# ಶಂಕರಸಪ್ತಾಹದ ಉಪನ್ಯಾಸಗಳು

(ಪ್ರಸ್ಥಾನತ್ರಯ ಭಾಷ್ಯೋಪನ್ಯಾಸಗಳು, ಪುರಾಣಪ್ರವಚನಗಳು,
ವೇದಾಂತೋಪನ್ಯಾಸಗಳು)



ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

# ಶಂಕರಸಪ್ತಾಹದ ಉಪನ್ಯಾಸಗಳು

**(ಪ್ರಸ್ಥಾನತ್ರಯ ಭಾಷ್ಯೋಪನ್ಯಾಸಗಳು, ಪುರಾಣಪ್ರವಚನಗಳು, ವೇದಾಂತೋಪನ್ಯಾಸಗಳು)**

ಸಂಪಾದಕರು

**ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ: 279

Price List Catalig No: 194

**ಅಧ್ಯಾತ್ಮಪ್ರಕಾಶಕಾರ್ಯಾಲಯ**

ಹೊಳೆನರಸೀಪುರ – 573 211 ಹಾಸನ ಜಿಲ್ಲೆ

ಕರ್ನಾಟಕ ರಾಜ್ಯ

ದೂರವಾಣಿ : 08175 – 273 820

weebsite: www.adhyatmaprakasha.org.

e-mail : secretary@adhyatmaprakasha.org

coordinator_apk@yahoo.com

**ಬೆಂಗಳೂರು ಶಾಖೆ :**

ನಂ. 68, (ಹೊಸ ನಂ.6), 6ನೇ ಮುಖ್ಯರಸ್ತೆ, ಎ.ಪಿ.ಕೆ ರಸ್ತೆ, 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು – 560 028

ದೂರವಾಣಿ : 080 – 2676 5548

email : shankara.bhaskara@gmail.com

**2021**

**SHANKARA SAPTAHADA UPANYASAGALU :**
Edited by: **Sri Sri Satchidanandendra Saraswathi Swamiji.**
Published by: Adhyatma Prakasha Karyalaya, Holenarasipura- 573 211,
Hassan District, Karnataka State, India. Phone: 08175 - 273 820.
weebsite: www.adhyatmaprakasha.org.
e-mail : secretary@adhyatmaprakasha.org
coordinator_apk@yahoo.com

ಒಂದನೆಯ ಮುದ್ರಣ : 2021 ಪ್ರತಿಗಳು: 500

ಮುದ್ರಣ ಕಾಗದ : 70 **GSM NS Maplitho**

ಪುಟಗಳು : 18 + 941 = 959

**ಬೆಲೆ : ರೂ. 400/-**

**© ಅಧ್ಯಾತ್ಮಪ್ರಕಾಶಕಾರ್ಯಾಲಯದವು**

**ಪ್ರತಿಗಳು ದೊರೆಯುವ ಸ್ಥಳ:**
**ಅಧ್ಯಾತ್ಮಪ್ರಾಕಾಶಕಾರ್ಯಾಲಯ**
ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ.

ದೂರವಾಣಿ : 08175 - 273 820

**ಬೆಂಗಳೂರು ಶಾಖೆ :**

ನಂ. 68, (ಹೊಸ ನಂ.6), 6ನೇ ಮುಖ್ಯರಸ್ತೆ, ಎ.ಪಿ.ಕೆ ರಸ್ತೆ, 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು - 560 028

ದೂರವಾಣಿ : 080 - 2676 5548.

email : shankara.bhaskara@gmail.com

**ಅಕ್ಷರ ಜೋಡಣೆ:**

ಡಿ.ಎನ್. ನರಹರಿ ಶರ್ಮಾ

ದೊಡ್ಡನಾರವಂಗಲ, ತುಮಕೂರು - 572 107.

Mobile :- 98457 60612 / 9738352817
Email :- naraharidn@gmail.com

**ಮುದ್ರಕರು:**

ಶ್ರೀರಾಮ ಪ್ರಿಂಟರ್ಸ್

ನಂ.25, 15ನೇ ಕ್ರಾಸ್, ಶ್ರೀನಿಧಿ ಲೇಔಟ್, ಬೆಂಗಳೂರು - 560 062.

ಮೊಬೈಲ್ :- 98453 46197

# ಪ್ರಕಾಶಕರ ಬಿನ್ನಹ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು ಶಂಕರಭಗವತ್ಪಾದರ ಉಪದೇಶಗಳನ್ನು ಸಾರಲು ಶಂಕರಜಯಂತಿ ಸಂದರ್ಭದಲ್ಲಿ 1931ರಲ್ಲಿ ಆರಂಭಮಾಡಿದ ಶಂಕರಸಪ್ತಾಹ ಕಾರ್ಯಕ್ರಮವು ಇಂದಿಗೂ ಕಾರ್ಯಾಲಯದಲ್ಲಿ ಮುಂದುವರಿಯುತ್ತಿದೆ. ಸಪ್ತಾಹಗಳಲ್ಲಿ ನಡೆದ ಉಪನ್ಯಾಸಗಳನ್ನು ಲೇಖನವಾಗಿಸಿ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಶ್ರೀಶ್ರೀಗಳವರೇ ಸಂಪಾದಿಸಿ ಪ್ರಕಟಿಸಿದ್ದರು. ಅದು ಮತ್ತೆ ಓದುಗರಿಗೆ ಒಂದೆಡೆ ದೊರೆಯಬೇಕೆಂದು ಈಗ **ಶಂಕರಸಪ್ತಾಹದ ಉಪನ್ಯಾಸಗಳು** – ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದೆ.

ಈ ಗ್ರಂಥಪ್ರಕಟಣೆಗೆ ಶ್ರೀ ಕೃಷ್ಣಪಾದಾಚಾರ್ಯ ಸ್ವಾಮೀಜಿ ಕುರುಡಿ – ಇವರು ತಮ್ಮ ಮಾತೃಶ್ರೀ ದಿ|| ಹನುಮಮ್ಮ ಮತ್ತು ಪಿತಾಶ್ರೀ ಮುದುಕಪ್ಪ ಬಾರಕೇರ ಇವರ ನೆನಪಿನಲ್ಲಿ 1,76,300/–ರೂ ಗಳನ್ನು ಉದಾರವಾಗಿ ಸಹಾಯಮಾಡಿರುತ್ತಾರೆ. ಸ್ವಾಮೀಜಿಯವರಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಗ್ರಂಥದ ಕರಡನ್ನು ತಿದ್ದುವದರಲ್ಲಿ ಶ್ರೀ ಆರ್. ಬಿ. ಗೋಪಿನಾಥ್ ಮತ್ತು ಶ್ರೀಲಕ್ಷ್ಮೀಶ ಭಟ್ಟರು ಶ್ರಮವಹಿಸಿರುತ್ತಾರೆ. ಡಿ.ಟಿ.ಪಿ. ಯನ್ನು ಶ್ರೀ ಡಿ. ಎನ್. ನರಹರಿ ಶರ್ಮಾರವರು ಮಾಡಿರುತ್ತಾರೆ. ಮುದ್ರಣವನ್ನು ಶ್ರೀರಾಮ ಪ್ರಿಂಟರ್ಸ್ ನವರು ಅಂದವಾಗಿ ಮಾಡಿಕೊಟ್ಟಿರುತ್ತಾರೆ. ಇವರೆಲ್ಲರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಜಿಜ್ಞಾಸುಗಳು ಎಂದಿನಂತೆ ಗ್ರಂಥವನ್ನು ಆದರದಿಂದ ಬರಮಾಡಿಕೊಂಡು ಕಾರ್ಯಾಲಯದ ಅಧ್ಯಾತ್ಮಪ್ರಸಾರ ಕಾರ್ಯದಲ್ಲಿ ತನು, ಮನ, ಧನಗಳಿಂದ ಸಹಕರಿಸಿರೆಂದು ಪ್ರಾರ್ಥಿಸುತ್ತೇವೆ.

**ಶಾರ್ವರಿಸಂವತ್ಸರದ** **ಪ್ರಕಾಶಕರು**

**ಮಾಘ ಕೃಷ್ಣ ಚತುರ್ದಶೀ**

**ಮಹಾಶಿವರಾತ್ರಿ**

**11-03-2021**

# ಪೀಠಿಕೆ

**ಅಧ್ಯಾತವಿದ್ಯೆಯಲ್ಲಿ ಹೆಚ್ಚಿನ ಆದರವನ್ನುಂಟುಮಾಡುವದೇ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಮುಖ್ಯೋದ್ದೇಶ** ಎಂಬ ಗುರಿಯನ್ನಿಟ್ಟುಕೊಂಡು 1920ರಲ್ಲಿ ಕಾರ್ಯಾಲಯವು ಸ್ಥಾಪನೆಗೊಂಡಿತು. ಅದಕ್ಕೆ ಪೂರಕವಾಗಿ ಭಾಷ್ಯಪ್ರವಚನ, ಗ್ರಂಥಪ್ರಕಟಣೆ, ಭಜನಪದ್ಧತಿ, ಪತ್ರಿಕಾಪ್ರಕಟನೆ - ಮುಂತಾದ ಬಗೆಯಲ್ಲಿ ಮುಂದುವರೆಯಿತು. ಇವುಗಳಲ್ಲದೆ 1931ರ ಸಮಯಕ್ಕೆ ಇನ್ನೊಂದು ದಿಕ್ಕಿನಲ್ಲಿಯೂ ಕಾರ್ಯಾಲಯವು ಮುಂದುವರಿಯುವ ಅವಕಾಶವು ದೊರೆಯಿತು.

ಆ ಸಂದರ್ಭವನ್ನು ಶ್ರೀಶ್ರೀಗಳವರೇ ವಿವರಿಸಿರುವಂತೆ - ಶೃಂಗೇರಿ ಶಂಕರಮಠ, ಬೆಂಗಳೂರಿನಲ್ಲಿ ಪ್ರತಿವರ್ಷ ವೈಶಾಖಶುದ್ಧ ಪಾಡ್ಯದಿಂದ ವೈಶಾಖ ಶುದ್ಧ ಪಂಚಮಿಯವರೆಗೆ ಶಂಕರಜಯಂತಿ ಮಹೋತ್ಸವವು ನಡೆಯುತ್ತಿತ್ತು. ಅದರಲ್ಲಿ ಬೆಳಗ್ಗೆ ಭಾಷ್ಯಪಾರಾಯಣ, ಅಭಿಷೇಕ, ಪೂಜೆ, ಬ್ರಾಹ್ಮಣಭೋಜನ; ಸಾಯಂಕಾಲ ವಿದ್ವಾಂಸರುಗಳಿಂದ ಉಪನ್ಯಾಸಗಳೂ; ಭಾರತವಾಚನ, ಸಂಗೀತ, ಹರಿಕಥೆ - ಮುಂತಾದವುಗಳೂ ನಡೆಯುತ್ತಿದ್ದವು. ನಾನೂ (ಶ್ರೀಶ್ರೀಗಳವರು) ಒಂದೆರಡು ಉಪನ್ಯಾಸವನ್ನು ಮಾಡಿದ್ದೆನು. ''**ಶಂಕರರ ಸ್ಮರಣೆಗೆ ಬರಿಯ ಪೂಜಾದಿಕರ್ಮಗಳೇ ಆಗಲಿ, ಪಾನಕಪನಿವಾರ, ಭೋಜನಮುಂತಾದವುಗಳಾಗಲಿ ಸಾಲದು, ಮುಖ್ಯವಾಗಿ ವೇದಾಂತೋಪನ್ಯಾಸಗಳಿಗೂ ಭಾಷ್ಯಪ್ರವಚನಕ್ಕೂ ಅವಕಾಶವನ್ನು ಕಲ್ಪಿಸಬೇಕು**'' - ಎಂದು ನಾನು ಅಧ್ಯಕ್ಷರಾಗಿದ್ದ ದಿ|| ಸರ್ಕಲ್ ಇನ್‌ಸ್ಪೆಕ್ಟರ್ ವೆಂಕಟರಾಮಯ್ಯನವರಿಗೆ ಸೂಚಿಸಿದೆನು. ಅವರಿಗೆ ಅದು ಅಷ್ಟು ಒಪ್ಪಾಗಲಿಲ್ಲ. ''**ವೇದಾಂತದಲ್ಲಿ ನಮಗೂ ನಿಮಗೂ ಪ್ರೀತಿ ಇರಬಹುದು; ಆದರೆ ಜನಸಾಮಾನ್ಯಕ್ಕೆ ಎಂದಿಗೂ ಆಗಲಾರದು**'' ಎಂದು ಹೇಳಿಬಿಟ್ಟರು. ನನ್ನ ಸಲಹೆಯು ಯಾರಿಗೂ ಸೊಗಸಿದಂತೆ ಕಾಣಲಿಲ್ಲ. ಆದ್ದರಿಂದ ವಿಠ್ಠಲಶಾಸ್ತ್ರಿಗಳು, ವೆಂಕಟೇಶಶಾಸ್ತ್ರಿಗಳು ಇಬ್ಬರನ್ನು ಕರೆಸಿಕೊಂಡು, ನಾವೇ ಸ್ವತಂತ್ರವಾಗಿ ಈ ಬಗೆಯ ಶಂಕರೋತ್ಸವವನ್ನೇಕೆ ಮಾಡಬಾರದು - ಎಂಬ ವಿಷಯವನ್ನು ಆಲೋಚನೆಯನ್ನು ಮಾಡಿದೆವು. ಮೂವರೂ ಒಮ್ಮತಕ್ಕೆ ಬಂದು ಉತ್ಸವವನ್ನು ''**ಪ್ರತಿಸಂವತ್ಸರದ ವೈಶಾಖಶುದ್ಧ ಪಂಚಮಿ ಶಂಕರಜಯಂತಿಯಿಂದ**

ವೈಶಾಖಶುದ್ಧ ದ್ವಾದಶಿ ಶಂಕರಾರಾಧನೆ''ಯವರೆಗೂ ಉತ್ಸವವಾಗಬೇಕೆಂದು ನಿಶ್ಚಯಿಸಿದೆವು. ಅದಕ್ಕೆ ''**ಶಂಕರಸಪ್ತಾಹ**'' ಎಂಬ ಹೆಸರನ್ನಿಟ್ಟುಕೊಂಡೆವು. ಅದು ಹಾಗೆಯೇ ಮುಂದುವರಿಯಿತು.

**ಪ್ರಜೋತ್ಪತ್ತಿ ಸಂವತ್ಸರದಲ್ಲಿ** 23-4-1931 ರಿಂದ 29-4-1931ರವರೆಗೆ ರಾಮೇಶ್ವರದೇವಸ್ಥಾನ, ಬೆಂಗಳೂರಿನಲ್ಲಿ ಮೊದಲ ಉತ್ಸವವು ನಡೆಯಿತು. ಸಪ್ತಾಹದಲ್ಲಿ ಕಾರ್ಯಕ್ರಮಗಳು: **ಬೆಳಿಗ್ಗೆ - ಭಾಷ್ಯಪ್ರವಚನ, ಮಧ್ಯಾಹ್ನ-ಪುರಾಣ, ಸಂಜೆ-ವೇದಾಂತ** ಉಪನ್ಯಾಸ ಹೀಗೆ ಇರುತ್ತಿದ್ದವು. ಅನಂತರ ಜಗದ್ಗುರು ಶಂಕರಾಚಾರ್ಯರ ಉತ್ಸವಮಹೋತ್ಸವವು ನಿರಂತರವಾಗಿ ನಡೆಯುತ್ತಾ ಬಂದಿದೆ. ಅವುಗಳ ವಿವರಗಳು:

## ಶಂಕರಸಪ್ತಾಹದ ವೃತ್ತಾಂತ ವೈಶಾಖಶುದ್ಧ ಪಂಚಮಿಯಿಂದ ವೈಶಾಖಶುದ್ಧ ದ್ವಾದಶಿಯವರೆಗೆ

| ಕ್ರ.ಸಂ | ಸಂವತ್ಸರ | ದಿನಾಂಕ | ನಡೆದ ಸ್ಥಳ |
|---|---|---|---|
| **1** | ಶ್ರೀಪ್ರಜೋತ್ಪತ್ತಿ | **23-4 1931 ರಿಂದ 29-4-1931** | ಶ್ರೀರಾಮೇಶ್ವರದೇವಸ್ಥಾನ ಬೆಂಗಳೂರು |
| **2** | ಶ್ರೀಆಂಗಿರಸ | **10-5-1932 ರಿಂದ 17-5-1932** | ಜಲಕಂಠೇಶ್ವರ ದೇವಸ್ಥಾನ, ಕೋಟೆ, ಬೆಂಗಳೂರು |
| **3** | ಶ್ರೀಮುಖ | **30-4-1933ರಿಂದ 7-5-1933** | ಶ್ರೀಶಿವಗಂಗಾಮಠ, ಬೆಂಗಳೂರು |
| **4** | ಶ್ರೀಭಾವ | **18-5-1934 ರಿಂದ 26-5-1934** | ಶ್ರೀರಾಮೇಶ್ವರದೇವಸ್ಥಾನ ಬೆಂಗಳೂರು |
| **5** | ಶ್ರೀಯುವ | **7-5-1935 ರಿಂದ 15-1935** | ಶ್ರೀಶಿವಗಂಗಾಮಠ, ಬೆಂಗಳೂರು |
| **6** | ಶ್ರೀಧಾತೃ | **26-4-1936 ರಿಂದ 3-5-1936** | ಶ್ರೀಭೀಮೇಶ್ವರದೇವಸ್ಥಾನ ಶಿವಮೊಗ್ಗ |

| | | | |
|---|---|---|---|
| 7 | ಶ್ರೀಈಶ್ವರ | 15-5-1937 ರಿಂದ 21-5-1937 | ಶ್ರೀಭೀಮೇಶ್ವರದೇವಸ್ಥಾನ ಶಿವಮೊಗ್ಗ |
| 8 | ಶ್ರೀಬಹುಧಾನ್ಯ | 4-5-1938 ರಿಂದ 11-5-1938 | ಶ್ರೀ ಚತುರ್ಭುಜ ಪಟ್ಟಾಭಿರಾಮಸ್ವಾಮಿ ದೇವಾಲಯ, ಹೊಳೆನರಸೀಪುರ |
| 9 | ಶ್ರೀಪ್ರಮಾಥೀ | 24-4-1939ರಿಂದ 30-4-1939 | ಅಭಿನವಶಂಕರಾಲಯ, ಮೈಸೂರು |
| 10 | ಶ್ರೀವಿಕ್ರಮ | 12-5-1940ರಿಂದ 18-5-1940 | ಶ್ರೀಶಂಕರನಾರಾಯಣ ದೇವಾಲಯ, ಚಾಮುಂಡೀಪುರ, ಮೈಸೂರು |
| 11 | ಶ್ರೀವಿಷು | 1-5-1941 ರಿಂದ 8-5-1941 | ಶ್ರೀಶಂಕರನಾರಾಯಣ ದೇವಾಲಯ, ಚಾಮುಂಡೀಪುರ, ಮೈಸೂರು |
| 12 | ಶ್ರೀಚಿತ್ರಭಾನು | 20-4-1942 ರಿಂದ 28-4-1942 | ಪೂರ್ಣಯ್ಯನವರ ಛತ್ರ, ತರೀಕೆರೆ |
| 13 | ಶ್ರೀಸ್ವಭಾನು | 9-5-1943 ರಿಂದ 16-5-1943 | ಬ್ರಾಹ್ಮಣ ಸೇವಾಸಂಘ, ತುಮಕೂರು |
| 14 | ಶ್ರೀತಾರಣ | 24-4-1944 ರಿಂದ 5-5-1944 | ಶ್ರೀ ಚತುರ್ಭುಜ ಪಟ್ಟಾಭಿರಾಮಸ್ವಾಮಿ ದೇವಾಲಯ, ಹೊಳೆನರಸೀಪುರ |
| 15 | ಶ್ರೀಪಾರ್ಥಿವ | 16-5-1945 ರಿಂದ 23-5-1945 | ಓಂಕಾರೇಶ್ವರದೇವಸ್ಥಾನ, ಚಿಕ್ಕಮಗಳೂರು |
| 16 | ಶ್ರೀವ್ಯಯ | 5-5-1946ರಿಂದ 12-5-1946 | ಕರಣಿಕರಪಾಠಶಾಲೆ, ಬೆಂಗಳೂರು |
| 17 | ಶ್ರೀಸರ್ವಜಿತ್ | 25-4-1947 ರಿಂದ 2-5-1947 | ಜಿ. ನಂಜಪ್ಪನರ ಮನೆ, ಮಂಡ್ಯ |
| 18 | ಶ್ರೀಸರ್ವಧಾರಿ | 13-5-1948ರಿಂದ 20-5-1948 | ಪ್ರಸನ್ನ ವಿಶ್ವೇಶ್ವರಸ್ವಾಮಿ ದೇವಸ್ಥಾನ, ಚಾಮರಾಜಪುರ, ಮೈಸೂರು |
| 19 | ಶ್ರೀವಿರೋಧಿ | 3-5-1949 ರಿಂದ 10-5-1949 | ಅ.ಪ್ರ.ಕಾ, ಹೊಳೆನರಸೀಪುರ |

| | | | |
|---|---|---|---|
| 20 | ಶ್ರೀವಿಕೃತಿ | 22-5-1950 ರಿಂದ 29-05-1950 | ಕರಣಿಕರಪಾಠಶಾಲೆ, ಬೆಂಗಳೂರು |
| 21 | ಶ್ರೀಖರ | 11-5-1951 ರಿಂದ 18-05-1951 | ಅ.ಪ್ರ.ಕಾ, ಹೊಳೆನರಸೀಪುರ |
| 22 | ಶ್ರೀನಂದನ | 29-4-1952 ರಿಂದ 6-5-1952 | ಪ್ರಸನ್ನ ವಿಶ್ವೇಶ್ವರಸ್ವಾಮಿ ದೇವಸ್ಥಾನ, ಚಾಮರಾಜಪುರ, ಮೈಸೂರು |
| 23 | ಶ್ರೀವಿಜಯ | 18-5-1953 ರಿಂದ 24-5-1953 | ಅ.ಪ್ರ.ಕಾ, ಹೊಳೆನರಸೀಪುರ |
| 24 | ಶ್ರೀಜಯ | 7-5-1954 ರಿಂದ 14-5-1954 | ಪ್ರಸನ್ನ ವಿಶ್ವೇಶ್ವರಸ್ವಾಮಿ ದೇವಸ್ಥಾನ, ಚಾಮರಾಜಪುರ, ಮೈಸೂರು |
| 25 | ಶ್ರೀಮನ್ಮಥ | 26-4-1955ರಿಂದ 3-5-1955 | ಶ್ರೀಶಂಕರಲಿಂಗದೇವಸ್ಥಾನ ಮತ್ತು ಶ್ರೀಗೌರೀಪುರಚಿಂತಾಮಣಿಮಠ, ಬಳ್ಳಾರಿ |
| 26 | ಶ್ರೀದುರ್ಮುಖಿ | 15-5-1956ರಿಂದ 20-5-1956 | ★★★★ |
| 27 | ಶ್ರೀಹೇವಿಳಂಬೀ | 4-5-1957ರಿಂದ 11-5-1957 | ಶ್ರೀಸೀತಾರಾಮಮಂದಿರ, ಹಲಸೂರುಪೇಟೆ, ಬೆಂಗಳೂರು |
| 28 | ಶ್ರೀವಿಳಂಬೀ | 24-5-1958ರಿಂದ 30-4-1958 | ವಿರೂಪಾಕ್ಷದೇವಸ್ಥಾನ, ಹಾಸನ |
| 29 | ಶ್ರೀವಿಕಾರಿ | 13-5-1959ರಿಂದ 19-5-1959 | ★★★★ |
| 30 | ಶ್ರೀಶಾರ್ವರಿ | 1-5-1960 ರಿಂದ 7-5-1960 | ಶ್ರೀರಾಮಮಂದಿರ, ನ. ರಾ. ಕಾಲೊನಿ, ಬೆಂಗಳೂರು |
| 31 | ಶ್ರೀಪ್ಲವ | 20-4-1961 ರಿಂದ 27-4-1961 | ಅ.ಪ್ರ.ಕಾ. ಹೊಳೆನರಸೀಪುರ |
| 32 | ಶ್ರೀಶುಭಕೃತ್ | 8-5-1962 ರಿಂದ 16-5-1962 | ಸೀತಾರಾಮ ದೇವಸ್ಥಾನ ಮೈಸೂರು |
| 33 | ಶ್ರೀಶೋಭಕೃತ್ | 28-4-1963 ರಿಂದ 4-5-1963 | ಅ.ಪ್ರ.ಕಾ. ಹೊಳೆನರಸೀಪುರ |

| | | | |
|---|---|---|---|
| 34 | ಶ್ರೀಕ್ರೋಧಿ | 1964 | ಶಂಕರಸೇವಾಸಂಘ, ಮಧುಗಿರಿ |
| 35 | ಶ್ರೀವಿಶ್ವಾವಸು | 1965 | ಶ್ರೀದೇವರಾಯಕುಲಕರ್ಣಿಗಳ ಮನೆ, ಬೆಂಗಳೂರು |
| 36 | ಶ್ರೀಪರಾಭವ | 1966 | ಶಿವಾನಂದ ಅಧ್ಯಾತ್ಮಮಂದಿರ, ದಾವಣಗೆರೆ |
| 37 | ಶ್ರೀಪ್ಲವಂಗ | 1966 | ಅನಂತಸ್ವಾಮಿ ಆಶ್ರಮ, ಬೆಂಗಳೂರು |
| 38 | ಶ್ರೀಕೀಲಕ | 1967 | ತರೀಕೆರೆ |
| 39 | ಶ್ರೀಸೌಮ್ಯ | 1968 | ವಿಠ್ಠಲಶಾಸ್ತ್ರಿಗಳ ಮನೆ, ಮೈಸೂರು |
| 40 | ಶ್ರೀವಿರೋಧಿಕೃತ್ | 1969 | ಅರಕಲಗೂಡು |

**ಶಂಕರಸಪ್ತಾಹದಲ್ಲಿ ಭೋಜನಕಲಾಪವನ್ನು ಪ್ರಧಾನವಾಗಿ ಇಟ್ಟುಕೊಳ್ಳ ಬಾರದು, ಜ್ಞಾನಯಜ್ಞವೇ ಪ್ರಧಾನವಾಗಿ ನಡೆಯಬೇಕು** - ಎಂಬುದೇ ನಮ್ಮ ಪ್ರಥಮೋದ್ದೇಶವಾಗಿತ್ತು. ಆದರೂ ಪರಸ್ಥಳಗಳಿಂದ ಬಂದ ಜನರಿಗೆ ಊಟವಸತಿಗಳಿಗೆ ಏರ್ಪಾಟುಮಾಡುವದು ಅವಶ್ಯವಾಗಿತ್ತು. ಯಾವ ಸ್ಥಳದಲ್ಲಿ ಸಪ್ತಾಹವು ನಡೆಯುತ್ತಿತ್ತೋ ಅಲ್ಲಿನ ಮಹನೀಯರುಗಳ ಸಹಕಾರದಿಂದ ಆಗಮಿಸಿದ ವಿದ್ವಾಂಸರುಗಳಿಗೆ ಸಂಭಾವನೆ, ಪ್ರಯಾಣವೆಚ್ಚ, ಊಟವಸತಿ - ಇತ್ಯಾದಿಗಳನ್ನು ಏರ್ಪಾಡು ಮಾಡಲಾಗುತ್ತಿತ್ತು.

ಈ ಸಪ್ತಾಹಗಳಲ್ಲಿ ಅನೇಕ ಮಹಾಮಹಾ ವಿದ್ವಾಂಸರುಗಳು ಭಾಗವಹಿಸುತ್ತಿದ್ದರು. ಶ್ರೀ ಕೆ. ಎ. ಕೃಷ್ಣಸ್ವಾಮಿ ಅಯ್ಯರ್, ಶ್ರೀ ವಿಠ್ಠಲಶಾಸ್ತ್ರಿಗಳು, ಬ್ರ॥ಶ್ರೀ ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿಗಳು, ಶ್ರೀವೆಂಕಟೇಶಶಾಸ್ತ್ರಿಗಳು, ವಿ॥ ತಿಪ್ಪಾಶಾಸ್ತ್ರಿಗಳು, ಪಂಡಿತಪ್ರವರ ವಿ॥ ಹೆಚ್. ಅನಂತಮೂರ್ತಿಶಾಸ್ತ್ರಿಗಳು, ಬ್ರ॥ಶ್ರೀ ತರ್ಕ ವಿದ್ವಾನ್ ವಿ. ಪಾಟಣಕರ್ ಚಂದ್ರಶೇಖರ ಭಟ್ಟರು, ಆಸ್ಥಾನ ವಿದ್ವಾನ್ ಕುಕ್ಕೆಸುಬ್ರಹ್ಮಣ್ಯಶಾಸ್ತ್ರಿಗಳು, ಆಸ್ಥಾನ ವಿದ್ವಾನ್ ಸಾಹಿತ್ಯರತ್ನಂ ಕೆ. ಗೋಪಾಲಕೃಷ್ಣ ಶಾಸ್ತ್ರಿಗಳು, ಗೀತಾಪರಿಚಾರಿಣೆ ಸಭೆಯ ಶಂಕರಾನಂದಭಾರತೀ ಸ್ವಾಮಿಗಳು, ಪಂಡಿತರಾಜ ನವೀನಂ ವೆಂಕಟೇಶಶಾಸ್ತ್ರಿಗಳು, ಶ್ರೀಕೃಷ್ಣಯೋಗೀಂದ್ರ, ಬ್ರಹ್ಮಾನಂದ

ಸರಸ್ವತೀ ಸ್ವಾಮಿಗಳು, ಮತ್ತೂರು ಸುಬ್ರಾಯಾವಧಾನಿಗಳು, ಶ್ರೀಕೋಡೂರು ಕೃಷ್ಣಜೋಯಿಸರು, ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು – ಇನ್ನೂ ಅನೇಕ ಮಹಾಮಹಾ ವಿದ್ವಾಂಸರುಗಳು ಉಪನ್ಯಾಸಗಳನ್ನು ಮಾಡುತ್ತಿದ್ದರು. ಶ್ರೀ ನಂಜಪ್ಪಭಾಗವತರು, ಶ್ರೀರಾಮಣ್ಣದಾಸರು ಅರಸೀಕೆರೆ, ಗಮಕಿ ರಾಮಕೃಷ್ಣಶಾಸ್ತ್ರಿಗಳು, ಗಮಕಿ ಶ್ರೀನಿವಾಸರಾಯರು ಮೊದಲಾದವರು ಭಜನೆ, ಹರಿಕಥೆಗಳನ್ನು ನಡೆಸುತ್ತಿದ್ದರು.

1945ರ ಸಪ್ತಾಹವು ಚಿಕ್ಕಮಗಳೂರಿನ ಓಂಕಾರೇಶ್ವರ ದೇವಾಲಯದ ಅಂಗಳದಲ್ಲಿ ನಡೆಯಿತು. ಈ ಸಪ್ತಾಹಕ್ಕೆ ಅಲ್ಲಿಯೇ ಸಮೀಪದಲ್ಲಿ ವಾಸ್ತವ್ಯಮಾಡಿದ್ದ ಸುಪ್ರಸಿದ್ಧ **ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಶ್ರೀಧರಸ್ವಾಮಿಗಳವರು** ಆಗಮಿಸಿ ''**ಶಾಂಕರ ಮತ**'' ಎಂಬ ವಿಷಯವನ್ನು ಕುರಿತು ಮೂರು ಘಂಟೆಗಳ ಕಾಲ ಅಸ್ಖಲಿತವಾಗಿ ಉಪದೇಶವನ್ನು ಮಾಡಿದರು.

ಈ ಶಂಕರ ಸಪ್ತಾಹವು ವಿದ್ವಾಂಸರುಗಳ ಸಹಕಾರದಿಂದ ಈಗಲೂ ಕಾರ್ಯಾಲಯದಲ್ಲಿ ಮುಂದುವರಿಯುತ್ತಿದೆ. 1931ರಲ್ಲಿ ಆರಂಭವಾದ ಶಂಕರಸಪ್ತಾಹಕ್ಕೆ ಆಸ್ತಿಯೆಂದರೆ ಮಹಾಜನರ ಸಹಕಾರವೇ ಆಗಿತ್ತು. ಕೆಲವರು ಉಚಿತವಾಗಿ ಸಭಾಮಂಟಪವನ್ನು ಕೊಟ್ಟರೆ, ಇನ್ನೂ ಕೆಲವರು ಅತಿಥಿಸತ್ಕಾರ, ವಿದ್ವಾಂಸರ ಸಂಭಾವನೆ, ಮಾರ್ಗವ್ಯಯ ಮುಂತಾದವುಗಳನ್ನು ವಹಿಸಿಕೊಳ್ಳುತ್ತಿದ್ದರು. ಹೀಗೆ ಶಂಕರಸಪ್ತಾಹವು ವಿಜೃಂಭಣೆಯಿಂದ ನಡೆಯುತ್ತಾ ಶಂಕರರ ಉಪದೇಶಗಳನ್ನು ಪಸರಿಸುವದರಲ್ಲಿ ಒಂದು ಮೈಲಿಗಲ್ಲಾಯಿತು.

ಅನೇಕ ಸಾಮಾನ್ಯ ವೇದಾಂತಜಿಜ್ಞಾಸುಗಳಿಗೆ ಶಂಕರಾಚಾರ್ಯರ ಪ್ರಸ್ಥಾನತ್ರಯ ಗ್ರಂಥಗಳ, ಪ್ರಕರಣ ಗ್ರಂಥಗಳ ತಿಳಿವಳಿಕೆ; ಪುರಾಣಗಳಲ್ಲಿರುವ ಆಧ್ಯಾತ್ಮಿಕವಿಷಯಗಳು, ಉಪಾಸನೆ, ಭಕ್ತಿ, ಜ್ಞಾನ, ವೈರಾಗ್ಯ, ಕರ್ಮದ ಸ್ವರೂಪ ಮೊದಲಾದ ಸೂಕ್ಷ್ಮ ವಿಷಯಗಳು ಮನದಟ್ಟಾಗಲು ಸಹಕಾರವಾಯಿತು.

ಸಂಜೆ ಶ್ರೀಶ್ರೀಗಳವರು ವೇದಾಂತದ ಮುಖ್ಯಪ್ರಮೇಯಗಳನ್ನು ಕುರಿತು ಸ್ವತಂತ್ರವಾಗಿ ನಡೆಸುತ್ತಿದ್ದ ಉಪನ್ಯಾಸಗಳು ವೈಚಾರಿಕ ಜಾಗ್ರತಿಯನ್ನು ಉಂಟುಮಾಡುತ್ತಾ, ಅನ್ಯಮತಗಳೊಡನೆ ಹೋಲಿಕೆಯನ್ನು ಮಾಡುತ್ತಾ,

ಶಂಕರಸಿದ್ಧಾಂತದಲ್ಲಿ ನಿಷ್ಠೆಯನ್ನು ದೃಢಗೊಳಿಸುವಂತವಾಗಿದ್ದವು. ಇನ್ನು ಭಜನೆ, ಹರಿಕಥೆ, ನಾಮಸ್ಮರಣೆಗಳು ಮನಸ್ಸನ್ನು ಅಧ್ಯಾತ್ಮವಿಚಾರಗಳನ್ನು ಕೇಳಿ ಮನನ ಮಾಡಲು ಪ್ರೋತ್ಸಾಹದಾಯಕವಾಗಿದ್ದವು.

ಹಿಂದೆ **ಶಂಕರಸಪ್ತಾಹದ ವೃತ್ತಾಂತ** ಎಂಬ ಹೆಸರಿನಿಂದ ಪುಸ್ತಕವನ್ನು ಪ್ರಕಟಿಸಿ ಸಪ್ತಾಹಗಳಲ್ಲಿ ನಡೆದ ಉಪನ್ಯಾಸಗಳನ್ನು ಲೇಖನರೂಪದಲ್ಲಿ ಪ್ರಕಟಿಸಲಾಗುತ್ತಿತ್ತು. ಹಾಗೆಯೇ **ಅಧ್ಯಾತ್ಮಪ್ರಕಾಶ** ಮಾಸಪತ್ರಿಕೆಯಲ್ಲಿ ಸ್ವತಂತ್ರಪುಟವಾಗಿಯೂ ಪ್ರಕಟಿಸಲಾಗುತ್ತಿತ್ತು. ಈ ಸಪ್ತಾಹಗಳಲ್ಲಿ ವಿದ್ವಾಂಸರುಗಳು ಮಾಡಿರುವ ಉಪದೇಶಗಳು ಶಂಕರಸಿದ್ಧಾಂತವನ್ನು ಮನಗಾಣಬೇಕೆಂದು ನಿಜವಾಗಿಯೂ ಹಂಬಲಿಸುವ ಮುಮುಕ್ಷುಗಳಿಗೆ ನಿರುಪಮಸಾಧನಗಳಾಗಿರುತ್ತವೆ.

ಈ ಉಪನ್ಯಾಸಗಳಲ್ಲಿ ಕೆಲವು ಸ್ವತಂತ್ರಗ್ರಂಥಗಳಾಗಿಯೂ ಪ್ರಕಟವಾಗಿವೆ. ಅದರಲ್ಲಿಯೂ ಶ್ರೀಶ್ರೀಗಳವರು 1957, 1961, 1962, 1963– ಈ ನಾಲ್ಕು ಸಪ್ತಾಹಗಳಲ್ಲಿ ಸಾಯಂಕಾಲ ನೀಡಿರುವ ಉಪದೇಶಗಳು ಅಮೋಘ ಉಪದೇಶರತ್ನಮಾಲಿಕೆಗಳಾಗಿವೆ. **ಅನುಭವಪರ್ಯಂತವಾದ ಆತ್ಮವಿಚಾರ** (1957), **ಪರಿಪೂರ್ಣದರ್ಶನ** (1961), **ಸರ್ವವ್ಯವಹಾರಾತೀತವಾದ ಪರಮಾರ್ಥ** (1962), **ಬ್ರಹ್ಮವಿದ್ಯೆ** (1963) – ಎಂಬ ಹೆಸರಿನಿಂದ ಪ್ರಕಟವಾಗಿವೆ. ಈ ನಾಲ್ಕು ಚಿಕ್ಕ ಪುಸ್ತಕಗಳಲ್ಲಿ ಶ್ರುತಿ, ತರ್ಕ, ಅನುಭವ – ಈ ಮೂರಕ್ಕೂ ಹೊಂದುಗಡೆಮಾಡಿಕೊಂಡು ತತ್ತ್ವವನ್ನು ಅನುಭವಕ್ಕೆ ತಂದುಕೊಳ್ಳುವ ಬಗೆಯನ್ನು ಹೃದಯಂಗಮವಾಗಿ ತಿಳಿಸಿದೆ.

ಈ ನಾಲ್ಕು ಸಪ್ತಾಹದ ಉಪನ್ಯಾಸಗಳೇ ಅಲ್ಲದೆ ಲಭ್ಯವಿರುವ ಎಲ್ಲ ಸಪ್ತಾಹಗಳ ಉಪನ್ಯಾಸಗಳನ್ನು ಓದುವದರಿಂದ ಮುಮುಕ್ಷುಗಳಿಗೆ ಅತ್ಯಂತ ಲಾಭವಿದೆಯೆಂದು **ಶಂಕರಸಪ್ತಾಹದ ಉಪನ್ಯಾಸಗಳು** ಎಂಬ ಶೀರ್ಷಿಕೆಯಲ್ಲಿ **1. ಪ್ರಸ್ಥಾನತ್ರಯ ಭಾಷ್ಯೋಪನ್ಯಾಸಗಳು** (ಬೆಳಿಗ್ಗೆ), **2. ಪುರಾಣಪ್ರವಚನಗಳು** (ಮಧ್ಯಾಹ್ನ), **3. ವೇದಾಂತ ಉಪನ್ಯಾಸಗಳು** (ಸಂಜೆ) – ಎಂದು ಮೂರು ವಿಭಾಗವಾಗಿ ಉಪನ್ಯಾಸಗಳನ್ನು ವಿಂಗಡಿಸಿ ಇಲ್ಲಿ

ಪ್ರಕಟ ಮಾಡಲಾಗಿದೆ. ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ವೃತ್ತಾಂತದಂತೆ ಪ್ರಕಟಿಸಿರುವ ಉಪನ್ಯಾಸಗಳನ್ನು ಲೇಖನದಂತೆ ಕೊಡಲಾಗಿದೆ.

ಇಲ್ಲಿ 1932ರಿಂದ 1944ರವರೆಗಿನ ಹಾಗೂ 1951 ರಿಂದ 1963 ರ ವರೆಗಿನ ವೃತ್ತಾಂತಗಳು ಮಾತ್ರ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಪ್ರಕಟವಾಗಿತ್ತು. 1945 ರಿಂದ 1951 ರವರೆಗಿನ ವೃತ್ತಾಂತವನ್ನು ಹಾಗೂ 1964ರಿಂದ ಮುಂದಿನ ಸಪ್ತಾಹಗಳ ವರದಿಯನ್ನು ಪ್ರಕಟಿಸಿರಲಿಲ್ಲ. ಆ ಸಂದರ್ಭದ ವಿಷಯಗಳು ತಿಳಿದುಬರುವಂತಿಲ್ಲ.

ಶಂಕರ ಜಯಂತಿಯೆಂದರೆ ಬರಿಯ ಪೂಜೆ-ಪುನಸ್ಕಾರಗಳಲ್ಲ ಎಂಬ ಆಶಯದೊಂದಿಗೆ ಅರಂಭವಾದ ಶಂಕರಸಪ್ತಾಹವು ನಿಜವಾದ ತತ್ತ್ವಪ್ರಸಾರ ಅಭಿಯಾನಕ್ಕೆ ಮುನ್ನುಡಿಯಾಯಿತು. ಇಲ್ಲಿರುವ ಉಪನ್ಯಾಸಗಳು ಅಮೋಘ ವಾಗಿದ್ದು ಓದುಗರಿಗೆ ಅತ್ಯುಪಯುಕ್ತವಾಗಿವೆ. ಅಂದಿನ ವಿದ್ವಾಂಸರ ಉಪನ್ಯಾಸದ ಶೈಲಿ, ವಿಷಯಗಳನ್ನು ಪ್ರಸ್ತುತಪಡಿಸಿದ ರೀತಿ, ವಿಷಯಗಳು ಇವೆಲ್ಲವೂ ಅಮೋಘವಾಗಿವೆ. ಇಂಥಹ ಅಮೋಘವಾದ ಉಪನ್ಯಾಸಗಳು ಶಂಕರಭಗವತ್ಪಾದರ ಉಪದೇಶಾಮೃತವನ್ನು ಪಾನಮಾಡಲು ಅತ್ಯಂತ ಸಹಾಯಕವಾಗಿವೆ. ಇವೆಲ್ಲಕ್ಕೂ ಪ್ರಧಾನ ಕಾರಣರು ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು. ಅವರ ನೇತೃತ್ವದಲ್ಲಿ ಇವೆಲ್ಲವೂ ಸಾಧ್ಯವಾಗಿರುವದು. ಅವರ ದಿವ್ಯಚೇತನಕ್ಕೆ ಶಿರಸಾಷ್ಟಾಂಗಪ್ರಣಾಮಗಳು.

ಈ ಉಪನ್ಯಾಸಗಳು ನಮಗೆ ದೊರೆಯುವಂತೆ ಉಪನ್ಯಾಸಗಳನ್ನು ಕೇಳಿ, ಅ ಸಮಕಾಲದಲ್ಲಿಯೇ ಬರೆದು, ಮತ್ತೆ ಪರಿಷ್ಕರಿಸಿ, ಲೇಖನರೂಪದಲ್ಲಿ ಪತ್ರಿಕೆಯಲ್ಲಿ ಪ್ರಕಟಿಸಲು ಶ್ರಮಿಸಿದ ಎಲ್ಲ ಮಹನೀಯರುಗಳಿಗೂ ನಮಸ್ಕಾರವನ್ನು ಮಾಡೋಣ.

ಇಂಥ ಪವಿತ್ರೋಪದೇಶಗಳ ಅಧ್ಯಯನದಿಂದ ನಮ್ಮ ಸಚ್ಚಿದಾನಂದಸ್ವರೂಪವನ್ನು ತಿಳಿಯುವಂತೆ ಶ್ರೀ ಶಂಕರಭಗವತ್ಪಾದಚಾರ್ಯರು ಅನುಗ್ರಹಿಸಲಿ ಎಂದು ಪ್ರಾರ್ಥಿಸೋಣ.

# ವಿಷಯಾನುಕ್ರಮಣಿಕೆ


| ಕ್ರ.ಸಂ | ವಿಷಯ | ಪುಟ |
|---|---|---|
| 1. | ಆತ್ಮನು ಅಭಯಸ್ವರೂಪನು | 6 |
| 2. | ಜ್ಞಾನಕರ್ಮಗಳ ಸಮುಚ್ಚಯವಿಚಾರ | 8 |
| 3. | ಪಂಚಕೋಶವಿವೇಕ | 10 |
| 4. | ತುರೀಯ ವಿಚಾರ | 11 |
| 5. | ಬ್ರಹ್ಮನ ಸ್ವರೂಪ | 12 |
| 6. | ಬ್ರಹ್ಮವನ್ನು ತಿಳಿಯುವದು ಹೇಗೆ? | 14 |
| 7. | ಕರ್ಮ-ಅಕರ್ಮ | 16 |
| 8. | ಆಚಾರ್ಯರವರ ಚರಿತ್ರೆ | 18 |
| 9. | ಸಕಲಕಾಮಗಳನ್ನೂ ಪಡೆಯುವ ಬಗೆ | 19 |
| 10. | ಬ್ರಹ್ಮಜ್ಞಾನವುಂಟಾದ ಕೂಡಲೇ ಮೋಕ್ಷವಾಗುತ್ತದೆಯೆ, ಇಲ್ಲವೆ? | 24 |
| 11. | ಸದಸದ್ವಿವೇಕ | 26 |
| 12. | ಯಾವದು ಪರಮಾರ್ಥ? | 28 |
| 13. | ಸರ್ವರಲ್ಲಿಯೂ ಆತ್ಮನು ಒಬ್ಬನೇ | 29 |
| 14. | ಆತ್ಮನೊಬ್ಬನೇ ಪರಮಾರ್ಥಸತ್ಯ | 31 |
| 15. | ಷೋಡಶಕಲನಾದ ಪುರುಷನು ಎಲ್ಲಿರುತ್ತಾನೆ? | 32 |
| 16. | ಪರಮಾತ್ಮನ ಪ್ರವೇಶ | 33 |
| 17. | ಆಚಾರ್ಯರ ಗುಣಕಥನ | 36 |
| 18. | ಬ್ರಹ್ಮವನ್ನು ಸತ್ಯವೆಂದು ಉಪಾಸನೆ | 38 |
| 19. | ಬ್ರಹ್ಮವೇ ಜಗತ್ಕಾರಣ | 40 |
| 20. | ಜ್ಞಾನದಿಂದಲೇ ಮೋಕ್ಷ | 42 |
| 21. | ಪ್ರಪಂಚವು ತೋರಿಕೆಮಾತ್ರ | 45 |
| 22. | ಅಭಿಮಾನದಿಂದಲೇ ಬಂಧ | 47 |
| 23. | ಆತ್ಮನೆಂದೇ ಉಪಾಸಿಸಬೇಕು | 49 |
| 24. | ಆತ್ಮಜ್ಞಾನಕ್ಕೆ ಆವೃತ್ತಿಮಾಡತಕ್ಕ ಅವಶ್ಯಕತೆಯುಂಟೆ ಇಲ್ಲವೆ? | 54 |

| | | |
|---|---|---|
| 25. | ಅವಿದ್ಯಾಕಾಮಕರ್ಮರಹಿತವಾದ ಸ್ವರೂಪ | 57 |
| 26. | ಭಗವತ್ಪಾದಾಚಾರ್ಯರವರ ಗುಣಕಥನವ | 59 |
| 27. | ಆತ್ಮನ ಈಕ್ಷಿತೃತ್ವ | 62 |
| 28. | ಶಾಸ್ತ್ರದಲ್ಲಿ ಹೇಳಿರುವಂತೆಯೇ ಪ್ರಮಾತ್ಮನ ಉಪಾಸನೆ | 64 |
| 29. | ಆತ್ಮನ ಸಾಕ್ಷಾತ್ಸ್ವರೂಪ | 68 |
| 30. | ಪರಮಾತ್ಮನ ಸ್ವರೂಪ | 70 |
| 31. | ವಿಶ್ವರೂಪೋಪಾಸನೆ | 73 |
| 32. | ಬ್ರಹ್ಮಾತ್ಮಭಾವ | 75 |
| 33. | ಜ್ಞಾನನಿಷ್ಠೆ | 78 |
| 34. | ಆಚಾರ್ಯರ ಗುಣಕಥನ | 81 |
| 35. | ಆತ್ಮನ ಸೂಕ್ಷ್ಮತ್ವ ವ್ಯಾಪಿತ್ವ | 84 |
| 36. | ಬ್ರಹ್ಮನನ್ನು ತಿಳಿದವನು ಅಮೃತತ್ತ್ವವನ್ನು ಪಡೆಯುತ್ತಾನೆ | 85 |
| 37. | ವಿಜ್ಞಾನವಾದಿಗಳ ಮತ | 91 |
| 38. | ಆ ಇವನು ಇಲ್ಲಿ ಪ್ರವೇಶಿಸಿದನು | 93 |
| 39. | ಜ್ಞಾನಿಯು ಕರ್ಮರಹಿತನೆ? | 96 |
| 40. | ಬ್ರಹ್ಮಪ್ರಾಪ್ತಿ | 99 |
| 41. | ಆಚಾರ್ಯರ ಗುಣಕಥನ | 102 |
| 42. | ಅಜ್ಞಾನನಾಶವೇ ಆತ್ಮಲಾಭ | 105 |
| 43. | ಸುಷುಪ್ತಿಯು ಬ್ರಹ್ಮಸ್ಥಾನವು | 106 |
| 44. | ಅವಿದ್ಯಾನಿವೃತ್ತಿಯೇ ಮೋಕ್ಷ | 107 |
| 45. | ಜೀವನ ಕರ್ತೃತ್ವ | 108 |
| 46. | ಬ್ರಹ್ಮದ ಲಕ್ಷಣ | 109 |
| 47. | ಕರ್ಮತ್ಯಾಗ | 110 |
| 48. | ಆತ್ಮನು ಜನ್ಮಾದಿರಹಿತನು | 112 |
| 49. | ಆಚಾರ್ಯರ ಗುಣಕಥನ | 113 |
| 50. | ವೇದಾಂತವಾಕ್ಯಗಳ ಕೃತ್ಯ | 114 |
| 51. | ಎಲ್ಲವೂ ಆತ್ಮನೆ | 116 |

| | | |
|---|---|---|
| 52. | ಸದ್ಬ್ರಹ್ಮವನ್ನು ಅರಿಯುವದಕ್ಕೆ ಉಪಾಯ | 117 |
| 53. | ತನಿನಿದ್ರೆಯಲ್ಲಿ ಅರಿವು | 118 |
| 54. | ಅನೇಕಾತ್ಮಕಬ್ರಹ್ಮವಾದ ನಿರಾಕರಣೆ | 119 |
| 55. | ಕ್ಷೇತ್ರಕ್ಷೇತ್ರಜ್ಞಸಂಯೋಗ | 121 |
| 56. | ಆಚಾರ್ಯರ ಗುಣಕಥನ | 123 |
| 57. | ಸುಷುಪ್ತಿಯ ವಿಚಾರ | 124 |
| 58. | ಎಲ್ಲೆಲ್ಲಿಯೂ ಬ್ರಹ್ಮವೊಂದೆ | 126 |
| 59. | ಪರಿಣಾಮವಾದಖಂಡನೆ | 127 |
| 60. | ತುರೀಯನ ಸ್ವಭಾವ | 129 |
| 61. | ಭಗವಂತನನ್ನು ಭಜಿಸಿದವರು ಆತನನ್ನೇ ಸೇರುತ್ತಾರೆ | 130 |
| 62. | ಸುಷುಪ್ತಿಸ್ವರೂಪದ ವರ್ಣನೆ | 132 |
| 63. | ಆಚಾರ್ಯರ ಗುಣಕಥನ | 133 |
| 64. | ತಸ್ಯೋಪನಿಷತ್ | 135 |
| 65. | ಭೂಮಸ್ವರೂಪ | 138 |
| 66. | ಬ್ರಹ್ಮವೇ ಜಗತ್ತಿಗೆ ಕಾರಣ | 140 |
| 67. | ಎಲ್ಲವೂ ಆತ್ಮವೇ | 142 |
| 68. | ಜ್ಞಾನಿಗೆ ಕರ್ಮವಿಲ್ಲ | 144 |
| 69. | ಜಾಗ್ರತ್ಸ್ವಪ್ನಗಳಿಗೆ ಕಾರ್ಯಕಾರಣಸಂಬಂಧವಿಲ್ಲ | 146 |
| 70. | ಜ್ಞಾನನಿಷ್ಠೆ | 148 |
| 71. | ಆಚಾರ್ಯರ ಗುಣಕಥನ | 149 |
| 72. | ಆತ್ಮನೊಬ್ಬನಿರುವನು | 151 |
| 73. | ಬ್ರಹ್ಮವನ್ನು ತಿಳಿಯಬೇಕು | 155 |
| 74. | ಚೇತನವೇ ಜಗತ್ಕಾರಣ | 157 |
| 75. | ಆತ್ಮತತ್ತ್ವವನ್ನು ತಿಳಿದುಕೊಳ್ಳುವ ಬಗೆ | 158 |
| 76. | ಜ್ಞಾನಿಗಳ ವ್ಯವಹಾರ | 161 |
| 77. | ಆತ್ಮನು ಅಣುಪರಿಮಾಣನು | 162 |
| 78. | ಸ್ವಪ್ನಸುಷುಪ್ತಿಗಳಲ್ಲಿ ಜೀವನ ಸ್ವರೂಪ | 164 |

| | | |
|---|---|---|
| 79. | ಪರಮಾತ್ಮತತ್ತ್ವ | 167 |
| 80. | ಆಚಾರ್ಯರ ಗುಣಕಥನ | 169 |
| 81. | ಆಚಾರ್ಯರ ಗುಣಕಥಶೋಕಮೋಹನ | 172 |
| 82. | ಇಂದ್ರಿಯಗಳ ವ್ಯಾಪಾರ | 174 |
| 83. | ಬ್ರಹ್ಮವೇ ಸತ್ಯವು | 175 |
| 84. | ಜೀವನಿಗೆ ಉತ್ಪತ್ತಿಯಿಲ್ಲ | 176 |
| 85. | ಪ್ರಾಣೋಪಾಸನೆ | 177 |
| 86. | ಅರ್ಜುನನ ಸಂಶಯ | 179 |
| 87. | ಬ್ರಹ್ಮಕ್ಕಿಂತಲೂ ಬೇರೆಯ ತತ್ತ್ವವಿದೆಯೆ? | 181 |
| 88. | ಆಚಾರ್ಯರ ಗುಣಕಥನ | 183 |
| 89. | ತುರೀಯಾತ್ಮನ ಸ್ವರೂಪ | 187 |
| 90. | ಬ್ರಹ್ಮಪ್ರಾಪ್ತಿಯ ಸ್ವರೂಪ | 189 |
| 91. | ಜೀವನ ಕರ್ತೃತ್ವ | 191 |
| 92. | ಬ್ರಹ್ಮಜಿಜ್ಞಾಸೆ | 193 |
| 93. | ಪ್ರಕೃತಿಸ್ಥತ್ವ | 195 |
| 94. | ಸತ್ಯದ ಸತ್ಯವು | 197 |
| 95. | ಮೂರು ಧರ್ಮಸ್ಕಂಧಗಳು | 198 |
| 96. | ಆಚಾರ್ಯರ ಗುಣಕಥನ | 200 |
| 97. | ಜ್ಞಾನಮಾತ್ರದಿಂದಲೇ ಪರಮಪುರುಷಾರ್ಥಪ್ರಾಪ್ತಿ | 201 |
| 98. | ಈಶ್ವರೋಪಾಸನೆಯ ಸೋಪಾನ | 204 |
| 99. | ಆತ್ಮಜ್ಞಾನವು ಕರ್ಮಶೇಷವಲ್ಲ | 205 |
| 100. | ಬ್ರಹ್ಮದ ಅಸ್ತಿತ್ವಕ್ಕೆ ಹೇತುಗಳು | 208 |
| 101. | ಅಸತ್ಕಾರ್ಯವಾದದ ವಿಮರ್ಶೆ | 209 |
| 102. | ಬ್ರಹ್ಮಜ್ಞಾನದಿಂದ ಸಂಸಾರಿತ್ವನಿವೃತ್ತಿ | 211 |
| 103. | ಆತ್ಮನ ಕೃತ್ಸ್ನತ್ವ | 213 |
| 104. | ಪರಮಾತ್ಮನೇ ಪರಮಾರ್ಥತತ್ತ್ವವು | 214 |
| 105. | ಅಂತರ್ಯಾಮಿಯ ವಿಚಾರ | 218 |

| | | |
|---|---|---|
| 106. | ಅದೇ ನೀನಾಗಿರುವೆ | 220 |
| 107. | ಕ್ಷೇತ್ರಜ್ಞೇಶ್ವರೈಕತ್ವಜ್ಞಾನದಿಂದಾಗುವ ಫಲ | 222 |
| 108. | ಬ್ರಹ್ಮವು ಪ್ರಪಂಚಕ್ಕೆ ಕಾರಣವೆ? | 224 |
| 109. | ಉಪನಿಷತ್ಪ್ರಾಮಾಣ್ಯ | 226 |
| 110. | ಜ್ಞಾನನಿಷ್ಠೆಯನ್ನು ಪಡೆದುಕೊಳ್ಳುವ ಬಗೆ | 228 |
| 111. | ಆಚಾರ್ಯರ ಗುಣಕಥನ | 229 |
| 112. | ಅಕ್ಷರಬ್ರಹ್ಮ | 232 |
| 113. | ತಾನೇ ಸರ್ವವಾಗುವನು | 234 |
| 114. | ಅವ್ಯಕ್ತದ ಸ್ವರೂಪ | 236 |
| 115. | ಬ್ರಹ್ಮಸಂಸ್ಪರ್ಶ | 238 |
| 116. | ಬ್ರಹ್ಮಜ್ಞಾನಿಯು ಪಂಚಕೋಶಗಳನ್ನು ಮೀರುವ ಬಗೆ | 239 |
| 117. | ಪರಮಾತ್ಮನು ಅದ್ವಿತೀಯನು | 240 |
| 118. | ಅವಸ್ಥೆಗಳ ಸ್ವರೂಪ | 242 |
| 119. | ಜೀವನಿಗೆ ಉತ್ಪತ್ತಿಯಿಲ್ಲ | 246 |
| 120. | ಕರ್ಮಯೋಗ | 247 |
| 121. | ಜ್ಞಾನಿಗೆ ಶರೀರಸಂಬಂಧವಿಲ್ಲ | 249 |
| 122. | ಉಪಕೋಸಲವಿದ್ಯೆ | 250 |
| 123. | ಹಾರ್ದಬ್ರಹ್ಮೋಪಾಸನೆಯ ಫಲ | 252 |
| 124. | ಪರಭಕ್ತರ ಲಕ್ಷಣ | 253 |
| 125. | ಆಚಾರ್ಯರ ಗುಣಕಥನ | 255 |
| 126. | ಅದ್ವಯಾತ್ಮನ ಸ್ವರೂಪ | 256 |
| 127. | ಶ್ರವಣಾದಿಗಳ ಆವೃತ್ತಿಯ ಆವಶ್ಯಕತೆ | 258 |
| 128. | ಪ್ರಜ್ಞಾತ್ಮಸ್ವರೂಪನಿರ್ಧಾರಣ | 261 |
| 129. | ಸಂಸಾರಗತಿ, ಮೋಕ್ಷಗತಿ | 262 |
| 130. | ಶಾಸ್ತ್ರೋಕ್ತನಾದ ಪರಮಾತ್ಮನ ಸ್ವರೂಪ | 264 |
| 131. | ನಿರುಪಾಧಿಕತತ್ತ್ವದ ಸಾರ | 266 |
| 132. | ಆಚಾರ್ಯರ ಗುಣಕಥನ | 268 |

| | | |
|---|---|---|
| 133. | ಸಾಂಖ್ಯ-ಯೋಗಗಳ ಸಾಮರಸ್ಯ | 270 |
| 134. | ಸ್ವಪ್ನಸುಷುಪ್ತಿಯ ಅನುಭವಗಳ ವಿಚಾರ | 272 |
| 135. | ಅದ್ವಿತೀಯಚೈತನ್ಯವೇ ಜಗತ್ಕಾರಣ | 275 |
| 136. | ಆನಂದಮೀಮಾಂಸೆ | 277 |
| 137. | ಬ್ರಹ್ಮಧರ್ಮಗಳ ಉಪಸಂಹಾರ | 179 |
| 138. | ಆತ್ಮನ ಕರ್ತೃತ್ವವು ಸ್ವಾಭಾವಿಕವೆ? | 281 |
| 139. | ಆಚಾರ್ಯರ ಗುಣಕಥನ | 283 |
| 140. | ಅದ್ವೈತವೇ ಪರಮಾರ್ಥ | 287 |
| 141. | ಆನಂದಮಯಾತ್ಮನ ವಿಚಾರ | 288 |
| 142. | ಅವಿದ್ಯಾನಿವರ್ತಕವಾದ ಸಮ್ಯಗ್ದರ್ಶನ | 290 |
| 143. | ಬ್ರಹ್ಮದ ಲಕ್ಷಣ | 292 |
| 144. | ಶಾಂಡಿಲ್ಯವಿದ್ಯೆ | 295 |
| 145. | ಏಕಾತ್ಮವಾದದ ವಿಷಯಕ್ಕಿರುವ ಆಕ್ಷೇಪಸಮಾಧಾನಗಳು | 298 |
| 146. | ಪರಮಾರ್ಥದರ್ಶನದ ಪ್ರತಿಪಾದನೆ | 301 |
| 147. | ಜೀವಾತ್ಮಪರಮಾತ್ಮರ ಸಂಬಂಧ | 302 |
| 148. | ಬ್ರಹ್ಮವು ಜಗತ್ಕಾರಣವು | 304 |
| 149. | ಸುಷುಪ್ತ ಪುರಷನ ಸ್ವರೂಪ | 305 |
| 150. | ಬ್ರಹ್ಮಕಾರಣವಾದ | 307 |
| 151. | ಕರ್ಮಕಾಂಡಖಂಡನೆ | 308 |
| 152. | ಜ್ಞಾನದಿಂದಲೇ ಸಂಸಾರನಾಶ | 312 |
| 153. | ಆಚಾರ್ಯರ ಗುಣಕಥನ | 314 |
| 154. | ಇವೆಲ್ಲವೂ ಪರಮಾತ್ಮನೇ | 314 |
| 155. | ಪರಮಾತ್ಮೋಪದೇಶ | 317 |
| 156. | ಸ್ಥಿತಪ್ರಜ್ಞನಿಗೆ ಉಂಟಾಗಿರುವ ಜ್ಞಾನದಿಂದ ಆಗುವ ಫಲಗಳು | 319 |
| 157. | ಎಲ್ಲವೂ ಆತ್ಮನೇ | 321 |
| 158. | ಮೂರು ಜನ ಆಚಾರ್ಯರ ದೃಷ್ಟಿ | 322 |
| 159. | ಜ್ಞಾನನಿಷ್ಠಾವಿಚಾರ | 324 |

| | | |
|---|---|---|
| 160. | ಸುಷುಪ್ತಿವಿಚಾರ | 326 |
| 161. | ಅಕ್ಷರೋಪಾಸಕರ ಭಕ್ತಿ | 328 |
| 162. | ಆಚಾರ್ಯರ ಗುಣಕಥನ | 330 |
| 163. | ಪರಾಪರಪ್ರಕೃತಿ | 332 |
| 164. | ಎರಡು ಪ್ರಶ್ನೆಗಳ ವಿಚಾರ | 337 |
| 165. | ಆಕಾಶವೆಂಬುದಕ್ಕೆ ಏನರ್ಥ? | 338 |
| 166. | ಕ್ಷೇತ್ರಜ್ಞೇಶ್ವರೈಕ್ಯ | 343 |
| 167. | ಪಂಚಕೋಶಾತೀತನಾದ ಆತ್ಮ | 344 |
| 168. | ಬ್ರಹ್ಮಜ್ಞಾನವೂ ಅದರ ಫಲವೂ | 347 |
| 170. | ದಹರಾಕಾಶವು ಬ್ರಹ್ಮವೇ | 348 |

★★★★★

# ಶಂಕರಸಪ್ತಾಹದ ಉಪನ್ಯಾಸಗಳು

# ಪ್ರಸ್ಥಾನತ್ರಯ
# ಭಾಷ್ಯೋಪನ್ಯಾಸಗಳು

ಓಂ

# ಶಂಕರಸಪ್ತಾಹದ ಉಪನ್ಯಾಸಗಳು

## ಆಚಾರ್ಯರ ಸೇವೆಯನ್ನು ಹೇಗೆ ಹೇಗೆ ನಡೆಯಿಸಬೇಕು ಎಂಬುದಕ್ಕೆ ಕೆಲವು ಸೂಚನೆಗಳು

ಆಚಾರ್ಯರ ಜಯಂತಿಯ ಉತ್ಸವವನ್ನು ಮಾಡುವದು ಈಗಿನ ಕಾಲದಲ್ಲಿ ಅಲ್ಲಲ್ಲಿ ನಡೆದೇ ಇರುತ್ತದೆ. ಆದರೆ ಈ ಉತ್ಸವವು ಮಿಕ್ಕ ಉತ್ಸವಗಳಂತೆ **ರಥೋತ್ಸವ, ಮೆರವಣಿಗೆ, ಅಭಿಷೇಕ, ಪಾನಕಪನಿವಾರ, ಬಾಜಬಜಂತ್ರಿ**-ಮುಂತಾದವುಗಳಲ್ಲಿಯೇ ಮುಗಿಯಬಾರದು; ಆಚಾರ್ಯರ ಸಿದ್ಧಾಂತವೇನು? ಅವರು ಲೋಕಕ್ಕೆ ಉಪಕಾರವನ್ನು ಮಾಡಿರುವುದೇನು? ಎಂಬುದನ್ನು ಸ್ಪಷ್ಟವಾಗಿ ಜನರಿಗೆ ತಿಳಿಯಪಡಿಸುವ ಮಹೋತ್ಸವವಾಗಿರಬೇಕು. ಏಕೆಂದರೆ ಶಂಕರಾಚಾರ್ಯರು ಪ್ರಚ್ಛನ್ನಬೌದ್ಧರೆಂದು ಕೆಲವರು ಅದ್ವೈತದ್ವೇಷಿಗಳು ಎನ್ನುತ್ತಿದ್ದಾರೆ. ಅದ್ವೈತಿಗಳಲ್ಲಿಯೂ ಕೆಲವರು ಶಂಕರಾಚಾರ್ಯರ ಸಿದ್ಧಾಂತವನ್ನು ಯೋಗದಲ್ಲಿಯೋ ಒಣತರ್ಕದ ಮಾತಿನ ಅಥವಾ ಪುಸ್ತಕದ ವೇದಾಂತದಲ್ಲಿಯೋ ಅಡಕಮಾಡಿಬಿಡುತ್ತಿದ್ದಾರೆ. ಆದ್ದರಿಂದ ವರ್ಷಕ್ಕೆ ಒಮ್ಮೆಯಾದರೂ ಅಲ್ಲಲ್ಲಿ ಜನರನ್ನು ಸೇರಿಸಿ ಆಚಾರ್ಯರ ನಿಜವಾದ ತತ್ತ್ವವನ್ನು ಜನರ ಮನಸ್ಸಿಗೆ ಹಿಡಿಯುವಂತೆ ಮಾಡಿಸುವ ಉತ್ಸವಗಳು ಅತ್ಯವಶ್ಯವಾಗಿವೆ.

### ಈ ಉತ್ಸವಗಳಲ್ಲಿ ಏನೇನು ಮಾಡಬೇಕು?

1. ಆಚಾರ್ಯರ ಪೂಜೆ ಮುಂತಾದವುಗಳ ಜೊತೆಗೆ ಅವರ ಸಿದ್ಧಾಂತಗಳನ್ನೊಳಕೊಂಡ ಭಕ್ತಿಜ್ಞಾನವೈರಾಗ್ಯಪ್ರಧಾನವಾದ ಭಜನೆಗಳನ್ನೂ ಹರಿಕಥೆಗಳನ್ನೂ ಏರ್ಪಡಿಸಬೇಕು.

2. ಆಚಾರ್ಯರ ಗ್ರಂಥಗಳ ಪಾರಾಯಣ, ಶ್ರವಣ-ಮುಂತಾದವುಗಳನ್ನು ನಡೆಯಿಸಬೇಕು.

3. ಆಚಾರ್ಯರ ಸಿದ್ಧಾಂತಗಳ ವಿಷಯವಾದ ಉಪನ್ಯಾಸವನ್ನು ಮಾಡಿಸಬೇಕು.

4. ವೇದಾಂತಗ್ರಂಥಗಳನ್ನೋದಿದ ಚಿಕ್ಕ ವಯಸ್ಸಿನವರಿಗೆ ಪ್ರೋತ್ಸಾಹ, ವಿದ್ವಾಂಸರಿಗೆ ಸಂಭಾವನೆ, ವೇದಾಂತಗ್ರಂಥಪ್ರಚಾರಕರಿಗೆ ಪೋಷಣದ್ರವ್ಯ-ಇವುಗಳನ್ನು ಯಥಾಶಕ್ತಿಯಾಗಿ ಮಾಡಬೇಕು.

5. ಓದಿ ತಿಳಿದುಕೊಳ್ಳಬಲ್ಲ ಬಡವರಿಗೆ ಆಚಾರ್ಯರ ಸದುಪದೇಶಗಳುಳ್ಳ ಪುಟ್ಟಪುಸ್ತಕಗಳನ್ನು ಧರ್ಮಾರ್ಥವಾಗಿ ಹಂಚಿಸಬೇಕು.

## ಆಚಾರ್ಯರ ಸೇವೆಯನ್ನು ಮಾಡುವ ಬಗೆ

ಆಚಾರ್ಯರ ಸೇವೆಯನ್ನು ನಾವು ಹೇಗೆ ಹೇಗೆ ಮಾಡಬಹುದು? ಯಾವಾಗಲೂ ಅವರ ಉಪಕಾರಸ್ಮರಣೆಯನ್ನು ಮಾಡುವದೇ, ಅವರು ಮಾಡಿರುವ ಸದುಪದೇಶದಂತೆ ಅನುಷ್ಠಾನದಲ್ಲಿಡುವದೇ, ಮುಖ್ಯವಾದ ಸೇವೆಯು. ಆ ದಿನಗಳಲ್ಲಿ ವಿಶೇಷವಾಗಿ ಆಚಾರ್ಯರವರ ಸ್ಮರಣೆಯನ್ನು ಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯವು. ಅನುಕೂಲವಿದ್ದವರು ಜಯಂತಿಯಿಂದ ಆರಾಧನೆಯವರೆಗೆ ಒಂದು ಸಪ್ತಾಹಮಹೋತ್ಸವವನ್ನು ಏರ್ಪಡಿಸಬಹುದು.

ಆಗಿನ ಕಾಲದಲ್ಲಿ -

1. ಆಚಾರ್ಯರ ಪಟಕ್ಕೆ ಅಥವಾ ವಿಗ್ರಹಕ್ಕೆ ಯಥಾಸಂಭವವಾಗಿ ಪೂಜೆ, ಅಭಿಷೇಕ - ಮುಂತಾದ ಉಪಚಾರಗಳನ್ನು ನಡೆಯಿಸಬಹುದು.

2. ಆಚಾರ್ಯರ ಸಿದ್ಧಾಂತಗಳನ್ನೊಳಕೊಂಡ ಭಕ್ತಿಜ್ಞಾನ ವೈರಾಗ್ಯ ಪ್ರಧಾನವಾದ ಭಜನೆಗಳನ್ನೂ ಹರಿಕಥೆಗಳನ್ನೂ ಏರ್ಪಡಿಸಬಹುದು.

3. ಆಚಾರ್ಯರ ಭಾಷ್ಯಗ್ರಂಥಗಳ ಪಾರಾಯಣ, ಶ್ರವಣ-ಮುಂತಾದವುಗಳನ್ನು ಆಚರಿಸಬಹುದು.

4. ವೇದಾಂತಸಿದ್ಧಾಂತಗಳ ಉಪನ್ಯಾಸಗಳನ್ನು ಏರ್ಪಡಿಸಬಹುದು.

5. ಆಚಾರ್ಯರ ಸದುಪದೇಶಗಳನ್ನು ಸ್ವಲ್ಪದರಲ್ಲಿ ಅಡಕಮಾಡಿ ಕೊಂಡಿರುವ ಪುಟ್ಟ ಗ್ರಂಥಗಳನ್ನು ಓದಿ ತಿಳಿದುಕೊಳ್ಳಬಲ್ಲವರಿಗೆ ಧರ್ಮಾರ್ಥವಾಗಿ ಹಂಚಬಹುದು.

ಮುಖ್ಯವಾಗಿ **'ಜ್ಞಾನದಿಂದಲೇ ಮುಕ್ತಿ'**ಯೆಂಬ ಆಚಾರ್ಯರ ಸಿದ್ಧಾಂತವನ್ನು ಲಕ್ಷ್ಯದಲ್ಲಿಟ್ಟು ತತ್ತ್ವಜ್ಞಾನದ ಸಂಪಾದನೆಗೂ ತತ್ತ್ವಜ್ಞಾನದ ಪ್ರಸಾರಣೆಗೂ ಮಾಡುವ ಪ್ರಯತ್ನಗಳೇ ಆಚಾರ್ಯರ ನಿಜವಾದ ಸೇವೆಯೆಂಬುದನ್ನು ಮರೆಯಬಾರದು.

★★★★★

# ಪ್ರಸ್ಥಾನತ್ರಯ ಭಾಷ್ಯೋಪನ್ಯಾಸಗಳು

## ಆತ್ಮನು ಅಭಯಸ್ವರೂಪನು

**30-4-1933**

ಶ್ರೀಶ್ರೀಗಳವರು

ಶ್ರೀಶಂಕರಭಗವತ್ಪಾದರವರ "**ಉಪದೇಶಸಾಹಸ್ರಿ**" ಎಂಬ ಗ್ರಂಥದ ಪದ್ಯಭಾಗದಲ್ಲಿ **ಪಾರ್ಥಿವಪ್ರಕರಣದ** ಹದಿನೇಳು ಶ್ಲೋಕಗಳಲ್ಲಿ ಘ್ರಾಣವೇ ಮುಂತಾದ ಜ್ಞಾನೇಂದ್ರಿಯಗಳು, ವಾಕ್ಕೇ ಮುಂತಾದ ಕರ್ಮೇಂದ್ರಿಯಗಳು, ಅವುಗಳ ವಿಷಯಗಳು, ವಿಷಯಗಳನ್ನು ಅದು ಇದು ಎಂದು ವಿಕಲ್ಪಿಸುವ ಮನಸ್ಸು, ವಸ್ತುವನ್ನು ಗೊತ್ತುಪಡಿಸುವ ಬುದ್ಧಿ- ಇವೆಲ್ಲವೂ ಭೌತಿಕವಾಗಿರುವದರಿಂದಲೂ ಕರಣರೂಪವಾಗಿರುವರಿಂದಲೂ ಅನಾತ್ಮವು. ಇವೆಲ್ಲವನ್ನೂ ತನ್ನ ಸ್ವರೂಪವಾದ ಚೈತನ್ಯಪ್ರಕಾಶದಿಂದ ಬೆಳಗುತ್ತಿರುವ ಆತ್ಮನು ಇವುಗಳಿಗಿಂತ ಬೇರೆಯೆಂತ ತಿಳಿಯಬೇಕು.

ವಸ್ತುಗಳನ್ನು ತೋರಿಸುವ ಬೆಳಕು ತಾನು ತೋರಿಸುವ ವಸ್ತುವಿನ ಆಕಾರವಾಗಿ ಅದರಲ್ಲಿಯೇ ಸೇರಿದಂತಿದ್ದರೂ ನಿಜವಾಗಿಯೂ ಯಾವಾಗಲೂ ಬೇರೆಯಾಗಿರುವಂತೆ ಬಗೆಬಗೆಯ ಪ್ರತ್ಯಯಗಳನ್ನು ಅರಿಯುತ್ತಿರುವ ಆತ್ಮನು ಅವುಗಳಿಗಿಂತ ಬೇರೆಯಾಗಿಯೇ ಇರುವನು. ದೀಪವು ಹೇಗೆ ತನ್ನಲ್ಲಿ ಯಾವ ಮಾರ್ಪಾಡೂ ಇಲ್ಲದೆಯೇ ತನಗೆ ಗೋಚರವಾದದ್ದನ್ನೆಲ್ಲ ಬೆಳಗುವದೊ, ಅದರಂತೆ ಶಬ್ದವೇ ಮುಂತಾದ ವಿಷಯಗಳ ಆಕಾರವಾಗಿರುವ ಪ್ರತ್ಯಯಗಳನ್ನು ಆತ್ಮನು ಮಾರ್ಪಾಡಾಗದೆಯೇ ಅರಿಯುತ್ತಿರುವನು. ಶರೀರೇಂದ್ರಿಯಗಳ ಗುಂಪೇ ತಾನೆಂದು ಅಭಿಮಾನಪಡುತ್ತಿರುವ ಅಹಂಕಾರಕ್ಕೇ ಸುಖದುಃಖಾದಿಗಳಾಗುತ್ತಿರುವವೇ ಹೊರತು ಆತ್ಮನಿಗಲ್ಲ. ಆದ್ದರಿಂದ ದೃಶ್ಯದ ಧರ್ಮವನ್ನು

ತನ್ನಲ್ಲಿ ತಪ್ಪಾಗಿ ಹಾಕಿಕೊಂಡು ಅರಿಯುವ ತಪ್ಪುತಿಳಿವಳಿಕೆಯಿಂದ ಆತ್ಮನಲ್ಲಿ ಸಂಸಾರದುಃಖವು ತೋರುತ್ತಿರುವದು; ನಿಜವಾಗಿ ನೋಡಿದರೆ ದುಃಖವೆಲ್ಲವನ್ನೂ ವಿಷಯವಾಗಿ ಅರಿಯುತ್ತಿರುವ ಅವನಲ್ಲಿ ಯಾವ ಸಂಸಾರದುಃಖವೂ ಇರುವದಿಲ್ಲವೆಂದಾಯಿತು.

ಕಣ್ಣು ತನ್ನನ್ನೇ ತಾನು ಅರಿಯುವಂತೆ ಆತ್ಮನು ದುಃಖಿಯಾದ ತನ್ನನ್ನೇ ತಾನು ಅರಿಯುತ್ತಾನೆಂದು ಏತಕ್ಕೆ ಇಟ್ಟುಕೊಳ್ಳಬಾರದು?- ಎಂದರೆ ಹಾಗಲ್ಲ. ಏಕೆಂದರೆ ಕಣ್ಣು ಅನೇಕ ಅವಯವಗಳುಳ್ಳದ್ದಾಗಿರುವದು; ಅದು ಕಿವಿಯೇ ಮುಂತಾದ್ದರೊಡನೆ ಸೇರಿಕೊಂಡು ಮತ್ತೊಬ್ಬನ ಪ್ರಯೋಜನಕ್ಕಾಗಿರುವದು; ಆತ್ಮನು ಹಾಗಿಲ್ಲ. ಆತ್ಮನಲ್ಲಿಯೂ ಜ್ಞಾನ, ಯತ್ನ, ಇಚ್ಛೆ, ದ್ವೇಷ-ಮುಂತಾದ ಗುಣಗಳಿರುವದರಿಂದ ಆತ್ಮನಲ್ಲಿಯೂ ಅನೇಕತ್ವವಿದೆಯಲ್ಲ?- ಎಂದರೆ ಇದು ಸರಿಯಲ್ಲ. ಏಕೆಂದರೆ ಆತ್ಮನು ಯಾವಾಗಲೂ ಜ್ಞಾನಸ್ವರೂಪನಾಗಿರುತ್ತಾನೆ. ಜ್ಞಾನಕ್ಕೆ ಮಿಕ್ಕದ್ದೆಲ್ಲವೂ ವಿಷಯವಾಗಿರುವದೇ ಹೊರತು ಜ್ಞಾನಕ್ಕೆ ಸಂಬಂಧ ಪಟ್ಟಿರಲಾರದು. ಆದ್ದರಿಂದ ಜ್ಞಾನವು ಅನೇಕವಲ್ಲ, ಮತ್ತೊಂದರೊಡನೆ ಸೇರುವದೂ ಅಲ್ಲ. ಬೆಳಕು ಎಲ್ಲವನ್ನೂ ತೋರಿಸುವದಾದರೂ ಅದು ತನ್ನನ್ನು ತಾನೇ ತೋರಿಸುವದೆಂದರೆ ಹೇಗೆ ಅರ್ಥವಿಲ್ಲವೋ ಇದರಂತೆ ಆತ್ಮನು ಮಿಕ್ಕೆಲ್ಲವನ್ನೂ ಅರಿಯುತ್ತಾನಾದರೂ ತಾನು ತನ್ನನ್ನೇ ಅರಿಯುತ್ತಾನೆನ್ನುವದಕ್ಕೆ ಅರ್ಥವಿಲ್ಲ. ಯಾವದು ಯಾವದರ ಸ್ವಭಾವವೋ ಅದಕ್ಕೆ ಅದು ತಾನೇ ವಿಷಯವಾಗಲಾರದು; ಉದಾಹರಣೆಗೆ ಬೆಂಕಿಯು ತನ್ನನ್ನೇ ತಾನು ಸುಡಲಾರದು, ತನ್ನನ್ನೇ ತಾನು ಬೆಳಗಲೂ ಆರದು.

ಬುದ್ಧಿಯು ತಾನೇ ತನ್ನನ್ನು ಗ್ರಹಿಸಲಾರದೆಂಬುದಕ್ಕೂ ಇದೇ ಯುಕ್ತಿಯು. ಬುದ್ಧಿಯು ತನ್ನನ್ನು ತಾನು ಗ್ರಹಿಸಲಾರದಿದ್ದರೆ ತಾನೇ ಶೂನ್ಯವಾಗಲೆಂದೂ ಹೇಳುವದಕ್ಕಿಲ್ಲ; ಏಕೆಂದರೆ ಸಾಕ್ಷಿರೂಪನಾದ ಸ್ವಯಂಪ್ರಕಾಶಚೈತನ್ಯರೂಪನಾದ ಆತ್ಮನಿಗೆ ಅದು ವಿಷಯವಾಗಿರುತ್ತದೆ. ಆದಕಾರಣ ಅದರ ಸ್ವರೂಪವು ಆ ಸಾಕ್ಷಿಯೇ ಆಗಿರುತ್ತದೆ. ಆದ್ದರಿಂದ ಬುದ್ಧಿಯು ಹುಟ್ಟಿತು, ಅರಿಯಿತು, ಹೋಯಿತು- ಎಂಬ ವಿಕಲ್ಪಗಳನ್ನೆಲ್ಲ ನೋಡುತ್ತಿರುವ ಸಾಕ್ಷಿಚೈತನ್ಯದಲ್ಲಿ ಸಕಲ ವಿಧವಾದ ಸಂಸಾರವೂ

ಅಜ್ಞಾನದಿಂದ ಕಲ್ಪಿತವಾಗಿರುವದೆಂದೂ ಚೈತನ್ಯರೂಪನಾದ ಆತ್ಮನು ನಿತ್ಯಮುಕ್ತನಾಗಿ ಅಭಯಸ್ವರೂಪನಾಗಿರುವನೆಂದೂ ತಿಳಿಯಬೇಕು. ಹೀಗೆಂಬುದು ಪ್ರಕರಣದ ತಿರುಳು.

★★★★★

# ಜ್ಞಾನಕರ್ಮಗಳ ಸಮುಚ್ಚಯವಿಚಾರ

**1-5-1933**

**ಬ್ರ॥ ಶ್ರೀ॥ ಎಂ.ಎಸ್.ವೆಂಕಟೇಶಶಾಸ್ತ್ರಿಗಳವರು**

**ಈಶಾವಾಸ್ಯೋಪನಿಷತ್ತಿನ ಭಾಷ್ಯದ ಕೊನೆಯಲ್ಲಿ ಜ್ಞಾನಕರ್ಮಗಳ ಸಮುಚ್ಚಯವಿಚಾರವನ್ನು** ವಿವರಿಸಿದೆ. ಈ ಉಪನಿಷತ್ತಿನಲ್ಲಿ ''ವಿದ್ಯೆಯನ್ನೂ ಅವಿದ್ಯೆಯನ್ನೂ ಜೊತೆಯಲ್ಲಿ ಸೇರಿಕೊಂಡು ಅನುಷ್ಠಾನಮಾಡಿದರೆ ಅವಿದ್ಯೆಯಿಂದ ಮೃತ್ಯುವನ್ನು ದಾಟಿ, ವಿದ್ಯೆಯಿಂದ ಅಮೃತತ್ವವನ್ನು (ಸಾವಿಲ್ಲದಿರುವಿಕೆಯನ್ನು) ಪಡೆಯುತ್ತಾನೆ'' ಎಂಬರ್ಥದ ಮಂತ್ರವಿದೆ. ಇಲ್ಲಿ ಅವಿದ್ಯೆಯೆಂದರೆ ಕರ್ಮವೆಂದೂ ವಿದ್ಯೆಯೆಂದರೆ ಉಪಾಸನೆಯೆಂದೂ ಇವೆರಡನ್ನೂ ಸೇರಿಸಿಕೊಂಡು ಅನುಷ್ಠಾನಮಾಡಿದರೆ ಅಧರ್ಮಾದಿಗಳನ್ನು ಕಳೆದುಕೊಂಡು ಉಪಾಸ್ಯದೇವತೆಯ ಸ್ವರೂಪವನ್ನು ಪಡೆಯುವದೆಂಬ ಅಮೃತತ್ವವನ್ನು ಪಡೆಯುತ್ತಾನೆ-ಎಂದು ಆಚಾರ್ಯರವರು ಇದಕ್ಕೆ ಅರ್ಥವನ್ನು ಬರೆದಿರುತ್ತಾರೆ. ವಿದ್ಯೆಯೆಂದರೆ ಪರಮಾರ್ಥವಾದ ವಿದ್ಯೆಯೇ, ಅಮೃತತ್ವವೆಂದರೆ ಮುಕ್ತಿಯೇ-ಎಂದು ಏತಕ್ಕೆ ಅರ್ಥಮಾಡಬಾರದೆಂಬುದಕ್ಕೆ ಈ ಭಾಷ್ಯದಲ್ಲಿ ಸಮಾಧಾನವಿದೆ.

ಜ್ಞಾನವು ಕರ್ಮಕ್ಕೆ ತೀರ ವಿರುದ್ಧವಾಗಿರುತ್ತದೆ. ಹೇಗೆಂದರೆ 'ಕರ್ಮವನ್ನು ಮಾಡು' ಎಂಬ ರೂಪದಲ್ಲಿರುವ ವಿಧಿವಚನಗಳಿಂದ ಕರ್ಮದ ಅರಿವಾಗುತ್ತದೆ; 'ಇದು ಇಂಥದ್ದು' ಎಂಬ ರೂಪದಲ್ಲಿರುವ ವಸ್ತುಬೋಧಕ ವಚನಗಳಿಂದ ಆತ್ಮಜ್ಞಾನವಾಗುತ್ತದೆ. ಕರ್ಮದ ಅರಿವಾದ ಮೇಲೆ ಅವನ್ನು ಮಾಡುವದು

ಉಳಿದಿರುತ್ತದೆ; ಆತ್ಮವನ್ನರಿತುಕೊಂಡ ಮೇಲೆ ಮಾಡಬೇಕಾದದ್ದು ಏನೂ ಇರುವದಿಲ್ಲ. ಕರ್ಮದ ಜ್ಞಾನಕ್ಕೆ ಮುಂದೆ ಪಡೆಯಬೇಕಾಗಿರುವ ಸ್ವರ್ಗವೇ ಮುಂತಾದದ್ದು ಫಲವು; ಆತ್ಮಜ್ಞಾನಕ್ಕೆ ಯಾವಾಗಲೂ ಇದ್ದು ಕೊಂಡಿರುವ ಕೈವಲ್ಯವು ಫಲವು. ಹೀಗೆ ಒಂದಕ್ಕೊಂದಕ್ಕೆ ಅತ್ಯಂತ ವಿರುದ್ಧವಾಗಿರುವ ಜ್ಞಾನಕರ್ಮಗಳನ್ನು ಒಬ್ಬನೇ ಒಂದೇ ಕಾಲದಲ್ಲಿ ಇಟ್ಟುಕೊಂಡಿರುವದೆಂಬುದು ಆಗದ ಕೆಲಸ. ಕರ್ಮವು ಅವಿದ್ಯೆಯ ಕಾರ್ಯವಾಗಿರುವದರಿಂದಲೂ ಅವಿದ್ಯೆಯು ಜ್ಞಾನವುಂಟಾದ ಮೇಲೆ ನಿಲ್ಲಲೇ ಆರದಾದ್ದರಿಂದಲೂ ಇವೆರಡನ್ನೂ ಸೇರಿಸುವದೆಂಬುದು ಒಪ್ಪುವ ಮಾತಲ್ಲ. ಶಾಸ್ತ್ರವು ಇರುವ ವಸ್ತುವಿನ ವಿಷಯವಾಗಿ ನಮಗೆ ತಿಳಿವನ್ನುಂಟು ಮಾಡೀತೇ ಹೊರತು ಒಟ್ಟಿಗೆ ಇರಲಾಗದ ಜ್ಞಾನಕರ್ಮಗಳನ್ನು ಕೂಡಿಸಿಕೊಳ್ಳಿರೆಂದು ಎಂದಿಗೂ ಹೇಳಲಾರದು; ಹಾಗೆ ಹೇಳಿದರೆ ಅದು ಪ್ರಮಾಣವೇ ಅಗಲಾರದು. ಆದರೆ ವಿದ್ಯೆಯೆಂದರೆ ಉಪಾಸನೆಯೆಂದಿಟ್ಟುಕೊಂಡರೆ ಮೇಲೆ ಹೇಳಿದ ಯಾವ ಆಕ್ಷೇಪಣೆಯೂ ಅದಕ್ಕೆ ಹತ್ತುವದಿಲ್ಲ. ಆದ್ದರಿಂದ ಇಲ್ಲಿ ವಿದ್ಯೆಯೆಂದರೆ ಉಪಾಸನೆಯೇ.

ಪರಮಾರ್ಥವಾದ ಮುಕ್ತಿಯು ಯಾವಾಗಲೂ ನಮ್ಮ ಸ್ವಭಾವವೇ ಆಗಿರುವದರಿಂದ ಅದು ಯಾವದಾದರೂ ಒಂದು ದಾರಿಯಿಂದ ಹೋಗಿ ಪಡೆಯುವ ಫಲವಾಗಲಾರದು. ಆದರೆ ಇಲ್ಲಿ ಅಮೃತತ್ವವನ್ನು ಪಡೆಯುವ ದಾರಿಯನ್ನು ತೋರಿಸಬೇಕೆಂದು ಉಪಾಸಕನು ಪ್ರಾರ್ಥಿಸಿಕೊಂಡಿರುತ್ತಾನೆ. ಆದ್ದರಿಂದ ಅಮೃತತ್ವವೆಂದರೆ ದೇವತಾತ್ಮಭಾವವೇ; ಅದೂ ಬಹುಕಾಲದವರೆಗಿರುವದರಿಂದ ಅದನ್ನು ಸಾವಿಲ್ಲದಿರುವಿಕೆಯೆಂದು ಕರೆದಿರುತ್ತದೆ. ಹೀಗೆಂಬುದು ಭಾಷ್ಯಕಾರರ ತಾತ್ಪರ್ಯವು.

★★★★★

# ಪಂಚಕೋಶವಿವೇಕ

**2-5-1933**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ತೈತ್ತಿರೀಯೋಪನಿಷದ್ಭಾಷ್ಯದಲ್ಲಿ** ''ಯಾವನು ಹೀಗೆಂದು ತಿಳಿಯುವನೋ ಅವನು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ- ಎಂಬ ಆತ್ಮರನ್ನು ದಾಟುತ್ತಾನೆ'' (2-8) ಎಂದು ಹೇಳಿರುವ ವಾಕ್ಯದಲ್ಲಿ 'ಹೀಗೆಂದು ತಿಳಿಯುವವನು ಪರಮಾತ್ಮನಿಗಿಂತ ಬೇರೆ, ಅವನು ಐದು ಬಗೆಯ ಆತ್ಮರನ್ನು ಒಬ್ಬೊಬ್ಬರನ್ನಾಗಿ ದಾಟುತ್ತಾರೆ'- ಎಂದು ಅಕ್ಷರಾರ್ಥವನ್ನು ಮಾಡಿದರೆ ಒಬ್ಬ ಪರಮಾತ್ಮನೇ ಜಗತ್ತೆಲ್ಲವನ್ನೂ ಸೃಷ್ಟಿಸಿ ಅದರೊಳಕ್ಕೆ ಪ್ರವೇಶಿಸಿರುತ್ತಾನೆಂದು ಹೇಳುವ ಶ್ರುತಿಗೆ ವಿರೋಧವಾಗುವದು; ತಿಳಿಯುವವನೂ ತಿಳಿಯಲ್ಪಡುವ ಪರಮಾತ್ಮನೂ ಒಬ್ಬನೇ ಎಂದರೆ, 'ತಾನೇ ತನ್ನನ್ನು ದಾಟುತ್ತಾನೆ ಅಥವಾ ಪಡೆಯುತ್ತಾನೆ' - ಎಂದು ಅರ್ಥಮಾಡಿದಂತೆ ಆಗುವದು, ಪರಮಾತ್ಮನೇ ಸಂಸಾರಿಯೆಂದಾಗುವದು, ಅಥವಾ ಪರಮಾತ್ಮನೇ ಇಲ್ಲವೆಂದಾಗುವದು; ಆದ್ದರಿಂದ ಈ ವಾಕ್ಯದರ್ಥವನ್ನು ಹೇಗೆ ತಿಳಿದುಕೊಳ್ಳಬೇಕು?- ಎಂಬುದು ಸಂಶಯವು.

ಈ ಸಂಶಯವನ್ನು ಬಗೆಹರಿಸುವದಕ್ಕೆ ಸಿದ್ಧಾಂತಿಯು ಹೇಳಿರುವದೇನೆಂದರೆ:- ಬ್ರಹ್ಮವನ್ನು ತಿಳಿದುಕೊಳ್ಳುವವನು ಎಲ್ಲಕ್ಕೂ ಹೆಚ್ಚಿನದಾದ ಬ್ರಹ್ಮಭಾವವನ್ನೇ ಪಡೆಯುತ್ತಾನೆಂದು ತಿಳಿಸುವದಕ್ಕೆ ಈ ಉಪನಿಷತ್ತು ಹೊರಟಿರುತ್ತದೆ. ಜ್ಞಾನದಿಂದ ಅಜ್ಞಾನವು ಹೋದೀತೇ ಹೊರತು ಹೊಸದಾಗಿ ಯಾವದೊಂದನ್ನೂ ಅದರಿಂದ ಪಡೆಯುವದು ಆಗಲಾರದು. ಆದ್ದರಿಂದ ಅವಿದ್ಯೆಯಿಂದ ಆಗಿರುವ ಅನ್ನಮಯನೇ ಮುಂತಾದ ರೂಪವನ್ನು ಜ್ಞಾನದಿಂದ ಕಳೆದುಕೊಳ್ಳುವದೇ ಪರಮಾತ್ಮ ಪ್ರಾಪ್ತಿಯೆಂದು ಅರ್ಥಮಾಡಬೇಕು. ಮುಕ್ತಿಯು ನಿತ್ಯವಾಗಬೇಕಾದರೆ ಅದು ಕರ್ಮದ ಫಲವಾಗಕೂಡದು. ಆದ್ದರಿಂದಲೂ ತಾನೇ ಬ್ರಹ್ಮವಾಗಿದ್ದು ತನ್ನನ್ನೇ ತಾನು ಜ್ಞಾನದಿಂದ ಪಡೆಯುತ್ತಾನೆ- ಎಂದು ಹೇಳುವದೇ

ಯುಕ್ತವು. ಪರಮಾತ್ಮನನ್ನು ಪಡೆದವನು ಅಭಯದಲ್ಲಿ ನಿಲುಗಡೆಯನ್ನು ಹೊಂದುತ್ತಾನೆಂದು ಶ್ರುತಿ ಇದೆ; ಜ್ಞಾನಿಯು ತನಗಿಂತ ಬೇರೆಯಾಗಿ ಏನೊಂದನ್ನೂ ಕಾಣದಿರುವದರಿಂದ ಅವನಿಗೆ ಹೆದರಿಕೆ ಹೋಗುವದೆಂಬುದು ಯುಕ್ತವಾಗಿದೆ. ತನಗಿಂತ ಬೇರೆಯಾದದ್ದೆಲ್ಲವೂ ಅವಿದ್ಯೆಯಿಂದ ಆಗಿರುವದೆಂದಾದರೆ ಸರಿಯಾದ ತಿಳಿವಳಿಕೆಗೆ ಅದು ಕಾಣದೆ ಹೋಗುವದೂ ಸ್ವಭಾವವಾಗಿದೆ. ದ್ವೈತವು ಜಾಗ್ರತ್ಸ್ವಪ್ನಗಳಲ್ಲಿ ಮಾತ್ರವೇ ಕಂಡುಬರುವದರಿಂದಲೂ ಸುಷುಪ್ತಿ ಸಮಾಧಿಗಳಲ್ಲಿ ಕಾಣಬರದೆ ಇರುವದರಿಂದಲೂ ಅದು ಅವಿದ್ಯಾಕೃತವೆಂಬುದೂ ಅನುಭವಸಿದ್ಧವಾಗಿರುತ್ತದೆ. ಆದ್ದರಿಂದ 'ಆನಂದಮಯನಾದ ಆತ್ಮನನ್ನು ದಾಟುತ್ತಾನೆ' ಎಂಬುದೇ ಮುಂತಾದ ವಾಕ್ಯಗಳಲ್ಲಿ ತಾನು ಅವಿಷಯವಾದ ಬ್ರಹ್ಮವೇ ಎಂದು ಅರಿತುಕೊಳ್ಳುವದರಿಂದ ಆನಂದಮಯನೆಂಬ ಭ್ರಾಂತಿಯನ್ನು ಬಗೆಹರಿಸಿಕೊಳ್ಳುತ್ತಾನೆಂಬುದೇ ಅರ್ಥವು. ಹಾಗಿಲ್ಲದೆ ನಿಜವಾಗಿಯೂ ದಾಟುತ್ತಾನೆ ಎಂದರ್ಥ ಮಾಡಿದರೆ ಆತ್ಮನು ಸರ್ವವ್ಯಾಪಿಯಾಗಿರುವದರಿಂದಲೂ ಆತ್ಮನಿಗಿಂತ ಬೇರೊಂದು ವಸ್ತುವೂ ಇಲ್ಲದ್ದರಿಂದಲೂ ಆತ್ಮನು ಯಾವದೊಂದನ್ನಾದರೂ ದಾಟುತ್ತಾನೆಂಬ ಮಾತು ನಿರರ್ಥಕವಾಗುವದು- ಹೀಗೆಂಬುದು ಭಾಷ್ಯದ ಸಂಕ್ಷೇಪಾರ್ಥವು.

★★★★★

# ತುರೀಯ ವಿಚಾರ

**3-5-33**

**ಬ್ರ॥ ಶ್ರೀ॥ ಎಂ.ಎಸ್.ವೆಂಕಟೇಶಶಾಸ್ತ್ರಿಗಳವರು**

**ಮಾಂಡೂಕ್ಯೋಪನಿಷತ್ತಿನಲ್ಲಿ** ಏಳನೆಯ ಮಂತ್ರದ ಭಾಷ್ಯದಲ್ಲಿರುವ ತುರೀಯ ವಿಚಾರವನ್ನು ವಿವರಿಸಿದೆ. ಅಲ್ಲಿ ಬ್ರಹ್ಮದ ನಾಲ್ಕು ಪಾದಗಳಾದ ವಿಶ್ವ, ತೈಜಸ, ಪ್ರಾಜ್ಞ, ತುರೀಯ - ಇವುಗಳಲ್ಲಿ ಮೊದಲನೆಯ ಮೂರೂ

ಅವಿದ್ಯಾಕಲ್ಪಿತವಾಗಿರುತ್ತವೆ; ಕೊನೆಯದಾದ ತುರೀಯವು ಅವುಗಳ ನಿಜವಾದ ಸ್ವರೂಪವಾಗಿರುತ್ತದೆ. ಹೀಗಿರುವದರಿಂದ ಹಗ್ಗವನ್ನು ಹಾವಲ್ಲವೆಂದು ತಿಳಿಯಿಸುವಂತೆ 'ಮೂರವಸ್ಥೆಗಳಲ್ಲಿರುವ ವಿಶ್ವತೈಜಸಪ್ರಾಜ್ಞರೂಪಗಳು ನಿನ್ನವಲ್ಲ' ಎಂದು ಹೇಳಿದ ಸಮಕಾಲಕ್ಕೇ ಆತ್ಮನ ಸ್ವರೂಪವನ್ನು ತಿಳಿಸಿದಂತಾಗುವದು. ಹಾಗಿಲ್ಲದೆ ಮೂರವಸ್ಥೆಗಳಲ್ಲಿರುವ ಆತ್ಮರಿಗಿಂತ ತುರೀಯನೆಂಬ ಆತ್ಮನು ಬೇರೆಯಾಗಿದ್ದರೆ ತುರೀಯನನ್ನು ತಿಳಿಯುವದಕ್ಕೆ ಮಾರ್ಗವೇ ಇರುತ್ತಿರಲಿಲ್ಲ; ಶಾಸ್ತ್ರವನ್ನು ತಿಳಿಸಿದ್ದು ವ್ಯರ್ಥವಾಗುತ್ತಿತ್ತು, ಅಥವಾ ತುರೀಯಾತ್ಮನು ಇಲ್ಲವೆಂದೇ ಆಗುತ್ತಿತ್ತು. ಆದ್ದರಿಂದಲೇ ಈಗ ಕಲ್ಪಿತವಾದ ವಿಶ್ವತೈಜಸಪ್ರಾಜ್ಞರಲ್ಲವೆಂಬುದನ್ನು ಅರಿತ ಒಡನೆ ಮತ್ತೊಂದು ಪ್ರಮಾಣವನ್ನಾಗಲಿ ಸಾಧನವನ್ನಾಗಲಿ ಜಯಸದೆ ಅದ್ವಿತೀಯಾತ್ಮನಾದ ತುರೀಯನ ಜ್ಞಾನವಾದಂತೆಯೇ ಆಗುವದು; ಆಮೇಲೆ ಪ್ರಮಾತೃಪ್ರಮಾಣ ಪ್ರಮೇಯವ್ಯವಹಾರವೇ ನಿಲ್ಲುವದಿಲ್ಲ.

★★★★★

# ಬ್ರಹ್ಮನ ಸ್ವರೂಪ

**4-5-1933**

**ಬ್ರ|| ಶ್ರೀ|| ಎಸ್.ವಿಠ್ಠಲಶಾಸ್ತ್ರಿಗಳವರು**

**ಬ್ರಹ್ಮಸೂತ್ರದ ಮೂರನೆಯ ಅಧ್ಯಾಯದ ಎರಡನೆಯ ಪಾದದಲ್ಲಿ ಇಪ್ಪತ್ತೊಂದನೆಯ ಸೂತ್ರದ ಭಾಷ್ಯ**ಭಾಗದಲ್ಲಿ ವಿವರಣೆಯು ಹೀಗಿದೆ. ಈ ಅಧಿಕರಣದಲ್ಲಿ ಬ್ರಹ್ಮದ ಸ್ವರೂಪವನ್ನು ಕುರಿತು ಚರ್ಚೆಯಿರುತ್ತದೆ. ಬ್ರಹ್ಮದಲ್ಲಿ ಯಾವ ವಿಶೇಷವೂ ಇಲ್ಲವೆಂಬುದನ್ನು ಹೇಳುವ ಶ್ರುತಿವಚನಗಳೂ ಇವೆ; ಅದರಲ್ಲಿ ಸರ್ವಗಂಧತ್ವ ಸರ್ವರಸತ್ವವೇ ಮುಂತಾದ ವಿಶೇಷಗಳುಂಟೆಂದು ಹೇಳುವ ಶ್ರುತಿವಚನಗಳೂ ಇವೆ. ಇವೆರಡನ್ನೂ ಸರಿಯೆಂದು ಇಟ್ಟುಕೊಳ್ಳಬೇಕೆ, ಅಥವಾ ಇವುಗಳಲ್ಲಿ ಒಂದನ್ನು ಒಪ್ಪಿ ಇನ್ನೊಂದನ್ನು ಬಿಟ್ಟುಬಿಡಬೇಕೆ? ಒಂದು ಮಾತ್ರ

ನಿಜವೆಂದಾದರೆ ಇವುಗಳಲ್ಲಿ ಯಾವದನ್ನು ಇಟ್ಟುಕೊಳ್ಳಬೇಕು? – ಎಂಬ ಸಂಶಯವು ಬರಲಾಗಿ ಬ್ರಹ್ಮವು ನಿರ್ವಿಶೇಷವಾದದ್ದೇ, ಅದರಲ್ಲಿ ಯಾವದೊಂದು ವಿಶೇಷವಾದ ಆಕಾರವೂ ಇರುವದಿಲ್ಲ. ಬ್ರಹ್ಮವು ನಿರಾಕಾರವೆಂದು ಹೇಳುವ ಶ್ರುತಿಗಳು ನಿರಾಕಾರತ್ವವನ್ನೇ ಹೇಳುವುದಕ್ಕೆ ಬಂದಿರುತ್ತವೆ; ಆದರೆ ಬ್ರಹ್ಮವು ಆಕಾರವುಳ್ಳದ್ದೆಂದು ಹೇಳುವ ಶ್ರುತಿಗಳು ಉಪಾಸನೆಯನ್ನು ಹೇಳುವದಕ್ಕಾಗಿ ಬಂದಿರುತ್ತವೆಯಾದ್ದರಿಂದ ನಿಜವಾಗಿಯೂ ಬ್ರಹ್ಮಕ್ಕೆ ಆಕಾರವುಂಟೆಯ ಅವು ಹೇಳಿದಂತೆ ಆಗುವದಿಲ್ಲ. ಆಕಾರವು ಉಪಾಧಿಯಿಂದುಂಟಾಗಿರುವದರಿಂದಲೂ ಉಪಾಧಿಯು ಅವಿದ್ಯಾಕಲ್ಪಿತವಾಗಿ ರುವದರಿಂದಲೂ ನಿಜವಾಗಿ ಬ್ರಹ್ಮಕ್ಕೆ ಆಕಾರವಿಲ್ಲ- ಎಂದು ಭಾಷ್ಯಕಾರರು ನಿರ್ಣಯಿಸಿರುತ್ತಾರೆ.

ಆದರೆ ಮತ್ತೆ ಕೆಲವರು ಈ ಅಧಿಕರಣವನ್ನು ಎರಡು ಭಾಗವಾಗಿ ಒಡೆದು ಬ್ರಹ್ಮವು ನಿಷ್ಪ್ರಪಂಚವೊ, ಸಪ್ರಂಚವೊ? ನಿಷ್ಪ್ರಪಂಚವಾದರೆ ಅದು ಸದ್ರೂಪವೊ, ಚಿದ್ರೂಪವೋ? ಎರಡೂ ರೂಪವಾಗಿದೆಯೊ? – ಎಂಬ ಸಂಶಯವನ್ನು ತೆಗೆದಿರುತ್ತಾರೆ. ಅವರ ಮತದಲ್ಲಿ ಎರಡನೆಯ ಭಾಗವು ವ್ಯರ್ಥವಾಗುವದು; ಏಕೆಂದರೆ ನಿರ್ವಿಶೇಷವಾದ ಬ್ರಹ್ಮದಲ್ಲಿ ಎರಡು ರೂಪಗಳಿರುವದು ಸಾಧ್ಯವಿಲ್ಲ, ಚಿದ್ರೂಪಕ್ಕಿಂತ ಬೇರೆಯಾದ ಸದ್ರೂಪವು ಇರುವದೂ ಇಲ್ಲ. ಆದ್ದರಿಂದ ಬ್ರಹ್ಮವು ನಿರಾಕಾರವೇ ಆದರೆ ಅದು ಸಾಕಾರವೆಂದು ಹೇಳುವ ಶ್ರುತಿಗಳಿಗೆ ಗತಿಯೇನು? ಎಂಬುದನ್ನು ತಿಳಿಸುವದಕ್ಕೆ ಎರಡನೆಯ ಭಾಗದ ಸೂತ್ರಗಳು ಬಂದಿವೆಯೆಂಬುದೇ ಸರಿ.

ಬ್ರಹ್ಮದಲ್ಲಿ ಆಕಾರವನ್ನು ಹೇಳುವ ಶ್ರುತಿಗಳು ಪ್ರಪಂಚವಿಲಯವನ್ನು ಮಾಡುವದನ್ನು ತಿಳಿಸುವದಕ್ಕೆ ಬಂದಿವೆಯೆಂದು ಕೆಲವರೆನ್ನುತ್ತಾರೆ. ಇದು ಸರಿಯಲ್ಲ, ಏಕೆಂದರೆ ಪ್ರಪಂಚವಿಲಯವೆಂದರೆ ಭೇದವನ್ನು ಕರಗಿಸವದೆಂರ್ಥ, ಬ್ರಹ್ಮದಲ್ಲಿ ನಿಜವಾಗಿ ಭೇದವಿದೆಯೆಂದೂ ತುಪ್ಪವನ್ನು ಬಿಸಿಮಾಡಿ ಕರಿಗಿಸುವಂತೆ ಎಲ್ಲಾ ಭೇದವನ್ನೂ ಕರಗಿಸ ಬೇಕೆಂದೂ ಪೂರ್ವಪಕ್ಷಿಯ ಅಭಿಪ್ರಾಯವಿದ್ದರೆ ಅದು ಆಗದ ಮಾತು; ಏಕೆಂದರೆ ನಿಜವಾಗಿರುವ ಪದಾರ್ಥವನ್ನು ನಾಶಮಾಡುವದಕ್ಕೆ ಯಾರಿಂದಲೂ ಆಗಲಾರದು. ಒಂದು ವೇಳೆ ಅದೂ ಆಗುವದೆಂದು ಒಪ್ಪಿಕೊಂಡರೂ ಒಬ್ಬನು ಪ್ರಪಂಚವನ್ನು ಕರಗಿಸಿ ಮುಕ್ತನಾದ ಮೇಲೆ ಮಿಕ್ಕವರಿಗೆ ಕರಗಿಸಬೇಕಾದ

ಪ್ರಪಂಚವೇ ಉಳಿದಿರಲಾರದು. ಹಾಗಿಲ್ಲದೆ ನಾವು ಹೇಳುವಂತೆ ಪ್ರಪಂಚವು ಅವಿದ್ಯಾಕಲ್ಪಿತವೆಂಬುದನ್ನು ಪೂರ್ವಪಕ್ಷಿಯು ಒಪ್ಪುವದಾದರೆ - ಹಗ್ಗದಲ್ಲಿ ಕಲ್ಪಿಸಿರುವ ಹಾವನ್ನು ಹಗ್ಗದ ಅರಿವಿನಿಂದಲೇ ಕಳೆದುಕೊಳ್ಳುವಂತೆ- ಬ್ರಹ್ಮದಲ್ಲಿ ಕಲ್ಪಿತವಾಗಿರುವ ಪ್ರಪಂಚವನ್ನು ಬ್ರಹ್ಮದ ಅರಿವಿನಿಂದಲೇ ಕಳೆದುಕೊಳ್ಳಬೇಕಾಗುವದು. ಈ ಎಲ್ಲಾ ಕಾರಣದಿಂದ ಬ್ರಹ್ಮದಲ್ಲಿ ಯಾವ ವಿಶೇಷವೂ ಇಲ್ಲವೆಂದು ಹೇಳುವ ಸಂದರ್ಭದಲ್ಲಿ ಬಂದಿರುವ ಬ್ರಹ್ಮದ ಗುಣಗಳು ಪ್ರಪಂಚವಿಲಯವನ್ನು ಬೋಧಿಸುತ್ತವೆಯೆಂದಿಟ್ಟುಕೊಳ್ಳುವದು ಯುಕ್ತವು. ಆದರೆ ಇಂಥಿಂಥ ಗುಣವುಳ್ಳದ್ದೆಂದು ಬ್ರಹ್ಮವನ್ನು ಉಪಾಸನೆಮಾಡಬೇಕು- ಎಂದು ಹೇಳುವ ಶ್ರುತಿಗಳು ಪ್ರಪಂಚವಿಲಯಕ್ಕಾಗಿ ಬಂದಿರುವದಿಲ್ಲ; ಅವುಗಳಲ್ಲಿ ಉಪಾಸನೆಯೇ ಮುಖ್ಯವು; ಉಪಾಸನೆಯಿಂದ ಪಾಪನಾಶ, ಯಾವದಾದರೊಂದು ಫಲದ ಪ್ರಾಪ್ತಿ, ಅಥವಾ ಕ್ರಮಮುಕ್ತಿಯು ದೊರೆಯುತ್ತದೆಯೆಂದು ಶಾಸ್ತ್ರಪ್ರಾಮಾಣ್ಯದಿಂದ ನಂಬಬೇಕಾಗಿರುವದು. ಅಂತೂ ಉಪಾಸನೆಯನ್ನು ಹೇಳುವ ವಾಕ್ಯಗಳಲ್ಲಿ ಉಪಾಸನೆಯೇ ಮುಖ್ಯತಾತ್ಪರ್ಯವಾಗಿರುವದರಿಂದ ಅವುಗಳ ಫಲದಿಂದ ಬ್ರಹ್ಮವು ಸಾಕಾರವೆಂದು ನಿರ್ಣಯಿಸುವದಕ್ಕಾಗಲಾರದು.

★★★★★

## ಬ್ರಹ್ಮವನ್ನು ತಿಳಿಯುವದು ಹೇಗೆ?

**5-5-1933**

**ಶ್ರೀಶ್ರೀಗಳವರು**

**ಕೇನೋಪನಿಷತ್ತಿನ ಎರಡನೆಯ ಖಂಡದ ನಾಲ್ಕನೆಯ ಮಂತ್ರದ ಭಾಷ್ಯ**ದರ್ಥದಲ್ಲಿ ಬ್ರಹ್ಮವು ಜ್ಞಾನಕ್ಕೆ ವಿಷಯವಲ್ಲವೆಂದು ಹಿಂದಿನ ಗ್ರಂಥಸಂದರ್ಭದಲ್ಲಿ ತಿಳಿಸಿರುವದರಿಂದ 'ಬ್ರಹ್ಮಜ್ಞಾನಿಗಳಿಗೂ ಬ್ರಹ್ಮವು ತಿಳಿಯದು, ಅಜ್ಞಾನಿಗಳಿಗೂ ತಿಳಿಯದು; ಹೀಗಿರುವಲ್ಲಿ ಇವರಿಬ್ಬರಲ್ಲಿ ಹೆಚ್ಚು ಕಡಿಮೆ

ಏನು? ಬ್ರಹ್ಮವನ್ನು ಸರಿಯಾಗಿ ತಿಳಿದುಕೊಳ್ಳುವದು ಹೇಗೆ?' ಎಂಬ ಪ್ರಶ್ನೆಯು ತಲೆದೋರುವದಷ್ಟೆ. ಅದಕ್ಕೆ ಈ ಮಂತ್ರದಲ್ಲಿ ಉತ್ತರವನ್ನು ಹೇಳಿರುತ್ತದೆ.

ಪ್ರತಿಯೊಂದು ಪ್ರತ್ಯಯವೂ (ಅರಿವೂ) ಆಗುತ್ತಿರುವಲ್ಲಿ ಆ ಪ್ರತ್ಯಯವನ್ನು ನೋಡುತ್ತಿರುವ ಸಾಕ್ಷಿಯಾದ ಬರಿಯರಿವೇ ಬ್ರಹ್ಮವು ಎಂದು ಅರಿತುಕೊಂಡರೆ ಅದನ್ನು ಸರಿಯಾಗಿ ಅರಿತಂತಾಗುವದು. ಆಗ ಅದಕ್ಕೆ ಹುಟ್ಟುಸಾವುಗಳಿಲ್ಲವೆಂದೂ ಅದು ನಿತ್ಯವಾದದ್ದೆಂದೂ ವಿಶುದ್ಧರೂಪವಾದದ್ದೆಂದೂ ನಮ್ಮಗಳ ಒಳಗಿನ ಆತ್ಮನೆಂದೂ ಯಾವ ವಿಶೇಷವೂ ಇಲ್ಲದ್ದೆಂದೂ ಸಕಲಪ್ರಾಣಿಗಳಲ್ಲಿಯೂ ಒಂದೇ ಎಂದೂ ಏರ್ಪಡುತ್ತದೆ. ಈ ಮಂತ್ರದಲ್ಲಿರುವ '**ಪ್ರತಿಬೋಧವಿದಿತಮ್**' ಎಂಬ ಮಾತಿಗೆ ಇದೇ ಅರ್ಥವು.

ಈ ಮಾತಿಗೆ ಕೆಲವರು ಬೇರೆ ಅರ್ಥವನ್ನು ಹೇಳುತ್ತಾರೆ: ಆತ್ಮನು 'ಅರಿಯುವವನು' ಅರಿಯುವದೆಂಬ ಕ್ರಿಯೆಗೆ ಕರ್ತೃ; ಆದ್ದರಿಂದ ಪ್ರತಿಯೊಂದು ಅರಿವಿಗೂ ಕರ್ತೃವಾಗಿ ಅವನನ್ನು ಅರಿತುಕೊಂಡರೆ ಸರಿಯಾಗಿ ತಿಳಿದಂತಾಯಿತೆಂದು ಅವರ ಅಭಿಪ್ರಾಯ. ಆದರೆ ಅವರ ಮತದಲ್ಲಿ ಆತ್ಮನಲ್ಲಿ ಅರಿಯುವದೆಂಬ ಕ್ರಿಯೆಯು ಹುಟ್ಟಿ ನಾಶವಾಗುತ್ತಿರುವದೆಂದಾಗುವದರಿಂದ ಆತ್ಮನು ಜ್ಞಾನಸ್ವರೂಪನಲ್ಲವೆಂದಾಗುವದು; ಅವನಲ್ಲಿ ವಿಕ್ರಿಯೆಯುಂಟೆಂದೂ ಆಗುವದು. ಈ ಎರಡೂ ಶ್ರುತಿಗೂ ಯುಕ್ತಿಗೂ ವಿರುದ್ಧವಾಗಿರುವವು.

ವೈಶೇಷಿಕರ ಮತದಲ್ಲಿ ಜ್ಞಾನವೆಂಬುದು ಆತ್ಮಮನಸ್ಸುಗಳ ಸಂಯೋಗದಿಂದ ಹುಟ್ಟಿರುವದೆಂದೂ ಆತ್ಮನ ಧರ್ಮವೆಂದೂ ಒಪ್ಪಿರುತ್ತದೆ. ಈ ಮತದಲ್ಲಿಯೂ ಆತ್ಮನು ಅಚೇತನನು ಎಂದಾಗುತ್ತದೆ. ಇದು ಶ್ರುತಿ ವಿರುದ್ಧವು, ಆತ್ಮನಲ್ಲಿ ಯಾವ ಅವಯವಗಳೂ ಇಲ್ಲದ್ದರಿಂದ ಅವನು ಮತ್ತೊಂದರೊಡನೆ ಸಂಯೋಗವಾಗುವನೆಂಬುದು ಯುಕ್ತಿವಿರುದ್ಧವು. ಆತ್ಮನು ವ್ಯಾಪಕನಾದ್ದರಿಂದ ಮನಸ್ಸಿನೊಡನೆ ನಿತ್ಯಸಂಯುಕ್ತನಾಗಿರುವನೆಂದಾಗುತ್ತದೆ; ಆಗ ಯಾವಾಗಲೂ ಅನುಭವವೇ ಇರಬೇಕೇ ಹೊರತು, ಸ್ಮೃತಿಯೆಂಬುದು ಇಂಥ ಕಾಲದಲ್ಲಿ ಉಂಟಾಗುವದೆಂಬುದಕ್ಕೆ ಕಾರಣವಿಲ್ಲದೆ ಹೋಗುವದು. ಅಸಂಗನಾದ ಆತ್ಮನು ಮತ್ತೊಂದರೊಡನೆ ಸೇರುವದೆಂಬುದೂ ಶ್ರುತಿವಿರುದ್ಧವಾಗುವದು.

ಮತ್ತೆ ಕೆಲವರು ಆತ್ಮನು ತನ್ನನ್ನು ತಾನೇ ಅರಿಯುವನೆಂದು ಈ ಮಾತಿಗೆ ಅರ್ಥವನ್ನು ಮಾಡಿರುತ್ತಾರೆ. ಉಪಾಧಿಯಿಂದ ಅರಿಯುವವನು, ಅರಿಯಲ್ಪಡುವವನು- ಎಂಬ ಭೇದವನ್ನು ಕಲ್ಪಿಸಬಹುದಾದರೂ ಸ್ವತಃ ತನ್ನನ್ನು ತಾನು ಅರಿಯುತ್ತಾನೆಂದಾಗಲಿ ಮತ್ತೊಬ್ಬರಿಂದ ಅರಿಯಲ್ಪಡುತ್ತಾನೆಂದಾಗಲಿ ಹೇಳುವದಕ್ಕೆ ಎಂದಿಗೂ ಅವಕಾಶವಿರುವದಿಲ್ಲ. ಬೌದ್ಧರು ಹೇಳುವಂತೆ ವಿಜ್ಞಾನವು ತನ್ನನ್ನು ತಾನೇ ಅರಿಯುವದೆಂಬುದಂತೂ ಅತ್ಯಂತ ಯುಕ್ತಿವಿರುದ್ಧವು; ಏಕೆಂದರೆ ಅವರ ಮತದಲ್ಲಿ ವಿಜ್ಞಾನವು ಕ್ಷಣಿಕವಾಗಿಯೂ ಸಾಕ್ಷಿರೂಪನಾದ ಆತ್ಮನಿಲ್ಲದೆಯೂ ಇರುತ್ತದೆ. ವಿಜ್ಞಾನವು ಕ್ಷಣಿಕವೆಂಬುದು ಶ್ರುತಿಗೂ ವಿರುದ್ಧವಾಗಿರುತ್ತದೆ.

ಆದ್ದರಿಂದ ಪ್ರತಿಯೊಂದು ಪ್ರತ್ಯಯಕ್ಕೂ ಸಾಕ್ಷಿಯಾದ ಆತ್ಮನು ಎಂದು ಅರಿತುಕೊಂಡರೇ ಆತ್ಮನನ್ನು ಸರಿಯಾಗಿ ಅರಿತಂತಾಗುವದು, ಆಗಲೇ ಮನುಷ್ಯನು ಮರಣರಹಿತನಾಗುವನು. ಆತ್ಮನು ಮರಣರಹಿತನಾಗಿರುವದರಿಂದಲೂ ಆತ್ಮಸ್ವರೂಪವನ್ನು ಸರಿಯಾಗಿ ಅರಿತುಕೊಂಡವನು ಆತ್ಮನೇ ಆಗುವದರಿಂದಲೂ ಆತ್ಮನ ಬಲವೇ ತನ್ನ ಬಲವೆಂದಾಗಿ ಆತ್ಮವಿದ್ಯೆಯಿಂದ ಮರಣವನ್ನು ಗೆದ್ದು ಕೊಳ್ಳುವ ಶಕ್ತಿಯುಂಟಾಗುವದು.

★★★★★

## ಕರ್ಮ-ಅಕರ್ಮ

**6-5-1933**

**ಬ್ರ॥ ಶ್ರೀ॥ ಎಂ.ಎಸ್.ವೆಂಕಟೇಶಶಾಸ್ತ್ರಿಗಳವರು**

**ಭಗವದ್ಗೀತೆಯಲ್ಲಿ ನಾಲ್ಕನೆಯ ಅಧ್ಯಾಯದ ಹದಿನೆಂಟನೆಯ ಶ್ಲೋಕದ** ಅಕ್ಷರಾರ್ಥವು ಹೇಗಿರುವದೆಂದರೆ: ''ಕರ್ಮದಲ್ಲಿ ಅಕರ್ಮವನ್ನೂ ಅಕರ್ಮದಲ್ಲಿ ಕರ್ಮವನ್ನೂ ಯಾವನು ಕಾಣುವನೋ ಅವನು ಮನುಷ್ಯರಲ್ಲಿ ಬುದ್ಧಿವಂತನು ಅವನು ಯೋಗಿಯು, ಅವನು ಎಲ್ಲಾ ಕರ್ಮವನ್ನೂ ಮಾಡಿದವನು.''

ಈ ಶ್ಲೋಕಕ್ಕೆ ಹಿಂದಿನ ಕೆಲವರು ವ್ಯಾಖ್ಯಾನಕಾರರು ಮಾಡಿರುವ ಅರ್ಥವು ಇದು; ನಿತ್ಯವಾದ ಕರ್ಮಗಳನ್ನು ಈಶ್ವರಾರ್ಪಣೆಗೆಂದು ಮಾಡಿದರೆ ಅವುಗಳಿಗೆ ಫಲವಿಲ್ಲ; ಆದ್ದರಿಂದ ಅವು ಕರ್ಮವಾದರೂ ಫಲವಿಲ್ಲದರಿಂದ ಕರ್ಮವಲ್ಲವೆಂದು ಹೇಳಬೇಕು. ಹಾಲುಕೊಡದೆ ಇದ್ದರೆ ಹಸುವೇ ಅಲ್ಲವೆನ್ನುವಂತೆ ನಿತ್ಯಕರ್ಮವನ್ನು ಅಕರ್ಮವೆಂದು ತಿಳಿಯಬೇಕು. ಇದರಂತೆ ನಿತ್ಯಕರ್ಮವನ್ನು ಮಾಡದಿದ್ದರೆ ನರಕವೇ ಮುಂತಾದ ಫಲವಾಗುವದು; ಆದ್ದರಿಂದ ಮಾಡದೆ ಇರುವದೆಂಬುದು ಕರ್ಮವಲ್ಲದಿದ್ದರೂ ಕೆಟ್ಟಫಲವನ್ನು ಕೊಡುವದರಿಂದ ಕರ್ಮವೆಂದಾಯಿತು. ಇದೇ ಕರ್ಮದಲ್ಲಿ ಅಕರ್ಮವನ್ನು ಕಾಣುವದು ಮತ್ತು ಅಕರ್ಮದಲ್ಲಿ ಕರ್ಮವನ್ನು ಕಾಣುವದು.

ಈ ವ್ಯಾಖ್ಯಾನವು ಸಂದರ್ಭಕ್ಕೆ ಹೊಂದುವದಿಲ್ಲ, ಯುಕ್ತಿಗೆ ವಿರುದ್ಧ. ಹೇಗೆಂದರೆ ಈ ಶ್ಲೋಕವನ್ನು ಹೇಳುವ ಮುಂಚೆ (16ನೆಯ ಶ್ಲೋಕದಲ್ಲಿ) ಈ ಜ್ಞಾನದಿಂದ ಮೋಕ್ಷವಾಗುವದೆಂದು ಹೇಳಿದೆ; ಈ ಶ್ಲೋಕದ ಎರಡನೆಯ ಅರ್ಧದಲ್ಲಿ ಹೀಗೆಂದು ತಿಳಿದವನು 'ಬುದ್ಧಿವಂತನು, ಯೋಗಿಯು' ಎಂದು ಮೊದಲಾಗಿ ಹೊಗಳಿದೆ. ಇವೆರಡೂ ಮೇಲಿನ ವ್ಯಾಖ್ಯಾನಕ್ಕೆ ಹೊಂದುವದಿಲ್ಲ. ಏಕೆಂದರೆ ನಿತ್ಯಕರ್ಮವನ್ನು ಅಕರ್ಮವೆಂದು ತಿಳಿದಮಾತ್ರಕ್ಕೆ ಯಾರಿಗೂ ಮೋಕ್ಷವಾಗುವದಿಲ್ಲ. ನಿಷ್ಫಲವಾದ ಕರ್ಮವು ಮೋಕ್ಷಫಲವನ್ನು ಕೊಡುವದೆಂಬುದು ವಿರುದ್ಧವೂ ಆಗಿರುತ್ತದೆ ನಿತ್ಯ ಕರ್ಮವನ್ನು ಮಾಡದೆ ಇರುವ ಅಭಾವದಿಂದ ನರಕವೆಂಬ ಭಾವರೂಪಫಲವು ಆಗುವದೆಂಬುದೂ ಯುಕ್ತಿವಿರುದ್ಧವಾಗಿದೆ. ಮಾಡಿದರೂ ಫಲವಿಲ್ಲದೆ ಮಾಡದೆ ಇದ್ದರೆ ದುಃಖವಾಗುವಂಥ ನಿತ್ಯಕರ್ಮವನ್ನು ಶಾಸ್ತ್ರದಲ್ಲಿ ಹೇಳಿದೆ ಎಂಬುದೂ ಒಪ್ಪತಕ್ಕ ಮಾತಲ್ಲ. ಆದ್ದರಿಂದ ಈ ವ್ಯಾಖ್ಯಾನವು ಸರಿಯಲ್ಲ.

ಈ ಶ್ಲೋಕಕ್ಕೆ ಸರಿಯಾದ ಅರ್ಥವೇನೆಂದರೆ ಆತ್ಮನಲ್ಲಿ ಯಾವ ಕರ್ಮವೂ ಇಲ್ಲದೆ ಇದ್ದರೂ ದೇಹಾದಿಗಳಲ್ಲಿ ತೋರುವ ಕರ್ಮವನ್ನು ಭ್ರಾಂತಿಯಿಂದ ಆತ್ಮನಲ್ಲಿ ಹಾಕಿಕೊಂಡು ಅವನು ಕರ್ತೃವೆಂದು ಜನರು ತಪ್ಪಾಗಿ ತಿಳಿದುಕೊಂಡಿರುತ್ತಾರೆ; ಇದರಂತೆ ಈ ಕರ್ಮವು ನಿಂತಾಗ ಆತ್ಮನು ಸುಮ್ಮನೆ ಯಾವ ಕರ್ಮವನ್ನೂ ಮಾಡದೆ ಇರುವನೆಂದೂ ತಪ್ಪಾಗಿ ತಿಳಿದುಕೊಂಡಿರುತ್ತಾರೆ. ಆದ್ದರಿಂದ ಈ ಎರಡು ತಪ್ಪುತಿಳಿವನ್ನೂ ಹೋಗಲಾಡಿಸುವದಕ್ಕಾಗಿ 'ಕರ್ಮದಲ್ಲಿ ಅಕರ್ಮವನ್ನು

ಕಾಣಬೇಕು, ಅಕರ್ಮದಲ್ಲಿ ಕರ್ಮವನ್ನು ಕಾಣಬೇಕು' ಎಂದರೆ ಕರ್ಮವನ್ನು ಮಾಡುವಂತೆ ವ್ಯವಹಾರದಲ್ಲಿ ನಾವು ತಿಳಿಯುವ ಆತ್ಮನು ನಿಜವಾಗಿ ಯಾವ ಕರ್ಮವನ್ನೂ ಮಾಡುವದಿಲ್ಲವೆಂದು ತಿಳಿದುಕೊಳ್ಳಬೇಕು; ದೇಹಾದಿಗಳು ಕೆಲಸ ಮಾಡದಿದ್ದರೂ ಆ ಸುಮ್ಮನೆ ಇರುವದೆಂಬ ಕ್ರಿಯೆಯು ತನ್ನದೆಂಬುದು ಅಭಿಮಾನದಿಂದುಂಟಾಗಿರುವದರಿಂದ ಅದೂ ಒಂದು ಬಗೆಯ ಕರ್ಮವೇ ಎಂದು ತಿಳಿಯಬೇಕು. ಹೀಗೆ ತಿಳಿದರೆ ಆತ್ಮನು ಅಕರ್ತೃವೆಂಬ ನಿಜವಾದ ಜ್ಞಾನವಾಗಿ ಸಂಸಾರದಿಂದ ಬಿಡುಗಡೆಯಾಗುವದರಿಂದ ಹೀಗೆ ತಿಳಿದವನು ಬುದ್ಧಿವಂತನು; ಅವನಿಗೆ ಮನಸ್ಸಮಾಧಾನವು ಕೆಡುವದಕ್ಕೆ ಕಾರಣವಿಲ್ಲದ್ದರಿಂದ ಅವನು ಯೋಗಿಯು; ಎಲ್ಲಾ ಕರ್ಮಗಳಿಂದಾಗುವ ಚಿತ್ತ ಶುದ್ಧಿಗೂ ಈ ಜ್ಞಾನವೇ ಕೊನೆಯ ಫಲವಾದ್ದರಿಂದ ಈ ಜ್ಞಾನವುಳ್ಳವನು ಎಲ್ಲಾ ಕರ್ಮಗಳನ್ನೂ ಮಾಡಿದಂತಾಯಿತು.

★★★★★

## ಆಚಾರ್ಯರವರ ಚರಿತ್ರೆ

**6-5-1933**

**ಶ್ರೀಶ್ರೀಗಳವರು**

ಆಚಾರ್ಯರವರ ಚರಿತ್ರೆಯು ನಿಜವಾಗಿ ಜ್ಞಾನದ ಇತಿಹಾಸವಾಗಿರುವದು. ಅವರು ಅವತರಿಸುವ ಮುಂಚೆ ವೇದದಲ್ಲಿ ಕರ್ಮ, ಉಪಾಸನೆ- ಇವುಗಳಿಗೆ ಹೆಚ್ಚಿನ ಪ್ರಾಧಾನ್ಯವಿತ್ತು. ಉಪಾಸನೆಯನ್ನೇ ಅನೇಕರು ಜ್ಞಾನವೆಂದು ವ್ಯವಹರಿಸುತ್ತಿದ್ದರು, ಆಚಾರ್ಯರು ಉಪಾಸನೆಗಿಂತ ಬೇರೆಯಾದ ಜ್ಞಾನವೊಂದು ವೇದದಲ್ಲಿ ಪ್ರತಿಪಾದಿತವಾಗಿದೆಯೆಂಬುದನ್ನು ಸ್ಪಷ್ಟಪಡಿಸಿದರು.

ಆಚಾರ್ಯರಿಗಿಂತ ಪೂರ್ವದಲ್ಲಿ ಅವಿದ್ಯೆ, ಮಾಯೆ- ಎಂಬ ಎರಡು ಮಾತುಗಳೂ ಬಳಕೆಯಲ್ಲಿದ್ದವು; ಈಗಲೂ ಇವೆ. ಈ ಮಾತುಗಳಿಗೆ ಅವರು

ಕೊಟ್ಟಿರುವ ಅರ್ಥವನ್ನು ನಾವೆಲ್ಲರೂ ಲಕ್ಷ್ಯದಲ್ಲಿಡಬೇಕಾದದ್ದು ಅತ್ಯವಶ್ಯವಾಗಿದೆ. ಮಾಯೆಯೆಂದರೆ ಇಂದ್ರಿಯಕ್ಕೆ ಗೋಚರವಾಗಿರುವ ಪ್ರಪಂಚದ ತೋರಿಕೆ. ಹೊರಗಿನ ಇಂದ್ರಿಯಗಳಿಗೂ ಒಳಗಿನ ಮನಸ್ಸಿಗೂ ದ್ವೈತ ಪ್ರಪಂಚವು ತೋರುತ್ತಿರುವದೆಂಬ ವಿಷಯಕ್ಕೆ ಯಾರಿಗೂ ಮತಭೇದವಿರುವದಿಲ್ಲ. ಆದರೆ ಈ ತೋರಿಕೆಯು ನಿಜವಾದ ತತ್ತ್ವವನ್ನು ಬೋಧಿಸುವದೆ? ಇದಕ್ಕೆ ಪರಮಾರ್ಥವಾದ ಇರವು ಉಂಟೆ?- ಎಂದು ವಿಚಾರಿಸಿದರೆ ಇದು ಪರಮಾರ್ಥವಲ್ಲವೆಂದು ವೇದಾಂತವಿಚಾರದಿಂದ ಸ್ಪಷ್ಟವಾಗುತ್ತದೆ. ಈ ಕಾರಣದಿಂದ ಈ ದ್ವೈತವು ಮಾಯೆಯ, ಯುಕ್ತಿಹೀನವಾದ ತೋರಿಕೆಯೇ ಹೊರತು ಪರಮಾರ್ಥವಲ್ಲ - ಎಂದು ಆಚಾರ್ಯರು ಬೋಧಿಸಿರುತ್ತಾರೆ.

★★★★★

# ಸಕಲಕಾಮಗಳನ್ನೂ ಪಡೆಯುವ ಬಗೆ

**18-05-1934**

**ಶ್ರೀಶ್ರೀಗಳವರು**

**ಛಾಂದೋಗ್ಯದ ಎಂಟನೆಯ ಅಧ್ಯಾಯದಲ್ಲಿ ಹನ್ನೆರಡನೆಯ ಖಂಡದ ಒಂದನೆಯ ಮಂತ್ರದ** ಭಾಷ್ಯಭಾಗದಲ್ಲಿ ಹೀಗೆ ವಿವರಿಸಿದೆ - ''ಪಾಪರಹಿತನೂ ಮುಪ್ಪುಮರಣವಿಲ್ಲದವನೂ ಶೋಕವಿಲ್ಲದವನೂ ಹಸಿವುಬಾಯಾರಿಕೆಯಿಲ್ಲದವನೂ ಸತ್ಯಕಾಮನೂ ಸತ್ಯಸಂಕಲ್ಪನೂ ಆಗಿರುವ ಆತ್ಮನನ್ನು ಹುಡುಕಿ ಅರಿತುಕೊಳ್ಳಬೇಕು; ಹಾಗೆ ಅರಿತವನು ಸಕಲಲೋಕಗಳನ್ನೂ ಸಕಲಕಾಮಗಳನ್ನೂ ಪಡೆಯುವನು''- ಎಂಬ ಬ್ರಹ್ಮದೇವರ ವಚನವನ್ನು ಕೇಳಿದ ದೇವಾಸುರರು ತಾವು ಆ ಆತ್ಮನನ್ನು ತಿಳಿದುಕೊಳ್ಳಬೇಕೆಂದು ಆಸೆಪಟ್ಟರು. ದೇವತೆಗಳ ಒಡೆಯನಾದ ಇಂದ್ರನೂ ಅಸುರರ ಒಡೆಯನಾದ ವಿರೋಚನನೂ ಬ್ರಹ್ಮನ ಬಳಿಗೆ ಬಂದರು. ಮೂವತ್ತೆರಡು ವರ್ಷ ಬ್ರಹ್ಮಚರ್ಯದಿಂದಿದ್ದಮೇಲೆ ಅವರಿಗೆ

ಬ್ರಹ್ಮನು ''ಕಣ್ಣಿನಲ್ಲಿ ಕಾಣುವ ಪುರುಷನೇ ಆತ್ಮನು'' ಎಂದು ಉಪದೇಶಿಸಿದನು. ''ಆಮೇಲೆ ಉದಕಪಾತ್ರೆಯಲ್ಲಿ ನಿಮ್ಮನ್ನು ನೋಡಿಕೊಳ್ಳಿರಿ, ಅಲ್ಲಿ ಏನು ಕಾಣಿಸುತ್ತದೆ?'' ಎಂದು ಕೇಳಿದನು. ಅವರು ''ನಮ್ಮ ಪ್ರತಿಬಿಂಬವೇ ಸಂಪೂರ್ಣವಾಗಿ ಕಾಣಿಸುತ್ತಿದೆ'' ಎನ್ನಲು ''ಕ್ಷೌರಾದಿಗಳನ್ನು ಮಾಡಿಸಿಕೊಂಡು ಚೆನ್ನಾಗಿ ಅಲಂಕಾರಮಾಡಿಕೊಂಡು ಮತ್ತೆ ನೋಡಿರಿ, ಏನು ಕಾಣಿಸುತ್ತದೆ?'' ಎಂದನು. ಅವರು ''ನಾವು ಹೇಗೆ ಅಲಂಕೃತರಾಗಿರುವೆವೋ ಹಾಗೆಯೇ ಕಾಣಿಸುತ್ತಿದೆ'' ಎಂದರು. ಬ್ರಹ್ಮನು ''ಇವನೇ ಆತ್ಮನು'' ಎಂದನು. ಅವರು ಅಷ್ಟರಿಂದ ತೃಪ್ತರಾಗಿ ಹೊರಟುಹೋದರು. ಅವರು ಹೋಗುತ್ತಿರುವ ಹಾಗೆಯೇ ಬ್ರಹ್ಮನು ''ದೇವತೆಗಳು, ಅಸುರರು – ಇವರಿಬ್ಬರಲ್ಲಿ ಯಾವನು ಆತ್ಮನನ್ನು ಅರಿಯದೇ ಹೋಗುವರೋ ಅವರಿಗೆ ಸೋಲಾಗುವದು'' ಎಂದನು. ವಿರೋಚನನು ಹೊರಟೇಹೋದನು; ಅವನು 'ದೇಹವೇ ಆತ್ಮನು, ಅದರ ಸೇವೆಯೇ ಇಹಪರಸುಖಗಳಿಗೆ ಕಾರಣ' ಎಂದು ಅಸುರರಿಗೆ ಬೋಧಿಸಿದನು. ಇಂದ್ರನು ಮಾತ್ರ ಪರಿತೃಪ್ತನಾಗಲಿಲ್ಲ. ಬ್ರಹ್ಮನು ಹೇಳಿದ ಆತ್ಮನು ಛಾಯಾತ್ಮನಿಗಿಂತ ಬೇರೆಯಾಗಿರಬೇಕೆಂದು ಯೋಚಿಸಿ ಮತ್ತೆ ಆತನ ಬಳಿಗೆ ಬಂದು 'ಸ್ವಾಮಿ, ಶರೀರವನ್ನನುಸರಿಸಿ ವಿಕಾರವನ್ನು ಪಡೆಯುತ್ತಲೂ ನಾಶವಾಗುತ್ತಲೂ ಇರುವ ಛಾಯೆಯು ಹೇಗೆ ಆತ್ಮನಾದೀತು?' ಎನ್ನಲು ಬ್ರಹ್ಮನು ಇನ್ನೂ ಮೂವತ್ತೆರಡು ವರ್ಷಗಳ ಬ್ರಹ್ಮಚರ್ಯೆಯನ್ನು ಮಾಡುವಂತೆ ಇಂದ್ರನಿಗೆ ಹೇಳಿ, ಆ ಬಳಿಕ ''ಸ್ವಪ್ನದಲ್ಲಿ ಬಗೆಬಗೆಯ ಭೋಗಗಳನ್ನು ಅನುಭವಿಸುವವನೇ ಆತ್ಮನು'' ಎಂದನು. ಇಂದ್ರನು ಇದಕ್ಕೆ ತೃಪ್ತನಾಗದೆ ಮತ್ತೆ ಕೇಳಲು ಮೂವತ್ತೆರಡು ವರ್ಷ ಬ್ರಹ್ಮಚರ್ಯವಾದ ಬಳಿಕ ''ಸುಷುಪ್ತಿಯಲ್ಲಿರುವವನೇ ಆತ್ಮನು'' ಎಂದನು. ಸುಷುಪ್ತಿಯಲ್ಲಿ ಯಾವ ಅರಿವೂ ಇರುವದೇ ಇಲ್ಲವಲ್ಲ! – ಎಂಬ ಶಂಕೆಯಿಂದ ಇಂದ್ರನು ಮತ್ತೆ ಬಂದು ಬ್ರಹ್ಮನ ಅಪ್ಪಣೆಯಂತೆ ಐದು ವರ್ಷ ಬ್ರಹ್ಮಚರ್ಯವನ್ನು ಮಾಡಿದ ಬಳಿಕ ಬ್ರಹ್ಮನು ಹೇಳಿದ ಉತ್ತರವು ಪ್ರಕೃತಮಂತ್ರದಲ್ಲಿರುತ್ತದೆ.

**ಮಂತ್ರದ ಅಕ್ಷರಾರ್ಥವೇನೆಂದರೆ** – ''ಈ ಶರೀರವು ಮರ್ತ್ಯವು, ಮೃತ್ಯುವ್ಯಾಪ್ತವಾಗಿಯೇ ಇರುವದು; ಇದು ಅಮೃತನಾಗಿಯೂ

ಅಶರೀರನಾಗಿಯೂ ಇರುವ ಆತ್ಮನಿಗೆ ಅಧಿಷ್ಠಾನವು; ಸಶರೀರನಿಗೆ ಪ್ರಿಯಾಪ್ರಿಯಗಳು ಬೆನ್ನುಹತ್ತಿರುವವು, ಸಶರೀರನಾದವನಿಗೆ ಪ್ರಿಯಾಪ್ರಿಯಾಗಳ ನಾಶವೆಂಬುದಿಲ್ಲ; ಆದರೆ ಅಶರೀರನಾದವನನ್ನು ಪ್ರಿಯಾಪ್ರಿಯಗಳು ಸೋಂಕುವುದಿಲ್ಲ.''

ಇದರ ಅಭಿಪ್ರಾಯವೇನೆಂದರೆ ಪ್ರಿಯಾಪ್ರಿಯಗಳೆಂಬಿವು ಧರ್ಮಾಧರ್ಮಗಳ ಕಾರ್ಯಗಳು; ಆದ್ದರಿಂದ ಇವು ಅನಿತ್ಯಗಳು. ಅಶರೀರತ್ವವೆಂಬುದು ಮಾತ್ರ ಆತ್ಮನ ಸ್ವರೂಪವು. ಪ್ರಿಯವೆಂಬುದೂ ಆತ್ಮನಿಗೆ ಹೊರಚ್ಚಾಗಿರುವ ಧರ್ಮದ ಕಾರ್ಯವೇ; ಆದರೆ ಆತ್ಮನ ಸ್ವರೂಪವಾದ ಆನಂದವೆಂಬುದು ಮಾತ್ರ ಧರ್ಮದ ಕಾರ್ಯವಲ್ಲ. ಸುಷುಪ್ತಿಯಲ್ಲಿ ತನ್ನನ್ನಾಗಲಿ ಮತ್ತೊಬ್ಬರನ್ನಾಗಲಿ ಅರಿಯುವುದಿಲ್ಲವಾದ್ದರಿಂದ ಅದರಲ್ಲಿ ಏನು ಸುಖವು? – ಎಂದು ಇಂದ್ರನು ಕೇಳಿದ್ದನು. 'ಈ ಪ್ರಾಣಿಗಳು, ಈ ಲೋಕಗಳು, ಈ ಕಾಮಗಳು – ಎಲ್ಲವೂ ನನಗಿಂತ ಬೇರೆಯಾಗಿರುವವು, ನಾನು ಅವುಗಳಿಗೆ ಒಡೆಯನು' ಎಂಬ ಅರಿವಿರುವ ಸ್ಥಿತಿಯೇ ಸುಖದಾಯಕವೆಂಬ ಅಭಿಪ್ರಾಯವು ಅವನ ಈ ಪ್ರಶ್ನೆಯಲ್ಲಿ ಅಡಗಿತ್ತು. ಆದರೆ ಅಶರೀರನಾಗಿ ಸರ್ವಭೂತಲೋಕಕಾಮಗಳನ್ನೂ ತನ್ನ ರೂಪದಲ್ಲಿಯೇ ಅಡಗಿಸಿಕೊಳ್ಳುವ ಸುಖವೇ ನಿಜವಾದ ಸುಖವೆಂಬುದು ಅವನಿಗೆ ತಿಳಿದಿರಲಿಲ್ಲ. ಇಂಥ ಆನಂದವನ್ನು ತಿಳಿಸಿಕೊಡುವುದಕ್ಕಾಗಿಯೇ ಬ್ರಹ್ಮನು ಈ ವಾಕ್ಯವನ್ನು ಹೇಳಿರುತ್ತಾನೆ.

ಹೀಗೆ ಸರ್ವವೂ ತಾನಾಗಿರುವದರಿಂದ ಆತ್ಮಜ್ಞಾನಿಗೆ ಸಮಸ್ತವಿಧವಾದ ಸುಖವೂ ಉಂಟಾಗುವದೆಂದು ತಿಳಿಸುವುದಕ್ಕಾಗಿ ಅವನಿಗೆ ಬಗೆಬಗೆಯ ಭೋಗಗಳೂ ಲೋಕಪ್ರಾಪ್ತಿಯೂ ಉಂಟಾಗುವವೆಂದು ಶ್ರುತಿಯಲ್ಲಿ ಹೇಳಿರುತ್ತದೆ. 'ಹಾಗಾದರೆ ಆತ್ಮಜ್ಞಾನಿಯು ಸರ್ವಾತ್ಮನಾಗಿರುವದರಿಂದ ಸರ್ವರ ದುಃಖವೂ ಆತನಿಗೆ ಆಗಬೇಕಾಗುವುದಲ್ಲ!' ಎಂದು ಶಂಕಿಸಬಾರದು. ಏಕೆಂದರೆ ದುಃಖವೆಂಬುದು ಆತ್ಮನಲ್ಲಿ ಅವಿದ್ಯೆಯಿಂದ ಕಲ್ಪಿತವಾಗಿರುತ್ತದೆ. ಶರೀರಾತ್ಮನೇ ತಾನೆಂಬುದೇ ಅವಿದ್ಯೆಯು; ಈ ತಿಳಿವಳಿಕೆಯೇ ದುಃಖಕ್ಕೆ ಕಾರಣವಾಗಿರುವದು; ಅದು ಜ್ಞಾನದಿಂದ ತೊಲಗಿಹೋಗಿರುವದರಿಂದ ಆತ್ಮಜ್ಞಾನಿಗೆ ಯಾವ ದುಃಖವೂ ಆಗುವದಕ್ಕೆ ಕಾರಣವಿರುವದಿಲ್ಲ. ಆದರೆ ಅಜ್ಞಾನಿಗಳಿಗೆ ಆಗುವ

ಸುಖವು ಕೂಡ ಅವರ ಶುದ್ಧಸತ್ತ್ವದ ಅಂತಃಕರಣದಿಂದ ಹೊರತೋರುವ ಪರಮಾತ್ಮಸ್ವರೂಪವೇ ಆಗಿರುವದರಿಂದ ಅದನ್ನು ಆತ್ಮಜ್ಞಾನಿಯ ಆನಂದದಲ್ಲಿಯೇ ಅಡಕಮಾಡಿಬಿಡಬಹುದಾಗಿರುತ್ತದೆ.

ಈ ಸಂದರ್ಭದಲ್ಲಿ ಕೆಲವರು ಪಟ್ಟಿರುವ ಅಭಿಪ್ರಾಯವೇನೆಂದರೆ– 'ಕಣ್ಣಿನಲ್ಲಿ ಕಾಣುವವನು', 'ಸ್ವಪ್ನದಲ್ಲಿ ಬಗೆಬಗೆಯ ಭೋಗಗಳನ್ನು ಅನುಭವಿಸುವವನು' 'ಸುಷುಪ್ತಿಯಲ್ಲಿರುವವನು' – ಎಂದು ಬ್ರಹ್ಮನು ಹೇಳಿದ ಆತ್ಮರು ಪರಮಾತ್ಮನಲ್ಲ. ಬಿದಿಗೆಯ ಚಂದ್ರನನ್ನು ಕಾಣದವನಿಗೆ ಕೊಂಬೆಯ ಮೇಲಿರುವವನೇ ಚಂದ್ರನೆಂದು ಮೋದಲು ಹೇಳಿ ಆಮೇಲೆ ನಿಜವಾದ ಚಂದ್ರನನ್ನು ತೋರಿಸುವಂತೆ, ಮೊದಲು ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿರುವ ಆತ್ಮನನ್ನು ತಿಳಿಸಿ ಆಮೇಲೆ ನಾಲ್ಕನೆಯ ಸಲಕ್ಕೆ ಅಶರೀರನಾದ ನಿಜವಾದ ಪರಮಾತ್ಮನನ್ನು ಇಂದ್ರನಿಗೆ ಬ್ರಹ್ಮನು ಉಪದೇಶಮಾಡಿರುತ್ತಾನೆ. ಹೀಗೆಂಬುದು ಕೆಲವರು ವೇದಾಂತಿಗಳ ಮತವು. ಆದರೆ ಈ ವಾದವು ಸರಿಯಲ್ಲ; ಏಕೆಂದರೆ ಕಣ್ಣಿನಲ್ಲಿ ಕಾಣುವವನೇ ಆತ್ಮನೆಂದರೆ ನೆರಳೇ ಆತ್ಮನೆಂದು ತಿಳಿದಾರೆಂದು ಯೋಚಿಸಿ ಬ್ರಹ್ಮನು ನೀರಿನ ಪಾತ್ರೆಯಲ್ಲಿ ನೋಡಿಕೊಳ್ಳಿರೆಂದು ಇಂದ್ರವಿರೋಚನರಿಗೆ ಹೇಳಿರುತ್ತಾನೆ; 'ಸರಿಯಾಗಿ ಅಲಂಕಾರ ಮಾಡಿಕೊಂಡು ನೋಡಿಕೊಳ್ಳಿರಿ' ಎಂದದ್ದೂ, 'ಏನು ಕಾಣುತ್ತದೆ?' ಎಂದು ಕೇಳಿದ್ದೂ – ಇದಕ್ಕಾಗಿಯೇ. ಆದ್ದರಿಂದ 'ನೆರಳೂ ಕನಸಿನಲ್ಲಿ ಕಾಣುವ ನೋಟವೂ ಆತ್ಮನಲ್ಲ, ಅವುಗಳನ್ನು ನೋಡುವ ಸಾಕ್ಷಿಯೇ ಆತ್ಮನು' – ಎಂಬುದೇ ಬ್ರಹ್ಮನ ಅಭಿಪ್ರಾಯವು. ಈ ಮತವನ್ನು ಒಪ್ಪದವರ ಪಕ್ಷದಲ್ಲಿ ನೀರಿನ ಪಾತ್ರೆಯಲ್ಲಿ ಮುಖವನ್ನು ತೋರಿಸಿದ್ದೇ ಮುಂತಾದದ್ದೆಲ್ಲ ವ್ಯರ್ಥವಾಗುವದು; ಅಥವಾ ಒಂದೊಂದು ಕಡೆ ಒಬ್ಬೊಬ್ಬ ಆತ್ಮನನ್ನು ಹೇಳಿ ಇಂದ್ರನನ್ನೂ ವಿರೋಚನನ್ನೂ ಬ್ರಹ್ಮನು ವಂಚಿಸಿದನೆಂದು ಬ್ರಹ್ಮನ ಮೇಲೆ ತಪ್ಪನ್ನು ಆರೋಪಮಾಡಬೇಕಾಗುವದು. ಇದಲ್ಲದೆ ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿ ಬೇರೊಂದು ಆತ್ಮಸ್ವರೂಪವನ್ನೇ ಬ್ರಹ್ಮನು ಉಪದೇಶಮಾಡಿದ್ದರೆ 'ಇದು ಬ್ರಹ್ಮವಲ್ಲ' ಎಂದು ಹೇಳಬೇಕಾಗಿತ್ತು; ಹಾಗೆ ಬ್ರಹ್ಮನು ಹೇಳಿರುವುದಿಲ್ಲ.

ಆದ್ದರಿಂದ 'ಕಣ್ಣಿನಲ್ಲಿ ಕಾಣುವವನು', 'ಸ್ವಪ್ನದಲ್ಲಿ ಬಗೆಬಗೆಯ ಮಹಿಮೆಯನ್ನು ಅನುಭವಿಸುವವನು'– ಎಂಬ ಎರಡು ಸ್ಥಾನಗಳಲ್ಲಿಯೂ

ದ್ರಷ್ಟೃವಾದ ಆತ್ಮನನ್ನೇ ಉಪದೇಶಿಸಿರುತ್ತದೆಯನ್ನಬೇಕು. ಈ ಎರಡು ಅವಸ್ಥೆಗಳಲ್ಲಿಯೂ ತಾನು, ಪರರು- ಎಂಬ ಅರಿವು ಉಂಟು, ನಿದ್ರೆಯಲ್ಲಿಲ್ಲ; ಆದ್ದರಿಂದಲೇ ಇಂದ್ರನು 'ಸುಷುಪ್ತಿಯಲ್ಲಿ ಇಂಥ ಅರಿವು ಇಲ್ಲವಲ್ಲ!'-ಎಂದು ಕೇಳಿರುವದು. ಈ ಮೂರು ಅವಸ್ಥೆಯಲ್ಲಿಯೂ ಅವಿದ್ಯಾದೃಷ್ಟಿಯಿಂದ ಆತ್ಮನಿಗೆ ಸಶರೀರತ್ವವಿದೆಯೆಂಬುದರಿಂದಲೇ ಪ್ರಿಯಾಪ್ರಿಯಗಳು ಅವನಿಗೆ ಅಂಟಿಕೊಂಡಿರುವವು; ವಿದ್ಯಾದೃಷ್ಟಿಯಿಂದ ನಿತ್ಯಸಿದ್ಧವಾಗಿರುವ ಅಶರೀರತ್ವವನ್ನು ಬೋಧಿಸುವದರಮೂಲಕ ಸುಖದುಃಖಗಳಿಗತೀತವಾದ ಪರಮಾತ್ಮ ಸ್ವರೂಪವನ್ನು ಬೋಧಿಸುವದೇ ಪ್ರಕೃತ ಮಂತ್ರದ ಉದ್ದೇಶವು.

ಆದ್ದರಿಂದಲೇ ನಾಲ್ಕನೆಯ ಸಲವೂ 'ಈ ಆತ್ಮನನ್ನೇ ಬೋಧಿಸುತ್ತೇನೆ'- ಎಂದು ಬ್ರಹ್ಮನು ಹೇಳಿರುತ್ತಾನೆ. ಜಗತ್ತನ್ನೆಲ್ಲ ಸೃಷ್ಟಿಮಾಡಿ ಅದರಲ್ಲಿ ಪರಮಾತ್ಮನು ಪ್ರವೇಶಿಸಿರುವನೆಂದು ಹೇಳಿ ಹಾಗೆ ಪ್ರವೇಶಮಾಡಿರುವಾತನಿಗೇ ''**ತತ್ತ್ವಮಸಿ**'' **(ನೀನು ಆ ಬ್ರಹ್ಮವಾಗಿರುವೆ)** ಎಂಬ ವಾಕ್ಯವನ್ನು ಉಪದೇಶಿಸಿರುತ್ತದೆ. ಭೂಮವಿದ್ಯೆಯಲ್ಲಿ ಭೂಮಕ್ಕೆ '**ನಾನು**' ಎಂಬ ಹೆಸರನ್ನು ಕೊಟ್ಟಿರುವದು, ಬೃಹದಾರಣ್ಯಕದಲ್ಲಿ ಪರಮಾತ್ಮನಿಗಿಂತ ಬೇರೆ ದ್ರಷ್ಟೃವಿಲ್ಲವೆಂದು ಹೇಳಿರುವದು, ಶ್ರುತಿಗಳಲ್ಲೆಲ್ಲ ಪರಬ್ರಹ್ಮವನ್ನು ಆತ್ಮನೆಂಬ ಹೆಸರಿನಿಂದ ಕರೆದಿರುವದು- ಇವೆಲ್ಲ ಬ್ರಹ್ಮಾತ್ಮೈಕ್ಯಸಿದ್ಧಾಂತಕ್ಕೇ ಸಹಕಾರಿಯಾಗಿರುತ್ತವೆ. ಆದ್ದರಿಂದ ಅವಿದ್ಯೆಯಿಂದ ಅಧ್ಯಸ್ತವಾಗಿರುವ ಸಂಸಾರಿತ್ವವನ್ನು ತೊಲಗಿಸಿ ಸ್ವಭಾವಸಿದ್ಧವಾಗಿರುವ ಅಶರೀರತ್ವವನ್ನು ತಿಳಿಸುವುದಕ್ಕಾಗಿಯೇ ಬ್ರಹ್ಮನು ಅವಸ್ಥಾತ್ರಯಪರೀಕ್ಷೆಯ ಮೂಲಕ ಪ್ರಸಿದ್ಧನಾದ ಆತ್ಮನನ್ನೇ ಬೋಧಿಸಿರುತ್ತಾನೆ; ಆದ್ದರಿಂದಲೇ ಪ್ರತಿಯೊಂದು ಸಲವೂ 'ಇದು ಅಮೃತವು, ಅಭಯವು, ಇದು ಬ್ರಹ್ಮವು' ಎಂಬ ಮಾತುಗಳನ್ನು ಆಡಿರುತ್ತಾನೆ ಎಂದು ಸಿದ್ಧವಾಯಿತು.

★★★★★

# ಬ್ರಹ್ಮಜ್ಞಾನವುಂಟಾದ ಕೂಡಲೇ ಮೋಕ್ಷವಾಗುತ್ತದೆಯೆ, ಇಲ್ಲವೆ?

**19-05-1934**

**ಬ್ರ॥ ಶ್ರೀ॥ ಎಮ್. ಎಸ್. ವೆಂಕಟೇಶಶಾಸ್ತ್ರಿಗಳವರು**

**ಸೂತ್ರಭಾಷ್ಯದಲ್ಲಿ ಮೂರನೆಯ ಅಧ್ಯಾಯದ ಮೂರನೆಯ ಪಾದದ ಮೂವತ್ತೆರಡನೆಯ ಸೂತ್ರದ** ಭಾಷ್ಯದಲ್ಲಿ ಬ್ರಹ್ಮಜ್ಞಾನವು ಉಂಟಾದ ಕೂಡಲೇ ಮೋಕ್ಷವು ಆಗುತ್ತದೆಯೆ, ಇಲ್ಲವೆ? -ಎಂಬುದನ್ನು ಚರ್ಚಿಸಿರುತ್ತದೆ. ಇತಿಹಾಸದಲ್ಲಿಯೂ ಪುರಾಣದಲ್ಲಿಯೂ ಕೂಡ ಅಪಾಂತರತಮ, ವಸಿಷ್ಠ, ಭೃಗು, ಸನತ್ಕುಮಾರ, ದಕ್ಷ, ನಾರದ - ಮೊದಲಾದ ಕೆಲವರು ಜ್ಞಾನಿಗಳು ಬೇರೆ ದೇಹವನ್ನು ಧರಿಸಿದರೆಂದು ವರ್ಣಿಸಿರುವ ಕಥೆಗಳುಂಟು; ಶ್ರುತಿಯಲ್ಲಿಯೂ ಈ ಬಗೆಯ ಕೆಲವು ಅರ್ಥವಾದಗಳುಂಟು. ಆದ್ದರಿಂದ ಜ್ಞಾನವಾದ ಮೇಲೂ ಮತ್ತೆ ಜನ್ಮವುಂಟಾಗಬಹುದೆಂಬ ಸಂಶಯವುಂಟಾಗುತ್ತದೆ. ಈ ಸಂಶಯವನ್ನು ಇಲ್ಲಿ ಬಗೆಹರಿಸಿರುತ್ತಾರೆ.

ಅಪಾಂತರತಮರೇ ಮೊದಲಾದ ಜ್ಞಾನಿಗಳು ಒಂದೊಂದು ಕೆಲಸಕ್ಕಾಗಿ ಪರಮೇಶ್ವರನಿಂದ ನಿಯಮಿತವಾಗಿದ್ದ ಆಧಿಕಾರಿಕಪುರುಷರು. ಅವರು ಜ್ಞಾನಕ್ಕೆ ಪೂರ್ವದಲ್ಲಿಯೇ ಇದ್ದ ತಮ್ಮ ತಮ್ಮ ಪ್ರಾರಬ್ಧಕರ್ಮದ ವೇಗದಿಂದಲೇ ತಮ್ಮ ದೇಹೇಂದ್ರಿಯ ಪ್ರಕೃತಿಯನ್ನು ಸ್ವಾಧೀನದಲ್ಲಿಟ್ಟುಕೊಂಡವರಾಗಿ ಬೇರೆ ಬೇರೆ ದೇಹವನ್ನು ಸ್ವತಂತ್ರವಾಗಿಯೇ ನಿರ್ಮಾಣಮಾಡಿಕೊಂಡರು. ಅವರು ನಮ್ಮಂತೆ ಈ ಜನ್ಮದ ಪ್ರಾರಬ್ಧಕರ್ಮವು ಮುಗಿದು ಮತ್ತೆ ಸಂಚಿತಕರ್ಮದಲ್ಲೊಂದಂಶವು ಫಲಕೊಡುವದಕ್ಕಾರಂಭಿಸಿದ್ದರಿಂದ ಜನ್ಮಾಂತರವನ್ನು ಪಡೆದವರಲ್ಲ. ಆದ್ದರಿಂದ ಶ್ರುತಿಸ್ಮೃತಿಗಳಲ್ಲಿ ಹೇಳಿರುವಂತೆ ಜ್ಞಾನದಿಂದ ಅವರು ಮೋಕ್ಷವನ್ನು ಪಡೆದರೇ ಹೊರತು ಮತ್ತೆ ಹೊಸ ಕರ್ಮವು ಯಾವದೂ ಅವರಲ್ಲಿ ಉತ್ಪತ್ತಿಯಾಗಿರುವದಿಲ್ಲ. ಜ್ಞಾನಿಗೆ ಪ್ರಾರಬ್ಧಕರ್ಮದ ಫಲವನನ್ನುಭವಿಸಿದ ಬಳಿಕ ಪರಮಮುಕ್ತಿಯು ಆಗಿಯೇ ತೀರುವದೆಂದು **'ತಸ್ಯ ತಾವದೇವ ಚಿರಮ್' (ಛಾಂ.6-14-2)** ಎಂಬ ಶ್ರುತಿಯಲ್ಲಿ ಹೇಳಿದ್ದನ್ನನುಸರಿಸಿ ಈ ಸಮಾಧಾನವನ್ನು ಹೇಳಿದ್ದಾಗಿರುತ್ತದೆ.

ಆದರೆ ಈ ಶಂಕೆಗೆ ಇನ್ನೊಂದು ಪರಮಸಮಾಧಾನವನ್ನು ಹೇಳಬಹುದು. ಜ್ಞಾನಕ್ಕೆ ಆಗುವ ಮುಕ್ತಿಯೆಂಬ ಫಲವು ಸ್ವರ್ಗಾದಿಗಳಂತೆ ದೇಶಾಂತರದಲ್ಲಿ ಕಾಲಾಂತರದಲ್ಲಿ ಆಗುವದಾಗಿದ್ದರೆ ಜ್ಞಾನವಾದರೆ ಮೋಕ್ಷವಾಗುವದೋ ಇಲ್ಲವೋ ಎಂಬ ಶಂಕೆಯು ಉಂಟಾದರೂ ಆಗಬಹುದಾಗಿತ್ತು. ಆದರೆ ಹಾಗಿಲ್ಲ. ''**ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ**'' (ಯಾವದು ಪರೋಕ್ಷವಲ್ಲದೆ ನೇರಾಗಿಯೇ ಅನುಭವವಾಗುತ್ತಿರುವ ಬ್ರಹ್ಮವೋ **ಬೃ.3-4-1**) ಎಂಬ ಶ್ರುತಿಯಲ್ಲಿರುವಂತೆ ಬ್ರಹ್ಮಸ್ವರೂಪವು ಅಪರೋಕ್ಷವಾಗಿರುತ್ತದೆ; ಆದ್ದರಿಂದ ಬ್ರಹ್ಮಸ್ವರೂಪವಾಗಿರುವ ಮುಕ್ತಿಯೂ ಈಗಲೇ ಇಲ್ಲಿಯೇ ಅನುಭವಕ್ಕೆ ಬರತಕ್ಕದ್ದಾಗಿರುತ್ತದೆ. ''**ತತ್ತ್ವಮಸಿ**'' (**ಆ ಬ್ರಹ್ಮವೇ ನೀನಾಗಿರುವೆ ಛಾಂ.6-8-7**) ಎಂಬ ವೇದಾಂತವಾಕ್ಯದಿಂದುಂಟಾದ ಜ್ಞಾನವು ಈಗಲೇ ಬ್ರಹ್ಮವಾಗಿರುವೆಯೆಂದು ಬೋಧಿಸುವದೇ ಹೊರತು ಸತ್ತಮೇಲೆ ಬ್ರಹ್ಮವಾಗುವೆಯೆನ್ನುವದಿಲ್ಲ. 'ಇದನ್ನು ತಿಳಿದ ಕೂಡಲೇ ವಾಮದೇವನು ಸರ್ವಾತ್ಮನಾದನು' ಎಂದು ಬೃಹದಾರಣ್ಯಕದಲ್ಲಿಯೂ ಹೇಳಿದೆ. ಆದ್ದರಿಂದ ''**ತಸ್ಯ ತಾವದೇವ ಚಿರಮ್**'' ಎಂದರೆ ಅಜ್ಞಾನವು ಹೋಗುವವರೆಗೇ ತಡ, ಕೂಡಲೇ ಮೋಕ್ಷವಾಗುವದು – ಎಂದು ಸದ್ಯೋಮುಕ್ತಿಯ ಅಭಿಪ್ರಾಯವನ್ನೇ ಶ್ರುತಿಗೂ ಹೇಳಬಹುದಾಗಿದೆ.

★★★★★

# ಸದಸದ್ವಿವೇಕ

**20-05-1934**

**ವಿದ್ವಾನ್ ತಿಪ್ಪಾಶಾಸ್ತ್ರಿಗಳವರು**

**ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।**
**ಉಭಯೋರಪಿ ದೃಷ್ಟೋಽನ್ತಸ್ತ್ವನಯೋಸ್ತತ್ತ್ವದರ್ಶಿಭಿಃ ॥**

**ಗೀತಾಭಾಷ್ಯದ ಎರಡನೆಯ ಅಧ್ಯಾಯದ ಹದಿನಾರನೆಯ ಶ್ಲೋಕದ ಭಾಷ್ಯ**ದಲ್ಲಿ ''ಅಸತ್ತಾಗಿರುವ ದೇಹಾದಿಗಳೂ ಶೀತೋಷ್ಣಾದಿವಿಕಾರಗಳೂ ಇರುವದೆಂಬುದಿಲ್ಲ; ಸದ್ರೂಪನಾಗಿರುವ ಆತ್ಮನು ಇಲ್ಲವೆಂಬುದೂ ಇಲ್ಲ. ಇದರ ನಿರ್ಣಯವನ್ನು ತತ್ತ್ವದರ್ಶಿಗಳು ಮಾಡಿಕೊಂಡಿರುತ್ತಾರೆ. ಆದ್ದರಿಂದ ನೀನೂ ತತ್ತ್ವದರ್ಶಿಗಳ ದೃಷ್ಟಿಯನ್ನಾಶ್ರಯಿಸಿ, 'ಶೀತೋಷ್ಣದ್ವಂದ್ವಗಳೆಲ್ಲ ವಿಕಾರರೂಪವಾಗಿರುವುದರಿಂದ ಅಸದ್ರೂಪವಾಗಿರುವವು, ಇವುಗಳಿಗೆ ನಿಜವಾದ ಇರವು ಇಲ್ಲ' - ಎಂಬುದನ್ನು ತಿಳಿದುಕೊಂಡು ಅವುಗಳನ್ನು ಸಹಿಸಿಕೊ'' ಎಂದು ಅರ್ಜುನನಿಗೆ ಶ್ರೀಕೃಷ್ಣನು ಬೋಧಿಸಿರುತ್ತಾನೆ. ಇಲ್ಲಿ ಹೇಳಿರುವ ಸದಸದ್ವಿವೇಕವನ್ನು ಜಿಜ್ಞಾಸುಗಳಿಗೆ ಮನಗಾಣಿಸುವದಕ್ಕಾಗಿ ಆಚಾರ್ಯರವರು ವಿಸ್ತಾರವಾಗಿ ವಿಚಾರವನ್ನು ಮಾಡಿರುತ್ತಾರೆ.

ಲೋಕದಲ್ಲಿ ಯಾವದು ಕಾರ್ಯವೋ ಅದು ತನ್ನ ಕಾರಣಕ್ಕಿಂತ ಬೇರೆಯಾಗಿರುವದಿಲ್ಲ. ಗಡಿಗೆಯು ತನ್ನ ಕಾರಣವಾದ ಮಣ್ಣಿಗಿಂತ ಬೇರೆಯಾಗಿರುವದಿಲ್ಲ; ಆ ಮಣ್ಣೂ ತನ್ನ ಕಾರಣಕ್ಕಿಂತ ಬೇರೆಯಾಗಿರುವದಿಲ್ಲ; ಹೀಗೆ ಸರ್ವವೂ ಪರಮಕಾರಣವಾದ ಸದ್ರೂಪಕ್ಕಿಂತ ಬೇರೆಯಾಗಿರುವದೇ ಇಲ್ಲ.

ಯಾವದರ ಬುದ್ಧಿಯು ಬೇರ್ಪಡುತ್ತಿರುವದೋ, ಎಂದರೆ 'ಇದು ಹೀಗಲ್ಲ' ಎಂದು ಮಾರ್ಪಾಡನ್ನು ಹೊಂದುತ್ತಿರುವದೋ, ಅದು ಅಸತ್ತು; ಯಾವದರ ಬುದ್ಧಿಯು ಹೀಗೆ ಬೇರ್ಪಡುವುದಿಲ್ಲವೋ ಅದು ಸತ್ತು. ಹೀಗೆ ಸತ್ತು, ಅಸತ್ತು - ಇವುಗಳ ಲಕ್ಷಣವನ್ನಿಟ್ಟುಕೊಂಡರೆ, ಲೋಕದಲ್ಲಿ

ನಮಗೆ ತೋರಿಬರುವ ಘಟಪಟಾದಿಸಕಲಬುದ್ಧಿಗಳೂ ಬೇರ್ಪಡುತ್ತಲೇ ಇರುವವು; ಏಕೆಂದರೆ ಸರಿಯಾಗಿ ನೋಡಿದಾಗ ಅವುಗಳು ತಮ್ಮ ಕಾರಣಕ್ಕಿಂತ ಬೇರೆಯಾಗಿರುವದೇ ಇಲ್ಲವೆಂದು ಪ್ರಮಾಣಗಳಿಂದ ಸಿದ್ಧವಾಗುವದು. ಆದರೆ ಅದೇ ಘಟಪಟಗಳೊಡನೆ ಸೇರಿಕೊಂಡಿರುವ ಸದ್ಬುದ್ಧಿಯು ಮಾತ್ರ ಬೇರ್ಪಡುವದಿಲ್ಲ; ಏಕೆಂದರೆ ಆಯಾ ಕಾರ್ಯವು ಅಸತ್ತೆಂದು ನಿಶ್ಚಿತವಾದ ಮೇಲೂ ಅದರ ಕಾರಣದಲ್ಲಿ ಸದ್ಬುದ್ಧಿಯು ಇದ್ದೇ ಇರುವದು. 'ಘಟಾದಿಗಳು ಅಸತ್ತಾದರೆ, ಅವುಗಳ ಬುದ್ಧಿಯೊಡನೆ ಸದ್ಬುದ್ಧಿಯೂ ಇರುವುದಲ್ಲ? 'ಗಡಿಗೆ' ಎಂದರೆ ಇರುವ ಗಡಿಗೆ ಎಂದೇ ಅರ್ಥವಷ್ಟೇ; 'ಗಡಿಗೆಯು ಅಸತ್ತಾದರೆ ಅದು ಇರುವದೆಂಬ ಬುದ್ಧಿಯು ನಮಗೆ ಉಂಟಾಗುವದಕ್ಕೆ ಕಾರಣವೇನು?' – ಎಂದು ಯಾರಾದರೂ ಕೇಳಬಹುದು. ಇದಕ್ಕೆ ಸಮಾಧಾನವೇನೆಂದರೆ: 'ಇದು ನೀರು' ಎಂದು ಬಿಸಿಲುಕುದುರೆಯಲ್ಲಿಯೂ ಬುದ್ಧಿಯುಂಟಾಗುವದು. ಅಲ್ಲಿ 'ಇದು' ಎಂಬ ಬುದ್ಧಿಗೆ ವಿಷಯವಾದ ಮರಳುಬಯಲು ಇದೆ; ಆದರೆ 'ನೀರು' ಎಂಬ ಬುದ್ಧಿಗೆ ಅನುಗುಣವಾದ ಪದಾರ್ಥವು ಇರುವದಿಲ್ಲ. ಹೀಗಿರುವದರಿಂದ ಒಂದು ನಿಜವಾಗಿಯೂ ಇನ್ನೊಂದು ಬರಿಯ ತೋರಿಕೆಯದಾಗಿಯೂ ಇರುವ ಎರಡು ವಸ್ತುಗಳ ಬುದ್ಧಿಯು ಒಂದೇ ಕಡೆಯಲ್ಲಿ ಉಂಟಾಗುವದೇನೂ ಅನುಭವವಿರುದ್ಧವಲ್ಲ. ಆದ್ದರಿಂದ ಸದ್ಬುದ್ಧಿಗೆ ವಿಷಯವಾದದ್ದು ಕೊನೆಯಲ್ಲಿ ಆತ್ಮನೆ, ಆ ಬುದ್ಧಿಯು ಬೇರ್ಪಡುವದಿಲ್ಲವಾದ್ದರಿಂದ ಆತ್ಮನು ಇಲ್ಲವೆಂಬುದಿಲ್ಲ; ಘಟಾದಿಬುದ್ಧಿಗಳಿಗೆ ವಿಷಯವಾದದ್ದು ಅನಾತ್ಮವು, ಈ ಬುದ್ಧಿಯು ಬೇರ್ಪಡುತ್ತಲೇ ಇರುವದರಿಂದ ಘಟಾದಿಗಳು ಪರಮಾರ್ಥವಾಗಿರುವದಿಲ್ಲ. ಇವುಗಳಿಂದ ಉಂಟಾಗುವ ದುಃಖವೂ ಪರಮಾರ್ಥವಲ್ಲ .

★★★★★

# ಯಾವದು ಪರಮಾರ್ಥ?

**21-5-1934**

**ಶ್ರೀಶ್ರೀಗಳವರು**

**ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ ।**
**ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥**

**ಮಾಂಡೂಕ್ಯಕಾರಿಕೆಯ ವೈತಥ್ಯಪ್ರಕರಣದ 32ನೆಯ ಶ್ಲೋಕವು** ಈ ಪ್ರಕರಣದ ಅರ್ಥವನ್ನು ಉಪಸಂಹಾರರೂಪದಿಂದ ತಿಳಿಸುತ್ತದೆ. ದ್ವೈತವೆಲ್ಲ ಮಿಥ್ಯೆಯಾಗಿರುವದರಿಂದಲೂ ಆತ್ಮನೊಬ್ಬನೇ ಪರಮಾರ್ಥಸತ್ಯನಾಗಿ ರುವದರಿಂದಲೂ ವ್ಯವಹಾರವೆಲ್ಲ ಅವಿದ್ಯಾವಿಷಯವು. ವಿದ್ಯಾದೃಷ್ಟಿಯಿಂದ ನೋಡಿದರೆ ಜಗತ್ತಿನ ಉತ್ಪತ್ತಿಪ್ರಲಯಗಳೇ ಇಲ್ಲ; ಆದ್ದರಿಂದ ಯಾವನೂ ಬದ್ಧನಾದದ್ದಿಲ್ಲ, ಮುಮುಕ್ಷುವಾಗಿ ಸಾಧನವನ್ನು ಮಾಡುವಾತನೂ ಇಲ್ಲ, ಮುಕ್ತನಾದವನೂ ಇಲ್ಲ- ಇದೇ ಪರಮಾರ್ಥವು. ಹಗ್ಗದಲ್ಲಿ ಕಲ್ಪಿತವಾದ ಹಾವು ಹಗ್ಗದಲ್ಲಿಯಾಗಲಿ ಮನಸ್ಸಿನಲ್ಲಾಗಲಿ ಹುಟ್ಟಿ ನಾಶವಾಗುವದಿಲ್ಲ; ಏಕೆಂದರೆ ಅದು ಇರುವದೇ ಇಲ್ಲ. ಇದರಂತೆಯೇ ಪ್ರಪಂಚವೆಂಬುದು ಇಲ್ಲವೇ ಇಲ್ಲವಾದ್ದರಿಂದ ಅದಕ್ಕೆ ಹುಟ್ಟುಹೊಂದುಗಳಿಲ್ಲ. ಆದ್ದರಿಂದ ಆ ಪ್ರಪಂಚದೊಳಗಿನ ಬದ್ಧಮುಕ್ತರೂ ಇಲ್ಲವೆಂಬುದೇ ಪರಮಾರ್ಥವು.

ಹೀಗಿರುವದರಿಂದ ಆತ್ಮನಲ್ಲಿ ಆರೋಪಿತವಾಗಿರುವ ದ್ವೈತವನ್ನೆಲ್ಲ ಮಿಥ್ಯೆಯೆಂದು ತೋರಿಸುವದೊಂದೇ ಶಾಸ್ತ್ರದ ಕೆಲಸವು. ಆತ್ಮನು ಸುಖಿ, ದುಃಖಿ, ಮೂಢನು, ಹುಟ್ಟಿದನು, ಸತ್ತನು, ಸವೆದನು, ದೇಹವುಳ್ಳವನಾಗಿ ದ್ದಾನೆ, ನೋಡುತ್ತಾನೆ, ವ್ಯಕ್ತನಾಗಿದ್ದಾನೆ, ಅವ್ಯಕ್ತನಾದನು, ಕರ್ಮಮಾಡುತ್ತಾನೆ, ಫಲವನ್ನು ಹೊಂದುತ್ತಾನೆ, ಇಂಥದ್ದೊಂದನ್ನು ಸೇರಿಕೊಂಡನು, ಅಗಲಿದನು, ಸವೆದನು, ಬೆಳೆದನು- ಎಂದು ಮುಂತಾಗಿ ಅಧ್ಯಸ್ತವಾಗಿರುವ ರೂಪಗಳಲ್ಲೆಲ್ಲ ಆತ್ಮನು ಸಿದ್ಧವಾಗಿಯೇ ಇರುತ್ತಾನೆ. ಆದ್ದರಿಂದ ಯಾವ ಯಾವ

ವಿಶೇಷರೂಪವನ್ನು ಆರೋಪಮಾಡಿಕೊಳ್ಳುತ್ತಾರೋ ಆಯಾ ರೂಪವನ್ನು ನೀನು ಸುಖಿತ್ವಾದಿರೂಪದಿಂದ ಕೂಡಿಲ್ಲ ಎಂದು ಶಾಸ್ತ್ರವು ತೋರಿಸಿಕೊಡುವದರಿಂದ ಆತ್ಮನಿಗೆ ಪ್ರಮಾಣವೆನಿಸಿರುವದೇ ಹೊರತು ಆತ್ಮಸ್ವರೂಪವನ್ನೇ ಬೆಟ್ಟಿಟ್ಟು ತೋರಿಸಿಕೊಡುವದಿಲ್ಲ. ಎಲ್ಲಾ ಆರೋಪಿತರೂಪಗಳಿಗೂ ಸಾಕ್ಷಿಯಾಗಿರುವ ಆತ್ಮನು ಆರೋಪಿತರೂಪಗಳಲ್ಲೆಲ್ಲ ಅನುಗತನಾಗಿರುವದರಿಂದಲೂ ಅವಿಕಲ್ಪಿತವಾಗಿ ರುವದರಿಂದಲೂ ಆತನು ಸ್ವಯಂಸಿದ್ಧನೂ ಅಪ್ರಮೇಯನೂ ಆಗಿರುತ್ತಾನೆ.

★★★★★

# ಸರ್ವರಲ್ಲಿಯೂ ಆತ್ಮನು ಒಬ್ಬನೇ

**22-05-1934**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳವರು**

**ಐತರೇಯೋಪನಿಷತ್ತಿನ ಎರಡನೆಯ ಅಧ್ಯಾಯದಲ್ಲಿ ಇರುವ ಸಂಬಂಧಭಾಷ್ಯದ ಅರ್ಥ**ವಿವರಣೆ –

ಈ ಉಪನಿಷತ್ತಿನ ಮೊದಲನೆಯ ಅಧ್ಯಾಯವು ಆರಣ್ಯಕ ಕ್ರಮದಲ್ಲಿ ನಾಲ್ಕನೆಯದಾಗುವದು. ಪರಮಾತ್ಮನು ಯಾವದೊಂದು ಉಪಾದಾನಕಾರಣವನ್ನೂ ಬಯಸದೆಯೆ ತಾನೇ ಆಕಾಶಾದಿಕ್ರಮದಿಂದ ಜಗತ್ತನ್ನು ಸೃಷ್ಟಿಮಾಡಿ, ಸಕಲ ಪ್ರಾಣಿಗಳ ಶರೀರವನ್ನೂ ಹೊಕ್ಕು, 'ನಾನೇ ಬ್ರಹ್ಮವು' ಎಂದು ಅರಿತುಕೊಂಡನು. ಆದ್ದರಿಂದ ಸಕಲಶರೀರಗಳಲ್ಲಿಯೂ ಆ ಒಬ್ಬನೇ ಆತ್ಮನಿರುವನು, ಅವನೇ ನಾನೆಂದು ಎಲ್ಲರೂ ತಿಳಿದುಕೊಳ್ಳಬೇಕು – ಎಂಬುದು ಈ ಅಧ್ಯಾಯದ ತಾತ್ಪರ್ಯವು. ಇದರಲ್ಲಿ ಪರಮೇಶ್ವರನು ಯಾವಾಗಲೂ ಸರ್ವವ್ಯಾಪಕನಾಗಿರುವಲ್ಲಿ ಸೃಷ್ಟಿಮಾಡಿದ ಬಳಿಕ ಅದರಲ್ಲಿ ಹೇಗೆ ಹೊಕ್ಕನು?– ಎಂದು ಸಂಶಯವು ಬರಲಾಗಿ ಸರ್ವರ ಆತ್ಮನೂ ಒಬ್ಬನೇ ಎಂಬುದನ್ನು ತಿಳಿಸುವುದಕ್ಕಾಗಿ ಈ ಪ್ರಕರಣವು ಬಂದಿದೆಯೇ ಹೊರತು ಈ ಪ್ರಕರಣಕ್ಕೆ

ಸೃಷ್ಟಿಯಲ್ಲಿ ತಾತ್ಪರ್ಯವಿಲ್ಲ; ಆದ್ದರಿಂದ ಇಲ್ಲಿ ತೋರಿಬರುವ ಅನುಪಪತ್ತಿಗಳನ್ನೆಲ್ಲ ಅರ್ಥವಾದದಲ್ಲಿ ಸೇರಿಸಬೇಕಾಗಿದೆ - ಎಂಬ ಸಮಾಧಾನವನ್ನು ಆಚಾರ್ಯರು ಹೇಳಿರುತ್ತಾರೆ.

ಈ ಭಾಷ್ಯಭಾಗದಲ್ಲಿ ಇನ್ನೊಂದು ವಿಚಾರದ ಚರ್ಚೆಯೂ ಇದೆ, ಸಂಸಾರಿಯಾದ ಆತ್ಮನು ಲೋಕಪ್ರಸಿದ್ಧನಾಗಿರುತ್ತಾನೆ; ಜಗತ್ಕರ್ತನಾದ ಈಶ್ವರಾತ್ಮನು ಅನುಮಾನಪ್ರಮಾಣದಿಂದಲೂ ಶಾಸ್ತ್ರದಿಂದಲೂ ಪ್ರಸಿದ್ಧನಾಗಿರುತ್ತಾನೆ; ''ನೇತಿ ನೇತಿ'' - (ಇದಲ್ಲ, ಇದಲ್ಲ) ಮುಂತಾದ ಶ್ರುತಿಗಳಿಂದ ಪ್ರಸಿದ್ಧನಾಗಿರುವ ನಿರ್ವಿಶೇಷಾತ್ಮನೊಬ್ಬನು ಉಪನಿಷತ್ತಿನಲ್ಲಿ ಪ್ರತಿಪಾದಿತನಾಗಿರುತ್ತಾನೆ. ಹೀಗೆ ಮೂರು ಮಂದಿ ಆತ್ಮರು ಇರುವಲ್ಲಿ, ಒಬ್ಬನೇ ಆತ್ಮನೆನ್ನುವದು ಹೇಗೆ ಸರಿ? - ಎಂಬ ಪೂರ್ವಪಕ್ಷವನ್ನು ಈ ಚರ್ಚೆಯಲ್ಲಿ ಆಚಾರ್ಯರು ವಿಚಾರಕ್ಕೆ ತೆಗೆದುಕೊಂಡಿರುತ್ತಾರೆ. ಇದಕ್ಕೆ ಅವರು ಕೊಟ್ಟಿರುವ ಉತ್ತರವೇನೆಂದರೆ; ಆತ್ಮನು ಸಂಸಾರಿಯೆಂಬುದು ಪ್ರತ್ಯಕ್ಷದಿಂದಾಗಲಿ ಅನುಮಾನದಿಂದಾಗಲಿ ಸಿದ್ಧವಾಗುವುದಿಲ್ಲ; ಏಕೆಂದರೆ ಆತ್ಮನು ಯಾವ ಪ್ರಮಾಣಕ್ಕೂ ವಿಷಯನೇ ಅಲ್ಲ. ಆತ್ಮನು ತಾನೇ ತನ್ನನ್ನು ಪ್ರತ್ಯಾಕ್ಷಾದಿಗಳಿಂದ ಸಿದ್ಧಮಾಡುತ್ತಾನೆಂದಾಗಲಿ ಮತ್ತೊಬ್ಬ ಆತ್ಮನಿಂದ ಸಿದ್ಧನಾಗುತ್ತಾನೆಂದಾಗಲಿ ಹೇಳುವದು, ಆತ್ಮನು ಅವಿಷಯನಾಗಿರುತ್ತಾನೆಂಬ ಅನುಭವಕ್ಕೆ ವಿರುದ್ಧವಾದ ಮಾತಾಗಿರುತ್ತದೆ. ಆತ್ಮನಲ್ಲಿ ಶ್ರೋತೃತ್ವಾದಿಧರ್ಮಗಳಿವೆಯೆಂದು ಅನುಭವದಲ್ಲಿ ಕಾಣುವದೂ, ಶಾಸ್ತ್ರದಲ್ಲಿ ಹೇಳಿರುವದೂ ನಿಜ; ಆದರೆ ಶ್ರೋತೃತ್ವಾದಿಗಳೆಂಬಿವು ನಿತ್ಯವಾದ ಚೈತನ್ಯಕ್ಕಿಂತ ಸ್ವರೂಪದಲ್ಲಿ ಭಿನ್ನವಾಗಿರುವದಿಲ್ಲ; ಬೇರೆಬೇರೆಯಾಗಿ ಉತ್ಪತ್ತಿನಾಶಗಳಿರುವಂತೆ ತೋರುವ ಶ್ರುತ್ಯಾದಿಗಳೆಂಬಿವು ಇಂದ್ರಿಯಗಳಲ್ಲಿರುವ ಅನಿತ್ಯಧರ್ಮಗಳಾಗಿರುತ್ತವೆಯಾಗಿ ಅವು ಆತ್ಮನಿಗೆ ಸಂಬಂಧಪಟ್ಟಿರುವದಿಲ್ಲ. ನಿತ್ಯಚೈತನ್ಯವಾದ ಸ್ವರೂಪದಲ್ಲಿ ಒಂದು, ಅನೇಕ- ಎಂಬಿವೇ ಮುಂತಾದ ವಿಕಲ್ಪಗಳೂ ಹೊಂದುವದಿಲ್ಲ. ಸರ್ವರಲ್ಲಿಯೂ ಆತ್ಮನೊಬ್ಬನೇ - ಎಂದು ಅರಿತುಕೊಳ್ಳಬೇಕೆಂದು ಹೇಳುವ ಶ್ರುತಿಗೆ ಆತ್ಮನು ಅರಿವಿನ ವಿಷಯನಾಗಬಹುದೆಂಬ ತಾತ್ಪರ್ಯವೇನೂ ಇರುವದಿಲ್ಲ. ಆತ್ಮನದಲ್ಲದೆ

ಅಧ್ಯಾಸದಿಂದ ತೋರುತ್ತಿರುವ ಧರ್ಮಗಳನ್ನು ಆತ್ಮನಿಂದ ತಳ್ಳಿಹಾಕಬೇಕೆಂಬುದೇ ಶಾಸ್ತ್ರದ ಉದ್ದೇಶವು; ಸರ್ವ ಸಾಕ್ಷಿಯಾಗಿ ನಿತ್ಯಶುದ್ಧನಾಗಿರುವ ಆತ್ಮನ ಜ್ಞಾನವನ್ನು ಈ ರೀತಿಯಿಂದಲೇ ಶಾಸ್ತ್ರವು ಉಂಟುಮಾಡಿಕೊಡುತ್ತದೆ.

★★★★★

# ಆತ್ಮನೊಬ್ಬನೇ ಪರಮಾರ್ಥಸತ್ಯ

**23-05-1934**

**ಶ್ರೀಶ್ರೀಗಳವರು**

**ಮಾಂಡೂಕ್ಯಕಾರಿಕೆಯಲ್ಲಿ ಅದ್ವೈತಪ್ರಕರಣದ ಮೂವತ್ತುನಾಲ್ಕು, ಮೂವತ್ತೈದು, ಮೂವತ್ತಾರು - ಈ ಶ್ಲೋಕಗಳ ಅರ್ಥದ ವಿವರಣೆಯನ್ನು ಮಾಡುತ್ತಾ** - ಆತ್ಮವೊಂದೇ ಸತ್ಯವು ಎಂಬ ತಿಳಿವಳಿಕೆಯುಂಟಾದ ಮೇಲೆ ಮನಸ್ಸು ಮನಸ್ಸಲ್ಲದೆ ಹೋಗುವದು; ಸಂಕಲ್ಪಿಸಬೇಕಾದ ವಸ್ತುವೇ ಆಗ ಇರುವದಿಲ್ಲವಾದ್ದರಿಂದ ಮನಸ್ಸು ಸಂಕಲ್ಪವನ್ನು ಮಾಡುವದಿಲ್ಲ, ಸುಡುವದಕ್ಕೇನೂ ಇಲ್ಲವಾಗಲು ಬೆಂಕಿಯು ತಾನೇ ಶಾಂತವಾಗುವಂತೆ ತಾನೂ ಶಾಂತವಾಗುವದು. ಹೀಗೆ ಮನಸ್ಸು ವಿಷಯಗಳೆರಡೂ ಇಲ್ಲದ ಈ ತಿಳಿವಳಿಕೆಯ ಸ್ಥಿತಿಗೂ ಸುಷುಪ್ತಿಯ ಸ್ಥಿತಿಗೂ ಹೆಚ್ಚು ಕಡಿಮೆಯುಂಟು. ಸರಿಯಾದ ಜ್ಞಾನದಿಂದ ಮನೋನಿರೋಧವುಂಟಾಗುವಾಗಲೂ ಪ್ರತ್ಯಯವಿರುವದಿಲ್ಲ, ಸುಷುಪ್ತಿಯಲ್ಲಿಯೂ ಪ್ರತ್ಯಯವಿರುವದಿಲ್ಲ. ಈ ಭಾಗದಲ್ಲಿ ಎರಡವಸ್ಥೆಗಳೂ ಒಂದೇ ಆಗಿರುವವು. ಆದರೂ ಈ ಎರಡು ಅವಸ್ಥೆಗಳಲ್ಲಿರುವ ವಿಶೇಷವೇನೆಂದರೆ ಸುಷುಪ್ತಿಯಲ್ಲಿ ಅವಿದ್ಯೆಯ ವಾಸನೆಯು ಸುಮ್ಮನೆ ಲಯವಾಗುತ್ತದೆ; ಮತ್ತೆ ಎಚ್ಚರವಾದ ಕೂಡಲೆ ಎಂದಿನಂತೆ ಎದ್ದುಕೊಳ್ಳುತ್ತವೆ. ಆದರೆ ಜ್ಞಾನದಿಂದ ಮನೋನಿರೋಧವಾದರೆ ಹಾಗಲ್ಲ; ಇನ್ನುಮುಂದೆ ಅವಿದ್ಯೆಯು ಆತ್ಮಸತ್ಯಜ್ಞಾನದಿಂದ ಸುಟ್ಟುಹೋಗಿರುವದರಿಂದ ಅದರ ಆಟವು ಮತ್ತೆ

ಸಾಗುವದೇ ಇಲ್ಲ. ನಿದ್ರೆಯಲ್ಲಿ ದ್ವೈತವನ್ನಡಗಿಸಿಕೊಂಡ ಮಾತ್ರದಿಂದ ಸಂಸಾರದಲ್ಲಿ ಮಾಡಬೇಕಾದ ಕರ್ತವ್ಯಗಳೆಲ್ಲ ಮುಗಿದುಹೋಗುವದಿಲ್ಲ; ಆದರೆ ಯಾವಾತನು ಆತ್ಮನೊಬ್ಬನೇ ಪರಮಾರ್ಥಸತ್ಯವೆಂದು ತಿಳಿದುಕೊಳ್ಳುವನೋ ಅವನು ಅಷ್ಟುಮಾತ್ರದಿಂದ ಕೃತಕೃತ್ಯನು. ಇನ್ನು ಮುಂದೆ ಅವನು ಸಮಾಧಿಯೇ ಮುಂತಾದವುಗಳನ್ನು ಸಂಪಾದಿಸಿಕೊಂಡು ದ್ವೈತವನ್ನು ನೀಗಿಕೊಳ್ಳಬೇಕಾದದ್ದೇನೂ ಇರುವದಿಲ್ಲ.

★★★★★

## ಷೋಡಶಕಲನಾದ ಪುರುಷನು ಎಲ್ಲಿರುತ್ತಾನೆ?

**24-05-1934**

ಬ್ರ॥ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳು

**ಪ್ರಶ್ನೋಪನಿಷತ್ತಿನಲ್ಲಿ ಆರನೆಯ ಪ್ರಶ್ನದ ಎರಡನೆಯ ಮಂತ್ರದ** ಭಾಷ್ಯದಲ್ಲಿ ಸುಕೇಶಭಾರದ್ವಾಜನು 'ಷೋಡಶಕಲನಾದ ಪುರುಷನು ಎಲ್ಲಿರುತ್ತಾನೆ?' ಎಂದು ಕೇಳಿದ್ದಕ್ಕೆ ಪಿಪ್ಪಲಾಯನನು ಹೇಳಿದ ಉತ್ತರವು ಈ ಮಂತ್ರದಲ್ಲಿದೆ. ಇಲ್ಲಿ ಷೋಡಷಕಲೆಗಳನ್ನು ಹೇಳಿರುವದು ಆತ್ಮನ ಶುದ್ಧರೂಪನ್ನು ತೋರಿಸುವದಕ್ಕಾಗಿಯೇ ಹೊರತು, ನಿಜವಾಗಿ ಅವು ಆತ್ಮಚೈತನ್ಯಕ್ಕಿಂತ ಬೇರೆಯಾಗಿರುವವೆಂದು ತಿಳಿಸುವದಕ್ಕಲ್ಲ. ಈ ರಹಸ್ಯವನ್ನು ತಿಳಿಯದೆ ಉಪಾಧಿರೂಪವಾಗಿರುವ ಅವಿದ್ಯಾಧ್ಯಸ್ತವಾದ ಕಲೆಗಳನ್ನೇ ಆತ್ಮನೆಂದು ಭ್ರಮಿಸಿ ಚೈತನ್ಯವೆಂಬುದು ಭೂತಗಳ ಧರ್ಮವೆಂದು ಚಾರ್ವಾಕರು; ಆತ್ಮನಲ್ಲಿ ಅನಿತ್ಯವಾದ ಚೈತನ್ಯಗುಣವು ಹುಟ್ಟಿ ನಾಶವಾಗುತ್ತಿರುವದೆಂದು ನೈಯಾಯಿಕರು; ಚೈತನ್ಯರೂಪವೇ ಪ್ರತಿಕ್ಷಣವೂ ಹುಟ್ಟುತ್ತದೆ, ನಾಶವಾಗುತ್ತದೆ, ಅದಕ್ಕಿಂತ ಬೇರೆಯಾಗಿ ಆತ್ಮನಿಲ್ಲವೇ ಇಲ್ಲವೆಂದು ವಿಜ್ಞಾನವಾದಿಗಳು; ಶೂನ್ಯವೇ ಪರಮಾರ್ಥವೆಂದು ಶೂನ್ಯವಾದಿಗಳು – ಹೀಗೆಲ್ಲ ಭ್ರಾಂತರಾಗಿರುತ್ತಾರೆ. ಇವರ ಮತವನ್ನೆಲ್ಲ ಖಂಡಿಸುವದಕ್ಕಾಗಿ ಇಲ್ಲಿ ಭಾಷ್ಯಕಾರರು

ಕೂಟಸ್ಥಚೈತನ್ಯರೂಪವನ್ನು ಸ್ಥಾಪನೆಮಾಡಿರುತ್ತಾರೆ.

ಜ್ಞಾನಜ್ಞೇಯಗಳು ಒಟ್ಟಿಗೆ ಇರುವವಾದರೂ ಜ್ಞೇಯವು ಜ್ಞಾನವನ್ನು ಬಿಟ್ಟು ಹೋಗುತ್ತಲೇ ಇರುವದು, ಸುಷುಪ್ತಿಯಲ್ಲಿ ಅದು ಅತ್ಯಂತವಾಗಿ ಇಲ್ಲವಾಗುವದು. ಜ್ಞೇಯವಿಲ್ಲದಿದ್ದರೆ ಜ್ಞಾನವೂ ಇರಲಾರದಾದ್ದರಿಂದ ಸುಷುಪ್ತಿಯಲ್ಲಿ ಜ್ಞಾನವೂ ಇಲ್ಲ ಎಂದು ಬೌದ್ಧರು ಹೇಳುವದು ಅಸಂಗತವು. ಕತ್ತಲೆಯಲ್ಲಿ ಯಾವರೂಪವೂ ಕಾಣದಿದ್ದರೆ ಕಣ್ಣೇ ಇಲ್ಲವೆಂದು ಹೇಗೆ ಹೇಳುವದಕ್ಕೆ ಬರುವದಿಲ್ಲವೋ ಹಾಗೆ ಸುಷುಪ್ತಿಯಲ್ಲಿ ಜ್ಞೇಯವಿಲ್ಲದಮಾತ್ರದಿಂದ ಜ್ಞಾನವೂ ಇಲ್ಲವೆಂದು ಹೇಳುವದಕ್ಕೆ ಬರುವದಿಲ್ಲ. ಯಾವಜ್ಞಾನದ ಬಲದಿಂದ ಜ್ಞೇಯಾಭಾವವನ್ನು ಸುಷುಪ್ತಿಯಲ್ಲಿ ಕಲ್ಪಿಸಬೇಕೋ ಆ ಜ್ಞಾನವು ಇಲ್ಲವೆನ್ನುವದು ಸುತರಾಂ ಅಸಂಗತವಾಗಿರುತ್ತದೆ. ಜ್ಞಾನವು ತನ್ನನ್ನೇ ತಾನು ಅರಿಯುವದೆಂಬುದಂತೂ ತನಗೆ ತಾನೇ ವಿರುದ್ಧವಾದದ್ದು. ಒಂದೊಂದು ವಸ್ತುವೂ ಜ್ಞೇಯವಾಗಿಯೇ ಸಿದ್ಧವಾಗಬೇಕೆಂಬುದು ಅನವಸ್ಥಾದಿದೋಷಗಳಿಂದ ಕೂಡಿರುವದು, ಅನುಭವ ವಿರುದ್ಧವಾಗಿಯೂ ಇರುವದು. ಆದ್ದರಿಂದ ಸಕಲಜ್ಞೇಯಗಳೂ ಬೇರ್ಪಟ್ಟರೂ ತಾನು ಇದ್ದಂತೆಯೇ ಇರುವ ಚೈತನ್ಯವೇ ಆತ್ಮನು, ಆತ್ಮನಲ್ಲಿಯೇ ಜ್ಞೇಯಗಳಾದ ಷೋಡಶಕಲೆಗಳು ಆರೋಪಿತವಾಗಿವೆ. ಅಜ್ಞರು ಅವುಗಳ ಧರ್ಮಗಳನ್ನೇ ಆತ್ಮನಲ್ಲಿ ಆರೋಪಿಸುತ್ತಾರೆ – ಎಂಬುದೇ ಸಿದ್ಧಾಂತವು.

★★★★★

# ಪರಮಾತ್ಮನ ಪ್ರವೇಶ

**25-05-1934**

**ವಿದ್ವಾನ್ ಎಚ್. ಅನಂತಮೂರ್ತಿಗಳವರು**

ತೈತ್ತಿರೀಯೋಪನಿಷತ್ತಿನ ಎರಡನೆಯ ಅಧ್ಯಾಯದ ಆರನೆಯ ಅನುವಾಕದಲ್ಲಿರುವ ''**ತತ್ಸೃಷ್ಟ್ವಾ ತದೇವಾನುಪ್ರಾವಿಶತ್**'' ಎಂಬ ವಾಕ್ಯದ

ಅರ್ಥವನ್ನು ವಿಚಾರಮಾಡಿರುವ ಭಾಷ್ಯಭಾಗದಲ್ಲಿ – ''ಜಗತ್ತನ್ನು ಸೃಷ್ಟಿಮಾಡಿ ಅದನ್ನೇ ಪ್ರವೇಶಿಸಿತು'' ಎಂದು ಹೇಳಿದೆಯಷ್ಟೇ; ಸೃಷ್ಟಿಮಾಡಿದ ಪರಮಾತ್ಮನು ಅದೇ ರೂಪದಿಂದ ಜಗತ್ತನ್ನು ಪ್ರವೇಶಿಸಿದನೆ ಅಥವಾ ಬೇರೆ ರೂಪದಿಂದ ಪ್ರವೇಶಿಸಿದನೆ?– ಎಂಬುದು ವಿಚಾರದ ವಿಷಯ. ಥಟ್ಟನೆ ನೋಡಿದರೆ, ಪ್ರವೇಶವೆಂಬುದೇ ಹೊಂದುವದಿಲ್ಲವೆಂದು ತೋರುತ್ತಿರುವದು. ಏಕೆಂದರೆ ಜಗದ್ರೂಪವಾಗಿ ಪರಿಣಮಿಸುವದರಿಂದಲೇ ಜಗತ್ತಿನಲ್ಲಿ ಹೊಕ್ಕಂತಾಗಿರುತ್ತದೆ; ಮತ್ತೆ ಅದರೊಳಗೆ ಹೋಗುವದೆಂದರೇನು? ಮಣ್ಣು ಹುಡಿಯಾದ ಮೇಲೆಯೇ ಘಟವಾಗುವಂತೆ, ಬ್ರಹ್ಮವು ಜೀವರೂಪವನ್ನು ತಾಳಿಯೇ ಜಗತ್ತಿನಲ್ಲಿ ಹೊಗುವದು – ಎಂದು ಅರ್ಥಮಾಡಬಹುದಲ್ಲ!– ಎಂದರೆ ಈ ಪಕ್ಷವು ಸರಿಯಲ್ಲ; ಏಕೆಂದರೆ ಮಣ್ಣಿನಲ್ಲಿ ಅವಯವಗಳಿರುವಂತೆ ಬ್ರಹ್ಮದಲ್ಲಿ ಅವಯವಗಳೇನೂ ಇರುವದಿಲ್ಲ. 'ಬ್ರಹ್ಮದಲ್ಲಿ ಅವಯವವೂ ಇದೆ; ಮುಖದಲ್ಲಿ ಕೈಯನ್ನು ಇಟ್ಟುಕೊಳ್ಳುವಂತೆ, ನಾಮರೂಪವೆಂಬ ಕಾರ್ಯರೂಪವಾದ ಒಂದು ಅವಯವದಲ್ಲಿ ಜೀವನೆಂಬ ಮತ್ತೊಂದು ಅವಯವವು ಹೊಕ್ಕಿತೆಂದು ಅರ್ಥಮಾಡೋಣ' – ಎಂದರೆ ಅದೂ ಹೊಂದುವದಿಲ್ಲ; ಏಕೆಂದರೆ ಜಗತ್ತೆಂಬ ಕಾರ್ಯರೂಪದಿಂದ ಪರಿಣಾಮವಾದ ಮೇಲೆ ಈ ಕಾರ್ಯಕ್ಕಿಂತ ಬೇರೆಯಾಗಿರುವ ಸ್ಥಳವೊಂದು ಇದ್ದರಲ್ಲವೆ, ಅಲ್ಲಿ ಜೀವರೂಪದಿಂದ ಬ್ರಹ್ಮವಿದ್ದೀತು? ಜೀವರೂಪದಿಂದ ಸೃಷ್ಟವಾದ ಕಾರ್ಯವು ಕಾರಣವಾದ ಬ್ರಹ್ಮವನ್ನೇ ಹೊಕ್ಕಿತು ಎಂದು ಅರ್ಥಮಾಡಿದರೆ ಜೀವತ್ವವೇ ಇಲ್ಲವಾಯಿತೆಂದಾಗುವದು. 'ಅದನ್ನು ಸೃಷ್ಟಿಮಾಡಿ ಅದನ್ನೇ ಹೊಕ್ಕಿತು' ಎಂದು ಶ್ರುತಿಯಲ್ಲಿರುವದರಿಂದ ಬ್ರಹ್ಮವನ್ನು ಜೀವನು ಹೊಕ್ಕನು ಎಂದು ಅರ್ಥಮಾಡುವದು ಸರಿಹೋಗುವದಿಲ್ಲ. ಮತ್ತೊಂದು ಕಾರ್ಯವನ್ನೇ ಜೀವನು ಹೊಗುತ್ತಾನೆ ಎಂದರೆ ಅದು ವಿರೋಧವಾಗುವದು; ಏಕೆಂದರೆ ಮಣ್ಣು ಗಡಿಗೆಯಾದ ಮೇಲೆ ಆ ಗಡಿಗೆಯು ಮತ್ತೊಂದು ಗಡಿಗೆಯಾಗುವದನ್ನು ನಾವೆಲ್ಲಿಯೂ ಕಂಡಿರುವದಿಲ್ಲ. ಅಖಂಡವಾದ ಆತ್ಮನು ನಾಮರೂಪಗಳಿಗಿಂತ ಬೇರೆಯೆಂದು ಹೇಳುವ ಶ್ರುತಿಗಳಿಗೂ ಇದು ವಿರುದ್ಧವಾಗುವದು. ಜೀವನು ಜಡವಾಗುವದಾದರೆ ಅವನಿಗೆ ಮೋಕ್ಷವಾಗುವದೆಂಬುದು ಅಸಂಭವವಾಗುವದು. 'ಬ್ರಹ್ಮವು ಶರೀರವೇ ಮುಂತಾದ ಆಧಾರದ ರೂಪವಾಗಿಯೂ ಒಳಗಿರುವ ಜೀವನ ರೂಪವಾಗಿಯೂ ಪರಿಣತವಾಯಿತು' – ಎಂದು ಅರ್ಥವನ್ನು ಮಾಡೋಣವೇ? ಎಂದರೆ ಅದೂ

ಹೊಂದುವದಿಲ್ಲ; ಏಕೆಂದರೆ ಒಳಗೇ ಇದ್ದುಕೊಂಡಿದ್ದ ಬ್ರಹ್ಮವು 'ಹೊಕ್ಕಿತು' ಎಂದರೆ ಅರ್ಥವಿಲ್ಲದ ಮಾತಾಗುವದು. ಸೂರ್ಯನು ಪ್ರತಿಬಿಂಬರೂಪದಿಂದ ನೀರಿನಲ್ಲಿ ಹೊಗುವಂತೆ ಜೀವರೂಪದಿಂದ ಪ್ರವೇಶಿಸುತ್ತಾನೆ – ಎಂದರ್ಥಮಾಡುವದಾದರೆ, ಬ್ರಹ್ಮವು ಪರಿಚ್ಛಿನ್ನವೆಂದೂ ಸಾಕಾರವೆಂದೂ ಕಲ್ಪಿಸಿದಂತಾಗುವದು. ಆದ್ದರಿಂದ 'ಬ್ರಹ್ಮವು ಜಗತ್ತನ್ನು ಸೃಷ್ಟಿಸಿ ಅದರೊಳಗೆ ಹೊಕ್ಕಿತು' ಎಂಬ ವಾಕ್ಯಕ್ಕೆ ಯಾವ ರೀತಿಯಿಂದಲೂ ಅರ್ಥವಾಗುವದಿಲ್ಲ. – ಎಂಬುದು ಪೂರ್ವಪಕ್ಷವು.

ಇದಕ್ಕೆ ಭಾಷ್ಯಕಾರರು ಹೇಳಿರುವ ಸಮಾಧಾನವೇನೆಂದರೆ; 'ಬ್ರಹ್ಮವನ್ನರಿತವನು ಪರಮಪುರುಷಾರ್ಥವನ್ನು ಪಡೆಯುತ್ತಾನೆ', 'ಆ ಬ್ರಹ್ಮವು ಗುಹೆಯಲ್ಲಿದೆ' ಎಂದು ಹಿಂದೆ ಹೇಳಿರುತ್ತದೆ. ಬ್ರಹ್ಮಸ್ವರೂಪವು ಎಲ್ಲೆಲ್ಲಿಯೂ ಅನುಸ್ಯೂತವಾಗಿರುವದೆಂದು ತೋರಿಸುವದಕ್ಕೋಸ್ಕರ ಆಕಾಶಾದಿಭೂತಗಳೂ ಅನ್ನಮಯದವರೆಗಿನ ಕೋಶಗಳೂ ಕಾರ್ಯಕಾರಣಪರಂಪರೆಯಾಗಿ ಬ್ರಹ್ಮದಿಂದಲೇ ಉಂಟಾಗಿರುವದೆಂದು ಹೇಳಿದ್ದಾಗಿದೆ. ಅನ್ನಮಯಾತ್ಮನಿಗಿಂತ ಬೇರೆಯಾಗಿ ಒಳಗಿರುವ ಪ್ರಾಣಮಯ, ಅವನಿಗಿಂತ ಬೇರೆಯಾಗಿ ಇನ್ನೂ ಒಳಗಿರುವ ವಿಜ್ಞಾನಮಯ – ಎಂದು ವಿಜ್ಞಾನಗುಹೆಯಲ್ಲಿ ಆತ್ಮನನ್ನು ಕಾಣುವಂತೆ ಹೊಳಹೊಗಿಸಿ ಅಲ್ಲಿ ಆನಂದಮಯನೆಂಬ ವಿಶಿಷ್ಟಾತ್ಮನನ್ನು ತೋರಿಸಿದ್ದಾಯಿತು. ಅಲ್ಲಿಂದ ಮುಂದಕ್ಕೆ ಆನಂದವು ತಾರತಮ್ಯದಿಂದ ಮನುಷ್ಯಾದಿಯಾಗಿ ಬ್ರಹ್ಮನವರೆಗಿರುವದೆಂದು ಹೇಳಿ ಆನಂದಮಯನೆಂಬ ಹೆಗ್ಗುರುತಿನಿಂದ ಆನಂದಸ್ವರೂಪವಾಗಿಯೂ ಸಕಲ ವಿಕಲ್ಪಗಳಿಗೆ ಆಸ್ಪದವಾಗಿಯೂ ನಿರ್ವಿಕಲ್ಪವಾಗಿಯೂ ಇರುವ ಬ್ರಹ್ಮವನ್ನು ಇದೇ ಅಂತಃಕರಣಗುಹೆಯಲ್ಲಿ ತಿಳಿಯಬೇಕೆಂದು ತಿಳಿಸುವದಕ್ಕಾಗಿ 'ಬ್ರಹ್ಮವು ಗುಹೆಯಲ್ಲಿರುವದೆಂಬ' ವಾಕ್ಯವನ್ನು ವಿವರಿಸುವದಕ್ಕಾಗಿ ಇಲ್ಲಿ 'ಅದನ್ನು ಸೃಷ್ಟಿಸಿ ಅದನ್ನೇ ಹೊಕ್ಕಿರುವದು' ಎಂದು ಹೇಳಿರುತ್ತದೆ. ನಿಜವಾಗಿಯೂ ಸೃಷ್ಟಿಮಾಡಿತೆಂಬುದಾಗಲಿ ಪ್ರವೇಶ ಮಾಡಿತೆಂಬುದಾಗಲಿ ವಿವಕ್ಷಿತವಲ್ಲ – ಎಂಬುದು ಭಾಷ್ಯಚರ್ಚೆಯ ಸಾರಾಂಶವು.

★★★★★

# ಆಚಾರ್ಯರ ಗುಣಕಥನ

**26-05-1934**

**ಶ್ರೀಶ್ರೀಗಳವರು**

ಪ್ರತಿಯೊಂದು ಮತದಲ್ಲಿಯೂ ಬೇರೆ ಬೇರೆ ಪಂಗಡದಲ್ಲಿರುವವರು ತಮ್ಮ ತಮ್ಮ ಆಚಾರ್ಯರನ್ನು ಗೌರವಿಸುವದೂ ಜಗದ್ಗುರುಗಳೆಂದು ಕರೆಯುವದೂ ವಾಡಿಕೆಯಾಗಿರುತ್ತದೆ. ಇದು ಆ ಮತಾನುಯಾಯಿಗಳ ಶ್ರದ್ಧೆಯನ್ನು ವ್ಯಕ್ತಪಡಿಸುವದಾದರೂ ಆ ಆಚಾರ್ಯರುಗಳ ಜಗದ್ಗುರುತ್ವವನ್ನು ಸಯುಕ್ತಿಕವಾಗಿ ಸ್ಥಾಪಿಸುವದಕ್ಕೆ ಸಾಕಾಗುವದಿಲ್ಲ. ಶ್ರೀಶಂಕರಭಗವತ್ಪಾದರು ಮಾತ್ರ ಅನ್ವರ್ಥವಾಗಿಯೂ ಜಗದ್ಗುರುಗಳಾಗಿರುತ್ತಾರೆ. ಏಕೆಂದರೆ ಅವರು ಮಾಡಿರುವ ವೇದಾಂತೋಪದೇಶವು ಎಲ್ಲರೂ ಕೇಳಿ ತಿಳಿದುಕೊಳ್ಳತಕ್ಕದ್ದಾಗಿರುತ್ತದೆ; ಮನಸ್ಸು ಮಾಡಿದರೆ ಎಲ್ಲರೂ ಅದರಂತೆ ವಿಚಾರಮಾಡಿ ಅದರಲ್ಲಿರುವ ತತ್ತ್ವವನ್ನು ಮನಗಾಣಬಹುದಾಗಿರುತ್ತದೆ; ಹಾಗೆ ಮನಗಂಡ ಮೇಲೆ ಎಲ್ಲರಿಗೂ ಆ ಉಪದೇಶವು ಸಮವಾಗಿಯೇ ಪ್ರಯೋಜನವನ್ನು ಉಂಟುಮಾಡುವಂಥದ್ದಾಗಿರುತ್ತದೆ.

ಆಚಾರ್ಯರನ್ನು ಜಗದ್ಗುರುಗಳೆಂದು ನಾವೆನ್ನುವದು ಹೀಗೆ ಯೋಗ್ಯವೇ ಆಗಿರುವದಾದರೂ ಅವರ ಜಗದ್ಗುರುತ್ವವು ಮಿಕ್ಕವರೆಲ್ಲರನ್ನೂ ಲಘುವಾಗಿ ಮಾಡಿಡುವಂಥದ್ದಾಗಿರುವದಿಲ್ಲ.; ಏಕೆಂದರೆ ಅವರು ಬೋಧಿಸಿರುವ ವೇದಾಂತದಲ್ಲಿ ''**ಅಹಂ ಬ್ರಹ್ಮಾಸ್ಮಿ**'' (ನಾನು ಬ್ರಹ್ಮವಾಗಿರುವೆನು), ''**ತತ್ತ್ವಮಸಿ**'' (ಅದು ನೀನಾಗಿರುವೆ), ''**ಸರ್ವಂ ಖಲ್ವಿದಂ ಬ್ರಹ್ಮ**'' (ಇದೆಲ್ಲವೂ ಬ್ರಹ್ಮವೇ) – ಎಂಬ ಉದಾರತತ್ತ್ವಗಳು ಅಡಗಿರುತ್ತವೆ. ಆಚಾರ್ಯರ ಉಪದೇಶವನ್ನು ಮನಗಂಡಮೇಲೆ ಪ್ರತಿಯೊಬ್ಬನೂ ಮತ್ತೊಬ್ಬರ ಸುಖಕ್ಕೆ ಯಾವ ಧಕ್ಕೆಯೂ ತಗಲದಂತೆಯೇ, 'ನಾನು ಬ್ರಹ್ಮವಾಗಿರುತ್ತೇನೆ' ಎಂದುಕೊಳ್ಳಬಹುದಾಗಿದೆ; ತನಗೆ ಯಾವ ಗರ್ವವೂ ಬರುವದಕ್ಕೆ ಅವಕಾಶವಿಲ್ಲದೆ, ತಾನೂ ಜಗದ್ಗುರುಗಳಾದ ಶಂಕರಭಗವತ್ಪಾದರಿಗೆ ಸಮಾನನಾಗಲು ಅವಕಾಶವಿದೆ. ಇದರಿಂದ ಆ ಮಹನೀಯರ ಜಗದ್ಗುರುತ್ವಕ್ಕೆ ರವೆಯಷ್ಟೂ ಹಾನಿಯಾಗುವಂತಿರುವದಿಲ್ಲ.

ಆಚಾರ್ಯರು ಪವಿತ್ರವಾದ ಬ್ರಾಹ್ಮಣಕುಲದಲ್ಲಿ ಜನಿಸಿ ವೇದಾಧ್ಯಯನಾದಿಗಳನ್ನು ಮಾಡಿ ಬ್ರಹ್ಮಚರ್ಯದಿಂದಲೇ ವಿರಕ್ತರಾಗಿ ತತ್ತ್ವಾನ್ವೇಷಣವನ್ನು ಮಾಡಿ ಸಾಕ್ಷಾತ್ಕಾರವನ್ನು ಪಡೆದದ್ದಲ್ಲದೆ ಲೋಕಕ್ಕೆಲ್ಲಕ್ಕೂ ತಮ್ಮ ನಿತ್ಯಾನಂದವು ದೊರಕುವಂತೆ ಉಪದೇಶಮಾಡುವದರಲ್ಲಿಯೂ ಆ ಉಪದೇಶವನ್ನೊಳಗೊಂಡ ಅಮೂಲ್ಯವಾದ ಭಾಷ್ಯಗಳನ್ನು ರಚಿಸುವದರಲ್ಲಿಯೂ ತಮ್ಮ ಜೀವಿತವನ್ನೆಲ್ಲ ವಿನಿಯೋಗಿಸಿರುತ್ತಾರೆ. ಪರಮಸಾತ್ವಿಕ ಶಿರೋಮಣಿಗಳಾದ್ದರಿಂದ ಅವರು ತಮ್ಮ ಜೀವನಚರಿತ್ರೆಯ ಅಂಶಗಳನ್ನು ಕುರಿತು ಒಂದಕ್ಷರವನ್ನಾದರೂ ತಮ್ಮ ಗ್ರಂಥಗಳಲ್ಲಿ ಬರೆದಿರುವದಿಲ್ಲ. ಅವರ ಜೀವನಚರಿತವನ್ನು ತಿಳಿಯಿಸುವ ಯಾವ ಪ್ರಮಾಣಗ್ರಂಥಗಳೂ ದೊರೆಯುವಂತಿರುವದಿಲ್ಲ. ಶಂಕರವಿಜಯಗಳೆಂದು ಹೇಳಿಸಿಕೊಳ್ಳುವ ಗ್ರಂಥಗಳು ಅವರಿಗಿಂತ ಕೆಲವು ಶತಮಾನಗಳ ಇತ್ತೀಚೆಗೆ ಬರೆದವುಗಳಾಗಿವೆ; ಅವುಗಳಲ್ಲಿ ಅವರ ಚರಿತ್ರೆಯ ಮುಖ್ಯಾಂಶಗಳು ಕೂಡ ಒಂದಕ್ಕೊಂದು ವಿರುದ್ಧವಾಗುವಂತೆ ಬರೆದಿರುತ್ತವೆ. ಈ ಸುಸಂಧಿಯನ್ನುಪಯೋಗಿಸಿಕೊಂಡು ಅಸೂಯಾಪರರಾದ ಕೆಲವರು ಆಚಾರ್ಯರ ಪವಿತ್ರಜನ್ಮಚರಿತ್ರೆಯಲ್ಲಿ ಕೂಡ ಕಳಂಕವನ್ನು ಸಂಭವಿಸುವ ಕಥೆಗಳನ್ನು ಕಲ್ಪಿಸುವ ದಿಟ್ಟತನವನ್ನು ಮಾಡಿರುತ್ತಾರೆ. ಇದಂತಿರಲಿ, ನಮ್ಮ ದೌರ್ಭಾಗ್ಯದಿಂದ ಆಚಾರ್ಯರ ಜೀವನಚರಿತ್ರೆಯ ನಿಜವಾದ ಅಂಶಗಳು ನಮಗೆ ದೊರೆಯದಂತಾಗಿದ್ದರೂ ಇದೂ ಒಂದು ವಿಧವಾಗಿ ನಮ್ಮಗಳಿಗೆ ಆಚಾರ್ಯರ ಸದುಪದೇಶವನ್ನು ನೆನಪಿಗೆ ತರುವಂತೆಯೇ ಇದೆ. ಏಕೆಂದರೆ ಅವರು ಶರೀರಕ್ಕೆ ಪ್ರಾಧಾನ್ಯವನ್ನು ಕೊಡುವವರ ಅಜ್ಞಾನವನ್ನು ತೊಲಗಿಸುವ ಪ್ರಯತ್ನದಲ್ಲಿಯೇ ತಮ್ಮ ಜೀವನವನ್ನೆಲ್ಲ ವಿನಿಯೋಗಿಸಿರುತ್ತಾರೆ. ಅವರು ಮಾಡಿರುವ ಉಪದೇಶವೇನೆಂದರೆ;

**ಜಾಗ್ರತ್ಸ್ವಪ್ನಸುಷುಪ್ತಿಷು ಸ್ಫುಟತರಾ ಯಾ ಸಂವಿದುಜ್ಜೃಮ್ಭತೇ**
**ಯಾ ಬ್ರಹ್ಮಾದಿಪಿಪೀಲಿಕಾನ್ತತನುಷು ಪ್ರೋತಃ ಜಗತ್ಸಾಕ್ಷಿಣೀ ।**
**ಸೈವಾಹಂ ನ ಚ ದೃಶ್ಯವಸ್ತ್ವಿತಿ ದೃಢಪ್ರಜ್ಞಾಪಿ ಯಸ್ಯಾಪಿ ಚೇತ್**
**ಚಂಡಾಲೋಸ್ತು ಸ ತು ದ್ವಿಜೋಸ್ತು ಗುರುರಿತ್ಯೇಷಾ ಮನೀಷಾ ಮಮ ॥**

'ಎಚ್ಚರಕನಸುತನಿನಿದ್ರೆ'ಗಳಲ್ಲಿ ಅತ್ಯಂತಸ್ಫುಟವಾಗಿ ಯಾವ ಚೈತನ್ಯವು ತಾನೇ ತೋರಿಕೊಳ್ಳುತ್ತಲಿರುವದೊ, ಬ್ರಹ್ಮವನ್ನು ಮೊದಲುಗೊಂಡು ಇರುವೆಯವರೆಗಿನ ಪ್ರಾಣಿಗಳ ಶರೀರಗಳಲ್ಲೆಲ್ಲ ಯಾವ ಒಂದೇ ಚೈತನ್ಯವು ನೂತುಕೊಂಡು ಜಗತ್ತಿಗೆಲ್ಲ ಸಾಕ್ಷಿಯಾಗಿರುವದೋ, ಅದೇ ನಾನು, ಕಾಣುವ ವಸ್ತು ನಾನಲ್ಲ'-ಎಂದು ಗಟ್ಟಿಯಾದ ತಿಳಿವಳಿಕೆಯು ಯಾವನಿಗಾದರೂ ಇದ್ದರೆ, ಆತನು ಚಂಡಾಲನಾಗಲಿ, ದ್ವಿಜನಾಗಲಿ, ಅವನೇ ನಮ್ಮೆಲ್ಲರಿಗೂ ಗುರುವು. ಹೀಗೆಂಬುದು ನನ್ನ ಮತವು.

ಇಂಥ ಪವಿತ್ರೋಪದೇಶವನ್ನು ಮಾಡಿರುವ ಆಚಾರ್ಯರು ಸಚ್ಚಿದಾನಂದ ಸ್ವರೂಪವಾದ ಬ್ರಹ್ಮಕ್ಕಿಂತ ಬೇರೆಯಾಗಿರಲು ಅವಕಾಶವೇ ಇಲ್ಲವಾದ್ದರಿಂದ ಅವರ ಶರೀರವ್ಯಕ್ತಿಯ ಜಾತಿಕುಲಗೋತ್ರಗಳು ನಮಗೆ ತಿಳಿದರೂ ತಿಳಿಯದಿದ್ದರೂ ಆ ಅಮಂಗಲವಿಚಾರದಲ್ಲಿ ತೊಡಗದೆ ದಿವ್ಯವಾದ ಅವರ ಉಪದೇಶಾಮೃತವನ್ನು ಪಾನಮಾಡಿ ಪರಮಮಂಗಲವಾದ ಬ್ರಹ್ಮಾನಂದವನ್ನು ಪಡೆಯುವದು ನಮ್ಮೆಲ್ಲರ ಕರ್ತವ್ಯವಾಗಿರುವದು.

★★★★★

## ಬ್ರಹ್ಮವನ್ನು ಸತ್ಯವೆಂದು ಉಪಾಸನೆ

**7-5-1935**

ಶ್ರೀಶ್ರೀಗಳವರು

**ಛಾಂದೋಗ್ಯೋಪನಿಷದ್ಭಾಷ್ಯ ಎಂಟನೆಯ ಅಧ್ಯಾಯದಲ್ಲಿ ಮೂರನೆಯ ಖಂಡದಲ್ಲಿ** - ಬ್ರಹ್ಮಪುರವೆನಿಸಿರುವ ಈ ಶರೀರದಲ್ಲಿ ಹೃದಯಪುಂಡರೀಕವೆಂಬ ಬ್ರಹ್ಮದ ಸ್ಥಾನವಿರುವದು ; ಕರಣಗಳನ್ನೆಲ್ಲ ಒಳಗೆ ಸರಿಸಿಕೊಂಡು ಬಾಹ್ಯವಿಷಯ ವಿರಕ್ತರಾಗಿ, ಬ್ರಹ್ಮಚರ್ಯ, ಸತ್ಯ-ಎಂಬ ಎರಡು, ಸಾಧನಗಳಿಂದೊಡಗೂಡಿ ಬ್ರಹ್ಮವನ್ನು ಅಲ್ಲಿ ಚಿಂತಿಸಬೇಕು, ಹೃದಯದಲ್ಲಿರುವ ಸ್ವಚ್ಛವಾದ ಅಂತಃಕರಣದಲ್ಲಿ

ಶುದ್ಧವಾದ ಕನ್ನಡಿಯಲ್ಲಿ ಮಾರುಹೊಳೆಯುವ ಮುಖದಂತೆ ಈ ಬ್ರಹ್ಮವು ಸ್ಪಷ್ಟವಾಗಿ ತಿಳಿಯಬರುತ್ತದೆ- ಎಂಬುದನ್ನು ತಿಳಿಸುವದಕ್ಕೆ ಈ ಪ್ರಕರಣವು ಬಂದಿರುತ್ತದೆ.

ಬ್ರಹ್ಮದಲ್ಲಿ ಸತ್ಯಕಾಮಾದಿಗಳು ಉಂಟೆಂದು ಹಿಂದಿನ ಖಂಡದಲ್ಲಿ ಹೇಳಿರುತ್ತದೆ. ಆದರೆ ಅವುಗಳು ನಮಗೆ ಏಕೆ ತಿಳಿಯಬರುವದಿಲ್ಲ ?– ಎಂಬುದನ್ನು ಈ ಖಂಡದ ಮೊದಲನೆಯ ಮಂತ್ರವು ವಿವರಿಸುತ್ತದೆ. ತನಗೆ ಇಷ್ಟರಾದ ಮಕ್ಕಳು , ಅಣ್ಣತಮ್ಮಂದಿರು ಮುಂತಾದವರು ಹೃದಯಾಕಾಶರೂಪವಾದ ಬ್ರಹ್ಮದಲ್ಲಿಯೇ ಇರುತ್ತಿದ್ದರೂ ಅವರು ಸತ್ತಬಳಿಕ ಸಿಕ್ಕದೆ ಇರುವದಕ್ಕೆ ಕಾರಣವೇನೆಂದರೆ ಹೊರಗಿನ ವಿಷಯತೃಷ್ಣೆಯೇ; ಸತ್ಯವಾದ ಕಾಮಗಳಿಗೆ ಹೊರಗಿನ ವಿಷಯಗಳ ಬಯಕೆ, ಸ್ವೇಚ್ಛಾಚಾರ – ಎಂಬ ಅನೃತರೂಪವಾದ ಮುಚ್ಚಳವು ಮರೆಯಾಗಿರುವದು. ನಿಜವಾಗಿನೋಡಿದರೆ ಸಮಸ್ತ ಕಾಮಗಳನ್ನೂ ಪಡೆದರೆ ಆಗುವ ಆನಂದವೆಲ್ಲ ಈ ಬ್ರಹ್ಮದ ಉಪಾಸನೆಯಿಂದ ದೊರಕುತ್ತದೆ. ಭೂಮಿಯಲ್ಲಿ ಹೂಳಿಟ್ಟಿರುವ ಹೊನ್ನನ್ನು ನಿಧಿಶಾಸ್ತ್ರವನ್ನರಿತವರು 'ಇಂಥಲ್ಲಿ ನಿಧಿಯಿದೆ' – ಎಂದು ತೋರಿಸಿಕೊಡುವವರೆಗೆ ಅದೇ ನಿಧಿಯ ಮೇಲೆ ನಾವು ಓಡಾಡುತ್ತಿದ್ದರೂ ಹೇಗೆ ನಮಗೆ ಸಿಕ್ಕದೆ ಇರುವದೋ ಅದರಂತೆ ಈ ಬ್ರಹ್ಮವನ್ನು ಸುಷುಪ್ತಿಕಾಲದಲ್ಲಿ ಜೀವರೆಲ್ಲರೂ ಹೊಂದುತ್ತಿದ್ದರೂ 'ಈಗ ನಾನು ಬ್ರಹ್ಮವಾದೆನು' ಎಂದು ಅರಿತುಕೊಳ್ಳಲಾರದೆ ಇರುವರು; ಇದಕ್ಕೆ ಅವರ ಅವಿದ್ಯೆಯೇ ಕಾರಣವು, ಅವಿದ್ಯೆಯಿಂದಾದ ಬಾಹ್ಯವಸ್ತುಗಳ ತೃಷ್ಣೆಯೇ ಅವರನ್ನು ಹೊರಮುಖವಾಗಿ ಎಳೆಯುತ್ತಿರುವದು. ಹೀಗೆ ಅತ್ಯಂತಸನ್ನಿಹಿತವಾಗಿಯೇ ಇರುವ ಬ್ರಹ್ಮವನ್ನು ಅರಿಯದಿರುವದು ಎಂಥ ದೌರ್ಭಾಗ್ಯವು!

ಈ ಆತ್ಮನು ಹೃದಯದಲ್ಲಿರುವನು. 'ಹೃದಯ' ಎಂಬ ಮಾತಿನ ಅವಯವಾರ್ಥದಲ್ಲಿಯೇ (ಹೃದಿ ಅಯಮ್) ಈ ಪರಮಾತ್ಮನು ಹೃದಯದಲ್ಲಿರುವನೆಂಬ ವಿಷಯವು ಅಡಕವಾಗಿರುವದು; ಹೀಗೆಂದು ತಿಳಿದಿರುವವನು ಸುಷುಪ್ತಿಕಾಲದಲ್ಲಿ ದಿನದಿನವೂ ತಾನು ಬ್ರಹ್ಮವನ್ನೇ ಸೇರುತ್ತಿರುವನು, ಸತ್ತಬಳಿಕಲಂತೂ ಆ ಬ್ರಹ್ಮದಲ್ಲಿಯೇ ಐಕ್ಯನಾಗುವನು.

ಯಾವನು ಶರೀರಾತ್ಮಭಾವನೆಯನ್ನು ಬಿಟ್ಟು ಮೇಲೆ ಹೇಳಿದಂತೆ ಉಪಾಸನೆಮಾಡುವನೋ ಅವನು ಪರಂಜ್ಯೋತಿಯಾದ ಪರಮಾತ್ಮನನ್ನು

ಸೇರಿಕೊಳ್ಳುವನು; ಈ ಪರಂಜ್ಯೋತಿಯೇ ನಮ್ಮ ಆತ್ಮನು, ಮರಣರಹಿತನು, ಭಯರಹಿತನು, ಬ್ರಹ್ಮವು.

ಈ ಬ್ರಹ್ಮಕ್ಕೆ ಸತ್ಯವೆಂದು ಹೆಸರು, ಸತ್ಯವೆಂಬ ಮಾತಿನಲ್ಲಿರುವ ಸಕಾರವು ಅಮೃತವೆಂಬರ್ಥವನ್ನು ಸೂಚಿಸುವದು; ತಕಾರವು ಮರ್ತ್ಯವೆಂಬರ್ಥವನ್ನು ಸೂಚಿಸುವದು; ಯಕಾರವು ಮರ್ತ್ಯಾಮೃತಗಳೆರಡನ್ನೂ (ನಿ)ಯಮನಮಾಡುವ ದೆಂಬರ್ಥವನ್ನು ಸೂಚಿಸುವದು. ಹೀಗೆ ಸತ್ಯವೆಂಬ ಬ್ರಹ್ಮದ ನಾಮದಲ್ಲಿರುವ ಅರ್ಥವನ್ನು ತಿಳಿದು ಈ ನಾಮದಿಂದ ಬ್ರಹ್ಮವನ್ನು ಯಾವನು ಉಪಾಸನೆ ಮಾಡುವನೋ ಅವನು ಪ್ರತಿದಿನವೂ ಸುಷುಪ್ತಿಕಾಲದಲ್ಲಿ ಬ್ರಹ್ಮವನ್ನು ಸೇರುತ್ತಿರುವನು, ಜೀವಂತನಾಗಿರುವಾಗಲೇ ಬ್ರಹ್ಮವಾಗಿದ್ದು ಸತ್ತಬಳಿಕವೂ ಬ್ರಹ್ಮದಲ್ಲಿಯೇ ಐಕ್ಯನಾಗುವನು.

★★★★★

# ಬ್ರಹ್ಮವೇ ಜಗತ್ಕಾರಣ

**8-5-1935**

**ವಿದ್ವಾನ್ ಬ್ರ|| ಶ್ರೀ|| ಚಂದ್ರಶೇಖರಭಟ್ಟರು**

**ಪ್ರಶ್ನೋಪನಿಷತ್ತಿನಲ್ಲಿ ಆರನೆಯ ಪ್ರಶ್ನದ ಮೂರನೆಯ ಮಂತ್ರದ ಭಾಷ್ಯ;** ಈ ಮಂತ್ರದಲ್ಲಿ ''**ಸ ಐಕ್ಷತ**'' ''ಆತನು ಯೋಚಿಸಿ ನೋಡಿದನು'' ಎಂದು ''ಈಕ್ಷಣ''ವನ್ನು ಹೇಳಿರುವದರಿಂದ ಚೇತನರೂಪವಾದ ಬ್ರಹ್ಮವೇ ಜಗತ್ಕಾರಣವೆಂದು ಸಿದ್ಧಿಸುತ್ತದೆ. ಆದರೆ ಸಾಂಖ್ಯರು ಸತ್ತ್ವರಜಸ್ತಮೋಗುಣಗಳ ಸಾಮ್ಯಾವಸ್ಥೆಯೇ ಪ್ರಧಾನವೆಂಬ ಹೆಸರಿನಿಂದ ಜಗತ್ಕಾರಣವಾಗಿರುವದೆಂದು ಅನುಮಾನ ಪ್ರಮಾಣದಿಂದ ನಿರ್ಣಯಿಸಿರುತ್ತಾರೆ ; ಆದ್ದರಿಂದ ಈ ಸಾಂಖ್ಯಮತವು ಶ್ರುತಿ ಯುಕ್ತಿಸಮ್ಮತವಲ್ಲವೆಂದು ತೋರಿಸಿಕೊಡುವದಕ್ಕಾಗಿ ಆಚಾರ್ಯರವರು ಇಲ್ಲಿ ಹೊರಟಿರುತ್ತಾರೆ.

ಆತ್ಮನು ಅಕರ್ತ, ಆದ್ದರಿಂದ ಅವನು ಸೃಷ್ಟಿಕರ್ತನಲ್ಲ; ಅವನು ಅದ್ವಿತೀಯ, ಆದ್ದರಿಂದ ಅವನಿಗೆ ಸೃಷ್ಟಿಗೆ ಸಾಧನವಿಲ್ಲವೆಂದಾಯಿತು ; ಆತ್ಮನು ತಾನೇ ಸೃಷ್ಟಿಮಾಡಿಕೊಂಡಿದ್ದರೆ ಅನರ್ಥವನ್ನು ಸೃಷ್ಟಿಮಾಡಿಕೊಳ್ಳುತ್ತಿರಲಿಲ್ಲ, ಆದರೆ ಪ್ರಪಂಚದಲ್ಲಿ ಅನರ್ಥವೂ ಕಂಡುಬರುತ್ತದೆ. ಈ ಎಲ್ಲಾ ಕಾರಣಗಳಿಂದ ಜಗತ್ತನ್ನು ಚೇತನನಾದ ಆತ್ಮನು ಸೃಷ್ಟಿಮಾಡಿದನೆಂಬುದು ಸರಿಯಲ್ಲವೆಂತ ಏರ್ಪಡುತ್ತದೆ. ಆದ್ದರಿಂದ ಪ್ರಧಾನವೇ ಚೇತನರೂಪನಾದ ಆತ್ಮನಿಗೆ ಬಂಧಮೋಕ್ಷಗಳನ್ನುಂಟು ಮಾಡುವದಕ್ಕಾಗಿ ಸೃಷ್ಟಿಮಾಡುತ್ತದೆ. ಅದು ಯೋಚಿಸಿ ನೋಡಿ ಕೆಲಸಮಾಡುವ ಪುರುಷನಂತೆ ಒಂದು ಗೊತ್ತಾದ ಕ್ರಮದಲ್ಲಿ ಮಾರ್ಪಡುತ್ತಿರುವದರಿಂದ ''ಅವನು ಯೋಚಿಸಿ ನೋಡಿದನು'' ಎಂದು ಉಪಚಾರಕ್ಕಾಗಿ ಮಂತ್ರದಲ್ಲಿ ಹೇಳಿರುತ್ತದೆ. ಹೀಗೆಂಬುದು ಸಾಂಖ್ಯರ ಪಕ್ಷ.

ಇದು ಸರಿಯಲ್ಲ. ಏಕೆಂದರೆ ಆತ್ಮನು ನಿರ್ವಿಕಾರನು. ಅವನಲ್ಲಿ ಭೋಕ್ತೃತ್ವವನ್ನು ಒಪ್ಪುವ ಸಾಂಖ್ಯರು ಕರ್ತೃತ್ವವನ್ನು ಮಾತ್ರ ಒಪ್ಪದಿರುವದಕ್ಕೆ ಕಾರಣವಿಲ್ಲ. ''ಕರ್ತೃತ್ವವನ್ನು ಒಪ್ಪಿದರೆ ಆತ್ಮನು ತನ್ನ ಸ್ವರೂಪವನ್ನೇ ಬದಲಾಯಿಸಿಕೊಂಡನೆಂದಾಗುವದು ; ಭೋಕ್ತೃತ್ವವನ್ನು ಒಪ್ಪಿಕೊಂಡರೆ ಹಾಗಿಲ್ಲ, ಏಕೆಂದರೆ ಭೋಕ್ತೃತ್ವವೆಂಬುದು ಬರಿಯ ಚಿದ್ರೂಪದಿಂದಲೇ ಆಗುವವಿಕಾರವು''- ಎಂದು ಸಾಂಖ್ಯರು ಹೇಳುತ್ತಾರೆ ; ಇದು ಸರಿಯಲ್ಲ. ಆತ್ಮನು ಅದ್ವಿತೀಯನಾಗಿ ರುವದು ನಿಜವಾದರೂ ಅವಿದ್ಯೆಯಿಂದಾಗಿರುವ ನಾಮರೂಪಗಳೆಂಬ ಉಪಾಧಿಗಳ ವ್ಯವಹಾರದಿಂದ ಕರ್ತೃತ್ವಭೋಕ್ತೃತ್ವಗಳು ಆತ್ಮನಿಗೆ ಉಂಟೆಂದು ಸಿದ್ಧಾಂತದಲ್ಲಿ ಒಪ್ಪಿರುತ್ತದೆ. ಸಾಂಖ್ಯರು ಕರ್ತೃತ್ವವನ್ನು ಅವಿದ್ಯಾಕೃತವೆಂದೂ ಭೋಕ್ತೃತ್ವವನ್ನು ಪಾರಮಾರ್ಥಿಕವೆಂದೂ ಹೇಳುವದೂ ಪ್ರಧಾನವೂ ನಿಜವಾಗಿಯೇ ಪುರುಷನಿಗಿಂತ ಬೇರೆಯಾದ ತತ್ತ್ವವೆಂದು ಒಪ್ಪುವದೂ ತರ್ಕವಿರುದ್ಧ. ಭೋಕ್ತೃತ್ವವು ಕೇವಲ ಪುರುಷನಿಗೆ ಎಂದರೂ ಪ್ರಧಾನಪುರುಷರಿಬ್ಬರೂ ಸೇರಿದ್ದಲ್ಲಿ ಭೋಕ್ತೃತ್ವವುಂಟಾಗುವದು ಎಂದರೂ ತರ್ಕವಿರೋಧವು ತಪ್ಪಿದ್ದಲ್ಲ; ಪುರುಷನಿಗೆ ಭೋಗವು ಇಲ್ಲವೇ ಇಲ್ಲವೆಂದರೆ ಶಾಸ್ತ್ರವು ವ್ಯರ್ಥವಾಗುವದು; ಆವಿದ್ಯಕ ಭೋಕ್ತೃತ್ವವಿದೆಯೆಂದರೆ ಆಗ ಕರ್ತೃತ್ವವಿಲ್ಲದ ಭೋಕ್ತೃತ್ವವು ಪುರುಷನಿಗೆ, ಭೋಕ್ತೃತ್ವವಿಲ್ಲದ ಕರ್ತೃತ್ವವು ಪ್ರಧಾನಕ್ಕೆ - ಎಂದು ಸಾಂಖ್ಯರು ವಿಂಗಡಿಸಿರುವ

ಕಲ್ಪನೆಗೆ ಆಧಾರವಿಲ್ಲದೆ ಹೋಗುವದು. ಆದ್ದರಿಂದ ಕರ್ತೃತ್ವಭೋಕ್ತೃತ್ವಗಳೆರಡೂ ಆವಿದ್ಯಕವೆಂದೂ ಪರಮಾರ್ಥವಾಗಿ ಅದ್ವಿತೀಯಾತ್ಮವೊಂದೇ ತತ್ತ್ವವೆಂದೂ ಒಪ್ಪಬೇಕು.

★★★★★

# ಜ್ಞಾನದಿಂದಲೇ ಮೋಕ್ಷ

**9-5-1935**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರು**

**ತೈತ್ತಿರೀಯೋಪನಿಷತ್ತಿನ ಶಿಕ್ಷಾವಲ್ಲಿಯಲ್ಲಿ** ನಾನಾವಿಧವಾದ ಉಪಾಸನೆಗಳನ್ನು ಹೇಳಿರುತ್ತದೆ. ಅವುಗಳಲ್ಲಿ ಕೆಲವು ಕರ್ಮಕಾಂಡಕ್ಕೆ ಸಂಬಂಧಪಟ್ಟು ಇರುತ್ತವೆ. ಆದ್ದರಿಂದ ಕರ್ಮದಿಂದಲೇ ಮುಕ್ತಿಯೆ ಅಥವಾ ಉಪಾಸನೆಯಿಂದೊಡಗೂಡಿದ ಕರ್ಮದಿಂದ ಮುಕ್ತಿಯೆ, ಇಲ್ಲದಿದ್ದರೆ ಸಮಪ್ರಧಾನವಾಗಿ ಸೇರಿಸಿ ಅನುಷ್ಠಾನಮಾಡಿದ ಕರ್ಮೋಪಾಸನೆಗಳಿಂದ ಮುಕ್ತಿಯೆ, ಕರ್ಮವನ್ನು ಅಂಗವಾಗಿಟ್ಟು ಮಾಡಿದ ಉಪಾಸನೆಯಿಂದಲೇ ಮುಕ್ತಿಯೆ, ಹಾಗೂ ಇಲ್ಲದಿದ್ದರೆ ಬರಿಯ ಜ್ಞಾನದಿಂದಲೇ ಮುಕ್ತಿಯಾಗುವದೆ?– ಎಂಬ ವಿಕಲ್ಪಗಳನ್ನು ಒಂದೊಂದಾಗಿ ಇಲ್ಲಿ ಭಾಷ್ಯಕಾರರು ವಿಚಾರಕ್ಕೆ ತೆಗೆದುಕೊಂಡಿರುತ್ತಾರೆ.

ತಿಳಿದವನೇ ಯಾಗಮಾಡಬೇಕು, ಯಾಗಮಾಡಿಸಬೇಕು ಎಂದು ಶಾಸ್ತ್ರದಲ್ಲಿ ಹೇಳಿರುವದರಿಂದ ಕರ್ಮಕಾಂಡ, ಜ್ಞಾನಕಾಂಡ– ಈ ಎರಡನ್ನೂ ಅಧ್ಯಯನ ಮಾಡಿ ಅರ್ಥವನ್ನು ತಿಳಿದುಕೊಂಡು ಕರ್ಮವನ್ನು ಮಾಡಿದರೆ ಮುಕ್ತಿಯಾಗುವದು– ಎಂಬುದು ಮೊದಲನೆಯ ಪಕ್ಷ. ಆದರೆ ಮುಕ್ತಿಯು ಕರ್ಮದಿಂದ ಉಂಟಾದರೆ ಅದು ಅನಿತ್ಯವಾಗುವದು. ಏಕೆಂದರೆ ಲೋಕದಲ್ಲಿ ಕರ್ಮದಿಂದ ಪಡೆದದ್ದೆಲ್ಲವೂ ಅನಿತ್ಯವೆಂಬುದು ಪ್ರಸಿದ್ಧವಾಗಿರುತ್ತದೆ. ಕಾಮ್ಯನಿಷಿದ್ಧಕರ್ಮಗಳನ್ನು

ಬಿಟ್ಟು ನಿತ್ಯಕರ್ಮಗಳನ್ನೇ ಮಾಡುತ್ತಿದ್ದರೆ ಪ್ರತ್ಯವಾಯವಿಲ್ಲದೆ ಹೋಗುವದರಿಂದ ಪ್ರಾರಬ್ಧಕರ್ಮವನ್ನು ಅನುಭವಿಸಿದ ಮೇಲೆ ಮೋಕ್ಷವು ತಾನೇ ಸಿದ್ಧವಾಗಬಹುದಲ್ಲ?- ಎಂದರೆ ಹಾಗಲ್ಲ ; ಸಂಚಿತಕರ್ಮಗಳು ಅನೇಕವಿರುವದರಿಂದ ಮತ್ತೊಂದು ಶರೀರವು ಉಂಟಾಗಲೇಬೇಕಾಗುವದು, ವೇದಾರ್ಥಶ್ರವಣದಿಂದಾಗುವ ಜ್ಞಾನವಾದ ಮೇಲೂ ಮನನನಿದಿಧ್ಯಾಸನವನ್ನು ವಿಧಿಸಿರುವದರಿಂದ ಅಧ್ಯಯನದಿಂದಾದ ಜ್ಞಾನವುಳ್ಳಾತನು ಕರ್ಮವನ್ನು ಮಾಡಿದರೂ ಅದು ಮೋಕ್ಷಕ್ಕೆ ಬೇಕಾದ ಜ್ಞಾನವೆಂದು ಹೇಳುವದಕ್ಕೆ ಬರುವಹಾಗಿಲ್ಲ.

ವಿಷವು ಮಂತ್ರದಿಂದ ಕೂಡಿದಾಗಲೂ ಮೊಸರು ಸಕ್ಕರೆಯಿಂದ ಕೂಡಿದಾಗಲೂ ಮರಣ, ಜ್ವರ - ಮುಂತಾದ ತಮ್ಮತಮ್ಮ ಕೆಟ್ಟ ಫಲವನ್ನು ಕೊಡದೆ ಬೇರೊಂದು ಫಲವನ್ನು ಕೊಡುವಂತೆ ಕರ್ಮವು ತಾನೊಂದೇ ಮೋಕ್ಷವನ್ನು ಕೊಡಲಾರದೆ ಇದ್ದರೂ ಉಪಾಸನೆಯಿಂದ ಕೂಡಿದ ಕರ್ಮವು ಮೋಕ್ಷವನ್ನು ಕೊಡಬಹುದಲ್ಲ?- ಎಂದರೆ ಅದೂ ಸರಿಯಲ್ಲ. ಏಕೆಂದರೆ ಕರ್ಮದಿಂದಾದ ಫಲವು ಅನಿತ್ಯವಾಗಿರುವದು, ಶಾಸ್ತ್ರದಲ್ಲಿ ಹೇಳಿರುವ ಕರ್ಮಕ್ಕೆ ನಿತ್ಯಫಲವಾಗಕೂಡದೆ? - ಎಂದರೆ ಹಾಗಲ್ಲ. ಏಕೆಂದರೆ ಶಾಸ್ತ್ರವು ಇದ್ದದ್ದನ್ನು ತಿಳಿಸೀತೇ ಹೊರತು ಸ್ವಭಾವವಾಗಿ ಅನಿತ್ಯವಾದ್ದನ್ನು ನಿತ್ಯವಾಗಿ ಮಾಡಲಾರದು. ವಿದ್ಯಾಕರ್ಮಗಳೆರಡೂ ಸಮವಾಗಿ ಸೇರಿದರೆ ಮೋಕ್ಷವಾಗುವದೆಂಬ ಪಕ್ಷದಲ್ಲಿಯೂ ಮುಕ್ತಿಯು ಅನಿತ್ಯವಾಗಬೇಕಾಗುವದರಿಂದ ಇದೇ ದೋಷವಿರುವದು.

ಕರ್ಮಕ್ಕೆ ಉತ್ಪತ್ತಿ, (ಉಂಟುಮಾಡುವದು), ಸಂಸ್ಕಾರ (ಸ್ವರೂಪದಲ್ಲಿ ವಿಶೇಷವನ್ನುಂಟುಮಾಡುವದು), ವಿಕಾರ (ಮಾರ್ಪಡಿಸುವದು), ಆಪ್ತಿ (ಪಡೆಯಿಸುವದು)- ಎಂಬ ನಾಲ್ಕು ಬಗೆಯ ಫಲಗಳುಂಟು; ಮೋಕ್ಷವು ಈ ನಾಲ್ಕು ಬಗೆಯಲ್ಲಿ ಒಂದೂ ಅಲ್ಲ, ಆದ್ದರಿಂದಲೂ ಅದು ಕರ್ಮೋಪಾಸನೆಗಳ ಫಲವಾಗಲಾರದು. ಸುಷುಮ್ನಾನಾಡಿಯ ಮೂಲಕ ಸೂರ್ಯದ್ವಾರದಿಂದ ಬ್ರಹ್ಮವನ್ನು ಪಡೆಯಬೇಕೆಂದು ಶಾಸ್ತ್ರವಿರುವದಲ್ಲ?- ಎಂದರೆ ಆ ಬಗೆಯ ಶಾಸ್ತ್ರವಚನವೆಲ್ಲ ಕಾರ್ಯಬ್ರಹ್ಮದ ವಿಷಯವು. ಲೋಕಾಂತರದಲ್ಲಿ ಕಾರ್ಯಬ್ರಹ್ಮನು ವಾಸವಾಗಿರುವದರಿಂದ ಅಲ್ಲಿಗೆ ಹೋಗಿ ಆ ಲೋಕವನ್ನು ಪಡೆಯಬೇಕಾಗಿರುತ್ತದೆ ; ಆದರೆ ಪರಬ್ರಹ್ಮವು ಸರ್ವಗತವಾಗಿರುವದರಿಂದಲೂ

ನಮ್ಮೆಲ್ಲರ ಆತ್ಮನೇ ಆಗಿರುವದರಿಂದಲೂ ಅದನ್ನು ಮತ್ತೆಲ್ಲಿಗೂ ಹೋಗಿ ಪಡೆಯಬೇಕಾದದ್ದಿರುವದಿಲ್ಲ.

ಇದಲ್ಲದೆ ನಿಜವಾದ ಜ್ಞಾನದ ಸ್ವರೂಪವನ್ನರಿಯದೆ ಜ್ಞಾನಕರ್ಮ ಸಮುಚ್ಚಯವನ್ನು ಮುಕ್ತಿಗೆ ಕಾರಣವೆಂದು ವಾದಿಗಳು ಹೇಳುತ್ತಿರುತ್ತಾರೆ, ಏಕೆಂದರೆ ನಿಜವಾದ ಜ್ಞಾನವು ಬಂದಾಗ ಕ್ರಿಯಾಕಾರಕಫಲವೆಂಬ ಭೇದವೇ ಸುಳ್ಳೆಂಬ ಅರಿವು ಉಂಟಾಗುವದು; ಕರ್ಮಕ್ಕೆ ಆ ಕಾರಕಗಳೆಲ್ಲವೂ ಬೇಕು. ಹೀಗಿರುವಲ್ಲಿ ಆತ್ಮಜ್ಞಾನವುಳ್ಳವನು ಕರ್ಮವನ್ನು ಅನುಷ್ಠಾನಮಾಡುವನೆಂಬುದೇ ವಿರುದ್ಧವಾದ ಮಾತು. ಆದ್ದರಿಂದ ಜ್ಞಾನಕರ್ಮಸಮುಚ್ಚಯವು ಹೊಂದುವದಿಲ್ಲ. ಉಪಾಸನಾರೂಪವಾದ ಜ್ಞಾನವನ್ನೂ ಕರ್ಮವನ್ನೂ ಕೂಡಿಸಿ ಅನುಷ್ಠಾನಮಾಡಬಹುದಾದರೂ ಅದಕ್ಕೆ ಕ್ರಮಮುಕ್ತಿಯುಂಟಾಗುವದೇ ಹೊರತು ಮುಖ್ಯವಾದ ಮುಕ್ತಿಯು ದೊರಕಲಾರದು.

ಶ್ರುತಿಯಲ್ಲಿ ಕರ್ಮವನ್ನು ವಿಧಿಸಿರುತ್ತದೆ. ಅದೇ ಶ್ರುತಿಯಲ್ಲಿ ಕರ್ತ್ರಾದಿಕಾರಕಗಳು ಸುಳ್ಳೆಂದು ಬೋಧಿಸಿದರೆ ಕರ್ಮವಿಧಾಯಕಶ್ರುತಿಗೆ ವಿಷಯವೇ ಇಲ್ಲದೆಹೋಗುವದಲ್ಲ? ಎಂದರೆ ಹಾಗಲ್ಲ. ಕರ್ಮಫಲವನ್ನು ಹೇಳುವ ಶ್ರುತಿಯು ಅವಿದ್ಯಾಪ್ರಾಪ್ತವಾದ ಕಾರಕಗಳನ್ನು ಇಟ್ಟುಕೊಂಡೇ ಹೇಳುತ್ತದೆಯೇ ಹೊರತು ಪರಮಾರ್ಥವಾಗಿಯೂ ಕಾರಕಗಳು ಇರುವವೆಂದೇನೂ ತಾತ್ಪರ್ಯದಿಂದ ಹೇಳುವುದಿಲ್ಲ; ಜ್ಞಾನವನ್ನು ಉಪದೇಶಿಸುವ ಶ್ರುತಿಯು ಅಜ್ಞಾನದಿಂದ ಆಗಿರುವ ಬಂಧವನ್ನು ಕಳೆಯುವದಕ್ಕಾಗಿ ಬಂದಿರುತ್ತದೆ ಆದ್ದರಿಂದ ಈ ಎರಡು ಶ್ರುತಿಗಳಿಗೂ ವಿರೋಧವಿಲ್ಲ, ಅಪ್ರಾಮಾಣ್ಯವೂ ಇಲ್ಲ. ಯಾವನು ಆತ್ಮಸ್ವರೂಪವನ್ನು ಅರಿಯನೋ ಅವನು ಅನಾತ್ಮವನ್ನು ಸತ್ಯವೆಂದು ತಿಳಿದು ಅದರ ಬಯಕೆಯಿಂದ ಕರ್ಮಗಳನ್ನು ಮಾಡುತ್ತಾನೆ; ಆತ್ಮನೊಬ್ಬನೇ ಪರಮಾರ್ಥವೆಂಬ ಜ್ಞಾನವನ್ನು ಯಾವನು ಸಂಪಾದಿಸಿಕೊಂಡಿರುವನೋ ಅವನಿಗೆ ಅನಾತ್ಮವೆಂಬುದೇ ಇಲ್ಲವಾದ್ದರಿಂದ ಕಾಮವೂ ಇಲ್ಲ, ಕರ್ಮವೂ ಇಲ್ಲ.

ಹೀಗೆ ಜ್ಞಾನಕರ್ಮಗಳು ಪರಸ್ಪರವಿರುದ್ಧವಾಗಿರುವದರಿಂದ ಜ್ಞಾನಕ್ಕೆ ಕರ್ಮದ ಸಹಾಯವೇನೂ ಬೇಕಿರುವದಿಲ್ಲ; ಆದರೂ ಜ್ಞಾನೋತ್ಪತ್ತಿಯಾಗುವದಕ್ಕೆ

ಪೂರ್ವದಲ್ಲಿ ಚಿತ್ತದಲ್ಲಿರುವ ಪ್ರತಿಬಂಧವನ್ನು ನೀಗುವದಕ್ಕೆ ನಿತ್ಯಕರ್ಮಗಳು ಉಪಯೋಗವಾಗುವದರಿಂದ ಶಾಸ್ತ್ರದಲ್ಲಿ ಕರ್ಮಗಳನ್ನು ವಿಧಿಸಿರುತ್ತದೆ. ಈ ಎಲ್ಲಾ ಕಾರಣಗಳಿಂದ ಬರಿಯ ಜ್ಞಾನದಿಂದಲೇ ಮೋಕ್ಷವಾಗುವದೆಂದು ಸಿದ್ಧವಾಯಿತು.

★★★★★

# ಪ್ರಪಂಚವು ತೋರಿಕೆಮಾತ್ರ

**10-5-1935**

**ವಿದ್ವಾನ್ ಬ್ರ॥ ಶ್ರೀ॥ ಚಂದ್ರಶೇಖರಭಟ್ಟರು**

**ಬ್ರಹ್ಮಸೂತ್ರದ ಎರಡನೆಯ ಅಧ್ಯಾಯದ ಒಂದನೆಯ** ಪಾದದಲ್ಲಿ ಒಂಬತ್ತನೆಯ ಸೂತ್ರದ ಭಾಷ್ಯದಲ್ಲಿ ಈ ಪ್ರಪಂಚವು ಸ್ಥೂಲವಾಗಿದೆ, ಅವಯವಗಳಿಂದ ಕೂಡಿದೆ, ಅಚೇತನವಾಗಿರುತ್ತದೆ, ಪರಿಚ್ಛಿನ್ನವಾಗಿದೆ, ಅಶುದ್ಧವಾಗಿದೆ- ಇದಕ್ಕೆ ಕಾರಣವು ಬ್ರಹ್ಮವೆಂದೂ ಅದರಿಂದ ಇದರ ಸೃಷ್ಟಿಸ್ಥಿತಿಲಯಗಳು ಆಗುತ್ತಿವೆಯೆಂದೂ ಹೇಳುವದಾದರೆ ಪ್ರಲಯಕಾಲದಲ್ಲಿ ಬ್ರಹ್ಮದಲ್ಲಿ ಈ ಪ್ರಪಂಚದ ಧರ್ಮಗಳೆಲ್ಲ ಸೇರಿಕೊಳ್ಳುತ್ತದೆಯೆಂದಂತಾಗುವದು; ಎಲ್ಲವೂ ಪ್ರಲಯದಲ್ಲಿ ಬ್ರಹ್ಮವಾಗಿ ಬಿಟ್ಟರೆ ಮತ್ತೆ ಭೋಕ್ತೃ, ಭೋಗ್ಯ, ನಿಯನ್ತೃ- ಎಂಬ ವಿಂಗಡವಾಗುವದಕ್ಕೆ ಕಾರಣವಿರುವುದಿಲ್ಲ. ಭೋಕ್ತರಾದ ಜೀವರು ಪ್ರಲಯದಲ್ಲಿ ಬ್ರಹ್ಮಸ್ವರೂಪವೇ ಆಗಿಬಿಡುವದರಿಂದಲೂ ಅವರ ಕರ್ಮಗಳೂ ಲಯವಾಗಿಬಿಡುವದರಿಂದಲೂ ಮತ್ತೆ ಅವರು ಸೃಷ್ಟಿಯಲ್ಲಿ ಸಂಸಾರಕ್ಕೆ ಬರುವುದಕ್ಕೆ ಕಾರಣವಿರುವದಿಲ್ಲ; ಕಾರಣವಿಲ್ಲದೆಯೇ ಅವರು ಸಂಸಾರಕ್ಕೆ ಬರುವದಾದರೆ ಮುಕ್ತರೂ ಮತ್ತೆ ಸಂಸಾರದಲ್ಲಿ ಹುಟ್ಟಬಹುದಾಗುವದು; ಪ್ರಲಯಕಾಲದಲ್ಲಿ ಜಗತ್ತು ಈಗ ಇರುವಂತೆಯೇ ವಿಭಕ್ತವಾಗಿಯೇ ಇರುವದಾದರೆ ಅದು ಪ್ರಲಯವೆಂದೇ ಆಗುವದಿಲ್ಲ, ಕಾರ್ಯವು ಕಾರಣಕ್ಕಿಂತ ಬೇರೆಯಲ್ಲವೆಂಬ ಸಿದ್ಧಾಂತವೂ ಹೋಗಿಬಿಡುತ್ತದೆ. ಆದ್ದರಿಂದ ಬ್ರಹ್ಮವು

ಜಗತ್ತಿಗೆ ಕಾರಣವೆಂಬ ವಾದವು ಸರಿಯಲ್ಲ- ಎಂದು ಸಾಂಖ್ಯರು ಆಕ್ಷೇಪಿಸಿರುವದಕ್ಕೆ ಈ ಸೂತ್ರದಲ್ಲಿ ಉತ್ತರವನ್ನು ಕೊಟ್ಟಿರುತ್ತದೆ.

ಕಾರ್ಯವು ಲಯವಾದರೆ ಆದರ ಧರ್ಮಗಳು ಕಾರಣದಲ್ಲಿ ಸೇರಿಕೊಳ್ಳಲೇಬೇಕೆಂಬ ನಿಯಮವೇನೂ ಇಲ್ಲ. ಮಣ್ಣಿನಿಂದಾಗಿರುವ ಮಡಕೆ ಮುಂತಾದವೂ ಚಿನ್ನದಿಂದ ಆಗಿರುವ ಅಸಲಿಯೇ ಮುಂತಾದ ಒಡವೆಗಳೂ ಭೂಮಿಯಿಂದ ಹುಟ್ಟುವ ನಾಲ್ಕುಬಗೆಯ ಪ್ರಾಣಿಗಳೂ ತಮ್ಮತಮ್ಮ ಕಾರಣದಲ್ಲಿ ಲಯವಾದರೆ ಕಾರ್ಯದ ಧರ್ಮವೇನೂ ಕಾರಣದಲ್ಲಿ ಅಂಟಿಕೊಳ್ಳುವದಿಲ್ಲ. ಲಯವಾಗುವಾಗಲೂ ಕಾರ್ಯವು ತನ್ನ ಧರ್ಮವನ್ನು ಇಟ್ಟುಕೊಂಡರೆ ಅದು ಲಯವೆಂದು ಹೇಗೆ ಆದೀತು?

ಇದಿರಲಿ. ಪ್ರಲಯದಲ್ಲಿ ಕಾರ್ಯದ ಧರ್ಮವು ಕಾರಣಕ್ಕೆ ಅಂಟಬೇಕೆಂದು ಏಕೆ ಹೇಳುತ್ತೀರಿ? ಸ್ಥಿತಿಯಲ್ಲಿಯೂ ಕಾರಣವಿರುವದರಿಂದಲೂ ಕಾರ್ಯವು ಅದಕ್ಕಿಂತ ಬೇರೆಯಾಗಿಲ್ಲದ್ದರಿಂದಲೂ ನಿಮ್ಮ ಈ ಆಕ್ಷೇಪವು ಸ್ಥಿತಿಗೂ ಹೊಂದಬೇಕಲ್ಲವೆ? ನಿಜವಾಗಿ ನೋಡಿದರೆ ಯಾವಾಗಲೂ ಆಕ್ಷೇಪಕ್ಕೆ ಕಾರಣವಿಲ್ಲ; ಏಕೆಂದರೆ ಕಾರ್ಯವೂ ಅದರ ಧರ್ಮಗಳೂ ಅವಿದ್ಯೆಯಿಂದ ಆರೋಪಿತವಾಗಿ ವೆಯೇ ಹೊರತು ಪರಮಾರ್ಥವಾಗಿಲ್ಲ. ಮಾಯಾವಿಗೆ ಅವನು ಉಂಟುಮಾಡಿದ ಮಾಯೆಯ ಸೋಂಕು ಹೇಗೆ ಇಲ್ಲವೋ, ಕನಸುಕಾಣುವಾತನಿಗೆ ಕನಸಿನ ಪ್ರಪಂಚದ ಸೋಂಕು ಹೇಗೆ ಇಲ್ಲವೋ, ಹೀಗೆಯೇ ಪ್ರಪಂಚದ ಸೃಷ್ಟಿಸ್ಥಿತಿಲಯಗಳು ಪರಮಾತ್ಮನಿಗೆ ಅಂಟುವದಿಲ್ಲ.

ಪ್ರಲಯದಲ್ಲಿ ಬ್ರಹ್ಮದಲ್ಲಿ ಸೇರಿದ ಪ್ರಪಂಚವು ಮತ್ತೆ ಹೇಗೆ ಉಂಟಾಗುವದು? ಎಂದರೆ ಸುಷುಪ್ತಿ, ಸಮಾಧಿ- ಮುಂತಾದ ಅವಸ್ಥೆಗಳಲ್ಲಿ ಬ್ರಹ್ಮವೇ ಆಗಿರುವ ಜಗತ್ತು ಮತ್ತೆ ಎಚ್ಚರದಲ್ಲಿ ಹೇಗೆ ಉಂಟಾಗುವದೋ ಹಾಗೆ ಎಂದು ತಿಳಿಯಿರಿ, ಅಜ್ಞಾನದಿಂದ ಜಗತ್ತು ಆಗಿರುವದರಿಂದ ಜ್ಞಾನದಿಂದ ಅದು ನಾಶವಾಗುವವರೆಗೂ ಅದು ಹೋಗುವದೇ ಇಲ್ಲ; ನಿಜವಾಗಿ ನೋಡಿದರೆ ಯಾವ ಜಗತ್ತೂ ವಿಭಾಗವೂ ಪರಮಾತ್ಮನಲ್ಲಿ ಇಲ್ಲವೇ ಇಲ್ಲ, ಆದರೂ ಸ್ಥಿತಿಕಾಲದಲ್ಲಿ

ಕನಸಿನ ಪ್ರಪಂಚದಂತೆ ಇದು ಕಾಣುತ್ತಲೇ ಇರುವದಲ್ಲವೆ? ಇದಕ್ಕೇನು ಕಾರಣ? ಮಿಥ್ಯಾಜ್ಞಾನವೇ. ಇದರಂತೆ ಮಿಥ್ಯಾಜ್ಞಾನನಿಮಿತ್ತವಾಗಿ ಪ್ರಲಯ ಕಾಲದಲ್ಲಿಯೂ ಒಂದಾನೊಂದು ವಿಭಾಗಶಕ್ತಿಯಿರುವದೆಂದು ತಿಳಿಯಿರಿ; ಆ ಮಿಥ್ಯಾಜ್ಞಾನವು ಯಾರಿಗೆ ಹೋಗಿರುವದೋ ಅವರೇ ಮುಕ್ತರು; ಆದ್ದರಿಂದ ಅವರ ದೃಷ್ಟಿಯಿಂದ ಸ್ಥಿತಿಯಲ್ಲಾಗಲಿ ಪ್ರಲಯದಲ್ಲಾಗಲಿ ಪ್ರಪಂಚವಿರುವದೇ ಇಲ್ಲ, ಇನ್ನು ಅವರು ಸಂಸಾರಕ್ಕೆ ಬರುವದೆಲ್ಲಿ ಬಂತು?

ಪ್ರಲಯದಲ್ಲಿ ಪ್ರಪಂಚವು ಈಗ ಇರುವಂತೆ ವಿಭಕ್ತವಾಗಿಯೇ ಇರುವದೆಂಬ ವಾದವನ್ನು ಸಿದ್ಧಾಂತಿಗಳು ಒಪ್ಪುವದೇ ಇಲ್ಲ; ಏಕೆಂದರೆ ಪರಮಾರ್ಥವಾಗಿ ಯಾವಾಗಲೂ ಇದು ಇರುವದೇ ಇಲ್ಲವಾದರೂ ಮಿಥ್ಯಾಜ್ಞಾನನಿಮಿತ್ತವಾಗಿ ಮಾಯೆಯಂತೆಯೂ ಸ್ವಾಪ್ನಪ್ರಪಂಚದಂತೆಯೂ ಇದು ತೋರಿಕೊಂಡಿರುವದೆಂಬುದೇ ವೇದಾಂತಸಿದ್ಧಾಂತವಾಗಿರುತ್ತದೆ -ಎಂಬುದು ಭಾಷ್ಯದ ಸಾರವು.

★★★★★

# ಅಭಿಮಾನದಿಂದಲೇ ಬಂಧ

**11-5-1935**

**ಬ್ರ॥ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳು**

**ಭಗವದ್ಗೀತೆಯ ಹದಿನೆಂಟನೆಯ ಅಧ್ಯಾಯದ ಹದಿನೇಳನೆಯ ಶ್ಲೋಕದ** ಭಾಷ್ಯ - ಯಾವನಿಗೆ ನಾನೆಂಬ ಅಭಿಮಾನವಿಲ್ಲವೋ ಯಾವನ ಬುದ್ಧಿಯು ಅಲಿಪ್ತವಾಗಿರುವದೋ ಅವನು ಮೂರು ಲೋಕಗಳನ್ನೂ ಕೊಂದರೂ ಕೊಂದಾತನಾಗುವುದಿಲ್ಲ, ಅವನಿಗೆ ಅದರಿಂದ ಬಂಧವಿಲ್ಲ-ಎಂಬುದು ಶ್ಲೋಕದ ಅಕ್ಷರಾರ್ಥವು.

ಶರೀರ, ಕರ್ತೃ, ಹನ್ನೆರಡು ಬಗೆಯ ಕರಣಗಳು, ಪ್ರಾಣಾದಿಗಳ ವ್ಯಾಪಾರ ಮತ್ತು ದೈವ ಇವು ಐದೂ ಆತ್ಮನಲ್ಲಿ ಅವಿದ್ಯೆಯಿಂದ ಕಲ್ಪಿತವಾಗಿರುವವು; ಕರ್ಮಗಳಿಗೆ ಇವು ಐದೇ ಕಾರಣವಾಗಿರುತ್ತವೆ; ನಾನು ಈ ಐದರ ಸಂಬಂಧವೂ ಇಲ್ಲದ ಶುದ್ಧನಾದ ಅವಿಕ್ರಿಯನಾದ ಆತ್ಮನು- ಎಂಬ ಜ್ಞಾನವು ಯಾವಾತನಿಗೆ ಉಂಟಾಗಿರುವದೋ 'ಇದನ್ನು ಮಾಡಿದ್ದರಿಂದ ನನಗೆ ಒಳ್ಳೆಯ ಅಥವಾ ಕೆಟ್ಟ ಫಲವಾಗುವದು' ಎಂದು ಕರ್ಮಫಲದ ಅಂಟನ್ನು ಹಚ್ಚಿಕೊಳ್ಳುವ ವಾಸನೆಯು ಯಾವಾತನ ಬುದ್ಧಿಯಲ್ಲಿರುವದಿಲ್ಲವೋ, ಅವನು ಮೂರು ಲೋಕಗಳನ್ನೂ ಕೊಂದರೂ ಕೊಂದಂತಲ್ಲ, ಅದರಿಂದ ಅವನಿಗೆ ಬಂಧವು ಆಗುವದಿಲ್ಲ. ಇದು ಜ್ಞಾನವನ್ನು ಹೊಗಳುವದಕ್ಕಾಗಿ ಹೇಳಿದ ಮಾತು.

ಕೊಂದರೂ ಕೊಂದಂತಲ್ಲ- ಎಂದು ಹೇಳುವದು ವಿರುದ್ಧವಲ್ಲವೆ? ಎಂದರೆ ಹಾಗಲ್ಲ. ದೇಹಾದಿಗಳೇ ತಾವೆಂದು, ತಿಳಿಯುವವರ ಬುದ್ಧಿಯು ಲೌಕಿಕ ದೃಷ್ಟಿಯು; ಆ ಲೌಕಿಕದೃಷ್ಟಿಯಿಂದ ಕೊಂದರೂ ನಿಜವಾಗಿ ಶಾಸ್ತ್ರಜನಿತವಾದ ಪಾರಮಾರ್ಥಿಕದೃಷ್ಟಿಯಿಂದ ಅವನು ಕೊಲ್ಲುವದಿಲ್ಲ- ಎಂಬುದು ಇಲ್ಲಿ ಆಶಯವು.

ಆತ್ಮನೊಬ್ಬನೇ ಕೊಲ್ಲುವದಿಲ್ಲ ಎಂಬುದು ನಿಜವಾದರೂ ಶರೀರಾದಿಗಳಿಂದೊಡಗೂಡಿ ಆತ್ಮನು ಕೊಲ್ಲುತ್ತಾನೆಂದೇ ತೋರುವದಲ್ಲ?- ಎಂದರೆ ಹಾಗಲ್ಲ. ಏಕೆಂದರೆ ಆತ್ಮನು ಮತ್ತೊಂದರೊಡನೆ ಕೂಡಿಕೊಳ್ಳುವ ಸ್ವಭಾವದವನಲ್ಲ. ಆತ್ಮನಲ್ಲಿ ಯಾವ ಅವಯುವಗಳೂ ಇಲ್ಲದೆ ಇರುವದರಿಂದಲೂ ಅವನ ಜ್ಞಾನಸ್ವರೂಪವು ಮತ್ತೊಂದರ ಅಧೀನದಲ್ಲಿಲ್ಲವಾದ್ದರಿಂದಲೂ ಯಾವ ಮಾರ್ಪಾಡುಗಳೂ ಅವನಲ್ಲಿರುವದಿಲ್ಲ. ಒಂದು ವೇಳೆ ಅವನಲ್ಲಿ ಮಾರ್ಪಾಡುಗಳಿವೆಯೆಂದರೂ ತನ್ನಲ್ಲಿ ಆಗುವ ಮಾರ್ಪಾಡುಗಳು ತನಗೆ ಆದಾವೇ ಹೊರತು ಶರೀರಾದಿಗಳ ಮಾರ್ಪಾಡುಗಳು ಎಂದಿಗೂ ತನಗೆ ಆಗಲಾರವು. ಶರೀರಾದಿಗಳಲ್ಲಿ ಆಗುವ ವ್ಯಾಪಾರಗಳು ಆತ್ಮನಲ್ಲಿರುವಂತೆ ತೋರುವದು ತಪ್ಪುತಿಳಿವಳಿಕೆಯಿಂದಾದ್ದರಿಂದ ಪರಮಾರ್ಥವಾಗಿ ಆತ್ಮನಲ್ಲಿ ಅವು ಇರುವದಿಲ್ಲವೆಂಬುದೇ ಯುಕ್ತವು. ಅವಿದ್ಯೆಯಿಂದ ಕಲ್ಪಿತವಾದ ಬೆಳ್ಳಿಯ ಗುಣಗಳು ಕಪ್ಪೆಯಚಿಪ್ಪಿಗೆ ಹೇಗೆ ನಿಜವಾಗಿ ಅಂಟಲಾರವೋ ಅದರಂತೆಯೇ

ಶರೀರಾದಿಗಳ ಧರ್ಮಗಳು ಆತ್ಮನಿಗೆ ಅಂಟಲಾರವೆಂದು ತಿಳಿಯಬೇಕು. ಗೀತಾಶಾಸ್ತ್ರದಲ್ಲಿ ಅಲ್ಲಲ್ಲಿ ಆತ್ಮನು ಅವಿಕ್ರಿಯನೆಂದು ಹೇಳಿಯೇ ಇರುತ್ತದೆ; ಅದನ್ನೇ ಇಲ್ಲಿ ಒಟ್ಟು ತಾತ್ಪರ್ಯವನ್ನು ಉಪಸಂಹಾರದಲ್ಲಿ ತೋರಿಸಿ ಕೊಡುವದಕ್ಕೆಂದು ಮತ್ತೆ ಹೇಳಿರುತ್ತದೆ.

ಆದಕಾರಣ ನಾನು ದೇಹಿಯು ಎಂಬ ಅಭಿಮಾನವು ತೊಲಗಲಾಗಿ ಅವಿದ್ಯೆಯಿಂದ ಆಗಿದ್ದ ಕರ್ಮಗಳನ್ನೆಲ್ಲ ಸಂನ್ಯಾಸಮಾಡಿದಂತಾಗುವದು; ಆದ್ದರಿಂದಲೇ ಇಂಥ ಸಂನ್ಯಾಸಿಗಳಿಗೆ ಅನಿಷ್ಟ, ಇಷ್ಟ, ಮಿಶ್ರ- ಎಂಬ ಮೂರು ಬಗೆಯ ಕರ್ಮಫಲಗಳೂ ಆಗುವಹಾಗಿರುವದಿಲ್ಲ; ಈ ಅಭಿಮಾನವು ಹೋಗದೆ ಇರುವದರಿಂದಲೇ ಮಿಕ್ಕವರಿಗೆ ಅವು ಉಂಟಾಗುತ್ತವೆ. ಇದೇ ಒಟ್ಟು ಗೀತಾಶಾಸ್ತ್ರದ ತಾತ್ಪರ್ಯವು. ಇದೇ ವೇದಾರ್ಥಸಾರವಾದ್ದರಿಂದ ಕುಶಲಮತಿಗಳಾದವರು ಇದನ್ನು ಚೆನ್ನಾಗಿ ವಿಚಾರಮಾಡಿ ಮನಗಾಣಬೇಕಾಗಿರುತ್ತದೆ.

★★★★★

## ಆತ್ಮನೆಂದೇ ಉಪಾಸಿಸಬೇಕು

**12-5-1935**

**ಶ್ರೀಶ್ರೀಗಳವರು**

**ಬೃಹದಾರಣ್ಯಕೋಪನಿಷತ್ತಿನ ಒಂದನೆಯ ಅಧ್ಯಾಯದ ನಾಲ್ಕನೆಯ ಬ್ರಾಹ್ಮಣದ ಏಳನೆಯ ಮಂತ್ರದಲ್ಲಿ ''ಆತ್ಮೇತ್ಯೇವೋಪಾಸೀತ''** ಎಂಬ ವಾಕ್ಯವನ್ನು ಕುರಿತು ಚರ್ಚೆಯನ್ನೊಳಗೊಂಡ ಭಾಷ್ಯಭಾಗದಲ್ಲಿ ಪ್ರಾಣ, ವಾಕ್ಕು, ಚಕ್ಷು, ಶ್ರೋತ್ರ, ಮನಸ್ಸು- ಎಂದು ಆತ್ಮನನ್ನು ಕರ್ಮನಾಮಗಳಿಂದ ಉಪಾಸನೆ ಮಾಡಬಾರದು. ಇವುಗಳಲ್ಲಿ ಒಂದೊಂದು ನಾಮರೂಪದಿಂದ ಉಪಾಸನೆಮಾಡಿದರೆ ಮಿಕ್ಕ ನಾಮರೂಪಗಳು ಆತ್ಮನಲ್ಲಿ ಸೇರುವದಿಲ್ಲ; ಆದ್ದರಿಂದ ಅದು ಪೂರ್ಣರೂಪವನ್ನು ಉಪಾಸನೆಮಾಡಿದಂತಾಗುವದಿಲ್ಲ. ಹೀಗೆ

ಒಂದೊಂದನ್ನೇ ಉಪಾಸನೆಮಾಡುವವನು ನಿಜವನ್ನು ಅರಿಯನು. ಆದಕಾರಣ 'ಆತ್ಮನು' ಎಂದೇ ಉಪಾಸನೆಮಾಡಬೇಕು ಆತ್ಮನು ತನ್ನ ರೂಪದಿಂದ ಮೇಲೆ ಹೇಳಿದ ರೂಪಗಳನ್ನೆಲ್ಲ ವ್ಯಾಪಿಸಿರುವದರಿಂದ ಆತ್ಮನೆಂದು ಉಪಾಸನೆ ಮಾಡಿದರೆ ಪ್ರಾಣಾದಿಗಳೆಲ್ಲವನ್ನೂ ಉಪಾಸನೆಮಾಡಿದಂತಾಗುವದು- ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ''ಇಲ್ಲಿ ಆತ್ಮನೆಂದೇ ಉಪಾಸನೆಮಾಡಬೇಕು'' ಎಂಬಲ್ಲಿ ವಿಧಿಯು ವಿವಕ್ಷಿತವಾಗಿದೆಯೆ, ಇದ್ದರೆ ಇದು ಯಾವ ಬಗೆಯ ವಿಧಿ?- ಎಂಬ ಪ್ರಶ್ನೆಯನ್ನು ಈ ಭಾಷ್ಯದಲ್ಲಿ ವಿಚಾರಕ್ಕೆ ತೆಗೆದುಕೊಂಡಿರುತ್ತದೆ.

ಆಚಾರ್ಯರ ಹಿಂದಿನ ವೇದಾಂತಿಗಳಲ್ಲಿ ಕೆಲವರು ಇದನ್ನು ಅಪೂರ್ವ ವಿಧಿಯೆಂದು ಅಭಿಪ್ರಾಯಪಟ್ಟಿರುತ್ತಾರೆ. ಜ್ಞಾನವೆಂದರೂ ಉಪಾಸನೆಯೆಂದರೂ ಒಂದೇ. ವೇದಶಬ್ದದಿಂದ ಆಗುವ ಜ್ಞಾನವು ಶ್ರವಣಮಾತ್ರದಿಂದ ತಾನೇ ಉಂಟಾಗಿಬಿಡುವದರಿಂದ ಅದನ್ನೇನೂ ಶಾಸ್ತ್ರದಲ್ಲಿ ವಿಧಿಸಬೇಕಾದದ್ದಿರುವದಿಲ್ಲ; ಆದರೆ ಆತ್ಮನ ಉಪಾಸನೆಯು ಈ ಶಬ್ದಜ್ಞಾನಕ್ಕಿಂತ ಬೇರೆಯಾಗಿರುವದರಿಂದ ಅದನ್ನು ವಿಧಿಸಬೇಕಾಗಿರುತ್ತದೆ. ಯಾವದು ಅಪ್ರಾಪ್ತವೋ, ಎಂದರೆ ತಾನೇ ಸಿದ್ಧವಾಗುವದಿಲ್ಲವೋ ಅದನ್ನು ಶಾಸ್ತ್ರವು ವಿಧಿಸಿದರೆ ಅದಕ್ಕೆ ಅಪೂರ್ವವಿಧಿಯೆಂದು ಹೆಸರು. ಆದಕಾರಣ ಇಲ್ಲಿ ಹೇಳಿರುವ 'ಆತ್ಮೇತ್ಯೇವೋಪಾಸೀತ' (ಆತ್ಮನೆಂದೇ ಉಪಾಸನೆಮಾಡಬೇಕು) ಎಂಬುದು ಅಪೂರ್ವವಿಧಿ ಎಂಬುದು ಅವರ ಆಶಯವು. 'ಯಜೇತ' (ಯಾಗಮಾಡಬೇಕು) 'ಜುಹುಯಾತ್' (ಹೋಮ ಮಾಡಬೇಕು) ಮುಂತಾದ ಮಾತುಗಳಲ್ಲಿ ಹೇಗೆ ವಿಧಿಯನ್ನು ಸೂಚಿಸುವ ಪ್ರತ್ಯಯವು ಕಂಡುಬರುತ್ತದೆಯೋ, ಹಾಗೆಯೇ ಇಲ್ಲಿಯೂ 'ಉಪಾಸೀತ' (ಉಪಾಸನೆಮಾಡಬೇಕು) ಎಂಬ ಮಾತಿನಲ್ಲಿ ವಿಧಿಸೂಚಕಪ್ರತ್ಯಯವಿರುತ್ತದೆ. ಯಾವ ದೇವತೆಗೋಸ್ಕರ ಹೋಮಮಾಡುತ್ತೇವೆಯೋ ಆ ದೇವತೆಯನ್ನು ಮನಸ್ಸಿನಲ್ಲಿ ಧ್ಯಾನಮಾಡಬೇಕು - ಎಂದು ಕರ್ಮಕಾಂಡದಲ್ಲಿ ವಿಧಿಸಿರುತ್ತದೆ. ಧ್ಯಾನವು ಹೇಗೆ ಮನಸ್ಸಿನ ಕ್ರಿಯೆಯಾಗಿರುತ್ತದೆಯೋ ಅದರಂತೆ 'ಆತ್ಮನೆಂದು ಉಪಾಸನೆ ಮಾಡಬೇಕು' ಎಂಬಲ್ಲಿ ವಿಧಿಸುವ ಉಪಾಸನೆಯೂ ಮಾನಸ ಕ್ರಿಯೆಯಾಗಿರುತ್ತದೆ. 'ಯಜೇತ' (ಯಾಗಮಾಡಬೇಕು) ಎಂಬಲ್ಲಿ ಏನನ್ನು? ಏತರಿಂದ? ಹೇಗೆ ಎಂಬ ಆಕಾಂಕ್ಷೆಯನ್ನು ಪರಿಹರಿಸುವದಕ್ಕಾಗಿ

ಹೇಗೆ ವಿವರವಿರುತ್ತದೆಯೋ ಅದರಂತೆಯೇ ಇಲ್ಲಿಯೂ ಏನನ್ನು ಉಪಾಸನೆಮಾಡಬೇಕು?' ಆತ್ಮನನ್ನು ಉಪಾಸನೆಮಾಡಬೇಕು; ಏತರಿಂದ ಉಪಾಸನೆಮಾಡಬೇಕು? ಮನಸ್ಸಿನಿಂದ; ಹೇಗೆ ಉಪಾಸನೆಮಾಡಬೇಕು? ತ್ಯಾಗ ಬ್ರಹ್ಮಚರ್ಯಶಮದಮೋಪರತಿತಿತಿಕ್ಷಾದಿಗಳಿಂದ ಕೂಡಿ ಉಪಾಸನೆಮಾಡಬೇಕು ಎಂದು ಮೂರು ಬಗೆಯ ಆಕಾಂಕ್ಷೆಗೆ ಪರಿಹಾರವನ್ನು ಹೇಳಿರುತ್ತದೆ. ದರ್ಶಪೂರ್ಣಮಾಸ್ಯಗಳನ್ನು ವಿಧಿಸಿರುವ ಪ್ರಕರಣದಲ್ಲಿ ಆ ವಿಧಿಗೆ ಬೇಕಾದ ವಿವರವನ್ನು ಕೊಡುವದಕ್ಕೇ ಎಲ್ಲಾ ಭಾಗವೂ ಹೇಗೆ ಬಂದಿರುವದೋ ಅದರಂತೆ ಉಪನಿಷತ್ತಿನಲ್ಲಿ ಆತ್ಮೋಪಾಸನೆಯನ್ನು ವಿಧಿಸಿ ಅದಕ್ಕೆ ಬೇಕಾಗಿರುವ ಸ್ವರೂಪವನ್ನು ತಿಳಿಸುವದಕ್ಕೋಸ್ಕರವೇ ಮಿಕ್ಕ ವಚನಗಳೆಲ್ಲವೂ ಬಂದಿರುತ್ತವೆ. ಹೀಗೆಂಬುದು ಉಪಾಸನಾವಿಧಿವಾದಿಗಳ ಅಭಿಪ್ರಾಯವಾಗಿತ್ತು.

ಈ ಪೂರ್ವಪಕ್ಷದಲ್ಲಿ ವೇದಾಂತವಾಕ್ಯಶ್ರವಣಮಾತ್ರದಿಂದ ಜ್ಞಾನವುಂಟಾಗುವದಿಲ್ಲವೆಂಬ ಅಭಿಪ್ರಾಯವು ಅಡಗಿರುತ್ತದೆ. ಆದರೆ ವೇದಾಂತ ವಾಕ್ಯದಲ್ಲಿ ಹೇಳಿರುವ ಆತ್ಮಸ್ವರೂಪವನ್ನು ತಿಳಿದಲ್ಲದೆ ವಾಕ್ಯಜ್ಞಾನವಾಯಿತೆಂದು ಹೇಳುವದಕ್ಕೆ ಆಗುವದಿಲ್ಲ. ಆತ್ಮಸ್ವರೂಪವನ್ನು ತಿಳಿದರೆ ಆಮೇಲೆ ಆತ್ಮಜ್ಞಾನಿಯು ಮಾಡತಕ್ಕದ್ದೇನೂ ಉಳಿದಿರುವದಿಲ್ಲ. ಏಕೆಂದರೆ ಆ ಸ್ವರೂಪವು ಯಾವ ಕ್ರಿಯೆಯೂ ಇಲ್ಲದ್ದೆಂದು ವೇದಾಂತವಾಕ್ಯವು ತಿಳಿಸುತ್ತದೆ. ಬರಿಯ ವಾಕ್ಯದಿಂದಾದ ವಿಜ್ಞಾನದಿಂದ ಅಜ್ಞಾನವು ತೊಲಗಿ ಆತ್ಮಜ್ಞಾನವು ಆಗುವದೇ ಇಲ್ಲವೆನ್ನುವದು ಸರಿಯಲ್ಲ; ಏಕೆಂದರೆ 'ತತ್ತ್ವಮಸಿ' ಮುಂತಾದ ವಾಕ್ಯಗಳಲ್ಲಿ ಆತ್ಮನ ನಿಜವಾದ ಬ್ರಹ್ಮಸ್ವರೂಪವನ್ನೇ ತಾತ್ಪರ್ಯದಿಂದ ಹೇಳಿರುತ್ತದೆ. ಆತ್ಮಜ್ಞಾನವಿಧಿಗೆ ವಿಷಯವಾದ ಬ್ರಹ್ಮವನ್ನು ತಿಳಿಸುವದಕ್ಕೆ ಈ ವಾಕ್ಯಗಳು ಬಂದಿವೆಯೆನ್ನಬಹುದಲ್ಲ! ಎಂದರೆ ಅದೂ ಸರಿಯಲ್ಲ; ಏಕೆಂದರೆ ವಾಕ್ಯಶ್ರವಣದಿಂದಲೇ ಜ್ಞಾನವಾದ ಮೇಲೆ ಮತ್ತೆ ಅನುಷ್ಠಾನಮಾಡಬೇಕಾದದ್ದೇ ಇರುವದಿಲ್ಲವಾದ್ದರಿಂದ ಇಲ್ಲಿ ವಿಧಿಗೆ ಅವಕಾಶವಿರುವದಿಲ್ಲ. ವಿಧಿಯಿಲ್ಲದೆ ಆತ್ಮನನ್ನು ತಿಳಿದುಕೊಳ್ಳುವದಕ್ಕೆ ಯಾರೂ ಪ್ರಯತ್ನಿಸಲಾರರು- ಎಂಬುದು ಸರಿಯಲ್ಲ. ಏಕೆಂದರೆ ಆತ್ಮಸ್ವರೂಪವನ್ನು ತಿಳಿಸುವ ವಾಕ್ಯವನ್ನು ಕೇಳಿದಮಾತ್ರದಿಂದಲೇ ಆ ಜ್ಞಾನವು ಆಗಿಬಿಡುವದರಿಂದ ಮತ್ತೆ ಅದಕ್ಕಾಗಿ ಪ್ರಯತ್ನಮಾಡಬೇಕಾದದ್ದೇನೂ ಇರುವದಿಲ್ಲ. ವಿಧಿಯಿಲ್ಲದೆ

ಇದ್ದರೆ ವಾಕ್ಯಶ್ರವಣದಲ್ಲಿಯೇ ಯಾರೂ ತೊಡಗಲಾರರು ಎಂದು ಪೂರ್ವಪಕ್ಷಿಯು ಹೇಳಬಹುದು ; ಆದರೆ ಹಾಗಾದ ಪಕ್ಷದಲ್ಲಿ ವಿಧಿವಾಕ್ಯಶ್ರವಣಕ್ಕೂ ಮತ್ತೊಂದು ವಿಧಿ ಬೇಕು, ಅದರ ಶ್ರವಣಕ್ಕೆ ಮತ್ತೊಂದು ವಿಧಿ ಬೇಕು - ಎಂದು ವಿಧಿಗಳ ಸಂಖ್ಯೆಗೆ ನಿಲುಗಡೆಯೇ ಇಲ್ಲದೆ ಹೋಗುವದು.

ವಾಕ್ಯಶ್ರವಣದಿಂದಾದ ಜ್ಞಾನವಾದ ಮೇಲೆ ಆತ್ಮಜ್ಞಾನವು ಒಂದೇ ಸಮನೆ ಸ್ಮರಣೆಯಲ್ಲಿರಬೇಕಲ್ಲವೆ? ಅದಕ್ಕಾದರೂ ಒಂದು ವಿಧಿಯು ಬೇಕೊ ಬೇಡವೊ?- ಎಂದರೆ ಹಾಗಲ್ಲ; ಆತ್ಮಜ್ಞಾನವಾದ ಕೂಡಲೆ ಅನಾತ್ಮಜ್ಞಾನವು ಹೋಗುತ್ತದೆ, ಅದರಿಂದಾದ ಅನಾತ್ಮಸ್ಮರಣೆಯೂ ಹೋಗಿಬಿಡುತ್ತದೆ. ಆಗ ಆತ್ಮಜ್ಞಾನದ ಸ್ಮೃತಿಯು ತನಗೆ ತಾನೇ ಬಂದುಬಿಡುತ್ತದೆಯಾದ್ದರಿಂದ ಅದಕ್ಕಾಗಿ ಯಾವ ವಿಧಿಯೂ ಬೇಕಿರುವದಿಲ್ಲ. ಇದಲ್ಲದೆ ಆತ್ಮಜ್ಞಾನದ ಸ್ಮೃತಿಯಿಂದ ಶೋಕಮೋಹಾದಿಗಳು ಹೋಗುವವೆಂಬುದು ದೃಷ್ಟಫಲವಾಗಿರುವದರಿಂದಲೂ ಅದಕ್ಕಾಗಿ ಯಾವ ವಿಧಿಯೂ ಬೇಕಿರುವದಿಲ್ಲ.

ಹಾಗಾದರೆ ಚಿತ್ತವೃತ್ತಿಗಳ ನಿರೋಧಕ್ಕಾಗಿ ಇಲ್ಲಿ ವಿಧಿ ಬೇಕಾಗಿರುತ್ತದೆ ಎಂದು ಇಟ್ಟುಕೊಳ್ಳಬಹುದಲ್ಲ?- ಎಂದರೆ ಅದೂ ಸರಿಯಲ್ಲ. ಏಕೆಂದರೆ ಆತ್ಮಜ್ಞಾನಸ್ಮೃತಿಗಳಿಂದಲೇ ಚಿತ್ತವೃತ್ತಿಗಳ ನಿರೋಧವಾಗುವದಲ್ಲದೆ ಮತ್ತೆ ಏತರಿಂದಲೂ ಸಂಪೂರ್ಣವಾಗಿ ಅವು ಹೋಗಲಾರವು. ಇದಲ್ಲದೆ ಉಪನಿಷತ್ತಿನಲ್ಲಿ ಆತ್ಮಜ್ಞಾನದಿಂದ ಮುಕ್ತಿಯೆಂದು ಹೇಳಿರುತ್ತದೆಯೇ ಹೊರತು ಚಿತ್ತವೃತ್ತಿನಿರೋಧವೇ ಮುಂತಾದ ಬೇರೆ ಯಾವ ಸಾಧನದಿಂದಲೂ ಆ ಪರಮಪುರುಷಾರ್ಥವು ಆಗುತ್ತದೆಯೆಂದು ಹೇಳಿರುವದಿಲ್ಲ. ಆದ್ದರಿಂದಲೂ ಆತ್ಮಜ್ಞಾನವಾದ ಮೇಲೆ ಮತ್ತೆ ಯಾವ ವಿಧಿಯೂ ಬೇಕಿರುವದಿಲ್ಲ.

ಆತ್ಮಜ್ಞಾನವಾದ ಮೇಲೆ 'ಏನನ್ನು?' 'ಏತರಿಂದ?' 'ಹೇಗೆ?' -ಎಂಬ ಆಕಾಂಕ್ಷೆಗಳು ಉಂಟಾಗುವ ಹಾಗಿಲ್ಲ ; ಏಕೆಂದರೆ ತನಗೆ ಎರಡನೆಯ ವಸ್ತುವೇ ಇಲ್ಲದ ಆತ್ಮತತ್ತ್ವವನ್ನು ತಿಳಿದವನಿಗೆ ಯಾವ ಆಕಾಂಕ್ಷೆಯೂ ಉಂಟಾಗುವದಕ್ಕೆ ಅವಕಾಶವಿರುವದಿಲ್ಲ. ಆದ್ದರಿಂದ ಇದು ಕರ್ಮವಿಧಿಗೆ ಸಮಾನವೆಂತ ಹೇಳಲಾಗುವದಿಲ್ಲ. 'ಬ್ರಹ್ಮವು ಒಂದೇ, ತನಗೆರಡನೆಯದಿಲ್ಲದ್ದು'- ಎಂದು

ಮುಂತಾಗಿರುವ ಆತ್ಮವಾಕ್ಯಗಳಲ್ಲಿ ಯಾವ ವಿಧಿಯೂ ಕಾಣುವದಿಲ್ಲ. ಬರಿಯ ವಸ್ತುಸ್ವರೂಪವನ್ನು ಹೇಳುವ ವಾಕ್ಯಕ್ಕೆ ಪ್ರಾಮಾಣ್ಯವು ಹೇಗೆ ಬಂದೀತು?- ಎಂದರೆ ನಿಶ್ಚಿತವಾಗಿಯೂ ಸಪ್ರಯೋಜನವಾಗಿಯೂ ಇರುವ ಜ್ಞಾನವನ್ನುಂಟು ಮಾಡುವದರಿಂದ ಅದಕ್ಕೆ ಪ್ರಾಮಾಣ್ಯವು ಬರುತ್ತದೆ ಎಂದು ಉತ್ತರಹೇಳಬಹುದಾಗಿರುತ್ತದೆ. ಆದ್ದರಿಂದ ಆತ್ಮಸ್ವರೂಪವನ್ನು ತಿಳಿಸುವ ವಾಕ್ಯಗಳಲ್ಲಿ ಯಾವ ವಿಧಿಗೂ ಅವಕಾಶವಿರುವದಿಲ್ಲವೆಂಬುದೇ ಸಿದ್ಧಾಂತವು.

ಆಚಾರ್ಯರ ಕಾಲಕ್ಕೆ ವೇದಾಂತಿಗಳಲ್ಲಿ ಮತ್ತೊಂದು ಬಗೆಯ ಪೂರ್ವ ಪಕ್ಷಿಗಳು ಇದ್ದರು. ಅವರ ಅಭಿಪ್ರಾಯವೇನೆಂದರೆ- ವೇದಾಂತವಾಕ್ಯದಿಂದ ಆಗುವ ಜ್ಞಾನವು ಅಜ್ಞಾನವನ್ನು ತೊಲಗಿಸುವದಿಲ್ಲ; ಶ್ರವಣದಿಂದಾದ ಜ್ಞಾನವನ್ನು ಚೆನ್ನಾಗಿ ಆವೃತ್ತಿಮಾಡುತ್ತಿದ್ದರೆ ಮತ್ತೊಂದು ಬಗೆಯ ಹೊಸ ಜ್ಞಾನವುಂಟಾಗುತ್ತದೆ, ಆ ಜ್ಞಾನದಿಂದಲೇ ಅಜ್ಞಾನವು ಹೋಗುತ್ತದೆ. ಹೀಗೆಂಬ ಪೂರ್ವಪಕ್ಷದಲ್ಲಿ ವಾಕ್ಯಮಾತ್ರದಿಂದ ಜ್ಞಾನವಾಗಲಾರದೆಂಬ ಮೇಲೆ ಹೇಳಿದ ಪೂರ್ವಪಕ್ಷಿಗಳ ಅಭಿಪ್ರಾಯವೂ ಅಡಗಿರುತ್ತದೆ. ಇದಕ್ಕೂ ಮೇಲೆ ಹೇಳಿದ ಸಮಾಧಾನವನ್ನೇ ಹೇಳಬೇಕಾಗಿರುತ್ತದೆ.

ಆದರೆ ಇದರಲ್ಲಡಗಿರುವ ಮತ್ತೊಂದು ಅಭಿಪ್ರಾಯವೇನೆಂದರೆ 'ತತ್ತ್ವಮಸಿ' ಮುಂತಾದ ಮಹಾವಾಕ್ಯಗಳ ಮೊದಲನೆಯ ಶ್ರವಣದಿಂದ ಆಗುವ ಜ್ಞಾನವು ಅಜ್ಞಾನವನ್ನು ಹೋಗಲಾಡಿಸುವದಿಲ್ಲವಾದರೂ ಅದನ್ನೇ ಭಾವನೆಮಾಡುವದರಿಂದ ಮತ್ತೊಂದು ಅಜ್ಞಾನನಾಶಕಜ್ಞಾನವು ಉತ್ಪತ್ತಿಯಾಗುತ್ತದೆಯೆಂಬುದು- ಇದೂ ಸರಿಯಲ್ಲ. ಏಕೆಂದರೆ ಈ ಪಕ್ಷದಲ್ಲಿ ವಾಕ್ಯಕ್ಕೆ ಅಜ್ಞಾನವನ್ನು ಕಳೆಯುವ ಶಕ್ತಿಯಿಲ್ಲದ್ದರಿಂದ ಅಪ್ರಾಮಾಣ್ಯವೂ ಬರುತ್ತದೆ; ಅಪ್ರಮಾಣವಾದ ವಾಕ್ಯವನ್ನು ಭಾವನೆಮಾಡುವದರಿಂದ ಪ್ರಮಾಣವಾದ ಜ್ಞಾನವುಂಟಾಗುವದೆಂಬ ಯುಕ್ತಿವಿರುದ್ಧಪಕ್ಷವೂ ಗಂಟುಬೀಳುತ್ತದೆ. ಆದ್ದರಿಂದ ಸರಿಯಾದ ಅಧಿಕಾರಿಗೆ ವಾಕ್ಯದಿಂದ ಜ್ಞಾನವುಂಟಾಗಿಯೇ ತೀರುತ್ತದೆ; ಜ್ಞಾನವುಂಟಾದ ಮೇಲೂ ವಾಸನಾಬಲದಿಂದ ಹಿಂದಿನಂತೆಯೇ ವಾಙ್ಮನಃ ಕಾಯಗಳ ಪ್ರವೃತ್ತಿಯುಂಟಾಗಬಹುದಾಗಿದೆಯಾದ್ದರಿಂದ ಜ್ಞಾನವುಂಟಾದ ಮೇಲೂ ಬಿಡದೆ ತ್ಯಾಗವೈರಾಗ್ಯಾದಿಗಳನ್ನವಲಂಬಿಸಿಕೊಂಡು ಜ್ಞಾನಸ್ಮೃತಿಯನ್ನು

ನಿಲ್ಲಿಸಿಕೊಳ್ಳಬೇಕು- ಎಂದು 'ಆತ್ಮೇತ್ಯೇವೋಪಾಸೀತ' ಎಂದು ಮುಂತಾದ ವಾಕ್ಯಗಳಲ್ಲಿ ನಿಯಮವಿಧಿಯನ್ನು ಹೇಳಿರುತ್ತದೆ. ನಿಜವಾಗಿ ಇಲ್ಲಿ ಜ್ಞಾನವನ್ನೇನೂ ಹೊಸದಾಗಿ ವಿಧಿಸಿರುವದಿಲ್ಲ-ಎಂಬುದು ಭಾಷ್ಯಕಾರರ ಸಿದ್ಧಾಂತವು.

★★★★★

## ಆತ್ಮಜ್ಞಾನಕ್ಕೆ ಆವೃತ್ತಿಮಾಡತಕ್ಕ ಅವಶ್ಯಕತೆಯುಂಟೆ ಇಲ್ಲವೆ?

**13-05-1935**

**ಬ್ರ|| ಶ್ರೀ|| ಎಸ್.ವಿಠ್ಠಲಶಾಸ್ತ್ರಿಗಳವರು**

ನಿತ್ಯಶುದ್ಧಬುದ್ಧಮುಕ್ತಸ್ವಭಾವವಾಗಿಯೂ ನಮ್ಮ ಆತ್ಮನೇ ಆಗಿಯೂ ಇರುವ ಬ್ರಹ್ಮವಿಷಯವಾಗಿರುವ ಪ್ರತ್ಯಯವು ಒಮ್ಮೆ ಉಂಟಾದ ಮೇಲೆ ಮತ್ತೆ ಅದರ ಆವೃತ್ತಿಮಾಡತಕ್ಕ ಅವಶ್ಯಕತೆಯುಂಟೆ ಇಲ್ಲವೆ? -ಎಂಬ ವಿಚಾರವನ್ನು **ಬ್ರಹ್ಮಸೂತ್ರಭಾಷ್ಯದಲ್ಲಿ ನಾಲ್ಕನೆಯ ಅಧ್ಯಾಯದ ಮೊದಲನೆಯ ಪಾದದ ಎರಡನೆಯ ಸೂತ್ರದ** ಭಾಷ್ಯದಲ್ಲಿ ಚರ್ಚೆಗೆ ತೆಗೆದುಕೊಂಡಿರುತ್ತದೆ.

ಒಂದೇ ಒಂದು ಸಲ ವಾಕ್ಯಶ್ರವಣವನ್ನು ಮಾಡಿದ ಮಾತ್ರದಿಂದ ಜ್ಞಾನವುಂಟಾಗಲಾರದು. ಮತ್ತೆ ಮತ್ತೆ ಅದನ್ನು ಆವೃತ್ತಿಮಾಡುತ್ತಿದ್ದರೆ ಉಂಟಾಗುವದು- ಎಂದು ಹೇಳುವದು ಸರಿಯಲ್ಲ. ಏಕೆಂದರೆ ಒಂದು ಸಲ ಶ್ರವಣ ಮಾಡಿದ ಮಹಾವಾಕ್ಯಕ್ಕೆ ಬ್ರಹ್ಮಾತ್ಮತತ್ತ್ವಜ್ಞಾನವನ್ನುಂಟು ಮಾಡುವ ಸಾಮರ್ಥ್ಯವಿಲ್ಲವಾದರೆ ಅಂಥ ಅಸಮರ್ಥವಾಕ್ಯವನ್ನು ಎಷ್ಟು ಸಲ ಶ್ರವಣಮಾಡಿದರೆ ತಾನೆ ಸರಿಯಾದ ಜ್ಞಾನವುಂಟಾದೀತು? ಬರಿಯ ವಾಕ್ಯಶ್ರವಣವನ್ನೇ ಆವೃತ್ತಿ ಮಾಡಬೇಕೆಂದು ನಾವು ಹೇಳುವದಿಲ್ಲ, ಯುಕ್ತಿಯನ್ನೂ ಸೇರಿಸಿಕೊಂಡು ಶ್ರವಣವನ್ನೂ ಆವೃತ್ತಿಮಾಡಿದರೆ ಅನುಭವವುಂಟಾಗುವದೆಂಬುದು ನಮ್ಮ ಮತವು ಎಂದರೆ ಅದೂ ಸರಿಯಾಗಿ

ತೋರುವದಿಲ್ಲ; ಏಕೆಂದರೆ ಒಂದು ಸಲ ಶ್ರವಣ, ಒಂದು ಸಲ ಯುಕ್ತಿ- ಹೀಗೆ ಮಾಡಿದರೆ ಸಾಕಾಗದೆ ಇದ್ದರೆ ಅವನ್ನು ಎಷ್ಟು ಸಲ ಆವೃತ್ತಿಮಾಡಿದರೆ ತಾನೆ ನಿಜವಾದ ಜ್ಞಾನವು ಉಂಟಾಗುವ ಬಗೆ ಹೇಗೆ?- ಎಂಬ ಪ್ರಶ್ನೆಯು ಆಗಲೂ ಇದ್ದೇ ಇರುತ್ತದೆ. ಯುಕ್ತಿವಾಕ್ಯಗಳೆರಡನ್ನೂ ಸೇರಿಸಿಕೊಂಡರೆ ಪರೋಕ್ಷಜ್ಞಾನವು ಮಾತ್ರ ಆಗುತ್ತದೆ, ಆಮೇಲೆ ಅವುಗಳನ್ನು ಆವೃತ್ತಿಮಾಡಿದರೆ ಅಪರೋಕ್ಷಜ್ಞಾನವುಂಟಾಗುತ್ತದೆ- ಎಂದು ಆವೃತ್ತಿವಾದಿಗಳು ಸಮಾಧಾನವನ್ನು ಹೇಳಬಹುದು. ಆದರೆ ಇಲ್ಲಿಯೂ ಮೊದಲಿನಂತೆಯೇ ಆಕ್ಷೇಪವು ಬಂದೇ ಬರುತ್ತದೆ; ಒಂದು ಸಲ ಶಾಸ್ತ್ರಯುಕ್ತಿಗಳನ್ನು ಅನುಸಂಧಾನಮಾಡಿದರೆ ಪರೋಕ್ಷ ಜ್ಞಾನವುಂಟಾದರೆ ನೂರಾರು ಸಲ ಅದೇ ಶಾಸ್ತ್ರಯುಕ್ತಿಗಳನ್ನು ಆವೃತ್ತಿಮಾಡಿದ ಮಾತ್ರದಿಂದ ಅಪರೋಕ್ಷಜ್ಞಾನವಾಗುವದಾದರೂ ಹೇಗೆ? ಎಂದು ಇಲ್ಲಿಯೂ ಕೇಳಬಹುದಾಗಿರುತ್ತದೆ. ಇದೂ ಅಲ್ಲದೆ ಆತ್ಮನಲ್ಲಿ ಅನೇಕ ಅಂಶಗಳಿರುವದಾಗಿದ್ದರೆ ಒಂದೊಂದು ಸಲಕ್ಕೆ ಒಂದೊಂದಂಶದ ಜ್ಞಾನವುಂಟಾಗುವದೆಂದಾದರೂ ಹೇಳಬಹುದಾಗಿತ್ತು. ಆದರೆ ಆತ್ಮನು ನಿರಂಶನು, ಸಾಮಾನ್ಯವಿಶೇಷರಹಿತನು, ಚೈತನ್ಯಮಾತ್ರನು; ಆದ್ದರಿಂದ ಆತ್ಮಜ್ಞಾನವುಂಟಾಗುವದಕ್ಕೆ ಯಾವ ಆವೃತ್ತಿಯೂ ಬೇಕಾಗಿ ತೋರುವದಿಲ್ಲ - ಎಂಬುದು ಪೂರ್ವಪಕ್ಷವು.

ತತ್ತ್ವಮಸಿ ಮೊದಲಾದ ವಾಕ್ಯಗಳ ಶ್ರವಣಮಾಡಿದ ಮಾತ್ರದಿಂದ ಯಾರೊಬ್ಬರಿಗೂ ಅಪರೋಕ್ಷಜ್ಞಾನವುಂಟಾಗುವದೇ ಇಲ್ಲವೆಂದೂ ಶಾಸ್ತ್ರಯುಕ್ತಿಗಳನ್ನು ಮತ್ತೆ ಮತ್ತೆ ಆವೃತ್ತಿಮಾಡುವದರಿಂದಲೇ ಜ್ಞಾನವುಂಟಾ ಗುವದೆಂದೂ ಹೇಳುತ್ತಿದ್ದ **ಪ್ರಸಂಖ್ಯಾನವಾದಿ**ಗಳೆಂಬ ವೇದಾಂತಿಗಳು ಕೆಲವರು ಆಚಾರ್ಯರ ಕಾಲದಲ್ಲಿದ್ದರು. ಅವರ ಪಕ್ಷದಲ್ಲಿ ಮೇಲಿನ ಆಕ್ಷೇಪಣೆಗಳಿಗೆ ಪರಿಹಾರವೇ ದೊರಕುವದಿಲ್ಲ. ಆದರೆ ಆಚಾರ್ಯರು ತೋರಿಸಿರುವ ವೇದಾಂತಸಿದ್ಧಾಂತವು ಅದಲ್ಲ. ಉತ್ತಮಾಧಿಕಾರಿಯಾದವನಿಗೆ ಒಂದೇ ಸಲ ವಾಕ್ಯಶ್ರವಣಮಾಡಿದರೂ ಜ್ಞಾನವಾಗಬಹುದೆಂದೂ ಅವನಿಗೆ ಆವೃತ್ತಿಯ ಆವಶ್ಯಕತೆಯೇ ಇಲ್ಲವೆಂದೂ ಅವರ ಮತವಾಗಿರುತ್ತದೆ.

ಆದರೆ ಇಷ್ಟು ಮಾತ್ರದಿಂದ ವಾಕ್ಯಾರ್ಥವನ್ನು ಮತ್ತೆ ಮತ್ತೆ ಮನಸ್ಸಿನಲ್ಲಿ ಮೆಲುಕುಹಾಕಬೇಕೆಂದು ವೇದಾಂತಿಗಳು ಹೇಳುವ ಉಪದೇಶವೇನೂ

ವ್ಯರ್ಥವಾಗುವದಿಲ್ಲ. ಸೂಕ್ಷ್ಮಬುದ್ಧಿಯುಳ್ಳ ಉತ್ತಮಾಧಿಕಾರಿಗೆ ಒಂದೇ ಒಂದು ಸಲ ವಾಕ್ಯಶ್ರವಣಮಾಡಿದ್ದರಿಂದ ಜ್ಞಾನವುಂಟಾದ ಮಾತ್ರಕ್ಕೆ ಎಲ್ಲರಿಗೂ ಹಾಗೆಯೇ ಆಗುವದೆಂಬ ಭರವಸೆಯೇನೂ ಇಲ್ಲ. ಆದ್ದರಿಂದ ಸಾಮಾನ್ಯಬುದ್ಧಿಯ ಜಿಜ್ಞಾಸುಗಳು ಮತ್ತೆಮತ್ತೆ ಶ್ರವಣಮಾಡಬೇಕು, ಮನನವನ್ನೂ ಮಾಡಬೇಕು. ಆತ್ಮನಲ್ಲಿ ನಿಜವಾಗಿ ಭಾಗಗಳಿಲ್ಲವೆಂಬುದೇನೋ ನಿಜ; ಆದರೆ ಆತ್ಮನಲ್ಲಿ ಅಜ್ಞರು ನಾನಾ ವಿಧವಾದ ಇಲ್ಲದ ಧರ್ಮಗಳನ್ನು ಹುಟ್ಟುಗಟ್ಟಿಕೊಂಡು ಸಂಶಯಪಡುತ್ತಿರುತ್ತಾರೆ; ಅಂಥವರು ಒಂದೊಂದು ಯುಕ್ತಿಯಿಂದ ಒಂದೊಂದು ಸಂಶಯವನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ. ಒಂದು ಸಲಕ್ಕೆ ಸಂಶಯಗಳೆಲ್ಲ ಹೋಗದೆ ಇದ್ದರೂ ಮತ್ತೆಮತ್ತೆ ವಿಚಾರಮಾಡುವದರಿಂದ ಸಂಶಯನಿವೃತ್ತಿಯಾಗುವದೆಂಬುದು ಅನುಭವದಲ್ಲಿರುವದರಿಂದ ಆವೃತ್ತಿಯು ನಿಷ್ಪ್ರಯೋಜನವೇ ಎಂಬುದು ಹಠಮಾತ್ರವಾಗಿರುತ್ತದೆ. ಇದೂ ಅಲ್ಲದೆ ತತ್ತ್ವಮಸಿ ಮುಂತಾದ ವಾಕ್ಯಗಳಲ್ಲಿ ತತ್, ತ್ವಮ್- ಎಂಬ ಪದಗಳ ಅರ್ಥವು ಯಾರಿಗೆ ಸ್ಪಷ್ಟವಾಗಿ ತಿಳಿದಿರುವದೋ ಅವರಿಗೆ ಆ ಮಹಾವಾಕ್ಯದ ತಾತ್ಪರ್ಯದ ವಿಷಯದಲ್ಲಿ ಯಾವ ಸಂದೇಹವೂ ಆಗುವದಿಲ್ಲ; ಯಾರಿಗೆ ಈ ಪದಗಳ ಅರ್ಥವು ತಿಳಿಯದೋ ಅವರಿಗೆ ವಾಕ್ಯಾರ್ಥವು ಸ್ಫುಟವಾಗದೆ ಸಂದೇಹಗಳು ತಲೆದೋರುವವೆಂಬುದು ಸಹಜವಾಗಿರುತ್ತದೆ. ಇಂಥ ಸಂದೇಹನಿವೃತ್ತಿಗಾಗಿಯೇ ಮತ್ತೆ ಮತ್ತೆ ಶಾಸ್ತ್ರಶ್ರವಣವನ್ನು ಮಾಡಬೇಕೆಂದೂ ಶ್ರವಣಮಾಡಿದ ಮೇಲೆ ಅದೇ ಅರ್ಥವನ್ನು ಮತ್ತೆ ಮತ್ತೆ ಮನನಮಾಡಬೇಕೆಂದೂ ಶಾಸ್ತ್ರದಲ್ಲಿ ವಿಧಿಸಿರುತ್ತದೆ- ಎಂಬುದು ಭಾಷ್ಯಕಾರರ ಅಭಿಪ್ರಾಯದ ಸಾರವು.

★★★★★

# ಅವಿದ್ಯಾಕಾಮಕರ್ಮರಹಿತವಾದ ಸ್ವರೂಪ

**14-05-1935**

**ಶ್ರೀಶ್ರೀಗಳವರು**

**ಬೃಹದಾರಣ್ಯಕೋಪನಿಷತ್ತಿನಲ್ಲಿ ನಾಲ್ಕನೆಯ ಅಧ್ಯಾಯದ ಮೂರನೆಯ ಬ್ರಾಹ್ಮಣದ ಇಪ್ಪತ್ತೊಂದನೆಯ ಮಂತ್ರದಲ್ಲಿ** ಆತ್ಮನು ಸ್ವಯಂಜ್ಯೋತಿಯೆಂದೂ ಅವಿದ್ಯಾಕಾಮಕರ್ಮಗಳಿಲ್ಲದವನೆಂದೂ ಹಿಂದೆ ಹೇಳಿದ್ದಾಗಿದೆ. ಅವಿದ್ಯಾಕಾಮ ಕರ್ಮಗಳು ಸುಷುಪ್ತಿಯಲ್ಲಿಲ್ಲದ್ದರಿಂದ ಅವು ಆತ್ಮನ ಸ್ವಭಾವವಲ್ಲ , ಆತ್ಮನು ಸ್ವಯಂಜ್ಯೋತಿಯಾಗಿದ್ದಾನೆ - ಎಂದು ಹೇಳಲಾಗಿ 'ಆತ್ಮಚೈತನ್ಯವೂ ಸುಷುಪ್ತಿ ಯಲ್ಲಿ ಕಾಣಬರುವದಿಲ್ಲವಲ್ಲ!'- ಎಂಬ ಆಕ್ಷೇಪವು ಮುಂದಕ್ಕೆ ಬಂದಿತು. ಆಗ ಆತ್ಮನು ಚೈತನ್ಯರೂಪನೇ ಆಗಿರುತ್ತಿದ್ದರೂ ತಾನೊಬ್ಬನೇ ಇರುವದರಿಂದ ಅದು ತಿಳಿಯಬರುವದಿಲ್ಲವೇ ಹೊರತು ಅವಿದ್ಯಾಕಾಮಕರ್ಮಗಳಂತೆ ಚೈತನ್ಯಸ್ವಭಾವವೂ ಹೊರಗಿನಿಂದ ಬಂದದ್ದೆಂಬ ಕಾರಣದಿಂದಲ್ಲ- ಎಂದು ಸಮಾಧಾನವನ್ನು ಹೇಳಿದ್ದಾಯಿತು. ಈ ಮಂತ್ರದಲ್ಲಿ ಅವಿದ್ಯಾಕಾಮ ಕರ್ಮರಹಿತವಾದ ಸ್ವರೂಪವೇ ಸುಷುಪ್ತಿಯಲ್ಲಿ ನೇರಾಗಿ ಅನುಭವಕ್ಕೆ ಬರುತ್ತದೆ ಯೆಂಬ ಪ್ರಕೃತವಿಚಾರವನ್ನೇ **ಇಪ್ಪತ್ತೆರಡನೆಯ ಮಂತ್ರದ ಭಾಷ್ಯದಲ್ಲಿ** ವಿವರಿಸಿರುತ್ತದೆ.

ಈ ಅವಸ್ಥೆಯಲ್ಲಿ ಕಾಮವಾಗಲಿ ಕರ್ಮವಾಗಲಿ ಅವಿದ್ಯೆಯಾಗಲಿ ಇಲ್ಲದಿರುವದರಿಂದ ತಂದೆಯು ತಂದೆಯಲ್ಲದೆಹೋಗುವನು, ಎಂದರೆ ಕರ್ಮನಿಮಿತ್ತವಾದ ಪಿತೃತ್ವವು ಅವನಿಗೆ ಇಲ್ಲದೆ ಹೋಗುವದು. ಇದರಂತೆ ಮಗನೂ ಮಗನಲ್ಲದೆ ಹೋಗುವನು, ಇದೇ ಕಾರಣದಿಂದ ತಾಯಿಯು ತಾಯಿಯಲ್ಲದೆ ಹೋಗುವರು, ಕರ್ಮದಿಂದ ಜಯಿಸಿದ ಮತ್ತು ಜಯಿಸಬೇಕಾಗಿ ರುವ ಲೋಕಗಳು ಲೋಕಗಳಲ್ಲದೆ ಹೋಗುವವು; ಕರ್ಮಕ್ಕೆ ಅಂಗವಾಗಿರುವ ದೇವತೆಗಳು ದೇವತೆಗಳಲ್ಲದೆ ಹೋಗುವದು; ಸಾಧ್ಯಸಾಧನಸಂಬಂಧವನ್ನು ತಿಳಿಸುವ ವೇದಗಳು ವೇದಗಳಲ್ಲದೆ ಹೋಗುವವು. ಕರ್ಮವಿಲ್ಲದೆ ಇರುವದೇ ಈ ಅವಸ್ಥೆಯಲ್ಲಿ ಇಂಥ ಸ್ವರೂಪವುಂಟಾಗಿರುವದಕ್ಕೆ ಕಾರಣವು.

ಈ ಸುಷುಪ್ತಿಯಲ್ಲಿ ಶುಭಕರ್ಮಗಳು ಮಾತ್ರ ಹೋಗುವವೆಂದು ತಿಳಿಯಬಾರದು, ಅತ್ಯಂತಘೋರವಾದ ಅಶುಭಕರ್ಮಗಳ ಸಂಬಂಧವೂ ಆತ್ಮನಿಗೆ ಇಲ್ಲಿ ಇಲ್ಲದಂತೆ ಆಗುವದು. ಬ್ರಾಹ್ಮಣನ ಚಿನ್ನವನ್ನು ಕದ್ದವನು, ಭ್ರೂಣಹತ್ಯವನ್ನು ಮಾಡಿದವನು, ಅತ್ಯಂತನಿಕೃಷ್ಟಜಾತಿಯನ್ನು ಕೊಟ್ಟ ಕರ್ಮವನ್ನು ಹಿಂದಿನ ಜನ್ಮದಲ್ಲಿ ಮಾಡಿರುವ ಚಂಡಾಲನು, ಪುಲ್ಕಸನು (ಎಂದರೆ ಕ್ಷತ್ರಿಯಸ್ತ್ರೀಯಲ್ಲಿ ಶೂದ್ರನಿಂದ ಜನಿಸಿದವನು) – ಇವರೆಲ್ಲರೂ ತಮ್ಮ ತಮ್ಮ ಪಾಪಕರ್ಮಸಂಬಂಧವನ್ನು ಮೀರಿರುವದರಿಂದ ಸ್ತೇನ, ಭ್ರೂಣಘ್ನ, ಚಂಡಾಲ, ಪುಲ್ಕಸ– ಎಂಬ ಹೆಸರಿಗೆ ಅರ್ಹರಲ್ಲದವರಾಗುವರು.

ಇದರಂತೆ ಯತಿ, ವಾನಪ್ರಸ್ಥ– ಮುಂತಾದ ಆಶ್ರಮಕರ್ಮಗಳ ಸಂಬಂಧವೂ ಈ ಅವಸ್ಥೆಯಲ್ಲಿ ಆತ್ಮನಿಗೆ ಇರುವದಿಲ್ಲ. ಹೆಚ್ಚೇನು? ಪುಣ್ಯವಾಗಲಿ ಪಾಪವಾಗಲಿ ಈ ಅವಸ್ಥೆಯಲ್ಲಿ ಆತ್ಮನನ್ನು ಹಿಂಬಾಲಿಸುವದೇ ಇಲ್ಲ; ಅಂತಃ ಕರಣಗತವಾದ ಕಾಮಗಳನ್ನೆಲ್ಲ ಅವನು ಮೀರಿರುತ್ತಾನೆ, ಆದ್ದರಿಂದ ಅವನಿಗೆ ಯಾವ ಕರ್ಮವೂ ಅಂಟದೆ ಇರುವದು ಸ್ವಾಭಾವಿಕವಾಗಿದೆ– ಹೀಗೆಂಬುದು ಈ ಮಂತ್ರದ ತಾತ್ಪರ್ಯವು.

ಭರ್ತೃಪ್ರಪಂಚರೇ ಮುಂತಾದ ಹಿಂದಿನ ಭಾಷ್ಯಕಾರರು ಕಾಮಗಳು ಕೇವಲ ಅಂತಃಕರಣದಲ್ಲಿರುವದಿಲ್ಲ ; ಹೂವಿನ ವಾಸನೆಯು ಹೂಬುಟ್ಟಿಗೂ ಅಂಟಿಕೊಳ್ಳುವಂತೆ ಹೃದಯದಲ್ಲಿರುವ ಆತ್ಮನಿಗೂ ಅವು ಅಂಟಿಕೊಂಡಿರುತ್ತವೆ– ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಶ್ರುತಿಯಲ್ಲಿ ಕೇವಲ ಅಂತಃಕರಣವನ್ನೇ ಕಾಮಗಳು ಆಶ್ರಯಿಸಿಕೊಂಡಿರುತ್ತವೆ– ಎಂದು ಸ್ಪಷ್ಟವಾಗಿ ಹೇಳಿರುತ್ತದೆ. ಆತ್ಮನು ಶುದ್ಧನು ಎಂದು ತೋರಿಸುವದಕ್ಕಾಗಿಯೇ ಈ ಪ್ರಕರಣವು ಹೊರಟಿರುತ್ತದೆ. ಹೃದಯದಲ್ಲಿರುವ ಕಾಮಗಳನ್ನು ಮಾತ್ರ ಸುಷುಪ್ತಿಯಲ್ಲಿ ಮೀರಿರುತ್ತಾನೆಂದು ಹೇಳುವದು ಶ್ರುತಿಯ ತಾತ್ಪರ್ಯವಲ್ಲ ; ಹೃದಯದಲ್ಲಿ ಈಗ ಇರುವ ಕಾಮಗಳೊಂದೂ ಈ ಅವಸ್ಥೆಯಲ್ಲಿರುವದಿಲ್ಲ– ಎಂದು ತಿಳಿಸುವದೇ ಅದರ ಉದ್ದೇಶವು. ಆತ್ಮನಲ್ಲಿ ಕಾಮಗಳು ಅಂತಃಕರಣನಿಮಿತ್ತವಾಗಿಯೇ ಸ್ವಪ್ನದಲ್ಲಿ ತೋರಿಕೊಳ್ಳುವವೆಂದು ಹಿಂದೆ ಹೇಳಿಯೂ ಇರುವದರಿಂದ ಆತ್ಮನು ಆಕಾಮನೆಂಬುದೇ ಯುಕ್ತವು; ಹೀಗೆ ಅರ್ಥಮಾಡಿದರೇ ಆತ್ಮನು ಅಸಂಗನೆಂದು

ಹೇಳುವ ಶ್ರುತಿಯೂ ಸಮಂಜಸವಾಗುತ್ತದೆ. ತರ್ಕಶಾಸ್ತ್ರದಲ್ಲಿ ಆತ್ಮನಿಗೆ ಕಾಮವು ಒಂದು ಧರ್ಮವೆಂದು ಹೇಳಿರುತ್ತದೆಯಾದರೂ ಶ್ರುತಿವಿರುದ್ಧವಾಗಿರುವದರಿಂದ ಅದನ್ನು ಸ್ವೀಕರಿಸತಕ್ಕದ್ದಲ್ಲ. ಸ್ವಪ್ನದಲ್ಲಿ ಕಾಮಗಳು ದೃಶ್ಯವಾಗಿ ಕಂಡುಬರುತ್ತವೆ ಎಂಬುದು ಅನುಭವಸಿದ್ಧವಾಗಿದೆ ; ಅವು ದ್ರಷ್ಟೃವಾದ ಆತ್ಮನ ಧರ್ಮವಾಗಿದ್ದರೆ ಎಂದಿಗೂ ಆತ್ಮನಿಗೆ ವಿಷಯವಾಗಿ ತಿಳಿಯಬರುವದು ಸಾಧ್ಯವಾಗುತ್ತಿರಲಿಲ್ಲ. ಜೀವಾತ್ಮನಿಗೂ ಪರಮಾತ್ಮನಿಗೂ ಐಕ್ಯವನ್ನು ಹೇಳುವದೇ ಶ್ರುತಿಯ ಉದ್ದೇಶವೆಂದು ಸಕಲವೇದಾಂತಿಗಳೂ ಒಪ್ಪಿರುತ್ತಾರೆ; ಜೀವಾತ್ಮನಿಗೆ ಕಾಮಗಳು ಸಹಜವಾಗಿಯೇ ಇರುವದಾದರೆ ಈ ಐಕ್ಯವು ಎಂದಿಗೂ ಸಿದ್ಧಿಸದೆ ಹೋಗುತ್ತದೆ. ಈ ಎಲ್ಲಾ ಕಾರಣಗಳಿಂದ ಭರ್ತೃಪ್ರಪಂಚರೇ ಮೊದಲಾದವರ ಮತವು ವೇದಬಾಹ್ಯವಾಗಿರುತ್ತದೆ- ಎಂದು ಭಾಷ್ಯಕಾರರು ಈ ಮಂತ್ರದಲ್ಲಿ ನಿಶ್ಚಯಿಸಿರುತ್ತಾರೆ.

★★★★★

# ಭಗವತ್ಪಾದಾಚಾರ್ಯರವರ ಗುಣಕಥನವ

**15-05-1935**

**ಶ್ರೀಶ್ರೀಗಳವರು**

ಯಾವನು ಮತ್ತೊಬ್ಬರಿಗೆ ಹಿತವಾದದ್ದನ್ನು ಉಪದೇಶಿಸುವನೋ ಅವನೇ ಗುರುವು. ಆಸ್ತಿಕರಾಗಲಿ ನಾಸ್ತಿಕರಾಗಲಿ ತಮಗೆ ಹಿತವನ್ನು ಹೇಳುವ ನಿಸ್ವಾರ್ಥರಾದ ಗುರುಗಳನ್ನು ಸೇವಿಸುತ್ತಾರೆ. ತಂದೆ, ತಾಯಿ, ಉಪಾಧ್ಯಾಯರು- ಮುಂತಾದವರು ಎಷ್ಟೆಷ್ಟು ಮಟ್ಟಿಗೆ ನಮಗೆ ಹಿತಾನುಶಾಸನವನ್ನು ಮಾಡುವರೋ ಅಷ್ಟಷ್ಟು ಮಟ್ಟಿಗೆ ಗುರುಸ್ಥಾನಕ್ಕೆ ತಕ್ಕವರಾಗುವರು. ಆದರೆ ಇಂಥ ಗುರುಗಳಿಗಿಂತಲೂ ಧರ್ಮಗುರುಗಳಿಗೆ ಗೌರವ ಹೆಚ್ಚು; ಏಕೆಂದರೆ ಅವರು ಈ ಲೋಕ, ಈ ಜನ್ಮ- ಇವೆರಡರಲ್ಲಿಯೇ ನಮ್ಮ ಜೀವನವು ಮುಗಿಯುವದಿಲ್ಲವೆಂದೂ ಲೋಕಾಂತರಜನ್ಮಾಂತರಗಳಲ್ಲಿಯೂ ಕರ್ಮಫಲವನ್ನನುಭವಿಸುವ ನಮ್ಮ ಜೀವಸ್ವರೂಪವೊಂದು ಇದೆಯೆಂದೂ ತಿಳಿಸಿಕೊಡುತ್ತಾರೆ.

ಎಲ್ಲಾ ಮತಗಳಲ್ಲಿಯೂ ದೇವರನ್ನೂ ಜನ್ಮಾಂತರವನ್ನೂ ಒಪ್ಪುವದಿಲ್ಲವೆಂಬುದು ನಿಜ; ಆದರೆ ಮನುಷ್ಯನ ಜೀವನದಲ್ಲಿ ಧರ್ಮವೆಂಬುದು ಒಂದು ಹೆಚ್ಚಿನ ಶಕ್ತಿಯೆಂದು ಅನೀಶ್ವರವಾದಿಗಳಾದ ಬೌದ್ಧರಂಥವರು ಕೂಡ ಒಪ್ಪಿರುತ್ತಾರೆ. ಇಂಥ ಧರ್ಮವನ್ನು ಜೀವನದಲ್ಲಿ ಅನುಭವಕ್ಕೆ ತಂದುಕೊಡುವ ಗುರುವಿಗೆ ಲೌಕಿಕಗುರುವಿಗಿಂತ ಹೆಚ್ಚಿನ ಸ್ಥಾನವು ದೊರೆಯುವದು ಸಹಜವಾಗಿಯೇ ಇರುತ್ತದೆ.

ಆದರೆ ಇಂಥ ಧರ್ಮಗುರುಗಳ ಪರಂಪರೆಯಲ್ಲಿ ಬಂದವರು ಕೆಲವರು ಸಂಕುಚಿತದೃಷ್ಟಿಯನ್ನು ಹೊಂದಿ 'ನಮ್ಮ ಮತವೇ ಸತ್ಯವು, ಮಿಕ್ಕವೆಲ್ಲವೂ ತಪ್ಪುಹಾದಿಗಳು' – ಎಂದು ಉಪದೇಶಿಸುತ್ತಾ ಬಂದಿರುತ್ತಾರೆ. ಇದರಿಂದ ಧರ್ಮದ ಹೆಸರಿನಲ್ಲಿ ಕೂಡ ರಾಗದ್ವೇಷಾದಿಗಳು ಹೆಚ್ಚುವದಕ್ಕೆ ಅವಕಾಶವಾಗಿರುತ್ತದೆ. ಆದ್ದರಿಂದ ಧರ್ಮಗಳನ್ನೆಲ್ಲ ಸಮರಸಮಾಡಿ ತೋರಿಸುವ ಒಬ್ಬ ಮಹಾಗುರು ಬೇಕಾಗಿರುತ್ತಾನೆಂಬುದು ನಿರ್ವಿವಾದವು. ಇಂಥ ಮಹಾಗುರುವಿನ ಸ್ಥಾನವನ್ನು ಪ್ರತಿಯೊಂದು ಮತದವರೂ ತಮ್ಮ ತಮ್ಮ ಗುರುಗಳಿಗೆ ಕೊಡಬೇಕೆಂದು ಹವಣಿಸುತ್ತಿರುವರು; ಇದು ಅನುಯಾಯಿಗಳ ಭಕ್ತಿಶ್ರದ್ಧೆಗಳನ್ನು ಸೂಚಿಸುತ್ತದೆಯಾದರೂ ನ್ಯಾಯಯುಕ್ತವಾಗಿದೆಯೆಂದು ಹೇಳುವದಕ್ಕೆ ಆಗುವದಿಲ್ಲ. ಮಿಕ್ಕ ಮತಗಳನ್ನೆಲ್ಲ ಅಳಿಸಿ ತಮ್ಮ ಮತಕ್ಕೆ ದೀಕ್ಷೆಯಿಂದಲೋ ಶುದ್ಧಿಯಿಂದಲೋ ಆ ಮತಗಳ ಅನುಯಾಯಿಗಳನ್ನೆಲ್ಲ ಸೆಳೆದುಕೊಂಡು ಎಲ್ಲಾ ಮತಗಳನ್ನೂ ಒಂದು ಮಾಡಿದರೆ ಸಮನ್ವಯವಾಯಿತೆಂದು ಭಾವಿಸುವದು ಈಗ್ಗೆ ಬಹುಕಡೆಗಳಲ್ಲಿ ಕಂಡುಬರುತ್ತಿದೆ. ಇದು 'ಯಾರು ಬಲಿಷ್ಠರೋ ಅವರದೇ ಪೃಥ್ವಿಯು' ಎಂಬ ಉಕ್ತಿಯನ್ನು ಅನುಸರಿಸುವದೇ ಹೊರತು, ನಿಜವಾದ ಧರ್ಮಮಾರ್ಗವೆಂದು ಹೇಳುವದಕ್ಕೆ ಆಗುವದಿಲ್ಲ; ಮತ್ತು ಈ ರೀತಿಯಿಂದಾದ ಧರ್ಮೈಕ್ಯವು ಕೊನೆಯವರೆಗೂ ನಿಲ್ಲುವದೂ ಇಲ್ಲ, ನಿಜವಾಗಿ ಧರ್ಮವು ಹೊರಗಿನ ವೇಷಭಾಷೆಗಳಿಗೆ ಸಂಬಂಧಪಟ್ಟಿರುವದಿಲ್ಲ, ಅದು ಹೃದಯಕ್ಕೆ ಸೇರಿದ್ದು; ಆದ್ದರಿಂದ ಎಲ್ಲಾ ಧರ್ಮಗಳನ್ನೂ ಒಂದುಗೂಡಿಸುವದಕ್ಕೆ ಮತ್ತೊಂದು ಬಗೆಯ ಸಮನ್ವಯವನ್ನು ತೋರಿಸಿಕೊಡುವ ಮಹಾಗುರುಗಳೊಬ್ಬರು ಬೇಕಾಗಿರುತ್ತಾರೆಂದು ನಾವು ಒಪ್ಪಬೇಕು. ಇಂಥ ಗುರುಗಳೇ ಶ್ರೀಶಂಕರಾಚಾರ್ಯರೆಂಬುದು ನನ್ನ ನಮ್ರ ಸೂಚನೆಯಿರುವದು.

ಶಂಕರಾಚಾರ್ಯರನ್ನು ಮಾತ್ರ ಧರ್ಮಾಚಾರ್ಯರಿಗೆಲ್ಲ ಗುರುಗಳಾದ ಜಗದ್ಗುರುಗಳೆಂದು ಕರೆಯುವದಕ್ಕೆ ಕಾರಣವೇನೆಂದು ಯಾರಾದಾರೂ ಕೇಳಬಹುದು. ಆಚಾರ್ಯರು ಯಾವದೊಂದು ವಿಶೇಷಧರ್ಮದ ಬೆನ್ನುಹತ್ತಿ ಅದರ ಆಚಾರವಿಚಾರಗಳನ್ನು ಮಾತ್ರ ಅನುಸರಿಸಿದವರಾಗಿಲ್ಲ; ಅವರು ಧರ್ಮಗಳಿಗೆಲ್ಲ ಆಧಾರವಾಗಿರುವ ಪರಮತತ್ತ್ವವನ್ನು ನಮ್ಮಗಳ ಮುಂದೆ ಇಟ್ಟಿರುತ್ತಾರೆ. ಅವರು ಮಾಡಿರುವ ಸರ್ವಾತ್ಮರೂಪಬ್ರಹ್ಮತತ್ತ್ವವು ನಮ್ಮೆಲ್ಲರ ಆತ್ಮನಾಗಿರುತ್ತದೆಯಾದ್ದರಿಂದ ಅದನ್ನು ತಿರಸ್ಕರಿಸುವದಕ್ಕೇ ಆಗುವಂತಿಲ್ಲ. ನಮಗೆಲ್ಲ ಅದು ಅತ್ಯಂತಪ್ರೇಮಕ್ಕೆ ವಿಷಯವಾದದ್ದಾಗಿರುತ್ತದೆ. ಶೈವ ವೈಷ್ಣವ, ವೈದಿಕ ಅವೈದಿಕ- ಮುಂತಾದ ಯಾವ ಮತದಲ್ಲಿ ನಾವು ಜನಿಸಿರಲಿ, ಸದಾಚಾರದಿಂದ ಸತ್ತ್ವಶುದ್ಧಿಯನ್ನು ಸಂಪಾದಿಸಿಕೊಂಡರೆ ಸಾಕು, ಅವರು ಉಪದೇಶಿಸಿರುವ ತತ್ತ್ವವನ್ನು ಕಂಡುಕೊಳ್ಳುವದಕ್ಕೆ ಆಗುವಂತಿದೆ. ವರ್ಣಾಶ್ರಮಧರ್ಮದಲ್ಲಿರುವವರೂ ಇಲ್ಲದವರೂ ಜ್ಞಾನಿಗಳಾಗಿರಬಹುದೆಂದು ಅವರು ಕಂಠೋಕ್ತವಾಗಿ ಹೇಳಿಬಿಟ್ಟಿರುತ್ತಾರೆ; ಬ್ರಾಹ್ಮಣಾದಿ ಉಚ್ಚವರ್ಣದವರಿಗೆ ಹೇಗೋ ಅದರಂತೆ ಮಿಕ್ಕವರಿಗೂ ಜ್ಞಾನಕ್ಕೆ ಅವಕಾಶವುಂಟೆಂಬುದನ್ನು ಸ್ಪಷ್ಟಗೊಳಿಸಿರುತ್ತಾರೆ. ಈ ಕಾರಣದಿಂದ ಅವರು ಮಾಡಿರುವ ಧರ್ಮಸಮನ್ವಯವೇ ಸರ್ವರಿಗೂ ಪ್ರಿಯವೂ ಹಿತವೂ ಆಗಿರುತ್ತದೆ. ನಾವು ಆಚಾರ್ಯರ ಆರಾಧನೆಮಾಡಬೇಕೆಂದಿದ್ದರೆ ಅವರ ಉಪದೇಶವನ್ನು ಅನುಷ್ಠಾನಕ್ಕೆ ತರಬೇಕು. ನಾನು ನನ್ನದೆಂಬ ಅಭಿಮಾನವನ್ನು ಬಿಟ್ಟು ಜೀವನಮಾಡುತ್ತಾ ಆ ಜಗದ್ಗುರುಗಳು ಉಪದೇಶಿಸಿರುವ ವೇದಾಂತಜ್ಞಾನವು ನಮಗೆ ದಕ್ಕುವಂತೆ ಅನುಗ್ರಹಮಾಡಿರೆಂದು ಅವರನ್ನು ಕೇಳಿಕೊಳ್ಳಬೇಕು. ಇದೇ ನಿಜವಾದ ಆರಾಧನೆ.

★★★★★

# ಆತ್ಮನ ಈಕ್ಷಿತೃತ್ವ

(ಉಪದೇಶಸಾಹಸ್ರಿಯಲ್ಲಿ ಈಕ್ಷಿತೃತ್ವ ಪ್ರಕರಣ)

**26-4-1936**

**ಶ್ರೀಶ್ರೀಗಳವರು**

ಛಾಂದೋಗ್ಯದಲ್ಲಿ ''**ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ**'' ಎಂಬ ಶ್ರುತಿಯಿದೆ. ಸದ್ರೂಪವಾದ ಬ್ರಹ್ಮವೊಂದೇ ಮೊದಲು ಇತ್ತು. ಅದು ಚೈತನ್ಯರೂಪಜ್ಞಾನದಿಂದ ನೋಡಿ ಜಗತ್ತನ್ನು ಸೃಷ್ಟಿಸಿ ಅದರಲ್ಲಿ ಪ್ರವೇಶಿಸಿತು- ಎಂದು ಹೇಳಿದ ಬಳಿಕ ಈ ವಾಕ್ಯವು ಬಂದಿದೆ. ''ಅದೇ ಸತ್ಯವು, ಅದೇ ಆತ್ಮನು, ಶ್ವೇತಕೇತುವೆ, ಅದೇ ನೀನಾಗಿರುವೆ'' ಎಂಬುದು ಈ ವಾಕ್ಯಕ್ಕೆ ಅರ್ಥವು. ಸಕಲಜೀವರೂ ಈ ಜಗತ್ತಿನೊಳಗೆ ಪ್ರವೇಶಿಸಿರುವ ಪರಮಾತ್ಮನೇ- ಸಕಲರೂ ಚೈತನ್ಯಸ್ವರೂಪಪರಮಾತ್ಮನೇ - ಎಂದು ಹೇಳುವದು ಈ ಶ್ರುತಿಯ ಉದ್ದೇಶವಾಗಿರುತ್ತದೆ. ಜೀವರು ಚೈತನ್ಯರೂಪಸಾಕ್ಷಿಯಾಗಿರುತ್ತಾರೆಂಬುದು ಸ್ವತಃ ಸಿದ್ಧವಾದದ್ದು. ತಾವು ಜಡವಾದ ದೇಹಾದಿಗಳಾಗಿರುವೆವೆಂದು ಅವರು ಅಜ್ಞಾನದಿಂದ ತಿಳಿದುಕೊಂಡಿರುತ್ತಾರೆ. 'ಆದ್ದರಿಂದ ಶ್ವೇತಕೇತುವೆ, ಅದು ನೀನಾಗಿರುವೆ' ಎಂದು ಉಪದೇಶಿಸಿ ಅಜ್ಞಾನದಿಂದಾಗಿರುವ ಸ್ವರೂಪವನ್ನು ತೊಲಗಿಸುವದಕ್ಕೆ ಈ ವಾಕ್ಯವು ಬಂದಿರುತ್ತದೆಯೇ ಹೊರತು ಮೊದಲು ಇಲ್ಲದೆ ಇದ್ದ ಬ್ರಹ್ಮತ್ವವನ್ನು ಇದು ಉಂಟುಮಾಡಿಕೊಡುವದಿಲ್ಲ. ಆದ್ದರಿಂದ ಸರಿಯಾದ ಅಧಿಕಾರವನ್ನು ಹೊಂದಿದ ಜಿಜ್ಞಾಸುವಿಗೆ ಶ್ರುತಿಯ ಉಪದೇಶವನ್ನು ಆಲೈಸಿ ಕೇಳಿದೊಡನೆಯೇ ತನ್ನ ಸ್ವರೂಪದ ಪ್ರಾಪ್ತಿಯಾಗುವದು; ಇದಕ್ಕಾಗಿ ಮತ್ತೊಂದು ಪ್ರಮಾಣವಾಗಲಿ ಸಾಧನವಾಗಲಿ ಬೇಕಾಗಿರುವದಿಲ್ಲ. ಈ ಕಾರಣದಿಂದಲೇ ಬೃಹದಾರಣ್ಯಕದಲ್ಲಿ ಯಾಜ್ಞವಲ್ಕ್ಯರು ಮೈತ್ರೇಯಿಗೆ ಆತ್ಮೋಪದೇಶವನ್ನು ಮಾಡಿದ ಬಳಿಕ ''**ಉಕ್ತಾನುಶಾಸನಾಸಿ ಮೈತ್ರೇಯಿ ಏತಾವದರೇ ಖಲ್ವಮೃತತ್ತ್ವಮ್**'' (ಎಲೆ ಮೈತ್ರೇಯಿ, ನಿನಗೆ ಹೇಳತಕ್ಕ ತತ್ತ್ವವನ್ನು ಹೇಳಿದ್ದಾಯಿತು; ಇಷ್ಟೇ ಮೋಕ್ಷಕ್ಕೆ ಸಾಧನವು) ಎಂದು

ಹೇಳಿ ಸಂನ್ಯಾಸಗ್ರಹಣವನ್ನು ಮಾಡಿಬಿಟ್ಟರು. ವಾಕ್ಯದಿಂದ ಆತ್ಮಸ್ವರೂಪವನ್ನು ತಿಳಿಯತಕ್ಕದ್ದಲ್ಲದೆ ಅದರ ಜೊತೆಗೆ ಕರ್ಮವನ್ನೂ ಮಾಡತಕ್ಕದ್ದೆಂಬ ವಾದವು ಸರಿಯಾಗಿದ್ದರೆ, ಕರ್ಮಸಾಧನೆಯ ಸಹಾಯವೇ ಇಲ್ಲದ ಮೈತ್ರೇಯಿಗೆ ಜ್ಞಾನವನ್ನುಪದೇಶಿಸಿದ ಬಳಿಕ 'ಇಷ್ಟೇ ಅಮೃತತ್ವಕ್ಕೆ ಸಾಧನವು' ಎಂದು ಹೇಳುತ್ತಿರಲಿಲ್ಲ; ಕರ್ಮವಿಲ್ಲದೆ ಜ್ಞಾನವು ಮುಕ್ತಿಯನ್ನು ಕೊಡಲಾರದಾಗಿದ್ದರೆ ಅವರು ತಾವೂ ಗೃಹಸ್ಥಾಶ್ರಮವನ್ನು ಬಿಟ್ಟು ಹೋಗುತ್ತಿರಲಿಲ್ಲ. ಆದ್ದರಿಂದ ಜ್ಞಾನಮಾತ್ರದಿಂದಲೇ ಮುಕ್ತಿಯೆಂದು ಇದರಿಂದಲೂ ಏರ್ಪಡುತ್ತದೆ.

ನಮ್ಮ ಸ್ವರೂಪವಾದ ಚೈತನ್ಯವು ಸಕಲರ ಮನಸ್ಸಿಗೂ ಸಾಕ್ಷಿಯಾಗಿರುತ್ತದೆ, ನಿರ್ವಿಕಾರವಾಗಿರುತ್ತದೆ; ಇದರಲ್ಲಿ ಯಾವ ವಿಶೇಷವೂ ಇರುವದೆಂದು ಹೇಳುವದಕ್ಕೆ ಬರುವಂತಿಲ್ಲ. ಕನಸಿನಲ್ಲಿ ಹೇಗೋ ಹಾಗೆ ಎಚ್ಚರದಲ್ಲಿಯೂ ಮನಸ್ಸನ್ನೂ ಮನೋವೃತ್ತಿಗಳನ್ನೂ ನೋಡುತ್ತಾ, ಸುಷುಪ್ತಿಯಲ್ಲಿ ಇವೆರಡೂ ಇಲ್ಲದಿದ್ದರೂ ತಾನು ಚೈತನ್ಯರೂಪದಿಂದಲೇ ಬೆಳಗುತ್ತಿರುವದರಿಂದ ನಮ್ಮ ಆತ್ಮನು ಅದ್ವಿತೀಯಚಿನ್ಮಾತ್ರವಾಗಿರುತ್ತದೆ. ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳ ದೃಷ್ಟಿಯಿಂದ ಅನಾತ್ಮಪ್ರಪಂಚವು ಸತ್ಯವಾಗಿಯೇ ಇರುವಂತೆ ತೋರುತ್ತಿದ್ದರೂ ಎಚ್ಚರವಾಗುವವರೆಗೆ ಕನಸು ಸತ್ಯವಾಗಿ ತೋರುತ್ತಿರುವಂತೆ ಆತ್ಮಜ್ಞಾನವಾಗುವವರೆಗೆ ಮಾತ್ರ ಅದು ಸತ್ಯವೆಂಬ ಭಾವನೆಯಿರುವದು. ಆಮೇಲೆ ದೇಹಾತ್ಮಭಾವನೆಯೂ ಪ್ರಮಾಣವ್ಯವಹಾರವೂ ಬಾಧಿತವಾಗಿಬಿಡುತ್ತವೆ. ಆದಕಾರಣ 'ಆಕಾಶದಂತೆ ಸರ್ವಭೂತಗಳನ್ನೂ ವ್ಯಾಪಿಸಿಕೊಂಡಿರುತ್ತಿದ್ದರೂ ಯಾವ ಭೂತಧರ್ಮಗಳ ಸೋಂಕೂ ಇಲ್ಲದೆ, ಎಲ್ಲಕ್ಕೂ ಸಾಕ್ಷಿಯಾಗಿ ತಾನೇತಾನಾಗಿರುವ ನಿರ್ಗುಣಬ್ರಹ್ಮವೇ ನಾನು'- ಎಂದು ಶ್ರುತ್ಯನುಸಾರವಾಗಿ ನಿಶ್ಚಯಿಸಬೇಕು.

★★★★★

# ಶಾಸ್ತ್ರದಲ್ಲಿ ಹೇಳಿರುವಂತೆಯೇ ಪ್ರಮಾತ್ಮನ ಉಪಾಸನೆ

**27-04-1936**

ವಿದ್ವಾನ್ ಪಿ.ಚಂದ್ರಶೇಖರಭಟ್ಟರವರು

ಬ್ರಹ್ಮಸೂತ್ರ ಒಂದನೆಯ ಅಧ್ಯಾಯದ ಎರಡನೆಯ ಪಾದದಲ್ಲಿ ಸರ್ವತ್ರಪ್ರಸಿದ್ಧ್ಯಧಿಕರಣದ ಭಾಷ್ಯದ ಅಭಿಪ್ರಾಯವು ಹೀಗಿದೆ:

ಛಾಂದೋಗ್ಯೋಪನಿಷತ್ತಿನಲ್ಲಿ

**''ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ । ಅಥ ಖಲು ಕ್ರತುಮಯಃ ಪುರುಷೋ ಯಥಾಕ್ರತುರಸ್ಮಿಂಲ್ಲೋಕೇ ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ ಸ ಕ್ರತುಂ ಕುರ್ವೀತ ॥ 1 ॥**

**ಮನೋಮಯಃ ಪ್ರಾಣಶರೀರೋ ಭಾರೂಪಃ ಸತ್ಯಸಂಕಲ್ಪಃ ಆಕಾಶಾತ್ಮಾ ಸರ್ವಕರ್ಮಾ ಸರ್ವಕಾಮಃ ಸರ್ವಗಂಧಃ ಸರ್ವರಸಃ ಸರ್ವಮಿದಮಭ್ಯಾತ್ತೋಽವಾಕ್ಯನಾದರಃ ॥ 2 ॥**

**ಏಷ ಮ ಆತ್ಮಾನ್ತರ್ಹೃದಯೇಽಣೀಯಾನ್ ವ್ರೀಹೇರ್ವಾ ಯವಾದ್ವಾ ಸರ್ಷಪಾದ್ವಾ ಶ್ಯಾಮಾಕಾದ್ವಾ ಶ್ಯಾಮಾಕತಂಡುಲಾದ್ವೈಷ ಮ ಆತ್ಮಾನ್ತರ್ಹೃದಯೇ ಜಾಯಾನ್ ಪೃಥಿವ್ಯಾ ಜ್ಯಾಯಾನಂತರಿಕ್ಷಾಜ್ಜ್ಯಾಯಾನ್ದಿವೋ ಜ್ಯಾಯಾನೇಭ್ಯೋ ಲೋಕೇಭ್ಯಃ ॥ 3 ॥**

**ಸರ್ವಕರ್ಮಾ ಸರ್ವಕಾಮಃ ಸರ್ವಗಂಧಃ ಸರ್ವರಸಃ ಸರ್ವಮಿದಮ-ಭ್ಯಾತ್ತೋಽವಾಕ್ಯಾನಾದರ ಏಷ ಮ ಆತ್ಮಾನ್ತರ್ಹೃದಯ ಏತದ್ಬ್ರಹ್ಮೈತಮಿತಃ ಪ್ರೇತ್ಯಾಭಿಸಂಭವಿತಾಸ್ಮೀತಿ ಯಸ್ಯ ಸ್ಯಾದದ್ಧಾ ನ ವಿಚಿಕಿತ್ಸಾಸ್ತೀತಿ ಹಸ್ಮಾಹ ಶಾಂಡಿಲ್ಯಃ ಶಾಂಡಿಲ್ಯಃ ॥ 4 ॥**

ಎಂಬ ಶ್ರುತಿವಾಕ್ಯವಿದೆ. ಇದರ ಅಕ್ಷರಾರ್ಥವೇನೆಂದರೆ-

ಇದೆಲ್ಲವೂ ಬ್ರಹ್ಮವೇ; ಏಕೆಂದರೆ ಅದರಿಂದ ಹುಟ್ಟಿರುವದು ಅದರಲ್ಲಿಯೇ ಲಯವಾಗುವದು. ಅದರಲ್ಲಿಯೇ ಇದ್ದುಕೊಂಡು ತನ್ನ ವ್ಯಾಪಾರವನ್ನು ಮಾಡುತ್ತಿರುವದು. ಆದ್ದರಿಂದ ಶಾಂತನಾಗಿ ಉಪಾಸನೆಮಾಡಬೇಕು; ಗಟ್ಟಿಯಾಗಿ ನಿಲುಗಡೆಯಾಗುವಂತೆ ಉಪಾಸನೆಮಾಡಬೇಕು. ಏಕೆಂದರೆ ಮನುಷ್ಯನು ಕ್ರತುಮಯನಾಗಿರುತ್ತಾನೆ. ಈ ಲೋಕದಲ್ಲಿರುವಾಗ ಯಾವ ಬಗೆಯ ಮನೋನಿಶ್ಚಯವುಳ್ಳವನಾಗಿರುವನೋ ಸತ್ತಬಳಿಕವೂ ಅದಕ್ಕೆ ಅನುಗುಣವಾಗಿಯೇ ಫಲವುಂಟಾಗುವದು; ''ಮನೋಮಯನು ಜ್ಞಾನಕ್ರಿಯಾಶಕ್ತಿರೂಪವಾದ ಪ್ರಾಣವನ್ನೇ ಶರೀರವಾಗಿ ಉಳ್ಳವನು, ಚೈತನ್ಯರೂಪನು, ಸತ್ಯಸಂಕಲ್ಪನು, ಆಕಾಶಾತ್ಮನು, ಸರ್ವಕರ್ಮನು, ಸರ್ವಕಾಮನು, ಸರ್ವಗಂಧವುಳ್ಳವನು, ಸರ್ವರಸವುಳ್ಳವನು, ಇದೆಲ್ಲವನ್ನೂ ವ್ಯಾಪಿಸಿರುವವನು, ವಾಗ್ರಹಿತನು, ಏತರಲ್ಲಿಯೂ ಸಡಗರವಿಲ್ಲದವನು.

ಈತನು ಹೃದಯದಲ್ಲಿರುವ ನನ್ನ ಆತ್ಮನು. ಬತ್ತದಕಾಳಿಗಿಂತಲೂ ಜವೆಗೋಧಿಯ ಕಾಳಿಗಿಂತಲೂ ಸಾಸುವೆಯಕಾಳಿಗಿಂತಲೂ ಸಾವೆಯಕಾಳಿಗಿಂತಲೂ ಸಾವೆಯಕ್ಕಿಗಿಂತಲೂ ಸಣ್ಣವನು. ಈತನು ಹೃದಯದಲ್ಲಿರುವ ನನ್ನ ಆತ್ಮನು, ಪೃಥಿವಿಗಿಂತ ದೊಡ್ಡವನು, ಅಂತರಿಕ್ಷಕ್ಕಿಂತ ದೊಡ್ಡವನು, ಸ್ವರ್ಗಕ್ಕಿಂತ ದೊಡ್ಡವನು, ಈ ಲೋಕಗಳಿಗಿಂತಲೂ ದೊಡ್ಡವನು, ಸರ್ವಕರ್ಮನು, ಸರ್ವಕಾಮನು, ಸರ್ವಗಂಧವುಳ್ಳವನು. ಸರ್ವರಸವುಳ್ಳವನು, ಇದೆಲ್ಲವನ್ನೂ ವ್ಯಾಪಿಸಿರುವವನು, ವಾಗ್ರಹಿತನು, ಏತರಲ್ಲಿಯೂ ಸಡಗರವಿಲ್ಲದವನು. ಈತನು ಹೃದಯದೊಳಗಿರುವ ನನ್ನ ಆತ್ಮನು, ಇದೇ ಬ್ರಹ್ಮವು; ಈ ಲೋಕವನ್ನು ಬಿಟ್ಟುಹೋದಬಳಿಕ ಈತನನ್ನು ಪಡೆಯುವೆನು'' ಎಂದು ಯಾವನಿಗೆ ಇಂಥ ನಿಶ್ಚಯವಿರುವದೋ ಸಂಶಯವಿರುವದಿಲ್ಲವೋ ಅವನು ಪಡೆಯುವನೆಂದು ಶಾಂಡಿಲ್ಯನು, ಶಾಂಡಿಲ್ಯನೇ, ಹೇಳಿದನು.

ಈ ಶ್ರುತಿಯಲ್ಲಿ ಹೇಳಿರುವ ಉಪಾಸನೆಗೆ ವಿಷಯನಾದವನು ಜೀವನೆ, ಬ್ರಹ್ಮವೆ?- ಎಂಬ ಸಂಶಯವುಂಟಾಗಲಾಗಿ ಪೂರ್ವಪಕ್ಷಿಯು ಅಭಿಪ್ರಾಯಪಡುವದೇನೆಂದರೆ 'ಮನೋಮಯ', 'ಪ್ರಾಣಶರೀರ'- ಎಂಬ ವಿಶೇಷಣಗಳಿರುವದರಿಂದ ಮನಃಪ್ರಾಣಗಳ ಸಂಬಂಧವಿರುವ ಈ ಜೀವನೇ ಉಪಾಸನೆಗೆ ವಿಷಯವು. ಮೊದಲನೆಯ ವಾಕ್ಯದಲ್ಲಿ 'ಇದೆಲ್ಲವೂ ಬ್ರಹ್ಮವೇ' ಎಂದಿದ್ದರೂ ಅದು ಶಮಯುಕ್ತನಾಗಿರಬೇಕೆಂಬುದನ್ನು ವಿಧಿಸುವದಕ್ಕಾಗಿ ಬಂದಿರುತ್ತದೆ. ಸರ್ವವೂ ಬ್ರಹ್ಮರೂಪವೇ ಆಗಿರುವದರಿಂದ ರಾಗದ್ವೇಷಗಳಿಲ್ಲದೆ ಶಾಂತನಾಗಿ ಉಪಾಸನೆ ಮಾಡಬೇಕು- ಎಂಬುದು ಅದರ ತಾತ್ಪರ್ಯವು.

ಶ್ರುತಿಯಲ್ಲಿರುವ ' 'ಸ ಕ್ರತುಂ ಕುರ್ವೀತ' ಎಂಬ ವಚನವೇ ಉಪಾಸನೆಯನ್ನು ವಿಧಿಸುತ್ತದೆ; ಈ ಉಪಾಸನೆಗೆ ವಿಷಯುವಾದದ್ದು ಯಾವದೆಂದರೆ 'ಮನೋಮಯಃ ಪ್ರಾಣಶರೀರಃ' ಎಂದು ಹೇಳಿರುವದರಿಂದ ಇದು ಜೀವವಿಷಯಕವಾದ ಉಪಾಸನೆಯೇ ಎಂದು ಹೇಳಬೇಕು; 'ಸರ್ವಕರ್ಮನು', 'ಸರ್ವಕಾಮನು'- ಮುಂತಾದ ವಿಶೇಷಣಗಳನ್ನು ಒಂದೊಂದಾಗಿ ಎಲ್ಲಾ ಕರ್ಮವನ್ನೂ ಮಾಡುವವನು, ಒಂದೊಂದಾಗಿ ಎಲ್ಲಾ ಭೋಗವನ್ನೂ ಅನುಭವಿಸುವವನು- ಎಂಬರ್ಥದಲ್ಲಿ ಇಟ್ಟುಕೊಳ್ಳಬಹುದಾಗಿರುತ್ತದೆ. 'ಹೃದಯದಲ್ಲಿರುವವನು', 'ಅಣುರೂಪನು'- ಎಂಬ ವಿಶೇಷಣಗಳೂ ಜೀವನಿಗೇ ಹೊಂದಿರುತ್ತವೆ; ಮುಂದಿರುವ ಪೃಥಿವಿಗಿಂತ ದೊಡ್ಡವನು'- ಮುಂತಾದ ವಿಶೇಷಣಗಳನ್ನು ಇನ್ನು ಮುಂದೆ ಬ್ರಹ್ಮವಾಗುವವನಾದ ಕಾರಣ ಪೃಥಿವಿಗಿಂತ ದೊಡ್ಡವನಾಗುವನು- ಎಂಬರ್ಥದಲ್ಲಿ ಇಟ್ಟುಕೊಳ್ಳಬಹುದು. ಕೊನೆಯಲ್ಲಿ 'ಇದು ಬ್ರಹ್ಮವು' ಎಂದು ಹೇಳಿರುವದೂ ಜೀವನನ್ನೇ. ಆದ್ದರಿಂದ ಒಟ್ಟಿನಲ್ಲಿ ಇಲ್ಲಿ ಹೇಳಿರುವದು ಜೀವೋಪಾಸನೆಯನ್ನೇ - ಎಂಬುದು ಪೂರ್ವಪಕ್ಷವು.

ಸಿದ್ಧಾಂತವೇನೆಂದರೆ - ಉಪನಿಷತ್ತುಗಳಲ್ಲೆಲ್ಲ ಜಗತ್ಕಾರಣವು ಬ್ರಹ್ಮವೆಂದೇ ಪ್ರಸಿದ್ಧವಾಗಿರುತ್ತದೆ; ಇಲ್ಲಿಯೂ 'ಇದೆಲ್ಲವೂ ಬ್ರಹ್ಮವು' ಎಂದು ಪ್ರಕೃತವಾಗಿದೆ, ಅದನ್ನೇ ಉಪಕ್ರಮದಲ್ಲಿ ಹೇಳಿರುತ್ತದೆ. ಆದ್ದರಿಂದ ಅದನ್ನೇ ಮನೋಮಯತ್ವಾದಿಗುಣಗಳಿಂದ ಉಪಾಸನೆಮಾಡಬೇಕೆಂದು ಹೇಳಿರುತ್ತದೆಯೆನ್ನಬೇಕು. 'ಸರ್ವಂ ಖಲ್ವಿದಂ ಬ್ರಹ್ಮ' ಎಂಬುದು ಶಮವಿಧಿಗಾಗಿ ಹೇಳಿದ್ದರೂ ಉಪಕ್ರಮದಲ್ಲಿ ಹೇಳಿದ ಅದನ್ನೇ ಈ ಉಪಾಸನೆಯಲ್ಲಿ ಸಂಬಂಧಿಸಿಕೊಳ್ಳುವದು ಯುಕ್ತವಾಗಿರುತ್ತದೆ; ಜೀವನನ್ನು ಇಲ್ಲಿ ಸ್ವಶಬ್ದದಿಂದಲೂ ಹೇಳಿಲ್ಲ, ಅವನ ಸನ್ನಿಧಿಯೂ ಇಲ್ಲಿಲ್ಲ, ಇದಲ್ಲದೆ ಶ್ರುತಿಯಲ್ಲಿ ಹೇಳಿರುವ 'ಸತ್ಯಕಾಮ', 'ಸತ್ಯಸಂಕಲ್ಪ'- ಮುಂತಾದ ಗುಣಗಳು ಬ್ರಹ್ಮಕ್ಕೆ ಹೊಂದುವದೇ ಹೊರತು ಜೀವನಿಗೆ ಹೊಂದುವದಿಲ್ಲ; ಬ್ರಹ್ಮವು ಶುದ್ಧರೂಪದಿಂದ ಮನಃಪ್ರಾಣರಹಿತವಾಗಿರುವದು ನಿಜವಾದರೂ ಉಪಾಸ್ಯವಾದ ಸಗುಣರೂಪದಲ್ಲಿ ಅದು ಮನೋಮಯವೂ ಪ್ರಾಣಶರೀರವೂ ಆಗಿರುವದರಲ್ಲಿ ಯಾವ ವಿರೋಧವೂ ಇಲ್ಲ. ಜೀವನಿಗೆ ಸತ್ಯಸಂಕಲ್ಪಾದಿಗುಣಗಳು ಹೊಂದುವದೇ

ಇಲ್ಲ, ಬ್ರಹ್ಮಕ್ಕೆ ಮನೋಮಯತ್ವಾದಿಗಳು ಹೊಂದುತ್ತವೆ. ಹೀಗೆ ಇಲ್ಲಿ ಹೇಳಿರುವ ಸಕಲಗುಣಗಳೂ ಯಾವದಕ್ಕೆ ಹೊಂದುತ್ತವೆಯೋ ಅಂಥ ಬ್ರಹ್ಮವನ್ನೇ ಉಪಾಸನೆಮಾಡಬೇಕೆಂದು ಶ್ರುತಿಯಲ್ಲಿ ಹೇಳಿದೆಯೆಂಬುದು ಯುಕ್ತವು. 'ಇವನನ್ನು ನಾನು ಪಡೆಯುವೆನು' ಎಂದು ಉಪಾಸನೆಮಾಡಬೇಕೆಂದು ಇಲ್ಲಿ ಹೇಳಿರುವದರಿಂದ ಪಡೆಯುವ ಜೀವನಿಗಿಂತಲೂ ಪಡೆಯಲ್ಪಡುವ ಬ್ರಹ್ಮವು ಬೇರೆ, ಅದೇ ಉಪಾಸನೆಗೆ ವಿಷಯವು– ಎಂದು ಸಿದ್ಧವಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಬ್ರಹ್ಮವೇ ಉಪಾಸ್ಯವು ಎಂಬುದು ಸಿದ್ಧಾಂತವು.

ಇಲ್ಲಿ ಒಂದು ಆಕ್ಷೇಪವು; 'ಸರ್ವವ್ಯಾಪಿಯಾದ ಬ್ರಹ್ಮವು ಹೃದಯದಲ್ಲಿ ಮಾತ್ರ ಇರುವದೆಂಬುದು ಹೇಗೆ? ಅದಕ್ಕೆ ಅಣುತ್ವವು ಹೇಗೆ? ಇದೂ ಅಲ್ಲದೆ ಪರಮಾತ್ಮನಿಗಿಂತ ಬೇರೆಯಾಗಿರುವ ಪರಮಾತ್ಮನಿಗಿಂತ ಬೇರೊಬ್ಬ ಆತ್ಮನೇ ಇಲ್ಲವೆಂದು ಶ್ರುತಿಯು ಹೇಳುತ್ತಿರುವಲ್ಲಿ ಜೀವನು ಉಪಾಸ್ಯನಲ್ಲ, ಪರಮಾತ್ಮನೇ ಉಪಾಸ್ಯನು– ಎಂದು ಹೇಳುವದು ಶ್ರುತಿವಿರುದ್ಧವಲ್ಲವೆ? ಪರಮಾತ್ಮನೇ ಜೀವನಾದರೆ ಪರಮಾತ್ಮನಿಗೇ ಸಂಸಾರವೆಂಬ ದೋಷವೂ ಬರುವದಿಲ್ಲವೆ?' ಇದಕ್ಕೆಲ್ಲ ಪರಿಹಾರವೇನೆಂದರೆ ಪರಮಾತ್ಮನಿಗಿಂತ ಬೇರೆ ಜೀವನಿಲ್ಲವೆಂಬುದೇ ನಿಜ. ಆ ಪರಮಾತ್ಮಸ್ವರೂಪವನ್ನು ತಿಳಿದುಕೊಂಡವರಿಗೆ ಉಪಾಸ್ಯವೂ ಇಲ್ಲ, ಸಂಸಾರವೂ ಇಲ್ಲ; ಆದ್ದರಿಂದ ಜ್ಞಾನಾವಸ್ಥೆಯಲ್ಲಿ ಈ ಆಕ್ಷೇಪವೇ ಹುಟ್ಟುವದಿಲ್ಲ. ಆದರೆ ಶಾಸ್ತ್ರೋಕ್ತವಾದ ಬ್ರಹ್ಮಸ್ವರೂಪವನ್ನರಿಯದೆ ಇರುವವರು ಜೀವನೆಂಬ ಒಂದು ಪರಿಚ್ಛಿನ್ನರೂಪವನ್ನು ಕಲ್ಪಿಸಿಕೊಂಡಿರುತ್ತಾರೆ. ಅಂಥವರು ಬ್ರಹ್ಮವನ್ನು ಹೃದಯದಲ್ಲಿರುವನೆಂದೂ ಅಣುರೂಪನೆಂದೂ ಉಪಾಸನೆಮಾಡಬೇಕೆಂದು ಪ್ರಕೃತಶ್ರುತಿಯಲ್ಲಿ ಹೇಳಿರುತ್ತದೆ; ಎಲ್ಲೆಲ್ಲಿಯೂ ಇರುವ ಪರಮಾತ್ಮನು ಹೃದಯದಲ್ಲಿಯೂ ಇರುವನೆಂದು ಉಪಾಸನೆಮಾಡುವದರಲ್ಲಿ ವಿರೋಧವಿಲ್ಲ. ಸಕಲಾಕಾರಗಳೂ ಪರಮಾತ್ಮನಲ್ಲಿಯೇ ಕಲ್ಪಿತವಾಗಿರುವದರಿಂದ ಅಣುರೂಪತ್ವವೂ ಅವನದೇ ಎಂದು ಉಪಾಸನೆಮಾಡಬಹುದಾಗಿದೆ. ಮಿಥ್ಯಾಜ್ಞಾನಕಲ್ಪಿತವಾಗಿರುವ ಜೀವಸ್ವರೂಪವನ್ನು ನೆನೆಸಿಕೊಳ್ಳದೆ ಶಾಸ್ತ್ರದಲ್ಲಿ ಹೇಳಿದಂತೆ ಪರಮೇಶ್ವರನನ್ನು ಉಪಾಸನೆ ಮಾಡುವದರಲ್ಲಿ ಶಾಸ್ತ್ರೋಕ್ತವಾದ ಫಲವು ಉಂಟಾಗುವದೆಂಬುದು ನ್ಯಾಯವಾಗಿದೆ .

★★★★★

# ಆತ್ಮನ ಸಾಕ್ಷಾತ್ಸ್ವರೂಪ

**28-04-1936**

**ಬ್ರ॥ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

**ಕಠೋಪನಿಷನಿಷತ್ತಿನ ಪ್ರಥಮಾಧ್ಯಾಯದ ಎರಡನೆಯ ವಲ್ಲಿಯ ಹದಿನೆಂಟನೆಯ ಮಂತ್ರದಿಂದ ಇಪ್ಪತ್ತೈದನೆಯ ಮಂತ್ರಗಳವರೆಗಿನ ಭಾಷ್ಯದರ್ಥ ವಿವರಣೆಯು ಹೀಗಿದೆ:**

ಈ ಅಧ್ಯಾಯದ ಹಿಂದಿನ ಗ್ರಂಥಭಾಗದಲ್ಲಿ ನಿರ್ವಿಶೇಷನಾದ ಆತ್ಮನನ್ನು ತಿಳಿಯುವದಕ್ಕೆ ಅನುಕೂಲಿಸಲೆಂದು ಓಂಕಾರವನ್ನು ಆಲಂಬನವಾಗಿಯೂ ಪ್ರತೀಕವಾಗಿಯೂ ಹೇಳಿರುತ್ತದೆ; ಮಂದಮಧ್ಯಮರಿಗೆ ಉಪಾಸನೆಗಾಗಿ ಅಪರಬ್ರಹ್ಮದ ಆಲಂಬನವಾಗಿಯೂ ಪ್ರತೀಕವಾಗಿಯೂ ಇದನ್ನು ಹೇಳಿರುತ್ತದೆ. ಇದೇ ಆತ್ಮನ ಸಾಕ್ಷಾತ್ಸ್ವರೂಪವನ್ನು ಗೊತ್ತುಪಡಿಸುವದಕ್ಕಾಗಿ ಈ ಮಂತ್ರಗಳು ಬಂದಿರುತ್ತವೆ.

ಆತ್ಮನು ನಿತ್ಯವಾದ ಚೈತನ್ಯಸ್ವರೂಪನಾಗಿರುವದರಿಂದ ಇವನು ಹುಟ್ಟುವದಿಲ್ಲ, ಸಾಯುವದಿಲ್ಲ, ಮತ್ತೇತರಿಂದಲೂ ಉಂಟಾದದ್ದೂ ಇಲ್ಲ. ಇವನು ಜನ್ಮರಹಿತನು, ನಿತ್ಯನು, ಸವೆಯದವನು, ಬೆಳೆಯುವದಿಲ್ಲ, ಶಸ್ತ್ರಾದಿಗಳಿಂದ ಶರೀರವನ್ನು ಹೊಡೆದರೂ ಇವನು ಸಾಯುವದಿಲ್ಲ, ಗಡಿಗೆ ಮುಂತಾದವುಗಳಲ್ಲಿರುವ ಆಕಾಶದಂತೆ ತನ್ನ ಸ್ವರೂಪದಲ್ಲಿಯೇ ಇರುತ್ತಾನೆ. ಹೀಗಿದ್ದರೂ ಈ ಆತ್ಮನು ಕೊಲ್ಲುವವನೆಂದೂ ಕೊಲ್ಲಿಸಿಕೊಳ್ಳುವವನೆಂದೂ ಯಾರು ತಿಳಿಯುವರೋ ಅವರು ಅಜ್ಞರು, ತತ್ತ್ವವನ್ನು ತಿಳಿಯದವರು. ಆತ್ಮನು ಲೋಕದಲ್ಲಿರುವ ಅತ್ಯಂತ ಸೂಕ್ಷ್ಮವಾದ ವಸ್ತುಗಳಿಗಿಂತಲೂ ಸೂಕ್ಷ್ಮವಾಗಿರುವಾತನು, ಅತ್ಯಂತ ದೊಡ್ಡದಕ್ಕಿಂತಲೂ ದೊಡ್ಡವನು; ಇವನು ಬ್ರಹ್ಮಾದಿಸ್ತಂಬಪರ್ಯಂತವಾದ ಒಂದೊಂದು ಪ್ರಾಣಿಯ ಹೃದಯದಲ್ಲಿಯೂ ಇದ್ದುಕೊಂಡಿರುತ್ತಾನೆ. ಯಾವನು ವಿರಕ್ತನಾಗಿರುವನೋ

ಅವನ ಕರಣಗಳು ಶುದ್ಧಿಯಾಗಿ ಅವನು ಈ ಪರಮಾತ್ಮನ ಮಹಿಮೆಯನ್ನು ತಿಳಿದುಕೊಳ್ಳುತ್ತಾನೆ. ಹಾಗಿಲ್ಲದೆ ಕಾಮಿಗಳಾಗಿರುವ ಸಾಮಾನ್ಯಜನರಿಗೆ ಇವನನ್ನು ಅರಿತುಕೊಳ್ಳುವದೆಂಬುದು ಆಗದಮಾತು. ಇಲ್ಲಿಯೇ ಇದ್ದುಕೊಂಡೇ ಇವನು ದೂರಕ್ಕೆ ಹೋಗುವಂತೆ ತೋರುತ್ತಿರುವನು, ಮಲಗಿಕೊಂಡಿದ್ದೇ ಸರ್ವದಿಕ್ಕುಗಳಿಗೂ ಹೋಗುತ್ತಿರುವಂತಿರುವನು– ಹೀಗೆ ಅತ್ಯಂತವಿರುದ್ಧವಾದ ಧರ್ಮಗಳಿಂದ ಕೂಡಿದಂತೆ ತೋರುತ್ತಿರುವ ಈ ಆತ್ಮನನ್ನು ಸಾಮಾನ್ಯರು ಯಾರೂ ಅರಿಯಲಾರರು. ಈ ಆತ್ಮನಿಗೆ ಶರೀರವಿಲ್ಲ. ಅನಿತ್ಯವಾದ ದೇವಪಿತೃಮನುಷ್ಯಾದಿಶರೀರಗಳಲ್ಲಿ ತಾನು ನಿತ್ಯವಾಗಿಯೇ ಯಾವ ವಿಕಾರವೂ ಇಲ್ಲದೆ ಇದ್ದುಕೊಂಡಿರುವನು. ಮಹಂತನೂ ವಿಭುವೂ ಆಗಿರುವ ಈತನು ತನ್ನ ಆತ್ಮನೇ– ಎಂದು ತಿಳಿದ ಪಂಡಿತನು ಶೋಕರಹಿತನಾಗಿರುವನು.

ಈ ಆತ್ಮನು ಅನೇಕ ವೇದಗಳನ್ನು ಅಧ್ಯಯನಮಾಡುವದರಿಂದಾಗಲಿ ಅಥವಾ ಓದಿದ್ದನ್ನು ಚೆನ್ನಾಗಿ ನೆನಪಿಟ್ಟುಕೊಂಡದ್ದರಿಂದಾಗಲಿ ಬಹು ಶಾಸ್ತ್ರಪರಿಚಯದಿಂದಲಾಗಲಿ ಸಿಕ್ಕುವವನಲ್ಲ, ಯಾವ ಆತ್ಮರೂಪವನ್ನು ಅರಿಯಬೇಕೆಂದು ಬಯಸುತ್ತಾರೋ ಆ ಆತ್ಮನಿಂದಲೇ ಆತ್ಮಸ್ವರೂಪವು ನಿಷ್ಕಾಮಿಗಳಿಗೆ ದೊರೆಯುವದು. ಆ ಪರಮಾತ್ಮನು ತನ್ನನ್ನೇ ಕಾಣಬೇಕೆಂದು ಹಂಬಲಿಸುತ್ತಿರುವವರಿಗೆ ತನ್ನ ಸ್ವರೂಪವನ್ನು ಬಿಚ್ಚಿತೋರಿಸುವನು.

ಕೆಟ್ಟ ನಡತೆಯನ್ನು ಬಿಡದವನು, ಇಂದ್ರಿಯಲೋಲತೆಯನ್ನು ಬಿಟ್ಟು ಶಾಂತನಾಗದವನು, ಮನಸ್ಸಮಾಧಾನವಿಲ್ಲದವನು, ಮನಶ್ಚಾಂಚಲ್ಯವುಳ್ಳಾತನು– ಇವರು ಯಾರಿಗೂ ಈ ಆತ್ಮನ ಜ್ಞಾನವುಂಟಾಗುವದಿಲ್ಲ. ಯಾವನಿಗೆ ಸರ್ವರನ್ನೂ ಕಾಪಾಡುವ ಬ್ರಹ್ಮಕ್ಷತ್ರಗಳೂ ಊಟವಾಗಿರುವವೋ, ಮೃತ್ಯುವು ಉಪ್ಪಿನ ಕಾಯಿಯಾಗಿರುವದೋ, ಅಂಥ ಸರ್ವಸಂಸಾರಧರ್ಮಾತೀತನಾದ ಈ ಆತ್ಮನು ಎಲ್ಲಿರುವನೆಂಬುದನ್ನು ಸಾಧನರಹಿತನಾದವನು ಹೇಗೆ ತಾನೆ ಅರಿತುಕೊಂಡಾನು– ಎಂಬುದು ಮಂತ್ರಭಾಷ್ಯದ ಭಾವಾರ್ಥವು.

★★★★★

# ಪರಮಾತ್ಮನ ಸ್ವರೂಪ

**29-04-1936**

**ಶ್ರೀಶ್ರೀಗಳವರು**

ಬ್ರಹ್ಮಸೂತ್ರದಲ್ಲಿ ಮೊದಲನೆಯ ಅಧ್ಯಾಯದ ಮೂರನೆಯ ಪಾದದಲ್ಲಿ **ಸುಷುಪ್ತ್ಯುತ್ಕ್ರಾಂತ್ಯಧಿಕರಣದ ಭಾಷ್ಯ**ದರ್ಥದ ವಿವರಣೆ:

ಬೃಹದಾರಣ್ಯಕದ ನಾಲ್ಕನೆಯ ಅಧ್ಯಾಯದ ಮೂರನೆಯ ಬ್ರಾಹ್ಮಣದಲ್ಲಿ ''**ಕತಮ ಆತ್ಮೇತಿ ಯೋಽಯಂ ವಿಜ್ಞಾನಮಯ ಪ್ರಾಣೇಷು ಹೃದ್ಯನ್ತರ್ಜ್ಯೋತಿಃ ಪುರುಷಃ**'' (ಆತ್ಮನೆಂದರೆ ಯಾರು? ಯಾವನು ವಿಜ್ಞಾನಮಯನಾಗಿ, ಪ್ರಾಣಗಳ ಹತ್ತಿರವಿರುವನಾಗಿ, ಹೃದಯದೊಳಗೆ ಜ್ಯೋತೀರೂಪನಾಗಿರುವ ಪುರುಷನು) ಎಂದು ಉಪಕ್ರಮವಾಗಿ ಈ ಅಧ್ಯಾಯದ ನಾಲ್ಕನೆಯ ಬ್ರಾಹ್ಮಣವು ಮುಗಿಯುವವರೆಗೂ ಬಹಳವಾಗಿ ಆತ್ಮವಿಷಯವನ್ನು ವಿಚಾರಮಾಡಿರುತ್ತದೆ. ಇಲ್ಲಿ ವಿಚಾರ ಮಾಡಿರುವದು ಬರಿಯ ಸಂಸಾರಿಯಾದ ಜೀವನ ವಿಷಯವೊ ಅಸಂಸಾರಿಯಾದ ಪರಮಾತ್ಮನ ವಿಷಯವೊ? – ಎಂಬುದು ವಿಚಾರದ ವಿಷಯವು.

ಪೂರ್ವಪಕ್ಷವೇನೆಂದರೆ ಇದೆಲ್ಲವೂ ಸಂಸಾರಿಯಾದ ಜೀವನ ವಿಚಾರವೇ; ಏಕೆಂದರೆ 'ಯಾವನು ವಿಜ್ಞಾನಮಯನಾಗಿ ಪ್ರಾಣಗಳ ಬಳಿಯಲ್ಲಿರುವನೋ' ಎಂಬ ಉಪಕ್ರಮವಾಕ್ಯದಲ್ಲಿ ಶಾರೀರಾತ್ಮನಾದ ಜೀವನ ಗುರುತುಗಳೇ ಕಂಡುಬರುತ್ತವೆ; ಈ ಪ್ರಕರಣದ ಉಪಸಂಹಾರವಾಕ್ಯದಲ್ಲಿಯೂ ''**ಸ ವಾ ಏಷ ಮಹಾನಜ ಆತ್ಮಾ ಯೋಽಯಂ ವಿಜ್ಞಾನಮಯಃ ಪ್ರಾಣೇಷು**'' (ಪ್ರಾಣಗಳ ಬಳಿಯಲ್ಲಿರುವ ವಿಜ್ಞಾನಮಯನಿದಾನಲ್ಲ, ಈ ದೊಡ್ಡ ಜನ್ಮರಹಿತನಾದಾತನೇ ಆತ್ಮನು) ಎಂದಿದೆ; ಅದರಲ್ಲಿಯೂ ಸಂಸಾರಾತ್ಮನ ಗುರುತುಗಳಾದ 'ವಿಜ್ಞಾನಮಯ', 'ಪ್ರಾಣಗಳಲ್ಲಿರುವ' ಎಂಬ ವಿಶೇಷಣಗಳನ್ನು ಬಿಡದೆ ಹೇಳಿರುತ್ತದೆ. ನಡುವೆಯಲ್ಲಿ ಜಾಗ್ರದವಸ್ಥೆಯೇ ಮುಂತಾದ ಅವಸ್ಥೆಗಳನ್ನು ಹೇಳಿರುವದರಿಂದಲೂ ಇದು ಜೀವನ ವಿಚಾರವೇ–ಎಂದು ನಿರ್ಣಯವಾಗುತ್ತದೆ; ಏಕೆಂದರೆ ಅವಸ್ಥೆಗಳು

ಜೀವನಿಗೆ ಸಂಬಂಧಪಟ್ಟಿವೆಯೇ ಹೊರತು ಪರಮಾತ್ಮನಿಗೆ ಇರುವದಿಲ್ಲ. ಆದ್ದರಿಂದ ಈ ಪ್ರಕರಣವು ಜೀವನನ್ನೇ ಹೇಳುವದಕ್ಕೆ ಬಂದಿದೆ- ಎಂಬುದು ಪೂರ್ವಪಕ್ಷಿಯ ಅಭಿಪ್ರಾಯವು.

ಆದರೆ ಇದು ಸರಿಯಲ್ಲ. ಏಕೆಂದರೆ ಇಲ್ಲಿ ಸುಷುಪ್ತಿಯಲ್ಲಿಯೂ ಉತ್ಕ್ರಾಂತಿಯಲ್ಲಿಯೂ ಜೀವನಿಗಿಂತ ವ್ಯತಿರಿಕ್ತನಾದ ಪರಮೇಶ್ವರನ ಸ್ವರೂಪವನ್ನು ಹೇಳಿರುತ್ತದೆ. ಸುಷುಪ್ತಿಯಲ್ಲಿ 'ಈ ಪುರುಷನು ಪ್ರಾಜ್ಞನೊಡನೆ ಆಲಿಂಗಿತನಾಗಿರುವದರಿಂದ ಒಳಗೆಂಬುದನ್ನಾಗಲಿ ಹೊರಗೆಂಬುದನ್ನಾಗಲಿ ಅರಿಯದೆ ಇರುತ್ತಾನೆ' ಎಂದು ಹೇಳಿದೆ. ಇಲ್ಲಿ ಪುರುಷನೆಂದರೆ ಜೀವನೇ; ಏಕೆಂದರೆ ಅವನಿಗೆ ಒಳಗೂ ಹೊರಗೂ ತಿಳಿಯಬೇಕಾದದ್ದು ಇದ್ದೇ ಇರುವದರಿಂದ ಅವನು ಈ ಸುಷುಪ್ತಿಯಲ್ಲಿ ಹಾಗೆ ತಿಳಿಯುವದಿಲ್ಲ ಎಂದು ಪ್ರತಿಷೇಧಿಸಿರುವದು ಯುಕ್ತವಾಗುತ್ತದೆ; ಆದರೆ ಪರಮಾತ್ಮನಿಗೆ ಒಳಗೂ ಇಲ್ಲ ಹೊರಗೂ ಇಲ್ಲ, ಆದ್ದರಿಂದ ಅವನು ಒಳಗುಹೊರಗುಗಳನ್ನು ಅರಿಯುವದಿಲ್ಲವೆಂಬುದು ಅವನಿಗೆ ಹೊಂದುವದಿಲ್ಲ. ಇನ್ನು ಈ ಪುರುಷನು 'ಪ್ರಾಜ್ಞನಿಂದ ಆಲಿಂಗಿತನಾಗಿರುವನು' ಎಂದಿದೆಯಲ್ಲ, ಅದು ಪರಮಾತ್ಮನಿಗೇ ಹೊಂದುತ್ತದೆ. ಏಕೆಂದರೆ ಸರ್ವಜ್ಞತ್ವವೆಂಬ ಪ್ರಜ್ಞೆಯು ಎಂದರೆ ಚೈತನ್ಯಸ್ವರೂಪವು, ಅವನದಾಗಿರುತ್ತದೆ; ಇದು ಜೀವನಿಗೆ ಹೊಂದುವದಿಲ್ಲ, ಏಕೆಂದರೆ ಅವನು ಅಂತಃಕರಣಸಹಾಯದಿಂದ ಇಷ್ಟಿಷ್ಟನ್ನೇ ಅರಿಯಬಲ್ಲವನಾಗಿರುವದರಿಂದ ಅವನು ಪ್ರಾಜ್ಞನೆನಿಸಲಾರನು. ಇದರಂತೆ ಉತ್ಕ್ರಾಂತಿಯಲ್ಲಿ ಎಂದರೆ ಶರೀರವನ್ನು ಬಿಟ್ಟು ಹೋಗುವಾಗ ಈ ಶಾರೀರಾತ್ಮನು ಪ್ರಾಜ್ಞಾತ್ಮನಿಂದ ವ್ಯಾಪ್ತನಾಗಿ ಮೇಲುಸಿರುಬಿಡುತ್ತಾ ಹೋಗುತ್ತಾನೆ' ಎಂದು ಹೇಳಿರುತ್ತದೆ. ಇಲ್ಲಿಯೂ ಶಾರೀರನೆಂಬುದು ಶರೀರಸ್ವಾಮಿಯಾದ ಜೀವನಿಗೆ ಒಪ್ಪುವ ಶಬ್ದವು, ಅಶರೀರನಾದ ಪರಮಾತ್ಮನಿಗೆ ಒಪ್ಪುವದಿಲ್ಲ; ಪ್ರಾಜ್ಞನೆಂದರೆ ಮೇಲೆ ಹೇಳಿದಂತೆ ಪರಮಾತ್ಮನೇ. ಹೀಗೆ ಜೀವನಿಗಿಂತ ಬೇರೆಯಾದ ಪರಮಾತ್ಮನನ್ನು ಇಲ್ಲಿ ಹೇಳಿರುತ್ತದೆ. ಆದ್ದರಿಂದ ಈ ಪ್ರಕರಣವು ಬರಿಯ ಜೀವನನ್ನು ಹೇಳುವದೆಂಬುದು ಒಪ್ಪತಕ್ಕದ್ದಲ್ಲ.

ಮೊದಲು, ಕೊನೆಗೆ, ನಡುವೆ- ಎಲ್ಲೆಲ್ಲಿಯೂ ಜೀವನ ಗುರುತುಗಳಿವೆ ಯೆಂದು ಪೂರ್ವಪಕ್ಷಿಯು ಹೇಳಿರುತ್ತಾನಲ್ಲವೆ? ಅಲ್ಲಿಯೂ ಅಸಂಸಾರಿ

ಸ್ವರೂಪವನ್ನೇ ಹೇಳಿರುತ್ತದೆ. ಹೇಗೆಂದರೆ, ಉಪಕ್ರಮದಲ್ಲಿ ಹೇಳಿರುವ ವಾಕ್ಯದಲ್ಲಿ 'ಪ್ರಾಣಗಳ ಬಳಿಯಲ್ಲಿರುವ ಈ ವಿಜ್ಞಾನಮಯನು ಇದಾನಲ್ಲ, ಇವನು ಪರಮಾತ್ಮನೇ' ಎಂದು ಜೀವಾತ್ಮನಿಗೆ ಅಸಂಸಾರಿಸ್ವರೂಪವನ್ನೇ ಹೇಳಿರುತ್ತದೆಯೆನ್ನುವದು ಸರಿ; ಏಕೆಂದರೆ ಮುಂದಿನ ಗ್ರಂಥದಲ್ಲಿ ಆತ್ಮನು ಕನಸಿನಲ್ಲಿ ''ಧ್ಯಾನಮಾಡುತ್ತಿರುವವನಂತೆಯೂ ಸಂಚರಿಸುತ್ತಿರುವಂತೆಯೂ'' ಇರುತ್ತಾನೆ ಎಂದು ಹೇಳಿರುವದರಿಂದ ಅಲ್ಲಿ ನಿಜವಾಗಿ ಅವನಿಗೆ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅಂತಃಕರಣ- ಮುಂತಾದವುಗಳ ಸಂಬಂಧವು ನಿಜವಾಗಿಲ್ಲವೆಂಬುದನ್ನೇ ಹೇಳುವದಕ್ಕೆ ಹೊರಟಿದೆಯೆಂದು ವ್ಯಕ್ತವಾಗುತ್ತದೆ. ಉಪಸಂಹಾರದಲ್ಲಿಯೂ ''ಈ ಪ್ರಾಣಗಳ ಬಳಿಯಲ್ಲಿರುವ ವಿಜ್ಞಾನಮಯನಿದಾನಲ್ಲ, ಇವನು ಈ ಪರಮಾರ್ಥವಾಗಿ ಸರ್ವವ್ಯಾಪಕನೂ ಜನ್ಮರಹಿತನೂ ಆಗಿರುವ ಆತ್ಮನೇ'' ಎಂದು ಹೇಳಿರುತ್ತದೆ. ನಡುವೆಯಲ್ಲಿ ಅವಸ್ಥೆಗಳನ್ನು ಹೇಳಿರುವದು ಆತ್ಮನಿಗೆ ಅವಸ್ಥೆಗಳಿರುವವೆಂದು ಹೇಳುವದಕ್ಕಲ್ಲ, ಮತ್ತೇಕೆಂದರೆ ಆತ್ಮನಿಗೆ ಅವಸ್ಥೆಗಳೇ ಇಲ್ಲ, ಅವನು ಅಸಂಸಾರಿ- ಎಂಬುದನ್ನು ತಿಳಿಸುವದಕ್ಕೆ. ಏಕೆಂದರೆ ಜನಕನು ''ಇನ್ನು ಮೇಲೆ ಮೋಕ್ಷವಾಗುವಂಥ ಸ್ವರೂಪವನ್ನು ಹೇಳು'' ಎಂದು ಮತ್ತೆಮತ್ತೆ ಕೇಳುತ್ತಿದಾನೆ. 'ಹೀಗಿರುವದರಿಂದ ಇವನು ಸಂಸಾರ ಧರ್ಮಗಳ ಸಂಬಂಧವಿಲ್ಲದವನಾಗಿರುತ್ತಾನೆ, ಏಕೆಂದರೆ ಈ ಪುರುಷನು ಅಸಂಗನಾಗಿರುತ್ತಾನೆ. ಪುಣ್ಯವೂ ಹಿಂಬಾಲಿಸದ ಪಾಪವೂ ಹಿಂಬಾಲಿಸಿದವನಾಗಿರುತ್ತಾನೆ, ಆಗ ಹೃದಯದ ಶೋಕಗಳನ್ನೆಲ್ಲ ದಾಟಿರುತ್ತಾನೆ' ಎಂದು ಶ್ರುತಿಯಲ್ಲಿ ಹೇಳಿರುವದರಿಂದಲೂ ಇದು ಸಿದ್ಧವಾಗಿರುತ್ತದೆ. ಇಲ್ಲಿರುವ ಕೆಲವು ಶಬ್ದಗಳು ಅಸಂಸಾರಿಯಾದ ಪರಮಾತ್ಮನಿಗೆ ಮಾತ್ರ ಹೊಂದುವವುಗಳಾಗಿವೆ; ಏಕೆಂದರೆ 'ಎಲ್ಲಕ್ಕೂ ಒಡೆಯನು, ಎಲ್ಲವನ್ನೂ ಆಳುವಾತನು, ಎಲ್ಲಕ್ಕೂ ಅಧಿಪತಿಯು' ಮುಂತಾದ ಶಬ್ದಗಳು ಸಂಸಾರಿಯಾದ ಜೀವನಿಗೆ ಹೊಂದುವ ಹಾಗೆಯೇ ಇರುವದಿಲ್ಲ. ಆದ್ದರಿಂದ ಆತ್ಮನನ್ನು ದೇಹ ಪ್ರಾಣ ಮನೋಬುದ್ಧಿಗಳಿಗಿಂತ ವ್ಯತಿರಿಕ್ತವಾಗಿರುವ ಸಾಕ್ಷಿಯಾಗಿಯೂ ಅವಸ್ಥಾಸಾಕ್ಷಿಯಾದ ಚೈತನ್ಯಸ್ವರೂಪನಾಗಿಯೂ ಪ್ರತಿಪಾದನೆಮಾಡುವ ಮೂಲಕ ಚಿದಾಭಾಸನಾದ ಜೀವನಿಗಿಂತ ವ್ಯತಿರಿಕ್ತನನ್ನಾಗಿಯೂ ಸಕಲಸಂಸಾರಧರ್ಮವಿಮುಕ್ತನನ್ನಾಗಿಯೂ ತೋರಿಸಿಕೊಡುವದೇ ಈ ಪ್ರಕರಣದ ಧ್ಯೇಯವೆಂಬುದು ಸಿದ್ಧಾಂತವು.

★★★★★

# ವಿಶ್ವರೂಪೋಪಾಸನೆ

**30-04-1936**

**ಬ್ರ॥ಶ್ರೀ॥ ಪಿ.ಚಂದ್ರಶೇಖರಭಟ್ಟರವರು**

**ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ** ವಿಶ್ವರೂಪೋಪಾಸನೆಯನ್ನು ಹೇಳಿರುತ್ತದೆ, ಯಾವ ಉಪಾಧಿಯೂ ಇಲ್ಲದ ಪರಮಾತ್ಮನ ಸ್ವರೂಪದ ಚಿಂತನೆಯನ್ನೇ ಹಿಂದಿನ ಅಧ್ಯಾಯಗಳಲ್ಲಿ ಅಲ್ಲಲ್ಲಿ ಹೇಳಿರುತ್ತದೆ. ಯಾವಾಗಲೂ ಭಕ್ತಿಯಿಂದ ವಿಶ್ವರೂಪನಾದ ಪರಮೇಶ್ವರನನ್ನು ಉಪಾಸನೆಮಾಡುವವರು, ನಿರುಪಾಧಿಕನಾದ ಪರಮಾತ್ಮನ ತತ್ತ್ವವನ್ನು ನಿದಿಧ್ಯಾಸನಮಾಡಿ ಅರಿತುಕೊಳ್ಳುವವರು– ಇವರಿಬ್ಬರಲ್ಲಿ ಯಾರು ಹೆಚ್ಚಿನ ಯೋಗಿಗಳು? ಎಂದು ಅರ್ಜುನನು ಕೇಳಲು ಪರಮಾತ್ಮನು ''ಅರ್ಜುನನೆ, ಪರಮಾತ್ಮಸ್ವರೂಪವೇ ಆಗಿರುವ ಜ್ಞಾನಿಗಳು ಹೆಚ್ಚಿನ ಯೋಗಿಗಳೆಂದಾಗಲಿ ಹೆಚ್ಚಿನ ಯೋಗಿಗಳಲ್ಲವೆಂದಾಗಲಿ ಹೇಳತಕ್ಕದ್ದು ಸರಿಯಾಗುವದಿಲ್ಲ, ಆದರೆ ಜ್ಞಾನವನ್ನು ಪಡೆಯುವದು ಬಹುಕಷ್ಟ. ಯಾರು ಸರ್ವಕರ್ಮಗಳನ್ನೂ ನನಗೆ ಅರ್ಪಿಸಿ ನನ್ನಲ್ಲಿಯೇ ತಾತ್ಪರ್ಯವಿಟ್ಟು ಅನನ್ಯಯೋಗದಿಂದ ಧ್ಯಾನಮಾಡುತ್ತಿರುವರೋ ಅವರನ್ನು ನಾನೇ ಸಂಸಾರಸಾಗರದಿಂದ ಹಿಡಿದೆತ್ತುವೆನು; ಆದ್ದರಿಂದ ಅವರನ್ನು ಹೆಚ್ಚಿನ ಯೋಗಿಗಳೆಂದು ಕರೆಯುವದು ಯುಕ್ತವಾಗಿದೆ'' ಎಂದು ಉತ್ತರವನ್ನಿತ್ತ ಬಳಿಕ ಅರ್ಜುನನಿಗೆ ಹೀಗೆಂದು ಉಪದೇಶ ಮಾಡಿರುತ್ತಾನೆ:

''ಹೀಗಿರುವದರಿಂದ ಎಲೈ ಅರ್ಜುನನೆ, ನೀನು ವಿಶ್ವರೂಪನಾದ ನನ್ನಲ್ಲಿಯೇ ಮನಸ್ಸನ್ನೂ ಬುದ್ಧಿಯನ್ನೂ ಇಡು, ನನ್ನ ಅನುಗ್ರಹದಿಂದ ನೀನು ಶರೀರವನ್ನು ಬಿಟ್ಟಬಳಿಕವೂ ನನ್ನ ಸಾಯಜ್ಯವನ್ನೇ ಹೊಂದುವೆ, ಆದರೆ ಸಂತತವಾಗಿ ನನ್ನಲ್ಲಿಯೇ ಚಿತ್ತವನ್ನು ನಿಲಿಸಿಕೊಳ್ಳುವದು ಅಶಕ್ಯವೆಂದು ತೋರಿದರೆ, ಚಿತ್ತವನ್ನು ಮತ್ತೆಮತ್ತೆ ನನ್ನಲ್ಲಿಯೇ ತಂದು ನಿಲ್ಲಿಸಿಕೊಳ್ಳುವ ಅಭ್ಯಾಸ ಯೋಗವನ್ನವಲಂಬಿಸು. ಅದರಿಂದ ಕ್ರಮಕ್ರಮವಾಗಿ ನನ್ನನ್ನು ಪಡೆಯಬಹುದು. ಈ ಅಭ್ಯಾಸವು ನಿನಗೆ ದಕ್ಕದೆಹೋದರೆ ನನಗಾಗಿಯೇ ಕರ್ಮಗಳನ್ನು ಮಾಡು; ಆ ಮೂಲಕ

ಚಿತ್ತಶುದ್ಧಿಯನ್ನು ಹೊಂದಿ ಕ್ರಮಕ್ರಮವಾಗಿ ಧ್ಯಾನಾದಿಗಳ ಮೂಲಕ ನನ್ನನ್ನು ಹೊಂದಬಹುದು. ಹೀಗೆ ಭಗವತ್ಕರ್ಮವನ್ನು ಮಾಡುವದೂ ನಿನಗೆ ಕಷ್ಟವೆಂದು ತೋರಿದರೆ ಸರ್ವಕರ್ಮಗಳ ಫಲವನ್ನು ತ್ಯಾಗಮಾಡು. ಏಕೆಂದರೆ:

**ಶ್ರೇಯೋ ಹಿ ಜ್ಞಾನಮಭ್ಯಾಸಾಜ್ಜ್ಞಾನಾಧ್ಧ್ಯಾನಂ ವಿಶಿಷ್ಯತೇ ।**
**ಧ್ಯಾನಾತ್ಕರ್ಮಫಲತ್ಯಾಗಸ್ತ್ಯಾಗಾಚ್ಛಾನ್ತಿರನನ್ತರಮ್ ॥**

ಜ್ಞಾನವು ಅಭ್ಯಾಸಕ್ಕಿಂತಲೂ ಉತ್ತಮವು, ಜ್ಞಾನಕ್ಕಿಂತಲೂ ಜ್ಞಾನದೊಡಗೂಡಿದ ಧ್ಯಾನವು ಹೆಚ್ಚಿನದು; ಇಂಥ ಧ್ಯಾನಕ್ಕಿಂತ ಕರ್ಮಫಲತ್ಯಾಗವು ಹೆಚ್ಚಿನದು, ಈ ಎಲ್ಲಾ ವಿಶೇಷಣಗಳಿಂದೊಡಗೂಡಿದ ಕರ್ಮಫಲತ್ಯಾಗದಿಂದ ಶಾಂತಿರೂಪವಾದ ಮೋಕ್ಷವೇ ಆಗುತ್ತದೆ.

ಇಲ್ಲಿ ಒಂದಕ್ಕಿಂತ ಒಂದು ಹೆಚ್ಚೆಂದು ಹೇಳಿ ಕೊನೆಗೆ ಸರ್ವಕರ್ಮಫಲತ್ಯಾಗವನ್ನು ಹೊಗಳುವದಕ್ಕಾಗಿ ಈ ಶ್ಲೋಕವು ಬಂದಿದೆಯೆಂದು ತಿಳಿಯಬೇಕು. ಏಕೆಂದರೆ ಹೆಚ್ಚಿನ ಇಂಥಿಂಥ ಸಾಧನವನ್ನು ಮಾಡುವದಕ್ಕೆ ಆಗದಿದ್ದರೆ ಇದನ್ನು ಮಾಡು- ಎಂದು ಕರ್ಮಫಲತ್ಯಾಗವನ್ನು ಹೊಗಳಿರುತ್ತದೆ. ಸರ್ವಕಾಮಗಳೂ ತೊಲಗಿದರೆ ಮುಕ್ತಿಯಾಗುವದೆಂದು ಶ್ರುತಿಯಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ, ಶ್ರೌತಸ್ಮಾರ್ತಕರ್ಮಗಳೂ ಕಾಮಗಳೇ ಆಗಿ ರುವದರಿಂದಲೂ ಅವುಗಳನ್ನು ಬಿಟ್ಟು ಬಿಟ್ಟು ಧ್ಯಾನನಿಷ್ಠನಾದಾತನಿಗೆ ಕೂಡಲೆ ಮುಕ್ತಿಯಾಗುವದರಿಂದ ಅಜ್ಞನು ಕೂಡ ಕರ್ಮಫಲತ್ಯಾಗಮಾಡಿದರೆ ಮುಂದೆ ಅವನಿಗೆ ಇದೇ ರೀತಿಯಲ್ಲಿ, ಮುಕ್ತಿಯಾಗುವದು- ಎಂದು ಫಲತ್ಯಾಗದಲ್ಲಿ ರುಚಿಯನ್ನು ಹುಟ್ಟಿಸುವದಕ್ಕಾಗಿ ಹೇಳಿದ ಮಾತಿದು. 'ಅಗಸ್ತ್ಯನು ಸಮುದ್ರವನ್ನೇ ಕುಡಿದುಬಿಟ್ಟನು, ಬ್ರಾಹ್ಮಣರೇನು ಸಾಮಾನ್ಯರೆ?' ಎಂದು ಈಗಿನ ಅಲ್ಪವೀರ್ಯರಾದ ಬ್ರಾಹ್ಮಣರನ್ನೂ ಹೊಗಳುವಂತೆ ಕರ್ಮಫಲತ್ಯಾಗದಿಂದ ಕರ್ಮಯೋಗವು ಮುಕ್ತಿಕಾರಣವೆಂದು ಇಲ್ಲಿ ಹೇಳಿರುತ್ತದೆ.

ಮತ್ತು ಇಲ್ಲಿ ಆತ್ಮೇಶ್ವರಭೇದವನ್ನು ಅಂಗೀಕರಿಸಿಯೇ ವಿಶ್ವರೂಪನಾದ ಈಶ್ವರನ ಧ್ಯಾನವನ್ನುಪದೇಶಿಸಿರುತ್ತದೆ, ಅಕ್ಷರೋಪಾಸಕರಿಗೆ ಕರ್ಮಯೋಗವನ್ನು

ಹೇಳಿರುವದಿಲ್ಲ, ಕರ್ಮಯೋಗಿಗೆ ಅಕ್ಷರೋಪಾಸನೆಯನ್ನು ಹೇಳಿರುವದಿಲ್ಲ. ಆದ್ದರಿಂದಲೇ ನಿರುಪಾಧಿಕಬ್ರಹ್ಮವನ್ನು ಚಿಂತಿಸುವ ಜ್ಞಾನಿಗಳು ನನ್ನನ್ನೇ ಸೇರುತ್ತಾರೆ- ಎಂದು ಅವರಿಗೆ ಸ್ವಾತಂತ್ರ್ಯವನ್ನು ಹೇಳಿ, 'ಕರ್ಮಯೋಗಿಗಳನ್ನು ನಾನೇ ಉದ್ಧರಿಸುತ್ತೇನೆ' ಎಂದು ಅವರಿಗೆ ಪಾರತಂತ್ರ್ಯವನ್ನೂ ಹೇಳಿರುತ್ತಾನೆ. ಆದ್ದರಿಂದಲೇ ಅರ್ಜುನನಿಗೆ ಅತ್ಯಂತವಾಗಿ ಹಿತವನ್ನೇ ಬಯಸಿರುವ ಭಗವಂತನು ಅವನ ಅಧಿಕಾರಕ್ಕೆ ತಕ್ಕಂತೆ ಭೇದದೃಷ್ಟಿಯಿಂದ ಕೂಡಿದ ಕರ್ಮಯೋಗವನ್ನೇ ಹೇಳಿರುತ್ತಾನೆ. ಆದ್ದರಿಂದಲೇ ಮುಂದೆ **'ಅದ್ವೇಷ್ಟಾ ಸರ್ವಭೂತಾನಾಮ್'** ಎಂಬುದೇ ಮುಂತಾದ ಶ್ಲೋಕಗಳಲ್ಲಿ ಸಮ್ಯಗ್ದರ್ಶನದಲ್ಲಿಯೇ ತಾತ್ಪರ್ಯವುಳ್ಳ ಅಕ್ಷರೋಪಾಸಕನ ಲಕ್ಷಣವನ್ನು ತಿಳಿಸಿರುತ್ತಾನೆ.

★★★★★

# ಬ್ರಹ್ಮಾತ್ಮಭಾವ

**01-05-1936**

**ಬ್ರ॥ಶ್ರೀ॥ ಎಸ್, ವಿಠ್ಠಲಶಾಸ್ತ್ರಿಗಳವರು**

**ಬೃಹದಾರಣ್ಯಕದ 1-4-10ರ ಭಾಷ್ಯಭಾಗದ** ವಿವರಣೆಗೆ ತೆಗೆದುಕೊಂಡ ಮಂತ್ರಭಾಗವು ಹೇಗಿರುವದೆಂದರೆ:

**''ಬ್ರಹ್ಮ ವಾ ಇದಮಗ್ರ ಆಸೀತ್ತದಾತ್ಮನಮೇವಾವೇತ್ । ಅಹಂ ಬ್ರಹ್ಮಾಸ್ಮೀತಿ । ತಸ್ಮಾತ್ತತ್ಸರ್ವಮಭವತ್ ತದ್ಯೋ ಯೋ ದೇವಾನಾಂ ಪ್ರತ್ಯಬುಧ್ಯತ ಸ ಏವ ತದಭವತ್ತಥರ್ಷೀಣಾಂ ತಥಾ ಮನುಷ್ಯಾಣಾಂ ತದ್ಧೈತತ್ಪಶ್ಯನ್ನೃಷಿರ್ವಾಮದೇವಃ ಪ್ರತಿಪೇದೇಽಹಂ ಮನುರಭವಂ ಸೂರ್ಯಶ್ಚೇತಿ । ತದಿದಮಪ್ಯೇತರ್ಹಿ ಯ ಏವಂ ವೇದಾಹಂ ಬ್ರಹ್ಮಾಸ್ಮೀತಿ ಸ ಇದಂ ಸರ್ವಂ ಭವತಿ ತಸ್ಯ ಹ ನ ದೇವಾಶ್ಚ ನಾಭೂತ್ಯಾ ಈಶತೇ । ಆತ್ಮಾ ಹ್ಯೇಷಾಂ ಸ ಭವತಿ ॥''**

ಭಾಷ್ಯಾನುಸಾರವಾಗಿ ಇದರ ಅಭಿಪ್ರಾಯವೇನೆಂದರೆ - ಈ ಶರೀರದಲ್ಲಿ ಕಾಣುತ್ತಾನಲ್ಲ, ಈ ಆತ್ಮನೂ ನಮ್ಮೆದುರಿಗೆ ಪ್ರತ್ಯಕ್ಷಾದಿ ಪ್ರಮಾಣವೇದ್ಯನಾಗಿ ರುವ ಈ ಪ್ರಪಂಚವೂ ಎಲ್ಲವೂ ಮೊದಲು, ಎಂದರೆ ಜ್ಞಾನವಾಗುವದಕ್ಕೆ ಮೊದಲು, ಬ್ರಹ್ಮವೇ ಆಗಿದ್ದರೂ, ಸರಿಯಾದ ತಿಳಿವಳಿಕೆಯಿಲ್ಲದ್ದರಿಂದ 'ನಾನು ಬ್ರಹ್ಮವಲ್ಲ, ಈ ಜಗತ್ತು ಬ್ರಹ್ಮವಲ್ಲ' ಎಂದು ತಿಳಿದುಕೊಂಡು 'ನಾನು ಕರ್ತನು, ಕ್ರಿಯೆಯನ್ನು ಮಾಡುವವನು, ಫಲಗಳನ್ನು ಅನುಭವಿಸುವವನು, ಸುಖದುಃಖಗಳನ್ನು ಪಡೆಯುತ್ತಿರುವ ಸಂಸಾರಿಯು'- ಎಂದು ತಿಳಿದುಕೊಂಡಿರುತ್ತಾರೆ. ಪರಮಾರ್ಥವಾಗಿಯೇನೋ ಎಲ್ಲವೂ ಬ್ರಹ್ಮವೇ ಆಗಿರುವದರಿಂದ ದಯಾಲುವಾದ ಸದ್ಗುರುವು 'ನೀನು ಸಂಸಾರಿಯಲ್ಲವಯ್ಯ' ಎಂದು ಎಚ್ಚರಿಸಲಾಗಿ ಈ ಬ್ರಹ್ಮವು ಅವಿದ್ಯಾಕಲ್ಪಿತವಾದ ವಿಶೇಷಗಳು ಯಾವದೂ ಇಲ್ಲದ ತನ್ನ ಸ್ವರೂಪವನ್ನೇ ಅರಿತುಕೊಂಡಿತು. ನಾನು ಎಂದು ದೃಷ್ಟಿಯನ್ನು ಮಾಡುವ ಆತ್ಮನು ಬ್ರಹ್ಮವೇ ಆಗಿರುತ್ತೇನೆ; ಎಲ್ಲಕ್ಕೂ ಒಳಗಿದ್ದುಕೊಂಡು ಸಾಕ್ಷಾದಪರೋಕ್ಷವಾಗಿರುವ, ಹಸಿವು ಮುಂತಾದ ಊರ್ಮಿಗಳಿಲ್ಲದ ಸ್ಥೂಲ, ಅಣು- ಮುಂತಾದ ಯಾವ ವಿಕಲ್ಪವೂ, ಇಲ್ಲದ ಪರಮಾತ್ಮನೇ ಆಗಿರುತ್ತೇನೆ- ಎಂದು ಅರಿತುಕೊಂಡಿತು.

ಈ ತಿಳಿವಳಿಕೆಯಿಂದ ಆ ಬ್ರಹ್ಮವು ಸರ್ವವೂ ಆಯಿತು, ನಾನು ಬ್ರಹ್ಮವಲ್ಲವೆಂಬ ಆರೋಪವು ಹೋಗಲು, ಆ ಆರೋಪಣೆಯ ಕಾರ್ಯವಾದ ಅಸರ್ವತ್ವವೂ ತೊಲಗಿ ಸರ್ವವೂ ತಾನೇ ಆಯಿತು. ಆದ್ದರಿಂದ ಮನುಷ್ಯರು ಬ್ರಹ್ಮದ ವಿದ್ಯೆಯಿಂದ ನಾವು ಸರ್ವವೂ ಆಗುವೆವೆಂದು ಭಾವಿಸಿಕೊಂಡಿರುವದು ಯುಕ್ತವೇ ಆಗಿರುತ್ತದೆ.

ದೇವತೆಗಳಲ್ಲಿ ಯಾವನು ಯಾವನು ಮೇಲೆ ಹೇಳಿದಂತೆ ತಮ್ಮ ಸ್ವರೂಪವಾದ ಪರಮಾತ್ಮನನ್ನು ತಿಳಿದುಕೊಂಡರೋ ಅವನವನು ಬ್ರಹ್ಮವಾದನು; ಋಷಿಗಳಲ್ಲಿಯೂ ಹೀಗೆಯೇ, ಮನುಷ್ಯರಲ್ಲಿಯೂ ಹೀಗೆಯೇ - ಎಂದರೆ ಯಾರು ಯಾರು ತಿಳಿದುಕೊಂಡರೋ ಅವರವರು ಬ್ರಹ್ಮವಾದರು. ಇಲ್ಲಿ ದೇವತೆಗಳು, ಋಷಿಗಳು, ಮನುಷ್ಯರು- ಎಂದು ಹೇಳಿರುವದು ಲೋಕದೃಷ್ಟಿಯಿಂದಲೇ ಹೊರತು ಪರಮಾರ್ಥದೃಷ್ಟಿಯಿಂದಲ್ಲ; ಏಕೆಂದರೆ ಎಲ್ಲೆಲ್ಲಿಯೂ ಬ್ರಹ್ಮವೇ ಹೊಕ್ಕಿರುವದೆಂದು ಹಿಂದೆ ಹೇಳಿರುತ್ತದೆ. ಶರೀರವೇ ಮುಂತಾದ

ಉಪಾಧಿಗಳಿಂದಾಗುವ ದೃಷ್ಟಿಯಿಂದ ದೇವತೆಗಳು – ಎಂಬುದೇ ಮುಂತಾದ ಹೆಸರುಗಳು ಬರುತ್ತವೆ; ಪರಮಾರ್ಥವಾಗಿ ನೋಡಿದರೆ ಬ್ರಹ್ಮವೇ ಆಯಾ ದೇವತಾದಿ ದೇಹಗಳಲ್ಲಿ ಬೇರೆ ಬೇರೆಯಾಗಿರುವಂತಿದ್ದ ತನ್ನ ಸ್ವರೂಪವನ್ನು ಅರಿತುಕೊಂಡು ಸರ್ವವೂ ಆಯಿತು. ಬ್ರಹ್ಮವೂ ಸಕಲವೇ ಆಗಿರುವದರಿಂದ ಬ್ರಹ್ಮವು ಅಜ್ಞಾನದಿಂದ ಪರಿಚ್ಛಿನ್ನವಾಗಿತ್ತೆಂದೂ ಜ್ಞಾನದಿಂದ ಅಪರಿಚ್ಛಿನ್ನವಾಗಿ ಸರ್ವವೂ ಆಯಿತೆಂದೂ ಹೇಳುವದು ಕೂಡ ಅಜ್ಞಾನದೃಷ್ಟಿಯ ವ್ಯವಹಾರವೇ ಹೊರತು ಪರಮಾರ್ಥವಾಗಿ ಬ್ರಹ್ಮಕ್ಕಿಂತ ಬೇರೆ ಯಾವುದೂ ಏನೂ ಆಗುವದೂ ಇಲ್ಲ, ಹೋಗುವದೂ ಇಲ್ಲ.

ಈ ಬ್ರಹ್ಮವಿದ್ಯೆಗೆ ಸರ್ವಾತ್ಮಭಾವವೇ ಫಲವೆನ್ನುವದಕ್ಕೆ ವಾಮದೇವನೇ ನಿದರ್ಶನವು. ಆತನು ಈ ಬ್ರಹ್ಮವನ್ನು ನಾನು ಈ ಬ್ರಹ್ಮವೇ ಎಂದು ಕಂಡುಕೊಂಡು ಈ ದರ್ಶನದ ಫಲವಾಗಿ ''ನಾನು ಮನುವಾಗಿದ್ದೆನು, ಸೂರ್ಯನಾಗಿದ್ದೆನು'' ಎಂಬರ್ಥವುಳ್ಳ ಮಂತ್ರಗಳ ದ್ರಷ್ಟೃವಾದನು. ''ಪಶ್ಯನ್ ಪ್ರತಿಪೇದೇ'' (ಕಂಡು ಫಲವನ್ನು ಪಡೆದನು) ಎಂಬ ಪ್ರಯೋಗದಲ್ಲಿ ಪಶ್ಯನ್ ಎಂದು ವರ್ತಮಾನ ಕಾಲವನ್ನು ಹೇಳುವ ಶತೃಪ್ರತ್ಯಯವಿರುವದರಿಂದ ಅರಿವಿನಿಂದಲೇ ಫಲವನ್ನು ಪಡೆದನು, ಮೋಕ್ಷವನ್ನು ಪಡೆಯುವದಕ್ಕೆ ಬ್ರಹ್ಮವಿದ್ಯೆಗೆ ಮತ್ತೊಂದು ಸಹಾಯವೂ ಬೇಕಾಗಲಿಲ್ಲ– ಎಂಬುದನ್ನು ಸೂಚಿಸಿದಂತಾಯಿತು. 'ಭುಞ್ಜನ್ ತೃಪ್ಯತಿ' (ಊಟಮಾಡಿದರೆ ತೃಪ್ತಿಯಾಗುತ್ತದೆ) ಎಂಬ ಪ್ರಯೋಗದಲ್ಲಿ ಕೇವಲ ಭೋಜನದಿಂದಲೇ ತೃಪ್ತಿಯೆಂದು ಸೂಚಿತವಾಗುವಂತೆಯೂ ಸಮಾನಕಾಲವನ್ನೂ ಇದು ಸೂಚಿಸುತ್ತದೆ, ಕೇವಲ ವಿದ್ಯೆಯಿಂದಲೇ ಮುಕ್ತಿಯಾಗುವದು ಎಂಬುದನ್ನೂ ತಿಳಿಸುತ್ತದೆ.

ಬ್ರಹ್ಮವಿದ್ಯೆಯಿಂದ ಸರ್ವಾತ್ಮಭಾವವನ್ನು ಪಡೆದುಕೊಳ್ಳುವದು ದೊಡ್ಡ ವರಾದ ವಾಮದೇವಾದಿಗಳಿಗೆ ಮಾತ್ರ ಹೆಚ್ಚಿನ ಸಾಮರ್ಥ್ಯವಿದ್ದದ್ದರಿಂದ ದೊರಕಿತು; ಈ ಕಾಲದವರಿಗೆ, ಅದರಲ್ಲಿಯೂ ಅಲ್ಪವೀರ್ಯರಾದ ಮನುಷ್ಯರಿಗೆ, ದೊರಕಲಾರದು ಎಂದು ಯಾರಾದರೂ ತಿಳಿಯಬಾರದೆಂದು ಶ್ರುತಿಯು ಹೇಳಿರುವದೇನೆಂದರೆ ''ಈಗಲೂ ಯಾವನು ಹೊರಗಿನ ವಿಷಯದಲ್ಲಿ ಆದರವನ್ನು ತೊರೆದು 'ನಾನು ಬ್ರಹ್ಮವು' ಎಂದು ತನ್ನ ಸ್ವರೂಪವನ್ನೇ ಅರಿತುಕೊಳ್ಳುತ್ತಾನೋ,

ಯಾವನು ಉಪಾಧಿಯಿಂದಾಗುವ ಭ್ರಾಂತಿಯ ತಿಳಿವಿನಿಂದ ಆರೋಪಿತವಾಗಿರುವ ವಿಶೇಷಗಳನ್ನೆಲ್ಲ ಒತ್ತಲಿಸಿ ಸಂಸಾರದ ಧರ್ಮದ ವಾಸನೆಯೂ ಇಲ್ಲದ ಒಳಗೂ ಹೊರಗೂ ಇಲ್ಲದ ಬ್ರಹ್ಮವೊಂದೇ ಆಗಿರುವೆನೆಂದು ಅರಿತುಕೊಳ್ಳುತ್ತಾನೋ, ಅವನು ಯಾವನೇ ಆಗಲಿ ಅವನಿಗೆ ಅವಿದ್ಯೆಯಿಂದಾಗಿರುವ ಅಸರ್ವಾತ್ಮತ್ವವು ಬ್ರಹ್ಮವಿಜ್ಞಾನದಿಂದ ಹೋಗಿಬಿಡುವದರಿಂದ ಅವನು ಇದೆಲ್ಲವೂ ಆಗಿಬಿಡುತ್ತಾನೆ. ಮಹಾವೀರ್ಯರಾದ ವಾಮದೇವಾದಿಗಳಿಗಾಗಲಿ ಹೀನವೀರ್ಯರಾದ ಈಗಿನ ಮನುಷ್ಯರಿಗಾಗಲಿ ಅವರು ಬ್ರಹ್ಮಸ್ವರೂಪರೇ ಎಂಬ ವಿಷಯದಲ್ಲಿ ಯಾವದೊಂದು ತಾರತಮ್ಯವೂ ಇರುವದಿಲ್ಲ''

ಹೀಗೆ ಬ್ರಹ್ಮವೇ ತಾನೆಂದು ತಿಳಿದಾತನು ಸರ್ವಾತ್ಮಭಾವವನ್ನು ಪಡೆಯುವದಕ್ಕೆ ಅಡ್ಡಿಮಾಡಲು ದೇವತೆಗಳಿಂದಲೂ ಆಗಲಾರದು, ಏಕೆಂದರೆ ಅವರಿಗೂ ಅವನು – ಆತ್ಮನೇ ಆಗಿಬಿಡುತ್ತಾನೆ.

★★★★★

## ಜ್ಞಾನನಿಷ್ಠೆ

**02-05-1936**

**ಶ್ರೀಶ್ರೀಗಳವರು**

**ಗೀತೆಯ ಹದಿನೆಂಟನೆಯ ಅಧ್ಯಾಯದ ಐವತ್ತನೆಯ ಶ್ಲೋಕದ ಭಾಷ್ಯದ** ವಿವರಣೆ – ಶ್ಲೋಕವು ಹೀಗಿರುವದು,

**ಸಿದ್ಧಿಂ ಪ್ರಾಪ್ತೋ ಯಥಾ ಬ್ರಹ್ಮ ತಥಾಪ್ನೋತಿ ನಿಬೋಧ ಮೇ ।**
**ಸಮಾಸೇನೈವ ಕೌನ್ತೇಯ ನಿಷ್ಠಾ ಜ್ಞಾನಸ್ಯ ಯಾ ಪರಾ ॥**

ಸ್ವಕರ್ಮವನ್ನು ಈಶ್ವರಾರ್ಪಣಬುದ್ಧಿಯಿಂದ ಮಾಡಿ ಪರಮೇಶ್ವರನನ್ನು ಆರಾಧನೆಮಾಡಿದರೆ ಆ ಈಶ್ವರನ ಪ್ರಸಾದದಿಂದ ಶರೀರೇಂದ್ರಿಯಗಳು ಶುದ್ಧಿಯಾಗಿ

ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆ ಎಂಬ ಸಿದ್ಧಿಯು ಬರುವದೆಂದು ಹಿಂದೆ ಹೇಳಿರುತ್ತದೆ. ಆ ಸಿದ್ಧಿಯನ್ನು ಪಡೆದ ಮೇಲೆ ಸಾಧಕನು ಬ್ರಹ್ಮವನ್ನು ಪಡೆಯುತ್ತಾನೆ, ಜ್ಞಾನದ ಪರನಿಷ್ಠೆಯೆಂಬ ಹೆಚ್ಚಿನ ಸಿದ್ಧಿಯನ್ನು ಆಮೇಲೆ ಪಡೆದುಕೊಳ್ಳುತ್ತಾನೆ ಎಂಬುದು ಈ ಶ್ಲೋಕದ ತಾತ್ಪರ್ಯವು.

ಭಗವದ್ಗೀತೆಯಲ್ಲಿ ಭಗವಂತನು ಹೇಳಿರುವ ಮತ್ತು ಉಪನಿಷತ್ತುಗಳಲ್ಲಿ ತಿಳಿಸಿರುವ ಆತ್ಮಸ್ವರೂಪವು ಹೇಗಿರುವದೋ ಅದರಂತೆಯೇ ತಿಳಿವಳಿಕೆಯು ನಿಲುಗಡೆಗೆ ಬರುವದೇ ಜ್ಞಾನದ ನಿಷ್ಠೆಯು. ಈ ನಿಷ್ಠೆಯನ್ನು ಪಡೆಯುವದೇ ಬ್ರಹ್ಮಪ್ರಾಪ್ತಿಯು - ಎಂಬುದು ಇಲ್ಲಿ ಭಗವಂತನ ಭಾವವು. ಇಲ್ಲಿ ಒಂದು ಶಂಕೆಯು ಉಂಟಾಗಬಹುದು: ಅದೇನೆಂದರೆ, ಜ್ಞಾನವೆಂಬುದು ವಿಷಯದ ಆಕಾರವಾಗಿರಬೇಕು ; ಆದರೆ ಆತ್ಮನು ವಿಷಯನೂ ಅಲ್ಲ, ಅವನಿಗೆ ಯಾವ ಆಕಾರವೂ ಇಲ್ಲ. ಹೀಗಿರುವಲ್ಲಿ ಆತ್ಮಜ್ಞಾನವೆಂಬುದು ಹೇಗೆ ಆಗಬೇಕು? ಆತ್ಮನೂ ನಿರಾಕಾರನು, ಆತ್ಮಜ್ಞಾನವೂ ನಿರಾಕಾರ- ಹೀಗಾದರೆ ಆತ್ಮಜ್ಞಾನದ ಭಾವನೆಯೆಂಬ ನಿಷ್ಠೆಯು ತಾನೇ ಹೇಗಾಗಬೇಕು?

ಇದಕ್ಕೆ ಉತ್ತರವೇನೆಂದರೆ, ಬುದ್ಧಿಯನ್ನು ಅತ್ಯಂತನಿರ್ಮಲವಾಗಿ ಮಾಡುವದೇ ಆತ್ಮಜ್ಞಾನಕ್ಕೆ ಮಾರ್ಗವು. ಬುದ್ಧಿ, ಮನಸ್ಸು, ಇಂದ್ರಿಯಗಳು, ದೇಹ- ಇವುಗಳು ಒಂದಕ್ಕಿಂತ ಒಂದು ಹೊರಗೆ, ಹೆಚ್ಚು ಹೆಚ್ಚು ಸ್ಥೂಲವಾಗಿ ದ್ದುಕೊಂಡು ತಾವೇ ಚೈತನ್ಯವೆಂಬ ಬುದ್ಧಿಯನ್ನು ಉಂಟುಮಾಡುತ್ತಿರುತ್ತವೆ. ಅತ್ಯಂತ ಮೂಢರಾದವರು ದೇಹವೇ ಚೈತನ್ಯವೆಂದು ಭಾವಿಸಿಕೊಳ್ಳುತ್ತಾರೆ, ಇವರಿಗಿಂತ ಮೇಲಾದವರು ಇಂದ್ರಿಯಗಳನ್ನು, ಇನ್ನೂ ಸೂಕ್ಷ್ಮಮತಿಗಳಾದವರು ಮನಸ್ಸನ್ನು 'ಇನ್ನು ಕೆಲವರು ಬುದ್ಧಿಯನ್ನು' ಮತ್ತೆ ಕೆಲವರು ಅವ್ಯಾಕೃತವನ್ನು ಆತ್ಮನೆಂದು ಭಾವಿಸಿರುತ್ತಾರೆ. ಇವುಗಳಲ್ಲಿ ಆತ್ಮಚೈತನ್ಯವೆಂಬ ಬುದ್ಧಿಗೆ ಆತ್ಮಚೈತನ್ಯದ ಬೆಳಕೇ ಕಾರಣವಾದ್ದರಿಂದ ಆತ್ಮಜ್ಞಾನವನ್ನೇನೂ ಹೊಸದಾಗಿ ಉಂಟುಮಾಡಬೇಕಾದದ್ದಿರುವದಿಲ್ಲ. ನಾಮರೂಪವೇ ಮುಂತಾದ ಅನಾತ್ಮವನ್ನು ಆತ್ಮನಲ್ಲಿ ಆರೋಪಿಸಿರುವದನ್ನು ತೆಗೆದುಹಾಕಬೇಕಾಗಿರುತ್ತದೆ, ಅಷ್ಟೆ. ಯಾರಿಗೆ ನಾಮರೂಪಗಳೆಂಬ ವಿಶೇಷಾಕಾರಗಳಲ್ಲಿಯೇ ಬುದ್ಧಿಯು ನಿಂತಿರುವದೋ ಅವರಿಗೆ ಅತ್ಯಂತ ಪ್ರಸಿದ್ಧವೂ ಅತ್ಯಂತ ಸುಲಭವಾಗಿ ತಿಳಿಯಬಹುದಾದದ್ದೂ

ಆಗಿರುವ ಆತ್ಮತತ್ತ್ವವೇ ಎಲ್ಲಿಯೋ ಅತಿದೂರವಾಗಿರುವಂತೆಯೂ ತಮಗಿಂತ ಬೇರೆಯಾಗಿರುವಂತೆಯೂ ತೋರುತ್ತಿರುವದು. ಆದರೆ ಯಾರು ಹೊರಗಡೆಯ ವಿಷಯಗಳ ಬುದ್ಧಿಯನ್ನು ತೊಲಗಿಸಿಕೊಂಡು ಸದ್ಗುರುಪ್ರಸಾದವನ್ನು ಹೊಂದಿರುವರೋ ಅಂಥ ಶುದ್ಧಚಿತ್ತರಿಗೆ ಆತ್ಮನಿಗಿಂತ ಹೆಚ್ಚು ಸುವಿಜ್ಞೇಯವಾಗಿ ರುವ ಅಥವಾ ಹೆಚ್ಚು ಹತ್ತಿರವಿರುವ ವಸ್ತುವೇ ಇರುವದಿಲ್ಲ. ಆದ್ದರಿಂದಲೇ ಇದನ್ನು ನೇರಾಗಿ ಅರಿಯಬಹುದು- ಎಂದು ಹಿಂದೆ 9-2ರಲ್ಲಿ ಹೇಳಿರುತ್ತದೆ.

ಕೆಲವರು ಪಂಡಿತಂಮನ್ಯರು ಆತ್ಮನು ನಿರಾಕಾರನಾದ್ದರಿಂದ ಆತ್ಮಜ್ಞಾನವು ಉಂಟಾಗುವದು ಕಷ್ಟವೆಂದು ಭಾವಿಸಿರುತ್ತಾರೆ. ಆದರೆ ತಿಳಿದವರಿಗೆ ಆತ್ಮಚೈತನ್ಯಕ್ಕಿಂತ ಬೇರೆಯಾಗಿ ಮತ್ತೆ ಯಾವದೂ ಕಾಣದೆ ಇರುವದರಿಂದ ಅವರಿಗೆ ಅನಾತ್ಮವಸ್ತುವಿನಲ್ಲಿ ಸತ್ಯಬುದ್ಧಿಯಾಗುವದು ಇನ್ನೂ ಕಷ್ಟವಾಗಿರುತ್ತದೆ. ಆತ್ಮನೆಂದರೆ ತನ್ನ ಸ್ವರೂಪವು, ಅದು ಹೇಗೆ ತಾನೇ ತನಗೆ ಅಪ್ರಸಿದ್ಧವಾದೀತು? ಆತ್ಮನು ಅಪ್ರಸಿದ್ಧನಾದರೆ ಪ್ರವೃತ್ತಿಗಳೆಲ್ಲವೂ ಯಾರಿಗಾಗಿ ಆಗುತ್ತಿರುವವೆಂದು ಹೇಳುವದಕ್ಕೇ ಬರುವದಿಲ್ಲ. ಪ್ರವೃತ್ತಿಗಳು ದೇಹಾದಿಜಡವಸ್ತುಗಳಿಗಾಗಿ ಎಂದಾಗಲಿ ಸುಖದುಃಖಗಳು ಸುಖದುಃಖಗಳಿಗೇ ಎಂದಾಗಲಿ ಹೇಳುವದು ಆಗುವದಿಲ್ಲ. ಆದ್ದರಿಂದ ಸ್ವತಃಸಿದ್ಧನಾದ ಆತ್ಮನು ಮತ್ತೊಂದು ಪ್ರಮಾಣವನ್ನು ಬಯಸದೆಯೇ ಸಿದ್ಧನಾಗಿರುತ್ತಾನಾಗಿ ಆತ್ಮಜ್ಞಾನನಿಷ್ಠೆಯು ವಿವೇಕಿಗಳಿಗೇನೂ ಕಷ್ಟವಾಗಿರುವದಿಲ್ಲ.

ಜ್ಞಾನವು ನಿರಾಕಾರವೆನ್ನುವವರು ಕೂಡ ಜ್ಞಾನದಿಂದಲೇ ಜ್ಞೇಯವನ್ನು ಗೊತ್ತುಪಡಿಸಬೇಕಾಗಿರುವದರಿಂದ ಜ್ಞಾನವು ಅವರಿಗೂ ಅಪ್ರಸಿದ್ಧವೆನ್ನುವದಕ್ಕೆ ಆಗುವದಿಲ್ಲ. ಜ್ಞಾನವನ್ನು ಗಡಿಗೆಯೇ ಮುಂತಾದ ಹೊರಗಿನ ವಸ್ತುಗಳಂತೆ ಜ್ಞೇಯವೆನ್ನುವದು ಸರಿಯಲ್ಲ; ಏಕೆಂದರೆ ಆಗ ಅಜ್ಞೇಯವಾದ ಜ್ಞಾನವನ್ನು ಅರಿಯುವದಕ್ಕೆ ಮತ್ತೊಂದು ಜ್ಞಾನವು ಬೇಕಾಗುವದು- ಅದೂ ಆಗಲಿ ಎಂದರೆ ಅದನ್ನರಿಯುವ ಮತ್ತೊಂದು, ಅದಕ್ಕೆ ಮತ್ತೊಂದು-ಹೀಗೆ ನಿಲುಗಡೆಯಿಲ್ಲದೆ ಜ್ಞಾನಗಳ ಸಾಲನ್ನು ಕಲ್ಪನೆಮಾಡಬೇಕಾಗುವದು. ಅದು ಸರಿಯಲ್ಲವಾದ್ದರಿಂದ ಜ್ಞಾನವೂ ಜ್ಞಾನಸ್ವರೂಪನಾದ ಆತ್ಮನೂ ಸುಪ್ರಸಿದ್ಧವೆಂದೇ ಒಪ್ಪಬೇಕು. ಆದ್ದರಿಂದ ಅನಾತ್ಮದಲ್ಲಿ ಆತ್ಮಬುದ್ಧಿಯನ್ನು ಕಳೆದುಕೊಳ್ಳುವದರ ಮೂಲಕ ಜ್ಞಾನನಿಷ್ಠೆಯನ್ನು ಸುಲಭವಾಗಿ ಸಂಪಾದಿಸಿಕೊಳ್ಳಬಹುದು.

★★★★★

# ಆಚಾರ್ಯರ ಗುಣಕಥನ

**03-05-1936**

**ಶ್ರೀಶ್ರೀಗಳವರು**

ಆಚಾರ್ಯರ ಉಪದೇಶಗಳ ಪ್ರಸಾರದಿಂದ ಲೋಕಕ್ಕೆಲ್ಲ ಕಲ್ಯಾಣವಾಗುವದು. ಆಚಾರ್ಯರು ಸ್ಮಾರ್ತರ ಗುರುಗಳು ಎಂದು ಹೇಳುವದು ರೂಢಿಯಾಗಿದೆ. ದಕ್ಷಿಣದೇಶದಲ್ಲಿ ಸ್ಮಾರ್ತರು ಬಲುಮಟ್ಟಿಗೆ ಶೈವಾಚಾರವನ್ನು ಅನುಸರಿಸುತ್ತಿರುವದರಿಂದ ಅವರೂ ಶೈವರೆಂದೇ ಕೆಲವರು ಭಾವಿಸುವ ಸಂಭವವಿರುತ್ತದೆ. ಆದರೆ ನಿಜವಾಗಿ ಅವರು ತಮ್ಮ ಪ್ರಸ್ಥಾನತ್ರಯ ಭಾಷ್ಯದಲ್ಲಿ ಯಾವದೊಂದು ಮತಾಚಾರವನ್ನೂ ಅಟ್ಟಕ್ಕೇರಿಸಿಲ್ಲ, ಯಾವದೊಂದು ಆಚಾರವನ್ನೂ ತಿರಸ್ಕರಿಸಿರುವದಿಲ್ಲ. ಸೃಷ್ಟಿಗೆಲ್ಲ ತಿರುಳಾದ ಪರಮಾತ್ಮತತ್ತ್ವವನ್ನು ಮಾತ್ರ ಅವರು ಶ್ರುತಿಯುಕ್ತ್ಯನುಭವಗಳ ಆಧಾರದಿಂದ ಎಲ್ಲರಿಗೂ ತಿಳಿಯುವಂತೆ ಬೋಧಿಸಲು ಪ್ರಯತ್ನಮಾಡಿರುತ್ತಾರೆ. ಆದ್ದರಿಂದ ಈ ದೃಷ್ಟಿಯಿಂದ ನೋಡಿದರೆ ಅವರು ಜಗದ್ಗುರುಗಳು. ಅವರ ಸ್ಮರಣೆಯನ್ನು ಜನರಿಗೆ ಆಗಾಗ್ಗೆ ತಂದುಕೊಡುವದು ಜಗತ್ತಿಗೇ ಕಲ್ಯಾಣವನ್ನು ಮಾಡಿದಂತೆ ಆಗುವದೆಂದರೆ ಅತಿಶಯೋಕ್ತಿಯಾಗಲಾರದು.

ಈಗ್ಗೆ ಆಚಾರ್ಯರ ವಂಶದವರು ಯಾರಾದರೂ ಇದಾರೋ ಇಲ್ಲವೋ ಸಂದೇಹವಾಗಿದೆ. ಅವರು ಯಾರ ಮಕ್ಕಳು, ಅವರ ಹೆಸರೇನು, ಅವರ ಜೀವನ ಚರಿತ್ರೆಯ ಮುಖ್ಯಘಟನೆಗಳಾವವು?- ಎಂಬುದು ಕೂಡ ತಿಳಿಯುವಂತಿಲ್ಲ. ಲೋಕಕ್ಕೆಲ್ಲ ಪೂಜ್ಯರೆನಿಸಿರುವ ಇಂಥ ಮಹಾವ್ಯಕ್ತಿಯ ಸಂಬಂಧವಾಗಿ ಯಾವದೊಂದು ಸ್ಮಾರಕಸಾಮಗ್ರಿಯೂ ಇಲ್ಲದಿರುವದು ನಮ್ಮ ದೌರ್ಭಾಗ್ಯವೇ ಎನ್ನಬೇಕಾಗಿದೆಯಾದರೂ ಭೌತಿಕವಾದ ಯಾವ ಸ್ಮಾರಕಸಾಮಗ್ರಿ ತಾನೇ ಎಷ್ಟು ದಿನ ಬಾಳೀತು? ಆಚಾರ್ಯರು ಶರೀರಾಭಿಮಾನವನ್ನು ಬಿಡಿಸುವ ವೇದಾಂತ ತತ್ತ್ವವನ್ನೇ ಬೋಧಿಸಿದರಾದ್ದರಿಂದ ಅವರು ತಮ್ಮ ಭೌತಿಕಶರೀರಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಎಲ್ಲಿಯೂ ಹೇಳಿಕೊಳ್ಳದೆ ಇರುವದು ಅವರ ಯೋಗ್ಯತೆಗೆ

ಅನುಗುಣವಾಗಿಯೇ ಇರುತ್ತದೆ. ಆದರೂ ಚಿತ್ರಾದಿಗಳ ಮೂಲಕ ಅವರ ಪೂಜೆ, ಪುರಸ್ಕಾರ–ಮುಂತಾದವುಗಳನ್ನು ಮಾಡುವದರಿಂದ ಅವರ ಭಾವನೆಗಳು ನಮ್ಮ ಮೇಲೆಯೂ ತಮ್ಮ ಪ್ರಭಾವವನ್ನು ತೋರಿಸುವದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂತೆ ಆಗುವದೆಂಬುದರಲ್ಲಿ ಸಂಶಯವಿಲ್ಲ. ಈ ದೃಷ್ಟಿಯಿಂದಲೇ ನಾವು ಅವರ ಜಯಂತಿ, ಆರಾಧನೆ– ಮುಂತಾದ ಉತ್ಸವಗಳನ್ನು ನೆರವೇರಿಸುವದು.

ಆಚಾರ್ಯರ ಗುಣಕಥನವು ಅವರಲ್ಲಿ ನಿಜವಾದ ಭಕ್ತಿಯುಳ್ಳ ಮಹಾತ್ಮರಿಗೆ ಮಾತ್ರ ಸಾಧ್ಯವು. ಯಾರು ಅವರ ಸ್ಥಿತಿಗೆ ಏರಬಲ್ಲ ಚಿತ್ತವುಳ್ಳವರಾಗಿರುವರೋ ಅವರಿಗೆ ಮಾತ್ರ ಅವರ ಪೂರ್ಣಭಕ್ತಿಯು ವಶವಾದೀತು. ಆಚಾರ್ಯರ ಮನೋಭಾವವು ಹೇಗಿದ್ದಿತು?– ಎಂಬುದನ್ನು ತಿಳಿಯಬೇಕಾದರೆ ಅವರು ತಮ್ಮ ಭಾಷ್ಯಗಳಲ್ಲಿ ವ್ಯಾಖ್ಯಾನಮಾಡಿ ಮತ್ತೆ ಮತ್ತೆ ಉದಾಹರಿಸಿರುವ ''**ಅಹಂ ಬ್ರಹ್ಮಾಸ್ಮಿ**'' (ನಾನು ಬ್ರಹ್ಮವಾಗಿರುವೆನು), '**ತತ್ತ್ವಮಸಿ**' (ಅದೇ ನೀನಾಗಿರುವೆ), ''**ಸರ್ವಂ ಖಲ್ವಿದಂ ಬ್ರಹ್ಮ**'' (ಈ ಪ್ರಪಂಚವೆಲ್ಲವೂ ಪರಮಾರ್ಥವಾಗಿ ಬ್ರಹ್ಮವೇ)– ಎಂಬ ಸುಂದರಧ್ಯೇಯದ ವೈದಿಕಮಹಾವಾಕ್ಯಗಳ ಪರಮತಾತ್ಪರ್ಯವನ್ನು ಮನಸ್ಸಿನೊಳಗೆ ತಂದುಕೊಳ್ಳಬೇಕಾಗುವದು. ಆಚಾರ್ಯರು ಹೇಳುವ ವಿಷಯವೂ ಅಚ್ಯುತ, ಅವರ ಉಪದೇಶವೂ ಅಚ್ಯುತ; ತತ್ತ್ವವನ್ನೇ ಎಲ್ಲೆಲ್ಲಿಯೂ ಕಂಡು ತತ್ತ್ವವೇ ತಾನಾಗಿ ತತ್ತ್ವಾರಾಮನಾಗಿ ತತ್ತ್ವದಿಂದ ಅಪ್ರಚ್ಯುತನಾಗಬೇಕು, ಅದರಿಂದ ಕೆಳಕ್ಕೆ ಜಾರಲೇಬಾರದು– ಎಂಬ ಗೌಡಪಾದರವರ ಉದಾತ್ತವಾದ ಉಪದೇಶಕ್ಕೆ ಉದಾಹರಣೆಯಾಗಿದ್ದದ್ದು ಆಚಾರ್ಯರ ಚರಿತ್ರೆಯು.

ವಿಶೇಷವಾಗಿ ಕರ್ಣಾಟಕದ ಜನರ ಮೇಲೆ ಒಂದಾನೊಂದು ಕರ್ತವ್ಯದ ಹೊಣೆಗಾರಿಕೆಯು ಬಿದ್ದಿರುತ್ತದೆ. ಆಚಾರ್ಯರು ತಮ್ಮ ಸದುಪದೇಶವನ್ನು ಭರತಖಂಡದಲ್ಲೆಲ್ಲ ವಿಸ್ತರಿಸಿದ ಮೇಲೆಯೂ ಬಹುಕಾಲ ನಮ್ಮ ಕರ್ಣಾಟಕದಲ್ಲಿಯೇ ವಿಶ್ರಾಂತಿಯನ್ನು ತೆಗೆದುಕೊಂಡರೆಂದು ತಿಳಿಯಬರುತ್ತದೆ. ಆದರೆ ಇದರ ಜೊತೆಗೆ ಅವರ ಭಾಷ್ಯಗಳಲ್ಲಿ ಕಂಡುಬರುವ ಮಹಾತತ್ತ್ವಗಳ ವಿಚಾರವೂ ಈ ದೇಶದಲ್ಲಿ ವಿಶ್ರಾಂತಿಯನ್ನು ಪಡೆಯಿತೋ ಎಂಬಂತೆ ಕಾಣುತ್ತಿದೆ, ಸದ್ಯದ ಕರ್ಣಾಟಕದವರ ಸ್ಥಿತಿ. ಇದು ಯುಕ್ತವಲ್ಲ. ಆಚಾರ್ಯರ ಹೃದಯವಾದ ವೇದಾಂತದ ಗೂಢತತ್ತ್ವಗಳನ್ನು ಊರೂರಿಗೂ ತಂದು

ಹರಡುವ ಸಂನ್ಯಾಸಿಗಳು ಅವಶ್ಯವಾಗಿ ಬೇಕಾಗಿದಾರೆ. ನಮ್ಮ ಪೀಠಾಧಿಪರಾದ ಸ್ವಾಮಿಗಳಿಗೆ ಅಡ್ಡಪಲ್ಲಕ್ಕಿಯೇ ಮುಂತಾದ ಬಿರುದುಗಳುಂಟೆಂದು ಸಾಧಿಸುವದು, ಅವರಿಗೆ ಪಾದಪೂಜೆಯನ್ನು ಮಾಡಿ ತೀರ್ಥವನ್ನು ತೆಗೆದುಕೊಳ್ಳುವದು–ಇಷ್ಟರಿಂದಲೇ ನಾವುಗಳು ತೃಪ್ತರಾಗದೆ ನಾವುಗಳು ತತ್ತ್ವವಿಚಾರವನ್ನು ಸತತವಾಗಿ ಬೆಳೆಯಿಸುತ್ತಿರುವ ಕೇಂದ್ರಗಳನ್ನು ಅಲ್ಲಲ್ಲಿ ಏರ್ಪಡಿಸಿಕೊಳ್ಳಬೇಕು.

ಈ ತತ್ತ್ವಗಳು ಎಲ್ಲರ ಹೃದಯದಲ್ಲಿಯೂ ಮೂಡುವಂತಾಗಬೇಕಾದರೆ ಅವುಗಳನ್ನು ಬಹು ಸುಲಭವಾಗಿ ತಿಳಿಯುವ ಸಂಸ್ಕೃತಗ್ರಂಥಗಳಲ್ಲಿಯೂ ಕನ್ನಡ ಗ್ರಂಥಗಳಲ್ಲಿಯೂ ಇಡಬೇಕು. ಹಿಂದಿನ ದೊಡ್ಡ ದೊಡ್ಡ ಗ್ರಂಥಗಳು ಕನ್ನಡಕ್ಕೆ ಬರಬೇಕು, ಅಲ್ಲಿಗಲ್ಲಿಗೆ ಪುಸ್ತಕಭಂಡಾರಗಳು ಏರ್ಪಾಡಾಗಬೇಕು. ಈಗಿನ ಜೀವನಸ್ಥಿತಿಗೆ ಹೊಂದುವಂಥ ದೃಷ್ಟಾಂತಾದಿಗಳಿಂದ ಕೂಡಿದ ಹೊಸ ಗ್ರಂಥಗಳು ಹುಟ್ಟಬೇಕು. ಹಾಡು, ಪದ, ಪದ್ಯ, ನಾಟಕ–ಮುಂತಾದ ರೂಪಗಳಿಂದ ಹೆಂಗಸರಿಗೂ, ಗಂಡಸರಿಗೂ, ದೊಡ್ಡವರಿಗೂ, ಹುಡುಗರಿಗೂ, ವಿದ್ಯಾವಂತರಿಗೂ ಸಾಮಾನ್ಯ ತಿಳಿವಳಿಕೆಯವರಿಗೂ ಅನುಕೂಲಿಸುವಂತೆ ಪುರಾಣ, ಹರಿಕಥೆ, ಬಯಲಾಟ, ಉಪನ್ಯಾಸ, ಚರ್ಚೆ, ವೃತ್ತಾಂತಪತ್ರ– ಮುಂತಾದ ಸಕಲರೂಪಗಳಲ್ಲಿಯೂ ತತ್ತ್ವವು ಹರಡುವದಕ್ಕೆ ಮಾರ್ಗಗಳನ್ನು ಕಲ್ಪಿಸಬೇಕು. ಕೇವಲ ವೈದಿಕರಿಗೆ ಮಾತ್ರವೇ ಈ ತತ್ತ್ವಗಳು ಅವಶ್ಯವೆಂದು ಭಾವಿಸಬಾರದು, ಮತಾಂತರದವರಿಗೂ ಇವುಗಳ ಆವಶ್ಯಕತೆಯಿರುತ್ತದೆ; ಆದ್ದರಿಂದ ಅವರವರ ಅಧಿಕಾರಕ್ಕೆ ತಕ್ಕಂತೆ ಅಧ್ಯಾತ್ಮತತ್ತ್ವಗಳನ್ನು ಆರಿಸಿಕೊಳ್ಳುವದಕ್ಕೆ ಅವಕಾಶವನ್ನು ಕಲ್ಪಿಸಬೇಕು. ಹೀಗೆ ಮಾಡಿದರೆ ಮಾತ್ರ ನಾವು ಆಚಾರ್ಯರ ಸೇವೆಯನ್ನು ಮಾಡಿದಂತೆ ಆಗುತ್ತದೆ. ಆಗಲೇ ಇಂಥ ಉತ್ಸವಗಳ ಉದ್ದೇಶವು ಪೂರ್ಣವಾಗಿ ನೆರವೇರಿದಂತೆ ಆಗುತ್ತದೆ.

★★★★★

# ಆತ್ಮನ ಸೂಕ್ಷ್ಮತ್ವ ವ್ಯಾಪಿತ್ವ

**15-5-1937**

**ಶ್ರೀಶ್ರೀಗಳವರು**

**ಉಪದೇಶಸಾಹಸ್ರಿಯಲ್ಲಿ ಸೂಕ್ಷ್ಮತಾವ್ಯಾಪಿತಾಪ್ರಕರಣದಲ್ಲಿ ಹೀಗೆ ವಿವರಣೆ ಇದೆ,** ಗಂಧವೇ ಮುಂತಾದ ಭೂತಗುಣಗಳು ಒಂದಕ್ಕಿಂತ ಒಂದು ಸೂಕ್ಷ್ಮವಾಗಿಯೂ ವ್ಯಾಪಕವಾಗಿಯೂ ಇರುವವು. ಈ ಗುಣಗಳು ಗುಣಿಗಳಾದ ಭೂತಗಳಿಗಿಂತ ಬೇರೆಯಾಗಿಲ್ಲವೇ ಇಲ್ಲವಾದ್ದರಿಂದ ಭೂತಗಳಲ್ಲಿಯೇ ಈ ಸೂಕ್ಷ್ಮತ್ವವ್ಯಾಪಿತ್ವಗಳನ್ನು ತಿಳಿಯಬೇಕು. ಭೂತಗಳಲ್ಲಿ ಆಧ್ಯಾತ್ಮಿಕ, ಆಧಿಭೌತಿಕ-ಎಂಬ ವಿಂಗಡಗಳು ವ್ಯವಹಾರದಲ್ಲಿದ್ದರೂ ನಿಜವಾಗಿ ಶರೀರದ ಪೃಥ್ವಿಯೂ ಹೊರಗಿನ ಪೃಥ್ವಿಯೂ ಸೇರಿ ಒಂದೇ ಪೃಥ್ವಿಯೆಂಬ ರಾಶಿಯಾಗಿರುತ್ತದೆ; ಹೀಗೆಯೇ ಅಪ್ಪು ಮುಂತಾದ ಭೂತಗಳನ್ನು ಗ್ರಹಿಸಬೇಕು. ಈ ಪೃಥ್ವ್ಯಾದಿಗಳು ತಮ್ಮ ತಮ್ಮ ಕಾರಣವಾದ ಸೂಕ್ಷ್ಮವೂ ವ್ಯಾಪಕವೂ ಆದ ಅಪ್ಪು ಮುಂತಾದವುಗಳಿಗಿಂತ ಬೇರೆಯಾಗಿರುವದೇ ಇಲ್ಲ; ಏಕೆಂದರೆ ಕಾರ್ಯವೆಂಬುದು ಕಾರಣಕ್ಕಿಂತ ಬೇರೆಯಾಗಿರುವದಿಲ್ಲ. ಹೀಗೆ ನೋಡಿದರೆ ಭೂತಗಳೆಲ್ಲ ಪರಮಸೂಕ್ಷ್ಮವಾದ ಆಕಾಶವೇ ಆಗಿಬಿಡುತ್ತವೆ. ಆಕಾಶಕ್ಕಿಂತ ಬೇರೆಯಾಗಿ ಯಾವ ಭೂತವೂ ಇಲ್ಲವೇ ಇಲ್ಲ.

ಇದರಂತೆಯೇ ಇನ್ನೂ ಮುಂದಕ್ಕೆ ಹೋದರೆ ಆಕಾಶಕ್ಕೂ ಮೂಲ ಕಾರಣವಾಗಿರುವ ಚೈತನ್ಯವೊಂದೇ ಉಳಿಯುತ್ತದೆ. ಆ ಚೈತನ್ಯವೇ ನಮ್ಮ ನಿಜವಾದ ಸ್ವರೂಪವು. ಈ ನಮ್ಮ ಆತ್ಮವೇ ಆಕಾಶಾದಿಗಳೆಂಬ ವ್ಯವಹಾರಕ್ಕೆ ಆಶ್ರಯವಾಗಿರುವದು. ಬ್ರಹ್ಮನು ಮೊದಲಾಗಿ ಸ್ಥಾವರದವರೆಗಿನ ಪ್ರಾಣಿಗಳೆಲ್ಲ ಈ ಆತ್ಮನ ಪುರಗಳೆಂದು ಸ್ಮೃತಿಯಲ್ಲಿ ಹೇಳಿರುತ್ತದೆ. ಹೀಗೆ 'ಅದ್ವಿತೀಯನಾಗಿರುವ ಆತ್ಮನೇ ನಾನೆಂದು ತಿಳಿದುಕೊಂಡರೆ ಯಾವ ಕಾಮಕ್ರೋಧಗಳೂ ಇರುವದಿಲ್ಲ. ಆಕಾಶದಲ್ಲಿ ನೀಲಿಯ ಬಣ್ಣವಿದೆಯೆಂದು ಅವಿವೇಕಿಗಳು ಭಾವಿಸುವಂತೆ ಈ

ಆತ್ಮನಲ್ಲಿ ಶಬ್ದಸ್ಪರ್ಶಾದಿಗಳುಂಟೆಂದು ಅಜ್ಞರು ಭಾವಿಸುತ್ತಿರುವರು. ಸಕಲಭೂತಗಳನ್ನೂ ಬೆಳಗುವ ಶುದ್ಧಚೈತನ್ಯವೇ ನಾನಾಗಿರುವುದರಿಂದ ನಾನು ಸರ್ವಜ್ಞನೂ ಸರ್ವದೋಷರಹಿತನೂ ಆಗಿದೇನೆ'- ಎಂದು ತಿಳಿಯುವದೇ ಸರಿಯಾದ ತಿಳಿವು.

ಹುಟ್ಟುವದೆಲ್ಲವೂ ಜ್ಞಾನಕ್ಕೆ ವಿಷಯವಾಗಿರುತ್ತದೆ, ಜ್ಞಾನಕ್ಕಿಂತ ಬೇರೆಯಾಗಿ ಸ್ವತಂತ್ರವಾಗಿ ಇರುವದೇ ಇಲ್ಲ. ಸ್ವಪ್ನದಲ್ಲಿ ದ್ವೈತವು ತೋರುವಾಗಲೂ ಜ್ಞಾನವು ನಿರ್ವಿಷಯವಾಗಿಯೇ ಇರುವಂತೆ ಈಗಲೂ ಅದು ನಿರ್ವಿಷಯವಾಗಿಯೇ ಇರುತ್ತದೆ. ನಮ್ಮಗಳ ಅರಿವು ಹುಟ್ಟುವ ಸ್ವಭಾವದ್ದೂ ಅಲ್ಲ, ಅದಕ್ಕೆ ವಿಷಯವೂ ಬೇಕಿಲ್ಲ; ಇದನ್ನು ಸುಷುಪ್ತಿಯ ಅನುಭವದಿಂದ ತಿಳಿದುಕೊಳ್ಳಬಹುದು. ಜಾಗ್ರದವಸ್ಥೆಯಲ್ಲಿ ಜ್ಞಾನವು ಹುಟ್ಟುವದೆಂದೂ ಅದು ಸವಿಷಯವಾಗಿ ರುವದೆಂದೂ ತೋರುವದು ಅವಿದ್ಯೆಯಿಂದ. ಹೀಗೆ ತಾನೊಂದೇ ಇರುವ ಈ ಜ್ಞಾನವು ತನ್ನನ್ನು ತಾನು ಅರಿಯುವದೆಂಬುದೂ ಸರಿಯಲ್ಲ; ಏಕೆಂದರೆ ಅದರಲ್ಲಿ ವಿಷಯತ್ವವಿರುವದಿಲ್ಲ. ಆದ್ದರಿಂದ ಸಿದ್ಧಾಂತವೇನೆಂದರೆ, ನಿತ್ಯಪ್ರಕಾಶರೂಪವಾದ ಚೈತನ್ಯವೊಂದೇ ಪರಮಾರ್ಥವು ; ಅದರಲ್ಲಿ ವಿಷಯವಿಷಯಿಭಾವವನ್ನೂ ಪಂಚಭೂತಗಳನ್ನೂ ತಿಳಿಯದ ಜನರು ಕಲ್ಪಿಸಿಕೊಂಡಿರುತ್ತಾರೆ.

★★★★★

# ಬ್ರಹ್ಮನನ್ನು ತಿಳಿದವನು ಅಮೃತತ್ತ್ವವನ್ನು ಪಡೆಯುತ್ತಾನೆ

**16-5-1937**

**ಬ್ರ॥ಶ್ರೀ॥ಎಸ್. ವಿಠ್ಠಲಶಾಸ್ತ್ರಿಗಳು**

ಛಾಂದೋಗ್ಯದ ಎರಡನೆಯ ಅಧ್ಯಾಯದ ಮೊದಲನೆಯ ಮಂತ್ರದಲ್ಲಿರುವ **'ಬ್ರಹ್ಮಸಂಸ್ಥೋಽಮೃತತ್ವಮೇತಿ'** ಎಂಬ ವಾಕ್ಯದ ತಾತ್ಪರ್ಯವೇನು ಎಂದರೆ - ಮಂತ್ರವು ಹೀಗಿರುತ್ತದೆ:

**ತ್ರಯೋ ಧರ್ಮಸ್ಕಂಧಾ ಯಜ್ಞೋಽಧ್ಯಯನಂ ದಾನಮಿತಿ ಪ್ರಥಮಸ್ತಪ ಏವ ದ್ವಿತೀಯೋ ಬ್ರಹ್ಮಚಾರ್ಯಾಚಾರ್ಯಕುಲವಾಸೀ ತೃತೀಯೋಽತ್ಯನ್ತಮಾತ್ಮಾನಮಾಚಾರ್ಯಕುಲೇಽವಸಾದಯನ್ ಸರ್ವ ಏತೇ ಪುಣ್ಯಲೋಕಾ ಭವಂತಿ ಬ್ರಹ್ಮಸಂಸ್ಥೋಽಮೃತತ್ತ್ವಮೇತಿ ॥**

ಧರ್ಮದ ವಿಭಾಗಗಳು ಮೂರು. ಯಜ್ಞ, ಅಧ್ಯಯನ, ದಾನ- ಎಂಬಿವುಗಳಿಂದ ಕೂಡಿರುವದೊಂದು; ತಪಸ್ಸು ಎಂಬುದು ಮತ್ತೊಂದು; ಅತ್ಯಂತವಾಗಿ ಆಚಾರ್ಯಗೃಹದಲ್ಲಿಯೇ ತನ್ನ ಕಾಲವನ್ನೆಲ್ಲ ಕಳೆಯುವಾತನದೊಂದು. ಇವರೆಲ್ಲರೂ ಪುಣ್ಯಲೋಕವನ್ನು ಪಡೆಯುವರು. ಬ್ರಹ್ಮಸಂಸ್ಥನು ಅಮೃತತ್ವವನ್ನು ಹೊಂದುತ್ತಾನೆ.

ಈ ಮಂತ್ರದಲ್ಲಿ ಯಜ್ಞಾಧ್ಯಯನದಾನಗಳಿಂದ ಕೂಡಿದ ಗೃಹಸ್ಥ, ಕೃಚ್ಛ್ರಚಾಂದ್ರಾಯಣಗಳ ತಪಸ್ಸಿನಿಂದ ಕೂಡಿದ ವಾನಪ್ರಸ್ಥ ಅಥವಾ ಇಂದ್ರಿಯ ಸಂಯಮದಿಂದ ಕೂಡಿದ ತ್ರಿದಂಡ್ಯಾದಿಸಂನ್ಯಾಸಾಶ್ರಮಿ, ಜೀವಿತಕಾಲವನ್ನೆಲ್ಲ ಗುರುಕುಲದಲ್ಲಿಯೇ ಬ್ರಹ್ಮಚರ್ಯದಿಂದ ಕಳೆಯುವ ನೈಷ್ಠಿಕಬ್ರಹ್ಮಚಾರಿ - ಎಂಬ ಮೂರು ಆಶ್ರಮದವರನ್ನು ಹೆಸರಿಸಿ ಅವರಿಗೆ ಪುಣ್ಯಲೋಕವುಂಟಾಗುವದೆಂದು ಹೇಳಿದ ಬಳಿಕ ಬ್ರಹ್ಮಸಂಸ್ಥನಿಗೆ ಅಮೃತತ್ವವುಂಟಾಗುವದು- ಎಂದು ಹೇಳಿರುತ್ತದೆ. ಈ ಅಮೃತತ್ವವು ಹಿಂದೆ ಹೇಳಿರುವ ಪುಣ್ಯಲೋಕಕ್ಕಿಂತಲೂ ಬೇರೆಯಾಗಿರಬೇಕಾದ್ದರಿಂದ ಇಲ್ಲಿ ಅಮೃತತ್ವವೆಂದರೆ ಪರಮಾರ್ಥವಾದ ಮೋಕ್ಷವೇ ಹೊರತು ದೇವತಾ ಸಾಯುಜ್ಯಾದಿಗಳಲ್ಲ- ಎಂಬುದು ಸ್ಪಷ್ಟವಾಗಿರುತ್ತದೆ. ಈ ಅಮೃತತ್ವವನ್ನು ಪಡೆಯುವ ಬ್ರಹ್ಮಸಂಸ್ಥನೆಂದರೆ ಯಾರು?- ಎಂಬುದು ಪ್ರಕೃತಭಾಷ್ಯದಲ್ಲಿ ಚರ್ಚೆಗೆ ತೆಗೆದುಕೊಂಡಿರುವ ವಿಷಯವು.

ಇಲ್ಲಿ ಹಿಂದಿನ ಮೂರು ಆಶ್ರಮಗಳಲ್ಲಿರುವವರಿಗೂ ಪುಣ್ಯಲೋಕವು ಪ್ರಾಪ್ತವಾಗುವದೆಂಬುದನ್ನು ಹೇಳುವದೇನೂ ಪ್ರಕೃತಮಂತ್ರದ ಉದ್ದೇಶವಲ್ಲ; ಏಕೆಂದರೆ ಈ ಮಂತ್ರವು ಓಂಕಾರೋಪಾಸನೆಯ ವಿಧಿಯ ಪ್ರಕರಣದಲ್ಲಿ ಬಂದಿರುತ್ತದೆ. ಸಾಮೋಪಾಸನೆಗಳಿಂದಲಾಗಲಿ ಕರ್ಮಗಳಿಂದಲಾಗಲಿ ಸಿಕ್ಕಲಾರದ ಅಮೃತತ್ವವು ಬರಿಯ ಓಂಕಾರೋಪಾಸನೆಯಿಂದ ದೊರಕುತ್ತದೆ - ಎಂದು ಆ ಉಪಾಸನೆಯನ್ನು ಹೊಗಳುವದಕ್ಕೆ ಇದು ಹೊರಟಿರುತ್ತದೆ. ಆದ್ದರಿಂದ

ಮೊದಲನೆಯ ಮೂವರಿಗೂ ಪುಣ್ಯಲೋಕವು ಮಾತ್ರ ಬರುತ್ತದೆ ಎಂದು ಶಾಸ್ತ್ರಾಂತರಸಿದ್ಧವಾದದ್ದನ್ನೇ ಅನುವಾದಮಾಡಿ, ಆದರೆ ಬ್ರಹ್ಮಸಂಸ್ಥನಾದವನಿಗೆ ಅಮೃತತ್ವವು ಸಿಕ್ಕುತ್ತದೆ- ಎಂದು ಹೇಳುವದಕ್ಕೆ ಮಂತ್ರವು ಬಂದಿದೆಯೆಂದು ನಿರ್ಣಯಿಸಬೇಕು. ಆದ್ದರಿಂದ ಆಶ್ರಮಕರ್ಮಗಳನ್ನೆಲ್ಲ ತ್ಯಾಗಮಾಡಿ ಕೇವಲ ಪ್ರಣವೋಪಾಸನೆಯನ್ನು ಮಾಡುತ್ತಿರುವವನೇ ಇಲ್ಲಿ ಬ್ರಹ್ಮಸಂಸ್ಥನು - ಎಂಬುದು ಭಾಷ್ಯಕಾರರ ಮತವು.

ಹಿಂದಿನ ವೃತ್ತಿಕಾರರೊಬ್ಬರು ಈ ಮಂತ್ರದ ತಾತ್ಪರ್ಯವನ್ನು ಮತ್ತೊಂದು ಬಗೆಯಲ್ಲಿ ವರ್ಣಿಸಿರುತ್ತಾರೆ. ನಾಲ್ಕು ಆಶ್ರಮದಲ್ಲಿ ಯಾರೇ ಆಗಲಿ ತಮ್ಮತಮ್ಮ ಆಶ್ರಮಕರ್ಮವನ್ನು ಮಾತ್ರ ಮಾಡಿಕೊಂಡಿದ್ದರೆ ಅವರಿಗೆ ಪುಣ್ಯಲೋಕವು ದೊರಕುವದು; ಆದರೆ ಅವರಲ್ಲಿ ಯಾವನು ಬ್ರಹ್ಮಸಂಸ್ಥನಾಗಿರುವನೋ ಎಂದರೆ ಪ್ರಣವಸೇವಕನಾಗಿರುವನೋ ಅವನಿಗೆ ಅಮೃತತ್ವವುಂಟಾಗುವದು. ಎಲ್ಲಾ ಆಶ್ರಮದವರಿಗೂ ಬ್ರಹ್ಮಸಂಸ್ಥರಾಗುವದಕ್ಕೆ ಅಧಿಕಾರವುಂಟು; ತಮ್ಮತಮ್ಮ ಆಶ್ರಮಕರ್ಮವನ್ನು ಮಾಡಿದ ಬಳಿಕ ಉಳಿಯುವಷ್ಟು ಕಾಲದಲ್ಲಿ ಅವರು ಬ್ರಹ್ಮಸಂಸ್ಥರಾಗಿರಬಹುದು. ಬ್ರಹ್ಮಸಂಸ್ಥನೆಂಬ ಶಬ್ದವು ಯೌಗಿಕವಾಗಿರುತ್ತದೆ; ಯಾವನು ಬ್ರಹ್ಮದಲ್ಲಿ ಸಂಸ್ಥಿತಿಯುಳ್ಳವನೋ ಅವನು ಬ್ರಹ್ಮಸಂಸ್ಥನು. ಹಾಗಿಲ್ಲದೆ ಬ್ರಹ್ಮಸಂಸ್ಥನೆಂದರೆ ಸಂನ್ಯಾಸಿಯೇ ಎಂದು ಹೇಳಿದರೆ ಆಶ್ರಮವನ್ನು ಸ್ವೀಕಾರಮಾಡಿದಮಾತ್ರದಿಂದ ಮುಕ್ತಿಯಾಗಬೇಕಾಗುವದು, ಜ್ಞಾನದಿಂದ ಮುಕ್ತಿಯಾಗುವದೆಂಬ ಸಿದ್ಧಾಂತವನ್ನು ಕೈಬಿಡಬೇಕಾಗುವದು. ಇದೂ ಅಲ್ಲದೆ ಸಂನ್ಯಾಸಾಶ್ರಮದ ಧರ್ಮವೂ ಮಿಕ್ಕ ಆಶ್ರಮಧರ್ಮಗಳಂತೆಯೇ ಧರ್ಮವಾಗಿಯೇ ಹೊರತು ಅದರಲ್ಲೇನೂ ವಿಶೇಷವಿರುವದಿಲ್ಲ. 'ಸಂನ್ಯಾಸಿಯು ಬ್ರಹ್ಮಸಂಸ್ಥನಾಗಿದ್ದರೆ ಮೋಕ್ಷವಾಗುವದು, ಇಲ್ಲದಿದ್ದರೆ ಇಲ್ಲ' ಎಂಬ ವಚನವೇನೂ ಇರುವದಿಲ್ಲ. ಆದ್ದರಿಂದ ಸಕಲ ಆಶ್ರಮದವರೂ ಬ್ರಹ್ಮಸಂಸ್ಥರಾಗಿ ಮೋಕ್ಷವನ್ನು ಪಡೆಯಬಹುದು ಎಂಬುದು ವೃತ್ತಿಕಾರರ ಮತವು. ಇದೇ ಸಮುಚ್ಚಯವಾದಿಗಳ ಪಕ್ಷವು.

ಈ ಪಕ್ಷವು ಸರಿಯಲ್ಲ. ಏಕೆಂದರೆ ಕರ್ಮವೂ ಜ್ಞಾನವೂ ಒಬ್ಬನಲ್ಲಿಯೇ ಇರುವದು ಸಾಧ್ಯವಲ್ಲ. ಕರ್ಮವನ್ನು ಮಾಡುವವನು ಕ್ರಿಯಾಕಾರಕಫಲಗಳು

ಬೇರೆಬೇರೆಯಾಗಿಯೇ ನಿಜವಾಗಿಯೂ ಇದ್ದುಕೊಂಡಿರುವವೆಂದು ನಂಬಿರುತ್ತಾನೆ; ಹಾಗಿಲ್ಲದಿದ್ದರೆ ಕರ್ಮದಲ್ಲಿ ತೊಡಗುವದೇ ಆಗುವದಿಲ್ಲ. ಆದರೆ ಜ್ಞಾನಿಯಾದವನು 'ಇದೆಲ್ಲವೂ ಸದ್ರೂಪವಾದ ಬ್ರಹ್ಮವೇ' ಎಂಬ ನಿಶ್ಚಯ-ವುಳ್ಳವನಾಗಿರುತ್ತಾನೆ. ಈ ನಿಶ್ಚಯವು ಕ್ರಿಯಾಕಾರಕಫಲಗಳು ಬೇರೆಬೇರೆಯೆಂಬ ಅರಿವನ್ನು ಹೋಗಲಾಡಿಸಿದ ಮೇಲೆಯೇ ಉಂಟಾಗತಕ್ಕದ್ದಾಗಿರುತ್ತದೆ. ಆದ್ದರಿಂದ ಸರ್ವವೂ ಸದ್ರೂಪವಾದ ಬ್ರಹ್ಮವೇ' ಎಂಬ ನಿಶ್ಚಯದ ರೂಪವಾಗಿರುವ ಬ್ರಹ್ಮಸಂಸ್ಥೆಯು ನಾನು 'ಕರ್ತೃವು ಭೋಕ್ತೃವು' ಎಂಬ ಅಭಿಮಾನವುಳ್ಳ ಬ್ರಹ್ಮಚಾರಿಗಾಗಲಿ ಗೃಹಸ್ಥನಿಗಾಗಲಿ ವಾನಪ್ರಸ್ಥನಿಗಾಗಲಿ ಸಂಭವಿಸಲಾರದು. 'ಅಭಕ್ಷ್ಯವನ್ನು ಭಕ್ಷಣಮಾಡಬಾರದು' ಎಂಬ ಶಾಸ್ತ್ರವಚನದಿಂದ ಉಂಟಾದ ಜ್ಞಾನವು ಅಭಕ್ಷ್ಯವನ್ನು ತಿನ್ನುವದನ್ನು ಹೇಗೆ ಬಿಡಿಸುತ್ತದೆಯೋ ಅದರಂತೆಯೇ 'ಅದ್ವಿತೀಯವಾದ ಬ್ರಹ್ಮವೊಂದೇ ಸತ್ಯವು' ಎಂಬ ವಾಕ್ಯದಿಂದುಂಟಾದ ಜ್ಞಾನವೂ ಕರ್ಮವನ್ನು ಬಿಡಿಸುತ್ತದೆ; ಆದ್ದರಿಂದ ಮೊದಲಿನ ಮೂರು ಆಶ್ರಮದವರು ಎಂದಿಗೂ ಬ್ರಹ್ಮಸಂಸ್ಥರಲ್ಲ.

ಹಾಗಾದರೆ 'ಕರ್ಮವನ್ನು ಮಾಡಬೇಕು' ಎಂದು ಹೇಳುವ ವಾಕ್ಯಗಳು ಅಪ್ರಮಾಣವಾಗುವದಿಲ್ಲವೆ? – ಎಂದರೆ ಇಲ್ಲ. ಕನಸಿನ ಅರಿವುಗಳೆಲ್ಲ ಎಚ್ಚರವಾಗುವವರೆಗೂ ಸತ್ಯವಾಗಿಯೇ ತೋರುವಂತೆ ಏಕತ್ವಜ್ಞಾನವುಂಟಾಗುವವರೆಗೂ ಆ ವಿಧಿಗಳು ಪ್ರಮಾಣವಾಗಿರುತ್ತವೆ. ಕಾಮವಿಲ್ಲದವರು ಕಾಮ್ಯಕರ್ಮವನ್ನು ಬಿಟ್ಟರೂ ಕಾಮವಿರುವವರು ಮಾಡುತ್ತಲೇ ಇರುವಂತೆ ಜ್ಞಾನಿಗಳು ಸರ್ವಕರ್ಮಗಳನ್ನೂ ಬಿಟ್ಟರೂ ಅಜ್ಞರು ಮಾಡುತ್ತಲೇ ಇರುತ್ತಾರೆ.

ಪರಿವ್ರಾಜಕರು ಭಿಕ್ಷಾಟನಾದಿಗಳನ್ನು ಮಾಡುತ್ತ ಬ್ರಹ್ಮಸಂಸ್ಥರಾಗಿ ಇರುವಂತೆ ಗೃಹಸ್ಥರು ಅಗ್ನಿಹೋತ್ರಾದಿಗಳನ್ನು ಮಾಡಿಕೊಂಡೇ ಬ್ರಹ್ಮಸಂಸ್ಥರಾಗಿ ಇರಕೂಡದೇಕೆ?– ಎಂದರೆ ಇದು ಸರಿಯಲ್ಲ. ಏಕೆಂದರೆ ಭಿಕ್ಷಾಟನಾದಿಗಳನ್ನು ಮಾಡುವದಕ್ಕೆ ಹಸಿವು ಮುಂತಾದ ನಿಮಿತ್ತವಿರುತ್ತದೆ, ಆದರೆ ಬ್ರಹ್ಮಸಂಸ್ಥನು ಅಗ್ನಿಹೋತ್ರಾದಿಗಳನ್ನು ಮಾಡಲೇಬೇಕೆಂಬುದಕ್ಕೆ ಅಂಥ ನಿಮಿತ್ತವೇನೂ ಇರುವದಿಲ್ಲ. ಕರ್ಮವನ್ನು ಮಾಡದೆ ಬಿಟ್ಟರೆ ಪ್ರತ್ಯವಾಯವುಂಟಾಗುವದೆಂಬ

ನಿಮಿತ್ತವಿದೆಯಲ್ಲ!- ಎಂದು ಪೂರ್ವಪಕ್ಷಿಯು ಕೇಳಬಹುದು. ಆದರೆ ಪ್ರತ್ಯವಾಯವು ಕರ್ಮಕ್ಕೆ ಯಾವನು ಅಧಿಕಾರಿಯೋ ಅವನಿಗೆ ಉಂಟಾದೀತೇ ಹೊರತು ಏಕತ್ವ ಪ್ರತ್ಯಯವುಳ್ಳ ಜ್ಞಾನಿಗೆ ಉಂಟಾಗಲಾರದು. ಹಾಗಾದರೆ 'ಏಕತ್ವಪ್ರತ್ಯಯವುಳ್ಳವರೆಲ್ಲರೂ ಪರಿವ್ರಾಜಕರೇ ಎಂದಾಗುವದಲ್ಲ! ಗೃಹಸ್ಥನೂ ಈ ರೀತಿಯಲ್ಲಿ ಬ್ರಹ್ಮಸಂಸ್ಥನಾಗಬಹುದೆಂದಾಯಿತಲ್ಲ!' ಎಂದರೆ ಅದು ಆಗದು. ಏಕೆಂದರೆ ಮೂರು ಆಶ್ರಮಗಳಲ್ಲಿಯೂ 'ನಾನು', 'ನನ್ನದು'-ಎಂಬ ಭೇದಬುದ್ಧಿಯಿರುತ್ತದೆ; ಆದ್ದರಿಂದ ಅವರು ಬ್ರಹ್ಮಸಂಸ್ಥರಲ್ಲ, ಪರಿವ್ರಾಜಕನೇ ಬ್ರಹ್ಮಸಂಸ್ಥನು. ಇಂಥ ಪರಿವ್ರಾಜಕನಿಗೆ ಭೇದಬುದ್ಧಿಯೇ ಇಲ್ಲವಾದ್ದರಿಂದ ಅವನು ಯಮನಿಯಮಾದಿಗಳನ್ನೂ ಮಾಡಬೇಕಾದದ್ದಿಲ್ಲವೆಂದಾಗುವದಿಲ್ಲವೆ?- ಎಂದರೆ ಇಲ್ಲ; ಏಕತ್ವಪ್ರತ್ಯಯವು ಮರೆಯಾಗಿರುವಾಗ ಕರ್ಮಾಂತರದಲ್ಲಿ ತೊಡಗದೆ ಇರುವದಕ್ಕಾಗಿ ಯಮನಿಯಮಗಳನ್ನು ಅವನು ಮಾಡುತ್ತಾನೆ. ಹಾಗಾದರೆ ನಿಷಿದ್ಧ ಕರ್ಮಗಳನ್ನೂ ಅವನು ಮಾಡಬಹುದಲ್ಲ!- ಎಂದು ಶಂಕಿಸಬಾರದು; ಏಕೆಂದರೆ ಜ್ಞಾನವುಂಟಾಗುವದಕ್ಕೆ ಮೊದಲೇ ಅವನು ಅಧರ್ಮವನ್ನು ಬಿಟ್ಟುಬಿಟ್ಟಿರುತ್ತಾನೆ, ಈಗ ಮತ್ತೆ ಅದರಲ್ಲಿ ಅವನು ತೊಡಗುವನೆಂಬ ಶಂಕೆಯೇ ಇರುವದಿಲ್ಲ.

ಬ್ರಹ್ಮಸಂಸ್ಥನೆಂಬ ಮಾತು ಯೌಗಿಕವಾದರೂ ಅದು ಇಂಥ ಪರಿವ್ರಾಜಕನೊಬ್ಬನಿಗೇ ಅನ್ವಯಿಸುತ್ತದೆ. ಗೃಹಸ್ಥನೆಂಬ ಹೆಸರು ಯೌಗಿಕವಾದರೂ ಗೃಹದಲ್ಲಿರುವವರಿಗೆಲ್ಲ ಅದನ್ನು ಉಪಯೋಗಿಸುವದಿಲ್ಲ; ಗೃಹಸ್ಥಾಶ್ರಮದಲ್ಲಿರುವಾತನಿಗೆ ಮಾತ್ರ ಅನ್ವಯಿಸುತ್ತದೆ. ಅಲ್ಲವೆ? ಅದರಂತೆಯೇ ಬ್ರಹ್ಮಸಂಸ್ಥನೆಂಬುದೂ ಮೇಲೆ ಹೇಳಿದ ಪರಿವ್ರಾಜಕನಿಗೇ ಅನ್ವಯಿಸುವ ಯೋಗರೂಢಶಬ್ದವಾಗಿರುತ್ತದೆಯೆಂದು ತಿಳಿಯಬೇಕು.

ಈ ಪಾರಿವ್ರಾಜ್ಯವೇ ವೇದೋಕ್ತವಾದದ್ದೇ ಹೊರತು ಯಜ್ಞೋಪವೀತ ತ್ರಿದಂಡಾದಿಗಳನ್ನು ಧರಿಸುವದು ಸಂನ್ಯಾಸವಲ್ಲ; ಏಕೆಂದರೆ ಯಜ್ಞೋಪವೀತಾದಿಗಳು ಕರ್ಮಕ್ಕೆ ಬೇಕಾದ ಉಪಕರಣಗಳಾಗಿರುತ್ತವೆ. ಸಾಂಖ್ಯರೂ ಬೌದ್ಧರೂ ಹೇಳುವ ಸಂನ್ಯಾಸಕ್ಕೂ ವೇದೋಕ್ತಪಾರಿವ್ರಾಜ್ಯಕ್ಕೂ ತಾರತಮ್ಯವುಂಟು. ಸಾಂಖ್ಯರು ಕ್ರಿಯಾಕಾರಫಲಭೇದವನ್ನು ಸತ್ಯವೆಂದು ಒಪ್ಪಿ

ಕರ್ಮತ್ಯಾಗವನ್ನು ಬೋಧಿಸುತ್ತಾರೆ; ಆದ್ದರಿಂದ ಅದು ಕರ್ತೃತ್ವವಿರುವಾಗಲೇ ಕರ್ಮವನ್ನು ಬಿಟ್ಟಂತೆ ಆಗುತ್ತದೆ. ಬೌದ್ಧರಲ್ಲಿ ಶೂನ್ಯವಾದಿಗಳು ಕರ್ತೃತ್ವವನ್ನು ಶೂನ್ಯವೆಂದು ಹೇಳುತ್ತಾರಾದರೂ ಎಲ್ಲಕ್ಕೂ ಸಾಕ್ಷಿಯಾಗಿರುವ ಬ್ರಹ್ಮಚೈತನ್ಯವನ್ನು ಅವರು ನಿಷ್ಕಾರಣವಾಗಿ ತಿರಸ್ಕರಿಸಿರುತ್ತಾರೆ. ಎಲ್ಲವೂ ಶೂನ್ಯವೆಂದು ಹೇಳುವವನು ಶೂನ್ಯವೆಂಬುದು ಒಪ್ಪುವ ಮಾತಲ್ಲವಾದ್ದರಿಂದಲೂ ಅವರ ಮತವು ಸರಿಯಲ್ಲ. ಅಜ್ಞರು ಆಲಸ್ಯದಿಂದ ಕರ್ಮವನ್ನು ಬಿಡಬಹುದಾದರೂ ಕ್ರಿಯಾಕಾರಕಫಲಭೇದಬುದ್ಧಿಯು ಅವರಿಗಿದ್ದೇ ಇರುತ್ತದೆ. ಆದ್ದರಿಂದ ವೇದಾಂತಪ್ರಮಾಣದಿಂದ ಯಾವನಿಗೆ ಏಕತ್ವಜ್ಞಾನವುಂಟಾಗಿರುವದೋ ಅವನೇ ನಿಜವಾಗಿ ಕರ್ಮಸಂನ್ಯಾಸಿಯಾದ ಪರಿವ್ರಾಜಕನು, ಅವನೇ ಬ್ರಹ್ಮಸಂಸ್ಥನು, ಗ್ರಹಸ್ಥರಿಗೆ ಈ ಜ್ಞಾನವುಂಟಾದರೂ ಅವರೂ ಕರ್ಮವನ್ನು ಬಿಟ್ಟು ಮೇಲೆ ಹೇಳಿದ ಪಾರಿವ್ರಾಜ್ಯವನ್ನೇ ಸ್ವೀಕರಿಸುವರು. ಅವರ ದೃಷ್ಟಿಯಿಂದ ಬ್ರಹ್ಮವೊಂದೇ ಸತ್ಯವಾಗಿರುವದರಿಂದ ಅಗ್ನಿಯ ಅಗ್ನಿತ್ವವೂ ಹೋಗಿಬಿಡುವದಾದ್ದರಿಂದ ಅಗ್ನಿಯನ್ನು ನಿಷ್ಕಾರಣವಾಗಿ ಬಿಟ್ಟದ್ದರಿಂದಾಗುವ ವೀರಹತ್ಯಾದೋಷವು ಅವರಿಗೆ ಬರಲಾರದು.

ಅಂತೂ ಪ್ರಕೃತಮಂತ್ರದಲ್ಲಿ ಏಕತ್ವಪ್ರತ್ಯಯವು ಬಂದ ಜ್ಞಾನಿಯನ್ನೇ ಬ್ರಹ್ಮಸಂಸ್ಥನೆಂದು ಕರೆದಿರುತ್ತದೆ; ಅಂಥ ಪರಿವ್ರಾಜಕನಿಗೇ ಮುಖ್ಯವಾದ ಅಮೃತತ್ವವು ಉಂಟಾಗುತ್ತದೆ- ಎಂಬುದೇ ವಾಕ್ಯಕ್ಕೆ ತಾತ್ಪರ್ಯವು. ಹೀಗೆಂಬುದು ಭಾಷ್ಯದ ಅಭಿಪ್ರಾಯವು.

★★★★★

# ವಿಜ್ಞಾನವಾದಿಗಳ ಮತ

**17-5-1937**

**ಬ್ರ॥ಶ್ರೀ॥ಪಿ. ಚಂದ್ರಶೇಖರಭಟ್ಟರು**

**ಬ್ರಹ್ಮಸೂತ್ರದ ಎರಡನೆಯ ಅಧ್ಯಾಯದ ಎರಡನೆಯ ಪಾದದ ಇಪ್ಪತ್ತೆಂಟನೆಯ ಸೂತ್ರದ ಭಾಷ್ಯ**ದಲ್ಲಿ ಬೌದ್ಧರಲ್ಲೊಬ್ಬರಾದ ವಿಜ್ಞಾನವಾದಿಗಳ ಮತವನ್ನು ಖಂಡಿಸಿರುತ್ತದೆ. ವಿಜ್ಞಾನವಾದಿಗಳ ಅಭಿಪ್ರಾಯವೇನೆಂದರೆ ವಿಜ್ಞಾನವೊಂದೇ ಪ್ರಮಾಣ, ಪ್ರಮೇಯ, ಪ್ರಮಿತಿ- ಎಂಬ ವ್ಯವಹಾರಕ್ಕೆ, ಆಸ್ಪದವಾಗಿರುವದು. ವಿಜ್ಞಾನಕ್ಕಿಂತ ಬೇರೆಯಾಗಿ ಅದರ ವಿಷಯವು ಇರುವದೇ ಇಲ್ಲ.

ವಿಜ್ಞಾನಕ್ಕಿಂತ ಬೇರೆಯಾದ ಹೊರಗಿನ ವಿಷಯಗಳು ಇಲ್ಲವೆಂಬುದಕ್ಕೆ ಅವರು ಕೊಟ್ಟಿರುವ ಆಧಾರವೇನೆಂದರೆ: 1. ಹೊರಗಿನ ವಸ್ತುವು ಪರಮಾಣುರೂಪವಾದರೆ ಅವು ಕಾಣಿಸುವದೇ ಇಲ್ಲ; ಅವು ಕಂಬವೇ ಮುಂತಾದ ಅವಯವಿಗಳ ರೂಪದಲ್ಲಿ ಕಾಣಿಸುವದಕ್ಕೂ ಕಾರಣವಿಲ್ಲ. ಹೊರಗೆ ಕಂಬವೇ ಮುಂತಾದವುಗಳೇ ಕಾಣುವವು - ಎಂದರೆ ಅವು ತಮ್ಮ ಅವಯವವಾದ ಪರಮಾಣುಗಳಿಗಿಂತ ಬೇರೆಯೊ, ಅಲ್ಲವೊ- ಎಂದು ಹೇಳುವದಕ್ಕೆ ಬರುವದಿಲ್ಲ; ಹೀಗೆಯೇ ಜಾತಿಯು ವ್ಯಕ್ತಿಗಳಿಗಿಂತ ಬೇರೆಯೊ, ಅಲ್ಲವೊ - ಎಂದು ಹೇಳುವದಕ್ಕೆ ಆಗುವದಿಲ್ಲ. ಆದ್ದರಿಂದ ಹೊರಗೆ ವಿಷಯವೆಂಬುದೇ ಇಲ್ಲ. 2. ಘಟಜ್ಞಾನ, ಪಟಜ್ಞಾನ- ಎಂಬಲ್ಲಿ ಜ್ಞಾನವು ಘಟದ ರೂಪವಾಗಿಯೂ ಪಟದ ರೂಪವಾಗಿಯೂ ತೋರಿದ ಹೊರತು ಘಟಜ್ಞಾನಪಟಜ್ಞಾನಗಳು ಆಗುವದಿಲ್ಲವೆಂದು ಎಲ್ಲರೂ ಒಪ್ಪಬೇಕಷ್ಟೆ; ಜ್ಞಾನವೇ ಹೀಗೆ ಬೇರೆಬೇರೆ ರೂಪವಾಗಿ ತೋರುವದೆಂದಿಟ್ಟುಕೊಂಡರೇ ಸಾಗುತ್ತಿರುವಾಗ ಅದಕ್ಕಿಂತ ಬೇರೆಯಾಗಿ ವಿಷಯವೂ ಇದೆ - ಎಂದು ಏತಕ್ಕೆ ಇಟ್ಟುಕೊಳ್ಳಬೇಕು? 3. ಜ್ಞಾನವೂ ವಿಷಯವೂ ಜೊತೆಯಲ್ಲಿಯೇ ಇರುವದೇ ಹೊರತು ವಿಷಯವು ತಾನೊಂದೇ ಇದ್ದದನ್ನು ಯಾರೂ ಕಂಡಿಲ್ಲ; ಆದ್ದರಿಂದಲೂ ವಿಷಯವು ಇಲ್ಲವೆನ್ನುವದು

ಸರಿ. 4. ಸ್ವಪ್ನಾದಿಗಳಲ್ಲಿ ವಿಷಯವಿಲ್ಲದಿದ್ದರೂ ಜ್ಞಾನವೇ ವಿಷಯಾಕಾರದಲ್ಲಿ ತೋರುತ್ತದೆಯೆಂಬುದು ಎಲ್ಲರಿಗೂ ಒಪ್ಪಾಗಿದೆ; ಎಚ್ಚರದಲ್ಲಿಯೂ ಹಾಗೆಯೇ ಎಂದು ಹೇಳಬಾರದೇಕೆ? 5. ಹಿಂದಿನ ಜ್ಞಾನದಿಂದ ವಾಸನೆಯಾಗಿ ಆ ವಾಸನೆಯಿಂದ ಈಗ ಮತ್ತೆ ಜ್ಞಾನವಾಗಿರುತ್ತದೆ. ಈ ಜ್ಞಾನದಿಂದ ಮತ್ತೆ ಮನಸ್ಸಿನಲ್ಲಿ ವಾಸನೆಯುಳಿದುಕೊಂಡು ಮತ್ತೊಂದು ಜ್ಞಾನವಾಗುತ್ತದೆ. ಹೀಗೆ ಅನಾದಿವಾಸನೆಯಿಂದಲೇ ವ್ಯವಹಾರವು ಸಾಗುವಾಗ ಜ್ಞಾನಕ್ಕಿಂತ ಹೊರಚ್ಚಾಗಿ ವಿಷಯವನ್ನು ಕಲ್ಪಿಸುವದು ವ್ಯರ್ಥ- ಎಂಬುದು **ವಿಜ್ಞಾನವಾದಿಯ ಮತವು.**

ವಿಜ್ಞಾನವು ಅನುಭವದಲ್ಲಿದೆ, ವಿಷಯವು ಅನುಭವದಲ್ಲಿಲ್ಲ- ಎಂಬ ಈ ವಾದವು ಸರಿಯಲ್ಲ. ಏಕೆಂದರೆ (1) ವಿಜ್ಞಾನವು ಬೇರೆ, ಅದರ ವಿಷಯವು ಬೇರೆ-ಎಂದು ಅನುಭವದಲ್ಲಿ ತೋರಿಬರುತ್ತದೆ. (2) ಹೊರಗೆ ವಿಷಯವು ತೋರಿದರೂ 'ಅದು ಅವಯವಿಯಾಗಲಾರದು, ಅವಯವವಾಗಲಾರದು'- ಎಂದು ಮುಂತಾಗಿ ಯುಕ್ತಿಯನ್ನುಪಯೋಗಿಸಿ ಅಲ್ಲಗಳೆಯುವದು ಸರಿಯಲ್ಲ. ಯಥಾಯೋಗ್ಯವಾಗಿ ಪ್ರತ್ಯಕ್ಷಾದಿ ಸರ್ವಪ್ರಮಾಣಗಳಿಂದಲೂ ತೋರುತ್ತಲಿರುವ ವಿಷಯವನ್ನು ಬರಿಯ ಯುಕ್ತಿಯಿಂದ ತಳ್ಳುವದು ಅನುಭವವಿರುದ್ಧವಾದದ್ದು. (3) ಹೊರಗೆ ವಿಷಯವಿರುವದರಿಂದಲೇ ಜ್ಞಾನವು ಬೇರೆಬೇರೆಯ ರೂಪವನ್ನು ತಳೆಯುವದೆಂದು ಹೇಳುವದು ಯುಕ್ತವಾಗಿದೆ. ಜ್ಞಾನವು ಬಗೆಬಗೆಯಾಗಿ ತೋರುವದಕ್ಕೆ ಕಾರಣವಾಗಿರುವದರಿಂದಲೇ ವಿಷಯವು ಅದರ ಜೊತೆಯಲ್ಲಿಯೇ ಕಂಡುಬರುತ್ತಿರುವದು. ಘಟಜ್ಞಾನ, ಪಟಜ್ಞಾನ- ಇಲ್ಲಿ ಜ್ಞಾನವು ಒಂದೇ ಆಗಿದೆ, ವಿಷಯವಾದ ಘಟಪಟಗಳು ಬೇರೆಯಾಗಿವೆ; ಘಟಜ್ಞಾನ, ಘಟಸ್ಮರಣ- ಇಲ್ಲಿ ವಿಷಯವಾದ ಘಟವು ಒಂದೇ ಆಗಿದೆ, ವಿಷಯಿಗಳಾದ ದರ್ಶನಸ್ಮರಣಗಳು ಬೇರೆಯಾಗಿವೆ, ಈ ರೀತಿಯಲ್ಲಿ ವಿಜ್ಞಾನವೂ ವಿಷಯವೂ ಬೇರೆಬೇರೆ ಎಂಬುದು ಅನುಭವದಲ್ಲಿ ಸ್ಪಷ್ಟವಾಗಿ ತಿಳಿಯಬರುತ್ತದೆ, (4) ವಿಜ್ಞಾನವೇ ವಿಷಯ, ವಿಜ್ಞಾನವೇ ವಿಷಯಿ- ಎಂಬ ಮತದಲ್ಲಿ ವಿಜ್ಞಾನವು ಒಂದೊಂದೇ ಕ್ಷಣವಿರುವದೆಂದೂ ಅಂಗೀಕರಿಸಿರುವದರಿಂದ ವಿಜ್ಞಾನಗಳು ಎರಡು, ವಿಜ್ಞಾನವು ಕ್ಷಣಿಕ, ವಿಜ್ಞಾನವು ಸ್ವಲಕ್ಷಣ ಎಂದು ನಿರ್ಧರಿಸುವದಕ್ಕೆ ಆಗುವದೇ ಇಲ್ಲ; ಏಕೆಂದರೆ ಕ್ಷಣದ್ವಯದವರೆಗೆ ಇರುವ ವಿಜ್ಞಾನವೇ ಆ ಮತದಲ್ಲಿಲ್ಲ. (5)

ವಿಜ್ಞಾನವೇ ವಿಷಯ, ಅದೇ ವಿಷಯಿ-ಎಂಬ ಮತದಲ್ಲಿ ಒಂದೇ ಕರ್ಮವೂ ಕರ್ತೃವೂ ಆಗಿರುವದೆಂದು ಅನುಭವವಿರುದ್ಧವಾಗಿ ಕಲ್ಪಿಸಿದ ದೋಷವೂ ಇದೆ. ವಿಜ್ಞಾನವಾದಿಗಳು ಕೊಟ್ಟ ಸ್ವಪ್ನದೃಷ್ಟಾಂತವನ್ನೂ ವಾಸನಾವಿಚಾರವನ್ನೂ ಮುಂದಿನ ಸೂತ್ರಗಳಲ್ಲಿ ಖಂಡಿಸಿರುತ್ತದೆ. ಆದ್ದರಿಂದ ವಿಜ್ಞಾನಕ್ಕಿಂತ ಬೇರೆಯಾಗಿ ವಿಷಯವು ಇದೆಯೆಂಬುದೇ ಸರಿ.

ನಿಜವಾಗಿ ನೋಡಿದರೆ ವಿಜ್ಞಾನವೂ ವಿಷಯವೇ, ಅದನ್ನು ಅರಿಯುವ ಕೂಟಸ್ಥವಾದ ಸಾಕ್ಷಿಚೈತನ್ಯವು ಬೇರೆಯಿರುತ್ತದೆ; ವಿಜ್ಞಾನವು ಹುಟ್ಟಿಹಾಳಾಗುವದನ್ನೂ ವಿಜ್ಞಾನಗಳು ಅನೇಕವೆಂಬುದನ್ನೂ ಆ ಚೈತನ್ಯವು ಅನುಭವಿಸುತ್ತದೆ. ಅದು ಯಾವಾಗಲೂ ವಿಷಯಿಯಾಗಿ ಸ್ವತಃಸಿದ್ಧವಾಗಿರುವದರಿಂದ ನಮ್ಮ ಮತದಲ್ಲಿ ಕ್ಷಣಿಕವಿಜ್ಞಾನವಾದದಲ್ಲಿರುವ ದೋಷಗಳು ಬರುವದಿಲ್ಲ.

★★★★★

# ಆ ಇವನು ಇಲ್ಲಿ ಪ್ರವೇಶಿಸಿದನು

**18-5-1937**

**ವೇ॥ಬ್ರ॥ಎಸ್.ವಿಠ್ಠಲಶಾಸ್ತ್ರಿಗಳು**

**ಬೃಹದಾರಣ್ಯಕದ ಒಂದನೆಯ ಅಧ್ಯಾಯದ ನಾಲ್ಕನೆಯ ಬ್ರಾಹ್ಮಣದ ಏಳನೆಯ ಮಂತ್ರದಲ್ಲಿರುವ 'ಸ ಏಷ ಇಹ ಪ್ರವಿಷ್ಟಃ'** ( ಆ ಇವನು ಇಲ್ಲಿ ಪ್ರವೇಶಿಸಿದನು) ಎಂಬ ವಾಕ್ಯಭಾಷ್ಯದ ಅರ್ಥವಿವರಣೆ:

ಈ ಮಂತ್ರದಲ್ಲಿ ಜಗತ್ತು ಅವ್ಯಾಕೃತವಾಗಿತ್ತೆಂತಲೂ ಆಮೇಲೆ ನಾಮರೂಪಗಳಿಂದ ವ್ಯಾಕೃತವಾಯಿತೆಂತಲೂ ಅದರಿಂದಲೇ ಈಗಲೂ ಜಗತ್ತು ಇವನ 'ಹೆಸರು ಇಂಥದ್ದು, ರೂಪವು ಇಂಥದ್ದು' ಎಂದೇ ನಾಮರೂಪಗಳಿಂದ ವ್ಯಾಕೃತವಾಗುತ್ತಿರುವದೆಂದೂ ಹೇಳಿರುತ್ತದೆ. ಇಲ್ಲಿ ಇದು ಎಂದು ಹೇಳಿರುತ್ತದೆ.

ಇಲ್ಲಿ ಇದು ಎಂದು ಹೇಳಲ್ಪಟ್ಟಿರುವ ಜಗತ್ತೆಂಬ ಮಾತಿನಲ್ಲಿ ಕ್ರಿಯೆಗಳು, ಅವುಗಳ ನಿಮಿತ್ತಗಳು, ಅವುಗಳನ್ನು ಮಾಡುವ ಕರ್ತೃಗಳು, ಇವೆಲ್ಲವನ್ನೂ ಆಳುವ ಪರಮೇಶ್ವರನು- ಇಷ್ಟೂ ಸೇರಿರುತ್ತದೆ. ಪರಮಾತ್ಮನು ಅತ್ಯಂತವಾಗಿ ಸ್ವಚ್ಛನಾಗಿದ್ದರೂ ಅವನಲ್ಲಿ ಅವಿದ್ಯೆಯಿಂದ ಕರ್ತೃಕ್ರಿಯಾಫಲಗಳು ಆರೋಪಿತವಾಗಿರುತ್ತವೆ; ಅವನೇ ಸಕಲನಾಮರೂಪಗಳಿಗೂ ಆತ್ಮನಾಗಿರುತ್ತಾನೆ, ಮತ್ತು ಸೃಷ್ಟಿಕಾಲದಲ್ಲಿ ಈ ತನ್ನ ಸ್ವರೂಪವೇ ಆಗಿರುವ ನಾಮರೂಪಗಳನ್ನು ಹೊರಗೆಡವಿ ಸಂಸಾರಿಗಳ ದೇಹರೂಪವಾಗಿರುವ ಈ ನಾಮರೂಪಗಳಲ್ಲಿ ತೋರಿಕೊಳ್ಳುತ್ತಾನೆ. ಆ ಪರಮಾತ್ಮನನ್ನು ತಿಳಿಸುವದಕ್ಕಾಗಿಯೇ ಸಕಲಶಾಸ್ತ್ರಗಳೂ ಹೊರಟಿರುತ್ತವೆ. ಅದಕ್ಕಾಗಿಯೇ 'ಆ ಪರಮಾತ್ಮನು ಇಲ್ಲಿ ಹೊಕ್ಕನು' ಎಂದು ಈ ವಾಕ್ಯದಲ್ಲಿ ಹೇಳಿರುತ್ತದೆ.

ಪರಮಾತ್ಮಸ್ವರೂಪವನ್ನು ತಿಳಿಸುವುದಕ್ಕಾಗಿಯೇ ಈ ವಾಕ್ಯವು ಬಂದಿದೆಯೆಂಬುದನ್ನು ತಿಳಿದುಕೊಳ್ಳಲಾರದವರ ದೃಷ್ಟಿಯಿಂದ ನೋಡಿದರೆ ಈ ವಾಕ್ಯದ ಅರ್ಥವು ಹೊಂದುಗಡೆಯಾಗುವದಿಲ್ಲ. ಏಕೆಂದರೆ ಸರ್ವವ್ಯಾಪಿಯಾಗಿ ರುವ ಪರಮಾತ್ಮನು ಜಗತ್ತನ್ನು ಸೃಷ್ಟಿಸಿ ಅದರೊಳಗೆ ಹೊಕ್ಕನು- ಎಂದು ಕಲ್ಪಿಸುವದು ಯುಕ್ತವಾಗುವದೇ ಇಲ್ಲ.

ಪರಮಾತ್ಮನು ಜಗತ್ತಿನಲ್ಲಿ ತೆಂಗಿನಚಿಪ್ಪಿನಲ್ಲಿ ಎಳನೀರು ಹೊಕ್ಕಂತೆ, ಎಂದರೆ ಅಲ್ಲಿಯೇ ಇದ್ದವನು ರೂಪಾಂತರವಾಗಿ ಕಾಣಿಸಿಕೊಳ್ಳುತ್ತಾನೆ- ಎಂದು ಕಲ್ಪಿಸುವದಕ್ಕೆ ಆಗುವದಿಲ್ಲ; ಏಕೆಂದರೆ ಅವನೇ ತನ್ನ ರೂಪದಿಂದ ಹೊಕ್ಕನೆಂದು ಶ್ರುತಿಯು ಹೇಳುತ್ತದೆ. ಒಂದು ಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳವನ್ನು ಸೇರುವಂತೆ ಹೊಕ್ಕನೆಂಬುದಂತೂ ಹೊಂದುವಹಾಗೆಯೇ ಇಲ್ಲ. ಅವನು ಪ್ರತಿಬಿಂಬರೂಪದಿಂದ ಜಗತ್ತಿನಲ್ಲಿ ಹೊಕ್ಕನೆಂದು ಹೇಳೋಣವೆಂದರೆ ಪ್ರತಿಫಲಿಸುವ ಸ್ಥಳಕ್ಕೆ ಬಿಂಬವು ದೂರವಾಗಿರುವಂತೆ ಜಗತ್ತಿಗೆ ದೂರವಾಗಿ ಪರಮಾತ್ಮನು ಇರಬೇಕಾಗುವದು. ದ್ರವ್ಯವು ಹುಟ್ಟಿದ ಒಂದು ಕ್ಷಣವಾದ ಮೇಲೆ ಅದರಲ್ಲಿ ಗುಣವು ಸೇರಿಕೊಳ್ಳುವಂತೆ ಸೇರಿಕೊಳ್ಳುವನೆನ್ನುವದೂ ಒಪ್ಪುವ ಮಾತಲ್ಲ; ಏಕೆಂದರೆ ಗುಣವು ದ್ರವ್ಯವನ್ನು ಆಶ್ರಯಿಸಿರುವಂತೆ ಆತ್ಮನು ನಾಮರೂಪಗಳನ್ನು ಆಶ್ರಯಿಸಿಕೊಂಡಿರುವದಿಲ್ಲ. ಹಣ್ಣಿನಲ್ಲಿ ಬೀಜಗಳಂತೆ ಸೇರಿಕೊಂಡನು ಎಂದು ಹೇಳಿದರೆ ಆತ್ಮನು

ಸಾವಯವನೆಂದೂ ಬೆಳೆಯುವದು, ಸವೆಯುವನು-ಮುಂತಾದ ಸ್ವಭಾವಗಳು ಅವನಲ್ಲಿರುವವೆಂದೂ ಹೇಳಿದಂತಾಗುವದು. ಪರಮಾತ್ಮನು ತಾನೇ ಪ್ರವೇಶಮಾಡಿಲ್ಲ, ಜೀವರೂಪದಿಂದ ಪ್ರವೇಶಿಸಿರುತ್ತಾನೆ- ಎಂದರೆ ಶ್ರುತಿಗೆ ವಿರೋಧವಾಗುತ್ತದೆ; ಪರಮಾತ್ಮನು ಸಂಸಾರಿಯೆಂದೂ ಅನೇಕರೆಂದೂ ಒಪ್ಪಬೇಕಾಗುತ್ತದೆ. ಇದೆಲ್ಲ ಅನಿಷ್ಟವಾಗಿದೆ.

ಜೀವನು ಸಂಸಾರಿಯಾಗಿ ಸುಖದುಃಖಗಳನ್ನು ಅನುಭವಿಸುತ್ತಿರುವದು ಪ್ರತ್ಯಕ್ಷವಾಗಿರುವುದರಿಂದ ಪರಮಾತ್ಮನೇ ಈ ಶರೀರದಲ್ಲಿ ಪ್ರವೇಶಿಸಿರುವನೆಂಬುದು ಸರಿಯಲ್ಲ- ಎಂದು ಪೂರ್ವಪಕ್ಷಿಯು ಹೇಳಬಹುದು. ಆದರೆ ಸುಖದುಃ ಖಗಳು ಅಂತಃಕರಣದಲ್ಲಿರುವದು ಕಂಡಿದೆಯೇ ಹೊರತು ಆತ್ಮನಲ್ಲಿರುವದು ಕಂಡಿಲ್ಲ; ಆತ್ಮನು ಪ್ರತ್ಯಕ್ಷಕ್ಕೆ ವಿಷಯನೂ ಅಲ್ಲ, 'ಆತ್ಮನ ಕಾಮಕ್ಕಾಗಿ ಸರ್ವವೂ ಪ್ರಿಯವಾಗಿರುತ್ತದೆ' ಎಂದು ಶ್ರುತಿಯು ಹೇಳುವದರಿಂದ ಆತ್ಮನಲ್ಲಿ ಕಾಮವೆಂಬ ಸಂಸಾರಧರ್ಮವಿರಬೇಕಲ್ಲವೆ?- ಎಂದರೆ ಶ್ರುತಿಯು ಆತ್ಮನ ಪರಮಾರ್ಥರೂಪವನ್ನು ಕುರಿತು ಹೇಳುವದಿಲ್ಲ. ಪ್ರತ್ಯಕ್ಷದಂತೆ ಅನುಮಾನದಿಂದಲೂ ಆತ್ಮನು ಸಂಸಾರಿಯೆಂದು ಸಿದ್ಧವಾಗುವದಿಲ್ಲ, ಏಕೆಂದರೆ ತಾರ್ಕಿಕರ ಮತದಲ್ಲಿ ಆತ್ಮನು ನಿತ್ಯಾನುಮೇಯನಾಗಿರುವದರಿಂದ ಪ್ರತ್ಯಕ್ಷವಾಗಿ ರುವ ಸುಖದುಃಖಗಳು ಅವನ ಧರ್ಮವಾಗಲಾರವು. ಇದೂ ಅಲ್ಲದೆ ಸುಖದುಃ ಖದಂತೆ ಆತ್ಮನೂ ವಿಷಯವೇ ಆದರೆ ವಿಷಯಿಯೇ ಇಲ್ಲವಾಗುತ್ತದೆ; ಆತ್ಮನಲ್ಲಿ ಅಂಶಗಳಿಲ್ಲವಾದ್ದರಿಂದ ಅವನು ವಿಷಯಿಯೂ ವಿಷಯವೂ ಆಗಿರುತ್ತಾನೆಂದು ಹೇಳುವದು ಯುಕ್ತವಾಗುವದಿಲ್ಲ. ಆತ್ಮಮನಃಸಂಯೋಗದಿಂದ ಸುಖದುಃ ಖಗಳುಂಟಾಗುವವೆಂಬ ತಾರ್ಕಿಕರ ಮತದಲ್ಲಿ ಸಂಯೋಗಕ್ಕೆ ಸಂಬಂಧಿಯಾದ ಆತ್ಮನು ಸಾವಯವನು, ವಿಕಾರಿಯು, ಅನಿತ್ಯನು- ಎಂದಾಗುತ್ತದೆ. ನಿತ್ಯನಾದ ಆತ್ಮನಲ್ಲಿ ಅನಿತ್ಯವಾದ ಸುಖದುಃಖಾದಿ ಧರ್ಮಗಳಿರಲೇ ಆರವು. ಆಕಾಶದಲ್ಲಿ ಶಬ್ದವಿರುವದಾದರೂ ಆಕಾಶವೂ ನಿಜವಾಗಿ ಅನಿತ್ಯವೇ ಆಗಿರುತ್ತದೆಯಾದ್ದರಿಂದ ನಿತ್ಯದಲ್ಲಿ ಅನಿತ್ಯಧರ್ಮವಿರಬಹುದೆನ್ನುವದಕ್ಕೆ ಇದು ದೃಷ್ಟಾಂತವಾಗುವದಿಲ್ಲ. ಆತ್ಮನು ವಿಕಾರಿಯಾದರೂ ನಿತ್ಯನಾಗಿರಬಹುದು, ಸಾವಯವನಾದರೂ ನಿತ್ಯನಾಗಿರಬಹುದು- ಎಂಬುದು ದೃಷ್ಟವಿರುದ್ಧವಾಗಿದೆ. ಆದ್ದರಿಂದ ಆತ್ಮನಲ್ಲಿ

ಸಂಸಾರವಿರುವದೆಂಬುದು ಪ್ರತ್ಯಕ್ಷದಿಂದಾಗಲಿ ಅನುಮಾನದಿಂದಾಗಲಿ ಸಿದ್ಧವಾಗುವದಿಲ್ಲ. ಆದ್ದರಿಂದ ಪರಮಾತ್ಮನೇ ಜಗತ್ತಿನಲ್ಲಿ ಪ್ರವೇಶಿಸಿರುವನೆಂಬ ವಾಕ್ಯವು ಪ್ರತ್ಯಕ್ಷಾದಿವಿರುದ್ಧವಲ್ಲ.

ಹಾಗಾದರೆ ಸಂಸಾರಿಯೇ ಇಲ್ಲವೆಂದಾಗಿ ಶಾಸ್ತ್ರೋಪದೇಶವೂ ವ್ಯರ್ಥವಾಗುವದಿಲ್ಲವೆ?- ಎಂದರೆ ಹಾಗಲ್ಲ. ನಿಜವಾಗಿ ನಿರ್ದುಃಖಿಯಾಗಿರುವ ಆತ್ಮನಲ್ಲಿ ಸಂಸಾರಿತ್ವವು ಕಲ್ಪಿತವಾಗಿರುತ್ತದೆ; ಆ ಕಲ್ಪಿತಸಂಸಾರದುಃಖವನ್ನು ಕಳೆಯುವದಕ್ಕಾಗಿ ಶಾಸ್ತ್ರವು ಹೊರಟಿರುತ್ತದೆ. ಆದ್ದರಿಂದ ಶಾಸ್ತ್ರವು ವ್ಯರ್ಥವಲ್ಲ.

ಆದ್ದರಿಂದ 'ಆತ್ಮನು ಇಲ್ಲಿ ಪ್ರವೇಶಮಾಡಿದನು' ಎಂಬ ವಾಕ್ಯಕ್ಕೆ ನಿಜವಾಗಿಯೂ ಆತ್ಮನು ಪ್ರವೇಶಮಾಡಿರುವನೆಂದೇನೂ ಅರ್ಥವಲ್ಲ. ಜಗತ್ತು ಸೃಷ್ಟಿಯಾಗುವದಕ್ಕಿಂತ ಮುಂಚೆ ಆತ್ಮನು ತೋರುವದಿಲ್ಲ; ಜಗತ್ತು ಸೃಷ್ಟಿಯಾದಮೇಲೆ ಅವನು ಅಂತಃಕರಣದಲ್ಲಿ ತೋರಿಕೊಳ್ಳುತ್ತಾನೆ. ಸೂರ್ಯಾದಿಗಳ ಪ್ರತಿಬಿಂಬವು ನೀರಿನಲ್ಲಿ ತೋರುವಂತೆ ಅಂತಃಕರಣದಲ್ಲಿ ಆತ್ಮನು ತೋರಿಕೊಳ್ಳುತ್ತಾನೆ- ಎಂಬುದೇ ಪ್ರವೇಶ ಶ್ರುತಿಗೆ ಅರ್ಥವು.

★★★★★

## ಜ್ಞಾನಿಯು ಕರ್ಮರಹಿತನೆ?

**19-5-1937**

**ವೇ।।ಬ್ರ।।ಪಿ.ಚಂದ್ರಶೇಖರಭಟ್ಟರು**

ಗೀತೆಯ ಎರಡನೆಯ ಅಧ್ಯಾಯದ ಇಪ್ಪತ್ತೊಂದನೆಯ ಶ್ಲೋಕದ ಭಾಷ್ಯಭಾಗದ ಅರ್ಥ ವಿವರಣೆ:

**ವೇದಾವಿನಾಶಿನಂ ನಿತ್ಯಂ ಯ ಏನಮಜಮವ್ಯಯಮ್ ।**
**ಕಥಂ ಸ ಪುರುಷಃ ಪಾರ್ಥ ಕಂ ಘಾತಯತಿ ಹನ್ತಿ ಕಮ್ ।।**

ಈ ಶ್ಲೋಕದಲ್ಲಿ 'ಆತ್ಮನು ನಿತ್ಯನೂ ಜನ್ಮರಹಿತನೂ ಅವ್ಯಯನೂ ಆಗಿರುವನೆಂಬುದನ್ನು ಕಂಡುಕೊಂಡ ಜ್ಞಾನಿಯು ಕೊಲ್ಲುವದೂ ಇಲ್ಲ, ಕೊಲ್ಲಿಸುವದೂ ಇಲ್ಲ'- ಎಂದು ಹೇಳಿದೆಯಷ್ಟೆ. ಆತ್ಮನು ವಿಕಾರವಿಲ್ಲದವನೆಂದು ತಿಳಿದುಕೊಂಡ ಮಾತ್ರದಿಂದ ಜ್ಞಾನಿಯು ಏತಕ್ಕೆ ಕರ್ಮರಹಿತನಾಗಬೇಕು?- ಎಂಬುದು ವಿಚಾರದ ವಿಷಯವು.

ಜ್ಞಾನಿಯು ಬೇರೆ, ಆತ್ಮನು ಬೇರೆ- ಹೀಗಿದ್ದರೆ ಮೇಲಿನ ಆಕ್ಷೇಪವು ಸರಿಯಾಗುತ್ತಿತ್ತು. ಆದರೆ ನಿಜಸ್ಥಿತಿ ಹೀಗಿಲ್ಲ, ಜ್ಞಾನಿಯೆಂದರೆ ಆತ್ಮನೇ; ಏಕೆಂದರೆ ದೇಹಾದಿಗಳು ಜ್ಞಾನಿಯೆನಿಸುವದಕ್ಕೆ ತಕ್ಕವುಗಳಲ್ಲ. ಸರಿಯಾಗಿ ನೋಡಿದರೆ ಆತ್ಮನನ್ನು ಜ್ಞಾನಿಯೆಂದಾಗಲಿ ಅಜ್ಞಾನಿಯೆಂದಾಗಲಿ ಹೇಳುವದಕ್ಕೆ ಬರುವದಿಲ್ಲವಾದರೂ ಅವಿದ್ಯಾರೂಪವಾದ ಬುದ್ಧಿವೃತ್ತಿಯ ಉಪಾಧಿಯಿಂದ ಆತ್ಮನೇ ವ್ಯವಹಾರದಲ್ಲಿ ಅಜ್ಞಾನಿಯೆನಿಸಿಕೊಳ್ಳುತ್ತಾನೆ ; ವಿದ್ಯಾರೂಪವಾದ ವೃತ್ತಿಯ ಉಪಾಧಿಯಿಂದ ಜ್ಞಾನಿಯೆನಿಸಿಕೊಳ್ಳುತ್ತಾನೆ. ಆದಕಾರಣ ಈ ದೃಷ್ಟಿಯಿಂದ ಜ್ಞಾನಿಗೆ ಕರ್ಮವು ಹೊಂದುವದಿಲ್ಲವೆಂದು ಹೇಳಬಹುದಾಗಿರುತ್ತದೆ.

ಕರ್ಮದ ಸ್ವರೂಪವನ್ನು ತಿಳಿದುಕೊಂಡಮೇಲೂ ಅದನ್ನು ಮಾಡುವದೆಂಬ ಕ್ರಿಯೆಯು ಹೇಗೆ ಉಳಿದುಕೊಳ್ಳುವದೋ ಹಾಗೆ 'ನಿರ್ವಿಕಾರನಾದ ಆತ್ಮನೇ ನಾನು' ಎಂಬ ಜ್ಞಾನವು ಉಂಟಾದ ಮೇಲೆ ಮಾಡತಕ್ಕದ್ದು ಏನೂ ಉಳಿದಿರುವದಿಲ್ಲ. ಆದ್ದರಿಂದಲೇ ಜ್ಞಾನಯೋಗವನ್ನು ಸಾಂಖ್ಯರಿಗೂ ಕರ್ಮಯೋಗವನ್ನು ಯೋಗಿಗಳಿಗೂ ಭಗವಂತನು ವಿಂಗಡಿಸಿ ಹೇಳಿರುತ್ತಾನೆ. ನಿರ್ವಿಕಾರಾತ್ಮಜ್ಞಾನವು ಯಾರಿಗೂ ಉಂಟಾಗುವದಿಲ್ಲ, ಆತ್ಮನನ್ನು ತಿಳಿಯಪಡಿಸುವ ಕರಣವೇ ಇಲ್ಲ-ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಇದು ಸರಿಯಲ್ಲ. ಏಕೆಂದರೆ ಶಾಸ್ತ್ರವು ನಿರ್ವಿಕಾರಾತ್ಮನನ್ನು ಬೋಧಿಸುವದಕ್ಕೆ ಹೊರಟಿರುತ್ತದೆ ; ಅದನ್ನು ಅಪ್ರಮಾಣವೆನ್ನುವದಕ್ಕೆ ಯಾವ ಕಾರಣವೂ ಇಲ್ಲ. ಶಾಸ್ತ್ರಾಚಾರ್ಯರಿಂದಲೂ ಶಮದಮಾದಿಗಳಿಂದಲೂ ಸಂಸ್ಕಾರವನ್ನು ಹೊಂದಿದ ಮನಸ್ಸು ಆತ್ಮಸ್ವರೂಪವನ್ನು ತಿಳಿಸುವ ಕರಣವಾಗಿರುತ್ತದೆ. ಹೀಗೆ ವಚನವೂ ಕರಣವೂ ಇರುವದರಿಂದ ಆತ್ಮಜ್ಞಾನವಾಗುವದಿಲ್ಲವೆಂದು ಹೇಳುವದು ಹೆಚ್ಚಿನ ಮಾತು. ಇಂಥ ಜ್ಞಾನಿಗೆ ಕರ್ಮವಿರುವದಿಲ್ಲವಾದ್ದರಿಂದ ಅವನಿಗೆ ಸರ್ವಕರ್ಮಸಂನ್ಯಾಸಪೂರ್ವಕವಾದ ಜ್ಞಾನದಲ್ಲಿಯೇ ಅಧಿಕಾರವೆಂದು ಏರ್ಪಡುತ್ತದೆ.

ಆದ್ದರಿಂದಲೇ ಮುಂದೆ ಐದನೆಯ ಅಧ್ಯಾಯದಲ್ಲಿ 'ಸರ್ವಕರ್ಮಾಣಿಮನಸಾ' ಎಂಬ ಶ್ಲೋಕದಲ್ಲಿ ಜ್ಞಾನಿಗೆ ಸರ್ವಕರ್ಮ ಸಂನ್ಯಾಸವನ್ನು ಹೇಳಿರುತ್ತದೆ. 'ಇಲ್ಲಿ' ಸರ್ವಕರ್ಮಗಳೆಂದರೆ 'ಮಾನಸ ಕರ್ಮಗಳೆಲ್ಲವೆಂದರ್ಥ; ಅಥವಾ ಶಾಸ್ತ್ರೀಯಕರ್ಮಗಳು ಹೊರತು ಮಿಕ್ಕ ಕರ್ಮಗಳೆಲ್ಲವೆಂದರ್ಥ'' ಎಂದು ಕೆಲವರು ಶ್ಲೋಕದ ಅಭಿಪ್ರಾಯವನ್ನು ತಿರುಗಿಸುವದಕ್ಕೆ ಹೋಗುತ್ತಾರೆ. ಇದು ಸರಿಯಲ್ಲ. ಏಕೆಂದರೆ 'ಎಲ್ಲಾ ಕರ್ಮಗಳನ್ನೂ' ಎಂಬಲ್ಲಿ 'ಎಲ್ಲಾ' ಎಂಬ ಮಾತಿನ ಅರ್ಥವನ್ನು ಕುಗ್ಗಿಸುವದಕ್ಕೆ ಕಾರಣವಿಲ್ಲ; ವಾಕ್ಕಾಯಕರ್ಮಗಳೂ ಮಾನಸಕರ್ಮಗಳೂ ಬೇಕೇಬೇಕಾಗುವದರಿಂದ ಮಾನಸಕರ್ಮವನ್ನು ಬಿಟ್ಟರೆ ಮತ್ತೆ ಯಾವ ಕರ್ಮವೂ ಉಳಿಯುವದೂ ಇಲ್ಲ. 'ನೈವಕುರ್ವನ್, ನಕಾರಯನ್''-ಏನನ್ನೂ ಮಾಡದೆಯೇ, ಮಾಡಿಸದೆಯೇ- ಎಂದು ಸಾವಧಾರಣವಾಗಿ ಹೇಳಿರುವ ವಚನಕ್ಕೂ ಅವರ ಅಭಿಪ್ರಾಯವು ವಿರುದ್ಧವಾಗುತ್ತದೆ. ಈ ಶ್ಲೋಕದಲ್ಲಿ ಹೇಳಿದ ಸರ್ವಕರ್ಮಸಂನ್ಯಾಸವು ಸಾಯುವವನಿಗೆ ಎಂದು ಹೇಳುವದಕ್ಕಾಗುವದಿಲ್ಲ; (ನವದ್ವಾರೇ ಪುರೇ ದೇಹೀ- ಆಸ್ತೇ) ಒಂಬತ್ತುದ್ವಾರಗಳ ಪುರದಲ್ಲಿ ದೇಹಿಯು ಇರುತ್ತಾನೆ' ಎಂಬ ವಚನಕ್ಕೆ ಇದು ವಿರುದ್ಧವಾಗುವದು. ''ನವದ್ವಾರಪುರವಾದ ದೇಹದಲ್ಲಿಟ್ಟು ಏನೂ ಮಾಡದೆ ಇರುತ್ತಾನೆ'' **ನವದ್ವಾರೇ ಪುರೇ ಸಂನ್ಯಸ್ಯ..** ಎಂದು ಶ್ಲೋಕವನ್ನು ತಿರಿಚಿ ಅರ್ಥ ಮಾಡುವದೂ ಸರಿಯಲ್ಲ, ಏಕೆಂದರೆ ಆತ್ಮನು ಯಾವಾಗಲೂ ಅವಿಕ್ರಿಯನೆಂಬ ಗೀತಾತಾತ್ಪರ್ಯಕ್ಕೆ ಅದು ವಿರುದ್ಧವಾಗುವದು; ಮತ್ತು 'ಇರುತ್ತಾನೆ' ಎಂಬ ಕ್ರಿಯೆಗೆ ಎಲ್ಲಿ?- ಎಂಬ ಆಕಾಂಕ್ಷೆಯಿರುವಂತೆ 'ಸಂನ್ಯಾಸವನ್ನು ಮಾಡಿ' ಎಂಬುದಕ್ಕೆ ಎಲ್ಲಿ?- ಎಂಬ ಆಕಾಂಕ್ಷೆಯಿರುವದಿಲ್ಲ. ಇದಲ್ಲದೆ 'ಸಂನ್ಯಾಸ'ವೆಂಬ ಶಬ್ದಕ್ಕೆ ಬಿಡುವದೆಂಬ ಅರ್ಥವಿದೆಯೇ ಹೊರತು ಇಡುವದೆಂಬರ್ಥವೇನೂ ಇರುವದಿಲ್ಲ. ಆದ್ದರಿಂದ ಗೀತಾಶಾಸ್ತ್ರದ ಪ್ರಕಾರ ಆತ್ಮಜ್ಞಾನಿಗೆ ಸರ್ವಕರ್ಮ ಸಂನ್ಯಾಸದಲ್ಲಿಯೇ ಅಧಿಕಾರವು .

★★★★★

# ಬ್ರಹ್ಮಪ್ರಾಪ್ತಿ

**20-5-1937**

**ಶ್ರೀಶ್ರೀಗಳವರು**

**ಬ್ರಹ್ಮಸೂತ್ರದ ನಾಲ್ಕನೆಯ ಅಧ್ಯಾಯದ ಮೂರನೆಯ ಪಾದದ ಹದಿನಾಲ್ಕನೆಯ ಸೂತ್ರದ ಭಾಷ್ಯದ** ಅರ್ಥವಿವರಣೆ: ಛಾಂದೋಗ್ಯದ ನಾಲ್ಕನೆಯ ಅಧ್ಯಾಯದಲ್ಲಿ **''ಸ ಏವಾನ್ ಬ್ರಹ್ಮಗಮಯತಿ''(ಛಾ.4-15-6)** (ಆತನು ಇವರನ್ನು ಕರೆದುಕೊಂಡುಹೋಗಿ ಬ್ರಹ್ಮವನ್ನು ಸೇರಿಸುತ್ತಾನೆ) ಎಂಬ ವಾಕ್ಯವು ಬಂದಿದೆ. ಉಪಾಸಕರು ಅರ್ಚಿರಾದಿಮಾರ್ಗದಿಂದ ವಿದ್ಯುಲ್ಲೋಕಕ್ಕೆ ಹೋದಮೇಲೆ ಅಲ್ಲಿಂದ ಒಬ್ಬ ಅಮಾನವ ಪುರುಷನು ಅವರನ್ನು ಬ್ರಹ್ಮಲೋಕಕ್ಕೆ ಕರೆದುಕೊಂಡು ಹೋಗುತ್ತಾನೆಂದು ಆ ವಾಕ್ಯದ ತಾತ್ಪರ್ಯವು. ಇಲ್ಲಿ ಉಪಾಸಕನು ಸೇರುವನೆಂದು ಹೇಳಿರುವದು ಮುಖ್ಯಬ್ರಹ್ಮವಲ್ಲ ; ಏಕೆಂದರೆ ಎಲ್ಲೆಲ್ಲಿಯೂ ಇರುವ ಬ್ರಹ್ಮವನ್ನು ಸೇರುವದಕ್ಕೆ ಒಂದಾನೊಂದು ಸ್ಥಳಕ್ಕೆ ಹೋಗಬೇಕಾದ ಆವಶ್ಯಕತೆಯೇನೂ ಇರುವದಿಲ್ಲ. ಆದ್ದರಿಂದ ಸತ್ಯಲೋಕದಲ್ಲಿರುವ ಕಾರ್ಯಬ್ರಹ್ಮದ ಬಳಿಗೇ ಉಪಾಸಕನು ಹೋಗುತ್ತಾನೆ - ಎಂಬುದೇ ವಾಕ್ಯಾರ್ಥವೆಂದು **ಬಾದರಿ**ಯೆಂಬ ಆಚಾರ್ಯರ ಮತವು. ಭಾಷ್ಯಕಾರರೂ ಹೀಗೆಂದೇ ಅಭಿಪ್ರಾಯ ಪಟ್ಟಿರುತ್ತಾರೆ.

ಆದರೆ ಬ್ರಹ್ಮವೆಂಬ ಶಬ್ದವನ್ನು ಮುಖ್ಯಾರ್ಥದಲ್ಲಿಯೇ ಇಟ್ಟುಕೊಳ್ಳುವದು ಯುಕ್ತವೆಂದು ಜೈಮಿನಿಗಳ ಮತವು. ಈ ಮತವನ್ನೇ ಸಿದ್ಧಾಂತವೆಂತ ಹಿಂದಿನ ವೃತ್ತಿಕಾರರು ಅಂಗೀಕರಿಸಿದ್ದರು. ಆ ಮತದಲ್ಲಿರುವ ದೋಷಗಳನ್ನು ಪ್ರಕೃತ ಭಾಷ್ಯದಲ್ಲಿ ಭಗವತ್ಪಾದರವರು ಹೊರಕ್ಕೆ ತಂದಿರುತ್ತಾರೆ. ಬ್ರಹ್ಮವು ಸರ್ವಗತವಾಗಿ ರುವದರಿಂದ ಅದನ್ನು ಪಡೆಯುವದಕ್ಕೆ ಯಾವದಾದರೊಂದು ಸ್ಥಳಕ್ಕೆ ಹೋಗಬೇಕಾದ ಅವಶ್ಯಕತೆಯಿರುವದಿಲ್ಲ. ಭೂಮಿಯಲ್ಲಿಯೇ ಇರುವವನು ಅದರ ಮತ್ತೊಂದು ಭಾಗಕ್ಕೆ ಹೋಗುವನೆಂದು ಹೇಳಬಹುದು; ಒಬ್ಬ ಮನುಷ್ಯನು ತನ್ನ ಅವಸ್ಥೆಯೇ ಆಗಿರುವ ಬಾಲ್ಯವನ್ನು ಬಿಟ್ಟು ತನ್ನ ಅವಸ್ಥೆಯೇ

ಆದ ವಾರ್ಧಕವನ್ನು ಸೇರಬಹುದು. ಆದರೆ ಪರಮಾತ್ಮನಲ್ಲಿ ದೇಶಕಾಲಾದಿ ಕೃತವಾದ ವಿಶೇಷಗಳು ಯಾವವೂ ಇಲ್ಲದ್ದರಿಂದ ಆ ರೀತಿಯಲ್ಲಿ ಅವನು ಪ್ರಾಪ್ಯನಾಗಲಾರನು. ಬ್ರಹ್ಮವು ಸೃಷ್ಟಿಸ್ಥಿತಿಲಯಕ್ಕೆ ಕಾರಣವಾಗಿರುವದರಿಂದ ಅದರಲ್ಲಿ ವಿಧವಿಧವಾದ ಶಕ್ತಿಗಳಿವೆ; ಆದ್ದರಿಂದ ಅದು ನಿತ್ಯಪ್ರಾಪ್ತವಾಗಿಯೇ ಇದ್ದು ಪ್ರಾಪ್ಯವೂ ಆಗಬಹುದಲ್ಲ!- ಎಂದು ಶಂಕಿಸಬಾರದು. ಏಕೆಂದರೆ ಈ ಅಭಿಪ್ರಾಯವು 'ಬ್ರಹ್ಮಜ್ಞಾನಿಯ ಪ್ರಾಣಗಳು ಮತ್ತೆಲ್ಲಿಗೂ ಹೋಗುವದಿಲ್ಲ' ಎಂದು ಸಾರುತ್ತಿರುವ ಶ್ರುತಿಗೆ ವಿರುದ್ಧವಾಗಿರುತ್ತದೆ. ಸೃಷ್ಟ್ಯಾದಿವಾಕ್ಯಗಳು ಸೃಷ್ಟ್ಯಾದಿಗಳು ಪರಮಾರ್ಥವೆಂದು ಹೇಳುವದಕ್ಕೆ ಬಂದಿರುವದಿಲ್ಲ; ಆತ್ಮೈಕತ್ವವನ್ನು ಹೇಳುವದಕ್ಕಾಗಿಯೇ ಬಂದಿರುತ್ತವೆ. ಆದ್ದರಿಂದ ಆತ್ಮನಲ್ಲಿ ಸರ್ವಶಕ್ತಿಗಳೂ ಇವೆಯೆಂಬುದು ಪರಮಾರ್ಥವಲ್ಲ; ಬ್ರಹ್ಮವು ನಿರ್ವಿಶೇಷವೂ ನಿತ್ಯಪ್ರಾಪ್ತವೂ ಆಗಿದೆಯೆಂಬುದೇ ಪರಮಾರ್ಥವು.

ಜೀವನು ಲೋಕಾಂತರಕ್ಕಾಗಿ ಹೋಗಿ ಬ್ರಹ್ಮವನ್ನು ಸೇರುವನೆಂಬ ಪಕ್ಷವು ಯುಕ್ತಿಗೆ ವಿರುದ್ಧವಾಗಿದೆ. ಏಕೆಂದರೆ ಜೀವನು ಬ್ರಹ್ಮದ ಅವಯವವಲ್ಲ 'ವಿಕಾರವೂ ಅಲ್ಲ; ಹಾಗೆಂದು ಹೇಳುವದು ಯುಕ್ತಿಗೂ ಶ್ರುತಿಗೂ ವಿರುದ್ಧ ಒಂದುವೇಳೆ ಹಾಗೆಂದು ಒಪ್ಪಿದರೂ ಅವಯವವು ನಿತ್ಯವಾಗಿ ತನ್ನ ಅವಯವಿಯಲ್ಲಿಯೂ ಕಾರ್ಯವು ಕಾರಣದಲ್ಲಿಯೂ ಇದ್ದುಕೊಂಡೇ ಇರುವದರಿಂದ ಮತ್ತೆ ಜೀವನು ಬ್ರಹ್ಮವನ್ನು ಪಡೆಯಬೇಕೆಂಬುದು ಸಂಗತವಾಗುವದಿಲ್ಲ. ಜೀವನು ಬ್ರಹ್ಮಕ್ಕಿಂತ ಬೇರೆಯೇ ಎಂದು ಹೇಳಿದರೆ ಅವನ ಪರಿಮಾಣವು ಯಾವದು?- ಎಂಬ ಪ್ರಶ್ನೆಯು ಮುಂದಕ್ಕೆ ಬರುವದು. ಅವನು ವಿಭುವಾದರೆ ಎಲ್ಲಿಗೆ ಹೋಗುವದೂ ಆಗುವದಿಲ್ಲ; ಮಧ್ಯಮ ಪರಿಮಾಣದವನಾದರೆ ಅನಿತ್ಯನಾಗುವನು; ಅಣುವಾದರೆ ಶರೀರದಲ್ಲೆಲ್ಲ ಆಗುವ ಅನುಭವವು ಅವನಿಗೆ ತೋರಬಾರದಾಗುವದು. ಜೀವನು ಬ್ರಹ್ಮಕ್ಕಿಂತ ಬೇರೆಯೇ ಎಂಬ ಪಕ್ಷವು 'ತತ್ತ್ವಮಸಿ' (ಅದೇ ನೀನು) ಎಂಬುದೇ ಮುಂತಾದ ಮಹಾವಾಕ್ಯಗಳಿಗೆ ವಿರುದ್ಧವೂ ಆಗಿರುತ್ತದೆ. ಆದ್ದರಿಂದ ಪರಬ್ರಹ್ಮವನ್ನು ಪಡೆಯುವದಕ್ಕೆ ಎಲ್ಲಿಗೂ ಹೋಗಬೇಕಾದದ್ದಿಲ್ಲ; ಜ್ಞಾನದಿಂದ ನಿತ್ಯಪ್ರಾಪ್ತವಾಗಿರುವ ತನ್ನ ಸ್ವರೂಪವಾದ ಬ್ರಹ್ಮದಲ್ಲಿ ನಿಂತುಕೊಳ್ಳುವದೇ ಬ್ರಹ್ಮಪ್ರಾಪ್ತಿ ಎಂಬುದೇ ಸಿದ್ಧಾಂತವು.

ಸ್ವರೂಪಪ್ರಾಪ್ತಿಗೆ ಜ್ಞಾನವೇನೂ ಬೇಕಿಲ್ಲವೆಂದೂ ಕಾಮ್ಯನಿಷಿದ್ಧ ಕರ್ಮಗಳನ್ನು ಬಿಟ್ಟು ನಿತ್ಯಕರ್ಮಗಳನ್ನು ಮಾಡುತ್ತಿರುವದರಿಂದಲೇ ಅದು ಸಿದ್ಧಿಸುವದೆಂದೂ ಕೆಲವರು ಅಭಿಪ್ರಾಯಪಟ್ಟಿದ್ದರು. ಕಾಮ್ಯಕರ್ಮಗಳಿಂದ ಒಳ್ಳೆಯ ಫಲವೂ ನಿಷಿದ್ಧಕರ್ಮಗಳಿಂದ ಕೆಟ್ಟ ಫಲವೂ ಆಗುವದು ; ಅವುಗಳನ್ನು ಮಾಡದೆ ಬಿಟ್ಟರೆ ಆ ಫಲಗಳನ್ನು ಅನುಭವಿಸಬೇಕಾದದ್ದು ಇಲ್ಲದೆ ಹೋಗುವದು. ನಿತ್ಯ ಕರ್ಮಗಳನ್ನು ಮಾಡುತ್ತಿರುವದರಿಂದ ಪ್ರತ್ಯವಾಯದೋಷವು ತಪ್ಪುತ್ತದೆ. ಹೀಗೆ ಮಾಡುತ್ತಿದ್ದರೆ ಈ ಶರೀರವು ಬಿದ್ದು ಹೋದಮೇಲೆ ಮತ್ತೆ ಶರೀರಗ್ರಹಣಕ್ಕೆ ಕಾರಣವೇ ಇಲ್ಲದೆ ಹೋಗುವದರಿಂದ ಸ್ವಸ್ವರೂಪಸ್ಥಿತಿಯೆಂಬ ಮೋಕ್ಷವು ತಾನೇ ಸಿದ್ಧವಾಗುತ್ತದೆ- ಎಂದು ಅವರ ಆಶಯವು. ಆದರೆ ಅವರ ಮತಕ್ಕೆ ಶ್ರುತಿಯ ಆಧಾರವಿಲ್ಲ. ಜನ್ಮಾಂತರದಲ್ಲಿ ಮಾಡಿದ ಅನೇಕಕರ್ಮಗಳು ಯಾವ ಫಲವನ್ನೂ ಕೊಡದೆ ಹಾಗೆಯೇ ನಾಶವಾಗುವವೆಂದು ಕಲ್ಪಿಸುವದು ಅಯುಕ್ತವಾಗುತ್ತದೆ. ಆದ್ದರಿಂದ ಕರ್ತೃತ್ವಭೋಕ್ತೃತ್ವದ ಬೀಜವನ್ನೇ ನಾಶಗೊಳಿಸುವ ಬ್ರಹ್ಮಜ್ಞಾನವೇ ಬೇಕು. ಈ ಜ್ಞಾನವು ಬಂದಾಗ ಗಂತೃಗಂತವ್ಯಾದಿಭೇದವಿರುವದಿಲ್ಲ.

ಆದ್ದರಿಂದ ಅವಿದ್ಯಾವಸ್ಥೆಯಲ್ಲಿ ಸಗುಣಬ್ರಹ್ಮವನ್ನು ಉಪಾಸನೆ ಮಾಡುವವರು ಕಾರ್ಯಬ್ರಹ್ಮವನ್ನೇ ಸೇರಿ ಕಾಲಕ್ರಮದಿಂದ ಜ್ಞಾನವನ್ನು ಸಂಪಾದಿಸಿಕೊಂಡು ಮುಕ್ತಿಯನ್ನು ಪಡೆಯುತ್ತಾರೆ. ಜ್ಞಾನವನ್ನು ಇಲ್ಲಿಯೇ ಸಂಪಾದಿಸಿಕೊಂಡವರು ಇಲ್ಲಿಯೇ ಪರಬ್ರಹ್ಮವನ್ನು ಸೇರುತ್ತಾರೆ - ಎಂಬ ಪಕ್ಷವೇ ಶ್ರುತಿಯುಕ್ತಿಸಮ್ಮತವಾದದ್ದು. ಬ್ರಹ್ಮವು ನಿಜವಾಗಿ ಒಂದೇ ಆದರೂ ಅವಿದ್ಯೆಯಿಂದ ಅದರಲ್ಲಿ ನಾಮರೂಪಗಳು ಆರೋಪಿತವಾಗಿರುವ ದಶೆಯಲ್ಲಿ ಅದೇ ಸಗುಣವೆಂದು ವ್ಯವಹೃತವಾಗುತ್ತದೆ; ಆ ಸ್ಥಿತಿಯಲ್ಲಿಯೇ ಉಪಾಸನೆಯನ್ನು ಶ್ರುತಿಗಳು ಉಪದೇಶಿಸುತ್ತವೆ. ಜ್ಞಾನದಿಂದ ಬ್ರಹ್ಮದ ಪರಮಾರ್ಥವನ್ನು ತಿಳಿದುಕೊಂಡಾಗ ಅದೇ ನಿರ್ಗುಣವೂ ನಿರ್ವಿಶೇಷವೂ ಆಗಿರುತ್ತದೆ. ಅದನ್ನು ಪಡೆಯುವದಕ್ಕೆ ಯಾವದೊಂದು ವಿಶೇಷವಾದ ಕಾಲವಾಗಲಿ ದೇಶವಾಗಲಿ ಬೇಕಿರುವದಿಲ್ಲ.

★★★★★

# ಆಚಾರ್ಯರ ಗುಣಕಥನ

**21-5-1937**

**ಶ್ರೀಶ್ರೀಗಳವರು**

ಆಚಾರ್ಯರ ಚರಿತ್ರೆಯೇ ಜ್ಞಾನವೈರಾಗ್ಯಪ್ರಧಾನವಾದದ್ದು; ಆದ್ದರಿಂದ ಆಚಾರ್ಯರ ಗುಣಕಥನವೆಂದರೆ ಅವರ ಜ್ಞಾನವೈರಾಗ್ಯಗಳ ಕಥನವೇ ಆಗಿರುತ್ತದೆ. ಬ್ರಹ್ಮವು ಹೇಗೆ ಸಚ್ಚಿದಾನಂದಸ್ವರೂಪಕ್ಕಿಂತ ಬೇರೆಯಾಗಿಲ್ಲವೋ ಅದರಂತೆಯೇ ಆಚಾರ್ಯರೂ ಜ್ಞಾನವೈರಾಗ್ಯಗಳಿಗಿಂತ ಬೇರೆಯಾಗಿ ರುವದಿಲ್ಲವೆನ್ನಬಹುದು.

ನಮ್ಮ ದೇಶವು ಮೊದಲಿನಿಂದಲೂ ಐಹಿಕಸಂಪತ್ತು, ಆಧ್ಯಾತ್ಮಿಕಸಂಪತ್ತು – ಎರಡನ್ನೂ ಸಮಬೆರಕೆಯಿಂದ ಪಡೆದುಕೊಂಡು ಪ್ರಸಿದ್ಧವಾಗಿತ್ತು. ಈ ದೇಶವು ಉಚ್ಛ್ರಾಯಸ್ಥಿತಿಯಲ್ಲಿದ್ದಾಗ ಅದು ಜ್ಞಾನವೈರಾಗ್ಯದ ತಳಹದಿಯ ಮೇಲೆಯೇ ನಿಂತಿತ್ತು. ಕಾಲಗತಿಯಿಂದ ಅದು ತಪ್ಪಿ ಈಗ ನಾವು ಪರರ ಸಂಸ್ಕೃತಿಗೆ ವಶರಾಗಿರುತ್ತೇವೆ; ಈಗ ಕಾಮಕ್ರೋಧಗಳಿಗೆ ಅಧೀನವಾಗಿ ನರಳುತ್ತಿರುವ ಸಂಸ್ಕೃತಿಗೆ ನಾವು ತುತ್ತಾಗಿರುವೆವು. ಜ್ಞಾನವಿರಕ್ತಿಗಳಿಂದ ಕೂಡಿದ ಬ್ರಾಹ್ಮಣಾದಿಗಳು ಇಲ್ಲವೇ ಇಲ್ಲವೆನ್ನುವಷ್ಟು ಆಧ್ಯಾತ್ಮಿಕದಾರಿದ್ರ್ಯವು ನಮ್ಮ ದೇಶವನ್ನು ಆವರಿಸಿಕೊಂಡುಬಿಟ್ಟಿದೆ. 'ಸ್ವಯಂ ನಷ್ಟಃ ಪರಾನ್ನಾಶಯತಿ' (ತಾನೂ ಕೆಟ್ಟವನು, ಮತ್ತೊಬ್ಬರನ್ನೂ ಹಾಳುಮಾಡುತ್ತಾನೆ) ಎಂಬಂತೆ ಅನ್ಯಾಯದಿಂದಲಾದರೂ ಸಂಪತ್ತು ಕೂಡಿಹಾಕಿಕೊಳ್ಳುವದೇ ನಾಗರಿಕತೆ–ಎಂಬ ಭಾವವು ನಮ್ಮಲ್ಲಿ ಬೆಳೆಯುತ್ತಲಿದೆ. ನಿಜವಾಗಿ ನೋಡಿದರೆ, ಒಬ್ಬನು ಎಷ್ಟು ಸಂಪಾದಿಸಿ ಎಷ್ಟು ಖರ್ಚುಮಾಡುತ್ತಾನೆ–ಎಂಬುದರ ಮೇಲಿಂದ ಅವನ ಅಂತಸ್ತನ್ನು ನಿರ್ಣಯಿಸತಕ್ಕದ್ದಲ್ಲ, ಸಂಪಾದಿಸಿದ್ದರಲ್ಲಿ ಎಷ್ಟು ಭಾಗವನ್ನು ಸದ್ವಿನಿಯೋಗಮಾಡುತ್ತಾನೆಂಬುದರ ಮೇಲಿಂದ ನಿರ್ಣಯಿಸಬೇಕು. ಆದ್ದರಿಂದಲೇ ಶ್ರುತಿಯಲ್ಲಿ ''ವಿವೇಕವನ್ನು ಕೊಟ್ಟು ಆಮೇಲೆ ಐಶ್ವರ್ಯವನ್ನು ಕೊಡು'' (''**ತತೋ ಮೇ ಶ್ರಿಯಮಾವಹ**'') ಎಂಬ

ಪ್ರಾರ್ಥನೆಯು ಕಂಡುಬರುತ್ತದೆ. ಜ್ಞಾನವಿರಕ್ತಿಗಳ ತಳಹದಿಯ ಮೇಲೆಯೇ ಯಾವ ಜನಾಂಗವಾದರೂ ಬಹುಕಾಲ ನಿಲ್ಲುತ್ತದೆಯೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು. ಕಲ್ಯಾಣಾಪೇಕ್ಷಿಗಳಾದವರು ಜ್ಞಾನವೈರಾಗ್ಯಗಳ ವಿಚಾರವನ್ನು ಅವಶ್ಯವಾಗಿ ಮಾಡಬೇಕು, ಅವುಗಳ ವಿಚಾರದಲ್ಲಿ ತೊಡಗಿದರೆ ಜನರ ಹಾಸ್ಯಕ್ಕೆ ಗುರಿಯಾದೇವೆಂದು ಎಂದಿಗೂ ಅಂಜಬಾರದು.

ಆಚಾರ್ಯರ ಉತ್ಸವವು ಜ್ಞಾನವೈರಾಗ್ಯಗಳ ಪ್ರಸಾರಕ್ಕೇ ಅಗತಕ್ಕದ್ದಾದ್ದರಿಂದ ಇದಕ್ಕಾಗಿ ವ್ಯಯವಾದ ಧನವು ಸದ್ವಿನಿಯೋಗವಾಗುತ್ತದೆಯೆಂಬುದರಲ್ಲಿ ಸಂಶಯವಿಲ್ಲ. ಈ ಉತ್ಸವದಲ್ಲಿ ಮುಖ್ಯವಾಗಿ ನಾವುಗಳು ಅಹಂತೆಯನ್ನು ಪೂರ್ಣವಾಗಿ ಆಚಾರ್ಯರ ಪಾದಮೂಲದಲ್ಲಿ ಅರ್ಪಿಸಿಬಿಡಬೇಕು. ಇನ್ನು ಮುಂದೆ ಅವರ ಭಾಷ್ಯಾದಿಗಳ ಶ್ರವಣಮನನನಿದಿಧ್ಯಾಸನಗಳಿಂದ ಆದಷ್ಟುಮಟ್ಟಿಗೂ ಕಾಲವನ್ನುಕಳೆಯುತ್ತೇವೆಂದು ಪ್ರತಿಜ್ಞೆಮಾಡಬೇಕು. ಆಗ ನಿಜವಾಗಿ ಆಚಾರ್ಯರ ಉತ್ಸವವಾಗುತ್ತದೆ.

ಜ್ಞಾನವೆಂದರೆ ಆಚಾರ್ಯರ ಗ್ರಂಥಗಳನ್ನು ಪರೀಕ್ಷಾದಿಗಳಿಗಾಗಿ ಓದಿ ಅವುಗಳನ್ನು ಕಂಠಪಾಠಮಾಡಿ ಸಭೆಗಳ ಮೂಲಕ ವಿದ್ವತ್ತೆಯನ್ನು ಪ್ರಕಟಿಸುವದಲ್ಲ. ಹಾಗೆ ಮಾಡುವದೂ ನಿಷ್ಫಲವಲ್ಲ, ಆದರೆ ಅದು ಆಚಾರ್ಯರು ಹೇಳುವ ಜ್ಞಾನವಲ್ಲ. ''**ವೈದುಷ್ಯಂ ವಿದುಷಾಂ ತದ್ವದ್ಭುಕ್ತಯೇ ನ ತು ಮುಕ್ತಯೇ**'' ಎಂಬಂತೆ ವಿದ್ವಜ್ಜನರ ಪಾಂಡಿತ್ಯವು ಭುಕ್ತಿಯನ್ನು ಕೊಟ್ಟೀತೇ ಹೊರತು ಮುಕ್ತಿಯನ್ನು ಕೊಡಲಾರದು. ನಮಗೆ ನಿಜವಾಗಿಯೂ ಕಾಮಕ್ರೋಧಾದಿಗಳಿಂದ ಬಿಡುಗಡೆಯಾಗಿ ಆನಂದಜೀವನವು ದೊರಕಬೇಕೆಂಬ ಹಾರೈಕೆಯಿದ್ದರೆ ನಾವು ಆಚಾರ್ಯರ ಗ್ರಂಥಗಳನ್ನು ಕೇವಲ ಪರೀಕ್ಷಾಗ್ರಂಥಗಳೆಂದು ಎಂದಿಗೂ ಭಾವಿಸಬಾರದು. ಅವರು ಮತ್ತೆ ಮತ್ತೆ ಹೇಳಿರುವಂತೆ ಶಾಂತದರ್ಪರಾಗಿ ತರ್ಕಪ್ರಧಾನರಾಗದೆ ಪರಿಪೂರ್ಣಸಚ್ಚಿದಾನಂದಬ್ರಹ್ಮವೇ ಪರಮಾರ್ಥಸತ್ಯವಾದ ನಮ್ಮ ಆತ್ಮನು ಎಂಬ ಸಾಕ್ಷಾದನುಭವವನ್ನು ತಂದುಕೊಳ್ಳಬೇಕು. ಈ ಸಾಕ್ಷಾತ್ಕಾರವೇ ನಿಜವಾದ ಜ್ಞಾನವು. ಆ ಗ್ರಂಥಗಳನ್ನು ಶ್ರವಣಮಾಡಬೇಕು, ಯುಕ್ತಿಯ ಒರೆಗಲ್ಲಿನ ಮೇಲೆ ಉಜ್ಜಿ ಪರೀಕ್ಷಿಸಬೇಕು, ಅನುಭವಕ್ಕೆ ಹೊಂದಿಸಿನೋಡಿಕೊಳ್ಳಬೇಕು; ಇವು ಮೂರೂ ಹೊಂದುಗಡೆಯಾದ ಸಾಕ್ಷಾತ್ಕಾರವೇ ಜ್ಞಾನವು. ಅದು ನಮ್ಮಲ್ಲಿ

ಯಾರಿಗೂ ಈ ಕಲಿಯುಗದಲ್ಲಿ ಎಟುಕುವದೇ ಇಲ್ಲ– ಎಂಬ ಅಂಜಿಕೆಯ ಮಾತನ್ನು ಬಿಡಬೇಕು. ಗೀತೆಯಲ್ಲಿ ''**ಅನೇಕ ಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್**'' ಎಂದು ಹೇಳಿರುವದು ನಿಜ; ಆದರೆ ಈಗಾಗಲೇ ನಮ್ಮೆಲ್ಲರಿಗೂ ಸಾವಿರಾರು ಜನ್ಮಗಳಾಗಿರುತ್ತವೆ. ಆದ್ದರಿಂದ ಶ್ರದ್ಧಾಭಕ್ತಿಗಳಿಂದ ಪ್ರಯತ್ನಿಸುವ ಅಧಿಕಾರಿಗಳಿಗೆ ಈ ಕಲಿಯುಗದಲ್ಲಿಯೂ ಜ್ಞಾನವುಂಟಾಗುತ್ತದೆ. ಅದು ಭಾಗ್ಯವಶದಿಂದ ಯಾರಿಗಾದರೂ ಉಂಟಾದರೆ ಮಿಕ್ಕವರಿಗೂ ಅದನ್ನು ಹೇಳಿಕೊಡಬೇಕು. ಅದೊಂದು ಬಗೆಯ ಆಚಾರ್ಯಸೇವೆಯಾಗುವದು.

ಆಚಾರ್ಯರ ಜ್ಞಾನವೈರಾಗ್ಯಗಳು ಸರಿಯಾಗಿ ಪ್ರಸಾರವಾಗಬೇಕಾದರೆ ಆದರ್ಶಪ್ರಾಯರಾಗಿರುವ ಗುರುಶಿಷ್ಯರುಗಳಿರುವ ವಿದ್ಯಾಶಾಲೆಯೊಂದು ಏರ್ಪಡಬೇಕು. ಆ ವಿದ್ಯಾಶಾಲೆಯಲ್ಲಿ ಪರೀಕ್ಷೆಯು ಮುಖ್ಯವಾಗಿರಬಾರದು. ತೋರುಗಾಣಿಕೆಯ ವಿದ್ಯೆಗೆ ಬೆಲೆಯನ್ನು ಕೊಡದೆ ತಾನೂ ತತ್ತ್ವವನ್ನು ಮನಗಂಡು ಶಿಷ್ಯರಿಗೆ ಎಂದಿಗೆ ಹೇಳಿಕೊಟ್ಟು ಸಂತೋಷಪಟ್ಟೇನೆಂಬ ಗುರುವು ಆ ಶಾಲೆಯಲ್ಲಿರಬೇಕು. ಶಿಷ್ಯರಿಗೆ ಪಾಠಗಳನ್ನು ಮಾತ್ರವೇ ಅಲ್ಲದೆ ಅನುಷ್ಠಾನಾದಿಗಳನ್ನು ಕಲಿಸುವ ಪದ್ಧತಿಯೂ ಆಚರಣೆಗೆ ಬರಬೇಕು. 'ಕರ್ಮದಿಂದ ಬರಿಯ ಚಿತ್ತಶುದ್ಧಿಯಾಗುತ್ತದೆ' ಎಂದು ಹೇಳಿ ಅನುಷ್ಠಾನಕ್ಕೆ ಸೊನ್ನೆಸುತ್ತುವ ಶುಷ್ಕವೇದಾಂತಕ್ಕೆ ಅದು ಸ್ಥಾನವಾಗಬಾರದು. ಗುರುಭಕ್ತಿಯನ್ನು ಬಾಯಿಂದ ಉಪದೇಶಿಸಬೇಕಾದದ್ದಿಲ್ಲ, ಗುರುಗಳು ತಮ್ಮ ನಡತೆಯಿಂದಲೇ ಶಿಷ್ಯರಿಗೆ ಭಕ್ತಿಯುಂಟಾಗುವಂತೆ ಇರಬೇಕು. ''ಗುರುಗಳ ಸೇವೆಯನ್ನೇಕೆ ಮಾಡಬೇಕು? ಅವರೇ ತಮ್ಮ ಕೆಲಸವನ್ನು ಮಾಡಿಕೊಂಡರಾಗದೆ?'' ಎನ್ನುವ ತಾರ್ಕಿಕಶಿಷ್ಯರಿಗಿಂತಲೂ ಗುರುಗಳ ಛಾಯಾನುವರ್ತಿಗಳಾಗಿ ದ್ದುಕೊಂಡು ಸಮಯಬಂದಾಗಲೆಲ್ಲ ಅವರ ಜ್ಞಾನೋಪದೇಶವನ್ನು ಪಡೆದು ಕೃತಕೃತ್ಯರಾಗಬೇಕೆಂಬ ವಿಮಲಮತಿಯ ಸಚ್ಛಿಷ್ಯರು ಅಲ್ಲಿ ನೆಲೆಸಬೇಕು. ಇಂಥ ಗುರುಶಿಷ್ಯಪರಂಪರೆಯು ಸಾಗಿದರೆ ದೇಶದ ಪುಣ್ಯಕ್ಕೆ ಎಣೆಯೇ ಇಲ್ಲ. ಇಂಥ ಗುರುಗಳೂ ಶಿಷ್ಯರೂ ದೊರಕುವದು ಕಷ್ಟವೇ ಸರಿ; ಆದರೆ ಇಂಥ ಒಬ್ಬರೇ ಒಬ್ಬರು ಗುರುಗಳು ಒಬ್ಬನೇ ಒಬ್ಬ ಶಿಷ್ಯ–ಹೀಗೆ ಇಬ್ಬರಿರುವ ವಿದ್ಯಾಶಾಲೆಯು ಏರ್ಪಟ್ಟರೂ ಚಿಂತೆಯಿಲ್ಲ, ಅದು ಲೋಕದ ಮೇಲೆ ಅತ್ಯಂತಕಲ್ಯಾಣಕರವಾದ

ಪ್ರಭಾವವನ್ನು ಬೀರುವ ಸ್ಥಾನವಾಗುವದೆಂಬುದನ್ನು ನಾವೆಲ್ಲರೂ ನೆನಪಿಡಬೇಕು. ''ಅಂಥ ಒಂದು ಕೇಂದ್ರವಾದರೂ ನಮ್ಮಲ್ಲಿ ಏರ್ಪಡಲಿ! ಅಲ್ಲಿ ಶಿಕ್ಷಿತರಾದ ವಿದ್ಯಾರ್ಥಿಗಳು ವಾಸನಾನುಸಾರವಾಗಿ ಗೃಹಸ್ಥರಾಗಿಯೋ ಸಂನ್ಯಾಸಿಗಳಾಗಿಯೋ ನಮ್ಮ ದೇಶದಲ್ಲಿ ಜ್ಞಾನವೈರಾಗ್ಯಗಳನ್ನು ಪ್ರಸಾರಮಾಡಲಿ! ಅವರ ಪ್ರಭೆಯ ಸಂಪರ್ಕದಿಂದ ನಮ್ಮ ಮಕ್ಕಳಲ್ಲಿ ಆಸುರ ಸಂಪತ್ತಿಯು ಸಂಪೂರ್ಣವಾಗಿ ತೊಲಗಿ ದೈವಸಂಪತ್ತಿಯ ಪ್ರಾದುರ್ಭಾವವಾಗಲಿ!'' ಎಂದು ದಿನದಿನವೂ ನಾವು ಪ್ರಾರ್ಥಿಸೋಣ.

★★★★★

# ಅಜ್ಞಾನನಾಶವೇ ಆತ್ಮಲಾಭ

**4-5-1938**

**ಶ್ರೀಶ್ರೀಗಳವರು**

**ಉಪದೇಶಸಾಹಸ್ರಿಯ ಪದ್ಯಭಾಗದ ಸಮ್ಯಜ್ಮತಿಪ್ರಕರಣದ ಶ್ಲೋಕಗಳ** ಅರ್ಥವಿವರಣೆ:

ಲೋಕದಲ್ಲಿ ಮನುಷ್ಯನು ಪಡೆದುಕೊಳ್ಳಬೇಕೆಂಬ ಲಾಭಗಳೆಲ್ಲ ತನಗಾಗಿ; ಆದ್ದರಿಂದ ತನ್ನ ಸ್ವರೂಪವಾದ ಆತ್ಮನನ್ನು ಪಡೆದುಕೊಳ್ಳುವದೇ ಪರಮಲಾಭವು. ಆತ್ಮನು ನಿತ್ಯಲಬ್ಧನಾಗಿರುವದರಿಂದ ಅಜ್ಞಾನದ ನಾಶವೇ ಆತ್ಮಲಾಭವೆನಿಸುವದು. ಆ ನಾಶವು ವೇದೋಕ್ತಜ್ಞಾನದಿಂದ ಆಗುತ್ತದೆ. ವೇದವು ಆತ್ಮನೊಬ್ಬನೇ ಎಂದು ಬೋಧಿಸುವದಲ್ಲದೆ ನಾಮರೂಪಕರ್ಮಗಳು ಅನ್ಯೋನ್ಯಾಪೇಕ್ಷವಾಗಿರುವದರಿಂದ ಅಸತ್ಯವೆಂಬುದನ್ನು ತಿಳಿಸಿಕೊಡುತ್ತದೆ. ಕೇವಲ ಚೈತನ್ಯರೂಪನಾದ ಆತ್ಮನೇ ಉಪಾಧಿಭೇದದಿಂದ ಇಂದ್ರಿಯಾಂತಃ ಕರಣಗಳ ಜ್ಞಾನವಾಗಿ ತೋರಿಕೊಳ್ಳುತ್ತಾನೆ.

ಹೀಗೆ ಜಾಗ್ರತ್ಸ್ವಪ್ನಗಳಲ್ಲಿ ನಮ್ಮ ಒಳಗೂ ಹೊರಗೂ ಕಾಣುವವೆಲ್ಲವೂ ಚೈತನ್ಯದಲ್ಲಿ ಅವಿದ್ಯಾಕಲ್ಪಿತವಾಗಿರುತ್ತದೆಯೆಂಬುದು ಪ್ರಪಂಚವು ಸುಷುಪ್ತಿಯಲ್ಲಿ ಕಾಣದೆ ಇರುವದರಿಂದಲೇ ಸಿದ್ಧವಾಗುತ್ತದೆ. ಆದ್ದರಿಂದಲೇ ಶಾಸ್ತ್ರದಲ್ಲಿ ವಿದ್ಯೆಯನ್ನು ಹೇಳಿರುತ್ತದೆ; ಶಾಸ್ತ್ರೋಕ್ತವಾದ ಸಾಧನಗಳಿಂದ ಚಿತ್ತಶುದ್ಧಿಯನ್ನು ಸಂಪಾದಿಸಿಕೊಂಡು ಈ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

★★★★★

# ಸುಷುಪ್ತಿಯು ಬ್ರಹ್ಮಸ್ಥಾನವು

**5-5-1938**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳವರು**

**ಬ್ರಹ್ಮಸೂತ್ರಭಾಷ್ಯದ (3-2-7) ತದಭಾವಾಧಿಕರಣದಲ್ಲಿ** - ಉಪನಿಷತ್ತುಗಳಲ್ಲಿ ಸುಷುಪ್ತಿವರ್ಣನೆಯನ್ನು ಮಾಡುವಾಗ ಜೀವನು ತನಿನಿದ್ರೆಯಲ್ಲಿ ನಾಡಿಗಳನ್ನು ಪ್ರವೇಶಿಸುತ್ತಾನೆಂದು ಒಂದು ಕಡೆ, ಪುರೀತತ್ತೆಂಬ ಹೃದಯದ ಸುತ್ತು ಪೊರೆಯನ್ನು ಹೊಕ್ಕು ನಿದ್ರಿಸುತ್ತಾನೆಂದು ಒಂದು ಕಡೆ, ಪರಮಾತ್ಮನನ್ನು ಆಲಂಗಿಸಿಕೊಂಡು ನಿದ್ರಿಸುತ್ತಾನೆಂದು ಒಂದು ಕಡೆ - ಹೀಗೆ ಬಗೆಬಗೆಯಾಗಿ ಹೇಳಿರುತ್ತದೆಯಾದರೂ ಇವುಗಳು ಬೇರೆಬೇರೆಯಾಗಿ ಸುಷುಪ್ತಿ ಸ್ಥಾನಗಳೆಂದೇನೂ ತಾತ್ಪರ್ಯವಲ್ಲ. ನಾಡೀಪುರೀತತ್ತುಗಳ ಮೂಲಕವಾಗಿ ಹೋಗಿ ಬ್ರಹ್ಮನಲ್ಲಿ ಸೇರಿಕೊಳ್ಳುತ್ತಾನೆಂಬುದೇ ಶ್ರುತಿಯ ತಾತ್ಪರ್ಯ. ಅದರಲ್ಲಿಯೂ ಆಗ ಜೀವನು ಸದ್ರೂಪನಾದ ಬ್ರಹ್ಮವೇ ಆಗಿರುತ್ತಾನೆಂದು ಶ್ರುತಿಯು ಅಭಿಪ್ರಾಯಪಡುತ್ತದೆ. ಪರಮಾರ್ಥವಾಗಿ ನೋಡಿದರೆ ಯಾವಾಗಲೂ ಜೀವನು ಬ್ರಹ್ಮರೂಪದಲ್ಲಿಯೇ ಇರುತ್ತಾನಾದರೂ ಸ್ಥೂಲಸೂಕ್ಷ್ಮೋಪಾಧಿಗಳಿಂದ ಕೂಡಿ ಎಚ್ಚರಕನಸುಗಳಲ್ಲಿ ತಾನೇ ಬೇರೆಯಾಗಿದ್ದಂತೆ ತೋರುತ್ತಾನೆ ; ತನಿನಿದ್ರೆಯಲ್ಲಿ ಆ ಉಪಾಧಿಗಳು ಇಲ್ಲದ್ದರಿಂದ ತನ್ನ ಪರಮಾರ್ಥರೂಪವಾದ

ಬ್ರಹ್ಮರೂಪವಾಗಿಯೇ ನಿಲ್ಲುತ್ತಾನೆ. ಆದ್ದರಿಂದ ನಿಜವಾಗಿ ಜೀವನು ಬ್ರಹ್ಮಸ್ವರೂಪನೇ ಆಗಿರುತ್ತಾನೆಂಬುದನ್ನು ತಿಳಿಸುವದಕ್ಕಾಗಿಯೇ ಸುಷುಪ್ತಿಸ್ಥಾನವನ್ನು ಬ್ರಹ್ಮವೆಂದು ಹೇಳಿದೆ.

★★★★★

# ಅವಿದ್ಯಾನಿವೃತ್ತಿಯೇ ಮೋಕ್ಷ

**7-5-1938**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳು**

**ಬೃಹದಾರಣ್ಯಕದಲ್ಲಿ (4-4-6) ''ನ ತಸ್ಯ ಪ್ರಾಣಾ ಉತ್ಕ್ರಾಮನ್ತಿ'' ಎಂಬ ಶ್ರುತಿಭಾಗದ ಭಾಷ್ಯದಲ್ಲಿ** - ಯಾವನಿಗೆ ಆತ್ಮನಿಗಿಂತ ಬೇರೆಯಾಗಿ ತನಗೆ ಬೇಕೆಂಬ ಮತ್ತೊಂದು ವಸ್ತುವು ಇರುವದಿಲ್ಲವೋ ಎಲ್ಲವೂ ಆತ್ಮನೇ ಎಂಬ ಜ್ಞಾನವಾಗಿರುವದೋ ಅಂಥವನಿಗೆ ಯಾವ ಕಾಮವೂ ಇರುವದಿಲ್ಲ, ಆದ್ದರಿಂದ ಅವನು ಯಾವ ಕರ್ಮವನ್ನೂ ಮಾಡತಕ್ಕದ್ದಿರುವದಿಲ್ಲ. ಅದರಿಂದಲೇ ಅವನು ಕರ್ಮದ ಫಲವನ್ನು ಅನುಭವಿಸುವದಕ್ಕಾಗಿ ಲೋಕಾಂತರಕ್ಕೆ ಹೋಗಬೇಕಾದದ್ದೂ ಇರುವದಿಲ್ಲ. ಸುಷುಪ್ತಿಯಲ್ಲಿ ಹೇಗೆ ನಮ್ಮಗಳ ಆತ್ಮನು ನಿರ್ವಿಶೇಷನಾಗಿರುವನೋ ಹಾಗೆಯೇ ಯಾವಾಗಲೂ ನಿರ್ವಿಶೇಷನಾಗಿಯೇ ಇರುತ್ತಾನೆಂಬ ಅರಿವನ್ನು ಮಾಡಿಕೊಂಡ ಜ್ಞಾನಿಗೆ ಲೋಕಾಂತರಗಮನಕ್ಕೆ ಕಾರಣವು ಏನೂ ಇರುವದಿಲ್ಲ. ಅವನು ಮೊದಲೇ ಬ್ರಹ್ಮವಾಗಿದ್ದು ಈಗ ಜ್ಞಾನದಿಂದ ಬ್ರಹ್ಮದಲ್ಲಿ ಸೇರಿಹೋಗುತ್ತಾನೆ. ಮುಂದೆ ಅವನಿಗೆ ಕರ್ಮದ ಫಲವಾಗಿ ಬೇರೊಂದು ದೇಹವನ್ನು ಧರಿಸಬೇಕಾದ ಆವಶ್ಯಕತೆಯಿರುವದಿಲ್ಲ. ಈ ದೃಷ್ಟಿಯಿಂದ ನೋಡಿದರೆ ಅವಿದ್ಯಾನಿವೃತ್ತಿಯೇ ಮೋಕ್ಷವೇ ಹೊರತು ಅದಕ್ಕೆ ಹೊಸದಾಗಿ ಯಾವದೊಂದೂ ಹುಟ್ಟಬೇಕಾದದ್ದಿರುವದಿಲ್ಲ - ಎಂದು ತಿಳಿಸಿರುತ್ತದೆ.

★★★★★

# ಜೀವನ ಕರ್ತೃತ್ವ

**7-5-1938**

**ಬ್ರ॥ಶ್ರೀ॥ ಕೆ.ಪಿ ನಾರಾಯಣಶಾಸ್ತ್ರಿಗಳವರು**

ಜೀವನ ಕರ್ತೃತ್ವವೆಂಬುದು ಪರಮಾರ್ಥವೆ, ಅವಿದ್ಯಾಕೃತವೆ?- ಎಂಬ ವಿಷಯವನ್ನು **ಬ್ರಹ್ಮಸೂತ್ರದಲ್ಲಿ ತಕ್ಷಾಧಿಕರಣ(2-3-40)**ದಲ್ಲಿ ಪರಿಹರಿಸಿರುತ್ತದೆ. ಶಾಸ್ತ್ರದಲ್ಲಿ 'ಯಾಗಮಾಡಬೇಕು', 'ದಾನಮಾಡಬೇಕು'- ಎಂದು ಮುಂತಾಗಿ ವಿಧಿಸಿರುವದರಿಂದಲೂ 'ಸ್ವಪ್ನದಲ್ಲಿ ಜೀವನು ಬಗೆಬಗೆಯಾಗಿ ವಿಹರಿಸುತ್ತಾನೆ' ಎಂದು ಹೇಳಿರುವದರಿಂದಲೂ ಅವನು ಕರಣಗಳನ್ನು ಸ್ವೀಕರಿಸುತ್ತಾನೆ' ಎಂದು ಹೇಳಿರುವದರಿಂದಲೂ ಇವನಿಗೆ ಕರ್ಮದಲ್ಲಿ ಕರ್ತೃತ್ವವುಂಟೆಂದು ಹೇಳಿರುವದರಿಂದಲೂ ಬುದ್ಧಿಯೇ ಕರ್ತೃವೆಂದರೆ ಕರಣವೇ ಕರ್ತೃವೆಂದು ಹೇಳಿದಂತೆ ಆಗುವದರಿಂದಲೂ ಆತ್ಮಜ್ಞಾನಕ್ಕಾಗಿ ಶ್ರವಣಮನನನಿದಿಧ್ಯಾಸನಗಳನ್ನು ಮಾಡಬೇಕೆಂದು ವಿಧಿಸಿರುವದರಿಂದಲೂ ಜೀವನು ಪರಮಾರ್ಥವಾಗಿ ಕರ್ತೃವೇ ಎಂಬುದು ಪೂರ್ವಪಕ್ಷವು. ಜೀವನು ಸ್ವಾಭಾವಿಕವಾಗಿಯೇ ಕರ್ತೃವಾಗಿದ್ದರೆ ಅವನಿಗೆ ಬಿಡುಗಡೆಯಾಗಲಾರದಾದ್ದರಿಂದ ಅವನು ನಿಜವಾಗಿ ಕರ್ತೃವಲ್ಲ. ಎಂದೆಂದಿಗೂ ಕರ್ಮಬಂಧವು ಬಿಡುಗಡೆಯಾಗದಿದ್ದವನಿಗೆ ಶಾಸ್ತ್ರವು ಮೋಕ್ಷಸಾಧನವಾದ ಜ್ಞಾನವನ್ನು ಉಪದೇಶಿಸುತ್ತದೆ ಎಂಬುದೂ ಸರಿಯಲ್ಲ. ಎಚ್ಚರಕನಸುಗಳಲ್ಲಿ ಉಪಾಧಿಸಂಬಂಧದಿಂದ ಕರ್ತೃತ್ವವು ಉಂಟಾಗಿರುವದೆಂತಲೂ ತನಿನಿದ್ರೆಯಲ್ಲಿ ಪರಮಾತ್ಮನೊಡನೆ ಸೇರಿಕೊಂಡಿರುವದರಿಂದ ಜೀವನಿಗೆ ಯಾವ ಕರ್ತೃತ್ವವೂ ಇರುವದಿಲ್ಲವೆಂತಲೂ ಶ್ರುತಿಯಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಆದ್ದರಿಂದ ಹೇಗೆ ಬಡಗಿಯು ಬಾಚಿ, ಉಳಿ ಮುಂತಾದ ಆಯುಧಗಳನ್ನು ಹಿಡಿದು ಕೆಲಸಮಾಡುವಾಗ ಬಡಗಿ ಎಂಬ ಕರ್ತೃತ್ವವೂ ಆ ಕೆಲಸದಿಂದ ಆಗುವ ದುಃಖವೂ ಅವನಿಗೆ ಉಂಟಾಗುವವೋ ಅವನೇ ಅವುಗಳನ್ನು ಅಚೆಗಿಟ್ಟು ಸುಮ್ಮನಿರುವಾಗ ಕರ್ತೃವಲ್ಲದೆ ಸುಖಿಯಾಗಿರುವನೋ ಅದರಂತೆಯೇ ಜೀವನ ಕರ್ತೃತ್ವವೂ ದೇಹೇಂದ್ರಿಯಗಳ ಸಂಬಂಧದಿಂದಲೇ ಕರ್ತೃವೂ ಭೋಕ್ತೃವೂ

ಆಗಿರುತ್ತಾನೆ ; ಅವುಗಳ ಸಂಬಂಧವಿಲ್ಲದಾಗ ತನಿನಿದ್ರೆಯೇ ಮುಂತಾದ ಅವಸ್ಥೆಯಲ್ಲಿ ತನ್ನ ಸ್ವಾಭಾವಿಕವಾದ ಕರ್ತೃತ್ವಭೋಕ್ತೃತ್ವವಿಲ್ಲದ ಆನಂದಸ್ಥಿತಿಯಲ್ಲಿರುತ್ತಾನೆ- ಎಂಬುದೇ ಶ್ರುತಿಯ ಅಭಿಪ್ರಾಯವು. ಪೂರ್ವಪಕ್ಷದಲ್ಲಿ ಹೇಳಿದ ಶಾಸ್ತ್ರಾರ್ಥವತ್ತ್ವವೇ ಮುಂತಾದ ಕಾರಣಗಳು ಸರಿಯಲ್ಲ ; ಏಕೆಂದರೆ ಶಾಸ್ತ್ರವು ಲೋಕಪ್ರಸಿದ್ಧವಾದ ಆವಿದ್ಯಕಕರ್ತೃತ್ವವನ್ನು ಇಟ್ಟುಕೊಂಡೇ ಕರ್ಮಾದಿಗಳನ್ನು ವಿಧಿಸುತ್ತದೆಯೆಂದು ಹೇಳುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಆದ್ದರಿಂದ ಕರ್ತೃತ್ವವು ಜೀವನ ಸ್ವಭಾವವಲ್ಲ ಎಂಬುದು ಅಧಿಕರಣಾಭಿಪ್ರಾಯವು.

★★★★★

# ಬ್ರಹ್ಮದ ಲಕ್ಷಣ

**8-5-1938**

**ಬ್ರ|| ಶ್ರೀ|| ನಾರಾಯಣಶಾಸ್ತ್ರಿಗಳವರು**

**ತೈತ್ತಿರೀಯಭಾಷ್ಯದಲ್ಲಿ ''ಸತ್ಯಂ ಜ್ಞಾನಮನನ್ತಂ ಬ್ರಹ್ಮ'' (2-1) ಎಂಬ ವಾಕ್ಯದರ್ಥವನ್ನು ತಿಳಿಸುವ ಭಾಷ್ಯವಿವರಣೆ ಹೀಗಿದೆ,** ಸತ್ಯಂ ಜ್ಞಾನಮನನ್ತಂ ಬ್ರಹ್ಮ ಎಂಬ ವಾಕ್ಯವು ಬ್ರಹ್ಮದ ಲಕ್ಷಣವನ್ನು ತಿಳಿಸುವದಕ್ಕೆ ಬಂದಿರುತ್ತದೆ. ನೀಲವೂ ದೊಡ್ಡದೂ ಸುವಾಸನೆಯೂ ಉಳ್ಳದ್ದು ನೀಲೋತ್ಪಲವು - ಎಂದು ಹೇಳುವಲ್ಲಿ ನೀಲವೆಂಬ ವಿಶೇಷಣವು ಅದೇ ಜಾತಿಯ ರಕ್ತೋತ್ಪಲವಲ್ಲವೆಂದು ತಿಳಿಸುವಂತೆ ಇಲ್ಲಿ ಸತ್ಯಾದಿವಿಶೇಷಣಗಳು ಬೇರೊಂದು ಬ್ರಹ್ಮದಿಂದ ಬ್ರಹ್ಮವನ್ನು ಬೇರ್ಪಡಿಸುವದಕ್ಕೆ ಬಂದಿಲ್ಲ; ಏಕೆಂದರೆ ಬ್ರಹ್ಮವು ಒಂದೇ, ಅನೇಕವಲ್ಲ. ವಿಶೇಷಣಗಳು ಬ್ರಹ್ಮದ ಅಸಾಧಾರಣಸ್ವರೂಪವನ್ನು ತಿಳಿಸುತ್ತವೆ. ಹೇಗೆಂದರೆ ಬ್ರಹ್ಮವು ಸತ್ಯವಾಗಿರುತ್ತದೆ, ಅಸತ್ಯವಲ್ಲ; ಜ್ಞಾನ ಸ್ವರೂಪವಾದದ್ದು ಜಡವಲ್ಲ; ಅನಂತವಾದದ್ದು ಪರಿಚ್ಛಿನ್ನವಾದದ್ದಲ್ಲ - ಎಂದು ವಿಶೇಷಣಗಳು ಬ್ರಹ್ಮದ ಸ್ವರೂಪವನ್ನು ತಿಳಿಸುತ್ತವೆ. ಇಲ್ಲಿ ಜ್ಞಾನವೆಂದರೆ ಜ್ಞಾನ ಕರ್ತೃವೆಂದಾಗಲಿ

ಅಂತಃಕರಣದ ವೃತ್ತಿಯೆಂದಾಗಲಿ ಅಭಿಪ್ರಾಯವಲ್ಲ; ಏಕೆಂದರೆ ಕರ್ತೃತ್ವವೂ ವೃತ್ತಿಯೂ ಅನಂತವಲ್ಲ, ಇದು ಜ್ಞಾನವೂ ಅನಂತವೂ ಆಗಿರುವದೆಂದು ಹೇಳಿದ್ದರಿಂದ ಚೈತನ್ಯಸ್ವರೂಪವೇ ಆಗಿರುವದೆಂದು ಅರ್ಥವು, ಅನಂತವೆಂದರೆ ದೇಶಕಾಲವಸ್ತುಪರಿಚ್ಛೇದಶೂನ್ಯವೆಂದರ್ಥ. ಸತ್ಯ, ಜ್ಞಾನ, ಅನಂತ- ಎಂಬ ಶಬ್ದಗಳು ಲೋಕದಲ್ಲಿ ಬೇರೆಬೇರೆ ವಸ್ತುವನ್ನು ಬೋಧಿಸಬಹುದಾದರೂ ಇಲ್ಲಿ ಒಂದರೊಡನೊಂದು ಸೇರಿಕೊಂಡು ಆಯಾ ಲೌಕಿಕವಸ್ತುವಲ್ಲವೆಂಬುದನ್ನು ತಿಳಿಸಿ ನಮ್ಮೆಲ್ಲರ ಆತ್ಮನಾಗಿರುವ ಬ್ರಹ್ಮವನ್ನೇ ಕುರುಹಿಟ್ಟು ತಿಳಿಸುತ್ತವೆ. ಆದ್ದರಿಂದ ಬ್ರಹ್ಮವು ಸತ್ಯಾದಿಶಬ್ದಗಳಿಗೆ ವಾಚ್ಯಾರ್ಥವಲ್ಲ. ಲಕ್ಷ್ಯಾರ್ಥವಾಗಿರುತ್ತದೆ; ನೀಲವಾದ ಉತ್ಪಲವು ಎಂಬಲ್ಲಿ ನೀಲ, ಉತ್ಪಲ ಎಂಬ ಎರಡು ಪದಾರ್ಥಗಳ ಸಂಬಂಧವನ್ನು ಹೇಗೆ ವಾಕ್ಯವು ಹೇಳುತ್ತದೆಯೋ ಹಾಗೆ ಸತ್ಯ, ಜ್ಞಾನ, ಅನಂತ - ಎಂಬ ಮೂರು ಪದಾರ್ಥಗಳ ಸಂಸರ್ಗವನ್ನು ಈ ವಾಕ್ಯವು ಬೋಧಿಸುವದಿಲ್ಲ, ಅಖಂಡಾರ್ಥವಾದ ಬ್ರಹ್ಮವನ್ನೇ ಬೋಧಿಸುತ್ತದೆ - ಎಂಬುದು ಭಾಷ್ಯದ ಸಾರವು.

★★★★★

# ಕರ್ಮತ್ಯಾಗ

**9-5-1938**

**ಬ್ರ॥ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳು**

ಗೀತೆಯಲ್ಲಿ 18ನೆಯ ಅಧ್ಯಾಯದ 48ನೆಯ ಶ್ಲೋಕದಲ್ಲಿ ''ಸಹಜವಾದ ಕರ್ಮವು ದೋಷಯುಕ್ತವಾದದ್ದಾದರೂ ಅದನ್ನು ಬಿಡಬಾರದು'' ಎಂದು ಹೇಳಿರುತ್ತದೆಯಷ್ಟೆ. ಕರ್ಮವನ್ನು ಬಿಡುವದಕ್ಕೆ ಆಗುವದಿಲ್ಲವಾದ್ದರಿಂದ ಬಿಡಬಾರದೊ, ಸಹಜಕರ್ಮವನ್ನು ಬಿಟ್ಟರೆ ದೋಷವಾಗುತ್ತದೆಯಾದ್ದರಿಂದ ಬಿಡಬಾರದೊ?- ಎಂಬ ವಿಷಯದಲ್ಲಿ ಚರ್ಚಿಸತಕ್ಕದ್ದಿದೆ.

ಕರ್ಮವನ್ನು ಬಿಡುವದಕ್ಕೆ ಆಗುವದೇ ಇಲ್ಲ-ಎಂಬ ಪಕ್ಷದಲ್ಲಿ ಆತ್ಮಸ್ವರೂಪವನ್ನೂ ಕ್ರಿಯಾಸ್ವರೂಪವನ್ನೂ ವಿಚಾರಮಾಡಬೇಕಾಗುವದು. ಸಾಂಖ್ಯರು ಗುಣಗಳ ವಿಷಯವಾಗಿ ಹೇಳುವಂತೆ ಯಾವಾಗಲೂ ಚಲಿಸುತ್ತಲೇ ಇರುವದು ಆತ್ಮನ ಸ್ವಭಾವವು ಎಂದು ಒಂದು ಅಭಿಪ್ರಾಯವನ್ನು ಕೊಡಬಹುದು. ಅಥವಾ ಬೌದ್ಧರು ಹೇಳುವಂತೆ ಕ್ರಿಯೆಗಿಂತ ಬೇರೆಯಾಗಿ ಕಾರಕವೆಂಬುದೇ ಇಲ್ಲ. ಆದ್ದರಿಂದ ಆತ್ಮನ ಸ್ವರೂಪವೇ ಕ್ರಿಯೆಯು, ಆದ್ದರಿಂದ ಕರ್ಮವನ್ನು ಬಿಡುವದು ಆಗುವದಿಲ್ಲ - ಎಂದು ಮತ್ತೊಂದು ಅಭಿಪ್ರಾಯವನ್ನು ಕೊಡಬಹುದು. ಆದರೆ ಇವೆರಡು ಪಕ್ಷವೂ ಲೋಕಾನುಭವಕ್ಕೆ ವಿರುದ್ಧವಾಗಿರುತ್ತವೆ. ಆತ್ಮನು ಕೆಲವು ವೇಳೆ ಸಕ್ರಿಯನಾಗಿರುತ್ತಾನೆ. ಮತ್ತೆ ಕೆಲವು ವೇಳೆ ನಿಷ್ಕ್ರಿಯನಾಗಿರುತ್ತಾನೆ; ಆದ್ದರಿಂದ ಕರ್ಮವನ್ನು ಬಿಡುವದು ಸಾಧ್ಯವಾಗಿದೆ- ಎಂಬ ಪಕ್ಷದಲ್ಲಿ ಇಲ್ಲದಿದ್ದ ಕ್ರಿಯೆಯು ಹುಟ್ಟುವದು, ಇದ್ದ ಕ್ರಿಯೆಯು ನಾಶವಾಗುವದು- ಎಂದು ಹೇಳಿದಂತೆ ಆಗುತ್ತದೆ. ಇದ್ದದ್ದು ನಾಶವಾಗದು, ಇಲ್ಲದ್ದು ಹುಟ್ಟದು- ಎಂಬ ಭಗವಂತನ ಮತಕ್ಕೆ ಇದು ವಿರುದ್ಧವಾಗಿರುತ್ತದೆ, ಯುಕ್ತಿಗೂ ವಿರುದ್ಧವಾಗುತ್ತದೆ. ಏಕೆಂದರೆ ಇಲ್ಲದ್ದು ಹುಟ್ಟುತ್ತದೆ, ಇದ್ದದ್ದು ಇಲ್ಲವಾಗುತ್ತದೆ- ಎಂದರೆ ಭಾವ ಅಭಾವ- ಎಂಬ ವಿಭಾಗವೇ ಇಲ್ಲವಾಗಿಬಿಡುತ್ತದೆ. ವೈಶೇಷಿಕರು ಹೇಳುವ ಸಮವಾಯಸಂಬಂಧವಾಗಲಿ, ಮೊದಲು ಇಲ್ಲದಿದ್ದ ಕಾರ್ಯಕ್ಕೆ ಹುಟ್ಟುತ್ತಲೂ ಆ ಸಂಬಂಧವು ಸೇರುವದೆಂಬುದಾಗಲಿ, ಯುಕ್ತ್ಯನುಭವಗಳಿಗೆ ಹೊಂದುವದಿಲ್ಲ. ಸಾಂಖ್ಯರು ಹೇಳುವ ಪರಿಣಾಮಪಕ್ಷದಲ್ಲಿಯೂ ಮೊದಲು ಇಲ್ಲದಿದ್ದ ಧರ್ಮವು ಹುಟ್ಟುವದೆಂದು ಅಂಗೀಕರಿಸಿರುವದರಿಂದ ಇದೇ ದೋಷವು ಗಂಟುಬೀಳುತ್ತದೆ. ಆದ್ದರಿಂದ ಇರುವದು ಒಂದೇ ಪರಮಾರ್ಥವಸ್ತುವು; ಅದರಲ್ಲಿ ಉತ್ಪತ್ತಿವಿನಾಶಾದಿಗಳನ್ನು ಅವಿದ್ಯೆಯಿಂದ ಕಲ್ಪಿಸುತ್ತಿರುತ್ತಾರೆ ಎಂಬುದೇ ಸಿದ್ಧಾಂತವು. ನಿಷ್ಕ್ರಿಯನಾದ ಆತ್ಮನಲ್ಲಿ ಕ್ರಿಯೆಯು ಅವಿದ್ಯಾಕಲ್ಪಿತವಾಗಿ ರುವದರಿಂದ ಅಜ್ಞರು ಕರ್ಮವನ್ನು ತ್ಯಾಗಮಾಡಲಾರದೆ ಇರುವರು ; ಜ್ಞಾನಿಗಳು ವಿದ್ಯೆಯಿಂದ ಅವನ್ನು ತ್ಯಾಗ ಮಾಡಬಹುದು. ಆದ್ದರಿಂದ ಅಜ್ಞರಾದವರು ಸಹಜಕರ್ಮವನ್ನು ತ್ಯಾಗಮಾಡಬಾರದು ಎಂಬುದೇ ಇಲ್ಲಿ ಶ್ಲೋಕಾರ್ಥವು - ಹೀಗೆಂಬುದು ಭಾಷ್ಯದ ಸಾರವು.

★★★★★

# ಆತ್ಮನು ಜನ್ಮಾದಿರಹಿತನು

**10-5-1938**

**ಶ್ರೀಶ್ರೀಗಳವರು**

**ಮಾಂಡೂಕ್ಯಕಾರಿಕೆಯ ಅದ್ವೈತಪ್ರಕರಣದಲ್ಲಿ 36ರಿಂದ 48ರವರೆಗಿನ ಕಾರಿಕೆಗಳ ಭಾಷ್ಯಾರ್ಥವಿವರಣೆ:**

ಆತ್ಮನ ಪರಮಾರ್ಥಸ್ವರೂಪದಲ್ಲಿ ಜನ್ಮಾದಿವಿಕಾರಗಳಿರುವದಿಲ್ಲ. ಅದರಲ್ಲಿ ಅಜ್ಞಾನದ ನಿದ್ರೆಯಾಗಲಿ ತಪ್ಪುತಿಳಿವಳಿಕೆಯ ಕನಸಾಗಲಿ ಇರುವದಿಲ್ಲ; ಅದಕ್ಕೆ ನಾಮವಿಲ್ಲ, ರೂಪವಿಲ್ಲ. ಅದು ಯಾವಗಲೂ ಬೆಳಗುತ್ತಿರುವದು, ತಾನೇ ಎಲ್ಲವೂ ಆಗಿರುವದು, ಚೈತನ್ಯಸ್ವರೂಪವಾಗಿರುವದು. ಅಜ್ಞಾನವನ್ನು ಕಳೆದುಕೊಂಡ ಮೇಲೆ ಅದನ್ನು ಸಾಕ್ಷಾತ್ಕಾರಮಾಡಿಕೊಳ್ಳುವದಕ್ಕೆ ಯಾವ ಸಾಧನವನ್ನೂ ಮಾಡಬೇಕಾದದ್ದಿರುವದಿಲ್ಲ. ಅದು ವಾಙ್ಮನಸ್ಸುಗಳಿಗೆ ದೂರವಾಗಿರುತ್ತದೆ. ಶಾಂತಸ್ವರೂಪವಾಗಿರುತ್ತದೆ, ನಿತ್ಯಜ್ಯೋತಿಯಾಗಿರುತ್ತದೆ ಮನಸ್ಸಮಾಧಾನದಿಂದುಂಟಾಗುವ ಜ್ಞಾನಕ್ಕೆ ತಿಳಿಯಬರುತ್ತದೆ, ನಿರ್ವಿಕಾರವೂ ನಿರ್ಭಯವೂ ಆಗಿರುತ್ತದೆ. ಅದನ್ನು ತೆಗೆದುಕೊಳ್ಳುವದಾಗಲಿ ಬಿಡುವದಾಗಲಿ ಆಗುವಂತಿರುವದಿಲ್ಲ. ಅದು ತನ್ನ ಸ್ವರೂಪದಿಂದಲೇ ಇದ್ದುಕೊಂಡು ಯಾವ ಕಾರ್ಯಕಾರಣಭಾವವೂ ಇಲ್ಲದೆ ಒಂದೇ ಸಮವಾಗಿರುತ್ತದೆ. ಇದನ್ನು ಅರಿಯುವದು ಸಾಮಾನ್ಯರಿಗೆ ಕಷ್ಟವಾಗಿರುತ್ತದೆ. ಸರ್ವಾತ್ಮವಾದ ಅದನ್ನು ಅರಿತುಕೊಂಡರೆ ತಮ್ಮ ಸ್ವರೂಪವೇ ನಾಶವಾಯಿತೆಂದು ಅವರು ಭಾವಿಸಿ ಅಂಜುತ್ತಾರೆ. ಮಧ್ಯಮಾಧಿಕಾರಿಗಳಾದವರು ಇದನ್ನು ಮನೋನಿಗ್ರಹದಿಂದ ತಿಳಿದುಕೊಳ್ಳಬೇಕಾಗಿರುತ್ತದೆ. ಅವರು ವಿವೇಕವೈರಾಗ್ಯದಿಂದ ಮನಸ್ಸನ್ನು ಒಳಕ್ಕೆ ಸೆಳೆದುಕೊಂಡು ನಿದ್ರೆಗಾಗಲಿ ವಿಷಯಚಿಂತೆಗಾಗಲಿ ಅವಕಾಶಕೊಡದೆ ಸಮಭಾವಕ್ಕೆ ತಂದುಕೊಂಡು ಸಮಾಧಿಸುಖಕ್ಕೆ ಮರುಳಾಗದೆ ಬ್ರಹ್ಮಸ್ವರೂಪದಲ್ಲಿ ನಿಲ್ಲಿಸಿಕೊಳ್ಳಬೇಕಾಗುವದು. ಬ್ರಹ್ಮವನ್ನು ಅರಿಯುವದಕ್ಕೆ ಹೇಳಿದ

ಸೃಷ್ಟಿಯೂ ಅದನ್ನು ಪಡೆಯುವದಕ್ಕೆ ಹೇಳಿದ ಧ್ಯಾನವೂ ಪರಮಾರ್ಥವಲ್ಲ ; ಅಜಾದ್ವಿತೀಯವಾದ ಆತ್ಮತತ್ತ್ವವೇ ಪರಮಾರ್ಥವು-ಎಂಬುದನ್ನು ಜಿಜ್ಞಾಸುಗಳು ಮರೆಯದಿರಬೇಕು- ಎಂಬುದು ಕಾರಿಕಾಭಿಪ್ರಾಯವು.

★★★★★

## ಆಚಾರ್ಯರ ಗುಣಕಥನ

**11-5-1938**

**ಶ್ರೀಶ್ರೀಗಳವರು**

ಆಚಾರ್ಯರ ಚರಿತ್ರೆಯು ಮುಖ್ಯವಾಗಿ ಅವರ ಜ್ಞಾನವೈರಾಗ್ಯಗಳ ಪ್ರದರ್ಶನವಾಗಿದೆ. ಇದನ್ನು ನಾವು ಅವರ ಭಾಷ್ಯಾದಿಗ್ರಂಥಗಳಿಂದ ತಿಳಿದುಕೊಳ್ಳಬೇಕಾಗಿದೆಯೇ ಹೊರತು ಈಗ ಪ್ರಚಾರದಲ್ಲಿರುವ ಶಂಕರವಿಜಯವೇ ಮುಂತಾದ ಕಥೆಗಳಿಂದ ಆಗುವಂತಿಲ್ಲ, ಶಂಕರವಿಜಯಗಳಲ್ಲಿ ಆಚಾರ್ಯರ ಜನ್ಮ, ಸಂನ್ಯಾಸ, ಭಾಷ್ಯರಚನೆ, ಮಂಡನಮಿಶ್ರರೊಡನೆ ಸಂವಾದ, ದಿಗ್ವಿಜಯ- ಇವುಗಳನ್ನು ವರ್ಣಿಸುವಾಗ ಇತಿಹಾಸಕ್ಕೆ ವಿರುದ್ಧವಾಗಿಯೂ ಲೋಕಬುದ್ಧಿಗೆ ವಿರುದ್ಧವಾಗಿಯೂ ಕರ್ಮಸಿದ್ಧಾಂತಾದಿಗಳಿಗೆ ವಿರುದ್ಧವಾಗಿಯೂ ಇರುವ ಕೆಲವು ವಿಷಯಗಳು ಕಣ್ಣಿಗೆ ಬೀಳುತ್ತವೆ. ಇವೆಲ್ಲವೂ ಶ್ರದ್ಧಾಳುಗಳಾದವರು ಅರಿಯದೆ ಆಚಾರ್ಯರಿಗೆ ಮಾಡಿದ ಅಪವಾದಗಳಾಗಿರುತ್ತವೆಯಾದ್ದರಿಂದ ಆ ವಿಷಯದಲ್ಲಿ ನಾವು ಉದಾಸೀನರಾಗಿ ಆಚಾರ್ಯರು ಬರೆದಿರುವ ಉಪನಿಷದ್ಭಾಷ್ಯ, ಗೀತಾಭಾಷ್ಯ, ಸೂತ್ರಭಾಷ್ಯ- ಮುಂತಾದ ಪ್ರಧಾನಗ್ರಂಥಗಳಿಂದ ಅವರ ಸಿದ್ಧಾಂತವನ್ನೂ ಉಪದೇಶಕ್ರಮವನ್ನೂ ಸ್ವೀಕರಿಸಬೇಕು. ಆಚಾರ್ಯರು ಹೇಳುವ ಕರ್ಮಧ್ಯಾನಭಕ್ತಿಜ್ಞಾನಗಳು ಇಲ್ಲಿಯೇ ನಮಗೆ ಆಗುವ ಪ್ರಯೋಜನವನ್ನು ತಿಳಿಸಿಕೊಡತಕ್ಕವುಗಳಾಗಿವೆ. ಅವುಗಳಲ್ಲಿ ಯಾವ ಅಂಧಶ್ರದ್ಧೆಯನ್ನೂ ನಾವು ಇಡಬೇಕಾಗಿರುವದಿಲ್ಲ, ಅವುಗಳ ಪ್ರಯೋಜನವು ನಮಗೆ ದೊರಕಬೇಕಾದರೆ ಭಾಷ್ಯಾರ್ಥವನ್ನು ಮನನಮಾಡಿ ಅನುಭವಕ್ಕೆ ತಂದುಕೊಂಡು ಇತರರಿಗೂ

ಬೋಧಿಸಬಲ್ಲವರ ಸಂಖ್ಯೆಯನ್ನು ನಾವು ಹೆಚ್ಚಿಸಬೇಕು. ಇದಕ್ಕೆ ತಕ್ಕ ಸೌಕರ್ಯಗಳನ್ನು ಪರಮೇಶ್ವರನು ನಮಗೆ ಅನುಗ್ರಹಿಸಲಿ ಎಂದು ಭಗವಂತನನ್ನು ಪ್ರಾರ್ಥಿವೆನು.

★★★★★

# ವೇದಾಂತವಾಕ್ಯಗಳ ಕೃತ್ಯ

## 24-4-1939

**ಬ್ರ|| ಶ್ರೀ|| ಎಸ್.ವಿಠ್ಠಲಶಾಸ್ತ್ರಿಗಳು**

**ಉಪದೇಶಸಾಹಸ್ರಿಯ ಪದ್ಯಭಾಗದ ತತ್ತ್ವಮಸಿಪ್ರಕರಣದ** 211ರಿಂದ ಕೊನೆಯವರೆಗಿನ ಭಾಗದಲ್ಲಿ ತತ್ತ್ವಮಸಿ ಮುಂತಾದ ವಾಕ್ಯಗಳ ಕೃತ್ಯವೇನೆಂಬುದನ್ನು ಚರ್ಚಿಸಿರುತ್ತದೆ. ಹಿಂದೆ ಪ್ರಸಂಖ್ಯಾನವಾದಿಗಳೆಂಬವರು ಬರಿಯ ವಾಕ್ಯೋಪದೇಶದಿಂದ ನಮಗೆ ಅಪರೋಕ್ಷಜ್ಞಾನವಾಗಲಾರದೆಂದೂ ವಾಕ್ಯಜ್ಞಾನವಾದ ಮೇಲೂ 'ನಾನು ಕರ್ತೃವು; ದುಃಖಿಯು' ಎಂಬ ಅರಿವು ಪ್ರತ್ಯಕ್ಷವಾಗಿ ಇದ್ದುಕೊಂಡಿರುವದೆಂದೂ ಆ ಅಜ್ಞಾನವನ್ನು ಹೊಡೆದು-ಹಾಕುವದಕ್ಕಾಗಿ ಶಬ್ದಯುಕ್ತಿಗಳಿಂದುಂಟಾದ ಜ್ಞಾನವನ್ನು ಮತ್ತೆ ಮತ್ತೆ ಅಭ್ಯಾಸಮಾಡಬೇಕೆಂದೂ ಹೇಳುತ್ತಿದ್ದರು. ಸಾಕ್ಷಾತ್ಕಾರಜ್ಞಾನವು ಈ ಅಭ್ಯಾಸದಿಂದಲೇ ಅಗುವದೆಂಬುದು ಅವರ ಅಭಿಪ್ರಾಯವಾಗಿತ್ತು. ಈ ಅಭ್ಯಾಸರೂಪವಾದ ಪ್ರಸಂಖ್ಯಾನವನ್ನು ಮಾಡುವದಕ್ಕೇ ಸಂನ್ಯಾಸಾಶ್ರಮವನ್ನು ಶಾಸ್ತ್ರದಲ್ಲಿ ವಿಧಿಸಿರುತ್ತದೆಯೆಂದೂ ಹಾಗೆಂದು ಒಪ್ಪದಿದ್ದರೆ ಸಂನ್ಯಾಸವನ್ನು ಸ್ವೇಚ್ಛೆಯಿಂದ ತೆಗೆದುಕೊಂಡವನು ಅದನ್ನು ಬಿಡಲೂಬಹುದಾಗುವದರಿಂದ ವ್ಯವಸ್ಥೆಯಿಲ್ಲದೆ ಹೋಗುವದೆಂದೂ ಅವರ ಅಭಿಪ್ರಾಯವಿತ್ತು.

ಅವರ ಮತವನ್ನು ಖಂಡಿಸಿ, ವಾಕ್ಯದಿಂದಲೇ ಅಪರೋಕ್ಷಜ್ಞಾನವಾಗಬಹುದೆಂಬುದನ್ನು ಇಲ್ಲಿ ಸ್ಪಷ್ಟಗೊಳಿಸಿರುತ್ತದೆ. ನಮ್ಮ ಸ್ವರೂಪಕ್ಕಿಂತ

ಬೇರೆಯಾದ ವಸ್ತುವಿನ ವಿಷಯಕ್ಕೆ ನಾವು ಕೇಳಿದ ವಾಕ್ಯದಿಂದ ಪ್ರತ್ಯಕ್ಷ ಜ್ಞಾನವಾಗದೆ ಇರಬಹುದು; ಆದರೆ ನಮ್ಮ ಸ್ವರೂಪದ ವಿಷಯದಲ್ಲಿ ಮರೆಯೇನೂ ಇಲ್ಲವಾದ್ದರಿಂದ ವಾಕ್ಯದಿಂದಲೇ ಅಪರೋಕ್ಷ-ಜ್ಞಾನವಾಗಬಹುದು. ಹತ್ತು ಜನ ಮಂಕರ ಕಥೆಯಲ್ಲಿ ತಾನೇ ಹತ್ತನೆಯವನಾಗಿದ್ದರೂ ಅಜ್ಞಾನದಿಂದ ಒಂಬತ್ತು ಜನರೇ ಇದಾರೆಂದು ತಿಳಿಯುತ್ತಿದ್ದವನಿಗೆ 'ನೀನೇ ಹತ್ತನೆಯವನು' ಎಂಬ ಉಪದೇಶವೇ ಅಪರೋಕ್ಷಜ್ಞಾನಕ್ಕೆ ಕಾರಣವಾದಂತೆ 'ನೀನೇ ಸದ್ರೂಪವಾದ ಬ್ರಹ್ಮವು' ಎಂಬ ವೇದವಾಕ್ಯದ ಉಪದೇಶವು ನಿತ್ಯಸಿದ್ಧವಾಗಿರುವ ನಮ್ಮ ಸ್ವರೂಪದ ಅಪರೋಕ್ಷಜ್ಞಾನಕ್ಕೆ ಸಾಕಾಗಿರುತ್ತದೆ. ವಾಕ್ಯಾರ್ಥವು ತಿಳಿದ ಮೇಲೂ ಅಜ್ಞಾನವಿರುವದೆಂಬುದು ಸುಳ್ಳು. ಪದಾರ್ಥಜ್ಞಾನವಾಗದೆ ಇರುವವರಿಗೆ ವಾಕ್ಯಾರ್ಥಜ್ಞಾನವಾಗುವದೇ ಇಲ್ಲ. ಆದ್ದರಿಂದ ತತ್ತ್ವಮಸಿ ಮುಂತಾದ ವಾಕ್ಯಗಳಲ್ಲಿರುವ ಪದಗಳ ಅರ್ಥವನ್ನು, ಮುಖ್ಯವಾಗಿ ತ್ವಂಪದಾರ್ಥವನ್ನು, ಶೋಧಿಸುವದಕ್ಕಾಗಿ ಶಾಸ್ತ್ರವು ಸಂನ್ಯಾಸಾಶ್ರಮವನ್ನು ಏರ್ಪಡಿಸಿರುತ್ತದೆ. ಯಾವನು ಸಂನ್ಯಾಸವನ್ನು ಈ ವಿಧಿಗೊಳಪಟ್ಟು ತೆಗೆದುಕೊಂಡಿರುವನೋ ಅವನು ಸ್ವೇಚ್ಛಾಚಾರಿಯಾಗಲು ಅವಕಾಶವಿಲ್ಲ; ಪದಾರ್ಥವನ್ನು ಚೆನ್ನಾಗಿ ಶೋಧಿಸಿ ತಿಳಿದುಕೊಂಡಬಳಿಕ ತತ್ತ್ವಮಸಿವಾಕ್ಯದ ಅರ್ಥವು ನಿಸ್ಸಂಶಯವಾಗಿ ಅಪರೋಕ್ಷವಾಗಿಯೇ ಉಂಟಾಗುವದರಿಂದ ಆಮೇಲೆ ಅವನು ಮಾಡತಕ್ಕದ್ದೂ ಉಳಿದಿರುವದಿಲ್ಲ, ಆ ಜ್ಞಾನವನ್ನು ಹೊಡೆಯುವ ಯಾವ ಜ್ಞಾನವೂ ಇಲ್ಲದಿರುವದರಿಂದ ಅದೇ ಪರಮಾರ್ಥವಾದ ಅನುಭವವು ಎಂಬುದು ಪ್ರಕರಣಭಾಗದ ಸಾರವಾಗಿದೆ.

★★★★★

# ಎಲ್ಲವೂ ಆತ್ಮನೆ

**25-4-1939**

**ವಿದ್ವಾನ್ ಬ್ರ॥ಶ್ರೀ॥ಎಚ್.ಅನಂತಮೂರ್ತಿಶಾಸ್ತ್ರಿಗಳವರು**

**ಮುಂಡಕೋಪನಿಷತ್ತಿನ 3ನೆಯ ಮುಂಡಕದ 1ನೆಯ ಖಂಡದ 4,5,6ನೆಯ ಮಂತ್ರಗಳಲ್ಲಿ** - ಸರ್ವಭೂತಗಳಲ್ಲಿಯೂ ಆತ್ಮನಾಗಿದ್ದುಕೊಂಡು ಬಗೆಬಗೆಯಿಂದ ತೋರಿಕೊಳ್ಳುತ್ತಿರುವ ಈ ಪರಮಾತ್ಮನೇ ನಾನೆಂದು ಯಾವನು ತಿಳಿದುಕೊಳ್ಳುವನೋ ಅವನು ಅತಿವಾದಿಯಾಗುವದಿಲ್ಲ. ಅವನ ದೃಷ್ಟಿಯಲ್ಲಿ ಎಲ್ಲವೂ ಆತ್ಮನೇ ಆಗಿರುವದದಿಂದ ಅವನು ಯಾವದನ್ನೂ ಮೀರಿ ನುಡಿಯುವದಿಲ್ಲ, ಎಲ್ಲವನ್ನೂ ಆತ್ಮರೂಪದಲ್ಲಿಯೇ ಕಾಣುತ್ತಿರುವನು. ಅವನಿಗೆ ಹೊರಗಿನ ಸಾಧನಗಳಿಂದಾಗುವ ಕ್ರೀಡೆ ಯಾವದೂ ಇರುವದಿಲ್ಲ, ಹೊರಗಿನ ವಿಷಯಗಳಲ್ಲಿ ಅವನ ಮನಸ್ಸು ರತಿಯನ್ನು ತೋರಿಸುವದಿಲ್ಲ; ಅವನಿಗೆ ಆತ್ಮನಲ್ಲಿಯೇ ಕ್ರೀಡೆ, ಆತ್ಮನಲ್ಲಿಯೇ ರತಿ, ಧ್ಯಾನ ಜ್ಞಾನವೈರಾಗ್ಯಗಳೇ ಕ್ರಿಯೆ. ಇಂಥವನೇ ಬ್ರಹ್ಮಜ್ಞಾನಿಗಳಲ್ಲೆಲ್ಲ ಶ್ರೇಷ್ಠನು - ಎಂಬುದು ನಾಲ್ಕನೆಯ ಮಂತ್ರದ ಅರ್ಥವು. ಇಲ್ಲಿ ಕೆಲವರು ಆತ್ಮರತಿಕ್ರಿಯಾವಾನ್ ಎಂಬ ಮಾತಿಗೆ ಬ್ರಹ್ಮವಿದ್ಯೆ ಮತ್ತು ಅಗ್ನಿಹೋತ್ರಾದಿಕ್ರಿಯೆಗಳುಳ್ಳವನು ಎಂದು ಅರ್ಥಮಾಡಿರುತ್ತಾರೆ. ಆದರೆ ಕರ್ಮವನ್ನು ಮಾಡುವ ಕರ್ತೃತ್ವಬುದ್ಧಿಯುಳ್ಳವನೇ ಅಕರ್ತೃವಾದ ಅದ್ವಿತೀಯವಾದ ಬ್ರಹ್ಮವನ್ನೂ ತಿಳಿದವನು ಎಂದು ಹೇಳುವದು ವಿರುದ್ಧವಾಗಿರುತ್ತದೆ; ಇಲ್ಲಿ ಅದ್ವಿತೀಯಬ್ರಹ್ಮಜ್ಞಾನವನ್ನೇ ಹೇಳಿದೆಯೇ ಹೊರತು ಅಪರಬ್ರಹ್ಮಜ್ಞಾನವನ್ನಲ್ಲವೆಂಬುದು ''ಬ್ರಹ್ಮಜ್ಞಾನಿಗಳಲ್ಲೆಲ್ಲ ಶ್ರೇಷ್ಠನು'' ಎಂಬ ವಿಶೇಷಣದಿಂದ ಹೊರಡುತ್ತದೆ. ಇದೇ ಉಪನಿಷತ್ತಿನಲ್ಲಿ ಮುಂದೆ ಸನ್ಯಾಸಯೋಗದಿಂದ ಶುದ್ಧಸತ್ತ್ವರಾದ ಯತಿಗಳಿಗೇ ಮುಕ್ತಿಯಾಗುವದೆಂದು ಹೇಳಿರುವದೂ ಅಗ್ನಿಹೋತ್ರಾದಿಕ್ರಿಯಾಸಮುಚ್ಚಯವಾದಕ್ಕೆ ಅನನುಕೂಲವಾಗಿರುತ್ತದೆ. ಆದ್ದರಿಂದ ಕೇವಲಜ್ಞಾನವನ್ನೇ ಇಲ್ಲಿ ಹೇಳಿದೆಯೆನ್ನಬೇಕು. ಈ ಜ್ಞಾನವು ಪಕ್ವವಾಗುವದಕ್ಕೆ ಸತ್ಯವಚನ, ಮನಸ್ಸನ್ನೂ ಇಂದ್ರಿಯವನ್ನೂ

ಬಿಗಿಹಿಡಿಯುವ ತಪಸ್ಸು, ಬ್ರಹ್ಮಚರ್ಯ- ಇವುಗಳನ್ನು ನಿತ್ಯವೂ ಆಚರಿಸುತ್ತಿರಬೇಕು; ಹೀಗೆ ನಿತ್ಯವೂ ಸತ್ಯವಚನಾದಿಗಳಿಂದ ಚಿತ್ತಕಲ್ಮಷವನ್ನು ನೀಗಿಕೊಂಡವರೇ ತಮ್ಮ ಹೃದಯದಲ್ಲಿ ಆ ಸ್ವಯಂ ಪ್ರಕಾಶನಾದ ಆತ್ಮನನ್ನು ಕಂಡುಕೊಳ್ಳುವರು-ಎಂಬುದು ಐದನೆಯ ಮಂತ್ರದ ಅರ್ಥ. ಆರನೆಯ ಮಂತ್ರದಲ್ಲಿ ಇಹಪರಗಳಲ್ಲಿಯೂ ಸತ್ಯವೇ ಉತ್ಕೃಷ್ಟಸಾಧನವೆಂದು ಸತ್ಯವಚನವನ್ನು ಹೊಗಳಿರುತ್ತದೆ.

★★★★★

# ಸದ್ಬ್ರಹ್ಮವನ್ನು ಅರಿಯುವದಕ್ಕೆ ಉಪಾಯ

**26-4-1939**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳು**

ಅತೀಂದ್ರಿಯವಾದ ಸದ್ಬ್ರಹ್ಮವನ್ನು ಅರಿಯುವದಕ್ಕೆ ಉಪಾಯವೇನೆಂಬುದನ್ನು **ಛಾಂದೋಗ್ಯದಲ್ಲಿ 6ನೆಯ ಅಧ್ಯಾಯದ 14ನೆಯ ಖಂಡದಲ್ಲಿ** ಒಂದು ದೃಷ್ಟಾಂತದಿಂದ ತಿಳಿಸಿರುತ್ತದೆ. ಗಂಧಾರದೇಶದಿಂದ ಒಬ್ಬ ಪುರುಷನನ್ನು ಕಳ್ಳನು ಕಣ್ಣುಕಟ್ಟಿ ನಿರ್ಜನವಾದ ಕಗ್ಗಾಡಿಗೆ ತಂದು ಬಿಟ್ಟುಬಿಟ್ಟನು. ಆ ಮನುಷ್ಯನು ಅಳುತ್ತಾ ''ನನ್ನನ್ನು ಕಣ್ಣುಕಟ್ಟಿ ತಂದುಬಿಟ್ಟಿರುತ್ತಾರಪ್ಪ! ಕಣ್ಣುಬಿಚ್ಚಿರಿ!'' ಎಂದು ಕೂಗಿಕೊಂಡನು. ದಾರಿಹೋಕನೊಬ್ಬನು ಕರುಣೆಯಿಂದ ಅವನ ಕಣ್ಣಿನ ಕಟ್ಟನ್ನು ಕಳಚಿ 'ಇಗೋ, ಈ ಉತ್ತರದಿಕ್ಕಿಗೆ ನಿಮ್ಮದೇಶವಿದೆ, ಅಲ್ಲಿಗೆ ಹೋಗು' ಎಂದು ಹೇಳಲು ಅವನು ಊರಿಂದೂರಿಗೆ ದಾರಿಯನ್ನು ಕೇಳುತ್ತಾ ಆ ದಾರಿಯನ್ನು ಸರಿಯಾಗಿ ತಿಳಿದುಕೊಂಡು ಗಂಧಾರದೇಶಕ್ಕೇ ಹೋಗಿಸೇರಿದನು. ಇದರಂತೆ ಜೀವನು ಸದ್ರೂಪವಾದ ಬ್ರಹ್ಮವನ್ನು ಬಿಟ್ಟುಬಂದು ಭೌತಿಕವಾದ ದೇಹಾರಣ್ಯವನ್ನು ಸೇರಿರುತ್ತಾನೆ; ಇವನಿಗೆ ಅನೇಕವಿಷಯಗಳ ಬಯಕೆಯೆಂಬ ಕಟ್ಟನ್ನುಕಟ್ಟಿ ಧರ್ಮಾಧರ್ಮಗಳೆಂಬ ಕಳ್ಳರು ಇಲ್ಲಿಗೆ ತಂದು ಬಿಟ್ಟಿರುತ್ತಾರೆ. ಇವನು ಪುಣ್ಯದಿಂದ ಪರಮಕಾರುಣಿಕನಾದ ಬ್ರಹ್ಮಜ್ಞನಾದ ಗುರುವನ್ನು ಸೇರಿ ಅವನ

ಸದುಪದೇಶವು ಅವಿದ್ಯೆಯ ಮೋಹವೆಂಬ ಕಣ್ಣು ಕಟ್ಟನ್ನು ಬಿಚ್ಚಲು ತನ್ನ ಸದ್ರೂಪವನ್ನು ಪಡೆದು ಸುಖಿಯಾಗುತ್ತಾನೆ-ಎಂಬುದು ಮಂತ್ರಾರ್ಥವು. ಈ ಮಂತ್ರದಲ್ಲಿ ಪ್ರಾರಬ್ಧಕರ್ಮವು ಸವೆಯುತ್ತಲೂ ಸದ್ಬ್ರಹ್ಮದಲ್ಲಿಯೇ ಜ್ಞಾನಿಯು ಸೇರಿಹೋಗುತ್ತಾನೆ ಎಂಬ ವಾಕ್ಯವಿದೆ. ಇದು ವ್ಯಾವಹಾರಿಕ ದೃಷ್ಟಿಯಿಂದ ಹೇಳಿದ್ದೆಂದೂ ಜ್ಞಾನಿಯು ಮಿಕ್ಕ ಕರ್ಮಗಳನ್ನು ಜ್ಞಾನದಿಂದ ನಾಶಮಾಡಿಕೊಂಡು ಜ್ಞಾನಸಂಪ್ರದಾಯವನ್ನು ಹರಡುತ್ತಿರುವನಾದರೂ ಪರಮಾರ್ಥವಾಗಿ ಬ್ರಹ್ಮಜ್ಞಾನಿಗೆ ಯಾವ ಕರ್ಮವೂ ಇರುವದಿಲ್ಲವೆಂದೂ ಆಚಾರ್ಯರು ಭಾಷ್ಯದಲ್ಲಿ ಸ್ಪಷ್ಟಪಡಿಸಿರುತ್ತಾರೆ.

★★★★★

# ತನಿನಿದ್ರೆಯಲ್ಲಿ ಅರಿವು

**27-4-1939**

**ಬ್ರ॥ ಶ್ರೀ॥ ಪಿ. ಚಂದ್ರಶೇಖರಭಟ್ಟರು**

**ಬೃಹದಾರಣ್ಯಕೋಪನಿಷತ್ತಿನ ನಾಲ್ಕನೆಯ ಅಧ್ಯಾಯದ ಮೂರನೆಯ ಬ್ರಾಹ್ಮಣದಲ್ಲಿ 31ಮತ್ತು32ನೆಯ ಮಂತ್ರದಲ್ಲಿ** ಹೀಗೆ ವಿವರಣೆ ಇದೆ. ಎಚ್ಚರಕನಸುಗಳಂತೆ ತನಗಿಂತ ಬೇರೆಯಾಗಿರುವದು ಯಾವದೂ ಇಲ್ಲದ್ದರಿಂದ ಆತ್ಮನು ತನಿನಿದ್ರೆಯಲ್ಲಿ ಇದು ಇಂಥದ್ದು- ಎಂದು ವಿಶೇಷರೂಪದಿಂದ ಅರಿಯುವದಿಲ್ಲ. ಆತ್ಮನಿಗೆ ವಿಶೇಷಜ್ಞಾನವಿರುವದೇ ಸ್ವಭಾವವಾದರೆ ಎಚ್ಚರಕನಸುಗಳಲ್ಲಿ ಆ ಸ್ವಭಾವವನ್ನು ಬಿಡುವದಕ್ಕೇನು ಕಾರಣ?- ಎಂದರೆ ಎಚ್ಚರಕನಸುಗಳಲ್ಲಿ ಅವಿದ್ಯೆಯಿಂದ ಆತ್ಮನಿಗಿಂತ ಬೇರೊಂದು ವಸ್ತುವಿರುವಂತೆ ಕಲ್ಪಿತವಾಗಿರುತ್ತದೆಯಾದ್ದರಿಂದ, ತಾನು ಬೇರೆಯಲ್ಲದಿದ್ದರೂ ತನಗಿಂತ ಬೇರೊಂದು ಇಲ್ಲದಿದ್ದರೂ, ತಾನೇ ಬೇರೆಯಾಗಿ ಮತ್ತೊಂದು ವಸ್ತುವನ್ನು ಕಾಣುತ್ತಾನೆ, ಮೂಸುತ್ತಾನೆ, ಸವಿಯುತ್ತಾನೆ, ನುಡಿಯುತ್ತಾನೆ, ಕೇಳುತ್ತಾನೆ, ಯೋಚಿಸುತ್ತಾನೆ, ಮುಟ್ಟುತ್ತಾನೆ, ಅರಿಯುತ್ತಾನೆ; ಆದರೆ ಸುಷುಪ್ತಿಯಲ್ಲಿ

ಎರಡನೆಯ ವಸ್ತುವನ್ನು ಕಲ್ಪಿಸುವ ಅವಿದ್ಯೆಯು ಶಾಂತವಾಗಿರುವದರಿಂದ[1] ಅವಿದ್ಯಾಕಲ್ಪಿತವಾದ ಬೇರೊಂದು ವಸ್ತುವಿಲ್ಲದ್ದರಿಂದ ಮತ್ತೊಂದನ್ನು ಕಾಣುವದೇ ಮುಂತಾದ ವಿಶೇಷಜ್ಞಾನವಾಗುವದಿಲ್ಲ. ಆಗ ತನ್ನ ಪ್ರಾಜ್ಞಸ್ವರೂಪದೊಡನೆ ಐಕ್ಯನಾಗಿ ಸಂಪೂರ್ಣವಾಗಿ ತಿಳಿಯಾಗಿ ಆಪ್ತಕಾಮನೂ ಆತ್ಮಕಾಮನೂ ಆಗಿ ರುತ್ತಾನೆ. ತಿಳಿನೀರಿನಂತೆ ಸ್ವಚ್ಛನಾಗಿರುತ್ತಾನೆ, ತಾನೊಬ್ಬನೇ ಆಗಿರುತ್ತಾನೆ, ದ್ರಷ್ಟೃಚೈತನ್ಯಸ್ವರೂಪನಾಗಿರುತ್ತಾನೆ, ಅದ್ವಿತೀಯನಾಗಿತ್ತಾನೆ, ಈ ಜೀವನಿಗೆ ಇದೇ ಬ್ರಹ್ಮಲೋಕವು ಎಂದರೆ ಇವನು ಆಗ ಕಾರ್ಯಕರಣಗಳೆಂಬ ಉಪಾಧಿಗಳ ಭೇದವಿಲ್ಲದೆ ಯಾವದೊಂದರ ಸಂಬಂಧವೂ ಇಲ್ಲದೆ ಆತ್ಮಜ್ಯೋತಿಯಾದ ಪರಮಾತ್ಮನಲ್ಲಿಯೇ ಇರುತ್ತಾನೆ. ಇದೇ ಜೀವನಿಗೆ ಪರಮಗತಿಯು, ಇದೇ ಹೆಚ್ಚಿನ ಸಂಪತ್ತು, ಇದೇ ಪರಮಲೋಕವು, ಇದೇ ಪರಮಾನಂದವು. ಈ ಆನಂದದ ಚೂರುಗಳನ್ನೇ ಮಿಕ್ಕ ಜೀವರು ಅನುಭವಿಸುತ್ತಿರುತ್ತಾರೆ- ಎಂದು ಯಾಜ್ಞವಲ್ಕ್ಯನು ಉಪದೇಶಿಸಿದನೆಂಬುದು ಭಾಷ್ಯ ಸಾರವು.

★★★★★

# ಅನೇಕಾತ್ಮಕಬ್ರಹ್ಮವಾದ ನಿರಾಕರಣೆ

**28-4-1939**

**ವಿದ್ವಾನ್ ಎಚ್. ಅನಂತಮೂರ್ತಿಶಾಸ್ತ್ರಿಗಳವರು**

**ಬ್ರಹ್ಮಸೂತ್ರದ ಆರಮ್ಭಣಾಧಿಕರಣ ಭಾಷ್ಯದಲ್ಲಿ ಅನೇಕಾತ್ಮಕಬ್ರಹ್ಮವಾದ ನಿರಾಕರಣವನ್ನು ಹೀಗೆ ವಿವರಿಸಿದೆ,** ವೃಕ್ಷದಲ್ಲಿ ಕೊಂಬೆಗಳಿರುವಂತೆ ಬ್ರಹ್ಮದಲ್ಲಿ ಅನೇಕತ್ವವೂ ಇದೆಯೆಂದೂ ಏಕತ್ವವೂ ನಾನಾತ್ವವೂ ಸತ್ಯವೇ ಎಂದೂ ಇಟ್ಟುಕೊಂಡರೆ ಕರ್ಮಕಾಂಡಕ್ಕೂ ಜ್ಞಾನಕಾಂಡಕ್ಕೂ ಸಮವಾಗಿ ಪ್ರಾಮಾಣ್ಯವು ಬರುವದರಿಂದ ಹಾಗೆ ಇಟ್ಟುಕೊಳ್ಳಬೇಕೆಂದೂ ಹೇಳುವ ವಾದಿಗಳ ಪಕ್ಷವನ್ನು ಈ ಭಾಷ್ಯಭಾಗದಲ್ಲಿ ಖಂಡಿಸಿರುತ್ತದೆ. ಶ್ರುತಿಯಲ್ಲಿ ಕಾರಣವೊಂದೇ ಸತ್ಯವೆಂದು ಹೇಳಿ

ಕಾರ್ಯವನ್ನು ಕೇವಲ ವಾಗ್ವ್ಯವಹಾರವಿಷಯವಾದ ನಾಮಮಾತ್ರವೆಂದು ಹೇಳಿರುತ್ತದೆ; ಆತ್ಮವನ್ನು ಸತ್ಯವೆಂದು ಕರೆದಿರುವದಲ್ಲದೆ ಕ್ರಿಯಾಕಾರಕಫಲವ್ಯ-ವಹಾರಶೂನ್ಯವಾದ 'ಸದಾತ್ಮನೇ' ನೀನು ಎಂದೂ ಉಪದೇಶಮಾಡಿರುತ್ತದೆ. ಪ್ರಪಂಚಸತ್ಯತ್ವವನ್ನು ನಂಬಿದವನು ಅನೃತಾಭಿಸಂಧಿಯುಳ್ಳವನೆಂದು ನಿಂದಿಸಿರುತ್ತದೆ. ಆದ್ದರಿಂದ ಏಕತ್ವವೊಂದೇ ಸತ್ಯವೆಂಬುದು ಶ್ರುತಿಸಮ್ಮತವಾದದ್ದು. ಏಕತ್ವವೇ ಸತ್ಯವಾದರೆ ಪ್ರಮಾಣವ್ಯವಹಾರವು ಹೇಗೆ ಸಾಗಬೇಕೆಂದು ಶಂಕಿಸುವ ಕಾರಣವಿಲ್ಲ; ಏಕೆಂದರೆ ಜ್ಞಾನವಾಗುವದಕ್ಕೆ ಮುಂಚೆ ಸ್ವಪ್ನವ್ಯವಹಾರದಂತೆ ಅದು ಸತ್ಯವಾಗಿಯೇ ತೋರುವದರಿಂದ ಅದರ ವ್ಯವಹಾರಕ್ಕೆ ಅಡ್ಡಿಯಿರುವದಿಲ್ಲ. ವಿಷವೇರಿದ ಶಂಕೆಯಿಂದ ಮರಣವೂ ಸ್ವಪ್ನದರ್ಶನದಿಂದ ಸತ್ಯವಾದ ಫಲವೂ ಅನೃತಾಕ್ಷರದಿಂದ ಸತ್ಯಾಕ್ಷರದ ಜ್ಞಾನವೂ ಆಗುವದರಿಂದ ಅಸತ್ಯವಾದ ವೇದಾಂತವಾಕ್ಯದಿಂದ ಸತ್ಯವಾದ ಬ್ರಹ್ಮದ ಜ್ಞಾನವುಂಟಾಗಬಹುದಾಗಿರುತ್ತದೆ. ಅದ್ವೈತವನ್ನು ಒಪ್ಪಿದಮೇಲೆ ಯಾವ ಆಕ್ಷೇಪವನ್ನೂ ಒಡ್ಡುವದಕ್ಕೆ ಬರುವದಿಲ್ಲವಾದ್ದರಿಂದಲೂ ಶ್ರವಣಾದಿಸಾಧನಗಳಿಂದ ಜ್ಞಾನವು ಉಂಟಾಗಿಯೇ ತೀರುವದರಿಂದಲೂ ಅದಕ್ಕೆ ಅನರ್ಥನಿವೃತ್ತಿಯೆಂಬ ಪ್ರಯೋಜನವಿರುವದರಿಂದಲೂ ಈ ಜ್ಞಾನದಿಂದ ಅನೇಕತ್ವವು ಮಿಥ್ಯೆಯೆಂದು ನಿಶ್ಚಯವಾಗುವದರಿಂದಲೂ ಅನೇಕತ್ವವೂ ಸತ್ಯವೆಂದು ಹೇಳುವದು ಸರಿಯಲ್ಲ-ಎಂಬುದು ಭಾಷ್ಯದ ಸಾರವು.

★★★★★

# ಕ್ಷೇತ್ರಕ್ಷೇತ್ರಜ್ಞಸಂಯೋಗ

**29-4-1939**

**ಬ್ರ|| ಶ್ರೀ|| ಆಸ್ಥಾನಮಹಾವಿದ್ವಾನ್, ಸಾಹಿತ್ಯರತ್ನ**

**ಕೆ. ಗೋಪಾಲಕೃಷ್ಣಶಾಸ್ತ್ರಿಗಳು**

**ಭಗವದ್ಗೀತಾ 13ನೆಯ ಅಧ್ಯಾಯದ 26ರಿಂದ 30ನೆಯವರೆಗಿನ ಶ್ಲೋಕಗಳ ಭಾಷ್ಯದಲ್ಲಿ** ಲೋಕದಲ್ಲಿ ಜನ್ಮವೆಂಬುದು ಕ್ಷೇತ್ರಕ್ಷೇತ್ರಜ್ಞಸಂಯೋಗದಿಂದ ಉಂಟಾಗಿರುವದು. ಇಲ್ಲಿ ಸಂಯೋಗವೆಂದರೆ ಮಿಥ್ಯಾಜ್ಞಾನವು;

(ಇಲ್ಲಿ ಮಿಥ್ಯಾಜ್ಞಾನವೆಂದರೆ ಭಾವರೂಪವಾದ ಅವಿದ್ಯೆಯೆಂದೂ ಇದು ಸುಷುಪ್ತಿಪ್ರಲಯಗಳಲ್ಲಿ ಬೀಜರೂಪವಾಗಿರುವದೆಂದೂ ಅದಕ್ಕೆ ಕಾರಣತ್ವವು ಹೊಂದುವದಿಲ್ಲವೆಂದು **ಕೆ. ಗೋಪಾಲಕೃಷ್ಣಶಾಸ್ತ್ರಿಗಳು** ಪ್ರಾಸಂಗಿಕವಾಗಿ ಹೇಳಿದರು. **ಶ್ರೀಶ್ರೀಗಳವರು** ಅನುವಾದದಲ್ಲಿ - ಅವಿದ್ಯೆಯು ಭಾವವೆ, ಅಭಾವವೆ? - ಎಂಬುದರಲ್ಲಿ ಆಚಾರ್ಯರಿಗೆ ನಿರ್ಭರವಿಲ್ಲವೆಂತಲೂ ಭಾವಾಭಾವಾದಿಸಕಲಕಲ್ಪನೆಗಳೂ ಕ್ಷೇತ್ರಕ್ಷೇತ್ರಜ್ಞರ ಇತರೇತರತದ್ಧರ್ಮಾಧ್ಯಾಸವೇ ಮೂಲವೆಂಬುದರಲ್ಲಿ ಅವರಿಗೆ ಪರಮತಾತ್ಪರ್ಯವೆಂದೂ ತಿಳಿಸಿದರು. **ಇತರೇತರತದ್ಧರ್ಮಾಧ್ಯಾಸಲಕ್ಷಣಃ ಸಂಯೋಗಃ ಕ್ಷೇತ್ರಕ್ಷೇತ್ರಜ್ಞಸ್ವರೂಪವಿವೇಕಾಭಾವನಿಬನ್ಧನಃ** ಎಂಬ 26ನೇ ಶ್ಲೋಕಭಾಷ್ಯದ ಬಲದಿಂದ ವಿವೇಕಜ್ಞಾನಾಭಾವವೇ ಅಧ್ಯಾಸರೂಪಾವಿದ್ಯೆಗೆ ನಿಮಿತ್ತವು. ಆತ್ಮೈಕತ್ವವೇ ಪ್ರಕೃತಭಾಗದ ವಿಷಯವು - ಎಂಬುದನ್ನು ವಿಶದಪಡಿಸಿದರು.)

ಹಗ್ಗ, ಕಪ್ಪೆಚಿಪ್ಪು- ಮುಂತಾದವುಗಳನ್ನು ಕಲ್ಪಿತವಾದ ಹಾವು, ಬೆಳ್ಳಿ-ಎಂದು ಮುಂತಾಗಿ ಭಾವಿಸುವಂತೆ ಕ್ಷೇತ್ರಕ್ಷೇತ್ರಜ್ಞರುಗಳನ್ನು ಒಂದನ್ನು ಇನ್ನೊಂದೆಂದು ತಿಳಿಯುವದು ಮತ್ತು ಒಂದರ ಧರ್ಮವನ್ನು ಇನ್ನೊಂದರ ಧರ್ಮವೆಂದು ಭಾವಿಸುವದು ಇವೆರಡನ್ನು ವಿಂಗಡಿಸಿಕೊಂಡು ಕ್ಷೇತ್ರಜ್ಞನೆಂದರೆ ಯಾವ ಉಪಾಧಿಯೂ ಇಲ್ಲದ ಜ್ಞೇಯವಾದ ಬ್ರಹ್ಮವೇ ಎಂದೂ ಕ್ಷೇತ್ರವೆಂದರೆ

ಮಾಯಾನಿರ್ಮಿತವಸ್ತುಗಳಂತೆಯೂ ಸ್ವಪ್ನಗಂಧರ್ವನಗರಾದಿಗಳಂತೆಯೂ ಅಸತ್ಪದಾರ್ಥವೆಂದೂ ತಿಳಿದುಕೊಂಡರೆ ಮಿಥ್ಯಾಜ್ಞಾನವು ತೊಲಗುತ್ತದೆ. ಯಾವನಿಗೆ ಹೀಗೆ ಮಿಥ್ಯಾಜ್ಞಾನವು ಹೋಗುತ್ತದೆಯೋ ಅವನಿಗೆ ಜನ್ಮಕ್ಕೆ ಕಾರಣವಿರುವದಿಲ್ಲವಾದ್ದರಿಂದ ಅವನು ಮತ್ತೆ ಹುಟ್ಟುವದಿಲ್ಲ. ಸಮಸ್ತಭೂತಗಳೂ ಅವು ನಾಶವಾದರೂ ಅವುಗಳಲ್ಲಿ ಒಂದೇ ರೂಪದಿಂದ ಇರುತ್ತಿರುವ ಪರಮೇಶ್ವರನನ್ನು ಕಂಡವನೇ ಸರಿಯಾದ ಜ್ಞಾನಿಯು; ಆತ್ಮನಲ್ಲಿ ಯಾವ ಭಾವವಿಕಾರಗಳೂ ಇಲ್ಲವೆಂಬುದೇ ನಿಜವಾದ ಜ್ಞಾನವು. ಇಂಥ ಆತ್ಮನ ಸ್ವರೂಪವನ್ನು ತಪ್ಪಾಗಿ ತಿಳಿದುಕೊಳ್ಳುವದರಿಂದ ಮಿಕ್ಕವರು ಅಜ್ಞಾನಿಗಳೆನಿಸುವರು. ಹೀಗೆ ಎಲ್ಲೆಲ್ಲಿಯೂ ಒಂದೇ ರೂಪದಿಂದ ಕೂಟಸ್ಥನಾಗಿ ಈಶ್ವರನಿರುವನೆಂದು ಯಾವನು ತಿಳಿದಿರುವನೋ ಅವನ ಹೊರತು ಮಿಕ್ಕವರು ಆತ್ಮಸ್ವರೂಪವನ್ನು ಮುಚ್ಚಿ ಅನಾತ್ಮವನ್ನೇ ಆತ್ಮನೆಂದು ಎಣಿಸಿರುವದರಿಂದ ಆತ್ಮಹತ್ಯಾದೋಷಕ್ಕೆ ಭಾಗಿಗಳಾಗಿರುವರು. ಆದ್ದರಿಂದ ಜ್ಞಾನಿಯೊಬ್ಬನಿಗೇ ಪರಗತಿಯಾಗುತ್ತದೆ. ಪ್ರಕೃತಿಯೊಂದೇ ಸರ್ವಕರ್ಮಗಳಿಗೂ ಕಾರಣವೆಂದೂ ನಿರ್ಗುಣನೂ ನಿರ್ವಿಶೇಷನೂ ಅಕರ್ತೃವೂ ಆಗಿರುವ ಆತ್ಮನು ಯಾವ ಕರ್ಮವನ್ನೂ ಮಾಡುವದಿಲ್ಲವೆಂದೂ ತಿಳಿದವನೇ ನಿಜವಾಗಿ ತಿಳಿದವನು. ಸಮಸ್ತಭೂತಗಳೂ ಒಂದೇ ಆತ್ಮತತ್ತ್ವದಿಂದ ಬಂದಿರುವವೆಂದೂ ಅದರಲ್ಲಿಯೇ ಆತ್ಮರೂಪದಿಂದ ಇದ್ದುಕೊಂಡಿರುವವೆಂದೂ ಯಾವಾಗ ತಿಳಿದುಕೊಳ್ಳುವನೋ ಆಗಲೇ ಬ್ರಹ್ಮಸ್ವರೂಪವನ್ನು ಪಡೆಯುತ್ತಾನೆ- ಎಂಬುದು ಭಾಷ್ಯದ ಅಭಿಪ್ರಾಯವು.

★★★★★

# ಆಚಾರ್ಯರ ಗುಣಕಥನ

**30-4-1939**

**ಶ್ರೀಶ್ರೀಗಳವರು**

ಆಚಾರ್ಯರ ಅನೇಕ ಗುಣಗಳಲ್ಲಿ ಯಾವದಾದರೂ ಒಂದನ್ನು ಸ್ಮರಣೆಮಾಡಿದರೂ ನಾವು ಧನ್ಯರು; ಈ ದಿನ ಅವರ ಜ್ಞಾನಪ್ರಸಾರದ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಿ ಅವರ ಗುಣಕಥನವನ್ನು ಯಥಾಶಕ್ತಿ ಮಾಡಬೇಕೆಂದಿರುವೆನು. ಆಚಾರ್ಯರ ಕಾಲದಲ್ಲಿ ಪ್ರತಿಯೊಬ್ಬರೂ ತಮ್ಮತಮ್ಮ ದರ್ಶನವೇ ಸರಿಯೆನ್ನುವ ಹಠವಾದಿಗಳಾಗಿದ್ದರು; ನಿಜವಾಗಿ ನೋಡಿದರೆ ಒಬ್ಬ ಪರಮಾತ್ಮನಲ್ಲಿಯೇ ಎಲ್ಲವೂ ಕಲ್ಪಿತವಾಗಿರುವದರಿಂದ ಆ ದರ್ಶನಗಳಲ್ಲಿಯೂ ಒಂದಿಷ್ಟು ನಿಜದಂಶವಿತ್ತು. ಆಚಾರ್ಯರು ಅಂಧಕಾರಕ್ಕೆ ದೀಪವನ್ನು ತಂದಂತೆ ಜ್ಞಾನದಿಂದಲೇ ಮುಕ್ತಿಯೆಂಬ ತಮ್ಮ ಸಿದ್ಧಾಂತವನ್ನು ತಂದು ಪಾದಚಾರಿಗಳಾಗಿ ಓಡಾಡಿ ಆಯಾ ದರ್ಶನದ ಪ್ರಮುಖರನ್ನು ತಮ್ಮಕಡೆಗೆ ಒಲಿಸಿಕೊಂಡು ವಿರಕ್ತಿಗಿಂತ ಹೆಚ್ಚಿಲ್ಲವೆಂದೂ ಆತ್ಮಜ್ಞಾನವೇ ವೈರಾಗ್ಯದ ಮೂಲವೆಂದೂ ತೋರಿಸಿಕೊಟ್ಟರು. ತಮ್ಮ ಅವತಾರ ಸಮಾಪ್ತಿಯಾದ ಮೇಲೆಯೂ ಜ್ಞಾನಸಂಪ್ರದಾಯವು ನಡೆಯುವಂತೆ ಮಠಾಮ್ನಾಯವನ್ನು ಏರ್ಪಡಿಸಿದರು. ತಮ್ಮ ಅಭಿಪ್ರಾಯಗಳನ್ನು ಭಾಷ್ಯಗಳಲ್ಲಿ ನಿಸ್ಸಂದಿಗ್ಧವಾಗಿ ಬರೆದಿಟ್ಟರು, ಈಗ ಅವರ ಸಾನ್ನಿಧ್ಯವು ಅವರ ಗ್ರಂಥಗಳಲ್ಲಿಯೇ ಇದೆ. ಅವುಗಳನ್ನು ಜನರಿಗೆ ತಿಳಿಯಹೇಳುವದೇ ಅವರ ಸೇವೆ. ಆ ಕೆಲಸಕ್ಕೆ ನಾವೆಲ್ಲರೂ ಕೈಹಾಕಬೇಕು- ಎಂದು ಹೇಳಿದರು.

★★★★★

# ಸುಷುಪ್ತಿಯ ವಿಚಾರ

**12-5-1940**

**ಶ್ರೀಶ್ರೀಗಳವರು**

**ಬೃಹದಾರಣ್ಯಕದ ನಾಲ್ಕನೆಯ ಅಧ್ಯಾಯದ ಮೂರನೆಯ ಬ್ರಾಹ್ಮಣದ ಹತ್ತೊಂಬತ್ತು, ಇಪ್ಪತ್ತು- ಈ ಮಂತ್ರಗಳ ಭಾಷ್ಯದಲ್ಲಿ** ಜನಕಮಹಾರಾಜನು ಕಾಮಪ್ರಶ್ನದ ವರವನ್ನು - ತಾನು ಕೇಳಿದ ಪ್ರಶ್ನೆಗೆ ಉತ್ತರಹೇಳುವೆವೆಂಬ ವಾಗ್ದಾನವನ್ನು - ಯಾಜ್ಞವಲ್ಕ್ಯರಿಂದ ಪಡೆದುಕೊಂಡಿದ್ದನು. ಅವನ ಪ್ರಶ್ನೆಗೆ ಉತ್ತರವಾಗಿ ಯಾಜ್ಞವಲ್ಕ್ಯರು ಹೇಳಿದ್ದರ ಒಂದು ಭಾಗವು ಈ ಮಂತ್ರಗಳಲ್ಲಿರುತ್ತದೆ. ಹಿಂದಿನ ಭಾಗದಲ್ಲಿ ಅವಸ್ಥಾತ್ರಯವಿಚಾರವನ್ನು ಮಾಡಿದ್ದಾಗಿದೆ. ಎಚ್ಚರದಲ್ಲಿ ಸಂಗದಿಂದ ಕೂಡಿ ದೇಹೇಂದ್ರಿಯಗಳ ಕಟ್ಟಿಗೆ ಒಳಪಟ್ಟಿರುವಂತೆ ತೋರುವ ಜೀವನು ಕನಸಿನಲ್ಲಿ ದೇಹೇಂದ್ರಿಯಗಳ ಕಟ್ಟನ್ನು ಕಳಚಿಕೊಂಡಿರುವಂತೆಯೂ ಕಾಮಯುಕ್ತನಾಗಿರುವಂತೆಯೂ ತೋರುತ್ತಿರುತ್ತಾನೆ. ಆದರೆ ಸುಷುಪ್ತಿಯಲ್ಲಿ ತಿಳಿಯಾದ ರೂಪವನ್ನು ಪಡೆದು ಅಸಂಗನಾಗಿರುವದು ಕಂಡುಬರುತ್ತದೆ- ಎಂದು ತೀರ್ಮಾನವಾಗಿದೆ. ಈ ವಿಚಾರವನ್ನು ಕಡೆದರೆ ಕಟ್ಟ ಕಡೆಯಲ್ಲಿ ನಿಲ್ಲುವ ಸಿದ್ಧಾಂತವೇನೆಂದರೆ ಆತ್ಮನು ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿರುತ್ತಾನೆ ಎಂಬುದು. ಇದನ್ನು ತಿಳಿಸುವದಕ್ಕಾಗಿ ಇಲ್ಲಿ ಸುಷುಪ್ತಿಯ ವಿಚಾರವನ್ನು ವಿಶೇಷವಾಗಿ ವಿಮರ್ಶೆಗೆ ತೆಗೆದುಕೊಂಡಿರುತ್ತದೆ.

ಹೇಗೆ ಆಕಾಶದಲ್ಲಿ ಹಾರಾಡುತ್ತಿದ್ದ ಗಿಡಗನು ಅಥವಾ ಡೇಗೆಯು ಸೋತು ರೆಕ್ಕೆಗಳನ್ನು ಮುದುರಿಕೊಂಡು ತನ್ನ ಗೂಡನ್ನೇ ಸೇರಿಕೊಳ್ಳುವುದೋ ಅದರಂತೆ ಈ ಜೀವನು ಜಾಗ್ರತ್ಸ್ವಪ್ನಗಳ ವ್ಯವಹಾರದಿಂದ ಬಳಲಿ ಒಂದಿಷ್ಟೂ ಕಾಮವಿಲ್ಲದ, ಒಂದಿಷ್ಟೂ ಕನಸನ್ನೂ ಕಾಣದ, ತನಿನಿದ್ರೆ ಎಂಬ ಅವಸ್ಥೆಯನ್ನು ಹೊಂದುತ್ತಾನೆ. ಆಗ ಜೀವನು ಜಾಗ್ರತ್ಸ್ವಪ್ನಗಳಲ್ಲಿ ಕಾರ್ಯಕರಣಗಳ ಸಂಯೋಗದಿಂದ ಮಾಡುತ್ತಿದ್ದ ಕ್ರಿಯೆಗಳ ಮತ್ತು ಫಲಗಳ ವ್ಯವಹಾರದಿಂದ

ಬೇಸತ್ತು ಯಾವದೊಂದು ಸಂಸಾರಧರ್ಮವೂ ಇಲ್ಲದೆ ಯಾವದೊಂದು ಕ್ರಿಯಾಕಾರಕಗಳ ಆಯಾಸವೂ ಇಲ್ಲದೆ ಇರುವ ತನ್ನ ಆತ್ಮನನ್ನೇ ವಿಶ್ರಾಂತಿಗಾಗಿ ಸೇರಿಕೊಳ್ಳುತ್ತಾನೆ. ಆದ್ದರಿಂದ ಜೀವನಿಗೆ ಬೇರೆ ಉಪಾಧಿಗಳಿಂದಲೇ ಸಂಸಾರವಾಗಿರುತ್ತದೆ; ಆ ಸಂಸಾರವು ಉಪಾಧಿಗಳ ಸ್ವರೂಪವನ್ನು ವಿಂಗಡಿಸಿಕೊಳ್ಳದೆ ಇರುವ ಅವಿದ್ಯೆಯಿಂದಲೇ ಆದದ್ದು. ಈ ಅವಿದ್ಯೆಯು ಜೀವನಿಗೆ ಸ್ವಾಭಾವಿಕವಾದದ್ದೆ? ಆಗಂತುಕವಾದದ್ದೆ? ಸ್ವಾಭಾವಿಕವಾಗಿದ್ದರೆ ಅದು ಎಂದಿಗೂ ಹೋಗಲಾರದು. ನಿಜವಾಗಿ ಅದು ಸ್ವಾಭಾವಿಕವಲ್ಲವೆಂಬುದಕ್ಕೆ ಯುಕ್ತಿಯಿಲ್ಲದೆ ಇಲ್ಲ. ಆ ಯುಕ್ತಿಯನ್ನು ತಿಳಿಸಿಕೊಡುವದೇ ಎರಡನೆಯ ಮಂತ್ರದ ಉದ್ದೇಶವು. ಕನಸಿನ ಅವಸ್ಥೆಯನ್ನು ನೋಡಿದರೆ ಅವಿದ್ಯೆಯು ನಮಗೆ ಸ್ವಾಭಾವಿಕವಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಹೇಗೆಂದರೆ ಎಚ್ಚರದ ವಾಸನೆಯಿಂದಲೇ ನಮಗೆ ಕನಸು ಆಗುವದೆಂದು ವ್ಯವಹಾರದಲ್ಲಿ ಎಲ್ಲರೂ ಒಪ್ಪಿರುತ್ತಾರಷ್ಟೆ. ನಮಗೆ ಕನಸಿನಲ್ಲಿ ಉಂಟಾಗುವ ವಾಸನೆಗಳು ಕೆಟ್ಟವಾಗಿದ್ದರೆ ನಮಗೆ ದುಃಖವಾಗುತ್ತದೆ; ಅವು ಒಳ್ಳೆಯವಾಗಿದ್ದರೆ ಸುಖವಾಗುತ್ತದೆ. ಕೆಟ್ಟ ವಾಸನೆಯ ಫಲವಾಗಿ ಯಾರೋ ತನ್ನನ್ನು ಹೊಡೆಯುವಂತೆ, ವಶಗೊಳಿಸಿಕೊಳ್ಳುವಂತೆ, ಆನೆಯು ಓಡಿಸಿಕೊಂಡು ಬಂದಂತೆ, ತಾನು ಗುಂಡಿಯಲ್ಲಿ ಬಿದ್ದಂತೆ ಹೀಗೆಲ್ಲ ಅಲ್ಲಿ ತಪ್ಪುತಿಳಿವಳಿಕೆಯುಂಟಾಗುವದುಂಟು. ಇದರಂತೆಯೇ ಒಳ್ಳೆಯ ವಾಸನೆಯಿಂದ ತಾನು ದೇವನಾಗಿರುವಂತೆಯೂ ಅರಸನಾಗಿರುವಂತೆಯೂ ತಿಳಿವಳಿಕೆಯುಂಟಾಗಬಹುದು. ಎಚ್ಚರದಲ್ಲಿ ಎಂಥ ತಿಳಿವಳಿಕೆಯು ಹೆಚ್ಚುತ್ತದೆಯೋ ಅದಕ್ಕನುಗುಣವಾದ ವಾಸನೆಯಿಂದ ಕನಸಿನಲ್ಲಿಯೂ ಕಾಣುವದರಿಂದ ಎಚ್ಚರದಲ್ಲಿ ಅವಿದ್ಯೆಯು ಅತ್ಯಂತವಾಗಿ ಕಳೆದುಹೋಗಿ ತಿಳಿವಳಿಕೆಯು ಹೆಚ್ಚಿದರೆ ಅದೇ ಭಾವನೆಯಿಂದ ಕನಸಿನಲ್ಲಿಯೂ ನಾನು ಸರ್ವಾತ್ಮಭಾವವನ್ನು ಹೊಂದಿರುತ್ತೇನೆಂದು ಭಾವಿಸಿಕೊಳ್ಳುತ್ತಾನೆ. ಹೀಗೆ ಎಚ್ಚರದಲ್ಲಿಯೂ ಕನಸಿನಲ್ಲಿಯೂ ಅವಿದ್ಯೆಯು ಎಷ್ಟೇ ದಟ್ಟವಾಗಿ ತೋರಿಕೊಳ್ಳುತ್ತಿದ್ದರೂ ವಿದ್ಯಾವಾಸನೆಯು ಪ್ರಬಲವಾದಂತೆಲ್ಲ ಅದು ಕರಗುತ್ತಾ ಹೋಗಿ ಕೊನೆಗೆ ವಿದ್ಯೆಯು ತೀರ ಕೊನೆಯ ಮಟ್ಟಕ್ಕೆ ಏರಿದರೆ ಹಗ್ಗವನ್ನರಿತವನಿಗೆ ತೋರಿಕೆಯ ಹಾವಿನ ಅರಿವೇ ಇಲ್ಲದಹಾಗಾಗುವಂತೆ

ಅವಿದ್ಯೆಯು ತೀರ ಇಲ್ಲವಾಗಿಬಿಡುತ್ತದೆ. ಆದ್ದರಿಂದ ಅವಿದ್ಯೆಯು ಜೀವನ ಸ್ವಭಾವವಲ್ಲವೆಂದೂ ಸುಷುಪ್ತಿಯಲ್ಲಿರುವಂತೆ ಸರ್ವಸಂಸಾರಾತೀತನಾಗಿ ರುವದೇ ತನ್ನ ಸ್ವಭಾವವೆಂಬ ತಿಳಿವಳಿಕೆಯಿಂದ ಅದನ್ನು ಪೂರ್ತಿಯಾಗಿ ತೊಲಗಿಸಿಕೊಳ್ಳಬಹುದೆಂದೂ ನಿಶ್ಚಯವಾಗುತ್ತದೆ – ಎಂಬುದು ಭಾಷ್ಯದ ಸಾರವು.

★★★★★

# ಎಲ್ಲೆಲ್ಲಿಯೂ ಬ್ರಹ್ಮವೊಂದೆ

**13-5-1940**

**ಬ್ರ॥ಶ್ರೀ॥ ಕೆ. ಪಿ. ನಾರಾಯಣಶಾಸ್ತ್ರಿಗಳವರು**

**ಮುಂಡಕೋಪನಿಷತ್ತಿನ ಎರಡನೆಯ ಮುಂಡಕದ ಎರಡನೆಯ ಖಂಡದಲ್ಲಿ 7 ರಿಂದ 11 ರವರೆಗಿನ ಮಂತ್ರಗಳ ಭಾಷ್ಯದಲ್ಲಿ –** ಪರಮಾತ್ಮನು ಆಕಾಶದಂತೆ ಸರ್ವಗತನಾಗಿರುವದರಿಂದ ಇಂಥದ್ದೊಂದು ಕಡೆಯಲ್ಲಿದಾನೆಂದು ಹೇಳುವದಕ್ಕೆ ಬರುವದಿಲ್ಲ. ಆದರೂ ಹೃದಯದೊಳಗಿರುವ ಆಕಾಶದಲ್ಲಿರುವವನಂತೆ ಮನೋವೃತ್ತಿಗಳಿಂದಲೇ ತತ್ಸಾಕ್ಷಿಯಾಗಿ ಕಾಣಬರುತ್ತಾನೆ. ಅವನು ಪ್ರಾಣವನ್ನೂ ಲಿಂಗಶರೀರವನ್ನೂ ಒಂದು ಸ್ಥೂಲ ಶರೀರದಿಂದ ಇನ್ನೊಂದು ಶರೀರಕ್ಕೆ ಒಯ್ಯುತ್ತಿರುವನು. ಅವನು ಅನ್ನಮಯವಾದ ಶರೀರದಲ್ಲಿ ಹೃದಯದಲ್ಲಿ ಬುದ್ಧಿಯನ್ನಿಟ್ಟುಕೊಂಡು ಅದಕ್ಕೆ ಸಾಕ್ಷಿಯಾಗಿರುತ್ತಿರುವನು. ಇಂಥ ಆತ್ಮನ ಸ್ವರೂಪವನ್ನು ಶಮದಮಾದಿಸಂಪನ್ನನಾಗಿ ಶಾಸ್ತ್ರಾಚಾರ್ಯರ ಉಪದೇಶದಿಂದುಂಟಾದ ಅರಿವಿನಿಂದ ಸಾಕ್ಷಾತ್ಕರಿಸಿಕೊಂಡವರು ಅದು ಆನಂದರೂಪವಾಗಿ ಎಲ್ಲೆಲ್ಲಿಯೂ ಇರುವದೆಂಬುದನ್ನು ಕಂಡುಕೊಳ್ಳುವರು. ಆ ಕಾರ್ಯಕಾರಣರೂಪನಾಗಿರುವ ಪರಮಾತ್ಮನೇ ತಾನೆಂದು ಕಂಡುಕೊಂಡವರಿಗೆ ಹೃದಯದಲ್ಲಿ ಅದುವರೆಗೆ ಕೂಡಿಕೊಂಡಿದ್ದ ಅವಿದ್ಯಾವಾಸನೆಗಳ ರಾಶಿಯು ನಾಶವಾಗುವದು, ಸಕಲ

ಸಂಶಯಗಳೂ ತೊಲಗುವವು, ಹಿಂದೆ ರಾಶಿ ಹಾಕಿಕೊಂಡಿದ್ದ ಕರ್ಮಗಳೆಲ್ಲವೂ ಸವೆದುಹೋಗುವವು. ಒರೆಯಲ್ಲಿಟ್ಟ ಕತ್ತಿಯಂತೆ ಬುದ್ಧಿಯೊಳಗೆ ಸಾಕ್ಷಿಯಾಗಿರುವ ಬ್ರಹ್ಮರೂಪವಾದ ಈ ಆತ್ಮನು ಅತ್ಯಂತ ಶುಭ್ರನಾಗಿ, ಬೆಳಕುಗಳಿಗೆಲ್ಲ ಬೆಳಕಾಗಿರುತ್ತಾನೆ. ಇವನ ಸ್ವರೂಪವನ್ನು ಆತ್ಮಜ್ಞಾನಿಗಳು ಮಾತ್ರವೇ ಬಲ್ಲರು. ಆತ್ಮಚೈತನ್ಯವನ್ನು ಸೂರ್ಯ, ಚಂದ್ರ, ಮಿಂಚು, ಬೆಂಕಿ- ಇವು ಯಾವದೊಂದೂ ಬೆಳಗಲಾರವು; ಅದರ ಬೆಳಕಿನಿಂದಲೇ ಇವು ಬೆಳಗುತ್ತಾ ತೋರಿಕೊಳ್ಳುತ್ತಿರುವವು. ಚೆನ್ನಾಗಿ ನೋಡಿದರೆ ಈ ಬ್ರಹ್ಮವೊಂದೇ ಸತ್ಯವು, ಮಿಕ್ಕದ್ದೆಲ್ಲವೂ ಹೆಸರಿಗೆ ಮಾತ್ರ ಇದ್ದುಕೊಂಡಿರುವುದು; ಹಿಂದೆ, ಮುಂದೆ, ಎಡಕ್ಕೆ, ಬಲಕ್ಕೆ, ಕೆಳಗೆ, ಮೇಲೆ - ಎಲ್ಲೆಲ್ಲಿಯೂ ಬ್ರಹ್ಮವೊಂದೇ, ಇದೆಲ್ಲವೂ ಉತ್ಕೃಷ್ಟವಾದ ಬ್ರಹ್ಮವೇ ಆಗಿರುತ್ತದೆ- ಎಂಬುದು ಮಂತ್ರಗಳ ಅಭಿಪ್ರಾಯವು.

★★★★★

# ಪರಿಣಾಮವಾದಖಂಡನೆ

**14-5-1940**

**ಬ್ರ॥ ಶ್ರೀ॥ ಕೆ.ಪಿ.ನಾರಾಯಣಶಾಸ್ತ್ರಿಗಳು**

**ಬ್ರಹ್ಮಸೂತ್ರ, ಎರಡನೆಯ ಅಧ್ಯಾಯ ಒಂದನೆಯ ಪಾದ ಹದಿನಾಲ್ಕನೆಯ ಸೂತ್ರ**ದಲ್ಲಿ ಪರಿಣಾಮವಾದಖಂಡನೆಯ ಭಾಷ್ಯದ ಅರ್ಥವಿವರಣೆ:

ಜಗತ್ತು ಕಾರ್ಯವೆಂದೂ ಬ್ರಹ್ಮವು ಕಾರಣವೆಂದೂ ಇಟ್ಟುಕೊಂಡಾಗ ಜಗತ್ತಿನಲ್ಲಿ ಭೋಕ್ತೃಗಳಾದ ಜೀವರೂ ಭೋಗ್ಯವಾದ ಶಬ್ದಾದಿವಿಷಯಗಳೂ ಬೇರೆಬೇರೆಯಾಗಿ ತೋರುತ್ತಿರುವವು. ಸಮುದ್ರವು ತಾನು ಒಂದೇ ಆಗಿದ್ದರೂ ನೊರೆ, ತೆರೆ, ಅಲೆ, ನೀರುಗುಳ್ಳೆ - ಮುಂತಾದವುಗಳು ಬೇರೆಬೇರೆಯಾಗಿ

ಯೇ ತೋರುವಂತೆ ಬ್ರಹ್ಮವು ಒಂದೇ ಆಗಿದ್ದರೂ ಜೀವರೂ ವಿಷಯಗಳೂ ಬೇರೆಬೇರೆಯಾಗಿರಬಹುದಾಗಿದೆ ! ಆದರೆ ಆಗಲೂ ನೊರೆ, ತೆರೆ ಮುಂತಾದವುಗಳು ಸಮುದ್ರದ ನೀರೇ ಆಗಿರುವಂತೆ ಜೀವರೂ ವಿಷಯಗಳೂ ಪರಬ್ರಹ್ಮವೇ ಆಗಿರುತ್ತದೆ – ಎಂದು ಹಿಂದಿನ ಸೂತ್ರದಲ್ಲಿ ಪರಮಾರ್ಥದೃಷ್ಟಿಯನ್ನವಲಂಬಿಸಿ ಕಾರ್ಯಕಾರಣವಿಭಾಗವು ನಿಜವಾಗಿಲ್ಲದೆ ಇರುವದರಿಂದ ಎಲ್ಲವೂ ಕಾರಣವೆಂಬ ಬ್ರಹ್ಮವೇ ಆಗಿರುತ್ತದೆ ಎಂಬ ಪರಿಹಾರವನ್ನು ಹೇಳಿರುತ್ತದೆ.

ಪ್ರಕೃತದಲ್ಲಿ ಶ್ರುತಿಗೆ ಕಾರ್ಯಕಾರಣವಿಭಾಗವು ಪರಮಾರ್ಥವೆಂಬ ಅಭಿಪ್ರಾಯವೇ ಇದೆಯೆ, ಇಲ್ಲವೆ? – ಎಂಬುದನ್ನು ವಿಚಾರಮಾಡಬೇಕು. 'ಮಣ್ಣಿನಿಂದ ಆಗಿರುವ ಮಡಕೆಯೇ ಮುಂತಾದವುಗಳೆಲ್ಲವೂ ಮಣ್ಣನ್ನು ಅರಿತರೆ ಜ್ಞಾತವಾಗುವಂತೆ ಬ್ರಹ್ಮವನ್ನು ಅರಿತರೆ ಜಗತ್ತೆಲ್ಲವನ್ನೂ ಅರಿತಂತೆ ಆಗುತ್ತದೆ' ಎಂದು ಮುಂತಾಗಿ ಪರಿಣಾಮವಾಗುವ ಮಣ್ಣು ಮುಂತಾದವುಗಳನ್ನೇ ಬ್ರಹ್ಮಕ್ಕೆ ಉಪಮಾನವಾಗಿ ಕೊಟ್ಟಿರುವದರಿಂದ ಬ್ರಹ್ಮವೂ ಜಗದ್ರೂಪದಲ್ಲಿ ಮಣ್ಣಿನಂತೆ ನಿಜವಾಗಿಯೇ ಪರಿಣಾಮವಾಗುವದೆಂದೇ ಏತಕ್ಕೆ ಹೇಳಬಾರದು? ಎಂಬ ಶಂಕೆಯು ಎದ್ದುಕೊಳ್ಳುತ್ತದೆ. ಆದರೆ ಬ್ರಹ್ಮದಲ್ಲಿ ಯಾವ ವಿಕಾರವೂ ಇಲ್ಲವೆಂದು ಅನೇಕ ಶ್ರುತಿಗಳಲ್ಲಿ ಸ್ಪಷ್ಟವಾಗಿ ಹೇಳಿರುವದರಿಂದ ಈ ಶಂಕೆಗೆ ಕಾರಣವಿರುವದಿಲ್ಲ. ಬ್ರಹ್ಮದಲ್ಲಿ ವಿಕಾರವು ಇದೆ, ಅದು ವಿಕಾರವಿಲ್ಲದೆಯೂ ಇದೆ – ಎಂದು ಹೇಳುವದು ವಿರೋಧವಾಗುತ್ತದೆ. ಆದ್ದರಿಂದ ಬ್ರಹ್ಮವು ಜಗದ್ರೂಪವಾಗಿ ಪರಿಣಮಿಸುತ್ತದೆಯೆಂದು ಹೇಳುವದು ಸರಿಯಲ್ಲ. ಇದಲ್ಲದೆ ಬ್ರಹ್ಮವು ಅದ್ವಿತೀಯವಾದದ್ದೆಂದು ತಿಳಿದರೆ ಮೋಕ್ಷವಾಗುವದೆಂದು ಎಲ್ಲಿಯೂ ಹೇಳಿಲ್ಲ. ಆದ್ದರಿಂದ ಫಲವನ್ನು ಹೇಳಿರುವ ಏಕತ್ವದರ್ಶನಕ್ಕೆ ಅಂಗವಾಗಿಯೇ ಪರಿಣಾಮಾದಿಗಳನ್ನು ಹೇಳಿರುತ್ತದೆಯೆಂದೂ ಸೃಷ್ಟ್ಯಾದಿಶ್ರುತಿಗಳಿಂದ ಏಕತ್ವವನ್ನೇ ತಿಳಿದುಕೊಳ್ಳಬೇಕೆಂದೂ ಏರ್ಪಡುತ್ತದೆ. ''ಬ್ರಹ್ಮವು ಅದ್ವಿತಿಯವೇ ಆದರೆ ಸ್ವತಂತ್ರನಾದ ಈಶ್ವರ, ಪರವಶರಾದ ಜೀವರು – ಎಂಬ ವಿಭಾಗವೇ ಇಲ್ಲದೆ ಹೋಗುವದಲ್ಲ!' ಎಂದು ಪರಿಣಾಮವಾದಿಯು ಕೇಳಬಹುದು. ಆದರೆ ಅವಿದ್ಯೆಯಿಂದ ಕಲ್ಪಿತವಾಗಿರುವ ನಾಮರೂಪಗಳೆಂಬ ಉಪಾಧಿಯಿಂದ ಈಶ್ವರನೆಂದೂ ಆ ನಾಮ ರೂಪಗಳಿಂದಾದ ಕಾರ್ಯಕರಣಗಳೆಂಬ ಉಪಾಧಿಯಿಂದ ಜೀವನೆಂದೂ ಒಂದೇ ಚೈತನ್ಯಕ್ಕೆ ವ್ಯಾವಹಾರಿಕವಿಭಾಗವು ಉಂಟಾಗಬಹುದಾಗಿರುತ್ತದೆ. ಪರಮಾರ್ಥದೃಷ್ಟಿಯಿಂದ ಆತ್ಮಚೈತನ್ಯವು

ಅದ್ವಿತೀಯವಾಗಿಯೇ ಇರುವದೆಂಬ ವಾದಕ್ಕೆ ಇದರಿಂದೇನೂ ಹಾನಿಯಿಲ್ಲ. ವ್ಯಾವಹಾರಿಕದೃಷ್ಟಿಯಿಂದ ಒಪ್ಪಿರುವ ಈ ಪರಿಣಾಮವನ್ನು ಅವಲಂಬಿಸಿಯೇ ಸಗುಣೇಶ್ವರನ ಉಪಾಸನೆಯನ್ನೂ ಶ್ರುತಿಯಲ್ಲಿ ವಿಧಿಸಿದೆ ಎಂಬುದು ಸೂತ್ರಕಾರರ ಆಶಯವು. ಆದ್ದರಿಂದ ವ್ಯವಹಾರದೃಷ್ಟಿಯಿಂದ ಪರಿಣಾಮವು ಸರಿಯಾದರೂ ನಿಜವಾಗಿ ನೋಡಿದರೆ ಆತ್ಮನು ಅದ್ವಿತೀಯನೇ ಆಗಿರುತ್ತಾನೆ-ಎಂಬುದು ಭಾಷ್ಯದ ಅಭಿಪ್ರಾಯವು.

★★★★★

# ತುರೀಯನ ಸ್ವಭಾವ

**15-5-1940**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳವರು**

**ಮಾಂಡೂಕ್ಯೋಪನಿಷತ್ತಿನ ಆಗಮಪ್ರಕರಣದ 10ರಿಂದ 18ರ ವರೆಗಿನ** ಕಾರಿಕೆಗಳಲ್ಲಿ ತುರೀಯನ-ಎಂದರೆ ಅವಸ್ಥಾತ್ರಯಾತೀತನಾದ ಆತ್ಮನ-ಸ್ವಭಾವವನ್ನು ತಿಳಿಸಿರುತ್ತದೆ. ತುರೀಯನಲ್ಲಿ ಯಾವಾಗಲೂ ದುಃಖಗಳಿರುವದಿಲ್ಲ. ಅವನಿಗೂ ವಿಶ್ವತೈಜಸಪ್ರಾಜ್ಞರಿಗೂ ಇರುವ ತಾರತಮ್ಯವನ್ನು ತಿಳಿದುಕೊಂಡವನೇ ಜ್ಞಾನಿಯು. ಪರಮಾರ್ಥವನ್ನು ಅರಿಯದ್ದೆಂಬ ಅಗ್ರಹಣ, ತಪ್ಪಾಗಿ ತಿಳಿಯುವದೆಂಬ ಅನ್ಯಥಾಗ್ರಹಣ- ಇವೆರಡೂ ವಿಶ್ವತೈಜಸರಲ್ಲಿರುತ್ತವೆ; ಅಗ್ರಹಣವೆಂಬುದೊಂದೇ ಪ್ರಾಜ್ಞನಲ್ಲಿರುತ್ತದೆ. ಅಗ್ರಹಣವು ಕಾರಣವು, ಅನ್ಯಥಾಗ್ರಹಣವು ಕಾರ್ಯವು; ಈ ಎರಡೂ ಇಲ್ಲದಿರುವ ಸ್ವರೂಪವೇ ತುರೀಯವು. ಪ್ರಾಜ್ಞನು ಏನನ್ನೂ ಅರಿಯುವದಿಲ್ಲ, ತುರೀಯನು ಎಲ್ಲವನ್ನೂ ಅರಿಯುವ ಚೈತನ್ಯಸ್ವರೂಪನು; ಪ್ರಾಜ್ಞನಿಗೂ ದ್ವೈತಗ್ರಹಣವಿಲ್ಲ, ತುರೀಯನಿಗೂ ಇಲ್ಲ; ಆದರೆ ಪ್ರಾಜ್ಞನಿಗೆ ಅರಿಯದಿರುವದೆಂಬುದು ಮುಂದೆ ಅನ್ಯಥಾಗ್ರಹಣಕ್ಕೆ ಕಾರಣವಾಗಿರುತ್ತದೆ, ತುರೀಯನಲ್ಲಿ ಅದಿಲ್ಲ. ವಿಶ್ವತೈಜಸರಿಗೆ ಕನಸಿನಂತೆ ಮತ್ತೊಂದನ್ನು ಕಾಣುವನಿದ್ರೆ,

ಪ್ರಾಜ್ಞನಿಗೆ ಏನನ್ನೂ ಕಾಣದ ನಿದ್ರೆ; ತುರೀಯನಿಗೆ ನಿದ್ರೆಯೂ ಇಲ್ಲ, ಕನಸೂ ಇಲ್ಲ. ತತ್ತ್ವವನ್ನು ಅರಿಯದಿರುವದು ನಿದ್ರೆ, ತಪ್ಪಾಗಿ ಅರಿಯುವದು ಕನಸು; ಈ ಎರಡು ಬಗೆಯ ಭ್ರಾಂತಿಯು ತೊಲಗಲು ತುರೀಯನಾಗುವನು; ಜಾಗ್ರತ್ಸ್ವಪ್ನಸುಷುಪ್ತಿಗಳೆಂಬಿವನ್ನು ಕಾಣುವದೆಂಬುದೇ ಒಂದು ಸ್ವಪ್ನವು; ಅದನ್ನು ಕಾಣುವದಕ್ಕೆ ಬೇಕಾಗಿರುವ ಅನಾದ್ಯಜ್ಞಾನವೇ ನಿದ್ರೆಯು. ಸದ್ಗುರುವಿನ ಅನುಗ್ರಹದಿಂದ ಈ ನಿದ್ರೆಯಿಂದ ಎಚ್ಚತ್ತವನು 'ನನಗೆ ನಿದ್ರೆಯಿಲ್ಲ, ಕನಸಿಲ್ಲ, ನಾನು ಹುಟ್ಟಿದ್ದೇ ಇಲ್ಲ' ಎಂದು ಅರಿತುಕೊಳ್ಳುವನು. ಆತ್ಮನಲ್ಲಿ ಜಾಗ್ರದಾದಿ ಪ್ರಪಂಚವು ಮೊದಲು ಇದ್ದುಕೊಂಡಿದ್ದು ಆಮೇಲೆ ತೊಲಗುವದಿಲ್ಲ; ಅದು ಇದೆಯೆಂಬುದೇ ಅಜ್ಞಾನವು, ನಿಜವಾಗಿ ಆತ್ಮನು ಅದ್ವೈತನೇ. ಗುರುವು ಬೋಧಿಸಿದ ಬಳಿಕ ದ್ವೈತವು ತೊಲಗುವದೆಂದು ತಿಳಿಯಬಾರದು; ಗುರು, ಶಿಷ್ಯ, ಉಪದೇಶ-ಎಂಬ ವಿಕಲ್ಪವು ವಿಷಯಬೋಧನೆಗಾಗಿ ಕಲ್ಪಿತವಾಗಿದ್ದರೂ ಈ ವಿಕಲ್ಪವು ಬೋಧನೆಯ ಹಿಂದೂ, ಬೋಧನೆಯ ಕಾಲಕ್ಕೂ, ಬೋಧನೆಯಾದ ಮೇಲೂ ಇರುವದೇ ಇಲ್ಲ. ನಿತ್ಯನಿರ್ವಿಕಲ್ಪನಾದ ನಿಷ್ಪ್ರಪಂಚನಾದ ಆತ್ಮನೇ ನಾನು-ಎಂಬ ಅರಿವೇ ಪರಮಾರ್ಥಜ್ಞಾನವು; ಜ್ಞಾನಿಗೆ ಯಾವಾಗಲೂ ಎಂದಿಗೂ ದ್ವೈತವು ಇರುವದೇ ಇಲ್ಲ-ಎಂಬುದು ಕಾರಿಕೆಗಳ ಅಭಿಪ್ರಾಯವು.

★★★★★

## ಭಗವಂತನನ್ನು ಭಜಿಸಿದವರು ಆತನನ್ನೇ ಸೇರುತ್ತಾರೆ

**16-5-1940**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರು**

**ಭಗವದ್ಗೀತೆಯಲ್ಲಿ ಏಳನೆಯ ಅಧ್ಯಾಯದ 13ರಿಂದ 23ರವರೆಗಿನ ಶ್ಲೋಕಗಳ ಭಾಷ್ಯಾರ್ಥವು ಹೀಗಿದೆ:** ಪ್ರಾಣಿಗಳ ಕರ್ಮವಶದಿಂದ ಉಂಟಾಗುವ ಸಾತ್ತ್ವಿಕರಾಜಸತಾಮಸ ಪದಾರ್ಥಗಳೆಲ್ಲವೂ ಪರಮಾತ್ಮನಿಂದಲೇ ಉಂಟಾಗುತ್ತವೆಯಾದರೂ ಅವು ಆತನ ವಶದಲ್ಲಿರುವವೇ ಹೊರತು ಆತನು

ಅವುಗಳ ವಶದಲ್ಲಿರುವದಿಲ್ಲ. ಹೀಗೆ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿರುವ ಪರಮಾತ್ಮನ ಸ್ವರೂಪವನ್ನು ಅರಿತುಕೊಳ್ಳಲಾರದೆ ಜನರು ಈ ಮೂರು ಗುಣಗಳ ಪದಾರ್ಥಗಳಿಂದಲೇ ಮೋಹಿತರಾಗಿರುತ್ತಾರೆ. ಈ ಗುಣಗಳು ಮಾಯಿಕವಾಗಿ ಬರಿಯ ತೋರಿಕೆಯಾಗಿರುತ್ತವೆಯಾದರೂ ಅಜ್ಞರು ಈ ಮಾಯೆಯನ್ನು ದಾಟಲಾರದೆ ಇರುತ್ತಾರೆ. ಯಾರು ಸರ್ವಧರ್ಮಗಳನ್ನೂ ಬಿಟ್ಟು ತಮ್ಮ ಆತ್ಮನಾಗಿರುವ ಪರಮೇಶ್ವರನನ್ನೇ ಶರಣುಹೊಂದಿರುವರೋ ಅವರು ಮಾತ್ರ ಇದನ್ನು ದಾಟುವರು. ಮಾಯೆಗೆ ಸಿಕ್ಕಿದವರು ಆಸುರಸಂಪತ್ತಿನಿಂದ ಜ್ಞಾನವನ್ನು ಕಳೆದುಕೊಂಡು ಭಗವಂತನನ್ನು ಹೊಂದದೆ ಇರುತ್ತಾರೆ; ಸುಕೃತಿಗಳುಮಾತ್ರ ಆತನನ್ನೇ ಭಜಿಸುತ್ತಾರೆ. ಪುಣ್ಯವಂತರಾದ ಈ ಭಕ್ತರು ನಾಲ್ಕುಬಗೆ. ಇವರಲ್ಲಿ ಸಂಕಟಕ್ಕೆ ಸಿಕ್ಕಿದವನು, ಪುರುಷಾರ್ಥವನ್ನು ಬಯಸುವವನು, ಜ್ಞಾನವನ್ನು ಕೋರುವವನು- ಈ ಮೂವರು ಪರಮೇಶ್ವರನನ್ನೇ ಭಜಿಸುವರಾದರೂ ನಾಲ್ಕನೆಯವನಾದ ಜ್ಞಾನಿಯು ಯಾವದೊಂದು ನಿಮಿತ್ತವೂ ಇಲ್ಲದೆ ಭಗವಂತನನ್ನೇ ಭಜಿಸುತ್ತಿರುವದರಿಂದ ಅವನು ಪರಮಭಕ್ತನಾಗಿರುತ್ತಾನೆ. ಇಂಥ ಜ್ಞಾನಭಕ್ತಿಯು ಎಷ್ಟೋ ಜನ್ಮಗಳ ತರುವಾಯ ದೊರಕುತ್ತದೆ; ಏಕೆಂದರೆ ಜನರಿಗೆ ಸಾಮಾನ್ಯವಾಗಿ ಬಗೆಬಗೆಯ ಕಾಮಗಳಿರುವದರಿಂದ ಆಯಾ ಕಾಮಗಳ ಪೂರ್ತಿಗಾಗಿ ಬೇರೆಬೇರೆ ದೇವತೆಗಳನ್ನು ಭಜಿಸುತ್ತಿರುತ್ತಾರೆ. ಆದರೆ ಆ ಫಲವು ಕೊನೆಗಾಣತಕ್ಕದ್ದೆಂದೂ ಪರಮೇಶ್ವರನ ಆರಾಧನೆಯೇ ನಿತ್ಯಫಲವನ್ನು ಕೊಡತಕ್ಕದ್ದೆಂದೂ ಯಾವಾಗ ಮನಸ್ಸಿಗೆ ತಟ್ಟುವದೋ ಆಗ ವಾಸುದೇವನೇ ಎಲ್ಲವೂ ಸರ್ವದೇವತಾಮಯನೂ ಆಗಿರುತ್ತಾನೆ ಎಂದು ನಿಶ್ಚಯಿಸಿ ಆತನೊಬ್ಬನನ್ನೇ ಶರಣು ಹೊಂದುತ್ತಾನೆ, ದೇವತೆಗಳನ್ನು ಭಜಿಸುವವರು ದೇವತೆಗಳನ್ನು ಹೊಂದುವಂತೆ ಭಗವಂತನನ್ನು ಭಜಿಸಿದವರು ಆತನನ್ನೇ ಸೇರುತ್ತಾರೆಂಬುದು ಸ್ವಾಭಾವಿಕವಾಗಿರುತ್ತದೆ. ಇಂಥ ಭಕ್ತರಿಗೂ ಭಗವಂತನಿಗೂ ಯಾವ ಭೇದವೂ ಇಲ್ಲ-ಎಂಬುದು ಶ್ಲೋಕಗಳ ಅಭಿಪ್ರಾಯವು.

★★★★★

# ಸುಷುಪ್ತಿಸ್ವರೂಪದ ವರ್ಣನೆ

**17-5-1940**

**ಶ್ರೀಶ್ರೀಗಳವರು**

**ಪ್ರಶ್ನೋಪನಿಷತ್ತಿನ ನಾಲ್ಕನೆಯ ಪ್ರಶ್ನದ 6ರಿಂದ 11ರವರೆಗಿ**ನ ಮಂತ್ರಗಳಲ್ಲಿ ಸೌರ್ಯಾಯಣಿಗಾರ್ಗ್ಯನು ಕೇಳಿದ ಪ್ರಶ್ನೆಗೆ ಉತ್ತರವಾಗಿ ಪಿಪ್ಪಲಾದನು ಹೇಳಿದ ಸುಷುಪ್ತಿಸ್ವರೂಪದ ವರ್ಣನೆಯಿದೆ. ಮನಸ್ಸು ವಾಸನೆಗಳೆಲ್ಲವನ್ನೂ ಉಪಸಂಹಾರ ಮಾಡಿಕೊಂಡು ಸಾಮಾನ್ಯ ರೂಪದಿಂದ ಶರೀರವೆಲ್ಲವನ್ನೂ ವ್ಯಾಪಿಸಿಕೊಂಡಾಗ ಸ್ವಪ್ನಗಳನ್ನು ಕಾಣುವದಿಲ್ಲ, ಸುಷುಪ್ತಿಯ ಸುಖವುಂಟಾಗುತ್ತದೆ. ಆ ಕಾಲಕ್ಕೆ ಅವಿದ್ಯಾಕಾಮಕರ್ಮದಿಂದಾಗಿರುವ ಕಾರ್ಯಕಲಾಪಗಳು ಇಲ್ಲವಾಗುವವು; ಆಗ ಉಪಾಧಿಗಳ ನಾಶದಿಂದ ಅದ್ವಿತೀಯವಾದ ನಿರುಪಾಧಿಕಸ್ವರೂಪವೊಂದೇ ಉಳಿದುಕೊಳ್ಳುತ್ತದೆ. ಹಕ್ಕಿಗಳು ತಮ್ಮ ವಾಸದ ಮರಕ್ಕೆ ಹೋಗುವಂತೆ ಪೃಥಿವ್ಯಾದಿಭೂತಗಳು, ತನ್ಮಾತ್ರೆಗಳು, ಇಂದ್ರಿಯಗಳು, ವಿಷಯಗಳು, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಮತ್ತು ಈ ಅಂತಃಕರಣಚತುಷ್ಟಯದ ವಿಷಯಗಳು, ಪ್ರಾಣವು ಮತ್ತು ಅದರಿಂದ ಕೂಡಿಕೊಂಡಿರುವದು-ಇವೆಲ್ಲವೂ ಪರಮಾತ್ಮನಲ್ಲಿ ಲಯವಾಗುತ್ತದೆ. ದ್ರಷ್ಟೃ, ಶ್ರೋತೃ-ಮುಂತಾದ ರೂಪದಿಂದ ತೋರಿಕೊಳ್ಳುವ ವಿಜ್ಞಾನಾತ್ಮನೂ ಪರಮಾತ್ಮನಲ್ಲಿ ಅಡಗಿಕೊಳ್ಳುತ್ತಾನೆ. ಆ ಪರಮಾತ್ಮಸ್ವರೂಪವನ್ನು ಅರಿತವನು ಸರ್ವಜ್ಞನೂ ಸರ್ವನೂ ಆಗುತ್ತಾನೆ- ಎಂಬುದು ಮಂತ್ರಗಳ ಅಭಿಪ್ರಾಯವು.

★★★★★

# ಆಚಾರ್ಯರ ಗುಣಕಥನ

**18-5-1940**

**ಶ್ರೀಶ್ರೀಗಳವರು**

ಪರಮೇಶ್ವರನ ಗುಣಗಳನ್ನು ಎಷ್ಟು ಹೇಳಿದರೂ ಹೇಗೆ ಮುಗಿಯದೆ ಇರುವವೋ ಹಾಗೆ ಆಚಾರ್ಯರ ಗುಣಗಳೂ ಅಗಣಿತವಾಗಿರುವವು. ಆದ್ದರಿಂದ ಯಾವದಾದರೊಂದು ಗುಣವನ್ನು ಕುರಿತು ಒಂದಿಷ್ಟು ಸ್ವಮತಿಗೆ ಅನುಗುಣವಾಗಿ ಹೊಗಳಿ ಕೃತಾರ್ಥರಾಗುವದೇ ಈ ದಿನದ ಉದ್ದೇಶವು. ಆದ್ದರಿಂದ ಆಚಾರ್ಯರು ಮಾಡಿರುವ 'ಬ್ರಹ್ಮದಾನ'ದ ವಿಚಾರವಾಗಿ ಒಂದೆರಡು ಮಾತು ಹೇಳುವೆನು.

ಶಾಸ್ತ್ರದಲ್ಲಿ ಯಜ್ಞ, ದಾನ, ತಪಸ್ಸು-ಇವುಗಳನ್ನು ಬಹಳವಾಗಿ ಹೊಗಳಿರುತ್ತದೆ. ಕಲಿಯುಗದಲ್ಲಿ ದಾನವೊಂದೇ ಶ್ರೇಷ್ಠವಾಗಿರುವ ಧರ್ಮವೆಂದು ವ್ಯಾಸರು ಹೇಳಿರುತ್ತಾರೆ. ಆಚಾರ್ಯರು ಮಾಡಿರುವ ಬ್ರಹ್ಮದಾನಕ್ಕಿಂತ ಹೆಚ್ಚಿನ ದಾನವು ಇರುವ ಸಂಭವವೇ ಇಲ್ಲ. ಏಕೆಂದರೆ ಬ್ರಹ್ಮದಲ್ಲಿ ಸೇರಿಲ್ಲದ್ದು ಇಲ್ಲ, ಬ್ರಹ್ಮವನ್ನು ಕೊಟ್ಟರೆ ಎಲ್ಲವನ್ನೂ ಕೊಟ್ಟಂತೆಯೇ. ಆದ್ದರಿಂದಲೇ ಛಾಂದೋಗ್ಯದಲ್ಲಿ ಬ್ರಹ್ಮವಿದ್ಯೆಯನ್ನು ಹೀಗೆ ಹೊಗಳಿರುತ್ತದೆ: ''ಸಮುದ್ರಪರ್ಯಂತವಾದ ಧನಪೂರ್ಣವಾದ ಭೂಮಿಯನ್ನೆಲ್ಲವನ್ನೂ ಬ್ರಹ್ಮದಾನವನ್ನು ಮಾಡಿದ ಆಚಾರ್ಯನಿಗೆ ಕೊಟ್ಟರೂ ಬ್ರಹ್ಮದಾನವೇ ಮಿಗಿಲೆನಿಸುತ್ತದೆ''. ಇದು ಮಧುವಿದ್ಯೆಯ ವಿಚಾರದಲ್ಲಿ ಹೇಳಿದ್ದು. ಇದರಂತೆಯೇ ಸಂವರ್ಗವಿದ್ಯೆಯಲ್ಲಿಯೂ ಬ್ರಹ್ಮದಾನವನ್ನು ಹೊಗಳಿರುತ್ತದೆ. ಜಾನಶ್ರುತಿಯೆಂಬ ರಾಜನು ಬಹುಜನಗಳಿಗೆ ಅನ್ನದಾನವನ್ನೂ ಮಿಕ್ಕದಾನಗಳನ್ನೂ ಮಾಡುತ್ತಿದ್ದನಾದರೂ ತನಗಿಂತ ಹೆಚ್ಚಿನ ಕೀರ್ತಿಯ ರೈಕ್ವನೆಂಬ ಮಹಾತ್ಮನಿರುವನೆಂದು ತಿಳಿದು ಅವನಲ್ಲಿಗೆ ನೂರಾರು ಗೋವುಗಳನ್ನೂ ಬೇಕಾದಷ್ಟು ಚಿನ್ನದ ನಾಣ್ಯವನ್ನೂ ರಥವನ್ನೂ ತೆಗೆದುಕೊಂಡು ಬಂದು ''ಸ್ವಾಮಿ, ನನಗೆ ತಾವು ಅರಿತಿರುವ ಬ್ರಹ್ಮವಿದ್ಯೆಯನ್ನು ಉಪದೇಶಮಾಡಬೇಕು'' ಎಂದು ಕೇಳಿಕೊಂಡಾಗ ''ಎಲಾ ಶೂದ್ರನೆ, ಈ ನಿನ್ನ ಗೋವುಗಳು ನಿನ್ನಲ್ಲಿಯೇ ಇರಲಿ!'' ಎಂದು ರೈಕ್ವನು ಹೇಳಿರುತ್ತಾನೆ. ತನಗೆ ಇರುವದಕ್ಕೆ ಒಂದಿಷ್ಟು ನೆರಳೂ

ಇಲ್ಲದೆ ಗಾಡಿಯ ಕೆಳಗೆ ಕುಳಿತಿದ್ದ ರೈಕ್ವನು ಪ್ರಖ್ಯಾತನಾದ ರಾಜನನ್ನು ಇಷ್ಟು ಅಸಡ್ಡೆಯಿಂದ ಕಾಣುವ ಧೈರ್ಯವು ಅವನಿಗೆ ಎತರಿಂದ ಬಂತು? ರಾಜನುಕೂಡ ಬಹುವಿನಯದಿಂದ ಬಂದು ಅವನನ್ನು ಸತ್ಕರಿಸಿ ಅವನಿಂದ ಪಡೆದುಕೊಂಡ ಬ್ರಹ್ಮವಿದ್ಯೆಯ ಮಹಿಮೆಯು ಎಂಥ ಹೆಚ್ಚಿನದಾಗಿರಬೇಕು! ಮುಂದೆ ಈ ರಾಜನು ಒಂದು ಸಾವಿರ ಗೋವು, ತಕ್ಕಷ್ಟುದಕ್ಷಿಣೆ, ರಥ, ಒಂದು ಗ್ರಾಮ-ಇಷ್ಟನ್ನೂ ತನ್ನ ಮಗಳನ್ನೂ ವಿನಯದಿಂದ ರೈಕ್ವನಿಗೊಪ್ಪಿಸಿ ಆತನಲ್ಲಿದ್ದ ವಿದ್ಯೆಯನ್ನು ಕಲಿತುಕೊಂಡನೆಂದು ಹೇಳಿರುತ್ತದೆ. ಇದಿಷ್ಟೂ ಸಗುಣವಿದ್ಯೆಯ ವಿಚಾರವಾಯಿತು. ಉಪಾಸನೆಯ ರೂಪವಾದ ಬ್ರಹ್ಮವಿದ್ಯೆಗೇ ಇಷ್ಟು ಗೌರವವಿರುವಾಗ ಇದ್ದದ್ದು ಇದ್ದಂತೆ ಇಡಿಯ ವಿಶ್ವದ ತಿರುಳನ್ನೇ ತಿಳಿಸಿಕೊಡುವ ಪರಬ್ರಹ್ಮವಿದ್ಯೆಗೆ ಎಂಥ ಬೆಲೆಯಾಯಿತು! ನಿರತಿಶಯವಾದ ಇಂಥ ಬ್ರಹ್ಮವಿದ್ಯೆಯನ್ನು ಅಹೇತುಕದಯಾ-ಸಿಂಧುವಾಗಿ ಅನುಗ್ರಹಿಸಿರುವ ಆಚಾರ್ಯರ ವಿಷಯದಲ್ಲಿ ನಾವು ಹೇಗೆ ಕೃತಜ್ಞರಾಗಿರಬೇಕಾಯಿತು!

ಆಚಾರ್ಯರು ಮಾಡಿರುವ ಬ್ರಹ್ಮದಾನವು ನಮ್ಮಗಳೆಲ್ಲರ ಸ್ವರೂಪದ ದಾನವು. ಬೇಕಾದಷ್ಟು ಐಶ್ವರ್ಯವು ಬಂದರೂ ಅವಿವೇಕಿಗಳಿಗೆ ಅದರಿಂದ ಕೆಡುಕೇ ಆಗುತ್ತದೆ; ಆದರೆ ಆತ್ಮಸ್ವರೂಪವನ್ನು ತಿಳಿಯುವದೆಂಬ ವಿವೇಕವನ್ನು ಪಡೆದುಕೊಂಡವರು ಯಾವ ಸ್ಥಾನದಲ್ಲಿದ್ದರೂ ಅವರ ಜೀವನವು ಆನಂದಮಯವಾಗಿರುವದರಲ್ಲಿ ಸಂಶಯವಿಲ್ಲ. ತತ್ತ್ವಜ್ಞಾನಿಗಳೇ ರಾಜ್ಯವಾಳಲು ಅರ್ಹರೆಂದು ಪ್ಲೇಟೋ ಎಂಬಾತನು ಹೇಳಿರುವನಂತೆ. ಈ ದೃಷ್ಟಿಯಿಂದ ನೋಡಿದರೆ ಚಕ್ರವರ್ತಿಗಳಿಗೂ ಚಕ್ರವರ್ತಿ ಎನ್ನಿಸಿಕೊಳ್ಳುವದಕ್ಕೆ ಅರ್ಹನಾಗಿ ತಮ್ಮ ಸ್ವರೂಪದಲ್ಲಿ ಇಡಿಯ ಬ್ರಹ್ಮಾಂಡವನ್ನೇ ಅಡಕಮಾಡಿಕೊಂಡಿರುವ ಆಚಾರ್ಯರನ್ನು ಎಷ್ಟು ಹೊಗಳಿದರೂ ಅಲ್ಪವೇ. ಇದಲ್ಲದೆ ತತ್ತ್ವದೃಷ್ಟಿಯಿಂದ ನಮ್ಮ ಸ್ವರೂಪವೇ ಶಂಕರರಾಗಿರುವದರಿಂದ ಅವರ ಸ್ತುತಿಯು ನಮ್ಮಗಳ ಆತ್ಮನಾದ ಪರಮೇಶ್ವರನ ಸ್ತುತಿಯೇ ಆಗುತ್ತದೆ. ಪರಮಾತ್ಮಸ್ತುತಿಯಿಂದ ನಮಗೆ ಅನಾತ್ಮಬುದ್ಧಿಯು ಅಷ್ಟಷ್ಟು ದೂರವಾಗುತ್ತದೆ. ಆದ್ದರಿಂದ ಪರಮಾತ್ಮನನ್ನು ಸ್ತುತಿಸುತ್ತಿರುವದೇ ಪರಮಧರ್ಮವೆಂದು ಭೀಷ್ಮರು ಹೇಳಿರುತ್ತಾರೆ.

ಈ ರೀತಿಯಲ್ಲಿ ಆಚಾರ್ಯರು ಪರಮಾರ್ಥವಾಗಿ ಪರಬ್ರಹ್ಮಸ್ವರೂಪರೇ ಆಗಿರುವದರಿಂದ ಅವರನ್ನು ಒಬ್ಬ ವ್ಯಕ್ತಿಗಳೆಂದು ಭಾವಿಸಿ ''ಅವರು

ಕಾಲಟಿಯಲ್ಲಿ ಜನಿಸಿದರು, ಇಂಥವರ ಮಕ್ಕಳು''- ಎಂದು ಮುಂತಾಗಿ ಅವರನ್ನು ವರ್ಣಿಸುವದಕ್ಕಿಂತಲೂ ಅವರು ನಿರುಪಚರಿತವಾಗಿ ಎಲ್ಲರೂ ಬ್ರಹ್ಮವೆಂದೇ ಹೇಳಿರುವಂತೆ ನಾವು ನಮ್ಮ ಸ್ವರೂಪವನ್ನು ಬ್ರಹ್ಮವೆಂದು ಅರಿತುಕೊಳ್ಳುವದು, ಅದನ್ನು ಮತ್ತೊಬ್ಬರಿಗೂ ತಿಳಿಯಪಡಿಸುವದು-ಇದೇ ಯೋಗ್ಯವಾದ ಪೂಜೆಯಾಗಿರುವದು. ಇಷ್ಟರ ಹೊರತು ನಾವು ಮತ್ತೆ ಯಾವ ಗುರುದಕ್ಷಿಣೆಯನ್ನೂ ಅವರು ಕೊಟ್ಟಿರುವ ಬ್ರಹ್ಮವಿದ್ಯೆಗೆ ಪ್ರತಿಯಾಗಿ ಕೊಡಲಾಗುವಹಾಗಿಲ್ಲ.ಆದ್ದರಿಂದ ನಾವು ನಿರಂತರವಾಗಿ ಶಂಕರಸ್ಮರಣೆಯನ್ನು ಮಾಡಿ ಅವರು ಕೊಟ್ಟಿರುವ ಬ್ರಹ್ಮವಿದ್ಯೆಯ ಫಲವನ್ನು ಅನುಭವಿಸುವಂತೆ ನಮಗೆ ಪ್ರೋತ್ಸಾಹವನ್ನೀಯಲಿ.

★★★★★

# ತಸ್ಯೋಪನಿಷತ್

**1-5-1941**

ಶ್ರೀಶ್ರೀಗಳವರು

**ಬೃಹದಾರಣ್ಯಕ ಎರಡನೆಯ ಅಧ್ಯಾಯದ ಒಂದನೆಯ ಬ್ರಾಹ್ಮಣದ ಇಪ್ಪತ್ತನೆಯ ಮಂತ್ರ**ದಲ್ಲಿ ''ತಸ್ಯೋಪನಿಷತ್'' ಎಂಬ ಭಾಗದ ಬಗ್ಗೆ ವಿಚಾರಮಾಡಿರುವ ಭಾಷ್ಯಾರ್ಥ ವಿವರಣೆ:

ಈ ಪ್ರಕರಣವು ಕ್ರಿಯಾಕಾರಕಫಲಭೇದರಹಿತನಾದ ಆತ್ಮನ ಸ್ವರೂಪವನ್ನು ತಿಳಿಸುವದಕ್ಕೇ ಬಂದಿರುವದರಿಂದ 'ಸುಷುಪ್ತಿಯಲ್ಲಿ ಆತ್ಮನೊಬ್ಬನೇ ಇರುತ್ತಾನೆ. ಎಚ್ಚರವಾಗುವಾಗ ಅವನಿಂದಲೇ ಪ್ರಾಣಾದಿ ಜಗತ್ತು ಉಂಟಾಗುತ್ತದೆ, ಅವನಿಗಿಂತ ಬೇರೆ ಯಾವದೂ ಇಲ್ಲ-ಎಂದು ಇಲ್ಲಿ ಹೇಳಿರುತ್ತದೆ. ಆದ್ದರಿಂದ ''ಆತನ ಹೆಸರು (ತಸ್ಯೋಪನಿಷತ್) ಸತ್ಯದ ಸತ್ಯವೆಂದು; ಪ್ರಾಣಗಳೇ ಸತ್ಯ, ಅವುಗಳಿಗೆ ಈತನು ಸತ್ಯನು'' ಎಂದು

ಹೇಳಿರುವದು ಪರಮಾತ್ಮನ ವಿಷಯವೇ ಎಂದು ಸ್ಪಷ್ಟವಾಗಿರುತ್ತದೆ. ಇದನ್ನು ಭಾಷ್ಯಕಾರರು ವಿಚಾರದಿಂದ ಗಟ್ಟಿಗೊಳಿಸಿರುತ್ತಾರೆ.

ಜೀವನಿಗಿಂತ ಬೇರೆಯಾಗಿರುವ ಯಾವ ಆತ್ಮನೂ ಇಲ್ಲ. ಬ್ರಹ್ಮವನ್ನು ತಿಳಿಯಿಸುವೆನೆಂದು ಪ್ರಾರಂಭಿಸಿದ ಅಜಾತಶತ್ರುವು ಸುಪ್ತಪುರುಷನನ್ನು ತಟ್ಟಿಎಬ್ಬಿಸಿ ಆ ಜೀವನಿಂದಲೇ ಸಮಸ್ತಜಗತ್ತೂ ಉಂಟಾಗುವದೆಂದು ಹೇಳಿರುತ್ತಾನೆ. ಎಚ್ಚರದಲ್ಲಿ ಜೀವನಾಗಿದ್ದವನು ಸುಷುಪ್ತಿಯಲ್ಲಿ ಅಸಂಸಾರಿಯಾಗುವನೆಂಬುದು ಅನುಭವವಿರುದ್ಧ, ಅಸಂಸಾರಿಯಾದ ಆತ್ಮನು ಇಲ್ಲವೇ ಇಲ್ಲವೆಂದು ನಿರೀಶ್ವರವಾದಿಗಳಾದ ಸಾಂಖ್ಯಮೀಮಾಂಸಕರೇ ಮೊದಲಾದವರು ಸ್ಥಾಪಿಸಿರುತ್ತಾರೆ. ಆದ್ದರಿಂದ ತಸ್ಯೋಪನಿಷತ್ ಎಂದರೆ ಆ ಜೀವನ ಅಭಿಧಾಯಕವಾದ ಮಾತು ಎಂದೇ ಅರ್ಥ. ಜೀವನು ಜಗತ್ಕಾರಣನಲ್ಲದಿದ್ದರೂ ಶಾಸ್ತ್ರಪ್ರಾಮಾಣ್ಯದಿಂದ ಹಾಗೆಂದು ನಂಬಬೇಕು-ಎಂಬುದು ಒಂದು ಪೂರ್ವಪಕ್ಷ.

ಸರ್ವಜ್ಞನೂ ಸರ್ವವಿದನೂ ಆಗಿರುವ ಸರ್ವೇಶ್ವರನೊಬ್ಬನು ಜೀವನಿಗಿಂತ ವ್ಯತಿರಿಕ್ತನಾಗಿದಾನೆಂದು ಶ್ರುತಿಸ್ಮೃತಿಗಳಿಂದ ಸಿದ್ಧವಾಗಿರುತ್ತದೆ. ಯುಕ್ತಿಯಿಂದಲೂ ಈಶ್ವರಸಿದ್ಧಿಯನ್ನು ಮಾಡಬಹುದು. ''ಹೃದಯದಲ್ಲಿರುವ ಆಕಾಶ ಸ್ವರೂಪನಾದ ಪರಮೇಶ್ವರನಲ್ಲಿ ಮಲಗಿರುತ್ತಾನೆ'' ಎಂದು ಪ್ರಕರಣವೂ ಈಶ್ವರ ವಿಷಯವಾಗಿದೆ. ಆದ್ದರಿಂದ ಪರಮೇಶ್ವರನೇ ಪ್ರಕೃತನಾಗಿರುತ್ತಾನೆ: ಅವನ ಹೆಸರೇ ಸತ್ಯದ ಸತ್ಯವೆಂದು. ಪರಮೇಶ್ವರನ ಆರಾಧನೆಯಿಂದ ಬ್ರಹ್ಮಸಾಯುಜ್ಯವನ್ನು ಪಡೆಯಬೇಕೆಂಬುದು ವೇದಾರ್ಥ. ನಾನೇ ಬ್ರಹ್ಮವು ಎಂಬುದು ಅರ್ಥವಾದ, ಏಕೆಂದರೆ ಈಗ ನಾನು ಬ್ರಹ್ಮವಲ್ಲವೆಂಬುದು ಸಿದ್ಧವಾಗಿಯೇ ಇದೆ-ಎಂಬುದು ಮತ್ತೊಂದು ಪೂರ್ವಪಕ್ಷ.

ಇವೆರಡು ಪಕ್ಷಗಳೂ ಸರಿಯಲ್ಲ. ಏಕೆಂದರೆ ಜಗತ್ತನ್ನು ಸೃಷ್ಟಿಸಿರುವ ಪರಮೇಶ್ವರನೇ ಜೀವರೂಪದಿಂದ ಶರೀರವನ್ನು ಹೊಕ್ಕಿರುತ್ತಾನೆಂದು ಶ್ರುತಿಯಲ್ಲಿ ಹೇಳಿರುತ್ತದೆ. ಬ್ರಹ್ಮವನ್ನು ಆತ್ಮನೆಂದೂ ಶ್ರುತಿಯಲ್ಲಿ ಕರೆದಿದೆ. ಆದ್ದರಿಂದ ಪರಮಾತ್ಮನಿಗಿಂತ ಬೇರೆಯಾಗಿ ಯಾವ ಜೀವನೂ ಇರುವದಿಲ್ಲ.

ಆದ್ದರಿಂದ ''ಆತನ ಹೆಸರು ಸತ್ಯದ ಸತ್ಯವೆಂದು'' ಎಂಬಲ್ಲಿ ಜಗತ್ಕಾರಣನಾದ ಪರಮಾತ್ಮನ ಹೆಸರೆಂದೇ ಅರ್ಥಮಾಡಬೇಕು. ಪರಮಾತ್ಮನೇ ಮಿಕ್ಕದ್ದೆಲ್ಲದರ ಸತ್ಯವು, ಏಕೆಂದರೆ ಅವನೇ ಪರಮಾರ್ಥಸತ್ಯವು-ಎಂಬುದು ವಾಕ್ಯಾರ್ಥ. ಹೀಗೆಂಬುದು ಸಿದ್ಧಾಂತ.

ಈ ಸಿದ್ಧಾಂತದಮೇಲೆ ಕೆಲವರು ಹೀಗೆಂದು ಆಕ್ಷೇಪಿಸುತ್ತಾರೆ: ಪರಮಾತ್ಮನಿಗಿಂತ ಬೇರೆಯಾಗಿ ಜೀವನೇ ಇಲ್ಲವೆಂದಾದರೆ ಪರಮಾತ್ಮನಿಗೆ ಯಾವ ಪುರುಷಾರ್ಥವೂ ಆಗಬೇಕಾಗಿಲ್ಲವಾಗಿ ಶಾಸ್ತ್ರೋಪದೇಶವು ವ್ಯರ್ಥವಾಗುತ್ತದೆ. ಇನ್ನೂ ಕೆಲವರು ಇದೇ ಕಾರಣದಿಂದ ಪರಮಾತ್ಮನು ತಾನೇ ಶರೀರದಲ್ಲಿ ಹೊಕ್ಕಿರುವದಿಲ್ಲ, ಜೀವರೂಪದಿಂದ ತನ್ನನ್ನು ತಾನು ಮಾರ್ಪಡಿಸಿಕೊಂಡು ಹೊಕ್ಕಿರುತ್ತಾನೆ; ಆದ್ದರಿಂದ ಜೀವನಿಗೂ ಬ್ರಹ್ಮಕ್ಕೂ ಭೇದಾಭೇದವನ್ನು ಹೇಳಬೇಕು ಎಂದು ಹೇಳುತ್ತಾರೆ. ಇವೆರಡು ಮತಗಳೂ ಸರಿಯಲ್ಲ. ಏಕೆಂದರೆ ನಿರವಯವನಾದ ಪರಮಾತ್ಮನು ಮಾರ್ಪಡುವನೆಂಬುದು ಯುಕ್ತಿವಿರುದ್ಧವಾಗಿರುತ್ತದೆ. ಶ್ರುತಿಯಲ್ಲಿ ಬೆಂಕಿಯ ಕಿಡಿಗಳಂತೆ ಜೀವರು ಹೊರಟುಬರುತ್ತಾರೆಂದು ಹೇಳಿರುವದು ಪರಮಾತ್ಮನಿಗೆ ನಿಜವಾಗಿ ಅಂಶವಿದೆಯೆಂದು ಹೇಳುವದಕ್ಕಲ್ಲ; ಅಂಶಾಂಶಿಗಳಿಗೆ ಭೇದವಿಲ್ಲದಿರುವಂತೆ ಜೀವನು ಪರಮಾತ್ಮನಿಗಿಂತ ಬೇರೆಯಲ್ಲ-ಎಂದು ತಿಳಿಸುವದಕ್ಕೆ. ಆದ್ದರಿಂದ ಅಜ್ಞಾನದಿಂದ ಜೀವನೆಂದು ತಿಳಿದುಕೊಂಡಿರುವವನು ಗುರುವಿನ ಉಪದೇಶದಿಂದ ಬ್ರಹ್ಮಸ್ವರೂಪನೇ ತಾನೆಂದು ತಿಳಿದುಕೊಳ್ಳಬಹುದಾಗಿದೆ. ಆದ್ದರಿಂದ ಬ್ರಹ್ಮದ ವಿಕಾರವು ಜೀವನೆಂದಾಗಲಿ ಈಗ ಜೀವನಾಗಿರುವವನು ಬ್ರಹ್ಮೋಪಾಸನೆಯಿಂದ ಬ್ರಹ್ಮವಾಗುವನೆಂದಾಗಲಿ ತಿಳಿಯುವದು ಯುಕ್ತವಲ್ಲ. ನಾವು ಎಚ್ಚರದಲ್ಲಿ ಶರೀರಾದಿಗಳ ಸಂಬಂಧದಿಂದ ನಮ್ಮನ್ನು ನಾವು ಜೀವರೆಂದು ಭಾವಿಸುತ್ತೇವೆ. ಆದರೆ ಉಪಾಧಿಯ ಸಂಬಂಧವಿಲ್ಲದ ಸುಷುಪ್ತಿಯಲ್ಲಿ ಪರಮಾತ್ಮಸ್ವರೂಪದಲ್ಲಿಯೇ ಇರುತ್ತೇವೆ. ಆದ್ದರಿಂದ ಪರಮಾತ್ಮನೇ ಪ್ರಕೃತ: ಆತನ ಹೆಸರೇ ಸತ್ಯದ ಸತ್ಯವು ಎಂಬುದೇ ಶ್ರುತಿವಚನದ ತಾತ್ಪರ್ಯವು ಎಂಬುದು ಭಾಷ್ಯಭಾಗದ ಸಾರ.

★★★★★

# ಭೂಮಸ್ವರೂಪ

**2-5-1941**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರು**

**ಛಾಂದೋಗ್ಯದ ಏಳನೆಯ ಅಧ್ಯಾಯದ ಇಪ್ಪತ್ತನಾಲ್ಕು ಇಪ್ಪತ್ತೈದನೆಯ ಖಂಡಗಳಲ್ಲಿ**, ನಾರದರು ಸಕಲವಿದ್ಯಾಪಾರಂಗತರಾಗಿದ್ದರೂ ಆತ್ಮವಿದ್ಯೆಯನ್ನರಿಯದ್ದರಿಂದ ಶೋಕಸಂತಪ್ತರಾಗಿ ಪೂಜ್ಯರಾದ ಸನತ್ಕುಮಾರರ ಬಳಿಗೆ ಬಂದು ಶೋಕತಾರಕವಾದ ಆತ್ಮವಿದ್ಯೆಯನ್ನು ಹೇಳಿಕೊಡಬೇಕೆಂದು ಬೇಡಿಕೊಂಡರು. ಆಗ ಸನತ್ಕುಮಾರರು ನಾಮವನ್ನು ಮೊದಲುಮಾಡಿಕೊಂಡು ಒಂದಕ್ಕಿಂತ ಒಂದು ಹೆಚ್ಚೆನಿಸುವ ತತ್ತ್ವಗಳನ್ನು ತಿಳಿಸಿಕೊಟ್ಟು ಎಲ್ಲಕ್ಕಿಂತಲೂ ಹೆಚ್ಚಾಗಿರುವ ಪ್ರಾಣವನ್ನು ತಿಳಿಸಿ ''ಚರಾಚರವಾದದ್ದೆಲ್ಲವೂ ಪ್ರಾಣವೇ, ಅದನ್ನು ಮನನವಿಜ್ಞಾನಗಳಿಂದ ಕಂಡುಕೊಂಡಾತನು ಎಲ್ಲವನ್ನೂ ಮೀರಿ ನುಡಿಯಬಲ್ಲ ಜ್ಞಾನಿಯಾಗುವನು'' ಎಂದು ಹೇಳಲು ನಾರದರು ಪ್ರಾಣವೇ ನನ್ನ ಆತ್ಮನು ಎಂದು ತಿಳಿದುಕೊಂಡರು. ಆದರೆ ಇದಕ್ಕಿಂತ ಹೆಚ್ಚಿನದಾದ ಆತ್ಮತತ್ತ್ವವೊಂದುಂಟೆಂಬುದನ್ನು ತಿಳಿಯಪಡಿಸುವದಕ್ಕಾಗಿ ಸನತ್ಕುಮಾರರು ''ಪ್ರಾಣವನ್ನು ತಿಳಿದುಕೊಂಡಾತನು ನಿಜವಾಗಿ ಅತಿವಾದಿಯಲ್ಲ; ಏಕೆಂದರೆ ಇದಕ್ಕಿಂತಲೂ ಹೆಚ್ಚಿನದಾದ ಪರಮಾರ್ಥಸತ್ಯವಾದ ತತ್ತ್ವವೊಂದಿದೆ. ಅದನ್ನು ಅರಿತುಕೊಳ್ಳಬೇಕು, ಅದನ್ನು ಅರಿಯುವದಕ್ಕಾಗಿ ವಿಚಾರಮಾಡಬೇಕು. ವಿಚಾರಕ್ಕೆ ಮೊದಲು ಶ್ರದ್ಧೆಯೆಂಬ ಬುದ್ಧಿಯಿರಬೇಕು, ಶ್ರದ್ಧೆಯುಂಟಾಗಬೇಕಾದರೆ ಗುರುಶುಶ್ರೂಷಾದಿಗಳಲ್ಲಿ ತತ್ಪರನಾಗಿರಬೇಕು, ತತ್ಪರತೆಯುಂಟಾಗಬೇಕಾದರೆ ತನಗೆ ಸುಖವುಂಟಾಗುವಂತಿರಬೇಕು. ಆದ್ದರಿಂದ ಸುಖವನ್ನೇ ವಿಚಾರಮಾಡಬೇಕು, ಯಾವದು ಎಲ್ಲಕ್ಕೂ ಮಿಗಿಲಾಗಿರುವದೋ ಅದೇ ಸುಖವು; ಯಾವದು ಅಲ್ಪವೋ ಅದರಲ್ಲಿ ಸುಖವಿಲ್ಲ'' ಎನ್ನಲು ನಾರದರು ''ಪೂಜ್ಯರೆ, (ಮಿಗಿಲಿಲ್ಲದ) ಭೂಮವನ್ನೇ ನಾನು ತಿಳಿಯಲಿಚ್ಛಿಸುತ್ತೇನೆ'' ಎಂದರು. ಈ ಸಂದರ್ಭದಲ್ಲಿ ಸನತ್ಕುಮಾರರು ಹೇಳಿದ ವಾಕ್ಯಗಳು ಇಪ್ಪತ್ತನಾಲ್ಕು ಇಪ್ಪತ್ತೈದನೆಯ ಖಂಡಗಳಲ್ಲಿರುತ್ತವೆ.

''ಎಲ್ಲಿ ಮತ್ತೊಂದು ಕಾಣುವದಿಲ್ಲವೋ, ಮತ್ತೊಂದನ್ನು ಕೇಳುವದಿಲ್ಲವೋ, ಮತ್ತೊಂದನ್ನರಿಯುವದಿಲ್ಲವೋ ಅದೇ ಭೂಮವು (ಮಿಗಿಲಿಲ್ಲದ್ದು, ಅನಂತವು); ಎಲ್ಲಿ ತಾನು ಎರಡನೆಯದನ್ನು ಕಾಣುವನೋ, ಎರಡನೆಯದನ್ನು ಕೇಳುವನೋ ಎರಡನೆಯದನ್ನು ಅರಿಯುವನೋ ಅದೇ ಅಲ್ಪವಾದದ್ದು, ಅಲ್ಪವಾದದ್ದು ಮರ್ತ್ಯವೂ ಆಗಿರುತ್ತದೆ. ಅವಿದ್ಯೆಯಿರುವವರೆಗೂ ಎರಡನೆಯದು ಕಾಣಿಸುತ್ತಿರುತ್ತದೆ; ಆದರೆ ಯಾವ ಜ್ಞಾನವು ಬಂದಾಗ ಎರಡನೆಯದು ಯಾವದೊಂದೂ ಕಾಣಿಸುವದಿಲ್ಲವೋ, ಅದ್ವಿತೀಯನಾದ ಆತ್ಮನೊಬ್ಬನೇ ಇರುವನೋ ಅದೇ ಭೂಮದ, ಎಲ್ಲಕ್ಕೂ ಮಿಗಿಲಾದ ಆತ್ಮನ, ಜ್ಞಾನವು. ಆದ್ದರಿಂದ ಸಂಸಾರದ ಯಾವ ವ್ಯವಹಾರವೂ ಈ ಭೂಮವೆಂಬ ಬ್ರಹ್ಮದಲ್ಲಿರುವದಿಲ್ಲ. ಅಲ್ಪವಾಗಿ ಅಳತೆಗೆ ಸಿಕ್ಕುವದೆಲ್ಲ ಅವಿದ್ಯಾಕೃತವಾದದ್ದು: ಅದು ದುಃಖಮಯವೂ ಆಗಿರುತ್ತದೆ. ಆದರೆ ಭೂಮವು ಅದ್ವಿತೀಯವಾಗಿ ರುವದರಿಂದ ಅದೇ ಆನಂದಸ್ವರೂಪವಾಗಿರುತ್ತದೆ. ''ಇಂಥ ಭೂಮವು ಯಾವದರ ಆಶ್ರಯದಲ್ಲಿರುತ್ತದೆ?'' ಎಂದು ಕೇಳಿದ ನಾರದರಿಗೆ ಸನತ್ಕುಮಾರರು ''ಅಯ್ಯ, ಇದು ತನ್ನ ಮಹಿಮೆಯಲ್ಲಿ ತಾನು ಇದ್ದುಕೊಂಡಿರುವದು, ಅಥವಾ ಯಾವದೊಂದನ್ನೂ ಆಶ್ರಯಿಸದೆ ಇರುವದೆಂಬುದೇ ಪರಮಾರ್ಥವು. ಹೇಗೆ ಎತ್ತುಗಳು ಕುದುರೆಗಳು- ಮುಂತಾದ ಸಂಪತ್ತನ್ನಾಶ್ರಯಿಸಿರುವ ಒಬ್ಬ ಮನುಷ್ಯನು ದೊಡ್ಡವನೆನಿಸಿಕೊಂಡಿರುವನೋ ಹಾಗೆ ಈ ಭೂಮವು ಮತ್ತೊಂದನ್ನಾಶ್ರಯಿಸಿಕೊಂಡು ಎಲ್ಲಕ್ಕೂ ಮಿಗಿಲಾಗಿ ರುವದಿಲ್ಲ, ಇದಕ್ಕಿಂತ ಮತ್ತೊಂದು ಇಲ್ಲವೇ ಇಲ್ಲ; ಆದ್ದರಿಂದಲೂ ಎಲ್ಲವನ್ನೂ ತಾನೇ ವ್ಯಾಪಿಸಿಕೊಂಡಿರುವದರಿಂದಲೂ ಇದು 'ಭೂಮ, ಎಲ್ಲಕ್ಕೂ ಮಿಗಿ ಲಾದದ್ದು' ಎನ್ನಿಸಿಕೊಂಡಿರುತ್ತದೆ. ಅದು ನಮ್ಮಗಳಲ್ಲಿ ನಾನು ಎನ್ನಿಸಿಕೊಳ್ಳುವದಕ್ಕೆ ತಕ್ಕ ಆತ್ಮನೇ ಆಗಿರುತ್ತದೆ. ಈ ಆತ್ಮನೇ ಕೆಳಗೆ, ಮೇಲೆ, ಹಿಂದೆ, ಮುಂದೆ, ಬಲ, ಎಡ-ಎಲ್ಲವೂ ಆಗಿರುತ್ತಾನೆ. ಯಾವನು ಚೆನ್ನಾಗಿ ವಿಚಾರಮಾಡಿ ಈ ಆತ್ಮನನ್ನೇ ಅರಿತುಕೊಂಡು ಇವನಲ್ಲಿಯೇ ನೆಲೆನಿಂತು ಆನಂದವುಳ್ಳವನಾಗಿರುವನೋ ಅವನು ಬದುಕಿರುವಾಗಲೇ ಸ್ವತಂತ್ರನಾಗಿ ಮುಕ್ತನಾಗುವನು. ಮಿಕ್ಕವರೆಲ್ಲರೂ ಮರ್ತ್ಯರಾಗಿ ಅಲ್ಪಭೋಗದ ಲೋಕಗಳನ್ನು ಪಡೆಯುತ್ತಾರೆ''ಎಂದು ನುಡಿದರು-ಎಂಬುದು ಖಂಡಗಳ ಸಾರವು.

★★★★★

# ಬ್ರಹ್ಮವೇ ಜಗತ್ತಿಗೆ ಕಾರಣ

**3-5-1941**

**ಶ್ರೀಶ್ರೀಗಳವರು**

**ಬ್ರಹ್ಮಸೂತ್ರದ ಎರಡನೆಯ ಅಧ್ಯಾಯದ ಒಂದನೆಯ ಪಾದದಲ್ಲಿ ''ಕೃತ್ಸ್ನಪ್ರಸಕ್ತ್ಯಧಿಕರಣ''ದ ಭಾಷ್ಯದಲ್ಲಿ** ತನಗೆರಡನೆಯದಿಲ್ಲದ ಒಂದೇ ತತ್ತ್ವವಾದ ಬ್ರಹ್ಮವೇ ಜಗತ್ತಿಗೆ ಕಾರಣವಾಗಿದೆ ಎಂಬ ವೇದಾಂತಿಗಳ ಸಿದ್ಧಾಂತಮೇಲೆ ಸಾಂಖ್ಯರು ಮಾಡಿರುವ ಆಕ್ಷೇಪವೊಂದಕ್ಕೆ ಇಲ್ಲಿ ಪರಿಹಾರವನ್ನು ಹೇಳಿರುತ್ತದೆ. ಬ್ರಹ್ಮವು ಜಗತ್ತಾದರೆ ಪೂರ್ಣ ಬ್ರಹ್ಮವೇ ಜಗತ್ತಾಗಬೇಕು; ಏಕೆಂದರೆ ಬ್ರಹ್ಮದಲ್ಲಿ ಅವಯವಗಳಿಲ್ಲ. ಎಲ್ಲಾ ಬ್ರಹ್ಮವೂ ಜಗತ್ತಾಗಿದೆಯೆಂದು ಒಪ್ಪಿಕೊಂಡರೆ ಬ್ರಹ್ಮವೇ ಈಗ ಇಲ್ಲವೆಂದಾಗುತ್ತದೆ. 'ಆತ್ಮನನ್ನು ನೋಡಬೇಕು' ಎಂಬ ಶಾಸ್ತ್ರವೂ ವ್ಯರ್ಥವಾಗುತ್ತದೆ, ಬ್ರಹ್ಮವು ಜನ್ಮರಹಿತವೆಂಬ ಶ್ರುತಿಗೂ ವಿರುದ್ಧವಾಗುತ್ತದೆ. ಈ ದೋಷದಿಂದ ಬಿಡುಗಡೆಯಾಗುವದಕ್ಕೆಂದು ಬ್ರಹ್ಮವು ಸಾವಯವವೇ ಎಂದು ಹೇಳೋಣವೆಂದರೆ ಅದು ಅನಿತ್ಯವೆಂದಾಗುತ್ತದೆ, ಅದು ನಿರವಯವವಾದದ್ದೆಂಬ ಶ್ರುತಿಗೂ ವಿರುದ್ಧವಾಗುತ್ತದೆ. ಆದ್ದರಿಂದ ಅದ್ವಿತೀಯಬ್ರಹ್ಮದಿಂದ ಜಗತ್ತಾಗಿದೆ ಎಂದು ಹೇಗೆ ನಂಬುವದು?- ಎಂಬುದು ಪೂರ್ವಪಕ್ಷವು.

ಇದಕ್ಕೆ ಸಮಾಧಾನವೇನೆಂದರೆ ಬ್ರಹ್ಮವು ನಿರವಯವವೇ ಸರಿ. ಆದರೆ ಎಲ್ಲವೂ ಜಗತ್ತಾಗಿರುವದೇ ಇಲ್ಲ, ಮಾರ್ಪಡದೆ ಶುದ್ಧವಾಗಿರುವ ಬ್ರಹ್ಮಸ್ವರೂಪವೂ ಇದ್ದೇ ಇದೆ. ಹಾಗೆಂದು ಶ್ರುತಿಯಲ್ಲಿಯೂ ಹೇಳಿರುತ್ತದೆ. ''ವಿರುದ್ಧವಾದ ಈ ಎರಡನ್ನೂ ಹೇಗೆ ಹೊಂದಿಸಬೇಕು? ಶ್ರುತಿಯು ವಿರುದ್ಧವಾದ ಅರ್ಥವನ್ನು ಹೇಳುವದಾದರೆ ಅದು ಅಪ್ರಮಾಣವೇ ಆಗುವದಿಲ್ಲವೇ?'' ಎಂದು ಶಂಕಿಸಬಾರದು. ಏಕೆಂದರೆ ಬ್ರಹ್ಮವು ತನ್ನ ಪರಮಾರ್ಥರೂಪದಿಂದ ಯಾವ ಪರಿಣಾಮವೂ ಇಲ್ಲದೆ ಇದೆ. ಅವಿದ್ಯಾಕಲ್ಪಿತವಾದ ನಾಮರೂಪವೆಂಬ ಒಂದಾನೊಂದು ರೂಪವಿಶೇಷದಿಂದ ವ್ಯಾಕೃತ ಮತ್ತು ಅವ್ಯಾಕೃತ ಎಂಬ

ಅವಸ್ಥೆಗಳನ್ನು ಪಡೆಯುತ್ತಲೂ ಇದೆ. ಬ್ರಹ್ಮವು ಜಗತ್ತಾಗಿ ನಿಜವಾಗಿಯೂ ಪರಿಣಮಿಸಿದೆಯೆಂದು ತಿಳಿಸುವದೇನೂ ಶ್ರುತಿಯ ಉದ್ದೇಶವಲ್ಲ; ಬ್ರಹ್ಮವು ಸರ್ವವ್ಯವಹಾರಕ್ಕೂ ಅತೀತವಾಗಿದ್ದುಕೊಂಡಿದೆ. ಅದೇ ನಮ್ಮಗಳ ಆತ್ಮನು-ಎಂದು ಹೇಳುವದೇ ಸೃಷ್ಟಿಶ್ರುತಿಯ ಉದ್ದೇಶವು. ಆದ್ದರಿಂದ ಶ್ರುತಿಯಲ್ಲಿ ಯಾವ ವಿರುದ್ಧಾರ್ಥವೂ ಇರುವದಿಲ್ಲ. ಕನಸಿನಲ್ಲಿ ಒಬ್ಬನೇ ಆದ ಆತ್ಮನಲ್ಲಿ ಅವನು ಇರುವಂತೇ ಇದ್ದು ಅನೇಕಾಕಾರವಾದ ಸೃಷ್ಟಿಯಾಗುವದಿಲ್ಲವೇ? ಮಾಯಾವಿಯು ತಾನಿರುವಂತೆಯೇ ಇದ್ದು ವಿಚಿತ್ರವಾದ ವಸ್ತುಗಳನ್ನೂ ಸೃಷ್ಟಿಯನ್ನೂ ಮಾಡುವದಿಲ್ಲವೆ? ಅದರಂತೆಯೇ ಬ್ರಹ್ಮವು ವಿಚಿತ್ರವಾದ ಜಗತ್ತಾಗಿಯೂ ಸೃಷ್ಟವಾಗಿ ತಾನು ಇದ್ದಂತೆಯೇ ಶುದ್ಧಸ್ವರೂಪದಿಂದಲೂ ಇರುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ.

ಸಾಂಖ್ಯರು ಹೇಳುವ ಮೇಲಿನ ಆಕ್ಷೇಪವು ಅವರಿಗೇ ಗಂಟುಬಿದ್ದಿರುತ್ತದೆ. ಏಕೆಂದರೆ ಅವರು ಒಪ್ಪಿರುವ ಪ್ರಧಾನದಲ್ಲಿ ಅವಯವಗಳಿಲ್ಲ; ಅದು ಹೇಗೆ ಜಗತ್ತಾಯಿತು? ಅದರಲ್ಲಿ ಸತ್ತ್ವರಜಸ್ತಮಗಳೆಂಬ ಅವಯವಗಳಿವೆಯಾದರೂ ಒಂದೊಂದೇ ಆದ ಸತ್ತ್ವ, ರಜಸ್ಸು, ತಮಸ್ಸು-ಇವುಗಳಿಂದ ವಿಚಿತ್ರವಾದ ಜಗತ್ತು ಹೇಗೆ ಆಗುತ್ತದೆ!- ಎಂಬ ಆಕ್ಷೇಪವು ಬಿಟ್ಟದ್ದಲ್ಲ. ಪ್ರಧಾನದಲ್ಲಿ ಅವಯವವನ್ನು ಒಪ್ಪಿದರೆ ಅದಕ್ಕೆ ಅನಿತ್ಯತ್ವಾದಿಗಳು ಗಂಟುಬೀಳುವವು. ಪ್ರಧಾನದಲ್ಲಿ ಕೆಲವು ಶಕ್ತಿಗಳು ಇರುತ್ತವೆಯಾದ್ದರಿಂದ ವಿಚಿತ್ರವಾದ ಜಗತ್ತು ಉಂಟಾಗಬಹುದಲ್ಲ!- ಎಂದು ಸಾಂಖ್ಯನು ಕೇಳಬಹುದು; ಆಗ ಬ್ರಹ್ಮದಲ್ಲಿಯೇ ಅವಿದ್ಯಾಕಲ್ಪಿತವಾದ ಶಕ್ತಿಗಳನ್ನು ಒಪ್ಪುವ ನಮ್ಮ ಮತದಲ್ಲಿ ಯಾವ ದೋಷಗಳೂ ಇಲ್ಲವೆಂದು ಒಪ್ಪಬೇಕಾಗುತ್ತದೆ. ಹೀಗೆ ತಾವೇ ಪರಿಹರಿಸಿಕೊಳ್ಳಲಾರದ ದೋಷವನ್ನು ಬ್ರಹ್ಮವಾದದ ಮೇಲೆ ಹಾಕುವದು ಸರಿಯಲ್ಲ. ನಿಜವಾಗಿ ಬ್ರಹ್ಮವಾದದಲ್ಲಿ ದೋಷವೂ ಇಲ್ಲ. ಏಕೆಂದರೆ ಬ್ರಹ್ಮವು ಪರಮಾರ್ಥಸತ್ಯವೆಂದೂ ಮಿಕ್ಕದ್ದೆಲ್ಲವೂ ಅವಿದ್ಯಾವ್ಯವಹಾರಕೃತವೆಂದೂ ಅದು ಹೇಳುತ್ತದೆ. ಆದ್ದರಿಂದ ಬ್ರಹ್ಮವು ಅವಿದ್ಯಾದೃಷ್ಟಿಯಿಂದ ಜಗತ್ಕಾರಣವೆಂಬ ಮತದಲ್ಲಿ ಯಾವ ದೋಷವೂ ಇಲ್ಲ-ಎಂಬುದು ಅಧಿಕರಣದ ಸಾರವು.

★★★★★

# ಎಲ್ಲವೂ ಆತ್ಮವೇ

**4-5-1941**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳು**

**ಐತರೇಯದಲ್ಲಿ ಒಂದನೆಯ ಅಧ್ಯಾಯದ ಒಂದು ಮತ್ತು ಎರಡನೆಯ ಮಂತ್ರಗಳ ಭಾಷ್ಯದ ಅರ್ಥವು** - ''ಈ ಪ್ರಪಂಚವು ಮೊದಲು ಆತ್ಮನೊಬ್ಬನೇ ಆಗಿತ್ತು, ಸ್ಥಾವರಜಂಗಮಾತ್ಮಕವಾದ ಮತ್ತೇನೂ ಇರಲೇ ಇಲ್ಲ. ಆತನು ''ಈ ಲೋಕಗಳನ್ನು ಸೃಷ್ಟಿಮಾಡುವೆನು' ಎಂದು ಯೋಚಿಸಿಕೊಂಡನು'' ಎಂಬುದು ಒಂದನೆಯ ಮಂತ್ರದ ಅರ್ಥ.

ಆತ್ಮ ಎಂಬ ಮಾತು ಆಪ್ನೋತಿ, ಅತ್ತಿ, ಅತತಿ-ಎಂಬ ಮೂರು ಬೇರೆಬೇರೆ ಅರ್ಥಗಳುಳ್ಳ ಧಾತುಗಳಿಂದ ವ್ಯುತ್ಪನ್ನವಾಗಬಹುದಾಗಿದೆ. ಆಪ್ನೋತಿ ಎಂದರೆ ವ್ಯಾಪಿಸುತ್ತಾನೆ; ಸಕಲವನ್ನೂ ವ್ಯಾಪಿಸಿದರೆ, ಮಿಗಿಲಿಲ್ಲವೆನ್ನುವಷ್ಟು ವ್ಯಾಪಿಸಿದರೆ, ಎಲ್ಲವೂ ತಾನೇ ಆಗುತ್ತದೆ. ಅತ್ತಿ ಎಂದರೆ ತಿನ್ನುತ್ತಾನೆ; ಎಲ್ಲವನ್ನೂ ತಿಂದದ್ದು ತಾನೇ ಆಗುತ್ತದೆ. ಅತತಿ ಎಂದರೆ ಸಂತತವಾಗಿ ಅವಿಚ್ಛಿನ್ನನಾಗಿರುತ್ತಾನೆ; ನಡುವೆ ಮತ್ತೊಂದು ಇರುವದಿಲ್ಲವೆಂದರೂ ಎರಡನೆಯದಿಲ್ಲದ ತಾನೊಂದೇ ಆಗುತ್ತದೆ. ಹೀಗೆ ಯಾವ ರೀತಿಯಲ್ಲಿ ಆತ್ಮಶಬ್ದಕ್ಕೆ ವ್ಯುತ್ಪತ್ತಿಯನ್ನು ಹೇಳಿದರೂ ಆತ್ಮನು ತನಗೆರಡನೆಯದಿಲ್ಲದ ತತ್ತ್ವವೆಂದು ಅರ್ಥವಾಗುತ್ತದೆ. ಇಂಥ ಸರ್ವಜ್ಞನೂ ಸರ್ವಶಕ್ತಿಯುತನೂ ಆದ ಪರಮಾತ್ಮನೊಬ್ಬನೇ ಸೃಷ್ಟಿಗೆ ಪೂರ್ವದಲ್ಲಿದ್ದನು. ಅವನಲ್ಲಿ ಯಾವ ಸಂಸಾರಧರ್ಮವೂ ಇರಲಿಲ್ಲ; ಏಕೆಂದರೆ ಅವನು ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿ ಹುಟ್ಟಿಲ್ಲದವನೂ ಮುಪ್ಪಿಲ್ಲದವನೂ ಸಾವಿಲ್ಲದವನೂ ಸಾಯುವ ಸ್ವಭಾವದವನಲ್ಲದವನೂ ಅಂಜಿಕೆಯಿಲ್ಲದವನೂ ಎರಡನೆಯದಿಲ್ಲದವನೂ ಆಗಿರುತ್ತಾನೆ. ಈ ನಾಮರೂಪಕರ್ಮಗಳ ರೂಪದಲ್ಲಿರುವ ಈ ಜಗತ್ತೂ ಆಗ ಆತ್ಮನೊಬ್ಬನೇ ಆಗಿತ್ತು. ಈಗಲೂ ಎಲ್ಲವೂ ಆತ್ಮನೇ ಆಗಿರುತ್ತದೆಯಾದರೂ ಆಗ ಆತ್ಮನಲ್ಲಿ ನಾಮರೂಪಕರ್ಮಗಳೆಂಬ ವಿಶೇಷರೂಪವು ಕಾಣಿಸುತ್ತಿರಲಿಲ್ಲ, ಈಗ ಆ ವಿಶೇಷವು ಕಾಣಿಸುತ್ತಿದೆ. ಹೇಗೆ ನೀರೊಂದೇ ನೀರಾಗಿಯೂ ನೊರೆಯಾಗಿಯೂ

ಆಗಿರುವದೋ ನೊರೆಯಾಗುವದಕ್ಕೆ ಮೊದಲು ನೀರೆಂಬ ಒಂದೇ ಮಾತಿಗೂ ಅರಿವಿಗೂ ವಿಷಯವಾಗಿರುವದೋ, ಹಾಗೆ ಈಗ ಆತ್ಮನೂ ನಾಮರೂಪಕರ್ಮಗಳೂ ಆಗಿರುವದೇ ಆಗ ಆತ್ಮನೆಂಬ ಒಂದೇ ಶಬ್ದಕ್ಕೂ ಪ್ರತ್ಯಯಕ್ಕೂ ವಿಷಯವಾಗಿತ್ತು. ಅದಕ್ಕಿಂತ ಬೇರೆಯಾಗಿ ಮತ್ತೆ ಯಾವದೊಂದೂ ಇರಲಿಲ್ಲ. ನಾಮರೂಪಗಳು ಆತ್ಮನೇ ಆಗಿದ್ದದ್ದರಿಂದ ಅವು ಅವನಿಗಿಂತ ಬೇರೆಯಾಗಿರಲಿಲ್ಲ. ಸಾಂಖ್ಯರು ಹೇಳುವ ಪ್ರಧಾನವಾಗಲಿ ವೈಶೇಷಿಕರು ಹೇಳುವ ಅಣುಗಳಾಗಲಿ ಸ್ವತಂತ್ರವಾಗಿ ಜಗತ್ಕಾರಣವಾಗಿದೆ ಎಂಬುದು ಶ್ರುತಿಸಮ್ಮತವಲ್ಲ; ಇದೆಲ್ಲವೂ ಆತ್ಮನೇ ಆಗಿದ್ದು ಆತ್ಮನಿಂದಲೇ ಉಂಟಾಗಿದೆ ಎಂಬುದೇ ವೇದಾಂತಸಿದ್ಧಾಂತವು.

ಆ ಪರಮಾತ್ಮನು ಲೋಕಗಳನ್ನು ಸೃಷ್ಟಿಮಾಡಬೇಕೆಂದು ಆಲೋಚಿಸಿದನು. ಅವನಿಗೆ ಯೋಚಿಸುವದಕ್ಕೆ ಯಾವ ಕರಣಗಳೂ ಇರಲಿಲ್ಲವಾದರೂ ಸರ್ವಜ್ಞನಾದ್ದರಿಂದ ಅವನಿಗೆ ಹಾಗೆಯೇ ಯೋಚಿಸುವದಕ್ಕಾಯಿತು. ಹೀಗೆ ಆಲೋಚನೆಮಾಡಿದ ಬಳಿಕ ಅಂಭಸ್ಸು, ಮರೀಚಿ, ಮರ, ಅಪ್ಪು-ಎಂಬ ಲೋಕಗಳನ್ನು ಸೃಷ್ಟಿಸಿದನು. ಲೋಕದಲ್ಲಿ ಬಡಗಿಯೇ ಮೊದಲಾದವರಿಗೆ ಮನೆಯನ್ನು ಕಟ್ಟುವದೇ ಮುಂತಾದ ಉಪಾದಾನಕಾರಣವು ಬೇಕಾಗುತ್ತದೆಯಷ್ಟೆ; ಹಾಗೆ ಈ ಲೋಕಗಳನ್ನು ಸೃಷ್ಟಿಸುವದಕ್ಕೆ ಆತ್ಮನಿಗೆ ಯಾವ ಉಪಾದಾನಕಾರಣವಿತ್ತು?- ಎಂಬ ಪ್ರಶ್ನೆಯು ಸ್ವಾಭಾವಿಕವಾಗಿ ಹುಟ್ಟುತ್ತದೆಯಷ್ಟೆ. ನಾವು ಮೇಲೆ ಹೇಳಿರುವ ನಾಮರೂಪಗಳೇ ಈ ಉಪಾದಾನಕಾರಣ. ನಾಮರೂಪಗಳು ಮೊದಲು ಆತ್ಮನೇ ಆಗಿ, ಆತ್ಮನೆಂಬ ಹೆಸರಿಗೆ ತಕ್ಕವಾಗಿದ್ದವು; ಅವುಗಳಿಂದ ಈ ಜಗತ್ತನ್ನು ಆತ್ಮನು ಸೃಷ್ಟಿಸಿದನು. ಅಥವಾ ಮಾಯಾವಿಯಂತೆ ಉಪಾದಾನವೂ ಇಲ್ಲದೆಯೇ ಆತ್ಮನು ತಾನೇ ಜಗತ್ತಾಗಿ ಪರಿಣಮಿಸಿದನು. ಅಂತೂ ಕಾರಣರೂಪವಾಗಿರುವ ನಾಮರೂಪಗಳೂ ಕಾರ್ಯರೂಪವಾಗಿರುವ ವ್ಯಾಕೃತನಾಮರೂಪಗಳೆಂಬ ಅಂಭಸ್ಸೇ ಮುಂತಾದ ಲೋಕಗಳೂ ಎಲ್ಲವೂ ಆತ್ಮನೇ, ಆತ್ಮನಿಗಿಂತ ಬೇರೆ ಯಾವದೊಂದೂ ಇಲ್ಲವೇ ಇಲ್ಲ ಎಂಬುದು ಎರಡನೆಯ ಮಂತ್ರದ ಅಭಿಪ್ರಾಯವು.

★★★★★

# ಜ್ಞಾನಿಗೆ ಕರ್ಮವಿಲ್ಲ

**5-5-1941**

**ಬ್ರ॥ ಶ್ರೀ॥ ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

**ಭಗವದ್ಗೀತೆಯಲ್ಲಿ ಎರಡನೆಯ ಅಧ್ಯಾಯದ ಇಪ್ಪತ್ತೊಂದನೆಯ ಶ್ಲೋಕದ ಭಾಷ್ಯಾರ್ಥವಿವರಣೆ:** ''ಯಾವನು ಈ ಆತ್ಮನನ್ನು ಅಜನೆಂದೂ ಅವ್ಯಯನೆಂದೂ ಅರಿತುಕೊಂಡಿರುವನೋ ಆ ಪುರುಷನು ಹೇಗೆ ಯಾರನ್ನು ಕೊಲ್ಲುತ್ತಾನೆ, ಹೇಗೆ ಕೊಲ್ಲಿಸುತ್ತಾನೆ?'' ಎಂಬುದು ಶ್ಲೋಕದ ಅಕ್ಷರಾರ್ಥವು. ಇಲ್ಲಿ ಕೊಲ್ಲುವದೆಂಬ ಒಂದು ಕರ್ಮವನ್ನು ಮಾತ್ರ ಆಕ್ಷೇಪಿಸಿರುವದಿಲ್ಲ; ಇದು ಉಪಲಕ್ಷಣವಾಗಿ ಹೇಳಿದ್ದು. ಯಾವ ಕರ್ಮವೂ ಜ್ಞಾನಿಗೆ ಇರುವದಿಲ್ಲವೆಂಬುದೇ ಶ್ಲೋಕದ ಪರಮಾಶಯವಾಗಿರುತ್ತದೆ.

ಆತ್ಮಜ್ಞಾನಿಗೆ ಯಾವ ಕರ್ಮವೂ ಇಲ್ಲವೆನ್ನುವದು ಏಕೆ?- ಎಂದರೆ ಆತ್ಮಜ್ಞಾನವಿರುವದರಿಂದ. ಆತ್ಮನು ಯಾವ ವಿಕಾರವೂ ಇಲ್ಲದವನು; ಅಂಥ ಆತ್ಮನೇ ತಾನೆಂದು ಅರಿತಿರುವವನು ಹೇಗೆ ಕರ್ತೃವಾದಾನು? ಆತ್ಮಜ್ಞಾನಿಯಲ್ಲಿ ಜ್ಞಾನವೆಂಬ ವಿಕಾರವಾದರೂ ಇರಬೇಕೊ, ಬೇಡವೊ?- ಎಂದು ಶಂಕಿಸಕೂಡದು. ಜ್ಞಾನ, ಅಜ್ಞಾನ-ಇವೆರಡೂ ಬುದ್ಧಿಯ ವೃತ್ತಿಗಳು; ಆ ವೃತ್ತಿಗಳೆಂಬ ಉಪಾಧಿಯ ಸಂಬಂಧದಿಂದ ಆತ್ಮನನ್ನು ಜ್ಞಾನಿಯೆಂದೂ ಅಜ್ಞಾನಿಯೆಂದೂ ನಾವು ವ್ಯವಹರಿಸುತ್ತಿರುವೆವು. ಸರಿಯಾಗಿ ನೋಡಿದರೆ ಈ ವಿಕಾರಗಳೂ ಆತ್ಮನಲ್ಲಿಲ್ಲವೇ ಇಲ್ಲ.

ಅಜ್ಞಾನಿಗೆ ಕರ್ಮವನ್ನೂ ಜ್ಞಾನಿಗೆ ಜ್ಞಾನವನ್ನೂ ಶಾಸ್ತ್ರವು ಹೇಳುತ್ತದೆಯೆಂದು ವಿಭಾಗಮಾಡಿದರೆ ತಿಳಿದವನಿಗೇ ಮತ್ತೆ ಜ್ಞಾನವನ್ನು ಶಾಸ್ತ್ರವು ಹೇಳಿದಂತೆ ಆಗುತ್ತದೆ; ಆದ್ದರಿಂದ ಜ್ಞಾನವನ್ನು ಅಜ್ಞಾನಿಗೇ ಹೇಳಿರುತ್ತದೆ ಎನ್ನುವದೇ ಸರಿಯಾದದ್ದು-ಎಂದು ನಮಗೆ ಮೊದಲು ತೋರಬಹುದು. ಆದರೆ ಅಜ್ಞಾನಕ್ಕೂ ಜ್ಞಾನಕ್ಕೂ ಒಂದು ತಾರತಮ್ಯವಿದೆ.

ಅದೇನೆಂದರೆ ಅಜ್ಞಾನದಿಂದ ತಾನು ಕರ್ತೃ ಎಂದು ಭಾವಿಸಿರುವವನು ಅಗ್ನಿಹೋತ್ರವೇ ಮುಂತಾದ ಕರ್ಮವನ್ನು ಮಾಡಬೇಕು ಎಂಬ ವಿಧಿಯ ಅರ್ಥವನ್ನು ತಿಳಿದುಕೊಂಡ ಬಳಿಕ ಆ ಕರ್ಮವನ್ನು ಮಾಡಬೇಕಾದದ್ದು ಉಳಿದುಕೊಂಡಿರುತ್ತದೆ; ಆದರೆ ನಾನು ಕರ್ತೃವಲ್ಲ, ಭೋಕ್ತೃವಲ್ಲ, ಸರ್ವರಿಗೂ ಆತ್ಮನಾಗಿರುವ ಪರಮಾತ್ಮನೇ- ಎಂಬ ಅರಿವು ಶಾಸ್ತ್ರದಿಂದ ಯಾವಾತನಿಗೆ ಆಗುವದೋ ಅವನು ಮತ್ತೆ ಮಾಡಬೇಕಾದದ್ದೇನೂ ಉಳಿದಿರುವದಿಲ್ಲ. ಆದ್ದರಿಂದ ಜ್ಞಾನಿಗೆ ಜ್ಞಾನವನ್ನೇ ಹೇಳಿದೆ, ಕರ್ಮಿಗೆ ಕರ್ಮವನ್ನು ವಿಧಿಸಿರುತ್ತದೆ ಎಂದು ವಿಂಗಡಿಸಿ ಹೇಳುವದು ತಪ್ಪಲ್ಲ.

ಕೆಲವರು ಮೀಮಾಂಸಕರು ಆತ್ಮಜ್ಞಾನದ ವಿಷಯದಲ್ಲಿ ಹೀಗೆ ಆಕ್ಷೇಪವನ್ನು ತೆಗೆಯುತ್ತಾರೆ: ''ನಾನು ಕರ್ತೃವಲ್ಲ ಭೋಕ್ತೃವಲ್ಲ- ಎಂದಿ ರೀತಿಯಾದ ಅರಿವು ಯಾರಿಗೂ ಉಂಟಾಗುವದೇ ಇಲ್ಲ; ಅದು ಉಂಟಾದರಲ್ಲವೆ, ಸರ್ವಕರ್ಮವನ್ನೂ ಬಿಡುವದು ಸಾಧ್ಯವಾಗುವದು?'' ಈ ಆಕ್ಷೇಪವು ಸರಿಯಲ್ಲ, ಏಕೆಂದರೆ ಧರ್ಮಾಧರ್ಮಗಳ ಜ್ಞಾನವು ಶಾಸ್ತ್ರದಿಂದ ಹೇಗೆ ಆಗುತ್ತದೆಯೋ ಹಾಗೆ ಜನ್ಮಾದಿವಿಕಾರರಹಿತನಾದ ಆತ್ಮನು ತಾನೆಂಬ ಜ್ಞಾನವೂ ಶಾಸ್ತ್ರದಿಂದ ಅವಶ್ಯವಾಗಿ ಆಗಿಯೇತೀರಬೇಕು. ಹಾಗಿಲ್ಲದಿದ್ದರೆ ಅನ್ಯಾಯವಾಗಿ ಶಾಸ್ತ್ರವಾಕ್ಯವನ್ನು ಅಪ್ರಮಾಣವೆಂದು ಎಣಿಸಿದಂತೆ ಆಗುತ್ತದೆ. ಆತ್ಮನು ಯಾವ ಕರಣಕ್ಕೂ ಗೋಚರನಲ್ಲವಾದರೂ ಶಾಸ್ತ್ರಾಚಾರ್ಯರ ಉಪದೇಶದಿಂದಲೂ ಶಮದಮಾದಿಗಳಿಂದಲೂ ಸಂಸ್ಕಾರವನ್ನು ಹೊಂದಿದ ಮನಸ್ಸಿಗೆ ಆತ್ಮನು ಯಾವ ವಿಕಾರವೂ ಇಲ್ಲದವನೆಂಬುದು ಅವಶ್ಯವಾಗಿ ತಿಳಿಯುತ್ತದೆ. ಹಾಗೆಂದು ಶ್ರುತಿಯಲ್ಲಿ ಹೇಳಿದೆ. ಆ ಜ್ಞಾನದಿಂದ ಅಜ್ಞಾನವು ಅವಶ್ಯವಾಗಿ ನಾಶವಾಗಿಯೇತೀರುತ್ತದೆ. ಆದ್ದರಿಂದ ಅಂಥ ಜ್ಞಾನಿಗೆ ಯಾವ ಕರ್ತೃತ್ವವೂ ಇರುವದಿಲ್ಲವೆಂದು ಹೇಳಿದ್ದು ಸರಿಯೇ ಆಗಿದೆ. ಆದ್ದರಿಂದಲೇ ಮುಂದೆ (5-13ರಲ್ಲಿ) ದೇಹದಲ್ಲಿರುವಾಗಲೇ ಜ್ಞಾನಿಯು ಸರ್ವಕರ್ಮಸಂನ್ಯಾಸರೂಪವಾದ ಜ್ಞಾನವನ್ನು ಪಡೆಯುತ್ತಾನೆಂದು ಸ್ಪಷ್ಟವಾಗಿ ಹೇಳಿರುತ್ತದೆ-ಎಂಬುದು ಶ್ಲೋಕ ಭಾಷ್ಯದ ಸಾರವು.

★★★★★

# ಜಾಗ್ರತ್ಸ್ವಪ್ನಗಳಿಗೆ ಕಾರ್ಯಕಾರಣಸಂಬಂಧವಿಲ್ಲ

**6-5-1941**

**ಬ್ರ॥ ಶ್ರೀ॥ ಎಚ್. ಅನಂತಮೂರ್ತಿಶಾಸ್ತ್ರಿಗಳವರು**

**ಮಾಂಡೂಕ್ಯಕಾರಿಕೆಯಲ್ಲಿ ಅಲಾತಶಾಂತಿಯ 38ರಿಂದ 46ರವರೆಗಿನ ಕಾರಿಕೆಗಳಲ್ಲಿ** ಜಾಗ್ರತ್ಸ್ವಪ್ನಗಳಿಗೆ ಕಾರ್ಯಕಾರಣಸಂಬಂಧ ವಿಲ್ಲವೆಂಬುದನ್ನು ಸ್ಪಷ್ಟಗೊಳಿಸಿರುತ್ತದೆ. ಸರಿಯಾಗಿ ನೋಡಿದರೆ ಹುಟ್ಟುವದೆಂಬುದೇ ಸಿದ್ಧವಾಗುವದಿಲ್ಲ. ಆದ್ದರಿಂದ ಎಲ್ಲವೂ ಜನ್ಮರಹಿತನಾದ ಆತ್ಮನೇ ಆಗಿರುತ್ತದೆ. ಮುಖ್ಯವಾಗಿ ಎಚ್ಚರದಿಂದ ಕನಸು ಉಂಟಾಗುವದೆಂಬ ಕಾರ್ಯಕಾರಣಭಾವವಂತೂ ಎಂದಿಗೂ ಒಪ್ಪತಕ್ಕದ್ದಲ್ಲ. ಏಕೆಂದರೆ ಎಚ್ಚರವೆಂದರೆ ನಿಜವಾಗಿರುವದೆಂದೂ ಕನಸೆಂದರೆ ನಿತ್ಯವಲ್ಲದ್ದೆಂದೂ ಜನರು ನಂಬುತ್ತಾರೆ. ಹೀಗಿರುವಲ್ಲಿ ಇರುವದರಿಂದ ಇಲ್ಲದ್ದು ಹುಟ್ಟುವದೆಂಬುದು ಹೇಗೆ ಸರಿಯಾದೀತು? ಮೊಲದಕೊಂಬೇ ಮುಂತಾದದ್ದು ಯಾವಾಗಲೂ ಹೇಗೂ ಹುಟ್ಟಿದ್ದಿಲ್ಲ, ಏಕೆಂದರೆ ಅದು ಇರುವದೇ ಇಲ್ಲ; ಹೀಗೆಯೇ, ಇಲ್ಲದ ಕನಸೆಂಬುದು ಇರುವ ಎಚ್ಚರದಿಂದ ಹೇಗೆ ಹುಟ್ಟೀತು? ಎಚ್ಚರವು ಕನಸಿಗೆ ಕಾರಣವೆಂಬುದನ್ನು ವೇದಾಂತಿಗಳು ವ್ಯಾವಹಾರಿಕದೃಷ್ಟಿಯಿಂದ ಹೇಳುವದುಂಟು. ಆದರೆ ಎಚ್ಚರದಲ್ಲಿರುವದೆಲ್ಲ ನಿಜವಾದದ್ದೆಂದೂ ಕನಸು ಮಾತ್ರ ಸುಳ್ಳಾದದ್ದೆಂದೂ ಅವರು ಹೇಳುವದಿಲ್ಲ. ಎಚ್ಚರವೂ ಮಿಥ್ಯವೇ, ಕನಸೂ ಮಿಥ್ಯವೇ. ಎಚ್ಚರದಲ್ಲಿ ಅಸತ್ಯವಾದದ್ದನ್ನು ಕಂಡು ಅದರ ವಾಸನೆಯಿಂದ ಕನಸನ್ನು ಕಾಣುವದುಂಟು; ಆದರೆ ಕನಸನ್ನು ಕಂಡು ಹಾಗೆಯೇ ಎಚ್ಚರದಲ್ಲಿ ಕಾಣುವದು ಬಹು ಕಡಿಮೆ. ಆದ್ದರಿಂದ ಎಚ್ಚರವು ಕನಸಿಗೆ ಕಾರಣವೆಂದು ವ್ಯಾವಹಾರಿಕದೃಷ್ಟಿಯಿಂದ ಹೇಳಬಹುದು. ಆದರೆ ಪರಮಾರ್ಥವಾಗಿ ನೋಡಿದರೆ ಕಾರ್ಯಕಾರಣಭಾವವೆಂಬುದೇ ಯುಕ್ತವಲ್ಲ. ಏಕೆಂದರೆ ಅಸತ್ತಿನಿಂದ ಅಸತ್ತುಂಟಾಗುವ ಹಾಗಿಲ್ಲ. ಸತ್ತೂ ಉಂಟಾಗುವ ಹಾಗಿಲ್ಲ. ಸತ್ತಿನಿಂದ ಸತ್ತೇ ಉಂಟಾಗುವಹಾಗಿಲ್ಲ, ಇನ್ನು ಅಸತ್ತುಂಟಾಗುವದೆಲ್ಲಿ ಬಂತು?

ಅಂತೂ ಸತ್ತೂ ಉಂಟಾಗುವದಿಲ್ಲ. ಅಸತ್ತೂ ಉಂಟಾಗುವದಿಲ್ಲ; ಆದ್ದರಿಂದ ಯಾವದೂ ಉಂಟಾಗಲೇ ಆರದು. ಎಚ್ಚರದಲ್ಲಿ ನಾವು ಹಗ್ಗದ ಹಾವು, ಕಪ್ಪೆಯಚಿಪ್ಪಿನ ಬೆಳ್ಳಿ-ಮುಂತಾದ ಕೆಲವು ಅನಿರ್ವಚನೀಯವಸ್ತುಗಳನ್ನು ಕಾಣುತ್ತೇವಷ್ಟೆ; ಅವು ಎಲ್ಲಿರುತ್ತವೆ? ಎಲ್ಲಿಯೂ ಇರದೆಇರುವ ವಸ್ತುಗಳನ್ನೇ ನಾವು ತಪ್ಪುತಿಳಿವಳಿಕೆಯಿಂದ ಅಲ್ಲಿರುವಂತೆ ಕಲ್ಪಿಸಿಕೊಳ್ಳುತ್ತಿರುತ್ತೇವೆ. ಅಲ್ಲವೆ? ಅದರಂತೆಯೇ ಕನಸಿನಲ್ಲಿಯೂ ತಪ್ಪುತಿಳಿವಿನಿಂದ ಅಲ್ಲಿಲ್ಲದ ಪದಾರ್ಥಗಳನ್ನೇ ಕಾಣುತ್ತಿರುವೆವೇ ಹೊರತು ಅವು ಎಂದಿಗೂ ಎಚ್ಚರದಿಂದ ಉಂಟಾದ ಕಾರ್ಯಗಳಲ್ಲ.

ಅದ್ವೈತಿಗಳೂ ಕಾರ್ಯಕಾರಣವನ್ನು ಕೆಲವು ಕಡೆ ಒಪ್ಪಿ ಜಗತ್ತು ಹುಟ್ಟಿರುವದೆಂದು ಹೇಳುವದುಂಟು. ಹೊರಗೆ ಪದಾರ್ಥಗಳು ನಮಗೆ ಕಾಣುತ್ತಿರುವದರಿಂದಲೂ ಅವುಗಳನ್ನು ಬಳಸಿಕೊಂಡು ವರ್ಣಾಶ್ರಮಧರ್ಮಗಳನ್ನು ಜನರು ಮಾಡುತ್ತಿರುವದರಿಂದಲೂ ಆ ಪದಾರ್ಥಗಳು ನಿಜವಾಗಿಯೂ ಇವೆಯೆಂದು ನೆರೆನಂಬಿರುವ ಶ್ರದ್ಧಾಳುಗಳಾದ ಮಂದಾಧಿಕಾರಿಗಳಿಗಾಗಿ ಹೀಗೆ ಅದ್ವೈತಿಗಳು ಜಗಜ್ಜನ್ಮವನ್ನು ಒಪ್ಪಿರುತ್ತಾರೆ. ಅದನ್ನು ಮೊದಲು ಹಿಡಿದುಕೊಂಡು ಕರ್ಮದಿಂದ ಚಿತ್ತಶುದ್ಧಿಯನ್ನು ಮಾಡಿಕೊಳ್ಳಲಿ; ಮುಂದೆ ಉಪನಿಷತ್ತಿನ ಜ್ಞಾನದಿಂದ ಅವರಿಗೇ ಜನ್ಮರಹಿತವಾದ ಪರಮಾರ್ಥದ ಸ್ವರೂಪವು ತಾನೇ ತಿಳಿಯುತ್ತದೆ- ಎಂಬುದೇ ಅದ್ವೈತಿಗಳ ಆಶಯವು. ಹೀಗೆ ಕಾರ್ಯಕಾರಣಭಾವವನ್ನು ಹೇಳಿದರೂ ಅದನ್ನು ನಂಬಿದವರು ವೈದಿಕಮಾರ್ಗದಲ್ಲಿಯೇ ಇರುವದರಿಂದ ಅವರಿಗೆ ಈ ನಂಬಿಕೆಯಿಂದ ಅಷ್ಟೇನೂ ಹೆಚ್ಚಿನ ದೋಷವುಂಟಾಗುವದಿಲ್ಲ. ಏಕೆಂದರೆ ಮುಂದೆ ಅವರಿಗೆ ಕ್ರಮಕ್ರಮವಾಗಿ ವೈದಿಕಸಿದ್ಧಾಂತವು ತಿಳಿದೇತೀರುತ್ತದೆ; ಸಾಂಖ್ಯಾದಿಗಳಂತೆ ಕಾರ್ಯಕಾರಣಭಾವವೇ ಪರಮಾರ್ಥವೆಂದು ಅವರು ಪಟ್ಟುಹಿಡಿಯುವ ಸಂಭವವೇನೂ ಇಲ್ಲ. ಸರಿಯಾಗಿ ನೋಡಿದರೆ ಪದಾರ್ಥಗಳು ಕಾಣುವದೂ ವ್ಯವಹಾರದಲ್ಲಿ ಬಳಕೆಗೆ ಬರುವದೂ ವಸ್ತುವು ನಿಜವಾಗಿದೆಯೆಂಬುದಕ್ಕೇನೂ ಗುರುತಲ್ಲ; ಮಾಯೆಯಿಂದ ಕಾಣುವ ಪದಾರ್ಥಗಳಲ್ಲಿಯೂ ಈ ಲಕ್ಷಣವು ಇರುತ್ತದೆ. ನಿಜವಾದ

ಪರಮಾರ್ಥವೇನೆಂದರೆ ವಸ್ತುವಿಗೆ ಜನ್ಮವಿಲ್ಲ, ಕ್ರಿಯೆಯಿಲ್ಲ, ಅದು ದ್ರವ್ಯವಲ್ಲ- ಇಂಥ ಚಿನ್ಮಾತ್ರವಾದ ಶಾಂತವಾದ ಅದ್ವಿತೀಯವವದು. ಹೀಗೆಂದು ತಿಳಿದರೆ ಅವಿದ್ಯಾಸಂಸಾರದ ಬಂಧವು ಬಿಡುಗಡೆಯಾಗುತ್ತದೆ ಎಂಬುದು ಕಾರಿಕೆಗಳರ್ಥದ ಸಾರವು.

★★★★★

# ಜ್ಞಾನನಿಷ್ಠೆ

**7-5-1941**

**ಶ್ರೀಶ್ರೀಗಳವರು**

**ಭಗವದ್ಗೀತೆಯಲ್ಲಿ ಹದಿನೆಂಟನೆಯ ಅಧ್ಯಾಯದ ಐವತ್ತೈದನೆಯ ಶ್ಲೋಕದ ಭಾಷ್ಯಾರ್ಥವು ಹೀಗಿದೆ,** ಜ್ಞಾನನಿಷ್ಠಾಯೋಗ್ಯತೆಯೆಂಬ ಸಿದ್ಧಿಯನ್ನು ಪಡೆದಮೇಲೆ ಬ್ರಹ್ಮವನ್ನು ಹೇಗೆ ಪಡೆಯುತ್ತಾನೆಂಬುದನ್ನು ಹೇಳುವದಕ್ಕೆ ಹೊರಟ ಭಗವಂತನು ಏಕಾಂತವಾಸ, ಇಂದ್ರಿಯನಿಗ್ರಹ, ಧ್ಯಾನಯೋಗ, ಅಹಂಕಾರಾದಿಗಳ ತ್ಯಾಗ-ಇವುಗಳಿಂದ ಜ್ಞಾನನಿಷ್ಠೆಯೆಂಬ ಭಕ್ತಿಯನ್ನು ಪಡೆದುಕೊಳ್ಳುತ್ತಾನೆ ಎಂದು ಹಿಂದೆ ಹೇಳಿರುತ್ತಾನೆ. ಆ ಭಕ್ತಿಯಿಂದ ಸಾಧಕನು ನನ್ನನ್ನು ಸೋಪಾಧಿಕರೂಪದಿಂದಲೂ ನಿರುಪಾಧಿಕರೂಪದಿಂದಲೂ ಅರಿತುಕೊಂಡು ನನ್ನಸ್ವರೂಪನೇ ಆಗುತ್ತಾನೆ ಎಂದು ಈ ಶ್ಲೋಕದಲ್ಲಿ ಹೇಳಿರುತ್ತಾನೆ.

ಇಲ್ಲಿ ಒಂದು ಶಂಕೆ: ಯಾವಾಗ ಯಾವ ವಿಷಯದಲ್ಲಿ ಜ್ಞಾನವುಂಟಾಗುವದೋ ಆಗಲೇ ಅದನ್ನು ಸರಿಯಾಗಿ ಅರಿತುಕೊಳ್ಳುತ್ತಾರೆಯೇ ಹೊರತು ಅದನ್ನು ಅರಿತುಕೊಳ್ಳುವುದಕ್ಕೆ ಜ್ಞಾನವನ್ನು ಮತ್ತೆಮತ್ತೆ ಅಭ್ಯಾಸಮಾಡುವದೆಂಬ ನಿಷ್ಠೆಯೇನೂ ಬೇಕಾಗುವದಿಲ್ಲ. ಹೀಗಿರುವಲ್ಲಿ ಭಕ್ತಿಯಿಂದ ಎಂದರೆ ಜ್ಞಾನನಿಷ್ಠೆಯಿಂದ ನನ್ನನ್ನು ಅರಿತುಕೊಳ್ಳುತ್ತಾನೆ ಎಂದು

ಹೇಳಿದ್ದು ವಿರುದ್ಧವಲ್ಲವೆ? ಈ ಶಂಕೆಯು ಸರಿಯಲ್ಲ. ಏಕೆಂದರೆ ಜ್ಞಾನನಿಷ್ಠೆಯೆಂದರೆ ಜ್ಞಾನವು ಹುಟ್ಟಿದಮೇಲೆ ಅದನ್ನು ಅವೃತ್ತಿಮಾಡುವದಲ್ಲ. ಜ್ಞಾನವು ಶಾಸ್ತ್ರೋಪದೇಶದಿಂದಲೂ ಆಚಾರ್ಯರ ಉಪದೇಶದಿಂದಲೂ ಹುಟ್ಟುತ್ತದೆ; ಅದು ಚಿತ್ತಶುದ್ಧಿಯಿಂದಲೂ ಅಮಾನಿತ್ವಾದಿಗಳಿಂದಲೂ ಪಕ್ವವಾಗುತ್ತದೆ. ಅದು ಸರ್ವಕರ್ಮಸಂನ್ಯಾಸದಿಂದ ತನ್ನ ಸ್ವಾನುಭವರೂಪದಲ್ಲಿ ಕೊನೆಗಾಣುವದಿದೆಯಲ್ಲ, ಅದನ್ನೇ ಇಲ್ಲಿ ಜ್ಞಾನನಿಷ್ಠೆಯೆಂದು ಕರೆದಿದೆ. ಈ ಜ್ಞಾನನಿಷ್ಠೆಯನ್ನೇ ಆರ್ತಾದಿಭಕ್ತಿಗಳಿಗೆ ಹೋಲಿಸಿ ಜ್ಞಾನನಿಷ್ಠೆಯೆಂಬ ಪರಭಕ್ತಿಯೆಂದು ಕರೆದಿರುತ್ತದೆ. ಆದ್ದರಿಂದ ಈ ಜ್ಞಾನನಿಷ್ಠೆಯಿಂದಲೇ ಭಗವಂತನನ್ನು ಸರಿಯಾಗಿ ತಿಳಿದುಕೊಂಡು ಭೇದಬುದ್ಧಿಯನ್ನು ಸಂಪೂರ್ಣವಾಗಿ ತೊಲಗಿಸಿಕೊಳ್ಳುತ್ತಾನೆ ಎಂದು ಹೇಳಿದ್ದು ಸರಿಯೇ ಆಯಿತು. ಸರ್ವಕರ್ಮಸಂನ್ಯಾಸಸಹಿತವಾಗಿರುವ ಜ್ಞಾನನಿಷ್ಠೆಯೇ ಪರಿಪಕ್ವವಾದ ಪರಮಾತ್ಮಜ್ಞಾನಕ್ಕೆ ಕಾರಣವೆಂದು ಶ್ರುತಿಸ್ಮೃತಿಗಳಲ್ಲಿಯೂ ಗೀತೆಗಳಲ್ಲಿಯೂ ನಿಶ್ಚಯವಾಗಿರುತ್ತದೆ ಎಂಬುದು ಭಾಷ್ಯದ ಸಾರವು.

★★★★★

## ಆಚಾರ್ಯರ ಗುಣಕಥನ

**8-5-1941**

**ಶ್ರೀಶ್ರೀಗಳವರು**

ಆಚಾರ್ಯರ ಗುಣಗಳನ್ನು ವರ್ಣಿಸುವದರಲ್ಲಿ ಒಂದು ಬಗೆಯ ಆನಂದವು ಮನುಷ್ಯನಿಗೆ ಉಂಟಾಗುತ್ತದೆ. ಆದ್ದರಿಂದ ನನ್ನ ಸಾಮರ್ಥ್ಯಕ್ಕೆ ತಕ್ಕಷ್ಟು ಯಾವದಾದರೊಂದು ಗುಣವನ್ನು ವರ್ಣಿಸಿ ಕೃತಾರ್ಥನಾಗುವ ಯೋಚನೆಮಾಡಿರುತ್ತೇನೆ. ಈ ದಿನ ಶ್ರೀಶಂಕರರ ''**ದಿಗ್ವಿಜಯದ**'' ವಿಷಯವಾಗಿ ಕೆಲವು ಮಾತುಗಳನ್ನು ಆಡಬೇಕೆಂದಿರುತ್ತೇನೆ.

ಹಿಂದಿನ ಕಾಲಕ್ಕೆ ಪಂಡಿತರುಗಳು ತಮ್ಮ ಸಾಮರ್ಥ್ಯವನ್ನು ಜನರಿಗೆ ತಿಳಿಯಪಡಿಸುವದಕ್ಕಾಗಿ ದೇಶದಲ್ಲೆಲ್ಲ ಸಂಚಾರಮಾಡಿ ಮುಖ್ಯ ಪಂಡಿತರೊಡನೆ ವಾಕ್ಯಾರ್ಥವನ್ನು ಮಾಡಿ ಸೋಲಿಸಿ ಅವರಿಂದ ಜಯಪತ್ರಿಕೆಯನ್ನು ಪಡೆಯುತ್ತಿದ್ದರು. ಇಂಥ ದಿಗ್ದಂತಿಗಳಾಗಿರುವವರಿಗೆ ರಾಜಮರ್ಯಾದೆಯೂ ಗೌರವವೂ ದೊರೆಯುತ್ತಿದ್ದವು. ಬೌದ್ಧರಜೈನರ ಕಾಲದಲ್ಲಿ ಸಂನ್ಯಾಸಿಗಳೂ ಈ ಮಾರ್ಗವನ್ನು ಅನುಸರಿಸಿ ಮತಪ್ರಸಾರವನ್ನು ಮಾಡಿದರು. ಇತ್ತೀಚೆಗೆ ಕುಮಾರಿಲಭಟ್ಟರೇ ಮುಂತಾದವರಿಂದ ಈ ಬಗೆಯ ಪ್ರಚಾರವಾಯಿತು. ಇದೇ ಮಾರ್ಗವನ್ನು ಅನುಸರಿಸಿ ವೇದಾಂತಿಗಳೂ ದಿಗ್ವಿಜಯವನ್ನು ಮಾಡುವದಕ್ಕೆ ಆರಂಭಿಸಿದರು. ಶ್ರೀಶಂಕರಾಚಾರ್ಯರವರೂ ಇದೇ ಕ್ರಮವನ್ನು ಅನುಸರಿಸಿರುತ್ತಾರೆ.

ಆದರೆ ಆಚಾರ್ಯರ ಪದ್ಧತಿಯಲ್ಲಿ ಒಂದು ವಿಶೇಷವಿದೆ. ಹಿಂದಿನ ವೇದಾಂತಿಗಳೂ ಮಿಕ್ಕ ದರ್ಶನಗಳವರೂ ಹೇಳಿದ್ದರಲ್ಲಿರುವ ಗುಣಾಂಶವನ್ನೆಲ್ಲ ತೆಗೆದುಕೊಂಡು ಅದರಮೇಲಿನ ತಮ್ಮ ಸಿದ್ಧಾಂತವನ್ನು ಅವರು ಸ್ಥಾಪಿಸಿರುತ್ತಾರೆ. ಕರ್ಮವು ಚಿತ್ತಶುದ್ಧಿಗಾಗಿ ಉಪಯುಕ್ತವೆಂದೂ ಉಪಾಸನೆಯು ಏಕಾಗ್ರತೆಗೆ ಉಪಯೋಗವೆಂದೂ ಹೇಳಿರುವದಲ್ಲದೆ ಮೀಮಾಂಸಕರು ಹೇಳುವ ಸ್ವರ್ಗವನ್ನೂ ಉಪಾಸನಾವಾದಿಗಳು ಹೇಳುವ ಬ್ರಹ್ಮಲೋಕವನ್ನೂ ಒಪ್ಪಿಕೊಂಡೇ ತಮ್ಮ ಸಿದ್ಧಾಂತವನ್ನು ಅವರು ಪ್ರತಿಪಾದಿಸಿರುತ್ತಾರೆ. ಕೊನೆಗೆ ಜೈನರೂ ಮುಂತಾದವರ ಪಕ್ಷದ ಗುಣಾಂಶವನ್ನು ಕೂಡ ಅವರು ಬಿಡುವಹಾಗಿಲ್ಲ. ನಿಜವಾಗಿ ವೇದಾಂತದಲ್ಲಿ ಈ ಅಂಶಗಳೆಲ್ಲ ಇರುವವೇ ಆಗಿರುವದರಿಂದ ಆಚಾರ್ಯರು ಎಲ್ಲವರನ್ನೂ ತಮ್ಮವರನ್ನಾಗಿ ಮಾಡಿಕೊಳ್ಳುವದು ಸುಲಭವೇ ಆಯಿತು.

ಅವರ ದಿಗ್ವಜಯದಿಂದ ಯಾರಿಗೂ ಅಪಜಯವಾಗಲಿಲ್ಲ. ಅವರ ಸಿದ್ಧಾಂತವು ಏಕದೇಶವನ್ನು ಮಾತ್ರ ಹೇಳುವ ಇತರ ಮತಗಳಿಗೆ ವಿರುದ್ಧವಾಗಲಿಲ್ಲ; ಅವರು ಒಂದು ಪಂಗಡವನ್ನು ಗುಂಪು ಕಟ್ಟುವದಕ್ಕೆ ಪ್ರಯತ್ನಮಾಡಲಿಲ್ಲ. ದ್ವೈತಮತ ಭೇದಗಳೆಲ್ಲ ಅದ್ವೈತದಲ್ಲಿಯೇ ಪರ್ಯವಸಾನವಾಗಬೇಕಾಗಿರುವದರಿಂದ ಅವರಿಗೂ ನಮಗೂ ವಿರೋಧವಿಲ್ಲ- ಎಂಬ ಗೌಡಪಾದರ ವಚನವನ್ನು ಅವರು ಅಕ್ಷರಶಃ ಪಾಲಿಸಿದರು. ಆದ್ದರಿಂದಲೇ

ಆಚಾರ್ಯರ ಗ್ರಂಥದಲ್ಲಿ ಎಲ್ಲಾ ಮತಗಳಿಗೂ ತಕ್ಕಸಾಧನವನ್ನು ಕಲ್ಪಿಸಿ ಪರಮಸಿದ್ಧಾಂತಕ್ಕೆ ವಿರುದ್ಧವಾದ ಕಡೆ ಹೊರತು ಮಿಕ್ಕ ಕಡೆಗಳಲ್ಲೆಲ್ಲ ಅವನ್ನು ಒಪ್ಪಿಕೊಂಡುಬಂದಿರುತ್ತಾರೆ. ಆದ್ದರಿಂದ ಆಚಾರ್ಯರ ದಿಗ್ವಿಜಯವು ಎಂದೆಂದಿಗೂ ಶಾಶ್ವತವಾದದ್ದು. ಪ್ರೇಮದಿಂದ ಅವರು ಎಲ್ಲರನ್ನೂ ಕಟ್ಟಿಹಾಕಿರುತ್ತಾರೆ; ಪರಮವಿಶಾಲವಾಗಿರುವ ಅದ್ವೈತತತ್ತ್ವದಲ್ಲಿ ಎಲ್ಲರನ್ನೂ ಕೂಡಿಹಾಕಿರುತ್ತಾರೆ.

★★★★★

# ಆತ್ಮನೊಬ್ಬನಿರುವನು

**20-4-1942**

**ಶ್ರೀಶ್ರೀಗಳವರು**

ಉಪದೇಶಸಾಹಸ್ರಿಯ ಪದ್ಯಭಾಗದ ಪಾರ್ಥಿವಪ್ರಕರಣದಲ್ಲಿ 31ರಿಂದ 68ರವರೆಗಿನ ಶ್ಲೋಕಗಳಲ್ಲಿ - ತನ್ನ ಸ್ವರೂಪವು ಜ್ಞಾನವೇ ಆಗಲಿ ಮತ್ತೇನೇ ಆಗಲಿ, ಆತ್ಮನೊಬ್ಬನಿರುವನೆಂಬ ವಿಷಯಕ್ಕೆ ವಿವಾದವುಂಟಾಗುವ ಹಾಗಿಲ್ಲ. ಏಕೆಂದರೆ ಇದೆ, ಇಲ್ಲ-ಎಂದು ಎರಡು ಬಗೆಯಿಂದ ತೋರುವ ಪದಾರ್ಥಗಳಿಗೂ ಸಾಕ್ಷಿಯಾಗಿ ಅವನ್ನು ಬೆಳಗುವ ಸಾಕ್ಷಿಯೊಬ್ಬನು ಇರಬೇಕು; ಇಲ್ಲದಿದ್ದರೆ ಇದೆ ಇಲ್ಲವೆಂಬ ವ್ಯವಹಾರವೇ ಸಿದ್ಧವಾಗುವುದಿಲ್ಲ. ಆ ಆತ್ಮನು ಇಲ್ಲವೆಂಬುದು ಯಾವ ಪ್ರಮಾಣದಿಂದಲೂ ಸಿದ್ಧವಾಗುವುದಿಲ್ಲ. ಸ್ವಯಂಸಿದ್ಧನಾದ ಆತ್ಮನ ಬಲದಿಂದಲೇ ಎಲ್ಲ ವ್ಯವಹಾರವೂ ಸಾಗುತ್ತಿದೆ. ಇದೆ, ಇಲ್ಲ, ಇದ್ದೂ ಇಲ್ಲ-ಎಂಬ ವಿಕಲ್ಪಕ್ಕೆ ಪೂರ್ವದಲ್ಲಿಯೇ ಯಾವದು ಇರಲೇಬೇಕಾಗಿದೆಯೋ ಅದೇ ಅದ್ವೈತತತ್ತ್ವವು. ಅದರಲ್ಲಿ ಯಾವ ಏರುಪೇರುಗಳೂ ಇರುವುದಿಲ್ಲ. ಅದು ನಿತ್ಯವೂ ಆಗಿರುತ್ತದೆ, ವಿಕಲ್ಪಿತವಾದ ದ್ವೈತಕ್ಕಿಂತಲೂ ಬೇರೆಯಾಗಿಯೇ ಇರುತ್ತದೆ. ದ್ವೈತವು ವಿಕಲ್ಪಿತವಾಗಿರುವದರಿಂದಲೂ ಹುಟ್ಟುವದರಿಂದಲೂ ಕನಸಿನಲ್ಲಿ ಕಾಣುವ ನೋಟದಂತೆ ಇದು ಮಿಥ್ಯೆಯೇ ಎಂದು ಹೇಳಬೇಕಾಗುತ್ತದೆ;

ಇದು ಇದೆ, ಅಥವಾ ಇಲ್ಲ ಎಂದು ಕಲ್ಪನೆಮಾಡುವದಕ್ಕೆ ಮುಂದೆ ದ್ವೈತವು ಇರುವದೇ ಇಲ್ಲ; ಆದ್ದರಿಂದಲೂ ಅದು ಮಿಥ್ಯೆ. ''ಕಾರ್ಯರೂಪವಾದದ್ದೆಲ್ಲವೂ ವಸ್ತುವಿಲ್ಲದ ಬರಿಯ ಹೆಸರಾಗಿರುತ್ತದೆ'' (ಛಾ), ''ಯಾವನು ದ್ವೈತವು ಬೇರೆಬೇರೆಯಾಗಿರುವಂತೆ ಎಣಿಸುವವನೋ ಅವನು ಸಾವಿನಮೇಲೆ ಸಾವನ್ನು ಪಡೆಯುವನು'' (ಬೃ) ''ನನ್ನ ಮಾಯೆಯು ದಾಟಲಶಕ್ಯವಾದದ್ದು'' (ಭ.ಗೀ) ಎಂದು ಶ್ರುತಿಸ್ಮೃತಿಗಳಲ್ಲಿದೆ. ಆದ್ದರಿಂದ ಅದಕ್ಕಾಗಿಆತ್ಮನು ದ್ವೈತದ ಸೋಂಕಿಲ್ಲದೆ ಶುದ್ಧನೂ ಬೇಕುಬೇಡಗಳನ್ನು ಮೀರಿದವನೂ ಮತ್ತೊಬ್ಬರಿಂದ ಕಲ್ಪಿತವಾಗದೆ ತಾನೇ ಇರುವವನೂ ಆಗಿರುತ್ತಾನೆ.

ಈ ಆತ್ಮನು ಜ್ಯೋತಿಸ್ವರೂಪನಾಗಿರುವದರಿಂದ ಇವನಲ್ಲಿ ಯಾವ ಅಜ್ಞಾನವೂ ಇರುವದಿಲ್ಲ; ನಿತ್ಯಜ್ಯೋತಿಯಾಗಿರುವದರಿಂದ ಸೂರ್ಯನಲ್ಲಿ ಅಪ್ರಕಾಶವೆಂಬುದೆಲ್ಲಿ ಬಂದೀತು? ಇವನು ನಿರ್ವಿಕಾರನಾದ್ದರಿಂದ ಇವನಿಗೆ ಮತ್ತೊಂದು ಅವಸ್ಥೆಯೆಂಬುದಿಲ್ಲ. ಏಕೆಂದರೆ ಅವಸ್ಥೆಯಿದ್ದರೆ ಸ್ವರೂಪದಲ್ಲಿಯೇ ಮಾರ್ಪಾಡಾಗಿ ನಾಶವಾಗಬೇಕಾಗುತ್ತದೆ. ಮೋಕ್ಷವೆಂಬುದು ಒಂದು ಅವಸ್ಥೆಯಾದರೆ ಅದು ಕೃತಕವೂ ಅನಿತ್ಯವೂ ಆಗಬೇಕಾಗುತ್ತದೆ; ಮೋಕ್ಷವು ಮತ್ತೊಂದರೊಡನೆ ಸಂಯೋಗವಾಗಲಿ, ಮತ್ತೊಂದರ ವಿಯೋಗವಾಗಲಿ, ಎರಡೂ ಅನಿತ್ಯವೇ ಆಗುತ್ತದೆ. ಇದರಂತೆ ಹೋಗುವದು, ಬರುವದು- ಎಂಬ ಕ್ರಿಯೆಯಿಂದ ಪಡೆಯತಕ್ಕದ್ದು ಮೋಕ್ಷವೆನಿಸಲಾರದು; ಏಕೆಂದರೆ ಎಲ್ಲಿಗೆ ಹೋದರೂ ಸ್ವರೂಪವು ಬದಲಾಯಿಸಲಾರದು. ಸ್ವರೂಪಕ್ಕೆ ಒಂದು ನಿಮಿತ್ತ ಬೇಡ, ಮಿಕ್ಕದ್ದೆಲ್ಲವೂ ನಿಮಿತ್ತವನ್ನು ಬಯಸುತ್ತದೆ; ಆದ್ದರಿಂದ ಸ್ವರೂಪಕ್ಕಿಂತ ಬೇರೆಯಾದದ್ದೆಲ್ಲವೂ ಅನಿತ್ಯವಾಗಿರುತ್ತದೆ. ಎಲ್ಲವೂ ಆತ್ಮನಿಗಾಗಿ ರುವದರಿಂದ ಆತ್ಮನೊಬ್ಬನೇ ನಿತ್ಯನಾಗಿರುತ್ತಾನೆ. ಹೀಗೆ ಆತ್ಮಸ್ವರೂಪದಿಂದ ಮೋಕ್ಷವು ಯಾವ ಕರ್ಮದಿಂದಲೂ ಪ್ರಾಪ್ತವಾಗುವಂತಿಲ್ಲವಾದ್ದರಿಂದ ಕರ್ಮವನ್ನೂ ಮಾಡಬೇಕಾಗಿಲ್ಲ. ಸರ್ವಕರ್ಮಸಂನ್ಯಾಸವೇ ಮೋಕ್ಷಕ್ಕೆ ಸಾಧನವು. ಆತ್ಮಲಾಭವು ಎಲ್ಲಕ್ಕಿಂತಲೂ ಹೆಚ್ಚಿನದೆಂದು ಶಾಸ್ತ್ರವಿದೆ. ಅದು ಯುಕ್ತಿಗೂ ಹೊಂದುತ್ತದೆ. ಆದ್ದರಿಂದ ಅನಾತ್ಮವೆಲ್ಲವನ್ನೂ ಬಿಟ್ಟು ಆತ್ಮನನ್ನೇ ಅರಿತುಕೊಳ್ಳಬೇಕು.

ಸಾಂಖ್ಯರು ಗುಣಗಳ ವೈಷಮ್ಯದಿಂದ ಸೃಷ್ಟಿಯಾಗುವದೆಂದೂ ಪ್ರಕೃತಿಯ ವ್ಯಾಪಾರವು ಪುರುಷನ ಬಂಧಮೋಕ್ಷಗಳಿಗೆ ಕಾರಣವಾಗಿರುವದೆಂದೂ ಹೇಳುತ್ತಾರೆ. ಆದರೆ ಪ್ರಲಯವಾದ ಮೇಲೆ ಮತ್ತೂ ಗುಣಗಳಲ್ಲಿ ವೈಷಮ್ಯವುಂಟಾಗುವದಕ್ಕೆ ಕಾರಣವಿರುವದಿಲ್ಲ; ಗುಣಗಳೇ ಒಂದರೊಂದರ ಪ್ರವೃತ್ತಿಗೆ ಕಾರಣವೆನ್ನುವದಾದರೆ ಯಾವಾಗಲೂ ಸೃಷ್ಟಿಯಾಗಬೇಕಾಗುತ್ತದೆ, ಅಥವಾ ಯಾವಾಗಲೂ ಆಗದೆ ಹೋಗಬೇಕಾಗುತ್ತದೆ. ಪುರುಷನಿಗಾಗಿ ಕೆಲಸಮಾಡುವ ಪ್ರಕೃತಿಯು ಬದ್ಧಪುರುಷರಿಗೆಂದೇ ಕೆಲಸಮಾಡಬೇಕಾದದ್ದೇನು? ಮುಕ್ತರಿಗಾಗಿಯೂ ಏತಕ್ಕೆ ಮಾಡಬಾರದು?-ಎಂಬ ಪ್ರಶ್ನೆಯು ಎದ್ದುಕೊಳ್ಳುತ್ತದೆ. ಸುಖವೇ ಮುಂತಾದ ಅರ್ಥಕ್ಕೆ ಅಸಂಗನಾದ ಅವಿಕಾರಿಯಾದ ಪುರುಷನಿಗೂ ಸಂಬಂಧವಿರುವದಕ್ಕೆ ಕಾರಣವಿಲ್ಲ; ಒಂದು ವೇಳೆ ಪುರುಷನು ವಿಕಾರಿಯೆಂದು ಒಪ್ಪಿದರೂ ಪ್ರಕೃತಿಯು ಜಡವಾಗಿರುವದರಿಂದ ಅದು ಪುರುಷನಿಗಾಗಿ ಕೆಲಸಮಾಡುವದೆಂಬುದು ಹೊಂದಲಾರದು, ಪುರುಷನು ವಿಕಾರಿಯಾದ್ದರಿಂದ ಅವನು ನಶ್ವರನಾಗುವನೆಂಬ ದೋಷವೂ ತಟ್ಟುತ್ತದೆ. ಇದೆಲ್ಲ ಸಾಂಖ್ಯಮತದಲ್ಲಿರುವ ದೋಷ.

ಇನ್ನು ವೈಶೇಷಿಕರೇ ಮುಂತಾದವರು ಹೇಳುವಂತೆ ಜ್ಞಾನವೆಂಬುದು ಆತ್ಮನ ಗುಣವಾಗಿದ್ದರೆ ಆತ್ಮನ ಗುಣಗಳೇ ಆಗಿರುವ ಸುಖಾದಿಗಳು ಜ್ಞಾನಕ್ಕೆ ವಿಷಯವಾಗುವ ಸಂಭವವಿರುವದಿಲ್ಲ. ಮನಃಸಂಯೋಗವೊಂದರಿಂದಲೇ ಆ ಗುಣಗಳು ಆತ್ಮಸಮವೇತವಾಗಿರುವವೆಂದು ಆ ವಾದಿಗಳು ಒಪ್ಪಿರುವದರಿಂದಲೂ ಜ್ಞಾನಕ್ಕೆ ಸುಖಾದಿಗಳು ವಿಷಯವಾಗಲಾರವು. ಸುಖವನ್ನು ನಾನು ಅರಿತೆನು ಎಂದು ಅನುಭವವಾಗುತ್ತಿರುವದರಿಂದ ಸುಖವು ಜ್ಞಾನವಿಷಯವಲ್ಲವೆಂದು ಹೇಳುವದಕ್ಕೆ ಬರುವದಿಲ್ಲ. ಆತ್ಮನು ನಿತ್ಯನಾಗಿರುವದರಿಂದ ಅವಿಕಾರಿಯಾಗಿರುತ್ತಾನೆ; ಆದ್ದರಿಂದ ಸುಖಾದಿಗಳು ಆತ್ಮಧರ್ಮವೆಂಬುದೂ ಸರಿಯಲ್ಲ. ಅವು ಮನಸ್ಸಿಗೇಕೆ ಧರ್ಮವಲ್ಲ? ಎಂಬ ಪ್ರಶ್ನೆಗೂ ಉತ್ತರವಿಲ್ಲ. ಜ್ಞಾನವೂ ಜ್ಞೇಯವೆಂದು ವೈಶೇಷಿಕರು ಒಪ್ಪುತ್ತಾರೆ; ಆದರೆ ಆ ಅರಿಯುವ ಜ್ಞಾನವು ಮತ್ತೊಂದಕ್ಕೆ ಜ್ಞೇಯ, ಆ ಜ್ಞಾನವು ಮತ್ತೊಂದಕ್ಕೆ; ಎಂದೀಪರಿಯಲ್ಲಿ ಅನವಸ್ಥೆಯ ದೋಷವು ಅವರಿಗೆ ಗಂಟುಬೀಳುತ್ತದೆ.

ಅರಿಯುವ ಮತ್ತು ಅರಿಯಲ್ಪಡುವ ಜ್ಞಾನಗಳೆರಡೂ ಒಟ್ಟಿಗೆ ಉಂಟಾಗುವವೆನ್ನುವದಾದರೆ ಒಂದು ಜ್ಞೇಯವು ಮತ್ತೊಂದು ಜ್ಞಾನವು ಎಂಬ ವಿಭಾಗಕ್ಕೆ ಕಾರಣವಿಲ್ಲ. ಆತ್ಮನಲ್ಲಿ ಬೇರೆಬೇರೆ ಅವಸ್ಥೆಗಳಾಗುವದಕ್ಕೆ ಕಾರಣವಿಲ್ಲವಾದ್ದರಿಂದಲೂ ಆತ್ಮನು ಅಸಂಗನಾಗಿರುವದರಿಂದಲೂ ಅವನಿಗೆ ಬಂಧಮೋಕ್ಷಗಳು ಆಗುವದಕ್ಕೆ ಕಾರಣವಿರುವದಿಲ್ಲ.

ಹಾಗಾದರೆ ಬಂಧವಾಗಲಿ ಮೋಕ್ಷವಾಗಲಿ ಇಲ್ಲವೇ ಇಲ್ಲವೆಂದಾಗುವದಿಲ್ಲವೆ?- ಎಂದು ಶಂಕಿಸಬಾರದು. ಏಕೆಂದರೆ ಬುದ್ಧಿಯ ಭ್ರಾಂತಿಯೇ ಬಂಧವು, ಆ ಭ್ರಾಂತಿಯ ನಾಶವೇ ಮೋಕ್ಷವು. ಜ್ಞಾನವು ಆತ್ಮನ ಸ್ವರೂಪವೇ ಆಗಿದೆ; ಆದರೂ ಅದರಿಂದ ಬೆಳಗುವ ಬುದ್ಧಿಯು ತನಗಿಂತ ಬೇರೆ ಜ್ಞಾನವು ಇಲ್ಲವೆಂದೇ ಭ್ರಾಂತಿಯನ್ನು ತಳೆಯುತ್ತಿರುವದು. ಈ ಭ್ರಾಂತಿಯೇ ಬಂಧವು; ಇದು ಹೋಗುವದೇ ಮೋಕ್ಷವು. ಇದನ್ನು ಬಿಟ್ಟು ಮೋಕ್ಷವು ಬೇರೊಂದು ಅವಸ್ಥೆಯೆಂದು ಯಾರುಯಾರು ಕಲ್ಪಿಸಿದರೂ ದೋಷವು ಅವರಿಗೆ ತಟ್ಟುವದು. ಆದ್ದರಿಂದಲೇ ವೇದಬಾಹ್ಯವಾದ ಸ್ಮೃತಿಗಳೂ ಶಾಸ್ತ್ರಗಳೂ ಅಪ್ರಮಾಣವೆಂದೂ ತಮೋನಿಷ್ಠವಾದವೆಂದೂ ಸ್ಮೃತಿಯಲ್ಲಿರುತ್ತದೆ. ಆದ್ದರಿಂದ ಶ್ರದ್ಧಾಭಕ್ತಿಗಳಿಂದೊಡಗೂಡಿ ವ್ಯಾಸರಿಗಭಿಮತವಾದ ವೇದಾಂತದರ್ಶನವನ್ನೇ ಅವಲಂಬಿಸಬೇಕು ಎಂಬುದು ಗ್ರಂಥಭಾಗದ ಸಾರವು.

★★★★★

# ಬ್ರಹ್ಮವನ್ನು ತಿಳಿಯಬೇಕು

**21-4-1942**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರು**

**ಕೇನೋಪನಿಷತ್ತಿನಲ್ಲಿ ನಾಲ್ಕನೆಯ ಖಂಡದಲ್ಲಿ 7 ರಿಂದ 9 ರವರೆಗಿನ ಮಂತ್ರಗಳಲ್ಲಿ** ಶಿಷ್ಯನು ಗುರುವನ್ನು 'ಉಪನಿಷತ್ತನ್ನು ಹೇಳಬೇಕು' ಎಂದು ಕೇಳಲು ಗುರು 'ನಿನಗೆ ಬ್ರಹ್ಮದ ಉಪನಿಷತ್ತನ್ನು ಹೇಳಿರುತ್ತೇನೆ' ಎಂದು ಉತ್ತರವನ್ನು ಕೊಟ್ಟಿರುತ್ತಾನೆ. ಹಿಂದೆ ಹೇಳಿರುವ ಉಪನಿಷತ್ತಿಗೆ ಸಹಕಾರಿಯಾಗಿ ಸಾಧನಾಂತರವೂ ಬೇಕೊ ಬೇಡವೂ? ಬೇಕಾದರೆ ಆ ಸಾಧನವನ್ನು ಹೇಳಿರಿ-ಎಂಬ ಅಭಿಪ್ರಾಯದಿಂದ ಶಿಷ್ಯನು ಪ್ರಶ್ನೆಮಾಡಿರುತ್ತಾನೆ. ಇದಕ್ಕೆ ಮತ್ತೆ ಯಾವ ಸಹಕಾರಿ ಸಾಧನವೂ ಅವಶ್ಯವಿಲ್ಲ, ಇದೇ ಉಪನಿಷತ್ತು. ಇಷ್ಟನ್ನು ತಿಳಿದುಕೊಂಡರೆ ಮತ್ತೇನೂ ಬೇಕಿರುವದಿಲ್ಲ-ಎಂಬುದು ಗುರುವಿನ ಉತ್ತರದ ಆಶಯವು.

ಮುಂದಿನ ಮಂತ್ರದಲ್ಲಿ ತಪಸ್ಸು, ದಮ, ಕರ್ಮ- ಮುಂತಾದವುಗಳನ್ನು ಹೇಳಿರುವದು ಉಪನಿಷತ್ತಿನ- ಎಂದರೆ ಬ್ರಹ್ಮವಿದ್ಯೆಯ ಜೊತೆಗೆ ಬೇರೆ ಸಹಕಾರಿ ಸಾಧನವನ್ನು ತಿಳಿಸುವದಕ್ಕಲ್ಲ, ಬ್ರಹ್ಮವಿದ್ಯೆಯು ಉಂಟಾಗುವದಕ್ಕೆ ಸಾಧನವಾಗಿಯೇ ಅವನ್ನು ಹೇಳಿರುತ್ತದೆ. ವೇದ, ಶಿಕ್ಷೆಯೇ ಮುಂತಾದ ಅಂಗಗಳನ್ನು ತಪಸ್ಸೇ ಮುಂತಾದವುಗಳ ಜೊತೆಗೆ ಅಲ್ಲಿ ಹೇಳಿರುತ್ತದೆ; ಆ ವೇದವೇ ಮುಂತಾದವುಗಳು ಕರ್ಮಜ್ಞಾನಗಳಿಗೆ ಸಹಾಯಕವಾಗಿವೆಯೇ ಹೊರತು ಅವು ಬ್ರಹ್ಮವಿದ್ಯೆಗೆ ಶೇಷವಲ್ಲ, ಸಹಾಕಾರಿಸಾಧನವೂ ಅಲ್ಲ. ಆದ್ದರಿಂದ ಅದರಂತೆಯೇ ತಪಸ್ಸೂ ಮುಂತಾದವುಗಳನ್ನೂ ಜ್ಞಾನೋತ್ಪತ್ತಿಗೆ ಸಾಧನವಾಗಿ ಹೇಳಿದೆಯೆಂದೇ ನಿಶ್ಚಯಿಸಬೇಕು. ಸೂಕ್ತವಾಕದಲ್ಲಿ ಹೇಳಿರುವ ಮಂತ್ರಗಳಲ್ಲಿ ಕೆಲವು ಪೌರ್ಣಮಾಸ್ಯದೇವತೆಗಳಿಗೂ ಮತ್ತೆ ಕೆಲವು ದರ್ಶದ ದೇವತೆಗಳಿಗೂ ಹೊಂದುವದರಿಂದ ಆಯಾ ಯಾಗಕ್ಕೆ ಹೊಂದುವ ಮಂತ್ರಗಳನ್ನು ಅದದಕ್ಕೆ ಬೇರ್ಪಡಿಸಿಕೊಳ್ಳುವಂತೆ ಇಲ್ಲಿಯೂ ವೇದಶಿಕ್ಷಾದ್ಯಂಗಗಳು-ಇವುಗಳನ್ನು ಕರ್ಮಜ್ಞಾನಗಳಿಗೆ ಸಾಧನವಾಗಿಯೂ ತಪಸ್ಸು ಮುಂತಾದವುಗಳನ್ನು ಜ್ಞಾನಕ್ಕೆ ಶೇಷವೆಂದೋ ಸಹಕಾರಿಯೆಂದೋ ಹೇಳಿದೆ ಎಂದೂ ಏತಕ್ಕೆ

ವಿಂಗಡಿಸಿಕೊಳ್ಳಬಾರದು?-ಎಂದು ಶಂಕಿಸಬಾರದು. ಏಕೆಂದರೆ ಬ್ರಹ್ಮವಿದ್ಯೆಯಲ್ಲಿ ಯಾವ ಕ್ರಿಯೆಯಾಗಲಿ ಕಾರಕವಾಗಲಿ ಫಲವಾಗಲಿ ಇರುವದಿಲ್ಲ. ಆದ್ದರಿಂದ ಅದಕ್ಕೆ ಸಹಕಾರಿಯಾಗಲಿ ಶೇಷವಾಗಲಿ ಅವಶ್ಯವಿರುವದಿಲ್ಲ. ಆದ್ದರಿಂದ ಸರ್ವಕರ್ಮಸಂನ್ಯಾಸಪೂರ್ವಕವಾಗಿರುವ ಈ ಬ್ರಹ್ಮವಿದ್ಯೆಯೆಂಬ ಉಪನಿಷತ್ತು ಸ್ವತಂತ್ರವಾಗಿಯೇ ಪುರುಷಾರ್ಥಕ್ಕೆ ಸಾಧನವಾಗಿರುತ್ತದೆ; ಇದಕ್ಕೆ ಮತ್ತೇತರ ಸಹಾಯವೂ ಬೇಡ ಎಂಬುದೇ ಗುರುವಿನ ಆಶಯವು.

ಆದರೆ ಈ ಜ್ಞಾನವು ದೊರಕುವದಕ್ಕೆ ತಪಸ್ಸು, ದಮ, ಕರ್ಮ- ಇವುಗಳು ಬೇಕು. ಪುರುಷನು ನೆಟ್ಟಗೆ ನಿಲ್ಲುವದಕ್ಕೆ ಪಾದಗಳು ಬೇಕಾಗಿರುವಂತೆ ಇವು ವಿದ್ಯೆಗೆ ಪಾದಗಳಾಗಿರುತ್ತವೆ. ಈ ಜನ್ಮದಲ್ಲಿಯೋ ಹಿಂದಿನ ಜನ್ಮಗಳಲ್ಲಿಯೋ ತಪಸ್ಸೇ ಮುಂತಾದ ಸಾಧನಗಳನ್ನು ಚೆನ್ನಾಗಿ ಅನುಷ್ಠಾನಮಾಡಿರುವವರಿಗೇ ಜ್ಞಾನವುಂಟಾಗುತ್ತದೆ. 'ಅಮಾನಿತ್ವಮದಂಭಿತ್ವಮ್'-ಮುಂತಾಗಿ ಗೀತೆಯಲ್ಲಿ ಹೇಳಿರುವ ಜ್ಞಾನಸಾಧನಗಳನ್ನು ಇಲ್ಲಿ ಸೇರಿಸಿಕೊಳ್ಳಬೇಕು. ವೇದಗಳು ಕರ್ಮವನ್ನೂ ಜ್ಞಾನವನ್ನೂ ತಿಳಿಸುತ್ತವೆ; ಷಡಂಗಗಳು ವೇದರಕ್ಷಣೆಗೆ ಬೇಕಾಗಿ ರುತ್ತದೆ. ಆದ್ದರಿಂದ ಅವೂ ಪಾದಗಳೇ ಅಥವಾ ತಪ ಆದಿಗಳು ಪಾದಗಳು, ವೇದಗಳೂ ಮಿಕ್ಕ ಅಂಗಗಳಿದ್ದಂತೆ - ಎಂದಾದರೂ ಕಲ್ಪಿಸಬಹುದು. ಸತ್ಯವೆಂಬುದು ವಿದ್ಯೆಗೆ ನೆಲೆಮನೆ; ವಿದ್ಯೆಯು ಅದರಲ್ಲಿಯೇ ನೆಲಸಿರುತ್ತದೆ. ಮಿಕ್ಕ ಸಾಧನಗಳಿಗಿಂತಲೂ ವಾಙ್ಮನಃಕಾಯಗಳಲ್ಲಿ ವಕ್ರತೆಯಿಲ್ಲದೆ ಇರುವದೆಂಬ ಸತ್ಯವು ಬಲುಹೆಚ್ಚಿನ ಸಾಧನವಾದ್ದರಿಂದ ಅದು ವಿದ್ಯೆಗೆ ಆಯತನವಾಗಿರುತ್ತದೆ. ಈ ಸಾಧನಗಳಿಂದೊಡಗೂಡಿರುವಾತನಿಗೇ ವಿದ್ಯೆಯು ಲಭಿಸುತ್ತದೆ.

ಯಾವಾತನು ಬ್ರಹ್ಮವನ್ನು ಇದ್ದದ್ದು ಇದ್ದಂತೆ ತಿಳಿಯುವ ಬ್ರಹ್ಮವಿದ್ಯೆಯನ್ನು ಪಡೆದುಕೊಳ್ಳುವನೋ ಅವನು ಅವಿದ್ಯಾಕಾಮಕರ್ಮಗಳೆಂಬ ಸಂಸಾರಕಾರಣವಾದ ಪಾಪವನ್ನು ಕೊಡವಿಕೊಂಡು ಅನಂತಾನಂದರೂಪವಾದ ಬ್ರಹ್ಮದಲ್ಲಿ ನೆಲೆನಿಲ್ಲುತ್ತಾನೆ. ಅವನು ಮರಳಿ ಸಂಸಾರಕ್ಕೆ ಬರುವದಿಲ್ಲ- ಎಂಬುದೇ ಭಾಷ್ಯಭಾಗದ ಸಾರವು.

★★★★★

# ಚೇತನವೇ ಜಗತ್ಕಾರಣ

**22-4-1942**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರು**

**ಬ್ರಹ್ಮಸೂತ್ರದ 2-1-21 ರಿಂದ 23ರವರೆಗಿನ ಸೂತ್ರಗಳ ಭಾಷ್ಯಾರ್ಥ ವಿವರಣೆ:** ಚೇತನವೇ ಜಗತ್ಕಾರಣವೆಂಬ ವಾದದಲ್ಲಿ ಅನೇಕ ದೋಷಗಳು ತಲೆದೋರುತ್ತವೆ. ಜೀವನೇ ಬ್ರಹ್ಮವೆಂದು ಶ್ರುತಿಯಲ್ಲಿ ಹೇಳಿದೆ; ಬ್ರಹ್ಮವೇ ಜೀವನಾಗಿ ಸೃಷ್ಟಿಯಲ್ಲಿ ಪ್ರವೇಶಿಸಿರುತ್ತದೆ ಎಂದೂ ಹೇಳಿದೆ. ಆದರೆ ಹುಟ್ಟು, ಸಾವು, ಮುಪ್ಪು, ಬೇನೆ-ಮುಂತಾದ ಅನರ್ಥಗಳಿಂದ ಕೂಡಿದ ಈ ಸಂಸಾರವನ್ನು ಬ್ರಹ್ಮವು ತಾನೇ ಉಂಟುಮಾಡಿಕೊಂಡಿತೆಂದು ಹೇಳುವದು ಸರಿಯಾದೀತೆ? ಅದರೊಳಕ್ಕೆ ಜೀವನಾಗಿ ಹೊಕ್ಕು ಅತ್ಯಂತಮಲಿನವಾದ ದೇಹವನ್ನೇ ತಾನೆಂದು ಬಗೆದೀತೆ? ಇದನ್ನೆಲ್ಲ ಬ್ರಹ್ಮವು ಮಾಡಿದ್ದರೆ ಇದು ದುಃಖವೆಂದು ತಿಳಿದಬಳಿಕ ಏತಕ್ಕೆ ಇದನ್ನು ಬಿಟ್ಟು ಮತ್ತೊಂದು ಸುಖಕರವಾದದ್ದನ್ನು ಮಾಡಿಕೊಳ್ಳಬಾರದು; ತಾನೇ ಸೃಷ್ಟಿಸಿದ ಜಗತ್ತನ್ನು ತಾನೇ ಪರಿಹರಿಸಿಕೊಳ್ಳುವದಕ್ಕೇಕೆ ಆಗುವದಿಲ್ಲ? ಜೀವನು ತನ್ನ ಶರೀರವನ್ನು ಕೂಡ ಸುಲಭವಾಗಿ ತನ್ನೊಳಕ್ಕೆ ಸರಿಯಿಸಿಕೊಂಡು ಹೊಸದೊಂದು ಶರೀರವನ್ನು ಮಾಡಿಕೊಳ್ಳಲಾರನಲ್ಲ! ಆದ್ದರಿಂದ ಹಲವು ದೋಷಗಳು ಈ ವಾದದಲ್ಲಿವೆ-ಎಂಬುದು ಪೂರ್ವಪಕ್ಷ.

ಇಲ್ಲಿ ಅವಿದ್ಯಾದೃಷ್ಟಿಯಿಂದ ತೋರುವ ಜೀವನೇ ಜಗತ್ತನ್ನು ಸೃಷ್ಟಿಸಿರುವನೆಂದು ಬಗೆದು ಪೂರ್ವಪಕ್ಷಿಯು ಈ ಆಕ್ಷೇಪಗಳನ್ನು ಹಾಕಿಕೊಂಡಿರುತ್ತಾನೆ. ಆದರೆ ಇದು ಸರಿಯಲ್ಲ, ಬ್ರಹ್ಮವು ಸರ್ವಜ್ಞವೂ ಸರ್ವಶಕ್ತಿಯಿಂದ ಕೂಡಿದ್ದೂ ಆಗಿರುವದರಿಂದ, ಅದು ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಮಾಡುತ್ತದೆಯೆಂದು ಹೇಳುವ ನಮ್ಮ ವಾದದಲ್ಲಿ ಯಾವ ದೋಷವೂ ಇರುವದಿಲ್ಲ. ಇದೂ ಅಲ್ಲದೆ ಜೀವ, ಸೃಷ್ಟಿ ಕರ್ತ-ಎಂಬ ವಿಭಾಗವು ಕೂಡ ಅವಿದ್ಯೆಯಿಂದಲೇ ಆಗಿರುತ್ತದೆ. ಆಕಾಶ, ಘಟಾಕಾಶ-ಎಂಬ ವಿಭಾಗವು ತೋರುವಾಗಲೂ ಆಕಾಶವು ಒಂದೇ

ಆಗಿರುವಂತೆ ಪರಮಾರ್ಥವಾಗಿ ಜಗತ್ತನ್ನು ಸೃಷ್ಟಿಸುವ ಈಶ್ವರನೆಂದೂ ಸಂಸಾರದುಃಖವನ್ನು ಅನುಭವಿಸುವ ಜೀವನೆಂದೂ ವಿಭಾಗವು ತೋರುತ್ತಿರುವಾಗಲೂ ಬ್ರಹ್ಮವು ಒಂದೇ ಆಗಿರುತ್ತದೆ; ಅದು ನಿಜವಾಗಿ ಜಗತ್ಸ್ರಷ್ಟೃ ಅಲ್ಲ ಸಂಸಾರಿಯೂ ಅಲ್ಲ. ಆದ್ದರಿಂದ ಪೂರ್ವಪಕ್ಷದಲ್ಲಿ ಹೇಳಿದ ದೋಷಗಳು ವ್ಯವಹಾರದೃಷ್ಟಿಯಿಂದ ಈಶ್ವರನಿಗೆ ತಟ್ಟುವದಿಲ್ಲ; ಪರಮಾರ್ಥವಾಗಿ ಯಾರಿಗೂ ತಟ್ಟುವದಿಲ್ಲ, ಒಂದು ಬ್ರಹ್ಮವೇ ಜೀವ, ಈಶ್ವರ-ಎಂಬ ಭೇದವನ್ನು ತಳೆದಿರುವದೂ ಸೃಷ್ಟಿಯಲ್ಲಿ ವೈಚಿತ್ರ್ಯವಿರುವದೂ ಅನುಭವವಿರುದ್ಧವಲ್ಲ. ಪೃಥ್ವಿಯೊಂದೇ ಕಾಡುಕಲ್ಲು, ಸೂರ್ಯಕಾಂತ, ವಜ್ರವೈಡೂರ್ಯ-ಎಂದು ಬಗೆಬಗೆಯ ಭೇದವನ್ನು ತಳೆದಿರುವಂತೆಯೂ ಸ್ವಪ್ನದಲ್ಲಿ ಒಬ್ಬ ಆತ್ಮನೇ ನಾನಾರೂಪವನ್ನು ತಳೆದಿರುವಂತೆಯೂ ಬ್ರಹ್ಮದಲ್ಲಿ ಎಲ್ಲಾ ಬಗೆಯ ಭೇದವೂ ವೈಚಿತ್ರ್ಯವೂ ತೋರಬಹುದಾಗಿದೆ-ಎಂಬುದು ಸಿದ್ಧಾಂತವು.

★★★★★

## ಆತ್ಮತತ್ತ್ವವನ್ನು ತಿಳಿದುಕೊಳ್ಳುವ ಬಗೆ

**23-4-1942**

**ಬ್ರ॥ ಶ್ರೀ॥ ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

ಯಾವದನ್ನು ಅರಿತರೆ ಮತ್ತೇನೂ ಬೇಕೆನಿಸುವದಿಲ್ಲವೋ ಆ ಆತ್ಮತತ್ತ್ವವನ್ನು ತಿಳಿದುಕೊಳ್ಳುವ ಬಗೆಯನ್ನು **ಕಠೋಪನಿಷತ್ತಿನ ಎರಡನೆಯ ಅಧ್ಯಾಯದ ಒಂದನೆಯವಲ್ಲಿಯಲ್ಲಿ ಮೂರರಿಂದ ಹನ್ನೆರಡನೆಯ** ಮಂತ್ರಗಳಲ್ಲಿ ಹೇಳಿದೆ; ಯಾವದರಿಂದ ಶಬ್ದಸ್ಪರ್ಶರೂಪರಸಗಂಧಾದಿಗಳನ್ನು ಅರಿಯುತ್ತಾನೋ ಅದೇ ಆತ್ಮಚೈತನ್ಯವು. ದೇಹಾದಿರೂಪದಿಂದಲೇ ನಾವು ಸರ್ವವನ್ನೂ ಅರಿಯುತ್ತೇವೆಂದು ಜನರು ತಿಳಿದುಮಾಡಿರುತ್ತಾರಾದರೂ ಅದು ನಿಜವಲ್ಲ;

ಏಕೆಂದರೆ ದೇಹೇಂದ್ರಿಯಾದಿಗಳೂ ಶಬ್ದಾದಿರೂಪವೇ ಆಗಿರುತ್ತದೆ. ರೂಪವು ರೂಪವನ್ನು ಅರಿಯುವದು ಹೇಗಾದೀತು? ಆದ್ದರಿಂದ ಈ ರೂಪಾದಿವಿಲಕ್ಷಣವಾದ ಚೈತನ್ಯದಿಂದಲೇ ಎಲ್ಲವನ್ನೂ ಅರಿಯುತ್ತಿದೇವೆ. ಆತ್ಮನಿಗೆ ಅರಿಯುವದಕ್ಕಾಗದ್ದು ಯಾವದೊಂದೂ ಉಳಿದಿಲ್ಲ; ಆ ಆತ್ಮನೇ ಸರ್ವಜ್ಞನು. ನಚಿಕೇತನು ಯಮನನ್ನು ಕೇಳಿದ್ದು ಧರ್ಮಾಧರ್ಮಗಳನ್ನು ಮೀರಿರುವ ಪರಮತತ್ತ್ವವು.

ಪರಮಾರ್ಥವು ಆತಿಸೂಕ್ಷ್ಮವಾದುದರಿಂದ ಅದನ್ನೇ ಮತ್ತೊಂದು ಬಗೆಯಲ್ಲಿ ನಾಲ್ಕನೆಯ ಮಂತ್ರದಲ್ಲಿ ತಿಳಿಸಿರುತ್ತದೆ. ಯಾವದರಿಂದ ಎಚ್ಚರವನ್ನೂ ಕನಸನ್ನೂ ಅರಿಯುತ್ತಾರೋ ಆ ಚೈತನ್ಯವೇ 'ಮಹಾನ್' ಸರ್ವವ್ಯಾಪಕನು, ವಿಭುವು, ಎಲ್ಲವೂ ಆಗಿ ತೋರುತ್ತಿರುವವನು, ಎಲ್ಲರ ಆತ್ಮನು. ಈ ಆತ್ಮನೇ ತಾನೆಂದು ಅರಿತ ಧೀರನಿಗೆ ಶೋಕವಿಲ್ಲ.

ಕರ್ಮಫಲವನ್ನನುಭವಿಸುತ್ತಿರುವ ಈ ಜೀವನೇ ಪರಮಾರ್ಥವಾಗಿ ಭೂತಭವಿಷ್ಯತ್ಕಾಲಗಳ ಈಶ್ವರನು-ಎಂದು ಯಾವನು ತಿಳಿದುಕೊಳ್ಳುವನೋ ಅವನಿಗೆ ಆಮೇಲೆ ಮತ್ತೊಂದರ ಅಂಜಿಕೆಯಿಂದ ತನ್ನನ್ನು ಪಾಡಿಕೊಳ್ಳಬೇಕಾದದ್ದು ಇರುವದಿಲ್ಲ. ಯಾವನು ಎಲ್ಲಕ್ಕೂ ಮೊದಲು ಹುಟ್ಟಿ ಪಂಚಭೂತಗಳನ್ನೂ ದೇವಾದಿ ಶರೀರಗಳನ್ನೂ ಸೃಷ್ಟಿಸಿರುವನೋ ಅವರಲ್ಲಿ ಜೀವಭಾವದಿಂದ ಹೊಕ್ಕಿರುವನೋ ಆ ಹಿರಣ್ಯಗರ್ಭ ಮತ್ತು ಸರ್ವದೇವತಾಮಯನಾದ ಆತ್ಮನೇ ಇವನು. ಅರಣಿಗಳನ್ನು ಮಥನ ಮಾಡುವಾಗ ಹುಟ್ಟಿ ಹವಿಸ್ಸನ್ನುಣ್ಣುವವನಾಗಿ ಹವಿರಾದಿಗಳಿಂದ ಕರ್ಮಿಗಳು ಪೂಜಿಸುವ ಅಗ್ನಿಯೂ ಯೋಗಿಗಳು ಹೃದಯದಲ್ಲಿ ಧ್ಯಾನಭಾವನಾದಿಗಳಿಂದ ಪೂಜಿಸುವ ಅಗ್ನಿಯೂ ಈತನೇ, ಅಧ್ಯಾತ್ಮವಾದ ವಾಗಾದಿಗಳೂ, ಅಧಿದೈವವಾದ ಅಗ್ನ್ಯಾದಿಗಳೂ ಹುಟ್ಟಿ ಯಾವನಲ್ಲಿಯೇ ಲಯವಾಗುವರೋ, ಇರುವ ಕಾಲದಲ್ಲಿಯೂ ಯಾವನಲ್ಲಿ ಹಾರೇಕೋಲುಗಳಂತೆ ಕೂಡಿಕೊಂಡಿರುವರೋ, ಅಂಥ ಹಿರಣ್ಯಗರ್ಭನೂ ಆ ಬ್ರಹ್ಮವೇ.

ಕಾರ್ಯಕಾರಣೋಪಾಧಿಗಳಿಂದೊಡಗೂಡಿ ಸಂಸಾರಧರ್ಮವುಳ್ಳ ಜೀವನಂತೆ ಅಜ್ಞರಿಗೆ ತೋರುತ್ತಿರುವದೇ ನಿಜವಾಗಿ ಯಾವಾಗಲೂ ವಿಜ್ಞಾನಘನಸ್ವರೂಪವುಳ್ಳದ್ದಾಗಿ ಯಾವದು ಸಂಸಾರಧರ್ಮವಿಲ್ಲದ ಬ್ರಹ್ಮವಾಗಿರುವದೋ ಅದೇ ಇಲ್ಲಿ ಜೀವನಾಗಿ ಕಾಣುತ್ತಿರುವದು. ಹೀಗೆ ಉಪಾಧಿಭೇದದಿಂದಲೇ ಬೇರೆಬೇರೆಯಾಗಿ ಕಾಣುತ್ತಿರುವದರಿಂದ ತಾನೊಂದೇ ಇರುವ ಬ್ರಹ್ಮವನ್ನು ನಾನು ಬೇರೆ, ಪರಬ್ರಹ್ಮವು ಬೇರೆ–ಎಂದು ಯಾವನು ಅವಿದ್ಯಾಮೋಹದಿಂದ ಬೇರೆಬೇರೆಯಾಗಿ ಕಾಣುವನೋ ಅವನು ಮತ್ತೆಮತ್ತೆ ಹುಟ್ಟುಸಾವುಗಳನ್ನು ಪಡೆಯುತ್ತಲೇ ಇರುವನು. ಆದ್ದರಿಂದ ವಿಜ್ಞಾನೈಕರಸವಾದ ಎಡೆಬಿಡದೆ ಹಬ್ಬಿರುವ ಆಕಾಶದಂತೆ ಪರಿಪೂರ್ಣವಾಗಿರುವ ಬ್ರಹ್ಮವೇ ನಾನೆಂದು ತಿಳಿಯಬೇಕು. ಆಚಾರ್ಯರ ಮತ್ತು ಶಾಸ್ತ್ರದ ಉಪದೇಶ ಸಂಸ್ಕಾರವನ್ನು ಹೊಂದಿದ ಮನಸ್ಸಿನಿಂದ ಏಕರಸವಾಗಿರುವ ಆತ್ಮನೇ ನಾನು ಎಂದು ಬ್ರಹ್ಮವನ್ನು ಅರಿತುಕೊಳ್ಳಬೇಕು. ಹಾಗೆ ಅರಿತುಕೊಂಡ ಮೇಲೆ ಭೇದಕ್ಕೆ ಕಾರಣವಾಗಿರುವ ಅವಿದ್ಯೆಯು ಹೋಗಿಬಿಡುವದರಿಂದ ಈ ಬ್ರಹ್ಮದಲ್ಲಿ ಒಂದಿಷ್ಟೂ ನಾನಾತ್ವವಿರುವದಿಲ್ಲ. ಆದರೆ ಅವಿದ್ಯಾದೃಷ್ಟಿಯನ್ನೇ ಅವಲಂಬಿಸಿ ಯಾವಾತನು ಬ್ರಹ್ಮದಲ್ಲಿ ಭೇದವಿದ್ದಂತೆ ಕಾಣುತ್ತಿರುವನೋ, ಅವನು ಒಂದಿಷ್ಟು ಭೇದವನ್ನು ಕಲ್ಪಿಸಿದರೂ ಅವನಿಗೆ ಜನನಮರಣಗಳ ಸಾಲು ತಪ್ಪಿದ್ದಲ್ಲ–ಎಂಬುದು ಭಾಷ್ಯದ ಅರ್ಥವು.

★★★★★

# ಜ್ಞಾನಿಗಳ ವ್ಯವಹಾರ

**24-4-1942**

**ಬ್ರ॥ ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

ಅಜ್ಞಾನವನ್ನು ಕಳೆದುಕೊಂಡ ಜ್ಞಾನಿಗಳ ವ್ಯವಹಾರವನ್ನು ಈ **ಗೀತಾಭಾಷ್ಯದಲ್ಲಿ ಐದನೆಯ ಅಧ್ಯಾಯದಲ್ಲಿ 18ರಿಂದ ಕೊನೆಯವರೆಗಿನ** ಶ್ಲೋಕಗಳಲ್ಲಿ ವರ್ಣಿಸಿದೆ. ಸಾತ್ತ್ವಿಕರು, ರಾಜಸರು, ತಾಮಸರು ಹೀಗೆ ಗುಣಭೇದದಿಂದ ಜನರಿಗೆ ಜಗತ್ತು ತಾರತಮ್ಯದಿಂದ ಕಾಣುತ್ತಿದ್ದರೂ ಜ್ಞಾನಿಗಳಿಗೆ ಮಾತ್ರ ಎಲ್ಲವೂ ಬ್ರಹ್ಮವಾಗಿಯೇ ತೋರುತ್ತಿರುವದು, ಗುಣಗಳನ್ನೂ ಅವುಗಳ ಭೇದವನ್ನೂ ಬೆಳಗುತ್ತಿರುವ ಚೈತನ್ಯವೇ ತಾವೆಂದೂ, ಆ ಚೈತನ್ಯವು ಎಲ್ಲರಲ್ಲಿಯೂ ಒಂದೇ ಆಗಿರುವದೆಂದೂ ಅವರ ತಿಳಿವಳಿಕೆಯಾಗಿರುತ್ತದೆ. ಮೂಢರಿಗೆ ದೋಷಗಳಿಂದ ಕೂಡಿರುವ ವಸ್ತುಗಳಲ್ಲಿ ಬ್ರಹ್ಮವು ದೋಷವತ್ತಾಗಿ ಯೂ ಗುಣವುಳ್ಳಗಳಲ್ಲಿ ಗುಣವತ್ತಾಗಿಯೂ ಇರುವಂತೆ ಕಂಡರೂ ನಿಜವಾಗಿ ಅದರಲ್ಲಿ ಯಾವ ಗುಣವೂ ಇಲ್ಲ, ಯಾವ ದೋಷವೂ ಇಲ್ಲ. ದೇಹಾದಿಗಳೇ ಆತ್ಮನೆಂದು ತಿಳಿಯುವವರಿಗೆ ತಾರತಮ್ಯವು ತೋರುತ್ತದೆ; ತಾರತಮ್ಯವುಳ್ಳವರಲ್ಲಿ ಸಮಬುದ್ಧಿಯನ್ನು ಮಾಡುವದರಿಂದ ಅಂಥವರಿಗೆ ದೋಷವೂ ಬರುತ್ತದೆ. ಆದರೆ ಜ್ಞಾನಿಗಳಿಗೆ ಈ ಬಗೆಯ ಅರಿವೂ ಇಲ್ಲ, ದೋಷವೂ ಇಲ್ಲ. ಆದ್ದರಿಂದಲೇ ಅವರಿಗೆ ಪ್ರಿಯಾಪ್ರಿಯಗಳಿಂದ ಹರ್ಷವಾಗಲಿ ಉದ್ವೇಗವಾಗಲಿ ಆಗುವದಿಲ್ಲ. ಅವರಿಗೆ ವಿಷಯಭೋಗದಿಂದಾಗುವ ಸುಖಕ್ಕಿಂತಲೂ ಹೆಚ್ಚಿನದಾದ ಅಕ್ಷಯಸುಖವು ಬ್ರಹ್ಮನಿಷ್ಠೆಯಿಂದಲೇ ಆಗುತ್ತದೆ. ವಿಷಯದಿಂದಾಗುವ ಭೋಗಗಳೆಲ್ಲವೂ- ನಿಜವಾಗಿ ದುಃಖಕ್ಕೆ ಕಾರಣವಾಗಿರುತ್ತವೆ; ಆದ್ದರಿಂದ ಅವುಗಳಲ್ಲಿ ವಿವೇಕಿಯಾದವನಿಗೆ ಆಸಕ್ತಿಯಿರುವದೇ ಇಲ್ಲ. ಜ್ಞಾನಿಯಾದವನು ಕಾಮಕ್ರೋಧಗಳ ವೇಗವನ್ನು ಸಂಪೂರ್ಣವಾಗಿ ತಡೆಗಟ್ಟಿರುತ್ತಾನೆ, ಅವನು ಆತ್ಮಾರಾಮನಾಗಿ ಆತ್ಮನಲ್ಲಿಯೇ ಆನಂದವನ್ನು ಪಡೆಯುತ್ತಿರುತ್ತಾನೆ.

ನಿಜವಾಗಿ ಜ್ಞಾನಿಗಳಿಗೆ ಎಲ್ಲೆಲ್ಲಿಯೂ ಬ್ರಹ್ಮಾನಂದವೇ ಕಾಣುತ್ತಿರುತ್ತದೆ. ಇಂಥ ಸಮ್ಯಗ್ದರ್ಶನಕ್ಕಾಗಿ ಧ್ಯಾನಯೋಗವೆಂಬ ಅಂತರಂಗಸಾಧನವನ್ನು ಮಾಡಬೇಕು-ಎಂಬುದು ಶ್ಲೋಕಗಳ ತಾತ್ಪರ್ಯವು.

★★★★★

# ಆತ್ಮನು ಅಣುಪರಿಮಾಣನು

**25-4-1942**

**ಬ್ರ|| ಶ್ರೀ|| ಎಚ್. ಅನಂತಮೂರ್ತಿ ಶಾಸ್ತ್ರಿಗಳವರು**

**ಬ್ರಹ್ಮಸೂತ್ರ ಎರಡನೆಯ ಅಧ್ಯಾಯ ಮೂರನೆಯ ಪಾದದಲ್ಲಿ ಇಪ್ಪತ್ತೊಂಬತ್ತರಿಂದ ಮೂವತ್ತೆರಡನೆಯ ಸೂತ್ರದವರೆಗಿನ ಭಾಷ್ಯಾರ್ಥ ವಿವರಣೆ:**

ಈ ಅಧಿಕರಣದ ಹಿಂದಿನ ಭಾಗದಲ್ಲಿ ಆತ್ಮನು ಅಣುಪರಿಮಾಣನೆಂಬ ಪೂರ್ವಪಕ್ಷದ ಸೂತ್ರಗಳಿರುತ್ತದೆ. ಇಲ್ಲಿ ಆ ಪಕ್ಷವನ್ನು ಖಂಡಿಸಿರುತ್ತದೆ. ನಿಜವಾಗಿ ಆತ್ಮನು ಅಣುವಲ್ಲ, ಬುದ್ಧಿಯ ಸಂಬಂಧದಿಂದ ಎಂದರೆ ಅಂತಃಕರಣದ ಅಧ್ಯಾಸದಿಂದ ಪರಬ್ರಹ್ಮವೇ ಜೀವವೆನಿಸಿಕೊಂಡಿರುತ್ತದೆ. ಬ್ರಹ್ಮವು ವಿಭುವಾಗಿದೆ ಎಂದು ಶ್ರುತಿಯಲ್ಲಿ ಹೇಳಿರುವದರಿಂದಲೂ ಜೀವನೂ ವಿಭುವೆಂದು ಹೇಳಿರುವದರಿಂದಲೂ ಜೀವನು ನಿಜವಾಗಿ ವಿಭುವೇ ಆಗಿದ್ದು ಬುದ್ಧಿಯ ಅಧ್ಯಾಸದಿಂದ ಅವನನ್ನು ಅಣುವೆಂದು ತಿಳಿದುಕೊಂಡಿದ್ದೇವೆಂದು ಹೇಳುವದು ಯುಕ್ತವಾಗಿದೆ. ನಿಜವಾಗಿಯೂ ಜೀವನು ಅಣುವೇ ಎಂದಿಟ್ಟುಕೊಂಡರೆ ಶರೀರದಲ್ಲೆಲ್ಲ ಆಗುವ ನೋವನ್ನು ಅರಿಯುವದು ಕಷ್ಟವಾದೀತು; ಶರೀರದಷ್ಟೇ ಪರಿಣಾಮಾಣವುಳ್ಳವನೆಂಬುದನ್ನು ಹಿಂದೆಯೇ ಖಂಡಿಸಿರುತ್ತೇವೆ: ಆದ್ದರಿಂದ ಸುಖ, ದುಃಖ, ಇಚ್ಛೆ-ಮುಂತಾದ ಗುಣಗಳು ಹೇಗೆ ಅಂತಃಕರಣಕ್ಕೆ ಸೇರಿದ್ದರೂ ಅಧ್ಯಾಸದಿಂದ ಆತ್ಮನಿಗೆ ಸೇರಿರುವಂತೆ ಇವೆಯೋ ಅದರಂತೆ ಅಧ್ಯಾಸದಿಂದ ಅಂತಃಕರಣದ ಪರಿಣಾಮವೇ

ಜೀವನ ಪರಿಣಾಮವಾಗಿರುತ್ತದೆ, ಅದರ ಅಧ್ಯಾಸದಿಂದಲೇ ಉತ್ಕ್ರಾಂತಿ, ಗಮನ-ಮುಂತಾದವುಗಳೂ ಆಗಿರುತ್ತವೆ. ಕೆಲವು ಕಡೆಗಳಲ್ಲಿ ಜ್ಞೇಯನಾದ ಆತ್ಮನನ್ನು ಅಣುವೆಂದು ಹೇಳಿರುವದುಂಟು. ಅಲ್ಲಿ ಆತ್ಮನು ಅರಿಯುವದಕ್ಕಾಗದಷ್ಟು ಸೂಕ್ಷ್ಮನು ಎಂದು ಅಭಿಪ್ರಾಯವನ್ನು ಕಲ್ಪಿಸಬೇಕು. ಜೀವನು ಹೃದಯದಲ್ಲಿರುತ್ತಾನೆಂಬುದೂ ಅಂತಃಕರಣದ ಅಧ್ಯಾಸದಿಂದಲೇ. ನಿರ್ಗುಣನಾದ ಪರಮಾತ್ಮನನ್ನು ಉಪಾಧಿಗುಣಗಳಿಂದ ಅಣುವೆಂದು ಕೆಲವುಕಡೆ ಹೇಳಿರುವಂತೆಯೇ ಇದನ್ನರಿಯಬೇಕು.

ಬುದ್ಧಿಯ ಸಂಬಂಧವು ತಪ್ಪಿದರೆ ಜೀವನೇ ಇಲ್ಲವೆಂದಾಗುವದಿಲ್ಲವೆ? ಅಥವಾ ಜೀವನಿಗೆ ಸಂಸಾರಿತ್ವವೇ ಇಲ್ಲವೆಂದಾಗುವದಿಲ್ಲವೆ?- ಎಂದು ಯಾರಾದರೂ ಕೇಳಬಹುದು. ಆದರೆ ಪರಮಾರ್ಥವಾಗಿ ಜೀವನು ಪರಮಾತ್ಮನೇ ಆಗಿರುವದರಿಂದಲೂ ಮಿಥ್ಯಾಜ್ಞಾನವಿರುವವರೆಗೆ ಸಂಸಾರಿಯಾಗಿ ಕಾಣುತ್ತಿರುವದರಿಂದಲೂ ಈ ಪಕ್ಷದಲ್ಲಿ ಯಾವ ದೋಷವನ್ನೂ ತೋರಿಸುವದಕ್ಕೆ ಬರುವದಿಲ್ಲ. ಮಿಥ್ಯಾಜ್ಞಾನದಿಂದುಂಟಾಗಿರುವ ಈ ಅಂತಃಕರಣಸಂಬಂಧವು ಸರಿಯಾದ ಬ್ರಹ್ಮಜ್ಞಾನವುಂಟಾಗುವವರೆಗೂ ಹೋಗುವದೇ ಇಲ್ಲ. ಸುಷುಪ್ತಿ, ಪ್ರಲಯ-ಮುಂತಾದ ಅವಸ್ಥೆಗಳಲ್ಲಿ ಅಂತಃಕರಣದ ಸಂಬಂಧವು ತೋರದೆ ಇದ್ದರೂ ಅದು ಸಂಪೂರ್ಣವಾಗಿ ಹೋಗಿರುವದಿಲ್ಲ. ಏಕೆಂದರೆ ಜ್ಞಾನದಿಂದಲೇ ಈ ಸಂಬಂಧವು ನಿಜವಾಗಿಲ್ಲವೆಂದು ತೋರಬೇಕಾಗಿದೆ. ಜ್ಞಾನವುಂಟಾಗುವವರೆಗೂ ಈ ಸಂಬಂಧವು ಇದ್ದುಕೊಂಡಿರುವದರಿಂದಲೇ ಜೀವನಿಗೆ ಸುಷುಪ್ತ್ಯಾದಿಗಳಿಂದ ಮತ್ತೆ ಎಚ್ಚರುವದೂ ಹುಟ್ಟುವದೂ ಸಂಭವಿಸುತ್ತವೆ.

ಇಂಥ ಅಂತಃಕರಣವೆಂಬುದೇ ಇಲ್ಲ ಎಂದು ಹೇಳುವದಂತೂ ಹೊಂದುವದೇ ಇಲ್ಲ. ಏಕೆಂದರೆ ಮನಸ್ಸು, ಬುದ್ಧಿ, ಚಿತ್ತ-ಎಂದು ಪರಿಪರಿಯಾಗಿ ವೃತ್ತಿಭೇದದಿಂದ ಕರೆಯಲ್ಪಡುವ ಅಂತಃಕರಣವೆಂಬುದೇ ಇಲ್ಲದಿದ್ದರೆ ಆತ್ಮನಿಗೆ ಯಾವಾಗಲೂ ವಿಷಯಜ್ಞಾನವಾಗಬೇಕಾದೀತು, ಅಥವಾ ಯಾವಾಗಲೂ ಆಗಬಾರದಾದೀತು. ಇಂದ್ರಿಯಾದಿಸಾಧನಗಳಿದ್ದರೂ ಅರಿವಾಗದಿರುವದಕ್ಕೆ ಕಾರಣವೇನು? ಅಂತಃಕರಣದ ಸಂಬಂಧವಿಲ್ಲದ್ದರಿಂದ. ಇಂದ್ರಿಯಗಳ ಶಕ್ತಿಗೆ

ಪ್ರತಿಬಂಧಕವಾದ್ದರಿಂದಲೇ ಕೆಲವು ವೇಳೆ ಅರಿಯುವದಿಲ್ಲವೆಂದು ಕಲ್ಪಿಸುವದು ಸರಿಯಲ್ಲ. ಏಕೆಂದರೆ ಹಿಂದೆ ಅಡ್ಡಿಯಿರಲಿಲ್ಲ, ಮುಂದೆ ಇರುವದಿಲ್ಲ; ಹೀಗಿರುವಲ್ಲಿ ನಡುವೆ ಆ ಅಡ್ಡಿ ಎಂಬುದು ಎಲ್ಲಿಂದ ಬಂತು?–ಎಂಬ ಪ್ರಶ್ನೆಗೆ ಉತ್ತರವು ಸಿಕ್ಕುವದಿಲ್ಲ. ಆದ್ದರಿಂದ ಯಾವದರ ಸೇರುವೆಯಿಂದ ಅರಿವಾಗುತ್ತದೆಯೋ ಯಾವದು ಇಲ್ಲದ್ದರಿಂದ ಅರಿವಾಗದೆ ಇರುವದೋ ಅದೇ ಅಂತಃಕರಣವು – ಇದೂ ಅಲ್ಲದೆ ಕಾಮಾದಿಗಳೆಲ್ಲವೂ ಈ ಅಂತಃಕರಣದ ಧರ್ಮಗಳೆಂದು ಶ್ರುತಿಯು ಹೇಳುತ್ತದೆ. ಆದ್ದರಿಂದ ಅಂತಃಕರಣವೆಂಬುದನ್ನು ವ್ಯವಹಾರದಲ್ಲಿ ಒಪ್ಪಬೇಕು. ಅದರ ಧರ್ಮದ ಅಧ್ಯಾಸದಿಂದಲೇ ಜೀವನಿಗೆ ಅಣುತ್ವವನ್ನು ಹೇಳಿದೆ ಎಂದೇ ಕಲ್ಪಿಸಬೇಕು. ಸ್ವತಃ ಅವನಿಗೆ ಅಣುಪರಿಮಾಣತ್ವವಿರುವದಿಲ್ಲ ಎಂಬುದೇ ಸಿದ್ಧಾಂತವು–ಎಂಬುದು ಭಾಷ್ಯಭಾಗದ ಸಾರವು.

★★★★★

## ಸ್ವಪ್ನಸುಷುಪ್ತಿಗಳಲ್ಲಿ ಜೀವನ ಸ್ವರೂಪ

**26-4-1942**

**ಶ್ರೀಶ್ರೀಗಳವರು**

**ಬೃಹದಾರಣ್ಯಕದ ಎರಡನೆಯ ಅಧ್ಯಾಯದಲ್ಲಿ ಒಂದನೆಯ ಬ್ರಾಹ್ಮಣದ** ಹದಿನೇಳರಿಂದ ಹತ್ತೊಂಬತ್ತನೆಯ ಮಂತ್ರದವರೆಗಿನ ಭಾಷ್ಯದಲ್ಲಿ ಅಜಾತಶತ್ರು ಬಾಲಾಕಿಯೆಂಬ ಬ್ರಾಹ್ಮಣನಿಗೆ ಸ್ವಪ್ನಸುಷುಪ್ತಿಗಳಲ್ಲಿ ಜೀವನ ಸ್ವರೂಪವು ಹೇಗಿರುವದೆಂಬುದನ್ನು ತಿಳಿಸಿಕೊಟ್ಟಿರುತ್ತಾನೆ. ನಿದ್ರೆಮಾಡುತ್ತಿರುವಾಗ ಈ ವಿಜ್ಞಾನಮಯನು ಎಲ್ಲಿದ್ದನು? ಆಗ ವಾಗಾದೀಂದ್ರಿಯಗಳಲ್ಲಿರುವ ತಮ್ಮತಮ್ಮ ವಿಷಯಗಳನ್ನರಿಯುವ ಶಕ್ತಿಯನ್ನು ಅಂತಃಕರಣದಲ್ಲುಂಟಾಗುವ ವಿಶೇಷವಿಜ್ಞಾನದೊಡನೆ ತೆಗೆದುಕೊಂಡು ತನ್ನ

ಸ್ವಾಭಾವಿಕವಾದ ಅಸಂಸಾರಿಯಾದ ಪರಮಾತ್ಮನಲ್ಲಿಯೇ ಅವಿಶೇಷರೂಪದಿಂದ ಇದ್ದುಕೊಂಡುಬಿಡುತ್ತಾನೆ. ಶರೀರ, ಇಂದ್ರಿಯಗಳು-ಇವುಗಳ ಒಡೆತನವನ್ನು ಬಿಟ್ಟಾಗ ತನ್ನ ಸ್ವರೂಪದಲ್ಲಿಯೇ ಇರುತ್ತಾನೆಂಬುದನ್ನು 'ಸ್ವಪಿತಿ' ಎಂಬ (ತನ್ನಲ್ಲಿ ಲಯವಾಗಿರುತ್ತಾನೆ ಎಂಬರ್ಥದ) ನಿದ್ರಾವಾಚಕವಾದ ಹೆಸರು ಇವನಿಗೆ ಬಂದಿರುವದೇ ಹೊರಪಡಿಸುತ್ತದೆ. ಸ್ವ-ತನ್ನನ್ನು ಅಪಿತಿ-ಸೇರಿಕೊಂಡಿರುತ್ತಾನೆ ಎಂಬ ಗೌಣನಾಮವು ಇವನಿಗೆ ಇರುತ್ತದೆ ಎಂಬುದೊಂದೇ ಅಲ್ಲ; ಯುಕ್ತಿಯಿಂದಲೂ ಆಗ ಇವನು ಪರಮಾತ್ಮಸ್ವರೂಪದಲ್ಲಿದ್ದುಕೊಂಡಿರುತ್ತಾನೆ ಎಂಬುದನ್ನು ತಿಳಿಯಪಡಿಸಬಹುದು. ಹೇಗೆಂದರೆ ಆಗ ವಾಗಾದಿ ಇಂದ್ರಿಯಗಳೆಲ್ಲವೂ ಉಪಸಂಹಾರವಾಗಿರುತ್ತವೆ. ಇಂದ್ರಿಯಗಳೆಂಬ ಉಪಾಧಿಯಿಂದಲೇ ಅಲ್ಲವೆ, ಇವನು ಸಂಸಾರಿಯೆನಿಸಿಕೊಂಡಿರುವದು? ಈ ಉಪಾಧಿಗಳೆಲ್ಲವೂ ಉಪಸಂಹಾರವಾಗಿರುವದರಿಂದ ಆಗ ತನ್ನ ಸ್ವರೂಪದಿಂದಲೇ ಇರುತ್ತಾನೆ ಎಂದು ಏರ್ಪಡುತ್ತದೆ.

ಜೀವನಿಗೆ ಕನಸಾಗುತ್ತಿರುವಾಗ ಇವನಲ್ಲಿ ಯಾವ ಶರೀರೇಂದ್ರಿಯಗಳ ಸಂಬಂಧವೂ ಇಲ್ಲದಿದ್ದರೂ ಎಚ್ಚರದಲ್ಲಿದ್ದಂತೆಯೇ ಇವನು ಆಗಲೂ ಶೋಕಮೋಹಾದಿಗಳಿಂದ ಕೂಡಿಯೇ ಇರುವದು ಕಂಡುಬರುತ್ತದೆಯಾದ್ದರಿಂದ ಇವನ ಸ್ವಭಾವವೇ ಸಂಸಾರಿತ್ವವೆಂದು ತಿಳಿಯಬಾರದು. ''ಏಕೆಂದರೆ ಆಗ ತೋರುವ ಶೋಕಮೋಹಾದಿಗಳು ಮಿಥ್ಯಾರೂಪವಾದ ತೋರಿಕೆಯೆಂಬುದು ಎಲ್ಲರಿಗೂ ಗೊತ್ತಿದೆ. ಆಗ ತಾನು ದೊಡ್ಡ ಅರಸನಾಗಿದ್ದಂತೆಯೂ ಒಬ್ಬ ಶ್ರೋತ್ರಿಯನಾದ ಬ್ರಾಹ್ಮಣನಾಗಿದ್ದಂತೆಯೂ ಒಬ್ಬ ದೇವತೆಯಾಗಿಯೋ ಅಥವಾ ಒಂದು ಮೂಕಪ್ರಾಣಿಯಾಗಿಯೋ ಇದ್ದಂತೆಯೂ ಕನಸಾಗುತ್ತದೆ. ಆದರೆ ಅವನು ನಿಜವಾಗಿಯೂ ಅರಸನಾಗಿರುವದಿಲ್ಲ, ಬ್ರಾಹ್ಮಣನಾಗಿರುವದಿಲ್ಲ, ದೇವತೆಯಾಗಿರುವದಿಲ್ಲ ಅಥವಾ ಮೂಗಜಂತುವಾಗಿರುವದೂ ಇಲ್ಲ; ಆದ್ದರಿಂದಲೇ ಜನರು 'ಅರಸನಾಗಿದ್ದಂತೆ ಕನಸಾಯಿತು' ಎಂದು ಮುಂತಾಗಿ 'ಅಂತೆ' ಎಂಬ ಮಾತಿನಿಂದ ಈ ಮಿಥ್ಯಾತ್ವವನ್ನು ತಿಳಿಸುತ್ತಾರೆ. ಎಚ್ಚರದಲ್ಲಿ ಎಚ್ಚರವಿರುವವರೆಗೂ ಅನುಭವಗಳಿರುವಂತೆಯೇ ಕನಸಿನಲ್ಲಿ ಕನಸಿರುವವರೆಗೂ

ತನ್ನ ಅನುಭವಗಳಿರುವವಲ್ಲ! ಎಂದು ಯಾರಾದರೂ ಶಂಕಿಸಬಹುದು. ಆದರೆ ಎಚ್ಚರದಲ್ಲಿ ಕೂಡ ಆತ್ಮನು ದೇಹೇಂದ್ರಿಯಾದಿಗಳಿಗಿಂತ ಬೇರೆಯಾಗಿಯೇ ಇರುತ್ತಾನೆ; ಆ ಆತ್ಮನಿಂದ ಅರಿಯಲ್ಪಡುವ ದೇಹೇಂದ್ರಿಯಾದಿಗಳ ಸಂಬಂಧವನ್ನು ಅಲ್ಲಿಯೂ ತಪ್ಪು ತಿಳಿವಳಿಕೆಯಿಂದಲೇ ಆತ್ಮನಲ್ಲಿ ಹುಟ್ಟುಗಟ್ಟಿರುತ್ತಾರೆ. ಆದ್ದರಿಂದ ಎರಡವಸ್ಥೆಗಳಲ್ಲಿಯೂ ದೇಹೇಂದ್ರಿಯಾದಿಗಳ ಸಂಬಂಧವು ಮಿಥ್ಯೆಯೇ ಆಗಿರುತ್ತದೆ. ಈ ವಿಚಾರವನ್ನು ಬದಿಗಿಟ್ಟರೂ ಇನ್ನೊಂದು ರೀತಿಯಿಂದಲೂ ಇದಕ್ಕೆ ಸಮಾಧಾನವನ್ನು ಹೇಳಬಹುದು. ಅರಸನಾದವನು ಕನಸಿನಲ್ಲಿ ತನ್ನ ಭೋಗಗಳಿಂದೊಡಗೂಡಿ ತನ್ನ ರಾಜ್ಯದಲ್ಲೆಲ್ಲ ಸಂಚರಿಸುತ್ತಿರುವನೆಂದು ಭಾವಿಸಿಕೊಳ್ಳುವದುಂಟು; ಆದರೆ ಆಗಲೂ ನಿಜವಾದ ರಾಜನು ಮಂಚದಮೇಲೆಯೇ ಮಲಗಿರುತ್ತಾನೆ. ಅವನ ಕರಣಗಳೆಲ್ಲವೂ ಉಪಸಂಹಾರವಾಗಿರುತ್ತವೆ. ಅವನು ಹೊರಗೆ ಎಲ್ಲಿಯೂ ಹೋಗಿರುವದಿಲ್ಲ. ಆದರೂ ಅವನು ಮತ್ತೊಂದು ಶರೀರದೊಡನೆ ಕೂಡಿಕೊಂಡು ದೇಶಸಂಚಾರಮಾಡಿದಂತೆ ಕಾಣುವದಲ್ಲ! ಆ ಮತ್ತೊಂದು ಶರೀರವು ಎಚ್ಚರದ ಶರೀರದ ಒಳಗಡೆ ಇರುವದೆಂದು ಭಾವಿಸಬಹುದೆ? ಇಲ್ಲ. ಆದ್ದರಿಂದ ಕನಸಿನಲ್ಲಿ ಕಾಣುವ ದೃಶ್ಯಗಳೆಲ್ಲವೂ ಮಿಥ್ಯೆಯೆಂಬುದು ಲೋಕಪ್ರಸಿದ್ಧವು. ಇದರಂತೆಯೇ ಎಚ್ಚರದಲ್ಲಿಯೂ ಎಂದರಿಯಬೇಕು. ಏಕೆಂದರೆ ಈ ಎರಡವಸ್ಥೆಗಳಲ್ಲಿ ಕ್ರಿಯಾಕಾರಕಫಲರೂಪವಾದ ಪ್ರಪಂಚವೂ ದೇಹೇಂದ್ರಿಯಗಳೂ ಆತ್ಮನಿಗೆ ವಿಷಯವಾಗಿಯೇ ಇರುತ್ತದೆ. ಆದ್ದರಿಂದ ಆತ್ಮನು ಅವುಗಳ ಸಂಬಂಧವಿಲ್ಲದವನೇ, ಶುದ್ಧಚೈತನ್ಯಸ್ವರೂಪನೇ.

ವಿಷಯವಾಗಿರುವ ದೃಶ್ಯವನ್ನು ನೋಡುವದಾದರೂ ಈ ಆತ್ಮನಿಗೆ ಸ್ವಾಭಾವಿಕವೆಂದಾಯಿತಲ್ಲ!- ಎಂದು ಶಂಕೆಯುಂಟಾಗಬಹುದು. ಆದರೆ ಇದೂ ಸರಿಯಲ್ಲ, ಏಕೆಂದರೆ ಕನಸಿಲ್ಲದ ತನಿನಿದ್ರೆಯುಂಟಾದಾಗ- ಹೃದಯದಿಂದ ಹೊರಟಿರುವ ನಾಡಿಗಳ ಮೂಲಕವಾಗಿ ಪುರೀತತ್ತಿನಲ್ಲಿ ಮಲಗಿರುವಾಗ ಎಂದರೆ ಅಂತಃಕರಣಸಂಕೋಚದಿಂದ ತಾನೂ ಸಂಕುಚಿತನಾದಂತಾಗಿ ತನ್ನೊಳಗೇ ತಾನು ಇದ್ದುಕೊಂಡಿರುವಾಗ-ಒಬ್ಬ ಹುಡುಗನು, ಅಥವಾ

ಮಹಾರಾಜನು, ಅಥವಾ ಮಹಾಬ್ರಾಹ್ಮಣನು ಸುಖವಾಗಿ ಮಲಗಿರುವಂತೆ, ನಿರಾಬಾಧವಾಗಿ ತನ್ನ ಸ್ವಾಭಾವಿಕವಾದ ಸರ್ವಸಂಸಾರ ಧರ್ಮಗಳನ್ನೂ ಮೀರಿದ ಪರಮಾತ್ಮಸ್ವರೂಪದಲ್ಲಿಯೇ ಇದ್ದುಕೊಂಡಿರುತ್ತಾನೆ. ಆದ್ದರಿಂದ ಇವನಿಗೆ ಶರೀರಾದಿಗಳ ಸಂಬಂಧವು ಒಂದಿಷ್ಟೂ ಇಲ್ಲ-ಎಂಬುದು ಭಾಷ್ಯಭಾಗದ ಸಾರವು.

★★★★★

# ಪರಮಾತ್ಮತತ್ತ್ವ

**27-4-1942**

**ಬ್ರ॥ ಶ್ರೀ॥ ಹೆಚ್.ಅನಂತಮೂರ್ತಿ ಶಾಸ್ತ್ರಿಗಳವರು**

**ಗೀತೆಯ ಹದಿಮೂರನೆಯ ಅಧ್ಯಾಯದ ಹನ್ನೆರಡರಿಂದ ಹದಿನೇಳನೆಯ** ಶ್ಲೋಕಗಳಲ್ಲಿ ವೇದಾಂತದಲ್ಲಿ ತಿಳಿದುಕೊಳ್ಳಬೇಕಾಗಿರುವ ಪರಮಾತ್ಮತತ್ತ್ವವನ್ನು ವರ್ಣಿಸಿರುತ್ತದೆ. ಬ್ರಹ್ಮವು ಅನಾದಿಯಾಗಿರುತ್ತದೆ, ಅದು ಸತ್ತೂ ಅಲ್ಲ ಅಸತ್ತೂ ಅಲ್ಲ-ಎಂದು ಮೊದಲನೆಯ ಶ್ಲೋಕದಲ್ಲಿ ಹೇಳಿದೆ. ಇಲ್ಲಿ ಅನಾದಿಮತ್ಪರಮ್-ಎಂದು ಕೆಲವರು ಆಚಾರ್ಯರು ಪದಚ್ಛೇದವನ್ನು ಮಾಡಿಕೊಂಡು ಅರ್ಥವನ್ನು ಹೇಳಿರುತ್ತಾರೆ; ಅದು ಸರಿಯಲ್ಲ. ಏಕೆಂದರೆ ಮತ್ಪರಮ್ ಎಂದರೆ ವಾಸುದೇವನೆಂಬ ಪರಶಕ್ತಿಯುಳ್ಳದ್ದು ಬ್ರಹ್ಮವು ಎಂದು ಆ ವ್ಯಾಖ್ಯಾನಕಾರರ ಅರ್ಥವಾಗಿದೆ; ಆದರೆ ಇಲ್ಲಿ ಬ್ರಹ್ಮದಲ್ಲಿ ಯಾವದೊಂದು ವಿಶೇಷವೂ ಇಲ್ಲವೆಂದು ಹೇಳುವ ಪ್ರಕರಣವಾಗಿದೆ. ಆದ್ದರಿಂದ ಬ್ರಹ್ಮಕ್ಕೆ ಕಾಲದ ಕಟ್ಟಿಲ್ಲ; ಅದು ಸತ್ತಲ್ಲ, ಅಸತ್ತೂ ಅಲ್ಲ-ಎಂಬುದೇ ಶ್ಲೋಕಾರ್ಧದ ಅರ್ಥವು. ಬ್ರಹ್ಮವು ಅತೀಂದ್ರಿಯವಾಗಿರುವದರಿಂದ ಅದನ್ನು ಇದೆಯೆಂದಾಗಲಿ ಇಲ್ಲವೆಂದಾಗಲಿ ಹೇಳುವದಕ್ಕೆ ಬರುವಂತಿಲ್ಲ; ಅರಿಯುವ ಅಥವಾ ಅರಿಯುವದಕ್ಕೆ ಬಾರದ ವಸ್ತುವಿಗಿಂತಲೂ ಇದು ಬೇರೆಯಾಗಿ ನಮ್ಮ ಆತ್ಮನೇ ಆಗಿರುವದರಿಂದ ಅದನ್ನು ಶಬ್ದಪ್ರಮಾಣದಿಂದಲೇ ತಿಳಿದುಕೊಳ್ಳಬೇಕು-ಎಂದು ಶ್ರುತಿಯು

ಹೇಳುತ್ತಿರುವದು. ಈ ಕಾರಣದಿಂದಲೇ ಬ್ರಹ್ಮವನ್ನು ತಿಳಿಸುವ ಯಾವದೊಂದೂ ವಾಚಕವೂ ಇಲ್ಲವೆಂಬುದು ನಿಜ; ಏಕೆಂದರೆ ಅದರಲ್ಲಿ ಜಾತಿಗುಣಕ್ರಿಯಾಸಂಬಂಧಗಳು ಯಾವವೂ ಇರುವದಿಲ್ಲ. ಅದು ತನಗೆರಡನೆಯದಿಲ್ಲದ ವಿಷಯವಲ್ಲದ್ದು. ಆದರೂ ಅದು ನಮ್ಮ ಆತ್ಮನೇ ಆಗಿರುತ್ತದೆಯಾದ್ದರಿಂದ ಅದು ಇಲ್ಲವೆನ್ನುವದಕ್ಕಾಗುವದಿಲ್ಲ. ಆದ್ದರಿಂದ ಬ್ರಹ್ಮವನ್ನು ಇದೆ ಎಂಬ ಶಬ್ದಪ್ರತ್ಯಯಗಳಿಂದಲಾಗಲಿ ಇಲ್ಲವೆಂಬ ಶಬ್ದಪ್ರತ್ಯಯಗಳಿಂದಲಾಗಲಿ ಹೇಳುವದಕ್ಕೆ ಆಗುವ ಅನಾತ್ಮವಸ್ತುಗಳಿಗಿಂತ ಬೇರೆಯೇ ಆದ ನಮ್ಮ ಆತ್ಮನು ಎಂದೇ ತಿಳಿದುಕೊಳ್ಳಬೇಕು.

ಶರೀರೇಂದ್ರಿಯಗಳಿಂದ ಆತ್ಮನಲ್ಲಿ ಯಾವ ವಿಶೇಷವೂ ಆಗಿರುವದಿಲ್ಲವಾದರೂ ಆ ಇಂದ್ರಿಯಾದಿಗಳಿಂದಲೇ ಅದನ್ನು ಇದೆಯೆಂದು ತಿಳಿದುಕೊಳ್ಳಬಹುದು. ಏಕೆಂದರೆ ಎಲ್ಲಾ ಪ್ರಾಣಿಗಳ ಕರಣಗಳಿಂದಲೂ ಅದರ ಇರವನ್ನು ತಿಳಿದುಕೊಳ್ಳಬಹುದಾಗಿದೆ. ಯಾವ ಪ್ರಾಣಿಗಳಲ್ಲಿರುವ ಪ್ರಾಣಾಪಾನಾದಿಗಳೂ ತಮ್ಮ ಕಾರ್ಯವನ್ನು ಮಾಡಬಲ್ಲವಾಗಿರುವದು ಆ ಪರಮಾತ್ಮನ **ಶಕ್ತಿಯ** ಬಲದಿಂದಲೇ. ಆದ್ದರಿಂದ ಪರಮಾತ್ಮತತ್ತ್ವವು ಎಲ್ಲಾ ಇಂದ್ರಿಯಗಳ ಗುಣಗಳಿಂದಲೂ ತೋರಿಕೊಳ್ಳುತ್ತಿರುತ್ತದೆ. ಆದರೂ ನಿಜವಾಗಿ ಅದಕ್ಕೆ ಯಾವ ಇಂದ್ರಿಯವೂ ಸೇರಿಕೊಂಡಿಲ್ಲ. ಅದು ಯಾವದಕ್ಕೂ ಅಂಟಿಕೊಂಡಿಲ್ಲವಾದರೂ ಎಲ್ಲವೂ ಅದರ ಇರವಿನಿಂದಲೇ ಇರುವದಾಗಿ ದೆ. ಅದರಲ್ಲಿ ಯಾವ ಗುಣಗಳೂ ಇಲ್ಲ. ಅದು ಶಬ್ದಾದಿರೂಪದಿಂದಿರುವ ಮೂರು ಗುಣಗಳನ್ನು ಅರಿಯತಕ್ಕದ್ದಾಗಿದೆ.

ಅದು ಪ್ರಾಣಿಗಳ ದೇಹದೊಳಗೆ, ಹೊರಗೆ, ದೇಹದ ರೂಪದಲ್ಲಿ– ಹೀಗೆ ಎಲ್ಲೆಲ್ಲಿಯೂ ಇರುತ್ತದೆ. ಆದರೂ ಅತ್ಯಂತಸೂಕ್ಷ್ಮವಾಗಿ ಇರುವದರಿಂದ ತಿಳಿಯುವದಕ್ಕೆ ಬರುವದಿಲ್ಲ. ಅದು ಅಜ್ಞರಿಗೆ ಅತಿದೂರದಲ್ಲಿದೆ. ಜ್ಞಾನಿಗಳಿಗೆ ಆತ್ಮನೇ ಆಗಿ ಅತ್ಯಂತ ಸಮೀಪದಲ್ಲಿರುತ್ತದೆ. ಅದರಲ್ಲಿ ಯಾವ ವಿಭಾಗವೂ ಇರುವದಿಲ್ಲ, ಆದರೂ ಬೇರೆ ಬೇರೆ ದೇಹಗಳಲ್ಲಿ ವಿಂಗಡವಾಗಿರುವಂತೆ ತೋರುತ್ತಿರುತ್ತದೆ. ಅದು ಪ್ರಾಣಿಗಳ ಉತ್ಪತ್ತಿ, ಸ್ಥಿತಿ ಲಯಗಳಿಗೆ ಕಾರಣವಾಗಿರುತ್ತದೆ. ಬೆಳಕುಗಳಿಗೆಲ್ಲ ಬೆಳಕದು.

ಅರಿಯುವ ಜ್ಞಾನವೂ ಜ್ಞೇಯವಾಗಿರುವದರ ಸ್ವರೂಪವೂ ಅದನ್ನರಿತರೆ ಉಂಟಾಗುವ ಜ್ಞಾನಫಲವೂ-ಎಲ್ಲವೂ ಅದೇ ಆಗಿ ಪ್ರಾಣಿಗಳ ಹೃದಯದಲ್ಲಿಯೂ ಇರುತ್ತಿರುವದು-ಎಂಬುದು ಶ್ಲೋಕಗಳ ಭಾಷ್ಯದ ಸಾರವು.

★★★★★

## ಆಚಾರ್ಯರ ಗುಣಕಥನ

**28-4-1942**

**ಶ್ರೀಶ್ರೀಗಳವರು**

ಬ್ರಹ್ಮಸ್ವರೂಪದಲ್ಲಿ ನಿಜವಾಗಿ ಯಾವ ಗುಣವೂ ಇಲ್ಲದಿದ್ದರೂ ನಾವು ಆರೋಪಿಸಬಹುದಾದ ಸತ್ತ್ವಾದಿಗುಣಗಳ ಕೀರ್ತನದಿಂದಲೇ ನಾವು ಕೃತಾರ್ಥರಾಗುತ್ತೇವೆ. ಆರೋಪಿತಗುಣಗಳಿಂದ ನಮಗೆ ಒಳ್ಳೆಯದಾಗುವದು ಹೇಗೆ?-ಎಂದರೆ ಇಲ್ಲಿ ಒಂದು ವಿಶೇಷ: ಏಕಮೇವಾದ್ವಿತೀಯವಾದ ಪರಮಾರ್ಥವೊಂದೇ ಇರುವದೆಂಬುದೇ ಸತ್ಯ. ಆದರೆ ಆ ಜ್ಞಾನವು ಇಲ್ಲದ ಜೀವರುಗಳಿಗೆಲ್ಲ ಜೀವೇಶ್ವರವಿಭಾಗವು ಇದ್ದೇ ಇರುತ್ತದೆ. ಆಗ ಪರಮೇಶ್ವರನಲ್ಲಿ ಜೀವರು ತಮ್ಮತಮ್ಮ ದೃಷ್ಟಿಯಿಂದ ಹಲವು ಗುಣಗಳನ್ನು ಆರೋಪಿಸುತ್ತಾರೆ. ಉದಾಹರಣೆಗೆ ಬೆಂಕಿಯು ತನ್ನ ಸ್ವರೂಪದಲ್ಲಿಯೇ ಇದ್ದುಕೊಂಡರೂ ಅದಕ್ಕೆ ಮತ್ತೊಂದು ವಸ್ತುವಿನ ಸಂಬಂಧವಾದರೆ ಆ ವಸ್ತು ಸುಟ್ಟುಹೋಗುತ್ತದೆ. ಆ ದಾಹ್ಯವಸ್ತುವಿನ ದೃಷ್ಟಿಯಿಂದ ನೋಡಿದರೆ ಬೆಂಕಿಯಲ್ಲಿ ಸುಡುವದೆಂಬ ಧರ್ಮವು ಆರೋಪಿತವಾಗುತ್ತದೆ. ನಿಜವಾಗಿ ನೋಡಿದರೆ ಸುಡುವದೆಂಬುದು ಬೆಂಕಿಯ ಸ್ವರೂಪವೇ ಆಗಿರುತ್ತದೆ. ಇದರಂತೆ ನಮ್ಮ ದೃಷ್ಟಿಯಿಂದ ಭಗವಂತನಲ್ಲಿ ದಯೆ, ವಾತ್ಸಲ್ಯ-ಮುಂತಾದವು ಆರೋಪಿತವಾಗಿರುತ್ತವೆ; ಪರಮಾರ್ಥವಾಗಿ ಅವುಗಳೆಲ್ಲವೂ ಅವನ ಸ್ವರೂಪವೇ ಆಗಿರುತ್ತವೆ. ಆದ್ದರಿಂದ ನಮ್ಮ ದೃಷ್ಟಿಯಿಂದ ಪರಮಾತ್ಮನ ಗುಣಗಳು ಕಲ್ಪಿತವಾದರೂ ಅವು ಇಲ್ಲವೇ ಇಲ್ಲವೆಂದು ಮಾತ್ರ

ಹೇಳುವದಕ್ಕೆ ಬರುವದಿಲ್ಲ; ಅವು ಆತನ ಸ್ವರೂಪವೇ ಆಗಿರುತ್ತವೆ. ಆತನು ದರಿದ್ರರ ದೃಷ್ಟಿಯಿಂದ ಮಹಾದಾತೃವಾಗಿರುತ್ತಾನೆ, ಅಜ್ಞರ ದೃಷ್ಟಿಯಿಂದ ಸರ್ವಜ್ಞನಾಗಿರುತ್ತಾನೆ, ಪಾಪಿಗಳ ದೃಷ್ಟಿಯಿಂದ ಪತಿತಪಾವನನಾಗಿರುತ್ತಾನೆ; ಇವೇ ಮುಂತಾದ ಅನಂತಕಲ್ಯಾಣಗುಣಗಳು ಆತನ ಸ್ವರೂಪವೇ ಆಗಿರುತ್ತವೆ. ಇದರಂತೆ ಪರಮೇಶ್ವರಾಭಿನ್ನರಾದ ಶಂಕರಭಗವತ್ಪಾದರಲ್ಲಿಯೂ ಅನಂತಗುಣಗಳಿರುತ್ತವೆ. ಅವುಗಳಲ್ಲಿ ಒಂದನ್ನು ಆರಿಸಿಕೊಂಡು ಕೊಂಡಾಡುವದು ಈ ಸಂದರ್ಭದಲ್ಲಿ ವಾಡಿಕೆಯಾಗಿರುತ್ತದೆ. ಅದರಂತೆ ಈ ದಿನ ಆಚಾರ್ಯರ ತ್ಯಾಗವೆಂಬ ಗುಣವನ್ನು ಕುರಿತು ಒಂದಿಷ್ಟು ಮಾತನಾಡುವೆನು.

ಲೋಕದಲ್ಲಿ ಜನರು ನಮ್ಮದೆಂದು ಇಟ್ಟುಕೊಂಡಿರುವ ಒಂದೆರಡು ದ್ರವ್ಯಗಳನ್ನು ಮತ್ತೊಬ್ಬನಿಗಾಗಿ ಬಿಟ್ಟರೆ ಅದನ್ನು ಸ್ವಾರ್ಥತ್ಯಾಗವೆಂದು ಹೊಗಳುವದುಂಟು. ಆದರೆ ಸರಿಯಾಗಿ ನೋಡಿದರೆ ಅದು ಸ್ವಾರ್ಥತ್ಯಾಗವಲ್ಲ. ಏಕೆಂದರೆ ಸ್ವಾರ್ಥವೆಂದರೆ ತನಗೆ ಬೇಕಾದದ್ದು; ಪ್ರತಿಯೊಬ್ಬನಿಗೂ ಬೇಕಾದ ಪರಮಪುರುಷಾರ್ಥಕ್ಕೆ ಅಡ್ಡಿಯಾಗಿರುವ ವಸ್ತುಗಳನ್ನು ಕೈಬಿಟ್ಟರೆ ಅದನ್ನು ಸ್ವಾರ್ಥತ್ಯಾಗವೆಂದು ಹೇಗೆ ಕರೆಯುವದಕ್ಕಾದೀತು? ನಿಜವಾಗಿ ಸ್ವಾರ್ಥವನ್ನು ತ್ಯಾಗಮಾಡುವದು ಯಾರಿಂದಲೂ ಆಗಲಾರದು. ಪರಮಾರ್ಥಸ್ವರೂಪವೇ ಸ್ವಾರ್ಥವು; ಅದನ್ನು ತ್ಯಾಗಮಾಡುವದು ಹೇಗೆ? ಆದರೂ ತನ್ನದೆಂದು ಭಾವಿಸಿಕೊಂಡಿರುವ ವಸ್ತುವನ್ನು ಬಿಡುವದನ್ನೇ ತ್ಯಾಗವೆಂದು ಕರೆಯುವ ರೂಢಿಯಿಂದ ಈಗ ಮಾತನಾಡುತ್ತಿದೇವೆ. ಮನುಷ್ಯನು ತ್ಯಾಗದಿಂದಲೇ ಬದುಕಿರಬೆಕು, ತನ್ನನ್ನು ಕಾಪಾಡಿಕೊಳ್ಳಬೇಕು-ಎಂದು ಶ್ರುತಿಗಳು ಮೊಳಗುತ್ತಿವೆ. ಕರ್ಮದಿಂದಲ್ಲ, ಪ್ರಜೆಯಿಂದಲ್ಲ, ತ್ಯಾಗದಿಂದಲೇ ಅಮೃತತ್ವವನ್ನು ಪಡೆಯುತ್ತಾರೆ-ಎಂಬುದು ಅವುಗಳ ಉಪದೇಶ. ಕರ್ಮವು ಇಂದ್ರಿಯಗಳನ್ನು ಸವೆಯಿಸುವ ಭೋಗವನ್ನು ಮಾತ್ರ ಕೊಡಬಲ್ಲದು, ಪ್ರಜಾಸಂತತಿಯೂ ಅಷ್ಟೆ, ಆದರೆ ತ್ಯಾಗವೊಂದೇ ಸಾವಿನಂಜಿಕೆಯನ್ನು ಕಳೆಯಿಸುವದು, ತ್ಯಾಗಕ್ಕಾಗಿಯೇ ಸಂನ್ಯಾಸವೆಂಬ ಒಂದು ಆಶ್ರಮವು ಏರ್ಪಟ್ಟಿರುತ್ತದೆ. ಗೃಹಸ್ಥರುಕೂಡ ಸದ್ವಿನಿಯೋಗಕ್ಕಾಗಿ ಸಂಪಾದನೆಮಾಡಿ ತ್ಯಾಗಬುದ್ಧಿಯನ್ನು ಸಂಪಾದಿಸಿಕೊಳ್ಳಬೇಕೆಂದು ಶಾಸ್ತ್ರಗಳು ಹೇಳುತ್ತವೆ.

ಆಚಾರ್ಯರು ಮಾಡಿತೋರಿಸಿದ ತ್ಯಾಗದ ಸ್ವರೂಪವೇನು? ಇದೆಲ್ಲವೂ ಪರಮೇಶ್ವರನೇ ; ಈ ಬುದ್ಧಿಯಿಂದ ತ್ಯಾಗಮಾಡಿ ನಿಮ್ಮನ್ನು ನೀವು ಕಾಪಾಡಿಕೊಳ್ಳಿರಿ-ಎಂಬ ಶ್ರುತಿಯಲ್ಲಿ ಹೇಳಿದ ತ್ಯಾಗವೇ ಆಚಾರ್ಯರಿಗೆ ಮೆಚ್ಚಾದದ್ದು. ಕರ್ತೃತ್ವಬುದ್ಧಿಯಿರುವಾಗ ಆಶ್ರಮಸಂನ್ಯಾಸವನ್ನು ಮಾಡಿಕೊಳ್ಳುವ ಕರ್ಮವಿಶೇಷ ರೂಪವಾದ ತ್ಯಾಗವೂ ಒಂದು ಬಗೆಯ ತ್ಯಾಗವೇ ಸರಿ; ಏಕೆಂದರೆ ಅದರಿಂದಲೂ ನಾನು, ನನ್ನದು-ಎಂಬ ಅಭಿಮಾನವು ತಗ್ಗುತ್ತದೆ. ಆದರೆ ಕರ್ತೃತ್ವಬುದ್ಧಿಯನ್ನು ತ್ಯಾಗಮಾಡುವದು ಸಂಪೂರ್ಣತ್ಯಾಗವು. ಇದು ಬಹಳ ಕಷ್ಟಸಾಧ್ಯವು. ಎಲ್ಲವನ್ನೂ ತ್ಯಾಗಮಾಡಿದೆನೆಂದು ಕರ್ತೃತ್ವವನ್ನಿಟ್ಟುಕೊಳ್ಳುವದು ಸರ್ವಸ್ವವನ್ನೂ ಮಾರಿಕೊಂಡು ಒಂದು ಬ್ಯಾಂಕುಚೆಕ್ಕನ್ನು ಪಡೆದುಕೊಂಡಂತೆ ಇರುತ್ತದೆ. ಏಕೆಂದರೆ ಚೆಕ್ಕಿನಿಂದ ಹಣವನ್ನು ಯಾವಾಗಬೇಕೆಂದರೆ ಆಗ ಪಡೆದುಕೊಳ್ಳಬಹುದಾಗಿರುವಂತೆಯೇ ಕರ್ತೃತ್ವದಿಂದ ಇಡಿಯ ಅನಾತ್ಮಜಗತ್ತನ್ನೇ ಪಡೆದುಕೊಳ್ಳುವದಕ್ಕೆ ಬರುತ್ತದೆ. ಆದ್ದರಿಂದ ಸ್ಮೃತಿಯಲ್ಲಿ ಹೀಗೆಂದು ಹೇಳಿರುತ್ತದೆ ''ಧರ್ಮವನ್ನು ಬಿಡು, ಅಧರ್ಮವನ್ನು ಬಿಡು; ಸತ್ಯವನ್ನು ಬಿಡು, ಅನೃತವನ್ನು ಬಿಡು-ಇವೆರಡನ್ನೂ ಬಿಟ್ಟಾದಮೇಲೆ ಯಾವದರಿಂದ ಇವೆರಡನ್ನೂ ಬಿಡುತ್ತೀಯೋ ಅದನ್ನೂ ಬಿಟ್ಟುಬಿಡು'' ನಾನು ಧರ್ಮಾಧರ್ಮಗಳನ್ನು ಮೀರಿದೆನು, ಸತ್ಯಾನೃತಗಳನ್ನು ಮೀರಿದೆನು-ಎಂದು ಯಾವನಾದರೂ ಹೇಳಿಕೊಳ್ಳಬಹುದು; ಆದರೆ ಇವುಗಳನ್ನು ಮೀರಿದೆನೆಂಬ ಅಹಂಕಾರವನ್ನು, ಕರ್ತೃತ್ವ ಬುದ್ಧಿಯನ್ನು ಮೀರಿದೆನೆ?- ಎಂದು ತನ್ನಲ್ಲಿ ತಾನೇ ನೋಡಿಕೊಳ್ಳಬೇಕು.

ಈ ಅಹಂಕಾರವನ್ನು ತ್ಯಾಗಮಾಡುವದು ಹೇಗೆ? ಇದಕ್ಕೆ ಜ್ಞಾನವೊಂದೇ ಉಪಾಯವು. ಜ್ಞಾನವು ಅಮಾನಿತ್ವ, ಅದಂಭಿತ್ವ-ಮುಂತಾದ ಸಾಧನಗಳಿಂದಲೇ ದೊರಕುವದೆಂದು ಗೀತೆಯಲ್ಲಿ ಹೇಳಿರುತ್ತದೆ. ಅಲ್ಲಿ ಹೇಳಿರುವ ಸಾಧನಗಳಲ್ಲಿ ಒಂದನ್ನು ನಾವು ಅಳವಡಿಸಿಕೊಂಡರೂ ಸಾಕು, ಮಿಕ್ಕವುಗಳು ತಾವೇ ವಶವಾಗುತ್ತವೆ. ನಮ್ಮಲ್ಲಿರುವ ದುರ್ಗುಣವು ಯಾವದು?- ಎಂಬುದನ್ನು ಆಲೋಚಿಸಿಕೊಂಡು ಅವುಗಳ ಪ್ರತಿಪಕ್ಷವಾದ ಸಾಧನವನ್ನು ನಾವು ಆರಂಭಿಸಬೇಕು. ಅದರಿಂದ ಈ ಕರ್ತೃತ್ವಬುದ್ಧಿಯು ತೊಲಗಿಹೋಗುವದು.

ಆಚಾರ್ಯರು ಈ ಲೋಕದಲ್ಲವತರಿಸಿ ಮನುಷ್ಯರಂತೆ ಆಚರಣೆಯನ್ನು ಮಾಡಿತೋರಿಸಿಕೊಟ್ಟ ತ್ಯಾಗದ ಹೆಚ್ಚುಗಾರಿಕೆಯು ವರ್ಣನಾತೀತವಾಗಿರುತ್ತದೆ. ಅವರಿಗೆ ಬಾಲ್ಯದಿಂದಲೇ ವೈರಾಗ್ಯವು ಬಂದದ್ದು, ಲೋಕಕ್ಕಾಗಿ ಅವರು ಶರೀರವನ್ನು ದಂಡಿಸಿದ್ದು, ಗುರುಸೇವೆ, ಪಾದಚಾರಿಗಳಾಗಿ ಭರತಖಂಡದಲ್ಲೆಲ್ಲ ಸಂಚರಿಸಿದ್ದು, ಪರಶಿವನಂತೆ ಭಿಕ್ಷಾಚರ್ಯೆಯಿಂದಲೇ ತಿರುಗುತ್ತಿದ್ದು ತಮ್ಮ ಜ್ಞಾನಭಂಡಾರವನ್ನೇ ಭಾವರೂಪದಿಂದ ಸೂರೆಗೊಟ್ಟಿರುವದು - ಇವೆಲ್ಲಕ್ಕಿಂತ ಹೆಚ್ಚಿನ ತ್ಯಾಗವು ಮತ್ತೆಲ್ಲಿ ಸಿಕ್ಕುತ್ತದೆ? ಕರ್ತೃತ್ವವಿದ್ದರೆ ಎಲ್ಲವೂ ಇದೆ, ಇದನ್ನು ಬಿಟ್ಟರೆ ಸಕಲವನ್ನೂ ತ್ಯಾಗಮಾಡಿದಂತೆ-ಎಂಬುದಕ್ಕೆ ಆಚಾರ್ಯರೇ ಉದಾಹರಣೆ. ಈ ಅರ್ಥದಲ್ಲಿ ಆಚಾರ್ಯರು ತ್ಯಾಗಮೂರ್ತಿ-ಎಂದು ಹೇಳಬಹುದಾಗಿದೆ. ಅಂಥವರ ಸ್ಮರಣೆಮಾಡುವದರಿಂದ ಈ ದಿನ ನಾವು ಧನ್ಯರು.

★★★★★

## ಶೋಕಮೋಹ

**09-05-1943**

**ಶ್ರೀಶ್ರೀಗಳವರು**

**ಭಗವದ್ಗೀತೆಯ ಎರಡನೆಯ ಅಧ್ಯಾಯದ 16ರಿಂದ 18ರವರೆಗಿನ ಶ್ಲೋಕಗಳ ಭಾಷ್ಯಾರ್ಥ** - ಅರ್ಜುನನಿಗೆ ಉಂಟಾಗಿದ್ದ ಶೋಕಮೋಹಗಳನ್ನು ಕಳೆಯುವದಕ್ಕಾಗಿ ಭಗವಂತನು ಗೀತೋಪದೇಶವನ್ನು ಮಾಡಿರುತ್ತಾನೆ. ಅರ್ಜುನನಿಗೆ ಅನಾತ್ಮದಲ್ಲಿ ಸತ್ಯತ್ವಬುದ್ಧಿಯಿದ್ದಿತು, ಆತ್ಮಜ್ಞಾನವಿರಲಿಲ್ಲ. ಇದರಿಂದ ಅವನಿಗೆ ಶೋಕಮೋಹಗಳುಂಟಾಗಿದ್ದವು. ಆದ್ದರಿಂದ ಆತ್ಮನೇ ಸತ್ಯವು, ಶೋಕಮೋಹಗಳಿಗೆ ಕಾರಣವಾಗಿರುವ ಅನಾತ್ಮವು ಅಸತ್ಯವು- ಎಂಬ ಜ್ಞಾನವನ್ನು ಭಗವಂತನು ಅವನಿಗೆ ಉಪದೇಶಿಸಬೇಕಾಯಿತು. ಅಸತ್ಯವಾದದ್ದು ತೋರಿಕೊಂಡರೂ ಅದಕ್ಕೆ ನಿಜವಾದ ಇರವು ಇಲ್ಲ. ಕಾರ್ಯಕಾರಣ

ಭಾವದಿಂದ ತೋರಿಕೊಳ್ಳುವ ಗಡಿಗೆಯೇ ಮುಂತಾದದ್ದನ್ನು ಪರಿಕಿಸಿದರೆ ಇದು ತಿಳಿಯುತ್ತದೆ. ಗಡಿಗೆಯೇ ಮುಂತಾದ ಕಾರ್ಯವು ತನ್ನ ಕಾರಣವಾದ ಮಣ್ಣೇ ಮುಂತಾದದ್ದಕ್ಕಿಂತ ಬೇರೆಯಾಗಿರುವದಿಲ್ಲ. ಕಾರ್ಯವೆಲ್ಲವನ್ನೂ ಹೀಗೆಯೇ ಅರಿಯಬೇಕು. ಚೆನ್ನಾಗಿ ನೋಡಿದರೆ ಅವುಗಳು ಇಲ್ಲವೇ ಇಲ್ಲವೆಂದೂ ಅವುಗಳಲ್ಲಿ ತೋರುವ ಇರವು ಪರಮಾರ್ಥವಾಗಿರುವ ಆತ್ಮನದೆಂದೂ ನಿರ್ಣಯವಾಗುತ್ತದೆ. ಇದು ಇಂಥದ್ದು ಎಂಬ ರೂಪದ ಸಾಮಾನಾಧಿಕರಣ್ಯದಿಂದ ತೋರುವ ಎರಡು ಪದಾರ್ಥಗಳಲ್ಲಿ ಇದೆಯೆಂಬ ಬುದ್ಧಿಗೆ ವಿಷಯವಾಗಿರುವದು ಪರಮಾರ್ಥವು; ಅದರ ಜೊತೆಯಲ್ಲಿ ತೋರುವ ಇಂಥದ್ದು ಎಂಬುದು ಬರಿಯ ತೋರಿಕೆ. ಇದು ನೀರು ಎಂದು ಬಿಸಿಲು ಕುದುರೆಯನ್ನೇ ನಾವು ಕರೆಯುವೆವು; ಅಲ್ಲಿ ಬಿಸಿಲು ಮಾತ್ರ ನಿಜವಾಗಿರುತ್ತದೆ, ನೀರು ಬರಿಯ ತೋರಿಕೆಯಾಗಿ ರುತ್ತದೆ. ಇದೆ ಎಂಬ ಬುದ್ಧಿಗೆ ವಿಷಯವಾಗಿರುವ ಆತ್ಮವಸ್ತು ಎಂದಿಗೂ ನಾಶವಾಗದು; ಇಂಥದ್ದು ಎಂಬ ಬುದ್ಧಿಗೆ ತೋರುವ ಅನಾತ್ಮವು ಎಂದಿಗೂ ಇರುವದಲ್ಲ, ಅದರ ಬುದ್ಧಿಯು ಮಾರ್ಪಡುತ್ತಲೇ ಇರುತ್ತದೆ. ಆದ್ದರಿಂದ ಶೀತೋಷ್ಣಾದಿವಿಕಾರವೆಲ್ಲವೂ ಈ ಕಾರಣದಿಂದ ಅಸತ್ತೇ, ನಿಜವಾಗಿರುವದಲ್ಲ ಎಂಬ ತತ್ತ್ವದೃಷ್ಟಿಗಳ ಬುದ್ಧಿಯನ್ನವಲಂಬಿಸಿಕೊಂಡು ವಿವೇಕಿಯಾದವನು ದ್ವಂದ್ವಗಳನ್ನು ತಡೆದುಕೊಳ್ಳಬೇಕು. ಸತ್ಯವಾಗಿರುವ ಆತ್ಮತತ್ತ್ವವು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವದು. ಅದಕ್ಕೆ ಎಂದಿಗೂ ನಾಶವಿಲ್ಲ; ಏಕೆಂದರೆ ಅದು ನಿರವಯವವಾಗಿರುವದರಿಂದ ಸ್ವರೂಪದಿಂದ ನಾಶವಾಗುವದಲ್ಲ, ನಿರ್ಧರ್ಮಕವಾದ್ದರಿಂದ ಮತ್ತೊಂದರಿಂದ ನಾಶವಾಗುವಂತಿಲ್ಲ. ತನ್ನನ್ನೇ ತಾನು ನಾಶಗೊಳಿಸಿಕೊಳ್ಳುವದೆಂದು ನಿರೀಕ್ಷಿಸುವದಕ್ಕೂ ಆಗುವದಿಲ್ಲ. ಆದರೆ ದೇಹವೇ ಮುಂತಾದ ಅನಾತ್ಮಗಳೆಲ್ಲವೂ ನೀರೆಂದು ತೋರಿದ ಬಿಸಿಲುಗುದುರೆಯಂತೆಯೂ ಕನಸಿನಲ್ಲಿ ಅಥವಾ ಮಾಯೆಯ ಫಲವಾಗಿ, ತೋರುವ ದೇಹಾದಿಗಳಂತೆಯೂ ಅನಿತ್ಯವಾಗಿರುತ್ತದೆ. ಅವಕ್ಕೂ ಸ್ವತಃಸಿದ್ಧನಾಗಿ ಸತ್ಯವಾಗಿರುವ ಆತ್ಮನಿಗೂ ಯಾವ ಸಂಬಂಧವೂ ಇಲ್ಲ- ಎಂದು ತಿಳಿದುಕೊಂಡು ಶೋಕಮೋಹಗಳನ್ನು ತೊರೆಯಬೇಕು - ಎಂಬುದು ಶ್ಲೋಕಗಳ ಭಾಷ್ಯದ ಸಾರವು.

★★★★★

# ಇಂದ್ರಿಯಗಳ ವ್ಯಾಪಾರ

**10-5-1948**

**ಬ್ರ|| ಶ್ರೀ|| ಹೆಚ್.ಅನಂತಮೂರ್ತಿಶಾಸ್ತ್ರಿಗಳವರು**

ಮನಸ್ಸೇ ಮುಂತಾದವುಗಳು ತಮ್ಮತಮ್ಮ ವಿಷಯದಲ್ಲಿ ನಿಯಮದಿಂದ ಎರಗುತ್ತವೆಯಲ್ಲ, ಅದು ಯಾರ ಪ್ರೇರಣೆಯಿಂದ? ಆ ಪ್ರೇರಣೆಯಾದರೂ ಹೇಗೆ?- ಎಂಬ ಪ್ರಶ್ನೆಗೆ ಉತ್ತರವಾಗಿ **ಕೇನೋಪನಿಷತ್ತಿನ 1ಮತ್ತು 2ನೇ** ಮಂತ್ರವು ಬಂದಿರುತ್ತದೆ.

ಆತ್ಮನು ಶ್ರೋತ್ರಕ್ಕೂ ಶ್ರೋತ್ರವು, ಮನಸ್ಸಿಗೂ ಮನಸ್ಸು- ಎಂದು ಮುಂತಾಗಿ ಮಂತ್ರದಲ್ಲಿ ಹೇಳಿರುವದೇಕೆಂದರೆ ಆತ್ಮನಿಗೆ ತನ್ನದೇ ಆದ ಒಂದು ವ್ಯಾಪಾರವಿರುವುದಿಲ್ಲ. ಮತ್ತೇನೆಂದರೆ ಅವನು ಕೇಳುವದು, ಸಂಕಲ್ಪಿಸುವದು, ನಿಶ್ಚಯಿಸುವದು- ಮುಂತಾದ ವ್ಯಾಪಾರಗಳ ಫಲವಾಗಿ ಉಂಟಾಗುವ ಅರಿವಿನಿಂದ ತಿಳಿದುಬರುವವನಾಗಿರುತ್ತಾನೆ. ಶ್ರೋತ್ರಾದಿಗಳು ಒಂದರೊಡನೊಂದು ಕೂಡಿಕೊಂಡು ಯಾರಿಗಾಗಿ ತಮ್ಮ ವ್ಯಾಪಾರವನ್ನು ಮಾಡುತ್ತಿರುವವೋ ಅವನೇ ಶ್ರೋತ್ರಾದಿಗಳ ಪ್ರೇರಕನಾದ ಆತ್ಮನು. ಶ್ರೋತ್ರವು ತನ್ನ ವಿಷಯವಾದ ಶಬ್ದವನ್ನು ಕೇಳುವದು ಚೈತನ್ಯಸ್ವರೂಪನಾದ ಆತ್ಮನ ಬಲದಿಂದಲೇ. ಇದರಂತೆಯೇ ಮಿಕ್ಕ ವಿಶೇಷಣಗಳ ಅರ್ಥವನ್ನು ತಿಳಿಯಬೇಕು. ಯಾವ ಕರಣವಾದರೂ ಯಾವನಿಗಾಗಿ ತನ್ನ ತನ್ನ ವ್ಯಾಪಾರದಲ್ಲಿ ತೊಡಗಿರುವದೋ ಅದೇ ಬ್ರಹ್ಮವು; ಆ ಚೈತನ್ಯದಬಲದಿಂದಲೇ ಕರಣಗಳು ತಮ್ಮ ತಮ್ಮ ಅರಿವಿನ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತವೆ. ಈ ಬ್ರಹ್ಮಸ್ವರೂಪವು ಕೂಟಸ್ಥವಾಗಿಯೂ ಜನ್ಮರಹಿತವಾಗಿ ಯೂ ಮುಪ್ಪುಸಾವುಗಳಿಲ್ಲದ್ದಾಗಿಯೂ ಇರುತ್ತದೆ. ಇದನ್ನರಿತುಕೊಂಡವನಿಗೆ ಅಮೃತತ್ವವು ದೊರಕುವದು. ಶ್ರೋತ್ರಾದಿಗಳೇ ತಾವೆಂದು ಯಾರು ತಿಳಿದು ಕೊಂಡಿರುವರೋ ಅವರಿಗೇ ಆ ತಾದಾತ್ಮ್ಯದಿಂದ ಹುಟ್ಟುಹೊಂದುಗಳೆಂಬ ಸಂಸಾರವುಂಟಾಗುತ್ತಿರುವದು. ಆದರೆ ಯಾರು ಶ್ರೋತ್ರಕ್ಕೂ ಶ್ರೋತ್ರವಾಗಿ ರುವ ಕರಣಗಳೆಲ್ಲಕ್ಕೂ ತಿರುಳಾಗಿರುವ ನಿತ್ಯಚೈತನ್ಯವೇ ತಮ್ಮ ಆತ್ಮನಾಗಿರುವ

ಬ್ರಹ್ಮವೆಂದು ಅರಿತುಕೊಳ್ಳುವರೋ ಅವರು ಪುತ್ರಮಿತ್ರಕಳತ್ರಾದಿಗಳಲ್ಲಿ ನಾನು ನನ್ನದೆಂಬ ಬುದ್ಧಿಯನ್ನು ತಪ್ಪಿಸಿಕೊಂಡುಬಿಡುವರಾದ್ದರಿಂದ ಅಮೃತರಾಗುವರು- ಎಂಬುದು ಮಂತ್ರಭಾಷ್ಯದ ಸಾರವು.

# ಬ್ರಹ್ಮವೇ ಸತ್ಯವು

**11-5-1943**

**ಬ್ರ॥ ಶ್ರೀ॥ ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

ಬ್ರಹ್ಮವನ್ನರಿತವನು ಹೆಚ್ಚಿನ ಫಲವನ್ನು ಪಡೆದುಕೊಳ್ಳುತ್ತಾನೆ ಎಂಬ ವಾಕ್ಯದಲ್ಲಿ **ತೈತ್ತಿರೀಯದ ಎರಡನೆಯ ವಲ್ಲಿ(2-1,2)ಯ** ಅರ್ಥವೆಲ್ಲವೂ ಸೂತ್ರಿತವಾಗಿರುತ್ತದೆ. ಅದರ ಅರ್ಥವನ್ನು ''ಬ್ರಹ್ಮವು ಸತ್ಯಜ್ಞಾನಾನಂತವಾಗಿ ರುತ್ತದೆ. ಗುಹೆಯಲ್ಲಿ ಪರಮಾಕಾಶದಲ್ಲಿರುವ ಅದನ್ನು ಯಾವನು ಅರಿತುಕೊಳ್ಳುವನೋ ಅವನು ಸರ್ವಕಾಮಗಳನ್ನೂ ಬ್ರಹ್ಮರೂಪದಿಂದ ಪಡೆದುಕೊಳ್ಳುತ್ತಾನೆ'' ಎಂದು ಸಂಗ್ರಹವಾಗಿ ವ್ಯಾಖ್ಯಾನ ಮಾಡಲಾಗಿದೆ. ಈಗ ಅದನ್ನೇ ವಿಸ್ತಾರವಾಗಿ ವಿವರಿಸುವದಕ್ಕೆ ಪ್ರಾರಂಭವಾಗಿರುತ್ತದೆ. ಆನಂತ್ಯವೆಂಬುದು ದೇಶದಿಂದ, ಕಾಲದಿಂದ, ವಸ್ತುವಿನಿಂದ ಎಂದು-ಮೂರು ಬಗೆ. ಆಕಾಶವು ದೇಶದಿಂದ ಅನಂತವು; ಆದರೆ ಅದು ಬ್ರಹ್ಮದ ಕಾರ್ಯವಾದ್ದರಿಂದ ಕಾಲದಿಂದ ಅನಂತವಲ್ಲ. ಬ್ರಹ್ಮವು ಮೂರು ಬಗೆಯಿಂದಲೂ ಅನಂತವಾಗಿರುತ್ತದೆ. ಯಾವ ವಸ್ತುವಾದರೂ ಬ್ರಹ್ಮದಿಂದಲೇ ಉಂಟಾಗಿರುತ್ತದೆ. ಆದ್ದರಿಂದ ಯಾವ ವಸ್ತುವೂ ಬ್ರಹ್ಮಕ್ಕಿಂತ ಬೇರೆಯಾಗಿಲ್ಲ. ಕಾರ್ಯವೆಂಬುದೂ ಬರಿಯ ಮಾತೇ ಹೊರತು ಅದು ಕಾರಣಕ್ಕಿಂತ ಬೇರೆಯಾಗಿರುವದಿಲ್ಲ. ಬ್ರಹ್ಮವು ಕಾಲಾಕಾಶಾದಿಗಳಿಗೂ ಕಾರಣವಾಗಿ ರುವದರಿಂದ ಅವು ಬ್ರಹ್ಮಕ್ಕಿಂತ ಬೇರೆಯಿಲ್ಲ. ಆದ್ದರಿಂದ ಮಿಗಿಲಿಲ್ಲದ ಆನಂತ್ಯವು ಬ್ರಹ್ಮಕ್ಕಿದೆ, ಆದ್ದರಿಂದ ಅದೇ ಮಿಗಿಲಿಲ್ಲದ ಸತ್ಯತ್ವವುಳ್ಳದ್ದಾಗಿರುತ್ತದೆ.

ಈ ಬ್ರಹ್ಮವೇ ಆತ್ಮನು. ಈ ಆತ್ಮಸ್ವರೂಪವಾದ ಬ್ರಹ್ಮದಿಂದಲೇ ಆಕಾಶ, ವಾಯು, ಅಗ್ನಿ, ಅಪ್ಪು, ಪೃಥ್ವಿ, ಮರಗಿಡಗಳು, ಅನ್ನ, ಶರೀರ-ಇವುಗಳು

ಕ್ರಮಕ್ರಮವಾಗಿ ಉಂಟಾಗಿರುತ್ತವೆ. ಅನ್ನದಿಂದಲೇ ಸ್ಥಾವರಜಂಗಮಪ್ರಾಣಿಗಳು ಹುಟ್ಟುತ್ತವೆ; ಅದರಲ್ಲಿಯೇ ಜೀವಿಸಿದ್ದು ಅದನ್ನೇ ಸೇರುತ್ತವೆ. ಆದ್ದರಿಂದ ಅದು ಬ್ರಹ್ಮವು. ಹೀಗೆಂದು ತಿಳಿದವರಿಗೆ ಅನ್ನವೆಲ್ಲವೂ ಪ್ರಾಪ್ತವಾಗುತ್ತದೆ. ಹೀಗೆಯೇ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ-ಎಂಬ ಅವಿದ್ಯಾಕೃತಾತ್ಮರು ಒಬ್ಬರೊಳಗೊಬ್ಬರು ಇರುತ್ತಾರೆ. ಅವರೆಲ್ಲರೂ ನಿಜವಾದ ಆತ್ಮರಲ್ಲ. ಎಲ್ಲಕ್ಕಿಂತಲೂ ಒಳಗಿರುವ ಆನಂದಸ್ವರೂಪವಾದ ಪ್ರತ್ಯಗಾತ್ಮನೇ ನಿಜವಾದ ಆತ್ಮನು ಬ್ರಹ್ಮವು - ಎಂಬುದು ಭಾಷ್ಯಭಾಗದ ತಾತ್ಪರ್ಯವು.

★★★★★

## ಜೀವನಿಗೆ ಉತ್ಪತ್ತಿಯಿಲ್ಲ

**12-5-1943**

**ಬ್ರ॥ ಶ್ರೀ॥ ಎಸ್. ವಿಠಲಶಾಸ್ತ್ರಿಗಳವರು**

ಜೀವನು ಉತ್ಪನ್ನನಾಗುತ್ತಾನೆಯೆ? ಆಕಾಶಾದಿಗಳುಕೂಡ ಬ್ರಹ್ಮದಿಂದ ಹುಟ್ಟಿದವೆಂದು ನಿರ್ಣಯವಾಗಿರುತ್ತದೆ. ಜೀವನೂ ಅದರಂತೆ ಹುಟ್ಟುತ್ತಾನೆಯೆ? ಎಂಬುದು **ಬ್ರಹ್ಮಸೂತ್ರದಲ್ಲಿ (2-3-17) ಆತ್ಮಾಧಿಕರಣ** ವಿಚಾರದ ವಿಷಯ. ಒಂದನ್ನರಿತರೆ ಎಲ್ಲವನ್ನೂ ಅರಿತಂತೆ ಆಗುತ್ತದೆ ಎಂಬ ವೇದಾಂತಪ್ರತಿಜ್ಞೆಯು ನಿಲ್ಲಬೇಕಾದರೆ ಬ್ರಹ್ಮಕ್ಕಿಂತ ಬೇರೆಯಾದದ್ದೆಲ್ಲವೂ ಬ್ರಹ್ಮದಿಂದ ಹುಟ್ಟುತ್ತದೆಯೆಂದು ನಿರ್ಣಯವಾಗಬೇಕು. ಕೆಲವು ಶ್ರುತಿಗಳಲ್ಲಿ ಜೀವರ ಉತ್ಪತ್ತಿಯನ್ನು ಹೇಳಿಯೂ ಇರುತ್ತದೆ. ಆದ್ದರಿಂದ ಜೀವನೂ ಹುಟ್ಟುತ್ತಾನೆ ಎಂಬುದು ಪೂರ್ವಪಕ್ಷ. ಜೀವನು ಅಜನೆಂದೂ ಮಾರ್ಪಾಡಿಲ್ಲದವನೆಂದೂ ಬ್ರಹ್ಮವೇ ಜೀವರೂಪದಿಂದಲೂ ಬ್ರಹ್ಮರೂಪದಿಂದಲೂ ಇರುವದೆಂದೂ ಶ್ರುತಿಯೂ ಹೇಳುತ್ತದೆಯಾದ್ದರಿಂದ ಜೀವನು ಬ್ರಹ್ಮದಿಂದ ಹುಟ್ಟುತ್ತಾನೆಂಬುದು ಸರಿಯಲ್ಲ. ಯಾವದು ವಿಭಕ್ತವಾಗಿ

ಬೇರೆಯಾಗಿ ತೋರುತ್ತದೆಯೋ ಅದು ಕಾರ್ಯವಾಗಿರಬೇಕಲ್ಲವೆ?-ಎಂದು ಪೂರ್ವಪಕ್ಷಿ ಕೇಳಬಹುದು. ಆದರೆ ಜೀವನು ಸ್ವತಃ ವಿಭಕ್ತನಾಗಿರುವದಿಲ್ಲ; ಬುದ್ಧಿಯೇ ಮುಂತಾದ ಉಪಾಧಿಗಳಿಂದ ವಿಭಕ್ತನಾಗಿರುವಂತೆ ತೋರುತ್ತಿರುತ್ತಾನೆ. ಅಷ್ಟೆ. ಉಪಾಧಿಯ ಹುಟ್ಟುವಿಕೆಯಿಂದಲೇ ಅವನು ಹುಟ್ಟಿದಂತೆ, ಅದರ ನಾಶದಿಂದಲೇ ಅವನು ನಾಶವಾದಂತೆ ಕಾಣತ್ತದೆ. ಬ್ರಹ್ಮವೇ ಜೀವರೂಪದಿಂದಿರುವದೆಂದು ಶ್ರುತಿಯು ಹೇಳುವದರಿಂದ ಒಂದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗುವದೆಂಬ ಪ್ರತಿಜ್ಞೆಗೆ ವಿರೋಧವೇನೂ ಇರುವದಿಲ್ಲ. ಆದ್ದರಿಂದ ಬ್ರಹ್ಮವೇ ಜೀವನು. ಅವನಿಗೆ ಉತ್ಪತ್ತಿಯಿಲ್ಲ-ಎಂಬುದು ಸಿದ್ಧಾಂತವು. ಇದೇ ಅಧಿಕರಣದ ಸಾರ.

★★★★★

# ಪ್ರಾಣೋಪಾಸನೆ

**13-5-1943**

**ಬ್ರ|| ಶ್ರೀ|| ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

**ಬೃಹದಾರಣ್ಯಕದಲ್ಲಿ (1-3-1) ಪ್ರಾಣೋಪಾಸನೆಯ ವಿಷಯದಲ್ಲಿರುವ** ಚರ್ಚೆ. ಇಲ್ಲಿ ವಿಷಯವೇನೆಂದರೆ ದೇವತೆಗಳಿಗೂ ಅಸುರರಿಗೂ ಸ್ಪರ್ಧೆಯಾಗಿ ದೇವತೆಗಳು ಅಸುರರನ್ನು ಉದ್ಗೀಥದ ಮೂಲಕವಾಗಿ ಗೆಲ್ಲಬೇಕೆಂದು ಹವಣಿಸುತ್ತಿದ್ದರು. ವಾಕ್ಕು, ಘ್ರಾಣ, ಚಕ್ಷುಸ್ಸು, ಶ್ರೋತ್ರ, ಮನಸ್ಸು-ಇವುಗಳಿಗಭಿಮಾನಿಗಳಾದ ದೇವತೆಗಳು ಒಬ್ಬೊಬ್ಬರಾಗಿ ದೇವತೆಗಳ ಪರವಾಗಿ ಉದ್ಗಾತೃಗಳಾದರು. ಆದರೆ ಅವರಲ್ಲಿ ಒಬ್ಬೊಬ್ಬನೂ ತಮ್ಮತಮ್ಮ ಒಂದೊಂದು ವಿಶೇಷ ಕರ್ಮದಲ್ಲಿಯೂ ಆಸಂಗವುಳ್ಳವರಾದರು; ಆಗ ಅಸುರರು ಅವರಿಗೆ ಪಾಪದ ಸಂಬಂಧವನ್ನು ಗಂಟುಹಾಕಿದರು. ಆದರೆ ಮುಖ್ಯಪ್ರಾಣನು ಮಾತ್ರ ಯಾವ ಆಸಂಗವೂ ಇಲ್ಲದ್ದರಿಂದ ಜಯಶೀಲವಾದನು. ದೇವತೆಗಳು ಗೆದ್ದರು, ಅಸುರರು ವಿನಷ್ಟರಾದರು. ಆದ್ದರಿಂದ ಈ

ಪ್ರಾಣವನ್ನು ವಿಶುದ್ಧಿಗುಣದಿಂದ ಕೂಡಿದವನೆಂದು ಉಪಾಸನೆಮಾಡಿದವರು ಮೃತ್ಯುದೂರವಾಗುತ್ತಾರೆ ಎಂದು ಪ್ರಾಣೋಪಾಸನೆಯನ್ನು ವಿಧಿಸಿರುತ್ತದೆ. ಇಲ್ಲಿ ಉಪಾಸನೆಯನ್ನು ವಿಧಿಸಿದೆಯಾದರೂ ಪ್ರಾಣನಲ್ಲಿ ನಿಜವಾಗಿ ವಿಶುದ್ಧಿಯೆಂಬ ಗುಣವು ಇರಬೇಕಾದದ್ದಿಲ್ಲ ಎಂಬ ಪೂರ್ವಪಕ್ಷವನ್ನು ತೆಗೆದು ಭಾಷ್ಯದಲ್ಲಿ ಚರ್ಚೆಮಾಡಿರುತ್ತದೆ. ಪೂರ್ವಪಕ್ಷಿಯ ಅಭಿಪ್ರಾಯದಲ್ಲಿ ಇಲ್ಲಿ ಪ್ರಾಣನನ್ನು ಸುಮ್ಮನೆ ಹೊಗಳಿದೆಯೇ ಹೊರತು ಅದೇನೂ ವಸ್ತುಸ್ಥಿತಿಯಲ್ಲ. ಆದರೆ ಬಾಧಕವಿಲ್ಲದಿರುವವರೆಗೆ ಶ್ರುತಿಯಲ್ಲಿ ಹೇಳಿರುವದು ಪರಮಾರ್ಥವೆಂದೇ ತಿಳಿಯುವದು ಯುಕ್ತವು. ತಪ್ಪುತಪ್ಪಾಗಿ ಇಲ್ಲದ ಧರ್ಮವನ್ನು ಇದೆಯೆಂದು ಉಪಾಸನೆಮಾಡುವದರಿಂದ ಉತ್ತಮಫಲವು ಎಂದಿಗೂ ಆಗಲಾರದು. ನಾಮಾದಿಗಳನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕೆಂದು ಹೇಳಿರುವಲ್ಲಿ ನಾಮಾದಿಗಳು ಪ್ರತೀಕವಾಗಿರುತ್ತವೆ; ಬ್ರಹ್ಮವು ನಿಜವಾಗಿ ಇದ್ದುಕೊಂಡಿದೆ. ಇಲ್ಲದೆ ಇರುವದನ್ನು ಪ್ರತೀಕೋಪಾಸನೆಯಲ್ಲಿ ಕೂಡ ಆರೋಪಿಸುವದಿಲ್ಲ. ಆದ್ದರಿಂದ ಕರ್ಮಸ್ವರೂಪವನ್ನೂ ಅದನ್ನು ಮಾಡುವ ರೀತಿಯನ್ನೂ ಫಲವನ್ನೂ ಹೇಗೆ ಇದ್ದದ್ದನ್ನೇ ಶಾಸ್ತ್ರವು ತಿಳಿಸಿಕೊಡುವದೋ ಹಾಗೆಯೇ ಪರಮಾತ್ಮನೇ ಮುಂತಾದ ವಸ್ತುರೂಪವನ್ನು ಇದ್ದದ್ದನ್ನೇ ಹೇಳುತ್ತದೆಯೆಂದು ಒಪ್ಪುವದು ಯುಕ್ತ. ವೇದವಾಕ್ಯಜನಿತವಾಗಿರುವದರಿಂದ ಎರಡು ಬುದ್ಧಿಯೂ ಪ್ರಮಾಣವೆಂಬುದೇ ನ್ಯಾಯ. ಅನುಷ್ಠೇಯವಲ್ಲದ್ದನ್ನು ಹೇಳುವದು ವಾಕ್ಯವೇ ಆಗಲಾರದೆಂದು ಹೇಳಲಾಗುವದಿಲ್ಲ; ಏಕೆಂದರೆ ವೇದದಲ್ಲಿ ವಸ್ತುಬೋಧಕವಾಕ್ಯಗಳೂ ಇದ್ದೇ ಇವೆ. ಬ್ರಹ್ಮವಾಕ್ಯದಿಂದ ಉಂಟಾಗುವ ಜ್ಞಾನದಿಂದ ಅಜ್ಞಾನಾದಿಗಳು ಹೋಗುವವೆಂದು ಶ್ರುತಿಯಲ್ಲಿದೆ, ಜ್ಞಾನಿಗಳ ಅನುಭವದಲ್ಲಿಯೂ ಇದೆ. ಪ್ರತಿಷೇಧವಾಕ್ಯಗಳು ಅನುಷ್ಠೇಯವನ್ನು ಹೇಳದಿದ್ದರೂ ಪ್ರಮಾಣವಾಗಿರುವವೆಂದು ಪೂರ್ವಪಕ್ಷಿಯಾದ ಮೀಮಾಂಸಕನೂ ಒಪ್ಪುತ್ತಾನೆ. ಮಾಡಬಾರದಾದ ಕರ್ಮಗಳಿಂದ ಅನರ್ಥವಾಗುವಂತೆ ಶಾಸ್ತ್ರೋಕ್ತಕರ್ಮಗಳೂ ಅಜ್ಞಾನದಿಂದಾಗಿರುವದರಿಂದ ಅವುಗಳಿಂದಲೂ ಸಂಸಾರಾನರ್ಥವುಂಟಾಗುತ್ತದೆ. ಆದ್ದರಿಂದ ಜ್ಞಾನವಾಕ್ಯಗಳಿಂದ ಅಜ್ಞಾನವು

ಹೋದರೆ ಆ ಅನರ್ಥವು ಇಲ್ಲವಾಗುವದು ಯುಕ್ತವೇ ಆಗಿರುತ್ತದೆ. ಆದ್ದರಿಂದ ಕ್ರಿಯೆಯನ್ನು ಹೇಳುದ ನಿಷೇಧವಾಕ್ಯಗಳಿಗೆ ಪ್ರಯೋಜನವಿರುವಂತೆ ವಸ್ತುಪ್ರತಿಪಾದಕವಾಕ್ಯಗಳಿಗೂ ಪ್ರಯೋಜನವುಂಟು. ಅಂಥ ವಾಕ್ಯಗಳು ಬರಿಯ ಸ್ತುತಿಯೆಂದು ಹೇಳಲಾಗದು-ಎಂಬುದು ಚರ್ಚೆಯ ಫಲಿತಾಂಶವು.

★★★★★

# ಅರ್ಜುನನ ಸಂಶಯ

**14-5-1943**

**ಬ್ರ॥ ಶ್ರೀ॥ ಎಸ್. ವಿಠಲಶಾಸ್ತ್ರಿಗಳವರು**

**ಭಗವದ್ಗೀತೆಯ ಐದನೆಯ ಅಧ್ಯಾಯದ ಸಂಬಂಧಭಾಷ್ಯದಲ್ಲಿ** ಸರ್ವಕರ್ಮಸಂನ್ಯಾಸವನ್ನು ಹೇಳಿದ್ದನ್ನೂ ಕರ್ಮಯೋಗವನ್ನು ಮಾಡೆಂದು ತನಗೆ ಹೇಳಿದ್ದನ್ನೂ ಕೇಳಿ ಅರ್ಜುನ-ಇವೆರಡರಲ್ಲಿ ಯಾವದು ಹೆಚ್ಚಿನದೋ ಅದನ್ನು ಮಾಡೋಣವೆಂದು ಈ ಅಧ್ಯಾಯದಲ್ಲಿ ಆ ವಿಷಯವಾಗಿ ಪ್ರಶ್ನೆಮಾಡಿರುತ್ತಾನೆ.

ಕರ್ಮಸಂನ್ಯಾಸವನ್ನು ಹೇಳಿದ ವಚನಗಳಲ್ಲಿ ಸಂನ್ಯಾಸವನ್ನೇ ವಿಧಿಸಿರುವದರಿಂದ ಅದು ಪ್ರಧಾನವಾಗಿರುತ್ತದೆ; ಅದನ್ನು ಮಾಡುವವನು ಆತ್ಮಜ್ಞಾನಿಯೇ ಅಲ್ಲದೆ ಆತ್ಮಜ್ಞಾನವಿಲ್ಲದವನೂ ಆಗಿರಬಹುದು-ಎಂಬುದು ಅರ್ಜುನನ ಅಭಿಪ್ರಾಯ. ಇದು ಸರಿಯಾದ ಅಭಿಪ್ರಾಯ ಎಂಬುದು ಭಗವಂತನ ಉತ್ತರದಿಂದಲೂ ಗೊತ್ತಾಗುತ್ತದೆ, ಏಕೆಂದರೆ ಸಂನ್ಯಾಸಕ್ಕಿಂತ ಕರ್ಮಯೋಗವೇ ಮೇಲೆಂದು ಭಗವಂತನು ಉತ್ತರವನ್ನು ಕೊಟ್ಟಿರುತ್ತಾನಷ್ಟೆ. ಇಲ್ಲಿ ಒಬ್ಬನಿಗೇ ಎರಡೂ ಇರುವವೆಂದೂ ಅವೆರಡರಲ್ಲಿ ಕರ್ಮಯೋಗವೇ ಮೇಲೆಂದೂ ಹೇಳಿದಂತಾಗಿದೆ. ಆದರೆ ಜ್ಞಾನಿಗೆ ಸಂನ್ಯಾಸವು ಆಗಬಹುದಾದರೂ ಕರ್ಮಯೋಗವು ಆಗುವಂತಿಲ್ಲ. ಏಕೆಂದರೆ ನಿಷ್ಕ್ರಿಯನಾದ ಆತ್ಮನೇ ನಾನು ಎಂಬುದು ಜ್ಞಾನವು; ಆ ಜ್ಞಾನವಿದ್ದವನಿಗೆ ತಾನು ಕರ್ತೃವೆಂಬ

ಬುದ್ಧಿಯಿರಲಾರದಾದ್ದರಿಂದ ಕರ್ಮಯೋಗದಲ್ಲಿ ಅಧಿಕಾರವಿರಲಾರದು. ಆದ್ದರಿಂದ ಕರ್ಮಸಂನ್ಯಾಸವೂ ಕರ್ಮಯೋಗವೂ ಎರಡೂ ಹೊಂದುವದೆಂಬುದು ಆತ್ಮಜ್ಞಾನವಿಲ್ಲದ ಕರ್ತೃತ್ವಾಭಿಮಾನವುಳ್ಳ ಪುರುಷನಿಗೇ ಆಗಿರುತ್ತದೆ. ಹಿಂದೆ ''ಕರ್ಮಕ್ಕಿಂತ ಜ್ಞಾನವು ಮೇಲಾದರೆ ನನ್ನನ್ನು ಕರ್ಮದಲ್ಲೇಕೆ ತೊಡಗಿಸುತ್ತೀ?''-ಎಂದು ಕೇಳಿದ ಅರ್ಜುನನಿಗೆ ''ಜ್ಞಾನಿಗಳಿಗೆ ಜ್ಞಾನಯೋಗವು ಸರಿ, ಯೋಗಿಗಳಿಗೆ ಕರ್ಮಯೋಗವು ಸರಿ'' -ಎಂದು ಭಗವಂತನು ಉತ್ತರವನ್ನು ಕೊಟ್ಟಿರುತ್ತಾನೆ. ''ಬರಿಯ ಸಂನ್ಯಾಸದಿಂದಲೇ ಸಿದ್ಧಿಯಾಗುವದಿಲ್ಲ'' ಎಂದು ಹೇಳಿರುವದರಿಂದ ಜ್ಞಾನಸಹಿತವಾದ ಸಂನ್ಯಾಸದಿಂದ ಸಿದ್ಧಿಯಾಗುತ್ತದೆ ಎಂದು ಹೇಳಿದಂತಾಗುವದು. ಕರ್ಮಯೋಗವನ್ನು ವಿಧಾನಮಾಡಿರುವದರಿಂದ ಅದೂ ತನಗೆ ಶ್ರೇಯಸ್ಕರವೇ ಎಂದು ಭಗವಂತನು ಹೇಳಿರುತ್ತಾನೆ. ಈಗ ಜ್ಞಾನವಿಲ್ಲದವನಿಗೆ ಸಂನ್ಯಾಸವು ಮೇಲೊ, ಕರ್ಮ ಯೋಗವು ಮೇಲೊ?- ಎಂದು ಅರ್ಜುನನ್ನು ಕೇಳಿರುತ್ತಾನೆ. ಭಗವಂತನು ''ಆತ್ಮಜ್ಞಾನಿಯು ಮಾಡುವ ಸಂನ್ಯಾಸವು ಅಕರ್ತೃಜ್ಞಾನಪೂರ್ವಕವಾದ ಸರ್ವಕರ್ಮಸಂನ್ಯಾಸವು. ಮಿಕ್ಕವರು ಕರ್ತೃತ್ವಜ್ಞಾನವಿರುವಾಗಲೇ ಕರ್ಮದಲ್ಲಿ ಭಾಗವನ್ನು ಸಂನ್ಯಾಸಮಾಡುವರಷ್ಟೆ; ಅದಕ್ಕೆ ಯಮನಿಯಮಾದಿಸಾಧನಗಳು ಬೇಕಾಗುವದರಿಂದ ಅದನ್ನು ಮಾಡುವದು ಎಲ್ಲರಿಗೂ ಸಾಧ್ಯವಿಲ್ಲ. ಆದನ್ನು ಮಾಡಲಾರದವರಿಗೆ ಸುಕರವಾಗಿರುವ ಕರ್ಮಯೋಗವೇ ಮೇಲು''-ಎಂದು ಉತ್ತರವನ್ನು ಕೊಟ್ಟಿರುತ್ತಾನೆ. ಆದ್ದರಿಂದ ಈ ಅಧ್ಯಾಯದಲ್ಲಿ ಅರ್ಜುನನು ಕೇಳಿರುವದೂ ಭಗವಂತನು ಉತ್ತರಕೊಟ್ಟಿರುವದೂ ಪರಮಾರ್ಥಜ್ಞಾನದಿಂದ ಮಾಡುವ ಸರ್ವಕರ್ಮಸಂನ್ಯಾಸದ ವಿಷಯವಲ್ಲ, ಆತ್ಮಜ್ಞಾನಿಗಳಲ್ಲದವರು ಮಾಡಬಹುದಾದ ಕರ್ಮಸಂನ್ಯಾಸರೂಪವಾದ ಆಶ್ರಮಸಂನ್ಯಾಸದ ವಿಷಯವು-ಎಂಬುದು ಭಾಷ್ಯದ ಸಾರ.

★★★★★

# ಬ್ರಹ್ಮಕ್ಕಿಂತಲೂ ಬೇರೆಯ ತತ್ತ್ವವಿದೆಯೆ?

**15-5-1943**

**ಬ್ರ॥ ಶ್ರೀ॥ ಎಚ್. ಅನಂತಮೂರ್ತಿಶಾಸ್ತ್ರಿಗಳವರು**

ಬ್ರಹ್ಮವು ನಿರ್ವಿಶೇಷವೆಂದು ಹಿಂದಿನ ಅಧಿಕರಣದಲ್ಲಿ ನಿರ್ಣಯ ಮಾಡಲಾಗಿರುತ್ತದೆ. ಆ ಬ್ರಹ್ಮಕ್ಕಿಂತಲೂ ಆಚೆಿನ ತತ್ತ್ವವೊಂದು ಇದೆಯೆ, ಇಲ್ಲವೆ?-ಎಂಬುದನ್ನು **ಬ್ರಹ್ಮಸೂತ್ರದ (3-2-31) ಈ ಪರಾಧಿಕರಣದಲ್ಲಿ** ವಿಚಾರಮಾಡಿರುತ್ತದೆ. ಆತ್ಮನನ್ನು ಶ್ರುತಿಯಲ್ಲಿ 'ಸೇತು ಎಂಬ ಶಬ್ದದಿಂದ ಕರೆದಿರುತ್ತದೆ. ಸೇತುವೆಂದರೆ ಅಣೆಕಟ್ಟು; ಸೇತುವನ್ನು ದಾಟಬೇಕೆಂದು ಶ್ರುತಿಯಲ್ಲಿರುವದರಿಂದ ಸೇತುವನ್ನು ದಾಟಿ ಬಯಲಿಗೆ ಹೋಗುವಂತೆ ಬ್ರಹ್ಮವನ್ನು ದಾಟಿ ಮತ್ತೊಂದು ತತ್ತ್ವವನ್ನು ಪಡೆಯಬೇಕಾಗಿದೆಯೆಂದು ತೋರುತ್ತದೆ. ಇದರಂತೆ ಬ್ರಹ್ಮಕ್ಕೆ ನಾಲ್ಕು ಪಾದಗಳು-ಎಂದು ಮುಂತಾಗಿ ಅಳತೆಯನ್ನು ಹೇಳಿರುತ್ತದೆಯಾದ್ದರಿಂದ ಅದು ಪರಿಚ್ಛಿನ್ನವಾಗಿರಬೇಕೆಂದು ತೋರುತ್ತದೆ. ಸುಷುಪ್ತಿಯಲ್ಲಿ ಜೀವನಿಗೂ ಬ್ರಹ್ಮಕ್ಕೂ ಸಂಬಂಧವಾಗುವದೆಂದು ಶ್ರುತಿಯಲ್ಲಿ ಹೇಳಿರುವದರಿಂದಲೂ ಹೀಗೆಂದೇ ತಿಳಿಯಬೇಕಾಗಿದೆ; ಏಕೆಂದರೆ ಸಂಬಂಧಿಯಾದದ್ದು ಅಳತೆಗೆ ಕಟ್ಟುಬಿದ್ದಿರಬೇಕು. ಆದಿತ್ಯನಲ್ಲಿರುವ ಪುರುಷನೊಬ್ಬನು, ಅಕ್ಷಿಯಲ್ಲಿರುವವನು ಮತ್ತೊಬ್ಬನು-ಎಂದು ಬ್ರಹ್ಮದಲ್ಲಿ ಭೇದವನ್ನು ಹೇಳಿರುವದೂ ಇದಕ್ಕೆ ಬೆಂಬಲವಾಗುತ್ತದೆ. ಆದ್ದರಿಂದ ಬ್ರಹ್ಮವು ಪರಿಚ್ಛಿನ್ನವಾದದ್ದೇ, ಬ್ರಹ್ಮಕ್ಕಿಂತಲೂ ಆಚೆ ಒಂದು ತತ್ತ್ವವಿರಬೇಕು-ಎಂಬುದು ಪೂರ್ವಪಕ್ಷವು.

ಈ ಅಭಿಪ್ರಾಯವು ಸರಿಯಲ್ಲ. ಏಕೆಂದರೆ ಬ್ರಹ್ಮದಿಂದಲೇ ಎಲ್ಲವೂ ಹುಟ್ಟುವದೆಂದೂ ಅದೊಂದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗುವದೆಂದೂ ಶ್ರುತಿಯಲ್ಲಿ ಹೇಳಿರುತ್ತದೆ- ಬ್ರಹ್ಮವನ್ನು ದಾಟಿ ಮತ್ತೊಂದು ತತ್ತ್ವವನ್ನು ಹೇಳಿಯೂ ಇಲ್ಲ. ಆದ್ದರಿಂದ ಬ್ರಹ್ಮಕ್ಕಿಂತ ಬೇರೊಂದು ತತ್ತ್ವವಿದೆಯೆಂಬುದು ಸರಿಯಲ್ಲ. ಸೇತುವೆಂದ ಮಾತ್ರದಿಂದ ಮತ್ತೊಂದಿದೆ ಎಂದು ಕಲ್ಪಿಸುವದು

ನ್ಯಾಯವಲ್ಲ; ಹಾಗೆ ಕಲ್ಪಿಸುವದಾದರೆ ಅದು ಅಣೆಕಟ್ಟಿನಂತೆ ಮಣ್ಣು, ಕಟ್ಟಿಗೆ-ಮುಂತಾದವುಗಳಿಂದ ಆಗಿರುವದೆಂದೂ ಕಲ್ಪಿಸಬಹುದಾಗುವದು. ಆದ್ದರಿಂದ ಅದು ಯುಕ್ತವಲ್ಲ. ಸೇತುವಿನಂತೆ ಜಗತ್ತಿನ ವ್ಯವಸ್ಥೆಗೆ ಕಾರಣವಾಗಿದೆಯೆಂಬುದೇ ಇಲ್ಲಿ ಸೇತುಶಬ್ದದಿಂದ ತಿಳಿಯಬೇಕಾದದ್ದು. ಬ್ರಹ್ಮಕ್ಕೆ ನಾಲ್ಕು ಪಾದಗಳು ಎಂದು ಮುಂತಾಗಿ ಅಳತೆಯನ್ನು ಹೇಳಿರುವದು ಉಪಾಸನೆಗಾಗಿ. ಬ್ರಹ್ಮಸ್ವರೂಪವನ್ನು ಪೂರ್ಣವಾಗಿ ಗ್ರಹಿಸಲಾರದವರು ಅದರ ಒಂದು ಭಾಗವನ್ನೇ ಧ್ಯಾನಮಾಡಲಿ ಎಂದು ಕಲ್ಪಿಸಿರುತ್ತಾರೆಯೇ ಹೊರತು ನಿಜವಾಗಿ ಬ್ರಹ್ಮಕ್ಕೆ ಅಳತೆಯಿದೆಯೆಂದೇನೂ ಅಭಿಪ್ರಾಯವಿಲ್ಲ. ಸುಷುಪ್ತಿಯಲ್ಲಿ ಸಂಬಂಧವನ್ನು ಹೇಳಿರುವದು ಉಪಾಧಿಯು ಇಲ್ಲವಾಗಲು ಬಿಡಿಯರಿವು ಇಲ್ಲವಾಗುವದೆಂಬುದನ್ನು ತಿಳಿಸುವದಕ್ಕೇ ಹೊರತು ಬ್ರಹ್ಮವು ಬೇರೆಯಾಗಿ ದೆಯೆಂದು ತಿಳಿಸುವದಕ್ಕಲ್ಲ. ಬೆಳಕು ಉಪಾಧಿಯಿಂದ ಬೇರೆಯಾಗಿ ತೋರುತ್ತಿದ್ದು ಅದು ಹೋಗಲು ಮೊದಲಿನ ಬೆಳಕೇ ಆಗುವಂತೆಯೂ ಸೂಜಿ, ಹಗ್ಗದಕುಣಿಕೆ-ಮುಂತಾದವುಗಳಲ್ಲಿ ಕಾಣುವ ಆಕಾಶವು ಉಪಾಧಿಗಳು ಇಲ್ಲವಾಗಲು ಆಕಾಶವೇ ಆಗುವಂತೆಯೂ ಈ ಸಂಬಂಧವನ್ನು ತಿಳಿಯಬೇಕು. ಭೇದವನ್ನು ಹೇಳಿರುವದೂ ಉಪಾಧಿಯಿಂದಲೇ. ''ಸುಷುಪ್ತಿಯಲ್ಲಿ ತನ್ನನ್ನೇ ಸೇರಿಸಿಕೊಳ್ಳುತ್ತಾನೆ'' ಎಂದು ಶ್ರುತಿ ಹೇಳಿರುವದೂ ಇದಕ್ಕೆ ಬೆಂಬಲವಾಗಿರುತ್ತದೆ. ಬ್ರಹ್ಮಕ್ಕಿಂತ ಬೇರೆ ಯಾವದೂ ಇಲ್ಲವೆಂದು ಶ್ರುತಿಯಲ್ಲಿ ಹೇಳಿರುವದೂ ಇದಕ್ಕೆ ಪುಷ್ಟಿಯನ್ನು ಕೊಡುತ್ತದೆ. ಹೀಗೆಂದು ಒಪ್ಪಿದರೇ ಬ್ರಹ್ಮವು ಸರ್ವಗತವೆಂಬುದು ಹೊಂದುತ್ತದೆ. ಆದ್ದರಿಂದ ಬ್ರಹ್ಮಕ್ಕಿಂತ ಆಚೆ ಯಾವ ತತ್ತ್ವವೂ ಇರುವದಿಲ್ಲ-ಎಂಬುದು ಸಿದ್ಧಾಂತವು.

★★★★★

# ಆಚಾರ್ಯರ ಗುಣಕಥನ

**16-5-1943**

**ಶ್ರೀಶ್ರೀಗಳವರು**

ಭಗವತ್ಸ್ವರೂಪರಾದವರ ಸ್ಮರಣದಿಂದ, ಈ ಸಪ್ತಾಹದ ಉತ್ಸವದಲ್ಲಿ ನಾವು ಮಾಡಿರುವ ಕರ್ಮಗಳಲ್ಲಿ ಆಗಿರಬಹುದಾದ ನ್ಯೂನಾತಿರಿಕ್ತಗಳು ಅಂಟದೆ ಕರ್ಮಕ್ಕೆ ಸಾದ್ಗುಣ್ಯವು ಬರುತ್ತದೆ. ಆಚಾರ್ಯರ ಅನುಗ್ರಹದಿಂದ ನಾವು ಸರಿಯಾದ ಜ್ಞಾನಕ್ಕೂ ಅಧಿಕಾರಿಗಳಾಗುವೆವು. ಆದ್ದರಿಂದ ಪದ್ಧತಿಯನ್ನನುಸರಿಸಿ ಆಚಾರ್ಯರ ಗುಣಕಥನವನ್ನು ಯಥಾಶಕ್ತಿಯಾಗಿ ಮಾಡುವದಕ್ಕೆ ಪ್ರಯತ್ನಿಸೋಣ. ಈ ದಿನದ ವಿಷಯವು ''ಆಚಾರ್ಯರು ಮಾಡಿದ **ಬ್ರಾಹ್ಮಣ್ಯೋದ್ಧಾರ**''.

ಭಗವದ್ಗೀತೆಯ ಭಾಷ್ಯದಲ್ಲಿ ಆಚಾರ್ಯರು ಅಪ್ಪಣೆಕೊಡಿಸಿರುವ ದೇನೆಂದರೆ: ''ಬ್ರಾಹ್ಮಣ್ಯವನ್ನು ಕಾಪಾಡಿದರೆ ವೈದಿಕಧರ್ಮವನ್ನೇ ಕಾಪಾಡಿದಂತೆ''. ಬ್ರಾಹ್ಮಣನೆಂದರೆ ಅದ್ವೈತದೃಷ್ಟಿಯುಳ್ಳವನು, ವಿಶಾಲವಾದ ದೃಷ್ಟಿಯುಳ್ಳಾತನು. ಯಾವನು ವಿರಕ್ತಿಯಿಂದ ಕೂಡಿ, ತತ್ತ್ವವನ್ನು ತಿಳಿದು ಸರ್ವವ್ಯಾಪಕವಾದ ಬ್ರಹ್ಮದಲ್ಲಿಯೇ ನೆಲೆನಿಂತಿರುವನೋ ಅವನೇ ಬ್ರಾಹ್ಮಣನು. ಶ್ರುತಿಯಲ್ಲಿ ''ಇನ್ನು ಬ್ರಾಹ್ಮಣನಾದನು'' ಎಂದು ಜ್ಞಾನಿಯನ್ನು ಬ್ರಾಹ್ಮಣನೆಂದು ಕರೆದಿರುವದಕ್ಕೆ ಇದೇ ಕಾರಣವು.

ಜನರು ಬ್ರಹ್ಮಜ್ಞಾನದಿಂದ ಎಷ್ಟೆಷ್ಟು ದೂರವಾದರೋ ಅಷ್ಟಷ್ಟು ಬ್ರಾಹ್ಮಣ್ಯವು ಖಿಲವಾಯಿತು. ಪೂರ್ವದಲ್ಲಿ ಎಲ್ಲರೂ ಬ್ರಾಹ್ಮಣರಾಗಿದ್ದರೆಂದು ಅವರವರ ಕರ್ಮದಿಂದ ಜನರು ಕೆಳಕ್ಕೆ ಇಳಿದು ಬೇರೆಬೇರೆಯ ವರ್ಣಗಳನ್ನು ಪಡೆದರೆಂದೂ ಭಾರತದಲ್ಲಿ ಒಂದು ಕಥೆಯಿದೆ. ಇದಿರಲಿ. ನಿಜವಾಗಿ ನಮಗೆ ಪರಮಾತ್ಮನ ಸ್ಮರಣೆ ಎಷ್ಟೆಷ್ಟರ ಮಟ್ಟಿಗೆ ಇರುವದೋ ಅಷ್ಟರಮಟ್ಟಿಗೆ ಬ್ರಾಹ್ಮಣ್ಯವು ಉಳಿದುಕೊಂಡಿರುವದು. ಕೃತಯುಗದಲ್ಲಿ ಧ್ಯಾನ, ತ್ರೇತಾಯುಗದಲ್ಲಿ ಯಾಗ,

ದ್ವಾಪರದಲ್ಲಿ ಅರ್ಚನೆ-ಇವುಗಳಿಂದ ಯಾವ ಫಲವು ಸಿಕ್ಕುತ್ತಿತ್ತೋ ಆ ಫಲವು ಕಲಿಯುಗದಲ್ಲಿ ಕೇಶವನಾಮವನ್ನು ಸಂಕೀರ್ತನಮಾಡುವದರಿಂದ ಸಿಕ್ಕುತ್ತದೆ – ಎಂದು **ಪುರಾಣವಚನ**ವಿದೆ. ಕಲಿಯುಗದಲ್ಲಿ ಪರಮಾತ್ಮಸಾಮೀಪ್ಯವು ಜನರಿಗೆ ದೊರಕುವದು ಎಷ್ಟು ಕಷ್ಟವೆಂಬುದು ಇದರಿಂದ ಗೊತ್ತಾಗುವಂತಿದೆ. ಬ್ರಹ್ಮಚಿಂತನೆಯಲ್ಲಿದ್ದುಕೊಂಡು ಬ್ರಾಹ್ಮಣ್ಯವನ್ನು ಕಾಪಾಡಿಕೊಳ್ಳಿ ಎಂದು ಆಚಾರ್ಯರು ಮಾಡಿರುವ ಉಪದೇಶದ ಹೆಚ್ಚುಗಾರಿಕೆಯು ಇದರಿಂದಲೇ ವ್ಯಕ್ತವಾಗುತ್ತದೆ.

ಆಚಾರ್ಯರ ಅವತಾರದ ಕಾಲಕ್ಕೆ ಬೌದ್ಧರ ಧರ್ಮವು ಕ್ಷೀಣವಾಗಿ ಮೀಮಾಂಸಕರು ಹೆಚ್ಚಿಕೊಂಡಿದ್ದರು. ಒಂದುಕಡೆಯಲ್ಲಿ ಬೌದ್ಧರು ''ಒಂದು ತಿಗುಣೆಯನ್ನೂ ಕೊಲ್ಲಕೂಡದು'' ಎಂದು ಅಹಿಂಸೆಯನ್ನು ಬೋಧಿಸುತ್ತಿದ್ದರೆ ಇನ್ನೊಂದು ಕಡೆಯಲ್ಲಿ ಮೀಮಾಂಸಕರ ಅನುಯಾಯಿಗಳಾದ ಯಾಜ್ಞಿಕರು ಪಶುಗಳ ರಕ್ತಕೋಡಿಯನ್ನು ಹರಿಯಿಸಬೇಕೆಂಬುದನ್ನು ತಿಳಿಯಪಡಿಸುತ್ತಿದ್ದರು. ಇಂಥ ವಿಷಮಕಾಲದಲ್ಲಿ ಆಚಾರ್ಯರು ವೇದಾಂತವನ್ನು ಬ್ರಾಹ್ಮಣ್ಯಕ್ಕೆ ತಳಹದಿಯನ್ನಾಗಿಮಾಡಿ ಜೀವನಕ್ಕೆ ಧ್ಯೇಯವಾಗಿ 'ಸರ್ವವೂ ಬ್ರಹ್ಮವು' ಎಂಬ ತತ್ತ್ವವನ್ನುಪದೇಶಿಸಿ ವೈದಿಕ ಕರ್ಮಗಳನ್ನೆಲ್ಲ ಅದಕ್ಕೆ ಸಂಬಂಧಿಸಿ ಉಪದೇಶಿಸಿದರು.

ಆಚಾರ್ಯರು ಮುಖ್ಯವಾಗಿ ಸಂನ್ಯಾಸವನ್ನೇ ಹೇಳಿದರೆಂದೂ ಅವರದು ಸಂನ್ಯಾಸಿಗಳ ವೇದಾಂತವೆಂದೂ ಕೆಲವರು ದೂರುತ್ತಾರೆ. ಆದರೆ ಅವರ ಗ್ರಂಥಗಳನ್ನು ನೋಡಿದರೆ ಇದು ನಿರಾಧಾರವಾದ ಆಕ್ಷೇಪವೆಂಬುದು ವ್ಯಕ್ತವಾಗುತ್ತದೆ. ಅವರು ಕರ್ಮಯೋಗಕ್ಕೆ ಎಂಥ ಪ್ರಾಶಸ್ತ್ಯವನ್ನು ಕೊಟ್ಟಿರುತ್ತಾರೆ! ''ನೈಷ್ಕರ್ಮ್ಯ ಸಿದ್ಧಿಗೆ ಕರ್ಮವನ್ನು ಮಾಡುವದೇ ಸಾಧನ'' (ಗೀ. ಭಾ.2-47) ಎಂದು ಆಚಾರ್ಯರು ಹೇಳಿರುವನ್ನು ಕಂಡವರು ಅವರು ಕರ್ಮಕ್ಕೆ ವಿರೋಧಿಗಳೆಂದು ಹೇಳುವದಕ್ಕೆ ಬಾಯಿ ಬಂದೀತೆ? ''ಭಗವಂತನು ಅರ್ಜುನನಿಗೆ ಅತ್ಯಂತವಾಗಿ ಹಿತವನ್ನೇ ಕೋರುವವನಾದ್ದರಿಂದ ಅವನಿಗೆ ಸಮ್ಯಗ್ದರ್ಶನದ ಸಂಬಂಧವಿಲ್ಲದ ಕರ್ಮಯೋಗವನ್ನೇ ಉಪದೇಶಿಸಿರುತ್ತಾನೇ'' (ಗೀ. ಭಾ.12-13) ಎಂದು ಅವರು

ಹೇಳಿರುವದನ್ನು ನೋಡಿರಿ; ''**ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಙ್ಗವರ್ಜಿತಃ**'' (11-52) ಎಂಬ ಶ್ಲೋಕದಲ್ಲಿ ಗೀತಾಶಾಸ್ತ್ರದಲ್ಲೆಲ್ಲ ಸಾರಭೂತವಾಗಿರುವ ಮೋಕ್ಷ ಸಾಧನವನ್ನು ಹಿಂಡಿಟ್ಟು ಹೇಳಿರುತ್ತದೆ- ಎಂದು ಅವರು ಭಾಷ್ಯದಲ್ಲಿ ಬರೆದಿರುವದನ್ನು ನೋಡಿರಿ. ಆಗ ಅವರು ಸಂನ್ಯಾಸವನ್ನೇ ಎಲ್ಲರಿಗೂ ಉಪದೇಶಿಸಿರುತ್ತಾರೆಂಬುದು ಎಂಥ ಪೊಳ್ಳುಕೂಗು ಎಂಬುದು ವೇದ್ಯವಾಗುತ್ತದೆ. ಜ್ಞಾನದಿಂದಲೇ ಮೋಕ್ಷವೆಂದು ಅವರು ಹೇಳಿರುವದು ನಿಜ. ಆದರೆ ಆ ಜ್ಞಾನಕ್ಕೆ ಕರ್ಮಾನುಷ್ಠಾನವೇ ಮುಖ್ಯವೆಂಬುದು ಅವರ ಸಿದ್ಧಾಂತವಾಗಿರುತ್ತದೆ. ಆದ್ದರಿಂದಲೇ ಕರ್ಮವಾಕ್ಯಗಳು ವೇದದಲ್ಲಿ ಹೆಚ್ಚಾಗಿರುತ್ತವೆಯೆಂದೂ ಅವರು ಅಭಿಪ್ರಾಯಪಟ್ಟಿರುತ್ತಾರೆ.

ಕಾಲುನಡಗೆಯಿಂದ ಭರತಖಂಡದಲ್ಲೆಲ್ಲ ತಿರುಗಿ ಈ ವೈದಿಕಧರ್ಮವನ್ನು ಉಪದೇಶಿಸಿ ಆಗಿನ ಕಾಲದ ಶ್ರೇಷ್ಠವಿದ್ವಾಂಸರೆಲ್ಲರನ್ನೂ ತಮ್ಮ ಮತಕ್ಕೆ ತಿರುಗಿಸಿಕೊಂಡ ಅವರ ಹೃದಯವು ಸತ್ಯದಲ್ಲಿ ಎಂಥ ಆದರವುಳ್ಳದ್ದಾಗಿರಬೇಕು! ವೇದವೂ ವೇದಪುರುಷನೂ ಮುಳುಗಿಬಿಟ್ಟಿದ್ದ ಕಾಲವದು. ಅಂಥ ಕಾಲದಲ್ಲಿ ಪ್ರವೃತ್ತಿಧರ್ಮದಲ್ಲಿ ಆದರವನ್ನುಂಟುಮಾಡಿಸಿ ನಿವೃತ್ತಿಧರ್ಮದ ಸಾರವಾದ ಪರಮಾತ್ಮನನ್ನು ತಿಳಿಸಿದರು. 'ಅಡಿಗೆಮಾಡಬೇಕು, ಊಟವಿಲ್ಲ' ಎಂಬಂತೆ ಪರಮಾತ್ಮನಿಗೆ ಸೊನ್ನೆಸುತ್ತಿದ್ದ ಮೀಮಾಂಸಕರ ಉಪಟಳವನ್ನು ತಪ್ಪಿಸಿದರು. ವೇದದಲ್ಲಿ ವಸ್ತುಪರವಾದ ವಾಕ್ಯಗಳೂ ಉಂಟು ಎಂದು ಸ್ಥಾಪಿಸಿ ಬ್ರಾಹ್ಮಣರಿಗೆ ಬ್ರಹ್ಮವನ್ನು ದಾನಮಾಡಿದರು. ತತ್ತ್ವದ ಅನುಭವದ ಬಲದಿಂದಲೂ ತಮ್ಮ ಮೃದುಹೃದಯದಿಂದಲೂ ವಾದಿಗಳನ್ನುಗೆದ್ದು ಲೋಕಕ್ಕೇ ಕಲ್ಯಾಣವನ್ನುಂಟುಮಾಡಿದ್ದರಿಂದ ಅವರಿಗೆ **ಶಂಕರರೆಂಬ** ಹೆಸರು ಅನ್ವರ್ಥವಾಯಿತು!

ಜ್ಞಾನಕ್ಕೆ ಅವ್ಯಭಿಚರಿತವಾದ ಭಕ್ತಿಯಿರಬೇಕು, ಭಕ್ತರಿಗೇ ಭಗವಂತನು ಜ್ಞಾನವನ್ನು ಅನುಗ್ರಹಿಸುತ್ತಾನೆ. ಪರಮಾತ್ಮನ ಕರ್ಮವನ್ನು ಪ್ರೇಮದಿಂದ ಮಾಡಬೇಕು, ಅವನ ಸ್ವರೂಪವನ್ನು ತಿಳಿಸುವ ವಾಕ್ಯಗಳನ್ನು ಪ್ರೇಮದಿಂದ

ಶ್ರವಣ ಮಾಡಬೇಕು, ಅವುಗಳ ಅರ್ಥವನ್ನು ಪ್ರೇಮದಿಂದ ವಿಚಾರಮಾಡಬೇಕು-ಆಗಲೇ ವೇದಾರ್ಥವು ಅನುಭವಕ್ಕೆ ಅಳವಟ್ಟು ಆನಂದವನ್ನು ಕೊಡುತ್ತದೆ. ಭಕ್ತರಮೇಲಿನ ದಯೆಯಿಂದ ಪರಮೇಶ್ವರನು ಅವರ ಹೃದಯದಲ್ಲಿಯೇ ಇದ್ದುಕೊಂಡು ಅವರು ಅಜ್ಞಾನದ ಕಗ್ಗತ್ತಲೆಯಲ್ಲಿ ಮುಗ್ಗರಿಸದಂತೆ ಜ್ಞಾನದೀಪವನ್ನು ಹಿಡಿಯುತ್ತಾನೆ-ಎಂದು ಅವರು ಹೇಳಿರುತ್ತಾರೆ. ಈ ದೀಪದ ವರ್ಣನೆಯನ್ನು ಆಚಾರ್ಯರು ಹತ್ತನೆಯ ಅಧ್ಯಾಯದ ಭಾಷ್ಯದಲ್ಲಿ ವರ್ಣಿಸಿರುವದನ್ನು ನೆನಪಿಟ್ಟವರಿಗೆ ಭಕ್ತಿಯಲ್ಲಿ ಅವರಿಗೆ ಎಂಥ ಆದರವೆಂಬುದು ತಿಳಿಯಬರುತ್ತದೆ. ''ಭಕ್ತಿಪ್ರಸಾದವೆಂಬ ಎಣ್ಣೆಯನ್ನು ಸುರಿದು ಭಗವಂತನ ಭಾವನೆಯೆಂಬ ಗಾಳಿಯಿಂದ ಆ ದೀಪವು ಉರಿಯುತ್ತಿರುವದು. ಅದಕ್ಕೆ ಬ್ರಹ್ಮಚರ್ಯವೇ ಮುಂತಾದ ಸಾಧನಗಳ ಸಂಸ್ಕಾರದಿಂದ ಪ್ರಜ್ಞೆಯೆಂಬ ಬತ್ತಿಯನ್ನು ಹಾಕಿರುವದು. ವಿಷಯಗಳಿಂದ ಹಿಮ್ಮೆಟ್ಟಿ ರಾಗದ್ವೇಷಗಳೆಂಬ ಕಲ್ಮಶವಿಲ್ಲದೆ ಬಿರುಗಾಳಿಯ ಹೊಡೆತವಿಲ್ಲದ ಪ್ರಸನ್ನಚಿತ್ತವೆಂಬ ಕೋಣೆಯಲ್ಲಿಟ್ಟಿರುವ ದೀಪವದು!'' ಆಚಾರ್ಯರು ಜ್ಞಾನನಿಷ್ಠೆಯನ್ನು ಪರಭಕ್ತಿಯೆಂದೇ ಕರೆದಿರುವರೆಂಬುದನ್ನು ಇಲ್ಲಿ ನೆನಪಿಡಬೇಕು. ಪರಮಾತ್ಮನ ಸ್ವರೂಪದ ಜ್ಞಾನವು ಎಷ್ಟು ಹೆಚ್ಚಾದರೆ ಆತನ ಮೇಲಿನ ಪ್ರೇಮವೂ ಅಷ್ಟು ಹೆಚ್ಚಾಗುತ್ತದೆ, ಪ್ರೇಮವು ಹೆಚ್ಚಿದಷ್ಟೂ ಜ್ಞಾನವು ಹೆಚ್ಚುತ್ತದೆ-ಎಂಬುದು ಅವರ ಆಶಯವು.

ಮುಖ್ಯವಾಗಿ ಆಚಾರ್ಯರು ಹೇಳುವದಿಷ್ಟು: ಪರಮಾತ್ಮನೊಬ್ಬನೇ ಎಲ್ಲೆಲ್ಲಿಯೂ ಇರುವಾತನು. ಪರಮಾತ್ಮತತ್ತ್ವವೇ ನಮ್ಮ ಒಳಗೆ ಇದೆ, ಅದೇ ಹೊರಗೂ ಇದೆ, ತಾನೂ ಆ ತತ್ತ್ವವೇ-ಎಂದು ಪರಮಾತ್ಮನಲ್ಲಿಯೇ ನೆಲೆನಿಂತು ತತ್ತ್ವದಿಂದ ಎಂದಿಗೂ ಜಾರದ ಉಚ್ಚಧ್ಯೇಯವನ್ನು ಇಟ್ಟುಕೊಳ್ಳಬೇಕು. ಅದೇ ಬ್ರಾಹ್ಮಣ್ಯವು, ಉದಾರಬುದ್ಧಿಯಿರುವದೇ ಬ್ರಾಹ್ಮಣವು, ಸಂಕುಚಿತಬುದ್ಧಿಯೇ ಅಬ್ರಾಹ್ಮಣ್ಯವು. ಈ ಊರಿನ ಬ್ರಾಹ್ಮಣಸೇವಾಸಂಘದಲ್ಲಿ ಆಚಾರ್ಯರ ಸಪ್ತಾಹವು ನಡೆದದ್ದರಿಂದ ನನಗೆ ಅವರು ಮಾಡಿದ ಬ್ರಾಹ್ಮಣೋದ್ಧಾರದ ನೆನಪು ಬಂದಿತು. ನಾವುಗಳು ಬ್ರಾಹ್ಮಣರಾಗಿ ಹುಟ್ಟಿದ್ದಕ್ಕೆ ಆಚಾರ್ಯರ

ಗ್ರಂಥಗಳನ್ನು ಓದಬೇಕು, ಕೇಳಬೇಕು, ಮತ್ತೊಬ್ಬರಿಗೆ ಹೇಳಬೇಕು, ವಿಚಾರಮಾಡಬೇಕು; ಉದಾರಬುದ್ಧಿಯ ಬ್ರಾಹ್ಮಣ್ಯವನ್ನು ಸಂಪಾದಿಸಬೇಕು. ಇದರಿಂದ ನಮ್ಮ ಕಲ್ಯಾಣವೂ ಆಗುವದು, ಲೋಕಕ್ಕೂ ಕಲ್ಯಾಣವಾಗುವದು. ಹಾಗಾಗುವಂತೆ ಆಚಾರ್ಯರ ಅನುಗ್ರಹವು ನಮಗೆಲ್ಲರಿಗೂ ಆಗಲಿ.

★★★★★

# ತುರೀಯಾತ್ಮನ ಸ್ವರೂಪ

**18-05-1953**

**ಶ್ರೀ ಶ್ರೀಗಳವರು**

**ಮಾಂಡೂಕ್ಯಭಾಷ್ಯದ ಏಳನೆಯ ಮಂತ್ರದಲ್ಲಿ** ತುರೀಯಾತ್ಮನ ಸ್ವರೂಪವನ್ನು ವಿವರಿಸುವ ಭಾಷ್ಯದ ಅವತರಣಿಕಾಭಾಷ್ಯವಿವರಣೆ: ಪರಮಾತ್ಮನಲ್ಲಿ ಶಬ್ದಪ್ರವೃತ್ತಿಗೆ ನಿಮಿತ್ತವಾದ ಜಾತಿಗುಣಕ್ರಿಯಾದಿಗಳು ಯಾವವೂ ಇಲ್ಲದಿರುವದರಿಂದ ಅವನನ್ನು ಯಾವ ಶಬ್ದದಿಂದಲೂ ಹೇಳುವದಕ್ಕೆ ಬರುವುದಿಲ್ಲ; ಪ್ರತ್ಯಕ್ಷವೇ ಮುಂತಾದ ಪ್ರಮಾಣಾಂತರಕ್ಕೂ ಅವನು ವಿಷಯನಲ್ಲ. ಯಾವ ವಿಶೇಷವೂ ಇಲ್ಲದ್ದರಿಂದ ಆತ್ಮಸ್ವರೂಪವು ಶೂನ್ಯವೇ ಆಯಿತಲ್ಲ!- ಎಂದು ಶಂಕಿಸಬಾರದು. ಏಕೆಂದರೆ ಪ್ರಾಣನೇ ಮುಂತಾದ ಸರ್ವ ವಿಕಲ್ಪಗಳಿಗೂ ಆಸ್ಪದನಾಗಿ ರುವ ಆತ್ಮನನ್ನು ಶೂನ್ಯವೆನ್ನುವದಕ್ಕಾಗುವದಿಲ್ಲ. ರಜ್ಜುಸರ್ಪವೇ ಮುಂತಾದ ವಿಕಲ್ಪಗಳು ಹೇಗೆ ಹಗ್ಗವೇ ಮುಂತಾದ ಆಸ್ಪದವಿಲ್ಲದೆ ತೋರಿಕೊಳ್ಳಲಾರವೋ ಹಾಗೆಯೇ ಪ್ರಾಣಾದಿಗಳೂ ಆತ್ಮನಿಲ್ಲದೆ ತೋರಿಕೊಳ್ಳಲಾರವು. ಇಂಥ ಪರಮಾತ್ಮನನ್ನು ಅರಿತುಕೊಂಡರೆ ಪ್ರಯೋಜನವಾದರೂ ಏನು?- ಎಂದು ಕೆಲವರು ಕೇಳಬಹುದು. ಇವನೇ ನಮ್ಮ ಆತ್ಮನು ಎಂದು ಅರಿತುಕೊಂಡರೆ ಅನಾತ್ಮದಲ್ಲಿರುವ ರಾಗದ್ವೇಷಾದಿಗಳು ತೊಲಗುವದೇ ಈ ಜ್ಞಾನದ ಪ್ರಯೋಜನವು. ಇದರ ಅರಿವು ಆಗುವದಾದರೂ ಹೇಗೆ? ಎಂದು ಕೇಳುವವರಿಗೆ ಉಪನಿಷದ್ವಾಕ್ಯಜ್ಞಾನದಿಂದ ಎಂಬುದೇ ಉತ್ತರ.

ಪರಮಾತ್ಮನಿಗೆ ಪರಮಾರ್ಥವಾದ ರೂಪವೊಂದು, ಅಪರಮಾರ್ಥವಾದ ವೈಶ್ವಾನರ, ತೈಜಸ, ಪ್ರಾಜ್ಞ (ಅಥವಾ ಪ್ರಾಣ) ಎಂಬ ರೂಪಗಳು ಮೂರು- ಹೀಗೆ ನಾಲ್ಕು ಪಾದಗಳಿವೆ. ಈವರೆಗೆ ಅಪರಮಾರ್ಥವಾದ ತೋರಿಕೆಯ ಮೂರು ಪಾದಗಳನ್ನು ಹೇಳಿದ್ದಾಗಿದೆ; ಈಗ ಹಾವನ್ನು ಅಲ್ಲಗಳೆದು ಹಗ್ಗವನ್ನು ತಿಳಿಸುವಂತೆ ಅಪರಮಾರ್ಥವಾದ ಮೂರು ಪಾದಗಳನ್ನು ಅಲ್ಲಗಳೆದು ನಾಲ್ಕನೆಯದಾದ ಪರಮಾರ್ಥವಾದ ಪಾದವನ್ನು ತಿಳಿಸುವದಕ್ಕೆ ಹೊರಟಿದೆ.

ಇದು ನಾಲ್ಕನೆಯ ಪಾದವೆಂಬುದರಿಂದಲೇ ಇನ್ನುಳಿದ ಮೂರಲ್ಲವೆಂದು ಆಗುವದಾದರೂ ಅವನ್ನು ಅಲ್ಲಗಳೆದಿರುವದೇಕೆ? ಎಂದರೆ, ಹಾವೆಂದು ತೋರುವದೇ ಹಗ್ಗವು ಎಂದು ತಿಳಿಸುವದಕ್ಕಾಗಿ ಇದು ಹಾವಲ್ಲ, ಹಗ್ಗವು-ಎಂದು ಹೇಳುವಂತೆ ವೈಶ್ವಾನರಾದಿಗಳೇ ನಿಜವಾಗಿ ತುರೀಯನು ಎಂದು ತಿಳಿಸುವದಕ್ಕಾಗಿ ವೈಶ್ವಾನರಾದಿರೂಪಗಳನ್ನು ಅಲ್ಲಗಳೆದಿರುತ್ತದೆ. ಹೀಗಿರುವದರಿಂದ ಇವನು ವೈಶ್ವಾನರನಲ್ಲ, ತೈಜಸನಲ್ಲ, ಪ್ರಾಜ್ಞನಲ್ಲ- ಎಂಬ ಅಲ್ಲಗಳೆಯುವಿಕೆಯ ಅರಿವು ಆದ ಸಮಕಾಲದಲ್ಲಿಯೇ ಆತ್ಮನಲ್ಲಿ ಸರ್ವಾನರ್ಥಪ್ರಪಂಚವೂ ತೊಲಗುವದೆಂದಾಯಿತು. ಆದ್ದರಿಂದ ಈ ಪ್ರತಿಷೇಧಜ್ಞಾನಕ್ಕಿಂತ ಬೇರೆಯಾದ ಪ್ರಮಾಣವಾಗಲಿ ಸಾಧನವಾಗಲಿ ತುರೀಯಜ್ಞಾನಕ್ಕೆ ಬೇಕಾಗುವದಿಲ್ಲ; ಆದ್ದರಿಂದ ಆತ್ಮಜ್ಞಾನಕ್ಕೆ ಸಾಕ್ಷಾತ್ಕಾರರೂಪವಾದ ಪ್ರಮಾಣವು ಬೇಕೆಂದೂ ಅದಕ್ಕಾಗಿ ಶಾಬ್ದಜ್ಞಾನವನ್ನು ಅಭ್ಯಾಸಮಾಡತಕ್ಕ ಸಾಧನವು ಅವಶ್ಯವೆಂದೂ ಹೇಳುವವರ ಮಾತಿಗೆ ಬೆಲೆಯಿಲ್ಲ. ಯಾವ ಪ್ರಮಾಣವೇ ಆಗಲಿ ಪ್ರಮೇಯದ ಅಜ್ಞಾನವನ್ನು ಕಳೆಯುವದೊಂದೇ ಹೊರತು ಆಯಾ ಪ್ರಮೇಯದಲ್ಲಿ ಜ್ಞಾತತ್ವವೆಂಬ ಅತಿಶಯವನ್ನೂ ಬೇರೆಯಾಗಿ ಮಾಡುವದೆಂಬವರ ಮತವು ಅನುಭವ ವಿರುದ್ಧವಾಗಿರುತ್ತದೆ. ಇದರಂತೆ ತುರೀಯನೇ ನಮ್ಮ ಆತ್ಮನಾಗಿರುವದರಿಂದ ಅವನಲ್ಲಿ ಆರೋಪಿತವಾಗಿರುವ ವೈಶ್ವಾನರತ್ವ, ತೈಜಸತ್ವ, ಪ್ರಾಜ್ಞತ್ವ- ಇದನ್ನು ಅಲ್ಲಗಳೆಯುವ ವೇದವಾಕ್ಯದಿಂದುಂಟಾಗುವ ಜ್ಞಾನದ ಸಮಕಾಲದಲ್ಲಿಯೇ ಜಿಜ್ಞಾಸೆಯು ಪರಿಪೂರ್ತಿಯಾಗುವದು. ಆದ್ದರಿಂದ ಆತ್ಮಜ್ಞಾನಕ್ಕೆ ಮತ್ತೆ

ಪ್ರಮಾಣದ ವ್ಯಾಪಾರವು ಬೇಕಾಗುವದಿಲ್ಲ; ಈ ನಿಷೇಧಜ್ಞಾನವು ಆತ್ಮನಲ್ಲಿ ಪ್ರಮಾತೃತ್ವವನ್ನೇ ತೆಗೆದುಹಾಕುವದರಿಂದಲೂ ಮತ್ತೆ ಪ್ರಮಾಣವ್ಯವಹಾರವು ಉಳಿದಿರುವದಕ್ಕೆ ಅವಕಾಶವಿಲ್ಲ. ಆದ್ದರಿಂದ ''ನಾಂತಃಪ್ರಜ್ಞಮ್'' ಮುಂತಾದ ನಿಷೇಧಜ್ಞಾನವೇ ತುರೀಯನಲ್ಲಿ ಸರ್ವಾನರ್ಥಗಳನ್ನೂ ಕಳೆಯುವದಕ್ಕೆ ಸಾಕಾಗಿದೆ- ಎಂಬುದು ಭಾಷ್ಯಾವತರಣಿಕೆಯ ಅಭಿಪ್ರಾಯವು.

★★★★★

# ಬ್ರಹ್ಮಪ್ರಾಪ್ತಿಯ ಸ್ವರೂಪ

**19-5-1953**

**ಬ್ರ॥ಶ್ರೀ॥ವಿಠಲಶಾಸ್ತ್ರಿಗಳವರು**

**ಬೃಹದಾರಣ್ಯಕದಲ್ಲಿ** **1-4-10** ರಲ್ಲಿರುವ ಬ್ರಹ್ಮಪ್ರಾಪ್ತಿಯ ಸ್ವರೂಪದ ವಿಷಯದ ಭಾಷ್ಯಾರ್ಥವಿವರಣೆ: ಬ್ರಹ್ಮಪ್ರಾಪ್ತಿಫಲವೆಂಬುದು ಅವಿದ್ಯಾನಿವಾರಣೆಮಾತ್ರವಾಗಿರುತ್ತದೆ. ಕಣ್ಣಿಗೆ ಬೆಳಕಿನ ಸಂಬಂಧವಾದ ಮಾತ್ರಕ್ಕೆ ಆ ಕಾಲದಲ್ಲಿಯೇ ರೂಪದ ಅರಿವಾಗುವಂತೆ ಆತ್ಮನ ಜ್ಞಾನವಾದ ಕಾಲದಲ್ಲಿಯೇ ಅಜ್ಞಾನವು ತೊಲಗುತ್ತದೆ. ಆದ್ದರಿಂದ ಆತ್ಮಜ್ಞಾನಿಯು ಎಲ್ಲರಿಗೂ ಆತ್ಮನಾಗಿಬಿಡುವದರಿಂದ ದೇವತೆಗಳೂ ಅವನಿಗೆ ಬ್ರಹ್ಮಪ್ರಾಪ್ತಿಯಾಗದಂತೆ ಮಾಡಲಾರರು ಎಂದು ಶ್ರುತಿವಾಕ್ಯದ ಅರ್ಥ.

ಇಲ್ಲಿ ಅಜ್ಞಾನನಿವೃತ್ತಿಯ ಬಗ್ಗೆ ಮೂರು ಪೂರ್ವಪಕ್ಷಗಳನ್ನು ಭಾಷ್ಯಕಾರರು ವಿಮರ್ಶಿಸಿರುತ್ತಾರೆ. ವಿದ್ಯಾಪ್ರತ್ಯಯವನ್ನು ಸಂತತವಾಗಿ ಅಭ್ಯಾಸಮಾಡಿದರೆ, ಕೊನೆಯ ಪ್ರತ್ಯಯದಿಂದಲೇ ಅಜ್ಞಾನವು ತೊಲಗುವದೆಂಬವರ ಪಕ್ಷವೊಂದು. ಕೊನೆಯ ಪ್ರತ್ಯಯಕ್ಕೂ ಮೊದಲನೆಯದಕ್ಕೂ ಯಾವ ಭೇದವೂ ಇಲ್ಲವಾದ್ದರಿಂದ ಅದು ಸರಿಯಲ್ಲವೆಂದು ಭಾಷ್ಯಕಾರರು ತಳ್ಳಿಹಾಕಿರುತ್ತಾರೆ. ಸಂತತವಾದ ವಿದ್ಯಾಪ್ರತ್ಯಯವೇ

ಅವಿದ್ಯಾನಿವರ್ತಕವು, ಬಿಟ್ಟುಬಿಟ್ಟು ಆಗುವ ಜ್ಞಾನವು ನಿವರ್ತಕವಲ್ಲ - ಎಂಬ ಪಕ್ಷವು ಇನ್ನೊಂದು. ಜ್ಞಾನ ಸಂತತಿಯು ಭೋಜನಾದಿಗಳ ಪ್ರತ್ಯಯದಿಂದ ವಿಚ್ಛಿನ್ನವಾಗಲೇಬೇಕಾಗಿರುವದರಿಂದ ಇದು ಸಾಧ್ಯವಿಲ್ಲವೆಂದು ಭಾಷ್ಯಕಾರರು ಈ ಪಕ್ಷವನ್ನು ತಳ್ಳಿಹಾಕಿರುತ್ತಾರೆ. ಇಷ್ಟೇ ಪ್ರತ್ಯಯಗಳಾಗಬೇಕೆಂಬ ನಿಯಮವೇ ಇಲ್ಲವಾಗುವದೆಂಬ ದೋಷವೂ ಈ ಪಕ್ಷದಲ್ಲಿದೆ. ಜ್ಞಾನವು ಅಜ್ಞಾನನಿವರ್ತಕವಲ್ಲವೆ ಅಲ್ಲ, ಅದರ ನಿವೃತ್ತಿಯನ್ನು ಹೇಳುವ ವೇದವಾಕ್ಯವು ಸ್ತುತಿಗಾಗಿ ಬಂದಿರುವ ಅರ್ಥವಾದ ಎಂಬುದು ಮೂರನೆಯ ಪಕ್ಷ. ಉಪನಿಷತ್ತುಗಳಲ್ಲೆಲ್ಲ ಹೇಳಿರುವ ಅಜ್ಞಾನನಿವೃತ್ತಿಯನ್ನು ಅರ್ಥವಾದವೆಂದು ಹೇಳುವದು ಸರಿಯಲ್ಲ ಎಂದು ಭಾಷ್ಯಕಾರರು ಅದನ್ನು ತಳ್ಳಿಹಾಕಿರುತ್ತಾರೆ.

ಜ್ಞಾನಿಗಳಿಗೂ ಜ್ಞಾನಕ್ಕೆ ವಿರುದ್ಧವಾದ ತಿಳಿವೂ ಕಾರ್ಯವೂ ಇವೆಯಲ್ಲ, - ಎಂಬ ಆಕ್ಷೇಪಕ್ಕೆ ಎರಡು ಉತ್ತರವನ್ನು ಭಾಷ್ಯದಲ್ಲಿ ಹೇಳಿದೆ. ಪ್ರಾರಬ್ಧಕರ್ಮದಿಂದ ಉಂಟಾಗಿರುವ ಶರೀರವೂ ವಿಪರೀತಪ್ರತ್ಯಯವೆಂಬ ದೋಷನಿಮಿತ್ತವಾಗಿ ರುವದರಿಂದ ಅಷ್ಟುಮಟ್ಟಿಗೆ ವಿಪರೀತಪ್ರತ್ಯಯವೂ ರಾಗಾದಿದೋಷವೂ ಇರುವದು ವಿರುದ್ಧವಲ್ಲ- ಎಂದು ಒಂದು ಸಮಾಧಾನವನ್ನು ಕೊಟ್ಟಿದೆ. ಜ್ಞಾನಿಗೆ ವಿಪರೀತಪ್ರತ್ಯಯವು ಉಂಟಾಗುವದೇ ಇಲ್ಲ; ಹಿಂದಕ್ಕೆ ಉಂಟಾಗಿ ದ್ದ ವಿಪರೀತಪ್ರತ್ಯಯಗಳ ಸಂಸ್ಕಾರದಿಂದುಂಟಾದ ಪ್ರತ್ಯಯಾಭಾಸಗಳು ಉಂಟಾಗಬಹುದು ಅಷ್ಟೆ- ಎಂದು ಇನ್ನೊಂದು ಸಮಾಧಾನವನ್ನು ಕೊಟ್ಟಿದೆ. ಜ್ಞಾನವಾದ ಕೂಡಲೆ ಶರೀರವು ಬಿದ್ದುಹೋಗದೆ ಇರುವದಕ್ಕೆ ಈ ಕರ್ಮಶೇಷವೇ ಕಾರಣವೆಂದು ಹೇಳಿ ಜ್ಞಾನದಿಂದ ಅಜ್ಞಾನವೂ ಫಲವು ಪ್ರಾರಂಭವಾಗದ ಕರ್ಮಗಳೂ ನಾಶವಾಗಿಬಿಡುತ್ತವೆ, ಆದ್ದರಿಂದಲೇ ದೇವತೆಗಳೂ ಫಲಪ್ರಾಪ್ತಿಗೆ ಅಡ್ಡಿಮಾಡುವದಿಲ್ಲ - ಎಂದು ಭಾಷ್ಯವನ್ನು ಉಪಸಂಹಾರಮಾಡಿದೆ ಎಂದು ಶಾಸ್ತ್ರಿಗಳವರು ವಿಸ್ತಾರವಾಗಿ ವಿವರಿಸಿ ಹೇಳಿದರು.

ಶ್ರೀಶ್ರೀಗಳವರು ಅನುವಾದಮಾಡುವಾಗ ಪ್ರಾರಬ್ಧಕರ್ಮವು ಉಳಿದಿದೆ ಎಂಬುದು ವ್ಯಾವಹಾರಿಕದೃಷ್ಟಿಯೆಂದು ತಿಳಿಸಿದರು. ನಿಜವಾಗಿ ಆತ್ಮನಲ್ಲಿ ಯಾವ ಕರ್ಮವೂ ಇಲ್ಲವೆಂಬುದೇ ಸಿದ್ಧಾಂತವಾದರೂ ಜ್ಞಾನವುಂಟಾದಮೇಲೂ ಶರೀರವು ಕಾಣಿಸುತ್ತಿರುವದಲ್ಲ! -ಎಂಬ ಆಕ್ಷೇಪಕ್ಕೆ

ಪರಿಹಾರವಾಗಿ ಪ್ರಾರಬ್ಧಕರ್ಮವನ್ನು ಒಪ್ಪಿ, ಅದಕ್ಕೆ ತಕ್ಕಷ್ಟು ಅವಿದ್ಯೆಯೂ ರಾಗಾದಿಗಳೂ ಜ್ಞಾನಿಯಲ್ಲಿಯೂ ಇರಬಹುದೆಂದು ಹೇಳಿದೆ. ಆದರೆ ಇದು ಪರಮಸಮಾಧಾನವಲ್ಲ. ಜ್ಞಾನಿಗೆ ವಿಪರೀತಪ್ರತ್ಯಯದಂತೆ ಯಾವದಾದರೂ ಹುಟ್ಟಿದರೆ ಅದು ವಾಸನಾಬಲದಿಂದ ಆದದ್ದು; ಅದನ್ನು ಕೂಡಲೆ ಜ್ಞಾನದ ವಾಸನೆಯು ಹೊಡೆದುಹಾಕುತ್ತದೆ. ನಮಗೆ ಶರೀರವಿಲ್ಲ, ಕರ್ಮವಿಲ್ಲ, ಕಾಮವಿಲ್ಲ, ಅಜ್ಞಾನವಿಲ್ಲ – ಎಂಬ ತಿಳಿವಳಿಕೆಯೇ ಆತ್ಮಜ್ಞಾನದ ಸ್ವರೂಪವು. ಈ ಜ್ಞಾನವು ಉಂಟಾದಾಗ ಯಾವ ಅಜ್ಞಾನವೂ ಇರುವದಿಲ್ಲ, ಯಾವ ವಿಪರೀತಪ್ರತ್ಯಯದ ಕಾರ್ಯವೂ ಇರುವದೇ ಇಲ್ಲ – ಎಂಬುದೇ ಪರಮಾರ್ಥವು.

★★★★★

# ಜೀವನ ಕರ್ತೃತ್ವ

**20-5-1953**

**ಬ್ರ॥ಶ್ರೀ॥ಎಚ್.ಅನಂತಮೂರ್ತಿಶಾಸ್ತ್ರಿಗಳವರು**

**ಸೂತ್ರಭಾಷ್ಯ 2-3-40**ನೆಯ ಸೂತ್ರದಲ್ಲಿ ಜೀವನ ಕರ್ತೃತ್ವವು ಸ್ವಾಭಾವಿಕವೊ, ಅಲ್ಲವೊ? –ಎಂಬುದನ್ನು ವಿಚಾರಮಾಡಿದೆ. ಹಿಂದಿನ ಅಧಿಕರಣದಲ್ಲಿ ಸಿದ್ಧಾಂತಮಾಡಿರುವದೇನೆಂದರೆ ಜೀವನು ಕರ್ತೃವೇ ಆಗಿರಬೇಕು. ಇಲ್ಲದಿದ್ದರೆ ಶಾಸ್ತ್ರವು ಸಾರ್ಥಕವಾಗುವದಿಲ್ಲ. ಶಾಸ್ತ್ರದಲ್ಲಿ ಕರ್ಮವನ್ನು ಜೀವನಿಗೆ ವಿಧಿಸಿದೆ; ಆತ್ಮಜ್ಞಾನವನ್ನು ಸಂಪಾದಿಸುವದಕ್ಕೆಂದು ಆತ್ಮನಲ್ಲಿ ಚಿತ್ತಸಮಾಧಾನವನ್ನು ಮಾಡಬೇಕೆಂದು ಹೇಳಿದೆ. ಜೀವನು ಕನಸಿನಲ್ಲಿ ಮನಬಂದಂತೆ ವಿಹರಿಸುತ್ತಿರುವನೆಂದಿದೆ; ಅವನು ಸಕಲಕರ್ಮಗಳಿಗೂ ಕರ್ತೃವೆಂದು ಹೇಳಿದೆ; ಜೀವನು ಅರಿಯುವದು ಸಾಧನಗಳ ಅಪೇಕ್ಷೆಯಿಂದಲೇ ಆದರೂ ಅರಿವು ಇವನಿಗೆ ಸೇರಿದ್ದು; ಜೀವನು ಕರ್ತೃವಲ್ಲದಿದ್ದರೆ ಬುದ್ಧಿಯೇ ಕರ್ತೃವೆಂದಾದೀತು. ಈ ಎಲ್ಲಾ ಕಾರಣಗಳಿಂದಲೂ ಜೀವನು ಕರ್ತೃ.

ಪ್ರಕೃತ ಸೂತ್ರದ ಅಭಿಪ್ರಾಯವೇನೆಂದರೆ ಕರ್ತೃತ್ವವು ಸ್ವಾಭಾವಿಕವಾದರೆ ಮೋಕ್ಷವೇ ಇಲ್ಲವೆಂದಾಗುವದು. ಆದ್ದರಿಂದ ಕರ್ತೃತ್ವವು ಉಪಾಧಿನಿಮಿತ್ತವೇ; ಅವಿದ್ಯಾದೃಷ್ಟಿಯಿಂದ ಕರ್ತೃತ್ವವೂ ವಿದ್ಯಾದೃಷ್ಟಿಯಿಂದ ಅಕರ್ತೃತ್ವವೂ ಆತ್ಮನಿಗಿದೆ ಎಂದು ಶಾಸ್ತ್ರದಲ್ಲಿಯೇ ಹೇಳಿದೆ. ಬಡಗಿಯು ತನ್ನ ಆಯುಧಗಳನ್ನುಪಯೋಗಿಸಿ ಕರ್ತೃವೂ ದುಃಖಿಯೂ ಆಗಿರುವಂತೆ ಆತ್ಮನು ಸ್ವಪ್ನಜಾಗರಿತಾವಸ್ಥೆಗಳಲ್ಲಿ ಕರ್ತೃವೂ ದುಃಖಿಯೂ ಆಗಿರುತ್ತಾನೆ; ಸುಷುಪ್ತಿಯಲ್ಲಿ ಕಾರ್ಯಕರಣಗಳ ಸಂಪರ್ಕವಿಲ್ಲದ್ದರಿಂದ ಅಕರ್ತೃವೂ ಸುಖಿಯೂ ಆಗಿರುತ್ತಾನೆ. ಶಾಸ್ತ್ರವು ಯಥಾಪ್ರಾಪ್ತವಾದ ಕರ್ತೃತ್ವವನ್ನೇ ಇಟ್ಟುಕೊಂಡು ಹೊರಟಿರುವದರಿಂದ ಹಿಂದಿನ ಅಧಿಕರಣದ ಹೇತುಗಳು ಅವಿದ್ಯಾದೃಷ್ಟಿಯ ಕರ್ತೃತ್ವವನ್ನೇ ಸಾಧಿಸುತ್ತವೆ - ಎನ್ನಬೇಕು. ಹಿಂದೆ ಹೇಳಿದ ಯಾವ ಹೇತುವಿನಿಂದಲೂ ಆತ್ಮನಲ್ಲಿ ಸ್ವಾಭಾವಿಕವಾದ ಕರ್ತೃತ್ವವು ಸಿದ್ಧವಾಗುವದಿಲ್ಲ; ಅಲ್ಲೆಲ್ಲ ಔಪಚಾರಿಕವಾದ ಕರ್ತೃತ್ವವನ್ನೇ ಹಿಡಿಯಬೇಕು-ಎಂಬುದೇ ಸಿದ್ಧಾಂತ.

ಶ್ರೀಶ್ರೀಗಳು ಅನುವಾದದಲ್ಲಿ ಜೀವನು ಕರ್ತೃವೆಂಬುದು ಲೋಕಸಿದ್ಧವಾದ್ದರಿಂದ ಅದರ ವಿಚಾರವೇನೂ ಇಲ್ಲಿಲ್ಲ; ಶಾಸ್ತ್ರದಲ್ಲಿ ಹೇಳಿರುವ ಕರ್ತೃತ್ವಕ್ಕೇನು ಗತಿ ಎಂಬುದೇ ವಿಚಾರಣೀಯ. ಅದೆಲ್ಲವೂ ಔಪಾಧಿಕವಾಗಿದೆ ಎಂಬುದು ಸಿದ್ಧಾಂತ ಎಂಬುದನ್ನು ಸ್ಪಷ್ಟಪಡಿಸಿದರು.

★★★★★

# ಬ್ರಹ್ಮಜಿಜ್ಞಾಸೆ

**21-5-1953**

**ಬ್ರ॥ಶ್ರೀ॥ ಲಕ್ಷ್ಮೀನರಸಿಂಹಮೂರ್ತಿ**

**ಐತರೇಯ 3-1ರಿಂದ 4**ರವರೆಗಿನ ಭಾಗದ ಭಾಷ್ಯಾರ್ಥವಿವರಣೆ: ಬ್ರಹ್ಮವಿದ್ಯೆಯಿಂದ ಸರ್ವಾತ್ಮಭಾವವು ದೊರೆಯುವದೆಂಬುದನ್ನು ಕೇಳಿದ ಮುಮುಕ್ಷುಗಳು ತಮ್ಮತಮ್ಮಲ್ಲಿ ಹೀಗೆಂದು ಜಿಜ್ಞಾಸೆಮಾಡಲಾರಂಭಿಸಿದರು. ವಾಮದೇವಾದಿಗಳು ಅರಿತುಕೊಂಡು ಮುಕ್ತರಾದರಲ್ಲ, ಆ ಆತ್ಮನು ಯಾರು? ಈ ಕಾರ್ಯಕರಣಸಂಘಾತವನ್ನು ಹೊಕ್ಕಿರುವ ಇಬ್ಬರು ಆತ್ಮರುಗಳ ವಿಷಯದಲ್ಲಿ ಕೇಳಿರುತ್ತೇವೆ; ಆ ಈರ್ವರಲ್ಲಿ ನಾವು ಯಾರನ್ನು ಆತ್ಮನೆಂದು ಅರಿತುಕೊಳ್ಳಬೇಕು?

ಹೀಗೆಂದು ವಿಚಾರಿಸುವಲ್ಲಿ ಅವರಿಗೆ ಹೀಗೆಂಬ ನಿಶ್ಚಯವುಂಟಾಯಿತು; ಯಾವದರಿಂದ ಕಾಣುವದು, ಕೇಳುವದು, ಮೂಸುವದು, ಮಾತನಾಡುವದು, ಸವಿಯುವದು-ಮುಂತಾದವುಗಳು ಆಗುತ್ತಿರುವವೋ, ಯಾವದರಿಂದ ಅರಿಯುವದು, ನೆನಪಿಡುವದು - ಮುಂತಾದವುಗಳು ಆಗುತ್ತಿರುವವೋ, ಅದು ಬ್ರಹ್ಮವಲ್ಲ. ಅದು ಕಾಲುತುದಿಯಿಂದ ಈ ಶರೀರವನ್ನು ಹೊಕ್ಕಿತೆಂದು ಹೇಳಲಾಗಿದೆ; ಆದರೆ ಯಾವ ಪ್ರಜ್ಞಾನಸ್ವರೂಪವನಾದ ಆತ್ಮನು ಬೈತಲೆಯನ್ನು ಸೀಳಿಕೊಂಡು ಶರೀರವನ್ನು ಹೊಕ್ಕನೆಂದು ಹೇಳಿದೆಯೋ ಆ ಅರಿಯುವಾತನಾದ ಆತ್ಮನಾಗಿರುವ ತತ್ತ್ವವೇ ಬ್ರಹ್ಮವು. ಈ ಪ್ರಜ್ಞಾನಸ್ವರೂಪನಾದ ಬ್ರಹ್ಮವೇ ಬ್ರಹ್ಮಾದಿ ದೇವತೆಗಳೂ ಪಂಚಮಹಾಭೂತಗಳೂ ಸ್ಥಾವರಜಂಗಮವೆಲ್ಲವೂ ಆಗಿರುತ್ತದೆ. ಆ ಪ್ರಜ್ಞಾನದಿಂದಲೇ ಎಲ್ಲರೂ ಅರಿಯುತ್ತಾರೆ. ಅದರಲ್ಲಿಯೇ ಎಲ್ಲವೂ ನಿಂತಿರುತ್ತವೆ, ಅದೇ ಬ್ರಹ್ಮವು. ಆ ಪ್ರಜ್ಞಾನರೂಪಬ್ರಹ್ಮದ ಅರಿವಿನಿಂದಲೇ ಹಿಂದಿನ ಜ್ಞಾನಿಗಳು ಈ ಲೋಕವನ್ನು ದಾಟಿ ಅಮೃತರಾದರು. ಇದು ಉಪನಿಷದ್ಭಾಷ್ಯದ ಸಾರಾಂಶವು.

ಶ್ರೀಗಳವರು ಐತರೇಯೋಪನಿಷತ್ತಿನಲ್ಲಿ ಆಚಾರ್ಯರ ಭಾಷ್ಯವು ಉಪಲಬ್ಧವಾಗಿರುವ ಮೂರು ಅಧ್ಯಾಯಗಳ ಭಾಗದ ಹಿಂದಿನ ಮೂರು

ಅಧ್ಯಾಯಗಳಲ್ಲಿ ಪ್ರಾಣನ ಮಹಿಮೆಯನ್ನು ವರ್ಣಿಸಿರುವ ರೀತಿಯನ್ನೂ ಅಲ್ಲಿ ಬಂದಿರುವ ಪ್ರಾಣಸಂವಾದವನ್ನೂ ವಿವರಿಸಿಹೇಳಿದ ಬಳಿಕ ಸಮಷ್ಟಿರೂಪನಾಗಿರುವ ಪ್ರಾಣನನ್ನೇ ಅಥವಾ ಹಿರಣ್ಯಗರ್ಭನನ್ನೇ ಆ ಹಿಂದಿನ ಭಾಗದಲ್ಲಿ ವರ್ಣಿಸಿರುತ್ತದೆ ಎಂದು ನೆನಪುಕೊಟ್ಟರು. ಆ ಪ್ರಾಣವೇ ಕರಣಾತ್ಮನಾಗಿ ಎಲ್ಲಾ ಜೀವರುಗಳಲ್ಲಿಯೂ ಬೇರೆಬೇರೆಯಾಗಿ ಪ್ರವಿಭಕ್ತನಾಗಿರುತ್ತಾನೆ. ಅವನ ಉಪಾಸನೆಯಿಂದ ಆಗುವ ದೇವತಾಪ್ಯಯವೆಂಬ ಫಲವೇ ಜ್ಞಾನಕರ್ಮಸಮುಚ್ಚಯದಿಂದ ದೊರೆಯುವ ಪರಮಗತಿಯು. ಇದಕ್ಕಿಂತ ಬೇರೆಯಾಗಿ ವಸ್ತುತಂತ್ರವಾದ ಜ್ಞಾನದಿಂದ ಸಿಕ್ಕುವ ಸದ್ಯೋಮುಕ್ತಿಯನ್ನೇ ಈ ಮೂರು ಅಧ್ಯಾಯಗಳಲ್ಲಿ ಹೇಳಿರುತ್ತದೆ ಎಂದು ಭಾಷ್ಯದ ಅವತರಣಿಕೆಯಲ್ಲಿ ಹೇಳಿರುವದನ್ನು ತಿಳಿಸಿದರು. ಶರೀರ ಪರಿಚ್ಛಿನ್ನವಾದ ದೃಷ್ಟಿಯಿಂದ ನೋಡಿದರೆ ಪ್ರಾಣನೇ ನಮ್ಮ ಆತ್ಮನೆಂಬ ಭ್ರಾಂತಿಯಾಗುತ್ತದೆ. ಕಾರ್ಯಕರಣಸಂಘಾತದಲ್ಲಿ ಆಗುತ್ತಿರುವ ವ್ಯಾಪಾರಗಳೆಲ್ಲ ಕರಣರೂಪನಾದ ಪ್ರಾಣನದೇ; ಅವನು ಜ್ಞಾನಕ್ರಿಯಾಶಕ್ತಿಗಳುಳ್ಳವನು. ಅವನನ್ನೇ ಕಾಲುತುದಿಯಿಂದ ಶರೀರವನ್ನು ಹೊಕ್ಕನು ಎಂದು ಶ್ರುತಿಯಲ್ಲಿ ವಿವರಿಸಿರುವದು. ಆತ್ಮನೆಂದರೆ ವ್ಯಾಪಿಸಿರುವವನು, ಅನುಭವಿಸುವವನು, ಸಂತತನಾಗಿರುವವನು - ಆಪ್ನೋತೇರತ್ತೇರತತೇರ್ವಾ - ಎಂಬುದು ಶಬ್ದ ವ್ಯುತ್ಪತ್ತಿಯಿಂದ ತಿಳಿದುಬರುತ್ತದೆ. ಗೌಣಾರ್ಥದಲ್ಲಿ ಪ್ರಾಣನು ಆತ್ಮನಾದರೂ ಪ್ರಾಣನನ್ನೂ ವ್ಯಾಪಿಸಿಕೊಂಡು ಎಲ್ಲವನ್ನೂ ತನ್ನ ಸ್ವರೂಪ ಚೈತನ್ಯದಿಂದ ಬೆಳಗುತ್ತಾ ಅಖಂಡಸ್ವರೂಪನಾಗಿರುವ ನಿರ್ವಿಶೇಷಪರಮಾತ್ಮನೇ ನಿಜವಾಗಿ ಆತ್ಮನು. ಅವನು ಪ್ರಾಣಕ್ಕೂ ಪ್ರಾಣನು. ಪ್ರಾಣನು ಭೃತ್ಯನಂತೆ ಕಾಲುಕಡೆಯಿಂದ ಶರೀರವನ್ನು ಹೊಕ್ಕರೆ ಆತ್ಮನು ಮೂರ್ಧದ್ವಾರದಿಂದ ಯಜಮಾನನಂತೆ ಹೊಕ್ಕಿರುತ್ತಾನೆಂದು ಶ್ರುತಿಯಲ್ಲಿ ವರ್ಣಿಸಿರುವದಕ್ಕೆ ಇದೇ ಕಾರಣ. ಆತ್ಮನು ಪ್ರಜ್ಞಾತೃವೆಂದರೆ ಪ್ರಜ್ಞಾನಕ್ರಿಯೆಯ ಕರ್ತೃವಲ್ಲ, ಪ್ರಜ್ಞಾನಸ್ವರೂಪನು; ಆ ರೂಪದಿಂದಿರುವದೇ ಬ್ರಹ್ಮವು-ಎಂದು ತಿಳಿಸಿಕೊಟ್ಟರು.

★★★★★

# ಪ್ರಕೃತಿಸ್ಥತ್ವ

**22-5-1953**

**ಶ್ರೀಶ್ರೀಗಳವರು**

**ಗೀತಾಭಾಷ್ಯದ 14ನೆಯ ಅಧ್ಯಾಯದಲ್ಲಿ 22ರಿಂದ 27ನೆಯ ಶ್ಲೋಕಗಳ ಭಾಷ್ಯಾರ್ಥವಿವರಣೆ:** ಹದಿನಾಲ್ಕನೆಯ ಅಧ್ಯಾಯಕ್ಕೆ ಆಚಾರ್ಯರು ಮೂರು ಬಗೆಯಲ್ಲಿ ಸಂಬಂಧವನ್ನು ಬರೆದಿರುತ್ತಾರೆ. ಮೂರನೆಯದನ್ನು ಮಾತ್ರ ಇಲ್ಲಿ ವಿಚಾರಕ್ಕೆ ತಿಗೆದುಕೊಳ್ಳೋಣ. ಪ್ರಕೃತಿಸ್ಥತ್ವವೆಂಬ ಅವಿದ್ಯೆಯೂ ಗುಣಗಳಲ್ಲಿ ಸಂಗವನ್ನಿಡುವದೆಂಬ ಕಾಮವೂ ಸಂಸಾರಕಾರಣವು ಎಂದು ಹಿಂದಿನ ಅಧ್ಯಾಯದಲ್ಲಿ ಹೇಳಿರುತ್ತದೆ. ಗುಣಗಳಲ್ಲಿ ಸಂಗವೆಂದರೆ ಹೇಗೆ? ಅವುಗಳೂ ಬಂಧಕವಾಗಿರುವದು ಹೇಗೆ? ಅವುಗಳಿಂದ ಬಿಡುಗಡೆ ಹೇಗೆ? ಹಾಗೆ ಮುಕ್ತನಾದವನ ಲಕ್ಷಣವೇನು ? -ಎಂಬಿಷ್ಟನ್ನು ತಿಳಿಸುವದಕ್ಕೆ ಈ ಅಧ್ಯಾಯವು ಬಂದಿರುತ್ತದೆ.

ಈವರಗೆ ಗುಣಗಳ ಸ್ವಭಾವವನ್ನೂ ಅವು ಬಂಧವಾಗಿರುವ ರೀತಿಯನ್ನೂ ಹೇಳಿದ್ದಾಗಿದೆ. ಗುಣಗಳಿಗಿಂತ ಬೇರೆ ಕರ್ತೃವಿಲ್ಲ ಎಂದು ಯಾವಾಗ ಸಾಕ್ಷಿಯಾಗಿ ಅರಿತುಕೊಳ್ಳುತ್ತಾನೋ ಗುಣಕ್ಕಿಂತ ಸಾಕ್ಷಿರೂಪವು ದೂರವಿರುತ್ತದೆ ಎಂದೂ ಅರಿತುಕೊಳ್ಳುತ್ತಾನೋ ಆಗ ಪರಮಾತ್ಮಭಾವವನ್ನು ಪಡೆಯುತ್ತಾನೆ ಎಂದೂ ಹೇಳಿದ್ದಾಗಿದೆ. ಗುಣಗಳು ಕರ್ತೃ ಎಂಬ ಸಾಂಖ್ಯರ ಅಭಿಪ್ರಾಯದಲ್ಲೇನೂ ಇಲ್ಲಿ ತಾತ್ಪರ್ಯವಿಲ್ಲ ; ಆತ್ಮನು ಕರ್ತೃವಲ್ಲವೆಂಬಿಷ್ಟರಲ್ಲಿಯೇ ತಾತ್ಪರ್ಯ. ಗುಣಗಳು ಮೂರನ್ನೂ ದಾಟದಾಗ ಜನ್ಮಾದಿದುಃಖಗಳಿಂದ ಮುಕ್ತನಾಗಿ ಅಮೃತತ್ವವನ್ನು ಹೊಂದುತ್ತಾನೆ ಎಂದೂ ಹೇಳಿದ್ದಾಗಿದೆ. ದುಃಖದಿಂದ ಮುಕ್ತನಾಗುವದು, ಪರಮಾತ್ಮಪ್ರಾಪ್ತಿಯಾಗುವದು -ಎಂದು ಎರಡು ಬೇರೆಬೇರೆ ಫಲಗಳೆಂದು ಅರಿಯಬಾರದು. ಗುಣಾತೀತನೇ ಭಗವದ್ಭಾವವನ್ನು ಪಡೆಯುವವನು ಎಂದಿಷ್ಟೇ ಇಲ್ಲಿ ಹೇಳಿರುವದು. ಈ ಸಂರ್ಭದಲ್ಲಿ ಅರ್ಜುನನು ಗುಣಾತೀತನ ಲಕ್ಷಣವನ್ನು ಕೇಳಿರುತ್ತಾನೆ. ಇದು ಪ್ರಕೃತವಿಚಾರಕ್ಕೆ ಸಂಬಂಧ.

ಗುಣಗಳಿಂದ ಬಿಡುಗಡೆಯಾಗಬೇಕು ಎಂದು ಹಂಬಲಿಸುವವನು ಗುಣಬದ್ಧನು; ಗುಣಗಳು ಬರಲಿ ಹೋಗಲಿ, ತನ್ನ ಸ್ವರೂಪದಲ್ಲಿ ತಾನಿರುವವನು ಗುಣಾತೀತನು. ಸುಖದುಃಖಗಳಲ್ಲಿ ಸಮನಾಗಿರಬೇಕು; ಸಮಾಧಿಸುಖವೇ ಬಂದರೂ ಅದೂ ಗುಣಗಳ ಕೃತ್ಯವೇ ಎಂಬವರೆಗೆ ಅರಿವು ಹೋಗಿರಬೇಕು. 'ಗುಣಗಳು ತಮ್ಮತಮ್ಮ ವ್ಯಾಪಾರವನ್ನು ಮಾಡುತ್ತವೆ ಎಂದು ಉದಾಸೀನನಾಗಿ ಇರಬೇಕು' ಎಂದರೇನು? ಅಕ್ಷರಾರ್ಥವನ್ನು ಹಿಡಿದರೆ ಗುಣಗಳಿಗೆ ಅಷ್ಟರಮಟ್ಟಿಗಾದರೂ ಬೆಲೆಯನ್ನು ಕೊಟ್ಟಂತೆ ಆಗುವದು. ಆದ್ದರಿಂದ ಈ ಗುಣಗಳೆಲ್ಲ ಆವಿದ್ಯಕವಾದ್ದರಿಂದ ಇದಕ್ಕೇನೂ ಬೆಲೆಯಿಲ್ಲ ಎಂದು ತಟಸ್ಥನಾಗಿರುವವನೇ ಗುಣಾತೀತನು. ದೃಷ್ಟಾದೃಷ್ಟಾರ್ಥಗಳಿಗಾಗಿ ಯಾವ ಪ್ರಯತ್ನವನ್ನೂ ಮಾಡದೆ ಇರುವವನು ಗುಣಾತೀತನು; ಇವನನ್ನೇ ಇಲ್ಲಿ ಸರ್ವಾರಂಭಪರಿತ್ಯಾಗಿ-ಎಂದು ಕರೆದಿರುವದು. ಸಾಧ್ಯಸಾಧನಗಳೆಲ್ಲವನ್ನೂ ಆತ್ಮನಾಗಿ ಕಂಡವನೇ ಹೀಗಿರುವದಕ್ಕೆ ಶಕ್ತನು. ಈ ಲಕ್ಷಣಗಳೆಲ್ಲವೂ ಗುಣಾತೀತರಿಗೆ ಸ್ವಭಾವದಿಂದ ಇರುವವು; ಮುಮುಕ್ಷುಗಳು ಶಾಸ್ತ್ರಾಚಾರ್ಯರ ಉಪದೇಶದಿಂದ ಸಾಧನವನ್ನು ಮಾಡಿ ಅಳವಡಿಸಿಕೊಳ್ಳಬೇಕಾಗಿರುತ್ತದೆ. ಇವುಗಳಲ್ಲೆಲ್ಲ ಭಗವಂತನಲ್ಲಿ ಅವ್ಯಭಿಚರಿತ ಭಕ್ತಿಯಿರುವವೆಂಬುದು ಮುಖ್ಯಸಾಧನವು. ಅಂಥ ಭಕ್ತಿಯನ್ನು ಸಂಪಾದಿಸಿಕೊಂಡವರಿಗೆ ಪರಮೇಶ್ವರನ ಅನುಗ್ರಹದಿಂದ ಗುಣಗಳನ್ನು ಮೀರಿ ಪರಮಾತ್ಮನಲ್ಲಿಯೇ ನೆಲೆನಿಲ್ಲುವದು ಸುಲಭವಾಗುತ್ತದೆ ಎಂಬುದು ಭಾಷ್ಯದ ಸಾರವು.

★★★★★

# ಸತ್ಯದ ಸತ್ಯವು

**23-5-1953**

**ಬ್ರ॥ಶ್ರೀ॥ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

**ಸೂತ್ರಭ್ಯಾಷದ 2-3-22ರ ಭಾಷ್ಯಾರ್ಥ**ವಿವರಣೆ: ಬ್ರಹ್ಮದ ಎರಡು ರೂಪಗಳನ್ನು ತಿಳಿಸಿದ ಬಳಿಕ ಬೃಹದಾರಣ್ಯಕ ವಾಕ್ಯವೊಂದು ಬ್ರಹ್ಮವನ್ನು 'ನೇತಿ ನೇತಿ' ಎಂದು ತಿಳಿಸಿರುತ್ತದೆ. ಇಲ್ಲಿ 'ನೇತಿ ನೇತಿ' ಎಂದು ಎರಡು ಸಲ ಹೇಳಿರುವದರಿಂದ ಪ್ರಪಂಚವನ್ನೂ ಬ್ರಹ್ಮವನ್ನೂ ಇಲ್ಲವೆಂದಿವೆ -ಎಂದು ಒಂದು ಬಗೆಯ ಅರ್ಥವನ್ನು ಪೂರ್ವಪಕ್ಷಿಯು ತೆಗೆದಿರುತ್ತಾನೆ. ಇದರಿಂದ ಶೂನ್ಯವಾದಕ್ಕೇ ವೇದವು ಬೆಂಬಲವನ್ನು ಕೊಟ್ಟಂತೆ ಅಗುತ್ತದೆ. ಬ್ರಹ್ಮವು ವಾಕ್ಕಿಗೂ ಮನಸ್ಸಿಗೂ ಆಚೆಯಿರುವದೆಂದಿರುವದರಿಂದ ಅದನ್ನೇ ಇಲ್ಲವೆಂದಿರಬಹುದು ಎಂದು ಮತ್ತೊಂದು ಅರ್ಥವನ್ನು ಪೂರ್ವಪಕ್ಷಿ ಹೇಳುತ್ತಾನೆ. ಇದರಂತೆ ಬ್ರಹ್ಮವೇ ಇಲ್ಲವೆಂಬ ನಾಸ್ತಿಕವಾದವು ಸಿದ್ಧವಾಗುತ್ತದೆ. ಆದರೆ ತೋರುವದನ್ನು ಇದಲ್ಲ ಎನ್ನಬೇಕಾದರೆ ಇಂಥದ್ದಿದು ಎಂದು ನಿಶ್ಚಯಿಸಬೇಕಾಗುವದರಿಂದ ಶೂನ್ಯವಾದವು ಯುಕ್ತಿಬಾಹ್ಯವಾಗಿರುತ್ತದೆ. ಬ್ರಹ್ಮವು ಎಲ್ಲರ ಆತ್ಮನೇ ಆಗಿರುವದರಿಂದ ಅದನ್ನು ಇಲ್ಲವೆನ್ನುವದೂ ಆಗುವದಿಲ್ಲ. ಆದ್ದರಿಂದ ಬ್ರಹ್ಮದಲ್ಲಿ ತೋರುವದನ್ನೆಲ್ಲ ನೇತಿ ಎಂಬ ಮಾತಿನಿಂದ ಅಲ್ಲಗಳೆದಿದೆ - ಎಂದೇ ನಿಶ್ಚಯಿಸಬೇಕು. ಆದ್ದರಿಂದಲೇ ಮುಂದೆ ಸತ್ಯದ ಸತ್ಯವು ಎಂದು ಬ್ರಹ್ಮವನ್ನು ವರ್ಣಿಸಿದೆ -ಎಂಬುದು ಸೂತ್ರ ಭಾಷ್ಯದ ಸಾರವು.

ಶ್ರೀಗಳು ಅನುವಾದದಲ್ಲಿ ಪ್ರಪಂಚಕ್ಕೆಲ್ಲ ಸಾರವು ಬ್ರಹ್ಮವಾದ್ದರಿಂದ ಪ್ರಪಂಚದ ಸತ್ಯತ್ವವೂ ಬ್ರಹ್ಮಕ್ಕೆ ಸೇರಿದ್ದೇ ಎಂದು ಶ್ರುತಿಯಲ್ಲಿ ದೃಢಪಡಿಸಿದೆ ಎಂಬಿದನ್ನು ಸ್ಪಷ್ಟಪಡಿಸಿದರು.

★★★★★

# ಮೂರು ಧರ್ಮಸ್ಕಂಧಗಳು

**24-05-1953**

**ಬ್ರ॥ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

**ಛಾಂದೋಗ್ಯೋಪನಿಷತ್ತಿನ 2-23-1ರ ಶ್ರುತಿಯಲ್ಲಿ** ಹೀಗೆಂದಿದೆ: ಧರ್ಮಸ್ಕಂಧಗಳು ಮೂರು - ಯಜ್ಞ, ಅಧ್ಯಯನ, ದಾನ - ಎಂಬುದು ಒಂದನೆಯದು, ತಪಸ್ಸೆಂಬುದು ಎರಡನೆಯದು, ಆಚಾರ್ಯಕುಲದಲ್ಲಿದ್ದು ಶರೀರವನ್ನು ಸವೆಯಿಸುತ್ತಿರುವ ಬ್ರಹ್ಮಚಾರಿಯು ಮೂರನೆಯವನು- ಈ ಎಲ್ಲರಿಗೂ ಪುಣ್ಯಲೋಕಪ್ರಾಪ್ತಿಯಾಗುತ್ತದೆ; ಬ್ರಹ್ಮಸಂಸ್ಥನಿಗೆ ಅಮೃತತ್ವವು ಸಿಕ್ಕುವದು.

ಇಲ್ಲಿ ಓಂಕಾರದ ಉಪಾಸನೆಯನ್ನು ಹೊಗಳುವದಕ್ಕಾಗಿ ಸಾಮಪ್ರಕರಣದಲ್ಲಿ ಅದನ್ನು ಹೇಳಿರುತ್ತದೆ. ನೈಷ್ಠಿಕಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ- ಎಂಬ ಮೂವರಿಗೆ ಪುಣ್ಯಲೋಕವು ಪ್ರಾಪ್ತವಾಗುತ್ತದೆ; ಆದರೆ ಓಂಕಾರರೂಪ ಬ್ರಹ್ಮದಲ್ಲಿ ನೆಲೆನಿಂತಿರುವ ಪರಿವ್ರಾಜಕನಿಗೆ ಅಮೃತತ್ತ್ವವು ಪ್ರಾಪ್ತವಾಗುವದು ಎಂಬುದು ವಾಕ್ಯದ ಅರ್ಥ. ಇಲ್ಲಿ ಅಮೃತತ್ವವನ್ನು ಪುಣ್ಯಲೋಕಗಳಿಗಿಂತ ಬೇರೆಯಾಗಿಯೇ ಹೇಳಿರುವದರಿಂದ ಅದು ಬ್ರಹ್ಮಲೋಕಪ್ರಾಪ್ತಿ ರೂಪವಾದ ಆಪೇಕ್ಷಿಕಮುಕ್ತಿಯಲ್ಲ, ಮುಖ್ಯಮುಕ್ತಿಯೇ ಎಂದು ತಿಳಿಯಬೇಕು. ಹೀಗೆ ಇತರ ಆಶ್ರಮಗಳಿಗೆ ಆಗುವ ಫಲವನ್ನು ಅನುವಾದಮಾಡಿ ಪ್ರಣವೋಪಾಸಕನಾದ ಪರಿವ್ರಾಜನಿಕನಿಗೆ ಮುಖ್ಯಮುಕ್ತಿಯೇ ಸಿಕ್ಕುವದೆಂದು ಅದನ್ನು ಹೊಗಳಿರುತ್ತದೆ.

ಪ್ರಣವೋಪಾಸನೆಯ ಸ್ತುತ್ಯರ್ಥವಾದರೂ ಈ ವಾಕ್ಯದಲ್ಲಿ ಬ್ರಹ್ಮಸಂಸ್ಥನಿಗೆ ಅಮೃತತತ್ವವುಂಟಾಗುವದೆಂದು ಹೇಳುವದರಲ್ಲಿ ತಾತ್ಪರ್ಯವಿದೆ; ಬ್ರಹ್ಮಸಂಸ್ಥನೆಂದರೆ ಸರ್ವಕರ್ಮಗಳನ್ನೂ ಪರಿತ್ಯಜಿಸಿರುವ ಪರಮಹಂಸನೇ ಎಂಬುದು ಭಾಷ್ಯಕಾರರ ಮತವು. 'ತಪಸ್ಸೇ ಎರಡನೆಯದು' - ಎಂಬಲ್ಲಿ

ಸಂನ್ಯಾಸಿಯನ್ನೂ ಸೇರಿಸಿದೆಯೆಂದೂ ನಾಲ್ಕೂ ಆಶ್ರಮದವರಲ್ಲಿ ಯಾವನು ಪ್ರಣವ ಸೇವಿಯೋ ಅವನಿಗೆ ಅಮೃತತ್ವವು ದೊರಕುವದೆಂದೂ ಕೆಲವರು ವಾದಿಸಿದ್ದರು. ಅವರ ಅಭಿಪ್ರಾಯದಂತೆ ಜ್ಞಾನಕರ್ಮಸಮುಚ್ಚಯವೇ ಮೋಕ್ಷಕ್ಕೆ ಕಾರಣವು; ಕರ್ಮವಿಲ್ಲದ ಆಶ್ರಮವೇ ಇಲ್ಲ. ಬ್ರಹ್ಮಸಂಸ್ಥ ಎಂಬ ಶಬ್ದದಿಂದ ಪರಿವ್ರಾಜಕನನ್ನೇ ಹೇಳಿದೆ ಎಂದಾದರೆ ಆಶ್ರಮಮಾತ್ರದಿಂದಲೇ ಮುಕ್ತಿಯಾಗುವದೆಂದಾದೀತು ಎಂಬುದು ಅವರ ಭಾವ. ಆದರೆ ಆಚಾರ್ಯರು ಬ್ರಹ್ಮಸಂಸ್ಥನಾಗಿರುವದೆಂದರೆ ಬ್ರಹ್ಮದಲ್ಲಿಯೇ ನಿಂತಿರುವದು; ಕರ್ಮವನ್ನು ಮಾಡುತ್ತಾ ಬ್ರಹ್ಮದಲ್ಲಿಯೂ ನೆಲೆನಿಲ್ಲುವದು ಆಗದ ಮಾತು. ಬ್ರಹ್ಮವೇ ಎಲ್ಲವೂ ಎಂಬ ಬ್ರಹ್ಮಾತ್ಮೈಕತ್ವಪ್ರತ್ಯಯವು ಉಂಟಾದಮೇಲೆ ಯಾವ ಕ್ರಿಯಾಕಾರಕಫಲಭೇದ ಬುದ್ಧಿಯೂ ನಿಲ್ಲುವದಕ್ಕೆ ಅವಕಾಶವಿಲ್ಲವಾದ್ದರಿಂದಲೂ ಮಿಕ್ಕ ಮೂರು ಆಶ್ರಮದವರಿಗೆ ಅವರವರ ಆಶ್ರಮಕರ್ಮವಿರುವದರಿಂದಲೂ ಅತ್ಯಂತವಾಗಿ ಕರ್ಮಗಳನ್ನು ತ್ಯಜಿಸಿರುವ ಪರಮಹಂಸನೇ ಬ್ರಹ್ಮಸಂಸ್ಥನು. ಜ್ಞಾನವಂತನಾದವನೇ ನಿಜವಾದ ಪರಿವ್ರಾಜಕನಾದ್ದರಿಂದ ಆಶ್ರಮಮಾತ್ರದಿಂದ ಮುಕ್ತಿಯಾದೀತೆಂಬ ಭೀತಿಗೆ ಕಾರಣವಿಲ್ಲ, ಓಂಕಾರದರ್ಥವನ್ನು ಮನಗಂಡಿರುವ ಜ್ಞಾನಿಯನ್ನೇ ಪರಮಹಂಸನೆಂದು ನಾವು ಕರೆಯುತ್ತೇವೆ; ಅವನಿಗೇ ಅಮೃತತ್ವವನ್ನು ಇಲ್ಲಿ ಹೇಳಿ ಆ ಮೂಲಕ ಓಂಕಾರದ ಉಪಾಸನೆಯನ್ನು ಹೊಗಳಿದೆ- ಎಂಬುದು ಭಾಷ್ಯದ ಸಾರವು. ಈ ಪಾರಿವ್ರಾಜ್ಯವೊಂದೇ ವೇದೋಕ್ತವಾದದ್ದು; ಯಜ್ಞೋಪವೀತದಂಡಕಮಂಡಲ್ವಾದಿ ಪರಿಗ್ರಹವುಳ್ಳ ಸ್ಮಾರ್ತಸಂನ್ಯಾಸವು ವೇದದಲ್ಲಿ ವಿಹಿತವಾದದ್ದಲ್ಲ- ಎಂಬುದು ಭಾಷ್ಯಕಾರರ ಅಭಿಪ್ರಾಯವು.

ಶ್ರೀಗಳವರು ಅನುವಾದದಲ್ಲಿ ಹೀಗೆಂದರು: ಈ ಪ್ರಸಂಗದಲ್ಲಿ ವಿದ್ವತ್ಸಂನ್ಯಾಸವನ್ನೇ ಪರಾಮರ್ಶಿಸಿದೆ. ನಿಜವಾಗಿ ಅದೇ ಮುಖ್ಯಾರ್ಥದಲ್ಲಿ ಸಂನ್ಯಾಸವು; ಆ ಸಂನ್ಯಾಸಿಗೇ ಮುಖ್ಯಬ್ರಹ್ಮಸಂಸ್ಥತ್ವವು ಹೊಂದುತ್ತದೆ. ವಿರಕ್ತರಾದವರು ಜ್ಞಾನಾಂಗವಾಗಿ ಸಂನ್ಯಾಸಮಾಡಬಹುದೆಂಬುದು ಭಾಷ್ಯಾಂತರದಲ್ಲಿ ಹೇಳಿದೆ. ಆ ವಿವಿದಿಷಾಸಂನ್ಯಾಸಿಗಳಿಗೆ ಯಮನಿಯಮಾದಿಗಳೂ ವಿಹಿತವಾಗಿವೆಯೆಂದೂ ಅವನ್ನು ಬಿಟ್ಟರೆ ಆ ಸನ್ಯಾಸಿಗಳಿಗೆ ಪ್ರತ್ಯವಾಯ

ಉಂಟೆಂದೂ ಆಚಾರ್ಯರು ಅಲ್ಲಿ ಹೇಳಿರುತಾರೆ. ನಿಜವಾದ ಸಂನ್ಯಾಸಿಗಳಿಗೆ ಯಾವ ಕರ್ಮವೂ ಇಲ್ಲ ; ಅವರಿಗೆ ಭಿಕ್ಷಾದಿಗಳಲ್ಲಿಯೂ ನಿಯತಪ್ರವೃತ್ತಿಯಿಲ್ಲ, ಅದು ವಿಹಿತವೆಂಬ ಕಾರಣದಿಂದ ಅವರು ಮಾಡುವದೂ ಇಲ್ಲ. ಯಮಾದಿಗಳನ್ನು ಕೂಡ ಅವರು ಶಾಸ್ತ್ರಚೋದಿತರಾಗಿ ಮಾಡುತ್ತಿರುವದಿಲ್ಲ. ಇಂಥ ಸಂನ್ಯಾಸಿಗಳಿಗೆ ಪ್ರಣವನಿಷ್ಠೆಯಿಂದ ದೊರೆಯುವ ಅಮೃತಫಲವನ್ನು ಹೇಳಿ ಓಂಕಾರೋಪಾಸನೆಯನ್ನು ಹೊಗಳುವದೇ ಪ್ರಕೃತವಾಕ್ಯದ ಗುರಿ.

★★★★★

## ಆಚಾರ್ಯರ ಗುಣಕಥನ

**ತಾ||25-5-1953**

**ಶ್ರೀಶ್ರೀಗಳವರು**

ಲೋಕಕ್ಕೆ ಸುಖಶಾಂತಿಗಳನ್ನುಂಟುಮಾಡಬೇಕೆನ್ನುವವರು ಎರಡು ಬಗೆಯಿಂದ ಜನರಿಗೆ ತಿಳಿವಳಿಕೆಯನ್ನು ಕೊಡುವದಕ್ಕೆ ಯತ್ನಿಸಿರುತ್ತಾರೆ. ಆರ್ಥಿಕದೃಷ್ಟಿಯಿಂದ ಕೊಡುವ ಉಪದೇಶವು ವ್ಯವಹಾರದಲ್ಲಿ ಸ್ವಲ್ಪ ದೂರ ಹೋದರೂ ಕೊನೆಗೆ ದೇಹಾತ್ಮಬುದ್ಧಿಯನ್ನು ಕೊಟ್ಟು ರಾಗದ್ವೇಷಗಳನ್ನು ಬೆಳೆಯಿಸುತ್ತದೆ. ಆದರೆ ಆಧ್ಯಾತ್ಮಿಕದೃಷ್ಟಿಯನ್ನು ಅವಲಂಬಿಸಿ ಮಾಡುವ ಉಪದೇಶವು ಆತ್ಮಪ್ರಧಾನವಾಗಿರುವದರಿಂದ ಇಹಪರಗಳೆರಡರಲ್ಲಿಯೂ ಸುಖಶಾಂತಿಗಳನ್ನು ಕೊಡುತ್ತದೆ. ಈ ದೃಷ್ಟಿಯನ್ನವಲಂಬಿಸಿಯೇ ಆಚಾರ್ಯರು ಉಪದೇಶಮಾಡಿರುತ್ತಾರೆ.

★★★★★

# ಜ್ಞಾನಮಾತ್ರದಿಂದಲೇ ಪರಮಪುರುಷಾರ್ಥಪ್ರಾಪ್ತಿ

**07-05-1954**

**ಶ್ರೀಶ್ರೀಗಳವರು**

**ಮಾಂಡೂಕ್ಯಕಾರಿಕೆಯ ಅಲಾತಶಾಂತಿ ಪ್ರಕರಣದಲ್ಲಿ 91ರಿಂದ 100ರವರೆಗಿನ** ಕಾರಿಕೆಗಳ ಭಾಷ್ಯಾರ್ಥವಿವರಣೆ: ವೇದಾಂತಸಿದ್ಧಾಂತದಲ್ಲಿ ಆತ್ಮವಸ್ತುವಿನ ಜ್ಞಾನಮಾತ್ರದಿಂದಲೇ ಪರಮಪುರುಷಾರ್ಥಪ್ರಾಪ್ತಿಯೆಂದು ಬೋಧಿಸುವ ಅಚಾರ್ಯರ ಸಂಪ್ರದಾಯಕ್ಕೆ ಶ್ರೀಗೌಡಪಾದರವರ ಕಾರಿಕೆಯೊಂದೇ ಆಧಾರವಾಗಿದೆ. ಆಚಾರ್ಯರ ಹಿಂದೆ ವೇದಾಂತಪ್ರಕ್ರಿಯೆಯು ಹೇಗಿತ್ತೆಂಬುದನ್ನು ನಿರ್ಣಯಿಸುವದಕ್ಕೆ ಈ ಗ್ರಂಥವಾದರೂ ಉಪಲಬ್ಧವಾಗಿರುವದು ನಮ್ಮಗಳ ಸುದೈವ. ಈ ಸಿದ್ಧಾಂತವನ್ನು ಸಂಗ್ರಹವಾಗಿ ತಿಳಿಸುವ ಮಾಂಡೂಕ್ಯವನ್ನು ಮೂಲವಾಗಿಟ್ಟುಕೊಂಡು ಶ್ರೀಗೌಡಪಾದರು ತಮ್ಮ ಪ್ರಕ್ರಿಯೆಯ ವಿಶೇಷಗಳನ್ನೆಲ್ಲ ಹೊರಗೆಡಹಿರುತ್ತಾರೆ. ಬೌದ್ಧರ ಪಾರಿಭಾಷಿಕಶಬ್ದಗಳನ್ನೇ ಬೇರೆಯ ಅರ್ಥದಲ್ಲಿ ಪ್ರಯೋಗಿಸಿ ಬೌದ್ಧರ ಪ್ರಕ್ರಿಯೆಗೂ ವೇದಾಂತಪ್ರಕ್ರಿಯೆಗೂ ಇರುವ ತಾರತಮ್ಯವನ್ನು ಪ್ರಕಟಿಸಿರುವದು ಗೌಡಪಾದಕಾರಿಕೆಯ ಇನ್ನೊಂದು ವಿಶೇಷ.

ಈ ಗ್ರಂಥದಲ್ಲಿ ಆಗಮ, ವೈತಥ್ಯ, ಅದ್ವೈತ, ಅಲಾತಶಾಂತಿ- ಎಂಬ ನಾಲ್ಕು ಪ್ರಕರಣಗಳಿವೆ. ಆಗಮಪ್ರಕರಣದಲ್ಲಿ ಆಗಮದಿಂದ ಆತ್ಮತತ್ತ್ವವನ್ನು ಉಪದೇಶಿಸುವ ಪ್ರಕಾರವನ್ನು ತಿಳಿಸಿದೆ. ಆತ್ಮನು ಮಾತಿಗೂ ಮನಸ್ಸಿಗೂ ವಿಷಯನಲ್ಲದ್ದರಿಂದ ಅವನನ್ನು ತಿಳಿಸುವದು ಹೇಗೆ? - ಎಂದು ಕೆಲವರು ಶಂಕಿಸುವರು. ಆದರೆ ಶ್ರುತಿಯು ಆತ್ಮನದಲ್ಲದ ಧರ್ಮವನ್ನು ಅಲ್ಲಗಳೆದು ಸ್ವಯಂಸಿದ್ಧವಾದ ಆತ್ಮನಲ್ಲಿಯೇ ನೆಲೆನಿಲ್ಲುವಂತೆ ಒಂದು ಉಪದೇಶಕ್ರಮವನ್ನು ಸ್ವೀಕರಿಸಿರುತ್ತದೆ. ಇದಕ್ಕೆ ಆಗಮವೆಂದು ಹೆಸರು. ಅವಸ್ಥಾತ್ರಯವೂ ಅವಸ್ಥೆಯನ್ನು ಅನುಭವಿಸುವ ರೂಪವೂ ನಮ್ಮ ಆತ್ಮನಿಗೆ ಸೇರಿದ್ದಲ್ಲವೆಂದು ತಿಳಿಯಿಸಿಕೊಟ್ಟು 'ಸ ಆತ್ಮಾ ಸ ವಿಜ್ಞೇಯಃ' ಇವನೇ ಆತ್ಮನು ಇವನನ್ನೇ ಅರಿತುಕೊಳ್ಳಬೇಕು - ಎಂದು ಉಪದೇಶಿಸಿರುವದರಿಂದ ವಾಙ್ಮನಸ್ಸುಗಳಿಗೆ ಅವಿಷಯನೆಂದೇ

ನಮ್ಮ ಆತ್ಮನೆಂದು ಅತದ್ಧರ್ಮನಿಷೇಧಕ್ಕೆ ಅವಧಿಯಾದ ನಮ್ಮ ಸ್ವರೂಪವನ್ನೇ ತಿಳಿಸಿಕೊಟ್ಟಂತಾಗುತ್ತದೆ.

ಆಗಮಮಾತ್ರದಿಂದಲೇ ತಿಳಿದುಕೊಳ್ಳುವ ಉತ್ತಮಾಧಿಕಾರಿಗಳಿಗೆ ಮುಂದಿನ ಮೂರು ಪ್ರರಣಗಳ ಅವಶ್ಯಕತೆಯಿರುವದೇ ಇಲ್ಲ. ಆದರೆ ಜಾಗ್ರದವಸ್ಥೆಯೇ ಸತ್ಯವೆಂಬ ಅಭಿನಿವೇಶವುಳ್ಳವರಿಗಾಗಿ ಜಾಗ್ರತ್ಸ್ವಪ್ನಗಳಿಗೆ ಯಾವ ತಾರತಮ್ಯವೂ ಇಲ್ಲವೆಂದು ತಿಳಿಸುವ ವೈತಥ್ಯಪ್ರಕರಣವು ಬೇಕು. ದ್ವೈತದಂತೆ ಅದ್ವೈತಾತ್ಮನೂ ಮಿಥ್ಯೆಯಾಗಬಾರದೇಕೆ ?- ಎಂಬ ಶಂಕೆಯುಳ್ಳವರಿಗೆ ಆತ್ಮಸತ್ಯತ್ವವನ್ನು ಭದ್ರಪಡಿಸುವದಕ್ಕಾಗಿ ಅದ್ವೈತಪ್ರರಣವೂ ಬೇಕಾಗುವದು. ಮಿಕ್ಕವಾದಿಗಳೂ ನಿಮ್ಮಂತೆಯೇ ತಮ್ಮತಮ್ಮ ಸಿದ್ಧಾಂತಗಳನ್ನು ಸಾಧಿಸುವರಲ್ಲ! - ಎಂಬ ಶಂಕೆಗೆ ಉತ್ತರವಾಗಿ ಅಲಾತಶಾಂತಿ ಪ್ರಕರಣವನ್ನು ಬರೆದಿದೆ. ದ್ವೈತಿಗಳಾದ ಸಾಂಖ್ಯವೈಶೇಷಿಕಜೈನಬೌದ್ಧಾದಿಗಳು ಒಬ್ಬರನ್ನೊಬ್ಬರು ವಾದಿಸುತ್ತಾ ಒಬ್ಬರಮೇಲೊಬ್ಬರು ಹಾಕುತ್ತಿರುವ ತರ್ಕ ದೋಷಗಳು ಅಪರಿಹಾರ್ಯವೇ ಆಗಿರುವದರಿಂದ ಅವರ ತರ್ಕದಿಂದಲೇ ಅಜಾದ್ವಯಾತ್ಮತತ್ತ್ವವು ಸಿದ್ಧವಾಗುತ್ತದೆ ಎಂದು ತಿಳಿಸಿ ನಾಮರೂಪಾತ್ಮಕವಾದ ಜಗತ್ತು ಪರಮಾರ್ಥವಾಗಿ ಅನಾಮರೂಪವಾಗಿರುವ ಓಂಕಾರ ಅಥವಾ ಬ್ರಹ್ಮ - ಎಂದು ತಿಳಿಸುವ ಉಪನಿಷತ್ತಿನ ಅರ್ಥವೇ ಈ ಕೊನೆಯ ಪ್ರಕರಣದಲ್ಲಿದೆ. ಅಲಾತ (ಕೊಳ್ಳಿಯನ್ನು ತಿರುಗಿಸಿದರೆ ಕಂಡು, ತಿರುಗಿಸದೆ ಇದ್ದಾಗ ಅಡುಗುವ ಆಕಾರದ್ವೈತಗಳ ಮಿಥ್ಯಾತ್ವವನ್ನು ತಿಳಿಸುವ) ದೃಷ್ಟಾಂತದಿಂದ ಈ ಅರ್ಥವನ್ನು ಮನಗಾಣಿಸುವದರಿಂದ ಈ ಪ್ರಕರಣಕ್ಕೆ ಅಲಾತಶಾಂತಿ ಎಂಬ ಹೆಸರನ್ನು ಕೊಟ್ಟಿದೆ.

ಪ್ರಕೃತ ಕಾರಿಕೆಗಳ ಸಂಬಂಧವೇನೆಂದರೆ, ಹಿಂದಿನ ಎರಡು ಕಾರಿಕೆಗಳಲ್ಲಿ ಅವಸ್ಥಾತ್ರಯಪರೀಕ್ಷೆಯಿಂದ ಆತ್ಮತತ್ತ್ವವನ್ನು ಅರಿತುಕೊಂಡವನು ಸರ್ವಜ್ಞನು. ಹೇಯಜ್ಞೇಯಾಪ್ಯಪಾಕ್ಯಗಳನ್ನು ಸಾಧಿಸಿ ಅವನ್ನು ಮೀರಿರುವ ಆತ್ಮನನ್ನೇ ಅರಿತುಕೊಳ್ಳಬೇಕು ಎಂದು ಬೋಧಿಸಿದೆ. ಜಾಗ್ರತ್ಸ್ವಪ್ನಸುಷುಪ್ತಿಗಳನ್ನು ಮೀರಿದ ತುರೀಯಾತ್ಮನೇ ಪರಮಾರ್ಥ. ಅವಸ್ಥೆಗಳು ಹೇಯ, ಜ್ಞಾನಬಾಧ್ಯಗಳು; ಜ್ಞೇಯವೆಂದರೆ ಇದೆ, ಇಲ್ಲ ಇದ್ದೂ ಇಲ್ಲ, ಇಲ್ಲವೇ ಇಲ್ಲ - ಎಂಬ ನಾಲ್ಕು ಕೋಟಿಗಳನ್ನೂ ಮೀರಿದ ಪರಮಾರ್ಥವು; ಪಾಂಡಿತ್ಯಬಾಲ್ಯ

ಮೌನಗಳೆಂಬ ಸಾಧನಗಳು ಆಪ್ಯಗಳು; ರಾಗದ್ವೇಷಮೋಹಾದಿದೋಷಗಳೇ ಪಾಕ್ಯಗಳು, ಬೇಯಿಸಿ ನೀಗಿಕೊಳ್ಳತಕ್ಕವು. ಈ ನಾಲ್ಕರಲ್ಲಿ ಜ್ಞೇಯವೊಂದೇ ಪರಮಾರ್ಥವು, ಮಿಕ್ಕ ಮೂರು ಸಾಧನದಶೆಯಲ್ಲಿರಬೇಕಾದರೂ ಆವಿದ್ಯಕವಾಗಿರುತ್ತವೆ ಎಂಬುದು ಆ ಗ್ರಂಥಭಾಗದ ಸಾರವು.

ಪರಮಾರ್ಥದೃಷ್ಟಿಯಿಂದ ನೋಡಿದರೆ ಆತ್ಮರುಗಳೆಲ್ಲರೂ ಸ್ವಭಾವದಿಂದಲೇ ಎಲ್ಲಕ್ಕಿಂತಲೂ ಸೂಕ್ಷ್ಮವೂ ನಿರಂಜನವೂ ಸರ್ವಗತವೂ ಆಗಿರುವ ಆಕಾಶದಂತಿರುವ ಅದ್ವಿತೀಯಾತ್ಮತತ್ತ್ವವೇ ಆಗಿರುತ್ತಾರೆ. ಅವರಲ್ಲಿ ಅವಸ್ಥಾತ್ರಯ ರೂಪವಾದ ಅಥವಾ ಸಾಧ್ಯಸಾಧನಸಾಧಕರೂಪವಾದ ನಾನಾತ್ವವು ಒಂದಿಷ್ಟೂ ಇರುವುದೇ ಇಲ್ಲ. ಆತ್ಮನನ್ನು ಅರಿಯಬೇಕೆಂಬುದೂ ಅವಿದ್ಯಾದೃಷ್ಟಿಯಿಂದಲೇ ಹೇಳಿದ್ದು. ನಿಜವಾಗಿ ಆತ್ಮರುಗಳೆಲ್ಲರೂ ನಿತ್ಯಬುದ್ಧಸ್ವಭಾವನಾದ ಪರಮಾತ್ಮನೇ ಆಗಿರುತ್ತಾನೆ; ಹೀಗೆಂಬ ನಿಶ್ಚಯವು ಯಾವನಿಗೆ ಇರುವದೋ ಅವನು ನಿತ್ಯಮುಕ್ತನು. ಆತ್ಮರು ಸಾಧನದಿಂದ ಶಾಂತಿಯನ್ನು ಪಡೆದುಕೊಳ್ಳಬೇಕಾಗಿಲ್ಲ; ನಿತ್ಯಶಾಂತಶಿವಸ್ವರೂಪರೇ ಅವರು. ಅವರೆಲ್ಲರಲ್ಲಿಯೂ ಒಂದೇ ಸಮವಾದ, ಅಭಿನ್ನವಾದ, ಏರುಪೇರಿಲ್ಲದ ವಿಶುದ್ಧವಾದ ಆತ್ಮಸ್ವರೂಪವೇ ಇರುತ್ತದೆ. ಭೇದದಲ್ಲಿಯೇ ಸಂಚರಿಸುತ್ತಿರುವ ಜನರಿಗೆ ಈ ವಿಶುದ್ಧಿ ಇರುವದಿಲ್ಲ; ಅಂಥ ದ್ವೈತಿಗಳನ್ನು ಶ್ರುತಿಯು ಕೃಪಣರೆಂದು ಕರೆದಿದೆ. ಅಜವೂ ಸಾಮ್ಯವೂ ಆಗಿರುವ ಪರಮಾರ್ಥದಲ್ಲಿಯೇ ನಿತ್ಯನಿಶ್ಚಿತರಾಗಿ ನಿಂತಿರುವವರು ಸ್ತ್ರೀಶೂದ್ರಾದಿಗಳಾದರೂ ಮಹಾಜ್ಞಾನಿಗಳು; ಅವರ ಹಾದಿಯನ್ನು ಸಾಮಾನ್ಯಜನರು ಪ್ರವೇಶಿಸಲಾರರು. ಜ್ಞಾನಿಗಳ ದೃಷ್ಟಿಯಿಂದ ಅವರು ಜನ್ಮರಹಿತರೇ, ಅವರ ಜ್ಞಾನವೂ ಜನ್ಮರಹಿತವು, ಆ ಜ್ಞಾನವು ಮತ್ತೊಂದು ಜ್ಞೇಯದಲ್ಲಿ ಸೇರುವದೇ ಇಲ್ಲ; ಜ್ಞಾತೃಜ್ಞಾನಜ್ಞೇಯವಿಭಾಗವೇ ಆ ದೃಷ್ಟಿಯಲ್ಲಿಲ್ಲ. ಅವಿವೇಕಿಗಳಾದವರಿಗೋ ಎಂದರೆ ಒಂದಿಷ್ಟು ಭೇದವು ತೋರಿದರೂ ಅವರಿಗೆ ಅಸಂಗತ್ವವು ಎಂದಿಗೂ ಇರುವದಿಲ್ಲ, ಅವರಿಗೆ ಆವಿದ್ಯೆಯ ಆವರಣದಿಂದಾಗುವ ಬಂಧನಾಶವಿಲ್ಲವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ನಿಜವಾಗಿ ನೋಡಿದರೆ ಯಾರಿಗೂ ಅವಿದ್ಯಾವರಣವಿಲ್ಲವೇ ಇಲ್ಲ, ಎಲ್ಲರೂ ನಿತ್ಯಶುದ್ಧಬುದ್ಧಮುಕ್ತಸ್ವಭಾವರೇ; ಈ ಸ್ವರೂಪದ ಅರಿವು ಎಲ್ಲರಿಗೂ

ಸ್ವರೂಪವೇ ಆಗಿರುತ್ತದೆ. ಜ್ಞಾನಿಯಾದವನಿಗೆ ಯಾವ ಜ್ಞೇಯವನ್ನು ಅರಿತುಕೊಳ್ಳುವದಕ್ಕೂ ಅದರಲ್ಲಿ ಸಂಕ್ರಾಂತವಾಗುವ ಜ್ಞಾತೃಜ್ಞಾನ ಜ್ಞೇಯಗಳೆಲ್ಲವೂ ಒಂದೇ ಸರ್ವವ್ಯಾಪಕವಾದ ಅದ್ವಿತೀಯಚಿತ್ತತ್ತ್ವವೇ ಆಗಿರುತ್ತವೆ. ಇದು ಕ್ಷಣಿಕವಿಜ್ಞಾನವಾದಿಗಳಾದ ಅಥವಾ ಶೂನ್ಯವಾದಿಗಳಾದ ಬೌದ್ಧರ ದರ್ಶನಕ್ಕಿಂತ ಅತ್ಯಂತವಿಲಕ್ಷಣವಾದ ಸಿದ್ಧಾಂತವು - ಹೀಗೆಂಬುದು ಉಪಸಂಹಾರಕಾರಿಕೆಗಳ ಸಂಕ್ಷಿಪ್ತಾರ್ಥವು. ಕೊನೆಯಲ್ಲಿ ಇಂಥ ಅದ್ವಿತೀಯ ಪರಮಾತ್ಮನಿಗೆ ವ್ಯವಹಾರದೃಷ್ಟಿಯಿಂದ ನಮಸ್ಕರಿಸಿ ಗೌಡಪಾದರು ತಮ್ಮ ಗ್ರಂಥಕ್ಕೆ ಮಂಗಲವನ್ನು ಮಾಡಿರುತ್ತಾರೆ.

★★★★★

# ಈಶ್ವರೋಪಾಸನೆಯ ಸೋಪಾನ

**08-05-1954**

**ವೇ॥ಬ್ರ॥ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

**ಭಗವದ್ಗೀತೆಯ 12ನೆಯ ಅಧ್ಯಾಯದ ಮೊದಲನೆಯ 12 ಶ್ಲೋಕಗಳ** ಭಾಷ್ಯದ ಅಭಿಪ್ರಾಯ: ಅದರಲ್ಲಿ ಈಶ್ವರೋಪಾಸನೆಯ ಸೋಪಾನವನ್ನು ವಿವರಿಸಿದೆ. ಅವ್ಯಕ್ತೋಪಾಸನೆಗಿಂತ ವಿಶ್ವರೂಪೋಪಾಸನೆಯ ಸೌಲಭ್ಯ, ಅದಕ್ಕಾಗಿ ಅನುಸರಿಸಬೇಕಾದ ಉತ್ತರೋತ್ತರಸುಲಭತರೋಪಾಯಗಳು - ಇವನ್ನು ತಿಳಿಸಿಕೊಟ್ಟಿದೆ. ಭಗವಂತನಲ್ಲಿ ಚಿತ್ತಸಮಾಧಾನ, ಅಭ್ಯಾಸಯೋಗ, ಭಗವತ್ಕರ್ಮ, ಸರ್ವಕರ್ಮಫಲತ್ಯಾಗ-ಇವೇ ಆ ಉಪಾಸನೆಗಳು.

ಶ್ರೀಗಳು ಅನುವಾದದಲ್ಲಿ ಹೇಳಿದ್ದೇನೆಂದರೆ, ಭಗವದ್ಗೀತೆಯಲ್ಲಿ ಸಾಧನೋಪದೇಶವನ್ನು ಮಾಡಿರುವದರಲ್ಲಿ ಒಂದು ವಿಶೇಷವಿದೆ. ಯಾವದು ಸುಲಭತರವಾಗಿರುವದೋ ಅದನ್ನು ಹೊಗಳಿದೆ; ಸುಲಭವಾದದ್ದೆಂದು

ಸಾಧಕರು ಅದನ್ನು ಉಪೇಕ್ಷೆಮಾಡದೆ ಇರಲಿ ಎಂಬುದೇ ಇದಕ್ಕೆ ಉದ್ದೇಶ. ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವೇ ಉತ್ತಮವೆಂದು ಹೇಳಿರುವದು ಇಂಥ ಉಪದೇಶಗಳಲ್ಲಿ ಒಂದು. ಪ್ರಕೃತದಲ್ಲಿ ಅವ್ಯಕ್ತಬ್ರಹ್ಮೋಪಾಸನೆಗಿಂತ ವಿಶ್ವರೂಪೋಪಾಸನೆಯೇ ಹೆಚ್ಚಿನದೆಂದೂ ವಿಶ್ವರೂಪೋಪಾಸಕರೇ ಯೋಗವಿತ್ತಮರೆಂದೂ ಹೊಗಳಿರುವದಕ್ಕೆ ಇದೇ ಕಾರಣ. ಭಗವತ್ಕರ್ಮಕ್ಕೆ ಅಭ್ಯಾಸಯೋಗವನ್ನು ಸಾಧಿಸಬೇಕೆಂದೂ ಅದಾಗದಿದ್ದರೆ ಕರ್ಮ ಯೋಗವನ್ನು, ಅದೂ ಆಗದಿದ್ದರೆ ಸರ್ವ ಕರ್ಮಫಲತ್ಯಾಗವನ್ನು, ಅಭ್ಯಸಿಸಬೇಕೆಂದು ಹೇಳಿರುವದರಲ್ಲಿರುವದರ ಸ್ವಾರಸ್ಯವೇನೆಂದರೆ, ಜ್ಞಾನಿಗಳು ಸರ್ವಕರ್ಮಸಂನ್ಯಾಸಮಾಡುತ್ತಾರೆ ಎಂದರೆ ಕರ್ಮ ಮಾತ್ರವನ್ನು ಅಕರ್ಮವಾಗಿ ತಿರುಗಿಸಿಕೊಂಡುಬಿಡುತ್ತಾರೆ; ಅವರಿಗೆ ಜ್ಞಾನದಿಂದ ಕಾಮವು ಇಲ್ಲವಾಗಿಬಿಡುತ್ತದೆಯಾದ್ದರಿಂದ ಕರ್ಮವು ಅಂಟುವದಿಲ್ಲ. ಆದ್ದರಿಂದ ಕೃತಾರ್ಥರ ಈ ಮೇಲುಪಙ್ಕ್ತಿಯನ್ನು ಅನುಸರಿಸಬೇಕೆನ್ನುವವರು ಕರ್ಮಫಲತ್ಯಾಗವನ್ನು ಮಾಡುವ ಸಾಧನವನ್ನು ಮೊದಲು ಅಳವಡಿಸಿಕೊಳ್ಳಬೇಕು ಎಂಬುದು ಪ್ರಕೃತ ಗೀತೋಪದೇಶದ ಸಾರವು.

★★★★★

## ಆತ್ಮಜ್ಞಾನವು ಕರ್ಮಶೇಷವಲ್ಲ

**9-5-1954**

**ಬ್ರ॥ಶ್ರೀ॥ ನವೀನಂ ವೆಂಕಟೇಶಶಾಸ್ತ್ರಿಗಳವರು**

**ಸೂತ್ರಭಾಷ್ಯ 3-4-8**ರಿಂದ **17**ರವರೆಗಿನ ಭಾಷ್ಯಭಾಗದಲ್ಲಿ ಆತ್ಮಜ್ಞಾನವು ಕರ್ಮಶೇಷವಲ್ಲವೆಂಬುದನ್ನು ಪ್ರತಿಪಾದನಮಾಡಿರುತ್ತದೆ. ಆತ್ಮನು ಕರ್ತೃವಾಗಿರುವದರಿಂದ ಆತ್ಮಜ್ಞಾನವು ಕರ್ಮಶೇಷವೇ ಆಗಿರುತ್ತದೆ. ಆದ್ದರಿಂದ ಕರ್ಮಫಲಕ್ಕಿಂತ ಬೇರೆಯಾಗಿ ಆತ್ಮಜ್ಞಾನದ ಫಲವಿರಲಾರದು. ಆತ್ಮನನ್ನು

ಪ್ರಿಯನು ಎಂದು ಮುಂತಾಗಿ ಸಂಸಾರಿಧರ್ಮವುಳ್ಳವನೆಂದೇ ಶ್ರುತಿಯಲ್ಲಿ ಹೇಳಿರುವದರಿಂದ ಪರಮಾತ್ಮಜ್ಞಾನವೆಂಬುದಿಲ್ಲ. ಬ್ರಹ್ಮಜ್ಞಾನಿಗಳುಕೂಡ ಕರ್ಮವನ್ನು ಮಾಡುತ್ತಿದ್ದರೆಂದು ಶ್ರುತಿಯಲ್ಲಿದೆ; ವಿದ್ಯಾಪೂರ್ವಕವಾಗಿ ಮಾಡಿದ ಕರ್ಮವು ವೀರ್ಯವತ್ತರವಾಗುವದೆಂದೂ ಹೇಳಿದೆ. ವಿದ್ಯಾಕರ್ಮಗಳೆರಡೂ ಜೊತೆಯಾಗಿದ್ದೇ ಫಲಾರಂಭಕವಾಗುವವೆಂದೂ ಶ್ರುತಿಯು ಹೇಳುತ್ತಿದೆ. ವೇದಾರ್ಥವನ್ನೆಲ್ಲ ತಿಳಿದವನೇ ಕರ್ಮಕ್ಕೆ ಅಧಿಕಾರಿಯು; ಬದುಕಿರುವವರೆಗೂ ಕರ್ಮವನ್ನು ಮಾಡುತ್ತಲೇ ಇರಬೇಕು - ಎಂಬ ಶ್ರುತಿಯ ಪ್ರಮಾಣದಿಂದಲೂ ಆತ್ಮಜ್ಞಾನವು ಕರ್ಮಶೇಷವೇ ಎಂದಾಗುತ್ತದೆ ಎಂಬುದು ಪೂರ್ವಪಕ್ಷವು. ಸಂಸಾರಿಧರ್ಮರಹಿತನಾದ ಅಪಹತಪಾಪ್ಮತ್ವಾದಿಗಳಿಂದೊಡಗೂಡಿದ ಆತ್ಮನನ್ನು ಶ್ರುತಿಯಲ್ಲಿ ಹೇಳಿರುವದರಿಂದಲೂ ಬ್ರಹ್ಮಜ್ಞಾನಿಗಳು ಕರ್ಮವನ್ನು ಬಿಟ್ಟು ಏಷಣಾತ್ರಯವನ್ನು ತ್ಯಾಗಮಾಡಿದರೆಂದೂ ತಿಳಿಸಿರುವದರಿಂದಲೂ ಪೂರ್ವಪಕ್ಷಿಯು ಉದಾಹರಿಸಿರುವ ಕರ್ಮಸಹಿತಜ್ಞಾನವು ಸಗುಣ ಬ್ರಹ್ಮಜ್ಞಾನವಾದ್ದರಿಂದ ಅದರಿಂದ ಸಿದ್ಧಾಂತಕ್ಕೆ ಯಾವ ಹಾನಿಯೂ ಇಲ್ಲ. ಜ್ಞಾನಪೂರ್ವಕವಾಗಿ ಕರ್ಮವನ್ನು ಮಾಡಿದರೆ ಕರ್ಮವು ಸಮೃದ್ಧವಾಗುವದೆಂಬುದು ಪ್ರಕೃತವಾದ ಉದ್ಗೀಥೋಪಾಸನೆಯ ವಿಷಯವಾಗಿರುವದರಿಂದಲೂ ಜ್ಞಾನಕರ್ಮಗಳು ಎರಡೂ ಸೇರಿ ಫಲವನ್ನು ಕೊಡುವವೆಂಬುದು ಮುಮುಕ್ಷುಗಳ ವಿಷಯವಲ್ಲವಾದ್ದರಿಂದಲೂ ಸರ್ವವೇದಾರ್ಥವನ್ನೂ ಬಲ್ಲವನೇ ಕರ್ಮಾಧಿಕಾರಿಯೆಂಬುದು ಕರ್ಮಜ್ಞಾನಕ್ಕೆ ಮಾತ್ರ ಅನ್ವಯಿಸುವದರಿಂದಲೂ ಕರ್ಮವನ್ನು ಮಾಡುತ್ತಲೇ ಬದುಕಿರಬೇಕೆನ್ನುವದು ಜ್ಞಾನಿಯ ವಿಷಯವಲ್ಲವಾದ್ದರಿಂದಲೂ ಉಪನಿಷತ್ತಿನಲ್ಲಿ ಹೇಳಿರುವ ಆತ್ಮಜ್ಞಾನವು ಪರಮಾತ್ಮಜ್ಞಾನವೇ. ಅದು ಉಂಟಾದರೆ ಕ್ರಿಯಾಕಾರಫಲಗಳೆಲ್ಲವೂ ಅವಿದ್ಯಾಕೃತವೆಂದು ತಿಳಿದುಬಿಡುತ್ತದೆ. ಊರ್ಧ್ವರೇತಸ್ಕರಾದ ಕರ್ಮರಹಿತರಾದ ಆಶ್ರಮಾಂತರಗಳಲ್ಲಿರುವವರಿಗೂ ಆತ್ಮಜ್ಞಾನವನ್ನು ಹೇಳಿದೆ. ಈ ಎಲ್ಲಾ ಕಾರಣಗಳಿಂದ ಆತ್ಮಜ್ಞಾನವು ಕರ್ಮಶೇಷವಲ್ಲ. ಸ್ವತಂತ್ರವಾಗಿಯೇ ಪುರುಷಾರ್ಥವನ್ನು ಕೊಡುತ್ತದೆ - ಎಂಬುದು ಸಿದ್ಧಾಂತವು.

ಪ್ರವಚನಾಂತದಲ್ಲಿ ಶ್ರೀಗಳು ಹೀಗೆಂದರು: ಭಾಷ್ಯದಲ್ಲಿ ಸಮನ್ವಯಾಧ್ಯಾಯದಲ್ಲೆಲ್ಲ ಈ ವಾಕ್ಯವು ಬ್ರಹ್ಮಪರವೊ, ಜೀವಪರವೊ? – ಎಂದು ಅಲ್ಲಲ್ಲಿ ವಿಚಾರಮಾಡಿ ಅಸಂಸಾರಿಯಾದ ಆತ್ಮನನ್ನೇ ವಾಕ್ಯವು ಹೇಳುತ್ತದೆ ಎಂದು ತಿಳಿಸಿಯೇ ಇತ್ತು. ಆದರೂ ಇಲ್ಲಿ ಫಲದೃಷ್ಟಿಯಿಂದ ಈ ಪೂರ್ವಪಕ್ಷಸಿದ್ಧಾಂತಗಳನ್ನು ಹೇಳಿದೆ. ದೇಹವ್ಯತಿರಿಕ್ತನಾದ ಆತ್ಮನೊಬ್ಬನು ಇದಾನೆಂಬ ಜ್ಞಾನವು ವೈದಿಕಕರ್ಮಕ್ಕೆ ಮಾತ್ರ ಉಪಯೋಗವೇ ಹೊರತು ಲೌಕಿಕಕರ್ಮಕ್ಕೆ ಆ ಜ್ಞಾನವು ಬೇಕಿರುವದಿಲ್ಲ ; ಶಾಸ್ತ್ರದಲ್ಲಿ ಹೇಳಿರುವದು ಸಂಸಾರಿಸ್ವರೂಪನಾದ ಆತ್ಮನನ್ನೇ ಎಂಬುದಕ್ಕೆ ಅನೇಕ ಸಾಧಕಯುಕ್ತಿಗಳಿವೆ; ಆದ್ದರಿಂದ ಪರಮಾತ್ಮ ಜ್ಞಾನದಿಂದ ಮುಕ್ತಿ ಎಂಬುದು ಹೊಂದುವದಿಲ್ಲ – ಎಂಬುದು ಪೂರ್ವಪಕ್ಷ. ಆದರೆ ಸಿದ್ಧಾಂತದೃಷ್ಟಿಯಿಂದ ನೋಡಿದರೆ ಸರ್ವವೂ ಆತ್ಮನೇ ಎಂಬ ಜ್ಞಾನವುಂಟಾದಮೇಲೆ ಕರ್ಮವೇ ಇರುವಂತಿಲ್ಲ; ಇನ್ನು ಈ ಜ್ಞಾನವು ಕರ್ಮಕ್ಕೆ ಅಂಗವೆಂಬುದು ಹೇಗೆ ಕೂಡೀತು ? ಈ ಅನುಭವಕ್ಕೆ ಹೊಂದಿಸಿಕೊಂಡು ಪೂರ್ವಪಕ್ಷಿಯು ಉಪನ್ಯಾಸಮಾಡಿರುವ ಶ್ರುತಿಗಳಿಗೆಲ್ಲ ಬೇರೆಯ ಅರ್ಥವನ್ನು ಮಾಡಬಹುದಾಗಿದೆ.

ಇಲ್ಲಿ ಜ್ಞಾನವೇ ಮೋಕ್ಷಕ್ಕೆ ಸಾಕ್ಷಾತ್ಸಾಧನವು, ಕರ್ಮವಲ್ಲ– ಎಂದು ಹೇಳಿದೆಯೇ ಹೊರತು ಕರ್ಮಗಳು ಸರ್ವಥಾ ಬೇಡವೆಂದಿರುವದಿಲ್ಲ. ಕರ್ಮಗಳಿಗೆ ಸ್ವರ್ಗಾದಿಗಳು ಫಲ ಎಂದಿರುವಂತೆ ಶ್ರುತಿಯಲ್ಲಿಯೇ ಜ್ಞಾನಿಗಳಿಗೇ ಮೋಕ್ಷವೆಂದಿದೆ– ಎಂಬುದರಲ್ಲಿ ಲಕ್ಷ್ಯ. ಕರ್ಮವು ಚಿತ್ತಶುದ್ಧಿಯ ಮೂಲಕವಾಗಿ ಜ್ಞಾನಸಂಪಾದನೆಗೂ ಸಾಧನವಾಗಿರುತ್ತದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು.

★★★★★

# ಬ್ರಹ್ಮದ ಅಸ್ತಿತ್ವಕ್ಕೆ ಹೇತುಗಳು

**10-05-1954**

**ಬ್ರ॥ಶ್ರೀ॥ಎಸ್. ವಿಠ್ಠಲಶಾಸ್ತ್ರಿಗಳವರು**

**ತೈತ್ತಿರೀಯಭಾಷ್ಯ**ದಲ್ಲಿ ಬ್ರಹ್ಮದ ಅಸ್ತಿತ್ವಕ್ಕೆ ಕೆಲವು ಹೇತುಗಳನ್ನು ಹೇಳಿರುವ **2-7**ರ ಭಾಷ್ಯದಲ್ಲಿ ಬ್ರಹ್ಮವು ಮೊದಲು ಅಸತ್ತಾಗಿತ್ತು ಎಂದರೆ ಅವ್ಯಾಕೃತ ರೂಪದಲ್ಲಿತ್ತು; ಅದೇ ನಾಮರೂಪಗಳಾಗಿ ವಿಂಗಡಿಸಿಕೊಂಡು ಸತ್ತೆನಿಸಿತು. ಹೀಗೆ ತಾನೇ ಎಲ್ಲವನ್ನೂ ಮಾಡಿದ್ದರಿಂದಲೂ ಸುಕೃತರೂಪವಾಗಿ ಪರಿಣಮಿಸಿದ್ದರಿಂದಲೂ ಅದಕ್ಕೆ ಸುಕೃತವೆಂದು ಹೆಸರು. ಆದ್ದರಿಂದ ಜಗತ್ಕಾರಣವಾಗಿ ಫಲಕ್ಕೆ ಹೇತುವಾಗಿ ರುವದರಿಂದ ಚೇತನವಾದ ಬ್ರಹ್ಮವು ಇದೆ ಎನ್ನಬೇಕು. ಬಾಹ್ಯಾನಂದಕ್ಕೆ ಬೇಕಾದ ಸಾಧನವಿಲ್ಲದಿದ್ದರೂ ಬ್ರಹ್ಮಜ್ಞಾನಿಗಳು ಆನಂದದಿಂದಿರುತ್ತಾರಾದ್ದರಿಂದ ಅದಕ್ಕೆ ಕಾರಣವಾದ ರಸರೂಪವಾದ ಬ್ರಹ್ಮವು ಇದೆ ಎಂದಾಗುತ್ತದೆ. ಶರೀರದ ಪ್ರಾಣಾಪಾನಚೇಷ್ಟೆಗಳು ಆಗುತ್ತಿರುವದರಿಂದಲೂ ಸಂಹತವಾದದ್ದು ಪರಾರ್ಥವಾಗಿರಬೇಕಾದ್ದರಿಂದ **ಅಸಂಹತವಾದ ಚೇತ**ನರೂಪವಾದ ಬ್ರಹ್ಮಾತ್ಮನು ಇರುತ್ತಾನೆಂದಾಯಿತು. ತನ್ನ ಆಶ್ರಯದಿಂದ ಜ್ಞಾನಿಗಳಿಗೆ **ಅಭಯ**ಕ್ಕೆ ತನ್ನನ್ನು ಬಿಟ್ಟು ಬೇರೆಯಾದ್ದರಿಂದ ಅಜ್ಞರ **ಭಯ**ಕ್ಕೂ ಕಾರಣವಾಗಿರುವದರಿಂದಲೂ ಬ್ರಹ್ಮವು ಇದೆ ಎನ್ನಬೇಕು ಎಂಬುದು ಅನುವಾಕದ ಸಾರವು.

ಶ್ರೀಶ್ರೀಗಳವರು ಅನುವಾದದಲ್ಲಿ ಹೇಳಿದ್ದರ ಸಾರಸಂಗ್ರಹವೇನೆಂದರೆ ಬ್ರಹ್ಮವು ನಮ್ಮೆಲ್ಲರ ಆತ್ಮನೇ ಆಗಿರುವದರಿಂದ ಸ್ವಯಂಸಿದ್ಧವಾಗಿರುತ್ತದೆ. ಆದ್ದರಿಂದ ಅದನ್ನು ಇದೆ ಎಂದು ತೋರಿಸುವದೇ ಬೇಡ. ಆದರೂ ಅಜ್ಞಾನವು ಅಂಥ ಆತ್ಮನೂ ಇಲ್ಲವೆನ್ನುವಂತೆ ಮಾಡಿದೆ. ಆತ್ಮನು ನಿರ್ವಿಶೇಷನೆಂದು ಶ್ರುತಿ ಹೇಳುವದರಿಂದ ಅವನು ಇಲ್ಲವೇ ಇಲ್ಲ ಎಂಬ ಶಂಕೆಯುಂಟಾಗಬಹುದಾಗಿ ದೆ. ಆದ್ದರಿಂದ ಶ್ರುತಿಯು ಲೋಕಬುದ್ಧಿಯನ್ನನುಸರಿಸಿ ಕಾರ್ಯಕಾರಣಭಾವ, ಆನಂದಹೇತುತ್ವ, ಜೀವನವ್ಯಾಪಾರಕ್ಕೆ ಪ್ರಯೋಜನ, ಭಯಾಭಯಗಳಿಗೆ ಕಾರಣ- ಎಂಬ ಯುಕ್ತಿಗಳನ್ನು ಉಪಯೋಗಿಸಿಕೊಂಡು ಆತ್ಮನ ಅಸ್ತಿತ್ವವನ್ನು

ತಿಳಿಸಿಕೊಡುತ್ತಿದೆ. ಆತ್ಮಸ್ವರೂಪವು ತಿಳಿದಾಗ ಬ್ರಹ್ಮವೇ ವ್ಯವಹಾರದೃಷ್ಟಿಯಿಂದ ಜಗತ್ಕಾರಣವೂ, ಕರ್ಮಫಲದಾತೃವೂ, ಸುಖಮೂಲವೂ, ಪ್ರವೃತ್ತಿಗೆ ಪ್ರಯೋಜಕವೂ, ಅಭಯಹೇತುವೂ ಆಗಿರುವದು ಹೇಗೆಂಬುದು ತಾನೇ ಸ್ಪಷ್ಟವಾಗುತ್ತದೆ.

★★★★★

# ಅಸತ್ಕಾರ್ಯವಾದದ ವಿಮರ್ಶೆ

**11-5-1954**

**ಶ್ರೀ ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

**ಛಾಂದೋಗ್ಯ (6-2-2ರ) ಭಾಷ್ಯ**ದಲ್ಲಿ ಅಸತ್ಕಾರ್ಯವಾದದ ವಿಮರ್ಶೆಯ ಈ ಶ್ರುತಿಯಲ್ಲಿ - ಸತ್ತೊಂದೇ ಇತ್ತು; ಅದರಿಂದಲೇ ಇಲ್ಲವೂ ಆಗಿರುತ್ತದೆ- ಎಂದು ಹೇಳಿ 'ಮೊದಲು ಅಸತ್ತೇ ಇತ್ತು, ಅದರಿಂದಲೇ ಸತ್ತಾದ ಈ ಜಗತ್ತು ಉಂಟಾಯಿತು' -ಎನ್ನುವವರ ಮತವು ಸರಿಯಲ್ಲ ಎಂದು ತಳ್ಳಿಹಾಕಿದೆ.

ಶ್ರುತಿಯ ಭಾಷ್ಯದಲ್ಲಿ ಬೌದ್ಧರ ಅಸತ್ಕಾರ್ಯವನ್ನು ವಿಮರ್ಶೆಮಾಡಿರುತ್ತದೆ. ಬೀಜವು ನಾಶವಾದಮೇಲೆಯೇ ಮೊಳಕೆಯು ಹುಟ್ಟುವದು ಕಂಡಿದೆ ಎಂಬ ದೃಷ್ಟಾಂತದ ಆಧಾರದಿಂದ ಬೌದ್ಧರು ಆಸತ್ತಿನಿಂದಲೇ ಸತ್ತು ಹುಟ್ಟುತ್ತದೆ ಎಂದು ವಾದಿಸಿದ್ದರು. ಆದರೆ ಮೊಳಕೆಯಲ್ಲಿ ಅನುಗತವಾಗಿರುವ ಬೀಜಾವಯವಗಳು ಇದ್ದೇ ಇರುವದರಿಂದ ಅಲ್ಲಿಯೂ ಸತ್ತಿನಿಂದಲೇ ಸತ್ತು ಹುಟ್ಟಿದಂತೆ ಆಯಿತು - ಎಂದು ಭಾಷ್ಯಕಾರರು ವಾದಿಸಿರುತ್ತಾರೆ. ಬೀಜದ ಆಕಾರವೂ ನಾಶವಾದಮೇಲೆಯೇ ಅಲ್ಲವೆ, ಮೊಳಕೆಯುಂಟಾಗುವದು? - ಎಂಬ ಆಕ್ಷೇಪಕ್ಕೆ ಅವಯವವ್ಯತಿರಿಕ್ತವಾದ ಅವಯವಿಯನ್ನು ಬೌದ್ಧರು ಒಪ್ಪಿಲ್ಲವಾದ್ದರಿಂದ ನಿಮಗೆ ಈ ದೃಷ್ಟಾಂತವು ಹೊಂದುವದಿಲ್ಲ; ಸಂವೃತಿಯಿಂದ - ಅವಿದ್ಯೆಯಿಂದ - ಅದನ್ನು ನಾವು ಒಪ್ಪಿದೇವೆ ಎಂದು

ಅವರು ಹೇಳುವದಕ್ಕಿಲ್ಲ; ಏಕೆಂದರೆ ಸಂವೃತಿಯು ಅಭಾವವಾದರೆ ದೃಷ್ಟಾಂತವೇ ಇಲ್ಲ, ಭಾವವಾದರೆ ಬೀಜದ ಅವಯವಗಳಿಂದಲೇ ಮೊಳಕೆಯಾಗುವದರಿಂದ ಅಲ್ಲಿಯೂ ಅಸತ್ಕಾರ್ಯವಾದಕ್ಕೆ ಅವಕಾಶವಿಲ್ಲ ಎಂದು ತಿಳಿಸಿರುತ್ತಾರೆ. ಗಡಿಗೆಯನ್ನು ಮಾಡುವವರು ಮಣ್ಣು ಮುದ್ದೆಯನ್ನೇ ತೆಗೆದುಕೊಳ್ಳುವರು; ಅಭಾವವೇ ಗಡಿಗೆಗೆ ಕಾರಣವಾಗಿದರೆ ಹಾಗೇಕೆ ತೆಗೆದುಕೊಳ್ಳಬೇಕಿತ್ತು? ಬುದ್ಧಿಗಿಂತ ವ್ಯತಿರಿಕ್ತವಾದ ಮಣ್ಣಾಗಲಿ ಗಡಿಗೆಯಾಗಲಿ ಇಲ್ಲವೇ ಇಲ್ಲ ಎಂದು ಬೌದ್ಧರು ವಾದಿಸುವದುಂಟು; ಆದರೆ ಬುದ್ಧಿಯು ಅಭಾವವಲ್ಲವಾದ್ದರಿಂದ ಆ ವಾದವೂ ಅವರಿಗೆ ಸಹಾಯಕವಾಗುವಂತಿಲ್ಲ. ಒಂದು ಬುದ್ಧಿಯಾಗುತ್ತಲೂ ಮತ್ತೊಂದು ಬುದ್ಧಿಯುಂಟಾಗುತ್ತದೆ; ಇಲ್ಲಿ ಕಾರ್ಯಕಾರಣಭಾವವನ್ನೇನೂ ನಾವು ಒಪ್ಪುವದಿಲ್ಲ -ಎನ್ನುವ ಬೌದ್ಧರಿಗೆ ಆಚಾರ್ಯರು ಹೇಳುವದೇನೆಂದರೆ ಒಂದಾಗುತ್ತಲೂ ಮತ್ತೊಂದು ಎಂಬುದಕ್ಕೆ ನಿಮ್ಮ ಮತದಲ್ಲಿ ದೃಷ್ಟಾಂತವೇ ಇಲ್ಲ. ಆದ್ದರಿಂದ ಅಸತ್ಕಾರ್ಯವಾದವು ಸಲ್ಲದು.

ಹಾಗಾದರೆ ಸತ್ತಿನಿಂದಲಾದರೂ ಸತ್ತು ಹುಟ್ಟುತ್ತದೆಯೆ? ಅದಕ್ಕಾದರೂ ದೃಷ್ಟಾಂತವೆಲ್ಲಿದೆ? -ಎಂದು ಅಸತ್ಕಾರ್ಯವಾದಿಗಳು ಮಾಡುವ ಆಕ್ಷೇಪಕ್ಕೆ ಭಾಷ್ಯದಲ್ಲಿರುವ ಪರಿಹಾರವೇನೆಂದರೆ, ನಾವು ಸತ್ತಿನಿಂದ ಮತ್ತೊಂದು ಸತ್ತು ಉಂಟಾಗುತ್ತದೆ ಎಂದೇನೂ ಹೇಳುವದಿಲ್ಲ; ಸತ್ತೇ ರೂಪಾಂತರದಿಂದ ತೋರಿಕೊಳ್ಳುತ್ತದೆ ಎನ್ನುತ್ತೇವೆ. 'ನಿರವಯವವಾದ ಸತ್ತಿಗೆ ಆಕಾರಾಂತರವನ್ನು ಪಡೆಯುವ ಅವಯವಗಳಾದರೂ ಎಲ್ಲಿವೆ?' - ಎಂದು ಕೇಳುವವರಿಗೆ ಉತ್ತರವೇನೆಂದರೆ, ಹಗ್ಗದಲ್ಲಿ ಹಾವು ಕಲ್ಪಿತವಾಗುವಂತೆ ಬುದ್ಧಿಕಲ್ಪಿತವಾಗಿಯೇ ಸದ್ರೂಪನಾದ ಆತ್ಮನಲ್ಲಿ ಜಗತ್ತು ತೋರುತ್ತಿದೆ ಎಂಬುದು ನಮ್ಮ ಮತವು. ಆದ್ದರಿಂದ ಜಗತ್ತು ಎಂಬ ಬುದ್ಧಿಯಿರುವ ಕಾಲದಲ್ಲಿಯೂ ಅದ್ವಿತೀಯಾತ್ಮ ತತ್ತ್ವವೊಂದೇ ಇರುತ್ತದೆ ಎಂಬುದೇ ಸಿದ್ಧಾಂತವು.

ಶ್ರೀಗಳು ಅನುವಾದವನ್ನು ಮಾಡುವಾಗ ಹೇಳಿದ್ದೇನೆಂದರೆ ಜಗತ್ತು ಸತ್ತಿನಿಂದ ಬಂದಿದೆಯೆ, ಅಸತ್ತಿನಿಂದ ಬಂದಿದೆಯೆ? -ಎಂಬುದು ಇಲ್ಲಿ ಪ್ರಶ್ನೆಯಲ್ಲ. ಏಕೆಂದರೆ ಪೂರ್ವಪಕ್ಷದಲ್ಲಾಗಲಿ ಸಿದ್ಧಾಂತದಲ್ಲಾಗಲಿ ಜಗತ್ತು ಏತರಿಂದಾದರೂ ನಿಜವಾಗಿ ಉಂಟಾಗಿದೆ ಎಂದು ಒಪ್ಪಿಯೇ ಇಲ್ಲ. ಜಗತ್ತಿನ

ತೋರಿಕೆಯು ಬರಿಯ ತೋರಿಕೆ, ಅದಕ್ಕೆ ಆಧಾರವೇನೂ ಇಲ್ಲ - ಎಂಬುದು ಅಸದ್ವಾದಿಯ ಮತ; ಇದಕ್ಕೆ ಆಧಾರವಾಗಿ ಸದಾತ್ಮತತ್ತ್ವವಿದೆ ಎಂಬುದು ವೇದಾಂತಿಗಳ ಮತ. ಆತ್ಮನು ಸುಷುಪ್ತಿಯಲ್ಲಿರುತ್ತಾನೆ; ಅಲ್ಲಿ ಯಾವ ಶಬ್ದಬುದ್ಧಿವ್ಯವಹಾರವೂ ಇರುವುದಿಲ್ಲ. ಜಗತ್ತಿನಲ್ಲಿ ಆತ್ಮ, ಜಗತ್ತು- ಎಂಬ ಶಬ್ದಬುದ್ಧಿಗಳಿರುತ್ತವೆ. ಆದ್ದರಿಂದ ಜಗತ್ತು ಎಂಬ ಶಬ್ಧಬುದ್ಧಿವ್ಯವಹಾರಕ್ಕೆ ಆತ್ಮನೇ ಆಧಾರ. ನಿಜವಾಗಿ ಆತ್ಮನು ಯಾವಾಗಲೂ ಅದ್ವಿತೀಯನಾಗಿರುತ್ತಾನೆ; ಅವನೇ ಪರಮಾರ್ಥವಸ್ತು.

★★★★★

# ಬ್ರಹ್ಮಜ್ಞಾನದಿಂದ ಸಂಸಾರಿತ್ವನಿವೃತ್ತಿ

**12-5-1954**

**ಬ್ರ॥ಶ್ರೀ॥ ವಿದ್ವಾನ್ ಲಕ್ಷ್ಮೀನರಸಿಂಹಶಾಸ್ತ್ರಿಗಳವರು**

**ಸೂತ್ರಭಾಷ್ಯ 1-1-4**ರಲ್ಲಿ ಬ್ರಹ್ಮಜ್ಞಾನದಿಂದ ಸಂಸಾರಿತ್ವನಿವೃತ್ತಿ ಯಾಗುತ್ತದೆ ಎಂಬ ವಿಷಯವನ್ನು ಪ್ರತಿಪಾದಿಸಿದೆ, ವೇದಾಂತವಾಕ್ಯಶ್ರವಣದಿಂದ ಉಂಟಾದ ಜ್ಞಾನವಾದ ಮೇಲೂ ಮೊದಲಿನಂತೆಯೇ ಸಂಸಾರಿತ್ವವಿರುವದು ಕಂಡುಬರುವದರಿಂದ ಬ್ರಹ್ಮವಸ್ತುಮಾತ್ರವನ್ನು ಬೋಧಿಸುವದರಲ್ಲಿ ಉಪನಿಷತ್ತುಗಳಿಗೆ ತಾತ್ಪರ್ಯವೆನ್ನಬಾರದು. ಶ್ರವಣಜ್ಞಾನವಾದ ಮೇಲೂ ಮತ್ತೆ ಮನನನಿದಿಧ್ಯಾಸನಗಳನ್ನು ವಿಧಿಸಿರುವದು ಕಂಡುಬರುತ್ತದೆ. ಆದ್ದರಿಂದ ಬ್ರಹ್ಮಜಿಜ್ಞಾಸೆಯು ಬರಿಯ ವಸ್ತುಜ್ಞಾನಮಾತ್ರದಲ್ಲಿ ಪರ್ಯವಸಾನ ವಾಗುವದಿಲ್ಲ- ಎಂಬ ಪೂರ್ವಪಕ್ಷಕ್ಕೆ ಇಲ್ಲಿ ಭಾಷ್ಯಕಾರರು ಸಮಾಧಾನವನ್ನು ಹೇಳಿರುತ್ತಾರೆ. ಬ್ರಹ್ಮಾತ್ಮಭಾವದ ಅನುಭವವು ಉಂಟಾದಮೇಲೂ ಸಂಸಾರಿತ್ವಭ್ರಾಂತಿಯು ನಿಂತಿರುತ್ತದೆ ಎಂಬುದು ಎಂದಿಗೂ ಸರಿಯಾಗಲಾರದು. ಶರೀರಾಭಿಮಾನವು ಹೋದಮೇಲೂ ಮಿಥ್ಯಾಜ್ಞಾನದ ಕಾರ್ಯವಾದ ದುಃಖಭಯಾದಿ ಸಂಸಾರವು ಇರುವದೆಂದು ಕಲ್ಪಿಸುವದು ಯುಕ್ತವಲ್ಲ,

ಮನನನಿದಿಧ್ಯಾಸನಗಳೂ ಈ ಅನುಭವವುಂಟಾಗುವದಕ್ಕೆಂದೇ ಉಪದಿಷ್ಟವಾಗಿ ಇರುವದರಿಂದ ಬ್ರಹ್ಮಾನುಭವವು ವ್ಯರ್ಥವೆನ್ನುವದಕ್ಕಾಗುವದಿಲ್ಲ- ಎಂಬುದು ಭಾಷ್ಯದ ಸಾರವು.

ಶ್ರೀಗಳು ಅನುವಾದದಲ್ಲಿ ಹೀಗೆಂದರು: ಕರ್ಮವಾಕ್ಯಕ್ಕೆ ಹೇಗೆ ಬೋಧಕತ್ವವಿದೆಯೋ, ಹಾಗೆಯೇ ಬ್ರಹ್ಮವಾಕ್ಯಕ್ಕೂ ಬೋಧಕತ್ವವಿದೆ. ಆದ್ದರಿಂದ ಅಧಿಕಾರಿಯಾದವನಿಗೆ ವೇದಾಂತವಾಕ್ಯಶ್ರವಣದಿಂದ ಅವಶ್ಯವಾಗಿ ಬ್ರಹ್ಮಜ್ಞಾನವು ಆಗುತ್ತದೆ. ಆದರೆ ಓದುವದಕ್ಕೆ ಬಾರದೆ ಇರುವವನಿಗೆ ಓದುವ ಕನ್ನಡಕಗಳಿಂದ ಹೇಗೆ ಪ್ರಯೋಜನವಾಗುವದಿಲ್ಲವೋ ಹಾಗೆ ವಾಕ್ಯಜ್ಞಾನವನ್ನು ಮಾಡಿಕೊಳ್ಳುವ ಯೋಗ್ಯತೆಯಿಲ್ಲದವನಿಗೆ ವಾಕ್ಯಶ್ರವಣಮಾತ್ರದಿಂದ ಬ್ರಹ್ಮಾತ್ಮಭಾವದ ಜ್ಞಾನವು ಆಗುವದಿಲ್ಲ. ಇದು ಪ್ರಮಾಣದ ತಪ್ಪಲ್ಲ. ನೇತ್ರ ಭ್ರಾಂತಿಗಳ ವಿಷಯವಾಗಿ ಒಮ್ಮೆ ಉಪನ್ಯಾಸವನ್ನು ಮಾಡುತ್ತಿದ್ದವರೊಬ್ಬರು ಒಂದು ಚಿತ್ರಪಟವನ್ನು ನಮ್ಮೆದುರಿಗೆ 'ಹಾಕಿ ಈ ಎರಡು ಗೀರುಗಳಲ್ಲಿ ಯಾವದು ದೊಡ್ಡದು?' ಎಂದು ಕೇಳಿದರು ನೋಡುವವರಿಗೆ ಒಂದು ಅಡ್ಡಗೀರು ದೊಡ್ಡದಾಗಿಯೂ ಮತ್ತೊಂದು ಸಣ್ಣದಾಗಿಯೂ ಕಾಣುತ್ತಿತ್ತು; ಆದರೆ ಉಪನ್ಯಾಸಕರು ಅಳತೆಮಾಡಿ ತೋರಿಸಿದ್ದರಲ್ಲಿ ಅವೆರಡೂ ಒಂದೇ ಅಳತೆಯವಾಗಿದ್ದವು. ಉಪಾಧಿವಶದಿಂದ ಅವುಗಳಲ್ಲಿ ಒಂದು ಮತ್ತೊಂದಕ್ಕೆ ದೊಡ್ಡದಾಗಿರುವಂತೆ ಕಾಣಿಸುತ್ತಿತ್ತು. ಅಷ್ಟೆ. ಇದರಂತೆ ಉತ್ತಮಾಧಿಕಾರಿಗೆ ಶ್ರವಣಮಾತ್ರದಿಂದ ಜ್ಞಾನವಾದರೂ ಮತ್ತೆ ಕೆಲವರಿಗೆ ಆಗದೆ ಇರುತ್ತದೆ. ಅಂಥವರ ಸಲುವಾಗಿ ವಾಕ್ಯಜ್ಞಾನವು ಅನುಭವರೂಪವಾಗಿ ಕಾಣಿಸಿಕೊಳ್ಳಲೆಂದು ಮನನನಿದಿಧ್ಯಾಸನಗಳನ್ನು ಉಪನಿಷತ್ತಿನಲ್ಲಿ ಹೇಳಿದೆ. ಶ್ರವಣದಿಂದ ತಿಳಿಸಿದ ವಿಷಯದಲ್ಲಿಯೇ ಮನನನಿದಿಧ್ಯಾಸನಗಳೂ ಸ್ಥಿರೀಕರಣವನ್ನು ಮಾಡುತ್ತವೆಯೇ ಹೊರತು ಹೊಸ ಜ್ಞಾನವನ್ನೇನೂ ಉಂಟುಮಾಡುವದಿಲ್ಲ. ಆದ್ದರಿಂದ ವಾಕ್ಯಜ್ಞಾನವು ಅನುಭವಕ್ಕೆ ಬಂದಾಗ ನಾನು ಅಶರೀರನಾದ ಪರಮಾತ್ಮಾಭಿನ್ನನೇ ಎಂಬ ಜ್ಞಾನವು ಅವಶ್ಯವಾಗಿ ಆಗುತ್ತದೆ. ಆದ್ದರಿಂದ ಶಾಸ್ತ್ರಕ್ಕೆ ವಸ್ತುಬೋಧಕತ್ವಮಾತ್ರದಿಂದಲೇ ಪ್ರಾಮಾಣ್ಯವುಂಟು- ಎಂದು ದೃಷ್ಟಾಂತಪೂರ್ವಕವಾಗಿ ತಿಳಿಯಪಡಿಸಿದರು.

★★★★★

# ಆತ್ಮನ ಕೃತ್ಸ್ನತ್ವ

**13-5-1954**

**ಬ್ರ|| ಶ್ರೀ|| ಕೆ. ಕೃಷ್ಣಜೋಯಿಸರು**

ಬೃಹದಾರಣ್ಯಕದಲ್ಲಿ (1-4-7) ಆತ್ಮನ ಕೃತ್ಸ್ನತ್ವವಿಷಯವನ್ನು ಹೀಗೆ ವಿವರಿಸಿದೆ. ಈ ಜಗತ್ತು ಹುಟ್ಟುವ ಮುಂಚೆ ಅವ್ಯಾಕೃತವಾಗಿತ್ತು, ಎಂದರೆ ಬಿಡಿಬಿಡಿಯಾಗಿ ವಿಂಗಡಿಸಿಕೊಳ್ಳದೆ ಒಂದೇ ಆಗಿತ್ತು. ಅದು ನಾಮರೂಪವಾಗಿ ವಿಂಗಡವಾಯಿತು. ಹೀಗೆ ವಿಂಗಡವಾದಾಗ ಪರಮಾತ್ಮನು ಇದರೊಳಗೆ ಪ್ರವೇಶನಾದನು. ಹಡಪದಲ್ಲಿ ಒಂದು ಕಡೆ ಕ್ಷೌರಕತ್ತಿಯು ಇರುವಂತೆ ವಿಶೇಷರೂಪದಿಂದಲೂ ಕಟ್ಟಿಗೆಯಲ್ಲಿ ಬೆಂಕಿಯು ಹೇಗೆ ಇರುತ್ತಿರುವದೋ ಹಾಗೆ ಸಾಮಾನ್ಯರೂಪದಿಂದಲೂ ಈ ಶರೀರದೊಳಗೆ ಆತ್ಮನು ಇದ್ದುಕೊಂಡಿರುತ್ತಾನೆ. ಜನರು ಅವನನ್ನು ಸರಿಯಾಗಿ ತಿಳಿದುಕೊಳ್ಳದೆ ಇರುತ್ತಾರೆ. ಏಕೆಂದರೆ ಅವರು ತಿಳಿದಿರುವ ಆತ್ಮನು ಅಕೃತ್ಸ್ನನು, ಪೂರ್ಣನಲ್ಲ, ಅವರು ಅರಿತಿರುವ ಆತ್ಮನು ಉಸಿರಾಡುವಾಗಲೇ ಪ್ರಾಣಿಯಾಗಿರುತ್ತಾನೆ, ಮಾತನಾಡುವಾಗಲೇ ವಕ್ತೃವಾಗಿರುತ್ತಾನೆ, ನೋಡುವಾಗ ದ್ರಷ್ಟೃವೂ ಕೇಳುವಾಗ ಶ್ರೋತೃವೂ ಯೋಚಿಸುವಾಗ ಮಂತೃವೂ ಆಗಿರುತ್ತಾನೆ. ಇವೆಲ್ಲ ಆತ್ಮನಿಗೆ ಆಯಾ ಕರ್ಮದಿಂದ ಬಂದ ನಾಮಗಳು: ಆದ್ದರಿಂದ ಈ ಒಂದೊಂದು ರೂಪದಿಂದಲೇ ಅರಿತವನು ಸರಿಯಾಗಿ ಅರಿತಂತಲ್ಲ. ಆತ್ಮನೆಂದೇ ಉಪಾಸನೆ ಮಾಡಬೇಕು, ಎಂದರೆ ಅರಿತುಕೊಳ್ಳಬೇಕು. ಆ ರೂಪದಲ್ಲಿ ಇವೆಲ್ಲವೂ ಒಂದಾಗಿರುವವು. ಇದನ್ನೇ ಅರಿತುಕೊಳ್ಳಬೇಕು; ಇದೊಂದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ, ಗೋವಿನ ಹೆಜ್ಜೆಯ ಗುರುತಿನಿಂದ ಅದನ್ನು ಹೇಗೆ ಕಂಡುಹಿಡಿದುಕೊಳ್ಳಬಹುದೋ ಹಾಗೆ ಆತ್ಮನನ್ನು ಅರಿತರೆ ಎಲ್ಲವನ್ನೂ ಅರಿತು ಪಡೆದುಕೊಳ್ಳಬಹುದು - ಇದು ಶ್ರುತಿಯ ಸಾಮಾನ್ಯಾರ್ಥ. ಸೃಷ್ಟಿಯಲ್ಲಿ ಈಶ್ವರನ ಪ್ರವೇಶವನ್ನು ಹೇಳಿರುವದೂ ಆತ್ಮಜ್ಞಾನಕ್ಕಾಗಿ ಎಂಬುದನ್ನೂ, ಸರ್ವವ್ಯಾಪಕನಾದ ಆತ್ಮನು ಶರೀರದಲ್ಲಿಯೂ ಸಾಮಾನ್ಯರೂಪದಿಂದ

ವ್ಯಾಪಿಸಿಕೊಂಡಿದ್ದು ವಿಶೇಷಜ್ಞಾನದಿಂದ ಈ ಶರೀರದಲ್ಲಿ ಕಾಣಿಸುತ್ತಿರುತ್ತಾನಾದ್ದರಿಂದ ಕಟ್ಟಿಗೆಯನ್ನು ಮಥನಮಾಡಿ ಬೆಂಕಿಯನ್ನು ಪಡೆಯುವಂತೆ ಒಳಹೊಕ್ಕು, ನೋಡಿ ಆತ್ಮಸ್ವರೂಪದಿಂದ ಕಂಡುಕೊಳ್ಳಬೇಕೆಂಬುದನ್ನೂ ತಿಳಿಸಿದರು.

ಅನುವಾದದಲ್ಲಿ ಶ್ರೀಗಳು ಕರ್ಮಕಾಂಡಕ್ಕೂ ಜ್ಞಾನಕಾಂಡಕ್ಕೂ ಇರುವ ಸಂಬಂಧವನ್ನು ತಿಳಿಸಿಕೊಟ್ಟು ಇಷ್ಟಾನಿಷ್ಟಪ್ರಾಪ್ತಿಪರಿಹಾರಕ್ಕೆ ಉಪಾಯವನ್ನು ಹುಡುಕುವ ಅಜ್ಞಾನವನ್ನು ಕಳೆಯುವ ಆತ್ಮಜ್ಞಾನವೇ ಜ್ಞಾನಕಾಂಡದ ಅಸಾಧಾರಣವಿಷಯವೆಂಬುದನ್ನು ಸ್ಪಷ್ಟಪಡಿಸಿದರು. ವ್ಯಾಕೃತಪ್ರಪಂಚದಲ್ಲಿ ಒಂದೊಂದು ಶರೀರದಲ್ಲಿಯೂ ಹೊಕ್ಕಂತೆ ಬೇರೆಬೇರೆಯ ಅವಯವಗಳಲ್ಲಿಯೂ ವಿಶೇಷಾಭಿಮಾನವುಳ್ಳವನಾಗಿ ಕಾಣುತ್ತಾನೆ; ಆದರೆ ಇವುಗಳೊಳಗೆಲ್ಲ ಅನುಸ್ಯೂತವಾಗಿರುವ ರೂಪವೇ ಆತ್ಮನು. ಜ್ಞಾನದಿಂದ ಸರ್ವೋಪಾಧಿಗಳನ್ನೂ ವಿಲಯನಮಾಡಿಕೊಂಡು ನಿರುಪಾಧಿಕವಾದ ಆತ್ಮರೂಪದಿಂದ ಅರಿತರೇ ಆತ್ಮನನ್ನು ಪಡೆದುಕೊಂಡಂತೆ ಆಯಿತು; ಆತ್ಮನೆಂಬ ಹೆಸರಿನಿಂದ ಕರೆದ ಮಾತ್ರದಿಂದ ಅಥವಾ ಆತ್ಮನೆಂಬ ಭಾವನೆಮಾಡಿದಮಾತ್ರದಿಂದ ನಿಜವಾದ ಆತ್ಮಪ್ರಾಪ್ತಿಯಾದಂತೆ ಅಲ್ಲ; ಅನಾತ್ಮವೆಲ್ಲವನ್ನೂ ಇಲ್ಲವಾಗಿಸಿಕೊಂಡು ಅದ್ವಿತೀಯಾತ್ಮನಲ್ಲಿ ನಿಲ್ಲುವದೇ ನಿಜವಾದ ಆತ್ಮಪ್ರಾಪ್ತಿ ಎಂದು ವಿವರಿಸಿದರು.

★★★★★

# ಪರಮಾತ್ಮನೇ ಪರಮಾರ್ಥತತ್ತ್ವವು

**26-4-1955**

**ಶ್ರೀಶ್ರೀಗಳವರು**

**ಮಾಂಡೂಕ್ಯಕಾರಿಕೆಯ ವೈತಥ್ಯಪ್ರಕರಣದಲ್ಲಿ 34ರಿಂದ 38ರವರೆಗಿನ ಕಾರಿಕೆಗಳ ಭಾಷ್ಯ**ದಲ್ಲಿ ಬ್ರಹ್ಮಾದಿಸ್ತಂಬಪರ್ಯಂತವಾಗಿ ಸಕಲಪ್ರಾಣಿಗಳಿಗೂ ಆತ್ಮನಾಗಿ ಇರುವ ಒಬ್ಬ ಪರಮಾತ್ಮನೇ ಪರಮಾರ್ಥತತ್ತ್ವವು, ಅದಕ್ಕಿಂತ

ಬೇರೆಯಾಗಿ ಯಾವದೊಂದೂ ಇಲ್ಲವೇ ಇಲ್ಲ ಎಂಬುದು ಅದ್ವೈತಸಿದ್ಧಾಂತವು. ಇದು ಗಹನವಾಗಿದ್ದರೂ ಅಧಿಕಾರಿಗಳಿಗೆ ಅತ್ಯಂತಸುಲಭವಾಗಿ ಅನುಭವಕ್ಕೆ ಬರುತ್ತದೆ. ಬೆಳಕಿನಿಂದಲೇ ಎಲ್ಲವೂ ಕಾಣುವಂತೆ ಆತ್ಮನ ಚೈತನ್ಯದಿಂದಲೇ ಎಲ್ಲವೂ ನಮಗೆ ಕಾಣಬರುತ್ತದೆ; ಅದಕ್ಕಿಂತ ವ್ಯತಿರಿಕ್ತವಾಗಿ ಯಾವದೊಂದೂ ಇರುವದೇ ಇಲ್ಲ ಎಂಬುದನ್ನು ನಮಗೆಲ್ಲರಿಗೂ ಅತ್ಯಂತಪರಿಚಿತವಾಗಿರುವ ಎಚ್ಚರಕನಸು ನಿದ್ರೆಗಳೆಂಬ ಮೂರು ಅವಸ್ಥೆಗಳ ಪರೀಕ್ಷೆಯಿಂದ ತೋರಿಸಿಕೊಟ್ಟಿರುವದೇ ಮಾಂಡೂಕ್ಯೋಪನಿಷತ್ತಿನ ಹೆಚ್ಚುಗಾರಿಕೆ.

ಪ್ರಪಂಚವು ಅಭಿಧಾನ, ಅಭಿಧೇಯ ( ಹೆಸರು, ಪದಾರ್ಥ) ಎಂಬ ಎರಡು ಭಾಗವಾಗಿ ಒಡೆದುಕೊಂಡಿರುವಂತೆ ತೋರುತ್ತದೆ. ಅದರ ನಿಜವನ್ನು ಅವಸ್ಥಾತ್ರಯಪರೀಕ್ಷೆಯಿಂದ ಒಳಹೊಕ್ಕು ನೋಡಿದರೆ ಅದು ಹೆಸರು, ಪದಾರ್ಥ ಇವೆರಡಕ್ಕೂ ತಿರುಳಾಗಿ ಇವೆರಡನ್ನೂ ಮೀರಿರುವ ನಿರ್ವಿಶೇಷವಾದ ಅಜಾದ್ವೈತಾತ್ಮನೇ ಎಂಬುದು ಮನದಟ್ಟಾಗುವದು - ಎಂಬುದನ್ನು ಉಪನಿಷತ್ತಿನಲ್ಲಿ ತಿಳಿಸಿರುತ್ತದೆ. ಅದನ್ನು ಓಂಕಾರವೆಂದಾಗಲಿ, ಬ್ರಹ್ಮವೆಂದಾಗಲಿ ಕರೆಯಬಹುದು; ಆದರೆ ಓಂಕಾರವೆಂದರೆ ಶಬ್ದವಲ್ಲ, ಬ್ರಹ್ಮವೆಂದರೆ ಓಂಕಾರವಾಚ್ಯವಸ್ತುವಲ್ಲ. ಇದನ್ನು ಶಂಕರಾಚಾರ್ಯರ ಪರಮಗುರುಗಳಾದ ಶ್ರೀಗೌಡಪಾದರವರು ತಾವು ಬರೆದಿರುವ ಮಾಂಡೂಕ್ಯವಿವರಣದ **ಆಗಮಪ್ರಕರಣ**ವೆಂಬ ಭಾಗದಲ್ಲಿ ವಿವರಿಸಿ ತೋರಿಸಿರುತ್ತಾರೆ. ಆತ್ಮನು ಅವಸ್ಥಾತ್ರಯಾತೀತನು ಎಂಬುದನ್ನು ಇಲ್ಲಿ ಒಂದಾನೊಂದು ವಿಶಿಷ್ಟಪ್ರಕಾರದಿಂದ ಬೋಧಿಸಿದೆ; ಆದ್ದರಿಂದ ಇದಕ್ಕೆ **ಆಗಮಪ್ರಕರಣ**ವೆಂದು ಹೆಸರು. ಉಳಿದ ಮೂರು ಪ್ರಕರಣಗಳಲ್ಲಿ ಇದೇ ಅರ್ಥವನ್ನು ತರ್ಕದಿಂದ ತೋರಿಸಿರುತ್ತದೆ. **ವೈತಥ್ಯಪ್ರಕರಣ**ದಲ್ಲಿ ಎಚ್ಚರಕನಸುಗಳೆರಡೂ ಕನಸಿನಂತೆ ಹುಸಿತೋರಿಕೆಯ ದೃಶ್ಯಗಳನ್ನೇ ತೋರಿಸುವವು ; ಆದ್ದರಿಂದ ಆತ್ಮನು ಅದ್ವಿತೀಯನೇ ಎಂದು ತೋರಿಸಿಕೊಟ್ಟಿದೆ. **ಅದ್ವೈತಪ್ರಕರಣ**ದಲ್ಲಿ ಆತ್ಮನು ಯಾವಾಗಲೂ ಅಜನೇ, ಅದ್ವಿತೀಯನೇ; ಅವನು ಪ್ರಪಂಚವಾಗಿ ಹುಟ್ಟುವನೆಂಬುದು ಮಾಯೆಯಿಂದ, ಅವಿದ್ಯಾದೃಷ್ಟಿಯಿಂದ ಮಾತ್ರ - ಎಂದು ಸ್ಥಾಪಿಸಿದೆ. **ಆಲಾತಶಾಂತಿಪ್ರಕರಣ**ದಲ್ಲಿ ಉರಿಯುವ ಕೊಳ್ಳಿಯನ್ನು ತಿರಿಗಿಸಿದರೆ ಕಾಣುವ ಬಗೆಬಗೆಯ

ಆಕಾರಗಳಂತೆ ಪ್ರಪಂಚವು ಆತ್ಮನಲ್ಲಿ ತೋರುತ್ತಿದೆ; ಈ ತತ್ತ್ವವನ್ನರಿಯದೆ ದ್ವೈತಿಗಳು ಬೇರೆಬೇರೆಯ ದರ್ಶನಗಳನ್ನು ಸಿದ್ಧಾಂತವೆಂದೆಣಿಸಿಕೊಂಡು ಒಬ್ಬರೊಡನೊಬ್ಬರು ವಾದಮಾಡುತ್ತಿರುವರು ಎಂದು ತಿಳಿಸಿದೆ.

ಈ ದಿನ ವೈತಥ್ಯಪ್ರಕರಣದ ಕೊನೆಯ ನಾಲ್ಕು ಶ್ಲೋಕಗಳನ್ನು ಪ್ರವಚನಕ್ಕೆ ಇಟ್ಟುಕೊಂಡಿದೆ. ತೋರುವ ದ್ವೈತವೆಲ್ಲವೂ ಹುಸಿಯೇ, ಅದರ ತತ್ತ್ವವು ನಿಜವಾಗಿ ಅದ್ವೈತವೇ ಎಂಬುದನ್ನು ಮನಗಾಣುವವರ ಚಿತ್ತವು ಒಂದಾನೊಂದು ಮಟ್ಟಕ್ಕೆ ಏರಿರಬೇಕು. ಓದುವವನಿಗೆ ಕಣ್ಣು ಹೇಗೆ ಅತ್ಯವಶ್ಯವೋ ಹಾಗೆ ಈ ಸಿದ್ಧಾಂತವನ್ನು ಅರಿತುಕೊಳ್ಳುವದಕ್ಕೆ ಜಿಜ್ಞಾಸುಗಳಲ್ಲಿ ಒಂದಾನೊಂದು ಯೋಗ್ಯತೆ ಅವಶ್ಯವಾಗಿ ಇರಬೇಕು. ಈ ಯೋಗ್ಯತೆಯು ಪ್ರಯತ್ನಪಟ್ಟರೆ ಎಲ್ಲರಿಗೂ ಸಿಕ್ಕಬಹುದಾಗಿದೆ. ಆದ್ದರಿಂದ ಅಂಥ ಯೋಗ್ಯತೆಯು ಸ್ಫುಟವಾಗಿ ತೋರುವ ಅನುಭವಿಗಳ ನಡೆನುಡಿಗಳನ್ನು ನೋಡಿ ಅವರ ಅನುಕರಣೆಯಿಂದ ಪ್ರಯತ್ನಪೂರ್ವಕವಾಗಿ ಆ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಬೇಕು. ಇದನ್ನು ತಿಳಿಸುವದಕ್ಕಾಗಿ ಇಲ್ಲಿ ಜ್ಞಾನಿಗಳ ಲಕ್ಷಣವನ್ನು ತಿಳಿಸಿದೆ.

**ವೀತರಾಗಭಯಕ್ರೋಧೈರ್ಮುನಿಭಿರ್ವೇದಪಾರಗೈಃ ।**
**ನಿರ್ವಿಕಲ್ಪೋಹ್ಯಯಂ ದೃಷ್ಟಃ ಪ್ರಪಞ್ಚೋಪಶಮೋಽದ್ವಯಃ ॥**

ಈ ಆತ್ಮನಲ್ಲಿ ಯಾವ ವಿಕಲ್ಪವೂ ಇಲ್ಲ; ಇಂಥವನು ಎಂದು ಹೇಳಬಹುದಾದ ವಿಶೇಷವು ಯಾವದೂ ಇಲ್ಲ. ಇವನಲ್ಲಿ ಯಾವ ಭೇದವೂ ಇಲ್ಲ, ಇವನಿಗೆ ಎರಡನೆಯದಾದ ವಸ್ತುವೇ ಇಲ್ಲ. ಹೀಗಿದ್ದರೂ ಇವನನ್ನು ತಿಳಿದುಕೊಳ್ಳುವದು ಕಷ್ಟವಲ್ಲ; ಏಕೆಂದರೆ ಇವನು ನಮ್ಮ ಆತ್ಮನೇ ಆಗಿರುತ್ತಾನೆ. ಯಾವ ಯೋಗ್ಯತೆಯಿರುವವರು ಇದನ್ನರಿಯುತ್ತಾರೆಂದರೆ ವೀತರಾಗಭಯಕ್ರೋಧರು ಎಂದರೆ ಅಂತಃಕರಣದಲ್ಲಿರುವ ವೇದನಾರೂಪವಾದ ಇಚ್ಛೆ, ಹೆದರಿಕೆ, ಸಿಟ್ಟು ಮುಂತಾದ ದೋಷಗಳಿಲ್ಲದವರು. ಈ ದೋಷಗಳಿದ್ದವರಿಗೆ ಇಲ್ಲದಿರುವ ದ್ವೈತವೂ ಸತ್ಯವೆಂದು ಕಾಣಿಸುತ್ತಿರುವದು: ಅದರಿಂದ ಅವರಿಗೆ ಮತ್ತೆ ಈ ದೋಷಗಳುಂಟಾಗುತ್ತಿರುವವು. ಇಂಥ ದೋಷಗಳಿಲ್ಲದವರಾಗಿ ಆತ್ಮತತ್ತ್ವವನ್ನೇ ಮನನಮಾಡುವವರಾಗಿ

ರುವರಾಗಿದ್ದವರಿಗೇ ಅದು ತಿಳಿಯುತ್ತದೆ. ಅವರು ಸ್ವತಂತ್ರವಾಗಿ ಮನನಮಾಡುವವರಾಗಿರಬಾರದು, ವೇದಾಂತಾರ್ಥತತ್ಪರರಾಗಿರಬೇಕು.

ಈ ತತ್ತ್ವದ ಸ್ವರೂಪವನ್ನು ತಿಳಿದವರು ಅದರ ಅನುಸಂಧಾನದಲ್ಲಿಯೇ ಇರುತ್ತಾರೆ. ಅವರಿಗೆ ಮತ್ತೆ ಯಾವ ದ್ವೈತವೂ ಕಾಣಿಸುವದಿಲ್ಲ ; ಅವರು ವ್ಯವಹಾರದಲ್ಲಿ ಯಾರೊಬ್ಬರ ಮೆಚ್ಚಿಕೆಯನ್ನೂ ಕೋರದೆ ಜಡರಂತೆ ಕಾಣಿಸಿಕೊಳ್ಳುತ್ತಾ ಆತ್ಮನಿಷ್ಠರಾಗಿಯೇ ಇರುತ್ತಾರೆ. ಆದ್ದರಿಂದ ಜಿಜ್ಞಾಸುಗಳಾದವರೂ ಅದನ್ನು ತಿಳಿದುಕೊಳ್ಳುವದಕ್ಕೆ ಪ್ರಯತ್ನವನ್ನು ಮಾಡಬೇಕು. ಈ ತತ್ತ್ವವನ್ನು ತಿಳಿದವರು ಮನುಷ್ಯಲೋಕ, ಪಿತೃಲೋಕ, ದೇವಲೋಕ ಎಂಬ ಲೋಕತ್ರಯದಲ್ಲಿ ಪಡೆಯಬಹುದಾದ ಯಾವ ಭೋಗವನ್ನೂ ಬಯಸದೆ ಪರಮಹಂಸಪರಿವ್ರಾಜಕರಾಗಿರುತ್ತಾರೆ; ಏಕೆಂದರೆ ಅದ್ವೈತಾತ್ಮನಿಗಿಂತ ಬೇರೆ ಯಾವದೊಂದೂ ಪರಮಾರ್ಥವಲ್ಲವೆಂದು ಅವರಿಗೆ ಗೊತ್ತಾಗಿಬಿಟ್ಟಿರುತ್ತದೆ. ಆದ್ದರಿಂದ ಅದನ್ನು ಅರಿಯಬೇಕೆನ್ನುವವರಿಗೂ ವೈರಾಗ್ಯವು ಅತ್ಯವಶ್ಯವಾಗಿರುತ್ತದೆ.

ಇಷ್ಟೇ ಅಲ್ಲ, ಈ ಜ್ಞಾನಿಗಳಿಗೆ ಎಲ್ಲೆಲ್ಲಿಯೂ ಯಾವಾಗಲೂ ಒಂದೇ ಒಂದು ತತ್ತ್ವವು ಇರುತ್ತದೆ ; ಅದಕ್ಕೆ ಎರಡನೆಯದೇ ಇಲ್ಲದ್ದರಿಂದಲೂ ಅದು ತಮ್ಮ ಆತ್ಮನೇ ಆಗಿರುವದರಿಂದ 'ಎಲ್ಲೆಲ್ಲಿಯೂ ಆ ತತ್ತ್ವವೇ ಇದೆ, ಅದನ್ನು ನಾನು ಬಿಟ್ಟು ಜಾರುವ ಸಂಭವವೇ ಇಲ್ಲ' ಎಂಬ ನಿಶ್ಚಯವಾಗಿಬಿಟ್ಟಿರುತ್ತದೆ. ಜಿಜ್ಞಾಸುಗಳು ಚಿತ್ತದ ಸಮಾಧಿಯನ್ನು ಪಡೆದುಕೊಂಡಾಗ ಮಾತ್ರ ತತ್ತ್ವಪ್ರಾಪ್ತಿಯಾಗಿರುವದೆಂಬ ತಪ್ಪುತಿಳಿವಳಿಕೆಯನ್ನು ಕೈಬಿಡಬೇಕು, ಅದ್ವಿತೀಯವಾದ ಪರಮಾರ್ಥತತ್ತ್ವವೇ ನಾನು ಎಂಬ ಅರಿವನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಕು ಎಂಬುದು ಕಾರಿಕೆಗಳ ಅಭಿಪ್ರಾಯ.

★★★★★

# ಅಂತರ್ಯಾಮಿಯ ವಿಚಾರ

**27-4-1955**

**ಗೌರೀಪುರಮಠಾಧೀಶರಾದ**
**ಶ್ರೀ ಶ್ರೀ ಶ್ರೀನಿವಾಸಸದಾನಂದ ಚಿಂತಾಮಣಿಸ್ವಾಮಿಗಳವರು**

**ಬ್ರಹ್ಮಸೂತ್ರಭಾಷ್ಯ 1-2-18ರಿಂದ 20ರವರೆಗಿನ ಸೂತ್ರಗಳ** ಅಭಿಪ್ರಾಯವೇನೆಂದರೆ 'ಈ ಲೋಕವನ್ನೂ ಪರಲೋಕವನ್ನೂ ಸರ್ವಭೂತಗಳನ್ನೂ ಒಳಗಿದ್ದುಕೊಂಡು ಕಟ್ಟಿನಲ್ಲಿಟ್ಟುಕೊಂಡಿರುವ ಅಂತರ್ಯಾಮಿ ಯಾರು? ಹೇಳು' ಎಂದು ಉದ್ದಾಲಕನು ಯಾಜ್ಞವಲ್ಕ್ಯನನ್ನು ಕೇಳಿದ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಶ್ರುತಿಯಲ್ಲಿ ಹೇಳಿರುವ ಅಂತರ್ಯಾಮಿ ಯಾರು? ಎಂಬ ಸಂಶಯವುಂಟಾಗಲು ಇದು ಯವದೋ ಅಪ್ರಸಿದ್ಧವಾದ ಒಂದು ವಸ್ತು, ಪೃಥಿವ್ಯಾದ್ಯಭಿಮಾನಿಯಾದ ಯಾವದೋ ದೇವತೆ, ಅಥವಾ ಯೋಗಮಹಿಮೆಯಿಂದ ಎಲ್ಲರ ಒಳಹೊಕ್ಕಿರುವ ಯಾವನೋ ಮಹಾತ್ಮನು ಎಂದು ಪೂರ್ವಪಕ್ಷದಲ್ಲಿ ಮೂರು ಬಗೆಯ ಉತ್ತರವನ್ನು ಹೇಳಿದೆ. ಈ ಅಂತರ್ಯಾಮಿಯು ಪರಮಾತ್ಮನೇ ; ಏಕೆಂದರೆ ಆತನ ಅಸಾಧಾರಣಧರ್ಮಗಳು ಇಲ್ಲಿ ಕಂಡುಬರುತ್ತಿವೆ. ಪೃಥಿವ್ಯಾದಿಗಳನ್ನುಕೂಡ ನಿಯಮನಮಾಡುವದು ಮತ್ತೆ ಯಾರಿಗೂ ಶಕ್ಯವಿಲ್ಲ. ಯಾಜ್ಞವಲ್ಕ್ಯನು ಉತ್ತರದಲ್ಲಿ 'ಇವನು ನಿನ್ನ ಆತ್ಮನು' ಎಂದಿರುವದು ಪರಮಾತ್ಮನಿಗೆ ಮಾತ್ರ ಹೊಂದುತ್ತದೆ. ಪೃಥಿವ್ಯಾದಿ ದೇವತೆಗಳಿಗೂ ಅಂತರ್ಯಾಮಿಯ ಸ್ವರೂಪವು ತಿಳಿಯದು ಎಂದಿರುವದರಿಂದ ಇದು ದೇವತೆಯ ವಿಷಯವಲ್ಲವೆನ್ನಬೇಕು. ಇದು ಸರ್ವಕಾರಣವೆಂದು ಸಾಂಖ್ಯರು ಒಪ್ಪಿರುವ ಅಚೇತನವಾದ ಪ್ರಧಾನವಲ್ಲ; ಏಕೆಂದರೆ ಇದನ್ನು 'ಅದೃಷ್ಟನಾದ ದ್ರಷ್ಟೃ ಎಂದು ಮುಂತಾಗಿ ಇಲ್ಲಿ ವರ್ಣಿಸಿದೆ. ದ್ರಷ್ಟೃ (ನೋಡುವವನು) ಎಂಬುದು ಚೇತನಧರ್ಮವು. ಇನ್ನು ಇದು ಜೀವನೂ ಅಲ್ಲ; ಏಕೆಂದರೆ ವಿಜ್ಞಾನಾತ್ಮನಿಗೂ ಒಳಗೆ ಇದ್ದುಕೊಂಡು ಅವನನ್ನು ಅಂತರ್ಯಾಮಿಯು ನಿಯಮಿಸುತ್ತಾನೆಂದು ಯಾಜ್ಞವಲ್ಕ್ಯನು ನುಡಿದಿರುತ್ತಾನೆ. ಒಂದು ಶರೀರದಲ್ಲಿ ಇಬ್ಬರು ಆತ್ಮರು ಇರುವದು ಹೇಗೆ ? ಎಂದು ಶಂಕಿಸಬಾರದು;

ಏಕೆಂದರೆ ಅವಿದ್ಯೆಯಿಂದ ಕಲ್ಪಿತವಾಗಿರುವ ದೇಹಾದಿಸಂಜಾತದಿಂದ ಜೀವನೆಂದೂ ನಿತ್ಯನಿರತಶಯವಾದ ಉತ್ಕೃಷ್ಟೋಪಾಧಿಯಿಂದ ಅಂತರ್ಯಾಮಿಯೆಂದೂ ಹೇಳಬಹುದಾಗಿದೆ ಎಂಬುದು ಅಧಿಕರಣಭಾಷ್ಯದ ಸಾರವು.

ಶ್ರೀಗಳು ಅನುವಾದದಲ್ಲಿ ಹೀಗೆಂದರು : ವೇದಾಂತಶಾಸ್ತ್ರವು ನಮುಗೆಲ್ಲರಿಗೂ ಸಮಾನವಾಗಿರುವ ಸಂಸಾರದುಃಖವನ್ನು ಕಳೆಯುವ ಜ್ಞಾನವನ್ನು ತಿಳಿಸುತ್ತದೆ. ಜನಕನಂಥ ಚಕ್ರವರ್ತಿಗಳುಕೂಡ ಇದನ್ನು ಉಪಯೋಗಿಸಿಕೊಂಡರು. ಅತನು ಏರ್ಪಡಿಸಿದ್ದ ಮಹಾಯಜ್ಞವೊಂದರಲ್ಲಿ ಈ ಚರ್ಚೆಯು ನಡೆಯಿತು. 'ಸೂತ್ರನನ್ನೂ ಅವನೊಳಗಿದ್ದುಕೊಂಡು ಅವನನ್ನು ಆಡಿಸುತ್ತಿರುವ ಅಂತರ್ಯಾಮಿಯನ್ನೂ ಹೇಳು!' ಎಂದು ಉದ್ದಾಲಕನು ಪ್ರಶ್ನೆಮಾಡಿರುತ್ತಾನೆ. ಇದು ಕೇವಲ ಆಗಮಗಮ್ಯವಾದ ವಿಷಯ. ಹೊರಗಿನ ಪ್ರತ್ಯಕ್ಷಾದಿ ಪ್ರಮಾಣಗಳಿಂದ ತಿಳಿಯತಕ್ಕದ್ದಲ್ಲ ; ಅನುಭವಿಗಳ ಉಪದೇಶವೇ ಇದಕ್ಕೆ ಬೇಕು. ದೇವತೆಗಳು ಮುಂತಾದವರನ್ನು ಅವರೊಳಗಿದ್ದು ಅವರಿಗೂ ತಿಳಿಯದಂತೆಯೇ ನಿಯಮದಲ್ಲಿಟ್ಟುಕೊಂಡಿರುವ ಮಹಾಶಕ್ತಿ ಯಾವದು?- ಎಂಬುದು ಇಲ್ಲಿಯ ವಿಚಾರದ ವಿಷಯ. ಪೂರ್ವಪಕ್ಷಿಗಳು ಹೊರಗಿನ ದೃಷ್ಟಿಯಿಂದ ಒಬ್ಬ ದೇವತೆಯೇ ಅಂತರ್ಯಾಮಿ, ಪ್ರಧಾನವೇ ಅದು, ಅವನು ಒಬ್ಬ ಯೋಗಿಯಾಗಿರಬಹುದು, ಜೀವನೇ ಅವನು ಎಂದು ಮುಂತಾಗಿ ಕಲ್ಪಿಸಿರುತ್ತಾರೆ. ನಮ್ಮೆಲ್ಲರಿಗೂ ಆತ್ಮನಾಗಿರುವ ಪರಮಾತ್ಮನೇ ಅವನು ಎಂಬುದು ಸಿದ್ಧಾಂತವು. ನಾನು ಎಂಬ ಜೀವನಿಗಿಂತಲೂ ಬೇರೆಯಾಗಿ ನಮುಗೆಲ್ಲ ಅಂತರ್ಯಾಮಿಯಾಗಿ ಇರುವ ಸರ್ವಸಾಕ್ಷಿಸ್ವರೂಪನಾದ ಪರಮಾತ್ಮನೊಬ್ಬನಿದಾನೆ ಎಂಬುದನ್ನು ಇಲ್ಲಿ ತಿಳಿಕೊಟ್ಟಿದೆ. ಈ ಜ್ಞಾನದಿಂದಲೇ ನಮುಗೆ ಸರ್ವದುಃಖಪರಿಹಾರವೂ ಆಗುವದೆಂದು ವೇದಾಂತವು ಹೇಳುತ್ತದೆಯಾದ್ದರಿಂದ ಇದನ್ನು ಅನುಭವಕ್ಕೆ ತಂದುಕೊಳ್ಳುವದಕ್ಕೆ ನಾವೆಲ್ಲರೂ ಯತ್ನಿಸಬೇಕು.

★★★★★

# ಅದೇ ನೀನಾಗಿರುವೆ

**28-4-1955**

**ಬ್ರ॥ಶ್ರೀ॥ಎಸ್. ವಿಠಲಶಾಸ್ತ್ರಿಗಳವರು**

**ಛಾಂದೋಗ್ಯದಲ್ಲಿ 6-8-1,2** ಇವುಗಳ ಭಾಷ್ಯದಲ್ಲಿ ಉದ್ದಾಲಕ ಆರುಣಿಯು ಶ್ವೇತಕೇತುವಿಗೆ ನೀನು ನಿಜವಾಗಿಯೂ ಪರಮಾತ್ಮಸ್ವರೂಪನೇ ಆದರೂ ನಿನ್ನನ್ನು ಸಂಸಾರಿ ಎಂದು ತಿಳಿದುಕೊಂಡಿರುವೆ. ಆ ಪರಮಾರ್ಥಸತ್ಯವಾದ ಸದ್ಬ್ರಹ್ಮವೇ ಎಲ್ಲರಿಗೂ ಆತ್ಮನು ಎಂಬುದನ್ನು ಮನಗಾಣಿಸಿಕೊಡುವದಕ್ಕಾಗಿ ಒಬ್ಬನೇ ಆದ ಪರಮಾತ್ಮನಿಂದ ಪ್ರಪಂಚವು ಸೃಷ್ಟಿಯಾಗಿರುವದೆಂಬುದನ್ನೂ, ಅದರಲ್ಲಿ ಕಾಣುವ ಶರೀರಗಳಲ್ಲಿರುವ ಮನಸ್ಸಿನಲ್ಲಿ ಪರಮಾತ್ಮನು-ಕನ್ನಡಿಯಲ್ಲಿ ಮನುಷ್ಯನು ಪ್ರತಿಬಿಂಬರೂಪದಿಂದ ಹೊಕ್ಕಿರುವಂತೆ - ಒಳಹೊಕ್ಕಿರುತ್ತಾನೆಂಬುದನ್ನೂ ಆ ಮನಸ್ಸೆಂಬುದು ಅನ್ನಮಯವಾಗಿದ್ದು ತೇಜಸ್ಸು, ಅಪ್ಪು- ಇವುಗಳ ವಿಕಾರವಾಗಿರುವ ವಾಕ್ಪ್ರಾಣಗಳೊಡನೆ ಸೇರಿಕೊಂಡಿರುತ್ತದೆ ಎಂಬುದನ್ನೂ ತಿಳಿಸಿಕೊಟ್ಟನೆಂಬುದು ಹಿಂದಿನ ಗ್ರಂಥದ ಸಾರವು.

ಈ ಖಂಡದಲ್ಲಿರುವ ಎರಡು ಶ್ರುತಿವಚನಗಳಲ್ಲಿ ಹೇಳಿರುವದರ ಸಾರವೇನೆಂದರೆ: ಜೀವನು ಮನಸ್ಸಿನಲ್ಲಿದ್ದುಕೊಂಡು ಮನೋಮಯನಾಗಿ ದರ್ಶನ ಶ್ರವಣಮನನಾದಿಗಳನ್ನು ಮಾಡುತ್ತಿರುತ್ತಾನೆ. ಈ ವಿಶೇಷರೂಪವು ಅವನಿಗೆ ಮನಸ್ಸೆಂಬ ಉಪಾಧಿಯಿಂದಲೇ ಆದದ್ದು. ಹೇಗೆಂದರೆ, ಆ ಮನಸ್ಸು ಇಲ್ಲವಾಗಲು ಇಂದ್ರಿಯವಿಷಯಗಳ ಸಂಬಂಧವೂ ಇಲ್ಲದೆ ಅವನು ತನಿನಿದ್ರೆಯಲ್ಲಿ ತನ್ನ ಆತ್ಮನೇ ಆದ ಬ್ರಹ್ಮದಲ್ಲಿಯೇ ಸೇರಿಕೊಳ್ಳುತ್ತಾನೆ. ಆಗ ಅವನಿಗೆ ಸ್ವಪಿತಿ' (ನಿದ್ರಿಸುತ್ತಾನೆ) ಎಂಬ ಹೆಸರು ಬರುತ್ತದೆ; ಲೋಕದಲ್ಲಿ ಪ್ರಸಿದ್ಧವಾಗಿರುವ ಈ ಸ್ವಪಿತಿ ಎಂಬ ಮಾತಿನಲ್ಲಿಯೂ ಸ್ವಂ (ತನ್ನನ್ನು) ಅಪಿತಿ (ಸೇರಿ ಲಯವಾಗುತ್ತಾನೆ)- ಎಂದು ತನ್ನ ಸ್ವರೂಪದಲ್ಲಿ ಸೇರುತ್ತಾನೆಂಬ ಭಾವವಿರುತ್ತದೆ. ಹೀಗೆ ಸ್ವರೂಪದಲ್ಲಿ ಸೇರಿಕೊಳ್ಳುವದರಿಂದಲೇ ಅವನಿಗೆ ವಿಶ್ರಾಂತಿಯುಂಟಾಗುತ್ತದೆ.

ಹೇಗೆ ದಾರಕ್ಕೆ ಕಟ್ಟಿಹಾಕಿರುವ ಪಕ್ಷಿಯು ಅತ್ತಿತ್ತ ಹಾರಾಡಿ ಎಲ್ಲಿಯೂ ವಿಶ್ರಾಂತಿ ಸ್ಥಾನವು ಸಿಕ್ಕದೆ ತನ್ನನ್ನು ಕಟ್ಟಿಹಾಕಿದ್ದ ಸ್ಥಲಕ್ಕೇ ಬಂದು ನಿಲ್ಲುವದೋ ಹಾಗೆಯೇ ಮನಸ್ಸೆಂಬ ಉಪಾಧಿಯುಳ್ಳ ಜೀವನು ತನಗೆ ನಿತ್ಯಸಂಬದ್ಧನಾಗಿರುವ ಪರಮಾತ್ಮನನ್ನೇ ಸೇರಿಕೊಳ್ಳುತ್ತಾನೆ. ಆದ್ದರಿಂದ ಜೀವನ ತತ್ತ್ವವು ಪರಮಾತ್ಮನೇ.

ಶ್ರೀಗಳು ಅನುವಾದದಲ್ಲಿ ಇಂತೆಂದರು; ಅನಾದಿಕಾಲದಿಂದ ನಮಗೆ ಪ್ರಪಂಚವಾಸನೆಯಿದ್ದುಬಿಟ್ಟಿದೆ ; ಅದನ್ನೇ ಹೆಚ್ಚಿಸುವ ವ್ಯವಹಾರವನ್ನು ಮತ್ತೆಮತ್ತೆ ಮಾಡುತ್ತಲೂ ಇದೇವೆ. ಆದರೆ ಈ ಅವಿದ್ಯಾವಾಸನೆಯನ್ನು ಕಳೆಯುವ ಪ್ರಯತ್ನವನ್ನು ನಾವು ಮಾಡಿಲ್ಲ. ಪರಮಾತ್ಮತ್ವವು ನಮ್ಮ ಸ್ವಭಾವವೇ ಆದರೂ ಅದನ್ನು ಅರಿತು ನಮ್ಮ ಸ್ವರೂಪದಲ್ಲಿ ನಿಲ್ಲುವದಕ್ಕೆ ಪ್ರಯತ್ನಿಸುತ್ತಿಲ್ಲ. ಈಗಿನ ಸ್ಥಿತಿಯಲ್ಲಿ ಜನರು, ಸರಕಾರ-ಎಲ್ಲರೂ ಬಗೆಬಗೆಯ ಚಟುವಟಿಕೆಗಳಲ್ಲಿ ವ್ಯಾಪೃತರಾಗಿರುತ್ತಾರೆ. ಇದು ದೇಶಾಭಿವೃದ್ಧಿಯ ದೃಷ್ಟಿಯಿಂದ ಯುಕ್ತವೂ ಆಗಿದೆ. ಆದರೆ ಎಲ್ಲಾ ಅಭ್ಯುದಯಗಳಿಗಿಂತಲೂ ಹೆಚ್ಚಿನದಾದ ಪರಮಪುರುಷಾರ್ಥವನ್ನು ಕೈಬಿಡುವದು ಯುಕ್ತವಲ್ಲ. ಇದನ್ನು ನೆನಪುಕೊಡುವದಕ್ಕೇ ಉಪನಿಷತ್ತುಗಳು ಬಂದಿರುತ್ತವೆ. ಸರ್ವಸಾಧಾರಣವಾಗಿ ರುವ ಸುಷುಪ್ತಿಯ ವಿಚಾರದಿಂದ ಎಂಥ ಮಹತ್ತ್ವದ ನೆನಪು ನಮಗೆ ಆಗುತ್ತದೆ ಎಂಬುದನ್ನು ಈ ದಿನದ ಪ್ರವಚನಭಾಗದಿಂದ ನಾವು ತಿಳಿದುಕೊಳ್ಳಬಹುದು. ನಿತ್ಯಸಿದ್ಧವಾದ ನಮ್ಮ ಆನಂದಸ್ವಭಾವವನ್ನು ಜ್ಞಾನದಿಂದ ಅರಿತುಕೊಂಡು ನಾವು ಕೃತಾರ್ಥರಾಗಬೇಕು.

★★★★★

# ಕ್ಷೇತ್ರಜ್ಞೇಶ್ವರೈಕತ್ವಜ್ಞಾನದಿಂದಾಗುವ ಫಲ

## 29-4-1955

**ಬ್ರ॥ಶ್ರೀ॥ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿ**

**ಗೀತಾಭಾಷ್ಯ 13ನೆಯ ಅಧ್ಯಾಯದ 26ರಿಂದ 30ರವರೆಗಿನ ಶ್ಲೋಕಗಳ** ಭಾಷ್ಯಭಾಗದಲ್ಲಿ ಕ್ಷೇತ್ರಜ್ಞೇಶ್ವರೈಕತ್ವಜ್ಞಾನದಿಂದಾಗುವ ಫಲವನ್ನು ವರ್ಣಿಸಿದೆ. ಲೋಕದಲ್ಲಿರುವ ಸ್ಥಾವರಜಂಗಮಾತ್ಮಕವಾದ ಪ್ರಾಣಿಗಳೆಲ್ಲವೂ ಕ್ಷೇತ್ರಕ್ಷೇತ್ರಜ್ಞರ ಸಂಯೋಗದಿಂದ ಉಂಟಾಗಿರುತ್ತವೆ. ಈ ಸಂಯೋಗವೆಂಬುದು ಹಗ್ಗಕ್ಕೂ ಗಡಿಗೆಗೂ ಆಗುವ ಸಂಬಂಧವಲ್ಲ; ನೂಲುಬಟ್ಟೆಗಳ ಸಂಬಂಧವೂ ಅಲ್ಲ. ಕ್ಷೇತ್ರಜ್ಞನು ಪರಮಾರ್ಥಸತ್ಯವು, ಕ್ಷೇತ್ರವು ಮಿಥ್ಯೆ-ಎಂಬುದನ್ನರಿಯದ್ದರಿಂದ ಒಂದರ ಧರ್ಮವನ್ನು ಮತ್ತೊಂದರಲ್ಲಿ ಅಧ್ಯಾಸಮಾಡಿಕೊಂಡಿರುವದೇ ಈ ಸಂಯೋಗವು. ಇದರಿಂದಲೇ ಆತ್ಮನು ಸಂಸಾರಿಯೆಂದು ಕಾಣಿಸುತ್ತಿರುವನು. ನಿಜವಾಗಿ ಈ ಆತ್ಮನು ಪರಮಾತ್ಮಸ್ವರೂಪನೇ ಎಂದೂ ದೇಹೇಂದ್ರಿಯಗಳೆಲ್ಲಕ್ಕೂ ಒಡೆಯನಾಗಿರುವವನಾಗಿ ಸಮಸ್ತಭೂತಗಳಲ್ಲಿಯೂ ಇರುವನೆಂದೂ ಕಾರ್ಯಕರಣಸಂಘಾತಗಳು ನಾಶವಾದರೂ ತಾನು ಹಾಗೇ ಇರುವ ನಿರ್ವಿಶೇಷಾದ್ವೈತಸ್ವರೂಪನೆಂದೂ ತಿಳಿಯುವದೇ ಈ ಸಂಯೋಗಕ್ಕೆ ಪರಿಹಾರವು. ಈ ಸಮ್ಯಗ್ಜ್ಞಾನದಿಂದ ಶರೀರಾದಿಗಳನ್ನೇ ಆತ್ಮನೆಂದುಕೊಂಡು ಮತ್ತೆಮತ್ತೆ ಶರೀರವನ್ನೇ ಪಡೆಯುತ್ತಾ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿರುವದು ತಪ್ಪುವದು, ಪರಗತಿಯು ದೊರಕುವದು, ಆತ್ಮನು ನಿಜವಾಗಿ ಅಕರ್ತೃವೇ, ಕ್ರಿಯೆಗಳೆಲ್ಲ ಅವಿದ್ಯಾತ್ಮಕವಾದ ಪ್ರಕೃತಿಯಿಂದಾಗುವವೇ-ಎಂದು ತಿಳಿಯುವದೇ ನಿಜವಾದ ಜ್ಞಾನವು. ಪ್ರಾಣಿಗಳು ಬೇರೆಬೇರೆಯಾಗಿರುವಂತೆ ತೋರುತ್ತಿದ್ದರೂ ಒಬ್ಬ ಪರಮಾತ್ಮನಲ್ಲಿಯೇ ಇದ್ದುಕೊಂಡು ಆತನಿಂದಲೇ ಹೊರತೋರಿಕೊಳ್ಳುವವೆಂದು ತಿಳಿದವನು ಬ್ರಹ್ಮಸ್ವರೂಪವನ್ನೇ ಪಡೆದುಕೊಳ್ಳುವನು - ಎಂಬುದು ಶ್ಲೋಕಗಳ ಭಾಷ್ಯದ ಸಾರವು.

ಶ್ರೀಗಳು ಅನುವಾದದಲ್ಲಿ ಹೀಗೆಂದರು; ಬಂಧದಿಂದ ಹೇಗೆ ಬಿಡುಗಡೆಯಾಗುವದೆಂಬುದನ್ನು ಮೀಮಾಂಸಕರೂ ಸಾಂಖ್ಯರೂ ಬೇರೆಬೇರೆಯ ರೀತಿಯಲ್ಲಿ ವರ್ಣಿಸಿರುತ್ತಾರೆ. ಧರ್ಮಾಧರ್ಮಗಳ ಫಲವಾಗಿ ಜೀವನು ಶರೀರವನ್ನು ಪಡೆಯುತ್ತಾನೆ, ಸಂಸಾರದಲ್ಲಿ ಸಿಕ್ಕುತ್ತಾನೆ; ನಿತ್ಯನೈಮಿತ್ತಿಕ ಕರ್ಮಗಳನ್ನು ಮಾತ್ರ ಮಾಡುತ್ತಿದ್ದರೆ ಒಳ್ಳೆಯಕೆಟ್ಟಫಲಗಳಾಗದೆ ಮುಕ್ತಿಯಾಗುವದು-ಎಂದು ಮೀಮಾಂಸಕರ ಅಭಿಪ್ರಾಯ. ಪ್ರಕೃತಿಪುರುಷ ವಿವೇಕವಿಲ್ಲದ್ದರಿಂದ ಪ್ರಕೃತಿ ಧರ್ಮವನ್ನು ತನ್ನ ಮೇಲೆ ಹಾಕಿಕೊಂಡು ಬಂಧವನ್ನು ಅನುಭವಿಸುತ್ತಿರುತ್ತಾನೆ ; ಅವುಗಳ ವಿವೇಕದಿಂದ ಮುಕ್ತಿಯಾಗುವದು-ಎಂದು ಸಾಂಖ್ಯರ ಮತ. ಆದರೆ ಆತ್ಮರು ಸಾಂಖ್ಯರು ಹೇಳುವಂತೆ ಅನೇಕರಿಲ್ಲ, ಒಬ್ಬನೇ. ಪ್ರಕೃತಿಯು ನಿಜವಾಗಿರುವದಿಲ್ಲ, ಅದು ಮಾಯಿಕವಾದದ್ದು ; ಇವೆರಡರ ಪರಸ್ಪರಾಧ್ಯಾರೋಪದಿಂದ ಜನ್ಮಸುಖದುಃಖಾದಿಗಳಿಗೆ ಕಾರಣವಾಗಿವೆ. ಆತ್ಮನು ಜನ್ಮಾದಿವಿಕಾರಗಳಿಲ್ಲದವನಾಗಿ ಎಲ್ಲಾ ಭೂತಗಳ ಶರೀರಗಳಲ್ಲಿಯೂ ನಿತ್ಯಮುಕ್ತವಾದ ತನ್ನ ಒಂದೇ ರೂಪದಿಂದ ಇರುತ್ತಾನೆ ; ಪ್ರಕೃತಿಯೆಂಬುದು ಅವನಲ್ಲಿಯೇ ಬಗೆಬಗೆಯಾಗಿ ತೋರಿಕೊಳ್ಳುತ್ತಿದೆ ಎಂಬ ಅರಿವು ಆದರೆ ಬ್ರಹ್ಮಾತ್ಮತ್ವಪ್ರಾಪ್ತಿಯಾಗುವದು. ನಾವು ಯಾವಾಗಲೂ ಬ್ರಹ್ಮಸ್ವರೂಪವೇ ಆಗಿ ರುವದರಿಂದ ಜ್ಞಾನಮಾತ್ರದಿಂದ ಈ ಬ್ರಹ್ಮಾತ್ಮತ್ವಪ್ರಾಪ್ತಿಯಾದಂತೆ ಆಗುತ್ತದೆ ಎಂಬುದು ವೇದಾಂತಿಗಳ ಉಪದೇಶವು.

★★★★★

# ಬ್ರಹ್ಮವು ಪ್ರಪಂಚಕ್ಕೆ ಕಾರಣವೆ?

**30-4-1955**

**ಬ್ರ॥ಶ್ರೀ॥ವಿದ್ವಾನ್ ಚಂದ್ರಶೇಖರಭಟ್ಟ ಪಾಟಣಕರ**

ಬ್ರಹ್ಮಸೂತ್ರ **2-1-9**ರ ಭಾಷ್ಯದಲ್ಲಿ ಪ್ರಪಂಚವು ಸ್ಥೂಲವಾಗಿದೆ, ಸಾವಯವವಾಗಿದೆ, ಅಚೇತನವಾಗಿದೆ, ಪರಿಚ್ಛಿನ್ನವಾಗಿದೆ, ಅಶುದ್ಧವಾಗಿದೆ. ಇಂಥ ಧರ್ಮವುಳ್ಳ ಕಾರ್ಯಕ್ಕೆ ಅದ್ವಿತೀಯವಾದ ಬ್ರಹ್ಮವು ಕಾರಣವು ಎಂದು ಒಪ್ಪಿದರೆ ಪ್ರಲಯದಲ್ಲಿ ಈ ಧರ್ಮಗಳೆಲ್ಲ ಬ್ರಹ್ಮಕ್ಕೆ ಅಂಟಿಕೊಳ್ಳುವವೆಂದಾಗುತ್ತದೆ; ಮತ್ತೆ ಸೃಷ್ಟಿಯಾಗುವಾಗ ಭೋಕ್ತೃ ಭೋಗ್ಯಾದಿರೂಪದಿಂದ ವಿಂಗಡಿಸಿಕೊಳ್ಳುವದಕ್ಕೆ ಕಾರಣವಿರುವದಿಲ್ಲ; ಬ್ರಹ್ಮದಲ್ಲಿ ಒಂದಾದವರೂ ಮತ್ತೆ ಹುಟ್ಟಬಹುದಾದರೆ ಮುಕ್ತರೂ ಹುಟ್ಟಬಹುದಾಗುತ್ತದೆ. ಜಗತ್ತು ಪ್ರಲಯದಲ್ಲಿಯೂ ಹಾಗೆಯೇ ಉಳಿದುಕೊಂಡಿದೆ ಎಂದರೆ ಪ್ರಲಯವೇ ಇಲ್ಲವೆಂದಾಗುವದು. ಬ್ರಹ್ಮಕ್ಕಿಂತ ಪ್ರಪಂಚವು ಬೇರೆಯೆಂದೇ ಆಗುವದು - ಎಂಬ ದೋಷವನ್ನು ತೆಗೆದ ಸಾಂಖ್ಯರ ಆಕ್ಷೇಪಗಳಿಗೆ ಇಲ್ಲಿ ಪರಿಹಾರವನ್ನು ಹೇಳಿದೆ.

ಗಡಿಗೆ, ಅಸಲಿ ಮುಂತಾದವು ಮಣ್ಣು, ಚಿನ್ನ - ಮುಂತಾದವುಗಳಲ್ಲಿ ಒಂದಾದರೂ ತಮ್ಮ ಧರ್ಮಗಳನ್ನು ಅವಕ್ಕೆ ಅಂಟಿಸುವದಿಲ್ಲ. ಕಾರ್ಯವು ಲಯವಾದರೆ ಕಾರಣಕ್ಕೆ ತನ್ನ ಧರ್ಮವನ್ನು ಅಂಟಿಸುವದೆಂಬುದಕ್ಕೆ ದೃಷ್ಟಾಂತವೇ ಇಲ್ಲ. ಕಾರ್ಯವು ಕಾರಣರೂಪವೇ ಆಗಿದ್ದರೂ ಕಾರಣವು ಕಾರ್ಯರೂಪವಲ್ಲವೆಂಬುದು ನಮ್ಮ ಸಿದ್ಧಾಂತ. ಇದೂ ಅಲ್ಲದೆ ಕಾರ್ಯವು ಯಾವಾಗಲೂ ಕಾರಣಕ್ಕಿಂತ ಬೇರೆಯಾಗಿರುವದೇ ಇಲ್ಲವೆಂಬುದು ನಮ್ಮ ಮತವಾದ್ದರಿಂದ ಪ್ರಲಯದಲ್ಲಿ ಮಾತ್ರ ಈ ದೋಷವನ್ನು ಹೇಳುವದು ಸರಿಯಲ್ಲ ; ಕಾರ್ಯವು ಅವಿದ್ಯಾಕಲ್ಪಿತವಾಗಿರುವದರಿಂದ ಆದರ ಧರ್ಮವು ಯಾವಕಾಲಕ್ಕೂ ಕಾರಣಕ್ಕೆ ಅಂಟಿಕೊಂಡಿರುವದಿಲ್ಲ. ಮಾಯಾವಿಗೆ ಮಾಯೆಯು ಅಂಟದಿರುವಂತೆ ಪ್ರಪಂಚದ ಅಂಟು ಆತ್ಮನಿಗೆ ಇರುವದಿಲ್ಲವೆಂಬುದೇ ಸಂಗತ. ಸೃಷ್ಟಿಸ್ಥಿತಿಲಯಗಳೆಂಬಿವು ಮಾಯೆಯೇ ಎಂದು ವೇದಾಂತಿಗಳು ಹೇಳುತ್ತಾರೆ.

ಸುಷುಪ್ತಿಸಮಾಧಿಗಳಲ್ಲಿ ಸ್ವಾಭಾವಿಕವಾಗಿ ಆತ್ಮನಲ್ಲಿ ಜಗತ್ತು ಒಂದಾದರೂ ಮತ್ತೆ ಎಚ್ಚರವಾಗುತ್ತಲೂ ಮಿಥ್ಯಾಜ್ಞಾನಕೃತವಾದ ಅದು ಇದ್ದೇಇರುವಂತೆ ಇಲ್ಲಿಯೂ ಸ್ಥಿತಿಕಾಲದಲ್ಲಿರಬಹುದಾಗಿದೆ. ಸ್ಥಿತಿ ಕಾಲದಲ್ಲಿ ಮಿಥ್ಯಾಜ್ಞಾನಕಲ್ಪಿತ ಪ್ರಪಂಚವಿಭಾಗವಿರುವಂತೆ ಮಿಥ್ಯಾಜ್ಞಾನದಿಂದಾದ ವಿಭಾಗಶಕ್ತಿಯು ಪ್ರಲಯದಲ್ಲಿಯೂ ಇರಬಹುದಾಗಿದೆ. ಮಿಥ್ಯಾಜ್ಞಾನವಿರುವವರು ಮತ್ತೆ ಸೃಷ್ಟಿಯಲ್ಲಿ ಹುಟ್ಟುತ್ತಾರಾದರೂ ಸಮ್ಯಗ್ಜ್ಞಾನದಿಂದ ತಪ್ಪು ತಿಳಿವನ್ನು ಕಳೆದುಕೊಂಡ ಮುಕ್ತರು ಹುಟ್ಟುವದಕ್ಕೆ ಕಾರಣವೇ ಇಲ್ಲ. ಪ್ರಲಯದಲ್ಲಿ ಪ್ರಪಂಚವು ಬೇರೆ ಇದೆ ಎಂದು ನಾವು ಹೇಳುವದೇ ಇಲ್ಲವಾದ್ದರಿಂದ ಆ ದೋಷವು ನಮ್ಮ ಪಕ್ಷದಲ್ಲಿಲ್ಲ-ಎಂಬುದು ಭಾಷ್ಯದ ಸಾರವು.

**ಶ್ರೀಗಳು** ಅನುವಾದದಲ್ಲಿ ಇಂತೆಂದರು: ತಾರ್ಕಿಕರು ವೇದಾಂತಪ್ರಕ್ರಿಯೆಯ ಮೇಲೆ ಹಾಕುವ ದೋಷಕ್ಕೆ ತರ್ಕದಿಂದಲೇ ಉತ್ತರವನ್ನು ಹೇಳುವದು ಯುಕ್ತ. ಹಾಗೆ ಇಲ್ಲಿಯೂ ದೃಷ್ಟಾಂತದಿಂದಲೇ ಸಾಂಖ್ಯರ ಆಕ್ಷೇಪಕ್ಕೆ ಉತ್ತರವನ್ನು ಕೊಟ್ಟಿದೆ. ಆದರೆ ಆತ್ಮನಿಂದ ಸೃಷ್ಟಿಸ್ಥಿತಿ ಪ್ರಲಯಗಳು ಆಗಿವೆ ಎಂಬುದು ಅವಿದ್ಯೆ ಎಂಬುದು ವೇದಾಂತದ ಅಸಾಧಾರಣಪ್ರಕ್ರಿಯೆ. ''ಅನಾದಿಮಾಯೆಯಿಂದ ಸುಪ್ತನಾದ ಜೀವನು ಎಚ್ಚತ್ತಾಗ ತಾನು ಅಜನೂ ಅನಿದ್ರನೂ ಅಸ್ವಪ್ನನೂ ಆದ ಅದ್ವಿತೀಯಬ್ರಹ್ಮವೆಂಬುದನ್ನು ಅರಿತುಕೊಳ್ಳುವನು'' ಎಂಬ ಗೌಡಪಾದರ ಉಕ್ತಿಯನ್ನು ಇಲ್ಲಿ ಆಚಾರ್ಯರು ಉದಾಹರಿಸಿರುವದು ಅತ್ಯಂತಸಮಂಜಸವಾಗಿದೆ. ಇದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಸೃಷ್ಟಿಯಲ್ಲಿ ಪ್ರಪಂಚವು ತೋರುವಾಗಲಾಗಲಿ, ಪ್ರಲಯದಲ್ಲಾಗಲ್ಲಿ ಅದರ ಧರ್ಮಗಳು ಆತ್ಮನಿಗೆ ಅಂಟುವದೆಂಬುದು ಅತ್ಯಂತ ಅಸಂಭವವು. ಮಾಯೆಯ ದೋಷವು ಮಾಯಾವಿಗೆ ಅಂಟದಂತೆಯೇ ಇದು- ಎಂದು ಅನುಭವಾನುಸಾರವಾದ ಉತ್ತರವನ್ನು ಇಲ್ಲಿ ಹೇಳಿದೆ. ಈ ವೇದಾಂತಪ್ರಕ್ರಿಯೆಯನ್ನು ಅರಿತುಕೊಂಡರೆ ತಾರ್ಕಿಕರ ಅಂಜಿಕೆಯಿಲ್ಲದೆ ತತ್ತ್ವವನ್ನು ಅನುಭವಕ್ಕೆ ತಂದುಕೊಂಡು ನಲಿಯಬಹುದು.

★★★★★

# ಉಪನಿಷತ್ಪ್ರಾಮಾಣ್ಯ

**1-5-1955**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

ಬೃಹದಾರಣ್ಯಕ ಭಾಷ್ಯದಲ್ಲಿ 2-1-20ರಲ್ಲಿರುವ ಉಪನಿಷತ್ಪ್ರಾಮಾಣ್ಯ ವಿಷಯದ ಚರ್ಚೆಯಲ್ಲಿ - ಉಪನಿಷತ್ತುಗಳೆಲ್ಲ ಆತ್ಮತತ್ತ್ವವನ್ನೇ ಹೇಳುವವಾದರೆ ಕರ್ಮಕಾಂಡವು ಅಪ್ರಮಾಣವಾದೀತು. ಏಕೆಂದರೆ ಅಸಂಸಾರಿಯಾದ ಆತ್ಮನೊಬ್ಬನೇ ಇದಾನೆಂದರೆ ಯಾರು ಫಲಕ್ಕಾಗಿ ಪ್ರವರ್ತಿಸಬೇಕು? ಅಥವಾ ಯಾವ ಅನಿಷ್ಟ ಫಲವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಯಾರು ಕೆಟ್ಟ ಕರ್ಮದಿಂದ ಹಿಮ್ಮೆಟ್ಟಬೇಕು? ಇದಲ್ಲದೆ ಉಪನಿಷತ್ತುಗಳಿಗೂ ಈ ಪಕ್ಷದಲ್ಲಿ ಪ್ರಾಮಾಣ್ಯವು ಹೋಗಿಬಿಡುವದು. ಏಕೆಂದರೆ ಬದ್ಧನೇ ಇಲ್ಲದ್ದರಿಂದ ಮೋಕ್ಷಕ್ಕಾಗಿ ಪ್ರಯತ್ನಿಸುವವರೇ ಇಲ್ಲವಾಗುವರು. ಆದ್ದರಿಂದ ಆತ್ಮೈಕತ್ವವು ಉಪನಿಷತ್ತುಗಳ ತಾತ್ಪರ್ಯವಲ್ಲ ಎಂಬುದು ಪೂರ್ವಪಕ್ಷ.

ಉಪನಿಷದ್ವಾಕ್ಯವು ಬೋಧಕವಾಗಿರುವದರಿಂದಲೂ ತನ್ನ ಅರ್ಥವನ್ನು ಎಲ್ಲಿಯೂ ನಿಷೇಧಿಸುವದಿಲ್ಲವಾದ್ದರಿಂದಲೂ ಪ್ರಮಾಣವೇ. ಕರ್ಮಕಾಂಡವು ಇಷ್ಟಾನಿಷ್ಟಪ್ರಾಪ್ತಿಪರಿಹಾರಗಳಿಗೆ ಉಪಾಯವನ್ನು ಹುಡುಕುತ್ತಿರುವವನಿಗೆ ಆಯಾ ಉಪಾಯವಾದ ಕರ್ಮವನ್ನು ವಿಧಿಸುತ್ತದೆ. ಕ್ರಿಯಾಕಾರಕಫಲಭೇದವು ಸತ್ಯವೆಂದಾಗಲಿ ಅಸತ್ಯವೆಂದಾಗಲಿ ಹೇಳುವದಿಲ್ಲ. ಆದ್ದರಿಂದ ಕಾಮಿಗಳು ಕಾಮ್ಯಕರ್ಮದಲ್ಲಿ ಪ್ರವೃತ್ತರಾಗುವಂತೆ ಅಜ್ಞರೂ ನಿತ್ಯಕರ್ಮಗಳಲ್ಲಿ ಪ್ರವೃತ್ತರಾಗಬಹುದಾಗಿದೆ. ವೇದಾಂತವಾಕ್ಯಗಳನ್ನೂ ಕರ್ಮಗಳನ್ನೂ ಮಾಡಬಾರದು ಎಂದೇನೂ ಉಪದೇಶಿಸಿಲ್ಲ. ಆದ್ದರಿಂದ ಆಯಾ ದೃಷ್ಟಿಯುಳ್ಳವರು ಕರ್ಮನಿಷ್ಠೆಯನ್ನೋ ಜ್ಞಾನನಿಷ್ಠೆಯನ್ನೋ ಅನುಸರಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆಯಬಹುದಾಗಿದೆ.

ಹೀಗಿರುವದರಿಂದ ಕರ್ಮಕಾಂಡಕ್ಕೂ ಜ್ಞಾನಕಾಂಡಕ್ಕೂ ವಿರೋಧವಿಲ್ಲ. ಜಿಜ್ಞಾಸುವಾದವನು ಭೇದಬುದ್ಧಿಯುಳ್ಳವನಾಗಿಯೇ ಪ್ರವರ್ತಿಸುವದರಿಂದ ಶ್ರವಣ ಮನನನಿದಿಧ್ಯಾಸನಗಳನ್ನು ಅವಲಂಬಿಸಿ ಬ್ರಹ್ಮಾತ್ಮೈಕ್ಯಜ್ಞಾನವನ್ನು ಪಡೆದುಕೊಳ್ಳುತ್ತಾನೆ. ಫಲವನ್ನು ಪಡೆದುಕೊಂಡಮೇಲೆ ವೇದಾಂತವಾಕ್ಯವು ನಿಷ್ಪ್ರಯೋಜನವಾದರೂ ಬಾಧಕವಿಲ್ಲ. ಪ್ರಮಾಣಗಳು ತಮ್ಮ ತಮ್ಮ ವಿಷಯಗಳನ್ನು ತಿಳಿಸಿಕೊಡುವದರಿಂದಲೇ ಪ್ರಮಾಣವಾಗಿರುವದರಿಂದ ಅವಕ್ಕೆ ಪರಸ್ಪರವಿರೋಧವೇನೂ ಇಲ್ಲ- ಎಂಬುದು ಭಾಷ್ಯಗ್ರಂಥದ ಸಾರವು.

**ಶ್ರೀಗಳವರು** ಅನುವಾದದಲ್ಲಿ ಈ ದಿನದ ವಿಚಾರವು ವಾಕ್ಯಪ್ರಾಮಾಣ್ಯದ ವಿಷಯವಾಗಿರುವದರಿಂದ ಎಲ್ಲರಿಗೂ ತಿಳಿಯದೆ ಇರಬಹುದು. ಆಟಂಬಾಂಬಿನ ರಚನಾದಿಗಳ ವಿಚಾರ, ಭೂಮ್ಯಾಕರ್ಷಕಶಕ್ತಿಯ ವಿಚಾರ, ಸಾಪೇಕ್ಷವಾದ-ಮುಂತಾದ ಭೌತಿಕತತ್ತ್ವ ವಿಚಾರಗಳನ್ನು ತಿಳಿದುಕೊಳ್ಳುವದು ಹೇಗೆ ಸಾಮಾನ್ಯರಿಗೆ ಕಷ್ಟವೋ ಹಾಗೆ ವಾಕ್ಯಪ್ರಾಮಾಣ್ಯದಂಥ ವಿಚಾರಗಳೂ ಬೇಗನೆ ಹಿಡಿಸುವದಿಲ್ಲ- ಎಂದು ಅವತರಣಿಕೆಯಾಗಿ ಹೇಳಿ ಬೋಧಕತ್ವವಿದ್ದು ಸಂಶಯವಾಗದಂತೆ ನಿಶ್ಚಯವಾಗಿರುವ ಫಲವಿಷಯವನ್ನು ತಿಳಿಸಿದರೆ ವಾಕ್ಯವು ಪ್ರಮಾಣವಾಗುವದು ಎಂಬುದನ್ನು ವಿವರಿಸಿದರು. ಸ್ವಪ್ನಜಾಗರಿತಗಳ ಅರಿವುಗಳು ತಮ್ಮತಮ್ಮ ಕಾಲಕ್ಕೆ ಪ್ರಮಾಣವಾಗಿಯೇ ಇರುವಂತೆ ಕರ್ಮಕಾಂಡಜ್ಞಾನಕಾಂಡ ವಾಕ್ಯಗಳೂ ಬೇರೆಬೇರೆ ದೃಷ್ಟಿಯಿಂದ ಪ್ರಮಾಣವಾಗಬಹುದೆಂಬುದನ್ನು ವಿವರಿಸಿ ಹೇಳಿದರು.

★★★★★

# ಜ್ಞಾನನಿಷ್ಠೆಯನ್ನು ಪಡೆದುಕೊಳ್ಳುವ ಬಗೆ

**2-5-1955**

ಬ್ರ॥ಶ್ರೀ॥ವಿದ್ವಾನ್ ಪಿ.ಚಂದ್ರಶೇಖರಭಟ್ಟರು

**ಗೀತಾ ಭಾಷ್ಯದಲ್ಲಿ** 18ನೆಯ ಅಧ್ಯಾಯದ 51ರಿಂದ 55ರವರೆಗಿನ ಶ್ಲೋಕಗಳಲ್ಲಿ ಕರ್ಮಯೋಗದಿಂದ ಜ್ಞಾನಯೋಗ್ಯತೆ ಎಂಬ ಸಿದ್ಧಿಯನ್ನು ಪಡೆದುಕೊಂಡಿರುವವನು ಜ್ಞಾನನಿಷ್ಠೆಯನ್ನು ಹೇಗೆ ಪಡೆದುಕೊಳ್ಳಬೇಕೆಂಬುದನ್ನು ವರ್ಣಿಸಿದೆ. ಬುದ್ಧಿವಿಶುದ್ಧಿಯನ್ನು ಹೊಂದಿ ಶರೀರಸ್ಥಿತಿಗೆ ಬೇಕಾದಷ್ಟು ಹೊರತು ಮಿಕ್ಕ ವಿಷಯಗಳನ್ನೆಲ್ಲ ತ್ಯಜಿಸಿ ಶರೀರೇಂದ್ರಿಯಗಳನ್ನು ಬಿಗಿಹಿಡಿದುಕೊಂಡು ಏಕಾಂತಸೇವಿಯಾಗಿ ಲಘ್ವಾಹಾರ, ತ್ರಿಕರಣಸಂಯಮ- ಇವುಗಳಿಂದ ಕೂಡಿ ವೈರಾಗ್ಯದಿಂದ ನಿತ್ಯವೂ ಆತ್ಮಸ್ವರೂಪಚಿಂತನಾರೂಪವಾದ ಧ್ಯಾನ ಮತ್ತು ಅವನಲ್ಲಿಯೇ ಮನಸ್ಸನ್ನು ಏಕಾಗ್ರಗೊಳಿಸಿಕೊಳ್ಳುವ ಯೋಗ- ಇವುಗಳಲ್ಲಿ ನಿಂತು ಅಹಂಕಾರ, ಬಲ, ದರ್ಪ, ಕಾಮ, ಕ್ರೋಧ, ಪರಿಗ್ರಹ-ಇವುಗಳನ್ನು ಕಳಚಿಕೊಂಡವನು ಬ್ರಹ್ಮಭಾವವನ್ನು ಪಡೆದುಕೊಳ್ಳುತ್ತಾನೆ. ಅಂಥವನು ಸಮತ್ವ ದೃಷ್ಟಿಯಿಂದ ಕೂಡಿದ ಪರಭಕ್ತಿಯನ್ನು ಪಡೆದುಕೊಂಡು ಸೋಪಾಧಿಕರೂಪದ ಪರಮಾತ್ಮನಲ್ಲಿ ವೈಭವವನ್ನೂ ನಿರುಪಾಧಿಕರೂಪದ ತತ್ತ್ವವನ್ನೂ ಅರಿತುಕೊಂಡು ಪರಮಾತ್ಮನಲ್ಲಿ ಒಂದಾಗುತ್ತಾನೆ.

ಇಲ್ಲಿ ನಿಷ್ಠೆಯೆಂದರೆ ಆವೃತ್ತಿಯಲ್ಲ, ಭೇದಬುದ್ಧಿಗೆ ಕಾರಣವಾದ ಸರ್ವ ಕರ್ಮಗಳನ್ನೂ ಸಂನ್ಯಾಸಮಾಡಿ ಬುದ್ಧಿವಿಶುದ್ಧಿ, ಅಮಾನಿತ್ವಾದಿಗಳು-ಇವುಗಳಿಂದೊಡಗೂಡಿ ಬ್ರಹ್ಮಾತ್ಮೈಕತ್ವಜ್ಞಾನವು ಅನುಭವಕ್ಕೆ ನೆಲೆನಿಲ್ಲುವದೇ ಜ್ಞಾನ ನಿಷ್ಠೆ-ಎಂಬುದು ಆಚಾರ್ಯರ ಮತವು.

**ಶ್ರೀಗಳವರು** ಅನುವಾದದಲ್ಲಿ ಹೇಳಿದ್ದೇನೆಂದರೆ, ಇದು ಅಂತರ್ಮುಖಿಗಳಾಗಿ ಆತ್ಮನನ್ನೇ ಅರಿತುಕೊಳ್ಳಬೇಕೆಂದು ಹವಣಿಸುವವರಿಗೆ ಬಹಳ ರುಚಿಯಾದ ವಿಷಯ. ಕರ್ಮಯೋಗದಿಂದ ಚಿತ್ತಶುದ್ಧಿಯನ್ನು ಸಂಪಾದಿಸಿಕೊಂಡು ಸರ್ವ

ಕರ್ಮಸಂನ್ಯಾಸವನ್ನೂ ನಿವೃತ್ತಿಧರ್ಮವನ್ನೂ ಅನುಸರಿಸುತ್ತಾ ಧ್ಯಾನಯೋಗ ನಿರತರಾಗಿರುವವರಿಗೆ ಪರಭಕ್ತಿರೂಪವಾದ ಜ್ಞಾನನಿಷ್ಠೆಯು ಲಭಿಸುವದು, ಪರಮಪುರುಷಾರ್ಥವು ಇಲ್ಲಿಯೇ ದೊರಕುವದು. ಇದೇ ಗೀತೋಪದೇಶದ ಸಾರ.

★★★★★

## ಆಚಾರ್ಯರ ಗುಣಕಥನ

**3-5-1955**

**ಶ್ರೀಶ್ರೀಗಳವರು**

ಸೃಷ್ಟಿಯ ಆರಂಭದಿಂದಲೂ ತತ್ತ್ವೋಪದೇಶವನ್ನು ಮಾಡುವ ಸಂಪ್ರದಾಯವು ನಡೆದುಬಂದಿರುತ್ತದೆ. ಆದಿಕರ್ತನಾದ ನಾರಾಯಣಭಗವಂತನು ಜಗತ್ತನ್ನು ಸೃಷ್ಟಿಸಿ ಮರೀಚ್ಯಾದಿಗಳಿಗೆ ಪ್ರವೃತ್ತಿಧರ್ಮವನ್ನೂ ಸನಕಸನಂದನಾದಿಗಳಿಗೆ ನಿವೃತ್ತಿಧರ್ಮವನ್ನೂ ಉಪದೇಶಮಾಡಿದನೆಂದು ಗೀತಾಭಾಷ್ಯದಲ್ಲಿ ಶಂಕರಭಗವತ್ಪಾದಾಚಾರ್ಯರವರು ಬರೆದಿರುತ್ತಾರೆ. ಜಗತ್ತಿನ ಸ್ಥಿತಿಗೆ ಕಾರಣವಾಗಿರುವ ಧರ್ಮವು ವಿಚ್ಛೇದವಾದರೆ ಪ್ರಲಯವೇ ಆಗುವದು; ಆ ಧರ್ಮವನ್ನುಪ ದೇಶಿಸುವ ಸಂಪ್ರದಾಯವನ್ನು ಮುಂದುವರಿಸಿ ಜಗತ್ತನ್ನು ಕಾಪಾಡುವದಕ್ಕೆಂದೇ ಭಗವಂತನು ಅವತಾರಮಾಡುತ್ತಿರುತ್ತಾನೆ.

ಅದ್ವೈತಸಿದ್ಧಾಂತದ ದೃಷ್ಟಿಯಿಂದ ನೋಡಿದರೆ ಸೃಷ್ಟಿಯಾದ ಜಗತ್ತೂ ಭಗವಂತನು ಉಪದೇಶಮಾಡಿದ ಧರ್ಮವೂ ಉಪದೇಶವನ್ನು ಗ್ರಹಿಸಿದ ಮರೀಚಿಸನಕಾದಿಗಳೂ- ಎಲ್ಲರೂ ಪರಮಾತ್ಮನ ಸ್ವರೂಪವೇ ಆಗಿರುತ್ತಾರೆ. ಹೀಗೆ ಉಪದೇಷ್ಟ್ರಾದಿರೂಪದಿಂದ ತೋರಿಕೊಳ್ಳುವದೊಂದು ಆ ಭಗವಂತನ ಲೀಲೆ. ಬೃಹದಾರಣ್ಯಕಭಾಷ್ಯದಲ್ಲಿ ಹಿರಣ್ಯಗರ್ಭನೂ ಅವನಿಂದ ವಿರಾಟ್ಪುರುಷನೂ ಹುಟ್ಟಿದ್ದನ್ನು ಶ್ರುತಿಯಲ್ಲಿ ವರ್ಣಿಸಿರುವಂತೆ ವ್ಯಾಖ್ಯಾನಮಾಡಿದ ಬಳಿಕ ಆಚಾರ್ಯರು ಹಿರಣ್ಯಗರ್ಭನೇನು ಜೀವನೆ, ಪರಮೇಶ್ವರನೆ?- ಎಂಬುದನ್ನು

ಚರ್ಚಿಸಿರುತ್ತಾರೆ. ಭಯಾರತ್ಯಾದಿಗಳು ಅವನಿಗೆ ಉಂಟಾದವೆಂದಿರುವದರಿಂದ ಜೀವನೆನ್ನಬೇಕಾಗುವದು. ಶ್ರುತಿಸ್ಮೃತಿಗಳಲ್ಲಿ ಹಿರಣ್ಯಗರ್ಭನು ಸರ್ವದೇವಾತ್ಮಕನೆಂದು ವರ್ಣಿಸಿರುವದನ್ನು ನೋಡಿದರೆ ಅವನು ಪರಮಾತ್ಮನೇ ಎನ್ನಬೇಕಾಗುವದು. ಈ ಸಂಶಯವನ್ನು ಪರಿಹರಿಸುವಾಗ ಆಚಾರ್ಯರು ಹೇಳಿರುವದೇನೆಂದರೆ ಹಿರಣ್ಯಗರ್ಭನ ಉಪಾಧಿಯು ಬಹುವಿಶುದ್ಧವಾಗಿ ರುವದರಿಂದ ಅವನು ಪರಮಾತ್ಮನೆಂದು ಶ್ರುತಿಯಲ್ಲಿ ಹೇಳಿದೆ; ನಿಜವಾಗಿ ನೋಡಿದರೆ ನಿರುಪಾಧಿಕಸ್ವರೂಪದಿಂದ ಎಲ್ಲರೂ ಪರಮಾತ್ಮರೇ. ಈ ದೃಷ್ಟಿಯಿಂದ ಶಂಕರಾಚಾರ್ಯರನ್ನು ಪರಮಾತ್ಮ ಸ್ವರೂಪರೇ ಎಂದು ನಾವು ನಂಬಬಹುದಾಗಿ ದೆ. ಪರಮಾತ್ಮನಿಗಲ್ಲದೆ ಪರಮಾತ್ಮನ ತತ್ತ್ವವು ಮತ್ತೆ ಯಾರಿಗೆ ಗೊತ್ತಾದೀತು? ಪರಮಾರ್ಥತತ್ತ್ವವನ್ನು ಸರ್ವಸಂಮತವಾಗುವಂತೆ ಬಿಡಿಸಿ ಬೋಧಿಸುವ ಶಂಕರರು ಸಾಕ್ಷಾತ್ತಾಗಿ ಶಂಕರರೇ ಎಂದು ಜನರು ನಂಬಿರುವದನ್ನು ಬರಿಯ ಮೂಢನಂಬಿಕೆ ಎಂದು ಹೇಳುವದಕ್ಕಾಗಲಾರದು.

ಶ್ರೀಶಂಕರಭಗವತ್ಪಾದರವರು ಅವತರಿಸಿದ ಕಾಲಕ್ಕೆ ಈ ದೇಶದಲ್ಲಿ ಜನರಿಗೆ ಅಜ್ಞಾನದ ಅಂಧಕಾರವು ಮುಸುಕಿತ್ತು. ವಾದಿಗಳು ವೇದಾಂತ ಸಿದ್ಧಾಂತದ ವಿಷಯಕ್ಕೆ ಪರಸ್ಪರವಿರುದ್ಧವಾದ ಅನೇಕಮತಗಳನ್ನು ಅವಲಂಬಿಸಿದ್ದರು; ಜನರು ಕರ್ಮ, ಉಪಾಸನೆ, ಜ್ಞಾನ-ಯಾವದರ ಮರ್ಮವನ್ನೂ ಅರಿಯದೆ ತಟ್ಟಾಡುತ್ತಿದ್ದರು. ಹೀಗಿರುವಲ್ಲಿ ತಟ್ಟನೆ ಶಂಕರಸೂರ್ಯನು ಉದಯಿಸಿದನು; ಆಸೇತುಹಿಮಾಚಲದವರೆಗೂ ಕಾಲುನಡಗೆಯಿಂದ ಸಂಚರಿಸಿ ಎಲ್ಲರಿಗೂ ಜ್ಞಾನದ ಬೆಳಕನ್ನು ಕೊಟ್ಟನು.

ಶಂಕರಾಚಾರ್ಯರು ಜಗದ್ಗುರುಗಳೆಂಬುದು ಅನ್ವರ್ಥವಾಗಿರುತ್ತದೆ. ಶಾಸ್ತ್ರದರ್ಥವನ್ನು ವ್ಯಾಖ್ಯಾನಮಾಡಿ ಜನರನ್ನು ಆಚಾರದಲ್ಲಿ ನಿಲ್ಲಿಸಿ ತಾನೂ ಆಚರಣೆಯಲ್ಲಿಟ್ಟುಕೊಂಡಿರುವಾತನೇ ಆಚಾರ್ಯನು. ಈ ಅರ್ಥದಲ್ಲಿ ಶಂಕರಭಗವತ್ಪಾದರು ನಿಜವಾಗಿಯೂ ಆಚಾರ್ಯರು. ಅವರು ಧರ್ಮದ ಮರ್ಮವನ್ನು ಆಚರಣೆಯಿಂದಲೂ ಬೋಧೆಯಿಂದಲೂ ಜನರಿಗೆ ತಿಳಿಸಿಕೊಟ್ಟು ಇಂದಿನವರೆಗೂ ಅದು ನಮ್ಮ ದೇಶದ ಜನರ ಹೃದಯದಲ್ಲಿ ಅಚ್ಚಳಿಯದಂತೆ ನಿಲ್ಲುವಂತೆ ಮಾಡಿರುತ್ತಾರೆ. ಅವರು ಬೋಧಿಸಿರುವ ಅದ್ವೈತವು ವಿಚಾರಪರವಾದ

ಜಗತ್ತಿಗೆಲ್ಲ ಮೆಚ್ಚಾಗಿರುತ್ತದೆ. ಅವರು ಶ್ರುತಿವಾಕ್ಯಗಳಿಗೆಲ್ಲ ಸಾಮಂಜಸ್ಯವನ್ನು ಕಲ್ಪಿಸಿ ಭಾಷ್ಯವನ್ನು ಬರೆದಿರುತ್ತಾರೆ ; ಮೀಮಾಂಸಕರ ನ್ಯಾಯವನ್ನು ಅವರಿಗೇ ಒಪ್ಪಿಸಿ ತಮ್ಮ ವ್ಯಾಖ್ಯಾನವನ್ನೇ ಅವಲಂಬನೆಮಾಡುವಂತೆ ಮಾಡಿರುತ್ತಾರೆ. ತಾರ್ಕಿಕರನ್ನು ಅವರವರ ಯುಕ್ತಿಯಿಂದಲೇ ಬಾಯಿಕಟ್ಟಿಸುವ ಸತ್ತರ್ಕವನ್ನು ಎಲ್ಲರಮುಂದೆ ಇಟ್ಟಿರುತ್ತಾರೆ. ವೇದಾಂತಾರ್ಥವು ಅನುಭವಸಂಮತವೆಂಬುದನ್ನು ತೋರಿಸಿಕೊಟ್ಟು ವಾದದಲ್ಲಿ ಸೋತ ಪ್ರತಿವಾದಿಗಳೂ ತತ್ತ್ವವನ್ನು ಅನುಭವಕ್ಕೆ ತಂದುಕೊಂಡು ಶಂಕರರ ಅನುಯಾಯಿಗಳಾಗುವಂತೆ ಮಾಡಿರುತ್ತಾರೆ.

ಶಂಕರರು ತಮ್ಮನ್ನು ಹೊಗಳುವದಕ್ಕೆ ಯಾವ ಆಸ್ಥಾನಪಂಡಿತರನ್ನೂ ಇಟ್ಟುಕೊಳ್ಳಲಿಲ್ಲ. ಆದರೂ ಅವರ ಮಹಿಮೆಯನ್ನು ಇಂದಿಗೂ ಭರತಖಂಡವೆಲ್ಲ ಹೊಗಳುತ್ತಿದೆ; ಪರದೇಶದವರೂ ಅವರ ಜ್ಞಾನವೈರಾಗ್ಯಾದಿಗುಣಗಳನ್ನು ಕೊಂಡಾಡುತ್ತಿದಾರೆ. ಅವರು ಮಾಡಿರುವ ಉಪದೇಶವು ಎಲ್ಲರಿಗೂ ಆಶಾದಾಯಕವಾಗಿದೆ. ನಮ್ಮೆಲ್ಲರ ಆತ್ಮನು ಜನ್ಮಾದಿರಹಿತನಾಗಿರುವ ಅಭಯ ಬ್ರಹ್ಮವೇ ಎಂಬ ಆನಂದದಾಯಕವಾದ ತತ್ತ್ವೋಪದೇಶವನ್ನು ಅವರು ಮಾಡಿರುತ್ತಾರೆ. ಸ್ತ್ರೀಶೂದ್ರಾದಿಗಳಿಗೂ ಜ್ಞಾನಕ್ಕೆ ಅಧಿಕಾರವುಂಟೆಂಬ ಉದಾರಹೃದಯದ ಉಪದೇಶವನ್ನು ಮಾಡಿದರೂ ಶಾಸ್ತ್ರೋಕ್ತಕರ್ಮಾಚರಣೆಗೆ ಸ್ವಲ್ಪವೂ ಕುಂದಿಲ್ಲದಂತೆ ನೋಡಿಕೊಂಡಿರುತ್ತಾರೆ. ಕರ್ಮೋಪಾಸನೆಗಳನ್ನು ಮಾಡಿ ತಮ್ಮತಮ್ಮ ಇಷ್ಟಾರ್ಥವನ್ನು ಪಡೆಯುವವರಿಗೂ ವಿರಕ್ತಿಯಿಂದ ಜ್ಞಾನವನ್ನು ಸಂಪಾದಿಸಿಕೊಳ್ಳುವ ಉತ್ತಮಾಧಿಕಾರಿಗಳಿಗೂ ಹೊಂದುವ ಉಪದೇಶವು ಅವರದು. ಆ ಮಹಾಮಹಿಮರ ಸ್ಮರಣೆಯು ವೇದಾರ್ಥಾನುಷ್ಠಾನದ ಸ್ಮರಣೆಯೇ, ತತ್ತ್ವಜ್ಞಾನದ ಸ್ಮರಣೆಯೇ ಆಗಿರುತ್ತದೆ. ಅವರ ಅನುಗ್ರಹವು ನಮ್ಮ ಮೇಲಿರಲಿ!

★★★★★

# ಅಕ್ಷರಬ್ರಹ್ಮ

**15-5-1956**

**ಬ್ರ॥ಶ್ರೀ॥ ವಿಠ್ಠಲಶಾಸ್ತ್ರಿಗಳವರು**

ಮುಂಡಕೋಪನಿಷತ್ತಿನ 2-2-1ರಿಂದ 5ರವರೆಗಿನ ಭಾಷ್ಯಾರ್ಥವು ಹೀಗಿದೆ - ಅಕ್ಷರವೆಂಬ ಹೆಸರಿನ ಬ್ರಹ್ಮವು ಯಾವ ರೂಪವು ಇಲ್ಲದ್ದಾದರೂ ದರ್ಶನ ಶ್ರವಣಮನನಾದಿ ಉಪಾಧಿಧರ್ಮಗಳಿಂದ ಒಡಗೂಡಿ ಹೃದಯದಲ್ಲಿ ಕಾಣಿಸಿಕೊಳ್ಳುವದು. ಆದ್ದರಿಂದ ಇದಕ್ಕೆ ಗುಹಾಚರವು ಎಂದು ಹೆಸರು ಬಂದಿದೆ. ಇದೇ ಎಲ್ಲಕ್ಕೂ ಹೆಚ್ಚಿನ ಪದವು ಎಂದರೆ ಪ್ರಾಪ್ಯಸ್ಥಾನವು. ಚರಾಚರಪ್ರಾಣಿಗಳೂ ಮತ್ತು ಮಿಕ್ಕದ್ದೆಲ್ಲವೂ ಇದನ್ನೇ ಹೊಂದಿಕೊಂಡು ಇರುತ್ತಿರುವದು. ಸ್ಥೂಲಸೂಕ್ಷ್ಮವಾಗಿರುವ ಮೂರ್ತಾಮೂರ್ತದೃಶ್ಯಗಳೆಲ್ಲವೂ ಇದಕ್ಕೆ ಅಧೀನವಾಗಿಯೇ ಇರತಕ್ಕವುಗಳಾಗಿವೆ. ಅದು ಜನರ ಅರಿವನ್ನೂ ದಾಟಿ ಆಚೆಗೆ ಇರುತ್ತದೆ. ಸರ್ವದೋಷರಹಿತವಾಗಿರುವದರಿಂದ ಅದನ್ನು ಎಲ್ಲರೂ ಬಯಸಬೇಕು. ಅದು ತನ್ನ ಪ್ರಕಾಶದಿಂದಲೇ ಎಲ್ಲವನ್ನೂ ಬೆಳಗುತ್ತಿರುವದು. ಅಣುವಾಗಿರುವದೆಲ್ಲಕ್ಕಿಂತಲೂ ಅಣುವಾಗಿ ಸ್ಥೂಲವಾಗಿರುವದೆಲ್ಲಕ್ಕೂ ಸ್ಥೂಲವಾಗಿ ಸಕಲಲೋಕನಿವಾಸಿಗಳಿಗೂ ಆಶ್ರಯವಾಗಿ ಇರುವದೇ ಅಕ್ಷರವೆಂಬ ಬ್ರಹ್ಮವು. ವಾಙ್ಮನಃಪ್ರಾಣಗಳೆಲ್ಲಕ್ಕೂ ಅದೇ ಇರವನ್ನು ಕೊಟ್ಟಿರುವದು. ಅದೇ ಪರಮಾರ್ಥಸತ್ಯವು. ಅದೇ ಅಮೃತತ್ವಕ್ಕೆ ಹೇತುವಾದದ್ದು. ಸಾಧಕನಾದವನು ತನ್ನ ಮನಸ್ಸನ್ನು ಅದರಲ್ಲಿಯೇ ನೆಲೆನಿಲ್ಲಿಸಿಕೊಳ್ಳಬೇಕು. ಉಪನಿಷತ್ತಿನಲ್ಲಿ ಪ್ರತಿಪಾದ್ಯವಾಗಿರುವ ಪ್ರಣವವನ್ನು ಧನುಸ್ಸಾಗಿ ಮಾಡಿಕೊಂಡು ಉಪಾಸನೆಯಿಂದ ಸಂಸ್ಕರಿಸಿಕೊಂಡ ಆತ್ಮನೆಂಬ ಬಾಣವನ್ನು ಬಾಹ್ಯವಿಷಯಭೋಗದ ತೃಷ್ಣೆಯನ್ನು ಕಳೆದುಕೊಂಡು ವೈರಾಗ್ಯದಿಂದ ಜಿತೇಂದ್ರಿಯನಾಗಿ ಬ್ರಹ್ಮನೆಂಬ ಗುರಿಯಲ್ಲಿಯೇ ಮನಸ್ಸನ್ನು ಇಟ್ಟುಕೊಂಡು ಗುರಿಯನ್ನು ನೋಡಿ ಬಾಣವನ್ನು ಬಿಡುವವನಂತೆ ಆತ್ಮನನ್ನು ಬ್ರಹ್ಮದಲ್ಲಿ ಒಂದು ಮಾಡಿಕೊಳ್ಳಬೇಕು; ಎಂದರೆ ದೇಹಾದಿಗಳಲ್ಲಿ ತಾನೆಂಬ ಪ್ರತ್ಯಯವನ್ನು ಪರಿಹರಿಸಿಕೊಂಡು ಅಕ್ಷರಾಖ್ಯಬ್ರಹ್ಮವೇ ತಾನೆಂಬ ಅನುಭವರೂಪಫಲವನ್ನುಪಡೆದುಕೊಳ್ಳಬೇಕು. ಭೂಮ್ಯಂತರಿಕ್ಷಸ್ವರ್ಗಲೋಕಗಳೂ,

ಮನಸ್ಸೂ ಸಕಲಕರಣಗಳೂ ಯಾವ ಪರಮಾತ್ಮನನ್ನೇ ಆಶ್ರಯಿಸಿಕೊಂಡಿರುವವೋ ಆ ಏಕರಸನಾಗಿರುವ ಆತ್ಮನೇ ನಮ್ಮಗಳ ಆತ್ಮನೆಂದು ತಿಳಿದುಕೊಳ್ಳಬೇಕು. ಇದೇ ಪರ ವಿದ್ಯೆಯು. ಇದಕ್ಕಿಂತ ವ್ಯತಿರಿಕ್ತವಾದ ಕರ್ಮೋಪಾಸನಾದಿವ್ಯವಹಾರವನ್ನೂ ಮುಮುಕ್ಷುಗಳು ಬಿಟ್ಟುಬಿಡಬೇಕು. ಈ ಅಕ್ಷರದ ಜ್ಞಾನವೇ ಅಮೃತತ್ವವೆಂಬ ಪುರುಷಾರ್ಥವನ್ನು- ಜೀವರುಗಳನ್ನು ಸಂಸಾರವೆಂಬಸಾಗರದಿಂದ ದಾಟಿಸಿ ಅಚೆಯದಡವನ್ನು-ಮುಟ್ಟಿಸುವ ಸೇತುವೆಯಾಗಿರುತ್ತದೆ ಎಂಬುದು ಭಾಷ್ಯದ ಸಾರವು.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೇಳಿದ್ದೇನೆಂದರೆ: ಕ್ರಿಯಾಕಾರಕ ಫಲಾತ್ಮಕವಾದ ಸಂಸಾರಕ್ಕೇ ಸೇರಿಕೊಂಡಿರುವ ಸಾಧ್ಯಸಾಧನಗಳನ್ನು ತಿಳಿಸುವ ಕರ್ಮೋಪಾಸನಾವಾಕ್ಯಗಳಿಂದಾಗುವ ವಿದ್ಯೆಯು ಅಪರವಿದ್ಯೆ; ಅದಕ್ಕಿಂತ ವಿಲಕ್ಷಣವಾಗಿರುವ ಶಬ್ದಸ್ಪರ್ಶಾದಿಸರ್ವಧರ್ಮಾತೀತವಾದ ಅಕ್ಷರವೆಂಬ ಹೆಸರಿನ ಬ್ರಹ್ಮವನ್ನು ತಿಳಿಸುವದೇ ಪರವಿದ್ಯೆ- ಎಂದು ಈ ಉಪನಿಷತ್ತಿನ ಹಿಂದಿನ ಗ್ರಂಥಭಾಗದಲ್ಲಿ ತಿಳಿಸಿರುತ್ತದೆ. ಆ ಬ್ರಹ್ಮದಿಂದಲೇ, ಆ ಅಕ್ಷರವೆಂಬ ಹೆಸರಿನ ಪರಮಪುರುಷನಿಂದಲೇ ಇದೆಲ್ಲವೂ ಆಗಿರುವದು; ಅಂದರೆ ಅಕ್ಷರವೇ ಎಲ್ಲಾ ರೂಪದಿಂದಲೂ ಕಾಣಿಸಿಕೊಳ್ಳುತ್ತಿರುವದು ಎಂದು ಅರ್ಥ. ಬ್ರಹ್ಮಕ್ಕೆ ಯಾವದೊಂದು ಗೊತ್ತಾದ ರೂಪವೂ ಇಲ್ಲದಿದ್ದರೂ ಮನೋವಾಕ್ಕುಗಳಿಗೆ ಅದು ವಿಷಯವೇ ಅಲ್ಲದಿದ್ದರೂ ಆ ಚೈತನ್ಯವನ್ನು ಬಿಟ್ಟು ಯಾವ ಸದಸತ್ ವಸ್ತುಗಳೂ ಇರುವದಿಲ್ಲ. ವಾಙ್ಮನಃಪ್ರಾಣಗಳೆಂಬ ಆಧ್ಯಾತ್ಮಿಕಭಾವಗಳು ಅದನ್ನು ಅವಲಂಬಿಸಿಕೊಂಡೇ ಜೀವಿಸಿಕೊಂಡಿರುವವು. ಬಂಡಿಯ ಗಾಲಿಯ ಹಾರೆಕೋಲುಗಳೆಲ್ಲವೂ ಗುಂಭಕ್ಕೇ ಸೇರಿಕೊಂಡಿರುವಂತೆ ವಿಷಯವಾಗಿರುವ ದೇಹೇಂದ್ರಿಯಮನಃಪ್ರಾಣಗಳೆಲ್ಲವೂ ಆ ಅಕ್ಷರವನ್ನೇ ಅವಲಂಬಿಸಿಕೊಂಡು ಇರುತ್ತವೆ. ಆದ್ದರಿಂದ ಈ ಅಕ್ಷರವೇ ಪರಮಾರ್ಥಸತ್ಯವು. ವಿಷಯವಾದ ದೇಹೇಂದ್ರಿಯಾದಿಗಳು ಅದರ ಆಶ್ರಯದಿಂದ ಮಾತ್ರವೇ ಸತ್ಯವಾಗಿ ತೋರುವ ಮಿಥ್ಯಾಪ್ರತೀತಿಗಳು.

ಹೀಗಿರುವದರಿಂದ ಸಾಧಕನಾದವನು ಅನೃತವಾಗಿರುವ ಈ ವಿಷಯಾದಿಗಳ ತೃಷ್ಣೆಯಿಂದ ಪ್ರಮತ್ತನಾಗದೆ ಇವುಗಳ ಪರಮಾರ್ಥಸತ್ಯವಾಗಿ

ರುವ ಅಕ್ಷರಬ್ರಹ್ಮದ ಕಡೆಗೇ ಲಕ್ಷ್ಯವನ್ನು ಇಟ್ಟುಕೊಳ್ಳಬೇಕು. ಲೌಕಿಕವಿಷಯಗಳನ್ನು ತಿಳಿಸುವ ಮಾತುಗಳೆಲ್ಲವನ್ನೂ ಬಿಟ್ಟು ಪರಮಾರ್ಥಸತ್ಯವನ್ನೇ ತಿಳಿಸುವ ಪ್ರಣವದ ಪರಿಶೀಲನೆಯಿಂದ ಮನಸ್ಸಿಗೆ ಸಂಸ್ಕಾರವನ್ನು ಉಂಟುಮಾಡಿಕೊಂಡು ಸೋಪಾಧಿಕವಾದ ಆತ್ಮಸ್ವರೂಪವನ್ನು ನಿರುಪಾಧಿಕವಾದ ಪರಮಾತ್ಮಸ್ವರೂಪದಲ್ಲಿಯೇ ಒಂದಾಗಿಸಿಕೊಳ್ಳಬೇಕು. ಈ ಅಧ್ಯಾತ್ಮಯೋಗದಿಂದ ಅಮೃತತ್ವದ ಪ್ರಾಪ್ತಿಯಾಗುವದು. ಇದನ್ನೇ ಹಿಂದಿನ ಪ್ರಕರಣದ ಉಪಸಂಹಾರವಾಕ್ಯದಲ್ಲಿ ಅವಿದ್ಯಾಗ್ರಂಥಿಯನ್ನು ನಾಶಪಡಿಸಿಕೊಳ್ಳುತ್ತಾನೆ-ಎಂಬ ಮಾತಿನಿಂದ ತಿಳಿಸಿರುತ್ತದೆ.

★★★★★

## ತಾನೇ ಸರ್ವವಾಗುವನು

**16-5-1956**

**ಬ್ರ॥ಶ್ರೀ॥ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಶಾಸ್ತ್ರಿಗಳವರು**

**ಪ್ರಶ್ನೋಪನಿಷದ್ಭಾಷ್ಯ 4-7ರಿಂದ 11ರವರೆಗಿನ** ಭಾಷ್ಯದಲ್ಲಿ ಹೀಗೆ ವಿವರಿಸಿದೆ ಸುಷುಪ್ತಿಯಲ್ಲಿ ಅವಿದ್ಯಾಕಾಮಕರ್ಮಗಳಿಂದಾಗಿರುವ ಕಾರ್ಯ- ಕರಣಗಳು ಇಲ್ಲವಾಗಿಬಿಡುತ್ತವೆ. ಏಕೆಂದರೆ ಆಗ ಸಾಯಂಕಾಲದ ಹೊತ್ತು ಪಕ್ಷಿಗಳು ತಮ್ಮ ತಮ್ಮ ಮರದ ಗೂಡಿಗೆ ಹೋಗಿ ಸೇರಿಕೊಳ್ಳುವಂತೆ ಪೃಥಿವ್ಯಪ್ತೇಜೋವಾಯ್ವಾಕಾಶಗಳೂ ಅವುಗಳ ತನ್ಮಾತ್ರೆಗಳೂ ಚಕ್ಷುರಾದಿಜ್ಞಾನೇಂದ್ರಿಯಗಳೂ ಅವುಗಳ ವಿಷಯಗಳಾಗಿರುವ ರೂಪಾದಿಗಳೂ ವಾಗಾದಿಕರ್ಮೇಂದ್ರಿಯಗಳೂ ಅವುಗಳ ವಿಷಯಗಳಾದ ವಕ್ತವ್ಯಾದಿಗಳೂ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ-ಎಂಬ ಅಂತಃಕರಣಚತುಷ್ಟಯವೂ ಅವುಗಳ ವಿಷಯಗಳೂ ಇವುಗಳೆಲ್ಲವನ್ನೂ ಹಿಡಿದು ಕೂಡಿಹಾಕಿರುವ ಪ್ರಾಣವೂ ಪ್ರಾಣವು ಒಕ್ಕಟ್ಟಿನಲ್ಲಿಟ್ಟಿರುವ ಕಾರ್ಯಕರಣಸಂಘಾತವೂ-ಎಲ್ಲವೂ ಆತ್ಮನಲ್ಲಿ ಹೋಗಿ ಸೇರಿ ಒಂದಾಗಿಬಿಡುತ್ತವೆ. ಇದೆಲ್ಲದರ ಜೊತೆಗೆ ಬೇರೆಬೇರೆ ಉಪಾಧಿಗಳಿಂದ - ನೀರಿನ ಉಪಾಧಿಯಿಂದ

ಕಾಣುವ ಸೂರ್ಯಪ್ರತಿಬಿಂಬದಂತೆ – ನೋಡುವವನು, ಕೇಳುವವನು, ಮುಂತಾದ ರೂಪದಿಂದ ಬೇರೆಬೇರೆಯಾಗಿ ಕಾಣುತ್ತಿದ್ದ ಆತ್ಮಸ್ವರೂಪವೂ–ನೀರೇ ಮುಂತಾದ ಉಪಾಧಿಯು ಇಲ್ಲವಾಗಲು ಸೂರ್ಯಬಿಂಬದಲ್ಲಿ ಒಂದಾಗಿ ಬಿಡುವ ಪ್ರತಿಬಿಂಬಗಳಂತೆ ಅಕ್ಷರವೆಂಬ ಹೆಸರಿನ ಪರಮಾತ್ಮನಲ್ಲಿ ಒಂದಾಗಿ ಬಿಡುತ್ತದೆ. ಆಗ ಜೀವಾತ್ಮನು ತನ್ನ ವಿಶೇಷರೂಪವನ್ನು ಬಿಟ್ಟು ಪರಮಾತ್ಮನೇ ಆಗಿದ್ದುಕೊಂಡುಬಿಟ್ಟಿರುತ್ತಾನೆ. ಸ್ಥೂಲಸೂಕ್ಷ್ಮಶರೀರಗಳ ಸಂಬಂಧದಿಂದಾಗುವ ಯಾವ ವಿಶೇಷವೂ ಇಲ್ಲದ ಆ ಅಕ್ಷರವೆಂಬ ಹೆಸರಿನ ಶುದ್ಧಬ್ರಹ್ಮಸ್ವರೂಪವನ್ನು ಯಾವನು ಅರಿತುಕೊಳ್ಳುವನೋ ಅವನು ಸರ್ವಜ್ಞನಾಗಿ ಸರ್ವಾತ್ಮಭಾವವನ್ನು ಹೊಂದುವನು–ಹೀಗೆಂಬುದು ಉಪನಿಷದ್ಭಾಗದ ಸಾರವು.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೇಳಿದ್ದೇನೆಂದರೆ: ತತ್ತ್ವವನ್ನು ನೋಡುವದಕ್ಕೆ ಎರಡು ದೃಷ್ಟಿಗಳಿವೆ. ಪರಾಗ್ದೃಷ್ಟಿ ಅಂದರೆ ಹೊರಗಿನ ದೃಷ್ಟಿ; ಅದರಿಂದ ಹೊರಗಿನ ವಿಷಯಗಳನ್ನು ನೋಡುವದಕ್ಕಾಗುತ್ತದೆ. ಪರಮಾರ್ಥವನ್ನು ನೋಡುವದಕ್ಕೆ ಈ ದೃಷ್ಟಿಯು ಉಪಯೋಗವಿಲ್ಲ. ಪಾಶ್ಚಾತ್ಯರು ಪ್ರಕೃತಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವದರಲ್ಲಿ ಜಯಶೀಲರಾಗಿರುತ್ತಾರೆ, ಆದರೆ ಮನುಷ್ಯನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವದು ಅವರಿಂದ ಆಗಿರುವದಿಲ್ಲ –ಎಂದು ಒಬ್ಬಾತನು ಹೇಳಿರುತ್ತಾನೆ. ಇದು ನಿಜವಾದ ಮಾತು. ಏಕೆಂದರೆ ಮನುಷ್ಯನೆಂದರೆ ಬರಿಯ ಪ್ರಕೃತಿಮಾತ್ರವಲ್ಲ. ಪ್ರಕೃತಿವಿಲಕ್ಷಣನಾದ ಆತ್ಮನೂ ಆಗಿರುತ್ತಾನೆ. ಆತ್ಮತತ್ತ್ವವನ್ನು ತಿಳಿಯುವದಕ್ಕೆ ಪರಾಗ್ದೃಷ್ಟಿಯಿಂದ ಪ್ರಯೋಜನವಿರುವದಿಲ್ಲ. ಇದಕ್ಕೆ ಪ್ರತ್ಯಗ್ದೃಷ್ಟಿಯು ಬೇಕು. ಜಾಗ್ರತ್ಪ್ರಧಾನವಾದ ದೃಷ್ಟಿಯಿಂದ ಸ್ವಪ್ನವನ್ನೂ ಸುಷುಪ್ತಿಯನ್ನೂ ನೋಡಿದರೆ ಅವೆರಡೂ ನಿರುಪಯೋಗಿಯಾದ ಅವಸ್ಥೆಗಳೆಂದು ಕಾಣಬಹುದು. ಭೌತಿಕವಿಜ್ಞಾನಶಾಸ್ತ್ರದವರು ಜಾಗ್ರದ್ದೃಷ್ಟಿಯಿಂದ ಮನಸ್ಸನ್ನು ವಿಚಾರಮಾಡಿ ಮನೋವಿಶ್ಲೇಷಣವೆಂಬ ಪದ್ಧತಿಯಿಂದ ಚಿಕಿತ್ಸಾಶಾಸ್ತ್ರಕ್ಕೆ ಉಪಯೋಗವಾಗುವ ಕೆಲವು ವಿಷಯಗಳನ್ನು ಕಂಡುಹಿಡಿದಿದ್ದಾರಂತೆ. ಸುಷುಪ್ತಿಯಲ್ಲಿ ಮಾತ್ರ ಯಾವ ಪ್ರಯೋಜನವೂ ಇರುವಂತೆ ಅವರ ಪರಾಗ್ದೃಷ್ಟಿಗೆ ಕಂಡುಬರುವದಿಲ್ಲ, ಆದರೆ ಉಪನಿಷತ್ತಿನಲ್ಲಿ ಹೇಳಿದ ಪ್ರತ್ಯಗ್ದೃಷ್ಟಿಯ ಕ್ರಮದಿಂದ ನೋಡಿದರೆ ನಮ್ಮ ಎದುರಿಗೆ ಕಾಣುವ

ಚಿತ್ರವಿಚಿತ್ರವಾದ ಪ್ರಪಂಚವೂ ನಮಗೆ ಉಪಾಧಿಯಾಗಿರುವ ದೇಹೇಂದ್ರಿಯ ಸಂಘಾತವೂ ಇವೆಲ್ಲಕ್ಕೂ ಉಪಾದಾನಕಾರಣವಾಗಿರುವ ಸ್ಥೂಲಸೂಕ್ಷ್ಮ ಭೂತಗಳೂ ಎಲ್ಲವೂ ಸುಷುಪ್ತಿಯಲ್ಲಿ ಲಯವಾಗಿಬಿಟ್ಟಿರುತ್ತವೆ. ಈ ಉಪಾಧಿಗಳಿಂದ ಎಚ್ಚರದಲ್ಲಿ ನಮಗೆ ಕಾಣುತ್ತಿರುವ ನಾನು ಎಂಬ ವಿಶೇಷರೂಪವು– ನೀರು ಒಣಗಿದರೆ ಅದರಲ್ಲಿ ಕಾಣುವ ಸೂರ್ಯಪ್ರತಿಬಿಂಬವು ಹೋಗಿಬಿಡುವಂತೆ– ತಾನೂ ಮರೆಯಾಗಿಬಿಡುವದು. ಆ ಕಾಲಕ್ಕೆ ನಾನು, ನೀನು ಮುಂತಾದ ಚೇತನವಿಭಾಗವೂ ಅಂತರಿಂದ್ರಿಯಬಾಹ್ಯೇಂದ್ರಿಯಗಳೂ ಅವುಗಳ ವಿಷಯಗಳೂ ಎಲ್ಲವೂ ಪರಮಾತ್ಮನಲ್ಲಿ ಒಂದಾಗಿಬಿಟ್ಟಿರುತ್ತವೆ. ಸುಷುಪ್ತಿಯಲ್ಲಿ ಆ ಪರಮಾತ್ಮನಲ್ಲಿ ಒಂದಾಗಿ ಇದ್ದುಕೊಂಡು ಹೊರಕ್ಕೆ ಬಂದಿರುವದರಿಂದಲೇ ನಮಗೆ ಎಚ್ಚರವಾದಾಗ ಹೆಚ್ಚಿನ ಉಲ್ಲಾಸವುಂಟಾಗಿರುತ್ತದೆ. ಇದನ್ನು ಇಂದ್ರಿಯಗಳ ಹೊರಗಣ್ಣಿನಿಂದ ನೋಡಿ ತಿಳಿಯುವದಕ್ಕಾಗುವದಿಲ್ಲ, ಅನುಭವರೂಪವಾದ ಒಳಗಣ್ಣಿನಿಂದ ನೋಡಿದರೆ ಇಡಿಯ ಪ್ರಪಂಚಕ್ಕೂ ನಮಗೂ ಆ ಪರಮಾತ್ಮನೇ ಆಧಾರವಾಗಿರುತ್ತಾನೆ – ಎಂದು ಗೊತ್ತಾಗುತ್ತದೆ. ಆ ಪರಮಾತ್ಮನೇ ತಾನೆಂದು ತಿಳಿದುಕೊಂಡಾತನು ತಾನೇ ಸರ್ವವಾಗುವನು ಎಂಬುದು ಉಪನಿಷತ್ತಿನ ಉಪದೇಶವು.

★★★★★

## ಅವ್ಯಕ್ತದ ಸ್ವರೂಪ

**17-5-1956**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ಸೂತ್ರಭಾಷ್ಯ 1-4-1** ರಲ್ಲಿರುವ ಅವ್ಯಕ್ತವಿಷಯ ವಿವರಣೆ ಹೀಗಿದೆ: ಸಾಂಖ್ಯರ ಸಿದ್ಧಾಂತಕ್ಕೆ ಶ್ರುತಿಯ ಆಧಾರವಿಲ್ಲವೆಂಬುದು ವೇದಾಂತಿಗಳ ಅಭಿಪ್ರಾಯವಷ್ಟೆ. ಆದರೆ ಕಠೋಪನಿಷತ್ತಿನಲ್ಲಿ 'ಮಹತಃ ಪರಮವ್ಯಕ್ತಮ್' ಎಂಬಲ್ಲಿ ಸಾಂಖ್ಯರ ಅವ್ಯಕ್ತವನ್ನು ಹೇಳಿದೆಯಲ್ಲ ಎಂಬ ಪೂರ್ವಪಕ್ಷವನ್ನು ತೆಗೆದು ಅವ್ಯಕ್ತಶಬ್ದವು ಇಲ್ಲಿ ಶರೀರವಾಚಕವೇ ಎಂಬುದನ್ನು ಉಪನಿಷತ್ತಿನ

ಪೂರ್ವಾಪರಸಂದರ್ಭವನ್ನು ಸಮಾಲೋಚನಮಾಡುವದರಿಂದ ತಿಳಿಸಿದೆ.

ಆತ್ಮನನ್ನು ರಥಿಯೆಂದು ತಿಳಿ. ಶರೀರವನ್ನು ರಥವೆಂದೂ ಬುದ್ಧಿಯನ್ನು ಸಾರಥಿಯೆಂದೂ ತಿಳಿ. ಮನಸ್ಸೇ ಕಡಿವಾಣವು. ಇಂದ್ರಿಯಗಳು ಕುದುರೆಗಳು. ವಿಷಯಗಳು ಅವುಗಳಿಗೆ ದಾರಿ. ಆತ್ಮೇಂದ್ರಿಯಮನಸ್ಸುಗಳಿಂದ ಕೂಡಿದವನೇ ಭೋಕ್ತನೆಂದು ತಿಳಿದವರು ಹೇಳುತ್ತಾರೆ'' ಎಂದು ಹಿಂದಿನ ವಾಕ್ಯದಲ್ಲಿ ತಿಳಿಸಿದೆ. ಇಂದ್ರಿಯಾದಿಗಳ ಅಸಂಯಮದಿಂದ ಸಂಸಾರವನ್ನು ಪಡೆಯುತ್ತಾರೆ. ಸಂಯಮದಿಂದ ವಿಷ್ಣುವಿನ ಪರಮಪದವನ್ನೇ ಪಡೆಯುತ್ತಾರೆ ಎಂದು ತಿಳಿಸಿದ ಬಳಿಕ ಆ ವಿಷ್ಣುವಿನ ಪರಮಪದವು ಯಾವದೆಂಬುದನ್ನು ತಿಳಿಸಿಕೊಡುವದಕ್ಕಾಗಿ ಇಂದ್ರಿಯಗಳಿಗಿಂತ ಅರ್ಥಗಳು ಹೆಚ್ಚಿನವು; ಅರ್ಥಗಳಿಗಿಂತ ಮನಸ್ಸು ಹೆಚ್ಚಿನದು; ಮನಸ್ಸಿಗಿಂತ ಬುದ್ಧಿಯು ಹೆಚ್ಚಿನದು; ಅವ್ಯಕ್ತಕ್ಕಿಂತ ಪುರುಷನು ಹೆಚ್ಚಿನವನು, ಪುರುಷನಿಗಿಂತ ಹೆಚ್ಚಿನದು ಯಾವದೂ ಇಲ್ಲವೇ ಇಲ್ಲ. ಅವನೇ ಕೊನೆ, ಅವನೇ ಪರಗತಿ''- ಎಂಬ ಈ ವಾಕ್ಯವು ಬಂದಿರುತ್ತದೆ. ಈ ಎರಡು ವಾಕ್ಯಗಳನ್ನೂ ಹೋಲಿಸಿ ನೋಡಿದರೆ ಹಿಂದೆ ಹೇಳಿದ ಇಂದ್ರಿಯಾದಿಗಳೇ ಈ ವಾಕ್ಯದಲ್ಲಿ ಬಂದಿರುವವೆಂಬುದು ಸ್ಪಷ್ಟವಾಗಿರುತ್ತದೆ. ಹಿಂದೆ ಹೇಳಿದ ರಥಿಯನ್ನೇ ಇಲ್ಲಿ ಮಹಾನ್ ಆತ್ಮಾ ಎಂಬ ಶಬ್ದದಿಂದ ಹೇಳಿರುತ್ತದೆ ಎಂದಾಗಲಿ ಅಥವಾ ಹಿಂದೆ ಬುದ್ಧಿಶಬ್ದದಿಂದ ಹೇಳಿರುವದರಲ್ಲಿ ಅಡಕವಾಗಿರುವ ಸಮಷ್ಟಿ ಬುದ್ಧಿಯನ್ನಾಗಲಿ ಮಹನ್ ಆತ್ಮಾ ಎಂಬ ಶಬ್ದದಿಂದ ಹೇಳಿದೆಯೆಂದಾಗಲಿ ತಿಳಿಯಬಹುದು. ಆದ್ದರಿಂದ ಪರಿಶೇಷನ್ಯಾಯದಿಂದ ಹಿಂದೆ ಹೇಳಿದ ಶರೀರವನ್ನೇ ಇಲ್ಲಿ ಅವ್ಯಕ್ತಶಬ್ದದಿಂದ ತಿಳಿಸಿರುತ್ತದೆ ಎಂದು ಗೊತ್ತುಪಡಿಸಬಹುದಾಗಿದೆ. ಶರೀರ, ಇಂದ್ರಿಯ, ಮನಸ್ಸು, ಬುದ್ಧಿ, ವಿಷಯ-ಇವುಗಳಿಂದ ಕೂಡಿರುವ ಅಜ್ಞನಿಗೆ ಸಂಸಾರವು ಹೇಗಾಗುವದು, ಅದರಿಂದ ಬಿಡುಗಡೆಯು ಹೇಗಾಗುವದು? ಎಂಬಿದನ್ನು ತಿಳಿಸುವದೇ ಇಲ್ಲಿ ಉದ್ದೇಶವು; ಆದ್ದರಿಂದ ಸಾಂಖ್ಯರ ಅವ್ಯಕ್ತತತ್ತ್ವಕ್ಕೇನೂ ಇಲ್ಲಿ ಅವಕಾಶವಿಲ್ಲ. ಪ್ರಕೃತವಾಕ್ಯದ ಮುಂದೆ ಬರುವ ಅಧ್ಯಾತ್ಮಯೋಗದ ವಿವರಣೆಯಿಂದಲೂ ಈ ಅಭಿಪ್ರಾಯಕ್ಕೆ ಬೆಂಬಲವು ದೊರಕುತ್ತದೆ. ಅಲ್ಲಿ ಇಂದ್ರಿಯಗಳನ್ನು ಮನಸ್ಸಿನಲ್ಲಿ,

ಮನಸ್ಸನ್ನು ಬುದ್ಧಿಯಲ್ಲಿ ಹೀಗೆ ಒಂದರಲ್ಲಿ ಒಂದನ್ನು ಲಯಮಾಡುತ್ತಾ ಕೊನೆಗೆ ಶಾಂತನಾದ ಪರಮಾತ್ಮನಲ್ಲಿ ನೆಲೆನಿಲ್ಲಬೇಕೆಂದು ಉಪದೇಶಿಸಿರುತ್ತದೆ. ಈ ಎಲ್ಲಾಕಾರಣಗಳಿಂದ ಇಲ್ಲಿರುವ ಅವ್ಯಕ್ತಶಬ್ದವು ಪ್ರಧಾನಪರವಲ್ಲವೆಂದು ಗೊತ್ತಾಗುತ್ತದೆ ಎಂಬುದು ಸೂತ್ರಭಾಷ್ಯದ ಅಭಿಪ್ರಾಯವು.

★★★★★

# ಬ್ರಹ್ಮಸಂಸ್ಪರ್ಶ

**18-5-1956**

**ಬ್ರ॥ಶ್ರೀ॥ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳವರು**

**ಗೀತಾಭಾಷ್ಯ 6-24** ರಿಂದ 31ರವರೆಗಿನ ಅಭಿಪ್ರಾಯವೇನೆಂದರೆ ಧ್ಯಾನಯೋಗವು ಜ್ಞಾನಕ್ಕೆ ಅಂತರಂಗಸಾಧನವಾಗಿರುತ್ತದೆ. ಕರ್ಮಯೋಗವನ್ನು ಮಾಡಿ ಚಿತ್ತಶುದ್ಧಿಯನ್ನು ಮಾಡಿಕೊಂಡವರು ಮಾತ್ರ ಇದಕ್ಕೆ ಅಧಿಕಾರಿಗಳು. ಈ ಯೋಗವನ್ನು ಬೇಸರವಿಲ್ಲದೆ ಒಂದೇ ಸಮಕ್ಕೆ ದೀರ್ಘಕಾಲದವರೆಗೂ ಮಾಡುತ್ತಿದ್ದರೆ ಮಾತ್ರ ಸಫಲವಾಗುತ್ತದೆ. ಯಾವ ಸಂಕಲ್ಪವನ್ನೂ ಮಾಡದಿರುವದರ ಮೂಲಕ ಇಂದ್ರಿಯಗಳನ್ನು ಬಿಗಿಹಿಡಿದುಕೊಂಡು ಕ್ರಮಕ್ರಮವಾಗಿ ಮನಸ್ಸಿನಲ್ಲಿಯೂ ಆತ್ಮನಲ್ಲಿಯೂ ಲಯಗೊಳಿಸಿಕೊಳ್ಳಬೇಕು. ಮನಸ್ಸನ್ನು ಆತ್ಮನಲ್ಲಿ ಸಂಪೂರ್ಣವಾಗಿ ಲಯಗೊಳಿಸಿಕೊಂಡರೆ ಅತೀಂದ್ರಿಯವಾದ ಉತ್ತಮ ಸುಖವು ಕಾಣಿಸಿಕೊಳ್ಳುವದು. ಆಗ ಬ್ರಹ್ಮಸಂಸ್ಪರ್ಶವು ಎಂದರೆ ಬ್ರಹ್ಮಭಾವವೇ ಉಂಟಾಗಿ ಬಿಡುವದು. ಈ ಯೋಗದ ಫಲವಾಗಿ ತನ್ನ ಆತ್ಮನು ಎಲ್ಲಾ ಕಡೆಯಲ್ಲಿಯೂ ಇರುತ್ತಾನೆಂದೂ ಸರ್ವಭೂತಗಳೂ ಆತ್ಮನಲ್ಲಿಯೇ ಇದ್ದುಕೊಂಡಿರುವವೆಂದೂ ತತ್ತ್ವಜ್ಞಾನವು ಹುಟ್ಟುವದು. ಹೀಗೆ ಸರ್ವಾತ್ಮೈಕತ್ವವನ್ನು ತಿಳಿದುಕೊಂಡಾತನಿಗೆ ಪರಮಾತ್ಮನೇ ಆತ್ಮನಾಗಿರುವದರಿಂದ ಪರಮಾತ್ಮನು ಮರೆಯಾಗುವ ಸಂಭವವೇ ಇಲ್ಲ ಎಂಬುದು ಭಾಷ್ಯದ ತಾತ್ಪರ್ಯ.

★★★★★

# ಬ್ರಹ್ಮಜ್ಞಾನಿಯು ಪಂಚಕೋಶಗಳನ್ನು ಮೀರುವ ಬಗೆ

**19-5-1956**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ತೈತ್ತಿರೀಯೋಪನಿಷದ್ಭಾಷ್ಯ 2-8**ರಲ್ಲಿ ಹೀಗೆ ವಿವರಿಸಿದೆ: ಪರಮಾತ್ಮಜ್ಞಾನಿಯು ಪರಮಾತ್ಮನಿಗಿಂತ ಬೇರೆಯೆಂದಾದರೆ ಪರಮಾತ್ಮನೇ ಜೀವಭಾವದಿಂದ ಸೃಷ್ಟಿಯಲ್ಲಿ ಒಳಗೆ ಹೊಕ್ಕಿರುತ್ತಾನೆಂದು ಹೇಳುವ ಶ್ರುತಿಗಳಿಗೆ ವಿರೋಧವಾಗುವದು, ಪರಮಾತ್ಮನೇ ಎಂದಾದರೆ ತನ್ನನ್ನು ತಾನೇ ಉಪಸಂಕ್ರಮಣ ಮಾಡುವದೆಂಬುದು ತರ್ಕವಿರುದ್ಧವಾಗುವದು. ಮತ್ತು ಪರಮಾತ್ಮನೇ ಸಂಸಾರಿಯೆಂದೋ ಅಥವಾ ಪರಮಾತ್ಮನು ಇಲ್ಲವೇಇಲ್ಲವೆಂದೋ ಆಗುವದು. ಆದ್ದರಿಂದ ಅರಿಯುವವನು ಯಾರು? ಉಪಸಂಕ್ರಮಣವು ಹೇಗೆ? – ಎಂಬುದನ್ನು ವಿಚಾರಿಸಬೇಕು.

ಸಿದ್ಧಾಂತವೇನೆಂದರೆ : (1) ಬ್ರಹ್ಮವನ್ನರಿತವನು ಬ್ರಹ್ಮವೇ ಆಗುವನೆಂದು ಹೇಳಿರುವದರಿಂದ ಇಲ್ಲಿ ಅರಿಯುವವನು ಪರಮಾತ್ಮನೆಂದೇ ತಿಳಿಯಬೇಕು. ಹಾಗಾದರೆ ಪರಮಾತ್ಮನಿಗೇ ಪರಮಾತ್ಮಭಾವವು ಬರುವದೆಂದಾಯಿತಲ್ಲ ಎಂದರೆ ಅವಿದ್ಯೆಯಿಂದ ಕಲ್ಪಿತವಾಗಿರುವ ಅನಾತ್ಮತ್ವವನ್ನು ತೊಲಗಿಸಿಕೊಂಡು ಮೊದಲು ಪರಮಾತ್ಮನಾಗಿದ್ದವನೇ ಮತ್ತೆ ಪರಮಾತ್ಮನಾಗಬಹುದಾಗಿರುತ್ತದೆ. (2) ವಿದ್ಯಾಮಾತ್ರದಿಂದ ಪರಮಪುರುಷಾರ್ಥವನ್ನು ಹೇಳಿರುವದರಿಂದಲೂ ಈ ಸಿದ್ಧಾಂತವೇ ಸರಿಯೆಂದು ತಿಳಿಯಬೇಕು. (3) ಇಲ್ಲಿ ವಿದ್ಯೆಯ ಜೊತೆಗೆ ಸಾಧನವನ್ನೂ ಹೇಳಿರುತ್ತದೆಯೆಂದು ಒಪ್ಪಿಕೊಂಡರೂ ಸಾಧನೆಯಿಂದ ಉಂಟಾಗುವ ಮೋಕ್ಷವು ಅನಿತ್ಯವಾಗಬೇಕಾಗುವದು. (4) ಬ್ರಹ್ಮಜ್ಞಾನಿಗೆ ಅಭಯವೆಂಬ ಫಲವನ್ನು ಹೇಳಿರುವದರಿಂದಲೂ ಈ ಸಿದ್ಧಾಂತವೇ ಸರಿಯೆನ್ನಬೇಕಾಗುತ್ತದೆ. ಏಕೆಂದರೆ ಬ್ರಹ್ಮವು ಅದ್ವಿತೀಯವಾಗಿದ್ದು ಅದರ ಜ್ಞಾನದಿಂದ ಅವಿದ್ಯೆಯು ತೊಲಗಲಾಗಿ ಅವಿದ್ಯಾಕೃತವಾದ ಭಯಕಾರಣವಾದ ದ್ವೈತವು ತೊಲಗುವದೆಂಬುದು ಯುಕ್ತವಾಗುತ್ತದೆ. ದ್ವೈತವು

ಅವಿದ್ಯಾಕೃತವೆಂಬುದಾದರೋ ಸುಷುಪ್ತಿ ಸಮಾಧಿಗಳ ಅನುಭವದಿಂದ ನಿಶ್ಚಯವಾಗಿರುತ್ತದೆ. ಇಲ್ಲಿ ಉಪಸಂಕ್ರಮಣವೆಂದರೆ ವಿದ್ಯಾಮಾತ್ರವಾಗಿ ರುತ್ತದೆ, ಪ್ರಾಪ್ತಿಯೇನೂ ಅಲ್ಲ. ಆದ್ದರಿಂದ ತನ್ನನ್ನು ತಾನೇ ಹೇಗೆ ಉಪಸಂಕ್ರಮಣಮಾಡುತ್ತಾನೆ?- ಎಂಬ ಆಕ್ಷೇಪಕ್ಕೆ ಅವಕಾಶವಿಲ್ಲ. ವಿದ್ಯಾವಿದ್ಯೆಗಳಿಂದ ಪರಮಾತ್ಮನಲ್ಲಿ ವಿಶೇಷ ಉಂಟಾಗುವದಿಲ್ಲವೆ?-ಎಂದು ಶಂಕಿಸಬಾರದು. ಏಕೆಂದರೆ ಅವೆರಡೂ ಅಂತಃಕರಣದ ಧರ್ಮಗಳಾಗಿ ರುವದರಿಂದ ಜ್ಞೇಯವಾಗಿರುತ್ತವೆ. ಅವೆರಡನ್ನೂ ಬೆಳಗುವ ಆತ್ಮಚೈತನ್ಯಕ್ಕೇ ಅವು ಸೇರಿದವುಗಳೆಂದು ತಿಳಿಯುವದು ತಪ್ಪುತಿಳಿವಳಿಕೆಯಾಗಿರುತ್ತದೆ- ಹೀಗೆಂಬುದು ಭಾಷ್ಯದ ಸಾರವು.

★★★★★

# ಪರಮಾತ್ಮನು ಅದ್ವಿತೀಯನು

**20-5-1956**

**ಬ್ರ॥ಶ್ರೀ॥ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳವರು**

**ಮಾಂಡೂಕ್ಯಕಾರಿಕೆಯ 2-30 ರಿಂದ 33**ರವರೆಗಿನ ಕಾರಿಕೆಗಳ ಭಾಷ್ಯದ ಅಭಿಪ್ರಾಯ: ಪರಮಾತ್ಮನು ಅದ್ವಿತೀಯನೇ ಆಗಿರುತ್ತಿದ್ದರೂ ಅವನಲ್ಲಿ ಪ್ರಾಣ, ಭೂತ, ಗುಣಾದಿಗಳನ್ನು ವಾದಿಗಳು ಬಗೆಬಗೆಯಾಗಿ ಕಲ್ಪಿಸಿಕೊಂಡಿರುತ್ತಾರೆ. ವಿಷಯವನ್ನು ಹೀಗೆಂದು ಅನುಭವಕ್ಕೆ ತಂದುಕೊಂಡಿರುವವನಿಗೆ ಶ್ರುತಿವಾಕ್ಯಗಳ ತಾತ್ಪರ್ಯವು ಸ್ಫುಟವಾಗಿ ತಿಳಿಯುತ್ತದೆ. ಸ್ವಪ್ನ, ಮಾಯೆ, ಗಂಧರ್ವನಗರ-ಇವುಗಳು ಹೇಗೆ ತಮ್ಮ ತೋರಿಕೆಯ ಕಾಲಕ್ಕೆ ಪರಮಾರ್ಥವಾಗಿ ಯೇ ತೋರುತ್ತಿದ್ದರೂ ಆ ತೋರಿಕೆಯ ರೂಪದಲ್ಲಿ ಹುಸಿಯಾಗಿರುವವೋ ಸ್ವಪ್ನಕ್ಕೆ ಆಧಾರವಾಗಿರುವ ಆತ್ಮ, ಮಾಯೆಗೆ ಆಧಾರವಾಗಿರುವ ಮಾಯಾವಿ, ಗಂಧರ್ವನಗರಕ್ಕೆ ಆಧಾರವಾಗಿರುವ ಮೋಡ-ಇವುಗಳೇ ಹಾಗೆಹಾಗೆ

ತೋರುತ್ತಿರುವವೋ ಹಾಗೆಯೇ ಈ ಪ್ರಪಂಚವೆಲ್ಲವೂ ಆತ್ಮನಲ್ಲಿ ಕಲ್ಪಿತವಾಗಿ ತೋರುತ್ತಿರುವದು. ಪರಮಾರ್ಥದೃಷ್ಟಿಯಿಂದ ನೋಡಿದರೆ, ಈ ಪ್ರಪಂಚವು ಹುಟ್ಟಿದ್ದೂ ಇಲ್ಲ, ಲಯವಾಗುವದೂ ಇಲ್ಲ; ಸಂಸಾರಬಂಧ, ಸಾಧಕನಾದ ಮುಮುಕ್ಷು, ಮುಕ್ತ-ಇವು ಯಾವವೂ ಸತ್ಯವಲ್ಲ. ಪರಮಾತ್ಮನೊಬ್ಬನೇ ಇರುತ್ತಾನೆ. ಈ ಪರಮಾರ್ಥವನ್ನು ತಿಳಿಸುವದಕ್ಕೆ ಶಾಸ್ತ್ರವು ಕಲ್ಪಿತವಾದ ದ್ವೈತವನ್ನು ಕಳೆಯುವದೇ ಹೊರತು ನೇರಾಗಿ ಅದ್ವೈತಾತ್ಮನನ್ನೇನೂ ತಿಳಿಸುವದಿಲ್ಲ; ಆತ್ಮನದಲ್ಲದ ಧರ್ಮವನ್ನು ಕಳೆಯುವದರಿಂದಲೇ ಶಾಸ್ತ್ರವು ಪ್ರಮಾಣವಾಗಿರುತ್ತದೆ. ಅದ್ವಯನೆಂದೂ ದ್ವೈತ ಪ್ರಪಂಚದಲ್ಲಿ ತೋರುವ ಭಾವಗಳೆಂದೂ ಪರಮಾತ್ಮನೊಬ್ಬನೇ ತೋರುತ್ತಿರುತ್ತಾನೆ; ಯಾವ ಪ್ರಪಂಚವೂ ಅದ್ವಿತೀಯನಾದ ಪರಮಾತ್ಮನಿಲ್ಲದೆ ತೋರಲಾರದು. ಆದ್ದರಿಂದ ಇದೆಲ್ಲವೂ ಅದ್ವಯನಾದ ಪರಮಾತ್ಮನೇ ಎಂದು ತಿಳಿಯಬೇಕು. ಅದ್ವೈತರೂಪವೇ ಮಂಗಲಕರವಾದದ್ದು -ಎಂಬುದು ಭಾಷ್ಯದ ಸಾರವು.

ಶ್ರೀ ಶ್ರೀಗಳು ವಿಷಯವನ್ನು ಅನುವಾದಮಾಡುವಾಗ ಉಪದೇಶಿಸಿದ್ದು ಏನೆಂದರೆ, ಎಲ್ಲಾ ಶಾಸ್ತ್ರಗಳೂ ತಮ್ಮತಮ್ಮ ವಿಷಯದ ಅವಿದ್ಯೆಯನ್ನು ಕಳೆಯುವದಕ್ಕೇ ಬಂದಿರುತ್ತವೆ. ಇದರಂತೆ ಅದ್ವೈತಶಾಸ್ತ್ರವೂ ಪರಮಾತ್ಮನ ವಿಷಯದ ಅವಿದ್ಯೆಯನ್ನು-ತಪ್ಪುತಿಳಿವಳಿಕೆಯನ್ನು-ಕಳೆಯುತ್ತದೆ. ಪರಮಾತ್ಮನೇ ಆಗಿರುವ ನಮ್ಮ ಆತ್ಮನನ್ನು ಸಂಸಾರಿಯೆಂದು ತಿಳಿದುಕೊಂಡು, ಈ ಪ್ರಪಂಚದಲ್ಲಿ ಜನಿಸಿರುವ ನಾನು ಸಂಸಾರದಿಂದ ನರಳುತ್ತಿದೇನೆ, ಪರಮಾತ್ಮಜ್ಞಾನವನ್ನು ಪಡೆದುಕೊಂಡು ಮುಕ್ತನಾಗಬೇಕು-ಎಂದು ಭಾವಿಸಿಕೊಂಡಿರುವ ತಪ್ಪುತಿಳಿವಳಿಕೆಯನ್ನು ಕಳೆಯುವದಕ್ಕೆ ಶಾಸ್ತ್ರವು ಬಂದಿರುತ್ತದೆ. ನೀವು ತಿಳಿದುಕೊಂಡಿರುವ ಸ್ವರೂಪವಲ್ಲ, ನಿಮ್ಮದು - ಎಂದು ಅದು ತಿಳಿಸಿಕೊಟ್ಟಾಗ ನಮ್ಮ ಪರಮಾರ್ಥಸ್ವರೂಪದ ತಿಳಿವಳಿಕೆಯು ಉಂಟಾಗುತ್ತದೆ. ಸ್ವಪ್ನವೇ ಮುಂತಾದ ದೃಷ್ಟಾಂತಗಳಿಂದಲೇ ದ್ವೈತದ ಮಿಥ್ಯಾತ್ವವು ಸಿದ್ಧವಾಗುವದೆಂತಲೂ ಅಷ್ಟರಿಂದಲೇ ನಮ್ಮ ಸಂಸಾರಬಂಧವು ಕಳೆದುಹೋಗುವದೆಂತಲೂ ತಿಳಿಯಬಾರದು. ಈ ಪ್ರಕರಣದಲ್ಲಿ ಎಚ್ಚರಕ್ಕೂ ಕನಸಿಗೂ ಯಾವ ತಾರತಮ್ಯವೂ ಇಲ್ಲ -ಎಂಬುದನ್ನು ಅನುಭವಕ್ಕೆ

ಹೊಂದುವಂತೆ ತೋರಿಸಿಕೊಟ್ಟಿದೆ. ಅದನ್ನು ಮನದಟ್ಟುಮಾಡಿಕೊಂಡವರಿಗೆ ಈ ನಮಗೆ ಕಾಣುತ್ತಿರುವ ಪ್ರಪಂಚವೆಲ್ಲವೂ ಆತ್ಮನಲ್ಲಿ ಕಲ್ಪಿತವಾಗಿದೆ ಎಂಬುದು ಅನುಭವಕ್ಕೆ ಬರುತ್ತದೆ. ಇದನ್ನು ಅರಿತುಕೊಳ್ಳದೆ ಇರುವವರು ವ್ಯವಹಾರಮಾಡುತ್ತಿರುವ ದ್ವೈತಪ್ರಪಂಚವೂ ಅದ್ವೈತಪರಮಾತ್ಮನೇ ಆಗಿದೆ; ಆದರೆ ಆ ತಿಳಿವಳಿಕೆಯಿಲ್ಲದ್ದರಿಂದ ಜನರಿಗೆ ರಾಗದ್ವೇಷಾದಿಗಳ ಅನರ್ಥವು ಆಗುತ್ತಿರುತ್ತದೆ. ಯಾರು ಈ ನಿಜವನ್ನು ಅರಿತುಕೊಳ್ಳುವರೋ ಅವರಿಗೆ ವೇದದ ತಾತ್ಪರ್ಯವೂ ನಿಃಸಂಶಯವಾಗಿ ಗೊತ್ತಾಗುವದು ; ಅದ್ವೈತವೇ ಪರಮಾರ್ಥವೆಂದೂ ನಿತ್ಯಮಂಗಲರೂಪವಾದದ್ದೆಂದೂ ಅವರು ಮನಗಾಣುವರು.

★★★★★

## ಅವಸ್ಥೆಗಳ ಸ್ವರೂಪ

**4-5-1957**

**ಶ್ರೀಶ್ರೀಸಚ್ಚಿದಾನದೇಂದ್ರಸರಸ್ವತೀ ಸ್ವಾಮಿಗಳವರು**

**ಮಾಂಡೂಕ್ಯ ಕಾರಿಕೆಯ ಅಲಾಂತಶಾಂತಿಪ್ರಕರಣದಲ್ಲಿ 4-87** ರಿಂದ 92 ರವರೆಗಿನ ಭಾಷ್ಯದ ಅಭಿಪ್ರಾಯವು ಹೀಗಿದೆ - ಶ್ರೀಗೌಡಪಾದರವರು ಶಾಂಕರಸಂಪ್ರದಾಯಕ್ಕೆ ಬೇಕಾಗಿರುವ ವಿಚಾರವನ್ನು ಸುವ್ಯವಸ್ಥೆಯಿಂದ ತಿಳಿಸಿಕೊಡುವ ಗ್ರಂಥವನ್ನು ಬರೆಯುವದಕ್ಕೆ ಮೊದಲಿಗರು ಅಥವಾ ನಮಗೆ ಸಿಕ್ಕುವ ಅಂಥ ಗ್ರಂಥಗಳಲ್ಲಿ ಇವರದೇ ಮೊದಲನೆಯದು. ಗೌಡಪಾದರ ಗ್ರಂಥಕ್ಕೆ ಹೆಸರೇನೆಂಬುದನ್ನು ಆಚಾರ್ಯರವರು ತಿಳಿಸಿಲ್ಲ. ಇಲ್ಲಿರುವ ಶ್ಲೋಕಗಳನ್ನು ಕೆಲವರು 'ವಾರ್ತಿಕ'ವೆಂದೂ ಮತ್ತೆ ಕೆಲವರು 'ಕಾರಿಕೆ'ಯೆಂದೂ ಕರೆದಿರುತ್ತಾರೆ; ಆನಂದಗಿರಿಗಳು ಬರೆದಿರುವ ಟೀಕೆಯ ಕೊನೆಯಲ್ಲಿ ಇದನ್ನು 'ಆಗಮಶಾಸ್ತ್ರ' ಎಂದು ಕರೆದಿದೆ.

ಮಾಂಡೂಕ್ಯದಲ್ಲಿ ವಾಚ್ಯವಾಚಕಗಳೆರಡೂ ಅಲ್ಲದ ಪರಮಾರ್ಥತತ್ತ್ವವನ್ನು ತಿಳಿಸಿರುತ್ತದೆ. ಇದನ್ನು ಗೌಡಪಾದರು ತಮ್ಮ ಮಾತುಗಳಿಂದ ವರ್ಣಿಸಿರುತ್ತಾರೆ. ಪರಮಾರ್ಥವನ್ನು ತಿಳಿಸುವದಕ್ಕೆ ಒಂದಾನೊಂದು ವಿಶಿಷ್ಟಕ್ರಮದ ಉಪದೇಶವು ಬೇಕಾಗುತ್ತದೆ. ಆ ಕ್ರಮವನ್ನು ಉಪನಿಷತ್ತಿಗೆ ಅನುಗುಣವಾಗಿ ತಿಳಿಕೊಟ್ಟಿರುವದರಿಂದ ಗೌಡಪಾದರ ಮೊದಲನೆಯ ಪ್ರಕರಣಕ್ಕೆ ಆಗಮಪ್ರಕರಣ ಎಂಬ ಹೆಸರು ಬಂದಿರಬಹುದು. ಅವರು ಬರೆದಿರುವ ಮಿಕ್ಕ ಮೂರು ಪ್ರಕರಣಗಳು ಆಗಮಾರ್ಥವನ್ನು ಯುಕ್ತಿಯಿಂದ ತೋರಿಸಿ ಅನುಭವಕ್ಕೆ ಹೊಂದಿಸಿಕೊಡುತ್ತವೆ.

ಆದ್ದರಿಂದ ಅವು ಯುಕ್ತಿಪ್ರಧಾನವಾಗಿರುತ್ತವೆಯೆನ್ನಬೇಕು. ನಾಲ್ಕನೆಯದಾದ ಅಲಾತಶಾಂತಿ ಪ್ರಕರಣದಲ್ಲಿ ವೇದಾಂತೋಪದಿಷ್ಟವಾಗಿರುವ ಅಜಾತಬ್ರಹ್ಮವನ್ನು ತಿಳಿಸುವದಕ್ಕೆ ಒಂದು ವಿಶಿಷ್ಟಕ್ರಮವನ್ನು ಉಪಯೋಗಿಸಿದೆ. ಬ್ರಹ್ಮವು ಎಂದೆಂದಿಗೂ ಅಜಾತ, ಹುಟ್ಟುವ ಸ್ವಭಾವವೇ ಇಲ್ಲದ್ದು : ಆದರೂ ಅದನ್ನು ಹುಟ್ಟಿದೆ ಎಂದು ವಾದಿಗಳು ಬಗೆಬಗೆಯಿಂದ ತಮ್ಮ ಸಿದ್ಧಾಂತರೀತಿಯಿಂದ ತೋರಿಸಿ ಕೊಡುವದಕ್ಕೆ ಪ್ರಯತ್ನಿಸಿರುತ್ತಾರೆ. ಜಾತಿಯನ್ನು- ಬ್ರಹ್ಮವು ಹುಟ್ಟುತ್ತದೆ ಎಂಬುದನ್ನು-ತಮ್ಮ ಮತವಾಗಿಟ್ಟುಕೊಂಡಿರುವವರು ಪರಸ್ಪರವಿರುದ್ಧವಾದ ಪ್ರಕಾರಗಳಿಂದಲೇ ಆ ವಾದವನ್ನು ಪ್ರತಿಪಾದಿಸುತ್ತಿರುವದರಿಂದ ಬ್ರಹ್ಮವು ಪ್ರಪಂಚರೂಪದಿಂದ ಹುಟ್ಟಿದೆ ಎಂಬ ವಾದದಲ್ಲಿಯೇ ಏನೋ ದೋಷವಿದೆ ಎಂದು ತೋರುತ್ತದೆ. ಜಾತಿವಾದದಲ್ಲಿ- ಬ್ರಹ್ಮವು ದ್ವೈತಪ್ರಪಂಚರೂಪದಿಂದ ಹುಟ್ಟುತ್ತದೆ ಎಂಬ ವಾದದಲ್ಲಿ- ರಾಗದ್ವೇಷಗಳಿಗೆ ಅವಕಾಶವಿದೆಯೆಂದೂ ಆಗುತ್ತದೆ. ಆದ್ದರಿಂದಲೂ ವೇದಾಂತಸಿದ್ಧಾಂತವಾದ ಅಜಾದ್ವೈತವಾದವೇ ಸರ್ವೋತ್ತಮವೆಂದು ಸಿದ್ಧವಾಗುತ್ತದೆ-ಎಂದು ಈ ಪ್ರಕರಣದಲ್ಲಿ ತೀರ್ಮಾನಿಸಿದೆ. ಹೀಗೆ ಯುಕ್ತಿ ಪ್ರಧಾನವಾಗಿಯೇ ಈ ಪ್ರಕರಣದಲ್ಲಿ ಹೊರಟಿದ್ದರೂ ಕೊನೆಯಲ್ಲಿ 'ಮಧುರೇಣ ಸಮಾಪಯೇತ್' ಎಂಬ ನ್ಯಾಯವನ್ನನುಸರಿಸಿ ಗೌಡಪಾದರ ಆಗಮಪ್ರಧಾನವಾಗಿರುವ ತಮ್ಮ ಪ್ರಕ್ರಿಯೆಯನ್ನೇ ಶ್ರೋತೃಗಳ ಮುಂದೆ ಇಟ್ಟಿರುತ್ತಾರೆ. ಆ ಭಾಗವನ್ನೇ ಈ ದಿನ ನಾವು ವಿಚಾರಕ್ಕೆ ತೆಗೆದುಕೊಂಡಿರುವದು.

ಈ ಪ್ರಕರಣದ ಎಂಬತ್ತೇಳನೆಯ ಶ್ಲೋಕದಿಂದ ಹಿಡಿದು ಎಂಬತ್ತೊಂಬತ್ತನೆಯ ಶ್ಲೋಕಗಳವರೆಗಿನ ಗ್ರಂಥಭಾಗದ ಅಭಿಪ್ರಾಯವೇನೆಂದರೆ:

ಲೌಕಿಕ ವ್ಯವಹಾರಕ್ಕೂ ಶಾಸ್ತ್ರೀಯವ್ಯವಹಾರಕ್ಕೂ ಆಶ್ರಯವಾಗಿರುವ ಜಾಗ್ರತ್ತನ್ನು ಲೌಕಿಕವೆಂದು ಕರೆಯಬಹುದು. ಇದರಲ್ಲಿ ಗ್ರಾಹ್ಯವಸ್ತುವಿದೆ, ಗ್ರಾಹಕವಾದ ಜ್ಞಾನವೂ ಇದೆ. ನಮ್ಮನಮ್ಮ ಮಟ್ಟಿಗೆ ಆಗುವ ಕನಸನ್ನು ಶುದ್ಧಲೌಕಿಕವೆಂದು ಕರೆಯಬಹುದು. ಏಕೆಂದರೆ ಅಲ್ಲಿ ಗ್ರಾಹ್ಯವಾದ ವಸ್ತುಗಳಿಲ್ಲದಿದ್ದರೂ ಅವು ಇದ್ದಂತೆ ತೋರಿಸುವ ಗ್ರಾಹಕವಾದ ಅರಿವು ಮಾತ್ರ ಇರುತ್ತದೆ. ಇನ್ನು ಗ್ರಾಹ್ಯವಾದ ವಸ್ತುವಾಗಲಿ, ಗ್ರಾಹಕವಾದ ಅರಿವಾಗಲಿ ಇಲ್ಲದಿರುವ ಸುಷುಪ್ತಿಯನ್ನು ಲೋಕೋತ್ತರ ಎಂದು ಕರೆಯಬಹುದು. ಏಕೆಂದರೆ ಅಲ್ಲಿ ಯಾವ ವ್ಯವಹಾರಕ್ಕೂ ಅವಕಾಶವೇ ಇರುವದಿಲ್ಲ ; ವ್ಯವಹಾರವನ್ನೆಲ್ಲ ಮೀರಿರುವ ಅವಸ್ಥೆಯದು.

ಈ ಮೂರು ಅವಸ್ಥೆಗಳೇ ಜ್ಞೇಯವು, ಅರಿತುಕೊಳ್ಳಬೇಕಾಗಿರತಕ್ಕದ್ದು ; ಏಕೆಂದರೆ ಇವುಗಳನ್ನು ಬಿಟ್ಟರೆ ಅರಿತುಕೊಳ್ಳತಕ್ಕದ್ದಾಗಿ ಮತ್ತೆ ಯಾವದೊಂದೂ ಉಳಿಯುವದಿಲ್ಲ. ಯಾವ ವಾದಿಗಳೇ ಆಗಲಿ ಕಲ್ಪಿಸಿಕೊಂಡಿರುವ ವಿಚಾರಣೀಯ ವಸ್ತುಗಳು, ಈ ಮೂರರಲ್ಲಿಯೇ ಅಡಕವಾಗಿರುತ್ತವೆ. ಇದನ್ನು ಅರಿಯುವ ಜ್ಞಾನವೇ, ಅನುಭವರೂಪವಾದ ಅರಿವೇ, ನಿಜವಾದ ಜ್ಞಾನವು. ಇವುಗಳನ್ನು ಜ್ಞಾನದಿಂದ ಅರಿತಂತೆ ಸರಿಯಾಗಿ ವಿಚಾರಮಾಡಿದರೆ ಯಾವದು ಕಟ್ಟಕಡೆಗೆ ಪರಮಾರ್ಥವೆಂದು ನಿಲ್ಲುವದೋ ಅದೇ ವಿಜ್ಞೇಯವು.

ಈ ಮೂರು ಜ್ಞೇಯಗಳನ್ನೂ ಕ್ರಮವರಿತು ಒಂದೊಂದಾಗಿ ಪರೀಕ್ಷಿಸುತ್ತಾ ಹೋದರೆ, ಲೌಕಿಕವೆನಿಸುವ ಜಾಗ್ರದವಸ್ಥೆಯು ಶುದ್ಧಲೌಕಿಕವಾದ ಸ್ವಪ್ನದಲ್ಲಿ ಲಯವಾಗುವದು. ಏಕೆಂದರೆ ಸ್ವಪ್ನಕ್ಕಿಂತ ವಿಲಕ್ಷಣವಾಗಿ ಇದು ಎಚ್ಚರ ಎಂದು ಗುರುತಿಸುವದಕ್ಕೆ ಸಹಾಯಕವಾದ ಯಾವ ಹೆಗ್ಗುರುತೂ ಎಚ್ಚರದಲ್ಲಿರುವದಿಲ್ಲ ; ಈ ಎರಡು ಅವಸ್ಥೆಗಳೂ ಸಮವಾಗಿ ಗ್ರಾಹ್ಯಗ್ರಾಹಕರೂಪವಾಗಿಯೇ ತತ್ಕಾಲಕ್ಕೆ ತೋರುವವೆಂಬುದನ್ನು ವೈತಥ್ಯಪ್ರಕರಣದಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿದೆ. ಇನ್ನು ಲೋಕೋತ್ತರವಾದ ಸುಷುಪ್ತಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಇಡಿಯ ದ್ವೈತಪ್ರಪಂಚವೇ ಅಲ್ಲಿ ಮಾಯವಾಗಿರುತ್ತದೆ. ಈ ಮೂರು ಜ್ಞೇಯಗಳನ್ನೂ ಕಾಣುತ್ತಿರುವ, ತನ್ನ ಚೈತನ್ಯದಿಂದ ಬೆಳಗುತ್ತಿರುವ ಆತ್ಮತತ್ತ್ವವೊಂದೇ ಯಾವಾಗಲೂಮಾರ್ಪಡದೆ, ತನ್ನ ಸ್ವರೂಪವು ಅಚ್ಚಳಿಯದಂತೆ ಇದ್ದುಕೊಂಡಿರುವದೆಂದು ಕಂಡುಬರುತ್ತದೆ. ಆದ್ದರಿಂದ ಹೀಗೆ

ಕ್ರಮವರಿತು ಜ್ಞೇಯಗಳನ್ನು ಅನುಭವಾನುಸಾರವಾಗಿ ವಿಚಾರಮಾಡಿದವನು ಯಾವಾಗಲೂ ಸರ್ವಜ್ಞನಾಗಿರುತ್ತಾನೆ, ಏಕೆಂದರೆ ಅವನ ಸ್ವರೂಪವು ಅವಸ್ಥಾತ್ರಯವನ್ನು ಎಂದೆಂದಿಗೂ ಮಿರಿರುವ ನಿತ್ಯಚೈತನ್ಯ ಸ್ವರೂಪವಾದ ತುರೀಯಾತ್ಮನೇ ಆಗಿರುತ್ತದೆ.

ಹೀಗೆ ನೋಡಿದರೆ ಅವಸ್ಥಾತ್ರಯಗಳು ಆತ್ಮನಲ್ಲಿ ಎಂದೆಂದಿಗೂ ಇರುವದೇ ಇಲ್ಲ. ಆದ್ದರಿಂದ ಅವು ಹೇಯ, ತಿಳಿವಳಿಕೆಯಿಂದ ಬಿಡತಕ್ಕವು ಎನಿಸುತ್ತವೆ. ತುರೀಯವೊಂದೇ ಮಹಾಜ್ಞೇಯವಾಗಿ ಉಳಿದುಕೊಳುತ್ತದೆ. ಈ ಆತ್ಮಜ್ಞಾನವನ್ನು ಸಂಪಾದಿಸಿಕೊಂಡು ಅನಾತ್ಮಜ್ಞಾನವನ್ನು ಬಿಟ್ಟು ಆತ್ಮತತ್ತ್ವವನ್ನು ಮನನ ಮಾಡುವದೇ ಆಪ್ಯವು, ಪಡೆದುಕೊಳ್ಳಬೇಕಾದ ಸಾಧನವು. ಮಿಥ್ಯಾರೂಪವಾದ ದ್ವೈತದಲ್ಲಿರುವ ರಾಗದ್ವೇಷಾದಿಗಳನ್ನು ಈ ತಿಳಿವಳಿಕೆಯಿಂದ ಪಚನ ಮಾಡಬೇಕಾಗಿರುವದರಿಂದ ಇವು ಪಾಕ್ಯಗಳು. ಅಂತೂ ಪರಮಾರ್ಥವೇನೆಂದರೆ ಅದ್ವಿತೀಯಾತ್ಮನೊಬ್ಬನೇ ಎಂದೆಂದಿಗೂ ಇರುವವನು. ಹೇಯ, ಆಪ್ಯ, ಪಾಕ್ಯ–ಎಂಬೀ ಮೂರೂ ಕೂಡ ವ್ಯವಹಾರದೃಷ್ಟಿಯಿಂದಲೇ ಹೇಳಿದವುಗಳಾಗಿವೆ. ಇದನ್ನು ತಿಳಿದುಕೊಂಡವನೇ ಸರ್ವಜ್ಞನು–ಎಂಬುದು ಕಾರಿಕೆಗಳ ಅಭಿಪ್ರಾಯದ ಸಾರವು.

★★★★★

# ಜೀವನಿಗೆ ಉತ್ಪತ್ತಿಯಿಲ್ಲ

**5-5-1957**

**ಬ್ರ॥ಶ್ರೀ॥ ಪರಕ್ಕಜೆ ಸುಬ್ರಹ್ಮಣ್ಯಭಟ್ಟರು**

**ಬ್ರಹ್ಮಸೂತ್ರಭಾಷ್ಯ 2-3-17**ರಲ್ಲಿ ಜೀವನಿಗೆ ಉತ್ಪತ್ತಿಯಿಲ್ಲವೆಂದು ನಿರ್ಣಯಿಸಿದೆ. ಕೆಲವು ಉಪನಿಷತ್ತುಗಳಲ್ಲಿ ಜೀವನ ಉತ್ಪತ್ತಿಯನ್ನು ಹೇಳಿದೆ, ಕೆಲವು ಉಪನಿಷತ್ತುಗಳಲ್ಲಿ ಯಾವ ಮಾರ್ಪಾಡು ಇಲ್ಲದೆ ಬ್ರಹ್ಮವೇ ಜೀವರೂಪದಿಂದ ಇರುತ್ತಾನೆಂದು ಹೇಳಿದೆ. ಇವುಗಳಲ್ಲಿ ಯಾವದು ಸರಿ? ಒಂದನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ ಆಗುವದೆಂದು ಶ್ರುತಿಯಲ್ಲಿರುವದರಿಂದ ಬ್ರಹ್ಮಜ್ಞಾನದಿಂದ ಜೀವನನ್ನು ತಿಳಿದುಕೊಂಡಂತೆ ಆಗಬೇಕಾದರೆ ಜೀವನೂ ಹುಟ್ಟಿದಾನೆಂಬುದು ಯುಕ್ತ ; ಬ್ರಹ್ಮಕ್ಕೂ ಜೀವನಿಗೂ ಲಕ್ಷಣಭೇದವೂ ಇದೆ. ಆದ್ದರಿಂದ ಹುಟ್ಟಿದಾನೆಂದೇ ಹೇಳಬೇಕು ಎಂದು ಮೊದಲು ತಟ್ಟನೆ ತೋರುತ್ತದೆ. ಆದರೆ ಜೀವನಿಗೆ ಉತ್ಪತ್ತಿಯೇ ಹೊಂದುವದಿಲ್ಲ. ಏಕೆಂದರೆ ಜೀವನು ನಿತ್ಯನೆಂದೂ ಜನ್ಮರಹಿತನೆಂದೂ ಶ್ರುತಿಯಲ್ಲಿ ಹೇಳಿದೆ ; ಬ್ರಹ್ಮವೇ ಜೀವರೂಪದಿಂದ ಇದ್ದುಕೊಂಡಿದೆ ಎಂದೂ ಹೇಳಿದೆ. ಆದ್ದರಿಂದ ಜೀವನಿಗೆ ಉತ್ಪತ್ತಿಯಿಲ್ಲವೆಂಬುದೇ ಸಿದ್ಧಾಂತ.

ಜೀವನು ಇತರವಸ್ತುಗಳಿಗಿಂತ ವಿಭಕ್ತನಾಗಿರುವದರಿಂದ ಇವನು ಕಾರ್ಯವೇ ಎಂದಾಗುತ್ತದೆ; ಕಾರ್ಯವಾಗಿರುವದರಿಂದ ಅವನಿಗೆ ಉತ್ಪತ್ತಿಯೂ ಉಂಟು ಎಂದಾಗುತ್ತದೆಯಲ್ಲ! -ಎಂದರೆ ಜೀವನು ವಿಭಕ್ತನಾಗಿ ಕಾಣುತ್ತಿರುವದು ಉಪಾಧಿಯ ನಿಮಿತ್ತದಿಂದಲೇ, ಅವನು ತನ್ನಿಂದ ತಾನು ವಿಭಕ್ತನಾಗಿ ರುವದಿಲ್ಲ. ಉಪಾಧಿಪ್ರಲಯದಿಂದಲೇ ಜೀವನಿಗೆ ಪ್ರಲಯವೇ ಹೊರತು ಸ್ವತಃ ಇಲ್ಲವೆಂಬುದನ್ನು ಯಾಜ್ಞವಲ್ಕ್ಯನು ಮೈತ್ರೇಯಿಗೆ ಹೇಳಿರುತ್ತಾನೆ. ಒಂದನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ ಆಗುವದೆಂಬ ಪ್ರತಿಜ್ಞೆಯು ಬ್ರಹ್ಮವೇ ಜೀವನೆಂಬ ಕಾರಣದಿಂದಲೇ ಹೊಂದುತ್ತದೆ ; ಜೀವಬ್ರಹ್ಮರುಗಳಿಗೆ ಇರುವ ಲಕ್ಷಣಭೇದವು ಉಪಾಧಿಯ ನಿಮಿತ್ತದಿಂದಲೇ ಆಗಿದೆ. ಆದ್ದರಿಂದಲೇ ಜೀವನ ಸ್ವರೂಪವನ್ನು ವಿಚಾರಮಾಡಿ ಅವನಿಗೆ ಯಾವ ಸಂಸಾರಧರ್ಮವೂ ಇಲ್ಲವೆಂದು

ತೋರಿಸಿಕೊಟ್ಟು ಯಾಜ್ಞವಲ್ಕ್ಯನು ಜೀವನು ನಿಜವಾಗಿ ಬ್ರಹ್ಮಸ್ವರೂಪವೇ ಆಗಿರುತ್ತಾನೆಂದು ಜನಕನಿಗೆ ತಿಳಿಯಹೇಳಿರುತಾನೆ. ಆದ್ದರಿಂದ ಜೀವನಿಗೆ ಜನ್ಮವೂ ಇಲ್ಲ, ಮರಣವೂ ಇಲ್ಲ-ಎಂಬುದು ಸಿದ್ಧಾಂತವು.

ಪ್ರವಚನದ ಕೊನೆಯಲ್ಲಿ **ಶ್ರೀಶ್ರೀಗಳವರು** ಅಧಿಕರಣದ ಸಾರವನ್ನು ಸುಲಭವಾದ ಮಾತುಗಳಿಂದ ವಿಶದಪಡಿಸಿದರು. ಎಲ್ಲರಿಗೂ ಭಾಷ್ಯವನ್ನು ನೇರಾಗಿ ಓದಿ ತಿಳಿದುಕೊಳ್ಳುವದು ಸಾಧ್ಯವಿರಲಾರದಾದರೂ ಅಧಿಕಾರಿಗಳಿಗೆ ಪ್ರೋತ್ಸಾಹಾರ್ಥವಾಗಿ ವೇದಾಂತವಿಚಾರದ ಕ್ರಮವನ್ನು ತಿಳಿಯಪಡಿಸುವದಕ್ಕೆಂದು ಅಲ್ಲಲ್ಲಿ ಬೇರೆಬೇರೆಯ ಭಾಷ್ಯಗಳನ್ನು ಅರಿಸಿ ಇಟ್ಟಿರುತ್ತಾರೆ. ಜೀವನು ಹುಟ್ಟುತ್ತಾನೆಂದೇ ಲೌಕಿಕದೃಷ್ಟಿಯಿಂದ ತೋರಿದರೂ ಶ್ರುತಿಯಲ್ಲಿ ಇವನು ಬ್ರಹ್ಮವೇ ಆಗಿರುತ್ತಾನೆಂದು ಹೇಳಿರುತ್ತದೆಯಲ್ಲ!- ಎಂಬ ಶಂಕೆಯುಳ್ಳವರಿಗೆ ಸಮಾಧಾನಾರ್ಥವಾಗಿ ಜೀವನು ಶರೀರಾದ್ಯುಪಾಧಿಗಳ ಸಂಬಂಧದಿಂದ ಸಂಸಾರಿಯಾಗಿ ತೋರುತ್ತಿರುತ್ತಾನೆ ; ನಿಜವಾಗಿ ಅವನು ಯಾವಾಗಲೂ ಪರಮಾತ್ಮನೇ ಆಗಿರುತ್ತಾನೆ, ಅದನ್ನು ಮನಗಾಣುವದರಿಂದ ಪರಮಪುರುಷಾರ್ಥವು ದೊರಕುತ್ತದೆ ಎಂಬುದು ವೇದಾಂತೋಪದೇಶ-ಎಂದು ತಿಳಿಯಪಡಿಸಿದರು.

★★★★★

# ಕರ್ಮಯೋಗ

**6-5-1957**

**ಬ್ರ॥ಶ್ರೀ॥ವಿದ್ವಾನ್ ಪಿ.ಚಂದ್ರಶೇಖರಭಟ್ಟರು**

**ಭಗವದ್ಗೀತೆಯ ಮೂರನೆಯ ಅಧ್ಯಾಯದ 4ರಿಂದ 16ನೆಯವರೆಗಿ** ನ ಶ್ಲೋಕಗಳ ಭಾಷ್ಯದ ಅಭಿಪ್ರಾಯ: ಈ ಭಾಗದಲ್ಲಿ ಆತ್ಮಜ್ಞಾನಿಗಳಲ್ಲದ ಕರ್ಮಾಧಿಕಾರಿಗಳು ಕರ್ಮವನ್ನು ಅವಶ್ಯವಾಗಿ ಮಾಡಬೇಕೆಂದು ಉಪದೇಶಿಸಿದೆ.

ಕರ್ಮವನ್ನು ಬಿಟ್ಟಮಾತ್ರದಿಂದಲೇ ನೈಷ್ಕರ್ಮ್ಯರೂಪವಾದ ಜ್ಞಾನನಿಷ್ಠೆಯು ಬರುವದಿಲ್ಲ. ಸಾಮಾನ್ಯರಿಗೆ ಕರ್ಮವಿಲ್ಲದೆ ಇರುವದಕ್ಕೆ ಆಗುವದೇ ಇಲ್ಲ ; ಕರ್ಮಗಳನ್ನು ಬಿಟ್ಟು ಕರ್ಮಫಲವನ್ನು ಮನಸ್ಸಿನಿಂದ ಸ್ಮರಿಸಿಕೊಳ್ಳುತ್ತಿರುವ ಮಿಥ್ಯಾಚಾರದಿಂದ ಏನೂ ಪ್ರಯೋಜನವಿಲ್ಲ. ಆದ್ದರಿಂದ ನಿತ್ಯಕರ್ಮವನ್ನು ಮಾಡಬೇಕು. ಈಶ್ವರಾರ್ಪಣವಾಗಿ ಮಾಡಿದ ಕರ್ಮವು ಎಂದಿಗೂ ಬಂಧಕವಾಗುವದಿಲ್ಲ. ಯಾರು ದೇವತೆಗಳು ಕೊಟ್ಟಿರುವದನ್ನು ಅವರಿಗೆ ಅರ್ಪಣೆಮಾಡಿ ಅವರಿತ್ತ ಕರ್ಮಫಲವನ್ನು ಭುಂಜಿಸದೆ ತಮಗೋಸ್ಕರವಾಗಿಯೇ ಭೋಗಗಳನ್ನು ಬಯಸುವರೋ ಅವರು ಪಾಪಾತ್ಮರು. ಯಜ್ಞದಿಂದ ವೃಷ್ಟಿ, ಅನ್ನ, ಪ್ರಜೋತ್ಪತ್ತಿ- ಇವುಗಳು ಕ್ರಮಕ್ರಮವಾಗಿ ಉಂಟಾಗುತ್ತವೆ. ಆದ್ದರಿಂದ ಭಗವಂತನು ಪ್ರವರ್ತನೆಮಾಡಿರುವ ಧರ್ಮಚಕ್ರವನ್ನು ಅನುಸರಿಸುವದು ಅಧಿಕಾರಿಗಳಿಗೆ ಯುಕ್ತ-ಎಂಬುದು ಗ್ರಂಥದ ಸಾರವು.

**ಶ್ರೀಶ್ರೀಗಳವರು** ಗೀತಾಪುಸ್ತಕಗಳು ಬಹಳ ಅಗ್ಗವಾಗಿ ಸಿಕ್ಕುವ ಈ ಕಾಲದಲ್ಲಿ ಅದಕ್ಕೆ ತಪ್ಪು ಅರ್ಥವನ್ನು ಕಲ್ಪಿಸುವದೂ ಬಹಳವಾಗಿ ಹೆಚ್ಚಿರುತ್ತದೆ; ಗೀತೆಯಲ್ಲಿ ವರ್ಣಾಶ್ರಮಧರ್ಮವನ್ನು ಹೇಳಿಲ್ಲವೆಂದೂ ಅಲ್ಲಿ ಅದನ್ನು ಹೇಳಿದೆ ಎಂಬುವರು ದೇಶದ್ರೋಹಿಗಳೆಂದೂ ಎನ್ನುವವರಿದಾರೆ. ವರ್ಣಾಶ್ರಮಧರ್ಮದ ಪ್ರಯೋಜನವು ಸಿಕ್ಕುವ ಕಾಲವು ಆಗಿಹೋಯಿತು; ಈಗ ಅದನ್ನು ಗೌರವಪೂರ್ವಕವಾಗಿ ಬೀಳ್ಕೊಡಬೇಕು ಎನ್ನುವವರೂ ಹುಟ್ಟಿಕೊಂಡಿರುತ್ತಾರೆ! ರಾಜಕೀಯನಿಮಿತ್ತದಿಂದ ಜನರು ಏನಾದರೂ ಹೇಳಲಿ, ಗೀತೆಯಲ್ಲಿ ವರ್ಣಾಶ್ರಮಧರ್ಮವನ್ನು ಹೇಳಿರುವದಂತೂ ಅತ್ಯಂತಸ್ಪಷ್ಟವಾಗಿರುತ್ತದೆ. ಇದಿರಲಿ. ಈಗಿನ ಕಾಲದಲ್ಲಿ ಎಲ್ಲರೂ ಎಲ್ಲಾ ಉದ್ಯೋಗಗಳನ್ನೂ ಮಾಡಬೇಕೆಂಬ ಪೈಪೋಟಿಯನ್ನು ಹತ್ತಿಸುತ್ತಾ ಇರುತ್ತಾರೆ. ಇದರಿಂದ ಮಾಡುವ ಕೆಲಸದ ಯೋಗ್ಯತೆಯೂ ಕಡಿಮೆಯಾಗುತ್ತದೆ; ಸಮಾಜದಲ್ಲಿ ಅಸ್ವಾಸ್ಥ್ಯವೂ ಉಂಟಾಗಿರುತ್ತದೆ. ಜನರ ಸ್ವಾರ್ಥವು ಹೆಚ್ಚುತ್ತಿದೆ, ನಿತ್ಯಜೀವನವು ಸಾಗುವದೂ ಕಷ್ಟವಾಗಿದೆ. ಗೀತೆಯಲ್ಲಿ ಹೇಳಿರುವ ದೇವತಾರ್ಥವಾದ ಯಜ್ಞವಂತಿರಲಿ, ತಮ್ಮತಮ್ಮ ಕುಟುಂಬದವರಿಗಾಗಿ ದುಡಿಯುವದನ್ನು ಕಡಿಮೆಮಾಡಬೇಕೆಂಬ ಸ್ವಾರ್ಥಿಗಳೂ ತಲೆದೋರುತ್ತಿದಾರೆ.

ನಮ್ಮನಮ್ಮ ಕರ್ಮಗಳನ್ನು ಈಶ್ವರ ಪ್ರೀತ್ಯರ್ಥವಾಗಿ ಮಾಡುತ್ತಾ ಸ್ವಾರ್ಥವನ್ನು ಕಡಿಮೆಮಾಡಿಕೊಂಡರೆ ಎಷ್ಟೋ ಅನರ್ಥಗಳು ಕಡಿಮೆಯಾದಾವು. ಆದ್ದರಿಂದ ಆತ್ಮಜ್ಞಾನವಿಲ್ಲದ ಅಧಿಕಾರಿಗಳು ಲೌಕಿಕಕರ್ಮಗಳನ್ನೂ ಶಾಸ್ತ್ರೀಯಕರ್ಮಗಳನ್ನೂ ಪರಮೇಶ್ವರನಿಗೆ ಅರ್ಪಣೆಮಾಡುವ ಕರ್ಮಯೋಗವನ್ನು ಅಭ್ಯಾಸಮಾಡುವದು ಒಳ್ಳೆಯದು'- ಎಂದು ಉಪದೇಶಿಸಿದರು.

★★★★★

## ಜ್ಞಾನಿಗೆ ಶರೀರಸಂಬಂಧವಿಲ್ಲ

**7-5-1957**

**ಬ್ರ॥ಶ್ರೀ॥ ಹೆಚ್.ಅನಂತಮೂರ್ತಿಶಾಸ್ತ್ರಿಗಳವರು**

**ಬೃಹದಾರಣ್ಯಕಭಾಷ್ಯ**ದಲ್ಲಿ ನಾಲ್ಕನೆಯ ಅಧ್ಯಾಯದ ನಾಲ್ಕನೆಯ ಬ್ರಾಹ್ಮಣದಲ್ಲಿ 6ನೆಯ ಮಂತ್ರದ ಭಾಷ್ಯಾರ್ಥವಿವರಣೆಯು ಹೀಗಿದೆ: ಆ ಮಂತ್ರದಲ್ಲಿ ಹೇಳಿರುವದೇನೆಂದರೆ ವಿಷಯದಲ್ಲಿಯೇ ಆಸಕ್ತನಾಗಿರುವ ಅಜ್ಞನು, ಆಯಾ ವಿಷಯವನ್ನು ಪಡೆದುಕೊಳ್ಳುವದಕ್ಕಾಗಿ ಆಯಾ ಕರ್ಮದೊಡನೆ ಹೋಗಿ ಫಲವಿರುವಲ್ಲಿಗೆ ಹೋಗುತ್ತಾನೆ; ಅದನ್ನು ಅನುಭವಿಸಿದ ಬಳಿಕ ಮತ್ತೂ ಕರ್ಮವನ್ನು ಮಾಡುವದಕ್ಕಾಗಿ ಈ ಲೋಕಕ್ಕೆ ಬರುತ್ತಾನೆ. ಆದರೆ ಯಾವ ಕಾಮವೂ ಇಲ್ಲದ ಜ್ಞಾನಿಯು ಜ್ಞಾನಫಲವನ್ನು ಪಡೆದುಕೊಳ್ಳುವದಕ್ಕೆ ಹೀಗೆ ಎಲ್ಲಿಗೂ ಹೋಗಬೇಕಾದದ್ದಿರುವದಿಲ್ಲ. ಅವನು ಆತ್ಮಕಾಮನಾಗಿ ಬಿಟ್ಟಿರುವದರಿಂದ ಆತ್ಮನಲ್ಲಿಯೇ ಎಲ್ಲಾ ಕಾಮಗಳನ್ನೂ ಪಡೆದುಕೊಂಡು ಬಿಟ್ಟವನಾಗಿ ಅಕಾಮನಾಗಿರುತ್ತಾನೆ. ಆದ್ದರಿಂದ ಅವನ ಪ್ರಾಣಗಳು ಇಲ್ಲಿಯೇ ಅವನ ಸ್ವರೂಪದಲ್ಲಿ ಸೇರಿಹೋಗುತ್ತವೆ. ಅವನ ಮೊದಲೂ ಬ್ರಹ್ಮವೇ ಆಗಿದ್ದು, ಬ್ರಹ್ಮದಲ್ಲಿಯೇ ಸೇರಿಬಿಡುತ್ತಾನ್'' ಈ ವಿಷಯಕ್ಕೆ ಆಚಾರ್ಯರು ಪೂರ್ವಪಕ್ಷಿಗಳು ಮಾಡಿರುವ ಅಪಾರ್ಥವನ್ನು ಖಂಡಿಸಿ ಜ್ಞಾನಿಗೆ ಬದುಕಿರುವಾಗ ಒಂದು ರೂಪ,

ಸತ್ತಮೇಲೆ ಒಂದು ರೂಪ-ಹೀಗೆ ಎರಡು ಬೇರೆಬೇರೆಯ ರೂಪಗಳಿರುವದಿಲ್ಲ; ಅವನು ಯಾವಾಗಲೂ ಒಂದೇ ರೂಪದಲ್ಲಿರುತ್ತಾನೆ ಎಂದು ತೀರ್ಮಾನಿಸಿರುತ್ತಾರೆ. ಶಾಸ್ತ್ರಿಗಳವರು ಈ ಅಭಿಪ್ರಾಯವನ್ನು ವಿಶದಪಡಿಸಿದರು.

ಪ್ರವಚನದ ಕೊನೆಯಲ್ಲಿ **ಶ್ರೀಗಳವರು** ಇಲ್ಲಿ ಬಂದಿರುವ ಚರ್ಚೆಗೆ ಕಾರಣವೇನೆಂಬುದನ್ನು ವಿವರಿಸಿದರು. ಆಗಿನ ಕಾಲಕ್ಕೆ ಕೆಲವರು ಜೀವನು ಬದುಕಿದ್ದಾಗ ಇದ್ದ ಸ್ವರೂಪವು ಹೋಗಿ ಮುಕ್ತಿಯಲ್ಲಿ ಮತ್ತೊಂದು ಸ್ವರೂಪವು ಬರುತ್ತದೆ ಎಂದು ವಿದೇಹಕೈವಲ್ಯಕ್ಕೆ ಪ್ರಾಮುಖ್ಯವನ್ನು ಕೊಟ್ಟು ಹೇಳುತ್ತಿದ್ದರು. ಜೀವನು ಸ್ವರೂಪದಿಂದ ನಾಶವಾಗಿ ಬ್ರಹ್ಮದಲ್ಲಿ ಬೆರೆತು ಬ್ರಹ್ಮವಾಗುತ್ತಾನೆ ಎಂಬ ಅನಿಷ್ಟವಾದ ಅಭಿಪ್ರಾಯವು ಅದರಿಂದ ಉಂಟಾಗುತ್ತಿದ್ದದ್ದರಿಂದ ಅವಿದ್ಯಾಕೃತವಾದದ್ದೇ ಬಂಧವು; ಆ ಅವಿದ್ಯೆಯೂ ವಿಷಯವಾಗಿರುವದರಿಂದ ಆತ್ಮನ ಧರ್ಮವಲ್ಲವಾದ್ದರಿಂದ ಬ್ರಹ್ಮವೇ ಆಗಿರುವ ಜೀವನಿಗೆ ಬ್ರಹ್ಮದಲ್ಲಿ ಲಯವಾಗುತ್ತದೆ ಎಂಬುದು ಉಪಚಾರಮಾತ್ರಕ್ಕೆ ಹೇಳಿದ್ದು. ಮಿಕ್ಕ ಜೀವರಂತೆ ಜ್ಞಾನಿಗೆ ಮತ್ತೆ ಶರೀರ ಸಂಬಂಧವು ಆಗುವದಿಲ್ಲವೆಂಬುದೇ ಶ್ರುತಿಗೆ ಅರ್ಥ' -ಎಂಬುದನ್ನು ಸ್ಪಷ್ಟಪಡಿಸಿದರು.

★★★★★

# ಉಪಕೋಸಲವಿದ್ಯೆ

**8-5-1957**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ಬ್ರಹ್ಮಸೂತ್ರಭಾಷ್ಯ** 1-2-13 ರಿಂದ 17ನೆಯ ಸೂತ್ರಗಳವರೆಗಿನ ಗ್ರಂಥಭಾಗದಲ್ಲಿ ಹೇಳಿರುವ **ಉಪಕೋಸಲವಿದ್ಯೆಯ** ಅಭಿಪ್ರಾಯ: ಈ ಭಾಗದಲ್ಲಿ ಉಪಕೋಸಲನಿಗೆ ಗುರುವಾದ ಸತ್ಯಕಾಮಜಾಬಾಲನು

ಉಪದೇಶಮಾಡಿದ ಅಕ್ಷಿಪುರುಷನ ವಿದ್ಯೆಯನ್ನು ಕುರಿತು ಚರ್ಚೆಮಾಡಿರುತ್ತದೆ. ಕಣ್ಣಿನಲ್ಲಿರುವನೆಂದಿರುವದರಿಂದ ಈ ಪುರುಷನು ಛಾಯಾತ್ಮನೊ, ಜೀವನೊ, ಆದಿತ್ಯಪುರುಷನೊ ಆಗಿರಬೇಕು-ಎಂಬುದು ಪೂರ್ವಪಕ್ಷಿಯ ಅಭಿಪ್ರಾಯ.. ಆದರೆ ಇವನನ್ನು ಆತ್ಮನೆಂದು ಕರೆದಿರುವದರಿಂದಲೂ 'ಅಮೃತನು', 'ಅಭಯನು' ಎಂದಿರುವದರಿಂದಲೂ ಇವನಿಗೆ ನಿರ್ಮಲವಾದ ಸ್ಥಾನವನ್ನು ಹೇಳಿರುವದರಿಂದಲೂ ಉತ್ತಮಗುಣಗಳನ್ನು ಉಪದೇಶಿಸಿರುವದರಿಂದಲೂ ಸರ್ವವ್ಯಾಪಿಯಾದ ಸುಖರೂಪನೆಂದು ಹೇಳಿದ ಉಪಕ್ರಮಕ್ಕೂ ಹೊಂದುವದರಿಂದಲೂ ಉಪಾಸಕನಿಗೆ ಉತ್ತರಮಾರ್ಗದಿಂದ ಗತಿಯನ್ನು ಹೇಳಿರುವದರಿಂದಲೂ ಇವನು ಪರಮಾತ್ಮನೇ, ಜೀವಾದಿಗಳಲ್ಲ - ಎಂದು ಸಿದ್ಧಾಂತಮಾಡಲಾಗಿದೆ.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೇಳಿದ್ದೇನೆಂದರೆ, ಪರಮಾತ್ಮ ಸ್ವರೂಪವು ಯಾವ ವಿಶೇಷವೂ ಇಲ್ಲದ್ದಾದ್ದರಿಂದ ಅದನ್ನು ತಿಳಿಯುವದಕ್ಕೆ ದ್ವಾರವೇ ಇರುವದಿಲ್ಲವೆಂಬಂತೆ ಇದೆ. ಆದರೂ ಅದರಲ್ಲಿ ಕಲ್ಪಿತವಾಗಿರುವ ನಾಮರೂಪಗಳನ್ನೇ ದ್ವಾರವಾಗಿ ಮಾಡಿಕೊಂಡು ಶ್ರುತಿಯು ಆ ಸ್ವರೂಪವನ್ನು ತಿಳಿಸಿಕೊಟ್ಟಿರುತ್ತದೆ. ವಿಚಾರಶಕ್ತಿಯು ಸಾಲದೆ ಪರಮಾತ್ಮನನ್ನು ನೇರಾಗಿ ಅರಿತುಕೊಳ್ಳಲಾರದವರಿಗೆಂದು ಆ ಉಪಾಧಿಗಳ ಕೆಲವು ಧರ್ಮಗಳನ್ನು ಉಪಯೋಗಿಸಿಕೊಂಡು ಆ ಮೂಲಕವಾಗಿ ಪರಮಾತ್ಮನನ್ನು ಉಪಾಸನೆ ಮಾಡಿರೆಂದೂ ಹೇಳಿರುತ್ತದೆ. ಸದ್ಗುರು ಸೇವೆಯಿಂದ ಶಿಷ್ಯನಿಗೆ ಆಗುವ ಪರಮಲಾಭವನ್ನು ಅಗ್ನಿಗಳು ಉಪದೇಶಮಾಡಿದವೆಂಬ ಆಖ್ಯಾನರೂಪದಿಂದ ಈ ಅಧಿಕರಣದಲ್ಲಿ ತಿಳಿಸಿರುತ್ತದೆ. ಕಣ್ಣಿನಲ್ಲಿರುವ ಪರಮಾತ್ಮನೆಂದರೆ ಕಣ್ಣಿಗೂ ಕಣ್ಣಾಗಿರುವ ಚೈತನ್ಯರೂಪನು, ಅವನು ಕಣ್ಣಿನಂತೆಯೇ ಯಾವ ಕಲ್ಮಷವನ್ನೂ ತನ್ನಲ್ಲಿಟ್ಟುಕೊಳ್ಳದೆ ಅಚೆಗೆ ತಳ್ಳುವವನು, ಸರ್ವಕಾಮಗಳನ್ನೂ ಕೊಡುವ ತೇಜೋರೂಪನು - ಎಂದು ಉಪಾಸನೆಮಾಡುವಂತೆ ಗುರುಗಳು ಉಪದೇಶಮಾಡಿರುತ್ತಾರೆ. ಅದ್ವಿತೀಯಾನಂದರೂಪನಾದ ಪರಮಾತ್ಮನನ್ನು ಹಾಗೆಂದು ಉಪಾಸನೆಮಾಡಿದರೂ ಇಹಪರಸುಖವುಂಟು.

★★★★★

# ಹಾರ್ದಬ್ರಹ್ಮೋಪಾಸನೆಯ ಫಲ

## 9-5-1957

**ಬ್ರ॥ಶ್ರೀ॥ಲಕ್ಷ್ಮೀನರಸಿಂಹಶಾಸ್ತ್ರಿಗಳವರು**

**ಛಾಂದೋಗ್ಯಭಾಷ್ಯ** 8-1-6 ರಿಂದ 8-3-4ರವರೆಗಿನ ಭಾಗದಲ್ಲಿ ಹಾರ್ದಬ್ರಹ್ಮೋಪಾಸನೆಯ ಫಲವನ್ನು ವರ್ಣಿಸಿದೆ. ಹೃದಯದಲ್ಲಿ ಪರಮಾತ್ಮನೇ ಇರುತ್ತಾನೆ. ಅವನು ಪಾಪರಹಿತನು, ಜರಾಮೃತ್ಯುಗಳಿಲ್ಲದವನು, ಶೋಕರಹಿತನು, ಹಸಿವುಬಾಯಾರಿಕೆಗಳಿಲ್ಲದವನು, ಸತ್ಯಕಾಮನು, ಸತ್ಯಸಂಕಲ್ಪನು, ಆತನೇ ನನ್ನ ಆತ್ಮನು-ಎಂದು ಉಪಾಸನೆಮಾಡುವಾತನಿಗೆ ಆಗುವ ಫಲವು ಕಾಮಚಾರವು, ಎಂದರೆ ಯಾವ ಫಲವನ್ನು ಬಯಸಿದರೆ ಸಂಕಲ್ಪಮಾತ್ರದಿಂದ ಅದು ಸಿದ್ಧವಾಗುವದು. ಸತ್ಯವಾದ ಕಾಮಗಳೆಲ್ಲವೂ ನಿಜವಾಗಿ ನಮ್ಮ ಹೃದಯದಲ್ಲಿರುತ್ತಿದ್ದರೂ ನಮಗೆ ಬಾಹ್ಯವಿಷಯಗಳಲ್ಲಿ ಆಸಕ್ತಿಯಿರುವದರಿಂದ ಆ ಕಾಮಗಳನ್ನು ನಾವು ಪಡೆದುಕೊಳ್ಳಲಾರದೆ ಇರುತ್ತೇವೆ; ಸುಷುಪ್ತಿಯಲ್ಲಿ ಪ್ರತಿದಿನವೂ ಇಂಥ ಆತ್ಮನಲ್ಲಿ ಒಂದಾಗುತ್ತಲೇ ಇದ್ದರೂ ನಮಗೆ ಅವು ದೊರಕದೆ ಇರುತ್ತವೆ. ಸರಿಯಾಗಿ ಉಪಾಸನೆಮಾಡಿದವರಿಗೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಈ ಫಲಗಳು ಅವಶ್ಯವಾಗಿ ದೊರಕುತ್ತವೆ ಎಂಬುದು ಗ್ರಂಥದ ಸಾರವು.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೇಳಿದ್ದೇನೆಂದರೆ : ಶ್ರುತಿಯಲ್ಲಿ ಜ್ಞಾನ ಉಪಾಸನೆ-ಎರಡನ್ನೂ ಹೇಳಿದೆ; ಅದರಲ್ಲಿಯೂ ಛಾಂದೋಗ್ಯದಲ್ಲಿ ವಿಶೇಷವಾಗಿ ಉಪಾಸನೆಯನ್ನೇ ಹೇಳಿರುತ್ತದೆ. ಆದರೆ ಮೈಗಳ್ಳರೂ ವಿಷಯಾಸಕ್ತರೂ ಆಗಿರುವ ಜನರಿಗೆ ಜ್ಞಾನದ ಫಲವೂ ಸಿಕ್ಕುವದಿಲ್ಲ, ಉಪಾಸನೆಯ ಫಲವೂ ದಕ್ಕುವದಿಲ್ಲ. ಈ ಎರಡಕ್ಕೂ ಶ್ರದ್ಧೆ ಬೇಕು, ಗುರುಪದೇಶವು ಬೇಕು, ತತ್ಪರತೆಯಿಂದ ಅನುಷ್ಠಾನಮಾಡಿ ನೋಡಬೇಕು. ಹೀಗಾದರೆ ಅವಶ್ಯವಾಗಿ ಫಲವುಸಿಕ್ಕುತ್ತದೆ. ಉಪಾಸನೆಗೆ ಸಾಕ್ಷಾತ್ಕಾರವು ಅತ್ಯವಶ್ಯ; ಅದರಿಂದ ಮುಂದೆ ಲೋಕಾಂತರದಲ್ಲಿ ಆಗುವ ಫಲಗಳು ಇಲ್ಲಿಯೇ

ಸೂಚಿತವಾಗುತ್ತವೆ. ಸತ್ಯಕಾಮನಾದ ಆತ್ಮನಲ್ಲಿ ಶ್ರದ್ಧೆಯಿದ್ದರೆ ನಮಗೂ ಸತ್ಯವಾಗಿ ಕಾಮಗಳು ದೊರಕುತ್ತವೆ, ತೋರಿಕೆಯ ಪ್ರಪಂಚದಲ್ಲಿ ಶ್ರದ್ಧೆಯಿದ್ದರೆ ತೋರಿಕೆಯ ಫಲವೇ ಆಗುತ್ತದೆ. ಉಪಾಸನೆಯಿಂದ ಹೃದಯಕ್ಕೆ ಉಲ್ಲಾಸ ಬರಬೇಕು ; ಅದೇ ಗುರುತು, ಸಫಲವಾಯಿತೆನ್ನುವದಕ್ಕೆ. ನಮ್ಮನಮ್ಮ ಯೋಗ್ಯತೆಗೆ ತಕ್ಕ ಉಪಾಸನೆಯನ್ನು-ಪುರಾಣೋಕ್ತವಾದರೂ ಚಿಂತೆಯಿಲ್ಲ - ಶ್ರದ್ಧೆಯಿಂದ ಮಾಡಿದರೆ ಅವಶ್ಯವಾಗಿ ಫಲವು ದೊರಕುತ್ತದೆ.

★★★★★

# ಪರಭಕ್ತರ ಲಕ್ಷಣ

**10-5-1957**

**ಬ್ರ. ಶ್ರೀ ಎಂ. ಎಸ್. ವೆಂಕಟೇಶಶಾಸ್ತ್ರಿಗಳು**

**ಗೀತಾಭಾಷ್ಯ** 12ನೆಯ ಅಧ್ಯಾಯದಲ್ಲಿ 12 ರಿಂದ 20ನೆಯ ಶ್ಲೋಕಗಳ ಭಾಷ್ಯಭಾಗದಲ್ಲಿ 'ಪರಭಕ್ತರ ಲಕ್ಷಣ'ವನ್ನು ವರ್ಣಿಸಿರುತ್ತದೆ. ಭಗವದ್ಗೀತೆಯಲ್ಲಿ ಮುಮುಕ್ಷುಗಳಿಗಾಗಿ ಪ್ರವೃತ್ತಿ ನಿವೃತ್ತಿ ಧರ್ಮಗಳನ್ನು ಹೇಳಿರುತ್ತದೆ. 'ನ ಜಾಯತೇ ಮ್ರಿಯತೇ ವಾ' ಎಂದು ಮುಂತಾಗಿ ಹೇಳಿರುವ ಯಾವ ವಿಕಾರವೂ ಇಲ್ಲದ ಅಕ್ಷರ ಬ್ರಹ್ಮದ ಜ್ಞಾನ, ಸಾಂಖ್ಯನಿಷ್ಠೆ : ಅದನ್ನು ಅರಿಯುವದಕ್ಕೆ ಉಪಾಯವಾಗಿ ಹೇಳಿರುವದು ಕರ್ಮನಿಷ್ಠೆ : ಭಗವಂತನು ತನ್ನ ವಿಭೂತಿಗಳನ್ನು ಹೇಗೆ ಚಿಂತಿಸಬೇಕೆಂಬುದನ್ನು ಹತ್ತನೆಯ ಅಧ್ಯಾಯದಲ್ಲಿ ತಿಳಿಸಿ ಕೊನೆಯಲ್ಲಿ ಇಡಿಯ ಜಗತ್ತೇ ನನ್ನ ಒಂದಂಶವಾದ ವಿಭೂತಿಯು ಎಂದು ಮುಗಿಸಿದನು. ಆ ಬಳಿಕ **'ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಙ್ಗವರ್ಜಿತಃ । ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಣ್ಡವ ।''** ಎಂದು ಭಗವತ್ಕರ್ಮವನ್ನೇ ಮಾಡುತ್ತಾ ಭಗವಂತನಲ್ಲಿಯೇ ತಾತ್ಪರ್ಯದಿಂದ ಇರುವ ಭಕ್ತನಿಗೆ ಭಗವತ್ಪ್ರಾಪ್ತಿಯಾಗುತ್ತದೆ ಎಂದು ಹೇಳಿದನು. ಈ ಸಾಧನವು ವಿಶ್ವರೂಪೋಪಾಸನೆಗೆ ಸೇರಿದ್ದು, ವಿಶ್ವವೆಲ್ಲವೂ

ಪರಮೇಶ್ವರನದೇ ಎಂಬುದನ್ನು ಮನಗಾಣುವದಕ್ಕೆಂದೇ ಅರ್ಜುನನ ಪ್ರಾರ್ಥನೆಯಂತೆ ವಿಶ್ವರೂಪವನ್ನು ಭಗವಂತನು ತೋರಿಸಿದನು. ವಿಶ್ವರೂಪವನ್ನು ಉಪಾಸನೆಮಾಡುವದು ಮೇಲೊ, ಅಕ್ಷರೋಪಾಸನೆಯನ್ನು ಮಾಡುವದು ಮೇಲೊ?-ಎಂದು ಈಗ ಅರ್ಜುನನು ಕೇಳಿರುತ್ತಾನೆ. ಭಗವಂತನು ಅರ್ಜುನನಿಗೆ ಅತ್ಯಂತವಾಗಿಯೇ ಹಿತವಾಗಬೇಕೆಂದು ಬಯಸಿದ್ದರಿಂದ ಅವನ ಸ್ವಭಾವಕ್ಕೆ ಒಗ್ಗುವ ವಿಶ್ವರೂಪೋಪಾಸನೆಯನ್ನೇ ಮೇಲೆಂದು ಹೇಳಿರುತ್ತಾನೆ. ಏಕೆಂದರೆ ವಿಶ್ವರೂಪವು ಸ್ಥೂಲವಾಗಿರುವದರಿಂದ ಅದನ್ನು ಉಪಾಸನೆಮಾಡುವದು ಸುಲಭ; ಭಗವಂತನೇ ಈ ಉಪಾಸಕರನ್ನು ಉದ್ಧಾರಮಾಡುತ್ತಾನೆ. ಆದ್ದರಿಂದ ಅದನ್ನೇ ಮಾಡು ಎಂದು ಅರ್ಜುನನಿಗೂ ಉಪದೇಶಸಿರುತ್ತಾನೆ. ಆದರೂ ಶಾಸ್ತ್ರಕ್ಕೆ ನಿವೃತ್ತಿ ಧರ್ಮದಲ್ಲಿಯೇ ಪರಮತಾತ್ಪರ್ಯವಿರುವದರಿಂದ ನಿವೃತ್ತಿ ಧರ್ಮದಲ್ಲಿ ನೆಲೆನಿಂತಿರುವ ಅಕ್ಷರೋಪಾಸಕರಾದ ಪರಭಕ್ತರ ಲಕ್ಷಣವನ್ನು ಇಲ್ಲಿ ತಿಳಿಸಿರುತ್ತದೆ. ಯಾರು ಅಕ್ಷರವೆಂಬ ಅವ್ಯಕ್ತನಿರ್ವಿಶೇಷರೂಪವನ್ನು ಅರಿತುಕೊಂಡು ಯಾವಾಗಲೂ ತನ್ನಿಷ್ಠರಾಗಿರುವರೋ ಅವರೇ ಪರಭಕ್ತರು; ಅವರೇ ಭಗವಂತನಿಗೆ ಪರಮಪ್ರಿಯರು, ಏಕೆಂದರೆ ಪರಮಾತ್ಮನು ತಮ್ಮ ಮತ್ತು ಸರ್ವಭೂತಗಳ ಆತ್ಮನೆಂದೇ ತಿಳಿದು ಅವರು ಸರ್ವಭೂತಗಳಲ್ಲಿಯೂ ಅದ್ವೇಷ್ಟೃತ್ವಾದಿಗಳಿಂದ ಕೂಡಿರುತ್ತಾರೆ. ಜ್ಞಾನವು ಸ್ವತಂತ್ರವಾಗಿಯೇ ಅಕ್ಷರಪ್ರಾಪ್ತಿಯನ್ನು ಕೊಡುತ್ತದೆ. ಅಂಥ ಅಕ್ಷರೋಪಾಸಕರಾದ ಭಕ್ತರ ಲಕ್ಷಣವನ್ನು ಇಲ್ಲಿ ಹೇಳಿರುವದು ಸಾಧಕರಾದವರೂ ಅವುಗಳನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಿಸಬೇಕೆಂದು ತಿಳಿಸುವದಕ್ಕಾಗಿ. ನೇರಾಗಿ ಈ ನಿಷ್ಠೆಯನ್ನವಲಂಬಿಸುವದಕ್ಕೆ ಆಗದವರು ವಿಶ್ವರೂಪೋಪಾಸನೆಯನ್ನು ಮಾಡಿ ಕ್ರಮಮುಕ್ತಿಯನ್ನು ಪಡೆಯಬೇಕು.

★★★★★

# ಆಚಾರ್ಯರ ಗುಣಕಥನ

**11-5-1957**

**ಶ್ರೀಶ್ರೀಗಳು**

ಪರಿಚ್ಛಿನ್ನಬುದ್ಧಿಯ ತರ್ಕದಿಂದ ನಾವು ಎಲ್ಲವನ್ನೂ ನಿರ್ಣಯಿಸುವದಕ್ಕೆ ಮತ್ತೆಮತ್ತೆ ಪ್ರಯತ್ನಮಾಡುತ್ತಿರುತ್ತೇವೆ. ಪರಮಾರ್ಥಕ್ಕೆ ಈ ತರ್ಕವು ಎಂದಿಗೂ ಹೊಂದಲಾರದು. ಶ್ರೀಶಂಕರಭಗವತ್ಪಾದರ ಅನುಗ್ರಹದಿಂದ ಈ ಸಲದ ಸಪ್ತಾಹವು ಎಲ್ಲಾ ರೀತಿಯಿಂದಲೂ ನಮ್ಮ ಅಲ್ಪಬುದ್ಧಿಯ ತರ್ಕವು ನಿರೀಕ್ಷಿಸಿದ್ದಕ್ಕಿಂತಲೂ ಹತ್ತರಷ್ಟು ಹೆಚ್ಚಾಗಿ ಜಯಶೀಲವಾಗಿ ನಡೆದಿರುತ್ತದೆ. ಲೋಕದಲ್ಲಿ ಅವಿದ್ಯಾಕಾಮಪ್ರವಾಹವು ಮುಂದುವರಿಯುತ್ತಲೇ ಇರುವದರಿಂದ ಅಶಾಂತಿಯೂ ಹೆಚ್ಚಿದೆ. ಸಂಯುಕ್ತಜನಾಂಗಗಳ ಸಂಘದಲ್ಲಿ ಶಾಂತಿಗೆ ಉಪಾಯಗಳನ್ನು ಹುಡುಕುತ್ತಲೇ ಇರುವರಾದರೂ ಆ ಜನಾಂಗಗಳ ನಡತೆಯಿಂದಲೇ ಅಶಾಂತಿಯು ಹೆಚ್ಚಾಗುತ್ತಿದೆ ; ಶಾಂತಿಗೆ ಕಾರಣರಾಗಬೇಕಾದ ಸರಕಾರಗಳ ಪ್ರತಿನಿಧಿಗಳೇ ಅಶಾಂತಿಯ ಬೀಜವನ್ನು ಬಿತ್ತುತ್ತಿರುತ್ತಾರೆ. ಪುಣ್ಯದ ಫಲವು ಬೇಕು, ಅದನ್ನು ಮಾಡಬಾರದು : ಪಾಪದ ಫಲವು ಬೇಡ, ಅದನ್ನು ಮಾಡಿಯೇತೀರಬೇಕು, ಹೀಗಾಗಿದೆ ಮಾನವನ ಸದ್ಯದ ಮನಸ್ಸು! ಇದಕ್ಕೆ ನಮ್ಮ ಕಾಮಾದಿಗಳೇ ಕಾರಣವಾಗಿವೆ. ಇದಕ್ಕೆಲ್ಲ ಒಂದೇ ಔಷಧಿಯಿದೆ. ಅದೇ ತತ್ತ್ವಜ್ಞಾನವು. ಜಿಜ್ಞಾಸುಗಳು ಕಾಮವು ತಮ್ಮ ವೈರಿಯೆಂಬುದನ್ನು ತಿಳಿದಿರುವರು; ಭಗವಂತನು ಅರ್ಜುನನು ತತ್ತ್ವಜ್ಞಾನದಿಂದಲೇ ಉದ್ಧಾರವಾಗಬೇಕೆಂಬುದನ್ನು ನಿಶ್ಚಯಿಸಿಕೊಂಡು ಅದನ್ನೇ ಅವನಿಗೆ ಉಪದೇಶಿಸಿದನು. ಅದರ ಸಾರವನ್ನೇ ಆಚಾರ್ಯರು ನಮಗೆ ತೋರಿಸಿಕೊಟ್ಟಿರುತ್ತಾರೆ. ಬರಿಯ ಪಾರಿಭಾಷಿಕಶಬ್ದಗಳ ಜ್ಞಾನವು ತತ್ತ್ವಜ್ಞಾನವೆನಿಸಲಾರದು. ಜ್ಞಾನದಿಂದ ನಮ್ಮ ಸ್ವಭಾವವು ಸಂಪೂರ್ಣವಾಗಿ ಮಾರ್ಪಡಬೇಕು. ಇದರ ಮರ್ಮವನ್ನು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಉಪದೇಶಿಸಿ ನಮ್ಮನ್ನು ಅನುಗ್ರಹಿಸಿರುತ್ತಾರೆ. ಸಾರ್ವತ್ರಿಕಾನುಭವಕ್ಕೆ

ಹೊಂದುವದಾಗಿಯೂ ಸುಲಭವಾಗಿ ಸಂಪಾದಿಸಿಕೊಳ್ಳಬಹುದಾಗಿಯೂ ಇರುವ ಅವರ ಉಪದೇಶವನ್ನು ನಾವು ಕಿವಿಗೊಟ್ಟು ಕೇಳಿ ಅದರಂತೆ ನಡೆದುಕೊಂಡು ಕೃತಾರ್ಥರಾಗೋಣ.

★★★★★

# ಅದ್ವಯಾತ್ಮನ ಸ್ವರೂಪ

**24-4-1958**

**ಶ್ರೀಶ್ರೀಗಳವರು**

**ಮಾಂಡೂಕ್ಯಕಾರಿಕೆಯ ವೈತಥ್ಯಪ್ರಕರಣದಲ್ಲಿ** 2-32 ರಿಂದ 38 ರವರೆಗಿನ ಭಾಷ್ಯದ ಅಭಿಪ್ರಾಯ: ಗೌಡಪಾದರ ಗ್ರಂಥವು ಬಹುಸಂಕ್ಷಿಪ್ತವಾಗಿದೆ. ಅದರ ಆಶಯವನ್ನು ತಿಳಿಯುವದಕ್ಕೆ ಮಿಕ್ಕೆಲ್ಲವನ್ನೂ ಬಿಟ್ಟು ತತ್ತ್ವಕ್ಕಾಗಿಯೇ ಜೀವನವನ್ನು ಮೀಸಲಾಗಿಟ್ಟುಕೊಂಡಿರುವವರು ಬೇಕು. ಇದನ್ನು ಮಡಿಯಲ್ಲಿದ್ದು ಕೇಳಬೇಕು, ಎಂದರೆ ಮನೋವಾಕ್ಕಾಯಗಳನ್ನು ಲೌಕಿಕವಿಷಯಗಳ ಕಡೆಗೆ ಹರಿಯಬಿಡದೆ ಪರಮಾರ್ಥವನ್ನೇ ತಿಳಿಯುವದಕ್ಕೆ ಸಜ್ಜುಮಾಡಿಕೊಂಡು ಶ್ರವಣಮಾಡಬೇಕು. ಆಗಮಪ್ರಕರಣವೆಂಬ ಮೊದಲನೆಯ ಪ್ರಕರಣದಲ್ಲಿ ಆತ್ಮನಿಗೆ ಜಾಗ್ರತ್ಸ್ವಪ್ನಸುಷುಪ್ತಿಗಳ ಸೋಂಕೇ ಇಲ್ಲ ಎಂಬುದನ್ನು ತಿಳಿಸಿದೆ. ಇದನ್ನೇ ಯುಕ್ತಿಯಿಂದ ಮಿಕ್ಕ ಮೂರು ಪ್ರಕರಣಗಳಲ್ಲಿ ಹೇಳಿದೆ.

ಈಗ ನಾವು ತೆಗೆದುಕೊಂಡಿರುವ ಎರಡನೆಯ ಪ್ರಕರಣದಲ್ಲಿ ದ್ವೈತದ ವೈತಥ್ಯವನ್ನು ತಿಳಿಸಿ ಅದ್ವಯಾತ್ಮಸ್ವರೂಪಕ್ಕೆ ತಂದುಬಿಟ್ಟಿರುತ್ತದೆ. ನಮಗೆಲ್ಲರಿಗೂ ತಿಳಿದಿರುವಂತೆ ಸ್ವಪ್ನವು ತನ್ನಕಾಲಕ್ಕೆ ನಿಜವೆಂದೇ ತೋರುತ್ತದೆ; ಆದರೆ ಎಚ್ಚತ್ತಕೂಡಲೆ ಅದು ಬರಿಯ ಹುಸಿತೋರಿಕೆ ಎಂಬುದು ಸ್ಫುಟವಾಗುತ್ತದೆ. ಚೆನ್ನಾಗಿ ವಿಚಾರಮಾಡಿದರೆ ಎಚ್ಚರಕ್ಕೂ ಕನಸಿಗೂ ಯಾವ ಹೆಚ್ಚುಕಡಿಮೆಯೂ

ಇರುವದಿಲ್ಲ; ಎರಡವಸ್ಥೆಗಳು ತಮ್ಮತಮ್ಮ ಕಾಲಕ್ಕೆ ಎಚ್ಚರವೆಂದೇ ತೋರುತ್ತಿರುವವು. ಯಾವದು ಕನಸು, ಯಾವದು ಅಲ್ಲ-ಎಂಬುದನ್ನು ನಿರ್ಣಯಿಸುವದೇ ಆಗುವಂತಿಲ್ಲ-ಎಂಬಿದನ್ನು ತಿಳಿಸಿರುವದಲ್ಲದೆ ಆತ್ಮನು ನಿಜವಾಗಿ ಅದ್ವಿತೀಯನೇ ಆಗಿದ್ದರೂ ಸಾಮಾನ್ಯ ಜನರೇ ಅಲ್ಲದೆ ಪಂಡಿತರಾದ ವಾದಿಗಳುಕೂಡ ತಮ್ಮತಮ್ಮ ಮನಬಂದಂತೆ ಅವನಲ್ಲಿ ಬೇರೆಬೇರೆಯ ವಿಕಲ್ಪಗಳನ್ನು ಮಾಡಿಕೊಂಡು ವ್ಯವಹರಿಸುತ್ತಿದಾರೆ. ಅವರವರಿಗೆ ಅವರವರ ಮತವೇ ಸತ್ಯವಾಗಿ ತೋರುತ್ತಿರುತ್ತದೆ. ಪರಮಾರ್ಥವೇನೆಂದರೆ ಸ್ವಪ್ನವೂ ಮಾಯೆಯೂ ಹೇಗೆ ತಮ್ಮತಮ್ಮಕಾಲಕ್ಕೆ ಸತ್ಯವೆಂದೇ ತೋರುತ್ತಿರುವವೋ ಆದರೂ ಆ ತೋರಿಕೆಯ ರೂಪದಿಂದ ಹುಸಿಯೇ ಆಗಿರುವವೋ ಹಾಗೆಯೇ ಈ ದ್ವೈತಪ್ರಪಂಚವೆಲ್ಲವೂ ಎಷ್ಟೇ ಸತ್ಯವೆಂದು ತೋರಿದರೂ ಇದೆಲ್ಲವೂ ಮಿಥ್ಯೆಯೇ-ಎಂಬುದು ಉಪನಿಷತ್ತುಗಳ ಉಪದೇಶವು. ಈ ಪರಮಾರ್ಥವನ್ನು ಅರಿತುಕೊಂಡರೆ ಜಗತ್ತಿಗೆ ಹುಟ್ಟುಹೊಂದುಗಳೇ ಇಲ್ಲ. ಇಲ್ಲಿ ಯಾವನೂ ಬದ್ಧನಾಗಿದ್ದುಕೊಂಡು ಸಾಧನೆಯಿಂದ ಮುಕ್ತನಾಗುವದಿಲ್ಲ. ನಿಜವಾಗಿ ನಾವೆಲ್ಲರೂ ಅದ್ವಿತೀಯಪರಮಾತ್ಮನೇ ಆಗಿರುತ್ತೇವೆ. ನಮ್ಮ ಸ್ವರೂಪದಲ್ಲಿ ಎಂದಿಗೂ ಇಲ್ಲದೆ ಇರುವ ಸಂಸಾರಿತ್ವರೂಪವನ್ನು ಅವಿದ್ಯೆಯಿಂದ ಹುಟ್ಟುಗಟ್ಟಿಕೊಂಡು ಇರುತ್ತೇವೆ. ಹಗ್ಗವನ್ನು ಹಾವೆಂದು ಅರಿತುಕೊಂಡಿರುವವನಿಗೆ 'ಇದು ಹಾವಲ್ಲ' ಎಂದು ಬಲ್ಲವರು ತಿಳಿಸಿಕೊಡುವಂತೆ ಈ ಕಲ್ಪಿತದ್ವೈತವನ್ನು ಅಲ್ಲಗಳೆಯುವದೇ ಶಾಸ್ತ್ರದ ಕೆಲಸವಾಗಿರುತ್ತದೆ ; ಅದು ಆತ್ಮನನ್ನು ನೇರಾಗಿ ತಿಳಿಯಿಸಬೇಕಾದದ್ದೇನೂ ಇಲ್ಲ, ಏಕೆಂದರೆ ಆತ್ಮನು ಸ್ವಯಂಸಿದ್ಧನು. ಈ ತೋರುವ ಹುಸಿಯಾದ ಬಗೆಬಗೆಯ ಭಾವಗಳು ಆತ್ಮನಿಗಿಂತ ಬೇರೆಯಾಗಿರುವದಿಲ್ಲ; ಅವು ತಮ್ಮ ತೋರಿಕೆಯ ರೂಪದಿಂದ ಸತ್ಯವಾಗಿರುವದಿಲ್ಲ; ಅವು ಒಂದಕ್ಕಿಂತ ಒಂದು ಬೇರೆಯೂ ಅಲ್ಲ, ಅವೆಲ್ಲ ಒಂದೇ ಎಂಬುದೂ ಸರಿಯಲ್ಲ. ಏಕೆಂದರೆ ಅವು ಬರಿಯ ವಿಕಲ್ಪವಾಗಿರುತ್ತವೆ.

ಹೀಗೆಂದು ತಿಳಿದುಕೊಳ್ಳುವದಕ್ಕೆ ಯತ್ನಿಸುವವರು ರಾಗದ್ವೇಷಾದಿಚಿತ್ತ ಕಲ್ಮಷವಿಲ್ಲದವರಾಗಿರಬೇಕು, ತತ್ತ್ವವನ್ನು ಮನನಮಾಡುವವರಾಗಿರಬೇಕು, ವೇದಾರ್ಥವನ್ನು ನಿರ್ಣಯಿಸಬಲ್ಲವರಾಗಿರಬೇಕು. ಅಂಥವರಿಗೆ ಮಾತ್ರವೇ ಈ ಅದ್ವೈತತತ್ತ್ವವು ತಿಳಿಯುವದು. ಯಾರು ಹೀಗೆಂದು ಈ ಆತ್ಮನನ್ನು

ಅರಿತುಕೊಳ್ಳುವರೋ ಅವರು ಅದ್ವೈತಾತ್ಮಚಿಂತನೆಯಲ್ಲಿಯೇ ಇದ್ದುಕೊಂಡು ದಂಭದರ್ಪಾದಿಗಳಿಲ್ಲದ ಪರಮಹಂಸರಾಗಿರುತ್ತಾರೆ. ಸಾಧಕರೂ ಈ ಅದ್ವೈತಾತ್ಮವನ್ನು ಅರಿತುಕೊಳ್ಳುವದಕ್ಕೆ ಎಲ್ಲ ಪ್ರಯತ್ನವನ್ನೂ ಮಾಡಬೇಕು.

ಈಗ ನಾವು ದ್ವೈತವಿಶಿಷ್ಟನಾದ ಆತ್ಮನನ್ನು ಕಾಣುತ್ತಿದೇವೆಯೆಂದೂ ಸಾಧನದಿಂದ ಅದ್ವೈತಾತ್ಮನನ್ನು ಅರಿತುಕೊಳ್ಳುವೆವೆಂದೂ ಭಾವಿಸಬಾರದು. ಕೆಲವರು ವಾದಿಗಳು ನಿರ್ವಿಕಲ್ಪಸಮಾಧಿಯೇ ಮುಂತಾದ ಅವಸ್ಥೆಗಳಲ್ಲಿ ಅದ್ವೈತಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂದೂ ಆ ಅವಸ್ಥೆಯಿಂದ ಇಳಿದರೆ ತತ್ತ್ವವನ್ನು ಬಿಟ್ಟು ಜಾರಿದಂತೆ ಆಗುವದೆಂದೂ ಭ್ರಾಂತರಾಗಿರುತ್ತಾರೆ. ನಿಜವು ಹೀಗಿಲ್ಲ. ನಮ್ಮ ಹೊರಗೆ ಕಾಣುವ ದ್ವೈತವೆಲ್ಲವೂ ನಿಜವಾಗಿ ಅದ್ವೈತನಾದ ಆತ್ಮನೇ; ಒಳಗಿರುವ ಮಾನಸದ್ವೈತವೂ ಅದ್ವೈತಾತ್ಮನೇ; ನಾವೂ ಆ ಆತ್ಮನೇ. ಆ ಆತ್ಮನಿಗಿಂತ ಬೇರೆಯಾಗಿ ಯಾವಾಗಲೂ ಎಂದಿಗೂ ಇರುವದೇ ಇಲ್ಲ. ಇದೇ ಪರಮಾರ್ಥವು. ಇದನ್ನು ತಿಳಿಸಿಕೊಡುವದಕ್ಕಾಗಿಯೇ ಸ್ವಪ್ನಜಾಗ್ರತ್ತುಗಳನ್ನು ಹೋಲಿಸಿ ಎರಡು ಸ್ವಪ್ನವೇ ಎಂದು ಈ ಪ್ರಕರಣದಲ್ಲಿ ನಿರ್ಣಯಿಸಿರುತ್ತದೆ. ಸ್ವಪ್ನದಲ್ಲಿ ಕಲ್ಪಿಸಿಕೊಂಡಿರುವ ದ್ವೈತವು ನಿಜವಾದ ನಮ್ಮ ಸ್ವರೂಪಕ್ಕಿಂತ ಹೇಗೆ ಬೇರೆಯಿರುವದಿಲ್ಲವೋ ಹಾಗೆಯೇ ಎಚ್ಚರದಲ್ಲಿಯೂ ಎಂದು ತಿಳಿಯಬೇಕು.

★★★★★

# ಶ್ರವಣಾದಿಗಳ ಆವೃತ್ತಿಯ ಆವಶ್ಯಕತೆ

**25-4-1958**

**ಬ್ರ|| ಶ್ರೀ|| ಎಸ್. ವಿಠಲಶಾಸ್ತ್ರಿಗಳವರು**

**ಬ್ರಹ್ಮಸೂತ್ರಭಾಷ್ಯ (4-1-2)** ದಲ್ಲಿ ಶ್ರವಣಾದಿಗಳ ಆವೃತ್ತಿಯ ಆವಶ್ಯಕತೆಯನ್ನು ಕುರಿತು ಭಾಷ್ಯಾಶಯ ವೇನೆಂದರೆ - ಪರಬ್ರಹ್ಮವು

ಸಿದ್ಧವಸ್ತುವಾಗಿ ಇರುವದರಿಂದ ಅದರ ಪ್ರತ್ಯಯವನ್ನು ಅವೃತ್ತಿಮಾಡಬೇಕಾದದ್ದೇಕೆ? ಶ್ರವಣಕ್ಕೆ ಯುಕ್ತಿಯು ಬೇಕೆಂದರೂ ಒಂದು ಸಲ ಶ್ರವಣವನ್ನೂ ಮನನವನ್ನೂ ಮಾಡಿದರಾಗದೆ? ನಿರ್ವಿಶೇಷವಾಗಿರುವ ಬ್ರಹ್ಮದಲ್ಲಿ ಸಾಧನಗಳ ಆವೃತ್ತಿಯ ಆವಶ್ಯಕತೆ ಏನು?- ಎಂಬ ಆಕ್ಷೇಪವನ್ನು ತೆಗೆದು (1) ಶ್ರವಣಮಾತ್ರದಿಂದಲೂ ಉತ್ತಮಾಧಿಕಾರಿಗಳಿಗೆ ಜ್ಞಾನವಾಗುತ್ತದೆ. (2) ಮಿಕ್ಕವರಿಗೆ ಮನನನಿದಿಧ್ಯಾಸನಗಳ ಅವೃತ್ತಿಯೂ ಅವಶ್ಯವಾಗಿದೆ. ಆವೃತ್ತಿಯಿಂದಲೇ ಜ್ಞಾನವಾಗುವದು ಅನುಭವದಿಂದ ಕಂಡು ಬಂದಿರುವದರಿಂದ ಬರಿಯ ತರ್ಕನಿಮಿತ್ತವಾದ ಆಕ್ಷೇಪವನ್ನು ಇದರ ಮೇಲೆ ಹಾಕುವದಕ್ಕೆ ಬರುವದಿಲ್ಲ. (3) ಪದಾರ್ಥಜ್ಞಾನವಿಲ್ಲದೆ ವಾಕ್ಯಾರ್ಥಜ್ಞಾನವು ಆಗಲಾರದಾದ್ದರಿಂದ ಪದಾರ್ಥಜ್ಞಾನಕ್ಕಾಗಿ ಶ್ರವಣಾದಿಗಳ ಆವೃತ್ತಿಯು ಆವಶ್ಯವಾಗುತ್ತದೆ; ಬ್ರಹ್ಮವು ನಿರ್ವಿಶೇಷವಾಗಿದ್ದರೂ ಅದರಲ್ಲಿ ಆರೋಪಿತವಾಗಿ ರುವ ಅಂಶಗಳು ಬಹಳವಾಗಿರುವದರಿಂದ ಕ್ರಮಕ್ರಮವಾಗಿ ಅಭ್ಯಾಸದಿಂದ ಜ್ಞಾನವಾಗಬಹುದಾಗಿದೆ-ಎಂದು ಭಾಷ್ಯಕಾರರು ಸಿದ್ಧಾಂತಮಾಡಿರುತ್ತಾರೆ.

**ಶ್ರೀಗಳವರು** ಅನುವಾದದಲ್ಲಿ ಹೀಗೆಂದರು : ಈ ಭಾಷ್ಯದ ಪೂರ್ವಪಕ್ಷಿಗಳು ಉಪಾಸನಾವಾದಿಗಳೆಂದು ಇಟ್ಟುಕೊಳ್ಳಬಹುದು. ಉಪಾಸನೆಯ ಅಭ್ಯಾಸದಿಂದ ಸಾಕ್ಷಾತ್ಕಾರವಾಗುತ್ತದೆಯಾಗಿ ಬ್ರಹ್ಮೋಪಾಸನೆಯೇ ಜ್ಞಾನವೆನ್ನುವವರ ಪಕ್ಷದಲ್ಲಿ ಸೂತ್ರಕಾರರು ಶ್ರವಣಾದಿಗಳ ಆವೃತ್ತಿಯನ್ನು ಹೇಳಿರುವದು ಹೊಂದುತ್ತದೆ. ಆದರೆ ವಸ್ತುತಂತ್ರವಾದ ಜ್ಞಾನವನ್ನು ಹೇಳುವವರ ಮತದಲ್ಲಿ ಅದು ಹೇಗೆ ಹೊಂದೀತು?-ಎಂಬುದು ಪೂರ್ವಪಕ್ಷ. ಇದಕ್ಕೆ ಸಮಾಧಾನವಾಗಿ (1) **ಭಾವನಾವಾದಿಗಳು** ವಾಕ್ಯಜ್ಞಾನವು ಆವೃತ್ತಿಯಿಂದ ಬಲವಾದರೇ ಬ್ರಹ್ಮಾತ್ಮತತ್ತ್ವಜ್ಞಾನವಾಗುತ್ತದೆ ಎನ್ನುತ್ತಿದ್ದರು ; ಒಂದು ಸಲ ಶ್ರವಣಮಾಡಿದ್ದರಿಂದ ಆಗದಿರುವ ಜ್ಞಾನವು ಅದನ್ನು ಆವೃತ್ತಿ ಮಾಡಿದ್ದರಿಂದ ತಾನೇ ಹೇಗಾದೀತು? - ಎಂಬ ಆಕ್ಷೇಪಕ್ಕೆ ಅವರಲ್ಲಿ ಉತ್ತರವಿಲ್ಲ. (2) **ಪ್ರಸಂಖ್ಯಾನ ವಾದಿಗಳು** ಕೇವಲ ಶ್ರವಣವು ಸಾಲದು; ಯುಕ್ತಿಯಿಂದ ಕೂಡಿ ಆವೃತ್ತಿ ಮಾಡಬೇಕು -ಎನ್ನುತ್ತಿದ್ದರು. ಆಗಲೂ ಒಂದು ಸಲ ಶ್ರವಣಮನನಗಳಿಂದಾಗದ

ಜ್ಞಾನವು ಆವೃತ್ತಿಯಿಂದ ತಾನೇ ಹೇಗಾದೀತು?- ಎಂಬ ಶಂಕೆ ಉಳಿದೇ ಇರುತ್ತದೆ. (3) **ಸಾಕ್ಷಾತ್ಕಾರವಾದಿಗಳು** ವಾಕ್ಯದಿಂದ ಸಾಮಾನ್ಯಜ್ಞಾನವು ಮಾತ್ರ ಆಗುತ್ತದೆ; ಆವೃತ್ತಿಯಿಂದ ಸಾಕ್ಷಾತ್ಕಾರರೂಪ ಜ್ಞಾನವಾಗುತ್ತದೆ ಎನ್ನುತ್ತಿದ್ದರು; ಆಗಲೂ ಒಂದು ಸಲ ಅನುಸರಿಸಿದ ವಾಕ್ಯಯುಕ್ತಿಗಳಿಂದಾಗದ ಸಾಕ್ಷಾತ್ಕಾರವು ಆವೃತ್ತಿಯಿಂದ ತಾನೆ ಹೇಗೆ ಆದೀತು? ಎಂಬ ಶಂಕೆ ಎದ್ದುಕೊಳ್ಳುತ್ತದೆ. (4) ಬ್ರಹ್ಮದಲ್ಲಿ ಸಾಮಾನ್ಯವಿಶೇಷಭಾವಗಳಿಲ್ಲವಲ್ಲ, ಹಲವು ಬಾರಿ ಪ್ರತ್ಯಯಾವೃತ್ತಿಯನ್ನು ಮಾಡಿದರೆ ಯಾವ ವಿಶೇಷವು ಆದೀತು?-ಎಂಬ ಶಂಕೆಯು ಈ ಎಲ್ಲಾ ವಾದಗಳಿಗೂ ಸಮಾನವಾಗಿರುತ್ತದೆ. ಆಚಾರ್ಯರವರೂ ವಸ್ತುತಂತ್ರಜ್ಞಾನವಾದಿಗಳೇ ಆಗಿದ್ದರೂ ಅವರು ಹೇಳುವದೇನೆಂದರೆ : ಆತ್ಮನು ಬ್ರಹ್ಮವೆಂಬ ಜ್ಞಾನಕ್ಕೆ ಅಡ್ಡಿಯಾಗಿರುವದು ಅವಿದ್ಯೆ. ಈ ಅವಿದ್ಯೆಯಿಂದ ಆತ್ಮನಲ್ಲಿ ದೇಹೇಂದ್ರಿಯಾದಿ ಬಹ್ವಂಶಗಳು ಆರೋಪಿತವಾಗಿರುವದರಿಂದ ಒಂದೊಂದು ಅವಧಾನದಿಂದ ಒಂದೊಂದು ಅಧ್ಯಾರೋಪಿತಾಂಶವನ್ನು ಕಳೆಯುವದಕ್ಕಾಗಿ ಮಂದಮಧ್ಯಮಾಧಿಕಾರಿಗಳಿಗೆ ಪದಾರ್ಥವಿವೇಕಕ್ಕಾಗಿ ಆವೃತ್ತಿಯು ಬೇಕಾಗುವದು; ಉತ್ತಮಾಧಿಕಾರಿಗಳಿಗೆ ಒಂದು ಸಲ ಶ್ರವಣಮಾಡಿದ ಮಾತ್ರದಿಂದಲೇ ಜ್ಞಾನವಾಗಬಹುದು. ಹೀಗೆ ವಾಕ್ಯಜ್ಞಾನವು ಆದ ಬಳಿಕ ಮಾಡಬೇಕಾದ ಆವೃತ್ತಿಯನ್ನು ವೇದಾಂತದಲ್ಲಿ ಒಪ್ಪಿರುವದಿಲ್ಲ. ಆದ್ದರಿಂದ ಈ ಮತದಲ್ಲಿ ಯಾವ ಆಕ್ಷೇಪವೂ ಇಲ್ಲ ಎಂದು ಸಿದ್ಧಾಂತ ಮಾಡಿರುತ್ತಾರೆ.

★★★★★

# ಪ್ರಜ್ಞಾತ್ಮಸ್ವರೂಪನಿರ್ಧಾರಣ

**26-4-1958**

**ಬ್ರ॥ ಶ್ರೀ॥ ಅನಂತಮೂರ್ತಿಶಾಸ್ತ್ರಿಗಳವರು**

**ಐತರೇಯ** 3-1 ರಿಂದ 5ರವರೆಗೆ ; ಯಾವ ಆತ್ಮನನ್ನು ವಾಮದೇವಾದಿಗಳು ಅರಿತುಕೊಂಡು ಪರಮಪುರುಷಾರ್ಥವನ್ನು ಹೊಂದಿದರೋ ಆ ಆತ್ಮನು ಯಾರು ? -ಎಂಬುದನ್ನು ಇಲ್ಲಿ ವಿಚಾರಿಸಿ ಪ್ರಜ್ಞಾತ್ಮಸ್ವರೂಪನಿರ್ಧಾರಣೆಮಾಡಿರುತ್ತದೆ. ಈ ಉಪನಿಷತ್ತಿನಲ್ಲಿ ಹೇಳಿರುವ ಆತ್ಮರುಗಳು ಇಬ್ಬರು; ಇವರುಗಳಲ್ಲಿ ಒಬ್ಬನು ಕರಣಾತ್ಮನು, ಇನ್ನೊಬ್ಬನು ಕರ್ತೃಸ್ವರೂಪನು. ಚಕ್ಷುರಾದಿರೂಪವಾಗಿ ಬಗೆಬಗೆಯಾಗಿರುವ ವೃತ್ತಿಗಳಿಂದ ಬೇರ್ಪಡಿಸಿಕೊಂಡು ಯಾರಿಗೋಸ್ಕರ ಈ ವೃತ್ತಿಗಳಾಗುವವೋ ಆ ಪ್ರಜ್ಞಾನಸ್ವರೂಪವೇ ನಿಜವಾದ ಆತ್ಮನು ಎಂದು ಅರಿತುಕೊಳ್ಳಬೇಕು. ಈ ಪ್ರಜ್ಞಾನವೇ ಬ್ರಹ್ಮ, ಇಂದ್ರ, ಪ್ರಜಾಪತಿ, ದೇವತೆಗಳು, ಭೂತಗಳು, ಪ್ರಾಣಿಗಳು-ಮುಂತಾದ ರೂಪದಿಂದ ವಿಕಲ್ಪವಾಗುತ್ತಿರುವದು. ಇದರ ಪರಮಾರ್ಥವೇ ಪ್ರಜ್ಞಾನವು, ಅದೇ ಎಲ್ಲಕ್ಕೂ ಆಧಾರವಾದದ್ದು. ಆ ಪ್ರಜ್ಞಾತ್ಮನ ರೂಪದಿಂದ ಅರಿತುಕೊಂಡು ಈ ಸಂಸಾರಲೋಕವನ್ನು ಮೀರಿದವನೇ ಅಮೃತನಾಗುತ್ತಾನೆ ಎಂಬುದು ಭಾಷ್ಯದ ಸಾರವು.

**ಶ್ರೀಗಳು** ಅನುವಾದದಲ್ಲಿ ಹೀಗೆಂದರು: ಪರಮಾತ್ಮನನ್ನು ಸೋಪಾಧಿಕವಾಗಿಯೂ ನಿರುಪಾಧಿಕವಾಗಿಯೂ - ಎರಡು ರೂಪದಿಂದ ಉಪನಿಷತ್ತಿನಲ್ಲಿ ತಿಳಿಸಿದೆ. ಇವುಗಳಲ್ಲಿ ಜ್ಞಾನಕ್ರಿಯಾಶಕ್ತಿಗಳಿಂದ ಕೂಡಿರುವ ಪ್ರಾಣಪ್ರಜ್ಞಾತ್ಮನೆಂಬ ಸೋಪಾಧಿಕರೂಪವು ಐತರೇಯದ ಹಿಂದಿನ ಮೂರು ಅಧ್ಯಾಯಗಳಲ್ಲಿ ವರ್ಣಿತವಾಗಿದೆ. ಆ ಪ್ರಾಣನನ್ನೇ ಉಪಾಸನೆಮಾಡಬೇಕು; ಅವನೇ ನಮ್ಮೆಲ್ಲರ ಆತ್ಮನು-ಎಂದು ಅಲ್ಲಿ ಹೇಳಿದೆ. ಆ ದೃಷ್ಟಿಯಿಂದ ನಮ್ಮಲ್ಲಿರುವ ಆತ್ಮನೂ ಪ್ರಾಣಪ್ರಜ್ಞಾತ್ಮನಾಗಿರುತ್ತಾನೆ; ಅಲ್ಲಿ ಕ್ರಿಯೆಗೆ ಜ್ಞಾನವು ಅಧೀನವಾಗಿರುತ್ತದೆ. ಆ ಆತ್ಮಜ್ಞಾನವು ಪೂರ್ಣವಲ್ಲವೆಂಬುದನ್ನು ತಿಳಿಸುವದಕ್ಕಾಗಿ ಪ್ರಾಣನು

ಪುರುಷನ ಕಾಲುಗಳ ಕಡೆಯಿಂದ ಒಳಹೊಕ್ಕಿರುವನೆಂದು ಹೇಳಿರುತ್ತದೆ. ಇನ್ನು ಕೇವಲ ನಿರುಪಾಧಿಕ ಆತ್ಮನಿದಾನಲ್ಲ, ಅವನು ಶುದ್ಧಚೈತನ್ಯಸ್ವರೂಪನು, ಅವನೇ ನಿಜವಾಗಿ ಪ್ರಜ್ಞಾನಸ್ವರೂಪನು. ಜ್ಞಾನಕ್ರಿಯಾಶಕ್ತಿಗಳು ನಮ್ಮಲ್ಲಿ ಅಂತಃಕರಣದ ಮೂಲಕವಾಗಿ ತೋರುತ್ತವೆ, ಚೈತನ್ಯವು ಅವುಗಳಿಗೆ ಸಾಕ್ಷಿಯಾಗಿರುವ ಆತ್ಮರೂಪದಿಂದ ತೋರುತ್ತದೆ. ಸೋಪಾಧಿಕರೂಪದಲ್ಲಿ ಆತ್ಮನನ್ನು ಬಿಟ್ಟರೆ ಉಳಿಯುವ ಉಪಾಧಿಯು ಕರಣಮಾತ್ರವೇ ಆಗಿರುತ್ತದೆ. ಆತ್ಮನ ಶುದ್ಧರೂಪವು ಚಿನ್ಮಾತ್ರವಾಗಿದ್ದುಕೊಂಡು ಆಧ್ಯಾತ್ಮಿಕ, ಆಧಿಭೌತಿಕ, ಅಧಿದೈವಿಕ-ಎಲ್ಲಕ್ಕೂ ಸಾಕ್ಷಿಯಾಗಿರುವದು. ಆ ಪ್ರಜ್ಞೆಯೇ ಎಲ್ಲಕ್ಕೂ ಕಣ್ಣು, ಎಲ್ಲಕ್ಕೂ ನಾಯಕನು. ಅದನ್ನು ಬ್ರಹ್ಮವು ಎಂದು ಅರಿತುಕೊಂಡರೆ ಈ ಸಂಸಾರದ ಕೋಟಲೆಯೆಲ್ಲ ತಪ್ಪುವದು, ಅಮೃತತ್ವವು ಪ್ರಾಪ್ತವಾಗುವದು.

★★★★★

## ಸಂಸಾರಗತಿ, ಮೋಕ್ಷಗತಿ

**27-4-1958**

**ಬ್ರ॥ ಶ್ರೀ॥ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳವರು**

**ಕಠೋಪನಿಷತ್ತಿನ** 1-3-1 ರಿಂದ 9ರ ಭಾಷ್ಯದಲ್ಲಿ ಸಂಸಾರಗತಿ, ಮೋಕ್ಷಗತಿ-ಇವುಗಳ ವಿಷಯವನ್ನು ಹೇಳಿದೆ. ಹಿಂದಿನ ಭಾಗದಲ್ಲಿ ವಿದ್ಯಾವಿದ್ಯೆಗಳು ಒಂದಕ್ಕೊಂದು ವಿರುದ್ಧವಾದ ಫಲಗಳನ್ನು ಕೊಡುತ್ತವೆ ಎಂಬುದನ್ನು ಹೇಳಿದ್ದಾಗಿದೆ. ಆದರೆ ಅವುಗಳ ಸ್ವರೂಪವನ್ನೂ ಫಲಗಳನ್ನೂ ಇದ್ದದ್ದು ಇದ್ದಂತೆ ನಿರ್ಣಯಿಸಿರುವದಿಲ್ಲ. ಅದಕ್ಕಾಗಿ ಇಲ್ಲಿ ರಥದ ರೂಪಕವನ್ನು ಕೊಟ್ಟು ಜೀವನು ಪರಮಾತ್ಮನನ್ನು ಹೇಗೆ ಮುಟ್ಟಬೇಕಾಗಿದೆ ಎಂಬುದನ್ನು ವಿವರಿಸಲಾಗಿರುತ್ತದೆ.

ಈ ನಮ್ಮ ಶರೀರದಲ್ಲಿ ಇಬ್ಬರು ಆತ್ಮರುಗಳು ಹೃದಯದಲ್ಲಿ ಹೊಕ್ಕಿರುತ್ತಾರೆ. ಅವರಲ್ಲಿ ಒಬ್ಬನು ಕರ್ಮವನ್ನು ಮಾಡಿ ಫಲವನ್ನು ಅನುಭವಿಸುತ್ತಿರುವನು; ಇನ್ನೊಬ್ಬನು ಹಾಗೆಯೇ ನೋಡುತ್ತಿರುವನು. ಅವರಲ್ಲಿ ಜೀವನು ನೆರಳಿನಂತೆ ಇರುತ್ತಾನೆ, ಇನ್ನೊಬ್ಬನು ಬಿಸಿಲಿನಂತೆ ಪ್ರಕಾಶಸ್ವರೂಪನಾಗಿರುತ್ತಾನೆ. ಹೀಗೆಂದು ತತ್ತ್ವವನ್ನು ಬಲ್ಲ ಬ್ರಹ್ಮಜ್ಞಾನಿಗಳೂ, ಪಂಚಾಗ್ನಿ, ತ್ರಿಣಾಚಿಕೇತಾಗ್ನಿ-ಇವುಗಳ ಉಪಾಸಕರೂ ಹೇಳುತ್ತಾರೆ. ಜೀವನು ಪಡೆಯಬೇಕಾಗಿರುವ ಪರಗತಿಯು ಕರ್ಮಿಗಳೂ ಉಪಾಸಕರೂ ಪಡೆಯಬೇಕಾಗಿರುವ ಅಪರಬ್ರಹ್ಮವೆಂದೂ ಜ್ಞಾನಿಗಳು ಮುಟ್ಟಬೇಕಾಗಿರುವ ಪರಬ್ರಹ್ಮವೆಂದೂ ಎರಡು ಬಗೆಯಾಗಿರುವದು. ಈ ಎರಡು ಗುರಿಯನ್ನೂ ಮುಟ್ಟುವದಕ್ಕೆ ಹೊರಟಿರುವ ಸಂಸಾರಿಯಾದ ಜೀವನು ರಥಿಯು, ಶರೀರವೇ ರಥ, ಬುದ್ಧಿಯೇ ಸಾರಥಿ ; ಮನಸ್ಸೇ ಆ ಕುದುರೆಗಳಿಗೆ ಕಟ್ಟುವ ಕಡಿವಾಣ, ಇಂದ್ರಿಯಗಳೇ ಕುದುರೆಗಳು. ಶರೀರೇಂದ್ರಿಯಮನಸ್ಸುಗಳಿಂದ ಒಡಗೂಡಿರುವ ಆತ್ಮನೇ ಇಲ್ಲಿ ಭೋಕ್ತೃವೆನಿಸಿರುತ್ತಾನೆ. ಯಾವನ ಬುದ್ಧಿಯು ವಿವೇಕರಹಿತವಾಗಿರುವದೋ, ಮನಸ್ಸು ಸಮಾಹಿತವಾಗಿರುವದಿಲ್ಲವೋ, ಅವನಿಗೆ ಗಾಡಿಯನ್ನು ನಡೆಯಿಸುವವನಿಗೆ ತುಂಟಕುದುರೆಗಳು ವಶವಾಗದಿರುವಂತೆ ಇಂದ್ರಿಯಗಳು ಹಿಡಿತಕ್ಕೆ ಸಿಕ್ಕಿರುವದಿಲ್ಲ ; ಆದರೆ ಯಾವನು ವಿವೇಕಯುಕ್ತವಾದ ಬುದ್ಧಿಯಿಂದ ಕೂಡಿ ಸಮಾಹಿತವಾದ ಮನಸ್ಸುಳ್ಳವನಾಗಿರುವನೋ ಅವನಿಗೆ, ಪಳಗಿದ ಕುದುರೆಗಳು ಗಾಡಿಯನ್ನು ನಡೆಸುವವನಿಗೆ ಅಳವಡುವಂತೆ, ಇಂದ್ರಿಯಗಳು ವಶದಲ್ಲಿರುತ್ತವೆ. ಯಾವನ ಮನೋಬುದ್ಧಿಗಳು ಅಕ್ರಮದಲ್ಲಿರುವವೋ ಅವನು ಸಂಸಾರವನ್ನು ಪಡೆಯುವನು; ಯಾವನ ಮನೋಬುದ್ಧಿಗಳು ಸರಿಯಾದ ಸ್ಥಿತಿಯಲ್ಲಿರುವವೋ ಅವನೇ ಪರಮಾರ್ಥವಾದ ವಿಷ್ಣುವಿನ ಸ್ಥಾನವನ್ನು ಪಡೆದುಕೊಳ್ಳುವನು. ಇದು ಗ್ರಂಥಭಾಗದ ಸಾರ.

**ಶ್ರೀಗಳವರು** ಅನುವಾದದಲ್ಲಿ ಉಪನಿಷತ್ತಿನಲ್ಲಿ ಹೇಳಿರುವ ಪರಾಪರಬ್ರಹ್ಮವಿದ್ಯೆಗಳ ಸ್ವರೂಪವನ್ನು ವರ್ಣಿಸಿ ಹೀಗೆಂದರು : ಉಪಾಸನೆಯಿಂದ ಪಡೆದುಕೊಳ್ಳಬೇಕಾಗಿರುವ ಅಪರಬ್ರಹ್ಮವೇ ಆಗಲಿ, ಜ್ಞಾನದಿಂದ ಅರಿತುಕೊಳ್ಳಬೇಕಾಗಿರುವ ಪರಬ್ರಹ್ಮವೇ ಆಗಲಿ, ಬರಿಯ ಕರ್ಮದಿಂದ ಎಂದಿಗೂ

ಸಿಕ್ಕತಕ್ಕದ್ದಲ್ಲ ; ಹೊರಗಿರುವ ವಿಷಯಗಳಂತೆ ಇಂದ್ರಿಯಗೋಚರವೂ ಅಲ್ಲ. ಆದ್ದರಿಂದ ಅಂತಃಕರಣವನ್ನು ಶುದ್ಧಿಗೊಳಿಸುವ ಉಪಾಯದಿಂದಲೇ ಅದನ್ನು ಕಂಡುಕೊಳ್ಳಬೇಕಾಗಿರುತ್ತದೆ. ಇಂದ್ರಿಯಗಳು, ಮನಸ್ಸು, ಬುದ್ಧಿ-ಇವುಗಳಿಗೆ ಇರುವ ಸಂಬಂಧವನ್ನು ಇಲ್ಲಿ ಹೇಳಿರುವ ಅಧ್ಯಾತ್ಮತತ್ತ್ವಗಳ ಆಧಾರದಿಂದ ಕಂಡುಕೊಳ್ಳಬೇಕು. ಯಾವನು ವಿಷಯಗಳಲ್ಲಿ ಇಂದ್ರಿಯಗಳನ್ನು ಹರಿಯಬಿಡುವನೋ ಅವನು ಸಂಸಾರಭಾಗಿಯಾಗುವನು. ಆದ್ದರಿಂದ ಸಾಧಕನು ಇಂದ್ರಿಯಗಳನ್ನು ಬಿಗಿಹಿಡಿದುಕೊಂಡು ಆತ್ಮತತ್ತ್ವವನ್ನು ಕಂಡುಕೊಳ್ಳಬೇಕಾಗಿದೆ. ಉಪಾಸನೆಗೆ ಆಧ್ಯಾತ್ಮಿಕ ಭಾವನಾಶಕ್ತಿಯು ಬೆಳೆಯಬೇಕಾಗಿರುತ್ತದೆ ; ಜ್ಞಾನಕ್ಕೆ ಸಂಸ್ಕಾರಯುತವಾದ ಮನಸ್ಸಿನ ಏಕಾಗ್ರತೆಯಿಂದ ಮಾಡುವ ನಿದಿಧ್ಯಾಸನವು ಬೇಕಾಗುತ್ತದೆ. ಮುಮುಕ್ಷುಗಳು ಇದನ್ನರಿತು ಸಾಧನವನ್ನುಮಾಡಿ ಕೃತಾರ್ಥರಾಗಬೇಕು.

★★★★★

## ಶಾಸ್ತ್ರೋಕ್ತನಾದ ಪರಮಾತ್ಮನ ಸ್ವರೂಪ

**28-4-1958**

**ಬ್ರ|| ಶ್ರೀ|| ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

**ಬ್ರಹ್ಮಸೂತ್ರಭಾಷ್ಯದಲ್ಲಿ** ನಾಲ್ಕನೆಯ ಅಧ್ಯಾಯದ ಒಂದನೆಯ ಪಾದದ ಮೂರನೆಯ ಸೂತ್ರದ ಅರ್ಥ: ಶಾಸ್ತ್ರೋಕ್ತನಾದ ಪರಮಾತ್ಮನನ್ನು ನಮ್ಮ ಸ್ವರೂಪವೇ ಎಂದು ತಿಳಿದುಕೊಳ್ಳಬೇಕೊ, ನನಗಿಂತ ಬೇರೆ ಎಂದು ತಿಳಿದುಕೊಳ್ಳಬೇಕೊ?-ಎಂಬ ಪ್ರಶ್ನೆಯನ್ನು ಇಲ್ಲಿ ಚರ್ಚಿಸಿರುತ್ತದೆ. ಆತ್ಮ ಎಂಬ ಶಬ್ದವೇನೋ ಇಲ್ಲಿದೆ; ಆದರೂ ಪರಮಾತ್ಮನು ಧರ್ಮಾಧರ್ಮರಹಿತನಾದವನು, ಸತ್ಯಸಂಕಲ್ಪನು- ಎಂದು ಮುಂತಾಗಿ ಶಾಸ್ತ್ರದಲ್ಲಿ ವರ್ಣಿಸಿದೆ; ಜೀವಾತ್ಮನು ಅದಕ್ಕೆ ವಿರುದ್ಧವಾದ ಗುಣಗಳುಳ್ಳವನೇ ಆಗಿರುತ್ತಾನೆ. ಪರಮೇಶ್ವರನನ್ನು ಸಂಸಾರಿಯಾದ

ಜೀವನೆಂದು ಇಟ್ಟುಕೊಂಡರೆ ಈಶ್ವರನೇ ಇಲ್ಲವೆಂದಾಗುವದು; ಸಂಸಾರಿಯಾದ ಜೀವನನ್ನೇ ಈಶ್ವರನೆಂದು ಇಟ್ಟುಕೊಂಡರೆ ಸಂಸಾರಬಂಧದಿಂದ ಬಿಡುಗಡೆಯಾಗಬೇಕಾದವರೇ ಇಲ್ಲವೆಂದಾಗಿ ಶಾಸ್ತ್ರವು ವ್ಯರ್ಥವಾಗುವದು. ಆದ್ದರಿಂದ ಈಶ್ವರನು ಬೇರೆ, ಜೀವನು ಬೇರೆ ಎಂಬುದೇ ಯುಕ್ತ-ಎಂದು ಮೊದಲು ತೋರುವದು. ಆದರೆ ಶಾಸ್ತ್ರದಲ್ಲಿ ನಾನೇ 'ಬ್ರಹ್ಮವು,' 'ನೀನೇ ಅದು'- ಎಂದು ಮುಂತಾಗಿ ಸ್ಪಷ್ಟವಾಗಿ ತಿಳಿಸಿರುತ್ತದೆ. ಎಲೈ ದೇವತೆಯೆ, 'ನೀನೇ ನಾನು, 'ನಾನೇ ನೀನು' ಎಂದು ತಿರುಗಿಸಿತಿರುಗಿಸಿ ಶಾಸ್ತ್ರಕಾರರು ಹೇಳಿರುತ್ತಾರೆ ; ಆದ್ದರಿಂದ 'ನಾನು ಬ್ರಹ್ಮ' ಎಂದು ಧ್ಯಾನಮಾಡಬೇಕು ಎಂದು 'ಅಹಂ ಬ್ರಹ್ಮಾಸ್ಮಿ' ವ್ಯಾಕ್ಯಕ್ಕೆ ಅರ್ಥವನ್ನು ಮಾಡಲಾಗುವಂತಿಲ್ಲ. 'ನಾನು ಬೇರೆ, ನಾನು ಉಪಾಸನೆಮಾಡುವ ದೇವತೆ ಬೇರೆ- ಎಂಬವನು ಅರಿಯನು' ಎಂದು ಜೀವಪರಮೇಶ್ವರಭೇದವನ್ನು ಶಾಸ್ತ್ರದಲ್ಲಿ ನಿಂದಿಸಿಯೂ ಇರುತ್ತದೆ. ಆದ್ದರಿಂದ ಜೀವಪರಮಾತ್ಮರಿಗೆ ಅಭೇದವನ್ನೇ ಇಲ್ಲಿ ತಿಳಿಯಬೇಕು ಎಂಬುದು ಸಿದ್ಧಾಂತವು. ಅತ್ಯಂತವಿರುದ್ಧಗುಣವುಳ್ಳ ಜೀವೇಶ್ವರರುಗಳಿಗೆ ಐಕ್ಯವನ್ನು ಹೇಗೆ ಒಪ್ಪುವದು?- ಎಂದು ಶಂಕಿಸಬಾರದು. ಏಕೆಂದರೆ ಈಶ್ವರನನ್ನು ಜೀವನೆಂದು ತಿಳಿಯಬೇಕೆಂದೇನೂ ಶಾಸ್ತ್ರದಲ್ಲಿ ಹೇಳಿರುವದಿಲ್ಲ. ಜೀವನು ಸಂಸಾರಿಯಾಗಿ ತೋರುತ್ತಿರುವದು ಹುಸಿ, ನಿಜವಾಗಿ ಅವನು ಪರಮಾತ್ಮನೇ ಆಗಿರುತ್ತಾನೆ- ಎಂದು ಅವಿದ್ಯೆಯನ್ನು ಕಳೆದು ಜೀವನನ್ನೇ ಪರಮಾತ್ಮನೆಂದು ಶ್ರುತಿಯು ಹೇಳುತ್ತಿದೆ. ಆದ್ದರಿಂದ ಇಲ್ಲಿ ಯಾವ ವಿರೋಧವೂ ಇಲ್ಲ. ಜೀವನು ಈಶ್ವರನೆಂಬುದು ಪ್ರತ್ಯಕ್ಷಾದಿಪ್ರಮಾಣಗಳಿಗೆ ವಿರುದ್ಧವಲ್ಲವೆ?-ಎಂದು ಯಾರಾದರೂ ಕೇಳಬಹುದು. ಆದರೆ ಪ್ರತ್ಯಕ್ಷಾದಿಪ್ರಮಾಣಗಳು ಅವಿದ್ಯಾವಸ್ಥೆಯಲ್ಲಿ ನಾವು ಜೀವರು ಎಂಬುದನ್ನು ತಿಳಿಸುತ್ತವೆ. ಶಾಸ್ತ್ರವು ಪರಮಾರ್ಥವಾಗಿ ನಾವೆಲ್ಲರೂ ಪರಮಾತ್ಮಸ್ವರೂಪರೇ ಎಂಬುದನ್ನು ತಿಳಿಸಿಕೊಡುತ್ತದೆ. ಆದ್ದರಿಂದ ಆ ಜ್ಞಾನವು ಬಂದಾಗ ಯಾವ ವಿರೋಧವೂ ಇರುವದಿಲ್ಲ-ಹೀಗೆಂಬುದು ಸೂತ್ರ ಭಾಷ್ಯದ ಅಭಿಪ್ರಾಯ.

**ಶ್ರೀ**ಗಳು ಅನುವಾದದಲ್ಲಿ ಹೀಗೆಂದರು: ಶಾಸ್ತ್ರವು ಪ್ರತ್ಯಕ್ಷಾದಿಪ್ರಮಾಣಗಳಿಂದ ನಮಗೆ ತಿಳಿಯದೆ ಇರುವ ಅರ್ಥವನ್ನು ತಿಳಿಸುತ್ತದೆ.

ಆದ್ದರಿಂದ ಶಾಸ್ತ್ರಕ್ಕೂ ಪ್ರತ್ಯಕ್ಷಾದಿಗಳಿಗೂ ಯಾವ ವಿರೋಧವೂ ಇಲ್ಲ. ಶಾಸ್ತ್ರವು ಬ್ರಹ್ಮವು ನಮ್ಮೆಲ್ಲರ ಆತ್ಮನೇ ಎಂಬುದನ್ನು ತಿಳಿಸುವದಲ್ಲದೆ ನಮ್ಮೆಲ್ಲರಿಗೂ ಒಬ್ಬನೇ ಆತ್ಮನು. ಅದೇ ನಮ್ಮ ನಿಜವಾದ ಸ್ವರೂಪವು-ಎಂಬುದನ್ನು ಅನುಭವಕ್ಕೆ ತಂದುಕೊಡುತ್ತದೆ. ಯಾರಿಗೆ ಈ ಅನುಭವವುಂಟಾಗುವದೋ, ಯಾರು ಶಾಸ್ತ್ರಾರ್ಥವನ್ನು ಮನನ ಮಾಡಿ ತಮ್ಮ ಅನುಭವಕ್ಕೆ ಹೊಂದಿಸಿಕೊಳ್ಳಬಲ್ಲರೋ ಅಂಥವರಿಗೆ ಬ್ರಹ್ಮವೊಂದೇ ಪರಮಾರ್ಥವು, ಅದೇ ನಾನು- ಎಂಬುದು ಅನುಭವಕ್ಕೆ ಬಂದುಬಿಡುವದರಿಂದ ಆಗ ಯಾವ ವಿರುದ್ಧತರ್ಕಕ್ಕೂ ಅವಕಾಶವಿರುವದಿಲ್ಲ; ತರ್ಕದ ಆವಶ್ಯಕತೆಯೂ ಆಗ್ಗೆ ಇರುವದಿಲ್ಲ. ಆ ತಿಳಿವಳಿಕೆಯು ಉಂಟಾಗುವವರೆಗೂ ನಾವೆಲ್ಲರೂ ಜೀವರೇ ಪರಮೇಶ್ವರನು ಬೇರೆಯೇ-ಎಂಬುದಕ್ಕೂ ಯಾವ ಅಡ್ಡಿಯೂ ಇರುವದಿಲ್ಲ.

★★★★★

## ನಿರುಪಾಧಿಕತತ್ತ್ವದ ಸಾರ

**29-4-1958**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳವರು**

**ಗೀತಾಭಾಷ್ಯದಲ್ಲಿ** 15-16 ರಿಂದ 20ರವರೆಗಿನ ಶ್ಲೋಕಗಳ ಭಾಷ್ಯದ ಅಭಿಪ್ರಾಯ: ಶ್ರೀಕೃಷ್ಣ ಭಗವಂತನು ಬೇರೆಬೇರೆಯ ಉಪಾಧಿಗಳಿಂದಾಗಿರುವ ವಿಭೂತಿವಿಶೇಷಗಳನ್ನು ಸಂಗ್ರಹವಾಗಿ ಹೇಳಿದ ಬಳಿಕ ತನ್ನ ನಿರುಪಾಧಿಕತತ್ತ್ವವನ್ನು ತಿಳಿಸಿದ್ದರ ಸಾರವು ಈ ಶ್ಲೋಕಗಳಲ್ಲಿದೆ.

ನಾಮರೂಪಗಳಿಂದಾಗಿರುವ ಚೇತನಾಚೇತನವಸ್ತುಗಳಾಗಿರುವ ವ್ಯಾಕೃತ ರೂಪದ ಆತ್ಮನು ಕ್ಷರನೆನಿಸುವನು; ಅದೇ ಪ್ರಪಂಚದ ಅವ್ಯಾಕೃತರೂಪದ ಉಪಾಧಿಯುಳ್ಳ ಮಾಯೋಪಾಧಿಕವಾದ ಆತ್ಮನು ಅಕ್ಷರನೆನಿಸುವನು. ಉಪಾಧಿಗಳ ಗೋಜಿಲ್ಲದೆ ಭೂರ್ಭುವಃಸ್ವರಾಖ್ಯವಾದ ಮೂರು ಲೋಕಗಳನ್ನೂ

ವ್ಯಾಪಿಸಿಕೊಂಡು ತನ್ನ ಚಿತ್ಸ್ವರೂಪದ ಸನ್ನಿಧಿಮಾತ್ರದಿಂದ ಎಲ್ಲವನ್ನೂ ಧರಿಸಿರುವ ನಿರುಪಾಧಿಕನಾದ ಈಶ್ವರನು **ಪರಮಾತ್ಮ**ನೆನಿಸುವನು ಏಕೆಂದರೆ ಅವಿದ್ಯಾಕಲ್ಪಿತರಾದ ಮಿಕ್ಕ ಆತ್ಮರುಗಳಿಗಿಂತಲೂ ಇವನು ಪರಮನು; ಮತ್ತು ಸರ್ವಭೂತಗಳಿಗೂ ಪ್ರತ್ಯಕ್ಚೇತನರೂಪನಾಗಿರುವದರಿಂದ ಆತ್ಮನೂ ಆಗಿರುತ್ತಾನೆ. ಕ್ಷರ, ಅಕ್ಷರ-ಎಂಬ ಪುರುಷರಿಗಿಂತಲೂ ಉತ್ತಮನಾಗಿರುವದರಿಂದ ಈ ಪರಮಾತ್ಮನಿಗೆ **ಪುರುಷೋತ್ತಮನು** ಎಂಬ ಹೆಸರು ವೇದದಲ್ಲಿಯೂ ಇದೆ; ಕವಿಗಳೂ ಹಾಗೆಂದು ವರ್ಣಿಸುತ್ತಾರೆ. ಈ ಪುರುಷೋತ್ತಮತತ್ತ್ವವನ್ನು ಅರಿತುಕೊಂಡವನು ಭಗವಂತನನ್ನು ಸರ್ವಾತ್ಮನೆಂದು ಭಜಿಸುವನು. ವ್ಯಾಕೃತಾವ್ಯಾಕೃತಗಳೆರಡರ ತತ್ತ್ವವಾಗಿರುವದರಿಂದ ಇದು ಪರಮರಹಸ್ಯವು; ಇದನ್ನರಿತವನೇ ಜ್ಞಾನಿಯು, ಕೃತಕೃತ್ಯನು-ಎಂಬುದು ಶ್ಲೋಕಗಳ ಅಭಿಪ್ರಾಯವು.

**ಶ್ರೀಗಳು** ಅನುವಾದದಲ್ಲಿ ಹೇಳಿದ್ದೇನೆಂದರೆ : ಭೌತಿಕವಿಜ್ಞಾನವು ಇಲ್ಲಿಗೆ ಮುಗಿಯುವದೆಂಬುದಿಲ್ಲ; ವಿಚಾರಮಾಡಿದಂತೆಲ್ಲ ಅದು ಮುಂದುವರಿಯುತ್ತಲೇ ಇರುತ್ತದೆ. ಆದರೆ ಅಧ್ಯಾತ್ಮಶಾಸ್ತ್ರದಲ್ಲಿ ಹೀಗಿಲ್ಲ. ಇರುವದೆಲ್ಲವೂ ವ್ಯಾಕೃತಾ ವ್ಯಾಕೃತಪ್ರಪಂಚ ಮತ್ತು ಅವುಗಳ ಸಾಕ್ಷಿ- ಇಷ್ಟರಲ್ಲಿಯೇ ಅಡಕವಾಗಿರುತ್ತದೆ. ಇನ್ನೂ ಒಳಹೊಕ್ಕು ನೋಡಿದರೆ ನಾಮರೂಪಗಳ ಬೀಜವಾದ ಮಾಯೆಯೇ ಜಗತ್ತತ್ತ್ವ; ಆ ಮಾಯೆಯ ತತ್ತ್ವವೇ **ಪರಮಾತ್ಮ**. ಪರಮಾತ್ಮನು ಎಲ್ಲಕ್ಕೂ ನಿಜವಾದ ಆತ್ಮನು ; ವ್ಯಾಕೃತಾತ್ಮ, ಅವ್ಯಾಕೃತಾತ್ಮ-ಎಂದು ಉಪಾಧಿಗಳಿಂದ ತೋರುವ ಆತ್ಮನ ಎರಡು ರೂಪಗಳಾದ ಪುರುಷರಿಗಿಂತ ಉತ್ತಮನಾದ್ದರಿಂದ ಪುರುಷೋತ್ತಮನನ್ನು ಕಂಡುಕೊಂಡಮೇಲೆ ಅರಿತುಕೊಳ್ಳಬೇಕಾದದ್ದಾಗಲಿ ಮಾಡಬೇಕಾದದ್ದಾಗಲಿ ಉಳಿದಿರುವದಿಲ್ಲ-ಎಂಬುದು ವೇದಾಂತದ ಜಿಜ್ಞಾಸೆಯ ಪರಿಸಮಾಪ್ತಿಸ್ಥಾನ.

★★★★★

# ಆಚಾರ್ಯರ ಗುಣಕಥನ

**30-4-1958**

**ಶ್ರೀ ಶ್ರೀಗಳು**

ಪ್ರತಿವರ್ಷದ ಸಪ್ತಾಹದ ಕೊನೆಯಲ್ಲಿ ಆಚಾರ್ಯರವರ ಗುಣಕಥನವನ್ನು ಮಾಡುವ ಪದ್ಧತಿಯಿದೆ. ಸರಿಯಾಗಿ ನೋಡಿದರೆ ಆ ಮಹನೀಯರ ಭಾಷ್ಯಾದಿಗಳ ಅರ್ಥವನ್ನು ಮನಗಂಡರೆ ಅದೇ ಅವರ ಗುಣಕಥನವಾಗುವದು. ಓಂಕಾರವೊಂದೇ ಪರಮಾತ್ಮನ ವಾಚಕವಾದರೂ 'ಓಂ ತತ್ಸದ್ಬ್ರಹ್ಮಾರ್ಪಣಮಸ್ತು, ಶ್ರೀಕೃಷ್ಣಾರ್ಪಣಮಸ್ತು' ಎಂದು ಮುಂತಾಗಿ ಅರಿಯದವರಿಗೆ ತಿಳಿಯಲೆಂದು ವಿಸ್ತರಿಸುವಂತೆ ಆಚಾರ್ಯರ ಗುಣಕಥನವನ್ನು ವಿಶೇಷವಾಗಿಟ್ಟುಕೊಳ್ಳುವದಾಗಿದೆ.

ಪರಮಾತ್ಮನ ಸ್ತೋತ್ರವನ್ನು ಮಾಡುವದು ಪರಮಾತ್ಮನ ಪ್ರಯೋಜನಕ್ಕಲ್ಲ, ನಾವು ಪರಮಾತ್ಮತತ್ತ್ವದ ಭಾವನೆಯಿಂದ ಪಾವನರಾಗುವದಕ್ಕೆ. ಶ್ರೀರಾಮನು ಧರ್ಮಾತ್ಮನು, ಸತ್ಯಸಂಧನು - ಎಂಬುದನ್ನು ರಾಮಾಯಣದಲ್ಲೆಲ್ಲ ಹೊಗಳಿದೆ; ಆತನ ಗುಣಗಳನ್ನು ಮತ್ತೆ ಮತ್ತೆ ಮನಸ್ಸಿನಲ್ಲಿ ಹೊರಳಾಡಿಸುವದರಿಂದ ನಮ್ಮ ಸ್ವಭಾವದಮೇಲೆ ಉತ್ತಮಪರಿಣಾಮವಾಗುವದು. ಇದರಂತೆ ಆಚಾರ್ಯರ ಗುಣಕಥನಕ್ಕೆ ನಮ್ಮ ಸ್ವಭಾವಪರಿವರ್ತನೆಯೇ ಫಲವಾಗಿರುತ್ತದೆ.

ಈ ಸಲ ಆಚಾರ್ಯರವರ ಸೇವೆಮಾಡಿದ್ದರಲ್ಲಿ ಎಷ್ಟು ಲೋಪದೋಷಗಳಿವೆಯೋ ನಮಗೆ ತಿಳಿಯದು. ಆದರೆ ಆ ಮಹನೀಯರು ಅದರಲ್ಲಿರುವ ಗುಣವನ್ನು ಸ್ವೀಕರಿಸಿ ನಮ್ಮನ್ನು ಅನುಗ್ರಹಿಸಬೇಕಾಗಿದೆ. ಸಕಲವೇದಗಳೂ ಪರಮಾತ್ಮನನ್ನೇ ಹೇಳುತ್ತವೆ ಎಂದು ಶ್ರುತಿಯಲ್ಲಿದೆ. ಅಧ್ಯಯನ ಮಾಡುವದೂ ವೇದಾಂತಚಿಂತನೆಮಾಡುವದೂ ಅದರ ಅರ್ಥವನ್ನು ಮನನ ಮಾಡುವದೂ ಬ್ರಾಹ್ಮಣನ ಕರ್ತವ್ಯವೆಂಬುದನ್ನು ನಾವು ನೆನಪಿನಲ್ಲಿಡಬೇಕು. ಈಗ ಆಪದ್ಧರ್ಮವನ್ನು ಸ್ವೀಕರಿಸುವ ಕಾಲವು ಬಂದಿದೆಯಾದರೂ ನಾವು ವೇದವನ್ನು ತ್ಯಾಗಮಾಡಬಾರದು. ಬರಿಯ

ಹೊಟ್ಟೆಗಾಗಿ ದುಡಿಯುವದು ಶೂದ್ರಧರ್ಮ. ಆದ್ದರಿಂದ ಈಗ ನಾವು ವೇದದ ಕೆಲವು ಮುಖ್ಯಮಂತ್ರಗಳನ್ನಾದರೂ ಆರಿಸಿ ಅರ್ಥಸಮೇತವಾಗಿ ಅಚ್ಚುಮಾಡಿಸಿ ಬ್ರಾಹ್ಮಣವಟುಗಳಿಗೆ ಉಚಿತವಾಗಿ ಕೊಡಿಸುವದಕ್ಕೂ ಅವರಿಗೆ ಆ ಮಂತ್ರಗಳನ್ನು ಅಧ್ಯಯನಮಾಡಿಸುವದಕ್ಕೂ ಏರ್ಪಾಡುಮಾಡಬೇಕು.

ಆಚಾರ್ಯರು ಎಂಟುವರ್ಷಕ್ಕೇ ಪಾರಮಹಂಸ್ಯಸಂನ್ಯಾಸವನ್ನು ಸ್ವೀಕರಿಸಿದರೆಂದು ಹೇಳುತ್ತಾರೆ. ಇದು ನಿಜವಾದ ಅವರಿಗಿದ್ದ ಅಪಾರವಾದ ವೈದಿಕ ವಾಙ್ಮಯದ ಪರಿಚಯವನ್ನು ನೋಡಿದರೆ ಎಂಥ ಘನಪಾಠಿಗಳೂ ತಲೆದೂಗುವಂತಿದೆ. ಇನ್ನೂ ಉಳಿದಿರುವ ಅವರ ವೇದಾಂತಭಾಷ್ಯಗಳಲ್ಲಿ ಕಾಣಬರುವ ಶ್ರುತಿಗಳು, ಯುಕ್ತಿಗಳು, ಅನುಭವಪರಾಮರ್ಶ – ಇವೆಲ್ಲವೂ ಅವರ ಸರ್ವಜ್ಞತೆಯನ್ನು ಸೂಚಿಸುತ್ತಿವೆ. ಇಂಥ ವಿರಕ್ತರೂ, ಜ್ಞಾನಿಗಳೂ ಭರತಖಂಡದಲ್ಲಿ ಒಬ್ಬರಾದರೂ ಜನಿಸಬೇಕಾದರೆ ಆಚಾರಸಂಪನ್ನರೂ ಅಧ್ಯಯನಶೀಲರೂ ಆದ ಬ್ರಾಹ್ಮಣರು ಎಷ್ಟಿರಬೇಕಾಯಿತು, ನೀವೇ ಯೋಚಿಸಿರಿ !

ಈಗ ದೇಶಾಭಿಮಾನದ ಕೂಗು ಎಲ್ಲೆಲ್ಲಿಯೂ ಎದ್ದಿದೆ. ಆದರೆ ದೇಶದ ಸಂಸ್ಕೃತಿಯನ್ನು ಕಡೆಗಣಿಸಿದ ದೇಶಭಕ್ತಿ ಯಾವದು ? ರತ್ನವನ್ನು ಎಲ್ಲಿಯೋ ಕಳೆದುಕೊಂಡು ಪೆಟ್ಟಿಗೆಯನ್ನು ಭದ್ರವಾಗಿಟ್ಟುಕೊಂಡಂತೆ ಆಗಿರುತ್ತದೆ, ನಮ್ಮ ಪಾಡು! ಕೇವಲ ಬಾಹ್ಯಕಾಮಗಳಿಗೆ ಮರುಳಾಗಿ ಅವಿವೇಕಿಗಳಾದ ಹುಡುಗರಾಗದಂತೆ ಇರಬೇಕಾದರೆ ಆಚಾರ್ಯರಂಥ ಮಹನೀಯರ ಅಮೋಘ ಉಪದೇಶಗಳನ್ನು ನಾವು ನೆನಪಿನಲ್ಲಿಡುವದು ಅತ್ಯವಶ್ಯ. ನಮ್ಮ ಮಕ್ಕಳು ಆತ್ಮಘಾತುಕರೂ ದೇಶದ್ರೋಹಿಗಳೂ ಆಗದಂತೆ ನೋಡಿಕೊಳ್ಳಬೇಕು. ಈ ದೃಷ್ಟಿಯಿಂದ ಶ್ರೀಶಂಕರಭಗವತ್ಪಾದರವರ ಗ್ರಂಥಗಳನ್ನು ಮೂಲಸಹಿತವಾಗಿ ಕನ್ನಡಿಸಿ ಪೂಜೆಗಾದರೂ ನಾವು ಇಟ್ಟುಕೊಳ್ಳಬೇಕು.

ವೇದವೆಂಬ ಮರಕ್ಕೆ ವೇದಾಂತವೇ ಹಣ್ಣು. ವೇದಾಂತಫಲದ ಸವಿಯು ನಮ್ಮ ಮಕ್ಕಳಿಗೆಲ್ಲರಿಗೂ ಸಿಕ್ಕುವಂತೆ ಮಾಡಿಕೊಡಬೇಕು. ಶ್ರೀಶಂಕರಭಗವತ್ಪಾದರವರು ಬರೆದಿರುವ ಭಾಷ್ಯಗಳಿಂದಲೇ ವೇದಾಂತದ ರುಚಿಯನ್ನು ನಾವು ಕಾಣಲು ಸಾಧ್ಯ. ಅವರ ಅಮೋಘವಾದ ಭಾಷ್ಯಗಳಿಂದ

ಕೆಲವು ಭಾಗಗಳನ್ನು ಆರಿಸಿ, ಕ್ರಮಪಡಿಸಿ ಜೋಡಿಸಿ, ಅಚ್ಚುಮಾಡಿಸಿ ಅದನ್ನು ಎಲ್ಲರಿಗೂ ಹಂಚಬೇಕು. ನಾವೂ ಆ ಭಾಷ್ಯಗಳ ಸಾರವನ್ನು ಗ್ರಹಿಸಿ ಮಿಕ್ಕವರಿಗೂ ಮಾಡಿಸಬೇಕು.

ವಿಶೇಷವಾಗಿ ಬ್ರಾಹ್ಮಣನ ಕರ್ತವ್ಯವಿದು. ಜ್ಞಾನಕ್ಕೆ ಎಲ್ಲರಿಗೂ ಅಧಿಕಾರವಿದೆಯಾದರೂ ಎಂಥ ಕಷ್ಟವನ್ನಾದರೂ ಸಹಿಸಿಕೊಂಡು ವೇದ, ವೇದಾಂತ, ಸಂಸ್ಕೃತ – ಇವುಗಳನ್ನು ತಾನೂ ಕಲಿತು ಮಿಕ್ಕವರಿಗೂ ಕಲಿಸಿಕೊಡುವದು ಬ್ರಾಹ್ಮಣನ ಹೆಮ್ಮೆಯಾಗಿರಬೇಕು. ಪರಮಾತ್ಮನು ಬ್ರಹ್ಮನಿಂದ ಒಂದು ಹುಳುವಿನವರೆಗೆ ಎಲ್ಲರಿಗೂ ಆತ್ಮನೇ; ಅವನು ಆನಂದಸ್ವರೂಪನಾಗಿರುತ್ತಾನೆ. ಈ ಸುದ್ದಿಯನ್ನು ಎಲ್ಲರಿಗೂ ಹರಡಿರಿ. ಅದ್ವೈತವೇದಾಂತವೆಂಬ ಹೆಸರಿನಿಂದ ಅನಾಚಾರವನ್ನು ಎತ್ತಿಹಿಡಿಯುವದು ಸರಿಯಲ್ಲ; ಶ್ರೀಶಂಕರಾಚಾರ್ಯರವರ ವಿಷಯಕ್ಕೆ ಕಟ್ಟುಕಥೆಯನ್ನು ನಂಬಿ ಪ್ರಚಾರಮಾಡುವದು ಅವರಲ್ಲಿರುವ ಭಕ್ತಿಯ ಗುರುತೂ ಅಲ್ಲ. ಆಚಾರ್ಯರು ಉಪದೇಶಿಸಿರುವ ಕರ್ಮಭಕ್ತಿಜ್ಞಾನಗಳ ರಹಸ್ಯವನ್ನು ಅಳವಡಿಸಿಕೊಳ್ಳುವದಕ್ಕೂ ಜನರಲ್ಲಿ ಪ್ರಚಾರಮಾಡುವದಕ್ಕೂ ಪ್ರಯತ್ನಿಸುವದೇ ಅವರಲ್ಲಿ ನಮಗಿರುವ ಹೆಚ್ಚಿನ ಭಕ್ತಿಯ ಗುರುತು.

★★★★★

# ಸಾಂಖ್ಯ-ಯೋಗಗಳ ಸಾಮರಸ್ಯ

**13-5-1959**

**ಶ್ರೀಶ್ರೀಗಳವರು**

**ಭಗವದ್ಗೀತೆಯಲ್ಲಿ** 5-6 ರಿಂದ 13ರವರೆಗಿನ ಶ್ಲೋಕಗಳ ಭಾಷ್ಯಭಾಗದಲ್ಲಿ ಸಾಂಖ್ಯಯೋಗಗಳ ಸಾಮರಸ್ಯವನ್ನು ವಿವರಿಸಿದೆ. ಕರ್ಮಗಳ ಸಂನ್ಯಾಸ ಮತ್ತು ಅವುಗಳ ಯೋಗ, ಎಂದರೆ ಕರ್ಮವನ್ನು

ಬಿಡುವದು ಮತ್ತು ಮಾಡುವದು- ಇವುಗಳಲ್ಲಿ ಯಾವದು ಶ್ರೇಯಸ್ಕರವೆಂಬುದನ್ನು ನಿಶ್ಚಯಿಸಿ ಹೇಳು ಎಂದು ಅರ್ಜುನನು ಕೇಳಿದ್ದಕ್ಕೆ ಭಗವಂತನು ಕರ್ಮಯೋಗವೂ ಕರ್ಮಸಂನ್ಯಾಸವೂ ಎರಡೂ ಶ್ರೇಯಸ್ಸಿಗೆ ಸಾಧನಗಳೇ ಆದರೂ ಅವುಗಳೊಳಗೆ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವೇ ಹೆಚ್ಚಿನದು ಎಂದು ಹೇಳಿದ್ದಾನೆ. ಜ್ಞಾನಯುಕ್ತವಾದ ಸಂನ್ಯಾಸವು **ಸಾಂಖ್ಯ**ವೆನಿಸುವದು, ಸಮಬುದ್ಧಿತ್ವಾದಿಗಳಿಂದ ಕೂಡಿದ ಕರ್ಮಾನುಷ್ಠಾನವು **ಯೋಗ**ವೆಂದು ಕರೆಯಿಸಿಕೊಳ್ಳುತ್ತದೆ. ಸರಿಯಾಗಿ ಮಾಡಿದರೆ ಯೋಗದಿಂದಲೂ ಸಾಂಖ್ಯಪ್ರಾಪ್ಯಫಲವನ್ನೇ ಪಡೆದುಕೊಳ್ಳಬಹುದು. ಕರ್ಮಯೋಗವು ಸಾಂಖ್ಯಕ್ಕೆ ಉಪಾಯವಾಗಿದೆ; ಸಾಂಖ್ಯವೇ **ಪರಮಾರ್ಥಯೋಗ**ವಾಗಿರುವದರಿಂದ ಅದಕ್ಕೆ ಉಪಾಯವಾಗಿರುವ ಕರ್ಮಯೋಗವನ್ನು ಸಂನ್ಯಾಸವೆಂದೂ ಯೋಗವೆಂದೂ ಕರೆಯುತ್ತಾರೆ. ಯೋಗವಿಲ್ಲದೆ ಆ ಪರಮಾರ್ಥಸಂನ್ಯಾಸವು ದೊರಕಲಾರದು : ಯೋಗದಿಂದೊಡಗೂಡಿದಾತನು ಅಂತಃಕರಣಶುದ್ಧಿಯನ್ನು ಪಡೆದು ಜಿತೇಂದ್ರಿಯನಾಗಿ ಎಲ್ಲಾ ಭೂತಗಳಿಗೂ ಆತ್ಮನಾಗಿರುವ ಪರಮಾತ್ಮನೇ ತನ್ನ ಆತ್ಮನೆಂದು ತಿಳಿದುಕೊಳ್ಳುವನು. ಆಗ ಅವನು ಯಾವ ಕರ್ಮವನ್ನು ಮಾಡಿದರೂ ನಿಜವಾಗಿ ಏನನ್ನೂ ಮಾಡುವದೇ ಇಲ್ಲ; ಆದ್ದರಿಂದ ಅವನಿಗೆ ಕರ್ಮಫಲದ ಲೇಪವೂ ಆಗುವದಿಲ್ಲ.

ಕರ್ಮಯೋಗಿಯಾದವನು ಈಶ್ವರಾರ್ಥವಾಗಿ ಕರ್ಮವನ್ನು ಮಾಡುತ್ತಾ ಮೋಕ್ಷದಲ್ಲಿಕೂಡ ಸಂಗವನ್ನು ಬಿಟ್ಟು ಇರುತ್ತಿರುವನು. ಆದ್ದರಿಂದ ಅವನಿಗೂ ಕರ್ಮಫಲಲೇಪವಾಗುವದಿಲ್ಲ. ತ್ರಿಕರಣದಿಂದ ಮಾಡುವ ಆತನ ಕರ್ಮವೆಲ್ಲ ಚಿತ್ತಶುದ್ಧಿಗೇ ಕಾರಣವಾಗುತ್ತದೆ. ಯೋಗಿಯಾದವನು ಕರ್ಮಫಲತ್ಯಾಗದಿಂದ ಸತ್ತ್ವಶುದ್ಧ್ಯಾದಿಕ್ರಮದಿಂದ ಮೋಕ್ಷರೂಪವಾದ ಶಾಂತಿಯನ್ನೇ ಪಡೆದುಕೊಳ್ಳುತ್ತಾನೆ.

ಇನ್ನು ಪರಮಾರ್ಥ ಸಂನ್ಯಾಸಿಯಾದ ಜ್ಞಾನಿಯಾದರೋ ನವದ್ವಾರದ ಪುರವಾದ ದೇಹದಲ್ಲಿ ತನಗಿಂತ ವ್ಯತಿರಿಕ್ತವಾದ ಶರೀರದಲ್ಲಿದ್ದುಕೊಂಡು ಮನಸ್ಸಿನಿಂದ ಸರ್ವಕರ್ಮಗಳನ್ನೂ ಸಂನ್ಯಾಸಮಾಡಿರುವದರಿಂದ ಆ ಜ್ಞಾನದ ಫಲವಾಗಿ ಏನನ್ನೂ ಮಾಡುವದೂ ಇಲ್ಲ, ಮಾಡಿಸುವದೂ ಇಲ್ಲ.

ಅವನ ಜ್ಞಾನದೃಷ್ಟಿಯಿಂದ ನೋಡಿದಾಗ ಕಾರ್ಯಕರಣಸಂಘಾತದ ಅಧ್ಯಾರೋಪದಿಂದ ಪ್ರಸಕ್ತವಾಗುವ ಕರ್ಮಗಳು ಯಾವವೂ ಆತ್ಮನಲ್ಲಿರುವದಿಲ್ಲ; ಆತ್ಮಸ್ವರೂಪದಲ್ಲಿಯಂತೂ ಯಾವ ಕರ್ಮವೂ ಇರುವದೇ ಇಲ್ಲ.

ಹೀಗೆ ಕರ್ಮಯೋಗಿ, ಪರಮಾರ್ಥಜ್ಞಾನಿ- ಇಬ್ಬರೂ ಸರ್ವಕರ್ಮಸಂನ್ಯಾಸದಿಂದ ಸಿದ್ಧಿಯನ್ನು ಪಡೆದುಕೊಳ್ಳುತ್ತಾರೆ - ಎಂಬುದು ಗ್ರಂಥಭಾಗದ ಅರ್ಥವು.

★★★★★

## ಸ್ವಪ್ನಸುಷುಪ್ತಿಯ ಅನುಭವಗಳ ವಿಚಾರ

**14-5-1959**

**ಬ್ರ॥ಶ್ರೀ॥ಎಸ್.ವಿಠಲಶಾಸ್ತ್ರಿಗಳವರು**

**ಪ್ರಶ್ನೋಪನಿಷತ್ತಿ**ನಲ್ಲಿ 4-5ರಿಂದ 11ರವರೆಗಿನ ಭಾಗದಲ್ಲಿ ಸ್ವಪ್ನ ಸುಷುಪ್ತಿಯ ಅನುಭವಗಳ ವಿಚಾರವು ಇದೆ. ಸೌರ್ಯಾಯಣಿಗಾರ್ಗ್ಯನಿಗೆ ಪಿಪ್ಪಲಾದನು ಮಾಡಿದ ಉಪದೇಶವಿದು. ಸ್ವಪ್ನದಲ್ಲಿ ಮನಸ್ಸೆಂಬ ಕರಣವು ಮಹಿಮೆಯನ್ನು ಅನುಭವಿಸುತ್ತಿರುತ್ತದೆ ಎಂದು ಶ್ರುತಿಯಲ್ಲಿದೆ. ಮನಸ್ಸು ಕರಣಮಾತ್ರವಾಗಿರುವಲ್ಲಿ ಅದೇ ಸ್ವಪ್ನವನ್ನು ಅನುಭವಿಸುತ್ತದೆ ಎಂಬುದು ಹೇಗೆ ಸರಿ?- ಎಂಬ ಆಕ್ಷೇಪವನ್ನು ತೆಗೆದು ಆಚಾರ್ಯರು ಹೀಗೆ ಸಮಾಧಾನವನ್ನು ಬರೆದಿರುತ್ತಾರೆ: ಆತ್ಮನು ಸ್ವತಃ ಎಚ್ಚರವಾಗುವದಿಲ್ಲ, ಸ್ವಪ್ನವನ್ನೂ ಸ್ವತಃ ಕಾಣುವದಿಲ್ಲ; ಮನಸ್ಸೆಂಬ ಉಪಾಧಿಯಿಂದಲೇ ಈ ಅವಸ್ಥೆಗಳು ಅವನಿಗೆ ಆಗುವಂತೆ ತೋರುತ್ತಿರುತ್ತವೆ. ಹಾಗಾದರೆ ಆತ್ಮನು ಸ್ವಪ್ನದಲ್ಲಿ ಸ್ವಯಂಜ್ಯೋತಿಯಾಗಿರುತ್ತಾನೆಂಬ ವೇದಾಂತಸಿದ್ಧಾಂತವು ಹೇಗೆ ಹೊಂದುತ್ತದೆ? ಎಂದು ಯಾರಾದರೂ ಕೇಳಬಹುದು. ತನಿನಿದ್ರೆಯಲ್ಲಿ

ಹೇಗೆ ಅದೆಲ್ಲವನ್ನೂ ಅನುಭವಿಸುವ ಆತ್ಮನು ಸ್ವಯಂಜ್ಯೋತಿಯೆಂದು ಸಿದ್ಧವಾಗುವದೋ ಹಾಗೆಯೇ, ಸ್ವಪ್ನದಲ್ಲಿಯೂ ವಾಸನಾರೂಪವಾಗಿರುವ ಮನಸ್ಸು ಬಗೆಬಗೆಯ ದೃಶ್ಯಗಳಾಗಿ ಕಾಣಿಸುತ್ತಿರುವದರಿಂದ ಆತ್ಮನು ಅದೆಲ್ಲವನ್ನೂ ನೋಡುವ ಸ್ವಯಂಜ್ಯೋತಿಯೇ ಆಗಿರುತ್ತಾನೆ. ಹೀಗೆ ಮನಸ್ಸು ಬಗೆಬಗೆಯ ಮಹಿಮೆಗಳನ್ನನುಭವಿಸುವದೇ **ಸ್ವಪ್ನವು.**

ಇನ್ನು **ಸುಷುಪ್ತಿ**ಯಲ್ಲಿಯೋ ಎಂದರೆ ಪೃಥಿವೀತನ್ಮಾತ್ರೆ- ಮುಂತಾದವುಗಳು, ಇಂದ್ರಿಯಗಳೂ ಅವುಗಳ ವಿಷಯಗಳೂ ಇದೆಲ್ಲವೂ ಪರಮಾತ್ಮನಲ್ಲಿ ಒಂದಾಗುತ್ತದೆ. ಆಗ ದ್ರಷ್ಟೃ, ಶ್ರೋತೃ, ಮಂತೃ - ಎಂದು ಮುಂತಾಗಿ ಕಾಣುತ್ತಿರುವ ಈ ವಿಜ್ಞಾನಾತ್ಮನೂ ಪರಮಾತ್ಮನಲ್ಲಿ ಸೇರಿಕೊಳ್ಳುತ್ತಾನೆ. ಹಾಗೆ ಸುಷುಪ್ತಿಯಲ್ಲಿ ವಿಜ್ಞಾನಾತ್ಮನೂ ಇಂದ್ರಿಯಗಳೂ ಅವಕ್ಕೆ ಅಧಿಷ್ಠಾತೃಗಳಾದ ದೇವತೆಗಳೂ, ಭೂತಗಳೂ- ಎಲ್ಲವೂ ಯಾವ ಅಕ್ಷರನಾದ ಪರಮಾತ್ಮನಲ್ಲಿ ಸೇರಿಕೊಳ್ಳುವವೋ ಅವನನ್ನು ಅರಿತುಕೊಂಡವನು ಸರ್ವಜ್ಞನಾಗಿ ಸರ್ವವನ್ನೂ ಆತ್ಮನಾಗಿ ಒಳಹೊಗುವನು-ಎಂಬುದು ಶ್ರುತಿಭಾಗದ ಅರ್ಥವು.

**ಶ್ರೀಗಳವರು** ಅನುವಾದದಲ್ಲಿ ಹೇಳಿದ್ದೇನೆಂದರೆ : ವೇದಾಂತವು ತರ್ಕಶಾಸ್ತ್ರದಂತೆ ಅನುಗಮ ವಾಕ್ಯಮಾತ್ರವಾಗಿರುವದಿಲ್ಲ ; ಭೌತಿಕವಿಜ್ಞಾನದಂತೆ ಪರೀಕ್ಷಣಪ್ರಯೋಗಸಂವಾದೀಕರಣಗಳಿಂದಲೂ ಕೂಡಿರುವದಿಲ್ಲ. ತರ್ಕಪ್ರಧಾನವಾದ ಶೈಲಿಯಲ್ಲಿ ವಿಷಯವನ್ನು ಬಿಡಿಸಿಬಿಡಿಸಿ ಹೇಳಿದಂತೆ ಅದು ವಿವರಣ (Explanation) ವಾಗುವ ಬದಲು ಆವರಣ (Obscuring) ಆಗಿಬಿಡುತ್ತದೆ. ಭೌತಿಕಶಾಸ್ತ್ರದಲ್ಲಿ ಕೆಲವು ಹೊಸ ಶೋಧಗಳು ಆಗುತ್ತಿರುವವಾದರೂ ಅದು ತತ್ತ್ವನಿಶ್ಚಯವನ್ನು ಮಾಡಲಾರದೆ ಇರುತ್ತದೆ. ಕೊನೆಯ ತತ್ತ್ವವೇನೆಂಬುದನ್ನು ಹೇಳಲಾಗುವಂತಿಲ್ಲ ಎಂಬುದೇ ಅದರ ನಿರ್ಧಾರವಾಗಿರುತ್ತದೆ. ವೇದಾಂತದಲ್ಲಿ ಹೀಗಿಲ್ಲ; ಇಲ್ಲಿ ಸ್ವತಃಸಿದ್ಧವಾದ ಪರಮಾರ್ಥವನ್ನು ತಿಳಿಸುವದೇ ಗುರಿ ; ಅಧ್ಯಾರೋಪಾಪವಾದ ವಿದ್ಯೆಯನ್ನು ಅನುಸರಿಸುವದೇ ಇದರ ಪ್ರಕ್ರಿಯೆ. ವಿವರಣವೇನೂ ಇಲ್ಲಿ ಬೇಕಿಲ್ಲ ಎಂಬುದೇ ಬ್ರಹ್ಮಾತ್ಮತತ್ತ್ವದ ವಿಷಯದ ವಿವರಣೆ ಎನ್ನಬಹುದು.

ಪ್ರಶ್ನೋಪನಿಷತ್ತಿನಲ್ಲಿ ಆರು ಪ್ರಶ್ನೆಗಳನ್ನು ಶಿಷ್ಯರು ಕೇಳಿರುತ್ತಾರೆ: ಗುರುಗಳಾದ ಪಿಪ್ಪಲಾದರು ಅವಕ್ಕೆ ಉತ್ತರವನ್ನು ಹೇಳಿರುತ್ತಾರೆ. ಪ್ರಜೆಗಳ ಉತ್ಪತ್ತಿ ಹೇಗಾಗುತ್ತದೆ? - ಎಂಬುದು ಮೊದಲನೆಯ ಪ್ರಶ್ನೆ; ಆ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದರಿಂದ ಕಾರ್ಯಾತ್ಮ ಪ್ರಪಂಚದ ವಿವೇಕವನ್ನು ಮಾಡಿದಂತಾಗಿದೆ. ಎರಡನೆಯ ಪ್ರಶ್ನೆಯಲ್ಲಿ ಕರಣಾತ್ಮಕ ಪ್ರಪಂಚದ ವಿವೇಕವನ್ನು ಮಾಡಿದೆ. ಪ್ರಜಾಪತಿ, ಪ್ರಾಣ-ಇವುಗಳಿಗೂ ಮೂಲವಾದದ್ದು ಯಾವದು? - ಎಂಬುದು ಮೂರನೆಯ ಪ್ರಶ್ನೆಯ ವಿಷಯ; ಪ್ರಾಣನೂ ಆತ್ಮನ ಕಾರ್ಯವು ಎಂಬುದನ್ನು ಅಲ್ಲಿ ತಿಳಿಸಿದೆ. ಕರಣಗಳಲ್ಲಿ ಯಾವವು ಸುಪ್ತವಾಗಬಹುದು, ಯಾವವು ಉಳಿದಿರುತ್ತವೆ? - ಎಂಬ ಈ ನಾಲ್ಕನೆಯ ಪ್ರಶ್ನೆಯಲ್ಲಿ ಕರಣಗಳಿಗೆಲ್ಲ ಲಯಸ್ಥಾನವಾದ ಪರಮಾತ್ಮನನ್ನು ತಿಳಿಸುವದಕ್ಕೆ ಹೊರಟಿದೆ. ಈ ಪ್ರಶ್ನದಲ್ಲಿ ಸ್ವಪ್ನಸುಷುಪ್ತಿಗಳ ತತ್ತ್ವವನ್ನು ನಿರ್ಧರಿಸಿದೆ. **ಸ್ವಪ್ನದಲ್ಲಿ ಮನಸ್ಸೇ ಆಧ್ಯಾತ್ಮಿಕ, ಬಾಹ್ಯ-ಎಂಬ ಎರಡು ವಿಭಾಗಗಳೂ ಆಗಿದ್ದು ಸುಷುಪ್ತಿಯಲ್ಲಿ ಸಕಲಕರಣಪ್ರಪಂಚವೂ ಜೀವನೂ ಎಲ್ಲವೂ ಅಕ್ಷರನೆಂಬ ಪರಮಾತ್ಮನಲ್ಲಿ ಲಯವಾಗಿಬಿಡುತ್ತದೆ. ಆ ಅಕ್ಷರಾತ್ಮನ ತತ್ತ್ವವನ್ನರಿತವನೇ ಸರ್ವಜ್ಞನು, ಸರ್ವವು** - ಎಂದು ಇಲ್ಲಿ ಸಿದ್ಧಾಂತಮಾಡಿದೆ. ಅವಸ್ಥೆಗಳು ಮೂರಕ್ಕೂ ಆತ್ಮನು ಸಮಾನವಾಗಿರುತ್ತಾನೆ; ಅವಸ್ಥೆಗಳೂ ಅವುಗಳಲ್ಲಿರುವ ದೃಶ್ಯಗಳೂ ಆತ್ಮನಲ್ಲಿಯೇ ಅಧ್ಯಾರೋಪಿತವಾಗಿ ತೋರಿಕೊಳ್ಳುತ್ತಿರುವವು-ಎಂಬ ಅನುಭವಾನುಸಾರಿಯಾದ ಸಿದ್ಧಾಂತವು ಇದರಿಂದ ಏರ್ಪಡುತ್ತದೆ.

★★★★★

# ಅದ್ವಿತೀಯಚೈತನ್ಯವೇ ಜಗತ್ಕಾರಣ

**15-5-1959**

**ಬ್ರ||ಶ್ರೀ||ಎಚ್.ಅನಂತಮೂರ್ತಿಶಾಸ್ತ್ರಿಗಳವರು**

**ಬ್ರಹ್ಮಸೂತ್ರಭಾಷ್ಯದ** 1-4-14 ಭಾಗದ ಬ್ರಹ್ಮಜಗತ್ಕಾರಣತ್ವದ ವಿಷಯದ ಆಕ್ಷೇಪಸಮಾಧಾನಗಳನ್ನು ವಿವರಿಸಿದೆ.

ಎಲ್ಲಾ ಶ್ರುತಿಗಳಲ್ಲಿಯೂ ಬ್ರಹ್ಮವೇ ಜಗತ್ಕಾರಣವೆಂದು ಹೇಳದಿರುವದರಿಂದ ಬ್ರಹ್ಮವೇ ಜಗತ್ಕಾರಣವು ಎಂಬ ಅಭಿಪ್ರಾಯವು ಸರಿಯಲ್ಲ. ಒಂದು ಶ್ರುತಿಯಲ್ಲಿ ಆಕಾಶಾದಿಸೃಷ್ಟಿ, ಮತ್ತೊಂದರಲ್ಲಿ ತೇಜಆದಿಯಾಗಿ ಸೃಷ್ಟಿ, ಮಗದೊಂದರಲ್ಲಿ ಪ್ರಾಣಾದಿಯಾಗಿ, ಬೇರೊಂದು ಕಡೆ ಕ್ರಮವಿಲ್ಲದೆಯೇ ಸೃಷ್ಟಿ-ಹೀಗೆ ಹೇಳಿದೆ. ಒಂದು ವಾಕ್ಯದಲ್ಲಿ ಅಸತ್ತಿನಿಂದ ಸೃಷ್ಟಿ, ಮತ್ತೊಂದರಲ್ಲಿ ಜಗತ್ತು ತಾನೇ ವ್ಯಾಕೃತವಾಯಿತೆನ್ನುವದು-ಹೀಗೆ ಒಂದಕ್ಕೊಂದು ಹೊಂದದಿರುವ ವಾಕ್ಯಗಳನ್ನು ಪ್ರಮಾಣವೆನ್ನುವದಕ್ಕಿಂತ ಸ್ಮೃತಿಯುಕ್ತಿಗಳಿಗೆ ಅನುಗುಣವಾಗಿ ಪ್ರಧಾನವನ್ನೋ, ಪರಮಾಣುಗಳನ್ನೋ ಜಗತ್ಕಾರಣವೆಂದು ಹಿಡಿಯುವದೇ ಯುಕ್ತ -ಎಂಬುದು **ಪೂರ್ವಪಕ್ಷ.**

ಸೃಷ್ಟಿಯಾಗುವ ಜಗತ್ತಿನ ವಿಷಯಕ್ಕೆ ಮತಭೇದವಿದ್ದರೂ ಎಲ್ಲಾ ವಾಕ್ಯಗಳಲ್ಲಿಯೂ ಸರ್ವಜ್ಞನೂ ಸರ್ವೇಶ್ವರನೂ ಏಕನೂ ಅದ್ವಿತೀಯನೂ ಆದ ಪರಮಾತ್ಮನೇ ಜಗತ್ಕಾರಣವೆಂದು ಹೇಳಿರುತ್ತದೆ. ಕಾರ್ಯದ ವಿಷಯಕ್ಕೆ ಮತಭೇದವಿದ್ದರೂ ಅದರಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲದ್ದರಿಂದ ದೋಷವಿಲ್ಲ. ಬ್ರಹ್ಮಸ್ವರೂಪವನ್ನು ತಿಳಿದುಕೊಳ್ಳುವದಕ್ಕೆ ಉಪಾಯವಾಗಿಯೇ ಸೃಷ್ಟಿಯನ್ನು ಹೇಳಿರುತ್ತದೆ; ಹಾಗೆಂದು ಶ್ರುತಿಯೂ ಹೇಳುತ್ತಿದೆ. ಸೃಷ್ಟಿವಾಕ್ಯಗಳಲ್ಲಿಯೂ ಒಂದು ಬಗೆಯ ಕ್ರಮವನ್ನು ಹೊಂದಿಸಿ ಎಲ್ಲಾ ಶ್ರುತಿಗಳಿಗೂ ಏಕವಾಕ್ಯತೆಯನ್ನು ಮಾಡಲೂಬಹುದು. ಬ್ರಹ್ಮಜ್ಞಾನಕ್ಕಾಗಿಯೇ ಶ್ರುತಿಯನ್ನು ಹೇಳಿರುವದರಿಂದಲೂ ಆ ಜ್ಞಾನದಿಂದ ಪ್ರತ್ಯಕ್ಷಫಲವೇ ಆಗುವದರಿಂದಲೂ ಇಲ್ಲಿ ಯಾವ ಆಕ್ಷೇಪಕ್ಕೂ ಅವಕಾಶವಿಲ್ಲ-ಎಂಬುದು ಸಿದ್ಧಾಂತವು.

ಅನುವಾದದಲ್ಲಿ **ಶ್ರೀಶ್ರೀಗಳವರು** ಹೇಳಿದ್ದೇನೆಂದರೆ: ಐತಿಹಾಸಿಕದೃಷ್ಟಿಯವರು ಹೆಚ್ಚುತ್ತಿರುವ ಈ ಕಾಲದಲ್ಲಿ ಶ್ರುತಿಗಳಿಗೆಲ್ಲ ಏಕವಾಕ್ಯತೆಮಾಡಬೇಕಾದ ಆವಶ್ಯಕತೆಯೇನೂ ಕಾಣಲಾರದು. ಏಕೆಂದರೆ ಆಯಾ ಕಾಲಕ್ಕೆ ಆಯಾ ಋಷಿಗೆ ತೋರಿದ್ದನ್ನು ಅವನವನು ಹೇಳಿದ್ದಾನೆ-ಎಂಬುದು ಐತಿಹಾಸಿಕರ ಮತ. ಆದರೂ ವೇದಾಂತಗಳೆಲ್ಲವೂ ಒಂದೇ ಅಭಿಪ್ರಾಯವುಳ್ಳವಾಗಿವೆ; ಅವೆಲ್ಲ ಬ್ರಹ್ಮವೇ ಜಗತ್ಕಾರಣವೆಂದು ಹೇಳುತ್ತಿವೆ. ಅವು ಬ್ರಹ್ಮಕ್ಕೆ ಜಗತ್ಕಾರಣತ್ವವನ್ನು ಹೇಳಿರುವದುಕೂಡ ಕಾರ್ಯಕಾರಣ-ಭಾವದ ಬುದ್ಧಿಯನ್ನು ಗಟ್ಟಿಗೊಳಿಸುವದಕ್ಕಲ್ಲ. ಜಗತ್ಕಾರಣವೆಂದು ಶ್ರುತಿಗಳು ಹೇಳುತ್ತಿರುವ ಬ್ರಹ್ಮವು ನಮ್ಮಗಳೆಲ್ಲರ ಆತ್ಮನೇ ಆಗಿದ್ದು ಅದಕ್ಕಿಂತ ವ್ಯತಿರಿಕ್ತವಾದ ಜಗತ್ತೇ ಇಲ್ಲ-ಎಂಬ ತತ್ತ್ವವನ್ನು ಅನುಭವಕ್ಕೆ ಹೊಂದಿಸುವವುಗಳಾಗಿವೆ - ಎಂಬ ಶಾಂಕರಸಿದ್ಧಾಂತದಲ್ಲಿ ಈ ವಿಚಾರದಿಂದ ಪರಮ ಪ್ರಯೋಜನವಿರುತ್ತದೆ. ಸಾಂಖ್ಯರಾಗಲಿ ಉಳಿದ ತಾರ್ಕಿಕರಾಗಲಿ ಈ ಕಾಲಕ್ಕೆ ಇಲ್ಲವಾದರೂ ವೇದಾಂತವು ತರ್ಕಪ್ರಧಾನವಲ್ಲ; ಶ್ರುತಿಯು ಅನುಭವಸಂಮತವಾದದ್ದನ್ನೇ ಹೇಳುತ್ತಿದೆ-ಎಂಬುದನ್ನು ಈ ಸಿದ್ಧಾಂತವು ನೆನಪಿಗೆ ತಂದುಕೊಡುತ್ತಿದೆ. ವೇದಾಂತದಲ್ಲೆಲ್ಲ ಅದ್ವಿತೀಯಚೈತನ್ಯವೇ ಜಗತ್ಕಾರಣ ಎಂದು ಹೇಳಿರುವದು ಈ ಸಿದ್ಧಾಂತಕ್ಕೆ ಅನುಗುಣವಾಗಿದೆ ಎಂಬುದು ಪ್ರಕೃತ ವಿಚಾರದ ಸಾರ.

★★★★★

# ಆನಂದಮೀಮಾಂಸೆ

**16-5-1959**

**ಬ್ರ|| ಶ್ರೀ|| ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳವರು**

**ತೈತ್ತಿರೀಯೋಪನಿಷತ್ತಿ**ನಲ್ಲಿ ಆನಂದವಲ್ಲಿ 8ನೆಯ ಅನುವಾಕದ ಭಾಷ್ಯದ ಅಭಿಪ್ರಾಯವೇನೆಂದರೆ - ಈ ಉಪನಿಷದ್ಭಾಗದಲ್ಲಿ ಆನಂದಮೀಮಾಂಸೆಯಿದೆ- ಈ ಆನಂದವು ವಿಷಯವಿಷಯಿಗಳ ಸಂಬಂಧದಿಂದ ಉಂಟಾಗತಕ್ಕದ್ದೋ ಅಥವಾ ಸ್ವಾಭಾವಿಕವೋ?- ಎಂಬುದನ್ನು ಇಲ್ಲಿ ವಿಚಾರಮಾಡಬೇಕು. ಲೌಕಿಕವಾದ ಆನಂದವು ಹೊರಗಿನ ಮತ್ತು ಒಳಗಿನ ಸಾಧನಸಂಪತ್ತು ಉತ್ತಮವಾದಂತೆ ತಾನೂ ಉತ್ಕೃಷ್ಟವಾಗುತ್ತಾಹೋಗುತ್ತದೆ. ಬ್ರಹ್ಮಾದಿಸ್ತಂಬಪರ್ಯಂತವಾದ ಪ್ರಾಣಿಗಳು ಅನುಭವಿಸುವ ಆನಂದವು ಬ್ರಹ್ಮಾನಂದದ ಅಂಶವೇ ಆಗಿದೆ. ಆದರೆ ವಿಷಯಾದಿಗಳ ಸಂಬಂಧದಿಂದ ಹೊರತೋರಿಕೊಳ್ಳುತ್ತಿರುವದರಿಂದ ಲೌಕಿಕಾನಂದವೆನಿಸಿಕೊಳ್ಳುತ್ತದೆ. ಜ್ಞಾನದಿಂದ ಅವಿದ್ಯಾಕೃತವಾದ ವಿಷಯವಿಷಯಿವಿಭಾಗವು ತೊಲಗಲಾಗಿ ಅದೇ ಅದ್ವೈತಾನಂದವಾಗುತ್ತದೆ. ಭೂಮಿಯ ಮೇಲೆ ಯೌವನವಂತನೂ ಸಾಧುವೂ ಆಗಿ ಅಧ್ಯಯನಶೀಲನಾಗಿ ತೀರ ಹೆಚ್ಚಾದ ಆಶ್ರೋತ್ತರಗಳುಳ್ಳವನೂ ಎಲ್ಲರಿಗಿಂತ ಹೆಚ್ಚು ದೃಢನಾಗಿ ಬಲಿಷ್ಠನಾಗಿ ಪೃಥಿವಿಗೆಲ್ಲ ಒಡೆಯನಾಗಿದ್ದರೆ ಅವನ ಆನಂದವು ಒಂದು ಎಂದಿಟ್ಟುಕೊಳ್ಳಬಹುದು. ಅಲ್ಲಿಂದ ಮುಂದಕ್ಕೆ ಆ ಆನಂದವು ನೂರುನೂರರಷ್ಟು ಹೆಚ್ಚುತ್ತಾ ಮನುಷ್ಯಗಂಧರ್ವರು, ದೇವಗಂಧರ್ವರು, ಪಿತೃಗಳು, ಆಜಾನದೇವತೆಗಳು, ಕರ್ಮದೇವತೆಗಳು, ದೇವತೆಗಳು, ಇಂದ್ರ, ಬೃಹಸ್ಪತಿ, ಪ್ರಜಾಪತಿ, ಹಿರಣ್ಯಗರ್ಭಬ್ರಹ್ಮ-ಹೀಗೆ ಹೆಚ್ಚುತ್ತಾ ಹೋಗುತ್ತದೆ. ಕೆಳಕೆಳಗಿನ ಆನಂದದಲ್ಲಿ ವಿರಕ್ತನಾದ ಶ್ರೋತ್ರಿಯನಾದವನಿಗೆ ಮೇಲುಮೇಲಿನ ಆನಂದವು ಅನುಭವದಲ್ಲಿರುತ್ತದೆ. ಹಿರಣ್ಯಗರ್ಭನ ಆನಂದವು ಎಲ್ಲರಿಗಿಂತಲೂ ಉತ್ಕೃಷ್ಟತಮವಾಗಿರುತ್ತದೆ. ಈ ಬಿಡಿಬಿಡಿ ಆನಂದಗಳಲ್ಲೆಲ್ಲ ಹೊಂದಿಕೊಂಡುಬಂದಿರುವ ಆನಂದವೇ ಬ್ರಹ್ಮಾನಂದ. ಯಾವನು

ಇದನ್ನು ಅನುಭವಕ್ಕೆ ತಂದುಕೊಳ್ಳುತ್ತಾನೋ ಅವನು ಪಂಚಕೋಶಗಳನ್ನು ಮೀರಿ ಬ್ರಹ್ಮಾನಂದಸ್ವರೂಪದಲ್ಲಿಯೇ ನೆಲೆನಿಲ್ಲುತ್ತಾನೆ-ಎಂಬುದು ಅನುವಾಕಭಾಷ್ಯದ ಸಾರ.

**ಶ್ರೀಶ್ರೀಗಳು** ತಮ್ಮ ಅನುವಾದದಲ್ಲಿ ಹೀಗೆಂದರು: ತೈತ್ತಿರೀಯದಲ್ಲಿ 'ಬ್ರಹ್ಮವು ಸತ್ಯಜ್ಞಾನಾನಂತವಾಗಿದೆ, ಅದೇ ನಮ್ಮೆಲ್ಲರ ಆತ್ಮ' ಎಂಬುದನ್ನು ತಿಳಿಸಿಕೊಡುವದಕ್ಕೆ ಹೊರಟು ಆನಂದಮಯನನ್ನು ವರ್ಣಿಸಿದ ಬಳಿಕ ಪ್ರಿಯಮೋದಪ್ರಮೋದಗಳುಕೂಡ ಅದರ ಅವಯವಗಳು; ಬಾಹ್ಯವಾದ ಆನಂದಗಳಿಗೆಲ್ಲ ಆಧಾರವಾದ ಆನಂದವೊಂದಿದೆ; ಆ ಆನಂದರೂಪಬ್ರಹ್ಮವೇ ಆನಂದಮಯಾತ್ಮನ ಪುಚ್ಛವು-ಎಂದು ಹೇಳಿದೆ. ನಮಗೆ ಗೊತ್ತಿರುವ ಆನಂದಗಳೆಲ್ಲಕ್ಕೂ ವಿಲಕ್ಷಣವಾಗಿರುವ ಆ ಬ್ರಹ್ಮಾನಂದದ ಸ್ವರೂಪವನ್ನು ಅರಿತುಕೊಳ್ಳುವದು ಹೇಗೆ?-ಎಂಬ ಶಂಕೆ ಬರಬಹುದೆಂದು ಆನಂದರೂಪವಾದ ಬ್ರಹ್ಮವು ಇದೆ ಎಂದು ತಿಳಿಸುವದಕ್ಕೆ ಅನೇಕ ಉಪಪತ್ತಿಗಳನ್ನು ಹೇಳಿರುತ್ತದೆ. ಮನುಷ್ಯರೆಲ್ಲರೂ ಹಗಲೂ ಇರುಳೂ ದುಡಿದು, ಯಾವದೊಂದು ಸಿಕ್ಕಬಹುದೆಂದು ಶ್ರಮಪಡುತ್ತಾ ಬದುಕಿರುವರೋ ಅದೇ ಬ್ರಹ್ಮಾನಂದವು. ಮನುಷ್ಯರೇ ಅಲ್ಲದೆ ಮಹಾತ್ಮರಾದ ದೇವತೆಗಳು ಕೂಡ ಯಾವದರ ನಿಜವನ್ನರಿಯದೆ ಎಂಥವರಾದರೂ ಅಂಜಿಕೆಪಡುತ್ತಿರುವರೋ, ಅದೇ ಬ್ರಹ್ಮಾನಂದ. ಎಂಥ ಚಕ್ರವರ್ತಿಗಳಿಗಿರುವ ಸುಖವೂ ಈ ಆನಂದವಲ್ಲ ; ಅದು ವಿಷಯ ಭೋಗದ ಸುಖ. ಆಯಾಸವಿಲ್ಲದ ಆನಂದವನ್ನು ಯಾರೂ ಕಾಣರು ; ಸಾತ್ತ್ವಿಕರಾದ ದೊಡ್ಡವರು ಯಾವ ಭೋಗವೂ ಇಲ್ಲದಿದ್ದರೂ ನಿರ್ಭಯರಾಗಿ ಪ್ರಫುಲ್ಲ ಪ್ರಸನ್ನವದನರಾಗಿರುತ್ತಾರಲ್ಲವೆ ? ಅದೇ ಬ್ರಹ್ಮಾನಂದದ ಬುಗ್ಗೆಯ ಮಹಿಮೆ. ಆ ಆನಂದದ ಸ್ವರೂಪವನ್ನು ಅರಿತವನು ಅಭಯದಲ್ಲಿ ಪ್ರತಿಷ್ಠೆಯನ್ನು ಹೊಂದುತ್ತಾನೆ-ಎಂಬುದು ಉಪನಿಷತ್ತಿನ ಉಪದೇಶ.

★★★★★

# ಬ್ರಹ್ಮಧರ್ಮಗಳ ಉಪಸಂಹಾರ

**17-5-1959**

**ಬ್ರ॥ಶ್ರೀ॥ ಪರಕ್ಕಜೆ ಸುಬ್ರಹ್ಮಣ್ಯಭಟ್ಟರು**

**ಬ್ರಹ್ಮಧರ್ಮಗಳ ಉಪಸಂಹಾರವನ್ನು** ಕುರಿತು ಬ್ರಹ್ಮಸೂತ್ರದ 3-3-11 ರಿಂದ 13 ಮತ್ತು 3-3-33 ಇವುಗಳ ಭಾಷ್ಯದ ಅಭಿಪ್ರಾಯವೇನೆಂದರೆ - ಬ್ರಹ್ಮಸ್ವರೂಪವನ್ನು ತಿಳಿಸುವ ಶ್ರುತಿಗಳಲ್ಲಿ ಆತ್ಮನು ಆನಂದರೂಪನು, ವಿಜ್ಞಾನಘನನು, ಸರ್ವಗತನು, ಸರ್ವಾತ್ಮನು-ಎಂದು ಮುಂತಾಗಿ ಕೆಲಕೆಲವು ಧರ್ಮಗಳು ಕೆಲಕೆಲಪ್ರದೇಶಗಳಲ್ಲಿ ಕಾಣಬರುತ್ತವೆ. ಯಾವಯಾವ ಶ್ರುತಿಯಲ್ಲಿ ಎಷ್ಟೆಷ್ಟನ್ನು ಹೇಳಿದೆಯೋ ಅಷ್ಟಷ್ಟನ್ನೇ ಗ್ರಹಿಸಬೇಕೊ, ಅಥವಾ ಎಲ್ಲವನ್ನೂ ಎಲ್ಲಾ ಕಡೆಗೂ ಹೊಂದಿಸಿಕೊಳ್ಳಬೇಕೊ?-ಎಂಬ ಸಂಶಯಕ್ಕೆ ಸಿದ್ಧಾಂತವೇನೆಂದರೆ : ಎಲ್ಲವನ್ನೂ ಸೇರಿಸಿಕೊಂಡೇ ಆತ್ಮಸ್ವರೂಪವನ್ನು ತಿಳಿಯಬೇಕು ; ಏಕೆಂದರೆ ಅದೇ ಬ್ರಹ್ಮವನ್ನೇ ಎಲ್ಲಾ ಕಡೆಯಲ್ಲಿಯೂ ಹೇಳಿರುತ್ತದೆ. ಆದರೆ ಉಪಾಧಿಗಳಿಂದ ಹೇಳಿರುವ ಸಂಯದ್ವಾಮತ್ವ, ಸತ್ಯಕಾಮತ್ವ-ಮುಂತಾಗಿ ಉಪಾಸನೆಗೆಂದು ವಿಧಿಸಿರುವ ಧರ್ಮಗಳನ್ನು ಅಲ್ಲಲ್ಲಿಗೇ ಇಟ್ಟುಕೊಳ್ಳಬೇಕು. ಏಕೆಂದರೆ ಆ ಉಪಾಸನೆಗಳು ಬೇರೆಬೇರೆಯಾಗಿರುತ್ತವೆ. ಇದರಂತೆ ಅಕ್ಷರವೆಂಬ ಹೆಸರಿನಿಂದ ಬ್ರಹ್ಮಕ್ಕೆ ವಿಶೇಷನಿರಾಕರಣವನ್ನು ಮಾಡಿರುವ ಪ್ರಕಾರಗಳನ್ನೆಲ್ಲ ಒಟ್ಟಿಗೆ ಉಪಸಂಹಾರ ಮಾಡಿಕೊಳ್ಳಬೇಕು. ಏಕೆಂದರೆ ಅದೇ ಬ್ರಹ್ಮವೇ ಎಲ್ಲಾ ಕಡೆಯಲ್ಲಿಯೂ ಪ್ರತಿಪಾದ್ಯವಾಗಿರುತ್ತದೆ. ಇದು ಭಾಷ್ಯದ ಸಾರವು.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೀಗೆಂದರು: ಉಪಾಸನೆಗಾಗಿ ಬ್ರಹ್ಮವಿಚಾರವು ಬಂದಿರುವ ಕಡೆಗಳಲ್ಲಿ ಗುಣಗಳನ್ನೆಲ್ಲ ಉಪಸಂಹಾರ ಮಾಡಿಕೊಂಡೇ ಆಯಾ ಉಪಾಸನೆಯನ್ನು ಸಾಕ್ಷಾತ್ಕಾರವಾಗುವವರೆಗೂ ಭಾವನೆಯನ್ನು ನಡೆಯಿಸಬೇಕಾದದ್ದು ಯುಕ್ತ. ಏಕೆಂದರೆ ಅಲ್ಲಿ ಭಾವನಾತಿಶಯವು ತೀರ ಹೆಚ್ಚಿನ ಮಟ್ಟಕ್ಕೆ ಏರಿದಾಗಲೇ ಸಾಕ್ಷಾತ್ಕಾರವಾಗುತ್ತದೆ. ಆದರೆ ಬ್ರಹ್ಮವಾಕ್ಯಗಳಲ್ಲಿ ಭಾವನೆಗಾಗಿ ಬ್ರಹ್ಮಧರ್ಮಗಳನ್ನು ಹೇಳುವದಿಲ್ಲ;

ಏಕೆಂದರೆ ಆ ಧರ್ಮಗಳು ಬ್ರಹ್ಮದ ಸ್ವರೂಪಕ್ಕೇ ಸೇರಿದವುಗಳಾಗಿರುವವೇ ಹೊರತು ಅವು ಗುಣಿಗಳಾದ ದ್ರವ್ಯಕ್ಕೆ ಸೇರಿರುವ ಗುಣಗಳಂತೆ ಅಲ್ಲ. ಆದ್ದರಿಂದ ಬ್ರಹ್ಮವನ್ನು ಅರಿತುಕೊಳ್ಳುವಾಗ ಆನಂದಾದಿಗಳು ಜೊತೆಯಲ್ಲಿಯೇ ಅದರ ಸ್ವರೂಪದಲ್ಲಿ ಸೇರಿರುವವೆಂತ ಅರಿತುಕೊಳ್ಳತಕ್ಕದ್ದು ಅವಶ್ಯ. ಇಲ್ಲದಿದ್ದರೆ ಬ್ರಹ್ಮವನ್ನು ಇದ್ದದ್ದು ಇದ್ದಂತೆ ಅರಿತದ್ದೇ ಆಗುವದಿಲ್ಲ. ಅದರೂ ಕೆಲವರು ಇದನ್ನು ಗುಣೋಪಸಂಹಾರವನ್ನು ಮಾಡಿ ಮಾಡತಕ್ಕ ನಿರ್ಗುಣೋಪಾಸನೆ ಎಂದು ತಪ್ಪಾಗಿ ಭಾವಿಸಿಕೊಂಡಿರುತ್ತಾರೆ. ಅದು ವ್ಯಾಹತೋಕ್ತಿ, ಎಂದರೆ ತನಗೆತಾನೇ ವಿರುದ್ಧವಾದ ಮಾತು ಎಂಬುದು ಸ್ಪಷ್ಟವಾಗಿರುತ್ತದೆ. ನಿರ್ಗುಣವಾದ ವಸ್ತುವನ್ನು ಗುಣೋಪಸಂಹಾರ ಪೂರ್ವಕವಾಗಿ ಉಪಾಸನೆಮಾಡಬೇಕೆಂಬ ಮಾತಿಗೆ ಯಾವ ನಿಜವಾದ ಅರ್ಥವೂ ಇರುವಂತಿಲ್ಲ. ಇನ್ನು ನಿಷೇಧರೂಪವಾದ ಧರ್ಮಗಳ ವಿಷಯದಲ್ಲಿ ಹೇಳತಕ್ಕದ್ದೇನಿದೆ? ಅಕ್ಷರವೆಂದು ಶ್ರುತಿಯಲ್ಲಿ ಕರೆದಿರುವ ಪರಬ್ರಹ್ಮವು ನಿರ್ವಿಶೇಷವೆಂದು ತೋರಿಸಿಕೊಡುವದೇ ಅವುಗಳ ಗುರಿ. ನಿರ್ವಿಶೇಷವಾದ ತತ್ತ್ವದಲ್ಲಿ ವಿಶೇಷಣ ರೂಪವಾದ ಧರ್ಮಗಳಿವೆಯೆಂಬುದು ತನಗೆತಾನೇ ವಿರುದ್ಧವಾದ ಮಾತಷ್ಟೆ? ಈ ದಿವಸ ಪ್ರವಚನಕ್ಕೆ ಇಟ್ಟಿರುವ ಅಧಿಕರಣಗಳೆರಡೂ ಗುಣೋಪಸಂಹಾರಪಾದದಲ್ಲಿ ಬಂದಿದ್ದರೂ ಇಲ್ಲಿ ಯಾವ ಗುಣಗಳ ಉಪಸಂಹಾರವೂ ಇರುವದಿಲ್ಲ. ಬ್ರಹ್ಮವಾಕ್ಯಗಳಲ್ಲಿ ಬ್ರಹ್ಮವನ್ನು ವರ್ಣಿಸುವ ಪದಗಳಿವು; ಆದ್ದರಿಂದ ಇವನ್ನು ವಿಶೇಷಣಗಳೆಂತ ಕರೆದಿದೆ. ವೇದಾಂತಸೂತ್ರವೆಲ್ಲ ಸಗುಣಬ್ರಹ್ಮಪರವೇ ಎನ್ನುವವರು ಸಾವಧಾನವಾಗಿ ಆಲೋಚನೆಮಾಡತಕ್ಕ ಅಧಿಕರಣಗಳಿವು. ಏಕೆಂದರೆ ಇಲ್ಲಿ ಅನಾತ್ಮವಾದದ್ದೆಲ್ಲವನ್ನೂ ನಿರಾಕರಿಸಿ ಉಳಿಯುವದೇ ನಮ್ಮ ಆತ್ಮನಾದ ಬ್ರಹ್ಮಸ್ವರೂಪ ಎಂಬುದನ್ನು ಪ್ರತಿಪಾದಿಸಿರುತ್ತದೆ.

★★★★★

# ಆತ್ಮನ ಕರ್ತೃತ್ವವು ಸ್ವಾಭಾವಿಕವೆ?

**18-5-1959**

**ಬ್ರ|| ಶ್ರೀ|| ಎಸ್.ವಿಠಲಶಾಸ್ತ್ರಿಗಳವರು**

ಗೀತೆಯ 18-16,17 ರ ಭಾಷ್ಯದಲ್ಲಿ ಆತ್ಮನ ಕರ್ತೃತ್ವವು ಸ್ವಾಭಾವಿಕವೆ? ಎಂಬ ವಿಷಯವನ್ನು ಚರ್ಚಿಸಿದೆ. ಶರೀರ, ಕರ್ತೃವಾದ ಜೀವ, ಕರಣಗಳು, ಪ್ರಾಣಾಪಾನಾದಿವ್ಯಾಪಾರಗಳು ಅಧಿಷ್ಠಾತೃ, ದೈವತ-ಈ ಐದು ಹೇತುಗಳಿಂದ ಕರ್ಮಗಳು ಆಗುತ್ತಿರುವವು. ಹೀಗಿರುವಲ್ಲಿ ಯಾವ ಉಪಾಧಿಯೂ ಇಲ್ಲದ ಶುದ್ಧಾತ್ಮನನ್ನು ಯಾವನು ಕರ್ತೃವೆಂದು ಭಾವಿಸುತ್ತಾನೋ ಅವನದು ತಪ್ಪುತಿಳಿವಳಿಕೆ, ಅವನು ನಿಜವನ್ನು ಅರಿಯನು. ಈ ಅವಿದ್ಯಾಕಲ್ಪಿತವಾದ ದೇಹಾದಿಗಳ ಕ್ರಿಯೆಯನ್ನು ನನ್ನದೆಂದು ತಿಳಿಯುವವನೂ, ದೇಹಾದಿವ್ಯತಿರಿಕ್ತನಾದ ಕೇವಲಾತ್ಮನೇ ಕರ್ತೃವೆಂದು ತಿಳಿಯುವವನೂ ಅವಿವೇಕಿಯು. ಯಾವನಿಗೆ ನಾನು ಎಂಬ ಅಭಿಮಾನವಿರುವದಿಲ್ಲವೋ, ಯಾವನು ಇಂಥ ಕರ್ಮವನ್ನು ಮಾಡುವದರಿಂದ ಇಂಥ ಫಲವನ್ನನುಭವಿಸುವೆನು-ಎಂದು ಕರ್ಮಫಲಲೇಪವಿಲ್ಲದವನಾಗಿರುತ್ತಾನೋ, ಅಂಥವನು ವ್ಯವಹಾರದೃಷ್ಟಿಯಿಂದ ಮಾಡುತ್ತಿರುವ ಯಾವ ಕರ್ಮದಿಂದಲೂ ಬದ್ಧನಾಗುವದಿಲ್ಲ; ಏಕೆಂದರೆ ಪರಮಾರ್ಥವಾಗಿ ಅವನು ಯಾವ ಕರ್ಮವನ್ನೂ ಮಾಡುವದಿಲ್ಲ-ಎಂಬುದು ಶ್ಲೋಕಗಳ ತಾತ್ಪರ್ಯವು. ಜ್ಞಾನಿಗಳು ಇಂಥ ಬುದ್ಧಿಗಳುಳ್ಳವರಾಗಿರುವದರಿಂದ ಅವರಿಗೆ ಸರ್ವಕರ್ಮಸಂನ್ಯಾಸವು ಶಕ್ಯವಾಗಿರುತ್ತದೆಯಾಗಿ ಅವರಿಗೆ ಕರ್ಮದ ಇಷ್ಟಾನಿಷ್ಟಮಿಶ್ರಫಲಗಳು ಉಂಟಾಗುವದಿಲ್ಲ; ಮಿಕ್ಕವರಿಗೆ ತಪ್ಪುವದಿಲ್ಲ - ಎಂದು ಭಾಷ್ಯದಲ್ಲಿ ವಿವರಿಸಿರುತ್ತದೆ. ಆತ್ಮನು ನಿಜವಾಗಿ ಯಾವ ಕ್ರಿಯೆಗೂ ಕರ್ತೃವಲ್ಲ, ಹೇತುಕರ್ತೃವೂ ಅಲ್ಲ; ಯಾವ ಕ್ರಿಯೆಗೂ ಕರ್ಮವಲ್ಲ-ನಾಯಂ ಹನ್ತಿ ನ ಹನ್ಯತೇ', ಕಂ ಘಾತಯತಿ ಹನ್ತಿ ಕಮ್' ಎಂದು ಉಪಕ್ರಮದಲ್ಲಿ ಹೇಳಿದ ಅರ್ಥವನ್ನೇ ಇಲ್ಲಿ ಉಪಸಂಹಾರಮಾಡಿದೆ-ಎಂಬುದು ಭಾಷ್ಯದ ಸಾರವು.

**ಶ್ರೀಗಳು** ಅನುವಾದದಲ್ಲಿ ಇಂತೆಂದರು : ಆತ್ಮನು ನಿಜವಾಗಿ ಕರ್ತೃವೆ? ಎಂಬುದನ್ನು ಇಲ್ಲಿ ವಿಚಾರಕ್ಕೆ ತೆಗೆದುಕೊಂಡಿದೆ. ಅಧಿಷ್ಠಾನಾದಿಗಳೈದೂ ಸೇರಿದರೆ ಕರ್ಮವಾಗುತ್ತದೆ. ಆತ್ಮನೊಬ್ಬನೇ ಕರ್ತೃವಲ್ಲ-ಎಂದು ಶ್ಲೋಕಕ್ಕೆ ಅಕ್ಷರಾರ್ಥವೆಂದು ತಟ್ಟನೆ ಕಾಣುತ್ತದೆ. ಆದರೆ ಗೀತಾಶಾಸ್ತ್ರದ ಒಟ್ಟುತಾತ್ಪರ್ಯವನ್ನು ಮನದಂದರೆ ಭಾಷ್ಯಕಾರರು ತಗೆದಿರುವ ಅರ್ಥವೇ ಸರಿ ಎಂತ ನಿರ್ಧಾರವಾಗುತ್ತದೆ. ಆತ್ಮನು ಕೇವಲನು, ಶುದ್ಧನು, ಅಸಂಗನು; ಅವನು ಕರ್ತೃಎಂದು ತಿಳಿದವನು ದುರ್ಮತಿಯು, ಈ ಎರಡು ಶ್ಲೋಕಗಳನ್ನೂ ಮುಂದಿನ ಶ್ಲೋಕದ ಅಭಿಪ್ರಾಯವನ್ನೂ ಮನದಂದರೆ, ಆಚಾರ್ಯರ ಅಧ್ಯಾಸಭಾಷ್ಯಕ್ಕೆ ಇದೇ ಮೂಲವಾಗಿರಬಹುದು-ಎಂಬ ಕಲ್ಪನೆ ಮನಸ್ಸಿಗೆ ಬರುತ್ತದೆ. ಏಕೆಂದರೆ ಜ್ಞಾತೃಜ್ಞಾನಜ್ಞೇಯವಿಭಾಗದ ಅರಿವೇ ಕರ್ಮಾರಂಭಕ್ಕೆ ಕಾರಣವು. ಜ್ಞಾತೃತ್ವಕ್ಕೆ ಹೇತುವೇ ಅವಿದ್ಯೆ ; ಅದರಿಂದಲೇ ಕರ್ತೃತ್ವಭೋಕ್ತೃತ್ವಗಳು ಉಂಟಾಗುತ್ತವೆ. **ತಕ್ಷಾಧಿಕರಣದ ಸೂತ್ರ**ದಲ್ಲಿಯೂ ಭಾಷ್ಯಕಾರರು ಇದೇ ಅರ್ಥವನ್ನು ತೆಗೆದಿರುತ್ತಾರೆ. ಬಡಗಿಯು ಬಾಚಿ, ಉಳಿ-ಮುಂತಾದ ಉಪಕರಣಗಳನ್ನು ಉಪಯೋಗಿಸುವಾಗ ದುಃಖಪಡುತ್ತಿರುತ್ತಾನೆ ; ಅವನು ಕರಣಗಳನ್ನುಪಯೋಗಿಸದೆ ಯಾವ ಕೆಲಸವನ್ನೂ ಮಾಡದಿರುವಾಗ ಸುಖಿಯಾಗಿರುತ್ತಾನೆ. ಇದರಂತೆ ಆತ್ಮನು ಶರೀರೇಂದ್ರಿಯಾದಿಗಳನ್ನುಪಯೋಗಿಸಿ ಕರ್ತೃವಾಗಿರುವಾಗಲೇ ಅವನಿಗೆ ಸಂಸಾರದುಃಖ. ಆತ್ಮನು ಕರ್ತೃವಾದರೆ ಕೇವಲ ಅವನೊಬ್ಬನೇ, ಕರ್ತೃವಲ್ಲ-ಎಂದು ಶ್ಲೋಕಕ್ಕೆ ಅರ್ಥವನ್ನು ಮಾಡುವದು ಸರಿಯಲ್ಲ. ದೃಷ್ಟಾಂತದಲ್ಲಿ ಬಡಗಿಯು ಬಾಚಿ ಮುಂತಾದವುಗಳನ್ನು ತೆಗೆದುಕೊಳ್ಳುವದು ಅಥವಾ ಅತ್ತಸರಿಯಿಸಿಡುವದು- ಹೀಗೆ ಮಾಡುವ ಕರ್ತೃತ್ವವುಳ್ಳವನಾಗಿರುತ್ತಾನಷ್ಟೆ? ಅದಕ್ಕೆ ಅವನಿಗೆ ಬಾಚಿ-ಮುಂತಾದ ಉಪಕರಣಗಳಲ್ಲದೆ ಕಣ್ಣು, ಕೈ-ಮುಂತಾದ ಕರಣಗಳು ಬೇರೆ ಇರುತ್ತವೆ ; ಆದರೆ ಆತ್ಮನಿಗೆ ಶರೀರ, ಇಂದ್ರಿಯ-ಮುಂತಾದವುಗಳನ್ನು ತೆಗೆದುಕೊಂಡು ಉಪಯೋಗಿಸುವದಕ್ಕಾಗಲಿ ಅಥವಾ ಅವನ್ನು ಬಿಟ್ಟುಬಿಡುವದಕ್ಕಾಗಲಿ ಯಾವ ಕರಣಗಳೂ ಸ್ವಂತವಾಗಿರುವದಿಲ್ಲ. ಆದ್ದರಿಂದ ಸರಿಯಾದ ತಿಳಿವಳಿಕೆಯನ್ನು ಸಂಪಾದಿಸಿಕೊಂಡು

ನೋಡುವವರಿಗೆ ತಾವು ಎಂದೆಂದಿಗೂ ಅಕರ್ತೃ ಸ್ವರೂಪರೇ, ಕ್ರಿಯಾಕಾರಕಫಲಗಳ ಸಂಬಂಧವು ತಮಗೆ ಎಳ್ಳಷ್ಟೂ ಇರುವದಿಲ್ಲ ಎಂಬುದು ಸ್ಫುಟವಾಗುತ್ತದೆ. ಹೀಗೆ ಅರಿತುಕೊಂಡವರೇ ಪರಮಾರ್ಥಸಂನ್ಯಾಸಿಗಳು. ವ್ಯವಹಾರದೃಷ್ಟಿಯಿಂದ ಅವರು ಮಾಡುತ್ತಿರುವ ಯಾವ ಕ್ರಿಯೆಗಳೂ ಅವರಿಗೆ ಸಂಬಂಧಿಸಿರುವದಿಲ್ಲ.

★★★★★

## ಆಚಾರ್ಯರ ಗುಣಕಥನ

**19-5-1959**

**ಶ್ರೀಶ್ರೀಗಳವರು**

ನಿರ್ಗುಣನಾದ ಪರಮಾತ್ಮನೇ ಸಾಧಕರಿಗಾಗಿ ಸ್ವೇಚ್ಛೆಯಿಂದ ಮಾಯಾಮಯವಾದ ರೂಪವನ್ನು ಧರಿಸುತ್ತಾನೆ ಎಂದು ಆಚಾರ್ಯರು ಹೇಳಿರುತ್ತಾರೆ. ಸ್ವರೂಪದಿಂದ ಪರಮಾತ್ಮನು ನಿರ್ಗುಣನಾಗಿದ್ದರೂ ನಾಮರೂಪಗತಗುಣಗಳಿಂದ ಸಗುಣನಾಗಿಯೂ ಇರುತ್ತಾನಾದ್ದರಿಂದ ಆ ಗುಣವಿಶಿಷ್ಟನಾದ ಪರಮಾತ್ಮನನ್ನು ಉಪಾಸನೆಮಾಡುವವರಿಗೆ ಅವರವರ ಭಾವನೆಗೆ ತಕ್ಕಂತೆ ಫಲವಾಗುವದು ಎಂದೂ ಅವರು ಉಪದೇಶಿಸಿರುತ್ತಾರೆ. 'ಅಹಂ ಬ್ರಹ್ಮಾಸ್ಮಿ' ನಾನು ಬ್ರಹ್ಮವಾಗಿರುವೆನು, 'ತತ್ತ್ವಮಸಿ'- 'ನೀನು ಆ ಬ್ರಹ್ಮವೇ' 'ಬ್ರಹ್ಮೈವೇದಂ ವಿಶ್ವಮ್'-ಈ ವಿಶ್ವವು ಬ್ರಹ್ಮವೇ-ಎಂಬ ವೇದಾಂತವಾಕ್ಯಗಳ ಆಳವನ್ನು ಅನುಭವದಲ್ಲಿಟ್ಟುಕೊಂಡು ಕಲಿಯುಗದ ಜನರಮೇಲೂ ಪರಿಣಾಮವಾಗುವಂತೆ ಉಪದೇಶಿಸಿದ ಆ ಮಹಾನುಭಾವರು ನಿರ್ಗುಣಸಗುಣಬ್ರಹ್ಮಕ್ಕೆ ಅಭಿನ್ನರೇ ಎಂದು ಹೇಳಲು ಯಾವ ಅಡ್ಡಿಯೂ ಇರುವದಿಲ್ಲ. ಪರಮಾರ್ಥತತ್ತ್ವವು ಹೀಗಿದ್ದರೂ ವ್ಯವಹಾರದೃಷ್ಟಿಯನ್ನವಲಂಬಿಸಿ ಜಗದ್ಗುರುಗಳೆಂಬ ಅನ್ವರ್ಥನಾಮಕ್ಕೆ ತಕ್ಕವರಾಗಿದ್ದ ಆಚಾರ್ಯರ ಯಾವದಾದರೊಂದು ಗುಣವನ್ನು ಪ್ರಶಂಸಿಸಿ ಕೃತಾರ್ಥರಾಗುವ ಪದ್ಧತಿಯನ್ನು ಈ ಮಂಗಲದ ದಿನಕ್ಕೆ ಇಟ್ಟುಕೊಂಡಿರುತ್ತೇವೆ.

ಆಚಾರ್ಯರು ಗೇಣುಗೇಣಿಗೂ ಸಿಹಿಯೇ ಆಗಿರುವ ಕಬ್ಬಿನಂತೆ ಒಂದೊಂದು ಗುಣದಲ್ಲಿಯೂ ಮಾಧುರ್ಯವನ್ನು ಪ್ರದರ್ಶಿಸಿರುತ್ತಾರೆ. ಪರಮೇಶ್ವರನಂತೆಯೇ ಅವರು ತಮ್ಮ ಗುಣಕಥನವನ್ನೇನೂ ಬಯಸುವದಿಲ್ಲ; ಆದರೂ ಶಿಷ್ಯರೂ ಸಾಧಕರೂ ಮುಮುಕ್ಷುಗಳೂ ಆದ ನಮಗೆ ಅವರ ಯಾವದಾದರೊಂದು ಗುಣದ ಸ್ಮರಣವು ಮಂಗಲದಾಯಕವಾಗಿರುತ್ತದೆ.

ಈ ಲೋಕದಲ್ಲಿ ಉಪದೇಶಕರ ಸಂಖ್ಯೆಗೇನೂ ಕಡಿಮೆಯಿಲ್ಲ. ಒಂದು ದೃಷ್ಟಿಯಿಂದ ಉಪದೇಶಕರಾಗುವದಕ್ಕೆ ಹವಣಿಸುವವರ ಸಂಖ್ಯೆಯೇ ಹೆಚ್ಚಾಗಿರುವದೆಂದರೂ ಸಲ್ಲುವಂತೆ ಇದೆ. ಸದ್ಯಃಸ್ಥಿತಿಯಲ್ಲಿ ಜನಗಳಲ್ಲಿ ಸುಪ್ತವಾಗಿರುವ ರಾಗ ದ್ವೇಷಗಳನ್ನು ಎಚ್ಚರಿಸಿ ಅವರನ್ನು ಒಬ್ಬರಮೇಲೊಬ್ಬರನ್ನು ತಿರುಗಿಸುವ ಉಪದೇಶಕರು ಹಲವರು ಇರುತ್ತಾರೆ. ಲಾಭಕ್ಕಾಗಿ ಸಂಬಳಗಾರರನ್ನು ಹತ್ತಿಕ್ಕುವನಾಯಕರೂ ಅವರ ಮೇಲೆ ಸಂಬಳದವರನ್ನು ತಿರುಗಿಸುವ ಉಪದೇಶಕರಾದ ನಾಯಕರೂ ಅಲ್ಲಲ್ಲಿ ಸಿಕ್ಕುತ್ತಾರೆ. ಆದರೆ ಜನರನ್ನೆಲ್ಲ ಪರಮಶಾಂತಿಗೆ ಒಯ್ಯುವ ಮಾರ್ಗವನ್ನು ಉಪದೇಶಿಸುವ ಮಹಾತ್ಮರು ಬಹುವಿರಳ. ಜಿನಿವಾದಲ್ಲಿ ಶಾಂತಿಯ ಉಪಾಯಗಳನ್ನು ಚರ್ಚಿಸುವದಕ್ಕಾಗಿ ಸೇರಿದ್ದ ಸದಸ್ಯರುಗಳನ್ನು ಕೂಡ ಶೋಧನೆ ಮಾಡಿಯೇ ಒಳಗೆ ಬಿಟ್ಟರೆಂದು ಕೇಳುತ್ತೇನೆ; ಇದು ಈಗಿನ ಶಾಂತಿಸ್ಥಾಪನೆಯಹಾದಿ! ಆದರೆ ಆಚಾರ್ಯರಂಥವರು ಉಪದೇಶಿಸಿದ ಶಾಂತಿಯ ಮಾರ್ಗವು ಬೇರೆ:

**ನಿತ್ಯೋಽನಿತ್ಯಾನಾಂ ಚೇತನಶ್ಚೇತನಾನಾಂ ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್ । ತಮಾತ್ಮಸ್ಥಂ ಯೇಽನುಪಶ್ಯನ್ತಿ ಧೀರಾಸ್ತೇಷಾಂ ಶಾನ್ತಿಃ ಶಾಶ್ವತೀ ನೇತರೇಷಾಮ್ ॥ (ಕಠ: 2-2-13)**

ಎಂಬ ಶ್ರುತಿವಚನವನ್ನು ತಾವೂ ಅರಿತು ಅದರಂತೆ ಅನುಷ್ಠಾನಕ್ಕೆ ತಂದುಕೊಳ್ಳುವ ಮಾರ್ಗವನ್ನು ಉಪದೇಶಿಸಿದವರು, ಆಚಾರ್ಯರು. ಅನಿತ್ಯರಾದ ಪ್ರಾಣಿಗಳಲ್ಲಿ ನಿತ್ಯನಾದ ಪರಮಾತ್ಮನೆಂಬ ತತ್ತ್ವವೊಂದುಂಟು; ಅದರ ಚೈತನ್ಯದಿಂದಲೇ ಪ್ರಾಣಿಗಳೆಲ್ಲವೂ ಚೇತನರೆನಿಸಿಕೊಂಡಿರುವವು. ಅವುಗಳ ಕಾಮವನ್ನೆಲ್ಲ ತಾನೊಬ್ಬನೇ ಪರಿಪೂರ್ತಿಗೊಳಿಸುತ್ತಿರುವ ನಿತ್ಯತೃಪ್ತನು, ಆ ಪರಮೇಶ್ವರನು. ಆತನು ತಮ್ಮ

ಆತ್ಮರೂಪದಿಂದಲೇ ಇರುವನು ಎಂಬುದನ್ನು ಶಾಸ್ತ್ರಾಚಾರ್ಯರ ಉಪದೇಶವನ್ನು ಅನುಸರಿಸಿ ಯಾರು ಕಂಡುಕೊಳ್ಳುವರೋ ಅವರಿಗೇ ಶಾಶ್ವತವಾದ ಶಾಂತಿಯು, ಮಿಕ್ಕವರಿಗಲ್ಲ-ಎಂಬುದು ಆಚಾರ್ಯರ ಉಪದೇಶವು.

ಈಗ ನಾವು ಶಾಂತಿಗಾಗಿ ಏರ್ಪಡಿಸಿಕೊಳ್ಳುತ್ತಿರುವ 'ಸಂಘಗಳೂ', 'ಸಮಾಜಗಳೂ' ಕೆಲವರು ಒಂದಾಗಿ ಮಿಕ್ಕವರನ್ನು ಹೊರದೂಡುವದಕ್ಕೇ ಸಾಧನವಾಗಿರುತ್ತವೆ. ಏಕೆಂದರೆ ಅವು 'ಅಹಂಕಾರಗಳು' ಒಂದಾಗುವ ಕ್ರಮವನ್ನು ಅನುಸರಿಸುತ್ತಿವೆ. ಶ್ರುತ್ಯನುಸಾರಿಗಳಾದ ಆಚಾರ್ಯರಂಥವರು ಉಪದೇಶಿಸಿರುವ ಇನ್ನೊಂದು ಕ್ರಮವುಂಟು. ಅದನ್ನು ಯಾಜ್ಞವಲ್ಕ್ಯರು ಮೈತ್ರೇಯಿಗೆ ಉಪದೇಶಿಸಿರುತ್ತಾರೆ :

**ಸ ಯಥಾ ಸೈನ್ಧವಖಿಲ್ಯ ಉದಕೇ ಪ್ರಾಸ್ತ ಉದಕಮೇವಾನುವಿಲೀಯೇತ ನ ಹಾಸ್ಯೋದ್ಗ್ರಹಣಾಯೇವ ಸ್ಯಾತ್ । ಯತೋ ಯತಸ್ತ್ವಾದದೀತ ಲವಣಮೇವೈವಂ ವಾ ಅರ ಇದಂ ಮಹದ್ಭೂತಮನನ್ತಮಪಾರಂ ವಿಜ್ಞಾನ ಘನ ಏವ ॥ (ಬೃ: 2-4-12)**

ಒಂದಾನೊಂದು ಅನಂತವಾದ, ಅಪಾರವಾದ, ಮಹಾಸಮುದ್ರವಿದೆ; ನಾವು ಒಬ್ಬೊಬ್ಬರೂ ಅದರಿಂದ ಮೇಲಕ್ಕೆದ್ದಿರುವ ಅಲೆಗಳಂತೆ ಇರುವ ಅಹಂಕಾರವ್ಯಕ್ತಿಗಳು. ಉಪ್ಪಿನಹರಳು ನೀರಿನಲ್ಲಿ ಹಾಕಿದರೆ ಉಪ್ಪುನೀರೇ ಆಗಿ ಬಿಡುವಂತೆ, ನಾವೆಲ್ಲರೂ ಆ ಪರಮಾತ್ಮಸಮುದ್ರದಲ್ಲಿ ಒಂದಾಗುವ ಕ್ರಮದ ಉಪದೇಶವನ್ನು ಋಷಿಗಳು ಮಾಡಿರುತ್ತಾರೆ. ಸಮುದ್ರದಲ್ಲಿ ಒಂದು ಹಿಮದ ಗಡಿಗೆಯಿದೆ, ಅದರೊಳಗೆ ಒಂದಿಷ್ಟು ನೀರೂ ಇದೆ-ಎಂದಿಟ್ಟುಕೊಳ್ಳಿರಿ. ಆ ಗಡಿಗೆಯ ನೀರು ಸಮುದ್ರದ ನೀರಿಗಿಂತ ಬೇರೆಯಾಗಿರುವಂತೆ, ಅಂಥ ಗಡಿಗೆಗಳು ಅನೇಕವಿದ್ದರೆ ಅವುಗಳು ಒಂದಕ್ಕಿಂತ ಒಂದು ಬೇರೆ ಬೇರೆಯಾಗಿರುವಂತೆ, ನಾವುಗಳು ಇದ್ದುಕೊಂಡಿರುತ್ತೇವೆ. ಬಿಸಿಲಿನ ಝಳಕ್ಕೆ ಆ ಗಡಿಗೆಗಳೆಲ್ಲ ಕರಗಿ ನೀರೆಲ್ಲ ಒಂದೇ ಆಗುವದೂ ಒಂದು ಕ್ರಮ. ಆದರೆ ಆ ಗಡಿಗೆಗಳು ಇದ್ದಂತೆ ಇದ್ದು ಎಲ್ಲವೂ ನೀರೇ ಎಂಬ ತಿಳಿವಳಿಕೆಯಿಂದ ಅವುಗಳನ್ನು ಒಂದುಮಾಡಿಕೊಳ್ಳುವದರಲ್ಲಿ ಒಂದು ಹೆಚ್ಚಿನ ಕೌಶಲವಿದೆ.

ಅಲ್ಲವೆ? ಇದರಂತೆ ನಮ್ಮ ಅಹಂಕಾರವನ್ನು ಕಳೆದುಕೊಂಡು ನಾವು ತೋರಿಕೆಗೆ ಬೇರೆಬೇರೆಯಾಗಿದ್ದರೂ ಆತ್ಮಚೈತನ್ಯರಸದ ರೂಪದಿಂದ ಎಲ್ಲರೂ ಒಂದೇ ಆಗಿರುವಂಥ ಜ್ಞಾನವನ್ನು ಕೊಡುವ ಉಪದೇಶವು ವೇದಾಂತಿಗಳದು.

ಆತ್ಮಜ್ಞಾನದಿಂದ ಒಂದಾಗುವದರಲ್ಲಿ ಇಂಥ ಒಂದು ಬಗೆಯ ಕೌಶಲವಿದೆ, ಒಂದು ಬಗೆಯ ಆನಂದವಿದೆ. ಲೋಕದಲ್ಲಿರುವ ಜನರ ವೇಷ, ಭಾಷೆ, ಜೀವನ ಕ್ರಮ, ವಿದ್ಯಾಭ್ಯಾಸ, ರಾಷ್ಟ್ರಪದ್ಧತಿ–ಇವುಗಳನ್ನೆಲ್ಲ ಯಾವದೋ ಒಂದೇ ಒಂದು ಮಾದರಿಗೆ ಇಳಿಸಿ ಎಲ್ಲರನ್ನೂ ಒಂದುಮಾಡುವ ಪದ್ಧತಿಯು ಹಿಮದ ಗಡಿಗೆಗಳನ್ನು ಕರಗಿಸಿ ನೀರುಮಾಡಿ 'ಈಗ ಎಲ್ಲವೂ ಒಂದಾಯಿತು' ಎನ್ನುವ ಕೌಶಲವಾಗಿರುತ್ತದೆ. ವ್ಯವಹಾರದಲ್ಲಿ ತೋರುವ ಯಾವ ತಾರತಮ್ಯವನ್ನೂ ಮಾರ್ಪಡಿಸದೆ ಇದ್ದರೂ ಜನರು ಐಕಾತ್ಮ್ಯಭಾವನೆಯಿಂದ ಒಂದಾಗಿ ಪರಸ್ಪರಪ್ರೇಮಾದರಗಳಿಂದ ಒಂದಾಗುವ ಕೌಶಲವು ಇದಕ್ಕಿಂತ ಹೆಚ್ಚಿನದಾಗಿರುತ್ತದೆ. ನಾಟಕದಲ್ಲಿ ಯುದ್ಧಮಾಡುವ ಭೀಮದುರ್ಯೋಧನರು ವೀರರಸವನ್ನು ಮಾತ್ರ ನೋಟದಲ್ಲಿ ಉದ್ಬೋಧಗೊಳಿಸುತ್ತಾರೆ ; ಆದರೆ ನಿಜವಾಗಿ ಯುದ್ಧಮಾಡಿದ ಭೀಮದುರ್ಯೋಧನರ ಯುದ್ಧದ ಭೀಭತ್ಸದೃಶ್ಯವನ್ನು ಯಾರುತಾನೆ ಬಯಸುತ್ತಾರೆ?

ಉಪನಿಷತ್ತಿನಲ್ಲಿ ಉಪದೇಶಿಸಿರುವ ಪರಮಾತ್ಮತತ್ತ್ವವು ನಮ್ಮೆಲ್ಲರ ಹೃದಯದಲ್ಲಿಯೂ ಇದ್ದು ಒಂದೇ ಆಗಿರುತ್ತದೆ. ಆ ಪರಮಾತ್ಮರೂಪದಿಂದ ನಾವು ಒಂದೇ ಆಗಿರುತ್ತೇವೆಂಬ ಆನಂದವನ್ನು ಕಂಡುಕೊಂಡು ಸೌಹಾರ್ದದಿಂದಲೂ ಪ್ರೇಮದಿಂದಲೂ ವರ್ತಿಸುವ ಈ ಶಾಶ್ವತಶಾಂತಿಯು ನಮಗೆಲ್ಲ ದೊರಕುವಂತೆ ಆಚಾರ್ಯರು ಬೋಧಿಸಿರುವ ಉಪದೇಶವನ್ನು ನಾವೆಲ್ಲರೂ ಸ್ಮರಿಸೋಣ. ಋಷ್ಯಾಶ್ರಮಗಳಲ್ಲಿ ರಾಗದ್ವೇಷಗಳನ್ನುಳಿದು ಪರಸ್ಪರಪ್ರೇಮದಿಂದ ವರ್ತಿಸಿದ ದುಷ್ಟಮೃಗಗಳಂತೆ ನಮ್ಮ ನೈಸರ್ಗಿಕದೋಷಗಳನ್ನು ತೊಲಗಿಸಿಕೊಂಡು ಆತ್ಮೈಕತ್ವಜ್ಞಾನದ ಶಾಂತಿಸುಖಗಳನ್ನು ಪಡೆಯುವಂತೆ ಅನುಗ್ರಹಿಸಿರೆಂದು ಆಚಾರ್ಯರನ್ನು ಪ್ರಾರ್ಥಿಸಿಕೊಳ್ಳೋಣ!

★★★★★

# ಅದ್ವೈತವೇ ಪರಮಾರ್ಥ

**01-05-1960**

**ಶ್ರೀಶ್ರೀಗಳವರು**

ಮಾಂಡೂಕ್ಯಕಾರಿಕಾಭಾಷ್ಯ 3-23 ರಿಂದ 28ರವರೆಗಿನ ಭಾಗದ ಅಭಿಪ್ರಾಯವೇನೆಂದರೆ - ಶ್ರುತಿಯಲ್ಲಿ ಹೇಳಿರುವ ಸೃಷ್ಟಿಯು ಪರಮಾರ್ಥವಲ್ಲ; ಜೀವರು ಘಟಾಕಾಶಗಳಂತೆಯೂ ಅವರ ಶರೀರೇಂದ್ರಿಯ ಸಂಘಾತಗಳು ಸ್ವಪ್ನದಲ್ಲಿಯೂ ಮಾಯೆಯಿಂದಲೂ ಕಾಣುವ ದೇಹಾದಿಸಂಘಾತಗಳಂತೆಯೂ ಬರಿಯ ತೋರಿಕೆಯೇ. ಅದ್ವೈತವೇ ಪರಮಾರ್ಥ; ಭೇದವೆಲ್ಲ ಮಾಯಿಕ. ಹೀಗೆಂದು ಒಪ್ಪದಿದ್ದರೆ ಅಮೃತವು ಮರ್ತ್ಯವಾಗುವದೆಂದೂ ಮರ್ತ್ಯವು ಅಮೃತವಾಗುವದೆಂದೂ ಒಪ್ಪಬೇಕಾಗಿ ಬರುತ್ತದೆ-ಎಂದು ಈ ಗ್ರಂಥದ ಹಿಂದಿನ ಭಾಗದಲ್ಲಿ ತಿಳಿಸಲಾಗಿತ್ತು. ಪ್ರಕೃತಭಾಗದಲ್ಲಿ ಶ್ರುತಿಯಲ್ಲಿ ಸೃಷ್ಟಿಯನ್ನು ಹೇಳುವ ವಾಕ್ಯಗಳಿಗೆ ಅರ್ಥವನ್ನು ಹೇಗೆ ಮಾಡಬೇಕು?-ಎಂಬುದನ್ನು ವಿಚಾರಕ್ಕೆ ಇಟ್ಟುಕೊಳ್ಳಲಾಗಿದೆ. ಐಕ್ಯವನ್ನು ತಿಳಿಸುವದಕ್ಕೆ ಸೃಷ್ಟಿಪ್ರತಿಪಾದನೆಯು ಉಪಾಯಮಾತ್ರವೆಂಬುದು ಸಿದ್ಧಾಂತ; ಹಾಗಾದರೆ ಶ್ರುತ್ಯಕ್ಷರಗಳನ್ನು ಹೇಗೆ ಹೊಂದಿಸಬೇಕು? ಎಂದರೆ ಸೃಷ್ಟಿವಾಕ್ಯಗಳು ನಿಜವಾದ ಸೃಷ್ಟಿಗೂ ಮಾಯಿಕ ಸೃಷ್ಟಿಗೂ ಹೊಂದುವಂತೆ ಇವೆ. ಶ್ರುತಿಯ ಅಕ್ಷರಾರ್ಥವನ್ನು ಹಿಡಿದರೆ ಶ್ರುತಿಯ ಮಹಾತಾತ್ಪರ್ಯಕ್ಕೂ ಯುಕ್ತಿಗೂ ವಿರುದ್ಧವಾಗುತ್ತದೆಯಾದ್ದರಿಂದ ಇದು ಮಾಯಿಕಸೃಷ್ಟಿಯನ್ನೇ ಹೇಳುವದಕ್ಕೆ ಬಂದದ್ದು ಎಂದು ನಿಶ್ಚಯಿಸಬೇಕು.

ಶ್ರುತಿಯಲ್ಲಿ ನಾನಾತ್ವವನ್ನು ನಿಷೇಧಿಸಿದೆ: ಈಶ್ವರನು ಬಹುರೂಪನಾಗಿ ತೋರುವದು ಇಂದ್ರಿಯಪ್ರಜ್ಞರೂಪವಾದ ಮಾಯೆಯಿಂದ, ಆತನು ಹುಟ್ಟದೆಯೇ ಬಹುಪ್ರಕಾರದಿಂದ ಹುಟ್ಟುತ್ತಾನೆ - ಎಂದು ಹೇಳಿದೆ. ಸಂಭೂತಿಯನ್ನು ಉಪಾಸನೆಮಾಡುವವರನ್ನು ನಿಂದಿಸಿದೆ. ಸಂಭೂತಿಯ ಉಪಾಸನೆ, ಮತ್ತು ಕರ್ಮ ಇವುಗಳ ಸಮುಚ್ಚಯವನ್ನು ವಿಧಿಸಿದ್ದರೆ

ಮುಂದೆ ಇವೆರಡನ್ನೂ ಅವಿದ್ಯೆ ಎಂದು ಕರೆದಿರುವದರಿಂದ ಸಂಭೂತಿಯನ್ನು ನಿಂದಿಸಿದಂತೆಯೇ ಆಗಿದೆ. ಮತ್ತೆ ಯಾರು ಇವನನ್ನು ಉಂಟುಮಾಡಿಯಾರು? – ಎಂದು ಬ್ರಹ್ಮಕ್ಕೆ ಜನ್ಮಾಂತರವನ್ನು ಅಲ್ಲಗಳೆದಿದೆ. **'ಸ ಏಷ ನೇತಿನೇತ್ಯಾತ್ಮಾ'** (ಆ ಇವನೇ ನೇತಿನೇತಿ ಎಂದು ಹೇಳಿದ ಆತ್ಮನು) ಎಂದು ಮತ್ತೆಮತ್ತೆ ಬೇರೆಬೇರೆಯ ಉಪಾಯಗಳಿಂದ ಆತ್ಮತತ್ತ್ವವನ್ನು ತಿಳಿಸಿಕೊಟ್ಟು, ಆ ಉಪಾಯವನ್ನು ಸತ್ಯವೆಂದು ತಿಳಿಯಬಾರದೆಂದು ಅಲ್ಲಗಳೆದಿರುತ್ತದೆ. ಆದ್ದರಿಂದ ಶ್ರುತಿಯ ತಾತ್ಪರ್ಯವು ಏಕತ್ವದಲ್ಲಿಯೇ ಎಂದಾಯಿತು. ಇರುವದು ಮಾಯೆಯಿಂದ ಹುಟ್ಟಬಹುದೇ ಹೊರತು ನಿಜವಾಗಿ ಹುಟ್ಟಲಾರದು; ಇಲ್ಲದ್ದು ಮಾಯೆಯಿಂದಲೂ ಹುಟ್ಟಲಾರದು. ಈ ಯುಕ್ತಿಯಿಂದ ನೋಡಿದರೂ ಆತ್ಮತತ್ತ್ವವು ತಾನು ಇದ್ದಂತೆಯೇ ಇದ್ದು ಮಾಯೆಯಿಂದ ಹುಟ್ಟುತ್ತದೆ-ಎಂದು ಸಿದ್ಧವಾಗುತ್ತದೆ. ಆದ್ದರಿಂದ ಶ್ರುತ್ಯಕ್ಷರಕ್ಕೂ ಯುಕ್ತಿಗೂ ಹೊಂದುವಂತೆ ಮಾಯಿಕಸೃಷ್ಟಿಯನ್ನೇ ಶ್ರುತಿಯು ಹೇಳಿದೆ ಎಂದು ನಿಶ್ಚಯಿಸಬೇಕು-ಎಂಬುದು ಕಾರಿಕೆಗಳ ಅಭಿಪ್ರಾಯ.

★★★★★

## ಆನಂದಮಯಾತ್ಮನ ವಿಚಾರ

**2-5-1960**

**ಬ್ರ॥ ಶ್ರೀ॥ ಲಕ್ಷ್ಮೀನರಸಿಂಹಶಾಸ್ತ್ರಿಗಳವರು**

ತೈತ್ತಿರೀಯದ ಆನಂದದಲ್ಲಿಯಲ್ಲಿ 2-5 ಈ ಭಾಗದಲ್ಲಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ- ಈ ನಾಲ್ವರು ಆತ್ಮರುಗಳಿಗೂ ಒಳಗಿರುವ **ಆನಂದಮಯಾತ್ಮನ** ವಿಚಾರವಿದೆ. 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' ಎಂದು ಶ್ರುತಿಯು ಪ್ರಾರಂಭಿಸಿರುವ ಸರ್ವಾತ್ಮನಾದ ಬ್ರಹ್ಮವು ಈ ಆನಂದಮಯಾತ್ಮನೆ, ಅಥವಾ ಇದಕ್ಕಿಂತಲೂ ಬೇರೆಯಾದದ್ದೆ?- ಎಂಬಿದನ್ನು ಆಚಾರ್ಯರು

ವಿಸ್ತಾರವಾಗಿ ಚರ್ಚಿಸಿರುತ್ತಾರೆ. ಹಿಂದಿನ **ವೃತ್ತಿಕಾರರೊಬ್ಬರು** ಆನಂದಮಯನು ಪರಮಾತ್ಮನೇ ಎಂದು ಸಿದ್ಧಾಂತಮಾಡಿದ್ದರು. ಆದರೆ ಆಚಾರ್ಯರ ಅಭಿಪ್ರಾಯವೇನೆಂದರೆ (1) ಅನ್ನಮಯವೇ ಮುಂತಾದ ಕಾರ್ಯರೂಪವಾದ ಆತ್ಮರುಗಳನ್ನು ಹೇಳುತ್ತಾ 'ಇನ್ನೊಬ್ಬ ಆತ್ಮನು' ಎಂದು ಹೇಳಿರುವದರಿಂದಲೂ 'ಮಯ' ಎಂಬ ವಿಕಾರವನ್ನು ಹೇಳುವ ಪ್ರತ್ಯಯವನ್ನು ಸೇರಿಸಿಯೇ 'ಆನಂದಮಯಾತ್ಮ' ನನ್ನು ಕರೆದಿರುವದರಿಂದಲೂ ಇವನೂ ಕಾರ್ಯಾತ್ಮನೇ, ಪರಮಾತ್ಮನಲ್ಲ. (2) ಆನಂದಮಯನಾದ ಆತ್ಮನನ್ನು 'ಸಂಕ್ರಮಣಮಾಡುತ್ತಾನೆ' ಎಂದು ಆನಂದಮಯನನ್ನು ಕರ್ಮವಾಗಿ ಹೇಳಿರುವದರಿಂದ ಯಾವನು ಸಂಕ್ರಮಣ (ದಾಟುವದನ್ನು) ಮಾಡುತ್ತಾನೋ ಅವನ ಆತ್ಮನಾದ ಪರಮಾತ್ಮನು ಇವನಲ್ಲ. (3) ಆನಂದಮಯನಿಗೆ ಶಿರಸ್ಸು, ಎಡಪಕ್ಕ, ಬಲಪಕ್ಕ –ಎಂದು ಅವಯವಗಳನ್ನು ಹೇಳಿರುವದರಿಂದಲೂ ಹೀಗೆಂದು ತಿಳಿಯಬೇಕು. ಏಕೆಂದರೆ ಪರಮಾತ್ಮನಿಗೆ ಅವಯವಗಳಿಲ್ಲ. (4) ಯಾವನು ಬ್ರಹ್ಮವು ಇಲ್ಲವೆಂದು ತಿಳಿಯುತ್ತಾನೋ ಅವನು ತಾನೇ ಅಸತ್ತಾಗುತ್ತಾನೆ (ಇಲ್ಲದವನಾಗುತ್ತಾನೆ)- ಎಂಬ ಅರ್ಥದ ಮಂತ್ರವನ್ನು ಇಲ್ಲಿ ಉದಾಹರಿಸಿದೆ. ಆನಂದಮಯನು ಪ್ರಿಯಮೋದಾದಿ ವಿಶೇಷಗಳುಳ್ಳವನಾಗಿರುವದರಿಂದ ಅವನು ಇಲ್ಲವೆಂದು ಸಂಶಯ ಮಾಡುವದಕ್ಕೇ ಕಾರಣವಿಲ್ಲ. ಆದ್ದರಿಂದಲೂ ಅವನು ಪರಮಾತ್ಮನಲ್ಲ. (5) ಈ ಆನಂದಮಯನಿಗೆ ಬ್ರಹ್ಮವು ಪುಚ್ಛವೆಂದು ಹೇಳಿರುವದರಿಂದಲೂ ಇವನಿಗಿಂತ ಬ್ರಹ್ಮವು ಬೇರೆ ಎಂದಾಗುತ್ತದೆ. ಆದ್ದರಿಂದ ಆನಂದಮಯನೆಂದರೆ ಭೋಕ್ತಾತ್ಮನೇ, ಪರಮಾತ್ಮನಲ್ಲ ಎಂಬಿದು ಆಚಾರ್ಯರ ಸಿದ್ಧಾಂತ. ಇದನ್ನು ಶಾಸ್ತ್ರಿಗಳವರು ವಿಸ್ತಾರವಾಗಿ ವ್ಯಾಖ್ಯಾನಮಾಡಿ ತಿಳಿಸಿದರು.

**ಶ್ರೀಶ್ರೀಗಳವರು** ಅನುವಾದದಲ್ಲಿ, ವೃತ್ತಿಕಾರರು ಸವಿಶೇಷಬ್ರಹ್ಮವನ್ನೇನೂ ಹೇಳಬೇಕೆಂಬ ಇಚ್ಛೆಯುಳ್ಳವರಲ್ಲವಾದರೂ ಆನಂದಮಯನನ್ನು ಸರ್ವಾಂತರನಾಗಿ ಹೇಳಿದೆ ಎಂಬ ಕಾರಣದಿಂದ ಅವನೇ ಪರಮಾತ್ಮನೆಂದು ಅಭಿಪ್ರಾಯಪಟ್ಟಿದ್ದರು. ಆದರೆ ಭಾಷ್ಯದಲ್ಲಿ ತೋರಿಸಿರುವ ಯುಕ್ತಿಗಳಿಂದ ಆನಂದಮಯನು ಪರಮಾತ್ಮನಾಗುವಂತಿಲ್ಲ. ಅವನೇ ಪರಮಾತ್ಮನೆಂದು ಹಿಡಿದರೆ ವೃತ್ತಿಕಾರರ ಮತವೂ ಸವಿಶೇಷಬ್ರಹ್ಮವಾದದಲ್ಲಿಯೇ

ಪರ್ಯವಸಾನವಾಗುತ್ತದೆ. ಆ ಮಟ್ಟದಲ್ಲಿ ಭೋಕ್ತಾತ್ರನಿಂದ ಆತ್ಮಸ್ವರೂಪವನ್ನು ಬಿಡಿಸಿ ವಿವೇಚನೆಯನ್ನು ಮಾಡಿದಂತೆ ಆಗುವದಿಲ್ಲ. ಆದ್ದರಿಂದ ನಿರ್ವಿಶೇಷವಾದ ಆನಂದಸ್ವರೂಪವೇ ಪರಮಾತ್ಮನೆಂದು ತಿಳಿಯಬೇಕು. ಆನಂದವೆಂದರೆ ಸಂವೇದ್ಯವಾಗಿರುವ ಪ್ರಿಯಮೋದಾದಿಗಳ ರೂಪದ್ದಲ್ಲ; ನಿತ್ಯತೃಪ್ತವಾಗಿರುವ ಸರ್ವಸಂಸಾರಧರ್ಮಾತೀತಸ್ವರೂಪವೇ- ಎಂದು ಸ್ಪಷ್ಟಗೊಳಿಸಿದರು.

★★★★★

# ಅವಿದ್ಯಾನಿವರ್ತಕವಾದ ಸಮ್ಯಗ್ದರ್ಶನ

**3-5-1960**

**ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳು**

ಭಗವದ್ಗೀತಾಭಾಷ್ಯದ 13ನೆಯ ಅಧ್ಯಾಯ 27ರಿಂದ 31ರವರೆಗಿನ ಭಾಗದಲ್ಲಿ ಅವಿದ್ಯಾನಿವರ್ತಕವಾದ ಸಮ್ಯಗ್ದರ್ಶನವನ್ನು ನಿರೂಪಿಸಿದೆ. ಸಮ್ಯಗ್ದರ್ಶವು ಸಂಸಾರಬೀಜವಾದ ಅವಿದ್ಯೆಯನ್ನು ತೊಲಗಿಸುವದರಿಂದ ಮುಂದೆ ಜನ್ಮವಿಲ್ಲದಂತೆ ಮಾಡುತ್ತದೆ; ಜನ್ಮಕ್ಕೆ ಅವಿದ್ಯೆಯಿಂದಾಗಿರುವ ಕ್ಷೇತ್ರಕ್ಷೇತ್ರಜ್ಞಸಂಯೋಗವೇ ಕಾರಣವಾಗಿರುವದರಿಂದ ಸಮ್ಯಗ್ದರ್ಶನಕ್ಕೆ ಜನ್ಮಾಭಾವವೆಂಬ ಫಲವು ಬರಬಹುದಾಗಿದೆ. ಭೂತಗಳು ನಾಶವಾಗುವಂಥವು, ಪರಮೇಶ್ವರನು ಅವಿನಾಶಿಯಾಗಿರುವದರಿಂದ ನಿರ್ವಿಶೇಷನೂ ಏಕನೂ ಆಗಿರುತ್ತಾನೆ. ಯಾವನು ಹೀಗೆ ಶರೀರಗಳಿಗೂ ಪರಮೇಶ್ವರನಿಗೂ ಇರುವ ವೈಲಕ್ಷಣ್ಯವನ್ನು ಅರಿತುಕೊಳ್ಳುವನೋ ಅವನೇ ಸರಿಯಾಗಿ ಅರಿತುಕೊಂಡವನು. ಎಲ್ಲರಲ್ಲಿಯೂ ಸಮನಾಗಿರುವ ಪರಮೇಶ್ವರನೇ ತನ್ನ ಆತ್ಮನಾಗಿ ರುತ್ತಾನೆಂದು ಕಂಡುಕೊಂಡಾತನು ತನ್ನನ್ನು ತಾನು ಕೊಂದುಕೊಳ್ಳುವದಿಲ್ಲ; ಅಜ್ಞರು ಆ ಪರಮಾತ್ಮನನ್ನು ಅರಿಯದೆ ಇರುವದರಿಂದ ಅವಿದ್ಯೆಯಿಂದ

ಆತ್ಮಹತ್ಯಮಾಡಿಕೊಂಡವರಾಗಿರುತ್ತಾರೆ. ತಮ್ಮ ಗುಣಕರ್ಮಗಳಿಂದ ಬೇರೆಬೇರೆಯಾಗಿರುವಂತೆ ತೋರುತ್ತಿರುವ ಅನೇಕ ಆತ್ಮರು ಇರುವರೆಂದು ಅಜ್ಞರಿಗೆ ತೋರುತ್ತಿದ್ದರೂ ನಿಜವಾಗಿ ಆತ್ಮನು ನಿರ್ಗುಣನೂ ಅಕರ್ತೃವೂ ಆಗಿರುತ್ತಾನೆ ; ಪ್ರಕೃತಿಯೇ ಬಗೆಬಗೆಯ ರೂಪಗಳನ್ನು ಹೊಂದಿ ಕರ್ಮಗಳನ್ನು ಮಾಡುತ್ತಿರುವದು. ಯಾವಾಗ ಶಾಸ್ತ್ರಾಚಾರ್ಯರ ಉಪದೇಶದಿಂದ ಒಬ್ಬ ಆತ್ಮನೇ ಎಲ್ಲಾ ಭೂತಗಳ ರೂಪದಿಂದ ಕಾಣುತ್ತಿರುವನೆಂಬ ಅರಿವಾಗುವದೋ, ಆಗ ಹಾಗೆಂದು ಅರಿತುಕೊಂಡವನಿಗೆ ಬ್ರಹ್ಮಭಾವವೇ ಲಭಿಸುವದು. ಆತನು ತನ್ನ ಸ್ವರೂಪದಿಂದ ಅನಾದಿಯೂ ನಿರ್ಗುಣನೂ ಆಗಿರುವದರಿಂದ ಸರ್ವಶರೀರಗಳಲ್ಲಿಯೂ ಇದ್ದರೂ ಅವನಲ್ಲಿ ಯಾವ ವಿಕಾರವೂ ಇಲ್ಲ; ಅವನು ಕರ್ತೃವೂ ಅಲ್ಲ; ಭೋಕ್ತೃವೂ ಅಲ್ಲ. ಅವಿದ್ಯೆಯಿಂದಲೇ ಕರ್ತೃತ್ವಭೋಕ್ತೃತ್ವಬುದ್ಧಿಯುಂಟಾಗಿರುತ್ತದೆ-ಎಂಬುದು ಶ್ಲೋಕಗಳ ಅಭಿಪ್ರಾಯ.

**ಶ್ರೀಶ್ರೀಗಳು** ಅನುವಾದದಲ್ಲಿ ಇಂತೆಂದರು: ಒಬ್ಬನೇ ಆತ್ಮನಲ್ಲಿ ಸರ್ವಭೂತಗಳೂ ಇರುತ್ತವೆ, ಸರ್ವಭೂತಗಳಲ್ಲಿಯೂ ಆತ್ಮನು ಇರುತ್ತಾನೆ ಎಂದು ಹೇಳುವದು ವಿಷಮವಾಗಿ ತೋರುತ್ತದೆ. ಆತ್ಮರು ಅನೇಕರೆಂದು ನಮಗೆ ಕಾಣುತ್ತಿದ್ದರೂ ಅವನು ಒಬ್ಬನೇ ಎಂಬ ವೇದಾಂತಿಗಳ ಹೇಳಿಕೆಯು ಅನುಭವವಿರುದ್ಧವಾಗಿ ಕಾಣುತ್ತಿರುವದು. ಜ್ಞಾನಿಯು ಅಜ್ಞಾನಿಗಳಂತೆ ತನ್ನ ಆತ್ಮನನ್ನು ತಾನೇ ಕೊಲ್ಲುವದಿಲ್ಲ ಎಂಬಲ್ಲಿಯೂ ವೈಷಮ್ಯವು ತೋರುತ್ತಿರುವದು- ಈ ಶಂಕೆಗಳಿಗೆಲ್ಲ ಇಲ್ಲಿ ಪರಿಹಾರವನ್ನು ಹೇಳಿದೆ. ಪರಮಾತ್ಮನಿಂದಲೇ ಎಲ್ಲವೂ ಬಂದು ಆತನಲ್ಲಿಯೇ ತೋರಿಕೊಳ್ಳುತ್ತಿರುವದು. ಹಿಮದಿಂದಾಗಿರುವ ಪಾತ್ರೆಯೊಳಗೆ ಹಿಮದಿಂದಾಗಿರುವ ತಂಬಿಗೆಯೂ ಹಿಮದಿಂದಾಗಿರುವ ಲೋಟವೂ ಇದ್ದರೆ, ದೊಡ್ಡ ಪಾತ್ರೆಯ ನೀರನ್ನು ಬಿಟ್ಟು ಮತ್ತೆ ಯಾವ ಬೇರೆಯ ನೀರೂ ಹೇಗೆ ಇರುವದಿಲ್ಲವೋ, ಸರಿಯಾಗಿ ನೋಡಿದರೆ ಹೇಗೆ ಎಲ್ಲವೂ ನೀರೇ ಆಗಿರುವದೋ ಹಾಗೆ ಎಲ್ಲವೂ ಬ್ರಹ್ಮದಿಂದಲೇ ಬಂದು ಬ್ರಹ್ಮದಲ್ಲಿಯೇ ಇರುತ್ತಿದೆ ಎಂದು ತಿಳಿಯಬೇಕು. ಹೀಗೆ ತಿಳಿದವನು ಬ್ರಹ್ಮವನ್ನೇ ಸೇರುತ್ತಾನೆ, ಎಂದರೆ ಬ್ರಹ್ಮವೇ ತಾನೆಂಬ ಅರಿವನ್ನು ಸಂಪಾದಿಸಿಕೊಳ್ಳುತ್ತಾನೆ ಎಂದರ್ಥ. ಆತ್ಮರು ಬೇರೆಬೇರೆ ಎಂದು ಕಾಣುತ್ತಿರುವದು ಅವಿದ್ಯಾ

ಕಲ್ಪಿತವಾಗಿರುವ ಪ್ರಕೃತಿಯ ಪರಿಣಾಮಗಳ ಭೇದದಿಂದ. ಪ್ರಕೃತಿಯ ಗುಣಗಳೇ ಕರ್ಮವನ್ನು ಮಾಡುತ್ತವೆ, ಎಂದರೆ ಪ್ರಕೃತಿಯೂ ಅದರ ಗುಣಗಳೂ ಪರಮಾತ್ಮನಲ್ಲಿಯೇ ಅಧ್ಯಸ್ತವಾಗಿರುತ್ತವೆ ಎಂದರ್ಥ. ಇದರಿಂದ ಆತ್ಮನು ಎಂದೆಂದಿಗೂ ಪರಿಶುದ್ಧನೂ ಅಕರ್ತೃವೂ ಆಗಿರುತ್ತಾನೆಂಬ ತಿಳಿವಳಿಕೆಯಾಗುವದು. ಹೀಗೆ ಎಲ್ಲಾ ಭೂತಗಳಲ್ಲಿಯೂ ಒಬ್ಬನೇ ಆತ್ಮನು ಇರುತ್ತಾನೆ ಎಂಬ ಅರಿವು ಯಾವನಿಗೆ ಆಗುವದೋ ಅವನು ಯಾವಾಗಲೂ ನಿತ್ಯಶುದ್ಧಬುದ್ಧಮುಕ್ತಸ್ವಭಾವದ ಆತ್ಮನೇ ನಾನೆಂಬ ತಿಳಿವಳಿಕೆಯಿಂದ ಮರಣದ ಅಂಜಿಕೆಯಿಲ್ಲದೆ ಇರುತ್ತಾನೆ. ಅಜ್ಞರು ಮಾತ್ರ ದೇಹೇಂದ್ರಿಯಪ್ರಾಣಾದಿಗಳನ್ನು ಒಂದೊಂದಾಗಿ ತಮ್ಮ ಆತ್ಮನೆಂದು ಅರಿಯುವದರಿಂದ ನಿಜವಾದ ಆತ್ಮನನ್ನು ಅರಿತುಕೊಳ್ಳದೆ ಆತ್ಮಜ್ಞಾನದಿಂದ ಆಗಬೇಕಾಗಿರುವ ಪ್ರಯೋಜನವನ್ನು ಪಡೆಯದೆ ಇರುವರಾದ್ದರಿಂದ ಅವರು ಆತ್ಮಹತ್ಯೆಯನ್ನು ಮಾಡಿದವರಾಗುತ್ತಾರೆ.

★★★★★

# ಬ್ರಹ್ಮದ ಲಕ್ಷಣ

**4-5-1960**

**ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

ಬ್ರಹ್ಮಸೂತ್ರ **ಜನ್ಮಾದ್ಯಧಿಕರಣ** ಭಾಷ್ಯಾರ್ಥವು ಹೀಗಿದೆ – ಈ ಸೂತ್ರದಲ್ಲಿ ಬ್ರಹ್ಮದ ಲಕ್ಷಣವನ್ನು ತಿಳಿಸಿದೆ. ಲಕ್ಷಣವೆಂದರೆ ಅಸಾಧಾರಣಧರ್ಮವಲ್ಲ. ಯಾವದಾದರೂ ಧರ್ಮವು ಬ್ರಹ್ಮಕ್ಕಿದೆ ಎಂದರೆ, ಅದರಿಂದಲೇ ಸದ್ವಿತೀಯವಾಗಿ ಬ್ರಹ್ಮದ ಬ್ರಹ್ಮತ್ವಕ್ಕೆ ಹಾನಿಬಂದೀತು. ಆದ್ದರಿಂದ ಬ್ರಹ್ಮದ ಸ್ವರೂಪವನ್ನು ತಿಳಿಸುವದಕ್ಕೆ ಜಗಜ್ಜನ್ಮಾದಿಕಾರಣತ್ವವೆಂಬ ಲಕ್ಷಣವನ್ನು ಹೇಳಿದೆ. ಶುಕ್ತಿಯು ರಜಕ್ಕೆ ಕಾರಣವಾಗಿರುವಂತೆ ಬ್ರಹ್ಮವು ಜಗತ್ಕಾರಣವಾಗಿದೆ; ಆದ್ದರಿಂದ ಜಗತ್ಕಾರಣವು ಯಾವದು–ಎಂದರೆ ಜಗತ್ತಿನ ಪರಮಾರ್ಥವೇನು? ಎಂಬುದೇ ಪ್ರಶ್ನೆ.

ಉತ್ಪತ್ತಿಸ್ಥಿತಿಲಯಗಳಿಂದ ತೋರುತ್ತಿರುವ ಜಗತ್ತಿನ ಪರಮಾರ್ಥವೇ ಬ್ರಹ್ಮ. ಜಗತ್ತಿನ ಸ್ವಭಾವವನ್ನು ಪರಿಶೀಲಿಸಿದರೆ ಅದು ನಾಮರೂಪಗಳಿಂದ ವ್ಯಾಕೃತವಾಗಿ ಕ್ರಿಯಾಕಾರಕಫಲರೂಪವಾಗಿ ಮನಸ್ಸಿನಿಂದಲೂ ಅಚಿಂತ್ಯವಾಗಿದೆ. ಆದ್ದರಿಂದ ಇದಕ್ಕೆ ನಾಮರೂಪರಹಿತವಾದ ಕರ್ತೃಭೋಕ್ತೃವಲ್ಲದ ಸರ್ವಜ್ಞಸರ್ವ ಶಕ್ತಿಯಾದ ಚೇತನವೇ ಜಗತ್ಕಾರಣವೆಂದು ಏರ್ಪಡುತ್ತದೆ. ಇಂಥ ಜಗತ್ತಿಗೆ ಬ್ರಹ್ಮವಲ್ಲದೆ ಅಚೇತನವಾಗಿರುವ ಪ್ರಧಾನ, ಅಣು, ಅಭಾವ, ಯಾವನಾದರೊಬ್ಬ ಜೀವ–ಇವುಗಳಲ್ಲಿ ಯಾವದೊಂದೂ ಕಾರಣವಾಗಿರಲಾರದೆಂದೂ ಸಿದ್ಧವಾಗುತ್ತದೆ. ಸ್ವಭಾವವೂ ಕಾರಣವಲ್ಲ, ಏಕೆಂದರೆ ಗೊತ್ತಾದ ದೇಶಕಾಲನಿಮಿತ್ತಗಳನ್ನನುಸರಿಯೇ ಇಲ್ಲಿ ಫಲಗಳು ತೋರುತ್ತಿವೆ.

ಜಗತ್ತಿನ ಜನ್ಮಾದಿಗಳು ಏತರಿಂದಾಗುವವೋ ಅದೇ ಪರಮೇಶ್ವರನು–ಎಂಬ ಅನುಮಾನದಿಂದ ಜಗತ್ತಿಗೆ ನಿಮಿತ್ತಕಾರಣನಾದ ಈಶ್ವರನನ್ನು ಸಿದ್ಧಿಮಾಡಬಹುದೆಂದು ಕೆಲವರು ಹೇಳಿರುತ್ತಾರೆ. ವೇದಾಂತವಾಕ್ಯವನ್ನು ಉದಾಹರಿಸಿ ವಿಚಾರಮಾಡುವದಕ್ಕೆ ಬಾದರಾಯಣರ ಸೂತ್ರಗಳು ಹುಟ್ಟಿರುವದರಿಂದ ಇಲ್ಲಿ ಆ ಅನುಮಾನವನ್ನು ಹೇಳಿಲ್ಲ; ಆದರೂ ಬ್ರಹ್ಮಜಿಜ್ಞಾಸೆಯು ಅನುಭವದಲ್ಲಿ ಪರ್ಯವಸಾನವಾಗಬೇಕಾಗಿರುವದರಿಂದ ಇಲ್ಲಿ ವೇದಾಂತವಾಕ್ಯವೇ ಅಲ್ಲದೆ ತರ್ಕವೂ ವಾಕ್ಯಾರ್ಥಗ್ರಹಣವು ಗಟ್ಟಿಯಾಗುವದಕ್ಕೆ ಸಾಹಾಯಕವಾಗಿರುತ್ತದೆ. ಬ್ರಹ್ಮಜ್ಞಾನವು ಭೂತವಸ್ತುವನ್ನು ತಿಳಿಸುವದಾದ್ದರಿಂದ ಕರ್ಮದಂತೆ ಕರ್ತೃವಿಗೆ ಅಧೀನವಾಗಿ ಏರ್ಪಡುವಹಾಗಿಲ್ಲ. ಆದ್ದರಿಂದ ಇಲ್ಲಿ ಶ್ರುತಿಯ ಜೊತೆಗೆ ಅನುಭವತರ್ಕಗಳೂ ಅವಶ್ಯ. ಬ್ರಹ್ಮವು ಭೂತವಸ್ತು–ಸಿದ್ಧವಾಗಿರುವ ವಸ್ತು–ಎಂದಮಾತ್ರದಿಂದಲೇ ಅನುಮಾನಕ್ಕೆ ವಿಷಯವಾಗಬಹುದೆಂದು ಕಲ್ಪಿಸುವದು ಸರಿಯಲ್ಲ. ಏಕೆಂದರೆ ಇಲ್ಲಿ ಕಾರಣವಾದ ಬ್ರಹ್ಮವು ಇಂದ್ರಿಯಗೋಚರವಾಗಿರುವದಿಲ್ಲವಾದ್ದರಿಂದ ತಾನೊಂದೇ ಕಾಣಿಸುತ್ತಿರುವ ಈ ಜಗತ್ತು ಬ್ರಹ್ಮದ ಕಾರ್ಯವೋ ಅಥವಾ ಮತ್ತೆ ಯಾವದಾದರೊಂದು ಕಾರಣದಿಂದಾದದ್ದೋ ನಿಶ್ಚಯಿಸುವದಕ್ಕೆ ಬರುವದಿಲ್ಲ. ಆದ್ದರಿಂದ '**ಯತೋ ವಾ ಇಮಾನಿ ಭೂತಾನಿ ಜಾಯನ್ತೇ, ಆನನ್ದೋ ಬ್ರಹ್ಮೇತಿ ವ್ಯಜಾನಾತ್**..' ಮುಂತಾದ ವೇದಾಂತವಾಕ್ಯಗಳಿಂದಲೇ

ಜಗತ್ಕಾರಣವಾದದ್ದು ಸರ್ವಜ್ಞವೂ ಸರ್ವಶಕ್ತಿಯುಕ್ತವೂ ಆಗಿರುವ ಬ್ರಹ್ಮವೆಂದು ಸಿದ್ಧವಾಗುತ್ತದೆ- ಎಂಬುದು ಭಾಷ್ಯಸಾರ.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೀಗೆಂದರು: ಬ್ರಹ್ಮಸೂತ್ರದಲ್ಲಿ ಮೊದಲನೆಯ ನಾಲ್ಕು ಸೂತ್ರಗಳು ಶಾಸ್ತ್ರಕ್ಕೆ ಭೂಮಿಕೆ ಇದ್ದಂತೆ ಇವೆ. ಇದರ ಮೇಲೆ ಶಾಸ್ತ್ರದ ಕಟ್ಟಡವು ನಿಂತಿರುತ್ತದೆ. ಬ್ರಹ್ಮವನ್ನು ಅಧಿಕಾರಿಗಳು ಜಿಜ್ಞಾಸೆಮಾಡಬೇಕು ಎಂದು ಮೊದಲನೆಯ ಸೂತ್ರದಲ್ಲಿ ಹೇಳಿ ಈ ಎರಡನೆಯ ಸೂತ್ರದಲ್ಲಿ ಆ ಜಿಜ್ಞಾಸ್ಯಬ್ರಹ್ಮವು ಯಾವದು?-ಎಂಬುದನ್ನು ತಿಳಿಸಿ ಇದಕ್ಕೆ ಪ್ರಮಾಣವೇನು?- ಎಂಬಿದನ್ನು ಮುಂದಿನ ಎರಡು ಸೂತ್ರಗಳಿಂದ ನಿರ್ಣಯಿಸಲಾಗುವದು.

ವೇದಾಂತಿಗಳಿಗೆ ಮೀಮಾಂಸಕರು ಮತ್ತು ತಾರ್ಕಿಕರು-ಇವರಿಬ್ಬರೂ ಎದುರಾಳಿಗಳು. ವೇದಾಂತಿಗಳು ಬ್ರಹ್ಮವು ಶಾಸ್ತ್ರಮಾತ್ರಗಮ್ಯ ಎಂದರೆ ಶಾಸ್ತ್ರಾರ್ಥವು ಕರ್ಮವಾದೀತೇ ಹೊರತು ಭೂತವಸ್ತುವಾಗಲಾರದು ಎಂದು ಮೀಮಾಂಸಕರು ಪ್ರತಿಭಟಿಸುತ್ತಾರೆ. ಅದು ಭೂತವಸ್ತುವಾದ್ದರಿಂದ ಅನುಮಾನಾದಿಪ್ರಮಾಣಗಳಿಂದ ಅದನ್ನು ಸಿದ್ಧಪಡಿಸಬೇಕಾಗಿದೆ ಎಂದು ತಾರ್ಕಿಕರು ಎನ್ನುತ್ತಾರೆ. ಮೀಮಾಂಸಕರಿಗೆ ತರ್ಕದ ಮೇಲೆ ಕೆಂಗಣ್ಣು; ತಾರ್ಕಿಕರಿಗೆ ಶಾಸ್ತ್ರವು ಎರಡನೆಯದು, ತರ್ಕಕ್ಕೇ ಅವರಲ್ಲಿ ಮೇಲುಗೈ. ವೇದಾಂತಿಗಳ ಸ್ಥಾನವು ಈ ಎರಡಕ್ಕೂ ವಿಲಕ್ಷಣವಾಗಿದೆ. ಬ್ರಹ್ಮವು ವೇದಾಂತಪ್ರಮಾಣದಿಂದಲೇ ಅರಿಯಬರುತ್ತದೆ: ವೇದಾಂತಪ್ರಮಾಣವು ಅನುಭವಾನುಸಾರಿಯಾಗಿ ಇರುವದರಿಂದ ಅನುಭವಾಂಗವಾದ ತರ್ಕವೂ ಇಲ್ಲಿ ಅವಶ್ಯವೆಂದು ಅವರ ಮತ.

ಪ್ರಕೃತಸೂತ್ರದಲ್ಲಿ ಜಗತ್ತೆಲ್ಲವೂ ಪ್ರತ್ಯಕ್ಷಸಂನಿಧಾಪಿತವಾಗಿದೆ, ಎಂದರೆ ಅನುಭವಕ್ಕೆ ವಿಷಯವಾಗಿದೆ ಎಂದು ಭಾಷ್ಯಕಾರರು ತಿಳಿಸಿರುತ್ತಾರೆ. ಪ್ರಾಮಾತೃ ಪ್ರಮಾಣಪ್ರಮೇಯರೂಪವಾದ ಜಗತ್ತೆಲ್ಲಕ್ಕೂ ಬ್ರಹ್ಮವು ಕಾರಣವೆಂದರೆ ನಿಯತವಾಗಿ ಪೂರ್ವಕಾಲದಲ್ಲಿರುವದೆಂದು ಅರ್ಥವಲ್ಲ ; ಯಾವದರ ಸ್ವರೂಪದಿಂದಲೇ ಸೃಷ್ಟಿಸ್ಥಿತಿಲಯಗಳಲ್ಲಿ ಜಗತ್ತು

ಇದ್ದು ಕೊಂಡಿರುವದೋ ಅದೇ ಬ್ರಹ್ಮ ಎಂಬುದು ಸೂತ್ರಕ್ಕೆ ವಿಷಯವಾಕ್ಯವಾದ ವೇದಾಂತವಾಕ್ಯಕ್ಕೆ ಅರ್ಥ ; ವಿಷಯ ವಾಕ್ಯದಲ್ಲಿ ಅಧ್ಯಾತ್ಮವಾಗಿಯೇ ಇದನ್ನು ಕಂಡುಹಿಡಿಯಬೇಕೆಂದು ಹೇಳಿದೆ ಎಂಬುದು 'ಅನ್ನಂ ಪ್ರಾಣಂ ಚಕ್ಷುಃ'– ಮುಂತಾದ ವಾಕ್ಯದಿಂದ ಸಿದ್ಧವಾಗುತ್ತದೆ. ನಮ್ಮೊಳಗೆ ಇರುವ ಸರ್ವಾಧಾರವಾದ ಆನಂದವೇ ಆ ಕಾರಣ.

★★★★★

# ಶಾಂಡಿಲ್ಯವಿದ್ಯೆ

**5-5-1960**

**ಬ್ರ|| ಶ್ರೀ|| ಎಸ್.ವಿಠ್ಠಲಶಾಸ್ತ್ರಿಗಳವರು**

ಛಾಂದೋಗ್ಯೋಪನಿಷತ್ತಿನ 3-14 ಈ ಮಂತ್ರದಲ್ಲಿ ಪ್ರತ್ಯಕ್ಷಾದಿವಿಷಯವಾಗಿರುವ ನಾಮರೂಪವಾದ ಜಗತ್ತೆಲ್ಲವೂ ಬ್ರಹ್ಮವೇ, ಏಕೆಂದರೆ ಅದು ತಜ್ಜಲಾನ್– ಆ ಬ್ರಹ್ಮದಿಂದ ಹುಟ್ಟಿ, ಅದರಲ್ಲಿ ಲಯವಾಗುವದಾಗಿ ಈಗ ಅದರಿಂದಲೇ ಸ್ಥಿತಿಕಾಲದಲ್ಲಿ ವ್ಯಾಪರಮಾಡುತ್ತಿರುತ್ತದೆ – ಎಂದು ಹೇಳಿದೆ. ಜಗತ್ತು ಸೃಷ್ಟಿಸ್ಥಿತಿಕಾಲಗಳಲ್ಲಿ ಬ್ರಹ್ಮತಾದಾತ್ಮ್ಯವನ್ನು ಬಿಡದೆ ಇರುವದರಿಂದ ಶಾಂತನಾಗಿ ಆ ಬ್ರಹ್ಮವನ್ನು ಉಪಾಸನೆಮಾಡಬೇಕು. ಇಲ್ಲಿ ಹೇಳಿರುವಂತೆ ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಳ್ಳಬೇಕು; ಏಕೆಂದರೆ ಮನುಷ್ಯನು ಮನಸ್ಸಿನ ನಿಶ್ಚಯಕ್ಕನುಗುಣವಾಗಿಯೇ ಫಲವನ್ನು ಅನುಭವಿಸುತ್ತಾನೆ. ಪರಮಾತ್ಮನು ಮನೋಮಯನು, ಪ್ರಾಣಶರೀರನು, ಭಾರೂಪನು, ಸತ್ಯ ಸಂಕಲ್ಪನು, ಆಕಾಶಾತ್ಮನು, ಸರ್ವಕರ್ಮನು, ಸರ್ವಕಾಮನು, ಸರ್ವಗಂಧನು, ಸರ್ವರೂಪನು, ಈ ಜಗತ್ತೆಲ್ಲವನ್ನೂ ವ್ಯಾಪಿಸಿರುವನು, ವಾಗಾದಿಕರಣಹಿತನು, ಸಂಭ್ರಮರಹಿತನು – ಎಂದು ಉಪಾಸನೆಮಾಡಬೇಕು. ಈತನೇ ನನ್ನ ಆತ್ಮನು, ಹೃದಯದೊಳಗೆ ಅಣುವಿಗೂ ಅಣುತರನಾಗಿ, ಪೃಥಿವ್ಯಾದಿಗಳಿಂತಲೂ

ಮಿಗಿಲಾದ ಪರಿಮಾಣದವನಾಗಿತ್ತಾನೆ. ಇವನನ್ನೇ ನಾನು ಪರಲೋಕದಲ್ಲಿ ಸೇರಿಕೊಳ್ಳುವೆನು - ಎಂದು ದೃಢತರವಾದ ನಿಶ್ಚಯದಿಂದ ಉಪಾಸನೆ ಮಾಡಿದವನು ಈ ಬ್ರಹ್ಮವನ್ನು ಸೇರಿಕೊಳ್ಳುತ್ತಾನೆ ಎಂಬುದು ವಾಕ್ಯದ ಅರ್ಥವು.

ಇಲ್ಲಿ ಶಾಸ್ತ್ರಿಗಳವರು ಬ್ರಹ್ಮದ ವಿಶೇಷಣಗಳನ್ನೆಲ್ಲ ಭಾಷ್ಯಾನುಸಾರ ವಿವರಿಸಿದರು. ಇಲ್ಲಿ ಆತ್ಮಶಬ್ದವು ಆರನೆಯ ಅಧ್ಯಾಯದಲ್ಲಿ 'ತತ್ತ್ವಮಸಿ ಸ ಆತ್ಮಾ' - ಎಂಬ ವಾಕ್ಯದಲ್ಲಿರುವಂತೆ ತನ್ನ ಸ್ವರೂಪವೇ ಎಂಬ ನಿರುಪಚರಿತಾರ್ಥದಲ್ಲಿ ಬಂದಿಲ್ಲ. 'ನನ್ನ ನಿಜವಾದ ಆತ್ಮನಿವನು, ಈತನನ್ನು ನಾನು ಕಾಲಾಂತರದಲ್ಲಿ ಸೇರಿಕೊಳ್ಳುವೆನು'-ಎಂದು ಹೇಳಿರುವದರಿಂದ ಇಲ್ಲಿ ಜೀವಪರಮಾತ್ಮನಿಗೆ ಒಂದಿಷ್ಟು ಭೇದವನ್ನಿಟ್ಟುಕೊಂಡೇ ಉಪಾಸನೆಯನ್ನು ಹೇಳಿದೆ. ನಿಸ್ಸಂಶಯವಾದ ನಿಶ್ಚಯಪೂರ್ವಕವಾಗಿ ಭಾವನೆಮಾಡುವವರಿಗೆ ಅವಶ್ಯವಾಗಿ ಉಪಾಸನೆಯ ಫಲವು ಸಿಕ್ಕುವದೆಂಬುದೇ ಶ್ರುತಿಯ ಅರ್ಥ ಎಂಬುದನ್ನು ಸ್ಪಷ್ಟಪಡಿಸಿದರು.

**ಶ್ರೀಗಳು** ಅನುವಾದದಲ್ಲಿ ಹೀಗೆಂದರು: ಶ್ರುತಿಯಲ್ಲಿ ಪುರುಷತಂತ್ರವಾದ ಉಪಾಸನೆ, ವಸ್ತುತಂತ್ರವಾದ ಅರಿವು-ಈ ಎರಡನ್ನು 'ಉಪಾಸನೆ' ಎಂಬ ಮಾತಿನಿಂದ ಕರೆದಿರುವದುಂಟು. ಸಂದರ್ಭಾನುಸಾರವಾಗಿ ಅಲ್ಲಿ ಯಾವದೆಂಬುದನ್ನು ನಿರ್ಣಯಿಸಬೇಕಾಗುತ್ತದೆ. ಪ್ರಕೃತದಲ್ಲಿ ಹೇಳಿರುವದು ಉಪಾಸನೆ.

ಉಪಾಸನೆಯು ಮಧ್ಯಮಾಧಿಕಾರಿಗಳಿಗೆ ಎಂದು ಕಡೆಗಣಿಸುವ ವೇದಾಂತಿಗಳೇ ಈಗ ಬಹಳ; ಆದರೆ ಕರ್ಮವನ್ನು ಅನುಷ್ಠಾನಮಾಡದೆ, ಉಪಾಸನೆಯನ್ನೂ ಮಾಡದೆ, ಶುಷ್ಕವಾದ ತರ್ಕಪ್ರಧಾನವಾದ ವಿಚಾರವನ್ನೇ ಜ್ಞಾನವೆಂದು ಭ್ರಾಂತಿಪಡುವವರಿಗೆ ವೇದಾಂತದ ನಿಜವಾದ ಫಲವು ದಕ್ಕಲಾರದು. ನಮಗೆ ವೇದೋಕ್ತವಾದ ಉಪಾಸನೆಯು ದಕ್ಕದೆಇದ್ದರೆ ಪುರಾಣೇತಿಹಾಸಗಳಲ್ಲಿ ಹೇಳಿರುವ ಉಪಾಸನೆಗಳನ್ನಾದರೂ ಮಾಡಿ ಅಂತಃಕರಣವನ್ನು ಪ್ರತ್ಯಕ್ಪ್ರವಣವಾಗಿ ಮಾಡಿಕೊಳ್ಳಬೇಕು.

ಶಾಂಡಿಲ್ಯವಿದ್ಯೆಯು ಛಾಂದೋಗ್ಯ, ಬೃಹದಾರಣ್ಯಕೋಪನಿಷತ್ತು, ಶತಪಥ ಬ್ರಾಹ್ಮಣ - ಈ ಮೂರರಲ್ಲಿಯೂ ಇದೆ. ಇವುಗಳೆಲ್ಲದರಲ್ಲಿಯೂ

ಶಾಂಡಿಲ್ಯರ ಮುದ್ರಿಕೆಯಿದೆ. ಇವುಗಳನ್ನೆಲ್ಲ ಗುಣೋಪಸಂಹಾರ ಮಾಡಿಕೊಂಡು ಉಪಾಸನೆ ಮಾಡುವ ಕ್ರಮವನ್ನು ಬಲ್ಲವರಿಂದ ತಿಳಿದುಕೊಳ್ಳಬೇಕಾಗುತ್ತದೆ. ಈ ಉಪಾಸನೆಯನ್ನು ಮಾಡುವ ಯೋಗ್ಯತೆಯಿಲ್ಲದಿದ್ದರೂ ಅಭಿಪ್ರಾಯವನ್ನಾದರೂ ತಿಳಿದಿರುವದರಿಂದ ಲಾಭವುಂಟು. ಸಮಷ್ಟಿಮನಸ್ಸಿನ ಉಪಾಧಿಯುಳ್ಳವನಾಗಿ ಕ್ರಿಯಾಶಕ್ತಿ ಪ್ರಧಾನವಾದ ಪ್ರಾಣವೇ ಶರೀರವುಳ್ಳ, ಚೈತನ್ಯಲಕ್ಷಣವಾದ ರೂಪವುಳ್ಳವನಾಗಿರುವಾತನು ಈ ಪರಮಾತ್ಮನು. ಆತನ ಯಾವ ಸಂಕಲ್ಪಕ್ಕೂ ಯಾವ ಕಾಮಕ್ಕೂ ತಡೆಯಿಲ್ಲ; ಅಂಥ ಆಪ್ತಕಾಮನು, ಸರ್ವಗತನಾದವನು, ಸರ್ವವನ್ನು ಆತನೇ ನಿರ್ಮಾಣಮಾಡಿದವನು – ಇಂಥ ಪರಮಾತ್ಮನೇ ನಮ್ಮ ನಿಜವಾದ ಆತ್ಮನು. ಈಗಲೂ ನಾನೂ ಆತನಲ್ಲಿಯೇ ಇದ್ದು, ವ್ಯವಹರಿಸುತ್ತಾ ಇರುವೆನು; ಸತ್ತಬಳಿಕವೂ ಆತನನ್ನೇ ಸೇರುವೆನು – ಎಂಬ ದೃಢವಾದ ವಿಶ್ವಾಸದ ಭಾವನೆಯು ಯಾವನಿಗೆ ಗಟ್ಟಿಯಾಗುವದೋ ಅಂಥವನಿಗೆ ಆ ಸಾಕ್ಷಾತ್ಕಾರದ ಫಲವಾಗಿ ಆ ಪರಮಾತ್ಮನ ಪ್ರಾಪ್ತಿಯಾಗಿಯೇತೀರುವದು. ಇದರಲ್ಲಿ ಯಾವ ಸಂಶಯವೂ ಇಲ್ಲ. ನಿಜವಾದ ಉಪಾಸಕನಿಗೆ ಮನಸ್ಸಿನ ಕಲ್ಮಷವೆಲ್ಲ ಹೋಗುವದು, ಸತ್ಯಸಂಕಲ್ಪತ್ವವು ಬರುವದು–ಮುಂತಾದ ಚಿಹ್ನೆಗಳು ಇಲ್ಲಿಯೇ ತೋರಿಕೊಳ್ಳುವವು. ಪರಲೋಕದಲ್ಲಿ ಅಂಥ ಬ್ರಹ್ಮದ ಪ್ರಾಪ್ತಿಯೇ ಆಗುವದೆಂಬ ಶ್ರದ್ಧೆಯು ಅವನಲ್ಲಿ ನಿಂತಿರುವದೆಂಬುದರಲ್ಲಿ ಆಶ್ಚರ್ಯವೇನು?

★★★★★

# ಏಕಾತ್ಮವಾದದ ವಿಷಯಕ್ಕಿರುವ ಆಕ್ಷೇಪಸಮಾಧಾನಗಳು

**6-5-1960**

**ಬ್ರ॥ ಶ್ರೀ॥ ಟಿ.ಸೀತಾರಾಮಶಾಸ್ತ್ರಿಗಳು**

**ಬ್ರಹ್ಮಸೂತ್ರಭಾಷ್ಯ** 2-1-14ರಲ್ಲಿ ಏಕಾತ್ಮವಾದದ ವಿಷಯಕ್ಕಿರುವ ಆಕ್ಷೇಪಸಮಾಧಾನಗಳೇನೆಂದರೆ – ಭೇದಾಭೇದವಾದಿಗಳು ಆತ್ಮೈಕತ್ವವಾದದ ಮೇಲೆ ಆಕ್ಷೇಪ ಮಾಡುವದೇನೆಂದರೆ ಈ ವಾದದಲ್ಲಿ ಭೇದವೇ ಇಲ್ಲದ್ದರಿಂದ ಪ್ರತ್ಯಕ್ಷಾದಿ ಪ್ರಮಾಣಗಳಿಗೆ ವಿಷಯವಿಲ್ಲದೆಹೋಗುವದು, ವಿಧಿಪ್ರತಿಷೇಧಶಾಸ್ತ್ರಕ್ಕೂ ಭೇದವು ಬೇಕಾಗಿರುವದರಿಂದ ಅದೂ ಇಲ್ಲಿ ಅಪ್ರಮಾಣವೆಂದಾಗುವದು. ಇದೂ ಅಲ್ಲದೆ ಅನೃತವಾಗಿರುವ ಮೋಕ್ಷಶಾಸ್ತ್ರವು ಪ್ರತಿಪಾದಿಸುವ ಆತ್ಮೈಕತ್ವವು ಸತ್ಯವೆಂಬುದಾದರೂ ಹೇಗೆ ಹೊಂದೀತು?

ಇದಕ್ಕೆ ಅದ್ವೈತಿಗಳ ಉತ್ತರವಿದು: ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳು ನಮ್ಮ ಸಿದ್ಧಾಂತದಂತೆ ಅಪ್ರಮಾಣವಾಗುವದಿಲ್ಲ. ಏಕೆಂದರೆ ಸ್ವಪ್ನವ್ಯವಹಾರವು ಎಚ್ಚರವಾಗುವವರೆಗೆ ಸತ್ಯವಾಗಿರುವಂತೆ ಪ್ರತ್ಯಕ್ಷಾದಿವ್ಯವಹಾರಗಳೂ ಬ್ರಹ್ಮಾತ್ಮಜ್ಞಾನವಾಗುವವರೆಗೆ ಸತ್ಯವಾಗಿಯೇ ಇರುತ್ತವೆ. ಕನಸು ಇರುವವರೆಗೆ ಯಾರಿಗೂ ಅಲ್ಲಿರುವ ಪ್ರತ್ಯಕ್ಷಾದಿಗಳು ಅನೃತವೆಂದೇನೂ ಆಗಿರುವದಿಲ್ಲವಷ್ಟೆ? ಅದರಂತೆಯೇ ಇಲ್ಲಿಯೂ ತಿಳಿಯಬೇಕು. ವಿಧಿನಿಷೇಧವ್ಯವಹಾರವನ್ನೂ ಹೀಗೆಯೇ ತಿಳಿಯಬೇಕು. ಅವೂ ಆತ್ಮಜ್ಞಾನವಾಗುವವರೆಗೆ ಸತ್ಯವೇ ಆಗಿರುತ್ತದೆ. ಇನ್ನು ಅನೃತವಾದ ವೇದಾಂತವಾಕ್ಯದಿಂದ ಸತ್ಯವಾದ ಬ್ರಹ್ಮಾತ್ಮಜ್ಞಾನವು ಆಗುವದು ಹೇಗೆ? – ಎಂಬುದು ನಿಮ್ಮ ಎರಡನೆಯ ಆಶಂಕೆ. ಅದಕ್ಕೆ ಪರಿಹಾರವೇನೆಂದರೆ ಇದಕ್ಕೆ ದೃಷ್ಟಾಂತಗಳುಂಟು. ಶಂಕಾವಿಷವು – ಇದು ವಿಷವೆಂಬ ಶಂಕೆಗೆ ವಿಷಯವಾದದ್ದು–ಮರಣಕ್ಕೆ ಕಾರಣವಾಗಿರುತ್ತದೆ; ಕನಸಿನಲ್ಲಿ ಹಾವು ಕಡಿದಂತೆ, ನೀರಿನಲ್ಲಿ ಸ್ನಾನಮಾಡಿದಂತೆ ಕಾರ್ಯವಾಗುತ್ತದೆ. ಆ ಕಾರ್ಯವೂ ಸುಳ್ಳೇ ಅಲ್ಲವೆ? – ಎಂದರೆ ಆ ಕಾರ್ಯವು ಸುಳ್ಳಾದರೂ ಅದರ

ಅರಿವು ಸುಳ್ಳಾಗುವದಿಲ್ಲ; ಏಕೆಂದರೆ ಎಚ್ಚರವಾದಮೇಲೂ ಅದು ಉಳಿದುಕೊಂಡಿರುತ್ತದೆ. ಇದರಂತೆ ಅನೃತವಾದ ಕನಸುಗಳು ಕೆಲವು ಸತ್ಯವಾದ ಫಲಗಳ ಸೂಚಕವಾಗುತ್ತವೆ. ಇದಲ್ಲದೆ ವೇದಾಂತಪ್ರಮಾಣವು ಅಂತ್ಯಪ್ರಮಾಣವು. ಅದರಿಂದ ಆತ್ಮೈಕತ್ವವನ್ನು ತಿಳಿದುಕೊಂಡಮೇಲೆ ಮತ್ತೇನೂ ಕೇಳತಕ್ಕದ್ದು ಉಳಿದಿರುವದಿಲ್ಲ. ಆಮೇಲೆ ಪ್ರಮಾಣವ್ಯವಹಾರವೇ ಮುಗಿದುಹೋಗಿಬಿಡುತ್ತದೆ. ಆ ತಿಳಿವಳಿಕೆಯು ಹುಟ್ಟುವದಿಲ್ಲವೆಂದಾಗಲಿ, ಭ್ರಾಂತಿಯೆಂದಾಗಲಿ ಹೇಳುವದಕ್ಕೆ ಬರುವದಿಲ್ಲ; ಏಕೆಂದರೆ ಆ ಮೇಲೆ ಬಾಧಕಪ್ರಮಾಣವೇ ಉಳಿದಿರುವದಿಲ್ಲ, ಅವಿದ್ಯಾನಿವೃತ್ತಿಯೂ ಆಗಿಬಿಟ್ಟಿರುತ್ತದೆ. ಆದ್ದರಿಂದ ಇಲ್ಲಿ ಯಾವ ಆಕ್ಷೇಪಕ್ಕೂ ಅವಕಾಶವಿರುವದಿಲ್ಲ.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೀಗೆಂದರು: ಭರ್ತೃಪ್ರಪಂಚರು ಆಚಾರ್ಯರ ಸಮಕಾಲೀನರಾದ ಅಥವಾ ಅವರ ಹಿಂದೆ ಇದ್ದ ಭೇದಾಭೇದವಾದಿಗಳು. ಅವರ ಮತವೇನೆಂದರೆ ಬ್ರಹ್ಮವು ಅನೇಕಾತ್ಮಕವಾಗಿರುತ್ತದೆ. ಮರ ಎಂಬುದು ಒಂದಾಗಿದ್ದರೂ ಕೊಂಬೆಗಳು ಎಂದು ನಾನಾತ್ವವೂ ಇರುವಂತೆ, ಅಥವಾ ಸಮುದ್ರ ಎಂಬುದು ಒಂದೇ ಆದರೂ ನೊರೆ, ತೆರೆ-ಎಂದು ಮುಂತಾಗಿ ನಾನಾತ್ಮಕವಾಗಿಯೂ ಇರುವಂತೆ ಬ್ರಹ್ಮದಲ್ಲಿ ಏಕತ್ವವೂ ನಾನಾತ್ವವೂ ಇದೆ; ಏಕತ್ವಾಂಶದ ಜ್ಞಾನದಿಂದ ಮೋಕ್ಷವ್ಯವಹಾರವೂ ಸಿದ್ಧಿಸುವದು, ನಾನಾತ್ವಾಂಶದಿಂದ ಲೌಕಿಕವೈದಿಕವ್ಯವಹಾರಗಳೂ ಸಿದ್ಧಿಸುವವು. ಭರ್ತೃಪ್ರಪಂಚರ ಈ ಮತವನ್ನು ಆಚಾರ್ಯರು ಖಂಡಿಸಿರುತ್ತಾರೆ: ಶ್ರುತಿಗಳು ಕೇವಲಾದ್ವೈತವನ್ನೇ ಹೇಳುತ್ತವೆಯೆಂದೂ ದ್ವೈತವು ಅವಿದ್ಯಾಕಲ್ಪಿತವ್ಯವಹಾರಮಾತ್ರವೆಂದೂ ಅವರು ಹೇಳುತ್ತಾರೆ. ಮರ, ಸಮುದ್ರ - ಎಂಬ ದೃಷ್ಟಾಂತರದಲ್ಲಿ ನಾನಾತ್ವವಿದ್ದಮಾತ್ರದಿಂದ ನಿರವಯವವಾದ ಬ್ರಹ್ಮದಲ್ಲಿ ನಾನಾತ್ವವನ್ನು ಕಲ್ಪಿಸುವದು ಸರಿಯಾಗುವದಿಲ್ಲ. ದ್ವೈತಾದ್ವೈತವೆಂಬ ತಿಳಿವಳಿಕೆಯೇ ವಿರುದ್ಧವಾಗಿದೆ. ಮಿಥ್ಯಾಜ್ಞಾನವೇ ಇಲ್ಲದ್ದರಿಂದ ಜ್ಞಾನದಿಂದ ಮೋಕ್ಷವೆಂಬುದೂ ಸಿದ್ಧಿಸುವದಿಲ್ಲ-ಎಂಬುದು ಆ ಮತದ ಖಂಡನೆಯ ಸಾರ.

ಅದ್ವೈತಮತದ ಮೇಲೆ ಆ ಮತದವರು ಹಾಕುವ ಆಕ್ಷೇಪಗಳಿಗೆ ಆಚಾರ್ಯರು ಹೇಳುವ ಪರಿಹಾರಗಳನ್ನು ಈ ದಿನದ ಪ್ರವಚನದಲ್ಲಿ ತಿಳಿಸಿದೆ. ಸರ್ವಪ್ರಮಾಣಪ್ರಮೇಯವ್ಯವಹಾರಗಳೂ ಪರಮಾರ್ಥಜ್ಞಾನವಾಗುವ ಮುಂಚೆಯೇ ಸತ್ಯವಾಗಿರುತ್ತವೆ. 'ಅದ್ವೈತವೇ ಸಿದ್ಧಾಂತವಾದರೆ ಇಂಥಿಂಥ ದೋಷಗಳು ಬರುತ್ತವೆ' ಎಂಬ ಆಕ್ಷೇಪವೇ ನಿಲ್ಲುವದಿಲ್ಲ. 'ಏಕೆಂದರೆ ಅದ್ವೈತವೆಂದರೆ ದ್ವೈತವಿಲ್ಲದ್ದು; ಅದರಲ್ಲಿ ದೋಷಗಳು ಎಂಬ ದ್ವೈತವು ಹೇಗೆ ಬಂದೀತು? ಅದ್ವೈತವೇ ನಿಜವಾದರೆ' ಎಂದು ರೇಶಬ್ದವನ್ನುಪಯೋಗಿಸುವದೂ ಸರಿಯಲ್ಲ; ಏಕೆಂದರೆ ಶ್ರುತಿಯು ಅದ್ವೈತಾನುಭವಪರ್ಯಂತವಾದ ಅವಗತಿಯನ್ನು ಕೊಟ್ಟುಬಿಡುತ್ತದೆ. ಶ್ರುತಿಯು ಈ ಅವಗತಿಯನ್ನು ಕೊಟ್ಟಮೇಲೆ ಪ್ರಮಾಣಾದಿವ್ಯವಹಾರವೇ ಇಲ್ಲದ್ದರಿಂದ ಇದಕ್ಕೆ **ಅಂತ್ಯಪ್ರಮಾಣವೆನ್ನು**ವರು. ಅದ್ವೈತವೇ ಕೊನೆಯ ಮಾತೇಕೆ? ಶೂನ್ಯವೇಕೆಲ್ಲ? – ಎಂದು ಕೇಳುವದು ಕುತರ್ಕವು. ಏಕೆಂದರೆ ಅದ್ವೈತಾತ್ಮನೇ ಸರ್ವಸಾಕ್ಷಿಯಾಗಿರುವದರಿಂದ ಸರ್ವಶೂನ್ಯತ್ವವನ್ನು ಕಲ್ಪಿಸುವದೂ ಸಾಧ್ಯವಿಲ್ಲ. ತರ್ಕದಿಂದ ಮಾಡುವ ಆಕ್ಷೇಪವು ಅನುಭವದ ಮುಂದೆ ನಿಲ್ಲಲಾರದಾದ್ದರಿಂದ ಇಲ್ಲಿ ಯಾವ ಕುತರ್ಕದ ಆಕ್ಷೇಪಕ್ಕೂ ಅವಕಾಶವಿಲ್ಲ – ಎಂಬುದು ಪರಿಹಾರಭಾಷ್ಯದ ಸಾರ. ಶಂಕಾವಿಷ, ಸ್ವಪ್ನದಲ್ಲಿ ಸರ್ಪ ಕಡಿದದ್ದು – ಮುಂತಾದ ದೃಷ್ಟಾಂತಗಳನ್ನು ಕೊಟ್ಟು ಹೇಳಿರುವದು ಜಿಜ್ಞಾಸುಗಳಿಗೆ ಸಂಭವನಾಯುಕ್ತಿಯನ್ನು ಒದಗಿಸುವದಕ್ಕೇ ಹೊರತು ಅದ್ವೈತವನ್ನು ತರ್ಕದಿಂದ ಸಾಧಿಸುವದಕ್ಕಲ್ಲ.

★★★★★

# ಪರಮಾರ್ಥದರ್ಶನದ ಪ್ರತಿಪಾದನೆ

## 20 - 4 - 1961

**ಶ್ರೀಶ್ರೀಗಳವರು**

ಉಪದೇಶಸಾಹಸ್ರಿಯ ಪದ್ಯಭಾಗದ 10ನೆಯ ಪ್ರಕರಣದಲ್ಲಿ **ಪರಮಾರ್ಥದರ್ಶನ**ದ ಪ್ರತಿಪಾದನೆಯಿದೆ. ಈ ಗ್ರಂಥವು ಆಚಾರ್ಯರೇ ಬರೆದಿದ್ದೆಂಬುದಕ್ಕೆ ಸಾಕಾದಷ್ಟು ಪ್ರಮಾಣಗಳಿವೆ. ಪ್ರಕೃತಪ್ರಕರಣದಲ್ಲಿ ಅಡಕವಾಗಿರುವ ವಿಷಯಗಳು ಮುಂದೆ ಸಪ್ತಾಹದಲ್ಲಿ ಬರಲಿರುವ ವಿಚಾರಗಳನ್ನೆಲ್ಲ ಸೂತ್ರಪ್ರಾಯವಾಗಿ ಒಳಗೊಂಡಿವೆ. ಪರಮಾರ್ಥತತ್ತ್ವವು ನಮ್ಮ ಆತ್ಮನು. ಅದು ನಿತ್ಯದೃಗ್ರೂಪವಾಗಿರುತ್ತದೆ. ಆಕಾಶದಂತೆ ಅಸಂಗವಾದದ್ದು, ಸರ್ವವಿಕಾರರಹಿತವಾಗಿ ನಿತ್ಯಶುದ್ಧಬುದ್ಧಮುಕ್ತ-ಸ್ವಭಾವವಾಗಿರತಕ್ಕ ನಮ್ಮಗಳ ಆತ್ಮನು ಇದೇ. ಎಲ್ಲೆಲ್ಲಿಯೂ ಇರತಕ್ಕ **ಭೂಮ**ಶಬ್ದವಾಚ್ಯವಾದದ್ದು, ಕಾರ್ಯಕಾರಣಭಾವರಹಿತವಾದ ಅದ್ವೈತತತ್ತ್ವವು. ಅವಸ್ಥಾತ್ರಯಗಳಿಗೆ ಅತೀತವಾದ ತುರೀಯವು. ಕ್ರಿಯಾಕಾರಕ-ಫಲಭೇದವರ್ಜಿತವಾದದ್ದು, ಬಂಧಮೋಕ್ಷವ್ಯವಹಾರವನ್ನು ಮೀರಿದ್ದು, ಕ್ಷರಾಕ್ಷರಗಳಿಗೆ ವಿಲಕ್ಷಣವಾದ ಪುರುಷೋತ್ತಮನು ; ಅವಿದ್ಯಾ-ಕಾಮಕರ್ಮಗಳಿಲ್ಲದ್ದು, ನಿರ್ವಿಕಲ್ಪವಾದದ್ದು, ಈ ಜ್ಞಾನವಿದ್ದವರಿಗೆ ಜನ್ಮವಿಲ್ಲ, ಕರ್ಮವಿಲ್ಲ. ಅವಸ್ಥಾತ್ರಯದಲ್ಲಿಯೂ ದ್ವಿತೀಯವಸ್ತುವನ್ನು ಕಂಡೂಕಾಣದೆ, ಕರ್ಮಗಳನ್ನು ಮಾಡಿಯೂ ಮಾಡದೆ ಇರುವಾತನೇ ಆತ್ಮಜ್ಞನು - ಎಂಬುದೇ ಪರಮಾರ್ಥದರ್ಶನ.

★★★★★

# ಜೀವಾತ್ಮಪರಮಾತ್ಮರ ಸಂಬಂಧ

**21- 4 - 1961**

**ಬ್ರ|| ಶ್ರೀ|| ಎಸ್.ವಿಠ್ಠಲಶಾಸ್ತ್ರಿಗಳು**

**ಬೃಹದಾರಣ್ಯಕಭಾಷ್ಯ** (2-1-20)ರಲ್ಲಿ ಜೀವಾತ್ಮಪರಮಾತ್ಮರ ಸಂಬಂಧವನ್ನು ಚರ್ಚಿಸುವ ಭಾಷ್ಯಭಾಗ: ಬಾಲಾಕಿ, ಅಜಾತಶತ್ರು- ಇವರ ಸಂವಾದದಲ್ಲಿ ಬ್ರಹ್ಮವು ಯಾವದು?- ಎಂಬುದನ್ನು ಚರ್ಚೆಮಾಡಿರುತ್ತದೆ. ಅದರ ಕೊನೆಯಲ್ಲಿ ಅಜಾತಶತ್ರುವು ಸುಪ್ತಪುರುಷನನ್ನು ಎಬ್ಬಿಸಿ ಸುಷುಪ್ತಿಯಲ್ಲಿ ಈ ಜೀವನು ಎಲ್ಲಿದ್ದನು ? ಎಲ್ಲಿಂದ ಬಂದನು?- ಎಂಬ ಪ್ರಶ್ನೆಯನ್ನು ತೆಗೆದು ತಾನೇ ಅದಕ್ಕೆ ಉತ್ತರವನ್ನು ಹೇಳಿರುತ್ತಾನೆ. ಸುಷುಪ್ತಾತ್ಮನಿಂದಲೇ ವಾಗಾದಿಕರಣಗಳೂ ಭೂರಾದಿಲೋಕಗಳೂ ಕರ್ಮಫಲಗಳೂ ದೇವತೆಗಳೂ ಸರ್ವಭೂತಗಳೂ ಬಂದಿರುತ್ತವೆ- ಎಂದು ತಿಳಿಸಿರುತ್ತಾನೆ. ಆ ಆತ್ಮನ **ಉಪನಿಷತ್ತು**- ಎಂದರೆ ರಹಸ್ಯವಾದ ಹೆಸರು- ಸತ್ಯದ ಸತ್ಯವು ಎಂದು ಉಪಸಂಹಾರಮಾಡಿರುತ್ತಾನೆ. ಅದರಲ್ಲಿ ಸತ್ಯದ ಸತ್ಯವೆಂದರೆ ಯಾರು?- ಎಂಬುದನ್ನು ಇಲ್ಲಿ ಚರ್ಚಿಸಿ ನಿರ್ಣಯಿಸಿದೆ. ಪರಮಾತ್ಮನೇ ಸತ್ಯದ ಸತ್ಯವು-ಎಂಬುದು ಅಜಾತಶತ್ರುವಿನ ನಿರ್ಣಯ.

**ಶ್ರೀಶ್ರೀಗಳು** ಅನುವಾದದಲ್ಲಿ ಹೇಳಿದ್ದೇನೆಂದರೆ, ಈ ದಿನದ ವಿಚಾರವು ಒಣಚರ್ಚೆ ಎಂದು ಭಾವಿಸಬಾರದು. ಬಾಲಾಕಿಯೂ ಅಜಾತಶತ್ರುವೂ ತತ್ತ್ವಪಕ್ಷಪಾತಿಗಳು. ಪರಮಾರ್ಥತತ್ತ್ವವು ಯಾವದೆಂಬುದನ್ನು ರಾಜನಿಗೆ ತಿಳಿಸಿಕೊಡುವದಕ್ಕೆ ಬಂದ ಗಾರ್ಗ್ಯನೂ ಬ್ರಹ್ಮಸ್ವರೂಪವನ್ನು ತಕ್ಕಮಟ್ಟಿಗೆ ತಿಳಿದವನೇ ಆಗಿದ್ದನು ; ಅವನಿಗೆ ಬ್ರಹ್ಮದ ಪೂರ್ಣತತ್ತ್ವವು ತಿಳಿದಿರಲಿಲ್ಲ, ಅಷ್ಟೆ. ವೇದಾಂತದಲ್ಲಿ ಹೇಳಿರುವ ಪರಮಾರ್ಥವು ಒಂದೇ ಒಂದು ; ಅದನ್ನೇ ಜನರು ಬಗೆಬಗೆಯಾಗಿ ತಿಳಿದುಕೊಂಡಿರುತ್ತಾರೆ. ಜೀವನು, ಪ್ರಾಣನು- ಅಥವಾ ಸರ್ವದೇವತಾ ರೂಪನಾದ ಪರಮೇಶ್ವರನು- ನಿರುಪಾಧಿಕವಾದ ಪರಬ್ರಹ್ಮ- ಈ ಮೂರೂ ಒಂದೇ ತತ್ತ್ವವು. ಇವುಗಳೊಳಗೆ ಅಜಾತಶತ್ರುವು

ತಿಳಿಸಿಕೊಟ್ಟ ತತ್ತ್ವವು ಯಾವದು?- ಎಂಬುದೀಗ ಪ್ರಶ್ನೆ. ಅವನು ಗಾರ್ಗ್ಯನಿಗೆ ಒಬ್ಬ ಸುಪ್ತಪುರುಷ (ಗಾಢನಿದ್ರೆಯಿಂದ ಮಲಗಿದ್ದ ಮನುಷ್ಯ) ನನ್ನು ಎಬ್ಬಿಸಿ ತೋರಿಸಿ 'ಈ ಜೀವನು ಆ ನಿದ್ರೆಯಲ್ಲಿ ಎಲ್ಲಿದ್ದನು? ಎಲ್ಲಿಂದ ಬಂದನು ?' ಎಂದು ಕೇಳಿರುತ್ತಾನೆ. ಸುಷ್ತಾತ್ಮನ ಹೆಸರು 'ಸತ್ಯಸ್ಯ ಸತ್ಯಮ್' ಸತ್ಯದ ಸತ್ಯವು ಎಂದು ತಿಳಿಸಿರುತ್ತಾನೆ. ಆ ಆತ್ಮಪದಾರ್ಥವು ಯಾವದು ?- ಎಂಬುದೇ ನಿರ್ಣಯಿಸಬೇಕಾಗಿರುವ ಪ್ರಶ್ನೆ.

ಇಲ್ಲಿ ಮೂರು ಉತ್ತರಗಳನ್ನು ಕಲ್ಪಿಸಬಹುದು. **ಮೊದಲನೆಯದು** ಎಲ್ಲರಿಗೂ ಹೊಳೆಯುವ ಉತ್ತರ. ಜೀವನು ಎಚ್ಚರವಾಗಿದ್ದು, ಜೀವನೇ ನಿದ್ರಿಸಿ ಮತ್ತೆ ಎಚ್ಚರಕ್ಕೆ ಬಂದ. ಆದ್ದರಿಂದ ಜೀವನೇ ಇಲ್ಲಿ ಹೇಳಿರುವ ತತ್ತ್ವವು. ಅವನನ್ನೇ 'ಸತ್ಯದ ಸತ್ಯ' ಎಂದು ಉಪಾಸನೆಮಾಡಬೇಕು. ಈ ಆತ್ಮನಿಂದ ಪ್ರಾಣಗಳು, ಲೋಕಗಳು, ದೇವತೆಗಳು- ಮುಂತಾಗಿ ಹೊರಟುಬಂದಿರುತ್ತಾರೆ ಎಂದು ಶ್ರುತಿಯಲ್ಲಿ ಹೇಳಿದೆಯಲ್ಲ! ಅವನು ಜೀವನು ಹೇಗಾದಾನು ?- ಎಂಬ ಆಕ್ಷೇಪಕ್ಕೆ ಈ ಪಕ್ಷದವರು ಶಾಸ್ತ್ರಪ್ರಾಮಾಣ್ಯದಿಂದ ಇದೆಲ್ಲವನ್ನೂ ಶ್ರದ್ಧೆಯಿಂದ ನಂಬಬೇಕು ಎಂಬ ಪರಿಹಾರವನ್ನು ಹೇಳಿದ್ದಾರೆ. **ಎರಡನೆಯದು** ಪರಮೇಶ್ವರನೇ- ಗಾರ್ಗ್ಯನು ಹೇಳಿದ ಪ್ರಾಣನೇ- ಎಂಬ ಪಕ್ಷ. ಪರಮೇಶ್ವರನೆಂಬ ಬ್ರಹ್ಮವನ್ನೇ ಆತ್ಮೇತ್ಯೇವೋಪಾಸಿತ- ಮುಂತಾದ ವಾಕ್ಯಗಳಿಂದ ಇಲ್ಲಿ ಹೇಳಿರುತ್ತದೆ. ಆದ್ದರಿಂದ ಪರಮೇಶ್ವರನನ್ನೇ ಸುಷುಪ್ತಿಯಲ್ಲಿ ಜೀವನು ಸೇರಿಕೊಂಡಿರುತ್ತಾನೆ. ಅವನನ್ನೇ ಉಪಾಸನೆಮಾಡಿ ಅದರ ಬಲದಿಂದ ಸತ್ತಬಳಿಕ ಬ್ರಹ್ಮಸಾಯುಜ್ಯವನ್ನು ಪಡೆದುಕೊಳ್ಳುತ್ತಾನೆ. ಅವನನ್ನೇ ಇಲ್ಲಿ 'ಸತ್ಯದ ಸತ್ಯವು' ಎಂದು ಹೇಳಿದೆ ಎಂಬುದು ಈ ಪಕ್ಷದವರ ಮತ. **ಪರಮಸಿದ್ಧಾಂತವೇನೆಂದರೆ** ಪರಮಾತ್ಮನೇ ಜಗತ್ತನ್ನು ಸೃಷ್ಟಿಸಿ ಜೀವರೂಪದಿಂದ ಈ ಶರೀರದೊಳಗೆ ಹೊಕ್ಕಿರುತ್ತಾನೆಂದು ಶ್ರುತಿಯಲ್ಲಿ ಹೇಳಿದೆ; ಬ್ರಹ್ಮವು ನಮ್ಮಗಳ ಆತ್ಮನೆಂದೇ ಹೇಳಿರುತ್ತದೆ. ಜೀವನು ಸುಷುಪ್ತಿಯಲ್ಲಿ ಆ ಪರಮಾತ್ಮನ ರೂಪದಲ್ಲಿಯೇ ಇರುತ್ತಾನೆ ; ಈಗ ಅವನಿಂದಲೇ ಎಚ್ಚತ್ತುಬಂದಿರುತ್ತಾನೆ. ಬ್ರಹ್ಮವೇ ನಮ್ಮ ಸ್ವರೂಪವೆಂದು

ಅರಿತುಕೊಂಡವರಿಗೆ ಸರ್ವಾತ್ಮಭಾವವು ಲಭಿಸುತ್ತದೆ. ಅದೇ **'ಸತ್ಯದ ಸತ್ಯವು'**-ಎಂದರೆ ಬಿಸಿನೀರಿನ ಬಿಸಿ ಬೆಂಕಿಯೇ ಆಗಿರುವಂತೆ, ಸತ್ಯವೆಂದು ತೋರುವ ವಸ್ತುಗಳೆಲ್ಲದರ ತಿರುಳು.

★★★★★

# ಬ್ರಹ್ಮವು ಜಗತ್ಕಾರಣವು

**22-04-1961**

**ಬ್ರ॥ಶ್ರೀ॥ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು**

**ಬ್ರಹ್ಮಸೂತ್ರಭಾಷ್ಯದಲ್ಲಿ** (1-4-14,15) ಬ್ರಹ್ಮವು ಜಗತ್ಕಾರಣವೆಂಬ ವಿಷಯಕ್ಕೆ ಆಕ್ಷೇಪಸಮಾಧಾನಗಳು ಹೀಗಿವೆ : ಶ್ರುತಿಗಳಲ್ಲಿ ಸೃಷ್ಟಿಯನ್ನು ಹೇಳುವಾಗ ಬಗೆಬಗೆಯಾಗಿ ಹೇಳಿರುತ್ತದೆ. ಆಕಾಶವೇ ಮೊದಲು ಸೃಷ್ಟಿಯಾಯಿತೆಂದು ಒಂದು ಕಡೆ, ತೇಜಸ್ಸೇ ಮೊದಲೆಂದು ಮತ್ತೊಂದು ಕಡೆ, ಪ್ರಾಣವೇ ಮೊದಲೆಂದು ಇನ್ನೊಂದು ಕಡೆ, ಕ್ರಮವೇ ಇಲ್ಲದೆ ಲೋಕಗಳ ಸೃಷ್ಟಿಯನ್ನು ಹೇಳಿರುವದು ಬೇರೊಂದು ಕಡೆ- ಹೀಗೆಲ್ಲ ಇವೆ. ಸತ್ತೇ ಜಗತ್ಕಾರಣವೆಂದು ಒಮ್ಮೆ, ಅಸತ್ತೇ ಕಾರಣವೆಂದು ಇನ್ನೊಮ್ಮೆ ಹೀಗೆಲ್ಲ ಇರುವದರಿಂದ ಇಲ್ಲಿ ಏಕವಾಕ್ಯತೆಯಾಗುವಂತಿಲ್ಲವಾದ್ದರಿಂದ ಪ್ರಧಾನಾದಿಕಾರಣವಾದವನ್ನೇ ಒಪ್ಪಬೇಕಲ್ಲವೆ?- ಎಂದು **ಆಕ್ಷೇಪ.** ಸೃಷ್ಟವಾದ ಕಾರ್ಯದ ವಿಷಯಕ್ಕೆ ಬಗೆಬಗೆಯಾಗಿ ಹೇಳಿದ್ದರೂ ಕಾರಣವಾದ ಬ್ರಹ್ಮದ ವಿಷಯದಲ್ಲಿ ಅಭಿಪ್ರಾಯವು ಒಂದೇ ಆಗಿರುತ್ತದೆ. ಸೃಷ್ಟಿಯಲ್ಲಿ ಪರಮತಾತ್ಪರ್ಯವಿಲ್ಲದ್ದರಿಂದಲೂ ಕಾರ್ಯವು ಕಾರಣಕ್ಕಿಂತ ಬೇರೆಯಿಲ್ಲವೆಂದು ಮಾತ್ರವೇ ತಿಳಿಸುವದಕ್ಕೇ ಸೃಷ್ಟಿಯನ್ನು ಹೇಳಿರುವದರಿಂದಲೂ ಬ್ರಹ್ಮವನ್ನು ಅಸತ್ತೆಂದು ಕರೆದಿರುವದು ಸೃಷ್ಟಿಗೆ ಪೂರ್ವದಲ್ಲಿ ನಾಮರೂಪಗಳಿಂದ ವ್ಯಾಕೃತವಾಗಿರಲಿಲ್ಲವೆಂದು ತಿಳಿಸುವದಕ್ಕೇ ಹೊರತು ಅದು

ಅಸತ್ತೆನ್ನುವದಕ್ಕಲ್ಲವಾದ್ದರಿಂದಲೂ ಯಾವ ಆಕ್ಷೇಪವೂ ಇಲ್ಲಿಲ್ಲ - ಎಂಬುದು **ಸಮಾಧಾನ**ದ ಸಾರವು.

**ಶ್ರೀಗಳು** ಅನುವಾದದಲ್ಲಿ ಇಂತೆಂದರು : ವೇದವಾಕ್ಯಗಳಿಗೆ ಸಮನ್ವಯ ಮಾಡಿ ವೇದಾರ್ಥವನ್ನು ನಿರ್ಣಯಿಸುವ ಕ್ರಮವನ್ನು ಮೀಮಾಂಸೆ ಎನ್ನುವರು. ಈ ಪದ್ಧತಿಯು ಪಾಶ್ಚಾತ್ಯರಲ್ಲಿಯೂ ಬೈಬಲಿನ ವಿಷಯಕ್ಕೆ ಉಂಟು. ವಾಕ್ಯಗಳ ಏಕವಾಕ್ಯತಾಮಾತ್ರದಿಂದ ವಸ್ತುಸಿದ್ಧಿಯಾಗುವದಿಲ್ಲ, ಪೂರ್ವಾಪರವಿರೋಧವಿಲ್ಲ ವೆಂದಮಾತ್ರಕ್ಕೂ ಸಿದ್ಧಾಂತವು ನಿಂತಿತೆಂದು ಹೇಳಲಾಗದು; ಹೀಗೆ ಹೊಂದಿಸುವದು ಸುಳ್ಳಿನ ವಿಷಯಕ್ಕೂ ಕೆಲವು ಕಡೆ ಸಾಧ್ಯ. ಐತಿಹಾಸಿಕದೃಷ್ಟಿಯಿಂದ ವೇದವಾಕ್ಯಗಳಿಗೆ ಅರ್ಥವನ್ನು ಮಾಡುವದೂ ಸರಿಯಲ್ಲ. ಶ್ರುತ್ಯರ್ಥವು ಅನುಭವಾನುಸಾರಿಯಾಗಿದೆ ಎಂದು ತೋರಿಸಿರುವದೇ ಆಚಾರ್ಯರ ಹೆಚ್ಚುಗಾರಿಕೆ. ಪ್ರಕೃತದಲ್ಲಿ ಕಾರ್ಯವಾದ ಜಗತ್ತು ಕಾರಣವಾದ ಬ್ರಹ್ಮಕ್ಕಿಂತ ಬೇರೆಯಲ್ಲವೆಂದು ತಿಳಿಸುವದೇ ಶ್ರುತಿಗೆ ತಾತ್ಪರ್ಯ. ಶ್ರುತಿಯು ಕಾರ್ಯಕಾರಣವಾದವನ್ನು ಗಟ್ಟಿಮಾಡುವ ಬದಲು ಕಾರ್ಯಕಾರಣಭಾವವೇ ನಿಜವಾಗಿಲ್ಲ ಎಂಬುದನ್ನು ತಿಳಿಸುವದರಲ್ಲಿ ತಾತ್ಪರ್ಯವುಳ್ಳದ್ದಾಗಿದೆ.

★★★★★

# ಸುಷುಪ್ತ ಪುರುಷನ ಸ್ವರೂಪ

**23-04-1961**

**ಬ್ರ॥ ಶ್ರೀ॥ ಎಸ್. ವಿಠಲಶಾಸ್ತ್ರಿಗಳವರು**

ಉದ್ದಾಲಕನು ಶ್ವೇತಕೇತುವನ್ನು ಕುರಿತು ಇಂತೆಂದನು : ಪರದೇವತೆಯಾದ ಬ್ರಹ್ಮವು ಮನಸ್ಸಿನಲ್ಲಿ ಹೊಕ್ಕು ಶ್ರವಣಮನನದರ್ಶನಾದಿ-ವ್ಯಾಪಾರಗಳನ್ನು ಮಾಡುತ್ತಿದೆ. ಆದ್ದರಿಂದ ಅದಕ್ಕೆ 'ಮನಸ್ಸು' ಎಂದೇ ಹೆಸರು ಬಂದಿದೆ. ಈ ಮನಸ್ಸು ಉಪಶಾಂತವಾದರೆ ಜೀವನು ಗಾಢನಿದ್ರೆಯಲ್ಲಿ ತನ್ನ

ಆತ್ಮಸ್ವರೂಪವೇ ಆಗಿರುವ ಬ್ರಹ್ಮದಲ್ಲಿ ಸೇರಿಹೋಗುತ್ತಾನೆ. ಆಗ ಅವನಿಗೆ ಜೀವತ್ವವಿರುವದಿಲ್ಲ ಪರದೇವತೆಯೇ ಆಗಿಬಿಟ್ಟಿರುತ್ತಾನೆ ಆದ್ದರಿಂದ ಜನರು ಅವನನ್ನು 'ಸ್ವಪಿತಿ' (ತನ್ನಲ್ಲಿ ಸೇರಿಕೊಂಡುಹೋಗಿರುತ್ತಾನೆ) ಎನ್ನುತ್ತಾರೆ.

ಆದ್ದರಿಂದ ಆಗ ಅವನಿಗೆ ಆಯಾಸಪರಿಹಾರವಾಗುತ್ತದೆ. ಸುಷುಪ್ತಿಸ್ಥಾನದಲಿರುವಾಗ ಪ್ರಾಣವೊಂದೇ ವ್ಯಾಪಾರಮಾಡುತ್ತಿರುವದರಿಂದ ಆ ಅವಸ್ಥೆಯಲ್ಲಿ ಪರಮಾತ್ಮನಿಗೆ '**ಪ್ರಾಣನು**' ಎಂದು ಹೆಸರು. ಆ ಪ್ರಾಣನಲ್ಲಿಯೇ ಜೀವನು ಆಗ ಒಂದಾಗಿಬಿಟ್ಟಿರುತ್ತಾನೆ- ಎಂಬುದು ಗ್ರಂಥದ ಸಾರವು.

**ಶ್ರೀಶ್ರೀಗಳು** ಅನುವಾದದಲ್ಲಿ ಹೀಗೆಂದು ಅಪ್ಪಣೆಕೊಡಿಸಿದರು; ವೇದದಲ್ಲಿ ಕೆಲವು ವಿಷಯಗಳನ್ನು ನೆನಪಿಟ್ಟುಕೊಳ್ಳುವದಕ್ಕೆ ಅನುಕೂಲವಾಗಲೆಂದು ಒಂದೊಂದು ಬಗೆಯ ಶಬ್ದವ್ಯುತ್ಪತ್ತಿಯನ್ನು ತೋರಿಸಿರುತ್ತಾರೆ. ಇಲ್ಲಿ 'ಸ್ವಪಿತಿ' (ನಿದ್ರಿಸುತ್ತಿದಾನೆ) ಎಂಬ ಸಂಸ್ಕೃತಮಾತಿನಿಂದಲೇ 'ಸ್ವಮ್ ಅಪಿತಿ' (ತನ್ನಲ್ಲಿ ಲಯವಾಗಿರುತ್ತಾನೆ) ಎಂಬರ್ಥ ಬರುವಂತೆ ವ್ಯುತ್ಪತ್ತಿಯನ್ನು ಹೇಳಿರುವದೊಂದು ವಿಶೇಷ. ನಿದ್ರೆಯಲ್ಲಿ ಯಾರಿಗೂ ಅರಿವು ಇರುವದಿಲ್ಲವೆಂಬುದು ಪ್ರಸಿದ್ಧ : ಆದರೆ ಅಲ್ಲಿ ಅರಿವು ಏಕೆ ಇಲ್ಲ? -ಎಂಬುದನ್ನು ಶ್ರುತಿಯು ಮಾತ್ರ ತಿಳಿಸುತ್ತದೆ. ಜೀವನು ಆಗ ಪರಬ್ರಹ್ಮಸ್ವರೂಪದಲ್ಲಿ ಒಂದಾಗಿಬಿಟ್ಟಿರುತ್ತಾನೆ. ಎರಡಿದ್ದರಲ್ಲವೆ, ಜ್ಞಾನವುಂಟಾಗುವದು? ಇದು ಅದ್ವೈತಾವಸ್ಥೆಯಾದ್ದರಿಂದ ಇಲ್ಲಿ ಯಾವ ಜ್ಞಾನವೂ ಉಂಟಾಗುವದಿಲ್ಲ- ಎಂದು ಶ್ರುತಿಯಲ್ಲಿ ಮತ್ತೆಮತ್ತೆ ಹೇಳಿರುತ್ತದೆ. ಸುಷುಪ್ತಿಯಲ್ಲಿ ನಮಗೆ ಯಾವ ನಿಷ್ಪ್ರಪಂಚರೂಪವೇ ಇರುತ್ತದೆಯೋ ಅದೇ ಎಚ್ಚರದಲ್ಲಿಯೂ ಇರುತ್ತದೆ. ಹೊರಗೆ ತೋರುವ ಮಿಥ್ಯಾದೃಶ್ಯಗಳನ್ನು ಕಾಣುತ್ತಿರುವೆವೆಂಬ ಭ್ರಾಂತಿಯು ಜನರಿಗೆ ಆಗಿಬಿಟ್ಟಿರುತ್ತದೆ. ಜಾಗ್ರತ್ತಿನಲ್ಲಿ ದ್ವೈತವನ್ನು ನೋಡುತ್ತಿದ್ದರೂ ಯಾವನಿಗೆ ಸುಷುಪ್ತಿಯಂತೆಯೇ, ದ್ವೈತವೂ ಕಾಣಿಸದೆ ಇರುವನೋ, ಹಾಗೆಯೇ ಎಚ್ಚರದಲ್ಲಿ ಬೇರೆಬೇರೆಯ ಕರ್ಮವನ್ನು ಮಾಡುವಂತಿದ್ದರೂ ಸುಷುಪ್ತಿಯಂತೆಯೇ ಯಾವನು ನಿಷ್ಕ್ರಿಯನಾಗಿ ರುತ್ತಾನೋ ಅವನೇ ನಿಜವಾದ ಆತ್ಮಜ್ಞಾನಿಯು -ಎಂದು ಆಚಾರ್ಯರು ಉಪದೇಶಸಾಹಸ್ರಿಯಲ್ಲಿ ಹೇಳಿರುತ್ತಾರೆ.

★★★★★

# ಬ್ರಹ್ಮಕಾರಣವಾದ

**24-04-1961**

**ವಿದ್ವಾನ್ ಕೆ.ಕೃಷ್ಣಜೋಯಿಸರು**

**ಬ್ರಹ್ಮಸೂತ್ರಭಾಷ್ಯ** 2-1-26ರಿಂದ 29ದಲ್ಲಿ ಬ್ರಹ್ಮಕಾರಣವಾದದಲ್ಲಿ ಸಾಂಖ್ಯರ ಆಕ್ಷೇಪವನ್ನೂ ಅದಕ್ಕೆ ಸಮಾಧಾನಗಳನ್ನು ವಿವರಿಸಿದೆ. ಅದ್ವಿತೀಯವಾದ ಚೈತನ್ಯಸ್ವರೂಪವಾಗಿರುವ ಬ್ರಹ್ಮವು ಜಗತ್ಕಾರಣವೆಂಬುದು ವೇದಾಂತಸಿದ್ಧಾಂತ. ಬ್ರಹ್ಮವು ಇದ್ದಂತೆಯೇ ಇದ್ದು ಜಗತ್ತಾಗಿ ಪರಿಣಮಿಸಿದೆ- ಎಂದು ಹೇಳುವ ವೇದಾಂತಿಗಳ ಅಭಿಪ್ರಾಯವನ್ನು ಹಿಡಿದುಕೊಳ್ಳಲಾರದೆ ಸಾಂಖ್ಯರು ಮಾಡಿರುವ **ಆಕ್ಷೇಪವೇನೆಂದರೆ** : ಬ್ರಹ್ಮವು ನಿರವಯವವಾಗಿ ರುವದರಿಂದ ಪೂರ್ಣವಾಗಿಯೇ ಜಗತ್ತಾಗಿ ಪರಿಣಮಿಸಿರಬೇಕು. ಆಗ ಬೇರೆಯಾಗಿ ಬ್ರಹ್ಮವೇ ಇಲ್ಲದ್ದರಿಂದ ಪರಮಾತ್ಮನನ್ನು ಕಂಡುಕೊಳ್ಳಬೇಕು- ಎಂಬ ಶ್ರುತ್ಯುಪದೇಶವು ಹೊಂದುವದಿಲ್ಲ ; ಈ ವಾದವು ಕಾರಣವು ಜನ್ಮರಹಿತವೆಂಬ ಶ್ರುತಿಗೂ ವಿರುದ್ಧವಾಗುತ್ತದೆ. ಸಾವಯವವೇ ಆಗಲಿ -ಎಂದರೆ ಅದು ನಿರವಯವವೆಂದು ಹೇಳುವ ಶ್ರುತಿಗಳಿಗೆ ವಿರೋಧವಾಗುತ್ತದೆ. ಈ ಆಕ್ಷೇಪಕ್ಕೆ **ಪರಿಹಾರವೇನೆಂದರೆ** ಶ್ರುತಿಪ್ರಾಮಾಣ್ಯದಿಂದ ಬ್ರಹ್ಮವು ಪೂರ್ಣವಾಗಿ ಜಗತ್ತಾಗಿ ಬಿಟ್ಟಿದೆ ಎಂದೂ ಅದು ನಿರವಯವವೂ ಆಗಿದೆಯೆಂದೂ ಒಪ್ಪಬೇಕು. ಈ ಅಭಿಪ್ರಾಯವು ವಿರುದ್ಧವಲ್ಲವೆ? ಎಂದರೆ, ಅವಿದ್ಯಾಕಲ್ಪಿತವಾಗಿರುವ ನಾಮರೂಪಗಳೆಂಬ ರೂಪವಿಶೇಷದಿಂದ ಆತ್ಮನು ಅವ್ಯಾಕೃತರೂಪದಿಂದ ವ್ಯಾಕೃತರೂಪಕ್ಕೆ ತಿರುಗುತ್ತಾನೆ ಎಂದು ಒಪ್ಪುವದರಲ್ಲಿ ಯಾವ ದೋಷವೂ ಇಲ್ಲ; ಪಾರಮಾರ್ಥಿಕವಾದ ತನ್ನ ರೂಪದಿಂದ ಪರಮಾತ್ಮನು ಹಾಗೆಯೇ ಇದ್ದು ಕೊಂಡಿರುತ್ತಾನೆ, ಮಾಯಿಕವಾಗಿ ಜಗದ್ರೂಪವಾಗಿ ಪರಿಣಮಿಸಿಯೂ ಇರುತ್ತಾನೆ. ಸ್ವಪ್ನದಲ್ಲಿ ತಾನು ಒಬ್ಬನೇ ಇದ್ದರೂ ಸ್ವಪ್ನವನ್ನು ಕಾಣುವವನ ದೃಷ್ಟಿಯಿಂದ ವಿಚಿತ್ರವಾದ ಸೃಷ್ಟಿಯಾಗಿರುವದಿಲ್ಲವೆ? ದೇವತೆಗಳೂ ಮಾಯಾವಿಗಳೂ ತಾವು ಇರುವಂತೆಯೇ ಇದ್ದು ವಿಚಿತ್ರಸೃಷ್ಟಿಯನ್ನು

ಮಾಡುವರಲ್ಲವೆ? ಹಾಗೆಯೇ ಸೃಷ್ಟಿಯಾಗಬಹುದಾಗಿದೆ. ಈ ಸಾಂಖ್ಯರ ಆಕ್ಷೇಪವು ಅವರ ಮೇಲೂ ಬೀಳುತ್ತದೆ. ಏಕೆಂದರೆ ಪ್ರಧಾನವು ನಿರವಯವವಾಗಿದ್ದರೂ ಜಗದ್ರೂಪದಿಂದ ಪರಿಣಮಿಸುತ್ತದೆ ಎಂದು ಅವರೂ ಒಪ್ಪುತ್ತಾರೆ. ಸತ್ತ್ವರಜಸ್ತಮಸ್ಸುಗಳೆಂಬ ಅವಯವಗಳು ಅದಕ್ಕಿವೆ-ಎಂದು ಈ ಆಕ್ಷೇಪಕ್ಕೆ ಪರಿಹಾರವನ್ನು ಹೇಳುವದಕ್ಕೆ ಆಗುವದಿಲ್ಲ. ಏಕೆಂದರೆ ಸತ್ತ್ವಾದಿಗಳೂ ನಿರವಯವವೇ ಆಗಿವೆ. ಶಕ್ತಿರೂಪವಾದ ಅವಯವಗಳನ್ನು ಒಪ್ಪಿದರೊ? -ಎಂದರೆ ಬ್ರಹ್ಮನಿಗೂ ಅಂಥ ಮಾಯಿಕಶಕ್ತಿಗಳು ಇದ್ದೇ ಇವೆ. ಇದರಂತೆ ಪರಮಾಣುವಾದಿಗಳಿಗೂ ಈ ಆಕ್ಷೇಪವು ತಗಲುತ್ತದೆ. ಪರಮಾಣುವು ಸಾವಯವವೊ, ನಿರವಯವವೊ? ನಿರವಯವವಾದರೆ ಎರಡು ಪರಮಾಣುಗಳಿಗೆ ಪೂರಸಂಯೋಗವಾಗುವದರಿಂದ ದ್ವ್ಯಣುಕವಾಗುವದು ಹೇಗೆ? ಒಂದೇ ಕಡೆಯಲ್ಲಿ ಸಂಯೋಗವಾಗುವದೆಂದರೆ ಅದು ನಿರವಯವ ಹೇಗೆ ? ಇತ್ಯಾದಿ. ಬ್ರಹ್ಮವಾದದಲ್ಲಿ ಅವಿದ್ಯಾಕಲ್ಪಿತವಾದ ಅವಯವಗಳಿರುವದರಿಂದ ಯಾವ ದೋಷವೂ ಇಲ್ಲ ಎಂಬುದೊಂದು ವಿಶೇಷವಿದೆ; ಮಿಕ್ಕವರು ಎಲ್ಲವೂ ಪರಮಾರ್ಥವೇ ಎನ್ನುವದರಿಂದ ಅವರ ಪಕ್ಷದಲ್ಲಿ ದೋಷವೇ ಇರುತ್ತದೆ-ಎಂಬುದು ಈ ವಿಚಾರದ ಸಾರವು.

★★★★★

# ಕರ್ಮಕಾಂಡಖಂಡನೆ

**25-4-1961**

**ಬ್ರ॥ಶ್ರೀ॥ ಪರಕ್ಕಜೆ ಸುಬ್ರಹ್ಮಣ್ಯಭಟ್ಟರು**

**ಭಗವದ್ ಗೀತಾಭಾಷ್ಯದಲ್ಲಿ** (18-66) ಕರ್ಮಕಾಂಡಖಂಡನೆಯನ್ನು ಮಾಡಿದೆ. ಗೀತೆಯಲ್ಲಿ ಜ್ಞಾನದಿಂದಲೇ ಮೋಕ್ಷವೆಂದು ಹೇಳಿದೆ ಎಂಬುದನ್ನು ತಿಳಿಸುವ ಸಂದರ್ಭದಲ್ಲಿ ಮೀಮಾಂಸಕರ ಪೂರ್ವಪಕ್ಷವನ್ನು ತೆಗೆದಿದೆ.

ನಿತ್ಯಕರ್ಮವನ್ನು ಮಾಡದೆ ಇದ್ದರೆ ನರಕವೇ ಮುಂತಾದವುಗಳನ್ನು ಪಡೆಯುವದೆಂಬ ಪ್ರತ್ಯವಾಯವುಂಟಾಗುತ್ತದೆಯಾದ್ದರಿಂದ ಜ್ಞಾನವಾದವು ಸರಿಯಲ್ಲ. ಕರ್ಮಾನುಷ್ಠಾನದಿಂದಲೇ ಮೋಕ್ಷವನ್ನು ಪಡೆದುಕೊಳ್ಳುವದಕ್ಕೆ ಆಗುತ್ತದೆ. ಹೇಗೆಂದರೆ, ನಿತ್ಯಕರ್ಮವನ್ನು ಮಾಡುತ್ತಿದ್ದರೆ ಪ್ರತ್ಯವಾಯವುಂಟಾಗದೆ ಇರುತ್ತದೆ. ಪ್ರತಿಷಿದ್ಧ ಕರ್ಮಗಳನ್ನೂ ಕಾಮ್ಯಕರ್ಮಗಳನ್ನೂ ಮಾಡದೆ ಇರುವದರಿಂದ ಒಳ್ಳೆಯ ಅಥವಾ ಅನಿಷ್ಟವಾದ ಶರೀರವನ್ನು ಜನ್ಮಾಂತರದಲ್ಲಿ ಪಡೆಯದೆ ಇರುವದಕ್ಕಾಗುತ್ತದೆ. ಈಗಿನ ಶರೀರವುಂಟಾಗುವದಕ್ಕೆ ಕಾರಣವಾಗಿರುವ ಪ್ರಾರಬ್ಧಕರ್ಮವನ್ನು ಮಾಡುವದರಿಂದ ಜನ್ಮಾಂತರಕ್ಕೆ ಕಾರಣವೇ ಇಲ್ಲದ್ದರಿಂದ ರಾಗದ್ವೇಷಾದಿಗಳನ್ನು ಬಿಟ್ಟವರಿಗೆ ಸತ್ತಮೇಲೆ ತಮ್ಮ ಆತ್ಮನಲ್ಲಿಯೇ ನಿಲ್ಲುವದೆಂಬ ಮೋಕ್ಷವು ಉಭಿಸುತ್ತದೆ- ಎಂಬುದು ಪೂರ್ವಪಕ್ಷ.

ಇದು ಸರಿಯಲ್ಲ. ಏಕೆಂದರೆ 'ಆತ್ಮಜ್ಞಾನದಿಂದಲೇ ಮೋಕ್ಷವಾಗುವದು, ಅದಕ್ಕೆ ಬೇರೆಯ ಮಾರ್ಗವೇ ಇಲ್ಲ'- ಎಂದು ಶ್ರುತಿಯಿದೆ, ಸ್ಮೃತಿಯೂ ಇದೆ. ಈಗ ಫಲವನ್ನು ಕೊಡದೆ ಇರುವ ಕರ್ಮಗಳು ನಾಶವಾಗುವದಕ್ಕೆ ಕಾರಣವೂ ಇಲ್ಲ; ಅವಕ್ಕೆ ಜನ್ಮಾಂತರವು ಬಂದೇತೀರಬೇಕು. ಧರ್ಮಾಧರ್ಮಗಳಿಗೆ ನಿಮಿತ್ತವಾಗಿರುವ ರಾಗದ್ವೇಷಮೋಹಗಳನ್ನು ಬಿಡುವದು ಆತ್ಮಜ್ಞಾನವಿಲ್ಲದವರಿಗೆ ಆಗಲೂಆರದು. ನಿತ್ಯಕರ್ಮಗಳಿಗೆ ಪುಣ್ಯಫಲವಾಗುವದರಿಂದ ಅವುಗಳನ್ನು ಮಾಡುವದೂ ಜನ್ಮಾಂತರಕ್ಕೆ ಕಾರಣವೇ ಆಗುತ್ತದೆ. ನಿತ್ಯಕರ್ಮಗಳನ್ನು ಮಾಡುವ ಆಯಾಸವೇ ಹಿಂದಿನ ಕರ್ಮಗಳ ಫಲವಾದ ದುಃಖವನ್ನು ಅನುಭವಿಸಿದಂತಾಗುವದು ಎಂಬುದು ಸರಿಯಲ್ಲ ; ಏಕೆಂದರೆ ಸಾಯುವಾಗ ಮೊಳಕೆಯಾಗದೆ ಇದ್ದ ಕರ್ಮಗಳ ಫಲವನ್ನು ಈ ಜನ್ಮದಲ್ಲಿ ಅನುಭವಿಸುವದು ಆಗಲಾರದು. ವಿಚಿತ್ರವಾದ ಅನೇಕ ಕರ್ಮಗಳಿಗೆ ನಿತ್ಯಕರ್ಮಾಯಾಸವೊಂದೇ ಫಲವೆನ್ನುವದು ಸರಿಯಾಗಲಾರದು. ಪ್ರಾರಬ್ಧಫಲವಲ್ಲದ ಕರ್ಮಗಳ ಗತಿ ಏನು ?- ಎಂದು ಕೇಳಿದಾಗ ಪ್ರಾರಬ್ಧಫಲವುಳ್ಳ ಕರ್ಮಗಳ ಆಯಾಸವೇ ಅವುಗಳ ಫಲವೆನ್ನುವದು ಅಪ್ರಕೃತವಾದದ್ದನ್ನು ಹೇಳಿದಂತೆ ಆಗುವದು. ಎಲ್ಲಾ ಕರ್ಮಗಳಿಗೂ ಇದೇ ಫಲವಾಗಲೆಂದು ಗೊತ್ತಾಗಿ ಹೇಳುವದೂ ಸರಿಯಲ್ಲ, ಏಕೆಂದರೆ ಇನ್ನೂ ಎಷ್ಟೋ ದುಃಖಾನುಭವಗಳಿರುತ್ತವೆ. ಇದಲ್ಲದೆ

ನಿತ್ಯಕರ್ಮಗಳೇನೂ ಪ್ರಾಯಶ್ಚಿತ್ತ ಕರ್ಮಗಳಲ್ಲ, ಅವುಗಳಿಂದ ಹಿಂದಿನ ಪಾಪಕ್ಕೆ ಫಲ ಹೇಗೆ ಉಂಟಾದೀತು ? ಅದೂ ಆದರೆ ಕಾಮ್ಯಕರ್ಮಗಳ ಅನುಷ್ಠಾನದ ಆಯಾಸವೂ ಅವುಗಳ ಫಲವಾಗಬಾರದೇಕೆ ? ಇದಲ್ಲದೆ ನಿತ್ಯಕರ್ಮಗಳನ್ನು ಮಾಡುವದರಿಂದಾದ ಆಯಾಸವು ಹಿಂದಿನ ಕರ್ಮಗಳ ಫಲವೆಂದು ಏತಕ್ಕೆ ಹೇಳಬೇಕು ? ಅದು ನಿತ್ಯ ಕರ್ಮದ ಫಲವೇಕಲ್ಲ ? ನಿತ್ಯಕರ್ಮಗಳನ್ನು ಮಾಡುವಾಗಲೇ ಕಾಮ್ಯಕರ್ಮವನ್ನು ತಂತ್ರದಿಂದ (ಒಟ್ಟು ಗೂಡಿಸಿ) ಮಾಡುವವರಿಗೆ ಈ ಆಯಾಸವು ಹಿಂದಿನ ಕರ್ಮಗಳದ್ದೇ ಎಂದಾಗಿ ಕಾಮ್ಯಕರ್ಮಕ್ಕೆ ಫಲವೇ ಇಲ್ಲವೆಂದಾಗುವದಿಲ್ಲವೆ? ವಿಹಿತವೂ ಅಲ್ಲದೆ ಪ್ರತಿಷಿದ್ಧವೂ ಅಲ್ಲದ ಕರ್ಮಗಳಿಗೆ ಮಾತ್ರ ತತ್ಕಾಲದಲ್ಲಿ ಫಲವಾಗಬಹುದು ; ಶಾಸ್ತ್ರವಿಹಿತವಾದ ಅಥವಾ ಶಾಸ್ತ್ರದಿಂದ ಪ್ರತಿಷಿದ್ಧವಾದ ಕರ್ಮಕ್ಕೆ ತತ್ಕಾಲಫಲವು ಹೇಗಾದೀತು? ಆದ್ದರಿಂದ ನಿತ್ಯಕರ್ಮಗಳಿಗೆ ಅದೃಷ್ಟಫಲವೂ ಇದೆ ಎಂದು ಒಪ್ಪಬೇಕು. ಆದ್ದರಿಂದ ಅವಿದ್ಯಾಪೂರ್ವಕವಾಗಿ ಮಾಡಿದ ಕರ್ಮವೂ ನಾಶವಾಗುವದಕ್ಕೆ ಆತ್ಮಜ್ಞಾನವೇ ಕಾರಣವು ಎಂಬುದು ಯುಕ್ತ. ಆದ್ದರಿಂದ ಕರ್ಮ ಸಂನ್ಯಾಸವನ್ನು ಮಾಡಿ ಆತ್ಮಜ್ಞಾನವನ್ನು ಸಂಪಾದಿಸಿಕೊಂಡವರಿಗೆ ಮಾತ್ರ ಮೋಕ್ಷವೇ ಹೊರತು ಅಜ್ಞರಾದ ಕರ್ಮಿಗಳಿಗಲ್ಲ ಎಂಬುದೇ ಸಿದ್ಧಾಂತ.

**ಶ್ರೀಗಳು** ಅನುವಾದದಲ್ಲಿ ಹೀಗೆಂದು ಅಪ್ಪಣೆಕೊಡಿಸಿದರು : ಶಾಸ್ತ್ರೋಕ್ತ ಕರ್ಮಗಳಿಗೆ ಕಾಲಾಂತರದಲ್ಲಿ ಫಲವಾಗುವದೇ ಹೊರತು ಇಲ್ಲಿಯೇ ಆಗುವದಿಲ್ಲ. ಇದನ್ನು ಮೀಮಾಂಸಕರೇ ಒಪ್ಪಿರುತ್ತಾರೆ. ಮೊದಮೊದಲು ಅವರು ಸ್ವರ್ಗಕ್ಕಿಂತ ಹೆಚ್ಚಿನ ಫಲವಿಲ್ಲ- ಎನ್ನುತ್ತಿದ್ದರು. ಆದರೆ ವೇದಾಂತಿಗಳು ಪ್ರಬಲರಾದಾಗ ಸ್ವರ್ಗವೇ ಮೋಕ್ಷ ಎನ್ನುವದಕ್ಕೆ ಪ್ರಾರಂಭಿಸಿದರು. ನಿತ್ಯ, ನೈಮಿತ್ತಿಕ, ಕಾಮ್ಯ, ಪ್ರತಿಷಿದ್ಧ- ಇವುಗಳಲ್ಲಿ ಕಡೆಯ ಎರಡನ್ನು ಬಿಟ್ಟು ಮೊದಲನೆಯ ಎರಡನ್ನು ಮಾಡುತ್ತಿದ್ದರೆ ಸಾಕು; ನಿತ್ಯನೈಮಿತ್ತಿಕಕರ್ಮಗಳಿಗೆ ಫಲವೇ ಇಲ್ಲದ್ದರಿಂದ ಮತ್ತೆ ಜನ್ಮವುಂಟಾಗುವದಕ್ಕೆ ಕಾರಣವೇ ಇಲ್ಲ; ಆತ್ಮನಲ್ಲಿಯೇ ನೆಲೆನಿಲ್ಲುವದೆಂಬ ಮೋಕ್ಷವು ಲಭಿಸುತ್ತದೆ - ಎಂದರು; ವೇದಾಂತದಿಂದಾಗುವ ಫಲವೂ ಕರ್ಮಾನುಷ್ಠಾನದಿಂದಲೇ ಆಗುವದರಿಂದ ವೇದಾಂತಭಾಗದಿಂದ ಆಗಬೇಕಾದದ್ದೇನೂ ಇಲ್ಲ - ಎನ್ನುವದಕ್ಕೆ

ಮೊದಲುಮಾಡಿದರು. ಈ ಪೂರ್ವಪಕ್ಷವನ್ನು ಇಲ್ಲಿ ಪರೀಕ್ಷೆಮಾಡಿದೆ. ಇದರಿಂದ ಈ ಜನ್ಮದ ಕರ್ಮದ ಸಾಲವು ತೀರಿದಂತಾಗಬಹುದು. ಹಳೆಯ ಜನ್ಮಗಳ ಕರ್ಮಗಳಿಗೇನು ಗತಿ?- ಎಂದರೆ ಅವರು ಇದಕ್ಕೂ ಒಂದು ಉಪಾಯವನ್ನು ಹುಡುಕಿದರು. ನಿತ್ಯಕರ್ಮವನ್ನು ಮಾಡುವದರಿಂದಾಗುವ ಆಯಾಸರೂಪವಾದ ದುಃಖದಿಂದ ಹಳೆಯ ಕರ್ಮವೆಲ್ಲ ತೀರಿಹೋಗುತ್ತದೆ ಎಂದರು. ಆದರೆ ಈ ಆಯಾಸಕ್ಕೂ ಹಿಂದಿನ ಕರ್ಮಗಳಿಗೂ ಹೇಗೆ ಗಂಟುಹಾಕುವದು? ಈ ಆಯಾಸದಲ್ಲಿ ಎಲ್ಲಾ ಕರ್ಮಗಳ ಫಲವೂ ಸೇರಿಹೋಗುವದೊ, ಏನಾದರೂ ಉಳಿಯುವದೊ? ಉಳಿದರೆ ಆದಕ್ಕೇನು ಗತಿ ? ಇದೊಂದು ಪೇಚಾಟಕ್ಕೆ ಕಾರಣವಾದ ಪ್ರಶ್ನೆಯಾಯಿತು. ಪಾಪಕರ್ಮಗಳಿಗೆ ಆಯಾಸವು ಫಲವೆಂದರೂ ಎನ್ನಬಹುದು. ಹಳೆಯ ಪುಣ್ಯಕರ್ಮಗಳು ಸವೆಯುವದು ಹೇಗೆ ?- ಎಂಬ ಪ್ರಶ್ನೆಯೂ ಎದ್ದುಕೊಂಡಿತು. ಎಲ್ಲಾ ಕರ್ಮಗಳೂ ಒಂದೇ ಜನ್ಮದಲ್ಲಿ ಫಲವನ್ನು ಕೊಡುವದು ಹೇಗೆ ? ಈ ಪ್ರಶ್ನೆಗೂ ಉತ್ತರವಿಲ್ಲ. ಇದಲ್ಲದೆ ನಿತ್ಯಕರ್ಮದ ಆಯಾಸವು ಅದರ ಫಲವಾಗಲಿ, ಮತ್ತೊಂದು ಕರ್ಮದ ಫಲ ಹೇಗೆ ? ಶಾಸ್ತ್ರದಲ್ಲಿ ಹೇಳಿದ ಕರ್ಮಕ್ಕೆ ಕಾಲಾಂತರದಲ್ಲಿ ಫಲವಾಗಲೇಬೇಕಲ್ಲವೆ ? ಅದಕ್ಕೇನು ಗತಿ ? ಈ ಆಕ್ಷೇಪಕ್ಕೂ ಪರಿಹಾರವು ಸಿಕ್ಕುವಂತಿಲ್ಲ. ಈ ಎಲ್ಲಾ ಕಾರಣಗಳಿಂದಲೂ ಈ ಕರ್ಮವಾದವು ಸರಿಯಲ್ಲ - ಎಂಬುದು ಖಂಡನೆಯ ಸಾರ.

ಹಾಗಾದರೆ ಎಲ್ಲಾ ಕರ್ಮಗಳೂ ಸವೆಯುವ ಪರಿ ಹೇಗೆ ?- ಎಂದು ಯಾರಾದರೂ ಕೇಳಬಹುದು. ಅದಕ್ಕೆ ಮುಂದಿನ ಪ್ರವಚನದಲ್ಲಿ ಉತ್ತರವು ಸಿಕ್ಕುವದು.

★★★★★

# ಜ್ಞಾನದಿಂದಲೇ ಸಂಸಾರನಾಶ

**26-4-1961**

**ಶ್ರೀಶ್ರೀಗಳವರು**

**ಭಗವದ್ಗೀತಾಭಾಷ್ಯದಲ್ಲಿ** 18ನೆಯ ಅಧ್ಯಾಯ 66ನೆಯ ಶ್ಲೋಕದ ಉಪಸಂಹಾರಭಾಷ್ಯಭಾಗದಲ್ಲಿ : ವ್ಯವಹಾರದೃಷ್ಟಿಯಿಂದ ನೋಡಿದರೆ ಸರ್ವಕರ್ಮಗಳೂ ನಾಶವಾಗುವದೆಂಬುದು ಎಂದಿಗೂ ಆಗದೆಂಬುದು ನಿನ್ನೆಯದಿನದ ಚರ್ಚೆಯಲ್ಲಿ ಸ್ಪಷ್ಟವಾಗಿತ್ತು. ಹಾಗಾದರೆ ಅನಾದಿಯಾಗಿ ಜೀವನು ಮಾಡಿಕೊಂಡು ಬಂದಿರುವ ಕರ್ಮಗಳ ಫಲವು ಕ್ಷಯವಾಗುವದು ಹೇಗೆ? - ಎಂಬ ಪ್ರಶ್ನೆ ಎದ್ದುಕೊಳ್ಳುವದು ಸಹಜವಾಗಿದೆಯಷ್ಟೆ? ಇದಕ್ಕೆ ಉತ್ತರವೇನೆಂದರೆ: ಕರ್ಮಕ್ಕೆಲ್ಲ ಅವಿದ್ಯಾ ಕಾಮಗಳೇ ಕಾರಣವೆಂದು ಗೀತೆಯಲ್ಲಿ ಅಲ್ಲಲ್ಲಿ ತಿಳಿಸಿರುತ್ತದೆ. ಆದ್ದರಿಂದ ಆತ್ಮಜ್ಞಾನವನ್ನು ಸಂಪಾದಿಸಿಕೊಂಡು ಅಧಿಷ್ಠಾನವೇ ಮುಂತಾದ ಐದೇ ಕರ್ಮಕ್ಕೆ ಹೇತುಗಳು, ಕೇವಲಾತ್ಮನು ಕರ್ತೃವಲ್ಲ-ಎಂದು ನಿಶ್ಚಯಿಸಿಕೊಂಡು ಪರಮಾತ್ಮನೊಬ್ಬನನ್ನೇ ಶರಣುಹೊಂದಿರುವ ಜ್ಞಾನಿಗಳಿಗೆ ಯಾವ ಕರ್ಮದ ಫಲವೂ ಆಗುವದಿಲ್ಲ. ಕರ್ಮವೆಲ್ಲವೂ ಅವಿದ್ಯಾತ್ಮಕವೆಂಬುದು ಹೇಗೆ?- ಎಂದರೆ, ದೇಹಾದಿಗಳೇ ತಾನೆಂದು ತಿಳಿದವನಿಗೇ ಕರ್ಮವು ಸಾಧ್ಯವಾದ್ದರಿಂದ ದೇಹಾದಿಗಳೇ ತಾನೆಂದು ತಿಳಿಯುವದು ಗೌಣಪ್ರತ್ಯಯವೇ ಹೊರತು ಮಿಥ್ಯೆಯಲ್ಲ- ಎಂದು ಪೂರ್ವಪಕ್ಷಿಯು ಹೇಳಬಹುದು. ಅದು ಸರಿಯಲ್ಲ, ಏಕೆಂದರೆ ಗೌಣಶಬ್ದಪ್ರತ್ಯಯಗಳಿಂದ ಮುಖ್ಯಕರ್ತೃತ್ವವು ಆಗಲಾರದು ; ನಾನೇ ಕರ್ತೃ, ಈ ಕರ್ಮವು ನನ್ನದೇ -ಎಂದು ತಿಳಿಯುವದು ಮಿಥ್ಯೆಯಲ್ಲದೆ ಗೌಣವು ಹೇಗಾದೀತು? ತನ್ನ ಇಚ್ಛಾಸ್ಮೃತಿ ಪ್ರಯತ್ನಗಳಿಂದ ಕರ್ಮವನ್ನು ಮಾಡಬಹುದಲ್ಲವೆ? ಹಾಗಲ್ಲ. ಏಕೆಂದರೆ ಆ ಸ್ಮೃತಿ, ಇಚ್ಛೆ- ಮುಂತಾದವುಗಳೂ ಮಿಥ್ಯಾಪ್ರತ್ಯಯಜನ್ಯವೇ ಆಗಿರುತ್ತವೆ. ಹೇಗೆ ಈ ಜನ್ಮದ ದೇಹಾದಿಗಳಲ್ಲಿರುವ ಅಭಿಮಾನವು ಅವಿದ್ಯಾಕೃತವೋ ಹಾಗೆಯೇ ಜನ್ಮಾಂತರಕೃತವಾದ ಅಭಿಮಾನವೂ ಅವಿದ್ಯಾಕೃತವೇ. ಶಾಸ್ತ್ರದಲ್ಲಿ ವಿಹಿತವಾಗಿರುವದರಿಂದ ಆತ್ಮನು ಮಾಡಬೇಕಾಗಿರುವದನ್ನು ದೇಹಾದಿಗಳು ಮಾಡಬಹುದಲ್ಲವೆ? ಹಾಗಲ್ಲ,

ಏಕೆಂದರೆ ದೇಹೇಂದ್ರಿಯಾದಿಗಳು ತಾನೆಂಬುದೇ ಮಿಥ್ಯಾಪ್ರತ್ಯಯವಾಗಿರುತ್ತದೆ. ಶ್ರುತಿಪ್ರಾಮಾಣ್ಯವು ಅದೃಷ್ಟವಿಷಯಕ್ಕೇ ಹೊರತು ದೃಷ್ಟವಾಗಿರುವ ಮಿಥ್ಯಾಜ್ಞಾನವನ್ನು ಬಾಧಿಸುವದಕ್ಕಲ್ಲ. ಬೆಂಕಿಯು ತಣ್ಣಗಿದೆ ಎಂದು ನೂರುಶ್ರುತಿಗಳು ಹೇಳಿದರೆತಾನೆ ಪ್ರಮಾಣವಾದಾವೇನು? ಕರ್ಮವೆಲ್ಲವೂ ಮಿಥ್ಯಾಪ್ರತ್ಯಯದಿಂದಾಗುವದಾದರೆ ಕರ್ತೃವೇ ಇಲ್ಲವಾಗುವದರಿಂದ ಶಾಸ್ತ್ರಕ್ಕೆ ಪ್ರಾಮಾಣ್ಯವೇ ತಪ್ಪುವದಲ್ಲ ?-ಎಂದರೆ ಹಾಗಲ್ಲ : ಬ್ರಹ್ಮವಿದ್ಯಾವಿಷಯದಲ್ಲಂತೂ ಪ್ರಾಮಾಣ್ಯವು ಇದ್ದೇಇರುತ್ತದೆ. ಕರ್ಮಶ್ರುತಿಯಂತೆ ಅದೂ ಅಪ್ರಮಾಣವೆಂದಾಗಲಿ!- ಎಂದರೆ ಹಾಗಲ್ಲ, ಏಕೆಂದರೆ ಅದಕ್ಕೆ ಬಾಧಕ ಪ್ರತ್ಯಯವಿಲ್ಲ. ಹಾಗಾದರೂ ಕರ್ಮಶ್ರುತಿಯಂತೂ ಅಪ್ರಮಾಣವೇ ಆಗುವದಲ್ಲವೆ? ಹಾಗಲ್ಲ ಏಕೆಂದರೆ ಉಪಾಯವು ಮಿಥ್ಯೆಯಾದರೂ ಉಪೇಯವು ಸತ್ಯವಾಗಿದ್ದರೆ ಸಾಕು, ಪ್ರಾಮಾಣ್ಯವು ಬಂದುಬಿಡುತ್ತದೆ. ಪ್ರತ್ಯಕ್ಷಾದಿಪ್ರಮಾಣಗಳಂತೆ ಕರ್ಮವಾಕ್ಯಗಳೂ ಅಜ್ಞರ ವಿಷಯದಲ್ಲಿ ನೇರಾಗಿ ಪ್ರಮಾಣವಾಗಿವೆ ; ಅವು ಮುಮುಕ್ಷುಗಳಿಗೆ ಜ್ಞಾನಕ್ಕೆ ಕಾರಣವಾಗಿರುವದರಿಂದಲೂ ಪ್ರಮಾಣವಾಗಿವೆ.

ಆತ್ಮನು ಸ್ವಯಂಕರ್ತೃವಲ್ಲದಿದ್ದರೂ ರಾಜನು, ಯಜ್ಞದ ಯಜಮಾನನು-ಮುಂತಾದವರಂತೆ ಸಂನಿಧಿಯಿಂದಲೇ ಕರ್ತೃವಾಗಿರಬಹುದಲ್ಲ!- ಎಂದರೆ ಅದು ಸರಿಯಲ್ಲ. ಏಕೆಂದರೆ ದೃಷ್ಟಾಂತದಲ್ಲಿ ರಾಜಾದಿಗಳಿಗೆ ಸ್ವಯಂವ್ಯಾಪಾರವೇ ಇದೆ ; ದಾರ್ಷ್ಟಾಂತಿಕದಲ್ಲಿ ಆತ್ಮನಿಗೆ ಯಾವ ವ್ಯಾಪಾರವೂ ಇರುವದಿಲ್ಲ. ಆದ್ದರಿಂದ ಕರ್ತೃತ್ವವು ದೇಹಾದ್ಯಭಿಮಾನಕೃತವಾದ ಮಿಥ್ಯಾಪ್ರತ್ಯಯದಿಂದಲೇ ಆದದ್ದು. ಆ ಅಭಿಮಾನವಿಲ್ಲದ ಸುಷುಪ್ತಿ, ಸಮಾಧಿ-ಮುಂತಾದ ಅವಸ್ಥೆಗಳಲ್ಲಿ ಕರ್ತೃತ್ವಾದ್ಯನರ್ಥವು ಇರುವದಿಲ್ಲವೆಂಬುದು ಸರ್ವರಿಗೂ ಗೊತ್ತೇ ಇದೆ. ಆದ್ದರಿಂದ ಸಂಸಾರವೆಂಬುದು ಭ್ರಾಂತಿನಿಮಿತ್ತವೇ, ಪರಮಾರ್ಥವಲ್ಲ. ಆದ್ದರಿಂದ ಇದು ಜ್ಞಾನದಿಂದ ನಾಶವಾಗಬಹುದಾಗಿದೆ ಎಂದು ಸಿದ್ಧವಾಯಿತು-ಎಂಬುದು ಸಾರವು.

★★★★★

## ಆಚಾರ್ಯರ ಗುಣಕಥನ

**27-4-1961**

**ಶ್ರೀಗಳವರು**

ಪಕ್ಷಪಾತವಿಲ್ಲದೆ ಭೂಲೋಕದವರಿಗೆಲ್ಲ ಅನ್ವಯಿಸುವ ಅಮೃತತ್ವಕ್ಕೆ ಕಾರಣವಾಗಿರುವ ಅಧ್ಯಾತ್ಮತತ್ತ್ವವನ್ನು ಉಪದೇಶದಿಂದಲೂ ತಮ್ಮ ನಡೆನುಡಿಗಳಿಂದಲೂ ಉಪದೇಶಿಸಿರುವ ಮಹಾತ್ಮರು ಶ್ರೀಶಂಕರಭಗವತ್ಪಾದರು. ವಿವೇಕಿಯಾದ ಮನುಷ್ಯನು ಹುಟ್ಟಿದ್ದಕ್ಕೆ ಅವರು ಭೋಧಿಸಿರುವ ಅಧ್ಯಾತ್ಮತತ್ತ್ವವನ್ನು ತಿಳಿದುಕೊಳ್ಳಬೇಕು. 'ಸಾಧನಚತುಷ್ಟಯಸಂಪನ್ನರಾಗಿ ಶ್ರವಣಾದಿಸಾಧನೆಗಳನ್ನು ಅಳವಡಿಸಿಕೊಂಡು ನಮ್ಮಲ್ಲಿಯೇ ಇರುವ ಶಾಶ್ವತ ತತ್ತ್ವವನ್ನು ಅರಿತು ಕೃತಾರ್ಥರಾಗುವಂತೆ ನಮ್ಮನ್ನು ಅನುಗ್ರಹಿಸಿರಿ' ಎಂದು ಆಚಾರ್ಯರನ್ನು ಬೇಡಿಕೊಳ್ಳೋಣ.

★★★★★

## ಇವೆಲ್ಲವೂ ಪರಮಾತ್ಮನೇ

**8-5-1962**

**ಶ್ರೀಶ್ರೀಗಳವರು**

ಬೃಹದಾರಣ್ಯಕ ಭಾಷ್ಯದಲ್ಲಿ 2-4-1 ರಿಂದ 15 ರವರೆಗಿನ **ಮೈತ್ರೇಯೀಬ್ರಾಹ್ಮಣದ** ಭಾಗದ ಅಭಿಪ್ರಾಯ: ಆತ್ಮವು ವ್ಯಾಕೃತಾವ್ಯಾಕೃತಪ್ರಪಂಚಕ್ಕಿಂತ ವಿಲಕ್ಷಣವಾಗಿದೆ. ನಾಮರೂಪಕರ್ಮಾತ್ಮಕವಾದ ಪ್ರಪಂಚವು ವ್ಯಾಕೃತವಾಗಿರಲಿ ಅವ್ಯಾಕೃತವಾಗಿರಲಿ, ಅವಿದ್ಯಾಕೃತವೇ ಎಂದೂ ಅದರಲ್ಲಿ ವಿರಕ್ತಿಯುಂಟಾಗಿರುವಾತನಿಗೇ ಬ್ರಹ್ಮವಿದ್ಯೆಯಲ್ಲಿ ಅಧಿಕಾರವು ಎಂದೂ

ಹಿಂದಿನ ಭಾಗದಲ್ಲಿ ತಿಳಿಸಿದೆ. ಬ್ರಹ್ಮವು ಏಕವೂ ಅದ್ವಿತೀಯವೂ ನಿರ್ವಿಶೇಷವೂ ಆಗಿರುತ್ತದೆ; ಅದರಲ್ಲಿ ಯಾವ ಕ್ರಿಯಾಕಾರಕ ಫಲವಿಭಾಗವೂ ಇರುವದಿಲ್ಲ; ಅದು ಸತ್ಯಶಬ್ದವಾಚ್ಯವಾದ ಪಂಚಭೂತಗಳಿಗಿಂತ ವಿಲಕ್ಷಣವಾದದ್ದು, ಅದನ್ನು 'ನೇತಿ ನೇತಿ' ಎಂದು ಸರ್ವವಿಶೇಷಪ್ರತಿಷೇಧ ಮೂಲಕವಾಗಿಯೇ ತಿಳಿದುಕೊಳ್ಳಬೇಕಾಗಿದೆ ಎಂಬುದನ್ನೂ ತಿಳಿಸಿದ್ದಾಗಿದೆ. ಈಗ ಪ್ರಕೃತಬ್ರಾಹ್ಮಣದಲ್ಲಿ ಸಂನ್ಯಾಸವು ಜ್ಞಾನಕ್ಕೆ ಅಂಗವೆಂದು ತಿಳಿಸಬೇಕಾಗಿದೆ. ಆದ್ದರಿಂದ ಈ ಬ್ರಾಹ್ಮಣವನ್ನು ಪ್ರಾರಂಭಿಸಿದೆ. ಮೈತ್ರೇಯಿಗೆ ಸಂನ್ಯಾಸವನ್ನು ಹೇಳಿಲ್ಲವಲ್ಲ!- ಎಂದು ಶಂಕಿಸಬಾರದು. ನಿಷ್ಕ್ರಿಯಾತ್ಮನಲ್ಲಿ ನೆಲೆನಿಲ್ಲುವದೇ ಪರಮಸಂನ್ಯಾಸವು. ಅದು ಆಕೆಗೂ ಅನ್ವಯಿಸುತ್ತದೆ.

ಯಾಜ್ಞವಲ್ಕ್ಯರು ಪಾರಿವ್ರಾಜ್ಯವೆಂಬ ಆಶ್ರಮವನ್ನು ಸ್ವೀಕರಿಸುವದಕ್ಕೆ ಉದ್ಯುಕ್ತರಾಗಿ ತಮ್ಮ ಪ್ರಿಯಪತ್ನಿಯನ್ನು ಕಂಡು, 'ಎಲೆ ಮೈತ್ರೇಯಿ, ನಿನಗೂ ಕಾತ್ಯಾಯಿನಿಗೂ ಆಸ್ತಿಯನ್ನು ಪಾಲುಮಾಡಿಕೊಟ್ಟು ಸಂಬಂಧವಿಚ್ಛೇದವನ್ನು ಮಾಡುವೆನು' ಎಂದರು. ಆಗ ಮೈತ್ರೇಯಿ 'ಈ ಜಗತ್ತೆಲ್ಲವೂ ವಿತ್ತಪೂರ್ಣವಾಗಿದ್ದರೆತಾನೆ, ಆಗ ನನಗೆ ಅದರಿಂದ ಅಮೃತತ್ವವು ಸಿಕ್ಕೀತೇನು?' ಎಂದು ಕೇಳಲು, 'ಹಾಗಲ್ಲ, ಉಪಕರಣಸಮೃದ್ಧಿಯಿರುವವರಂತೆ ನೀನೂ ಜೀವಿಸಬಹುದು ; ಅಷ್ಟೇ ಹೊರತು ವಿತ್ತದಿಂದ ಅಮೃತತ್ವದ ಆಶೆಯೂ ಇರುವದಿಲ್ಲ' ಎಂದರು. 'ಹಾಗಾದರೆ ಈ ವಿತ್ತವನ್ನು ತೆಗೆದುಕೊಂಡು ನಾನೇನು ಮಾಡಲಿ? ತಮಗೆ ತಿಳಿದಿರುವ ಅಮೃತತ್ವಕ್ಕೆ ಕಾರಣವಾದ ವಿದ್ಯೆಯನ್ನೇ ನನಗೂ ತಿಳಿಸಿ ಕೊಡಿರಿ' ಎಂದು ಮೈತ್ರೇಯಿ ಕೇಳಲು, ಅವರು ಸುಪ್ರೀತರಾಗಿ ಇಂತೆಂದರು: 'ಬಾ, ಕುಳಿತುಕೊ; ನಿನಗೆ ನಾನು ಹೇಳುವದನ್ನು ಲಕ್ಷ್ಯವಿಟ್ಟು ಆಲೈಸಿ ತಿಳಿದುಕೊ: ಪತಿಗಾಗಿ ಪತಿಯು ಪ್ರಿಯನಾಗಿರುವದಿಲ್ಲ, (ತನ್ನ) ಆತ್ಮನ ಕಾಮಕ್ಕೆ ಪ್ರಿಯನಾಗಿರುತ್ತಾನೆ. ಹೀಗೆಯೇ ಹೆಂಡತಿ, ಮಕ್ಕಳು, ವಿತ್ತ, ಬ್ರಾಹ್ಮಣ್ಯ, ಕ್ಷತ್ರಿಯತ್ವ, ಲೋಕಗಳು, ದೇವತೆಗಳು, ಪ್ರಾಣಿಗಳು-ಇವುಗಳಲ್ಲಿ ಯಾವದೊಂದೂ ತನತನಗಾಗಿ ಪ್ರಿಯವಾಗಿರುವದಿಲ್ಲ. ಆತ್ಮನಿಗಾಗಿಯೇ ಪ್ರಿಯವಾಗಿರುತ್ತವೆ. ಆದ್ದರಿಂದ ಆತ್ಮನನ್ನೇ ಶ್ರವಣಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನ ಮಾಡಬೇಕು. ಅದರಿಂದ ಇದೆಲ್ಲವನ್ನೂ ತಿಳಿದಂತೆ ಆಗುತ್ತದೆ' ಎಂದರು.

'ಆತ್ಮನೆಂದೇ ಅರಿತುಕೊಳ್ಳಬೇಕು ; ಏಕೆಂದರೆ ಎಲ್ಲಕ್ಕಿಂತಲೂ ಅದೇ ಪ್ರಿಯವು' ಎಂದು ಹಿಂದೆ ಸೂತ್ರಪ್ರಾಯವಾಗಿ ಹೇಳಿರುವದನ್ನೇ ಇಲ್ಲಿ ವಿವರಿಸಿರುತ್ತದೆ. 'ಇಲ್ಲಿ ಆತ್ಮನ ಕಾಮಕ್ಕಾಗಿಯೇ ಎಲ್ಲವೂ ಪ್ರಿಯವಾಗಿರುತ್ತದೆ' ಎಂದಿರುವದು. ಸಂಸಾರಿಯಾದ ಭೋಕ್ತಾತ್ಮನನ್ನು ಉದ್ದೇಶಿಸಿ ಹೇಳಿರುವದಲ್ಲ ಅವನಲ್ಲಿರುವ ಪರಮಾನಂದಸ್ವರೂಪನಾದ ಪರಮಾತ್ಮನನ್ನೇ ಲಕ್ಷಿಸಿ ಹೇಳಿರುತ್ತದೆ. ಈ ಲೋಕದಲ್ಲಿ ಯಾವಯಾವದು ಪ್ರಿಯವಾಗಿ ತೋರಿದರೂ ಅದು ಆತ್ಮನ ಸಂಬಂಧದಿಂದಲೇ. ಈ ಆತ್ಮಸ್ವರೂಪವನ್ನು ಆಚಾರ್ಯನಿಂದಲೂ ಆಗಮದಿಂದಲೂ ಶ್ರವಣಮಾಡಬೇಕು. ಅದನ್ನು ತರ್ಕದಿಂದಲೂ ಹೊಂದಿಸಿಕೊಳ್ಳಬೇಕು. ಆಮೇಲೆ ಏಕಾಗ್ರತೆಯಿಂದ ಲಕ್ಷ್ಯವಿಟ್ಟು ಚಿಂತಿಸಿ ಆತ್ಮನನ್ನೇ ತಿಳಿದುಕೊಳ್ಳಬೇಕು. ಹಾಗಾದರೆ ಆತ್ಮನು ನಿತ್ಯನು, ಕ್ರಿಯಾಕಾರಕಫಲರಹಿತನು, ನಿತ್ಯತೃಪ್ತನು- ಎಂಬ ಅರಿವು ಉಂಟಾಗುತ್ತದೆ. ಹಗ್ಗದಲ್ಲಿ ಹಾವನ್ನು ಹುಟ್ಟು ಹಾಕುವಂತೆ ಆತ್ಮಸ್ವರೂಪದಲ್ಲಿ ಕ್ರಿಯಾಕಾರಕಫಲಸ್ವರೂಪವನ್ನು ಹುಟ್ಟುಹಾಕಿಕೊಂಡಿರುತ್ತೇವೆ. ಪ್ರಪಂಚಪ್ರತ್ಯಯವೆಲ್ಲವೂ ಅವಿದ್ಯಾತ್ಮಕವೇ. ಆತ್ಮನು ನಿಷ್ಪ್ರಪಂಚನು-ಎಂದು ನಾವು ನಿಶ್ಚಯಿಸಬೇಕು.

ಬ್ರಾಹ್ಮಣ್ಯ, 'ಕ್ಷತ್ರಿಯತ್ವ', ಲೋಕ, ದೇವತೆಗಳು - ಮುಂತಾಗಿ ಯಾವ ಯಾವದನ್ನು ನಾವು ಆತ್ಮನಿಗಿಂತ ಬೇರೆ ಎಂದು ಭಾವಿಸಿಕೊಳ್ಳುವೆವೋ-ಎಂದರೆ ನಾನು ಬ್ರಾಹ್ಮಣನು, ಕ್ಷತ್ರಿಯನು, ದೇವತಾತ್ಮನು- ಎಂದುಮುಂತಾಗಿ ಎಣಿಸಿ ಕೊಳ್ಳುವೆವೋ- ಆ ಬ್ರಾಹ್ಮಣ್ಯವೇ ಮುಂತಾದದ್ದು 'ನನ್ನನ್ನು ಅನಾತ್ಮರೂಪದಿಂದ ಕಾಣುತ್ತಿರುವನಲ್ಲ!' ಎಂದು ನಮ್ಮನ್ನು ತಿರಸ್ಕರಿಸುತ್ತದೆ ಎಂದು ಇಲ್ಲಿ ಹೇಳಿರುವದರಿಂದಲೇ ಅಸಂಸಾರಿಯಾದ ಆತ್ಮನೇ ನಮ್ಮ ನಿಜವಾದ ಸ್ವರೂಪವೆಂದು ತಿಳಿಸುವದು ಯಾಜ್ಞವಲ್ಕ್ಯರ ಉದ್ದೇಶವೆಂದು ಏರ್ಪಡುತ್ತದೆ. ಯಾವನಿಗೆ ಅನಾತ್ಮವಾದ ದೇಹೇಂದ್ರಿಯಾದಿಗಳಲ್ಲಿ ಆತ್ಮಬುದ್ಧಿಯಿರುವದೋ- ನಾನೆಂಬ ಭಾವನೆಯಿರುವದೋ - ಅವನು ಮರ್ತ್ಯನು. ಇದೆಲ್ಲವೂ ಆತ್ಮನೇ ಎಂದು ಯಾವನು ನಿಶ್ಚಯಿಸಿಕೊಳ್ಳುವನೋ ಅವನೇ ಪರಮಾರ್ಥಸಂನ್ಯಾಸಿ, ಅವನಿಗೇ ಅಮೃತತ್ವವು ಸಿಕ್ಕುವದು. 'ನಾನು ಕಂಡದ್ದೆಲ್ಲ ಕನಸು' ಎಂದು ಎಚ್ಚತ್ತವನು ಅಂದುಕೊಂಡಾಗ ಹೇಗೆ ಕನಸಿನ ಪ್ರಪಂಚವು ಸ್ವಲ್ಪವೂ ಇರುವದಿಲ್ಲವೋ ಹಾಗೆಯೇ

ಜ್ಞಾನಿಯು ಇದೆಲ್ಲವೂ ಆತ್ಮನೇ ಎಂದು ಅರಿತುಕೊಂಡಾಗ ಪ್ರಪಂಚವಿರುವದಿಲ್ಲ; ನಿಷ್ಪ್ರಪಂಚನಾದ ಆತ್ಮನೊಬ್ಬನೇ ಉಳಿದುಕೊಂಡಿರುತ್ತಾನೆ.

ನಗಾರಿಯೇ ಮುಂತಾದದ್ದರ ಬಿಡಿಬಿಡಿಶಬ್ದಗಳು ನಗಾರಿಯ ಶಬ್ದ ಎಂದು ಮುಂತಾಗಿರುವ ಸಾಮಾನ್ಯಗಳಲ್ಲಿ ಅಡಕವಾಗಿರುವಂತೆ, ಎಚ್ಚರಕನಸುಗಳಲ್ಲಿ ಕಾಣುವ ವಸ್ತುವಿಶೇಷಗಳೆಲ್ಲ ಆತ್ಮಚೈತನ್ಯದಿಂದ ಅನುಗತವಾಗಿಯೇ ಇರುವದರಿಂದ ಅವು ಯಾವವೂ ಆತ್ಮನಿಗಿಂತ ಬೇರೆಯಾಗಿರುವದಿಲ್ಲ. ಹೇಗೆ ಹಸಿಕಟ್ಟಿಗೆಯ ಬೆಂಕಿಯಿಂದ ಹೊಗೆ, ಕಿಡಿ, ಮುಂತಾದವುಗಳು ಹೊರಗೆ ಬರುವವೋ ಹಾಗೆಯೇ ಉತ್ಪತ್ತಿಕಾಲದಲ್ಲಿ ಆತ್ಮನಿಂದ ಋಗ್ವೇದಾದಿನಾಮಗಳು ಹುಟ್ಟಿರುತ್ತವೆ; ರೂಪವು ನಾಮಕ್ಕೆ ವಶವಾಗಿರುವದರಿಂದ ರೂಪಗಳೂ ಆತ್ಮನಿಂದಲೇ ಹುಟ್ಟಿರುತ್ತವೆ; ಆದ್ದರಿಂದ ಆತ್ಮನಿಗಿಂತ ಬೇರೆಯಾಗಿ ಅವು ಇರುವದಿಲ್ಲ. ಹಾಗೆಯೇ ಪ್ರಲಯದಲ್ಲಿಯೂ ಎಲ್ಲವೂ ಆತ್ಮನಲ್ಲಿಯೇ ಅಡಗಿಕೊಳ್ಳುತ್ತಿರುವದರಿಂದ ಆತ್ಮನಿಗಿಂತ ಬೇರೆಯಲ್ಲವೆಂದು ಗೊತ್ತಾಗುತ್ತದೆ. ಆದ್ದರಿಂದ ಇವೆಲ್ಲವೂ ಪರಮಾತ್ಮನೇ ಎಂದು ನಾವು ನಿಶ್ಚಯಿಸಬೇಕು.

★★★★★

# ಪರಮಾತ್ಮೋಪದೇಶ

**9-5-1962**

**ಬ್ರ॥ ಶ್ರೀ॥ ಎಸ್. ವಿಠಲಶಾಸ್ತ್ರಿಗಳವರು**

**ಬ್ರಹ್ಮಸೂತ್ರ** (1-4-19 ರಿಂದ22ನೆಯಸೂತ್ರಗಳ) ಭಾಷ್ಯದ ಅಭಿಪ್ರಾಯ: ಬೃಹದಾರಣ್ಯಕದಲ್ಲಿ 'ಆತ್ಮಾವಾ ಅರೇ ದ್ರಷ್ಟವ್ಯಃ ಶ್ರೋತವ್ಯೋಮನ್ತವ್ಯೋ ನಿದಿಧ್ಯಾಸಿತವ್ಯಃ' ಎಂದು ಮುಂತಾಗಿ ( ಬೃ.2-4-5) ಇರುವ ವಾಕ್ಯವು ಜೀವಾತ್ಮನ ವಿಷಯವೊ, ಪರಮಾತ್ಮನನ್ನು ಕುರಿತದ್ದೋ? ಎಂಬ ಸಂಶಯ

ಬರಲು ಅಮೃತತ್ವಕ್ಕಾಗಿ ಮೈತ್ರೇಯಿಗೆ ಯಾಜ್ಞವಲ್ಕ್ಯರು ಈ ಉಪದೇಶವನ್ನು ಮಾಡಿರುವದರಿಂದಲೂ ಆತ್ಮನನ್ನು ಅರಿತುಕೊಂಡರೆ ಎಲ್ಲವನ್ನೂ ಅರಿತುಕೊಂಡಂತೆ ಎಂದಿರುವದರಿಂದಲೂ ಆತ್ಮನಿಗಿಂತ ವ್ಯತಿರಿಕ್ತವೆಂದು ಯಾವದೊಂದನ್ನೂ ತಿಳಿಯಬಾರದು ಎಂದು ಭೇದದೃಷ್ಟಿಯನ್ನು ನಿಂದಿಸಿರುವದರಿಂದಲೂ ಆತ್ಮನೇ ಎಲ್ಲದರ ಉತ್ಪತ್ತಿಗೂ ಪ್ರಲಯಕ್ಕೂ ಕಾರಣನು ಎಂದಿರುವದರಿಂದಲೂ ಇದು ಪರಮಾತ್ಮೋಪದೇಶವೇ ಎಂದು ತೀರ್ಮಾನಿಸಿದೆ. ಈ ಸಂದರ್ಭದಲ್ಲಿ 'ಆತ್ಮನಿಗಾಗಿಯೇ ಎಲ್ಲವೂ ಪ್ರಿಯವಾಗಿದೆ' ಎಂದು ಉಪಕ್ರಮಿಸಿರುವದೇಕೆ ? ಎಂಬುದಕ್ಕೆ ವಿಜ್ಞಾನಾತ್ಮನೂ ಪರಮಾತ್ಮನ ಕಾರ್ಯವೇ, ಆದ್ದರಿಂದ ಪರಮಾತ್ಮನ ಜ್ಞಾನದಿಂದ ಅವನನ್ನು ಅರಿತುಕೊಂಡಂತೆ ಆಗುವದೆಂಬುದನ್ನು ಇದು ಸೂಚಿಸುತ್ತದೆ ಎಂದು ಆಶ್ಮರಥ್ಯರೂ ಜ್ಞಾನಧ್ಯಾನಾದಿಸಾಧನಾನುಷ್ಠಾನಗಳನ್ನು ಮಾಡಿ ಉತ್ಕ್ರಾಂತಿಯನ್ನು ಹೊಂದಿದವನು ಪರಮಾತ್ಮನಾಗುವನೆಂಬುದನ್ನು ಇದು ಸೂಚಿಸುತ್ತದೆ ಎಂದು ಔಡುಲೋಮಿಗಳೂ ಪರಮಾತ್ಮನೇ ವಿಜ್ಞಾನಾತ್ಮನ ರೂಪದಿಂದ ಇರುವನು ಎಂಬುದನ್ನು ಇದು ತಿಳಿಸುತ್ತದೆ ಎಂದು ಕಾಶಕೃತ್ಸ್ನರೂ ಅಭಿಪ್ರಾಯಪಟ್ಟಿರುತ್ತಾರೆ.

ಇಲ್ಲಿ ಭಾಷ್ಯಕಾರರು ಮಾಡಿರುವ ತೀರ್ಮಾನವೇನೆಂದರೆ 'ತತ್ತ್ವಮಸಿ' ಎಂದುಮುಂತಾಗಿರುವ ಆತ್ಮೈಕ್ಯೋಪದೇಶದ ಶ್ರುತಿಗಳ ಪ್ರಮಾಣದಿಂದ ಅಮೃತತ್ವಕ್ಕೆ ಪರಮಾತ್ಮಜ್ಞಾನವೇ ಕಾರಣವಾಗಿರುವದರಿಂದಲೂ ಕಾಶಕೃತ್ಸ್ನರ ಮತವೇ ಸಿದ್ಧಾಂತವು. ಜೀವನ ಜೀವತ್ವವು ಮಾತ್ರ ಉಪಾಧಿವಶದಿಂದ ತೋರುತ್ತಿದೆ; ನಿಜವಾಗಿ ಜೀವಪರಮಾತ್ಮರಿಗೆ ಭೇದವಿಲ್ಲ.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೀಗೆಂದರು ; ಇಲ್ಲಿ 'ಆತ್ಮನಸ್ತುಕಾಮಾಯ' ಎಂದಿರುವದರಿಂದ ಆತ್ಮನಿಗೆ ಕಾಮವುಂಟು ಎಂದು ತೋರುತ್ತಿದೆಯಾಗಿ ಇದು ಜೀವಾತ್ಮನ ವಿಷಯದ ವಾಕ್ಯವೆಂದೇ ತೋರುತ್ತದೆ. ಆದರೆ ಜ್ಞಾನವು ಅಮೃತತ್ವಕ್ಕೆ ಕಾರಣವಾದದ್ದು, ಆತ್ಮನನ್ನು ಅರಿತರೆ ಎಲ್ಲವನ್ನೂ ಅರಿತಂತೆ. ಆತ್ಮನಿಗಿಂತ ಬೇರೆಯಾಗಿ ಯಾವದೊಂದೂ ಇಲ್ಲ ಎಂದು ಹೇಳಿರುವದೆಲ್ಲ

ಪರಮಾತ್ಮನಿಗೇ ಹೊಂದುವದರಿಂದ ಆತ್ಮನು ಎಲ್ಲಕ್ಕಿಂತಲೂ ಪ್ರಿಯನಾದ್ದರಿಂದ ಅವನನ್ನು ಅರಿತುಕೊಳ್ಳಬೇಕು ಎಂದಿಷ್ಟೇ ಉಪಕ್ರಮವಾಕ್ಯಕ್ಕೆ ಅರ್ಥಮಾಡುವದು ಒಳ್ಳೆಯದು. 'ತತ್ತ್ವಮಸಿ' ಎಂದು ಜೀವನ ಪರಮಾರ್ಥರೂಪವು ಪರಮಾತ್ಮನೇ ಎಂದು ಹೇಳುವ ಶ್ರುತಿಗಳಿಗೂ ಹೊಂದಿಕೆಯಾಗುತ್ತದೆ.

★★★★★

# ಸ್ಥಿತಪ್ರಜ್ಞನಿಗೆ ಉಂಟಾಗಿರುವ ಜ್ಞಾನದಿಂದ ಆಗುವ ಫಲಗಳು

**10-5-1962**

**ಬ್ರ॥ಶ್ರೀ॥ಎಸ್. ಅನಂತಮೂರ್ತಿಶಾಸ್ತ್ರಿಗಳವರು**

**ಭಗವದ್ಗೀತಾಭಾಷ್ಯದಲ್ಲಿ** 2-69ರಿಂದ 72ರವರೆಗಿನ ಶ್ಲೋಕಗಳ ಅಭಿಪ್ರಾಯ: ಇಲ್ಲಿ ಸ್ಥಿತಪ್ರಜ್ಞನಿಗೆ ಉಂಟಾಗಿರುವ ಜ್ಞಾನದಿಂದ ಆಗುವ ಫಲಗಳನ್ನು ಹೇಳಿರುತ್ತದೆ. ಸ್ಥಿತಪ್ರಜ್ಞನಿಗೆ ತಿಳಿದಿರುವ ಪರಮಾರ್ಥವು ಉಳಿದವರಿಗೆ ರಾತ್ರೆಯಂತೆ ಇರುತ್ತದೆ ; ಕತ್ತಲೆಯಲ್ಲಿ ಓಡಾಡುವವರಿಗೆ ಯಾವ ವಸ್ತುವೂ ತಿಳಿಯದಿರುವಂತೆ ಅವರಿಗೆ ಪರಮಾರ್ಥವು ಗೋಚರವಾಗದೆ ಇರುತ್ತದೆ.ಆದರೆ ಮಿಕ್ಕವರು ತಾವಿರುವದು ಎಚ್ಚರವೆಂದು ತಿಳಿದುಕೊಂಡಿದ್ದರೂ ನಿಜವಾಗಿ ಗ್ರಾಹ್ಯ ಗ್ರಾಹಕಭೇದವನ್ನು ತಿಳಿಯುವ ಕನಸಿನ ವ್ಯವಹಾರದಲ್ಲಿಯೇ ಇರುತ್ತಾರಲ್ಲ, ಆ ಭೇದದ ಅರಿವು ಜ್ಞಾನಿಗೆ ಒಂದಿಷ್ಟೂ ಇರುವುದಿಲ್ಲ. ಏಕೆಂದರೆ ಅದು ಅವಿದ್ಯಾರೂಪವಾಗಿರುವದರಿಂದ ಅವನಿಗೆ ವಿದ್ಯೆಯಿಂದ ಸಂಪೂರ್ಣವಾಗಿ ತೊಲಗಿ ಹೋಗಿರುತ್ತದೆ. ಆದ್ದರಿಂದ ಕರ್ತೃತ್ವಭೋಕ್ತೃತ್ವಜ್ಞಾನವುಳ್ಳ ಅಜ್ಞರಿಗೇ ಕರ್ಮದಲ್ಲಿ ಅಧಿಕಾರ. ಜ್ಞಾನವುಂಟಾದ ಕೂಡಲೆ, ಸೂರ್ಯೋದಯವಾದ ಕೂಡಲೆ ಕತ್ತಲೆಯು ಸಂಪೂರ್ಣವಾಗಿ ಹೋಗಿಬಿಡುವಂತೆ, ಎಲ್ಲಾ ವ್ಯವಹಾರವೂ ಹೋಗಿಬಿಟ್ಟಿರುತ್ತದೆ. ಅವನಿಗೆ ಕರ್ತೃತ್ವವಿಲ್ಲದ್ದರಿಂದ ಕರ್ಮವೂ ಇರುವದಿಲ್ಲ. ಸಮುದ್ರದಲ್ಲಿ ನದಿಗಳ ನೀರು ಬಂದು ಒಂದೇಸಮನೆ ಬೀಳುತ್ತಿದ್ದರೂ ಸಮುದ್ರವು ಮೇರೆದಪ್ಪದೆ ಹೇಗೆ

ಇದ್ದಂತೆಯೇ ಇರುವದೋ ಹಾಗೆ ಸ್ಥಿತಪ್ರಜ್ಞನಾದ ಜ್ಞಾನಿಗೆ ಬಂದ ಸರ್ವಕಾಮಗಳೂ ಆತ್ಮನಲ್ಲಿಯೇ ಲಯವಾಗಿಬಿಡುತ್ತವೆ. ಅವನು ಸರ್ವಕಾಮಗಳನ್ನೂ ಬಿಟ್ಟು ಶರೀರಯಾತ್ರೆಗೆ ಬೇಕಾದಷ್ಟು ವಿಷಯಗಳನ್ನು ಅಹಂಕಾರಮಮಕಾರವಿಲ್ಲದೆ ಸೇವಿಸುತ್ತಿರುವನು. ಅವನಿಗೇ ಪರಮಶಾಂತಿರೂಪವಾದ ಮೋಕ್ಷವು ದೊರಕುವದು. ಸ್ಥಿತಪ್ರಜ್ಞನ ಸ್ಥಿತಿಯೇ ಬ್ರಾಹ್ಮೀಸ್ಥಿತಿ : ಅದನ್ನು ಎಂದು ಯಾವನು ಪಡೆದುಕೊಂಡರೂ ಅಗಲೆ ಅವನಿಗೆ ಬ್ರಹ್ಮನಿರ್ವಾಣವು ಬರುವದು – ಎಂಬುದು ಭಾಷ್ಯಾಭಿಪ್ರಾಯ.

**ಶ್ರೀಗಳು** ಅನುವಾದದಲ್ಲಿ ಇಂತೆಂದರು ; ಸ್ಥಿತಪ್ರಜ್ಞತ್ವವೆಂಬ ಆತ್ಮನಾತ್ಮ ವಿವೇಕವೆಂಬುದು ನಿಜವಾಗಿರುವ ಎರಡು ವಸ್ತುಗಳನ್ನು ವಿಂಗಡಿಸಿಕೊಳ್ಳುವದಲ್ಲ; ಮಿಥ್ಯಾರೋಪವನ್ನು ಬಿಟ್ಟು ನಮ್ಮ ಸ್ವರೂಪದಲ್ಲಿ ನಿಲ್ಲುವದೇ ಆ ವಿವೇಕದ ಲಕ್ಷಣ. ಸೂರ್ಯನು ಹುಟ್ಟಿದ ಕೂಡಲೆ ಕತ್ತಲೆಯು ತೊಲಗುವದೆಂಬ ದೃಷ್ಟಾಂತವನ್ನು ಕೊಟ್ಟಿರುವದರಿಂದ ಭಾಷ್ಯಕಾರರ ಮತದಲ್ಲಿ ಜ್ಞಾನವು ಅಜ್ಞಾನವನ್ನು ತೆಗೆದುಹಾಕುವದಿಲ್ಲ; ಜ್ಞಾನವುಂಟಾಗುವದೇ ಅಜ್ಞಾನನಿವೃತ್ತಿ ಎಂದಾಯಿತು. ಅವಿವೇಕರೂಪವಾದ ಅಜ್ಞಾನವು ತೊಲಗುತ್ತಲೂ ಸರ್ವವ್ಯವಹಾರಗಳೂ ನಿವೃತ್ತವಾಗುತ್ತವೆ. ಇಲ್ಲಿ ಮೊದಲು ಜ್ಞಾನೋತ್ಪತ್ತಿ, ಬಳಿಕ ಅವಿದ್ಯಾನಿವೃತ್ತಿ, ಆಮೇಲೆ ಕಾಮಾದಿಗಳು ಹೋಗುವದು ಎಂದು ಕಾಲಕೃತಕ್ರಮವನ್ನು ತೆಗೆದುಕೊಳ್ಳಬಾರದು. ಒಂದೇ ಕಾಲದಲ್ಲಿಯೇ ಇದೆಲ್ಲವೂ ಆಗಿಬಿಡುತ್ತದೆ. ಅಜ್ಞರಿಗೆ ಕಾಮ್ಯವಿಷಯಗಳು ದೊರೆಯಬೇಕು, ಸ್ಥಿತಪ್ರಜ್ಞನಿಗೆ ಕಾಮಗಳೆಂಬವೂ ಆತ್ಮನೇ ಆಗಿರುತ್ತವೆ. ಇದು 'ಬ್ರಾಹ್ಮೀಸ್ಥಿತಿ' ಎಂದರೆ ಬ್ರಹ್ಮಸ್ವರೂಪದಿಂದ ನಾನು ಯಾವಾಗಲೂ ಇದ್ದು ಕೊಂಡಿರುವೆನೆಂಬ ಅನುಭವ. ಅದು ಬರುವದಲ್ಲ, ಅದರಲ್ಲಿ ಜ್ಞಾನಿಯು ನಿಲ್ಲುವದೂ ಇಲ್ಲ. ಇದೇ ಸ್ಥಿತಪ್ರಜ್ಞತ್ವ.

★★★★★

# ಎಲ್ಲವೂ ಆತ್ಮನೇ

**11-5-1962**

**ಬ್ರ॥ಶ್ರೀ॥ ಚಂದ್ರಶೇಖರಭಟ್ಟರು ಪಾಟಣಕರ**

**ಬೃಹದಾರಣ್ಯಕಭಾಷ್ಯ** (ಬೃ.2-4-12 ರಿಂದ 14)ರ ಗ್ರಂಥಭಾಗದ ಹಿಂದೆ 'ಇದೆಲ್ಲವೂ ಆತ್ಮನೇ' ಎಂದು ಪ್ರತಿಜ್ಞೆಮಾಡಿ ಅದಕ್ಕೆ ಎಲ್ಲರಲ್ಲಿಯೂ ಆತ್ಮನು ಅನುಗತನಾಗಿರುತ್ತಾನೆ, ಎಲ್ಲವೂ ಆತ್ಮನಿಂದ ಹುಟ್ಟಿದೆ, ಎಲ್ಲವೂ ಆತ್ಮನಲ್ಲಿ ಪ್ರಲಯವಾಗುತ್ತದೆ, ಎಂಬ ಹೇತುಗಳನ್ನು ಹೇಳಿದ್ದಾಗಿದೆ. ಅಲ್ಲಿ ಹೇಳಿದ್ದು ಸ್ವಾಭಾವಿಕಪ್ರಲಯ ; ಈಗ ಬ್ರಹ್ಮಜ್ಞಾನಿಗಳಿಗೆ ಬ್ರಹ್ಮವಿದ್ಯಾನಿಮಿತ್ತದಿಂದ ಆಗುವ ಆತ್ಯಂತಿಕಪ್ರಲಯವನ್ನು ಪ್ರಕೃತಗ್ರಂಥಭಾಗದಲ್ಲಿ ತಿಳಿಸಿರುತ್ತದೆ. ಈ ಗ್ರಂಥಭಾಗದ ಸಾರವೇನೆಂದರೆ :

ಉಪ್ಪಿನಹರಳನ್ನು ಅದಕ್ಕೆ ಕಾರಣವಾದ ಉದಕದಲ್ಲಿ ಹಾಕಿದರೆ ಅದೂ ದ್ರವವೇ ಆಗಿಬಿಡುವಂತೆ, ಆಮೇಲೆ ಎಂಥ ನಿಪುಣನೂ ಅದನ್ನು ಮತ್ತೆ ಹರಳಿನ ರೂಪದಿಂದ ಎತ್ತಿತೆಗೆದುಕೊಳ್ಳುವದಕ್ಕೆ ಆಗದೆ ಇರುವಂತೆ, ಎಲ್ಲೆಲ್ಲಿ ನೋಡಿದರೂ ನೀರು ಸವಿಯಲ್ಲಿ ಉಪ್ಪೇ ಆಗಿದ್ದರೂ ಅಲ್ಲಿ ಉಪ್ಪಿನಹರಳು ಇಲ್ಲದೆ ಇರುವಂತೆ, ಪರಮಾತ್ಮನೆಂಬ ತತ್ತ್ವವೂ ಅವಿದ್ಯೆಯಿಂದ ದೇಹೇಂದ್ರಿಯಸಂಘಾತ ರೂಪವನ್ನಾಂತು ಜನ್ಮಮರಣಾದಿಸಂಸಾರಧರ್ಮವುಳ್ಳದ್ದಾಗಿ ತೋರುತ್ತಿರುವದು. ಇದು ದೃಷ್ಟಾಂತದ ಉಪ್ಪಿನಹರಳಿನಂತೆ. ಮತ್ತೆ ವಿದ್ಯೆಯಿಂದ ಅವಿದ್ಯಾಕೃತವಾದ ಭೇದಭಾವವು ನಾಶವಾಗಲು ಎಲ್ಲವೂ ವಿಜ್ಞಾನಘನವೇ ಆಗಿರುವ ಪರಮಾತ್ಮನೇ ಆಗಿಬಿಡುವದು. ಇದು ದೃಷ್ಟಾಂತದ ಉದಕಭಾವದಂತೆ. ಇದು ಭೂತಗಳಿಂದ ಹುಟ್ಟಿತೋರಿಕೊಂಡು, ಶಾಸ್ತ್ರಾಚಾರ್ಯರ ಉಪದೇಶದಿಂದ ದೊರೆತ ಬ್ರಹ್ಮವಿದ್ಯೆಯಿಂದ ಮತ್ತೆ ಕರಗಿಹೋಗುವದು. ಬಳಿಕ ಪ್ರಜ್ಞಾನವಾದ ಬ್ರಹ್ಮವಾಗಿಯೇ ಉಳಿದುಕೊಳ್ಳುವದು. ಆಗ 'ನಾನು ಇಂಥವನು' ಎಂಬ ವಿಶೇಷಸಂಜ್ಞೆ ಇರುವದಿಲ್ಲ. ಜೀವನೇ ವಿದ್ಯೆಯಿಂದ ನಾಶವಾಗುವನೆಂದಲ್ಲ. ಅವಿದ್ಯೆಯಿಂದಾಗಿದ್ದ ಪರಿಚ್ಛಿನ್ನಭಾವವು ಮಾತ್ರ ನಾಶವಾಗುವದು. ದ್ವೈತವಿರುವಾಗ ಒಬ್ಬನು

ಮತ್ತೊಬ್ಬನನ್ನು ಕಾಣುವನು. ಆದರೆ ವಿದ್ಯೆಯಿಂದ ಎಲ್ಲವೂ ಆತ್ಮನೇ ಆಗಲು ಅಲ್ಲಿ ಏತರಿಂದ ಯಾವದನ್ನು ಅರಿಯಬೇಕು ? ಎಲ್ಲವನ್ನೂ ಅರಿಯುವ ಅದ್ವಿತೀಯನಾದ ಆತ್ಮನನ್ನು ಅರಿಯುವದಕ್ಕೆ ಯಾವ ಸಾಧನವೂ ಇರುವದಿಲ್ಲ.

**ಶ್ರೀಗಳು** ಅನುವಾದದಲ್ಲಿ ಇಂತೆಂದರು : ಅವಿದ್ಯೆಯಿಂದ ಶರೀರಾದಿಗಳನ್ನು ಪಡೆದುಕೊಂಡಿರುವಂತೆ ಕಾಣುತ್ತಿರುವ ಜೀವನು ವಿದ್ಯೆಯಿಂದ ನೋಡಿದಾಗ ವಿಜ್ಞಾನಘನನೇ ಆಗಿರುತ್ತಾನೆ. ಮಣ್ಣಿನಿಂದ ಮಾಡಿದ ಗಣಪತಿಯ ವಿಗ್ರಹದಲ್ಲಿ ಸೊಂಡಿಲು, ಕೈಕಾಲು, ಹೊಟ್ಟೆ, ಹಾವು, ಇಲಿ ಎಂದು ಮುಂತಾಗಿ ಭೇದವು ಕಾಣುತ್ತಿದ್ದರೂ ಅದರ ಸಾರದ ದೃಷ್ಟಿಯಿಂದ ನೋಡಿದಾಗ ಎಲ್ಲವೂ ಮಣ್ಣೇ ಎಂದಾಗಿ ಬಿಡುವದು. ಅಲ್ಲಿ ಯಾವ ಭೇದವೂ ಇರುವದಿಲ್ಲ. ಇದರಂತೆ ದ್ವೈತದೃಷ್ಟಿಯಿಂದ ನೋಡಿದಾಗ ವಿಶೇಷಜ್ಞಾನಕ್ಕೆ ಅವಕಾಶವಿರುತ್ತದೆ ; ಎಲ್ಲವೂ ಪ್ರಜ್ಞಾನಘನವೇ ಎಂಬ ವಿದ್ಯಾದೃಷ್ಟಿಯಿಂದ ನೋಡಿದಾಗ ನಾನು ಇಂಥ ಕರಣದಿಂದ ಇಂಥ ವಿಷಯವನ್ನು ಅರಿಯುತ್ತೇನೆ ಎಂಬ ವಿಭಾಗಕ್ಕೆ ಅವಕಾಶವಿರುವದೇ ಇಲ್ಲ.

★★★★★

## ಮೂರು ಜನ ಆಚಾರ್ಯರ ದೃಷ್ಟಿ

**12-5-1962**

**ವೇ|| ಲಕ್ಷ್ಮೀನರಸಿಂಹಶಾಸ್ತ್ರಿಗಳವರು**

ಬ್ರಹ್ಮಸೂತ್ರಭಾಷ್ಯದ (1-4-22)ರ ಭಾಗದಲ್ಲಿ 'ಆತ್ಮಾ ವಾ **ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ** ನಿದಿಧ್ಯಾಸಿತವ್ಯಃ' ಎಂಬ ವಾಕ್ಯದಲ್ಲಿ ಜೀವಾತ್ಮನನ್ನು ಹೇಳಿದೆಯೆ, ಪರಮಾತ್ಮ ನನ್ನು ಹೇಳಿದೆಯೆ ?- ಎಂಬ ವಿಷಯಕ್ಕೆ ಬಂದಿರುವ ಸಂದೇಹವನ್ನು ಪರಿಹರಿಸುವದಕ್ಕೆ ಆಶ್ಮರಥ್ಯ, ಔಡುಲೋಮಿ, ಕಾಶಕೃತ್ಸ್ನ - ಈ

ಮೂರು ಜನ ಆಚಾರ್ಯರುಗಳ ಅಭಿಪ್ರಾಯವನ್ನು ತಿಳಿಸಿ ಕಾಶಕೃತ್ಸ್ನರ ಮತವನ್ನೇ ಸಿದ್ಧಾಂತವಾಗಿ ಸ್ವೀಕರಿಸಿದೆ. (9-5-1962)ರ ಬುಧವಾರದ ದಿನ ಪ್ರವಚನಕ್ಕೆ ಇಟ್ಟಿದ್ದ ವಿಷಯವೂ ಇದೇ; ಆದರೆ 'ಇದಂ ಮಹದ್ಭೂತಮನನ್ತಮಪಾರಂ ವಿಜ್ಞಾನಘನ ಏವೈತೇಭ್ಯೋ ಭೂತೇಭ್ಯಃ ಸಮುತ್ಥಾಯ ತಾನ್ಯೇವಾನುವಿನಶ್ಯತಿ ನ ಪ್ರೇತ್ಯ ಸಂಜ್ಞಾಸ್ತಿ' ಎಂಬ ವಾಕ್ಯದ ಅಭಿಪ್ರಾಯವನ್ನು ಆಗ ಚರ್ಚಿಸಿರಲಿಲ್ಲ. ಈ ವಾಕ್ಯದಲ್ಲಿ ಪ್ರಕೃತವಾಗಿರುವ ದ್ರಷ್ಟವ್ಯವೆಂದು ಉಪದೇಶಿಸಿರುವ ತತ್ತ್ವವು 'ಭೂತಗಳಿಂದಲೂ ಉಂಟಾಗಿ ಅವುಗಳನ್ನನುಸರಿಸಿಯೇ ಲಯವಾಗುತ್ತದೆ' ಎಂದು ಹೇಳಿರುವದರಿಂದಲೂ ಅದನ್ನು ವಿಜ್ಞಾತೃವೆಂದು ವಿಜ್ಞಾನಕರ್ತೃವಾಚಕಶಬ್ದದಿಂದ ಕರೆದಿರುವದರಿಂದಲೂ ಇದು ವಿಜ್ಞಾನಾತ್ಮ (ಜೀವಾತ್ಮ) ವಿಷಯಕವಾಕ್ಯವೇ ಎಂದು ತೋರುತ್ತದೆಯಲ್ಲ! ಹೀಗಿರುವಲ್ಲಿ ಇದನ್ನು ಪರಮಾತ್ಮವಾಕ್ಯವೆಂದು ಹೇಗೆ ಹೇಳುವದು ? ಎಂಬ ಪೂರ್ವಪಕ್ಷಕ್ಕೆ ಪರಿಹಾರವನ್ನು ಮೇಲೆ ಹೇಳಿದ ಮೂರು ಜನ ಆಚಾರ್ಯರ ದೃಷ್ಟಿಯಿಂದಲೂ ಹೇಳಿದೆ.

1. 'ಆತ್ಮನನ್ನರಿತರೆ ಎಲ್ಲವನ್ನೂ ಅರಿತಂತೆ', 'ಇದೆಲ್ಲವೂ ಈ ಆತ್ಮನೇ' ಎಂದು ಪ್ರತಿಜ್ಞಾವಾಕ್ಯದಲ್ಲಿರುವದನ್ನೇ ಪ್ರಕೃತವಾಕ್ಯದಲ್ಲಿಯೂ ವಿಸ್ತರಿಸಿ ಹೇಳಿರುತ್ತದೆ. ಅಭೇದಾಂಶವನ್ನಿಟ್ಟುಕೊಂಡರಲ್ಲವೆ, ಪರಮಾತ್ಮಜ್ಞಾನದಿಂದ ಜೀವಸಹಿತವಾಗಿ ಎಲ್ಲವನ್ನೂ ಅರಿತಂತೆ ಆಗುವದು? ಎಂಬುದು **ಆಶ್ಮರಥ್ಯರ** ಮತ.

2. ಜ್ಞಾನಧ್ಯಾನಾದಿಗಳಿಂದ ನಿರ್ಮಲನಾದ ಜೀವನು ಪರಮಾತ್ಮನಲ್ಲಿ ಒಂದಾಗುವನೆಂಬುದನ್ನಿಟ್ಟುಕೊಂಡು ಹೀಗೆ ಅಭೇದವನ್ನು ಹೇಳಿದೆ ಎಂದು **ಔಡುಲೋಮಿಗಳ** ಮತ.

3. ಪರಮಾತ್ಮನೇ ಈ ಜೀವರೂಪದಿಂದ ಈಗಲೂ ಇರುವದರಿಂದಲೇ ಹಾಗೆ ಅಭೇದವನ್ನು ಹೇಳಿದೆ ಎಂಬುದು **ಕಾಶಕೃತ್ಸ್ನರ** ಮತ.

ಇದೇ ಇಲ್ಲಿ ಸಿದ್ಧಾಂತ. ಇಲ್ಲಿ ಅಭೇದವನ್ನು ಹೇಳಿದೆ ಎಂಬುದು ಹೇಗೆ ? ಜೀವನು ನಾಶವಾಗುತ್ತಾನೆ ಎಂದಲ್ಲವೆ, ಇಲ್ಲಿ ಹೇಳಿದೆ ? -ಎಂಬ ಶಂಕೆಗೆ ಪರಿಹಾರವನ್ನು ಇದೇ ಶ್ರುತಿಯಲ್ಲಿ ಹೇಳಿದೆ. ಈ ಆತ್ಮನಿಗೆ ವಿನಾಶವೇನೂ ಇಲ್ಲ ; ಅವಿದ್ಯೆಯಿಂದ

ತೋರುವ ಭೂತಮಾತ್ರೆಗಳ ಸಂಬಂಧವು ಇಲ್ಲವಾಗುವದರಿಂದ ಆಗುವ ವಿಶೇಷ ವಿಜ್ಞಾನವಿನಾಶವನ್ನೇ ಇಲ್ಲಿ ನಾಶವೆಂದು ಕರೆದಿದೆ – ಎಂದು ಯಾಜ್ಞವಲ್ಕ್ಯರು ಮೈತ್ರೇಯಿಗೆ ತಿಳಿಸಿಕೊಟ್ಟಿರುತ್ತಾರೆ.

'ವಿಜ್ಞಾತೃ' ಎಂದು ಕರ್ತೃವಾಚಕಶಬ್ದದಿಂದ ಪರಮಾತ್ಮನನ್ನು ಕರೆದಿರುವದೇಕೆ?– ಎಂದರೆ ಪರಮಾತ್ಮನೇ ಜೀವಭಾವದಿಂದ ತೋರುತ್ತಿರುವದರಿಂದ ಅವಿದ್ಯಾಕೃತವಾದ ದ್ವೈತವಿರುವಲ್ಲಿ ವಿಶೇಷಜ್ಞಾನವಿರುತ್ತದೆ; ವಿದ್ಯಾದೃಷ್ಟಿಯಿಂದ ಯಾವ ವಿಶೇಷಜ್ಞಾನವೂ ಇಲ್ಲ ಎಂದು ಇಲ್ಲಿ ಸ್ಪಷ್ಟಪಡಿಸಿರುವದರಿಂದ ಕೇವಲ ವಿಜ್ಞಾನಸ್ವರೂಪನೇ ಆಗಿರುವ ಪರಮಾತ್ಮನನ್ನೇ ಜೀವನಾಗಿದ್ದಾಗ ವಿಜ್ಞಾತೃವಾಗಿದ್ದನೆಂಬ ಕಾರಣದಿಂದ 'ವಿಜ್ಞಾತೃ' ಎಂದಿದೆ. ಆದ್ದರಿಂದ ವಿಜ್ಞಾನಾತ್ಮ ಪರಮಾತ್ಮರಿಗೆ ತೋರುವ ಭೇದವು ಅವಿದ್ಯೆಯಿಂದಾದ ದೇಹಾದ್ಯುಪಾಧಿಗಳ ನಿಮಿತ್ತದಿಂದಾಗಿ ರುತ್ತದೆ, ಪರಮಾರ್ಥವಲ್ಲ ಎಂದು ಕಾಶಕೃತ್ಸ್ನಾಚಾರ್ಯರ ಮತದಂತೆಯೇ ನಿಶ್ಚಯಿಸಬೇಕು – ಎಂಬುದು ಭಾಷ್ಯದ ಸಾರ.

★★★★★

# ಜ್ಞಾನನಿಷ್ಠಾವಿಚಾರ

**13-5-1962**

**ವೇ॥ಬ್ರ॥ಶ್ರೀ॥ ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಶಾಸ್ತ್ರಿಗಳವರು**

ಭಗವದ್ಗೀತಾ (18-50ನೆಯ ಶ್ಲೋಕದ) ಭಾಷ್ಯದಲ್ಲಿ "**ಜ್ಞಾನನಿಷ್ಠಾವಿಚಾರ**"ವಿದೆ. ಕರ್ಮಯೋಗದಿಂದ ಪರಮೇಶ್ವರನ ಪ್ರಸಾದದಿಂದ ಶರೀರೇಂದ್ರಿಯಗಳು ಜ್ಞಾನನಿಷ್ಠೆಗೆ ತಕ್ಕ ಯೋಗ್ಯತೆಯನ್ನು ಪಡೆದುಕೊಳ್ಳಲಾಗಿ ಜ್ಞಾನನಿಷ್ಠೆಯಿಂದ ಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ ಎಂದು ಭಗವಂತನು ಇಲ್ಲಿ ಪ್ರತಿಜ್ಞೆಮಾಡಿರುತ್ತಾನೆ. ಈ ವಿಷಯದಲ್ಲಿ ಭಾಷ್ಯಕಾರರು ಮಾಡಿರುವ ಚರ್ಚೆಯ ಸಾರವೇನೆಂದರೆ:

ಜ್ಞಾನವು ಗೀತೆಯಲ್ಲಿಯೂ ಉಪನಿಷತ್ತುಗಳಲ್ಲಿಯೂ ತಿಳಿಸಿರುವ ಆತ್ಮಸ್ವರೂಪಕ್ಕೆ ಅನುಗುಣವಾಗಿ ಆಗುತ್ತದೆ. ಅದರ ಪರಮಪರ್ಯವಸಾನವೇ ಜ್ಞಾನನಿಷ್ಠೆ.

ಜ್ಞಾನವು ವಿಷಯದ ಆಕಾರವಾಗಿಯೇ ಉಂಟಾಗುವದೆಂಬುದು ಪ್ರಸಿದ್ಧವಾಗಿರುತ್ತದೆ. ಆತ್ಮನು ವಿಷಯನೂ ಅಲ್ಲ, ಆಕಾರವುಳ್ಳವನೂ ಅಲ್ಲ; ಆದ್ದರಿಂದ ಆತ್ಮಾಕಾರವಾಗಿ ಜ್ಞಾನವುಂಟಾಗುವದೆಂಬುದು ಅಸಂಭಾವಿತ. ಆದ್ದರಿಂದ ಜ್ಞಾನನಿಷ್ಠೆಯು ಹೇಗೆ ಆದೀತು? –ಎಂಬ ಶಂಕೆಯುಂಟಾಗಬಹುದು. ಆತ್ಮನು ಅತ್ಯಂತನಿರ್ಮಲನು, ಅತಿಸ್ವಚ್ಛನು, ಅತಿಸೂಕ್ಷ್ಮನು; ಅಂತಃಕರಣವೂ ಹಾಗೆಯೇ ನಿರ್ಮಲತ್ವಾದಿಗುಣವುಳ್ಳದ್ದಾದರೆ ಆತ್ಮಚೈತನ್ಯಾಕಾರವಾಗಿ ಹೊಳೆಯಬಹುದಾಗಿದೆ. ಬುದ್ಧಿಯ ಆಭಾಸವು ಮನಸ್ಸು, ಮನಸ್ಸಿನ ಆಭಾಸವು ಇಂದ್ರಿಯಗಳು, ಇಂದ್ರಿಯಾಭಾಸವು ದೇಹವು. ಆದ್ದರಿಂದ ದೇಹಾದಿಬುದ್ಧ್ಯಂತವಾಗಿರುವ ತತ್ತ್ವಗಳಲ್ಲಿ ಆತ್ಮಬುದ್ಧಿಯು ವಾದಿಗಳಿಗೆ ಉಂಟಾಗುತ್ತಿರುವದು. ಸರ್ವಾಂತರವಾದ ಅವಿದ್ಯಾಕಲ್ಪಿತವಾದ ಅವ್ಯಾಕೃತವನ್ನೂ ಕೂಡ ಆತ್ಮನೆಂದು ಕೆಲವರು ತಿಳಿದಿರುತ್ತಾರೆ, ಹೀಗಿರುವದರಿಂದ ಆತ್ಮ ಜ್ಞಾನವನ್ನು ಹೊಸದಾಗಿ ತಿಳಿಸಿಕೊಡಬೇಕಾದದ್ದೇನೂ ಇರುವದಿಲ್ಲ ; ಏಕೆಂದರೆ ಅವಿದ್ಯೆಯಿಂದ ಕಲ್ಪಿತವಾದ ಸರ್ವಪದಾರ್ಥಗಳ ರೂಪದಿಂದಲೂ ಆತ್ಮನೇ ಬೆಳಗುತ್ತಿರುತ್ತಾನೆ. ಆದ್ದರಿಂದ ಆತ್ಮನು ಅವಿದ್ಯೆಯಿಂದ ಅಧ್ಯಸ್ತವಾಗಿರುವ ದೇಹಾದ್ಯವ್ಯಕ್ತಾಂತ ಪದಾರ್ಥಗಳಲ್ಲವೆಂದು ತಿಳಿಸಿಕೊಟ್ಟರೆ ಸಾಕಾಗಿದೆ. ಆತ್ಮವಸ್ತು ನಿರಾಕಾರವಾಗಿ ರುವದರಿಂದ ಆತ್ಮಜ್ಞಾನನಿಷ್ಠೆಯನ್ನು ಸಂಪಾದಿಸುವದು ಆಗಲಾರದು ಎಂದು ಬಗೆಯುವದು ತಪ್ಪು; ಏಕೆಂದರೆ ಆತ್ಮಚೈತನ್ಯಕ್ಕಿಂತ ಬೇರೆಯಾಗಿ ಯಾವ ವಸ್ತುವೂ ಕಾಣಬರುವದಿಲ್ಲ. ಆದ್ದರಿಂದ ಬಾಹ್ಯಾಕಾರವಾಗಿರುವ ಭೇದಬುದ್ಧಿಯನ್ನು ತೊಲಗಿಸಿಕೊಳ್ಳುವದೇ ಆತ್ಮಸ್ವರೂಪವನ್ನು ಅನುಸರಿಸುವದಕ್ಕೆ ಕಾರಣವಾಗಿರುತ್ತದೆ ಎಂದೇ ಸಂಪ್ರದಾಯಾನುಸಾರವಾಗಿ ತಿಳಿದುಕೊಳ್ಳಬೇಕು. ಆತ್ಮನು ಅತ್ಯಂತಪ್ರಸಿದ್ಧನಾಗಿರುವದರಿಂದ ಅವನನ್ನು ಪಡೆದುಕೊಳ್ಳಬೇಕು, ಬಿಡಬೇಕು ಅಥವಾ ಸ್ವೀಕರಿಸಬೇಕು – ಎಂದು ಬಗೆಯಬಾರದು. ಸರ್ವಪ್ರವೃತ್ತಿಗಳೂ ಆತ್ಮಾರ್ಥವಾಗಿಯೇ ಇರುವದರಿಂದಲೂ ಸರ್ವವ್ಯವಹಾರವೂ ಆತ್ಮಾನುಭವದಲ್ಲಿಯೇ ಕೊನೆಗಾಣುತ್ತಿರುವದರಿಂದಲೂ ಆತ್ಮಜ್ಞಾನಕ್ಕಾಗಿ ಯಾವ ಪ್ರಮಾಣವನ್ನೂ ಹುಡುಕಬೇಕಾದದ್ದಿರುವದಿಲ್ಲ. ಜ್ಞಾನವು

ಅಪ್ರತ್ಯಕ್ಷವೆನ್ನುವವರುಕೂಡ ಜ್ಞೇಯದ ಅನುಭವವು ಜ್ಞಾನಾಧೀನವಾಗಿಯೇ ಆಗಬೇಕಾಗಿರುವದರಿಂದ ಸುಖಾದಿಗಳಂತೆ ಜ್ಞಾನವು ಅತ್ಯಂತಪ್ರಸಿದ್ಧವೆಂದು ಒಪ್ಪಬೇಕು. ಜ್ಞಾನವನ್ನು ಹೊಸದಾಗಿ ತಿಳಿಯಬೇಕಾಗಿರುವದೆಂದು ಎಣಿಸಿದರೆ ಆ ಜ್ಞಾನವನ್ನು ತಿಳಿಯುವದಕ್ಕೆ ಮತ್ತೊಂದು ಜ್ಞಾನವು ಬೇಕಾಗಿಬರುವದರಿಂದ ಅನವಸ್ಥಾದೋಷವು ಗಂಟುಬೀಳುತ್ತದೆ. ಇದೇ ಕಾರಣದಿಂದಲೇ ಜ್ಞಾತೃವೂ ಅತ್ಯಂತಪ್ರಸಿದ್ಧನೆಂದೇ ಒಪ್ಪಬೇಕು. ಈ ರೀತಿಯಲ್ಲಿ ಜ್ಞಾನನಿಷ್ಠೆಯನ್ನು ಅತದ್ಬುದ್ಧಿನಿವೃತ್ತಿಯಿಂದಲೇ ಸಂಪಾದಿಸಿಕೊಳ್ಳಬಹುದು.

**ಶ್ರೀಶ್ರೀಗಳು** ಅನುವಾದದಲ್ಲಿ ಜ್ಞಾನನಿಷ್ಠೆಯು ಅಂತರ್ಮುಖತ್ವವಿಲ್ಲದವರಿಗೆ ಎಂದಿಗೂ ಸಾಧ್ಯವಿಲ್ಲವೆಂಬುದನ್ನು ಅನೇಕ ದೃಷ್ಟಾಂತಗಳಿಂದ ಸ್ಪಷ್ಟಪಡಿಸಿದರು. ಆತ್ಮಜ್ಞಾನವು ಸುಲಭಸಾಧ್ಯವಲ್ಲವೆಂದು ತಿಳಿಯುವವರಿಗೆ ಬಾಹ್ಯವಿಷಯಾಭಿಲಾಷೆಯೇ ಆಡ್ಡ ಬಂದಿದೆ ಎಂಬುದನ್ನು ಸ್ಪಷ್ಟಪಡಿಸಿದರು.

★★★★★

## ಸುಷುಪ್ತಿವಿಚಾರ

**14-5-1962**

**ಬ್ರ॥ಶ್ರೀ॥ಹೆಚ್.ಅನಂತಮೂರ್ತಿಶಾಸ್ತ್ರಿಗಳು**

**ಛಾಂದೋಗ್ಯಭಾಷ್ಯ** (6.8-1,2)ದಲ್ಲಿರುವ **ಸುಷುಪ್ತಿವಿಚಾರವಿದೆ.** ಮನಸ್ಸಿನಲ್ಲಿ ಪರಮಾತ್ಮನು ಜೀವರೂಪದಿಂದ ಪ್ರವಿಷ್ಟನಾಗಿರುತ್ತಾನಷ್ಟೆ? ಆ ಮನಸ್ಸು ಅನ್ನಮಯವಾಗಿದ್ದು ತೇಜಸ್ಸುಗಳಿಂದಾಗಿರುವ ಪ್ರಾಣ, ವಾಕ್ಕು ಇವುಗಳೊಡನೆ ಕೂಡಿಕೊಂಡಿರುವದೆಂದು ಹಿಂದೆ ಹೇಳಿದೆ. ಈ ಮನಸ್ಸಿನಲ್ಲಿದ್ದುಕೊಂಡಿರುವ ಜೀವನು ದರ್ಶನಶ್ರವಣಮನನಾದಿ ವ್ಯವಹಾರವನ್ನು ಮಾಡುತ್ತಿದ್ದು, ಸುಷುಪ್ತಿಯಲ್ಲಿ ಮೈಗರೆದಾಗ

ಪರಮಾತ್ಮರೂಪವನ್ನೇ ಪಡೆದುಕೊಂಡು ಬಿಡುತ್ತಾನೆ. ಇಲ್ಲಿ ಸ್ವಪ್ನಾಂತವೆಂದರೆ ಸುಷುಪ್ತಿಯೇ; ಏಕೆಂದರೆ ಅಲ್ಲಿಯೇ ಜೀವನು ತನ್ನ ಸ್ವರೂಪವಾದ ಪರಮಾತ್ಮನಲ್ಲಿ ಲಯವಾಗುತ್ತಾನೆ. ಜೀವನು ಸ್ವಪ್ನದಲ್ಲಿ ಅವಿದ್ಯಾಕಾಮಕರ್ಮಗಳ ವಶನಾಗಿ ಸುಖದುಃಖಗಳನ್ನು ಅನುಭವಿಸುತ್ತಾ ಇರುತ್ತಾನೆ ; ಸುಷುಪ್ತಿಯಲ್ಲಿಯೋ ಎಂದರೆ ಪುಣ್ಯಪಾಪಗಳು ಅವನನ್ನು ಹಿಂಬಾಲಿಸುವದಿಲ್ಲವಾಗಿ ಅಲ್ಲಿಯೇ ಜೀವತ್ವವಿನಿರ್ಮುಕ್ತವಾದ ಪರದೇವತಾಸ್ವರೂಪವು ಅವನಿಗೆ ಲಭಿಸುತ್ತದೆ. ಆದ್ದರಿಂದ 'ಸ್ವಪಿತಿ' ತನ್ನ ಸ್ವರೂಪವಾದ ಪರಮಾತ್ಮತತ್ತ್ವವನ್ನು ಸೇರಿಕೊಳ್ಳುತ್ತಾನೆ –ಎಂಬ ಶಬ್ದವನ್ನು ಜನರು ಅವನಿಗೆ ಉಪಯೋಗಿಸುತ್ತಾರೆ. ಸ್ವರೂಪದಲ್ಲಿ ಸೇರಿಹೋಗಿರುವದರಿಂದಲೇ ಅವನಿಗೆ ಅಲ್ಲಿ ಯಾವ ಶ್ರಮವೂ ಆಗುವದಿಲ್ಲ, ಆ ಅವಸ್ಥೆಯಲ್ಲಿ ಕರಣಗಳೆಲ್ಲ ಪ್ರಾಣಗ್ರಸ್ತವಾಗಿರುವಲ್ಲಿ ಜೀವತ್ವವನ್ನು ಬಿಟ್ಟು ಸರ್ವಪ್ರಾಣಗಳಿಗೂ ಪ್ರಾಣನಾಗಿರುವ ಪರಮಾತ್ಮನನ್ನೇ ಸೇರಿರುತ್ತಾನೆ – ಎಂಬುದು ಭಾಷ್ಯದ ಸಾರವು.

**ಶ್ರೀಗಳು** ಅನುವಾದದಲ್ಲಿ ಇಂತೆಂದರು : 'ಸದೇವಸೋಮ್ಯ' ಎಂಬ ವಾಕ್ಯದಲ್ಲಿ ಎಲ್ಲವೂ ಸೃಷ್ಟಿಗೆ ಪೂರ್ವದಲ್ಲಿ ಅದ್ವಿತೀಯವಾದ ಸನ್ಮಾತ್ರವಾದ ಪರಮಾತ್ಮನೊಬ್ಬನೇ ಆಗಿತ್ತು ಎಂದು ಹೇಳಿದ್ದರೂ ಈಗ ಹಾಗಿಲ್ಲವೆಂದೇನೂ ಅರ್ಥವಲ್ಲ. ಜಾಗ್ರತ್ಸ್ವಪ್ನಗಳಲ್ಲಿ ಬೇರೆಬೇರೆಯಾಗಿ ತೋರುತ್ತಿರುತ್ತದೆ ; ಶರೀರಕರಣಗಳಿಂದ ಕೂಡಿಕೊಂಡಿರುವಂತೆ ಆಗ ತೋರಿದರೂ ಆಗಲೂ ಸನ್ಮಾತ್ರವೇ ಆಗಿರುತ್ತದೆ. ಸುಷುಪ್ತಿಯಲ್ಲಿ ಮತ್ತೆ ಕೇವಲ ಸನ್ಮಾತ್ರರೂಪದಿಂದ ತೋರಿಕೊಳ್ಳುವದೇ ಇದಕ್ಕೆ ಗುರುತು. ಜೀವನಿಗೆ ಶರೀರಕರಣಾದಿಗಳ ಸಂಬಂಧದಿಂದ ಆಗಿರುವಂತೆ ಕಾಣುವ ಶ್ರಮವು ಸುಷುಪ್ತಿಯಲ್ಲಿಲ್ಲ ; ಏಕೆಂದರೆ ಆಗ ಅವನು ಪರಮಾತ್ಮರೂಪವಾದ ತನ್ನಲ್ಲಿ ತಾನು ಸೇರಿಕೊಂಡಿರುತ್ತಾನೆ. ಶ್ರಮವು ಉಪಾಧಿಯಿಂದಲೂ ವಿಶ್ರಾಂತಿಯು ತನ್ನ ಸ್ವರೂಪದಲ್ಲಿರುವದರಿಂದಲೂ ತೋರುತ್ತದೆ – ಎಂದು ಇದರಿಂದ ಸಿದ್ಧವಾಗುತ್ತದೆ.

★★★★★

# ಅಕ್ಷರೋಪಾಸಕರ ಭಕ್ತಿ

**15-5-1962**

**ಬ್ರ॥ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

**ಭಗವದ್ಗೀತಾ** ಭಾಷ್ಯದಲ್ಲಿ (12-13ರಿಂದ ಪೂರ) ''ಅಕ್ಷರೋಪಾಸಕರ ಭಕ್ತಿ''ಯನ್ನು ವರ್ಣಿಸಿದೆ. ಹನ್ನೊಂದನೆಯ ಅಧ್ಯಾಯದಲ್ಲಿ ವಿಶ್ವರೂಪವಾದ ಈಶ್ವರನಲ್ಲಿ ಚಿತ್ತವನ್ನಿಟ್ಟುಕೊಳ್ಳುವ ಬಗೆಯನ್ನೂ ಈಶ್ವರಾರ್ಥವಾಗಿ ಕರ್ಮಾನುಷ್ಠಾನಮಾಡುವ ರೀತಿಯನ್ನೂ ತಿಳಿಸಲಾಯಿತು. ಇದು ಜೀವೇಶ್ವರರಿಗೆ ಭೇದವನ್ನು ಅಂಗೀಕರಿಸಿ ಅಜ್ಞಾನಿಗಳಿಗೇ ಹೇಳಿದ್ದೆಂಬುದು 'ಅಥೈತದಪ್ಯಶಕ್ತೋಽಸಿ' ಇದನ್ನೂ ಮಾಡುವದಕ್ಕೆ ಆಗದೆ ಇದ್ದರೆ - ಎಂದು ಅಜ್ಞಾನಸೂಚಕವಾದ ವಾಕ್ಯವನ್ನು ಪ್ರಯೋಗಿಸಿರುವದರಿಂದ ಗೊತ್ತಾಗುತ್ತದೆ. ಇದು ಅಭೇದದರ್ಶಿಗಳಾದ ಅಕ್ಷರೋಪಾಸಕರಿಗೆ ಹೇಳಿದ್ದಲ್ಲವೆಂದೂ ಇದರಿಂದಲೇ ಗೊತ್ತಾಗುತ್ತದೆ. ಇದರಂತೆ 'ತೇ ಪ್ರಾಪ್ನುವನ್ತಿಮಾಮೇವ' ಅವರು ನನ್ನನ್ನೇ ಹೊಂದುತ್ತಾರೆ ಎಂದು ಅಕ್ಷರೋಪಾಸಕರಿಗೆ ಸ್ವಾತಂತ್ರ್ಯವನ್ನು ಹೇಳಿ ವಿಶ್ವರೂಪೋಪಾಸಕರಿಗೆ ತೇಷಾಮಹಂ ಸಮುದ್ಧರ್ತಾ ಅವರನ್ನು ನಾನು ಸಂಸಾರಸಾಗರದಿಂದ ಉದ್ಧಾರಮಾಡುವೆನು - ಎಂದು ಪಾರತಂತ್ರ್ಯವನ್ನು ಹೇಳಿರುವದರಿಂದಲೂ ಹೀಗೆಂದು ನಿಶ್ಚಿತವಾಗುತ್ತದೆ; ಏಕೆಂದರೆ ಈಶ್ವರನೇ ನನ್ನ ಆತ್ಮನೆಂದು ತಿಳಿದ ಅಕ್ಷರೋಪಾಸಕನು ಎಂದಿಗೂ ಈಶ್ವರನಿಗೆ ತಾನು ಅಧೀನನೆಂದು ಭಾವಿಸಿಕೊಳ್ಳಲಾರನು. ಅರ್ಜುನನಿಗೆ ಹಿತವನ್ನೇ ಕೋರುವನಾದ್ದರಿಂದ ಭಗವಂತನು ಅವನಿಗೆ ಭೇದದೃಷ್ಟಿಯ ಕರ್ಮಯೋಗವನ್ನೇ ಉಪದೇಶಿಸಿರುತ್ತಾನೆ. ಆದ್ದರಿಂದ ಈ ಎರಡು ಉಪದೇಶಗಳೂ ಸಚ್ಛಾಸ್ತ್ರಕೃತವೇ ಎಂದಾಯಿತು. ಪ್ರಕೃತದಲ್ಲಿ ಅಕ್ಷರೋಪಾಸಕರಲ್ಲಿರುವ ಅದ್ವೇಷ್ಟೃತ್ವಾದಿಧರ್ಮಗಳನ್ನು ಉಪದೇಶಿಸಿರುವದಕ್ಕೆ ಹೊರಟಿರುತ್ತಾನೆ.

ಅಕ್ಷರೋಪಾಸಕನು ಎಲ್ಲರೂ ತನ್ನ ಆತ್ಮಸ್ವರೂಪರೇ ಆಗಿರುವದರಿಂದ ಯಾರನ್ನೂ ದ್ವೇಷಿಸದೆ ಮೈತ್ರಿಯಿಂದಲೂ ದುಃಖಿತರಾದವರಲ್ಲಿ

ಕರುಣೆಯಿಂದಲೂ ಅಹಂಕಾರಮಮಕಾರವಿಲ್ಲದೆ ಸುಖದುಃಖಗಳ ಪ್ರಾಪ್ತಿಯಿಂದ ಏರುಪೇರಿಲ್ಲದೆ ತನಗೆ ಕೆಟ್ಟದ್ದನ್ನು ಮಾಡಿದರೂ ಕ್ಷಮಿಸುವವನಾಗಿರುತ್ತಾನೆ. ದೇಹಯಾತ್ರೆಗೆ ಬೇಕಾದದ್ದು ಪ್ರಾಪ್ತವಾಗಲಿ ಆಗದಿರಲಿ ಸಂತೋಷದಿಂದಲೇ ಇರುತ್ತಾ ಭಗವಂತನಲ್ಲಿಯೇ ಮನೋಬುದ್ಧಿಗಳನ್ನಿಟ್ಟು, ತಾನು ಮತ್ತೊಬ್ಬರಿಂದ ನೊಂದುಕೊಳ್ಳದೆ ಮತ್ತೊಬ್ಬರನ್ನೂ ನೋಯಿಸದೆ ಹರ್ಷ, ಅಮರ್ಷ, ಭಯ, ಉದ್ವೇಗ-ಮುಂತಾದ ಉಬ್ಬರವಿಳಿತಗಳಿಲ್ಲದ ಅಪೇಕ್ಷಾರಹಿತನಾಗಿ ಶುಚಿಯಾಗಿ ಕಾರ್ಯಗಳಲ್ಲಿ ದಕ್ಷನೂ ಮಿತ್ರಾರಿಪಕ್ಷಗಳನ್ನು ವಹಿಸದೆ ಉದಾಸೀನನಾಗಿ ಅಂಜಿಕೆಯಿಲ್ಲದೆ ಸರ್ವಕರ್ಮ ಸಂನ್ಯಾಸಿಯಾಗಿ ಹರ್ಷದ್ವೇಷಶೋಕಾಕಾಂಕ್ಷೆಗಳಿಲ್ಲದೆ ಶತ್ರುಮಿತ್ರರು, ಮಾನಾಪಮಾನಗಳು, ಶೀತೋಷ್ಣಗಳು, ಸುಖದುಃಖಗಳು- ಎಲ್ಲೆಲ್ಲಿಯೂ ಸಮನಾಗಿ ಸಂಗರಹಿತನಾಗಿ ನಿಂದಾಸ್ತುತಿಗಳಲ್ಲಿ ಸಮನಾಗಿ ದೊರೆತಷ್ಟರಿಂದಲೇ ಸಂತುಷ್ಟನಾಗಿ ತನ್ನದೆಂಬ ಗೃಹವಿಲ್ಲದೆ ಪರಮಾರ್ಥದಲ್ಲಿ ನಿಂತಿರುವ ಭಕ್ತನೇ ಭಗವಂತನಿಗೆ ಪ್ರಿಯನು. ಈ ಹೇಳಿದ ಅಕ್ಷರೋಪಾಸಕರ ಧರ್ಮವನ್ನು ಯಾರು ಶ್ರದ್ಧೆಯಿಂದ ಅನುಸರಿಸುತ್ತಿರುವರೋ ಆ ಭಕ್ತರು ಭಗವಂತನಿಗೆ ಅತ್ಯಂತಪ್ರಿಯರು. ಆದ್ದರಿಂದ ಸಾಧಕರು ಈ ಧರ್ಮವನ್ನು ಅನುಸರಿಸಬೇಕು- ಎಂಬುದು ಭಾಷ್ಯದ ಸಾರವು.

**ಶ್ರೀ**ಗಳು ಅನುವಾದದಲ್ಲಿ ಇಂತೆಂದರು : ಮುಕ್ತರಾದ ಭಗವದ್ಭಕ್ತರಲ್ಲಿ ಈ ಹೇಳಿದ ಗುಣಗಳು ಸ್ವಭಾವದಿಂದ ಇರುವವು. ಮುಮುಕ್ಷುಗಳಿಗೆ ಭಗವಂತನೇ ಗುರಿಯಾಗಿರುವದರಿಂದ ಅವರೂ ಈ ಧರ್ಮವನ್ನು ಸ್ವಭಾವದಿಂದಲೇ ಅನುಸರಿಸುತ್ತಾರೆ. ಉಳಿದವರಿಗೆ ಈ ಗ್ರಂಥವನ್ನು ಶ್ರವಣಮಾಡುವದರಿಂದ ಯಾವ ಪ್ರಯೋಜನವೂ ಇಲ್ಲವೆಂದು ತಿಳಿಯಬಾರದು. ಅವರು 'ಮತ್ಕರ್ಮಕೃನ್ಮತ್ಪರಮಃ' ಮುಂತಾಗಿ ಹೇಳಿರುವ ಗುರಿಯನ್ನಿಟ್ಟುಕೊಂಡು ನಡೆಯುವದಕ್ಕೆ ಪ್ರಾರಂಭಿಸುವರು. ಇದೇ ನಿಜವಾದ ವಿದ್ಯಾಭ್ಯಾಸವು. ಇದರಿಂದ ಜನರಲ್ಲಿ ವಿನಯಾಧಾನವಾಗುತ್ತದೆ. ಪರಮಾತ್ಮನಲ್ಲಿ ಪ್ರೇಮಭಾವನೆಯನ್ನು ಸಂಪಾದಿಸಿಕೊಂಡು ಕಾಲಾನುಕಾಲದಲ್ಲಿ ಜ್ಞಾನಫಲವಾಗಿ ಅಕೃತ್ರಿಮಪ್ರೇಮವನ್ನು ಪಡೆದುಕೊಳ್ಳಬೇಕು.

★★★★★

# ಆಚಾರ್ಯರ ಗುಣಕಥನ

**16-5-1962**

**ಶ್ರೀಶ್ರೀಗಳವರು**

ಮಹಾಮಂಗಲದ ದಿನ ಆಚಾರ್ಯರ ಒಂದೊಂದು ಗುಣವನ್ನು ಕುರಿತು ಮಾತನಾಡುವದು ಪದ್ಧತಿ. ಆದರೆ ಯಾವದಾದರೂ ಒಂದೇ ಗುಣವನ್ನು ಕುರಿತು ಹೇಳಿದರೆ ಎಲ್ಲಾ ಗುಣಗಳನ್ನೂ ಹೇಳಿದಂತೆ ಆಗಬೇಕು. ಅಂಥ ಗುಣವು ಯಾವದಾದರೂ ಇದೆಯೆ? ಎಂದರೆ ಇದೆ. ಅದಕ್ಕೆ '**ಸ್ವರೂಪಾವಸ್ಥಾನ**' ಎಂದು ಹೆಸರು.

ಪರಮಾತ್ಮನು ಯಾವಾಗಲೂ 'ಸ್ವೇ ಮಹಿಮ್ನಿ ಸ್ಥಿತಃ' ತನ್ನ ಮಹಿಮೆಯಲ್ಲಿ ತಾನು ಇದ್ದುಕೊಂಡಿರುತ್ತಾನೆ. 'ತನ್ನಲ್ಲಿ ತಾನು ಇರುತ್ತಾನೆ' ಎಂದರೆ ತಾನೇ ಆಧಾರವಾಗಿಯೂ ತಾನೇ ಆಧೇಯವಾಗಿಯೂ ವಿಭಾಗವಾಗಿರುತ್ತಾನೆಂದೇನೂ ಅಭಿಪ್ರಾಯವಲ್ಲ; ಸರ್ವವ್ಯವಹಾರಾತೀತನಾಗಿ ತನ್ನ ಸ್ವರೂಪದಲ್ಲಿಯೇ ತಾನು ಇರುತ್ತಾನೆಂದು ಅಭಿಪ್ರಾಯ. ವ್ಯವಹಾರವೆಂದರೆ: ಶಬ್ದಪ್ರತ್ಯಯಕರ್ಮಗಳು: ಸರ್ವಪ್ರಾಣಿಗಳೂ ಹುಟ್ಟುವಾಗಲೇ ಜ್ಞಾನೇಚ್ಛಾಕರ್ತೃತ್ವಭೋಕ್ತೃದ ಮೋಹವನ್ನು ಮುಂದುಮಾಡಿಕೊಂಡೇ ಹುಟ್ಟುವವು. ಇವೆಲ್ಲಕ್ಕೂ ಅಹಂತೆಯೇ ಹಿಂತಡಿಕೆ. ಯಾರು ಅಹಂತೆಯನ್ನು ಮೀರಿರುವರೋ ಅವರು ಏನನ್ನೂ ಮಾಡುವದಿಲ್ಲ, ಮತ್ತೊಬ್ಬರಿಂದಲೂ ಏನನ್ನೂ ಮಾಡಿಸುತ್ತಿರುವದಿಲ್ಲ : ಅವರು ತಮ್ಮ ಸ್ವರೂಪದಲ್ಲಿಯೇ ಇರುತ್ತಾರೆ. ಇದನ್ನು ಆಚಾರ್ಯರು ತಮ್ಮ ಉದಾಹರಣೆಯಿಂದ ತಿಳಿಸಿಕೊಟ್ಟಿರುತ್ತಾರೆ.

ಸರ್ವವ್ಯವಹಾರಾತೀತವಾದ ಅವಸ್ಥೆ ಎಂದರೆ ಯಾವದು ? ಕಲ್ಲುಬಂಡೆಯ ಸ್ಥಿತಿಯೆ? ಜೀವನವೆಂದರೆ ಏನಾದರೂ ಮಾಡಬೇಕು, ಯಾವದನ್ನಾದರೂ ಬಿಡಬೇಕು. ಎಲ್ಲ ವ್ಯವಹಾರವನ್ನೂ ದಾಟಿರುವದೆಂದರೆ ಹೇಗೆ? ವೇದಾಂತಿಗಳು ಕರ್ಮಸಂನ್ಯಾಸವನ್ನು ಉಪದೇಶಿಸುತ್ತಾ ಆಲಸ್ಯಕ್ಕೆ ಪ್ರೋತ್ಸಾಹವನ್ನು ಕೊಡುತ್ತಿರುವರು- ಎಂದು ಈಗಿನವರು ಕೆಲವರು ಆಕ್ಷೇಪಿಸುತ್ತಿರುತ್ತಾರೆ. ಅವರಿಗೆ ನಿಜವು ತಿಳಿಯದು. ವೇದಾಂತವು ಕರ್ಮಾಭಾವವನ್ನು ಉಪದೇಶಿಸುತ್ತಿಲ್ಲ.

**ಕರ್ಮಣ್ಯಕರ್ಮಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।**
**ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥**

ಎಂಬ ಭಗವದುಕ್ತಿಯಂತೆ ಕರ್ಮ, ಅಕರ್ಮ-ಎರಡನ್ನೂ ಮೀರಿರುವ ಕೂಟಸ್ಥನಿತ್ಯಸ್ಥಿತಿಯನ್ನು ಪಡೆದುಕೊಳ್ಳಬೇಕೆಂದು ವೇದಾಂತಿಗಳು ಹೇಳುತ್ತಾರೆ. ಯಾರು ಇಂಥ ಸ್ವರೂಪಾವಸ್ಥಾನವನ್ನು ಪಡೆದುಕೊಂಡಿರುವರೋ ಅವರು ನಿಜವಾಗಿ ಏನನ್ನೂ ಮಾಡುವದೇ ಇಲ್ಲವಾದರೂ ಜನಕಾದಿಗಳಂತೆ ಮಿಕ್ಕೆಲ್ಲರಿಗಿಂತಲೂ ಹೆಚ್ಚಿನ ಕರ್ಮವನ್ನು ಮಾಡುತ್ತಾ ಲೋಕ ಸಂಗ್ರಹವನ್ನು ಮಾಡುತ್ತಿರುತ್ತಾರೆ.

ಆಚಾರ್ಯರವರ ಚರಿತ್ರೆಯಲ್ಲಿ ಇದು ಸುಸ್ಪಷ್ಟವಾಗಿರುತ್ತದೆ. ಅವರು ತಮ್ಮ ಹದಿನಾರನೆಯ ವಯಸ್ಸಿನೊಳಗಾಗಿ ಕಾಲುನಡಗೆಯಿಂದಲೇ ಭರತಖಂಡವನ್ನೆಲ್ಲ ಸಂಚರಿಸಿ ವೇದಾಂತಗಳ ಪರಮತಾತ್ಪರ್ಯವನ್ನು ತಿಳಿಸುವ ಭಾಷ್ಯವನ್ನು ರಚಿಸಿ ಜನರ ಹೃದಯದಲ್ಲಿ ವೇದೋಕ್ತವಾದ ಪ್ರವೃತ್ತಿನಿವೃತ್ತಿಗಳೆಂಬ ಧರ್ಮದ್ವಯದ ಮರ್ಮವನ್ನು ಬಿತ್ತಿದರು.

ಈಗ ಆಚಾರ್ಯರ ಹೆಸರು ಭರತಖಂಡದ ಮೂಲೆಮೂಲೆಯಲ್ಲಿಯೂ ಇರುತ್ತದೆ. ಊರೂರಿನಲ್ಲಿಯೂ ಅವರ ಉತ್ಸವಗಳಾಗುತ್ತಿವೆ. ಪ್ರತಿವರ್ಷವೂ ಅವರ ಜಯಂತಿಯನ್ನೂ ಆರಾಧನೆಯನ್ನೂ ಮಾಡುವವರು ಲಕ್ಷಗಟ್ಟಲೆ ಇರುತ್ತಾರೆ. 'ಆಚಾರ್ಯರು ಹೇಳಿದ ವೇದಾಂತವಿದು' ಎಂದು ಯಾವದಾದರೂ ನಾಲ್ಕು ಶ್ಲೋಕಗಳನ್ನು ಹೇಳಿ ವೇದಾಂತಿಗಳೆನ್ನಿಸಿಕೊಳ್ಳುವದಕ್ಕೆ ಹವಣಿಸುವವರೂ ಅನೇಕರಿರುತ್ತಾರೆ. ಆದರೆ ಆಚಾರ್ಯರು ನಮ್ಮಂತೆ ಸಂಸಾರದ ಏಳುಬೀಳುಗಳನ್ನು ಅನುಭವಿಸದೆ ತಮ್ಮ ಸ್ವರೂಪದಲ್ಲಿಯೇ ವಿಶ್ರಾಂತಿಯನ್ನು ಪಡೆಯುತ್ತಾ ಇದ್ದುಕೊಂಡು ಇಂಥ ಅದ್ಭುತಕಾರ್ಯವನ್ನು ಮಾಡಿದರು.

**ಅಪಾಣಿಪಾದೋಜವನೋ ಗ್ರಹೀತಾ ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ ।**
**ಸ ವೇತ್ತಿವೇದ್ಯಂ ನ ಚ ತಸ್ಯಾಸ್ತಿ ವೇತ್ತಾ ತಮಾಹುರಗ್ರ್ಯಂ ಪುರುಷಂ ಮಹಾನ್ತಮ್॥**

(ಶ್ವೇ.3-19)

ಎಂಬಂತೆ ಕೈಯಿಲ್ಲದೆ ಹಿಡಿಯುತ್ತಾ ಕಾಲಿಲ್ಲದೆ ವೇಗವಾಗಿ ನಡೆಯುತ್ತಾ ಕಣ್ಣಿಲ್ಲದೆ ನೋಡುತ್ತಾ ಕಿವಿಯಿಲ್ಲದೆ ಕೇಳುತ್ತಾ ಎಲ್ಲವನ್ನೂ ಅರಿತು ತನ್ನನ್ನು ಅರಿಯುವವರು ಯಾರೂ ಇಲ್ಲದೆ ಇರುವ ಅಗ್ರ್ಯನಾದ ಮಹಾಪುರುಷನಾತನು- ಎಂಬ ಮಹಿಮೆಯನ್ನು ತೋರಿಸಿದ ಮಹಾತ್ಮರವರೆಂಬುದನ್ನು ತಿಳಿದವರು ಬಹಳ ವಿರಳ.

ಆಚಾರ್ಯರ ಗುಣಕಥನವೆಂದರೆ ಅವರಿಗೆ ನಮ್ಮ ಸರ್ಟಿಫಿಕೇಟ್ ಬೇಕೆಂದಲ್ಲ; ಅವರ ಸ್ವಭಾವವಾದ ಗುಣವನ್ನು ಕೀರ್ತನೆಮಾಡಿ ಅವರ ಅನುಗ್ರಹದಿಂದಲೇ ಸ್ವರೂಪಾವಸ್ಥಾನವೆಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. 'ನೈವಕಿಞ್ಚಿತ್ ಕರೋಮಿತಿ ಯುಕ್ತೋ ಮನ್ಯೇತ ತತ್ತ್ವವಿತ್' ಎಂಬಂತೆ ಎಲ್ಲಾ ಕಾರ್ಯವನ್ನೂ ಮಾಡುತ್ತಿದ್ದರೂ ಸರ್ವವ್ಯವಹಾರಾತೀತರಾಗಿ ಏನನ್ನೂ ಮಾಡದೆ ಇರುವದೆಂದರೇನೆಂಬುದರ ಮರ್ಮವನ್ನು ನಾವು ಅವರ ಅನುಗ್ರಹದಿಂದ ಅರಿತುಕೊಳ್ಳಬೇಕಾಗಿದೆ. ಯಾಜ್ಞವಲ್ಕ್ಯರಂತೆ ಸರ್ವವ್ಯವಹಾರವನ್ನೂ ಮಾಡುತ್ತಾ ಸರ್ವವ್ಯವಹಾರಾತೀತರಾಗಿದ್ದು ಏಷಣಾತ್ರಯವನ್ನು ಬಿಟ್ಟಿದ್ದು ತಮ್ಮ ಸ್ವರೂಪದಲ್ಲಿ ತಾವು ವಿಶ್ರಾಂತಿಪಡೆಯುವ ಪಾರಿವ್ರಾಜ್ಯದ ಗುಟ್ಟೇನೆಂಬುದನ್ನು ಅವರ ಅನುಗ್ರಹದಿಂದ ನಾವು ತಿಳಿದುಕೊಳ್ಳಬೇಕಾಗಿದೆ.

★★★★★

# ಪರಾಪರಪ್ರಕೃತಿ

**28-4-1963**

**ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

**ಭಗವದ್ಗೀತೆಯ** ಹದಿಮೂರನೆಯ ಅಧ್ಯಾಯದ 2ನೆಯ ಶ್ಲೋಕದ ಭಾಷ್ಯದ ಅರ್ಥ: ಏಳನೆಯ ಅಧ್ಯಾಯದಲ್ಲಿ ಪರಮೇಶ್ವರನಿಗೆ ಎರಡು ಪ್ರಕೃತಿಗಳುಂಟು-ಎಂದು ಹೇಳಿರುತ್ತದೆ. ತ್ರಿಗುಣಾತ್ಮಕವಾದ ಮಾಯೆ ಎಂಬ

**ಅ**ಪರಪ್ರಕೃತಿಯೊಂದು; ಅದು ಸಂಸಾರಕ್ಕೆ ಕಾರಣವಾಗಿರುವದರಿಂದ ಅಪರ ಎನಿಸಿರುತ್ತದೆ. ಈಶ್ವರಾತ್ಮಕವಾದ ಜೀವನಾಗಿರುವ ಪರಪ್ರಕೃತಿಯೊಂದು. ಈ ಎರಡು ಪ್ರಕೃತಿಗಳಿಂದೊಡಗೂಡಿಯೇ ಈಶ್ವರನು ಜಗತ್ತಿನ ಉತ್ಪತ್ತಿಸ್ಥಿತಿಲಯಗಳಿಗೆ ಹೇತುವಾಗಿರುತ್ತಾನೆ-ಎಂದು ಆ ಅಧ್ಯಾಯದಲ್ಲಿ ಹೇಳಿತ್ತು. ಈ ಎರಡು ಪ್ರಕೃತಿಗಳ ಸ್ವರೂಪವನ್ನು ನಿರೂಪಣಮಾಡುವದರ ಮೂಲಕ ಈಶ್ವರನ ತತ್ತ್ವವನ್ನು ಗೊತ್ತುಪಡಿಸುವದಕ್ಕೆಂದು ಈ ಹದಿಮೂರನೆಯ ಅಧ್ಯಾಯವು ಪ್ರಾರಂಭವಾಗಿ ರುತ್ತದೆ. ಹನ್ನೆರಡನೆಯ ಅಧ್ಯಾಯದಲ್ಲಿ ಅಕ್ಷರೋಪಾಸಕರ ಅದ್ವೇಷ್ಟೃತ್ವವೇ ಮುಂತಾದ ಧರ್ಮಗಳನ್ನು ವರ್ಣಿಸಲಾಗಿದೆಯಷ್ಟೆ, ಅದರಲ್ಲಿರುವ ತತ್ತ್ವಜ್ಞಾನವು ಯಾವದು?-ಎಂಬುದನ್ನೂ ಇಲ್ಲಿ ನಿರ್ಧರಿಸಲಾಗುವದು.

ತ್ರಿಗುಣಾತ್ಮಕವಾದ ಪ್ರಕೃತಿಯು ಶರೀರ, ಇಂದ್ರಿಯಗಳು, ವಿಷಯ-ಎಂಬ ಮೂರು ರೂಪದಿಂದ ಪರಿಣಮಿಸಿ ಪುರುಷನಿಗೆ ಸಂಸಾರಭೋಗಕ್ಕೂ ಮೋಕ್ಷಕ್ಕೂ ಕಾರಣವಾಗಿರುತ್ತದೆ. ಈ ಕಾರ್ಯಕಾರಣ ಸಂಘಾತವೆಂಬುದೇ **ಶರೀರವೆಂಬ** ಶಬ್ದದಿಂದಲೂ, **ಕ್ಷೇತ್ರವೆಂಬ** ಶಬ್ದದಿಂದಲೂ ಹೇಳಲ್ಪಟ್ಟಿದೆ. ಈ ಕ್ಷೇತ್ರವನ್ನು ಅರಿಯುವಾತನೇ ಕ್ಷೇತ್ರಜ್ಞನು. ಕ್ಷೇತ್ರವೆಂಬುದರಲ್ಲಿ ಯಾವ ಯಾವದು ಸೇರಿದೆ? ಕ್ಷೇತ್ರಜ್ಞನ ಸ್ವರೂಪವು ಯಾವದು? ಅವನು ಕ್ಷೇತ್ರವನ್ನು ಅರಿಯುವನೆಂದರೆ ಹೇಗೆ?-ಎಂಬುದನ್ನೂ ಇಲ್ಲಿ ವಿವರಿಸಲಾಗುವದು.

ಪ್ರಕೃತ ಎರಡನೆಯ ಶ್ಲೋಕದಲ್ಲಿ ಸರ್ವಕ್ಷೇತ್ರಗಳಲ್ಲಿಯೂ ಇರುವ ಕ್ಷೇತ್ರಜ್ಞನು ಪರಮಾರ್ಥವಾಗಿ ಪರಮೇಶ್ವರನೇ- ಎಂದು ಅರಿಯಬೇಕು, ಕ್ಷೇತ್ರಕ್ಷೇತ್ರಜ್ಞರ ಪರಮಾರ್ಥ ಜ್ಞಾನವೇ ನಿಜವಾದ ಜ್ಞಾನವು ಎಂದು ಹೇಳಿದೆ. ಕ್ಷೇತ್ರಜ್ಞನೆಂದರೆ ಜೀವನು: ಬ್ರಹ್ಮಾದಿಸ್ತಂಬಪರ್ಯಂತವಾಗಿರುವ ಬಗೆಬಗೆಯ ಕ್ಷೇತ್ರಗಳಿಂದ ಬೇರೆಬೇರೆಯಾದ ಜೀವರುಗಳಾಗಿ ತೋರುತ್ತಿರುವ ಇವನೇ ಸತ್ತೆಂದಾಗಲಿ ಅಸತ್ತೆಂದಾಗಲಿ ಹೇಳುವದಕ್ಕೆ ಆಗದೆ ಇರುವ ನಿರುಪಾಧಿಕನಾದ ಪರಮಾತ್ಮನು-ಎಂಬುದು ಶ್ಲೋಕದ ಅಭಿಪ್ರಾಯವು.

ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಇರುವ ಜೀವನು ಪರಮೇಶ್ವರನೇ ಎಂದಾದರೆ ಪರಮೇಶ್ವರನಿಗಿಂತ ಬೇರೆಯಾಗಿರುವ ಕರ್ತೃಭೋಕ್ತೃವೇ ಇಲ್ಲವೆಂದಾಗುತ್ತದೆ; ಆಗ ಈಶ್ವರನೇ ಸಂಸಾರಿ ಎಂದಾಗುವದು; ಅಥವಾ ಈಶ್ವರನು

ಸಂಸಾರಿಯಲ್ಲವಾದ್ದರಿಂದ ಸಂಸಾರವೇ ಇಲ್ಲವೆಂದಾದರೂ ಆಗುವದು. ಇವೆರಡೂ ಯಾರಿಗೂ ಒಪ್ಪಿಗೆಯಾಗುವಂತಿಲ್ಲ. ಏಕೆಂದರೆ ಆಗ ಬಂಧಮೋಕ್ಷಗಳನ್ನೂ ಅದಕ್ಕೆ ಕಾರಣವನ್ನೂ ವಿವರಿಸುವ ಶಾಸ್ತ್ರವೂ ವ್ಯರ್ಥವೆಂದಾಗುವದು. ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸುಖದುಃಖಗಳೂ ಅವುಗಳಿಗೆ ಕಾರಣವಾಗಿರುವ ಪುಣ್ಯಪಾಪಗಳೂ ಸಿದ್ಧವಾಗಿರುತ್ತವೆ ; ಜಗತ್ತು ಬಗೆಬಗೆಯಾಗಿರುವದರಿಂದ ಇದಕ್ಕೆ ಕಾರಣವಾಗಿ ಜೀವರುಗಳ ಧರ್ಮಾಧರ್ಮವೈಚಿತ್ರ್ಯವೂ ಇರಬೇಕೆಂದು ಅನುಮಾನ ಪ್ರಮಾಣದಿಂದಲೂ ಕಲ್ಪಿಸಬಹುದಾಗಿದೆ. ಆದ್ದರಿಂದ ಸಂಸಾರವೇ ಇಲ್ಲವೆಂಬುದು ಪ್ರತ್ಯಕ್ಷಾದಿಪ್ರಮಾಣಗಳಿಗೂ ವಿರುದ್ಧವಾಗಿರುತ್ತದೆ. ಆದ್ದರಿಂದ ಜೀವಾತ್ಮರೂ ಈಶ್ವರನೂ ಒಂದೇ- ಎಂದು ಹೇಳುವವರ ಮತವು ದೋಷಗ್ರಸ್ತವಾಗಿದೆ ಎಂದೂ ಹೇಳಬೇಕಲ್ಲವೆ?- ಎಂಬುದು ಈ ಸಿದ್ಧಾಂತದ ಮೇಲಿನ ಆಕ್ಷೇಪವು.

ಈ ಆಕ್ಷೇಪವು ಸರಿಯಲ್ಲ. ಏಕೆಂದರೆ ವಿದ್ಯಾವಿದ್ಯೆಗಳ ದೃಷ್ಟಿಭೇದವನ್ನು ಮನದಂದರೆ ವೇದಾಂತದಮೇಲೆ ಹೊರಿಸಿರುವ ಈ ದೋಷವು ಯಾವದೂ ಉಳಿಯುವದಿಲ್ಲ. ಕ್ಷೇತ್ರಜ್ಞನೇ ಈಶ್ವರನೆಂಬ ಜ್ಞಾನದಿಂದ ಪರಮಪುರುಷಾರ್ಥವೂ ಸಿದ್ಧವಾಗಬಹುದಾಗುತ್ತದೆ. ಅವಿದ್ಯೆಯಿಂದ ಸಂಸಾರವೂ ವಿದ್ಯೆಯಿಂದ ಮೋಕ್ಷವೂ ಸಿಕ್ಕುವವೆಂದು ಶ್ರುತಿಸ್ಮೃತಿಗಳಲ್ಲಿ ಹೇಳಿರುತ್ತದೆ; ಭಗವದ್ಗೀತೆಯಲ್ಲಿಯೂ ಹೇಳಿದೆ. ಅಜ್ಞಾನದಿಂದ ಅನರ್ಥವಾಗುವದೂ ಜ್ಞಾನದಿಂದ ಅನರ್ಥ ಪರಿಹಾರವಾಗುವದೂ ಯುಕ್ತಿಯುಕ್ತವಾಗಿಯೂ ಇದೆ. ಆದ್ದರಿಂದ ದೇಹಾದಿಗಳಲ್ಲಿ ಇವೇ ತಾನೆಂಬ ತಪ್ಪುಭಾವನೆಯುಳ್ಳವನು ಧರ್ಮಾಧರ್ಮಗಳನ್ನು ಮಾಡಿ ಜನನಮರಣರೂಪವಾದ ಸಂಸಾರವನ್ನು ಹೊಂದುತ್ತಾನೆ; ಆತ್ಮನಲ್ಲಿಯೇ ಆತ್ಮಬುದ್ಧಿಯುಳ್ಳಾತನು ರಾಗದ್ವೇಷಾದಿಗಳನ್ನು ಕಳೆದುಕೊಂಡು ಧರ್ಮಾಧರ್ಮಗಳನ್ನು ಮೀರಿ ಪರಮಪುರುಷಾರ್ಥವನ್ನು ಹೊಂದುತ್ತಾನೆ- ಎಂಬುದೇ ಯುಕ್ತವಾಗಿರುತ್ತದೆ. ಆದ್ದರಿಂದ ಅವಿದ್ಯೆಯಿಂದ ಸಂಸಾರಿಗಳಾಗಿ ರುವಂತೆ ತೋರಿದರೂ ಪರಮಾರ್ಥವಾಗಿ ಜೀವರು ಪರಮೇಶ್ವರಸ್ವರೂಪರೇ ಆಗಿರುವರೆಂಬುದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಒಂದು ಮೋಟುಮರವನ್ನು ಮನುಷ್ಯನೆಂದು ಕತ್ತಲೆಯಲ್ಲಿ ತಪ್ಪಾಗಿ

ಭಾವಿಸಿಕೊಂಡಮಾತ್ರದಿಂದ ಹೇಗೆ ಮರವು ಮನುಷ್ಯನಾಗಿರುವದಿಲ್ಲವೋ, ಮನುಷ್ಯನೂ ಮರವಾಗುವದಿಲ್ಲವೋ ಹಾಗೆಯೇ ಇಲ್ಲಿ ಈಶ್ವರನಿಗೆ ಸಂಸಾರಿತ್ವವೆಂಬ ದೋಷವು ತಟ್ಟುವದಿಲ್ಲವೆಂದು ತಿಳಿಯಬೇಕು.

ಇಲ್ಲಿ ಒಂದು ಆಕ್ಷೇಪ : ಮರ, ಮನುಷ್ಯ - ಇವೆರಡೂ ಜ್ಞೇಯಗಳಾದ್ದರಿಂದ ಒಂದನ್ನೊಂದೆಂದು ತಪ್ಪಾಗಿ ತಿಳಿಯಬಹುದು; ಆದರೆ ಆತ್ಮನು ಜ್ಞಾತೃ, ದೇಹಾದಿಗಳು ಜ್ಞೇಯ; ಹೀಗಿರುವಲ್ಲಿ ಇವೆರಡನ್ನೂ ಒಂದನ್ನೊಂದೆಂದು ತಪ್ಪಾಗಿತಿಳಿದುಕೊಂಡಿದ್ದೇವೆಂದು ಹೇಳಬಹುದೇ? ಜ್ಞೇಯಗಳಲ್ಲಿ ಒಂದನ್ನು ಮತ್ತೊಂದೆಂದು ತಿಳಿದದ್ದರಿಂದ ಒಂದರ ಧರ್ಮವು ಮತ್ತೊಂದಕ್ಕೆ ಆಗದೆ ಇರಬಹುದು. ಆದರೆ ಅಷ್ಟುಮಾತ್ರದಿಂದ ಜ್ಞೇಯವಾದ ದೇಹಾದಿಗಳ ಧರ್ಮವು ಜ್ಞಾತೃವಾದ ಆತ್ಮನಿಗೆ ನಿಜವಾಗಿ ಆಗುವದಿಲ್ಲವೆನ್ನಬಹುದೆ?

ಈ ಆಕ್ಷೇಪವು ಸರಿಯಲ್ಲ. ಏಕೆಂದರೆ ಅದ್ವೈತಿಗಳು ಈಶ್ವರನಾಗಿರುವ ಆತ್ಮನಲ್ಲಿ ಸಂಸಾರಿಯಾದ ಜೀವನೆಂಬ ತಪ್ಪುತಿಳಿವಳಿಕೆಯುಂಟಾಗಿದೆಯೆಂದೂ ಅಷ್ಟುಮಾತ್ರದಿಂದ ಈಶ್ವರನಿಗೇನೂ ಸಂಸಾರಿತ್ವವುಂಟಾಗುವದಿಲ್ಲವೆಂದೂ ಹೇಳುತ್ತಿದ್ದಾರೆ. ದ್ವೈತಿಗಳು ಇದನ್ನೊಪ್ಪದಿದ್ದರೂ ಜೀವನಿಗೆ ದೇಹಧರ್ಮವಾದ ಯೌವನ, ಮುಪ್ಪು-ಮುಂತಾದವುಗಳು ತಪ್ಪು ತಿಳಿವಳಿಕೆಯಿಂದ ಬರುತ್ತದೆ ಎಂದು ಅವರೂ ಹೇಳುತ್ತಾರೆ. ಜೀವನು ಮಾಡುವ ಧರ್ಮಾಧರ್ಮಗಳಿಂದ ಅವನಿಗೆ ಬೇರೆಬೇರೆಯ ದೇಹವು ಬಂದರೂ ದೇಹದ ಧರ್ಮವು ನಿಜವಾಗಿ ಜೀವನಿಗೇನೂ ಬಂದಿರುವದಿಲ್ಲವೆಂಬುದು ಅವರಿಗೂ ಸಂಮತವಷ್ಟೇ? ಅದರಂತೆಯೇ ಇಲ್ಲಿಯೂ ರಾಗದ್ವೇಷ, ಸುಖದುಃಖಮೋಹ-ಮುಂತಾದವುಗಳು ಆತ್ಮನಿಗೆ ನಿಜವಾಗಿಲ್ಲ; ಅವು ನಿತ್ಯಚೈತನ್ಯರೂಪನಾದ ಕ್ಷೇತ್ರಜ್ಞನಿಗೆ ಸೇರಿದವಲ್ಲ; ಅವನು ನಿತ್ಯಮುಕ್ತನಾದ ಈಶ್ವರನೇ ಎಂದು ಅದ್ವೈತಿಗಳು ಹೇಳುತ್ತಾರೆ. ಇದಕ್ಕೆ ಶ್ರುತಿಸ್ಮೃತಿಗಳ ಆಧಾರವಿದೆ; ಯುಕ್ತ್ಯನುಭಗಳ ಬೆಂಬಲವಿದೆ. ಆದ್ದರಿಂದ ಸಂಸಾರಿತ್ವವು ಅವಿದ್ಯಾಕೃತವೇ ಸರಿ.

ಹಾಗಾದರೆ ಅವಿದ್ಯೆಯಿಂದತಾನೆ ಸಂಸಾರಿತ್ವವು? ಆ ಅವಿದ್ಯೆಯಿರುವದರಿಂದಲೇ ಜೀವನು ಸಂಸಾರಿ ಎಂದಾಗುವದಿಲ್ಲವೆ?- ಎಂದು ಯಾರಾದರೂ ಕೇಳಬಹುದು. ಅದು ಸರಿಯಲ್ಲ. ಏಕೆಂದರೆ ಅವಿದ್ಯೆ ಎಂದರೇನು?

ನಿಜವನ್ನು ಮರೆಮಾಡುವ ಒಂದಾನೊಂದು ತಾಮಸಪ್ರತ್ಯಯವದು. ತಿಳಿಯದೆ ಇರುವದು, ಸಂಶಯವನ್ನು ತಾಳುವದು, ತಪ್ಪಾಗಿ ತಿಳಿಯುವದು-ಇವೆಲ್ಲ ಅವಿದ್ಯೆಯೇ. ಇವು ವಸ್ತುವನ್ನು ವಿಂಗಡಿಸಿ ತಿಳಿದುಕೊಳ್ಳದೆ ಇರುವದರಿಂದ ಆಗುವವು, ವಿವೇಕದಿಂದ ಹೋಗುವವು-ಎಂಬುದು ಕಣ್ಣು ಮುಂತಾದವುಗಳಿಗೆ ಪರೆಯೇ ಮುಂತಾದ ದೋಷಗಳಿಂದಾಗುವ ಅಗ್ರಹಣವೇ ಮುಂತಾದವುಗಳು ಆಗುವದು, ಆ ದೋಷಗಳು ಹೋಗುತ್ತಲೂ ಅಗ್ರಹಣಾದಿಗಳು ಇಲ್ಲವಾಗುವದು-ಎಂಬ ಲೋಕಾನುಭವದಿಂದಲೇ ಗೊತ್ತಾಗುತ್ತದೆ. ಹೇಗೆ ದೋಷದಿಂದ ಚಕ್ಷುರಾದಿ ಕರಣಗಳಲ್ಲಿ ಅಗ್ರಹಣಾದಿಗಳುಂಟಾಗುವವೋ ಹಾಗೆಯೇ ಅಂತಃಕರಣದೋಷದಿಂದಲೇ ಆತ್ಮಸ್ವರೂಪದ ಅಗ್ರಹಣವೇ ಮುಂತಾದವುಗಳೂ ಆಗುತ್ತವೆ- ಎಂಬುದು ಯುಕ್ತವಾಗಿದೆ. ಇದಲ್ಲದೆ ಅವಿದ್ಯೆಯೆಂಬುದು ಅನುಭವಕ್ಕೆ ವಿಷಯವಾಗಿದೆ; ಆದ್ದರಿಂದ ಅದು ಅನುಭವರೂಪದ ಆತ್ಮನ ಧರ್ಮವಲ್ಲ. ಮೋಕ್ಷದಲ್ಲಿ ಯಾವ ಕರಣಗಳೂ ಇರುವದಿಲ್ಲವಾದ್ದರಿಂದ ಅವಿದ್ಯಾದಿದೋಷಗಳು ಇರುವದೇ ಇಲ್ಲವೆಂಬುದು ಎಲ್ಲಾ ವಾದಿಗಳಿಗೂ ಒಪ್ಪಾಗಿದೆ. ಆದ್ದರಿಂದಲೂ ಅವಿದ್ಯೆಯು ಆತ್ಮನ ಧರ್ಮವಲ್ಲ. ಆತ್ಮನು ಅವಿನಾಶಿಯಾದ್ದರಿಂದಲೂ ಸರ್ವವ್ಯಾಪಿಯಾಗಿರುವದರಿಂದಲೂ ಅಮೂರ್ತನಾಗಿರುವದರಿಂದಲೂ ಅವನಿಗೆ ಒಮ್ಮೆ ಅವಿದ್ಯೆಯ ಸಂಯೋಗವೂ ಒಮ್ಮೆ ಅದರಿಂದ ಬಿಡುಗಡೆಯೂ ಆಗುವದೆಂಬುದು ಯುಕ್ತವಲ್ಲ. ಆದ್ದರಿಂದ 'ಅನಾದಿತ್ವಾನ್ನಿರ್ಗುಣತ್ವಾತ್ ಪರಮಾತ್ಮಾಽಯಮವ್ಯಯಃ' ಎಂದು ಗೀತೆಯಲ್ಲಿ ಹೇಳಿರುವದರಿಂದ ಆತ್ಮನಿಗೆ ಎಂದಿಗೂ ಅವಿದ್ಯಾಕಾಮಕರ್ಮಗಳ ಸಂಬಂಧವು ನಿಜವಾಗಿಲ್ಲ; ಅವನು ಪರಮಾತ್ಮನೇ- ಎಂದು ಸಿದ್ಧವಾಗುತ್ತದೆ. ಹೀಗೆಂಬುದು ಭಾಷ್ಯಭಾಗದ ಸಾರವು.

★★★★★

# ಎರಡು ಪ್ರಶ್ನೆಗಳ ವಿಚಾರ

**29-4-1963**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ಬೃಹದಾರಣ್ಯಕೋಪನಿಷತ್ತಿನ** (3-4-1,3-5-1) ಭಾಷ್ಯಭಾಗದಲ್ಲಿ ಉಷಸ್ತಚಾಕ್ರಾಯಣ, ಕಹೋಲಕೌಷೀತಕೇಯ- ಎಂಬಿಬ್ಬರು ಯಾಜ್ಞವಲ್ಕ್ಯನನ್ನು ಕೇಳಿದ ಎರಡು ಪ್ರಶ್ನೆಗಳ ವಿಚಾರವಿದೆ. ಈ ಎರಡು ಪ್ರಶ್ನೆಗಳು ಬೇರೆಬೇರೆಯ ವಿಷಯವನ್ನು ಕುರಿತವುಗಳೆ, ಅಥವಾ ಒಬ್ಬನೇ ಆತ್ಮನನ್ನು ಕುರಿತವುಗಳೆ? ಎಂಬುದು ಚರ್ಚೆಯ ವಿಷಯ. ಇವೆರಡೂ ಬೇರೆಬೇರೆಯ ಆತ್ಮರನ್ನು ಕುರಿತವು: ಮೊದಲನೆಯದು ಕ್ಷೇತ್ರಜ್ಞನನ್ನು- ಎಂದರೆ ಜೀವನನ್ನು ಕುರಿತ ಪ್ರಶ್ನೆ; ಎರಡನೆಯದು ಪರಮಾತ್ಮನನ್ನು ಕುರಿತ ಪ್ರಶ್ನೆ-ಎಂದು ಭರ್ತೃಪ್ರಪಂಚರು ಅಭಿಪ್ರಾಯಪಟ್ಟಿದ್ದರು.

ಇದು ಸರಿಯಲ್ಲ. ಏಕೆಂದರೆ ಎರಡರಲ್ಲಿಯೂ 'ಯತ್ ಸಾಕ್ಷಾದಪರೋಕ್ಷಾದ್ ಬ್ರಹ್ಮ'-ಎಂದೇ ಆತ್ಮನನ್ನು ವರ್ಣಿಸಿದೆ. ಇಬ್ಬರನ್ನೂ 'ಸರ್ವಾಂತರ' ಆತ್ಮನೆಂದೇ ಕರೆದಿದೆ. ಮುಖ್ಯವಾದ ಬ್ರಹ್ಮವೂ ಎಲ್ಲಕ್ಕೂ ಒಳಗಿನ ಆತ್ಮನೂ ಒಬ್ಬನೇ ಆಗಿರಬೇಕೇ ಹೊರತು ಇಬ್ಬರಾಗುವಂತಿಲ್ಲ. ಉತ್ತರದಲ್ಲಿ ('ಸತ ಆತ್ಮಾ ಸರ್ವಾಂತರಃ')- ಅವನೇ ನಿನ್ನ ಸರ್ವಾಂತರನಾದ ಆತ್ಮನು -ಎಂದಿರುವದರಿಂದಲೂ ಒಬ್ಬರಿಗೆ ಇಬ್ಬರು ಆತ್ಮರಿರುವಂತಿಲ್ಲವಾದ್ದರಿಂದಲೂ ಉಷಸ್ತನಿಗೊಬ್ಬ ಆತ್ಮ ಬೇರೆ, ಕಹೋಲನಿಗೆ ಮತ್ತೊಬ್ಬನು- ಎನ್ನುವದಕ್ಕೂ ಬರುವಂತಿಲ್ಲವಾದ್ದರಿಂದಲೂ ಇಲ್ಲಿ ಒಬ್ಬನನ್ನೇ ವಿಚಾರಮಾಡಿದೆ. ಹಿಂದಿನ ಪ್ರಶ್ನೆಯ ಉತ್ತರದಲ್ಲಿ ಬದ್ಧನಾದ ಆತ್ಮನೊಬ್ಬನು ಉಂಟು ಎಂತಲೂ ಎರಡನೆಯದರಲ್ಲಿ ಅವನು ನಿಜವಾಗಿ ಸರ್ವಸಂಸಾರಧರ್ಮಗಳಿಲ್ಲದವನು ಎಂತಲೂ ಹೇಳಿದೆ. ಅವಿದ್ಯಾಕಲ್ಪಿತವಾದ ನಾಮರೂಪಗಳಿಂದಾಗಿರುವ ದೇಹೇಂದ್ರಿಯಸಂಘಾತವೆಂಬ ಉಪಾಧಿಯಿಂದ ಆತ್ಮನು ಜೀವನಾಗಿ ಕಾಣುತ್ತಾನೆ; ಉಪಾಧಿರಹಿತವಾದ ಪರಮಾರ್ಥಸ್ವರೂಪದಿಂದ ನೋಡಿದರೆ ಅವನೇ ಪರಮಾತ್ಮನಾಗಿರುತ್ತಾನೆ.

ಆದ್ದರಿಂದ ಈ ಎರಡಕ್ಕೂ ವಿರೋಧವಿಲ್ಲ. ರಜ್ಜುಸರ್ಪ, ಶುಕ್ತಿರಜತ, ಗಗನಮಾಲಿನ್ಯ-ಇವು ಅವಿದ್ಯೆಯಿಂದ ತೋರುವಾಗಲೂ ಹಗ್ಗ, ಕಪ್ಪೆಯಚಿಪ್ಪು, ಆಕಾಶ-ಇವುಗಳಿಗೆ ಹೇಗೆ ಅಧ್ಯಾರೋಪಿತರೂಪದ ಸಂಪರ್ಕವಿರುವದಿಲ್ಲವೋ ಹಾಗೆಯೇ ಅದ್ವೈತಾತ್ಮನಿಗೂ ಆರೋಪಿತನಾದ ಸಂಸಾರಿತ್ವದ ಅಂಟು ಇಲ್ಲ-ಎಂಬುದು ಯುಕ್ತವಾಗಿದೆ. ಆದ್ದರಿಂದ ಒಬ್ಬನೇ ಆತ್ಮನನ್ನು ಕುರಿತು ಎರಡು ಪ್ರಶ್ನೆಗಳೂ ಬಂದಿರುತ್ತವೆ. ಈ ಆತ್ಮನು ದೃಷ್ಟಿಗೂ ದ್ರಷ್ಟೃ, ಶ್ರುತಿಗೂ ಶ್ರೋತೃ, ಮತಿಗೂ ಮಂತೃ, ವಿಜ್ಞಾನಕ್ಕೂ ವಿಜ್ಞಾತೃವಾದ ಸರ್ವಾಂತರಾತ್ಮನಾದ್ದರಿಂದ ಅವನನ್ನು ವಿಷಯೀಕರಿಸುವದಕ್ಕೆ ಆಗುವದಿಲ್ಲ ; ಹಸಿವು ಬಾಯಾರಿಕೆ, ಶೋಕಮೋಹ ಮುಪ್ಪುಸಾವು - ಇವುಗಳ ಸೋಂಕಿಲ್ಲದವನು. ಇವನನ್ನು ಅರಿತವನು ಪಾಂಡಿತ್ಯ, ಬಾಲ್ಯ, ಮೌನ-ಇವುಗಳನ್ನಳವಡಿಸಿಕೊಂಡು ನಿಜವಾದ ಅರ್ಥದಲ್ಲಿ 'ಬ್ರಾಹ್ಮಣ'ನೆನಿಸುವನು-ಎಂದು ಈ ಬ್ರಾಹ್ಮಣಗಳ ಸಾರ.

**ಶ್ರೀಶ್ರೀಗಳವರು** ಅನುವಾದದಲ್ಲಿ ಜನಕನ ಯಜ್ಞದಲ್ಲಿ ಆದ ಸಭೆಯ ಉದ್ದೇಶವನ್ನು ವಿವರಿಸಿ ಆತ್ಮನಿಗೆ ಜರಾಮರಣಾದಿಗಳು ಶರೀರವೇ ಮುಂತಾದ ಉಪಾಧಿಗಳಿಂದ ಬಂದಿವೆಯೆಂಬುದನ್ನೂ ಸರಿಯಾಗಿ ಒಳಹೊಕ್ಕು ವಿಚಾರವನ್ನು ಮಾಡಿದರೆ ಶರೀರಾದಿಗಳು ಅವಿದ್ಯಾಕಲ್ಪಿತವೇ ಆಗಿರುವವೆಂಬುದನ್ನೂ ತಿಳಿಸಿದರು.

★★★★★

## ಆಕಾಶವೆಂಬುದಕ್ಕೆ ಏನರ್ಥ?

**30-4-1963**

**ಬ್ರ॥ಹೆಚ್.ಅನಂತಮೂರ್ತಿಶಾಸ್ತ್ರಿಗಳವರು**

**ಬ್ರಹ್ಮಸೂತ್ರಭಾಷ್ಯದಲ್ಲಿ ದಹರಾಧಿಕರಣದಲ್ಲಿ** (1-3-14ರಿಂದ 18) ಭಾಗದ ಅಭಿಪ್ರಾಯ: ಛಾಂದೋಗ್ಯದಲ್ಲಿ "**ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೋಽಸ್ಮಿನ್ನಂತರಾಕಾಶಸ್ತಸ್ಮಿನ್ ಯದಂತಸ್ತದನ್ವೇಷ್ಟವ್ಯಂ**

**ತದ್ವಾವ ವಿಜಿಜ್ಞಾಸಿತವ್ಯಮ್**'' (8-1-1) ಎಂದು ಮುಂತಾಗಿರುವ ವಾಕ್ಯವಿದೆ. ಅಲ್ಲಿರುವ ಆಕಾಶವೆಂಬುದಕ್ಕೆ ಏನರ್ಥ? - ಎಂಬುದೀಗ ಚರ್ಚೆಗೆ ವಿಷಯ.

ವಾಕ್ಯಕ್ಕೆ ಅಕ್ಷರಾರ್ಥವು ಹೀಗಾಗುತ್ತದೆ; ''ಈ ಬ್ರಹ್ಮಪುರದೊಳಗೆ ಅಲ್ಪವಾದ ಪುಂಡರೀಕದ ಮನೆಯಿದೆ, ಅದರೊಳಗೆ ಆಕಾಶವಿದೆಯಷ್ಟೇ. ಅದರೊಳಗಿರುವದನ್ನು ಹುಡುಕಬೇಕು. ಅದನ್ನೇ ಅರಿತುಕೊಳ್ಳಬೇಕು'' - ಇಲ್ಲಿ 'ಆಕಾಶ'ವೆಂಬುದು ಮೊದಲು ಉತ್ಪನ್ನವಾದ ಭೂತಕ್ಕೆ ಹೆಸರೆಂಬುದು ಪ್ರಸಿದ್ಧವಾಗಿದೆ. ಆಕಾಶವು ಸರ್ವಗತವಾದರೂ ಅದು ಅಲ್ಪವಾದ ದೇಶದಲ್ಲಿರುವದರಿಂದ ಅದನ್ನು ಅಲ್ಪವೆನ್ನಬಹುದಾಗುತ್ತದೆ. ಅದರಲ್ಲಿ 'ದ್ಯಾವಾಪೃಥಿವಿಗಳು' ಇವೆ ಎಂದು ಮುಂತಾಗಿ ವಾಕ್ಯಶೇಷದಲ್ಲಿದೆ; ಅದೂ ಹೊಂದುತ್ತದೆ, ಏಕೆಂದರೆ ಆಕಾಶದಲ್ಲಿ ಎಲ್ಲವೂ ಇರುತ್ತದೆಯಷ್ಟೆ? 'ಬ್ರಹ್ಮಪುರ'ವೆಂಬ ಮಾತಿಗೆ ಜೀವನ ಶರೀರವೆಂದೂ ಅರ್ಥವನ್ನು ಮಾಡಬಹುದಾಗುತ್ತದೆ. ಏಕೆಂದರೆ ಜೀವನೇ ಶರೀರಕ್ಕೆ ಒಡೆಯನಾಗಿರುತ್ತಾನೆ. ಅದರಲ್ಲಿರುವ ಜೀವನನ್ನೇ ಅಲ್ಪವಾದ ಆಕಾಶವೆಂದಿದೆ ಎಂದಾದರೂ ಹೇಳಬಹುದಾಗುತ್ತದೆ ; ಬ್ರಹ್ಮವೆಂಬ ಮಾತು ಗೌಣವೃತ್ತಿಯಿಂದ ಜೀವನಿಗೆ ಸಲ್ಲುತ್ತದೆ ; ಆ ಜೀವನು ಕರ್ಮದಿಂದ ಸಂಪಾದಿಸಿಕೊಂಡಿರುವದರಿಂದ ಶರೀರವನ್ನು ಬ್ರಹ್ಮಪುರವೆಂದೂ ಹೇಳಬಹುದು. ಜೀವನಿಗೆ ಮನಸ್ಸೇ ಉಪಾಧಿಯಾಗಿರುವದರಿಂದಲೂ ಮನಸ್ಸು ಬಲುಮಟ್ಟಿಗೆ ಹೃದಯದಲ್ಲಿಯೇ ಇರುವದರಿಂದಲೂ ಜೀವನು ಬಹಳ ಸೂಕ್ಷ್ಮಪರಿಮಾಣನೆಂದು ಶ್ರುತಿಯಲ್ಲಿ ಹೇಳುವದರಿಂದಲೂ ಅವನನ್ನೇ ದಹರಾಕಾಶವೆಂದಿದೆ ಎಂದಾದರೂ ಹೇಳಬಹುದಾಗಿರುತ್ತದೆ. ಅವನು ಪರಮಾರ್ಥವಾಗಿ ಬ್ರಹ್ಮವೇ ಆಗಿ ರುವದರಿಂದ ಅವನನ್ನು ಈ ವಾಕ್ಯದಲ್ಲಿ ವಿಶಾಲವಾದ ಆಕಾಶಕ್ಕೆ ಹೋಲಿಸುವದೂ ಹೊಂದುತ್ತದೆ. 'ಇಲ್ಲಿ ಅದನ್ನೇ ಹುಡುಕಬೇಕು ಅದನ್ನೇ ಅರಿತುಕೊಳ್ಳಬೇಕು' ಎಂಬುದು ಭೂತಾಕಾಶಕ್ಕಾಗಲಿ ಜೀವನಿಗಾಗಲಿ ಹೊಂದುವದಿಲ್ಲವಲ್ಲ!- ಎಂದು ಶಂಕಿಸಬಾರದು. ಏಕೆಂದರೆ ಇಲ್ಲಿ ಆಕಾಶವನ್ನೇನೂ ಅರಿತುಕೊಳ್ಳಬೇಕೆಂದು ಹೇಳಿಲ್ಲ; 'ಅದರೊಳಗಿರುವದನ್ನು' ಅರಿತುಕೊಳ್ಳಬೇಕು ಎಂದೇ ಹೇಳಿದೆ- ಎಂಬುದು ಮೊದಲು ತಟ್ಟನೆ ತೋರಬಹುದಾದ ಅರ್ಥ.

ಈ ಪೂರ್ವಪಕ್ಷವು ಸರಿಯಲ್ಲ. ಏಕೆಂದರೆ ವಾಕ್ಯದ ಮುಂದಿನಭಾಗದಲ್ಲಿ ಹೇಳಿರುವದು ಯಾವದೂ ಆಕಾಶಕ್ಕಾಗಲಿ ಜೀವನಿಗಾಗಲಿ ಹೊಂದುವದಿಲ್ಲ ;

ಪರಮಾತ್ಮನಿಗೇ ಹೊಂದುತ್ತದೆ. (1)'ಹುಡುಕಬೇಕು' ಎಂದು ವಿಧಿಸಿರುವ ಆಕಾಶವು ಹೊರಗಿನ ಆಕಾಶದಷ್ಟೇ ಇದೆ, ಅಲ್ಪವಲ್ಲ ; ಆದರಲ್ಲಿ ಭೂಮ್ಯಂತರಿಕ್ಷಗಳೆರಡೂ ಅಡಕವಾಗಿವೆ- ಎಂದಿದೆ. ಆಕಾಶವನ್ನೇ ಇಲ್ಲಿ ಹೇಳಬೇಕೆಂದಿದ್ದರೆ ಆಕಾಶಕ್ಕೆ ಆಕಾಶವನ್ನೇ ಉಪಮಾನವಾಗಿ ಹೇಳುತ್ತಿರಲಿಲ್ಲ ; ಇದನ್ನು ಹೇಗೋ ಹೊಂದಿಸೋಣವೆಂದರೂ ಹೃದಯದಲ್ಲಿರುವ ಚಿಕ್ಕ ಪರಿಮಾಣದ ಆಕಾಶವು ಹೊರಗಿನ ಆಕಾಶಕ್ಕೆ ಸಮವಾಗಿದೆ ಎಂಬುದೂ ಹೇಗೂ ಹೊಂದುವಂತಿಲ್ಲ. (2) ಪರಮೇಶ್ವರನಿಗಾದರೂ ಈ ಉಪಮಾನವು ಹೇಗೆ ಹೊಂದುತ್ತದೆ? ಅವನು ಆಕಾಶಕಿಂತಲೂ ದೊಡ್ಡವನಲ್ಲವೆ?-ಎಂದರೆ, ಇಲ್ಲಿ 'ದಹರವಾದ ಆಕಾಶವು' ಎಂದು ಹೇಳಿದ್ದರಿಂದ ಅದು ಅಲ್ಪಪರಿಮಾಣವುಳ್ಳದ್ದೆಂದು ತಿಳಿದುಕೊಂಡಾರೆಂದು ಆ ಕಲ್ಪನೆಯನ್ನು ತೆಗೆದುಹಾಕುವದಕ್ಕಾಗಿ 'ಆಕಾಶದಷ್ಟು ಇದಾನೆ' ಎಂದಿದೆಯೇ ಹೊರತು ಅಷ್ಟೇ ಇದಾನೆ ಎಂದು ಹೇಳುವದಕ್ಕಲ್ಲ. (3) ಅಲ್ಪವಾದ 'ಆಕಾಶ' ಭಾಗದಲ್ಲಿ ಎಲ್ಲವೂ ಅಡಗಿದೆ ಎಂಬುದೂ ಹೊಂದುವದಿಲ್ಲ ; ಮುಂದಿನ ವಾಕ್ಯದಲ್ಲಿ 'ಇವನು ಆತ್ಮನು, ಪಾಪರಹಿತನು, ಮುಪ್ಪಿಲ್ಲದವನು, ಮೃತ್ಯವಿಲ್ಲದವನು, ಶೋಕವಿಲ್ಲದವನು, ಹಸಿವಿಲ್ಲದವನು, ನೀರಡಿಕೆಯಿಲ್ಲದವನು, ಸತ್ಯಕಾಮನು ಸತ್ಯಸಂಕಲ್ಪನು' ಎಂದು ಮುಂತಾಗಿ ಹೇಳಿರುವದು ಪರಮಾತ್ಮನಿಗೆ ಹೊಂದುತ್ತದೆಯೇ ಹೊರತು ಆಕಾಶಕ್ಕೆ ಹೊಂದಲಾರದು. (4) ಜೀವನಿಗೇನೋ ಆತ್ಮಶಬ್ದವು ಹೊಂದುತ್ತದೆ ; ಆದರೆ ಹೃದಯಪುಂಡರೀಕದಲ್ಲಿರುವದರಿಂದ ಅವನಿಗೆ ಇರುವ ಅಲ್ಪಪರಿಮಾಣವನ್ನು ಮಾತ್ರ ಇಲ್ಲವೆನ್ನುವದಕ್ಕೆ ಆಗುವ ಹಾಗೇ ಇರುವದಿಲ್ಲ. ಜೀವನು ಬ್ರಹ್ಮವೇ ಆಗಿರುವದರಿಂದ ಅವನಿಗೂ ಮಿಕ್ಕ ವಿಶೇಷಣಗಳನ್ನು ಹೊಂದಿಸಬಹುದಲ್ಲವೆ ?-ಎಂದರೆ ಯಾವ ಬ್ರಹ್ಮದ ಅಭೇದವನ್ನಿಟ್ಟುಕೊಂಡು ಜೀವನಿಗೆ ಆ ವಿಶೇಷಣಗಳನ್ನು ಹೊಂದಿಸುತ್ತೇವೆನ್ನುತ್ತೀರೋ ಆ ಬ್ರಹ್ಮವೇ ಇಲ್ಲಿ ವಿವಕ್ಷಿತವಾಗಿದೆ ಎಂದು ಒಪ್ಪುವದು ಹೆಚ್ಚು ಯುಕ್ತವಾಗಿರುತ್ತದೆ. (5) ಬ್ರಹ್ಮಪುರವೆಂಬ ಮಾತನ್ನು ಪರಮೇಶ್ವರನಿಗೆ ತೆಗೆದುಕೊಂಡರೆ ಬ್ರಹ್ಮಶಬ್ದಕ್ಕೆ ಗೌಣಾರ್ಥವನ್ನು ಕಲ್ಪಿಸಬೇಕಾದ ಕ್ಲೇಶವೂ ಇರುವದಿಲ್ಲ. ಆ ಬ್ರಹ್ಮವುಕೂಡ ಶರೀರದಲ್ಲಿರಬಹುದಾದ್ದರಿಂದ ಇದನ್ನು 'ಬ್ರಹ್ಮದ ಪುರ'ವೆಂದು ಕರೆಯಬಹುದಾಗುತ್ತದೆ. ಅಥವಾ ಜೀವನ ಶರೀರವೇ

ಆಗಿದ್ದರೂ ಅದರಲ್ಲಿ-ಸಾಲಗ್ರಾಮದಲ್ಲಿ ವಿಷ್ಣುವಿನಂತೆ-ಉಪಾಸಕರಿಗೆ ಬ್ರಹ್ಮವು ಸಂನಿಹಿತವಾಗಿ ಕಾಣಬರುತ್ತದೆಯಾದ್ದರಿಂದ ಇದನ್ನು ಬ್ರಹ್ಮಪುರವೆಂದು ಕರೆದಿದೆ ಎಂದಾದರೂ ಕಲ್ಪಿಸಬಹುದು. (6) ಈ ದಹರಾಕಾಶವನ್ನು ಅರಿತುಕೊಂಡವರಿಗೆ 'ಈ ಆತ್ಮನನ್ನೂ ಮತ್ತು ಈ ಸತ್ಯಕಾಮಗಳನ್ನೂ ಅರಿತುಕೊಂಡು ದೇಹವನ್ನು ಬಿಟ್ಟುಹೋಗುವವರಿಗೆ ಸರ್ವಲೋಕಗಳಲ್ಲಿಯೂ ಅವರಿಗೆ ಬೇಕಾದಂತೆ ಸಂಚರಿಸಬಹುದಾದ ಫಲವು ಆಗುತ್ತದೆ' ಎಂದು- ಅನಂತಫಲವನ್ನು ಹೇಳಿರುವದರಿಂದ ಈ ದಹರಾಕಾಶವು ಪರಮಾತ್ಮನೇ ಎಂದೂ ಸೂಚಿಸಿದಂತೆ ಆಗಿದೆ. (7)'ಇಲ್ಲಿ ಈ ಆಕಾಶವನ್ನು ಉಪಾಸನೆಮಾಡಬೇಕೆಂದು ಹೇಳಿಯೇ ಇಲ್ಲ, ಆಕಾಶದೊಳಗೆ ಇರುವದನ್ನು ಉಪಾಸನೆಮಾಡಬೇಕೆಂದು ಶ್ರುತಿಯಲ್ಲಿ ಹೇಳಿದೆ'- ಎಂದು ಪೂರ್ವಪಕ್ಷಿ ಹೇಳಿದ್ದು ಸರಿಯಲ್ಲ; ಏಕೆಂದರೆ ಆಗ ಒಳಗಿನ ಆಕಾಶವನ್ನು ವಿಶಾಲವಾದ ಆಕಾಶಕ್ಕೆ ಹೋಲಿಸಿರುವ ಸ್ತುತಿಯು ಹೊಂದುವದಿಲ್ಲ. ಆಕಾಶದೊಳಗಿನ ದ್ಯಾವಾಪೃಥಿವ್ಯಾದಿಗಳನ್ನು ಅರಿತುಕೊಳ್ಳಬೇಕೆಂಬ ಅಭಿಪ್ರಾಯವೂ ಮುಂದಿನ ವಾಕ್ಯದಲ್ಲಿ ಪಾಪರಹಿತನು ಎಂದು ಮುಂತಾಗಿ ಆತ್ಮನ ಸ್ವರೂಪವನ್ನು ವರ್ಣಿಸಿರುವದಕ್ಕೂ ಹೊಂದುಗೆಯಾಗುವದಿಲ್ಲ. ಆತ್ಮ ನನ್ನೂ ಅವನಲ್ಲಿದ್ದುಕೊಂಡಿರುವ ಕಾಮಗಳನ್ನೂ ಅರಿತುಕೊಂಡವನಿಗೆ ಅನಂತ ಫಲವಾಗುವದೆಂದು ಹೇಳಿರುವದು ಆಕಾಶವೆಂಬ ಹೆಸರಿನ ಪರಮೇಶ್ವರನನ್ನೇ ಹೇಳುತ್ತದೆ.

ಇದೂ ಅಲ್ಲದೆ, ಎಲ್ಲಾ ಜೀವರುಗಳೂ ಸುಷುಪ್ತಿಯಲ್ಲಿ ಬ್ರಹ್ಮವನ್ನು ಹೊಂದುತ್ತಿದ್ದರೂ ಅದನ್ನು ಅರಿಯದೆ ಇರುತ್ತಾರೆ- ಎಂದಿದೆ, ಮತ್ತು ಆತ್ಮನು ಲೋಕಗಳನ್ನೂ ವರ್ಣಾಶ್ರಮಾದಿಗಳನ್ನೂ ವ್ಯವಸ್ಥೆಯಲ್ಲಿಟ್ಟಿರುತ್ತಾನೆ-ಎಂದೂ ಶ್ರುತಿಯಲ್ಲಿದೆ ; 'ಆಕಾಶ'ವೆಂಬ ಶಬ್ದವನ್ನು ಶ್ರುತಿಯಲ್ಲಿ ಪರಮೇಶ್ವರನಿಗೆ ಪ್ರಯೋಗಿಸಿರುವದೂ ಪ್ರಸಿದ್ಧವಾಗಿದೆ. ಈ ಯಾವ ಧರ್ಮಗಳೂ ಜೀವನಿಗೂ ಹೊಂದುವದಿಲ್ಲ. ಆದ್ದರಿಂದ ಇಲ್ಲಿ ಆಕಾಶವೆಂದರೆ ಪರಮೇಶ್ವರನೇ ಎಂಬುದೇ ಸಿದ್ಧಾಂತ.

**ಶ್ರೀಗಳು** ಅನುವಾದವನ್ನು ಮಾಡುವಾಗ ಹೀಗೆಂದರು: ಇಂಥ ವಿಷಯಗಳು ಕಷ್ಟವಾಗಿದ್ದರೂ ವಿಚಾರಮಾಡಿ ತಿಳಿದುಕೊಳ್ಳಬೇಕಾದದ್ದು ಅತ್ಯವಶ್ಯ.

ಏಕೆಂದರೆ ನಾವೆಲ್ಲರೂ ವಿಷಯಗಳನ್ನೇ ಎಡೆಬಿಡದೆ ಉಪಾಸನೆಮಾಡುತ್ತಿದೇವೆ; ನಮ್ಮ ಸ್ವರೂಪವೇ ಹೆಚ್ಚಿನದೆಂದು ಹೆಮ್ಮೆಪಡುತ್ತಿದೇವೆ. ಆದರೆ ಪರಮಾತ್ಮನು ನಮ್ಮ ಹೃದಯದಲ್ಲಿಯೇ ಇರುತ್ತಾನೆ, ಆತನನ್ನು ಉಪಾಸನೆಮಾಡಿದರೆ ಸಕಲಕಾಮಗಳೂ ಅನಂತಫಲವೂ ಸಿಕ್ಕುತ್ತವೆ ಎಂಬ ಶ್ರುತಿಯ ಅಭಿಪ್ರಾಯವನ್ನು ತಿಳಿದುಕೊಂಡೂ ಪರಮೇಶ್ವರನನ್ನು ಉಪಾಸನೆಮಾಡದೆ ಇರುವೆವಲ್ಲ! ಎಷ್ಟು ಶೋಚನೀಯ!

ಪರಮಾತ್ಮನು ಉಪಾಸಕರನ್ನು ಅನುಗ್ರಹಿಸುವದಕ್ಕಾಗಿ ಅವರ ಒಳಗೇ ಇದ್ದುಕೊಂಡಿರುತ್ತಾನೆ; ಆದರೂ ಅವನ ಮಹಿಮೆಗೆ ಯಾವ ನ್ಯೂನತೆಯೂ ಇದರಿಂದ ಬಂದಿರುವದಿಲ್ಲ. ಅವನು ಸತ್ಯಕಾಮನು, ಸತ್ಯಸಂಕಲ್ಪನು, ಪಾಪರಹಿತನು -ಎಂದುಮುಂತಾಗಿ ಭಾವನೆಮಾಡುವದು ನಮಗೆ ಕಲ್ಯಾಣಕ್ಕೆ ಕಾರಣವಾಗುವದು. ಪ್ರಕೃತಶ್ರುತಿಯಲ್ಲಿ ಶರೀರವು ಮುಪ್ಪನ್ನು ಹೊಂದಿದರೂ ನಾಶವಾದರೂ ಈ ಆತ್ಮನು ನಾಶವಾಗುವದಿಲ್ಲ ಎಂದಿದೆ, ಇವನಲ್ಲಿ ಸರ್ವಕಾಮಗಳೂ ಇವೆ ಎಂದಿದೆ; ಪ್ರತಿದಿನವೂ ಆತನನ್ನೇ ಮುಟ್ಟಿದರೂ ಜೀವರು ಅವನ ಮಹಿಮೆಯನ್ನು ಅರಿಯದೆ ಇರುವರು-ಎಂದಿದೆ. ಆದ್ದರಿಂದ ಇಲ್ಲಿ ಹೇಳಿರುವದು ಪರಮೇಶ್ವರನನ್ನೇ-ಎಂದು ಬಾದರಾಯಣರು ಸಿದ್ಧಾಂತವನ್ನು ಮಾಡಿರುತ್ತಾರೆ.

ಈ ಅಧಿಕರಣದಲ್ಲಿ ಹೇಳಿರುವ ಪಾಪರಹಿತತ್ವವೇ ಮುಂತಾದ ಬ್ರಹ್ಮಲಿಂಗಗಳೂ ಸುಷುಪ್ತಿಯಲ್ಲಿ ಜೀವರಿಗೆ ಆಗುವದೆಂದು ಹೇಳಿರುವ ಬ್ರಹ್ಮಪ್ರಾಪ್ತಿಯೂ ಜ್ಞೇಯವಾದ ಪರಬ್ರಹ್ಮಕ್ಕೂ ಹೊಂದುತ್ತವೆ. ಆದ್ದರಿಂದ ಆಚಾರ್ಯರು ಉಪಾಸನಾವಾಕ್ಯವಿಚಾರದಲ್ಲಿಯೂ 'ಪರಬ್ರಹ್ಮ', 'ಪರಮಾತ್ಮ'-ಎಂಬ ಶಬ್ದಗಳನ್ನು ಪ್ರಯೋಗಿಸುತ್ತಾರೆ ; ಜ್ಞೇಯವಾಕ್ಯಗಳ ವಿಚಾರದಲ್ಲಿಯೂ 'ಪರಮೇಶ್ವರ' ಮುಂತಾದ ಶಬ್ದಗಳನ್ನು ಪ್ರಯೋಗಿಸುತ್ತಾರೆ. ಒಂದೇ ಬ್ರಹ್ಮವನ್ನೇ ಉಪಾಸ್ಯವಾಗಿಯೂ ಜ್ಞೇಯವಾಗಿಯೂ ಶ್ರುತಿಯಲ್ಲಿ ಉಪದೇಶಿಸಿದೆ ಎಂಬುದು ಅವರ ಅಭಿಪ್ರಾಯ. ಉಪಾಸನಾವಾಕ್ಯಗಳು ಉಪಾಸನಾಪ್ರಧಾನವಾಗಿರುತ್ತವೆ, ಬ್ರಹ್ಮವಾಕ್ಯಗಳು ಬ್ರಹ್ಮಸ್ವರೂಪಪ್ರಧಾನವಾಗಿ

ರುತ್ತವೆ- ಎಂದು ಆಚಾರ್ಯರು ಹೇಳಿದ್ದರೂ ಇದನ್ನರಿಯದೆ ಕೆಲವರು ನಮ್ಮ ದೇಶದ ಪಂಡಿತರೂ ಈ ವಾಕ್ಯವು 'ಉಪಾಸ್ಯಬ್ರಹ್ಮದಲ್ಲಿ ಸಮನ್ವಯವಾಗಿದೆ' ಎಂದು ತಪ್ಪಾಗಿ ವ್ಯವಹರಿಸುತ್ತಿದಾರೆ; ಪರದೇಶದ ಕೆಲವರು ವಿಮರ್ಶಕರು ಆಚಾರ್ಯರು ಪರಬ್ರಹ್ಮ, ಅಪರಬ್ರಹ್ಮ- ಈ ಎರಡರ ವಿಭಾಗವನ್ನು ವ್ಯವಸ್ಥೆಯಿಂದ ಹೇಳಿಲ್ಲ' ಎಂದೂ ಭ್ರಾಂತರಾಗಿರುತ್ತಾರೆ.

★★★★★

# ಕ್ಷೇತ್ರಜ್ಞೇಶ್ವರೈಕ್ಯ

**1-5-1963**

**ಶ್ರೀಶ್ರೀಗಳವರು**

ಗೀತೆಯ 13-2ರ ಭಾಷ್ಯದಲ್ಲಿ - ಜೀವನು ಸಂಸಾರಿಯಲ್ಲವೆಂದೇ ಆದರೆ ಶಾಸ್ತ್ರಾನರ್ಥಕ್ಯವಿಲ್ಲವೆ?- ಎಂಬ ಪ್ರಶ್ನೆಗೆ ಭಾಷ್ಯದಲ್ಲಿ ಎರಡು ಬಗೆಯ ಉತ್ತರವನ್ನು ಹೇಳಿದೆ. ಬಂಧಮುಕ್ತಾವಸ್ಥೆಗಳು ನಿಜವಾಗಿಯೇ ಆಗುವವೆನ್ನುವವರ ಪಕ್ಷದಲ್ಲಿ ಅನಾದಿಗೆ ನಾಶವೂ ಸಾದಿಗೆ ನಿತ್ಯತ್ವವೂ ಬರುವವೆಂಬ ದೋಷವಿದೆ. ಆದ್ದರಿಂದ ಮೋಕ್ಷವೇ ಇಲ್ಲವೆಂದಾಗಿ ಶಾಸ್ತ್ರಾನರ್ಥಕ್ಯವು ಬರುತ್ತದೆ. ವ್ಯವಹಾರದಲ್ಲಿ ಅವಿದ್ಯಾವಂತರೆಂದು ಪ್ರಸಿದ್ಧರಾಗಿರುವವರಿಗಾಗಿ ಶಾಸ್ತ್ರವು ಉಪದೇಶಿಸುತ್ತದೆ, ಅವಿದ್ಯೆಯನ್ನು ಕಳೆಯುತ್ತದೆ-ಎಂಬ ಪಕ್ಷದಲ್ಲಿ ಯಾವ ದೋಷವೂ ಇಲ್ಲ. ಕರ್ಮವನ್ನು ಮಾಡುವವರೇ ಇಲ್ಲವಾಗುವರೆಂದಾಗುವದಲ್ಲ! -ಎಂಬ ದೋಷವೂ ಈ ಪಕ್ಷದಲ್ಲಿಲ್ಲ; ಏಕೆಂದರೆ ಅವಿದ್ಯಾದಶೆಯಲ್ಲಿ ಕರ್ತೃವು ಇದ್ದೇ ಇರುತ್ತಾನೆ. ಆದ್ದರಿಂದ ಮಿಥ್ಯಾಜ್ಞಾನದಿಂದಲೇ ಸಂಸಾರಿತ್ವವುಂಟಾಗಿದೆ ಎಂಬುದೇ ಯುಕ್ತ.

ತಿಳಿದವರೆನ್ನುವವರೂ 'ನಾನು', 'ನನ್ನದು' ಎಂಬ ಅವಿದ್ಯಾವ್ಯವಹಾರವನ್ನು ಮಾಡುತ್ತಾರಲ್ಲವೆ? - ಎಂಬ ಆಕ್ಷೇಪವು ಸರಿಯಲ್ಲ ; ಏಕೆಂದರೆ ಆತ್ಮಸ್ವರೂಪವನ್ನು

ಅರಿತವರಿಗೆ ಎಂದಿಗೂ ಭೋಗದಲ್ಲಿ ಆಶೆಯಾಗಲಿ ಕರ್ಮದಲ್ಲಿ ಪ್ರವೃತ್ತಿಯಾಗಲಿ ಉಂಟಾಗಲಾರದು. ಆದ್ದರಿಂದ ''ಆಕ್ಷೇಪದಲ್ಲಿ ಹೇಳಿರುವ ತಿಳಿದವರೆನ್ನುವವರು ಅವಿದ್ಯಾವಂತರೇ. ಇದರಂತೆ ಕ್ಷೇತ್ರಜ್ಞನೆಂದರೆ ಪರಮಾತ್ಮನೇ ಸರಿ; ಅವನನ್ನು ಧ್ಯಾನಮಾಡಿ ಅವನ ಸ್ವರೂಪದ ಸಾಯುಜ್ಯವನ್ನು ಪಡೆಯಬೇಕು-ಎಂಬುದೇ ಶಾಸ್ತ್ರಾರ್ಥ'' ಎನ್ನುವವರ ಮತವೂ ಸಂಪ್ರದಾಯಾಗತವಾದ ಶಾಸ್ತ್ರಾರ್ಥಕ್ಕೆ ಹೊಂದುವದಿಲ್ಲ. ಅದೂ ಅವಿದ್ಯಾವಂತರ ಮಾತೇ ಆಗಿದೆ. ಹಾಗಾದರೆ ಆತ್ಮನಿಗೆ ಅವಿದ್ಯೆ ಇದೆ ಎಂದೇ ಆಯಿತಲ್ಲ!- ಎಂಬ ಆಕ್ಷೇಪವೂ ಸರಿಯಲ್ಲ ; ಏಕೆಂದರೆ ಅವಿದ್ಯೆಯು ಜ್ಞೇಯವಾಗಿರುವದರಿಂದ ಅದಕ್ಕೆ ಸಾಕ್ಷಿಯಾಗಿರುವ ಕ್ಷೇತ್ರಜ್ಞನಿಗೆ ಯಾವ ದೋಷವೂ ತಟ್ಟಲಾರದು. 'ನನಗೆ ಅವಿದ್ಯೆಯಿರುವದು ಅನುಭವದಲ್ಲಿದೆ' ಎನ್ನುವವನಿಗೂ ಅವಿದ್ಯೆಯು ವೇದ್ಯವೇ ಆಗಿರುತ್ತದೆಯಷ್ಟೆ? ಆತ್ಮನು ನಿಜವಾಗಿಯೂ ಅವಿದ್ಯಾಜ್ಞಾತೃ ಎಂಬುದೂ ಸರಿಯಲ್ಲ; ಏಕೆಂದರೆ ಅವನು ಕೂಟಸ್ಥಚೈತನ್ಯಸ್ವರೂಪನಾಗಿರುತ್ತಾನೆ. ಆದ್ದರಿಂದ ಸಂಸಾರವೆಂಬುದೆಲ್ಲವೂ ಅವಿದ್ಯಾಕಲ್ಪಿತವಾಗಿದೆ. ಈ ಅವಿದ್ಯೆಯು ಕ್ಷೇತ್ರಜ್ಞೇಶ್ವರೈಕತ್ವಜ್ಞಾನದಿಂದ. ತೊಲಗುವದು- ಎಂಬುದೇ ಸಿದ್ಧಾಂತ.

★★★★★

## ಪಂಚಕೋಶಾತೀತನಾದ ಆತ್ಮ

**2-5-1963**

**ಬ್ರ॥ಶ್ರೀ॥ ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿ**

**ತೈತ್ತಿರೀಯಭಾಷ್ಯದ** 2-8 ಈ ಅನುವಾಕದಲ್ಲಿ 'ಈ ಪುರುಷನಲ್ಲಿರುವ ಆತ್ಮನೂ ಆದಿತ್ಯನಲ್ಲಿರುವ ಪುರುಷನೂ ಒಂದೇ-ಹೀಗೆಂದು ಅರಿತವನು ಈ ಲೋಕವನ್ನು ಮೀರಿ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ-ಎಂಬ

ಆತ್ಮರುಗಳನ್ನು ಉಪಸಂಕ್ರಮಣಮಾಡುತ್ತಾನೆ' ಎಂದಿದೆ. ಇಲ್ಲಿ 'ಹೀಗೆ ಅರಿತವನು' ಎಂದರೆ ಯಾರು? ಅವನು ಅನ್ನಮಯಾದ್ಯಾತ್ಮರನ್ನು ಸಂಕ್ರಮಣಮಾಡುವದೆಂದರೆ ಹೇಗೆ?-ಎಂಬ ಎರಡು ಪ್ರಶ್ನೆಗಳನ್ನು ಕುರಿತು ಚರ್ಚಿಸಿರುತ್ತದೆ. ಅರಿಯುವಾತನು ಪರಮಾತ್ಮನಾಗಿ ಬೇರೆಯೇ ಎಂದಾದರೆ 'ಅದನ್ನು ಸೃಷ್ಟಿಸಿ ಅದನ್ನೇ ಪ್ರವೇಶಿಸಿದನು' ಎಂದುಮುಂತಾಗಿ ಹೇಳಿರುವ ಏಕತ್ವಶ್ರುತಿಗೆ ವಿರೋಧವಾಗುತ್ತದೆ ; ಪರಮಾತ್ಮನೇ ಎಂದರೆ ತನ್ನನ್ನು ತಾನೇ ಅರಿಯುವದೆಂಬ ಕರ್ಮ ಕರ್ತೃತ್ವವು ಗಂಟುಬೀಳುತ್ತದೆ - ಎಂಬ ಶಂಕೆಯನ್ನು ತೆಗೆದು ಹೇಳಿರುವ ಪರಿಹಾರವೇನೆಂದರೆ:

ಪರಮಾತ್ಮನೇ ಹೀಗೆ ಅರಿಯುವಾತನು; ಹೀಗೆ ಅರಿತದ್ದರಿಂದ ಅವನಿಗೆ ಪರಮಪುರುಷಾರ್ಥಪ್ರಾಪ್ತಿ ಎಂಬ ಫಲವನ್ನು ಉಪಕ್ರಮದಲ್ಲಿ ಪ್ರತಿಜ್ಞೆಮಾಡಿದ್ದು ಸರಿಯಾಗುತ್ತದೆ. ತಾನೇ ತನ್ನ ಸ್ವರೂಪವನ್ನು ಪಡೆದುಕೊಳ್ಳುವದೆಂಬುದು ಹೇಗೆ?-ಎಂದರೆ ಅವಿದ್ಯಾಕೃತವಾದ ನಾಮರೂಪಗಳನ್ನು ಅಲ್ಲಗಳೆಯುವದರಿಂದ ತನ್ನ ಸ್ವರೂಪವನ್ನು ತಾನು ಪಡೆದುಕೊಳ್ಳುತ್ತಾನೆ ಎಂದು ಉಪಚಾರಕ್ಕೆ ಹೇಳಬಹುದು. ಇದೇ ಸರಿಯಾದ ಅರ್ಥವೆನ್ನುವದಕ್ಕೆ ಆಧಾರವೇನೆಂದರೆ, ಅರಿತುಕೊಂಡಮಾತ್ರದಿಂದ ಪರಮಪುರುಷಾರ್ಥಪ್ರಾಪ್ತಿಯನ್ನು ಹೇಳಿರುವದು. ದ್ವೈತವು ಅವಿದ್ಯಾಕೃತವಾಗಿರುವದರಿಂದ ಅದನ್ನು ವಿದ್ಯೆಯಿಂದ ಕಳೆದುಕೊಳ್ಳಬಹುದಾಗಿದೆ. ದ್ವೈತವು ಸುಷುಪ್ತಿಸಮಾಧಿಗಳಲ್ಲಿ ಕಾಣಬರುವದಿಲ್ಲವಾದ್ದರಿಂದ ಅದು ಎಚ್ಚರ ಕನಸುಗಳಲ್ಲಿ ಕಾಣುವದು ಅವಿದ್ಯೆಯಿಂದಲೇ ಎಂದು ನಿರ್ಣಯವಾಗುತ್ತದೆ.

ಜೀವನಿಗಿಂತಲೂ ಈಶ್ವರನು ಬೇರೆಯೇ ಎಂದು ಒಪ್ಪಿರುವವರಿಗಾದರೆ ಅಜ್ಞಾನದಿಂದ ಸಂಸಾರಭಯವಾಗಿರುವದಿಲ್ಲವಾದ್ದರಿಂದ ಅದು ಹೋಗುವದಕ್ಕೆ ಕಾರಣವಿಲ್ಲ : ಆದ್ದರಿಂದ ಸಂಸಾರವು ಅವಿದ್ಯಾನಿಮಿತ್ತವೇ ; ವಿದ್ಯೆಯಿಂದ ಅದು ಹೋಗುತ್ತದೆ.

ಹೀಗಾದರೆ ಅವಿದ್ಯೆಯು ಆತ್ಮಧರ್ಮವೆಂದಾಯಿತಲ್ಲ! - ಎಂದರೆ ಹಾಗಲ್ಲ; ಏಕೆಂದರೆ ಅವಿದ್ಯೆಯೂ ವಿಷಯವಾಗಿರುತ್ತದೆಯಾದ್ದರಿಂದ ಆತ್ಮನಲ್ಲಿ

ನಿಜವಾಗಿಲ್ಲ. ಸಂಕ್ರಮಣವೆಂದರೆ ನಿಜವನ್ನು ಅರಿತುಕೊಳ್ಳುವದೇ -ಅವಿದ್ಯೆಯಿಂದಾಗಿರುವ ಭ್ರಾಂತಿಯನ್ನು ತೊಲಗಿಸಿಕೊಳ್ಳುವದೇ- ಹೊರತು ನಿಜವಾಗಿ ಪಡೆದುಕೊಳ್ಳುವದಲ್ಲ. ಆದ್ದರಿಂದ ಅವಿದ್ಯಾಕೃತವಾದ ದ್ವೈತನಿವೃತ್ತಿಯಿಂದಲೇ ಪರಮಪುರುಷಾರ್ಥಪ್ರಾಪ್ತಿ. ಇದೇ ಶ್ರುತ್ಯರ್ಥ- ಎಂಬುದು ಸಿದ್ಧಾಂತದ ಸಾರವು.

**ಶ್ರೀಗಳು** ಅನುವಾದದಲ್ಲಿ ಹೀಗೆಂದರು: ಶ್ರುತ್ಯರ್ಥವನ್ನು ಹೇಗೆ ಮಾಡಬೇಕು? - ಎಂಬುದನ್ನು ನಿರ್ಣಯಿಸಿಕೊಂಡಾಗ ಮಾತ್ರ ಈ ಚರ್ಚೆಯು ಅರ್ಥವತ್ತಾಗುವದು. ಶ್ರುತಿಗೆ ಆಚಾರ್ಯರು ಸಂಪ್ರದಾಯಾನುಸಾರವಾಗಿ ಯಾವದು ಅನುಭವದಲ್ಲಿ ಪರ್ಯವಸಾನವಾಗುವದೋ ಅದೇ ಶ್ರುತ್ಯರ್ಥ. ಆತ್ಮನು ಸರ್ವದ್ವೈತಾತೀತನಾಗಿದ್ದರೂ ಅನ್ನಮಯಾದ್ಯಾನಂದಮಯಾಂತವಾದ ಪಂಚಕೋಶಗಳಿಂದ ಸವಿಶೇಷನಾಗಿ ಕಾಣುತ್ತಿರುತ್ತಾನೆ. ಸರಿಯಾಗಿ ವಿಚಾರಮಾಡಿದರೆ ಆತ್ಮನಲ್ಲಿ ಯಾವ ವಿಶೇಷವೂ ಇಲ್ಲ ಎಂದು ನಿರ್ಣಯವಾಗುತ್ತದೆ. ಆದ್ದರಿಂದ ಆತ್ಮನಲ್ಲಿ ಉತ್ಕರ್ಷಾಪಕರ್ಷಗಳು ತೋರುವದು ಅವಿದ್ಯೆಯಿಂದ. ದ್ವೈತವೆಲ್ಲವೂ ಅವಿದ್ಯಾಕೃತವಾಗಿದೆ ಎಂಬುದಕ್ಕೆ ಸುಷುಪ್ತ್ಯಾದ್ಯನುಭವಗಳೇ ಆಧಾರ. ಆತ್ಮನ ಸ್ವಭಾವವೇ ಸವಿಶೇಷವಾಗಿದ್ದು ದ್ವೈತವು ಪರಮಾರ್ಥವೇ ಆಗಿದ್ದಿದ್ದರೆ ಸುಷುಪ್ತ್ಯಾದಿಗಳಲ್ಲಿ ಅದು ತೊಲಗಬಾರದಾಗಿತ್ತು. ಆದರೆ ಅನುಭವದಲ್ಲಿ ಅದ್ವೈತವೇ ಆ ಅವಸ್ಥೆಗಳಲ್ಲಿ ತೋರುತ್ತಿದೆ. ಆದ್ದರಿಂದ ಶ್ರುತಿಯು ವೇತೃವಾದ ಸಾಧಕನೂ ವೇದ್ಯನಾದ ಪರಮಾತ್ಮನೂ ಪರಮಾರ್ಥದೃಷ್ಟಿಯಿಂದ ಆನಂದಸ್ವರೂಪವಾದ, ಬ್ರಹ್ಮಮಾತ್ರವೇ ಎಂದು ನಿಶ್ಚಯಿಸಿರುತ್ತದೆ.

★★★★★

# ಬ್ರಹ್ಮಜ್ಞಾನವೂ ಅದರ ಫಲವೂ

**3-5-1963**

**ಬ್ರ॥ಶ್ರೀ॥ಮತ್ತೂರು ರಾಮಸ್ವಾಮಿ ಅವಧಾನಿಗಳು**

**ಮುಂಡಕೋಪನಿಷತ್ತಿನ** 2-2-7 ರಿಂದ 12ರ ವರೆಗಿನ ಭಾಷ್ಯದ ಸಾರವೇನೆಂದರೆ: ಸರ್ವಜ್ಞನಾಗಿರುವ ಪರಮಾತ್ಮನ ಮಹಿಮೆಯೇ ಈ ಜಗತ್ತು. ಆ ಆತ್ಮನು ಬ್ರಹ್ಮಪುರವಾದ ಹೃದಯಕಮಲದಲ್ಲಿರುತ್ತಿರುವನು; ಅವನು ಮನೋಮಯನು, ಮನಸ್ಸಿನ ವೃತ್ತಿಗಳಿಂದ ತಿಳಿಯಬರತಕ್ಕವನು. ಪ್ರಾಣಶರೀರವನ್ನು ಒಂದು ಕಡೆಯಿಂದ ಇನ್ನೊಂದೆಡೆಗೆ ಒಯ್ಯುವಾತನು. ಹೃದಯದ ಮೂಲಕವಾಗಿ ಶರೀರದಲ್ಲಿರುತ್ತಿರುವನು. ಶಮದಮಾದಿಗಳಿಂದಲೂ ಶಾಸ್ತ್ರಾಚಾರ್ಯರ ಉಪದೇಶದಿಂದಲೂ ಉಂಟಾಗುವ ಜ್ಞಾನದಿಂದ ವಿವೇಕಿಗಳಾದವರು ಎಲ್ಲೆಲ್ಲಿಯೂ ಇರುವ ಆನಂದರೂಪನಾದ ಆ ಆತ್ಮನನ್ನು ಕಂಡುಕೊಳ್ಳುವರು, ಆ ಪರಮಾತ್ಮನನ್ನು ಕಂಡುಕೊಂಡಾಗ ಹೃದಯಗ್ರಂಥಿಯು- ಎಂದರೆ ಅವಿದ್ಯೆಯಿಂದ ಕೂಡಿಹಾಕಿಕೊಂಡಿರುವ ಕಾಮವು ನಾಶವಾಗುವದು, ಆತ್ಮವಿಷಯಕವಾದ ಸಕಲಸಂಶಯಗಳೂ ತೊಲಗುವವು, ಸಕಲಕರ್ಮಗಳೂ ಕ್ಷಯವಾಗುವವು. ಹೃದಯದಲ್ಲಿರುವ ಈ ಅವಿದ್ಯಾಕಾಮಕರ್ಮರಹಿತವಾದ ನಿಷ್ಕಲಬ್ರಹ್ಮವನ್ನು ಆತ್ಮಪ್ರತ್ಯಯಾನುಸಾರಿಗಳಾದವರು ಮಾತ್ರ ಅರಿಯಬಲ್ಲರು. ಈ ಬ್ರಹ್ಮವು ಸಕಲಜ್ಯೋತಿಗಳನ್ನೂ ಬೆಳಗಬಲ್ಲ ಆತ್ಮಜ್ಯೋತಿಯಾಗಿರುತ್ತದೆ. ಇಷ್ಟೇ ಅಲ್ಲ, ಸರಿಯಾಗಿ ನೋಡಿದವರಿಗೆ ಬ್ರಹ್ಮವೇ ನಮ್ಮ ಮುಂದೆ ಹಿಂದೆ, ಎಡಕ್ಕೆ ಬಲಕ್ಕೆ, ಕೆಳಗೆ ಮೇಲುಗಡೆ ಎಲ್ಲೆಲ್ಲಿಯೂ ಇದೆ. ಈ ವಿಶ್ವವೆಲ್ಲ ಬ್ರಹ್ಮವೇ.

★★★★★

# ದಹರಾಕಾಶವು ಬ್ರಹ್ಮವೇ

**4-5-1963**

**ಬ್ರ॥ಶ್ರೀ॥ ಹೆಚ್.ಅನಂತಮೂರ್ತಿ ಶಾಸ್ತ್ರಿಗಳವರು**

**ಬ್ರಹ್ಮಸೂತ್ರ** 1-3-19 ರಿಂದ 21 ಭಾಷ್ಯಭಾಗದಲ್ಲಿ ದಹರಾಕಾಶವು ಬ್ರಹ್ಮವೇ ಎಂಬ ವಿಷಯಕ್ಕೆ ಪ್ರಜಾಪತಿಯ ವಾಕ್ಯದ ಆಧಾರದಿಂದ ಮಾಡಿದ ಆಶಂಕೆಗೆ ಪರಿಹಾರವನ್ನು ತಿಳಿಸಿದೆ. 'ಈ ಗ್ರಂಥಭಾಗದಲ್ಲಿ ಈ ಸಂಪ್ರಸಾದನು ಈ ಶರೀರವನ್ನು ಬಿಟ್ಟೆದ್ದು ಪರಂಜ್ಯೋತಿಯನ್ನು ಸೇರಿ ತನ್ನ ರೂಪದಿಂದ ಉತ್ಪನ್ನನಾಗುತ್ತಾನೆ. ಅವನು ಉತ್ತಮ ಪುರುಷನು' ಎಂದು ಹೇಳಿರುತ್ತದೆ. ಆದ್ದರಿಂದ ದಹರಾಕಾಶವು ಜೀವನೆಂದೂ ತಿಳಿಯಬಹುದು-ಎಂಬುದು ಪೂರ್ವಪಕ್ಷ. ಈ ಭಾಗದಲ್ಲಿ ಅಕ್ಷಿಯ ಉಪಲಕ್ಷಣದಿಂದ ತಿಳಿಯಬಂದ ದ್ರಷ್ಟೃವನ್ನು ಉಪನ್ಯಾಸಮಾಡಿ ನೀರಿನ ಶ್ರಾವೆಯ ದೃಷ್ಟಾಂತದಿಂದ ಇವನು ಶಾರೀರಾತ್ಮನಲ್ಲವೆಂಬುದನ್ನು ತೋರಿಸಿಕೊಟ್ಟು ಮತ್ತೆಮತ್ತೆ ಅವನನ್ನೇ ಸ್ವಪ್ನ ಸುಷುಪ್ತಿಗಳಲ್ಲಿ ತೋರಿಸಿ ಅವನು ತನ್ನ ಸ್ವರೂಪವನ್ನು ಪಡೆದುಕೊಳ್ಳುತ್ತಾನೆ- ಎಂದಿದೆ. ಜೀವನಿಗೆ ಪರಂಜ್ಯೋತಿಯಾದ ಬ್ರಹ್ಮವೇ ಪರಮಾರ್ಥಸ್ವರೂಪವು ಎಂದು ಹೇಳಿರುವದರಿಂದ ಇಲ್ಲಿ ಜೀವನನ್ನು ಜೀವರೂಪದಿಂದ ಹೇಳಿಲ್ಲ.

ಪರಮಾತ್ಮನು ತನ್ನ ರೂಪವನ್ನು ತಾನೇ ಪಡೆದುಕೊಳ್ಳುತ್ತಾನೆಂಬುದು ಹೇಗೆ? ಆತ್ಮನು ಕೂಟಸ್ಥನಲ್ಲವೆ? - ಎಂದರೆ ಸ್ಫಟಿಕವು ಉಪಾಧಿಯಿಂದ ನೀಲರಕ್ತಾದಿವರ್ಣವುಳ್ಳದ್ದರಂತೆ ತೋರಿದರೂ ನಿಜವಾಗಿ ಸ್ವಚ್ಛವಾಗಿಯೇ ಇದ್ದು ಪ್ರಮಾಣಜನ್ಯವಾದ ವಿವೇಕಜ್ಞಾನದಿಂದ ತನ್ನದೇ ಆದ ಶುದ್ಧ ಬಿಳಿಯ ಬಣ್ಣವನ್ನು ಪಡೆಯಿತೆಂದು ಹೇಗೆ ವ್ಯವಹೃತವಾಗುದೆಯೋ ಅದರಂತೆಯೇ ಜೀವನ ನಿಜವಾದ ಸ್ವರೂಪದ ವಿಷಯವನ್ನು ತಿಳಿಯಬೇಕು. ಆತ್ಮನು ಅವಿವೇಕದಿಂದ ಸಶರೀರನಾಗಿ ರುವಂತೆ ತೋರುತ್ತಾನೆ, ವಿವೇಕಜ್ಞಾನದಿಂದ ಅಶರೀರನಾಗುತ್ತಾನೆಂಬ ವ್ಯವಹಾರಕ್ಕೆ ವಿಷಯನಾಗುತ್ತಾನೆ, ಅಷ್ಟೆ. ಹೀಗೆ ಜೀವೇಶ್ವರರಿಗೆ ಮಿಥ್ಯಾಜ್ಞಾನದಿಂದಲೇ ಭೇದವೇ

ಹೊರತು ನಿಜವಾಗಿಯಲ್ಲ. ಜೀವನನ್ನು ಹೇಳಿರುವದು ಈ ಪರಮೇಶ್ವರವಾಕ್ಯಕ್ಕೆ ಹೇಗೆ ಹೊಂದುತ್ತದೆ ಎಂದರೆ ಜೀವನು ಸುಷುಪ್ತಿಯಲ್ಲಿ ಎರಡು ಬಗೆಯ ಉಪಾಧಿಗಳ ಅಭಿಮಾನವನ್ನೂ ಬಿಟ್ಟು ಯಾವ ಸ್ವರೂಪದಲ್ಲಿ ಸೇರಿಕೊಳ್ಳುತ್ತಾನೋ, ಆ ಬ್ರಹ್ಮರೂಪವನ್ನೇ ಉಪಾಸನೆಮಾಡಬೇಕೆಂದು ಹೇಳುವದಕ್ಕಾಗಿ ಜೀವಪರಾಮರ್ಶವು ಬಂದಿದೆ ಎಂದು ತಿಳಿಯಬೇಕು. ಆಕಾಶವನ್ನು ಅಲ್ಪವೆಂದು ಹೇಳಿರುವದು ಆಪೇಕ್ಷಿಕವು, ಉಪಾಸನೆಗಾಗಿ ಹೇಳಿದ್ದು. ನಿಜವಾಗಿ ಹಾಗಿಲ್ಲವೆಂದು ಶ್ರುತಿಯಲ್ಲಿಯೇ ಹೇಳಿದೆ- ಎಂಬುದು ಪರಿಹಾರವಾಕ್ಯದ ಸಾರವು.

**ಶ್ರೀಶ್ರೀಗಳವರು** ಅನುವಾದದಲ್ಲಿ ಮುಖ್ಯವಾಗಿ ಜೀವನು ಅವಸ್ಥೆಗಳಿಂದ ಬೇರೆಬೇರೆಯ ರೂಪಗಳನ್ನು ಹೊಂದುವಂತೆ ಕಂಡರೂ ಅದೇ ಸ್ವಚ್ಛಾತ್ಮನೇ ಹಾಗೆ ಉಪಾಧಿಗಳಿಂದ ಬೇರೆಬೇರೆಯಾಗಿರುವಂತೆ ತೋರಿಕೊಳ್ಳುತ್ತಾನೆ- ಎಂಬುದನ್ನೂ ಸ್ಫಟಿಕದೃಷ್ಟಾಂತದ ಸ್ವಾರಸ್ಯವನ್ನೂ ವಿವರಿಸಿ ತಿಳಿಸಿದರು. ಪರಮಾತ್ಮನಿಗೆ ಜೀವಭಾವವು ನಿಜವಾಗಿ ಬಂದೇ ಇಲ್ಲ ಎಂಬುದನ್ನು ಸ್ಪಷ್ಟಪಡಿಸಿದರು.

★★★★★

# ಶಂಕರಸಪ್ತಾಹದ ಉಪನ್ಯಾಸಗಳು

## ಪುರಾಣಪ್ರವಚನಗಳು

# ವಿಷಯಾನುಕ್ರಮಣಿಕೆ


| ಕ್ರ.ಸಂ | ವಿಷಯ | ಪುಟ |
|---|---|---|
| 1. | ಪ್ರಹ್ಲಾದನು ಮಾಡಿದ ಪರಮಾತ್ಮನ ಸ್ತೋತ್ರ | 11 |
| 2. | ಕೌಶಿಕ-ಬ್ರಾಹ್ಮಣಿ ಸಂವಾದ | 13 |
| 3. | ಸೂತಗೀತೆ | 15 |
| 4. | ನೀನು ಯಾರು? | 16 |
| 5. | ಲಕ್ಷ್ಮಣಸಮಾಧಾನ | 18 |
| 6. | ಯೋಗಸಾಧನದ ಉಪದೇಶ | 19 |
| 7. | ಕಾಲಯವನ ಸಂಹಾರ | 21 |
| 8. | ಪರಮಾತ್ಮನ ಆನಂದಸ್ವರೂಪ | 23 |
| 9. | ಶೌನಕೋಪದೇಶ | 25 |
| 10. | ಶ್ರುತಿಗೀತೆ | 27 |
| 11. | ಭಾಗವತಧರ್ಮದ ಸ್ವರೂಪ | 29 |
| 12. | ಧರ್ಮೋಪದೇಶ | 32 |
| 13. | ಕೇಶಿಧ್ವಜನ ಉಪದೇಶ | 35 |
| 14. | ಪ್ರಹ್ಲಾದನು ದೈತ್ಯಬಾಲರಿಗೆ ಮಾಡಿದ ಉಪದೇಶ | 37 |
| 15. | ಪೃಥುರಾಜನಿಗೆ ಸನತ್ಕುಮಾರರು ಮಾಡಿದ ಉಪದೇಶ | 39 |
| 16. | ಸುಷುಪ್ತಮೌನ | 41 |
| 17. | ಬ್ರಹ್ಮಗೀತೆ | 43 |
| 18. | ಪ್ರಲಯ ಮತ್ತು ಬ್ರಹ್ಮಸ್ವರೂಪದ ವರ್ಣನೆ | 44 |
| 19. | ಬ್ರಾಹ್ಮಣನ ಕರ್ತವ್ಯ; ಮೋಕ್ಷದ ಸ್ವರೂಪ | 47 |
| 20. | ಈಶ್ವರನು ಭೃಂಗೀಶ್ವರನಿಗೆ ಮಾಡಿದ ಉಪದೇಶ | 49 |
| 21. | ಅಘಾಸುರನ ಸಂಹಾರ | 52 |
| 22. | ಮಂಕ್ಯುಪಾಖ್ಯಾನ | 55 |
| 23. | ಸಪ್ತಭೂಮಿಕೆಗಳು | 57 |
| 24. | ಶಿವಸ್ವರೂಪ | 61 |

| | | |
|---|---|---|
| 25. | ಪೃಥುರಾಜನು ಪ್ರಜೆಗಳಿಗೆ ಮಾಡಿದ ಧರ್ಮೋಪದೇಶ | 62 |
| 26. | ಭಗವಂತನ ಜಗತ್ಸೃಷ್ಟ್ಯಾದಿಲೀಲೆ | 64 |
| 27. | ಕಾಮತ್ಯಾಗದ ಉಪದೇಶ | 66 |
| 28. | ತಂದೆ-ಮಗನ ಸಂವಾದ | 69 |
| 29. | ಗಜೇಂದ್ರಮೋಕ್ಷ | 71 |
| 30. | ಸೃಷ್ಟಿರಹಸ್ಯ | 75 |
| 31. | ಅನಿತ್ಯವಸ್ತುವಿನ ವಿಚಾರ | 77 |
| 32. | ಭಕ್ತಿಯೋಗದ ಮಹಿಮೆ | 79 |
| 33. | ಯಮ -ದೂತಸಂವಾದ | 81 |
| 34. | ಬ್ರಾಹ್ಮಣಪತ್ನಿಯರ ಭಗವದ್ಭಕ್ತಿ | 83 |
| 35. | ಅಕ್ರೂರನಿಗೆ ಪರಮಾತ್ಮದರ್ಶನ | 74 |
| 36. | ಶ್ರೀಕೃಷ್ಣನು ಉದ್ಧವನಿಗೆ ಉಪದೇಶಿಸಿದ ಭಕ್ತಿಯೋಗ | 85 |
| 37. | ಸಮಾಧಿಸ್ವರೂಪ | 85 |
| 38. | ಜೀವನ್ಮುಕ್ತನ ಲಕ್ಷಣ | 86 |
| 39. | ರಾಮನ ಸ್ವರೂಪ | 87 |
| 40. | ಪರಮಾತ್ಮಪ್ರಾಪ್ತಿಗೆ ಸಾಧನ | 88 |
| 41. | ಯೋಗತ್ರಯಗಳ ಸ್ವರೂಪ | 89 |
| 42. | ಪುರುಷೈಕತ್ವವಿಚಾರ | 91 |
| 43. | ಶಿವಲಿಂಗಸ್ವರೂಪ | 92 |
| 44. | ಸೌಭರಿಚರಿತ | 93 |
| 45. | ನಕುಲೋಪಾಖ್ಯಾನ | 94 |
| 46. | ಸಂಸಾರವನ್ನು ದಾಟುವದಕ್ಕೆ ಉಪಾಯ | 96 |
| 47. | ನಿದಾಘನಿಗೆ ಜ್ಞಾನೋಪದೇಶ | 97 |
| 48. | ಅತಿವರ್ಣಾಶ್ರಮಿಯ ಲಕ್ಷಣ | 98 |
| 49. | ಬ್ರಹ್ಮಪ್ರಾಪ್ತಿಯಾಗುವ ಬಗೆ | 99 |
| 50. | ಮೂರನೆಯ ಹೆಜ್ಜೆ | 101 |
| 51. | ಶ್ರೀರಾಮನ ಅನುಭವ | 104 |

| | | |
|---|---|---|
| 52. | ಪರಮಾತ್ಮನ ಮಾಯಾವಿಚಾರ | 105 |
| 53. | ಜ್ಞಾನೋಪದೇಶ | 106 |
| 54. | ನಿಜವಾದ ಸುಖ | 107 |
| 55. | ವ್ಯಾಸಾರ್ಜುನಸಂವಾದ | 108 |
| 56. | ಶಿವಸ್ವರೂಪ | 105 |
| 57. | ನಾರದ ಜೀವಸಂವಾದ | 111 |
| 58. | ಕಲಿಮಾಹಾತ್ಮ್ಯ | 116 |
| 59. | ಮೂರು ಬಗೆಯ ಅಹಂಕಾರ | 117 |
| 60. | ಭಗವಂತನ ಪರಮಾರ್ಥಸ್ವರೂಪದ ವರ್ಣನೆ | 118 |
| 61. | ವ್ಯಾಸರು ಶುಕರಿಗೆ ಮಾಡಿದ ಅನುಶಾಸನ | 121 |
| 62. | ಸಮುದ್ರಮಥನ | 123 |
| 63. | ಅಹಲ್ಯಾವೃತ್ತಾಂತ | 124 |
| 64. | ದುಃಖಬೀಜಗಳನ್ನು ಪರಿಹರಿಸಿಕೊಳ್ಳುವ ಉಪಾಯ | 128 |
| 65. | ಸಾಧನಾನುಷ್ಠಾನದ ಉಪದೇಶಕ್ರಮ | 130 |
| 66. | ಬ್ರಹ್ಮನ ಉಪದೇಶ | 133 |
| 67. | ಜ್ಞಾನಯಜ್ಞ | 134 |
| 68. | ಸಂಪಾತಿಯ ವೃತ್ತಾಂತ | 138 |
| 69. | ಧ್ರುವನು ಮಾಡಿದ ಭಗವತ್ತುತಿ | 140 |
| 70. | ಕ್ಷರ – ಅಕ್ಷರಗಳ ಸ್ವರೂಪ | 142 |
| 71. | ವೈರಾಗ್ಯದಿಂದಲೇ ಬ್ರಹ್ಮಜ್ಞಾನ | 144 |
| 72. | ಪರಮಾರ್ಥವರ್ಣನೆ | 145 |
| 73. | ಗುಣದೋಷಗಳನ್ನು ಮೀರುವ ದೃಷ್ಟಿ | 146 |
| 74. | ನೈಮಿತ್ತಿಕಪ್ರಲಯ ಪ್ರಾಕೃತಪ್ರಲಯ | 148 |
| 75. | ಬ್ರಹ್ಮನು ಮಾಡಿದ ಪರಮಾತ್ಮನ ಸ್ತುತಿ | 150 |
| 76. | ಪಾಪಕ್ಕೆ ಲೋಭವೇ ಆಶ್ರಯ | 153 |
| 77. | ಲಕ್ಷ್ಮೀನಾರಾಯಣರ ಸರ್ವವ್ಯಾಪಕತ್ವ | 155 |
| 78. | ಪರಮೇಶ್ವರನು ಸರ್ವಪ್ರಪಂಚಕ್ಕೂ ಕಾರಣನು | 156 |

| | | |
|---|---|---|
| 79. | ಶಿವನೇ ಮೂಲಕಾರಣನು | 158 |
| 80. | ಜೀವನ್ಮುಕ್ತನ ಸ್ಥಿತಿ | 162 |
| 81. | ಗೃಹಸ್ಥನಾದವನ ಧರ್ಮ | 173 |
| 82. | ದಮದ ಪ್ರಶಂಸೆ | 165 |
| 83. | ಸಿದ್ಧಗೀತೆ | 166 |
| 84. | ಬ್ರಹ್ಮಗೀತೆ | 168 |
| 85. | ಧ್ರುವನಿಗೆ ಸಪ್ತರ್ಷಿಗಳು ಮಾಡಿದ ಉಪದೇಶ | 169 |
| 86. | ಪ್ರಜ್ಞಾಮಾಹಾತ್ಮ್ಯ | 171 |
| 87. | ಯಮಳಾರ್ಜುನೋದ್ಧಾರ | 172 |
| 88. | ಪ್ರಹ್ಲಾದನು ದೈತ್ಯಬಾಲಕರಿಗೆ ಮಾಡಿದ ತತ್ತ್ವೋಪದೇಶ | 174 |
| 89. | ಮೋಕ್ಷಪ್ರಶಂಸೆ | 175 |
| 90. | ಜೀವನ್ಮುಕ್ತನ ವ್ಯವಹಾರ | 177 |
| 91. | ಮುಕ್ತಿಗೆ ಸಾಧನ | 178 |
| 92. | ಪೃಥಿವೀಗೀತೆ | 179 |
| 93. | ಮೋಹವನ್ನು ಬಿಡಬೇಕು | 180 |
| 94. | ನೃಗರಾಜನಿಗೆ ಓತಿಕೇತದ ಜನ್ಮ | 181 |
| 95. | ಬ್ರಹ್ಮಭಗವಂತರ ಸಂವಾದ | 183 |
| 96. | ಶುಭಾಶುಭಕರ್ಮಗಳ ವಿಚಾರ | 184 |
| 97. | ಬಾಲಕಾಖ್ಯಾಯಿಕೆ | 185 |
| 98. | ಯಮಗೀತೆ | 187 |
| 99. | ಶಿವಾನುಭವ | 188 |
| 100. | ಗಜೇಂದ್ರನ ಸ್ತೋತ್ರ | 189 |
| 101. | ಪೃಥುವಿಗೆ ಸನತ್ಕುಮಾರರು ಮಾಡಿದ ಉಪದೇಶ | 190 |
| 102. | ಭಗವತ್ಪ್ರಾಪ್ತಿಗೆ ಉಪಾಯ | 193 |
| 103. | ಜಗನ್ಮಿಥ್ಯಾತ್ವ | 194 |
| 104. | ಜಡಭರತನ ಉಪದೇಶ | 195 |
| 105. | ಆತ್ಮನೇ ಸರ್ವಸಾಕ್ಷಿಯು | 196 |

| | | |
|---|---|---|
| 106. | ನಿರ್ವಾಣಪ್ರಾಪ್ತಿಗೆ ಯುಕ್ತ್ಯುಪದೇಶ | 198 |
| 107. | ಶ್ರೀಕೃಷ್ಣಲೀಲೆ | 199 |
| 108. | ತುರೀಯಾಶ್ರಮಧರ್ಮ | 201 |
| 109. | ಅಕ್ರೂರನ ನಂದಗೋಕುಲ ಯಾತ್ರೆ | 197 |
| 110. | ಪಾಶುಪತವ್ರತ | 203 |
| 111. | ಮೋಕ್ಷೋಪದೇಶ | 206 |
| 112. | ಬ್ರಹ್ಮಸ್ವರೂಪದ ವಿವರ | 207 |
| 113. | ವಿಷ್ಣುಪಾರಮ್ಯ ವರ್ಣನೆ | 209 |
| 114. | ಯಜ್ಞವರಾಹಸ್ತುತಿ | 211 |
| 115. | ಪರಾಶರಗೀತೆ | 213 |
| 116. | ಅಹಂತಾನಿರಾಸ | 214 |
| 117. | ಭಗವಚ್ಛಬ್ದದ ನಿರ್ವಚನ | 215 |
| 118. | ಶಿವಪ್ರಸಾದ | 218 |
| 119. | ಸುಧಾಮೋಪಾಖ್ಯಾನ | 219 |
| 120. | ರುದ್ರಗೀತೆ | 221 |
| 121. | ಸಿದ್ಧಿಗಾಗಿ ಎಲ್ಲರೂ ಪೂಜಿಸಬೇಕಾದ ದೇವತೆ | 223 |
| 122. | ಉಪಶಾಂತತೆ | 224 |
| 123. | ಜಡಭರತಸೌವೀರರಾಜಸಂವಾದ | 226 |
| 124. | ಹಂಸವಿದ್ಯೆ | 228 |
| 125. | ತೃಷ್ಣಾವಿಚ್ಛೇದೋಪದೇಶ | 229 |
| 126. | ಮುಚುಕುಂದನು ಮಾಡಿದ ಭಗವತ್ಸ್ತುತಿ | 231 |
| 127. | ಶ್ರೇಯಃಪ್ರಾಪ್ತಿ | 232 |
| 128. | ವಿಜ್ಞಾನಾಭ್ಯಾಸ | 234 |
| 129. | ಬ್ರಹ್ಮಕೃತವಿಷ್ಣುಸ್ತೋತ್ರ | 235 |
| 130. | ಜ್ಞಾನೋತ್ಪತ್ತಿಗೆ ಉಪಾಯ | 236 |
| 131. | ಪರಮಾತ್ಮಸ್ವರೂಪದ ವರ್ಣನೆ | 238 |
| 132. | ಸತ್ಸಂಗದ ಮಹಿಮೆ | 239 |

| | | |
|---|---|---|
| 133. | ಭಗವಂತನ ಉಪದೇಶ | 240 |
| 134. | ಯೋಗದಿಂದ ಪರಮಾತ್ಮಪ್ರಾಪ್ತಿಯಾಗುವ ಪ್ರಕಾರ | 241 |
| 135. | ಅಕ್ರೂರನು ಗೋಕುಲಕ್ಕೆ ಹೊರಟ ಆಖ್ಯಾನ | 243 |
| 136. | ಭಗೀರಥನಿಗೆ ತ್ರಿತಲನ ಉಪದೇಶ | 244 |
| 137. | ಕೂಟಸ್ಥಬ್ರಹ್ಮದಿಂದ ಜೀವರ ಉತ್ಪತ್ತಿ ಆಗುವದೇ? | 245 |
| 138. | ಶಕ್ತಿತತ್ತ್ವ | 247 |
| 139. | ವಿಷ್ಣುಸ್ಮರಣೆಯ ಪ್ರಕಾರ | 248 |
| 140. | ಸುದಾಮೋಪಾಖ್ಯಾನ | 250 |
| 141. | ಪೃಥುರಾಜನ ಉಪದೇಶ | 252 |
| 142. | ಶುಕಜನಕರ ಸಂವಾದ | 255 |
| 143. | ಜೀವನ್ಮುಕ್ತ ಸ್ವರೂಪದ ವರ್ಣನೆ | 257 |
| 144. | ಷಡಕ್ಷರವಿವರಣೆ | 259 |
| 145. | ಕಲಿಯುಗದ ಹೆಚ್ಚುಗಾರಿಕೆ | 260 |
| 146. | ವಿವೇಕಮಾಹಾತ್ಮ್ಯ | 262 |
| 147. | ಐಲಗೀತೆ | 262 |

★★★★★

ಓಂ

# ಶಂಕರಸಪ್ತಾಹದ ಉಪನ್ಯಾಸಗಳು

# ಪುರಾಣಪ್ರವಚನಗಳು

## ಉದ್ಧವ-ಕೃಷ್ಣಸಂವಾದ

**30-4-1933**

**- ಬ್ರ॥ ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

**ಭಾಗವತಪುರಾಣದಲ್ಲಿ ಏಕಾದಶಸ್ಕಂಧದ** ಹನ್ನೊಂದನೆಯ ಅಧ್ಯಾಯದಲ್ಲಿ ಮನುಷ್ಯನು ದೇಹದಲ್ಲಿದ್ದುಕೊಂಡೇ ತ್ರಿಗುಣಾತೀತನಾಗುವದು ಹೇಗೆ? ಬದ್ಧನಿಗೂ ಮುಕ್ತನಿಗೂ ಇರುವ ಹೆಚ್ಚು ಕಡಿಮೆಯೇನು?- ಎಂದು ಉದ್ಧವನು ಕೇಳಿದ್ದಕ್ಕೆ ಭಗವಂತನು ಇಲ್ಲಿ ಉತ್ತರ ಹೇಳಿರುತ್ತಾನೆ. ಗುಣಗಳ ಸಂಬಂಧದಿಂದಲೇ ಪರಮಾತ್ಮನಿಗೆ ಬಂಧವೆಂದೂ ಮುಕ್ತಿಯೆಂದೂ ಸುಳ್ಳುವ್ಯವಹಾರವುಂಟಾಗಿರುವದು; ಸರಿಯಾಗಿ ನೋಡಿದರೆ ಗುಣಗಳೇ ಮಾಯಿಕವಾಗಿರುವದರಿಂದ ಬಂಧವೂ ಇಲ್ಲ, ಮುಕ್ತಿಯೂ ಇಲ್ಲ, ಶೋಕ ಮೋಹಗಳು, ಸುಖದುಃಖಗಳು, ದೇಹವನ್ನು ಪಡೆಯುವದು- ಎಲ್ಲವೂ ಸ್ವಪ್ನದಂತೆ ಬರಿಯ ತೋರಿಕೆಯೇ ಹೊರತು ಪರಮಾರ್ಥವಾಗಿ ಸಂಸಾರವಿಲ್ಲ. ಪರಮಾತ್ಮನ ಮಾಯೆಯಿಂದ ವಿದ್ಯೆ, ಅವಿದ್ಯೆ-ಎಂಬೆರಡೂ ನಿರ್ಮಿತವಾಗಿವೆ. ಅವಿದ್ಯೆಯಿಂದ ಬಂಧವೂ ವಿದ್ಯೆಯಿಂದ ಮೋಕ್ಷವೂ ಉಂಟಾಗುತ್ತವೆ.

ಜ್ಞಾನಿಯಾದವನು ದೇಹದಲ್ಲಿದ್ದರೂ ಜ್ಞಾನಬಲದಿಂದ ನಿತ್ಯಮುಕ್ತನಾಗಿರುವನು; ಅಜ್ಞಾನಿಯಾದವನು ಸುಖದುಃಖಗಳನ್ನನುಭವಿಸುತ್ತ

ನಿತ್ಯ ಬದ್ಧನಾಗಿರುವನು. ಕನಸಿನಲ್ಲಿರುವವನಿಗೆ ಯಾವ ದೇಹವೂ ಇಲ್ಲದಿದ್ದರೂ ದೇಹದ ದುಃಖಗಳಾಗುತ್ತಿರುವಂತೆ ಅಜ್ಞಾನಿಗೆ ದೇಹವೂ ಅದರ ದುಃಖಗಳೂ ಗಂಟುಬಿದ್ದಿರುವವು; ಕನಸಿನಿಂದ ಎಚ್ಚತ್ತವನಿಗೆ ಕನಸಿನಲ್ಲಿ ಕಂಡ ದೇಹದ ಅಭಿಮಾನವು ಒಂದಿಷ್ಟೂ ಇಲ್ಲದಿರುವ ಹಾಗೆ ಜ್ಞಾನಿಗೆ ವ್ಯವಹಾರ ದೃಷ್ಟಿಯಿಂದ ದೇಹವಿದ್ದರೂ ತನ್ನ ದೃಷ್ಟಿಯಿಂದ ದೇಹವಾಗಲಿ ಅದರ ದುಃಖಗಳಾಗಲಿ ಇರುವದೇ ಇಲ್ಲ. ಜ್ಞಾನಿಯು ಗುಣಮಯವಾಗಿರುವ ಇಂದ್ರಿಯಗಳಿಂದ ಗುಣಮಯವಾಗಿರುವ ವಿಷಯಗಳನ್ನು ಗ್ರಹಿಸುತ್ತಿದ್ದರೂ ಅವನಿಗೆ ಅವುಗಳಲ್ಲಿ ಅಭಿಮಾನವಿರುವದಿಲ್ಲ. ಆಕಾಶವೂ ಸೂರ್ಯನೂ ವಾಯುವೂ ಉಪಾಧಿಗಳ ಭೇದದಿಂದ ಬೇರೆಬೇರೆಯಾಗಿಯೂ ಆ ಉಪಾಧಿಗಳ ಸಂಬಂಧವಿರುವಂತೆಯೂ ತೋರಿದರೂ ಹೇಗೆ ನಿಜವಾಗಿ ತಮ್ಮ ತಮ್ಮ ಸ್ವರೂಪದಲ್ಲಿಯೇ ಇರುವವೋ, ಅದರಂತೆ ಅಸಂಗನಾದ ಆತ್ಮನೇ ತಾನೆಂದರಿತು ಯಾವ ಸಂಕಲ್ಪವೂ ಇಲ್ಲದಿರುವದರಿಂದ ಜ್ಞಾನಿಯು ನಿತ್ಯಮುಕ್ತನಾಗಿರುವನು. ಹಿಂಸಕರು ತನ್ನನ್ನು ಹಿಂಸಿಸಿದರೂ ಮಿಕ್ಕವರು ಗೌರವಿಸಿದರೂ ಅವನು ಹಿಗ್ಗುತಗ್ಗು ಗಳಿಲ್ಲದೆ, ಯಾವದೊಂದನ್ನೂ ಹೊಗಳದೆ ಬಯ್ಯದೆ, ಸಮದೃಷ್ಟಿಯಾಗಿ, ಗುಣದೋಷಗಳಿಂದ ರಹಿತನಾಗಿ ಆತ್ಮಾರಾಮನಾಗಿ ಏನೂ ತಿಳಿಯದವನಂತೆ ಕಾಣಿಸಿಕೊಳ್ಳುತ್ತಾ ವ್ಯವಹರಿಸುತ್ತಿರುವನು.

ವಿಚಾರದಿಂದ ದ್ವೈತಭ್ರಮೆಯನ್ನು ಕಳೆದುಕೊಂಡು ಪರಮಾತ್ಮನಲ್ಲಿಯೇ ಮನಸ್ಸನ್ನು ನಿಲ್ಲಿಸಲಾರದವನು ಫಲಾಪೇಕ್ಷೆಯಿಲ್ಲದೆ ಸರ್ವಕರ್ಮಗಳನ್ನೂ ಮಾಡಿ ಪರಮೇಶ್ವರನಿಗೆ ಅರ್ಪಣೆಮಾಡುತ್ತಾ ಪರಮಾತ್ಮನ ಕಥಾ ಶ್ರವಣವನ್ನು ಮಾಡುತ್ತಾ ಆತನ ಲೀಲೆಗಳನ್ನು ಹಾಡುತ್ತಲೂ ಅಭಿನಯಿಸುತ್ತಲೂ ಕಾಲವನ್ನು ಹಾಕುತ್ತಿರಬೇಕು, ಆತನನ್ನೇ ಆಶ್ರಯಿಸಿ ಧರ್ಮ ಕಾಮಾರ್ಥಗಳನ್ನು ಆಚರಿಸುತ್ತಾ ಸತ್ಸಂಗದಿಂದ ಉತ್ತಮಸಾಧನಗಳನ್ನು ಅಳವಡಿಸಿಕೊಂಡು ಭಕ್ತಿಯಿಂದ ಆತನನ್ನು ಸೇರುವದಕ್ಕೆ ಯತ್ನಿಸಬೇಕು.

★★★★★

# ಪ್ರಹ್ಲಾದನು ಮಾಡಿದ ಪರಮಾತ್ಮನ ಸ್ತೋತ್ರ

**1-5-1933**

**ಶ್ರೀಶ್ರೀಗಳವರು**

**ವಿಷ್ಣುಪುರಾಣದಲ್ಲಿ ಒಂದನೆಯ ಅಂಶದಲ್ಲಿ ಹತ್ತೊಂಬತ್ತನೆಯ ಅಧ್ಯಾಯದಲ್ಲಿ** ಪ್ರಹ್ಲಾದನು ಪರಮಾತ್ಮನನ್ನು ಸ್ತೋತ್ರಮಾಡಿದ ಭಾಗದಲ್ಲಿ - ಹಿರಣ್ಯಕಶಿಪುವು ಮಗನನ್ನು ಕುರಿತು ''ಮಗೂ, ರಾಜನಾದವನು ಮಿತ್ರರು, ಶತ್ರುಗಳು, ಮಧ್ಯಸ್ಥರು, ಮಂತ್ರಿಗಳು, ಅಮಾತ್ಯರು, ಹೊರಗಿನ ಮತ್ತು ಒಳಗಿನ ಸೇವಕರು, ಶಂಕೆಗೊಳಗಾದವರು, ಮಿಕ್ಕವರು- ಇವರಲ್ಲಿ ಯಾರುಯಾರಲ್ಲಿ ಹೇಗೆಹೇಗೆ ನಡೆದುಕೊಳ್ಳಬೇಕು? ಇದನ್ನು ನಿಮ್ಮ ಗುರುಗಳು ಹೇಗೆ ಹೇಳಿಕೊಟ್ಟಿರುವರು?'' ಎಂದು ಕೇಳಲು ಪ್ರಹ್ಲಾದನು ''ಅಪ್ಪ, ನಮ್ಮ ಗುರುಗಳು ಮಿತ್ರಾದಿಗಳಲ್ಲಿ ಉಪಯೋಗಿಸಬೇಕಾದ ಸಾಮ, ದಾನ, ಭೇದ, ದಂಡ- ಎಂಬ ನಾಲ್ಕು ಉಪಾಯಗಳನ್ನೂ ಚೆನ್ನಾಗಿ ಹೇಳಿ ಕೊಟ್ಟಿರುವರು, ನಾನೂ ಅದನ್ನು ತಿಳಿದುಕೊಂಡೆನು. ಆದರೆ ಈ ಮಿತ್ರಾದಿಗಳೆಂಬುವರು ಯಾರೋ ಅವರೇ ನನಗೆ ಕಾಣಿಸುವದಿಲ್ಲ, ಪರಮಾರ್ಥವಾಗಿ ಪರಮಾತ್ಮನೊಬ್ಬನೇ ನಿನ್ನಲ್ಲಿಯೂ ನನ್ನಲ್ಲಿಯೂ ಮಿಕ್ಕವರಲ್ಲಿಯೂ ಇರುತ್ತಿರುವಾಗ, 'ಇವನು ಮಿತ್ರನು, ಇವನು ಶತ್ರುವು' ಎಂಬ ಮಾತು ಎಲ್ಲಿಯದು?'' ಎಂದು ನಿಷ್ಕಾಮವಾಗಿ ಎಲ್ಲೆಲ್ಲಿಯೂ ಪರಮಾತ್ಮನ ಸ್ವರೂಪವನ್ನು ಕಾಣುವ ಬಗೆಯನ್ನು ತಿಳಿಸಿದನು.

ಇದನ್ನು ಕೇಳಿ ಆ ದೈತ್ಯರಾಜನು ಕಿಡಿಕಿಡಿಯಾಗಿ ''ಅಯ್ಯೋ! ನಾನು ಎಷ್ಟು ಬೇಡವೆಂದರೂ ಇವನು ನಮಗೆ ಶತ್ರುವಾದ ವಿಷ್ಣುವಿನ ಸ್ತುತಿಯನ್ನೇ ಮಾಡುತ್ತಿರುವನು. ಇವನನ್ನು ನಾಗಪಾಶಗಳಿಂದ ಕಟ್ಟಿ ಸಮುದ್ರಕ್ಕೆ ಹಾಕಿ ಮೇಲೆ ಪರ್ವತಗಳನ್ನು ಹೇರಿಬಿಡಿ'' ಎಂದು ಅಪ್ಪಣೆಮಾಡಿದನು. ಪ್ರಹ್ಲಾದನು ಸಮುದ್ರದೊಳಗೇ ಇದ್ದುಕೊಂಡು ತನ್ನ ನಿತ್ಯಗಟ್ಟಲೆಯ ಕ್ರಮದಂತೆ ಪರಮಾತ್ಮನನ್ನು ಹೀಗೆಂದು ಸ್ತೋತ್ರಮಾಡಿದನು; ''ಎಲೈಪುಂಡರೀಕಾಕ್ಷನೆ, ಪುರುಷೋತ್ತಮನೆ, ಸರ್ವಲೋಕಕ್ಕೂ ಆತ್ಮನಾದವನೆ, ತೀಕ್ಷ್ಣವಾದ ಚಕ್ರವನ್ನು ಧರಿಸಿದಾತನೆ, ನಿನಗೆ

ನಮಸ್ಕಾರ. ವೇದ ರಕ್ಷಕನೆ, ಗೋಬ್ರಾಹ್ಮಣರಿಗೆ ಹಿತವನ್ನು ಬಯಸುವವನೆ, ಜಗತ್ತಿಗೆಲ್ಲ ಹಿತವನ್ನು ಕೋರುವವನೆ, ಗೋವಿಂದನೆ, ನಿನಗೆ ನಮಸ್ಕಾರ. ಬ್ರಹ್ಮವಿಷ್ಣುರುದ್ರರೂಪದಿಂದ ಸೃಷ್ಟಿಸ್ಥಿತಿಲಯಗಳನ್ನು ಮಾಡುವಾತನೆ, ನಿನಗೆ ನಮಸ್ಕಾರ. ದೇವತೆಗಳು, ಯಕ್ಷರು, ಸಿದ್ಧರು, ನಾಗರು, ಗಂಧರ್ವರು, ಕಿಂನರರು, ಪಿಶಾಚರು. ರಾಕ್ಷಸರು, ಮನುಷ್ಯರು, ಪಶುಪಕ್ಷಿಗಳು, ಮರಗಿಡಗಳು, ಪಂಚಭೂತಗಳು, ಅವುಗಳ ಗುಣಗಳು– ಇವುಗಳ ಪರಮಾರ್ಥವು ನೀನು, ಇದೆಲ್ಲವೂ ನೀನು. ವಿದ್ಯೆ ಅವಿದ್ಯೆ, ಸತ್ಯ ಅಸತ್ಯ, ವಿಷ ಅಮೃತ– ಇವೆಲ್ಲವೂ ನೀನು; ಪ್ರವೃತ್ತಿರೂಪವಾದ ಕರ್ಮ, ಇದರ ಉಪಕರಣಗಳು, ಇವುಗಳ ಫಲ, ಅದನ್ನು ಅನುಭವಿಸುವವನು– ಇವೆಲ್ಲವೂ ನೀನೇ. ಎಲ್ಲರಲ್ಲಿಯೂ ಇರುವವನು ನೀನು, ಯೋಗಿಗಳ ಯೋಗಕ್ಕೂ ಯಾಜಕರ ಯಜ್ಞಕ್ಕೂ ಗುರಿಯು ನೀನು, ಪಿತೃದೇವತೆಗಳಲ್ಲಿ ಹವ್ಯಕವ್ಯವನ್ನು ಭೋಗಿಸುವಾತನು ನೀನು. ಸ್ಥೂಲಸೂಕ್ಷ್ಮರೂಪವಾಗಿರುವದೆಲ್ಲ ನೀನೇ. ಸರ್ವಭೂತಗಳಲ್ಲಿಯೂ ವ್ಯಾಪಿಸಿರುವ ನಿನ್ನ ಅಪರಶಕ್ತಿಗೂ ಜ್ಞಾನಿಗಳಿಗೆ ಮಾತ್ರ ಗೋಚರವಾಗಿರುವ ಪರಶಕ್ತಿಗೂ ನಮಸ್ಕಾರ. ಯಾವನು ಎಲ್ಲಕ್ಕಿಂತಲೂ ಬೇರೆಯಾಗಿರುವನೋ, ಯಾವನಿಗಿಂತ ಬೇರೆಯಾಗಿ ಯಾವದೊಂದೂ ಇಲ್ಲವೋ, ಆ ವಾಸುದೇವಭಗವಂತನಿಗೆ ನಮಸ್ಕಾರ, ಯಾವಾತನಿಗೆ ಇಂಥ ಒಂದೆಂದು ಗೊತ್ತಾದ ನಾಮರೂಪಗಳಿಲ್ಲವೋ, ಯಾವನು 'ಇರುವಿಕೆ' ಎಂಬ ರೂಪದಲ್ಲಿಯೇ ತಿಳಿಯಬರುತ್ತಿರುವನೋ, ಯಾವನ ಪರಮರೂಪವನ್ನರಿಯದೆ ಆತನ ಅವತಾರಗಳನ್ನೇ ದೇವತೆಗಳು ಪೂಜಿಸುತ್ತಿರುವರೋ ಆ ಪರಮಾತ್ಮನಿಗೆ ನಮಸ್ಕಾರ. ಯಾವನು ಎಲ್ಲರ ಒಳಗೂ ಇದ್ದುಕೊಂಡು ಒಳ್ಳೆಯದನ್ನೂ ಕೆಟ್ಟದ್ದನ್ನೂ ನೋಡುತ್ತಿರುವನೋ ಆ ಸರ್ವಸಾಕ್ಷಿಗೆ ನಮಸ್ಕಾರ. ಯಾವನಿಗಿಂತ ಬೇರೆಯಾಗಿ ಈ ಜಗತ್ತು ಇಲ್ಲವೋ ಆ ವಿಷ್ಣುವಿಗೆ ನಮಸ್ಕಾರ. ಜಗತ್ತಿಗೆಲ್ಲ ಧ್ಯೇಯವಾಗಿರುವ ಅವ್ಯಯನಾದ ಆತನು ನನ್ನಲ್ಲಿ ಪ್ರಸನ್ನನಾಗಲಿ. ಯಾವನಲ್ಲಿ ಎಲ್ಲವೂ ಇರುವದೋ, ಯಾವನಿಂದ ಎಲ್ಲವೂ ಆಗಿರುವದೋ, ಯಾವನು ಎಲ್ಲವೂ ಆಗಿರುವನೋ, ಆ ಸರ್ವಾಶ್ರಯನಿಗೆ ನಮಸ್ಕಾರ. ಅನಂತನಾದ ಆ ವಿಷ್ಣುವು ಸರ್ವವ್ಯಾಪಿಯಾಗಿರುವದರಿಂದ ಆತನೇ ನಾನಾಗಿರುವೆನು. ನನ್ನಿಂದಲೇ ಎಲ್ಲವೂ ಆಗುವದು, ನಾನೇ

ಎಲ್ಲವೂ, ಸನಾತನವಾದ ನನ್ನಲ್ಲಿಯೇ ಎಲ್ಲವೂ ಇರುವದು. ನಾನೇ ನಾಶರಹಿತನೂ ನಿತ್ಯನೂ ಆಗಿರುವ ಆತ್ಮರುಗಳಿಗೆಲ್ಲ ಆಶ್ರಯನಾದ ಪರಮಾತ್ಮನು. ಸೃಷ್ಟಿಗೆ ಮೊದಲಲ್ಲಿಯೂ ಕೊನೆಯಲ್ಲಿಯೂ ಇರುವ ಬ್ರಹ್ಮವೆಂಬ ಪರಮಪುರುಷನು ನಾನೇ.'' ಹೀಗೆಂದು ಮೊದಲಾಗಿ ತನ್ಮಯನಾಗಿ ಪರಮಾತ್ಮನನ್ನು ಸ್ತುತಿಸಲು ನಾಗಪಾಶಗಳು ಹರಿದು ಅವನು ಮೇಲಕ್ಕೆದ್ದು ಬಂದನು.

★★★★★

# ಕೌಶಿಕ-ಬ್ರಾಹ್ಮಣಿ ಸಂವಾದ

**2-5-1933**

**ಬ್ರ॥ಶ್ರೀ॥ಎಂ.ಎಸ್.ವೆಂಕಟೇಶಶಾಸ್ತ್ರಿಗಳವರು**

**ಮಹಾಭಾರತದಲ್ಲಿ ವನಪರ್ವದ ಇನ್ನೂರಾರನೆಯ ಅಧ್ಯಾಯದಲ್ಲಿ** ಕೌಶಿಕನೆಂಬ ಬ್ರಾಹ್ಮಣನು ಸಾಂಗಾಧ್ಯಯನವನ್ನು ಮಾಡಿ ತಪಸ್ಸು ಮಾಡಿಕೊಂಡಿದ್ದನು. ಅವನು ಒಂದು ದಿನ ಒಂದು ಮರದ ಬುಡದಲ್ಲಿ ವೇದಾಧ್ಯಾಯನಮಾಡುತ್ತ ಕುಳಿತಿರುವಲ್ಲಿ ಮೇಲಿನಿಂದ ಒಂದು ಹಕ್ಕಿಯು ಅವನ ಮೇಲೆ ಹಿಕ್ಕೆಹಾಕಿತು. ಇದನ್ನು ಕಂಡು ಕ್ರುದ್ಧನಾದ ಕೌಶಿಕನು ಆ ಬೆಳ್ಳಕ್ಕಿಯನ್ನು ದುರದುರನೆ ನೋಡಲಾಗಿ ಆ ಹಕ್ಕಿಯು ಸುರುಟಿಕೊಂಡು ನೆಲದ ಮೇಲಕ್ಕೆ ಉರುಳಿಬಿತ್ತು. ಬ್ರಾಹ್ಮಣನು ಇದನ್ನು ಕಂಡು ''ಅಯ್ಯೋ! ಅಕಾರ್ಯವನ್ನು ಮಾಡಿದೆನಲ್ಲ!'' ಎಂದು ಪರಿತಾಪಪಡುತ್ತಾ ಹತ್ತಿರದಲ್ಲಿದ್ದ ಊರಿಗೆ ಭಿಕ್ಷಕ್ಕೆ ಹೋದನು. ಅಲ್ಲಿ ಕುಲೀನರ ಮನೆಗಳಲ್ಲಿ ಭಿಕ್ಷೆಯನ್ನು ಎತ್ತುತ್ತಾ ಕೊನೆಗೆ ಒಂದು ಮನೆಗೆ ಬಂದನು. ಅಲ್ಲಿ ಮನೆಯ ಯಜಮಾನಿಯು ಪಾತ್ರೆಯನ್ನು ತೊಳೆಯುತ್ತಿದ್ದಳು. ಅದನ್ನು ಮುಗಿಸಿಕೊಂಡು ಭಿಕ್ಷವನ್ನು ಹಾಕುವದಕ್ಕೆ ಬರುವದರೊಳಗೆ ಅವಳ ಗಂಡನು ಆಯಾಸದಿಂದ ಆಗತಾನೆ ಮನೆಗೆ ಬಂದನು. ಆಕೆಯು ಆತನಿಗೆ ಉಪಚಾರವನ್ನು ಮಾಡುತ್ತಿದ್ದು ಅಷ್ಟರಲ್ಲಿ ಭಿಕ್ಷಕ್ಕೆ ಬಂದ ಬ್ರಾಹ್ಮಣನು ನೆನಪಿಗೆ ಬರಲು ಕೂಡಲೆ ಭಿಕ್ಷವನ್ನು ಹಾಕುವದಕ್ಕೆ ಹೊರಕ್ಕೆ ಬಂದಳು.

ಬ್ರಾಹ್ಮಣನು ''ಏನಮ್ಮ, ನನ್ನನ್ನು 'ಇಲ್ಲಿಯೇ ಇರು' ಎಂದು ಹೇಳಿ ಇಷ್ಟು ತಡಮಾಡಬಹುದೆ? ಬ್ರಾಹ್ಮಣರಿಗಿಂತಲೂ ನಿನ್ನ ಗಂಡನೇ ದೊಡ್ಡವನಾದನೊ? ಬ್ರಾಹ್ಮಣರ ಮಾಹಾತ್ಮ್ಯವಾಗಲಿ ಗೃಹಸ್ಥಧರ್ಮವಾಗಲಿ ನಿನಗೆ ತಿಳಿಯದೆಂದು ತೋರುತ್ತದೆ!''– ಎಂದು ಸಿಟ್ಟಿನ ಮಾತನ್ನಾಡಿದನು.

ಆಕೆಯು ವಿನಯದಿಂದ ''ಅಯ್ಯ, ನನ್ನನ್ನು ಕ್ಷಮಿಸು. ನಾನು ಬ್ರಾಹ್ಮಣರ ತೇಜಸ್ಸನ್ನು ಅರಿಯದವಳೂ ಅಲ್ಲ. ಬ್ರಾಹ್ಮಣರಿಗೆ ಅಪಮಾನವನ್ನು ಮಾಡುವದಕ್ಕೆ ಬಯಸಿದವಳೂ ಅಲ್ಲ, ನನ್ನನ್ನು ನೀನು ಸಿಟ್ಟಿನಿಂದ ನೋಡುವದಕ್ಕೆ ನಾನೇನು ಕಾಡಿನ ಬೆಳ್ಳಕ್ಕಿಯೆ? ಏತಕ್ಕೆ ಸಿಟ್ಟುಮಾಡುತ್ತಿದ್ದೀಯೆ? ನನ್ನ ಅಭಿಪ್ರಾಯದಲ್ಲಿ ಪತಿಶುಶ್ರೂಷೆಯೇ ಹೆಂಗಸಿಗೆ ಹೆಚ್ಚಿನ ಧರ್ಮವೆಂದು ಬಗೆದು ಸ್ವಲ್ಪ ತಡಮಾಡಿದೆನು. ಈ ಧರ್ಮದ ಫಲವನ್ನು ನೋಡು: ಪತಿಸೇವೆಯ ಪ್ರಭಾವದಿಂದಲೇ ನನಗೆ ನೀನು ಅರಣ್ಯದಲ್ಲಿ ಮಾಡಿದ ಬೆಳ್ಳಕ್ಕಿಯ ಕೊಲೆಯು ಇಲ್ಲಿಗೇ ತಿಳಿದುಬಂದಿದೆ. ನಿಜವಾಗಿ ಕ್ರೋಧವೆಂಬುದು ಮನುಷ್ಯರ ಶತ್ರುವು. ಕ್ರೋಧಮೋಹಗಳನ್ನು ಯಾವನು ಬಿಟ್ಟಿರುವನೋ ಅವನನ್ನೇ ದೇವತೆಗಳು ಬ್ರಾಹ್ಮಣನೆನ್ನುವರು. ಯಾವನು ಸತ್ಯವನ್ನೇ ನುಡಿಯುವನೋ, ಗುರುವನ್ನು ಸಂತೋಷಗೊಳಿಸುವನೋ, ತನಗೆ ಹಿಂಸೆಮಾಡಿದವರಿಗೂ ಹಿಂಸೆಮಾಡದಿರುವನೋ ಅವನನ್ನೇ ದೇವತೆಗಳು ಬ್ರಾಹ್ಮಣನೆನ್ನುವರು. ಇಂದ್ರಿಯಗಳನ್ನು ಗೆದ್ದು ಧರ್ಮಪರನಾಗಿ ವೇದಾಧ್ಯಯನವನ್ನು ಮಾಡುತ್ತಾ ಶುಚಿಯಾಗಿ ಕಾಮಕ್ರೋಧಗಳನ್ನು ಯಾವನು ತನ್ನ ಹಿಡಿತದಲ್ಲಿಟ್ಟುಕೊಂಡಿರುವನೋ, ಯಾವ ಧರ್ಮಜ್ಞನಿಗೆ ಜನರೆಲ್ಲರೂ ತನ್ನಂತೆ ಆಗಿರುವರೋ, ಯಾವನು ಬ್ರಹ್ಮಚರ್ಯವನ್ನಾಚರಿಸುತ್ತಾ ದಾನಶೀಲನಾಗಿ ಮೈಮರೆಯದೆ ಇರುವನೋ, ಅವನನ್ನೇ ದೇವತೆಗಳು ಬ್ರಾಹ್ಮಣನೆನ್ನುವರು. ವೇದಾಧ್ಯಯನ, ಇಂದ್ರಿಯ ನಿಗ್ರಹ, ಸರಳತನ, ಸತ್ಯ–ಇವೇ ಬ್ರಾಹ್ಮಣನ ಧರ್ಮವೆಂದು ತಿಳಿದವರು ಹೇಳುತ್ತಾರೆ. ಎಲೈ ದ್ವಿಜೋತ್ತಮನೆ, ಧರ್ಮವು ಬಲುಬಗೆಯಾಗಿರುವದು, ಸೂಕ್ಷ್ಮವಾಗಿರುವದು; ನೀನು ಧರ್ಮಜ್ಞನಾದರೂ ಇದರ ಸೂಕ್ಷ್ಮಮರ್ಮವನ್ನರಿತವನಂತೆ ತೋರುವದಿಲ್ಲ. ಎಲ್ಲಕ್ಕೂ ಹೆಚ್ಚಿನ ಧರ್ಮವನ್ನು ಅರಿಯಬೇಕೆಂಬ ಆಸೆಯು ನಿನಗಿದ್ದರೆ ಮಿಥಿಲಾಪುರಿಗೆ ಹೋಗಿ ಅಲ್ಲಿ ತಾಯಿತಂದೆಗಳ ಶುಶ್ರೂಷೆಯಲ್ಲಿರುವ ಧರ್ಮವ್ಯಾಧನನ್ನು ಕೇಳಿ ತಿಳಿದುಕೊ. ನಾನು ಮಾತಾಡಿರುವ ಅತ್ಯುಕ್ತಿಗಳನ್ನು ಕ್ಷಮಿಸು'' ಎಂದಳು.

ಕೌಶಿಕನು ''ಅಮ್ಮ, ನೀನು ಮಾತಾಡಿದ್ದಕ್ಕೆ ನನಗೆ ಕೋಪವಿಲ್ಲ; ನನಗೆ ಒಳ್ಳೆಯದಾಗಲೆಂದೇ ನೀನು ಈ ಮಾತನ್ನಾಡಿದ್ದೀಯೆ. ನನಗೆ ಪರಮಸಂತೋಷವಾಯಿತು'' ಎಂದು ಆಕೆಯನ್ನು ಬೀಳ್ಕೊಂಡು ತನ್ನ ನಡತೆಯನ್ನು ತಾನೇ ನಿಂದಿಸಿಕೊಳ್ಳುತ್ತಾ ತನ್ನ ಮನೆಯ ಕಡೆಗೆ ಹೊರಟನು.

★★★★★

## ಸೂತಗೀತೆ

**3-5-1933**

**ಬ್ರ|| ಶ್ರೀ|| ಎಸ್.ವಿಠ್ಠಲಶಾಸ್ತ್ರಿಗಳವರು**

**ಸೂತಸಂಹಿತೆಯಲ್ಲಿ ಸೂತಗೀತೆಯ ಐದನೆಯ ಅಧ್ಯಾಯದಲ್ಲಿ** - ಆತ್ಮನಲ್ಲಿ ನಾನೆಂಬ ಬುದ್ಧಿಯೂ ಹೊರಗಿನ ವಸ್ತುವಿನಲ್ಲಿ ಇದು ಎಂಬ ಬುದ್ಧಿಯೂ ಸಕಲಪ್ರಾಣಿಗಳಲ್ಲಿಯೂ ಉಂಟಾಗುತ್ತದೆ. ಆದ್ದರಿಂದ ಮುಮುಕ್ಷುಗಳಾದವರು ಎಲ್ಲೆಲ್ಲಿ ಇದು ಎಂಬ ಬುದ್ಧಿಯುಂಟಾಗುವದೊ, ಅದು ಅನಾತ್ಮವೆಂದು ತಿಳಿಯಬೇಕು. ಶರೀರ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ- ಇವುಗಳೆಲ್ಲವೂ ಜಡವಾಗಿರುವದರಿಂದ ನಾನು ಎಂಬ ಬುದ್ಧಿಗೆ ವಿಷಯವಾಗಲಾರವು. ಹುಟ್ಟುಹೊಂದುಗಳುಳ್ಳ ಬುದ್ಧಿಯನ್ನೂ ಚೈತನ್ಯವಿಲ್ಲದ, ಪರಿಣಾಮಿಗಳಾಗಿರುವ ಚಿತ್ತಾಹಂಕಾರಗಳನ್ನೂ ನಾನೆಂದು ತಿಳಿಯುವದೂ ತಪ್ಪೇ. ಆದ್ದರಿಂದ ಆತ್ಮನೇ ಅಹಂಪ್ರತ್ಯಯಕ್ಕೆ ಅರ್ಥವು. ಹೀಗೆ ಒಂದು ಪ್ರತ್ಯಯಕ್ಕೆ ಅರ್ಥವಾಗಿರುವನೆಂದ ಮಾತ್ರದಿಂದ ಆತ್ಮನು ಆ ಪ್ರತ್ಯಯಕ್ಕೆ ವಶನಾಗಿರುವನೆಂದು ತಿಳಿಯಬಾರದು; ಏಕೆಂದರೆ ಯಾವ ಪ್ರತ್ಯಯವೂ ಆತ್ಮನ ಬೆಳಕಿಲ್ಲದೆ ತೋರಿಕೊಳ್ಳದು, ಆತ್ಮನು ಮಾತ್ರ ಸ್ವಯಂಸಿದ್ಧನಾಗಿ ತಾನೇ ಬೆಳಗುತ್ತಿರುವನು.

ಅಹಂಕಾರವು ಚೈತನ್ಯದ ಬೆಳಕಿನ ಬೆಂಬಲದಿಂದ ತಾನೇ ಜ್ಞಾತೃವೆಂಬಂತೆ ತೋರುತ್ತಿರುವದು; ನಿಜವಾಗಿ ಚಿದ್ರೂಪನಾಗಿಯೇ ಇರುವ ಆತ್ಮನು ಕರ್ತೃವೆಂದೂ ಭೋಕ್ತೃವೆಂದೂ ಅನೇಕನೆಂದೂ ತೋರುವದು ಅಹಂಕಾರವೆಂಬ ಉಪಾಧಿಯಿಂದಲೇ. ಹೀಗೆ ನಾನೆಂಬ ಬುದ್ಧಿಗೆ ಅಹಂಕಾರವೇ ಅರ್ಥವೆಂಬುದು ಪ್ರತೀತಿಯಿಂದ; ನಿಜವಾಗಿ ನೋಡಿದರೆ ಆತ್ಮನೇ ಅದಕ್ಕೆ ಅರ್ಥವು. ನಾನು ನಿದ್ರೆಮಾಡಿದೆನು ಎಂದು ಎಲ್ಲರೂ ವ್ಯವಹರಿಸುತ್ತಾರೆ; ಇಲ್ಲಿ ನಾನು ಎಂಬ ಮಾತಿಗೆ ಅಹಂಕಾರವು ಅರ್ಥವಲ್ಲವೆಂಬುದು ಸ್ಪಷ್ಟ, ಏಕೆಂದರೆ ಸುಷುಪ್ತಿಯಲ್ಲಿ ಅಹಂಕಾರವಿರುವದೇ ಇಲ್ಲ, ಚೈತನ್ಯದ ಬೆಂಬಲದಿಂದ ಅಹಂಕಾರವು ನಾನೆಂಬ ಬುದ್ಧಿಗೆ ವಿಷಯವಾಗಿರುವಂತೆ, ಅಹಂಕಾರದ ಸಂಬಂಧದಿಂದ ದೇಹಾದಿಗಳಲ್ಲಿಯೂ ನಾನೆಂಬ ಅರಿವಿನ ಭ್ರಾಂತಿಯೊಂದಾಗುತ್ತಿರುವದು.

ಹೀಗೆ ಚಿನ್ಮಾತ್ರನಾಗಿ, ಸರ್ವವ್ಯಾಪಕನಾಗಿ ಸತ್ಯನಾಗಿ ಆನಂದರೂಪನಾಗಿರುವ ಅದ್ವಿತೀಯಾತ್ಮನನ್ನು ಕಂಡವರೆಲ್ಲರೂ 'ನಾನು ಬ್ರಹ್ಮ' ಎಂಬ ಮಾತಿನಿಂದ ಆತ್ಮನನ್ನೇ ಹೇಳುತ್ತಿರುವರು. ಶಾಸ್ತ್ರಾಚಾರ್ಯರ ಉಪದೇಶದಿಂದಲೂ, ತರ್ಕದಿಂದಲೂ, ಅನುಭವದಿಂದಲೂ ತಮ್ಮ ಆತ್ಮನೇ ಬ್ರಹ್ಮವೆಂದು ತಿಳಿದವರಿಗೆ ಬ್ರಹ್ಮಕ್ಕಿಂತ ಬೇರೆಯಾಗಿ ಯಾವದೊಂದೂ ಇಲ್ಲವೆಂಬ ಹೆಚ್ಚಿನ ಜ್ಞಾನವುಂಟಾಗುವದು.

★★★★★

## ನೀನು ಯಾರು?

**4-5-1933**

**ಬ್ರ|| ಶ್ರೀ|| ಎಂ.ಎಸ್.ವೆಂಕಟೇಶಶಾಸ್ತ್ರಿಗಳವರು**

ಭಾಗವತದಲ್ಲಿ ಏಕಾದಶಸ್ಕಂಧದ ಹದಿಮೂರನೆಯ ಅಧ್ಯಾಯವನ್ನು ಶ್ರವಣಮಾಡಿಸುತ್ತಾ - ಪೂರ್ವದಲ್ಲಿ ಸನಕಾದಿಗಳು ಹಂಸರೂಪದಿಂದ ತಮ್ಮ

ಬಳಿಗೆ ಬಂದ ಪರಮಾತ್ಮನನ್ನು 'ನೀನು ಯಾರು?' ಎಂದು ಕೇಳಿದರು. ಆಗ ಹಂಸರೂಪಿಯಾದ ಪರಮಾತ್ಮನಿಂತೆಂದನು; ''ಎಲೈ ವಿಪ್ರರೆ, ವಸ್ತುವು ಒಂದೇ ಆಗಿರುವಲ್ಲಿ 'ನೀನು ಯಾರು?' ಎಂದು ಪ್ರಶ್ನೆಯು ಹೊಂದಲಾರದು. ಎಲ್ಲಾ ಪ್ರಾಣಿಗಳೂ ಪಂಚಭೂತಾತ್ಮರಾಗಿಯೇ ಇರುವವು, ಅವುಗಳ ಆತ್ಮನು ಒಬ್ಬನೇ ಆಗಿರುವನು. ಹೀಗಿರುವಲ್ಲಿ 'ನೀನು ಯಾರು?' ಎಂಬ ಪ್ರಶ್ನೆಯು ಸರಿಯಾದೀತೆ? ಪರಮಾರ್ಥದಿಂದ ನೋಡಿದರೆ ಮನಸ್ಸು, ವಾಕ್ಕು, ಇಂದ್ರಿಯ-ಇವುಗಳಿಗೆ ಗೋಚರವಾಗುವದೆಲ್ಲವೂ ನಾನೇ ಎಂದು ತಿಳಿಯಿರಿ. ಗುಣಗಳಲ್ಲಿ ಚಿತ್ತವೂ ಚಿತ್ತದಲ್ಲಿ ಗುಣಗಳೂ ಸೇರಿಕೊಳ್ಳುತ್ತಿರುವಲ್ಲಿ ನನ್ನ ಸ್ವರೂಪದಿಂದಿರುವ ಜೀವನಿಗೆ ಎರಡೂ ದೇಹಗಳಾಗಿರುವವು. ಆದ್ದರಿಂದ ನನ್ನ ಸ್ವರೂಪನಾಗಿ ಈ ಎರಡನ್ನೂ ಬಿಡತಕ್ಕದ್ದು. ಜಾಗ್ರತ್ತು, ಸ್ವಪ್ನ, ಸುಷುಪ್ತಿ-ಎಂಬ ಮೂರು ಅವಸ್ಥೆಗಳೂ ಬುದ್ಧಿ ವೃತ್ತಿಗಳೇ; ಅವುಗಳಿಗೆ ಸಾಕ್ಷಿಯಾದ ಆತ್ಮನು ಅವುಗಳಿಗಿಂತ ಅತ್ಯಂತ ಬೇರೆಯ ಸ್ವಭಾವದವನಾಗಿರುತ್ತಾನೆ. ಆದ್ದರಿಂದ ಸಂಸಾರಬಂಧವನ್ನು ತಪ್ಪಿಸಿಕೊಳ್ಳುವವನು ಈ ಮೂರವಸ್ಥೆಗಳಿಗೂ ಬೇರೆಯಾಗಿರುವ ತುರೀಯನಾದ ನನ್ನಲ್ಲಿ ನಿಲ್ಲಬೇಕು; ಈ ಮೂರವಸ್ಥೆಗಳೂ ನನ್ನ ಮಾಯೆಯಿಂದ ನನ್ನಲ್ಲಿ ಕಲ್ಪಿತವಾಗಿವೆಯೆಂಬುದನ್ನು ಮನಗಾಣಬೇಕು. ಅಂಥವನಿಗೆ ಈ ಮಾಯಿಕವಾದ ಅವಸ್ಥೆಗಳ ನೆನಪೇ ಆಗುವದಿಲ್ಲ. ಪ್ರಾರಬ್ಧವಶದಿಂದ ವ್ಯವಹಾರವನ್ನು ಮಾಡುತ್ತಿರುವ ದೇಹವೂ ಅವನ ಪಾಲಿಗೆ ಕನಸಿನ ದೇಹದಂತೆ ಇರುವದು.'' ಈ ಉಪದೇಶವನ್ನು ಕೇಳಿ ಸಾಂಖ್ಯಯೋಗಗಳೆರಡಕ್ಕೂ ನಿಲ್ದಾಣವಾಗಿರುವ ಆ ಪರಮಾತ್ಮನನ್ನು ಪರಮಭಕ್ತಿಯಿಂದ ಪೂಜಿಸಿದರು. ಆಮೇಲೆ ಪರಮಾತ್ಮನು ತನ್ನ ಸ್ಥಾನಕ್ಕೆ ತೆರಳಿದನು.

★★★★★

# ಲಕ್ಷ್ಮಣಸಮಾಧಾನ

**5-5-1933**

**ಬ್ರ॥ ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

**ಅಧ್ಯಾತ್ಮರಾಮಾಯಣದ ನಾಲ್ಕನೆಯ ಸರ್ಗದಲ್ಲಿ** ಶ್ರೀರಾಮನು ವನವಾಸಕ್ಕೆ ಹೊರಟಿರುವನೆಂಬ ಸುದ್ದಿಯನ್ನು ಕೇಳಿದ ಕೂಡಲೆ ಕೌಸಲ್ಯಾದೇವಿಯು ಸಿಡಿಲು ಬಡಿದವಳ ಹಾಗೆ ಮೂರ್ಛಿತಳಾಗಿ ಬಗೆಬಗೆಯಾಗಿ ಶೋಕಿಸುತ್ತಿರುವದನ್ನು ಕಂಡು ಸಹಿಸಲಾರದೆ ಕೋಪಗೊಂಡ ಲಕ್ಷ್ಮಣನು ''ಹುಚ್ಚನೂ ಮರುಳನೂ ಆಗಿ ಕೈಕೇಯಿಯ ವಶನಾಗಿರುವ ದಶರಥನನ್ನು ಬಂಧನದಲ್ಲಿಟ್ಟು ಭರತನನ್ನೂ ಅವನ ಸೋದರ ಮಾವನೇ ಮೊದಲಾದವರನ್ನೂ ಕೊಂದುಹಾಕುತ್ತೇನೆ. ನೀನು ಪಟ್ಟಾಭಿಷೇಕಕ್ಕೆ ಸಿದ್ಧನಾಗು'' ಎಂದು ಹೇಳುತ್ತಿರಲು ಶ್ರೀರಾಮನು ಅವನಿಗೆ ಹೇಳಿದ ಸಮಾಧಾನೋಕ್ತಿಯ ಭಾಗವೇ ಪುರಾಣದ ವಿಷಯವಾಗಿತ್ತು.

ಶ್ರೀರಾಮನು ಹೇಳಿದ್ದೇನೆಂದರೆ ''ಅಯ್ಯ ಲಕ್ಷ್ಮಣ, ಈ ರಾಜ್ಯವೂ ಈ ದೇಹಾದಿಗಳೂ ಸತ್ಯವಾಗಿದ್ದರಲ್ಲವೆ ನಿನ್ನ ಆಯಾಸವು ಸಾರ್ಥಕವು? ಮಿಂಚಿನಂತೆ ತೋರಿ ಹಾರುವ ಈ ಭೋಗಗಳೂ ಕಾದ ಕಬ್ಬಿಣದ ಮೇಲೆ ಬಿಟ್ಟ ನೀರಿನ ತೊಟ್ಟಿನಂತಿರುವ ಈ ಆಯುಸ್ಸೂ ಶಾಶ್ವತವೆ? ಹಾವಿನ ಬಾಯಿಯೊಳಕ್ಕೆ ಬಿದ್ದಿದ್ದರೂ ನೊಣವನ್ನು ತಿನ್ನಬೇಕೆಂದು ತವಕಿಸುತ್ತಿರುವ ಕಪ್ಪೆಯಂತೆ ಕಾಲಸರ್ಪನು ನುಂಗುತ್ತಿರುವಾಗಲೂ ಜನರು ಭೋಗಗಳಿಗೆಸುತ್ತಿರುವರಲ್ಲ!

''ಶರೀರದಿಂದ ಭೋಗಕ್ಕೆಂದು ಕರ್ಮವನ್ನು ಮಾಡುತ್ತಿರುವಾಗಲೂ ಶರೀರಕ್ಕಿಂತ ಬೇರೆಯಾಗಿರುವ ಪುರುಷನಿಗೆ ಯಾವ ಭೋಗವೂ ಉಂಟಾಗುತ್ತಿರುವದಿಲ್ಲ. ನೆಂಟರಿಷ್ಟರು ಒಂದು ಕಡೆ ಸೇರುವದೆಂಬುದು ನದಿಯು ಕೊಚ್ಚಿಕೊಂಡು ಹೋಗುತ್ತಿರುವ ಕಡ್ಡಿಗಳ ಸೇರುವಿಕೆಗೆ ಸಮವಾಗಿ ರುವದು. ಐಶ್ವರ್ಯವು ನೆರಳಿನಂತೆ ಬೇರೆಬೇರೆ ಕಡೆಗೆ ಹೋಗುತ್ತಿರುವದು,

ಯವ್ವನವು ಸಮುದ್ರದ ತೆರೆಯಂತೆ ಅಶಾಶ್ವತವಾಗಿರುವದು, ಸ್ತ್ರೀಸುಖವೆಂಬುದು ಕನಸಿನಂತಿರುವದು, ಆಯುಸ್ಸೂ ಅಲ್ಪವಾಗಿರುವದು; ಆದರೂ ಭೋಗವನ್ನು ತಾನು ಅನುಭವಿಸುವೆನೆಂಬ ಅಭಿಮಾನವು ಪ್ರಾಣಿಗಳಿಗಿದೆಯಲ್ಲ! ಕ್ಷಣಕ್ಷಣಕ್ಕೂ ಮಾರ್ಪಡುತ್ತಾ ರೋಗ, ಮುಪ್ಪು, ಮರಣಗಳಿಗೆ ತುತ್ತಾಗಿರುವ ಈ ಅಶುಚಿಯಾದ ದೇಹವನ್ನು ನಾನೆಂದು ಬಗೆದು ನಾನು ರಾಜನು ಎಂದುಕೊಳ್ಳಬಹುದೆ?

''ನಿನಗೆ ಈ ಕೋಪವುಂಟಾಗಿರುವದಕ್ಕೆ ದೇಹಾಭಿಮಾನವೇ ಕಾರಣವು. ಈ ಅಭಿಮಾನಕ್ಕೆ ಅವಿದ್ಯೆಯೆಂದು ಹೆಸರು. ಕ್ರೋಧವೆಂಬುದು ದೊಡ್ಡ ಅನರ್ಥಕ್ಕೆ ಕಾರಣವಾಗಿರುವದರಿಂದಲೂ ಇದಕ್ಕೆ ಅವಿದ್ಯೆಯೇ ಕಾರಣವಾಗಿರುವದರಿಂದಲೂ ದೇಹ, ಇಂದ್ರಿಯ, ಪ್ರಾಣ, ಬುದ್ಧಿ- ಇವುಗಳೆಲ್ಲಕ್ಕೂ ಬೇರೆಯಾಗಿರುವ ಆತ್ಮನೇ ನಾನೆಂಬ ಭಾವನೆಯನ್ನು ತಂದುಕೊ. ಆಮೇಲೆ ಆಯಾ ಕಾಲಕ್ಕೆ ಒದಗಿದ ಕರ್ಮವನ್ನು ನೀನು ಮಾಡಿದರೂ ನಿನಗೆ ಅದರ ಫಲವು ಅಂಟದೆ ಇರುವದು'' ಎಂದು ಸಮಾಧಾನಗೊಳಿಸಿದನು- ಎಂಬುದು ಸಂಕ್ಷೇಪಾರ್ಥವಾಗಿತ್ತು.

★★★★★

# ಯೋಗಸಾಧನದ ಉಪದೇಶ

**6-5-1933**

**ಶ್ರೀಶ್ರೀಗಳವರು**

**ಮಹಾಭಾರತದಲ್ಲಿ ಶಾಂತಿಪರ್ವದ ಮೋಕ್ಷಧರ್ಮದಲ್ಲಿ ಇನ್ನೂರನಲವತ್ತನೆಯ ಅಧ್ಯಾಯದಲ್ಲಿ** ವ್ಯಾಸಮಹರ್ಷಿಗಳು ತಮ್ಮ ಮಕ್ಕಳಾದ ಶುಕರಿಗೆ ಮಾಡಿದ ಯೋಗಸಾಧನದ ಉಪದೇಶವಿದೆ.

ಯೋಗಕ್ಕೆ ಕಾಮ, ಕ್ರೋಧ, ಲೋಭ, ಭಯ, ನಿದ್ರೆ - ಎಂಬ ಐದು ಅಡ್ಡಿಗಳುಂಟು. ಕಾಮವನ್ನು ಸಂಕಲ್ಪವನ್ನು ಮಾಡದಿರುವದರಿಂದಲೂ

ಕ್ರೋಧವನ್ನು ಶಾಂತಿಯಿಂದಲೂ ಸಾತ್ತ್ವಿಕಮಾರ್ಗದಲ್ಲಿದ್ದು ನಿದ್ರೆಯನ್ನೂ ಗೆದ್ದುಕೊಳ್ಳಬೇಕು. ಧೈರ್ಯದಿಂದ ಕೆಟ್ಟ ನಡತೆಯನ್ನೂ ಅತ್ಯಾಹಾರಾದಿಗಳನ್ನೂ ಗೆಲ್ಲಬೇಕು. ಕೈಕಾಲುಗಳಿಗೆ ತೊಂದರೆಯಾಗದಂತೆ ಕಣ್ಣಿನಿಂದ ನೋಡಿಕೊಳ್ಳಬೇಕು, ಕಣ್ಣುಕಿವಿಗಳನ್ನು ಒಳ್ಳೆಯ ಮನಸ್ಸಿನಿಂದ ಗೆದ್ದುಕೊಳ್ಳಬೇಕು, ಮನೋವಾಕ್ಕುಗಳನ್ನು ಕರ್ಮದಿಂದ ಗೆದ್ದುಕೊಳ್ಳಬೇಕು, ಭಯವನ್ನು ಎಚ್ಚರಿಕೆಯಿಂದ ಗೆಲ್ಲಬೇಕು, ದಂಭವನ್ನು ತಿಳಿದವರ ಸಹವಾಸದಿಂದ ಗೆಲ್ಲಬೇಕು.

ಅಗ್ನಿಗಳನ್ನೂ ಬ್ರಾಹ್ಮಣರನ್ನೂ ಪೂಜಿಸಬೇಕು. ದೇವತೆಗಳಿಗೆ ನಮಸ್ಕರಿಸಬೇಕು, ಕಾಮಪ್ರಧಾನವಾಗಿಯೂ ಹಿಂಸಾಯುಕ್ತವಾಗಿಯೂ ಮರ್ಮೋದ್ಘಾಟಕವಾಗಿಯೂ ಇರುವ ಮಾತನ್ನು ಬಿಡಬೇಕು. ಪ್ರಕಾಶ ಮಯವಾದ ಬ್ರಹ್ಮದ ಸಾರವೇ ಈ ಚರಾಚರವಾದ ಜಗತ್ತಾಗಿರುವದು. ಧ್ಯಾನ, ಅಧ್ಯಯನ, ದಾನ, ಸತ್ಯ, ಕೆಟ್ಟದ್ದುಮಾಡಲು ನಾಚಿಕೆ, ಸರಳತನ, ಕ್ಷಾಂತಿ, ಶುಚಿತ್ವ, ಆಚಾರದಲ್ಲಿ ಶುದ್ಧಿಯಾಗಿರುವದು, ಇಂದ್ರಿಯನಿಗ್ರಹ- ಇವುಗಳು ಬ್ರಹ್ಮತೇಜಸ್ಸು ಹೆಚ್ಚುವದಕ್ಕೂ ಪಾಪವು ಹೋಗುವದಕ್ಕೂ ಕಾರಣವಾಗಿರುವವು. ಹೀಗಿರುವವನಿಗೆ ಹಿಡಿದ ಕಾರ್ಯಗಳು ಕೈಗೂಡುವವು, ಜ್ಞಾನವು ಹೆಚ್ಚುವದು, ಎಲ್ಲಾ ಪ್ರಾಣಿಗಳಲ್ಲಿಯೂ ಒಂದೇ ವರ್ತನೆಯಿಂದ ಇದ್ದುಕೊಂಡು ದೊರೆತಷ್ಟರಿಂದ ಜೀವನವನ್ನು ನಡೆಯಿಸಿಕೊಳ್ಳುತ್ತಾ ಪಾಪವನ್ನು ಪರಿಹರಿಸಿಕೊಳ್ಳಬೇಕು. ಮನಸ್ಸು ಇಂದ್ರಿಯಗಳನ್ನು ಒಕ್ಕಡೆಗೆ ನಿಲ್ಲಿಸಿಕೊಂಡು ರಾತ್ರಿಯ ಮುಂಜಾವದಲ್ಲಿಯೂ ಹಿಂಜಾವದಲ್ಲಿಯೂ ಆತ್ಮನನ್ನೇ ಚಿಂತಿಸಬೇಕು.

ಮನಸ್ಸನ್ನು ಮೊದಲು ಗೆದ್ದು ಇಂದ್ರಿಯಗಳನ್ನು ಆಮೇಲೆ ಕ್ರಮ ಕ್ರಮವಾಗಿ ಗೆದ್ದುಕೊಳ್ಳಬೇಕು. ಮನಸ್ಸೂ ಇಂದ್ರಿಯಗಳೂ ಪ್ರಸನ್ನವಾದರೆ ಕೊನೆಗೆ ಆತ್ಮದರ್ಶನವಾಗುವದು. ಮೊದಮೊದಲ ಕೆಲವು ಅಡ್ಡಿಗಳು ಆಗುವವು; ಕೆಲವು ಸಣ್ಣ ಸಿದ್ಧಿಗಳೂ ತೋರಿಕೊಳ್ಳುವವು. ಆದರೆ ಜಾಣನಾದವನು ಇವುಗಳನ್ನು ಲೆಕ್ಕಿಸದೆ ಒಂದೇ ಸಮನೆ ಧ್ಯಾನ ಮಾಡುತ್ತಾ ಹೋಗಬೇಕು. ಸರಿಯಾದ ಸ್ಥಳವನ್ನು ಆರಿಸಿಕೊಂಡು ವ್ಯವಹಾರದಲ್ಲಿ ಉದಾಸೀನನಾಗಿ ಆಹಾರದಲ್ಲಿ ಕ್ಲಿಪ್ತಿಯಿಂದ ಇದ್ದುಕೊಂಡು ನಿಂದಾಸ್ತುತಿಗಳಿಂದ ಮನಸ್ಸಿಗೆ ಏರುಪೇರುಗಳನ್ನು ಮಾಡಿಕೊಳ್ಳದೆ

ಸರ್ವತ್ರ ಸಮದೃಷ್ಟಿಯಿಂದ ನಡೆಯುತ್ತಿದ್ದರೆ ಆರು ಮಾಸದಲ್ಲಿಯೇ ಫಲವು ಕೈಸೇರುವದು– ಕಡಿಮೆಯ ಜಾತಿಯವನಾಗಲಿ, ಹೆಂಗಸಾಗಲಿ – ಈ ಸಾಧನವನ್ನು ಮಾಡಿದರೆ ಅವರಿಗೂ ಆತ್ಮದರ್ಶನದ ಸಿದ್ಧಿಯಾಗಿ ಪರಮಗತಿಯು ಸಿಕ್ಕುವದು.

★★★★★

# ಕಾಲಯವನ ಸಂಹಾರ

**18-05-1934**

**ಬ್ರ|| ಶ್ರೀ|| ಎಮ್. ಎಸ್. ವೆಂಕಟೇಶಶಾಸ್ತ್ರಿಗಳವರು**

**ಭಾಗವತದ ಹತ್ತನೆಯ ಸ್ಕಂದದ ಉತ್ತರಾರ್ಧದ ಐವತ್ತೊಂದನೆಯ ಅಧ್ಯಾಯದಲ್ಲಿ** ಶ್ರೀಕೃಷ್ಣನು ಮುಚುಕುಂದನ ಮೂಲಕ ಕಾಲಯವನನ್ನು ಸಂಹಾರಮಾಡಿದ ಲೀಲೆಯ ಕಥೆ ಹೀಗಿದೆ – ವರಮತ್ತನಾದ ಕಾಲಯವನನು ಶ್ರೀಕೃಷ್ಣನೊಡನೆ ಯುದ್ಧಮಾಡಬೇಕೆಂದು ಅಟ್ಟಿಸಿಕೊಂಡು ಹೋಗುತ್ತಿರಲು ಶ್ರೀಕೃಷ್ಣನು ಹೆದರಿಕೊಂಡವನಂತೆ ಒಂದು ಗುಹೆಯನ್ನು ಹೊಕ್ಕನು. ಅಲ್ಲಿಗೆ ಬಂದು ಕಾಲಯವನನು ನೋಡಲಾಗಿ ಮುಚುಕುಂದನು ಮಲಗಿರುವುದು ಕಂಡುಬಂತು. ಮುಚುಕುಂದನೆಂಬುವನು ಮಾಂಧಾತೃವಿನ ಮಗನು. ಅವನು ಅಸುರರ ಪೀಡೆಯಿಂದ ಹೆದರಿದ್ದ ಇಂದ್ರಾದಿಗಳ ಸಹಾಯಕ್ಕಾಗಿ ಹೋಗಿ ಬಹುಕಾಲ ಅಲ್ಲಿಯೇ ಇದ್ದುಬಿಟ್ಟನು. ಇಷ್ಟರೊಳಗೆ ಅವನ ಹೆಂಡಿರು ಮಕ್ಕಳು, ನೆಂಟರು, ಪ್ರಜೆಗಳು – ಎಲ್ಲರೂ ಕಾಲವಶರಾದರು. ದೇವತೆಗಳು ತಮಗೆ ಸಹಾಯ ಮಾಡಿದ್ದ ಮುಚುಕುಂದನನ್ನು ''ಅಪ್ಪ, ನಮಗಾಗಿ ಸಕಲ ಭೋಗಗಳನ್ನೂ ಬಿಟ್ಟುಬಂದು ಬಹಳ ಶ್ರಮಪಟ್ಟಿರುತ್ತೀಯೆ; ಕೈವಲ್ಯವನ್ನೊಂದನ್ನು ಬಿಟ್ಟು ಮಿಕ್ಕ ಯಾವದಾದರೂ ವರವನ್ನು ಕೇಳಿಕೋ, ಕೊಡುತ್ತೇವೆ'' ಎಂದರು. ರಾಜನು 'ಬಹುಕಾಲ ಸುಖನಿದ್ರೆಯನ್ನು ಕೊಡಿರಿ' ಎಂದು ಅವರನ್ನು ಬೇಡಿಕೊಂಡು ಮೇಲೆ ಹೇಳಿದ ಗುಹೆಯಲ್ಲಿ ಮಲಗಿರುತ್ತಿದ್ದನು. 'ನಿನ್ನ ನಿದ್ರೆಯ ಭಂಗವನ್ನು ಯಾರಾದರೂ ಮಾಡಿದರೆ ನೀನು ನೋಡಿದ ಮಾತ್ರದಿಂದ ಅವನು

ಬೂದಿಯಾಗಲಿ' ಎಂದು ದೇವತೆಗಳು ಅವನಿಗೆ ವರವನ್ನು ಕೊಟ್ಟಿದ್ದರು. ಮೂಢನಾದ ಕಾಲಯವನನು ಈ ಸಂದರ್ಭವನ್ನರಿಯದೆ ಇವನೇ ಕೃಷ್ಣನೆಂದು ಭ್ರಮಿಸಿ ಅವನನ್ನು ಕಾಲಿನಿಂದ– ಹೊಡೆದು ಎಬ್ಬಿಸಿದನು; ಕೂಡಲೇ ಮುಚುಕುಂದನ ಕಣ್ಣುರಿಯಿಂದ ಭಸ್ಮವಾದನು.

ಇತ್ತ ಮುಚುಕುಂದನು ಎದ್ದು ಗುಹೆಯ ಕತ್ತಲೆಯನ್ನೆಲ್ಲ ತೊಲಗಿಸುತ್ತಿರುವ ತೇಜಸ್ಸಿನಿಂದ ಕೂಡಿದ ಶ್ರೀಕೃಷ್ಣನನ್ನು ಕಂಡು ''ಎಲೈ ಮಹಾತ್ಮನೆ, ನೀನು ಯಾರು? ನಿನ್ನ ಜನ್ಮಕರ್ಮಗೋತ್ರಾದಿಗಳನ್ನು ಹೇಳುವುದಕ್ಕೆ ಅಡ್ಡಿಯಿಲ್ಲದಿದ್ದರೆ, ದಯವಿಟ್ಟು ತಿಳಿಸು'' ಎನ್ನಲು ಶ್ರೀಭಗವಂತನು ''ಅಯ್ಯ ಸ್ವಭಾವದಿಂದ ಜನ್ಮಕರ್ಮನಾಮಧೇಯರಹಿತನಾಗಿರುವ ನನ್ನ ಜನ್ಮಗಳೂ ಕರ್ಮಗಳೂ ಹೆಸರುಗಳೂ ಅನಂತವಾಗಿರುವವು; ಬೇರೆಬೇರೆ ಕಾಲಕ್ಕೆ ತಕ್ಕಂತೆ ಇವುಗಳು ಉಂಟಾಗುವವು. ಸದ್ಯಕ್ಕೆ ನಾನು ಭೂಭಾರವನ್ನು ಇಳಿಸುವದಕ್ಕೋಸ್ಕರ ವಸುದೇವನ ಮನೆಯಲ್ಲಿ ಅವತರಿಸಿರುವೆನು; ನನ್ನನ್ನು ವಾಸುದೇವನೆನ್ನುವರು. ಇದುವರೆಗೆ ಅನೇಕ ಅಸುರರನ್ನು ನಾಶಗೊಳಿಸಿರುವೆನು; ಇಗೋ ಈ ಕಾಲಯವನನು ನಿನ್ನ ಕಣ್ಣಿನ ತೇಜಸ್ಸಿನಿಂದ ಹತನಾಗಿರುವನು. ನಿನ್ನ ಅನುಗ್ರಹಕ್ಕಾಗಿಯೇ ನಾನು ಇಲ್ಲಿಗೆ ಬಂದಿರುತ್ತೇನೆ. ಆದ್ದರಿಂದ ಎಲೈ ರಾಜನೇ, ಬೇಕಾದ ವರಗಳನ್ನು ಬೇಡಿಕೋ'' ಎಂದನು.

ಮುಚುಕುಂದನು ಭಗವಂತನಿಗೆ ನಮಸ್ಕಾರ ಮಾಡಿ ''ಪರಮೇಶ್ವರನೇ, ನಿನ್ನ ಮಾಯೆಯಿಂದ ಮೋಹಿತರಾದವರು ನಿನ್ನನ್ನು ಭಜಿಸದೆ ಪಶುಗಳಂತೆ ವಿಷಯಾಸಕ್ತರಾಗಿರುವರು. ನಾನು ಇದುವರೆಗೆ ರಾಜನೆಂಬ ಮದದಿಂದ ಪತ್ನೀ ಪುತ್ರಾದಿಗಳಲ್ಲಿ ಆಸಕ್ತನಾಗಿದ್ದು ಬೇಸರಪಟ್ಟಿರುವೆನು. ಇಹಪರಸೌಖ್ಯಗಳಲ್ಲಿಯೇ ಆಸಕ್ತರಾದವರು ಮಾಡುವ ಕಾಮ್ಯಕರ್ಮಗಳು ನಿಜವಾದ ಸುಖವನ್ನು ಎಂದಿಗೂ ಕೊಡಲಾರವು. ಸಕಲ ಕಾಮಗಳನ್ನೂ ತೊಲಗಿಸುವ ಸತ್ಸಂಗದಿಂದ ನಿನ್ನಲ್ಲಿ ಭಕ್ತಿಯುಂಟಾದವರು ಮಾತ್ರ ಧನ್ಯರಾಗುವರು. ಆದ್ದರಿಂದ ನನಗೆ ರಾಜ್ಯದ ಸಂಬಂಧವು ತನಗೆ ತಾನೇ ಕಳಚಿಕೊಂಡದ್ದು ನಿನ್ನ ಪರಮಾನುಗ್ರಹವೆಂದು ಭಾವಿಸಿರುತ್ತೇನೆ. ನಿನ್ನ ಪಾದಸೇವೆಯೊಂದನ್ನುಳಿದು ನಾನು ಮತ್ತೇನನ್ನೂ ಬಯಸೆನು. ತ್ರಿಗುಣಗಳಿಗೆ ಸಂಬಂಧಪಟ್ಟ ಆಶೆಗಳೆಲ್ಲವನ್ನೂ ತೊರೆದು

ಚೈತನ್ಯಮಾತ್ರ ಸ್ವರೂಪನಾದ ನಿನ್ನನ್ನೇ ಶರಣುಹೊಂದಿರುತ್ತೇನೆ, ನೀನು ನನ್ನನ್ನು ಕಾಪಾಡಬೇಕು'' ಎಂದನು.

ಆಗ ಪರಮಾತ್ಮನು ''ಎಲೈ ರಾಜನೆ, ನಾನು ನಿನಗೆ ಬೇಕಾದ ವರವನ್ನು ಕೊಡುತ್ತೇನೆಂದು ಆಶೆಯನ್ನು ತೋರಿಸಿದರೂ ನೀನು ಅದಕ್ಕೆ ಸಿಕ್ಕಲಿಲ್ಲ. ಇದು ನಿನ್ನ ಅನನ್ಯ ಭಕ್ತಿಯನ್ನು ತೋರಿಸುತ್ತದೆ. ನನ್ನ ಭಕ್ತಿಯಿಲ್ಲದೆ ಬರಿಯ ಯೋಗಾದಿಗಳಲ್ಲಿ ಆಸಕ್ತರಾದವರು ಸ್ವಲ್ಪ ಬಹಿರ್ಮುಖರಾಗುತ್ತಲೂ ಅವರಿಗೆ ಬಗೆಬಗೆಯ ಆಸೆಗಳು ಗಂಟುಬೀಳುತ್ತವೆ. ನನ್ನ ಭಕ್ತರಿಗೆ ಮಾತ್ರ ಹಾಗಿಲ್ಲ. ಆದ್ದರಿಂದ ನೀನು ನನ್ನನ್ನೇ ಚಿಂತಿಸುತ್ತಾ ಪ್ರಾರಬ್ಧಾನುಸಾರವಾಗಿ ಈ ದೇಹವನ್ನು ನೀಗುವವನಾಗು. ಮುಂದಿನ ಜನ್ಮದಲ್ಲಿ ಬ್ರಾಹ್ಮಣೋತ್ತಮನಾಗಿ ಜನಿಸಿ ನನ್ನನ್ನೇ ಪಡೆಯುವೆ'' ಎಂದು ಹೇಳಿದನು.– ಎಂಬುದು ಅಧ್ಯಾಯದ ಸಾರವು.

★★★★★

# ಪರಮಾತ್ಮನ ಆನಂದಸ್ವರೂಪ

**19-05-1934**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳವರು**

**ಸೂತಸಂಹಿತೆಯ ಯಜ್ಞವೈಭವಖಂಡದ ಎರಡನೆಯ ಭಾಗದ ಒಂಬತ್ತನೆಯ ಅಧ್ಯಾಯದಲ್ಲಿ** ಬ್ರಹ್ಮದೇವರು ದೇವತೆಗಳಿಗೆ ಪರಮಾತ್ಮನ ಆನಂದಸ್ವರೂಪವನ್ನು ವಿವರಿಸಿದ ರೀತಿಯಿದೆ.

ಪರಮಾತ್ಮನು ನಮ್ಮೊಳಗಿನ ಆತ್ಮನೇ ಆಗಿರುವದರಿಂದಲೂ ಆತ್ಮನು ಪರಮ ಪ್ರೇಮಕ್ಕೆ ವಿಷಯವಾಗಿರುವದರಿಂದಲೂ ಪರಮಾತ್ಮನು ಪರಮಾನಂದರೂಪನಾಗಿ ರುತ್ತಾನೆಂದು ಏರ್ಪಡುತ್ತದೆ. ಹೇಗೆಂದರೆ, ಗಂಡ, ಹೆಂಡತಿ, ಮಕ್ಕಳು, ಬ್ರಾಹ್ಮಣ್ಯ, ಕ್ಷತ್ರಿಯತ್ವ, ಹಣ, ಲೋಕಗಳು, ದೇವತೆಗಳು, ವೇದಗಳು, ಪ್ರಾಣಿಗಳು –

ಇವೆಲ್ಲವೂ ತಮತಮಗಾಗಿ ಪ್ರಿಯವೆನಿಸಿಕೊಂಡಿರುವದಿಲ್ಲ; ಆತ್ಮನಿಗಾಗಿಯೇ ಇವು ಪ್ರಿಯವೆನಿಸಿವೆ. ಆದ್ದರಿಂದ ಆತ್ಮನು ಅತ್ಯಂತ ಪ್ರಿಯನೆಂದು ಸಿದ್ಧವಾಯಿತು. ಆದ್ದರಿಂದ ಮಿಕ್ಕೆಲ್ಲವನ್ನೂ ಬಿಟ್ಟು ಆತ್ಮನನ್ನೇ ಶ್ರವಣ ಮನನ ನಿದಿಧ್ಯಾಸನಗಳಿಂದ ಕಂಡುಕೊಳ್ಳುವದಕ್ಕೆ ಯತ್ನಿಸಬೇಕು. ಈ ಆನಂದರೂಪನಾದ ಪರಮಾತ್ಮನೇ ತಾನೆಂದು ತಿಳಿದರೆ ದುಃಖವೆಲ್ಲವೂ ತೊಲಗುವದು. ಯಾವನು ಬ್ರಹ್ಮಕ್ಷತ್ರಾದಿಗಳು ತನ್ನ ಸ್ವರೂಪವಾಗಿರುವ ಪರಮಾತ್ಮನಿಗಿಂತ ಬೇರೆಯೆಂದು ತಿಳಿಯುವನೋ ಅವನನ್ನು ಆ ಬ್ರಹ್ಮಕ್ಷತ್ರಾದಿಗಳು ತಿರಸ್ಕರಿಸುತ್ತವೆ. ಆದ್ದರಿಂದ ಸಂಸಾರವನ್ನು ಕತ್ತರಿಸಿಹಾಕಿಕೊಳ್ಳಬೇಕೆಂದು ಬಯಸುವಾತನು ಬ್ರಹ್ಮವೇ ಸಕಲವೂ ಆಗಿರುವದೆಂಬ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ವೇದಗಳು, ಸ್ಮೃತಿಗಳು, ಪುರಾಣಗಳು, ಆಗಮಗಳು, ಜನರ ಸಾಮಾನ್ಯ ಬುದ್ಧಿ, ತರ್ಕಗಳು – ಇವುಗಳನ್ನು ನೋಡಿದರೆ ಒಂದಕ್ಕೊಂದು ವಿರುದ್ಧವಾಗಿಯೇ ತೋರುತ್ತಿರುವವು; ವಿದ್ವಾಂಸರಿಗೆ ಕೂಡ ಇವುಗಳಿಗೆ ಏಕವಾಕ್ಯತೆಯನ್ನು ಮಾಡಿಕೊಳ್ಳುವದರಲ್ಲಿಯೇ ಕಾಲವು ಹೋಗಿ ಬಿಡುವದು. ಆದ್ದರಿಂದ ಒಣತರ್ಕಕ್ಕೆ ಕೈ ಹಾಕದೆ ಜಾಣನಾದವನು ತೋರುವದೆಲ್ಲ ಬ್ರಹ್ಮವೆಂದು ತಿಳಿಯಬೇಕು. ಲೋಕದಲ್ಲಿ ಪ್ರಾಣಿಗಳ ತಿಳಿವಳಿಕೆಯು ಬೇರೆ ಬೇರೆ ಅಂತಸ್ತಿನಲ್ಲಿರುವದು; ಆದರೆ ಜ್ಞಾನಸ್ವರೂಪನಾದ ಮಹೇಶ್ವರನಿಗಿಂತ ಹೆಚ್ಚಿನ ಸರ್ವಜ್ಞರು ಯಾರೂ ಇರುವದಿಲ್ಲ. ಆದ್ದರಿಂದ ಲೌಕಿಕಪ್ರಜ್ಞೆಯ ಅಭಿಮಾನವನ್ನು ಬಿಟ್ಟು ಸರ್ವಜ್ಞನಾದ ಪರಮಾತ್ಮನೇ ಸಕಲವೂ ಆಗಿರುವನೆಂಬ ಅರಿವನ್ನು ಸಂಪಾದಿಸಿಕೊಳ್ಳಬೇಕು, ಈ ಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೆ ಆಯಾಸವು ಸ್ವಲ್ಪ, ಫಲವಾದ ಮುಕ್ತಿಯು ಇಲ್ಲಿಯೇ ಆಗುತ್ತದೆ. ಆದರೂ ಜನರು ಅದ್ವೈತಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೆ ಬಯಸದೆ ಇರುತ್ತಾರಲ್ಲ !

ಆದ್ದರಿಂದ ಸಾಮಾನ್ಯವಿಶೇಷರೂಪವಾದ ಜಗತ್ತಿನ ವ್ಯವಹಾರಜ್ಞಾನವನ್ನು ಮೀರಿ ಪರಮಾರ್ಥರೂಪವಾದ ಪರಬ್ರಹ್ಮವೇ ಈ ಜಗತ್ತಿನ ರೂಪದಲ್ಲಿ ಅಜ್ಞರಿಗೆ ತೋರುತ್ತಿರುವದೆಂಬ ಉತ್ತಮಜ್ಞಾನವನ್ನು ಯಾವನು ಪಡೆದುಕೊಳ್ಳುವನೋ ಅವನು ಸಾಕ್ಷಾತ್ಪರಶಿವನು, ಕೃತಕೃತ್ಯನು, ಆದ್ದರಿಂದ ಸಕಲ ಸಂದೇಹಗಳನ್ನೂ ನೀಗಿ ಚೇತನಾಚೇತನಾರೂಪವಾಗಿ ತೋರುತ್ತಿರುವದೆಲ್ಲವೂ ಶಿವನೇ ಎಂದು ಗುರೂಪದೇಶದಿಂದ ಅರಿಯಬೇಕು. ಆ ಅರಿವನ್ನೂ ಶಿವನೆಂದೇ ಅರಿಯಬೇಕು,

ಆ ಅರಿವನ್ನೂ ಬಿಟ್ಟು ಬರಿಯರಿವಿನ ರೂಪವಾಗಿ ನಿಲ್ಲಬೇಕು, ಹಾಗೆ ನಿಂತವನ ಉತ್ತಮನಿಷ್ಠೆಯು ವರ್ಣಾತೀತವಾಗಿರುವದು - ಎಂಬುದು ಅಧ್ಯಾಯದ ಸಾರವು.

★★★★★

# ಶೌನಕೋಪದೇಶ

**20-05-1934**

**ಬ್ರ॥ಶ್ರೀ॥ಎಂ.ಎಸ್. ವೆಂಕಟೇಶಶಾಸ್ತ್ರಿಗಳವರು**

**ಮಹಾಭಾರತವನಪರ್ವದ ಎರಡನೆಯ ಅಧ್ಯಾಯದಲ್ಲಿ ಶೌನಕೋಪದೇಶ**ವಿದೆ. ಪಾಂಡವರು ವನವಾಸಕ್ಕಾಗಿ ತೆರಳುತ್ತಿರುವಲ್ಲಿ ಊರಿನ ಬ್ರಾಹ್ಮಣರನೇಕರು ಅವರನ್ನು ಬಿಟ್ಟಿರಲಾರದೆ ಅವರ ಹಿಂದೆಯೇ ಹೊರಟರು. 'ನಮಗೇ ಆಹಾರಾದಿಗಳಿಗೆ ಅನುಕೂಲವಿಲ್ಲದಿರುವ ವನದಲ್ಲಿ ಇವರ ಶುಶ್ರೂಷೆಯನ್ನು ನಾನು ಹೇಗೆ ಮಾಡಲಿ? ಅಥವಾ ಇವರು ತಮ್ಮ ವೃತ್ತಿಯನ್ನು ತಾವೇ ನೋಡಿಕೊಳ್ಳುತ್ತೇವೆಂದರೂ ಅತಿಥಿಗಳ ಸಂಕಟವನ್ನು ನೋಡುತ್ತಾ ನಾನು ಹೇಗೆ ಸಮಾಧಾನದಿಂದಿರಲಿ?' - ಎಂದು ಚಿಂತಿಸುತ್ತಿರುವ ಧರ್ಮರಾಯನಿಗೆ ಶೌನಕನೆಂಬ ಬ್ರಾಹ್ಮಣನು ಮಾಡಿದ ಉಪದೇಶವು ಈ ಅಧ್ಯಾಯದಲ್ಲಿರುತ್ತದೆ.

''ಅಯ್ಯ, ಧರ್ಮರಾಯನೆ, ಧನಕ್ಕೆ ಕಷ್ಟವಾಗಿರುವಾಗಲೂ, ಶಾರೀರ ದುಃಖಗಳೊದಗಿರುವಾಗಲೂ, ಇತರ ಸಂಕಟಗಳು ಪ್ರಾಪ್ತವಾದಾಗಲೂ ತಿಳಿದವರು ಆ ದುಃಖಗಳನ್ನು ಹಚ್ಚಿಕೊಂಡು ಸಂಕಟಪಡುವದಿಲ್ಲ. ಶಾರೀರದುಃಖಗಳು ಬಹಳಮಟ್ಟಿಗೆ ಮಾನಸದುಃಖದಿಂದಲೇ ಉಂಟಾಗುತ್ತಿರುವದರಿಂದ ಮನಸ್ಸಿಗೆ ತಕ್ಕ ಚಿಕಿತ್ಸೆಯನ್ನು ಮೊದಲು ಮಾಡಿಕೊಳ್ಳಬೇಕು. ಮನಸ್ಸಿನ ದುಃಖಕ್ಕೆ ಸ್ನೇಹವೇ ಮೂಲವು. ಈ ಸ್ನೇಹದಿಂದ ಸಂಕಲ್ಪವೂ ಅನುರಾಗವೂ ಉಂಟಾಗುವವು; ಆದ್ದರಿಂದ

ವಿಷಯಗಳು ಬರುವಾಗಲೇ ಅವುಗಳಲ್ಲಿ ದೋಷಬುದ್ಧಿಯನ್ನು ಮಾಡಿಕೊಂಡು ವಿಷಯಸ್ನೇಹವಿಲ್ಲದಂತೆ ಮಾಡಿಕೊಳ್ಳಬೇಕು. ಈ ಸ್ನೇಹದಿಂದ ಅಥವಾ ರಾಗದಿಂದ ಕಾಮ, ಅದರಿಂದ ಇಚ್ಛೆ, ಅದರಿಂದ ತೃಷ್ಣೆ – ಹೀಗೆ ಉಂಟಾಗುವವು; ತೃಷ್ಣೆಯುಂಟಾದ ಮೇಲೆ ಅದನ್ನು ಬಿಡುವದು ಬಲುಕಷ್ಟ. ಆದರೆ ತೃಷ್ಣೆಯನ್ನು ಬಿಟ್ಟವನಿಗೆ ಸುಖವುಂಟು. ಅರ್ಥದಿಂದಾಗುವ ನಾನಾದೋಷಗಳನ್ನು ಚೆನ್ನಾಗಿ ಚಿಂತಿಸಿಕೊಂಡು ಅವುಗಳ ಅಗಲುವಿಕೆಯಿಂದಾದ ದುಃಖವನ್ನು ಸಹಿಸಿಕೊಳ್ಳಬೇಕು. ಯೌವನ, ರೂಪ, ಧನ – ಇವೆಲ್ಲ ಅನಿತ್ಯವೆಂದು ತಿಳಿದು ಧನಾಶೆಯನ್ನು ಬಿಡಬೇಕು. ಅತಿಥಿಗಳಿಗಾಗಿ ಧನದಾಸೆಯನ್ನು ಮಾಡುತ್ತೇನೆಯೇ ಹೊರತು ನನಗಾಗಿ ಅಲ್ಲ – ಎಂದು ನೀನು ಹೇಳಬಹುದು. ಆದರೆ ವೇದದಲ್ಲಿ ಕರ್ಮವನ್ನು ಮಾಡಬೇಕೆಂದೂ ಬಿಡಬೇಕೆಂದೂ ಎರಡನ್ನೂ ಹೇಳಿರುತ್ತದೆ. ಆದ್ದರಿಂದ ಧರ್ಮವನ್ನು ಮಾಡುವವನಿಗೆ ಅಭಿಮಾನವಿರಬಾರದು. ಇಜ್ಯಾ, ಅಧ್ಯಯನ, ದಾನ, ತಪಸ್ಸು, ಸತ್ಯ, ಕ್ಷಮಾ, ದಮ, ಅಲೋಭ – ಎಂದು ಧರ್ಮವು ಎಂಟು ಬಗೆ; ಇದರಲ್ಲಿ ಮೊದಲನೆಯ ನಾಲ್ಕು ಪಿತೃಯಾನಕ್ಕೂ ಎರಡನೆಯದು ದೇವಯಾನಕ್ಕೂ ಕಾರಣವಾಗಿರುವದು. ಎರಡನೆಯದಕ್ಕೆ (1) ಸಮ್ಯಕ್ಸಂಕಲ್ಪ ಸಂಬಂಧ – ಎಂದರೆ ಸಂಕಲ್ಪಗಳನ್ನೆಲ್ಲ ಚೆನ್ನಾಗಿ ಬಿಗಿಹಿಡಿದು ಶಾಂತನಾಗಿರುವದು, (2) ಸಮ್ಯಗಿಂದ್ರಿಯನಿಗ್ರಹ – ಎಂದರೆ ಇಂದ್ರಿಯಗಳನ್ನು ಜಯಿಸಿ ದಾಂತನಾಗಿರುವದು, (3) ಸಮ್ಯಗ್ವ್ರತವಿಶೇಷ – ಎಂದರೆ ಅಹಿಂಸಾದಿ ವ್ರತಗಳನ್ನು ಆಚರಿಸುವದು, (4) ಸಮ್ಯಗ್ಗುರುಸೇವನ – ಎಂದರೆ ಸದ್ಗುರುಗಳನ್ನು ಶ್ರದ್ಧಾಭಕ್ತಿಗಳಿಂದ ಅವರ ಇಂಗಿತವನ್ನರಿತು ಸೇವನೆಮಾಡುವದು, (5) ಸಮ್ಯಗಾಹಾರಯೋಗ – ಎಂದರೆ ಹಿತಮಿತಮೇಧ್ಯವಾಗಿರುವ ಆಹಾರವನ್ನು ಸೇವಿಸುವದು, (6) ಸಮ್ಯಗಧ್ಯಯನಾಗಮ – ಎಂದರೆ ಗುರುಮೂಲಕವಾಗಿ ನಿಯಮವನ್ನನುಸರಿಸಿ ವೇದಶಾಸ್ತ್ರಾಧ್ಯಯನಮಾಡುವದು, (7) ಸಮ್ಯಕ್ಕರ್ಮೋಪಸಂನ್ಯಾಸ – ಎಂದರೆ ವಿಧಿಯನ್ನನುಸರಿಸಿ ಕರ್ಮವನ್ನು ಸಂನ್ಯಾಸಮಾಡುವದು, (8) ಸಮ್ಯಕ್ಚಿತ್ತನಿರೋಧ – ಎಂದರೆ ಯೋಗಾಭ್ಯಾಸದಿಂದ ಚಿತ್ತವೃತ್ತಿಗಳನ್ನು ಲಯಮಾಡಿಕೊಳ್ಳುವದು – ಎಂದು ಎಂಟಂಗಗಳಿರುವವು. ಸಂಸಾರವನ್ನು ಗೆಲ್ಲಬೇಕೆಂಬವನು ಹೀಗೆ

ರಾಗದ್ವೇಷಗಳಿಲ್ಲದೆ ಎರಡು ಬಗೆಯ ಕರ್ಮಗಳನ್ನೂ ಮಾಡಿ ಉತ್ತಮವಾದ ಗತಿಯನ್ನು ಪಡೆಯುವನು. ಎಲೈ ಧರ್ಮರಾಯನೆ, ನೀನು ಕರ್ಮಮಯ ಸಿದ್ಧಿಯನ್ನು ಆಗಲೇ ಪಡೆದೇ ಇರುವೆ; ಆದ್ದರಿಂದ ಶಾಂತನಾಗಿ ತಪಸ್ಸಿನಿಂದಲೂ ಯೋಗದಿಂದಲೂ ಸಿದ್ಧಿಯನ್ನು ಹೊಂದಿ ಈ ಬ್ರಾಹ್ಮಣರನ್ನು ಪೋಷಿಸುವ ಯೋಚನೆಯನ್ನು ಮಾಡು'' ಎಂದು ಶೌನಕನು ಇಲ್ಲಿ ಉಪದೇಶಿಸಿರುತ್ತಾನೆ.

★★★★★

# ಶ್ರುತಿಗೀತೆ

**21 – 05 –1934**

**ವಿದ್ವಾನ್ ತಿಪ್ಪಾಶಾಸ್ತ್ರಿಗಳು**

**ಭಾಗವತದ ದಶಮಸ್ಕಂದದಲ್ಲಿ ಶ್ರುತಿಗೀತೆಯ** ಕೆಲವು ಶ್ಲೋಕಗಳ ಅರ್ಥವು ಹೀಗಿದೆ – ಪರೀಕ್ಷಿದ್ರಾಜನು ''ಬ್ರಾಹ್ಮಣೋತ್ತಮರೆ, ಸಗುಣವಸ್ತುವನ್ನು ಮಾತ್ರ ಬೋಧಿಸಬಲ್ಲ ಶ್ರುತಿಗಳು, ಇಂಥವನೆಂದು ತೋರಿಸುವದಕ್ಕಾಗದವನಾಗಿಯೂ ಯಾವ ಗುಣಗಳೂ ಇಲ್ಲದೆ ಇರುವವನಾಗಿಯೂ ಸದಸತ್ತುಗಳನ್ನು ಮೀರಿರುವ ಸ್ವರೂಪದವನಾಗಿಯೂ ಇರುವ ಪರಮಾತ್ಮನನ್ನು ನೇರಾಗಿ ತಿಳಿಸಿಕೊಡುವದು ಹೇಗೆ?'' – ಎಂದು ಕೇಳಲು, ಶುಕ್ರಾಚಾರ್ಯರು ಇಂತೆಂದರು –

''ಅಯ್ಯ ರಾಜನೆ, ಈಶ್ವರನು ಬುದ್ಧಿ, ಇಂದ್ರಿಯ, ಮನಸ್ಸು ಪ್ರಾಣ – ಇವುಗಳನ್ನು ವಿಷಯಭೋಗಕ್ಕಾಗಿಯೂ ಜನ್ಮವನ್ನು ಪಡೆದು ಕರ್ಮವನ್ನು ಮಾಡುವದಕ್ಕಾಗಿಯೂ ಸೃಷ್ಟಿಮಾಡಿರುತ್ತಾನೆ. ಈ ಬ್ರಹ್ಮಪರವಾದ ಉಪನಿಷತ್ತೆಂಬುದು ಅನಾದಿಕಾಲದಿಂದಲೂ ಶಿಷ್ಟಪರಂಪರೆಯಿಂದ ನಡೆದುಕೊಂಡು ಬಂದಿರುವದು. ಇದನ್ನು ಯಾವನು ಶ್ರದ್ಧೆಯಿಂದ ಸ್ವೀಕರಿಸುವನೋ ಅವನು ದೇಹಾದಿ ಸಕಲೋಪಾಧಿಗಳನ್ನೂ ಮೀರಿದ ಪರಮ ಮೋಕ್ಷವನ್ನು ಪಡೆಯುತ್ತಾನೆ. ಈ ವಿಷಯದಲ್ಲಿ ನಾರಯಣಗಾಥೆಯನ್ನು

ನಿನಗೆ ಹೇಳುತ್ತೇನೆ ಕೇಳು. ನಾರದನಾರಾಯಣರ ಸಂವಾದರೂಪವಾದದ್ದು. ಒಂದಾನೊಂದು ಕಾಲದಲ್ಲಿ ನಾರದಋಷಿಯು ಲೋಕದಲ್ಲಿ ಸಂಚರಿಸುತ್ತಾ ನಾರಾಯಣಾಶ್ರಮಕ್ಕೆ ಬಂದನು. ಪೂಜ್ಯನಾದ ನಾರಾಯಣಋಷಿಯು ಭರತವರ್ಷದ ಜನರಿಗೆ ಸ್ವಸ್ತಿಯಾಗಲೆಂದು ಕಲ್ಪಾಂತವಾಗಿ ತಪಸ್ಸುಮಾಡುತ್ತಿದ್ದನು. ಆತನನ್ನು ಕಲಾಪಗ್ರಾಮವಾಸಿಗಳು ಸುತ್ತುವರಿದಿದ್ದರು; ನಾರದನು ಆತನನ್ನು ನಮಸ್ಕರಿಸಿ ನೀನು ಕೇಳಿದ ಪ್ರಶ್ನೆಯನ್ನೇ ಕೇಳಲು ಪೂಜ್ಯನಾದ ನಾರಾಯಣನು ಜನಲೋಕದಲ್ಲಿ ಹಿಂದೆ ನಡೆದಿದ್ದ ಒಂದಾನೊಂದು ಬ್ರಹ್ಮವಾದವನ್ನು ವಿಸ್ತರಿಸಿ ಹೇಳಿದನು. ಜನಲೋಕದಲ್ಲಿರುವವರೆಲ್ಲರೂ ತಪಸ್ಸಿನಿಂದಲೂ ಶೀಲದಿಂದಲೂ ಜ್ಞಾನದಿಂದಲೂ ಸಮರೇ ಆದರೂ ಅವರಲ್ಲಿ ಸನಂದನನು ಈ ವಿಚಾರವನ್ನು ಹೇಳುವವನಾದನು, ಮಿಕ್ಕವರೆಲ್ಲರೂ ಕೇಳುತ್ತಿದ್ದರು. ಸನಂದನನು ಹೇಳಿದ ಉತ್ತರವೇ ಶ್ರುತಿಗೀತೆಯು''

ಪರಮೇಶ್ವರನು ತಾನು ಸೃಷ್ಟಿಮಾಡಿದ ಜಗತ್ತನ್ನೆಲ್ಲ ಸಂಹಾರಮಾಡಿ ಶಕ್ತಿಸಮನ್ವಿತನಾಗಿ ಮಲಗಿರಲು, ಬೆಳಗಿನ ಜಾವದಲ್ಲಿ ರಾಜನನ್ನು ಹೊಗಳುಭಟ್ಟರು ಸ್ತೋತ್ರಮಾಡುವಂತೆ, ಪ್ರಲಯಾಂತದಲ್ಲಿ ಶ್ರುತಿಗಳು ಆತನನ್ನು ಹೀಗೆಂದು ಹೊಗಳಿದವು: 1. ಎಲೈ ಯಾರಿಂದಲೂ ಜಿತನಲ್ಲದ ಪರಮೇಶ್ವರನೆ, ಜಯಜಯ; ಸ್ಥಾವರಜಂಗಮಪ್ರಾಣಿಗಳ ಅವಿದ್ಯೆಯನ್ನು ನಾಶಮಾಡು. ಆ ಅವಿದ್ಯೆಯು ಸತ್ವಾದಿಗುಣಗಳನ್ನು ಗ್ರಹಿಸಿ ಜೀವರುಗಳಿಗೆ ದೋಷವನ್ನುಂಟು ಮಾಡುತ್ತಿರುವದು; ನೀನು ಮಾತ್ರ ಸ್ವರೂಪದಿಂದಲೇ ಸಮಸ್ತೈಶ್ವರ್ಯಗಳನ್ನೂ ವಶಗೊಳಿಸಿಕೊಂಡಿರುವೆ. ಜೀವರಲ್ಲಿರುವ ಸಮಸ್ತಶಕ್ತಿಗಳನ್ನೂ ಎಚ್ಚರಗೊಳಿಸುವಾತನು ನೀನೇ. ಮಾಯೆಯಿಂದ ಕೂಡಿಕೊಂಡವನಾಗಿಯೂ ಸ್ವರೂಪದಲ್ಲಿಯೇ ಇದ್ದುಕೊಂಡಿರುವವನಾಗಿಯೂ ಇರುವನಿನ್ನನ್ನೇ ವೇದವು ಪ್ರತಿಪಾದಿಸುತ್ತಿರುವದು. 2. ಪ್ರತ್ಯಕ್ಷಾದಿಗಳಿಂದ ಕಾಣಬರುವ ಈ ಪ್ರಪಂಚವೆಲ್ಲವೂ ಪರಬ್ರಹ್ಮವಾದ ನೀನೇ ಎಂದು ಬಲ್ಲವರು ನಿಶ್ಚಯಿಸಿರುತ್ತಾರೆ. ಏಕೆಂದರೆ ಮಣ್ಣಿನಿಂದ ಆಗುವ ಘಟಾದಿಕಾರ್ಯಗಳಂತೆ ನಿರ್ವಿಕಾರನಾದ ಯಾವ ನಿನ್ನಿಂದ ಈ ಜಗತ್ತಿಗೆ ಸೃಷ್ಟಿಸ್ಥಿತಿಪ್ರಲಯಗಳು ಆಗುತ್ತಿವೆಯೋ ಆ ನೀನೇ ಕೊನೆಗೆ ಉಳಿದುಕೊಳ್ಳುವಾತನು. ಆದ್ದರಿಂದಲೇ ಋಷಿಗಳು

ಮನಸ್ಸಿನನಿಷ್ಠೆಯನ್ನೂ ಮತಿನ ನಡೆಯನ್ನೂ ನಿನ್ನಲ್ಲಿಯೇ ಇಟ್ಟಿರುತ್ತಾರೆ; ಜನರು ಎಲ್ಲಿ ಹೆಜ್ಜೆಯನ್ನು ಇಟ್ಟರೂ ನೆಲದ ಮೇಲೆ ಇಟ್ಟಂತೆ ಆಗದೆ ಇದ್ದೀತೇನು? 3. ಆದ್ದರಿಂದಲೇ, ಎಲೈ ತ್ರಿಗುಣೇಶ್ವರನೇ ವಿವೇಕಿಗಳಾದವರು ಸಮಸ್ತಲೋಕದ ಕಲ್ಮಷವನ್ನೂ ತೊಳೆಯುವ ಕಥಾಮೃತಸಾಗರದಲ್ಲಿ ಮುಳುಗಿ ಪಾಪಗಳನ್ನೂ ದುಃಖಗಳನ್ನೂ ಕಳೆದುಕೊಂಡಿರುವರು; ಹೀಗಿರುವಲ್ಲಿ ಎಲೈ ಪರಮೇಶ್ವರನೇ, ಸ್ವರೂಪಪ್ರಕಾಶದಿಂದ ಅಂತಃಕರಣಧರ್ಮಗಳಾದ ರಾಗಾದಿಗಳನ್ನೂ ಕಾಲಗುಣಗಳಾದ ಜರಾಮರಣಾದಿಗಳನ್ನೂ ನಿವಾರಿಸಿಕೊಂಡು, ಅಖಂಡಾನಂದಾನುಭವವನ್ನೇ ಯಾವಾಗಲೂ ಅನುಭವಿಸುತ್ತಿರುವವರು ದುಃಖವನ್ನು ನೀಗಿಕೊಳ್ಳುವರೆಂಬುದನ್ನು ಹೇಳುವದೇನಿದೆ? 4. ಎಲೈ ಪರಮಾತ್ಮನೇ, ನಿನ್ನನ್ನು ಅನುಸರಿಸಿದರೆ ಜೀವರ ಬಾಳುವೆಯೇ ಸಾರ್ಥಕವು; ಇಲ್ಲದಿದ್ದರೆ ಅವರು ತಿದಿಗಳ ಹಾಗೆ ಸುಮ್ಮನೆ ಉಸಿರುಬಿಡುತ್ತಾರೆನ್ನಬೇಕು. ಮಹತ್ತು, ಅಹಂಕಾರ - ಮುಂತಾದವುಗಳೆಲ್ಲ ಪಿಂಡಬ್ರಹ್ಮಾಂಡಗಳನ್ನು ಸೃಷ್ಟಿಸಿದವು. ಅನ್ನಮಯವೇ ಮುಂತಾದ ಪಂಚಕೋಶಗಳಲ್ಲಿ ಕೊನೆಯದಾದ ಆನಂದಮಯದಲ್ಲಿ ಬ್ರಹ್ಮವೆಂಬ ಪುಚ್ಛರೂಪದಿಂದ ಇರುವ ನೀನೇ ಈ ಕೋಶಗಳಲ್ಲಿ ಅನ್ವಿತನಾಗಿರುವದರಿಂದ ಆಯಾ ಆಕಾರನಾಗಿರುವೆ. ಆದರೂ ನೀನು ಸ್ಥೂಲಸೂಕ್ಷ್ಮಗಳೆರಡಕ್ಕೂ ಬೇರೆಯಾಗಿ, ಇವುಗಳು ಬಾಧಿತವಾದರೂ ಬಾಧಿತನಾಗದೇ ಉಳಿದುಕೊಳ್ಳುವ ಪರಮಾರ್ಥಸ್ವರೂಪನಾಗಿರುತ್ತೀಯೆ.

★★★★★

# ಭಾಗವತಧರ್ಮದ ಸ್ವರೂಪ

**22 – 05 –1934**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರು**

ಭಾಗವತದಲ್ಲಿ ಹನ್ನೊಂದನೆಯ ಸ್ಕಂಧದ ಎರಡನೆಯ ಅಧ್ಯಾಯದಲ್ಲಿ ನಾರದರು ವಸುದೇವನಿಗೆ ಭಾಗವತಧರ್ಮವನ್ನು ತಿಳಿಸುವದಕ್ಕಾಗಿ ಹೇಳಿದ

ನಿಮಿರಾಜನಿಗೂ ಜಾಯಂತೇಯರಾದ ಕವಿ, ಹರಿ – ಎಂಬ ಇಬ್ಬರು ಮಹಾತ್ಮರಿಗೂ ನಡೆದ ಸಂವಾದ ಭಾಗವು ಈ ಹೀಗಿದೆ.

ಋಷಭದೇವನ ಮಕ್ಕಳಲ್ಲಿ ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಆವಿಹೋತ್ರ, ದ್ರುಮಿಲ, ಚಮಸ, ಕರಭಾಜನ – ಎಂಬ ಒಂಬತ್ತು ಮಂದಿ ಆತ್ಮವಿದ್ಯಾವಿಶಾರದರಾಗಿ ಜಗತ್ತೆಲ್ಲವೂ ಭಗವದ್ರೂಪವೇ, ಆ ಭಗವಂತನು ತಮ್ಮ ಆತ್ಮನೇ – ಎಂಬ ಸಾಕ್ಷಾತ್ಕಾರವನ್ನು ಹೊಂದಿ ತಮ್ಮ ಯೋಗಮಹಿಮೆಯಿಂದ ಸಕಲಸಿದ್ಧಿಗಳನ್ನೂ ಪಡೆದು ಸ್ವೇಚ್ಛೆಯಿಂದ ಸರ್ವಲೋಕಗಳಲ್ಲಿಯೂ ಸಂಚರಿಸುತ್ತಾ ಒಂದಾನೊಂದು ಕಾಲಕ್ಕೆ ವಿದೇಹರಾಜನಾದ ನಿಮಿರಾಜನು ಸತ್ರ ಮಾಡುತ್ತಿರುವಲ್ಲಿಗೆ ಬಂದರು. ರಾಜನು ಅವರನ್ನು ಸತ್ಕರಿಸಿ ''ತಮ್ಮಂಥ ಭಗವದ್ಭಕ್ತರನ್ನು ನೋಡಿದಾಗ ದುರ್ಲಭವಾಗಿಯೂ ಕ್ಷಣಭಂಗುರವಾಗಿಯೂ ಇರುವ ಮನುಷ್ಯದೇಹವನ್ನು ಪಡೆದ ನಾವುಗಳು ಪರಮಪುರುಷಾರ್ಥವಾದ ಮೋಕ್ಷವಿಚಾರವನ್ನೇ ಕೇಳತಕ್ಕದ್ದು ಯುಕ್ತವು. ಯಾವ ಧರ್ಮಗಳನ್ನನುಸರಿಸಿ ಭಗವಂತನನ್ನು ಶರಣುಹೊಕ್ಕವರಿಗೆ ಆತನು ತನ್ನ ಸ್ವರೂಪವನ್ನು ಕೂಡ ಕೊಟ್ಟುಬಿಡುತ್ತಾನೋ ಅಂಥ ಭಾಗವತಧರ್ಮಗಳ ಸ್ವರೂಪವನ್ನು ನನಗೋಸ್ಕರ ಅಪ್ಪಣೆಕೊಡಿಸಬೇಕು'' ಎಂದು ಬೇಡಿಕೊಂಡನು.

ಆಗ ಕವಿಯೆಂಬಾತನಿಂತೆಂದನು: ''ಅಯ್ಯ, ಅಸದ್ರೂಪವಾದ ವಸ್ತುಗಳ ಚಿಂತನೆಯಿಂದ ತಳಮಳಗೊಂಡಿರುವಾತನಿಗೆ ನಿರ್ಭಯವಾದ ಅಚ್ಯುತನ ಪಾದಾರವಿಂದದ ಚಿಂತೆಯೇ ಪರಮ ಸಾಧನವು. ಯಾವ ಭಾಗವತಧರ್ಮಗಳನ್ನನುಸರಿಸಿದಾತನು ಪ್ರಮಾದವಿಲ್ಲದೆ ಇರುವನೋ, ಕಣ್ಣುಮುಚ್ಚಿಕೊಂಡು ಓಡಿದರೂ ಮುಗ್ಗರಿಸುವಂತಿರುವದಿಲ್ಲವೋ ಅಂಥ ಧರ್ಮಗಳನ್ನು ಹೇಳುವೆನು, ಕೇಳು. ಶರೀರದಿಂದಾಗಲಿ, ವಾಕ್ಕಿನಿಂದಾಗಲಿ, ಮನಸ್ಸಿನಿಂದಾಗಲಿ, ಇಂದ್ರಿಯಗಳಿಂದಾಗಲಿ ಸ್ವಭಾವಾನುಸಾರವಾಗಿ ಏನೇನು ಮಾಡುತ್ತಿರುವನೋ ಅದನ್ನೆಲ್ಲ ನಾರಾಯಣನಿಗೆಂದು ಅರ್ಪಣೆಮಾಡಬೇಕು. ಪರಮಾತ್ಮನಿಗಿಂತ ಬೇರೆಯೊಂದರ ಚಿಂತೆಯೇ ಭಯಕ್ಕೆ ಕಾರಣವು; ಆದ್ದರಿಂದ ಆತನ ಚಿಂತೆಯೊಂದನ್ನೇ ಅನುಸರಿಸಿದರೆ ಅಸದ್ರೂಪವಾದ ದ್ವೈತದ ಭಯವು ತಪ್ಪುವದು. ಪರಮಾತ್ಮನ ಮಂಗಲಕರವಾದ ಜನ್ಮಕರ್ಮಗಳ ಕಥೆಗಳನ್ನು

ಕೇಳುತ್ತಾ ಅವುಗಳನ್ನು ಸೂಚಿಸುವ ಆತನ ನಾಮಗಳನ್ನು ಲಜ್ಜೆಯನ್ನು ತೊರೆದು ಗಾನಮಾಡುತ್ತಾ ಅಸಕ್ತನಾಗಿ ಸಂಚರಿಸಬೇಕು. ಇದರಿಂದ ಪರಮಾತ್ಮನಲ್ಲಿ ಭಕ್ತಿಯುಂಟಾಗಿ ಅಳುತ್ತಲೂ ನಗುತ್ತಲೂ ಕೂಗುತ್ತಲೂ ಹಾಡುತ್ತಲೂ ಕಾಲಹಾಕುವನು; ತನ್ನ ಸುತ್ತಲೂ ಕಾಣುವದೆಲ್ಲ ಶ್ರೀಹರಿಯ ಶರೀರವೆಂದು ಅನನ್ಯ ಭಕ್ತಿಯಿಂದ ನಮಸ್ಕರಿಸುವನು. ಊಟಮಾಡುವವನಿಗೆ ತುಷ್ಟಿಯೂ ಪುಷ್ಟಿಯೂ ಹಸಿವು ಇಂಗುವದೂ ಹೇಗೆ ಏಕಕಾಲಕ್ಕೆ ಆಗುವವೋ ಅದರಂತೆ ಭಕ್ತಿಯೂ ಈಶ್ವರಾನುಭವವೂ ವಿರಕ್ತಿಯೂ ಏಕಕಾಲಕ್ಕೆ ಉಂಟಾಗುವವು, ಇದರಿಂದ ಪರಮಶಾಂತಿಯುಂಟಾಗುವದು.

ಹೀಗೆಂದು ಕವಿಯು ಹೇಳಿ ಮುಗಿಸಲು ಹರಿಯಿಂತೆಂದನು: ‘‘ಅಯ್ಯ, ಸರ್ವಭೂತಗಳಲ್ಲಿಯೂ ಪರಮಾತ್ಮನನ್ನೂ ಪರಮಾತ್ಮನಲ್ಲಿ ಸರ್ವಭೂತಗಳನ್ನೂ ಯಾವನು ಕಾಣುವನೋ ಅವನು ಭಾಗವತೋತ್ತಮನು; ಈಶ್ವರನಲ್ಲಿ ಪ್ರೇಮವನ್ನೂ ಅವನ ಭಕ್ತರಲ್ಲಿ ಮೈತ್ರಿಯನ್ನೂ ತಿಳಿಯದವರಲ್ಲಿ ಕೃಪೆಯನ್ನೂ ಶತ್ರುಗಳಲ್ಲಿ ಉಪೇಕ್ಷೆಯನ್ನೂ ಯಾವನು ಮಾಡುವನೋ ಅವನು ಮಧ್ಯಮನು; ಮೂರ್ತಿಯಲ್ಲಿ ಮಾತ್ರ ಹರಿಪೂಜೆಯನ್ನು ಮಾಡುತ್ತಾ ಭಕ್ತರಲ್ಲಿಯೂ ಮಿಕ್ಕವರಲ್ಲಿಯೂ ಗೌರವವನ್ನು ತೋರಿಸದವನು ಪ್ರಾಕೃತನು. ವಿಷಯಗಳನ್ನು ಸೇವಿಸಿದಮೇಲೂ ರಾಗದ್ವೇಷಗಳಿಲ್ಲದವನು ಭಾಗವತೋತ್ತಮನು; ದೇಹೇಂದ್ರಿಯಗಳ ವಿಕಾರಗಳಿಂದ ಮೋಹವನ್ನು ಹೊಂದದವನು ಭಾಗವತೋತ್ತಮನು; ಅವಿದ್ಯಾಕಾಮಕರ್ಮಗಳಿಗೆ ಎಡೆಯನ್ನೇ ಕೊಡದಂತೆ ಪರಮಾತ್ಮನನ್ನೇ ಚಿಂತಿಸುತ್ತಿರುವವನು ಭಾಗವತೋತ್ತಮನು; ಯಾವನು ದೇಹದ ಜನ್ಮ, ಕರ್ಮ, ವರ್ಣ, ಆಶ್ರಮ, ಜಾತಿ – ಇವುಗಳಲ್ಲಿ ಆಸಕ್ತನಾಗದೆ ಇರುವನೋ, ತನ್ನವನು ಪರರು – ಎಂಬ ಭೇದವಿಲ್ಲದೆ ಇರುವನೋ, ಸರ್ವಭೂತಗಳಲ್ಲಿಯೂ ಸಮನಾಗಿ ಶಾಂತನಾಗಿರುವನೋ, ಅವನು ಭಾಗವತೋತ್ತಮನು; ಮೂರು ಲೋಕದ ಒಡೆತನವೇ ಕೈಸೇರುವಂತಿದ್ದರೂ ಒಂದು ಅರ್ಧನಿಮಿಷವಾದರೂ ಭಗವಂತನ ಪಾದಾರವಿಂದವನ್ನಗಲಿ ಯಾವಾತನ ಮನಸ್ಸು ಚಲಿಸದೆ ಇರುವದೋ ಆತನೇ ವೈಷ್ಣವೋತ್ತಮನು. ತ್ರಿವಿಕ್ರಮನಾದ ಭಗವಂತನ ಚರಣಾಗ್ರದ ಬೆಳದಿಂಗಳಿನಿಂದ ಸಮಸ್ತ ಪಾಪಗಳನ್ನೂ ಕಳೆದುಕೊಂಡಾತನಿಗೆ

ಮತ್ತೆ ತಾಪತ್ರಯಗಳುಂಟೆ? ಪರಮಾತ್ಮನು ತನ್ನ ಹೃದಯವನ್ನು ಬಿಟ್ಟು ಚಲಿಸದಂತೆ ಯಾವಾತನು ಪ್ರೇಮಪಾಶದಿಂದ ಶ್ರೀಹರಿಯ ಪಾದಪದ್ಮಗಳನ್ನು ಕಟ್ಟಿಹಾಕಿರುವನೋ ಅವನೇ ಭಾಗವತೋತ್ತಮನು'' – ಎಂಬುದು ಅಧ್ಯಾಯದ ಸಾರಾಂಶವು.

★★★★★

## ಧರ್ಮೋಪದೇಶ

**23-05-1934**

ಶ್ರೀಶ್ರೀಗಳವರು

**ಸ್ಕಂದಪುರಾಣದ ಬ್ರಹ್ಮೋತ್ತರಖಂಡದಲ್ಲಿ ಹನ್ನೊಂದನೆಯ ಅಧ್ಯಾಯ** ದಲ್ಲಿ – ಭದ್ರಾಯುವೆಂಬ ರಾಜಪುತ್ರನಿಗೆ ಋಷಭಯೋಗೀಶ್ವರನು ಮಾಡಿದ ಧರ್ಮೋಪದೇಶವಿರುತ್ತದೆ. ಭದ್ರಾಯುವು ಇನ್ನೂ ಶಿಶುವಾಗಿರುವಾಗಲೇ ಅವನಿಗೆ ಅಕಾಲ ಮೃತ್ಯುವು ಬಂದೊದಗಿರಲು ಋಷಭಯೋಗಿಯು ತನ್ನ ತಪದ ಪ್ರಭಾವದಿಂದ ಅವನನ್ನು ಮತ್ತೆ ಬದುಕಿಸಿದ್ದನು. ಈಗ ಭದ್ರಾಯುವಿಗೆ ಹದಿನಾರು ವರ್ಷವಾಗಿದೆ. ತಾಯಿಯು ಅವನನ್ನು ಯೋಗೀಶ್ವರನ ಕಾಲಿಗೆ ಬೀಳಿಸಿ ತಾನೂ ವಿನಯದಿಂದ ನಮಸ್ಕರಿಸಿ, ''ಪೂಜ್ಯರೇ, ತಾವು ಈ ಮಗುವಿಗೆ ಪ್ರಾಣದಾನವನ್ನು ಮಾಡಿರುವ ತಂದೆಯು; ಇವನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡು ಸನ್ಮಾರ್ಗವನ್ನು ಉಪದೇಶಿಸಿ ಈ ಅನಾಥನನ್ನು ಕಾಪಾಡಬೇಕು'' ಎಂದು ಬೇಡಿಕೊಂಡಳು.

ಆಗ ಋಷಭಯೋಗೀಶ್ವರನು ಭದ್ರಾಯುವನ್ನು ಕುರಿತು ''ಮಗುವೆ, ಶ್ರುತಿಸ್ಮೃತಿಪುರಾಣಗಳಲ್ಲಿ ಆಯಾ ವರ್ಣಾಶ್ರಮದವರು ಅನುಸರಿಸಬೇಕಾದ ಧರ್ಮವನ್ನು ಹೇಳಿರುತ್ತದೆ. ದೊಡ್ಡವರು ಅದನ್ನನುಸರಿಸುತ್ತಾರಾದ್ದರಿಂದ ಅವರ ಹಾದಿಯನ್ನೇ ನೀನು ತುಳಿಯುತ್ತಿರು. ದೇವಾಜ್ಞೆಯನ್ನು ಮೀರಬೇಡ, ದೇವ

ನಿಂದೆಯನ್ನು ಮಾಡಬೇಡ, ಗೋದೇವಗುರುವಿಪ್ರರಲ್ಲಿ ಭಕ್ತಿಯುತನಾಗಿರು. ಅತಿಥಿಯಾಗಿ ಬಂದವನು ಚಂಡಾಲನೇ ಆಗಿದ್ದರೂ ಸನ್ಮಾನಿಸು; ಪ್ರಾಣಹೋಗುವ ಸಂಕಟ ಬಂದರೂ ಸತ್ಯವನ್ನು ಬಿಡಬೇಡ, ಗೋಬ್ರಾಹ್ಮಣರ ರಕ್ಷಣಾರ್ಥವಾಗಿ ಕೂಡ ಸುಳ್ಳನ್ನು ಹೇಳಬೇಡ. ಪರಧನ, ಪರಸ್ತ್ರೀ, ದೇವಸ್ವ, ಬ್ರಾಹ್ಮಣಸ್ವ - ಇವುಗಳಲ್ಲಿ ಆಶೆಯನ್ನು ತೊರೆ. ಒಳ್ಳೆಯನುಡಿ, ಒಳ್ಳೆಯ ನಡೆ, ಒಳ್ಳೆಯ ವ್ರತ, ಒಳ್ಳೆಯ ಸಂಪ್ರದಾಯ, ಧರ್ಮಾದಿಗಳನ್ನು ಸಂಪಾದಿಸುವದು - ಇವುಗಳಲ್ಲಿ ಬಯಕೆಯುಳ್ಳವನಾಗಿರು. ಸ್ನಾನ, ಜಪ, ಹೋಮ, ಸ್ವಾಧ್ಯಾಯ, ಪಿತೃತರ್ಪಣ, ಗೋಸೇವಾತಿಥಿಪೂಜೆ - ಇವುಗಳನ್ನು ತಪ್ಪದೆ ಮಾಡು. ಸಿಟ್ಟು, ಹಗೆ, ಹೆದರಿಕೆ, ಮೋಸ, ಚಾಡಿ, ಹಠ, ವಕ್ರಮಾರ್ಗ, ಜಂಭ, ಕಳವಳ - ಇವುಗಳನ್ನು ಯತ್ನದಿಂದ ಬಿಡುವನಾಗು. ಬೇಟೆ, ಜೂಜು, ಪಾನ, ಸ್ತ್ರೀ, ಸ್ತ್ರೀಜಿತರು - ಇವರಲ್ಲಿ ಅತ್ಯಾಸಕ್ತಿಯನ್ನು ಮಾಡದಿರು. ಸುಖಿಗಳಲ್ಲಿ ಮೈತ್ರಿಯನ್ನೂ ದುಃಖಿಗಳಲ್ಲಿ ದಯೆಯನ್ನೂ ಪುಣ್ಯವಂತರಲ್ಲಿ ಸಂತೋಷವನ್ನೂ ಕುತ್ಸಿತರಲ್ಲಿ ಉದಾಸೀನತೆಯನ್ನೂ ತೋರಿಸು. ಅತ್ಯಾಹಾರ, ಅತಿಕ್ರೋಧ, ಅತಿನಿದ್ರೆ, ಅತಿಶ್ರಮ, ಅತ್ಯಾಲಾಪ, ಅತಿಕ್ರೀಡೆ - ಇವುಗಳನ್ನು ತ್ಯಜಿಸು; ಅತಿವಿದ್ಯೆ, ಅತಿಶ್ರದ್ಧೆ, ಅತಿಪುಣ್ಯ, ಅತಿಸ್ಮೃತಿ, ಅತ್ಯುತ್ಸಾಹ, ಅತಿಖ್ಯಾತಿ, ಅತಿಧೈರ್ಯ - ಇವುಗಳನ್ನು ಸಾಧಿಸು. ಹೆಂಡತಿಯಲ್ಲಿ ಕಾಮ, ಹಗೆಗಳಲ್ಲಿ ಕ್ರೋಧ, ಪುಣ್ಯದಲ್ಲಿ ಲೋಭ, ಅಧರ್ಮಗಳಲ್ಲಿ ಅಸೂಯೆ, ಪಾಷಂಡನಲ್ಲಿ ದ್ವೇಷ, ಸಜ್ಜನರಲ್ಲಿ ರಾಗ - ಇವುಗಳನ್ನು ಇಟ್ಟುಕೊ. ಕೆಟ್ಟ ಆಲೋಚನೆಯನ್ನು ಹೇಳುವವನಿಗೆ ದಡ್ಡನಾಗಿರು, ಚಾಡಿಯ ಮಾತಿಗೆ ಕಿವುಡನಾಗು. ಧೂರ್ತರು, ಕೋಪಿಷ್ಠರು, ಮಾಯಾವಿಗಳು, ಕ್ರೂರರು, ಮೋಸಗಾರರು, ಚಂಚಲರು, ದುಷ್ಟರು, ಪತಿತರು, ನಾಸ್ತಿಕರು, ಕಪಟಿಗಳು - ಇವರನ್ನು ದೂರದಿಂದಲೇ ಬಿಟ್ಟು ತೆರಳು. ಹೆಚ್ಚು ಮಾತನಾಡದಿರು, ಇಂಗಿತವನ್ನು ತಿಳಿದುಕೊಳ್ಳುವದಕ್ಕೆ ಯತ್ನಿಸು, ಧನದಲ್ಲಿಯೂ ಕುಟುಂಬದಲ್ಲಿಯೂ ಅತ್ಯಾಸಕ್ತನಾಗದಿರು. ಪತಿವ್ರತೆಯಾದ ಹೆಂಡತಿ, ತಾಯಿ, ಮಾವ, ಸತ್ಪುರುಷರು, ಗುರು - ಇವರು ಹೇಳುವ ಮಾತಿನಲ್ಲಿ ವಿಶ್ವಾಸವಿಡು. ನಿನ್ನನ್ನು ರಕ್ಷಣೆ ಮಾಡಿಕೊಳ್ಳುವದನ್ನು ಮರೆಯಬೇಡ, ವಿಶ್ವಾಸದಿಂದ ಬಂದವನು ಕಳ್ಳನಾದರೂ ಕೊಲ್ಲಬೇಡ, ಅಮಾತ್ಯರಲ್ಲಿ ಶಂಕೆಯಿಂದಿರು, ಸತ್ಯವನ್ನು ಬಿಡದಿರು; ಅನಾಥರು, ದೀನರು, ಮುದುಕರು,ಹೆಂಗಸರು, ಹುಡುಗರು,

ನಿರಪರಾಧಿಗಳು – ಇವರನ್ನು ಹಣ, ಪ್ರಾಣ, ಬುದ್ಧಿ, ಶಕ್ತಿ, ಬಲ – ಎಲ್ಲವನ್ನೂ ವಿನಿಯೋಗಿಸಿ ಕಾಪಾಡು. ಶರಣಾಗತನಾದ ಶತ್ರುವನ್ನು ಕೊಲ್ಲಬೇಡ; ಯಾಚನೆ ಮಾಡುವವನು ಯಾರಾದರೂ ಅವನ ಪ್ರಾರ್ಥನೆಯನ್ನು ನೆರವೇರಿಸು. ಸತ್ಕೀರ್ತಿಯನ್ನು ಸಂಪಾದಿಸಿಕೋ. ಬ್ರಾಹ್ಮಣರಿಗೂ ವಿದ್ವಾಂಸರಿಗೂ ಕೀರ್ತಿಯೇ ಭೂಷಣವು. ಆನೆ, ಕುದುರೆ, ಸುವರ್ಣ, ರತ್ನರಾಶಿ – ಇವುಗಳೆಲ್ಲವನ್ನೂ ಅಪಕೀರ್ತಿ ಬರುವಂತಿದ್ದರೆ ತ್ಯಜಿಸಿಬಿಡು. ತಾಯಿಯ ಸಿಟ್ಟು, ತಂದೆಯ ಸಿಟ್ಟು, ಗುರುವಿನ ಸಿಟ್ಟು, ಹಣದ ವ್ಯಯ, ಮಕ್ಕಳ ಅಪರಾಧ, ಬ್ರಾಹ್ಮಣರ ಅಪರಾಧ – ಇವುಗಳನ್ನು ಕ್ಷಮಿಸು. ಆಯುಸ್ಸು, ಕೀರ್ತಿ, ಬಲ, ಸೌಖ್ಯ, ಧನ, ಪುಣ್ಯ, ಪ್ರಜೆಗಳ ಉನ್ನತಿ – ಇವುಗಳುಂಟಾಗುವಂಥ ಕಾರ್ಯವನ್ನು ಮಾಡುತ್ತಲಿರು; ದೇಶ, ಕಾಲ, ಶಕ್ತಿ, ಕಾರ್ಯಾಕಾರ್ಯ – ಇವುಗಳನ್ನು ವಿಚಾರಿಸಿಕೊಂಡೇ ಕಾರ್ಯದಲ್ಲಿ ತೊಡಗು. ಚೋರರನ್ನೂ ದುಷ್ಟರನ್ನೂ ಸರಿಯಾದ ನೀತಿಯಿಂದಲೂ ಶಕ್ತಿಯಿಂದಲೂ ದಂಡನೆಮಾಡು. ಸ್ನಾನ, ಜಪ, ಹೋಮ, ದೈವಕರ್ಮ, ಪಿತ್ರ್ಯಕರ್ಮ – ಇವುಗಳಲ್ಲಿ ತ್ವರೆಮಾಡದಿರು; ನಿದ್ರಾಭೋಜನಗಳ ವಿಷಯದಲ್ಲಿ ತ್ವರೆಮಾಡು. ಔದಾರ್ಯದಿಂದ ಕೂಡಿ ಮಾಯೆಯಿಲ್ಲದೆ ಸತ್ಯವಾದ ಜನಮನೋಹರವಾಗಿರುವ ಸಂಕ್ಷಿಪ್ತವಾದ ಬಹ್ವರ್ಥಸೂಚಕವಾದ ಮಾತನ್ನಾಡುತ್ತಿರು. ಶತ್ರುಗಳಿಗಾಗಲಿ ವಿಪತ್ತುಗಳಿಗಾಗಲಿ ಹೆದರದಿರು; ಬ್ರಾಹ್ಮಣರಿಗೂ ಪಾಪಕ್ಕೂ ಗುರುಶಾಸನಕ್ಕೂ ಹೆದರುತ್ತಿರು. ನೆಂಟರಿಷ್ಟರು, ಬ್ರಾಹ್ಮಣ, ಹೆಂಡಿರು, ಮಕ್ಕಳು – ಇವರಲ್ಲಿಯೂ ಭೋಜನಪಙ್ಕ್ತಿಯಲ್ಲಿಯೂ ಸಮಭಾವದಿಂದಿರು. ದೊಡ್ಡವರ ಹಿತೋಪದೇಶ, ಪುಣ್ಯಕಥಾಶ್ರವಣ, ವಿದ್ಯಾವಂತರ ಸಲ್ಲಾಪ – ಇವುಗಳಲ್ಲಿ ಪರಾಙ್ಮುಖನಾಗಬೇಡ. ಶುಚಿಯಾಗಿಯೂ ಪುಣ್ಯಜಲವಿರುವದಾಗಿಯೂ ಬ್ರಾಹ್ಮಣರ ವಸತಿಯಿಂದ ಕೂಡಿರುವದಾಗಿಯೂ ಇರುವ ಮಂಗಲಕರವಾದ ಪ್ರದೇಶದಲ್ಲಿ ವಾಸಮಾಡುತ್ತಿರು. ವೇಶ್ಯೆಯರೂ ಕಾಮುಕರೂ ನೀಚರೂ ತುಂಬಿರುವ ಸ್ಥಳದಲ್ಲಿ ಎಂದಿಗೂ ಇರಬೇಡ. ತ್ರಿಲೋಕೇಶ್ವರನಾದ ಶಿವನೊಬ್ಬನನ್ನೇ ಆಶ್ರಯಿಸಿರು; ಮಿಕ್ಕ ದೇವತೆಗಳನ್ನೂ ಉಪಾಸನೆಮಾಡು, ಅವರ ದಿನಗಳನ್ನೂ ಗೌರವಿಸು. ಯಾವಾಗಲೂ ಶುಚಿಯಾಗಿ, ದಕ್ಷನಾಗಿ, ಶಾಂತನಾಗಿ, ಸ್ಥಿರನಾಗಿರು; ವೇದವಿದರಾದ ವಿಪ್ರರು, ಶಾಂತರಾದ ಯತಿಗಳು, ಪುಣ್ಯವೃಕ್ಷಗಳು, ಪುಣ್ಯನದಿಗಳು, ಪುಣ್ಯತೀರ್ಥಸರೋವರಗಳು, ಧೇನು, ವೃಷಭ, ರತ್ನ, ಪತಿವ್ರತಾಸ್ತ್ರೀ, ಮನೆದೇವರು – ಇವರನ್ನು ಕಂಡೊಡನೆ ನಮಸ್ಕರಿಸು. ಬೆಳಗ್ಗೆ ಮುಂಚಿತವಾಗಿ ಎದ್ದು ಆಚಮನಮಾಡಿ ಗುರುವಿಗೆ

ನಮಸ್ಕಾರಮಾಡಿ, ಈಶ್ವರನನ್ನು ಧ್ಯಾನಮಾಡಿ, ದೇವತೆಗಳನ್ನು ಸ್ಮರಿಸಿ ಸೂರ್ಯನಿಗೆ ನಮಸ್ಕಾರಮಾಡು. ಗಂಧಪುಷ್ಪತಾಂಬೂಲಗಳನ್ನು ಶಿವಾರ್ಪಣಮಾಡಿಯೇ ಭೋಗಿಸು, ನೀನು ಮಾಡುವದೆಲ್ಲ ಶಿವಾರ್ಪಣವಾಗಿಸು. ಸಕಲವ್ಯವಹಾರಗಳಲ್ಲಿಯೂ ಶಿವಾನುಚಿಂತನೆಯನ್ನೇ ಮಾಡುತ್ತಿರು. ಕೈಗಳಲ್ಲಿಯೂ ಕಂಠದಲ್ಲಿಯೂ ರುದ್ರಾಕ್ಷಿಯನ್ನು ಧರಿಸಿ, ಭಸ್ಮತ್ರಿಪುಂಡವನ್ನು ಧರಿಸಿ, ಮಂತ್ರರಾಜವೆನಿಸಿರುವ ಪಂಚಾಕ್ಷರಿಯನ್ನು ಎಡಬಿಡದೆ ಜಪಿಸುತ್ತಾ ಪಶುಪತಿಯ ಚರಣವನ್ನೇ ಜಪಿಸುತ್ತಾ ಸಂತೋಷದಿಂದಿರು.'' ಹೀಗೆಂದು ಉಪದೇಶಮಾಡಿ ಶಿವಕವಚವೆಂಬ ಮಹಾಸ್ತವವನ್ನುಪದೇಶಿಸುವದಕ್ಕಾರಂಭಿಸಿದನು – ಎಂಬುದು ಅಧ್ಯಾಯದ ಸಾರವು.

★★★★★

## ಕೇಶಿಧ್ವಜನ ಉಪದೇಶ

**24-5-1934**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರು**

**ವಿಷ್ಣುಪುರಾಣದಲ್ಲಿ ಆರನೆಯ ಅಂಶದ ಏಳನೆಯ ಅಧ್ಯಾಯದಲ್ಲಿ** ಹೇಳಿರುವದೇನೆಂದರೆ – ಕೇಶಿಧ್ವಜನು ಖಾಂಡಿಕ್ಯಜನಕನನ್ನು ರಾಜ್ಯದಿಂದ ಓಡಿಸಿದ್ದರೂ ಯಜ್ಞವಿಚಾರದಲ್ಲಿ ತನ್ನುಂಟಾಗಿದ್ದ ಸಂಶಯವನ್ನು ಪರಿಹರಿಸುವದಕ್ಕೆ ಖಾಂಡಿಕ್ಯನೇ ಬಲ್ಲವನೆಂದು ಆತನ ಬಳಿಗೆ ಬಂದು ಪ್ರಶ್ನೆಮಾಡಿ ಅವನು ಹೇಳಿದಂತೆಯೇ ನಡೆದುಕೊಂಡನು. ಆ ಬಳಿಕ ತಾನು ಮಾಡಿದ ಯಜ್ಞವು ಖಾಂಡಿಕ್ಯನಿಗೆ ಗುರುದಕ್ಷಿಣೆಯನ್ನು ಕೊಟ್ಟ ಹೊರತು ಪೂರ್ಣವಾಗಲಾರದೆಂದು ಯೋಚಿಸಿ ಮತ್ತೆ ಬಂದು ''ಖಾಂಡಿಕ್ಯನೆ, ಗುರುದಕ್ಷಿಣೆಯನ್ನು ಕೇಳು, ಕೊಡುವೆನು'' ಎಂದನು. ಅವನು ''ಅಯ್ಯ, ಸಕಲಕ್ಲೇಶಗಳೂ ಪರಿಹಾರವಾಗುವ ಉಪಾಯವು ಯಾವದು? ಅದನ್ನು ಹೇಳು. ಅದೇ ನನಗೆ ಗುರುದಕ್ಷಿಣೆ'' ಎಂದನು. ಆ ಸಂದರ್ಭದಲ್ಲಿ ನಡೆದ ಸಂವಾದವು ಈ ಅಧ್ಯಾಯದಲ್ಲಿರುತ್ತದೆ.

ಗುರುದಕ್ಷಿಣೆಗಾಗಿ ಏನು ಕೇಳಿದರೂ ಕೊಡುವೆನೆಂದು ಕೇಶಿಧ್ವಜನು ಹೇಳಿದ್ದರೂ ಖಾಂಡಿಕ್ಯನು ಅಧ್ಯಾತ್ಮವಿಚಾರವನ್ನೇ ಕೇಳಿದ್ದರಿಂದ ಅವನು ಪರಮಾರ್ಥೋಪದೇಶಕ್ಕೆ ತಕ್ಕವನೆಂದು ನಿಶ್ಚಯಿಸಿ ಕೇಶಧ್ವಜನಿಂತೆಂದನು: ''ಅಯ್ಯ, ಖಾಂಡಿಕ್ಯನೆ, ಭಾಗ್ಯವಶದಿಂದ ನಿನಗೆ ವಿವೇಕವೂ ವೈರಾಗ್ಯವೂ ಉಂಟಾಗಿದೆ. ಆದ್ದರಿಂದ ಅವಿದ್ಯೆಯ ಸ್ವರೂಪವನ್ನು ಹೇಳುವೆನು ಕೇಳು. ತಾನಲ್ಲದ್ದನ್ನು ತಾನೆಂದೂ ತನ್ನದಲ್ಲದ್ದನ್ನು ತನ್ನದೆಂದೂ ಭಾವಿಸುವದೇ ಅವಿದ್ಯೆಯು. ಮೂಢನಾದವನು ಪಂಚಭೂತಾತ್ಮಕವಾದ ದೇಹದಲ್ಲಿ ತಾನೆಂಬ ಬುದ್ಧಿಯನ್ನು ಮಾಡಿಕೊಂಡು, ದೇಹದ ಭೋಗಕ್ಕೆ ಬೇಕಾಗಿರುವ ಹೊಲ, ಮನೆ-ಮುಂತಾದದ್ದರಲ್ಲಿ ತನ್ನದೆಂಬ ಬುದ್ಧಿಯನ್ನು ಮಾಡಿಕೊಂಡಿರುವನು; ಇದರಂತೆ ಮಕ್ಕಳು, ಮೊಮ್ಮಕ್ಕಳು- ಮುಂತಾಗಿ ಆ ದೇಹದಿಂದುಂಟಾಗಿರುವ ಸೃಷ್ಟಿಯಲ್ಲಿ ತನ್ನವರೆಂಬ ನಿಶ್ಚಯವನ್ನು ಮಾಡಿಕೊಂಡಿರುತ್ತಾನೆ. ಮನುಷ್ಯರ ಸಕಲವ್ಯಾಪಾರಗಳೂ ದೇಹಕ್ಕಾಗಿಯೇ; ಮಣ್ಣಿನ ಮನೆಯು ನಿಂತಿರುವದಕ್ಕೆ ಹೇಗೆ ಆಗಾಗ್ಗೆ ಮಣ್ಣುಗಾಜು ಮಾಡುವದು ಅವಶ್ಯವೋ ಅದರಂತೆ ಭೌತಿಕವಾದ ಶರೀರವು ಕೆಲವು ಕಾಲವಾದರೂ ಬಾಳುವದಕ್ಕೆ ಭೌತಿಕಪದಾರ್ಥಗಳ ಸಾಮಗ್ರಿಯು ಬೇಕಾಗಿರುವದು. ಇದರಲ್ಲಿಯೇ ಅಭಿಮಾನಪಟ್ಟು ಜೀವನು ಅನಾದಿಕಾಲದಿಂದ ಮೋಹಾಯಾಸವನ್ನು ಪಡೆಯುತ್ತಿರುವನು. ದೂರ ನಡೆದುಬಂದವನು ಬಿಸಿನೀರಿನಿಂದ ಕಾಲು ತೊಳೆದುಕೊಳ್ಳುವಂತೆ, ಬಹುಕಾಲದಿಂದ ಸಂಸಾರದಲ್ಲಿ ತೊಳಲುತ್ತಿರುವ ಜೀವನು ಜ್ಞಾನದಿಂದ ಅಜ್ಞಾನದ ಧೂಳನ್ನೂ ಸಂಸಾರದ ಶ್ರಮವನ್ನೂ ತೊಳೆದುಕೊಳ್ಳಬೇಕು. ತಪ್ಪಲೆಯಲ್ಲಿರುವ ನೀರು ತಪ್ಪಲೆಯನ್ನು ಕಾಯಿಸಿದಮಾತ್ರದಿಂದ ಉಕ್ಕುವದು, ಸದ್ದುಮಾಡುವದು- ಮುಂತಾದದ್ದನ್ನು ತಾನೂ ಹೊಂದುವಂತೆ ಆತ್ಮನು ಪ್ರಕೃತಿಯ ಸಂಗದಿಂದ ನಾನುನನ್ನದೆಂಬ ಅಭಿಮಾನವನ್ನು ಹೊಂದಿರುವನು. ಈ ಅಭಿಮಾನವೇ ಕ್ಲೇಶಗಳಿಗೆ ಕಾರಣವು. ಇದನ್ನು ಹೋಗಲಾಡಿಸುವದಕ್ಕೆ ಯೋಗವೇ ಉಪಾಯವು. ಮನಸ್ಸು ವಿಷಯಾಸಕ್ತವಾಗಿ ಬದ್ಧವಾಗುವದು, ನಿರ್ವಿಷಯವಾದರೆ ಮುಕ್ತವಾಗುವದು. ಆದ್ದರಿಂದ ವಿಷಯಗಳಿಂದ ಮನಸ್ಸನ್ನು ಎಳೆದುಕೊಂಡು ಪರಬ್ರಹ್ಮಸ್ವರೂಪವನ್ನೇ ಚಿಂತಿಸಬೇಕು. ಹೀಗೆ ಎಡೆಬಿಡದೆ ಚಿಂತಿಸುತ್ತಿದ್ದರೆ ಅದಷ್ಟುಬೇಗನೆ ಬ್ರಹ್ಮಸಮಾಧಿಯನ್ನು ಪಡೆದು ಮುಕ್ತಿಯನ್ನು ಹೊಂದುತ್ತಾನೆ. ಆದ್ದರಿಂದ ಯೋಗಾಂಗಗಳಾದ ಸ್ವಾಧ್ಯಾಯ

ಶೌಚಾದಿನಿಯಮಗಳನ್ನೂ ಬ್ರಹ್ಮಚರ್ಯಾಹಿಂಸಾದಿಯಮಗಳನ್ನೂ ಅಳವಡಿಸಿಕೊಂಡು ಆಸನ, ಪ್ರಾಣಾಯಾಮ, ಪ್ರತ್ಯಾಹಾರಗಳಿಂದ ಚಂಚಲವಾದ ಮನಸ್ಸನ್ನು ವಶಗೊಳಿಸಿಕೊಳ್ಳಬೇಕು. ಆಮೇಲೆ ತನ್ನ ಯೋಗ್ಯತೆ ಸುಕರವಾಗಿರುವ ಬ್ರಹ್ಮರೂಪವನ್ನು ಚಿಂತಿಸಬೇಕು.

''ಹೇಗೆಂದರೆ ಹಿರಣ್ಯಗರ್ಭನು, ಇಂದ್ರನು-ಮುಂತಾದ ಸಕಲ ದೇವತೆಗಳು, ಮನುಷ್ಯರು ಪಶುಪಕ್ಷಿ ಸಮುದ್ರಪರ್ವತನದೀವೃಕ್ಷಾದಿಗಳು- ಇವುಗಳಿಂದ ಕೂಡಿದ ಜಗತ್ತೆಂಬುದೇ ಆತನ ಶಕ್ತಿಗಳಿಂದ ಕೂಡಿದ ವಿಭೂತಿಯೆಂದು ಮೊದಲು ಚಿಂತಿಸಬೇಕು. ಆಮೇಲೆ ತನ್ನೊಳಗೆ ಸುಂದರವಾದ ರೂಪದಿಂದ ಕೂಡಿ ಪೀತಾಂಬರಧಾರಿಯಾಗಿ ಶಂಖಚಕ್ರಾದ್ಯಾಯುಧಗಳಿಂದ ಕೂಡಿದ ಸಾಕಾರರೂಪವನ್ನು ಚಿಂತಿಸಿ ತನ್ನ ವ್ಯವಹಾರದಲ್ಲೆಲ್ಲ ಆ ರೂಪವನ್ನು ಕಾಣುವಂತೆ ಸಿದ್ಧಿಯನ್ನು ಪಡೆದ ಬಳಿಕ ಅವಯವಗಳನ್ನೊಂದೊಂದಾಗಿ ಲಯಿಸಿ ಅವಯವಿಯಾಗಿ ಸಕಲಾಧಾರವಾಗಿರುವ ಮೂಲಸ್ವರೂಪವನ್ನು ಮಾತ್ರ ಚಿಂತಿಸುವದಕ್ಕೆ ಕಲಿತು, ಧ್ಯಾತೃಧ್ಯಾನಧ್ಯೇಯಗಳೆಂಬ ತ್ರಿಪುಟಿಯನ್ನು ಮೀರಿ ಆ ಮಹಾವಿಷ್ಣುವಿನಲ್ಲಿ ಅಭೇದವನ್ನು ಸಂಪಾದಿಸಿಕೊಂದು ಕೃತಕೃತ್ಯನಾಗಬೇಕು.'' ಹೀಗೆಂದು ಕೇಶಿಧ್ವಜನು ಉಪದೇಶಿಸಲಾಗಿ ಖಾಂಡಿಕ್ಯನು ತನ್ನ ಅಜ್ಞಾನವನ್ನೆಲ್ಲ ಕಳೆದುಕೊಂಡು ಸಂತುಷ್ಟಚಿತ್ತನಾದನು.

★★★★★

# ಪ್ರಹ್ಲಾದನು ದೈತ್ಯಬಾಲರಿಗೆ ಮಾಡಿದ ಉಪದೇಶ

**25-5-1934**

**ಶ್ರೀಶ್ರೀಗಳವರು**

**ವಿಷ್ಣುಪುರಾಣದಲ್ಲಿ ಮೊದಲನೆಯ ಅಂಶ ಹದಿನೇಳನೆಯ ಅಧ್ಯಾಯದಲ್ಲಿ** ಪ್ರಹ್ಲಾದನು ಸಹಪಾಠಿಗಳಾದ ದೈತ್ಯರಿಗೆ ಮಾಡಿದ ಉಪದೇಶವಿರುವ

ಭಾಗದಲ್ಲಿ - ಎಲ್ಲಾ ಪ್ರಾಣಿಗಳಿಗೂ ಬಾಲ್ಯ, ಯೌವನ, ಮುಪ್ಪು, ಸಾವು-ಇವು ಒಂದರ ಹಿಂದೊಂದು ಆಗುತ್ತಿರುವದು ಪ್ರತ್ಯಕ್ಷವಾಗಿರುತ್ತದೆ. ಸತ್ತಬಳಿಕ ಮತ್ತೆ ಹುಟ್ಟಿಯೇ ತೀರುತ್ತಾರೆಂಬುದು ಶಾಸ್ತ್ರಸಿದ್ಧವಾಗಿರುತ್ತದೆ. ಈ ಎಲ್ಲಾ ಹೀಗೆ ಇಡಿಯ ಸಂಸಾರವೇ ದುಃಖಮಯವಾಗಿರುತ್ತಿರುವದರಿಂದ ವಿಷ್ಣುವೊಬ್ಬನೇ ನಮಗೆಲ್ಲರಿಗೂ ಪರಮಗತಿಯಾಗಿರುತ್ತಾನೆ. ನಾವು ಹುಡುಗರು, ಆಮೇಲೆ ಪರಮಾರ್ಥ ಚಿಂತೆಯನ್ನು ಮಾಡುವೆವು- ಎಂದುಕೊಳ್ಳಬಾರದು. ಏಕೆಂದರೆ ಯೌವನವು ಬಂದಾಗ ವಿಷಯಾಭಿಲಾಷೆಯು ಹೆಚ್ಚಿ 'ಮುದುಕನಾದ ಮೇಲೆ ವಿಷ್ಣುಸ್ಮರಣೆಯನ್ನು ಮಾಡೋಣ'- ಎಂಬ ಯೋಚನೆ ಹುಟ್ಟುವದು; ಮುದುಕನಾದ ಮೇಲೆ 'ಅಯ್ಯೋ! ನಾನು ಅಸಮರ್ಥನಾಗಿರುವೆನು, ಈಗ ಏನೂ ಮಾಡಲಾರೆನು?' ಎಂಬ ಚಿಂತೆ ಹತ್ತಿ ಕೊಳ್ಳುವದು. ಆದ್ದರಿಂದ ವಿವೇಕಿಯಾದವನು ಬಾಲ್ಯದಿಂದಲೂ ಶ್ರೇಯಸ್ಕರವಾದ ಸಾಧನವನ್ನು ಆಶ್ರಯಿಸಬೇಕು. ಆ ಪರಮಾತ್ಮನಿಗೆ ಬಾಲ್ಯಾದಿಗಳು ಯಾವವೂ ಇರುವದಿಲ್ಲ; ಆನಂದಸ್ವರೂಪನಾದ ಆತನನ್ನೇ ನಾವು ಸ್ಮರಿಸಬೇಕು. ಸ್ಮರಣಮಾತ್ರದಿಂದ ಮಂಗಲವನ್ನುಂಟು ಮಾಡುವ ಆತನ ಚಿಂತನೆಗಾಗಿ ಆಯಾಸವೇನೂ ಪಡಬೇಕಾದದ್ದಿರುವದಿಲ್ಲ. ಹಗಲೂ ಇರುಳೂ ಆತನನ್ನು ಸ್ಮರಿಸುವವರಿಗೆ ಪಾಪಕ್ಷಯವಾಗುವದು. ಸರ್ವ ಭೂತಗಳಿಗೂ ಹಿತಕರವಾದ ಆತನಲ್ಲಿ ಪ್ರೇಮವುಂಟಾದರೆ ನಮ್ಮ ಕ್ಲೇಶಗಳೆಲ್ಲವೂ ಪರಿಹಾರವಾಗುತ್ತವೆ. ಈ ಜಗತ್ತೆಲ್ಲವೂ ತಾಪತ್ರಯದಿಂದ ಸಂಕಟಪಡುತ್ತಿರುವದರಿಂದ ಎಲ್ಲರ ಅವಸ್ಥೆಯೂ ಶೋಚನೀಯವಾಗಿರುವದು; ಹೀಗಿರುವಲ್ಲಿ ತಿಳಿದಾತನು ಯಾರಲ್ಲಿ ತಾನೆ ದ್ವೇಷವನ್ನು ಮಾಡಿಯಾನು? ಭ್ರಾಂತಿಕಲ್ಪಿತವಾದ ಭೇದವನ್ನು ಅಂಗೀಕರಿಸಿ ಈವರೆಗೆ ಮಾತನಾಡಿದ್ದಾಯಿತು. ನಿಜವಾಗಿ ನೋಡಿದರೆ ಈ ಜಗತ್ತೆಲ್ಲವೂ ಆ ಪರಮಾತ್ಮನಾದ ವಿಷ್ಣುವಿನ ವಿಸ್ತಾರವಾಗಿರುವದು; ಆದ್ದರಿಂದ ಜಾಣರಾದವರು ಇದೆಲ್ಲವನ್ನೂ ತಮ್ಮಂತೆಯೇ ನೋಡತಕ್ಕದ್ದು. ಅಸುರ ಭಾವವನ್ನು ಬಿಟ್ಟು ನಾವೆಲ್ಲರೂ ಪರಮಾನಂದವನ್ನು ಹೊಂದುವದಕ್ಕೆ ತಕ್ಕ ಯತ್ನವನ್ನು ಮಾಡಬೇಕು; ಯಾವಾತನ ಹೃದಯದಲ್ಲಿ ಆ ಕೇಶವನು ನೆಲೆಸುವನೋ ಅವನಿಗೆ ಏತರಿಂದಲೂ ನಾಶವಾಗದ ನಿತ್ಯಾನಂದವು ದೊರಕುವದು. ಆದ್ದರಿಂದ ಈ ಅಸಾರವಾದ ಸಂಸಾರದಲ್ಲಿ ಕಾಣಬರುವ ಯಾವ ಜನ್ಮದಿಂದಲೂ ತೃಪ್ತವಾಗಬಾರದು; ಎಲ್ಲೆಲ್ಲಿಯೂ ಸಮತ್ವಬುದ್ಧಿಯನ್ನು ಹೊಂದಿ ಆ ಸಮತ್ವದಿಂದಲೇ ಅಚ್ಯುತನ ಆರಾಧನೆಯನ್ನು ಮಾಡಬೇಕು. ಆತನು

ಪ್ರಸನ್ನನಾದರೆ ಏನುತಾನೆ ಲಭಿಸಲಾರದು? ಧರ್ಮ, ಅರ್ಥ, ಕಾಮ- ಇವುಗಳು ಕೂಡ ತುಚ್ಛವಾಗಿರುತ್ತವೆ; ಅನಂತವಾಗಿರುವ ಬ್ರಹ್ಮವೃಕ್ಷವನ್ನು ಆಶ್ರಯಿಸಿದಾತನು ಮಹಾಫಲವಾದ ನಿತ್ಯಾನಂದರೂಪಕೈವಲ್ಯವನ್ನೇ ಪಡೆಯುವನು.

★★★★★

# ಪೃಥುರಾಜನಿಗೆ ಸನತ್ಕುಮಾರರು ಮಾಡಿದ ಉಪದೇಶ

**7-5-1935**

**ಶ್ರೀ ಎಸ್. ವಿಠ್ಠಲಶಾಸ್ತ್ರಿಗಳು**

ಪೃಥುರಾಜನು ಸನಕಾದಿಮಹರ್ಷಿಗಳನ್ನು ಸತ್ಕಾರಪೂರ್ವಕವಾಗಿ ಬರಮಾಡಿಕೊಂಡು ''ಪೂಜ್ಯರೆ, ಭಕ್ತಾನುಗ್ರಹಾರ್ಥವಾಗಿ ಪರಮಾತ್ಮನೇ ಸಿದ್ಧರೂಪರಾದ ತಮ್ಮಂಥವರ ರೂಪಿನಿಂದ ಸಂಚರಿಸುತ್ತಾನೆಂದು ನನ್ನ ನಂಬಿಕೆ. ಈ ಸಂಸಾರದಲ್ಲಿ ಯಾವ ಮಾರ್ಗದಿಂದ ನಡೆದುಕೊಂಡರೆ ನಮ್ಮಗಳಿಗೆ ಕ್ಷೇಮವುಂಟಾದೀತು? ದಯವಿಟ್ಟು ತಿಳಿಸಬೇಕು'' - ಎನ್ನಲು ಸನತ್ಕುಮಾರರು ಹೀಗೆಂದು ಅಪ್ಪಣೆಕೊಡಿಸಿದರು:

ಎಲೈ, ಮಹಾರಾಜನೆ, ಎಲ್ಲರಿಗೂ ಹಿತವಾಗಲೆಂದು ನೀನು ಉತ್ತಮವಾದ ಪ್ರಶ್ನೆಯನ್ನು ಮಾಡಿದ್ದೀಯೆ. ಮುಖ್ಯವಾಗಿ ಶಾಸ್ತ್ರಗಳಲ್ಲೆಲ್ಲ ಕ್ಷೇಮಕ್ಕೆ ಕಾರಣವೆಂದು ಹೇಳಿರುವ ಉಪಾಯವು ಒಂದೇ; ಸರ್ವಾಂತಃ ಕರಣಸಾಕ್ಷಿಯಾಗಿರುವ ನಿರ್ಗುಣಪರಮಾತ್ಮನಲ್ಲಿ ದೃಢವಾದ ಭಕ್ತಿಯೇ ಆ ಉಪಾಯವು. ಆ ಭಕ್ತಿಯು ಉಂಟಾಗುವದಕ್ಕೆ ಶ್ರದ್ಧೆ, ಭಾಗವತಧರ್ಮಾಚರಣೆ, ತತ್ತ್ವವಿಚಾರ, ಅಧ್ಯಾತ್ಮಯೋಗನಿಷ್ಠೆ, ಯೋಗೀಶ್ವರರಾದ ಸಾಧುಗಳ ಉಪಾಸನೆ, ಪುಣ್ಯಶ್ರವಣನಾದ ಪರಮಾತ್ಮನ ಕಥಾಶ್ರವಣ, ವಿಷಯೇಂದ್ರಿಯಗಳ ವಿಚಾರದಲ್ಲಿಯೇ ತತ್ಪರರಾದವರ ಸಹವಾಸವನ್ನು ಬಿಟ್ಟು ಅವರ ಗೋಜಿಗೆ ಹೋಗದೆ ಏಕಾಂತವಾಸದಲ್ಲಿದ್ದುಕೊಂಡು ಪರಮಾತ್ಮನ ಗುಣಗಳೆಂಬ ಅಮೃತವನ್ನು ಪಾನಮಾಡುತ್ತಾ ಇದ್ದು, ಅಹಿಂಸೆ, ಪರಮಹಂಸರ ಆಚರಣೆ,

ಪರಮಾತ್ಮನ ಸ್ಮರಣೆ, ಯಮನಿಯಮಗಳು; ಮತ್ತೊಬ್ಬರನ್ನು ನಿಂದಿಸದೆ ಕಂಡಕಂಡ ಕರ್ಮಗಳಿಗೆ ಹರಿಯದೆ ಶೀತೋಷ್ಣಗಳನ್ನು ಸಹಿಸಿಕೊಂಡು ಪರಮಾತ್ಮನ ಗುಣಗಳನ್ನು ಗಾನಮಾಡುತ್ತಿರುವದು – ಇವುಗಳೆಲ್ಲವೂ ಕಾರಣವಾಗುವವು.

ಯಾವನು ಈ ಸಾಧನಗಳುಳ್ಳವನಾಗಿ ಸದ್ಗುರೂಪದೇಶದಿಂದುಂಟಾದ ಬ್ರಹ್ಮನಿಷ್ಠೆಯಿಂದ ಜ್ಞಾನವೈರಾಗ್ಯಗಳನ್ನು ಹೊಂದಿ ಕರ್ಮಾಶಯವನ್ನೆಲ್ಲ ಸುಟ್ಟುಹಾಕುವನೋ ಅವನು ಎಲ್ಲೆಲ್ಲಿಯೂ ಪರಮಾತ್ಮನನ್ನೇ ಕಾಣುತ್ತಿರುವನು. ಆದರೆ ಯಾವನು ಕರ್ಮಾಶಯವನ್ನೇ ವೃದ್ಧಿಗೊಳಿಸಿಕೊಂಡಿರುವನೋ ಅವನು ಭೇದದೃಷ್ಟಿಯುಳ್ಳವನಾಗಿ ವಿಷಯಗಳ ಸೆಳೆತಕ್ಕೆ ಮನಸ್ಸನ್ನು ಬಿಟ್ಟುಕೊಟ್ಟು ಜ್ಞಾನಭ್ರಷ್ಟನಾಗಿ ಕೆಟ್ಟುಹೋಗುವನು. ಹೊರಗಿನವಿಷಯಗಳ ಧ್ಯಾನದಿಂದ ತನ್ನ ಸ್ವಾರ್ಥವನ್ನು ಕೆಡಿಸಿಕೊಳ್ಳುವದಕ್ಕಿಂತ ಮನುಷ್ಯನಿಗೆ ಹೆಚ್ಚಿನ ಕೇಡು ಉಂಟಾಗಲಾರದು. ಆದ್ದರಿಂದ ಪುರುಷಾರ್ಥಗಳನ್ನೆಲ್ಲ ಹಾಳುಮಾಡುವ ವಿಷಯಸಂಗವನ್ನು ಮನುಷ್ಯನು ಎಂದ್ದಿಗೂ ಬೆಳೆಯಿಸಬಾರದು. ಮುಖ್ಯವಾಗಿ ಪುರುಷಾರ್ಥಗಳಲ್ಲೆಲ್ಲ ಮೋಕ್ಷವೇ ಹೆಚ್ಚಿನದಾದ್ದರಿಂದ ಅದನ್ನು ತಪ್ಪಿಸುವ ಕೆಲಸವನ್ನು ಮಾಡಲೇಬಾರದು.

ಆದ್ದರಿಂದ ಎಲೈ ರಾಜನೆ, ನೀನು ಎಲ್ಲಾ ಜೀವರುಗಳ ಹೃದಯದಲ್ಲಿ ಪ್ರತ್ಯಗಾತ್ಮರೂಪದಿಂದ ಬೆಳಗುತ್ತಿರುವ ಭಗವಂತನನ್ನು ಆತ್ಮನೇ ನಾನು' ಎಂದು ತಿಳಿದು ಹಗ್ಗದಲ್ಲಿ ಹಾವಿನಂತೆ ಸದಸದಾತ್ಮಕವಾದ ಪ್ರಪಂಚವೆಲ್ಲವೂ ಆತನಲ್ಲಿಯೇ ಮಾಯೆಯಿಂದ ತೋರುತ್ತಿರುವದೆಂದು ನಿಶ್ಚಯಿಸಿ ನಿತ್ಯಶುದ್ಧಬುದ್ಧ ಮುಕ್ತಸ್ವಭಾವನಾದ ಆತನನ್ನೇ ಶರಣುಹೊಂದು. ಯಾವನ ಚರಣಾರವಿಂದದ ಭಕ್ತಿಯಿಂದ ಸತ್ಪುರುಷರು ಕರ್ಮಾಶಯದ ಗಂಟನ್ನೆಲ್ಲ ಕಿತ್ತುಹಾಕುವರೋ ಅಂಥ ಅಮೃತಸ್ವರೂಪನಾದ ವಾಸುದೇವನನ್ನು ಭಜಿಸು. ಈ ಸಂಸಾರವೆಂಬ ಮಹಾ ಸಮುದ್ರದಲ್ಲಿ ಅರಿಷಡ್ವರ್ಗಗಳೆಂಬ ದೊಡ್ಡ ದೊಡ್ಡ ಮೊಸಳೆಗಳಿರುವದರಿಂದ ಇದನ್ನು ಹಡಗಾಗಲಿ ನಾವಿಕನಾಗಲಿ ಇಲ್ಲದೆ ದಾಟುವದು ಕಷ್ಟವು ; ಆದ್ದರಿಂದ ನೀನು ಆ ಶ್ರೀಹರಿಯ ಚರಣವನ್ನೇ ಹರಿಗೋಲಾಗಿ ಮಾಡಿಕೊಂಡು ದುಃಖವೆಂಬ ಕಡಲನ್ನು ದಾಟುವನಾಗು.''

★★★★★

# ಸುಷುಪ್ತಮೌನ

**9-5-1935**

**ಶ್ರೀಶ್ರೀಗಳವರು**

**ವಾಸಿಷ್ಠರಾಮಾಯಣದ ನಿರ್ವಾಣಪ್ರಕರಣದಲ್ಲಿ ಅರವತ್ತೆಂಟನೆಯ** ಸರ್ಗದಲ್ಲಿ ಶ್ರೀರಾಮರಿಗೆ ವಸಿಷ್ಠರು ಸುಷುಪ್ತಮೌನವನ್ನು ಉಪದೇಶಮಾಡಿರುತ್ತಾರೆ. ವಾಙ್ಮೌನ, ಅಕ್ಷಮೌನ, ಕಾಷ್ಠಮೌನ- ಎಂಬ ಮೂರು ಬಗೆಯ ಮೌನಗಳಿಗಿಂತಲೂ ಮಿಗಿಲಾದ ಒಂದು ಬಗೆಯ ಮೌನವಿದೆ- ಯಾವ ಮಾತನ್ನೂ ಆಡದೆ ಇರುವದು ವಾಙ್ಮೌನವು. ವಾಙ್ಮೌನಿಯ ಮಿಕ್ಕ ಇಂದ್ರಿಯಗಳು ಕೆಲಸಮಾಡುತ್ತಲೇ ಇರುವವು; ಆದರೆ ಅಕ್ಷಮೌನಿಯು ಎಲ್ಲಾ ಇಂದ್ರಿಯಗಳನ್ನೂ ಬಿಗಿಹಿಡಿದಿರುತ್ತಾನೆ. ಇಂದ್ರಿಯಗಳನ್ನು ಬಿಗಿಹಿಡಿಯುವದಲ್ಲದೆ, ಯಾವದೊಂದು ಶರೀರವ್ಯಾಪಾರವೂ ಆಗದ ಹಾಗೆ ಕಟ್ಟಿಗೆಯಂತೆ ಇರುವದು ಕಾಷ್ಠಮೌನವು. ಇದುವರೆಗೆ ಹೇಳಿದ ಮೂರು ಬಗೆಯ ಮೌನಿಗಳಿಗೂ ಮನೋ ಮೌನವು ಮಾತ್ರ ಸಾಯುವವರೆಗೂ ಸಿದ್ಧಿಸುವದಿಲ್ಲ. ಆದರೆ ಯಾವನು ಜೀವನ್ಮುಕ್ತನೋ ಅವನು ಮಾತ್ರ ಮನೋಮೌನವನ್ನು ಸಂಪಾದಿಸಿರುವನು; ಅವನೇ ಸುಷುಪ್ತಮೌನವೆಂಬ ನಾಲ್ಕನೆಯ ಮೌನವನ್ನು ಪಡೆದುಕೊಂಡಿರುವನು.

ಅಯ್ಯ ರಾಮನೆ, ಮೊದಲಿನ ಮೂರು ಬಗೆಯ ಮೌನಗಳಲ್ಲಿ ಚಿತ್ತವು ಯಾವಾಗಲೆಂದರೆ ಆಗ ಅರಳಿಕೊಳ್ಳುವದಕ್ಕೆ ಸಿದ್ಧವಾಗಿರುವದರಿಂದ ತಿಳಿದವರು ಅವುಗಳನ್ನು ಆದರಿಸುವದಿಲ್ಲ. ಆದರೆ ನಾಲ್ಕನೆಯದಾದ ಸುಷುಪ್ತಮೌನವು ಕೇಳಿದ ಮಾತ್ರಕ್ಕೆ ಮಂಗಳವನ್ನುಂಟುಮಾಡುವದು. ಈ ಮೌನದಲ್ಲಿ ಮೂರು ಬಗೆಯ ಪ್ರಾಣಾಯಾಮವನ್ನೇನೂ ಮಾಡಬೇಕಾದದ್ದಿರುವದಿಲ್ಲ, ಇಂದ್ರಿಯಗಳನ್ನು ಹೊರಕ್ಕೆ ಬಿಡತಕ್ಕದ್ದಾಗಲಿ ಒಳಕ್ಕೆ ಎಳೆದುಕೊಳ್ಳತಕ್ಕದ್ದಾಗಲಿ ಇರುವದಿಲ್ಲ. ಈ ಅವಸ್ಥೆಯಲ್ಲಿರುವಾತನ ಚಿತ್ತವು ಚಿತ್ತವಲ್ಲ, ಅಚಿತ್ತವೂ ಅಲ್ಲ; ಅದು ಸತ್ತೆಂದಾಗಲಿ ಅಸತ್ತೆಂದಾಗಲಿ ಸದಸದ್ವ್ಯತಿರಿಕ್ತವೆಂದಾಗಲಿ ಹೇಳುವದಕ್ಕೆ ಬರುವದಿಲ್ಲ. ತನ್ನಲ್ಲಿ ಯಾವದೊಂದು ವಿಭಾಗವೂ ಇಲ್ಲದೆ ತನ್ನ ನಿಲುಗಡೆಗೆ ಯಾವದೊಂದು

ಅಭ್ಯಾಸವನ್ನೂ ಬಯಸದೆ, ಧ್ಯಾನಮಾಡಿದರೂ ಮಾಡದೆ ಇದ್ದರೂ ಅನಾದ್ಯನಂತವಾದ ಆತ್ಮರೂಪದಲ್ಲಿಯೇ ಇರುತ್ತಿರುವದು. ಈ ನಾನಾವಿಧವಾದ ಜಗತ್ತಿನ ಭ್ರಮೆಯು ಯಾವದರ ಆಶ್ರಯದಲ್ಲಿರುವದೋ ಅದರ ತತ್ತ್ವವನ್ನು ತಿಳಿದುಕೊಂಡು ನಿಸ್ಸಂಶಯವಾಗಿರುವದೇ ಸುಷುಪ್ತಮೌನವು. ಬಗೆಬಗೆಯ ಜ್ಞಾನಗಳ ರೂಪಗಳಲ್ಲಿರುವ ಆತ್ಮರೂಪನಾದ ಶಿವನಿಂದಲೇ ಇದೆಲ್ಲವೂ ವ್ಯಾಪ್ತವಾಗಿ ರುವದು ಎಂದು ತಿಳಿದಿರುವ ಸ್ಥಿತಿಯೇ ಸುಷುಪ್ತಮೌನವು. ಎಲ್ಲವೂ ಆಕಾಶವು, ಆಕಾಶವೆಂಬುದೂ ಇಲ್ಲ; ಇದೆಲ್ಲವೂ ಉಂಟು, ಇದೊಂದು ಇಲ್ಲ ಎಂದು ನಿಶ್ಚಯಿಸಿ ಶಾಂತವಾಗಿ ಸಮಸ್ಥಿತಿಯಲ್ಲಿರುವ ಚಿತ್ತಸ್ಥಿತಿಯೇ ಸುಷುಪ್ತಮೌನವು. ಸರ್ವಶೂನ್ಯವೂ ನಿರಾಲಂಬವೂ ಶಾಂತಿಚೈತನ್ಯಮಾತ್ರ ಸ್ವರೂಪವೂ ಆಗಿರುವ ಸದಸದ್ವಿಲಕ್ಷಣವಾದ ಆತ್ಮಸ್ಥಿತಿಯೇ ಉತ್ತಮವಾದ ಸುಷುಪ್ತಮೌನವು; ಭಾವವೆಂದಾಗಲಿ ಅಭಾವವೆಂದಾಗಲಿ ಯಾವ ಸ್ಥಿತಿಯನ್ನೂ ಹೊಂದದೆ ಇರುವ ಜ್ಞಾನಸ್ವರೂಪವೇ ಉತ್ಕೃಷ್ಟವಾದ ಸುಷುಪ್ತಮೌನವು. ಯಾವದೊಂದು ವೃತ್ತಿಯೂ ಇಲ್ಲದೆ ಅತ್ಯಂತಸಮತ್ವವನ್ನು ಹೊಂದಿದ ಜ್ಞಾನವೃತ್ತಿಯಿಂದ ಹಿಂತಿರುಗದಿರುವದೇ ಅಕ್ಷಯವಾದ ಮೌನವು. ನಾನಿಲ್ಲ, ಮತ್ತೊಂದಿಲ್ಲ, ಮನಸ್ಸಿಲ್ಲ, ಮಾನಸವೃತ್ತಿಯಿಲ್ಲ ಎಂದು ಯಾವದೊಂದೂ ಜ್ಞಾನಕ್ಕೆ ಭಾಸವಾಗದಿರುವದೇ ಅತ್ಯುತ್ಕೃಷ್ಟವಾದ ಮೌನವು. ಈ ಜಗತ್ತಿನಲ್ಲಿರುವ ನಾಮರೂಪವೆಲ್ಲ ನನ್ನ ಸ್ವರೂಪವೇ ಎಂದು ತಿಳಿವುದೇ ಸುಷುಪ್ತಿಮೌನವು. ಈ ಸುಷುಪ್ತಬೋಧವು ನಾಶರಹಿತವಾಗಿರುವದು. ಇದೇ ನಿರ್ಮಲವಾದ ತುರ್ಯವು ಮತ್ತು ತುರ್ಯಾತೀತವು. ಯಾವನು ಈ ಸುಷುಪ್ತಿಸಮಾಧಿಯನ್ನು ಅಥವಾ ತುರ್ಯಸಮಾಧಿಯನ್ನು ಅಥವಾ ತುರ್ಯಾತೀತಸಮಾಧಿಯನ್ನು ಎಚ್ಚರದಲ್ಲಿಯೇ ಹೊಂದಿರುವನೋ ಅವನು ಸಕಲ ವ್ಯವಹಾರಗಳನ್ನೂ ಶಾಂತನಾಗಿ ನಡೆಯಿಸುತ್ತಲೇ ಇದ್ದರೂ ಅವನು ನಿತ್ಯವೂ ವಿದೇಹನೇ ಆಗಿರುವನು. ಎಲೈ ರಾಮನೆ, ಈ ರೀತಿಯಲ್ಲಿ ಸಂಸಾರವಾಸನೆಯನ್ನು ತಿರಸ್ಕರಿಸಿಕೊಂಡು ಹೊರಗಿನ ರೂಪದಲ್ಲಿ ಈ ಯಾವದೊಂದೂ ಇಲ್ಲ, ಆತ್ಮರೂಪದಲ್ಲಿ ಎಲ್ಲವೂ ಇದೆ ಎಂಬ ಜ್ಞಾನವನ್ನು ಹೊಂದಿ ಚಿದಾಕಾಶರೂಪದಲ್ಲಿಯೇ ನಿಲ್ಲುವನಾಗು- ಎಂದು ವಸಿಷ್ಠರು ಉಪದೇಶಮಾಡಿರುತ್ತಾರೆ.

★★★★★

# ಬ್ರಹ್ಮಗೀತೆ

**10-5-1935**

**ಬ್ರ॥ ಶ್ರೀ॥ ವಿಠ್ಠಲಶಾಸ್ತ್ರಿಗಳವರು**

**ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದ ಉಪರಿಭಾಗಕ್ಕೆ ಸೇರಿದ ಬ್ರಹ್ಮಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ** - ನಾನು ಎಂಬ ಅರಿವಿಗೆ ವಿಷಯವಾಗಿ ನಮ್ಮಲ್ಲಿ ತೋರುತ್ತಿರುವ ವಸ್ತುವೇ ನಿಜವಾಗಿ ಜ್ಞಾನಸ್ವರೂಪನಾದ ಆತ್ಮನು. ಇದು ಪರಮಾತ್ಮನ ಸ್ವರೂಪವೇ ಆಗಿದ್ದರೂ ಅವಿದ್ಯೆಯಿಂದ ಸಂಸಾರಿಯಾಗಿರುವಂತೆ ತೋರುತ್ತಿರುವದು. ಆದರೆ ಮುಮುಕ್ಷುವಾದವನು ಶಾಂತ್ಯಾದಿಸಾಧನಗಳನ್ನು ಅಳವಡಿಸಿಕೊಂಡು ಗುರುವಿನ ಸನ್ನಿಧಿಯನ್ನು ಸೇರಿ ಮಹಾವಾಕ್ಯವನ್ನು ಶ್ರವಣಮಾಡಿ ಮನನನಿದಿಧ್ಯಾಸನಗಳನ್ನು ಸಾಧನಮಾಡಿದರೆ ತನ್ನಲ್ಲಿರುವ ಪ್ರತ್ಯಗಾತ್ಮನೇ ಬ್ರಹ್ಮವೆಂಬ ಜ್ಞಾನವುಂಟಾಗುವದು, ಅವಿದ್ಯೆಯು ನಾಶವಾಗುವದು. ಆಗ ಅವಿದ್ಯೆಯ ಅಭಾವವಿರುವದೆಂದು ಅರ್ಥವಲ್ಲ; ಭಾವವೂ ಅಭಾವವೂ ಅಲ್ಲದ ಕೇವಲ ಬ್ರಹ್ಮವೊಂದೇ ಉಳಿದುಕೊಳ್ಳುವದು. ಆದ್ದರಿಂದ ಈಗ ಅವಿದ್ಯೆಯಿದೆಯೆಂದೂ ಅದು ವಿದ್ಯೆಯಿಂದ ನಾಶವಾಗುವದೆಂದೂ ಹೇಳುವದು ಬರಿಯ ವ್ಯವಹಾರವೆಂದು ತಿಳಿಯಬೇಕು. ಪರಬ್ರಹ್ಮವೇ ಬ್ರಹ್ಮರೂಪವಾಗಿಯೂ ಜಗದ್ರೂಪವಾಗಿಯೂ ವಿದ್ಯಾವಿದ್ಯೆಗಳ ರೂಪವಾಗಿಯೂ ಗುರುಶಿಷ್ಯಾದಿರೂಪವಾಗಿಯೂ ತೋರುತ್ತಿರುವದೆಂದೂ ಸಕಲವೂ ಬ್ರಹ್ಮವೇ ಎಂದೂ ತಿಳಿದುಕೊಂಡರೆ ಪ್ರಯೋಜನವೇ ಹೊರತು ಜಗತ್ತು ಮಾಯಾಮಯವೆಂದು ತಿಳಿದರೆ ಸಾಲದು. ಆದರೂ ಪರಮಾದ್ವೈತಜ್ಞಾನಕ್ಕೆ ಈ ಜ್ಞಾನವು ಉಪಕಾರಕವಾಗಿರುವದರಿಂದ ಜಗತ್ತು ಮಿಥ್ಯೆಯೆಂದು ಶ್ರುತಿಯು ಹೇಳುತ್ತಿರುವದು.

ಪರಮಾರ್ಥದೃಷ್ಟಿಯಲ್ಲಿ ನೋಡಿದರೆ ಹೇಗೆಹೇಗೆ ತೋರಿದರೂ ಅದೆಲ್ಲವೂ ಶಿವರೂಪವೆಂದೇ ಜ್ಞಾನಯೋಗಿಯು ತಿಳಿಯುತ್ತಿರುತ್ತಾನೆ; ಅಥವಾ, ತೋರಿದರೆ - ಎಂದಾದರೂ ಏಕೆ ಹೇಳಬೇಕು? ಏಕೆಂದರೆ ಆ ಯೋಗಿಗೆ ಮತ್ತೆ ಯಾವ

ರೂಪದಿಂದಲೂ ತತ್ತ್ವವು ತೋರುವದೇ ಇಲ್ಲ, ಅಲೆಗಳಿಲ್ಲದ ಸಮುದ್ರದಂತೆ ಸ್ವಸ್ವರೂಪದಲ್ಲಿಯೇ ಆತನು ನಿಂತುಬಿಟ್ಟಿರುತ್ತಾನೆ. ಆ ಸ್ಥಿತಿಯನ್ನು ವರ್ಣಿಸುವದಕ್ಕೆ ಅವನಿಂದಲಾಗಲಿ ಹರಿಹರಬ್ರಹ್ಮಾದಿಗಳಿಂದಾಗಲಿ ಶಕ್ಯವಲ್ಲ.

ಇಂಥ ನಿಷ್ಠೆಯನ್ನು ಸದ್ಗುರುವಿನ ಕೃಪಾಕಟಾಕ್ಷದಿಂದ ಪಡೆದುಕೊಳ್ಳಬೇಕು. ಸದ್ಗುರುವನ್ನು ಪರಶಿವನೆಂದೇ ಭಾವಿಸಿ ಸಕಲವನ್ನೂ ತೊರೆದು ಆಲಸ್ಯ ರಹಿತನಾಗಿ ಸೇವೆಮಾಡಬೇಕು. ಅನಾತ್ಮರೂಪವಾದ ದೇಹವನ್ನಾಗಲಿ ಅಷ್ಟೈಶ್ವರ್ಯವನ್ನಾಗಲಿ ಮಂತ್ರತಂತ್ರಗಳನ್ನಾಗಲಿ ಲೌಕಿಕೋಪಾಯಗಳನ್ನಾಗಲಿ ಕೊಡುವಾತನು ನಿಜವಾದ ಗುರುವಲ್ಲ. ಸರ್ವಸಾಕ್ಷಿಯಾದ ಪರಮಾತ್ಮಚೈತನ್ಯವನ್ನು ವಿವೇಚನೆಮಾಡಿ 'ಅದೇ ನೀನು' ಎಂದು ಯಾವಾತನು ತಿಳಿಸಿಕೊಡುವನೋ, ದೃಶ್ಯರೂಪವಾದ ಸಕಲವನ್ನೂ ದೃಗ್ರೂಪನಾದ ಆತ್ಮನಲ್ಲಿಯೇ ಯಾವನು ಲಯಮಾಡಿಸಿ ಪರಮಾದ್ವೈತಜ್ಞಾನವನ್ನೇ ಯಾವನು ಕೊಡುವನೋ, ಅಂಥವನೇ ಗುರುಗಳಿಗೆಲ್ಲ ಗುರು. ಅವನು ನಿಜವಾಗಿ ತನ್ನ ಆತ್ಮಸ್ವರೂಪನೇ ಆಗಿರುವನೆಂದು ತಿಳಿದು ಸರ್ವಯತ್ನದಿಂದಲೂ ಪ್ರಸನ್ನನಾಗಿ ಮಾಡಿಕೊಳ್ಳಬೇಕು – ಎಂಬುದು ಅಧ್ಯಾಯದ ಸಾರಾಂಶವು.

★★★★★

# ಪ್ರಲಯ ಮತ್ತು ಬ್ರಹ್ಮಸ್ವರೂಪದ ವರ್ಣನೆ

**11-5-1935**

**ಶ್ರೀಶ್ರೀಗಳವರು**

**ಭಾಗವತದ ದ್ವಾದಶಸ್ಕಂಧದಲ್ಲಿ – ನಾಲ್ಕನೆಯ ಅಧ್ಯಾಯದಲ್ಲಿ** ನೈಮಿತ್ತಿಕವೇ ಮುಂತಾದ ನಾಲ್ಕುಬಗೆಯ ಪ್ರಲಯಗಳನ್ನು ವರ್ಣನೆಮಾಡಿರುತ್ತದೆ. ಒಂದು ಸಾವಿರದ ಚತುರ್ಯುಗವಾದರೆ ಬ್ರಹ್ಮನಿಗೆ ಒಂದು ಹಗಲು, ಆಮೇಲೆ ಬ್ರಹ್ಮನಿಗೆ ಅಷ್ಟೇ ಕಾಲ ರಾತ್ರಿಯಾಗುವದು. ಪ್ರಪಂಚವನ್ನು ಸೃಷ್ಟಿಮಾಡುವ

ಬ್ರಹ್ಮನು ಜಗತ್ತೆಲ್ಲವನ್ನೂ ತನ್ನಲ್ಲಿ ಉಪಸಂಹಾರಮಾಡಿಕೊಂಡು ನಿದ್ರಿಸುವ ನಿಮಿತ್ತದಿಂದಾಗುವ ಪ್ರಲಯವೇ **ನೈಮಿತ್ತಿಕಪ್ರಲಯವು**. ಬ್ರಹ್ಮನಿಗೆ ಎರಡು ಪರಾರ್ಧದಷ್ಟು ಕಾಲವು ಮುಗಿಯಲು ಏಳು ಪ್ರಕೃತಿಗಳೂ ಪ್ರಲಯವಾಗುವವು. ಅದಕ್ಕೆ **ಪ್ರಾಕೃತಿಕಪ್ರಲಯವೆಂದು** ಹೆಸರು. ಆ ಪ್ರಲಯದಲ್ಲಿ ಪುರುಷನ ಮತ್ತು ಅವ್ಯಕ್ತದ ಶಕ್ತಿಗಳೆಲ್ಲವೂ ಕಾಲವಶದಿಂದ ಲಯವಾಗಿರುವವು. ಬ್ರಹ್ಮವೇ ಮುಂತಾದ ಸಕಲಭೂತಗಳೂ ಕಾಲವಶವಾಗಿ ಪರಿಣಾಮವಾಗುತ್ತಲೇ ಇರುವದರಿಂದ ಆ ದೃಷ್ಟಿಯಿಂದ ಅವುಗಳಿಗೆಲ್ಲ ನಿತ್ಯವೂ ಉತ್ಪತ್ತಿಪ್ರಲಯಗಳು ಆಗುತ್ತಲೇ ಇರುವವೆಂದು ಹೇಳಬೇಕಾಗುವದಲ್ಲವೆ? ಈ ಪ್ರಲಯವೇ **ನಿತ್ಯಪ್ರಲಯವೆನಿಸುವದು**. ಇನ್ನು ಆತ್ಯಂತಿಕ ಪ್ರಲಯವನ್ನು ವಿವರಿಸಲಾಗುವದು. ಜಾಗ್ರತ್ತು, ಸ್ವಪ್ನ, ಸುಷುಪ್ತಿ- ಎಂಬ ಮೂರೂ ಬುದ್ಧಿಯ ವೃತ್ತಿಗಳಾದ್ದರಿಂದ ನಿಜವಾಗಿ ಪ್ರತ್ಯಗಾತ್ಮನಲ್ಲಿ ಇವುಗಳ ಸೋಂಕು ಒಂದಿಷ್ಟೂ ಇಲ್ಲವಷ್ಟೆ? ಇದರಂತೆಯೇ ಪರಬ್ರಹ್ಮದಲ್ಲಿಯೂ ಜಗತ್ತು ಸೃಷ್ಟಿಸ್ಥಿತಿಲಯಗಳನ್ನು ಹೊಂದುತ್ತಿದ್ದರೂ ಇದರ ಸೋಂಕು ಬ್ರಹ್ಮಕ್ಕೆ ಇಲ್ಲವೇ ಇಲ್ಲವೆಂದು ನಿಶ್ಚಯಿಸಬೇಕು. ಮೊದಲಲ್ಲಿಯೂ ಕೊನೆಯಲ್ಲಿಯೂ ಇಲ್ಲದ ವಸ್ತುವು ನಡುವೆ ತೋರಿದರೂ ಅದು ಆತ್ಮನಿಗಿಂತ ಬೇರೆಯಿಲ್ಲವಾದ್ದರಿಂದ ಆ ತೋರಿಕೆಯ ರೂಪದಿಂದ ಇಲ್ಲವೇ ಇಲ್ಲವೆಂದೂ ಆತ್ಮರೂಪದಿಂದಲೇ ಅದು ಸತ್ಯವಾಗಿರುವದೆಂದೂ ಗೊತ್ತುಮಾಡಿಕೊಳ್ಳಬೇಕು. ಪರಮಾರ್ಥಸತ್ಯವಾದ ಆತ್ಮ ವಸ್ತುವಿನಲ್ಲಿ ನಾನಾತ್ವವೆಂಬುದು ಒಂದಿಷ್ಟೂ ಇರುವದಿಲ್ಲ. ಹೇಗೆ ಆಕಾಶದಲ್ಲಿ ಘಟಾಕಾಶ ಮಠಾಕಾಶವೆಂದು ಮುಂತಾಗಿ ಉಪಾಧಿಗಳಿಂದ ಬೇರೆಬೇರೆಯಾಗಿರುವದೋ, ಹೇಗೆ ಬೆಂಕಿಯು ತಾನು ಸುಡುವ ವಸ್ತುವಿನ ಆಕಾರಭೇದದಿಂದ ಬೇರೆಬೇರೆಯಾಗಿರುವದೋ ಮತ್ತು ಹೇಗೆ ಗಾಳಿಯು ಕೊಳಲಿನಲ್ಲಿ ಬೇರೆ ಬೇರೆಯ ಸ್ಥಾನಭೇದದಿಂದ ಬೇರೆಬೇರೆಯ ಸ್ವರವೆಂಬ ವ್ಯವಹಾರಕ್ಕೆ ವಿಷಯವಾಗಿರುವದೋ ಅದರಂತೆ ಒಂದೇ ಪರಮಾತ್ಮವಸ್ತುವು ಭಿನ್ನವಾಗಿರುವದೆಂಬ ವ್ಯವಹಾರವೂ ಉಂಟಾಗಿರುವದೇ ಹೊರತು ಈ ಭೇದವು ಪರಮಾರ್ಥವಲ್ಲ. ಸೂರ್ಯನಿಂದ ಉಂಟಾಗಿರುವ ಮೋಡವು ಸೂರ್ಯನ ಬೆಳಕಿನಿಂದಲೇ ಬೆಳಗುತ್ತಿದ್ದರೂ ಸೂರ್ಯಾಂಶವಾದ ಚಕ್ಷುರಿಂದ್ರಿಯಕ್ಕೆ ಮರೆಯೆನಿಸಿರುವದೋ ಇದರಂತೆ ಬ್ರಹ್ಮದಲ್ಲಿ ಆರೋಪಿತವಾಗಿರುವ ಅಹಂತೆಯು ಬ್ರಹ್ಮದಿಂದಲೇ ಬೆಳಗುತ್ತಾ ಬ್ರಹ್ಮಾಂಶನಾದ ಆತ್ಮನಿಗೆ ಬಂಧಕವಾಗಿರುವದು.

ಮೋಡವು ಹೋಗುತ್ತಲೂ ಹೇಗೆ ಚಕ್ಷುರಿಂದ್ರಿಯವು ತನ್ನ ಸ್ವರೂಪವಾದ ಸೂರ್ಯನನ್ನು ಕಂಡುಕೊಳ್ಳುವದೋ ಅದರಂತೆ ಜೀವನಲ್ಲಿರುವ ಈ ಅಹಂತೆಯು ನಾಶವಾಗುತ್ತಲೂ ಅವನು ತನ್ನ ಸ್ವರೂಪವಾದ ಬ್ರಹ್ಮವನ್ನು ಕಂಡುಕೊಳ್ಳುತ್ತಾನೆ. ಹೀಗೆ ತನ್ನ ಬಂಧವನ್ನು ತೊಲಗಿಸಿಕೊಂಡು ಆತ್ಮಾನುಭವವನ್ನು ಹೊಂದುವದನ್ನೇ ತಿಳಿದವರು **ಆತ್ಯಂತಿಕ ಪ್ರಲಯ**ವೆಂದು ಕರೆಯುತ್ತಾರೆ- ಎಂದು ಶುಕರು ಭಗವಂತನ ಲೀಲಾಕಥೆಗಳನ್ನು ಉಪಸಂಹಾರಮಾಡಿದರೆಂದು ಅಧ್ಯಾಯದ ಸಾರವು.

**ಐದನೆಯ ಅಧ್ಯಾಯದಲ್ಲಿ** ಶುಕಾಚಾರ್ಯರು ಪರೀಕ್ಷಿತನಿಗೆ ಮಾಡಿದ ಬ್ರಹ್ಮೋಪದೇಶವಿದೆ. ಅವರು ಅಪ್ಪಣೆಕೊಡಿಸಿರುವದೇನೆಂದರೆ- ಎಲೈ ರಾಜನೆ, ನಾನು ಸಾಯುವೆನೆಂಬ ಈ ಪಶುಬುದ್ಧಿಯನ್ನು ಬಿಡು; ನೀನು ಹಿಂದೆ ಇಲ್ಲದೆ ಇರಲಿಲ್ಲ, ಈಗ ಹುಟ್ಟಲಿಲ್ಲ, ಮುಂದೆ ಸಾಯುವದೂ ಇಲ್ಲ. ಬೀಜಾಂಕುರ ನ್ಯಾಯದಿಂದ ಹುಟ್ಟಿ ಸಾಯುತ್ತಿರುವ ಈ ದೇಹಾದಿಗಳಿಗಿಂತ ಅತ್ಯಂತ ಭಿನ್ನನಾಗಿ ಇರುತ್ತೀಯೆ. ಕನಸಿನಲ್ಲಿ ತನ್ನ ತಲೆಯನ್ನು ತಾನೇ ಕತ್ತರಿಸಿಕೊಂಡದ್ದನ್ನು ಕಾಣುವಂತೆ ದೇಹದ ಮರಣಾದಿಗಳನ್ನು ಕಾಣುವ ಆತ್ಮನು ಅದಕ್ಕಿಂತಲೂ ವಿಲಕ್ಷಣನೆಂದು ತಿಳಿದುಕೊ. ಗಡಿಗೆಯು ಒಡೆದುಹೋದರೆ ಅದರೊಳಗಿನ ಆಕಾಶವು ಮೊದಲಿನಂತೆಯೇ ಹೇಗೆ ಆಕಾಶವೇ ಆಗಿರುವದೋ ಅದರಂತೆ ದೇಹವು ಸತ್ತರೂ ಜೀವನು ಮತ್ತೆ ಬ್ರಹ್ಮವೇ ಆಗುವನು. ದೇಹಾದಿಗಳೆಲ್ಲ ಮಾಯಿಕವಾದ ಮನೋವಿಕಾರಗಳು. ಎಣ್ಣೆ, ಕಂಬ ಬತ್ತಿ, ಅಗ್ನಿ- ಇವುಗಳ, ಸಂಯೋಗವಿರುವವರೆಗೇ ದೀಪವು ದೀಪವೆನಿಸಿರುವಂತೆ ಸತ್ತ್ವರಜಸ್ತಮೋಗುಣಗಳಿಂದ ಇವುಗಳು ತೋರುತ್ತಲೂ ಹಾರುತ್ತಲೂ ಇರುವವು. ಇವುಗಳ ಗುಣಗಳು ಸ್ವಯಂಪ್ರಕಾಶವಾಗಿಯೂ ವ್ಯಕ್ತಾವ್ಯಕ್ತಗಳಿಗೆ ಭಿನ್ನನಾಗಿಯೂ ಇರುವ ಆತ್ಮನಿಗೆ ಒಂದಿಷ್ಟೂ ಅಂಟುವದಿಲ್ಲ- ಅವನು ಆಕಾಶದಂತೆ ಇದೆಲ್ಲಕ್ಕೂ ಆಧಾರನೂ ನಿತ್ಯನೂ ಅನಂತನೂ ಆಗಿರುತ್ತಾನೆ. ಎಲೈ ರಾಜನೆ. ಈ ರೀತಿಯಲ್ಲಿ ನಿನ್ನ ಸ್ವರೂಪವಾದ ಆತ್ಮನನ್ನು ಆತ್ಮಸ್ವರೂಪದಿಂದಲೇ ಅರಿತುಕೊಳ್ಳುವನಾಗು; ಪರಮೇಶ್ವರನ ಚಿಂತೆಯಿಂದ ಯುಕ್ತಿಯಿಂದೊಡಗೂಡಿ ವಿಚಾರಮಾಡುವಾಗ ನಿನಗೆ ಇದು ಸುಲಭವಾಗಿ ತಿಳಿಯುವದು. ಋಷಿಯ

ಶಾಪದಿಂದ ಪ್ರೇರಿತನಾದ ತಕ್ಷಕನು ಬಂದು ನಿನ್ನನ್ನು ಆಗ ಕಚ್ಚಲಾರನು; ಏಕೆಂದರೆ ಮೃತ್ಯುವಾಗಿರುವ ಈಶ್ವರನನ್ನು ಮೃತ್ಯುಗಳು ಕಚ್ಚಲಾರವು. 'ನಾನು ಪರಂಧಾಮನಾದ ಬ್ರಹ್ಮವು' 'ನಾನು ಪರಮಪದವಾದ ಬ್ರಹ್ಮವು' ಎಂದೀ ಪರಿಯಲ್ಲಿ ನಿನ್ನ ಸ್ವರೂಪವನ್ನು ನಿಷ್ಕಲನಾದ ಪರಮಾತ್ಮನಲ್ಲಿಯೇ ನಿಲ್ಲಿಸಿಕೊಳ್ಳುವೆಯಾದರೆ ವಿಷಪೂರಿತವಾದ ಬಾಯಿಂದ ನಿನ್ನ ಕಾಲನ್ನು ತಕ್ಷಕನು ಕಚ್ಚಿ ಚಪ್ಪರಿಸಿದರೂ ಶರೀರವಾಗಲಿ ಪ್ರಪಂಚವಾಗಲಿ ನಿನ್ನ ಸ್ವರೂಪಕ್ಕಿಂತ ಬೇರೆಯಾಗಿರುವದೇ ನಿನಗೆ ಕಾಣದೆ ಹೋಗುವದು. ಇಗೋ ನೀನು ಕೇಳಿದ ಆತ್ಮಸ್ವರೂಪವನ್ನು ನಿನಗೆ ತಿಳಿಸಿರುತ್ತೇನೆ. ವಿಶ್ವಾತ್ಮನಾದ ಶ್ರೀಹರಿಯ ವ್ಯಾಪಾರವನ್ನೂ ಹೇಳಿರುತ್ತೇನೆ. ಮತ್ತೇನಾದರೂ ಕೇಳತಕ್ಕದ್ದಿದ್ದರೆ ಕೇಳು ಎಂದು ಶುಕಾಚಾರ್ಯರು ನುಡಿದರು ಎಂಬುದು ಅಧ್ಯಾಯಾರ್ಥವು.

★★★★★

# ಬ್ರಾಹ್ಮಣನ ಕರ್ತವ್ಯ; ಮೋಕ್ಷದ ಸ್ವರೂಪ

**12-5-1935**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ಮಹಾಭಾರತದಲ್ಲಿ ಶಾಂತಿಪರ್ವದ ಮೋಕ್ಷಧರ್ಮದ ಮುನ್ನೂರ ಇಪ್ಪತ್ತಾರನೆಯ ಅಧ್ಯಾಯದಲ್ಲಿ**, ವೇದವ್ಯಾಸರು ತಮ್ಮ ಮಕ್ಕಳಾದ ಶುಕರಿಗೆ ಸಕಲಧರ್ಮರಹಸ್ಯವನ್ನೂ ಉಪದೇಶಮಾಡಿದ ಬಳಿಕ ಇನ್ನೂ ಏನಾದರೂ ಸಂಶಯವಿದ್ದರೆ ಜನಕರಾಜನಲ್ಲಿಗೆ ಹೋಗಿ ಪರಿಹರಿಸಿಕೊ- ಎಂದು ಅಪ್ಪಣೆಕೊಡಿಸಲಾಗಿ ಶುಕರು ಅದರಂತೆ ಅಲ್ಲಿಗೆ ಬಂದು ಕುಶಲಪ್ರಶ್ನೆಯಾದ ಮೇಲೆ 'ಬ್ರಾಹ್ಮಣನು ಮಾಡತಕ್ಕದ್ದೇನು? ಮೋಕ್ಷದ ಸ್ವರೂಪವೇನು? ಅದನ್ನು ಪಡೆಯುವದು ಹೇಗೆ?' - ಎಂಬ ಪ್ರಶ್ನೆಗಳನ್ನು ಹಾಕಿದರು. ಜನಕನು ಆ ಪ್ರಶ್ನೆಗಳಿಗೆ ಕೊಟ್ಟ ಉತ್ತರವು ಈ ಅಧ್ಯಾಯದಲ್ಲಿ ಇದೆ.

ಬ್ರಾಹ್ಮಣನಾದವನು ಉಪನಯನವಾದ ಬಳಿಕ ಗುರುವಿನ ಬಳಿಯಲ್ಲಿ ಬ್ರಹ್ಮಚರ್ಯದಿಂದಿದ್ದುಕೊಂಡು ವೇದಾಧ್ಯಯನವನ್ನು ಮಾಡಬೇಕು, ಗುರುದಕ್ಷಿಣೆಯನ್ನು ಕೊಟ್ಟು ಮನೆಗೆ ಬಂದು ಮದುವೆಯಾಗಿ ಆಹಿತಾಗ್ನಿಯಾಗಿ ಗೃಹಸ್ಥಾಶ್ರಮಧರ್ಮವನ್ನು ಅನುಸರಿಸಬೇಕು, ಪುತ್ರಪೌತ್ರರು ಉಂಟಾದ ಬಳಿಕ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ವಿರಕ್ತಿಯುಂಟಾದ ಮೇಲೆ ಸಂನ್ಯಾಸಾಶ್ರಮವನ್ನು ಹೊಂದಬೇಕು- ಎಂದು ಜನಕನು ಹೇಳಲು ಶುಕರು 'ಎಲೈ ರಾಜನೆ' ಜ್ಞಾನವುಂಟಾದರೂ ಮೂರು ಆಶ್ರಮಗಳಲ್ಲಿಯೂ ಅವಶ್ಯವಾಗಿ ಇರಲೇಬೇಕೆ?'' ಎಂದು ಕೇಳಿದ್ದಕ್ಕೆ ರಾಜನು ಇಂತೆಂದನು; 'ಎಲೈ ಶುಕಮುನಿಯೆ, ಗುರುವಿನ ಸಂಬಂಧವಿಲ್ಲದೆ ಜ್ಞಾನವಿಲ್ಲ, ಜ್ಞಾನವಿಲ್ಲದೆ ಮೋಕ್ಷವಿಲ್ಲ. ಗುರುವಿನ ಉಪದೇಶದಿಂದ ಜ್ಞಾನವನ್ನು ಹೊಂದಿದವನು ಯಾವಾಗಲೂ ಕೃತಕೃತ್ಯನೇ. ಆದರೂ ಲೋಕಸಂಗ್ರಹಾರ್ಥವಾಗಿಯೂ ಕರ್ಮದ ಅನುಷ್ಠಾನವು ಜನರಿಗೆ ಇಲ್ಲದೆ ಹೋದೀತೆಂಬ ಯೋಚನೆಯಿಂದಲೂ ನಾಲ್ಕು ಆಶ್ರಮಗಳನ್ನು ಏರ್ಪಡಿಸಿರುತ್ತಾರೆ. ಆಶ್ರಮಗಳೆಲ್ಲವನ್ನೂ ಕ್ರಮಕ್ರಮವಾಗಿ ಆಚರಿಸುತ್ತಾ ಎಷ್ಟೋ ಜನ್ಮಗಳನ್ನು ಕಳೆದ ಮೇಲೆಯೇ ಮೋಕ್ಷವೆಂಬುದು ದೊರೆಯುವದು. ಆದರೆ ಕರಣಗಳ ಶುದ್ಧಿಯು ಯಾವಾತನಿಗೆ ಉಂಟಾಗಿರುವದೋ ಅಂಥವನು ಮೊದಲನೆಯ ಆಶ್ರಮದಲ್ಲಿಯೇ ಮುಕ್ತಿಯನ್ನು ಹೊಂದಬಹುದು. ಅಂಥವನಿಗೆ ಉಳಿದ ಮೂರು ಆಶ್ರಮಗಳಿಂದ ಆಗಬೇಕಾದದ್ದೇನು? ಆದ್ದರಿಂದ ಸಾಧಕನಾದವನು ರಾಜಸತಾಮಸದೋಷಗಳನ್ನು ಬಿಟ್ಟು ಸಾತ್ತ್ವಿಕಮಾರ್ಗವನ್ನೇ ಅನುಸರಿಸಿ ತನ್ನಲ್ಲಿಯೇ ಆತ್ಮನನ್ನು ಕಂಡುಕೊಳ್ಳಬೇಕು. ಸರ್ವಭೂತಗಳಲ್ಲಿಯೂ ಒಬ್ಬನೇ ಆತ್ಮನಿರುವನೆಂದೂ ಆ ಒಬ್ಬ ಆತ್ಮನೇ ಸರ್ವಭೂತಗಳಿಗೂ ಆಶ್ರಯನೆಂದೂ ತಿಳಿದಾತನು ಈ ಸಂಸಾರದಲ್ಲಿ ಲಿಪ್ತನಾಗದೆ ಉತ್ತಮವಾದ ಮೋಕ್ಷವನ್ನೇ ಹೊಂದುವನು. ಈ ಅಭಿಪ್ರಾಯವನ್ನೇ ಯಯಾತಿಯು ಹೀಗೆಂದು ವರ್ಣಿಸಿರುತ್ತಾನೆ; ಆತ್ಮನಲ್ಲಿಯೇ ಬೆಳಕಿರುವದು, ಮಿಕ್ಕಲ್ಲಿಲ್ಲ; ಆ ಬೆಳಕು ಎಲ್ಲಾ ಜೀವರಲ್ಲಿಯೂ ಸಮಾನವಾಗಿರುವದು. ಸಮಾಹಿತಚಿತ್ತನಾದವನು ತಾನೇ ಅದನ್ನು ಅನುಭವಕ್ಕೆ ತೆಗೆದುಕೊಳ್ಳಲೂಬಹುದು. ತನ್ನಿಂದ ಮತ್ತೊಬ್ಬರಿಗೆ ಅಂಜಿಕೆಯಿಲ್ಲದೆ, ತಾನು ಮತ್ತೊಬ್ಬರಿಗೆ ಅಂಜದೆ ರಾಗದ್ವೇಷಮುಕ್ತನಾದವನು ಬ್ರಹ್ಮವನ್ನು ಸೇರುತ್ತಾನೆ; ಯಾವ ಪ್ರಾಣಿಗಳಲ್ಲಿಯೂ ಮನೋವಾಕ್ಕಾಯಗಳಲ್ಲಿ

ಪಾಪವನ್ನು ಆಚರಿಸದವನೇ ಬ್ರಹ್ಮವನ್ನು ಸೇರುತ್ತಾನೆ; ಮನಸ್ಸನ್ನು ಪರಮಾತ್ಮನಲ್ಲಿಟ್ಟು ಕಾಮವನ್ನೂ ಮೋಹವನ್ನೂ ಅಸೂಯೆಯನ್ನೂ ತ್ಯಜಿಸಿದವನು ಬ್ರಹ್ಮತ್ವವನ್ನು ಪಡೆಯುತ್ತಾನೆ; ಎಲ್ಲಾ ಪ್ರಾಣಿಗಳಲ್ಲಿಯೂ ಸಮನಾಗಿ ಕಾಣಬರುವ ಕೇಳಬರುವ ವಿಷಯಗಳಲ್ಲಿ ಏರುಪೇರುಗಳಿಲ್ಲದವನು ಬ್ರಹ್ಮವನ್ನು ಸೇರುತ್ತಾನೆ; ಸ್ತುತಿ ನಿಂದೆ, ಚಿನ್ನ ಕಬ್ಬಿಣ, ಸುಖ ದುಃಖ, ಶೀತ ಉಷ್ಣ, ಅರ್ಥ ಅನರ್ಥ, ಪ್ರಿಯ ಅಪ್ರಿಯ, ಬದುಕು ಸಾವು- ಇವುಗಳಲ್ಲೆಲ್ಲ ಸಮಭಾವವುಳ್ಳಾತನು ಬ್ರಹ್ಮವನ್ನು ಸೇರುತ್ತಾನೆ. ಆಮೆಯು ತನ್ನ ಕಾಲುಗಳನ್ನು ಒಳಕ್ಕೆಳೆದುಕೊಳ್ಳುವಂತೆ ಸಂನ್ಯಾಸಿಯಾದವನು ಇಂದ್ರಿಯಗಳನ್ನು ಮನಸ್ಸಿನಿಂದ ಹಿಂಜಗ್ಗಬೇಕು. ಕತ್ತಲೆ ಮುಚ್ಚಿದ ಮನೆಯಲ್ಲಿ ದೀಪವನ್ನು ತಂದರೆ ಹೇಗೆ ಎಲ್ಲವನ್ನೂ ಕಾಣಬಹುದೋ ಹಾಗೆಯೇ ಬುದ್ಧಿಯೆಂಬ ದೀಪದಿಂದ ಆತ್ಮನನ್ನು ಕಂಡುಕೊಳ್ಳಬಹುದು. ಎಲೈ ಶುಕನೆ, ನೀನು ಇಂಥ ಜ್ಞಾನವನ್ನೆಲ್ಲ ಅರಿತು ಈ ಸ್ಥಿತಿಯಲ್ಲಿಯೇ ಇರುವೆಯಾದ್ದರಿಂದ ನೀನು ಕೃತಕೃತ್ಯನು- ಎಂದು ಜನಕನು ನುಡಿದನೆಂಬುದು ಅಧ್ಯಾಯದ ಸಾರವು.

★★★★★

## ಈಶ್ವರನು ಭೃಂಗೀಶ್ವರನಿಗೆ ಮಾಡಿದ ಉಪದೇಶ

**14-05-1935**

**ಬ್ರ|| ಶ್ರೀ|| ಎಸ್.ವಿಠ್ಠಲಶಾಸ್ತ್ರಿಗಳು**

**ವಾಸಿಷ್ಠರಾಮಾಯಣದಲ್ಲಿ ನಿರ್ವಾಣಪ್ರಕರಣದ ನೂರಹದಿನೈದನೆಯ** ಸರ್ಗದಲ್ಲಿ ಈಶ್ವರನು ಭೃಂಗೀಶ್ವರನಿಗೆ ಉಪದೇಶಮಾಡಿದ ವ್ರತತ್ರಯವನ್ನು ವಸಿಷ್ಠರು ಶ್ರೀರಾಮನಿಗೆ ತಿಳಿಸಿದ ವಿಷಯವು ಇರುತ್ತದೆ.

ಮಹಾಕರ್ತೃತ್ವ, ಮಹಾಭೋಕ್ತೃತ್ವ, ಮಹಾತ್ಯಾಗಿತ್ವ- ಎಂಬಿವು ವ್ರತತ್ರಯದಲ್ಲಿ ಅಡಕವಾಗಿರುತ್ತವೆ. ಧರ್ಮಾಧರ್ಮಗಳನ್ನು ಒದಗಿದಂತೆ

ನಿಶ್ಶಂಕನಾಗಿ ಮಾಡುತ್ತಾ ರಾಗದ್ವೇಷಗಳನ್ನಾಗಲಿ ಸುಖದುಃಖಗಳನ್ನಾಗಲಿ ಲೆಕ್ಕಕ್ಕಿಡದೆ ಇರುವವನು ಮಹಾಕರ್ತನು, ಅಹಂಭಾವವಿಲ್ಲದೆ ನಿರ್ಮಲನಾಗಿ ಮಾತ್ಸರ್ಯವಿಲ್ಲದೆ ಶುಭಾಶುಭಕರ್ಮಗಳನ್ನು ಬಂದೊದಗಿದಂತೆಯೇ ಮಾಡುತ್ತಾ ಮನಸ್ಸಿಗೆ ಕರ್ಮದ ಲೇಪವಿಲ್ಲದಾತನು ಮಹಾಕರ್ತನು. ಏತರಲ್ಲಿಯೂ ಆಸಕ್ತಿಯಿಲ್ಲದೆ ಸಾಕ್ಷಿಯಂತೆ ಇರುತ್ತಾ ಮಾಡುವ ಕಾರ್ಯದಲ್ಲಿ ಯಾವನು ಕಾಮರಹಿತನಾಗಿರುವನೋ, ಮನಸ್ಸಿನಲ್ಲಿ ಉಬ್ಬರವಿಳಿತಗಳಿಲ್ಲದೆ ಯಾವನು ಹರ್ಷಶೋಕರಹಿತನಾಗಿ ಸಮಬುದ್ಧಿಯಾಗಿರುವನೋ, ಕಾಲಕ್ಕೆ ತಕ್ಕ ಬುದ್ಧಿಯನ್ನುಪಯೋಗಿಸುತ್ತಾ ಆಸಕ್ತಿಯಿಲ್ಲದೆ ಕಾರ್ಯಕ್ಕೆ ಅನುಗುಣವಾಗಿ ಯಾವನು ನಡೆದುಕೊಳ್ಳುವನೋ, ಯಾವನು ಸ್ವಭಾವದಿಂದಲೇ ಶಾಂತನಾಗಿ ದ್ದುಕೊಂಡು ಶುಭಾಶುಭಕರ್ಮಗಳನ್ನು ಮಾಡುವಾಗ ತನ್ನ ಸಮತ್ವವನ್ನು ಬಿಡದೆ ಇರುವನೋ ಶರೀರಾದಿಗಳಿಗೆ ಆರು ಭಾವವಿಕಾರಗಳು ಒದಗುವಾಗಲೂ ಯಾವನ ಮನಸ್ಸು ಒಂದೇ ಸ್ಥಿತಿಯಲ್ಲಿರುವದೋ- ಅವನೇ ಮಹಾಕರ್ತನು.

ಇನ್ನು ಮಹಾಭೋಕ್ತನ ವರ್ಣನೆಯನ್ನು ಕೇಳು. ಯಾವನು ಯಾವದೊಂದರಲ್ಲಿಯೂ ರಾಗದ್ವೇಷಗಳಿಲ್ಲದೆ ಬಂದೊದಗಿದ್ದನ್ನು ಅನುಭವಿಸುವಾತನೋ; ಯಾವನು ತೆಗೆದುಕೊಂಡರೂ ತೆಗೆದುಕೊಳ್ಳದೆ, ಮಾಡಿದರೂ, ಮಾಡದೆ ಭೋಗಿಸಿದರೂ ಭೋಗಿಸದೆ ಇರುವನೋ; ಯಾವನು ಸಕಲವನ್ನೂ ಇಚ್ಛಾಶೂನ್ಯನಾಗಿ ಸಾಕ್ಷಿಯಂತೆ ನೋಡುತ್ತಿರುವನೋ; ಯಾವನ ಮನಸ್ಸು ಸುಖದುಃಖ, ಜಯಾಜಯ, ಲಾಭನಷ್ಟ- ಎಂಬ ಭ್ರಾಂತಿಗಳಿಂದ ವಿಕ್ಷೇಪವಾಗುವದಿಲ್ಲವೋ; ಯಾವನಿಗೆ ಮುಪ್ಪು, ಸಾವು, ಸಂಕಟ, ದೊರೆತನ, ಬಡತನ – ಎಲ್ಲವೂ ರಮಣೀಯವಾಗಿಯೇ ತೋರುವವೋ, ಯಾವನು ದೊಡ್ಡ ದೊಡ್ಡ ಸುಖದುಃಖಗಳನ್ನು ಕೂಡ ಸಾಗರವು ನದಿಗಳನ್ನೊಳಕೊಳ್ಳುವಂತೆ ತನ್ನಲ್ಲಿ ಅಡಗಿಸಿಕೊಳ್ಳುವನೋ; ಯಾವನನ್ನು ಅಹಿಂಸೆ, ಸಮತೆ, ತೃಪ್ತಿ- ಇವು ಎಂದಿಗೂ ಬಿಟ್ಟಗಲದೆ ಇರುವವೋ; ಯಾವನು ಉಪ್ಪು, ಹುಳಿ, ಕಾರ, ಕಹಿ, ಮುಂತಾದ ರಸಗಳೆಲ್ಲವನ್ನೂ ಸಮಬುದ್ಧಿಯಿಂದ ಸ್ವೀಕರಿಸುವನೋ; ಯಾವನು ಇದು

ಭೋಜ್ಯವು, ಇದು ಅಭೋಜ್ಯವು- ಎಂಬ ವಿಭಾಗವಿಲ್ಲದೆ ಯಾವ ಮಾತನ್ನೂ ಆಡದೆ ಭುಂಜಿಸುವನೋ; ಆಪತ್ತು ಸಂಪತ್ತು, ಮೋಹ ಆನಂದ , ಕೀಳು ಮೇಲು- ಇವುಗಳೆಲ್ಲವನ್ನೂ ಒಂದೇ ಮನೋಭಾವದಿಂದ ಯಾವನು ಅನುಭವಿಸುವನೋ- ಅಂಥವನೇ ಮಹಾಭೋಕ್ತನು.

ಈಗ ಮಹಾತ್ಯಾಗಿಯನ್ನು ವರ್ಣಿಸುವೆನು: ಯಾವನು ಧರ್ಮ ಅಧರ್ಮ, ಸುಖ ದುಃಖ, ಮರಣ ಜನ್ಮ- ಇವುಗಳನ್ನು ಸಂಪೂರ್ಣವಾಗಿ ತ್ಯಾಗಮಾಡಿರುವನೋ; ಯಾವನು ಎಲ್ಲಾ ಇಚ್ಛೆಗಳನ್ನೂ ಎಲ್ಲಾ ಶಂಕೆಗಳನ್ನೂ ಎಲ್ಲಾ ಕರ್ಮಗಳನ್ನೂ ಎಲ್ಲಾ ಬಗೆಯ ಸಂಕಲ್ಪಗಳನ್ನೂ ಮನಸ್ಸಿನಲ್ಲಿ ತ್ಯಾಗಮಾಡಿರುವನೋ; ಯಾವನು ದೇಹೇಂದ್ರಿಯಮನಸ್ಸುಗಳ ಮತ್ತು ಅವುಗಳ ದುಃಖಗಳ ಇರವನ್ನೇ ಮಿಥ್ಯಾತ್ವಬುದ್ಧಿಯಿಂದ ತ್ಯಾಗಮಾಡಿರುವನೋ ; ಯಾವನು ಈ ಎದುರಿಗೆ ತೋರುತ್ತಿರುವ ಸಕಲ ದೃಶ್ಯವಿಲಾಸವನ್ನೂ ಮಿಥ್ಯಾತ್ವನಿಶ್ಚಯದಿಂದ ತ್ಯಾಗಮಾಡಿರುವನೋ ಅವನೇ ಮಹಾತ್ಯಾಗಿಯು.

ಎಲೈ ರಾಮನೆ, ಹೀಗೆ ಭೃಂಗೀಶನಿಗೆ ಈಶ್ವರನು ಉಪದೇಶಮಾಡಿದ ವ್ರತತ್ರಯವನ್ನು ಅನುಸರಿಸುವದಕ್ಕೆ ಒಂದೇ ಒಂದು ಉಪಾಯವು. ಅಂತರ್ಮುಖನಾಗಿ ನಿತ್ಯನಿರ್ಮಲವಾಗಿಯೂ ಅನಂತವಾಗಿಯೂ ಇರುವ ಬ್ರಹ್ಮವೊಂದಲ್ಲದೆ ಮತ್ತೊಂದು ಯಾವದೂ ಇಲ್ಲವೇ ಇಲ್ಲವೆಂಬ ತತ್ತ್ವವನ್ನು ಯಾವಾಗಲೂ ಭಾವನೆ ಮಾಡುತ್ತಾ ನಿರಂಜನನಾಗಿರುವದೇ ಆ ಉಪಾಯವು. ಆದ್ದರಿಂದ ನೀನು ಸಕಲ ಕಾರ್ಯಗಳನ್ನೂ ಮಾಡುತ್ತಾ ಹೀಗೆ ಅಂತರ್ಮುಖನಾಗಿದ್ದರೆ ಎಂದಿಗೂ ಆಯಾಸವನ್ನು ಪಡೆಯದೆ ಇರುವೆ, ಅಹಂಕಾರಲಯವನ್ನೂ ಪಡೆದುಕೊಳ್ಳುವೆ- ಎಂದು ವಸಿಷ್ಠರು ಉಪದೇಶಿಸಿದರೆಂಬುದು ಸರ್ಗದ ಸಾರವು.

★★★★★

# ಅಘಾಸುರನ ಸಂಹಾರ

**26-4-1936**

**ಬ್ರ॥ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

**ಭಾಗವತದಶಮಸ್ಕಂಧದ ಪೂರ್ವಾರ್ಧದಲ್ಲಿ ಹದಿಮೂರನೆಯ ಅಧ್ಯಾಯದಲ್ಲಿ** - ಅಘಾಸುರನನ್ನು ಶ್ರೀಕೃಷ್ಣನು ಸಂಹಾರಮಾಡಿದ್ದನ್ನು ಗೋಪಾಲಬಾಲಕರು ತಮ್ಮ ಕೌಮಾರಾವಸ್ಥೆ (ಐದನೆಯ ವರ್ಷದವರೆಗಿನ ಅವಸ್ಥೆ) ಯಲ್ಲಿ ಕಂಡರು; ಅದನ್ನು ತಮ್ಮ ಪೌಗಂಡಾವಸ್ಥೆಯಲ್ಲಿ ( ಹತ್ತನೆಯ ವರ್ಷದವರೆಗಿನ ಅವಸ್ಥೆ)ಯಲ್ಲಿ ಆಗ ತಾನೆ ನಡೆದಂತೆ ಮನೆಯವರಿಗೆ ಹೇಳಿದರು- ಎಂದು ಶುಕರು ಹೇಳಿದ್ದನ್ನು ಕೇಳಿ ಅತ್ಯಾಶ್ಚರ್ಯದಿಂದ ಪರೀಕ್ಷಿತನು ''ಸ್ವಾಮಿ, ಇದು ಹೇಗೆ ನಡೆಯಿತು? ದಯವಿಟ್ಟು ಹೇಳಬೇಕು'' ಎಂದು ಕೇಳಿಕೊಂಡನು. ಆಗ ಶುಕರು ಪರಮಾತ್ಮನ ಸ್ಮರಣೆಯಿಂದ ಆನಂದಸಮಾಧಿಯನ್ನು ಹೊಂದಿ ಬಹಿರ್ಮುಖರಾದ ಬಳಿಕ ಈ ಕಥೆಯನ್ನು ಹೇಳಿದರು:

ಅಯ್ಯ ರಾಜನೆ, ಈ ರಹಸ್ಯವನ್ನು ಹೇಳುವೆನು, ಕೇಳು; ಈ ರೀತಿಯಲ್ಲಿ ಅಘಾಸುರನನ್ನು ಸಂಹರಿಸಿ ಗೋಗಳನ್ನೂ ಗೋಪಾಲಕರನ್ನೂ ಕಾಪಾಡಿದ ಬಳಿಕ ಶ್ರೀಕೃಷ್ಣನು ಅವರೆಲ್ಲರನ್ನೂ ನದಿಯ ದಂಡೆಯಲ್ಲಿದ್ದ ಮಳಲೊಟ್ಟಿಲುಗಳ ಬಳಿಗೆ ಕರೆತಂದು, ಗೆಳೆಯರಿರಾ, ಇಲ್ಲಿ ಸ್ಥಳವು ಮನೋಹರವಾಗಿದೆ, ನಮಗೂ ಹಸಿವಾಗಿದೆ; ಆದ್ದರಿಂದ ಗೋಗಳು ಒಂದು ಕಡೆ ಮೇಯುತ್ತಿರಲಿ, ನಾವು ಊಟಮಾಡೋಣ' ಎಂದನು. ಅವರು ಹಾಗೇ ಆಗಲೆಂದು ತಮ್ಮ ತಮ್ಮ ಬುತ್ತಿಗಳನ್ನು ಬಿಚ್ಚಿ ಶ್ರೀಕೃಷ್ಣನನ್ನು ನಡುವೆ ಕೂರಿಸಿಕೊಂಡು ಅವನನ್ನೇ ನೋಡುತ್ತಾ ವಿಶಾಲವಾದ ಹೂವು, ಚಿಗುರು, ಎಲೆ, ತೊಗಟೆ, ಕಲ್ಲು- ಇವುಗಳಲ್ಲೊಂದನ್ನು ಭೋಜನಪಾತ್ರೆಯಾಗಿಟ್ಟುಕೊಂಡು ಊಟಮಾಡುವದಕ್ಕೆ ಮೊದಲುಮಾಡಿದರು. ಯಜ್ಞಭೋಕ್ತನಾದ ಶ್ರೀಕೃಷ್ಣನೂ ಆಗ ಬಾಲಕೇಳಿಯಿಂದ ಅವರು ಕೊಟ್ಟ ಬುತ್ತಿಯ ರುಚಿಗಳನ್ನು ನೋಡುತ್ತಾ ಅವರೊಡನೆ ವಿನೋದದಿಂದ ಭೋಜನ ಮಾಡುತ್ತಿದ್ದನು. ಹೀಗಿರುವಲ್ಲಿ ಕರುಗಳು ರುಚಿಯಾದ ಹಸುರುಹುಲ್ಲನ್ನು

ಹುಡುಕಿಕೊಂಡು ಎಲ್ಲಿಯೋ ದೂರವಾಗಿ ಹೋಗಿಬಿಟ್ಟವು. ಕರುಗಳನ್ನು ಕಾಣದೆ ಚಿಂತಿಸುತ್ತಿರುವ ಗೋಪಾಲಕರನ್ನು ಶ್ರೀಕೃಷ್ಣನು ಸಮಾಧಾನಪಡಿಸಿ ನೀವೆಲ್ಲರೂ ಇಲ್ಲಿಯೇ ಇರಿ, ನಾನು ಕರುಗಳನ್ನು ಹೊಡೆದುಕೊಂಡು ಬರುತ್ತೇನೆ' ಎಂದು ಕೈಯಲ್ಲಿ ತುತ್ತನ್ನು ಹಿಡಿದುಕೊಂಡೇ ಹೊರಟನು. ಇಷ್ಟರಲ್ಲಿ ಅಘಾಸುರ ಸಂಹಾರಲೀಲೆಯನ್ನು ಕಂಡು ವಿಸ್ಮಿತನಾಗಿದ್ದ ಬ್ರಹ್ಮನು ಶ್ರೀಕೃಷ್ಣನ ಮಹಿಮೆಯನ್ನು ನೋಡಬೇಕೆಂದು ಕರುಗಳನ್ನೂ ಗೋಪಾಲಕರನ್ನೂ ಅಪಹರಿಸಿಕೊಂಡು ತಾನೂ ಅಂತರ್ಧಾನನಾದನು.

ಆಗ ಶ್ರೀಕೃಷ್ಣನು ಕರುಗಳನ್ನು ಹುಡುಕಿ ಹುಡುಕಿ ಕಾಣದೆ ಹಿಂತಿರುಗಿ ಬಂದು ಗೋಪಾಲಕರೂ ಇಲ್ಲದಿರುವದನ್ನು ಕಂಡು ತನ್ನೊಳಗೆ ತಾನು ಯೋಚನೆ ಮಾಡಿ ಇದೆಲ್ಲವೂ 'ಬ್ರಹ್ಮನ ಕೃತ್ಯ'ವೆಂಬುದನ್ನು ತಿಳಿದುಕೊಂಡು ಹಸುಗಳು ಗೋಪಿಯರು, ಬ್ರಹ್ಮ – ಎಲ್ಲರಿಗೂ ಸಂತೋಷವಾಗಲೆಂದು ತಾನೇ ಕರುಗಳ ಮತ್ತು ಗೋಪಾಲಕರ ರೂಪನ್ನು ತಾಳಿದನು. ಕರುಗಳೂ ಕರುಗಳನ್ನು ಕಾಯುವ ಹುಡುಗರೂ ಎಷ್ಟೆಷ್ಟು ಸಣ್ಣವರಾಗಿದ್ದರೋ ಎಂಥ ಕೈಕಾಲುಗಳುಳ್ಳವರಾಗಿದ್ದರೋ ಅವರ ಕೋಲು, ಬುತ್ತಿಯ ಗಂಟು, ಬಟ್ಟೆ, ನಡತೆ, ಗುಣ, ಹೆಸರು, ಆಕಾರ, ವಯಸ್ಸು– ಮುಂತಾದವು ಹೇಗೆ ಹೇಗೆ ಇದ್ದವೋ ಆದರಂತೆಯೇ – **ಸರ್ವಂ ವಿಷ್ಣುಮಯಂ ಜಗತ್** ಎಂಬ ಮಾತಿನ ಅರ್ಥಸ್ವರೂಪನಾಗಿ – ಎಲ್ಲವೂ ತಾನೇ ಆಗಿ ಸರ್ವಾತ್ಮನಾದ ಶ್ರೀಕೃಷ್ಣನು ಈ ಕರುಗಳ ಮತ್ತು ಗೋಪಾಲಕರ ಸಮೇತ ಗೋಕುಲವನ್ನು ಹೊಕ್ಕನು. ಮೊದಲಿನಂತೆ ಕರುಗಳೂ ಗೋಪಾಲಕರೂ ತಮ್ಮ ತಮ್ಮ ಮನೆಗಳಿಗೆ ಹೋದರು, ಅವರ ತಾಯಿಯರೂ ಸಂತೋಷದಿಂದ ಅವರನ್ನು ಬರಮಾಡಿಕೊಂಡರು. ಈ ಲೀಲೆಯು ಒಂದು ವರ್ಷದವರೆಗೂ ಸತತವಾಗಿ ಗೋಕುಲದಲ್ಲಿಯೂ ವನದಲ್ಲಿಯೂ ನಡೆಯಿತು.

ಒಂದು ದಿನ ಶ್ರೀಕೃಷ್ಣನು ಬಲರಾಮನೊಡನೆ ವನವನ್ನು ಹೊಕ್ಕನು. ಅಲ್ಲಿ ಗೋವರ್ಧನಶಿಖರದಲ್ಲಿ ಮೇಯುತ್ತಿದ್ದ ಹಸುಗಳು, ಗೋಕುಲದ ಹತ್ತಿರ ಮೇಯುತ್ತಿದ್ದ ಕರುಗಳನ್ನು ಕಂಡು ಗೋಪಾಲಕರನ್ನೂ ಲಕ್ಷ್ಯಮಾಡದೆ ಕೆಳಕ್ಕೆ ಇಳಿದು ಗೋಕುಲಸಮೀಪಕ್ಕೆ ಓಡಿಬಂದವು ; ಗೋಪಾಲಕರು ಹಸುಗಳನ್ನು ಕೋಪದಿಂದ ಅಟ್ಟಿಸಿಕೊಂಡು ಬಂದರಾದರೂ ಕರುಗಳ ಬಳಿಯಲ್ಲಿ ತಮ್ಮ

ತಮ್ಮ ಮಕ್ಕಳು ಇರುವದನ್ನು ಕಂಡು ಸಿಟ್ಟನ್ನು ಬಿಟ್ಟು ಪರಮಪ್ರೀತಿಯನ್ನು ಹೊಂದಿದರು. ಬಲರಾಮನು ಇದನ್ನೆಲ್ಲ ನೋಡಿ ಇದೇನು ಮಾಯೆಯೆಂದು ವಿಚಾರಿಸುತ್ತಿರುವಲ್ಲಿ ಅವನ ಜ್ಞಾನಚಕ್ಷುಸ್ಸಿಗೆ ಗೋವುಗಳು, ಗೋಪಾಲ ಬಾಲಕರು- ಎಲ್ಲರೂ ಶ್ರೀಕೃಷ್ಣರೂಪವಾಗಿಯೇ ಕಂಡರು. ಅಷ್ಟುಹೊತ್ತಿಗೆ ಬ್ರಹ್ಮನೂ ಅಲ್ಲಿಗೆ ಬಂದು ಮೊದಲಿನಂತೆಯೇ ಆಡುತ್ತಿದ್ದ ಶ್ರೀಕೃಷ್ಣನನ್ನು ನೋಡಿ; ಆಹಾ! ಏನಿದು! ಈ ಕರುಗಳನ್ನೂ ಗೋಪಾಲಕರನ್ನೂ ನಾನು ಮಾಯಾಶಯ್ಯೆಯಲ್ಲಿ ಮಲಗಿಸಿದ್ದೆನಲ್ಲ! ಇವರು ಇಲ್ಲಿಗೆ ಹೇಗೆ ಬಂದರು?' ಎಂದು ಎಷ್ಟು ಯೋಚನೆ ಮಾಡಿದರೂ ಆ ವತ್ಸವತ್ಸಪಾಲರಿಗೂ ಇಲ್ಲಿರುವ ಮಾಯಾವತ್ಸವತ್ಸಪಾಲರಿಗೂ ಯಾವದೊಂದು ಭೇದವನ್ನೂ ಕಾಣಲಾರದೆ, ಯಾವದು ಸತ್ಯವೋ ಯಾವದು ಮಿಥ್ಯವೋ ಗೊತ್ತುಪಡಿಸಲಾರದೆ, ವಿಶ್ವಮೋಹಕನಾದ ವಿಷ್ಣುವಿಗೆ ಮೋಹವನ್ನುಂಟುಮಾಡಬೇಕೆಂದು ಯತ್ನಿಸಿದ ತಾನೇ ಮೋಹಕ್ಕೆ ಪಕ್ಕಾದನು. ಕತ್ತಲೆಯಲ್ಲಿ ಕಾವಳದ ಮಬ್ಬು ಕೆಲಸಮಾಡದಿರುವಂತೆಯೂ ಹಗಲುಬೆಳಕಿನಲ್ಲಿ ದೀಪದ ಹುಳುವಿನ ಬೆಳಕು ತೋರಿಕೊಳ್ಳಲಾರದೆ ಇರುವಂತೆಯೂ ಆ ಬ್ರಹ್ಮನ ಮಾಯೆಯು ಶ್ರೀಕೃಷ್ಣ ಮಾಯೆಯ ಬಳಿಯಲ್ಲಿ ತನ್ನ ಸಾಮರ್ಥ್ಯವನ್ನು ಕಳೆದುಕೊಂಡಿತು. ಅಷ್ಟರಲ್ಲಿ ಆ ಬ್ರಹ್ಮನಿಗೆ ಈ ವತ್ಸಪಾಲರೆಲ್ಲ ಚತುರ್ಭುಜರಾಗಿ ಯೂ ಶಂಖಚಕ್ರಗದಾಪದ್ಮಪಾಣಿಗಳಾಗಿಯೂ ಕಿರೀಟಾದಿಧಾರಿಗಳಾಗಿಯೂ ಶ್ರೀಕೃಷ್ಣರೂಪದಿಂದಲೇ ತೋರಿಕೊಂಡರು. ಇದನ್ನು ಕಂಡು ಬ್ರಹ್ಮನು ನಗರೀದೇವತೆಯ ಮುಂದಿಟ್ಟಿರುವ ಪುತ್ಥಳಿಯಂತೆ ಬೆರಗಾಗಿ ನಿಂತುಕೊಂಡನು.

ಇಷ್ಟರಲ್ಲಿ ಶ್ರೀಕೃಷ್ಣನು ತನ್ನ ಮಾಯೆಯ ತೆರೆಯನ್ನು ತೆಗೆದುಹಾಕಲು ಮೊದಲಿನಂತೆಯೇ ಸಂತೋಷದಿಂದ ಒಂದುಗೂಡಿ ನಲಿಯುತ್ತಿರುವ ಪ್ರಾಣಿಗಳಿಂದ ಕೂಡಿದ ವನಭಾಗವನ್ನೂ ಅಲ್ಲಿ ಮೊದಲಿನಂತೆಯೇ ಕರುಗಳನ್ನೂ ಗೋಪಾಲರನ್ನೂ ಹುಡುಕುತ್ತಾ ಕೈಯಲ್ಲಿ ತುತ್ತನ್ನು ಹಿಡಿದೇ ಇರುವ ಶ್ರೀಕೃಷ್ಣನನ್ನೂ ಕಂಡು ಹಿಂದೆ ತಾನು ಕಂಡ ಲೀಲೆಯನ್ನು ಮತ್ತೆಮತ್ತೆ ಸ್ಮರಿಸಿಕೊಳ್ಳುತ್ತಾ ಶ್ರೀಕೃಷ್ಣನ ಪಾದಗಳಿಗೆರಗಿ ಬಹುವಾಗಿ ಸ್ತೋತ್ರಮಾಡಿದನು. ಶ್ರೀಕೃಷ್ಣನ ಅಪ್ಪಣೆಯಂತೆ ಮೊದಲು ತಾನು ಅಪಹರಿಸಿದ್ದ ಕರುಗಳನ್ನೂ ಗೋಪಾಲ ಬಾಲರನ್ನೂ ತಂದುಕೊಟ್ಟನು. ಶ್ರೀಕೃಷ್ಣನನ್ನಗಲಿ ಇಲ್ಲಿಗೆ ಒಂದು

ವರ್ಷವಾಗಿದ್ದರೂ ಅವರೆಲ್ಲರೂ ಅರ್ಧಕ್ಷಣವಾದಂತೆ ಭಾವಿಸಿದರು; 'ಶ್ರೀಕೃಷ್ಣನೆ, ನಿನ್ನನ್ನು ಬಿಟ್ಟು ನಾವು ಒಬ್ಬರೂ ಊಟಮಾಡಿಲ್ಲ!' ಎನ್ನುತ್ತಾ ಅವನೊಡನೆ ಕುಳಿತುಕೊಂಡು ಭೋಜನಮಾಡಿದರು. ಈ ಶ್ರೀಕೃಷ್ಣಲೀಲೆಯ ಕಾರಣದಿಂದಲೇ ಅವರು ಮನೆಗೆ ಬಂದು, ನಡುವೆ ಒಂದು ವರ್ಷವೇ ಕಳೆದುಹೋಗಿದೆಯೆಂಬುದನ್ನು ಅರಿಯಲಾರದೆ, ಇಂದು 'ಶ್ರೀಕೃಷ್ಣನು ಒಂದು ಮಹಾಸರ್ಪವನ್ನು ಕೊಂದು ನಮ್ಮನ್ನು ರಕ್ಷಿಸಿದನು' ಎಂದು ಗೋಕುಲದಲ್ಲಿ ಹೇಳಿಕೊಂಡರು.

★★★★★

# ಮಂಕ್ಯುಪಾಖ್ಯಾನ

**27-04-1936**

**ಬ್ರ॥ ಶ್ರೀ॥ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳವರು**

**ಮಹಾಭಾರತದ ಮೋಕ್ಷಧರ್ಮದಲ್ಲಿ ಮಂಕ್ಯುಪಾಖ್ಯಾನದಲ್ಲಿ** - ಧನತೃಷ್ಣೆಯಿಂದ ಸಂಕಟಪಡುತ್ತಿರುವವನು ಎಷ್ಟು ಪ್ರಯತ್ನಪಟ್ಟರೂ ಇಷ್ಟಪ್ರಾಪ್ತಿಯಾಗದೆ ಇರುವಲ್ಲಿ ಏನು ಮಾಡಬೇಕು? ಅವನಿಗೆ ಹೇಗೆ ಸುಖವಾಗುವದು?- ಎಂದು ಯುಧಿಷ್ಠಿರನು ಕೇಳಲು ಭೀಷ್ಮರು ಈ ಉತ್ತರವನ್ನು ಹೇಳಿದರು:

ಅಯ್ಯ ರಾಜನೆ, ಲಾಭಾಲಾಭಗಳಲ್ಲಿ ಸಮಬುದ್ಧಿ, ಆಯಾಸಪಡದೆ ಇರುವದು, ಸತ್ಯವಚನ, ವೈರಾಗ್ಯ, ಮತ್ತು ಇಂಥದ್ದನ್ನು ಮಾಡಬೇಕೆಂಬ ಇಚ್ಛೆಯಿಲ್ಲದಿರುವಿಕೆ- ಈ ಐದೂ ಯಾವನಲ್ಲಿರುವವೋ ಅವನೇ ಸುಖಿಯು. ಇವುಗಳಿಂದಲೇ ಶಾಂತಿಯಾಗುವದು; ಇದೇ ಸ್ವರ್ಗವು, ಧರ್ಮವು, ಸುಖವು. ಈ ವಿಷಯದಲ್ಲಿ ಒಂದು ಉಪಾಖ್ಯಾನವನ್ನು ಹೇಳುವೆನು ಕೇಳು. ಮಂಕಿಯೆಂಬಾತನು ಹಣಕ್ಕಾಗಿ ಮತ್ತೆ ಮತ್ತೆ ಪ್ರಯತ್ನಮಾಡಿಯೂ

ಸಫಲಮನೋರಥನಾಗದೆ ಕೊನೆಗೆ ತನ್ನಲ್ಲಿದ್ದಷ್ಟು ಹಣಕ್ಕೆ ಒಂದು ಜೊತೆ ಹೋರಿಗಳನ್ನು ಕೊಂಡುಕೊಂಡನು. ಅವುಗಳನ್ನು ನೊಗಕ್ಕೆ ಹಚ್ಚಿ ಪಳಗಿಸುವದಕ್ಕೆಂದು ಒಯ್ಯುತ್ತಿರುವಲ್ಲಿ ಅವು ದಾರಿಯಲ್ಲಿ ಮಲಗಿದ್ದ ಒಂದು ಒಂಟೆಯನ್ನು ನಡುವೆಬಿಟ್ಟುಕೊಂಡು ಓಡಿದವು. ಆ ಒಂಟೆಯು ಇದನ್ನು ಸಹಿಸದೆ ತಟ್ಟನೆ ಎದ್ದು ತನ್ನ ಹೆಗಲಮೇಲೆ ಅವನ್ನೂ ಎತ್ತಿಕೊಂಡು ಮುಂದಕ್ಕೆ ಹೊರಟಿತು. ಸ್ವಲ್ಪ ದೂರದೊಳಗಾಗಿ ಅವು ಸಾಯುವಹಾಗಾಗಲು ಮಂಕಿಯು ಅದನ್ನು ನೋಡಿ ಇಂತೆಂದನು: ಎಂಥ ಸಮರ್ಥನಾದರೂ ದೈವವಶದಿಂದ ಸಿಕ್ಕದೆ ಇರುವ ಧನವನ್ನು ಎಷ್ಟು ಶ್ರದ್ಧೆಯಿಂದ ಪ್ರಯತ್ನಪಟ್ಟರೂ ಸಂಪಾದಿಸಲಾರನು. ನೋಡಿದಿರಾ, ಈ ನನ್ನ ಅದೃಷ್ಟವನ್ನು! ನನ್ನ ಹೋರಿಗಳೆರಡೂ ಅಕಸ್ಮಾತ್ತಾಗಿ ಹೀಗೆ ಒಂಟೆಯ ಕತ್ತಿಗೆ ಕಟ್ಟಿದ ಮಣಿಗಳಂತೆ ಜೋಲಾಡುತ್ತಾ ಸಾಯುತ್ತಿವೆಯಲ್ಲ! ನಿಜವಾಗಿಯೂ ಇದು ದೈವಕೃತವೇ ಅಲ್ಲದೆ ಮತ್ತೇನು? ನಾವು ಪೌರುಷವೆಂದು ಕರೆಯುವದೂ ನಿಜವಾಗಿ ದೈವವೇ ಅಲ್ಲವೆ? ಆದ್ದರಿಂದ ಸುಖೇಚ್ಛುವಾದವನು ವೈರಾಗ್ಯವನ್ನೇ ಹೊಂದಬೇಕು. ಯಾವನು ವಿರಕ್ತನೋ ಅರ್ಥಸಂಪಾದನೆಯಲ್ಲಿ ಆಶೆಯಿಲ್ಲದವನೂ ಆಗಿರುವನೋ ಅವನೇ ಸುಖವಾಗಿ ನಿದ್ರಿಸುತ್ತಾನೆ. ಆದ್ದರಿಂದಲೇ ಜನಕನ ಮನೆಯನ್ನು ಬಿಟ್ಟು ಮಹಾರಣ್ಯಕ್ಕೆ ಹೋಗುತ್ತಾ ಶುಕನು 'ಕಾಮಗಳೆಲ್ಲವನ್ನೂ ಪಡೆಯುವದಕ್ಕಿಂತಲೂ ಅವುಗಳನ್ನು ತ್ಯಜಿಸುವದೇ ಮೇಲು' ಎಂದಿರುತ್ತಾನೆ. ಬಗೆಬಗೆಯ ಪ್ರಯತ್ನಗಳೆಲ್ಲ ಇಲ್ಲಿಗೆ ಕೊನೆಯಾಗುವವೆಂಬುದನ್ನು ಯಾರೂ ಕಂಡಿರುವದಿಲ್ಲ. ಆದ್ದರಿಂದ 'ಎಲೈ ಆಶೆಯ ಮನಸ್ಸೆ, ಸಾಕು ಹಿಂತಿರುಗು; ಎಷ್ಟೋಸಲ ತಿರಸ್ಕಾರವಾಗಿದೆ, ಇನ್ನೂ ಹಿಂತಿರುಗದಿರುವೆಯಲ್ಲ! ಇನ್ನು ನನ್ನನ್ನು ಲೋಭಗೊಳಿಸದಿರು. ಎಲೈ ಕಾಮವೆ, ನಿನ್ನ ಯೋಗ್ಯತೆಯನ್ನು ಬಲ್ಲೆನು. ನಿನ್ನ ಮೂಲವಾದ ಸಂಕಲ್ಪವನ್ನೇ ಇನ್ನು ನಾನು ಮಾಡುವದಿಲ್ಲ; ಆಗ ಸಮೂಲವಾಗಿ ನಾಶವಾಗುವೆ. ಇನ್ನು ನಾನು ಎಚ್ಚತ್ತೆನು, ಇನ್ನು ನಾನು ಸರ್ವಭೂತಗಳನ್ನೂ ನನ್ನ ದೇಹದಲ್ಲಿರುವ ಮನಸ್ಸಿನಲ್ಲಿಯೇ ಆತ್ಮದರ್ಶನದ ಮೂಲಕ ಕಂಡುಕೊಳ್ಳುವದಕ್ಕಾಗಿ ಬ್ರಹ್ಮದಲ್ಲಿಯೇ ಮನಸ್ಸನ್ನಿಡುವೆನು. ಜನರು ನನ್ನನ್ನು ಬಯ್ದರೂ ಕ್ಷಮಿಸುತ್ತಾ, ಹಿಂಸಿಸಿದರೂ ಅಹಿಂಸಕನಾಗಿರುತ್ತಾ, ದ್ವೇಷ್ಯರಲ್ಲಿ ಪ್ರಿಯವಚನವನ್ನಾಡುತ್ತಾ, ಕಾಲವನ್ನು ಕಳೆಯುವೆನೇ ಹೊರತು ಕಾಮನಿಗೆ

ಇನ್ನು ವಶನಾಗೆನು. ಇನ್ನು ವೈರಾಗ್ಯ, ತೃಪ್ತಿ, ಶಾಂತಿ, ಸತ್ಯ, ದಮ, ಕ್ಷಮ, ಸರ್ವಭೂತದಯೆ- ಇವುಗಳನ್ನೇ ಅನುಸರಿಸುವೆನು; ಬೇಸಗೆಯಲ್ಲಿ ತಣ್ಣನೆಯ ಮಡುವನ್ನು ಜನರು ಆಶ್ರಯಿಸುವಂತೆ ಬ್ರಹ್ಮವನ್ನೇ ಈಗ ಆಶ್ರಯಿಸಿರುವೆನು, ಈ ಲೋಕದಲ್ಲಿ ಆಗುವ ಸಕಲಕಾಮೋಪಭೋಗದ ಸುಖವಾಗಲಿ ಸ್ವರ್ಗಲೋಕದಲ್ಲಿ ಆಗುವ ಸುಖವಾಗಲಿ ತೃಷ್ಣೆಯನ್ನು ಕಳೆದುಕೊಳ್ಳುವದರಿಂದ ಆಗುವ ಸುಖದ ವೀಸಪಾಲನ್ನೂ ಹೋಲಲಾರದು. ಆದ್ದರಿಂದ ನಾನು ಕಾಮವನ್ನು ಕೊಂದು ಹಾಕಿ ಬ್ರಹ್ಮಪುರವನ್ನು ಸೇರಿ ರಾಜನಂತೆ ಸುಖಿಯಾಗಿರುವೆನು!' ಹೀಗೆಂದು ಯೋಚಿಸಿಕೊಂಡು ಪರಮವೈರಾಗ್ಯವನ್ನು ತಾಳಿದ ಮಂಕಿಯು ಬ್ರಹ್ಮಪ್ರಾಪ್ತಿಯಿಂದ ಮಹಾಸುಖವನ್ನು ಪಡೆದನು.

★★★★★

# ಸಪ್ತಭೂಮಿಕೆಗಳು

**28-04-1936**

**ಬ್ರ॥ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳರು**

**ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ 126ನೆಯ ಸರ್ಗದ** ಭಾಗದಲ್ಲಿ ವಸಿಷ್ಠರು ಶ್ರೀರಾಮನಿಗೆ ಸಪ್ತಭೂಮಿಕೆಗಳನ್ನು ಉಪದೇಶಿಸುತ್ತಾ, ಸಮುದ್ರದ ಮೇಲುಗಡೆಯಲ್ಲಿ ತೇಲಾಡುತ್ತಿರುವ ನೊಗದ ಕಣ್ಣಿನಲ್ಲಿ ಸಮುದ್ರದಲ್ಲಿರುವ ಒಂದು ಆಮೆಯು ತನ್ನ ಕತ್ತನ್ನು ತೂರಿಸುವ ಸಂದರ್ಭವು ದೊರೆಯುವದು ಎಷ್ಟು ದುರ್ಲಭವೋ ಮನುಷ್ಯನು ವಿವೇಕಿಯಾಗುವದೂ ಅಷ್ಟೇ ದುರ್ಲಭವಾಗಿರುವದು. ಎಷ್ಟೋ ಜನ್ಮಗಳು ಕಳೆದ ಬಳಿಕ ಮನುಷ್ಯನು ಸಂಸಾರದಲ್ಲಿಯೂ ಅದರಲ್ಲಿರುವ ಕರ್ಮಫಲೋಪಭೋಗದಲ್ಲಿಯೂ ವಿರಕ್ತನಾಗಿ 'ಕ್ರಿಯೆಯಿಂದಾಗುವ ಉತ್ಪತ್ತಿ, ಆಪ್ತಿ, ವಿಕೃತಿ, ಪರಿಣತಿ-ಎಂಬಿವುಗಳು ಯಾವವೂ ಇಲ್ಲದ ಪರಮಾರ್ಥವು ಯಾವದು?'- ಎಂದು ವಿಚಾರಿಸಲು ಅನುವಾಗುತ್ತಾನೆ. ಪಾಪಕರ್ಮಗಳನ್ನು ಬಿಟ್ಟು ಪುಣ್ಯಕರ್ಮಗಳನ್ನು ಮಾಡುತ್ತಾ

**ಶಾಸ್ತ್ರಾರ್ಥದ ಇಚ್ಛೆ**ಯೆಂಬ ಮೊದಲನೆಯ ಭೂಮಿಕೆಯನ್ನೇರುತ್ತಾನೆ, ಆಮೇಲೆ ಶ್ರುತಿಸ್ಮೃತಿ ಸದಾಚಾರಧಾರಣಾಧ್ಯಾನಗಳಿಂದ ಪ್ರಸಿದ್ಧರಾದವರೊಡನೆ ಸೇರಿ **ವಿಚಾರ**ಮಾಡುವದೆಂಬ ಎರಡನೆಯ ಭೂಮಿಕೆಯನ್ನು ಹತ್ತುತ್ತಾನೆ. ಆಮೇಲೆ ವಿರಕ್ತಿಯು ಬಲಿತುಕೊಳ್ಳಲಾಗಿ ಅವನು **ಅಸಂಸಂಗ**ವೆಂಬ ಮೂರನೆಯ ಭೂಮಿಕೆಯನ್ನು ಮುಟ್ಟುತ್ತಾನೆ. ನಾನು ಕರ್ತನಲ್ಲ, ಭೋಕ್ತನಲ್ಲ; ಈಶ್ವರನೇ ಎಲ್ಲಕ್ಕೂ ಕರ್ತನು. ಈಶ್ವರಾಧೀನವಾಗಿ ಸುಖವಾಗಲಿ ದುಃಖವಾಗಲಿ, ಇದರಲ್ಲಿ ನನ್ನ ಕರ್ತೃತ್ವವೇನಿದೆ?– ಎಂದು ವಸ್ತುಗಳು ಬರುವದನ್ನಾಗಲಿ ಮನಸ್ಸಿಗೆ ಸಂಕಟವೊದಗುವದನ್ನಾಗಲಿ ಕಾಲವು ಕಳೆದುಹೋಗುವದನ್ನಾಗಲಿ ಎಣಿಸದೆ ಇರುವದು **ಸಾಮಾನ್ಯಾಸಂಸಂಗವು;** ಆಮೇಲೆ ಇಂಥ ವಿವೇಚನೆಯನ್ನು ಕೂಡ ಮಾಡದೆ ಮನಸ್ಸನ್ನು ಒಳಗಾಗಲಿ ಹೊರಗಾಗಲಿ ಮೇಲಾಗಲಿ ಕೆಳಗಾಗಲಿ ಯಾವದೊಂದು ವಸ್ತುವಿನಲ್ಲಿಯೂ ನಿಲ್ಲಿಸದೆ ಮೌನದಿಂದಿದ್ದುಬಿಡುವದು **ಶ್ರೇಷ್ಠಾಸಂಸಂಗವು.** ಶ್ರೇಷ್ಠಾಸಂಸಂಗವನ್ನು ಪಡೆದವನು ಯಾವದೊಂದು ಸಂಕಲ್ಪವನ್ನೂ ಮಾಡದೆ ಇರುತ್ತಾನೆ.

ಯಾವನು ಮೇಲೆ ಹೇಳಿದ ಮೂರು ಭೂಮಿಕೆಗಳಲ್ಲಿ ಒಂದನ್ನು ಏರಿರುವನೋ ಅವನು ತನ್ನ ಸಾಧನಕ್ಕೆ ಅನುಗುಣವಾದ ಉತ್ತಮಫಲವನ್ನು ಲೋಕಾಂತರದಲ್ಲಿ ಅನುಭವಿಸಿ ಪುಣ್ಯವು ಮುಗಿದಬಳಿಕ ಮತ್ತೆ ಶುಚಿಗಳೂ ಶ್ರೀಮಂತರೂ ಆದ ಸತ್ಪುರುಷರ ಮನೆಯಲ್ಲಿ ಹುಟ್ಟಿ ಹಿಂದಿನ ವಾಸನೆಯಿಂದ ಅದೇ ಸಾಧನೆಯನ್ನೇ ಮುಂದುವರಿಸುತ್ತಾನೆ. ಈ ಮೂರು ಭೂಮಿಕೆಗಳ ಒಟ್ಟನ್ನು **ಜಾಗ್ರತ್ತು** ಎಂದು ಕರೆಯಬಹುದು. ಈ ಅವಸ್ಥೆಯಲ್ಲಿರುವಾತನು ಆರ್ಯನೆನಿಸುವನು; ಮೊದಲನೆಯ ಭೂಮಿಕೆಯಲ್ಲಿ ಆರ್ಯತ್ವವು ಮೊಳಕೆಯಾಗಿ ಎರಡನೆಯದರಲ್ಲಿ ಅರಳಿ ಮೂರನೆಯದರಲ್ಲಿ ಫಲವನ್ನು ಕೊಡುವದು.

ಇವುಗಳ ಅಭ್ಯಾಸವು ಪೂರ್ಣವಾದ ಮೇಲೆ **ಸಮದರ್ಶನ** ಎಂಬ ನಾಲ್ಕನೆಯ ಭೂಮಿಕೆಯು ಸಿಕ್ಕುತ್ತದೆ. ಆಗ ಮೊದಲಿನಂತೆ ಲೋಕಗಳು ಗೋಚರವಾಗುತ್ತಿದ್ದರೂ ಕಾಣುವದೆಲ್ಲವೂ ಸ್ವಪ್ನದರ್ಶನದಂತೆ ಇದ್ದುಕೊಂಡು ಎಲ್ಲೆಲ್ಲಿಯೂ ನಿರ್ವಿಭಾಗವೂ ಆದ್ಯಂತರಹಿತವೂ ಆದ ಸಮತತ್ತ್ವವೇ

ಕಾಣುತ್ತಿರುವದು. ಸಾಧಕನು ಈ ಭೂಮಿಕೆಯನ್ನು ದಾಟಿದರೆ **ಸುಷುಪ್ತಿ** ಎಂಬ ಐದನೆಯ ಭೂಮಿಕೆಯನ್ನು ಸೇರುತ್ತಾನೆ. ಅದರಲ್ಲಿ ಸನ್ಮಾತ್ರನಾಗಿರುತ್ತಾನೆ. ಯಾವ ವಿಶೇಷವೂ ಇರುವದಿಲ್ಲ, ಬಹಿರ್ವೃತ್ತಿಯಿದ್ದರೂ ದ್ವೈತಭಾವನೆಯೇ ಇಲ್ಲದೆ ಅಂತರ್ಮುಖನಾಗಿಯೇ ಇದ್ದುಕೊಂಡು ಶಾಂತನಾಗಿ ಆನಂದದಿಂದಿರುವನು.

ಇದನ್ನು ಪೂರ್ಣವಾಗಿ ಅಭ್ಯಾಸದಿಂದ ವಶಗೊಳಿಸಿಕೊಂಡ ಬಳಿಕ **ತುರ್ಯ** ಎಂಬ ಆರನೆಯ ಭೂಮಿಕೆಯನ್ನೇರುತ್ತಾನೆ. ಅಲ್ಲಿ ಸದ್ರೂಪವಾಗಲಿ ಅಸದ್ರೂಪವಾಗಲಿ ಇರುವದಿಲ್ಲ ಅಹಂಕಾರವಾಗಲಿ ಅನಹಂಕಾರವಾಗಲಿ ಇರುವದಿಲ್ಲ; ಯಾವ ಬಗೆಯ ಚಿಂತನೆಯೂ ಇಲ್ಲದೆ ದ್ವೈತಾದ್ವೈತಗಳನ್ನು ಮೀರಿ ಸರ್ವಗ್ರಂಥಿರಹಿತನಾಗಿ ನಿಸ್ಸಂಶಯನಾಗಿ ಜೀವನ್ಮುಕ್ತನೆನಿಸಿ ಕೊಂಡಿರುವನು; ಆಕಾಶದಲ್ಲಿರುವ ಬರಿಯ ಗಡಿಗೆಯಂತೆ ಹೊರಗೂ ಒಳಗೂ ದ್ವೈತಶೂನ್ಯನಾಗಿಯೂ ಸಮುದ್ರದಲ್ಲಿರುವ ತುಂಬಿದ ಗಡಿಗೆಯು ಒಳಗೂ ಹೊರಗೂ ನೀರಿನಿಂದ ತುಂಬಿರುವಂತೆ ಒಳಗೂ ಹೊರಗೂ ಆನಂದ ಪರಿಪೂರ್ಣನಾಗಿರುವನು.

ಈ ಭೂಮಿಕೆಯನ್ನೂ ದಾಟಿದವನು **ವಿದೇಹಮುಕ್ತಿ**ಯೆಂಬ ಏಳನೆಯ ಭೂಮಿಕೆಗೆ ತಲುಪುತ್ತಾನೆ. ಅದು ಮಾತುಗಳಿಂದ ಹೇಳುವದಕ್ಕೆ ಬರುವಂತಿರುವದಿಲ್ಲ, ಅದೇ ಈ ಸಂಸಾರಭೂಮಿಕೆಗಳಿಗೆಲ್ಲ ಅವಧಿಯು. ಅದನ್ನು ಬೇರೆಬೇರೆ ವಾದಿಗಳು ಶಿವ, ಬ್ರಹ್ಮ, ಪ್ರಕೃತಿಪುರುಷವಿವೇಕ- ಮುಂತಾದ ನಾನಾರೂಪಗಳಿಂದ ವಿಕಲ್ಪಿಸುತ್ತಿರುವರು. ಅದು ನಿಜವಾಗಿ ಯಾವ ಶಬ್ದದಿಂದಲೂ ಹೇಳುವದಕ್ಕೆ ಬರುವದಲ್ಲವಾದರೂ ಬಲ್ಲವರು ಹೇಗೋ ಅದನ್ನೂ ಲಕ್ಷಣೆಯಿಂದ ಉಪದೇಶಮಾಡುತ್ತಾರೆ.

ಈ ಏಳು ಭೂಮಿಕೆಗಳನ್ನೂ ಯಾರು ಅಭ್ಯಾಸದಿಂದ ಪಡೆದುಕೊಳ್ಳುವರೋ ಅವರು ದುಃಖರಹಿತರಾಗುವರು – ಎಂಬುದು ವಸಿಷ್ಠರ ಉಪದೇಶದ ಸಾರವು.

★★★★★

# ಶಿವಸ್ವರೂಪ

**29-04-1936**

**ಬ್ರ॥ಶ್ರೀ॥ ಪಿ.ಚಂದ್ರಶೇಖರಭಟ್ಟರು**

**ಸೂತಸಂಹಿತೆಯ ಯಜ್ಞವೈಭವಖಂಡದ ಹದಿನೈದನೆಯ ಅಧ್ಯಾಯದಲ್ಲಿ** - ಲೋಕದಲ್ಲಿ ಗಡಿಗೆ, ಗೋಡೆ, ಕೊಮ್ಮೆ-ಎಂದು ಪದಾರ್ಥಗಳು ಬೇರೆಬೇರೆಯಾಗಿ ಕಾಣುತ್ತಿರುವಲ್ಲಿ ಆತ್ಮೈಕತ್ವವು ಹೇಗೆ ಹೊಂದುತ್ತದೆ?- ಎಂಬ ಶಂಕೆಗೆ ಇಲ್ಲಿ ಪರಿಹಾರವನ್ನು ಹೇಳಿರುತ್ತದೆ, ಪದಾರ್ಥಗಳಲ್ಲಿರುವ ಸತ್ತೆಯು ಒಂದೇ ಹೊರತು ಬೇರೆಯಲ್ಲ; ಸಾಮಾನ್ಯರೂಪದಿಂದ ಸತ್ತೆಯು (ಇರವು) ಒಂದು, ವಿಶೇಷರೂಪದಿಂದ ಅನೇಕ- ಎಂದು ಯಾರಾದರೂ ಹೇಳಬಹುದು; ಆದರೆ ಇದು ಸರಿಯಲ್ಲ, ಏಕೆಂದರೆ ಭೇದವಿದ್ದರಲ್ಲವೆ, ವಿಶೇಷವೆನ್ನುವದು? ಭೇದವೇ ಇಲ್ಲದೆ ವಿಶೇಷವೆಂಬ ಮಾತಿಗೆ ಅರ್ಥವನ್ನು ಮಾಡುವದು ಹೇಗೆ? ಸತ್ತೆಗೆ ಒಂದು ವಿಶೇಷರೂಪವಾದ ಭೇದಾಕಾರವಿದೆಯೆನ್ನುವದಾದರೆ ಆ ಆಕಾಶವು ಸತ್ತೆಗಿಂತ ಬೇರೆಯೆ, ಅಲ್ಲವೆ?- ಎಂದು ವಿಕಲ್ಪಿಸಿನೋಡೋಣ. ಬೇರೆಯಾದರೆ ಅದು ಸತ್ತೆಯಲ್ಲ, ಎಂದರೆ ಶೂನ್ಯವೇ, ಎಂದಾಗುವದು ; ಅದು ಸತ್ತೆಯೇ ಎಂದರೆ ಭೇದಾಕಾರವೆಂಬುದು ಎಲ್ಲಿ ಬಂತು? ಇನ್ನು ಆ ವಿಶೇಷವು ಸತ್ತೆಗಿಂತ ಭಿನ್ನವೂ ಅಭಿನ್ನವೂ ಆಗಿದೆ- ಎಂದರೆ ಭೇದಪಕ್ಷದಲ್ಲಿ ಹೇಳಿದ ದೋಷವೂ ಅಭೇದಪಕ್ಷದಲ್ಲಿ ಹೇಳಿದ ದೋಷವೂ ಒಂದೇ ಕಡೆಯಲ್ಲಿ ಸೇರಿದಂತಾಗುವದು. ಆದ್ದರಿಂದ ಸತ್ತೆಗಿಂತ ಬೇರೆಯಾಗಿ ವಿಶೇಷವೆಂಬುದು ಇಲ್ಲವೆಂದು ತರ್ಕದಿಂದ ಸಿದ್ಧವಾಯಿತು ವಿಶೇಷರೂಪದಿಂದ ವಸ್ತು ತೋರುವದೆಂಬುದು ಭ್ರಾಂತಿಯಾಗಿರಬೇಕೆಂದಾಯಿತು.

ಆದ್ದರಿಂದ ಸತ್ತೆಯು ಒಂದೇ, ಆ ಸತ್ತೆಯೇ ಬ್ರಹ್ಮವು. ಹಾಗಿಲ್ಲದೆ ಬ್ರಹ್ಮವು ಸತ್ತೆಗಿಂತ ಬೇರೆಯೆಂದರೆ ಬ್ರಹ್ಮವು ಅಸದ್ರೂಪವೆಂದಾಗುತ್ತದೆ, ಇದು ಅನಿಷ್ಟವು. ಹೀಗಿರುವದರಿಂದ ಗಡಿಗೆ ಮುಂತಾದ ಪದಾರ್ಥಗಳು ಸತ್ತೆಗಿಂತ ಬೇರೆಯಾಗಿರುವದಿಲ್ಲ; ಸತ್ತೆಯೇ ಬೇರೆ, ಗಡಿಗೆ ಮುಂತಾದವುಗಳು ಬೇರೆ- ಎಂಬ

ಅನುಭವವೂ ನಮಗಿಲ್ಲ, ಶ್ರುತಿಯೂ 'ಇದೆಲ್ಲ ಬ್ರಹ್ಮವೇ' ಎಂದು ಹೇಳುತ್ತಿದೆ; ಜ್ಞಾನಿಗಳ ಅನುಭವದಲ್ಲಿಯೂ ನಮ್ಮೆಲ್ಲರ ಆತ್ಮನಾಗಿರುವ ಚೈತನ್ಯರೂಪವಾದ ಬ್ರಹ್ಮಕ್ಕಿಂತ ಬೇರೆಯಾಗಿ ಯಾವದೊಂದೂ ಇರುವದೆಂದು ತೋರುವದಿಲ್ಲ. ಈ ಕಾರಣದಿಂದ ಎಲೈ ಋಷಿಗಳಿರ, ಇದೆಲ್ಲವೂ ಶಿವರೂಪವೆಂದು ಅರಿಯಿರಿ-ಎಂದು ಸೂತರು ಶೌನಕಾದಿಗಳಿಗೆ ಹೇಳಿರುತ್ತಾರೆ.

ವಸ್ತುವು ಒಂದಾಗಿದ್ದರೂ ಅದು ಬೇರೆಬೇರೆ ಆಕಾರಗಳಲ್ಲಿರುವಂತೆ ತೋರಬಹುದು; ವಿಚಾರಶೂನ್ಯರು ಆ ಭೇದಾಕಾರಗಳು ನಿಜವಾಗಿಯೂ ವಸ್ತುವಿಗಿಂತ ಬೇರೆಯಾಗಿಯೇ ಇವೆಯೆಂದು ತಪ್ಪಾಗಿ ಭಾವಿಸಿಕೊಳ್ಳಬಹುದು. ಚಿನ್ನವು ಕಡಗವೇ ಮುಂತಾದ ರೂಪಗಳಿಂದ ತೋರುವಂತೆಯೂ ಕಪ್ಪೇಚಿಪ್ಪು ಬೆಳ್ಳಿಯ ಹಾಗೆ ಹೊಳೆಯುವಂತೆಯೂ ಕನಸನ್ನು ಕಾಣುವಾತನು ತಾನೇ ಸ್ವಪ್ನದಲ್ಲಿರುವ ಬಗೆಬಗೆಯ ರೂಪಗಳಾಗಿ ತೋರಿಕೊಳ್ಳುವಂತೆಯೂ ಒಬ್ಬ ಶಿವನೇ ಸರ್ವರೂಪದಲ್ಲಿಯೂ ತೋರುತ್ತಿರುವನು. ಆಕಾಶದಲ್ಲಿ ಕತ್ತಲೆಯೂ ಬೆಳಕೂ ತೋರಿಕೊಳ್ಳುವಂತೆಯೂ ಸಾಗರದಲ್ಲಿ ಅಲೆ, ಗುಳ್ಳೆ, ಮುಂತಾದವುಗಳು ಕಾಣಿಸಿಕೊಳ್ಳುವಂತೆಯೂ ಪರಮಾತ್ಮನಲ್ಲಿ ಈ ಜಗತ್ತು ತೋರುತ್ತಿರುವದು. ಭೂತಗಳು, ಭುವನಗಳು, ಪರ್ವತಗಳು, ಬೆಟ್ಟಗಳು- ಎಲ್ಲವೂ ಶಂಭುವೇ, ಆತನಿಗಿಂತ ಬೇರೆ ಯಾವದೊಂದೂ ಇಲ್ಲ. ಯಜ್ಞಗಳಿಂದ ಆರಾಧಿಸಲ್ಪಡುತ್ತಿರುವಾತನೂ ದಾನ, ಜಪ, ತಪಸ್ಸು, ಸ್ತೋತ್ರ-ಇವುಗಳೆಲ್ಲದರಿಂದಲೂ ಪ್ರಾಪ್ಯನಾದವನೂ ಆತನೇ.

ಈ ಆತ್ಮನನ್ನೇ ಯತೀಂದ್ರರು ಗುರುಪ್ರಸಾದದಿಂದ ತಮ್ಮ ಹೃದಯದಲ್ಲಿರುವ ಅಹಂಪ್ರತ್ಯಯಸಾಕ್ಷಿಯ ರೂಪದಲ್ಲಿ ಅರಿತುಕೊಳ್ಳುವರು; ಎಲ್ಲವೂ ಶಿವನೇ ಎಂದು ಕಾಣುವವರಿಗೆ ಹುಟ್ಟು, ಸಾವು, ಮುಪ್ಪು, ಲೋಕಗಳು, ಗತಿ- ಇವೆಲ್ಲವೂ ಶಿವರೂಪದಿಂದಲೇ ಕಾಣುವದು. ಜಗತ್ತು ಬೇರೆಯಾಗಿರುವಂತೆ ತೋರುವದೇ ಇಲ್ಲ. ಅಂಥವರಿಗೆ ಸಕಲಕರ್ಮಗಳೂ ನಾಶವಾಗುವವು, ಯಾವ ಕರ್ಮಫಲದ ಲೇಪವೂ ಆಗುವದಿಲ್ಲ, ಏಕೆಂದರೆ ಪುಣ್ಯಪಾಪಗಳೂ ಅವರಿಗೆ ಬ್ರಹ್ಮರೂಪದಿಂದಲೇ ಕಾಣುತ್ತಿರುವವು. ರಜ್ಜುವೇ ಸರ್ಪಾದಿರೂಪದಿಂದ ತೋರಿಕೊಳ್ಳುವಂತೆಯೂ ಕಾರಣವಾದ

ಅಪ್ತತ್ತ್ವವೇ ಕಾರ್ಯವಾದ ಪೃಥಿವಿಯಾಗಿ ಕಾಣುತ್ತಿರುವಂತೆಯೂ ಶಿವನೇ ಜಗದ್ರೂಪವಾಗಿ ತೋರುತ್ತಿರುವನು. ಆದ್ದರಿಂದ ಜಗದನುಭವವೆಂಬುದೇ ಇಲ್ಲ, ಯಾವಾಗಲೂ ಸ್ವರೂಪ ಶಿವಾನುಭವವೇ ಇರುತ್ತದೆ- ಎಂದು ತಿಳಿದವನು ಬದ್ಧಮುಕ್ತನೂ ಅಲ್ಲ, ಬದ್ಧನಂತೂ ಅಲ್ಲವೇ ಅಲ್ಲ. ಆದಕಾರಣ ಪರಮಶಿವನು ಪ್ರಪಂಚರೂಪವಾಗಿ ಕಾಣುವನೆಂಬುದೂ ಸುಳ್ಳು, ಇದರಲ್ಲಿ ಬದ್ಧರಾಗಲಿ ಮುಕ್ತರಾಗಲಿ ಇರುವದೂ ಸುಳ್ಳು; ಶಿವನೇ ತನ್ನ ರೂಪದಿಂದ ಬೆಳಗುತ್ತಿರುವನೆಂಬುದೇ ವೇದೋಪದೇಶದ ಪರಮತಾತ್ಪರ್ಯವು.

★★★★★

## ಪೃಥುರಾಜನು ಪ್ರಜೆಗಳಿಗೆ ಮಾಡಿದ ಧರ್ಮೋಪದೇಶ

**30-04-1936**

**ಶ್ರೀಶ್ರೀಗಳವರು**

**ಭಾಗವತದ ನಾಲ್ಕನೆಯ ಸ್ಕಂಧದ ಇಪ್ಪತ್ತೊಂದನೆಯ ಅಧ್ಯಾಯದಲ್ಲಿ** ಪೃಥುರಾಜನು ಪ್ರಜೆಗಳಿಗೆ ಮಾಡಿದ ಧರ್ಮೋಪದೇಶವಿರುತ್ತದೆ. ಅದರ ಸಾರವೇನೆಂದರೆ: ಇಲ್ಲಿಗೆ ಬಂದಿರುವ ಸಭ್ಯರಾದ ಪ್ರಜೆಗಳಿರ, ಕೇಳಿ, ನಾನು ಪ್ರಜೆಗಳಿಗೆಲ್ಲ ಇಲ್ಲಿ ರಾಜನಾಗಿ ಧರ್ಮದಂಡವನ್ನು ಧರಿಸುವಂತೆ ನಿಯುಕ್ತನಾಗಿರುತ್ತೇನೆ; ಎಲ್ಲರನ್ನು ಕಾಪಾಡುತ್ತಲೂ ಅವರವರಿಗೆ ವೃತ್ತಿಯನ್ನು ಕಲ್ಪಿಸುತ್ತಲೂ ಅವರವರ ಧರ್ಮವನ್ನು ಅವರು ನಡೆಯಿಸಿಕೊಂಡು ಹೋಗುವಂತೆ ನೋಡಿಕೊಳ್ಳುತ್ತಲೂ ಇರುವದರಿಂದ ನನಗೆ ಉತ್ತಮಗತಿಯಾಗುವದೆಂದೂ ಪರಮೇಶ್ವರಪ್ರೀತಿಯಾಗುವದೆಂದೂ ತಿಳಿದವರು ಹೇಳುತ್ತಾರೆ, ಯಾವ ರಾಜನು ಜನರನ್ನು ಧರ್ಮಮಾರ್ಗದಲ್ಲಿ ನಿಲ್ಲಿಸದೆ ಅವರಿಂದ ತೆರಿಗೆಗಳನ್ನು ಕೊಳ್ಳುವನೋ ಅವನಿಗೆ ಪ್ರಜೆಗಳ ಪಾಪವು ಸಂಘಟಿಸುವದು, ತನ್ನ ಪುಣ್ಯದ ಫಲವು ಲಭಿಸದೆಹೋಗುವದು. ಆದ್ದರಿಂದ ಎಲೈ ಪ್ರಜೆಗಳಿರ, ನೀವು ನಿಮ್ಮ ನಿಮ್ಮ

ಧರ್ಮಗಳನ್ನು ತಪ್ಪದೆ ಈಶ್ವರಾರ್ಪಣ ಬುದ್ಧಿಯಿಂದ ನಡೆಸಿಕೊಂಡುಬನ್ನಿರಿ, ಆಗ ನನ್ನ ಮೇಲೆ ನೀವು ಅನುಗ್ರಹವನ್ನು ಮಾಡಿದಂತೆ ಆಗುವದು. ಪಿತೃಗಳು, ದೇವತೆಗಳು, ಋಷಿಗಳು - ಇವರಲ್ಲಿ ನನ್ನ ಪ್ರಾರ್ಥನೆಯೇನೆಂದರೆ ಈ ರೀತಿಯಲ್ಲಿ ನಡೆಯುವದಕ್ಕೆ ತಮ್ಮ ಅನುಮೋದನವು ಬೇಕು ; ಧರ್ಮವನ್ನು ಉಪದೇಶಿಸುವವನು, ಮಾಡುವವನು, ಅನುಮತಿಯನ್ನು ಕೊಡುವವನು - ಇವರು ಮೂವರಿಗೂ ಅದರ ಫಲವು ಸಮಾನವಾಗಿರುತ್ತದೆ.

ಬಹುಜನರ ಮತದಲ್ಲಿ ಯಜ್ಞಪತಿಯಾದ ಪರಮೇಶ್ವರನೊಬ್ಬನುಂಟು, ನಮ್ಮ ಪೂರ್ವಜರಲ್ಲಿ ಅನುಕಂಪನೀಯರಾದ ಕೆಲವರು ಹೊರತು ಮಿಕ್ಕವರೆಲ್ಲರೂ ಇದನ್ನು ಅಂಗೀಕರಿಸಿದ್ದರು. ಆ ಪರಮಾತ್ಮನ ಪಾದಸೇವೆಯನ್ನು ಮಾಡಬೇಕೆಂಬ ಕೌತೂಹಲವೇ ಆಕಾಶದಿಂದ ಹುಟ್ಟಿದ ಗಂಗೆಯಂತೆ ತಪಸ್ವಿಗಳನ್ನು ಪಾವನಗೊಳಿಸುತ್ತಿರುವದು. ಮನಸ್ಸಿನ ಕಶ್ಮಲವನ್ನೆಲ್ಲ ತೊಳೆದುಕೊಂಡು ಅಸಂಗನಾಗಿ ವಿಜ್ಞಾನದ ವೀರ್ಯವನ್ನು ಹೊಂದಿ ಆ ಪರಮಾತ್ಮನ ಪಾದಮೂಲವನ್ನಾಶ್ರಯಿಸಿದ ಪುರುಷನು ಮತ್ತೆ ಈ ಕ್ಲೇಶ ಬಹುಳವಾದ ಸಂಸಾರವನ್ನೈದನು. ಆ ಪರಮಾತ್ಮನನ್ನೇ ನೀವೂ ತ್ರಿಕರಣಗಳಿಂದಲೂ ನಿಷ್ಕಪಟತೆಯಿಂದ ಭಜಿಸುವರಾಗಿ. ಈ ಪರಮಾತ್ಮನು ಸ್ವರೂಪದಿಂದ ನಿರ್ಗುಣನಾದರೂ ವಿಶುದ್ಧವಿಜ್ಞಾನಘನನಾದರೂ ವ್ಯವಹಾರದಲ್ಲಿ ದ್ರವ್ಯ, ಗುಣ, ಕ್ರಿಯಾ- ಮುಂತಾದವುಗಳ ಹೆಸರನ್ನು ಹೇಳುವ ಶಬ್ದಗಳಿಗೂ ಗೋಚರನಾಗಿ ಸಗುಣನೂ ಆಗಿರುತ್ತಾನೆ. ಪ್ರಧಾನ, ಕಾಲ, ಕರ್ಮಾಶಯ, ಅದೃಷ್ಟ - ಇವುಗಳಿಂದ ಉಂಟಾಗುತ್ತಿರುವ ಈ ಶರೀರದಲ್ಲಿ ಈತನೇ ಕ್ರಿಯಾಫಲವಾದ ಸುಖರೂಪವಾಗಿಯೂ ತೋರಿಕೊಳ್ಳುತ್ತಿರುವನು, ನನ್ನವರಲ್ಲಿ ಯಾರುಯಾರು ಸರ್ವರಿಗೂ ಗುರುವೂ ಯಜ್ಞಭೋಕ್ತನೂ ಆದ ಈ ಹರಿಯನ್ನು ತಮ್ಮತಮ್ಮ ಕರ್ಮದಿಂದ ಅಭ್ಯರ್ಚನೆಮಾಡುವರೋ ಅವರೆಲ್ಲರೂ ನನಗೆ ಅನುಗ್ರಹವನ್ನು ಮಾಡಿದಂತೆ ಎಂದು ಎಣಿಸುತ್ತೇನೆ.

ನಮ್ಮ ರಾಜಕುಲದವರ ಅಧಿಕಾರದ ತೇಜಸ್ಸು ಮಹಾಸಿದ್ಧಿಗಳಿಂದಲೂ ತಿತಿಕ್ಷೆಯಿಂದಲೂ ತಪಸ್ಸಿನಿಂದಲೂ ವಿದ್ಯೆಯಿಂದಲೂ ಬೆಳಬೆಳಗುತ್ತಿರುವ ಬ್ರಾಹ್ಮಣರ ಮೇಲೆ ಎಂದಿಗೂ ಬೀಳದಿರಲಿ. ಆ ಬ್ರಾಹ್ಮಣರ ಚರಣವಂದನದಿಂದಲೇ

ಶ್ರೀಹರಿಗೆ ಕೂಡ ನಿತ್ಯಲಕ್ಷ್ಮೀಪತಿತ್ವವು ಬಂದಿರುತ್ತದೆ; ಅವರ ಸೇವೆಯಿಂದಲೇ ಪರಮೇಶ್ವರನು ತೃಪ್ತನಾಗುತ್ತಾನೆ. ಆದ್ದರಿಂದ ನಿತ್ಯವೂ ಅಂಥ ಬ್ರಾಹ್ಮಣರನ್ನು ನೀವು ಸೇವಿಸಿರಿ. ಯಾರ ಸೇವೆಯಿಂದ ಮನುಷ್ಯನಿಗೆ ಚಿತ್ತಶುದ್ಧಿಯುಂಟಾಗಿ ಮುಕ್ತಿಯೇ ದೊರಕುವದೋ ಅಂಥ ಬ್ರಾಹ್ಮಣರಿಗಿಂತಲೂ ಹೆಚ್ಚಾದ ಸುಖವು ಹವಿರ್ಭೋಜಿಗಳಾದ ದೇವತೆಗಳಿಗಿರುವದಿಲ್ಲ. ಆದ್ದರಿಂದ ಅವರ ಮೂಲಕ ಮಾಡಿದ ಹೋಮವನ್ನು ಪರಮೇಶ್ವರನು ಗ್ರಹಿಸುವಂತೆ ಯಜ್ಞೇಶ್ವರನ ಮುಖದಲ್ಲಿ ಮಾಡಿದ್ದನ್ನೂ ಗ್ರಹಿಸುವದಿಲ್ಲ, ಸಕಲವಿಶ್ವವನ್ನೂ ಬೆಳಗುವ ಸನಾತನ ವೇದವನ್ನು ಯಾರು ಶ್ರದ್ಧೆಯಿಂದಲೂ ನಿಯಮದಿಂದಲೂ ಮೌನದಿಂದಲೂ ಇಂದ್ರಿಯನಿಗ್ರಹದಿಂದಲೂ ಕೂಡಿ ಧರಿಸಿರುವರೋ ಅಂಥವರ ಪಾದರೇಣುವನ್ನು ನಾನು ಯಾವಜ್ಜೀವವೂ ಕಿರೀಟದ ಮೇಲೆ ಧರಿಸಿರುವೆನು; ಆದ್ದರಿಂದ ಪಾಪಪರಿಹಾರವೂ ಆಗಿ ಸರ್ವಗುಣಗಳ ಪ್ರಾಪ್ತಿಯೂ ಆಗುವದೆಂದು ನನ್ನ ಭಾವನೆ. ಗುಣಸಂಪನ್ನನಾಗಿ ಶೀಲಸಂಪನ್ನನೂ ಕೃತಜ್ಞನೂ ಗುರುಹಿರಿಯರನ್ನು ಸೇವಿಸುವವನೂ ಆದವನನ್ನೇ ಸಂಪತ್ತುಗಳು ಆಶ್ರಯಿಸುವವು. ಆದ್ದರಿಂದ ಬ್ರಾಹ್ಮಣರೂ ಗೋವುಗಳೂ ಸಪರಿವಾರನಾದ ವಿಷ್ಣುವೂ ನನ್ನಲ್ಲಿ ಪ್ರಸನ್ನರಾಗಿರಬೇಕೆಂಬುದೊಂದೇ ನನ್ನ ಪ್ರಾರ್ಥನೆ.

★★★★★

# ಭಗವಂತನ ಜಗತ್ಸೃಷ್ಟ್ಯಾದಿಲೀಲೆ

**01-05-1936**

**ಬ್ರ॥ಶ್ರೀ॥ಪಿ.ಚಂದ್ರಶೇಖರಭಟ್ಟರು**

ವಿಷ್ಣುಪುರಾಣದಲ್ಲಿ ಪ್ರಥಮಾಂಶದ ಎರಡನೆಯ ಅಧ್ಯಾಯದಲ್ಲಿ - ಭಗವಂತನ ಜಗತ್ಸೃಷ್ಟ್ಯಾದಿಲೀಲೆಯನ್ನು ವಿವರಿಸಿರುತ್ತದೆ. ಪರಮಾತ್ಮನು ಸಕಲಜಗತ್ತಿನ ಸೃಷ್ಟಿಸ್ಥಿತಿಲಯಕ್ಕೂ ಕಾರಣನಾಗಿರುತ್ತಾನೆ. ಆತನು ನಿತ್ಯನಿರ್ಮಲಜ್ಞಾನಸ್ವರೂಪನಾಗಿಯೇ

ಇದ್ದರೂ ಅವನನ್ನು ಅರ್ಥಸ್ವರೂಪನೆಂದು ಭ್ರಾಂತರು ಅರಿಯುತ್ತಿರುವರು. ಈ ವಿಷಯವನ್ನು ಬ್ರಹ್ಮನು ದಕ್ಷಾದಿಗಳಿಗೆ ಹೇಳಿರುತ್ತಾನೆ. 'ಪರಾತ್ಪರನಾಗಿರುವ ಪರಮಾತ್ಮನು ರೂಪವರ್ಣಾದಿಗಳಿಂದ ರಹಿತನಾಗಿ ಇದ್ದಾನೆ' ಎಂದು ಮಾತ್ರ ಹೇಳಿಸಿಕೊಳ್ಳುವದಕ್ಕೆ ಯೋಗ್ಯನಾಗಿರುತ್ತಾನೆ. ಆತನು ಎಲ್ಲೆಲ್ಲಿಯೂ ಇರುತ್ತಾನಾದ್ದರಿಂದ ಅವನಿಗೆ ವಾಸುದೇವನೆಂದು ಹೆಸರು. ಅವನನ್ನೇ ಬ್ರಹ್ಮವೆಂದು ಕರೆಯುತ್ತಾರೆ.

ಈ ಬ್ರಹ್ಮವೇ ಸಕಲ ವ್ಯಕ್ತಾವ್ಯಕ್ತರೂಪವಾದ ಪ್ರಪಂಚವಾಗಿಯೂ ಪುರುಷರೂಪವಾಗಿಯೂ ಇರುತ್ತದೆ, ಇವುಗಳನ್ನು ಮೀರಿ ವಿದ್ವಾಂಸರಿಗೆ ಮಾತ್ರ ಗೋಚರವಾಗಿರುವ ವಿಷ್ಣುಪದವಾಗಿಯೂ ಇರುತ್ತದೆ, ಈ ಎರಡು ಸ್ವರೂಪಗಳಲ್ಲಿ ವ್ಯಕ್ತಾವ್ಯಕ್ತಾದಿರೂಪಗಳು ಜಗತ್ಸೃಷ್ಟ್ಯಾದಿಲೀಲೆಗೆ ಹೇತುಗಳಾಗಿರುತ್ತವೆ. ಇವುಗಳಲ್ಲಿ ಅವ್ಯಕ್ತವೆಂಬುದೇ ಜಗತ್ಕಾರಣವಾದ ಪ್ರಕೃತಿಯು. ಇದು ಸದಸದ್ರೂಪವಾಗಿಯೂ ಮತ್ತೊಂದರ ಆಧಾರವಿಲ್ಲದೆಯೂ ಶಬ್ದಸ್ಪರ್ಶಾದಿಗಳಿಂದ ರಹಿತವಾಗಿಯೂ ಇರುತ್ತದೆ. ಪ್ರಳಯಕಾಲದಲ್ಲಿ ತ್ರಿಗುಣಾತ್ಮಕವಾಗಿರುವ ಈ ಅವ್ಯಕ್ತದಿಂದ ಸಕಲವೂ ವ್ಯಾಪ್ತವಾಗಿರುತ್ತದೆ. ಹೀಗೆ ಪ್ರಕೃತಿಯಲ್ಲಿ ಎಲ್ಲವೂ ಲೀನವಾಗಿರುವ ಪ್ರಲಯಕ್ಕೆ **ಪ್ರಾಕೃತಪ್ರಲಯ** ಎಂದು ಹೆಸರು. ಆಗಲೂ ಕಾಲವೆಂಬ ರೂಪವು ಪ್ರಲಯವಾಗದೆ ಇದ್ದುಕೊಂಡಿರುತ್ತದೆ, ಅದು ಪ್ರಕೃತಿಯನ್ನೂ ಪುರುಷನನ್ನೂ ಧರಿಸಿಕೊಂಡಿರುತ್ತದೆ. ಸೃಷ್ಟಿಕಾಲವು ಪ್ರಾಪ್ತವಾಗಲು ಶ್ರೀಹರಿಯು ಪ್ರಧಾನವನ್ನೂ ಪುರುಷನನ್ನೂ ಹೊಕ್ಕು ತನ್ನ ಸನ್ನಿಧಿಮಾತ್ರದಿಂದ ಅವನನ್ನು ಕ್ಷೋಭಗೊಳಿಸುತ್ತಾನೆ; ನಿಜವಾಗಿ ನೋಡಿದರೆ ಕ್ಷೋಭಕನೂ ಕ್ಷೋಭ್ಯನೂ ಅವನೇ, ಸಂಕೋಚವಿಕಾಸಗಳಾಗುವ ಪ್ರಧಾನವೂ ಅವನೇ. ಮಹದಾದಿವಿಕಾರಗಳೂ ಅಣುರೂಪಿಗಳಾದ ಜೀವರೂ ಬ್ರಹ್ಮನೇ ಮುಂತಾದ ರೂಪಗಳಿಂದ ವ್ಯಕ್ತನಾಗಿರುವಾತನೂ ಅವನೇ. ಮಹತ್ತು, ಅಹಂಕಾರ, ತನ್ಮಾತ್ರೆಗಳು, ಭೂತಗಳು-ಇವೆಲ್ಲವೂ ಕ್ರಮಕ್ರಮವಾಗಿ ಉಂಟಾಗಿ ಬ್ರಹ್ಮಾಂಡವಾಗುತ್ತದೆ. ಈ ಅಂಡವನ್ನು ಹೊಕ್ಕು ಶ್ರೀವಿಷ್ಣುವು ರಜೋಗುಣಪ್ರಧಾನನಾಗಿ ಸೃಷ್ಟಿಮಾಡುವ ಬ್ರಹ್ಮನೆನಿಸುವನು, ಸತ್ತ್ವಪ್ರಧಾನನಾಗಿ ಸ್ಥಿತಿಕರ್ತನಾದ ವಿಷ್ಣುವೆನಿಸುವನು, ತಮಃಪ್ರಧಾನನಾಗಿ

ಲಯಕರ್ತನಾದ ರುದ್ರನೆನಿಸುವನು. ಪ್ರಲಯಕಾಲದಲ್ಲಿ ಎಲ್ಲವನ್ನೂ ಪ್ರಲಯಾಂತದಲ್ಲಿ ಲಯಮಾಡಿದಬಳಿಕ ನಾಗಶಯನದಲ್ಲಿ ಮಲಗಿದ್ದು ಮತ್ತೆ ಎಚ್ಚತ್ತು ಬ್ರಹ್ಮರೂಪದಿಂದ ಸೃಷ್ಟಿಮಾಡುತ್ತಾನೆ.

ಈ ಸೃಷ್ಟಿಸ್ಥಿತಿಲಯಗಳಲ್ಲಿ ಸೃಷ್ಟಿಮಾಡುವಾತನೂ ತಾನೇ ಸೃಷ್ಟಿಯಾಗುವದೂ ತಾನೇ; ಪಾಲಕನೂ ತಾನೇ, ಪಾಲ್ಯವೂ ತಾನೇ; ಸಂಹಾರಕನೂ ತಾನೇ ಸಂಹಾರ್ಯನೂ ತಾನೇ. ಹೀಗೆ ಈತನೇ ಸರ್ವಭೂತಗಳಿಗೂ, ಒಡೆಯನಾಗಿರುವದರಿಂದ ಸಕಲಪ್ರಾಣಿಗಳಲ್ಲಿಯೂ ಕಂಡುಬರುವ ಸೃಷ್ಟ್ಯಾದಿಗಳು ಈತನಿಗೆ ಉಪಕಾರಕವಾಗಿರುತ್ತವೆ. ಆದ್ದರಿಂದ ಸಕಲವೂ ವಿಷ್ಣುವೇ ಎಂಬುದೇ ಸೃಷ್ಟ್ಯಾದಿಲೀಲೆಯಿಂದ ತಿಳಿಯಬೇಕಾದದ್ದು.

★★★★★

## ಕಾಮತ್ಯಾಗದ ಉಪದೇಶ

**02-05-1936**

**ಬ್ರ॥ಶ್ರೀ॥ ಕುಕ್ಕೆಸುಬ್ರಣ್ಯಶಾಸ್ತ್ರಿಗಳವರು**

**ಮಹಾಭಾರತ ಅಶ್ವಮೇಧಪರ್ವದ ಹದಿಮೂರನೆಯ** ಅಧ್ಯಾಯದಲ್ಲಿ ಶ್ರೀಕೃಷ್ಣನು ಧರ್ಮರಾಯನಿಗೆ ಮಾಡಿದ ಕಾಮತ್ಯಾಗದ ಉಪದೇಶವಿರುತ್ತದೆ. ಮನುಷ್ಯನು ಸುಮ್ಮನೆ ಹೊರಗಿನ ದ್ರವ್ಯತ್ಯಾಗವನ್ನು ಮಾಡಿದ ಮಾತ್ರದಿಂದ ಪುರುಷಾರ್ಥವು ಸಿದ್ಧಿಸುವದಿಲ್ಲ; ಆದ್ದರಿಂದ ತನ್ನೊಳಗಿನ ದ್ರವ್ಯವನ್ನು ಕೂಡ ಶುಷ್ಕವೈರಾಗ್ಯದಿಂದಲ್ಲದೆ ವಿವೇಕದಿಂದಲೇ ತ್ಯಾಗಮಾಡಿ ಸಿದ್ಧಿಯನ್ನು ಪಡೆಯಬೇಕು. ಹೊರಗಿನ ಪದಾರ್ಥಗಳನ್ನು ಮಾತ್ರ ಬಿಟ್ಟು ಶರೀರದ್ರವ್ಯಗಳಲ್ಲಿ ಆಸಕ್ತಿಯನ್ನು ಇಟ್ಟುಕೊಂಡಿರುವವನು ಮಾಡುವ ಧರ್ಮವು ಧರ್ಮವಲ್ಲ, ಅವನಿಗಾಗುವ ಸುಖವು ಸುಖವಲ್ಲ; ಅದನ್ನು ಯಾವನೂ ಬಯಸಬಾರದು.

'ಮಮ' (ನನ್ನದು)- ಎಂಬ ಎರಡಕ್ಷರವೇ ಮೃತ್ಯುವು, 'ನ ಮಮ' (ನನ್ನದಲ್ಲ)- ಎಂಬ ಮೂರಕ್ಷರವೇ ಅಮೃತರೂಪವಾದ ಬ್ರಹ್ಮವು ; ಆದ್ದರಿಂದ ಬ್ರಹ್ಮವೂ ಮೃತ್ಯುವೂ ತನ್ನಲ್ಲಿಯೇ ಇರುವವೆಂದು ತಿಳಿಯಬೇಕು. ಇವೆರಡೂ ಪ್ರಾಣಿಗಳಲ್ಲಿದ್ದುಕೊಂಡು ಅವುಗಳಿಗೆ ಕಾಣಿಸಿಕೊಳ್ಳದೆಯೇ ಅವನ್ನು ಯುದ್ಧಕ್ಕೆ ಹಚ್ಚಿರುವವು. ಯಾವನು ನಿರ್ಮಮನಾಗಿರುವನೋ ಅವನು ಸಮಸ್ತ ಪ್ರಾಣಿಗಳನ್ನು ಕೊಂದರೂ ಅಹಿಂಸಕನಾಗಿರುವನು. ಯಾವನಿಗೆ ಮಮತ್ವವೆಂಬುದೇ ಇಲ್ಲವೋ ಅವನಿಗೆ ಚೇತನಾಚೇತನಪ್ರಾಣಿಗಳೊಡ ಗೂಡಿರುವ ಇಡಿಯ ಭೂಮಂಡಲವೇ ವಶವಾದರೂ ಅದರಿಂದ ಆಗಬೇಕಾದದ್ದೇನು? ಇದಕ್ಕೆ ಬದಲು ಯಾವನು ಮಮತ್ವದಿಂದ ಕೂಡಿರುವನೋ ಅವನು ಕಾಡಿನಲ್ಲಿದ್ದುಕೊಂಡು ಹಣ್ಣುಹಂಪಲನ್ನು ತಿಂದುಕೊಂಡಿದ್ದರೂ ಮೃತ್ಯುವಿನ ಬಾಯಿಯಲ್ಲಿಯೇ ಇರುತ್ತಾನೆಂದು ತಿಳಿಯಬೇಕು. ಹೀಗೆ ಹೊರಗಿನ ಶತ್ರುಗಳಿಗೂ ಒಳಗಿನ ಶತ್ರುಗಳಿಗೂ ಸ್ವಭಾವದಲ್ಲಿ ತಾರತಮ್ಯವನ್ನು ಕಂಡುಕೊಳ್ಳಬೇಕು. ಯಾವನು ತನ್ನೊಳಗಿನ ಶತ್ರುವನ್ನು ಇಲ್ಲವಾಗಿಸಿಕೊಳ್ಳುವನೋ ಅವನು ಮಹಾಭಯದಿಂದ ಬಿಡುಗಡೆಯಾದಂತೆ ಅಗುವದು. ಲೋಕದಲ್ಲಿ ಯಾವನು ಕಾಮಾತ್ಮನಾಗಿರುವನೋ ಅವನನ್ನು ಯಾರೂ ಹೊಗಳುವದಿಲ್ಲ. ಇಲ್ಲಿ ಕಾಮವಿಲ್ಲದೆ ಯಾವದೊಂದು ಪ್ರವೃತ್ತಿಯೂ ಉಂಟಾಗುವದೇ ಇಲ್ಲ, ಕಾಮಗಳೆಲ್ಲವೂ ಮನಸ್ಸಿನಲ್ಲಿಯೇ ಉಂಟಾಗುತ್ತವೆ, ಆದ್ದರಿಂದ ಜಾಣನಾದವನು ತನ್ನ ಮನಸ್ಸಿನಲ್ಲಿರುವ ಕಾಮಗಳನ್ನು ಸಂಹಾರಮಾಡಬೇಕು. ತಿಳಿವಳಿಕೆಯುಂಟಾದಂದಿನಿಂದ ಮತ್ತೆ ಮತ್ತೆ ಅಭ್ಯಾಸ ಯೋಗವನ್ನೇ ಅನುಸರಿಸಿ ಸರಿಯಾದ ಯೋಗಮಾರ್ಗವನ್ನು ಕಂಡುಕೊಳ್ಳಬೇಕು.

ದಾನ, ವೇದಾಧ್ಯಯನ, ತಪಸ್ಸು, ವೇದೋಕ್ತವಾದ ಕಾಮ್ಯಕರ್ಮಗಳು, ವ್ರತ, ಯಜ್ಞ, ನಿಯಮಗಳು, ಧ್ಯಾನಯೋಗ – ಇವುಗಳಲ್ಲಿ ಯಾವದೊಂದನ್ನೂ ಕಾಮದಿಂದ ಮಾಡಬಾರದು. ಯಾವಯಾವದನ್ನು ಕಾಮದಿಂದ ಮಾಡುತ್ತೇವೋ ಅದು ಧರ್ಮವಲ್ಲವೆಂದು ತಿಳಿಯಬೇಕು, ಕಾಮವನ್ನು ನಿಗ್ರಹಮಾಡುವದೇ ಧರ್ಮಕ್ಕೆ ಮೂಲವು. ಒಂದೊಂದು ಸಾಧನದಲ್ಲಿಯೂ ಕಾಮವು ಹೇಗೋ ಜನರನ್ನು ವಶಗೊಳಿಸಿಕೊಳ್ಳುವದರಿಂದ ಅದನ್ನು

ಬಹು ಎಚ್ಚರದಿಂದ ತೊಲಗಿಸಿಕೊಳ್ಳಬೇಕು. ಈ ವಿಷಯದಲ್ಲಿ ಕಾಮನು ಪೂರ್ವದಲ್ಲಿ ಹೇಳಿಕೊಂಡ ಗಾಥೆಗಳು ಕೆಲವು ಇವೆ. ಅವುಗಳ ತಾತ್ಪರ್ಯವೇನೆಂದರೆ ನನ್ನನ್ನು ಉಪಾಯವಿಲ್ಲದೆ ಯಾರೂ ಕೊಲ್ಲಲಾರರು. ನನ್ನನ್ನು ಹೇಗಾದರೂ ಹೊಡೆದು ಬಲಾತ್ಕಾರದಿಂದ ಕೊಂದುಹಾಕಬೇಕೆಂದು ಯಾರಾದರೂ ಪ್ರಯತ್ನಿಸಿದರೆ, ಆ ಹೊಡೆತದಲ್ಲಿಯೇ ಹೇಗೋ ನಾನು ಹುಟ್ಟಿಕೊಳ್ಳುವೆನು. ಯಾವನಾದರೂ ಯಜ್ಞಯಾಗಾದಿಗಳನ್ನು ಮಾಡಿ ನನ್ನನ್ನು ನಾಶಗೊಳಿಸುವದಕ್ಕೆ ಯತ್ನಿಸಿದರೆ, ಪುಣ್ಯಾತ್ಮನು ಪುಣ್ಯಯೋನಿಯಲ್ಲಿ ಮತ್ತೂ ಹುಟ್ಟುವಂತೆ, ಅವನ ಚಿತ್ತದಲ್ಲಿ ನಾನು ಮತ್ತೂ ಹುಟ್ಟುತ್ತಿರುವೆನು. ಯಾರಾದರೂ ನಿತ್ಯವೂ ವೇದವೇದಾಂತಸಾಧನಗಳನ್ನು ಮಾಡುತ್ತಾ ನನ್ನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದರೆ ಸ್ಥಾವರಜನ್ಮದಲ್ಲಿ ಜೀವನು ಹುಟ್ಟುವಂತೆ ಮತ್ತೆ ಅವನ ಚಿತ್ತದಲ್ಲಿಯೂ ನಾನು ಹುಟ್ಟಿಕೊಳ್ಳುವೆನು. ಯಾವನಾದರೂ ಸತ್ಯಪರಾಕ್ರಮನಾಗಿ ಧೃತಿಯಿಂದ ನನ್ನನ್ನು ಕೊಲ್ಲುವದಕ್ಕೆ ಯತ್ನಿಸಿದರೆ ನಾನು ಆತನ ಚಿತ್ತದ ಅಭಿಮಾನವೇ ಆಗಿಬಿಡುತ್ತೇನೆ, ಆಗ ಅವನು ನನ್ನನ್ನು ಇಂಥವನೆಂದು ಅರಿಯಲಾರದೆ ಹೋಗುತ್ತಾನೆ, ಯಾವನಾದರೂ ತಪಸ್ಸಿನಿಂದ ನನ್ನನ್ನು ಗೆಲ್ಲುವದಕ್ಕೆ ಹೊರಟರೆ ಆ ತಪಸ್ಸಿನಲ್ಲಿಯೇ ನಾನು ತೋರಿಕೊಳ್ಳುತ್ತೇನೆ. ಯಾವನಾದರೂ ಮುಮುಕ್ಷುವಾಗಿ ನನ್ನನ್ನು ಕೊಲ್ಲುವದಕ್ಕೆ ಯತ್ನಿಸಿದರೆ ಆತನಲ್ಲಿಯೇ ನಾನು ಹುಟ್ಟಿ ನಗುತ್ತಾ ನರ್ತನ ಮಾಡುವೆನು. ಆದ್ದರಿಂದ ನನ್ನನ್ನು ಯಾರೂ ಕೊಲ್ಲಲಾರರು.''

ಆದ್ದರಿಂದ ಎಲೈ ಧರ್ಮರಾಯನೆ, ನೀನು ಮೊದಲು ನಿಷ್ಕಾಮ ಬುದ್ಧಿಯಿಂದ ಯಜ್ಞಾದಿಗಳನ್ನು ಮಾಡಿ ಚಿತ್ತಶುದ್ಧಿಯನ್ನು ಸಂಪಾದಿಸಿಕೊ; ಆಮೇಲೆ ಸುಲಭವಾಗಿ ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆದುಕೊಳ್ಳಬಹುದು- ಎಂದು ಶ್ರೀಕೃಷ್ಣನು ಉಪದೇಶಿಸಿದನು.

★★★★★

# ತಂದೆ-ಮಗನ ಸಂವಾದ

**15-5-1937**

**ಬ್ರ॥ಶ್ರೀ॥ಎಸ್. ವಿಠ್ಠಲಶಾಸ್ತ್ರಿಗಳವರು**

ಮಹಾಭಾರತ, ಶಾಂತಿ ಪರ್ವ, ಮೋಕ್ಷಧರ್ಮ, 175ನೆಯ ಅಧ್ಯಾಯದಲ್ಲಿ ಈ ಸಂದರ್ಭ ಬಂದಿದೆ, ಯಥಾವಿಧಿಯಾಗಿ ಅಧ್ಯಯನವನ್ನು ಮಾಡಿಕೊಂಡಿದ್ದ ಒಬ್ಬಾನೊಬ್ಬ ಬ್ರಾಹ್ಮಣನಿಗೆ ಮೇಧಾವಿಯೆಂಬ ಹೆಸರಿನ ಒಬ್ಬ ಮಗನಿದ್ದನು. ಒಂದು ದಿನ ಅವನು ''ತಂದೆಯೆ, ಆಯುಸ್ಸು ಕ್ಷೀಣವಾಗುತ್ತಿದೆಯೆಂದು ತಿಳಿದಬಳಿಕ ಶ್ರೇಯಸ್ಸಿಗಾಗಿ ಏನು ಮಾಡಬೇಕು?'' ಎಂದು ಕೇಳಲು ತಂದೆಯು ''ಬ್ರಹ್ಮಚರ್ಯದಿಂದ ವೇದಾಧ್ಯಯನವನ್ನು ಮಾಡಿ, ಗೃಹಸ್ಥನಾಗಿ ವೇದೋಕ್ತಕರ್ಮಗಳನ್ನು ಆಚರಿಸಿ ಪ್ರಜಾಸಂತಾನವನ್ನು ಪಡೆದು, ಆಮೇಲೆ ವಾನಪ್ರಸ್ಥನಾಗಿ ಕೊನೆಯಲ್ಲಿ ಸಂನ್ಯಾಸಿಯಾಗಬೇಕು'' ಎಂದು ಉತ್ತರಕೊಟ್ಟನು.

ಆಗ ಮಗನು ಇಂತೆಂದನು: ''ತಂದೆಯೆ, ಲೋಕವೆಲ್ಲವೂ ಮೃತ್ಯುವಿನ ಹೊಡೆತಕ್ಕೆ ಸಿಕ್ಕಿಬಿದ್ದಿರುತ್ತವೆ ; ಮುಪ್ಪು ಎಲ್ಲರನ್ನೂ ಮುತ್ತಿಕೊಳ್ಳುತ್ತಿದೆ; ಹಗಲುರಾತ್ರಿಗಳು ಹಾರಿಹೋಗುತ್ತಿವೆ. ಇದನ್ನು ತಿಳಿದೂ ಹೀಗೆ ಕಾಲವಿಳಂಬವನ್ನು ಮಾಡಬಹುದೆ? ಒಂದೊಂದು ರಾತ್ರಿಯು ಕಳೆದಂತೆಯೂ ಆಯುಸ್ಸು ಕಡಿಮೆಯಾಗುತ್ತಿರುವದು. ಮನುಷ್ಯನ ಆಸೆಗಳೆಲ್ಲ ಪೂರ್ತಿಯಾಗುವದರೊಳಗೇ ಮೃತ್ಯುವು ಬಂದೊದಗಿಬಿಡುವದು. ಗಿಡದಲ್ಲಿ ಹೂವನ್ನು ಬಿಡಿಸಿಕೊಳ್ಳುವಂತೆ ಎತ್ತಲೋ ಚಿತ್ತವಿಟ್ಟಿರುವ ಮನುಷ್ಯನನ್ನು, ತೋಳವು ಕುರಿಯನ್ನು ಹಿಡಿದೊಯ್ಯುವಂತೆ, ಮೃತ್ಯುವು ಸೆಳೆದುಕೊಂಡುಹೋಗುವದು. ಆದ್ದರಿಂದ ಮುಂದೆ ಮಾಡುವದನ್ನು ಈಗಲೇ ಮಾಡಿಬಿಡಬೇಕು; ಏಕೆಂದರೆ ನಾವು ಮಾಡಿದ್ದನ್ನೂ ಬಿಟ್ಟದ್ದನ್ನೂ ಮೃತ್ಯುವು ಲೆಕ್ಕಕ್ಕೆ ತಂದುಕೊಳ್ಳುವದಿಲ್ಲ, ಅದು ಇಂಥವನಿಗೆ ಬರುತ್ತದೆಯೆಂಬುದಾಗಲಿ ಇಂಥವನಿಗೆ ಬರುವದಿಲ್ಲವೆಂದಾಗಲಿ ನಿರ್ಧಾರವಿಲ್ಲ. ಯೌವನದಲ್ಲಿಯೇ ಧರ್ಮಶೀಲನಾಗಿ ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಸದ್ಗತಿಯನ್ನೂ

ಪಡೆಯಬೇಕಲ್ಲದೆ ಪತ್ನೀಪುತ್ರಾದಿಗಳಲ್ಲಿ ಆಸಕ್ತನಾಗಿದ್ದರೆ, ಹೋತನು ಹುಲಿಯ ಬಾಯಿಗೆ ಬೀಳುವಂತೆ, ಮೃತ್ಯುವಿಗೆ ತುತ್ತಾಗಬೇಕಾಗುವದು. ಮೃತ್ಯುವಿಗೆ ಇಂಥವರೇ ಬೇಕೆಂಬ ನಿಯಮವಿಲ್ಲ; ಅದು ಎಲ್ಲವನ್ನೂ ಒಂದೇ ಸಮನಾಗಿ ತೆಗೆದುಕೊಂಡು ಹೋಗುತ್ತದೆ. ಸಾವು, ಮುಪ್ಪು, ಬೇನೆ, ದುಃಖ-ಹೀಗೆ ಬಗೆಬಗೆಯ ಸಂಕಟಗಳು ದೇಹಕ್ಕೆ ಅಂಟಿಕೊಂಡಿರುತ್ತವೆ; ಆದ್ದರಿಂದ ನಾನು ಸ್ವಸ್ಥನಾಗಿರುವೆನೆಂದು ಯಾವನೂ ಧೈರ್ಯದಿಂದಿರಬಾರದು.

ವಿಷಯಾಸಕ್ತನಾಗಿ ಗ್ರಾಮದಲ್ಲಿರುವದು ಮೃತ್ಯುವಿನ ದ್ವಾರವೆಂದೂ ವಿವಿಕ್ತಸ್ಥಾನವೇ ದೇವತೆಗಳ ಸ್ಥಾನವೆಂದೂ ಶ್ರುತಿಯು ಸಾರುವದು. ಆದ್ದರಿಂದ ವಿವೇಕಿಗಳಾದವರು ವಿಷಯಾಸಕ್ತಿಯೆಂಬ ಕೊರಳ ಕಣ್ಣಿಯನ್ನು ಕಳಚಿಕೊಂಡು ಹೋಗುವರು. ಅಹಿಂಸಾವ್ರತವನ್ನಾಚರಿಸುವವರಿಗೆ ಮತ್ತೊಬ್ಬರಿಂದಲೂ ಹಿಂಸೆಯಿರುವದಿಲ್ಲ. ಸತ್ಯರೂಪನಾದ ಆತ್ಮನಲ್ಲಿ ನಿಷ್ಠೆಯುಳ್ಳವನೊಬ್ಬನೇ ಮೃತ್ಯುಸೇನೆಯು ತನ್ನನ್ನು ಮುತ್ತುತ್ತಲಿದೆಯೆಂಬುದನ್ನರಿತು ಸತ್ಯವ್ರತವನ್ನು ಸ್ವೀಕರಿಸಿ ಅದರಿಂದಲೇ ಮೃತ್ಯುವನ್ನು ಜಯಿಸುವನು.

ಆದ್ದರಿಂದ ನಾನು ಯಾರೊಬ್ಬರನ್ನೂ ಹಿಂಸಿಸದೆ ಕಾಮಕ್ರೋಧಗಳನ್ನು ತೊರೆದು ಸುಖದುಃಖಗಳನ್ನು ಸಮವಾಗಿ ಕಾಣುತ್ತಾ ಶಾಂತಿಯಜ್ಞನಾಗಿ ಹಿಂಸ್ರವಾದ ಪಶುಯಜ್ಞವನ್ನು ಬಿಟ್ಟುಬಿಡುವೆನು. ವಾಙ್ಮನಸ್ಸುಗಳನ್ನು ತಪಸ್ಸು, ತ್ಯಾಗ, ಸತ್ಯ -ಎಲ್ಲವನ್ನೂ ಬ್ರಹ್ಮದಲ್ಲಿಟ್ಟಿರುವವನಿಗೇ ಪರಮಪುರುಷಾರ್ಥವು ದೊರೆಯುತ್ತದೆ. ವಿದ್ಯೆಗೆ ಸಮನಾದ ಕಣ್ಣಿಲ್ಲ, ಸತ್ಯಕ್ಕೆ ಸಮನಾದ ತಪಸ್ಸಿಲ್ಲ, ರಾಗಕ್ಕೆ ಸಮನಾದ ದುಃಖವಿಲ್ಲ, ತ್ಯಾಗಕ್ಕೆ ಸಮನಾದ ಸುಖವಿಲ್ಲ. ಪ್ರಜಾ ಸಂತಾನವು ನನ್ನನ್ನು ದಾಟಿಸಲಾರದು ; ನಾನು ಆತ್ಮನಿಂದಲೇ ಹುಟ್ಟಿ, ಆತ್ಮನಲ್ಲಿಯೇ ಇರುವವನಾದ್ದರಿಂದ ಆತ್ಮನಲ್ಲಿಯೇ ಸೇರಿಕೊಳ್ಳುವೆನು. ಮುಖ್ಯವಾಗಿ ಬ್ರಾಹ್ಮಣನ ಧನವು ಯಾವದೆಂದರೆ : ಏಕಾಕಿಯಾಗಿರುವದು, ಸಮತೆ, ಸತ್ಯ, ಶೀಲ, ಅಹಿಂಸೆ, ಋಜುತ್ವ, ಕ್ರಿಯೆಗಳನ್ನು ಬಿಟ್ಟು ಉಪರತಿಯನ್ನು ಹೊಂದುವದು-ಇವೇ''. ಅಯ್ಯ, ಬ್ರಾಹ್ಮಣ ''ಸಾಯುವನಿಗೆ ಹಣದಿಂದೇನು, ನೆಂಟರಿಂದೇನು? ನಿನ್ನ ಹೃದಯದಲ್ಲಿರುವ ಪರಮಾತ್ಮನನ್ನು ಹುಡುಕಿ ಕಂಡುಕೊ. ನಿಮ್ಮ ತಂದೆ, ಅಜ್ಜ, ಮುತ್ತಜ್ಜಂದಿರೇ ಮೊದಲಾದವರು ಏನಾದರೆಂಬುದನ್ನು ಮನಸ್ಸಿನಲ್ಲಿ

ಆಲೋಚಿಸು'' ಎಂದು ನಿವೃತ್ತಿಧರ್ಮವನ್ನು ವಿವರಿಸಿದನು. ತಂದೆಯು ಈ ಮಾತಿನಲ್ಲಿರುವ ನಿಜವನ್ನರಿತು ತಾನೂ ಆತ್ಮನಿಷ್ಠೆಗೆ ಹೊರಟನು.

★★★★★

# ಗಜೇಂದ್ರಮೋಕ್ಷ

**16-5-1937**

**ಬ್ರ॥ಶ್ರೀ॥ಪಿ.ಚಂದ್ರಶೇಖರಭಟ್ಟರು**

**ಭಾಗವತದ ಎಂಟನೆಯ ಸ್ಕಂಧದ ಮೂರನೆಯ ಅಧ್ಯಾಯದಲ್ಲಿ** - ಇಂದ್ರದ್ಯುಮ್ನನೆಂಬ ರಾಜನು ಶಾಪದಿಂದ ಆನೆಯಾಗಿ ಹುಟ್ಟಿ ಒಂದು ದಿನ ತ್ರಿಕೂಟಪರ್ವತದ ತಪ್ಪಲಲ್ಲಿದ್ದ ಒಂದಾನೊಂದು ಸರೋವರದಲ್ಲಿ ಕ್ರೀಡಿಸುತ್ತಿರಲು ಒಂದು ಮೊಸಳೆಯು ಆನೆಯ ಕಾಲನ್ನು ಹಿಡಿದುಕೊಂಡಿತು. ಎಷ್ಟು ಕೊಸರಿಕೊಂಡರೂ ಕಾಲನ್ನು ಬಿಡಿಸಿಕೊಳ್ಳುವದು ಆನೆಯಿಂದ ಆಗಲಿಲ್ಲ; ಜೊತೆಯಲ್ಲಿ ಬಂದಿದ್ದ ಆನೆಗಳು ಯಾವವೂ ಅದನ್ನು ಬಿಡಿಸಲಾರದೆ ಸುಮ್ಮನೆ ನೋಡುತ್ತಾ ಮೇಲೆಯೇ ನಿಂತುಬಿಟ್ಟವು. ಆಗ ಆನೆಯು ಪೂರ್ವಜನ್ಮದ ಸಂಸ್ಕಾರದಿಂದ ಭಗವಂತನ ಸ್ತುತಿಯನ್ನು ಮಾಡಿತು. ಆಗ ಶ್ರೀಹರಿಯು ಬಂದು ಗಜೇಂದ್ರನನ್ನು ಬಿಡಿಸಿದನು ಎಂಬುದು ಕಥೆ. ಸ್ತೋತ್ರದಲ್ಲಿ ಗಜೇಂದ್ರನು ಉಪಯೋಗಿಸಿರುವ ವಿಶೇಷಣಗಳು ಬ್ರಹ್ಮನೇ ಮೊದಲಾದ ಯಾವದೊಂದು ವಿಶೇಷದೇವತೆಗೂ ಹೊಂದುವ ಹಾಗಿರಲಿಲ್ಲ ; ಆದ್ದರಿಂದ ಅವರು ಯಾರೂ ಈ ಸ್ತೋತ್ರವನ್ನು ತಮ್ಮದೆಂದು ಭಾವಿಸಲಿಲ್ಲ. ಅತ್ಯಂತ ನಿರ್ವಿಶೇಷಸ್ವರೂಪವಾದ ಪರಬ್ರಹ್ಮಕ್ಕೆ ಮಾತ್ರವೇ ಅನ್ವಯಿಸುವಂತಿದ್ದ ಆ ಸ್ತೋತ್ರದ ಭಾವಾರ್ಥವೇನೆಂದರೆ:

''ಯಾವನಿಂದ ಜಡವಾದ ದೇಹೇಂದ್ರಿಯಗಳೂ ಚೇತನವಾಗಿ ತೋರುವವೋ ಆದಿಬೀಜವಾದ ಆ ಪರಮೇಶ್ವರನೆಂಬ ಪುರುಷನಿಗೆ ಮನಸ್ಸಿನಿಂದಲೇ ನಮಸ್ಕರಿಸುತ್ತೇನೆ. ಈ ಪ್ರಪಂಚವು ಯಾವನಲ್ಲಿದ್ದು

ಕೊಂಡಿರುವದೋ, ಯಾವನಿಂದ ಬಂದಿರುವದೋ, ಯಾವನ ಸ್ವರೂಪವೇ ಆಗಿರುವದೋ, ಯಾವನು ಇದನ್ನು ಮೀರಿದ ರೂಪವುಳ್ಳವನೋ ಆ ಸ್ವತಃಸಿದ್ಧನನ್ನು ಶರಣುಹೊಕ್ಕಿದೇನೆ. ಯಾವನು ಮಾಯೆಯಿಂದ ತೋರಿ ಮರೆಯಾಗುತ್ತಿರುವ ಈ ಜಗತ್ತಿನ ಸೃಷ್ಟಿಪ್ರಲಯಗಳನ್ನು ತನ್ನ ನಿತ್ಯಚೈತನ್ಯದೃಷ್ಟಿಯಿಂದ ನೋಡುತ್ತಿರುವನೋ ಆ ಪರಾತ್ಪರನಾದ ಆತ್ಮನೆಂಬ ಮೂಲಕಾರಣನು ನನ್ನನ್ನು ಕಾಪಾಡಲಿ! ಕಾಲದಿಂದ ಲೋಕಗಳೂ ಲೋಕಪಾಲಕರೂ ನಾಶವಾಗಲು ಉಳಿಯುವ ಗಭೀರತಮಸ್ಸಿನ ಆಚೆ ಯಾವಾತನು ಬೆಳಗುತ್ತಿರುವನೋ, ಯಾವಾತನ ಸ್ವರೂಪವನ್ನು ದೇವತೆಗಳು ಋಷಿಗಳು ಕೂಡ ಅರಿಯಲಾರರೋ ಅಂಥಾತನನ್ನು ಯಾವ ಜೀವನು ತಾನೆ ಅರಿತುಕೊಂಡಾನು, ವರ್ಣಿಸಿಯಾನು? ಬೇರೆಬೇರೆ ಆಕೃತಿಗಳಿಂದ ತೋರಿಕೊಳ್ಳುತ್ತಿರುವ ಯಾವಾತನ ಚರಿತ್ರವನ್ನು ನಾವು ಹಿಂಬಾಲಿಸಿ ಅರಿಯಲಾರೆವೋ ಆತನು ನಮ್ಮನ್ನು ಕಾಪಾಡಲಿ! ಯಾವಾತನ ಅತ್ಯಂತ ಮಂಗಲಸ್ವರೂಪನ್ನು ನೋಡಬೇಕೆಂದು ಸತ್ಪುರುಷರು ಸಂಗವನ್ನು ತ್ಯಜಿಸಿ ಮುನಿಗಳಾಗಿ ಸಮಸ್ತಪ್ರಾಣಿಗಳನ್ನೂ ತಮ್ಮಂತೆ ಕಾಣುತ್ತಾ ಕಷ್ಟಸಾಧ್ಯವಾದ ವ್ರತಗಳನ್ನು ಆಚರಿಸುವರೋ ಆತನು ನನಗೆ ಗತಿ. ಯಾವನಿಗೆ ಜನ್ಮವಾಗಲಿ ಕರ್ಮವಾಗಲಿ ಇಲ್ಲವೋ ನಾಮರೂಪಗಳಾಗಲಿ ಗುಣದೋಷಗಳಾಗಲಿ ಇಲ್ಲವೋ ಯಾವನು ಲೋಕದ ಸೃಷ್ಟಿ ಪ್ರಲಯಗಳಿಗಾಗಿ ಇವುಗಳೆಲ್ಲವನ್ನೂ ಸ್ವೀಕರಿಸುತ್ತಿರುವನೋ ಪರಮೇಶ್ವರನೂ ಅನಂತಶಕ್ತಿಯುತನೂ ರೂಪವಿಲ್ಲದವನಾಗಿದ್ದರೂ ಬಹುರೂಪಗಳನ್ನು ಸ್ವೀಕರಿಸುವವನೂ ಅದ್ಭುತಕರ್ಮಗಳನ್ನು ಮಾಡುವವನೂ ಆದ ಆ ಪರಮಾತ್ಮನಿಗೆ ನಮಸ್ಕಾರ. ಸ್ವಯಂಪ್ರಕಾಶನಾದ ಸಾಕ್ಷಿಯಾಗಿ ವಾಙ್ಮನಶ್ಚಿತ್ತಗಳಿಗೆ ಅಗೋಚರನಾಗಿರುವ ಪರಮಾತ್ಮನಿಗೆ ನಮಸ್ಕಾರ! ಸತ್ತ್ವಗುಣದಿಂದಲೂ ನಿವೃತ್ತಿಧರ್ಮದಿಂದಲೂ ದೊರಕುವ ಕೈವಲ್ಯದೊಡೆಯನಾದ ಮೋಕ್ಷಾನಂದಾನುಭವಸ್ವರೂಪನಿಗೆ ನಮಸ್ಕಾರ. ಗುಣತ್ರಯವನ್ನನುಸರಿಸಿ ಶಾಂತಘೋರಮೂಢರೂಪನಾಗಿದ್ದರೂ ನಿರ್ವಿಶೇಷನಾಗಿ ಸಮಸ್ಥಿತಿಯಲ್ಲಿಯೇ ಇರುವ ಜ್ಞಾನದ ಗಟ್ಟಿಗೆ ನಮಸ್ಕಾರ. ಕ್ಷೇತ್ರಜ್ಞರೂಪದಿಂದಲೂ ಇದ್ದು ಸರ್ವಸಾಕ್ಷಿಯಾಗಿರುವಾತನೆ, ಆತ್ಮಮೂಲನಾದ ಪುರುಷನೆ, ಮೂಲಪ್ರಕೃತೆಯೆ, ನಿನಗೆ ನಮಸ್ಕಾರ.

ಸಕಲೇಂದ್ರಿಯವಿಷಯಗಳನ್ನೂ ನೋಡುತ್ತಾ ಸರ್ವಪ್ರತ್ಯಯಗಳಿಗೂ ಕಾರಣನಾಗಿ ಅಸದ್ರೂಪವಾದ ಅವಿದ್ಯೆಯಿಂದ ಸೂಚಿತನಾಗಿ ಸದ್ರೂಪನಾಗಿ ತೋರುತ್ತಿರುವ ಪರಮಾತ್ಮನಿಗೆ ನಮಸ್ಕಾರ. ಎಲ್ಲಕ್ಕೂ ಕಾರಣನಾಗಿ ತನಗೆ ಮತ್ತೊಂದು ಕಾರಣವಿಲ್ಲದೆ ಅದ್ಭುತಕಾರಣನಾಗಿರುವ ಸಕಲಾಗಮಗಳೂ ಹೋಗಿ ಸೇರುವ ಸಮುದ್ರವಾಗಿರುವ ಮೋಕ್ಷರೂಪವಾದ ಪರಗತಿಗೆ ನಮಸ್ಕಾರ! ಸತ್ತ್ವಾದಿ ಗುಣಗಳೆಂಬ ಅರಣಿಯಲ್ಲಿ ಅಡಗಿರುವ ಚಿದ್ರೂಪವಾದ ಅಗ್ನಿಯಾಗಿ ಅವುಗಳ ಕ್ಷೋಭವಾಗಲು ಹೊರಮುಖನಾಗುವವನೂ ನೈಷ್ಕರ್ಮ್ಯದಿಂದ ಶಾಸ್ತ್ರಗಳನ್ನು ಮೀರಿರುವವರ ಹೃದಯದಲ್ಲಿ ಬೆಳಗುವವನೂ ಆಗಿರುವ ಭಗವಂತನನ್ನು ನಮಸ್ಕರಿಸುತ್ತೇನೆ. ಶರಣಾಗತರಾಗುವ ನನ್ನಂಥ ಪಶುಗಳ ಪಾಶಗಳನ್ನು ತಪ್ಪಿಸುವವನೂ ನಿತ್ಯಮುಕ್ತನೂ ಮಹಾಕರುಣಾಶಾಲಿಯೂ ನಾಶರಹಿತನೂ ತನ್ನ ಅಂಶದಿಂದ ಸಮಸ್ತದೇಹಿಗಳ ಮನಸ್ಸಿನಲ್ಲಿಯೂ ಪ್ರತ್ಯಗಾತ್ಮನಾಗಿ ತೋರುತ್ತಿರುವವನೂ ಆದ ಪರಮಾತ್ಮನಿಗೆ ನಮಸ್ಕಾರ! ದೇಹ, ಪುತ್ರ, ಆಪ್ತರು, ಮನೆ, ಹಣ, ಆಳುಕಾಳು - ಮುಂತಾದವುಗಳಲ್ಲಿ ಆಸಕ್ತರಾಗಿರುವವರಿಗೆ ಸಿಕ್ಕದವನೂ ಗುಣಸಂಗರಹಿತನೂ ಮುಕ್ತಾತ್ಮರು ಹೃದಯದಲ್ಲಿ ಧ್ಯಾನಮಾಡತಕ್ಕವನೂ ಆಗಿರುವ ಜ್ಞಾನಸ್ವರೂಪಭಗವಂತನಾದ ಈಶ್ವರನಿಗೆ ನಮಸ್ಕಾರ! ತ್ರಿವರ್ಗದಿಂದ ಬಿಡುಗಡೆಯನ್ನು ಹೊಂದಬೇಕೆನ್ನುವವರು ಯಾರನ್ನು ಭಜಿಸಿ ಇಷ್ಟಗತಿಯನ್ನು ಹೊಂದುವರೋ, ಅವರಿಗೆ ಬೇಕಿಲ್ಲದಿದ್ದರೂ ಭೋಗಗಳನ್ನೂ ನಾಶರಹಿತವಾದ ದೇಹವನ್ನೂ ಯಾವನು ಕೊಡುವನೋ, ಅಂಥ ನಿರತಿಶಯದಯಾವಂತನು ನನ್ನನ್ನು ಬಿಡಿಸಲಿ! ಏಕಾಂತಭಕ್ತರು ಮತ್ತೇನನ್ನೂ ಬೇಡದೆ ಅತ್ಯಾಶ್ಚರ್ಯಕರವಾದ ಯಾವನ ಮಂಗಲಚರಿತವನ್ನೇ ಹಾಡುತ್ತಾ ಸುಖಸಮುದ್ರದಲ್ಲಿ ಮುಳುಗಿರುವರೋ ಅಂಥ ನಾಶರಹಿತವಾದ ಪರಬ್ರಹ್ಮವಾಗಿ ಅವ್ಯಕ್ತನೂ ಅಧ್ಯಾತ್ಮಯೋಗಕ್ಕೆ ಸಿಕ್ಕುವಾತನೂ ಅತೀಂದ್ರಿಯನೂ ಸೂಕ್ಷ್ಮವಾದ ವಸ್ತುವಿನಂತೆ ಅಜ್ಞರಿಗೆ ಅತಿದೂರನೂ ಆಗಿರುವ ಅನಾದ್ಯನಂತನಾದ ಪರಿಪೂರ್ಣಭಗವಂತನನ್ನು ಸ್ತುತಿಸುತ್ತೇನೆ. ಬ್ರಹ್ಮಾದಿದೇವತೆಗಳೂ ವೇದಗಳೂ ಚರಾಚರಪ್ರಾಣಿಗಳೂ ಬೇರೆಬೇರೆಯ ನಾಮರೂಪಗಳಿಂದ ಕೂಡಿ ಬೆಂಕಿಯಿಂದ ಹೊರಡುವ ಕಿಡಿಗಳಂತೆ ಯಾವನ ಅಂಶದಿಂದ ಆಗಿರುವರೋ ಮನಸ್ಸು, ಬುದ್ಧಿ, ಇಂದ್ರಿಯ, ಶರೀರ- ಇವುಗಳೆಲ್ಲವೂ ಯಾವನಿಂದಲೇ ಆಗಿರುವವೋ, ಯಾವಾತನು ದೇವತೆಯಲ್ಲದೆ ಅಸುರನಲ್ಲದೆ, ಮರ್ತ್ಯನಲ್ಲದೆ ತಿರ್ಯಕ್ಪ್ರಾಣಿಯೂ

ಅಲ್ಲದೆ ಹೆಂಗಸಲ್ಲದೆ ಗಂಡಸಲ್ಲದೆ, ನಪುಂಸಕನೂ ಅಲ್ಲದೆ, ಗುಣವಲ್ಲದೆ ಕರ್ಮವಲ್ಲದೆ, ಸತ್ತಲ್ಲದೆ, ಅಸತ್ತಲ್ಲದೆ, ಎಲ್ಲವನ್ನೂ ನಿಷೇಧ ಮಾಡಿದ ಮೇಲೆ ಉಳಿಯುವ ಸ್ವರೂಪನಾಗಿರುವನೋ ಅಂಥ ಸರ್ವಾತ್ಮನಿಗೆ ಜಯ! ನನಗೆ ಅಜ್ಞಾನಾವೃತವಾಗಿ ಈ ಆನೆಯ ಜನ್ಮದಲ್ಲಿರಬೇಕೆಂಬ ಇಚ್ಛೆಯೇನೂ ಇಲ್ಲ; ಆತ್ಮಪ್ರಕಾಶವನ್ನು ಮುಸುಕಿರುವ ಅಜ್ಞಾನದಿಂದ ಬಿಡುಗಡೆಯಾಗುವದೇ ಬೇಕಾಗಿದೆ. ವಿಶ್ವವನ್ನು ಸೃಷ್ಟಿಸುವವನೂ ವಿಶ್ವರೂಪನಾದರೂ ವಿಶ್ವವಲ್ಲದೆ ವಿಶ್ವವನ್ನು ಕ್ರೀಡಾಸಾಮಗ್ರಿಯಾಗಿ ಮಾಡಿಕೊಂಡಿರುವವನೂ ವಿಶ್ವಾತ್ಮನೂ ಜನ್ಮರಹಿತನೂ ಆದ ಪರಮಪದವಾದ ಬ್ರಹ್ಮವನ್ನು ನಮಸ್ಕರಿಸುತ್ತೇನೆ. ಯೋಗಿಗಳು ಕರ್ಮವನ್ನೆಲ್ಲ ಸುಟ್ಟು ಯೋಗಭಾವಿತವಾದ ತಮ್ಮ ಹೃದಯದಲ್ಲಿ ಯಾವಾತನನ್ನು ಕಂಡುಕೊಳ್ಳುವರೋ ಆತನನ್ನು ನಮಸ್ಕರಿಸುತ್ತೇನೆ. ಸಹಿಸಲಸದಳವಾದ ವೇಗವುಳ್ಳ ಶಕ್ತಿತ್ರಯಗಳಿಂದ ಕೂಡಿದಾತನೆ, ಸಮಸ್ತಬುದ್ಧಿವೃತ್ತಿಗಳ ಉತ್ಪತ್ತಿಗೂ ಕಾರಣನಾದವನೆ, ಶರಣಾಗತರನ್ನು ಕಾಪಾಡುವಾತನೆ, ಅಂತರಹಿತಶಕ್ತಿಯುಳ್ಳಾತನೆ, ಕುತ್ಸಿತವಾದ ಇಂದ್ರಿಯಗಳಿಗೆ ನಿಲುಕದ ಮಾರ್ಗವುಳ್ಳಾತನೆ, ನಮಸ್ಕಾರ, ನಮಸ್ಕಾರ, ಯಾವಾತನ ಶಕ್ತಿಯಿಂದ ಆವೃತವಾಗಿರುವದರಿಂದ ನನ್ನ ಸ್ವರೂಪವೇ ನನಗೆ ತಿಳಿಯದಾಗಿದೆಯೋ ಅಂಥ ದುರತಿಕ್ರಮವಾದ ಮಹಿಮೆಯ ಭಗವಂತನನ್ನು ಶರಣು ಹೊಂದಿದೇನೆ.''

ಈ ಸ್ತೋತ್ರವನ್ನು ಕೇಳಿ ಸವಿಶೇಷಸ್ವರೂಪರಾದ ದೇವತೆಗಳು ಸುಮ್ಮನಿದ್ದರು. ನಿಖಿಲಾತ್ಮನೂ ಸರ್ವದೇವತಾಮಯನೂ ಆದ ಶ್ರೀಹರಿಯು ಮಾತ್ರ ಕೂಡಲೆ ಚಕ್ರಾಯುಧನಾಗಿ ಛಂದೋಮಯನಾದ ಗರುಡನನ್ನೇರಿಕೊಂಡು ಅಲ್ಲಿ ಮೈದೋರಿದನು. ಆತನನ್ನು ಕಂಡು ಗಜೇಂದ್ರನು ಸೊಂಡಿಲಿನಿಂದ ಒಂದು ಕಮಲವನ್ನು ಹಿಡಿದೆತ್ತಿ ಬಹು ಕಷ್ಟದಿಂದ ''ನಾರಾಯಣನೆ! ಅಖಿಲಗುರುವೆ! ನಿನಗೆ ನಮಸ್ಕಾರ!'' ಎಂದು ಕೂಗಿಕೊಂಡನು. ದಯಾಮಯನಾದ ಪರಮಾತ್ಮನು ಗರುಡನ ಮೇಲಿನಿಂದ ಇಳಿದು ಮೊಸಳೆಯೊಡನೆಯೇ ಗಜೇಂದ್ರನನ್ನು ಸರಸ್ಸಿನಿಂದ ಮೇಲಕ್ಕೆತ್ತಿ ಮೊಸಳೆಯ ಮುಖವನ್ನು ಚಕ್ರದಿಂದ ಸೀಳಿದನು- ಎಂಬುದು ಅಧ್ಯಾಯಾರ್ಥದ ಸಾರವು.

★★★★★

# ಸೃಷ್ಟಿರಹಸ್ಯ

**17-5-1937**

**ಬ್ರ॥ಶ್ರೀ॥ಎಸ್. ವಿಠ್ಠಲಶಾಸ್ತ್ರಿಗಳವರು**

**ವಾಸಿಷ್ಠರಾಮಾಯಣದ ಸ್ಥಿತಿಪ್ರಕರಣದ ಮೂವತ್ತೊಂಬತ್ತನೆಯ ಅಧ್ಯಾಯ-** ಹಿಂದಿನ ಅಧ್ಯಾಯದಲ್ಲಿ ವಸಿಷ್ಠರು ''ಬಂಧವಿಲ್ಲ, ಮೋಕ್ಷವಿಲ್ಲ, ದುಃಖವು ಅಜ್ಞಾನದಿಂದ ಉಂಟಾಗಿರುತ್ತದೆ, ಅದು ಜ್ಞಾನದಿಂದ ಹೋಗಿಬಿಡುತ್ತದೆ'' ಎಂದದ್ದನ್ನು ಕೇಳಿ ಶ್ರೀರಾಮನು ಹಾಗಾದರೆ ಈ ವಿಚಿತ್ರರೂಪವಾದ ಸೃಷ್ಟಿಯು ಹೇಗೆ ಬಂತು?'' ಎಂದು ಪ್ರಶ್ನೆಮಾಡಲು ವಸಿಷ್ಠರು ಇಲ್ಲಿ ಉತ್ತರವನ್ನು ಹೇಳಿರುತ್ತಾರೆ.

''ಅಯ್ಯ ರಾಮನೆ, ಬ್ರಹ್ಮದಲ್ಲಿ ಸರ್ವಶಕ್ತಿಗಳೂ ಇರುತ್ತವೆ; ಆದರೆ ಅವು ಬ್ರಹ್ಮಕ್ಕಿಂತ ಬೇರೆಯಾಗಿರುವದಿಲ್ಲ. ಕಡಲಿನ ನೀರು ಉಬ್ಬಿ ಬಗೆಬಗೆಯಾಗಿ ಕುಣಿಯುವಂತೆ ಚಿದ್ಘನವಾದ ಬ್ರಹ್ಮವೇ ಚಿತ್ತವಾಗಿ ಕರ್ಮಮಯ, ವಾಸನಾಮಯ, ಮನೋಮಯವಾದ ಎಲ್ಲಾ ಬಗೆಯ ಶಕ್ತಿಗಳನ್ನೂ ತೋರ್ಪಡಿಸಿಕೊಳ್ಳುತ್ತಿರುವದು. ಸಮಸ್ತ ಜೀವರೂ ಸರ್ವಪದಾರ್ಥಗಳೂ ಬ್ರಹ್ಮದಿಂದಲೇ ಹುಟ್ಟಿ ಬ್ರಹ್ಮವನ್ನೇ ಸೇರುತ್ತಿರುವವು, ಸಮುದ್ರದ ಅಲೆಗಳಂತೆ ತನ್ಮಯವಾಗಿಯೇ ಇರುತ್ತವೆ'' ಎಂದು ಹೇಳಿದ ವಸಿಷ್ಠರನ್ನು ನೋಡಿ ಶ್ರೀರಾಮನು ''ಪೂಜ್ಯರೆ, ತಾವು ಹೇಳಿದ್ದು ನನಗೆ ಸರಿಯಾಗಿ ತಿಳಿಯಲಿಲ್ಲ. ಬ್ರಹ್ಮವು ಅತೀಂದ್ರಿಯವಾಗಿದೆ, ಆದರೆ ಜಗತ್ತು ಭಂಗುರವಾಗಿದೆ ; ಜಗತ್ತು ಬ್ರಹ್ಮದಿಂದ ಬಂದಿದ್ದರೆ ಬ್ರಹ್ಮದಂತೆಯೇ ಇರಬೇಕಾಗಿತ್ತಲ್ಲವೆ ? ಚಿದಾತ್ಮವಾದ ನಿಷ್ಕಲಂಕಬ್ರಹ್ಮಕ್ಕೆ ಜಗತ್ತೆಂಬ ಕಲಂಕವು ಹೇಗೆ ಬಂದಿತು?'' ಎಂದು ಕೇಳಿದನು.

ಬ್ರಹ್ಮವೊಂದೇ ಇರುವದು, ಕಲಂಕರೂಪವಾದ ಜಗತ್ತೆಂಬುದು ಇಲ್ಲವೇ ಇಲ್ಲ- ಎಂದು ಸ್ಪಷ್ಟವಾಗಿ ಹೇಳಿದ್ದರೂ ಬ್ರಹ್ಮಸ್ವರೂಪವನ್ನು ಅರಿಯದ್ದರಿಂದ ಈ ಸಿದ್ಧಾಂತವನ್ನು ತಿಳಿದುಕೊಳ್ಳಲಾರದೆ ಇರುವನೆಂಬುದನ್ನು ಮನದಂದುಕೊಂಡ ವಸಿಷ್ಠರು 'ಎಲ್ಲವೂ ಬ್ರಹ್ಮವೇ' ಎಂಬ ಸಿದ್ಧಾಂತವನ್ನು ರಾಮನಿಗೆ ಕ್ರಮಕ್ರಮವಾಗಿಯೇ ತಿಳಿಸಿಕೊಡಬೇಕೆಂದು ನಿಶ್ಚಯಿಸಿ ''ಅಯ್ಯ ಶ್ರೀರಾಮನೆ, ಮಾಯಾವಿಯು ಮಾಯೆಯಿಂದ ವಿಚಿತ್ರಕ್ರಿಯೆಗಳನ್ನು ಮಾಡುವದಿಲ್ಲವೆ? ಅದರಂತೆಯೇ ಆ ಮಾಯಾವಿಯಾದ ಪರಮಾತ್ಮನು ವಿಚಿತ್ರವಾದ ಸೃಷ್ಟಿಗಳನ್ನೂ ಅದ್ಭುತವಾದ ಕ್ರಿಯೆಗಳನ್ನೂ ಮಾಡುತ್ತಾನೆ. ಆದ್ದರಿಂದ ವಿವೇಕಿಯಾದವನು ಸರ್ವವೂ ಸರ್ವಪ್ರಕಾರದಿಂದಲೂ ಸರ್ವಕಾಲದಲ್ಲಿಯೂ ಸಂಭವಿಸುತ್ತದೆ ಎಂದು ತಿಳಿದು ವಿಸ್ಮಯಪಡದೆ ಹರ್ಷಾಮರ್ಷಗಳನ್ನು ತೊರೆದು ಏರುಪೇರಿಲ್ಲದೆ ಇರಬೇಕು. ಹಾಲಿನಲ್ಲಿ ತುಪ್ಪವೂ ಮಣ್ಣಿನಲ್ಲಿ ಮಡಕೆಯೂ ನೂಲಿನಲ್ಲಿ ಬಟ್ಟೆಯೂ ಬೀಜದಲ್ಲಿ ಮರವೂ ಅಡಗಿರುವಂತೆ ಆತ್ಮನಲ್ಲಿಯೇ ಅಡಗಿದ್ದ ಶಕ್ತಿಗಳು ಪ್ರಕಟವಾಗಿ ಬೇರೆ ಬೇರೆಯಾಗಿ ವ್ಯವಹೃತವಾಗುತ್ತವೆ. ಆದ್ದರಿಂದ ಇದೆಲ್ಲ ಬರಿಯ ತೋರಿಕೆಯೇ ಹೊರತು ಇವನ್ನು ಮಾಡುವವನಾಗಲಿ ಅನುಭವಿಸುವವನಾಗಲಿ ಯಾರೂ ಇರುವದಿಲ್ಲ. ಹೀಗೆ ಒಂದು ಸಲ ಪ್ರಕಟವಾಗುತ್ತಲೂ ಮತ್ತೊಂದು ಸಲ ಅಪ್ರಕಟವಾಗುತ್ತಲೂ ಇರುವ ಜಗದ್ದೃಶ್ಯಗಳಿಂದ ಆತ್ಮನಿಗೆ ಯಾವದೊಂದು ದೋಷವೂ ಇಲ್ಲ. ಆತ್ಮನ ಸ್ವರೂಪವು ಹುಟ್ಟುವದೂ ಇಲ್ಲ, ನಾಶವಾಗುವುದೂ ಇಲ್ಲ. ಆದ್ದರಿಂದ ನಾನು ಹೇಳಿದ ರೀತಿಯಿಂದ ಹೊರತೋರಿಕೊಳ್ಳುವ ಪದಾರ್ಥಗಳ ಸಂಗಡವೇ ಅವಿದ್ಯೆಯು ಬಂದು ಅವುಗಳು ಸತ್ಯವೆಂಬ ಬುದ್ಧಿಯನ್ನು ಗಟ್ಟಿಗೊಳಿಸಿ ಸಂಸಾರವೃಕ್ಷವನ್ನು ಬೆಳೆಯಿಸುವದೆಂದು ತಿಳಿದು ವಿವೇಕವೆಂಬ ಖಡ್ಗದಿಂದ ಇದನ್ನು ಕಡಿದುಹಾಕಿ, ಕಟ್ಟಿದ ಗೂಟದಿಂದ ಬಿಡುಗಡೆಹೊಂದಿದ ಮದ್ದಾನೆಯಂತೆ ಮುಕ್ತನಾಗಿ ವಿಹರಿಸು'' ಎಂದು ನುಡಿದರು- ಎಂಬುದು ಅಧ್ಯಾಯಾಭಿಪ್ರಾಯವು.

★★★★★

# ಅನಿತ್ಯವಸ್ತುವಿನ ವಿಚಾರ

**18-5-1937**

**ಶ್ರೀಶ್ರೀಗಳವರು**

**ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ ಹದಿನೆಂಟನೆಯ ಅಧ್ಯಾಯದಲ್ಲಿ** ಅನಿತ್ಯವಸ್ತುವಿನ ವಿಚಾರವಿರುತ್ತದೆ. ಯಾವಯಾವದು ಅನಾತ್ಮವಾಗಿರುವದೋ ಆ ಜಡವಸ್ತುವೆಲ್ಲ ಅನಿತ್ಯವೇ, ಯಾವದು ಕಾರ್ಯವೋ ಅದು ಅನಿತ್ಯವು- ಎಂಬ ನಿಯಮವು ಭಾವಪದಾರ್ಥಗಳಿಗೆ ಮಾತ್ರ ಹೊಂದುತ್ತದೆ; ಪ್ರಾಗಭಾವವು ಕಾರ್ಯವಲ್ಲದಿದ್ದರೂ ಅನಿತ್ಯವಾಗಿರುವದರಿಂದ ಅನಿತ್ಯವಾಗಿರುವದಕ್ಕೆ ಅನಾತ್ಮತ್ವವೇ ಹೇತುವಾಗಿರುತ್ತದೆಯೆನ್ನಬೇಕು. ಕಾಲ, ಆಕಾಶ-ಮುಂತಾದವುಗಳು ಕೂಡ ಅನಾತ್ಮವಾಗಿರುವದರಿಂದ ಅವೂ ಅನಿತ್ಯವೇ ಆಗಿರುತ್ತವೆ; ಅವು ನಿತ್ಯವಸ್ತುಗಳೆಂದು ತಾರ್ಕಿಕರು ಹೇಳುವದು ಶ್ರುತಿವಿರುದ್ಧವಾಗಿರುತ್ತದೆ, ಅವು ನಿಜವಾಗಿ ಅನಿತ್ಯವೆಂಬುದು ಸುಷುಪ್ತ್ಯಾದಿಗಳಲ್ಲಿ ಅನುಭವಕ್ಕೂ ಬರುತ್ತದೆ.

ತರ್ಕವು ಪ್ರಮಾಣಕ್ಕೆ ಅನುಗ್ರಾಹಕವಾಗಿರಬಹುದೇ ಹೊರತು ತಾನೇ ಪ್ರಮಾಣವಾಗಲಾರದು. ಆದ್ದರಿಂದ ಶ್ರುತ್ಯೈಕಗೋಚರವಾದ ವಿಷಯದಲ್ಲಿ ಸ್ವತಂತ್ರವಾಗಿ ತರ್ಕವನ್ನು ಉಪಯೋಗಿಸಬಾರದು. ಉಪಯೋಗಿಸಿದರೆ ತತ್ತ್ವವನ್ನು ಗೊತ್ತುಪಡಿಸುವದಾಗುವದಿಲ್ಲ, ತರ್ಕಕ್ಕೆ ನಿಲುಗಡೆಯೇ ಇರುವದಿಲ್ಲ; ಅದನ್ನೇ ನಂಬಿದವರು ಅನರ್ಥವನ್ನು ಹೊಂದಬೇಕಾಗುವದು.

ಇದಕ್ಕೆ ಒಂದು ಇತಿಹಾಸವುಂಟು: ಪೂರ್ವದಲ್ಲಿ **ಸಂಗಿರ**ನೆಂಬ ಒಬ್ಬ ಬ್ರಾಹ್ಮಣನು ವೇದಾರ್ಥವನ್ನು ತಿಳಿದುಕೊಳ್ಳಲಾರದೆ ಸ್ವತಂತ್ರತರ್ಕವನ್ನೇ ನಂಬಿ ಅದಕ್ಕೆ ಎಲ್ಲಿಯೂ ನಿಲುಗಡೆಯಾಗದೆ ಹೋಗಲು ಒಂದಾಗುತ್ತಲೊಂದು

ಪಾಷಂಡಮತವನ್ನು ಅವಲಂಬಿಸುತ್ತಾ ಯಥೇಚ್ಛಾಚಾರಗಳನ್ನು ಮಾಡುವದಕ್ಕೆ ಆರಂಭಿಸಿದನು. ಅವನು ಸತ್ತ ಮೇಲೆ ಯಮದೂತರು ಅವನನ್ನು ಆ ಪಾಪಗಳ ಫಲವನ್ನನುಭವಿಸುವದಕ್ಕೆ ನರಕದಲ್ಲಿ ಹಾಕಿದರು. ಅಲ್ಲಿ ಅವನು ವಿಚಿತ್ರವಾದ ಹಿಂಸೆಗಳನ್ನು ಅನುಭವಿಸುತ್ತಾ ಸಾವಿರಾರು ವರ್ಷಗಳವರೆಗೂ ಕಷ್ಟಪಟ್ಟ ಮೇಲೆ ಅವನಿಗೆ ಹಿಂದಿನ ಯಾವದೋ ಒಂದು ಜನ್ಮದಲ್ಲಿ ತಾನು ಮಾಡಿದ್ದ ಪುಣ್ಯವಿಶೇಷದಿಂದ ಅಲ್ಲಿಗೆ ಅಕಸ್ಮಾತ್ತಾಗಿ ದಯಮಾಡಿಸಿದ ಶಿವಭಕ್ತ ಶತಾನಂದರ ದರುಶನವಾಯಿತು. ಶತಾನಂದರು ನರಕಯಾತನೆಗಳಿಂದ ನರಳುತ್ತಿದ್ದ ಪಾಪಿಗಳನ್ನು ನೋಡಿ ಕರುಣೆಯಿಂದ ಅವರೆಲ್ಲರೂ ಉದ್ಧಾರವಾಗಲಿ– ಎಂದು ಅವರೆಲ್ಲರಿಗೂ ಕೇಳಿಸುವ ಹಾಗೆ ''ಓಂ ನಮಃ ಶಿವಾಯ!'' ಎಂದು ಕೂಗಿದರು. ಕೂಡಲೆ ನರಕವು ಸ್ವರ್ಗವಾಯಿತು. ಯಮನು ಕೂಡ ಭಕ್ತಶ್ರೇಷ್ಠರಾದ ಶಕ್ತನೆಂದರ ಬಳಿಯಲ್ಲಿ ಪ್ರಾಂಜಲಿಯಾಗಿ ನಿಂತುಕೊಂಡನು, ಶತಾನಂದರು ಸಂಗಿರನನ್ನು ನೋಡಿ ಎಲೈ, ಇನ್ನು ಮೇಲೆ ನಿನಗೆ ಭಯವಿಲ್ಲ; ನೀನು ಭೂಲೋಕಕ್ಕೆ ಹೋಗಿ ಶಿವಭಕ್ತಿಯ ಮಹಿಮೆಯಿಂದ ಸಕಲ ಸೌಖ್ಯಗಳನ್ನೂ ಹೊಂದಿ ಶಿವಲೋಕವನ್ನು ಸೇರುವೆ'' ಎಂದು ಅನುಗ್ರಹಿಸಿದರು. ಆಮೇಲೆ ಅವರು ಯಮನನ್ನು ಕುರಿತು ''ಅಪ್ಪ, ಶಾಸ್ತ್ರಾಚಾರಗಳಲ್ಲಿ ಶ್ರದ್ಧೆಯಿರುವ ಶಿವಭಕ್ತರನ್ನು ನೀನು ದಂಡಿಸಕೂಡದು; ಯಾರು ಶಾಸ್ತ್ರಬಹಿರ್ಮುಖರೋ ಭಕ್ತಿಹೀನರೋ ಕೇವಲ ತರ್ಕಶರಣರಾಗಿ ರುವರೋ ಅಂಥ ಅನಾಚಾರಿಗಳನ್ನು ಮಾತ್ರ ಪಾಪಶುದ್ಧಿಗಾಗಿ ಶಿಕ್ಷಿಸುತ್ತಿರು!'' ಎಂದು ಹೇಳಿ ಹೊರಟುಹೋದರು.

ಆದ್ದರಿಂದ ಶ್ರುತಿಪ್ರಮಾಣವನ್ನನುಸರಿಸಿ ಅನಾತ್ಮವೆಲ್ಲವೂ ಅನಿತ್ಯವೆಂದು ನಿಶ್ಚಯಿಸಿ ವಿಷಯವಿರಕ್ತರಾಗಿ ಶಿವಭಕ್ತಿಯನ್ನು ಸಂಪಾದಿಸಿಕೊಂಡು ಕೃತಾರ್ಥರಾಗಬೇಕು.

★★★★★

# ಭಕ್ತಿಯೋಗದ ಮಹಿಮೆ

**19-5-1937**

**ವೇ||ಬ್ರ||ಎಸ್. ವಿಠ್ಠಲಶಾಸ್ತ್ರಿಗಳು**

ಭಾಗವತದ ಮೂರನೆಯ ಸ್ಕಂಧದ ಇಪ್ಪತ್ತೈದನೆಯ ಅಧ್ಯಾಯದಲ್ಲಿ ತಾಯಿಯಾದ ದೇವಹೂತಿಗೆ ಕಪಿಲರು ಭಕ್ತಿಯೋಗದ ಮಹಿಮೆಯನ್ನು ಉಪದೇಶಿಸಿದ ವಿವರವಿದೆ. ವಾಸುದೇವನೇ ತನ್ನ ಉದರದಲ್ಲಿ ಅವತರಿಸಿರುತ್ತಾನೆಂಬ ನಂಬಿಕೆಯುಳ್ಳ ತಾಯಿಯು ಸಂಸಾರವನ್ನು ದಾಟುವ ಬಗೆ ಹೇಗೆಂದು ಕಪಿಲರನ್ನು ಕೇಳಿದ್ದಕ್ಕೆ ಅವರು ಹೇಳಿದ ಉತ್ತರವಿದು: 'ತಾಯಿಯೆ, ಆಧ್ಯಾತ್ಮಿಕಯೋಗವೇ ಮೋಕ್ಷಕ್ಕೆ ಮಾರ್ಗವು. ಹಿಂದೆ ನಾನು ಋಷಿಗಳಿಗೆ ಹೇಳಿದ್ದ ಈ ಯೋಗವನ್ನೇ ನಿನಗೆ ತಿಳಿಸುತ್ತೇನೆ, ಕೇಳು : ಮನಸ್ಸೇ ಬಂಧಕ್ಕೂ ಮೋಕ್ಷಕ್ಕೂ ಕಾರಣವಾಗಿ ರುವದು. ಅದು ತ್ರಿಗುಣಗಳಲ್ಲಿ ಸಕ್ತವಾಗಿದ್ದರೆ ಬಂಧವು, ಸಕ್ತಿಯನ್ನು ಬಿಟ್ಟರೆ ಮುಕ್ತಿಯು. ನಾನುನನ್ನದೆಂಬ ಅಭಿಮಾನದಿಂದಾಗುವ ಕಾಮಲೋಭಾದಿಗಳು ಯಾವಾಗ ತೊಲಗುವವೋ ಆಗ ಮನಸ್ಸು ಶುದ್ಧವಾಗಿ ಸುಖದುಃಖರಹಿತವಾಗಿ ಸಮತ್ವವನ್ನು ಪಡೆಯುವದು. ಪ್ರಕೃತಿಯನ್ನು ಮೀರಿ ಕೇವಲನೂ ನಿರಂತರನೂ ಸ್ವಯಂಜ್ಯೋತಿಯೂ ಅಖಂಡನೂ ಸೂಕ್ಷ್ಮನೂ ಆಗಿರುವ ಆತ್ಮನನ್ನು ಆಗ ಕಾಣಬಹುದು.

ಬ್ರಹ್ಮಪ್ರಾಪ್ತಿಗೆ ಭಕ್ತಿಗೆ ಸಮನಾದ ಮಾರ್ಗವೇ ಇಲ್ಲ. ಮನುಷ್ಯನಿಗೆ ಸಂಗವೆಂಬುದೇ ಪಾಶವು, ಸತ್ಸಂಗವೇ ಮೋಕ್ಷದ್ವಾರವನ್ನು ಹಾರುಹೊಡೆಯುವದಕ್ಕೆ ಉಪಾಯವು. ಯಾರು ದ್ವಂದ್ವಸಹಿಷ್ಣುಗಳಾಗಿಯೂ ಕರುಣಾವಂತರಾಗಿಯೂ ಸರ್ವಭೂತಗಳಿಗೂ ಹಿತವನ್ನು ಮಾಡುವವರಾಗಿಯೂ ಇದ್ದುಕೊಂಡು ಶತ್ರುಗಳೇ ಇಲ್ಲದೆ ಶಾಂತರಾಗಿ ಪರಮೇಶ್ವರನಲ್ಲಿ ಅನನ್ಯಭಕ್ತಿಯಿಂದೊಡಗೂಡಿ ಕರ್ಮವನ್ನು ಬಿಟ್ಟು ಎಲ್ಲವನ್ನೂ ತ್ಯಜಿಸಿ ಭಗವತ್ಕಥಾಲಾಪಗಳಿಂದಲೇ ಕಾಲವನ್ನು ಕಳೆಯುವರೊ ಅವರೇ ಸಾಧುಗಳು; ಅವರ ಸಂಗದಿಂದಲೇ ಭಕ್ತಿಯುಂಟಾಗುತ್ತದೆ. ಭಕ್ತಿಯಿಂದ ವಿರಕ್ತನಾಗಿ ಯೋಗಯುಕ್ತನಾಗಿ ತ್ರಿಗುಣಗಳನ್ನು ಮೀರಿ ಪರಮಾತ್ಮನನ್ನು ಹಿಡಿಯುವನು.

ಪರಲೋಕಸಂಬಂಧವಾದ ಕರ್ಮವನ್ನು ಮಾಡಿ ದೇವತ್ವವನ್ನು ಪಡೆದುಕೊಳ್ಳುವದಕ್ಕಿಂತಲೂ ಅನಿಮಿತ್ತವಾಗಿ ಭಗವದ್ಭಕ್ತಿಯನ್ನು ಮಾಡಿಕೊಂಡಿರುವ ಸಾತ್ತ್ವಿಕಚಿತ್ತವೃತ್ತಿಯನ್ನು ಹೊಂದುವದೇ ಉತ್ತಮ. ಭಗವಂತನ ಚರಣಸೇವೆಯಲ್ಲಿಯೇ ರತಿಯುಳ್ಳವರಾಗಿ ಭಗವತ್ಕರ್ಮವನ್ನೇ ಮಾಡುತ್ತಿರುವವರು ಪರಮಾತ್ಮನ ಐಕ್ಯವನ್ನು ಕೂಡ ಬಯಸುವದಿಲ್ಲ. ಒಬ್ಬರಿಗೊಬ್ಬರು ಭಗವಂತನ ಲೀಲೆಗಳನ್ನು ಹೇಳುತ್ತಲೂ ಆತನ ಸುಂದರವಾದ ರೂಪವನ್ನು ನೋಡುತ್ತಲೂ ಆನಂದಿಸುತ್ತಿರುತ್ತಾರೆ. ಹೀಗೆ ಸಕಲೇಂದ್ರಿಯವೃತ್ತಿಗಳನ್ನೂ ಪರಮೇಶ್ವರನಿಗೇ ಅರ್ಪಿಸಿದ ಆ ಭಕ್ತರು ಬೇಡವೆಂದರೂ ಉತ್ತಮಗತಿಯು ದೊರಕುತ್ತದೆ. ಪರಮೇಶ್ವರನ ಮಾಯಾಮಯ ವಿಭೂತಿಯಾದ ಅಷ್ಟೈಶ್ವರ್ಯವನ್ನು ಬಯಸಿದರಂತೂ ಅದು ಅನಾಯಾಸವಾಗಿ ದೊರಕುತ್ತದೆ. ಭಕ್ತರು ಎಂದಿಗೂ ನಾಶವಾಗುವದಿಲ್ಲ; ಪರಮೇಶ್ವರನು ಅವರಿಗೆ ಪ್ರಿಯನೂ ಆತ್ಮನೂ ಪುತ್ರನೂ ಸಖನೂ ಗುರುವೂ ಮಿತ್ರನೂ ಇಷ್ಟದೈವವೂ ಆಗಿರುತ್ತಾನೆ. ಅವರು ಎಲ್ಲವನ್ನೂ ಬಿಟ್ಟು ಆತನನ್ನೇ ಭಜಿಸುತ್ತಿರುತ್ತಾರೆ.

ಪ್ರಧಾನಪುರುಷರಿಗೆ ಒಡೆಯನೂ ಎಲ್ಲರ ಆತ್ಮನೂ ಆದ ಭಗವಂತನಿಂದಲ್ಲದೆ ಯಾರಿಗೂ ಭಯನಿವೃತ್ತಿಯಾಗಲಾರದು. ಆತನ ಭಯದಿಂದಲೇ ಗಾಳಿಯು ಬೀಸುತ್ತಿರುವದು, ಸೂರ್ಯನು ತಪಿಸುತ್ತಿರುವನು, ಇಂದ್ರನು ಮಳೆಗರೆಯುತ್ತಿರುವನು, ಬೆಂಕಿಯು ಸುಡುತ್ತಿರುವದು, ಮೃತ್ಯುವು ಸ್ವಲ್ಪವೂ ಕಾಲವಿಳಂಬವಿಲ್ಲದೆ ತನ್ನ ಕೆಲಸವನ್ನು ಮಾಡುತ್ತಿರುವದು. ಆದ್ದರಿಂದಲೇ ಯೋಗಿಗಳು ಜ್ಞಾನವೈರಾಗ್ಯಗಳಿಂದೊಡಗೂಡಿದ ಭಕ್ತಿಯಿಂದ ಆ ಪರಮೇಶ್ವರನ ಪಾದಮೂಲವನ್ನು ಸೇರಿ ಸುಖಿಗಳಾಗುತ್ತಾರೆ. ಆದ್ದರಿಂದ 'ಭಕ್ತಿಯೋಗದಿಂದ ಮನಸ್ಸನ್ನು ಸ್ಥಿರವಾಗಿ ಆ ಭಗವಂತನಲ್ಲಿ ನಿಲ್ಲಿಸಿಕೊಳ್ಳುವದೇ ನಿಃಶ್ರೇಯಸಕ್ಕೆ ಕಾರಣವಾಗಿರುತ್ತದೆ '.

★★★★★

# ಯಮ -ದೂತಸಂವಾದ

**20-5-1937**

**ಬ್ರ॥ ಶ್ರೀ॥ ಪಿ.ಚಂದ್ರಶೇಖರಭಟ್ಟರು**

**ವಿಷ್ಣುಪುರಾಣದ ಮೂರನೆಯ ಅಂಶದ ಏಳನೆಯ ಅಧ್ಯಾಯದಲ್ಲಿ -** ''ಈ ಬ್ರಹ್ಮಾಂಡದಲ್ಲಿ ಸ್ಥೂಲಸೂಕ್ಷ್ಮತಾರತಮ್ಯದಿಂದ ಎಲ್ಲೆಲ್ಲಿಯೂ ವ್ಯಾಪಿಸಿರುವ ಪ್ರಾಣಿಗಳು ಕರ್ಮವಶರಾಗಿ ಸಂಸಾರದಲ್ಲಿ ತೊಳಲುತ್ತಿರುವರಷ್ಟೆ. ಯಾವ ಪುಣ್ಯಕರ್ಮವನ್ನು ಮಾಡಿದರೆ ಈ ಜೀವರು ಯಮನವಶರಾಗುವದಿಲ್ಲವೋ ಅದನ್ನು ಹೇಳಿರಿ'' ಎಂದು ಮೈತ್ರೇಯರು ಕೇಳಿದ ಪ್ರಶ್ನೆಗೆ ಪರಾಶರರು ಇಲ್ಲಿ ಉತ್ತರವನ್ನು ಕೊಟ್ಟಿರುತ್ತಾರೆ. ಈ ವಿಷಯದಲ್ಲಿ ಭೀಷ್ಮರಿಗೆ ಕಲಿಂಗದೇಶದ ಒಬ್ಬ ಜಾತಿಸ್ಮರನಾದ ಬ್ರಾಹ್ಮಣನು ಹೇಳಿದ್ದ ಯಮನಿಗೂ ಅವರ ದೂತನಿಗೂ ನಡೆದ ಸಂವಾದದ ವೃತ್ತಾಂತವನ್ನು ಇಲ್ಲಿ ಉದಾಹರಿಸಿರುತ್ತಾರೆ.

ಪಾಶಹಸ್ತನಾಗಿ ನಿಂತಿರುವ ತನ್ನ ಭೃತ್ಯನ ಕಿವಿಯಲ್ಲಿ ಯಮನು ಹೀಗೆಂದನು: ''ಅಪ್ಪ, ನೀನು ಹರಿಭಕ್ತರನ್ನು ಮಾತ್ರ ಮುಟ್ಟಬೇಡ; ಅವರ ಮೇಲೆ ನನ್ನ ಅಧಿಕಾರವಿಲ್ಲ. ಲೋಕಹಿತಕ್ಕಾಗಿ ನನ್ನನ್ನು ಯಮಪದವಿಯಲ್ಲಿ ನಿಯಮಿಸಿರುವ ಲೋಕಗುರುವಾದ ಶ್ರೀಹರಿಯ ವಶದಲ್ಲಿಯೇ ಇರತಕ್ಕವನು ನಾನು. ಚಿನ್ನವೊಂದೇ ಕಡಗ, ಕಿರೀಟ, ಕುಂಡಲ- ಎಂದು ಬಗೆಬಗೆಯಾಗಿ ಹೇಳಿಸಿಕೊಳ್ಳುವಂತೆ ಆ ಪರಮಾತ್ಮನೊಬ್ಬನೇ ದೇವತೆಗಳೆಂದೂ ಪಶುಗಳೆಂದೂ ಮನುಷ್ಯರೆಂದೂ ಎನ್ನಿಸಿಕೊಳ್ಳುತ್ತಾನೆ. ಬಿರುಗಾಳಿಯಿಂದ ಎದ್ದ ಮಣ್ಣಿನಧೂಳಿನ ಕಣಗಳೂ ನೀರಿನ ತುಂತುರುಗಳೂ ಗಾಳಿಯು ಶಾಂತವಾಗಲು ತಮ್ಮತಮ್ಮ ಕಾರಣದಲ್ಲಿಯೇ ಶಾಂತವಾಗಿಬಿಡುವಂತೆ ಗುಣತ್ರಯದ ಕ್ಷೋಭೆಯಿಂದ ಉಂಟಾಗಿರುವ ದೇವತೆಗಳು, ಪಶುಗಳು, ಮನುಷ್ಯರು- ಎಲ್ಲರೂ ಕಟ್ಟಕಡೆಗೆ ಆತನಲ್ಲಿಯೇ ಸೇರಿ ಹೋಗುತ್ತಾರೆ. ಶ್ರೀಹರಿಯ ಪಾದಪದ್ಮವನ್ನು ಭಕ್ತಿಯಿಂದ ನಮಸ್ಕರಿಸುವವನು ನಿಷ್ಪಾಪನಾದ್ದರಿಂದ ಆಜ್ಯಾಹುತಿಯಿಂದ ಧಗಧಗಿಸುತ್ತಿರುವ ಅಗ್ನಿಯನ್ನು ಬಿಟ್ಟು ದೂರಕ್ಕೆ ಹೋಗುವಂತೆ ಅವನನ್ನು ಬಿಟ್ಟು ದೂರಕ್ಕೆ ತೆರಳುವನಾಗು.''

ಈ ಮಾತನ್ನು ಕೇಳಿದ ಯಮದೂತನು ''**ಪ್ರಭುವೆ, ವಿಷ್ಣುಭಕ್ತನ ಲಕ್ಷಣವೇನು?** ಅದನ್ನು ದಯವಿಟ್ಟು ನನಗೆ ಹೇಳಬೇಕು'' ಎನ್ನಲು ಯಮನಿಂತೆಂದನು: 'ಯಾವನು ವರ್ಣಾಶ್ರಮಧರ್ಮವನ್ನು ಬಿಟ್ಟಗಲದೆ ಎಲ್ಲರಲ್ಲಿಯೂ ಸಮಬುದ್ಧಿಯುಳ್ಳವನಾಗಿ ಏನನ್ನೂ ಅಪಹರಿಸದೆ ಯಾರನ್ನೂ ಕೊಲ್ಲದೆ ಇರುವನೋ, ಯಾವನ ಮನಸ್ಸು ಕಲಿಕಲ್ಮಷಯುಕ್ತವಾಗದೆ ಜನಾರ್ದನನಲ್ಲಿಯೇ ನಿಂತಿರುವದೋ, ಯಾವನು ಪರರಸ್ವತ್ತು ಅತ್ಯಂತ ಬೆಲೆಯುಳ್ಳದ್ದಾದರೂ ಅದನ್ನು ಹುಲ್ಲಿಗೆ ಕಡೆಯಾಗಿ ಕಾಣುತ್ತಾ ಭಗವಂತನಲ್ಲಿ ಅನನ್ಯಚಿತ್ತನಾಗಿರುವನೋ, ಅವನು ವಿಷ್ಣುಭಕ್ತನು. ಅತಿಸ್ವಚ್ಛನಾಗಿರುವ ವಿಷ್ಣುವಿನ ಭಕ್ತಿಯಿಂದ ಕೂಡಿದ ಹೃದಯದಲ್ಲಿ ಮತ್ಸರಾದಿಗಳಿಗೆ ಎಡೆಯಿರುವದೇ ಇಲ್ಲ. ಆದ್ದರಿಂದ ಅತಿಶಾಂತನಾಗಿ ಶುದ್ಧಚರಿತ್ರನಾಗಿ ಪ್ರಾಣಿಗಳಲ್ಲೆಲ್ಲ ಮೈತ್ರಿಯಿಂದ ನಡೆಯುವವನಾಗಿ ಪ್ರಿಯಹಿತವಾದ ಮಾತುಗಳನ್ನಾಡುತ್ತಾ ಇರುವವನ ಹೃದಯದಲ್ಲಿ ವಾಸುದೇವನು ಇರುತ್ತಾನೆಂದು ತಿಳಿಯಬೇಕು. ಸಾಲವೃಕ್ಷವು ಕೋಮಲವಾಗಿರುವದರಿಂದಲೇ ಅದು ಹುಟ್ಟಿದ ನೆಲದ ಗುಣವು ತಿಳಿಯುವಂತೆ ಭಕ್ತನ ಸೌಮನಸ್ಯದಿಂದಲೇ ಅವನ ಹೃದಯದಲ್ಲಿ ವಿಷ್ಣುವಿರುವನೆಂಬುದನ್ನು ಅರಿತುಕೊಳ್ಳಬಹುದು. ಎಲೈ ದೂತನೆ, ಹೀಗೆ ನಿಷ್ಪಾಪರಾಗಿ ಅಚ್ಯುತನ ಭಕ್ತರಾಗಿ ರುವವರನ್ನು ನೀನು ದೂರದಲ್ಲಿಯೇ ಬಿಟ್ಟು ತೆರಳಬೇಕು.

ಆದರೆ ಯಾವನು ಪರಧನವನ್ನು ಅಪಹರಿಸುತ್ತಲೂ ಪ್ರಾಣಿಹಿಂಸೆಯನ್ನು ಮಾಡುತ್ತಲೂ ಅನೃತನಿಷ್ಠುರವಾಕ್ಕುಗಳಿಂದ ಕೂಡಿರುವನೋ, ಯಾವನು ಹೆರರ ಸಂಪತ್ತನ್ನು ನೋಡಿ ಕರುಬುತ್ತಾ ಪರನಿಂದೆಯಲ್ಲಿಯೇ ರತನಾಗಿ ಯಜ್ಞದಾನಾದಿಗಳನ್ನು ಬಿಟ್ಟಿರುವನೋ, ಅವನ ಹೃದಯದಲ್ಲಿ ವಿಷ್ಣುವಿರುವದಿಲ್ಲ, ಅನ್ಯಾಯದಿಂದ ಧನಾರ್ಜನೆಯನ್ನು ಮಾಡುತ್ತ, ದುರ್ಮಾರ್ಗದಲ್ಲಿಯೇ ನಡೆಯುತ್ತಾ ಕೆಟ್ಟವರ ಸಂಗದಲ್ಲಿಯೇ ಮೆರೆಯುತ್ತಾ ಪಾಪೋದ್ಯೋಗದಲ್ಲಿಯೇ ಇರುವಾತನು ವಿಷ್ಣುಭಕ್ತನಲ್ಲವೇ ಅಲ್ಲ.

ಈ ಜಗತ್ತೆಲ್ಲವೂ ನಾನೂ ಪರಮಪುರುಷನಾದ ವಾಸುದೇವನೆಂಬ ತತ್ತ್ವವೇ- ಎಂದು ಯಾವನು ವಿಷ್ಣುವಿನಲ್ಲಿಯೇ ಮನಸ್ಸನ್ನಿಟ್ಟುಕೊಂಡಿರುವನೋ ಅವನನ್ನು ಬಿಟ್ಟು ದೂರ ಹೋಗು. ಯಾವನು ವಾಸುದೇವ, ವಿಷ್ಣು- ಮುಂತಾದ

ನಾಮಗಳನ್ನು ನುಡಿಯುತ್ತಾ ಆ ಪರಮಾತ್ಮನನ್ನೇ ಸ್ಮರಿಸುತ್ತಿರುವನೋ ಅವನನ್ನು ಬಿಟ್ಟುಹೋಗು. ಅಂತೂ ಅವ್ಯಯನಾದ ಶ್ರೀಹರಿಯು ಯಾರ ಹೃದಯದಲ್ಲಿರುವನೋ ಅವನ ಕಡೆಗೆ ಕಣ್ಣುಹಾಕುವದಕ್ಕೆ ಕೂಡ ನಿನಗಾಗಲಿ ನನಗಾಗಲಿ ಅಧಿಕಾರವಿರುವದಿಲ್ಲ. ಆತನಿಗೆ ಗತಿಯು ಯಮಲೋಕವಲ್ಲ, ವೈಕುಂಠಲೋಕವು'' ಎಂದು ಯಮನು ಉಪದೇಶಿಸಿದನು.

★★★★★

# ಬ್ರಾಹ್ಮಣಪತ್ನಿಯರ ಭಗವದ್ಭಕ್ತಿ

**4-5-1938**

**ಬ್ರ|| ಶ್ರೀ||ಎಸ್.ವಿಠ್ಠಲಶಾಸ್ತ್ರಿಗಳವರು**

**ಭಾಗವತದ ದಶಮಸ್ಕಂಧದ ಪೂರ್ವಾರ್ಧದಲ್ಲಿ ಇಪ್ಪತ್ತುಮೂರನೆಯ ಅಧ್ಯಾಯದಲ್ಲಿ** - ಹಸಿವಿನಿಂದ ಸಂಕಟಪಡುತ್ತಿದ್ದ ಗೋಪಾಲಕರನ್ನು ಶ್ರೀಕೃಷ್ಣನು ಬ್ರಾಹ್ಮಣರ ಯಜ್ಞಶಾಲೆಗೆ ಕಳುಹಿಸಿದ್ದು, ಬ್ರಾಹ್ಮಣರು ಔದಾಸೀನ್ಯದಿಂದ ಅನ್ನವನ್ನು ಕೊಡದೆ ಇದ್ದದ್ದು, ಅವರ ಪತ್ನಿಯರು ತಮ್ಮ ಪತಿಗಳ ಮಾತನ್ನು ಕೂಡ ಮೀರಿ ಶ್ರೀಕೃಷ್ಣನಿಗೆ ರುಚಿಯಾದ ಅನ್ನವನ್ನು ದಾನಮಾಡಿದ್ದು, ಅವರ ಭಕ್ತಿಯನ್ನು ಕಂಡು ಬ್ರಾಹ್ಮಣರು ಅನುತಾಪಪಟ್ಟಿದ್ದು - ಈ ಕಥೆಯು ಬಂದಿರುತ್ತದೆ. ಉತ್ತಮವಾದ ಜನ್ಮವಾಗಲಿ ಅಧ್ಯಯನವೇ ಆಗಲಿ ವ್ರತವಾಗಲಿ ತಪಸ್ಸಾಗಲಿ ಈಶ್ವರಭಕ್ತಿಯಿಲ್ಲದಿದ್ದರೆ ವ್ಯರ್ಥವು, ಯಾವದೊಂದು ಸಂಸ್ಕಾರವೂ ಕರ್ಮವೂ ಇಲ್ಲದಿದ್ದರೂ ಈಶ್ವರಭಕ್ತಿಯೊಂದಿದ್ದರೆ ಅವರೇ ಧನ್ಯರು ; ಜನರು ಮಾಡುವ ಯಜ್ಞಾದಿಕರ್ಮಗಳೆಲ್ಲವೂ ಸಾಂಗವಾಗಿ ಪರಮಾತ್ಮನ ವಿಭೂತಿಗಳೇ ಆಗಿ ರುವದರಿಂದ ಭಾವಭಕ್ತಿಯಿಂದ ಪರಮಾತ್ಮನನ್ನು ಶರಣುಹೋಗುವದು ಎಲ್ಲಾ ಕರ್ಮಗಳಿಗಿಂತಲೂ ಶ್ರೇಷ್ಠವಾದದ್ದು .

★★★★★

# ಅಕ್ರೂರನಿಗೆ ಪರಮಾತ್ಮದರ್ಶನ

**5-5-1938**

**ಬ್ರ॥ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

**ವಿಷ್ಣುಪುರಾಣದ 5ನೆಯ ಅಂಶದ 18ನೆಯ ಅಧ್ಯಾಯದಲ್ಲಿ** – ಅಕ್ರೂರನು ಗೋಕುಲದಿಂದ ಕೃಷ್ಣಬಲರಾಮರನ್ನು ಕರೆದುಕೊಂಡು ಬರುತ್ತಿರುವಲ್ಲಿ ನಡುಹಗಲಾಗಲು ಮಾಧ್ಯಾಹ್ನಿಕವನ್ನು ಯಮುನಾನದಿಯಲ್ಲಿ ನೆರವೇರಿಸುವದಕ್ಕೆಂದು ಹೋದನು. ಅವನು ನದಿಯಲ್ಲಿ ಮುಳುಗಿ ಪರಮಾತ್ಮನನ್ನು ಧ್ಯಾನಮಾಡಲು ಶ್ರೀಕೃಷ್ಣಬಲರಾಮರೇ ಅವನಿಗೆ ಗೋಚರವಾದರು. ಅಲ್ಲಿ ಆದಿಶೇಷರೂಪಿಯಾದ ಬಲರಾಮನನ್ನು ವಾಸುಕಿಯೇ ಮುಂತಾದವರು ಸ್ತೋತ್ರಮಾಡುತ್ತಿದ್ದರು, ಶ್ರೀ ಮಹಾವಿಷ್ಣುಸ್ವರೂಪನಾದ ಕೃಷ್ಣನನ್ನು ಸನಂದನನೇ ಮುಂತಾದವರು ಧ್ಯಾನ ಮಾಡುತ್ತಿದ್ದರು. ಇವರಿಬ್ಬರೂ ಇಲ್ಲಿಗೆ ಹೇಗೆ ಬಂದರೆಂಬುದನ್ನು ತಿಳಿಯದೆ ಆಶ್ಚರ್ಯದಿಂದ ಅವರನ್ನು ಮಾತನಾಡಿಸುವದಕ್ಕೆ ಪ್ರಯತ್ನಿಸಲು ಅವನಿಗೆ ಮಾತೇ ಹೊರಡಲಿಲ್ಲ. ನದಿಯಿಂದೆದ್ದು ಮೇಲಕ್ಕೆ ಬರಲು ರಾಮಕೃಷ್ಣರು ರಥದಲ್ಲಿ ಮನುಷ್ಯವೇಷದಿಂದ ಮೊದಲಿನಂತೆಯೇ ಕುಳಿತಿದ್ದರು; ಮತ್ತೆ ನೀರಿನಲ್ಲಿ ಮುಳುಗಿನೋಡಲು ಮುನಿಗಳಿಂದಲೂ ಗಂಧರ್ವರಿಂದಲೂ ಸಿದ್ಧರಿಂದಲೂ ಮಹೋರಗರಿಂದಲೂ ಸ್ತೋತ್ರವನ್ನು ಕೈಕೊಳ್ಳುತ್ತಾ ದಿವ್ಯರೂಪದಿಂದ ಕಾಣಿಸಿಕೊಂಡರು. ಆಗ ಶ್ರೀಕೃಷ್ಣನು ಸಾಕ್ಷಾದ್ಭಗವಂತನೇ ಎಂಬುದನ್ನು ಅರಿತ ಅಕ್ರೂರನು ಪರಮಾತ್ಮನನ್ನು ಭಕ್ತಿಯಿಂದ ಬಗೆಬಗೆಯಾಗಿ ಸ್ತುತಿಸಿದನು. ಅಕ್ರೂರನ ಸ್ತೋತ್ರದಲ್ಲಿ ಪರಮಾತ್ಮನ ಮಹಿಮೆಯು ಹೃದಯಂಗಮವಾಗಿ ವರ್ಣಿತವಾಗಿರುತ್ತದೆ.

★★★★★

# ಶ್ರೀಕೃಷ್ಣನು ಉದ್ಧವನಿಗೆ ಉಪದೇಶಿಸಿದ ಭಕ್ತಿಯೋಗ

**6-5-1938**

**ಬ್ರ|| ಶ್ರೀ|| ಎಸ್.ವಿಠ್ಠಲಶಾಸ್ತ್ರಿಗಳು**

**ಭಾಗವತದಲ್ಲಿ 11ನೆಯ ಸ್ಕಂಧದ 29ನೆಯ** ಅಧ್ಯಾಯದಲ್ಲಿ ಶ್ರೀ ಕೃಷ್ಣನು ಉದ್ಧವನಿಗೆ ಭಕ್ತಿಯೋಗವನ್ನು ಸಂಕ್ಷೇಪವಾಗಿ ಉಪದೇಶಿರುತ್ತಾನೆ. ಸಮಸ್ತಕರ್ಮಗಳನ್ನೂ ಭಗವತ್ಸ್ಮರಣಪೂರ್ವಕವಾಗಿ ಭಗವಂತನಿಗಾಗಿಯೇ ಮಾಡಿ ಅರ್ಪಿಸುತ್ತಿರಬೇಕು. ಭಗವಂತನ ಭಕ್ತರು ಇರುವ ಪುಣ್ಯಕ್ಷೇತ್ರಗಳನ್ನು ಸೇವಿಸುತ್ತಿರಬೇಕು. ದೇವತೆಗಳಲ್ಲಾಗಲಿ ಅಸುರರಲ್ಲಾಗಲಿ ಮನುಷ್ಯರಲ್ಲಾಗಲಿ ಭಗವದ್ಭಕ್ತರಾದವರ ಚರಿತ್ರೆಯನ್ನು ಶ್ರವಣ ಮಾಡುತ್ತಿರಬೇಕು. ಭಗವಂತನಿಗಾಗಿ ಪರ್ವಗಳನ್ನೂ ಮಹೋತ್ಸವಗಳನ್ನೂ ಏರ್ಪಡಿಸುತ್ತಿರಬೇಕು; ಗೀತನೃತ್ಯಾದಿಗಳಿಂದ ಭಜನೆಮಾಡುತ್ತಿರಬೇಕು; ಸರ್ವ ಪ್ರಾಣಿಗಳಲ್ಲಿಯೂ ಭಗವಂತನನ್ನೇ ಕಾಣುತ್ತಾ ಸರ್ವತ್ರ ಸಮಬುದ್ಧಿಯುಳ್ಳವನಾಗಿರಬೇಕು; ಸರ್ವತ್ರವೂ ಭಗವದ್ಭಾವನೆಯು ಬರುವವರೆಗೂ ಸರ್ವರಿಗೂ ಪೂಜ್ಯಬುದ್ಧಿಯಿಂದ ನಮಸ್ಕಾರಾದಿಗಳನ್ನು ಆಚರಿಸಬೇಕು; ಆಮೇಲೆ ಭಗವಂತನ ದಯೆಯಿಂದ ಜ್ಞಾನವನ್ನು ಪಡೆದು ಉಪರತನಾಗಬೇಕು.

★★★★★

# ಸಮಾಧಿಸ್ವರೂಪ

**7-5-1938**

**ಬ್ರ||ಶ್ರೀ|| ಕೆ.ಪಿ.ನಾರಾಯಣಶಾಸ್ತ್ರಿಗಳು**

**ಸೂತಸಂಹಿತೆಯ ಜ್ಞಾನಯೋಗಖಂಡದ 20ನೆಯ** ಅಧ್ಯಾಯದಲ್ಲಿ ಸಮಾಧಿಸ್ವರೂಪವನ್ನು ವಿವರಿಸಿರುತ್ತದೆ. ದೇಹಾದಿಗಳಾಗಲಿ ಅದಕ್ಕೆ ಕಾರಣವಾದ ಪಂಚಭೂತಗಳಾಗಲಿ ನಾನಲ್ಲ ಎಂದು

ಸಾಕ್ಷಿಸ್ವರೂಪದಲ್ಲಿದ್ದುಕೊಂಡು ಬ್ರಹ್ಮಸ್ವರೂಪದಲ್ಲಿ ನಿಂತಿರುವದು ಮುಖ್ಯಸಮಾಧಿಯು. ಅಥವಾ ಬ್ರಹ್ಮಾಂಡವನ್ನು ಪಂಚಭೂತಗಳಲ್ಲಿ, ಅವುಗಳನ್ನು ಸೂಕ್ಷ್ಮಭೂತಗಳಲ್ಲಿ, ಅವುಗಳನ್ನು ಮಾಯೆಯಲ್ಲಿ, ಆ ಮಾಯೆಯನ್ನು ಪ್ರತ್ಯಗಾತ್ಮನಲ್ಲಿ ಲಯಮಾಡಿಕೊಂಡು ತಾನು ಬ್ರಹ್ಮವೇ ಎಂಬ ಅರಿವನ್ನುಂಟುಮಾಡಿಕೊಳ್ಳುವದೇ ಸಮಾಧಿಯು. ಅಥವಾ ಪರಮೇಶ್ವರನು ಓಂಕಾರಸ್ವರೂಪನೆಂದು ತಿಳಿದು ಅಕಾರ, ಉಕಾರ ಮಕಾರಗಳ ಅರ್ಥವನ್ನು ಅನುಸಂಧಾನಮಾಡಿ ಅಕಾರಾದಿಗಳನ್ನು ಒಂದರಲ್ಲೊಂದನ್ನು ಲಯಮಾಡಿಕೊಂಡು ಮಾಯೆ, ನಾದ, ಜೀವ, ಈಶ್ವರ- ಈ ಕ್ರಮದಲ್ಲಿ ಒಂದನ್ನೊಂದರಲ್ಲಿ ಕಾಣುತ್ತಾ ಈಶ್ವರಭಾವದಲ್ಲಿ ನಿಲ್ಲುವದು ಸಮಾಧಿಯು. ಸಮುದ್ರದಿಂದ ಹುಟ್ಟಿದ ನೊರೆ, ತೆರೆ ಮುಂತಾದವುಗಳು ಸಮುದ್ರವೇ ಆಗಿರುವಂತೆ ಜಗತ್ತೆಲ್ಲವೂ ತನ್ನಲ್ಲಿಯೇ ಅಡಕವಾಗಿದೆಯೆಂದು ತಿಳಿಯುವದು ಸಮಾಧಿಯು. ಅಂತು ಯಾವನಿಗೆ ಪರಮಾತ್ಮನು ತನ್ನ ಆತ್ಮನಾಗಿಯೇ ಪ್ರಕಾಶನಾಗುವನೋ ಅವನು ಪರಮಭಾವವನ್ನು ಪಡೆಯುತ್ತಾನೆ. ಆದ್ದರಿಂದ ಈ ಜ್ಞಾನರೂಪವಾದ ಸಮಾಧಿಯನ್ನೇ ಪಡೆದು ಕೃತಕೃತ್ಯನಾಗಬೇಕು.

★★★★★

# ಜೀವನ್ಮುಕ್ತನ ಲಕ್ಷಣ

**8-5-1938**

**ಬ್ರ|| ಶ್ರೀ|| ಕೆ.ಪಿ.ನಾರಾಯಣಶಾಸ್ತ್ರಿಗಳವರು**

**ವಾಸಿಷ್ಠರಾಮಾಯಣದ ಉಪಶಮಪ್ರಕರಣದಲ್ಲಿ 17ನೆಯ ಅಧ್ಯಾಯದಲ್ಲಿ** ಜೀವನ್ಮುಕ್ತನ ಲಕ್ಷಣವನ್ನು ತಿಳಿಸಿರುತ್ತದೆ. ಎಲ್ಲರೂ ಮಾಡುವ ಕರ್ಮಗಳನ್ನು ಫಲಾಶೆಯಿಲ್ಲದೆ ಮಾಡುತ್ತಿರುವದು ಜೀವನ್ಮುಕ್ತಿಯು. ಸಂಕಲ್ಪವಿಲ್ಲದೆ ಹೊರಗೆ ವಿಹರಿಸುತ್ತಿರುವ ವಾಸನೆಯೇ ಜೀವನ್ಮುಕ್ತಿಯು. ಇದು ನನಗೆ ಆಗಬೇಕೆಂಬ ತೃಷ್ಣೆಯ ಸಂಕಲೆಯನ್ನು ಕತ್ತರಿಸಿರುವದೇ ಜೀವನ್ಮುಕ್ತಿಯು. ಬಂಧಾಶೆ,

ಮೋಕ್ಷಾಶೆ, ಸುಖದುಃಖಾವಸ್ಥೆಗಳು - ಎಲ್ಲವನ್ನೂ ಬಿಟ್ಟು ಸಮುದ್ರದಂತೆ ನಿಂತಿರುವದೇ ಜೀವನ್ಮುಕ್ತಿಯು. ಮುಪ್ಪುಸಾವುಗಳ ಅಂಜಿಕೆಯಿಲ್ಲದೆ ಇದು ನನ್ನದು ಎಂಬ ಭಾವನೆಯನ್ನು ದಾಟಿ ಇರುವದೇ ಜೀವನ್ಮುಕ್ತಿಯು. ಶರೀರವೇ ನಾನೆಂಬ ತುಚ್ಛಭಾವನೆಯನ್ನು ಬಿಟ್ಟು ಸ್ಥೂಲಸೂಕ್ಷ್ಮಶರೀರಗಳಿಗಿಂತಲೂ ನಾನು ಬೇರೆಯೆಂತಲೂ ಒಂದು ದೃಷ್ಟಿಯಿಂದ ಜಗಜ್ಜಾಲವೆಲ್ಲವೂ ನಾನೇ ಎಂತಲೂ ಮತ್ತೊಂದು ದೃಷ್ಟಿಯಿಂದ ಯಾವ ಜಗತ್ತೂ ನನ್ನಲ್ಲಿಲ್ಲವೆಂತಲೂ ಮನದಟ್ಟಾಗಿರುವ ಸ್ಥಿತಿಯು ಜೀವನ್ಮುಕ್ತಿಯು. ಎಲ್ಲವೂ ಆತ್ಮನೇ, ನಾನೇ, ನಾನು ಎಲ್ಲೆಲ್ಲಿಯೂ ಇರುವೆನು- ಎಂಬ ನಿಶ್ಚಯವಿರುವದೇ ಜೀವನ್ಮುಕ್ತಿಯು. ಆತ್ಮತತ್ತ್ವಕ್ಕೆ ಶೂನ್ಯವೆಂದೂ ಪ್ರಕೃತಿಯೆಂದೂ ಮಾಯೆಯೆಂದೂ ಬ್ರಹ್ಮವೆಂದೂ ವಿಜ್ಞಾನವೆಂದೂ ಬಗೆಬಗೆಯ ಹೆಸರುಗಳಿರುವವು ; ಇದಕ್ಕಿಂತ ವ್ಯತಿರಿಕ್ತವಾಗಿ ಬೇರೆಯಾವದೂ ಇರುವದಿಲ್ಲವೆಂಬ ನಿಶ್ಚಯದ ಅರಿವಿನಿಂದ ಕೂಡಿರುವದೇ ಜೀವನ್ಮುಕ್ತಿಯು- ಎಂದು ಬಗೆಬಗೆಯಾಗಿ ಭಾವಾದ್ವೈತವನ್ನು ಈ ಸರ್ಗದಲ್ಲಿ ವರ್ಣಿಸಿರುತ್ತದೆ.

★★★★★

## ರಾಮನ ಸ್ವರೂಪ

**9-5-1938**

**ಮಧ್ಯಾಹ್ನ : ಬ್ರ|| ಶ್ರೀ|| ಎಸ್.ವಿಠ್ಠಲಶಾಸ್ತ್ರಿಗಳು**

**ಅಧ್ಯಾತ್ಮರಾಮಾಯಣದಲ್ಲಿ ಬಾಲಕಾಂಡದ ಒಂದನೆಯ ಸರ್ಗದಲ್ಲಿ** ರಾಮ(ಪರಮಾತ್ಮ)ನ ಸ್ವರೂಪವು ನಿರ್ವಿಕಾರವಾಗಿರುತ್ತದೆ. ಪ್ರಕೃತಿಯಲ್ಲಿ ಆಗುವ ವಿಕಾರಗಳನ್ನೆಲ್ಲ ಆತನಲ್ಲಿ ಮೂಢರು ಕಲ್ಪಿಸುತ್ತಿರುತ್ತಾರೆ. ಆಕಾಶದಲ್ಲಿ ಜಲಾಕಾಶ, ಜಲಪ್ರತಿಬಿಂಬಾಕಾಶ, ಮಹಾಕಾಶ-ಎಂಬ ಭೇದಗಳು ಕಲ್ಪಿತವಾಗಿ ರುವಂತೆ ಚೈತನ್ಯದಲ್ಲಿ ಅಂತಃಕರಣಾವಚ್ಛಿನ್ನಚೈತನ್ಯ, ಚಿದಾಭಾಸಚೈತನ್ಯ ಪೂರ್ಣಚೈತನ್ಯ- ಎಂಬ ಮೂರು ಭೇದಗಳು ಕಲ್ಪಿತವಾಗಿರುವವು. ಇವುಗಳಲ್ಲಿ

ಆಭಾಸವು ಮಿಥ್ಯಾರೂಪವಾಗಿರುತ್ತವೆ; ಅದರಿಂದೊಡಗೂಡಿದ ಅಂತಃಕರಣದಲ್ಲಿ ಕಾಣಬರುವ ಕರ್ತೃತ್ವವನ್ನು ಅವಚ್ಛಿನ್ನಚೈತನ್ಯದಲ್ಲಿ ಆರೋಪಿಸುತ್ತಿರುತ್ತಾರೆ. ನಿಜವಾಗಿ ಚೈತನ್ಯದಲ್ಲಿ ಯಾವ ಅವಚ್ಛೇದವೂ ಇರುವದಿಲ್ಲವಾದ್ದರಿಂದ ಅವಚ್ಛಿನ್ನಚೈತನ್ಯವು ಪೂರ್ಣಚೈತನ್ಯವೇ ಆಗಿರುತ್ತದೆ. ವೇದಾಂತಮಹಾವಾಕ್ಯಶ್ರವಣದಿಂದ ಈ ಐಕ್ಯದ ಅರಿವು ಯಾವಾಗ ಆಗುತ್ತದೆಯೋ ಆಗ ಅಜ್ಞಾನವು ತೊಲಗಿ ಪರಮಾತ್ಮನ ಸ್ವರೂಪದ ಜ್ಞಾನವಾಗಿ ಪರಭಕ್ತಿಯಿಂದ ಪರಮಾತ್ಮಸ್ವರೂಪವನ್ನೇ ಪಡೆಯುತ್ತಾರೆ.

★★★★★

# ಪರಮಾತ್ಮಪ್ರಾಪ್ತಿಗೆ ಸಾಧನ

**10-5-1938**

**ಬ್ರ|| ಶ್ರೀ|| ಸಾಹಿತ್ಯವಿದ್ವಾನ್ ರಾಮಸ್ವಾಮಿಶಾಸ್ತ್ರಿಗಳು**

**ಭಾರತದಲ್ಲಿ ಉದ್ಯೋಗಪರ್ವ 68-69ನೆಯ ಅಧ್ಯಾಯಗಳಲ್ಲಿ** ಧೃತರಾಷ್ಟ್ರನು ಸಂಜಯನನ್ನು ಕುರಿತು ಕೌರವಸೇನೆಯಲ್ಲಿಯೂ ಪಾಂಡವ ಸೇನೆಯಲ್ಲಿಯೂ ಬಲದ ಸಾರಾಸಾರಾವನ್ನು ವಿಚಾರಮಾಡಿ ಹೇಳು ಎಂದು ಕೇಳಲು ಸಂಜಯನು 'ಪ್ರಭುವೆ, ಅರ್ಜುನನೂ ಶ್ರೀಕೃಷ್ಣನೂ ಕರ್ಮವಶರಾಗಿ ಹುಟ್ಟಿದ ಸಾಮಾನ್ಯಪುರುಷರೆಂದೆಣಿಸಬೇಡ. ಶ್ರೀಕೃಷ್ಣನ ಕೈಯಲ್ಲಿರುವ ಚಕ್ರವು ನೋಡುವದಕ್ಕೆ ಒಂದು ಮಾರುದ್ದವಾಗಿ ಕಾಣುತ್ತದೆಯಾದರೂ ಅದರ ನಿಜವಾದ ಅಳತೆ ಇಷ್ಟೆಂದಾಗಲಿ ಶಕ್ತಿಯು ಇಂಥದ್ದೆಂದಾಗಲಿ ನಿರ್ಣಯಿಸುವದಕ್ಕೆ ಬರುವಹಾಗಿಲ್ಲ. ನರಕಾಸುರಾದಿಗಳನ್ನು ಸಂಹರಿಸಿದ ಶ್ರೀಕೃಷ್ಣನು ಪೃಥಿವಿಯನ್ನಾಗಲಿ ಅಂತರಿಕ್ಷವನ್ನಾಗಲಿ ಸಂಕಲ್ಪಮಾತ್ರದಿಂದ ತನ್ನ ವಶಕ್ಕೆ ತೆಗೆದುಕೊಳ್ಳಬಲ್ಲನು. ಸಾರಾಸಾರವನ್ನು ಹೇಳೆಂದು ನನ್ನನ್ನು ಮತ್ತೆಮತ್ತೆ ಕೇಳುತ್ತಿರುವೆಯಷ್ಟೆ. ಸಂಕ್ಷೇಪವಾಗಿ ಹೇಳಿಬಿಡುತ್ತೇನೆ, ಕೇಳು. ಜಗತ್ತೆಲ್ಲ ಒಂದು ಕಡೆಗೆ ಸೇರಿದರೂ ಶ್ರೀಕೃಷ್ಣನೇ ಅದಕ್ಕಿಂತಲೂ ಬಲವುಳ್ಳವನಾಗಿ

ರುತ್ತಾನೆ. ಈ ಜಗತ್ತೆಲ್ಲವನ್ನೂ ಇಚ್ಛಾಮಾತ್ರದಿಂದಲೇ ಅವನು ಸುಟ್ಟು ಬೂದಿಮಾಡಿಬಿಡಬಲ್ಲನು. ಅವನು ಎಲ್ಲಿ ಸತ್ಯ, ಧರ್ಮ, ಲಜ್ಜೆ, ಋಜುತ್ವ - ಇವುಗಳಿರುವವೋ ಆ ಕಡೆಗೆ ಸೇರುವಾತನು, ಈಗ ಅವನು ಕ್ರೀಡಾರ್ಥವಾಗಿ ಪಾಂಡವರನ್ನು ಸೇರಿಕೊಂಡು ಅಧರ್ಮಿಷ್ಠರಾದ ನಿನ್ನ ಮಕ್ಕಳೆಲ್ಲರನ್ನೂ ಸುಟ್ಟುಹಾಕಲಿರುತ್ತಾನೆ. ಕಾಲಚಕ್ರಾದಿಗಳೆಲ್ಲವೂ ಆತನ ವಶವು, ಆತನೇ ಎಲ್ಲವನ್ನೂ ಆಳುವವನು. ತಾನೇ ಸರ್ವವನ್ನೂ ಮಾಡಬಲ್ಲನಾದರೂ ಈ ನಿಮಿತ್ತಗಳನ್ನೆಲ್ಲ ಇಟ್ಟುಕೊಂಡು ಕಾರ್ಯಕ್ಕೆ ಕೈಹಾಕಿರುತ್ತಾನೆ. ಆತನ ಮಾಯೆಯನ್ನು ಗೆಲ್ಲಬೇಕಾದರೆ ಅವನ ಭಕ್ತರಿಗಲ್ಲದೆ ಮತ್ತೊಬ್ಬರಿಗಾಗದು'' ಎಂದು ಹೇಳಿದನು. ಧೃತರಾಷ್ಟ್ರನು ಶ್ರೀಕೃಷ್ಣನ ಮಹಿಮೆಯನ್ನು ನೀನು ಹೇಗೆ ತಿಳಿದುಕೊಂಡೆ? ಎನ್ನಲು ನಾನು ಕಪಟವನ್ನಾಶ್ರಯಸದೆ ದಾಂಭಿಕನಾಗಿ ಧರ್ಮವನ್ನಾಚರಿಸದೆ ಶುದ್ಧಭಾವದಿಂದ ಭಗವದ್ಭಕ್ತನಾಗಿರುವದರಿಂದ ಈತನ ಸ್ವರೂಪವು ನನಗೆ ತಿಳಿದಿದೆ- ಎಂದು ನುಡಿದನು. ಧೃತರಾಷ್ಟ್ರನೂ ಗಾಂಧಾರಿಯೂ ದುರ್ಯೋಧನನಿಗೆ ಎಷ್ಟು ಬುದ್ಧಿವಾದವನ್ನು ಹೇಳಿದರೂ ಪಾಂಡವರಿಗೆ ಶರಣಾಗತನಾಗುವದಕ್ಕೆ ಅವನು ಇಚ್ಛಿಸಲಿಲ್ಲ. ಇದನ್ನು ಕಂಡು ಅವರಿಬ್ಬರೂ ಮನಸ್ಸಿನಲ್ಲಿ ಬಹಳ ಸಂಕಟಪಟ್ಟರು. ಕೊನೆಗೆ ಧೃತರಾಷ್ಟ್ರನು ಶ್ರೀಕೃಷ್ಣ ಪ್ರಾಪ್ತಿಯಾಗುವ ಮಾರ್ಗವನ್ನು ಹೇಳೆಂದು ಕೇಳಲು ಇಂದ್ರಿಯನಿಗ್ರಹ, ಕಾಮತ್ಯಾಗ, ಧ್ಯಾನ- ಇವುಗಳೇ ಪರಮಾತ್ಮಪ್ರಾಪ್ತಿಗೆ ಸಾಧನವೆಂಬುದನ್ನು ಸಂಜಯನು ವಿವರಿಸಿದನು.

★★★★★

# ಯೋಗತ್ರಯಗಳ ಸ್ವರೂಪ

**24-4-1939**

**ಬ್ರ|| ಶ್ರೀ|| ಹೊಸಕೆರೆ ಅನಂತಮೂರ್ತಿಶಾಸ್ತ್ರಿಗಳವರು**

**ಭಾಗವತ ಏಕಾದಶಸ್ಕಂಧದ 20ನೆಯ ಅಧ್ಯಾಯವನ್ನು ಶ್ರವಣ ಮಾಡಿಸಿದರು.** ಈ ಅಧ್ಯಾಯದಲ್ಲಿ ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ

ಎಂದು ಮೂರು ಯೋಗಗಳನ್ನು ತಿಳಿಸಿರುತ್ತದೆ. ಭಗವಂತನು ಉದ್ಧವನಿಗೆ ಹೇಳಿರುವದೇನೆಂದರೆ ಅತ್ಯಂತವಿರಕ್ತರಾದವರಿಗೆ ಜ್ಞಾನವೇ; ವಿರಕ್ತಿಯಿಲ್ಲದವರಿಗೆ ಕರ್ಮಯೋಗ; ಅಷ್ಟುವಿರಕ್ತರೂ ಅಲ್ಲದೆ ಅಷ್ಟು ಆಸಕ್ತರೂ ಅಲ್ಲದೆ ಇರುವ ಯಾರಿಗೆ ಪರಮೇಶ್ವರನ ಕಥಾದಿಗಳಲ್ಲಿ ಶ್ರದ್ಧೆಯುಂಟಾಗಿರುವದೋ ಅಂಥವರಿಗೆ ಭಕ್ತಿಯೋಗ-ಹೀಗೆ ಅಧಿಕಾರಭೇದದಿಂದ ಮೂರು ಯೋಗಗಳನ್ನು ನಾನು ಉಪದೇಶಿಸಿರುತ್ತೇನೆ. ಎಲ್ಲಿಯವರೆಗೆ ವಿರಕ್ತಿಯುಂಟಾಗುವದಿಲ್ಲವೋ ಅಥವಾ ಭಗವತ್ಕಥಾಶ್ರವಣಾದಿಗಳಲ್ಲಿ ಶ್ರದ್ಧೆಯುಂಟಾಗುವದಿಲ್ಲವೋ ಅಲ್ಲಿಯವರೆಗೆ ಕರ್ಮಗಳನ್ನು ಮಾಡುತ್ತಿರಬೇಕು, ಫಲಾಸಕ್ತಿಯಿಲ್ಲದೆ ಸ್ವಧರ್ಮವನ್ನು ಮಾಡುತ್ತಿರುವವನಿಗೆ ಭಕ್ತಿಯೋ ಜ್ಞಾನವೋ ಯಥಾಯೋಗ್ಯವಾಗಿ ದೊರಕುತ್ತದೆ. ಮನುಷ್ಯನಾಗಿ ಹುಟ್ಟಿದ್ದಕ್ಕೆ ಗುರುವೆಂಬ ಹಡಗಿನ ಯಜಮಾನನನ್ನೂ ಭಗವಂತನೆಂಬ ಮಾರುತವನ್ನೂ ಉಪಯೋಗಿಸಿಕೊಂಡು ದೇಹವೆಂಬ ಹಡಗಿನಮೂಲಕ ಸಂಸಾರ ಸಾಗರವನ್ನು ದಾಟಬೇಕು. ಯಾವಾಗ ಕರ್ಮದಲ್ಲಿ ವಿರಕ್ತಿಯಾಗುವದೋ ಆಗ ಮನಸ್ಸನ್ನು ಯೋಗದಿಂದ ಬಿಗಿಹಿಡಿದುಕೊಂಡು ಸಾಂಖ್ಯಮಾರ್ಗದಿಂದ ಸಮಸ್ತ ಭೂತಗಳ ಉತ್ಪತ್ತಿಯನ್ನೂ ಲಯವನ್ನೂ ಕ್ರಮವಾಗಿ ಚಿಂತಿಸುತ್ತಿರಬೇಕು. ಹೀಗೆ ಮಾಡುತ್ತಿರುವವರ ಮನಸ್ಸು ದುರ್ಮಾರ್ಗವನ್ನು ಬಿಡುತ್ತದೆ. ಯಾವನಿಗೆ ಭಗವತ್ಕಥಾಶ್ರವಣದಲ್ಲಿ ಶ್ರದ್ಧೆಯುಂಟಾಗುವದೋ ಅವನು ವೈರಾಗ್ಯದಿಂದ ಸರ್ವಕಾಮಗಳನ್ನೂ ತೊರೆದು ಭಗವಂತನನ್ನೇ ಭಜಿಸಬೇಕು. ಅವನಿಗೆ ಈಶ್ವರನ ಸೇವೆಯ ಫಲವಾಗಿ ಕಾಮಗಳೆಲ್ಲವೂ ತೊಲಗಿ ಆತ್ಮಜ್ಞಾನದಿಂದ ಹೃದಯಗ್ರಂಥಿಯು ಭೇದವಾಗುತ್ತದೆ, ಸಂಶಯಗಳು ಕತ್ತರಿಸಿಹೋಗುತ್ತವೆ, ಕರ್ಮಗಳು ಕ್ಷಯವಾಗುತ್ತವೆ. ಕರ್ಮ, ತಪಸ್ಸು, ಜ್ಞಾನ, ವೈರಾಗ್ಯ, ಯೋಗ, ದಾನ-ಮುಂತಾದ ಸಾಧನಗಳಿಂದ ಪಡೆಯುವದನ್ನೆಲ್ಲ ಭಗವದ್ಭಕ್ತಿಯಿಂದಲೇ ಪಡೆದು ಸಕಲ ಇಷ್ಟಾರ್ಥಗಳನ್ನೂ ಪಡೆಯುವದಕ್ಕಾಗುತ್ತದೆ; ಆದರೆ ಭಕ್ತರು ಯಾವದೊಂದನ್ನೂ ಬಯಸುವದಿಲ್ಲ ; ನಿಜವಾಗಿ ಯಾವ ಆಶೆಯೂ ಇಲ್ಲದ ಪುರುಷನಿಗೇ ಭಗವದ್ಭಕ್ತಿಯುಂಟಾಗುತ್ತದೆ. ಕರ್ಮ, ಭಕ್ತಿ, ಜ್ಞಾನ-ಇವುಗಳು ಕ್ರಮಕ್ರಮವಾಗಿ ಹೇಗೆ ಅಧಿಕಾರಿಗಳಿಗೆ ಅಳವಡುವವೆಂಬುದನ್ನೂ ಜ್ಞಾನದಿಂದಲೇ ಮುಕ್ತಿಯೆಂಬ ಸಿದ್ಧಾಂತಕ್ಕೆ ಈ ಅಧ್ಯಾಯಾರ್ಥವು ಪುಷ್ಟಿಯನ್ನು ಕೊಡುತ್ತದೆ.

★★★★★

# ಪುರುಷೈಕತ್ವವಿಚಾರ

**25-4-1939**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳು**

ಭಾರತದ ಮೋಕ್ಷ ಧರ್ಮದಲ್ಲಿ 350-351ನೆಯ ಅಧ್ಯಾಯದಲ್ಲಿ ಬ್ರಹ್ಮನು ಪುತ್ರನಾದ ರುದ್ರನಿಗೆ ಉಪದೇಶಮಾಡಿದ ಪುರುಷೈಕತ್ವವಿಚಾರವಿದೆ. ವೈಜಯಂತಪರ್ವತದಲ್ಲಿ ಏಕಾಂತದಲ್ಲಿ ಅಧ್ಯಾತ್ಮಚಿಂತನೆಯನ್ನು ಮಾಡುತ್ತಿದ್ದ ಚತುರ್ಮುಖಬ್ರಹ್ಮನ ಬಳಿಗೆ ಅವನ ಮಗನಾದ ರುದ್ರನು ಒಂದು ದಿನ ಬಂದು ನಮಸ್ಕರಿಸಿ ಕುಶಲಪ್ರಶ್ನೆಯಾದಮೇಲೆ ''ಸಕಲ ಪುರುಷರನ್ನೂ ಸೃಷ್ಟಿಮಾಡಿರುವ ನೀನು ಯಾರನ್ನು ಧ್ಯಾನಿಸುತ್ತೀಯೆ?'' ಎಂದು ಕೇಳಲು ಬ್ರಹ್ಮನು ''ಪುತ್ರನೆ, ನೀನು ಹೇಳಿದಂತೆ ಅನೇಕ ಪುರುಷರಿರುವದು ನಿಜ; ಆದರೆ ಅವರೆಲ್ಲರಿಗೂ ಕಾರಣನಾಗಿ ಅವರೆಲ್ಲರಿಗೂ ಆಧಾರನಾಗಿರುವವನು ಒಬ್ಬನೇ'' ಅವನು ಅಪ್ರಮೇಯನು, ಅತೀಂದ್ರಿಯನು, ಕೇವಲ ಜ್ಞಾನಗಮ್ಯನು. ಅವನಿಗೆ ಶರೀರವಿಲ್ಲ, ಎಲ್ಲರ ಶರೀರದಲ್ಲಿಯೂ ಅವನೇ ಇರುತ್ತಾನೆ. ಅವನು ಎಲ್ಲವನ್ನೂ ಬಲ್ಲನು; ಅವನನ್ನು ಯಾರೂ ಅರಿಯರು, ಅವನ ಸ್ವರೂಪವನ್ನು ಎಷ್ಟು ಚಿಂತಿಸಿದರೂ ತಿಳಿಯಲೊಲ್ಲದು. ವಾಯುವೊಂದೇ ಬಗೆಬಗೆಯಾಗಿ ಸಂಚರಿಸುವಂತೆಯೂ ಸಮುದ್ರವೊಂದೇ ನೀರಿಗೆಲ್ಲ ಕಾರಣವಾಗಿರುವಂತೆಯೂ ನಿರ್ಗುಣನಾದ ಆ ಮಹಾಪುರುಷನೊಬ್ಬನೇ ಬಗೆಬಗೆಯ ರೂಪಗಳಿಂದ ತೋರುತ್ತಿರುವನು. ತ್ರಿಗುಣಾತೀತರಾಗಿ ಶುಭ, ಅಶುಭ, ಸತ್ಯ, ಅನೃತ- ಎಲ್ಲವನ್ನೂ ಬಿಟ್ಟ ನಿರ್ಗುಣರೇ ನಿರ್ಗುಣಪರಮಾತ್ಮನನ್ನು ಸೇರುವರು. ಆತನೇ ನಾರಾಯಣನು; ಅವನನ್ನರಿಯದವನೇ ಕರ್ಮಾತ್ಮನಾದ ಜೀವನು. ಆ ಪರಮಾತ್ಮನು ದ್ರಷ್ಟೃವೂ ದ್ರಷ್ಟವ್ಯವೂ ಸಗುಣನೂ ನಿರ್ಗುಣನೂ ಆಗಿರುತ್ತಾನೆ. ಆತನೇ ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣ-ಎಂಬ ನಾಲ್ಕು ರೂಪದಿಂದ ತೋರಿಕೊಳ್ಳುತ್ತಿದಾನೆ. ಆತನನ್ನೇ ನಾನು ಚಿಂತಿಸುತ್ತಿದೇನೆ'' ಎಂದು ನುಡಿದನು.

★★★★★

# ಶಿವಲಿಂಗಸ್ವರೂಪ

**26-4-1939**

**ಬ್ರ|| ಶ್ರೀ|| ವಿದ್ವಾನ್ ಎಚ್. ಅನಂತಮೂರ್ತಿಶಾಸ್ತ್ರಿಗಳು**

**ಸೂತಸಂಹಿತೆಯ ಯಜ್ಞವೈಭವಖಂಡದಲ್ಲಿ 28ನೆಯ ಅಧ್ಯಾಯದಲ್ಲಿ** ಶಿವಲಿಂಗಸ್ವರೂಪವನ್ನು ವರ್ಣಿಸಿರುತ್ತದೆ. ಲಿಂಗವೆಂದರೆ ತಿಳಿಸಿಕೊಡುವ ಸಾಧನವೆಂದರ್ಥ; ಆತ್ಮಚೈತನ್ಯಭಿನ್ನವಾದದ್ದೆಲ್ಲವೂ ಜಡವಾಗಿರುವದರಿಂದ ಚೈತನ್ಯರೂಪನಾದ ಶಿವನೇ ಎಲ್ಲಕ್ಕೂ ಲಿಂಗವಾಗಿರುತ್ತಾನೆ. ಶಿವನನ್ನು ತಿಳಿಸಿಕೊಡುವದಕ್ಕೆ ಮತ್ತೆಯಾವದೂ ಇರುವದಿಲ್ಲ. ಆದ್ದರಿಂದ ಈ ಅರ್ಥದಲ್ಲಿ ಶಿವನೇ ಲಿಂಗವು ಎಂದು ಅವಧಾರಣಾಪೂರ್ವಪದ ಕರ್ಮಧಾರಯ ಸಮಾಸವಾಗುತ್ತದೆ. ಶಿವನ ಲಿಂಗವೆಂದು ತತ್ಪುರುಷಸಮಾಸವನ್ನು ಮಾಡಿದರೆ ಸರಿಯಾಗಿ ಅರ್ಥವಾಗುವದಿಲ್ಲ. ಆದರೂ ವ್ಯವಹಾರದೃಷ್ಟಿಯಿಂದ ವೇದಾಂತವಾಕ್ಯಜನ್ಯಜ್ಞಾನ, ವಿಚಾರಜನ್ಯಜ್ಞಾನ, ಸ್ಮೃತ್ಯಾದಿಗಳಿಂದುಂಟಾದ-ಜ್ಞಾನ, ಚಿತ್ತಮನೋಹಂಕಾರಬುದ್ಧಿಗಳು, ಪ್ರಾಣ, ಶರೀರ, ಇಂದ್ರಿಯಗಳು, ಭೂತಗಳು, ಲೋಕಗಳು-ಎಲ್ಲವನ್ನೂ ಶಿವನ ಲಿಂಗವೆಂದು ಹೇಳುತ್ತಿರುವರು. ಲಿಂಗವೆಂದರೆ ಆಲಯವು, ಆಧಾರವು-ಎಂದು ಮತ್ತೊಂದು ಅರ್ಥವುಂಟು. ಈ ಅರ್ಥದಲ್ಲಿಯೂ ಶಿವನೇ ಲಿಂಗವು. ಚಿದ್ರೂಪನಾದ ಶಿವನೇ ಮತ್ತೆಲ್ಲಕ್ಕೂ ಆಧಾರವಾಗಿರುವನೆಂಬುದು ಯುಕ್ತವಾಗಿದೆ. ಆದರೂ ಅಜ್ಞರ ಭಾವನೆಗಾಗಿ ಶಿವನಿಗೆ ಆಧಾರವಾದ ಲಿಂಗವೆಂದು ಮಂತ್ರಸಂಸ್ಕಾರದಿಂದ ಕೆಲವು ಆಧಾರಗಳನ್ನು ಕಲ್ಪಿಸಿರುತ್ತಾರೆ. ಲಿಂಗವೆಂದರೆ ಎಲ್ಲವನ್ನೂ ಲಯಿಸುವದೆಂದೂ ಅರ್ಥವುಂಟು. ಆಗಲೂ ಶಿವನೇ ಸರ್ವಕ್ಕೂ ಲಯಸ್ಥಾನವಾಗಿರುವದರಿಂದ ಶಿವನೇ ಲಿಂಗವು. ಶರೀರದಲ್ಲಿ ಬೇರೆಬೇರೆ ಆಧಾರಗಳಲ್ಲಿ ಶಿವನ ಲಿಂಗವನ್ನು ಆರಾಧಿಸಬೇಕೆಂದು ಹೇಳಿರುವದು ವ್ಯವಹಾರದೃಷ್ಟಿಯಿಂದಲೇ. ಲಿಂಗರೂಪಿಯಾದ ಶಿವನನ್ನು ಅರಿಯುವ ಜ್ಞಾನವೇ ಮುಖ್ಯಾರ್ಚನೆಯು. ವೇದವೇ ಅದಕ್ಕೆ ಪ್ರಮಾಣವು. ಆದ್ದರಿಂದ ನೀವು ಈ ರಹಸ್ಯವನ್ನರಿತು ಬದುಕಿರುವವರೆಗೂ ಶಿವನನ್ನು ಪೂಜಿಸುತ್ತಿರಿ.

★★★★★

# ಸೌಭರಿಚರಿತ

**27-4-1939**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳು**

**ವಿಷ್ಣುಪುರಾಣದಲ್ಲಿ ನಾಲ್ಕನೆಯ ಅಂಶದಲ್ಲಿ ಸೌಭರಿಚರಿತವು ಉಕ್ತವಾಗಿರುತ್ತದೆ.** ಸೌಭರಿಯೆಂಬ ಋಷಿಯು ನೀರಿನಲ್ಲಿ ಹನ್ನೆರಡು ವರ್ಷಗಳ ಕಾಲ ತಪಸ್ಸು ಮಾಡುತ್ತಿದ್ದನು. ಆತನು ಸಮ್ಮದನೆಂಬ ಒಂದು ಮೀನು ಪುತ್ರಪೌತ್ರರಿಂದೊಡಗೂಡಿ ಆನಂದದಿಂದಿದ್ದದ್ದನ್ನು ಕಂಡು ಮಕ್ಕಳುಮರಿಗಳಿಂದೊಡಗೂಡಿರಬೇಕೆಂಬ ಹಂಬಲನ್ನು ತಂದುಕೊಂಡನು. ಅಲ್ಲಿಂದ ಅವನು ತನ್ನ ಯೋಗಾಭ್ಯಾಸವನ್ನು ಬಿಟ್ಟು ಮಾಂಧಾತರಾಜನ ಬಳಿಗೆ ಹೋಗಿ, ಕನ್ಯಾಯಾಚನೆಯನ್ನು ಮಾಡಿದನು. ರಾಜನು ಶಾಪಭೀತಿಯಿಂದ 'ಯಾವ ಕನ್ಯೆಯು ನಮ್ಮ ಕುಲಪದ್ಧತಿಯಂತೆ ನಿಮ್ಮನ್ನು ಸ್ವಯಂವರಮಾಡಿಕೊಳ್ಳುವಳೋ ಅವಳನ್ನು ಕೊಡುತ್ತೇನೆ' ಎಂದು ನುಡಿದನು. ಆಗ ಋಷಿಯು ರಾಜನ ಅನುಮತಿಯಿಂದ ಅಂತಃಪುರದ ಸೇವಕನು ರಾಜನ ಅಭಿಪ್ರಾಯವನ್ನು ತಿಳಿಸಲು ರಾಜನ ಐವತ್ತು ಹೆಣ್ಣುಮಕ್ಕಳೂ ನಾನು ತಾನೆಂದು ಬಂದು ಆ ಋಷಿಯನ್ನು ವರಿಸಿದರು. ವಿವಾಹವಾದ ಬಳಿಕ ಸೌಭರಿಯು ತನ್ನ ಆಶ್ರಮಕ್ಕೆ ಬಂದು ವಿಶ್ವಕರ್ಮನಿಂದ ಹೆಂಡತಿಯರೆಲ್ಲರಿಗೂ ಉತ್ಕೃಷ್ಟಭೋಗ ಸಾಮಗ್ರಿಗಳಿಂದ ಕೂಡಿದ ಭವನಗಳನ್ನು ನಿರ್ಮಿಸಿಕೊಟ್ಟನು; ತಪೋಮಹಿಮೆಯಿಂದ ಒಬ್ಬೊಬ್ಬರಮನೆಯಲ್ಲಿಯೂ ಯಾವಾಗಲೂ ತಾನಿರುವಂತೆ ಮಾಡಿಕೊಂಡು ಎಲ್ಲರಿಗೂ ಸಂತೋಷವನ್ನುಂಟುಮಾಡಿಕೊಂಡಿದ್ದನು. ಅವನಿಗೆ ನೂರು ಮಕ್ಕಳಾಗಿ ಸಂಸಾರಮೋಹವು ಬೆಳೆದುಕೊಂಡಿತು. ಬಹುಕಾಲದಮೇಲೆ ಸಂಗದಿಂದಾದ ಸಂಸಾರಲಂಪಟವನ್ನು ಆಳವಾಗಿ ಆಲೋಚಿಸಿ ಕೊನೆಗೆ ಪಶ್ಚಾತ್ತಾಪದಿಂದ ವಿರಕ್ತನಾಗಿ ಪರಮಾತ್ಮನ ಆರಾಧನೆಯೇ ಪರಮಪುರುಷಾರ್ಥವೆಂದು ನಿರ್ಧರಿಸಿ, ಪತ್ನೀಸಮೇತನಾಗಿ ಮನೆಯನ್ನುಬಿಟ್ಟು

ವಾನಪ್ರಸ್ಥನಾಗಿ ಕ್ರಮಕ್ರಮವಾಗಿ ಸಂನ್ಯಾಸಿಯಾಗಿ ಪರಮೇಶ್ವರನ ಚಿಂತನೆಯಿಂದಲೇ ಕಾಲವನ್ನು ಕಳೆಯುತ್ತಾ ವಿದೇಹ ಕೈವಲ್ಯವನ್ನು ಪಡೆದನು. ಆದ್ದರಿಂದ ಕುಸಂಗವು ಬಂಧಕ್ಕೆ ಕಾರಣವೆಂದೂ ವೈರಾಗ್ಯವೂ ಭಕ್ತಿಯೂ ಮುಕ್ತಿಗೆ ಕಾರಣವೆಂದೂ ತಿಳಿಯಬೇಕು–ಎಂಬುದು ಚರಿತ್ರೆಯ ಸಾರವು.

★★★★★

# ನಕುಲೋಪಾಖ್ಯಾನ

**28-4-1939**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳವರು**

**ಜೈಮಿನೀಯಾಶ್ವಮೇಧದಲ್ಲಿ ನಕುಲೋಪಾಖ್ಯಾನವು ಉಕ್ತವಾಗಿರುತ್ತದೆ.** ಅಲ್ಲಿ ಧರ್ಮರಾಯನು ಅದ್ಭುತವಾದ ಅಶ್ವಮೇಧಯಜ್ಞವನ್ನು ಮಾಡಿ ಎಲ್ಲರನ್ನೂ ಸಂತೋಷಪಡಿಸಿದ ಬಳಿಕ ಎಲ್ಲರೂ ಆತನನ್ನು ಅಭಿನಂದಿಸಿದರು. ಆಗ ಧರ್ಮರಾಯನಿಗೆ ಉಂಟಾದ ಒಂದಿಷ್ಟು ಗರ್ವವನ್ನು ಪರಿಹರಿಸಲೋಸುಗವೋ ಎಂಬಂತೆ ಒಂದು ನಕುಲನು ಬಂದು ಮನುಷ್ಯವಾಣಿಯಿಂದ ಹೇಳಿದ ಕಥೆಯಿದು. ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಉಂಛವೃತ್ತಿಯಿಂದ ಜೀವಿಸುತ್ತಿದ್ದ ಬ್ರಾಹ್ಮಣನೊಬ್ಬನು ಅತ್ಯಂತದುರ್ಭಿಕ್ಷಕಾಲವು ಪ್ರಾಪ್ತವಾಗಲು ಕಾಳನ್ನು ಒಂದಿಷ್ಟೂಕೂಡಿ ಹಾಕುವದಕ್ಕೆ ಆಗದೆ ಕಷ್ಟಕ್ಕೀಡಾದನು. ಒಂದು ದಿನ ಮನೆಯಲ್ಲಿದ್ದ ಒಂದೇ ಸೇರು ಅಕ್ಕಿಯನ್ನು ಹಿಟ್ಟುಮಾಡಿ ಆಹ್ನಿಕವನ್ನೂ ಹೋಮವನ್ನೂ ತೀರಿಸಿಕೊಂಡ ಬಳಿಕ ಯಜಮಾನನೂ ಹೆಂಡತಿಯೂ ಮಗನೂ ಸೊಸೆಯೂ ಅದನ್ನು ನಾಲ್ಕು ಭಾಗವಾಗಿ ಮಾಡಿಕೊಂಡು ಭೋಜನಕ್ಕೆ ಸಿದ್ಧರಾದರು. ಹೀಗಿರುವಲ್ಲಿ ತಡೆಯಲಾರದಷ್ಟು ಹಸಿವಿನಿಂದ ಸಂಕಟಪಡುತ್ತಿದ್ದ ಒಬ್ಬ ಅತಿಥಿಯು ಅಲ್ಲಿಗೆ ಬಂದೊದಗಿದನು. ಆತನನ್ನು ಬ್ರಾಹ್ಮಣನು ಸತ್ಕಾರದಿಂದ ಬರಮಾಡಿಕೊಂಡು ಆದರೋಕ್ತಿಗಳಿಂದ ಅವನಿಗೆ ತನ್ನ ಭಾಗದ ಹಿಟ್ಟನ್ನು

ಬಡಿಸಿದನು. ಆದರೆ ಅತಿಥಿಯ ಹಸಿವು ಅಷ್ಟರಿಂದ ಇಂಗಲಿಲ್ಲ. ಬ್ರಾಹ್ಮಣನ ಹೆಂಡತಿಯು ತನ್ನ ಭಾಗವನ್ನು ಅತಿಥಿಗೆ ಒಪ್ಪಿಸಬೇಕೆಂದು ಬೇಡಿಕೊಂಡಳು; ಸ್ತ್ರೀಯರನ್ನು ರಕ್ಷಿಸುವದು ಯಜಮಾನನ ಕರ್ತವ್ಯವಾದ್ದರಿಂದ ನೀನು ಕೊಡಬೇಕಾದದ್ದಿಲ್ಲವೆಂದು ಎಷ್ಟು ಬಗೆಯಾಗಿ ಹೇಳಿದರೂ ಕೇಳದೆ ಪತ್ನಿಯಾದವಳು ಪತಿಯ ಧರ್ಮದಲ್ಲಿ ಭಾಗವನ್ನು ವಹಿಸುವದು ಯುಕ್ತವಾದ್ದರಿಂದ ಅವಶ್ಯವಾಗಿ ತನ್ನಪಾಲನ್ನು ಕೊಡಬೇಕೆಂದು ಆಕೆಯು ಮತ್ತೆಮತ್ತೆ ಬೇಡಿಕೊಂಡ ಮೇಲೆ ಅತಿಥಿಗೆ ಆ ಹಿಟ್ಟನ್ನು ಬ್ರಾಹ್ಮಣನು ಕೊಟ್ಟನು. ಆದರೆ ಅಷ್ಟರಿಂದಲೂ ಅತಿಥಿಗೆ ತೃಪ್ತಿಯಾಗಲಿಲ್ಲ. ಆಮೇಲೆ ಇದರಂತೆಯೇ ಮಗನೂ ಕೋಮಲಶರೀರಳಾದ ಸೊಸೆಯೂ ತಮ್ಮತಮ್ಮ ಹಿಟ್ಟಿನ ಪಾಲನ್ನು ಆತನಿಗೆ ಒಪ್ಪಿಸಿದರು. ಹೀಗೆ ಹಸಿವಿನ ಸಂಕಟದಲ್ಲಿ ನರಳುತ್ತಿದ್ದರೂ ತನ್ನಲ್ಲಿದ್ದ ಆಹಾರವನ್ನೆಲ್ಲ ಕೊಟ್ಟು ಆಗಲೂ ಮನಸ್ಸಿನಲ್ಲಿ ಕಳವಳವಿಲ್ಲದೆ ಇದ್ದ ಬ್ರಾಹ್ಮಣನನ್ನು ಕಂಡು ಆ ಅತಿಥಿಯು ತೃಪ್ತನಾಗಿ ತಾನು ಅವನ ಪರೀಕ್ಷಾರ್ಥವಾಗಿಬಂದ ಧರ್ಮನೆಂದು ತಿಳಿಸಿ ಆ ಬ್ರಾಹ್ಮಣನಿಗೋಸ್ಕರ ಆಗತಾನೇ ಬಂದ ವಿಮಾನದಲ್ಲಿ ಅವನನ್ನು ಸಕುಟುಂಬವಾಗಿ ಕುಳ್ಳಿರಿಸಿಕೊಂಡು ಸ್ವರ್ಗಕ್ಕೆ ಕರೆದುಕೊಂಡುಹೋದನು. ಅವನು ಹೋದಬಳಿಕ ಅಲ್ಲಿದ್ದ ಹಿಟ್ಟಿನ ನೀರಿನಲ್ಲಿ ಹೊರಳಾಡಿದ್ದರಿಂದ ಧರ್ಮಿಷ್ಠನಾದ ಆ ಬ್ರಾಹ್ಮಣನ ತಪೋಬಲದಿಂದಲೂ ಧರ್ಮನ ಅನುಗ್ರಹದಿಂದಲೂ ನನ್ನ ಶರೀರದ ಒಂದು ಭಾಗವು ಚಿನ್ನವಾಯಿತು. ಆದರೆ ಧರ್ಮರಾಯನು ಮಾಡಿದ ಮಹಾಯಜ್ಞದಲ್ಲಿಯೂ ನನಗೆ ಮತ್ತೊಂದು ಭಾಗವು ಚಿನ್ನವಾಗಲಿಲ್ಲ; ಆದ್ದರಿಂದ ಶ್ರದ್ಧೆಯಿಂದ ಆ ಕುರುಕ್ಷೇತ್ರದ ಬ್ರಾಹ್ಮಣನು ಮಾಡಿದ ಹಿಟ್ಟಿನ ದಾನಕ್ಕೆ ಇದು ಸಮವಾಗಲಿಲ್ಲ-ಎಂದು ನಕುಲನು ನುಡಿಯಿತು. ಇದನ್ನು ಕೇಳಿ ಎಲ್ಲರೂ ವಿಸ್ಮಯಗೊಂಡರು.

★★★★★

# ಸಂಸಾರವನ್ನು ದಾಟುವದಕ್ಕೆ ಉಪಾಯ

**29-4-1939**

**ಬ್ರ॥ ಶ್ರೀ॥ ಪಿ. ಚಂದ್ರಶೇಖರಭಟ್ಟರು**

**ಯೋಗವಾಸಿಷ್ಠದಲ್ಲಿ ಉಪಶಮಪ್ರಕರಣದ 5ನೆಯ** ಸರ್ಗದಲ್ಲಿ ಮನಸ್ಸೇ ತನ್ನ ಅಜ್ಞಾನದಿಂದಲೂ ಜ್ಞಾನದಿಂದಲೂ ಬಂಧಮೋಕ್ಷವ್ಯವಹಾರಕ್ಕೆ ಕಾರಣವಾಗಿರುವದರಿಂದ ಜ್ಞಾನವನ್ನು ಸಂಪಾದಿಸಿ ಮನಸ್ಸಿನಲ್ಲಿ ಶಾಂತಿಯನ್ನು ಹೊಂದುವದೇ ಸಂಸಾರವನ್ನು ದಾಟುವದಕ್ಕೆ ಉಪಾಯವೆಂಬುದನ್ನು ಉಪದೇಶಮಾಡಿರುತ್ತದೆ. ಶಾಸ್ತ್ರದಿಂದಲೂ, ಉತ್ಕಟವೈರಾಗ್ಯದಿಂದಲೂ, ಸತ್ಪುರುಷರ ಸಂಗದಿಂದಲೂ ಮನಸ್ಸಿನಲ್ಲಿ ಪುಣ್ಯಸಂಸ್ಕಾರವನ್ನುಂಟುಮಾಡಿ ಕೊಂಡು ತತ್ತ್ವವಿಚಾರಮಾಡಿದರೆ ಮನಸ್ಸಿನ ಅಜ್ಞಾನವು ತೊಲಗುತ್ತದೆ. ದೇಹಕ್ಕೂ ಆತ್ಮನಿಗೂ ಯಾವ ಸಂಬಂಧವೂ ಇಲ್ಲ; ಅಜ್ಞಾನದಿಂದ ಮನಸ್ಸು ಯಾವಾಗಲೂ ಜಡವಿಚಾರವನ್ನೇ ಮಾಡುತ್ತಿರುತ್ತದೆ. ಚೆನ್ನಾಗಿ ವಿಚಾರಮಾಡಿದರೆ ದೇಹವು ಜಡವಾದ್ದರಿಂದಲೂ ಮಿಥ್ಯೆಯಾದ್ದರಿಂದಲೂ ಆತ್ಮನು ಅಸಂಗಸಚ್ಚಿದಾನಂದಸ್ವರೂಪವಾದ್ದರಿಂದಲೂ ಯಾರಿಗೂ ಎಂದಿಗೂ ಸುಖದುಃಖಗಳಿಲ್ಲವೆಂದು ಹೊಳೆಯುತ್ತದೆ. ಆದ್ದರಿಂದ ಇದೆಲ್ಲವೂ ಆತ್ಮನೇ; ಅವನಲ್ಲಿಯೇ ಎಲ್ಲವೂ ಕಲ್ಪಿತವಾಗಿದೆ- ಎಂದು ತಿಳಿಯಬೇಕು. ಆತ್ಮನೆಂದೂ ಜಗತ್ತೆಂದೂ ಎರಡು ವಸ್ತುಗಳಲ್ಲ, ಅವೆರಡೂ ಒಂದೂ ಅಲ್ಲ; ಇದೆಲ್ಲವೂ ಬರಿಯತೋರಿಕೆ-ಎಂದು ತಿಳಿಯಬೇಕು; ಯಾವನು ಹೀಗೆಂದು ತಿಳಿಯುವನೋ ಅವನಿಗೆ ಶೋಕವಿಲ್ಲ; ಮೋಹವಿಲ್ಲ ಜನ್ಮಾದಿಗಳಿಲ್ಲ ; ನಿರ್ದ್ವಂದ್ವನಾಗಿ ನಿತ್ಯಸತ್ತ್ವಸ್ಥನಾಗಿ ನಿರ್ಯೋಗಕ್ಷೇಮನಾಗಿ ಸಂದರ್ಭವೊದಗಿ ದಂತೆ ಕೃತ್ಯಗಳನ್ನು ಮಾಡುತ್ತಾ, ತೆಗೆದುಕೊಳ್ಳುವದಾಗಲಿ ಬಿಡುವದಾಗಲಿ ಇಲ್ಲದೆ ವೀತರಾಗನಾಗಿ ತನ್ನಲ್ಲಿತಾನು ತೃಪ್ತನಾಗಿ ಯಾವ ಸಂತಾಪವೂ ಇಲ್ಲದೆ ಆನಂದಸ್ವರೂಪನಾಗಿ ಪೂರ್ಣನಾಗಿರುತ್ತಾನೆ- ಎಂದು ವಸಿಷ್ಠರು ಶ್ರೀರಾಮನಿಗೆ ಮನಃಪ್ರಶಮನೋಪಾಯವನ್ನು ಉಪದೇಶಿದರು.

★★★★★

# ನಿದಾಘನಿಗೆ ಜ್ಞಾನೋಪದೇಶ

**12-5-1940**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳವರು**

**ವಿಷ್ಣುಪುರಾಣದ ಎರಡನೆಯ ಅಂಶದ ಹದಿನಾರನೆಯ ಅಧ್ಯಾಯದಲ್ಲಿ** ಮಹರ್ಷಿಗಳಾದ ಋಭುಗಳು ತಮ್ಮ ಶಿಷ್ಯನಾದ ನಿದಾಘನಿಗೆ ಜ್ಞಾನೋಪದೇಶವನ್ನು ಹಿಂದೊಮ್ಮೆ ಮಾಡಿದ್ದರು. ಅವನನ್ನು ಜ್ಞಾನನಿಷ್ಠೆಯಲ್ಲಿಯೇ ನಿಲ್ಲಿಸಬೇಕೆಂಬ ಇಚ್ಛೆಯಿಂದ ಬಹುಕಾಲದ ಮೇಲೆ ಮತ್ತೆ ಅವನಿದ್ದ ನಗರಕ್ಕೆ ಬಂದರು. ಆಗ ತಾನೆ ನಿದಾಘನು ಅರಣ್ಯದಿಂದ ಸಮಿತ್ತನ್ನೂ ಕುಶವನ್ನೂ ತೆಗೆದುಕೊಂಡು ಊರಿಗೆ ಬರುತ್ತಿದ್ದನು; ರಾಜನು ಸಪರಿವಾರನಾಗಿ ಕೋಟೆಯೊಳಕ್ಕೆ ಪ್ರವೇಶಮಾಡುತ್ತಿದ್ದದ್ದರಿಂದ ಇವನು ಜನಸಂದಣಿಯಿಂದ ದೂರವಾಗಿ ನಿಂತಿದ್ದನು.

ಇದೇ ಸಂಧಿಯನ್ನುಪಯೋಗಿಸಿಕೊಂಡು ''ಎಲೈ ದ್ವಿಜನೆ, ಇದೇಕೆ ಹೀಗೆ ಒಂದು ಕಡೆಯಲ್ಲಿ ನೀನೊಬ್ಬನೇ ನಿಂತಿದ್ದೀಯೆ?'' ಎಂದು ಋಭುಗಳು ಕೇಳಿದರು. ನಿದಾಘನು ''ಅಯ್ಯ, ರಾಜನು ಊರೊಳಕ್ಕೆ ಹೋಗುತ್ತಿರುವದರಿಂದ ಜನರ ಗುಂಪು ಬಹಳವಾಗಿದೆ, ಆದ್ದರಿಂದ ನಾನು ನಿಂತಿದ್ದೇನೆ'' ಎಂದನು. ಋಭುಗಳು ''ರಾಜನು ಯಾರು? ಜನರೆಂದರೆ ಯಾರು?'' ಎಂದು ಕೇಳಲು ಅವನು ''ಇಗೋ ದೊಡ್ಡ ಆನೆಯ ಮೇಲೆ ಕುಳಿತಿರುವಾತನೇ ರಾಜನು, ಉಳಿದವರು ಪರಿವಾರದ ಜನರು'' ಎಂದನು. ಋಭುಗಳು ''ಸರಿ, ಇವರಲ್ಲಿ ಇಂಥವನೇ ರಾಜನೆಂದು ತಿಳಿಯಲಿಲ್ಲವಲ್ಲ! ಆನೆ ಯಾವದೊ!'' ಎನ್ನಲು, ನಿದಾಘನು ''ಇಗೋ, ಈ ಕೆಳಗೆ ಇರುವದೇ ಆನೆಯು, ಮೇಲೆ ಕುಳಿತಿರುವಾತನೇ ರಾಜನು'' ಎಂದನು. ಆಗಲೂ ''ಋಭುಗಳು ಕೆಳಗೆ ಎಂದರೆ ಯಾವದು, ಮೇಲೆಂದರೆ ಯಾವದು?- ಇದನ್ನು ನನಗೆ ತಿಳಿಯಹೇಳು'' - ಎಂದು ಮತ್ತೆ ಕೇಳಲು ನಿದಾಘನು ತಟ್ಟನೆ ಅವರ ಮೇಲೆ ಹತ್ತಿಕೊಂಡು ''ನಾನು ರಾಜನಂತೆ ಮೇಲೆ ಇರುವೆನು. ನೀನು ಆನೆಯಂತೆ ಕೆಳಗೆ ಇದ್ದೀಯೆ, ಈಗ ತಿಳಿಯಿತೆ?'' ಎನ್ನಲು ಋಭುಗಳು ''ಸರಿ, ಇಲ್ಲಿ ನೀನೆಂದರೆ ಯಾರು, ನಾನೆಂದರೆ ಯಾರು?

ಅದನ್ನು ಹೇಳು'' ಎಂದು ಕೇಳಿದರು. ಆ ಬ್ರಾಹ್ಮಣನು ಅದ್ವೈತಾಚಾರ್ಯರಾದ ತನ್ನ ಗುರುಗಳೇ ಇವರಾಗಿರಬೇಕೆಂದು ನಿಶ್ಚಯಿಸಿ ಕೆಳಗಿಳಿದು ಅವರ ಕಾಲ್ಗೆರಗಿದನು. ಅವರು ''ಅಯ್ಯ, ಸರ್ವವೂ ಬ್ರಹ್ಮವೆಂದು ತಿಳಿಸುವದಕ್ಕೋಸ್ಕರವೇ ನಾನು ಬಂದದ್ದು; ಈ ಅದ್ವೈತಭಾವನೆಯಿಂದಲೇ ನಿನಗೆ ಸದ್ಗತಿಯಾಗುವದು'' ಎಂದು ತಿಳಿಸಿ ಹೊರಟುಹೋದರು. ನಿದಾಘನೂ ಅವರ ಉಪದೇಶದಿಂದ ಜ್ಞಾನಿಯಾಗಿ ಆ ಬಳಿಕ ಸರ್ವಭೂತಗಳನ್ನೂ ಅಭೇದದಿಂದ ಕಾಣುತ್ತಾ ಪರಮಮುಕ್ತಿಯನ್ನು ಪಡೆದನು.

★★★★★

# ಅತಿವರ್ಣಾಶ್ರಮಿಯ ಲಕ್ಷಣ

**13-5-1940**

**ಬ್ರ॥ಶ್ರೀ॥ ನಾರಾಯಣಶಾಸ್ತ್ರಿಗಳವರು**

**ಸೂತಸಂಹಿತೆಯ ಮುಕ್ತಿಖಂಡದ ಐದನೆಯ ಅಧ್ಯಾಯದಲ್ಲಿ** - ಮುಕ್ತಿಯನ್ನು ಅನುಗ್ರಹಿಸುವವನು ಈಶ್ವರನು. ಆ ಈಶ್ವರನ ಸ್ವರೂಪವನ್ನು ಆಚಾರ್ಯನಿಂದ ಅರಿತುಕೊಂಡರೇ ಮುಕ್ತಿಯು ಸಿಕ್ಕುತ್ತದೆ. ಆದ್ದರಿಂದ ಸದ್ಗುರುವೇ ಮೋಚಕಪ್ರದನು. ವೇದಾಂತವಿಚಾರವನ್ನು ಮಾಡಿ ಜ್ಞಾನವನ್ನು ಸಂಪಾದಿಸುವವನೇ ಆಚಾರ್ಯನು. ವರ್ಣಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ- ಇವರುಗಳಲ್ಲಿ ಮೊದಮೊದಲನೆಯವನು ಮಿಕ್ಕುಳಿದವರಿಗೆಲ್ಲ ಗುರುವಾಗುತ್ತಾನೆ: ಆದರೆ ವಿದ್ಯೋತ್ಕರ್ಷದಿಂದ ಕೆಳಗಿನ ವರ್ಣದವರೂ ಮೇಲಿನ ವರ್ಣದವರಿಗೆ ಗುರುವಾಗಬಹುದೆಂದು ಬಲ್ಲವರು ಹೇಳುತ್ತಾರೆ. ಹೀಗೆಯೇ ಸಂನ್ಯಾಸಿ, ವಾನಪ್ರಸ್ಥ, ಗೃಹಸ್ಥ, ಬ್ರಹ್ಮಚಾರಿ ಎಂಬ ನಾಲ್ಕು ಆಶ್ರಮದವರಲ್ಲಿಯೂ ಗುರುಶಿಷ್ಯಭಾವವನ್ನು ತಿಳಿಯಬೇಕು. ಆದರೆ ಅತಿವರ್ಣಾಶ್ರಮಿಯು ಎಲ್ಲಾ ಗುರುಗಳಿಗೂ ಗುರುವಾಗಿರುತ್ತಾನೆ; ಅವನಿಗೆ ಸಮಾನರಾದವರಾಗಲಿ ಅವನಿಗಿಂತ ಹೆಚ್ಚಿನವರಾಗಲಿ ಯಾರೊಬ್ಬರೂ ಇರುವದಿಲ್ಲ.

**ಅತಿವರ್ಣಾಶ್ರಮಿಯ ಲಕ್ಷಣವೇನು?** ಎಂದರೆ ಅವನು ಶರೀರೇಂದ್ರಿಯಾದಿಗಳಿಗಿಂತ ಬೇರೆಯಾಗಿರುವ ಸರ್ವಸಾಕ್ಷಿಯಾದ ಚಿದಾನಂದಸ್ವಪ್ರಕಾಶವಾದ ಪರ ತತ್ತ್ವವನ್ನು ಬಲ್ಲವನಾಗಿ ಮಹಾವಾಕ್ಯದಿಂದ ತಾನೇ ಆ ಪರಮೇಶ್ವರನೆಂದು ಅರಿತುಕೊಂಡಿರುವನು. ಆ ಪರಮಾತ್ಮನು ಅವಸ್ಥಾತ್ರಯರಹಿತನೂ ತತ್ಸಾಕ್ಷಿಯೂ ಆಗಿರುವನೆಂದೂ ಮಾಯೆಯಿಂದ ಕಲ್ಪಿತವಾಗಿರುವ ವರ್ಣಾಶ್ರಮಾದಿಗಳು ತನ್ನ ಆ ಸ್ವರೂಪಕ್ಕೆ ಇಲ್ಲವೆಂದೂ ಅರಿತಿರುವನು. ತಾನು ಯಾವಾಗಲೂ ನಿಷ್ಕ್ರಿಯನೆಂದೂ ತನ್ನ ಸನ್ನಿಧಿಯಲ್ಲಿ ಕ್ರಿಯೆಯೆಲ್ಲವೂ ನಡೆಯುತ್ತಿರುವದೆಂದೂ ತಿಳಿದುಕೊಂಡಿರುವನು. ಚಿನ್ನದಲ್ಲಿ ಕಡಗ, ಹಾರ, ಮುಂತಾದವುಗಳೂ ಕಪ್ಪೆಯಚಿಪ್ಪಿನಲ್ಲಿ ಬೆಳ್ಳಿಯೂ ಕಲ್ಪಿತವಾಗಿ ರುವಂತೆ ಜಗತ್ತೆಲ್ಲವೂ ತನ್ನಲ್ಲಿಯೇ ಕಲ್ಪಿತವಾಗಿರುವದೆಂದೂ ತಾರತಮ್ಯದಿಂದ ತೋರುವ ಬ್ರಾಹ್ಮಣಾದಿ ವರ್ಣಗಳ ಮತ್ತು ಮನುಷ್ಯಪಶುಪಕ್ಷ್ಯಾದಿಗಳ ಶರೀರದಲ್ಲಿ ಏಕರೂಪದಿಂದಿರುವ ತನ್ನ ಆತ್ಮನಾದ ಬ್ರಹ್ಮವೇ ತೋರುತ್ತಿರುವದೆಂದೂ ಅರಿತಿರುವನು. ಆತನಿಗೆ ವಿಧಿಯಾಗಲಿ ನಿಷೇಧವಾಗಲಿ ವರ್ಜ್ಯಾವರ್ಜ್ಯವಾಗಲಿ ಯಾವದೂ ಇರುವುದಿಲ್ಲ. ಇಂಥ ಆತ್ಮವಿಜ್ಞಾನಿಯ ನಿಷ್ಠೆಯನ್ನು ಅಜ್ಞಾನಿಗಳು ಎಂದಿಗೂ ಅರಿಯಲಾರರು. ಅವನೇ ವೇದಾರ್ಥವೆಲ್ಲವನ್ನೂ ಬಲ್ಲ ಮೋಚಕಪ್ರದನಾದ ಆಚಾರ್ಯನು. ಅಷ್ಟೇ ಅಲ್ಲ, ಅವನೇ ಸತ್ಯಚಿದ್ಘನನಾದ ಪರಮೇಶ್ವರನು.

★★★★★

# ಬ್ರಹ್ಮಪ್ರಾಪ್ತಿಯಾಗುವ ಬಗೆ

**14-5-1940**

**ಬ್ರ|| ಶ್ರೀ|| ಮತ್ತೂರು ಸುಬ್ಬರಾಯಾವಧಾನಿಗಳು**

**ಭಾರತ ಮೋಕ್ಷಧರ್ಮದಲ್ಲಿ ಶುಕಾನುಪ್ರಶ್ನದ 239ನೆಯ ಅಧ್ಯಾಯದಲ್ಲಿ** ಅಧಿಕಾರಿಯಾದವನಿಗೆ ಬ್ರಹ್ಮಪ್ರಾಪ್ತಿಯಾಗುವ ಬಗೆ ಹೇಗೆಂದು

ಶುಕರು ಕೇಳಿರುತ್ತಾರೆ. ವ್ಯಾಸರು ಸಾಂಖ್ಯರೀತಿಯಿಂದಲೂ ಯೋಗರೀತಿಯಿಂದಲೂ ಬ್ರಹ್ಮಪ್ರಾಪ್ತಿಯಾಗುವ ರೀತಿಯನ್ನು ಹೇಳುವದಕ್ಕೆ ಹೊರಟು ಇಲ್ಲಿ ಸಾಂಖ್ಯ- ಎಂದರೆ ತತ್ತ್ವವಿಚಾರ- ಕ್ರಮದಿಂದ ಹೇಗೆ ಪರಬ್ರಹ್ಮವನ್ನು ಪಡೆದುಕೊಳ್ಳಬಹುದೆಂಬುದನ್ನು ತಿಳಿಸಿರುತ್ತಾರೆ. ವಿದ್ಯೆ, ತಪಸ್ಸು, ಇಂದ್ರಿಯನಿಗ್ರಹ, ಸರ್ವತ್ಯಾಗ- ಇವುಗಳಿಲ್ಲದೆ ಯಾವನಿಗೂ ಸಿದ್ಧಿಯಾಗುವದೇ ಇಲ್ಲ. ಬ್ರಹ್ಮನು ಸೃಷ್ಟಿಮಾಡಿರುವ ಪಂಚಮಹಾಭೂತಗಳು ಜೀವರ ಶರೀರದಲ್ಲಿಯೂ ರೂಪಾಂತರದಿಂದ ಇದ್ದುಕೊಂಡಿರುತ್ತವೆ. ಪೃಥ್ವಿಯಿಂದ ದೇಹವೂ ಜಲದಿಂದ ದ್ರವಾಂಶವೂ ತೇಜಸ್ಸಿನಿಂದ ಚಕ್ಷುರಿಂದ್ರಿಯವೂ ವಾಯುವಿನಿಂದ ಪ್ರಾಣಾಪಾನವೂ ಆಕಾಶದಿಂದ ಇಂದ್ರಿಯಗಳೂ ಉತ್ಪತ್ತಿಯಾಗಿರುತ್ತವೆ. ಪಾದಕ್ಕೆ ವಿಷ್ಣು, ಬಲಕ್ಕೆ ಇಂದ್ರ, ಹೊಟ್ಟೆಗೆ ಅಗ್ನಿ, ಕರ್ಣಗಳಿಗೆ ದಿಗ್ದೇವತೆಗಳು, ಜಿಹ್ವೆಗೆ ಸರಸ್ವತಿ ಹೀಗೆ ಆಯಾ ಇಂದ್ರಿಯಗಳಿಗೆ ಅಭಿಮಾನಿದೇವತೆಗಳಿರುವರು. ಶಬ್ದ, ಸ್ಪರ್ಶ, ರೂಪ, ರಸ, ಗಂಧ- ಈ ವಿಷಯಗಳನ್ನು ಶ್ರೋತ್ರಾದೀಂದ್ರಿಯದ್ವಾರಗಳಿಂದ ಅನುಭವಿಸುತ್ತಾರಷ್ಟೆ; ಇಲ್ಲಿ ಇಂದ್ರಿಯಗಳನ್ನು ಮನಸ್ಸೂ ಮನಸ್ಸನ್ನು ಜೀವನೂ ಪ್ರೇರಿಸುತ್ತಿರುವರು. ಪಂಚಬುದ್ಧೀಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚಪ್ರಾಣಗಳು, ಮನಸ್ಸು - ಎಂಬ ಹದಿನಾರರ ಗುಂಪಿಗೆ ಹದಿನೇಳನೆಯವನಾದ ಆತ್ಮನ ಸ್ವರೂಪವನ್ನು ತಿಳಿಯಬೇಕು. ಇಂದ್ರಿಯಗಳೆಲ್ಲಕ್ಕೂ ಹಿಂದಿರುವ ಮನಸ್ಸಿಗೆ ಗುಣಗಳೇ ಆಶ್ರಯವು, ಚೇತನರೂಪನಾದ ಆತ್ಮನಲ್ಲ; ಮನಸ್ಸಿನಿಂದ ಗುಣಗಳ ಕಾರ್ಯವು ತೋರಿಕೊಳ್ಳುವದೇ ಹೊರತು ಮನಸ್ಸೇ ಗುಣಗಳನ್ನುಂಟುಮಾಡುವದಿಲ್ಲ. ಆ ಗುಣಗಳು ಕೇವಲ ವ್ಯಾವಹಾರಿಕವಾದ ತೋರಿಕೆಯಾಗಿರುತ್ತವೆ. ಎಲ್ಲಕ್ಕೂ ಅಧಿಷ್ಠಾನರೂಪನಾದ ಆತ್ಮನು ಇಂದ್ರಿಯಗಳಿಗೆ ಗೋಚರನಲ್ಲ, ಏಕೆಂದರೆ ಅವನಲ್ಲಿ ಶಬ್ದಾದಿಗಳಿಲ್ಲ. ನಿಜವಾಗಿ ಅವನ ಪರಮಾರ್ಥ ಸ್ವರೂಪವೂ ಅಶರೀರವಾದದ್ದು, ಸಮಸ್ತ ಶರೀರಗಳಲ್ಲಿಯೂ ಇದ್ದುಕೊಂಡಿರುವದು. ಅದನ್ನು ಅರಿತುಕೊಂಡವನು ಬ್ರಹ್ಮಭಾವವನ್ನು ಪಡೆಯುತ್ತಾನೆ. ಸರ್ವಭೂತಗಳಲ್ಲಿಯೂ ಇರುವ ಈ ಪರಮಾರ್ಥಸ್ವರೂಪವನ್ನು ಕಂಡವರು ಸರ್ವತ್ರಸಮದರ್ಶಿಗಳಾಗಿರುತ್ತಾರೆ; ಅವರು ಆತ್ಮನಲ್ಲಿ ಸರ್ವಭೂತಗಳೂ ಸರ್ವಭೂತಗಳಲ್ಲಿ ಆತ್ಮನೂ ಇರುವದನ್ನು

ಕಂಡುಕೊಂಡಿರುತ್ತಾರೆ. ಸರ್ವರಲ್ಲಿರುವ ಆತ್ಮನೂ ಇದೇ ಸ್ವರೂಪದ ಒಬ್ಬನೇ ಆತ್ಮನೆಂದು ಅರಿತವನೇ ಜ್ಞಾನಿಯು. ಅವನು ಜ್ಞಾನದಿಂದ ಎಲ್ಲಿಗಾದರೂ ಹೋಗಿ ಬ್ರಹ್ಮಭಾವವನ್ನು ಪಡೆಯಬೇಕಾಗಿಲ್ಲ; ಏಕೆಂದರೆ ಬ್ರಹ್ಮವು ದೇಶಕಾಲಗಳನ್ನು ಮೀರಿ ಸೂಕ್ಷ್ಮಕ್ಕೂ ಸೂಕ್ಷ್ಮವಾಗಿ ಇಲ್ಲಿಯೇ ಎಲ್ಲೆಲ್ಲಿಯೂ ಇದ್ದುಕೊಂಡಿರುತ್ತದೆ. ಅದು ಸಮಸ್ತಪ್ರಾಣಿಗಳ ಕಾರ್ಯಕರಣಗಳಿಂದಲೂ ಕೂಡಿಯೂ ಅವುಗಳು ಯಾವವೂ ಇಲ್ಲದೆಯೂ ಇರುತ್ತದೆ; ಈ ಕ್ಷರಾಕ್ಷರರೂಪಗಳಿಗಿಂತಲೂ ಬೇರೆಯಾದ ಪುರುಷೋತ್ತಮರೂಪವೂ ಆಗಿರುತ್ತದೆ. ಹೀಗೆ ಶರೀರದಲ್ಲಿದ್ದು ಶರೀರವು ನಾಶವಾಗುತ್ತಲೂ ಶರೀರಾಂತರವನ್ನು ಹೊಂದುವಂತಿರುವ ಜೀವನೇ ನಿಜವಾಗಿ ಯಾವ ವಿಕಾರವೂ ಇಲ್ಲದ ಅಕ್ಷರಾತ್ಮನೆಂದು ತಿಳಿದವನು ತಾನೇ ಅಕ್ಷರನಾಗಿ ಜನ್ಮ ಮರಣರಹಿತನಾಗುತ್ತಾನೆ.

★★★★★

# ಮೂರನೆಯ ಹೆಜ್ಜೆ

**15-5-1940**

**ಬ್ರ|| ಶ್ರೀ|| ಮತ್ತೂರು ಸುಬ್ಬರಾಯಾವಧಾನಿಗಳು**

**ಭಾಗವತದ ಎರಡನೆಯ ಸ್ಕಂಧದಲ್ಲಿ ಇಪ್ಪತ್ತೆರಡನೆಯ ಅಧ್ಯಾಯದಲ್ಲಿ** ಬಲಿಚಕ್ರವರ್ತಿಯನ್ನು ವಾಮನನು ಮೂರು ಹೆಜ್ಜೆ ಭೂಮಿಯನ್ನು ಕೇಳಿ ಎರಡು ಹೆಜ್ಜೆಯಿಂದ ಭೂಮಿಯನ್ನೂ ಸ್ವರ್ಗವನ್ನೂ ಅಳೆದುಕೊಂಡು ಮೂರನೆಯ ಹೆಜ್ಜೆಗೆ ಸ್ಥಳವೆಲ್ಲಿ?- ಎಂದು ಕೇಳಿರುತ್ತಾನೆ. ಗರುಡನು ವಾರುಣಪಾಶದಿಂದ ಬಲಿಯನ್ನು ಕಟ್ಟಿ ಕೆಡವಿರುತ್ತಾನೆ. 'ವಾಗ್ದಾನವನ್ನು ಮಾಡಿ ದಾನಮಾಡದೆ ಇರುವವನಿಗೆ ನರಕ ವಾಸವಾಗುವದಲ್ಲ!' ಎಂದು ಮೂದಲಿಸಿದ ವಿಷ್ಣುವಿಗೆ ಬಲಿಯು ಹೇಳಿದ ಉತ್ತರವು ಹೀಗಿದೆ.

ಭಗವಂತನು ತನ್ನ ಮನಸ್ಸನ್ನು ಎಷ್ಟು ಕದಡಿದರೂ ಸ್ವಲ್ಪವೂ ತಳಮಳವಿಲ್ಲದೆ ಬಲಿಯು ಇಂತೆಂದನು: ಭಗವಂತನೆ, ನನ್ನ ಮಾತು ಸುಳ್ಳಾಗದಂತೆ ನನ್ನ ತಲೆಯಮೇಲೆ ನಿನ್ನ ಕಾಲನ್ನಿಡು. ನಾನು ನರಕಕ್ಕಾಗಲಿ ವರುಣಪಾಶಕ್ಕಾಗಲಿ ಅಂಜುವನಲ್ಲ; ರಾಜ್ಯಚ್ಯುತನಾದೆನಲ್ಲ ಎಂಬ ಯೋಚನೆಯೂ ನನಗೆ ಇಲ್ಲ. ಆದರೆ ನನ್ನ ಮಾತು ಸುಳ್ಳಾಗುವದಲ್ಲ ಎಂಬಿದೊಂದೇ ನನಗೆ ಅಂಜಿಕೆ. ಅಸುರರು ತಪ್ಪುಹಾದಿಯನ್ನು ತುಳಿಯದಂತೆ ದಂಡಿಸುವ ಪರೋಕ್ಷ ಗುರುವೇ ನೀನು; ನಿನ್ನಂತೆ ನಮ್ಮ ತಂದೆತಾಯಿಗಳೂ ನಮ್ಮನ್ನು ಶಿಕ್ಷಿಸಲಾರರು. ನಿನ್ನ ವೈರದಿಂದ ಎಷ್ಟೋ ಅಸುರರು ಯೋಗಿಗಳಿಗೆ ದೊರಕತಕ್ಕ ಸದ್ಗತಿಯನ್ನೇ ಹೊಂದಿರುತ್ತಾರೆ; ಅಂಥ ನೀನು ನಿಗ್ರಹಮಾಡಿದ್ದಕ್ಕೆ ನನಗೆ ನಾಚಿಕೆ ಏಕೆ? ನನ್ನ ಅಜ್ಜನಾದ ಪ್ರಹ್ಲಾದನು ನಿನ್ನ ವೈರಿಯಾದ ತನ್ನ ತಂದೆಯಿಂದ ಬಹುವಾಗಿ ಪೀಡಿತನಾದರೂ ನಿನ್ನ ಭಕ್ತಿಯಿಂದ ತನ್ನ ಸತ್ಯವಾಕ್ಯನ್ನು ಉಳಿಸಿಕೊಂಡನು. ಎಂದಿಗಾದರೂ ಹೋಗುವ ಈ ಶರೀರದಿಂದೇನು? ಧನವನ್ನು ಅಪಹರಿಸುವ ನೆಂಟರೆಂಬ ಕಳ್ಳರಿಂದಾಗಬೇಕಾದದ್ದೇನು? ಸಂಸಾರಕ್ಕೆ ಕಾರಣಳಾದ ಹೆಂಡತಿಯಿಂದೇನು? ಮರ್ತ್ಯನಾದವನಿಗೆ ಮನೆಮಾರುಗಳಿಂದಾದರೂ ಆಗಬೇಕಾದದ್ದೇನು? ಬರಿಯ ಆಯುಸ್ಸಿನ ವ್ಯಯವೇ ಅಲ್ಲವೆ? ಹೀಗೆಂದು ನಿಶ್ಚಯಿಸಿ ಆ ಸಾಧುವಾದ ಪ್ರಹ್ಲಾದನು ಜನಸಂಗದಿಂದ ಭೀತನಾಗಿ ನಿರ್ಭೀತಿಯಾದ ನಿನ್ನ ಪಾದಪದ್ಮವನ್ನೇ ಸೇರಿದನು. ಈಗ ನಾನೂ ಅದೃಷ್ಟದಿಂದ ಸಂಪತ್ತೆಲ್ಲವನ್ನೂ ಕಳೆದುಕೊಂಡು ನಿನ್ನ ಸಮೀಪವನ್ನು ಸೇರಿರುತ್ತೇನೆ.''

ಹೀಗೆಂದು ಹೇಳುವ ವೇಳೆಗೆ ಅಲ್ಲಿಗೆ ಪ್ರಹ್ಲಾದನು ಬಂದನು. ಬಲಿಯು ಪಾಶಬದ್ಧನಾಗಿದ್ದದ್ದರಿಂದ ನಮಸ್ಕಾರಮಾಡಲಾರದೆ ನಾಚಿಕೆಯಿಂದ ತಲೆಯನ್ನು ತಗ್ಗಿಸಿದನು. ಪ್ರಹ್ಲಾದನು ಶ್ರೀಮಹಾವಿಷ್ಣುವಿಗೆ ನಮಸ್ಕಾರಮಾಡಿ ''ಭಗವಂತನೆ, ನೀನೇ ಕೊಟ್ಟಿದ್ದ ಐಶ್ವರ್ಯವನ್ನು ನೀನೇ ತೆಗೆದುಕೊಂಡು ಈಗ ಇವನಿಗೆ ಮಹಾನುಗ್ರಹವನ್ನು ಮಾಡಿರುತ್ತೀಯೆ. ಯಾವ ಸಂಪತ್ತಿನಿಂದ ವಿವೇಕಿಯುಕೂಡ ಮೋಹವನ್ನು ಹೊಂದುವನೋ ಅಂಥದ್ದನ್ನು ಬಿಡಿಸಿದೆಯಲ್ಲ! ನಿನಗೆ ನಮಸ್ಕಾರ!'' ಎಂದನು. ಬಲಿಯ ಹೆಂಡತಿಯಾದ ವಿಂಧ್ಯಾವಳಿಯು ''ಕ್ರೀಡಾರ್ಥವಾಗಿ ನೀನು ಸೃಷ್ಟಿಸಿರುವ ಈ ಜಗತ್ತನ್ನು ಅವಿವೇಕಿಗಳು

ತಮ್ಮದೆಂದು ಬಗೆಯುತ್ತಾರೆ; ನಿನ್ನಲ್ಲಿರುವ ಕರ್ತೃತ್ವವನ್ನು ತಮ್ಮ ಮೇಲೆ ಹಾಕಿಕೊಳ್ಳುವ ಆ ಮೂಢರು ನಿನ್ನ ಪ್ರಭುತ್ವಕ್ಕೇನಾದರೂ ಊಣೆಯವನ್ನುಂಟುಮಾಡಿಯಾರೇನು?'' ಎಂದಳು. ಚತುರ್ಮುಖಬ್ರಹ್ಮನು ''ಪ್ರಭುವೆ, ನಿನಗೆ ಒಂದಿಷ್ಟು ನೀರನ್ನುಕೊಟ್ಟು ದೂರ್ವೆಯ ಪೂಜೆಯನ್ನು ಮಾಡಿದವರಿಗೂ ಉತ್ತಮಗತಿಯು ಸಿಕ್ಕುತ್ತದೆ; ಹೀಗಿರುವಲ್ಲಿ ಮನಸ್ಸಿನಲ್ಲಿ ಸ್ವಲ್ಪವೂ ಅಳುಕಿಲ್ಲದೆ ತ್ರಿಲೋಕವನ್ನೂಕೊಟ್ಟಿರುವ ಇವನಿಗೆ ಸಂಕಟವಾಗುವದು ಯುಕ್ತವಾದೀತೆ?'' ಎನ್ನಲು ಶ್ರೀಭಗವಂತನು ''ಬ್ರಹ್ಮನೆ, ನಾನು ಯಾರಿಗೆ ಅನುಗ್ರಹವನ್ನು ಮಾಡಬೇಕೆನ್ನುವೆನೋ ಅವನ ಧನವೆಲ್ಲವನ್ನೂ ಕಸಿದುಕೊಳ್ಳುವೆನು; ಆಗ ಮನುಷ್ಯನಿಗೆ ಮದವೂ ಗರ್ವವೂ ಹೋಗಿಬಿಡುತ್ತದೆ. ಬಹು ಕಷ್ಟದಿಂದ ಮಾನುಷಜನ್ಮವನ್ನು ಹೊಂದಿದವನು ಜನ್ಮಕರ್ಮವಯೋ ರೂಪವಿದ್ಯೈಶ್ವರ್ಯವೇ ಮುಂತಾದವುಗಳಿಂದ ಗರ್ವಪಡದೆ ಇದ್ದರೆ ಅದು ನನ್ನ ಅನುಗ್ರಹವೆಂದು ಭಾವಿಸಬೇಕು. ಈ ದಾನವಾಗ್ರಣಿಯು ಕಷ್ಟಕಾಲದಲ್ಲಿಯೂ ಮೋಸಹೋಗದೆ ಮಾಯೆಯನ್ನು ಜಯಿಸಿರುತ್ತಾನೆ; ಸ್ವತ್ತನ್ನು ಕಳೆದುಕೊಂಡು, ಸ್ಥಾನಚ್ಯುತನಾಗಿ, ಶತ್ರುಗಳು ತಿರಸ್ಕರಿಸಿ ಬಂಧಿಸಿದಾಗಲೂ ನೆಂಟರು ತನ್ನನ್ನು ಬಿಟ್ಟಗಲಿದಾಗಲೂ ಸಂಕಟಪಡುತ್ತಿದ್ದರೂ, ಗುರುಗಳು ಶಾಪವನ್ನು ಕೊಟ್ಟು ಬೆದರಿಸಿದರೂ ತನ್ನ ಸತ್ಯವನ್ನು ಬಿಡಲಿಲ್ಲವಲ್ಲ; ನಾನು ಎಷ್ಟು ಮರ್ಮೋದ್ಘಾಟನೆಮಾಡಿದರೂ ಸತ್ಯಪ್ರತಿಜ್ಞೆಯನ್ನು ಬಿಡಲಿಲ್ಲವಲ್ಲ! ಇಗೋ, ಇವನಿಗೆ ಯಾರಿಗೂ ದೊರೆಯದ ಸುತಲಲೋಕವನ್ನು ಕೊಟ್ಟಿರುತ್ತೇನೆ; ಇವನ ರಕ್ಷಣೆಗೆ ನನ್ನ ಚಕ್ರವನ್ನು ನಿಯಮಿಸಿರುತ್ತೇನೆ, ಅಲ್ಲಿ ನಾನೂ ಸಾಕಾರ ರೂಪದಿಂದ ಸನ್ನಿಹಿತನಾಗಿರುತ್ತೇನೆ. ಅವನಿಗೆ ನನ್ನ ಅನುಗ್ರಹದಿಂದ ಎಂದಿಗೂ ಆಸುರಭಾವವು ಉಂಟಾಗದೆ ಇರುತ್ತದೆ, ಮುಂದೆ ಸಾವರ್ಣಿಯ ತರುವಾಯ ಇವನು ಇಂದ್ರಪದವಿಯನ್ನು ಪಡೆಯುವನು'' ಎಂದು ಅನುಗ್ರಹಿಸಿದನು.

★★★★★

# ಶ್ರೀರಾಮನ ಅನುಭವ

**16-5-1940**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳು**

**ಯೋಗವಾಸಿಷ್ಠದ ನಿರ್ವಾಣಪ್ರಕರಣದ 192ನೆಯ** ಸರ್ಗದಲ್ಲಿ ಶ್ರೀರಾಮನು ತನ್ನ ಅನುಭವವನ್ನು ವಸಿಷ್ಠರಿಗೆ ಅರಿಕೆಮಾಡಿಕೊಂಡ ಬಗೆಯನ್ನು ತಿಳಿಸಿದೆ. ಅಜ್ಞಾನವೆಂಬ ಒಂದೇ ಕಾರಣದಿಂದ ಈ ಸಂಸಾರದ ಆಕಾಶದಲ್ಲಿ ಬಹುಕಾಲ ತೊಳಲಿದೆನು. ಸರಿಯಾಗಿ ನೋಡಿದರೆ ಇದು ಇರಲೇ ಇಲ್ಲ, ಎಲ್ಲ ಚಿದಾಕಾಶವೇ; ಆದರೂ ಅಜ್ಞಾನವಶದಿಂದ ಇದು ಸಂಸಾರದಂತೆ ತೋರಿಕೊಂಡಿತಲ್ಲ! ಸೃಷ್ಟಿಯಲ್ಲಿಯೂ ಪರಲೋಕದಲ್ಲಿಯೂ ಸ್ವಪ್ನವೇ ಮುಂತಾದ ಅವಸ್ಥೆಗಳಲ್ಲಿಯೂ ಕಲ್ಪನೆಯೇ ಮುಂತಾದವುಗಳಲ್ಲಿಯೂ ಚೈತನ್ಯವೇ ಆಯಾ ಆಕಾರದಲ್ಲಿ ತೋರಿಕೊಳ್ಳುತ್ತಿರುವದು. ಇದೆಲ್ಲವೂ ಭ್ರಾಂತಿಯಿಂದ ತೋರುತ್ತದೆ ಎಂಬುದೂ ಸರಿಯಲ್ಲ; ಏಕೆಂದರೆ ನಿರ್ವಿಕಾರವಸ್ತುವಿನಲ್ಲಿ ಭ್ರಾಂತಿಯಾಗುವದಾದರೂ ಹೇಗೆ? ವಿಚಾರದಲ್ಲಿ ಯಾವದೊಂದು ಭ್ರಮವೂ ಹೊಂದುವದೇ ಇಲ್ಲ. ಇದು ಏಕಾಯಿತು? ಎಂಬ ಪ್ರಶ್ನೆಯೇ ಹೊಂದುವದಿಲ್ಲ, ಏಕೆಂದರೆ ಇರುವದನ್ನಲ್ಲವೆ ವಿಚಾರಿಸಬೇಕು? ಆದ್ದರಿಂದ ಭ್ರಾಂತಿಯೂ ಇಲ್ಲ, ಇದೆಲ್ಲವೂ ನಿರಾವರಣವಾದ ಚೈತನ್ಯದ ಗಟ್ಟಿಯೇ ಆಗಿರುತ್ತದೆ. ಈ ಪರಿಪೂರ್ಣತತ್ತ್ವದಲ್ಲಿ ತೋರುವದಾಗಲಿ ತೋರದೆ ಇರುವದಾಗಲಿ ಇಲ್ಲವೇ ಇಲ್ಲ. ಜನನಮರಣರಹಿತವಾಗಿ ಹಾನೋಪಾದಾನವರ್ಜಿತವಾಗಿ ನಿರ್ವಿಕಾರಿಯಾಗಿರುವ ನಿರ್ದುಷ್ಟವಸ್ತುವೊಂದೇ ಇರುತ್ತಿರುವದು.

★★★★★

# ಪರಮಾತ್ಮನ ಮಾಯಾವಿಚಾರ

## 17-5-1940

**ಬ್ರ॥ ಶ್ರೀ॥ ವಿಠ್ಠಲಶಾಸ್ತ್ರಿಗಳವರು**

**ಭಾಗವತದ ಹನ್ನೊಂದನೆಯ ಸ್ಕಂದದಲ್ಲಿ ಮೂರನೆಯ** ಅಧ್ಯಾಯದಲ್ಲಿ ನಿಮಿರಾಜನಿಗೆ ಅಂತರಿಕ್ಷನೆಂಬ ಮಹಾತ್ಮನು ವಿವರಿಸಿ ಹೇಳಿದ ಪರಮಾತ್ಮನ ಮಾಯಾವಿಚಾರವಿದೆ. ಆತ್ಮನು ನಿರ್ಗುಣನೂ ಅದ್ವಿತೀಯನೂ ಆಗಿದ್ದರೂ ಬೇರೊಂದು ರೀತಿಯಲ್ಲಿ ತೋರುವದೆಂಬುದೇ ಮಾಯೆಯು. ಕೂಟಸ್ಥವಾದ ಜ್ಞಾನವೊಂದೇ ಇರುತ್ತಿದ್ದರೂ ಜಾಗ್ರತ್ತು, ಸ್ವಪ್ನ, ಸುಷುಪ್ತಿ-ಎಂಬ ಮೂರು ಬಗೆಯಿಂದ ತೋರಿಕೊಳ್ಳುತ್ತಿರುವದು. ಪರಮೇಶ್ವರನು ಪಂಚಭೂತಗಳಿಂದ ಬೇರೆಬೇರೆ ಪ್ರಾಣಿಗಳನ್ನು ಸೃಷ್ಟಿಸಿ ಅವುಗಳಲ್ಲಿ ಪ್ರವೇಶಿಸಿ ಅಭಿಮಾನದಿಂದ ತಾನೇ ಸೃಷ್ಟನಾಗಿರುವೆನೆಂದುಕೊಳ್ಳುತ್ತಾನೆ. ಕರ್ಮಗತಿಯಿಂದ ಬಗೆಬಗೆಯ ಫಲಗಳನ್ನು ಅನುಭವಿಸುತ್ತಾ ಪ್ರಲಯಕಾಲದವರೆಗೂ ಹುಟ್ಟಿಸಾಯುವಂತಿರುತ್ತಾನೆ. ಪ್ರಲಯಕಾಲದಲ್ಲಿ ಪಂಚಭೂತಗಳು ಒಂದರಲ್ಲೊಂದು ಲಯವಾಗಲು ಕೊನೆಗೆ ಪರಮಾತ್ಮಸ್ವರೂಪದಲ್ಲಿಯೇ ಸೇರಿಕೊಳ್ಳುತ್ತಾನೆ. ಹೀಗೆ ಮತ್ತೆ ಮತ್ತೆ ಸೃಷ್ಟಿಸ್ಥಿತಿಲಯಗಳು ಆಗುತ್ತಿರುವದೇ ಮಾಯೆಯು.

ಈ ಮಾಯೆಯನ್ನು ದಾಟುವದಕ್ಕೆ ಶಬ್ದಬ್ರಹ್ಮದಲ್ಲಿಯೂ ಪರಬ್ರಹ್ಮದಲ್ಲಿಯೂ ನಿಷ್ಣಾತನಾಗಿರುವ ಗುರುವಿನ ಬಳಿಗೆ ಅಧಿಕಾರಿಯಾದವನು ಹೋಗಬೇಕು. ಅವನಲ್ಲಿ ಭಾಗವತಧರ್ಮಗಳನ್ನು ಕಲಿತುಕೊಳ್ಳಬೇಕು. ಆ ಧರ್ಮಗಳಿಂದ ಪರಮೇಶ್ವರನ ಭಕ್ತಿಯನ್ನು ಪಡೆದುಕೊಂಡರೆ ಮಾಯೆಯನ್ನು ದಾಟುತ್ತಾನೆ. ಮನಸ್ಸು ಎಲ್ಲೆಲ್ಲಿಯೂ ಅಸಂಗವಾಗಿರುವದು, ಸಾಧುಗಳಲ್ಲಿ ಸಂಗವನ್ನು ಮಾಡುವದು, ದಯೆ, ಮೈತ್ರಿ, ವಿನಯ, ಭೂತದಯೆ, ಶುಚಿತ್ವ, ತಪಸ್ಸು, ತಿತಿಕ್ಷೆ, ಮೌನ, ಅಧ್ಯಯನ, ಋಜುತ್ವ, ಬ್ರಹ್ಮಚರ್ಯೆ, ಅಹಿಂಸೆ, ದ್ವಂದ್ವಗಳನ್ನು ಸಹಿಸಿಕೊಳ್ಳುವದು, ಎಲ್ಲೆಲ್ಲಿಯೂ ಪರಮಾತ್ಮನನ್ನು ಕಾಣುವದು, ಒಂಟಿಯಾಗಿರುವದು, ತನ್ನದೆಂಬ ಮನೆಯಿಲ್ಲದಿರುವದು,

ಶುದ್ಧವಾದ ನಾರುಬಟ್ಟೆಯನ್ನುಡುವದು, ತೃಪ್ತಿ, ಭಾಗವತಶಾಸ್ತ್ರದಲ್ಲಿ ಶ್ರದ್ಧೆ, ಮಿಕ್ಕ ಶಾಸ್ತ್ರಗಳ ಅನಿಂದೆ, ತ್ರಿಕರಣಸಂಯಮ, ಸತ್ಯ, ಶಮದಮಗಳು, ಶ್ರವಣಕೀರ್ತನಾದಿಗಳು, ಭಗವಂತನ ಜನ್ಮಕರ್ಮಗಳನ್ನು ಸ್ಮರಿಸುತ್ತಿರುವದು, ಒಬ್ಬರಿಗೊಬ್ಬರು ಹೇಳುತ್ತಿರುವದು-ಇವೇ ಮುಂತಾದ ರೀತಿಯಿಂದ ಭಗವಂತನ ಚಿಂತನೆಯಿಂದ ಆನಂದದಿಂದ ಕಾಲಹಾಕುತ್ತಿರುವದೇ ಭಾಗವತಧರ್ಮವು. ಇದರಿಂದ ಮಾಯೆಯನ್ನು ದಾಟುವರು ಎಂಬುದು ಅಧ್ಯಾಯದ ಸಾರವು.

★★★★★

# ಜ್ಞಾನೋಪದೇಶ

**1-5-41**

**ವೇ|| ಮತ್ತೂರು ಸುಬ್ಬರಾಯಾವಧಾನಿಗಳವರು**

**ಭಾಗವತದ ಮೂರನೆಯ ಸ್ಕಂಧದ ಐದನೆಯ** ಅಧ್ಯಾಯದಲ್ಲಿ ವಿದುರನು ಮೈತ್ರೇಯರನ್ನು - ಜನರು ಸುಖಕ್ಕಾಗಿಯೇ ಪ್ರಯತ್ನಿಸಿದರೂ ದುಃಖಿಗಳಾಗಿಯೇ ಇರುತ್ತಾರೆ. ಪರಮಾತ್ಮನ ಭಕ್ತಿಯನ್ನು ಹೇಗೆ ಮಾಡಿದರೆ ಆತನ ಅನುಗ್ರಹದಿಂದ ಜ್ಞಾನವನ್ನು ಪಡೆದು ಸುಖಿಸಬಹುದೋ ಅದನ್ನು ಹೇಳಬೇಕು. ಪರಮಾತ್ಮನು ಮಾಡಿದ ಅವತಾರಗಳು, ಆತನ ಲೀಲೆಗಳು, ಆತನು ಜಗತ್ತನ್ನು ಸೃಷ್ಟಿಸಿ ಜೀವರುಗಳಿಗೆ ಅವರವರ ಕರ್ಮವನ್ನು ಗೊತ್ತುಮಾಡುವ ಬಗೆ, ಮತ್ತೆ ಎಲ್ಲವನ್ನೂ ತನ್ನೊಳಗೆ ಅಡಗಿಸಿಕೊಳ್ಳುವ ರೀತಿ ಇವನ್ನೆಲ್ಲ ವಿವರಿಸಬೇಕು - ಎಂದು ವಿದುರನು ಕೇಳಿಕೊಂಡನು. ಆಗ ಮೈತ್ರೇಯರಿಂತೆಂದರು: ಎಲೈ ಸಾಧುವರ್ಯನಾದ ವಿದುರನೆ, ನೀನು ಒಳ್ಳೆಯ ಪ್ರಶ್ನೆಯನ್ನು ಮಾಡಿರುವೆ. ನೀನು ಉತ್ತಮವಂಶಜನು, ಭಗವಂತನಿಗೆ ಮೆಚ್ಚಾದವನು; ಭಗವಂತನು ಪರಂಧಾಮಕ್ಕೆ ಹೋಗುವಾಗ ನಿನಗೆ ಜ್ಞಾನೋಪದೇಶವನ್ನು ಮಾಡಬೇಕೆಂದು ನನಗೆ ಹೇಳಿರುವದೇ ನಿನ್ನ ಯೋಗ್ಯತೆಯನ್ನು ಪ್ರಕಟಗೊಳಿಸುತ್ತದೆ. ಆದ್ದರಿಂದ ನಿನಗೆ ಆ ಭಗವಂತನ ಲೀಲೆಗಳನ್ನು ಹೇಳುವೆನು ಕೇಳು. ಆದಿಯಲ್ಲಿ ಆ ಪರಮಾತ್ಮನೊಬ್ಬನೇ ಇರುತ್ತಿದ್ದನು.

ಆತನ ಸದಸದ್ರೂಪವಾದ ಮಾಯಾಶಕ್ತಿಯು ಆಗ ನಿದ್ರಿಸುತ್ತಿತ್ತು. ಆ ಶಕ್ತಿಯ ದೆಸೆಯಿಂದ ಈ ಜಗತ್ತೆಲ್ಲವನ್ನೂ ಆತನು ಸೃಷ್ಟಿಸಿರುತ್ತಾನೆ. ಸೃಷ್ಟಿಗೆ ಪರಮಾತ್ಮನ ಅಂಶವೆಂಬ ನಿಮಿತ್ತ, ಗುಣಗಳೆಂಬ ಉಪಾದಾನ, ಪ್ರೇರಕವಾದ ಕಾಮ ಇವುಗಳೇ ಕಾರಣವಾಗಿರುತ್ತವೆ. ಮಾಯೆಯಲ್ಲಿ ಆ ಭಗವಂತನು ತನ್ನ ವೀರ್ಯವನ್ನಿಡಲು ಮಹತ್ತು, ಆ ಮಹತ್ತಿನಿಂದ ಅಹಂಕಾರ-ಹೀಗೆ ಉಂಟಾಗಿರುತ್ತವೆ. ಅಹಂಕಾರವು ಸಾತ್ತ್ವಿಕ, ರಾಜಸ, ತಾಮಸ-ಎಂದು ಮೂರು ಬಗೆ. ಸಾತ್ತ್ವಿಕಾಹಂಕಾರದಿಂದ ಮನಸ್ಸೂ ದೇವತೆಗಳೂ ಉಂಟಾದರು; ರಾಜಸದಿಂದ ಜ್ಞಾನೇಂದ್ರಿಯಕರ್ಮೇಂದ್ರಿಯಗಳುಂಟಾದವು; ತಾಮಸಾಹಂಕಾರದಿಂದ ಭೂತಸೂಕ್ಷ್ಮಗಳುಂಟಾದವು. ಸೂಕ್ಷ್ಮಭೂತಗಳಿಂದ ಮಹಾಭೂತಗಳುಂಟಾದವು. ಮಹತ್ತತ್ತ್ವವೇ ಮುಂತಾದವುಗಳ ಅಭಿಮಾನಿದೇವತೆಗಳು ಆ ಪರಮಾತ್ಮನ ಕಲೆಗಳು. ಇವರು ಯಾರೂ ಸ್ವತಂತ್ರರಾಗಿ ಜಗತ್ತನ್ನು ಸೃಷ್ಟಿಮಾಡಲಾರರಾದ್ದರಿಂದ ಆ ಪರಮಾತ್ಮನೇ ಇವುಗಳೊಳಗೆಲ್ಲ ತಾನೇ ಏಕಕಾಲದಲ್ಲಿ ಹೊಕ್ಕು ಸೃಷ್ಟಿಸಿರುತ್ತಾನೆ. ಹೀಗೆ ಎಲ್ಲವೂ ಆ ಪರಮಾತ್ಮನೇ ಆಗಿರುತ್ತಾನೆ.

★★★★★

# ನಿಜವಾದ ಸುಖ

**2-5-1941**

**ವೇ|| ಮತ್ತೂರು ಸುಬ್ಬರಾಯಾವಧಾನಿಗಳು**

**ಮೋಕ್ಷಧರ್ಮದಲ್ಲಿ ಎಂಬತ್ತೆಂಟನೆಯ ಅಧ್ಯಾಯದಲ್ಲಿ** ಹಿಂದೆ ಸಗರನಿಗೆ ಗರುಡನು ಹೇಳಿದ ವಿಷಯವನ್ನೇ ಭೀಷ್ಮರು ಯುಧಿಷ್ಠಿರನಿಗೆ ಹೇಳಿದ್ದೇನೆಂದರೆ - ಮೋಕ್ಷಸುಖವೇ ನಿಜವಾದ ಸುಖವು. ಸಂಸಾರಸಕ್ತರಾದವನಿಗೆ ಇದು ತಿಳಿಯದೆ ಇರುತ್ತದೆ. ಆದ್ದರಿಂದ ವಿವೇಕಿಯಾದವನು ಭೋಗದ ಕುತೂಹಲವನ್ನು ನೀಗಿಕೊಂಡು, ಹೆಂಡಿರುಮಕ್ಕಳನ್ನು ಸರಿಯಾಗಿ ಕಾಪಾಡಿಕೊಂಡು ಬಂದು, ಮಕ್ಕಳು ಪ್ರಾಯಸ್ಥರಾಗಿ ಕುಟುಂಬವನ್ನು

ನೋಡಿಕೊಳ್ಳಲು ಸಮರ್ಥರಾಗುತ್ತಲೂ ಸಂಗಪಾಶವನ್ನು ಕಡಿದುಹಾಕಿ ತಾನು ಮೋಕ್ಷದ ಕಡೆಗೆ ತಿರುಗಬೇಕು. ಸಂಗಪಾಶದಿಂದ ಬಿಡುಗಡೆಯಾದವರು ಯಾವ ಅಂಜಿಕೆಯೂ ಇಲ್ಲದೆ ಸುಖವಾಗಿರುತ್ತಾರೆ; ಸಕ್ತರಾದವರು 'ಅಯ್ಯೋ, ನಾನಿಲ್ಲದಿದ್ದರೆ ಇವರಿಗೇನು ಗತಿ!' ಎಂದುಕೊಂಡು ಸಂಕಟಪಡುತ್ತಾರೆ. ಕರ್ಮಾನುಗುಣವಾಗಿ ಎಲ್ಲರಿಗೂ ಸುಖದುಃಖಗಳು ದೊರಕುವದರಿಂದ ಯಾರಿಗೂ ಯಾರೂ ಹೊಣೆಯಲ್ಲವೆಂದು ತಿಳಿದು ಮೋಕ್ಷದಲ್ಲಿಯೇ ಮನಸ್ಸನ್ನು ಹಾಕಬೇಕು. ಸ್ತ್ರೀಸಂಗ, ಕುಡಕುತನ, ಜೂಜು-ಇವುಗಳಿಗೆ ಮನಸೋಲದೆ, ಮತ್ತೆಮತ್ತೆ ಅದೇ ವಿಷಯಗಳನ್ನುಂಡುಂಡು ಬೇಸತ್ತು, ಎಷ್ಟು ಭೋಗವಿದ್ದರೂ ತನಗೆ ಸ್ವಲ್ಪವೇ ಸಲ್ಲತಕ್ಕದ್ದೆಂಬುದನ್ನರಿತು ಅನ್ನ, ವಸ್ತ್ರ, ಹಾಸಿಗೆ-ಇವುಗಳು ಹೇಗಿದ್ದರೂ ಸಮಬುದ್ಧಿಯಿಂದಿರುತ್ತಾ ಸುಖದುಃಖ, ಲಾಭನಷ್ಟ, ಸೋಲುಗೆಲವು, ಇಚ್ಛಾದ್ವೇಷ- ಇವೆಲ್ಲದರಲ್ಲಿಯೂ ಸಮನಾಗಿರಬೇಕು. ದೇವತೆಗಳು ಋಷಿಗಳು ಮುಂತಾದವರೂ ಈ ಲೋಕವನ್ನು ಬಿಟ್ಟು ತೆರಳಿರುವರೆಂಬುದನ್ನರಿತು ಯಾವದೊಂದೂ ಸ್ಥಿರವಲ್ಲವೆಂಬುದನ್ನು ಮನಗಂಡು ಪರಮಾತ್ಮನಲ್ಲಿಯೇ ಮನಸ್ಸಿಟ್ಟು ಸಂಗಪಾಶವನ್ನು ಕಡಿದುಕೊಳ್ಳಬೇಕು.

★★★★★

## ವ್ಯಾಸಾರ್ಜುನಸಂವಾದ

**3-5-1941**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರು**

**ವಿಷ್ಣುಪುರಾಣದ ಐದನೆಯ ಅಂಶದ ಮೂವತ್ತೆಂಟನೆಯ** ಅಧ್ಯಾಯದಲ್ಲಿ ಗೋಪಿಕಾಸ್ತ್ರೀಯರನ್ನು ಕಳ್ಳರಿಂದ ರಕ್ಷಿಸುವದಕ್ಕೆ ಕೈಯಲ್ಲಾಗದೆ ವಿಷಣ್ಣನಾಗಿ ಹಿಂತಿರುಗಿದ ಅರ್ಜುನನಿಗೂ ವ್ಯಾಸರಿಗೂ ನಡೆದ ಸಂಭಾಷಣೆಯಿದೆ.

ಅರ್ಜುನನು ವ್ಯಾಸರನ್ನು ಕುರಿತು ಇಂತೆಂದನು: ''ಪೂಜ್ಯರೆ, ನನ್ನ ಬಲವೀರ್ಯತೇಜಶ್ರೀಗಳೆಲ್ಲವೂ ಆಗಿದ್ದ ಶ್ರೀಹರಿಯು ನಮ್ಮನ್ನು ಬಿಟ್ಟು ಹೊರಟು ಹೋದನು: ಆತನನ್ನಗಲಿ ನಾವೆಲ್ಲರೂ ಹುಲ್ಲುಬೊಂಬೆಗಳಾಗಿಬಿಟ್ಟೆವು. ನನ್ನ ಶಸ್ತ್ರಾಸ್ತ್ರಗಳಿಗೂ ಗಾಂಡೀವಧನುಸ್ಸಿಗೂ ಸಾರವಾಗಿದ್ದ ಪುರುಷೋತ್ತಮನು ಹೊರಟುಹೋದನು, ಯಾವಾತನ ಬೆಂಬಲದಿಂದ ಭೀಷ್ಮಾದಿಗಳನ್ನು ಸುಖದಿಂದ ಗೆದ್ದೆನೋ ಆತನು ಹೋದಮೇಲೆ ಈ ಭೂಮಂಡಲವೇ ನನಗೆ ಯೌವನವಿಲ್ಲದ ಸಂಪತ್ತಿಲ್ಲದ ಕಾಂತಿಹೀನವಾದ ವಸ್ತುವಾಗಿ ಕಾಣುತ್ತಿರುವದು. ಮೂರು ಲೋಕದಲ್ಲಿಯೂ ಪ್ರಸಿದ್ಧವಾಗಿದ್ದ ನನ್ನ ಗಾಂಡೀವಕ್ಕೆ ದನಕಾಯುವವರ ದೊಣ್ಣೆಗಳಿಂದ ತಿರಸ್ಕಾರವಾಯಿತಲ್ಲ! ನನ್ನನ್ನು ಲೆಕ್ಕಿಸದೆ ಅವರು ಗೋಪಸ್ತ್ರೀಯರನ್ನು ಅಟ್ಟಿಕೊಂಡು ಹೋಗಿಬಿಟ್ಟರಲ್ಲ ! ನಾನು ಈಗ ನಿಸ್ತೇಜವಾಗಿರುವದೇನೂ ಅಚ್ಚರಿಯಲ್ಲ, ಆದರೆ ಇನ್ನೂ ಬದುಕಿರುವೆನೆಂಬುದೊಂದೇ ಅದ್ಭುತವು.

ಹೀಗೆಂದ ಅರ್ಜುನನಿಗೆ ವ್ಯಾಸರು ಸಮಾಧಾನಮಾಡುತ್ತಾ ಹೀಗೆಂದು ನುಡಿದರು: ''ಎಲೈ ಅರ್ಜುನನೆ, ಕಾಲದಿಂದ ಎಲ್ಲವೂ ಮಾರ್ಪಡುತ್ತದೆ. ಆದ್ದರಿಂದ ಇದೆಲ್ಲವೂ ಕಾಲವಶವೆಂದು ತಿಳಿದು ಸಮಾಧಾನವನ್ನು ಹೊಂದು. ಆ ಶ್ರೀಕೃಷ್ಣನೇ ಕಾಲಸ್ವರೂಪಿಯು; ಆತನ ಮಾಹಾತ್ಮ್ಯವು ನೀನು ಹೇಳಿದಂಥದ್ದೇ ಸರಿ. ಆತನು ಹೊರಟುಹೋಗಿರುತ್ತಾನೆ. ಆತನು ತನ್ನ ಇಚ್ಛೆಯಂತೆ ಯಾವಾಗ ಬೇಕೆಂದರೆ ಸೃಷ್ಟಿಸ್ಥಿತಿಪ್ರಲಯವನ್ನು ಮಾಡಬಲ್ಲನಾದ್ದರಿಂದ ಎಲೈ ಪಾರ್ಥನೆ, ನೀನು ಈಗ ಗೋಪಾಲರಿಂದ ಜಿತನಾದೆನೆಂದು ಚಿಂತಿಸಬೇಡ. ಇದೆಲ್ಲವೂ ಕಾಲಗತಿಯೆಂದು ತಿಳಿ. ನೀನು ಭೀಷ್ಮಾದಿಗಳನ್ನು ಗೆದ್ದೆಯಲ್ಲ! ಅದು ಅವರಿಗೆ ತಮಗಿಂತ ಕಡಿಮೆಯಾದವನಿಂದಾದ ಸೋಲಲ್ಲವೆ? ಅದರಂತೆಯೇ ಈಗ ನಿನಗಿಂತಲೂ ಕಡಿಮೆಯಾದ ದಸ್ಯುಗಳಿಂದ ನಿನಗೆ ಸೋಲಾಗಿರುತ್ತದೆ. ಇದೆಲ್ಲ ಆ ಪರಮೇಶ್ವರನ ಲೀಲೆಯೇ. ನಿನಗೆ ಸೋಲಿನ ನಿಮಿತ್ತವಾಗಿರುವ ಈ ಗೋಪಿಕಾಸ್ತ್ರೀಯರ ಚರಿತ್ರೆಯನ್ನು ಕೇಳು. ಹಿಂದಕ್ಕೆ ಅಷ್ಟಾವಕ್ರನೆಂಬ ಋಷಿಯು ನೀರಿನಲ್ಲಿ

ಮುಳುಗಿ ಅನೇಕವರ್ಷಗಳವರೆಗೆ ತಪಸ್ಸುಮಾಡುತ್ತಿದ್ದನು. ಒಮ್ಮೆ ಅಸುರರು ದೇವತೆಗಳನ್ನು ಗೆದ್ದಾಗ ಮೇರುಪರ್ವತದ ತಪ್ಪಲಿನಲ್ಲಿ ದೊಡ್ಡದೊಂದು ಉತ್ಸವವಾಯಿತು; ಆಗ ಅಲ್ಲಿಗೆ ಹೋಗುತ್ತಿದ್ದ ಅಪ್ಸರಸ್ತ್ರೀಯರು ಆ ಋಷಿಯನ್ನು ಕಂಡು ನಮಸ್ಕರಿಸಿ ಸ್ತುತಿಸಿದರು. ಅವರಿಂದ ದೃಷ್ಟನಾದ ಅಷ್ಟಾವಕ್ರನು ಪ್ರಸನ್ನನಾಗಿ ''ನಿಮಗೆ ಏನು ಬೇಕು? ಕೇಳಿಕೊಳ್ಳಿರಿ'' ಎನ್ನಲು ರಂಭಾದ್ಯಪ್ಸರಃಸ್ತ್ರೀಯರು ತಮ್ಮ ಪ್ರಸನ್ನತೆಯೇ ನಮಗೆ ಸಾಕಾಗಿದೆ ಎಂದರು; ಮತ್ತೆ ಕೆಲವರು ಸಾಕ್ಷಾತ್ ಪುರುಷೋತ್ತಮನೇ ನಮಗೆ ಪತಿಯಾಗುವಂತೆ ಅನುಗ್ರಹಿಸು ಎಂದರು. ಹಾಗೇ ಆಗಲೆಂದು ಆ ಮುನಿಯು ನೀರಿನಿಂದ ಏಳಲು ಆತನ ಎಂಟುಬಗೆಯಲ್ಲಿ-ಡೊಂಕಾಗಿದ್ದ ಶರೀರವನ್ನು ಕಂಡು ಗಟ್ಟಿಯಾಗಿ ಅವರು ನಕ್ಕದ್ದರಿಂದ ಕುಪಿತನಾಗಿ ''ನಿಮಗೆ ನಾನು ಕೊಟ್ಟಿರುವ ವರದ ಫಲವಾಗಿ ಪುರುಷೋತ್ತಮನನ್ನು ಪತಿಯಾಗಿ ವರಿಸುವಿರಿ; ಆದರೆ ಮುಂದೆ ದಸ್ಯುಗಳ ಕೈಯನ್ನು ಸೇರುವಿರಿ'' ಎಂದು ಶಾಪವಿತ್ತನು. ಇದನ್ನು ಕೇಳಿ ದಿಗಿಲುಬಿದ್ದ ಆ ಸ್ತ್ರೀಯರು ಆ ಋಷಿಯನ್ನು ಬಹುವಾಗಿ ಬೇಡಿಕೊಳ್ಳಲು ಕೊನೆಗೆ ಆತನು ''ಮತ್ತೂ ಈ ದೇವಲೋಕಕ್ಕೇ ಬರುವಿರಿ'' ಎಂದು ವಿಶಾಪವನ್ನಿತ್ತನು. ಇಗೋ, ಹೀಗೆ ಅಷ್ಟಾವಕ್ರನ ವರದಿಂದ ಗೋಪಿಕಾಸ್ತ್ರೀಯರಾಗಿ ಹುಟ್ಟಿದ್ದ ಆ ಸ್ತ್ರೀಯರು ಈಗ ಶಾಪದ ಫಲವನ್ನನುಭವಿಸಿದರು. ಆದ್ದರಿಂದ ನೀನು ಶೋಕಿಸದಿರು. ಎಲೈ ಅರ್ಜುನನೆ ''ಇನ್ನು ಮೇಲೆ ನೀವೂ ಈ ಲೋಕವನ್ನು ಬಿಡಬೇಕಾದ ಕಾಲವು ಹತ್ತಿರವಾಗುವದು. ಆದ್ದರಿಂದ ಹುಟ್ಟಿದವನಿಗೆ ಸಾವೂ ಏರಿದವನಿಗೆ ಇಳಿತವೂ ಕೂಡಿದ್ದಕ್ಕೆ ಅಗಲುವಿಕೆಯೂ ಸ್ವಭಾವವೆಂದರಿತು ಮುಂದೆ ನೀವುಗಳೂ ಎಲ್ಲವನ್ನೂ ಬಿಟ್ಟು ತಪಸ್ಸಿಗಾಗಿ ವನಕ್ಕೆ ತೆರಳಿರಿ'' ಎಂದು ಸಮಾಧಾನಗೊಳಿಸಿದನು. ಅರ್ಜುನನ ಮುಖದಿಂದ ಈ ವಾರ್ತೆಯನ್ನು ಕೇಳಿದ ಪಾಂಡವರು ಪರೀಕ್ಷಿತನನ್ನು ರಾಜ್ಯದಲ್ಲಿ ಅಭಿಷೇಕಮಾಡಿ ತಾವೂ ತಪಸ್ಸಿಗೆ ತೆರಳಿದರು.

★★★★★

# ಶಿವಸ್ವರೂಪ

**4-5-1941**

**- ಬ್ರ|| ಶ್ರೀ|| ವಿಠ್ಠಲಶಾಸ್ತ್ರಿಗಳವರು**

**ಸೂತಸಂಹಿತೆಯ ಯಜ್ಞವೈಭವಖಂಡದ ಇಪ್ಪತ್ತೇಳನೆಯ ಅಧ್ಯಾಯದಲ್ಲಿ** ಸೂತರಿಂದ ವರ್ಣಿತವಾಗಿರುವ ಶಿವಸ್ವರೂಪವು ಹೀಗಿದೆ - ''ಯಾವ ಪರಶಿವನ ಸತ್ತೆಯಿಂದ ಎಲ್ಲವೂ ಇರುವದೋ ಯಾವಾತನ ಚಿತ್ತಿನಬೆಳಕಿನಿಂದ ಎಲ್ಲವೂ ಅರಿಯುವದೋ, ಯಾವಾತನ ಆನಂದದ ಸೋಂಕಿನಿಂದ ಎಲ್ಲವೂ ಪ್ರೀತ್ಯಾಸ್ಪದವಾಗಿರುವದೋ, ಆ ಪರಸ್ವರೂಪವನ್ನು ತಿಳಿಸುವೆನು. ಭೌತಿಕವಸ್ತುಗಳು, ಪ್ರಾಣಿಗಳು, ಜೀವಾತ್ಮನು, ಸಮಷ್ಟಿಜೀವನು, ಬ್ರಹ್ಮ, ವಿಷ್ಣು, ರುದ್ರ, ಈಶ್ವರನು- ಇವುಗಳು ಸತ್ಯಜ್ಞಾನಾನಂದದ ತಿರುಳು ಹೆಚ್ಚುಹೆಚ್ಚು ವ್ಯಕ್ತವಾಗುವದರಿಂದ ಒಂದಕ್ಕಿಂತ ಒಂದು ಹೆಚ್ಚೆನಿಸಿರುತ್ತದೆ. ಇವೆಲ್ಲಕ್ಕಿಂತ ಸತ್ಯಜ್ಞಾನಾನಂದ ರೂಪವಾದ ಅದ್ವಯತತ್ತ್ವವೇ ಹೆಚ್ಚಿನದು, ಅದಕ್ಕಿಂತ ಮಿಗಿಲಾದದ್ದು ಯಾವದೂ ಇಲ್ಲ. ಮನುಷ್ಯನ ಆನಂದದಿಂದ ಹಿಡಿದು ಮನುಷ್ಯ ಗಂಧರ್ವಾದಿಗಳ ಆನಂದವು ಬ್ರಹ್ಮಾನಂದ, ವಿಷ್ಣುವಿನ ಆನಂದ, ರುದ್ರಾನಂದ, ಕಾರಣತ್ವೋಪಲಕ್ಷಿತ ಶಿವನ ಆನಂದ-ಇವುಗಳು ಕ್ರಮವಾಗಿ ತಾರತಮ್ಯದಿಂದ ಒಂದಕ್ಕಿಂತ ಒಂದು ಹೆಚ್ಚಾಗಿರುತ್ತವೆ ಆದರೆ ಸತ್ಯ ಚಿನ್ಮಾತ್ರರೂಪನಾದ ಪರಮಾತ್ಮನ ಸ್ವರೂಪವಾಗಿರುವ ಆನಂದವು ನಿರತಿಶಯವಾಗಿರುತ್ತದೆ. ಹೀಗೆಯೇ ಜ್ಞಾನದ ವಿಷಯಕ್ಕೂ ಅರಿಯಬೇಕು.

ಶಿವನು ಒಬ್ಬನೇ ಆಗಿದ್ದರೂ ಒಂದೇ ಮರವು ಬುಡ, ಕೊಂಬೆ, ಮುಂತಾದ ವಿಭಾಗಗಳಿಂದ ಬೇರೆಬೇರೆಯಾಗಿ ಹೆಚ್ಚುಕಡಿಮೆಯೆನಿಸಿಕೊಳ್ಳುವಂತೆ ರುದ್ರಾದಿಭೇದದಿಂದ ಹೆಚ್ಚು ಕಡಿಮೆಯೆನಿಸಿಕೊಳ್ಳುತ್ತಾನೆ. ಈ ದೃಷ್ಟಿಯಿಂದಲೇ ರುದ್ರನು ವಿಶ್ವಾಧಿಕನೆಂದು ಶ್ರುತಿಯಲ್ಲಿ ಹೇಳಿರುತ್ತದೆ. ಪ್ರಮಾಣದೃಷ್ಟಿಯಿಂದ ವಸ್ತುವು ಒಂದೇ ಆಗಿ ವ್ಯವಹಾರದಿಂದ ಹೀಗೆ ತಾರತಮ್ಯವಾಗಿರುವದೆಂದು ತಿಳಿಯದೆ ಜನರು ಇದು ಹೆಚ್ಚು, ಅದು ಹೆಚ್ಚು ಎಂದು ವಾದಿಸುತ್ತಿರುವರು.

ಆದ್ದರಿಂದ ಸರ್ವವನ್ನೂ ಕೈಬಿಟ್ಟು ಕಾರಣಶಿವನೊಬ್ಬನನ್ನೇ ಯಾವಾಗಲೂ ಧ್ಯಾನಮಾಡಬೇಕು; ಮರದಬುಡಕ್ಕೆ ನೀರು ಹಾಕಿದರೆ ಕೊಂಬೆಗಳೂ ಪುಷ್ಟಿಯನ್ನು ಪಡೆಯುವಂತೆ ಶಿವನ ಅರ್ಚನೆಯಿಂದ ಎಲ್ಲಾ ದೇವತೆಗಳೂ ತೃಪ್ತರಾಗುತ್ತಾರೆ. ಆ ಶಿವನ ನಿರ್ವಿಕಲ್ಪಕತತ್ತ್ವವನ್ನು ಅರಿತುಕೊಂಡವರಂತೂ ಜೀವನ್ಮುಕ್ತರೇ ಆಗುತ್ತಾರೆ.

ಪರಮಾತ್ಮನಾದ ಶಿವನಿಗೆ ನಾಮರೂಪಗಳು ಯಾವವೂ ಇಲ್ಲವಾದರೂ ಮಾಯೆಯಿಂದ ಆತನಿಗೆ ನಾಮರೂಪಗಳು ಕಲ್ಪಿತವಾಗಿರುತ್ತವೆ: ಈ ದೃಷ್ಟಿಯಿಂದ ನೋಡಿದಾಗ ಮುಖ್ಯ ವೃತ್ತಿಯಿಂದ ಶಿವರುದ್ರಾದಿನಾಮಗಳೂ ಯೋಗವೃತ್ತಿಯಿಂದ ವಿಷ್ಣ್ವಾದಿನಾಮಗಳೂ ಆ ಶಿವನಿಗೆ ಹೊಂದುತ್ತವೆ. ಪರತತ್ತ್ವದ ಜ್ಞಾನವು ಆತನ ಪ್ರಸಾದವನ್ನು ಪಡೆಯುವದರಿಂದಲೇ ಉಂಟಾಗುತ್ತದೆಯಾದ್ದರಿಂದ ಶಿವನ ಮೂರ್ತಿಯ ಧ್ಯಾನಪೂಜೆಗಳಿಂದ ಆತನ ನಾಮಸ್ಮರಣೆಯಂತೆ ರೂಪಧ್ಯಾನವನ್ನೂ ಭಕ್ತಿಯಿಂದ ಮಾಡಬೇಕು''.

★★★★★

## ನಾರದ ಜೀವಸಂವಾದ

**5-5-1941**

**ಬ್ರ|| ಶ್ರೀ|| ಅನಂತಮೂರ್ತಿಶಾಸ್ತ್ರಿಗಳವರು**

**ಭಾಗವತದಲ್ಲಿ ಆರನೆಯ ಸ್ಕಂಧದಲ್ಲಿ ಹದಿನಾರನೆಯ ಅಧ್ಯಾಯದಲ್ಲಿ** ಚಿತ್ರಕೇತುವೆಂಬ ಅರಸನಿಗೆ ಅಂಗಿರಸ್ಸೆಂಬ ಋಷಿಯ ಅನುಗ್ರಹದಿಂದ ಕೃತದ್ಯುತಿಯೆಂಬ ಪತ್ನಿಯಲ್ಲಿ ಒಬ್ಬ ಮಗನು ಹುಟ್ಟಿದನು. ಕೆಲವು ದಿನಗಳ ಮೇಲೆ ಆ ರಾಣಿಯ ಸವತಿಯರಾದ ಅರಸಿಯರು ದ್ವೇಷದಿಂದ ಆ ಮಗುವಿಗೆ ರಹಸ್ಯವಾಗಿ ವಿಷವನ್ನುಣ್ಣಿಸಿದ್ದರಿಂದ ಮಗು ಸತ್ತುಹೋಯಿತು. ರಾಜನೂ ರಾಣಿಯೂ ಅತ್ಯಂತದುಃಖದಿಂದ ಅಳುತ್ತಿರುವಲ್ಲಿ ಮತ್ತೆ ನಾರದನೂ ಅಂಗಿರಸ್ಸೂ

ಅಲ್ಲಿಗೆ ಬಂದು ಅವನಿಗೆ ಸಮಾಧಾನಮಾಡಿದರು. ನಾರದರು ಸತ್ತಿದ್ದ ಮಗುವಿನ ಜೀವವನ್ನು ತಮ್ಮ ತಪೋಮಹಿಮೆಯಿಂದ ಎಬ್ಬಿಸಿ ''ಎಲೈ ಜೀವಾತ್ಮನೆ ಏಳು, ನಿನ್ನ ತಾಯಿಯೂ ತಂದೆಯೂ ಸ್ನೇಹಿತರೂ ನೆಂಟರೂ ನಿನಗಾಗಿ ಬಹುಸಂಕಟದಿಂದ ಅಳುತ್ತಿದ್ದಾರೆ. ಆದ್ದರಿಂದ ನಿನ್ನ ಶರೀರವನ್ನು ಮತ್ತೆ ಹೊಕ್ಕು ತಂದೆಯು ಕೊಡುವ ಭೋಗಗಳನ್ನು ಅನುಭವಿಸು, ಸಿಂಹಾಸನದಲ್ಲಿ ಮಂಡಿಸು'' ಎಂದು ಹೇಳಲು ಆ ಜೀವನು ''ಅಯ್ಯ, ಇವರು ನನಗೆ ಯಾವ ಜನ್ಮದಲ್ಲಿ ತಂದೆತಾಯಿಗಳಾಗಿದ್ದರು? ನಾನು ನನ್ನ ಕರ್ಮಗಳಿಂದ ದೇವತೆಗಳು ಪ್ರಾಣಿಗಳು ಮನುಷ್ಯರು– ಮುಂತಾದವರ ಜನ್ಮಗಳಲ್ಲೆಲ್ಲ ತೊಳಲುತ್ತಾ ಇರುತ್ತೇನೆ. ಎಲ್ಲರೂ ಎಲ್ಲರಿಗೂ ಕ್ರಮಕ್ರಮವಾಗಿ ಬಂಧು, ಜಾತಿ, ಅರಿ, ಮಧ್ಯಸ್ಥ, ಮಿತ್ರ, ಉದಾಸೀನ ದ್ವೇಷಿ– ಎಂಬ ಬೇರೆಬೇರೆ ಸಂಬಂಧವನ್ನು ಪಡೆಯುತ್ತಿರುವರು. ಚಿನ್ನವೇ ಮುಂತಾದ ಮಾರಾಟದ ವಸ್ತುಗಳು ಒಬ್ಬರಿಂದೊಬ್ಬರ ಕೈಗೆ ಹೋಗುತ್ತಿರುವಂತೆ ಜೀವನು ಒಬ್ಬರಿಂದೊಬ್ಬರನ್ನು ಸೇರುತ್ತಿರುತ್ತಾನೆ. ಯಾವನಿಗೆ ಯಾವದರ ಸಂಬಂಧವು ಎಷ್ಟು ಕಾಲದವರೆಗೆ ಇರುವದೋ ಅಲ್ಲಿಯವರೆಗೇ ಅದು ಅವನದೆನಿಸುತ್ತದೆ. ನಿಜವೇನೆಂದರೆ ಈ ಆತ್ಮನು ನಿತ್ಯನೂ ಅವ್ಯಯನೂ ಸೂಕ್ಷ್ಮನೂ ಸರ್ವಕ್ಕೂ ಆಶ್ರಯನೂ ಆಗಿದ್ದುಕೊಂಡು ತನ್ನ ಮಾಯೆಯ ಗುಣಗಳಿಂದ ಎಲ್ಲವನ್ನೂ ಸೃಷ್ಟಿಸುತ್ತಿರುತ್ತಾನೆ. ಈತನಿಗೆ ಯಾರೊಬ್ಬರೂ ಪ್ರಿಯರಲ್ಲ. ಯಾರೊಬ್ಬರೂ ಅಪ್ರಿಯರಲ್ಲ; ಯಾರೊಬ್ಬರ ಗುಣವನ್ನಾಗಲಿ ದೋಷವನ್ನಾಗಲಿ ಕ್ರಿಯಾಫಲವನ್ನಾಗಲಿ ತಾನು ಸ್ವೀಕರಿಸದೆ ಉದಾಸೀನನಾಗಿ ಎಲ್ಲವನ್ನೂ ನೋಡುತ್ತಿರುತ್ತಾನೆ'' ಎಂದು ಹೇಳಿ ಕೂಡಲೆ ಹೊರಟುಹೋದನು. ಇದನ್ನು ಕೇಳಿ ಆಶ್ಚರ್ಯದಿಂದ ಅವನ ಜ್ಞಾತಿಗಳು ಶೋಕವನ್ನು ಬಿಟ್ಟು ಮಗುವಿಗೆ ಉತ್ತರಕ್ರಿಯೆಗಳನ್ನು ನಡೆಯಿಸಿದರು. ಮಗುವನ್ನು ಕೊಂದಿದ್ದ ಸ್ತ್ರೀಯರು ನಾಚಿಕೆಯಿಂದ ತಮ್ಮ ಪಾಪಕ್ಕೆ ಬ್ರಾಹ್ಮಣರು ವಿಧಿಸಿದ ಪ್ರಾಯಶ್ಚಿತ್ತವನ್ನು ಮಾಡಿಕೊಂಡರು.

ಆ ಚಿತ್ರಕೇತುವು ನಾರದರ ಮತ್ತು ಅಂಗಿರಸ್ಸುಗಳ ಉಪದೇಶದಿಂದ ವೈರಾಗ್ಯವನ್ನು ಹೊಂದಿ ಯಮುನಾನದಿಯಲ್ಲಿ ಸ್ನಾನಮಾಡಿದ ಬಳಿಕ ಬ್ರಹ್ಮಪುತ್ರರಾದ ನಾರದರು ಅವನಿಗೆ ಈ ಸ್ತೋತ್ರವನ್ನು ಉಪದೇಶಮಾಡಿದರು:

‘‘ಭಗವಂತನಾದ ವಾಸುದೇವನೆ, ನಿನಗೆ ನಮಸ್ಕಾರ; ನಿನ್ನನ್ನು ನಾವು ಧ್ಯಾನಮಾಡುತ್ತಿರುವೆವು. ಪ್ರದ್ಯುಮ್ನನೂ ಅನಿರುದ್ಧನೂ ಸಂಕರ್ಷಣನೂ ಆದ ನಿನಗೆ ನಮಸ್ಕಾರ. ವಿಜ್ಞಾನಮಾತ್ರನೆ, ಪರಮಾನಂದಮೂರ್ತಿಯೆ, ಆತ್ಮಾರಾಮನೆ, ಶಾಂತನೆ, ದ್ವೈತದೃಷ್ಟಿಯಿಲ್ಲದಾತನೆ, ಆತ್ಮಾನಂದದ ಅನುಭವದಿಂದಲೇ ಶಕ್ತಿಯೆಂಬ ಅಲೆಯನ್ನು ಬಿಟ್ಟವನೆ, ಇಂದ್ರಿಯಗಳನ್ನು ಜಯಿಸಿದಾತನೆ, ವಿಶ್ವಮೂರ್ತಿಯೆ, ನಿನಗೆ ನಮಸ್ಕಾರ! ಮನಸ್ಸಿನೊಡಗೂಡಿದ ವಾಕ್ಕು ಕೂಡ ಸುಮ್ಮನಾಗಲು ಯಾವಾತನು ಚಿನ್ಮಾತ್ರನಾಗಿ ನಾಮರೂಪ ರಹಿತನಾಗಿ ಸದಸತ್ತುಗಳನ್ನು ದಾಟಿದವನಾಗಿರುವನೋ ಆತನಿಗೆ ನಮಸ್ಕಾರ! ಮಣ್ಣಿನಲ್ಲಿ ಗಡಿಗೆಮಡಕೆ ಮುಂತಾದವುಗಳಂತೆ ಯಾವಾತನಲ್ಲಿಯೇ ಎಲ್ಲವೂ ಇರುವದೋ, ಯಾವಾತನಲ್ಲಿಯೇ ಲಯವಾಗುವದೋ ಯಾವಾತನಿಂದಲೇ ಬಂದಿರುವದೋ ಆ ಬ್ರಹ್ಮವಾದ ನಿನಗೆ ನಮಸ್ಕಾರ! ಮನಸ್ಸು, ಬುದ್ಧಿ, ಇಂದ್ರಿಯ, ಪ್ರಾಣ–ಇವು ಯಾವವೂ ಯಾವನನ್ನು ಸೋಂಕಲರಿಯವೋ ಎಲ್ಲವನ್ನೂ ಆಕಾಶದಂತೆ ವ್ಯಾಪಿಸಿರುವ ಆ ನಿನಗೆ ನಮಸ್ಕರಿಸುತ್ತೇನೆ. ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ–ಎಂಬಿವೆಲ್ಲವೂ ಯಾವಾತನ ಅಂಶದಿಂದ ಪ್ರೇರಿತವಾಗಿ ತಮ್ಮ ತಮ್ಮ ಕರ್ಮಗಳಲ್ಲಿ ತೊಡಗುತ್ತಿರುವವೋ, ಮಿಕ್ಕವೇಳೆಗಳಲ್ಲಿ ತೊಡಗದೆ ಇರುವವೋ, ಯಾವಾತನು ಆಯಾ ಸ್ಥಾನಗಳಿಂದ ಆಯಾ ಹೆಸರನ್ನು ಪಡೆಯುತ್ತಿರುವನೋ ಆ ಮಹಾಪುರುಷನೂ ಮಹಾನುಭಾವನೂ ಮಹಾವಿಭೂತಿ ಪತಿಯೂ ಸಕಲಸಾತ್ತ್ವಿಕಶ್ರೇಷ್ಠರಿಂದ ನಮಸ್ಕರಿಸಲ್ಪಟ್ಟ ಚರಣಕಮಲವುಳ್ಳಾತನೂ ಆದ ಪರಮೇಷ್ಠಿಯೇ, ನಿನಗೆ ನಮಸ್ಕಾರ!’’

ಈ ಉಪದೇಶವನ್ನು ಪಡೆದು ಚಿತ್ರಕೇತುವು ಭಗವಂತನನ್ನು ಧ್ಯಾನಿಸಿ ಪರಮಾತ್ಮನ ಸಾಕ್ಷಾತ್ಕಾರವನ್ನು ಹೊಂದಿ ಬಗೆಬಗೆಯಾಗಿ ಆತನನ್ನು ಸ್ತುತಿಸಿದನು. ಆಗ ಭಗವಂತನು ಅತ್ಯಂತವಾಗಿ ಸಂತೋಷಪಟ್ಟು ಆ ರಾಜನಿಗೆ ತನ್ನ ನಿರ್ಗುಣ ಸ್ವರೂಪದ ತತ್ತ್ವವನ್ನು ಹೀಗೆಂದು ಉಪದೇಶಿಸಿದನು. ‘‘ಎಲೈ ರಾಜನೆ, ನಾನೇ ಸರ್ವಭೂತಗಳೂ ಆಗಿರುತ್ತೇನೆ. ಶಬ್ದಬ್ರಹ್ಮವೂ ಪರಬ್ರಹ್ಮವೂ ಎರಡೂ ನನ್ನ ಶರೀರಗಳಾಗಿರುತ್ತವೆ, ನನ್ನ ಸ್ವರೂಪನಾದ ಆತ್ಮನು ಲೋಕದಲ್ಲಿ

ವ್ಯಾಪಿಸಿರುತ್ತದೆ. ಲೋಕವು ನನ್ನಲ್ಲಿ ಸೇರಿಕೊಂಡಿರುತ್ತವೆ; ಈ ಎರಡನ್ನೂ ನಾನೇ ವ್ಯಾಪಿಸಿಕೊಂಡಿರುತ್ತೇನೆ, ನನ್ನಲ್ಲಿಯೇ ಎರಡೂ ತೋರುತ್ತಿರುವದು. ಮಲಗಿರುವ ಮನುಷ್ಯನು ಹೇಗೆ ನಿದ್ರಿಸಿರುವಾಗಲೇ ಜಗತ್ತೆಲ್ಲವನ್ನೂ ತನ್ನೊಳಗೆ ಕಂಡಂತೆಯೂ ಕನಸುಕಂಡು ಎಚ್ಚತ್ತಂತೆಯೂ ತಾನು ಆ ಜಗತ್ತಿನಲ್ಲಿ ಒಂದು ಕಡೆಯಲ್ಲಿರುವಂತೆಯೂ ಭಾವಿಸುತ್ತಾನೋ ಹಾಗೆಯೇ ಎಚ್ಚರಕನಸುನಿದ್ರೆಗಳೆಲ್ಲವೂ ಮಾಯಾಮಾತ್ರವೆಂದು ತಿಳಿದು ಎಲ್ಲವನ್ನೂ ನೋಡುತ್ತಿರುವ ಆ ಪರಮಾತ್ಮನನ್ನು ನೆನೆಸಿಕೊಳ್ಳಬೇಕು. ನಿದ್ರಿಸುತ್ತಿರುವ ಪುರುಷನು ಯಾವದರ ಬಲದಿಂದ ತನ್ನ ನಿದ್ರೆಯನ್ನೂ ಸುಖವನ್ನೂ ಅರಿಯುತ್ತಿರುವನೋ ಆ ನಿರ್ಗುಣಬ್ರಹ್ಮವಾದ ಆತ್ಮನೇ ನಾನೆಂದು ತಿಳಿ. ಎಚ್ಚರವನ್ನೂ ನಿದ್ರೆಯನ್ನೂ ನೆನೆಸಿಕೊಂಡಾಗ ಅವಕ್ಕಿಂತ ಯಾವದು ಬೇರೆಯಾಗಿರುವದೋ ಆ ಜ್ಞಾನವೇ ಪರಬ್ರಹ್ಮವು. ನನಗಿಂತ ತಾನು ಬೇರೆಯೆಂದು ವಿಸ್ಮೃತಿಯಿಂದ ಮನುಷ್ಯನು ಭಾವಿಸುತ್ತಿರುವದೇ ಸಂಸಾರಕ್ಕೆ ಕಾರಣವಾಗಿರುತ್ತದೆ. ಮನುಷ್ಯಜನ್ಮವನ್ನು ಹೊಂದಿಯೂ ಯಾವನು ಆತ್ಮಜ್ಞಾನವನ್ನು ಹೊಂದುವದಿಲ್ಲವೋ ಅವನಿಗೆ ಎಲ್ಲಿಯೂ ಶಾಂತಿಯು ದೊರಕದು. ಮನುಷ್ಯರಿಗೆ ಕರ್ಮಗಳಿಂದ ಶ್ರಮವೂ ಅನಿಷ್ಟವಾದ ಫಲವೂ ಆಗುತ್ತಿರುವವೆಂಬುದನ್ನೂ ಯಾವಕರ್ಮವೂ ಇಲ್ಲದಿರುವದೇ ಅಭಯವೆಂಬುದನ್ನೂ ತಿಳಿದು ಜಾಣನಾದವನು ಸಂಕಲ್ಪವನ್ನು ತ್ಯಾಗಮಾಡಬೇಕು. ಆದ್ದರಿಂದ ಅವಸ್ಥಾತ್ರಯವನ್ನು ಮೀರಿರುವ ಪರಾತ್ಮನನ್ನು ತಿಳಿದುಕೊಳ್ಳುವದೇ ಪರಮಪುರುಷಾರ್ಥವೆಂದು ತಿಳಿಯಬೇಕು. ಇದನ್ನು ನೀನು ಮನಸ್ಸಿನಲ್ಲಿಟ್ಟುಕೊಂಡರೆ ಬೇಗನೆ ಸಿದ್ಧನಾಗುವೆ'' ಹೀಗೆಂದು ಉಪದೇಶಿಸಿ ಭಗವಂತನು ಅಂತರ್ಧಾನವಾದನು.

★★★★★

# ಕಲಿಮಾಹಾತ್ಮ್ಯ

**6-5-1941**

**ಬ್ರ|| ಶ್ರೀ|| ಎಸ್. ವಿಠ್ಠಲಶಾಸ್ತ್ರಿಗಳವರು**

ವಿಷ್ಣುಪುರಾಣದ ಆರನೆಯ ಅಂಶದಲ್ಲಿ ಎರಡನೆಯ ಅಧ್ಯಾಯದಲ್ಲಿ ಕಲಿಮಾಹಾತ್ಮ್ಯವನ್ನು ವರ್ಣಿಸಿರುತ್ತದೆ - ಯಾವ ಕಾಲದಲ್ಲಿ ಸ್ವಲ್ಪ ಧರ್ಮದಿಂದಲೇ ಬಹಳ ಪುಣ್ಯವು ಸಿಕ್ಕುತ್ತದೆ?- ಎಂಬುದನ್ನು ಕುರಿತು ತಮಗೆ ಉಂಟಾದ ಸಂಶಯವನ್ನು ಬಗೆಹರಿಸಿಕೊಳ್ಳುವದಕ್ಕಾಗಿ ಒಮ್ಮೆ ಋಷಿಗಳೆಲ್ಲರೂ ವೇದವ್ಯಾಸರ ಬಳಿಗೆ ಬಂದರು. ವ್ಯಾಸರು ಗಂಗಾನದಿಯಲ್ಲಿ ಸ್ನಾನಮಾಡುತ್ತಿದ್ದರು; ಆದ್ದರಿಂದ ಅವರ ಸ್ನಾನವು ಮುಗಿಯುವವರೆಗೂ ಋಷಿಗಳು ಕಾದುಕೊಂಡಿದ್ದರು. ಇಷ್ಟರಲ್ಲಿ ವ್ಯಾಸರು ನೀರಿನಲ್ಲಿ ಮುಳುಗುತ್ತಲೂ ಏಳುತ್ತಲೂ ''ಕಲಿಯು ಉತ್ತಮವಾದದ್ದು, ಶೂದ್ರನು ಧನ್ಯನು, ಸ್ತ್ರೀಯರು ಧನ್ಯರು''ಎಂದು ಮತ್ತೆ ಮತ್ತೆ ಹೇಳಿಕೊಂಡರು. ಆಮೇಲೆ ಅವರು ಮೇಲಕ್ಕೆದ್ದು ಆಹ್ನಿಕವನ್ನು ಮಾಡಿದಮೇಲೆ ಎಲ್ಲಾ ಋಷಿಗಳೂ ಅವರ ಹತ್ತಿರಕ್ಕೆ ಬಂದರು. ಆಗ ವ್ಯಾಸರು ''ನೀವೆಲ್ಲರೂ ಯಾವ ಕಾರಣದಿಂದ ಒಟ್ಟಿಗೆ ಬಂದಿರುವಿರಿ?'' ಎಂದು ಕೇಳಲು ನಾವು ನಮ್ಮಲ್ಲಿ ಉಂಟಾಗಿದ್ದ ಸಂಶಯವನ್ನು ಪರಿಹರಿಸಿಕೊಳ್ಳುವದಕ್ಕಾಗಿ ನಿಮ್ಮಲ್ಲಿಗೆ ಬಂದೆವು. ಆದರೆ ಆದಂತಿರಲಿ. ಈ ನೀವು ಸ್ನಾನಮಾಡುವಾಗ 'ಕಲಿಯು ಸಾಧುವಾದದ್ದು, ಶೂದ್ರರೂ ಸ್ತ್ರೀಯರೂ ಧನ್ಯರು'-ಎಂದು ಮತ್ತೆಮತ್ತೆ ಹೇಳಿದಿರಲ್ಲ, ಅದರ ಅಭಿಪ್ರಾಯವನ್ನು ಮೊದಲು ದಯವಿಟ್ಟು ತಿಳಿಸಬೇಕು; ಆ ಮೇಲೆ ನಮ್ಮ ಸಂಶಯವನ್ನು ಕುರಿತು ಮಾತಾಡೋಣ'' ಎಂದರು.

ಆಗ ವ್ಯಾಸರು ನಕ್ಕು ''ಎಲೈ ಮುನಿಶ್ರೇಷ್ಠರೆ, ಕೇಳಿರಿ. ಕೃತಯುಗದಲ್ಲಿ ಹತ್ತುವರ್ಷ, ತ್ರೇತೆಯಲ್ಲಿ ಒಂದುವರ್ಷ, ದ್ವಾಪರದಲ್ಲಿ ಒಂದು ತಿಂಗಳಲ್ಲಿ ಮಾಡಿದ ಪುಣ್ಯವು ಕಲಿಯುಗಗಲ್ಲಿ ಒಂದೇ ದಿವಸ ಮಾಡಿದ ಕರ್ಮಕ್ಕೆ ದೊರೆಯುವದು. ಆದ್ದರಿಂದ ಕಲಿಯು ಸಾಧುವೆಂದು ನಾನು ಹೇಳಿದೆನು.

ಕೃತದಲ್ಲಿ ಧ್ಯಾನದಿಂದ, ತ್ರೇತೆಯಲ್ಲಿ ಯಜ್ಞದಿಂದ, ದ್ವಾಪರದಲ್ಲಿ ಅರ್ಚನೆಯಿಂದ ಯಾವ ಫಲವು ಉಂಟಾಗುವದೋ ಅದೇ ಫಲವು ಕಲಿಯಲ್ಲಿ ಕೇಶವನ ಸತ್ಕೀರ್ತನೆಯಿಂದಲೇ ದೊರೆಯುವದು. ಆದ್ದರಿಂದ ಕಲಿಯು ಶ್ರೇಷ್ಠಯುಗವು. ಇನ್ನು ದ್ವಿಜರಿಗೆ ವೇದಾಧ್ಯಯನ, ವ್ರತಪರಿಪಾಲನೆ, ಸ್ವಧರ್ಮದಿಂದ ಪಡೆದ ಧನದಿಂದ ಯಜ್ಞವನ್ನು ಮಾಡುವದು, ವೃಥಾಲಾಪಾದಿಗಳನ್ನು ಬಿಟ್ಟು ಇಂದ್ರಿಯಸಂಯಮವನ್ನು ಮಾಡುವದು-ಮುಂತಾದ ಕಷ್ಟತರವಾದ ಹೊಣೆಗಾರಿಕೆಯಿರುತ್ತದೆ. ಆದರೆ ಪಾಕಯಜ್ಞಕ್ಕೆ ಅಧಿಕಾರಿಯಾದ ಶೂದ್ರನು ಈ ಯಾವ ಕ್ಲೇಶವೂ ಇಲ್ಲದೆ ದ್ವಿಜರ ಶುಶ್ರೂಷೆಯಿಂದಲೇ ಪರಲೋಕವನ್ನು ಗೆದ್ದುಕೊಳ್ಳುತ್ತಾನಾದ್ದರಿಂದ ಅವನೇ ಧನ್ಯನು- ಎಂದು ಹೇಳಿದೆನು. ಇದೇ ರೀತಿಯಲ್ಲಿ ಗಂಡಸರಿಗೆ ಇರುವ ಹೊಣೆಗಾರಿಕೆಯೂ ಕ್ಲೇಶವೂ ಇಲ್ಲದೆಯೇ ಸ್ತ್ರೀಯರು ಪತಿಶುಶ್ರೂಷೆಯಿಂದಲೇ ಆ ಗಂಡಸರು ಪುಣ್ಯದಿಂದ ಪಡೆಯುವ ಗತಿಯನ್ನೇ ಪಡೆಯಬಹುದು. ಆದ್ದರಿಂದ 'ಹೆಂಗಸರು ಧನ್ಯರು' ಎಂದೆನು. ಇನ್ನೇನಾದರೂ ಕೇಳುವದಿದ್ದರೆ ಕೇಳಿರಿ'' ಎಂದರು.

ಆಗ ಋಷಿಗಳು ತಮ್ಮ ಸಂದೇಹವನ್ನೆಲ್ಲ ಮೊದಲೇ ದಿವ್ಯಚಕ್ಷುವಿನಿಂದ ತಿಳಿದು ಬಗೆಹರಿಸಿದ ವ್ಯಾಸರನ್ನು ಸಂಪೂಜಿಸಿ ಸಂತುಷ್ಟರಾಗಿ ಅವರ ಅಪ್ಪಣೆಯನ್ನು ಪಡೆದು ಹೊರಟುಹೋದರು.

★★★★★

# ಮೂರು ಬಗೆಯ ಅಹಂಕಾರ

**7-5-1941**

**ಬ್ರ॥ ಶ್ರೀ॥ ಪಂಡಿತಪ್ರವರ ಎಚ್. ಅನಂತಮೂರ್ತಿಶಾಸ್ತ್ರಿಗಳು**

ವಾಸಿಷ್ಠರಾಮಾಯಣದ ಉಪಶಮಪ್ರಕರಣದಲ್ಲಿ ಎಪ್ಪತ್ತುಮೂರನೆಯ ಸರ್ಗದಲ್ಲಿ ವಸಿಷ್ಠರು ಮೂರು ಬಗೆಯ ಅಹಂಕಾರವನ್ನು ಉಪದೇಶ

ಮಾಡಿರುತ್ತಾರೆ. ''ನಾನೇ ಸಕಲ ಜಗತ್ತೂ, ನಾನೆಂದರೆ ಆತ್ಮನೇ; ನನಗಿಂತ ಎರಡನೆಯದು ಯಾವದೂ ಇಲ್ಲವೇ ಇಲ್ಲ'' ಎಂದು ಅರಿತುಕೊಂಡಾತನಿಗೆ ತನ್ನದೆಂಬುದೊಂದು, ಮತ್ತೊಬ್ಬರದೊಂದು ಹೀಗೆ ಎರಡಿರುವದಿಲ್ಲ. ಸಾತ್ತ್ವಿಕವಾದ ಈ ಅಹಂಕಾರದೃಷ್ಟಿಯಲ್ಲಿ ಎರಡು ಬಗೆಯಿರುತ್ತದೆ. ಅತ್ಯಂತಸೂಕ್ಷ್ಮನಾದ ಪರಮಾತ್ಮನೇ ನಾನು, ಎಲ್ಲವನ್ನೂ ಮೀರಿರುವನು ನಾನು, ನನಗಿಂತ ಬೇರೆ ಯಾವದೂ ಇಲ್ಲ- ಎಂಬುದೊಂದು; ಇದೆಲ್ಲವೂ ನಾನೇ ಎಂಬುದು ಮತ್ತೊಂದು. ಆದರೆ ನಾನೇ ದೇಹವೆಂಬ ಅಹಂಕಾರವಿದೆಯಲ್ಲ, ಅದು ಯಾವಾಗಲೂ ದುಃಖವನ್ನುಂಟುಮಾಡುವದೇ ಹೊರತು ಶಾಂತಿಯನ್ನು ಕೊಡುವದಿಲ್ಲ. ಸರಿಯಾಗಿ ನೋಡಿದರೆ ಸಕಲಜಗತ್ತಿಗೂ ಸತ್ತೆಯನ್ನು ಕೊಡುವ ಪರಮಾತ್ಮನೊಬ್ಬನಿರುವದೆಂಬುದೂ ಅವನೇ ತಾನೆಂಬುದೂ ಅನುಭವೈಕಗಮ್ಯವಾಗಿರುತ್ತದೆ. ನಿಜವಾಗಿ ಪರಮಾತ್ಮನೊಬ್ಬನೇ ಸಕಲವೂ ಆಗಿತೋರುತ್ತಿರುತ್ತಾನೆ. ಯಾವದು ತೋರಲಿ, ಯಾವದುಹೋಗಲಿ. ಅದರಿಂದ ಆತ್ಮನಿಗೆ ಏನೊಂದು ಹಾನಿವೃದ್ಧಿಯೂ ಆಗುವದಿಲ್ಲ. ನಿಜವಾಗಿ ಈ ಆತ್ಮನು ಬದ್ಧನೂ ಅಲ್ಲ, ಮುಕ್ತನೂ ಅಲ್ಲ, ಕೇವಲ ಅವಿಚಾರದಿಂದಲೇ ಜನರು ದುಃಖಿಸುತ್ತಿರುವರು. ವಿಚಾರದಿಂದ ಚಿತ್ತವನ್ನು ಚಿತ್ತತ್ತ್ವವನ್ನಾಗಿ ಮಾಡಿಕೊಂಡರೆ ಆಮೇಲೆ ಮೋಕ್ಷವನ್ನು ಪಡೆಯಬೇಕಾದದ್ದೇ ಇರುವದಿಲ್ಲ.

★★★★★

# ಭಗವಂತನ ಪರಮಾರ್ಥಸ್ವರೂಪದ ವರ್ಣನೆ

**20-4-1942**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳು**

**ವಿಷ್ಣುಪುರಾಣ ಆರನೆಯ ಅಂಶದಲ್ಲಿ ಐದನೆಯ ಅಧ್ಯಾಯದಲ್ಲಿ** ಆಧ್ಯಾತ್ಮಿಕಾದಿತಾಪಗಳ ವರ್ಣನೆಯೂ ಭಗವಾನ್, ವಾಸುದೇವ ಈ ಶಬ್ದಗಳ ವ್ಯಾಖ್ಯಾನವೂ, ಭಗವಂತನ ಪರಮಾರ್ಥಸ್ವರೂಪದ ವರ್ಣನೆಯೂ ಇವೆ.

ಆಧ್ಯಾತ್ಮಿಕವೇ ಮುಂತಾದ ತಾಪತ್ರಯವನ್ನು ಅರಿತುಕೊಂಡ ವಿವೇಕಿಯು ವೈರಾಗ್ಯವನ್ನು ಪಡೆದು ಜ್ಞಾನದಿಂದ ಆತ್ಯಂತಿಕಲಯರೂಪವಾದ ಮೋಕ್ಷವನ್ನು ಪಡೆಯುತ್ತಾನೆ. ಆಧ್ಯಾತ್ಮಿಕವು ಶಾರೀರವೆಂದೂ ಮಾನಸವೆಂದೂ ಎರಡು ಬಗೆ. ಶರೀರದಲ್ಲುಂಟಾಗುವ ಬಗೆಬಗೆಯ ರೋಗಗಳೂ ಮನಸ್ಸಿನಲ್ಲುಂಟಾಗುವ ಕಾಮಕ್ರೋಧಾದಿಗಳೂ ಆಧ್ಯಾತ್ಮಿಕವಾದವು; ಮೃಗಪಕ್ಷಿಮನುಷ್ಯಾದಿಗಳಿಂದ ಉಂಟಾಗುವ ತಾಪವು ಭೌತಿಕತಾಪವು; ಶೀತವಾತಾದಿಗಳಿಂದಾಗುವದು ಆಧಿದೈವಿಕತಾಪವು. ಗರ್ಭ, ಹುಟ್ಟು, ಮುಪ್ಪು, ಅಜ್ಞಾನ, ಸಾವು, ನರಕ–ಇವುಗಳಿಂದಾಗುವ ದುಃಖವು ಸಾವಿರಾರು ಬಗೆಗಳದ್ದಾಗಿರುವದು. ಕೇವಲ ನರಕದಲ್ಲಿ ಮಾತ್ರವೇ ಅಲ್ಲ, ಮೆಲ್ಲಮೆಲ್ಲಗೆ ಸವೆಯುತ್ತಿರುವ ಸ್ವರ್ಗದಲ್ಲಿಯೂ ದುಃಖವುಂಟು. ಸ್ವರ್ಗನರಕಗಳಲ್ಲಿ ಭೋಗವಾದಮೇಲೆ ಮತ್ತೆ ಗರ್ಭಜನ್ಮಾದಿಗಳೂ ಬರುತ್ತಲೇ ಇರುವದರಿಂದ ದುಃಖವುಂಟಾಗುತ್ತಲೇ ಇರುವದು. ಮನುಷ್ಯನಿಗೆ ಯಾವಯಾವದು ಮೆಚ್ಚಾಗಿರುವದೋ ಅದೆಲ್ಲವೂ ದುಃಖವೃಕ್ಷಕ್ಕೆ ಬೀಜವಾಗಿರುತ್ತದೆ; ಆದ್ದರಿಂದ ತಾಪತ್ರಯದಿಂದ ನರಳುತ್ತಿರುವ ಅಜ್ಞರಿಗೆ ದುಃಖವೇ ಹೊರತು ಸುಖವೆಲ್ಲಿಂದ ಬರಬೇಕು?

ಈ ದುಃಖವೆಂಬ ರೋಗಕ್ಕೆ ಒಂದೇ ಒಂದು ಮದ್ದಿರುವದು. ಭಗವತ್ಪ್ರಾಪ್ತಿಯೊಂದೇ ಆ ಮದ್ದು. ಅದಕ್ಕೆ ಜ್ಞಾನವೂ ಕರ್ಮವೂ ಸಾಧನವಾಗಿರುತ್ತವೆ. ಆಗಮದಿಂದುಂಟಾಗುವ ಶಬ್ದಬ್ರಹ್ಮಜ್ಞಾನವೆಂದೂ ವಿವೇಕದಿಂದಾಗುವ ಪರಬ್ರಹ್ಮಜ್ಞಾನವೆಂದೂ ಜ್ಞಾನವು ಎರಡು ಬಗೆ. ಅಜ್ಞಾನವು ಕತ್ತಲೆಯಂತೆ, ಇಂದ್ರಿಯದಿಂದಾಗುವ ಜ್ಞಾನವು ದೀಪದಂತೆ ಇರುವದು; ಆದರೆ ವಿವೇಕದಿಂದುಂಟಾಗುವ ಜ್ಞಾನವು ಸೂರ್ಯಪ್ರಕಾಶದಂತೆ ಇರುತ್ತದೆ. ಮೊದಲು ಶಬ್ದಬ್ರಹ್ಮಜ್ಞಾನವನ್ನು ಪಡೆದುಕೊಂಡಮೇಲೆ ಪರಬ್ರಹ್ಮಪ್ರಾಪ್ತಿಯಾಗುತ್ತದೆ. ಮುಂಡಕದಲ್ಲಿ ಹೇಳಿರುವ ಪರಾವರವಿದ್ಯೆಗಳೇ ಇವು.

ಶ್ರುತಿಯಲ್ಲಿ ಹೇಳಿರುವ ಶಬ್ದಾಗೋಚರವಾದ ಪರಬ್ರಹ್ಮವನ್ನೇ ಉಪಾಸನೆಗಾಗಿ **ಭಗವಂತ**ನೆಂಬ ಮಾತಿನಿಂದ ಗೌಣವಾಗಿ ಕರೆಯುತ್ತಾರೆ. '**ಭಗವತ್**' ಎಂಬ ಮಾತಿನಲ್ಲಿ ಭಕಾರಕ್ಕೆ ಸಂಭರ್ತ (ಪೋಷಕನು), ಭರ್ತ (ಆಧಾರನು) ಎಂಬ ಎರಡರ್ಥವಿರುತ್ತದೆ. ಗಕಾರಕ್ಕೆ ಸೃಷ್ಟಿಸ್ಥಿತಿಲಯಗಳನ್ನು ಮಾಡುವವನು ಎಂದರ್ಥವು. '**ಭಗ**' ಎಂಬ ಮಾತಿಗೆ ಸಂಪೂರ್ಣವಾದ ಐಶ್ವರ್ಯ,

ಧರ್ಮ, ಯಶಸ್ಸು, ಶ್ರೀ, ಜ್ಞಾನ, ಮತ್ತು ವೈರಾಗ್ಯ- ಎಂಬರ್ಥವಿರುವದು. ಇವುಗಳನ್ನುಳ್ಳವನೇ ಭಗವಂತನು. ಭೂತಾತ್ಮನೂ ಅಖಿಲಾತ್ಮನೂ ಆದ ಆ ಪರಮೇಶ್ವರನಲ್ಲಿ ಎಲ್ಲಾ ಭೂತಗಳೂ ವಾಸಮಾಡಿಕೊಂಡಿರುವವೆಂಬುದನ್ನು 'ವ' ಕಾರವು ತಿಳಿಸುತ್ತದೆ. ಈ ರೀತಿಯಲ್ಲಿ 'ಭಗವನ್' ಎಂಬ ಈ ಮಹಾಶಬ್ದವು ವಾಸುದೇವನಿಗೊಬ್ಬನಿಗೇ ಮುಖ್ಯವೃತ್ತಿಯಿಂದ ಸಲ್ಲತಕ್ಕದ್ದಾಗಿರುತ್ತದೆ. ಮಿಕ್ಕವರಿಗೆ ಇದನ್ನು ಉಪಚಾರಕ್ಕೆ ಉಪಯೋಗಿಸುವರು. ಯಾವನು ಭೂತಗಳ ಉತ್ಪತ್ತಿ, ಪ್ರಲಯ, ಆಗತಿ, ಗತಿ, ವಿದ್ಯೆ, ಅವಿದ್ಯೆ- ಇದೆಲ್ಲವನ್ನೂ ಬಲ್ಲವನೋ ಆತನೇ ಭಗವಂತನು. ಹೇಯಗುಣಗಳು ಯಾವವೂ ಇಲ್ಲದ ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು ಇವುಗಳಿಗೆ '**ಭಗವತ್**' ಎಂಬ ಹೆಸರು ಸಲ್ಲುತ್ತದೆ.

ಆ ಪರಮಾತ್ಮನಲ್ಲಿ ಸರ್ವಭೂತಗಳೂ ವಾಸವಾಗುವದರಿಂದಲೂ ಆತನು ಸರ್ವಭೂತಗಳಲ್ಲಿಯೂ ವಾಸಮಾಡುತ್ತಿರುವದರಿಂದಲೂ ಆತನಿಗೆ '**ವಾಸುದೇವ**'ನೆಂದು ಹೆಸರು.

ಆತನು ಪ್ರಕೃತಿಯನ್ನೂ ಅದರ ವಿಕಾರಗಳನ್ನೂ ಅವುಗಳ ಗುಣದೋಷಗಳನ್ನೂ ಮೀರಿ ಯಾವದೊಂದು ಆವರಣವೂ ಇಲ್ಲದೆ ಎಲ್ಲಕ್ಕೂ ಆತ್ಮನಾಗಿರುತ್ತಾನೆ; ಎಲ್ಲವೂ ಅವನಿಂದಲೇ ವ್ಯಾಪ್ತವಾಗಿರುತ್ತದೆ. ಆತನು ಸಮಸ್ತಕಲ್ಯಾಣಗುಣಗಳುಳ್ಳಾತನು, ತನ್ನ ಶಕ್ತಿಯಲ್ಲೊಂದರಿಂದ ಭೂತಗಳನ್ನೆಲ್ಲ ಆವರಿಸಿಕೊಂಡಿರುವನು, ಇಚ್ಛಾಮಾತ್ರದಿಂದ ತನಗಿಷ್ಟಬಂದ ದೇಹವನ್ನು ಧರಿಸುವಾತನು, ಅಖಿಲಜಗತ್ತಿನ ಹಿತವನ್ನು ಸಾಧಿಸುವಂಥವನು; ತೇಜಸ್ಸು, ಬಲ, ಐಶ್ವರ್ಯ, ಮಹಾಜ್ಞಾನ, ವೀರ್ಯ, ಶಕ್ತಿ-ಮುಂತಾದ ಗುಣಗಳ ರಾಶಿಯು. ದೊಡ್ಡದಕ್ಕೆಲ್ಲ ದೊಡ್ಡವನು, ಯಾವ ಕ್ಲೇಶಗಳೂ ಇಲ್ಲದವನು; ವ್ಯಷ್ಟಿಸಮಷ್ಟಿರೂಪನಾದ ಈಶನು, ವ್ಯಕ್ತಾವ್ಯಕ್ತಸ್ವರೂಪನು, ಸರ್ವೇಶ್ವರನು, ಸರ್ವವನ್ನೂ ನೋಡುವಾತನೂ ಸರ್ವವೇತ್ತನೂ ಸರ್ವಶಕ್ತಿಯೂ ತಾನಾದ ಆತನಿಗೇ ಪರಮೇಶ್ವರನೆಂಬ ಹೆಸರು. ಆ ನಿರ್ದುಷ್ಟವಾದ, ನಿರ್ಮಲವಾದ ಏಕರೂಪವಾದ ಆ ಶುದ್ಧವಾದ ಬ್ರಹ್ಮವನ್ನು ಏತರಿಂದ ಅರಿಯುವೆವೋ, ಕಂಡುಕೊಳ್ಳುವೆವೋ, ಪಡೆದುಕೊಳ್ಳುವೆವೋ, ಅದೇ ಜ್ಞಾನವು, ಮಿಕ್ಕದ್ದೆಲ್ಲವೂ ಅಜ್ಞಾನವು.

★★★★★

# ವ್ಯಾಸರು ಶುಕರಿಗೆ ಮಾಡಿದ ಅನುಶಾಸನ

**21-4-1942**

**ಬ್ರ॥ ಶ್ರೀ॥ ವೇ॥ ಶಾ॥ ಸಂ॥ ಚಿದಂಬರ ಪಂಡಿತರು**

**ಮಹಾಹಾಭಾರತದಲ್ಲಿ ಮೋಕ್ಷಧರ್ಮ 321ನೆಯ ಅಧ್ಯಾಯದಲ್ಲಿ** ವ್ಯಾಸರು ಶುಕರಿಗೆ ವೇದಾಧ್ಯಯನವನ್ನು ಮಾಡಿಸಿದ ಬಳಿಕ ಈ ರೀತಿಯಲ್ಲಿ ಅನುಶಾಸನಮಾಡಿದರು - ಪುತ್ರನೆ, ಧರ್ಮವನ್ನು ಸೇವಿಸು. ಶೀತೋಷ್ಣಗಳನ್ನೂ ಹಸಿವುನೀರಡಿಕೆಗಳನ್ನೂ ಪ್ರಾಣವಾಯುವನ್ನೂ ವಶದಲ್ಲಿಟ್ಟುಕೊ. ಜಿತೇಂದ್ರಿಯನಾಗಿರು. ಸತ್ಯ, ಋಜುತೆ, ಸಿಟ್ಟಿಲ್ಲದಿರುವದು, ಹೊಟ್ಟೆಕಿಚ್ಚಿಲ್ಲದಿರುವದು, ದಮ, ತಪಸ್ಸು, ಅಹಿಂಸೆ, ದಯೆ- ಇವುಗಳನ್ನು ವಿಧಿವತ್ತಾಗಿ ನಡೆಯಿಸಿಕೊಂಡು ಬಾ. ಋಜುವಲ್ಲದ ಮಾರ್ಗವನ್ನು ಬಿಟ್ಟು ಸತ್ಯವನ್ನೂ ಧರ್ಮವನ್ನೂ ಅವಲಂಬಿಸು; ದೇವತೆಗಳಿಗೂ ಅತಿಥಿಗಳಿಗೂ ಕೊಟ್ಟು ಮಿಕ್ಕದ್ದರಿಂದ ಪ್ರಾಣಯಾತ್ರೆಯನ್ನು ಸಾಗಿಸಿಕೊ. ನೀರನೊರೆಯಂತೆ ಅನಿತ್ಯವಾದ ದೇಹದಲ್ಲಿ ಜೀವನು ಹಕ್ಕಿಯಂತೆ ಕೆಲವುಕಾಲ ಮಾತ್ರವೇ ಇರುತ್ತಿರುವಲ್ಲಿ ನೀನು ಹೀಗೆ ಧೈರ್ಯದಿಂದ ಅಜ್ಞನಾಗಿರುವೆಯಲ್ಲ! ಕಾಮಾದಿಶತ್ರುಗಳು ಎಚ್ಚರಿಕೆಯಿಂದ ಮರ್ಮವನ್ನೇ ಹುಡುಕುತ್ತಿರುವಲ್ಲಿ ಅವಿವೇಕಿಯಂತೆ ಸುಮ್ಮನೆ ಇರುವೆಯಲ್ಲ! ದಿನಗಳು ಲೆಕ್ಕವಾಗುತ್ತಿವೆ, ಆಯಸ್ಸು ಕ್ಷೀಣವಾಗುತ್ತಿದೆ, ಒಟ್ಟು ಬಾಳನ್ನೇ ಬರೆದಿಡುತ್ತಿದ್ದಾರೆ; ಹೀಗಿರುವಲ್ಲಿ ಕೂಡಲೆ ಎದ್ದು ಏತಕ್ಕೆ ಗುರುಹಿರಿಯರ ಬಳಿಗೆ ಓಡದೆ ಇರುವೆ? ಯಾರಿಗೆ ಧರ್ಮವನ್ನು ಕಂಡರಾಗದೆ ಭ್ರಾಂತರಾಗಿ ಕುಮಾರ್ಗದಲ್ಲಿ ನಡೆಯುತ್ತಿರುವರೋ ಅಂಥವರನ್ನು ಹಿಂಬಾಲಿಸುವವರಿಗೂ ಸಂಕಟವೇ ಒದಗುವದು. ಆದ್ದರಿಂದ ಯಾರು ಅಲ್ಪತುಷ್ಟರಾಗಿ ವೇದಪರರಾಗಿ ಧರ್ಮಮಾರ್ಗವನ್ನವಲಂಬಿಸುವರೋ ಅಂಥ ಮಹಾಶಕ್ತರಾದ ಮಹಾತ್ಮರನ್ನು ಸೇವಿಸಿ ತತ್ತ್ವವನ್ನು ಕೇಳಿ ತಿಳಿದುಕೊ. ಧರ್ಮದ ನಿಚ್ಚಣಿಗೆಯನ್ನು ಮೆಟ್ಟಿಲುಮೆಟ್ಟಿಲಾಗಿ ಹತ್ತಿಕೊಂಡು ಹೋಗು. ರೇಷ್ಮೆಹುಳುವಿನಂತೆ ಏತಕ್ಕೆ ಅಧರ್ಮವನ್ನು ಸುತ್ತಿಕೊಂಡು ನಿಜವನ್ನು

ತಿಳಿಯದಿರುವೆ? ನಾಸ್ತಿಕನೂ ಮೇರೆದಪ್ಪಿದವನೂ ಆದವನು ದಡವನ್ನು ಕುಸಿಯುವಂತೆ ಮಾಡುವ ನದೀಪ್ರವಾಹದಂತೆ ಇರುವನು; ಅವನನ್ನು ಒತ್ತಟ್ಟಿಗೆ ಬಿಟ್ಟು ಹೊರಡು. ಕಾಮಕ್ರೋಧಮೃತ್ಯುಗಳಿಂದ ಒಡಗೂಡಿರುವ ಪಂಚೇಂದ್ರಿಯಜಲವುಳ್ಳ ನದಿಯನ್ನು ಧೃತಿಯೆಂಬ ತೆಪ್ಪದಿಂದ ದಾಟು. ಲೋಕವೆಲ್ಲ ಸಾವಿನ ಹೊಡೆತಕ್ಕೆ ಸಿಕ್ಕಿರುವದು, ಮುಪ್ಪಿನಿಂದ ನರಳುತ್ತಿರುವದು; ಹೀಗೆ ಆಯುಸ್ಸು ಒಂದೇ ಸಮನೆ ಗಳಿತವಾಗುತ್ತಿದೆ; ಈ ನದಿಯನ್ನು ದಾಟುವದಕ್ಕೆ ಧರ್ಮವೇ ದೋಣಿಯು, ಮೃತ್ಯುವು ಯಾವಾಗಲೂ ಮನುಷ್ಯನನ್ನು ಬೆರಸಿಕೊಂಡೇ ಬರುತ್ತಿದೆ; ಮನುಷ್ಯನಿಗೆ ಸುಖವೆಲ್ಲಿಯದು? ಮೇಕೆಯಮರಿಯು ಆಹಾರವನ್ನು ಹುಡುಕಿಕೊಂಡು ಓಡಾಡುತ್ತಿರಲು ಹೆಣ್ಣುತೋಳವು ಸೆಳೆದೊಯ್ಯುವಂತೆ ತೃಪ್ತಿಯಿಲ್ಲದೆ ಕಾಮಭೋಗವಸ್ತುಗಳನ್ನು ಕೂಡಿಹಾಕುತ್ತಿರುವಷ್ಟರಲ್ಲಿ ಮನುಷ್ಯನನ್ನು ಮೃತ್ಯುವು ಸೆಳೆದೊಯ್ಯುವದು. ಇಷ್ಟರಲ್ಲಿಯೇ ಅಂಧಕಾರವನ್ನು ಹೊಗಬೇಕಾಗಿರುವದು: ಆದ್ದರಿಂದ ಧರ್ಮದ ದೀಪದ ಕುಡಿಯನ್ನು ಕ್ರಮಕ್ರಮವಾಗಿ ದೊಡ್ಡದುಮಾಡಿಕೊಳ್ಳಬೇಕು. ಬ್ರಾಹ್ಮಣದೇಹವು ದುರ್ಲಭವಾದದ್ದು, ಇದು ಕಾಮಭೋಗಕ್ಕಾಗಿ ಹುಟ್ಟಿದ್ದಲ್ಲ; ಈ ಲೋಕದಲ್ಲಿ ತಪಸ್ಸಿನಿಂದ ಕ್ಲೇಶಪಟ್ಟು ಪರದಲ್ಲಿ ನಿರುಪಮಾನವಾದ ಸುಖವನ್ನು ಪಡೆದುಕೊಳ್ಳಬೇಕು. ಅನೇಕ ತಪಸ್ಸುಗಳಿಂದ ಸಿಕ್ಕುವ ಬ್ರಾಹ್ಮಣ್ಯವನ್ನು ಅಸಡ್ಡೆ ಮಾಡಬಾರದು; ಅಧ್ಯಯನ, ತಪಸ್ಸು, ದಮ-ಇವುಗಳ ಮೂಲಕವಾಗಿ ಮುಕ್ತಿಗೆ ದಾರಿಯನ್ನುಂಟುಮಾಡಿಕೊಳ್ಳಬೇಕು. ಕಾಲವು ಬೇಗನೆ ಹೋಗುತ್ತಿದೆ, ಅಧರ್ಮಿಷ್ಠರಿಗೆ ದುರ್ಗತಿಯಾಗುವದು ಖಂಡಿತ; ಮೃತ್ಯುವು ಬರುವದರೊಳಗೆ ಧರ್ಮವನ್ನು ಗಳಿಸಿಕೊ. ಮನುಷ್ಯನ ಹಿಂದೆ ಬಂಧುಗಳಾರೂ ಬರುವದಿಲ್ಲ, ಧರ್ಮಾಧರ್ಮಗಳು ಮಾತ್ರ ಅವನನ್ನು ಹಿಂಬಾಲಿಸುತ್ತವೆ.

ಧನವಾಗಲಿ ಬಂಧುಬಳಗಗಳಾಗಲಿ ಪುತ್ರರುಗಳಾಗಲಿ ಏತಕ್ಕೆ ಬಂದಾರು? ಹೃದಯಗುಹೆಯಲ್ಲಿರುವ ಆತ್ಮನನ್ನು ಹುಡುಕಬೇಕು. ನಾಳೆ ಮಾಡಬೇಕಾದದ್ದನ್ನು ಇಂದೇ ಮಾಡಬೇಕು. ಮನುಷ್ಯಜನ್ಮವೆಂಬುದು ಸ್ವರ್ಗಕ್ಕೆ ಸೋಪಾನವು; ಇದು ಸಿಕ್ಕಾಗ ಮತ್ತೆ ಕೆಳಕ್ಕೆ ಬೀಳದಂಥ ಕರ್ಮವನ್ನು ಮಾಡಬೇಕು. ತಪೋವನಗಳಲ್ಲಿಯೇ ಹುಟ್ಟಿ ಸತ್ತವರ ಧರ್ಮಕ್ಕಿಂತಲೂ ಭೋಗತ್ಯಾಗವನ್ನು ಮಾಡಿ ತಪಸ್ಸುಮಾಡುವವರು ಭಾಗ್ಯಶಾಲಿಗಳು. ತಂದೆತಾಯಿಗಳು ಸಾವಿರಗಟ್ಟಲೆ, ಹೆಂಡಿರುಮಕ್ಕಳು ನೂರುಗಟ್ಟಲೆ ಆಗಿರುತ್ತಾರೆ;

ಯಾರಿಗೆ ಯಾರು? ಅವರವರ ಕರ್ಮದ ಫಲವನ್ನು ಅವರು ಅನುಭವಿಸುತ್ತಾರೆ. ಸ್ವಜನಕ್ಕಾಗಿ ಪಾಪವನ್ನು ಮಾಡುವವರಿಗೆ ಕ್ಲೇಶವೇ ಫಲವು. ಆದ್ದರಿಂದ ಇದನ್ನೆಲ್ಲ ತಿಳಿದು ಎಲೈ ಮಗನೆ, ಧರ್ಮವನ್ನೇ ಮಾಡು. ದಾನಮಾಡದ ಭೋಗಮಾಡದ ಧನದಿಂದೇನು? ಕಾಮಕ್ರೋಧಾದಿರಿಪುಗಳನ್ನು ಜಯಿಸದ ಬಲದಿಂದೇನು? ಧರ್ಮಕ್ಕೆ ಬಾರದ ವಿದ್ಯೆಯಿಂದೇನು? ಜಿತೇಂದ್ರಿಯತ್ವವನ್ನು ಸಂಪಾದಿಸದ ಅಂತಃಕರಣದಿಂದೇನು? – ಹೀಗೆಂದು ಹಿತೋಪದೇಶವನ್ನು ಮಾಡಿದ ವ್ಯಾಸರನ್ನು ಬಿಟ್ಟು ಶುಕನು ವೈರಾಗ್ಯದಿಂದ ಅಧ್ಯಾತ್ಮಸಾಧನೆಗೆ ಹೊರಟುಹೋದನು.

★★★★★

# ಸಮುದ್ರಮಥನ

**22-4-1942**

**ಬ್ರ॥ ಶ್ರೀ॥ ಮತ್ತೂರು ಸುಬ್ಬರಾಯಾವಧಾನಿಗಳವರು**

ಭಾಗವತದ ಎಂಟನೆಯ ಸ್ಕಂಧದಲ್ಲಿ ಏಳನೆಯ ಅಧ್ಯಾಯದಲ್ಲಿ – ದೇವತೆಗಳೂ ಅಸುರರೂ ಸಮುದ್ರಮಥನ ಮಾಡಿದ ಕಥೆಯ ಭಾಗವಿದೆ. ನಾಗರಾಜನಾದ ವಾಸುಕಿಗೆ ಫಲದಲ್ಲಿ ಒಂದು ಭಾಗವನ್ನು ಕೊಡುವೆವೆಂದು ಒಪ್ಪಿಸಿ ಅವನನ್ನೇ ಹಗ್ಗವಾಗಿಯೂ ಮಂದರಪರ್ವತವನ್ನೇ ಕಡೆಗೋಲಾಗಿಯೂ ಮಾಡಿಕೊಂಡು ಕಡೆಯುವದಕ್ಕೆ ಮೊದಲುಮಾಡಿದರು. ಅಸುರರು ಹಾವಿನ ಬಾಲವು ಅಮಂಗಲವೆಂದು ತುಚ್ಛ ಬುದ್ಧಿಯಿಂದ ಕೈಬಿಡಲು ಅವರ ಹೆಮ್ಮೆಯನ್ನು ಕಂಡುನಗುತ್ತಾ ಶ್ರೀಹರಿಯೇ ದೇವತೆಗಳೊಡನೆ ಬಾಲವನ್ನು ಹಿಡಿದುಕೊಂಡನು. ಪರ್ವತವು ಭಾರದಿಂದ ಕಡಲಿನೊಳಗೆ ಮುಳುಗಲು ತಾನೇ ಆಮೆಯ ರೂಪವನ್ನು ತಳೆದು ಅದನ್ನು ನಿರಾಯಾಸದಿಂದ ಎತ್ತಿಹಿಡಿದುಕೊಂಡನು. ಅಸುರರಲ್ಲಿ ಅಸುರತೇಜಸ್ಸಿನಿಂದಲೂ ದೇವತೆಗಳಲ್ಲಿ ದೈವತೇಜಸ್ಸಿನಿಂದಲೂಹೊಕ್ಕುಇಬ್ಬರಿಗೂವೀರ್ಯವನ್ನುಕೊಟ್ಟುಮೇಲುಗಡೆಯಲ್ಲಿ ಪರ್ವತವನ್ನುಕೈಯಿಂದಹಿಡಿದುಕೊಂಡುಸಮುದ್ರಮಥನಕ್ಕೆಎಲ್ಲಾಬಗೆಯಿಂದಲೂ

ಸಹಾಯಮಾಡಿದನು. ಹಾವಿನ ಸಾವಿರಬಾಯಿಗಳಿಂದಲೂ ಹೊರಟ ಜ್ವಾಲೆಯಿಂದ ದೇವಾಸುರರು ಸಂತಪ್ತರಾಗಲು ಭಗವಂತನ ಅನುಗ್ರಹದಿಂದ ಮೋಡಗಳೂ ತಂಗಾಳಿಯೂ ತೋರಿಕೊಂಡು ಮಳೆಗರೆದು ಅವರ ಸಂಕಟವನ್ನು ಪರಿಹರಿಸಿದವು. ಹೀಗೆ ಪರಮಾತ್ಮನೇ ಸಕಲಕಾರ್ಯಗಳನ್ನೂ ನೆರವೇರಿಸುವ ಪ್ರಭುವೆಂಬುದನ್ನು ಶ್ರೀಹರಿಯು ಈ ಲೀಲೆಯಿಂದ ಪ್ರಕಟಿಸಿದನು.

ಇಷ್ಟರಲ್ಲಿ ಹಾಲಾಹಲವೆಂಬ ವಿಷವೊಂದು ಸಮುದ್ರದಿಂದ ಮೇಲಕ್ಕೆದ್ದುಕೊಂಡಿತು. ಆಗ ಪರ್ವತದ ಮೇಲೆ ಲೋಕಕಲ್ಯಾಣಕ್ಕಾಗಿ ತಪಸ್ಸುಮಾಡುತ್ತಿದ್ದ ಶಿವನನ್ನು ಎಲ್ಲರೂ ಶರಣುಹೊಕ್ಕು ಪರಮೇಶ್ವರನ ವಿಶ್ವರೂಪವನ್ನೂ ಗುಣಗಣವನ್ನೂ ವರ್ಣಿಸಿ ಸ್ತುತಿಸುತ್ತಾ ಈ ಉಲ್ಬಣವಾದ ವಿಷದ ಬೇಗೆಯನ್ನು ತಪ್ಪಿಸಬೇಕೆಂದು ಬೇಡಿಕೊಂಡರು. ಅದರಿಂದ ಸಂತುಷ್ಟನಾದ ಪರಮೇಶ್ವರನು ಪಾರ್ವತಿಯ ಅನುಮತಿಯಿಂದ ಜಗತ್ತಿಗೆ ಸ್ವಸ್ತಿಯಾಗಲೆಂದು ಹಾಲಾಹಲವಿಷವನ್ನು ಅಂಗೈಯಲ್ಲಿ ಇಟ್ಟುಕೊಂಡು ಕುಡಿದುಬಿಟ್ಟನು. ಲೋಕಸಂತಾಪಕ್ಕೆ ಅನುತಾಪವನ್ನೇ ತೋರಿಸುವದೇ ಅಲ್ಲವೆ, ಅಖಿಲಾತ್ಮನಾದ ಪರಮೇಶ್ವರನ ಹಿರಿಮೆ? ಆ ಶಿವನ ಕಾರ್ಯವನ್ನು ಕಂಡು ದೇವತೆಗಳೂ ಅಸುರರೂ ಪಾರ್ವತಿಯೂ ವಿಷ್ಣುವೂ ಬಹುವಾಗಿ ಹೊಗಳಿದರು.

★★★★★

## ಅಹಲ್ಯಾವೃತ್ತಾಂತ

## 23-4-1942

**ಬ್ರ|| ಶ್ರೀ|| ಚಿದಂಬರಪಂಡಿತರು**

**ಅಧ್ಯಾತ್ಮರಾಮಾಯಣದ ಬಾಲಕಾಂಡ ಐದನೆಯ ಸರ್ಗದದಲ್ಲಿ-** ವಿಶ್ವಾಮಿತ್ರರು ರಾಮಲಕ್ಷ್ಮಣರೊಡನೆ ಬರುತ್ತಿರಲು ದಾರಿಯಲ್ಲಿ ಪತ್ರಪುಷ್ಪಫಲಗಳಿಂದ ಕೂಡಿಕೊಂಡಿದ್ದರೂ ಒಂದು ಪ್ರಾಣಿಯೂ ಇಲ್ಲದ

ಆಶ್ರಮವೊಂದು ಕಂಗೊಳಿಸಿತು. ಆಗ ರಾಮರು ಕೇಳಿದ ಪ್ರಶ್ನೆಗೆ ಉತ್ತರವಾಗಿ ವಿಶ್ವಾಮಿತ್ರರು ಹೇಳಿದ ಅಹಲ್ಯಾವೃತ್ತಾಂತವು ಈ ಭಾಗದಲ್ಲಿರುತ್ತದೆ.

ಗೌತಮನೆಂಬ ಧಾರ್ಮಿಕವಾದ ಋಷಿಗೆ ಬ್ರಹ್ಮನು ಅಹಲ್ಯ ಎಂಬ ಲೋಕ ಸುಂದರಿಯಾದ ತನ್ನ ಮಗಳನ್ನು ಕೊಟ್ಟು ಮದುವೆಮಾಡಿಸಿದನು. ಆಕೆಯ ಶುಶ್ರೂಷೆಯಿಂದ ಸಂತುಷ್ಟನಾದ ಗೌತಮನು ಈ ಆಶ್ರಮದಲ್ಲಿ ವಾಸವಾಗಿರುತ್ತಿದ್ದನು. ಇಂದ್ರನು ಆಕೆಯನ್ನು ಕೆಡಿಸುವದಕ್ಕೆ ಕಾಲವನ್ನು ಕಾಯುತ್ತಿದ್ದು ಒಂದು ವೇಳೆ ಗೌತಮನು ಮನೆಯನ್ನು ಬಿಟ್ಟುಹೋಗಿರಲು ಮುನಿವೇಷದಿಂದ ಬಂದು ಆ ಕೆಲಸವನ್ನು ಮಾಡಿಕೊಂಡು ಬೇಗನೆ ಹೊರಡುವಷ್ಟರಲ್ಲಿ ಗೌತಮನೂ ಅಲ್ಲಿಗೆ ಬಂದನು. ತನ್ನ ವೇಷದಿಂದ ಹೊರಟಿರುವ ಇಂದ್ರನನ್ನು ಕಂಡು ಕಡುಸಿಟ್ಟಿನಿಂದ ''ಎಲಾ, ನೀನು ಯಾರು ಹೇಳು, ನಿಜವನ್ನು ತಿಳಿಸದಿದ್ದರೆ ಈಗಲೆ ನಿನ್ನನ್ನು ಬೂದಿಗೈಯ್ಯುವೆನು'' ಎಂದು ಹೇಳಲು ಇಂದ್ರನು ದೈನ್ಯದಿಂದ ಇದ್ದದ್ದನ್ನು ತಿಳಿಸಿ ಕ್ಷಮೆಯನ್ನು ಬೇಡಿದನು. ಎಲಾ ಯೋನಿಲಂಪಟನೆ, ನಿನ್ನ ಮೈಯೆಲ್ಲ ಸ್ತ್ರೀವ್ಯಂಜನವಾಗಲಿ ಎಂದು ಶಪಿಸಿ ಆಶ್ರಮದೊಳಕ್ಕೆ ಹೊಕ್ಕು ಅಂಜಿಕೆಯಿಂದ ನಡುಗುತ್ತಿದ್ದ ಅಹಲ್ಯೆಯನ್ನು ಕಂಡು ''ಎಲೈ ದುಷ್ಟೆ, ಈ ನಿನ್ನ ಆಶ್ರಮದ ಶಿಲೆಯಲ್ಲಿ ನೀನು ನಿರಾಹಾರಳಾಗಿ ಹಗಲೂ ಇರಳೂ ತಪಸ್ಸುಮಾಡುತ್ತಾ ಗಾಳಿಬಿಸಿಲುಗಳ ಹೊಡೆತವನ್ನು ತಡೆದುಕೊಂಡು ಪರಮೇಶ್ವರನಾದ ರಾಮನನ್ನು ಧ್ಯಾನಮಾಡುತ್ತಿರು. ಈ ಆಶ್ರಮದಲ್ಲಿ ಒಂದು ಪ್ರಾಣಿಯೂ ಇಲ್ಲದಿರಲಿ. ಹೀಗೆ ಅನೇಕ ಸಾವಿರ ವರ್ಷಗಳಾದಮೇಲೆ ಶ್ರೀರಾಮನು ಬಂದು ನೀನು ಆಶ್ರಯಿಸಿರುವ ಶಿಲೆಯನ್ನು ಯಾವಾಗ ಕಾಲಿನಿಂದ ಮುಟ್ಟುವನೋ ಆಗ ನೀನು ಪಾಪರಹಿತಳಾಗಿ ಆತನನ್ನು ಭಕ್ತಿಯಿಂದ ಪೂಜಿಸಿ ಪ್ರದಕ್ಷಿಣನಮಸ್ಕಾರವನ್ನು ಮಾಡಿ ನನ್ನನ್ನು ಬಂದು ಸೇರುವೆ'' ಹೀಗೆಂದು ಹೇಳಿ ಆ ಋಷಿಯು ಹಿಮವತ್ಪರ್ವತಕ್ಕೆ ತಪಸ್ಸಿಗೆ ಹೋದನು. ಅಂದಿನಿಂದ ಅಹಲ್ಯೆಯು ನಿನ್ನ ಆಗಮನವನ್ನೇ ನಿರೀಕ್ಷಿಸುತ್ತಾ ಇರುತ್ತಾಳೆ.

ಹೀಗೆಂದು ವಿಶ್ವಾಮಿತ್ರರು ಹೇಳಿ ಉಗ್ರವಾದ ತಪಸ್ಸನ್ನು ಮಾಡುತ್ತಿದ್ದ ಅಹಲ್ಯೆಯನ್ನು ಶ್ರೀರಾಮನಿಗೆ ತೋರಿಸಿದರು. ಶ್ರೀರಾಮನು ಕಾಲಿನಿಂದ

ಕಲ್ಲನ್ನು ತುಳಿದು ಆ ತಪೋಧನಳನ್ನು ಕಂಡನು. ''ನಾನು ರಾಮನು, ನಿನಗೆ ನಮಸ್ಕರಿಸುತ್ತೇನೆ'' ಎಂದು ಅಭಿವಾದನಮಾಡಿದನು. ಆಗ ಅಹಲ್ಯೆಯು ರಾಮನನ್ನು ವಿಧಿವತ್ತಾಗಿ ಪೂಜಿಸಿ ಗದ್ಗದಸ್ವರದಿಂದ ಹೀಗೆಂದು ಸ್ತುತಿಸಿದಳು.

''ಎಲೈ ಜಗನ್ನಿವಾಸನೆ, ಬ್ರಹ್ಮರುದ್ರರೇ ಮೊದಲಾದವರು ಧ್ಯಾನದ ಮೂಲಕ ಹುಡುಕುತ್ತಿರುವ ನಿನ್ನಪಾದಪದ್ಮದ ರಜಸ್ಸನ್ನು ಪಡೆದು ನಾನು ಕೃತಾರ್ಥಳಾದೆ. ನಿನ್ನ ನಿಜವಾದ ಸ್ವರೂಪವನ್ನು ಅರಿಯದೆ ಜನರು ನಿನ್ನ ಮನುಷ್ಯಭಾವದಿಂದ ಮೋಹಿತರಾಗುತ್ತಿರುವರು. ಚರಣಾದಿಗಳು ಇಲ್ಲದೆ ಚಲನಾದಿಕಾರ್ಯವನ್ನು ಮಾಡುತ್ತಿರುವ ಆನಂದಮಯನಾದ ನೀನು ಮಹಾಮಾಯಿಯು. ಯಾವ ನಿನ್ನ ಪಾದಸ್ಪರ್ಶದಿಂದ ಪವಿತ್ರಳಾದ ಭಾಗೀರಥಿಯು ಶಿವವಿರಿಂಚ್ಯಾದಿಗಳನ್ನು ಪಾವನಗೊಳಿಸುತ್ತಿರುವಳೋ ಆ ನೀನೇ ನನಗೆ ದೃಷ್ಟಿವಿಷಯನಾಗಿರುವೆ ಎಂಬುದು ನನ್ನ ಎಂಥ ಪುಣ್ಯದ ಫಲವಾಗಿರಬೇಕು! ಮಾನುಷರೂಪವನ್ನು ತಳೆದಿರುವ ಸುಂದರ ವಿಗ್ರಹನಾದ ಕೋದಂಡರಾಮನನ್ನೇ ನಾನು ನಿತ್ಯವೂ ಭಜಿಸುವೆನು; ಯಾವನ ಪಾದಪದ್ಮದ ಧೂಳಿಯನ್ನೇ ಶ್ರುತಿಗಳು ಹುಡುಕುತ್ತಿವೆಯೋ, ಯಾವನ ನಾಭಿಕಮಲದಿಂದಲೇ ಬ್ರಹ್ಮನು ಹುಟ್ಟಿರುವನೋ, ಯಾವನ ನಾಮದಲ್ಲಿಯೇ ಶಿವನು ಅಭಿರುಚಿಯುಳ್ಳನನಾಗಿರುವನೋ ಆ ರಾಮಚಂದ್ರನನ್ನೇ ನಿತ್ಯವೂ ಭಾವಿಸುತ್ತಿರುವೆನು; ಯಾವನ ಅವತಾರಲೀಲೆಗಳನ್ನು ಬ್ರಹ್ಮಲೋಕದಲ್ಲಿ ನಾರದಾದಿಗಳೂ ಸರಸ್ವತಿಯೂ ಗಾನಮಾಡುತ್ತಿರುವರೋ ಆತನೇ ನನಗೆ ಶರಣು. ಈತನೇ ಪರಮಾತ್ಮನು, ಪುರಾಣಪುರುಷನು, ಸ್ವಪ್ರಕಾಶನು, ಅನಂತನು, ಎಲ್ಲಕ್ಕೂ ಕಾರಣನಾದವನು; ಇಂಥ ಈತನು ಮಾಯಾಶರೀರವನ್ನು ಧರಿಸಿ ಪರಾನುಗ್ರಹವನ್ನು ಮಾಡುತ್ತಿರುವನು, ಈತನೇ ತನ್ನ ಮಾಯಾಗುಣಗಳ ಭೇದದಿಂದ ಬ್ರಹ್ಮವಿಷ್ಣುರುದ್ರರೆಂಬ ಬೇರೆ ಬೇರೆ ಹೆಸರುಗಳನ್ನು ಆನುತ್ತಿರುವನು. ಎಲೈ ರಾಮನೆ, ಲಕ್ಷ್ಮಿಯು ತನ್ನ ಎದೆಯಮೇಲೆ ಆದರದಿಂದ ಇಟ್ಟುಕೊಂಡಿರುವದಾಗಿರುವ ನಿನ್ನ ಪಾದವನ್ನು, ಒಂದೇ

ಹೆಜ್ಜೆಯಿಂದ ಜಗತ್ತೆಲ್ಲವನ್ನೂ ಆಕ್ರಮಿಸಿದ ನಿನ್ನ ಪಾದವನ್ನು, ನಿರಭಿಮಾನಿಗಳಾದ ಮುನೀಂದ್ರರು ಧ್ಯಾನಿಸುತ್ತಿರುವ ನಿನ್ನ ಪಾದವನ್ನು, ನಮಸ್ಕರಿಸುತ್ತೇನೆ. ನೀನು ಜಗತ್ತಿಗೆ ಆದಿಯು, ಜಗತ್ತಿಗೆ ಆಶ್ರಯನು, ಜಗತ್ತೇನೇ, ಸರ್ವಪ್ರಾಣಿಗಳಲ್ಲಿಯೂ ಇದ್ದು ಅವುಗಳ ಸಂಬಂಧವಿಲ್ಲದೆ ಇರುವೆ. ನೀನು ಅವಾಚ್ಯನಾದರೂ ಓಂಕಾರಕ್ಕೆ ವಾಚ್ಯನು, ವಾಚ್ಯವಾಚಕಭೇದದಿಂದ ತೋರುತ್ತಿರುವವನು, ಕ್ರಿಯಾಕಾರಕಫಲರೂಪನಾಗಿ ನೀನೊಬ್ಬನೇ ಮಾಯೆಯಿಂದ ತೋರುತ್ತಿರುವೆ. ನಿನ್ನ ಮಾಯೆಯಿಂದ ಮೋಹಿತರಾದವರು ನಿನ್ನನ್ನು ಮನುಷ್ಯನೆಂದೇ ಬಗೆಯುವರು; ಆದರೆ ನೀನು ಆಕಾಶದಂತೆ ಒಳಗೂಹೊರಗೂ ಇದ್ದು ನಿತ್ಯಶುದ್ಧಮುಕ್ತಸ್ವಭಾವನೂ ಅವ್ಯಯನೂ ಆಗಿರುವೆ. ನಾನು ಸ್ತ್ರೀ, ಅಜ್ಞಳು, ನಿನ್ನ ತತ್ತ್ವವನ್ನು ಹೇಗೆ ತಾನೆ ಅರಿತೇನು? ಆದ್ದರಿಂದ ಎಲೈ ರಾಮನೆ, ಅನನ್ಯಭಕ್ತಿಯಿಂದ ನಿನಗೆ ನೂರಾರುಬಾರಿ ನಮಸ್ಕಾರ ಮಾಡುವೆನು. ದೇವ, ನೀನು ಎಲ್ಲಿದ್ದರೂ ನಿನ್ನ ಪಾದಪದ್ಮದಲ್ಲಿಯೇ ಭಕ್ತಿಯಿರಲಿ: ಪುರುಷಶ್ರೇಷ್ಠನೆ, ನಿನಗೆ ನಮಸ್ಕಾರ! ಭಕ್ತವತ್ಸಲನೆ, ನಿನಗೆ ನಮಸ್ಕಾರ! ಹೃಷೀಕೇಶನೆ, ನಾರಾಯಣನೆ, ನಿನಗೆ ನಮಸ್ಕಾರ! ಸಂಸಾರದ ಅಂಜಿಕೆಯನ್ನು ತೊಲಗಿಸುವ ಏಕಕಾರಣವಾಗಿಯೂ ಕೋಟಿಸೂರ್ಯರ ಪ್ರಕಾಶವುಳ್ಳವನಾಗಿಯೂ ಧನುರ್ಬಾಣಗಳನ್ನು ಕೈಯಲ್ಲಿ ಹಿಡಿದಿರುವನಾಗಿಯೂ ಕಾಲಮೇಘದಂತೆ ಶ್ಯಾಮವರ್ಣನಾಗಿಯೂ ಪೀತಾಂಬರಧಾರಿಯಾಗಿಯೂ ರತ್ನಕುಂಡಲಧಾರಿಯಾಗಿಯೂ ಕಮಲನೇತ್ರನಾಗಿಯೂ ಇರುವ ಲಕ್ಷ್ಮಣಸಮೇತನಾದ ರಾಮನನ್ನೇ ಸ್ತುತಿಸುವೆನು.'' ಹೀಗೆ ಸ್ತೋತ್ರಮಾಡಿ ನಮಸ್ಕರಿಸಿ ಶ್ರೀರಾಮನ ಅನುಜ್ಞೆಯನ್ನು ಪಡೆದುಕೊಂಡು ಅಹಲ್ಯೆಯು ತನ್ನ ಪತಿಯ ಬಳಿಗೆ ಹೋದಳು. ಯಾವನು ಭಕ್ತಿಯಿಂದ ಈ ಸ್ತೋತ್ರವನ್ನು ಹೇಳುವನೋ ಅವನಿಗೆ ಪಾಪವೆಲ್ಲವೂ ಕಳೆದು ಬ್ರಹ್ಮಪ್ರಾಪ್ತಿಯಾಗುವದು.

★★★★★

# ದುಃಖಬೀಜಗಳನ್ನು ಪರಿಹರಿಸಿಕೊಳ್ಳುವ ಉಪಾಯ

**24-4-1942**

**ಪಂಡಿತಪ್ರವರ ಎಚ್. ಅನಂತಮೂರ್ತಿಶಾಸ್ತ್ರಿಗಳವರು**

ಸಂಸಾರಕ್ಕೆ ಶರೀರವೇ ಬೀಜವು, ಶರೀರಕ್ಕೆ ಚಿತ್ತವೇ ಬೀಜವು, ಚಿತ್ತಕ್ಕೆ ಪ್ರಾಣಸ್ಪಂದವೂ ದೃಢಭಾವನೆಯೂ (ಎಂದರೆ ವಾಸನೆಯೂ) ಬೀಜವು-ಎಂದು **ವಾಸಿಷ್ಠರಾಮಾಯಣದ ಉಪಶಮಪ್ರಕರಣದ ತೊಂಬತ್ತೊಂದನೆಯ** ಸರ್ಗದಲ್ಲಿ ಹೇಳಿರುತ್ತದೆ. ಈ ದುಃಖಬೀಜಗಳನ್ನು ಪರಿಹರಿಸಿಕೊಳ್ಳುವ ಉಪಾಯವು ಯಾವದು?- ಎಂಬ ಪ್ರಶ್ನೆಗೆ ಈ ತೊಂಬತ್ತೆರಡನೆಯ **ಸರ್ಗದಲ್ಲಿ** ವಸಿಷ್ಠರು ಉತ್ತರವನ್ನು ಹೇಳಿರುತ್ತಾರೆ. ವಾಸನೆಗೂ ಪ್ರಾಣಸ್ಪಂದಕ್ಕೂ ಸಂವೇದ್ಯವಾದ ವಿಷಯವೇ ಬೀಜವು; ಏಕೆಂದರೆ ಸಂವೇದ್ಯವಿಷಯದಿಂದಲೇ ಅವು ತೋರಿಕೊಳ್ಳುತ್ತವೆ. ಸಂವೇದ್ಯವೆಂಬುದು ಸಂವಿತ್ತಿನಿಂದ ಎಂದರೆ ಅರಿವಿನಿಂದಲೇ ಉಂಟಾಗುತ್ತದೆ. ಈ ಬಾಹ್ಯವಿಷಯದರಿವು ಮಿಥ್ಯಾಜ್ಞಾನವಾದ್ದರಿಂದ ಸರಿಯಾದ ತಿಳಿವಳಿಕೆಯಿಂದಲೇ ನಾಶವಾಗುತ್ತದೆ, ಅದರಿಂದ ವಾಸನೆಯೂ ಪ್ರಾಣಸ್ಪಂದವೂ ಇಲ್ಲವಾಗುತ್ತದೆ- ಎಂದೂ ಹಿಂದೆ ಹೇಳಲಾಗಿದೆ. ಈ ಮನೋನಾಶ, ತತ್ತ್ವಜ್ಞಾನ, ವಾಸನಾಕ್ಷಯ-ಎಂಬ ಮೂರು ಉಪಾಯಗಳಲ್ಲಿ ಯಾವದು ಶೀಘ್ರವಾಗಿ ಫಲವನ್ನು ಕೊಡುವ ಉಪಾಯವು?- ಎಂಬುದೇ ಇಲ್ಲಿ ಪ್ರಶ್ನೆ.

ಇಲ್ಲಿ ಬೀಜಪರಂಪರೆಯನ್ನು ಹೇಳಿ ಅವುಗಳನ್ನು ನಾಶಮಾಡುವ ಉಪಾಯಗಳನ್ನು ಹೇಳಿರುತ್ತದೆಯಷ್ಟೆ. ಇವುಗಳಲ್ಲಿ ಮುಂದುಮುಂದಿನವುಗಳು ಹೆಚ್ಚು ಹೆಚ್ಚು ಶೀಘ್ರವಾಗಿ ಫಲದಾಯಕವಾಗಿರುತ್ತವೆ. ಹೇಗೆಂದರೆ ಎಲ್ಲಕ್ಕೂ ಸದ್ರೂಪವಾದ ಆತ್ಮನೇ ಎಲ್ಲಕ್ಕೂ ಬೀಜವಾಗಿರುತ್ತದೆಯಾದ್ದರಿಂದ ಸದ್ರೂಪಾತ್ಮನೇ ಸತ್ಯವೆಂಬ ಜ್ಞಾನವನ್ನು ಮಾಡಿಕೊಂಡು ವಾಸನೆಯೆಲ್ಲವನ್ನೂ ಬಿಡುವದು ಎಲ್ಲಕ್ಕೂ ಹೆಚ್ಚಿನ ಉಪಾಯವು. ಕಾಲಸತ್ತಾ, ವಸ್ತುಸತ್ತಾ- ಎಂಬ ಸಾಮಾನ್ಯರೂಪವಾಗಿರುವ ಸತ್ತೆಯ ಅರಿವನ್ನು ಮೊದಲುಮಾಡಿಕೊಂಡರೆ ಅದರಿಂದ ಸದ್ರೂಪಾತ್ಮನಲ್ಲಿ ನೆಲೆನಿಲ್ಲಬಹುದು; ಇದು ಹಿಂದಿನದಕ್ಕಿಂತ ಸ್ವಲ್ಪ

ಹೆಚ್ಚು ಪ್ರಯತ್ನವನ್ನು ಬಯಸುತ್ತದೆ. ಸತ್ತೆಯಿಂದ ಆಗಿರುವ ಅರಿವೆಂಬ ಸಂವಿತ್ತತ್ವದಲ್ಲಿ ನಿಂತರೆ ಇನ್ನೂ ಸ್ವಲ್ಪ ಹೆಚ್ಚು ಪ್ರಯತ್ನದಿಂದ ಸಿದ್ಧಿಯನ್ನು ಪಡೆಯಬಹುದು. ನಮಗೆ ಏನೇನು ತೋರುತ್ತದೆಯೋ ಅದೆಲ್ಲವೂ ಅರಿವೇ ಎಂಬ ಭಾವನೆಯನ್ನು ತಂದುಕೊಳ್ಳಬೇಕು. ಸಂವಿತ್ತೇ ಸಂವೇದ್ಯವಾಗಿರುವದೆಂಬುದನ್ನರಿತು ಆ ಮೂಲಕ ಸಂವೇದ್ಯವಾದ ವಿಷಯತ್ಯಾಗದಿಂದಲೇ ಪ್ರಾಣಸ್ಪಂದವಾಸನೆಗಳನ್ನು ಗೆದ್ದುಕೊಳ್ಳಬೇಕೆಂದು ಹಿಂದೆ ಹೇಳಲಾಗಿದೆ; ಅದನ್ನು ಬಿಟ್ಟು ನೇರಾಗಿಯೇ ವಾಸನಾತ್ಯಾಗಕ್ಕೆ ಕೈಹಾಕಿದರೆ ಬಹಳ ಹೆಚ್ಚಿನ ಪ್ರಯತ್ನವು ಬೇಕಾಗುವದು.

ಎಲ್ಲಿಯವರೆಗೆ ಮನೋಲಯವಾಗುವದಿಲ್ಲವೋ ಅಲ್ಲಿಯವರೆಗೆ ವಾಸನಾಕ್ಷಯವಾಗಲಾರದು; ವಾಸನಾಕ್ಷಯವಾಗುವವರೆಗೆ ಮನೋಲಯವೂ ಆಗಲಾರದು. ತತ್ತ್ವಜ್ಞಾನವಿಲ್ಲದೆ ಮನೋನಾಶವಾಗುವದೆಂತು? ವಾಸನಾನಾಶವಿಲ್ಲದೆ ತತ್ತ್ವಜ್ಞಾನವಾಗುವದು ಹೇಗೆ? ಹೀಗೆ ತತ್ತ್ವಜ್ಞಾನ, ಮನೋನಾಶ, ವಾಸನಾಕ್ಷಯ ಈ ಮೂರೂ ಒಂದಕ್ಕೊಂದು ಕಾರಣವಾಗಿರುವದರಿಂದ ಇವುಗಳನ್ನು ಸಾಧಿಸುವದು ಕಡುಕಷ್ಟವಾಗಿರುತ್ತದೆ. ಆದ್ದರಿಂದ ವಿವೇಕಿಯಾದವನು ವಿರಕ್ತಿಯನ್ನು ಸಂಪಾದಿಸಿಕೊಂಡು ಈ ಮೂರನ್ನೂ ಒಟ್ಟಿಗೆ ಸಾಧಿಸಬೇಕು. ಚಿರಕಾಲ ಹೀಗೆ ಮಾಡಿದರೆ ಅವುಗಳಿಂದ ಫಲವಾಗುತ್ತದೆ. ಆದ್ದರಿಂದ ಎಡೆಬಿಡದೆ ಯಾವಾಗಲೂ ಈ ಮೂರನ್ನೂ ಅಭ್ಯಾಸಮಾಡಬೇಕು.

ಪ್ರಾಣಸ್ಪಂದವು ನಿಂತರೆ ಚಿತ್ತಸ್ಪಂದವು ತಾನೇ ನಿಲ್ಲುತ್ತದೆ. ಆದ್ದರಿಂದ ಪ್ರಾಣಜಯಕ್ಕೆ ಬಲವಾದ ಯತ್ನವನ್ನು ಮಾಡಬೇಕು. ಅಥವಾ ಚಿತ್ತವನ್ನೇ ನೇರಾಗಿ ಜಯಿಸುವದಕ್ಕೆ ಹೋಗಲೂಬಹುದು; ಆದರೆ ಅದಕ್ಕೆ ಬಹುಕಾಲ ಬೇಕು. ಅಧ್ಯಾತ್ಮವಿಚಾರ, ಸತ್ಸಂಗ, ವಾಸನಾತ್ಯಾಗ, ಪ್ರಾಣಸ್ಪಂದನಿರೋಧ- ಇವೆಲ್ಲವೂ ಚಿತ್ತಜಯಕ್ಕೆ ಯುಕ್ತಿಗಳಾಗಿವೆ. ಇಷ್ಟು ಯುಕ್ತಿಗಳಿದ್ದರೂ ಬಲಾತ್ಕಾರದಿಂದ ಚಿತ್ತವನ್ನು ಜಯಿಸುವದಕ್ಕೆ ಹೋಗುವದು ಮೂಢತನವು. ಹಾಗೆ ಬಲಾತ್ಕಾರ ಮಾಡುವವರು ವ್ಯರ್ಥವಾಗಿ ಕಾಲಯಾಪನೆಮಾಡುತ್ತಾ ಇರುವದು; ಹೇಗೋ ಅದೃಷ್ಟದಿಂದ ಅವರಲ್ಲಿ ಎಲ್ಲಿಯೋ ಕೆಲವರಿಗೆ ಆತ್ಮತತ್ತ್ವವು ತಿಳಿದರೂ ತಿಳಿಯಬಹುದು, ಅದೂ ಹೇಳುವದಕ್ಕಿಲ್ಲ; ಬಹುಜನರಿಗೆ ಸಂಸಾರವೇ ಗತಿ.

ಆದ್ದರಿಂದ ಈ ದುರ್ದೃಷ್ಟಿಯನ್ನು ಬಿಟ್ಟು ಉಪಾಯದಿಂದ ಶುದ್ಧಚೈತನ್ಯವೊಂದನ್ನೇ ಆಶ್ರಯಿಸಿ ವೀತರಾಗನಾಗಿ ಸ್ಥೈರ್ಯವನ್ನು ಪಡೆಯುವದಕ್ಕೆ ಯತ್ನಿಸಬೇಕು. ಸಂವೇದ್ಯವಾದ ವಿಷಯವಿಲ್ಲದ ಸಂವಿದ್ರೂಪವಾದ ಅದ್ವಿತೀಯಾತ್ಮತತ್ತ್ವದಲ್ಲಿಯೇ ನೆಲೆನಿಂತು ಎಲ್ಲಾ ಕರ್ಮಗಳನ್ನೂ ಮಾಡುತ್ತಿದ್ದರೂ ಅಕರ್ತೃವಾಗಿ ಶಾಂತಿ ಸಂಪತ್ತಿನೊಂದಿಗೆ ಆನಂದಪಡುತ್ತಿರಬೇಕು.

★★★★★

# ಸಾಧನಾನುಷ್ಠಾನದ ಉಪದೇಶಕ್ರಮ

**25-4-1942**

**ಬ್ರ|| ಶ್ರೀ|| ವಿಠ್ಠಲಶಾಸ್ತ್ರಿಗಳವರು**

ಕಪಿಲರು ದೇವಹೂತಿಗೆ ಮಾಡಿದ ಸಾಧನಾನುಷ್ಠಾನದ ಉಪದೇಶಕ್ರಮವು **ಭಾಗವತದ ಮೂರನೆಯ ಸ್ಕಂಧದ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿ**ರುತ್ತದೆ.

ಕೈಯಲ್ಲಾದಷ್ಟು ಮಟ್ಟಿಗೆ ಸ್ವಧರ್ಮದಲ್ಲಿ ನಡೆಯುವದು, ವಿಧರ್ಮವನ್ನು ಬಿಡುವದು, ಅದೃಷ್ಟವಶದಿಂದ ಸಿಕ್ಕಿದಷ್ಟರಿಂದ ತೃಪ್ತನಾಗಿ ಆತ್ಮಜ್ಞಾನಿಗಳ ಸೇವೆಯನ್ನು ಮಾಡುತ್ತಾ ಗ್ರಾಮ್ಯಧರ್ಮವನ್ನು ಬಿಟ್ಟು ಮೋಕ್ಷಧರ್ಮದಲ್ಲಿಯೇ ನಿರತನಾಗಿ ಮಿತವೂ ಮೇಧ್ಯವೂ ಆಗಿರುವ ಆಹಾರವನ್ನು ತೆಗೆದುಕೊಳ್ಳುವದು, ಏಕಾಂತವಾಸದಲ್ಲಿಯೇ ಇರುವದು, ಅಹಿಂಸೆ, ಸತ್ಯ, ಅಸ್ತೇಯ, ಅವಶ್ಯವಿದ್ದಷ್ಟು ಅರ್ಥವನ್ನು ಸಂಗ್ರಹಿಸುವದು, ಬ್ರಹ್ಮಚರ್ಯ, ತಪಸ್ಸು, ಶುಚಿಯಾಗಿರುವದು, ಶಾಸ್ತ್ರವನ್ನು ಅಧ್ಯಯನಮಾಡುವದು, ಈಶ್ವರಾರ್ಚನೆಮಾಡುತ್ತಿರುವದು, ಮೌನ, ಉತ್ತಮವಾದ ಆಸನವನ್ನು ಅಳವಡಿಸಿಕೊಳ್ಳುವದು, ಸ್ಥಿರನಾಗಿರುವದು, ಪ್ರಾಣವನ್ನು ಬಿಗಿಹಿಡಿಯುವದು, ಇಂದ್ರಿಯಗಳನ್ನು ವಿಷಯಗಳಿಂದ ಹಿಡಿದೆಳೆದುಕೊಳ್ಳುವದು, ಪ್ರಾಣಗಳನ್ನು ಮನಸ್ಸಿನೊಡನೆ ಯಾವದಾದರೊಂದು ಸ್ಥಾನದಲ್ಲಿ ಧಾರಣೆಮಾಡುವದು, ವಿಷ್ಣುವಿನ ಲೀಲೆಗಳನ್ನು ಚಿಂತಿಸುತ್ತಿರುವದು,

ಮನಸ್ಸನ್ನು ಸಮಾಹಿತವಾಗಿಟ್ಟುಕೊಂಡಿರುವದು- ಇವೇ ಮುಂತಾದ ಮಾರ್ಗಗಳಿಂದ ಮನಸ್ಸು ಕೆಟ್ಟಮಾರ್ಗಕ್ಕೆ ಹೋಗದಂತೆ ತಡೆದುಕೊಂಡು ಪರಮಾತ್ಮನಲ್ಲಿ ನಿಲ್ಲಿಸಿಕೊಳ್ಳಬೇಕು.

ಶುಚಿಯಾದ ಸ್ಥಳದಲ್ಲಿ ಕುಳಿತು ಆಸನವನ್ನಳವಡಿಸಿಕೊಂಡು ಶರೀರವನ್ನು ನೆಟ್ಟಗಿಟ್ಟುಕೊಂಡು ಯೋಗಾಭ್ಯಾಸವನ್ನು ಮಾಡಬೇಕು. ಪೂರಕ, ಕುಂಭಕ ರೇಚಕಗಳಿಂದ ಅಥವಾ ರೇಚಕ, ಕುಂಭಕ, ಪೂರಕಗಳಿಂದ ಪ್ರಾಣಮಾರ್ಗವನ್ನು ಶೋಧಿಸಿಕೊಂಡು ಚಿತ್ತವು ಚಾಂಚಲ್ಯವನ್ನು ಬಿಡುವಂತೆ ಮಾಡಿಕೊಳ್ಳಬೇಕು. ಪ್ರಾಣಾಯಾಮದಿಂದ ಯೋಗಿಯ ಚಿತ್ತವು ಬೇಗನೆ ನಿರ್ಮಲವಾಗುತ್ತದೆ; ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ-ಇವುಗಳಿಂದ ಚಿತ್ತದ ದೋಷಗಳು, ಕಿಲ್ಬಿಷಗಳು, ವಿಷಯಸಂಸರ್ಗಗಳು, ಅನೀಶ್ವರಗುಣಗಳು ಯಾವವೂ ಇಲ್ಲದಂತೆ ಆಗುತ್ತವೆ. ಇಂಥ ಮನಸ್ಸಿನಿಂದ ಭಗವಂತನ ಚಿಂತೆಯನ್ನು ಮಾಡಬೇಕು. ಭಗವಂತನು ಸುಂದರವಿಗ್ರಹನಾಗಿ ಹೃದಯದಲ್ಲಿರುವಂತೆ, ಓಡಾಡುವಂತೆ, ಮಲಗಿರುವಂತೆ-ಧ್ಯಾನಮಾಡಬೇಕು. ಹೀಗೆ ಭಗವಂತನಲ್ಲಿ ಮನಸ್ಸು ಬಿದ್ದಮೇಲೆ ಒಂದೊಂದು ಅಂಗದಲ್ಲಿ ಅದನ್ನು ವಿಶೇಷವಾಗಿ ನಿಲ್ಲಿಸಿಕೊಳ್ಳಬೇಕು. ಪಾದಕಮಲ, ಮೊಳಕಾಲು, ತೊಡೆ, ಸೊಂಟ, ಹೊಕ್ಕುಳು, ಕೌಸ್ತುಭಮಣಿ, ಹಾರ, ಕಂಠ, ತೋಳುಗಳು, ಚಕ್ರಶಂಖ, ಗದೆ, ವನಮಾಲೆ, ಮುಖ, ಕರ್ಣಕುಂಡಲಗಳು, ಮುಂಗುರುಳು; ಕಣ್ಣು, ನೋಟ, ನಗೆ-ಇವುಗಳನ್ನು ಕ್ರಮಕ್ರಮವಾಗಿ ಧ್ಯಾನಮಾಡುತ್ತಾ ಹೋಗಬೇಕು.

ಈ ರೀತಿಯಿಂದ ಅಭ್ಯಾಸಬಲದಿಂದ ಭಗವಂತನಲ್ಲಿ ಭಾವವನ್ನುಂಟುಮಾಡಿಕೊಂಡ ಬಳಿಕ ಭಕ್ತಿಯಿಂದ ಹೃದಯವು ಕರಗಿ ಸಂತೋಷದಿಂದ ಹೋಂಪುಳಿಯಾಗಿ ಕುತೂಹಲದಿಂದಲೂ ಆನಂದ ಬಾಷ್ಪದಿಂದಲೂ ಶರೀರವನ್ನೆಲ್ಲ ಮತ್ತೆಮತ್ತೆ ತೋಯಿಸಿಕೊಂಡು ಪರಮೇಶ್ವರನನ್ನು ತನ್ನಕಡೆಗೆ ಸೆಳೆಯುವದಕ್ಕೆಂದು ಮಾಡಿಕೊಂಡಿದ್ದ ಚಿತ್ತವೆಂಬ ಮೀಂಗೋಲನ್ನು ಮೆಲ್ಲಗೆ ಜಗ್ಗಿಬಿಡುತ್ತಾನೆ. ಆ ಚಿತ್ತಕ್ಕೆ ಆಶ್ರಯವಾಗಲಿ ವಿಷಯವಾಗಲಿ ಇಲ್ಲದೆ ಅದು ಆತ್ಮನಲ್ಲಿಯೇ ಧ್ಯಾನಬಲದಿಂದ ಲಯವಾಗಿ ಬಿಡುತ್ತದೆ. ಆಗ ಗುಣತ್ರಯದ ಪ್ರವಾಹವೇ ಇಲ್ಲವಾಗಿಬಿಡುವದರಿಂದ

ಪರಮಾತ್ಮನೊಬ್ಬನನ್ನೇ ನೇರಾಗಿ ನೋಡುತ್ತಾನೆ. ಈ ಮನೋಲಯವೆಂಬ ಕಡೆಯ ಸಾಧನದಿಂದ ಆ ಪೂಜ್ಯಸ್ಥಿತಿಯಲ್ಲಿಯೇ ಇರುವನಾಗಿ ಸುಖದುಃಖಗಳಿಗೆ ಹೇತುವಾದ ಅಹಂಕಾರವೂ ಇಲ್ಲದ್ದರಿಂದ ಎಲ್ಲವನ್ನೂ ಆ ಪರಮಾತ್ಮನೆಂದೇ ಕಾಣುತ್ತಿರುತ್ತಾನೆ. ಈ ಚರಮವೃತ್ತಿಯನ್ನು ಪಡೆದವನು ದೇಹವು ಸುಮ್ಮನಿರಲಿ ಚಲಿಸಲಿ, ಯಾವದೂ ಅವನಿಗೆ ಗೋಚರವಾಗುವದಿಲ್ಲ; ಏಕೆಂದರೆ ಅವನು ತನ್ನ ಸ್ವರೂಪವಾದ ಪರಮಾತ್ಮತ್ವವನ್ನೇ ಪಡೆದುಕೊಂಡಿರುತ್ತಾನೆ. ಮದ್ಯಮದದಿಂದ ಕಂಗಾಣದವನಿಗೆ ಬಟ್ಟೆಯು ಮೈಮೇಲೆ ಇರಲಿ ಅಥವಾ ಕಳಚಿಬೀಳಲಿ, ಹೇಗೆ ಗೊತ್ತೇ ಆಗುವದಿಲ್ಲವೋ ಅದರಂತೆ ಶರೀರದ ಸ್ಥಿತಿಗತಿಗಳು ಈ ಚರಮವೃತ್ತಿಯನ್ನು ಪಡೆದಾತನಿಗೂ ತಿಳಿಯಬರುವದಿಲ್ಲ. ಅವನು ಸಮಾಧಿಯೋಗವನ್ನು ಏರಿಬಿಟ್ಟಿರುತ್ತಾನೆ; ಎಚ್ಚರವಾದವನಿಗೆ ಕನಸಿನ ವಸ್ತುಗಳು ತೋರದಂತೆಯೇ ಅವನಿಗೆ ವ್ಯವಹಾರವು ತೋರದೆ ಇರುತ್ತದೆ.

ಮಗನು, ಹಣ - ಇವಕ್ಕಿಂತಲೂ ತಾನು ಬೇರೆ ಎಂದು ಹೇಗೆ ಜನಕ್ಕೆ ತಿಳಿಯುತ್ತಿರುವದೋ ಹಾಗೆಯೇ ಅಜ್ಞರು ತಾನೆಂದು ತಿಳಿದುಕೊಂಡಿರುವ ದೇಹಾದಿಗಳಿಗಿಂತಲೂ ಆತ್ಮನು ಬೇರೆಯಾಗಿರುವನು. ಕೊಳ್ಳಿ, ಕಿಡಿ, ಹೊಗೆ-ಇವುಗಳೆಲ್ಲಕ್ಕಿಂತಲೂ ಬೆಂಕಿಯು ಹೇಗೆ ಬೇರೆಯೇ ಆಗಿರುವದೋ ಹಾಗೆಯೇ ಭೂತಗಳು, ಇಂದ್ರಿಯಗಳು, ಅಂತಃಕರಣ, ಜೀವ- ಇವೆಲ್ಲಕ್ಕಿಂತಲೂ ಆತ್ಮನು ಬೇರೆಯಾಗಿರುತ್ತಾನೆ. ಆ ಸಾಕ್ಷಿಯಾದ ಆತ್ಮನೇ ಬ್ರಹ್ಮವು. ಹೇಗೆ ಭೂತಗಳು ಭೂತಸ್ವರೂಪವಾಗಿಯೇ ಈಗ ತೋರುತ್ತಿರುವವೋ ಅದರಂತೆ ಸರ್ವಭೂತಗಳಲ್ಲಿ ಆತ್ಮನೂ ಆತ್ಮನಲ್ಲಿ ಸರ್ವಭೂತಗಳೂ ಇರುವವೆಂದು ಭಾವಿಸಬೇಕು. ತನಗೆ ಕಾರಣವಾಗಿರುವ ವಸ್ತುಗಳಲ್ಲಿ ತೋರುವ ಅಗ್ನಿಯು ಆ ಉಪಾಧಿಗಳಿಂದ ಬೇರೆಬೇರೆಯಾಗಿ ಹೇಗೆ ತೋರುತ್ತಿರುವದೋ ಅದರಂತೆಯೇ ಪ್ರಕೃತಿಯಲ್ಲಿ ತೋರುವ ಆತ್ಮನೂ ಉಪಾಧಿಯಿಂದ ಬೇರೆಬೇರೆಯಾಗಿ ತೋರುತ್ತಿರುವನು. ಆದ್ದರಿಂದ ಈ ಅಚಿಂತ್ಯವಾದ ಸದಸದ್ರೂಪವಾದ ಪ್ರಕೃತಿಯನ್ನು ಗೆದ್ದುಕೊಂಡರೆ ಮನುಷ್ಯನು ತನ್ನ ಸ್ವರೂಪದಲ್ಲಿ ನೆಲೆನಿಲ್ಲುತ್ತಾನೆ.

★★★★★

# ಬ್ರಹ್ಮನ ಉಪದೇಶ

**26-4-1942**

**ಬ್ರ|| ಶ್ರೀ|| ಕುಂದಗೋಳದ ಜೀವಬಾಳಶಾಸ್ತ್ರಿಗಳವರು**

**ಶ್ರೀಮದ್ರಾಮಾಯಣದ ಯುದ್ಧಕಾಂಡದಲ್ಲಿ ನೂರಹದಿನೇಳನೆಯ ಸರ್ಗ**ದಲ್ಲಿ ಸೀತಾದೇವಿಯು ಅಗ್ನಿಪ್ರವೇಶಮಾಡಿದ ಬಳಿಕ ಚಿಂತಾಕ್ರಾಂತನಾಗಿದ್ದ ರಾಮನಬಳಿಗೆ ದೇವತೆಗಳೆಲ್ಲರೂ ಬಂದು ಸ್ತೋತ್ರಮಾಡಿದ್ದು, ಬ್ರಹ್ಮವೇತ್ತರಲ್ಲಿ ಅಗ್ರಗಣ್ಯನೆನಿಸಿರುವ ಚತುರ್ಮುಖಬ್ರಹ್ಮದೇವನು ''ನೀನೇ ಸಾಕ್ಷಾನ್ನಾರಾಯಣನು'' ಎಂದು ತಿಳಿಸಿ ಪರಮಾತ್ಮನ ವಿಭೂತಿಯನ್ನು ವರ್ಣನೆಮಾಡಿದ್ದರ ವಿವರವಿದೆ.

ಶಾಸ್ತ್ರಿಗಳವರು ಮೂಲದಲ್ಲಿ ಬಹಳ ಸ್ವಲ್ಪಭಾಗವನ್ನೇ ಓದಿದರೂ ಸರ್ಗದ ಮುಖ್ಯಾಶಯವನ್ನೇ ಹೃದಯಂಗಮವಾಗಿ ವಿವರಿಸಿ ಹೇಳಿದರು. ಸದ್ಗುರುಗಳ ಸ್ವರೂಪ, ಅನುಭವಿಗಳಾದ ಗುರುಗಳ ಬೋಧೆಯಿಂದ ಶಿಷ್ಯನು ಕೃತಾರ್ಥನಾಗುವ ಬಗೆ, ಅನುಭವವಿಲ್ಲದವರ ಮಾತು ಜೀವವಿಲ್ಲದ ದೇಹದಂತೆ ಸತ್ತಮಾತೆಂಬುದು, ಶಾಸ್ತ್ರಕ್ಕೂ ಅನುಭವವೇ ಒರೆಗಲ್ಲೆಂಬ ಮರ್ಮ, ಅನುಭವಾನುಸಾರಿಯಾದ ವಾಕ್ಯಗಳಿಂದ ಸ್ವರ್ಗಾದಿಬೋಧಕವಾಕ್ಯಗಳಲ್ಲಿಯೂ ಜನರಿಗೆ ಪ್ರಾಮಾಣ್ಯ ಬುದ್ಧಿಯುಂಟಾಗಿರುವದೆಂಬುದು, ಕರ್ಮಕಾಂಡಕ್ಕೆ ಜ್ಞಾನದಲ್ಲಿಯೇ ಪರಮತಾತ್ಪರ್ಯವೆಂಬ ವಿಷಯ, ತತ್ತ್ವದರ್ಶಿಗಳ ಉಪದೇಶದಿಂದ ಮನುಷ್ಯರ ಮನಸ್ಸಿನ ಮೇಲೆ ಆಗುವ ಪರಿಣಾಮ, ಜ್ಞಾನಿಗಳಿಗೂ ಅಜ್ಞಾನಿಗಳಿಗೂ ಇರುವ ಮುಖ್ಯತಾರತಮ್ಯ, ಸರ್ವತ್ರ ಪರಮಾತ್ಮನ ಸತ್ತಾಭಾನಗಳು ವ್ಯಾಪಿಸಿಕೊಂಡಿರುವದರ ಬಗೆ ಇವೆಲ್ಲವನ್ನೂ ತಿಳಿಸಿಕೊಟ್ಟು ಬ್ರಹ್ಮನ ಉಪದೇಶದಿಂದ ನಿತ್ಯಸಿದ್ಧವಾಗಿದ್ದ ತನ್ನ ಸ್ವರೂಪವನ್ನೇ ರಾಮಚಂದ್ರನು ಅರಿತುಕೊಂಡಂತೆ ಗುರೂಪದೇಶದಿಂದ ಸಾಧಕರೂ ಅರಿತುಕೊಂಡು ಕೃತಾರ್ಥರಾಗಬೇಕು.

★★★★★

# ಜ್ಞಾನಯಜ್ಞ

**27-4-1942**

**ಬ್ರ॥ ಶ್ರೀ॥ ವಿಠ್ಠಲಶಾಸ್ತ್ರಿಗಳವರು**

**ಸೂತಸಂಹಿತೆಯ ಯಜ್ಞವೈಭವಖಂಡದಲ್ಲಿ ಹತ್ತನೆಯ ಅಧ್ಯಾಯದಲ್ಲಿ** ಜ್ಞಾನಯಜ್ಞದ ವರ್ಣನೆಯಿದೆ. ಜ್ಞಾನವೆಂಬುದು ಬಹುವಿಧವಾಗಿರುತ್ತದೆ. ಪರಮಾತ್ಮನಾದ ಶಿವನ ಸ್ವರೂಪವೇ ಜ್ಞಾನವು. ಅದು ಮಾಯೆಯ ಮತ್ತು ಮಾಯಾಕಾರ್ಯದ ಸಂಬಂಧದಿಂದ ಅನೇಕ ಆಕಾರಗಳನ್ನು ಹೊಂದುತ್ತದೆ. ಹೇಗೆಂದರೆ ಶಿವನ ಜಡಶಕ್ತಿಯ ಮಾಯಾರೂಪಕ್ಕೆ ಸಂಬಂಧಪಟ್ಟ ಜ್ಞಾನವು **ನಿಯನ್ತೃ**ಎನ್ನಿಸಿಕೊಳ್ಳುತ್ತದೆ; ಆ ಶಕ್ತಿಯ ಅವಿದ್ಯಾರೂಪಕ್ಕೆ ಸಂಬಂಧಪಟ್ಟದ್ದು **ಜೀವ** ಎನ್ನಿಸಿಕೊಳ್ಳುತ್ತದೆ.

ಜೀವವೆಂಬ ಜ್ಞಾನವು ಅರ್ಥದಿಂದ ಮುಖ್ಯವಾದದ್ದೆಂದೂ ಪ್ರತೀತಿಯಿಂದ ಮುಖ್ಯವಾದದ್ದೆಂದೂ ಎರಡುಬಗೆ, ಅವಿದ್ಯಾಬದ್ಧವಾದ ವಿಜ್ಞಾನವೇ ಅರ್ಥದಿಂದ ಮುಖ್ಯವಾದ ಜೀವನು; ಸ್ಥೂಲಸೂಕ್ಷ್ಮಶರೀರಗಳಿಂದೊಡಗೂಡಿದ ಜೀವನೇ ಪ್ರತೀತಿಯಿಂದ ಮುಖ್ಯವಾದವನು. ಅನೇಕ ವೃತ್ತಿಗಳಿಂದ ಕೂಡಿರುವ ಚಿತ್ತವೇ ಜೀವನ ಜ್ಞಾತೃತ್ವಕ್ಕೂ ದುಃಖಿತ್ವಾದಿಗಳಿಗೂ ಕಾರಣವಾಗಿರುತ್ತದೆ.

ಚಿತ್ತವೆಂಬುದು ಪ್ರಮಾಣ, ಭ್ರಾಂತಿ, ಸಂದೇಹ-ಎಂದು ಬಹುರೂಪವನ್ನಾನುತ್ತದೆ. ಆಯಾ ಆಕಾರದಿಂದೊಡಗೂಡಿದ ಚೈತನ್ಯವೂ ಪ್ರಮಾಣವೇ ಮುಂತಾದ ಹೆಸರುಗಳನ್ನು ಪಡೆಯುತ್ತದೆ. ಹೇಗೆಂದರೆ ಅದುಷ್ಟವಾದ ಕಾರಣದಿಂದ ಹುಟ್ಟುವ ಜ್ಞಾನವು **ಪ್ರಮಾಣವೆನಿಸುತ್ತದೆ.** ದುಷ್ಟಕಾರಣದಿಂದ ಹುಟ್ಟಿದರೆ **ಭ್ರಾಂತಿಯೆನಿಸುತ್ತದೆ.** ಹಾಗೊ, ಹೀಗೊ?-ಎಂದು ಇಬ್ಬಗೆಯಾಗಿರುವಜ್ಞಾನವು ಸಂದೇಹವೆನಿಸುತ್ತದೆ. ಹೀಗೆಯೇ ಸರಿ ಎಂದು ತೋರುವ ಜ್ಞಾನವು **ನಿಶ್ಚಯವೆನಿಸುತ್ತದೆ.**

ಪ್ರಮಾಣಜ್ಞಾನಸಾಮಗ್ರಿಗಳು ಆರು ವಿಧ. ಅವುಗಳಲ್ಲಿ ಅನುಪಲಬ್ಧಿ ಎಂಬುದು ಅಭಾವವನ್ನರಿಯುವ ಸಾಮಗ್ರಿಯು, ಮಿಕ್ಕ ಐದೂ ಭಾವವನ್ನು ತಿಳಿಯುವದಕ್ಕೆ ಸಾಧನವು. ಇಂದ್ರಿಯದಿಂದಾಗುವ ಜ್ಞಾನವು **ಪ್ರತ್ಯಕ್ಷವು,** ವ್ಯಾಪ್ತಿಜನ್ಯಜ್ಞಾನವು **ಅನುಮಾನವು,** ಸಾದೃಶ್ಯಕಾರಣದಿಂದಾಗುವಜ್ಞಾನವು **ಉಪಮಾನವು,** ಅನುಪಪತ್ತಿಯಿಂದಾಗುವದು **ಅರ್ಥಾಪತ್ತಿಯು** ತಾತ್ಪರ್ಯದಿಂದೊಡಗೂಡಿದ ಶಬ್ದದಿಂದಾಗುವ ಜ್ಞಾನವು **ಶಾಬ್ದವು.**

ಶಬ್ದಪ್ರಮಾಣದಲ್ಲಿ ವರ್ಣಗಳೇ ಪದಾರ್ಥಗಳನ್ನು ಹೇಳುವವೆಂದು ಕೆಲವರ ಮತವು. ಪದಗಳೇ ವಾಚಕಗಳೆಂದು ಕೆಲವರೆನ್ನುವರು; ವಾಕ್ಯಗಳೇ ವಾಚಕಗಳೆಂದು ಕೆಲವರೆನ್ನುತ್ತಾರೆ. ಒಂದು ಅಕ್ಷರದ ಅಥವಾ ಅನೇಕಾಕ್ಷರಗಳಿಂದ ಪದಗಳಾಗಿರುತ್ತವೆ; ಪದಗಳು ಒಟ್ಟುಗೂಡಿ ವಾಕ್ಯವಾಗುತ್ತದೆ. ವಾಕ್ಯವು ಮುಖ್ಯವೆಂದೂ ಗೌಣವೆಂದೂ ಎರಡು ವಿಧವು. ಮುಖ್ಯವಾದದ್ದು ಮಹಾವಾಕ್ಯವು, ಗುಣಭೂತವಾಗಿರುವದು ಅವಾಂತರವಾಕ್ಯವು. ಇವೆರಡೂ ಸೇರಿ ಏಕವಾಕ್ಯವಾಗುವವು. ಪದಗಳು ಶಕ್ತಿಯಿಂದಲೂ ವಾಕ್ಯಗಳು ತಾತ್ಪರ್ಯದಿಂದಲೂ ತಮ್ಮ ಅರ್ಥವನ್ನು ತಿಳಿಸುತ್ತವೆ. ತಾತ್ಪರ್ಯವು ಮಹಾತಾತ್ಪರ್ಯವೆಂದೂ ಅವಾಂತರತಾತ್ಪರ್ಯವೆಂದೂ ಎರಡು ಬಗೆ.

ಕೆಲವು ವಾಕ್ಯಗಳು ನಿಷೇಧರೂಪವಾಗಿರುತ್ತವೆ, ಮತ್ತೆ ಕೆಲವು ವಿಧಿರೂಪವಾಗಿರುತ್ತವೆ. ವಿಧಿನಿಷೇಧಗಳೆರಡೂ ಕರ್ತವ್ಯವನ್ನು ತಿಳಿಸುತ್ತವೆ. ಇರುವ ಅರ್ಥವಾಗಿವನ್ನೇ ಬೋಧಿಸುವ ವಾಕ್ಯವು ಲೌಕಿಕವಾಗಲಿ ವೈದಿಕವಾಗಲಿ ಎರಡು ಬಗೆ; ಪಡೆದಿರುವದನ್ನೇ ಪಡೆಯಿಸುವದೊಂದು, ತೊಲಗಿರುವದನ್ನೇ ತೊಲಗಿಸುವದು ಮತ್ತೊಂದು.

ಪ್ರತ್ಯಕ್ಷಾದಿಪ್ರಮಾಣಗಳು ಐದು, ಕರ್ತವ್ಯವಿಷಯವಾದ ವಾಕ್ಯ - ಇವು ಬಾಹ್ಯವಿಷಯವನ್ನೇ ತಿಳಿಯಿಸುವದರಿಂದ ಅನಾತ್ಮವನ್ನೇ ತಿಳಿಸುತ್ತವೆ. ಆದ್ದರಿಂದ ಅವು ಆತ್ಮನನ್ನು ತಿಳಿಯಪಡಿಸಲಾರವು. ಪ್ರತ್ಯಗಾತ್ಮನೇ ಪರಶಿವರೂಪನು. ಮಿಕ್ಕದ್ದೆಲ್ಲವೂ ಅನಾತ್ಮವು. ಸಿದ್ಧಾರ್ಥಬೋಧಕವಾದ ಲೌಕಿಕವಾಕ್ಯಗಳು ಕೆಲವು ಅನಾತ್ಮವಿಷಯವಾಗಿರುತ್ತವೆ; ಅವುಗಳಿಂದಲೂ

ಆತ್ಮನನ್ನರಿಯುವದಕ್ಕೆ ಆಗುವದಿಲ್ಲ. ಆದರೆ ಕೆಲವು ಲೌಕಿಕವಾಕ್ಯಗಳು ಶ್ರುತಿಯ ಬಲದಿಂದಾಗಿದ್ದು ಶಿವಸ್ವರೂಪವನ್ನು ತಿಳಿಯಿಸಬಲ್ಲವಾಗಿರುತ್ತವೆ. ವೇದಾಂತದಲ್ಲಿರುವ ಮಹಾವಾಕ್ಯವು ಶಿವಸ್ವರೂಪವನ್ನು ಪಡೆಯುವದಕ್ಕೆ ಸಾಧಕವಾಗಿರುತ್ತದೆ, ಅದೇ ಭ್ರಾಂತಿಸಿದ್ಧವಾಗಿರುವ ಸಂಸಾರವನ್ನು ತೊಲಗಿಸುತ್ತದೆ.

ಆತ್ಮನು ಸ್ವಭಾವದಿಂದಲೇ ಬದ್ಧನಾಗಿದ್ದರೆ ನೂರಾರು ಜನ್ಮಗಳಾದರೂ ಅವನಿಗೆ ಮುಕ್ತಿಯಾಗಲಾರದು. ಏಕೆಂದರೆ ತನ್ನ ಸ್ವರೂಪವಾಗಿರುವದು ತನ್ನ ಜ್ಞಾನವಾದಹೊರತು ತೊಲಗಲಾರದು. ಆದರೆ ಆತ್ಮನಿಗೆ ನಾಶವಿಲ್ಲ, ಏಕೆಂದರೆ ಎಲ್ಲ ನಾಶವನ್ನೂ ನೋಡುವಾತನೇ ಆತ್ಮನು.

ಆತ್ಮನಲ್ಲಿರುವ ಭೇದವಾಗಲಿ ಆತ್ಮಬ್ರಹ್ಮರ ಭೇದವಾಗಲಿ ಉಪಾಧಿಯಿಂದಲೇ ಹೊರತು ತಾನೇ ಇರುವದಲ್ಲ. ಆಕಾಶಕ್ಕೆ ಹೇಗೆ ಘಟವೇ ಮುಂತಾದವುಗಳಿಂದ ಭೇದವಾಗುವದೋ ಅದರಂತೆ ಆತ್ಮನ ಭೇದವನ್ನೂ ಅರಿಯಬೇಕು. ಪರಮೇಶ್ವರನು ಚೈತನ್ಯರೂಪನಾದ್ದರಿಂದ ಒಬ್ಬನೇ ಆಗಿರುತ್ತಾನೆ ಎಂದು ಶ್ರುತಿಗಳು ಹೇಳುತ್ತಿವೆ. ಚಿತ್ತಿನಲ್ಲಿ ಎಂದಿಗೂ ಭೇದವಿಲ್ಲ, ಚೇತ್ಯವಾದ ಅನಾತ್ಮದ ಭೇದವು ಚಿತ್ತಿಗೆ ಎಂದಿಗೂ ಉಂಟಾಗಲಾರದು. ಆತ್ಮರೂಪನಾಗಿ ರುವ ಶಿವನು ಚಿನ್ಮಾತ್ರನಾಗಿರುತ್ತಾನೆ. ಏಕೆಂದರೆ ಅನಾತ್ಮವಾದ ಘಟಾದಿಗಳು ಚೇತ್ಯವಾಗಿರುತ್ತವೆ. ಕೆಲವರು ಆತ್ಮನಲ್ಲಿಯೂ ಸ್ವತಃ ಭೇದವಿರುವದೆಂದು ಹೇಳುತ್ತಾರೆ; ಆದರೆ ಅದು ಸರಿಯಲ್ಲ, ಏಕೆಂದರೆ ಭೇದಕ್ಕೆ ಕಾರಣವಿರುವದಿಲ್ಲ. ಆದ್ದರಿಂದ ಆತ್ಮನಲ್ಲಿರುವ ಭೇದವೆಂಬುದು ಭ್ರಾಂತಿಸಿದ್ಧವೇ ಸರಿ.

ಘಟಾದಿಗಳಲ್ಲಿ ಭೇದವಿದೆ ಎಂದು ಒಪ್ಪಿಕೊಂಡು ಆತ್ಮಭೇದವನ್ನು ತಿರಸ್ಕರಿಸಿದ್ದಾಯಿತು. ಆದರೆ ಸರಿಯಾಗಿ ನೋಡಿದರೆ ಘಟಾದಿಗಳ ಭೇದವೂ ಭ್ರಾಂತಿಸಿದ್ಧವೇ ಸರಿ. ಘಟಾದಿಗಳ ಭೇದವು ವ್ಯವಹಾರದಲ್ಲಿ ಸತ್ಯವೇ ಆದರೂ ಆ ಭೇದವು ಅವುಗಳ ಸ್ವರೂಪವೆಂದಾಗಲಿ ಧರ್ಮವೆಂದಾಗಲಿ ಗೊತ್ತುಪಡಿಸುವದು ಎಂದಿಗೂ ಆಗಲಾರದು. ಒಂದಕ್ಕಿಂತ ಮತ್ತೊಂದು ಭಿನ್ನವಾಗಿದೆ ಎನ್ನಬೇಕೇ ಹೊರತು ಒಂದೇ ವಸ್ತುವಿಗೆ ಭೇದವೆಂಬುದಿಲ್ಲವಷ್ಟೆ. ಮತ್ತೊಂದು ಎಂಬುದು ಭೇದವು ಸಿದ್ಧವಾದ

ಮೇಲೆಯೆ ಸಿದ್ಧವಾಗತಕ್ಕದ್ದು, ಭೇದವು ಮತ್ತೊಂದೆಂಬುದು ಸಿದ್ಧವಾದಮೇಲೆಯೇ ಸಿದ್ಧವಾಗತಕ್ಕದ್ದು-ಹೀಗೆ ಅನ್ಯೋನ್ಯಾಶ್ರಯವು ಬರುತ್ತದೆ. ಶ್ರುತಿಯು ಸತ್ತು ಒಂದೇ, ಅದಕ್ಕೆರಡನೆಯದಿಲ್ಲ-ಎಂದು ಹೇಳುತ್ತಿದೆ; ದ್ವೈತವು ಮಾಯಾಮಾತ್ರವೆನ್ನುತ್ತಿದೆ. ಏಕತ್ವವನ್ನು ತಿಳಿದರೆ ಶೋಕಮೋಹಗಳಿಲ್ಲವೆನ್ನುತ್ತದೆ; ಎರಡನೆಯದರಿಂದ ಅಂಜಿಕೆಯೆಂದೂ ಅಲ್ಪವಾದ ಪರಿಚ್ಛಿನ್ನದಿಂದ ಸುಖವಿಲ್ಲವೆಂದೂ ಸಾರುತ್ತಿದೆ. ಆದ್ದರಿಂದ ತರ್ಕದಿಂದಲೂ ಪ್ರಮಾಣದಿಂದಲೂ ಜ್ಞಾನಿಗಳ ಅನುಭವದಿಂದಲೂ ವಸ್ತುವೊಂದೇ ಎಂದಾಯಿತು.

ಯಾರು ಮಹಾವಾಕ್ಯದಿಂದ ಈ ಐಕ್ಯವನ್ನರಿತುಕೊಳ್ಳುವರೋ ಅವರು ಕನಸಿನಿಂದ ಎಚ್ಚತ್ತವರಂತೆ ಸಂಸಾರದಿಂದ ಮುಕ್ತರಾಗುವರು. ಭೇದದರ್ಶನವನ್ನು ಇಟ್ಟುಕೊಂಡು ಮುಕ್ತಿಯನ್ನು ಬಯಸುವವರು ಅತಿಘೋರವಾದ ಸಂಸಾರದಲ್ಲಿ ಬೀಳುವರು. ಸರ್ವಭೂತಗಳಲ್ಲಿಯೂ ಆತ್ಮನನ್ನೂ ಆತ್ಮನಲ್ಲಿ ಸರ್ವಭೂತಗಳನ್ನೂ ಕಂಡವನು ಆತ್ಮಯಾಜಿಯು, ಅವನೇ ಸ್ವಾರಾಜ್ಯವನ್ನು ಪಡೆಯುವವನು. ಈ ಜ್ಞಾನದಿಂದಲೇ ಸಂಸಾರಸಾಗರವನ್ನು ದಾಟಬಹುದು. ಈ ಅದ್ವೈತಜ್ಞಾನದಿಂದ ಬಹುಜನರು ಮುಕ್ತರಾಗಿರುತ್ತಾರೆ.

ಇದೇ ಜ್ಞಾನಯಜ್ಞವು, ಇದಕ್ಕೆ ಸಮಾನವಾದ ಯಜ್ಞವು ಮತ್ತೊಂದಿಲ್ಲ. ಇದರ ವೈಭವವನ್ನು ದೇವಾದಿಗಳೂ ಅರಿಯರು. ಈಶ್ವರನ ಅನುಗ್ರಹದಿಂದಲೇ ಇದರ ವೈಭವವು ತಿಳಿಯಬರುತ್ತದೆ. ಜ್ಞಾನಯಜ್ಞದಲ್ಲಿ ನಿಷ್ಠರಾದವರಿಗೆ ಹೇಯವಿಲ್ಲ, ಉಪಾದೇಯವಿಲ್ಲ. ಅವರ ಕಣ್ಣಿಗೆ ಎಲ್ಲವೂ ಬ್ರಹ್ಮವೇ ಆಗಿರುತ್ತದೆ. ಈ ಯಜ್ಞದ ವೈಭವವನ್ನು ಶ್ರುತಿಯಾಗಲಿ ಶಿವನಾಗಲಿ ಹೇಗೊ ಹೇಳಬಹುದೇ ಹೊರತು ಮಿಕ್ಕವರು ಯಾರೂ ಶಕ್ತರಲ್ಲ.

★★★★★

# ಸಂಪಾತಿಯ ವೃತ್ತಾಂತ

**09-05-1943**

**ಬ್ರ॥ ಶ್ರೀ॥ ಮತ್ತೂರು ಸುಬ್ಬರಾಯಾವಧಾನಿಗಳು**

**ಅಧ್ಯಾತ್ಮರಾಮಾಯಣದಲ್ಲಿ ಕಿಷ್ಕಿಂಧಾಕಾಂಡದಲ್ಲಿ 8ನೆಯ** ಸರ್ಗದಲ್ಲಿ ಸಂಪಾತಿಯು ಅಂಗದ, ಹನುಮಂತ, ಮೊದಲಾದ ವಾನರರಿಗೆ ತನ್ನ ಹಿಂದಿನ ವೃತ್ತಾಂತವನ್ನು ಹೇಳಿರುತ್ತಾನೆ: ನನಗೂ ನನ್ನ ತಮ್ಮನಾದ ಜಟಾಯುವಿಗೂ ಯೌವನವು ಬರಲಾಗಿ ಒಮ್ಮೆ ನಾವಿಬ್ಬರೂ ಬಲಗರ್ವಿತರಾಗಿ ನಮ್ಮಿಬ್ಬರಲ್ಲಿ ಯಾರು ಬಲಿಷ್ಠರೆಂಬುದನ್ನು ಗೊತ್ತುಪಡಿಸುವದಕ್ಕಾಗಿ ಸೂರ್ಯಮಂಡಲದವರೆಗೆ ಓಡೋಣವೆಂದು ಒಂದು ಪಂಥವನ್ನು ಮಾಡಿಕೊಂಡೆವು. ನಾವಿಬ್ಬರೂ ಅನೇಕ ಯೋಜನಗಳು ಹಾರಿಹೋದ ಮೇಲೆ ಜಟಾಯುವು ಬಿಸಿಲಿನ ತಾಪಕ್ಕೆ ತರಿಹರಿಸಲಾರದೆ ಕಳವಳಿಸುತ್ತಿರುವದನ್ನು ಕಂಡು ನಾನು ರೆಕ್ಕೆಗಳನ್ನು ಅವನ ಮೇಲೆ ಬಿಚ್ಚಿಹಿಡಿದೆನು. ಆಗ ನನ್ನ ರೆಕ್ಕೆಯೆರಡೂ ಸುಟ್ಟು ಈ ವಿಂಧ್ಯಪರ್ವತದ ಕೋಡುಗಲ್ಲಿನ ಮೇಲೆ ದೊಪ್ಪೆಂದು ಬಿದ್ದು ಮೂರ್ಛೆಹೋದೆನು. ಮೂರು ದಿನಗಳಾದಬಳಿಕ ಎಚ್ಚರವಾಯಿತು. ಆಗ ನಾನು ಇಲ್ಲಿ ಏಕೆ ಇರುವೆನೆಂಬುದೂ ತಿಳಿಯದೆ ಮೆಲ್ಲಗೆ ಕಣ್ತೆರದು ನೋಡಲು ಮುಂಗಡೆಯಲ್ಲಿ ಒಂದು ಆಶ್ರಮವು ಕಂಗೊಳಿಸಿತು. ಅಲ್ಲಿಗೆ ಮೆಲ್ಲಮೆಲ್ಲನೆ ತೆವಳಿಕೊಂಡು ಹೋದೆನು. ಅಲ್ಲಿದ್ದ ಚಂದ್ರಮನೆಂಬ ಮುನಿರಾಯನು ನನ್ನನ್ನು ಕಂಡು ಅಚ್ಚರಿಯಿಂದ ಇದೇನೆಂದು ಕೇಳಿದನು. ಆತನಿಗೆ ನಡೆದದ್ದನ್ನೆಲ್ಲವನ್ನೂ ವಿವರವಾಗಿ ತಿಳಿಸಿ ದಯಾಮಯನೇ, ನಾನು ಇನ್ನುಮೇಲೆ ರೆಕ್ಕೆಯಿಲ್ಲದೆ ಜೀವಿಸುವದೆಂತು? ನನ್ನನ್ನು ನೀನು ಹೇಗಾದರೂ ಕರುಣೆಯಿಂದ ಉದ್ಧರಿಸಬೇಕು ಎಂದು ಬೇಡಿಕೊಂಡೆನು. ಆಗ ಆ ಮುನಿಯು ಅಪ್ಪ, ದೇಹಾಭಿಮಾನದಿಂದ ಈ ಬಗೆಯ ದುಃಖವುಂಟಾಗುತ್ತದೆ. ಅನಾದ್ಯವಿದ್ಯೆಯಿಂದ ಜೀವನಿಗೆ ದೇಹಾಭಿಮಾನವಾಗಿರುತ್ತದೆ. ಚೈತನ್ಯದ ನೆರಳು ದೇಹದಮೇಲೆ ಬೀಳುವದರಿಂದ ದೇಹವೇ ನಾನೆಂಬ ಭ್ರಾಂತಿಯುಂಟಾಗುತ್ತದೆ; ಅದರಿಂದ

ಈ ಸಂಸಾರವುಂಟಾಗುತ್ತದೆ. ಆತ್ಮನು ನಿರ್ವಿಕಾರನಾದರೂ ಈ ಮಿಥ್ಯಾತಾದಾತ್ಮ್ಯದಿಂದ ಕರ್ತೃತ್ವವೂ ಅದರಿಂದಾದ ಫಲದ ಭೋಕ್ತೃತ್ವವೂ ಜೀವನಿಗೆ ಗಂಟು ಬೀಳುತ್ತದೆ. ಜೀವನು ತಾನು ಮಾಡಿದ ಪುಣ್ಯದಿಂದ ಸ್ವರ್ಗಕ್ಕೆಹೋಗಿ, ಪುಣ್ಯಫಲವು ಸವೆದಬಳಿಕ ಮತ್ತೆ ಕೆಳಕ್ಕೆ ಬಿದ್ದು ಧಾನ್ಯಾದಿಗಳಿಂದಾದ ಭಕ್ಷ್ಯಾದಿಗಳಮೂಲಕ ಮನುಷ್ಯಶರೀರವನ್ನು ಸೇರಿ ರೇತೋರೂಪದಿಂದ ಸ್ತ್ರೀಯ ಗರ್ಭವನ್ನು ಹೊಕ್ಕು ಮೆಲ್ಲಮೆಲ್ಲಗೆ ಶರೀರವನ್ನು ಪಡೆದು ಪಡಬಾರದ ದುಃಖವನ್ನು ಅನುಭವಿಸುತ್ತಾನೆ. ಆಗ ಅವನಿಗೆ ಹಿಂದಿನ ಜನ್ಮಗಳ ನೆನಪು ಉಂಟಾಗುತ್ತದೆ. ಪಶ್ಚಾತ್ತಾಪದಿಂದ ಅಯ್ಯೋ, ಈ ಗರ್ಭದಿಂದ ಹೊರಕ್ಕೆ ಬಂದರೆ ಇನ್ನು ಮೇಲಾದರೂ ಭಗವಂತನನ್ನು ಆರಾಧಿಸಿ ಕೃತಕೃತ್ಯನಾಗುವೆನು ಎಂದು ಕೊರಗುತ್ತಾನೆ. ಇಂಥ ದುಃಖಗಳನ್ನು ನೀನೂ ಅನುಭವಿಸಿರುತ್ತೀಯೆ – ಆದ್ದರಿಂದ ದೇಹಾಭಿಮಾನದಿಂದ ಈ ದುಃಖಪರಂಪರೆಯಾಗಿರುವದೆಂಬುದನ್ನು ತಿಳಿದು ಅವಸ್ಥಾತ್ರಯಸಂಬಂಧವಿಲ್ಲದ ಸಚ್ಚಿದಾನಂದಸ್ವರೂಪನೂ ನಿತ್ಯಶುದ್ಧಬುದ್ಧಶಾಂತಸ್ವರೂಪನಾದ ಆತ್ಮನ ಜ್ಞಾನವನ್ನು ಮಾಡಿಕೊಳ್ಳಬೇಕು. ಆಗ ಅಜ್ಞಾನದಿಂದಾಗುವ ಈ ಸುಖದುಃಖಗಳ ಅಂಟು ಇಲ್ಲದಂತಾಗುವದು. ಈ ಪ್ರಾರಬ್ಧಕರ್ಮವು ಸವೆಯುವವರೆಗೂ ನೀನು ಇಲ್ಲೇ ಇರು. ತ್ರೇತಾಯುಗದಲ್ಲಿ ರಾವಣನು ಶ್ರೀರಾಮಭಗವಂತನ ಪತ್ನಿಯಾದ ಸೀತೆಯನ್ನು ಕದ್ದೊಯ್ಯುವನು. ಆಕೆಯನ್ನು ಹುಡುಕಿಕೊಂಡು ಬರುವ ವಾನರರಿಗೂ ನಿನಗೂ ಕಾರಣಾಂತರದಿಂದ ಸಮಾಗಮವಾಗುವುದು. ಅವರಿಗೆ ಸೀತಾವೃತ್ತಾಂತವನ್ನು ತಿಳಿಸಿದರೆ ನಿನ್ನ ಪಕ್ಷಗಳು ಮತ್ತೆ ಗರಿಗಟ್ಟಿಕೊಳ್ಳುವವು ಎಂದು ನುಡಿದನು. ಇಗೋ, ನನಗೆ ಅದರಂತೆ ರೆಕ್ಕೆಗಳು ಬಂದಿರುತ್ತವೆ. ದುರ್ಜನರು ಕೂಡ ಯಾವ ಭಗವಂತನ ನಾಮಸ್ಮರಣೆಯಿಂದಲೇ ಸಂಸಾರಸಾಗರವನ್ನು ದಾಟುವರೋ ಅಂಥ ಶ್ರೀರಾಮನ ಭಕ್ತರಾದ ನೀವು ಈ ಕಡಲನ್ನು ದಾಟುವದೇನೂ ಕಷ್ಟವಲ್ಲ ಎಂದು ಸಂಪಾತಿಯು ನುಡಿದನು. ಹೀಗೆಂಬುದು ಸರ್ಗದ ಅಭಿಪ್ರಾಯವು.

★★★★★

# ಧ್ರುವನು ಮಾಡಿದ ಭಗವತ್ಸ್ತುತಿ

**10-5-1943**

**ಬ್ರ॥ಶ್ರೀ॥ ಮತ್ತೂರು ಸುಬ್ಬರಾಯಶಾಸ್ತ್ರಿಗಳವರು**

**ಭಾಗವತದ 4ನೆಯ ಸ್ಕಂದದ 9ನೆಯ ಅಧ್ಯಾಯದಲ್ಲಿ** - ಬಲತಾಯಿಯ ದುರುಕ್ತಿಗೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂಬ ಬುದ್ಧಿಯಿಂದ ಹೊರಟ ಧ್ರುವನಿಗೆ ದಾರಿಯಲ್ಲಿ ನಾರದರ ದರ್ಶನವಾಯಿತು. ಅವರ ಉಪದೇಶದಂತೆ ಮಧುವನಕ್ಕೆ ಹೋಗಿ ತಪಸ್ಸನ್ನು ಮಾಡುತ್ತಿರಲು ದೇವತೆಗಳಿಂದ ಪ್ರಾರ್ಥಿತನಾದ ವಿಷ್ಣುವು ಅವನನ್ನು ನೋಡುವುದಕ್ಕೆ ಬಂದನು. ಧ್ರುವನು ತನ್ನೊಳಗೆ ಚಿಂತಿಸುತ್ತಿದ್ದ ಮೂರ್ತಿಯು ತಟ್ಟನೆ ಮೈಗೆರೆಯಲು ಕಣ್ಣುತೆರೆದು ನೋಡುವಲ್ಲಿ ಅದೇ ಆಕಾರದ ವಿಷ್ಣುವು ಕಣ್ಣಿಗೆ ಗೋಚರನಾದನು. ಕೂಡಲೆ ಭಯಭಕ್ತಿಗಳಿಂದ ನಮಸ್ಕರಿಸಿ ಆ ಭಗವಂತನನ್ನು ಸ್ತೋತ್ರಮಾಡಬೇಕೆಂದು ಹವಣಿಸುತ್ತಾ ಧ್ರುವನು ಸ್ತೋತ್ರಮಾಡುವ ಬಗೆಯನ್ನು ಅರಿಯದೆ ಸಂಕಟಪಡುತ್ತಿರುವದನ್ನು ಕಂಡು ಶ್ರೀವಿಷ್ಣುವು ತನ್ನ ವೇದಮಯವಾದ ಶಂಖವನ್ನು ಅವನ ಕೆನ್ನೆಗೆ ತಾಕಿಸಿದನು. ಕೂಡಲೆ ಆತ್ಮಜ್ಞಾನವೂ ಭಕ್ತಿಯೂ ಧ್ರುವನಲ್ಲಿ ಕಾಣಿಸಿಕೊಂಡವು; ಅವನು ಆಗ ಹೀಗೆಂದು ಭಗವಂತನನ್ನು ಸ್ತೋತ್ರಮಾಡಿದನು:

ಯಾವಾತನು ನನ್ನ ಒಳಹೊಕ್ಕು ನನ್ನ ವಾಗಿಂದ್ರಿಯವನ್ನೂ ಕರಚರಣಾದಿಗಳನ್ನು ಎಚ್ಚರಗೊಳಿಸಿ ಜೀವನವನ್ನೆರೆದಿರುವನೋ ಆ ಭಗವಂತನಿಗೆ ನಮಸ್ಕಾರ! ಎಲೈ ಭಗವಂತನೆ, ನೀನೊಬ್ಬನೇ ಮಾಯೆಯಿಂದ ಈ ಜಗತ್ತೆಲ್ಲವನ್ನೂ ಸೃಷ್ಟಿಸಿ ಕಟ್ಟಿಗೆಯಲ್ಲಿ ಬಗೆಬಗೆಯಾಗಿ ಕಾಣುವ ಬೆಂಕಿಯಂತೆ ಈ ಗುಣಮಯವಾದ ಉಪಾಧಿಗಳಲ್ಲಿ ಅನೇಕವಾಗಿ ಕಾಣಿಸಿಕೊಳ್ಳುತ್ತಿರುವೆ. ಭಕ್ತರು ನೀನು ಕೊಟ್ಟ ಜ್ಞಾನದಿಂದಲೇ ಎಲ್ಲವನ್ನೂ ನಿದ್ರೆಯಿಂದೆಚ್ಚತ್ತವರಂತೆ ಅರಿತುಕೊಳ್ಳುತ್ತಾರೆ. ಮೋಕ್ಷಪ್ರದವಾದ ನಿನ್ನ ಪಾದಮೂಲವನ್ನು ಕೃತಜ್ಞರಾದ ಯಾರುತಾನೆ ಮರೆತಾರು? ಜನನಮರಣಗಳಿಂದ ಬಿಡುಗಡೆಮಾಡಬಲ್ಲ

ನಿನ್ನನ್ನು ವಿಷಯೇಂದ್ರಿಯಸುಖಕ್ಕಾಗಿ ಅರ್ಚಿಸುವವರು ನಿಜವಾಗಿ ನಿನ್ನ ಮಾಯೆಯಿಂದ ಬುದ್ಧಿಯನ್ನು ಕಳೆದುಕೊಂಡಿರುವರೆನ್ನಬೇಕು. ನಿನ್ನ ಪಾದಪದ್ಮಧ್ಯಾನದಿಂದಾಗುವ ಸುಖವು ಸ್ವಮಹಿಮಪ್ರತಿಷ್ಠಿತವಾದ ಬ್ರಹ್ಮಸ್ಥಿತಿಯಲ್ಲಿಯೂ ಸಿಕ್ಕಲಾರದು. ಹೀಗಿರುವಲ್ಲಿ ವಿನಶ್ವರವಾದ ಸ್ವರ್ಗದಲ್ಲೆಲ್ಲಿ ಸಿಕ್ಕೀತು? ಎಲೈ ಅನಂತನೆ, ಯಾವಾಗಲೂ ನಿನ್ನಲ್ಲಿಯೇ ಭಕ್ತಿಯನ್ನು ಹರಿಯಿಸುತ್ತಿರುವ ನಿರ್ಮಲಾತ್ಮರಾದ ಮಹಾಭಕ್ತರಲ್ಲಿಯೇ ನನಗೆ ಸಂಗವಾಗಲಿ! ಅದರಿಂದ ನಿನ್ನ ಗುಣಕಥನದ ಅಮೃತವನ್ನು ಪಾನಮಾಡಿ ಮತ್ತೆ ಸಂಸಾರದುಃಖವನ್ನು ತೊಲಗಿಸಿಕೊಳ್ಳುವಂತಾಗಲಿ! ನಿನ್ನ ಪಾದಪದ್ಮದಲ್ಲಿಯೇ ಆಸೆಯುಳ್ಳ ಭಕ್ತರಲ್ಲಿ ಯಾರಿಗೆ ಸಂಗವಿರುವದೋ ಅವರಿಗೆ ಈ ಮರ್ತ್ಯವಾದ ಹೆಂಡಿರುಮಕ್ಕಳು ಮುಂತಾದದ್ದರ ನೆನಪೇ ಇರುವದಿಲ್ಲ. ತಿರ್ಯಕ್ಪ್ರಾಣಿಗಳು, ಹಾವುಗಳು, ಹಕ್ಕಿಗಳು, ದೇವತೆಗಳು, ದೈತ್ಯರು, ಮರ್ತ್ಯರೂಪದಿಂದ ಕಾಣುವ ರೂಪವೆಲ್ಲವೂ ನಿನ್ನ ಸ್ಥೂಲರೂಪವೇ ಆಗಿರುತ್ತದೆ. ವಾಗತೀತವಾದ ನಿನ್ನ ಸೂಕ್ಷ್ಮರೂಪವನ್ನು ನಾನು ಅರಿಯೆನು. ಕಲ್ಪಾಂತದಲ್ಲಿ ಎಲ್ಲವನ್ನೂ ಹೊಟ್ಟೆಯಲ್ಲಡಗಿಸಿಕೊಂಡು ಶೇಷಶಾಯಿಯಾಗಿ ಯೋಗನಿದ್ರೆಯಲ್ಲಿ ಮಲಗಿರುವ ಪದ್ಮನಾಭನೆ, ನಿನಗೆ ನಮಸ್ಕಾರ! ನೀನು ನಿತ್ಯಮುಕ್ತನು, ಶುದ್ಧಬುದ್ಧಸ್ವರೂಪನು, ಕೂಟಸ್ಥನು, ಆದಿಪುರುಷನು, ಭಗವಂತನು, ಮೂರು ಗುಣಗಳಿಗೂ ಒಡೆಯನು, ಸ್ಥಿತಿಕಾಲದಲ್ಲಿ ಎಲ್ಲರ ಅಂತಃಕರಣ ವೃತ್ತಿಗಳನ್ನೂ ಅಖಂಡಿತವಾದ ನಿನ್ನ ದೃಷ್ಟಿಯಿಂದ ನೋಡುತ್ತಿರುವೆ. ಅಧಿಯಜ್ಞ ರೂಪದಿಂದಲೂ ಇರುವೆ. ಯಾವನಲ್ಲಿ ವಿದ್ಯಾದಿಸಕಲಶಕ್ತಿಗಳೂ ಇರುವವೋ ಆ ಜಗತ್ಕಾರಣನೂ, ಅದ್ವಿತೀಯನೂ ಅನಂತನೂ ಆದ್ಯನೂ ಆನಂದಮೋಕ್ಷನೂ ಅವಿಕಾರಣನೂ ಆದ ಭಗವಂತನನ್ನು ಶರಣುಹೊಕ್ಕಿರುವೆನು. ಎಲೈ ಭಗವಂತನೆ, ಪರಮಾರ್ಥವನ್ನು ತಿಳಿದು ಭಜಿಸುವವರಿಗೆ ಮಿಕ್ಕ ಕಾಮಗಳೆಲ್ಲಕ್ಕಿಂತಲೂ ಪುರುಷಾರ್ಥಮೂರ್ತಿಯಾದ ನಿನ್ನ ಪಾದಪದ್ಮವೇ ಪರಮಾರ್ಥವಾದ ಪುರುಷಾರ್ಥವಾಗಿರುತ್ತದೆ. ಹೀಗಿದ್ದರೂ ಸ್ವಾಮಿಯೆ, ಚಿಕ್ಕಕರುವನ್ನು ಕಾಪಾಡುವುದರಲ್ಲಿ ಕಾತರವಾಗಿರುವ ಹೊಸದಾಗಿ ಹೆತ್ತ ಹಸುವಿನಂತೆ ನೀನು ದೀನರನ್ನು ಕಾಪಾಡುತ್ತಿರುವೆ.

ಈ ರೀತಿಯಲ್ಲಿ ಸ್ತುತಿಸಿದ ಧ್ರುವನ ಮನೋಗತವನ್ನು ತಿಳಿದ ಭಗವಂತನು ಗ್ರಹನಕ್ಷತ್ರತಾರಕೆಗಳೂ ಧರ್ಮ, ಅಗ್ನಿ, ಕಶ್ಯಪ, ಶುಕ್ರ ಮುಂತಾದವರೂ ಪ್ರದಕ್ಷಣೆಮಾಡುತ್ತಿರುವ ದುರ್ಲಭವಾದ ಧ್ರುವಪದವಿಯನ್ನೇ ಅವನಿಗಿತ್ತು ''ತಂದೆಯು ವಿರಕ್ತನಾಗಿ ಅರಣ್ಯಕ್ಕೆ ಹೋಗುವಾಗ ಕೊಡುವ ರಾಜ್ಯವನ್ನು ಮೂವತ್ತಾರುಸಾವಿರವರ್ಷಗಳವರೆಗೆ ಆಳಿ ಯಜ್ಞಯಾಗಾದಿಗಳಿಂದ ಭಗವದರ್ಚನೆಯನ್ನು ಮಾಡಿ ಕೊನೆಯಲ್ಲಿ ನಿನಗೆ ನಾನಿತ್ತಿರುವ ಪದವಿಯನ್ನು ಹೊಂದು'' ಎಂದು ವರವನ್ನಿತ್ತು ಅಂತರ್ಧಾನವನ್ನೈದಿದನು.

ಬಳಿಕ ಧ್ರುವನು ದೈವಮಾಯಾವಂಚಿತನಾಗಿ ಪರಮಾತ್ಮನಲ್ಲಿಯೂ ಈ ಸಾಂತವಾದ ವರವನ್ನು ಬೇಡಿಕೊಂಡೆನಲ್ಲ! ಎಂದು ಪರಿತಪಿಸುತ್ತ ಹಿಂದಿರುಗಿದನು. ರಾಜನು ಪರಮಹರುಷದಿಂದ ಅವನನ್ನು ಬರಮಾಡಿಕೊಂಡು ಅವನ ವೃತ್ತಾಂತವನ್ನೆಲ್ಲ ಕೇಳಿ ಆಶ್ಚರ್ಯಪಟ್ಟನು. ತನಗೆ ವಾರ್ಧಕ್ಯವುಂಟಾಗಿರುವುದನ್ನು ಮನದಂದುಕೊಂಡು ಪ್ರಾಪ್ತವಯಸ್ಕನಾದ ಧ್ರುವನಿಗೆ ಪ್ರಜೆಗಳ ಸಮ್ಮತಿಯಿಂದ ಪಟ್ಟವನ್ನು ಕಟ್ಟಿ ತಾನು, ಪರಮಾತ್ಮಚಿಂತನೆಗಾಗಿ ಅರಣ್ಯಕ್ಕೆ ತೆರಳಿದನು- ಎಂಬುದು ಅಧ್ಯಾಯಾರ್ಥವು.

★★★★★

## ಕ್ಷರ - ಅಕ್ಷರಗಳ ಸ್ವರೂಪ

**11-5-1943**

**ಬ್ರ॥ ಶ್ರೀ॥ ಎಸ್॥ ವಿಠಲಶಾಸ್ತ್ರಿಗಳವರು**

**ಮಹಾಭಾರತ ಮೋಕ್ಷಧರ್ಮ 301ನೆಯ** ಅಧ್ಯಾಯದಲ್ಲಿ ಕ್ಷರವನ್ನು ಪಡೆದವರು ಸಂಸಾರಕ್ಕೆ ಮರಳಿ ಬರುವರೆಂದೂ ಅಕ್ಷರವನ್ನು ಪಡೆದವರು ಬರುವದಿಲ್ಲವೆಂದೂ ಹೇಳಿದ್ದರ ವಿವರವನ್ನು 302ನೆಯ ಅಧ್ಯಾಯದಲ್ಲಿ ಭೀಷ್ಮರು ಯುಧಿಷ್ಠರನಿಗೆ ತಿಳಿಸಿಕೊಟ್ಟಿರುತ್ತಾರೆ. ಇದೇ ಪ್ರಶ್ನೆಯನ್ನು ಕರಾಲಜನಕನು ಕೇಳಿದ್ದಕ್ಕೆ ವಸಿಷ್ಠರು ಕೊಟ್ಟ ಉತ್ತರವನ್ನೇ ಹೇಳುತ್ತೇನೆಂದು ಅವರು ಹೇಳಿದಾರೆ.

ಪ್ರಲಯಕಾಲದಲ್ಲಿ ಎಲ್ಲವೂ ಲಯವಾಗಿರುತ್ತದೆ. ಸೃಷ್ಟಿಕಾಲದಲ್ಲಿ ಮೊದಲು ಅಮೂರ್ತರೂಪವಾದ ಅಕ್ಷರಸ್ವರೂಪದಿಂದ, ಸಮಷ್ಟಿಬುದ್ಧಿಯೆಂದೂ ಮಹತ್ತತ್ತ್ವವೆಂದೂ ವಿರಿಂಚಿಯೆಂದೂ ಕರೆಯಿಸಿಕೊಳ್ಳುವ ಹಿರಣ್ಯಗರ್ಭನು ಹುಟ್ಟುತ್ತಾನೆ. ಆತನು ತನ್ನಿಂದ ತನ್ನನ್ನೇ ಬಹುವಿಧವಾಗಿ ಸೃಷ್ಟಿಸುತ್ತಾನೆ. ವಿದ್ಯಾಸೃಷ್ಟಿರೂಪವಾದ ಅಹಂಕಾರವನ್ನೂ ಎಂದರೆ ವಿರಾಟ್ಪುರುಷನನ್ನೂ ಅವಿದ್ಯಾಸೃಷ್ಟಿರೂಪವಾದ ವ್ಯಷ್ಟ್ಯಹಂಕಾರವನ್ನು ಅವನೇ ಸೃಷ್ಟಿಸುವನು. ಅಹಂಕಾರದಿಂದ ಭೂತಸೃಷ್ಟಿಯಾಗುತ್ತದೆ. ಅವುಗಳಿಂದ ಸ್ಥೂಲಭೂತಗಳು ಸೃಷ್ಟಿಯಾಗುವವು. ಆಮೇಲೆ ಇಂದ್ರಿಯಗಳು ಹತ್ತೂ ಮನಸ್ಸೂ ಸೃಷ್ಟಿಯಾಗುವವು. ಮೂರುಲೋಕದಲ್ಲಿರುವ ದೇಹಿಗಳಲ್ಲಿರುವ ದೇಹವೆಲ್ಲವೂ ಈ ತತ್ತ್ವಗಳಿಂದ ಆಗಿರುತ್ತದೆ. ಇದೆಲ್ಲವೂ ನಾಶವಾಗುವದರಿಂದ ಇದಕ್ಕೆ ಕ್ಷರವೆಂದು ಹೆಸರು. ಇಪ್ಪತ್ತುನಾಲ್ಕು ತತ್ತ್ವಗಳೂ ಕ್ಷರಗಳೇ. ವಿಷ್ಣುವು ನಿಜವಾಗಿ ತತ್ತ್ವವಲ್ಲದಿದ್ದರೂ ಈ ತತ್ತ್ವಗಳಿಗೆ ಆಶ್ರಯನಾಗಿರುವದರಿಂದ ಅವನನ್ನು ಇಪ್ಪತ್ತೈದನೆಯ ತತ್ತ್ವವೆಂದು ಕರೆಯುತ್ತಾರೆ. ವ್ಯಕ್ತವಾಗಿರುವ ಮರ್ತ್ಯವಾದದ್ದೆಲ್ಲವನ್ನೂ ಸೃಷ್ಟಿಸಿ ಆಯಾ ದೇಹದಲ್ಲಿ ಆತ್ಮರೂಪನಾಗಿ ಈತನು ಇದ್ದುಕೊಂಡಿರುವನು. ಎಲ್ಲಕ್ಕೂ ಕಾರಣನು ಇವನೇ, ಆದ್ದರಿಂದ ಎಲ್ಲಾ ಮೂರ್ತಿಗಳೂ ಇವನವೇ; ಆದರೂ ಇವನು ಸ್ವರೂಪದಿಂದ ಮೂರ್ತಿಯಿಲ್ಲದಾತನು. ಶರೀರದಲ್ಲಿದ್ದುಕೊಂಡು ಗುಣತ್ರಯಗಳಿಂದ ಇವೇ ನಾನೆಂಬ ಅಭಿಮಾನವನ್ನು ಪಡೆದು ಪುಣ್ಯದಿಂದ ದೇವತ್ವವನ್ನೂ ಪಾಪದಿಂದ ತಿರ್ಯಗ್ಯೋನಿಯನ್ನೂ ಪುಣ್ಯಪಾಪಗಳ ಮಿಶ್ರಣದಿಂದ ಮನುಷ್ಯಜನ್ಮವನ್ನೂ ಪಡೆಯುತ್ತಿರುವನು. ಆದರೆ ಜ್ಞಾನದಿಂದ ಅಕ್ಷರನಾದ ಪರಮಾತ್ಮಸ್ವರೂಪನೆಂದು ತಿಳಿದುಕೊಂಡರೆ ತನ್ನ ಸ್ವರೂಪದಿಂದಲೇ ಪ್ರಕಾಶಿಸುತ್ತಾನೆ.

★★★★★

# ವೈರಾಗ್ಯದಿಂದಲೇ ಬ್ರಹ್ಮಜ್ಞಾನ

**12-5-1943**

**ಪಂಡಿತಪ್ರವರ ಬ್ರ॥ ಶ್ರೀ॥ ಅನಂತಮೂರ್ತಿಶಾಸ್ತ್ರಿಗಳವರು**

**ಸೂತಸಂಹಿತೆಯ ಯಜ್ಞವೈಭವ ಖಂಡದ 17ನೆಯ ಅಧ್ಯಾಯದಲ್ಲಿ** ವೈರಾಗ್ಯದಿಂದಲೇ ದುಃಖವು ಹೋಗಿ ಮೋಕ್ಷಸಾಧನವಾದ ಬ್ರಹ್ಮಜ್ಞಾನವುಂಟಾಗುತ್ತದೆ. ಆದ್ದರಿಂದ ಅದನ್ನು ಹೇಳುತ್ತೇನೆ-ಎಂದು ಪ್ರಾರಂಭಿಸಿ ಸೂತನು ಬ್ರಹ್ಮವು ನಮ್ಮಗಳ ಆತ್ಮನೇ ಎಂಬ ಜ್ಞಾನವಿಲ್ಲದ್ದರಿಂದ ದ್ವೈತವು ತೋರುತ್ತಿರುವದು. ಪೂರ್ವವಾಸನೆಯಿಂದಲೂ ಕರ್ಮಪರಿಪಾಕದಿಂದಲೂ ದ್ವೈತವಸ್ತುವಿನಲ್ಲಿ ಇದು ಒಳ್ಳೆಯದು, ಇದು ಕೆಟ್ಟದ್ದು-ಎಂಬ ಬುದ್ಧಿಯು ಹುಟ್ಟಬೇಕೆಂದು ದೇವದೇವನಾದ ಪರಶಿವನ ಅಪ್ಪಣೆಯಾಗಿರುತ್ತದೆ. ಯಾವದು ಒಳ್ಳೆಯದೆಂದು ತೋರುವದೋ ಅದರಲ್ಲಿ ಇಚ್ಛೆಯು ಅವಶ್ಯವಾಗಿ ಆಗುವದು. ಒಳ್ಳೆಯದೆಂದು ಕಲ್ಪಿತವಾದದ್ದು ಐಹಿಕವೆಂದೂ ಪಾರಲೌಕಿಕವೆಂದೂ ಎರಡು ಬಗೆಯಾಗಿರುವದು. ಇಹಲೋಕದ ವಸ್ತುಗಳಲ್ಲಿ ಹಿಂದಿನ ಅನುಭವದಿಂದುಂಟಾದ ವಾಸನೆಯಿಂದಲೂ ಪಾರಲೌಕಿಕವಸ್ತುಗಳಲ್ಲಿ ಶಾಸ್ತ್ರಶ್ರವಣದಿಂದಲೂ ಇಚ್ಛೆಯುಂಟಾಗುತ್ತದೆ. ಇದರಂತೆ ಕೆಟ್ಟದ್ದೆಂದು ಕಲ್ಪಿತವಾದದ್ದರಲ್ಲಿ ನಿತ್ಯವೂ ದ್ವೇಷವಾಗುತ್ತಿರುವದು. ಮನುಷ್ಯರು ಹೀಗೆ ರಾಗದ್ವೇಷಗಳಿಂದ ಕಟ್ಟುವಡೆದು ಧರ್ಮಾಧರ್ಮಗಳ ವಶರಾಗಿ ದೇವ, ತಿರ್ಯಗ್ಜಂತು, ಮನುಷ್ಯ-ಮುಂತಾದ ಜನ್ಮಗಳನ್ನು ಪಡೆಯುತ್ತಿರುವರು. ಶುಕ್ರ, ಚರ್ಮ, ಮಾಂಸ, ನರ, ಎಲುಬು, ಕೂದಲು, ರಕ್ತ, ಕೀವು, ಶ್ಲೇಷ್ಮ, ಪಿತ್ತರಸ, ಮೂತ್ರ, ಮಲ-ಇವೇಮುಂತಾದವುಗಳನ್ನು ಕಂಡರೆ, ಮುಟ್ಟಿದರೆ, ಅಥವಾ ನೆನಸಿಕೊಂಡರೆ, ಅಷ್ಟುಮಾತ್ರದಿಂದ ಓಕರಿಕೆಯುಂಟಾಗುತ್ತದೆ; ಅದೇ ಶುಕ್ರಾದಿಗಳು ದೇಹದಲ್ಲಿರುವಾಗ ಅವುಗಳಲ್ಲಿ ನಾನು ನನ್ನದು ಎಂಬ ಅಭಿಮಾನವನ್ನು ಮಾಡುವವನು ಮೂಢನಲ್ಲವೆ? ಚಂದನಾದಿ ಸುಗಂಧವಸ್ತುಗಳೂ ಭಕ್ಷ್ಯಭೋಜ್ಯಾದಿರುಚಿಯುಕ್ತ ಪದಾರ್ಥಗಳೂ ಉತ್ತಮವಾದ ನೀರೂ ನಿರ್ಮಲವಾದ ಬಟ್ಟೆಯೂ ಯಾವದರ

ಸೋಂಕಿನಿಂದ ಅಸಹ್ಯವಾಗಿ ಮಾರ್ಪಡುವವೋ, ಅಂಥ ಶರೀರದಲ್ಲಿ ಶೋಭನಬುದ್ಧಿಯನ್ನು ಮಾಡುವದು ಉಚಿತವೆ? ಶರೀರವು ಗರ್ಭದಲ್ಲಿರುವಾಗ, ಹುಟ್ಟಿದಮೇಲೆ ಬಾಲ್ಯದಲ್ಲಿ, ಯೌವನದಲ್ಲಿ, ಮುಪ್ಪಿನಲ್ಲಿ, ಎಲ್ಲೆಲ್ಲಿಯೂ ದುಃಖಯುಕ್ತವಾಗಿ ಪೀಡಾಕರವಾಗಿಯೇ ಇರುತ್ತದೆ. ಇದರಿಂದ ದುಃಖವೇ ಹೊರತು ಸುಖವು ಯಾವಾಗಲೂ ಇರುವದಿಲ್ಲ. ಆದರೆ ಆತ್ಮಸ್ವರೂಪವು ನಿತ್ಯಸುಖರೂಪವಾಗಿತ್ತದೆ. ಅಜ್ಞಾನವು ತೊಲಗಿದರೆ ನಿತ್ಯಪ್ರಾಪ್ತವಾದ ಆ ಸುಖವು ಕೈವಶವಾಗುವದು. ಆದ್ದರಿಂದಲೇ ಶ್ರುತಿಯು ಸರ್ವಕಾಮಗಳೂ ಯಾವಾಗ ನಾಶವಾಗುವವೋ ಆಗಲೇ ಮರ್ತ್ಯನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಪಡೆಯುವನು ಎಂದು ಹೇಳುತ್ತದೆ. ವೈರಾಗ್ಯವಿಲ್ಲದವನಿಗೆ ಧರ್ಮಪ್ರಾಪ್ತಿಯಾಗಲಿ ಜ್ಞಾನವಾಗಲಿ ಬಂಧಚ್ಛೇದವಾಗಲಿ ಆಗಲಾರದು. ಆದ್ದರಿಂದ ವೈರಾಗ್ಯವೇ ಎಲ್ಲಕ್ಕಿಂತ ಹೆಚ್ಚಿನ ಸಾಧನವೆಂದು ಬಲ್ಲವರು ಹೇಳುತ್ತಾರೆ.

★★★★★

# ಪರಮಾರ್ಥವರ್ಣನೆ

**13-5-1943**

**ಬ್ರ|| ಶ್ರೀ|| ಎಸ್. ವಿಠಲಶಾಸ್ತ್ರಿಗಳವರು**

**ವಾಸಿಷ್ಠರಾಮಾಯಣದ ನಿರ್ವಾಣಪ್ರಕರಣದ ಪೂರ್ವಾರ್ಧದಲ್ಲಿ ನಲವತ್ತೈದನೆಯ ಸರ್ಗದಲ್ಲಿ** ವಸಿಷ್ಠರು ಶ್ರೀರಾಮನಿಗೆ ಪರಮಾತ್ಮತತ್ತ್ವವನ್ನು ಬಿಲ್ವವೆಂಬ ರೂಪಕದಿಂದ ಬೋಧಿಸಿರುತ್ತಾರೆ. ಸಾವಿರಾರು ಯೋಜನೆಗಳ ವಿಸ್ತಾರವುಳ್ಳ ಒಂದು ದೊಡ್ಡ ಬಿಲ್ವಫಲವುಂಟು. ಎಷ್ಟು ಯುಗಗಳಾದರೂ ಆದರ ಬಣ್ಣವು ಕಂದುವದಲ್ಲ, ರಸವು ಬತ್ತುವದಲ್ಲ, ಅತ್ಯಂತ ಮಧುರವಾದದ್ದು, ಅತ್ಯಂತ ಪುರಾತನವಾದರೂ ಬಹುಮೃದುವಾಗಿರುವದು. ಎಂಥ ಬಿರುಗಾಳಿಗೂ ಅಲುಗಾಡುವದಿಲ್ಲ. ಅದು ಜಗತ್ತಿನಸ್ಥಿತಿಗೇ

ಆಧಾರವಾಗಿರುವದು. ಅದಕ್ಕೂ ಹೋಲಿಸಿದರೆ ಬ್ರಹ್ಮಾಂಡಗಳುಕೂಡ ಬೆಟ್ಟದ ಕೆಳಗಿರುವ ಸಾಸುವೆಕಾಳಿನಂತಿರುವವು. ಅದು ಅತ್ಯಂತಪಕ್ವವಾಗಿ ದೆಯಾದರೂ ಅದಕ್ಕೆ ಮುಪ್ಪಿಲ್ಲ; ಬ್ರಹ್ಮ, ವಿಷ್ಣು, ಇಂದ್ರ, ರುದ್ರ-ಮುಂತಾದ ಚಿರಾಯುಗಳುಕೂಡ ಅದರ ಉತ್ಪತ್ತಿಯನ್ನರಿಯರು. ಅದಕ್ಕೆ ಮೊಳಕೆಯಾಗಲಿ ಮರವಾಗಲಿ, ಹೂವಾಗಲಿ, ಬುಡವಾಗಲಿ, ಕೊಂಬೆಯಾಗಲಿ, ಕಂಡದ್ದೇ ಇಲ್ಲ. ಅದಕ್ಕೆ ಹುಟ್ಟು ಮುಂತಾದ ಯಾವ ಮಾರ್ಪಾಡೂ ಇರುವದಿಲ್ಲ. ಅದರಲ್ಲಿ ಬೀಜವಿಲ್ಲ, ಗಟ್ಟಿಕಲ್ಲಿನಂತೆ ದಟ್ಟವಾಗಿರುವದು. ಸ್ವಾನುಭವದಿಂದ ಸವಿನೋಡತಕ್ಕ ರಸವು ಅದರದ್ದು. ಅದು ಪರಮಾತ್ಮ ಸ್ವರೂಪದಿಂದ ಬೇರೆಯಾಗದೆ ಇದೆ. ಅದರಲ್ಲಿ ಯಾವ ಭೇದವು ತೋರಿಕೊಂಡರೂ ಅದು ತನ್ನ ಸ್ವರೂಪವನ್ನು ಬಿಟ್ಟಿರುವದೇ ಇಲ್ಲ. ಅಹಂಕಾರ, ಆಕಾಶ, ಕಾಲ, ನಿಯತಿ, ಸಂಕಲ್ಪ, ರಾಗದ್ವೇಷ, ಹೇಯ, ಉಪಾದೇಯ, ಬ್ರಹ್ಮಾಂಡ ಎಂದು ಮುಂತಾಗಿ ಪರಿಪರಿಯಾದ ಪ್ರಕಾರಗಳು ಅದರಲ್ಲಿ ತೋರಿಹೋಗುತ್ತಿದ್ದರೂ ಅದು ಶಾಂತವಾಗಿ, ಸ್ವಸ್ಥವಾಗಿ, ಯಾವದೊಂದು ಏರುಪೇರೂ ಇಲ್ಲದೆ ತಾನಿದ್ದಂತೆಯೇ ಇರುತ್ತಿರುವದು. ಚಿನ್ಮಾತ್ರವಾಗಿರುವ ಅದು ಬಗೆಬಗೆಯಾಗಿ ತೋರಿಕೊಳ್ಳುತ್ತಾ ತಾನು ಆಗಿರುತ್ತಿರುವದು.

★★★★★

## ಗುಣದೋಷಗಳನ್ನು ಮೀರುವ ದೃಷ್ಟಿ

**14-5-1943**

**ಬ್ರ॥ಶ್ರೀ॥ ಎಚ್.ಅನಂತಮೂರ್ತಿಶಾಸ್ತ್ರಿಗಳವರು**

''ಗುಣದೋಷಗಳನ್ನು ಕಾಣುವದೇ ದೋಷವು, ಇವೆರಡೂ ಇಲ್ಲದಿರುವದೇ ಗುಣವು'' ಎಂದು ಭಗವಂತನು **ಭಾಗವತ ಹನ್ನೊಂದನೆಯ ಸ್ಕಂಧದ ಹತ್ತೊಂಬತ್ತನೆಯ** ಅಧ್ಯಾಯದಲ್ಲಿ ಹೇಳಿರುತ್ತಾನೆ. ಈ **ಇಪ್ಪತ್ತನೆಯ** ಅಧ್ಯಾಯದಲ್ಲಿ ಗುಣದೋಷಗಳನ್ನು ಮೀರುವ

ದೃಷ್ಟಿಯನ್ನು ಸಂಪಾದಿಸುವದಕ್ಕಾಗಿ ಯೋಗತ್ರಯವನ್ನು ಬೋಧಿಸಿರುತ್ತಾನೆ. ಕರ್ಮ, ಜ್ಞಾನ, ಭಕ್ತಿ-ಎಂದು ಮೂರು ಯೋಗಗಳುಂಟು. ವೈರಾಗ್ಯವಿಲ್ಲದವರಿಗೆ ಕರ್ಮವು, ವೈರಾಗ್ಯವುಳ್ಳವರಿಗೆ ಜ್ಞಾನವು, ಅತ್ಯಂತ ವಿರಕ್ತನೂ ಅಲ್ಲದೆ, ಅತ್ಯಂತ ಆಸಕ್ತನೂ ಅಲ್ಲದವನಿಗೆ ಭಕ್ತಿ-ಹೀಗೆ ಯೋಗತ್ರಯವನ್ನು ಅಧಿಕಾರಕ್ಕೆ ತಕ್ಕಂತೆ ಹೇಳಿರುತ್ತದೆ. ಯಾವನಿಗೆ ಯದೃಚ್ಛೆಯಿಂದ ಭಗವತ್ಕಥೆಯನ್ನು ಕೇಳುವದೇ ಮುಂತಾದದ್ದರಲ್ಲಿ ಶ್ರದ್ಧೆಯುಂಟಾಗುವದೋ ಅಂಥವನು ಭಕ್ತಿ ಯೋಗಕ್ಕೆ ತಕ್ಕವನು. ವಿರಕ್ತನಾಗದಿರುವವರೆಗೆ ಅಥವಾ ಭಗವಂತನ ಕಥೆಯನ್ನು ಕೇಳುವದರಲ್ಲಿ ಶ್ರದ್ಧೆಯುಂಟಾಗದಿರುವವರೆಗೆ ಕರ್ಮಗಳನ್ನು ಮಾಡಿಕೊಂಡಿರಬೇಕು. ನಿಷಿದ್ಧಕರ್ಮಗಳನ್ನು ಬಿಟ್ಟು ಶಾಸ್ತ್ರವಿಹಿತಕರ್ಮಗಳನ್ನು ನಿಷ್ಕಾಮನಾಗಿಮಾಡುತ್ತಿರುವವನಿಗೆ ಜ್ಞಾನವಾಗಲಿ ಭಕ್ತಿಯಾಗಲಿ ದೊರಕುವವು. ವಿವೇಕಿಯಾದವನು ಸ್ವರ್ಗನರಕಗಳನ್ನು ಕೊಡುವ ಕರ್ಮಗಳನ್ನು ಮಾಡದೆ ಮೃತ್ಯುವನ್ನು ತಪ್ಪಿಸಿಕೊಳ್ಳುವ ಉಪಾಯವನ್ನು ಹುಡುಕಬೇಕು. ಕತ್ತರಿಸಿಹಾಕುತ್ತಿರುವ ಮರದಲ್ಲಿರುವ ತನ್ನಗೂಡನ್ನುಬಿಟ್ಟು ಹಕ್ಕಿಯು ಮತ್ತೊಂದು ಕಡೆಗೆ ಹಾರಿಹೋಗಿ ಸುಖವಾಗಿರುವಂತೆ ತನ್ನ ಆಯುಸ್ಸು ಹಗಲೂ ಇರುಳೂ ಕಡಿಮೆಯಾಗುತ್ತಿರುವದೆಂಬುದನ್ನು ತಿಳಿದು ಮುಕ್ತಸಂಗನಾಗಿ ಪರಮಾತ್ಮನನ್ನು ತಿಳಿದು ಉಪಶಾಂತಿಯನ್ನು ಹೊಂದಬೇಕು. ಮನುಷ್ಯಶರೀರವು ದೊರಕುವದು ಸುದುರ್ಲಭವಾದದ್ದು. ಈ ಶರೀರವೆಂಬ ದೋಣಿಯು ಸಿಕ್ಕಿರುವಾಗ ಗುರುವೆಂಬ ಕರ್ಣಧಾರನನ್ನು ಉಪಯೋಗಿಸಿಕೊಂಡು ಭಗವಂತನೆಂಬ ಗಾಳಿಯಸಹಾಯದಿಂದ ಉಪಾಯವಾಗಿ ಸಂಸಾರಸಾಗರವನ್ನು ದಾಟಬೇಕು. ಕರ್ಮಗಳಲ್ಲಿ ವಿರಕ್ತನಾದವನು ಇಂದ್ರಿಯಗಳನ್ನು ಮೆಲ್ಲಮೆಲ್ಲಗೆ ಬಿಗಿಹಿಡಿದು ಆತ್ಮನಲ್ಲಿಯೇ ಮನಸ್ಸನ್ನು ನಿಲ್ಲಿಸಿಕೊಳ್ಳಬೇಕು. ಎಲ್ಲವೂ ಹೇಗೆ ಹುಟ್ಟಿ ಪ್ರಲಯವಾಗುವದೆಂಬುದನ್ನು ಸಾಂಖ್ಯರೀತಿಯಿಂದ ಚಿಂತಿಸಿ ಮನಸ್ಸನ್ನು ಪ್ರಸನ್ನಗೊಳಿಸಿಕೊಳ್ಳಬೇಕು. ಯಮಾದಿಗಳಿಂದಲೂ ವಿಚಾರದಿಂದಲೂ ಭಗವಂತನ ಅರ್ಚನಾದಿಗಳಿಂದಲೂ ಮನಸ್ಸನ್ನು ಪರಮಾತ್ಮನಲ್ಲಿಯೇ ನಿಲ್ಲಿಸಿಕೊಳ್ಳತಕ್ಕದ್ದು, ಎಲ್ಲಿಯಾದರೂ ತಪ್ಪಿ ಪಾಪಗಳನ್ನು ಮಾಡಿದರೆ ತಾನು ಮಾಡುವ ಯೋಗದಿಂದಲೇ ಅದನ್ನೂ ಪರಿಹರಿಸಿಕೊಳ್ಳಬಹುದು. ತಮ್ಮತಮ್ಮ ಕರ್ಮದಲ್ಲಿರುವದೇ ಅವರವರಿಗೆ ಗುಣವೆನಿಸುತ್ತದೆ. ಪರಮೇಶ್ವರನ ಭಕ್ತಿಯಲ್ಲಿ

ಶ್ರದ್ಧೆಯುಂಟಾದವನಿಗೆ ಕಾಮತ್ಯಾಗವು ಕಷ್ಟವಾದರೂ ಭಕ್ತಿಯಿಂದಲೇ ಅವುಗಳೆಲ್ಲವೂ ಕ್ರಮಕ್ರಮವಾಗಿ ನಾಶವಾಗುವವು. ಭಕ್ತಿಯೋಗದಲ್ಲಿ ನಿಂತಿರುವವನಿಗೆ ಅದರಿಂದ ಆಗುವ ಪ್ರಯೋಜನವು ಜ್ಞಾನವೈರಾಗ್ಯಗಳಿಂದಲೂ ಆಗಲಾರದು. ಕರ್ಮ, ತಪಸ್ಸು, ಜ್ಞಾನ, ವೈರಾಗ್ಯ, ಯೋಗ, ದಾನಧರ್ಮ –ಇವುಗಳಿಂದಾಗುವದೆಲ್ಲವೂ ಭಕ್ತಿಯೊಂದರಿಂದಲೇ ಭಕ್ತನಿಗೆ ದೊರಕುತ್ತದೆ. ಭಕ್ತರಾದವರು ಕೈವಲ್ಯವನ್ನು ಕೂಡ ಬಯಸುವದಿಲ್ಲ, ಅವರಿಗೆ ಭಕ್ತಿಗಿಂತ ಹೆಚ್ಚಿನದು ಮತ್ತೊಂದಿರುವದಿಲ್ಲ. ಅಂಥ ಏಕಾಂತಭಕ್ತರಿಗೆ ಗುಣದೋಷಗಳಿಂದಾಗುವ ವಿಶೇಷಗಳು ಉಂಟಾಗುವದೇ ಇಲ್ಲ; ಅಂಥ ಸಾಧುಗಳು ಸಮಚಿತ್ತರಾಗಿ ಬುದ್ಧಿಯನ್ನು ಮೀರಿರುವ ಪರಮಾತ್ಮನನ್ನೇ ಪಡೆದಿರುತ್ತಾರೆ.

★★★★★

# ನೈಮಿತ್ತಿಕಪ್ರಲಯ ಪ್ರಾಕೃತಪ್ರಲಯ

**15–5–1943**

**ಬ್ರ॥ ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರು**

ಪ್ರಲಯವು ನೈಮಿತ್ತಿಕ, ಪ್ರಾಕೃತಿಕ, ಆತ್ಯಂತಿಕ–ಎಂದು ಮೂರು ಬಗೆಯಾಗಿರುತ್ತದೆ. ಬ್ರಾಹ್ಮಪ್ರಲಯವು ನೈಮಿತ್ತಿಕವು, ಎರಡು ಪರಾರ್ಧದ ಕೊನೆಯಲ್ಲಿ ಆಗುವದು ಪ್ರಾಕೃತಪ್ರಲಯವು, ಮೋಕ್ಷವೇ ಆತ್ಯಂತಿಕಪ್ರಲಯವು. **ವಿಷ್ಣುಪುರಾಣದ ಆರನೆಯ ಅಂಶದ ನಾಲ್ಕನೆಯ** ಅಧ್ಯಾಯದಲ್ಲಿ ನೈಮಿತ್ತಿಕಪ್ರಲಯವನ್ನೂ ಪ್ರಾಕೃತಪ್ರಲಯವನ್ನೂ ವರ್ಣಿಸಿರುತ್ತದೆ.

ಸಪ್ತರ್ಷಿಗಳ ಸ್ಥಾನವನ್ನು ಕೂಡ ಆವರಿಸಿಕೊಂಡು ಏಕಾರ್ಣವವಾಗುತ್ತಲೂ ಭಗವಂತನ ಮುಖದಿಂದ ಹೊರಬಿದ್ದ ವಾಯು ಮೋಡಗಳನ್ನೆಲ್ಲ ಚದರಿಸಿ ನೂರು ವರ್ಷಗಳವರೆಗೆ ಬೀಸುತ್ತಿರುವದು. ಜನಲೋಕದಲ್ಲಿರುವ ಸನಕಾದಿಗಳಿಂದ ಸ್ತುತನಾಗಿ ಬ್ರಹ್ಮಲೋಕದಲ್ಲಿರುವ

ಮುಮುಕ್ಷುಗಳಿಂದ ಧ್ಯಾನಮಾಡಲ್ಪಟ್ಟವನಾಗಿ ಶ್ರೀಹರಿಯು ಬ್ರಹ್ಮರೂಪವನ್ನು ಧರಿಸಿಕೊಂಡು ಶೇಷಶಾಯಿಯಾಗಿ ಮಲಗಿರುವನು. ಆಗ ಸರ್ವಭೂತಮಯನೂ ಅಚಿಂತ್ಯನೂ ಅನಾದಿಯೂ ಜಗತ್ತಿಗೆ ಆದಿಕಾರಣನೂ ಭೂತಭಾವನನೂ ಆದ ಆ ಮಧುಸೂದನನು ವಾಯುವನ್ನೆಲ್ಲ ಒಳಕ್ಕೆಳೆದುಕೊಂಡು ಯೋಗನಿದ್ರೆಯನ್ನಾಶ್ರಯಿಸಿ ತನ್ನ ವಾಸುದೇವರೂಪವನ್ನು ಚಿಂತಿಸುತ್ತಿರುವನು. ಬ್ರಹ್ಮರೂಪಧಾರಿಯಾದ ಹರಿಯ ನಿದ್ರೆಯೇ ನಿಮಿತ್ತವಾಗಿರುವದರಿಂದ ಈ ಪ್ರಲಯಕ್ಕೆ **ನೈಮಿತ್ತಿಕಪ್ರಲಯ**ವೆಂದು ಹೆಸರು. ಆ ಮಹಾತ್ಮನು ಎಚ್ಚರುತ್ತಲೂ ಈ ಜಗತ್ತೆಲ್ಲವೂ ತನ್ನ ವ್ಯಾಪಾರವನ್ನು ಮಾಡುತ್ತದೆ. ಆತನ ನಿದ್ರೆಯಿಂದ ಎಲ್ಲವೂ ಅಡಗಿಹೋಗುತ್ತದೆ. ಇಂಥ ಮಹಾತ್ಮನು ಆ ವಿಷ್ಣುವು.

ಇನ್ನು **ಪ್ರಾಕೃತಪ್ರಲಯ**ದ ಪರಿ ಎಂತೆಂದರೆ ಮಹತ್ತತ್ತ್ವದಿಂದ ಹಿಡಿದು ವಿಶೇಷಪರ್ಯಂತವಾಗಿರುವ ಕಾರ್ಯವೆಲ್ಲವೂ ಆ ಕೃಷ್ಣನ ಇಚ್ಛೆಯಿಂದ ಆಗ ಲಯವಾಗುವದು. ಪೃಥ್ವಿಯು ಅಪ್ಪಿನಲ್ಲಿ, ಅಪ್ಪು ತೇಜಸ್ಸಿನಲ್ಲಿ, ತೇಜಸ್ಸು ವಾಯುವಿನಲ್ಲಿ, ವಾಯು ಆಕಾಶದಲ್ಲಿ-ಹೀಗೆ ತಮ್ಮ ತಮ್ಮ ಗುಣಗಳ ಸಮೇತ ತಮ್ಮ ತಮ್ಮ ಕಾರಣದಲ್ಲಿ ಲಯವಾಗುವವು. ಆಮೇಲೆ ಆಕಾಶದ ಶಬ್ದಗುಣವು ಭೂತಾದಿಯಲ್ಲಿ ಲಯವಾಗುವದು; ಆಗ ಪಂಚಭೂತಗಳೂ ಇಂದ್ರಿಯಗಳೂ ಇರದೆ ತಾಮಸಾಹಂಕಾರವೊಂದೇ ಉಳಿದುಕೊಳ್ಳುವದು. ಬಳಿಕ ಈ ಭೂತಾದಿಯು ಮಹತ್ತತ್ತ್ವದಲ್ಲಿ ಲಯವಾಗುವದು. ಹೀಗೆ ಒಳಗಿನ ಮತ್ತು ಹೊರಗಿನ ಕಾರ್ಯವೆಲ್ಲವೂ ಮಹತ್ತತ್ತ್ವದಲ್ಲಿ ಅಡಗಿದ ಬಳಿಕ ಮಹತ್ತನ್ನು ಪ್ರಕೃತಿಯು ನುಂಗಿಹಾಕುವದು, ಆಗ ಸತ್ತ್ವರಜಸ್ತಮೋಗುಣಗಳು ಸಮವಾಗಿರುವದರಿಂದ ಅದಕ್ಕೆ ಪ್ರಧಾನವೆಂಬ ಹೆಸರು ಬರುತ್ತದೆ. ಈ ರೀತಿಯಲ್ಲಿ ಪ್ರಕೃತಿಯು ವ್ಯಕ್ತವೆಂದೂ ಅವ್ಯಕ್ತವೆಂದೂ ಎರಡು ರೂಪಗಳಲ್ಲಿರುತ್ತದೆ. ಪ್ರಾಕೃತಪ್ರಲಯವಾಗುವಾಗ ವ್ಯಕ್ತವಾದದ್ದೆಲ್ಲವೂ ಅವ್ಯಕ್ತದಲ್ಲಿ ಅಡಗಿಹೋಗುತ್ತದೆ. ಇದಕ್ಕಿಂತೆ ಬೇರೆಯಾಗಿರುವ ಒಬ್ಬನೂ ಶುದ್ಧನೂ ನಿತ್ಯನೂ ಸರ್ವವ್ಯಾಪಿಯೂ ಆಗಿರುವ ಪುರುಷನು ಪರಮಾತ್ಮನ ಅಂಶವೇ ಆಗಿರುತ್ತಾನೆ. ಜ್ಞಾನಜ್ಞೇಯಾತ್ಮಕನಾಗಿರುವ ಆ ಸರ್ವೇಶ್ವರನಲ್ಲಿ ನಾಮಜಾತ್ಯಾದಿವಿಕಲ್ಪಗಳು ಯಾವವೂ ಇರುವದಿಲ್ಲ; ಸತ್ತಾಮಾತ್ರನಾಗಿರುತ್ತಾನೆ ಆತನು! ಅದೇ ಬ್ರಹ್ಮವು,

ಪರಮಾತ್ಮನು, ಈಶ್ವರನು, ವಿಷ್ಣುವು. ಆತನನ್ನು ಮುಟ್ಟಿದ ಯತಿಗಳಿಗೆ ಪುನರಾವೃತ್ತಿಯಿಲ್ಲ. ಪ್ರಕೃತಿಪುರುಷರೆಂದು ನಾನು ಹೇಳಿದ ಎರಡೂ ಈ ಪರಮಾತ್ಮನಲ್ಲಿ ಲಯವಾಗಿಬಿಡುತ್ತದೆ. ಆ ಪರಮಾತ್ಮನೇ ಸರ್ವಾಧಾರನಾದ ಪರಮೇಶ್ವರನಾದ ವಿಷ್ಣುವೆಂದು ವೇದವೇದಾಂತಗಳಲ್ಲಿ ಹಾಡಿರುತ್ತದೆ.

ಪ್ರವೃತ್ತಿನಿವೃತ್ತಿರೂಪವಾದ ಎರಡು ಬಗೆಯ ಕರ್ಮಗಳಿಂದಲೂ ಪೂಜ್ಯನಾದವನು ಆತನೇ. ಯಜ್ಞಗಳಿಂದಲೂ ಜ್ಞಾನಯೋಗಗಳಿಂದಲೂ ಆತನೇ ಆರಾಧಿತನಾಗತಕ್ಕವನು. ಎಲ್ಲ ಶಬ್ದಗಳಿಂದ ವಾಚ್ಯನಾಗಿರತಕ್ಕವನೂ ಆತನೇ, ವಾಕ್ಕುಗಳಿಗೆ ನಿಲುಕದ್ದೂ ಆತನೇ; ವ್ಯಕ್ತವೂ ಆತನೇ, ಆತನೇ ಸಕಲಕ್ಕೂ ಆತ್ಮನು, ಸಕಲರೂಪವೂ ಆತನದೇ. ಪರಮಾತ್ಮನ ರಾತ್ರಿಯಲ್ಲಿ ಎಲ್ಲವೂ ಲಯವಾಗುವದೆಂದೂ ಹಗಲಿನಲ್ಲಿ ಎಲ್ಲವೂ ಏಳುವದೆಂದೂ ಹೇಳಿದೆನಷ್ಟೆ. ಆತನಿಗೆ ನಿಜವಾಗಿ ಹಗಲುರಾತ್ರಿಗಳೇ ಇಲ್ಲ. ಉಪಚಾರಕ್ಕಾಗಿ ಹಗಲುರಾತ್ರಿಗಳೆಂದು ಹೇಳುತ್ತೇವೆ, ಅಷ್ಟೆ. ಎಲೈ, ಮೈತ್ರೇಯನೆ, ಈ ರೀತಿಯಲ್ಲಿ ನೈಮಿತ್ತಿಕಪ್ರಲಯವನ್ನೂ ಪ್ರಾಕೃತಪ್ರಲಯವನ್ನೂ ತಿಳಿಸಿರುತ್ತೇನೆ-ಎಂದು ಪರಾಶರರು ನುಡಿದರು.

★★★★★

## ಬ್ರಹ್ಮನು ಮಾಡಿದ ಪರಮಾತ್ಮನ ಸ್ತುತಿ

**18-05-1953**

**ಬ್ರ॥ ಶ್ರೀ ॥ ಎಸ್. ವಿಠಲಶಾಸ್ತ್ರಿಗಳವರು**

**ಭಾಗವತದಲ್ಲಿ ಮೂರನೆಯ ಸ್ಕಂಧದ ಒಂಬತ್ತನೆಯ ಅಧ್ಯಾಯದಲ್ಲಿ** ಭಗವಂತನಿಂದ ಜಗತ್ಸೃಷ್ಟಿಗಾಗಿ ಪ್ರಥಮೋತ್ಪನ್ನನಾದ ಬ್ರಹ್ಮನು ಮಾಡಿದ ಪರಮಾತ್ಮನ ಸ್ತುತಿಯನ್ನು ಮೈತ್ರೇಯರು ವಿದುರನಿಗೆ ತಿಳಿಸಿರುತ್ತಾರೆ. ಸ್ತೋತ್ರದ ಸಾರವಿದು: ''ಭಗವಂತನೆ, ನಿನ್ನ ಸ್ವರೂಪವನ್ನು ಬಹುಕಾಲಕ್ಕೆ ಈಗ ಅರಿತೆನು. ದೇಹಿಗಳು ನಿನ್ನನ್ನು ಅರಿಯರೆಂಬುದು ಎಂಥ

ದೌರ್ಭಾಗ್ಯವು! ನಿನ್ನನ್ನು ಬಿಟ್ಟು ಮತ್ತೊಂದಿಲ್ಲ; ಇಲ್ಲಿ ತೋರುವ ಅನೇಕ ರೂಪಗಳು ಮಾಯೆಯ ವಿಲಾಸವೇ. ಈಗ ನೀನು ಧರಿಸಿರುವ ಈ ರೂಪವು ನೂರಾರು ಅವತಾರಗಳಿಗೆ ಬೀಜವಾಗಿರುತ್ತದೆ; ಈ ನಿನ್ನ ನಾಭೀಕಮಲದಿಂದ ನಾನು ಹೊರತೋರಿಕೊಂಡಿರುವೆನು. ಈ ರೂಪವು ಆನಂದಾತ್ಮಕವೂ ನಿರ್ವಿಕಲ್ಪವೂ ಅಖಂಡತೇಜೋರೂಪವೂ ಆದ ಸ್ವರೂಪಕ್ಕಿಂತ ಭಿನ್ನವೆಂದು ನಾನು ಎಣಿಸಿಲ್ಲ; ಆದ್ದರಿಂದಲೇ ಈ ರೂಪವನ್ನು ನಾನು ಆಶ್ರಯಿಸಿರುವೆನು. ನಿನ್ನ ಉಪಾಸಕರು ಧ್ಯಾನಮಾಡಿ ಮಂಗಲವನ್ನು ಪಡೆಯಲೆಂದೇ ಈ ರೂಪವನ್ನು ಪ್ರಕಸಿರುವೆ; ನರಕಭಾಜನರಾದ ಜನರು ಮಾತ್ರ ಅನಾದರಿಸುವ ಮಂಗಲಸ್ವರೂಪನಾದ ನಿನಗೆ ನಮಸ್ಕಾರ! ಯಾರು ಶ್ರುತಿ ಎಂಬ ಗಾಳಿಯಿಂದ ಬಂದ ನಿನ್ನ ಚರಣಾಂಬುಜದ ವಾಸನೆಯನ್ನು ಕಿವಿಗಳಿಂದ ಮೂಸುತ್ತಲೇ ಇರುವರೋ ಅವರ ಹೃದಯವನ್ನು ಬಿಟ್ಟು ನೀನು ಎಂದಿಗೂ ಹೋಗುವದಿಲ್ಲ. ಎಲ್ಲಿಯವರೆಗೆ ನಿನ್ನ ಚರಣವನ್ನು ಶರಣುಹೊಗುವದಿಲ್ಲವೋ ಅಲ್ಲಿಯವರೆಗೇ ಜನರಿಗೆ ಸಂಸಾರದ ಅನರ್ಥವು ತೋರುತ್ತಿರುವದು. ಎಲ್ಲಾ ಅಮಂಗಲವನ್ನೂ ನಾಶಗೊಳಿಸುವ ನಿನ್ನನ್ನು ಬಿಟ್ಟು ಅಲ್ಪವಾದ ವಿಷಯಸುಖಕ್ಕಾಗಿ ಯಾರ ಮನಸ್ಸು ಹರಿಯುತ್ತಿರುವದೋ ಅವರ ಬುದ್ಧಿಯು ದೈವಾಪಹೃತವಾಗಿರುತ್ತದೆ, ಅಂಥ ಜನರನ್ನು ಕಂಡು ನನಗೆ ವಿಷಾದವಾಗುತ್ತದೆ. ಮಾಯೊಪಹೃತರಾದವರು ಎಲ್ಲಿಯವರೆಗೆ ನಿನಗಿಂತ ತಾವು ಭಿನ್ನರೆಂದು ತಿಳಿಯುವರೋ ಅಲ್ಲಿಯವರೆಗೆ ಅವರಿಗೆ ಸಂಸಾರಾನರ್ಥವು ತಪ್ಪದು.

‘‘ನಿನ್ನಿಂದ ವಿಮುಖರಾದ ಮುನಿಗಳೂ ಸಂಸಾರದಲ್ಲಿ ಬೀಳುತ್ತಿರುವರು. ನೀನು ಭಕ್ತಿಯೋಗದಿಂದ ಪ್ರಸನ್ನರಾಗಿರುವವರ ಹೃದಯದಲ್ಲಿ ವಾಸವಾಗಿ ರುವೆ; ಅವರು ಯಾವ ರೂಪವನ್ನು ಚಿಂತಿಸಿದರೆ ಆ ರೂಪದಿಂದ ಅವರಿಗೆ ತೋರಿಕೊಳ್ಳುತ್ತಿರುವೆ. ಹೃದಯದಲ್ಲಿ ಕಾಮಬದ್ಧರಾಗಿರುವ ದೇವತೆಗಳು ಮಾಡುವ ಆರಾಧನೆಯಿಂದಲೂ ಅಷ್ಟು ಪ್ರಸನ್ನನಾಗುವದಿಲ್ಲ; ಸರ್ವಭೂತದಯೆಯಿಂದ ಭಕ್ತರು ಮಾಡುವ ಆರಾಧನೆಯಿಂದಲೇ ಪ್ರಸನ್ನನಾಗುವೆ. ಯಜ್ಞದಾನ ತಪಸ್ಸುಗಳಿಂದ ಆರಾಧನೆಮಾಡಿ ನಿನ್ನ ಪ್ರಸನ್ನತೆಯನ್ನು ಪಡೆಯುವದೇ ಮನುಷ್ಯರಿಗೆ ಪರಮಪುರುಷಾರ್ಥವು. ಸ್ವರೂಪವದ ಚೈತನ್ಯಜ್ಯೋತಿಯಿಂದ

ಸರ್ವಭೇದಮೋಹವನ್ನೂ ತೊಲಗಿಸಿಕೊಂಡು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ನಿಮಿತ್ತವಾಗಿರುವ ಲೀಲಾರಸವುಳ್ಳ ಪರಮಾತ್ಮನೆ, ನಿನಗೆ ನಮಸ್ಕಾರ! ಯಾವನ ಅವತಾರಗಳ ಗುಣಕರ್ಮಲೀಲೆಗಳನ್ನು ತಿಳಿಸುವ ನಾಮಗಳನ್ನು ಅಂತಕಾಲದಲ್ಲಿ ಸ್ಮರಿಸಿಕೊಂಡಮಾತ್ರದಿಂದ ಪರಮಪುರುಷಾರ್ಥವನ್ನು ಪಡೆಯುವರೋ ಅಂಥ ಜನ್ಮರಹಿತನಾದ ನಿನಗೆ ಶರಣುಬಂದಿರುವೆನು. ಬ್ರಹ್ಮವಿಷ್ಣುಮಹೇಶ್ವರರೆಂಬ ಮೂರು ರೂಪದಿಂದ ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣವಾಗಿ ಬೆಳೆದುಕೊಂಡಿರುವ ಭುವನವೃಕ್ಷನೆ, ನಿನಗೆ ನಮಸ್ಕಾರ! ಪಾಪಪುಣ್ಯಗಳಲ್ಲಿ ನಿರತರಾಗಿರುವ ಜನವು ನಿನ್ನಿಂದ ಉಪದಿಷ್ಟವಾದ ಭಗವದರ್ಚನದಲ್ಲಿ ಪ್ರಮತ್ತರಾಗಿರುವರಷ್ಟೆ ; ಅವರ ಜೀವಿತಾಶೆಯನ್ನು ತಟ್ಟನೆ ಕತ್ತರಿಸುವ ಕಾಲರೂಪ ದೇವನಿಗೆ ನಮಸ್ಕಾರ! ಅನೇಕ ಯಜ್ಞತಪಸ್ಸುಗಳನ್ನು ಪುರುಷಾರ್ಥಪ್ರಾಪ್ತಿಗೆಂದು ಮಾಡಿದವನು ನಾನು, ಅಧಿಯಜ್ಞರೂಪನಾದ ನೀನು ಆ ನನ್ನ ತಪಸ್ಸಿಗೆ ಸಾಕ್ಷಿಯಾದವನು; ಅನಂತಕಾಲವಿರುವ ಸರ್ವರಿಂದಲೂ ನಮಸ್ಕೃತವಾಗಿರುವ ಸತ್ಯಲೋಕಾಧಿಪತ್ಯವನ್ನು ಆ ತಪಸ್ಸಿನಿಂದ ಪಡೆದ ನಾನು ಕೂಡ ಆ ಕಾಲನಿಗೆ ಅಂಜುತ್ತಿರುವೆನು! ಪೂರ್ಣಕಾಮನಾದ ನೀನು, ನೀನೇ ಮಾಡಿರುವ ಧರ್ಮಸೇತುವನ್ನು ಕಾಪಾಡುವದಕ್ಕೆಂದು ತಿರ್ಯಗ್ಜಂತುಗಳ, ಮನುಷ್ಯರ ಮತ್ತು ದೇವತೆಗಳೇ ಮೊದಲಾದವರ ದೇಹವನ್ನು ಧಾರಣೆಮಾಡಿ ಲೀಲೆಗಳನ್ನು ತೋರಿಸುತ್ತೀಯಲ್ಲ! ಇಂಥ ಪುರುಷೋತ್ತಮನಾದ ನಿನಗೆ ನಮಸ್ಕಾರ! ಅವಿದ್ಯಾ ಬದ್ಧನಲ್ಲದಿದ್ದರೂ ನೀನು ಈಗ ನಿದ್ರಿಸುತ್ತಿರುವದು ಹಿಂದಿನ ಕಲ್ಪದ ಪ್ರಾಣಿಗಳಿಗೆ ವಿಶ್ರಾಂತಿಯನ್ನು ಕೊಡುವದಕ್ಕೆ ಮಾತ್ರವಾಗಿರುತ್ತದೆ. ಈಗ ನಿನ್ನ ಯೋಗನಿದ್ರೆಯು ಮುಗಿದಿರುವದರಿಂದ ನಿನ್ನ ನೇತ್ರಕಮಲವು ವಿಕಸಿತವಾಗಿರುತ್ತದೆ. ನಿನ್ನ ನಾಭೀಕಮಲದಿಂದ ಉತ್ಪನ್ನನಾದ ನಾನು ನಿನ್ನ ಕೃಪೆಯಿಂದ ಜಗಸ್ಸೃಷ್ಟಿಯಲ್ಲಿ ಪ್ರವೃತ್ತನಾಗಿರುವೆನು. ಭಗವಂತನೆ, ಸಮಸ್ತಜಗತ್ತುಗಳಿಗೂ ಸುಹೃತ್ತೂ ಏಕಾತ್ಮನೂ ಆದ ನೀನು ಯಾವ ಸತ್ತ್ವದಿಂದೊಡಗೂಡಿದ ಐಶ್ವರ್ಯದಿಂದ ಎಲ್ಲವನ್ನೂ ಕಾಪಾಡುತ್ತಿರುವೆಯೋ ಅದರಿಂದಲೇ ನನ್ನ ದೃಷ್ಟಿಗೆ ಸಂಯೋಗವನ್ನುಂಟುಮಾಡು; ಆಗ ನಾನು ಮೊದಲಿನಂತೆ ಜಗತ್ತನ್ನು ಸೃಷ್ಟಿ ಮಾಡುವೆನು. ಮುಂದೆ ನಿನ್ನ ಶಕ್ತಿರೂಪಳಾದ ಲಕ್ಷ್ಮಿಯಿಂದೊಡಗೂಡಿ ಯಾವ ಯಾವ ಲೀಲೆಗಳನ್ನು ಮಾಡಲಿರುವೆಯೋ,

ಅದರಲ್ಲಿಯೇ ಈ ಸೃಷ್ಟಿಗೆಳಸಿರುವ ನನ್ನ ಚಿತ್ತವು ಯುಕ್ತವಾಗಿದ್ದುಕೊಂಡು ಕರ್ಮಸಂಗವನ್ನು ತೊರೆಯುವಂತೆ ಅನುಗ್ರಹಿಸು! ನಿನ್ನ ವಿಜ್ಞಾನಶಕ್ತಿಯೇ ಆಗಿದ್ದು ನಿನ್ನ ನಾಭೀಕಮಲದಿಂದ ಈಗ ಹೊರಟುಬಂದಿರುವ ನನಗೆ ಈ ಜಗತ್ಸೃಷ್ಟಿಯ ಕಾಲದಲ್ಲಿ ವೇದೋಚ್ಚಾರಣೆಯು ಎಂದಿಗೂ ನಿಲ್ಲದಿರಲಿ! ಅಪಾರಕರುಣಾಮಯನೆ, ಪ್ರೇಮದ ನಸುನಗುವಿನಿಂದ ಕಂದೆರೆದು ಅಮೃತಮಯವಾದ ನಿನ್ನ ವಾಣಿಯಿಂದ ನನ್ನ ವಿಷಾದವನ್ನು ಪರಿಹರಿಸು!''

ಕೊನೆಯಲ್ಲಿ ಶ್ರೀಶ್ರೀಗಳವರು: ಸತ್ಪುರುಷರ ಸಮಾಗಮದಲ್ಲಿ ಹೇಗೆ ಸತ್ಕಥಾಲಾಪಗಳೇ ನಡೆಯುವವೆಂಬುದನ್ನೂ ಸಾಧಕರಾದವರು ಭಗವಂತನ ತತ್ತ್ವಜ್ಞಾನವನ್ನು ಹೇಗೆ ಸಂಪಾದಿಸಿಕೊಳ್ಳಬಹುದು, ಭಗವಂತನ ಉಪಾಸನೆಯಿಂದ ಹೇಗೆ ಸಂಸಾರದಿಂದ ಬಿಡುಗಡೆಹೊಂದಬಹುದು, ಸ್ವಕರ್ಮಗಳನ್ನು ಭಗವದಾರಾಧನಾರೂಪವಾಗಿ ಮಾಡುವದರಿಂದ ಹೇಗೆ ಕೃತಾರ್ಥರಾಗಬಹುದು, ಭಗವಂತನ ಅನುಗ್ರಹದಿಂದಲೇ ಹೇಗೆ ನಮಗೆ ಸದ್ಬುದ್ಧಿಯು ದೊರಕುತ್ತದೆ – ಎಂಬುದನ್ನು ಸಂಗ್ರಹವಾಗಿ ತಿಳಿಸಿ ಬ್ರಹ್ಮಸೂತ್ರದ ಸಾರವನ್ನು ಸಂಗ್ರಹಿಸಿ ತಿಳಿಸಿದರು.

★★★★★

# ಪಾಪಕ್ಕೆ ಲೋಭವೇ ಆಶ್ರಯ

**19–5–1953**

**ಬ್ರ॥ಶ್ರೀ॥ಎಚ್. ಅನಂತಮೂರ್ತಿಶಾಸ್ತ್ರಿಗಳವರು**

**ಮಹಾಭಾರತದಲ್ಲಿ ಶಾಂತಿಪರ್ವದ 156ನೆಯ** ಅಧ್ಯಾಯದಲ್ಲಿ ಪಾಪಕ್ಕೆ ಲೋಭವೇ ಆಶ್ರಯವೆಂದು ಹೇಳಿದೆ. ಲೋಭದಿಂದಾಗುವ ಅನರ್ಥಗಳನ್ನೂ ವಿವರಿಸಿದೆ. ಯಾರು ಶುಚಿವ್ರತರಾಗಿರುವರೋ ಯಾರು ಪ್ರಿಯಾಪ್ರಿಯಗಳಲ್ಲಿ ಸಮರಾಗಿರುವರೋ ಯಾರು ದಾಂತರಾಗಿ

ರುವರೋ ಯಾರಿಗೆ ಸುಖದುಃಖಗಳು ಸಮವಾಗಿರುವವೋ, ಯಾರು ದಾತೃಗಳೇ ಹೊರತು ಪ್ರತಿಗ್ರಹವನ್ನು ಮಾಡುವವರಾಗಿರುವದಿಲ್ಲವೋ, ಯಾರು ಪಿತೃದೇವತೆಗಳ ಸೇವೆಯಲ್ಲಿ ನಿರತರಾಗಿರುವರೋ ಯಾರು ಸರ್ವಭೂತಗಳ ಹಿತದಲ್ಲಿ ನಿರತರಾಗಿರುವರೋ, ಯಾರು ಬರಿಯ ಮಾತಿಗಾಗಿ ಅಥವಾ ಖ್ಯಾತಿಗಾಗಿ ಧರ್ಮವನ್ನು ಮಾಡದೆ ಧರ್ಮಕ್ಕಾಗಿಯೇ ಧರ್ಮವನ್ನು ಮಾಡುತ್ತಿರುವರೋ, ಯಾರ ಮನಸ್ಸು ಒಂದಿಷ್ಟೂ ಭ್ರಾಂತವಾಗುವದಿಲ್ಲವೋ, ಅಂಥ ಶಿಷ್ಟರ ಸಂಗದಿಂದ ಲೋಭಾದಿಗಳನ್ನು ಜಯಿಸಬಹುದು.

**ಶ್ರೀಶ್ರೀಗಳು** ಇದರ ಅನುವಾದವನ್ನು ಮಾಡುವಾಗ ಕಾಮಕ್ರೋಧ ಲೋಭಗಳು ನರಕದ್ವಾರವೆಂದಿರುವ ಗೀತಾವಚನವನ್ನು ಉದಾಹರಿಸಿದರು. ಮನುಷ್ಯನು ಲೋಭದಿಂದಲೇ ವಿಷಯಕ್ಕೆ ಕಟ್ಟುಬಿದ್ದಿರುತ್ತಾನೆ; ಹೃದಯವನ್ನು ಪರಿವರ್ತನೆಮಾಡಿಕೊಂಡ ಹೊರತು ಬರಿಯ ಬುದ್ಧಿಯ ಬಲದಿಂದ ಅಧ್ಯಾತ್ಮವಿದ್ಯೆಯನ್ನು ಸಂಪಾದಿಸಿಕೊಳ್ಳುವದಕ್ಕೆ ಯಾರಿಗೂ ಆಗುವುದಿಲ್ಲ -ಎಂಬುದನ್ನು ಸ್ಪಷ್ಟಪಡಿಸಿದರು. ಲೋಭದ ಅನರ್ಥಕಾರಿತ್ವವನ್ನು ವರ್ಣನೆಮಾಡುವವರೇ ಲೋಭಿಗಳಾಗಿ ನಮಗೆ ದಾನಾದಿಗಳನ್ನು ಮಾಡಿ ಎಂದು ಉಪದೇಶಿಸಿದರೆ ಗತಿಯೇನು? ಜನರ ಲೋಭದಲ್ಲಿ ತಾರತಮ್ಯವಿರಬಹುದು; ಆದರೆ ಸಂಸಾರಿಗಳಲ್ಲಿ ಲೋಭವೇ ಇಲ್ಲದವರು ಸಿಕ್ಕುವದೇಇಲ್ಲ. ಲೋಭವು ಹೋಯಿತೆಂದರೆ ಮನುಷ್ಯನು ಕೃತಕೃತ್ಯನಾಗುವನು. ಆಪತ್ಕಾಲದಲ್ಲಾದರೂ ತತ್ತ್ವವಿಚಾರವನ್ನು ಮಾಡಿ ಲೋಭವನ್ನು ಕಳೆದುಕೊಳ್ಳಬೇಕು. ಧರ್ಮರಾಯನು ಹೊರಗಿನ ಶತ್ರುಗಳನ್ನುಗೆದ್ದರೂ ಮನಸ್ಸಿಗೆ ಶಾಂತಿ ದೊರಕದೆ ಇದ್ದದ್ದರಿಂದ ಲೋಭಾದಿಗಳೆಂಬ ಒಳಗಿನ ಶತ್ರುಗಳನ್ನು ಗೆಲ್ಲುವದು ಹೇಗೆ? - ಎಂದು ಕೇಳಿದ್ದಾನೆ. ಭೀಷ್ಮರ ಉತ್ತರವನ್ನು ನಾವೆಲ್ಲರೂ ಸಾವಧಾನವಾಗಿ ಕೇಳಿ ಕೃತಕೃತ್ಯರಾಗಬೇಕು. ಲೋಭವೆಂಬ ರೋಗದ ಚಿಹ್ನೆಗಳನ್ನೂ ಅದನ್ನು ಪರಿಹಾರ ಮಾಡಿಕೊಳ್ಳುವದಕ್ಕಾಗಿ ಮಾಡಿಕೊಳ್ಳಬೇಕಾದ ಸತ್ಸಂಗವೆಂಬ ಚಿಕಿತ್ಸೆಯನ್ನೂ ಇಲ್ಲಿ ತಿಳಿಸಿದೆ. ಚಿತ್ತಸ್ವಾಸ್ಥ್ಯವನ್ನು ಪಡೆಯಬೇಕೆಂಬ ಶಾಂತಿಪ್ರಿಯರು ಈ ಚಿಕಿತ್ಸೆಯನ್ನು ಮಾಡಿಕೊಳ್ಳುವದಕ್ಕೆ ಪ್ರಯತ್ನಿಸಬೇಕು - ಎಂದು ಅಧ್ಯಾಯಾರ್ಥವನ್ನು ವಿಶದಗೊಳಿಸಿದರು.

★★★★★

# ಲಕ್ಷ್ಮೀನಾರಾಯಣರ ಸರ್ವವ್ಯಾಪಕತ್ವ

**20-5-1953**

**ಬ್ರ॥ಶ್ರೀ॥ಎಚ್. ಎಸ್.ಲಕ್ಷ್ಮೀನರಸಿಂಹಮೂರ್ತಿ**

**ವಿಷ್ಣುಪುರಾಣದ 1ನೆಯ ಅಂಶದ 8ನೆಯ** ಅಧ್ಯಾಯದಲ್ಲಿ ಲಕ್ಷ್ಮೀನಾರಾಯಣರ ಸರ್ವವ್ಯಾಪಕತ್ವವನ್ನು ವರ್ಣಿಸಿರುತ್ತದೆ. 'ಲಕ್ಷ್ಮಿಯು ಕ್ಷೀರಸಾಗರದಲ್ಲಿ ಹುಟ್ಟಿದಳೆಂದು ಕೇಳಿದೇನೆ; ತಾವು ಈಗ ಆಕೆಯು ಭೃಗುವಿನಿಂದ ಖ್ಯಾತಿಯಲ್ಲಿ ಜನಿಸಿದಳೆಂದು ಹೇಳಿದಿರಲ್ಲ! ಈ ಎರಡಕ್ಕೂ ಏಕವಾಕ್ಯತೆ ಹೇಗೆ?' ಎಂದು ಮೈತ್ರೇಯನು ಕೇಳಿದ್ದಕ್ಕೆ ಪರಾಶರರು ಈ ಉತ್ತರವನ್ನು ಹೇಳಿರುತ್ತಾರೆ. ನಿಜವಾಗಿ ಲಕ್ಷ್ಮಿಯು ನಿತ್ಯಳೂ ಸರ್ವಗತಳೂ ಆಗಿ ವಿಷ್ಣುವನ್ನು ಬಿಟ್ಟು ಎಂದೆಂದಿಗೂ ಅಗಲದೆ ಇರುತ್ತಾಳೆ. ವಿಷ್ಣುವು ಯಾವಯಾವ ರೂಪದಿಂದ ತೋರಿಕೊಂಡರೂ ಅಲ್ಲಲ್ಲಿ ಅವನ ಜೊತೆಯಲ್ಲಿ ಲಕ್ಷ್ಮಿಯೂ ಇರುತ್ತಾಳೆ. ಅರ್ಥ, ವಾಣಿ; ನೀತಿ, ನಯ; ಭೋಧ, ಬುದ್ಧಿ; ಧರ್ಮ, ಸತ್ಕ್ರಿಯೆ; ಸ್ರಷ್ಟಾ, ಸೃಷ್ಟಿ - ಹೀಗೆ ಲಕ್ಷ್ಮೀನಾರಾಯಣರ ವಿಭೂತಿಗಳು ಜೊತೆಜೊತೆಯಲ್ಲಿಯೇ ಇರುತ್ತವೆ. ಸಂಕ್ಷೇಪವಾಗಿ ತಿಳಿಸಿದರೆ, ದೇವತೆಗಳು, ತಿರ್ಯಗ್ಜಂತುಗಳು, ಮನುಷ್ಯರು - ಮುಂತಾದವರಲ್ಲಿ ಪುನ್ನಾಮನಾಗಿರುವವನು ಶ್ರೀಹರಿಯೇ, ಸ್ತ್ರೀನಾಮಳು ಲಕ್ಷ್ಮಿಯೇ; ಇವರಿಬ್ಬರಿಗಿಂತ ಹೆಚ್ಚಿನ ತತ್ತ್ವವೇ ಇಲ್ಲ- ಎಂಬುದು ಉತ್ತರದ ಸಾರವು.

**ಶ್ರೀಗಳು** ಅನುವಾದದಲ್ಲಿ ಹೀಗೆಂದು ಅಪ್ಪಣೆಕೊಡಿಸಿದರು: ಮನುಷ್ಯನ ಮನಸ್ಸಿಗೆ ಪ್ರಧಾನವಾದದ್ದು ರುಚಿಸುವದಿಲ್ಲ, ಅಪ್ರಧಾನವಾದದ್ದು ರುಚಿಸುತ್ತದೆ; ವರ್ತಮಾನಕಾಲದಲ್ಲಿರುವದಕ್ಕಿಂತಲೂ ಹಿಂದೆ ಆಗಿಹೋಗಿ ರುವದನ್ನು ಸ್ಮರಿಸುತ್ತಿರುವದೇ ಅದಕ್ಕೆ ಇಷ್ಟ. ಇದನ್ನು ಅನುಸರಿಸಿ ವೇದದಲ್ಲಿರುವ ಅರ್ಥವಾದಗಳೂ ವೇದದ ಅರ್ಥವನ್ನು ವಿಸ್ತರಿಸುವದಕ್ಕೆ ಬಂದಿರುವ ಪುರಾಣಗಳ ಉಪದೇಶಗಳೂ ತ್ರಿಕಾಲಾಬಾಧಿತವಾದ ಪರಮಾರ್ಥ ತತ್ತ್ವವನ್ನೂ ಭೂತಕಾಲದಲ್ಲಿಟ್ಟು ತಿಳಿಸುತ್ತವೆ. ಪರಮಾತ್ಮನು ತಾನೊಬ್ಬನೇ ಇದ್ದು ಜಗತ್ತೆಲ್ಲವನ್ನೂ ಸೃಷ್ಟಿಸಿರುವನೆಂಬ ಕಥೆಯು ಈ ಜಾತಿಯದು.

ನಿಜವಾಗಿ ನೋಡಿದರೆ ಈಗಲೂ ಪರಮಾತ್ಮನೇ ಜಗತ್ತೆಲ್ಲವೂ ಆಗಿರುತ್ತಾನೆ. ಪರಮಾತ್ಮನ ಪ್ರಭಾವವೇ ಪರಮಾತ್ಮನ ಲಕ್ಷ್ಮಿಯು; ಪರಮಾತ್ಮನ ಪ್ರಭಾವಕ್ಕೆ ಉತ್ಪತ್ತಿಯಿಲ್ಲ; ಅದು ಭೂತಭವದ್ಭವಿಷ್ಯತ್ಕಾಲಗಳಿಂದ ಪರಿಚ್ಛಿನ್ನವಾದದ್ದಲ್ಲ. ಬ್ರಹ್ಮವೇ ಸತ್ಯವು, ಅವನೇ ಎಲ್ಲಾ ರೂಪಗಳಲ್ಲಿಯೂ ತೋರುತ್ತಿದಾನೆ. ಯಾವಯಾವದನ್ನು ಒಳ್ಳೆಯದು. ಕೆಟ್ಟದ್ದು - ಎಂದು ನಾವು ವಿಭಾಗಿಸಿ ಅರಿಯುತ್ತಿರುವೆವೋ ಅದೆಲ್ಲವೂ ಲಕ್ಷ್ಮೀನಾರಾಯಣನೇ; ಎಲ್ಲೆಲ್ಲಿಯೂ ಆತನನ್ನೇ ಶಾಸ್ತ್ರದೃಷ್ಟಿಯಿಂದ ಕಂಡುಕೊಂಡು ಧನ್ಯರಾಗಬೇಕು.

★★★★★

## ಪರಮೇಶ್ವರನು ಸರ್ವಪ್ರಪಂಚಕ್ಕೂ ಕಾರಣನು

**21-5-1953**

**ಬ್ರ॥ಶ್ರೀ॥ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

**ವಾಸಿಷ್ಠರಾಮಾಯಣದ ನಿರ್ವಾಣಪ್ರಕರಣದಲ್ಲಿ ಪೂರ್ವಭಾಗದ 37ನೆಯ ಸರ್ಗದಲ್ಲಿ,** ಚಿದ್ಧಾತುಸ್ವರೂಪನಾಗಿರುವ ಪರಮೇಶ್ವರನು ಸರ್ವಪ್ರಪಂಚಕ್ಕೂ ಕಾರಣನಾಗಿ ಸರ್ವಾಕಾರದಿಂದಲೂ ತೋರಿಕೊಳ್ಳುತ್ತಾ ಯಾವದೊಂದರ ಸೋಂಕೂ ಇಲ್ಲದೆ ನಿತ್ಯಶುದ್ಧನಾಗಿರುವನೆಂದು ಹಿಂದಿನ ಸರ್ಗದಲ್ಲಿ ಪರಮಾತ್ಮನ ಸರ್ವೈಶ್ವರ್ಯವನ್ನು ವರ್ಣಿಸಿ ಹೇಳಲಾಗಿರುತ್ತದೆ. ಹೀಗೆಂದು ವರ್ಣಿಸಿದ ಬಳಿಕ ಈಶ್ವರನು ವಸಿಷ್ಠಮುನಿಗೆ ಈ ರೀತಿ ಹೇಳಿರುತ್ತಾನೆ:

ಸರ್ವೇಶ್ವರನಾದ ಆ ಪರಮಾತ್ಮನ ಸತ್ತೆಂದಲೇ ಇರವು ಉಂಟಾಗಿರುತ್ತದೆ. ಬೀಜಕಣದಲ್ಲಿರುವ ಈ ಚಿತ್ಸತ್ತೆಯೇ ಮೊಳಕೆಯನ್ನು ಉಂಟುಮಾಡುತ್ತಿರುವದು; ನೀರಿನಲ್ಲಿದ್ದುಕೊಂಡು ನೊರೆಗುಳ್ಳೆ ಮುಂತಾದವನ್ನುಂಟುಮಾಡುತ್ತಿರುವದು. ಇದೇ ಹೂಗಳಲ್ಲಿದ್ದುಕೊಂಡು ಮೂಗಿನ ಹೊಳ್ಳೆಗಳಲ್ಲಿ ಸುವಾಸನೆಯನ್ನು ತೋರತ್ತಿರುವದು; ಕಲ್ಲಿನಲ್ಲಿದ್ದು

ಶರೀರವುಳ್ಳ ಗೊಂಬೆಯನ್ನು ಕಾಣಿಸುತ್ತಿರುವದು. ಗಾಳಿಯ ಅಲುಗಾಟವಾಗಿ ತ್ವಗಿಂದ್ರಿಯಕ್ಕೆ ಸ್ಪರ್ಶವನ್ನು ಉಂಟುಮಾಡುವದೂ ಇದೇ. ಆತ್ಮನನ್ನು ಕಲ್ಪಿಸಿ ಅವನ ವಿಚಾರದಿಂದ ಸರ್ವವೂ ಶೂನ್ಯವೆಂಬಂತೆ ಮಾಡಿಸುವದೂ ಇದೇ. ಆಕಾಶವನ್ನೂ ಕಾಲವನ್ನೂ ತೋರಿಸುವದೂ ಇದೇ. ಸದಾಶಿವಪರ್ಯಂತವಾಗಿ ಎಲ್ಲವನ್ನೂ ವ್ಯಾಪಿಸಿಕೊಂಡು ಇದು ಹೀಗಿರಬೇಕು, ಇದು ಹೀಗಿರಬಾರದು- ಎಂದು ಗೊತ್ತುಪಡಿಸಿ ತಾನೇ ನಿಯತಿಯಾಗುವದು. ಈ ಪ್ರಪಂಚರೂಪವಾದ ನಾಟ್ಯಮಂಡಪದಲ್ಲಿ ಸಾಕ್ಷಿಯಾಗಿ ನಿಂತಿರುವದೂ ಇದೇ.

ಹೀಗೆನ್ನಲು ವಸಿಷ್ಠಮುನಿಯು ಶಿವನ ಶಕ್ತಿಗಳು ಯಾವವು? ಹೇಗೆ ಇರುತ್ತವೆ? ಸಾಕ್ಷಿತ್ವವೆಂಬುದೇನು? -ಎಂದು ಕೇಳಲು ಈಶ್ವರನಿಂತೆಂದನು : ಅಪ್ರಮೇಯನಾಗಿಯೂ ಶಾಂತನಾಗಿಯೂ ಇರುವ ಚಿನ್ಮಾತ್ರ ಪರಮಾತ್ಮನಿಗೆ ಇಚ್ಛಾಸತ್ತೆ, ವ್ಯೋಮಸತ್ತೆ, ಕಾಲಸತ್ತೆ, ನಿಯತಿಸತ್ತೆ, ಮಹಾಸತ್ತೆ, ಜ್ಞಾನಶಕ್ತಿ, ಕರ್ತೃತ್ವ -ಮುಂತಾದ ಅನಂತ ಶಕ್ತಿಗಳಿರುವವು. ಅನಂತರೂಪನಾದ ಶಿವನಿಗೆ ಈ ಚಿನ್ಮಾತ್ರತ್ವವೇ ಶಕ್ತಿಯು, ಅದು ಆತನಿಗಿಂತ ಒಂದಿಷ್ಟು ಭಿನ್ನವೆಂಬಂತೆ ತೋರುವದು. ಕರ್ತೃತ್ವಭೋಕ್ತೃತ್ವಾದಿರೂಪಗಳನ್ನು ಆ ಒಂದೇ ಶಕ್ತಿಯು ಧರಿಸುತ್ತಿರುವದು. ಇದು ಹೀಗೆಯೇ ಇರಬೇಕು ಎಂಬ ಪರಾಪರರೂಪವಾಗಿ ರುವ ಶಕ್ತಿಯೇ ನಿಯತಿ ಎನ್ನಿಸುವದು. ಇದೇ ಜಗದ್ರೂಪವಾಗಿ ನರ್ತನ ಮಾಡುತ್ತಿರುವದು. ಈ ನರ್ತನವನ್ನು ನೋಡುತ್ತಲೇ ನಿತ್ಯಚಿನ್ಮಾತ್ರಶರೀರನಾದ ಈ ಪರಮೇಶ್ವರನೇ ಸಾಕ್ಷಿಯಾಗಿರುವನು ; ಅವನು ಈ ನಟಿಗಿಂತಲೂ ನಾಟ್ಯಕ್ಕಿಂತಲೂ ಭಿನ್ನನಲ್ಲವೇ ಅಲ್ಲ.

ಕೊನೆಯಲ್ಲಿ ಶ್ರೀಗಳು- ಒಂದೇ ಪರಮಾರ್ಥವು ತಾನು ಇದ್ದಂತೆ ಇದ್ದು ಭಿನ್ನವಾಗಿ ವ್ಯವಹಾರದಲ್ಲಿ ತೋರುವದನ್ನೇ ಈ ನಿಯತಿನೃತ್ಯವೆಂಬ ಹೆಸರಿನಿಂದ ಇಲ್ಲಿ ವರ್ಣಿಸಲಾಗಿದೆ ಎಂದು ಸಂಗ್ರಹಿಸಿ ಹೇಳಿದರು.

★★★★★

# ಶಿವನೇ ಮೂಲಕಾರಣನು

**22-5-1953**

**ಬ್ರ॥ಶ್ರೀ॥ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ ಶಾಸ್ತ್ರಿಗಳವರು**

**ಸೂತಸಂಹಿತೆಯ ಯಜ್ಞವೈಭವಖಂಡದಲ್ಲಿ 22ನೆಯ ಅಧ್ಯಾಯದಲ್ಲಿ** ವೇದಮಾರ್ಗಗಳು, ಸ್ಮೃತಿಗಳು, ಪುರಾಣೇತಿಹಾಸಗಳು, ವೇದಾಂತಗಳು, ಉಪವೇದಗಳು, ಆಗಮಗಳು, ಲೋಕಾಯತ, ತರ್ಕಶಾಸ್ತ್ರ, ಮೀಮಾಂಸಾ, ಸಾಂಖ್ಯಯೋಗಗಳು -ಎಲ್ಲಕ್ಕೂ ಶಿವನೇ ಮೂಲಕಾರಣನು; ಆತನ ಪ್ರಸಾದದಿಂದಲೇ ಆಯಾ ಗ್ರಂಥಕಾರರು ಯಥಾಶಕ್ತಿಯಾಗಿ ಗ್ರಂಥರಚನೆಯನ್ನು ಮಾಡಿರುತ್ತಾರೆ. ಎಲ್ಲಕ್ಕೂ ಮಹೇಶ್ವರನೇ ಗುರಿ. ಅವರವರ ರುಚಿಗನುಗುಣವಾಗಿ ಆಯಾ ಮಾರ್ಗವನ್ನು ಅನುಸರಿಸಿ ಕ್ರಮಕ್ರಮವಾಗಿ ಜ್ಞಾನಕ್ಕೆ ತಿರುಗುತ್ತಾರೆ. ಮುಖ್ಯವಾಗಿ ವೇದವೇ ವಿವಿದಿಷೆಯನ್ನೂ ವಿದ್ಯೆಯನ್ನೂ ಕೊಟ್ಟು ಭುಕ್ತಿಮುಕ್ತಿಗಳನ್ನು ಕೊಡಬಲ್ಲದ್ದಾಗಿರುತ್ತದೆ. ಆದ್ದರಿಂದ ವೇದನಿಷ್ಠನಾದವನು ಮತ್ತೊಂದು ಮಾರ್ಗವನ್ನು ಅನುಸರಿಸಬಾರದು; ಆದರೆ ಇಷ್ಟುಮಾತ್ರದಿಂದ ಇತರ ಮಾರ್ಗವನ್ನು ಅಪ್ರಮಾಣವೆಂದು ತಿಳಿಯಬಾರದು -ಎಂಬುದು ಅಧ್ಯಾಯದ ಸಾರವು.

**ಶ್ರೀಗಳು** ಅನುವಾದಮಾಡುವಾಗ ಮುಖ್ಯವಾಗಿ ವೇದಮಾರ್ಗದ ವಿಶೇಷವನ್ನು ಕುರಿತು ಮಾತಾಡಿದರು. ಅವರು ಅಪ್ಪಣೆಕೊಡಿಸಿದ್ದೇನೆಂದರೆ. ವೇದವನ್ನು ಹೊಗಳಿ ಮಿಕ್ಕ ಮತಗ್ರಂಥಗಳನ್ನು ದೂಷಿಸುವ ಅಭಿಪ್ರಾಯವೇನೂ ಇಲ್ಲಿಲ್ಲ. ಪರಮಾತ್ಮನ ಸ್ವರೂಪವನ್ನು ಇಲ್ಲಿಯೇ ಈಗಲೇ ಕಾಣುವ ಮಾರ್ಗವನ್ನು ಹೇಳುವ ವೇದವು ಪರೋಕ್ಷವಾಗಿ ಈಶ್ವರನನ್ನು ಹೇಳುವ ಅಥವಾ ಈಶ್ವರನ ಅಸ್ತಿತ್ವವನ್ನು ಅಲ್ಲಗಳೆದು ಅನಾತ್ಮವಿಚಾರದಲ್ಲಿಯೇ ನಿಂತಿರುವ ಇತರ ಮತಗ್ರಂಥಗಳಿಗಿಂತ ಮುಮುಕ್ಷುಗಳಿಗೆ ಸಾಧಕತಮವೆಂಬುದನ್ನು ನಿಷ್ಪಕ್ಷಪಾತಿಗಳಾದವರೆಲ್ಲರೂ ಒಪ್ಪಬೇಕಾಗುವದು. 'ಅತ್ರ ಬ್ರಹ್ಮ ಸಮಶ್ನುತೇ' ಎಂಬಂಥ ವಾಕ್ಯವು ಮಿಕ್ಕ ಯಾವ ಮತಗ್ರಂಥಗಳಲ್ಲಿಯೂ ಇಷ್ಟು ಸ್ಪಷ್ಟವಾಗಿ

ಕಾಣಿಸುವದಿಲ್ಲ ; ಪರಮೇಶ್ವರನು ನಮ್ಮೆಲ್ಲರ ಆತ್ಮನೇ ಎಂದು ಅವನಿಗೂ ನಮಗೂ ಇರುವ ನಿಕಟಸಂಬಂಧವನ್ನು ಇಷ್ಟು ಸ್ಫುಟವಾಗಿ ಮತ್ತೆಲ್ಲಿಯೂ ತಿಳಿಸಿರುವದು ಕಾಣುವದಿಲ್ಲ. ಪರಮೇಶ್ವರಪ್ರಾಪ್ತಿಗೆ ಮಾರ್ಗವನ್ನು ಹುಡುಕಬೇಕಾಗಿಲ್ಲ, ಜ್ಞಾನವೇ ಸಾಕು- ಎಂದು ಮಾರ್ಗಾನ್ವೇಷಣೆಯನ್ನು ನಿಲ್ಲಿಸಿಬಿಡುವದು ವೇದದ ಮಾರ್ಗವೊಂದೇ. ಈ ವೇದಪ್ರತಿಪಾದ್ಯವಾದ ವಿಚಾರಕ್ರಮಕ್ಕೆ ಯಾವ ಯಾವ ಮಾರ್ಗವು ಎಷ್ಟೆಷ್ಟು ಸಮೀಪವಾಗಿರುವದೋ ಅದದು ಅಷ್ಟಷ್ಟುಮಟ್ಟಿಗೆ ಪ್ರಾಮಾಣ್ಯದಲ್ಲಿ ಹೆಚ್ಚಿನ ಸ್ಥಾನಕ್ಕೆ ಅರ್ಹವಾಗಿರುತ್ತದೆ. ಸ್ತ್ರೀಶೂದ್ರಾದಿಗಳಿಗೆ ವೇದಕ್ಕೆ ಅಧಿಕಾರವೇ ಇಲ್ಲವೆಂದು ಹೇಳಿದ್ದರಿಂದ ಅವರು ವೇದಮಾರ್ಗವನ್ನೇ ತುಳಿಯದಂತೆ ಆಗಿದೆ ಎಂದು ಕೆಲವರು ವೈದಿಕರ ಮೇಲೆ ದೂರನ್ನು ಹೊರಿಸುವದುಂಟು ; ಆದರೆ ಇದಕ್ಕೆ ಯಾವ ಬುಡವೂ ಇಲ್ಲ. ಇತಿಹಾಸ ಪುರಾಣಗಳಲ್ಲಿ ವೇದಾರ್ಥವನ್ನೇ ಹೇಳಿದೆ; ಅವಶ್ಯವಾಗಿ ನಾಲ್ಕು ವರ್ಣದವರೂ ಅದನ್ನು ಶ್ರವಣಮಾಡಬೇಕು -ಎಂದು ವೇದವ್ಯಾಸಾದಿಗಳು ಸಾರಿರುತ್ತಾರೆ. ಸಂಸ್ಕೃತಬಾರದವರು ದೇಶಭಾಷೆಗಳ ಅನುವಾದವನ್ನಾದರೂ ಪಠಿಸಿ ಕೃತಾರ್ಥರಾಗಬಹುದು - ಎಂದು ಈ ಸೂತಸಂಹಿತೆಯಲ್ಲಿ ಹೇಳಿದೆ. ಆದ್ದರಿಂದ ಅವರವರಿಗೆ ರುಚಿಸುವ ಉಪಮಾರ್ಗದಿಂದ ಈ ವೇದಮಾರ್ಗವನ್ನು ಸೇರಿ ಮುಮುಕ್ಷುಗಳು ಕೃತಾರ್ಥರಾಗಬೇಕು.

★★★★★

# ಭಕ್ತಿಯೋಗದ ರಹಸ್ಯ

**07-5-1954**

**ಬ್ರ॥ ಶ್ರೀ॥ ಎಸ್. ವಿಠಲಶಾಸ್ತ್ರಿಗಳವರು**

**ಭಾಗವತದಲ್ಲಿ ಮೂರನೆಯ ಸ್ಕಂಧದ ಇಪ್ಪತ್ತೊಂಬತ್ತನೆಯ ಅಧ್ಯಾಯದಲ್ಲಿ** ಭಕ್ತಿಯೋಗದ ರಹಸ್ಯವಿದೆ. ತಾಯಿಯ ಪ್ರಶ್ನೆಗೆ ಉತ್ತರವಾಗಿ ಕಪಿಲಭಗವಂತನು ಹೇಳಿರುವ-

ದೇನೆಂದರೆ, ಗುಣಗಳಿಂದ ಭಿನ್ನವಾಗುವ ಸಾಧಕರ ಭಾವಗಳಿಗನುಗುಣವಾಗಿ ಭಕ್ತಿಯು ಅನೇಕ ಪ್ರಕಾರದಿಂದ ತೋರಿಕೊಳ್ಳುತ್ತದೆ. ಹಿಂಸಾದಂಭ ಮಾತ್ಸರ್ಯಾದಿಗಳಿಂದೊಡಗೂಡಿದ ಭಕ್ತಿಯು ತಾಮಸವು; ಯಶಸ್ಸು, ಐಶ್ವರ್ಯ - ಮುಂತಾದ ಕಾಮಗಳಿಗಾಗಿ ಪೂಜನೆಮಾಡುವ ಭಕ್ತಿಯು ರಾಜಸವು; ಪಾಪಕ್ಷಯಾರ್ಥವಾಗಿ ಭಗವಂತನ ಪ್ರೀತ್ಯರ್ಥವಾಗಿ ಇದು ಕರ್ತವ್ಯವೆಂಬ ಬುದ್ಧಿಯಿಂದ ಪೂಜಿಸುತ್ತಿರುವದು ಸಾತ್ತ್ವಿಕಭಕ್ತಿಯು. ಆದರೆ ಗಂಗಾ ಪ್ರವಾಹವು ಸಮುದ್ರದ ಕಡೆಗೇ ಹೋಗುತ್ತಿರುವಂತೆ ಭಗವದ್ಗುಣಶ್ರವಣ ಮಾತ್ರದಿಂದ ಮನಸ್ಸು ತೈಲಧಾರೆಯಂತೆ ಅವಿಚ್ಛಿನ್ನವಾಗಿ ಸರ್ವಾಂತರ್ಯಾಮಿಯಾದ ಪರಮಾತ್ಮನ ಕಡೆಗೇ ಹರಿಯುತ್ತಿರುವ ನಿಷ್ಕಾಮವಾದ ಅನನ್ಯ ಪ್ರೇಮವೇ ನಿರ್ಗುಣಭಕ್ತಿಯೆನಿಸುವದು. ಈ ಭಕ್ತಿಯುಳ್ಳವನು ಸಾಲೋಕ್ಯ, ಸಾರ್ಷ್ಟಿ, ಸಾಮೀಪ್ಯ, ಸಾರೂಪ್ಯ ಅಥವಾ ಸಾಯುಜ್ಯಗಳನ್ನು ಕೊಟ್ಟರೂ ಒಲ್ಲದೆ ಭಗವಂತನ ಸೇವೆಯನ್ನೇ ಮಾಡಲಿಚ್ಛಿಸುವನು; ಇನ್ನು ಅವನಿಗೆ ಮಿಕ್ಕ ಕಾಮಗಳು ಹೇಗೆ ಇದ್ದಾವು? ಈ ಮುಕ್ತಿಯನ್ನು ಕೂಡ ತಿರಸ್ಕರಿಸುವ ಭಕ್ತಿಯೋಗವೇ ಪರಮಪುರಷ ರೂಪಸಾಧನವು. ಇದರಿಂದಲೇ ಮನುಷ್ಯನು ತ್ರಿಗುಣಾತೀತನಾಗಿ ಅಪ್ರಾಕೃತವಾದ ಪ್ರೇಮವನ್ನು ಪಡೆದುಕೊಳ್ಳುವನು.

ನಿಷ್ಕಾಮಭಾವದಿಂದ ಶ್ರದ್ಧಾಪೂರ್ವಕವಾಗಿ ನಿತ್ಯನೈಮಿತ್ತಿಕಕರ್ಮಗಳನ್ನು ಮಾಡುತ್ತಾ ಶಾಸ್ತ್ರೋಕ್ತವಾದ ಹಿಂಸರಹಿತಕರ್ಮಯೋಗವನ್ನು ಮಾಡುತ್ತಾ ಭಗವಂತನ ಪ್ರತಿಮೆಯೇ ಮುಂತಾದವುಗಳ ದರ್ಶನ, ಸ್ಪರ್ಶ, ಪೂಜಾಸ್ತುತಿವಂದನಗಳನ್ನು ಮಾಡುತ್ತಾ, ಪ್ರಾಣಿಗಳಲ್ಲಿ ಭಗವದ್ಭಾವನೆಯನ್ನು ಮಾಡುತ್ತಾ ಧೃತಿವೈರಾಗ್ಯಗಳಿಂದೊಡಗೂಡಿ ಮಹಾಪುರುಷರನ್ನು ಗೌರವಿಸುವದು, ದೀನರಲ್ಲಿ ದಯೆಯನ್ನು ತೋರಿಸುವದು, ಸಮಾನರಲ್ಲಿ ಮೈತ್ರಿ- ಇವುಗಳನ್ನು ಆಚರಿಸುತ್ತಾ ಯಮನಿಯಮಗಳನ್ನು ಸಾಧಿಸುತ್ತಾ ಅಧ್ಯಾತ್ಮಶಾಸ್ತ್ರಗಳ ಶ್ರವಣವನ್ನೂ ಭಗವನ್ನಾಮಕೀರ್ತನವನ್ನೂ ಮಾಡುತ್ತಾ ಸತ್ಸಂಗವನ್ನು ಮಾಡಿ ಅಹಂಕಾರವಿಲ್ಲದಿರುವ ಭಾಗವತಧರ್ಮಾವಲಂಬಿಗೆ ಚಿತ್ತವು ಅತ್ಯಂತ ಶುದ್ಧವಾಗಿ ಭಗವಂತನಲ್ಲಿಯೇ ಲಗ್ನವಾಗುವದು.

ವಾಯುವು ಹೂವಿನ ಗಂಧವನ್ನು ಘ್ರಾಣೇಂದ್ರಿಯದವರೆಗೂ ತರುವಂತೆ ಭಕ್ತಿಯೋಗದಲ್ಲಿ ತತ್ಪರವಾದ ಚಿತ್ತವು ಭಗವಂತನವರೆಗೆ ಹೋಗಿ ಮುಟ್ಟುವದು. ಸರ್ವಾಂತರ್ಯಾಮಿಯಾದ ಭಗವಂತನನ್ನು ಅನಾದರಮಾಡಿ ಕೇವಲಪ್ರತಿಮೆಗಳನ್ನು ಪೂಜಿಸುವದು ವ್ಯರ್ಥವು. ಮಿಕ್ಕ ಜೀವರಲ್ಲಿ ವೈರವನ್ನು ಕಟ್ಟಿಕೊಂಡು ಅವರಲ್ಲಿರುವ ಭಗವಂತನಲ್ಲಿ ದ್ವೇಷವನ್ನು ಮಾಡುತ್ತಿರುವವನಿಗೆ ಎಂದಿಗೂ ಶಾಂತಿಯು ದಕ್ಕದು. ಮಿಕ್ಕ ಜೀವರನ್ನು ನಿಂದಿಸುತ್ತಾ ಮಾಡುವ ಮಹಾಪೂಜೆಯಿಂದಲೂ ಭಗವಂತನು ಪ್ರಸನ್ನನಾಗುವುದಿಲ್ಲ. ಎಲ್ಲಾ ಪ್ರಾಣಿಗಳಲ್ಲಿಯೂ ಇರುವ ಭಗವಂತನನ್ನೇ ತನ್ನ ಹೃದಯದಲ್ಲಿ ಕಂಡುಕೊಳ್ಳುವವರೆಗೂ ಅವಶ್ಯವಾಗಿ ಪ್ರತಿಮಾದಿದ್ವಾರದಿಂದ ಪೂಜೆಮಾಡುತ್ತಿರಬೇಕು. ಆದರೆ ಜೀವಪರಮಾತ್ಮರಿಗೆ ಸ್ವಲ್ಪವಾದರೂ ಭೇದವನ್ನು ಕಾಣುತ್ತಿರುವವನಿಗೆ ಮೃತ್ಯುಭಯವು ತಪ್ಪಿದ್ದಲ್ಲ. ಆದ್ದರಿಂದ ಸರ್ವ ಭೂತಗಳಲ್ಲಿರುವ ಭಗವಂತನನ್ನು ಯಥಾಯೋಗ್ಯವಾಗಿ ದಾನಮಾನಾದಿಗಳಿಂದ ಪೂಜಿಸುತ್ತಿರಬೇಕು. ಪಾಷಾಣಾದಿಗಳಿಗಿಂತ ಉಸಿರಾಡುವ ಪ್ರಾಣಿಗಳು, ಅವಕ್ಕಿಂತ ಮನಸ್ಸಿರುವ ಪ್ರಾಣಿಗಳು, ಅವಕ್ಕಿಂತ ಇಂದ್ರಿಯಸಹಿತ ಪ್ರಾಣಿಗಳು, ಅವುಗಳಿಗಿಂತಲೂ ಚತುಷ್ಪಾಜ್ಜಂತುಗಳು, ಅವುಗಳಿಗಿಂತ ಮನುಷ್ಯರು, ಅವರಲ್ಲಿಯೂ ಬ್ರಾಹ್ಮಣರು, ಅವರಲ್ಲಿಯೂ ವೇದವನ್ನು ಬಲ್ಲವರು, ವರ್ಣಾಶ್ರಮ ಧರ್ಮಗಳನ್ನು ಕಾಪಾಡಿಕೊಂಡಿರುವವರು- ಇವರು ಉತ್ತರೋತ್ತರವಾಗಿ ಶ್ರೇಷ್ಠರು. ನಿಷ್ಕಾಮಕರ್ಮಿಗಳಾಗಿ ತಾವು ಮಾಡುವ ಕರ್ಮಫಲವನ್ನೂ ಚಿತ್ತವನ್ನೂ ಭಗವದರ್ಪಣಮಾಡುವವರು ಎಲ್ಲರಿಗಿಂತಲೂ ಶ್ರೇಷ್ಠರು. ಆದ್ದರಿಂದ ಇದನ್ನರಿತವನು ಈಶ್ವರನೇ ಜೀವಾಂಶದಿಂದ ಸರ್ವರಲ್ಲಿಯೂ ಪ್ರವಿಷ್ಟನಾಗಿರುವನೆಂದು ಭಾವಿಸುತ್ತಾ ಎಲ್ಲಾ ಪ್ರಾಣಿಗಳನ್ನೂ ಮನಸ್ಸಿನಿಂದ ನಮಸ್ಕರಿಸುತ್ತಿರಬೇಕು. ಇದೇ ಭಕ್ತಿಯೋಗವು- ಎಂದು ಪುರಾಣಭಾಗದ ಸಾರವು.

ಪುರಾಣಶ್ರವಣದ ಕೊನೆಯಲ್ಲಿ **ಶ್ರೀಗಳು**- ಕಪಿಲಭಗವಂತನೇ ಸ್ತ್ರೀಯಾದ ತನ್ನ ಮಾತೆಗೆ ಹೇಳಿರುವದರಿಂದ ಇದು ಸಕಲರಿಗೂ ಸುಲಭಸಾಧ್ಯವಾದ ಸಾಧನವೆಂದು ನಾವೆಲ್ಲರೂ ನಂಬಬಹುದು. ಎಲ್ಲಾ ಪ್ರಾಣಿಗಳಲ್ಲಿಯೂ ಭಗವಂತನೇ ಇರುತ್ತಾನೆ, ಎಲ್ಲದರಲ್ಲಿಯೂ ಆತನೇ ಇರುತ್ತಾನೆ, ಎಲ್ಲವೂ

ಅವನೇ- ಎಂಬುದೇ ತತ್ತ್ವಜ್ಞಾನವು. ಇದನ್ನು ಭಕ್ತಿಯಿಂದ ಸುಲಭವಾಗಿ ಸಂಪಾದಿಸಿಕೊಳ್ಳಬಹುದಾಗಿದೆ. ಅನೇಕ ಶಾಸ್ತ್ರಗಳನ್ನು ಅಭ್ಯಾಸಮಾಡಿದವರಿಗೂ ಪರಮಾತ್ಮಪ್ರಾಪ್ತಿಯಾಗದಿರುವದಕ್ಕೆ ಹೃದಯದಲ್ಲಿ ಪ್ರೇಮವನ್ನು ತುಂಬಿಕೊಂಡು ಭಕ್ತಿಯನ್ನು ಮಾಡದೆ ಇರುವದೇ ಕಾರಣವೆಂದು ತಿಳಿಯಬೇಕು. ವೇದಾಂತರಹಸ್ಯವೆಲ್ಲ ಪ್ರೇಮದಲ್ಲಿದೆ. ಭಗವಂತನನ್ನು ಪ್ರಿಯನೆಂದೇ ಉಪಾಸನೆಮಾಡಬೇಕು; ಭಗವತ್ಪ್ರೇಮರೂಪವಾದ ಭಕ್ತಿಯು ಹೆಚ್ಚಾಗಿರುವ ಭಗವದ್ಭಕ್ತರ ಆರಾಧನೆಯಿಂದ ಸುಲಭವಾಗಿ ಭಗವತ್ಪ್ರಾಪ್ತಿಯಾಗುವದು ಪ್ರೇಮಪ್ರಧಾನವಾಗಿರುವ ಸ್ತ್ರೀಯರಿಗೆ ಇದು ಹೆಚ್ಚು ಸುಲಭವಾಗಿರುತ್ತದೆ; ಗಂಡಸರೂ ಈ ವಿಷಯದಲ್ಲಿ ಹೆಂಗಸರ ಮೇಲುಪಙ್ಕ್ತಿಯನ್ನನುಸರಿಸಿ ಮೃದು ಹೃದಯರಾಗಿ ಭಗವದ್ಭಕ್ತಿಯನ್ನು ಸಂಪಾದಿಸುವದೇ ಅಧ್ಯಾತ್ಮಸಾಧನದ ಗುಟ್ಟು ಎಂದು ಉಪದೇಶಿಸಿದರು.

★★★★★

## ಜೀವನ್ಮುಕ್ತನ ಸ್ಥಿತಿ

**23-5-1953**

**ಬ್ರ॥ ಶ್ರೀ॥ ಎಸ್. ವಿಠಲಶಾಸ್ತ್ರಿಗಳವರು**

**ವಾಸಿಷ್ಠ ರಾಮಾಯಣದಲ್ಲಿ ನಿರ್ವಾಣಪ್ರಕರಣದ ಪೂರ್ವಭಾಗದ 68ನೆಯ ಸರ್ಗ**ದಲ್ಲಿ ಸುಷುಪ್ತಮೌನವೆಂಬ ಹೆಸರಿನಿಂದ ಜೀವನ್ಮುಕ್ತಸ್ಥಿತಿಯನ್ನು ವರ್ಣಿಸಿರುತ್ತದೆ. ವಾಙ್ಮೌನ, ಅಕ್ಷಮೌನ, ಮನೋಮೌನ- ಇವಲ್ಲಕ್ಕೂ ವಿಲಕ್ಷಣವಾದದ್ದು ಸುಷುಪ್ತಮೌನವು. ಅದರಲ್ಲಿ ಪ್ರಾಣಸಂಯಮಾದಿಗಳು ಇರುವದಿಲ್ಲ; ಎಲ್ಲವನ್ನೂ ಆತ್ಮರೂಪವಾಗಿ ಕಾಣುವದೇ, ಸುಷುಪ್ತಿಯಂತೆ ನಿರ್ವಿಶೇಷವಾಗಿ ಕಾಣುವದೇ, ಸಷುಪ್ತಮೌನವು- ಎಂಬುದು ಸರ್ಗದ ಸಾರವು.

ಶ್ರೀಗಳು ಅನುವಾದದಲ್ಲಿ ಭಾರತದ ಒಂದು ಶ್ಲೋಕವನ್ನು ಹೇಳಿದರು. 'ಮಾತಾಡದೆ ಇದ್ದರೆ ಮುನಿಯಲ್ಲ, ಅರಣ್ಯದಲ್ಲಿ ವಾಸಮಾಡಿದರೂ ಮುನಿಯಲ್ಲ, ಸ್ವಲಕ್ಷಣವನ್ನು ಅರಿತಿರುವವನೇ ಮುನಿಯು' - ಎಂಬುದು ಶ್ಲೋಕದ ಅಭಿಪ್ರಾಯ. ದ್ವಿತೀಯವಸ್ತುವಿನ ಸಂಬಂಧವಿಲ್ಲದೆ ಆತ್ಮನಲ್ಲಿಯೇ ಇದ್ದು ಬಿಡುವ ಸ್ಥಿತಿಯನ್ನು ಅಸ್ಪರ್ಶಯೋಗ- ಎಂಬ ಹೆಸರಿನಿಂದ ಗೌಡಪಾದಾಚಾರ್ಯರು ಕರೆದಿರುತ್ತಾರೆ. ಅದನ್ನೇ ಇಲ್ಲಿ ಸುಷುಪ್ತಮೌನವೆಂದು ಕರೆದಿದೆ. ಮನಸ್ಸು ನಿಜವಾಗಿ ನೋಡಿದಾಗ ಮನಸ್ಸಾಗಿರುವದಿಲ್ಲ; ಅದು ಆತ್ಮನೇ ಆಗಿರುತ್ತದೆ. ಹೀಗೆಂದು ಅರಿತಿರುವವನು ಯಾವ ವ್ಯವಹಾರವನ್ನು ಮಾಡುವಂತೆ ತೋರಿದರೂ ಅವನು ನಿಜವಾಗಿ ಮೌನಿಯೇ -ಎಂದು ಸಂಗ್ರಹವಾಗಿ ಹೇಳಿದರು.

★★★★★

# ಗೃಹಸ್ಥನಾದವನ ಧರ್ಮ

**24-5-1953**

**ಬ್ರ॥ಶ್ರೀ॥ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಶಾಸ್ತ್ರಿಗಳವರು**

**ಭಾಗವತದಲ್ಲಿ 8ನೆಯ ಸ್ಕಂದ ಇಪ್ಪತ್ತನೆಯ ಅಧ್ಯಾಯದಲ್ಲಿ** ಶುಕ್ರಾಚಾರ್ಯರು ''ಗೃಹಸ್ಥನಾದವನು ಅರ್ಥಕಾಮಗಳನ್ನೂ ಯಶಸ್ಸನ್ನೂ ತನ್ನ ವೃತಿಯನ್ನೂ ಹಾಳುಮಾಡಿಕೊಳ್ಳದೆಯೇ ಧರ್ಮವನ್ನು ಅನುಸರಿಸಬೇಕು'' ಎಂದು ಹೇಳಿದ ಬುದ್ಧಿವಾದವನ್ನು ಕೇಳಿದ ಬಲಿಯು ''ಮೊದಲು ಕೊಟ್ಟವಾಗ್ದಾನವನ್ನು ಧನಲೋಭದಿಂದ ಮುರಿಯುವದು ನನಗೆ ರುಚಿಸುವದಿಲ್ಲ; ನನಗೆ ಯಾವ ಕಷ್ಟವು ಬಂದರೂ ಬರಲಿ, ಆದರೆ ಬ್ರಾಹ್ಮನಿಗೆ ಕೊಡುತ್ತೇನೆಂದು ಒಮ್ಮೆ ಹೇಳಿದ ಮಾತನ್ನು ಎಂದಿಗೂ ಹಿಂದಕ್ಕೆ ತೆಗೆದುಕೊಳ್ಳಲಾರೆನು''- ಎಂದು ದಾನವನ್ನು ಕೊಟ್ಟೇತೀರುವೆನೆಂದು ನಿಶ್ಚಯಿಸಿದ್ದು, ದೈವ ಪ್ರೇರಿತರಾದ ಶುಕ್ರಾಚಾರ್ಯರು 'ನೀನು ಐಶ್ವರ್ಯದಿಂದ ಭ್ರಷ್ಟನಾಗು' ಎಂದು ಶಪಿಸಿದ್ದು, ಬಲಿಯು

ಅದಕ್ಕೂ ಅಂಜದೆ ದಾನವನ್ನು ಕೊಟ್ಟದ್ದು, ವಾಮನನ ಮೂರ್ತಿಯು ಬೆಳೆದು ವಿರಾಡ್ರೂಪವನ್ನು ಧರಿಸಿದ್ದು, ಎರಡು ಹೆಜ್ಜೆಗಳಿಂದ ಇರುವದೆಲ್ಲವನ್ನೂ ವಿಷ್ಣುವು ಅಳೆದುಕೊಂಡದ್ದು – ಇದೆಲ್ಲವನ್ನೂ ಈ ಅಧ್ಯಾಯದಲ್ಲಿ ವರ್ಣಿಸಿರುತ್ತದೆ.

ಶ್ರೀಗಳು ಈ ಪುರಾಣಶ್ರವಣದ ಅಂತ್ಯದಲ್ಲಿ ಮಾಡಿದ ಅನುವಾದದಲ್ಲಿ ಪುರಾಣಗಳಲ್ಲಿ ಹೇಗೆ ವೇದಾರ್ಥವೇ ಅಡಗಿರುತ್ತದೆ ಎಂಬುದನ್ನೂ ಪುರಾಣಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವದು ವೈದಿಕಸಂಪ್ರದಾಯವನ್ನು ಬಲ್ಲವರಿಗೆ ಮಾತ್ರ ಸಾಧ್ಯವೆಂಬುದನ್ನೂ ಸ್ಪಷ್ಟಗೊಳಿಸಿದರು. ವಿಷ್ಣುವು ವಾಮನ ರೂಪದಿಂದ ಬಂದು ಮೂರಡಿಯ ಭೂಮಿಯನ್ನು ಬೇಡಿದಮೇಲೆ ತ್ರಿವಿಕ್ರಮನ್ನಾಗಿ ಅಳೆದುಕೊಂಡದ್ದು ಅನ್ಯಾಯವಲ್ಲವೆ? ಈ ಕಥೆಯಲ್ಲಿ ಬಲಿಯ ಕೀರ್ತಿಯು ಹೆಚ್ಚಾಗಿದ್ದರೂ ದೇವತೆಗಳ ಮೋಸವೂ ಪ್ರಕಟವಾಗಿದೆ ಎಂದು ಕುಚೋದ್ಯವನ್ನು ಮಾಡುವವರೂ ಈಗ ಇರುತ್ತಾರೆ. ರಾಜಕೀಯದೃಷ್ಟಿಯಿಂದ ಒಂದು ದೇಶದವರನ್ನು ಮತ್ತೊಂದು ದೇಶದವರು ವಿಮರ್ಶಿಸಿ ಬರೆಯುವಂತೆ ಪುರಾಣದ ಕಥೆಗಳನ್ನು ವಿಮರ್ಶಿಸುವದು ಕುತರ್ಕದ ಫಲವು, ರಾಗದ್ವೇಷಗಳನ್ನು ಕಳೆಯುವದಕ್ಕೆ ಬಂದಿರುವ ಪುರಾಣದಲ್ಲಿಯೂ ರಾಗದ್ವೇಷಗಳೇ ಕಾಣುತ್ತವೆ. ಆದರೆ ಸಮದೃಷ್ಟಿಯಿಂದ ನೋಡುವಾಗ ವೇದದಲ್ಲಿರುವ ಅರ್ಥವನ್ನೇ ಕಥಾರೂಪದಿಂದ ಪುರಾಣಗಳು ವಿಶದಗೊಳಿಸಿರುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಇಡಿಯ ಜಗತ್ತೇ ಪರಮಾತ್ಮನ ವಿಭೂತಿಯು ; ಆತ್ಮನಿಗೇ ಎಲ್ಲವನ್ನೂ ಅರ್ಪಿಸಬೇಕು. ಕೊಟ್ಟು ಬದುಕು, ಇಟ್ಟುಕೊಂಡು ಹಾಳಾಗಬೇಡ – ಎಂಬ ಘನವಾದ ಉಪದೇಶವು ಬಲಿಯ ಕಥೆಯಲ್ಲಿ ಕಾಣುತ್ತಿದೆ. ವೇದೋಕ್ತವಾದ ಯಜ್ಞದಾನತಪಸ್ಸುಗಳೆಂಬ ಮೂರು ಸಾಧನಗಳೊಳಗೆ ಕಲಿಯುಗಕ್ಕೆ ದಾನವೊಂದೇ ಸಾಧ್ಯವಾಗಿರುತ್ತದೆ ಎಂದು ಪುರಾಣಗಳು ಉಪದೇಶಿಸುತ್ತವೆ. ಮಮತ್ವವೇ ನಾಗರಿಕತೆಯೆಂಬ ರೋಗದ ಚಿಹ್ನೆ ಎಂದು ಎಡ್ವರ್ಡ್ ಕಾರ್ಪೆಂಟರ್ ಎಂಬಾತನು ತನ್ನದೊಂದು ಪುಸ್ತಕದಲ್ಲಿ ವರ್ಣಿಸಿರುತ್ತಾನೆ. ಈಶ್ವರನು ಕೊಡುತ್ತಾನೆ, ಈಶ್ವರನೇ ತೆಗೆದುಕೊಳ್ಳುತ್ತಾನೆ; ಅವನೇ ಇಬ್ಬರನ್ನೂ ಸಂಸಾರದಿಂದ ಪಾರುಗಾಣಿಸುವವನು ಎಂಬುದೊಂದು ಘನವಾದ ಉಪದೇಶವು. ಈ ತತ್ತ್ವವನ್ನು ಅರಿಯದವರು

ಸಂಕಟಪಡುತ್ತಾರೆ. ಇಂದು ತೆಗೆದುಕೊಂಡವನು, ನಾಳೆ ಕೊಡಬೇಕಾಗುತ್ತದೆ; ಇಲ್ಲದಿದ್ದರೆ ಅವನಿಂದ ಯಾರಾದರೂ ಅದನ್ನು ಕಸಿದುಕೊಂಡಾದರೂ ಬುದ್ಧಿಯನ್ನು ಕಲಿಸುತ್ತಾರೆ. ದಾನವೆಂಬ ಸಾಧನವನ್ನು ಸರಿಯಾಗಿ ಮಾಡಿ ಪರಮಾತ್ಮಸಾಕ್ಷಾತ್ಕಾರವನ್ನೇ ಮಾಡಿಕೊಳ್ಳಬಹುದು - ಎಂಬಿದನ್ನು ವಿವಿದ ದೃಷ್ಟಾಂತಗಳಿಂದ ವಿವರಿಸಿದರು.

★★★★★

# ದಮದ ಪ್ರಶಂಸೆ

**08-5-1954**

ಶ್ರೀಶ್ರೀಗಳು

**ಮಹಾಭಾರತದಲ್ಲಿ ಶಾಂತಿಪರ್ವ 158ನೆಯ ಅಧ್ಯಾಯದಲ್ಲಿ** ದಮಪ್ರಶಂಸೆಯಿದೆ. ದಮವೆಂಬ ಶಬ್ದಕ್ಕೆ ಸಾಮಾನ್ಯವಾಗಿ ಬಹಿರಿಂದ್ರಿಯನಿಗ್ರಹವೆಂಬ ಅರ್ಥವಿದೆ. ಆದರೆ ಇಲ್ಲಿ ವಿಶಾಲವಾದ ಅರ್ಥವನ್ನು ಕೊಟ್ಟಿದೆ. ''**ಕ್ಷಮಾಧೃತಿರಹಿಂಸಾ ಚ ಸಮತಾ ಸತ್ಯಮಾರ್ಜವಮ್ । ಇಂದ್ರಿಯಾಭಿಜಯೋದಾಕ್ಷ್ಯಂ ಮಾರ್ದವಂ ಹ್ರೀರಚಾಪಲಮ್ ॥ ಅಕಾರ್ಪಣ್ಯಮಸಂರಂಭಃ ಸನ್ತೋಷಃ ಪ್ರಿಯವಾದಿತಾ। ಅವಿಹಿಂಸಾಽನಸೂಯಾ ಚ ಹ್ಯೇಷಾಂ ಸಮುದಯೋ ದಮಃ ॥**'' ಈ ಎರಡು ಶ್ಲೋಕಗಳಲ್ಲಿ ಹೇಳಿರುವ ಲಕ್ಷಣವನ್ನು ಮನದಂದರೆ ಯಮವೆಂಬ ಶಬ್ದಕ್ಕಿರುವ ಅರ್ಥವನ್ನೇ ಇಲ್ಲಿ ದಮಶಬ್ದಕ್ಕೆ ಕೊಟ್ಟಿದೆ ಎಂಬುದು ಹೊಳೆಯುವದು. ಬಹಿರಿಂದ್ರಿಯಗಳನ್ನೂ ಅಂತಃಕರಣವನ್ನೂ ಸ್ವಾಧೀನದಲ್ಲಿಟ್ಟುಕೊಂಡಿರುವ ಹೆಚ್ಚಿನ ಸಾಮಾರ್ಥ್ಯವನ್ನೇ ಇಲ್ಲಿ ದಮವೆಂದು ಕರೆದಿರುವದು. ದಮವೆಂಬುದು ಸರ್ವಗುಣಗಳ ಸಮುದಾಯವಾಗಿದೆ. ಇದನ್ನು ವೇದವ್ಯಾಸರು ಚಮತ್ಕಾರವಾಗಿ ಇಲ್ಲಿ ನಮಗೆ ಮನದಟ್ಟು ಮಾಡಿಕೊಟ್ಟಿರುತ್ತಾರೆ: ''**ಏಕ ಏವ ದಮೇ ದೋಷೋ ದ್ವಿತೀಯೋ**

**ನೋಪಪದ್ಯತೇ । ಯದೇನಂ ದಮಸಂಯುಕ್ತಮಶಕ್ತಂ ಮನ್ಯತೇ ಜನಃ ॥''** ಇಂದ್ರಿಯಗಳನ್ನು ಹರಿಯಬಿಡುವದಕ್ಕೆ ಶಕ್ತಿಯಿದ್ದರೂ ಅವನ್ನು ಹೊರಕ್ಕೆ ಬಿಡದೆ ಇರುವ ಮಹಾಶಕ್ತಿಯುಳ್ಳವನೇ ದಮವಂತನು, ಆದರೂ ಅವನನ್ನು ಹೇಡಿ ಎಂದು ಅಜ್ಞರು ಭಾವಿಸುವರು. ಓಡುವ ಸ್ವಭಾವವೇ ಇಲ್ಲದ ಕಲ್ಲುಕುದುರೆಯನ್ನು ಸವಾರನ ಸಾಮರ್ಥ್ಯದಿಂದ ನಿಂತಿರುವ ಜಾತ್ಯಶ್ವಕ್ಕೆ ಹೋಲಿಸುವ ಮೂಢತನವೇ ಇದು. ದಮವೆಂಬುದು ಅಧ್ಯಾತ್ಮದ ಸಾರಸಂಗ್ರಹವು. ಇದನ್ನು ಶ್ರುತಿಯೇ ಕೊಂಡಾಡಿರುತ್ತದೆ. ಕ್ಷತ್ರಿಯರಿಗೂ ಅಧಿಕಾರಿಗಳಿಗೂ ನ್ಯಾಯಾಧಿಪತಿಗಳಿಗೂ ದಮವೇ ಭೂಷಣವು; ದಮವು ಸರ್ವವ್ಯವಹಾರದಲ್ಲಿಯೂ ಅವಶ್ಯವಾಗಿರುತ್ತದೆ. ಅಧ್ಯಾತ್ಮಸಾಧನಗಳಲ್ಲಂತೂ ದಮವೇ ಪ್ರಧಾನವಾದ ಸಾಧನವಾಗಿರುತ್ತದೆ.

★★★★★

# ಸಿದ್ಧಗೀತೆ

**09-5-1954**

**ಬ್ರ॥ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

**ವಾಸಿಷ್ಠರಾಮಾಯಣದಲ್ಲಿ ಉಪಶಮಪ್ರಕರಣದಲ್ಲಿ 8ನೆಯ ಸರ್ಗದಲ್ಲಿ** ಜನಕನು ತನ್ನ ಉಪವನದಲ್ಲಿದ್ದಾಗ ಕೇಳಿದ ಸಿದ್ಧಗೀತೆಯ ಹತ್ತು ಶ್ಲೋಕಗಳು ಬಂದಿದೆ. ಅವುಗಳ ಅರ್ಥವು ಸಂಗ್ರಹವಾಗಿ ಇಂತಿದೆ: (1) ದ್ರಷ್ಟೃ, ದೃಶ್ಯ- ಇವುಗಳ ಸಂಬಂಧದಿಂದ ಉಂಟಾಗುವ ಪ್ರತ್ಯಯದ ಫಲವಾದ ಆನಂದರೂಪವು ಯಾವದೋ ಅದು ತನ್ನ ಪಾರಮಾರ್ಥಿಕರೂಪದಿಂದ ಪ್ರಕಟವಾದಾಗ ಇರುವ ನಿಶ್ಚಲರೂಪವಾದ ಆತ್ಮನನ್ನು ಉಪಾಸನೆಮಾಡುತ್ತೇವೆ. (2) ದ್ರಷ್ಟೃ, ದರ್ಶನ, ದೃಶ್ಯ- ಎಂಬ ವಿಂಗಡಗಳನ್ನೂ ಅವುಗಳ ವಾಸನೆಯನ್ನೂ ಬಿಟ್ಟು ದರ್ಶನಕ್ಕೂ ಮೊದಲೇ ಹೊಳೆಯುತ್ತಿರುವ ಚಿದಾತ್ಮನನ್ನು ಉಪಾಸನೆಮಾಡುತ್ತೇವೆ. (3) ಅಸ್ತಿ,

ನಾಸ್ತಿ - ಎಂಬ ಎರಡು ಪಕ್ಷಗಳಿಗೂ ನಡುವೆ ಇರುವ, ತೋರುವದೆಲ್ಲವನ್ನೂ ಬೆಳಗುತ್ತಿರುವ ಆತ್ಮನನ್ನು ಉಪಾಸನೆಮಾಡುತ್ತೇವೆ. (4) ಯಾವದರಲ್ಲಿ ಎಲ್ಲವೂ ಇರುವದೋ, ಯಾವದರದ್ದೇ ಎಲ್ಲವೂ ಆಗಿರುವದೋ, ಯಾವದರಿಂದಲೇ ಎಲ್ಲವೂ ಬಂದಿರುವದೋ, ಯಾವದಕ್ಕಾಗಿ ಎಲ್ಲವೂ ಇದ್ದುಕೊಂಡಿರುವದೋ, ಯಾವದರಿಂದ ಎಲ್ಲವೂ ವ್ಯಾಪಾರಮಾಡುತ್ತಿರುವದೋ, ಯಾವದೇ ಎಲ್ಲವೂ ಆಗಿರುವದೋ ಆ ಸತ್ಯರೂಪವನ್ನು ಉಪಾಸನೆಮಾಡುತ್ತೇವೆ. (5) ಅಕಾರ ಮೊದಲಾಗಿ ಹಕಾರಾಂತವಾಗಿರುವ ಎಲ್ಲಾ ನಾಮಗಳನ್ನೂ ಅನೇಕವಾದ ರೂಪಗಳನ್ನೂ ಮಾಡಿ ತನ್ನನ್ನೇ ಎಂದೆಂದಿಗೂ ಹೊರಗೆಡಹುತ್ತಿರುವ ಆ ಆತ್ಮನನ್ನು ಉಪಾಸನೆಮಾಡುತ್ತೇವೆ. (6) ಹೃದಯಗುಹೆಯಲ್ಲಿರುವ ಈಶ್ವರನನ್ನು ಬಿಟ್ಟು ಮತ್ತೊಬ್ಬ ದೇವನನ್ನು ಯಾರು ಹುಡುಕಿಕೊಂಡು ಹೋಗುತ್ತಿರುವರೋ, ಅವರು ಕೈಯಲ್ಲಿರುವ ಕೌಸ್ತುಭವನ್ನು ಬಿಟ್ಟು ರತ್ನವನ್ನು ಅರಸುತ್ತಿರುವರು. (7) ಎಲ್ಲಾ ಆಶೆಗಳನ್ನೂ ಬಿಟ್ಟರೇ ಅಲ್ಲವೆ, ಈ ಫಲವು ಸಿಕ್ಕುವದು? ಇದರಿಂದ ಆಶೆಗಳೆಂಬ ವಿಷದ ಬಳ್ಳಿಗಳ ಮೂಲಮಾಲೆಯೇ ಕಿತ್ತುಹೋಗುವದು. (8) ಪದಾರ್ಥಗಳು ಅತ್ಯಂತ ವಿರಸವಾಗಿರುವವೆಂಬುದನ್ನು ತಿಳಿದೂತಿಳಿದೂ ಯಾವನು ಅವುಗಳಲ್ಲಿಯೇ ಭಾವನೆಯನ್ನು ಮತ್ತೂ ದೃಢಗೊಳಿಸಿ ಕೊಂಡಿರುವನೋ ಅವನು ನರನಲ್ಲ, ಗರ್ದಭ. (9) ಇಂದ್ರಿಯಗಳೆಂಬ ಈ ಹಾವುಗಳು ಎದ್ದೆದ್ದಹಾಗೆಲ್ಲ, ಇಂದ್ರನು ವಜ್ರಾಯುಧದಿಂದ ಪರ್ವತವನ್ನು ಹೊಡೆಯುವಂತೆ, ವಿವೇಕದಂಡದಿಂದ ಹೊಡೆಯುತ್ತಿರಬೇಕು. (10) ಪವಿತ್ರವಾದ ಇಂದ್ರಿಯೋಪಶಮದ ಸುಖವನ್ನೇ ತಂದುಕೊಳ್ಳುತ್ತಿರಬೇಕು. ಯಾವನಿಗೆ ಹೆಚ್ಚಿನ ಉಪಶಮವಿರುವದೋ ಅವನ ಚಿತ್ತವು ಶಾಂತವಾಗುವದು. ಸ್ವಸ್ವರೂಪದಲ್ಲಿ ಯಾವನ ಮನಸ್ಸು ಪ್ರಶಾಂತವಾಗುವದೋ ಅವನಿಗೆ ಶಾಶ್ವತವಾಗಿ ಸುಖದಲ್ಲಿಯೇ ಉತ್ತಮಸ್ಥಿತಿಯುಂಟಾಗುವದು.

ಪುರಾಣಶ್ರವಣದ ಅಂತ್ಯದಲ್ಲಿ ಶ್ರೀಗಳು ಹೀಗೆಂದು ಉಪದೇಶ ಮಾಡಿದರು: ಯಾವ ಮಹನೀಯರು ಸ್ವಯಂಸಿದ್ಧನಾದ ಪರಮಾತ್ಮನಲ್ಲಿಯೇ ಆತನ ರೂಪದಿಂದಲೇ ಶಾಶ್ವತವಾಗಿ ಮನಸ್ಸನ್ನು ನೆಲೆನಿಲ್ಲಿಸಿಕೊಂಡಿರುವರೋ ಅವರೇ ಸಿದ್ಧರು. ಅವರ ಉಪದೇಶವನ್ನು ಮನಮುಟ್ಟಿ ಕೇಳಿದವರು

ತಾವೂ ಸಿದ್ಧರಾಗುತ್ತಾರೆ. ಜನಕನಂಥ ಅಧಿಕಾರಿಗೆ ಈಗಲೂ ಹೃದಯವೆಂಬ ಉಪವನದಲ್ಲಿ ಸಿದ್ಧಗೀತೆಯು ಕೇಳಬರುತ್ತಲೇ ಇರುವದು. ಆ ಕಡೆಗೆ ಮನಸ್ಸೆಂಬ ಕಿವಿಯನ್ನು ತಿರುಗಿಸಬೇಕು ; ಆಗ ಅದು ಆನಂದಪರವಶವಾಗಿ ನಿತ್ಯಸಿದ್ಧನಾದ ಪರಮಾತ್ಮನಲ್ಲಿ ಒಂದಾಗಿ ಶ್ರೋತೃವನ್ನು ಅಖಂಡಸಚ್ಚಿದಾನಂದಸ್ವರೂಪದಿಂದ ಸಿದ್ಧನನ್ನಾಗಿ ಮಾಡುವದು.

★★★★★

# ಬ್ರಹ್ಮಗೀತೆ

**10-05-1954**

**ಬ್ರ॥ಶ್ರೀ॥ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು**

**ಸೂತಸಂಹಿತೆಯ ಯಜ್ಞವೈಭವಖಂಡದ 10ನೆಯ ಅಧ್ಯಾಯದ** ಬ್ರಹ್ಮಗೀತೆಯಲ್ಲಿ ಬ್ರಹ್ಮನು ದೇವತೆಗಳಿಗೆ ಹೇಳಿದ್ದೇನೆಂದರೆ: ಸರ್ವಾಂತರನೂ ಸಾಕ್ಷಾದಪರೋಕ್ಷಬ್ರಹ್ಮವೂ ಆಗಿರುವ ಪ್ರತ್ಯಗಾತ್ಮನೇ ಪ್ರಾಣಾಪಾನಾದಿ ವ್ಯಾಪಾರಗಳಿಗೆ ಆಧಾರವಾಗಿರುವವನು; ಅವನು ಸ್ವತಃ ನಿಷ್ಕ್ರಿಯನಾಗಿದ್ದು ಎಲ್ಲವನ್ನೂ ಸರ್ವಾಂತರವಾಗಿ ನೋಡುತ್ತಿರುವನೇ ಹೊರತು ಹೊರಗಿರುವ ದೇಹ ಪ್ರಾಣದೃಷ್ಟ್ಯಾದಿಗಳ ರೂಪನಲ್ಲ. ಸರ್ವಾಂತರನಾದ ಅವನಿಗಿಂತ ಮಿಕ್ಕದ್ದು ಯಾವದೂ ಸತ್ಯವಲ್ಲ.

ಆತ್ಮಸ್ವರೂಪವನ್ನು ಕಾರ್ಯಕಾರಣನಿರೂಪಣದಿಂದಲೂ ತಿಳಿದು-ಕೊಳ್ಳಬಹುದು. ಹೇಗೆಂದರೆ, ಪೃಥಿವಿ, ಅಪ್ಪು, ಅಂತರಿಕ್ಷ, ಗಂಧರ್ವ, ಆದಿತ್ಯ, ಚಂದ್ರ, ನಕ್ಷತ್ರ, ದೇವ, ಇಂದ್ರ, ಪ್ರಜಾಪತಿ, ವಿಷ್ಣು, ರುದ್ರ, ಸದಾಶಿವ – ಈ ಲೋಕಗಳೂ ಜಗತ್ಕಾರಣವಾದ ಸರ್ವಾಂತರನಾದ ಪ್ರತ್ಯಗಾತ್ಮರೂಪನಲ್ಲಿ ಓತಪ್ರೋತವಾಗಿರುತ್ತವೆ; ಅವು ನಿಜವಾಗಿ ಆತನಿಗಿಂತ ಬೇರೆಯಿಲ್ಲ.

ಪೃಥಿವಿ, ಅಪ್ಪು, ಅಗ್ನಿ, ವಾಯು- ಮುಂತಾದ ಚೇತನಾಚೇತನಗಳ ಒಳಗಿದ್ದುಕೊಂಡು ಎಲ್ಲವನ್ನೂ ನಿಯಮಿಸುವವನೂ ಆ ಪರಮಾತ್ಮನೇ; ಅವನು ಎಲ್ಲವನ್ನೂ ಅರಿಯುವನಾದರೂ ಆತನನ್ನು ಯಾರೂ ಅರಿಯರು. ಆತನು ಭಾವಾಭಾವಕ್ಕೆಲ್ಲ ಸಾಕ್ಷಿಯು. ಅವನ ದೃಷ್ಟಿಸ್ವರೂಪಕ್ಕೆ ನಾಶವೇ ಇಲ್ಲ.

ಅವನನ್ನು ಅರಿತವನಿಗೆ ಈ ಸ್ವರೂಪವೇ ಪರಮಸಂಪತ್ತು, ಪರಮ ಲೋಕವು, ಪರಮಾನಂದವು. ಆ ಜ್ಞಾನಿಗೆ ದೇಹವೇ ಇಲ್ಲ, ಅವನ ಸ್ವರೂಪದಲ್ಲಿ ನಾನಾತ್ವವೇ ಇಲ್ಲ; ಅದನ್ನು ಏಕರಸವೆಂದೇ ತಿಳಿಯಬೇಕು. ಅವನು ಯಾವ ಪ್ರಮಾಣಕ್ಕೂ ದೊರಕನು ; ಆತನನ್ನು ಅರಿಯುವದಕ್ಕೆ ಬೇಕಾದ ಸಾಧನಗಳನ್ನೇ ಅನುಷ್ಠಾನಮಾಡಬೇಕು. ಮಹಾನ್ ಅಜ ಆತ್ಮನಾಗಿರುವ ಸರ್ವಾಧಿ ಪತಿಯಾಗಿರುವ ಆತನನ್ನು ಯಜ್ಞಾದಿಗಳಿಂದಲೂ ಇತರ ಸಾಧನಗಳಿಂದಲೂ ಅರಿತುಕೊಂಡವನೇ ಮುನಿಯು. ಆ ಆತ್ಮನು ಸರ್ವವಿಶೇಷರಹಿತನು, ಸರ್ವಥಾ ಕರ್ಮಸಂಬಂಧರಹಿತನಾಗಿರುತ್ತಾನೆ.

★★★★★

# ಧ್ರುವನಿಗೆ ಸಪ್ತರ್ಷಿಗಳು ಮಾಡಿದ ಉಪದೇಶ

**11-5-1954**

**ವೇ|| ಬ್ರ|| ವಿದ್ವಾನ್ ಲಕ್ಷ್ಮೀನರಸಿಂಹಶಾಸ್ತ್ರಿಗಳವರು,**

ಧ್ರುವನು ತನಗೆ ಅರ್ಥವಾಗಲಿ ರಾಜ್ಯವಾಗಲಿ ಬೇಕಿಲ್ಲವೆಂದೂ ಮತ್ತೊಬ್ಬರು ಭೋಗಿಸದೆ ಇರುವ ಸ್ಥಾನವೇ ಬೇಕೆಂದೂ ಹೇಳಿ ಅದಕ್ಕೆ ಉಪಾಯವನ್ನು ಉಪದೇಶಿಸಬೇಕೆಂದು ಕೇಳಿಕೊಂಡದ್ದಕ್ಕೆ ಋಷಿಗಳು ಪರಮಪುರಷನಾದ ಮಹಾವಿಷ್ಣುವನ್ನೇ ಆರಾಧಿಸಿ ಒಲಿಸಿಕೊಂಡವರಿಗೆ ಅಂಥ ಸ್ಥಾನವು ದೊರಕುವದೆಂದೂ ಬಾಹ್ಯಾರ್ಥಗಳಿಂದ ಚಿತ್ತವನ್ನು ಹಿಂತಿರುಗಿಸಿಕೊಂಡು 'ಓಂ ನಮೋ ಭಗವತೇ ವಾಸುದೇವಾಯ'

ಎಂಬ ಮಂತ್ರವನ್ನು ಜಪಿಸಿ ಆ ಭಗವಂತನನ್ನು ಪ್ರಸನ್ನನಾಗಿ ಮಾಡಿಕೊಳ್ಳಬೇಕೆಂದೂ ಧ್ರುವನಿಗೆ ಸಪ್ತರ್ಷಿಗಳು ಉಪದೇಶಿಸಿರುವ ವಿಷಯವು **ವಿಷ್ಣುಪುರಾಣದ 1-11ನೆಯ ಅಧ್ಯಾಯದಲ್ಲಿ**ತ್ತದೆ.

ಶ್ರೀಗಳು ಅನುವಾದದಲ್ಲಿ ಹೀಗೆಂದು ಅಪ್ಪಣೆಕೊಡಿಸಿದರು: ಯಾವದಾದರೊಂದು ವಿಪತ್ತನ್ನು ಪರಿಹರಿಸಿಕೊಳ್ಳಬೇಕೆಂದೂ ಯಾವದಾದರೊಂದು ಲಾಭವನ್ನು ದೊರಕಿಸಿಕೊಳ್ಳಬೇಕೆಂದೂ ಆಶೆಯಿರುವದು ಮನುಷ್ಯನಿಗೆ ಸ್ವಾಭಾವಿಕ. ಆದರೆ ಧ್ರುವನಿಗೆ ಅಷ್ಟು ಚಿಕ್ಕವಯಸ್ಸಿನಲ್ಲಿಯೇ ಇಷ್ಟು ಉತ್ತಮವಾದ ಹಿರಿಯಾಶೆಯು ಅಂಕುರಿಸಿದ್ದು ಹಿಂದಿನ ಜನ್ಮಗಳ ಮಹಾಪುಣ್ಯದ ಫಲವೆನ್ನಬೇಕು. ತಂದೆಯ ತೊಡೆಯಮೇಲೆ ಒಂದುವೇಳೆ ಕುಳಿತಿದ್ದರೂ ಅವನು ಎಷ್ಟುದಿನ ಹಾಗೆ ಕುಳಿತುಕೊಳ್ಳುತ್ತಿದ್ದನು? ಅದನ್ನು ಬಿಟ್ಟು ಮಿಕ್ಕ ಎಲ್ಲಕ್ಕಿಂತಲೂ ಹೆಚ್ಚಿನ ಧ್ರುವಸ್ಥಾನವೊಂದು ಬೇಕು ಎಂಬ ಆಶೆಯು ಮೂಡಿದ್ದು ಪೂರ್ವಪುಣ್ಯವಾಸನೆಯಿಂದಲ್ಲದೆ ಸಾಧ್ಯವೆ? ದುಷ್ಟವಾಸನೆಯಿಂದೊಡಗೂಡಿದರೆ ಸಾಧನೆಯಲ್ಲಿಯೂ ದುಷ್ಟಮಾರ್ಗವನ್ನೇ ಅನುಸರಿಸಬೇಕೆನಿಸುವದು. ಆದರೆ ಧ್ರುವನಿಗೆ ಸತ್ಪುರುಷರ ಉಪದೇಶ, ಈಶ್ವರಶರಣಾಗತಿ, ಜಪಾದಿಸಾಧನಾನುಷ್ಠಾನ- ಇಂಥ ಉತ್ತಮ ಮಾರ್ಗದಿಂದಲೇ ತನ್ನ ಆಶೆಯನ್ನು ಪರಿಪೂರ್ತಿಗೊಳಿಸಿಕೊಳ್ಳಬೇಕೆನ್ನಿಸಿತು. ಅದೊಂದು ಸೌಭಾಗ್ಯ.

ಧ್ರುವನಿಗೆ ಸಪ್ತಋಷಿಗಳಂಥ ಸತ್ಪುರುಷರ ಸಮಾಗಮವೇ ದೊರೆಯಿತು. ಅವರು ಪರವೆನಿಸಿರುವ ಎಲ್ಲಾ ವಸ್ತುಗಳಿಗಿಂತ ಪರವೆನಿಸಿದ ವಾಸುದೇವಪರಬ್ರಹ್ಮವನ್ನೇ ಆರಾಧಿಸಿದರೆ ಅಚ್ಯುತವಾದ ಪದವಿಯು ದೊರಕುವದು ಎಂದು ಅವನಿಗೆ ಬೋಧಿಸಿದರು. ಮನುಷ್ಯನ ಭಾವನೆಯಂತೆಯೇ ಅವನಿಗೆ ಫಲವಾಗುತ್ತದೆ. ಕ್ಷೇತ್ರವೂ ಕ್ಷೇತ್ರಜ್ಞನೂ ವಾಸುದೇವಾತ್ಮಕವೇ ಎಂಬುದು ಅಧ್ಯಾತ್ಮ ಬೋಧೆಗಳ ಸಾರವು. ವ್ಯಕ್ತ, ಅವ್ಯಕ್ತ, ಜ್ಞ- ಇವುಗಳ ವಿವೇಕದಿಂದ ಮುಕ್ತಿಯಾಗುವದೆಂದು ಸಾಂಖ್ಯರು ಎನ್ನುತ್ತಾರೆ; ಆದರೆ ನಿಜವಾಗಿ ಇವೆಲ್ಲವೂ ವಾಸುದೇವನೆಂಬ ಪರಮಾತ್ಮನಲ್ಲಿಯೇ ಅಡಕವಾಗಿರುತ್ತವೆ.

ಋಷಿಗಳು ಉಪದೇಶಿಸಿದ ಮಂತ್ರವೂ ಅತ್ಯಂತವ್ಯಾಪಕಾರ್ಥವುಳ್ಳದ್ದು, ಓಂಕಾರವು ಸರ್ವವಾಚಕವಾಗಿದೆ; ಅದರ ಅರ್ಥವನ್ನು ಅರಿತುಕೊಂಡರೆ

ಇನ್ನು ಅರಿಯಬೇಕಾದದ್ದೇ ಇರುವದಿಲ್ಲ. ಆದರೆ ಅದು ಎಲ್ಲರಿಗೂ ದಕ್ಕುವದಲ್ಲ. ಆದ್ದರಿಂದ ಅದರ ಅಭಿಪ್ರಾಯವನ್ನೇ ವಿಸ್ತರಿಸಿ ಹೇಳುವ 'ಭಗವತೇ ವಾಸುದೇವಾಯ' ಎಂಬ ಮಂತ್ರಭಾಗವನ್ನು ಋಷಿಗಳು ಧ್ರುವನಿಗೆ ಉಪದೇಶಮಾಡಿದರು. ಭಗವಂತನೆಂದರೆ ಐಶ್ವರ್ಯಜ್ಞಾನಾದಿಗುಣಗಳು ಮಿಗಿಲಿಲ್ಲವೆಂಬಷ್ಟಿರುವ ಪರಮಾತ್ಮನು; ವಾಸುದೇವನೆಂದರೆ ಸಕಲ ಚರಾಚರಗಳಲ್ಲಿಯೂ ವ್ಯಾಪಿಸಿಕೊಂಡಿರುವ ಸ್ವಯಂಪ್ರಕಾಶನಾದ ಪರಮಾತ್ಮನು, ನಮಃ ಎಂದರೆ ಆ ಪರಮಾತ್ಮನಲ್ಲಿ ತನ್ನ ವ್ಯಕ್ತಿತ್ವವನ್ನು ಮುಳುಗಿಸುವ ಭಾವವನ್ನು ತಿಳಿಸುವ ಶಬ್ದವು. ಮಂತ್ರ ಜಪವೆಂದರೆ ಅದರ ಅರ್ಥವನ್ನು ಭಾವನೆಮಾಡುವದು. ಭಾವನೆಯು ಬಲಿತಂತೆಲ್ಲ ಹೊರಗಿನ ಸಂನಿವೇಶವೂ ಮಾರ್ಪಡುತ್ತದೆ. ಜಪದಿಂದ ಚಿತ್ತಶುದ್ಧಿಯಾಗಿ ಜ್ಞಾನವೇ ಉಂಟಾದರೆ ಮುಕ್ತಿಯೇ ವಶವಾಗುವದು. ಸಕಾಮರಾಗಿ ಜಪವನ್ನು ಮಾಡಿದರೂ ಅಮೂಲ್ಯವಾದ ಪರಮಾತ್ಮನ ನಾಮಸ್ಮರಣೆಯು ಆಯಾ ಕಾಮಗಳನ್ನು ಅವಶ್ಯವಾಗಿ ದೊರಕಿಸಿಕೊಡುತ್ತದೆ. ಅಂತು ಮನುಷ್ಯನು ಭೋಗಮೋಕ್ಷಗಳೆರಡಕ್ಕೂ ಪರಮಾತ್ಮನನ್ನು ಶರಣುಹೊಗುವದು ಉತ್ತಮೋಪಾಯವಾಗಿರುತ್ತದೆ.

★★★★★

# ಪ್ರಜ್ಞಾಮಾಹಾತ್ಮ್ಯ

**12-5-1954**

**ಬ್ರ॥ ಶ್ರೀ॥ ವೈ.ಚಂದ್ರಶೇಖರಶಾಸ್ತ್ರಿಗಳವರು**

ಇವರು **ವಾಸಿಷ್ಠರಾಮಾಯಣದಲ್ಲಿ** ಉಪಶಮಪ್ರಕರಣದ 12ನೆಯ ಸರ್ಗದ ಅಭಿಪ್ರಾಯವನ್ನು ಶ್ರವಣಮಾಡಿಸಿದರು. ಈ ಸರ್ಗದಲ್ಲಿ 'ಪ್ರಜ್ಞಾಮಾಹಾತ್ಮ್ಯ'ವನ್ನು ವರ್ಣಿಸಿದೆ. ಜನಕಮಹಾರಾಯನು ತನ್ನಲ್ಲಿ ತಾನು ವಿಚಾರ ಮಾಡುತ್ತಿದ್ದು ಕೊನೆಗೆ ಜೀವನ್ಮುಕ್ತನಾಗಿ ವರ್ತಿಸಿದನೆಂದು ವಿಚಾರಪ್ರಜ್ಞೆಗಳ

ಹಿರಿಮೆಯನ್ನು ಆದರ್ಶವಾಗಿ ಜಿಜ್ಞಾಸುಗಳ ಮುಂದೆ ಇಟ್ಟಿರುತ್ತದೆ. ಶಾಸ್ತ್ರಿಗಳವರು ಹಿಂದಿನ ಸರ್ಗದ ಅಭಿಪ್ರಾಯವನ್ನು ವಿಸ್ತಾರವಾಗಿ ವರ್ಣಿಸಿ ಈ ಸರ್ಗದ ಅಭಿಪ್ರಾಯವನ್ನು ಸಂಕ್ಷೇಪವಾಗಿ ಹೇಳಿದರು. ಶ್ರೀಗಳೂ ಸರ್ಗಾರ್ಥದ ಸಾರವನ್ನು ಅನುವಾದಮಾಡಿದರು.

ಜನಕನು ಜೀವನ್ಮುಕ್ತನಾದಬಳಿಕ ರಾಜ್ಯವನ್ನು ಆಳುತ್ತಿದ್ದರೂ ಅಂತಃಕರಣದಲ್ಲಿ ಹರ್ಷವಿಷಾದಗಳಿಲ್ಲದೆ ಗುಣದೋಷಗಳಿಂದ ಅವನ ಸ್ವರೂಪದಲ್ಲಿ ಯಾವ ಉದಯಾಸ್ತಗಳೂ ಇಲ್ಲದೆ ಇತ್ತು. ಅವನು ಏನು ಮಾಡುತ್ತಿದ್ದರೂ ನಿಷ್ಕ್ರಿಯನಾಗಿಯೇ ಇದ್ದನು; ಸುಷುಪ್ತಿಯಲ್ಲಿರುವವರಂತೆಯೇ ಅವನು ಜಾಗ್ರತ್ತಿನಲ್ಲಿಯೂ ಅದ್ವಿತೀಯನಾಗಿದ್ದನು. ಭೂತಭವಿಷ್ಯತ್ತುಗಳನ್ನು ಮನಸ್ಸಿಗೆ ತಂದುಕೊಳ್ಳದೆ ತತ್ಕಾಲಕ್ಕೆ ಪ್ರಾಪ್ತವಾದದ್ದನ್ನು ಅನುವರ್ತಿಸುತ್ತಿದ್ದನು. ಸಾಧುಸಂಗಮದಿಂದುಂಟಾದ ವಿಚಾರದಿಂದ ಸಿಕ್ಕುವ ಪದವು ಶಾಸ್ತ್ರಗುರುಗಳಿಂದಕೂಡ ಸಿಕ್ಕಲಾರದು. ಪೂರ್ವಾಪರವಿಚಾರಣೆಯಿಂದಾದ ಪ್ರಜ್ಞೆಯಿಂದ ಜಾಡ್ಯವೆಂಬ ಕುರುಡನ್ನು ಕಳೆದುಕೊಂಡು ಕೃತಾರ್ಥನಾಗಬಹುದು. ಆದ್ದರಿಂದ ಪ್ರಜ್ಞಾಮಾಂದ್ಯವನ್ನು ನಾಶಗೊಳಿಸಿಕೊಳ್ಳಬೇಕು. ಬೇಸಾಯಗಾರರು ಹೊಲವನ್ನುಳುವದಕ್ಕೆ ಮೊದಲುಮಾಡುವಂತೆ ಉಚ್ಚಪದವಿಯನ್ನು ಬಯಸುವವನು ಪ್ರಜ್ಞೆಯನ್ನೇ ಮೊದಲು ಸಂಪಾದಿಸಿಕೊಳ್ಳಬೇಕು.

★★★★★

# ಯಮಳಾರ್ಜುನೋದ್ಧಾರ

**13-5-1954**

**ಬ್ರ॥ ಶ್ರೀ॥ ಕೃಷ್ಣಜೋಯಿಸರು**

**ಭಾಗವತದಲ್ಲಿ ಹತ್ತನೆಯ ಸ್ಕಂಧದ ಹನ್ನೊಂದನೆಯ ಸರ್ಗದಲ್ಲಿ ಈ** ಆಖ್ಯಾನವು ಬಂದಿರುತ್ತದೆ. ನಲಕೂಬರಮಣಿಗ್ರೀವರೆಂಬ ಕುಬೇರಪುತ್ರರು

ಮದ್ಯಪಾನದಿಂದ ಮತ್ತರಾಗಿ ಗಂಗಾನದಿಯಲ್ಲಿ ದೇವಸ್ತ್ರೀಯರೊಡನೆ ಆಡುತ್ತಿದ್ದರು. ನಾರದರ್ಷಿಗಳು ಅಲ್ಲಿಗೆ ಬಂದರೂ ಅವರು ಬೆತ್ತಲೆಯಾಗಿಯೇ ಆಡುತ್ತಿದ್ದದ್ದನ್ನು ಕಂಡು ನಾರದರು ಅವರ ಅಜ್ಞಾನಕ್ಕೆ ಮರುಗಿ ''ನೀವು ಈಗಿನ ಸ್ಥಿತಿಗೆ ಅನುರೂಪವಾದ ಸ್ಥಾವರಜನ್ಮವನ್ನು ಪಡೆಯಿರಿ. ಆದರೆ ನನ್ನ ಅನುಗ್ರಹದಿಂದ ನಿಮಗೆ ಅಲ್ಲಿಯೂ ಸ್ಮರಣೆಯಿರುವದು ; ಕಾಲಾನುಕಾಲಕ್ಕೆ ವಾಸುದೇವಪರಮಾತ್ಮನ ಸಾಂನಿಧ್ಯವು ದೊರತು ಆತನ ಭಕ್ತಿಯಿಂದ ಮತ್ತೆ ನಿಮ್ಮ ಲೋಕಕ್ಕೆ ತೆರಳುವಿರಿ'' ಎಂದು ಶಾಪವಿಶಾಪಗಳನ್ನಿತ್ತರು. ಈ ಶಾಪದಿಂದ ಅವರು ಯಮಲಾರ್ಜುನವೃಕ್ಷಗಳಾಗಿ ಹುಟ್ಟಿ ಶ್ರೀಕೃಷ್ಣನ ದಾಮೋದರಲೀಲೆಯಲ್ಲಿ ಅನುಗೃಹೀತರಾಗಿ ವಿಶಾಪವನ್ನು ಹೊಂದಿ ಭಗವಂತನನ್ನು ಸ್ತುತಿಸಿ ತಮ್ಮ ಲೋಕಕ್ಕೆ ಹಿಂತೆರಳಿದ ಕಥೆಯು ಈ ಅಧ್ಯಾಯದಲ್ಲಿದೆ.

ಅನುವಾದದಲ್ಲಿ ಶ್ರೀಗಳು ಈ ಕಥೆಯ ಶ್ರವಣದಿಂದ ನಮಗೆ ಹೇಗೆ ಶ್ರೇಯಸ್ಸಿಗೆ ಕಾರಣವಾದೀತೆಂಬುದನ್ನು ತಿಳಿಯಹೇಳಿದರು. ಐಶ್ವರ್ಯಮದಮತ್ತರಾದವರಿಗೆ ಪಾಪದ ಅಂಜಿಕೆ ತಪ್ಪುವದು; ಅವರಿಗೆ ದೊಡ್ಡವರಿಂದ ಜ್ಞಾನೋದಯವಾದರೆ ಅವರು ಬದುಕುವರು. ಐಶ್ವರ್ಯವಂತರನ್ನು ಸುಲಿದು ಬಡವರಿಗೆ ಹಂಚುವ ಕಮ್ಯೂನಿಸ್ಟ್‌ನೀತಿಯು ಐಶ್ವರ್ಯವಂತರಿಗೆ ತಿಳಿವಳಿಕೆಯನ್ನು ಕೊಡಲಾರದು. ನಾರದರು ಐಶ್ವರ್ಯದಿಂದ ಮತ್ತರಾಗಿದ್ದ ಕುಬೇರಪುತ್ರರಿಗೆ ಶಾಪವನ್ನು ಕೊಟ್ಟರು; ಪಾಪಕೃತ್ಯವನ್ನು ಮಾಡಲಾಗದ ಜನ್ಮವನ್ನು ಅವರಿಗೆ ಕೊಟ್ಟಮೇಲೂ ತಮ್ಮ ತಪ್ಪಿಗೆ ಪಾಶ್ಚಾತ್ತಾಪವುಂಟಾಗುವ ಅವಕಾಶವನ್ನು ಕಲ್ಪಿಸಿದರು. ಅವರಿಗೆ ಪರಮಾತ್ಮನ ಸಂದರ್ಶನವಾಗುವ ಸುಯೋಗವನ್ನು ಅನುಗ್ರಹಿಸಿದರು. ಸಾಧುಗಳೊಡನೆ ಜಗಳವುಕೂಡ ಕ್ಷೇಮಕರವಾಗಿರುತ್ತದೆ. ಪಾಪಕ್ಕೆ ಕಾರಣವಾಗಿರುವ ದೇಹಾತ್ಮಬುದ್ಧಿ, ಕಾಮ, ಮದ – ಇವುಗಳನ್ನು ಮಾಡುವ ಅಜ್ಞಾನ, ಇವಿಷ್ಟನ್ನೂ ಸತ್ಪುರುಷರು ತಪ್ಪಿಸಿ ನಮ್ಮನ್ನು ಉದ್ಧರಿಸಬಲ್ಲರು – ಎಂದು ವಿವರಿಸಿ ಹೇಳಿದರು.

★★★★★

# ಪ್ರಹ್ಲಾದನು ದೈತ್ಯಬಾಲಕರಿಗೆ ಮಾಡಿದ ತತ್ತ್ವೋಪದೇಶ

**26-4-1955**

**ವೇ॥ಬ್ರ॥ಶ್ರೀ॥ ನಾರಾಯಣದೇವರಕೆರೆ ನಾರಾಯಣಭಟ್ಟರು**

ಭಾಗವತದಲ್ಲಿ ಏಳನೆಯ ಸ್ಕಂಧದ ಆರನೆಯ ಅಧ್ಯಾಯದಲ್ಲಿ ಪ್ರಹ್ಲಾದನು ದೈತ್ಯಬಾಲಕರಿಗೆ ಮಾಡಿದ ತತ್ತ್ವೋಪದೇಶವಿದೆ. ಮನುಷ್ಯನಿಗೆ ಇರುವ ನೂರು ವರ್ಷದ ಆಯುಸ್ಸಿನಲ್ಲಿ ನಿದ್ರೆ, ಬಾಲ್ಯ, ಮುಪ್ಪು ಈ ಅವಸ್ಥೆಗಳಲ್ಲಿ ವ್ಯರ್ಥವಾಗಿ ಕಳೆದುಹೋಗುವ ಬಹುಭಾಗದಲ್ಲಿ ಉಳಿಯುವದು ಅತ್ಯಲ್ಪ. ಈ ಸ್ವಲ್ಪಭಾಗದ ಕಾಲದಲ್ಲಿ ಕೂಡ ಮನುಷ್ಯನು ಕುಟುಂಬದಲ್ಲಿಯೇ ಆಸಕ್ತನಾಗಿ ರೇಶ್ಮೆಯಹುಳಿವಿನಂತೆ ಕಾಮದಿಂದ ಕರ್ಮವನ್ನು ಮಾಡುತ್ತಾ ತನ್ನನ್ನು ತಾನೇ ಬಂಧಿಸಿಕೊಳ್ಳುತ್ತಾನೆ. ಇದರಿಂದ ಅವನಿಗೆ ಮುಕ್ತಿಯಾಗಲಿ ಆತ್ಮಲೋಕಪ್ರಾಪ್ತಿಯಾಗಲಿ ಆಗದೆ ಇರುತ್ತದೆ. ಹೀಗಿರುವದರಿಂದ ಎಲೈ ದೈತ್ಯರುಗಳಿರ, ವಿಷಯರೂಪವಾದ ದೈತ್ಯರುಗಳ ಸಂಗವನ್ನು ಬಿಟ್ಟು ಆದಿ ದೇವನಾದ ನಾರಾಯಣನನ್ನು ಭಜಿಸಿ ಮುಕ್ತರಾಗಿರಿ. ಆತನು ಎಲ್ಲರಿಗೂ ಆತ್ಮನೇ ಆಗಿ ಸ್ವತಃಸಿದ್ಧನಾಗಿರುವದರಿಂದ ಅವನನ್ನು ಮೆಚ್ಚಿಸುವದಕ್ಕೆ ಹೆಚ್ಚಿನ ಆಯಾಸವೇನೂಆಗುವದಿಲ್ಲ.ಆತನೇದೃಗ್ದೃಶ್ಯಸ್ವರೂಪನಾಗಿದ್ದರೂಅವಿದ್ಯೆಯಿಂದ ಈಶ್ವರಭಾವವಿಲ್ಲದ ಜೀವನಂತೆ ಕಾಣಿಸುತ್ತಿರುತ್ತಾನೆ. ಆದ್ದರಿಂದ ಆಸುರಭಾವವನ್ನು ಬಿಟ್ಟು ಸರ್ವಭೂತಗಳಲ್ಲಿ ದಯೆಯನ್ನು ಮಾಡಿರಿ. ಧರ್ಮಾರ್ಥಕಾಮಗಳು ನಿಜವಾದ ಪುರುಷಾರ್ಥವಲ್ಲ ; ಪರಮಪುರುಷನಿಗೆ ಆತ್ಮನಿವೇದನೆಯನ್ನು ಮಾಡಿ ಪಡೆದುಕೊಳ್ಳುವ ಮೋಕ್ಷವೇ ಪರಮಪುರುಷಾರ್ಥವು. ಈ ನಿರ್ಮಲವಾದ ಜ್ಞಾನವನ್ನು ಭಗವನ್ನಾರಾಯಣನು ನಾರದರಿಗೆ ಉಪದೇಶಮಾಡಿದನು. ಆ ದೇವರ್ಷಿಯಾದ ನಾರದರಿಂದ ನಾನು ಈ ಜ್ಞಾನವನ್ನು ವಿಜ್ಞಾನಸಹಿತವಾಗಿ ಶ್ರವಣಮಾಡಿ ತಿಳಿದುಕೊಂಡಿರುತ್ತೇನೆ ನೀವೂ ಇದರಂತೆ ನಡೆದು ಧನ್ಯರಾಗಿರಿ – ಎಂದು ಪ್ರಹ್ಲಾದನು ಬಾಲಕರಿಗೆ ಉಪದೇಶಮಾಡಿರುತ್ತಾನೆ.

ಶ್ರೀಗಳು ಅನುವಾದದಲ್ಲಿ ಈಗಿನ ಸ್ಥಿತಿಯಲ್ಲಿ ನಾವೆಲ್ಲರೂ

ಹಿರಣ್ಯದ ಆಶೆಯಿಂದ ಮಾಡಬಾರದ ಕೆಲಸವನ್ನು ಮಾಡಿ ಕಂಡಕಂಡವರ ಕಾಲುಕಟ್ಟಿಕೊಳ್ಳುತ್ತಿದ್ದೇವಾದ್ದರಿಂದ ಈ ಅರ್ಥದಲ್ಲಿ ಹಿರಣ್ಯಕಶಿಪುಗಳೇ ಆಗಿ ಪರಮಪುರುಷಾರ್ಥದಿಂದ ವಂಚಿತರಾಗುತ್ತಿದೇವೆ. ಈಗಿನ ವಿದ್ಯಾಶಾಲೆಗಳಲ್ಲಿಯೂ ಅನರ್ಥಕಾರಿಯಾದ ಈ ಲೌಕಿಕವಿದ್ಯೆಯನ್ನೇ ಪ್ರಧಾನವಾಗಿ ಮಾಡಿಕೊಂಡು ಬೋಧಿಸುತ್ತಿದಾರೆ. ಪರಮಾತ್ಮನ ಸೇವೆಯನ್ನು ಮಾಡಿ ತತ್ತ್ವಜ್ಞಾನವನ್ನು ಸಂಪಾದಿಸಿಕೊಂಡು ಜನ್ಮವನ್ನು ಸಾರ್ಥಕ್ಯಪಡಿಸಿಕೊಳ್ಳುವ ವಿದ್ಯೆಯನ್ನು ಕಲಿಯುವದು ನಮ್ಮೆಲ್ಲರ ಕರ್ತವ್ಯವಾಗಿದೆ. ನಾರದರ ಸಂಗವು ಪ್ರಹ್ಲಾದನಿಗೆ ಸಿಕ್ಕಿದಂತೆ ನಮಗೂ ಸತ್ಸಂಗವು ಸಿಕ್ಕಿದರೆ ನಾವು ಇಹಪರಗಳಲ್ಲಿ ಸುಖಿವಾಗಿರುವೆವು. ಈ ಆತ್ಮವಿದ್ಯೆಗೆ ಪ್ರಾಮುಖ್ಯವನ್ನು ಕೊಡುವದೇ ನಮ್ಮ ದೇಶದ ಸಂಸ್ಕೃತಿಯ ಹೆಗ್ಗುರುತು ಎಂದು ಉಪದೇಶಿಸಿದರು.

★★★★★

# ಮೋಕ್ಷಪ್ರಶಂಸೆ

**27-4-55**

**ಬ್ರ॥ಶ್ರೀ॥ಎಸ್. ವಿಠ್ಠಲಶಾಸ್ತ್ರಿಗಳವರು**

**ಮಹಾಭಾರತದಲ್ಲಿ ಶಾಂತಿಪರ್ವ(165)**ರಲ್ಲಿ 'ಮೋಕ್ಷಪ್ರಶಂಸೆ'ಯನ್ನು ಮಾಡಿರುವ ಅಧ್ಯಾಯದಲ್ಲಿ ಭೀಷ್ಮರು ಮಾಡಿದ ಉಪದೇಶವನ್ನು ಪಡೆದು ಮನೆಗೆ ಬಂದ ಯುಧಿಷ್ಠಿರನು ತನ್ನ ನಾಲ್ಕು ತಮ್ಮಂದಿರನ್ನೂ ವಿದುರನನ್ನೂ ಧರ್ಮಕಾಮಾರ್ಥಗಳಲ್ಲಿ ಯಾವದು ಹೆಚ್ಚು, ಯಾವದು ಕಡಿಮೆ-ಎಂಬ ವಿಷಯಕ್ಕೆ ಪ್ರಶ್ನೆಮಾಡಿದನು. **ವಿದುರನು** ಅಧ್ಯಯನ, ತಪಸ್ಸು, ತ್ಯಾಗ, ಶ್ರದ್ಧೆ, ಯಜ್ಞ, ಕ್ಷಮೆ, ಭಾವಶುದ್ಧಿ, ದಯೆ, ಸತ್ಯ, ಸಂಯಮ ಇವುಗಳಿಂದಲೇ ಸರ್ವವೂ ದೊರೆಯುವದು. ಆದ್ದರಿಂದ ಧರ್ಮ ಪ್ರಧಾನನಾಗಿ ಎಲ್ಲರಲ್ಲಿಯೂ ಸಂಯತಾತ್ಮನಾಗಿರತಕ್ಕದ್ದು ಎಂದನು. **ಅರ್ಜುನನು** ಇದು ಕರ್ಮಭೂಮಿಯಾದ್ದರಿಂದ ಕೃಷಿವಾಣಿಜ್ಯಾದಿಗಳನ್ನೇ ಅವಲಂಬಿಸಬೇಕು ; ಇದೇ

ಅರ್ಥವು, ಇದನ್ನೇ ಧರ್ಮಕಾಮಗಳು ಅವಲಂಬಿಸಿರುವವು. ಆದ್ದರಿಂದ ಎಲ್ಲರೂ ಅರ್ಥಪರರಾಗಿರುತ್ತಾರೆ ಎಂದನು. **ನಕುಲಸಹದೇವರುಗಳು** ಧರ್ಮದಿಂದ ಅರ್ಥವೂ ಅರ್ಥದಿಂದ ಧರ್ಮವೂ ಕೂಡಿರಬೇಕು ; ಹಾಗಾದರೆ ಜೇನು ತುಪ್ಪಕ್ಕೆ ಅಮೃತವನ್ನು ಬೆರೆಯಿಸಿದಂತೆ ಆಗುವದು. ಆದ್ದರಿಂದ ಧರ್ಮಪ್ರಧಾನನಾಗಿ ಅರ್ಥವನ್ನು ಸಂಪಾದಿಸಿ ಕಾಮವನ್ನು ಪಡೆಯಬೇಕು ಎಂದರು. **ಭೀಮಸೇನನು** ಕಾಮವನ್ನೇ ಧರ್ಮಾರ್ಥಗಳು ಆಶ್ರಯಿಸಿರುವವು ; ಕಾಮವೇ ಧರ್ಮಾರ್ಥಗಳಿಗೆ ಕಾರಣವು. ಆದ್ದರಿಂದ ಧರ್ಮಾರ್ಥಕಾಮಗಳನ್ನು ಸಮವಾಗಿಯೇ ಸೇವನೆಮಾಡಬೇಕು- ಎಂದನು. ಆ ಬಳಿಕ **ಧರ್ಮರಾಜನು** ''ನೀವೆಲ್ಲರೂ ತಿಳಿದವರೇ . ಆದರೂ ನನ್ನ ಅಭಿಪ್ರಾಯವನ್ನು ಕೇಳಿರಿ ಪಾಪಪುಣ್ಯಗಳಲ್ಲಿ ನಿರತನಾಗದೆ ಅರ್ಥ, ಧರ್ಮ, ಕಾಮ ಇವುಗಳಲ್ಲಿ ಯಾವದೊಂದನ್ನೂ ಮೇಲಕ್ಕೇರಿಸದೆ ವಿಮುಕ್ತನಾಗಿ ಸಮಬುದ್ಧಿಯುಳ್ಳವನಾಗಿರುವನೋ ಅವನೇ ಮುಕ್ತನು, ಸಿದ್ಧನು. ಪ್ರಿಯವನ್ನಾಗಲಿ ಅಪ್ರಿಯವನ್ನಾಗಲಿ ಮಾಡದೆ ಜ್ಞಾನವನ್ನು ಸಂಪಾದಿಸಿಕೊಂಡುಮೋಕ್ಷಪರನಾಗಬೇಕು.ಧರ್ಮಾರ್ಥಕಾಮಗಳುದೈವದತ್ತವಾಗಿ ಬರುವವು ; ಲೋಕಹಿತಕ್ಕೆ ಮೋಕ್ಷವೇ ಮುಖ್ಯವೆಂಬುದೇ ರಹಸ್ಯವು'' ಎಂದು ತನ್ನ ಅಭಿಪ್ರಾಯವನ್ನು ತಿಳಿಸಿದನು – ಎಂಬುದು ಅಧ್ಯಾಯದ ಸಾರವು.

**ಶ್ರೀಗಳು** ಅನುವಾದದಲ್ಲಿ ಇಂತೆಂದರು: ನಮ್ಮ ಸಂಸ್ಕೃತಿಯು ಮೇಲಕ್ಕೆದ್ದರೆ ವ್ಯಾಸವಾಲ್ಮೀಕರಂಥವರ ಅನುಯಾಯಿಗಳು ಹೆಚ್ಚುವರು. ಶ್ರೀವೇದವ್ಯಾಸರ ಮಹಾಭಾರತವನ್ನು ಶ್ರವಣಮಾಡಿದಮಾತ್ರದಿಂದಲೇ ಪಾಪಗಳ ಪರಿಹಾರವಾಗುವದು. ಈ ದಿನದ ಶ್ರವಣದಲ್ಲಿ ನಾವು ಕೇಳಿರುವ ಪುರುಷಾರ್ಥವಿಚಾರಗಳು ಹೇಗಿವೆ? ಧರ್ಮಕ್ಕೆ ಸಂಬಂಧಪಡದ ಅರ್ಥಕಾಮಗಳೆಂಬಿವನ್ನು ಯಾರೋಬ್ಬರೂ ಪ್ರಶಂಸಿಸಿಲ್ಲ. ಇಹಲೋಕಕ್ಕೆ ಕೂಡ ತ್ರಿವರ್ಗವು ಅವಶ್ಯವಾಗಿ ಬೇಕು. ಆದರೆ ಪರಮಪುರುಷಾರ್ಥಕ್ಕೆ ಧರ್ಮವನ್ನು ಅಂಗವಾಗಿ ಮಾಡಿಕೊಂಡು ಜ್ಞಾನವನ್ನು ಸಂಪಾದಿಸುವದು ಮುಮುಕ್ಷುಗಳ ಗುರಿ. ಜೀವನ್ಮುಕ್ತರಾದ ಮಹನೀಯರೇ ಲೋಕಕ್ಕೆಲ್ಲ ಉಪಕಾರಿಗಳು. ಪರಿಷತ್ತಿನಲ್ಲಿ ಇಂತಿಷ್ಟು ಜನರಿರಬೇಕೆಂಬ ನಿಯಮವನ್ನು ಧರ್ಮಶಾಸ್ತ್ರಗಳಲ್ಲಿ ಬರೆದಿದೆ. ಹತ್ತು ಜನರು, ಕನಿಷ್ಠ ಪಕ್ಷ ಮೂರು ಜನರು – ಇವರ ಪರಿಷತ್ತುಗಳಲ್ಲಿ ಧರ್ಮವನ್ನು

ನಿರ್ಣಯಿಸಬೇಕೆಂದು ಹೇಳಿದೆ. ಆದರೆ ಅಧ್ಯಾತ್ಮಜ್ಞಾನಿಯು ಒಬ್ಬನೇ ಇದ್ದರೂ ಅವನ ಮಾತೇ ನಿರ್ಣಯವಾಗಿರುವದೆಂದು ಶಾಸ್ತ್ರಗಳಲ್ಲಿ ಹೇಳಿರುತ್ತದೆ. ಪರಮಾತ್ಮನಲ್ಲಿ ತಾದಾತ್ಮ್ಯವನ್ನು ಪಡೆದಿರುವ ಮಹಾತ್ಮರ ಅನುಸರಣೆ ನಮ್ಮ ಜನರಿಗೆ ದೊರೆತರೆ ಇಹಪರಸುಖಗಳಿಂದ ಅವರು ಎಂದಿಗೂ ವಂಚಿತರಾಗುವದಿಲ್ಲ.

★★★★★

# ಜೀವನ್ಮುಕ್ತನ ವ್ಯವಹಾರ

**28-4-55**

**ವೇ॥ಬ್ರ॥ಶ್ರೀ॥ ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳವರು**

**ಯೋಗವಾಸಿಷ್ಠದಲ್ಲಿ ಸ್ಥಿತಿಪ್ರಕರಣದ 23ನೆಯ ಸರ್ಗದಲ್ಲಿ** ಜೀವನ್ಮುಕ್ತನು ಶರೀರದಲ್ಲಿದ್ದರೂ ಜ್ಞಾನಬಲದಿಂದ ಅನಾಸಕ್ತನಾಗಿ ಆನಂದದಿಂದ ಹೇಗೆ ವ್ಯವಹರಿಸುತ್ತಿರುವನೆಂಬುದನ್ನು ವರ್ಣಿಸಿರುತ್ತದೆ. ಅಜ್ಞರಿಗೆ ಶರೀರವು ದುಃಖವಾಗಿದ್ದರೂ ಜ್ಞಾನಿಗೆ ಸುಖವಸತಿಯೇ ಆಗಿರುವದು ಹೇಗೆಂಬುದನ್ನೂ ವಿವರಿಸಿದೆ.

ಶ್ರೀಗಳು ಅನುವಾದದಲ್ಲಿ ಹೀಗೆಂದರು : ಸ್ವರಾಜ್ಯಕ್ಕಾಗಿ ನಮ್ಮ ದೇಶದವರು ಪಟ್ಟ ಕಷ್ಟವನ್ನು ನಾವೆಲ್ಲರೂ ಬಲ್ಲೆವು. ಮಹಾತ್ಮಗಾಂಧಿಯವರು ಆ ಕಷ್ಟಕ್ಕೆ ಪ್ರತಿಫಲವು ಸಿಕ್ಕಿದಮೇಲೆ ಸ್ವರಾಜ್ಯವೇನೋ ಬಂದಿತು, ಸುರಾಜ್ಯವು ಬರಲಿಲ್ಲ' ಎಂದರಂತೆ! ಈ ಸಂಸಾರದಲ್ಲಿ ನಾವು ಪಡೆಯುವ ಸ್ವಾತಂತ್ರ್ಯಸುಖವು ಇದೇ ಬಗೆಯದಾಗಿರುತ್ತದೆ. ಅದು ಬರುವವರೆಗೂ ನಾವು ಅದಕ್ಕಾಗಿ ಹಾತುವರಿಯುತ್ತಿರುವೆವು. ಆದರೆ ಅದು ಬಂದಮೇಲೆ ನಮ್ಮ ನಿರೀಕ್ಷಣೆಯಲ್ಲಿದ್ದ ಸುಖವನ್ನು ಕಾಣಲಿಲ್ಲವಲ್ಲ !- ಎಂಬ ನಿರಾಶೆಯಾಗುತ್ತದೆ. ಆದರೆ ಪರಮಾರ್ಥ?

★★★★★

# ಮುಕ್ತಿಗೆ ಸಾಧನ

**29-4-55**

**ಶ್ರೀ ಗೌರೀಪುರದ ಸ್ವಾಮಿಗಳವರು**

**ಸೂತಸಂಹಿತೆಯ ಶಿವಮಹಾತ್ಮ್ಯಖಂಡದಲ್ಲಿ 7ನೆಯ ಅಧ್ಯಾಯದಲ್ಲಿ** ಜ್ಞಾನಕರ್ಮಸಮುಚ್ಚಯ, ದಾನ, ವ್ರತ, ಯಜ್ಞ, ತಪಸ್ಸು, ಬ್ರಹ್ಮಚರ್ಯಾದ್ಯಾಶ್ರಮಗಳು, ತೀರ್ಥಸೇವೆ, ಕ್ಷೇತ್ರವಾಸ- ಹೀಗೆ ಬಗೆಬಗೆಯಾದ ಪ್ರಕಾರಗಳಿಂದ ಮುಕ್ತಿಸಾಧನವನ್ನು ವರ್ಣಿಸುತ್ತಿದಾರೆ. ತಾವು ಎಲ್ಲರಿಗೂ ಅನುಷ್ಠಾನ ಮಾಡುವದಕ್ಕೆ ಶಕ್ಯವಾಗಿರುವ ಸಾಧನವನ್ನು ಹೇಳಬೇಕು-ಎಂದು ನೈಮಿಷಾರಣ್ಯವಾಸಿಗಳು ಕೇಳಿಕೊಂಡದ್ದಕ್ಕೆ ಸೂತರು ವ್ಯಾಸಸಹಿತನಾಗಿ ನಾರಾಯಣನು ಕೈಲಾಸಕ್ಕೆ ಬಂದು ಈಶ್ವರನನ್ನು ಕೇಳಿದ ಇದೇ ಪ್ರಶ್ನೆಗೆ ಪರಮೇಶ್ವರನು ಕೊಟ್ಟ ಉತ್ತರವನ್ನು ತಿಳಿಸಿದರು. ಇದೇ ಪ್ರಶ್ನೆಯನ್ನು ಪಾರ್ವತಿಯೂ ಮೊದಲು ಕೇಳಿದ್ದಳಂತೆ. ಜ್ಞಾನವೇ ಮುಖ್ಯಸಾಧನವು, ನಿವೃತ್ತಿಸಾಧನನಿಷ್ಠನಾದ ಬ್ರಾಹ್ಮಣನೇ ಅದಕ್ಕೆ ಮುಖ್ಯಾಧಿಕಾರಿಯು, ಜ್ಞಾನಾಭ್ಯಾಸಕ್ಕೆ ಇತರರೂ ತಾರತಮ್ಯದಿಂದ ಅಧಿಕಾರಿಗಳು; ಶೂದ್ರಾದಿಗಳಿಗೆ ಪುರಾಣಮೂಲಕವೂ ಮಿಕ್ಕವರಿಗೆ ಭಾಷಾಂತರದಿಂದಲೂ ಜ್ಞಾನವುಂಟಾಗುವದು. ಮುಖ್ಯಾಧಿಕಾರಿಗಳಿಗೆ ಯಾವ ಪ್ರತಿಬಂಧವೂ ಇಲ್ಲದೆ ಜ್ಞಾನವುಂಟಾಗುತ್ತದೆ; ಮಿಕ್ಕವರಿಗೆ ಪ್ರತಿಬಂಧವಿರುವದರಿಂದ ಕೂಡಲೆ ಮುಕ್ತಿಯನ್ನು ಕೊಡದೆ ಇರುತ್ತದೆ. ಪರಮೇಶ್ವರನ ಪ್ರಸಾದದಿಂದಲೇ ಜ್ಞಾನವುಂಟಾಗಬೇಕಾಗಿರುವದರಿಂದ ಯಾವದಾದರೊಂದು ಈಶ್ವರಸ್ಥಾನದಲ್ಲಿ ವಾಸಮಾಡುವದರಿಂದ ಸುಲಭವಾಗಿ ಭುಕ್ತಿ ಮುಕ್ತಿಗಳು ದೊರಕುವವು-ಎಂದು ಕಾಶಿ, ದಕ್ಷಿಣಕೈಲಾಸ, ಕಾಲಹಸ್ತಿ, ವ್ಯಾಘ್ರಪುರ-ಮುಂತಾದ ಅನೇಕ ಸ್ಥಾನಗಳನ್ನು ತಿಳಿಸಿದ್ದಾರೆ.

**ಶ್ರೀಗಳು** ಅನುವಾದದಲ್ಲಿ ಹೇಳಿದ್ದೇನೆಂದರೆ ಮುಕ್ತಿಗೆ ಸಾಕ್ಷಾತ್ಸಾಧನವು ಜ್ಞಾನವೇ ಆದರೂ ಆ ಜ್ಞಾನವು ದೊರಕುವದಕ್ಕೆ ಪರಮೇಶ್ವರನ ಪ್ರಸಾದವು ಸುಲಭವಾದ ಉಪಾಯವೆಂದು ಇಲ್ಲಿ ಹೇಳಿದೆ. ಜ್ಞಾನಕ್ಕೆ ಎಲ್ಲೆಲ್ಲಿಯೂ

ಪರಮಾತ್ಮನನ್ನು ಕಾಣುವದು ಮುಖ್ಯಸಾಧನವು. ನಿಜವಾಗಿ ಪರಮಾತ್ಮನು ಎಲ್ಲೆಲ್ಲಿಯೂ ಇದ್ದರೂ ಕೆಲವು ವಿಶೇಷಸ್ಥಾನಗಳಲ್ಲಿ ಹೆಚ್ಚಾಗಿ ಪ್ರಕಟವಾಗಿ ರುತ್ತಾನೆ. ಶಿವಕ್ಷೇತ್ರಗಳು ಭರತಖಂಡದಲ್ಲೆಲ್ಲ ತುಂಬಿರುತ್ತವೆ. ಅವುಗಳಲ್ಲಿ ಒಂದನ್ನು ಆರಿಸಿಕೊಂಡು ಉತ್ತಮಭಾವನೆಯಿಂದ ಎಲ್ಲವನ್ನೂ ಎಲ್ಲರನ್ನೂ ಶಿವದೃಷ್ಟಿಯಿಂದ ಕಾಣುತ್ತಾ ಶಿವಭಕ್ತರ ಸೇವೆಯಿಂದ ಕೃತಾರ್ಥನಾಗಬೇಕು. ಈಗ ಕ್ಷೇತ್ರಗಳೂ ಕಾರಣಾಂತರಗಳಿಂದ ಉತ್ತಮ ಪ್ರಭಾವವನ್ನು ಬೀರುವದರಲ್ಲಿ ಕಡಿಮೆಯಾಗುತ್ತಿವೆ. ಮುಖ್ಯವಾಗಿ ಯೋಗ್ಯವಾದ ಶಿವಭಕ್ತರಾದ ಮಹಾತ್ಮರು ಎಲ್ಲಿ ಸಿಕ್ಕದ್ದರೆ ಅದೇ ಕ್ಷೇತ್ರವೆಂದು ತಿಳಿಯಬೇಕು. ದೊಡ್ಡವರ ಕೃಪೆಯಿಂದ ಶರೀರವೆಂಬ ಈ ಕ್ಷೇತ್ರದಲ್ಲಿಯೇ ಪರಮಾತ್ಮನನ್ನು ಕಾಣುವದಕ್ಕೆ ಪ್ರಯತ್ನಿಸಬೇಕು.

★★★★★

# ಪೃಥಿವೀಗೀತೆ

**30-4-55**

**ಬ್ರ॥ಶ್ರೀ॥ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳವರು**

**ವಿಷ್ಣುಪುರಾಣದಲ್ಲಿ 4-21-127ರಿಂದ ಕೊನೆಯವರೆಗಿನ ಭಾಗದಲ್ಲಿ ಪೃಥಿವೀಗೀ ತೆಯು** ಇದೆ. ರಾಜರುಗಳು ವಿವೇಕಿಗಳಾದರೂ ಮೋಹಕ್ಕೆ ಪರವಶರಾಗಿ ಮಂತ್ರಿಯು ಮೊದಲಾಗಿ ಸಾಗರಪರ್ಯಂತವಾಗಿರುವ ಭೋಮಿಯನ್ನೂ ಗೆದ್ದುಕೊಳ್ಳಬೇಕೆಂದು ಹವಣಿಸುತ್ತಾ ಸಮೀಪಿಸುತ್ತಿರುವ ಮೃತ್ಯುವನ್ನು ಕಾಣದೆ ಇರುತ್ತಾ ಭೂಮಿಗಾಗಿ ತಮ್ಮವರೊಡನೆಯೂ ಜಗಳವಾಡುತ್ತಾ ಸಾಯುತ್ತಾರಲ್ಲ! ಇದನ್ನು ಕಂಡುಕಂಡೂ ಉತ್ತರಾಧಿಕಾರಿಗಳೂ ಹೀಗೆಯೇ ಮಾಡುತ್ತಿರುವರಲ್ಲ! ಆತ್ಮಜಯವನ್ನು ಮಾಡಿಕೊಂಡು ಮುಕ್ತಿಯನ್ನು ಪಡೆಯದೆ ಇರುವರಲ್ಲ- ಎಂದು ಪೃಥಿವೀದೇವಿಯು ಕನಿಕರವನ್ನು ತೋರಿಸಿದಳೆಂಬುದು ಗ್ರಂಥಸಾರ. ಪರಾಶರರು ಈ ಗೀತೆಯ ಶ್ಲೋಕಗಳನ್ನು ಹೇಳಿ ಹಿಂದಿನವರು ಎಂಥ ವೀರರಾದರೂ ಸುಪ್ರಖ್ಯಾತರಾದರೂ ಯಜ್ಞದಾನತಪಸ್ಸುಗಳನ್ನು

ಮಾಡಿದವರಾದರೂ ಕಥಾವಶೇಷರಾಗಿರುತ್ತಾರೆ. ಇದನ್ನು ತಿಳಿದ ವಿವೇಕಿಯು ತನ್ನ ಶರೀರದಲ್ಲಿಕೂಡ ಮಮತ್ವವನ್ನು ಮಾಡಬಾರದು. ಮಿಕ್ಕದ್ದರಲ್ಲಿ ಬಾರದೆಂಬುದನ್ನು ಹೇಳುವದೇನು?- ಎಂದು ತಮ್ಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ.

**ಶ್ರೀಗಳು** ಅನುವಾದದಲ್ಲಿ ಹೇಳಿದ್ದೇನೆಂದರೆ: ಅಹಂಮಮತ್ವವನ್ನು ಬಿಡಬೇಕೆಂಬುದು ಶಾಸ್ತ್ರಗಳ ಮುಖ್ಯೋಪದೇಶವು. ಇದನ್ನು ಅತ್ಯಂತಿಕವಾಗ್ ನೀಗಿ ಕೊಳ್ಳುವದಕ್ಕೆ ಆತ್ಮವಿದ್ಯೆಯೇ ಉಪಾಯ. ಈಗ ನಮ್ಮ ದೌರ್ಭಾಗ್ಯದಿಂದ ನಾವುಗಳು ಆತ್ಮವಿದ್ಯೆಯನ್ನು ಅಲಕ್ಷ್ಯಮಾಡಿ ಅಹಂ ಮಮ' ಎಂಬುದೇ ನಮ್ಮ ಹಕ್ಕು ಎಂದು ಸಾರುತ್ತಿದೇವೆ. ಇದರಿಂದಲೇ ನಮಗೆ ಅನರ್ಥಗಳೆಲ್ಲ ಒದಗಿವೆ. ಮಮೇತಿ ಬಧ್ಯತೇ ಜನ್ತುರ್ನ ಮಮೇತಿ ವಿಮುಚ್ಯತೇ' ಎಂಬ ಪೂರ್ವಜರ ಉಕ್ತಿಯನ್ನು ಮಂತ್ರದಂತೆ ಜಪಿಸಿ ನಾವು ಕೃತಾರ್ಥರಾಗಬೇಕು.

★★★★★

## ಮೋಹವನ್ನು ಬಿಡಬೇಕು

**1-5-55**

**ಬ್ರ॥ಶ್ರೀ॥ವಿದ್ವಾನ್ ಚಂದ್ರಶೇಖರಭಟ್ಟರು ಪಾಟಣಕರ**

**ವಾಸಿಷ್ಠ ರಾಮಾಯಣದಲ್ಲಿ ಉಪಶಮಪ್ರಕರಣದ19ನೆಯ ಸರ್ಗದಲ್ಲಿ** - ಮಹೇಂದ್ರಪರ್ವತದಲ್ಲಿ ದೀರ್ಘತಪನೆಂಬ ಮುನಿಯಿದ್ದನು. ಅವನಿಗೆ ಪುಣ್ಯ, ಪಾವನ-ಎಂಬ ಇಬ್ಬರು ಮಕ್ಕಳಿದ್ದರು. ಕಾಲಾನುಕಾಲಕ್ಕೆ ಆತನೂ ವಿದೇಹಮುಕ್ತಿಯನ್ನು ಪಡೆಯಲು ಅವನ ಪತ್ನಿಯೂ ಅವನನ್ನು ಹಿಂಬಾಲಿಸಿದಳು. ಪುಣ್ಯನು ತಾಯಿತಂದೆಗಳ ಅಂತ್ಯಕರ್ಮದಲ್ಲಿ ನಿರತನಾಗಿದ್ದನು. ಆದರೆ ಪಾವನನು ದುಃಖಭರಿತನಾಗಿ ಶೋಕಿಸುತ್ತಲೇ ಇದ್ದನು. ಆಗ ಪುಣ್ಯನು ಪಾವನನಿಗೆ ಹೀಗೆಂದು ಬೋಧೆಮಾಡಿದನು : ಅಪ್ಪ ಪಾವನ, ಏತಕ್ಕೆ ಶೋಕದಿಂದ ಕುರುಡುನಾಗುತ್ತಿರುವೆ? ತಂದೆತಾಯಿಗಳನ್ನಗಲಿದೆನಲ್ಲ, ಎನ್ನುವೆಯಾದರೆ ಹಿಂದಿನ ಅನೇಕಜನ್ಮಗಳಲ್ಲಿ

ಅಗಲಿರುವಮಾತಾಪಿತೃಗಳನ್ನುಕುರಿತುಏತಕ್ಕೆಶೋಕಿಸದಿರುವೆ? ಈಪ್ರಪಂಚವೆಲ್ಲವೂ ಭ್ರಾಂತಿಯಾಗಿರುವದು, ಸ್ವಪ್ನದಂತಿರುವದು. ಪರಮಾರ್ಥದೃಷ್ಟಿಯಿಂದ ನಾಶವೆಂಬುದೇ ಇಲ್ಲ; ಸಂಪತ್ತುಗಳು ಬರಿಯ ಕನಸಿನಂತಿವೆ. ನಿಜವಾಗಿ ನೋಡಿದರೆ ನೀನು, ನಾನು-ಎಂಬುದೇ ಇಲ್ಲ. ಇವನು ಮೃತನಾದನು ಎಂಬ ಕುದೃಷ್ಟಿಯನ್ನು ಬಿಡು. ಅಜ್ಞಾನದಿಂದ ಹರಡಿರುವ ಮರುಭೂಮಿಯಲ್ಲಿ ಈ ವಾಸನಾಬಲವು ಕಾಣಿಸುತ್ತಿರುವದೆಂದು ತಿಳಿದು ಉಪಶಾಂತನಾಗು.

**ಶ್ರೀಗಳವರು** ಅನುವಾದದಲ್ಲಿ ಹೀಗೆಂದರು: ಪುಣ್ಯನಾದವನು ಪಾಪನನಿಗೆ ಮಾಡಿದ ಬೋಧೆಯಿದು. ಮೂರ್ಖರಿಗೆ ಹೀಗೆಂದು ಹೇಳಿದರೆ ತಪ್ಪರ್ಥವಾಗುವ ಸಂಭವವಿದೆ. ಯಾರಾದರೂ ಸತ್ತರೆ ಔದಾಸೀನ್ಯದಿಂದ ಇದ್ದುಕೊಂಡಿರಬೇಕೆಂಬ ಉಪದೇಶವಿದಲ್ಲ. ಯಾವ ಸಂದರ್ಭದಲ್ಲಿಯೂ ಕರ್ತವ್ಯಕರ್ಮವನ್ನು ಬಿಡತಕ್ಕದ್ದಲ್ಲ. ಹಿರಿಯರು ಗತಿಸಿದ ಬಳಿಕ ಅವರ ಅಂತ್ಯಕರ್ಮಗಳನ್ನು ಮಾಡುವದಕ್ಕೂ ಅವರ ಕೀರ್ತಿಯನ್ನು ಹಬ್ಬಿಸುವದಕ್ಕೂ ತನ್ನ ಜ್ಞಾನವನ್ನು ಪಕ್ವಗೊಳಿಸುವದಕ್ಕೂ ಯತ್ನಿಸಬೇಕು. ಪ್ರೇಮವು ಕೇವಲ ಬಂಧುಗಳಿಗೆ ನಿಯಮಿತವಾಗದೆ ವಿಶಾಲವಾಗುವಂತೆ ನೋಡಿಕೊಳ್ಳಬೇಕು. ದೇಹಾದಿಗಳಲ್ಲಿ ಮೋಹವನ್ನು ಬಿಟ್ಟು ಎಲ್ಲವನ್ನೂ ಪರಮಾತ್ಮನ ಸೇವೆಗೆ ಉಪಯೋಗಿಸಿ ಕೃತಾರ್ಥನಾಗಬೇಕೆಂಬುದೇ ಇಲ್ಲಿ ತಿಳಿಯತಕ್ಕದ್ದು.

★★★★★

# ನೃಗರಾಜನಿಗೆ ಓತಿಕೇತದ ಜನ್ಮ

**2-5-55**

**ಬ್ರ॥ಶ್ರೀ॥ ಎಸ್. ವಿಠ್ಠಲಶಾಸ್ತ್ರಿಗಳವರು**

**ಭಾಗವತ ದಶಮಸ್ಕಂಧದ ಉತ್ತರಾರ್ಧದ 64ನೆಯ ಅಧ್ಯಾಯದಲ್ಲಿ** ನೃಗರಾಜನಿಗೆ ಓತಿಕೇತದ ಜನ್ಮವು ಬಂದ ಕಾರಣವನ್ನು ವರ್ಣಿಸಿದೆ. ಆ ರಾಜನು

ಅನಂತಗೋದಾನಗಳನ್ನು ಸತ್ಪಾತ್ರರಿಗೆ ಮಾಡಿದ್ದನು. ಹೀಗಿರುವಲ್ಲಿ ಅವನು ಒಬ್ಬ ಬ್ರಾಹ್ಮಣನಿಗೆ ದಾನಮಾಡಿದ್ದ ಗೋವು ಅವನ ಹಸುಗಳ ಗುಂಪಿನಿಂದ ತಪ್ಪಿಸಿಕೊಂಡು ಬಂದು ರಾಜನ ಗೋಗಳಲ್ಲಿ ಸೇರಿಕೊಂಡಿತು. ಇದನ್ನರಿಯದೆ ರಾಜನು ಅದನ್ನು ಮತ್ತೊಬ್ಬ ಬ್ರಾಹ್ಮಣನಿಗೆ ದಾನಮಾಡಿದನು. ಮುಂದೆ ಆ ಬ್ರಾಹ್ಮಣರಿಬ್ಬರೂ ಇದು ನನ್ನದು, ನನ್ನದು- ಎಂದು ಜಗಳವಾಡುತ್ತಾ ರಾಜನಲ್ಲಿಗೆ ಬಂದು ದೂರು ಹೇಳಿಕೊಂಡರು. ಉತ್ತಮವಾದ ಅನೇಕ ಗೋಗಳನ್ನು ಇದಕ್ಕೆ ಬದಲಾಗಿ ಕೊಡುತ್ತೇನೆಂದು ರಾಜನು ಹೇಳಿದರೂ ಈ ವಿನಿಮಯಕ್ಕೆ ಒಪ್ಪಲಿಲ್ಲ. ಮುಂದೆ ರಾಜನು ಕಾಲಗತಿಯನ್ನೈದಿ ಯಮಲೋಕಕ್ಕೆ ಹೋಗಲು ನೀನು ಅಶುಭಕರ್ಮದ ಫಲವನ್ನು ಮೊದಲು ಅನುಭವಿಸಿವೆಯೊ, ಪುಣ್ಯದ ಫಲವನ್ನೇ ಭೋಗಿಸುವೆಯೊ?-ಎಂದು ಕೇಳಲು ಅಶುಭಕರ್ಮದ ಫಲವೇ ಮೊದಲಾಗಲಿ!- ಎಂದನು. ಇದರಿಂದ ರಾಜನಿಗೆ ಮಹಾಪರ್ವತಾಕಾರವಾದ ಓತೀಕೇತನ ಜನ್ಮವು ಬಂದಿತು. ಆ ರಾಜನು ಶ್ರೀಕೃಷ್ಣ ಪಾದಸ್ಪರ್ಶದಿಂದ ಆ ಜನ್ಮವನ್ನು ಬಿಟ್ಟು ವಿಮಾನವನ್ನೇರಿ ಪುಣ್ಯಲೋಕವನ್ನೈದಿದನು. ಬ್ರಹ್ಮಸ್ವವನ್ನು ಜಯಿಸಿಕೊಳ್ಳುವದು ಇಂಥ ತೇಜಸ್ವಿಗಳಿಗೂ ಅಶಕ್ಯವೆಂಬುದನ್ನರಿತು ವಿವೇಕಿಗಳಾದವರು ಬ್ರಹ್ಮಸ್ವವನ್ನು ಎಂದಿಗೂ ಬಯಸಬಾರದು- ಎಂದು ಶ್ರೀಕೃಷ್ಣನು ಬೋಧಿಸಿದನು.

**ಶ್ರೀಗಳವರು** ಅನುವಾದಲ್ಲಿ ಇಂತೆಂದರು : ವೇದೋಕ್ತಕರ್ಮಗಳಲ್ಲಿ ಯಜ್ಞ, ದಾನ, ತಪಸ್ಸು- ಇವು ಅತ್ಯಂತಶ್ರೇಷ್ಠ. ಇವುಗಳಿಗೆ ಯಥಾಸಂಭವವಾಗಿ ಅಂಗಾಂಗಿಭಾವವೂ ಉಂಟು. ಕಲಿಯುಗದಲ್ಲಿ ಮಿಕ್ಕ ಕರ್ಮಗಳು ಅಸಾಧ್ಯವೆಂದೇ ಹೇಳಬಹುದು. ಆದ್ದರಿಂದ ದಾನವನ್ನು ಮಾಡಿ ಕೃತಾರ್ಥರಾಗಬೇಕೆಂದು ಋಷಿಗಳು ಅದನ್ನು ಹೊಗಳಿರುತ್ತಾರೆ. ದಾನಬುದ್ಧಿಯು ಬರುವದರೊಳಗೆ ಪರಸ್ವಾಪಹರಣಬುದ್ಧಿಯು ತೀರ ಹೋಗಿರಬೇಕು. ದಾನದಲ್ಲಿ ಬಹಳ ಸೂಕ್ಷ್ಮವಿಚಾರಗಳಿವೆ. ಮತ್ತೊಬ್ಬರ ವಸ್ತುವನ್ನು ಮನಸ್ಸಿನಲ್ಲಿ ಕೂಡ ನನ್ನದೆನ್ನಬಾರದು. ದೊಡ್ಡವರು ಅದುಕೂಡ ಕಳ್ಳತನವೆನ್ನುತ್ತಾರೆ. ಅಸ್ತೇಯವು ಪರಿಪೂರ್ಣವಾದರೆ ಭೂಮಿಯಲ್ಲಿರುವ ರತ್ನಗಳೆಲ್ಲ ಕಾಣಿಸಿಕೊಳ್ಳುವವು ಎಂದು ಪತಂಜಲಿಗಳು ಹೇಳಿದಾರೆ. ಬ್ರಾಹ್ಮಣಸ್ವತ್ತನ್ನು ಕದಿಯಬಾರದು ಎಂಬುದನ್ನು ಯಾರೋ ಬ್ರಾಹ್ಮಣರು ಬರೆದಿರಬಹುದೆಂದು ಕೆಲವರ

ಕುಬುದ್ಧಿಯ ಊಹೆ. ಕಳಬಾರದೆಂಬುದು ಐಶ್ವರ್ಯವಂತರು ಬರೆಯಿಸಿದ ವಾಕ್ಯವೆಂದು ಕಳ್ಳರೂ ಹೇಳಬಹುದಲ್ಲವೆ? ಯೋಗ್ಯರಾಗಿ ವೇದ, ತತ್ತ್ವವಿಚಾರ, ಜ್ಞಾನ-ಇವುಗಳಲ್ಲಿ ನಿರತವಾಗಿರುವ ಬ್ರಾಹ್ಮಣರ ಸ್ವತ್ತನ್ನು ಅಪಹಾರಮಾಡಿದರೆ ಅಪರಿಮಿತಪಾಪವುಂಟೆಂಬುದಕ್ಕೆ ನೃಗೋಪಾಖ್ಯಾನವನ್ನು ಅರ್ಥವಾದವಾಗಿ ಭಾವಿಸಬಹುದು. ಬ್ರಾಹ್ಮಣರೇ ಆದಿಯಾಗಿ ಎಲ್ಲರೂ ತಮ್ಮತಮ್ಮ ಕರ್ಮವನ್ನು ಮಾಡಿಕೊಂಡು ಬಾಳಬೇಕು. ಸದ್ಯಕ್ಕೆ ದಾನವೊಂದೇ ತಾರಕವಾದ ಸಾಧನವಾಗಿದೆ ; ಅದನ್ನು ಯಥಾಶಕ್ತಿಯಾಗಿ ಮಾಡಿ ನಾವು ಕೃತಾರ್ಥರಾಗಬೇಕು.

★★★★★

# ಬ್ರಹ್ಮಭಗವಂತರ ಸಂವಾದ

**15-5-56**

**ಬ್ರ॥ಶ್ರೀ॥ಲಕ್ಷ್ಮೀನರಸಿಂಹಮೂರ್ತಿಗಳವರು**

ಭಾಗವತದ ಎರಡನೆಯ ಸ್ಕಂಧದ ಒಂಬತ್ತನೆಯ ಅಧ್ಯಾಯದಲ್ಲಿ ಹೇಳಿರುವವರ ಸಾರವೇನೆಂದರೆ ಚತುರ್ಮುಖಬ್ರಹ್ಮನು ಸೃಷ್ಟಿಮಾಡುವದಕ್ಕಾಗಿ ಏನುಮಾಡಬೇಕೆಂಬ ತೋಚದಿರುವಾಗ ತಪಸ್ಸನ್ನು (ತಪ,ತಪ) ಮಾಡು ಎಂಬ ಅಶರೀರವಾಕ್ಯನ್ನು ಕೇಳಿ ದಿವ್ಯಸಹಸ್ರವರ್ಷದವರೆಗೆ ತಪಸ್ಸುಮಾಡಿದಾಗ ಅವನಿಗೆ ಭಗವಂತನು ತನ್ನ ಲೋಕದ ಮತ್ತು ತನ್ನ ಸಗುಣರೂಪದ ದರ್ಶನವನ್ನು ಅನುಗ್ರಹಿಸಿ 'ನಿನ್ನ ತಪಸ್ಸಿನಿಂದ ತುಷ್ಟನಾಗಿದ್ದೇನೆ, ಇಷ್ಟವಾದ ವರವನ್ನು ಕೇಳಿಕೊ' ಎಂದನು. ಬ್ರಹ್ಮನು ಈ ಜಗತ್ತಿನ ಸೃಷ್ಟಿಸ್ಥಿತಿ ಸಂಹಾರಗಳನ್ನು ಮಾಡುತ್ತಾ ಹೇಗೆ ನೀನು ಕ್ರೀಡಿಸುತ್ತಿರುವೆಯೋ ಅದನ್ನು ತಿಳಿಯುವಂತೆ ನನಗೆ ಅನುಗ್ರಹಿಸು- ಎಂದು ಕೇಳಿಕೊಂಡನು. ಭಗವಂತನು 'ನನ್ನ ರೂಪದ್ವಯದ ತತ್ತ್ವಜ್ಞಾನವೂ ನಿನಗೆ ಆಗಲಿ' ಎಂದು ಅನುಗ್ರಹಿಸಿ ಯಾವಾಗಲೂ ಒಂದೇರೂಪದಿಂದ ಇರುವ

ತನ್ನ ಪರಮಾರ್ಥಸ್ವರೂಪವನ್ನೂ ಕೇವಲ ಯುಕ್ತಿಹೀನಪ್ರಕಾಶವಾದ ತನ್ನಲ್ಲಿ ತೋರುತ್ತಿರುವ ಮಾಯಾಸ್ವರೂಪವನ್ನೂ ತಿಳಿಸಿಕೊಟ್ಟು ಇದನ್ನು ತಿಳಿದುಕೊಂಡವರಿಗೆ ಎಂದಿಗೂ ಮೋಹವಾಗುವದಿಲ್ಲವೆಂದು ಹೇಳಿದನು.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೇಳಿದ್ದೇನೆಂದರೆ: ಚೈತನ್ಯಸ್ವರೂಪನಾದ ಆತ್ಮನಿಗೆ ಮಾಯಿಕವಾದ ಅರ್ಥಸಂಬಂಧದಿಂದಲೇ ಶರೀರತ್ವವೂ ಮರ್ತ್ಯತ್ವವೂ ಬಂದಿರುವದು ಎಂಬುದನ್ನು ಪರೀಕ್ಷಿತನಿಗೆ ಮನಗಾಣಿಸುವದಕ್ಕಾಗಿ ಶುಕರು ಈ ಬ್ರಹ್ಮಭಗವಂತರ ಸಂವಾದವನ್ನು ತಿಳಿಕೊಟ್ಟಿರುತ್ತಾರೆ. ಭಗವಂತನಿಗೆ ತನ್ನ ಪರಮಾರ್ಥಸತ್ಯರೂಪದ ಅರಿವು ನಿತ್ಯರೂಪವಾಗಿರುವದರಿಂದ ತನ್ನ ಸಂಕಲ್ಪಮಾತ್ರದಿಂದ ಈ ಜಗತ್ತನ್ನೂ ಸೃಷ್ಟಿಸುತ್ತಿರುವನು. ಇಚ್ಛಾಮಾತ್ರದಿಂದ ಸಗುಣಸಾಕಾರ ರೂಪವನ್ನು ತಳೆದು ಬ್ರಹ್ಮನಿಗೆ ಅನುಗ್ರಹಿಸಿದಾಗಲೂ ಆತ್ಮಸ್ವರೂಪವೇ ಅವ್ಯಭಿಚರಿತವಾಗಿರುವದೆಂದೂ ಮಿಕ್ಕದ್ದು ಅದರಲ್ಲಿ ತೋರುವ ಮಾಯಾಸ್ವರೂಪವೆಂದೂ ತತ್ತ್ವಜ್ಞಾನವನ್ನೇ ಉಪದೇಶಿಸಿರುತ್ತಾನೆ. ಇತಿಹಾಸಪುರಾಣಗಳಲ್ಲಿ ಈ ವೇದಾರ್ಥವನ್ನೇ ಕಥಾರೂಪದಿಂದ ತಿಳಿಸಿಕೊಟ್ಟಿದೆ ಎಂದು ನಿಶ್ಚಯಿಸುವವರಿಗೇ ಪುರಾಣದ ಪರಮಲಾಭವು ಲಭಿಸುವದು.

★★★★★

# ಶುಭಾಶುಭಕರ್ಮಗಳ ವಿಚಾರ

**16-5-56**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ಮಹಾಭಾರತದಲ್ಲಿ ಅನುಶಾಸನಪರ್ವದಲ್ಲಿ 325ನೆಯ ಅಧ್ಯಾಯದಲ್ಲಿ** ಶುಭಾಶುಭಕರ್ಮಗಳ ವಿಚಾರವಾಗಿ ಪರಮೇಶ್ವರನು ಪಾರ್ವತಿಗೆ ಹೇಳಿರುತ್ತಾನೆ. ಗ್ರಹನಕ್ಷತ್ರಾದಿಗಳಿಂದ ಶುಭಾಶುಭಗಳು ಸೂಚಿತವಾಗುವವೇ ಹೊರತು ಅವುಗಳೇ ಕರ್ಮಕ್ಕೆ ಕಾರಣವಲ್ಲ. ಮನುಷ್ಯನು ತನ್ನ ತನ್ನ ಕರ್ಮಕ್ಕೆ ತಾನೇ ಹೊಣೆಗಾರನು. ಮನುಷ್ಯನು ಶುಭಾಶುಭಕರ್ಮಗಳ ಫಲವನ್ನು ಒಂದೊಂದಾಗಿ ಅನುಭವಿಸುವದಿಲ್ಲ. ಈ ಲೋಕದಲ್ಲಿ ಅವೆರಡರ ಫಲವೂ ಎಲ್ಲರಿಗೂ ಒಟ್ಟೊಟ್ಟಿ

ಗೇ ಆಗುತ್ತದೆ. ಅವುಗಳಲ್ಲಿ ದೊಡ್ಡ ಕರ್ಮಫಲವನ್ನು ಮೊದಲು ಅನುಭವಿಸಿ ಅಮೇಲೆ ಸಣ್ಣದನ್ನು ಅನುಭವಿಸುತ್ತಾನೆ. ಮನುಷ್ಯನು ಕರ್ಮಕ್ಷಯವಾಗಲು ಮತ್ತೊಂದು ದೇಹವನ್ನು ಪಡೆಯುತ್ತಾನೆ. ಪ್ರಾಣಿಗಳು ತಮ್ಮ ತಮ್ಮ ಕರ್ಮಕ್ಕೆ ಅನುಗುಣವಾಗಿ ಅಷ್ಟಷ್ಟು ಆಯುಸ್ಸುಳ್ಳವರಾಗಿರುತ್ತಾರೆ. ಅಹಿಂಸೆ, ಸತ್ಯವಚನ, ಅಕ್ರೋಧ, ಕ್ಷಾಂತಿ, ಆರ್ಜವ, ಗುರುಹಿರಿಯರ ಸೇವೆ, ಶೌಚ, ಮಾಡಬಾರದ್ದನ್ನು ಬಿಡುವದು, ಪಥ್ಯಭೋಜನ-ಇವೇ ಮೊದಲಾದ ಗುಣಗಳು ದೀರ್ಘಜೀವಿತಕ್ಕೆ ಕಾರಣವು. ಧಾರ್ಮಿಕರು ಸ್ವರ್ಗದಲ್ಲಿಯಾದರೂ ಈ ಲೋಕದಲ್ಲಿಯಾದರೂ ಚಿರಂಜೀವಿಗಳಾಗಿರುವರು. ಪಾಪಿಗಳು ನರಕದಲ್ಲಿ ಚಿರಕಾಲವಿರುವರು. ಮತ್ತೆ ಅಲ್ಪಾಯುಗಳಾಗಿ ಹುಟ್ಟುವರು.

**ಶ್ರೀಶ್ರೀಗಳವರು** ಅನುವಾದದಲ್ಲಿ – ಈ ಅಧ್ಯಾಯದಲ್ಲಿ ದೀರ್ಘಾಯುಸ್ಸೆಂದರೆ ಸುಖದಿಂದ ಕೂಡಿದ ದೀರ್ಘಾಯುಸ್ಸೆಂದು ಅರ್ಥಮಾಡಬೇಕು. ಮನುಷ್ಯನು ಶುಭಕರ್ಮದಿಂದ ಪಡೆಯುವ ಜೀವನವು ಅಲ್ಪವಾದರೂ ಚಿರಜೀವತವೇ. ಆರೋಗ್ಯದೃಢಕಾಯರಾಗಿ ಸ್ವಕಾರ್ಯಪರಕಾರ್ಯಗಳನ್ನು ನಿರ್ವಹಿಸುವ ಶಕ್ತಿಯುಳ್ಳವರಾಗಿ ಜೀವಿಸುವದು ಶುಭಕರ್ಮದ ಫಲವೇ ಎಂದು ತಿಳಿಯಬೇಕು-ಎಂದು ಹೇಳಿದರು.

★★★★★

# ಬಾಲಕಾಖ್ಯಾಯಿಕೆ

**17-5-56**

**ಬ್ರ॥ಶ್ರೀ॥ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಶಾಸ್ತ್ರಿಗಳವರು**

**ವಾಸಿಷ್ಠ ರಾಮಾಯಣದಲ್ಲಿ 101ನೆಯ ಸರ್ಗದಲ್ಲಿ** ಮೊದಲು ಮನಸ್ಸು ಆಮೇಲೆ ಬಂಧವಿಮೋಕ್ಷದೃಷ್ಟಿಗಳು ಆ ಬಳಿಕ ಪ್ರಪಂಚ ರಚನೆ- ಇವುಗಳನ್ನೆಲ್ಲ ಹೇಳಿರುವದು **ಬಾಲಕಾಖ್ಯಾಯಿಕೆಯಂತೆ** ಇರುತ್ತದೆ. ಇದು ನಿಜವಾಗಿ ಲ್ಲದಿದ್ದರೂ ಮೂಢರಲ್ಲಿ ಗಟ್ಟಿಯಾಗಿಬಿಟ್ಟಿರುತ್ತದೆಯೆಂದು ವಸಿಷ್ಠರು ರಾಮನಿಗೆ

ತಿಳಿಸಿರುತ್ತಾರೆ. ಏನೂ ತಿಳಿಯದ ಒಬ್ಬ ಚಿಕ್ಕ ಹುಡುಗನು ದಾದಿಯನ್ನು ಕುರಿತು ಒಂದು ಚಿಕ್ಕ ಕಥೆಯನ್ನು ಹೇಳು ಎಂದು ಕೇಳಿಕೊಂಡನಂತೆ. ಆಕೆಯು ಹೇಳಿದ್ದೇನೆಂದರೆ: ಅತ್ಯಂತವಾಗಿ ಅಸತ್ತಾಗಿದ್ದ ಒಂದು ಪಟ್ಟಣದಲ್ಲಿ ಹುಟ್ಟದೆ ಇರುವವರು ಇಬ್ಬರು, ಗರ್ಭವನ್ನು ಕಾಣದಿರುವವನು ಮತ್ತೊಬ್ಬನು-ಹೀಗೆ ಮೂವರು ರಾಜಕುಮಾರರಿದ್ದರು. ನೆಂಟರನ್ನು ಕಳೆದುಕೊಂಡ ಅವರು ಶೋಕದಿಂದ ಆ ಶೂನ್ಯನಗರದಿಂದ ಒಟ್ಟಿಗೆ ಸೇರಿ ಹೊರಟರು. ಬಿಸಲಿನಲ್ಲಿ ಬಳಲಿ ಬೆಂಡಾಗಿ ಮುಳ್ಳುತುಳಿಯುತ್ತಾ ಮೈಯೆಲ್ಲ ಧೂಳಿಯಾಗಿ ದಾರಿಯಲ್ಲಿ ಮೂರು ಮರಗಳನ್ನು ಕಂಡರು. ಆ ಮರಗಳಲ್ಲಿ ಎರಡು ಹುಟ್ಟಿಯೇ ಇರಲಿಲ್ಲ, ಇನ್ನೊಂದು ಬೀಜವೇ ಇಲ್ಲದ್ದು. ಅಲ್ಲಿ ಅವರು ವಿಶ್ರಮಿಸಿಕೊಂಡು ಅವುಗಳ ಹಣ್ಣನ್ನು ತಿಂದು ರಸವನ್ನು ಕುಡಿದು ಮುನ್ನಡೆದು ಕೊನೆಗೆ ಮೂರು ನದಿಯನ್ನು ಸೇರಿದರು. ಆ ಹೊಳೆಗಳಲ್ಲಿ ಎರಡು ಒಣಗಿತ್ತು, ಇನ್ನೊಂದರಲ್ಲಿ ನೀರಿರಲಿಲ್ಲ ಅವುಗಳಲ್ಲಿ ಸ್ನಾನಮಾಡಿ ನೀರು ಕುಡಿದು ಸಂಜೆಯ ಹೊತ್ತಿಗೆ ಭವಿಷ್ಯನ್ನಗರವನ್ನು ಸೇರಿದರು. ಆ ನಗರದಲ್ಲಿ ಮೂರು ಭವನಗಳನ್ನು ಕಂಡರು. ಆ ಭವನಗಳಲ್ಲಿ ಎರಡು ಎಂದೂ ಕಟ್ಟಿದವುಗಳೇ ಅಲ್ಲ, ಇನ್ನೊಂದಕ್ಕೆ ಗೋಡೆಗಳೇ ಇಲರಲಿಲ್ಲ. ಅವುಗಳಲ್ಲಿ ಅವರು ಮೂರು ಚಿನ್ನದ ತಪ್ಪಲೆಗಳನ್ನು ಕಂಡರು. ಆ ಪಾತ್ರೆಗಳಲ್ಲಿ ಎರಡು ಒಡೆದ ಮಡಕೆಯ ಹೋಳುಗಳು, ಇನ್ನೊಂದು ಪುಡಿ. ಅಲ್ಲಿ ತೊಂಬತ್ತೊಂಬತ್ತು ಮತ್ತು ಒಂದು ಇಲ್ಲದ ನೂರು ಶೇರು ಅನ್ನವನ್ನು ಮಾಡಿ ಮೂವರು ಬ್ರಾಹ್ಮಣರನ್ನು ಕರೆದರು. ಆ ಬಾಯಿಯಿಲ್ಲದ ಬ್ರಾಹ್ಮಣನು ನೂರು ಶೇರು ಅನ್ನವನ್ನೂ ಉಂಡನು; ಉಳಿದುದನ್ನು ಆ ರಾಜಕುಮಾರರು ಉಂಡರು. ಈಗಲೂ ಆ ಭವಿಷ್ಯನ್ನಗರದಲ್ಲಿ ಆ ಮೂವರೂ ಬೇಟೆಯನ್ನಾಡುತ್ತಿದಾರೆ!

ವಸಿಷ್ಠರು ಹೇಳಿದ ಈ ಕತೆಯ ಸಾರವೇನೆಂದರೆ ಈ ಸಂಸಾರರಚನೆಯ ಹೀಗೆ ದೃಢವಾದ ಸಂಕಲ್ಪಗಳಿಂದ ಆಗಿರುತ್ತದೆ. ಇದೆಲ್ಲವೂ ಸಂಕಲ್ಪಮಾತ್ರದಿಂದಲೇ ಹೊರತು ಮತ್ತೆ ಹೇಗೂ ಇರುವದೇ ಇಲ್ಲ. ಪರಮಾತ್ಮನಿಂದ ಸಂಕಲ್ಪ ಮಾತ್ರವು ಮೊದಲು ಉಂಟಾಗಿ ಅದೇ ವಿಸ್ತಾರವಾಗಿರುತ್ತದೆ. ಈ ಜಗತ್ತೆಲ್ಲವೂ ಸಂಕಲ್ಪಮಾತ್ರವೇ. ಸಂಕಲ್ಪಮಾತ್ರವಾಗಿರುವ ಈ ಕಶ್ಮಲವನ್ನು ತೆಗೆದುಹಾಕಿಕೊಂಡು ನಿರ್ವಿಕಲ್ಪವಾದ ಶಾಂತಿಯನ್ನು ಪಡೆಯಬೇಕು.

★★★★★

# ಯಮಗೀತೆ

**18-5-56**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ವಿಷ್ಣುಪುರಾಣದಲ್ಲಿ (2-7)** ಯಮಗೀತೆಯಲ್ಲಿ ಜೀವರುಗಳು ಹೇಗೆ ಇದ್ದರೆ ಯಮನಿಗೆ ವಶವಾಗುವದಿಲ್ಲವೆಂಬುದನ್ನು ಮೈತ್ರೇಯನು ಕೇಳಿದ್ದಕ್ಕೆ ಪರಾಶರರು ಉತ್ತರಕೊಟ್ಟಿರುತ್ತಾರೆ.

ಯಮನು ದೂತನಿಗೆ ಪಿಸುಮಾತಿನಲ್ಲಿ ಹೀಗೆನ್ನುತ್ತಾನಂತೆ : ವಿಷ್ಣುವಿನ ಭಕ್ತರನ್ನು ನೀನು ಬಿಟ್ಟುಬಿಡಬೇಕು. ನಾನು ಹರಿಗುರುಗಳಿಗೆ ಅಧೀನನಾದವನು, ಸ್ವತಂತ್ರನಲ್ಲ. ಸಮಸ್ತರಿಗೂ ಹರಿಯು ಆತ್ಮನಾಗಿರುತ್ತಾನೆ. ಅವನನ್ನು ನಮಸ್ಕರಿಸಿದವನು ಪಾಪರಹಿತನು. ತನ್ನ ವರ್ಣಾಶ್ರಮಧರ್ಮವನ್ನು ಬಿಡದೆ ಎಲ್ಲರಲ್ಲಿಯೂ ಸಮಬುದ್ಧಿಯಿಂದ. ಇರುವವನೇ ವಿಷ್ಣುಭಕ್ತನು. ಯಾವನಿಗೇ ಕಲಿಕಲ್ಮಷದಿಂದ ಚಿತ್ತವು ಮಲಿನವಾಗುವದಿಲ್ಲವೋ, ಯಾವನು ರಹಸ್ಯದಲ್ಲಿ ಸಿಕ್ಕಿದ ಚಿನ್ನವನ್ನೂ ಕಡ್ಡಿಗೆ ಕಡೆಯಾಗಿ ಎಣಿಸುವನೋ, ಯಾವನಲ್ಲಿ ಮಾತ್ಸರ್ಯಾದಿದೋಷಗಳಿರುವದಿಲ್ಲವೋ, ಯಾವನು ಎಲ್ಲರಲ್ಲಿಯೂ ಮೈತ್ರೀಭಾವದಿಂದಿರುವನೋ, ಯವನು ಪ್ರಿಯವೂ ಹಿತವೂ ಆದ ವಚನವನ್ನು ಆಡುತ್ತಾ ಅಭಿಮಾನವಾಗಲಿ ಮಾಯೆಯಾಗಲಿ ಇಲ್ಲದಿರುವನೋ ಯಮನಿಯಮಾದಿಗಳಿಂದ ಕಲ್ಮಷಾದಿಗಳನ್ನೆಲ್ಲ ಕಳೆದುಕೊಂಡಿರುವನೋ, ಅವನು ವಿಷ್ಣುಭಕ್ತನು. ಇದಕ್ಕೆ ವಿಪರೀತನಾಗಿರುವವನು ವಿಷ್ಣುಭಕ್ತನಲ್ಲ. ಇದೆಲ್ಲವೂ ನಾನೂ ಪರಮಪುರುಷನಾದ ವಾಸುದೇವನೇ ಎಂಬ ನಿಶ್ಚಲವಾದ ಬುದ್ಧಿಯು ಯಾರಲ್ಲಿ ಇರುವದೋ, ಯಾರು ವಿಷ್ಣುವಿನ ನಾಮಾವಳಿಗಳನ್ನು ಉಚ್ಚರಿಸುತ್ತಿರುವರೋ, ಅಂಥವರನ್ನು ಬಿಟ್ಟು ನೀನು ತೊಲಗಬೇಕು. ಅಂಥವರ ವಿಷಯಕ್ಕೆ ನಿನಾಗಾಗಲಿ ನನಗಾಗಲಿ ಅವಕಾಶವೇ ಇರುವದಿಲ್ಲ.''

★★★★★

# ಶಿವಾನುಭವ

**19-5-56**

**ಬ್ರ॥ಶ್ರೀ॥ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳವರು**

**ಸೂತಸಂಹಿತೆಯ ಯಜ್ಞವೈಭವಖಂಡದ ಹದಿನೈದನೆಯ ಅಧ್ಯಾಯದ** ಸಾರವೇನೆಂದರೆ: ಆತ್ಮನು ಸಚ್ಚಿದಾನಂದೈಕರಸನಾಗಿ ಅದ್ವಿತೀಯನಾಗಿರುತ್ತಾನೆ ಎಂಬುದು ವೇದಾಂತದ ಸಿದ್ಧಾಂತವು. ಆದರೆ ವ್ಯವಹಾರದಲ್ಲಿ ಘಟಪಟಾದಿಗಳು ಸದ್ರೂಪದಿಂದ ತೋರುತ್ತಿರುವದರಿಂದ ಸತ್ತಾಸಾಮಾನ್ಯವು ತನ್ನ ರೂಪದಿಂದ ಒಂದೇ ಆಗಿರುವದೆಂದೂ ವಿಶೇಷರೂಪದಿಂದ ಭಿನ್ನಭಿನ್ನವಾಗಿರುವದೆಂದೂ ತಿಳಿಯಬೇಕೆಂದು ಕೆಲವರು ಹೇಳುತ್ತಾರೆ. ಇದು ಸರಿಯಲ್ಲ. ಏಕೆಂದರೆ ಏಕೆಂದರೆ ವಿಶೇಷರೂಪವೆಂಬುದೇ ಮೊದಲು ಸಿದ್ಧವಾಗಿಲ್ಲ. ಹೇಗೆಂದರೆ: ಗಟಪಟಾದಿಭೇದಾಕಾರವು ಸತ್ತೆಗಿಂತ ಭಿನ್ನವೊ, ಅಭಿನ್ನವೊ, ಭಿನ್ನಾಭಿನ್ನವೊ-ಎಂದು ವಿಕಲ್ಪಿಸೋಣ. ಅದು ಭಿನ್ನವಾದರೆ ಶೂನ್ಯವೇ ಆಗುವದು; ಅಭಿನ್ನವಾದರೆ ಸತ್ತೆಯೇ ಆಗುವದು. ಭಿನ್ನಾಭಿನ್ನವೆಂದರೆ ಈ ಎರಡು ದೋಷಗಳೂ ಬಂದೊದಗುವವು. ಆದ್ದರಿಂದ ವಿಶೇಷರೂಪವು ಭ್ರಾಂತಿಮಾತ್ರವು. ಸತ್ತು ಒಂದೇ ಒಂದಾಗಿರುತ್ತದೆ. ಈ ಸತ್ತೆಯೇ ಬ್ರಹ್ಮವು. ಸತ್ತಿಗಿಂತ ಭಿನ್ನವೆಂದರೆ ಮನುಷ್ಯನ ಕೋಡಿನಂತೆ ತುಚ್ಛವೆಂದಾಗುವದು. ಆದ್ದರಿಂದ ಇದೆಲ್ಲವೂ ಬ್ರಹ್ಮವೇ ಎಂದು ಶ್ರುತಿಯು ಹೇಳುತ್ತದೆ. ಜ್ಞಾನಿಗಳ ಅನುಭವವೂ ಹಾಗೆಯೇ ಇದೆ.

ಹೀಗಿರುವದರಿಂದ ಇದೆಲ್ಲವೂ ಶಿವನೆಂದೇ ತಿಳಿಯಬೇಕು. ಮಣ್ಣೇ ಮಡಕೆಕುಡಿಕೆಗಳ ರೂಪದಿಂದ ತೋರುವಂತೆಯೂ ಚಿನ್ನವೇ ಕಟಕಮಕುಟಾದಿಗಳ ರೂಪದಿಂದ ತೋರುವಂತೆಯೂ ಕಪ್ಪೆಯಚಿಪ್ಪೇ ಬೆಳ್ಳಿಯ ಆಕಾರದಿಂದ ತೋರುವಂತೆಯೂ ಸ್ವಪ್ನದರ್ಶಿಯಾದವನೇ ಸ್ವಪ್ನರೂಪದಿಂದ ತೋರಿಕೊಳ್ಳುವಂತೆಯೂ ಸರ್ವವನ್ನೂ ಬೆಳಗುವ ಶಿವನೊಬ್ಬನೇ ಎಲ್ಲಾ ರೂಪದಿಂದಲೂ ತೋರುತ್ತಿರುವನು. ಕತ್ತಲೆಯೂ ಬೆಳಕೂ ಆಕಾಶದಲ್ಲಿ ತೋರುತ್ತಿರುವಂತೆ ಜಡಾಜಡವೆಲ್ಲವೂ ಪರಮಾತ್ಮನಲ್ಲಿಯೇ ತೋರುತ್ತಿರುವವು.

ಸಮುದ್ರದಲ್ಲಿಯೇ ಅಲೆ, ತೆರೆ ಮುಂತಾದವುಗಳು ತೋರುವಂತೆ ಸಮಸ್ತಜಗತ್ತೂ ಪರಮಾತ್ಮನಲ್ಲಿಯೇ ತೋರುತ್ತಿರುವದು. ಆದ್ದರಿಂದ ಭೂತಗಳು, ವನಗಳು, ಗಿರಿಗಳು, ನದಿಗಳು, ಎಲ್ಲವೂ ಶಿವನೇ. ಯಜ್ಞ, ಜಪ, ತಪಸ್ಸು- ಇವುಗಳಿಗೆಲ್ಲ ವಿಷಯನಾದವನು ಆ ಶಿವನೇ. ಅವನನ್ನೇ ತಮ್ಮ ಹೃದಯದಲ್ಲಿ ಸಾಕ್ಷಿಯಾಗಿರುವನೆಂದು ಯತೀಂದ್ರರು ತಿಳಿಯುವರು. ಅವರಿಗೆ ಎಲ್ಲವೂ ಶಿವನೇ ಆಗಿ ಕಾಣುವದು. ಅವರ ಕರ್ಮಗಳೆಲ್ಲವೂ ನಾಶವಾಗುವವು. ಜ್ಞಾನಿಗಳಿಗೆ ಎಲ್ಲಾ ಅನುಭವವೂ ಶಿವಾನುಭವವೇ. ಅವರಲ್ಲಿ ಬದ್ಧಮುಕ್ತರೆಂಬ ವ್ಯವಹಾರವೂ ಇಲ್ಲ.

★★★★★

# ಗಜೇಂದ್ರನ ಸ್ತೋತ್ರ

**20-5-56**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ಭಾಗವತದ ಎಂಟನೆಯ ಸ್ಕಂಧದ ಮೂರನೆಯ ಅಧ್ಯಾಯದಲ್ಲಿ** ಗಜೇಂದ್ರನು ಭಗವಂತನನ್ನು ಸ್ತೋತ್ರಮಾಡಿದ್ದು, ಭಗವಂತನು ಅವನನ್ನು ಮೊಸಳೆಯ ಹಿಡಿತದಿಂದ ಬಿಡುಗಡೆಮಾಡಿದ್ದು-ಇವುಗಳ ವಿವರವಿರುತ್ತದೆ. ಇಲ್ಲ ಕೆಲವು ಸ್ತೋತ್ರವಾಕ್ಯಗಳ ಅಭಿಪ್ರಾಯವನ್ನು ಬರೆದಿದೆ. ಯಾವಾತನಿಂದ ಈ ಜಗತ್ತೆಲ್ಲವೂ ಚಿದಾತ್ಮಕವಾಗಿಯೇ ಜನಿಸಿರುವದೋ ಆ ಆದಿಕಾರಣನಾದ ಭಗವಂತನಿಗೆ ನಮಸ್ಕಾರ! ಈ ಪ್ರಪಂಚವು ಯಾವನಲ್ಲಿದ್ದುಕೊಂಡಿರುವದೋ, ಯಾವನಿಂದ ಬಂದಿರುವದೋ, ಯಾವನಿಂದ ಸೃಷ್ಟಿಸಲ್ಪಟ್ಟದ್ದೋ, ಯಾವನು ತಾನೇ ಇದೆಲ್ಲವೂ ಆಗಿರುವನೋ, ಯಾವನು ಇದೆಲ್ಲಕ್ಕಿಂತ ಪರವಾದ ಅವ್ಯಾಕೃತಕ್ಕಿಂತಲೂ ಪರನೋ ಆ ಸ್ವಯಂಭುವನ್ನು ಶರಣುಹೊಕ್ಕಿರುವೆನು. ಯಾವಾತನು ತನ್ನ ಮಾಯೆಯಿಂದ ತನ್ನ ಸ್ವರೂಪದಲ್ಲಿ ಕಲ್ಪಿತವಾಗಿ ಕೆಲವು ವೇಳೆ ತೋರಿಕೊಳ್ಳುತ್ತಲೂ ಕೆಲವು ವೇಳೆ ಮರೆಯಾಗುತ್ತಲೂ ಇದ್ದರೂ ನಿತ್ಯಾಲುಪ್ತ ಚೈತನ್ಯದೃಷ್ಟಿಯಿಂದ ನೋಡುತ್ತಲೇ ಇರುವನೋ ಆ ಪರಾತ್ಪರನಾದ ಮೂಲಭೂತನಾದ ಪರಮಾತ್ಮನು

ನನ್ನನ್ನು ಕಾಪಾಡಲಿ! ಪ್ರಲಯಕಾಲದಲ್ಲಿ ಲೋಕಗಳೂ ಲೋಕಪಾಲಕರೂ ಎಲ್ಲವೂ ನಾಶವಾಗಲು ಎಲ್ಲೆಲ್ಲಿಯೂ ಕಗ್ಗತ್ತಲೆಯು ಕವಿದಿರುವಲ್ಲಿ ಅದರಿಂದಾಚೆಗೆ ಇರುವ ವಿಭು ಯಾವನೋ, ಯಾವಾತನ ಪರಮಪದವನ್ನು ದೇವತೆಗಳಾಗಲಿ ಋಷಿಗಳಾಗಲಿ ಅರಿತುಕೊಳ್ಳಲಾರದೆ ಇರುವರೋ ಜೀವರುಗಳಂತೂ ನಿಶ್ಚಯವಾಗಿ ಅರಿತುಕೊಳ್ಳಲಾರದವರೇ ಆಗಿರುವರೋ, ಬಗೆ ಬಗೆಯಾಗಿ ಅಭಿನಯಿಸುತ್ತಿರುವ ನಟನ ಸ್ವರೂಪವನ್ನು ಜನರು ತಿಳಿಯದಂತೆ ಇರುವ ಆ ಪರಮಾತ್ಮನು ನನ್ನನ್ನು ಕಾಪಾಡಲಿ! ಯಾವಾತನ ಸುಮಂಗಲ ಸ್ಥಾನವನ್ನು ನೋಡಬಯಸುವವರು ಸಂಗವನ್ನು ತ್ಯಜಿಸಿ ಮುನಿಗಳೂ ಸಾಧುಚರಿತರೂ ಆಗಿ ಅರಣ್ಯದಲ್ಲಿ ಅಸ್ಖಲಿತವಾದ ತಪಸ್ಸನ್ನು ಮಾಡುತ್ತಾ ಸರ್ವಭೂತಗಳಲ್ಲಿಯೂ ಸೌಹಾರ್ದದಿಂದಿರುವರೋ ಆತನೇ ನನಗೆ ಗತಿ! ಯಾವಾತನಿಗೆ ಜನ್ಮ, ಕರ್ಮ, ನಾಮರೂಪಗಳು, ಗುಣದೋಷಗಳು – ಮುಂತಾದವು ಯಾವವೂ ಇಲ್ಲವೋ ಆದರೂ ಯಾವಾತನು ಲೋಕಗಳ ಸೃಷ್ಟಿಪ್ರಲಯಗಳನ್ನು ಮಾಡುವದಕ್ಕಾಗಿ ಆ ಜನ್ಮಾದಿಗಳನ್ನು ಮತ್ತೆಮತ್ತೆ ಪಡೆಯುತ್ತಿರುವನೋ, ಆ ಪರಮೇಶ್ವರನಾದ ಬ್ರಹ್ಮರೂಪನಾದ ಅನಂತಶಕ್ತಿಗಳುಳ್ಳವನಾದ ಅರೂಪನೂ ಬಹುರೂಪನೂ ಆಗಿರುವ ಅಧ್ಭುತಕರ್ಮನಾದ ಪರಮಾತ್ಮನಿಗೆ ನಮಸ್ಕಾರ!

★★★★★

# ಪೃಥುವಿಗೆ ಸನತ್ಕುಮಾರರು ಮಾಡಿದ ಉಪದೇಶ

**4-5-1957**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ಭಾಗವತದ 4ನೆಯ ಸ್ಕಂಧದ 22ನೆಯ ಅಧ್ಯಾಯದಲ್ಲಿ** ಹೀಗಿದೆ – ಒಮ್ಮೆ ಸನತ್ಕುಮಾರರೇ ಮೊದಲಾದ ನಾಲ್ವರು ಮುನಿಗಳು ಪೃಥುರಾಜನಲ್ಲಿಗೆ ಬಂದರು. ಆಗ ರಾಜನು ಅವರನ್ನು ಸತ್ಕರಿಸಿ ಈ ಜನ್ಮದಲ್ಲಿಯೇ ಮುಕ್ತಿಯು

ಹೇಗೆ ಸುಲಭವಾಗಿ ಆದೀತು? ದಯವಿಟ್ಟು ಹೇಳಬೇಕು ಎಂದು ಕೇಳಿಕೊಂಡನು. ಆಗ ಸನತ್ಕುಮಾರರು ಇಂತೆಂದರು: ಮಹಾರಾಜನೆ, ನೀನು ತಿಳಿದವನಾದರೂ ಉತ್ತಮಪ್ರಶ್ನೆಯನ್ನು ಮಾಡಿರುವೆ; ಸಾಧುಗಳು ಒಕ್ಕಡೆ ಸೇರಿದರೆ ಇಬ್ಬರಿಗೂ ಒಳ್ಳೆಯದಾಗುವದು, ಮತ್ತೆ ಅವರ ಸಂಭಾಷಣೆಯು ಸರ್ವರಿಗೂ ಮಂಗಲವನ್ನುಂಟುಮಾಡುತ್ತದೆ. ನಿನಗೆ ಪರಮಾತ್ಮನ ಪಾದಾರವಿಂದಗಳ ಗುಣಾನುವಾದದಲ್ಲಿ ರತಿಯಿದ್ದೇ ಇರುತ್ತದೆ. ಅದರಿಂದಲೇ ಅಂತಃಕರಣದಲ್ಲಿರುವ ಕಲ್ಮಷವೆಲ್ಲ ನಾಶವಾಗುವದು. ಸರ್ವರ ಆತ್ಮನಾಗಿರುವ ನಿರ್ಗುಣಬ್ರಹ್ಮದಲ್ಲಿ ರತಿಯಿರುವದೇ ಮುಕ್ತಿಗೆ ಕಾರಣವಾಗಿರುತ್ತದೆ. ಆ ನಿರ್ಗುಣಬ್ರಹ್ಮದಲ್ಲಿ ರತಿಯುಂಟಾಗುವದಕ್ಕೆ ಶ್ರದ್ಧೆ, ಭಾಗವತಧರ್ಮಾಚರಣೆ, ತತ್ತ್ವಜಿಜ್ಞಾಸೆ, ಆಧ್ಯಾತ್ಮಿಕಯೋಗದಲ್ಲಿ ನಿಷ್ಠೆ, ಯೋಗೇಶ್ವರನಾದ ಪರಮತ್ಮನ ಉಪಾಸನೆ, ಪುಣ್ಯಶ್ರವಸನಾದ ಆತ್ಮನ ಕಥೆಯನ್ನು ನಿತ್ಯವೂ ಕೇಳುವದು, ವಿಷಯಸಂಗಿಗಳ ಸಂಬಂಧವಿಲ್ಲದೆ ಇರುವದು, ಅಪರಿಗ್ರಹ, ಏಕಾಂತವಾಸ, ಹರಿಯ ಗುಣಾಮೃತವನ್ನು ಪಾನಮಾಡುತ್ತಿರುವದು, ಅಹಿಂಸೆ, ಪರಮಹಂಸಚರ್ಯೆ, ಮುಕುಂದನ ಚರಿತ್ರೆಯನ್ನು ಸ್ಮರಿಸಿಕೊಳ್ಳುತ್ತಿರುವದು, ಯಮನಿಯಮಗಳನ್ನು ಪಾಲಿಸುವದು, ನಿಷ್ಕಾಮತೆ, ತಿತಿಕ್ಷೆ, ಪರಮಾತ್ಮನ ಗುಣಗಳನ್ನು ಗಾನಮಾಡುತ್ತಿರುವದು, ಭಕ್ತಿ–ಇವುಗಳು ಇರಬೇಕು.

ಯಾವಾಗ ಪರಮಾತ್ಮನಲ್ಲಿ ಇಂಥ ರತಿಯುಂತಾಗುವದೋ ಆಗ ಆಚಾರ್ಯನ ಉಪದೇಶದಿಂದ ಉಂಟಾದ ಜ್ಞಾನವೈರಾಗ್ಯಗಳಿಂದ ಸಂಸಾರಕ್ಕೆ ಕಾರಣವಾಗಿರುವ ಅಜ್ಞಾನವನ್ನು ಸುಟ್ಟುಹಾಕಬಹುದು. ಹೀಗೆ ಸರ್ವಪ್ರತಿ ಬಂಧಗಳನ್ನೂ ಸುಟ್ಟುಹಾಕಿಕೊಂಡಿರುವವನು ಪರಮಾತ್ಮನ ದರ್ಶನಕ್ಕೆ ಅಡ್ಡಿಯಾಗಿದ್ದದ್ದನ್ನು ಯಾವದನ್ನೂ, ಕನಸಿನಿಂದ ಎಚ್ಚತ್ತವನಂತೆ, ಕಾಣದೆ ಇರುವನು. ಎಲ್ಲೆಲ್ಲಿಯೂ ಪರಮಾತ್ಮನನ್ನೇ ಕಾಣುತ್ತಿರುವನು. ಉಪಾಧಿಯಾದ ಅಂತಃಕರಣವಿರುವವರೆಗೇ ನಾನು, ವಿಷಯಗಳು–ಎಂಬ ಭೇದವನ್ನು ಕಾಣುತ್ತಿರುತ್ತಾನೆ. ವಿಷಯಗಳ ಧ್ಯಾನದಿಂದಲೇ ಸಂಗವೇ ಮುಂತಾದ ಎಲ್ಲಾ

ಅನರ್ಥಗಳೂ ಉಂಟಾಗುತ್ತಿರುವವು. ಆದ್ದರಿಂದ ಮುಮುಕ್ಷುವಾದವನು ಏತರಲ್ಲಿಯೂ ಸಂಗವನ್ನುಂಟುಮಾಡಿಕೊಳ್ಳಬಾರದು; ಏಕೆಂದರೆ ಸಂಗವೇ ನಾಲ್ಕು ಪುರುಷಾರ್ಥಗಳಿಗೂ ವಿಘಾತಕವಾಗಿರುತ್ತದೆ. ಸಂಗವು ಯಾರನ್ನು ಬಾಧಿಸುತ್ತಿರುವದೋ ಅವರಿಗೆ ಎಂದಿಗೂ ಮೋಕ್ಷವು ದೊರಕದು. ಪುರುಷಾರ್ಥಗಳೊಳಗೂ ಮೋಕ್ಷವೇ ಆತ್ಯಂತಿಕವಾದದ್ದು. ಆದ್ದರಿಂದ ಎಲೈ ರಾಜನೆ, ನೀನು ಎಲ್ಲಾ ಸ್ಥಾವರಜಂಗಮಗಳ ಹೃದಯದಲ್ಲಿಯೂ ಇರುವ ಪ್ರತ್ಯಗಾತ್ಮನಾಗಿರುವ ಆ ಪರಮಾತ್ಮನೇ ನಾನೆಂದು ತಿಳಿದುಕೊ. ಯಾವ ಪರಮಾತ್ಮನಲ್ಲಿ ಸದಸದ್ರೂಪವಾದ ಈ ಮಾಯೆಯು ಹಗ್ಗದಲ್ಲಿ ಹಾವಿನಂತೆ ತೋರುತ್ತಿರುವದೋ ಆ ನಿತ್ಯಶುದ್ಧಮುಕ್ತಸ್ವಭಾವನಾದ ಸರ್ವಕರ್ಮಕಲ್ಮಷರಹಿತನಾದ ಪರಮಾತ್ಮನನ್ನೇ ಶರಣುಹೊಗುವನಾಗು. ಯಾವ ಭಗವಂತನ ಪಾದಕಮಲಗಳಲ್ಲಿ ಭಕ್ತಿಯುಳ್ಳವನು ಕರ್ಮಾಶಯದ ಗ್ರಂಥಿಯನ್ನು ಬಿಚ್ಚಿಸಿಕೊಳ್ಳುವಂತೆ, ಸರ್ವತ್ಯಾಗವನ್ನು ಮಾಡಿದ ಯತಿಗಳೂ ಬಿಚ್ಚಿಸಿಕೊಳ್ಳಲಾರರೋ, ಆ ವಾಸುದೇವನನ್ನು ಶರಣುಹೊಂದು. ಈ ಸಂಸಾರ ಸಾಗರವನ್ನು ದಾಟುವದು ಬಹಳ ಕಷ್ಟವಾಗಿದ್ದರೂ ಆ ಪರಮಾತ್ಮನ ಪಾದವನ್ನೇ ತೆಪ್ಪವನ್ನಾಗಿ ಮಾಡಿಕೊಂಡು ನೀನು ಸುಲಭವಾಗಿ ದಾಟುವನಾಗು.

**ಶ್ರೀಶ್ರೀಗಳು** ಭಾಗವತದಲ್ಲಿ ಸಾಧನಸಿದ್ಧಾಂತಗಳ ಸಾಮರಸ್ಯವನ್ನು ಹೇಗೆ ಮಾಡಿದೆ ಎಂಬುದನ್ನು ತಿಳಿಸಿದರು. ರಾಜನು ಅಧ್ಯಾತ್ಮಜ್ಞಾನನಿಷ್ಠನಾದರೆ ಲೋಕಕ್ಕೇ ಕಲ್ಯಾಣವಾಗುವದು ಎಂಬುದನ್ನರಿತು ಸನತ್ಕುಮಾರರು ಪೃಥುರಾಜನನ್ನು ಉಪದೇಶದಿಂದ ಅನುಗ್ರಹಿಸಿದರೆಂಬುದನ್ನು ವಿವರಿಸಿದರು. ಬಲಾತ್ಕಾರದಿಂದ ರಾಜರನ್ನು ಕಿತ್ತೊಗೆಯುವ ಆಧುನಿಕಪ್ರಜಾಸತ್ತೆಯ ಮಾರ್ಗಕ್ಕೂ ಅಧ್ಯಾತ್ಮದೃಷ್ಟಿಯ ಬಲದಿಂದ ಸಮಾಜವನ್ನು ಸಂಸ್ಕರಿಸುವ ಋಷಿಗಳ ಮಾರ್ಗಕ್ಕೂ ಇರುವ ತಾರತಮ್ಯವನ್ನು ವೇನಪೃಥುರಾಜರ ಕಥೆಯ ದೃಷ್ಟಾಂತಗಳಿಂದ ವ್ಯಕ್ತಗೊಳಿಸಿದರು.

★★★★★

# ಭಗವತ್ಪ್ರಾಪ್ತಿಗೆ ಉಪಾಯ

**5-5-1957**

**ಬ್ರ॥ಶ್ರೀ॥ಪಿ.ಚಂದ್ರಶೇಖರಭಟ್ಟರು,**

**ಮಹಾಭಾರತದಲ್ಲಿ ಶಾಂತಿಪರ್ವದ 199ನೆಯ ಅಧ್ಯಾಯದಲ್ಲಿ** ಯುಧಿಷ್ಠಿರನು ಕೇಳಿದ ಪ್ರಶ್ನೆಗೆ ಉತ್ತರವಾಗಿ ಭೀಷ್ಮಾಚಾರ್ಯರು ಬೃಹಸ್ಪತಿಪ್ರಜಾಪತಿ ಸಂವಾದವನ್ನು ಹೇಳಿರುತ್ತಾರೆ. ಜೀವನ ಪರಮಾರ್ಥರೂಪವು ಯಾವದು? ಎಲ್ಲಕ್ಕೂ ಕಾರಣವು ಯಾವದು? ಜ್ಞಾನದ ಫಲವೇನು, ಕರ್ಮದ ಫಲವೇನು? -ಎಂಬ ಪ್ರಶ್ನೆಯನ್ನು ಬೃಹಸ್ಪತಿಯು ಕೇಳಿರುತ್ತಾನೆ.

ಕರ್ಮಕಾಂಡದಲ್ಲಿ ಇಷ್ಟಪ್ರಾಪ್ತಿ, ಅನಿಷ್ಟನಿವೃತ್ತಿ-ಇವುಗಳ ವಿಷಯವನ್ನು ಹೇಳಿದೆ. ಆದರೂ ಎಂದೆಂದಿಗೂ ಹಿತವಾಗುವದಕ್ಕೆ ಸಾಧನವನ್ನು ಅಲ್ಲಿ ಹೇಳಿಲ್ಲ. ಅಲ್ಲಿ ಹೇಳಿರುವ ಸಾಧನಗಳಿಂದ ಆಶೆಯು ಹೆಚ್ಚುತ್ತಾಹೋಗುವದು; ಆದರೆ ಕಾಮ್ಯಕರ್ಮಗಳನ್ನು ಬಿಟ್ಟವರಿಗೇ ಪರಮಪುರುಷಾರ್ಥವು ದೊರಕೀತು. ಆದ್ದರಿಂದ ನಿಷ್ಕಾಮಕರ್ಮವನ್ನು ಮಾಡಿ ಜ್ಞಾನಕ್ಕೆ ಯೋಗ್ಯತೆಯನ್ನು ಹೊಂದಿ ಜ್ಞಾನವನ್ನು ಸಂಪಾದಿಸಿಕೊಂಡು ಕೃತಾರ್ಥನಾಗಬೇಕು. ಕರ್ಮಫಲವು ಅನಿತ್ಯ, ಅದರಿಂದ ದೂರನಾಗಬೇಕು.

ತ್ರಿಕರಣವನ್ನು ಉಪಯೋಗಿಸುವ ಮಾರ್ಗವು ಕರ್ಮದ್ದು, ಮನಸ್ಸನ್ನು ಉಪಯೋಗಿಸುವದು ಜ್ಞಾನದ್ದು. ಬ್ರಹ್ಮವಸ್ತು ಕರ್ಮದಿಂದ ದೊರೆಯತಕ್ಕದ್ದಲ್ಲ. ಅಜ್ಞಾನವು ಹೋಗಿ ಆ ಜ್ಞಾನವು ದೊರೆಯಬೇಕು. ಜ್ಞಾನವು ಬೇಕೆನ್ನುವವರಿಗೆ ಕರ್ಮವು ಬೇಡ. ಶುಭಾಶುಭಕರ್ಮ, ಅವುಗಳ ಫಲಪ್ರಾಪ್ತಿ, ಮತ್ತೆ ಕರ್ಮಾನುಷ್ಠಾನ ಇದೇ ಸಂಸಾರ; ಪ್ರಪಂಚಕ್ಕೆ ಮೂಲಕಾರಣವಾಗಿರುವ ಪರಮಾತ್ಮನನ್ನು ಅರಿತುಕೊಂಡರೆ ನಿತ್ಯತೃಪ್ತಿರೂಪವಾದ ಮೋಕ್ಷವು ದೊರಕುವದು. ಬ್ರಹ್ಮವು ಅಥವಾ ಪರಮಾತ್ಮನು ಶಬ್ದಸ್ಪರ್ಶರೂಪರಸಗಂಧಾದಿಗಳಿಲ್ಲದ್ದು, ಅದರಲ್ಲಿ ಸ್ತ್ರೀಪುರುಷಾದಿಭೇದಗಳಿಲ್ಲ; ಅದು ಸತ್ತಲ್ಲ, ಅಸತ್ತಲ್ಲ, ಸದಸತ್ತೂ ಅಲ್ಲ. ಇಂದ್ರಿಯಗಳಿಗೆ ಅತೀತವಾಗಿರುವದು. ಅದನ್ನು ತಿಳಿದುಕೊಂಡವರಿಗೇ ನಿತ್ಯಸುಖ.

**ಶ್ರೀಶ್ರೀಗಳವರು** ಹೀಗೆಂದು ಉಪದೇಶಮಾಡಿದರು: ವೇದದಲ್ಲಿ ಹೇಳಿರುವ ಕರ್ಮಜ್ಞಾನಗಳ ವಿಷಯವನ್ನು ಇತಿಹಾಸಪುರಾಣಗಳಲ್ಲಿ ವಿಸ್ತರಿಸಿ ತಿಳಿಸಿದೆ. ಈಗಿನ ಕಾಲದವರು ಪರಲೋಕದ ವಿಚಾರವು ಹೆಚ್ಚಿ ನಮಗೆ ಕಷ್ಟವಾಗಿದೆ ಎಂದು ಗೊಣಗುಟ್ಟುತ್ತಿರುವರು; ಇದರ ಜೊತೆಯಲ್ಲಿಯೇ 'ನಮ್ಮ ದೇಶದ ಸಂಸ್ಕೃತಿ' ಎಂಬ ಮಾತನ್ನೂ ಬಿಟ್ಟಿಲ್ಲ. ಪಂಚವಾರ್ಷಿಕಯೋಜನೆ ಎಂಬುದು ಮುಂದಿನ ಕಾಲದಲ್ಲಾಗುವ ಅಭಿವೃದ್ಧಿಯ ವಿಚಾರವಲ್ಲವೆ? ಋಷಿಗಳು ಈ ಜನ್ಮಕ್ಕೇ ಅಲ್ಲದೇ ಜನ್ಮಾಂತರಲೋಕಾಂತರಗಳಿಗೂ ಅನ್ವಯಿಸುವ ಯೋಜನೆಯನ್ನು ವಿಚಾರಿಸಿದರೆ ಅದಕ್ಕೇಕೆ ಹೆದರಬೇಕು ? ನಮ್ಮ ಲೋಕವ್ಯಾಪಾರದ ಅತಿದೇಶವೇ ಈ ಕರ್ಮಜ್ಞಾನಮಾರ್ಗವಾಗಿದೆ; ಈ ಎರಡಕ್ಕೂ ವಿರೋಧವೇನೂ ಇಲ್ಲ. ಅತೀಂದ್ರಿಯಫಲಕ್ಕಾಗಿ ಪ್ರಯತ್ನವನ್ನು ಮಾಡುವದು ವಿವೇಕಿಗಳಿಗೆ ಯುಕ್ತವೇ ಆಗಿರುತ್ತದೆ. ಧರ್ಮರಾಜನು ಈ ಲೋಕದ ಸುಖವನ್ನು ಪಡೆದು ಅದರ ಯೋಗ್ಯತೆಯನ್ನು ತೂಗಿ ಪರಲೋಕದ ಸುಖಕ್ಕೆ ಬೇಕಾದ ಕರ್ಮ, ಅದಕ್ಕಿಂತಲೂ ಹೆಚ್ಚಿನ ಪುರುಷಾರ್ಥವನ್ನು ಕೊಡುವ ಜ್ಞಾನ–ಇವುಗಳ ವಿಚಾರವನ್ನು ಮಾಡಿರುತ್ತಾನೆ. ಎಲ್ಲರಿಗೂ ವೈರಾಗ್ಯವು ಸುಲಭವಾಗಿ ಲಭಿಸುವದಿಲ್ಲ. ನಾವು ಭಾರತಾದಿಗಳನ್ನು ಶ್ರವಣಮಾಡಿ ದುರಾಶೆಯನ್ನು ಬಿಟ್ಟು ಪಾಪದೂರರಾಗಿ ಸತ್ಕರ್ಮಾಚರಣೆಯನ್ನು ಮಾಡಿ ಕರ್ಮಯೋಗದಿಂದ ಚಿತ್ತಶುದ್ಧಿಯನ್ನು ಹೊಂದಬೇಕು. ಆ ಬಳಿಕ ಜ್ಞಾನವು ನಮಗೆ ಲಭಿಸೀತು.

★★★★★

# ಜಗನ್ಮಿಥ್ಯಾತ್ವ

**6-5-1957**

**ಬ್ರ॥ಶ್ರೀ॥ಮತ್ತೂರು ಸುಬ್ರಾಯಾವಧಾನಿಗಳು**

**ವಾಸಿಷ್ಠ ರಾಮಾಯಣದ ನಿರ್ವಾಣಪ್ರಕರಣ ಪೂರ್ವಭಾಗದ 41ನೆಯ ಸರ್ಗ**ದಲ್ಲಿ – ಜಗತ್ತಿನ ತತ್ತ್ವವೆಂದರೆ ಪರಮಾರ್ಥವೇ; ಜಗತ್ತಿನ ಇರುವಿಕೆಯು

ಪರಮಾರ್ಥದ ಇರುವಿಕೆಗಿಂತ ಬೇರೆಯಾಗಿರುವದಿಲ್ಲ ಎಂಬುದು ಪುರಾಣದ ಸಾರವು.

**ಶ್ರೀಶ್ರೀಗಳವರು** ಅನುವಾದರೂಪವಾಗಿ ಹೇಳಿದ್ದರಲ್ಲಿ ಈ ಉಪದೇಶವಿತ್ತು: ಈ ಸರ್ಗದಲ್ಲಿ ವೇದಾಂತದ ಸಿದ್ಧಾಂತವನ್ನೆಲ್ಲ ಹೇಳಿದೆ. ಇದಕ್ಕೆ ಸಪ್ತಾಹದ ಆರು ದಿನಗಳಲ್ಲಿಯೂ ಮಾಡುತ್ತಿರುವ ಉಪಾನ್ಯಾಸಗಳನ್ನೇ ಅನುವಾದವೆಂದು ಹೇಳಬಹುದಾಗಿದೆ. ವಸಿಷ್ಠರು ತಾವು ಈಶ್ವರನಿಂದ ತಿಳಿದದ್ದನ್ನು ಶ್ರೀರಾಮನಿಗೆ ತಿಳಿಯಹೇಳಿರುತ್ತಾರೆ. ನಾಮರೂಪಪ್ರಪಂಚವೂ ಗುರುಶಾಸ್ತ್ರಶಿಷ್ಯವಿಭಾಗವೂ ಆತ್ಮನಲ್ಲಿ ಕಲ್ಪಿತವಾಗಿದೆ. ಆತ್ಮನಲ್ಲಿ ಯಾವ ವಿಭಾಗವೂ ಇಲ್ಲ- ಎಂಬುದನ್ನು ತಿಳಿದುಕೊಂಡು ಅದನ್ನು ಜ್ಞಾನದಿಂದ ತೊಡೆದುಹಾಕಿಕೊಳ್ಳುತ್ತೇವೆ. ಇಲ್ಲಿ ಅವಿದ್ಯೆಯನ್ನು ಅವಿದ್ಯೆಯಿಂದಲೇ ತೊಡೆದು ಹಾಕುವರೆಂಬುದನ್ನು ಲಕ್ಷ್ಯದಲ್ಲಿಡಬೇಕು. ಹೀಗೆ ಪರಮಾರ್ಥದೃಷ್ಟಿಯಿಂದ ವಿದ್ಯಾವಿದ್ಯೆಗಳೆರಡೂ ಅವಿದ್ಯೆಯೇ ಆದರೂ ಗುರುಶಾಸ್ತ್ರಬೋಧೆಯನ್ನು ತಿರಸ್ಕರಿಸಬೇಕೆಂದಾಗಲಿ, ಜ್ಞಾನವು ಕಾಕತಾಳೀಯವಾಗಿ ಬಂದು ನಮ್ಮ ಬಳಿಗೆ ಧಮುಕುವದೆಂದಾಗಲಿ ತಿಳಿಯಬಾರದು. ಅಧಿಕಾರಿಯಾದವನಿಗೆ ಈಶ್ವರಾನುಗ್ರಹದಿಂದ ವಿದ್ಯೆಯು ದೊರೆತು ಅವಿದ್ಯೆಯು ತೊಲಗುತ್ತದೆ. ಆ ಜ್ಞಾನವು ಬಂದಾಗ ಅವಿದ್ಯೆಯು ಹೋದದ್ದೂ ಜ್ಞಾನವು ಬಂದದ್ದೂ ಎರಡೂ ಆವಿದ್ಯಕವೇ ಎಂಬುದು ಮನದಟ್ಟಾಗುತ್ತದೆ.

★★★★★

# ಜಡಭರತನ ಉಪದೇಶ

**7-5-1957**

**ವಿದ್ಯಾರ್ಥಿ ಶ್ರೀ ಬಿ.ಕೆ.ಮಂಜಯ್ಯನವರು**

ಸೌವೀರಮಹಾರಾಜನಿಗೆ ಜಡಭರತನು ಮಾಡಿದ ಪರಮಾರ್ಥೋಪದೇಶವನ್ನೊಳಗೊಂಡ **ವಿಷ್ಣುಪುರಾಣ 2-14ರ**

ಅಭಿಪ್ರಾಯವು ಹೀಗಿದೆ. ಶರೀರಾದಿಗಳಿಗಿಂತ ಭಿನ್ನನಾಗಿರುವ ಆತ್ಮನ ಸ್ವರೂಪವನ್ನು 'ಪಲ್ಲಕ್ಕಿಯನ್ನು ಹೊತ್ತಿರುವವರು ಯಾರು ?' ಎಂಬುದು ವಿವೇಚನೆಯ ನೆಪದಿಂದ ಭರತನು ರಾಜನಿಗೆ ತಿಳಿಸಿಕೊಟ್ಟನೆಂಬುದು ಅಧ್ಯಾಯದ ಸಾರ.

**ಶ್ರೀಶ್ರೀಗಳವರು** ಹೀಗೆಂದು ಅಪ್ಪಣೆಕೊಡಿಸಿದರು: ಈ ದಿನ ಉದ್ದೇಶ ಪೂರ್ವಕವಾಗಿ ವಿದ್ಯಾರ್ಥಿಯಿಂದ ಹೇಳಿಸಿದೆ. ಅವನು ಇದೇ ಮೊದಲನೆಯ ಸಲ ಹೇಳಿದ್ದು; ಆದರೂ ಪರಮಾತ್ಮನ ವ್ಯಾಪಕತ್ವವನ್ನು ತಕ್ಕಮಟ್ಟಿಗೆ ವಿವರಿಸಿ ಹೇಳಿರುತ್ತಾನೆ. ವಿಷ್ಣುವಿನ ಸ್ವರೂಪದಲ್ಲಿಯೇ ನಮ್ಮ ಜ್ಞಾನವು ನಿಲ್ಲಬೇಕು; ಅದರಿಂದಲೇ ಮೋಕ್ಷ. ಈ ಜ್ಞಾನಕ್ಕೆ ಉಪಾಸನೆ, ಕರ್ಮ-ಇವುಗಳೆಲ್ಲವೂ ಸಾಧನವು- ಎಂಬುದೇ ಇಲ್ಲಿ ಉಪದೇಶವು. ವಿದ್ಯಾರ್ಥಿಗೆ ತಾವೆಲ್ಲರೂ ಆಶೀರ್ವಾದ ಮಾಡಬೇಕು; ಅದರಿಂದ ಅವನಿಗೂ ಚಿತ್ತಶುದ್ಧಿಯಾಗಿ ಜ್ಞಾನಪ್ರಾಪ್ತಿಗೆ ಸಹಾಯವಾಗುತ್ತದೆ, ಕಾರ್ಯಾಲಯದ ವಿದ್ಯಾಲಯಕ್ಕೆ ತಮ್ಮ ಕಡೆಯ ಯೋಗ್ಯ ವಿದ್ಯಾರ್ಥಿಗಳನ್ನು ಕಳುಹಿಸಿ ಅಧ್ಯಾತ್ಮವಿದ್ಯೆಯ ಲಾಭವನ್ನು ಪಡೆದುಕೊಳ್ಳಬೇಕು. ಹುಡುಗರು, ದೊಡ್ಡವರು, ಹೆಂಗಸರು, ಗಂಡಸರು – ಯಾರು ಈ ಅಧ್ಯಾತ್ಮವಿದ್ಯೆ ಯನ್ನು ಕಲಿತರೂ ಶ್ರೇಯಸ್ಸುಂಟಾಗುವದು.

★★★★★

## ಆತ್ಮನೇ ಸರ್ವಸಾಕ್ಷಿಯು

**8-5-1957**

**ಬ್ರ॥ಶ್ರೀ॥ ಲಕ್ಷ್ಮೀನರಸಿಂಹಶಾಸ್ತ್ರಿಗಳವರು**

**ಯಜ್ಞವೈಭವಖಂಡದ ಉತ್ತರಭಾಗದಲ್ಲಿ 4-1**ರಿಂದ **44 ಶ್ಲೋಕಗಳಲ್ಲಿ ಕೇನೋಪನಿಷತ್ತಿನ** ಅರ್ಥವನ್ನು ಸಂಗ್ರಹಿಸಿದೆ. ಪರಮಾತ್ಮನು ಸರ್ವೇಂದ್ರಿಯಗಳಿಗೂ ಆತ್ಮನಾಗಿ ಅವುಗಳನ್ನು ತನ್ನ ಚೈತನ್ಯದಿಂದ ಬೆಳಗುತ್ತಾ,

ತಮ್ಮತಮ್ಮ ವ್ಯಾಪಾರವನ್ನು ಮಾಡುವಂತೆ ಸಂನಿಧಿಮಾತ್ರದಿಂದ ಅನುಗ್ರಹಿಸುತ್ತಾನೆ. ಆತನನ್ನು ಸರ್ವಸಾಕ್ಷಿಯೆಂದು ಅರಿತುಕೊಳ್ಳಬೇಕು-ಎಂಬುದು ಉಪನಿಷತ್ತಿನ ಸಾರವು.

**ಶ್ರೀಗಳು** ಅನುವಾದದಲ್ಲಿ ಹೀಗೆಂದರು: ಶ್ರುತ್ಯರ್ಥವನ್ನೇ ತಿಳಿಯುವ ಭಾಷೆಯಲ್ಲಿ ಸಂಗ್ರಹಿಸಿ ಇತಿಹಾಸಪುರಾಣಗಳು, ಹೇಳುವದು ಪದ್ಧತಿ. ಈ ದಿನದ ಪುರಾಣಭಾಗದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿ ಶ್ರುತಿಯ ಅಕ್ಷರವನ್ನೂ ಸಂಗ್ರಹಿಸಿ ತಿಳಿಸಿದೆ. ಶ್ರುತಿಗಾಗಲಿ ಪುರಾಣಕ್ಕಾಗಲಿ ಇದು ಶ್ರುತಿ, ಪುರಾಣ-ಎಂಬ ಕಾರಣದಿಂದಲ್ಲ, ಪ್ರಾಮಾಣ್ಯ; ತತ್ತ್ವವನ್ನು ತಿಳಿಸುವದರಿಂದ. ಇಂದ್ರಿಯಗಳೂ ಮನಸ್ಸೂ ತಮ್ಮತಮ್ಮ ವ್ಯಾಪಾರದಲ್ಲಿ ತೊಡಗುವವಷ್ಟೆ, ಇವು ತಮಗೆತಾವೇ ಹೀಗೆ ನಡೆಯುತ್ತಿರುವವೊ, ಅಥವಾ ಇವಕ್ಕೂ ಪ್ರೇರಕವಾಗಿ ಯಾವದಾದರೊಂದು ಶಕ್ತಿಯಿದೆಯೊ?-ಎಂದು ಇಲ್ಲಿ ಶಿಷ್ಯನು ಕೇಳಿರುತ್ತಾನೆ. ಭೌತಿಕವಿಜ್ಞಾನ ಶಾಸ್ತ್ರಜ್ಞರು ಹೇಳುವಂತೆ ಇದೊಂದು ಪ್ರಕೃತಿನಿಯಮ (Law of Nature) ಎಂದು ಬಿಟ್ಟರೆಸಾಲದು. ಇಂದ್ರಿಯಗಳು ಸಂಹತವಾಗಿ-ಒಂದಕ್ಕೊಂದು ಹೊಂದಿಗೆಯಾಗಿ ಸೇರಿಕೊಂಡು-ಕೆಲಸಮಾಡುತ್ತಿರುವದರಿಂದ ತಮಗಿಂತ ವಿಲಕ್ಷಣವಾದ ಯಾವದೋ ಒಂದಕ್ಕಾಗಿ ಕೆಲಸಮಾಡುತ್ತಿರಬೇಕು-ಎಂಬ ಸಾಂಖ್ಯರ ಯುಕ್ತಿಯನ್ನು ಅನುಸರಿಸಿದರೂ ಇಲ್ಲಿ ಶ್ರುತಿಯ ತಾತ್ಪರ್ಯವನ್ನು ಪೂರ್ಣವಾಗಿ ಗ್ರಹಿಸಿದಂತೆ ಆಗುವದಿಲ್ಲ. ಇಂದ್ರಿಯಾದಿಗಳು ತಮ್ಮತಮ್ಮ ವ್ಯಾಪಾರವನ್ನು ಮಾಡುತ್ತಿವೆ ಎಂಬುದನ್ನು ನೇರಾಗಿ ನೋಡುತ್ತಿರುವ ಸಾಕ್ಷಿರೂಪನಾದ ಆತ್ಮನು ಸ್ವಯಂಸಿದ್ಧನಾಗಿ ಇರುತ್ತಾನೆ. ಆತನ ಸಂನಿಧಿಮಾತ್ರದಿಂದಲೇ ಇವುಗಳು ಹೇಗೆ ನಿಯಮದಿಂದ ವ್ಯಾಪಾರಮಾಡುತ್ತಿವೆ-ಎಂಬ ತತ್ತ್ವವನ್ನು ಇಲ್ಲಿ ತಿಳಿಸಿರುತ್ತದೆ.

★★★★★

# ನಿರ್ವಾಣಪ್ರಾಪ್ತಿಗೆ ಯುಕ್ತ್ಯುಪದೇಶ

**9-5-1957**

**ಬ್ರ॥ಶ್ರೀ॥ಎಚ್. ಅನಂತಮೂರ್ತಿಶಾಸ್ತ್ರಿಗಳವರು**

**ವಾಸಿಷ್ಠ ರಾಮಾಯಣದ ನಿರ್ವಾಣಪ್ರಕರಣದ ಉತ್ತರಭಾಗದಲ್ಲಿ 31ನೆಯ ಸರ್ಗ**ದಲ್ಲಿ ನಿರ್ವಾಣಪ್ರಾಪ್ತಿಗೆ ಯುಕ್ತ್ಯುಪದೇಶವನ್ನು ಮಾಡಿರುತ್ತದೆ. ಚಿದಾತ್ಮನೇ ಸರ್ವವೂ ಆಗಿರುತ್ತಾನೆ. ಚಿತ್ತಿಗಿಂತ ವ್ಯತಿರಿಕ್ತವಾಗಿ ಯಾವದೊಂದೂ ಇರುವದೇ ಇಲ್ಲ. ಆ ಚಿದಾತ್ಮನಲ್ಲಿ ನಾವುಗಳು ನಮ್ಮ ನಮ್ಮ ಅಂತಃಕರಣದಲ್ಲಿ ಯಾವಯಾವದಿರುತ್ತದೆಯೋ ಅದನ್ನೇ ಕಾಣುತ್ತಿರುವೆವು. ಒಳಹೊಕ್ಕು ನೋಡಿದರೆ ಚಿದಾತ್ಮನಲ್ಲಿ ಯಾವದೊಂದೂ ಇರುವದೇ ಇಲ್ಲ; ಅದು ಜ್ಞಾನದಿಂದ ನಾಶವಾಗುವದೆಂದು ಭಾವಿಸುವದೂ ಸರಿಯಲ್ಲ. ಸ್ವಪ್ನದಲ್ಲಿ ಸ್ವಪ್ನವನ್ನು ಕಾಣುವವನಿಗಿಂತ ಯಾವದೊಂದೂ ಬೇರೆಯಾಗಿಲ್ಲದಿದ್ದರೂ ಬೇರೆಯಾಗಿ ಇರುವಂತೆ ಕಾಣುವದಿಲ್ಲವೆ? ಹಾಗೆಯೇ ಇಲ್ಲಿಯೂ ತಿಳಿಯಬೇಕು. ಜಗತ್ತಿನ ವಿಷಯದಲ್ಲಿ ಅದು ಅಸತ್ತೆಂದು ನಿಂದಿಸುವದೂ ಸರಿಯಲ್ಲ, ಸತ್ತೆಂದು ತಿಳಿಯುವದೂ ಸರಿಯಲ್ಲ, ಗಗನಕುಸುಮಗಳು ನಿಜವೊ ಸುಳ್ಳೊ? -ಎಂದು ಯಾರುತಾನೆ ತಿಳಿಯುತ್ತಾರೆ? ಅದು ಹೀಗಿದೆ, ಹಾಗಿದೆ ಎಂಬ ಮಿಥ್ಯಾಸಂಕಲ್ಪದಿಂದಲೇ ಜಗತ್ತು ಕಾಣುತ್ತಿರುವದು. ಇಲ್ಲಿ ಅದಕ್ಕೆ ಯಾವದೊಂದು ಬೆಲೆಯನ್ನೂ ಕೊಡದೆ ಸಂಪೂರ್ಣವಾಗಿ ಅದನ್ನು ಮರೆತುಬಿಡಬೇಕು, ಮತ್ತೆ ಅದನ್ನು ಸ್ಮರಿಸಲೂಬಾರದು. ಜಗದ್ಭ್ರಾಂತಿಯು ಕಳೆದ ಬಳಿಕ ಉಳಿಯುವ ಆತ್ಮವಸ್ತುವನ್ನು ಇದೆಯೆನ್ನುವದಕ್ಕೂ ಇಲ್ಲ, ಇಲ್ಲವೆನ್ನುವದಕ್ಕೂ ಇಲ್ಲ. ಅದು ಅನುಭವೈಕವೇದ್ಯವು, ಅದನ್ನು ಅರಿತುಕೊಂಡು ಸ್ವಸ್ಥನಾಗಿರುವದೇ ನಿರ್ವಾಣವು, ಹೀಗೆಂಬುದು ಸರ್ಗದ ಸಾರವು.

**ಶ್ರೀಶ್ರೀಗಳು** ಅನುವಾದಲ್ಲಿ ಹೀಗೆಂದರು: ಸ್ವಪ್ನಕ್ಕೆ ಜಾಗ್ರತ್ತನ್ನು ಹೋಲಿಸಿ ಎರಡನ್ನೂ ಒಂದುಮಾಡಿಕೊಳ್ಳುವದರಿಂದ ನಿರ್ವಾಣಪ್ರಾಪ್ತಿಯಾಗುವದಿಲ್ಲ; ಅವೆರಡೂ ಪರಮಾರ್ಥದಲ್ಲಿ ಕಲ್ಪಿತವೇ ಎಂದು ಮನಗಾಣುವದೇ

ಪರಮಪುರುಷಾರ್ಥಕ್ಕೆ ಸಾಧನವು. ಆತ್ಮನಲ್ಲಿ ಎಲ್ಲವೂ ಕಲ್ಪಿತವೆಂಬುದರಿಂದ ಅದು ವಿಜ್ಞಾನವೆಂದು ಅನೇಕರು ಭ್ರಾಂತರಾಗುತ್ತಾರೆ. ಒಂದೇ ವಸ್ತುವನ್ನು ಬಗೆಬಗೆಯಾಗಿ ತಿಳಿದುಕೊಳ್ಳುತ್ತಿದ್ದೇವೆ. ಈಗ ನಾವು ಭಾವಿಸಿಕೊಂಡಿರುವ ಪ್ರಕಾರವನ್ನು ಸಂಪೂರ್ಣವಾಗಿ ಮರೆತು ತತ್ತ್ವವನ್ನು ಅನುಭವಕ್ಕೆ ತಂದುಕೊಳ್ಳಬೇಕು. ಇದಕ್ಕಾಗಿ ಯಾವ ಮನೋಭೂಮಿಕೆಗೂ ಏರಬೇಕಾಗಿಲ್ಲ; ಆತ್ಮಸ್ಥಿತಿಯೇ ನಿಜವಾದ ನಿರ್ವಾಣ.

★★★★★

# ಶ್ರೀಕೃಷ್ಣಲೀಲೆ

**10-5-1957**

**ಶ್ರೀ|| ನಂಜಪ್ಪಭಾಗವತರು**

ಭಾಗವತದ ದಶಮಸ್ಕಂಧದಲ್ಲಿ 69ನೆಯ ಅಧ್ಯಾಯದಲ್ಲಿ ಹದಿನಾರು ಸಾವಿರ ರಾಣಿಯರನ್ನೂ ಮನುಷ್ಯ ಶರೀರವನ್ನು ಧರಿಸಿದ್ದ ಭಗವಂತನೊಬ್ಬನೇ ಹೇಗೆ ತೃಪ್ತಿಪಡಿಸಿದನು?-ಎಂದು ರಾಜನು ಪ್ರಶ್ನೆಮಾಡಿದ್ದಕ್ಕೆ ಶುಕರು ಉತ್ತರವನ್ನು ಕೊಟ್ಟಿರುತ್ತಾರೆ. ಹದಿನಾರು ಸಾವಿರ ಭವನಗಳನ್ನು ಶ್ರೀ ಕೃಷ್ಣಭಗವಂತನು ಅವರಿಗೆ ಮಾಡಿಸಿದ್ದನು. ನಾರದರು ಭಗವಂತನ ಲೀಲೆಯನ್ನು ನೋಡಬೇಕೆಂದು ಒಂದು ಅರಮನೆಯನ್ನು ಪ್ರವೇಶಿಸಲು ಅಲ್ಲಿ ರಾಣಿಯು ಕೃಷ್ಣನಿಗೆ ಚಾಮರವನ್ನು ಹಾಕುತ್ತಿದ್ದಳು, ಭಗವಂತನು ನಾರದರನ್ನು ಕಂಡೊಡನೆ ಅವರಿಗೆ ಅತಿಥಿಸತ್ಕಾರಗಳನ್ನು ಮಾಡಿದನು. ಇನ್ನೊಂದು ಮನೆಯಲ್ಲಿ ಹೆಂಡತಿಯೊಡನೆ ಪಗಡೆಯಾಡುತ್ತಿದ್ದನು, ಮತ್ತೊಂದು ಮನೆಯಲ್ಲಿ ಮಕ್ಕಳನ್ನು ಆಡಿಸುತ್ತಿದ್ದನು, ಮಗದೊಂದರಲ್ಲಿ ಸ್ನಾನಕ್ಕೆ ಸಜ್ಜಾಗಿದ್ದನು. ಹೀಗೆಯೇ ಹೋಮಮಾಡುವದು, ಬ್ರಾಹ್ಮಣರಿಗೆ ಭೋಜನಮಾಡಿಸುವದು, ಸಂಧ್ಯಾವಂದನೆ ಮಾಡುತ್ತಿರುವದು, ಮಂತ್ರಾಲೋಚನೆ

ಮಾಡುತ್ತಿರುವದು, ಇತಿಹಾಸಪುರಾಣಾದಿಗಳನ್ನು ಕೇಳುತ್ತಿರುವದು, ಧ್ಯಾನಮಾಡುತ್ತಿರುವದು-ಮುಂತಾದ ಬಗೆಬಗೆಯ ವ್ಯವಹಾರಗಳಿಂದ ಒಂದೊಂದು ಮನೆಯಲ್ಲಿಯೂ ಕಾಲಕ್ಷೇಪವನ್ನು ಮಾಡುತ್ತಿದ್ದ ಭಗವಂತನನ್ನು ಕಂಡು ನಾರದರು ಅತ್ಯಂತವಿಸ್ಮಿತರಾದರು; ಗಾರ್ಹಸ್ಥ್ಯಧರ್ಮವನ್ನು ಹೇಗೆ ಮಾಡುತ್ತಿರಬೇಕೆಂಬುದನ್ನು ತನ್ನ ಲೀಲೆಯಿಂದ ಭಗವಂತನು ತೋರಿಸುತ್ತಿದ್ದನು.

**ಶ್ರೀಶ್ರೀಗಳು** ಅನುವಾದದಲ್ಲಿ ಹೀಗೆಂದು ಅಪ್ಪಣೆಕೊಡಿಸಿದರು: ಶ್ರೀಕೃಷ್ಣನ ಈ ಚರಿತ್ರೆಯು ನಿಜವಾಗಿ ನಡೆಯಿತೆ? – ಎಂದು ಸಂಶಯಪಡುವವರು ಕೆಲವರು ಇರುತ್ತಾರೆ. ನಮಗಂತೂ ಭಾಗವತವನ್ನು ಓದುವಾಗ ಆ ದಿವ್ಯಚರಿತೆಯು ಈಗಲೂ ನಡೆಯುತ್ತಿರುವಂತೆಯೇ ತೋರುತ್ತದೆ. ಭಗವಂತನು ತನ್ನ ಸ್ವರೂಪದಿಂದ ಹಾಗೆಯೇ ಇದ್ದುಕೊಂಡೇ ಒಂದೇ ಕಾಲಕ್ಕೆ ಎಲ್ಲರಲ್ಲಿಯೂ ಇದ್ದುಕೊಂಡು ಸರ್ವರ ಕರ್ಮಗಳಿಗೂ ಸಾಕ್ಷಿಯಾಗಿ ತಕ್ಕ ತಕ್ಕ ಫಲಗಳನ್ನು ಕೊಡುತ್ತಿರುತ್ತಾನೆ. 'ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್' ಎಂಬ ಶ್ರುತಿಯ ಅರ್ಥವೇ ಇದು. ಇದನ್ನು ಶ್ರೀಕೃಷ್ಣಭಗವಂತನು ತನ್ನ ಲೀಲಾ ನಾಟಕದಿಂದ ಆಡಿ ಪರಿಶುದ್ಧಭಾವಭಕ್ತಿಯುತರಾದ ನಾರದರಿಗೆ ಮನಗಾಣಿಸಿಕೊಟ್ಟಿರುತ್ತಾನೆ. ಭಗವಂತನ ಗುಣಕರ್ಮಗಳ ಲೀಲೆಯನ್ನು ಭಕ್ತಿಯಿಂದ ಆಲಿಸಿ ಮನಸ್ಸಿನಲ್ಲಿ ಹೊರಳಾಡಿಸುವವರಿಗೆ ಭಗವಂತನ ಅನುಗ್ರಹವಾಗುತ್ತದೆ, ಸಗುಣನಿರ್ಗುಣಗಳ ಸಾಮರಸ್ಯವು ತಿಳಿದುಬರುತ್ತದೆ. ಇದನ್ನು ಶ್ರವಣಮಾಡಿ ಪಾಪದೂರರಾಗಿ ಉದ್ಧಾರವಾಗುವದೇ ನಮಗೆ ಶ್ರೇಯಸ್ಕರ.

★★★★★

# ತುರೀಯಾಶ್ರಮಧರ್ಮ

**24-4-1958**

**ಬ್ರ॥ ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

ಮಹಾಭಾರತದ ಶಾಂತಿಪರ್ವ 251ನೆಯ ಅಧ್ಯಾಯದಲ್ಲಿ ತುರೀಯಾಶ್ರಮಧರ್ಮವನ್ನು ಕುರಿತ ಭೀಷ್ಮರ ಉಪದೇಶವನ್ನು ಶ್ರವಣಮಾಡಿಸಿದರು. ಹಿಂದಿನ ಅಧ್ಯಾಯಗಳಲ್ಲಿ ಬ್ರಹ್ಮಚರ್ಯ, ಗಾರ್ಹಸ್ಥ್ಯ, ವಾನಪ್ರಸ್ಥ-ಎಂಬ ಮೂರು ಆಶ್ರಮಗಳ ಧರ್ಮಗಳನ್ನು ವಿವರಿಸಿದೆ. ಈಗ ಸಂನ್ಯಾಸಾಶ್ರಮದ ಧರ್ಮವನ್ನು ಹೇಳುತ್ತಾರೆ.

ಹಿಂದಿನ ಆಶ್ರಮಗಳಿಂದ ಕಷಾಯವನ್ನು ಕರ್ಮಾದಿಗಳಿಂದ ಪಕ್ವಮಾಡಿಕೊಂಡು ಚಿತ್ತಸಂಸ್ಕಾರವನ್ನು ಹೊಂದಿ ಪರಿವ್ರಾಜಕನಾಗಬೇಕು. ಇಲ್ಲಿ ತಾನೊಬ್ಬನೇ ಆಶ್ರಮಧರ್ಮವನ್ನು ಆಚರಿಸತಕ್ಕದ್ದು, ಗೃಹಸ್ಥನಂತೆ ಪತ್ನ್ಯಾದಿಗಳ ಸಹಾಯವಿರುವಂತಿಲ್ಲ. ಆಹಾರವಿಹಾರಗಳಲ್ಲಿ ಇಂದ್ರಿಯಗಳನ್ನು ಸಡಿಲಬಿಡದೆ, ಒಪ್ಪೊತ್ತೇ ಲಘ್ವಾಹಾರವನ್ನು ತೆಗೆದುಕೊಳ್ಳುತ್ತಿದ್ದು, ವೃಕ್ಷಮೂಲವನ್ನು ಸೇವಿಸುತ್ತಾ ಹರಕುಬಟ್ಟೆಯಿಂದಲೇ ತೃಪ್ತನಾಗಿ, ಪ್ರಪಂಚದಲ್ಲಿ ಉಪೇಕ್ಷಾಬುದ್ಧಿಯಿಂದ ಇರಬೇಕು. ಮೌನವನ್ನಾಚರಿಸಬೇಕು, ಅವಾಚ್ಯವನ್ನಾಡಬಾರದು, ನಿಂದಾಸ್ತುತಿಗಳನ್ನು ಸಮವಾಗಿ ಕಾಣುತ್ತಿರಬೇಕು. ಒಂದು ಪೂರ್ಣಬ್ರಹ್ಮವನ್ನೇ ಎಲ್ಲೆಲ್ಲಿಯೂ ಕಾಣುತ್ತಾ, ಜನಸಂಗಕ್ಕೂ ಸ್ತ್ರೀಸಂಗಕ್ಕೂ ಅಂಜುತ್ತಾ ಮಾನಾಪಮಾನಗಳಿಂದ ಹಿಗ್ಗದೆ ಕುಗ್ಗದೆ, ಮರಣವನ್ನಾಗಲಿ ಬದುಕಿರುವದನ್ನಾಗಲಿ ಬಯಸದೆ ವಾಙ್ಮನಸ್ಸುಗಳಲ್ಲಿ ವಿಕ್ಷೇಪವನ್ನು ಪಡೆಯದೆ, ಅಹಿಂಸಾಧರ್ಮವನ್ನಾಚರಿಸುತ್ತಾ ಸರ್ವರಲ್ಲಿಯೂ ಸಮಬುದ್ಧಿಯಿರಬೇಕು, ಸರ್ವಸಂಗವಿವರ್ಜಿತನಾಗಿರಬೇಕು, ಅವನೇ ನಿಜವಾದ ಬ್ರಾಹ್ಮಣನು. ಯಾವನು ಹೀಗೆ ಯಾವ ಆಶೆಯೂ ಇಲ್ಲದೆ, ಯಾವ ಕರ್ಮವನ್ನೂ ತನಗಾಗಿ ಮಾಡದೆ

ಸ್ತುತಿನಮಸ್ಕಾರವರ್ಜಿತನಾಗಿ, ಸರ್ವಭೂತಗಳಿಗೂ ಅಭಯದಕ್ಷಿಣೆಯನ್ನು ಕೊಟ್ಟಿರುತ್ತಾನೋ ಅವನೇ ಅನಂತತತ್ತ್ವವನ್ನು ಹೊಂದುವನು. ಲೋಕದಲ್ಲಿ ಅವನೇ ಎಲ್ಲರಿಗೂ ಪೂಜ್ಯನು; ಅವನಿಗೆ ಮಾಡಿದ ಪೂಜೆಯು ಅನಂತಫಲಪ್ರದವಾಗಿರುತ್ತದೆ.

**ಶ್ರೀಗಳು** ತಮ್ಮ ಅನುವಾದದಲ್ಲಿ ಹೀಗೆಂದರು: ಶ್ರೀಶಂಕರಭಗವತ್ಪಾದರವರ ಮಹೋತ್ಸವದಲ್ಲಿ ಚತುರ್ಥಾಶ್ರಮದ ವರ್ಣನೆಯನ್ನು ಕೇಳಿದ್ದೊಂದು ಮಹಾಪುಣ್ಯವೆನಬೇಕು. ಆ ಮಹಾತ್ಮರು ತಮ್ಮ ಎಂಟನೆಯ ವರ್ಷದಲ್ಲಿಯೇ ಪಾರಿವ್ರಾಜ್ಯವನ್ನು ಹೊಂದಿ ನಿಜವಾದ ಪಾರಮಹಂಸ್ಯದ ಮರ್ಮವನ್ನು ಸಕಲರಿಗೂ ತೋರಿಸಿಕೊಟ್ಟರು. ಯಾವನು ಏಷಣಾತ್ರಯವನ್ನು ಬಿಟ್ಟು ಪಾಂಡಿತ್ಯ, ಬಾಲ್ಯ, ಮೌನ - ಎಂಬ ಸ್ಥಿತಿಗಳನ್ನು ಮೀರಿರುವನೋ ಅವನನ್ನೇ ದೇವತೆಗಳು ನಿಜವಾದ ಬ್ರಾಹ್ಮಣನು ಎನ್ನುತ್ತಾರೆ. ದೇವತೆಗಳು ಸೂಕ್ಷ್ಮದರ್ಶಿಗಳಾದ್ದರಿಂದ ಅವರಿಗೆ ಅದು ತಿಳಿದಿರುವದು. ಬ್ರಹ್ಮಜ್ಞಾನವುಳ್ಳವನಾಗಿ ಬ್ರಹ್ಮನಿಷ್ಠನಾಗಿರುವವನೇ ನಿಜವಾದ ಪರಮಹಂಸನು, ಅವನೇ ನಿಜವಾದ ಅರ್ಥದಲ್ಲಿ ಬ್ರಾಹ್ಮಣನು. ಸಕಲವಿದ್ಯಾನಿಲಯಗಳಲ್ಲಿ ಡಿಗ್ರಿಯನ್ನು ಹೊಂದಿದವನನ್ನೇ ಪದವೀಧರನು ಎಂದು ಎಲ್ಲರೂ ಗೌರವಿಸುವಂತೆಯೇ ವೇದದಿಂದಲೂ ದೇವತೆಗಳಿಂದಲೂ ಬ್ರಾಹ್ಮಣನೆನಿಸಿಕೊಂಡಿರುವ ಪರಮಾರ್ಥಸಂನ್ಯಾಸಿಯೇ ಪರಮಾರ್ಥ ಬ್ರಾಹ್ಮಣನೆಂದು ಸರ್ವರಿಗೂ ಮಾನ್ಯನಾಗಿರುತ್ತಾನೆ.

★★★★★

# ಅಕ್ರೂರನ ನಂದಗೋಕುಲ ಯಾತ್ರೆ

**25-4-1958**

**ಶ್ರೀ|| ಬಿ.ಕೆ.ಮಂಜಯ್ಯ**

**ವಿಷ್ಣುಪುರಾಣ (5-17)**ರಲ್ಲಿ ಅಕ್ರೂರನ ನಂದಗೋಕುಲ ಯಾತ್ರೆಯ ವಿಷಯವನ್ನು ವರ್ಣಿಸಿದೆ. ಕಂಸನ ಇಚ್ಛೆಯಂತೆ ಶ್ರೀಕೃಷ್ಣನನ್ನು ಕರೆತರುವ ಬಗ್ಗೆ ಗೋಕುಲಕ್ಕೆ ಹೊರಟ ಅಕ್ರೂರನು, ವೇದವೇದ್ಯನೂ ಸ್ಮರಣಮಾತ್ರದಿಂದ ಪಾಪಗಳನ್ನು ಪರಿಹರಿಸುವವನೂ ಯಜ್ಞಾಧಿಪತಿಯೂ ಸರ್ವಾತ್ಮನೂ ಸರ್ವಜ್ಞನೂ ಆಗಿರುವ ಶ್ರೀಕೃಷ್ಣನನ್ನು ನಾನು ಹೋಗಿ ಕಾಣುವೆನು, ಅವನು ನನ್ನನ್ನು ನೋಡಿ ಮಾತನಾಡಿಸುತ್ತಾನಲ್ಲವೆ? ನಾನೇ ಧನ್ಯನು-ಎಂದು ದಾರಿಯಲ್ಲಿಯೇ ಶ್ರೀಕೃಷ್ಣನ ಮಹಿಮೆಯನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಾ ಹೋಗಿ ಗೋಕುಲದಲ್ಲಿ ಸಾಯಂಕಾಲದಲ್ಲಿ ಗೋವುಗಳ ಕರುಗಳ ಮಧ್ಯದಲಿರುವ ಶ್ರೀಕೃಷ್ಣನನ್ನೂ ಬಲರಾಮನನ್ನೂ ಕಂಡು ಆತನ ರೂಪವನ್ನೇ ಸ್ಮರಿಸುತ್ತಾ ಈ ಭಗವಂತನು ನನ್ನನ್ನು ಸಂತೋಷದಿಂದ ಬರಮಾಡಿಕೊಂಡು, ನನ್ನೊಡನೆ ಮಾತನಾಡುತ್ತಾ, ನನ್ನ ಮೈಮೇಲೆ ಪ್ರೇಮದಿಂದ ಕೈಯಾಡಿಸಿಯಾನೆ?-ಎಂದು ಚಿಂತಿಸುತ್ತಾ ಆತನ ಬಳಿಗೆ ಹೋಗಿ ನಮಸ್ಕರಿಸಿದನು.

**ಶ್ರೀಗಳವರು** ಅನುವಾದದಲ್ಲಿ ಹೀಗೆಂದು ಅಪ್ಪಣೆಕೊಡಿಸಿದರು ಇತಿಹಾಸಪುರಾಣಗಳಿಂದ ವೇದಾರ್ಥವನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಭಗವಂತನ ತತ್ತ್ವವು ಯಾರಿಗೆ ತಿಳಿಯುವದಿಲ್ಲ, ಯಾರಿಗೆ ತಿಳಿಯುತ್ತದೆ? -ಎಂಬುದನ್ನು ಈ ಅಧ್ಯಾಯದಲ್ಲಿ ಅಕ್ರೂರನ ಗೋಕುಲಯಾತ್ರೆಯ ನೆಪದಿಂದ ತಿಳಿಸಿರುತ್ತದೆ. ಕಂಸನ ಪ್ರೇಮವು ಸ್ವಾರ್ಥದ್ದಾಗಿತ್ತು. ತನ್ನ ತಂಗಿ ಎಂಬ ಅಭಿಮಾನದಿಂದ ಅವಳಿಗೆ ಭೂಷಣಗಳಿಂದ ಅಲಂಕರಿಸಿ ಮದುವೆಯನ್ನು ಮಾಡಿ ಉತ್ಸವಮಾಡಿಸಿದವನು, ಅವಳ ಗರ್ಭದಲ್ಲಿ ಭಗವಂತನು ಅವತರಿಸುವನೆಂದು ತಿಳಿದ ಕೂಡಲೆ ಅವಳನ್ನು ವಸುದೇವನೊಡನೆ ಕಾಲಿಗೆ ಬೇಡಿಹಾಕಿಸಿ ಕಾರಾಗಾರದಲ್ಲಿಟ್ಟನು. ಶ್ರೀಕೃಷ್ಣನನ್ನು ಹೇಗಾದರೂ ಕೊಲ್ಲಬೇಕೆಂಬ ದುರ್ಬುದ್ಧಿಯೇ ಅವನಿಗೆ ಬಂತು.

ಕೃಷ್ಣನನ್ನು ಕರೆತರುವದಕ್ಕೆ ಅಕ್ರೂರನನ್ನು ಕಳುಹಿಸಿದ್ದನು. ಅಕ್ರೂರನು ಮಾತ್ರ ಶ್ರೀಕೃಷ್ಣನ ಭಗವತ್ಸ್ವರೂಪವನ್ನೇ ಮನದಲ್ಲಿ ನೆನೆಯುತ್ತಾ ಯಾವ ಪರಮಾತ್ಮನು ಸ್ಮರಣಮಂಗಲನೋ ಅವನನ್ನು ನೋಡುವೆನು, ವೇದಮೂಲನಾಗಿರುವ ಭಗವಂತನು ನನ್ನೊಡನೆ ಮಾತನಾಡುವನಲ್ಲ, ದೇವತೆಗಳೂ ಕಾಣದ ಭಗವಂತನೇ ನನಗೆ ಪ್ರತ್ಯಕ್ಷನಾಗುವನಲ್ಲ!- ಎಂದು ಭಾವಪೂರಿತನಾಗಿ ಗೋಕುಲಕ್ಕೆ ಹೊರಟಿದ್ದನು. ಅವನು ಮಾಡುತ್ತಿದ್ದ ಹಂಬಲಿಕೆಯು ಮುಮುಕ್ಷುಗಳಿಗೆ ಅನುಕರಣೀಯವಾಗಿರುತ್ತದೆ. ಅದರಂತೆ ಭಗವತ್ಪ್ರಾಪ್ತಿಗೆ ಯಾರು ಹಂಬಲಿಸುವರೋ ಅವರಿಗೆ ಅವಶ್ಯವಾಗಿ ಭಗವಂತನು ಪ್ರಸನ್ನನಾಗುವನು.

★★★★★

## ಪಾಶುಪತವ್ರತ

**26-4-1958**

**ಬ್ರ॥ಶ್ರೀ॥ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳವರು**

**ಲಿಂಗಪುರಾಣದ** ಉತ್ತರಾರ್ಧದಲ್ಲಿ 9ನೆಯ ಅಧ್ಯಾಯದಲ್ಲಿ **ಸನತ್ಕುಮಾರಶೈಲಾದಿಸಂವಾದದ** ರೂಪದಿಂದ ಪಾಶುಪತವ್ರತವನ್ನು ಹೇಳಿರುತ್ತದೆ. ಬ್ರಹ್ಮಾದಿಸ್ಥಾವರಾಂತವಾಗಿರುವ ಪ್ರಾಣಿಗಳೆಲ್ಲವೂ ಪಶುಗಳೇ; ಅವರಿಗೆ ಒಡೆಯನಾದ ರುದ್ರಭಗವಂತನೇ **ಪಶುಪತಿ,** ಆ ಪರಮೇಶ್ವರನೇ ತನ್ನನ್ನು ಜ್ಞಾನಯೋಗದಿಂದ ಸೇವಿಸುವವರನ್ನು ಬಂಧದಿಂದ ಬಿಡುಗಡೆಮಾಡಿಸುತ್ತಾನೆ. ಇಪ್ಪತ್ತುನಾಲ್ಕು ತತ್ತ್ವಗಳೇಪಾಶಗಳೆನಿಸುವವು; ಅಜ್ಞಾನಿಗಳಿಗೆ ಬಂಧಕನಾಗಿರುವವನೂ ಅವನೇ. ಆ ಪರಮೇಶ್ವರನನ್ನು ಸೇವಿಸುವವರೇ **ಭಕ್ತರು.** ಭಕ್ತಿಯೋಗದಿಂದ ಅವನನ್ನು ಸೇವಿಸುವದೇ ಮೋಕ್ಷಕ್ಕೆ ಸಾಧನವು. ಆ ಶಿವನ ಗುಣ, ರೂಪ-ಇವುಗಳ ಚಿಂತನೆ ಮಾನಸಭಜನ; ಪ್ರಣವಜಪವು ವಾಚಿಕಭಜನ; ಪ್ರಾಣಾಯಾಮಾದಿಗಳು ಕಾಯಿಕ. ಅವಿದ್ಯೆ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ-ಎಂಬ ಪಂಚಕ್ಲೇಶಗಳಿಂದ ಜೀವರು

ಬದ್ಧರಾಗಿರುತ್ತಾರೆ; ಅವುಗಳಿಂದ ಬಿಡುಗಡೆಹೊಂದಿಸುವವನು ಆ ಶಿವನೇ. ಕಾಲತ್ರಯದಲ್ಲಿ ಶಿವವನ್ನು ಕೊಡುವವನೂ ಬ್ರಹ್ಮಾದಿಗಳಿಗೂ ಗುರುವೂ ಪರಾನುಗ್ರಹವೊಂದೇ ಪ್ರಯೋಜನವೆಂದುಕೊಂಡಿರುವವನೂ ಆದ ಆ ಪರಮಶಿವನನ್ನು ಪ್ರಣವಾದಿಗಳಿಂದ ಜಪಿಸುವದು ಬಹಳ ಶ್ರೇಷ್ಠವಾದದ್ದು, ಆ ಜಪಾದಿಗಳಿಂದ ಶಿವನು ಉಪನಿಷತ್ತಿನಲ್ಲಿ ಹೇಳಿರುವ ಅಸ್ಥೂಲಾದಿಸ್ವರೂಪನೇ ಎಂದು ತಿಳಿಯುವದೇ ಪರಮಪುರುಷಾರ್ಥವು. ಈ ಪರಮಾತ್ಮಜ್ಞಾನವನ್ನು ಸಂಪಾದಿಸಿಕೊಳ್ಳುವದೇ ಜನ್ಮಸಾರ್ಥಕ್ಯವು, ಮಿಕ್ಕದ್ದೆಲ್ಲ ವಾಗ್ರೂಪಶಾಸ್ತ್ರಜಾಲವೇ – ಎಂಬುದು ಅಧ್ಯಾಯದ ಸಾರವು.

**ಶ್ರೀಗಳು** ಅನುವಾದದಲ್ಲಿ ಹೀಗೆಂದರು: ಶ್ರೀವೇದವ್ಯಾಸರು ಅಧಿಕಾರಿಗಳ ಯೋಗ್ಯತೆಗೆ ಅನುಗುಣವಾಗಿ ಸಾಧನಗಳನ್ನು ಪುರಾಣಗಳಲ್ಲಿ ಬೇರೆಬೇರೆಯಾಗಿ ನಿರೂಪಿಸಿರುತ್ತಾರೆ. ಪ್ರಕೃತಾಧ್ಯಾಯದಲ್ಲಿ ಸ್ಥೂಲವಾದ ಭಸ್ಮರುದ್ರಾಕ್ಷಧಾರಣಾದಿ ಪಾಶುಪತವ್ರತವನ್ನು ಹೇಳದೆ ಪರಭಕ್ತಿಪರಜ್ಞಾನಗಳ ಸ್ವರೂಪವನ್ನೇ ಹೇಳಿರುತ್ತದೆ. ನಿತ್ಯಮುಕ್ತನೂ ಎಲ್ಲ ಪಶುಗಳಿಗೂ ಧರ್ಮಾಧರ್ಮಗಳಿಗೆ ತಕ್ಕಂತೆ ಫಲವನ್ನು ಕೊಡುತ್ತಿರುವವನೂ ಆದ ಪರಮಶಿವನನ್ನು ಮರೆತಿರುವದರಿಂದ ತೊಂಡುದನಗಳಂತೆ ಅತ್ತಿತ್ತ ಸುತ್ತಾಡುತ್ತಿರುವೆವು. ಈ ದೃಷ್ಟಿಯಿಂದ ನಾವೆಲ್ಲರೂ ಪಶುಗಳೇ ಆದರೂ ಯೋಗ್ಯತಾತಾರತಮ್ಯದಿಂದ ಸಾತ್ತ್ವಿಕರಾಜಸತಾಮಸವಿಭಾಗದಿಂದ ಬೇರೆಬೇರೆಯ ಅಂತಸ್ತಿಗೆ ಸೇರಿದವರಾಗಿರುತ್ತೇವೆ. ಪಶುಗಳು ತಮ್ಮತಮ್ಮ ಅಂತಸ್ತಿಗೆ ತಕ್ಕ ಧರ್ಮಾಧರ್ಮಗಳ ಫಲವಾದ ಪಾಶಗಳಿಂದ ಕಟ್ಟುಬಿದ್ದಿರುವವು. ವಿಷಯದ ಕಡೆಗೆ ಇಟ್ಟಿರುವ ತಮ್ಮ ಮನಸ್ಸನ್ನು ಪರಶಿವನ ಕಡೆಗೆ ತಿರುಗಿಸಿದರೆ ಗೆದ್ದವು. ಗುಣತ್ರಯದಿಂದ ಕೂಡಿದ್ದೆಲ್ಲವೂ ಪಾಶವೇ; ನಿರ್ಗುಣನಿರುಪಾಧಿಕನಾದ ಪರಮೇಶ್ವರನೊಬ್ಬನೇ ಪಾಶವಿಮೋಚಕನು. ಆತ್ಮನ ಜ್ಞಾನವನ್ನು ಸಂಪಾದಿಸಿಕೊಳ್ಳುವದೇ ಗುರಿ. ಅನನ್ಯಭಜನೆಯೇ ಅದಕ್ಕೆ ಸಾಧನ. ನಾವು ಶ್ರುತಿ ಸ್ಮೃತಿಪುರಾಣಗಳಲ್ಲಿ ಶ್ರದ್ಧಾದಿಗಳಿಲ್ಲದೆ ಪಶುಗಳಾಗಿದೇವೆ; ಆ ಮಹಾದೇವನೇ ನಮ್ಮನ್ನು ಈ ಅಶ್ರದ್ಧೆಯಿಂದ ಬಿಡಿಸಿ ಕಾಪಾಡಬೇಕಾಗಿದೆ.

★★★★★

# ಮೋಕ್ಷೋಪದೇಶ

**27-4-1958**

**ಬ್ರ|| ಶ್ರೀ|| ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

**ವಾಸಿಷ್ಠರಾಮಾಯಣದಲ್ಲಿ ಉಪಶಮಪ್ರಕರಣ 72ನೆಯ ಸರ್ಗದಲ್ಲಿ** ವಸಿಷ್ಠರು ಮೋಕ್ಷದ ವಿಷಯಕ್ಕೆ ಮಾಡಿದ ಉಪದೇಶವಿದೆ. ಅದರ ಸಾರವೇನೆಂದರೆ: ದೇಹವು ಹುಟ್ಟಿದರೆ ಆತ್ಮನು ಹುಟ್ಟುವದಿಲ್ಲ, ಅದು ನಷ್ಟವಾದರೆ ಅವನು ನಾಶವಾಗುವದೂ ಇಲ್ಲ. ನಾಶವಾಗಲೇಬೇಕಾದ ಈ ದೇಹವು ನಷ್ಟವಾದರೆ ಆತ್ಮನೂ ಹೋಗುವನೆಂಬವನು ಕುರುಡುಮನಸ್ಸಿನವನು. ಚೆನ್ನಾಗಿ ಒಳಹೊಕ್ಕು ನೋಡಿದರೆ ಕಲ್ಪಿತವಾದ ಈ ದೇಹಕ್ಕೂ ಸತ್ಯರೂಪನಾದ ಆತ್ಮನಿಗೂ ಯಾವ ಸಂಬಂಧವೂ ಇರುವದಿಲ್ಲ. ಈ ದೇಹದಲ್ಲಿ ಅಭಿಮಾನವಿರುವದು ಹೇಗೆ ಅವಿವೇಕವೋ ಹಾಗೆಯೇ ಸ್ತ್ರೀದೇಹಾದಿಗಳಲ್ಲಿ ವ್ಯಾಮುಗ್ಧರಾಗುವದೂ ಅವಿವೇಕವೇ. ಆದ್ದರಿಂದ ದೇಹೇಂದ್ರಿಯಮನಸ್ಸುಗಳ ಸಂಯೋಗವಿಯೋಗಗಳಿಂದ ಯಾವ ಹರ್ಷೋದ್ವೇಗಗಳನ್ನೂ ಪಡೆಯಬಾರದು. ಹೀಗೆ ವಿವೇಕವನ್ನು ಮಾಡಿಕೊಂಡ ವೀತರಾಗರು ಆತ್ಮನೇ ಈ ಎಲ್ಲವೂ ಆಗಿ ತೋರುತ್ತಿರುವನೆಂದು ತಿಳಿದು ಜೀವನ್ಮುಕ್ತರಾಗಿವರು. ದೃಶ್ಯದರ್ಶನಗಳ ಸಂಬಂಧದಿಂದ ಅವಿವೇಕಿಗಳು ಸಂಸಾರವನ್ನು ಹೊಂದುವರು; ವಿವೇಕಿಗಳು ಅವೆರಡಕ್ಕೂ ಆಧಾರವಾಗಿರುವ ಅನುಭವದ ತತ್ತ್ವವನ್ನು ಅರಿತುಕೊಂಡು ಮುಕ್ತಿಯನ್ನು ಹೊಂದುವರು. ಆ ಅನುಭವದ ಕಣ್ಣಿಂದ ನೋಡಿದಾಗ ಆತ್ಮನಲ್ಲಿ ಸ್ಥೂಲಸೂಕ್ಷ್ಮಾದಿವಿಕಲ್ಪಗಳಿರುವದಿಲ್ಲ, ಸದಸದಾದಿವಿಕಲ್ಪಗಳೂ ಇರುವದಿಲ್ಲ. ಅದಕ್ಕೆ ದೂರಹತ್ತಿರವೆಂಬುದಿಲ್ಲ, ಪ್ರಾಪ್ಯಾಪ್ರಾಪ್ಯವಿಭಾಗವಿಲ್ಲ. ಅದು ಸರ್ವವಲ್ಲ, ಸರ್ವಗತವೂ ಅಲ್ಲ. ಅತ್ಯಂತ ನಿರ್ವಿಕಲ್ಪವಾದ ತತ್ತ್ವವದು. ನಿಜವಾಗಿ ಆತ್ಮನೊಬ್ಬನೇ ಇದೆಲ್ಲವೂ ಆಗಿ ತೋರುತ್ತಿರುತ್ತಾನೆ.

**ಶ್ರೀಗಳು** ಅನುವಾದದಲ್ಲಿ ಇಂತೆಂದರು: ವಾಸಿಷ್ಠರಾಮಾಯಣದಲ್ಲಿ ಅತ್ಯಂತ ಅಜ್ಞನೂ ಅಲ್ಲದೆ, ಸಂಪೂರ್ಣಜ್ಞಾನಿಯೂ ಅಲ್ಲದೆ ಇರುವವನು ಈ

ಶಾಸ್ತ್ರಕ್ಕೆ ಅಧಿಕಾರಿ ಎಂದಿರುತ್ತದೆ. ನಾವುಗಳು ಬಹಿರ್ಮುಖರೇ ಆಗಿದ್ದರೂ ಶಾಸ್ತ್ರವನ್ನು ಕೇಳಬೇಕೆಂಬ ಆಶೆಯಿದೆ; ನಮಗೆ ತತ್ತ್ವವು ಬೇಕು, ಪ್ರಪಂಚವು ನಮ್ಮನ್ನು ಬಿಡಲೊಲ್ಲದು - ಹೀಗಿರುತ್ತೇವೆ. ಶರೀರ, ಪುತ್ರ, ಮಿತ್ರಾದಿಗಳು, ಗೊಂಬೆಗಳಂತೆ, ಎಲ್ಲವೂ ಪಂಚಭೂತಗಳ ಪರಿಣಾಮವೇ ಎಂಬ ಯುಕ್ತಿಗೆ ಎದುರುಮಾತಾಡುವದು ನಮ್ಮಿಂದ ಆಗುವಂತಿಲ್ಲ; ಅದರೆ ಮನಸ್ಸಿಗೆ ಇದು ಒಗ್ಗದು. ಇಂಥ ಸ್ಥಿತಿಯಲ್ಲಿರುವೆವು, ನಾವು. ದೃಶ್ಯಗಳಿಗೆಲ್ಲ ದೃಕ್ಕಾಗಿರುವ ನನಗೆ ಈ ಯಾವದರ ಅಂಟೂ ಇಲ್ಲವೆಂಬುದನ್ನು ಚೆನ್ನಾಗಿ ಮನದಟ್ಟುಮಾಡಿಕೊಳ್ಳಬೇಕು. ದೃಶ್ಯದರ್ಶನಗಳ ಸಂಬಂಧದಿಂದ ನಮಗೆ ವಿಷಯದ ಅರಿವೂ ಭೋಗವೂ ಉಂಟಾಗುತ್ತಿರುವದು ; ಆದರೆ ಈ ಸಂಬಂಧದ ನಡುವಿನ ಸಂಧಿಯಲ್ಲಿ ಆಗುವ ಅನುಭವದ ಕಡೆಗೇ ಲಕ್ಷ್ಯವಿಟ್ಟರೆ ಆಗ ದೃಶ್ಯದರ್ಶನ, ನಾನು ನನ್ನದು-ಯಾವದೂ ಇಲ್ಲವಾಗಿ ಹೋಗಿ ಬಿಡುವದು. ದೃಶ್ಯವು ಇಲ್ಲವೆಂಬ ಅರಿವಿನಿಂದ ಮನಸ್ಸಿನಿಂದ ದೃಶ್ಯವನ್ನು ತೊಡೆದುಹಾಕುವದೇ ಪರಮುಕ್ತಿಯೆಂದು ಈ ಶಾಸ್ತ್ರದಲ್ಲಿ ಮತ್ತೆಮತ್ತೆ ಹೇಳಿರುತ್ತದೆ. ಅನುಭವದ ಸಾರವೆಂಬುದು ನಿಜವಾಗಿರುವ ನಿತ್ಯಶುದ್ಧಬುದ್ಧ ಮುಕ್ತನಾದ ಆತ್ಮನೇ ಎಂದು ಮನದಟ್ಟಾದರೆ ಅದೇ ಜೀವನ್ಮುಕ್ತಿ.

★★★★★

# ಬ್ರಹ್ಮಸ್ವರೂಪದ ವಿವರ

**28-4-1958**

**ಬ್ರ|| ಶ್ರೀ|| ಎಸ್. ವಿಠಲಶಾಸ್ತ್ರಿಗಳವರು**

**ಕೂರ್ಮಪುರಾಣ** ಉತ್ತರಭಾಗದ 2ನೆಯ ಅಧ್ಯಾಯದಲ್ಲಿ ಬ್ರಹ್ಮಸ್ವರೂಪದ ವಿವರವಿದೆ. ಈಶ್ವರಗೀತೆಯ 2ನೆಯ ಅಧ್ಯಾಯವಿದು. ಈಶ್ವರನು ನಾರಾಯಣನನ್ನು ಮುಂದುಮಾಡಿಕೊಂಡು ಸಕಲ ಋಷಿಗಳಿಗೂ ಹೇಳಿದ ಅರ್ಥವನ್ನು ವ್ಯಾಸರು ಸೂತರಿಗೆ ಹೇಳಿರುತ್ತಾರೆ; ಸೂತರು ಶೌನಕಾದಿಗಳಿಗೆ

ಹೇಳಿರುತ್ತಾರೆ. ಆತ್ಮನು ಕೇವಲನೂ ಸ್ವಚ್ಛನೂ ಶುದ್ಧನೂ ಸೂಕ್ಷ್ಮನೂ ಸನಾತನನೂ ಆಗಿರುತ್ತಾನೆ. ಇವನೇ ಸರ್ವಾಂತರನಾದ ಚಿನ್ಮಾತ್ರನಾದ ಅಂತರ್ಯಾಮಿ. ಅವನೇ ಪುರುಷ, ಪ್ರಾಣ, ಮಹೇಶ್ವರ, ಕಾಲ, ಅವ್ಯಕ್ತ, ವೇದ-ಎಂದು ಶ್ರುತಿಯು ಹೇಳುತ್ತದೆ. ಜಗತ್ತೆಲ್ಲವೂ ಈತನಿಂದ ಹುಟ್ಟಿ, ಇವನಲ್ಲಿಯೇ ಸೇರುತ್ತದೆ. ಇವನು ಮಾಯೆಯಿಂದ ವಿವಿಧಶರೀರಗಳನ್ನು ಮಾಡಿಕೊಂಡು ಸಂಸಾರದಲ್ಲಿ ತೊಳಲುವಂತೆ ಕಂಡರೂ ನಿಜವಾಗಿ ಸಂಸಾರದಲ್ಲಿಲ್ಲ. ಇವನು ಪಂಚಭೂತಗಳಲ್ಲ, ಶಬ್ದಸ್ಪರ್ಶಾದಿಗಳಲ್ಲ, ಇಂದ್ರಿಯ ಮನೋಬುದ್ಧಿಗಳೂ ಅಲ್ಲ, ಕರ್ತೃವಲ್ಲ, ಭೋಕ್ತೃವಲ್ಲ. ಬೆಳಕಿಗೂ ಕತ್ತಲೆಗೂ ಹೇಗೆ ಸಂಬಂಧವಿಲ್ಲವೋ ಹಾಗೆ ಆತ್ಮನಿಗೂ ಅನೃತವಾದ ಪ್ರಪಂಚಕ್ಕೂ ಸಂಬಂಧವಿಲ್ಲವೇ ಇಲ್ಲ. ನಿರ್ವಿಕಾರನಾದ ನಿರ್ದ್ವಂದ್ವನಾದ ಅವ್ಯಯವಾದ ಆನಂದಸ್ವರೂಪನಾದ ಈ ಆತ್ಮನನ್ನು ಸಂಸಾರಿಯೆಂದು ಯಾವನು ಭಾವಿಸಿಕೊಳ್ಳುವನೋ ಅವನು ಅಜ್ಞನು. ವಿವೇಕಿಗಳು ಇವನು ಸ್ವಯಂಜ್ಯೋತಿಯೆಂದೂ ಸರ್ವಗತನಾದ ಪರಮಪುರುಷನೆಂದೂ ತಿಳಿಯುವರು. ಪ್ರಕೃತಿಸಂಗದಿಂದ ಅನಾತ್ಮವನ್ನೇ ಆತ್ಮನೆಂದು ತಿಳಿದುಕೊಂಡದ್ದರಿಂದ ಸಂಸಾರದುಃಖವುಂಟಾಗಿರುವದು. ಆದ್ದರಿಂದ ಅದ್ವೈತವೇ ಪರಮಾರ್ಥವು; ಭೇದವು ಮಾಯೆಯಿಂದ ತೋರುತ್ತಿರುವದು. ಹೊಗೆಯಿಂದ ಆಕಾಶವು ಹೇಗೆ ಮಲಿನವಾಗದೋ ಹಾಗೆಯೇ ಆತ್ಮನು ಉಪಾಧಿಗಳಿಂದ ಲಿಪ್ತನಾಗದೆ ಇರುವನು. ಜ್ಞಾನಸ್ವರೂಪನೇ ಆಗಿರುವ ಈ ಆತ್ಮನನ್ನು ಅರ್ಥರೂಪದಿಂದ ಕುದೃಷ್ಟಿಗಳು ಕಾಣುತ್ತಿರುವರು. ಸ್ವಚ್ಛವಾದ ಸ್ಫಟಿಕವು ಉಪಾಧಿವಶದಿಂದ ಕೆಂಪಾಗಿ ಕಾಣುವಂತೆ ಆತ್ಮನೂ ಸಂಸಾರಿಯಾಗಿ ಕಾಣುತ್ತಿರುವನು. ಆತ್ಮನನ್ನು ಶ್ರವಣಮನನಧ್ಯಾನಗಳಿಂದ ಚೈತನ್ಯ ಸ್ವರೂಪವೆಂದು ಕಂಡುಕೊಂಡರೆ ಪರಮಾತ್ಮನನ್ನೇ ಸೇರುತ್ತಾನೆ, ಅವನಲ್ಲಿ ಒಂದಾಗಿಬಿಡುತ್ತಾನೆ. ಎಲ್ಲಾ ಪ್ರಾಣಿಗಳೂ ಬೇರೆಬೇರೆಯಾಗಿ ತೋರುತ್ತಿದ್ದರೂ ಪರಮಾತ್ಮನಲ್ಲಿಯೇ ಒಂದಾಗಿ ಇದ್ದುಕೊಂಡು ಅವನಿಂದಲೇ ಹೊರಕ್ಕೆ ಬಂದಿರುವವೆಂಬುದನ್ನು ತಿಳಿದುಕೊಂಡರೆ ಬ್ರಹ್ಮವನ್ನು ಸೇರುವನು. ಆದ್ದರಿಂದ ವಿಜ್ಞಾನವೊಂದೇ ಇರುತ್ತದೆ: ಪ್ರಪಂಚವೆಂಬುದೇ ಇಲ್ಲ, ಸಂಸಾರವೂ ಇಲ್ಲ; ಅಜ್ಞಾನದಿಂದ ಸಂಸಾರದ ಮೋಹವುಂಟಾಗಿರುತ್ತದೆ. ಜ್ಞಾನಯೋಗಗಳಿಂದ ಪರಮಾತ್ಮನ ಪರಮಾರ್ಥವನ್ನು ಕಂಡುಕೊಂಡರೆ ಪರಮ ಪುರುಷಾರ್ಥವನ್ನು ಹೊಂದುವನು.

**ಶ್ರೀಗಳು** ಪುರಾಣದ ಕೊನೆಯಲ್ಲಿ ಹೇಳಿದ್ದೇನೆಂದರೆ : ಇತಿಹಾಸಪುರಾಣಗಳಿಂದ ವೇದಾರ್ಥವನ್ನು ತಿಳಿಯಬೇಕೆಂದು ಬಲ್ಲವರು ಹೇಳುತ್ತಾರೆ. ಈ ದಿನದ ಉಪದೇಶದಲ್ಲಿ ಉಪನಿಷತ್ತಿನ ಮಾತುಗಳೇ ಬಂದಿರುತ್ತವೆ. ಸಾಕ್ಷಾದೀಶ್ವರನೇ ಮಾಡಿದ ಉಪದೇಶವಾದ್ದರಿಂದ ಇದಕ್ಕೆ 'ಈಶ್ವರಗೀತೆ' ಎಂಬ ಹೆಸರು ಬಂದಿದೆ. ಈ ಪುರಾಣದಲ್ಲಿ ಶಿವನಿಗೆ ಪ್ರಾಧಾನ್ಯವಿದೆ. ಶಿವ, ವಿಷ್ಣು-ಎಂಬ ಭೇದವು ಪುರಾಣಗಳಲ್ಲಿಲ್ಲದಿದ್ದರೂ ಅದನ್ನು ನೆಪಮಾಡಿಕೊಂಡು ಜಗಳವಾಡುವ ಪದ್ಧತಿ ಕೆಲವರಲ್ಲಿದೆ. ಆ ದುಷ್ಟಭಾವವನ್ನು ಬಿಟ್ಟು ತತ್ತ್ವವನ್ನು ಗ್ರಹಿಸುವದಕ್ಕೆ ನಾವು ಸಿದ್ಧರಾಗಬೇಕು. ಪುರಾಣಗಳಲ್ಲಿ ಕಥೆಯು ದೃಷ್ಟಾಂತಕ್ಕಾಗಿ ಬಂದಿರುತ್ತದೆ, ತತ್ತ್ವವೇ ಇಲ್ಲಿ ಪ್ರಧಾನವಾದದು. ಪರಮಾತ್ಮನೇ ಜಗತ್ತಿನ ತತ್ತ್ವವು. ನಾವು ಶುದ್ಧಚೈತನ್ಯಸ್ವರೂಪದಲ್ಲಿ ಅಧ್ಯಾತ್ಮ, ಅಧಿಭೂತ-ಎಂಬ ವಿಭಾಗವನ್ನು ಅಜ್ಞಾನದಿಂದ ಕಲ್ಪಿಸಿಕೊಂಡು ವಿಕಲ್ಪವಾದ ಇಂದ್ರಿಯಗಳಿಂದ ವಿಕಲ್ಪವಾದ ಆಕಾಶಾದಿ ಪಂಚಭೂತಗಳನ್ನೂ ಶರೀರಾದಿಗಳಿಂದ ಚೇತನರಿಗೆ ಆಗುವ ಸಂಸಾರವನ್ನೂ ಹುಟ್ಟು ಹಾಕಿಕೊಂಡಿರುತ್ತೇವೆ. ಪೂರ್ಣಾನುಭವದ ಕಣ್ಣಿನಿಂದ ನೋಡಿ ತತ್ತ್ವವನ್ನು ಅರಿತುಕೊಂಡು ಕೃತಾರ್ಥರಾಗಬೇಕು.

★★★★★

# ವಿಷ್ಣುಪಾರಮ್ಯ ವರ್ಣನೆ

**29-4-1958**

**ಬ್ರ॥ ಶ್ರೀ॥ ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

**ಭಾಗವತ 6ನೆಯ ಸ್ಕಂಧದಲ್ಲಿ 3ನೆಯ ಅಧ್ಯಾಯದಲ್ಲಿ** ಯಮದೂತರು ವಿಷ್ಣುದೂತರಿಂದ ನಿವಾರಿತರಾಗಿ ಅಜಾಮಿಳನನ್ನು ಯಮಲೋಕಕ್ಕೆ ಕೊಂಡೊಯ್ಯಲಾರದೆ ಹಿಂತಿರುಗಿದ್ದು, ಅವರು ಯಮನಲ್ಲಿಗೆ ಬಂದು ತಮಗಿಂತಲೂ ಬೇರೊಬ್ಬ ಜೀವಶಾಸ್ತ್ರ ಇದಾನೆಯೆ? ಇದು ಹೇಗೆ ಸರಿಯಾದೀತು?' -

ಎಂದು ಆಶ್ಚರ್ಯದಿಂದ ಕೇಳಿದ್ದು, ಯಮನು ವಿಷ್ಣುವಿನ ಪಾರಮ್ಯವನ್ನು ಹೇಳಿದ್ದು – ಇವುಗಳ ವರ್ಣನೆಯಿದೆ : ''ಈ ಲೋಕವೆಲ್ಲ ಮಹಾವಿಷ್ಣುವಿನ ವಶದಲ್ಲಿಯೇ ಇದೆ; ಎಲ್ಲ ದೇವತೆಗಳೂ ಆತನಿಗೆ ಕಾಣಿಕೆಯನ್ನು ಒಪ್ಪಿಸುತ್ತಿರುವರು. ನಾನು, ಇಂದ್ರ ಮುಂತಾದ ದೇವತೆಗಳು ಆ ವಿಷ್ಣುವಿನ ಮಾಯೆಗೆ ಒಳಗಾಗಿ ಆತನ ಚೇಷ್ಟಿತವನ್ನು ತಿಳಿಯಲಾರದೆ ಇರುವೆವು; ಆ ಸ್ವತಂತ್ರನಾದ ಶ್ರೀಹರಿಯ ದೂತರು ಅಲ್ಲಲ್ಲಿ ಆತನ ರೂಪಗುಣಗಳಿಂದ ಕೂಡಿ ಸಂಚರಿಸುತ್ತಿರುವರು. ಭಾಗವತಧರ್ಮವನ್ನು ತಿಳಿಯುವದು ಕಷ್ಟ. ಅತ್ಯಂತ ಪರಧರ್ಮವೆಂದರೆ ಭಗವಂತನ ನಾಮಗ್ರಹಣವೇ ಮುಂತಾದವುಗಳ ಮೂಲಕ ಭಗವಂತನಲ್ಲಿ ಇಟ್ಟ ಭಕ್ತಿಯೋಗವೇ ಆಗಿರುತ್ತದೆ. ಈ ಯೋಗದಿಂದಲೇ ಅಜಾಮಿಳನು ಮೃತ್ಯುಪಾಶದಿಂದ ತಪ್ಪಿಸಿಕೊಂಡನು. ಯಾರು ಈ ಯೋಗವನ್ನು ಅನುಸರಿಸುವರೋ ಅವರಿಗೆ ಯಮದರ್ಶನವಿಲ್ಲ. ಯಾರು ಸಮದೃಷ್ಟಿಗಳಾಗಿದ್ದು ಭಗವಂತನನ್ನೇ ಶರಣುವಕ್ಕಿರುವನೋ ಅವರ ಬಳಿಗೆ ಹೋಗಬೇಡಿ. ಯಾರು ತಮ್ಮ ಶರೀರೇಂದ್ರಿಯಗಳನ್ನು ಭಗವಂತನ ಸೇವೆಗೆ ಉಪಯೋಗಿಸುವದಿಲ್ಲವೋ ಅವರನ್ನು ಮಾತ್ರ ನನ್ನ ಬಳಿಗೆ ಕರೆತನ್ನಿರಿ'' ಎಂದು ಯಮನು ದೂತರಿಗೆ ಉಪದೇಶಿಸಿರುತ್ತಾನೆ.

ಪುರಾಣದ ಕೊನೆಯಲ್ಲಿ **ಶ್ರೀಗಳವರು** ಹೀಗೆಂದು ಅಪ್ಪಣೆಕೊಡಿಸಿದರು : ಧರ್ಮವು ಕ್ಲೇಶಸಂಪಾದ್ಯ; ನದಿಗೆ ಎದುರಾಗಿ ಈಜಿದಂತೆ. ಆದರೆ ಭಕ್ತಿಯೆಂಬುದು ನದಿಯ ಪ್ರವಾಹವನ್ನನುಸರಿಸಿ ಈಜುವಷ್ಟು ಸುಲಭವಾದದ್ದು. ಎಂಥ ಪಾಪ ಪರಂಪರೆಗಳು ಇದ್ದರೂ ಅಜಾಮಿಳನನ್ನು ಕಾಪಾಡಿದ್ದು ಭಗವಂತನ ನಾಮ ಗ್ರಹಣವೇ. ಅಜಾಮಿಳನು ಮಾಡಿದ ಪಾಪಗಳು ಎಷ್ಟೇ ಇದ್ದರೂ 'ನಾರಯಣ' ಎಂದದ್ದರಿಂದ ಅವನಿಗೆ ಸದ್ಗತಿಯಾಯಿತು ಎಂದು ಹೇಳಿದರೆ ಅದು ನಾಮ ಮಾಹಾತ್ಮ್ಯವನ್ನು ತಿಳಿಸುವ ಅರ್ಥವಾದವೆಂದಾಗುವದು. ಆದರೆ ಅವನು ಹಿಂದೆ ಮಾಡಿದ್ದ ಧರ್ಮಾನುಷ್ಠಾನ, ಯಮದೂತರು ಅವನನ್ನು ಬಿಟ್ಟುಹೋದ ಬಳಿಕ ಮಾಡಿದ ತಪಸ್ಸು – ಮುಂತಾದವನ್ನೂ ಲೆಕ್ಕಕ್ಕೆ ಹಿಡಿದರೆ ಭಗವಂತನು ಕೇವಲ ಮೃಷಾಸ್ತುತಿಗೆ ಮೆಚ್ಚುವ ಪ್ರಭುವೆಂಬ ದೂರಿಗೆ ಅವಕಾಶವಿರುವದಿಲ್ಲ. ಅಜಾಮಿಳನ ಕಥೆಯನ್ನು ದೃಷ್ಟಾಂತವಾಗಿ ತೆಗೆದುಕೊಂಡು ಉದ್ದೇಶಪೂರ್ವಕವಾಗಿ ಪಾಪಪ್ರವೃತ್ತರಾಗುವವರಿಗೆ ಯಮನ ಪಾಶವೇ ಗತಿ. ಕರ್ಮಪ್ರವಾಹಕ್ಕೆ ಸಿಕ್ಕಿ

ಮಾಡುತ್ತಿದ್ದ ಪಾಪವು ಪುಣ್ಯಕರ್ಮಾನುಷ್ಠಾನದ ಸಂಸ್ಕಾರ, ಸತ್ಸಂಗ ಮಹಿಮೆ - ಮುಂತಾದವುಗಳಿಂದ ಹಿಮ್ಮೆಟ್ಟಿ ಪಶ್ಚಾತ್ತಾಪವುಂಟಾದವರಿಗೆ ಅವಶ್ಯವಾಗಿ ಭಗವಚ್ಛರಣತೆಯಲ್ಲಿ ಮನಸ್ಸು ನಿಂತುಬಿಡುತ್ತದೆ. ಅವರಿಗೆ ನಿಶ್ಚಿತವಾಗಿ ಸದ್ಗತಿಯುಂಟಾಗುತ್ತದೆ.

★★★★★

# ಯಜ್ಞವರಾಹಸ್ತುತಿ

**13-5-59**

**ವೇ॥ಬ್ರ॥ ಶ್ರೀ ವಿದ್ವಾನ್ ಎಸ್.ವಿಠಲಶಾಸ್ತ್ರಿಗಳವರು**

**ಭಾಗವತ 3-12 ರಲ್ಲಿರುವ ಯಜ್ಞವರಾಹಸ್ತುತಿಯ** ಅಭಿಪ್ರಾಯಲ್ಲಿ ಮೈತ್ರೇಯ-ವಿದುರಸಂವಾದ ರೂಪವಾಗಿ ಕಥೆಯನ್ನು ಹೇಳಿದೆ. ಬ್ರಹ್ಮನು ಸ್ವಾಯಂಭುವಮನುವಿಗೆ ನೀನು ಧರ್ಮದಿಂದ ರಾಜ್ಯವನ್ನಾಳಿಕೊಂಡು ಯಜ್ಞಗಳಿಂದ ಭಗವಂತನನ್ನು ತೃಪ್ತಿಪಡಿಸು ಎಂದು ಉಪದೇಶ ಮಾಡಲು, ಭೂಮಿಯೆಲ್ಲವೂ ಮಹಾಜಲದಲ್ಲಿ ಮುಳುಗಿಹೋಗಿರುವದರಿಂದ ತನಗೊಂದು ಸ್ಥಾನವನ್ನು ಕಲ್ಪಿಸಿಕೊಡಬೇಕೆಂದು ಮನುವು ಕೇಳಿಕೊಂಡನು. ಭೂಮಿಯನ್ನು ಹೇಗೆ ಉದ್ಧಾರಮಾಡಬೇಕೆಂದು ಬ್ರಹ್ಮನು ಪರಮಾತ್ಮನ ಧ್ಯಾನವನ್ನು ಮಾಡುತ್ತಿರುವಲ್ಲಿ ಅವನ ಮೂಗಿನ ಸೊಳ್ಳೆಯಿಂದ ಒಂದು ಸಣ್ಣ ವರಾಹದ ಮರಿಯು ಹೊರಟು ಒಂದು ಕ್ಷಣಮಾತ್ರದಲ್ಲಿ ಆನೆಯ ಗಾತ್ರವಾಯಿತು. ಇದೇನೆಂದು ಆಶ್ಚರ್ಯದಿಂದ ಅದನ್ನು ನೋಡುತ್ತಾ ಅದರ ಗರ್ಜನೆಯಿಂದ ಇದು ಪರಮಾತ್ಮನೇ ಎಂದು ನಿಶ್ಚಯಿಸುತ್ತಿರಲಾಗಿ ಜನೋಲೋಕತಪೋಲೋಕ ಸತ್ಯಲೋಕ ನಿವಾಸಿಗಳಾದ ಮುನಿಗಳು ಭಗವಂತನನ್ನು ಸ್ತೋತ್ರಮಾಡಿದರು. ವರಾಹರೂಪಿಯಾದ ಆ ಪರಮಾತ್ಮನ

ಶರೀರವೇ ತ್ರಯೀಮಯವಾದದ್ದು ; ಅವನ ಅಂಗಗಳೆಲ್ಲವೂ ಯಜ್ಞಾಂಗಗಳೇ ಎಂಬುದನ್ನು ಆ ಮುನಿಗಳು ವರ್ಣಿಸಿ ಪ್ರಾರ್ಥಿಸಿಕೊಂಡ ಪ್ರಕಾರ ಪರಮಾತ್ಮನು ಹಿರಣ್ಯಾಕ್ಷನನ್ನು ವಧಿಸಿ ಭೂಮಿಯನ್ನು ಮೇಲಕ್ಕೆತ್ತಿ ಇಟ್ಟು ಅಂತರ್ಧಾನನಾದನು. ಪರಮಾತ್ಮನ ಈ ಲೀಲೆಯ ಕಥೆಯನ್ನು ಕೇಳುವವನೂ ಹೇಳುವವನೂ ಆತನ ಪ್ರಸಾದದಿಂದ ಕೃತಾರ್ಥರಾಗುವರು- ಎಂಬುದು ಅಧ್ಯಾಯದ ಸಾರವು.

**ಶ್ರೀಶ್ರೀಗಳು** ಅನುವಾದದಲ್ಲಿ ಹೀಗೆಂದರು: ಪರಮಾತ್ಮನೇ ಹಿರಣ್ಯಗರ್ಭ, ವಿರಾಟ್ಪುರುಷ, ಮನು-ಮುಂತಾದ ರೂಪದಿಂದ ಜಗತ್ತೆಲ್ಲವನ್ನೂ ಸೃಷ್ಟಿಮಾಡಿ ಅದನ್ನೆಲ್ಲ ವ್ಯಾಪಿಸಿಕೊಂಡಿರುತ್ತಾನೆಂದು ಉಪನಿಷತ್ತುಗಳಲ್ಲಿ ಹೇಳಿದೆ. ಮನುಶತರೂಪಾಸೃಷ್ಟಿಯ ವ್ಯಾಜದಿಂದ ಈ ಜಗತ್ತೆಲ್ಲವೂ ಪರಮಾತ್ಮನ ವಿಭೂತಿಯೇ ಎಂಬುದನ್ನು ಶ್ರುತಿಪುರಾಣಗಳಲ್ಲಿ ಮನಗಾಣಿಸಿರುತ್ತದೆ. ಅವಾಂತರಪ್ರಲಯದಲ್ಲಿ ಪೃಥಿವಿಯು ಕಣ್ಮರೆಯಾಗಿದ್ದರೂ ಭಗವಂತನು ಅದನ್ನು ಮತ್ತೆ ಉದ್ಧಾರ ಮಾಡುವನೆಂಬುದನ್ನು ಹಿರಾಣ್ಯಾಕ್ಷನ ನೆಪದಿಂದ ಪುರಾಣದಲ್ಲಿ ವರ್ಣಿಸಿದೆ. ಯಜ್ಞ, ವೇದ-ಮುಂತಾದವುಗಳೆಲ್ಲವೂ ಪರಮಾತ್ಮನ ಏಕದೇಶದಲ್ಲಿ ಏಕದೇಶ. ಈ ಜಗತ್ತೆಂಬುದೆಲ್ಲ ಒಂದು ಯಜ್ಞರೂಪದಿಂದ ಗೋಚರವಾಗುತ್ತಿದ್ದರೂ ಪರಿಚ್ಛಿನ್ನದೃಷ್ಟಿಯಿಂದ ಇದರಲ್ಲಿ ನಮಗೆ ದುಃಖವು ತೋರುತ್ತಿದೆ. ಪರಮಾತ್ಮನ ಲೀಲೆಯನ್ನು ಕುರಿತ ಕಥೆಗಳನ್ನು ಕೇಳುವದರಿಂದ ಜಗತ್ತೆಲ್ಲವೂ ಆತನ ಮಹಿಮೆಯೇ ಎಂಬುದು ನಮಗೆ ಮನಸ್ಸಿನಲ್ಲಿ ಮಿಂಚುತ್ತದೆ. ಸ್ವಾರ್ಥಬುದ್ಧಿಯಿಂದ ನಾವು ಮಾಡುತ್ತಿರುವ ಅನ್ಯಾಯದಿಂದ ನಮಗೆ ತತ್ತ್ವವು ಹೊಳೆಯದೆ ಇದೆ. ಕ್ಷುದ್ರಚರಿತ್ರೆಗಳನ್ನು ಕೇಳುವದನ್ನು ಬಿಟ್ಟು ಭಗವಚ್ಚರಿತ್ರೆಯನ್ನು ಕೇಳುವದರಿಂದ ಸರ್ವವೂ ಭಗವನ್ಮಯವೆಂಬ ಭಾವನೆಯನ್ನು ಮನಸ್ಸಿನಲ್ಲಿ ಮೂಡಿಸಿಕೊಳ್ಳಬೇಕು.

★★★★★

# ಪರಾಶರಗೀತೆ

**14-5-1959**

**ವೇ||ಬ್ರ||ಶ್ರೀ||ಪರಕ್ಕಜೆ ಸುಬ್ರಹ್ಮಣ್ಯಭಟ್ಟರು**

**ಮಹಾಭಾರತದ ಶಾಂತಿಪರ್ವದ 304ನೆಯ ಅಧ್ಯಾಯದ**ಲ್ಲಿ ಜನಕನು ಕೇಳಿದ ಪ್ರಶ್ನೆಯಿದು: **'ಕಿಂ ಶ್ರೇಯಃ ಕಾ ಗತಿರ್ಬ್ರಹ್ಮನ್ ಕಿಂ ಕೃತಂ ನ ವಿನಶ್ಯತಿ । ಕ್ವ ಗತೋ ನ ನಿವರ್ತೇತ ತನ್ಮೇ ಬ್ರೂಹಿ ಮಹಾಮತೇ ॥'** ಶ್ರೇಯಸ್ಸಿಗೆ ಮೂಲವು ಯಾವದು? ಗತಿ ಯಾವದು? ಮಾಡಿದ್ದು ಯಾವದು ನಾಶವಾಗುದು? ಎಲ್ಲಿಗೆ ಹೋದವನಿಗೆ ಪುನರಾವೃತ್ತಿಯಿಲ್ಲ? ಪರಾಶರರು ಹೇಳಿದ್ದರ ಸಾರವೇನೆಂದರೆ ಅಸಂಗವೇ ಶ್ರೇಯಸ್ಸಿಗೆ ಮೂಲವು, ಜ್ಞಾನವೇ ಪರಮಗತಿ, ಸರಿಯಾಗಿ ಆಚರಿಸಿದ ತಪಸ್ಸೂ ಯೋಗ್ಯಕ್ಷೇತ್ರದಲ್ಲಿ ಮಾಡಿದ ಬೀಜಾವಾಪವೂ ನಾಶವಾಗದು. ಅಭಯದಾನವೇ ಸರ್ವದಾನಗಳಲ್ಲಿಯೂ ಶ್ರೇಷ್ಠವಾದದ್ದು; ಅಸಂಗನಾದವನಿಗೆ ಧರ್ಮಾಧರ್ಮಗಳ ಲೇಪವಾಗುವದಿಲ್ಲ. ಮೃತ್ಯುಕಾಲವು ಯಾವಾಗಲೆಂಬುದು ನಿಶ್ಚಿತವಿಲ್ಲವಾದ್ದರಿಂದ ಯಾವಾಗಲೂ ಧರ್ಮವನ್ನು ಮಾಡುತ್ತಿರುವದೇ ಒಳ್ಳೆಯದು. ಭೋಗಿಯಾದವನಲ್ಲ ವಿಷಯಗಳನ್ನು ಭುಂಜಿಸುವಾತನು, ಭೋಗತ್ಯಾಗಿಯೇ ನಿಜವಾದ ಭೋಗಿಯು. ಪರಮಾರ್ಥತತ್ತ್ವವನ್ನು ಪಡೆದವನಿಗೆ ಮಾತ್ರ ಪುನರಾವೃತ್ತಿಯಿಲ್ಲ.

**ಶ್ರೀಗಳವರು** ಅನುವಾದದಲ್ಲಿ ಹೀಗೆಂದರು: ಭಾರತವು ಧರ್ಮಪ್ರಧಾನವಾಗಿ ಹೊರಟಿದ್ದು ಮೋಕ್ಷದಲ್ಲಿ ನಿಂತಿರುತ್ತದೆ. ಇದರ ಅಭಿಪ್ರಾಯವನ್ನು ನಾವು ಮನನಮಾಡಿಕೊಳ್ಳಬೇಕು. ಇಲ್ಲಿ ಕೇಳಿರುವದು ಅಲಸರ ಪ್ರಶ್ನೆಯಲ್ಲ. ಪೌರುಷದಿಂದ ರಾಜ್ಯವನ್ನುಗಳಿಸಿ ಪಟ್ಟಾಭಿಷಿಕ್ತನಾದ ಯುಧಿಷ್ಠಿರನು ಕೇಳಿದ್ದು; ಕೌರವಶ್ರೇಷ್ಠರಾದ ಮಹಾಶೂರರೂ ಜ್ಞಾನಿಗಳೂ ಆದ ಭೀಷ್ಮರು ಹೇಳಿದ್ದು. ಪರಾಶರ ಗೀತೆಯಲ್ಲಿ ಜನಕನು ಕೇಳಿರುವ ಅಖ್ಯಾಯಿಕೆಯು ಧರ್ಮರಾಯನಿಗೆ ಕೊಟ್ಟ ಉತ್ತರವಾಗಿದೆ. ಮನುಷ್ಯನು ಅವಿವೇಕಿಯಾಗಿರುವಾಗ ವಿಷಯವಿಲ್ಲದ ಕನಸಿನಲ್ಲಿಯೂ ಭ್ರಮೆಗೊಳ್ಳುವಂತೆ

ವಿಷಯಾಸಕ್ತನಾಗುತ್ತಾನೆ; ವಿವೇಕಿಯಾಗಿರುವಾಗ ಸಕಲವಿಷಯಗಳ ನಡುವೆ ಇದ್ದರೂ ಅದೆಲ್ಲವೂ ಅವನಿಗೆ ಕನಸಿನಂತೆ ಕಾಣುತ್ತಿರುವದು. ಅಜ್ಞನು ಹಗಲೂ ಇರುಳೂ ದುಡಿದುದುಡಿದು ತನ್ನ ಶ್ರಮದ ಫಲವನ್ನು ಮತ್ತೊಬ್ಬರಿಗೆ ಕೊಟ್ಟು ಸಾಯುವನು. ಅವನಿಗೆ ಧರ್ಮಜ್ಞಾನಗಳಿಂದಾಗುವ ಉತ್ತಮಫಲಗಳು ಎಂದಿಗೂ ಸಿಕ್ಕಲಾರವು. ವಿವೇಕಿಯಾದವನು ಅಸಂಗಶಸ್ತ್ರದಿಂದ ಸರ್ವರಿಗೂ ಅಭಯದಾನವನ್ನು ಕೊಡುತ್ತಾನೆ; ಸಮುದ್ರದಲ್ಲಿ ಮುಳುಗಿ ಅಮೋಘವಾದ ರತ್ನಗಳನ್ನು ತೆಗೆದುಕೊಳ್ಳುವ ವರ್ತಕನಂತೆ ಧರ್ಮ, ವಿಜ್ಞಾನ-ಎಂಬ ಅಮೂಲ್ಯರತ್ನಗಳನ್ನು ಈ ಸಂಸಾರಸಾಗರದಿಂದ ಆರಿಸಿಕೊಳ್ಳುತ್ತಾನೆ; ಪುನರಾವೃತ್ತಿರಹಿತವಾದ ಪರಮಪುರುಷಾರ್ಥವನ್ನು ಪಡೆದು ಕೃತಕೃತ್ಯನಾಗುತ್ತಾನೆ.

★★★★★

## ಅಹಂತಾನಿರಾಸ

**15-5-1959**

**ಬ್ರ॥ಶ್ರೀ॥ಎಸ್.ವಿಠಲಶಾಸ್ತ್ರಿಗಳವರು**

**ವಾಸಿಷ್ಠ ರಾಮಾಯಣ** ನಿರ್ವಾಣಪ್ರಕರಣದ ಉತ್ತರಾರ್ಧದಲ್ಲಿ ನಾಲ್ಕನೆಯ ಸರ್ಗದಲ್ಲಿ **ಅಹಂತಾನಿರಾಸದ** ವಿಚಾರವಿದೆ: ಅಹಂಕಾರವೇ ಜಗತ್ತಿಗೆಲ್ಲವೂ, ಸಂಸಾರಕ್ಕೆಲ್ಲವೂ ಮೂಲವು; ಅದು ನಾಶವಾದರೆ ಜಗತ್ತೂ ಇಲ್ಲ, ಸಂಸಾರವೂ ಇಲ್ಲ. ಅಹಂತಾತ್ಯಾಗವೇ ನಿಜವಾದ ತ್ಯಾಗ, ಕರ್ಮತ್ಯಾಗವೇನೂ ತ್ಯಾಗವಲ್ಲ. ಅಹಂತೆಯು ಹೋದಾಗಿನ ದೃಷ್ಟಿಯಿಂದ ನೋಡಿದರೆ ಪರಮಾತ್ಮನೊಬ್ಬನೇ ಇರುತ್ತಾನೆ; ಆತನಿಗೆ ಹುಟ್ಟೂ ಇಲ್ಲ, ಹೊಂದೂ ಇಲ್ಲ. ಆಗ ನಾನು, ಜಗತ್ತು, ಅಂತಃಕರಣ-ಯಾವದೂ ಇಲ್ಲ; ಎಲ್ಲವೂ ಶಾಂತನೂ ಶಿವನೂ ಆದ ಆತ್ಮನಲ್ಲಿಯೇ ಶಾಂತವಾಗಿ ಶಿವವಾಗಿರುತ್ತದೆ.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೇಳಿದ್ದೇನೆಂದರೆ: ವಾಸಿಷ್ಠರಾಮಾಯಣದ ಉಪದೇಶಕ್ರಮವು ನಾವು ಹೇಗೆಹೇಗೆ ತಿಳಿದುಕೊಂಡಿರುವೆವೋ ಅದೊಂದೂ ಸರಿಯಲ್ಲ ಎಂಬುದನ್ನು ತಿಳಿಸುವದಾಗಿದೆ. ಉತ್ಪತ್ತಿಸ್ಥಿತ್ಯುಪಶಮಗಳು ಇಲ್ಲ-ಎಂದು ಹೇಳುವದೇ ಆಯಾ ಹೆಸರಿನ ಪ್ರಕರಣಗಳ ಸಾರವಾಗಿದೆ. ಇದರಂತೆ ನಿರ್ವಾಣವೂ ಇಲ್ಲವೆಂಬುದೇ ನಿರ್ವಾಣಪ್ರಕರಣದ ಸಾರವು. ಅಹಂತೆ ಇರುವವರೆಗೆ ನಮಗೆ ನಿರ್ವಾಣವು ಎಂದರೆ ಮೋಕ್ಷವು ಆಗಬೇಕಾದದ್ದಿದೆ ಎಂಬ ಭ್ರಾಂತಿಯಿರುತ್ತದೆ; ಅದನ್ನು ಶಾಂತಿಗೊಳಿಸಿಕೊಂಡರೆ ಬಂಧವೂ ಇಲ್ಲ, ಅಹಂತೆಯನ್ನ ಶಾಂತಿಗೊಳಿಸುತ್ತೇನೆಂಬ ಸಂಕಲ್ಪವೂ ಅಹಂತೆಯ ಕಾರ್ಯವೇ; ನಿರ್ವಾಣವೂ ಇಲ್ಲ. ಅಹಂತೆಯು ಹಲ್ಲುಮುರಿದ ಹಾವಿನಂತೆ, ಅಥವಾ ಚಿತ್ರದಲ್ಲಿರುವ ಹಾವಿನಂತೆ ಆದರೆ, ಅದರ ನಾಶವಾಯಿತು. ಆಗ ನಾಶವಾಗಬೇಕಾಗಿದ್ದ ಅಹಂತೆಯೇ ಇರಲಿಲ್ಲ ಎಂಬುದು ಗೊತ್ತಾಗುವದು.

★★★★★

# ಭಗವಚ್ಛಬ್ದದ ನಿರ್ವಚನ

**16-5-1959**

**ಬ್ರ॥ಶ್ರೀ॥ ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

**ವಿಷ್ಣುಪುರಾಣದ** (6-5-60 ರಿಂದ 87) ರಲ್ಲಿ ಭಗವಚ್ಛಬ್ದದ ನಿರ್ವಚನವನ್ನು ತಿಳಿಸಿದೆ. ಜ್ಞಾನವು ಆಗಮಜನ್ಯವೆಂದೂ ವಿವೇಕಜನ್ಯವೆಂದೂ ಎರಡು ವಿಧ. ಅಜ್ಞಾನವು ಅಂಧಂತಮಸ್ಸಿನಂತೆ ಇದೆ; ಜ್ಞಾನವು ಸೂರ್ಯನಂತೆ ಇರುತ್ತದೆ. ಪರಾಪರವಿದ್ಯೆಗಳು ಎರಡೆಂದೂ ಪರವಿದ್ಯೆಯಿಂದಲೇ ಪರಮಾತ್ಮತತ್ತ್ವವನ್ನು ತಿಳಿದುಕೊಳ್ಳಲಾಗುವದೆಂದೂ ಅಥರ್ವಣಶ್ರುತಿಯಲ್ಲಿದೆ. ಅವ್ಯಕ್ತವೂ, ಅಜರವೂ, ಅಚಿಂತ್ಯವೂ, ಅಜವೂ, ಅವ್ಯಯವೂ ಆಗಿರುವ ಬ್ರಹ್ಮವೇ ನಿತ್ಯವು, ಸರ್ವಗತವು, ಜಗತ್ಕಾರಣವು. ತಿಳಿದವರಿಗೆ ಮಾತ್ರ ಕಾಣುವ ಪರತತ್ತ್ವವಾದ ಆ ಅಕ್ಷರವನ್ನೇ ಭಗವಚ್ಛಬ್ದವು ತಿಳಿಸುತ್ತದೆ. ಆ

ಬ್ರಹ್ಮವು ಶಬ್ದಗೋಚರವಲ್ಲದಿದ್ದರೂ ಪೂಜಾರ್ಥವಾಗಿ ಅದನ್ನು ಭಗವಚ್ಛಬ್ದದಿಂದ ಉಪಚಾರಕ್ಕಾಗಿ ಕರೆಯುತ್ತಾರೆ. **ಭ** ಎಂಬ ಅಕ್ಷರಕ್ಕೆ ಸಂಭರ್ತೃ (ಪೋಷಕ), ಭರ್ತೃ (ಧಾರಕ) ಎಂಬ ಎರಡು ಅರ್ಥಗಳಿವೆ. **ಗ**ಕಾರಕ್ಕೆ ಕರ್ಮಫಲವನ್ನು ಪಡೆಯಿಸುವವನು, (ಗಮಯಿತಾ), ಸೃಷ್ಟಿಮಾಡುವವನು - ಎಂದು ಎರಡು ಅರ್ಥಗಳು. ಸಂಪೂರ್ಣವಾದ ಐಶ್ವರ್ಯ, ಧರ್ಮ, ಯಶಸ್ಸು, ಶ್ರೀ, ಜ್ಞಾನ, ವೈರಾಗ್ಯ-ಇದನ್ನು **ಭಗ** ಎಂಬ ಶಬ್ದವು ಹೇಳುತ್ತದೆ. ಅವನಲ್ಲಿ ಎಲ್ಲ ಭೂತಗಳೂ ವಾಸಮಾಡಿಕೊಂಡಿವೆ; ಅವನೂ ಎಲ್ಲಾ ಭೂತಗಳಲ್ಲಿಯೂ ಇರುತ್ತಾನೆ-ಎಂಬುದನ್ನು **ವಕಾರವು** ತಿಳಿಸುತ್ತದೆ. ಹೀಗೆ ಭಗವಾನ್ ಎಂಬೀ ಮಹಾಶಬ್ದವು ವಾಸುದೇವನಿಗೆ ಮಾತ್ರವೇ ಸಲ್ಲುತ್ತದೆ. ಭೂತಗಳ ಉತ್ಪತ್ತಿ, ಪ್ರಲಯ, ಗತಿ, ಆಗತಿ, ವಿದ್ಯೆ, ಅವಿದ್ಯೆ-ಇದನ್ನು ಬಲ್ಲವನಾದ್ದರಿಂದ ಆತನಿಗೆ **ಭಗವಂತನೆಂದು** ಹೆಸರು. ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು-ಇವೆಲ್ಲವೂ ಹೇಯಗುಣಸಂಬಂಧವಿಲ್ಲದಿರುವವಾಗಿ 'ಭಗವತ್' ಎಂಬ ಶಬ್ದದಿಂದ ಹೇಳಲ್ಪಡುವವು. ಎಲ್ಲಾ ಭೂತಗಳಲ್ಲಿಯೂ ಎಲ್ಲದರಲ್ಲಿಯೂ ವಾಸಮಾಡುತ್ತಿರುವದರಿಂದಲೇ ಆತನು ವಾಸುದೇವನೆನಿಸಿರುವನು. ಹೀಗೆಂದು ಖಾಂಡಿಕ್ಯ ಜನಕನಿಗೆ ಕೇಶಿಧ್ವಜನು ಹೇಳಿರುತ್ತಾನೆ. ಆತನು ಸರ್ವಗುಣದೋಷಗಳನ್ನು ಮೀರಿರುತ್ತಾನೆ. ಸಮಸ್ತಕಲ್ಯಾಣಗುಣಾತ್ಮಕನೂ ಅವನೇ, ತನ್ನ ಶಕ್ತಿಲೇಶದಿಂದ ಭೂತಗಳೆಲ್ಲವನ್ನೂ ಆವರಿಸಿಕೊಂಡಿರುತ್ತಾನೆ. ಇಚ್ಛಾಮಾತ್ರದಿಂದ ತನಗಿಷ್ಟವಾದ ದೇಹವನ್ನು ಧರಿಸುವನವನು. ಜಗತ್ತಿನವರಿಗೆಲ್ಲ ಹಿತವನ್ನು ಸಾಧಿಸಿಕೊಡುವಾತನವನು. ತೇಜೋಬಲೈಶ್ವರ್ಯಜ್ಞಾನವೀರ್ಯ ಶಕ್ತ್ಯಾದಿ ಗುಣಗಳ ಏಕರಾಶಿಯಾಗಿರುತ್ತಾನೆ. ಪರರಿಗೆಲ್ಲರಿಗೂ ಪರನಾದವನು ಆತನು ; ಯಾವ ಕ್ಲೇಶಗಳೂ ಆತನಲ್ಲಿಲ್ಲ. ವ್ಯಷ್ಟಿಸಮಷ್ಟಿರೂಪನವನು, ಸರ್ವಸಾಕ್ಷಿಯವನು. ಸರ್ವೇಶ್ವರ, ಸರ್ವಶಕ್ತಿ-ಆದ್ದರಿಂದ ಆತನಿಗೆ **ಪರಮೇಶ್ವರ** ಎಂದು ಹೆಸರು. ಆತನನ್ನು ಯಾವ ಜ್ಞಾನದಿಂದ ತಿಳಿಯಬಹುದೋ, ಕಾಣಬಹುದೋ, ಸಾಕ್ಷಾತ್ಕರಿಸಿಕೊಳ್ಳಬಹುದೋ ಅದೇ ನಿಜವಾದ ಜ್ಞಾನವು ; ಮಿಕ್ಕದ್ದೆಲ್ಲವೂ **ಅಜ್ಞಾನವು**.

**ಶ್ರೀಶ್ರೀಗಳು** ಅನುವಾದದಲ್ಲಿ ಹೇಳಿದ್ದರ ಸಾರವೇನೆಂದರೆ: ಇತಿಹಾಸ ಪುರಾಣಗಳಿಂದ ವೇದಾರ್ಥವನ್ನು ಬಲಪಡಿಸಿಕೊಳ್ಳಬೇಕು ಎಂಬುದೊಂದು ಬಲ್ಲವರ ಸೂಕ್ತಿ. **ಪರಾಶರರಂಥ** ಮಹರ್ಷಿಗಳು ಮಾತ್ರವೇ ವೇದಾರ್ಥವನ್ನು ಬಲ್ಲರು. ಅವರ ಅಭಿಪ್ರಾಯವು ಇಂದಿನ ಶ್ರವಣಕ್ಕೆ ಇಟ್ಟುಕೊಂಡಿರುವ ಅಧ್ಯಾಯದಲ್ಲಿ ಸ್ಪಷ್ಟವಾಗಿರುತ್ತದೆ. ಮುಂಡಕೋಪನಿಷತ್ತಿನಲ್ಲಿ **ಅಕ್ಷರವನ್ನು ತಿಳಿಸುವ ಪರವಿದ್ಯೆ** ಎಂದು ವರ್ಣಿಸಿರುವದನ್ನು ಪರಾಮರ್ಶಮಾಡಿಕೊಂಡು ಪರಾಶರರು ಸಗುಣ ನಿರ್ಗುಣಗಳ ಸಾಮರಸ್ಯವನ್ನು ಮಾಡಿರುತ್ತಾರೆ. ಅವೆರಡೂ ಒಂದೇ ರೂಪಾಯಿನ ಎರಡು ಪಕ್ಕಗಳಂತೆ ಇರುತ್ತವೆ. ಉಪನಿಷತ್ತಿನಲ್ಲಿ ಅಕ್ಷರವೆಂದು ಹೇಳಿರುವ ತತ್ತ್ವವೇ ಇಲ್ಲಿ **ಭಗವಾನ್ ವಾಸುದೇವ** ಎಂಬ ಹೆಸರಿನಿಂದ ವರ್ಣಿತವಾಗಿರುತ್ತದೆ. ಪರಮಾತ್ಮನು ಯಾವ ಶಬ್ದಕ್ಕೂ ಗೋಚರನಲ್ಲವಾದರೂ ಪೂಜಾರ್ಥವಾಗಿ 'ಭಗವಾನ್' ಎಂಬ ಶಬ್ದವನ್ನು ಅವನಲ್ಲಿ ಔಪಚಾರಿಕವಾಗಿ ಬಳಸುತ್ತಾರೆ ಎಂದು ಸ್ಪಷ್ಟವಾಗಿ ಇಲ್ಲಿ ಹೇಳಿರುವದನ್ನು ನಾವು ಲಕ್ಷಿಸಬೇಕು. ಭಗವಚ್ಛಬ್ದದ ಅಕ್ಷರಗಳಲ್ಲಿ ಹುದುಗಿರುವ ವಿಶೇಷಾಭಿಪ್ರಾಯಗಳನ್ನು ತಿಳಿಸುವ ಶ್ಲೋಕಗಳನ್ನು ನಾವೆಲ್ಲರೂ ನೆನಪಿನಲ್ಲಿಟ್ಟುಕೊಳ್ಳಬೇಕು. ಭಗವಂತನೇ ಎಲ್ಲಕ್ಕೂ ಆಧಾರವಾಗಿದ್ದುಕೊಂಡು ಎಲ್ಲರನ್ನೂ ಪೋಷಿಸುತ್ತಿದಾನೆ ; ಎಲ್ಲವನ್ನೂ ತನ್ನೊಳಗಿಂದ ಹೊರಬಿಟ್ಟು ಮತ್ತೆ ತನ್ನಲ್ಲಿಯೇ ಒಂದುಮಾಡಿಕೊಳ್ಳುತ್ತಿದಾನೆ ; ಜ್ಞಾನೈಶ್ವರ್ಯಾದಿಗಳೆಂಬ ಉತ್ತಮದಿವ್ಯಗುಣಗಳು-ಯಾವವನ್ನೂ ಜೀವನದ ಸಾರವೆನ್ನುವೆವೋ ಅವೆಲ್ಲ- ಆ ಭಗವಂತನ ಸ್ವರೂಪವೇ : ಜ್ಞಾನಾದಿಗುಣಗಳೇ ಆತನು. ದೃಷ್ಟಿಭೇದದಿಂದ ಇಲ್ಲಿ ಗುಣಗುಣಿಭೇದವು ಕಾಣಿಸುತ್ತಿದೆ. ಭಗವಂತನ ಗುಣಗಳಿಗೂ ಭಗವಂತನಿಗೂ ಭೇದವಿಲ್ಲವೆಂದು ದ್ವೈತಿಗಳುಕೂಡ ಹೇಳಿರುತ್ತಾರೆ. ಇನ್ನು ಅದ್ವೈತಿಗಳಾದ ಶಂಕರರು ಏನೆನ್ನಬೇಕು ? ಬ್ರಹ್ಮವನ್ನು ತಿಳಿದವರು ಬ್ರಹ್ಮವೇ-ಎಂದು ಶ್ರುತಿ ಸಾರುವಂತೆ, ಭಗವಂತನ ಉಪಾಸನೆಮಾಡಿ ತನ್ಮಯರಾದರೆ ಭಗವದ್ರೂಪರೇ ಎಂದು ಅವರು ಹೇಳುತ್ತಾರೆ.

★★★★★

# ಶಿವಪ್ರಸಾದ

**17-5-59**

**ಬ್ರ॥ ಶ್ರೀ॥ ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳವರು**

**ಸೂತಸಂಹಿತೆಯ** ಯಜ್ಞವೈಭವಖಂಡದ ಇಪ್ಪತ್ತೈದನೆಯ ಅಧ್ಯಾಯದಲ್ಲಿ ಸತ್ಯಸಂಧನೆಂಬ ಭಕ್ತನಿಗೆ ವಿಷ್ಣುವು ಶಿವನ ಪ್ರಸಾದವೇ ಸರ್ವರಿಗೂ ಮುಕ್ತಿಕಾರಣವೆಂತಲೂ ಮಿಕ್ಕ ದೇವತೆಗಳ ಪ್ರಸಾದವು ಆ ಶಿವನ ಪ್ರಸಾದದ ಮೂಲಕವೇ ಬಂದದ್ದಾಗಿರುವದೆಂದೂ ಉಪದೇಶಿಸಿರುತ್ತದೆ.

**ಶ್ರೀಶ್ರೀಗಳವರು** ಅನುವಾದದಲ್ಲಿ ಇಂತೆಂದರು : ಪರಮಾರ್ಥತತ್ತ್ವವನ್ನು ಉಪನಿಷತ್ತಿನಲ್ಲಿ 'ಶಾನ್ತಂ ಶಿವಮದ್ವೈತಂ ಚತುರ್ಥಂ ಮನ್ಯನ್ತೇ ಸ ಆತ್ಮಾ ಸ ವಿಜ್ಞೇಯಃ' ಎಂದು ಬಣ್ಣಿಸಿರುತ್ತದೆ. ಅನಾತ್ಮರೂಪವಾಗಿರುವ ದ್ವೈತವೆಲ್ಲವನ್ನೂ ಬಿಟ್ಟು ಸರ್ವಕ್ಕೂ ಆತ್ಮನಾಗಿರುವ ಪರಮಾತ್ಮನನ್ನೇ ಅರಿತುಕೊಂಡರೆ ಮೋಕ್ಷವು ದೊರಕುವದು ಎಂಬುದೇ ವೇದಾಂತೋಪದೇಶದ ಸಾರವು. ಆ ಅದ್ವೈತತತ್ತ್ವದಲ್ಲಿ ಹೆಚ್ಚು ಕಡಿಮೆ-ಎಂಬ ವ್ಯವಹಾರಕ್ಕೆ ಅವಕಾಶವೇ ಇರುವದಿಲ್ಲ. ಅದೇ ಎಲ್ಲಾ ದೇವತೆಗಳಿಗೂ ಆತ್ಮನಾಗಿರುತ್ತದೆ. ದೇವದತ್ತನ ಕೈ ಕಣ್ಣು-ಮುಂತಾದ ಅವಯವಗಳಲ್ಲಿ ಪರಸ್ಪರವೈಲಕ್ಷಣ್ಯವಿದೆ; ಕೈಯಿಂದಾಗುವ ಕೆಲಸ ಕಣ್ಣಿನಿಂದ ಆಗುವಂತಿರುವದಿಲ್ಲ, ಕಣ್ಣಿನಿಂದಾಗುವದು ಕೈಯಿಂದ ಆಗುವಂತಿರುವದಿಲ್ಲ. ಆದರೆ ಕೈ, ಕಾಲು, ಕಣ್ಣು, ಕಿವಿ-ಮುಂತಾದವುಗಳು ಮಾಡುವ ಕೆಲಸವೆಲ್ಲವೂ ಆ ದೇವದತ್ತನದೇ ಆಗಿರುತ್ತದೆ. ಇದರಂತೆ ದೇವತೆಗಳಿಗೂ ಪರಮೇಶ್ವರನಿಗೂ ಇರುವ ಸಂಬಂಧವನ್ನೂ ತಿಳಿಯಬೇಕು. ಇದಕ್ಕಿಂತಲೂ ಉತ್ತಮವಾದ ಉದಾಹರಣೆಯೊಂದನ್ನು ಕೊಡಬೇಕೆಂದರೆ, ಸೂರ್ಯನಿಗೂ ಅವನ ಕಿರಣಗಳಿಗೂ ಇರುವ ಸಂಬಂಧವೇ ಪರಮೇಶ್ವರನಿಗೂ ದೇವತೆಗಳಿಗೂ ಇರುವದೆನ್ನಬಹುದು. ಬೇರೆಬೇರೆಯ ಉಪಾಧಿಗಳಿಂದ ದೇವತೆಗಳಾಗಿರುವವರು ಆಯಾ ಉಪಾಧಿಗಳನ್ನು ತೆಗೆದುಹಾಕಿ ಅಂತರಾತ್ಮನ ದೃಷ್ಟಿಯಿಂದ ನೋಡಿದರೆ ಪರಮೇಶ್ವರನೇ ಆಗಿರುತ್ತಾರೆ. ಪರಮಾತ್ಮಾಂಶವು ಎಲ್ಲಾ ದೇವತೆಗಳಲ್ಲಿಯೂ

ಇದ್ದರೂ ಅವರವರಿಗೆ ತಮ್ಮತಮ್ಮ ಉಪಾಧಿಯಲ್ಲಿ ಅಭಿಮಾನವಿರುವವರೆಗೆ ಆಯಾ ದೇವತೆ ಎನಿಸುತ್ತಾರೆ. ಎಲ್ಲರಿಗೂ ಆತ್ಮನಾಗಿರುವ ಆ ಪರಮಾತ್ಮನೇ ಮಹಾದೇವ, ಪರಮೇಶ್ವರ-ಮುಂತಾದ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಾನೆ. ಈ ದಿವಸದ ಪುರಾಣದ ಅಧ್ಯಾಯದಲ್ಲಿ ಸತ್ಯಸಂಧನು ಮಾಡಿರುವ ವಿಷ್ಣುವಿನ ಸ್ತೋತ್ರದಲ್ಲಿ ಆ ಮಹಾದೇವನಿಗೆ ಮಾಡಬಹುದಾದ ಸ್ತೋತ್ರವೇ ಇರುತ್ತದೆ ಎಂಬುದನ್ನು ಲಕ್ಷಿಸಬೇಕು. ದೇವತೆಗಳಿಗೆಲ್ಲ ಅವರ ದೇವತಾತ್ವವೂ ಪ್ರಕಾಶವೂ ಯಾರಿಂದ ಬಂದಿದೆಯೋ ಆತನೇ ಪರಮೇಶ್ವರನು. ಅವನೇ ವಿಷ್ಣು. ಸರ್ವಕಾರಣನೂ ಸರ್ವಾಂತರಾತ್ಮನೂ ಆದ ಪರಮೇಶ್ವರನನ್ನು ಶಿವ ಎಂದರೂ ವಿಷ್ಣು ಎಂದರೂ ಯಾವ ಭೇದವೂ ಇಲ್ಲ. ಉಪಾಧಿಗಳ ಹೆಚ್ಚು ಕಡಿಮೆಯಿಂದಲೇ ಆಯಾ ದೇವತೆಗಳಿಗೆ ತಾರತಮ್ಯವುಂಟಾಗಿರುತ್ತದೆ. ಜ್ಞಾನ ಶಕ್ತಿ, ಕ್ರಿಯಾಶಕ್ತಿ, ಇಚ್ಛಾಶಕ್ತಿ-ಎಲ್ಲವೂ ಅವು ಎಲ್ಲಿ ತೋರಿದರೂ ಪರಮೇಶ್ವರನವೇ. ಆ ಪರಮೇಶ್ವರನಿಗೆ ಸಮನಾದವರಾಗಲಿ ಅಧಿಕರಾದವರಾಗಲಿ ಯಾರೊಬ್ಬರೂ ಇರುವದಿಲ್ಲ. ಇದೇ ಅಧ್ಯಾಯದ ಸಾರವು.

★★★★★

# ಸುಧಾಮೋಪಾಖ್ಯಾನ

**18-5-1959**

**ಬ್ರ॥ ಶ್ರೀ॥ ಅನಂತಮೂರ್ತಿಶಾಸ್ತ್ರಿಗಳವರು**

**ಭಾಗವತದ ದಶಮಸ್ಕಂಧದ 81ನೆಯ ಅಧ್ಯಾಯದಲ್ಲಿ** ಕುಚೇಲನು ಶ್ರೀಕೃಷ್ಣನಿಗೆ ಅವಲಕ್ಕಿಯನ್ನು ಕೊಟ್ಟದ್ದು, ಅದನ್ನು ಸ್ವೀಕರಿಸುವ ವ್ಯಾಜದಿಂದ ಆದ ಭಗವಂತನ ಪ್ರಸಾದದ ಫಲವಾಗಿ ಕುಚೇಲನಿಗೆ ಸಂಪತ್ತು ಬಂದದ್ದು-ಇವನ್ನು ವರ್ಣಿಸಿದೆ. ಕುಚೇಲನು ಶ್ರೀಕಾಮನಾಗಿ ನನ್ನನ್ನು ಭಜಿಸಿಲ್ಲ; ಪತಿವ್ರತೆಯಾದ ಪತ್ನಿಗೆ ಪ್ರಿಯವನ್ನು ಮಾಡುವದಕ್ಕೆಂದೇ ನನ್ನ ಬಳಿಗೆ ಬಂದಿದ್ದಾನೆ-ಎಂಬುದನ್ನು ತಿಳಿದ ಭಗವಂತನು ಅವನಿಗೆ

ಅನುಗ್ರಹಮಾಡಿಬಿಟ್ಟನು. ಕುಚೇಲನಿಗೆ ಇದರ ಅರಿವಿಲ್ಲದ್ದರಿಂದ ನನಗೆ ಧನಮದದಿಂದ 'ಭಗವಂತನ ವಿಸ್ಮರಣೆಯಾದೀತೆಂದು ಕೃಪೆಯಿಂದ ನನಗೆ ಧನವನ್ನು ಕೊಟ್ಟಿಲ್ಲವೆಂದು ಭಗವಂತನನ್ನೇ ಸ್ಮರಿಸುತ್ತಾಬಂದನು. ಮನೆಗೆ ಬಂದು ನೋಡುವಲ್ಲಿ ಸರ್ವಸಮೃದ್ಧಿಯೂ ಬಂದುಬಿಟ್ಟಿತ್ತು. ಭಗವಂತನ ದರ್ಶನವೇ ಇದಕ್ಕೆಲ್ಲ ಕಾರಣವು; ನನಗೆ ಜನ್ಮಜನ್ಮಕ್ಕೂ ಆತನ ಸೌಹೃದಸಖ್ಯಮೈತ್ರಿಗಳೂ ದಾಸ್ಯವೂ ಇರಲಿ!' ಎಂದುಕೊಂಡು ಭಗವಂತನ ಸ್ಮರಣೆಯನ್ನು ಮಾಡುತ್ತಲೇ ವಿಷಯ ಲಂಪಟನಾಗದೆ ಪತ್ನೀಸಮೇತನಾಗಿ ಆತನು ಅನುಗ್ರಹಿಸಿದ್ದ ಐಶ್ವರ್ಯವನ್ನು ಅನುಭವಿಸುತ್ತಾ ಕಾಲವನ್ನು ಕಳೆದನು.

**ಶ್ರೀಗಳು** ಅನುವಾದದಲ್ಲಿ ಹೀಗೆಂದರು: ಭಾಗವತಶ್ರವಣಮಾತ್ರದಿಂದ ಭಗವಂತನನ್ನು ಕೂಡಲೆ ನಮ್ಮ ಹೃದಯದಲ್ಲಿ ಕಟ್ಟಿಹಾಕಿಬಿಡಬಹುದು-ಎಂದು ವ್ಯಾಸರು ಅಪ್ಪಣೆಕೊಡಿಸಿರುತ್ತಾರೆ. ಆದರೂ ನಮ್ಮ ದುರ್ದೈವದಿಂದ ನಾವು ಭಾಗವತದಿಂದ ದೂರವಾಗುತ್ತಿದೇವೆ. ಈಗಿನವರ ಬುದ್ಧಿಯು ಜೀವನದ ಮಟ್ಟವು ಹೆಚ್ಚಾಗಬೇಕೆಂದಿದೆ. ಆದ್ದರಿಂದ ಕುಚೇಲನಂಥ ದರಿದ್ರರ ಕಥೆ ಅವರಿಗೆ ರುಚಿಸಲಾರದು. ಈಗಿನವರಿಗೆ ತಮ್ಮ ಐಶ್ವರ್ಯವನ್ನು ಕೊಬ್ಬಿಕೊಳ್ಳುವದೇ ರುಚಿಸುತ್ತದೆ; ಕುಚೇಲನಂಥವರಿಗೆ ಐಶ್ವರ್ಯವು ಮದವನ್ನು ಹೆಚ್ಚಿಸಿ ಪರಮಾರ್ಥವನ್ನು ಮರೆಯಿಸುವದೆಂಬ ಅಂಜಿಕೆ. ಆದ್ದರಿಂದ ಇಂಥ ಪುರಾಣಾಖ್ಯಾನದಿಂದ ಏನು ಪ್ರಯೋಜನವೆಂದು ಈಗಿನವರು ಆಕ್ಷೇಪಿಸುವ ಸಂಭವಿದೆ. ಆದರೆ ಇದೆಲ್ಲ ಪರದೇಶಗಳ ಅನುಕರಣೆಯ ಫಲವಾಗಿರುತ್ತದೆ. ಬರಿಯ ಹಣದ ಹೆಚ್ಚಿಗೆಯಿಂದ ಮನುಷ್ಯನ ಜೀವನವು ಮೇಲುಮಟ್ಟಕ್ಕೆ ಬರುವದಿಲ್ಲ. ಧನಧಾನ್ಯಾದಿಸಮೃದ್ಧಿಯಿದ್ದರೂ ವಿರಕ್ತಿಯನ್ನು ಸಂಪಾದಿಸಿಕೊಂಡಿರುವದೆಂಬುದು ನಮ್ಮ ದೇಶದವರ ಧ್ಯೇಯ. ನಿಜವಾದ ಐಶ್ವರ್ಯವೆಂದರೆ ಇಡಿಯ ಭೂಮಂಡಲವೇ ನಮ್ಮೆದುರಿಗೆ ಬಂದರೂ ಅದನ್ನು ಕಡೆಗಣಿಸಿ ಭಗವಂತನ ಸಾಂನಿಧ್ಯವನ್ನು ಬಯಸುವ ಸ್ಥಿತಿ; ಸಮಸ್ತಸಂಪತ್ಸಮವಾಪ್ತಿಹೇತುವಾದವನು ಭಗವಂತನೊಬ್ಬನೇ. ನಾವು ಹೂಡುತ್ತಿರುವ ಹಲವು ಯೋಜನೆಗಳಲ್ಲಿ ಭಗವಂತನನ್ನು ಸೇರುವ ಯೋಜನೆಯೊಂದು ಮಾತ್ರ ಸೇರಲಿಲ್ಲ! ಅಹಂಕಾರಮಮಕಾರಗಳನ್ನು

ಬಿಟ್ಟು ಸರ್ವಸಂಪತ್ತಿನ ಸಾರವಾದ ಭಗವಂತನನ್ನು ಹಿಡಿಯಬೇಕೆಂದು ಉಪದೇಶಿಸುತ್ತಿರುವ ಶುಕಮುನಿಗಳ ಉಪದೇಶಕ್ಕೆ ಇನ್ನಾದರೂ ಕಿವಿಗೊಡೋಣ.

★★★★★

# ರುದ್ರಗೀತೆ

**01.05.1960**

**ಬ್ರ॥ ಶ್ರೀ॥ ಎಸ್.ವಿಠಲಶಾಸ್ತ್ರಿಗಳವರು**

**ಭಾಗವತ (4-25)**ರಲ್ಲಿ ಪ್ರಾಚೀನಬರ್ಹಿಯ ಮಕ್ಕಳಾದ ಪ್ರಚೇತಸರ ತಪಸ್ಸಿಗೆ ಮೆಚ್ಚಿ ಅವರಿಗೆ ಅನುಗ್ರಹಹವನ್ನುಂಟು ಮಾಡುವದಕ್ಕಾಗಿ ಶ್ರೀರುದ್ರನು ಅವರಿಗೆ ಪ್ರತ್ಯಕ್ಷನಾಗಿ-ಭಗವತ್ತತ್ತ್ವವನ್ನೂ ಉಪಾಸನೆಯ ಮಾರ್ಗವನ್ನೂ ತಿಳಿಸುವ ರುದ್ರಗೀತೆಯನ್ನು ಉಪದೇಶಿಸಿದನು. ಈ ಸ್ತೋತ್ರವನ್ನು ನಿತ್ಯವೂ ಜಪಿಸಿರಿ, ಇದರಿಂದ ನಿಮ್ಮ ಇಷ್ಟಾರ್ಥವು ಲಭಿಸುವದು-ಎಂದು ತಿಳಿಸಿಕೊಟ್ಟನು.

**ಶ್ರೀಶ್ರೀಗಳವರು** ಅನುವಾದದಲ್ಲಿ ಹೀಗೆಂದರು: ಒಂದು ಘಂಟೆಯ ಹೊತ್ತು ಪುರಾಣದ ನೆಪದಿಂದ ಪರಮಾತ್ಮನ ತತ್ತ್ವ, ಮಹಿಮೆ, ಆಕಾರ-ಮುಂತಾದವುಗಳ ಚಿಂತನೆಯಿಂದ ನಾವೆಲ್ಲರೂ ಪುಣ್ಯವನ್ನು ಗಳಿಸಿಕೊಂಡಿರುತ್ತೇವೆ. ಈಗಿನವರು ಬಹಿರ್ಮುಖರಾಗಿಯೇ ಇರುವಲ್ಲಿ 'ದೇವರು ಇದಾನೆಯೆ? ಇದ್ದರೆ ಅವನಿಗೆ ಆಕಾರವುಂಟೆ?' ಎಂದು ಮುಂತಾಗಿ ಕುತರ್ಕವನ್ನು ಮಾಡಿ ಸಾಧಕರು ನಡೆಯುವ ದಾರಿಯಲ್ಲಿ ಗುಂಡಿಗಳನ್ನು ತೋಡುವ ಕುಹಕಿಗಳು ಬೇರೆ ಹುಟ್ಟಿಕೊಂಡಿರುತ್ತಾರೆ. ಯಾವ ಮನುಷ್ಯನನ್ನು ನೋಡಿದರೂ ಶರೀರ, ರೂಪ, ಬಲ, ಬುದ್ಧಿ, ನಡತೆ-ಮುಂತಾದವುಗಳಲ್ಲಿ ದೋಷವು ಕಂಡೇಕಾಣುತ್ತದೆ. ನಮಗೆ ತೋರುವ ಮತ್ತು ಕಲ್ಪನೆಗೆ ಬರುವ ಉತ್ತಮರೂಪಲಾವಣ್ಯವನ್ನೂ ಮುದ್ದೆಮಾಡಿ ಚಿನ್ಮಯನಾದ ಪರಮಾತ್ಮನ ವಿಭೂತಿಯೆಂದು ಕಲ್ಪಿಸಿಕೊಂಡು

ಆರಾಧನೆಮಾಡಬೇಕು. ಅಷ್ಟರಿಂದಲೇ ಮನೋಮಾಲಿನ್ಯವೆಲ್ಲ ತೊಳೆದುಹೋಗುತ್ತದೆ. 'ರುದ್ರನು ವಿಷ್ಣುವಿನ ಮಹಿಮೆಯನ್ನು ಹೇಳಿದನು' ಎಂದಿರುವದರಿಂದ ಶಿವವಿಷ್ಣುಭೇದವನ್ನು ಕಲ್ಪಿಸಿಕೊಂಡು ರಾಗದ್ವೇಷಗಳನ್ನು ಬೆಳೆಯಿಸಿಕೊಳ್ಳಬಾರದು. ಶ್ರೀರುದ್ರನು ಅನುಗ್ರಹಿಸದೆ ಇದ್ದಿದ್ದರೆ ನಮಗೆ ತತ್ತ್ವವು ಹೇಗೆ ತಿಳಿಯಬೇಕು ? ನಿರಾಕಾರನಾದ ಪರಮೇಶ್ವರನೇ ರುದ್ರಾದಿ ರೂಪದಿಂದ ಜನರಿಗೆ ಪೂಜಾದಿಸಾಧನಗಳನ್ನು ಹೇಗೆ ಅನುಷ್ಠಿಸಬೇಕೆಂಬುದನ್ನು ಉಪದೇಶಿಸಿ ಅನುಗ್ರಹಿಸುತ್ತಿರುತ್ತಾನೆ. ವಿಶ್ವವ್ಯಾಪಕವಾದ ತತ್ತ್ವದ ಹತ್ತಿರಕ್ಕೆ ಹೋಗುವದಕ್ಕೆ ಈಶ್ವರಾರಾಧನೆಯೇ ದ್ವಾರ. ಕ್ಷತ್ರಿಯರು ಸರಿಯಾಗಿ ರಾಜ್ಯವಾಳಬೇಕಾದರೆ ಅವರಿಗೂ ಈ ಜ್ಞಾನವು ಬೇಕು. ವ್ಯವಹಾರವು ನಿರಾತಂಕವಾಗಿ ಸಾಗುವದಕ್ಕೆ ನಮ್ಮಗಳಿಗೂ ಈ ಸಾಧನದ ಜ್ಞಾನವು ಬೇಕು. ಪರಮಾತ್ಮನ ಚಿಂತನೆಯು ಬೆಳೆದಂತೆಲ್ಲ ಸ್ವಧರ್ಮನಿಷ್ಠೆಯು ಹೆಚ್ಚುವದು; ಎಲ್ಲರ ಹೃದಯದಲ್ಲಿಯೂ ನಮ್ಮ ಆತ್ಮನಾಗಿರುವ ಭಗವಂತನೇ ಆತ್ಮನಾಗಿ ಇದ್ದುಕೊಂಡಿರುವನೆಂಬುದರ ಅರಿವಾಗುವದು.

★★★★★

# ಸಿದ್ಧಿಗಾಗಿ ಎಲ್ಲರೂ ಪೂಜಿಸಬೇಕಾದ ದೇವತೆ

**2-5-1960**

**ಶ್ರೀ|| ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳವರು**

**ಭಾರತ ಶಾಂತಿಪರ್ವ ಮೋಕ್ಷಧರ್ಮದಲ್ಲಿ 334ನೆಯ ಅಧ್ಯಾಯದಲ್ಲಿ** ಯುಧಿಷ್ಠಿರನು ಭೀಷ್ಮರನ್ನು ಕುರಿತು ಗೃಹಸ್ಥ, ಬ್ರಹ್ಮಚಾರಿ, ವಾನಪ್ರಸ್ಥ, ಭಿಕ್ಷುಕ- ಇವರೆಲ್ಲರೂ ಸಿದ್ಧಿಗಾಗಿ ಪೂಜಿಸಲೇಬೇಕಾದ ದೇವತೆ ಯಾವದು?- ಎಂದು ಪ್ರಶ್ನಿಸಿರುತ್ತಾನೆ. ಅದಕ್ಕೆ **ಭೀಷ್ಮರು** ಹೇಳಿದ ಉತ್ತರವಿದು: ನಾರಾಯಣನು ನರ, ನಾರಾಯಣ, ಹರಿ, ಕೃಷ್ಣ-ಎಂಬ ಭೇದದಿಂದ ಚತುರ್ಮೂರ್ತಿಯಾಗಿ ಧರ್ಮಾತ್ಮಜರಾಗಿ ಅವತರಿಸಿದನು. ಅವರೊಳಗೆ ನರನಾರಾಯಣರು

ಬದರಿಯಲ್ಲಿ ತಪಸ್ಸುಮಾಡುತ್ತಿರುವಲ್ಲಿ ನಾರದರು ಅಲ್ಲಿಗೆ ಬಂದು 'ಸರ್ವರೂ ಪಡೆಯತಕ್ಕ' ಪರಂಧಾಮವಾಗಿ ಇರುವ ಇವರು ಮಾಡುವ ಆಹ್ನಿಕಕರ್ಮವು ಎಂಥದಿರಬಹುದು? ಎಂಬ ಕುತೂಹಲದಿಂದ ನಾರಾಯಣನನ್ನು 'ಸರ್ವರಿಗೂ ಇಜ್ಯನಾಗಿರುವ ನೀನು ಯಾರನ್ನು ಪೂಜಿಸುತ್ತಿರುವೆ? ದಯವಿಟ್ಟು ಹೇಳು' ಎಂದು ಕೇಳಿದರು. ನಾರಯಣಭಗವಂತನು 'ಅವ್ಯಕ್ತಾದಿ'ಸರ್ವಜಗತ್ತಿಗೂ ಕಾರಣನಾಗಿರುವ ಅಂತರಾತ್ಮನನ್ನೇ ನಾವು ಪೂಜಿಸುತ್ತಿರುವೆವು. ಆತನಿಗಿಂತ ಹೆಚ್ಚಿನ ಪಿತೃವಾಗಲಿ ದೇವತೆಯಾಗಲಿ ದ್ವಿಜನಾಗಲಿ ಇರುವದಿಲ್ಲ ; ಅವನು ಎಲ್ಲರಿಗೂ ಆತ್ಮನಲ್ಲವೆ? ದೈವಪಿತ್ರ್ಯಕರ್ಮಗಳನ್ನು ಮಾಡಬೇಕೆಂಬುದು ಆತನ ಅಪ್ಪಣೆ. ಯಾರು ಆತನನ್ನು ಪೂಜಿಸುವದೋ ಅವರು ಸರ್ವಗತನೂ ನಿರ್ಗುಣನೂ ಆದ ಆತನನ್ನೇ ಸೇರುತ್ತಾರೆ, ನಾವೂ ಆತನನ್ನೇ ಪೂಜಿಸುತ್ತೇವೆ'.

**ಶ್ರೀಶ್ರೀಗಳು** ಅನುವಾದದಲ್ಲಿ ಹೇಳಿದ್ದೇನೆಂದರೆ: ನಾರದರು ನಾರಾಯಣನ ಪರಮಭಕ್ತರು; ಲೋಕಕಲ್ಯಾಣಕ್ಕಾಗಿಯೇ ಎಲ್ಲೆಲ್ಲಿಯೂ ಸಂಚರಿಸುತ್ತಿರುವವರು. ಅಂಥವರು ಲೋಕಕ್ಕೆ ಪರಮಾರ್ಥವು ತಿಳಿಯಲೆಂದೇ ನಾರಾಯಣನನ್ನು ಪ್ರಶ್ನೆ ಮಾಡಿರುತ್ತಾರೆ. ಶ್ರೀಮನ್ನಾರಾಯಣನು ಸರ್ವರಿಗೂ ಪೂಜ್ಯನಾಗಿರುವಲ್ಲಿ ಆತನು ಯಾರನ್ನು ಪೂಜಿಸುತ್ತಿರುವನೊ! -ಎಂಬ ಸಂಶಯವನ್ನು ಈ ನಾರದನಾರಾಯಣಸಂವಾದದ ಮೂಲಕ ವ್ಯಾಸರು ಪರಿಹರಿಸಿಕೊಟ್ಟಿರುತ್ತಾರೆ. ಭಗವಂತನು ತಾನು ಒಬ್ಬನೇ ಆಗಿದ್ದರೂ ನರನಾರಾಯಣ ಹರಿಕೃಷ್ಣರೆಂಬ ಚತುರ್ವ್ಯೂಹವನ್ನು ಮಾಡಿಕೊಂಡು ಅವತರಿಸಿ ಲೋಕಾನುಗ್ರಹವನ್ನು ಮಾಡಿದನೆಂದು ಇಲ್ಲಿ ಹೇಳಿರುವದನ್ನು ಲಕ್ಷಿಸಬೇಕು; ಭಾಗವತಸಂಪ್ರದಾಯದಂತೆ ವಾಸುದೇವ, ಪ್ರದ್ಯುಮ್ನ, ಸಂಕರ್ಷಣ, ಅನಿರುದ್ಧ-ಎಂಬ ಚತುರ್ವ್ಯೂಹವು ಪರಮಾತ್ಮನದು. ವೈಖಾನಸ ಧರ್ಮಸೂತ್ರದಲ್ಲಿ ಅಚ್ಯುತಾದಿಯಾಗಿ ಬೇರೊಂದು ಬಗೆಯ ವ್ಯೂಹಚತುಷ್ಟಯವನ್ನು ಹೇಳಿದೆ. ಶಂಕರಭಗವತ್ಪಾದರವರು ಬರೆದಿರುವಂತೆ ಬ್ರಹ್ಮಾದಿಸ್ತಂಬಪರ್ಯಂತವಾದ ಇಡಿಯ ಜಗತ್ತೇ ಭಗವದ್ವ್ಯೂಹವಾಗಿ ಇರುತ್ತದೆ. ಆದ್ದರಿಂದ ನರನಾರಾಯಣರೂಪದಿಂದ ಆತನು ನಮ್ಮೆಲ್ಲರ ಆತ್ಮನಾಗಿರುವ ಪರತತ್ತ್ವವನ್ನು ಪೂಜಿಸಿ ತೋರಿಸಿರುವದು-ನಾವುಗಳೂ

ನಮ್ಮೆಲ್ಲರ ಆತ್ಮನನ್ನೇ ಪೂಜಿಸಬೇಕು, ಪೂಜ್ಯಪೂಜಕಭಾವವು ಕೇವಲ ವ್ಯಾವಹಾರಿಕವಾದದ್ದು ಎಂಬ-ಪರಮಾರ್ಥವನ್ನು ತಿಳಿಯಪಡಿಸುವದಕ್ಕೇ ಆಗಿವೆ. ಪರಮಾತ್ಮನು ನಿತ್ಯನೂ ನಿರ್ಗುಣನೂ ಆಗಿದ್ದರೂ ನಮಗೆ ಪೂಜ್ಯನಾಗಿರುವಾಗ ಅನೇಕ ಗುಣಗಳಿಂದ ಕೂಡಿರುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ನಾವೆಲ್ಲರೂ ಆ ಭಗವಂತನನ್ನು ಆಶ್ರಯಿಸಿಕೊಂಡೇ ಇರುತ್ತೇವೆ; ಆತನನ್ನು ಅವ್ಯಭಿಚರಿತವಾದ ಭಕ್ತಿಯಿಂದ ಪೂಜಿಸಿದರೆ ತತ್ತ್ವಜ್ಞಾನವನ್ನು ಪಡೆದು ಆತನ ಸಾಯುಜ್ಯವನ್ನೇ ಪಡೆಯುವೆವು.

★★★★★

## ಉಪಶಾಂತತೆ

**3-5-1960**

**ಬ್ರ॥ ಶ್ರೀ॥ ಲಕ್ಷ್ಮೀನರಸಿಂಹಶಾಸ್ತ್ರಿಗಳವರು**

**ವಾಸಿಷ್ಠರಾಮಾಯಣ ಉಪಶಮ ಪ್ರಕರಣದ 5ನೆಯ ಸರ್ಗದಲ್ಲಿ** - ಮೊದಲೂ ಕೊನೆಗೂ ಇಲ್ಲದಿರುವ ಸಂಸಾರದಲ್ಲಿ ಆಸಕ್ತನಾಗಿ ಇರುವವನು ಪಶುತುಲ್ಯನು. ಅಜ್ಞನ ಮನಸ್ಸೇ ಜನ್ಮವೃದ್ಧಿಗಳನ್ನು ಹೊಂದುತ್ತದೆ; ಸಮ್ಯಗ್ದರ್ಶನದಿಂದ ಮುಕ್ತವಾಗುತ್ತದೆ. ಆದ್ದರಿಂದ ಯಾವಾಗಲೂ ಇರುವ ಪರಮಾರ್ಥವನ್ನು ಪಡೆದುಕೊಳ್ಳಬೇಕಾದದ್ದಿಲ್ಲ. ಮನಸ್ಸನ್ನು ದಾಟುವ ಉಪಾಯವನ್ನು ಮಾತ್ರ ಕೈಕೊಳ್ಳಬೇಕು. ಶಾಸ್ತ್ರೋಪದೇಶಶ್ರವಣ, ವೈರಾಗ್ಯ, ಸತ್ಸಂಗ-ಇವುಗಳಿಂದಲೇ ಮನಸ್ಸು ಉತ್ತಮವಾಗುತ್ತದೆ. ವೈರಾಗ್ಯವು ಬಂದಾಗ ಗುರೂಪಸತ್ತಿಯನ್ನು ಮಾಡಿ ಧ್ಯಾನಾದಿಗಳನ್ನು ಅನುಷ್ಠಾನಮಾಡಿ ಪರಮಪದವನ್ನು ಪಡೆದುಕೊಳ್ಳಬೇಕು. ಅಕ್ಕಸಾಲೆಯು ಚಿನ್ನವನ್ನೂ ಬೂದಿಯನ್ನೂ ಬಿಡಿಸಿ ತಿಳಿದುಕೊಳ್ಳುವಂತೆ ವಿಚಾರದಿಂದ ಜ್ಞಾನವನ್ನು ಸಂಪಾದಿಸಿಕೊಂಡವನಿಗೆ ಮೋಹವಿರುವದಿಲ್ಲ. ಆತ್ಮನನ್ನು ಅರಿತುಕೊಂಡಮಾತ್ರದಿಂದ ದುಃಖೋಪಶಮನವಾಗಿ ಅನಂತಸುಖಕ್ಕೆ

ಕಾರಣವಾಗುವದು. ಆದ್ದರಿಂದ ವಿವೇಕದಿಂದ ಸಾಧಕನು ತನ್ನ ಆತ್ಮನಲ್ಲಿ ನೆಲೆನಿಲ್ಲಬೇಕು. ವಿವೇಕಮಾತ್ರದಿಂದ ಅಜ್ಞಾನವು ತೊಲಗಿಹೋಗುವದು. ಸರಿಯಾಗಿ ನೋಡಿದರೆ ಸುಖದುಃಖಗಳು ದೇಹಕ್ಕೆ ಇಲ್ಲ, ಆತ್ಮನಿಗೂ ಇಲ್ಲ ; ಅಜ್ಞಾನಿಗೇ ಅವು ಆಗುತ್ತಿರುವವು. ಆತ್ಮಜಗತ್ತುಗಳು ಒಂದೂ ಅಲ್ಲ, ಭಿನ್ನವೂ ಅಲ್ಲ. ಆತ್ಮನೊಬ್ಬನೇ ಸತ್ಯ; ಭ್ರಾಂತಿಯಿಂದಲೇ ಈ ಜಗತ್ತು ಹರಡಿಕೊಂಡು ತೋರುತ್ತಿರುವದು. ಆದ್ದರಿಂದ ಇರುವದೊಂದೇ ನಿಜವಾಗಿರುವದು ಎಂದು ತಿಳಿದು ಮನಸ್ಸಿನ ವ್ಯಥೆಯನ್ನು ತ್ಯಜಿಸಿ ಶಾಂತನಾಗಬೇಕು. ಅಂಥ ಮುಕ್ತನಿಗೆ ತನ್ನಿಂದಲೇ ತನಗೆ ಆನಂದವು ದೊರಕುವದು. ಆದ್ದರಿಂದ ತಾನು ಯಾವಾಗಲೂ ನಿತ್ಯಶುದ್ಧಮುಕ್ತಸ್ವಭಾವನೆಂದರಿತು ಕೃತಕೃತ್ಯನಾಗಬೇಕು-ಎಂಬುದು ಸರ್ಗದ ಅಭಿಪ್ರಾಯವು.

**ಶ್ರೀ ಶ್ರೀಗಳವರು :** ಕೇವಲ ವಾಸನಾವಶದಿಂದ ವಿಷಯಚಿಂತನೆಯನ್ನು ಮಾಡುವದರಿಂದಲೇ ನಮಗೆ ಜಗತ್ತಿನ ಅನುಭವವೂ ಸಂಸಾರವೂ ಆಗಿದೆ ; ಆ ಜಗತ್ತಿನ ಉತ್ಪತ್ತಿಸ್ಥಿತಿಲಯಗಳೆಲ್ಲವೂ ಮನಸ್ಸಿನ ವಿಕಲ್ಪಮಾತ್ರವೇ. ನಮ್ಮ ಸ್ವರೂಪವು ನಮ್ಮದೇ ಆಗಿ ಎಂದೆಂದಿಗೂ ಇರುವದು ಎಂಬುದನ್ನು ಮನದಟ್ಟು ಮಾಡಿಕೊಂಡು ಸ್ವಸ್ಥರಾಗಬೇಕು-ಎಂಬುದೇ ಮುಖ್ಯವಾಗಿ ವಾಸಿಷ್ಠರಾಮಾಯಣದ ಉಪದೇಶವು-ಎಂದು ತತ್ತ್ವಾಧಿಗಮೋಪಾಯವನ್ನು ಶ್ರದ್ಧಾವೈದ್ಯವೇ (Faith Cure) ಮುಂತಾದ ದೃಷ್ಟಾಂತಗಳಿಂದ ಸ್ಪಷ್ಟಪಡಿಸಿದರು. ಮನಸ್ಸಿನಿಂದಲೇ ಬಂಧಮೋಕ್ಷಗಳೆಂದು ಗೊತ್ತಿದ್ದರೂ ಜನರು ಮನಸ್ಸನ್ನು ದಾಟುವದು ಹೇಗೆ? ಎಂದು ಮತ್ತೆ ಮತ್ತೆ ಪ್ರಶ್ನೆಮಾಡುತ್ತಿರುವರು. ಹೊರಮುಖವಾಗಿ ಮನಸ್ಸನ್ನು ಬಿಡದೆ ನಮ್ಮಲ್ಲಿ ನಾವು ಉಪಶಾಂತರಾಗಿ ಸುಮ್ಮನಿದ್ದರಾಯಿತು-ಎಂಬುದನ್ನು ಈ ರಾಮಾಯಣದಲ್ಲಿ ಹೇಗೆ ಮತ್ತೆಮತ್ತೆ ತಿಳಿಸಿದೆ ಎಂಬುದನ್ನು ವಿಶದಗೊಳಿಸಿದರು.

★★★★★

# ಜಡಭರತಸೌವೀರರಾಜಸಂವಾದ

**4-5-1960**

**ಬ್ರ॥ ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

ವಿಷ್ಣುಪುರಾಣದಲ್ಲಿ 2-14ರಲ್ಲಿ ''**ಜಡಭರತಸೌವೀರರಾಜಸಂವಾದ**'' ವಿದೆ. ಶಾಲಗ್ರಾಮಕ್ಷೇತ್ರದಲ್ಲಿ ತಪಸ್ಸುಮಾಡಿಕೊಂಡಿದ್ದ ಭರತನು ಜಿಂಕೆಯ ವ್ಯಾಮೋಹದಿಂದ ಜಿಂಕೆಯಾಗಿ ಹುಟ್ಟಿ ಶರೀರತ್ಯಾಗವನ್ನು ಮಾಡಿದ ಬಳಿಕ ಜಾತಿಸ್ಮರನಾದ ಬ್ರಾಹ್ಮಣನಾಗಿ ಜನಿಸಿದನು. ಅಲ್ಲಿ ಆತ್ಮಜ್ಞಾನವನ್ನು ಪಡೆದು ಸರ್ವಭೂತಗಳಲ್ಲಿಯೂ ಪರಮಾತ್ಮನನ್ನೇ ಕಾಣುತ್ತಿದ್ದನು. ನೋಡುವ ಜನರಿಗೆ ಜಡನಂತೆಯೂ ಉನ್ಮತ್ತನಂತೆಯೂ ಕಾಣುತ್ತಿದ್ದನು. ಜನರು ಆಹಾರವನ್ನು ಕೊಟ್ಟು ಅವನಿಂದ ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದರು. ಸೌವೀರರಾಜನು ಕಪಿಲರ ದರ್ಶನಕ್ಕಾಗಿ ಪಲ್ಲಕ್ಕಿಯಮೇಲೆ ಪ್ರಯಾಣಮಾಡುತ್ತಿರಲು ಅವನ ಕಡೆಯವರು ಈ ಬ್ರಾಹ್ಮಣನನ್ನು ಪಲ್ಲಕ್ಕಿಯನ್ನು ಹೊರುವದಕ್ಕೆ ಬಿಟ್ಟಿಹಿಡಿದರು, ರಾಜನು ಪಲ್ಲಕ್ಕಿಯನ್ನು ಏಕೆ ಸರಿಯಾಗಿ ಹೊರುವದಿಲ್ಲವೊ ? ಶರೀರದಲ್ಲೇನೋ ಬಲವಾಗಿದ್ದೀಯಲ್ಲ?- ಎಂದು ಕೇಳಲು ಬ್ರಾಹ್ಮಣನು ಆ ನೆಪವನ್ನು ಉಪಯೋಗಿಸಿಕೊಂಡೇ ಅವನಿಗೆ ತತ್ತ್ವೋಪದೇಶವನ್ನೇ ಮಾಡಿದನು. ಆಗ ರಾಜನು ವಿನಯಾನ್ವಿತನಾಗಿ ಕೇಳಿದ ಪ್ರಶ್ನೆಗೆ ಬ್ರಾಹ್ಮಣನು ಕೊಟ್ಟ ಉತ್ತರವನ್ನು ಈ ಅಧ್ಯಾಯದಲ್ಲಿ ಹೇಳಿದೆ.

'ವಿಷ್ಣುವಿನ ಅಂಶವಾದ ಕಪಿಲರೇ ನೀವೆಂದು ನನ್ನ ನಂಬಿಕೆ. ದಯವಿಟ್ಟು ನನಗೆ ಶ್ರೇಯಸ್ಸಾದದ್ದನ್ನು ಹೇಳಿಕೊಡಬೇಕು'- ಎಂದು ರಾಜನು ಕೇಳಿಕೊಳ್ಳಲು ಬ್ರಾಹ್ಮಣನು ಹೇಳಿದ ಉತ್ತರವಿದು.

ಶ್ರೇಯಸ್ಸುಗಳು ಬಗೆಬಗೆಯಾಗಿರುತ್ತವೆ. ಆದರೆ ಅವೇನೂ ಪರಮಾರ್ಥವಲ್ಲ. ಪುತ್ರ, ರಾಜ್ಯ, ಯಜ್ಞ, ಧ್ಯಾನ-ಮುಂತಾದವುಗಳಲ್ಲಿ ಯಾವದು ತಾನೆ ಪರಮಾರ್ಥ ಫಲವಾದೀತು? ಪರಮಾರ್ಥವೆಂದರೆ

ಪರಮಾತ್ಮನೇ. ಆತನು ಒಬ್ಬನೇ, ವ್ಯಾಪಕನು, ಸರ್ವಸಮನು, ಶುದ್ಧನು, ನಿರ್ಗುಣನು, ಪ್ರಕೃತಿಯಿಂದಾಚೆಗೆ ಇರುವಾತನು; ಜನ್ಮಾದಿವಿಕಾರರಹಿತನು, ಅವ್ಯಯನು, ಪರಮಚೈತನ್ಯಸ್ವರೂಪನು, ನಾಮಜಾತ್ಯಾದಿವಿಕಲ್ಪರಹಿತನು, ಎಲ್ಲರ ದೇಹದಲ್ಲಿಯೂ ಆತನೊಬ್ಬನೇ ಇದಾನೆಂದು ತಿಳಿದು ಕೃತಕೃತ್ಯನಾಗಬೇಕು.

**ಶ್ರೀಗಳು** ಅನುವಾದದಲ್ಲಿ ಇಂತೆಂದರು: ಭರತನು ಜಾತಿಬ್ರಾಹ್ಮಣನಾಗಿ ಹುಟ್ಟಿ ಜಡೋನ್ಮತ್ತರ ವರ್ತನವನ್ನು ತೋರಿಸುತ್ತಿದ್ದನೆಂದು ಇಲ್ಲಿ ಹೇಳಿರುವದನ್ನು ಜನರು ದುರುಪಯೋಗಮಾಡಿಕೊಳ್ಳುವ ಸಂಭವವಿದೆ. ಜಡನಂತೆಯೂ ಉನ್ಮತ್ತನಂತೆಯೂ ತೋರಿಸಿಕೊಂಡರೆ ಸಾಲದು. ಸರ್ವತ್ರವೂ ವ್ಯಾಪಿಸಿರುವ ಪರಮಾತ್ಮನಲ್ಲಿ ನಿಷ್ಠೆಯಿರುವಾತನೇ ಮಹಾತ್ಮನು: ಅರಿಯದವರು ಅವನನ್ನು ಜಡನೆಂದೂ ಉನ್ಮತ್ತನೆಂದೂ ಭ್ರಾಂತಿಯಿಂದ ತಿಳಿಯುತ್ತಾರೆ. ಅಷ್ಟೆ. ಸೌವೀರರಾಜನು ಮೊದಲು ವಿವೇಕವಿಲ್ಲದ್ದರಿಂದ ಭರತನನ್ನು ಬಿಟ್ಟಿಗೆ ತಕ್ಕವನೆಂದು ತಿಳಿದು ಹೆಮ್ಮೆಯ ಮಾತುಗಳನ್ನಾಡಿದನು. ಆದರೆ ಅವನು ಮಹಾತ್ಮನೆಂದು ತಿಳಿದಕೂಡಲೆ ಪಲ್ಲಕ್ಕಿಯಿಂದ ಕೆಳಕ್ಕಿಳಿದು ಆತನಿಗೆ ನಮಸ್ಕರಿಸಿ ವಿನಯದಿಂದ ಪ್ರಶ್ನೆಮಾಡಿ ತತ್ತ್ವವನ್ನು ತಿಳಿದುಕೊಂಡನು. ಪರಮಾರ್ಥವನ್ನುಪದೇಶಿಸಿ ಅನುಗ್ರಹಿಸಲು ಸಮರ್ಥನಾದ ಈ ಮಹಾತ್ಮನ ಮೇಲೆ ಪಲ್ಲಕ್ಕಿಯನ್ನು ಹೊರಿಸಿದೆನಲ್ಲ!-ಎಂದು ಪಶ್ಚಾತ್ತಾಪದಿಂದ ಕೊರಗಿದನು. ಅಹಂಕಾರರಹಿತನಾಗಿ ಜಿಜ್ಞಾಸುವಾಗಿದ್ದದ್ದರಿಂದ ಅವನಿಗೆ ಉಪದೇಶದ ಮರ್ಮವು ತಿಳಿಯಿತು, ಕೃತಾರ್ಥನಾದನು. ಜಿಜ್ಞಾಸುಗಳು ದೇಹಾಭಿಮಾನವನ್ನು ಬಿಟ್ಟು ಶಮದಮಾದಿಗಳನ್ನು ಸಂಪಾದಿಸಿಕೊಂಡು ಮಹಾತ್ಮರ ಉಪದೇಶವನ್ನು ಪಡೆಯಬೇಕು-ಎಂಬುದು ಇಲ್ಲಿ ಸ್ಫುಟವಾಗಿದೆ. ಜ್ಞಾನಿಗಳ ಹೃದಯವು ಮುಖ್ಯವೇ ಹೊರತು ಸಾಮಾನ್ಯವಾದ ಹೊರಗಿನ ವೇಷವನ್ನು ನೋಡಿ ಅವರನ್ನು ಧಿಕ್ಕರಿಸಬಾರದು-ಎಂಬ ನೀತಿಯೂ ಇಲ್ಲಿ ಉಕ್ತವಾಗಿದೆ.

★★★★★

# ಹಂಸವಿದ್ಯೆ

**5-5-1960**

**ಬ್ರ|| ಶ್ರೀ|| ಎಚ್.ಅನಂತಮೂರ್ತಿಶಾಸ್ತ್ರಿಗಳು**

**ಸೂತಸಂಹಿತೆಯಲ್ಲಿ ಯಜ್ಞವೈಭವಖಂಡದಲ್ಲಿ** ಏಳನೆಯ ಅಧ್ಯಾಯದಲ್ಲಿ **ಹಂಸವಿದ್ಯೆಯ ವಿವರಣೆಯಿದೆ.** ಮಂತ್ರವನ್ನು ಶಿವಶಕ್ತ್ಯಾತ್ಮಕವೆಂದು ಜಪಿಸುವದು, ಪ್ರಾಣಾಪಾನವೃತ್ತಿಗಳನ್ನೇ ಮಂತ್ರಾಕ್ಷರಗಳೆಂದು ಭಾವಿಸಿ ಜಪಿಸದೆ ಜಪದ ಫಲವನ್ನು ಪಡೆಯುವದು, ಜೀವೇಶ್ವರೈಕ್ಯವನ್ನು ಅನುಸಂಧಾನಮಾಡುವದು-ಈ ಮೂರು ಪ್ರಕಾರಗಳಿಂದ ಅಧಿಕಾರಿಭೇದವನ್ನು ಅನುಸರಿಸಿ ಮಂತ್ರದ ಅನುಷ್ಠಾನವನ್ನು ಹೇಳಿರುವದಲ್ಲದೆ, ನಿತ್ಯಾನುಷ್ಠಾನಯೋಗವನ್ನೂ ಇಲ್ಲಿ ಹೇಳಿರುತ್ತದೆ. ಗುರೂಪದೇಶಪೂರ್ವಕವಾಗಿ ಅಭ್ಯಾಸಮಾಡಿದರೆ ಮಂತ್ರವು ಸಫಲವಾಗುವದೆಂದು ಹೇಳಿದೆ. ಗುರುಭಕ್ತಿಯ ಮಹಿಮೆಯನ್ನೂ ತಿಳಿಸಿದೆ. ಶಾಸ್ತ್ರಿಗಳು ಪ್ರತಿಯೊಂದು ಚಿಂತನ ಕ್ರಮವನ್ನೂ ತಿಳಿಸಿ, ಕೊನೆಯಲ್ಲಿ ಹೇಳಿದ ಯೋಗದ ಚಕ್ರಜಯ ಮತ್ತು ಅದರಿಂದಾಗುವ ಸಿದ್ಧಿ- ಈ ವಿಚಾರವನ್ನು ಅರ್ಥಕ್ರಮಾನುಸಾರವಾಗಿ ಜ್ಞಾನವಿಚಾರದ ಹಿಂದಕ್ಕೆ ಹಾಕುವದು ಯುಕ್ತವೆಂದು ಕಾಣುತ್ತದೆ ಎಂತ ತಮ್ಮ ಅಭಿಪ್ರಾಯವನ್ನು ತಿಳಿಸಿದರು.

**ಶ್ರೀಗಳು** ಅನುವಾದದಲ್ಲಿ ಇಂತೆಂದರು: ಸೂತಸಂಹಿತೆಯು ಕರ್ಮ, ಉಪಾಸನೆ, ಜ್ಞಾನ-ಇವುಗಳೆಲ್ಲವನ್ನೂ ಕ್ರಮವರಿತು ಉಪದೇಶಿಸಿರುವದರಿಂದ ಪುರಾಣಗಳಲ್ಲಿ ಅದಕ್ಕೊಂದು ವಿಶಿಷ್ಟಸ್ಥಾನವಿದೆ. ಶ್ರೀಶಂಕರಭಗವತ್ಪಾದರವರು ಎಷ್ಟೋಸಾರಿ ಅದನ್ನು ಓದಿ ತಮ್ಮ ಭಾಷ್ಯವನ್ನು ಬರೆದರು-ಎಂಬುದೊಂದು ಲೋಕೋಕ್ತಿಯಿದೆ. ಭಾಷ್ಯಾರ್ಥದ ಸಾರವೆಲ್ಲವೂ ಇದರಲ್ಲಿದೆ ಎಂಬ ಅಭಿಪ್ರಾಯದಿಂದ ಈ ಉಕ್ತಿ ಹುಟ್ಟಿರಬೇಕು. ಆಗಮಗಳ ವಿಚಾರವು ಇದರಲ್ಲಿ ತಕ್ಕಷ್ಟು ವಿಸ್ತಾರವಾಗಿದೆ. ಕೊನೆಯಲ್ಲಿ ಶಿವ, ವಿಷ್ಣು, ಶಕ್ತಿ-ಮುಂತಾದ ಸಂಬಂಧದ ಉಪದೇಶಗಳು ತಾಂತ್ರಿಕರಿಗೆ ಹೇಳಿದವುಗಳು; ಅವುಗಳನ್ನು ವೈದಿಕರು ಅನುಸರಿಸಬಾರದು-ಎಂಬ ಸ್ಪಷ್ಟೋಕ್ತಿಯಿದೆ. ಮೊದಲು ಕರ್ಮಪ್ರಧಾನವಾಗಿ

ಪ್ರಾರಂಭಿಸಿದ ಈ ಪುರಾಣವು ಜಪಧ್ಯಾನಗಳನ್ನು ವಿವರಿಸುತ್ತಾ ಮಾತೃಕಾ, ಗಾಯತ್ರೀ, ಷಡಕ್ಷರೀ, ಹಂಸ, ಪ್ರಣವ-ಹೀಗೆ ಮೆಟ್ಟಿಲುಮೆಟ್ಟಿಲಾಗಿ ಜಪಶಾಸ್ತ್ರವನ್ನು ಕ್ರಮಪಡಿಸಿ ಬರಿಯ ತಾಂತ್ರಿಕದಲ್ಲಿ ಮುಗಿಸದೆ ವೈದಿಕದಲ್ಲಿ ಪರ್ಯವಸಾನ ಮಾಡಿರುವದೊಂದು ಇದರ ವಿಶೇಷ. ಪ್ರಕೃತದಲ್ಲಿ ಕೇವಲ ಉಚ್ಚಾರಣಾರೂಪವಾದ ಜಪ, ಪ್ರಾಣವೃತ್ತಿಗಳ ಅನುಸಂಧಾನ, ಮನಸ್ಸಿನ ವೃತ್ತಿಗಳು -ಹೀಗೆ ಸೂಕ್ಷ್ಮತರವಾಗಿ ಒಳಹೊಕ್ಕು ಕೊನೆಯಲ್ಲಿ ಅಖಂಡಚೈತನ್ಯದಲ್ಲಿ ಕೊನೆಗಾಣಿಸಿರುವದು ಮಂತ್ರಶಾಸ್ತ್ರವು ಎಷ್ಟರಮಟ್ಟಿಗೆ ವೇದಾಂತಕ್ಕೆ ಹೊಂದುಗೆಯಾಗಬಹುದೆಂಬುದನ್ನು ಮನದಟ್ಟುಮಾಡಿಕೊಡುವಂತಿದೆ.

★★★★★

# ತೃಷ್ಣಾವಿಚ್ಛೇದೋಪದೇಶ

**6-5-1960**

**ಬ್ರ॥ ಶ್ರೀ॥ ಕೊ. ಕೃಷ್ಣಜೋಯಿಸರು**

**ವಾಸಿಷ್ಠರಾಮಾಯಣದಲ್ಲಿ** ಉಪಶಮಪ್ರಕರಣದ 17ನೆಯ ಸರ್ಗದಲ್ಲಿ ವಸಿಷ್ಠರು ರಾಮನಿಗೆ ಉಪದೇಶಮಾಡುತ್ತಿದಾರೆ: ಪ್ರಾಕೃತರು ತೃಷ್ಣೆಯಿಂದ ಮಾಡುವ ಕರ್ಮಗಳನ್ನು ತೃಷ್ಣಾವರ್ಜಿತವಾಗಿ ಮಾಡುವ ಸ್ಥಿತಿಯು ಜೀವನ್ಮುಕ್ತಿಯು. ಜೀವನು ಬದ್ಧಭಾವದಿಂದ ಹೊರಗಿನ ವಿಷಯದಲ್ಲಿ ವಿಹರಿಸುವದು ಬಂಧವು: ಸಂಕಲ್ಪವಿಲ್ಲದೆ ಅವುಗಳಲ್ಲಿ ವಿಹರಿಸುವದು ಜೀವನ್ಮುಕ್ತನ ಸ್ಥಿತಿ. ಬಾಹ್ಯಾರ್ಥವ್ಯಸನಗಳಿಂದ ಬೆಳೆದ ತೃಕ್ಷ್ಣಿಯೇ ಬಂಧವು, ಯಾವ ಲಾಂಪಟ್ಯವೂ ಇಲ್ಲದ ಸ್ಥಿತಿಯು ಜೀವನ್ಮುಕ್ತಿ. ವಿಷಯಪ್ರಾಪ್ತಿಗೆ ಪೂರ್ವದಲ್ಲಿ, ವಿಷಯನಾಶವು ಆದಮೇಲೆ, ಅದು ಇರುವಾಗ-ಯಾವಾಗಲೂ ನಿರ್ದುಃಖನಾಗಿ ನಿಷ್ಕಲನಾಗಿರುವದೇ ಜೀವನ್ಮುಕ್ತಿ. ಇದು ನನಗೆ ಆಗಲಿ ಎಂಬುದೇ ಸಂಕೋಲೆ. ಯಾವ ಪದಾರ್ಥಗಳು ಇದ್ದರೂ ಇಲ್ಲದಿದ್ದರೂ

ಆ ತೃಷ್ಣೆಯಿಲ್ಲದೆ ಬಂಧಾಶೆ, ಮೋಕ್ಷಾಶೆ-ಎರಡೂ ಇಲ್ಲದೆ ಶಾಂತನಾಗಿರು. ಅಜರಾಮರವಾಗಿರುವ ನಿನ್ನ ಸ್ವರೂಪವನ್ನು ಅರಿತುಕೊಂಡು ಮುಪ್ಪುಮರಣಗಳ ಶಂಕೆಯನ್ನು ಬಿಟ್ಟುಬಿಡು, ಬಾಹ್ಯ ಪದಾರ್ಥವೇ ಬೇರೆ, ನಿನ್ನ ಸ್ವರೂಪವೇ ಬೇರೆ. ಅಸತ್ತಾಗಿದ್ದು ಹುಟ್ಟಿ ಸತ್ತಿನಂತೆ ತೋರುವ ಈ ವಿಶ್ವದ ತೃಷ್ಣೆಯು ಸದಸತ್ತುಗಳನ್ನು ಮೀರಿರುವ ನಿನಗೆ ಎಲ್ಲಿಯದು? ಮಾತಾಪಿತೃಗಳಿಂದ ಜನಿಸಿದ ಈ ಶರೀರವೇ ನಾನೆಂಬುದು ಬಂಧಕಾರಣವಾದ ನಿಶ್ಚಯವು; 'ಸರ್ವವಸ್ತುಗಳಿಗಿಂತಲೂ ವಿಲಕ್ಷಣವಾದ ಸೂಕ್ಷ್ಮರೂಪನು ನಾನು' ಎಂಬುದು ಮೋಕ್ಷಕಾರಣವಾದ ನಿಶ್ಚಯ; ಈ ಜಗತ್ತೆಲ್ಲವೂ ನಾನೇ ಎಂಬ ನಿಶ್ಚಯವೂ ಮೋಕ್ಷಕಾರಣವೇ. ನಾನೆಂಬುದು ಜಗತ್ತು-ಎಲ್ಲವೂ ಆಕಾಶದಂತೆ ಶೂನ್ಯಸ್ವರೂಪವು-ಎಂಬ ನಾಲ್ಕನೆಯ ನಿಶ್ಚಯವೂ ಮೋಕ್ಷಕ್ಕೆ ಕಾರಣವು. ಬದ್ಧರಿಗೆ ಮೊದಲನೆಯ ನಿಶ್ಚಯ; ಜೀವನ್ಮುಕ್ತರಿಗೆ ಮಿಕ್ಕ ಮೂರು ನಿಶ್ಚಯಗಳು. ಎಲ್ಲ ಆತ್ಮನಾದ ನಾನೇ ಎಂಬ ನಿಶ್ಚಯವನ್ನು ಇಟ್ಟುಕೊಂಡಿದ್ದರೆ ವಿಷಾದಕ್ಕೆ ಕಾರಣವಿಲ್ಲ. ಅಡ್ಡಡ್ಡಲಾಗಿ, ಮೇಲೆ, ಕೆಳಗೆ- ಎಲ್ಲೆಲ್ಲಿಯೂ ಆತ್ಮನ ಮಹಿಮೆಯೇ, ಎಲ್ಲವೂ ಆತ್ಮನೇ, ಎಂಬ ನಿಶ್ಚಯವಾದರೆ ಬಂಧವಿರದು. ಶೂನ್ಯ, ಪ್ರಕೃತಿ, ಮಾಯೆ, ಬ್ರಹ್ಮ, ಶಿವ, ಪುರುಷ, ಈಶ್ವರ-ಇವೆಲ್ಲ ಆತ್ಮನ ನಾಮಗಳೇ. ಬ್ರಹ್ಮನಿಂದ ಹಿಡಿದು ಸ್ತಂಬದ ಪರ್ಯಂತವಾಗಿ ಎಲ್ಲವೂ ಆತ್ಮನಿಂದಲೇ ವ್ಯಾಪ್ತವಾಗಿದೆ; ಆದ್ದರಿಂದ ಇದಕ್ಕಿಂತ ಬೇರೆಯಾಗಿ ಸತ್ಯವಾಗಲಿ ಅನೃತವಾಗಲಿ ಇರುವದಿಲ್ಲ. ದ್ವೈತಾದ್ವೈತ ಭೇದಗಳಿಂದ ಅದ್ವೈತತತ್ತ್ವವೇ ತೋರಿಕೊಳ್ಳುತ್ತಿರುವದು. ಆದ್ದರಿಂದ ಯಾವದು ಬಂದರೂ ಯಾವದು ಹೋದರೂ ದುಃಖಿಯಾಗದಿರು. ಈ ಜಗತ್ತು ಸತ್ತಲ್ಲ, ಅಸತ್ತಲ್ಲ, ಇದೆಲ್ಲವೂ ವಿಜ್ಞಾನಮಾತ್ರವೇ ಎಂದು ತಿಳಿದು ನಾನು, ನೀನು ಜಗತ್ತು-ಎಲ್ಲವೂ ಬ್ರಹ್ಮವೇ ಎಂಬ ನಿಶ್ಚಯವನ್ನು ನಿನ್ನೊಳಗೆ ಮಾಡಿಕೊ.

★★★★★

# ಮುಚುಕುಂದನು ಮಾಡಿದ ಭಗವತ್ಸ್ತುತಿ

**20-4-1961**

**ಬ್ರ॥ ಶ್ರೀ॥ ಎಸ್.ವಿಠ್ಠಲಶಾಸ್ತ್ರಿಗಳವರು**

**ಭಾಗವತ 10ನೆಯ ಸ್ಕಂಧ 51ನೆಯ ಅಧ್ಯಾಯದಲ್ಲಿ** ಮುಚುಕುಂದನು ಮಾಡಿದ ಭಗವತ್‌ಸ್ತುತಿಯು ಹೀಗಿದೆ: ಮಾಂಧಾತೃವಿನ ಮಗನಾದ ಮುಚುಕುಂದನು ದೇವತೆಗಳ ಪ್ರಾರ್ಥನೆಯಂತೆ ಅಸುರರಿಂದ ಅವರನ್ನು ರಕ್ಷಣೆಮಾಡಿದನು. ಈ ರಾಜನಿಗೆ ಅವನು ಕೇಳಿದಂತೆ ನಿದ್ರಾಸುಖದ ವರವನ್ನು ದೇವತೆಗಳು ಕೊಟ್ಟರು. ನಿದ್ರಾಭಂಗವನ್ನು ಮಾಡಿದವನು ನಿನ್ನ ದೃಷ್ಟಿಗೆ ಬಿದ್ದರೆ ಭಸ್ಮವಾಗಲಿ! - ಎಂದು ಅವರು ಅನುಗ್ರಹಿಸಿದ ವರವನ್ನು ಭಗವಂತನು ಉಪಯೋಗಿಕೊಂಡು ಕಾಲಯವನನ್ನು ಅವನ ದೃಷ್ಟಿಗೆ ಗೋಚರನಾಗುವಂತೆ ಏರ್ಪಡಿಸಿ ಅವನ ಇಷ್ಟಾರ್ಥವನ್ನು ನೆರವೇರಿಸಿಕೊಟ್ಟನು. ಮುಚುಕುಂದನು ಭಗವಂತನನ್ನು ಸ್ತೋತ್ರಮಾಡಿದ ವಿವರವು ಇಲ್ಲಿದೆ : 'ನನ್ನ ಕಾಲವು ವ್ಯರ್ಥವಾಗಿ ಸಂಸಾರಚಿಂತೆಯಲ್ಲಿಯೇ ಕಳೆದುಹೋಯಿತು. ನಾನು ರಾಜನೆಂಬ ಭಾವನೆಯಿಂದ ಈ ಜಡದೇಹದಲ್ಲಿ ಅಭಿಮಾನವನ್ನು ಹೊಂದಿದ್ದೆನು. ಈ ಶರೀರವು ಯಾವದಾದರೂ ಎಂದಿದ್ದರೂ ಭಸ್ಮವಾಗತಕ್ಕದ್ದೆಂಬುದನ್ನು ಮರೆತು ಸಂಸಾರಸುಖದಲ್ಲಿ ಕ್ರೀಡಾಮೃಗದಂತೆ ಮನುಷ್ಯನು ಕಾಲಹರಣಮಾಡುತ್ತಿರುತ್ತಾನೆ. ಕರ್ಮವನ್ನು ಮಾಡುವದು, ನಶ್ವರವಾದ ಭೋಗವನ್ನು ಅನುಭವಿಸುವದು- ಇವುಗಳಲ್ಲಿಯೇ ಆಸಕ್ತರಾದ ಜನಕ್ಕೆ ಸಂಸಾರದಿಂದ ಪಾರಾಗುವ ಕಾಲವು ಒದಗಿದರೆ ಸತ್ಸಂಗವು ದೊರೆತು ಭಗವಂತನಲ್ಲಿ ಭಕ್ತಿಯಾಗುತ್ತದೆ. ಈಗ ನನ್ನ ಅದೃಷ್ಟದಿಂದ ಆಕಸ್ಮಾತ್ತಾಗಿ ನಿನ್ನ ಅನುಗ್ರಹವು ದೊರೆತಿದೆ. ನನಗೆ ಮತ್ತೆ ಯಾವ ವರದ ಆಶೆಯೂ ಇಲ್ಲ. ನಿರಂಜನನೂ ನಿರ್ಗುಣನೂ ಅದ್ವಯನೂ ಆದ ಚಿನ್ಮಾತ್ರನಾದ- ನಿನ್ನನ್ನು ಶರಣುಹೊಂದಿರುತ್ತೇನೆ' -ಎಂದು ಪ್ರಾರ್ಥಿಸಿಕೊಂಡನು. ಭಗಂತನು ಅವನಿಗೆ ತಪಶ್ಚರ್ಯೆಯಿಂದ ಸಕಲಪಾಪಗಳನ್ನೂ ಕಳೆದುಕೊಂಡ ಮೂರನೆಯ ಜನ್ಮದಲ್ಲಿ ಭಗವತ್ಪ್ರಾಪ್ತಿಯೇ ಆಗುವಂತೆ ಅನುಗ್ರಹಿಸಿದನು.

**ಶ್ರೀಶ್ರೀಗಳವರು** ಅನುವಾದದಲ್ಲಿ ಧರ್ಮದ ಮಹಿಮೆಯನ್ನೂ ಭಗವಂತನು ಅಪ್ರಾರ್ಥಿತನಾಗಿ ಬಂದು ನಿಷ್ಕಾಮರಾದ ಭಕ್ತರನ್ನು ಹೇಗೆ ಅನುಗ್ರಹಿಸುತ್ತಾನೆ ಎಂಬುದನ್ನು ವಿವರಿಸಿ ಹೇಳಿದರು. ಪ್ರಸಂಗವಶದಿಂದ ಸಕಾಮರಾದವರು ಹೇಗೆ ಧನಾದಿಗಳನ್ನು ಬೇಡಿ ಕೆಡುತ್ತಾರೆ, ಭಗವದ್ಭಕ್ತರು ಹೇಗೆ ಸಂಸಾರದಲ್ಲಿ ವಿರಕ್ತರಾಗಿ ಭಗವದ್ಭಕ್ತಿಯನ್ನೇ ಎಲ್ಲಕ್ಕೂ ಹೆಚ್ಚಿನದೆಂದು ನಂಬಿರುತ್ತಾರೆ ಎಂಬುದನ್ನೂ ಸ್ಪಷ್ಟಪಡಿಸಿದರು.

★★★★★

## ಶ್ರೇಯಃಪ್ರಾಪ್ತಿ

**20-4-1961**

**ವೇ|| ಮತ್ತೂರು ರಾಮಸ್ವಾಮಿಅವಧಾನಿಗಳವರು**

**ಭಾರತ ಮೋಕ್ಷಧರ್ಮ 287ನೆಯ ಅಧ್ಯಾಯದಲ್ಲಿ** ಶ್ರೇಯಃಪ್ರಾಪ್ತಿಯ ಕುರಿತು ಯುಧಿಷ್ಠಿರನ ಪ್ರಶ್ನೆಗೆ ಉತ್ತರವಾಗಿ ಭೀಷ್ಮಾಚಾರ್ಯರು ಗಾಲವ ನಾರದಸಂವಾದರೂಪದ ಕಥೆಯನ್ನು ಹೇಳಿ ಉತ್ತರವನ್ನು ಕೊಟ್ಟಿರುತ್ತಾರೆ.

ಮಿತ್ರಾನುಗ್ರಹ, ಅಮಿತ್ರರ ನಿಗ್ರಹ, ಧರ್ಮಾರ್ಥಕಾಮಗಳ ಸಂಗ್ರಹ-ಇದು ಶ್ರೇಯಸ್ಕರವಾದದ್ದು. ಪಾಪಕರ್ಮತ್ಯಾಗ, ಪುಣ್ಯಕರ್ಮದಲ್ಲಿ ಪ್ರೀತಿ, ಸತ್ಸಂಗ- ಇದು ಶ್ರೇಯಸ್ಕರವಾದದ್ದು. ಸರ್ವಭೂತಗಳಲ್ಲಿಯೂ ಮೃದುವಾಗಿರುವದು, ವ್ಯವಹಾರದಲ್ಲಿ ಋಜುಭಾವದಿಂದಿರುವದು, ಮಧುರವಾದ ಮಾತನ್ನು ಆಡುವದು- ಇದು ಶ್ರೇಯಸ್ಕರ. ದೇವತೆಗಳು, ಪಿತೃಗಳು, ಅತಿಥಿಗಳು- ಇವರ ಸತ್ಕಾರ, ಭೃತ್ಯರಿಗೆ ಆಶ್ರಯವನ್ನು ಕೊಡುವದು- ಇದು ಶ್ರೇಯಸ್ಕರ. ಸತ್ಯ, ಅಹಂಕಾರತ್ಯಾಗ, ಪ್ರಮಾದವಿಲ್ಲದಿರುವದು, ಸಂತುಷ್ಟನಾಗಿರುವದು, ಅವಕ್ರತೆ- ಇದು ಶ್ರೇಯಸ್ಕರ. ವೇದವೇದಾಂತಗಳ ಅಧ್ಯಯನವನ್ನು ಮಾಡಿ ಧರ್ಮದಿಂದ

ತತ್ತ್ವಜ್ಞಾನವನ್ನು ಸಂಪಾದಿಸುವದಾಕ್ಕಾಗಿ ವಿಚಾರಮಾಡುವದು ಶ್ರೇಯಸ್ಕರ. ಆತಿಯಾಗಿ ವಿಷಯಸೇವನೆಮಾಡುವದು, ರಾತ್ರೆ ಅಲ್ಲಲ್ಲಿ ಅಡ್ಡಾಡುವದು, ಹಗಲು ನಿದ್ರಿಸುವದು, ಆಲಸ್ಯ, ಚಾಡಿಕೋರತನ- ಇವುಗಳನ್ನು ಬಿಡಬೇಕು; ಮತ್ತೊಬ್ಬರನ್ನು ನಿಂದಿಸಿ ತನ್ನ ಹೆಚ್ಚುಗಾರಿಕೆಯನ್ನು ತೋರಿಸಿಕೊಳ್ಳಬಾರದು, ಮೂರ್ಖನು ತನ್ನನ್ನು ಹೊಗಳಿಕೊಂಡರೂ ಲೋಕಪ್ರಖ್ಯಾತನಾಗುವದಿಲ್ಲ; ಯಾವದೋ ಮೂಲೆಯಲ್ಲಿದ್ದರೂ ವಿದ್ಯಾವಂತನು ಹೆಸರುವಾಸಿಯಾಗುವನು. ಪ್ರಜ್ಞಾಲಾಭಕ್ಕಾಗಿ ಮನುಷ್ಯನು ಪ್ರಯತ್ನಿಸುತ್ತಿರಬೇಕು. ಮತ್ತೊಬ್ಬರು ಕೇಳದೆ ತಾನೇ ಧರ್ಮವನ್ನು ಹೇಳುವದಕ್ಕೆ ಹೋಗಬಾರದು ; ಅನ್ಯಾಯದಿಂದ ಕೇಳಿದರೂ ಹೇಳಬಾರದು. ಧರ್ಮಪರರಾದವರು ಇರುವಕಡೆಯಲ್ಲಿಯೇ ವಾಸಮಾಡಬೇಕು. ಶಾಸ್ತ್ರ ವಿಚಾರವನ್ನು ಗುರುಶಿಷ್ಯಭಾವದಿಂದ ವಿಚಾರಮಾಡುವ ಜನರಿರುವಕಡೆಯಲ್ಲಿ ವಾಸಿಸಬೇಕು. ಧರ್ಮದಲ್ಲಿ ನಿರತರಾದವರು ಇರುವಕಡೆಯಲ್ಲಿಯೇ ವಾಸಮಾಡಬೇಕು. ಹೀಗೆ ಧರ್ಮದಲ್ಲಿಯೇ ಆಸಕ್ತಿಯಿರುವಾತನಿಗೆ ಶ್ರೇಯಸ್ಸಾಗುವದು- ಎಂಬುದು ಅಧ್ಯಾಯದ ಸಾರ.

**ಶ್ರೀಶ್ರೀಗಳು** ಅನುವಾದದಲ್ಲಿ ಹೀಗೆಂದರು : ಭಾರತದ ಆದ್ಯಂತಗಳಲ್ಲಿ ಹೇಳಿರುವದನ್ನು ನೋಡಿದರೆ ಅದಕ್ಕೆ ಧರ್ಮವೇ ಗುರಿ ಎಂಬುದು ಗೊತ್ತಾಗುತ್ತದೆ. ಧರ್ಮದಲ್ಲಿ ಪ್ರೇಮವುಳ್ಳ ಯುಧಿಷ್ಠಿರನ ಪ್ರಶ್ನೆಗೆ- ತಾವು ಶರತಲ್ಪದಲ್ಲಿದ್ದರೂ- ಧರ್ಮವೇ ಶ್ರೇಯಸ್ಕರವೆಂದು ಉತ್ತರವನ್ನು ಕೊಟ್ಟ ಭೀಷ್ಮಾಚಾರ್ಯರ ಉಪದೇಶವನ್ನು ನಾವು ಮನನಮಾಡುವದರಿಂದ ಶ್ರೇಯಸ್ಸುಂಟು. ಗುರುಪೂಜೆ, ಶಾಸ್ತ್ರಶ್ರವಣ, ಧರ್ಮದಲ್ಲಿ ಪ್ರೇಮ- ಇಂಥ ಸದ್ಗುಣಗಳು ಭಾರತಪಠನಶ್ರವಣಗಳಿಂದ ನಮಗೆ ಬರುತ್ತವೆ; ಶರೀರಪ್ರಧಾನವಾಗಿ ದೇಹಯಾತ್ರೆಗೆ ಬೇಕಾದ ತಿಳಿವಳಿಕೆಯನ್ನೇ ವಿಧ್ಯಾಭ್ಯಾಸವೆಂದು ತಿಳಿಯುವ ಅಪೂರ್ಣಪ್ರಜ್ಞೆ ಹೋಗುತ್ತದೆ.

★★★★★

# ವಿಜ್ಞಾನಾಭ್ಯಾಸ

**22-04-1961**

**ಬ್ರ|| ಶ್ರೀ|| ಎಸ್. ವಿಠಲಶಾಸ್ತ್ರಿಗಳವರು**

**ವಾಸಿಷ್ಠ ರಾಮಾಯಣದಲ್ಲಿ ಉತ್ಪತ್ತಿಪ್ರಕರಣದಲ್ಲಿ 22ನೆಯ ಸರ್ಗದಲ್ಲಿ** 'ವಿಜ್ಞಾನಾಭ್ಯಾಸ'ವೆಂಬ ವಿಷಯವು ಬಂದಿದೆ. ಈ ಜಗತ್ತು ಇಲ್ಲವೇ ಇಲ್ಲ ಎಂಬ ಭಾವನೆಯನ್ನು ಮತ್ತೆ ಮತ್ತೆ ಅಭ್ಯಾಸಮಾಡಿದರೆ ಇದು ಇಲ್ಲವೇ ಆಗಿ ಬಿಡುವದು, ಬ್ರಹ್ಮವೊಂದೇ ಉಳಿಯುವದು. **'ತಚ್ಚಿನ್ತನಂ ತತ್ಕಥನಮನ್ಯೋನ್ಯಂ ತತ್ಪ್ರಬೋಧನಮ್ । ಏತದೇಕಪರತ್ವಂ ಚ ತದಭ್ಯಾಸಂ ವಿದುರ್ಬುಧಾಃ' ॥** ಅದನ್ನೇ ಚಿಂತಿಸುತ್ತಿರುವದು, ಅದನ್ನೇ ಹೇಳುವದು, ಅದನ್ನೇ ಒಬ್ಬರಿಗೊಬ್ಬರು ತಿಳಿಸುವದೂ ಅದರಲ್ಲಿ ಏಕಪರತೆಯಿರುವದು- ಹೀಗಿರುವದನ್ನು **ಅಭ್ಯಾಸ**ವೆಂದು ಬಲ್ಲವರು ಹೇಳುತ್ತಾರೆ.

**ಶ್ರೀಗಳವರು** ಅನುವಾದದಲ್ಲಿ ಇಂತೆಂದರು : ವಸ್ತು ತಾನಿದ್ದಂತೆಯೇ ಇದ್ದರೂ ನಮ್ಮ ಭಾವನೆಯಿಂದ ಅದರ ಅರಿವು ಭಾವನೆಗನುಸಾರವಾಗಿ ಆಗಿಬಿಡುತ್ತದೆ. ಇದರಂತೆ ಪರಮಾರ್ಥವನ್ನು ನಾವು ಮಿಥ್ಯಾವಾಸನೆಯಿಂದ ಬೇರೆಯಾಗಿ ತಿಳಿದುಕೊಂಡಿರುತ್ತೇವೆ ; ಈ ವಾಸನೆಯನ್ನು ತತ್ತ್ವಚಿಂತನೆಯಿಂದ 'ನಾನು ಬ್ರಹ್ಮವೇ' ಎಂದು ಮತ್ತೆಮತ್ತೆ ಭಾವಿಸಿಕೊಳ್ಳುವದರಿಂದಲೇ ಜಗದ್ವಾಸನೆಯು ಹೋಗಿ ತತ್ತ್ವದ ಅರಿವು ಗೋಚರವಾಗುವದು. **'ಪ್ರಕ್ಷೀಣವಾಸನಾ ನಿದ್ರಾತುರ್ಯಶಬ್ದೇನ ಕಥ್ಯತೇ'** ವಾಸನೆಯು ಪೂರ ಹೋದ ನಿದ್ರೆಯೇ ತುರ್ಯಾವಸ್ಥೆ- ಎಂದು ಇಲ್ಲಿ ಹೇಳಿರುವದರ ಅಭಿಪ್ರಾಯವೇ ಇದು. ಬ್ರಹ್ಮಸಿದ್ಧಿಕಾರರೂ ಅಸತ್ತಾದದ್ದರ ಭಾವನೆಯಿಂದಲೂ ಅದರ ಸಾಕ್ಷಾತ್ಕಾರವಾಗುವಾಗ, ಸತ್ತಾದದ್ದರ ಭಾವನೆಯಿಂದ ಆಗದೆ ಇದ್ದೀತೆ?- ಎಂದಿದಾರೆ. ವಾಸಿಷ್ಠದಲ್ಲಿ ಹೀಗೆ ಮತ್ತೆಮತ್ತೆ ಹೇಳಿದೆ. ಇದು ಒಂದು ಬಗೆಯ **'ಜ್ಞಾನೋಪಾಸನೆ'** ಎನ್ನಬಹುದು.

★★★★★

# ಬ್ರಹ್ಮಕೃತವಿಷ್ಣುಸ್ತೋತ್ರ

**23-04-1961**

**ಬ್ರ॥ಶ್ರೀ॥ ಪರಕ್ಕಜೆ ಸುಬ್ರಹ್ಮಣ್ಯಭಟ್ಟರು**

ವಿಷ್ಣುಪುರಾಣದಲ್ಲಿ ಭೂದೇವಿಯು ತನಗೆ ಆಗಿರುವ ಭಾರವನ್ನು ಇಳಿಸಬೇಕೆಂದು ವಿಷ್ಣುವಿನಲ್ಲಿ ಪ್ರಾರ್ಥಿಸಿದ ಸಂದರ್ಭದಲ್ಲಿ ಈ ಸ್ತೋತ್ರವು ಬಂದಿದೆ; ''ವೇದವಾಣಿಗೆ ಆಗೋಚರನಾದ ದೇವನೆ, ಪರಾ, ಅಪರಾ- ಎಂಬ ವಿದ್ಯೆಗಳು ನಿನ್ನ ಮೂರ್ತಿಗಳು. ಶಬ್ದಬ್ರಹ್ಮ ಮತ್ತು ಪರಬ್ರಹ್ಮ -ಇವೆರಡೂ ನಿನ್ನ ರೂಪಗಳೇ. ವೇದವೇದಾಂಗಗಳು, ಇತಿಹಾಸಪುರಾಣಮೀಮಾಂಸಾಧರ್ಮಶಾಸ್ತ್ರ- ಎಲ್ಲವೂ ನೀನೇ; ಜೀವಾತ್ಮ, ಪರಮಾತ್ಮ, ದೇಹ, ಅವ್ಯಕ್ತ, ಆತ್ಮಸ್ವರೂಪ ಬೋಧಕವಾಕ್ಯ - ಎಲ್ಲವೂ ನೀನೇ; ಅವ್ಯಕ್ತನು, ಅನಿರ್ದೇಶ್ಯನು, ಆಚಿಂತ್ಯನು, ಪಾಣಿಪಾದಗಳಿಲ್ಲದೆ ಹಿಡಿಯುವವನು, ನಡೆಯುವವನು, ಕರ್ಣವಿಲ್ಲದೆ ಕೇಳುವವನು ನೀನು. ಸೂಕ್ಷ್ಮಕ್ಕೆ ಸೂಕ್ಷ್ಮನಾಗಿಗಿರುವ ನಿನ್ನ ದರ್ಶನದಿಂದ ಅಜ್ಞಾನನಾಶವು. ನೀನು ಜಗತ್ತೆಲ್ಲವನ್ನೂ ಕಾಪಾಡುವವನು, ಭೂತಭವಿಷ್ಯತ್ತುಗಳು, ಪ್ರಕೃತಿ- ಇವುಗಳನ್ನೂ ಮೀರಿರುವನು ನೀನೇ. ನೀನೇ ಜಗತ್ತೆಲ್ಲವನ್ನೂ ಮೂರಡಿಗಳಿಂದ ವ್ಯಾಪಿಸಿದವನು. ಒಬ್ಬ ಅಗ್ನಿಯೇ ನಾನಾರೂಪಗಳಿಂದ ಹೊಳೆಯುವಂತೆ ಎಲ್ಲರಲ್ಲಿಯೂ ಅವಿಕಾರಿಯಾಗಿ ಒಂದೇ ರೂಪದಿಂದಿರುವವನು ನೀನು. ನಿನ್ನ ಪರಮಪದವನ್ನು ಸೂರಿಗಳು ಮಾತ್ರ ಕಂಡಿರುವರು, ನಿನಗಿಂತ ಯಾವದೂ ಬೇರೆಯಿಲ್ಲ. ವ್ಯಕ್ತಾವ್ಯಕ್ತಗಳು, ಸಮಷ್ಟಿವ್ಯಷ್ಟಿಗಳು, ಎಲ್ಲವೂ ನೀನೇ. ಸರ್ವಜ್ಞನು, ಸರ್ವವಿದನು, ಸರ್ವಶಕ್ತಿ, ಜ್ಞಾನ, ಬಲ, ಬುದ್ಧಿ- ಇವುಗಳಿಂದ ಕೂಡಿರುವವನು. ನಿರ್ದೋಷನು. ನಿರಧಿಷ್ಠಾನನು, ಅಕ್ಷರನು, ಸರ್ವೇಶ್ವರನು, ಎಲ್ಲಕ್ಕೂ ಮೂಲಾಧಾರನು, ಯಾವದಾದರೂ ಕಾರಣದಿಂದ, ಅಕಾರಣದಿಂದ ಅಥವಾ ಕಾರಣಾಕಾರಣಗಳಿಂದ ನಿನಗೆ ಶರೀರಗ್ರಹಣವಾಗುವದಿಲ್ಲ, ಅದು ಕೇವಲ ಧರ್ಮರಕ್ಷಣೆಗೇ ಆಗಿರುತ್ತದೆ''

**ಶ್ರೀಶ್ರೀಗಳು** ಅನುವಾದದಲ್ಲಿ ಪುರಾಣಕ್ಕೂ ವೇದಕ್ಕೂ ಇರುವ ಸಂಬಂಧವನ್ನು ಹೇಳಿದ್ದಲ್ಲದೆ ಪ್ರಾರ್ಥನೆಯ ರಹಸ್ಯವನ್ನು ಹೇಳಿದರು. ಪರಮೇಶ್ವರನೇ ಸರ್ವವೂ ಎಂಬ ಭಾವನೆ ಬಂದಾಗ ಪರಮಾತ್ಮನ ಅನುಗ್ರಹವು ನಮಗೆ ಆಗಿಯೇ ಬಿಟ್ಟಿರುತ್ತದೆ. ಪರಮೇಶ್ವರನ ನಿಯಮದಂತೆಯೇ ಎಲ್ಲವೂ ನಡೆಯುವದಾದರೂ ಆ ಸಂದರ್ಭದಲ್ಲಿ ನಮ್ಮ ಪ್ರಾರ್ಥನೆಯಿಂದ ಆತನ ನಿಯಮಕ್ಕೆ ನಾವು ಹೊಂದಿಕೊಳ್ಳುತ್ತೇವೆ- ಎಂಬುದನ್ನು ವಿವರಿಸಿದರು.

★★★★★

## ಜ್ಞಾನೋತ್ಪತ್ತಿಗೆ ಉಪಾಯ

**24-04-1961**

**ವೇ॥ಬ್ರ॥ಶ್ರೀ॥ ವಿದ್ವಾನ್ ನರಸಿಂಹಮೂರ್ತಿಘನಪಾಠಿಗಳು**

**ಸೂತಸಂಹಿತೆಯಲ್ಲಿ** ಯಜ್ಞವೈಭವಖಂಡದ ಹದಿನಾರನೆಯ ಅಧ್ಯಾಯದಲ್ಲಿ ಜ್ಞಾನೋತ್ಪತ್ತಿಗೆ ಉಪಾಯವನ್ನು ಹೇಳಿರುತ್ತದೆ. ಮುಮುಕ್ಷುವಾದವನು 'ನನಗೆ ಅವಶ್ಯವಾಗಿ ಪರಗತಿಯು ದೊರಕುತ್ತದೆ' ಎಂಬ ನಿಶ್ಚಯದಿಂದ ದೇವತೆಗಳನ್ನು ದಿನದಿನವೂ ಪ್ರಾರ್ಥಿಸುತ್ತಿರಬೇಕು. ಮೇಧಾಸಿದ್ಧ್ಯರ್ಥವಾಗಿ ಮಂತ್ರವನ್ನು ಜಪಿಸುತ್ತಿರಬೇಕು; ದೇಹಯಾತ್ರೆಯಲ್ಲಿ ಸಂಕೋಚವಿರದಿರುವದಕ್ಕಾಗಿ ತಕ್ಕ ಹೋಮಗಳನ್ನು ಮಾಡುತ್ತಿರಬೇಕು. ಅಥವಾ ಜಪಿಸಬೇಕು. ಆಚಾರ್ಯ ಶುಶ್ರೂಷೆಯನ್ನು ಮಾಡುತ್ತಿರಬೇಕು. ವೇದಾಂತ ಶ್ರವಣ, ಮಹಾದೇವಾರ್ಚನೆ, ಶಮದಮಾದಿಗಳ ಅಭ್ಯಾಸ, ಭಸ್ಮರುದ್ರಾಕ್ಷಧಾರಣಾದಿಗಳನ್ನು ಮಾಡುತ್ತಾ ಷಡಕ್ಷರವನ್ನು ಜಪಿಸುತ್ತಿರಬೇಕು. ಶುದ್ಧವಾದ ಅನ್ನವನ್ನು ಭುಂಜಿಸುತ್ತಿರಬೇಕು. ದುಷ್ಟರ ಸಂಸರ್ಗವನ್ನು ಬಿಡಬೇಕು; ವಿಹಿತವನ್ನು ಮಾಡದಿದ್ದರೂ ನಿಷಿದ್ಧಕರ್ಮಗಳನ್ನು ಬಿಟ್ಟುಬಿಡಬೇಕು. ಇವೇ ಮುಂತಾದ ಜ್ಞಾನಸಾಧನಗಳನ್ನು ಅನುಷ್ಠಾನ ಮಾಡುತ್ತಿದ್ದರೆ ಜ್ಞಾನವುಂಟಾಗಿ ಜ್ಞಾತವಾದದ್ದನ್ನೇ ತಿಳಿದುಕೊಂಡು

ವಿಮುಕ್ತನಾಗಿಯೇ ಇದ್ದವನೇ ವಿಮುಕ್ತನಾಗುತ್ತಾನೆ; ನಿವೃತ್ತವಾಗಿದ್ದ ಅಜ್ಞಾನವೇ ನಿವೃತ್ತವಾಗುತ್ತದೆ. ಮಹಾದೇವನು ಪ್ರಸನ್ನನಾದರೆ ಯಾವನಿಗಾದರೂ ವಿಮುಕ್ತಿಯಾಗುತ್ತದೆ.

**ಶ್ರೀಗಳು** ಅನುವಾದದಲ್ಲಿ ಇಂತೆಂದರು; ಈ ಅಧ್ಯಾಯದಲ್ಲಿರುವ ವಿಷಯವು ಅವಶ್ಯವಾಗಿ ತಿಳಿಯಬೇಕಾದದ್ದು. ಏಕೆಂದರೆ ಅನೇಕರಿಗೆ ಜ್ಞಾನಕ್ಕೆ ಅಧಿಕಾರವು ಬಂದಿಲ್ಲವೆಂಬುದಿಷ್ಟೇ ಅಲ್ಲ ಮಾಡಬಾರದ್ದೇ ಸರಿ ಎಂಬ ಬುದ್ಧಿಯೂ ಬಂದಿದೆ. ಕೆಲವರು ವೇದಾಂತಕ್ಕೆ ಸಾಧನವೇನೂ ಬೇಕಿಲ್ಲ ; ಒಗಟುಗಳನ್ನು ಬಿಡಿಸುವಂತೆ ಕೆಲವು ಗಡುಚಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡರೆ ಸಾಕು-ಎಂದು ಭಾವಿಸಿಕೊಂಡಿರುತ್ತಾರೆ. ಇದು ತಪ್ಪು. ಈಗಲೇ ನಾವು ಬ್ರಹ್ಮಸ್ವರೂಪರಾಗಿರುತ್ತೇವಾದರೂ ಅದನ್ನೇ ಪ್ರಪಂಚವೆಂದು ತಪ್ಪಾಗಿ ತಿಳಿದು ಅದನ್ನೇ ಪಟ್ಟುಹಿಡಿದು, ಅವಿದ್ಯಾಕಾಮುಗಳಿಂದ ಮಾಡಬಾರದ್ದನ್ನು ಮಾಡುತ್ತಿರುತ್ತೇವೆ. ಆದ್ದರಿಂದ ಮೊದಲು ತಪ್ಪುಹಾದಿಯನ್ನು ಬಿಡಬೇಕು. ನಮ್ಮಗಳ ಮನಸ್ಸನ್ನು ಅಸುರರು ಆಶ್ರಯಿಸಿಕೊಂಡು-ಬಿಟ್ಟಿರುತ್ತಾರೆ. ಇನ್ನು ದೇವಾದಿದೇವನಾದ ಪರಮಾತ್ಮನ ಜ್ಞಾನವು ನಮಗೆ ಹೇಗೆ ಬರಬೇಕು? ಮೊಟ್ಟಮೊದಲು ದುಷ್ಟರ ಸಹವಾಸವನ್ನು ಬಿಡಬೇಕು; ಸಜ್ಜನಸಂಗವನ್ನು ಮಾಡಬೇಕು. ದೇವತೆಗಳನ್ನು ಎಡೆಬಿಡದೆ ಪ್ರಾರ್ಥಿಸುತ್ತಿರಬೇಕು; ಸರ್ವದೇವಮಯನಾದ ಪರಮೇಶ್ವರನಿಗೆ ಶರಣುಹೊಗಬೇಕು. ಕಪ್ಪೆಯಚಿಪ್ಪನ್ನೇ ಕಾಣುತ್ತಿದ್ದರೂ ಅದು ಬೆಳ್ಳಿ ಎಂಬ ವಿಪರೀತಜ್ಞಾನವು ನಮ್ಮ ತಿಳಿವಳಿಕೆಗೆ ಅಡ್ಡಬಂದಿರುವಂತೆ ಬ್ರಹ್ಮದ ವಿಷಯಕ್ಕೆ ವಿಪರೀತಗ್ರಹಣವು ಅಡ್ಡಬಂದಿರುತ್ತದೆ. ನಿಷಿದ್ಧತ್ಯಾಗ, ವಿಹಿತಾಚರಣೆ, ಆಚಾರ್ಯಸೇವೆ, ಪರಮೇಶ್ವರ ಭಕ್ತಿ- ಇವುಗಳಿಂದ ಕ್ರಮಕ್ರಮವಾಗಿ ಮನಸ್ಸಿನ ದೋಷಗಳು ಹೋಗಲಾಗಿ ಮೊದಲೇ ಹೋಗಿರುವ ಅವಿದ್ಯಾಬಂಧವು ಹೊಸದಾಗಿ ಹೋದಂತೆ ಆಗುತ್ತದೆ. ಜ್ಞಾತವಾಗಿದ್ದ ಬ್ರಹ್ಮವೇ ಜ್ಞಾತವಾಗುತ್ತದೆ; ನಿತ್ಯಮುಕ್ತನಾಗಿದ್ದವನೇ ಜ್ಞಾನದಿಂದ ಮುಕ್ತನಾದಂತಾಗುತ್ತಾನೆ- ಎಂದು ಇಲ್ಲಿ ಹೇಳಿರುತ್ತದೆ.

★★★★★

# ಪರಮಾತ್ಮಸ್ವರೂಪದ ವರ್ಣನೆ

**25-4-1961**

**ಬ್ರ॥ಶ್ರೀ॥ ಎಸ್.ವಿಠಲಶಾಸ್ತ್ರಿಗಳವರು**

ಬ್ರಹ್ಮವೈವರ್ತ ಪುರಾಣದಲ್ಲಿ ಬ್ರಹ್ಮಖಂಡದ 28ನೆಯ ಅಧ್ಯಾಯದಲ್ಲಿ ಪರಮಾತ್ಮಸ್ವರೂಪದ ವರ್ಣನೆ ಅದರಲ್ಲಿದೆ.

ಶ್ರೀಗಳ ಅನುವಾದವು ಹೀಗಿತ್ತು: ಪರಬ್ರಹ್ಮಸ್ವರೂಪವು ಇಂಥದ್ದೆಂದು ನಿರ್ಣಯಿಸುವದು ಕಷ್ಟ. ಪ್ರಕೃತಿಯ ಸ್ವರೂಪವನ್ನೇ ಲೌಕಿಕವಿಜ್ಞಾನಶಾಸ್ತ್ರದವರು ನಿಶ್ಚಯಿಸಲಾರರು; ಏಕೆಂದರೆ ಅದು ಪರಮೇಶ್ವರನ ತನು. ಆಕಾಶವು ಒಂದೇ ಕಾಲಕ್ಕೆ ನೀಲವೂ ಆಗಿದ್ದು ವರ್ಣರಹಿತವೂ ಆಗಿರುವಂತೆ ಪರಮಾತ್ಮನು ಸಾಕಾರನೂ ನಿರಾಕಾರನೂ ಆಗಿರುತ್ತಾನೆ. ಆತನೇ ಎಲ್ಲವೂ ಆಗಿರುತ್ತಾನೆ. ಪರಮಾತ್ಮನಿಗೆ ಎಲ್ಲಾ ನಿಗ್ರಹಾನುಗ್ರಹಶಕ್ತಿಗಳೂ ಸೇರಿವೆ. ವ್ಯವಹಾರಕ್ಕೆ ನಮಗೆ ಬೇಕಾಗಿರುವದೆಲ್ಲವನ್ನೂ ಆ ಪರಮಾತ್ಮನ ಅಂಶದಿಂದಲೇ ಆರಿಸಿಕೊಳ್ಳಬೇಕಾಗಿದೆ. ನಮ್ಮ ಬುದ್ಧಿಯು ಪರಿಚ್ಛಿನ್ನವಸ್ತುಗ್ರಾಹಿಯಾದ್ದರಿಂದ ಬ್ರಹ್ಮದ ಪೂರ್ಣಸ್ವರೂಪವನ್ನು ಅದು ಹಿಡಿಯಲಾರದು. ಈ ನಮ್ಮ ದುಃಖಮಯವಾದ ಲೋಕವೇ ಋಷಿಗಳಿಗೆ ಗೋಲೋಕವಾಗಿರುತ್ತದೆ. ಎಲ್ಲವೂ ಶ್ರೀಕೃಷ್ಣಪರಮಾತ್ಮ ಎಂದು ಭಾವಿಸುವದೇ ಆತನ ಪೂಜೆ. ಪ್ರೇಮಪ್ರವಾಹದಲ್ಲಿ ಜಡಬುದ್ಧಿಗೆ ಅವಕಾಶವಿರುವದಿಲ್ಲ. ಪ್ರೇಮವು ತನ್ನನ್ನೂ ಪರಮಾತ್ಮನನ್ನೂ ಒಂದುಗೂಡಿಸುತ್ತದೆ.

★★★★★

# ಸತ್ಸಂಗದ ಮಹಿಮೆ

**26-4-1961**

**ಶ್ರೀ|| ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ ಶಾಸ್ತ್ರಿಗಳವರು**

**ಶ್ರೀಮದ್ಭಾಗವತ(11-12)**ರಲ್ಲಿ ''ಸತ್ಸಂಗಮಹಿಮೆ''ಯನ್ನು ಹೀಗೆ ವರ್ಣಿಸಿದೆ: ಭಗವಂತನು ಉದ್ಧವನನ್ನು ಕುರಿತು ಇಂತೆಂದನು : ಯೋಗ, ಸಾಂಖ್ಯ, ಧರ್ಮ, ಅಧ್ಯಯನ, ತಪಸ್ಸು, ತ್ಯಾಗ, ಇಷ್ಟಾಪೂರ್ತ, ದಕ್ಷಿಣೆ, ವ್ರತಗಳು, ಯಜ್ಞ, ವೇದಗಳು, ತೀರ್ಥಗಳು, ನಿಯಮಗಳು, ಯಮಾನುಷ್ಠಾನ- ಇವುಗಳೆಲ್ಲಕ್ಕಿಂತಲೂ ಸತ್ಸಂಗವೇ ನನ್ನನ್ನು ವಶಪಡಿಸಿಕೊಳ್ಳುತ್ತದೆ. ಏಕೆಂದರೆ ಅದು ಸರ್ವಸಂಗವನ್ನೂ ನಾಶಗೊಳಿಸುತ್ತದೆ. ಸತ್ಸಂಗದಿಂದ ದೈತ್ಯರು, ಗಂಧರ್ವರು, ಅಪ್ಸರರು ಮುಂತಾದ ಅನೇಕರು ನನ್ನ ಸ್ಥಾನವನ್ನು ಸೇರಿರುತ್ತಾರೆ. ಅಧ್ಯಯನ, ತಪಸ್ಸು-ಮುಂತಾದ ವುಗಳಿಲ್ಲದಿದ್ದರೂ ಭಾವದಿಂದಲೇ ಅವರುಗಳು ನನ್ನನ್ನು ಪಡೆದರು. ಆದ್ದರಿಂದ ಸತ್ಸಂಗಕ್ಕಿಂತ ಹೆಚ್ಚಿನ ಸಾಧನವಿಲ್ಲ- ಎಂಬುದು ಗ್ರಂಥದ ಸಾರವು.

ಅನುವಾದದಲ್ಲಿ **ಶ್ರೀಗಳು** ಹೀಗೆಂದರು: ಜಗತ್ತಿನ ವಿಷಯಗಳ ಸಂಗವೊಂದು, ಭಗವಂತನ ಸಂಗವೊಂದು- ಹೀಗೆ ಎರಡು ಸಂಗಗಳಿವೆ. ಆದರೆ ಜಗತ್ತಿನ ಸಂಗವನ್ನು ಬಿಟ್ಟ ಹೊರತು ಪರಮಾತ್ಮನಲ್ಲಿ ಸಂಗವು ದೊರೆಯಲಾರದು. ಜಗತ್ತಿನ ಸಂಗವನ್ನು ನಾವು ಬಿಡುತ್ತೇವೆಂದರೂ ಜಗತ್ತು ನಮ್ಮನ್ನು ಬಿಡುವಂತಿಲ್ಲ. ಆದ್ದರಿಂದ ಮೊದಲು ಇವನ್ನು ಬಿಡಿಸಿಕ್ಕೊಳ್ಳುವ ಉಪಾಯವನ್ನು ಮಾಡಬೇಕು. ವಿಷಯಸಂಗವನ್ನು ತಪ್ಪಿಸಿಕೊಳ್ಳುವದಕ್ಕೆ ಸತ್ಸಂಗವೊಂದೇ ಉಪಾಯವೆಂದು ಭಗವಂತನು ಇಲ್ಲಿ ಹೇಳಿರುತ್ತಾನೆ. ಜಗತ್ತಿನ ಸಂಗವನ್ನು ಬಲಪಡಿಸುವದಕ್ಕೆ ನಾಸ್ತಿಕಸಂಗ, ಸ್ತ್ರೀಸಂಗ, ಧನಸಂಗ- ಇವು ಹೆಚ್ಚಿನ ಸಾಧನಗಳಾಗಿರುತ್ತವೆ; ಆದ್ದರಿಂದ ಇವುಗಳ ಸಂಗವನ್ನು ಮಾಡುವವರ ಸಂಗವನ್ನು ಕೂಡ ನಾವು ಮೊದಲು ತ್ಯಜಿಸಬೇಕು. ಸರ್ವಸಂಗವನ್ನೂ ತ್ಯಜಿಸುವದಕ್ಕೆ ಸಾಧುಗಳೇ ಉಪಾಯವು. ಆಹಾರವು

ಜೀರ್ಣವಾಗದೆ ಇರುವವರಿಗೆ ಶುಂಠಿಬೆಲ್ಲವನ್ನು ತಿನ್ನುವದರಿಂದ ಎಲ್ಲವೂ ಜೀರ್ಣವಾಗಿ ಹಸಿವೂ ಉಂಟಾಗುವಂತೆ ಸತ್ಸಂಗದಿಂದ ದುಸ್ಸಂಗವೂ ಹೋಗಿ, ಪರಮಾತ್ಮಭಕ್ತಿಯ ಹಸಿವೂ ಉಂಟಾಗುವದು.

★★★★★

## ಭಗವಂತನ ಉಪದೇಶ

**8-5-1962**

**ಬ್ರ॥ ಶ್ರೀ॥ ಎಸ್. ವಿಠಲಶಾಸ್ತ್ರಿಗಳವರು**

**ಭಾಗವತ**ದಲ್ಲಿ ದೇವಹೂತಿಗೆ ಕಪಿಲಭಗವಂತನು ಮಾಡಿದ ಉಪದೇಶವು ಹೀಗಿದೆ: ಪುರುಷನು ಪ್ರಕೃತಿಯ ಮಧ್ಯದಲ್ಲಿದ್ದರೂ ಅದರ ಗುಣಗಳ ಲೇಪವನ್ನು ಹೊಂದದೆ ಇರುತ್ತಾನೆ; ಏಕೆಂದರೆ ಅವನು ನಿಜವಾಗಿ ಅವಿಕಾರಿ, ಅಕರ್ತೃ, ನಿರ್ಗುಣ. ಆದರೆ 'ನಾನು ಕರ್ತೃ' ಎಂಬ ಅಭಿಮಾನದಿಂದ- ಸ್ವಪ್ನದಲ್ಲಿ ವಿಷಯಗಳಿಲ್ಲದಿದ್ದರೂ ಅನರ್ಥವನ್ನು ಹೊಂದುವಂತೆ- ಸಂಸಾರದಲ್ಲಿ ಬದ್ಧನಾಗುತ್ತಾನೆ. ಆದ್ದರಿಂದ ಭಕ್ತಿಯೋಗದಿಂದ ಚಿತ್ತವನ್ನು ವಶಪಡಿಸಿಕೊಳ್ಳಬೇಕು. ಪರಮಾತ್ಮನಲ್ಲಿ ಭಾವಭಕ್ತಿ, ಭಗವತ್ಕಥಾಶ್ರವಣ, ಸರ್ವಭೂತಸಮತ್ವ, ನಿರ್ವೈರ, ಬ್ರಹ್ಮಚರ್ಯ, ಮೌನ, ಸ್ವಧರ್ಮಾಚರಣೆ, ಮಿತಾಹಾರ, ಏಕಾಂತವಾಸ- ಮುಂತಾದವುಗಳಿಂದ ಅಹಂಕಾರವನ್ನು ಕಳೆದುಕೊಂಡರೆ ಆತ್ಮಪ್ರಾಪ್ತಿಯಾಗುತ್ತದೆ. ಧರ್ಮಾಚರಣೆಯಿಂದಲೂ ಭಕ್ತಿಯೋಗದಿಂದಲೂ ಸಾಧನಪರನಾಗಿದ್ದರೆ ಪ್ರಕೃತಿಯು ಕ್ರಮಕ್ರಮವಾಗಿ ದಗ್ಧವಾಗಿ ಕಾಣದಂತಾಗುವದು. ನಿದ್ರಿಸುತ್ತಿರುವವನಿಗೆ ಕನಸು ಅನರ್ಥ ಪರವಾಗಿದ್ದರೂ ಎಚ್ಚತ್ತವನಿಗೆ ಮೋಹಕವಾಗಿಲ್ಲದಿರುವಂತೆ ಪರಮಾತ್ಮನಲ್ಲಿ ಮನಸ್ಸಿಟ್ಟುಕೊಂಡವನಿಗೆ ಪ್ರಕೃತಿಯು ಎಂದಿಗೂ ತೊಂದರೆಯನ್ನುಂಟುಮಾಡದೆ ಇರುತ್ತದೆ. ಅವನಿಗೆ ಮುಕ್ತಿಯೂ ಸಿದ್ಧವಾಗುತ್ತದೆ- ಎಂಬುದು ಉಪದೇಶದ ಸಾರವು.

**ಶ್ರೀಶ್ರೀಗಳು** ತಮ್ಮ ಅನುವಾದದಲ್ಲಿ- ಬರಿಯ ಶಾಸ್ತ್ರಾಭ್ಯಾಸಿಗಳಿಗಿಂತ ಶ್ರದ್ಧಾಭಕ್ತಿಯುಳ್ಳವರಿಗೆ ಭಗವತ್ಪ್ರಾಪ್ತಿಯು ಬಹು ಸುಲಭವಾಗಿ ದೊರಕುತ್ತದೆ ಎಂಬುದನ್ನು ಸ್ಪಷ್ಟಪಡಿಸಿದರು.

★★★★★

# ಯೋಗದಿಂದ ಪರಮಾತ್ಮಪ್ರಾಪ್ತಿಯಾಗುವ ಪ್ರಕಾರ

**9-5-1962**

**ಬ್ರ॥ಶ್ರೀ॥ಹೆಚ್. ಅನಂತಮೂರ್ತಿ ಶಾಸ್ತ್ರಿಗಳವರು**

**ಮಹಾಭಾರತ ಮೋಕ್ಷಧರ್ಮದ** 240ನೆಯ ಅಧ್ಯಾಯದಲ್ಲಿ ವ್ಯಾಸರು ಮಗನಾದ ಶುಕನಿಗೆ ಯೋಗದಿಂದ ಪರಮಾತ್ಮಪ್ರಾಪ್ತಿಯಾಗುವ ಪ್ರಕಾರವನ್ನು ವರ್ಣಿಸಿರುತ್ತಾರೆ. ಇದನ್ನು ಶಮದಮಾದಿಸಂಪನ್ನನಾದವನೇ ತಿಳಿದುಕೊಳ್ಳುವದಕ್ಕೆ ತಕ್ಕ ಅಧಿಕಾರಿಯು. ಕಾಮಕ್ರೋಧಾದಿ ಯೋಗದೋಷಗಳನ್ನು ಮೊದಲು ನಾಶಮಾಡಿಕೊಳ್ಳಬೇಕು. ಕ್ರೋಧವನ್ನು ಶಮದಿಂದಲೂ, ಕಾಮವನ್ನು ಸಂಕಲ್ಪದಿಂದಲೂ ಸತ್ತ್ವಗುಣದ ಸೇವೆಯಿಂದ ನಿದ್ರೆಯನ್ನೂ, ಧೃತಿಯಿಂದ ಶಿಶ್ನೋದರಗಳನ್ನೂ ಗೆದ್ದುಕೊಂಡು ಚಕ್ಷುರಿಂದ್ರಿಯದ ಸಹಾಯದಿಂದ ಪಾಣಿಪಾದಗಳನ್ನೂ ಚಕ್ಷುಃಶ್ರೋತ್ರಗಳನ್ನೂ ಮನಸ್ಸಿನಿಂದಲೂ ರಕ್ಷಿಸಿಕೊಳ್ಳಬೇಕು. ಮನೋವಾಕ್ಕುಗಳನ್ನು ಕರ್ಮದಿಂದ ಶುದ್ಧಿಮಾಡಿಕೊಂಡು ಅಪ್ರಮತ್ತನಾಗಿರುವದರಿಂದ ಭಯವನ್ನು ಗೆಲ್ಲಬೇಕು. ಪ್ರಾಜ್ಞರ ಸೇವೆಯಿಂದ ದಂಭವನ್ನು ಗೆಲ್ಲಬೇಕು. ಹೀಗೆ ದೋಷಗಳನ್ನು ಪರಿಹರಿಸಿಕೊಂಡು ಅಗ್ನಿ, ಬ್ರಾಹ್ಮಣರು, ದೇವತೆಗಳು ಇವರನ್ನು ಪೂಜಿಸುತ್ತಿರಬೇಕು. ಕಾಮಹಿಂಸಾಯುಕ್ತವಾದ ಅಥವಾ ಮನೋದ್ವೇಗಕರವಾದ ಮಾತನ್ನು ಆಡಬಾರದು. ತೇಜೋಮಯವಾದ ಶುದ್ಧವಾದ ಬ್ರಹ್ಮದ ರಸವೇ ಈ ಜಗತ್ತು; ಆ ತೇಜಸ್ಸು, ಧ್ಯಾನ, ಅಧ್ಯಯನ, ದಾನ, ಸತ್ಯ, ಲಜ್ಜೆ, ಋಜುತ್ವ, ಕ್ಷಮೆ, ಶೌಚ, ಆಚಾರ,

ಶುದ್ಧಿ, ಇಂದ್ರಿಯನಿಗ್ರಹ ಇವುಗಳಿಂದ ವೃದ್ಧಿಯಾಗುತ್ತದೆ, ಸರ್ವಾರ್ಥಸಿದ್ಧಿಯಾಗುತ್ತದೆ, ವಿಜ್ಞಾನವುಂಟಾಗುತ್ತದೆ. ತೇಜಸ್ವಿಯಾಗಿ ಜಿತೇಂದ್ರಿಯನಾಗಿರುವಾತನು ಸರ್ವಭೂತಗಳಲ್ಲಿಯೂ ಸಮನಾಗಿ, ಸಿಕ್ಕಷ್ಟರಿಂದ ಜೀವಿಸುತ್ತಾ ಪಾಪಗಳನ್ನೂ ಕಾಮಕ್ರೋಧಗಳನ್ನೂ ತೊಲಗಿಸಿಕೊಂಡು ಬ್ರಹ್ಮಪ್ರಾಪ್ತಿಯನ್ನು ಮಾಡಿಕೊಳ್ಳಬೇಕು. ಮನ ಇಂದ್ರಿಯಗಳ ಏಕಾಗ್ರತೆಯನ್ನು ಸಂಪಾದಿಸಿಕೊಳ್ಳಬೇಕು. ರಾತ್ರಿಯ ಆದಿಭಾಗದಲ್ಲಿಯೂ ಅಂತ್ಯಭಾಗದಲ್ಲಿಯೂ ಪರಮಾತ್ಮನಲ್ಲಿ ಮನಸ್ಸಿಟ್ಟುಕೊಳ್ಳಬೇಕು. ಇಂದ್ರಿಯಗಳನ್ನು ಮನಸ್ಸಿನಲ್ಲಿ, ಮನಸ್ಸನ್ನು ಆತ್ಮನಲ್ಲಿ ಧಾರಣೆ ಮಾಡಬೇಕು. ಆಗ ಸರ್ವವ್ಯಾಪಕನಾಗಿರುವ ಹೊಗೆಯಿಲ್ಲದ ಬೆಂಕಿಯಂತಿರುವ ಚಿತ್ಸ್ವರೂಪನಾದ ಆತ್ಮನನ್ನು ಕಂಡುಕೊಳ್ಳುತ್ತಾನೆ. ಹೀಗೆ ಯೋಗಾಭ್ಯಾಸವನ್ನು ಮಾಡುತ್ತಿರುವಾತನು, ಅಕ್ಷರಬ್ರಹ್ಮದ ತಾದಾತ್ಮ್ಯವನ್ನು ಹೊಂದುವನು. ಯೋಗಸಿದ್ಧಿಗಳನ್ನು ಲೆಕ್ಕಿಸದೆ ಆತ್ಮದಲ್ಲಿಯೇ ಮನಸ್ಸಿಟ್ಟುಕೊಂಡು ಏಕಾಂತದಲ್ಲಿ ಯೋಗಾಭ್ಯಾಸವನ್ನು ಮಾಡುತ್ತಿರಬೇಕು. ಆತ್ಮನನ್ನು ಬಿಟ್ಟು ಮತ್ತೇನನ್ನೂ ಮನೋವಾಕಾಯಕರ್ಮಗಳಿಂದ ಸೋಂಕಬಾರದು, ನಿಂದಾಸ್ತುತಿಗಳಲ್ಲಿಯೂ ಲಾಭಾಲಾಭಗಳಲ್ಲಿಯೂ ಸಮನಾಗಿ ವಾಯುವಿನಂತೆ ಎಲ್ಲರಲ್ಲಿಯೂ ಸಮನಾಗಿರುವ ಸತ್ಪುರುಷನು ಆರು ತಿಂಗಳೊಳಗೇ ಶಬ್ದಬ್ರಹ್ಮವನ್ನು ಮೀರಿ ಪರಬ್ರಹ್ಮವನ್ನು ಸೇರುತ್ತಾನೆ. ಈ ಯೋಗವನ್ನು ಕೀಳುವರ್ಣದವನಾಗಲಿ, ಸ್ತ್ರೀಯಾಗಿರಲಿ ಮಾಡಿ ಪರಮಗತಿಯನ್ನು ಪಡೆಯಬಹುದು. ಮನಸ್ಸನ್ನು ಅಳವಡಿಸಿಕೊಂಡಿರುವ ಯೋಗಿಯು ಚಾಂಚಲ್ಯವಿಲ್ಲದ ಇಂದ್ರಿಯಗಳಿಂದ ಏನೇನು ಕಾಣುತ್ತಾನೋ ಅದೆಲ್ಲ ಜನ್ಮರಹಿತವಾದ, ಪರಮಪುರುಷನಾದ, ಮುಪ್ಪಿಲ್ಲದ, ಸನಾತನನಾದ, ಅಣುವಿಗೂ ಅಣುವಾದ ಮಹತ್ತಿಗೂ ಮಹತ್ತಾಗಿರುವ ಪರಬ್ರಹ್ಮವೇ ಎಂದು ತನ್ನ ಆತ್ಮರೂಪದಿಂದಲೇ ಕಂಡುಕೊಳ್ಳುತ್ತಾನೆ.

**ಶ್ರೀಗಳು** ಅನುವಾದಲ್ಲಿ ಹೀಗೆಂದು ಉಪದೇಶಮಾಡಿದರು: ಯೋಗವೆಂಬ ಶಬ್ದವನ್ನು ಜನರು ತಪ್ಪಾಗಿ ಅರ್ಥಮಾಡಿಕೊಳ್ಳುತಾರೆ. ಪ್ರಕೃತವಾಗಿರುವ ಯೋಗವು ಧ್ಯಾನಯೋಗ; ಇದು ಉತ್ತರಮಾಧಿಕಾರಿಗಳಿಗೆ

ಹೇಳಿದ ಸಾಂಖ್ಯವೂ ಅಲ್ಲ, ಅಧಮಾಧಿಕಾರಿಗಳಿಗೆ ಹೇಳಿದ ಕರ್ಮಯೋಗವೂ ಅಲ್ಲ. ಮನಸ್ಸು ಇಂದ್ರಿಯಗಳು – ಇವುಗಳು ಹೊರಗಡೆಗೆ ತಿರುಗದಂತೆ ನೋಡಿಕೊಂಡು ಪ್ರತ್ಯಙ್ಮುಖನಾಗುವದಕ್ಕೆ ಪ್ರಯತ್ನಿಸಿವದು, ಮನಸ್ಸನ್ನು ದೋಷಗಳಿಂದ ಮುಕ್ತವಾಗಿಮಾಡಿ ಪರಮಾತ್ಮನ ಚಿಂತನೆಯಲ್ಲಿಯೇ ನಿರತವಾಗಿ ರುವದು, ಪ್ರವರ್ತಕವಾಗಿರುವ ವೇದನೆಗಳನ್ನು ಬಿಗಿಹಿಡಿಯುವದು, ವೈರಾಗ್ಯ, ಸರ್ವಾತ್ಮಸಮಭಾವನೆ ಇವುಗಳಿಂದ ಕೂಡಿ ಯೋಗಸಿದ್ಧಿಗೆ ಬಾಯಿನೀರುಕರೆಯದಂತೆ ನೋಡಿಕೊಂಡು ಏಕಾಗ್ರತೆಯಿಂದ ಆತ್ಮನಲ್ಲಿ ಮನಸ್ಸಿಡಬೇಕು. ಆ ಮೇಲೆ ಎಲ್ಲೆಲ್ಲಿ ಏನೇನು ಕಾಣುವದೋ ಅದೆಲ್ಲವೂ ಪರಮಾತ್ಮನೇ ಆಗಿರುವ ತನ್ನ ಆತ್ಮನೇ ಎಂಬುದು ಮನದಟ್ಟಾಗುವದು.

★★★★★

# ಅಕ್ರೂರನು ಗೋಕುಲಕ್ಕೆ ಹೊರಟ ಆಖ್ಯಾನ

**10–5–1962**

**ಶ್ರೀ॥ಪಿ. ಚಂದ್ರಶೇಖರಭಟ್ಟರು**

**ವಿಷ್ಣುಪುರಾಣ(5–17)**ದಲ್ಲಿ, ಕೃಷ್ಣನನ್ನು ಕರೆದುಕೊಂಡು ಬರಬೇಕೆಂದು ದುರುದ್ದೇಶದಿಂದ ಅಕ್ರೂರನನ್ನು ಕಂಸನು ಕಳುಹಿಸಿದ್ದರೂ ಅವನು ಕೃಷ್ಣನ ಭಕ್ತನಾದ್ದರಿಂದ 'ಇಂದು ನನ್ನ ಜನ್ಮವು ಸಫಲವಾಯಿತು, ನಾನು ವೇದಗಳಿಗೂ ವೇದಾಂಗಗಳಿಗೂ ಮೂಲನಾಗಿರುವ, ಯಜ್ಞಗಳಿಗೆಲ್ಲ ಸ್ವಾಮಿಯಾಗಿರುವ, ಇಂದ್ರನಿಗೆ ಇಂದ್ರತ್ವವನ್ನು ಕೊಟ್ಟಿರುವ ಕೃಷ್ಣನನ್ನು ಕಾಣುವೆನು. ದೇವತೆಗಳು ಯಾರ ನಿಜವನ್ನರಿಯರೋ ಅವನನ್ನು ಕಾಣುವೆನು. ಸರ್ವಾತ್ಮನೂ ಸರ್ವಜ್ಞನೂ ಆದ, ನಾನಾವತಾರಗಳನ್ನು ಧರಿಸಿರುವ, ಭೂಮಿಯನ್ನೆಲ್ಲ ಅನಂತನಾಗಿ ಹೊತ್ತಿರುವನಾಗಿದ್ದರೂ ಲೋಕ ಕಲ್ಯಾಣಕ್ಕಾಗಿ ಅವತರಿಸಿರುವ ಕೃಷ್ಣನು ನನ್ನನ್ನು ಮಾತನಾಡಿಸುವನು. ಯಾವನನ್ನು ನೆನೆದರೆ ಸರ್ವಮಾಯೆಯನ್ನೂ ದಾಟುವರೋ, ಯಜ್ಞ, ಪುರುಷನು, ವಾಸುದೇವನು, ವಿಷ್ಣು ಎಂದು

ಬಗೆಬಗೆಯಾಗಿ ಕರೆಯಲ್ಪಟ್ಟಿರುವ ಆತನಿಗೆ ನಮಸ್ಕಾರ! ಯಾವನನ್ನು ಸ್ಮರಿಸಿದರೆ ಸಕಲಕಲ್ಯಾಣಕ್ಕೂ ಪಾತ್ರನಾಗುವನೋ ಆತನನ್ನು ಶರಣುಹೊಕ್ಕಿದ್ದೇನೆ !! ಎಂದು ಮುಂತಾಗಿ ಮನಸ್ಸಿನಲ್ಲಿ ಆತನನ್ನೇ ಚಿಂತಿಸಿಕೊಳ್ಳುತ್ತಾ ಗೋಕುಲಕ್ಕೆ ಹೋಗಿ ಶ್ರೀಕೃಷ್ಣನನ್ನು ಕಂಡನು. ಅಲ್ಲಿ ಭಗವಂತನ ಸರ್ವಾಂಗವನ್ನೂ ನೆನೆಯುತ್ತಾ ಆತನ ಮಹಿಮೆಯನ್ನು ಕೊಂಡಾಡುತ್ತಾ ಆತನನ್ನು ನಮಸ್ಕರಿಸಿದನು.

★★★★★

## ಭಗೀರಥನಿಗೆ ತ್ರಿತಲನ ಉಪದೇಶ

**11-5-1962**

**ಬ್ರ॥ ಶ್ರೀ॥ ವೈ.ಚಂದ್ರಶೇಖರಶಾಸ್ತ್ರಿಗಳು**

**ವಾಸಿಷ್ಠರಾಮಾಯಣದಲ್ಲಿ ನಿರ್ವಾಣಪ್ರಕರಣದ ಪೂರ್ವಾರ್ಧದಲ್ಲಿ** 74ನೆಯ ಸರ್ಗದಲ್ಲಿ ಭಗೀರಥನಿಗೆ ತ್ರಿತಲನು ಮಾಡಿದ ಉಪದೇಶವಿದೆ. ಒಮ್ಮೆ ಭಗೀರಥನು ಸಂಸಾರಭೀತನಾಗಿ ಗುರುವಾದ ತ್ರಿತಲನನ್ನು ಹೀಗೆಂದು ಕೇಳಿದನು: ''ಈ ಸಂಸಾರದಲ್ಲಿ ಬಹಳ ಖಿನ್ನನಾಗಿರುವೆನು, ಜರಾಮರಣಮೋಹಾದಿ ಸರ್ವ ಸಂಸಾರದುಃಖಗಳೂ ಕೊನೆಗಾಣುವದೆಂತು?'' ತ್ರಿತಲನು ಅದಕ್ಕೆ ಜ್ಞೇಯವೆಲ್ಲವೂ ಆತ್ಮನಿಗಿಂತ ವ್ಯತಿರಿಕ್ತವಾಗಿಲ್ಲವೆಂಬ ಪೂರ್ಣಜ್ಞಾನದಿಂದ ದುಃಖಗಳೆಲ್ಲ ಹೋಗುವವು ಎಂದು ಉತ್ತರಕೊಟ್ಟನು. ನಿರ್ಗುಣವಾದ ಚಿನ್ಮಾತ್ರವೇ ಇದೆ, ಮಿಕ್ಕ ದೇಹಾದಿಗಳಿಲ್ಲ ಎಂದು ತಿಳಿದಿದ್ದರೂ ಅವುಗಳ ಅರಿವೇಕೆ ನನಗೆ ಆಗುತ್ತಿದೆ? ಎಂಬ ಪ್ರಶ್ನೆಗೆ ಗುರುವಿನ ಉತ್ತರವಿದು: ಜ್ಞಾನಸಾಧನದಿಂದ ಜ್ಞೇಯನಿಷ್ಠನಾದರೆ ಮತ್ತೆ ಜೀವನು ಹುಟ್ಟುವದಿಲ್ಲ. ಆದ್ದರಿಂದ ಅಸಕ್ತಿಯೇ ಮುಂತಾದ ಜ್ಞಾನ ಸಾಧನಗಳನ್ನು ಅಭ್ಯಾಸಮಾಡಿ ಅಹಂಭಾವವನ್ನು ನಾಶಗೊಳಿಸಿಕೊಳ್ಳಬೇಕು. ಅಹಂಭಾವವು ಹೋಗುವದೆಂತು? ಎಂದರೆ, ಭೋಗವಾಸನೆಯನ್ನು ಬಿಟ್ಟರೆ ಅದು ನಾಶವಾಗುತ್ತದೆ. ಸಮಸ್ತಬಾಹ್ಯವಿಶೇಷಗಳನ್ನೂ ಬಿಟ್ಟು ನಿರ್ಭಯನಾಗಿ ಏಷಣೆಗಳನ್ನೆಲ್ಲ

ಪರಿತ್ಯಜಿಸಿ ಅಕಿಂಚನನಾಗಿ ನಿನ್ನ ಸಂಪತ್ತೆಲ್ಲವನ್ನೂ ಶತ್ರುಗಳಿಗೇ ಬಿಟ್ಟು ಅಹಂಕಾರವನ್ನು ನಾಶಮಾಡಿಕೊಂಡು ದೇಹಭಾವವನ್ನು ತೊಲಗಿಸಿಕೊಂಡು, ಭಿಕ್ಷಾಟನೆಮಾಡುತ್ತಾ ಗುರುವಾದ ನನ್ನನ್ನೂ ಪರಿಪ್ರಶ್ನೆ ಮಾಡುವದನ್ನು ಬಿಟ್ಟುಬಿಟ್ಟರೆ ಸರ್ವೋಚ್ಚನಾಗುವೆ ಎಂದು ತ್ರಿತಲನು ಸರ್ವ ತ್ಯಾಗಪೂರ್ವಕವಾಗಿ ಚಿನ್ಮಾತ್ರದಲ್ಲಿ ನೆಲೆನಿಲ್ಲುವ ಪರಿಯನ್ನು ಬೋಧಿಸಿದನು

★★★★★

## ಕೂಟಸ್ಥಬ್ರಹ್ಮದಿಂದ ಜೀವರ ಉತ್ಪತ್ತಿ ಆಗುವದೇ?

**12-5-1962**

**ವೇ॥ಬ್ರ॥ಶ್ರೀ॥ ಲಕ್ಷ್ಮೀನರಸಿಂಹಶಾಸ್ತ್ರಿಗಳವರು**

**ವಾಸಿಷ್ಠರಾಮಾಯಣದಲ್ಲಿ** ನಿರ್ವಾಣಪ್ರಕರಣದ ಉತ್ತರಾರ್ಧದ 51ನೆಯ ಸರ್ಗದಲ್ಲಿ ಶ್ರೀರಾಮನು ಕೂಟಸ್ಥಬ್ರಹ್ಮದಿಂದ ಜೀವರ ಉತ್ಪತ್ತಿ ಹೇಗೆ ಆದೀತು? ಅದರಿಂದ ಪ್ರಯೋಜನವಾದರೂ ಏನು? ಆಕಾಶದಿಂದ ಮರ ಹುಟ್ಟಿತೆಂಬಂತೆ ಅಲ್ಲವೆ, ಇದು?-ಎಂದು ಕೇಳಿದ ಪ್ರಶ್ನೆಗೆ ವಸಿಷ್ಠರು ಉತ್ತರವನ್ನು ಕೊಟ್ಟಿರುತ್ತಾರೆ. ನಿಜ, ಈ ಉತ್ಪತ್ತಿಯು ಅಸಂಭಾವಿತವೇ; ಪ್ರಥಮ ಜೀವನ ಉತ್ಪತ್ತಿಯಾಗುವದಿಲ್ಲವೆಂದು ಮಾತ್ರವಲ್ಲ, ಯಾವ ಜೀವರಾಗಲಿ, ಜಗತ್ತಾಗಲಿ ಹುಟ್ಟಿಯೇ ಇಲ್ಲ, ನಾಶವಾಗುವದೂ ಇಲ್ಲ; ಉಪದೇಶಕ್ಕಾಗಿ ಈ ಶಬ್ದಾರ್ಥಗಳನ್ನು ಕಲ್ಪಿಸಿರುತ್ತದೆ, ಅಷ್ಟೆ. ಶರೀರಗಳನ್ನು ಯಾರೂ ನಿರ್ಮಿಸಿಲ್ಲ, ಯಾರನ್ನೂ ಯಾರೂ ಸ್ನೇಹರಾಗಾದಿಬಂಧನಗಳಿಂದ ಕಟ್ಟಿಹಾಕಿಯೂ ಇರುವದಿಲ್ಲ. ಆತ್ಮನಲ್ಲಿ ಅನಾದ್ಯನಂತಚೈತನ್ಯಸ್ವಭಾವವೇ ಇದ್ದುಕೊಂಡಿರುತ್ತದೆ; ಅದೇ ಪ್ರಪಂಚರೂಪವಾಗಿ ತೋರುತ್ತಿರುವದು. ಕಂಬದಲ್ಲಿ ಅಡಕವಾಗಿದ್ದ ಗೊಂಬೆಯನ್ನೇ ಶಿಲ್ಪಿಯು ಪ್ರಕಟಮಾಡುವಂತೆ, ಚೈತನ್ಯದಲ್ಲಿರುವ ಜಗತ್ತೇ ಹೊರತೋರಿಕೊಳ್ಳುವದು. ದೇಶಕಾಲಕ್ರಿಯಾಲೋಕರೂಪಾದಿವಿಚಿತ್ರಗಳಿಲ್ಲದ ಬೋಧದಲ್ಲಿಯೇ

ದೇಶಕಾಲಾದಿರೂಪವಾದ ಈ ಜಗತ್ತು ತೋರುತ್ತಿರುವದು. ಯಾರು ದೃಶ್ಯವನ್ನೆಲ್ಲ ಜ್ಞಾನದಿಂದ ಶಾಂತಿಗೊಳಿಸಿಕೊಂಡಿರುವರೋ ಅವರಿಗೆ ಇದೊಂದೂ ಕಾಣಿಸದೆ ಇರುವದು. ಸೌಮ್ಯವಾದ ಸಾಗರದಲ್ಲಿ ಹೇಗೆ ಅಲೆಗಳೇ ಮುಂತಾದವುಗಳಿರುವದಿಲ್ಲವೋ ಹಾಗೆ ಕೂಟಸ್ಥವಾದ ಬ್ರಹ್ಮದಲ್ಲಿ ಜಗಚ್ಚಿತ್ತಾದಿಗಳು ಇರುವದೇ ಇಲ್ಲ. ಸ್ವಪ್ನಕಾಲದಲ್ಲಿ ಸ್ವಪ್ನವೇ ಎಚ್ಚರದಂತೆ ತೋರುವಂತೆ ಸತ್ಯವನ್ನು ತಿಳಿದವರಿಗೆ ಎಚ್ಚರವೂ ಸ್ವಪ್ನವಾಗಿಬಿಡುವದು. ಮೋಡವು ನಾಶವಾಗುವಾಗ ಆಕಾಶವೇ ಆಗಿಬಿಡುವಂತೆ ಸತ್ಯದ ಅರಿವಿನಿಂದ ಸಕಲಜಗತ್ತೂ ಶಾಂತವಾಗುವದು. ಇವೆಲ್ಲ ಬೋಧಮಾತ್ರವೆಂದು ತಿಳಿಯದ್ದರಿಂದಲೇ ಜಗತ್ತೂ ಚಿತ್ತವೂ ಉಂಟಾಗಿರುವದು, ಯಾವಾಗ ಜ್ಞಾನದಿಂದ ಅದೆಲ್ಲವೂ ನಾಶವಾಗುವದೋ ಆಗ ವಸ್ತ್ವಾಕಾರಗಳಿವೆ ಎಂಬ ತಪ್ಪುತಿಳಿವಳಿಕೆ ಹೇಗೆ ಉಂಟಾದೀತು ? ಜಾಗ್ರತ್ತಿನ ತತ್ತ್ವವನ್ನು ವಿಚಾರಮಾಡುತ್ತಿರುವಾಗಲೇ ಅದು ಕರಗಿ ಸ್ವಪ್ನವಾಗಿಬಿಡುವದು, ದೃಶ್ಯಪದಾರ್ಥಗಳಿಗೆ ಸಾರವೇ ಇಲ್ಲವಾಗುವದು. ವಿಷಯಾನುಭವವೆಲ್ಲಿ, ಆತ್ಮನಲ್ಲಿಯೇ ವಿಶ್ರಾಂತನಾಗುವದೆಲ್ಲಿ ? ಜಾಗ್ರತ್ಸ್ವಪ್ನಗಳಿಗೆ ಐಕ್ಯವಾಗುವದಾದರೆ ಭ್ರಾಂತರಿಗೂ ಜ್ಞಾನಿಗಳಿಗೂ ಐಕ್ಯವಾದೀತು. ಹೀಗೆ ಪೃಥಿವ್ಯಾದಿಜಗತ್ತು ಬಾಹ್ಯದೃಷ್ಟಿಯಿಂದ ಇದ್ದರೂ ಜ್ಞಾನಿಯ ದೃಷ್ಟಿಯಿಂದ ಶೂನ್ಯವಾಗಿಬಿಡುವದು. ಯಾವನು ಹೀಗೆ ಆತ್ಮನಲ್ಲಿಯೇ ವಿಶ್ರಾಂತನಾಗುವನೋ ಅವನು ಸಂಸಾರಸಾಗರವನ್ನು ದಾಟುವನು; ಅವನ ಕರ್ಮವೆಲ್ಲವೂ ನಾಶವಾಯಿತು. ಅವನೇ ಪರಮಶಾಂತನು.

**ಶ್ರೀ ಶ್ರೀಗಳವರು** ಅನುವಾದಲ್ಲಿ ವಾಸಿಷ್ಠರಾಮಾಯಣದ ಉಪದೇಶದ ಸರಣಿಯನ್ನು ವರ್ಣಿಸಿ ದೃಶ್ಯವೇ ಇಲ್ಲವೆಂಬ ತಿಳಿವಳಿಕೆಯಿಂದ ದೃಶ್ಯವನ್ನು ಕಳೆದುಕೊಂಡು ಆತ್ಯಂತಿಕವಾಗಿ ವಾಸನಾತ್ಯಾಗವನ್ನು ಮಾಡಿಕೊಂಡವನೇ ಕೃತಕೃತ್ಯನು –ಎಂಬುದು ಈ ರಾಮಾಯಣದ ಸಾರವೆಂದು ತಿಳಿಸಿದರು.

★★★★★

# ಶಕ್ತಿತತ್ತ್ವ

## 13-5-1962

**ಬ್ರ॥ಶ್ರೀ॥ ಲಕ್ಷ್ಮೀನರಸಿಂಹಮೂರ್ತಿಯವರು**

**ಯಜ್ಞವೈಭವಖಂಡದಲ್ಲಿ** 13ನೆಯ ಅಧ್ಯಾಯದಲ್ಲಿ ಸೂತರು ಜ್ಞಾನಯಜ್ಞವನ್ನು ವಿವರಿಸುವದಕ್ಕೆ ಹೊರಟು ''**ಶಕ್ತಿತತ್ತ್ವ**'' ವನ್ನು ಹೀಗೆಂದು ಇಲ್ಲಿ ವರ್ಣಿಸಿರುತ್ತಾರೆ: ಚಿನ್ಮಾತ್ರವನ್ನು ಆಶ್ರಯಿಸಿರುವ ಮಾಯೆಯ ಶಕ್ತ್ಯಾಕಾರದಲ್ಲಿ ಪ್ರವೇಶಿಸಿರುವ ನಿರ್ವಿಕಲ್ಪಸ್ವಯಂಪ್ರಕಾಶವಾದ ಸಂವಿದ್ರೂಪವೇ ಪರಶಕ್ತಿಯು. ಅದು ಸದಾಕಾರವಾಗಿ ಸಂಸಾರೋಚ್ಛೇದಕ್ಕೆ ಕಾರಣವಾಗಿರುತ್ತದೆ. ಆ ಶಕ್ತಿಗೂ ಶಿವನಿಗೂ ಭೇದವಿಲ್ಲ. ಜಗತ್ಕಾರಣತ್ವವನ್ನು ಹೊಂದಿದ ಶಿವನಿಗೂ ಅದೇ ಶಕ್ತಿಯು; ಅದಿಲ್ಲದೆ ಇದ್ದರೆ ಅವನು ನಿರರ್ಥಕನೆಂದು ತಿಳಿಯಬೇಕು. ಸರ್ವಜ್ಞತ್ವ, ಈಕ್ಷಿತೃತ್ವಗಳನ್ನು ಪಡೆದಿರುವ ಶಿವನಿಗೂ ರುದ್ರತ್ವ, ವಿಷ್ಣುತ್ವ, ಬ್ರಹ್ಮತ್ವ, ಸದಾಶಿವತ್ವ, ಈಶ್ವರತ್ವ, ಹಿರಣ್ಯಗರ್ಭತ್ವ, ಸೂತ್ರಾತ್ಮತ್ವ, ವಿರಾಡ್ಭಾವ, ಸ್ವರಾಡ್ಭಾವ, ಸಮ್ರಾಡ್ಭಾವ, ಇಂದ್ರಾದಿಲೋಕಪಾಲತ್ವ, ದೇವಾದಿರೂಪತ್ವ, ಮನುಷ್ಯತ್ವ, ತಿರ್ಯಗಾದಿರೂಪತ್ವ, ಓಷಧಿವನಸ್ಪತಿಗಳ ರೂಪ, ಭಕ್ಷ್ಯಭೋಜ್ಯಾದಿರೂಪ, ನದೀನದಾದಿರೂಪ, ಪರ್ವತಾದಿರೂಪ, ಸಮುದ್ರರೂಪ, ವಿದ್ಯಾರೂಪ- ಮುಂತಾದ ಸರ್ವಾಕಾರವನ್ನು ಪಡೆದಿರುವ ಶಿವನಿಗೂ ಇದೇ ಶಕ್ತಿಯು. ಶಕ್ತಿಯಿಲ್ಲದಿದ್ದರೆ ಶಿವನು ನಿರರ್ಥಕನು. ಶಿವನಿಲ್ಲದೆ ಶಕ್ತಿಯಿಲ್ಲ, ಶಕ್ತಿಯಿಲ್ಲದೆ ಶಿವನಿಲ್ಲ; ಹೀಗೆಂದು ಶಿವಶಕ್ತಿಗಳ ಐಕ್ಯವನ್ನು ಬಲ್ಲವನೇ ಬಲ್ಲವನು. ಈ ಶಿವಶಕ್ತಿಯರಿಂದಲೇ ಜಗತ್ತೆಲ್ಲವೂ ಆಗಿರುವದು. ಶಕ್ತ್ಯುಪಾಸಕರು ಸಕಲಾಭೀಷ್ಟಗಳನ್ನೂ ಪಡೆಯುವರು. ಪಾರ್ವತಿಯು ಈ ಶಕ್ತಿಯೇ, ಲಕ್ಷ್ಮೀಸರಸ್ವತಿಯರೂ ಈ ಶಕ್ತಿಯೇ. ಈಕೆಯನ್ನು ಆಶ್ರಯಿಸಿಯೇ ವೈದಿಕರು, ಶೈವರು, ಭಾಗವತರು, ದಿಗಂಬರರು, ಬೌದ್ಧರು ಎಲ್ಲರೂ ಈಕೆಯನ್ನೇ ಆರಾಧಿಸಿ ಇಷ್ಟಾರ್ಥವನ್ನು ಪಡೆಯುತ್ತಿದಾರೆ. ಶಿವೆ, ಉಮೆ, ಜಡಶಕ್ತಿ, ಜಡಕಾರ್ಯವಾದ ಜಗತ್ತು, ಜೀವ, ಇರುವದು, ಇಲ್ಲದ್ದು - ಎಲ್ಲವೂ ಈಕೆಯೇ. ಈ ಶಕ್ತಿಯನ್ನು

ಪೂರ್ಣರೂಪದಿಂದ ಉಪಾಸನೆಮಾಡಬೇಕು; ಬ್ರಹ್ಮರೂಪದಿಂದ ಸರ್ವವೂ ಅನಿಂದ್ಯವಾದರೂ ಅಜ್ಞರಿಗೆ ನಿಂದ್ಯಾನಿಂದ್ಯಭೇದರೂಪದಿಂದ ಕಾಣುತ್ತಿರುವದು. ಲೌಕಿಕವೈದಿಕವೆಂಬ ಭೇದವೂ ಹೀಗೆಯೇ. ಹೀಗೆಂದು ತಿಳಿಯುವದೇ ಜ್ಞಾನಯಜ್ಞವು.

**ಶ್ರೀಶ್ರೀಗಳವರು ಅನುವಾದದಲ್ಲಿ ಹೇಳಿದ್ದರ ಸಾರವೇನೆಂದರೆ:** ಶಿವನೂಶಕ್ತಿಯೂ ಒಂದೇ ಆದರೂ ಶಕ್ತಿರೂಪದಿಂದಲ್ಲದೆ ಅರ್ಥಕ್ರಿಯಾ ಕಾರಿಯಾಗನು. ಶಿವಶಕ್ತಿಗಳೆಂಬ ಭೇದವ್ಯವಹಾರವು ಔಪಚಾರಿಕ. ಸೂತಸಂಹಿತೆಯ ಮಹಿಮೆ ಅಗಾಧವು. ಶ್ರೀಶಂಕರಭಗತ್ಪಾದರವರು ಅನೇಕಸಲ ಈ ಪುರಾಣವನ್ನು ಓದಿ ತಮ್ಮ ಭಾಷ್ಯವನ್ನು ಬರೆದರೆಂದು ಹೇಳುತ್ತಾರೆ ; ಅದು ಸ್ತುತಿಗಾಗಿ ಹೇಳಿದ್ದೆಂದು ತಿಳಿಯಬೇಕು. ದಕ್ಷಿಣದಲ್ಲಿ ಶೈವವೈಷ್ಣವಶಾಕ್ತೇಯಾದಿಭೇದಗಳಿಂದ ತಾಂತ್ರಿಕರು ಬಹಳವಾಗಿದ್ದದ್ದರಿಂದ ಅವರನ್ನು ವೈದಿಕಮಾರ್ಗಕ್ಕೆ ಎಳೆಯುವದಕ್ಕೆ ವೇದಾಂತಿಗಳು ಮಾಡಿದ ಸಾಹಸವನ್ನು ಈ ಪುರಾಣದಲ್ಲಿ ಕಾಣಬಹುದು. ಸರ್ವವೂ ಬ್ರಹ್ಮವೇ; ಬೆಂಕಿಯ ಸೆಕೆ, ತಾಪ, ಪ್ರಕಾಶ - ಎಲ್ಲವೂ ಬೆಂಕಿಯೇ ಆಗಿರುವಂತೆ ಚಿತ್ತು ಜಡ, ಸತ್ಯ ಅನೃತ - ಎಲ್ಲವೂ ಬ್ರಹ್ಮವೇ ಎಂಬುದು ಪುರಾಣದ ಸಾರ.

★★★★★

# ವಿಷ್ಣುಸ್ಮರಣೆಯ ಪ್ರಕಾರ

**14-5-1962**

**ಬ್ರ॥ಶ್ರೀ॥ಮತ್ತೂರು ರಾಮಸ್ವಾಮಿಅವಧಾನಿಗಳು**

**ಪದ್ಮ ಪುರಾಣದಲ್ಲಿ** ಉತ್ತರಖಂಡ 128ನೆಯ ಅಧ್ಯಾಯ(1-48 ರವರೆಗಿನ ಶ್ಲೋಕಗಳ)ದಲ್ಲಿ ಪಾರ್ವತಿಗೆ ಮಹಾದೇವನು ವಿಷ್ಣುಸ್ಮರಣೆಯ ಪ್ರಕಾರವನ್ನು ಬೋಧಿಸಿರುತ್ತಾನೆ. ಮಹಾದೇವನು ಹೇಳಿರುವದೇನೆಂದರೆ: ವಿಷ್ಣುವಿನ ಸ್ವರೂಪವನ್ನು ತತ್ತ್ವಶಃ ಕಂಡುಕೊಂಡೇ ನಾನು ನಿತ್ಯವೂ ಆತನನ್ನು

ಸ್ಮರಿಸುತ್ತಿರುತ್ತೇನೆ. ಜನರು ದುಷ್ಟಭಾವದಿಂದಲಾಗಲಿ ಕಪಟದಿಂದಲಾಗಲಿ ಅಥವಾ ಅವನೇ ನಮ್ಮ ಸ್ವಾಮಿ ಎಂಬ ಭಾವದಿಂದಲಾಗಲಿ, ಭಕ್ತಿಯಿಂದಲಾಗಲಿ ಹೇಗೆ ಸ್ಮರಿಸಿದರೂ ಈ ಲೋಕದಲ್ಲಿ ಸುಖವನ್ನು ಭೋಗಿಸಿ ಆ ವಿಷ್ಣುವನ್ನೇ ಹೋಗಿ ಸೇರುವರು. ಕಣ್ಣಿಗೆ ಹಚ್ಚಿದ ಕಾಡಿಗೆಯಂತೆ ಸಮೀಪದಲ್ಲಿಯೇ ಇದ್ದರೂ ಆ ವಿಷ್ಣು ಕಾಣಿಸದೆ ಇರುತ್ತಾನೆ. ಭಕ್ತಿಯೋಗದಿಂದ ತತ್ ಕ್ಷಣದಲ್ಲಿಯೇ ಕಾಣಬರುತ್ತಾನೆ. ಈ ನಿಜವನ್ನರಿಯದೆ ಜನರು ಭ್ರಾಂತರಾಗುತ್ತಿರುವರು, ಆದ್ದರಿಂದ ಸರ್ವಧರ್ಮಗಳನ್ನೂ ಬಿಟ್ಟು ಭಕ್ತಿಯನ್ನು ಮಾಡಬೇಕು. ಭಕ್ತಿರಹಿತವಾದ ಧರ್ಮೋಪದೇಶವು ವ್ಯರ್ಥ. ನಿಜವಾದ ವಿಷ್ಣುಭಕ್ತನು ಎಲ್ಲಿಯೋ ಕೋಟಿಜನರೊಳಗೆ ಒಬ್ಬನು ಇರುತ್ತಾನೆ. ವಿಷ್ಣುವಿನಲ್ಲಿ ಭಕ್ತಿಯನ್ನು ಮಾಡಿದರೆ ಮರದ ಬುಡದಲ್ಲಿ ಹಾಕಿದ ನೀರಿನಿಂದ ಕೊಂಬೆಯಲ್ಲಿ ಫಲವು ಬಿಡುವಂತೆ ಪರಮಫಲವು ಪ್ರಾಪ್ತವಾಗುವದು. ಭಕ್ತರಿಗೆ ಕರ್ಮಬಂಧವಿಲ್ಲ. ಪಾಪಿಷ್ಠರಾದರೂ ಅಜಾಮಿಲನಂತೆ ನಾರಾಯಣನಾಮಸ್ಮರಣೆಯಿಂದ ಪರಗತಿಯನ್ನು ಪಡೆಯುವರು; ವೈಕುಂಠವನ್ನು ಪಡೆದ ವಿಷ್ಣುಭಕ್ತರಿಗೆ ಎಂದಿಗೂ ಪುನರಾವೃತ್ತಿಯಿಲ್ಲ - ಎಂಬುದು ಸಾರವು.

**ಶ್ರೀಗಳವರು** ಅನುವಾದದಲ್ಲಿ ಇಂತೆಂದರು: ವಿಷ್ಣುವನ್ನು ಸಂತತವೂ ಸ್ಮರಿಸುತ್ತಿರುವಾತನು ವಿಷ್ಣುಮಯನಾಗುವನು. ಕಮ್ಮಾರನಿಗೆ ಒಂದು ಮರವನ್ನು ಕಂಡರೆ 'ಇಂತಿಷ್ಟು ಇದ್ದಲು ಇದರಿಂದ ಆಗುವದು' ಎಂಬ ಭಾವನೆ ಬರುತ್ತದೆ; ಬಡಗಿಗೆ ಇಂತಿಷ್ಟು ಹಲಗೆಗಳಾಗುವವು ಎನಿಸುತ್ತದೆ. ಇದರಂತೆ ವಿಷ್ಣುಸ್ಮರಣೆಯನ್ನು ಮಾಡುವವರಿಗೆ ಜಗತ್ತೆಲ್ಲವೂ ವಿಷ್ಣುಮಯವೇ ಆಗಿ ತೋರುವದು. ಆದ್ದರಿಂದಲೇ ಪ್ರಹ್ಲಾದನು ಅವಿವೇಕಿಗಳು ವಿಷಯವನ್ನು ಎಡೆಬಿಡದೆ ಪ್ರೀತಿಯಿಂದ ಸ್ಮರಿಸುತ್ತಿರುವಂತೆ ನಿನ್ನ ಸ್ಮರಣೆಯಲ್ಲಿಯೇ ನನಗೆ ಪ್ರೀತಿಯಿರಲಿ!' ಎಂದು ಬೇಡಿಕೊಂಡಿರುತ್ತಾನೆ.

★★★★★

# ಸುದಾಮೋಪಾಖ್ಯಾನ

**15-5-1962**

**ಬ್ರ॥ಶ್ರೀ॥ ಚಂದ್ರಶೇಖರಭಟ್ಟರು ಪಾಟಣಕರ**

ಇವರು **ಭಾಗವತ ದಶಮಸ್ಕಂದ(1-81)**ದಲ್ಲಿ , ಶ್ರೀಕೃಷ್ಣನು ಕುಚೇಲನನ್ನು ಮನೆಯಿಂದ ಏನು ತಂದಿದ್ದೀಯೆ? ನಿಮ್ಮಂಥವರು ಪ್ರೇಮದಿಂದ ತಂದದ್ದು ಎಷ್ಟು ಅಲ್ಪವಾದರೂ ಅದೇ ನನಗೆ ಹೆಚ್ಚು ಎಂದು ಮತ್ತೆಮತ್ತೆ ಕೇಳಿದರೂ ಆ ಬ್ರಾಹ್ಮಣನು ನಾಚಿಕೆಯಿಂದ ಅವಲಕ್ಕಿಯನ್ನು ಕೊಡಲಾರದೆಹೋದನು. ಆಗ ಭಗವಂತನು 'ಇವನು ನನ್ನನ್ನೇನೂ ಶ್ರೀಕಾಮನಾಗಿ ಭಜಿಸಿದವನಲ್ಲ ; ಹೆಂಡತಿಗೆ ಪ್ರಿಯವಾಗಲಿ ಎಂದು ಬಂದಿದಾನೆ. ಹೇಗೂ ಇವನಿಗೆ ದುರ್ಲಭವಾದ ಸಂಪತ್ತುಗಳನ್ನು ಕೊಡೋಣ' ಎಂದು 'ತಾನೇ ಇದೇನು?' ಎಂದು ಬಟ್ಟೆಯ ಗಂಟನ್ನು ಬಿಚ್ಚಿ ಅವಲಕ್ಕಿಯನ್ನು ತೆಗೆದುಕೊಂಡನು. 'ಆಹಾ! ಈ ಅವಲಕ್ಕಿಯು ನನಗೆ ಎಷ್ಟು ಪ್ರಿಯವಾಗಿದೆ!' ಎಂದು ಒಂದು ಮುಷ್ಟಿಯನ್ನುತಿಂದು ಎರಡನೆಯನ್ನು ತೆಗೆದುಕೊಳ್ಳುವ ವೇಳೆಗೆ ಲಕ್ಷ್ಮಿಯು ಅವನ ಕೈಯನ್ನು ಹಿಡಿದುಕೊಂಡು 'ಇಷ್ಟೇ ಸಾಕು, ಸರ್ವಸಂಪತ್ಸಮೃದ್ಧಿಯೂ ಇಹಪರಗಳಲ್ಲಿ ಇವನಿಗೆ ಸಿಕ್ಕುವದಕ್ಕೆ' ಎಂದಳು. ಕುಚೇಲನು ಆ ರಾತ್ರೆಯನ್ನು ಅಲ್ಲಿಯೇ ಕಳೆದು ಮಾರನೆಯದಿನ ಸಂತೋಷದಿಂದ ಊರಿಗೆ ಹೊರಟನು. ಕೃಷ್ಣನು ಅವನಿಗೆ ಏನೂ ಕೊಡದಿದ್ದರೂ 'ದರಿದ್ರ ಬ್ರಾಹ್ಮಣನಾದ ನನ್ನನ್ನು ಲಕ್ಷ್ಮೀಪತಿಯಾದ ದೇವನು ಆಲಂಗಿಸಿದನಲ್ಲ!' ಎಂದುಕೊಂಡು ತನಗೆ ಶ್ರೀಕೃಷ್ಣನು ಮಾಡಿದ ವಿವಿಧೋಪಚಾರಗಳನ್ನು ನೆನೆನೆನೆದು 'ಇವನು ಧನಮದದಿಂದ ನನ್ನನ್ನು ಮರೆತುಬಿಟ್ಟಾನು' ಎಂದು ಕರುಣೆಯಿಂದ ಧನವನ್ನು ಕೊಡಲಿಲ್ಲವೆಂದು ಕಾಣುತ್ತದೆ-ಎಂದುಕೊಳ್ಳುತ್ತಾ ತನ್ನ ಮನೆಗೆ ಬರುವ ವೇಳೆಗೆ ಆ ಮನೆಯು ವೈಭವದಿಂದ ಕೂಡಿರುವದನ್ನೂ ಮನೆಯೊಳಗಿರುವ ದಾಸಿಯರೊಡನೆ ಹೊರಬರುತ್ತಿರುವ ಪತ್ನಿಯನ್ನೂ ಕಂಡು ಅತಿವಿಸ್ಮಿತನಾದನು. ಆಕೆಯೊಡನೆ ಒಳಕ್ಕೆ ಹೋಗಿ ಅಷ್ಟೊಂದು ಸಮೃದ್ಧಿಯು ಹೇಗೆ ಬಂದಿರಬೇಕೆಂಬುದನ್ನರಿಯದೆ

ಅತ್ಯಂತ ವಿಸ್ಮಯದಿಂದ ''ಆ ಮಹಾವಿಭೂತಿಯಾದ ಶ್ರೀಕೃಷ್ಣನ ದರ್ಶನದಿಂದಲ್ಲದೆ ಕಡುಬಡವನಾದ ನನಗೆ ಈ ಸಮೃದ್ಧಿಗೆ ಮತ್ತೇನು ಕಾರಣವಿದ್ದೀತು? ತಾನು ಕೊಡುವದನ್ನು ಸಣ್ಣದುಮಾಡಿಕೊಂಡು, ನಾನು ಕೊಟ್ಟ ಒಂದುಹಿಡಿ ಅವಲಕ್ಕಿಯನ್ನೇ ಪ್ರೀತಿಯಿಂದ ಗ್ರಹಿಸಿದನಲ್ಲ! ಜನ್ಮಜನ್ಮದಲ್ಲಿಯೂ ನನಗೆ ಆತನ ಗೆಳೆತನವೇ ಇರಲಿ, ಆತನ ದಾಸ್ಯವೇ ಇರಲಿ'' ಎಂದುಕೊಂಡು ವಿಷಯಲಂಪಟನಾಗದೆ ಪತ್ನೀಸಮೇತನಾಗಿ ಅನಾಸಕ್ತಿಯಿಂದ ವಿಷಯಗಳನ್ನು ಭೋಗಿಸುತ್ತಿದ್ದನು. ಈ ಬ್ರಹ್ಮಣ್ಯದೇವನ ಕಥೆಯನ್ನು ಕೇಳಿದವನು ಭಗವಂತನಲ್ಲಿ ಭಕ್ತಿಯನ್ನು ಹೊಂದಿ ಕರ್ಮಬಂಧದಿಂದ ಬಿಡುಗಡೆಯನ್ನು ಹೊಂದುತ್ತಾನೆ ಎಂಬುದು ಆ ವ್ಯಾಖ್ಯಾನದ ಸಾರವು.

**ಶ್ರೀಗಳು** ಅನುವಾದದಲ್ಲಿ ಇಂತೆಂದರು : ಪರಮಾತ್ಮನ ಗುಣಕರ್ಮ ಲೀಲೆಗಳನ್ನು ಮನಮುಟ್ಟಿ ಕೇಳಿದರೆ ಆತನಲ್ಲಿ ಅಚಲಭಕ್ತಿಯೂ ಆತನ ಸಾಯುಜ್ಯವೂ ದೊರಕುತ್ತದೆ ಎಂಬುದು ಸ್ವಾಭಾವಿಕವಾಗಿದೆ. ನಿಃಸ್ಪೃಹನಾದ ಕುಚೇಲನಂಥ ಬ್ರಾಹ್ಮಣ, ಅವನಿಗೆ ಅನುರೂಪಳಾದ ಹೆಂಡತಿ ನಿಮ್ಮ ಹಿಂದಿನ ಸ್ನೇಹಿತನಾದ ಶ್ರೀಕೃಷ್ಣನಲ್ಲಿಗೆ ಹೋಗಿಬರಬಾರದೆ ?– ಎಂಬ ಹರ್ಷದಾಯಕವಾದ ಸೂಚನೆಯನ್ನು ಮಾಡಿದಳು. ಕುಚೇಲನಿಗೆ ಶ್ರೀಕೃಷ್ಣಭಗವಂತನ ದರ್ಶನಕ್ಕೆ ಅವಕಾಶವು ದೊರಕಿತಲ್ಲ ! ಎಂದು ಪರಮಹರ್ಷವಾಯಿತು. ಭಗವಂತನು ಕುಚೇಲನಿಗೆ ಮಾಡಿದ ಆತಿಥ್ಯಗಳು ಲೋಕಕ್ಕೆಲ್ಲ ಮಾದರಿಯಾದವು. ಮಿತ್ರರಿಗೆ ಉಪಕಾರವನ್ನು ರಹಸ್ಯವಾಗಿ ಮಾಡಬೇಕೆಂಬುದನ್ನೂ ಅವರಿಂದಾದ ಸ್ವಲ್ಪ ಉಪಕಾರವನ್ನು ಹೆಚ್ಚಾಗಿ ತಿಳಿಯಬೇಕೆಂಬುದನ್ನೂ ತನ್ನ ಉದಾಹರಣೆಯಿಂದ ಶ್ರೀಕೃಷ್ಣನು ತಿಳಿಸಿರುತ್ತಾನೆ. ಭಗವಂತನಿಂದ ಆಗುವ ಉಪಕಾರವನ್ನು ಇಷ್ಟೆಂದು ಅಳೆಯುವದಕ್ಕಾದೀತೆ?

★★★★★

# ಪೃಥುರಾಜನ ಉಪದೇಶ

**28-4-1963**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

**ಭಾಗವತದಲ್ಲಿ ನಾಲ್ಕನೆಯ ಸ್ಕಂಧದಲ್ಲಿ 21ನೆಯ ಅಧ್ಯಾಯದಲ್ಲಿ** ಪೃಥುರಾಜನು ಪ್ರಜೆಗಳಿಗೆ ಹೀಗೆ ಉಪದೇಶವನ್ನು ಮಾಡಿದನು ಎಂದು ವರ್ಣಿಸಿದೆ:

ದುಷ್ಟನಾದ ವೇನರಾಜನು ಋಷಿಶಾಪದಿಂದ ಸತ್ತಬಳಿಕ ಅವನ ಬಾಹುಗಳನ್ನು ಕಡೆಯಲಾಗಿ ಪೃಥುವೆಂಬ ಪುತ್ರನೂ ಅರ್ಚಿ ಎಂಬ ಪುತ್ರಿಯೂ ಉತ್ಪನ್ನರಾದರು. ಲೋಕಸಂಮತವಾಗಿ ರಾಜ್ಯವಾಳುತ್ತಿದ್ದ ಪೃಥುಚಕ್ರವರ್ತಿಯು ಪ್ರಜೆಗಳಿಗೆ ಮಾಡಿದ ಉಪದೇಶದ ಸಾರವಿದು. ರಾಜನು ಸಭೆಯಲ್ಲಿ ಸೇರಿರುವವರನ್ನು ಕುರಿತು ಇಂತೆಂದನು :

ಸಭ್ಯರೆ, ನಿಮಗೆ ಕಲ್ಯಾಣವಾಗಲಿ! ಇಲ್ಲಿಗೆ ಬಂದಿರುವ ಸಜ್ಜನರಾದ ತಾವೆಲ್ಲರೂ ಕೇಳಿರಿ. ಏಕೆಂದರೆ ಸತ್ಪುರುಷರು ಇರುವೆಡೆಯಲ್ಲಿ ಧರ್ಮ ಜಿಜ್ಞಾಸುಗಳು ತಮ್ಮ ಅಭಿಪ್ರಾಯವನ್ನು ತಿಳಿಸುವದು ಯುಕ್ತವಾಗಿ ರುತ್ತದೆ. ಪ್ರಜೆಗಳನ್ನು ಆಳುವದು, ಅವರನ್ನು ರಕ್ಷಿಸುವದು, ಅವರಿಗೆ ವೃತ್ತಿಯನ್ನುಂಟುಮಾಡಿಕೊಡುವದು, ಅವರನ್ನು ತಮ್ಮ ಧರ್ಮದ ಕಟ್ಟಿನಲ್ಲಿಡುವದು- ಇದಕ್ಕಾಗಿ ನಾನು ರಾಜನಾಗಿ ನಿಯುಕ್ತನಾಗಿರುತ್ತೇನೆ. ಆದ್ದರಿಂದ ಈ ಕಾರ್ಯವನ್ನು ಸರಿಯಾಗಿ ನಾನು ಮಾಡಿದರೆ ಮಾತ್ರ ಭಗವಂತನ ದಯದಿಂದ ಯಾವ ಲೋಕಗಳು ಸಿಕ್ಕಬೇಕೋ ಅವು ದೊರಕುವವು. ಯಾವ ರಾಜನು ಪ್ರಜೆಗಳಿಗೆ ಧರ್ಮಮಾರ್ಗದ ತಿಳಿವಳಿಕೆಯನ್ನು ಕೊಡದೆ ಅವರಿಂದ ಕರಗಳನ್ನು ಮಾತ್ರ ತೆಗೆದುಕೊಳ್ಳುತ್ತಿರುವನೋ ಅವನು ಪ್ರಜೆಗಳ ಪಾಪವನ್ನು ಉಣ್ಣಬೇಕಾಗುವದು, ತನ್ನ ಐಶ್ವರ್ಯವನ್ನೂ ಕಳೆದುಕೊಳ್ಳುವನು. ಆದ್ದರಿಂದ ಪ್ರಜೆಗಳಿರ, ನನಗೆ ಪರಸುಖವಾಗುವದಕ್ಕೆಂದು ನೀವು

ಶ್ರೀಹರಿಯನ್ನು ಸ್ಮರಿಸುತ್ತಾ ನಿಮ್ಮನಿಮ್ಮ ಕರ್ತವ್ಯವನ್ನು ಮಾಡುತ್ತೀರಾದರೆ ನನ್ನ ಮೇಲೆ ಅನುಗ್ರಹವನ್ನು ಮಾಡಿದಂತೆ ಆಗುತ್ತದೆ. ನಿರ್ಮಲರಾದ ಪಿತೃಗಳಿರ, ದೇವತೆಗಳಿರ, ಋಷಿಗಳಿರ, ನೀವೂ ಇದನ್ನು ಅನುಮೋದಿಸಿರಿ. ಏಕೆಂದರೆ ಧರ್ಮವನ್ನು ಮಾಡಿದವನು, ಶಾಸನಮಾಡುವಾತನು, ಅನುಮೋದಿಸಿದವನು- ಈ ಮೂವರಿಗೂ ಪರಲೋಕದ ಫಲವು ಸಮವಾಗಿರುತ್ತದೆ. ಪೂಜ್ಯರೆ, ಯಜ್ಞಪತಿಯಾದ ಪರಮೇಶ್ವರನೊಬ್ಬನುಂಟು, ಏಕೆಂದರೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಪುಣ್ಯವಂತರುಗಳಿಗೆ ಮಾತ್ರ ದೊರಕುವ ತೇಜೋಮಯವಾದ ಶರೀರಗಳು ಕಂಡುಬರುತ್ತವೆ; ಈ ವೈಚಿತ್ರ್ಯದ ವ್ಯವಸ್ಥೆಗೆ ಒಬ್ಬನು ಇರಬೇಕಷ್ಟೆ? ಮನು, ಉತ್ತಾನಪಾದ - ಮೊದಲಾದವರೆಲ್ಲರ ಮತದಲ್ಲಿಯೂ ಚತುರ್ವಿಧಪುರುಷಾರ್ಥಗಳೂ ಸ್ವರ್ಗಾಪವರ್ಗಗಳನ್ನು ಗೊತ್ತುಪಡಿಸುವ ಭಗವಂತನೂ ಒಬ್ಬನು ಉಂಟೇ ಉಂಟು; ಈ ವಿಷಯಕ್ಕೆ ಮೃತ್ಯುದೌಹಿತ್ರನಾದ ವೇನನೇ ಮುಂತಾದ ಕೆಲವರಲ್ಲಿ ಮಾತ್ರ ಮತಭೇದವುಂಟು. ಆದ್ದರಿಂದ ಯಾವನ ಚರಣಕಮಲಗಳಲ್ಲಿರುವ ಪ್ರೇಮವು- ಆತನ ಚರಣಾಂಗುಷ್ಠದಿಂದ ಹುಟ್ಟಿದ ಗಂಗೆಯಂತೆ- ಸಂಸಾರಿಗಳ ಮನೋಮಲವನ್ನು ಕೂಡಲೆ ಕಳೆಯುವದೋ, ಯಾವನ ಪಾದವನ್ನಾಶ್ರಯಿಸಿದಾತನು ಮಾನಸಿಕದೋಷಗಳನ್ನೆಲ್ಲ ಕಳೆದುಕೊಂಡು ವೈರಾಗ್ಯ ವಿಜ್ಞಾನಗಳನ್ನು ಹೊಂದಿರುವನೋ, ಮತ್ತೆ ಸಂಸಾರಕ್ಕೆ ಎಂದಿಗೂ ಮರಳಿಬರದೆ ಇರುವನೋ, ಆ ಸರ್ವಕಾಮದಾತೃವನ್ನೇ ನೀವುಗಳು ನಿಮ್ಮನಿಮ್ಮ ಧರ್ಮಗಳನ್ನು ತ್ರಿಕರಣಶುದ್ಧಿಯಿಂದ ಮಾಡುತ್ತಾ ಭಜಿಸಿರಿ. ಆಗ ಅವಶ್ಯವಾಗಿ ನಿಮ್ಮ ಕರ್ಮಕ್ಕೆ ತಕ್ಕಂತೆ ಫಲವಾಗುವದೆಂದು ನಂಬಿರಿ. ಅನೇಕಗುಣಯುಕ್ತನೂ ನಿರ್ಗುಣನೂ ಆದ ಅ ಪರಮಾತ್ಮನೇ ನಾವು ಮಾಡುವ ವಿಧವಿಧವಾದ ಕ್ರಿಯೆಗಳಿಂದಲೂ ಪ್ರಯೋಗಿಸುವ ದ್ರವ್ಯ, ಗುಣ, ಕ್ರಿಯೆ, ಮಂತ್ರ- ಮುಂತಾದವುಗಳ ಭೇದದಿಂದಲೂ ವಿವಿಧವಿಶೇಷಣಯುಕ್ತಯಜ್ಞರೂಪದಿಂದಲೂ ಪ್ರಕಟನಾಗುವನು. ಅಗ್ನಿಯೊಂದೇ ತಾನು ಸುಡುವ ಕಟ್ಟಿಗೆಗಳ ಭೇದದಿಂದ ಬಗೆಬಗೆಯಾಗಿ

ತೋರುವಂತೆ, ಬಗೆಬಗೆಯ ಕರ್ಮಫಲಗಳ ರೂಪದಿಂದಲೂ ಕಾಣಬರುತ್ತಾನೆ. ಆಹಾ! ಇಲ್ಲಿ ಯಾವಯಾವ ಪ್ರಜೆಗಳು ಸ್ವಧರ್ಮದಿಂದ ಶ್ರೀಹರಿಯನ್ನು ಪೂಜಿಸುತ್ತಿರುವರೋ ಅವರು ನನ್ನಮೇಲೆ ಎಷ್ಟು ಕೃಪೆಯನ್ನು ತೋರಿಸುತ್ತಿರುತ್ತಾರೆ! ತಿತಿಕ್ಷೆ, ತಪಸ್ಸು, ವಿದ್ಯೆ-ಇವುಗಳಿಂದ ಥಳಿಥಳಿಸುತ್ತಿರುವ ವಿಷ್ಣುಭಕ್ತರಾದ ಬ್ರಾಹ್ಮಣರ ಮೇಲೆ ರಾಜರ ತೇಜಸ್ಸು ಬೀಳದಿರಲ್ಲಿ! ಯಾರ ಚರಣಕ್ಕೆ ನಮಸ್ಕರಿಸುವದರಿಂದ ಪುರಾಣಪುರುಷನು ಕೂಡ ಅನಪಾಯಿಲಕ್ಷ್ಮಿಯನ್ನು ಪಡೆದುಕೊಂಡನೋ, ಯಾರನ್ನು ಸೇವಿಸಿದರೆ ಈಶ್ವರನೂ ತುಷ್ಟನಾಗುವನೋ, ಆ ಬ್ರಾಹ್ಮಣರನ್ನು ಸರ್ವಪ್ರಕಾರದಿಂದಲೂ ಸೇವೆಮಾಡುತ್ತಿರಿ! ಆ ಬ್ರಾಹ್ಮಣರ ಸೇವೆಯಿಂದ ಹೆಚ್ಚಿನ ಮನಃಶಾಂತಿ ಉಂಟಾಗುತ್ತದೆ ; ಅವರಿಗಿಂತ ಹವಿರ್ಭೋಗಿಗಳಾದ ದೇವತೆಗಳಿಗೆ ಮತ್ತೆ ಯಾವ ಮುಖವಿದ್ದೀತು? ಶ್ರದ್ಧೆಯಿಂದ ಅವರ ಮುಖದಲ್ಲಿ ಹೋಮಮಾಡಿದ್ದನ್ನು ಸ್ವೀಕರಿಸುವಂತೆ ಅಚೇತನವಾದ ಅಗ್ನಿ ಯಲ್ಲಿ ಹೋಮಮಾಡಿದ್ದನ್ನು ಪರಮಾತ್ಮನು ಸ್ವೀಕರಿಸನು. ಯಾರು ನಿಷ್ಕಲ್ಮಷವಾದ ಸನಾತಬ್ರಹ್ಮವನ್ನು ಶ್ರದ್ಧೆ, ತಪಸ್ಸು, ಮಂಗಲ, ಮೌನ, ಸಂಯಮ-ಇವುಗಳಿಂದೊಡಗೂಡಿ ನಿರಂತರವೂ ಸಮಾಹಿತಚಿತ್ತರಾಗಿ ತಮ್ಮಲ್ಲಿ ಧರಿಸಿಕೊಂಡಿರುವರೋ, ಅವರ ಪಾದಕಮಲಗಳನ್ನು ನಾನು ಬದುಕಿರುವವರೆಗೂ ನನ್ನ ಕಿರೀಟದಮೇಲೆ ಧರಿಸುವಂತಾಗಲಿ ! ಹಾಗೆ ಧರಿಸುವಾತನ ಪಾಪಗಳೆಲ್ಲವೂ ನಾಶವಾಗುವವು ; ಸಕಲ ಗುಣಗಳೂ ಅವನಲ್ಲಿಗೆ ಬಂದುಸೇರುವವು. ಗುಣವಂತನೂ ಶೀಲವಂತನೂ ಕೃತಜ್ಞನೂ ಆದ ಯಾವ ಪುರುಷನು ಅವರ ಸೇವೆಯನ್ನು ಮಾಡುವನೋ ಅವನನ್ನು ಸರ್ವಸಂಪತ್ತುಗಳೂ ತಮಗೆತಾವೇ ಬಂದು ಸೇರುವವು. ಆದ್ದರಿಂದ ಬ್ರಾಹ್ಮಣಕುಲವೂ ಗೋವಂಶವೂ ಭಗವದ್ಭಕ್ತರೂ ಮತ್ತು ಭಗವಂತನೂ ನನ್ನಲ್ಲಿ ಸದಾ ಪ್ರಸನ್ನನಾಗಿರಲಿ !- ಎಂಬುದೇ ನನ್ನ ಪ್ರಾರ್ಥನೆ.''

★★★★★

# ಶುಕಜನಕರ ಸಂವಾದ

**29-4-1963**

**ಬ್ರ॥ಶ್ರೀ॥ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿಗಳವರು**

ಮಹಾಭಾರತದ ಮೋಕ್ಷಧರ್ಮದಲ್ಲಿ 326ನೆಯ ಅಧ್ಯಾಯದಲ್ಲಿ ವ್ಯಾಸರು ತಮ್ಮ ಮಗನಾದ ಶುಕನಿಗೆ ಅಧ್ಯಾತ್ಮವಿದ್ಯೆಯನ್ನೆಲ್ಲ ಹೇಳಿಕೊಟ್ಟು ಮಿಥಿಲಾಧಿಪತಿಯಾದ ಜನಕನಲ್ಲಿಗೆ ಹೋಗು, ಅವನು ನಿನಗೆ ಮೋಕ್ಷಸಾಧನವನ್ನೆಲ್ಲ ತಿಳಿಸಿಕೊಡುವನು-ಎಂದರು. ಅದರಂತೆ ಶುಕನು ಬಹುದೂರದಲ್ಲಿರುವ ಭಾರತವರ್ಷಕ್ಕೆ ಬಂದು ವಿದೇಹದೇಶವನ್ನು ಪ್ರವೇಶಿಸಿ ಮಿಥಿಲೆಯಲ್ಲಿ ಅರಮನೆಯ ಬಾಗಿಲಿಗೆ ಬರಲು ದ್ವಾರಪಾಲಕರು ತಡೆಗಟ್ಟಿ ಆಡಿದ ಪೌರುಷವಾಕ್ಕುಗಳಿಂದಲೂ ಮನಸ್ಸಿನಲ್ಲಿ ಕ್ಷುಬ್ಧನಾಗದೆ ಕೊನೆಗೆ ಅವರು ಸತ್ಕರಿಸಿ ಒಳಕ್ಕೆ ಬಿಟ್ಟ ಬಳಿಕ ಅರಮನೆಯನ್ನು ಹೊಕ್ಕನು. ಅಲ್ಲಿ ಪ್ರಮದಾವನದಲ್ಲಿದ್ದ ಸ್ತ್ರೀಯರ ಸಾಮೀಪ್ಯದಿಂದಲೂ ಮನಸ್ಸು ಕದಲದೆ ಇದ್ದನು. ಬಳಿಕ ಜನಕನೇ ಸಾಕ್ಷಾತ್ತಾಗಿ ಅವನನ್ನು ಅತಿಥಿ ಸತ್ಕಾರಪೂರ್ವಕವಾಗಿ ಬರಮಾಡಿಕೊಂಡನು. ಆಗ ನಡೆದ ಶುಕಜನಕರ ಸಂವಾದವು ಈ ಅಧ್ಯಾಯದಲ್ಲಿದೆ.

ಬ್ರಾಹ್ಮಣನಾದವನು ಏನನ್ನು ಮಾಡಬೇಕು? ಮೋಕ್ಷದ ಸ್ವರೂಪವೇನು? ಅದನ್ನು ಹೇಗೆ ಪಡೆದುಕೊಳ್ಳಬೇಕು? -ಎಂಬ ಪ್ರಶ್ನೆಗಳನ್ನು ಶುಕನು ಕೇಳಿದ್ದಕ್ಕೆ ಜನಕನು ಹೇಳಿದ ಉತ್ತರವು ಇಲ್ಲಿದೆ.

ಮೊದಲು ಜನಕನು ಬ್ರಾಹ್ಮಣನಾದವನು ಬ್ರಹ್ಮಚರ್ಯೆಯಿಂದ ಮೊದಲು ಮಾಡಿ ಚತುರ್ಥಾಶ್ರಮದವರೆಗೆ ಏರುವ ಕ್ರಮವನ್ನು ವಿವರಿಸಿದನು. ಆಗ ಶುಕನು ಜ್ಞಾನವಿಜ್ಞಾನವು ಉಂಟಾದಮೇಲೂ ನಿರ್ದ್ವಂದ್ವನಾದವನು ಮೊದಲನೆಯ ಮೂರು ಆಶ್ರಮಗಳಲ್ಲಿ ವಾಸಮಾಡಿಕೊಂಡೇ ಇರಬೇಕೇ?- ಎಂದು ಕೇಳಿದ್ದಕ್ಕೆ ಜನಕನಿಂತೆಂದನು.

ಜ್ಞಾನವಿಜ್ಞಾನಗಳಿಲ್ಲದೆ ಮೋಕ್ಷಪ್ರಾಪ್ತಿಯಾಗಲಾರದು; ಗುರು ಉಪದೇಶವಿಲ್ಲದೆ ಜ್ಞಾನಪ್ರಾಪ್ತಿಯಿಲ್ಲ. ಗುರುವೇ ಸಂಸಾರಸಾಗರವನ್ನು ದಾಟಿಸುವವನು; ಜ್ಞಾನವೇ ಹಡಗು; ತತ್ತ್ವವನ್ನು ಅರಿತು ಕೃತಕೃತ್ಯನಾದ ಮೇಲೆ ನದಿಯನ್ನು ದಾಟಿದವನಂತೆ ಎರಡನ್ನೂ ಬಿಟ್ಟುಬಿಡಬೇಕು, ನಾನು ಹೇಳಿರುವ ಆಶ್ರಮಕ್ರಮವನ್ನು ಹಿಂದಿನವರು ಲೋಕಮರ್ಯಾದೆಯು ನಾಶವಾಗಬಾರದೆಂದು ಅನುಸರಿಸಿರುತ್ತಾರೆ. ಈ ಕ್ರಮಯೋಗದಿಂದ ಎಷ್ಟೋ ಜನ್ಮಗಳಾದ ಬಳಿಕ ಮೋಕ್ಷವನ್ನು ಪಡೆಯುವನು. ಹೀಗೆ ಅನೇಕ ಜನ್ಮಗಳಲ್ಲಿ ಶುದ್ಧನಾಗಿರುವಾತನು ಪ್ರಥಮಾಶ್ರಮದಲ್ಲಿಯೇ ಮೋಕ್ಷವನ್ನು ಪಡೆಯುವನು; ಹಾಗೆ ಮುಕ್ತನಾದವನಿಗೆ ಮೊದಲನೆಯ ಮೂರು ಆಶ್ರಮಗಳಲ್ಲಿ ಏನು ಪ್ರಯೋಜನ? ಶುದ್ಧಸಾತ್ತ್ವಿಕಮಾರ್ಗದಿಂದ ಆತ್ಮನಲ್ಲಿಯೇ ಆತ್ಮನನ್ನು ಕಂಡುಕೊಳ್ಳಬೇಕು. ಸರ್ವಭೂತಗಳಲ್ಲಿಯೂ ಆತ್ಮನನ್ನೂ ಆತ್ಮನಲ್ಲಿ ಸರ್ವಭೂತಗಳನ್ನೂ ಕಂಡುಕೊಂಡವನು ಕರ್ಮದಿಂದಲಿಪ್ತನಾಗದೆ ಇರುತ್ತಾನೆ. ಅವನು ಮೇಲಕ್ಕೆ ಹಾರುವ ಹಕ್ಕಿಯಂತೆ ಮೋಕ್ಷವನ್ನು ಪಡೆದುಕೊಳ್ಳುವನು. ಆತ್ಮನಲ್ಲಿಯೇ ಜ್ಯೋತಿಯಿರುತ್ತದೆ; ಅದನ್ನು ಸಮಾಹಿತಚಿತ್ತನಾದವನು ಎಲ್ಲೆಲ್ಲಿಯೂ ಕಾಣಬಹುದು. ಯಾವನು ಮತ್ತೊಬ್ಬರಿಗೆ ಅಂಜದೆ ಇರುವನೋ ಯಾವನಿಗೆ ಮತ್ತೆ ಯಾರೂ ಅಂಜದಿರುವರೋ ಯಾವನು ಇಚ್ಛಾದ್ವೇಷಗಳಿಲ್ಲದವನೋ ಅವನು ಬ್ರಹ್ಮದಲ್ಲಿ ಸೇರುವನು. ಯಾವಾಗ ಯಾವ ಪ್ರಾಣಿಗಳಲ್ಲಿಯೂ ಕೆಟ್ಟಭಾವನೆಗಳನ್ನು ಮಾಡುವದಿಲ್ಲವೋ, ಮೋಹವನ್ನುಂಟುಮಾಡುವ ಹೊಟ್ಟೆಕಿಚ್ಚನ್ನೂ ಕಾಮಮೋಹಗಳನ್ನೂ ಬಿಟ್ಟಿರುವನೋ, ಯಾವಾಗ ಕೇಳುವ, ಕಾಣುವ, ಸರ್ವಭೂತಗಳಲ್ಲಿಯೂ ಸಮಭಾವವುಳ್ಳವನಾಗಿರುವನೋ ಸ್ತುತಿನಿಂದೆಗಳಲ್ಲಿಯೂ ಚಿನ್ನ ಕಬ್ಬಿಣಗಳಲ್ಲಿಯೂ ಸುಖದುಃಖಗಳಲ್ಲಿಯೂ ಶೀತೋಷ್ಣಗಳಲ್ಲಿಯೂ ಅರ್ಥಾನರ್ಥಗಳಲ್ಲಿಯೂ ಪ್ರಿಯಾಪ್ರಿಯಗಳಲ್ಲಿಯೂ ಬದುಕು ಸಾವುಗಳಲ್ಲಿಯೂ ಸಮನಾಗಿರುವನೋ ಅವನು ಬ್ರಹ್ಮದಲ್ಲಿ ಸೇರಿಹೋಗುವನು. ಆಮೆಯಂತೆ ಹೊರಕ್ಕೆ ಬಿಟ್ಟ ಕಾಲುಗಳನ್ನು ಒಳಕ್ಕೆ ಎಳೆದುಕೊಳ್ಳಬಲ್ಲನೋ ಆಗ ಬ್ರಹ್ಮನಿಷ್ಠನಾಗುವನು. ಹಾಗೆ ಭಿಕ್ಷುವಾದವನು ಇಂದ್ರಿಯಗಳನ್ನು ಬಿಗಿಹಿಡಿದುಕೊಳ್ಳಬೇಕು. ಕತ್ತಲೆಮನೆಯೊಳಗಿರುವವನು

ದೀಪದಿಂದ ಎಲ್ಲವನ್ನೂ ಹೇಗೆ ಕಾಣಬಹುದೋ ಹಾಗೆ ಬುದ್ಧಿದೀಪದಿಂದ ಆತ್ಮನನ್ನು ಕಂಡುಕೊಳ್ಳಬೇಕು.

ಎಲೈ ಶುಕನೆ, ಈ ಲಕ್ಷಣಗಳೆಲ್ಲವೂ ನಿನ್ನಲ್ಲಿ ಇದ್ದೇಇವೆ ; ನಿಮ್ಮ ತಂದೆಯ ಅನುಗ್ರಹದಿಂದಲೇ ಅವರ ಉಪದೇಶದಿಂದಲೇ ಎಲ್ಲವನ್ನೂ ತಿಳಿದುಕೊಂಡಿರುವೆ-ಎಂಬುದು ನನಗೆ ಜ್ಞಾನಮಹಿಮೆಯಿಂದ ಗೊತ್ತಾಗಿದೆ. ನಿನ್ನ ಜ್ಞಾನವೂ ನಿನಗೆ ಆಗುವ ಗತಿಯೂ ನಿನ್ನ ಐಶ್ವರ್ಯವೂ ಬಹಳ ಹೆಚ್ಚಿನದು ; ಅದನ್ನು ತಿಳಿಯದೆ ಇದ್ದೀಯೆ. ಬ್ರಾಹ್ಮಣನಿಗೆ ಯಾವ ಫಲವಾಗಬೇಕೋ ಮೋಕ್ಷದ ಸ್ವರೂಪವು ಯಾವದೋ ಅದರಲ್ಲಿಯೇ ಇದ್ದೀಯೆ; ನಿನಗೆ ಮತ್ತೆ ಹೇಳತಕ್ಕದ್ದೇನಿದೆ?-ಎಂದು ಜನಕನು ಶುಕನನ್ನು ಹೊಗಳಿದನು.

★★★★★

# ಜೀವನ್ಮುಕ್ತ ಸ್ವರೂಪದ ವರ್ಣನೆ

**30-4-1963**

**ಬ್ರ॥ಶ್ರೀ॥ಹೆಚ್.ಎಸ್.ಲಕ್ಷ್ಮೀನರಸಿಂಹಮೂರ್ತಿ ಶಾಸ್ತ್ರಿಗಳವರು**

**ವಾಸಿಷ್ಠರಾಮಾಯಣದಲ್ಲಿ ಉಪಶಮಪ್ರಕರಣದಲ್ಲಿ 77ನೆಯ ಸರ್ಗದಲ್ಲಿ** ಜೀವನ್ಮುಕ್ತ ಸ್ವರೂಪದ ವರ್ಣನೆಯಿದೆ. ಸರ್ಗಾರ್ಥದ ಅಭಿಪ್ರಾಯವೇನೆಂದರೆ; ಜೀವನ್ಮುಕ್ತನು ಏಷಣಾತ್ರಯವನ್ನು ತ್ಯಜಿಸಿರುವನು. ಅವನಿಗೆ ಈ ಜಗತ್ತು ಸುಷುಪ್ತಿಯಲ್ಲಿ ಕಾಣದೆ ಇರುವಂತೆಯೇ ಎಚ್ಚರದಲ್ಲಿಯೂ ಅಸದ್ರೂಪವಾಗಿಯೇ ಇರುವದು. ಅವನು ಯಾವದನ್ನು ಸ್ವೀಕರಿಸಿದರೂ ತನ್ನ ಸಮಬುದ್ಧಿಯಿಂದ ಕೂಡಿ ನಿಜವಾಗಿ ಗ್ರಹಿಸದೆ ಇರುವನು; ಹೊರಗಿನ ಜನರ ವ್ಯವಹಾರವನ್ನು ಗೊಂಬೆಗಳ ವ್ಯವಹಾರದಂತೆ ಕಾಣುವನು. ಅವನ ದೃಷ್ಟಿಯು ಒಳಗೇ ಲೀನವಾಗಿರುವದು. ಎಲ್ಲವನ್ನೂ ನೋಡುತ್ತಿದ್ದರೂ ಅವನಿಗೆ ಭೂತಭವಿಷ್ಯದ್ವರ್ತಮಾನಗಳ ಚಿಂತೆಯಿರುವದಿಲ್ಲ; ಎಲ್ಲವನ್ನೂ

ಮಾಡುತ್ತಿದ್ದರೂ ಒಳಗೆ ಏನೂ ಮಾಡುತ್ತಿರುವದಿಲ್ಲ; ಯಥಾಪ್ರಾಪ್ತವಾದದ್ದನ್ನು ಮಾಡುತ್ತಿದ್ದರೂ ಕರ್ತೃತ್ವ ಬುದ್ಧಿಯಿಲ್ಲದ್ದರಿಂದ ನಿಜವಾಗಿ ಏನನ್ನೂ ಮಾಡದೆ ಇರುತ್ತಾನೆ. ಅವನಿಗೆ ಬೇಕುಬೇಡಗಳಿಲ್ಲ, ಶೋಕಹರ್ಷಗಳಿಲ್ಲ; ಆಯಾ ಜನರೊಡನೆ ಅವರಿಗನುರೂಪನಾಗಿ ವರ್ತಿಸುತ್ತಿರುವನು, ಅವನಿಗೆ ಪುಣ್ಯವನ್ನು ಮಾಡಿದ್ದರಿಂದ ಆಗಬೇಕಾದದ್ದಿರುವದಿಲ್ಲ; ಪಾಪವನ್ನು ಬಿಡುವದರಿಂದಲೂ ಆಗಬೇಕಾದದ್ದಿರುವದಿಲ್ಲ. ಅವನಿಗೆ ಬಂಧಮೋಕ್ಷಾದಿಗಳ ಚಿಂತೆಯುಕೂಡ ಇರುವದಿಲ್ಲ, ಯಾವದನ್ನು ಮಾಡಿದರೂ ಸಕ್ತನಾಗದೆ ಇರುತ್ತಾನೆ. ಯಾವ ಅದ್ಭುತವನ್ನು ನೋಡಿದರೂ ಅವನಿಗೆ ಅಚ್ಚರಿಯಾಗುವದಿಲ್ಲ ; ಇದೆಲ್ಲ ಚಿದಾತ್ಮಶಕ್ತಿಯ ಸ್ಫುರಣಗಳೆಂದೇ ಭಾವಿಸುವನು. ಯಾವ ಭಾವಗಳೂ ಅವನನ್ನು ಹಿಗ್ಗಿಸುವದಿಲ್ಲ, ಕುಗ್ಗಿಸುವದಿಲ್ಲ. ಎಲ್ಲವನ್ನೂ ದೃಷ್ಟಿಸೃಷ್ಟಿಯೆಂದು ಕಾಣುತ್ತಿರುವನು. ಶುಭಾಶುಭ, ಸುಖದುಃಖ. ಹೇಯೋಪಾದೇಯ, ಇಷ್ಟಾನಿಷ್ಟ- ಮುಂತಾದದ್ದು ಯಾವದೂ ಅವನಿಗಿರುವದಿಲ್ಲ. ಆತನ ಮನಸ್ಸು ನೈರಾಶ್ಯದಿಂದ ಕರಗಿಹೋಗಿರುವದು, ಆದ್ದರಿಂದ ಅವನಿಗೆ ಸಂಕಲ್ಪವೇ ಇರುವದಿಲ್ಲ.

**ಶ್ರೀಶ್ರೀಗಳವರು** ಅನುವಾದದಲ್ಲಿ ಇಂತೆಂದರು: ಒಂದೊಂದು ದೇಶದವರು ಜೀವನಕ್ಕೆ ಒಂದೊಂದು ಗುರಿಯನ್ನಿಟ್ಟುಕೊಂಡಿರುತ್ತಾರೆ. ಜೀವನ್ಮುಕ್ತಿಯು ನಮ್ಮ ದೇಶದವರ ಗುರಿ. ನಮ್ಮಗಳ ಈಗಿನ ಮನಃಸ್ಥಿತಿಯೇ ನಮಗೆ ದುಃಖದಾಯಕವಾಗಿರುತ್ತದೆ. ಯಾವ ದೋಷವೂ ಇಲ್ಲದ ಗುಣವೇ ಇರುವ ವಸ್ತುಗಳೇ ಇದ್ದಿದ್ದರೆ, ಮನಸ್ಸಿಗೆ ದುಃಖವೇ ಇಲ್ಲದ ಸುಖವುಂಟಾಗುವ ಹಾಗಿದ್ದರೆ, ಅಥವಾ ನಾವು ಯಾವ ಕೆಲಸವನ್ನೂ ಮಾಡದೆ ಹಾಯಾಗಿರ-ಬಹುದಾಗಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು?- ಎಂದು ಅನಿಸುತ್ತದೆ. ಆದರೆ ಇದು ಆಗದಮಾತು. ಮನಸ್ಸು ಸಮಸ್ಥಿತಿಗೆ ಏರುವಂತೆ ಮಾಡಿಕೊಂಡರೆ, ತತ್ತ್ವವನ್ನು ತಿಳಿದು ಅದರಲ್ಲಿಯೇ ನಿಲ್ಲುವ ಜೀವನ್ಮುಕ್ತನ ಸ್ಥಿತಿಗೆ ನಾವು ಏರಿದರೆ ಆಗ ಜೀವನವು ಈ ದ್ವಂದ್ವಗಳನ್ನು ಮೀರುವದು. ಜೀವನ್ಮುಕ್ತನು ಯಾವ ವ್ಯವಹಾರವನ್ನು ಮಾಡುತ್ತಿದ್ದರೂ ಅವನ ಮನಸ್ಸು ತತ್ತ್ವದಲ್ಲಿಯೇ ನಿಂತಿರುತ್ತದೆ.

★★★★★

# ಷಡಕ್ಷರವಿವರಣೆ

**1-5- 1963**

**ಬ್ರ॥ಹೆಚ್.ಅನಂತಮೂರ್ತಿಶಾಸ್ತ್ರಿಗಳು**

**ಸೂತಸಂಹಿತೆಯಲ್ಲಿ ಯಜ್ಞವೈಭವಖಂಡ 18ನೆಯ ಅಧ್ಯಾಯದಲ್ಲಿ** **'ಷಡಕ್ಷರವಿವರಣೆ'** ಇದೆ. ಈ ಮಂತ್ರದಿಂದ ಮುಕ್ತಿಯೂ ಬ್ರಹ್ಮತ್ವಾದಿವಿಭೂತಿಗಳೂ ದೊರಕುತ್ತವೆ. ಅಂಗನ್ಯಾಸಕರನ್ಯಾಸಗಳನ್ನು ಮಾಡಿ ವಿಧಿವತ್ತಾಗಿ ಇದನ್ನು ಜಪಿಸತಕ್ಕದ್ದು. ಜಾಬಾಲೋಪನಿಷತ್ತಿನಲ್ಲಿ ಈ ಮಂತ್ರವು ಬಂದಿದೆ. ಈ ಮಂತ್ರದ ಒಂದೊಂದು ಅಕ್ಷರಕ್ಕೂ ವಿಶೇಷಾರ್ಥವಿದೆ. ಪ್ರಣವವು ಸರ್ವಾತ್ಮಕನಾದ ಶಿವನನ್ನು ಹೇಳುತ್ತದೆ. ಜಗತ್ತೆಲ್ಲವೂ ಶಿವಾತ್ಮಕವೇ ಆಗಿರುತ್ತದೆ, ಶಿವನಿಗಿಂತ ಬೇರೆಯಾದದ್ದೆಲ್ಲವೂ ಅಜ್ಞಾನದಿಂದ ತೋರುತ್ತದೆ-ಎಂಬುದೇ ಮಂತ್ರದ ಮುಖ್ಯಾರ್ಥವು. ಇದಕ್ಕೆ ಶ್ರುತಿಸ್ಮೃತ್ಯಾಗಮಗಳ ಆಧಾರವಿರುತ್ತದೆ- ಎಂದು ಹೇಳಿದ ಬಳಿಕ ಇದನ್ನು ಪುರಶ್ಚರಣಮಾಡುವ ಪ್ರಕಾರವನ್ನು ಈ ಅಧ್ಯಾಯದಲ್ಲಿ ಹೇಳಿರುತ್ತದೆ. ಶಿವನನ್ನು ಹೃದಯದಲ್ಲಿ ಪೂಜಿಸುವ ಬಗೆಯನ್ನೂ ತಿಳಿಸಿರುತ್ತದೆ.

**ಶ್ರೀಶ್ರೀಗಳು** ಅನುವಾದದಲ್ಲಿ ಇಂತೆಂದರು : ಮನುಷ್ಯನು ಅನಾತ್ಮದ ವಿಲಾಸಕ್ಕೆ ಪರವಶನಾಗಿ ದಿನದಿನವೂ ಅದರ ಮಾತನ್ನೇ ಜಪಿಸುತ್ತಾ ಅದರ ಧ್ಯಾನವನ್ನೇ ಮಾಡುತ್ತಿರುತ್ತಾನೆ. **ಜಪವೆಂದರೆ** ಬಿಟ್ಟುಬಿಟ್ಟು ಸ್ಮರಿಸಿಕೊಳ್ಳುವದು. **ಧ್ಯಾನವೆಂದರೆ** ಎಡೆಬಿಡದೆ ಅದೇ ಚಿಂತೆಯನ್ನು ಮಾಡುತ್ತಾ ಅದರಲ್ಲಿಯೇ ನಿಂತಿರುವದು. ಶವಾಕಾರವನ್ನು ಭಜಿಸಿ ಈವರೆಗೆ ಅಶುಚಿಸ್ವರೂಪರಾಗಿ-ಬಿಟ್ಟಿದ್ದೇವೆ; ಇನ್ನು ಮೇಲೆ ಶ್ರುತಿಸ್ಮೃತಿಪುರಾಣಗಳಲ್ಲಿ ಹೇಳಿರುವಂತೆ ಪರಮಾತ್ಮನ ಶಿವಾಕಾರವನ್ನೇ ಚಿಂತಿಸುತ್ತಾ ಪರಿಶುದ್ಧರಾಗೋಣ. ಅನಾತ್ಮಮಂತ್ರವನ್ನು ಯಾರೂ ಉಪದೇಶಿಸದಿದ್ದರೂ ಅದರ ಪುರಶ್ಚರಣೆಯನ್ನು ಮಾಡಿ ಸಿದ್ಧಿಮಾಡಿಕೊಂಡಿರುವ ನಾವುಗಳು ಈಗ ಆತ್ಮಮಂತ್ರದ ಉಪದೇಶವನ್ನು ಮಾಡಿಸಿಕೊಂಡು ಸಿದ್ಧಿಯನ್ನು ಹೊಂದಬೇಕಾಗಿದೆ.

★★★★★

# ಕಲಿಯುಗದ ಹೆಚ್ಚುಗಾರಿಕೆ

**2-5-1963**

**ಬ್ರ॥ಶ್ರೀ॥ ಮತ್ತೂರು ರಾಮಸ್ವಾಮಿ ಅವಧಾನಿಗಳು**

**ವಿಷ್ಣುಪುರಾಣ** (6-2)ರಲ್ಲಿ ಕಲಿಯುಗದ ಹೆಚ್ಚುಗಾರಿಕೆಯನ್ನು ಕುರಿತು ವರ್ಣಿಸಿದೆ. ಯಾವ ಕಾಲದಲ್ಲಿ ಸ್ವಲ್ಪ ಧರ್ಮವೇ ಹೆಚ್ಚಿನ ಫಲವನ್ನು ಕೊಡುತ್ತದೆ ಎಂಬುದನ್ನು ಹೇಗೆ ತಿಳಿಯುವದು?- ಎಂಬ ವಿಷಯದಲ್ಲಿ ಮುನಿಗಳಲ್ಲಿ ಒಮ್ಮೆ ವಾದವುಂಟಾಯಿತು. ಅವರು ತಮ್ಮ ಸಂದೇಹವನ್ನು ಪರಿಹರಿಸಿಕೊಳ್ಳುವದಕ್ಕಾಗಿ ವೇದವ್ಯಾಸರಲ್ಲಿಗೆ ಹೋಗುವ ವೇಳೆಗೆ ಅವರು ಗಂಗಾನದಿಯಲ್ಲಿ ಸ್ನಾನವನ್ನು ಮಾಡುತ್ತಿದ್ದರು. ಸ್ನಾನವು ಮುಗಿಯಲೆಂದು ಅವರು ಕಾದುಕೊಂಡಿರುತ್ತಿರಲು 'ಶೂದ್ರನೇ ಸಾಧು'. ಶೂದ್ರನೇ ಧನ್ಯನು, ಕಲಿಯೇ ಉತ್ತಮಯುಗ'- ಎನ್ನುತ್ತಾ ಅವರು ನೀರಿನಲ್ಲಿ ಮುಳುಗಿದರು. ಸ್ತ್ರೀಯರೇ ಧನ್ಯರು' ಎಂದು ಮತ್ತೊಮ್ಮೆ ಮುಳುಗಿದರು. ಅವರು ಸ್ನಾನವನ್ನು ಮಾಡಿ ಎದ್ದು ಮುನಿಗಳನ್ನು ಸ್ವಾಗತಿಸಿ ಸುಖಾಸನದಲ್ಲಿ ಕುಳ್ಳಿರಿಸಿದ ಬಳಿಕ ಏತಕ್ಕೆ ಬಂದಿರೆಂದು ಕೇಳಲು ಅವರು ''ನಮ್ಮ ಸಂಶಯದ ನಿವಾರಣೆಗಾಗಿ ನಿಮ್ಮ ಬಳಿಗೆ ಬಂದೆವು; ಅದಂತಿರಲಿ, ನೀವು ಸ್ನಾನವನ್ನು ಮಾಡುತ್ತಿರುವಾಗ ಕಲಿಯನ್ನೂ ಶೂದ್ರನನ್ನೂ ಸ್ತ್ರೀಯರನ್ನೂ ಹೊಗಳಿದ್ದರ ರಹಸ್ಯವನ್ನು ಮೊದಲು ಹೇಳಿರಿ'' ಎಂದು ಕೇಳಿಕೊಂಡರು.

ಆಗ ವೇದವ್ಯಾಸರು ಹೀಗೆಂದರು : ''ಕೃತಯುಗದಲ್ಲಿ ಹತ್ತುವರ್ಷದವರೆಗೆ ಮಾಡಿದ ತಪಸ್ಸು, ಬ್ರಹ್ಮಚರ್ಯ, ಜಪಾದಿಗಳು - ಇವುಗಳಿಗೆ ಆಗುವ ಫಲವು ತ್ರೇತಾಯುಗದಲ್ಲಿ ಒಂದುವರ್ಷ, ದ್ವಾಪರದಲ್ಲಿ ಒಂದು ತಿಂಗಳು, ಕಲಿಯುಗದಲ್ಲಿ ಒಂದುದಿನದ ಮಟ್ಟಿಗೆ ಮಾಡಿದ್ದರಿಂದಲೇ ದೊರಕುವದು; ಆದ್ದರಿಂದ 'ಕಲಿಯುಸಾಧು' ಎಂದೆನು. ಕೃತಯುಗದಲ್ಲಿ ಧ್ಯಾನವನ್ನು ಮಾಡಿದರೆ ಯಾವ ಫಲವೋ ಅದು ತ್ರೇತಾಯುಗದಲ್ಲಿ ಯಜ್ಞವನ್ನು ಮಾಡಿದರೆ,

ದ್ವಾಪರದಲ್ಲಿ ಅರ್ಚನೆಯನ್ನು ಮಾಡಿದರೆ ದೊರಕುವದು. ಕಲಿಯುಗದಲ್ಲಿ ಬರಿಯ ಕೀರ್ತನೆಯನ್ನು ಮಾಡಿದರೇ ದೊರಕುವದು. ಬ್ರಾಹ್ಮಣರು ಕ್ಲೇಶದಿಂದ ಕರ್ಮಗಳನ್ನು ಮಾಡಿ ಪಡೆಯುವ ಫಲವನ್ನು ದ್ವಿಜಶುಶ್ರೂಷೆಯಿಂದಲೇ ಶೂದ್ರನು ಪಡೆದುಕೊಳ್ಳಬಹುದಾದ್ದರಿಂದ 'ಶೂದ್ರನು ಧನ್ಯನು' ಎಂದೆನು. ಪುರುಷನು ನಿಯಮಗಳಿಂದ ಕಷ್ಟಪಟ್ಟು ಮಾಡುವ ಕರ್ಮಗಳ ಫಲವನ್ನು ಸ್ತ್ರೀಯು ಪತಿಸೇವೆಯಿಂದಲೇ ಪಡೆದುಕೊಳ್ಳಬಹುದು. ಆದ್ದರಿಂದ 'ಸ್ತ್ರೀಯರೇ ಧನ್ಯರು' ಎಂದೆನು''

ಋಷಿಗಳು ''ನಮ್ಮ ಮನಸ್ಸಿನಲ್ಲಿದ್ದ ಪ್ರಶ್ನೆಗೆ ನೀವೇ ಉತ್ತರವನ್ನು ಕೊಟ್ಟಂತಾಯಿತು'' ಎಂದು ಆಶ್ಚರ್ಯವನ್ನು ತೋರಿಸಿದರು. ವ್ಯಾಸರು ನಸುನಕ್ಕು ''ದಿವ್ಯಚಕ್ಷುಸ್ಸಿನಿಂದ ನಿಮ್ಮ ಮನೋಗತವನ್ನು ನಾನು ಅರಿತೇ ಈ ರೀತಿ ವರ್ತಿಸಿದೆನು. ಕಲಿಯುಗದಲ್ಲಿ ಸ್ವಲ್ಪ ಪ್ರಯತ್ನದಿಂದಲೇ ಹೆಚ್ಚಿನ ಫಲವು ದೊರಕುವದೆಂಬುದೇ ನಿಜ'' ಎಂದರು. ಕಲಿಯುಗದಲ್ಲಿ ಭಗವಂತನ ಕೀರ್ತನಮಾತ್ರದಿಂದ ಬಂಧದಿಂದ ಬಿಡುಗಡೆಯಾಗುವದು.

**ಶ್ರೀಶ್ರೀಗಳು** ಅನುವಾದದಲ್ಲಿ: ಈಗ್ಗೆ 'ಜಾತೀಯತೆ' ಎಂಬ ಹೆಸರಿನಿಂದ ವರ್ಣಾಶ್ರಮಧರ್ಮವನ್ನು ಹಳಿಯುವವರು ಹಲವರು ಇರುತ್ತಾರೆ. 'ಕಾಲವುಕೆಟ್ಟಿದೆ-ಎನ್ನುವದು ಹುಚ್ಚುತನ' ಎನ್ನುವ ತರ್ಕರಸಿಕರೂ ಹೇರಳವಾಗಿರುತ್ತಾರೆ. ಆದರೆ ಧರ್ಮಾನುಷ್ಠಾನವನ್ನು ಮನಃಪೂರ್ವಕವಾಗಿ ಸ್ವಲ್ಪಮಟ್ಟಿಗೆ ಮಾಡಿದವರಿಗೂ ಉತ್ಕೃಷ್ಟಫಲವಾಗುವದು ಅನುಭವದಲ್ಲಿದೆ. ಇದನ್ನು ಧೈರ್ಯವಿದ್ದವರು ಪರೀಕ್ಷೆಮಾಡಿನೋಡಿ ಮನಗಾಣಬೇಕಾಗಿದೆ – ಎಂದರು.

★★★★★

# ವಿವೇಕಮಾಹಾತ್ಮ್ಯ

**3-5-1963**

**ಬ್ರ॥ಶ್ರೀ॥ಹೆಚ್. ಅನಂತಮೂರ್ತಿಶಾಸ್ತ್ರಿಗಳವರು**

**ವಾಸಿಷ್ಠರಾಮಾಯಣ ನಿರ್ವಾಣಪ್ರಕರಣ** ಉತ್ತರಾರ್ಧದ 48ನೆಯ ಸರ್ಗದ ಅರ್ಥದ ಸಾರವೇನೆಂದರೆ ಸಂಸಾರದಲ್ಲಿ ವೈರಾಗ್ಯವು ಬೇರುಬಿಟ್ಟುಕೊಂಡು ಸತ್ಸಂಗ ಶಾಸ್ತ್ರಭಾವನೆಗಳಿಂದ ಸಜ್ಜನನಾದರೆ ವಿವೇಕವುಂಟಾಗುವದು. ಅಂಥ ವಿವೇಕಿಗೆ ಭಕ್ತಿಯಿಂದ ಪ್ರಸನ್ನನಾದ ಪರಮೇಶ್ವರನು ನಿರ್ವಾಣವನ್ನಿತ್ತು ಅನುಗ್ರಹಿಸುವನು. ಈಶ್ವರನೆಂದರೆ ಚಿನ್ಮಾತ್ರನಾಗಿ ಸಕಲರಿಗೂ ಆತ್ಮನಾಗಿರುವಾತನು, ಆತನೇ ಸರ್ವಾತ್ಮನೂ ಸರ್ವಗತನೂ ಆಗಿರುತ್ತಾನೆ. ವಿವೇಕವೆಂಬವನು ಪರಮೇಶ್ವರನ ದೂತನು. ಅವನು ಹೃದ್ಗುಹೆಯಲ್ಲಿದ್ದುಕೊಂಡು ವಾಸನಾಮಯವಾದ ಜೀವರಿಗೆ ಜ್ಞಾನವನ್ನು ಕೊಡುತ್ತಾ ಇವರಿಂದ ಚಿತ್ತವೆಂಬ ಪಿಶಾಚವು ಹತವಾಗುವದು. ಪರಮೇಶ್ವರನ ಪ್ರಸಾದದಿಂದ ಜೀವನಿಗೆ ಪರಮಾರ್ಥವಾದ ಆತ್ಮಪದವಿಯು ದೊರಕುವದು.

★★★★★

# ಐಲಗೀತೆ

**4-5-1963**

**ವೇ॥ ಘನಪಾಠಿ ನರಸಿಂಹಮೂರ್ತಿಗಳವರು**

**ಭಾಗವತ ಪುರಾಣ(11-26)**ದಲ್ಲಿರುವ ಐಲಗೀತೆಯಲ್ಲಿ ಭಾಗವತ ಧರ್ಮವನ್ನು ಆಶ್ರಯಿಸಿದವನು ಗುಣಗಳಲ್ಲಿ ಸಕ್ತನಾಗದೆ ಜ್ಞಾನನಿಷ್ಠನಾಗಿ

ರುತ್ತಾನೆ- ಎಂಬುದನ್ನು ತಿಳಿಸಿ ಶಿಶ್ನೋದರಪರಾಯಣರಾದವರ ಸಂಗದಿಂದ ಸಾಧಕನು ಹೇಗೆ ಕೆಟ್ಟುಹೋಗುತ್ತಾನೆ - ಎಂಬುದನ್ನು ಐಲಗೀತೆಯ ವ್ಯಾಜದಿಂದ ಭಗವಂತನು ಸ್ಪಷ್ಟಪಡಿಸಿರುತ್ತಾನೆ, ಐಲರಾಜನು ಉರ್ವಶಿಯ ವಿರಹದಿಂದ ಹುಚ್ಚನಂತೆ ಅವಳನ್ನು ಹಿಂಬಾಲಿಸಿ ಬೆತ್ತಲೆಯಾಗಿ ಓಡುತ್ತಿದ್ದವನು ಹೋಗುವವರನ್ನೂ ಬರುವವರನ್ನೂ ಕೂಡ ಕಾಣದೆ ಇದ್ದನು. ಐಲನು ಕೊನೆಗೆ ಪಶ್ಚಾತ್ತಾಪದಿಂದ ತಾನು ಸ್ತ್ರೀಸಂಗದಿಂದ ಪಟ್ಟ ಪಾಡನ್ನು ವರ್ಣಿಸಿ ಸ್ತ್ರೀಯರ ಸಂಗದಿಂದಲೂ ಸ್ತ್ರೈಣರ ಸಂಗದಿಂದಲೂ ಆಗುವ ಕೇಡನ್ನು ಹೇಳಿಕೊಂಡಿರುತ್ತಾನೆ. ಭಗವಂತನು ಅವನ ದೃಷ್ಟಾಂತವನ್ನು ಕೊಟ್ಟು ಸತ್ಪುರುಷರು ದುಸ್ಸಂಗದಿಂದಾಗುವ ಅನರ್ಥವನ್ನು ಪರಿಹರಿಸಿ ಹೇಗೆ ಭಗವಂತನ ಕಡೆಗೆ ತಿರುಗಿ ಸುತ್ತಾರೆಂಬುದನ್ನು ಸ್ಪಷ್ಟಪಡಿಸಿರುತ್ತಾನೆ.

**ಶ್ರೀಶ್ರೀಗಳವರು** ತಮ್ಮ ಅನುವಾದದಲ್ಲಿ ಪದಾರ್ಥಗಳ ಸ್ವಭಾವವೇನೂ ನಮ್ಮನ್ನು ಕೆಡಿಸುವದಿಲ್ಲ : ನಾವು ಅವುಗಳಲ್ಲಿ ಮಾಡಿಕೊಳ್ಳುವ ಅಧ್ಯಾಸದಿಂದಲೇ ನಮಗೆ ಹಾನಿ ಎಂಬುದನ್ನು ಸ್ಪಷ್ಟಪಡಿಸಿದರು. ಶೃಂಗೇರಿಯ ಪೀಠಾಧಿಪರಾಗಿದ್ದ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳ ಒಂದಾನೊಂದು ಉಪದೇಶವನ್ನು ಉದಾಹರಿಸಿ ಪತ್ರಿಕೆಯ ಪ್ರಕಟನೆಗಳಲ್ಲಿರುವ ವಸ್ತುವರ್ಣನೆಯಿಂದ ಮನುಷ್ಯನ ಮನಸ್ಸು ಹೇಗೆ ವಿಕಾರವನ್ನು ಹೊಂದುವದೆಂಬುದನ್ನು ಸ್ಪಷ್ಟಪಡಿಸಿದರು.

★★★★★

# ವೇದಾಂತೋಪನ್ಯಾಸಗಳು

# ವಿಷಯಾನುಕ್ರಮಣಿಕೆ


| ಕ್ರ.ಸಂ | ವಿಷಯ | ಪುಟ |
|---|---|---|
| 1. | ಆತ್ಮೈಕ್ಯ | 9 |
| 2. | ಈಶ್ವರಭಾವನೆ | 10 |
| 3. | ಶಂಕರರ ಅನುಯಾಯಿಗಳೆಂದರೆ ಯಾರು? | 13 |
| 4. | ಪ್ರಾರ್ಥನೆ | 15 |
| 5. | ಶ್ರೀಶಂಕರಾಚಾರ್ಯರ ಹಿಂದಿನ ವೇದಾಂತಿಗಳು | 18 |
| 6. | ಭೌತಿಕ ಶಾಸ್ತ್ರವೂ ವೇದಾಂತವೂ | 22 |
| 7. | ಸಂಪ್ರದಾಯ | 25 |
| 8. | ಶಂಕರರಾಮಾನುಜದರ್ಶನಗಳು | 28 |
| 9. | ವಿಕಾಸವಾದಕ್ಕೂ ವೇದಾಂತಕ್ಕೂ ವಿರೋಧವುಂಟೆ? | 32 |
| 10. | ವೇದಾಂತಕ್ಕೂ ಬೌದ್ಧಮತಕ್ಕೂ ಇರುವ ತಾರತಮ್ಯ | 38 |
| 11. | ವೇದಾಂತದ ಐಹಿಕಪ್ರಯೋಜನಗಳು | 41 |
| 12. | ವೇದಾಂತ ವಿಚಾರಕ್ಕೂ ತರ್ಕಕ್ಕೂ ಇರುವ ತಾರತಮ್ಯ | 44 |
| 13. | ವೇದಾಂತದಲ್ಲಿ ಉಕ್ತವಾಗಿರುವ ಜ್ಞಾನೋಪಾಸನೆಗಳ ಸ್ವರೂಪ | 50 |
| 14. | ಅಧ್ಯಾತ್ಮಜೀವನದ ಅಂತಸ್ತುಗಳು | 55 |
| 15. | ಅಧ್ಯಾಸಭಾಷ್ಯದ ಮಹತ್ತ್ವ | 59 |
| 16. | ವ್ಯವಹಾರದಲ್ಲಿ ಕರ್ಮಯೋಗ | 64 |
| 17. | ಶಂಕರಸಿದ್ಧಾಂತದಲ್ಲಿ ಭಕ್ತಿಯ ಸ್ಥಾನ | 69 |
| 18. | ವೈದಿಕಧರ್ಮದ ವಿಶ್ವವ್ಯಾಪಕತತ್ತ್ವಗಳು | 78 |
| 19. | ಶಂಕರಸಿದ್ಧಾಂತದಲ್ಲಿ ಧ್ಯಾನವಾದ ಮತ್ತು ಜ್ಞಾನವಾದ | 80 |
| 20. | ಮತಾಚಾರವೂ ತತ್ತ್ವವಿಚಾರವೂ | 83 |
| 21. | ಪರಮೇಶ್ವರ ಭಕ್ತಿ | 84 |
| 22. | ಅಧ್ಯಾತ್ಮಸಾಧನ | 86 |
| 23. | ಅದ್ವೈತಸಿದ್ಧಾಂತ | 87 |
| 24. | ಶಂಕರಸಿದ್ಧಾಂತದಲ್ಲಿ ಆತ್ಮಸಾಕ್ಷಾತ್ಕಾರ | 88 |

| | | |
|---|---|---|
| 25. | ಸರ್ವಸಮತ್ವ | 90 |
| 26. | ಜಗತ್ತಿನ ಅಧ್ಯಾತ್ಮವಾಙ್ಮಯದಲ್ಲಿ ಉಪನಿಷತ್ತುಗಳ ಸ್ಥಾನ | 91 |
| 27. | ಉಪಾಸನೆಯೂ ಜ್ಞಾನವೂ | 94 |
| 28. | ಅವಸ್ಥಾತ್ರಯ ಪ್ರಕ್ರಿಯೆ | 99 |
| 29. | ವೇದಾಂತದ ಈಗಿನ ಸ್ಥಿತಿ | 103 |
| 30. | ಜಗತ್ತು ಮಿಥ್ಯೆಯೆ? | 106 |
| 31. | ಸುಷುಪ್ತ್ಯವಸ್ಥೆಯ ರಹಸ್ಯ | 113 |
| 33. | ಸ್ಥಿತಪ್ರಜ್ಞ | 118 |
| 34. | ವೇದಾಂತವೂ ಜನಜೀವನವೂ | 124 |
| 35. | ಸದ್ಗುರುಸಚ್ಛಾಸ್ತ್ರಗಳ ಪ್ರಯೋಜನ | 130 |
| 36. | ವೇದಾಂತವೂ ಯೋಗವೂ | 135 |
| 37. | ಭಕ್ತಿಜ್ಞಾನಗಳ ಸಂಬಂಧ | 142 |
| 38. | ಸುಖಶಾಂತಿಗಳ ನೆಲೆ | 146 |
| 39. | ಉಪನಿಷತ್ತುಗಳ ಉಪದೇಶ | 151 |
| 40. | ಶಾಸ್ತ್ರವಿಚಾರವೂ ಅನುಭವೂ | 157 |
| 41. | ಮಾನವ ಜೀವನದ ಹೆಗ್ಗುರಿ | 162 |
| 42. | ಗೀತೋಪದೇಶ | 166 |
| 43. | ಶ್ರೀ ಶಂಕರಭಗವತ್ಪಾದರ ಅಸಾಧರಣೋಪದೇಶಗಳು | 170 |
| 44. | ಶ್ರುತಿಪ್ರಮಾಣ | 173 |
| 45. | ಪರಮಾತ್ಮನೊಬ್ಬನೇ ಪರಮಾರ್ಥವು | 177 |
| 46. | ಸಾಕ್ಷಿರೂಪನಾದ ಆತ್ಮನು ಅದ್ವಿತೀಯ | 181 |
| 47. | ಸುಷುಪ್ತಿಪರೀಕ್ಷೆಯ ಪ್ರಯೋಜನ | 184 |
| 48. | ಶ್ರುತ್ಯನುಗೃಹೀತ ತರ್ಕ | 188 |
| 49. | ಉಪಾಸನಾವಾದ, ಜ್ಞಾನವಾದ | 191 |
| 50. | ಶಾಂಕರವೇದಾಂತವೂ ಮಿಕ್ಕ ವೇದಾಂತಪ್ರಕ್ರಿಯೆಗಳೂ | 194 |
| 51. | ಶಾಂಕರವೇದಾಂತವೂ ಮತಗಳೂ | 198 |
| 52. | ಶಾಂಕರವೇದಾಂತವೂ ದರ್ಶನಗಳೂ | 202 |

| | | |
|---|---|---|
| 53. | ವೇದಾಂತವೂ ಬಾಹ್ಯವಿಜ್ಞಾನ ಶಾಸ್ತ್ರಗಳೂ | 207 |
| 54. | ವೇದಾಂತವೂ ಸಮಾಜವೂ | 211 |
| 55. | ವೇದಾಂತವೂ ನೀತಿಸೌಂದರ್ಯೋಪಾಸನೆಗಳೂ | 217 |
| 56. | ವೇದಾಂತವೂ ವಿದ್ಯಾಭ್ಯಾಸವೂ | 224 |
| 57. | ವೇದಾಂತದರ್ಶನವು ಆತ್ಮವಿಷಯಕಶಾಸ್ತ್ರ | 229 |
| 58. | ಶಾಸ್ತ್ರಪ್ರಾಮಾಣ್ಯ | 231 |
| 59. | ಶಾಸ್ತ್ರಪ್ರಮಾಣದ ಕೃತ್ಯವಿಶೇಷ | 235 |
| 60. | ಆತ್ಮಾನುಭವ | 238 |
| 61. | ಆತ್ಮಾನುಭವಕ್ಕೆ ಆಗಮದ ಮತ್ತು ತರ್ಕದ ಉಪಯೋಗ | 241 |
| 62. | ವೇದಾಂತಕ್ಕೆ ಒಪ್ಪಾಗಿರುವ ತರ್ಕ | 243 |
| 63. | ಉಪಾಸನೆಯೂ ನಿದಿಧ್ಯಾಸನವೂ | 247 |
| 64. | ಶಾಂಕರಾದ್ವೈತವೂ ಹಿಂದಿನ ವೇದಾಂತಪ್ರಕ್ರಿಯೆಗಳೂ | 248 |
| 65. | ವೇದಾಂತವೂ ಸಾಂಖ್ಯವೂ | 252 |
| 66. | ವೇದಾಂತವೂ ಯೋಗವೂ | 257 |
| 67. | ವೇದಾಂತವೂ ತರ್ಕವೂ | 259 |
| 68. | ವೇದಾಂತವೂ ಪೂರ್ವಮೀಮಾಂಸೆಯೂ | 261 |
| 69. | ವೇದಾಂತವೂ ಬೌದ್ಧಮತವೂ | 264 |
| 70. | ಶ್ರೀಶಂಕರಭಗವತ್ಪಾದರವರಿಗೆ ಸಂಮತವಾದ ವೇದಾಂತದ ಅಭಿಪ್ರಾಯಗಳು | 268 |
| 71. | ವಿದ್ಯಾವಿದ್ಯೆಗಳ ವಿಭಾಗ | 272 |
| 72. | ಅವಿದ್ಯೆಯ ವ್ಯಾಪಕತ್ವ | 274 |
| 73. | ಆತ್ಮೈಕ್ಯ | 277 |
| 74. | ವೇದಾಂತವೂ ವ್ಯವಹಾರವೂ | 280 |
| 75. | ಜಗದ್ಗುರು ಶಂಕರಾಚಾರ್ಯರ ಬೋಧೆ | 286 |
| 76. | ಉಪನಿಷದ್ಗಮ್ಯವಾದ ಪರಮಾತ್ಮನ ಕಲ್ಪನೆ | 289 |
| 77. | ಆತ್ಮಜ್ಞಾನ | 293 |
| 78. | ಆತ್ಮಸಾಕ್ಷಾತ್ಕಾರ | 298 |

| | | |
|---|---|---|
| 79. | ಆತ್ಮನಿಂದ ದೊರಕುವ ವೀರ್ಯ | 303 |
| 80. | ವಿದ್ಯೆಯಿಂದ ದೊರಕುವ ಅಮೃತತ್ವ | 306 |
| 81. | ಶಂಕರಭಗವತ್ಪಾದರವರೂ ಧರ್ಮವೂ | 310 |
| 82. | ಶಂಕರಭಗವತ್ಪಾದರ ಉಪದೇಶವೂ ತತ್ತ್ವಜ್ಞಾನಕ್ರಮಭೇದಗಳೂ | 313 |
| 83. | ಆಚಾರ್ಯರು ಅನುಗ್ರಹಿಸಿದ ವೇದಾಂತದರ್ಶನ | 316 |
| 84. | ವಿದ್ಯಾವಿದ್ಯೆಗಳು | 320 |
| 85. | ಅವಿದ್ಯಾಸತತ್ತ್ವ | 324 |
| 86. | ಅವಸ್ಥಾತ್ರಯಪ್ರಕ್ರಿಯೆ | 332 |
| 87. | ಶಾಂಕರವೇದಾಂತದಲ್ಲಿ ಅನುಭವ | 334 |

★★★★★

ಓಂ

# ಶಂಕರಸಪ್ತಾಹದ ಉಪನ್ಯಾಸಗಳು

# ವೇದಾಂತೋಪನ್ಯಾಸಗಳು

## ಆತ್ಮೈಕ್ಯ

**30-4-1933**

**ಶ್ರೀಯುತ ಕೆ.ಎ.ಕೃಷ್ಣಸ್ವಾಮಿ ಅಯ್ಯರ್**

ಆತ್ಮ, ಅನಾತ್ಮ- (ತಾನು, ತಾನಲ್ಲದ್ದು) ಎಂಬೆರಡು ಪದಾರ್ಥಗಳಲ್ಲಿ ಆತ್ಮನು ಎಲ್ಲವನ್ನೂ ತಿಳಿಯತಕ್ಕವನು; ಅನಾತ್ಮವು ತಿಳಿಯಲ್ಪಡತಕ್ಕದ್ದು. ಇವೆರಡರಲ್ಲಿ ಅಡಕವಾಗದ ಪದಾರ್ಥವೇ ಇಲ್ಲವಾದ್ದರಿಂದ ಇವುಗಳ ವಿಚಾರದಿಂದಲೇ ಪರಮಾರ್ಥವನ್ನು ನಿಶ್ಚಯಿಸಬೇಕಾಗಿರುವದು. ಆತ್ಮನೇ ಬ್ರಹ್ಮವು, ದೇಹಾದಿಗಳು ಬ್ರಹ್ಮವಲ್ಲ- ಎಂದು ವೇದಾಂತದಲ್ಲಿ ನಗಾರಿ ಹೊಡೆದು ಸಾರಿರುತ್ತದೆ. ಆದರೂ ಜನರು ಆತ್ಮಾನಾತ್ಮ ವಿಚಾರವನ್ನು ಮಾಡದೆ ಇರುವದರಿಂದ ಅವರಿಗೆ ಈ ತತ್ತ್ವವು ಹೊಳೆಯುವದಿಲ್ಲ.

ವಿಚಾರಕ್ಕೆ ತೊಡಗಿದ ಮೇಲೂ ಆತ್ಮನೆಂದರೆ ಯಾರು? - ಎಂಬುದು ಬಹು ಜನರಿಗೆ ದಕ್ಕದ ವಿಷಯವಾಗಿರುವದು; ಆತ್ಮೈಕ್ಯವನ್ನು ಕಂಡು ಕೊಳ್ಳುವದಂತೂ ಕಡುಕಷ್ಟವಾಗಿರುವದು; ಆದರೂ ತನಗೋಸ್ಕರವಾಗಿಯೇ ಮಿಕ್ಕೆಲ್ಲವೂ ಇರುವದರಿಂದಲೂ ಯಾವ ಐಹಿಕಭೋಗವೂ ಕೊನೆಯವರೆಗೂ ಇರುವ ಹಾಗಿಲ್ಲವಾದ್ದರಿಂದಲೂ ವಿಚಾರಪರನಾದವನು 'ನಾನು ಯಾರು? ನನಗೆ ನಿತ್ಯತ್ವವುಂಟೆ? ನಾನು ನಿತ್ಯಾನಂದದಿಂದ ಇರುವದು ಸಾಧ್ಯವೆ? ನನ್ನ ಹಾಗೆಯೇ ಇಲ್ಲಿ ಅನೇಕರಿರುವರಲ್ಲ! ಅವರಿಗೆಲ್ಲ ಬೇರೆಬೇರೆ ಆತ್ಮರುಂಟೊ, ಇಲ್ಲದಿದ್ದರೆ ಆತ್ಮನು ಒಬ್ಬನೆಯೊ? ಒಬ್ಬನಾದರೆ ಅವನ ಸ್ವರೂಪವೇನು? ಅನೇಕ ಆತ್ಮರಿದ್ದರೆ ಒಬ್ಬರಿಗೊಬ್ಬರಿಗೆ ಸಂಬಂಧವೇನು!'- ಎಂದು ಮುಂತಾಗಿ ತನ್ನನ್ನು ತಾನು

ಕೇಳಿಕೊಳ್ಳುವದು ಸಹಜವಾಗಿರುತ್ತದೆ. ಈ ವಿಷಯದಲ್ಲಿ ಮತ್ತೊಬ್ಬರ ಮಾತನ್ನು ನಂಬಿದರೆ ಸಾಲದು, ನಾವು ನಾವೇ ವಿಚಾರಮಾಡಿ ತಿಳಿದುಕೊಳ್ಳಬೇಕಾಗಿರುತ್ತದೆ.

ವ್ಯವಹಾರದಲ್ಲಿ ನೋಡಿದರೆ ಆತ್ಮರು ಅನೇಕರೆಂದೇ ನಮಗೆ ತೋರುತ್ತದೆ. ಎಲ್ಲೆಲ್ಲಿಯೂ ಭೇದವೇ ಸತ್ಯವಾಗಿರುತ್ತದೆ. ಬೇರೆಬೇರೆ ಆತ್ಮರಿಲ್ಲದಿದ್ದರೆ ವ್ಯವಹಾರವು ಸಾಗುವ ಹಾಗೆಯೇ ಇಲ್ಲ. ವ್ಯವಹಾರಕ್ಕೆ ಧರ್ಮಾಧರ್ಮಗಳ ಜ್ಞಾನವು ಬೇಕು. ಅದಕ್ಕೆ ಶಾಸ್ತ್ರವು ಬೇಕು. ಎಲ್ಲವನ್ನೂ ವ್ಯವಸ್ಥೆಗೊಳಿಸುವದಕ್ಕೆ ಒಬ್ಬ ಈಶ್ವರನು ಬೇಕು. ಇಷ್ಟೆಲ್ಲ ಭೇದವಾದಿಗೆ ಹೊಂದುವದೇ ಹೊರತು ಆತ್ಮನೊಬ್ಬನೇ ಪರಮಾರ್ಥವಾಗಿರುವನೆಂದು ಹೇಳಿದರೆ ಇವುಗಳು ಯಾವವೂ ಇಲ್ಲದೆ ಹೋಗುವದಲ್ಲ!– ಎಂಬ ಶಂಕೆಯುಂಟಾಗುತ್ತದೆ.

ಆದರೆ ಸರಿಯಾಗಿ ವಿಚಾರಮಾಡಿನೋಡೋಣ. ದ್ವೈತದೃಷ್ಟಿಯಿಂದಲಾದರೂ ಇದೆಲ್ಲವೂ ಸಮಂಜಸವಾಗುವದೆ? ಆತ್ಮನು ಒಬ್ಬನೇ ಅಲ್ಲದೆ ಇದ್ದರೆ ತನ್ನಂತೆ ಮತ್ತೊಬ್ಬನನ್ನು ಕಾಣಬೇಕೆಂಬ ಧರ್ಮದ ಅಡಿಗಲ್ಲು ನಿಂತೀತೆ? ಆಗ ಬೇರೆ ಬೇರೆ ಆತ್ಮರು ತಮ್ಮ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವದೇ ಯುಕ್ತವಾಗುವದು. ಆತ್ಮನು ನಿತ್ಯನೆಂದು ಆತ್ಮವಾದಿಗಳೆಲ್ಲರೂ ಒಪ್ಪುವರಾದ್ದರಿಂದ ಒಬ್ಬರನ್ನೊಬ್ಬರು ದ್ವೇಷಿಸುತ್ತಲೇ ಅನಂತಕಾಲವಿರಬೇಕಾಗುವದು. ಇವರ ಜಗಳವನ್ನು ಬಗೆಹರಿಸುವದಕ್ಕೆ ಒಬ್ಬ ಈಶ್ವರನಿರುವನೆಂದು ಇಟ್ಟುಕೊಳ್ಳೋಣವೆಂದರೆ ಅದೂ ನಂಬಿಕೆಯ ಮಾತಾಗುವದೇ ಹೊರತು ವಿಚಾರದಿಂದ ಸಿದ್ಧವಾಗಿ ಅನುಭವಕ್ಕೆ ಬರುವ ವಿಷಯವಾಗುವದಿಲ್ಲ. ತಮ್ಮನ್ನು ಯಾರಾದರೂ ನಾಸ್ತಿಕರೆನ್ನುವರೆಂಬ ಅಂಜಿಕೆಯಿಂದ ದೇವರಿದ್ದಾನೆಂದು ಹೊರಗೆ ಹೇಳುತ್ತಿರುವವರನ್ನು ಬಿಟ್ಟರೆ, ವಿಚಾರಪರರಾದವರೆಲ್ಲರೂ ದೇವರಿದ್ದಾನೆಂಬುದನ್ನು ಹೇಗೆ ನಂಬಬೇಕು?– ಎಂದು ತಮ್ಮೊಳಗೆ ತಾವು ಚಿಂತಿಸಿಯೇ ತೀರುವರು; ಅವರಿಗೆ ಈ ದೃಷ್ಟಿಯಲ್ಲಿ ಯಾವ ಸಮಾಧಾನವೂ ಸಿಕ್ಕುವ ಹಾಗಿಲ್ಲ. ದೇವರನ್ನು ಯಾರೂ ಕಂಡಿಲ್ಲ. ದೇವರೊಬ್ಬನು ಇದ್ದಾನೆಂದು ಒಪ್ಪಿಕೊಂಡರೂ ಅವನಲ್ಲಿ ಪಕ್ಷಪಾತವಿದೆಯೆಂದು ಹೇಳಬೇಕಾಗುವದು. ಇದೂ ಅಲ್ಲದೆ ಆತ್ಮನೆಂದರೆ ಯಾರೆಂಬುದನ್ನು ಗೊತ್ತುಪಡಿಸಿಕೊಂಡ ಮೇಲಲ್ಲವೆ, ಆತ್ಮನ ಏಕತ್ವವನ್ನಾಗಲಿ ಅನೇಕತ್ವವನ್ನಾಗಲಿ ವಿಚಾರಿಸಬೇಕು? ಆದರೆ ಯಾವ ದ್ವೈತಿಗಳೂ ಆತ್ಮಸಿದ್ಧಿಯನ್ನು ಇದುವರೆಗೆ ಮಾಡುವ ಗೋಜಿಗೆ ಹೋಗಿರುವದಿಲ್ಲ. ಪಾಶ್ಚಾತ್ಯರಿಗೆ ಮನಸ್ಸೇ ಆತ್ಮನು; ಈ

ದೇಶದಲ್ಲಿರುವ ದ್ವೈತಿಗಳು ದೇಹಾದಿಗಳಿಗಿಂತ ಬೇರೆಯಾಗಿರುವ ಜೀವನನ್ನು ಒಪ್ಪಿರುತ್ತಾರಾದರೂ ಆ ಒಪ್ಪಿಗೆಯು ಶಾಸ್ತ್ರಪ್ರಾಮಾಣ್ಯದ ನಂಬಿಕೆಯ ತಳಗಲ್ಲಿನ ಮೇಲೆ ನಿಂತಿರುವದೇ ಹೊರತು ಅನುಭವಕ್ಕೆ ಹೊಂದಿಕೊಂಡಿರುವದಿಲ್ಲ.

ಆದ್ದರಿಂದ ಅನೇಕ ಆತ್ಮರು, ಇವರಿಗಿಂತ ಬೇರೆಯಾದ ಒಬ್ಬ ಈಶ್ವರ, ಅವನಿಗಿಂತ ಬೇರೆಯಾದ ಒಂದು ಪ್ರಪಂಚ - ಇವುಗಳನ್ನು ಒಪ್ಪುವದಕ್ಕೆ ಯುಕ್ತಿಯಿಲ್ಲ, ಅನುಭವವಿಲ್ಲ; ಒಪ್ಪಿದರೆ ಪ್ರಯೋಜನವೂ ಇಲ್ಲ, ಎಲ್ಲೆಲ್ಲಿಯೂ ತೋರುತ್ತಿರುವ ಭೇದಕ್ಕೆ ಆಧಾರವಾದ ಪರಮಾರ್ಥವೇನೆಂಬ ಪ್ರಶ್ನೆಗಂತು ಇಲ್ಲಿ ಉತ್ತರವೇ ದೊರೆಯುವದಿಲ್ಲ.

ಇದನ್ನು ಬಿಟ್ಟು ಆತ್ಮೈಕತ್ವವನ್ನು ತೆಗೆದುಕೊಂಡರೊ?- ಎಂದರೆ ಅದು ಅನುಭವಸಿದ್ಧವಾಗಿದೆ, ಯುಕ್ತಿಸಮ್ಮತವಾಗಿದೆ, ಶಾಸ್ತ್ರಸಮ್ಮತವಾಗಿದೆ; ಇದರಿಂದ ಪ್ರಯೋಜನವೂ ಉಂಟು. ತಿಳಿಯಲ್ಪಡತಕ್ಕ ಪ್ರಪಂಚವೆಲ್ಲವೂ ಅದನ್ನು ತಿಳಿಯುವ ಆತ್ಮನಿಗಿಂತ ಬೇರೆಯಾಗಿರುವದನ್ನೂ ನಾವು ಎಂದೂ ಕಂಡದ್ದಿಲ್ಲ. ಅವಸ್ಥಾತ್ರಯಕ್ಕೂ ತಾನು ಸಾಕ್ಷಿಯಾಗಿರುವೆನೆಂದೂ ಎಚ್ಚರಕನಸುಗಳಲ್ಲಿ ತನಗೆ ತೋರುತ್ತಿರುವ ಪ್ರಪಂಚವು ಸುಷುಪ್ತಿಯಲ್ಲಿ ತೀರ ಇಲ್ಲದಂತೆ ಹೋದರೂ ಅದು ಇಲ್ಲದ್ದನ್ನು ತಾನು ಅನುಭವಿಸುತ್ತಿರುವದರಿಂದ ಆತ್ಮನು ತನಗೆರಡನೆಯದಿಲ್ಲದ ಸ್ವರೂಪದವನೆಂದೂ ಅನುಭವದಿಂದಲೇ ಸಿದ್ಧವಾಗುತ್ತದೆ. ಹೀಗೆ ಸಾಕ್ಷಿಯಾಗಿರುವ ಆತ್ಮನು ಸ್ವತಃ ಸಿದ್ಧನಾಗಿರುವದರಿಂದಲೂ ಅವನು ಇಲ್ಲವೆಂಬುದನ್ನು ಕಲ್ಪಿಸುವದಕ್ಕೆ ಕೂಡ ಆಗದಿರುವದರಿಂದಲೂ ಆತ್ಮನನ್ನು ಸಾಧಿಸುವದಕ್ಕೆ ಪ್ರಮಾಣವೇನೂ ಬೇಕಾಗುವದಿಲ್ಲ. ಬೇರೆಬೇರೆ ಆತ್ಮರಿರುವರೆಂದು ನಾವು ತಿಳಿಯುವದು ಒಂದಾನೊಂದು ಅವಸ್ಥೆಗೆ ಮಾತ್ರ ಕಟ್ಟುಬಿದ್ದಿರುವದರಿಂದ ಅಂಥ ವ್ಯವಹಾರಸಿದ್ಧರಾದ ಜೀವರುಗಳಿಗೆ ಸಾಕ್ಷಿಯಾದ ಆತ್ಮನು ಧರ್ಮಾಧರ್ಮಗಳನ್ನು ಮೀರಿದ ಈಶ್ವರನೇ ಎಂದು ಶಾಸ್ತ್ರಗಳು ಹೇಳುವದೂ ಅನುಭವ ಸಿದ್ಧವಾಗುತ್ತದೆ. ಈ ಒಬ್ಬ ಆತ್ಮನೇ ಎಲ್ಲರಿಗೂ ಆತ್ಮನಾಗಿರುವದರಿಂದ ತನ್ನಂತೆ ಎಲ್ಲರನ್ನೂ ಕಾಣಬೇಕೆಂಬ ಧರ್ಮತತ್ತ್ವಕ್ಕೂ ಇದರಿಂದ ಬಲ ಬಂದಂತಾಗುತ್ತದೆ.

★★★★★

# ಈಶ್ವರಭಾವನೆ

**3-5-1933**

**ಶ್ರೀಶ್ರೀಗಳವರು**

ಈ ಲೋಕದಲ್ಲಿರುವ ಮುಖ್ಯಮತಗಳಲ್ಲಿ ಈಶ್ವರನನ್ನು ಒಪ್ಪುವ ಮತಗಳೇ ಬಹಳವಾಗಿವೆ. ಆದರೆ ಈಶ್ವರನ ಸ್ವರೂಪದ ವಿಷಯದಲ್ಲಿ ಮಾತ್ರ ಅಭಿಪ್ರಾಯವು ಬೇರೆಬೇರೆಯಾಗಿರುತ್ತದೆ. ಕೆಲವು ಮತಗಳಲ್ಲಿ ದೇವರು ನಿರಾಕಾರನೆಂದೂ ಸಗುಣನೆಂದೂ ಅಂಗೀಕರಿಸಿದೆ; ಕ್ರಿಸ್ತಿಯನ್‌ಮತದಲ್ಲಿ ಈಶ್ವರನು ಸ್ವತಃ ನಿರಾಕಾರನಾದರೂ ಒಂದೇ ಒಂದು ಸಲ ಜಗತ್ತಿನಲ್ಲಿ ಮನುಷ್ಯನಾಗಿ ಅವತರಿಸಿ ಜನಗಳಿಗೆ ಸರಿಯಾದ ಮಾರ್ಗವನ್ನುಪದೇಶಿಸಿ ಮಾನವಜಾತಿಯ ಪಾಪವನ್ನು ಕಳೆಯುವದಕ್ಕಾಗಿ ತನ್ನ ದೇಹವನ್ನು ಬಲಿಯಾಗಿ ಅರ್ಪಿಸಿದನೆಂಬ ನಂಬಿಕೆಯಿದೆ. ಭರತಖಂಡದ ವೈದಿಕಮತದಲ್ಲಿ ಮಾತ್ರ ಈಶ್ವರನು ನಿರಾಕಾರಾನಾದರೂ ಅನೇಕ ಅಕಾರಗಳನ್ನೂ ಧರಿಸಬಲ್ಲನೆಂದೂ ನಿರ್ಗುಣನಾದರೂ ಸಕಲಸದ್ಗುಣಗಳನ್ನುಳ್ಳವನಾಗಿರುವನೆಂದೂ ಉಪದೇಶಿಸಿರುತ್ತದೆ.

ಮಿಕ್ಕ ಮತಗಳಲ್ಲಿರುವ ಈಶ್ವರಭಾವನೆಗೂ ವೇದಾಂತದಲ್ಲಿರುವ ಈಶ್ವರಭಾವನೆಗೂ ಒಂದು ಮುಖ್ಯತಾರತಮ್ಯವೇನೆಂದರೆ; ಈ ದರ್ಶನದಲ್ಲಿ ಈಶ್ವರನು ಎಲ್ಲಿಯೋ ಇರುವ ಒಂದು ವ್ಯಕ್ತಿಯಲ್ಲ; ಮಿಕ್ಕವರು ಎಣಿಸಿರುವಂತೆ ಉಪಾಸಕನಿಗಿಂತ ಬೇರೆಯಾಗಿ ಶಾಸ್ತ್ರದ ಅಥವಾ ಆಚಾರ್ಯರ ಉಪದೇಶದಿಂದ ನಂಬಿ ಪೂಜಿಸಬೇಕಾಗಿರುವ ಸರ್ವಶಕ್ತನಲ್ಲ. ವೇದಾಂತದ ಈಶ್ವರನು ನಿತ್ಯವಾದ ವಸ್ತುಗಳಿಗೆಲ್ಲ ನಿತ್ಯತ್ವವನ್ನು ಕೊಟ್ಟಿರುವ ಚೇತನವೆನಿಸಿರುವವರಲ್ಲೆಲ್ಲ ಚೇತನನಾಗಿ ರುವ ಅನೇಕರಾಗಿ ತೋರುವ ಆತ್ಮರುಗಳಿಗೆಲ್ಲ ತಿರುಳಾಗಿರುವವನು. ಆತನು ನಮ್ಮೆಲ್ಲರ ಆತ್ಮನಾಗಿರುವದರಿಂದ ಅವನು ಇದಾನೆಯೋ ಇಲ್ಲವೋ ಎಂಬ ವಿಷಯದಲ್ಲಿ ಸಂದೇಹಪಡಬೇಕಾಗಿರುವದಿಲ್ಲ; ಆತನ ಮೇಲೆ ಭಕ್ತಿಯಿಡುವದೂ ನಮ್ಮೆಲ್ಲರಿಗೂ ಸ್ವಾಭಾವಿಕವಾಗಿರುತ್ತದೆ. ಆತನ ಈ ಪರಮಾರ್ಥ ಸ್ವರೂಪವನ್ನು

**ಏಕೋ ದೇವಃ ಸರ್ವಭೂತೇಷು ಗೂಢಃ**
**ಸರ್ವವ್ಯಾಪೀ ಸರ್ವ ಭೂತಾಂತರಾತ್ಮಾ ।**
**ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ**
**ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥**

ಸರ್ವಪ್ರಾಣಿಗಳಲ್ಲಿಯೂ ಒಬ್ಬ ದೇವನೇ ಇರುತ್ತಿರುವನು. ಆತನು ಎಲ್ಲೆಲ್ಲಿಯೂ ಹಬ್ಬಿರುವವನು, ಸರ್ವಭೂತಗಳಿಗೂ ಒಳಗಿನ ಆತ್ಮನಾಗಿ ರುವವನು, ಕರ್ಮಗಳಿಗೆ ಒಡೆಯನಾಗಿರುವವನು, ಸರ್ವಪ್ರಾಣಿಗಳಲ್ಲಿಯೂ ನೆಲಸಿರುವವನು, ಎಲ್ಲಕ್ಕೂ ಸಾಕ್ಷಿಯಾಗಿರುವವನು, ಚೈತನ್ಯಸ್ವರೂಪನಾಗಿ ರುವವನು, ಯಾವದೊಂದರ ಸೋಂಕೂ ಇಲ್ಲದಿರುವವನು, ಯಾವ ಗುಣವೂ ಇಲ್ಲದವನು – ಎಂಬ ಶ್ರುತಿಯು ಸಾರುತ್ತಿರುವದು.

ಈ ಪರಮೇಶ್ವರನೇ ಮಿಕ್ಕದರ್ಶನಕಾರರು ಹೇಳುತ್ತಿರುವ ಸಗುಣ ಸಾಕಾರೇಶ್ವರನೆಂಬುದು ವಿಚಾರಶೀಲರಿಗೆ ವ್ಯಕ್ತವಾಗುವದು. ನಿಜವಾಗಿ ನೋಡಿದರೆ ಇವನು ಹೆಂಗಸೂ ಅಲ್ಲ, ಗಂಡಸೂ ಅಲ್ಲ; ಆದರೂ ಲೋಕದಲ್ಲಿರುವ ಹೆಣ್ಣು, ಗಂಡು, ಹುಡುಗ, ಹುಡುಗಿ, ಮುದುಕ, ಮುದುಕಿ- ಇವರ ಆಕಾರಗಳೆಲ್ಲ ಈತನವೇ. ಈತನು ಬಗೆಬಗೆಯಾದ ಅವತಾರಗಳನ್ನು ಮಾಡಿರುವನು. ಈಶ್ವರರು (ಎಂದರೆ ಸ್ವತಂತ್ರರು) ಎನಿಸಿಕೊಂಡಿರುವವರಲ್ಲೆಲ್ಲ ಇವನು ಮಹೇಶ್ವರನು, ದೇವತೆಗಳಲ್ಲೆಲ್ಲ ಮಹಾದೇವನು, ಸಮಸ್ತಜಗತ್ತಿಗೂ ಇವನೇ ಒಡೆಯನು. ಯಾವ ಸಾಮಗ್ರಿಯೂ ಇಲ್ಲದೆಯೇ ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ಲೀಲಾಮಾತ್ರದಿಂದ ಮಾಡುವವನು. ಈತನು ನಮ್ಮಲ್ಲಿಯೇ ಇದ್ದುಕೊಂಡು ಸುಷುಪ್ತಿಯಲ್ಲಿ ತಾನೊಬ್ಬನೇ ಇದ್ದರೂ ಜಾಗ್ರತ್ಸ್ವಪ್ನಗಳಲ್ಲಿ ಬ್ರಹ್ಮಾಂಡವನ್ನೇ ಸೃಷ್ಟಿಸುವದು ನಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ. ಮಾಯೆಯಿಂದ ಬೇಕು ಬೇಕಾದ್ದನ್ನು ಇಂದ್ರಜಾಲಗಾರನು ಮಾಡಿಬಿಡುವ ಹಾಗೆ ಈ ಜಗತ್ತನ್ನೇ ಲೀಲೆಯಿಂದ ನಿರ್ಮಿಸಿಬಿಡುತ್ತಿದ್ದಾನೆ. ಈ ಜಗತ್ತಿಗೆಲ್ಲ ತಾನೇ ಉಪಾದಾನ ಕಾರಣವಾಗಿರುವದರಿಂದ ಜಗತ್ತಿನಲ್ಲಿರುವ ಎಲ್ಲಾ ಕಲ್ಯಾಣಗುಣಗಳೂ ಈತನವೆ; ಜೀವರುಗಳಲ್ಲಿ ಕಾಣಬರುವ ದೋಷಗಳೆಲ್ಲ ಅವರಲ್ಲಿರುವ ಪಾಪ ಸಂಬಂಧದಿಂದ ಆಗಿರುವದರಿಂದ ಸರ್ವಸಾಕ್ಷಿಯಾದ ಈತನಲ್ಲಿ ಯಾವ ದೋಷಗಳೂ ಇಲ್ಲ.

ಇದನ್ನು –

**ಮನೋಮಯಃ ಪ್ರಾಣಶರೀರೋ ಭಾರೂಪಃ ಸತ್ಯಸಂಕಲ್ಪ ಆಕಾಶಾತ್ಮಾ ಸರ್ವಕರ್ಮಾ ಸರ್ವಕಾಮಃ ಸರ್ವಗಂಧಃ ಸರ್ವರಸಃ ಸರ್ವಮಿದಮಭ್ಯಾತ್ತೋ ವಾಕ್ಯನಾದರಃ ॥**

ಮನೋಮಯನು, ವಿಜ್ಞಾನಕ್ರಿಯಾಶಕ್ತಿರೂಪವಾದ ಪ್ರಾಣವೇ ಇವನ ಶರೀರವು, ಚೈತನ್ಯರೂಪನು, ಸತ್ಯಸಂಕಲ್ಪನು, ಆಕಾಶದಂತೆ ಸರ್ವಗತನೂ ಸೂಕ್ಷ್ಮನೂ ರೂಪವಿಲ್ಲದವನೂ ಆಗಿರುವವನು, ಎಲ್ಲವನ್ನೂ ಮಾಡಿರುವವನು, ಎಲ್ಲಾ ಉತ್ತಮಕಾಮಗಳುಳ್ಳವನು, ಎಲ್ಲಾ ಬಗೆಯ ಒಳ್ಳೆಯ ವಾಸನೆಗಳನ್ನೂ ಸವಿಗಳನ್ನೂ ಉಳ್ಳವನು, ಈ ಜಗತ್ತೆಲ್ಲವನ್ನೂ ವ್ಯಾಪಿಸಿರುವವನು, ಯಾವ ಕರಣಕಳೇಬರವೂ ಇಲ್ಲದವನು, ಯಾವದರಲ್ಲಿಯೂ ಸಡಗರವಿಲ್ಲದವನು – ಎಂಬ ಶ್ರುತಿಯು ಹೇಳುತ್ತದೆ.

ಹೀಗೆ ಜಗತ್ತಿನ ಜನ್ಮಾದಿಗಳಿದೆ ಕಾರಣನೂ ಸರ್ವಜ್ಞನೂ ಸರ್ವಶಕ್ತನೂ ಆಗಿರುವ ನಿತ್ಯಶುದ್ಧಮುಕ್ತಸ್ವಭಾವನಾದ ಪರಮೇಶ್ವರನನ್ನು ಶಾಸ್ತ್ರಗಳಿಂದಲೂ ಸದ್ಗುರುಗಳಿಂದಲೂ ತಿಳಿದುಕೊಂಡು ಉಪಾಸನೆಮಾಡಬೇಕು, ಆತನ ಪರಮಾರ್ಥಸ್ವರೂಪವನ್ನು ವಿಚಾರದಿಂದ ಅರಿತುಕೊಂಡು ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದಬೇಕು.

★★★★★

# ಶಂಕರರ ಅನುಯಾಯಿಗಳೆಂದರೆ ಯಾರು?

**6-5-1933**

**ಶ್ರೀ ಶ್ರೀಗಳವರು.**

ಶಂಕರಜಯಂತಿಯೇ ಮುಂತಾದ ಉತ್ಸವಗಳನ್ನು ಮಾಡಿದ ಮಾತ್ರದಿಂದ ನಾವು ಶ್ರೀಶಂಕರಾಚಾರ್ಯರ ಅನುಯಾಯಿಗಳೆನಿಸಿಕೊಳ್ಳಲಾರವೆಂಬುದನ್ನು ಎಲ್ಲರೂ ಒಪ್ಪಿರುತ್ತಾರೆ. ಆಚಾರ್ಯರವರು ಉಪದೇಶಮಾಡಿರುವ ತತ್ತ್ವಗಳನ್ನು ತಿಳಿದುಕೊಂಡು ಅವರು ಹೇಳಿರುವ ಸಾಧನಗಳನ್ನು ಅನುಷ್ಠಾನಮಾಡುವವರೇ ಅವರ ಶಿಷ್ಯರಾಗುವರೆಂಬುದೂ ನಮ್ಮೆಲ್ಲರಿಗೂ ಒಪ್ಪಿಗೆಯಾಗಿರುವ ಮಾತು. ಆದ್ದರಿಂದ ನಾವು ಶಂಕರರ ಅನುಯಾಯಿಗಳೆ, ಅಲ್ಲವೆ?- ಎಂಬುದನ್ನು ಪರೀಕ್ಷಿಸಿಕೊಳ್ಳುವ ಮೊದಲು ಆಚಾರ್ಯರು ಅಪ್ಪಣೆಕೊಡಿಸಿರುವ ಸಿದ್ಧಾಂತವು ಯಾವದು?- ಎಂಬುದನ್ನು ತಿಳಿಯಬೇಕಾಗುವದು.

ಶಂಕರಭಗವತ್ಪಾದರವರು ''ಜ್ಞಾನದಿಂದಲೇ ಮುಕ್ತಿಯು'' ಎಂಬ ಸಿದ್ಧಾಂತವನ್ನು ಎಲ್ಲೆಲ್ಲಿಯೂ ಸಾರಿರುತ್ತಾರೆ. ಅಜ್ಞಾನವನ್ನು ಕಳೆಯುವದೇ ಜ್ಞಾನದ ಕೃತ್ಯವೆಂದೂ ಜ್ಞಾನದಿಂದ ಆಗುವ ಫಲವು ಜ್ಞಾನವುಂಟಾದ ಸಮಕಾಲದಲ್ಲಿಯೇ ಆಗಬೇಕೆಂತಲೂ ನಮಗೆ ಲೌಕಿಕವಿಷಯಗಳ ಜ್ಞಾನದ ಪರಿಚಯದಿಂದ ತಿಳಿದಿರುತ್ತದೆ. ಆದ್ದರಿಂದ ಯಾರು ಜ್ಞಾನದಿಂದ ಮುಕ್ತಿಯಾಗುವದೆಂಬ ಅರ್ಥದಲ್ಲಿ ಸಂಶಯಪಡುತ್ತಿರುವರೋ, ಯಾರು ಅದಕ್ಕೆ ಅಡ್ಡಿಯಾಗುವ ಉಪದೇಶಗಳನ್ನು ಮಾಡುತ್ತಾರೆಯೋ ಅವರು ಎಂದಿಗೂ ಶಂಕರರ ಶಿಷ್ಯರುಗಳು ಆಗಲಾರರು. ಶಂಕರರ ವಿರೋಧಿಗಳಾಗಿರುವವರು ಮಾತ್ರವೇ ಅಲ್ಲದೆ ಅವರ ಶಿಷ್ಯರೆಂದು ಹೇಳಿಕೊಳ್ಳುವವರಲ್ಲಿ ಕೆಲವರು ಕೂಡ ವೇದಾಂತವಾಕ್ಯಜ್ಞಾನಮಾತ್ರದಿಂದ ಮುಕ್ತಿಯಾಗಲಾರದೆಂದೂ ಆ ಜ್ಞಾನವಾದ ಮೇಲೆಯೂ ಸಮಾಧಿಯೇ ಮುಂತಾದವುಗಳನ್ನು ಸಂಪಾದಿಸಿಕೊಂಡು ತತ್ತ್ವಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದೂ ದೇಹವು ಬಿದ್ದ ಬಳಿಕವೇ ಸಾಧಕನಿಗೆ ನಿಜವಾದ ಮುಕ್ತಿಯಾಗುವದೆಂದೂ ಹೇಳುತ್ತಿದ್ದಾರೆ. ಆಚಾರ್ಯರು ಉಪಯೋಗಿಸಿರುವ ಜ್ಞಾನ, ಅಜ್ಞಾನ - ಮುಂತಾದ

ಶಬ್ದಗಳಿಗೆ ತಮ್ಮದೇ ಒಂದು ಅರ್ಥವನ್ನು ಮಾಡುತ್ತಲೂ ಇರುತ್ತಾರೆ. ಆದ್ದರಿಂದ ತತ್ತ್ವಪಕ್ಷಪಾತಿಗಳಾಗಿರುವವರೆಲ್ಲರೂ ಶಂಕರರ ಸಿದ್ಧಾಂತವೇನೆಂಬುದನ್ನು ಮೊದಲು ಅವರ ಗ್ರಂಥಗಳಿಂದ ಗೊತ್ತುಮಾಡಿ, ವ್ಯಾಖ್ಯಾನದವರೂ ಮಿಕ್ಕವರೂ ಅವರ ಅಭಿಪ್ರಾಯವೆಂದು ಹೇಳುತ್ತಿರುವ ಸಿದ್ಧಾಂತವನ್ನು ಶಂಕರಗ್ರಂಥಗಳ ಒರೆಗಲ್ಲಿನ ಮೇಲೆ ತಿಕ್ಕಿಯೇ ಬೆಲೆಗಟ್ಟಬೇಕು. ಶಂಕರರು ಹೇಳದೆ ಇರುವ ಹೊಸ ವಿಷಯಗಳನ್ನು ಯಾರಾದರೂ ಹೇಳುತ್ತಿದ್ದರೂ ಆ ಆಚಾರ್ಯರ ಅಭಿಪ್ರಾಯಕ್ಕೆ ಹೊಂದು ಗಡೆಯಾಗಿರುವದಾದರೆ ಅಂಥವರ ಪಕ್ಷದಲ್ಲಿ ಯಾವ ವಿರೋಧವನ್ನೂ ಹೇಳುವದಕ್ಕೆ ಕಾರಣವಿಲ್ಲ; ಆದರೆ ಆಚಾರ್ಯರು ಹೌದೆಂದ್ದನ್ನು ಅಲ್ಲವೆಂದೂ ಅಲ್ಲವೆಂದದ್ದನ್ನು ಹೌದೆಂದೂ ಯಾರು ಹೇಳುತ್ತಿರುವರೋ ಅಂಥವರ ಪಕ್ಷವು ಹೊಂದುಗಡೆಯಾಗಿದ್ದರೂ ಶಂಕರಪಕ್ಷವಲ್ಲವೆಂದು ಮಾತ್ರ ಖಂಡಿತ ಒಪ್ಪಬೇಕಾಗುವದು. ಸರಿಯಾಗಿ ನೋಡಿದರೆ ಭಗವತ್ಪಾದರವರು ಶ್ರುತಿಗೂ ಯುಕ್ತಿಗೂ ಅನುಭವಕ್ಕೂ ಹೊಂದುವಂತೆ ಹೇಳಿರುವದರಿಂದ ಮತ್ತೊಂದು ದರ್ಶನವನ್ನು ಯುಕ್ತಿಯುಕ್ತವಾಗಿರುವದೆಂದು ಒಪ್ಪುವದಕ್ಕೆ ಬರುವ ಹಾಗಿಲ್ಲವೆಂಬುದನ್ನು ನಾವೆಲ್ಲರೂ ಲಕ್ಷ್ಯದಲ್ಲಿಡಬೇಕು.

ಆತ್ಮ ಮತ್ತು ಪ್ರಪಂಚಗಳ ನಿಜವಾದ ಸ್ವರೂಪವನ್ನು ಅರಿಯದೆ ಇರುವದರಿಂದಾಗಿರುವ ತಪ್ಪು ತಿಳಿವಳಿಕೆಗೆ **ಅವಿದ್ಯೆ** ಎಂದು ಹೆಸರು. ಅವಿದ್ಯೆಯ ಕಣ್ಣಿಂದ ನೋಡಿದಾಗ ಪ್ರಪಂಚವು ಸತ್ಯವೆಂಬ ಬುದ್ಧಿಯುಂಟಾಗುವದು, ಅದು ಮಾಯೆಯೆಂಬ ಅರಿವು ಆಗುವದಿಲ್ಲ. ಈ ಅವಿದ್ಯೆಯನ್ನು ಕಳೆಯುವದಕ್ಕೆ ಆತ್ಮಸ್ವರೂಪವನ್ನು ತಿಳಿದುಕೊಳ್ಳಬೇಕು. ಈ ಆತ್ಮಸ್ವರೂಪವನ್ನು ತಿಳಿಯಹೇಳುವದಕ್ಕೆಂದೇ ವೇದಾಂತಶಾಸ್ತ್ರವು ಹೊರಟಿರುತ್ತದೆ- ಎಂಬುದು ಆಚಾರ್ಯರ ಮುಖ್ಯ ಉಪದೇಶವು.

★★★★★

# ಪ್ರಾರ್ಥನೆ

**18-05-1934**

**ಶ್ರೀಶ್ರೀಗಳವರು**

ದೇವರಿಲ್ಲವೇ ಇಲ್ಲವೆಂಬವರನ್ನು ಬಿಟ್ಟರೆ ಉಳಿದವರೆಲ್ಲರೂ ಪ್ರಾರ್ಥನೆಯಲ್ಲಿ ವಿಶ್ವಾಸವುಳ್ಳವರಾಗಿರುತ್ತಾರೆ. ದೇವರಿಲ್ಲವೆನ್ನುವವರಲ್ಲಿ ಕೂಡ ಕೆಲವರು ಒಂದು ಬಗೆಯ ಪ್ರಾರ್ಥನೆಯನ್ನವಲಂಬಿಸಿರುತ್ತಾರೆ. ಉದಾಹರಣೆಗೆ: ಬೌದ್ಧಮತದಲ್ಲಿ ದೇವರಿಲ್ಲ; ಆದರೂ ಬುದ್ಧ, ಧರ್ಮ, ಸಂಘ - ಇವುಗಳನ್ನು ಅವರು ಪ್ರಾರ್ಥಿಸುತ್ತಾರೆ. ಪ್ರಾರ್ಥನೆಯೆಂಬುದು ಪ್ರಾಣಿಮಾತ್ರಕ್ಕೆ ಬೇಕಾಗಿರುವುದು. ಪ್ರಾರ್ಥನೆಯೆಂಬ ಮಾತಿಗೆ ತನಗೆ ಬೇಕಾದದ್ದನ್ನು ಕೋರುವದು ಎಂದರ್ಥ. ಮೂಕಪ್ರಾಣಿಗಳು ಕೂಡ ತಮಗೆ ಬೇಕಾದದ್ದನ್ನು ಕೊಡುವವರನ್ನು ಅನುಸರಿಸುವದಕ್ಕೆ ಹೋಗುತ್ತವೆ. ಆದರೆ ಮನುಷ್ಯನು ನಾಳೆಗೆ, ನಾಡಿದ್ದಿಗೆ, ತಾನು ಬದುಕಿರುವವರೆಗೆ ತನ್ನ ಮಕ್ಕಳು ಮೊಮ್ಮಕ್ಕಳಿಗೆ - ಹೆಚ್ಚೇಕೆ ? ಮುಂದಿನ ಜನ್ಮಕ್ಕೆ ಕೂಡ - ಸುಖವು ಬೇಕೆಂದೂ ದುಃಖವು ಬೇಡವೆಂದೂ ಇಚ್ಛಿಸುತ್ತಾನೆ. ಆದ್ದರಿಂದಲೇ ಅವನು ದುಡ್ಡಿಗಾಗಿ ಸಾಹುಕಾರನನ್ನು, ಆರೋಗ್ಯಕ್ಕಾಗಿ ವೈದ್ಯರನ್ನು, ವಿದ್ಯೆಗಾಗಿ ಗುರುಗಳನ್ನು - ಹೀಗೆಲ್ಲ ಅನುಸರಿಸುತ್ತಿರುತ್ತಾನೆ. ಇಷ್ಟೇ ಅಲ್ಲದೆ, ಎಂಥ ಮನುಷ್ಯೋತ್ತಮರಿಗೂ ಎಟುಕದ ಕೆಲವು ಶಕ್ತಿವಿಶೇಷಗಳನ್ನುಳ್ಳ ದೇವತೆಗಳೂ ಉಂಟೆಂದೂ ಅವರನ್ನು ಒಲಿಸಿಕೊಂಡರೆ ನಮಗೆ ದುಃಖಪರಿಹಾರವೂ ಸುಖಪ್ರಾಪ್ತಿಯೂ ಆಗುವದೆಂದೂ ಎಲ್ಲಾ ದೇಶದಲ್ಲಿಯೂ ಎಲ್ಲಾ ಕಾಲದಲ್ಲಿಯೂ ಅನಾಗರಿಕರು ಕೂಡ ನಂಬಿಕೊಂಡು ಬಂದಿರುತ್ತಾರೆ. ಬೇರೆ ಬೇರೆ ಧರ್ಮವನ್ನು ಅನುಸರಿಸುವವರಿಗೆ ತಾವು ತಾವು ನಂಬಿರುವ ದೇವತೆಗಳಲ್ಲಿ ಅಂಧವಿಶ್ವಾಸವು ಹೆಚ್ಚಿದಂತೆ ಪರಸ್ಪರವಾಗಿ ಹೊಡೆದಾಟಗಳುಂಟಾಗಿ, ಗೆದ್ದವರು ತಾವು ದೇವರ ಅನುಗ್ರಹದಿಂದಲೇ ಜಯಶೀಲರಾದೆವೆಂದು ನಂಬಿರುವದು ಕೂಡ ಇತಿಹಾಸದಿಂದ ಕಂಡುಬರುತ್ತದೆ. ಮನುಷ್ಯನಿಗೆ ಸಹಜವಾಗಿಯೇ ಪ್ರಾರ್ಥನೆಯ ಬಲದಲ್ಲಿ ಎಂಥ ನಂಬಿಕೆಯು ಇದ್ದುಕೊಂಡಿರುವದೆಂಬುದು ಇದರಿಂದ ವ್ಯಕ್ತವಾಗುತ್ತದೆ.

ವೈದಿಕಧರ್ಮದಲ್ಲಿ ಮಾತ್ರ ಅನೇಕದೇವತಾವಾದವನ್ನು ಬಹು ಪ್ರಾಚೀನ ಕಾಲದಲ್ಲಿಯೇ ತಿರಸ್ಕರಿಸಿರುತ್ತದೆ. ''**ಏಕಂ ಸದ್ವಿಪ್ರಾ ಬಹುಧಾ ವದನ್ತಿ**'' (ಇರುವನೊಬ್ಬನೇ ಪರಮಾತ್ಮನು, ಆತನನ್ನೇ ತಿಳಿದವರು ಬಗೆಬಗೆಯ ನಾಮಗಳಿಂದ ಕರೆಯುತ್ತಾರೆ) ಎಂಬ ಋಗ್ವೇದೋಕ್ತಿಯಲ್ಲಿ ಇದು ಸ್ಫುಟವಾಗಿರುವದು. ನಾಮರೂಪಗಳಿಗೆಲ್ಲ ಅತೀತನಾಗಿರುವ ಪರಮಾತ್ಮನೊಬ್ಬನೇ ಇರುವನೆಂದೂ ನಾವು ಮಾಡುವ ಸಮಸ್ತ ಲೌಕಿಕವೈದಿಕ ಪ್ರಾರ್ಥನೆಗಳಿಗೂ ಆತನೇ ಗುರಿಯೆಂದೂ ಇದನ್ನು ತಿಳಿದು ಆತನನ್ನೇ ಭಜಿಸುವದಕ್ಕೆ ಪ್ರಾರಂಭಿಸುವವರಿಗೆ ಉತ್ತಮ ಫಲವಾಗುವದೆಂದೂ ಶ್ರುತಿಸ್ಮೃತಿ (ಛಾಂ.6-20-21; ಗೀ. 4-10, 7-16) ಗಳಲ್ಲಿ ಪ್ರಸಿದ್ಧವಾಗಿರುವದು.

ಪ್ರಾರ್ಥನೆಯಿಂದ ಫಲವಾಗುವದು ಹೇಗೆ? - ಎಂದರೆ ಭಕ್ತನು ಮೋಡಿ ಹಾಕಿದಂತೆ ಭಗವಂತನನ್ನು ವಶಗೊಳಿಸಿಕೊಳ್ಳುವದಿಲ್ಲ; ಪ್ರಾರ್ಥನೆಯಿಂದ ಭೌತಿಕ ನಿಯಮಗಳನ್ನೇನೂ ಮಾರ್ಪಡಿಸುವದಕ್ಕೆ ಆಗುವದಿಲ್ಲ. ಹಿತವುಂಟಾಗಬೇಕು, ಅಹಿತವಾಗಬಾರದು - ಎಂಬುದು ನೀತಿಯ ಪ್ರಪಂಚದ ಪ್ರಕೃತಿ ನಿಯಮವು. ಪ್ರಾರ್ಥನೆಯಿಂದ ಈ ನಿಯಮಕ್ಕನುಸಾರವಾಗಿಯೇ ಉತ್ತಮ ಫಲವು ಮನುಷ್ಯನಿಗೆ ದೊರಕುತ್ತದೆ.

ಭಗವಂತನನ್ನು ನಾವು ಪ್ರಾರ್ಥಿಸಿದರೆ ನಮಗೆ ಅವನು ಹೇಗೆ ಫಲವನ್ನು ಕೊಟ್ಟಾನು ? ನಾವೂ ಅವನೂ ಬೇರೆಯಾಗಿರುವಾಗ ನಮ್ಮ ಪ್ರಾರ್ಥನೆಯು ಆತನ ಮನಸ್ಸಿನ ಮೇಲೆ ಯಾವ ಪರಿಣಾಮವನ್ನುಂಟುಮಾಡೀತು? - ಎಂದು ಶಂಕಿಸಬಾರದು. ಏಕೆಂದರೆ ಭಗವದ್ಗೀತೆಯಲ್ಲಿ (18-61) ಹೇಳಿರುವಂತೆ ಈಶ್ವರನು ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ಅವರ ಆತ್ಮನಾಗಿಯೇ ಕುಳಿತಿರುವನು; ಆತನನ್ನು ಅರಿಯದೆ, ಮಾಯಾಮೋಹಿತರಾಗಿ ನಾವು ಹೊರಗಡೆಗೆ ದೃಷ್ಟಿಯನ್ನು ತಿರುಗಿಸಿರುವೆವು. ಸರ್ವಭಾವದಿಂದಲೂ ಆತನನ್ನೇ ಶರಣುಹೊಕ್ಕರೆ ಆತನು ನಮಗೆ ಪ್ರಸನ್ನನಾಗುವನು, ಪರಮಶಾಂತಿಯು ನಮ್ಮ ಕೈವಶವಾಗುವದು.

ಪರಮಾತ್ಮನ ಸ್ವರೂಪವನ್ನು ಗೀತೆಯು ಹೀಗೆಂದು ವರ್ಣಿಸಿರುವದು:

**ಉಪದ್ರಷ್ಟಾನುಮಂತಾ ಚ ಭರ್ತಾ ಭೋಕ್ತಾ ಮಹೇಶ್ವರಃ ।**
**ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ ಪುರುಷಃ ಪರಃ ॥ 13-22**

ಈ ಶ್ಲೋಕದಲ್ಲಿರುವ ಒಂದೊಂದು ವಿಶೇಷಣದರ್ಥವೂ ವಿಚಾರಿಸತಕ್ಕದ್ದಾಗಿರುವದು. 'ಉಪದ್ರಷ್ಟ' - ಎಂದರೆ ಯಜ್ಞದಲ್ಲಿ ಋತ್ವಿಕರು ಮಾಡುವ ಕರ್ಮವನ್ನೆಲ್ಲ ನೋಡುತ್ತಿರುವ ಉಪದ್ರಷ್ಟೃವಿನಂತೆ ದೇಹೇಂದ್ರಿಯಾದಿಗಳ ವ್ಯಾಪಾರವನ್ನು ನೋಡುತ್ತಿರುವ, ನಮಗೆ ಅತ್ಯಂತ ಸಮೀಪದಲ್ಲಿರುವ ಸಾಕ್ಷಿಯು. 'ಅನುಮಂತ' - ಎಂದರೆ ನಾವು ಮಾಡುವ ಕಾರ್ಯಗಳೆಲ್ಲವೂ ತನ್ನ ಸನ್ನಿಧಿಯಿಂದಲೇ ಆಗುತ್ತಿದ್ದರೂ ಯಾವುದನ್ನೂ ಬೇಡವೆನ್ನದೆ ಇರುವವನು. 'ಭರ್ತ' ಎಂದರೆ ದೇಹೇಂದ್ರಿಯಾದಿಗಳಿಗೆ ಸ್ವರೂಪವನ್ನು ಧರಿಸುವದಕ್ಕೆ ಕಾರಣನಾಗಿರುವವನು. ಭೋಕ್ತನೆಂದರೆ ಸುಖದುಃಖಮೋಹಾತ್ಮಕವಾದ ಪ್ರತ್ಯಯಗಳೆಲ್ಲವನ್ನೂ ತನ್ನ ಚೈತನ್ಯರೂಪದಿಂದ ವ್ಯಾಪಿಸಿಕೊಂಡೇ ಇರುವಾತನು. 'ಮಹೇಶ್ವರ' - ಎಂದರೆ ಸರ್ವಾತ್ಮನೂ ಸ್ವತಂತ್ರನೂ ಆಗಿರುವವನು. ಪರಮಾತ್ಮನೆಂದರೆ ಅವಿದ್ಯಾಕಲ್ಪಿತವಾದ ದೇಹಾದ್ಯಾತ್ಮರುಗಳೆಲ್ಲರಿಗಿಂತಲೂ ಹೆಚ್ಚಿನವನಾದ ನಿಜವಾದ ಆತ್ಮನು. ಇಂಥ ಪರಮಾತ್ಮನು ನಮ್ಮ ಆತ್ಮನೇ ಆಗಿರುವದರಿಂದ ಆತನೇ ಶರಣೆಂದವರಿಗೆ ಪ್ರಾರ್ಥನೆಯಿಂದ ಎಲ್ಲಾ ಸತ್ಫಲಗಳೂ ಉಂಟಾಗುವದು ಸ್ವಾಭಾವಿಕವಾಗಿದೆ. ಈತನು ಎಲ್ಲರಿಗೂ ಆತ್ಮನಾಗಿರುವದರಿಂದ ಅಂಥವನ ಪರಮ ಮಂಗಲ ಸ್ವರೂಪವನ್ನು ನೆನಸಿಕೊಳ್ಳುವದೇ ಎಲ್ಲರಿಗೂ ಪರಮಶ್ರೇಯಸ್ಸಾಗಿರುವದು. ಆ ಸ್ವರೂಪವನ್ನು ಬಿಟ್ಟು ಇಲ್ಲದಸಲ್ಲದ ಭೇದಗಳನ್ನು ಕಲ್ಪಿಸಿಕೊಂಡಿರುವದರಿಂದಲೇ ಸಕಲ ದುಃಖಗಳೂ ಆಗಿರುವವು. ಆದ್ದರಿಂದ ಈ ಪರಮಾರ್ಥಸತ್ಯವಾದ ಪರಮಾತ್ಮಸ್ವರೂಪವನ್ನು ಕಂಡುಕೊಳ್ಳುವದೇ ಪ್ರಾರ್ಥನೆಯ ಪರಮೋದ್ದೇಶವು - ಎಂಬುದು ಉಪನ್ಯಾಸದ ಸಾರಾಂಶವಾಗಿತ್ತು.

★★★★★

# ಶ್ರೀಶಂಕರಾಚಾರ್ಯರ ಹಿಂದಿನ ವೇದಾಂತಿಗಳು

**20-05-1934**

**ಶ್ರೀಶ್ರೀಗಳವರು**

ಶಂಕರಭಗವತ್ಪಾದರವರು ಬರೆದಿರುವ ಪ್ರಸ್ಥಾನತ್ರಯಭಾಷ್ಯವೇ ಈಗ ನಮಗೆ ಸಿಕ್ಕುವ ಭಾಷ್ಯಗಳಲ್ಲೆ ಅತ್ಯಂತಪ್ರಾಚೀನವಾಗಿರುವದಾದರೂ ಅವರಿಗಿಂತ ಪೂರ್ವದಲ್ಲಿಯೂ ಎಷ್ಟೋ ಜನ ಭಾಷ್ಯಕಾರರು ಆಗಿ ಹೋಗಿರುವರೆಂಬುದು ಆಚಾರ್ಯರ ಭಾಷ್ಯದ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುತ್ತದೆ. ಈಗಲೂ ಶಂಕರಾಚಾರ್ಯರ ಅನುಯಾಯಿಗಳೆಂದು ಹೇಳಿಕೊಳ್ಳುವವರಲ್ಲಿ ಕೆಲವರು ಆಚಾರ್ಯರು ಹಿಂದೆ ಖಂಡಿಸಿರುವ ಮತಗಳನ್ನೇ ರೂಪಾಂತರಗಳಿಂದ ಕೆಲವಂಶಗಳಲ್ಲಿ ಅನುಸರಿಸುತ್ತಿರುವದು ಕಂಡುಬರುತ್ತದೆ. ಆದ್ದರಿಂದ ಆಚಾರ್ಯರಿಗೆ ಅಸಮ್ಮತವಾದ ಪಕ್ಷಗಳು ಯವವೆಂಬುದನ್ನು ವಿಚಾರಿಸುವದು ನಿಷ್ಪ್ರಯೋಜನವಲ್ಲ.

ಶ್ರೀಶಂಕರಭಗವತ್ಪಾದರವರಿಗೆ ಸಮ್ಮತವಾದ ವೈದಿಕಸಿದ್ಧಾಂತವೇನೆಂದರೆ: ಬ್ರಹ್ಮನಿಂದ ಹಿಡಿದು ಸ್ತಂಬಪರ್ಯಂತವಾಗಿರುವ ಸಕಲಪ್ರಾಣಿಗಳಿಗೂ ಆತ್ಮನು ಒಬ್ಬನೇ; ಆ ಆತ್ಮನು ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿರುತ್ತಾನೆ. ಅವಿಚಾರಿಗಳು ಈ ಪರಮಾರ್ಥಸ್ವರೂಪವನ್ನರಿಯದ್ದರಿಂದ ದೇಹ ಪ್ರಾಣೇಂದ್ರಿಯಮನೋಬುದ್ಧ್ಯಹಂಕಾರಗಳನ್ನು ಆತ್ಮನಲ್ಲಿ ಕಲ್ಪಿಸಿಕೊಂಡು ಈ ಕಲ್ಪನೆಯ ದೃಷ್ಟಿಗೆ ಗೋಚರವಾಗುವ ಹೊರಗಿನ ಭೌತಿಕಪ್ರಪಂಚವನ್ನು ಪರಮಾರ್ಥವೆಂದು ನಂಬಿ ಜನನಮರಣಸಂಸಾರದಲ್ಲಿ ತೊಳಲುತ್ತಿರುತ್ತಾರೆ. ಇವರು ಜ್ಞಾನದಿಂದ ಪರಮಾರ್ಥವನ್ನು ಕಂಡುಕೊಂಡ ಒಡನೆಯೇ ಈ ಸಂಸಾರಸ್ವಪ್ನದಿಂದ ಬಿಡುಗಡೆಯನ್ನು ಹೊಂದುತ್ತಾರೆ.

ಈ ಸಿದ್ಧಾಂತಕ್ಕೆ ವಿರೋಧವಾಗಿ ನಾನಾಮತಗಳು ಆಚಾರ್ಯರ ಕಾಲಕ್ಕೆ ಇರುತ್ತಿದ್ದವು; ಅವುಗಳನ್ನು ಆಚಾರ್ಯರು ಸ್ಪಷ್ಟವಾಗಿ ಖಂಡಿಸಿರುತ್ತಾರೆ. ಆದರೂ

ಆ ಮತಗಳ ವಾಸನೆಯಿಂದ ಬೇರೆ ಬೇರೆ ವಾದಗಳು ಈಗಲೂ ರೂಢಿಯಲ್ಲಿರುತ್ತವೆ. ಆದ್ದರಿಂದ ಆ ಮತಗಳನ್ನೂ ಈಗ ಪ್ರಚಾರದಲ್ಲಿರುವ ಅವುಗಳ ರೂಪಾಂತರಗಳನ್ನೂ ಬಹು ಸಂಕ್ಷೇಪವಾಗಿ ಇಲ್ಲಿ ತಿಳಿಸುತ್ತೇನೆ:-

(1) ಮೊಟ್ಟಮೊದಲನೆಯದು **ಕರ್ಮವಾದ.** ಕಾಮ್ಯನಿಷಿದ್ಧಗಳನ್ನು ಬಿಟ್ಟು ನಿತ್ಯಕರ್ಮಗಳನ್ನು ಮಾಡುತ್ತಿರುವದರಿಂದಲೇ ಮುಕ್ತಿಯಾಗುತ್ತದೆ; ಮುಕ್ತಿಗೆಜ್ಞಾನವು ಬೇಡವೇಬೇಡ - ಎಂದು ಕೆಲವರು ಮೀಮಾಂಸಕರು ಅಭಿಪ್ರಾಯಪಡುತ್ತಿದ್ದರು. ದೇವಋಣ, ಋಷಿಋಣ, ಪಿತೃಋಣ - ಎಂಬ ಮೂರು ಋಣಗಳನ್ನು ತೀರಿಸಿದ ಹೊರತು ತತ್ತ್ವವಿಚಾರಕ್ಕೆ ಯಾವನೂ ಅಧಿಕಾರಿಯಾಗುವದಿಲ್ಲವೆಂದು ಕೆಲವರು ವೇದಾಂತಿಗಳು ಹೇಳುತ್ತಿದ್ದರು. ಮುಕ್ತಿಯು ಕರ್ಮದಿಂದ ಸಿದ್ಧಿಸುವದಾದರೆ ಅದು ಅನಿತ್ಯವಾಗುವದು. ಆದ್ದರಿಂದ ಕರ್ಮದಿಂದ ಮುಕ್ತಿಯೆಂಬುದು ಅಯುಕ್ತ. ಋಣತ್ರಯವನ್ನು ಹೇಳುವ ವೇದದಲ್ಲಿಯೇ ವಿರಕ್ತರಿಗೆ ಕರ್ಮತ್ಯಾಗವನ್ನೂ ಹೇಳಿರುತ್ತದೆ; ಆದ್ದರಿಂದ ಋಣತ್ರಯಶ್ರುತಿಯು ಅವಿರಕ್ತರ ವಿಷಯ - ಎಂದು ಆಚಾರ್ಯರು ಈ ಎರಡು ವಾದಗಳಿಗೂ ಸಮಾಧಾನವನ್ನು ಹೇಳಿರುತ್ತಾರೆ. ಕರ್ಮದಿಂದ ಚಿತ್ತಶುದ್ಧಿಯಾದ ಹೊರತು ವೇದಾಂತವಿಚಾರಕ್ಕೆ ಯೋಗ್ಯತೆಯಿಲ್ಲವೆಂಬ ಉಪದೇಶದ ನೆಪದಿಂದ ವೇದಾಂತವಿಚಾರದಲ್ಲಿ ತೊಡಗುವವರನ್ನೆಲ್ಲ ನಿರುತ್ಸಾಹರನ್ನಾಗಿ ಮಾಡುತ್ತಿರುವ ಈಗಿನ ಕೆಲವರ ವಾದವು ಋಣತ್ರಯವಾದಿಗಳ ಪಕ್ಷಕ್ಕೇ ಸೇರಿದ್ದಾಗಿರುವದು.

(2) ಉಪನಿಷತ್ತಿನಲ್ಲಿ **ಉಪಾಸನೆಯನ್ನೇ** ಹೇಳಿರುತ್ತದೆ; ಅದಕ್ಕೆ ಬ್ರಹ್ಮದಲ್ಲಿ ತಾತ್ಪರ್ಯವಿಲ್ಲವೆಂದು ಕೆಲವರು ಹೇಳುತ್ತಿದ್ದರು. ಅನುಷ್ಠಾನಮಾಡುತ್ತಿದ್ದರೆ ಫಲವು ತಾನೇ ಆಗುತ್ತದೆ; ವಿಚಾರವೇತಕ್ಕೆ? ಎಂದು ವಾದಿಸುತ್ತಿರುವ ಈಗಿನ ಕೆಲವರನ್ನು ಈ ಗುಂಪಿಗೆ ಸೇರಿಸಬೇಕು. ಉಪಾಸನಾದ್ಯನುಷ್ಠಾನಗಳಿಗೆ ಬೇರೆ ಫಲವಿದೆ; ಆತ್ಮಸ್ವರೂಪವು ಜ್ಞಾನದಿಂದಲೇ ಕಂಡುಕೊಳ್ಳತಕ್ಕದ್ದಾಗಿರುವದು- ಎಂದು ಸ್ಪಷ್ಟವಾಗಿ ಉಪನಿಷತ್ತುಗಳಲ್ಲಿ ಹೇಳಿರುತ್ತದೆ. ಅನೇಕ ಉಪನಿಷದ್ವಾಕ್ಯಗಳು ಬ್ರಹ್ಮಾತ್ಮನಲ್ಲಿಯೇ ಸಮನ್ವಯವಾಗುತ್ತವೆ. ಉಪನಿಷತ್ತಿನ ಮಾರ್ಗವನ್ನನುಸರಿಸಿ ಮಾಡುವ ಶ್ರವಣಮನನನಿದಿಧ್ಯಾಸನಗಳಿಂದಲೇ ಜ್ಞಾನವುಂಟಾಗುವದು- ಎಂಬುದು ಈ ಪೂರ್ವಪಕ್ಷಕ್ಕೆ ಸಮಾಧಾನವು.

(3) ಬ್ರಹ್ಮಸ್ವರೂಪವನ್ನು ಶಾಸ್ತ್ರದಲ್ಲಿ ಹೇಳಿದೆಯಾದರೂ ಬ್ರಹ್ಮೋಪಾಸನೆಯಲ್ಲಿಯೇ ಉಪನಿಷತ್ತುಗಳಿಗೆ ಮುಖ್ಯತಾತ್ಪರ್ಯ; ಉಪಾಸನೆಯಿಂದಲೇ ಅದೃಷ್ಟಫಲವುಂಟಾಗುವದು - ಎಂಬ **ಉಪಾಸನಾಂಗಬ್ರಹ್ಮವಾದಿಗಳು** ಕೆಲವರಿದ್ದರು. ಜೀವನ್ಮುಕ್ತಿಯು ಗೌಣ, ವಿದೇಹಮುಕ್ತಿಯೇ ಮುಖ್ಯಮೋಕ್ಷ - ಎನ್ನುವ ಈಗಿನ ವಾದಿಗಳು ಈ ವಾದದ ವಾಸನೆಯುಳ್ಳವರು. ಇವರೂ ಇನ್ನು ಮುಂದೆ ಹೇಳುವ ಬೇರೆಯ ವಾದಿಗಳೂ ಉಪನಿಷದ್ವಾಕ್ಯಗಳಿಗೆ ವಿಧಿಯಲ್ಲಿಯೇ ತಾತ್ಪರ್ಯವು, ಅದರ ಫಲವು ಸ್ವರ್ಗಾದಿಗಳಂತೆ ಅದೃಷ್ಟವಾದದ್ದು - ಎಂಬ ಭ್ರಾಂತಿಗೆ ಒಳಗಾಗಿರುತ್ತಾರೆ. ''**ತತ್ತ್ವಮಸಿ**'' (ಅದೇ ನೀನಾಗಿರುವೆ) ಮುಂತಾದ ವಾಕ್ಯಗಳು ಈಗಲೇ ಇಲ್ಲಿಯೇ ಇರುವ ವಸ್ತುಸ್ಥಿತಿಯನ್ನು ಬೋಧಿಸುವದರಿಂದ ಜ್ಞಾನಪ್ರಧಾನವಾಗಿರುವ ಈ ವಾಕ್ಯಗಳಿಗೆ ಮರಣಾನಂತರದ ಫಲವನ್ನು ಹೇಳುವದು ಅನ್ಯಾಯವೆಂಬುದು ಇವರಿಗೆ ಆಚಾರ್ಯರು ಕೊಡುವ ಉತ್ತರವಾಗಿರುತ್ತದೆ.

(4) ವಾಕ್ಯದಿಂದಲೇ ಜ್ಞಾನವಾಗುವದಿಲ್ಲವಾದ್ದರಿಂದ ಶಾಸ್ತ್ರಯುಕ್ತಿಗಳನ್ನು ಅಭ್ಯಾಸಮಾಡುವದರಿಂದ ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆಯಬೇಕೆಂಬ ಪ್ರಸಂಖ್ಯಾವಾದಿಗಳು ಕೆಲವರು ಹಿಂದೆ ಇದ್ದರು; ಬ್ರಹ್ಮದ ಚಿಂತನೆಯನ್ನು ನಿರಂತರ ಮಾಡುತ್ತಿದ್ದರೆ ಸಾಯುವ ಕಾಲಕ್ಕೆ ಆಗುವ ಚರಮವೃತ್ತಿಯೇ ಕೈವಲ್ಯಕ್ಕೆ ಕಾರಣವಾಗುವದೆಂದು ಈಗಲೂ ಕೆಲವರು ಹೇಳುತ್ತಿರುವರು. ಜ್ಞಾನದ ಫಲವು ಪ್ರತ್ಯಕ್ಷವಾದ್ದರಿಂದ, ಇದ್ದದ್ದನ್ನು ಇದ್ದಂತೆ ಹೇಳುವ ವಾಕ್ಯದಿಂದ ಅಧಿಕಾರಿಗೆ ಜ್ಞಾನವು ಆಗಿಯೇ ತೀರಬೇಕೆಂಬುದು ಆಚಾರ್ಯರ ಮತವಾಗಿರುತ್ತದೆ.

(5) ಕಾಮಗಳನ್ನೆಲ್ಲ ಕಳೆದುಕೊಂಡ ಹೊರತು ಮೋಕ್ಷವಾಗಲಾರದೆಂದೂ ವೇದದಲ್ಲಿ ಹೇಳಿರುವ ವಿಧಿಗಳೆಲ್ಲ **ಕಾಮವಿಲಯ**ಕ್ಕಾಗಿಯೇ ಎಂದೂ ಹೇಳುವ ಕೆಲವು ವಾದಿಗಳು ಪೂರ್ವದಲ್ಲಿದ್ದರು; ಒಂದೇ ಜನ್ಮದಲ್ಲಿ ಮುಕ್ತಿಯಾಗಲಾರದು, ''ಅನೇಕ ಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್'' - ಎಂಬಂತೆ ಬಹುಜನ್ಮಗಳಾದ ಮೇಲೆಯೇ ಮುಕ್ತಿಯು ದೊರೆತೀತು - ಎಂದು ಹೇಳುವ ಈಗಿನ ವಾದಿಗಳೂ ಈ ಗುಂಪಿಗೆ ಸೇರತಕ್ಕವರೆ. ಜ್ಞಾನವು ಯಾವಾಗಲಾದರೆ ಆ ಕೂಡಲೆ ಮುಕ್ತಿಯಾಗುವದು. ಅದಕ್ಕೆ ಇಷ್ಟೆಂಬ ಅವಧಿಯಿಲ್ಲ; ಇದು ಅನುಭವಸಿದ್ಧ.

ಜ್ಞಾನವುಂಟಾದ ಮೇಲೆ ಎಲ್ಲಾ ಕಾಮಗಳೂ ನಾಶವಾಗಿಬಿಡುವವು - ಎಂಬುದು ಆಚಾರ್ಯರ ಉತ್ತರವು.

(6) ಆತ್ಮತತ್ತ್ವವನ್ನು ಶ್ರವಣಮಾಡಿದರೂ ಪ್ರಪಂಚವು ಕಾಣಿಸುತ್ತಿರುವದರಿಂದ **ಪ್ರಪಂಚವಿಲಯವನ್ನು** ಮಾಡಿಕೊಂಡ ಮೇಲೆಯೇ ನಿಷ್ಪ್ರಪಂಚಬ್ರಹ್ಮವನ್ನು ಕಾಣಬಹುದೆಂದು ಹೇಳುವ ವಾದಿಗಳು ಮತ್ತೆ ಕೆಲವರಿದ್ದರು. ಲಯಚಿಂತನೆಯಿಂದಲೇ ಸಾಕ್ಷಾತ್ಕಾರವಾಗುವದು, ಬರಿಯ ಮಾತಿನ ಬ್ರಹ್ಮದಿಂದ ಉಪಯೋಗವಿಲ್ಲ - ಎಂದು ಈಗಲೂ ಕೆಲವರು ಹೇಳುವದುಂಟು. ಆತ್ಮತತ್ತ್ವವು ಸ್ವಭಾವದಿಂದಲೇ ನಿಷ್ಪ್ರಪಂಚವಾಗಿರುವದರಿಂದ ಅವಿದ್ಯೆಯಿಂದಲೇ ಸಪ್ರಪಂಚವಾಗಿ ಕಾಣುತ್ತಿರುವದು. ಆದ್ದರಿಂದ ಜ್ಞಾನದಿಂದಲೇ ಪ್ರಪಂಚ ಲಯವಾಗುವದು - ಎಂಬುದು ಆಚಾರ್ಯರ ಮತವು.

(7) **ಚಿತ್ತನಿರೋಧವನ್ನು** ಮಾಡಿಕೊಂಡಲ್ಲದೆ ತತ್ತ್ವವು ಗೋಚರಿಸದು, ಅವಸ್ಥಾತ್ರಯದಿಂದ ಬೇರೆಯಾಗಿದ್ದುಕೊಂಡಿರುವ ಆತ್ಮತತ್ತ್ವವನ್ನು ಅವಸ್ಥಾತ್ರಯವಾಸನೆಯನ್ನು ಲಯಮಾಡಿಕೊಳ್ಳದೆ ಕಾಣುವುದಕ್ಕೆ ಆಗಲಾರದು ಎಂದು ಹೇಳುತ್ತಿದ್ದ ವಾದಿಗಳು ಮತ್ತೊಂದು ಬಗೆಯ ಪೂರ್ವಪಕ್ಷಿಗಳು; ಈಗಲೂ ಮನೋಲಯ, ವಾಸನಾಕ್ಷಯ, ಉನ್ಮನ್ಯವಸ್ಥಾ - ಎಂಬ ಮಾತುಗಳನ್ನು ಬಳಸುತ್ತಿರುವ ಕೆಲವರು ವೇದಾಂತಿಗಳು ಅಲ್ಲಲ್ಲಿ ಕಂಡುಬರುತ್ತಿದ್ದಾರೆ. ಚಿತ್ತನಿರೋಧಾದಿಸಾಧನಗಳಿಗೂ ಫಲವುಂಟು; ಆದರೆ ಆತ್ಮಜ್ಞಾನವು ವೇದಾಂತವಿಚಾರದಿಂದಲೇ ಆಗುವದು, ಆಮೇಲೆ ಚಿತ್ತನಿರೋಧಾದಿಗಳು ತಾನೇ ಉಂಟಾಗುವವು - ಎಂಬುದು ಆಚಾರ್ಯರ ಆಶಯವಾಗಿರುತ್ತದೆ.

(8) ಜ್ಞಾನವನ್ನೂ (ಎಂದರೆ ಉಪಾಸನೆಯನ್ನೂ) ಕರ್ಮವನ್ನೂ ಸೇರಿಸಿ ಸಾಧನೆಮಾಡಿದ ಹೊರತು ಮುಕ್ತಿಯಾಗದು - ಎಂದು ಹೇಳುತ್ತಿದ್ದ **ಸಮುಚ್ಚಯವಾದಿಗಳು** ಕೆಲವರು ಇರುತ್ತಿದ್ದರು. ಕರ್ಮವನ್ನು ಮಾಡದಿದ್ದರೆ ಜ್ಞಾನಿಗೂ ಪ್ರತ್ಯವಾಯ ಬರುತ್ತದೆ, ಪ್ರಾರಬ್ಧಕರ್ಮವು ಜ್ಞಾನಿಗೂ ಬಿಟ್ಟದ್ದಲ್ಲ - ಎಂದು ಜ್ಞಾನಕ್ಕೂ ಕರ್ಮವನ್ನು ಗಂಟುಹಾಕುವದಕ್ಕೆ ಹವಣಿಸುತ್ತಿರುವ ಈಗಿನ ಕೆಲವರು ಈ ಸಮುಚ್ಚಯವಾದಿಗಳ ಗುಂಪಿಗೆ ಸೇರತಕ್ಕವರಾಗಿರುವರು.

ಉಪಾಸನೆಗಿಂತ ಬೇರೆಯಾಗಿ ಅಕರ್ತ್ರಾತ್ಮಸ್ವರೂಪವನ್ನು ಬೋಧಿಸುವ ವಾಕ್ಯಗಳೂ ಉಪನಿಷತ್ತಿನಲ್ಲಿವೆ; ಈ ಜ್ಞಾನವನ್ನುಂಟುಮಾಡುವದೇ ಉಪನಿಷತ್ತಿನ ಪರಮ ಪ್ರಯೋಜನವು. ಈ ಜ್ಞಾನವುಂಟಾದವರಿಗೆ ಕರ್ಮವೆಂಬುದೇ ಮಿಥ್ಯೆಯಾಗಿ ಬಿಡುವದರಿಂದ ಜ್ಞಾನಕರ್ಮಸಮುಚ್ಚಯವೆಂಬುದು ಯುಕ್ತ್ಯನುಭವವಿರುದ್ಧ - ಎಂಬುದು ಆಚಾರ್ಯರ ಪಕ್ಷವು.

ಆಚಾರ್ಯರು ಮೊದಲೇ ಖಂಡಿಸಿದ್ದರೂ ಅನೇಕ ಪೂರ್ವಪಕ್ಷಗಳು ಹನುಮಂತನು ಕೊಂದ ಕಾಲನೇಮಿಯಂತೆ ಮತ್ತೆ ಮತ್ತೆ ರೂಪಾಂತರವನ್ನು ವಹಿಸಿಕೊಂಡು ಬರುತ್ತಿರುವದರಿಂದ ಆಚಾರ್ಯರ ಸಿದ್ಧಾಂತವನ್ನು ಸದ್ಗುರುಗಳಿಂದ ಚೆನ್ನಾಗಿ ಶ್ರವಣಮಾಡಿ ಮನನ ಮಾಡುವದೇ ಈ ಪೂರ್ವಪಕ್ಷಗಳಿಗೆ ತುತ್ತಾಗದಿರುವದಕ್ಕೆ ಉಪಾಯವೆಂದು ಅನೇಕ ಯುಕ್ತಿಗಳಿಂದಲೂ ದೃಷ್ಟಾಂತಗಳಿಂದಲೂ ಉಪನ್ಯಾಸಕರು ಸ್ಪಷ್ಟಗೊಳಿಸಿದರು.

★★★★★

## ಭೌತಿಕ ಶಾಸ್ತ್ರವೂ ವೇದಾಂತವೂ

**22- 05-1934**

**ಶ್ರೀಶ್ರೀಗಳವರು**

ಭೌತಿಕಶಾಸ್ತ್ರಕ್ಕೂ ವೇದಾಂತಶಾಸ್ತ್ರಕ್ಕೂ ವಿರೋಧವೆಂದು ಕೆಲವರು ತಿಳಿದುಕೊಂಡಿರುತ್ತಾರೆ. ಆದರೆ ಸರಿಯಾಗಿ ನೋಡಿದರೆ, ವೇದಾಂತಶಾಸ್ತ್ರದ ವಿಚಾರಕ್ರಮವು ಭೌತಿಕಶಾಸ್ತ್ರದ ಕ್ರಮವನ್ನು ಆದಷ್ಟುಮಟ್ಟಿಗೂ ಮುಂದುವರಿಸಿರುವದೆಂದೂ ಇದರಲ್ಲಿ ಉಪದೇಶಮಾಡಿರುವ ತತ್ತ್ವಗಳು ಯಾವ ಅನುಭವಕ್ಕೂ ವಿರುದ್ಧವಲ್ಲವೆಂದೂ ಕಂಡುಬರುತ್ತದೆ. ಇದನ್ನು ಮನಗಾಣಬೇಕೆನ್ನುವವರು ಭೌತಿಕಶಾಸ್ತ್ರದ ಕ್ರಮ, ಉದ್ದೇಶ, ವ್ಯಾಪಾರ, ದೃಷ್ಟಿ - ಮುಂತಾದವುಗಳನ್ನು ವೇದಾಂತಶಾಸ್ತ್ರದಕ್ರಮವೇಮುಂತಾದವುಗಳೊಡನೆಹೋಲಿಸಿ

ನೋಡಬೇಕು. (1) ಭೌತಿಕಶಾಸ್ತ್ರವು ತನ್ನ ವಿಚಾರಕ್ಕೆ ವಿಷಯವಾಗಿರುವದನ್ನೆಲ್ಲ ಒಟ್ಟುಗೂಡಿಸಿ ತೆಗೆದುಕೊಂಡು ನಿರೀಕ್ಷಣ (Observation), ಪರೀಕ್ಷಣ (Experiment), ಸಂವಾದೀಕರಣ (Verification) ಗಳಿಂದ ತತ್ತ್ವನಿರ್ಧಾರಣಮಾಡುತ್ತದೆ. ಇದರಂತೆ ವೇದಾಂತವು ಮನುಷ್ಯಮಾತ್ರಕ್ಕೆ ಇರುವ ಅನುಭವಸ್ಥಾನಗಳಾದ ಎಚ್ಚರ, ಕನಸು, ತನಿನಿದ್ರೆ - ಎಂಬ ಮೂರು ಅವಸ್ಥೆಗಳನ್ನೂ ವಿಷಯವಾಗಿಟ್ಟುಕೊಂಡು ಅವುಗಳಲ್ಲಿ ಕಂಡುಬರುವ ಅನುಭವಗಳನ್ನು ಹೊಂದುಗಡೆಮಾಡಿ ತತ್ತ್ವದ ತೀರ್ಮಾನವನ್ನು ಮಾಡುವದರಿಂದ ವಿಷಯವನ್ನು ಆರಿಸಿಕೊಳ್ಳುವದರಲ್ಲಿ ಭೌತಿಕಶಾಸ್ತ್ರದ ಕ್ರಮವನ್ನೇ ಅನುಸರಿಸುತ್ತಿರುವದು. (2) ಭೌತಿಕಶಾಸ್ತ್ರವು ತನಗೆ ಗೋಚರವಾಗುವ ದೃಶ್ಯಗಳನ್ನು ಸಂಬಂಧಿಸುವ ಪರಮಸಾಮಾನ್ಯವನ್ನು ಕಂಡುಹಿಡಿಯುತ್ತಾ ಹೋಗುತ್ತದೆ; ವಸ್ತು, ಶಕ್ತಿ, ಪ್ರಾಣ- ಮುಂತಾದ ಆಯಾ ಶಾಸ್ತ್ರವಿಭಾಗದ ವಿಷಯವನ್ನು ತನಗೆ ತಿಳಿದಮಟ್ಟಿಗೂ ಗೌರವದೋಷವಿಲ್ಲದಂತೆ ನಿರ್ಧರಿಸಿ ಸಾಮಾನ್ಯ ನಿಯಮಗಳನ್ನು ಕಲ್ಪಿಸುತ್ತದೆ. ಇದರಂತೆ ವೇದಾಂತಶಾಸ್ತ್ರವೂ ತನ್ನ ವಿಚಾರಕ್ಕೆ ವಿಷಯವಾದ ಅವಸ್ಥಾತ್ರಯಗಳಲ್ಲಿರುವದಾಗಿಯೂ ಸಾಮಾನ್ಯವಿಶೇಷರಹಿತವಾಗಿಯೂ ಇರುವ ಪರಮಸಾಮಾನ್ಯವಾಗಿರುವ ಸಚ್ಚಿದಾನಂದ ಸ್ವರೂಪವನ್ನು ನಿರ್ಧರಿಸುತ್ತದೆ; ಸಕಲದೃಶ್ಯಗಳಿಗೂ ಈ ಸ್ವರೂಪವೇ ಮೂಲವೆಂದು ಯುಕ್ತ್ಯನುಭವಗಳಿಂದ ಈ ಶಾಸ್ತ್ರವು ಗೊತ್ತುಪಡಿಸುವದರಿಂದ ಇದರ ಕ್ರಮದಲ್ಲಿ ಮಿಕ್ಕ ಎಲ್ಲಾ ಶಾಸ್ತ್ರಗಳಿಂದಲೂ ಹೆಚ್ಚಿನ ಲಾಘವವಿರುತ್ತದೆಯೆನ್ನಬೇಕಾಗುವದು. (3) ಭೌತಿಕಶಾಸ್ತ್ರವು ತತ್ತ್ವವೊಂದನ್ನು ಗೌರವಿಸುವದೇ ಹೊರತು, ಜನರನ್ನು ಗೌರವಿಸುವದಿಲ್ಲ; ವೇದಾಂತವು ಜ್ಞಾನದಿಂದಲೆ ಮುಕ್ತಿಯೆಂದು ಸಾರುವದರಿಂದಲೂ ಜಾತಿಕುಲಧನಾದಿಗಳಲ್ಲಿ ಎಷ್ಟು ಹೆಚ್ಚಿನ ಅಂತಸ್ತಿಗೇ ಬಂದಿರಲಿ, ತತ್ತ್ವವನ್ನು ಅನುಭವದಿಂದಲೇ ಕಂಡುಕೊಳ್ಳಬೇಕಾಗಿರುವದು - ಎಂದು ಹೇಳುವದರಿಂದಲೂ ಈ ಭಾಗದಲ್ಲಿ ಭೌತಿಕಶಾಸ್ತ್ರದಂತೆಯೇ ಇರುವದು. (4) ಭೌತಿಕಶಾಸ್ತ್ರವು ಪ್ರಕೃತಿಯ ನಿಯಮವನ್ನು ಒಪ್ಪುವದೇ ಹೊರತು ಅನುಭವಕ್ಕೆ ಗೋಚರವಾಗದ ದೇವತಾದಿಗಳಲ್ಲಿ ನಂಬಿಕೆಯನ್ನಿಡುವದಿಲ್ಲ; ವೇದಾಂತಶಾಸ್ತ್ರದಲ್ಲಿ ದೇವತೆಗಳ ಆತ್ಮನು ಕೂಡ ಅಪರೋಕ್ಷನಾದ ನಮ್ಮ ಆತ್ಮನೇ ಆಗಿರುವ ಪರಮಾತ್ಮನೆಂದು ಹೇಳುವದರಿಂದ ಯಾವ ಪ್ರಕೃತಿಯ ನಿಯಮವನ್ನೂ ಉಲ್ಲಂಘಿಸಬೇಕಾದದ್ದಿರುವದಿಲ್ಲ. (5) ಭೌತಿಕಶಾಸ್ತ್ರವು ತಾನು ಸಂಪಾದಿಸಿದ ಜ್ಞಾನವನ್ನು ವ್ಯವಹಾರಕ್ಕೆ ಉಪಯೋಗಿಸುವದು. ಅನೇಕ ಕಲೆಗಳು ಈ

ಶಾಸ್ತ್ರದ ಸಹಾಯದಿಂದ ಹುಟ್ಟಿ ಬೆಳೆದುಕೊಂಡಿರುತ್ತವೆ. ತಂತಿಯ ಸಮಾಚಾರ, ವಿದ್ಯುದ್ದೀಪ, ಜಹಜು, ವಿಮಾನ - ಮುಂತಾದ ಸೌಕರ್ಯಗಳು ಈ ಶಾಸ್ತ್ರವಿಜ್ಞಾನದ ಫಲವಾಗಿರುತ್ತದೆ. ವೇದಾಂತಜ್ಞಾನವು ಕೂಡ ವ್ಯವಹಾರಕ್ಕೇ ಉಪಯೋಗವಾಗಿರುತ್ತದೆ. ಎಂಥ ಭೌತಿಕವಿಜ್ಞಾನದಿಂದ ಎಷ್ಟು ಅಭಿವೃದ್ಧಿಯನ್ನು ಪಡೆದರೂ ತಾರತಮ್ಯಜ್ಞಾನದಿಂದ ರಾಗದ್ವೇಷಾದಿಗಳು ಹೆಚ್ಚದೆ ಇರುವದಿಲ್ಲ; ಇವುಗಳ ಪರಿಹಾರಕ್ಕೆ ಯಾವ ಉಪಾಯವನ್ನೂ ಭೌತಿಕಶಾಸ್ತ್ರವು ಹೇಳಿಕೊಡುವಂತಿಲ್ಲ. ವೇದಾಂತಜ್ಞಾನವು ರಾಗಾದಿಗಳಿಂದ ಮುಕ್ತರಾಗುವ ಬಗೆಯನ್ನು ಹೇಳಿಕೊಡುವದರಿಂದ ವ್ಯವಹಾರಕ್ಕೆ ಅತ್ಯಂತ ಉಪಯೋಗವಾಗಿರುವದು. ಕಾವ್ಯ, ಸಂಗೀತ, ಶಿಲ್ಪ, ಚಿತ್ರ, ಮುಂತಾದ ಅನೇಕ ಕಲೆಗಳು - ಈ ಶಾಸ್ತ್ರದ ಆಧಾರದಿಂದ ಕಳೆಗೊಂಡಿರುತ್ತವೆ. ಮನುಷ್ಯರಿಗೆಲ್ಲ ಬೇಕಾಗಿರುವ ಆನಂದವನ್ನೂ ಶಾಂತಿಯನ್ನೂ ಪಡೆಯುವ ಬಗೆಯನ್ನೂ ಈ ಶಾಸ್ತ್ರವು ತಿಳಿಸಿಕೊಡುತ್ತದೆ. ಆದರೆ ಈ ಆನಂದವನ್ನು ಯಾರೊಬ್ಬರೂ ತಮತಮಗೇ ಎಂದು ಬಚ್ಚಿಟ್ಟುಕೊಳ್ಳುವದಕ್ಕೆ ಆಗುವದಿಲ್ಲವಾದ್ದರಿಂದ ಇದರ ವಿಷಯದಲ್ಲಿ ರಾಗದ್ವೇಷಾದಿಗಳು ಉಂಟಾಗುವದಕ್ಕೆ ಸ್ವಲ್ಪವೂ ಅವಕಾಶವಿರುವದಿಲ್ಲ. (6) ಹೀಗೆ ಭೌತಿಕಜ್ಞಾನದ ಕ್ರಮಾದಿಗಳನ್ನೇ ವೇದಾಂತವು ಉಪಯೋಗಿಸಿ ಅದನ್ನು ಪೂರ್ಣಗೊಳಿಸುತ್ತದೆಯಲ್ಲದೆ ಇದರಲ್ಲಿ ಮತ್ತೊಂದು ಹೆಚ್ಚುಗ್ಗಾರಿಕೆಯುಂಟು. ಅದೇನೆಂದರೆ: (ಕ) ಭೌತಿಕ ವಿಜ್ಞಾನವು ಕಾಲದೊಳಗೆ ಹುಟ್ಟುವದು, ಕಾಲಕ್ಕೆ ತಕ್ಕಂತೆ ಮಾರ್ಪಡುವದು, ಇದರಲ್ಲಿ ಕೊನೆಯ ನಿರ್ಣಯವೆಂಬುದು ಆಗುವಂತಿರುವದಿಲ್ಲ; ಆದರೆ ವೇದಾಂತಜ್ಞಾನವು ಕಾಲಾತೀತವಾಗಿರುವದು, ಎಚ್ಚರ ಕನಸುಗಳಲ್ಲಿ ಮಾತ್ರ ಕಾಲವಿರುವದರಿಂದಲೂ ಆತ್ಮತತ್ತ್ವವು ಅವಸ್ಥಾತ್ರಯಾತೀತವಾಗಿರುವದರಿಂದಲೂ ಇದು ಮುಂದಿನ ಕಾಲಕ್ಕೆ ಮಾರ್ಪಡಬಹುದೆಂಬ ಶಂಕೆಯಿರುವದಿಲ್ಲ. ಆದ್ದರಿಂದ ವೇದಾಂತವೇ ನಿಜವಾದ ಶಾಸ್ತ್ರವು. (ಖ) ಭೌತಿಕಶಾಸ್ತ್ರದ ವಿಜ್ಞಾನದಿಂದ ಮೇಲೆ ಹೇಳಿದಂತೆ ಜನಗಳು ಮುಂದಕ್ಕೆ ಬಂದ ಹಾಗೆ ವಾಣಿಜ್ಯಾದಿಗಳನ್ನು ಪ್ರಾರಂಭಿಸಿ ಒಬ್ಬರನ್ನೊಬ್ಬರು ವಂಚಿಸುತ್ತಾ ಕೊನೆಗೆ ಘೋರವಾದ ಯುದ್ಧಾದಿಗಳಿಗೆ ಮೊದಲುಮಾಡುವರು. ಆದರೆ ವೇದಾಂತದ ದುರುಪಯೋಗಕ್ಕೆ ಎಂದಿಗೂ ಅವಕಾಶವಿಲ್ಲ. ಯೋಗಿಗಳು, ಸಾಧುಗಳು - ಎಂಬ ಹೆಸರನ್ನಿಟ್ಟುಕೊಂಡು ಕೆಲವರು ಜನರನ್ನು ಮರಳುಗೊಳಿಸುವದೇನೊ ನಿಜ; ಆದರೆ ಅವರು ವೇದಾಂತಿಗಳಲ್ಲ, ಅವರಿಗೆ

ವೇದಾಂತಜ್ಞಾನವಿಲ್ಲದ್ದರಿಂದಲೇ ಅವರು ಅಂಥ ಹೆಮ್ಮೆಯ, ಜಂಭದ, ವಂಚನೆಯ ಕಾರ್ಯಕ್ಕೆ ಕೈ ಹಾಕುತ್ತಾರೆ. ವೇದಾಂತಜ್ಞಾನವು ಲೋಕದಲ್ಲಿ ಹರಡಿ ಈ ಶಾಸ್ತ್ರದ ದೃಷ್ಟಿಯು ಹೆಚ್ಚು ಜನರಿಗೆ ಬಂದರೆ ಹೇಗಾಗುವದೆಂಬುದನ್ನು ಒಂದು ಶ್ಲೋಕದಿಂದ ವರ್ಣಿಸಬಹುದು:

**ಸಂಪೂರ್ಣಂ ಜಗದೇವ ನನ್ದನವನಂ ಸರ್ವೇಽಪಿ ಕಲ್ಪದ್ರುಮಾಃ**
**ಗಾಙ್ಗಂ ವಾರಿ ಸಮಸ್ತವಾರಿನಿವಹಃ ಪುಣ್ಯಾಃ ಸಮಸ್ತಾಃ ಕ್ರಿಯಾಃ ।**
**ವಾಚಃ ಪ್ರಾಕೃತಸಂಸ್ಕೃತಾಃ ಶ್ರುತಿಶಿರೋ ವಾರಾಣಸೀ ಮೇದಿನೀ**
**ಸರ್ವಾವಸ್ಥಿತಿರಸ್ಯ ವಸ್ತುವಿಷಯಾ ದೃಷ್ಟೇ ಪರಬ್ರಹ್ಮಣಿ ॥**

ಪರಮಾತ್ಮನ ಸಾಕ್ಷಾತ್ಕಾರವಾದಾಗ ಇಡಿಯ ಜಗತ್ತೇ ನಂದನವನವಾಗಿರುವದು, ಭೂಮಿಯ ಮರಗಳೆಲ್ಲವೂ ಕಲ್ಪವೃಕ್ಷಗಳಾಗಿರುವವು; ಎಲ್ಲಾ ನೀರೂ ಗಂಗಾಜಲವಾಗಿರುವದು, ಮಾಡುವ ಕೆಲಸಗಳೆಲ್ಲವೂ ಪುಣ್ಯಕರ್ಮಗಳಾಗಿರುವವು; ಸಂಸ್ಕೃತಪ್ರಾಕೃತಭಾಷೆಗಳ ಮಾತುಗಳೆಲ್ಲವೂ ವೇದಾಂತವಚನಗಳಾಗಿರುವವು; ನೆಲವೆಲ್ಲವೂ ವಾರಣಾಸೀಕ್ಷೇತ್ರವಾಗಿರುವದು; ಜ್ಞಾನಿಯ ಸ್ಥಿತಿಯೆಲ್ಲ ಆತ್ಮವಸ್ತುವಿನನುಭವವೇ ಆಗಿರುವದು.

★★★★★

# ಸಂಪ್ರದಾಯ

**24-5-1934**

**ಶ್ರೀಶ್ರೀಗಳವರು**

ಸಂಪ್ರದಾಯವೆಂಬ ಮಾತಿಗೆ 'ಚೆನ್ನಾಗಿ ಕೊಟ್ಟದ್ದು' ಎಂದರ್ಥವಾಗುವದು; ಆದ್ದರಿಂದ ಗುರುವು ಶಿಷ್ಯನಿಗೆ, ಆ ಶಿಷ್ಯನು ತನ್ನ ಶಿಷ್ಯನಿಗೆ- ಹೀಗೆ ಪರಂಪರೆಯಿಂದ ಕೊಟ್ಟುಕೊಂಡುಬಂದಿರುವ ಸರಿಯಾದ ತಿಳಿವಳಿಕೆಯೇ ಸಂಪ್ರದಾಯಾಗತವೆನಿಸುವದು. ಬಹುಕಾಲದಿಂದ ನಡೆದುಕೊಂಡುಬಂದಿರುವ

ತಿಳಿವಳಿಕೆಯು ಕಾಲದ ಹೊಡೆತವನ್ನು ತಡೆದುಕೊಂಡು ನಿಂತಿರುವದೆಂಬುದರ ಮೇಲೆ ಅದಕ್ಕೆ ಗೌರವವನ್ನು ಕೊಡುವದು ಜನರಲ್ಲಿ ಸ್ವಾಭಾವಿಕವಾಗಿರುತ್ತದೆ. ಇತ್ತೀಚೆಗೆ ಲೌಕಿಕವಿಚಾರಗಳಲ್ಲಿ ಹೊಸದೆಂದರೆ ಗೌರವ ಹೆಚ್ಚಾಗಿರುವದು; ಆದರೆ ಪರಲೋಕವಿಚಾರದಲ್ಲಿ ಮಾತ್ರ ಪರೀಕ್ಷೆಮಾಡುವಷ್ಟು ಕಾಲ ನಿಂತಿರುವ ಸಂಪ್ರದಾಯದ ಮತಕ್ಕೇ ಹೆಚ್ಚು ಪ್ರಾಶಸ್ತ್ಯವಿರುವದು.

ಇಂಥ ಸಂಪ್ರದಾಯಗಳು ಬಹಳವಾದಾಗ ಯಾವದು ಸರಿಯಾದ ಸಂಪ್ರದಾಯ?- ಎನ್ನುವ ಸಂದೇಹವು ಬಂದೊದಗುತ್ತದೆ. ಆಯಾ ಮತಗಳು ಮಂತ್ರಗಳು, ದೀಕ್ಷೆಗಳು, ಆಚಾರಗಳು, ಸಂಪ್ರದಾಯಾಗತವಾಗಿಯೇ ಬಂದಿರುವೆಂದು ಆಯಾ ಆಚಾರ್ಯರು ಹೇಳಿಕೊಳ್ಳುತ್ತಿದಾರೆ; ಈ ಅಧಿಕಾರದಿಂದ ಬೇರೆಯವರನ್ನು ಮತಾಂತರಗೊಳಿಸುತ್ತಿದಾರೆ, ಜನರಿಗೆ ಉಪದೇಶಮಾಡುತ್ತಿದಾರೆ, ಪಂಡಿತರೊಡನೆ ವಾಕ್ಯಾರ್ಥಮಾಡುತ್ತಿದಾರೆ. ಈ ಸಂಪ್ರದಾಯಗಳಲ್ಲಿ ಯಾವದು ಸರಿ?- ಎಂದರೆ ಕೆಲವರು ''ಒಂದು ಊರಿಗೆ ಅನೇಕ ಹಾದಿಗಳಿರಬಹುದು; ಇದರಂತೆ ಕಾಲಾನುಸಾರವಾಗಿ ಅನೇಕ ಬೋಧೆಗಳಾಗಿರಬಹುದು. ಆದ್ದರಿಂದ ಎಲ್ಲವೂ ಸರಿಯಾದ ಮಾರ್ಗವೇ'' ಎಂದು ಸಮಾಧಾನ ಹೇಳುತ್ತಾರೆ. ಆದರೆ ಈ ಉತ್ತರವು ಎಷ್ಟರಮಟ್ಟಿಗೇ ಸರಿಯಾಗಿರಲಿ ಬೇರೆಬೇರೆ ಕಾಲಗಳಲ್ಲಿ ಹುಟ್ಟಿದರಿಂದ ಯಾವ ಸಂಪ್ರದಾಯವು ಸತ್ಸಂಪ್ರದಾಯವು?- ಎಂಬುದನ್ನು ವಿಚಾರಿಸುವದು ಯುಕ್ತವಾಗಿರುತ್ತದೆ.

ಶ್ರೀಶಂಕರಭಗವತ್ಪಾದರೂ ಅವರ ಹಿಂದಿನ ಮತ್ತು ಅವರ ಕಾಲದ ವೇದಾಂತದ ಆಚಾರ್ಯರೂ ಅದ್ವೈತಿಗಳೇ ಆಗಿದ್ದರು. ಇವರೆಲ್ಲರೂ ತಮ್ಮ ತಮ್ಮ ಉಪದೇಶವು ಉಪನಿಷತ್ಕಾಲದಿಂದಲೂ ಸಂಪ್ರದಾಯಾಗತವಾಗಿ ರುವದೆಂದೇ ಹೇಳಿಕೊಳ್ಳುತ್ತಿದ್ದರು. ಈ ಹಕ್ಕಿನ ಮೇಲೆ ತಮ್ಮ ತಮ್ಮ ಮತವೇ ಸರಿಯಾದದ್ದೆಂದು ಸ್ಥಾಪನೆಮಾಡುವದಕ್ಕೂ ಹೊರಟಿದ್ದರು. ಪೂಜ್ಯಪಾದರಾದ ಶ್ರೀಶಂಕರಾಚಾರ್ಯರವರೂ ಸಂಪ್ರದಾಯವನ್ನು ಗೌರವಿಸಿರುತ್ತಾರೆ: ತಮ್ಮ ಮತವು ಬ್ರಹ್ಮಾದಿವಂಶಋಷಿಗಳಿಂದ ಬಂದದ್ದೆಂದು ಹೇಳಿರುತ್ತಾರೆ. ಸಂಪ್ರದಾಯವಿಲ್ಲದವನು ಸರ್ವಶಾಸ್ತ್ರವನ್ನು ತಿಳಿದಿದ್ದರೂ ಮೂರ್ಖನಂತೆ ಉಪೇಕ್ಷಿಸತಕ್ಕವನೆಂದಿರುತ್ತಾರೆ. ಆದರೆ ಅವರು ಹೇಳಿರುವ ಸಂಪ್ರದಾಯಕ್ಕೂ

ಮಿಕ್ಕವರು ಒಪ್ಪಿರುವ ಸಂಪ್ರದಾಯಕ್ಕೂ ಒಂದು ಮುಖ್ಯವಾದ ತಾರತಮ್ಯವಿದೆ. ಅವರು ಹೇಳುವದೇನೆಂದರೆ: ಪರಲೋಕಫಲವನ್ನು ಕೊಡುವ ಧಾರ್ಮಿಕವಿಚಾರದಲ್ಲಿ ಗುರುಗಳು, ಆಚಾರ್ಯರು, ಸಾಧುಗಳು, ಯೋಗಿಗಳು-ಮೊದಲಾದವರು ಉಪದೇಶಿಸಿದ ಅರ್ಥವನ್ನು ಶ್ರದ್ಧೆಯಿಂದ ಗ್ರಹಿಸುವದು. ಸಾಧನಮಾಡುವದು- ಇಷ್ಟೇ ಮುಖ್ಯವಾಗಿರುವದರಿಂದ ಆ ವಿಷಯದಲ್ಲಿ ಅನೇಕ ಸಂಪ್ರದಾಯಗಳಿರಬಹುದಾಗಿದೆ; ಆಯಾ ಸಂಪ್ರದಾಯದವರಿಗೆ ಆಯಾ ಉಪದೇಶಗಳಿಂದ ಫಲಗಳೂ ಒದಗಬಹುದಾಗಿದೆ. ಆದರೆ ತತ್ತ್ವಪ್ರಧಾನವಾದ ವೇದಾಂತವಿಚಾರದಲ್ಲಿ ಹೀಗಿಲ್ಲ. ಇಲ್ಲಿ ಬೋಧೆಯ ಸಂಪ್ರದಾಯವೇ ಹೊರತು ಹಕ್ಕಿನ ಸಂಪ್ರದಾಯವಿರುವದಿಲ್ಲ. ಗುರು ಹೇಳಿದಂತೆ ಅಧಿಕಾರಿಯಾದ ಶಿಷ್ಯನಿಗೆ ಜ್ಞಾನವಾಗಬೇಕು; ಆಗಲೇ ಗುರುವಿಗೆ ಗುರುತ್ವವು ದಕ್ಕುವದು. ಈ ಬಗೆಯ ಸಂಪ್ರದಾಯವನ್ನು ಮುಂದಕ್ಕೆ ಹಿಡಿದವರು ಮುಖ್ಯವಾಗಿ ಶ್ರೀಗೌಡಪಾದಚಾರ್ಯರು, ಮತ್ತು ಅವರ ಪ್ರಶಿಷ್ಯರಾದ ಶಂಕರಭಗವತ್ಪಾದರು; ಮಿಕ್ಕವರೆಲ್ಲ ಶ್ರದ್ಧಾಸಂಪ್ರದಾಯಿಗಳಾಗಿರುತ್ತಾರೆ.

ಸತ್ಸಂಪ್ರದಾಯಕ್ಕೆ ಒರೆಗಲ್ಲೇನೆಂದರೆ; ಅದು ಯುಕ್ತಿಗೆ ಹೊಂದಬೇಕು. ಅನುಭವಕ್ಕೆ ಹೊಂದಬೇಕು; ಶಿಷ್ಯನನ್ನು ಮೊದಲಿಗಿಂತ ಹೆಚ್ಚಿನ ಅಂತಸ್ತಿಗೆ ಒಯ್ಯುವಂತಿರಬೇಕು, ಆ ಜ್ಞಾನದಿಂದ ಪ್ರಯೋಜನವಿರಬೇಕು. ಇಂಥ ಸಂಪ್ರದಾಯವೇ ಸಂಪ್ರದಾಯವು. **''ಅಹಂ ಬ್ರಹ್ಮಾಸ್ಮಿ'', ''ತತ್ತ್ವಮಸಿ'', ''ಬ್ರಹ್ಮೈವೇದಂ ವಿಶ್ವಮ್''**- ಎಂದು ಅದ್ವೈತಿಗಳೆಲ್ಲರೂ ಹೇಳುತ್ತಿದಾರೆ; ಇವು ಉಪನಿಷತ್ತುಗಳಲ್ಲಿರುವ ವಾಕ್ಯಗಳೂ ಆಗಿವೆ. ಆದರೆ ಅವಸ್ಥಾತ್ರಯದೃಷ್ಟಿಯಿಂದ ಪರೀಕ್ಷಿಸಿದರೆ ಜಗತ್ತು ನಾಮರೂಪಗಳ ತೋರಿಕೆಯ ರೂಪದಿಂದ ಮಿಥ್ಯೆಯಾಗಿರುವದೆಂದೂ, ಇದಕ್ಕೆ ಸಾಕ್ಷಿಯಾಗಿರುವ ಆತ್ಮನು ನಿತ್ಯಶುದ್ಧಬುದ್ಧಮುಕ್ತ ಸ್ವಭಾವನಾಗಿಯೂ ಅದ್ವಿತೀಯನಾಗಿಯೂ ಇರುವನೆಂದೂ ಹೊರಗೆ ತೋರುವ ಜಗತ್ತು ಕೂಡ ಆತನ ವಿಭೂತಿಯೇ ಎಂದೂ ವ್ಯಕ್ತವಾಗುತ್ತದೆ. ಹೀಗೆ ನಾವೆಲ್ಲರೂ ಸರ್ವಸಂಸಾರವಿಮುಕ್ತವಾದ ನಿಷ್ಪ್ರಪಂಚವಾದ ಬ್ರಹ್ಮಸ್ವರೂಪರೆಂಬುದು ಅನಾದಿಸಂಪ್ರದಾಯದಿಂದ ಉಪನಿಷದೃಷಿಗಳ ಕಾಲದಿಂದಲೂ ಗುರು

ಶಿಷ್ಯಪರಂಪರೆಯಿಂದ ಬಂದಿರುವದೆಂದೂ ಈಗಲೂ ಉಪನಿಷತ್ತುಗಳಲ್ಲಿ ಹೇಳಿರುವ ಅವಸ್ಥಾದೃಷ್ಟಿಯನ್ನವಲಂಬಿಸಿ ಇದನ್ನು ಮನಗಂಡು ಸರ್ವಾನರ್ಥಗಳಿಂದಲೂ ಬಿಡುಗಡೆಯನ್ನು ಹೊಂದಬಹುದೆಂದೂ ಬೋಧಿಸುವದರಿಂದ ಶ್ರೀ ಶಂಕರಭಗವತ್ಪಾದರ ಬೋಧೆಯನ್ನು ನಿಸ್ಸಂದೇಹವಾಗಿ ಸಂಪ್ರದಾಯಾಗತವೆನ್ನ ಬಹುದಾಗಿರುತ್ತದೆ.

★★★★★

## ಶಂಕರರಾಮಾನುಜದರ್ಶನಗಳು

**8-5-1935**

**ಶ್ರೀ ಶ್ರೀಗಳವರು**

ಶ್ರೀರಾಮಾನುಜಾಚಾರ್ಯರ ದರ್ಶನಕ್ಕೆ ವಿಶಿಷ್ಟಾದ್ವೈತವೆಂದು ಹೆಸರು. ಶ್ರೀಶಂಕರಾಚಾರ್ಯರ ದರ್ಶನವು ಅದ್ವೈತವೆನಿಸುವದು. ಈ ಎರಡರಲ್ಲಿಯೂ 'ಅದ್ವೈತ'ವೆಂಬ ಹೆಸರಿದ್ದರೂ ಸಿದ್ಧಾಂತದ ಸ್ವರೂಪದಲ್ಲಿ ಇವೆರಡಕ್ಕೂ ತುಂಬ ತಾರತಮ್ಯವಿರುತ್ತದೆ. ಚಿತ್, ಅಚಿತ್- ಇವುಗಳೆರಡೂ ಅತ್ಯಂತಭಿನ್ನವಾದ ತತ್ತ್ವಗಳೆಂದೂ ಇವುಗಳೊಂದೊಡಗೂಡಿದ್ದಾಗಿಯೂ ಇವೆರಡಕ್ಕಿಂತಲೂ ಅತ್ಯಂತವಿಲಕ್ಷಣವಾಗಿಯೂ ಇರುವ ಚೈತನ್ಯವು ಒಂದೇ ಎಂಬುದನ್ನು ವಿಶಿಷ್ಟಾದ್ವೈತವೆಂಬ ಮಾತು ತಿಳಿಸುವದು. ಈ ಮತದಲ್ಲಿ ಚಿತ್ತು, ಅಚಿತ್ತು, ಚೈತನ್ಯ- ಈ ಮೂರೂ ನಿಜವಾಗಿಯೇ ಬೇರೆಯಾಗಿರುವವು. ಆದರೆ ಅದ್ವೈತಸಿದ್ಧಾಂತದಲ್ಲಿ ಹಾಗಲ್ಲ. ಚಿತ್ತಿಗಿಂತ ಬೇರೆಯಾಗಿ ಚೈತನ್ಯವೆಂಬುದೊಂದಿಲ್ಲ; ಬ್ರಹ್ಮಚೈತನ್ಯವು ಯಾವಾಗಲೂ ಶುದ್ಧವಾಗಿಯೇ ಎಂದರೆ ಎರಡನೆಯದರ ಸೋಂಕು ಇಲ್ಲದೆಯೇ ಇದ್ದರೂ ಅಧ್ಯಾಸದಿಂದ ಎಂದರೆ ತಪ್ಪುತಿಳಿವಳಿಕೆಯಿಂದ ಇದರಲ್ಲಿ ಅಚಿತ್ತಿನ ಸಂಬಂಧವಿರುವಂತೆ ತೋರುತ್ತಿರುವದು. ನಿಜವಾಗಿ ಚೈತನ್ಯವೊಂದೇ ಪರಮಾರ್ಥವು - ಎಂಬುದು ಈ ಸಿದ್ಧಾಂತದ ಸಾರವಾಗಿರುತ್ತದೆ.

ಈ ಎರಡು ಆಚಾರ್ಯರವರ **ಅಭ್ಯುಪಗಮಗಳು** ಬೇರೆಬೇರೆಯಾಗಿಯೇ ಇರುತ್ತವೆ. ಶ್ರೀರಾಮಾನುಜಾಚಾರ್ಯರವರು ಪ್ರತ್ಯಕ್ಷ, ಅನುಮಾನ, ಆಗಮ ಎಂಬ ಮೂರು ಪ್ರಮಾಣವನ್ನು ಒಪ್ಪಿರುತ್ತಾರೆ; ಆಗಮದಿಂದಲೇ ಎಂದರೆ ಶಾಸ್ತ್ರದಿಂದಲೇ ಈಶ್ವರತತ್ತ್ವವನ್ನು ಸಿದ್ಧಮಾಡಬೇಕೆಂದು ಹೇಳುತ್ತಾರೆ. ''ಈಶ್ವರನು ಸಕಲಕಲ್ಯಾಣಗುಣಗಳಿಂದ ಕೂಡಿದವನು, ಯಾವ ದೋಷವೂ ಇಲ್ಲದವನು, ಸತ್ಯಸಂಕಲ್ಪನು- ಎಂಬುದಕ್ಕೆ ಶಾಸ್ತ್ರವೇ ಪ್ರಮಾಣವು''- ಎಂಬುದು ರಾಮಾನುಜರ ಅಭ್ಯುಪಗಮವು. ಶ್ರೀಶಂಕರಸಿದ್ಧಾಂತದಲ್ಲಿ ಹಾಗಲ್ಲ. ಪ್ರಮಾಣ ಪ್ರಮೇಯವಿಭಾಗವು ವ್ಯವಹಾರಕ್ಕೆ ಸಾಕಾಗಿದ್ದರೂ ಪರಮಾರ್ಥವನ್ನು ಕಂಡುಹಿಡಿಯುವದಕ್ಕೆ ಹೊರಟಾಗ ಪ್ರಮಾಣಪ್ರಮೇಯವ್ಯವಹಾರವೇ ಒಂದಾನೊಂದು ಅಧ್ಯಾಸದಿಂದ- ಎಂದರೆ ತಪ್ಪುತಿಳಿವಿನಿಂದ- ಆಗಿರುವದೆಂದು ಹೊಳೆಯುತ್ತದೆ. ಅದು ಹೇಗೆಂದರೆ ದೇಹವನ್ನು ತಾನೆಂದೂ ಇಂದ್ರಿಯಗಳನ್ನು ತನ್ನವೆಂದೂ ತಿಳಿಯದಿದ್ದವನು ಪ್ರಮಾತೃ (ಅರಿಯುವವನು) ಆಗಲಾರನು; ಪ್ರಮಾತೃವಿನ ಆಶ್ರಯವಿಲ್ಲದ ಪ್ರಮಾಣಗಳು ಕೆಲಸಮಾಡಲಾರವು. ಆದರೆ ದೇಹವನ್ನು ತಾನೆಂದೂ ಇಂದ್ರಿಯಗಳನ್ನು ತನ್ನವೆಂದೂ ತಿಳಿಯುವದು ಸರಿಯಲ್ಲವೆಂದು ಎಲ್ಲರೂ ಒಪ್ಪಬೇಕಾಗಿರುತ್ತದೆ; ಏಕೆಂದರೆ ದೇಹಾದಿಗಳು ತನಗೆ ವಿಷಯವಾಗಿರುತ್ತವೆ, ತಾನು ಚೈತನ್ಯರೂಪನಾದ ವಿಷಯಿಯಾಗಿರುತ್ತಾನೆ, ಈ ಕಾರಣದಿಂದ ಪ್ರಮಾಣಪ್ರಮೇಯವ್ಯವಹಾರವೇ ಅವಿದ್ಯಕವಾಗಿರುವದರಿಂದ ಬ್ರಹ್ಮವು ಪ್ರಮಾಣಸಿದ್ಧವೆನ್ನುವುದು ಸರಿಯಲ್ಲ; ಬ್ರಹ್ಮವು ನಮ್ಮೆಲ್ಲರಿಗೂ ಆತ್ಮನಾಗಿಯೇ ಇರುವದರಿಂದಲೂ ಆತ್ಮನನ್ನು ಇಲ್ಲವೆಂದು ಅರಿಯುವದೇ ಅಸಾಧ್ಯವಾಗಿರುವದರಿಂದಲೂ ಬ್ರಹ್ಮವು ಪ್ರಮಾಣಗಳ ಅಪೇಕ್ಷೆಯಿಲ್ಲದೆ ಸ್ವತಃ ಸಿದ್ಧವಾಗಿರುವದು. ಇದೇ ಕಾರಣದಿಂದ ಬ್ರಹ್ಮವು ಶಾಸ್ತ್ರವು ಬ್ರಹ್ಮಾತ್ಮನಲ್ಲಿಲ್ಲದ ಧರ್ಮಗಳನ್ನು ಬೇರ್ಪಡಿಸಿ ತೋರಿಸಿ ಸ್ವತಃಸಿದ್ಧವಾದ ಆತ್ಮಸ್ವರೂಪವನ್ನು ನಮಗೆ ನೆನಪಿಗೆ ತಂದುಕೊಡುವದರಿಂದ ಶಾಸ್ತ್ರಪ್ರಮಾಣದಿಂದ ಬ್ರಹ್ಮವು ತಿಳಿಯಬರುವದೆಂಬ ವ್ಯವಹಾರವುಂಟಾಗಿರುವದು. ಶಾಸ್ತ್ರದಿಂದ ಬ್ರಹ್ಮವನ್ನು ತಿಳಿದುಕೊಂಡವನು ಜ್ಞಾತೃಜ್ಞೇಯಾದಿಭೇದವೇ ಅಪರಮಾರ್ಥವೆಂಬುದನ್ನು ಮನಗಾಣುತ್ತಾನೆ- ಎಂಬುದು ಶಂಕರರ ಮತವು.

ಶ್ರೀರಾಮಾನುಜರ ಅಭಿಪ್ರಾಯದಲ್ಲಿ ಚಿತ್ ಎಂಬ ಶಬ್ದದಿಂದ ಕರೆಯಲ್ಪಡುವ ಜೀವರು ಅನೇಕ; ಅವರು ಜ್ಞಾತೃಗಳು ಎಂದರೆ ವಿಷಯವನ್ನು ಜ್ಞಾನದಿಂದ ಅರಿಯುವವರು, ಜ್ಞಾನವು ಅವರ ಧರ್ಮವಾಗಿರುವದು, ಇದು ದೀಪದ ಬೆಳಕಿನ ಹಾಗೆ ಸಂಕೋಚವಿಕಾಸಗಳುಳ್ಳದ್ದು, ಜೀವರು ನಾನು ಎಂಬ ಅರಿವಿಗೆ ಗೋಚರರಾದವರು, ಪಾಪಪುಣ್ಯಗಳನ್ನು ಮಾಡುವವರು, ಅವಸ್ಥಾತ್ರಯವನ್ನೂ ಲೋಕಾಂತರಜನ್ಮಾಂತರಗತಿಗಳನೂ ಪಡೆಯುಕ್ಕವರು, ಎಡೆಬಿಡದೆ ಪರಮಾತ್ಮನ ಉಪಾಸನೆಯನ್ನು ಮಾಡಿದರೆ ಮುಕ್ತಿಯನ್ನು ಪಡೆಯತಕ್ಕವರು. ಶಂಕರಮತದಲ್ಲಿ ಜೀವರು ವ್ಯವಹಾರದಲ್ಲಿ ಅನೇಕರು, ಕರ್ತೃಭೋಕ್ತೃಸ್ವರೂಪರು, ಅವಸ್ಥಾವಂತರು ಲೋಕಾಂತರಜನ್ಮಾಂತರವನ್ನು ಹೊಂದುವರು. ಹೀಗಿದ್ದರೂ ಪರಮಾರ್ಥದಲ್ಲಿ ಇವರು ಪರಮಾತ್ಮಚೈತನ್ಯಕ್ಕಿಂತ ಬೇರೆಯಾಗಿರುವದೇ ಇಲ್ಲ ಇವರಲ್ಲಿ ತೋರುವ ಅನೇಕತ್ವ, ಕರ್ತೃತ್ವಭೋಕ್ತೃತ್ವಾದಿಗಳೆಲ್ಲ ಮೇಲೆ ಹೇಳಿದ ಅತ್ಮಾನಾತ್ಮಗಳ ಅಧ್ಯಾಸರೂಪವಾದ ಅವಿದ್ಯೆಯಿಂದ ಕಾಣುತ್ತಿರುವವು. ಆದ್ದರಿಂದ ಸರಿಯಾದ ಜ್ಞಾನವನ್ನು ಸಂಪಾದಿಸಿಕೊಂಡರೆ ಅಷ್ಟರಿಂದಲೇ ಸ್ವರೂಪ ಪ್ರಾಪ್ತಿಯೆಂಬ ಮುಕ್ತಿಯಾಗಿ ಬಿಡುತ್ತದೆ.

ಶ್ರೀರಾಮಾನುಜ ಸಿದ್ಧಾಂತದಲ್ಲಿ 'ಅಚಿತ್' ಎಂಬ ಹೆಸರಿನಿಂದ ಕರೆಯಲ್ಪಡುವ ಜಡವಸ್ತುವು ಶಬ್ದಾದಿಗುಣಗಳಿಂದ ಕೂಡುವಿಕೆ, ಕೂಡದಿರುವಿಕೆ – ಎಂಬ ಎರಡು ಸ್ಥಿತಿಗಳುಳ್ಳದ್ದು. ಇದನ್ನೇ ಜಡವಸ್ತುವಿನ ಸ್ಥೂಲಸ್ಥಿತಿಯೆಂದೂ ಸೂಕ್ಷ್ಮ ಸ್ಥಿತಿಯೆಂದೂ ಕರೆಯುವರು ಚಿತ್ತತ್ತ್ವವು ತನ್ನ ಸ್ವರೂಪದಲ್ಲಿ ಯಾವ ಮಾರ್ಪಾಡನ್ನೂ ಹೊಂದುವದಿಲ್ಲವಾದರೂ ಅದರ ಧರ್ಮವಾದ ಜ್ಞಾನಕ್ಕೆ ಮೇಲೆ ಹೇಳಿದಂತೆ ಸಂಕೋಚವಿಕಾಸಗಳುಟಾದ್ದರಿಂದ ಆ ಮೂಲಕ ಅದೂ ಸ್ಥೂಲಸೂಕ್ಷ್ಮ ರೂಪಗಳನ್ನು ಪಡೆಯುವದು ಬ್ರಹ್ಮಚೈತನ್ಯದ ಅಧೀನದಲ್ಲಿ ಈ ಚಿದಚಿತ್ತುಗಳು ಯಾವಾಗಲೂ ಇರುವದರಿಂದಲೂ ಬ್ರಹ್ಮಚೈತನ್ಯದ ಭೋಗಕ್ಕೆ ಇವು ಶರೀರದಂತೆ ಉಪಕರಣವಾಗಿರುವದರಿಂದಲೂ ಚಿದಚಿತ್ತುಗಳೆರಡೂ ಬ್ರಹ್ಮದ ಶರೀರವೆನಿಸುವವು. ಹೀಗೆ ಸೂಕ್ಷ್ಮರೂಪವಾದ ಚಿದಚಿತ್ತುಗಳಿಂದೊಡಗೂಡಿದ ಬ್ರಹ್ಮವು ಸ್ಥೂಲರೂಪವಾದ ಚಿದಚಿತ್ತುಗಳಾಗಿ ಮಾರ್ಪಡುವದೇ ಬ್ರಹ್ಮದ

ಜಗತ್ಕಾರಣತ್ವವೆನಿಸುವದು. ಈ ಮಾರ್ಪಾಡಿನಿಂದ ಬ್ರಹ್ಮದ ಸ್ವರೂಪದಲ್ಲಿ ಮಾತ್ರ ಯಾವ ವಿಕಾರವೂ ಆಗುವದಿಲ್ಲ. ಇದಿಷ್ಟೂ ರಾಮಾನುಜ ಮತದ. ಶ್ರೀಶಂಕರಸಿದ್ಧಾಂತದಲ್ಲಿಯೋ ಎಂದರೆ ವ್ಯವಹಾರದೃಷ್ಟಿಯಿಂದ ಜಗತ್ತಿನಲ್ಲಿ ಚಿದ ಚಿದ್ವಿಭಾಗವಿರುವದು ನಿಜ, ಈ ಚಿದಚಿದ್ರೂಪವಾದ ಜಗತ್ತಿನ ಸೃಷ್ಟಿಸ್ಥಿತಿಲಯಗಳು ಆಗುವದೂ ನಿಜ. ಆದ್ದರಿಂದ ಬ್ರಹ್ಮವು ಜಗತ್ಕಾರಣವೆಂದು ಹೇಳಲೂಬಹುದು. ಆದರೆ ಮೇಲೆ ವರ್ಣಿಸಿದ ರೀತಿಯಿಂದ ಅವಿದ್ಯಾಕಲ್ಪಿತವಾದ ನಾಮರೂಪಗಳಲ್ಲದೆ ಚೈತನ್ಯದಲ್ಲಿ ಯಾವ ಜಡವಸ್ತುವಿನ ಸಂಬಂಧವೂ ಇಲ್ಲದೆ ಇರುವದರಿಂದ ನಿತ್ಯಶುದ್ಧವಾದ ಬ್ರಹ್ಮಚೈತನ್ಯದಲ್ಲಿಯೇ ಅಖಿಲಚಿದಚಿದ್ರೂಪವಾದ ಜಗತ್ತು ಆರೋಪಿತವಾಗಿರುವದೆಂದು ಬೋಧಿಸುವದಕ್ಕೇ ಶಾಸ್ತ್ರದಲ್ಲಿ ಜಗತ್ಕಾರಣತ್ವವನ್ನು ಹೇಳಿದೆಯೇಹೊರತುತಾತ್ಪರ್ಯದಿಂದಜಗತ್ತಿನಸೃಷ್ಟ್ಯಾದಿಗಳನ್ನುಹೇಳಿರುವದಿಲ್ಲ. ಪರಮಾರ್ಥದೃಷ್ಟಿಯಿಂದ ನೋಡಿದಾಗ ಶಬ್ದಸ್ಪರ್ಶದಿಗಳಿಂದೊಡಗೂಡಿದ ಜಗತ್ತು ಚೈತನ್ಯರೂಪವಾದ ಬ್ರಹ್ಮದಲ್ಲಿ ಯಾವಾಗಲೂ ಇಲ್ಲವೇ ಇಲ್ಲ- ಎಂಬುದು ಅದ್ವೈತಸಿದ್ಧಾಂತದ ತಿರುಳು.

ವಿಶಿಷ್ಟಾದ್ವೈತಿಗಳು ಜ್ಞಾನದಿಂದ ಮುಕ್ತಿಯಾಗುವದೆನ್ನುವರಾದರೂ ಅವರ ಮತದಲ್ಲಿ ಜ್ಞಾನವೆಂದರೆ ಉಪಾಸನೆಯೇ. ಭಕ್ತಿರೂಪವನ್ನು ಹೊಂದಿದ ನಿದಿಧ್ಯಾಸನವೇ ಬ್ರಹ್ಮಸಾಕ್ಷಾತ್ಕಾರಕ್ಕೆ ಕಾರಣವೆಂದೂ ದಿನದಿನವೂ ಬಿಡದೆ ವರ್ಣಾಶ್ರಮಕರ್ಮವನ್ನು ಮಾಡುತ್ತಿರುವದರಿಂದ ಉಪಾಸನೆಯು ಬಲಿತು ಕಡೆಗೆ ಈ ಭಕ್ತಿಯು ಉತ್ಪನ್ನವಾಗುವದೆಂದೂ ಅರ್ಚಿರಾದಿಲೋಕಗಳ ಮಾರ್ಗವಾಗಿ ಬ್ರಹ್ಮಲೋಕವನ್ನು ಸೇರಿ ಜೀವಾತ್ಮರು ಸ್ವರೂಪಪ್ರಾಪ್ತಿಯನ್ನೂ ಬ್ರಹ್ಮದ ಸಾಮ್ಯವನ್ನೂ ಹೊಂದಿ, ಪರಮೇಶ್ವರನ ಅಧೀನದಲ್ಲಿದ್ದು ಕೊಂಡಿರುವರು - ಎಂದು ಈ ಸಿದ್ಧಾಂತದಲ್ಲಿ ವರ್ಣಿಸಿರುತ್ತದೆ. ಅದ್ವೈತಸಿದ್ಧಾಂತದಲ್ಲಿ ಹಾಗಲ್ಲ. ಶಾಸ್ತ್ರದಲ್ಲಿ ಹೇಳಿರುವ ಉಪಾಸನೆಯು ಕ್ರಮಮುಕ್ತಿಗೆ ಕಾರಣವಾಗಿ ಲೋಕಾಂತರದಲ್ಲಿ ಬ್ರಹ್ಮಜ್ಞಾನವನ್ನು ಪಡೆಯುವದಕ್ಕೆ ಕಾರಣವೂ ಆಗಬಹುದು ; ಆದರೆ ಮುಖ್ಯವಾದ ಮುಕ್ತಿಯು ಜ್ಞಾನದಿಂದ- ಎಂದರೆ ನಿತ್ಯಶುದ್ಧಮುಕ್ತ ಸ್ವಭಾವವಾದ ಪರಮಾತ್ಮನೇ ನಾನು ಎಂಬ ಅರಿವಿನಿಂದ, ಇಲ್ಲಿಯೇ ಆಗುವದು- ಎಂಬುದು ಈ ಸಿದ್ಧಾಂತದವರ ಉಪದೇಶವಾಗಿರುತ್ತದೆ.

ಇದುವರೆಗೆ ಹೇಳಿದ್ದರ ಒಟ್ಟು ತಾತ್ಪರ್ಯವನ್ನು ಸಂಗ್ರಹವಾಗಿ ತಿಳಿಸಿದರೆ ಇಷ್ಟರಲ್ಲಿ ಅಡಕವಾಗುವುದು; ಶ್ರೀರಾಮಾನುಜಸಿದ್ಧಾಂತದಲ್ಲಿ ಹೇಳಿರುವ ಜೀವಜಡಭೇದವನ್ನೂ ವರ್ಣಾಶ್ರಮಧರ್ಮಾನುಷ್ಠಾನವನ್ನೂ ಈಶ್ವರೋಪಾಸನೆಯನ್ನೂ ಆದರಿಂದ ಆಗುವ ಚಿತ್ತಶುದ್ಧಿ, ಲೋಕಾಂತರಗಮನ, ಕ್ರಮಮುಕ್ತಿ ಇವನ್ನೂ ಶಾಂಕರಸಿದ್ಧಾಂತದಲ್ಲಿಯೂ ಒಪ್ಪಿರುತ್ತದೆಯಾದರೂ ಇದೆಲ್ಲವೂ ಅವಿದ್ಯಾಕೃವ್ಯವಹಾರವೇ, ಪರಮಾರ್ಥವಾಗಿ ನೋಡಿದರೆ ವೇದಾಂತಶ್ರವಣ ಮನನನಿದಿಧ್ಯಾಸನಗಳಿಂದ ಆಗುವ ಬ್ರಹ್ಮಾತ್ಮಜ್ಞಾನವೇ ಆ ಕೂಡಲೆ ಇಲ್ಲಿಯೇ ಆಗುವಮುಕ್ತಿಗೆ ಕಾರಣವು - ಎಂಬುದು ಈ ಸಿದ್ಧಾಂತಗಳಲ್ಲಿರುವ ವಿಶೇಷವು.

★★★★★

## ವಿಕಾಸವಾದಕ್ಕೂ ವೇದಾಂತಕ್ಕೂ ವಿರೋಧವುಂಟೆ?

**10-5-1935**

**ಶ್ರೀಶ್ರೀಗಳವರು**

ವಿಕಾಸವಾದವೆಂಬುದು ಪಾಶ್ಚಾತ್ಯದೇಶಗಳಲ್ಲೆಲ್ಲ ಈಗ ಹರಡಿಕೊಂಡಿರುತ್ತದೆ. ಪಾಶ್ಚಾತ್ಯರ ಕ್ರಮದಲ್ಲಿ ವಿದ್ಯಾಭ್ಯಾಸವನ್ನು ಹೊಂದುತ್ತಿರುವ ನಮ್ಮ ದೇಶದ ತರುಣರಿಗೆಲ್ಲ ಮೆಚ್ಚಾಗಿರುತ್ತದೆ. ಆದ್ದರಿಂದ ಅದರ ಸ್ವರೂಪವನ್ನು ತಿಳಿದುಕೊಳ್ಳುವದೂ ಅದಕ್ಕೂ ವೇದಾಂತಕ್ಕೂ ಎಷ್ಟರಮಟ್ಟಿಗೆ ಹೊಂದುಗಡೆಯಿರುವದೆಂಬುದನ್ನು ಪರೀಕ್ಷಿಸುವದೂ ಈಗ ಅತ್ಯವಶ್ಯವಾಗಿರುತ್ತದೆ- ಎಂದು ಉಪನ್ಯಾಸಕರು ಪ್ರಾರಂಭಿಸಿ ಭೌತಿಕಶಾಸ್ತ್ರದ ವಿಚಾರಕ್ರಮವನ್ನು ಮೊಟ್ಟ ಮೊದಲು ಸಂಗ್ರಹವಾಗಿ ತಿಳಿಸಿದರು. ಆ ಕ್ರಮದ ಅಂಗಗಳಾದ ನಿರೀಕ್ಷಣ ಪರೀಕ್ಷಣ, ಕಾರಣದ ಊಹೆ (hypothesis), ಸಂವಾದೀಕರಣ (verification), ಸಿದ್ಧಾಂತಕಲ್ಪನ (theory) - ಎಂಬಿವುಗಳನ್ನು ವಿವರಿಸಿದರು. ಭೌತಿಕ ಶಾಸ್ತ್ರಜ್ಞರು ಮೇಲೆ ಕಂಡ ಕ್ರಮದಲ್ಲಿ ಮಾಡಿಕೊಂಡಿರುವ ಯಾವದೊಂದು ಸಿದ್ಧಾಂತವೂ

ಅಲ್ಲಿಗೇ ಕೊನೆಯಾಯಿತೆಂದು ನಂಬುವದಿಲ್ಲ ; ಅವರ ಅಭಿಪ್ರಾಯದಲ್ಲಿ ಇನ್ನೂ ಮುಂದಕ್ಕೆ ಶೋಧನಮಾಡಿದಂತೆ ಹೊಸ ಸಿದ್ಧಾಂತಗಳೂ ಆಗಬಹುದು ಎಂಬುದನ್ನು ನೆನಪಿಡಬೇಕು – ಎಂದು ಸೂಚಿಸಿ ಆಮೇಲೆ ವಿಕಾಸವಾದದ ಮುಖ್ಯಕಲ್ಪನೆಗಳನ್ನು ಸಭಿಕರ ಮುಂದೆ ಇಟ್ಟರು.

ಈ ಅನಂತವಾದ ವಿಶ್ವವು ನಿತ್ಯಪ್ರಚಲಿತವಾದ ದ್ರವ್ಯಭರಿತವಾಗಿರುತ್ತದೆ. ಇದರಲ್ಲಿರುವ ಒಟ್ಟು ದ್ರವ್ಯರಾಶಿಯು ಸ್ವಲ್ಪವೂ ಮಾರ್ಪಡದೆ. ಈ ಸಾರ್ವತ್ರಿಕಪ್ರಚಲನೆಯ ಫಲವಾಗಿ ತೇಜೋಮೇಘಗಳು ಕ್ಲಿಪ್ತಕಾಲದಲ್ಲಿ ಪರಿಣಾಮವಾಗಿ ಬೇರೆಬೇರೆ ರೂಪನ್ನು ಪಡೆಯುತ್ತಲಿರುವವು, ಮತ್ತೆ ಮತ್ತೆ ಈ ರೂಪವು ಲಯವಾಗುತ್ತಲೂ ಇರುವದು. ಅನಂತವಾದ ಆಕಾಶದಲ್ಲಿರುವ ಸೌರವ್ಯೂಹಗಳೆಲ್ಲ ಈ ಕ್ರಮದಲ್ಲಿ ಉಂಟಾಗಿರುವವು. ಇಂಥ ವ್ಯೂಹಗಳಲ್ಲಿ ಒಂದಾದ ನಮ್ಮ ಸೌರವ್ಯೂಹದ ಒಂದಂಶವಾದ ಭೂಗೋಳವೂ ಈ ಪ್ರಚಲನೆಯ ಫಲವಾಗಿ ಹಲವು ಕೋಟಿ ವರ್ಷಗಳ ಹಿಂದೆ ಉಂಟಾಯಿತು. ಇದರ ಮೇಲಿನ ಉಷ್ಣವು ಆರುತ್ತಾ ಇದು ಗಟ್ಟಿಯಾಗಿ ಇದರ ಮೇಲೆ ನೀರಿನ ಉತ್ಪತ್ತಿ ಕಾಣಿಸಿಕೊಂಡಿತು. ಆಮೇಲೆ ಜೀವಕೋಶಗಳುಂಟಾಗಿ ವನಸ್ಪತಿಗಳೂ ಪ್ರಾಣಿಗಳೂ ಒಂದಾನೊಂದು ಕ್ರಮದಲ್ಲಿ ಏರ್ಪಟ್ಟವು. ಈ ಕ್ರಮದಲ್ಲಿ ಮನುಷ್ಯನೂ ಉತ್ಪತ್ತಿಯಾಗಿರುತ್ತಾನೆ; ಅಮಿತಜನನ, ಜೀವನಕಲಹ, ಪರಿಸ್ಥಿತಿಗೆ ಹೊಂದಿಕೊಳ್ಳುವದು; ಆರ್ಜಿತಧರ್ಮ ವಂಶಾನುಗತಧರ್ಮ– ಮುಂತಾದ ನಿಮಿತ್ತಗಳಿಂದ ಪ್ರಾಣಿಗಳ ವಿಕಾಸವು ಆಗುತ್ತಾಬಂದಿರುತ್ತದೆ. ಈ ಕ್ರಮದಲ್ಲಿ ಹುಟ್ಟಿರುವ ಮನುಷ್ಯನು ಬೆನ್ನೆಲುಬುಳ್ಳ ಪ್ರಾಣಿಗಳ ಗುಂಪಿಗೆ ಸೇರತಕ್ಕವನು. ಚತುಷ್ಪಾದ ಪ್ರಾಣಿಗಳ ವರ್ಗದವನು, ಸಸ್ತನಿಗಳ ಹಿಂಡಿನವನು ಸೋಲ್ಲಪ್ರಾಣಿ ಪ್ರೈಮೇಟ್– ಎಂಬ ಶ್ರೇಷ್ಠ ತರಗತಿಯವನು, ವಾನರಜಾತಿಗೆ ಸಂಬಂಧಪಟ್ಟವನು, ಈ ವಿಕಾಸವು ಇನ್ನೂ ಆಗುತ್ತಲೇ ಇರುವದರಿಂದ ಮುಂದೆಯೂ ಬೇರೆಬೇರೆ ಮಾರ್ಪಾಡುಗಳಾಗಬಹುದು. ಜೀವನಾರ್ಥಕಲಹವೇ ಮುಂತಾದ ಕಾರಣಗಳಿಂದ ಮುಂದೆ ಮನುಷ್ಯನಿಗೆ ಹೆಚ್ಚಾದ ಅತಿಮಾನವಪ್ರಾಣಿಯೊಂದು ಹುಟ್ಟಬಹುದು. ಮನುಷ್ಯನಲ್ಲಿ ಕಾಣಬರುವ ಕುಲ, ವರ್ಣ, ಭಾಷೆ, ಲಿಂಗ, ಧರ್ಮ– ಇವುಗಳೂ

ಮಾನವಸಮಾಜವೂ ಹೀಗೆಯೇ ಆಯಾ ನಿಮಿತ್ತಗಳಿಂದ ಉಂಟಾಗಿರುತ್ತವೆ; ಇವುಗಳೂ ಸ್ವಭಾವವಾಗಿ ಮಾರ್ಪಡುತ್ತಲೇ ಇರುವವು. ಹೀಗೆಂಬುದು ವಿಕಾಸವಾದದ ಸಾರವು.

ವಿಕಾಸವಾದದ ಸ್ವರೂಪವನ್ನು ಈ ಸಂಗ್ರಹಮಾತ್ರದಿಂದ ತಿಳಿಯುವದು ಆಗಲಾರದು ; ಇದನ್ನು ಖಗೋಳಶಾಸ್ತ್ರ, ಭೂಗರ್ಭಶಾಸ್ತ್ರ, ಪದಾರ್ಥವಿಜ್ಞಾನಶಾಸ್ತ್ರ ಜೀವಶಾಸ್ತ್ರ, ಪ್ರಾಣಿಶಾಸ್ತ್ರ, ಗರ್ಭಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ- ಮುಂತಾದ ಅನೇಕ ಶಾಸ್ತ್ರಗಳ ಸಹಾಯದಿಂದ ನಿರ್ಣಯಿಸಿರುತ್ತಾರೆ. ಕ್ಯಾಂಟ್, ಲ್ಯಾಪ್ಲೇಸ್, ಡಾರ್ವಿನ್, ಹಕ್ಸ್ಲಿ, ಮುಲ್ಲರ್, ಹೆಕೆಲ್- ಮುಂತಾದವರು ಈ ವಾದದ ಆಚಾರ್ಯಪುರುಷರು, ಇವರು ಬರೆದಿರುವ ಗ್ರಂಥಗಳ ಸಾರವನ್ನು ತಿಳಿಯುವದಕ್ಕೆ ಇಂಗ್ಲೀಷು ಬಲ್ಲವರಿಗೆ ಬೇಕಾದಷ್ಟು ಅವಕಾಶವಿದೆ. ಕನ್ನಡದಲ್ಲಿ ''ವಿಕಾಸವಾದ ಅಥವಾ ದೇವರು ಸತ್ತನೆ?'' ಎಂಬ ಗ್ರಂಥವೊಂದನ್ನು ಶ್ರೀಯುತ ಕುಲಕರ್ಣಿ ನಾರಾಯಣರಾವ್ ಎಮ್.ಎನ್ - ಇವರು ಬರೆದಿರುತ್ತಾರೆ. ಈ ವಿಚಾರದಲ್ಲಿ ಆದರವುಳ್ಳ ಕನ್ನಡಿಗರೆಲ್ಲರೂ ಆ ಗ್ರಂಥವನ್ನು ಅವಶ್ಯವಾಗಿ ಓದಬೇಕು.

ಈಗ ವೇದಾಂತಕ್ಕೂ ವಿಕಾಸಕ್ಕೂ ವಿರೋಧವೆ?- ಎಂಬ ಪ್ರಶ್ನೆಯ ಕಡೆಗೆ ತೆರಳೋಣ. ಈಗಿನ ಕೆಲವರ ಅಭಿಪ್ರಾಯದಲ್ಲಿ ಇವೆರಡಕ್ಕೂ ಸ್ವಲ್ಪಮಟ್ಟಿಗಾದರೂ ವಿರೋಧವಿದೆ. ಆದ್ದರಿಂದ ಮಿಕ್ಕ ಮತಗಳೆಲ್ಲ ಕಾಲಾನುಸಾರವಾಗಿ ಮಾರ್ಪಟ್ಟಿರುವಂತೆ ಉಪನಿಷದ್ಧರ್ಮವೂ ಭೌತಿಕಶಾಸ್ತ್ರಕ್ಕನುಗುಣವಾಗಿ ರೂಪಾಂತರವನ್ನು ಹೊಂದುವದು ಅವಶ್ಯವೆಂದು ಅವರು ಹೇಳುತ್ತಾರೆ. ಜಗತ್ತು ವಿಕಾಸವಾದಕ್ರಮದಲ್ಲಿ ಮಾರ್ಪಡುತ್ತಾ ಬಂದಿದೆಯೆಂದಾದರೆ ಸೃಷ್ಟಿಮಾಡುವ ದೇವರಿಲ್ಲವೆಂದಾಗುವದು ; ದೇವರ ವಾಕ್ಯವೆನಿಸಿರುವ ಧರ್ಮಗ್ರಂಥಗಳಿಗೆ ಅಪ್ರಾಮಾಣ್ಯ ಬರುವದು; ಆದ್ದರಿಂದ ಈ ವಾದವು ಧರ್ಮಕ್ಕೆ ವಿರೋಧಿಯೆಂದೂ ಇದನ್ನು ಹುಡುಗರಿಗೆ ಓದಿಸಬಾರದೆಂದೂ ಅಮೆರಿಕದ ಕೆಲವು ಪ್ರಾಂತಗಳಲ್ಲಿ ಕಾನೂನು ಕೂಡ ಮಾಡಿಸುವದಕ್ಕೆ ಹೋಗಿರುವರಂತೆ. ಇದರಂತೆಯೇ ವೇದಾಂತಕ್ಕೂ ಈ ವಾದವು ವಿರೋಧವಾಗಿರುತ್ತದೆ. ಇದು ಜೀವಾತ್ಮಪರಮಾತ್ಮ, ಬಂಧ ಮೋಕ್ಷಾದಿಗಳನ್ನೆಲ್ಲ ಅಲ್ಲಗಳೆಯುವ ನಾಸ್ತಿಕವಾದವಾಗಿರುತ್ತದೆ- ಎಂದು ಕೆಲವರು ಭಾವಿಸಿರುತ್ತಾರೆ. ಮತ್ತೆ ಕೆಲವರು ದೇವರೇ ಸೃಷ್ಟಿಮಾಡಿರುತ್ತಾನೆ, ಅವನು ವಿಕಾಸವಾದಿಗಳು ಹೇಳುವ ಕ್ರಮದಿಂದಲೇ ಸೃಷ್ಟಿಮಾಡಿರುತ್ತಾನಾದ್ದರಿಂದ

ಧರ್ಮಕ್ಕೂ ವಿಕಾಸವಾದಕ್ಕೂ ವಿರೋಧವಿಲ್ಲ - ಎಂದು ಸಮಾಧಾನ ಹೇಳುವರು. ಇದರಿಂದ ಪ್ರಯೋಜನವಿಲ್ಲ; ಏಕೆಂದರೆ ವಿಕಾಸವಾದಿಗಳು ಪ್ರತಿಪಾದನೆ ಮಾಡುವ ರೀತಿಯು ನಿರೀಕ್ಷಣಪರೀಕ್ಷಣಾದಿಗಳ ಆಧಾರದ ಮೇಲೆ ನಿಂತಿರುತ್ತದೆ, ಈಶ್ವರವಾದಿಗಳ ಮತವು ಆ ಕ್ರಮವನ್ನನುಸರಿಸಿರುವುದಿಲ್ಲ; ಹೀಗಿರುವಲ್ಲಿ ಇವರಿಬ್ಬರಿಗೂ ಈ ವಿಷಯದಲ್ಲಿ ಏಕವಾಕ್ಯತೆ ಹೇಗಾದೀತು? ಸ್ಪೆನ್ಸರ್ ಸಾಹೇಬನು ಈ ದೃಶ್ಯಜಗತ್ತಿಗೆಲ್ಲ ಆಧಾರವಾಗಿ ಯಾವದೋ ಒಂದು ತತ್ತ್ವವು ಇರಬೇಕೆಂದು ಹೇಳಿದ್ದಾನೆ, ಆ ಅಜ್ಞೇಯವೇ ನಾವು ಹೇಳುವ ಬ್ರಹ್ಮ - ಎಂದು ಕೆಲವರು ವೇದಾಂತಿಗಳು ಅನ್ನುತ್ತಿದಾರೆ. ಇದು ವಿಕಾಸವಾದಿಗಳಿಗಾಗಲಿ ವೇದಾಂತಿಗಳಗಾಗಲಿ ಒಪ್ಪಿಗೆಯಾಗದ ಮಾತು; ಏಕೆಂದರೆ ವಿಕಾಸವಾದಿಗಳ ಪರೀಕ್ಷಣ ನಿರೀಕ್ಷಣಗಳಿಗೆ ಅಜ್ಞೇಯವು ಸಿಕ್ಕುವದಿಲ್ಲವಾದ್ದರಿಂದ ಅದು ಕೇವಲ ಕಲ್ಪನಾ ಮಾತ್ರವಾಗಿ ರುತ್ತದೆ, ವೇದಾಂತಿಗಳ ಬ್ರಹ್ಮವು ಕೇವಲ ಕಲ್ಪನಾಮಾತ್ರವೆಂದು ನಾವು ಯಾರೂ ನಂಬುವದಿಲ್ಲ. ಈಗಿನ ಭೌತಿಕಜ್ಞಾನಶಾಸ್ತ್ರಜ್ಞರು ಪರಮಾಣುವನ್ನು ಕೂಡ ವಿಭಾಗಿಸಿ ಎಲೆಕ್ಟ್ರಾನ್, ಪ್ರೋಟಾನ್ - ಎಂಬ ಧನವಿದ್ಯುತ್ಕಣ ಋಣವಿದ್ಯುತ್ಕಣ- ಎಂಬ ವಿದ್ಯುತ್ಕಣಗಳನ್ನು ಕಂಡುಕೊಂಡಿರುತ್ತಾರೆ. ಈ ವಿದ್ಯುಚ್ಛಕ್ತಿಯೇ ಬ್ರಹ್ಮವೆಂದು ಕೆಲವರು ಆಧುನಿಕರು ವೇದಾಂತದ ಅಭಿಮಾನದಿಂದ ಹೇಳುತ್ತಿದಾರೆ. ಇದಂತೂ ಸರಿಯೇ ಅಲ್ಲ; ಏಕೆಂದರೆ ವಿದ್ಯುತ್ಕಣವು ಚಿದಾತ್ಮಕವೆಂದು ಭೌತಿಕವಾದಿಗಳು ಒಪ್ಪುವದಿಲ್ಲ, ಬ್ರಹ್ಮವು ಜಡವೆಂಬುದನ್ನು ವೇದಾಂತಿಗಳು ಒಪ್ಪುವದಿಲ್ಲ. ಮತ್ತೆ ಕೆಲವರು ವಿಕಾಸವಾದಕ್ಕೆ ಸಮಾಧಾನವೇನೆಂದರೆ ''ನಮ್ಮ ವೇದಾಂತದಲ್ಲಿ ಅಂತರ್ಮುಖತ್ವವೆಂಬ ಸಾಧನವಿದೆ; ಆ ಸಾಧನದಿಂದ ನಾವು ಬ್ರಹ್ಮತತ್ತ್ವವನ್ನು ಕಂಡುಕೊಂಡಿರುತ್ತೇವೆ. ವಿಕಾಸವಾದಿಗಳಿಗೆ ಈ ಸಾಧನವಿಲ್ಲದ್ದರಿಂದ ಅವರಿಗೆ ಬ್ರಹ್ಮತತ್ತ್ವವು ಸಿಕ್ಕಿರುವದಿಲ್ಲ''. ಈ ಅಭಿಪ್ರಾಯವು ಯುಕ್ತಿಯುಕ್ತವಲ್ಲ; ಏಕೆಂದರೆ ಅಂತರ್ಮುಖತ್ವವೆನ್ನುವ ಸಾಧನವು ಸರಿಯಾದದ್ದೋ, ಅಲ್ಲವೋ ತಿಳಿದುಕೊಳ್ಳುವದಕ್ಕೆ ಉಪಾಯವೇ ಇರುವದಿಲ್ಲ. ಯಾರನಾದರೂ ಒಬ್ಬನು ತನಗೆ ಅಂತರ್ಮುಖತ್ವವಿದೆಯೆಂದೂ ತಾನು ಅತೀಂದ್ರಿಯನಾದ ಕೆಲವು ತತ್ತ್ವಗಳನ್ನು ಕಂಡುಕೊಂಡಿದೇನೆಂದೂ ಹೇಳಿದರೆ ಆಗ ಅದು ನಿಜವೋ ಸುಳ್ಳೋ - ಎಂಬುದನ್ನು ಗೊತ್ತುಪಡಿಸುವದು ಅಸಾಧ್ಯವಾಗಿರುತ್ತದೆ. ಇದು ಪ್ರತ್ಯಕ್ಷಾನುಮಾನಗಳಿಂದಲೇ ತತ್ತ್ವನಿರ್ಧಾರಣೆಮಾಡುತ್ತಿರುವ ಭೌತಿಕ ಶಾಸ್ತ್ರಜ್ಞರಿಗೆ ಸಮ್ಮತವೂ ಆಗಲಾರದು.

ಆದ್ದರಿಂದ ಹೀಗೆಲ್ಲ ಕೇವಲತರ್ಕಸಿದ್ಧವಾದ ವಿಚಾರಗಳನ್ನೇ ನಮ್ಮ ವೇದಾಂತಪ್ರತಿಪಾದ್ಯವಾದ ತತ್ತ್ವವೆಂತ ತಿಳಿಯುವದು ಜನಸಮ್ಮತವಾಗುವುದಿಲ್ಲ; ಇದರಿಂದ ವೇದಾಂತವಿಚಾರಕ್ಕೆ ಒಂದು ಕೆಟ್ಟ ಹೆಸರನ್ನೂ ತಂದಂತೆ ಆಗುತ್ತದೆ. ವೇದಾಂತದ ನಿಜವಾದ ತತ್ತ್ವವಿಚಾರಕ್ರಮವೆಂದರೆ ಅವಸ್ಥಾತ್ರಯ ಪರೀಕ್ಷೆಯು. ಭೌತಿಕಶಾಸ್ತ್ರವೆಲ್ಲ ಕೇವಲ ಜಾಗ್ರದವಸ್ಥಾಸಿದ್ಧವಿಷಯಗಳ ವಿಚಾರವಾಗಿರುತ್ತದೆ. ಇದು ವ್ಯವಹಾರಕ್ಕೆ ಸಾಕಾಗಿರುತ್ತದೆಯಾದ್ದರಿಂದ ಭೌತಿಕಶಾಸ್ತ್ರದ ಆಧಾರದ ಮೇಲೆ ಹುಟ್ಟಿರುವ ವಿಕಾಸವಾದವು ಅದೇ ಕ್ರಮವನ್ನನುಸರಿಸಿ ವಿಚಾರಕ್ಕೆ ಹೊರಟಿರುತ್ತದೆ. ವಿಕಾಸವಾದವು ಸರಿಯೆ, ಅಲ್ಲವೆ?- ಎಂಬುದನ್ನು ಜಾಗ್ರದ್ದೃಷ್ಟಿಯಿಂದಲೇ ಹೊರಟಿರುವ ವೈಜ್ಞಾನಿಕರು ವಿಚಾರ ಮಾಡಿ ನಿರ್ಣಯಮಾಡಬೇಕಾಗಿದೆ. ಇಂಥಿಂಥ ಸಾಕ್ಷಿಗಳು ದೊರೆಯುವದರಿಂದಲೂ ಇವುಗಳ ಸಾಕ್ಷ್ಯವು ಮತ್ತೆ ಹೇಗೂ ಹೊಂದುವ ಹಾಗಿಲ್ಲವಾದ್ದರಿಂದಲೂ ಸೌರವ್ಯೂಹವೂ ಭೂಗೋಳವೂ ಜೀವವೂ ಪ್ರಾಣಿಗಳೂ ಮನುಷ್ಯನೂ ನಾವು ಹೇಳುವ ಕ್ರಮದಲ್ಲಿ ಉತ್ಪತ್ತಿಯಾಗಿರಬೇಕು – ಎಂದು ವಿಕಾಸವಾದಿಗಳು ನಿರ್ಣಯಮಾಡಿರುತ್ತಾರೆ. ಆದ್ದರಿಂದ ಇದು ಅರ್ಥಾಪತ್ತಿಪ್ರಮಾಣವನ್ನು ಕೊಟ್ಟು ಹೇಳಿದ ಮಾತೆಂದಾಗುವದು. ಆದಕಾರಣ ಈ ವಾದದಲ್ಲಿ ದೋಷವನ್ನು ತೋರಿಸಬೇಕೆನ್ನುವವರು ಅರ್ಥಾಪತ್ತಿಗೆ ವಿಘಾತಕಗಳಾದ ಅನುಪಪತ್ತಿ (ಹೀಗೆ ಹೊಂದುವುದಿಲ್ಲ – ಎನ್ನುವಿಕೆ), ಅನ್ಯಥಾವ್ಯುಪಪತ್ತಿ (ಹೀಗೂ ಆಗಬಹುದಲ್ಲ? – ಎನ್ನುವಿಕೆ) ಅನ್ಯಥೈವೋಪಪತ್ತಿ (ಬೇರೆಯ ಬಗೆಯಲ್ಲಿಯೇ ಹೊಂದುವದಲ್ಲ?- ಎನ್ನುವಿಕೆ)- ಈ ಮೂರು ದೋಷಗಳನ್ನು ತೋರಿಸಬೇಕಾಗುವದು. ಇದು ಹೇಗಾದರೂ ಇರಲಿ. ವೇದಾಂತಿಗಳು ವಿಕಾಸವಾದವನ್ನು ಎದುರಿಸಿ ಅದನ್ನು ಖಂಡಿಸುವ ಗೋಜಿಗೇ ಹೋಗಬೇಕಾಗಿರುವುದಿಲ್ಲ; ಏಕೆಂದರೆ ಅವಸ್ಥಾತ್ರಯದ ಪೂರ್ಣಾನುಭವದ ಆಧಾರದ ಮೇಲೆ ಪರಮಾರ್ಥ ತತ್ತ್ವವನ್ನು ನಿರ್ಣಯಿಸುವ ಈ ಸಿದ್ಧಾಂತಕ್ಕೂ ಒಂದೇ ಅವಸ್ಥೆಯಲ್ಲಿ ಕಾಣಬರುವ ದೃಶ್ಯಗಳ ಮಾರ್ಪಾಡಿನ ನಿಯಮವನ್ನು ಗೊತ್ತುಪಡಿಸುವದಕ್ಕೆ ಹೊರಟಿರುವ ವಿಕಾಸವಾದಕ್ಕೂ ಯಾವದೊಂದೂ ವಿರೋಧವು ಇರುವದೇ ಇಲ್ಲ. ಸ್ವಪ್ನದಲ್ಲಿ ಒಬ್ಬ ವಿಕಾಸವಾದಿಯು ಒಂದಾನೊಂದು ಹೊಸ ಪ್ರಾಣಿಯನ್ನು ಕಂಡು ಪರೀಕ್ಷಿಸಿ ತನ್ನ ಸ್ನೇಹಿತನೊಡನೆ ಪ್ರಾಣ್ಯುತ್ಪತ್ತಿಯ ವಿಷಯದಲ್ಲಿ ಚರ್ಚಿಸುತ್ತಿರುವಷ್ಟರಲ್ಲಿ ಅವನಿಗೆ ಎಚ್ಚರವಾದರೆ ಅವನು

ಏನೆಂದು ಭಾವಿಸುವನು? ''ಇದೆಲ್ಲವೂ ನನಗೆ ತೋರಿದ ಬರಿಯ ದೃಶ್ಯವು, ಪರಮಾರ್ಥವಲ್ಲ'' ಎಂದಲ್ಲವೆ ಅವನು ಎಣಿಸುವನು? ಆದರೆ ನಿಷ್ಪಕ್ಷಪಾತದೃಷ್ಟಿಯಿಂದ ನೋಡಿದರೆ ಕನಸಿಗೂ ಎಚ್ಚರಕ್ಕೂ ಸ್ವರೂಪಪ್ರತೀತಿಗಳಲ್ಲಿ ಯಾವದೊಂದು ಹೆಚ್ಚುಕಡಿಮೆಯನ್ನೂ ತೋರಿಸಿಕೊಡುವದಕ್ಕೆ ಯಾವ ಭೌತಿಕಜ್ಞನಿಂದಲೂ ಆಗಲಾರದು. ಆದ್ದರಿಂದ ಎಚ್ಚರದಲ್ಲಿ ಮಾತ್ರವೇ ಮಾಡಿಕೊಂಡ ಸಿದ್ಧಾಂತವು ಆ ಅವಸ್ಥೆಗೆ ಮಾತ್ರ ಸರಿಹೋದೀತೇ ಹೊರತು ಅದು ಅಬಾಧಿತವಾದ ಪೂರ್ಣಾನುಭವ ಸಿದ್ಧ ಪರಮಾರ್ಥವೆಂದು ಹೇಳುವದಕ್ಕೆ ಬರಲಾರದು. ವಿಕಾಸವೆಂಬುದು ಜಾಗ್ರದವಸ್ಥೆಯಲ್ಲಿ ತೋರುವ ಜಾಗ್ರತ್ಕಾಲಪ್ರವಾಹಕ್ಕೆ ಕಟ್ಟುಬಿದ್ದಿರುತ್ತದೆ. ಆದರೆ ವೇದಾಂತಿಗಳು ಹೇಳುವ ಆತ್ಮನು ಅವಸ್ಥಾತ್ರಯಕ್ಕೆ ಸಾಕ್ಷಿಯಾಗಿರುವದರಿಂದ ಅವನು ಜಾಗ್ರತ್ಸ್ವಪ್ನಗಳಲ್ಲಿ ಮಾತ್ರ ತೋರಿಬರುವ ಯಾವದೊಂದು ಕಾಲಪ್ರವಾಹಕ್ಕೂ ಕಟ್ಟುಬಿದ್ದಿರುವದಿಲ್ಲ, ಕಾಲಾತೀತನಾಗಿರುತ್ತಾನೆ. ಈ ಆತ್ಮನು ಸುಷುಪ್ತಿಸಮಾಧ್ಯಾದಿಗಳಲ್ಲಿ ತಾನೊಬ್ಬನೇ ಇರುತ್ತಾನೆಂಬುದೂ ಅವನಲ್ಲಿ ಯಾವದೊಂದೂ ಚಲನೆಯುಂಟಾಗದೆಯೇ ಜಾಗ್ರತ್ಸ್ವಪ್ನದಲ್ಲಿ ಈ ಅಖಂಡಬ್ರಹ್ಮಾಂಡವೇ ವಿಕಾಸವಾಗುತ್ತದೆಯೆಂಬುದೂ ನಮ್ಮೆಲ್ಲರ ಅನುಭವದಲ್ಲಿರುತ್ತದೆ. ಜಾಗ್ರತ್ತಿನಲ್ಲಿ ಭೌತಿಕಜ್ಞರು ಪರೀಕ್ಷೆಮಾಡುವ ದ್ರವ್ಯಶಕ್ತಿಗಳೆಲ್ಲ ಆ ಅವಸ್ಥೆಗೆ ಮಾತ್ರವೇ ಕಟ್ಟುಬಿದ್ದಿದ್ದು ಸುಷುಪ್ತಿಯಲ್ಲಿ ಅವುಗಳಿಂದ ನಿರ್ಲೇಪನಾದ ಆತ್ಮನಲ್ಲಿಯೇ ಲಯವಾಗುವವೆಂಬುದೂ ಅನುಭವಸಿದ್ಧವಾಗಿರುತ್ತದೆ. ಆದ್ದರಿಂದ ನಿರ್ವಿಕಲ್ಪನಾದ ನಿತ್ಯಶುದ್ಧಬುದ್ಧಮುಕ್ತ ಸ್ವಭಾವನಾದ ಆತ್ಮನಲ್ಲಿ ಮಾಯೆಯಿಂದ ಕಲ್ಪಿತವಾದ ದೇಶಕಾಲನಿಮಿತ್ತಗಳ ವೈಚಿತ್ರ್ಯವುಳ್ಳ ಈ ಜಗತ್ತೆಲ್ಲವೂ ತೋರಿಹಾರುತ್ತಿರುವದೆಂಬುದೂ ವ್ಯವಹಾರವೆಂತಲೂ ವೇದಾಂತಿಗಳು ಹೇಳುವ ಸಿದ್ಧಾಂತವು ಯಾವ ಯುಕ್ತಿ ಶಾಸ್ತ್ರಕ್ಕೂ ವಿರುದ್ಧವಲ್ಲವೆಂದು ತಿಳಿಯಬೇಕು– ಎಂಬುದು ಉಪನ್ಯಾಸದ ಸಾರವು.

★★★★★

# ವೇದಾಂತಕ್ಕೂ ಬೌದ್ಧಮತಕ್ಕೂ ಇರುವ ತಾರತಮ್ಯ

## 02-5-1935

**ಶ್ರೀಶ್ರೀಗಳವರು**

ಬೌದ್ಧಮತವು ಒಂದಾನೊಂದು ಮಾರ್ಗವನ್ನುಪದೇಶಮಾಡುತ್ತದೆ; ದುಃಖಕಾರಣವನ್ನೂ ಅದರ ನಿವೃತ್ತ್ಯುಪಾಯವನ್ನೂ ತಿಳಿದುಕೊಂಡು ''ಅಷ್ಟಾಂಗ ಮಾರ್ಗ''ವೆಂಬ ಒಂದಾನೊಂದು ಸಾಧನವನ್ನು ಅನುಸರಿಸ ಬೇಕೆಂಬುದು ಆ ಮತದ ಉಪದೇಶವಾಗಿರುತ್ತದೆ, ಅದ್ವೈತವೆಂಬುದು ಒಂದು ದರ್ಶನವು. ಅದರಲ್ಲಿವಸ್ತುಸ್ವರೂಪವನ್ನು ನಿರ್ಧಾರಮಾಡುವದರಿಂದ ಅವಿದ್ಯೆಯೂ ಅದರಿಂದಾಗುವ ಸಕಲ ಅನರ್ಥಗಳೂ ತೊಲಗುವವೆಂದು ಉಪದೇಶಿಸಿರುತ್ತದೆ. ಅದ್ವೈತ ವೇದಾಂತದಲ್ಲಿ ಸಾಧನವನ್ನೆಲ್ಲ ತಿರಸ್ಕರಿಸಿರುತ್ತದೆಯೆಂದು ಅರ್ಥವಲ್ಲ; ಸಾಧನಗಳೆಲ್ಲ ಆತ್ಮಜ್ಞಾನಕ್ಕೆ, ಜ್ಞಾನವೊಂದೇ ಅನರ್ಥನಿವೃತ್ತಿಗೆ ಕಾರಣ-ಎಂದು ವೇದಾಂತದಲ್ಲಿ ಸ್ಪಷ್ಟವಾಗಿ ಹೇಳಿಬಿಟ್ಟಿರುತ್ತದೆ.

ಸಂಸಾರಕ್ಕೆ ಕಾರಣವು ಅವಿದ್ಯೆಯೆಂದು ಬೌದ್ಧರೂ ವೇದಾಂತಿಗಳೂ ಸಮವಾಗಿಯೇ ಹೇಳುತ್ತಾರೆ; ಆದರೆ ಇಲ್ಲಿಯೂ ಈ ಎರಡು ಅಭಿಪ್ರಾಯಗಳಿಗೆ ಬಹಳ ತಾರತಮ್ಯವಿರುತ್ತದೆ ಅವಿದ್ಯೆಯೆಂದರೆ ಆರ್ಯಸತ್ಯಚತುಷ್ಟಯವನ್ನು ತಿಳಿಯದೆ ಇರುವದೆಂದು ಬೌದ್ಧರೆನ್ನುತ್ತಾರೆ. ದುಃಖವುಂಟು, ಇದಕ್ಕೆ ತೃಷ್ಣೆಯೇ ಕಾರಣ; ದುಃಖವು ತೃಷ್ಣೆಯನ್ನು ನಾಶಮಾಡಿಕೊಂಡರೆ ಹೋಗುವದು; ಇದಕ್ಕೆ **ಅಷ್ಟಾಂಗಿಕಮಾರ್ಗ**ವೇ ಸಾಧನವು - ಎಂಬೀ ನಾಲ್ಕನ್ನೂ ಆರ್ಯಸತ್ಯವೆಂದು ಬೌದ್ಧರು ವ್ಯವಹರಿಸುತ್ತಾರೆ. ಈ ನಾಲ್ಕು ಸತ್ಯಗಳನ್ನು ಅರಿಯದೆ ಇರುವದೇ ಅವಿದ್ಯೆಯೆಂದು ಅವರ ಅಭಿಪ್ರಾಯ. ಅಷ್ಟಾಂಗಮಾರ್ಗದಲ್ಲಿ ಸಮ್ಯಗ್ದೃಷ್ಟಿಯೇ ಮುಂತಾದ ಎಂಟು ಅಂಗಗಳಿರುವವು; ಶಾಶ್ವತನಾದ ಆತ್ಮನು ಇಲ್ಲವೇ ಇಲ್ಲವೆಂಬ ಜ್ಞಾನವು ಸೇರಿರಬೇಕು. ಈ ಜ್ಞಾನವುಂಟಾಗದೆ ಆತ್ಮನೊಬ್ಬನಿರುವನೆಂದು ತಿಳಿಯುವದೂ ಆ ಮತದಲ್ಲಿ ಅವಿದ್ಯೆಯೇ. ಆದರೆ ವೇದಾಂತದಲ್ಲಿ ಅವಿದ್ಯೆ ಎಂದರೆ ಹೀಗಲ್ಲ, ಅದ್ವಿತೀಯನಾದ ಬ್ರಹ್ಮಾತ್ಮನನ್ನು ತಿಳಿಯದೆ, ಅವನಲ್ಲಿ

ಮಿಥ್ಯಾರೂಪವಾದ ಅನಾತ್ಮವನ್ನು ಅರೋಪಮಾಡಿಕೊಂಡು ಆ ಅನಾತ್ಮವನ್ನೇ ಆತ್ಮನೆಂದು ಭಾವಿಸುವದೇ ಈ . ಅವಿದ್ಯೆಯಿಂದು ಸಂಸಾರವುಂಟಾಗಿರುವ ಬಗೆಯನ್ನು **ಪ್ರತೀತ್ಯಸಮುತ್ಪಾದ**ವೆಂಬ ಕಾರಣಮಾಲೆಯ ವರ್ಣನೆಯಿಂದ ತಿಳಿಸುತ್ತಾರೆ. ಅವಿದ್ಯೆಯಿಂದ ಸಂಸಾರ, ಅದರಿಂದ ವಿಜ್ಞಾನ, ಅದರಿಂದ ನಾಮರೂಪ (ಜ್ಞಾನಜ್ಞೇಯವಿಭಾಗ), ಅದರಿಂದ ಷಡಾಯತನ (ಆರು ಇಂದ್ರಿಯಗಳು), ಅದರಿಂದ ವಿಷಯಸ್ಪರ್ಶ, ಆ ಸ್ಪರ್ಶದಿಂದ ವೇದನೆ, ವೇದನೆಯಿಂದ ತೃಷ್ಣೆ, ಆ ತೃಷ್ಣೆಯಿಂದ ಉಪಾದಾನ (ವಿಷಯಗ್ರಹಣ), ಆ ಉಪಾದಾನದಿಂದ ಭವ (ಹುಟ್ಟುವ ಪ್ರಯತ್ನ), ಅದರಿಂದ ಜನ್ಮ ಆಮೇಲೆ ಜರಾಮರಣ, ಶೋಕದುಃಖ-ಹೀಗೆ ಒಂದಾನೊಂದು ಕಾರಣಮಾಲೆಯುಂಟಾಗುತ್ತಿರುವದೇ ಬೌದ್ಧಮತದಂತೆ ಸಂಸಾರವು. ಈ ಮಾಲೆಗೆ ಪ್ರತೀತ್ಯಸಮುತ್ಪಾದವೆಂದು ಹೆಸರು. ಆದರೆ ವೇದಾಂತದಲ್ಲಿ ಅವಿದ್ಯೆಯು ಹೀಗೆ ಕಾರಣಕೋಟಿಯಲ್ಲಿ ಸೇರಿರುವದಿಲ್ಲ. ತತ್ತ್ವವನ್ನು ತಿಳಿಯದೆ ಇರುವದರಿಂದ ಕಾರ್ಯಕಾರಣ ಬುದ್ಧಿಯು ಉಂಟಾಗಿರುತ್ತದೆ; ಕಾರ್ಯಕಾರಣಭಾವವೇ ಅಪರಮಾರ್ಥವೆಂಬ ಜ್ಞಾನಮಾತ್ರದಿಂದಲೇ ಸಕಲ ಅನರ್ಥಗಳೂ ತೊಲಗುವವೆಂಬುದು ವೇದಾಂತ ರಹಸ್ಯವು.

ಬೌದ್ಧಮತವು ಸಾಧನೋಪದೇಶಪ್ರಧಾನವಾಗಿರುವದರಿಂದ ಜಾಗ್ರದವಸ್ಥೆಯೊಂದೇ ಆದರ ವಿಚಾರಕ್ಕೆ ವಿಷಯವಾಗಿರುತ್ತದೆ. ದುಃಖವೂ ಅದರ ಕಾರಣವಾದ ತೃಷ್ಣೆಯೂ ಅಷ್ಟಾಂಗಮಾರ್ಗವನ್ನನುಸರಿಸಿ ಅದನ್ನು ಪರಿಹರಿಸಿಕೊಳ್ಳುವದೆಂಬುದೂ ಜಾಗ್ರದವಸ್ಥೆಗೆ ಮಾತ್ರ ಅನ್ವಯಿಸುತ್ತದೆ. ಆದರೆ ವೇದಾಂತದಲ್ಲಿ ಅವಸ್ಥಾತ್ರಯವನ್ನೂ ವಿಚಾರಮಾಡಿ ಪೂರ್ಣಾನುಭವದ ಆಧಾರದ ಮೇಲೆ ಆತ್ಮತತ್ತ್ವವನ್ನು ನಿರ್ಧರಿಸಿರುತ್ತದೆ. ವ್ಯವಹಾರದಲ್ಲಿ ವಿಕಾರಗಳೆಲ್ಲವೂ ಸತ್ಯವಾಗಿ ತೋರಿದರೂ ಅವಸ್ಥಾತ್ರಯಸಾಕ್ಷಿಯಾದ ಆತ್ಮಚೈತನ್ಯದಲ್ಲಿ ಯಾವದೊಂದು ವಿಕಾರವೂ ಇಲ್ಲವೆಂಬ ಸಿದ್ಧಾಂತವನ್ನು ತೆಗೆದಿರುವದು ವೇದಾಂತದಲ್ಲಿ ಮಾತ್ರವಾಗಿರುತ್ತದೆ. ಇದೇ ಕಾರಣದಿಂದ ಬೌದ್ಧಮತವು ಆತ್ಮನೆಂದರೆ ಅಂತಃಕರಣವೃತ್ತಿಯಾದ ವಿಜ್ಞಾನವೆಂದೇ ಇಟ್ಟುಕೊಂಡಿರುವದು. ಆ ವಿಜ್ಞಾನವು ಸ್ವವಿಷಯಕವೆಂದೂ, ಎಂದರೆ ತನ್ನನ್ನು ತಾನೇ ಅರಿತುಕೊಳ್ಳಬಲ್ಲದ್ದೆಂದೂ, ಆದರ ಸಂತತಿಯಲ್ಲಿ ತೋರುವ ಆತ್ಮತ್ವವು

ಬರಿಯ ಭ್ರಾಂತಿಯೊಂದೂ ಸಿದ್ಧಾಂತಮಾಡಿರುತ್ತದೆ. ಸುಷುಪ್ತಿಸಮಾಧಿಗಳನ್ನೇ ಲಕ್ಷ್ಯದಲ್ಲಿಟ್ಟು ಶೂನ್ಯವಾದವೆಂಬ ಶಾಖೆಯು ಬೌದ್ಧಮತದಲ್ಲಿ ಉಂಟಾಗುವದಕ್ಕೂ ಜಗತ್ತಿನ ಆತ್ಮನೆನಿಸುವ ಈಶ್ವರನಾಗಲಿ ನಮ್ಮಗಳ ಆತ್ಮನೆನಿಸುವ ಜೀವನಾಗಲಿ ಇಲ್ಲವೇ ಇಲ್ಲವೆಂಬ ನೈರಾತ್ಮ್ಯವಾದವು ಏರ್ಪಡುವದಕ್ಕೂ ಏಕಾವಸ್ಥಾದೃಷ್ಟಿಯೇ ಕಾರಣವಾಯಿತು. ಸರ್ವಸಾಕ್ಷಿಯಾದ ಚೈತನ್ಯವು ನಿರ್ವಿಶೇಷವೆಂದೂ ನಿತ್ಯಶುದ್ಧಮುಕ್ತಸ್ವಭಾವವಾದದ್ದೆಂದೂ ಅದೇ ಸರ್ವವೆಂದೂ ಹೇಳುವ ವೇದಾಂತದ ಸರ್ವಾತ್ಮವಾದವು ಬೌದ್ಧಮತದಲ್ಲಿ ಮೊಳಕೆಯಾಗದಿರುವದಕ್ಕೆ ಈ ದೃಷ್ಟಿಭೇದವಲ್ಲದೆ ಮತ್ತೇನೂ ಕಾರಣವಲ್ಲ.

ಈ ರೀತಿಯಿಂದ ನೋಡುವಲ್ಲಿ ಬೌದ್ಧಮತದವರೂ ವೇದಾಂತಿಗಳೂ ವ್ಯವಹಾರದೃಷ್ಟಿಯಲ್ಲಿ ಪಾಪಪುಣ್ಯವಿಭಾಗ, ಕರ್ಮಫಲ, ಸಂಸಾರ, ಲೋಕಾಂತರ ನೀತಿಬೋಧೆ- ಇವುಗಳನ್ನು ಒಂದೇ ರೀತಿಯಿಂದ ಬೋಧಿಸುತ್ತಿದ್ದರೂ ಬೌದ್ಧರು ವೇದಾಂತದ ಆಧಾರವಾದ ಅವಸ್ಥಾತ್ರಯದೃಷ್ಟಿಯೆಂಬ ವೈದಿಕದೃಷ್ಟಿಯನ್ನನುಸರಿಸದೆ ನಿರಾತ್ಮವಾದಿಗಳಾಗಿರುತ್ತಾರೆಂಬುದೂ ವೇದಾಂತಿಗಳು ಹೇಳುವ ಆತ್ಮರೂಪವಾದ ವಿಜ್ಞಾನಕ್ಕೂ ಬೌದ್ಧರು ಹೇಳುವ ವೃತ್ತಿಜ್ಞಾನಕ್ಕೂ ಯಾವ ಸಂಬಂಧವೂ ಇಲ್ಲವೆಂಬುದೂ ಈ ಎರಡು ಉಪದೇಶಗಳಲ್ಲಿರುವ ಬಹುಮುಖ್ಯತಾರತಮ್ಯವನ್ನು ವ್ಯಕ್ತಗೊಳಿಸುತ್ತವೆ. ಹೀಗಿದ್ದರೂ ಬೌದ್ಧರು ಹೇಳುವ ವಿಜ್ಞಾನವಾದಶೂನ್ಯವಾದಗಳನ್ನು ವೇದಾಂತವಾದಕ್ಕೆ ಹೋಲಿಸುವದಲ್ಲದೆ ಅದ್ವೈತವೇದಾಂತಿಗಳನ್ನು ಪ್ರಚ್ಛನ್ನಬೌದ್ಧರೆಂದು ಕರೆಯುವ ಅವಿವೇಕಿಗಳೂ ಇರುವರು. ಇದಕ್ಕೆ ಈ ಎರಡು ಪಂಗಡದವರೂ ಉಪಯೋಗಿಸಿರುವ ಶಬ್ದಸಾಮ್ಯವೊಂದು ಹೊರತು ಮತ್ತೇನೂ ಈ ಸಿದ್ಧಾಂತಗಳಿಗೆ ಹೋಲಿಕೆಯಿರುವದಿಲ್ಲ. ನಿರ್ವಿಕಾರವಾಗಿಯೂ ನಿತ್ಯಶುದ್ಧಬುದ್ಧಮುಕ್ತಸ್ವಭಾವಾಗಿಯೂ ಇರುವ ಸಚ್ಚಿದಾನಂದಬ್ರಹ್ಮವೇ ಪರಮಾರ್ಥಸತ್ಯವೆಂದು ವೇದಾಂತಿಗಳ ಮುಖ್ಯಸಿದ್ಧಾಂತವು. ಯಾವ ಬೌದ್ಧ ಗ್ರಂಥದಲ್ಲಿಯೂ ಕಂಡುಬರುವದಿಲ್ಲ - ಎಂದು ಉಪನ್ಯಾಸಕರು ಅನೇಕ ಆಧಾರಗಳಿಂದ ಪುಷ್ಟೀಕರಿಸಿದರು.

★★★★★

# ವೇದಾಂತದ ಐಹಿಕಪ್ರಯೋಜನಗಳು

**13-05-1935**

**ಶ್ರೀಶ್ರೀಗಳವರು**

ಸರಿಯಾಗಿ ವಿಚಾರಮಾಡಬಲ್ಲ ಮನಃಶಕ್ತಿಯಿರುವ ಅನೇಕರು ವೇದಾಂತದಿಂದ ತಮ್ಮ ವ್ಯವಹಾರಕ್ಕೆ ಅಡ್ಡಿಯಾಗುವದೆಂದು ಹೇಗೋ ಒಂದು ಭೀತಿಯನ್ನು ಇಟ್ಟುಕೊಂಡಿರುವರು. ಆದ್ದರಿಂದಲೇ ಅವರಿಗೆ ವೇದಾಂತವೆಂದರೆ ತುಂಬ ಅಂಜಿಕೆ. ನಿಜವಾಗಿ ನೋಡಿದರೆ ವೇದಾಂತದಿಂದ ನಮ್ಮ ಯಾವ ವ್ಯವಹಾರಕ್ಕೂ ಅಡ್ಡಿಯಾಗಲಾರದೆಂಬುದಿಷ್ಟೇ ಅಲ್ಲ, ನಮ್ಮ ವ್ಯವಹಾರವನ್ನೆಲ್ಲ ಆನಂದಮಯವಾಗಿ ಮಾಡುವದೇ ವೇದಾಂತದ ಪರಮೋದ್ದೇಶವಾಗಿರುವದೆಂಬುದೂ ಮನಗಾಣುವದು.

ವ್ಯವಹಾರವೆಂದರೇನು? ಏಕಾವಸ್ಥಾದೃಷ್ಟಿಯಿಂದ ನೋಡುವಾಗ ಕಂಡುಬರುವ ಮಾತು, ಅರಿವು, ಪ್ರವೃತ್ತಿ, ಸುಖದುಃಖ-ಇವೇ ವ್ಯವಹಾರವೆಂಬ ಮಾತಿನ ಅರ್ಥವು. ಖಗೋಳದ ವಿಷಯವಾಗಿ ತಿಳಿಯಪಡಿಸುವ ಜ್ಯೋತಿಷಶಾಸ್ತ್ರ, ಆಧಿಭೌತಿಕಪ್ರಪಂಚದಲ್ಲಿ ಕಂಡುಬರುವ ಶಕ್ತಿಗಳ ಮತ್ತು ಪದಾರ್ಥಗಳ ವಿಷಯವಾದ ಪ್ರಕೃತಿಶಾಸ್ತ್ರ, ಭೂಗೋಳದ ಮೇಲೆ ಕಂಡುಬರುವ ಪ್ರಾಣಿಗಳ ವಿಷಯವಾಗಿ ತಿಳಿಯಹೇಳುವ ಜೀವಶಾಸ್ತ್ರ, ಜೀವಿಗಳಲ್ಲೆಲ್ಲ ಪ್ರಧಾನನೆಂದೆನಿಸಿಕೊಂಡಿರುವ ಮನುಷ್ಯನ ಅಭಿವೃದ್ಧಿಗೆ ಸಂಬಂಧಪಟ್ಟಿರುವ ಸಮಾಜಶಾಸ್ತ್ರ, ಅರ್ಥಶಾಸ್ತ್ರ, ದಂಡನೀತಿ- ಇವುಗಳೆಲ್ಲ ವ್ಯವಹಾರಕ್ಕೆ ಅವಶ್ಯವಾಗಿ ಬೇಕು. ಇವುಗಳ ಪರಿಣಾಮಕ್ರಮವನ್ನು ವಿವರಿಸುವ ವಿಕಾಸವಾದವು ವಿಚಾರಮಾಡತಕ್ಕದ್ದೇ ಸರಿ. ವ್ಯವಹಾರಕ್ಕೆ ಎಷ್ಟರಮಟ್ಟಿಗೆ ಬೇಕೋ ಅಷ್ಟರಮಟ್ಟಿಗೆ ನೀತಿವಿಚಾರವೂ ಮತವಿಚಾರವೂ ತತ್ತ್ವವಿಚಾರವೂ ಇದ್ದರೆ ಇರಬಹುದು. ಆದರೆ ಜನರನ್ನು ಕಾರ್ಯವಿಮುಖರನ್ನಾಗಿಸಿ ಮೂಲೆಹಿಡಿಸುವ ವೇದಾಂತವು ಏತಕ್ಕೆ?- ಎಂದು ಈಗಿನವರು ಕೆಲವರು ಕೇಳುತ್ತಾರೆ. ವೇದಾಂತವೆಂಬುದು ಅತಿ ಪ್ರಾಚೀನ ಕಾಲದಲ್ಲಿ ನಾಗರಿಕತೆಯಿಲ್ಲದಾಗ ಜನರು ಹಿಡಿದುಕೊಂಡಿದ್ದ

ವಿಚಾರಕ್ರಮವಿತ್ತೆಂದೂ ಈಗ್ಗೆ ಅದರಿಂದ ವ್ಯವಹಾರಕ್ಕೆ ಅಡಚಣೆಯೇ ಹೊರತು ಪ್ರಯೋಜನವೇನೂ ಇಲ್ಲವೆಂದೂ ಅವರ ಭಾವನೆಯಿರುವದು.

ಆದರೆ ವೇದಾಂತದ ಮರ್ಮವನ್ನು ತಿಳಿದವರು ಈ ಆಕ್ಷೇಪಣೆಯನ್ನು ಕೇಳಿ ನಗುವರೇ ಹೊರತು ಅದರಲ್ಲಿ ಏನಾದರೂ ಹುರುಳಿದ್ದೀತೆಂದು ಎಣಿಸುವದಿಲ್ಲ. ಪ್ರಪಂಚವೆಲ್ಲವೂ ಪರಬ್ರಹ್ಮದ ಕಲ್ಯಾಣವಿಭೂತಿಯೆಂದೂ ಕಾವ್ಯವೆಲ್ಲ ಬ್ರಹ್ಮದ ವರ್ಣನೆಯೆಂದೂ ಸಂಸ್ಕೃತವೂ ದೇಶಭಾಷೆಗಳೂ ಆತನ ಆನಂದಸ್ವರೂಪವನ್ನು ಹೊರಡಿಸುವ ಶ್ರುತಿವಾಕ್ಯಗಳೆಂದೂ ಕಲೆಗಳೆಲ್ಲ ಅದರ ಸೌಂದರ್ಯವು ಅಭಿವ್ಯಕ್ತವಾಗುವ ಸ್ಥಾನಗಳೆಂದೂ ವಿಜ್ಞಾನಶಾಸ್ತ್ರವೆಲ್ಲ ಅದರ ಜ್ಞಾನಶಕ್ತಿಯ ಮಹಿಮೆಯೆಂದೂ ಭಾವಿಸುವ ಪರಮಾರ್ಥ ವೇದಾಂತಿಯನ್ನು ಸೋಮಾರಿಯಾಗಿ ಭಾವಿಸುವದು ಎಂಥ ತಿಳಿಗೇಡಿತನ! ಶ್ರೀಶಂಕರಾಚಾರ್ಯರೇ ಮುಂತಾದ ವೇದಾಂತಶಿರೋಮಣಿಗಳನ್ನು ಸ್ಮರಣೆಗೆ ತಂದುಕೊಂಡರೆ ಸಾಕು, ವೇದಾಂತಿಗಳಷ್ಟು ಚಟುವಟಿಕೆಯೂ ವ್ಯವಹಾರದಕ್ಷತೆಯೂ ಲೋಕೋಪಕಾರಬುದ್ಧಿಯೂ ಮತ್ತೆ ಯಾರಿಗೂ ಉಂಟಾಗಲಾರದೆಂಬುದು ಒಣಹೆಮ್ಮೆಯ ಮಾತಲ್ಲವೆಂಬುದು ಕೂಡಲೆ ಮನಸ್ಸಿಗೆ ತಟ್ಟುವುದರಲ್ಲಿ ಸಂಶಯವಿಲ್ಲ.

ವೇದಾಂತದೃಷ್ಟಿಯಿಂದ ನಡೆಯಿಸುವ ವಿದ್ಯಾಭ್ಯಾಸದಲ್ಲಿ ಎಂಥೆಂಥ ಮಾರ್ಪಡುಗಳು ಆದಾವೆಂಬುದನ್ನು ಲಕ್ಷ್ಯದಲ್ಲಿಡುವದು ಒಳ್ಳೆಯದು. ಪ್ರಕೃತಿಯಿಂದ ಆದಷ್ಟು ಭೋಗವನ್ನು ಕಸಿದುಕೊಳ್ಳುವ ಪ್ರಕಾರವನ್ನು ತಿಳಿಸುವದೇ ವಿದ್ಯೆಯೆಂದು ವೇದಾಂತವು ಭಾವಿಸುವದಿಲ್ಲ, ಅರಿವಿನ ಮತ್ತು ಇರವಿನ ತತ್ತ್ವವನ್ನು ಪ್ರಧಾನವಾಗಿಟ್ಟುಕೊಂಡಿರುವ ವಿದ್ಯೆಯೇ ವಿದ್ಯೆಯೆಂಬುದು ಆ ದರ್ಶನದ ಸಿದ್ಧಾಂತವು. ಶರೀರ, ಮನಸ್ಸು, ಆತ್ಮ- ಈ ಮೂರರ ವಿಷಯದಲ್ಲಿಯೂ ಸರಿಯಾದ ತಿಳಿವಳಿಕೆಯನ್ನು ಸಂಪಾದಿಸುವದೇ ಮನುಷ್ಯನ ಕರ್ತವ್ಯವೆಂದು ವೇದಂತಿಗಳು ಭಾವಿಸಿರುವರು. ವೇದಾಂತವು ಕೊಡುವ ತಿಳಿವಳಿಕೆಯು ಬರಿಯ ತರ್ಕಪ್ರಧಾನವಾಗಿ ಯಾರೋ ಕೆಲವರಿಗೆ ಮುಡುಪಾಗಿ ಮಿಕ್ಕವರನ್ನು ಅಜ್ಞಾನದಲ್ಲಿರಿಸುವದಿಲ್ಲ; ಕರ್ಮ, ಜನ್ಮಾಂತರ, ಸ್ವರ್ಗ, ನರಕ, ಮೋಕ್ಷ- ಮುಂತಾದ ಅದರ ತತ್ತ್ವಗಳು ಜನಸಾಮಾನ್ಯದ ನಡತೆಯನ್ನು ತಿದ್ದುವದಕ್ಕೆ ಸಹಕಾರಿಯಾಗಿರುತ್ತವೆ. ಅದು ಸಿದ್ಧಪಡಿಸುವ ಉಪಾಧ್ಯಾಯರು ಭಾರಿಯ

ಸಂಬಳಗಳನ್ನು ಕೇಳುತ್ತಾ ಘಂಟೆಯ ಲೆಕ್ಕದಿಂದ ಕೆಲಸಮಾಡುವ ಸ್ವಾರ್ಥಪರರಲ್ಲ; ತಮಗೆ ಯಾವದೊಂದು ಸ್ವತ್ತೂ ಬೇಡವೆಂದು ವಿರಕ್ತರಾಗಿ ಜನರಿಂದ ತಮಗೆ ಆಗುವ ಮಾನಾಪಮಾನಗಳನ್ನು ಲೆಕ್ಕಿಸದೆ ತತ್ತ್ವವೊಂದನ್ನೇ ಬೋಧಿಸುವ ಉದಾರಿಗಳಾಗಿರುತ್ತಾರೆ. ಅದು ಬೋಧಿಸುವ ವಿದ್ಯೆಯು ಹಳ್ಳಿಗಳವರನ್ನೆಲ್ಲ ನಗರಕ್ಕೆ ತಂದು ಒಬ್ಬರ ಮೇಲೊಬ್ಬರು ಪೈಪೋಟಿಯಿಂದ ವರ್ತಿಸುವ ಹಾಗೆ ಮಾಡುವ ಕಳ್ಳವ್ಯಾಪಾರಕ್ಕೆ ಸಾಧನವಲ್ಲ; ಏಕಾಂತವಾಸವನ್ನೂ ಚಿತ್ತಶುದ್ಧಿಯನ್ನೂ ಶಾಂತಿಯನ್ನೂ ಸರ್ವಭೂತಪ್ರಮೇವನ್ನೂ ಬೆಳೆಯಿಸುವ ಸಾಧನವಾಗಿರುತ್ತದೆ.

ಈ ವಿದ್ಯೆಯು ಬೆಳೆದಂತೆ ಸಮಾಜದಲ್ಲಿ ಪರಸ್ಪರಸಹಾನುಭೂತಿಯು ಹೆಚ್ಚುತ್ತದೆ, ಎಲ್ಲರಿಗೂ ಒಂದೊಂದು ಬಗೆಯ ಉದ್ಯೋಗವು ದೊರಕುತ್ತದೆ, ಪೈಪೋಟಿಯು ತಗ್ಗುತ್ತದೆ; ಸಮಾಜದಲ್ಲಿ ಒಂದು ಪಂಗಡದವರನ್ನು ಮತ್ತೊಂದು ಪಂಗಡದವರ ಮೇಲೆ ಛೂಬಿಟ್ಟು ತಮಾಷೆನೋಡುವ ಸಮಾಜಸುಧಾರಕರ ಹಾವಳಿಯು ಕಡಿಮೆಯಾಗುತ್ತದೆ. ವೇದಾಂತವು ಧರ್ಮಗಳಿಗೆಲ್ಲ ಒಂದೇ ಪರಮಾಧಾರವನ್ನು ತೋರಿಸಿಕೊಡುವದರಿಂದ ಇದರ ಆಸರೆಯಲ್ಲಿರುವವರಲ್ಲಿ ಧರ್ಮದ ದುರಭಿಮಾನವು ತಲೆಯೆತ್ತಲಾರದು; ದೀಕ್ಷೆ, ಶುದ್ಧಿ- ಎಂದು ಮುಂತಾಗಿ ಬೇರೆಬೇರೆ ಹೆಸರುಗಳಿಂದ ಮತಾಂತರಗೊಳಿಸುವದರ ಅವಶ್ಯಕತೆಯೇ ತಪ್ಪಿಹೋಗುತ್ತದೆ.

ನಮ್ಮ ಆರ್ಥಿಕಸಮಸ್ಯೆಗಳೂ ರಾಜನೀತಿಯ ಸಮಸ್ಯೆಗಳೂ ವೇದಾಂತದ ತಿಳಿವು ಹರಡಿದಂತೆ ತಾವೇ ಬಿಡಿಸಿಕೊಳ್ಳುವವು. ಭೋಗಲಾಲಸೆ ಅಥವಾ ಅರ್ಥಲೋಭವೆಂಬ ರೋಗಕ್ಕೆ ವೈರಾಗ್ಯವೇ ಮದ್ದು. ಅದು ಬೆಳೆದರೆ ಹಣಗಾರ, ಕೂಲಿಗಾರ ಕೈಗಾರಿಕೆಯವರು, ಕೊಳ್ಳುವವರು, ಐಶ್ವರ್ಯವಂತರು ಬಡವರು- ಇವರಿಗಿರುವ ತಿಕ್ಕಾಟವು ತೀರ ಕಡಿಮೆಯಾಗುವದು; ವಾಣಿಜ್ಯರಾಷ್ಟ್ರಗಳಲ್ಲಿರುವ ಪರಸ್ಪರದ್ವೇಷವು ಮಾಯವಾಗುವದು. ಒಬ್ಬರಿಗೊಬ್ಬರು ಸಹಾಯಮಾಡುತ್ತಾ ಎಲ್ಲರೂ ಶ್ರೇಯಸ್ಸನ್ನು ಹೊಂದಬಹುದೆಂಬ ನೀತಿಗೆ ವೇದಾಂತಜ್ಞಾನವೇ ಅಡಿಗಲ್ಲಾಗಿರುವದು. ಅಧರ್ಮವು ಹೆಚ್ಚಿದಂತೆ ಯುದ್ಧವೂ ಕ್ಷಾಮಡಾಮರಗಳೂ ಉತ್ಪಾತಗಳೂ ತಲೆದೋರುವವೆಂದೂ ಧರ್ಮವು ಹೆಚ್ಚಿದರೆ ಜಗತ್ತೇ ಉದ್ಧಾರವಾಗುವದೆಂದೂ ಮನವರಿಕೆಯಾಗಬೇಕಾದರೆ ವೇದಾಂತಜ್ಞಾನವೇ ಉತ್ತಮ ಸಾಧನವು.

ಒಟ್ಟಿನಲ್ಲಿ 'ಜಗತ್ತು ನಮ್ಮ ವ್ಯಾವಹಾರಿಕದೃಷ್ಟಿಗೆ ಗೋಚರವಾಗುವ ರೂಪದಿಂದ ಅತ್ಯಂತ ಅಸಾರವಾಗಿರುವದು, ಇದರ ನಿಜವಾದ ಸ್ವರೂಪವು ಪರಬ್ರಹ್ಮವೇ ಆಗಿರುವದು,' ಎಂಬ ದಿವ್ಯದೃಷ್ಟಿಯನ್ನು ತಂದುಕೊಡುವ ವೇದಾಂತವು ಯಾವ ದೇಶದಲ್ಲಿ ಹಬ್ಬುವದೋ ಅಲ್ಲಿ ಸಕಲ ಅನರ್ಥಗಳೂ ಬಗೆಬಗೆಯ ಯುಕ್ತ್ಯನುಭವ ವಚನಗಳಿಂದ ಸ್ಪಷ್ಟಪಡಿಸಿದರು.

★★★★★

## ವೇದಾಂತ ವಿಚಾರಕ್ಕೂ ತರ್ಕಕ್ಕೂ ಇರುವ ತಾರತಮ್ಯ

**27-04-1936**

**ಶ್ರೀಶ್ರೀಗಳವರು**

ವೇದಾಂತವೇದ್ಯವಾದ ಬ್ರಹ್ಮವು ಮಾತಿಗೂ ಮನಸ್ಸಿಗೂ ಅತೀತವೆಂದು ಹೇಳುವವರೇ ಬ್ರಹ್ಮವನ್ನು ತಿಳಿಸುವದಕ್ಕೆಂದು ಭಾಷಣಕೊಡುತ್ತಾರೆ, ಶಾಸ್ತ್ರವಚನವನ್ನು ಉದಾಹರಿಸುತ್ತಾರೆ; ತರ್ಕವನ್ನೂ ಉಪಯೋಗಿಸುತ್ತಿರುತ್ತಾರೆ. ಇದು ತನಗೆ ತಾನೇ ವಿರುದ್ಧವಾದ ಕ್ರಮವಲ್ಲವೆ?- ಎಂದು ಹಲವರು ಶಂಕಿಸುವರು. ಅದರಲ್ಲಿಯೂ ಅದ್ವೈತವೇದಾಂತಿಗಳು ಬ್ರಹ್ಮವು ತರ್ಕಗೋಚರವೇ ಅಲ್ಲವೆಂದು ಹೇಳುತ್ತಾ ತಾವು ಮಾತ್ರ ಹೇರಳವಾಗಿ ತರ್ಕವನ್ನುಪಯೋಗಿ ಸುತ್ತಿರುವರು. ಇದರ ಗುಟ್ಟೇನು?- ಎಂಬುದನ್ನು ಪರೀಕ್ಷಿಸುವದು ಅಗತ್ಯ.

ಪಶ್ಚಿಮದೇಶದ ತರ್ಕವೇ ಈಗ ನಮ್ಮ ಹುಡುಗರಿಗೆ ಪ್ರೌಢವಿದ್ಯಾ ಶಾಲೆಗಳಲ್ಲಿ ಉಪದಿಷ್ಟವಾಗುತ್ತಿದೆ. ನಮ್ಮ ದೇಶದಲ್ಲಿ ಹಿಂದಿನಿಂದಲೂ ನ್ಯಾಯ ವೈಶೇಷಿಕದರ್ಶನಗಳನ್ನನುಸರಿಸುವ ತರ್ಕವನ್ನು ಅಭ್ಯಾಸಮಾಡುತ್ತಾ ಬಂದಿರುತ್ತಾರೆ. ಈ ಎರಡು ತರ್ಕಗಳ ಸ್ವರೂಪವನ್ನೂ ಒಂದಿಷ್ಟು ಮೊದಲು ವಿಮರ್ಶೆ ಮಾಡಬೇಕು. ಪಾಶ್ಚಾತ್ಯತರ್ಕದಲ್ಲಿ ವಿಚಾರದ ಆಕಾರವೇ ಮುಖ್ಯವಾಗಿರುತ್ತದೆ. ''ಕಬ್ಬಿಣವು ಲೋಹವಾಗಿರುತ್ತದೆ ; ಪ್ರತಿಯೊಂದು

ಲೋಹವು ಮೂಲಧಾತುವಾಗಿರುತ್ತದೆ; ಆದ್ದರಿಂದ ಕಬ್ಬಿಣವು ಮೂಲಧಾತುವಾಗಿರಬೇಕು'' -ಎಂಬ ಆಕಾರದಲ್ಲಿರುವ ನ್ಯಾಯಗಳನ್ನು ಸಾಮಾನ್ಯಾಕಾರದಲ್ಲಿಟ್ಟರೆ ಬೀಜಾಕ್ಷರಗಳಿಂದ ಗಣಿತವನ್ನು ಮಾಡುವಂತೆ x=y ಮತ್ತು y=z; ಆದ್ದರಿಂದ x=z ಆಗಿರಬೇಕು ಎಂದು ಹೇಳಬಹುದು. ನಮ್ಮ ಮನಸ್ಸು ಆಕಾರಗಳನ್ನೇ ಮುಖ್ಯವಾಗಿಟ್ಟುಕೊಂಡು ತರ್ಕಮಾಡುತ್ತಾ ಹೋಗುತ್ತಿರುವದರಿಂದ ಕೆಲವು ವೇಳೆ ಆಧಾರವಾಗಿರುವ ವಸ್ತು ಯಾವದೆಂದು ಯೋಚಿಸುವದಕ್ಕೆ ಕೂಡ ನಿಲ್ಲದೆಹೋಗುವದು. x,y ಮತ್ತು z ಎಂಬ ಮಕ್ಕಳಿದ್ದರೆ ಅವರಲ್ಲಿ ಒಬ್ಬನು ಹಿರಿಯನಾಗಿರಬೇಕು, ಇಲ್ಲದಿದ್ದರೆ ಅವರಿಬ್ಬರೂ ಸಮವಯಸ್ಕರಾಗಿರಬೇಕು - ಎಂಬುದು ಒಂದು ತರ್ಕದ ಆಕಾರವು. ಈ ಆಕಾರವನ್ನು ಮಾತ್ರ ನಾವು ನೆಚ್ಚಿ ವಿಚಾರಮಾಡುತ್ತಿದ್ದು ವಿಚಾರದ ನಡುವೆ x ಎಂಬುದು ಬಂಜೆಯನ್ನು ಸೂಚಿಸುವ ಅಕ್ಷರವೆಂದು ತಿಳಿದರೆ ವಿಚಾರವೆಲ್ಲ ವ್ಯರ್ಥವಾಗಿಬಿಡುತ್ತದೆ. ಅಂತೂ 'ಇದು ನಿಜವಾದರೆ ಇದು ನಿಜವಾಗಿರಬೇಕು'- ಎಂಬ ಆಕಾರದ ತರ್ಕವೆಲ್ಲ 'ರೆ' ರಾಜ್ಯದಲ್ಲಿರುವದರಿಂದ ಅದರ ಉಪಯೋಗವು ಅಷ್ಟಕ್ಕಷ್ಟೆ.

ಇನ್ನು ನಮ್ಮ ದೇಶದ ತರ್ಕಶಾಸ್ತ್ರದ ಕಡೆಗೆ ತಿರುಗಿದರೆ ಅದು ಲಕ್ಷಣ ಪ್ರಮಾಣಪರೀಕ್ಷೆಗಳ ರೂಪವಾಗಿರುತ್ತದೆಯಾದರೂ ಈಗ್ಗೆ ಅದರಲ್ಲಿಯೂ ಅನುಮಾನಪ್ರಮಾಣವೇ ಪ್ರಧಾನವಾಗಿರುತ್ತದೆ. ಅನುಮಾನದ ಸಹಾಯವಿಲ್ಲದೆ ಯಾವ ವ್ಯವಹಾರಶಾಸ್ತ್ರವೂ ಮುಂದಕ್ಕೆ ಒಂದು ಹೆಜ್ಜೆಯನ್ನೂ ಇಡಲಾರದು. ವ್ಯವಹಾರದಲ್ಲಿ ಅನುಮಾನಕ್ಕೆ ತುಂಬ ಬೆಲೆಯಿದ್ದರೂ ತತ್ತ್ವವಿಚಾರಕ್ಕೆ ಹೋಗುವವರು ಅದರ ಯೋಗ್ಯತೆಯನ್ನು ಚೆನ್ನಾಗಿ ಪರೀಕ್ಷಿಸತಕ್ಕದ್ದು ಅತ್ಯಂತವಾಗಿ ಅವಶ್ಯವಾಗಿರುತ್ತದೆ. ಸಾಧ್ಯವನ್ನು ಪಕ್ಷದಲ್ಲಿದೆಯೆಂದು ವ್ಯಾಪ್ತಿಬಲದಿಂದ ನಿಶ್ಚಯಮಾಡುವದೇ ಅಲ್ಲವೆ, ಅನುಮಾನಕೃತ್ಯವು? ಇಲ್ಲಿ ವ್ಯಾಪ್ತಿಯು ಹೇಗೆ ಏರ್ಪಡುವದೆಂಬುದನ್ನು ಮೊದಲು ಪರೀಕ್ಷಿಸಬೇಕು. ಎಲ್ಲೆಲ್ಲಿ ಹೊಗೆಯಿರುವದೋ ಅಲ್ಲೆಲ್ಲ ಬೆಂಕಿಯಿರುವದು- ಎಂಬ **ವ್ಯಾಪ್ತಿಯ** ಬಲದಿಂದ ಪರ್ವತವೆಂಬ **ಪಕ್ಷ**ದಲ್ಲಿಯೂ ಹೊಗೆಯಿದೆಯಾದ್ದರಿಂದ ಅಲ್ಲಿ ಬೆಂಕಿಯಿರಬೇಕು- ಎಂದು ನಿಶ್ಚಯಿಸುತ್ತೇವಷ್ಟೇ. ಇಲ್ಲಿ ಎಲ್ಲಿ

ಹೊಗೆಯಿರುವದೋ ಅಲ್ಲಿ ಬೆಂಕಿಯಿರುವದು –ಎಂಬ ವ್ಯಾಪ್ತಿಯು ಹೇಗೆ ನಿಶ್ಚಿತವಾಗುತ್ತದೆ? ಹೊಗೆಯನ್ನು ನೋಡುವದಕ್ಕೆ ಇಂದ್ರಿಯವು ಬೇಕು, ಇದು ಹೊಗೆಯೆಂದು ಅರಿತುಕೊಳ್ಳುವದಕ್ಕೆ ಮನಸ್ಸುಬೇಕು ; ಇಷ್ಟೇ ಸಾಲದು. ಹೊಗೆಯಿರುವ ಸ್ಥಳಗಳನ್ನೆಲ್ಲ ನೋಡಬೇಕು, ಅಲ್ಲಿ ತಪ್ಪದೆ ಬೆಂಕಿಯಿರುವದೆಂಬ ನಿಯತಸಾಹಚರ್ಯವನ್ನೂ ತಿಳಿದುಕೊಳ್ಳಬೇಕು. ಇಷ್ಟಾದರಲ್ಲವೆ, ಎಲ್ಲೆಲ್ಲಿ ಹೊಗೆಯಿರುವದೋ ಅಲ್ಲಲ್ಲಿ ಬೆಂಕಿಯಿರುವದೆಂಬ ವ್ಯಾಪ್ತಿಯು ಏರ್ಪಡುತ್ತದೆ? ಆದರೆ ಸಕಲ ಧೂಮವ್ಯಕ್ತಿಗಳನ್ನೂ ಸಕಲ ಅಗ್ನಿವ್ಯಕ್ತಿಗಳನ್ನೂ ಒಬ್ಬ ಮನುಷ್ಯನು ನೋಡುವದಕ್ಕೆ ಸಾಧ್ಯವೆ? ಅದಾಗದಿದ್ದರೆ ಈ ವ್ಯಾಪ್ತಿಯು ಏರ್ಪಡುವ ಬಗೆ ಹೇಗೆ? ಇದಕ್ಕೆ ತಾರ್ಕಿಕರು ಹೀಗೆಂದು ಉತ್ತರವನ್ನು ಹೇಳುತ್ತಾರೆ: ಅಗ್ನಿತ್ವವು ಎಲ್ಲಾ ಅಗ್ನಿವ್ಯಕ್ತಿಗಳಲ್ಲಿಯೂ ಇರುತ್ತದೆ; ಧೂಮತ್ವವು ಎಲ್ಲಾ ಧೂಮವ್ಯಕ್ತಿಗಳಲ್ಲಿಯೂ ಇರುತ್ತದೆ; ಇಂದ್ರಿಯಕ್ಕೆ ಗೋಚರವಾಗುವ ಅಡಿಗೆಯ ಬೆಂಕಿ, ಹೊಗೆ ಇವುಗಳ ಸಂಬಂಧದಿಂದ ಉಂಟಾಗುವ 'ಬೆಂಕಿಗಳು' 'ಹೊಗೆಗಳು' ಎಂಬ ಜ್ಞಾನದಲ್ಲಿ ವಹ್ನಿತ್ವವೂ ಧೂಮತ್ವವೂ ಪ್ರಕಾರವಾಗಿರುತ್ತವೆ. ಹೀಗೆ ಬೆಂಕಿಯನ್ನು ನೋಡಿದಾಗ ತಿಳಿಯಬರುವ ವಹ್ನಿತ್ವವೂ ಹೊಗೆಯನ್ನು ನೋಡಿದಾಗ ತಿಳಿಯಬರುವ ಧೂಮತ್ವವೂ ವ್ಯಕ್ತಿಗಳಲ್ಲೆಲ್ಲ ಇರುವದರಿಂದ ವ್ಯಾಪ್ತಿಜ್ಞಾನವಾಗಬಹುದಾಗಿದೆ. ಇದು ತಾರ್ಕಿಕರ ಪ್ರಕ್ರಿಯೆ.

ಇಲ್ಲಿ ಸಕಲಧೂಮಗಳಲ್ಲಿಯೂ ಧೂಮತ್ವವಿರುವದೆಂಬುದೂ ಆ ಧೂಮತ್ವದ ಜ್ಞಾನದ ಮೂಲಕ ಸಕಲಧೂಮಗಳೂ ನಮಗೆ ತಿಳಿಯಬರುವವೆಂಬುದೂ ಜನರ ಅನುಭವದಲ್ಲಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಆದರೂ ತಾರ್ಕಿಕರ ಈ ಅಭ್ಯುಪಗಮವನ್ನು ನಾವೂ ಒಪ್ಪಿಕೊಂಡೇ ಮುಂದಕ್ಕೆ ಹೊರಟರೆ ಮತ್ತೊಂದು ಅಡ್ಡಗೋಡೆಯು ಕಾಣಿಸಿಕೊಳ್ಳುತ್ತದೆ. ಈ ವ್ಯಾಪ್ತಿಜ್ಞಾನದಲ್ಲಿ ಪಕ್ಷಸಂಬಂಧವಾದ ಅಗ್ನಿಧೂಮಗಳ ಜ್ಞಾನವೂ ಅಡಕವಾಗಿದೆಯೊ, ಇಲ್ಲವೊ?– ಎಲ್ಲೆಲ್ಲಿ ಹೊಗೆಯಿರುವದೋ ಅಲ್ಲಲ್ಲಿ ಬೆಂಕಿಯಿರುವದು ಎಂಬ ವ್ಯಾಪ್ತಿಯಲ್ಲಿ ನಾವು ಯಾವ ಪರ್ವತದಲ್ಲಿ ಬೆಂಕಿಯಿದೆಯೆಂದು ಅನುಮಾನದಿಂದ ಸಾಧಿಸುವದಕ್ಕೆ ಹೊರಟಿರುವೆವೋ ಪರ್ವತದ ಹೊಗೆಯೂ ಬೆಂಕಿಯೂ ಸೇರಿಕೊಂಡಿರುವವೊ, ಇಲ್ಲವೊ?– ಎಂದು ವಿಚಾರಮಾಡಿದರೆ ಅನುಮಾನಕ್ಕೇ

ಒಂದು ದೊಡ್ಡ ಪ್ರತಿಬಂಧಕವು ಬಂದುಬಿಡುತ್ತದೆ. ಹೇಗೆಂದರೆ, ಪಕ್ಷವಾದ ಪರ್ವತದ ಹೊಗೆಯೂ ಬೆಂಕಿಯೂ ಮೊದಲೇ ವ್ಯಾಪ್ತಿಜ್ಞಾನದಿಂದ ಸಿದ್ಧವಾಗಿದ್ದರೆ ಅನುಮಾನವು ಹೊಸದಾಗಿ ಸಿದ್ಧಮಾಡಿಕೊಡುವದೇನು? ಪರ್ವತದಲ್ಲಿ ಹೊಗೆಯಿದ್ದರೆ ಬೆಂಕಿಯೂ ಇರುವದೆಂದು ನೀವು ಒಪ್ಪಿಕೊಂಡರೆ ನಾವೂ ಅದನ್ನು ಸಿದ್ಧಮಾಡಿಕೊಡುವೆವು- ಎಂದು ಹೇಳಿದಂತಾಗುವದಿಲ್ಲವೆ? ಹಾಗೆ ಅದು ಅಲ್ಲಿ ಸಿದ್ಧವಾಗಿಲ್ಲವೆಂದರೆ ಎಲ್ಲೆಲ್ಲಿ ಧೂಮವಿರುವದೋ ಅಲ್ಲಲ್ಲಿ ಹೊಗೆಯಿರಬೇಕೆನ್ನುವ ನಿಯಮಕ್ಕೆ ಅದೇ ಏಕೆ ನಿಷೇಧವಾಗಿರಬಾರದು?- ಎಂಬ ಪ್ರಶ್ನೆಗೆ ಉತ್ತರವಿಲ್ಲದೆ ಹೋಗುವದು. ಏಕೆಂದರೆ ಎಷ್ಟೋ ನಿಯಮಗಳನ್ನು ಹೀಗೆ ಅನುಮಾನದಿಂದ ಭೌತಿಕಶಾಸ್ತ್ರಜ್ಞರು ಸಿದ್ಧಮಾಡಿದಬಳಿಕ ಹೊಸದಾಗಿ ಮಾಡಿದ ಶೋಧನಗಳಿಂದ ಆ ನಿಯಮಕ್ಕೆ ಭಂಗಬಂದಿರುವದು ನಮ್ಮಗಳ ಅನುಭವದಲ್ಲಿದೆ. ಉದಾಹರಣೆಗೆ ಗ್ರಹಮಂಡಲದಲ್ಲಿ ಕಾಣಬರುವ ಉಪಗ್ರಹಗಳೆಲ್ಲ ತಮ್ಮತಮ್ಮ ಗ್ರಹಗಳನ್ನು ಒಂದೇ ಒಂದು ಗೊತ್ತಾದ ದಿಕ್ಕಿನಲ್ಲಿ ಸುತ್ತುತ್ತಿವೆ- ಎಂದು ಖಗೋಳಜ್ಞರು ಕಂಡುಹಿಡಿದಿದ್ದರು; ಆದ್ದರಿಂದ ಯಾವದೊಂದು ಉಪಗ್ರಹವಾದರೂ ತನ್ನ ಗ್ರಹವನ್ನು ಅದೇ ದಿಕ್ಕಿನಲ್ಲಿ ಸುತ್ತುತ್ತದೆಯೆಂದು ಅನುಮಾನಪ್ರಮಾಣದಿಂದ ನಿಶ್ಚಯಿಸಲು ಆಗ ಅವಕಾಶವಿತ್ತು. ಆದರೆ ಯೂರೆನಸ್ (Uranus) ಎಂಬ ಗ್ರಹದ ಉಪಗ್ರಹಗಳೂ ನೆಪ್ಟ್ಯೂನ್ (Neptune) ಎಂಬ ಗ್ರಹದ ಉಪಗ್ರಹವೂ ಮಿಕ್ಕ ಉಪಗ್ರಹಗಳ ದಿಕ್ಕಿಗೆ ವಿರುದ್ಧವಾದ ದಿಕ್ಕಿನಲ್ಲಿಯೇ ತಮ್ಮತಮ್ಮ ಗ್ರಹವನ್ನು ಸುತ್ತುತ್ತಿವೆಯೆಂದು ಈಚೆಗೆ ಗೊತ್ತಾಗಿರುತ್ತದೆ. ಕಾಲವು ಅನಂತವಾಗಿದೆ, ಆಕಾಶವೂ ಅನಂತವಾಗಿರುತ್ತದೆ; ಆದ್ದರಿಂದ ನಾವು ಎಷ್ಟು ಕಡೆಗಳಲ್ಲಿ ಎರಡು ವಸ್ತುಗಳಿಗೆ ವ್ಯಾಪ್ಯವ್ಯಾಪಕಭಾವವನ್ನು ಕಂಡಿದ್ದರೂ ಅವ್ಯಭಿಚರಿತವಾಗಿ- ಎಂದರೆ ಒಂದು ಕಡೆಯಲ್ಲಿಯೂ ತಪ್ಪದಂತೆ-ಎಲ್ಲೆಲ್ಲಿಯೂ ಯಾವಾಗಲೂ ಈ ವ್ಯಾಪ್ತಿಯು ನಿಲ್ಲುವದೆಂಬ ಭರವಸೆಯನ್ನು ಮಾನವನಾದವನು ಇಟ್ಟುಕೊಳ್ಳುವದಕ್ಕೆ ಆಗುವಹಾಗೇ ಇಲ್ಲ. ಹೀಗಿರುವಲ್ಲಿ ವ್ಯಾಪ್ತಿಯನ್ನು ನಂಬಿ ಹೊರಡುವ ಅನುಮಾನಪ್ರಮಾಣದ ಗತಿ ಏನಾಯಿತು?

ಇದುವರೆಗಿನ ವಿಚಾರದಿಂದ ಏನು ಸಿದ್ಧವಾಯಿತೆಂದರೆ ತರ್ಕದಿಂದ ವ್ಯವಹಾರಕ್ಕೆ ಎಷ್ಟೇ ಪ್ರಯೋಜನವಾಗಿರಲಿ, ಪರಮಾರ್ಥವನ್ನು ನಿರ್ಣಯಿಸುವದಕ್ಕೆ ಹೊರಡುವವರು ಬರಿಯ ತರ್ಕವನ್ನು ನಂಬಿ ಕೂತುಕೊಳ್ಳುವದಕ್ಕೆ ಆಗುವಂತಿಲ್ಲ.

ತರ್ಕದಲ್ಲಿ ಮೂಲದೋಷಗಳೇ ಕೆಲವು ಇರುತ್ತವೆ; ಅವು ತರ್ಕ ಮಾತ್ರಕ್ಕೇ ಅಂಟಿಕೊಂಡಿರುತ್ತವೆ. ಮೊದಲನೆಯದಾಗಿ ತರ್ಕವು ವಸ್ತುವನ್ನು ಪರೋಕ್ಷವಾಗಿ ತಿಳಿಸಿಕೊಡುವದೇ ಹೊರತು ಅಪರೋಕ್ಷವಾಗಿ ತಿಳಿಸಲಾರದು. ಎರಡನೆಯದಾಗಿ ತರ್ಕವು ಅಪ್ರತಿಷ್ಠವಾಗಿರುತ್ತದೆ, ಎಂದರೆ ಜಾಣರಾದವರು ಇಂದು ಒಂದು ವಿಷಯವನ್ನು ಯುಕ್ತಿಯಿಂದ ಸಿದ್ಧಪಡಿಸಿಕೊಟ್ಟರೆ ನಾಳೆ ಅವರಿಗಿಂತಲೂ ಜಾಣರಾದವರು ಅದನ್ನು ಖಂಡಿಸಿ ಅದಕ್ಕೆ ವಿರುದ್ಧವಾದದ್ದನ್ನು ಸ್ಥಾಪಿಸಿಬಿಡುತ್ತಾರೆ. ತರ್ಕವು ಮೆದುಳಿಗೆ ಕೆಲಸವನ್ನು ಕೊಡುತ್ತದೆ, ಆದರೆ ಸಂಸಾರದಲ್ಲಿ ತೃಪ್ತಿಯನ್ನು ಕೊಡುವದಿಲ್ಲ. ಜಗತ್ತಿನ ತತ್ತ್ವವೇನು? ನಮ್ಮ ಸ್ವರೂಪವೇನು? ಆನಂದದ ಬುಡವೆಲ್ಲಿದೆ?- ಎಂಬ ಪ್ರಶ್ನೆಗಳಿಗೆ ಅದು ತೃಪ್ತಿಕರವಾದ ಉತ್ತರವನ್ನು ಕೊಡುವದಿಲ್ಲ.

ಈಗ ವೇದಾಂತವಿಚಾರದ ಸರಣಿಯನ್ನು ಪರೀಕ್ಷಿಸುವದಕ್ಕೆ ಹೊರಡೋಣ. ತರ್ಕದಲ್ಲಿ ಮೇಲೆ ಹೇಳಿದಂತೆ ಮೂಲದೋಷಗಳಿದ್ದರೆ ವೇದಾಂತಿಗಳೇಕೆ ತರ್ಕವನ್ನುಪಯೋಗಿಸುತ್ತಿರುವರು? ''**ನೈಷಾ ತರ್ಕೇಣ ಮತಿರಾಪನೇಯಾ**'' (ಈ ತಿಳಿವಳಿಕೆಯು ತರ್ಕದಿಂದ ದೊರೆಯತಕ್ಕದ್ದಲ್ಲ) ಎಂದು ಶ್ರುತಿಯು ಹೇಳುತ್ತಿದೆ; ತರ್ಕಶಾಸ್ತ್ರದಗ್ಧರಾದವರಿಗೆ ಈ ತತ್ತ್ವವನ್ನು ಹೇಳಬೇಡಿರಿ, ಹೈತುಕರನ್ನು (ಎಂದರೆ ಹೇತುಪಕ್ಷಸಾಧ್ಯವೆಂದು ಸುಮ್ಮನೆ ತರ್ಕಮಾಡುವವರನ್ನು ) ಗೌರವಿಸಬೇಡಿರಿ - ಎಂದು ಸ್ಮೃತಿಗಳು ಸಾರುತ್ತಿವೆ. ಹೀಗಿದ್ದರೂ ವೇದಾಂತಿಗಳು ತರ್ಕವನ್ನೇ ಉಪಯೋಗಿಸುತ್ತಿರುವರಲ್ಲವೆ?- ಎಂದು ಕೆಲವರು ಕೇಳುವರು. ಇದಕ್ಕೆ ಸಾಮಾನ್ಯವಾಗಿ ವೇದಾಂತಿಗಳು 'ನಾವು ತರ್ಕಮಾತ್ರವನ್ನೇ ಬಿಡಬೇಕೆನ್ನುವದಿಲ್ಲ, ಶ್ರುತಿಗೆ ವಿರುದ್ಧವಾದ ತರ್ಕವನ್ನು ಬಿಡಬೇಕೆನ್ನುತ್ತೇವೆ' ಎಂದು ಉತ್ತರ ಹೇಳುವದುಂಟು. ಆದರೆ ಅಲ್ಲಿಯೂ ಒಂದು ಸಂದೇಹ ಬರುತ್ತದೆ, 'ಇಂಥದ್ದೊಂದು ತರ್ಕವು ಶ್ರುತಿಗೆ ವಿರುದ್ಧವೆ ಅಲ್ಲವೆ - ಎಂಬುದನ್ನು ನಿಶ್ಚಯಿಸುವದು ಹೇಗೆ? ಶ್ರುತಿಗೆ ಅರ್ಥವನ್ನು ಹೇಳಿದವರು ಸರಿಯಾಗಿ ಹೇಳಿದರೊ ಇಲ್ಲವೊ'- ಎಂಬುದನ್ನು ಏತರಿಂದ ಗೊತ್ತುಪಡಿಸಬೇಕು? ತರ್ಕದಿಂದಲೇ ಎಂದರೆ ತರ್ಕದಿಂದ ಶ್ರುತ್ಯರ್ಥ, ಶ್ರುತ್ಯರ್ಥದಿಂದ ಅದಕ್ಕೆ ಅನುಸಾರವಾದ ತರ್ಕ - ಎಂಬ ವಾದದಲ್ಲಿ ಅನ್ಯೋನ್ಯಾಶ್ರಯ ದೋಷವಿಲ್ಲವೆ?

ಇದಕ್ಕೆ ಅದ್ವೈತವೇದಾಂತಿಗಳು ಕೊಡುವ ಉತ್ತರವೇನೆಂದರೆ ತರ್ಕ ಮಾತ್ರವೇ ಬಿಡತಕ್ಕದ್ದೆಂದು ವೇದಾಂತಿಗಳ ಅಭಿಪ್ರಾಯವಿಲ್ಲ. ಸಾಮಾನ್ಯವಾಗಿ ನಾವು ತರ್ಕವೆಂದು ಕರೆಯುವದು ಎಚ್ಚರದವಸ್ಥೆಯಲ್ಲಿ ನಮಗೆ ಕಾಣಬರುವ ಪ್ರಮೇಯವಸ್ತುಗಳಿಗೆ ಮಾತ್ರ ಹತ್ತತಕ್ಕದ್ದಾಗಿರುತ್ತದೆ. ಆ ಅವಸ್ಥೆಯಲ್ಲಿ ಇಂದ್ರಿಯಗಳಿಂದ ಹೊರಗಿನ ವಿಷಯಗಳನ್ನೂ ಮನಸ್ಸಿನಿಂದ ಆ ವಿಷಯಗಳ ನಿಶ್ಚಯವನ್ನೂ ಒಳಗಿನ ಸುಖದುಃಖಾದಿಗಳನ್ನೂ ನಾವು ಅರಿಯುತ್ತೇವೆ, ಆದರೆ ಈ ಒಳಗಿನ ಮನಃಪ್ರಪಂಚ, ಮತ್ತು ಹೊರಗಿನ ಇಂದ್ರಿಯವೇದ್ಯವಾದ ಪ್ರಪಂಚ ಇವೆರಡರ ಯೋಗ್ಯತೆಯನ್ನು ನಿರ್ಣಯಿಸುವ ಅನುಭವವನ್ನು ಕೊಡುವದು ಯಾವದೋ ಅದೇ ನಮ್ಮಗಳ ಸಾಕ್ಷಿಯಾಗಿರುತ್ತದೆ. ಅದು ಯಾವ ಪ್ರಮಾಣಕ್ಕೂ ವಿಷಯವಲ್ಲ, ಪ್ರಮಾಣ ಪ್ರಮೇಯ ಪ್ರಮಾತೃ- ಎಂಬ ತ್ರಿಪುಟಿಯನ್ನು ಬೆಳಗುವ ಚೈತನ್ಯವಾಗಿರುತ್ತದೆ. ಇದನ್ನು ತರ್ಕದಿಂದ ಅರಿಯುವದಕ್ಕೆ ಆಗುವದೇ ಇಲ್ಲ, ಏಕೆಂದರೆ ತರ್ಕವೆಲ್ಲ ಮೇಲೆ ಹೇಳಿದ ಎರಡು ವಿಧವಾದ ಪ್ರಪಂಚದ ವಿಚಾರವನ್ನು ಮಾಡುವದಾಗಿರುತ್ತದೆ. ಸಾಕ್ಷಿಯು ತಾನೇ ಸಿದ್ಧವಾಗಿದ್ದುಕೊಂಡು ಮಿಕ್ಕ ಅನಾತ್ಮವನ್ನೂ ಬೆಳಗುತ್ತಿರುವದರಿಂದ ಅದನ್ನು ತಿಳಿಸುವದಕ್ಕೆ ಯಾವ ಶ್ರುತಿಯಾಗಲಿ ತರ್ಕವಾಗಲಿ ಅವಶ್ಯವೇ ಇಲ್ಲ. ಅವುಗಳಿಂದ ಅದನ್ನು ತಿಳಿಸುವದು ಶಕ್ಯವೂ ಅಲ್ಲ. ಆದರೂ ಶ್ರುತಿಯು ಒಂದಾನೊಂದು ವಿಚಾರಸರಣಿಯನ್ನು ನಮ್ಮ ಲಕ್ಷ್ಯಕ್ಕೆ ತಂದು ಈ ಸಾಕ್ಷಿಯ ಅನುಭವವನ್ನು ನೆನಪುಕೊಡುತ್ತದೆ. ನಾವು ಸ್ವಭಾವವಾಗಿ ಇಂದ್ರಿಯಪ್ರಪಂಚದ ಪರಿಶೀಲನೆಯಲ್ಲಿಯೇ ನಿರತರಾಗಿರುತ್ತೇವೆ; ಶ್ರುತಿಯು ಮಾನಸಪ್ರಪಂಚವೂ ಇಂದ್ರಿಯಪ್ರಪಂಚವೂ ಜಾಗ್ರನ್ಮಾತ್ರಕ್ಕೆ ಕಟ್ಟುಬಿದ್ದಿರುವದೆಂದು ತಿಳಿಸುವಕ್ಕಾಗಿ ಅವಸ್ಥಾತ್ರಯಪರೀಕ್ಷೆಯನ್ನು ಕೈಗೊಳಿಸುವದು. ಆಗ ನಮಗೆ ಅವಸ್ಥಾತ್ರಯವೇ ನಮಗಿಂತ ಬೇರೆಯೆಂದೂ ಅವುಗಳಲ್ಲಿ ಕಂಡುಬರುವ ವಿಷಯಗಳು ಪ್ರಮಾಣವೇದ್ಯವಾಗಿಯೂ ತರ್ಕ ವಿಷಯವಾಗಿಯೂ ಇದ್ದರೂ ಈ ಒಟ್ಟನ್ನೇ ಬೆಳಗುತ್ತಿರುವ ನಮ್ಮ ಸಾಕ್ಷಿ ಚೈತನ್ಯವು ತಾನು ಸ್ವತಃಸಿದ್ಧವಾಗಿದ್ದುಕೊಂಡು ಪ್ರಮಾಣತರ್ಕಗಳ ಕ್ಷೇತ್ರವನ್ನೇ ಮೀರಿರುವದೆಂದೂ ಪ್ರಮಾಣತರ್ಕಗಳೆರಡೂ ಅವಿದ್ಯಾಭೂಮಿಯಲ್ಲಿಯೇ ಇರುವವೆಂದೂ ಹೊಳೆಯುವದು. ಹೀಗೆ ನಮ್ಮ ಆತ್ಮನ ಧರ್ಮವಲ್ಲದ್ದನ್ನು ತೆಗೆದುಹಾಕುವದರಿಂದ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವೆನಿಸಿರುತ್ತದೆ. ಈ ಶ್ರುತಿಬೋಧೆಯನ್ನು ತಿಳಿದುಕೊಳ್ಳುವದಕ್ಕೆ ಅನುಕೂಲವಾಗಿರುವ ತರ್ಕವು

ಶ್ರುತಿಮತತರ್ಕವೆನಿಸುತ್ತದೆ. ಆದ್ದರಿಂದ ವೇದಾಂತಿಗಳು ತರ್ಕವನ್ನುಪಯೋಗಿಸಿದರೂ ಸ್ವತಃಸಿದ್ಧವಾದ ಅಪರೋಕ್ಷವಾದ ಶುದ್ಧಚೈತನ್ಯರೂಪವಾದ ನಮ್ಮ ಆತ್ಮನನ್ನೇ ನೆನಪುಕೊಡುವದಕ್ಕೆ ಬೇಕಾದ ತರ್ಕವನ್ನುಪಯೋಗಿಸುವದರಿಂದ ಅವರ ತರ್ಕವು ಲೌಕಿಕತರ್ಕದಂತೆ ಪರೋಕ್ಷವಿಷಯವಲ್ಲ, ಅಪ್ರತಿಷ್ಠಿತವಲ್ಲ; ಅದರಿಂದ ಪರಮಾನಂದಾವಾಪ್ತಿಯೆಂಬ ಪರಮಪುರುಷಾರ್ಥವೂ ಉಂಟು. ಪ್ರಮಾಣಗಳಿಗೆ ತಮ್ಮ ವಿಷಯವನ್ನು ಹೊಸದಾಗಿ ಉಂಟುಮಾಡುವ ಶಕ್ತಿಯಿಲ್ಲ, ಇರುವದನ್ನು ಇದ್ದಂತೆ ತಿಳಿಸುವ ಶಕ್ತಿಯಿದೆ. ಇದರಂತೆ ಶ್ರುತಿಯು ಆತ್ಮನನ್ನು ತಿಳಿಸುವದೇ ಹೊರತು ಉಂಟುಮಾಡುವದಿಲ್ಲ. ಈ ಶ್ರುತಿಯು ಹೇಳುವ ತರ್ಕಸರಣಿಯಿಂದ ಸಿದ್ಧವಾಗುವ ಆತ್ಮರೂಪವು ಮುಂದೆಯೆಂದಾದರೂ ಬೇರೆ ತರ್ಕದಿಂದ ಬಾಧಿತವಾಗಬಹುದೆಂಬ ದೋಷವೂ ಇಲ್ಲಿಲ್ಲ. ಏಕೆಂದರೆ ಕಾಲವೆಂಬುದು ಜಾಗ್ರತ್ಸ್ವಪ್ನಗಳಲ್ಲಿ ತೋರಿಕೊಳ್ಳುವ ಪದಾರ್ಥವು; ಆತ್ಮನು ಅವಸ್ಥಾತ್ರಯಸಾಕ್ಷಿಯಾಗಿರುವ ಕಾಲಾತೀತಪರಮಾರ್ಥಸ್ವರೂಪನು. ಆದ್ದರಿಂದ ವೇದಾಂತದ ವಿಚಾರಸರಣಿಯಲ್ಲಿ ನಮಗೆ ಹೆಚ್ಚಿನ ಶ್ರದ್ಧೆಯುಂಟಾಗುವದಕ್ಕೆ ಸಾಕಾದಷ್ಟು ಕಾರಣಗಳಿವೆ ಎಂದು ಉಪನ್ಯಾಸಕರು ವಿವಿಧದೃಷ್ಟಾಂತಗಳಿಂದ ವೇದಾಂತತರ್ಕದ ಅಸಾಧಾರಣಸ್ವರೂಪವನ್ನು ತಿಳಿಸಿದರು.

★★★★★

## ವೇದಾಂತದಲ್ಲಿ ಉಕ್ತವಾಗಿರುವ ಜ್ಞಾನೋಪಾಸನೆಗಳ ಸ್ವರೂಪ

**29-04-1936**

**ಶ್ರೀಶ್ರೀಗಳವರು**

ಇತ್ತೀಚೆಗೆ ವೇದಾಭ್ಯಾಸವೂ ವೇದೋಕ್ತಸಾಧನಗಳೂ ಬಹಳವಾಗಿ ಶಿಥಿಲವಾಗುತ್ತಿವೆ. ವೇದದಲ್ಲಿ ಹೇಳಿರುವ ಕರ್ಮ, ಉಪಾಸನ, ಜ್ಞಾನ-ಇವುಗಳಲ್ಲಿ ಒಂದೊಂದಕ್ಕೂ ಸಂಬಂಧವು ಏನೆಂಬುದು ತಿಳಿಯದೆ ಜನರು ಒಣಚರ್ಚೆಗೆ ಪ್ರಾರಂಭಿಸುತ್ತಾರೆ. ಇನ್ನೂ ಕೆಲವರು ಈ ಸಾಧನಗಳ ವಿಚಾರವೇ ಜೀವನಕ್ಕೆ ಅಡ್ಡಿ

ಯಾಗುವವು ಎನ್ನುತ್ತಿದಾರೆ. ಆದರೆ ನಿಜವಾಗಿ ನೋಡಿದರೆ ಜೀವನ ಎಂದರೇನು? ಹೊಟ್ಟೆಗೆ ಅಷ್ಟು, ಅನ್ನ, ಮೈಮೇಲಿಷ್ಟು ಬಟ್ಟೆ-ಎರಡೇ ಜೀವನವೇನು? ಏನಾದರೂ ಮಾಡಿ ಹೊಟ್ಟೆಬಟ್ಟೆಗೆ ನೇರ್ಪಾಗುವಂತೆ ಜೀವಿಸಿದರೆ ಜೀವನವು ಪರಿಪೂರ್ಣವಾದೀತೇನು? ತಿಳಿದವರು ಹಾಗೆಂದು ಎಂದಿಗೂ ಹೇಳಲಾರರು. ದೇಹವೊಂದಕ್ಕೇ ಅಲ್ಲದೆ ಇಂದ್ರಿಯಗಳು, ಮನಸ್ಸು, ಬುದ್ಧಿ- ಇವಕ್ಕೆಲ್ಲ ಬಲವನ್ನು ಕೊಡುವ ಜೀವನವಾದರೆ ಅದು ಪರಿಪೂರ್ಣಜೀವನವೆನಿಸುವದು. ಹಾಗಲ್ಲದಿದ್ದರೆ ನಾವು ಬರಿಯ ಮಾನವನ ಅನುಕೃತಿಯನ್ನು ಮಾಡುವ ಗೊಂಬೆಗಳಾಗುತ್ತೇವೆ, ಅಷ್ಟೆ. ಜಗತ್ತಿನ ಇತಿಹಾಸವನ್ನು ನೋಡಿದರೆ, ಯಾವ ಜನಾಂಗದಲ್ಲಿಯೇ ಆಗಲಿ ಧಾರ್ಮಿಕತೆಯು ಇರುವವರೆಗೂ ಆ ಜನಾಂಗವು ಬೆಳೆಯುತ್ತಿತ್ತೆಂದೂ ಆಮೇಲೆ ಕ್ಷೀಣಿಸುತ್ತಾ ಬಂತೆಂತಲೂ ತಿಳಿಯಬರುತ್ತದೆ. ಜೀವನದ ತಿರುಳಿನಲ್ಲಿ ಕೊನೆಗೆ ಧರ್ಮವೇ ಉಳಿದುಕೊಳ್ಳುವದು. ಆದ್ದರಿಂದ ವೇದೋಕ್ತವಾದ ಜ್ಞಾನೋಪಾಸನೆಗಳ ವಿಚಾರವು ಕೇವಲ ಪ್ರಾಚೀನಕಾಲಕ್ಕೆ ಸಂಬಂಧಪಟ್ಟದ್ದೆಂದು ಹಳಿಯದೆ ವಿಚಾರಮಾಡುವದು ಯುಕ್ತವಾದದ್ದು.

ಸಕಲ ಧರ್ಮಗಳಲ್ಲಿಯೂ ಉಪಾಸನೆಯಿದೆ. ಉಪಾಸನೆಯೆಂದರೆ ಸತತವಾಗಿ ಒಂದೇ ಪವಿತ್ರವಿಷಯವನ್ನು ಚಿಂತನೆಮಾಡುವದು. ಈ ಉಪಾಸನೆಯಿಲ್ಲದ ಧರ್ಮವೇ ಲೋಕದಲ್ಲಿಲ್ಲವಾದರೂ ವೇದೋಕ್ತವಾದ ಉಪಾಸನೆಯಲ್ಲಿ ವಿಶೇಷವುಂಟು. ಮೊದಲನೆಯದಾಗಿ ಈ ಉಪಾಸನೆಯು ಇಲ್ಲಿ ಕ್ರಮಪಡಿಸಿ ಉಪದಿಷ್ಟವಾಗಿರುತ್ತದೆ. ಉದಾಹರಣೆ ಕೆಲವು ಉಪಾಸನೆಗಳು ಕರ್ಮಾಂಗವಾಗಿವೆ; ಇಂಥಿಂಥ ಕರ್ಮವನ್ನು ಮಾಡುವಾಗ ಹೇಗೆಹೇಗೆ ಉಪಾಸನೆಮಾಡಿದರೆ ಕರ್ಮವು ಸಮೃದ್ಧಿಯಾಗುವದೆಂಬುದನ್ನು ತಿಳಿದು ಋಷಿಗಳು ಕೆಲವು ಉಪಾಸನೆಗಳನ್ನು ತಿಳಿಯಪಡಿಸಿರುತ್ತಾರೆ. ಮತ್ತೆ ಕೆಲವು ಪ್ರತೀಕೋಪಾಸನೆಗಳು, ಎಂದರೆ ಉಪಾಸ್ಯಕ್ಕೆ ಬದಲಾಗಿ ಯಾವದಾದರೊಂದು ವಸ್ತುವನ್ನು ಕುರಿತು ಮಾಡುವ ಚಿಂತನಗಳು. ಉದಾಹರಣೆಗೆ ಆದಿತ್ಯನನ್ನು ಬ್ರಹ್ಮವೆಂದು ಉಪಾಸನೆ ಮಾಡುವದು ಪ್ರತೀಕೋಪಾಸನೆಯು. ಸಾಲಗ್ರಾಮವನ್ನು ವಿಷ್ಣುವೆಂದು ಉಪಾಸನೆಮಾಡುವದೂ ಓಂಕಾರವನ್ನು ಬ್ರಹ್ಮವೆಂದು ಉಪಾಸನೆಮಾಡುವದೂ ಈ ಗುಂಪಿಗೇ ಸೇರಿರುತ್ತವೆ. ಮತ್ತೆ ಕೆಲವು

ಉಪಾಸನೆಗಳು ಅಹಂಗ್ರಹೋಪಾಸನೆಗಳು. ಧ್ಯೇಯವೇ ತಾನೆಂದು ಮಾಡುವ ಉಪಾಸನೆಗಳು ಈ ಜಾತಿಗೆ ಸೇರಿದವುಗಳಾಗಿವೆ. ಯಾವ ದೇವತೆಯನ್ನು ಉಪಾಸನೆಮಾಡುತ್ತಾನೋ ಅದರ ಧ್ಯಾನದಲ್ಲಿಯೇ ಮಗ್ನನಾಗಿ ತಾನೇ ಆ ದೇವತೆಯೆಂಬ ಅಭಿಮಾನವು ಬರುವವರೆಗೂ ಉಪಾಸನೆಮಾಡುತ್ತಿದ್ದರೆ ಮರಣಾನಂತರದಲ್ಲಿ ಆ ದೇವತೆಯ ಸಾಯುಜ್ಯವನ್ನೇ ಪಡೆಯುತ್ತಾನೆ ಎಂದು ''**ದೇವೋ ಭೂತ್ವಾ ದೇವಾನಪ್ಯೇತಿ**'' ಮುಂತಾದ ಶ್ರುತಿಗಳಲ್ಲಿ ಹೇಳಿರುತ್ತದೆ. ಉಪಾಸನೆಗೆಲ್ಲ ಅಹಂಕಾರದ ಲಯವೇ ಉದ್ದೇಶವು. ಅಹಂಗ್ರಹೋಪಾಸನೆಯಲ್ಲಿ ಈ ಲಯವು ಪರಿಪೂರ್ಣವಾಗಿ ಸಿದ್ಧಿಸುತ್ತದೆಯಾದ್ದರಿಂದ ಇದು ಎಲ್ಲಕ್ಕೂ ಹೆಚ್ಚಿನ ಉಪಾಸನೆಯೆನಿಸುತ್ತದೆ. ಈ ಎಲ್ಲಾ ಉಪಾಸನೆಗಳೂ ಎಲ್ಲರಿಗೂ ದಕ್ಕುವದಿಲ್ಲ, ಅವರವರ ಯೋಗ್ಯತೆಗೆ ತಕ್ಕಂತೆ ಒಂದೊಂದು ಉಪಾಸನೆಯನ್ನು ಮಾಡುವದು ಬೇಗನೆ ಫಲಕಾರಿಯಾಗುತ್ತದೆ. ಇದನ್ನರಿತೇ ವೇದೋಕ್ತವಾದ ಉಪಾಸನೆಗಳಲ್ಲಿ ಅಧಿಕಾರಭೇದದಿಂದ ಬೇರೆಬೇರೆಯ ಬಗೆಯ ಉಪಾಸನೆಗಳನ್ನು ಉಪದೇಶಮಾಡಿರುತ್ತದೆ. ಇದು ಈ ಉಪಾಸನೆಗಳಲ್ಲಿರುವ ಎರಡನೆಯ ವಿಶೇಷವು. ಸಾಕಾರೋಪಾಸನೆ, ನಿರಾಕಾರೋಪಾಸನೆ; ಸಗುಣೋಪಾಸನೆ, ನಿರ್ಗುಣೋಪಾಸನೆ; ಬಹಿರುಪಾಸನೆ, ಅಂತರುಪಾಸನೆ- ಎಂದು ಮುಂತಾಗಿ ಸ್ಥೂಲಸೂಕ್ಷ್ಮಬುದ್ಧಿಗಳಿಗೆ ಅನುಗುಣವಾಗಿ ಉಪಾಸನೆಗಳನ್ನು ಏರ್ಪಡಿಸಿರುವದು ವೇದಾಂತವೊಂದರಲ್ಲಿಯೇ. ಇದರ ಜೊತೆಗೆ ಈ ಉಪಾಸನೆಗಳು ಅನುಭವಾನುಸಾರಿಯೂ ಆಗಿರುವದೆಂಬುದು ಇದರ ಮೂರನೆಯ ವಿಶೇಷವಾಗಿರುತ್ತದೆ. ಉಪಾಸನೆಯು ಸುಮ್ಮನೆ ಶಾಸ್ತ್ರಶ್ರದ್ಧೆಯಿಂದ ನಂಬಬೇಕಾಗಿರುವದೆಂಬುದು ಧರ್ಮಗಳಲ್ಲೆಲ್ಲ ಸಮಾನವಾದರೂ ಶಾಸ್ತ್ರವು ಇಂಥ ಉಪಾಸನೆಯನ್ನು ಹೀಗೆ ಮಾಡಬೇಕೆಂದು ಏತಕ್ಕೆ ವಿಧಿಸಿರುತ್ತದೆ ಎಂಬುದನ್ನು ಶಾಸ್ತ್ರಿಯರೀತಿಯಿಂದ ವಿವರಿಸುವದಕ್ಕೆ ವೇದಾಂತದಲ್ಲಿ ಮಾತ್ರ ಸಾಧ್ಯವಾಗಿರುತ್ತದೆ. ಏಕೆಂದರೆ ಇಲ್ಲಿ ಅದೃಷ್ಟಫಲವುಳ್ಳ ಉಪಾಸನೆಗಳೇ ಅಲ್ಲದೆ ಇಲ್ಲಿಯೇ ಈಗಲೇ ಸಫಲವಾಗಬಹುದಾದ ಜ್ಞಾನವನ್ನೂ ಉಪದೇಶಮಾಡಿರುತ್ತದೆ. ಈ ಜ್ಞಾನದ ಕಣ್ಣಿಂದ ನೋಡಿದರೆ ಉಪಾಸನೆಗಳೆಂಬ ಸಾಧನಗಳು ಮಂದಮಧ್ಯಮಾಧಿಕಾರಿಗಳಿಗಾಗಿ ವಿಧಿರೂಪವಾಗಿ ಏರ್ಪಟ್ಟಿದ್ದರೂ ಅವೂ ವಸ್ತುಸ್ಥಿತಿಯನ್ನನುಸರಿಸಿಯೇ ವಿಹಿತವಾಗಿ

ರುತ್ತವೆ. ಅವುಗಳನ್ನನುಸರಿಸುವದರಿಂದ ಕೇವಲ ಶ್ರದ್ಧಾಮಾತ್ರಗಮ್ಯವಾದ ಜನ್ಮಾಂತರಲೋಕಾಂತರಗಳ ಫಲಗಳೇ ಅಲ್ಲದೆ ಇಂಥಿಂಥ ದೃಷ್ಟ-ಪ್ರಯೋಜನವೂ ಆಗಿಯೇ ತೀರಬೇಕು- ಎಂಬುದನ್ನು ಶಾಸ್ತ್ರೀಯರೀತಿಯಿಂದ ದೃಢಪಡಿಸುವದಕ್ಕೆ ಬರುವಂತಿರುತ್ತದೆ.

ವೇದಾಂತದಲ್ಲಿ ಉಪಾಸನೆಯೆಂಬ ಜ್ಞಾನವನ್ನಲ್ಲದೆ ಬೇರೆ ಬಗೆಯ ಜ್ಞಾನವೊಂದನ್ನೂ ಪ್ರತಿಪಾದಿಸಿರುತ್ತದೆ- ಎಂಬುದನ್ನು ಕೆಲವರು ಒಪ್ಪಿರುವದಿಲ್ಲ. ಆದರೆ ಅದನ್ನು ಒಪ್ಪಿರುವ ಶ್ರೀಗೌಡಪಾದಾಚಾರ್ಯರವರು ಮತ್ತು ಶ್ರೀಶಂಕರಾಚಾರ್ಯರವರು- ಇವರ ಪರಂಪರೆಯವರಾದ ಅದ್ವೈತಿಗಳ ಮತದಂತೆ ಕ್ರಮಮುಕ್ತಿಗೆ ಸಾಧನವಾಗಿರುವ ಉಪಾಸನೆಯೇ ಅಲ್ಲದೆ ಸದ್ಯೋಮುಕ್ತಿಗೆ ಸಾಧಕವಾಗಿರುವ ಜ್ಞಾನವೂ ಉಪನಿಷತ್ತುಗಳಲ್ಲಿ ಉಕ್ತವಾಗಿರುತ್ತದೆ. ಆ ದೃಷ್ಟಿಯಿಂದ ನೋಡಿದರೆ ಪ್ರತ್ಯಕ್ಷಾದಿಗಳು ಹೇಗೆ ಭೂತವಸ್ತುವನ್ನು ತಿಳಿಸುವ ಪ್ರಮಾಣಗಳೋ ಹಾಗೆಯೇ ಶಾಸ್ತ್ರವೂ ಭೂತವಸ್ತುವನ್ನು ತಿಳಿಸುವ ಪ್ರಮಾಣವಾಗಿರುತ್ತದೆ, ಶಾಸ್ತ್ರಶ್ರವಣದಿಂದ ಉಂಟಾಗುವ ಜ್ಞಾನವು ಉಪಾಸನೆಯಂತೆ ಕೇವಲ ಪರೋಕ್ಷಫಲವನ್ನುಂಟುಮಾಡುವದಾಗಿರುವದಿಲ್ಲ, ಅದು ನಮ್ಮ ಆತ್ಮನೇ ಆಗಿರುವ ಪರಮಾರ್ಥವಸ್ತುವನ್ನು ತಿಳಿಸಿಕೊಡುವದಾಗಿರುತ್ತದೆ. ಉಪಾಸನೆಯು ಮುಖ್ಯವಾಗಿ ಪರೋಕ್ಷವಾಗಿ ಪರಮಾತ್ಮನನ್ನು ಧ್ಯಾನಮಾಡುವದನ್ನು ತಿಳಿಸಿಕೊಡುತ್ತದೆ, ಅದು ಬಲಿತುಕೊಂಡರೆ ಉಪಾಸ್ಯಮೂರ್ತಿಯು ಎದುರಿಗೆ ಇರುವಷ್ಟು ಸ್ಫುಟವಾಗಿ ಕಾಣಲೂಬಹುದು. ಆದರೆ ಜ್ಞಾನದಿಂದ ಆಗುವ ವಸ್ತುಸಾಕ್ಷಾತ್ಕಾರವು ಈ ಬಗೆಯ ಅಭ್ಯಾಸದಿಂದ ಆಗುವದಲ್ಲ, ಕಣ್ಣುಬಿಟ್ಟ ಒಡನೆಯೇ ಎದುರಿಗಿರುವ ವಸ್ತುವಿನ ಸನ್ನಿಕರ್ಷದಿಂದ ಆ ವಸ್ತುವು ಇಂದ್ರಿಯ ಗೋಚರವಾಗಿ ನಮಗೆ ಹೇಗೆ ಅದರ ಜ್ಞಾನವಾಗಿಬಿಡುವದೋ ಅದರಂತೆಯೇ ವಾಕ್ಯಶ್ರವಣದಿಂದಾಗುವ ಜ್ಞಾನವು ಹುಟ್ಟಿದೊಡನೆಯೇ ನಮ್ಮ ಆತ್ಮನು ಆತ್ಮನಾಗಿರುವದರಿಂದ ಅತ್ಯಂತಸಮೀಪವಾಗಿರುವಂತೆ ತೋರಿಬರುತ್ತಾನೆ. ಇಂಥ ವಸ್ತುತಂತ್ರವಾಗಿರುವ ಜ್ಞಾನವೇ ನಿಜವಾದ ಜ್ಞಾನವೆಂದು ಆಚಾರ್ಯರವರ ಮತವಾಗಿರುತ್ತದೆ. ಪರಮಾತ್ಮತತ್ತ್ವವನ್ನು

ಸಾಕ್ಷಾತ್ಕಾರಮಾಡಿಕೊಳ್ಳುವದಕ್ಕೆ ಶ್ರವಣಮನನಗಳನ್ನು ಮಾತ್ರವೇ ಅಲ್ಲದೆ ನಿದಿಧ್ಯಾಸನವನ್ನೂ ಮಾಡಬೇಕೆಂದು ಶಾಸ್ತ್ರದಲ್ಲಿ ಹೇಳಿರುತ್ತದೆಯಾದರೂ ಈ ನಿದಿಧ್ಯಾಸನವು ಉಪಾಸನೆಯಲ್ಲ. ಶ್ರವಣಮಾಡಿದರ್ಥವನ್ನು ಯುಕ್ತಿಗೆ ಹೊಂದಿಸಿಕೊಂಡು ಮನನಮಾಡಿ ಅಸಂಭಾವನೆಯನ್ನು ಕಳೆದುಕೊಂಡ ಬಳಿಕ ಆತ್ಮತತ್ತ್ವವು ನಿಜವಾಗಿಯೂ ಅದ್ವಿತೀಯವಾಗಿ ನಿತ್ಯಶುದ್ಧಬುದ್ಧಮುಕ್ತ ಸ್ವಭಾವವಾಗಿರುವದೆಂಬುದನ್ನು ಕಂಡುಕೊಳ್ಳುವದಕ್ಕೆ ನಾವು ಮಾಡುವ ಮಾನಸವ್ಯಾಪಾರವೇ ನಿದಿಧ್ಯಾಸನವು.

ಹೀಗೆ ನೋಡಿದರೆ, ಶಾಸ್ತ್ರಶ್ರವಣಮಾಡಿದ ಬಳಿಕ ಬೇರೊಂದು ಬಗೆಯ ವಸ್ತುವಿನ ಭಾವನೆಯು ನಮ್ಮ ಮನಸ್ಸಿಗೆ ತಟ್ಟದಂತೆ ಸಂತತವಾಗಿ ಏಕರೂಪವಾಗಿ ಮಾಡುವ ಚಿಂತೆಯು ಉಪಾಸನೆಯೆನಿಸುವದೆಂದೂ ಆತ್ಮಸ್ವರೂಪವಿಷಯದಲ್ಲಿ ಶ್ರವಣಮನನಗಳನ್ನು ಮಾಡಿದ ಬಳಿಕ ನಮ್ಮ ವ್ಯಾವಹಾರಿಕಜ್ಞಾನದಿಂದಾಗಿರುವ ವಿಪರೀತಭಾವನೆಯನ್ನು ಕಳೆದುಕೊಳ್ಳುವದಕ್ಕಾಗಿ ನಮ್ಮಲ್ಲಿ ನಾವು ಶ್ರುತ್ಯರ್ಥವನ್ನು ಅನುಭವಕ್ಕೆ ಹೊಂದಿಸಿಕೊಳ್ಳುವದೇ ನಿದಿಧ್ಯಾಸನವೆಂದೂ ಗೊತ್ತಾಗುತ್ತದೆ. ನಿದಿಧ್ಯಾಸನದ ಫಲವಾಗಿ ಬರುವ ಜ್ಞಾನವು ನಮ್ಮ ಮೆದುಳಿನ ಭಾರವನ್ನು ಇಳಿಸಿ ವಸ್ತುತತ್ತ್ವವನ್ನು ಕರತಲಾಮಲಕವಾಗಿ ಮಾಡಿಕೊಡುತ್ತದೆ. ಲೌಕಿಕಶಾಸ್ತ್ರಗಳ ಜ್ಞಾನದಿಂದಲೇ ಮನುಷ್ಯನು ತನ್ನ ಅಜ್ಞಾನವನ್ನು ಕಳೆದುಕೊಂಡು ಪಶುತ್ವವನ್ನು ಮೀರಿ ಮನುಷ್ಯತ್ವವನ್ನು ಸಂಪಾದಿಸಿಕೊಳ್ಳುತ್ತಾನೆ; ಆದರೆ ವೇದಾಂತಜ್ಞಾನದಿಂದ ಆ ಮನುಷ್ಯತ್ವವನ್ನೂ ಮೀರಿ ದೇವತ್ವವನ್ನು ಸಂಪಾದಿಸಿಕೊಳ್ಳುತ್ತಾನೆ. ಸರ್ವವೂ ಬ್ರಹ್ಮಮಯವು ಎಂಬ ಅರಿವು ಉಪಾಸನಾರೂಪವಾದರೂ ಸಾಕು, ಭಯವು ಹೋಗಿಬಿಡುವದು, ಶಾಂತಿಯು ನೆಲೆಯಾಗಿ ನಿಲ್ಲುವದು; ಹೀಗಿರುವಲ್ಲಿ ವಸ್ತುತಂತ್ರವಾದ ಜ್ಞಾನವೇ ಉತ್ಪನ್ನವಾದರೆ ಅದರ ಪ್ರಯೋಜನವನ್ನು ಏನೆಂದು ವರ್ಣಿಸಬೇಕು ?

ಹೀಗಿರುವದರಿಂದ ವೇದಾಂತಜ್ಞಾನವನ್ನು ಸಂಪಾದಿಸಿಕೊಳ್ಳುವ ಕ್ರಮವೇ ನಿಜವಾದ ವಿದ್ಯಾಭ್ಯಾಸವೆನಿಸುವದು. ಏಕೆಂದರೆ ಆ ಜ್ಞಾನವು ಬಂದಮೇಲೆಯೇ ನಮ್ಮ ಬೇರೆಬೇರೆ ಜ್ಞಾನಗಳು ಪೂರ್ಣತ್ವವನ್ನು ಹೊಂದುವವು. ಆದಕಾರಣ ಭೌತಿಕಜ್ಞಾನವನ್ನು ಈ ಬ್ರಹ್ಮಜ್ಞಾನಕ್ಕೆ ಅಂಗವಾಗಿ ಭಾವಿಸಿ ಅವುಗಳನ್ನು ಕ್ರಮಪಡಿಸಿ

ಅಭ್ಯಾಸಮಾಡುತ್ತಾ ಬರಬೇಕು. ಆಗ ''**ಬ್ರಹ್ಮವಿದ್ಯಾಸರ್ವವಿದ್ಯಾ ಪ್ರತಿಷ್ಠಾಮ್**'' (ಬ್ರಹ್ಮವಿದ್ಯೆಯು ಎಲ್ಲಾ ವಿದ್ಯೆಗಳಿಗೂ ಪರ್ಯವಸಾನಸ್ಥಾನವೂ, ''**ಅಧ್ಯಾತ್ಮವಿದ್ಯಾ ವಿದ್ಯಾನಾಮ್**'' (ವಿದ್ಯೆಗಳಲ್ಲಿ ಅಧ್ಯಾತ್ಮವಿದ್ಯೆಯೇ ಪರಮೇಶ್ವರನ ವಿಭೂತಿಯೆಂದು ಉಪಾಸನೆಮಾಡಬೇಕು) - ಎಂಬ ಶಾಸ್ತ್ರವಚನವು ಸಾರ್ಥಕವಾಗುವದು.

★★★★★

# ಅಧ್ಯಾತ್ಮಜೀವನದ ಅಂತಸ್ತುಗಳು

**01-05-1936**

**ಶ್ರೀಶ್ರೀಗಳವರು**

ಜಗತ್ತಿನ ಇತಿಹಾಸವೆಲ್ಲ ಪರಿಪೂರ್ಣವಾದ ಜೀವನವು ಹೇಗಿರಬೇಕು?- ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಹಿಡಿಯುವ ಮಾನುಷಪ್ರಯತ್ನವೇ ಎನ್ನಬಹುದಾಗಿದೆ. ಎಷ್ಟೋ ನಾಗರಿಕತೆಗಳು ತಲೆದೋರಿ ಈ ಪ್ರಯತ್ನವನ್ನು ಮಾಡಿ ಒಳಸರಿದುಕೊಂಡಿರುತ್ತವೆ. ವೈದಿಕವಾಙ್ಮಯದಲ್ಲಿ 'ಅಧ್ಯಾತ್ಮಜೀವನ' ಎಂಬ ಒಂದಾನೊಂದು ಕ್ರಮವನ್ನು ಮುಂದಕ್ಕೆ ಹಿಡಿದಿರುತ್ತದೆ. ಈಗ ನಾವು ನಡೆಸುತ್ತಿರುವ ಜೀವನವು ಇದಕ್ಕಿಂತ ತೀರ ಭಿನ್ನವಾಗಿರುವದರಿಂದ ಇದರ ಸ್ವರೂಪವನ್ನು ವಿಚಾರಮಾಡುವದು ಪ್ರಯೋಜನಕಾರಿಯಾಗಿರುವದರಲ್ಲಿ ಸಂದೇಹವಿಲ್ಲ.

ಈಗಿನ ಜೀವನವನ್ನು 'ಆಧಿಭೌತಿಕಜೀವನ' ಎಂದು ಕರೆಯಬಹುದಾಗಿ ಇದೆ. ಇದರಲ್ಲಿ ಭೋಗ್ಯವಸ್ತುಗಳನ್ನು ರಾಶಿಯಾಗಿಟ್ಟುಕೊಳ್ಳುವದೇ ನಮ್ಮ ಧ್ಯೇಯವಾಗಿರುತ್ತದೆ. ಈ ಜೀವನದಲ್ಲಿ ಯಾರಿಗೂ ವಿಶ್ರಾಂತಿಯಿಲ್ಲ, ಎಲ್ಲರೂ ಎಡೆಬಿಡದೆ ಭೋಗ್ಯವಸ್ತುಗಳ ರಾಶೀಕರಣದಲ್ಲಿ ಉದ್ಯುಕ್ತರಾಗಿರುತ್ತಾರೆ, ಆದಷ್ಟು ಸ್ವಲ್ಪ ಹೊತ್ತಿನಲ್ಲಿ ಆದಷ್ಟು ಹೆಚ್ಚಾಗಿ ಕೂಡಿಹಾಕಬೇಕೆಂಬುದು ಅವರ ಗುರಿಯಾಗಿರುತ್ತದೆ. ಯಾರಿಗೂ ಇದರಿಂದ ಶಾಂತಿಯಿರುವದಿಲ್ಲ, ಮತ್ತೊಬ್ಬರು ನಮ್ಮನ್ನು ಎಲ್ಲಿ ಹಿಂದಕ್ಕೆ ತಳ್ಳುವರೋ ಎಂಬ ಅಂಜಿಕೆಯೂ, ಇರುವಷ್ಟು

ಭೋಗ್ಯರಾಶಿಯು ಕಡಿಮೆಯಾಗುವದಲ್ಲ!- ಎಂಬ ಯೋಚನೆಯೂ ಮನಸ್ಸಿಗೆ ಹತ್ತಿಕೊಂಡಿರುವವರೆಗೆ ಶಾಂತಿಯೆಲ್ಲಿಯದು? ನಾಗರಿಕರೆನ್ನಿಸಿಕೊಂಡಿರುವ ಜನಾಂಗದವರೆಲ್ಲ ಈ ಅವಿಶ್ರಾಂತಿಗೂ ಅಶಾಂತಿಗೂ ತುತ್ತಾಗಿರುತ್ತಾರೆ. ಇದು ಆಧಿಭೌತಿಕ ಜೀವನದ ದೃಶ್ಯವು.

ನಾವು ವಿಚಾರಮಾಡಬೇಕಾಗಿರುವ ಆಧ್ಯಾತ್ಮಿಕಜೀವನವು ಇದಕ್ಕೆ ವಿರುದ್ಧವಾಗಿರುತ್ತದೆ. ಪ್ರಜೆಗಳು, ರಾಜರು, ಅರ್ಥಶಾಸ್ತ್ರಜ್ಞರು, ರಾಜ ಕಾರಣಪಟುಗಳು-ಎಲ್ಲರೂ ಅಶಾಂತಿಯಲ್ಲಿ ಮುಳುಗಿ ಈ ನಾಗರಿಕತೆಯು ಹೀಗೇಕೆ ಹಸಗೆಟ್ಟು ಬೀಗವಾಗಿ ಕಾಣುತ್ತಿದೆ?- ಎಂದು ಯೋಚಿಸುತ್ತಿರುವ ಈ ಕಾಲದಲ್ಲಿ ಈ ಆಧ್ಯಾತ್ಮಿಕಜೀವನದ ವಿವರಣವು ಒಂದಿಷ್ಟು ಪ್ರಯೋಜನಕಾರಿಯಾಗಬಹುದೆಂಬ ನಂಬಿಕೆಯು ಮೊಳಕೆಯಾಗುತ್ತಿದೆ. ಈ ಜೀವನಕ್ರಮದಲ್ಲಿ ಹೊರಗಣ್ಣಿನಿಂದ ಭೋಗ್ಯವಸ್ತುಗಳ ಕಡೆಗೆ ದೃಷ್ಟಿಯನ್ನು ಚಾಚುವದನ್ನು ಬಿಟ್ಟು ನಮ್ಮ ನಮ್ಮೊಳಗೇ ನೋಡಿಕೊಳ್ಳುವದು ಮೊದಲನೆಯ ಹೆಜ್ಜೆಯಾಗಿರುತ್ತದೆ. ಭೌತಿಕ ವಸ್ತುಗಳ ರಾಶಿಯನ್ನು ಹಾಕಿಕೊಳ್ಳುವದು, ಭೌತಿಕವಿಜ್ಞಾನವನ್ನು ಹೆಚ್ಚಿಸುವದು- ಇವೆರಡೇ ಆಧಿಭೌತಿಕಜೀವನಕ್ಕೆ ಹೇಗೆ ಮುಖ್ಯವಾದ ಅಂಗಗಳಾಗಿರುತ್ತವೆಯೋ ಅದರಂತೆ ಹೊರಗಿನ ವಿಷಯಗಳಲ್ಲಿ ವಿರಕ್ತಿಯನ್ನು ಪಡೆಯುವದು, ಒಳಗಣ್ಣಿನಿಂದ ಎಲ್ಲಕ್ಕೂ ಕೇಂದ್ರವಾದ ಆತನ ವಿಷಯವಾದ ಜ್ಞಾನವನ್ನು ಪಡೆದುಕೊಳ್ಳುವದು- ಇವೆರಡೇ ಅಧ್ಯಾತ್ಮಜೀವನಕ್ಕೆ ಮುಖ್ಯವಾದ ಅಂಗಗಳಾಗಿರುತ್ತವೆ. ಆತ್ಮನಿಗಾಗಿ ಯೇ ಸರ್ವವೂ ಪ್ರಿಯವಾಗಿರುತ್ತದೆ, ಆತ್ಮನೇ ಎಲ್ಲಕ್ಕಿಂತಲೂ ಪ್ರಿಯತಮನಾಗಿರುತ್ತಾನೆ; ಆತ್ಮನೇ ಬ್ರಹ್ಮವು, ಎಂದರೆ ನಿರತಿಶಯವಾದ ಪರಮಾರ್ಥತತ್ತ್ವವು- ಎಂಬುದು ಈ ದೃಷ್ಟಿಯವರ ಮೂಲಭೂತವಾದ ಅಭ್ಯುಪಗಮವಾಗಿರುತ್ತದೆ. ಈ ಅಭ್ಯುಪಗಮವನ್ನು ಇಟ್ಟುಕೊಂಡು ಈ ಜೀವನದಲ್ಲಿ ಯಾವಯಾವ ಅಂತಸ್ತುಗಳಿರುವವೆಂಬುದನ್ನು ವಿಚಾರಿಸುವದು ಈ ಉಪನ್ಯಾಸದ ಉದ್ದೇಶವು.

ಆತ್ಮನೇ ಬ್ರಹ್ಮವಾಗಿರುವದರಿಂದ ಅಧ್ಯಾತ್ಮಜೀವನದಲ್ಲಿ ಸರ್ವವೂ ಆತ್ಮವಿಷಯವಾಗಿ ಅಥವಾ ಬ್ರಹ್ಮವಿಷಯವಾಗಿ ಇರುತ್ತದೆ. ಇಲ್ಲಿ

ಮೊಟ್ಟಮೊದಲನೆಯ ಅಂತಸ್ತಿಗೆ **ಬ್ರಹ್ಮಚರ್ಯ** ಎಂದು ಹೆಸರು. ಬ್ರಹ್ಮಚರ್ಯವು ವಿಷಯಚರ್ಯಕ್ಕೆ ವಿರುದ್ಧವಾಗಿರುತ್ತದೆ ವಿಷಯಗಳಲ್ಲಿ ಮನಸ್ಸನ್ನು ಬೆರೆಸಿಕೊಳ್ಳುವದೇ ಮೈಥುನವು, ಮೈಥುನಾಭಾವವೇ ಬ್ರಹ್ಮಚರ್ಯವು. ವಿಷಯಗಳಲ್ಲಿ ಮನಸ್ಸನ್ನಿಡದೆ ಇರುವದೆಂಬುದು ಸುಮ್ಮನೆ ದಕ್ಕುವದಿಲ್ಲ. ಅದಕ್ಕೆ ಬ್ರಹ್ಮಸಂಬಂಧವಾದ ವಿಚಾರವೂ ಓದುಬರವೂ ಬೇಕು. ವೇದಶಾಸ್ತ್ರಾದಿಗಳ ಅಧ್ಯಯನವೂ ವಿಚಾರವೂ ಬ್ರಹ್ಮಚರ್ಯವೆಂಬ ಶಬ್ದಕ್ಕೆ ಮೊಟ್ಟಮೊದಲನೆಯ ಅರ್ಥವಾಗಿರುತ್ತದೆ, ಬ್ರಹ್ಮಚರ್ಯದಿಂದ ಆಧ್ಯಾತ್ಮಿಕಶಕ್ತಿಯು ಸಜ್ಜುಗೊಳ್ಳುವದು, ನಮ್ಮ ಶರೀರವೂ ಇಂದ್ರಿಯಗಳೂ ಶುದ್ಧಿಯಾಗುವವು. ಯಾವನ ಇಂದ್ರಿಯಗಳಾಗಲಿ ಮನಸ್ಸಾಗಲಿ ವಿಷಯಗಳ ಸಂಪರ್ಕದಿಂದ ಕಲುಷಿತವಾಗಿರುವವೋ ಅವನಲ್ಲಿ ಪಾರಿಶುದ್ಧ್ಯವಿರುವದಿಲ್ಲ, ಅವನಲ್ಲಿ ಆಧ್ಯಾತ್ಮಿಕಶಕ್ತಿಯು ತೋರಿಕೊಂಡು ಬೆಳೆಯುವದೂ ಇಲ್ಲ. ಈ ಬ್ರಹ್ಮಚರ್ಯವು ಓದುವ ಹುಡುಗರಿಗೆ ಮಾತ್ರವೆಂದು ಭಾವಿಸಬಾರದು, ಗೃಹಸ್ಥಧರ್ಮದಲ್ಲಿಯೂ ಇದು ಸಾಗುತ್ತಿರಬೇಕು. ಗೃಹವೆಂಬುದು ಕಾಮುಕರ ಇಚ್ಛೆಯನ್ನು ನೆರವೇರಿಸುವ ವಿಲಾಸಗೃಹವಾಗಿರಬಾರದು, ಯಜಮಾನರಾದ ದಂಪತಿಗಳನ್ನೂ ಮಕ್ಕಳನ್ನೂ ಮನೆಯ ಪರಿವಾರದವರನ್ನೂ ಬ್ರಹ್ಮದ ಕಡೆಗೆ ಒಯ್ಯುವ ಪರಿಶುದ್ಧಸ್ಥಳವಾಗಿರಬೇಕು.

ಬ್ರಹ್ಮಚರ್ಯವೆಂಬುದನ್ನು ಕೇವಲ ಗರಡಿಯ ಸಾಧನೆಯಂತೆ ಕೆಲವು ದಿನ ನಡೆಸಿ ಬಿಡತಕ್ಕದ್ದಲ್ಲ, ಅದು ನಿತ್ಯಜೀವನದಲ್ಲಿ ಕಾಣುತ್ತಲೇ ಇರಬೇಕು. ಬ್ರಹ್ಮಚಾರಿಯಾದವನು ಹೇಗೆ ಅಧ್ಯಯನ, ಗುರುಸೇವೆ- ಮುಂತಾದ ಕರ್ಮಗಳಿಂದ ಬ್ರಹ್ಮಚರ್ಯಕ್ಕೆ ಕಳೆಯನ್ನು ತಂದುಕೊಳ್ಳುವನೋ ಹಾಗೆಯೇ ಗೃಹಸ್ಥನಾದವನೂ ಅತಿಥಿಸತ್ಕಾರ, ಪರೋಪಕಾರ ಮುಂತಾದ ರೀತಿಗಳಿಂದ ತನ್ನ ಜೀವನಕ್ಕೆ ಕಳೆಯನ್ನು ತಂದುಕೊಳ್ಳಬೇಕು. ತಾನು ಮಾಡುವದೆಲ್ಲ ಬ್ರಹ್ಮಾರ್ಪಣವೆಂದು ಭಾವಿಸುತ್ತಾ ಇರುವದು ಬ್ರಹ್ಮಚರ್ಯದ ಮೇಲಿನ ಅಂತಸ್ತು; ಇದನ್ನು **ಬ್ರಹ್ಮಕರ್ಮ** ಎಂಬ ಹೆಸರಿನಿಂದ ಕರೆಯಬಹುದಾಗಿದೆ. ತನ್ನ ಜೀವನವೆಲ್ಲ ಪರಮಾತ್ಮನ ಸೇವೆಯೇ ಎಂಬ ಭಾವನೆಯಿಂದ ಜೀವನವನ್ನೇ ಪರಮೇಶ್ವರನಿಗೆ ಅರ್ಪಿಸಿ ಬಾಳುವಾತನು ಈ ಎರಡನೆಯ ಅಂತಸ್ತಿಗೆ ಮುಟ್ಟಿರುತ್ತಾನೆ.

ಇದಕ್ಕೂ ಮೇಲಿನ ಅಂತಸ್ತಿಗೆ **ಬ್ರಹ್ಮವಿದ್ಯೆ** ಎಂದು ಹೆಸರಿಡಬಹುದಾಗಿದೆ. ಬ್ರಹ್ಮವಿದ್ಯೆಗೆ ಯೋಗವೇ ರಹಸ್ಯವು, ಯೋಗವೆಂದರೆ ಧ್ಯೇಯವಸ್ತುವಿನೊಳಗೆ ಹೊಕ್ಕು ಅದರಲ್ಲಿ ಐಕ್ಯವಾಗಿಬಿಡುವದು. ಒಂದು ಚಿತ್ರದ ಉದ್ದ, ಅಗಲ, ಗೆರೆಯ ದಿಕ್ಕು-ಮುಂತಾದವುಗಳನ್ನು ಪರೀಕ್ಷಿಸುವದಕ್ಕೂ ಅದರ ಸೌಂದರ್ಯದಿಂದ ಮುಗ್ಧನಾಗಿ ಅದರಲ್ಲಿಯೇ ಮುಳುಗಿಹೋಗುವದಕ್ಕೂ ಎಷ್ಟು ತಾರತಮ್ಯವಿರುವದೋ ಇಂದ್ರಿಯಗಳ ಮೂಲಕ ವಸ್ತುಗಳ ಮೇಲುಮೇಲನ್ನೇ ಪರೀಕ್ಷಿಸುವ ಭೌತಿಕವಿದ್ಯೆಗೂ ವಸ್ತುಗಳ ತಿರುಳಾದ ಬ್ರಹ್ಮವನ್ನೇ ತಿಳಿದುಕೊಳ್ಳುವದಕ್ಕೂ ಅಷ್ಟು ತಾರತಮ್ಯವಿರುವದು. ಒಂದು ಸುಂದರವಾದ ಹೂವು, ಒಂದು ಇಂಪಾದ ಗಾನ, ಒಂದು ಚಿತ್ತಾಕರ್ಷಕವಾದ ಲೀಲೆಯ ಮಗು- ಇವುಗಳ ಅರಿವಿನಲ್ಲಿಯೂ ಚಿತ್ರದ ಅರಿವಿನಂತೆಯೇ ಎರಡು ಬಗೆಯ ಅರಿವುಗಳಿರುವವು. ಒಂದು ಮೇಲೆಮೇಲೆಯೇ ಅರಿಯುವದು, ಇನ್ನೊಂದು ಅದರ ಒಳಗೇ ಹೊಕ್ಕು ತನ್ನ ವ್ಯಕ್ತಿತ್ವವನ್ನು ಕೂಡ ಮರೆತು ಅದರ ಅರಿವಿನ ಆನಂದವನ್ನು ಪಡೆಯುವದು. ಯಾವದೊಂದು ವಸ್ತುವನ್ನು ತಿಳಿದುಕೊಂಡರೆ ಎಲ್ಲವನ್ನೂ ಅರಿತಂತಾಗುವದೋ ಅದೇ ಬ್ರಹ್ಮವು; ಆ ಬ್ರಹ್ಮವನ್ನು ತನಗಿಂತ ಹೊರಗಿನ ವಸ್ತುವಾಗಿ ತಿಳಿದರೆ ಸಾಲದು, ನಿಜವಾಗಿ ನೋಡಿದರೆ ಹಾಗೆ ಅದನ್ನು ಹೊರಗಿನ ವಿಷಯವಾಗಿ ತಿಳಿಯುವದಕ್ಕೆ ಆಗುವಂತೆಯೂ ಇಲ್ಲ, ಜಗತ್ತಿನ ತಿರುಳೇ ಆತ್ಮನು, ಆ ಆತ್ಮನೇ ನನ್ನ ಆತ್ಮನು-ಎಂದು ಅರಿಯದೆ ಅರಿಯುವ, ತಾದಾತ್ಮ್ಯದಿಂದ ನೇರಾಗಿ ತಿಳಿದುಕೊಳ್ಳುವ, ಜಗತ್ತೆಲ್ಲವನ್ನೂ ನಂದನವನವಾಗಿ ಮಾಡಿಕೊಳ್ಳುವ ತಿಳಿವೇ **ಬ್ರಹ್ಮವಿದ್ಯೆಯು.**

★★★★★

# ಅಧ್ಯಾಸಭಾಷ್ಯದ ಮಹತ್ತ್ವ

**16-5-1937**

**ಶ್ರೀಶ್ರೀಗಳವರು**

ವಿಷಯರಾಶಿಯಲ್ಲಿ ಒಂದೊಂದು ವಿಭಾಗವನ್ನು ಆರಿಸಿಕೊಂಡು ವಿಚಾರ ಮಾಡುವ ಶಾಸ್ತ್ರಗಳು ಹೇರಳವಾಗಿವೆ; ಆದರೆ ವಿಷಯವು ವಿಷಯಿಯ ಅಧೀನವೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಂಡಿರುವ ದರ್ಶನಗಳು ಬಹು ವಿರಳ. ಅದರಲ್ಲಿಯೂ ಹೊರಗಿನ ಶಬ್ದಾದಿಗಳಂತೆ ಒಳಗಿನ ಇಂದ್ರಿಯಗಳೂ ಮನಸ್ಸೂ ಎಲ್ಲವೂ ವಿಷಯವೇ ಎಂಬುದನ್ನೂ ಈ ವಿಷಯರಾಶಿಯನ್ನೆಲ್ಲ ತನ್ನ ನಿತ್ಯವಾದ ಚೈತನ್ಯಪ್ರಕಾಶದಿಂದ ಬೆಳಗುತ್ತಿರುವ ಆತ್ಮನೇ ಪರಮಾರ್ಥವಿಷಯಿಯು ಎಂಬುದನ್ನೂ ಜಿಜ್ಞಾಸುಗಳ ಮನಸ್ಸಿಗೆ ಹತ್ತುವಂತೆ ಹೇಳಿರುವ ದರ್ಶನವು- ಶಾಂಕರವೇದಾಂತವೊಂದನ್ನು ಬಿಟ್ಟರೆ- ಒಂದೂ ಇಲ್ಲ. ಈ **ನಿಜವಾದ ವಿಷಯಿಯ** ಅಧೀನವಾಗಿಯೇ ವಿಷಯರಾಶಿಯೆಲ್ಲವೂ ಇರವನ್ನು ಪಡೆದಿರುತ್ತದೆ; ಆದ್ದರಿಂದ ಸಾಪೇಕ್ಷವಾಗಿ ಇರವನ್ನುಳ್ಳ ಅಂತಃಕರಣ, ಪ್ರಾಣ, ಇಂದ್ರಿಯ, ದೇಹ, ಶಬ್ದಾದಿ ವಿಷಯಗಳು- ಎಂಬ ಅನಾತ್ಮಕ್ಕೆ ಪರಮಾರ್ಥವಾದ ಇರವು ಇಲ್ಲವೇ ಇಲ್ಲವೆನ್ನ ಬಹುದು. ದ್ರವ್ಯ, ಗುಣ, ಕರ್ಮ, ಜೀವ, ಸ್ವಭಾವ, ಕಾಲ-ಮುಂತಾದವು ಪರಮಾತ್ಮನ ಅನುಗ್ರಹದಿಂದಲೇ ಇರುವವೆಂದೂ ಅದಿಲ್ಲದಿದ್ದರೆ ಅವು ಇಲ್ಲವೇ ಇಲ್ಲವೆಂದೂ ದೊಡ್ಡವರು ಹೇಳುವ ಮಾತಿಗೆ ಇದೇ ಅರ್ಥ. ಹೀಗೆ ವಿಷಯಿಯಾಗಿ ರುವ ಆತ್ಮನೇ ಸತ್ಯ, ಅನಾತ್ಮವೆಲ್ಲವೂ ಅನೃತ- ಎಂಬುದನ್ನು ಸ್ಪಷ್ಟವಾಗಿ ತಿಳಿಯಪಡಿಸಿರುವದು ಅಧ್ಯಾಸಭಾಷ್ಯದಲ್ಲಿಯೇ.

ಪರಮಾರ್ಥದೃಷ್ಟಿಯಿಂದ ನೋಡಿದಕೂಡಲೆ ಹೀಗೆ ಆತ್ಮಾನಾತ್ಮಗಳ ಸ್ವರೂಪದ ನಿಜವು ಕಂಡುಬರುವದಾದರೂ ಜನರು ಅನಾತ್ಮವನ್ನೇ ಸತ್ಯವೆಂದು ತಿಳಿದು ತಮ್ಮ ನಿಜವಾದ ಸ್ವರೂಪವಾದ ಆತ್ಮನನ್ನೇ ಇಲ್ಲವೆಂದು ಭಾವಿಸುವಷ್ಟು ಮೂಢರಾಗಿರುತ್ತಾರೆ. ಆದ್ದರಿಂದಲೇ ಆತ್ಮನ ಇರವು, ಅರಿವು, ಸುಖ-ಮುಂತಾದವುಗಳನ್ನು ಅನಾತ್ಮದಲ್ಲಿಯೇ ಆರೋಪಿಸಿಕೊಂಡು

ದೇಹಾದಿಗಳಲ್ಲಿ ಒಂದನ್ನು ನಾನೆಂದುಕೊಳ್ಳುತ್ತಾ ಅನಾತ್ಮಧರ್ಮಗಳಾದ ಹುಟ್ಟುವದು, ಬೆಳೆಯುವದು, ಸೊರಗುವದು, ಸಾಯುವದು- ಮುಂತಾದವುಗಳು ತಮ್ಮ ಧರ್ಮಗಳೇ ಎಂದುಕೊಳ್ಳುತ್ತಿರುತ್ತಾರೆ. ಹೀಗೆ ಆತ್ಮಾನಾತ್ಮಗಳನ್ನು ಒಂದನ್ನು ಮತ್ತೊಂದೆಂದು ಭಾವಿಸುತ್ತಾ ಅವುಗಳ ಧರ್ಮಗಳನ್ನು ಅವಿವೇಕದಿಂದ ಒಂದರಲ್ಲೊಂದನ್ನು ಹುಟ್ಟುಗಟ್ಟಿಕೊಳ್ಳುತ್ತಿರುವದಕ್ಕೆ ಅಧ್ಯಾಸವೆಂದು ಹೆಸರು. ಈ **ಅಧ್ಯಾಸವು** ತಪ್ಪುತಿಳಿವಳಿಕೆಯ ಫಲವಾದ್ದರಿಂದ ಇದಕ್ಕೆ ಅವಿದ್ಯೆಯೆಂಬ ಹೆಸರೂ ಬಂದಿರುತ್ತದೆ. **ಅವಿದ್ಯೆ**ಯಿಂದಲೇ ಜನರು ಕಾಮಪ್ರೇರಿತರಾಗಿ ಕರ್ಮವನ್ನು ಮಾಡುತ್ತಾ ಸಂಸಾರದ ಅನರ್ಥಗಳನ್ನು ಅನುಭವಿಸುತ್ತಿರುವರೆಂದೂ ಪರಮಾರ್ಥವನ್ನು ತಿಳಿದುಕೊಳ್ಳುವದೆಂಬ **ವಿದ್ಯೆ**ಯಿಂದ ಅದನ್ನು ತೊಲಗಿಸಿಕೊಂಡರೆ ಕರ್ಮಬಂಧದಿಂದ ಸಂಪೂರ್ಣವಾಗಿ ಬಿಡುಗಡೆಯಾಗುವರೆಂದೂ ಸ್ಫುಟವಾಗಿ ತಿಳಿಸಿಕೊಟ್ಟ ಕೀರ್ತಿಯು ಆಚಾರ್ಯರ ಅಧ್ಯಾಸಭಾಷ್ಯಕ್ಕೇ ಮೀಸಲಾಗಿರುತ್ತದೆ.

ಮಿಕ್ಕ ದರ್ಶನಗಳಲ್ಲಿ ಪ್ರಮಾಣವೇ ತತ್ತ್ವನಿರ್ಧಾರಣೆಗೆ ಒರೆಗಲ್ಲೆಂದು ಭಾವಿಸಲಾಗಿರುತ್ತದೆ. ಅದರಲ್ಲಿಯೂ ನ್ಯಾಯಶಾಸ್ತ್ರವು **ಪ್ರಮಾಣಶಾಸ್ತ್ರ**ವೆಂದೇ ಪ್ರಸಿದ್ಧವಾಗಿರುತ್ತದೆ; ಪ್ರಮಾಣಕ್ಕೆ ಎಷ್ಟು ಹೆಚ್ಚಿನ ಬೆಲೆಯಿರುವದೆಂಬುದನ್ನು ತಿಳಿಸಿಕೊಡುವದಕ್ಕಾಗಿ ನ್ಯಾಯಭಾಷ್ಯಕಾರರು ''**ನಮಃ ಪ್ರಮಾಣಾಯ**'' ಎಂದು ಪರಮೇಶ್ವರನ್ನು ಕೂಡ ಪ್ರಮಾಣವೆಂಬ ಹೆಸರಿನಿಂದ ಕರೆದಿರುತ್ತಾರೆ. ಆದರೆ ದೇಹವು ತಾನೆಂದೂ ಇಂದ್ರಿಯಗಳು ತನ್ನವೆಂದೂ ಇಟ್ಟುಕೊಂಡ ಹೊರತು ಯಾವನೂ ಪ್ರಮಾತೃವೆನಿಸಲಾರನು; ಪ್ರಮಾತೃವೇ ಇಲ್ಲದಿದ್ದರೆ ಪ್ರಮಾಣಗಳ ವ್ಯಾಪಾರಕ್ಕೆ ಅವಕಾಶವಿರುವದೇ ಇಲ್ಲ. ಮೇಲೆ ಹೇಳಿರುವಂತೆ ದೇಹಾದಿಗಳು ತಾನೆಂದು ತಿಳಿಯುವದು ಮಿಥ್ಯಾಜ್ಞಾನವೇ ಆಗಿರುವದರಿಂದ ಪ್ರಮಾತೃತ್ತ್ವವೂ ಅದನ್ನಾಶ್ರಯಿಸಿಕೊಂಡಿರುವ ಪ್ರಮಾಣಪ್ರಮೇಯವ್ಯವಹಾರವೂ ಆವಿದ್ಯಕವೇ ಎಂದು ಸಿದ್ಧವಾಗುತ್ತದೆ. ಆದಕಾರಣ ಪ್ರಮಾಣಸಿದ್ಧವೇ ಯಥಾರ್ಥವೆಂದು ಇತರ ದರ್ಶನಕಾರರು ಹೇಳುತ್ತಿದ್ದರೂ ಅವರು ಹೇಳುವ ಯಥಾರ್ಥಜ್ಞಾನ, ಅಯಥಾರ್ಥಜ್ಞಾನ- ಈ ಎರಡೂ ಅಧ್ಯಾಸರೂಪವಾದ ಮಿಥ್ಯಾಜ್ಞಾನದಲ್ಲಿಯೇ ಅಡಕವಾಗುವವೆಂಬ ಉತ್ತಮವಾದ ತತ್ತ್ವವೊಂದು ಮೇಲೆಕಂಡ ವಿಚಾರದಿಂದ

ಏರ್ಪಡುತ್ತದೆ. ಸಾಮಾನ್ಯರಿಗೆ ಅತಿಗಹನವಾಗಿರುವ ಈ ವಿಚಾರವನ್ನು ಸ್ಪಷ್ಟಪಡಿಸಿರುವದು ಅಧ್ಯಾಸಭಾಷ್ಯದ ಮತ್ತೊಂದು ಹೆಚ್ಚುಗಾರಿಕೆಯಾಗಿರುತ್ತದೆ.

ಈಗಿನ ವೇದಾಂತಜಿಜ್ಞಾಸುಗಳಲ್ಲಿ ಕೆಲವರು ತರ್ಕವನ್ನೂ ಮತ್ತೆ ಕೆಲವರು ಶಾಸ್ತ್ರವನ್ನೂ ಉತ್ಕೃಷ್ಟವೆಂದು ಭಾವಿಸಿ ಒಬ್ಬರೊಡನೊಬ್ಬರು ವಿವಾದಮಾಡುತ್ತಿರುವದು ಕಂಡುಬರುತ್ತಿದೆ. ಆದರೆ ಮೇಲೆ ವಿವರಿಸಿರುವಂತೆ ತಾನು ಜಿಜ್ಞಾಸುವು ಎಂದು ಭಾವಿಸಿರುವದರಲ್ಲಿಯೇ ದೇಹೇಂದ್ರಿಯಗಳು ನಾನು, ಅವು ನನ್ನವು - ಎಂಬ ಮಿಥ್ಯಾಭಿಪ್ರಾಯವು ಸೇರಿಕೊಂಡುಹೋಗಿ ರುವದರಿಂದ ತರ್ಕವಾಗಲಿ ಶಾಸ್ತ್ರವಾಗಲಿ ಅವಿದ್ಯಾಭೂಮಿಗಿಂತ ಮೇಲೆ ಇರುವದಿಲ್ಲವೆಂದು ಸ್ಪಷ್ಟವಾಗುವದರಿಂದ ಈ ವಿವಾದವು ವ್ಯರ್ಥವೆಂದು ತಾನೇ ಸಿದ್ಧವಾಗುತ್ತದೆ. ಆದ್ದರಿಂದ ಅಧ್ಯಾಸದ ಮಹತ್ತ್ವವನ್ನು ಅರಿಯದೆ ಈ ವಾದಿಗಳಿಬ್ಬರೂ ಕಚ್ಚಾಡುತ್ತಿರುವರೆಂದು ಹೇಳಬೇಕಾಗಿದೆ. ಇದೂ ಅಲ್ಲದೆ ತರ್ಕವು ಪ್ರಮಾಣಶುದ್ಧಿಗೋಸ್ಕರವಾಗಿಯೇ ಉಪಯುಕ್ತವಾಗುವದರಿಂದಲೂ ಅವಿದ್ಯಾಧೀನವಾದ ಪ್ರಮಾಣದ ಬಾಲವನ್ನೇ ಅನುಸರಿಸುವ ತರ್ಕವು ತಾನೂ ಆವಿದ್ಯಕವಾಗುವದೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಇದನ್ನೂ ಪ್ರತ್ಯಕ್ಷಾದಿಪ್ರಮಾಣಗಳಂತೆ ಶಾಸ್ತ್ರವೂ ಅವಿದ್ಯಾವಂತರ ವಿಷಯದಲ್ಲಿಯೇ ಪ್ರವರ್ತಿಸುವದೆಂಬುದನ್ನೂ ಸ್ಪಷ್ಟಗೊಳಿಸಿರುವದು ಅಧ್ಯಾಸಭಾಷ್ಯದ ಇನ್ನೊಂದು ಹೆಚ್ಚುಗಾರಿಕೆಯಾಗಿರುತ್ತದೆ.

''ನಾನು ಪ್ರಮಾತೃವು ಕರ್ತೃಭೋಕ್ತೃಸ್ವರೂಪನು'' ಎಂದು ನಾವು ತಪ್ಪುತಿಳಿವಳಿಕೆಯಿಂದ ದುಃಖಿಸುತ್ತಿರುವಾಗಲೂ ನಿಜವಾದ ನಮ್ಮ ಸ್ವರೂಪವು ಅಚ್ಚಳಿಯದೆ ತನ್ನ ಸಚ್ಚಿದಾನಂದಸ್ವರೂಪದಲ್ಲಿಯೇ ಇರಬೇಕಷ್ಟೆ. ಶಾಸ್ತ್ರದಿಂದಾಗುವ ಜ್ಞಾನದಿಂದ ನಮಗೆ ಮೋಕ್ಷವಾಗುವದೆಂದರೆ ನಾವು ಅಧ್ಯಾಸ ಮಾಡಿಕೊಂಡಿರುವ ಅನೃತವಾದ ಬಂಧವು ಹೋಗುವದೇ ಹೊರತು ನಮ್ಮ ಸ್ವರೂಪವೇನೂ ಆಗಬೇಕಾಗಿ ರುವದಿಲ್ಲವೆಂದು ಇದರಿಂದ ಸ್ಫುಟವಾಗುತ್ತದೆ. ಹೀಗಿರುವದರಿಂದ ಶಾಸ್ತ್ರವು ನಮ್ಮ ನಿತ್ಯಸಿದ್ಧವಾದ ಸಚ್ಚಿದಾನಂದರೂಪವನ್ನು ತಿಳಿಸಿಕೊಡುತ್ತದೆಯೇ ಹೊರತು ಇಲ್ಲದ ರೂಪವನ್ನೇನೂ ಹೊಸದಾಗಿ ತಂದುಕೊಡುವದಿಲ್ಲವೆಂದಾಯಿತು. ಇದನ್ನು ತಿಳಿಸಿಕೊಟ್ಟಿರುವದೂ ಅಧ್ಯಾಸಭಾಷ್ಯದ ಒಂದು ವಿಶೇಷವಾಗಿರುತ್ತದೆ.

ಹೀಗೆ ಅಧ್ಯಾಸಭಾಷ್ಯವು ನಮ್ಮಗಳ ಅನುಭವದಲ್ಲಿ ಸಿದ್ಧವಾಗುವ ವಿಚಾರಗಳನ್ನೇ ತಿಳಿಯಪಡಿಸುವದರಿಂದ ಇದರಿಂದ ನಾವು ತಿಳಿದುಕೊಳ್ಳಬೇಕಾಗಿರುವದೇನೂ ಇಲ್ಲವೆಂದು ಕಡೆಗಣಿಸುವಹಾಗಿಲ್ಲ; ಏಕೆಂದರೆ ಈ ಭಾಷ್ಯವನ್ನು ಓದಿದ ಮೇಲೆಯೂ **ಅಧ್ಯಾಸದ ಸ್ವರೂಪವನ್ನು** ಸರಿಯಾಗಿ ತಿಳಿದುಕೊಳ್ಳಲಾರದೆ ಪಂಡಿತರಾದವರು ಕೂಡ ಪೇಚಾಡುತ್ತಿರುವದು ಈಗಲೂ ನಮಗೆ ಗೋಚರವಾಗುತ್ತಿದೆ. ಉದಾಹರಣೆಗೆ ಆತ್ಮ, ಅನಾತ್ಮ-ಇವುಗಳನ್ನು ಬಿಡಿಸಿ ತಿಳಿದುಕೊಳ್ಳಲಾರದೆ ಒಂದರ ಧರ್ಮವನ್ನು ಮತ್ತೊಂದರಲ್ಲಿ ಆರೋಪಿಸುವದೇ ಅಧ್ಯಾಸವೆಂದು ಕೆಲವರು ವಿದ್ವಾಂಸರು ತಿಳಿದುಕೊಂಡಿರುತ್ತಾರೆ, ಆತ್ಮಾನಾತ್ಮಗಳ ಧರ್ಮಗಳನ್ನು ಪರಸ್ಪರವಾಗಿ ಆರೋಪಿಸುವದು ತಪ್ಪುತಿಳಿವಳಿಕೆಯ ಧರ್ಮವೇ ಆದರೂ ಅಧ್ಯಾಸಭಾಷ್ಯದಲ್ಲಿ ಹೇಳಿರುವ ಅಧ್ಯಾಸಕ್ಕೂ ಈ ಅಧ್ಯಾಸಕ್ಕೂ ಒಂದು ಮುಖ್ಯವಾದ ವೈಷಮ್ಯವಿರುತ್ತದೆ; ಅದೇನೆಂದರೆ ಅನಾತ್ಮವು ಅಸತ್ಯವೆಂಬ ಒಂದು ಪ್ರಧಾನವಿಚಾರವನ್ನೇ ಇಲ್ಲಿ ಕೈಬಿಟ್ಟಿರುತ್ತದೆ, ಪ್ರಕೃತಿಪುರುಷರನ್ನು ವಿವೇಚನೆಮಾಡದೆ ಇರುವ ಅವಿವೇಕದಿಂದ ಸಂಸಾರವಾಗಿರುವದೆಂದು ಹೇಳುವ **ಸಾಂಖ್ಯರ ಮತವನ್ನೇ** ಈ ವಿದ್ವಾಂಸರು ಅಧ್ಯಾಸವೆಂದು ತಿಳಿದುಕೊಂಡು ಮೋಸ ಹೋಗಿರುತ್ತಾರೆ. ಆತ್ಮನು ಸರ್ವವಿಧದಲ್ಲಿಯೂ ಅದ್ವಿತೀಯನಾಗಿ ನಿತ್ಯಶುದ್ಧ ಬುದ್ಧಮುಕ್ತಸ್ವಭಾವನಾಗಿರುತ್ತಾನೆಂಬ ತತ್ತ್ವವು ಸಾಂಖ್ಯರು ಹೇಳುವ ವಿವೇಕದಿಂದ ಏರ್ಪಡುವದೇ ಇಲ್ಲ; ಅದಕ್ಕೆ ಅಧ್ಯಾಸಭಾಷ್ಯದಲ್ಲಿ ಹೇಳಿರುವ ಆತ್ಮೈಕತ್ವ ವಿದ್ಯೆಯೇ ಅವಶ್ಯವಾಗಿರುತ್ತದೆ.

**ಅವಿದ್ಯೆಗೆ ಪ್ರಮಾಣವೇನು** ?- ಎಂದು ಕೇಳುವ ಪಂಡಿತರೂ ಅದಕ್ಕೆ ಅರ್ಥಾಪತ್ತಿ, ಅನುಮಾನ, ಆಗಮ- ಎಂಬ ಪ್ರಮಾಣಗಳನ್ನು ತೋರಿಸುವ ಪಂಡಿತರೂ ಪ್ರಮಾಣವ್ಯವಹಾರವೇ ಆವಿದ್ಯಕವೆಂಬ ಬಹುಮುಖ್ಯವಾದ ವಿಷಯವನ್ನು ಮರೆತುಬಿಟ್ಟಿರುತ್ತಾರೆ. ಅವಿದ್ಯೆಯು ಸಾಮಾನ್ಯಜನರ ದೃಷ್ಟಿವಿಶೇಷವೆಂದೂ ವಿದ್ಯೆಯೆಂಬುದು ಅದನ್ನು ಕದಲಿಸುವ ವೇದಾಂತದೃಷ್ಟಿಯೆಂದೂ ಅಧ್ಯಾಸಭಾಷ್ಯದಲ್ಲಿ ತಿಳಿಸಿರುವದನ್ನು ಅಸಡ್ಡೆಯಿಂದ ನೋಡುವದೇ ಇವರಿಬ್ಬರ ಭ್ರಾಂತಿಗೆ ಕಾರಣವಾಗಿರುತ್ತದೆ.

ಅಧ್ಯಾಸಕ್ಕೆ ಕಾರಣವನ್ನು ಹೇಳದೆ ಇರುವದು ಈ ಭಾಷ್ಯದ ಒಂದು ಕೊರತೆಯೆಂದು ಕೆಲವರು ವಾದಿಗಳು ಅಭಿಪ್ರಾಯಪಟ್ಟಿರುತ್ತಾರೆ. ಆ ವಾದಿಗಳ ಸಮಾಧಾನಕ್ಕಾಗಿ ಅಧ್ಯಾಸದ ಕಾರಣವನ್ನು ಕಂಡುಹಿಡಿದು ತಿಳಿಸುವದಕ್ಕೂ ಕೆಲವರು ಪಂಡಿತರು ಹೊರಟಿರುತ್ತಾರೆ. ಆದರೆ ಕಾರ್ಯಕಾರಣಭಾವವು ಅನಾತ್ಮರೂಪವಾದ ಒಟ್ಟು ಪ್ರಪಂಚದಲ್ಲಿಯೇ ಇರುವದೇ ಹೊರತು ಅದರ ಹೊರಗೆ ಇರಲಾರದೆಂಬುದನ್ನೂ ಕಾರ್ಯಕಾರಣರೂಪವಾದ ಈ ಅನಾತ್ಮವೇ ಅಧ್ಯಸ್ತವಾಗಿರುವದರಿಂದ ಅಧ್ಯಾಸಕ್ಕೆ ಕಾರಣವೊಂದು ಅದರ ಹಿಂದುಗಡೆ ಅವಿತುಕೊಂಡಿರಲಾರದೆಂಬುದನ್ನೂ ಈ ವಾದಿಗಳಿಬ್ಬರೂ ಮರೆತುಬಿಟ್ಟಿರುತ್ತಾರೆ.

ಅಧ್ಯಾಸದ ಸ್ವರೂಪವನ್ನು ವಿಚಾರದಿಂದ ತಿಳಿದರೂ ಅವಿದ್ಯಾವಾಸನೆಯು ಕ್ಷಯವಾಗದೆ ಇದ್ದರೆ ಪರಮಾರ್ಥಜ್ಞಾನವು ಹುಟ್ಟುವದಿಲ್ಲ- ಎಂದು ಕೆಲವರು ಅಭಿಪ್ರಾಯಪಡುತ್ತಿದಾರೆ.

**ಯಾವಜ್ಜೀವಮನಿನ್ದ್ಯಯಾ ಚ ರಮತೇ ಶಾಸ್ತ್ರಾರ್ಥಸಞ್ಜ್ಞಾತಯಾ ।**
**ತುಲ್ಯಂ ವಾಸನಯಾ ಮನೋ ಹಿ ಮುನಿವನ್ಮೌನೇನ ರಾಗಾದಿಷು ॥**
**ಪಶ್ಚಾತ್ಪಾವನಪಾವನಂ ಪದಮಜಂ ತತ್ಪ್ರಾಪ್ಯತಚ್ಛೀತಲಮ್ ।**
**ತತ್ಸಂಸ್ಥೇನ ನ ಶೋಚ್ಯತೇ ಪುನರಲಂ ಪುಂಸಾ ಮಹಾಪತ್ಸ್ವಪಿ॥**

ಎಂಬ ವಾಸಿಷ್ಠೋಕ್ತಿಯಂತೆ ಒಂದೇ ಸಮನೆ ಶಾಸ್ತ್ರಾರ್ಥದಿಂದುಂಟಾದ ಉತ್ತಮವಾಸನೆಯನ್ನು ಪಡೆದುಕೊಂಡು ಮೌನದಿಂದ ಇದ್ದಬಳಿಕ ಬ್ರಹ್ಮ ಸ್ವರೂಪದಲ್ಲಿನಿಷ್ಠೆಯನ್ನು ಹೊಂದಿ ಶೋಕದೂರವಾದ ಸ್ಥಿತಿಯನ್ನು ಪಡೆಯಬೇಕು- ಎಂಬುದು ಈ ವಾಸನಾಕ್ಷಯವಾದಿಗಳ ಮತವು. ಈ ಮತಕ್ಕೆ ಬುಡಭದ್ರವಿಲ್ಲ. ಏಕೆಂದರೆ, ವಾಸನೆಗೆ ಆಶ್ರಯವಾದದ್ದು ಮನಸ್ಸು. ಆ ಮನಸ್ಸೂ ಅನಾತ್ಮವಾಗಿ ರುವದರಿಂದ ಅದೂ ಅಧ್ಯಸ್ತವೇ. ಹೀಗೆ ಮನಸ್ಸೂ ಅಧ್ಯಸ್ತವೆಂಬುದನ್ನು ಮನಗಂಡವರಿಗೆ ಮತ್ತೆ ವಾಸನಾಕ್ಷಯವು ಹೇಗೆ ಬೇಕಾದೀತು?

ಅಧ್ಯಾಸಸ್ವರೂಪವನ್ನು ಚೆನ್ನಾಗಿ ಮನದಟ್ಟುಮಾಡಿಕೊಳ್ಳ ಬೇಕೆನ್ನುವವರಿಗೆ ಭಾಷ್ಯಕಾರರು ಮಾಂಡೂಕ್ಯಭಾಷ್ಯಾದಿಗಳಲ್ಲಿ ವಿವರಿಸಿರುವ

ಅವಸ್ಥಾತ್ರಯಪರೀಕ್ಷೆಯು ಉತ್ತಮಸಾಧನವಾಗಿರುತ್ತದೆ. ಅವಸ್ಥೆಯೆಂಬುದೂ ಒಂದು ಅಧ್ಯಾಸವೇ ಆದರೂ ಅದೊಂದನ್ನು ಹಾಗೆಯೇ ಇಟ್ಟುಕೊಂಡು ತತ್ತ್ವವಿಚಾರವನ್ನು ಮಾಡಿದರೆ ಶುದ್ಧವಾದ ಆತ್ಮಸ್ವರೂಪವು ಅನುಭವಕ್ಕೆ ಬಂದು ಮಿಕ್ಕದ್ದೆಲ್ಲವೂ ಹೇಗೆ ಅಧ್ಯಸ್ತವಾಗಿರುವದೆಂಬುದು ನಿಸ್ಸಂದಿಗ್ಧವಾಗಿ ಮನವರಿಕೆಯಾಗುತ್ತದೆ. ಒಂದೊಂದು ಅವಸ್ಥೆಯನ್ನೂ ಅದರಲ್ಲಡಕವಾಗಿರುವದೆಲ್ಲವನ್ನೂ ಸೇರಿಸಿಕೊಂಡು ವಿಷಯರಾಶಿಯೆಂದು ಇಟ್ಟುಕೊಂಡಕೂಡಲೆ ಅನಾತ್ಮವು ತನ್ನ ಸ್ವರೂಪವನ್ನು ಮಾರ್ಪಡಿಸುತ್ತಲೇ ಇದ್ದು ಪರಮಾರ್ಥ ಸತ್ಯವಾದ ಆತ್ಮನಲ್ಲಿ ಹೇಗೆ ಸೇರಿಹೋಗುವದೆಂಬುದು ಸುಷುಪ್ತ್ಯಾದ್ಯವಸ್ಥೆಗಳ ವಿಚಾರದಿಂದ ಸ್ಫುಟವಾಗುತ್ತದೆ.

ಹೀಗೆ ಅಧ್ಯಾಸಭಾಷ್ಯವು ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ಅಧ್ಯಾತ್ಮವಿದ್ಯೆಯ ಆವಶ್ಯಕತೆಯನ್ನು ಸ್ಪಷ್ಟಗೊಳಿಸುವ ಅತ್ಯದ್ಭುತವಾದ ಸಾಧನವಾಗಿರುತ್ತದೆ .

★★★★★

## ವ್ಯವಹಾರದಲ್ಲಿ ಕರ್ಮಯೋಗ

**17-5-1937**

ಶ್ರೀಶ್ರೀಗಳವರು

ಕರ್ಮಯೋಗವೆಂದರೆ ಶಾಸ್ತ್ರೋಕ್ತಕರ್ಮಗಳನ್ನು ಪರಮಪುರುಷಾರ್ಥಕ್ಕೆ ಸಾಧನವಾಗುವಂತೆ ಮಾಡುವ ಉಪಾಯವೆಂದು ಸಂಪ್ರದಾಯಗ್ರಂಥಗಳಲ್ಲಿ ವಿವರಿಸಿರುತ್ತದೆ. ಆದರೆ ಈ ಉಪನ್ಯಾಸದಲ್ಲಿ ಈ ಶಬ್ದಕ್ಕೆ ಆ ಅರ್ಥವನ್ನು ಇಟ್ಟುಕೊಂಡಿರುವದಿಲ್ಲ. ಸದ್ಯದ ಸಮಾಜದ ಸ್ಥಿತಿಯಲ್ಲಿ ವರ್ಣಾಶ್ರಮಗಳು ಸರಿಯಾಗಿ ವ್ಯವಸ್ಥಿತವಾಗಿಲ್ಲವೆಂದೂ ವರ್ಣಾಶ್ರಮಧರ್ಮಗಳನ್ನು ನಿರ್ದಿಷ್ಟ ರೀತಿಯಿಂದ ನಡೆಯಿಸಿಕೊಂಡು ಹೋಗುವದು ಕಷ್ಟಸಾಧ್ಯ ಅಥವಾ

ಅಸಾಧ್ಯವೇ ಎಂದೂ ನಮ್ಮಲ್ಲನೇಕರಿಗೆ ತೋರಿಬರುತ್ತಿದೆ. ಈಗ ವ್ಯವಹಾರದಲ್ಲಿ ನಾವು ಮಾಡುತ್ತಿರುವ ಆಯಾ ವೃತ್ತಿಯ ಕೆಲಸವನ್ನೇ ಇಲ್ಲಿ ನಾನು ಕರ್ಮವೆಂದು ಕರೆದಿರುತ್ತೇನೆ. ಈ ಕರ್ಮಕ್ಕೂ ಶಾಸ್ತ್ರೀಯಕರ್ಮಕ್ಕೆ ಹೊಂದಿಸಿರುವ ಕರ್ಮಯೋಗದ ತತ್ತ್ವಗಳನ್ನು ಹೊಂದಿಸಿಕೊಳ್ಳಬಹುದು ಎಂದು ತೋರಿಸುವದೇ ಈಗ ನನ್ನ ಉದ್ದೇಶವು.

ಶಾಸ್ತ್ರೀಯಕರ್ಮವನ್ನು ಅಕ್ಷರಶಃ ವಿಧಿವತ್ತಾಗಿ ಸಂಪೂರ್ಣವಾಗಿಯೂ ಮಾಡುವದಕ್ಕೆ ಆಗದಿದ್ದರೂ ಶಕ್ತ್ಯನುಸಾರವಾಗಿ ಅಲ್ಪಸ್ವಲ್ಪವಾಗಿಯಾದರೂ ಅದನ್ನು ನೆರವೇರಿಸುತ್ತಾ ಕಾಲಗತಿಯಿಂದ ಒದಗಿರುವ ನಮ್ಮ ನಮ್ಮ ವೃತ್ತಿಗಳಿಗೂ ಕರ್ಮಯೋಗದ ತತ್ತ್ವಗಳನ್ನು ನಾವು ಜೋಡಿಸಿಕೊಳ್ಳಬಹುದು. ಇಷ್ಟುಮಾತ್ರದಿಂದಲೇ ಈ ಯುಗದಲ್ಲಿ ಕೃತಕೃತ್ಯರಾಗಬಹುದೆಂದು ಪುರಾಣಾದಿಗಳು ಹೇಳುತ್ತವೆ.

ಕರ್ಮವು ಶಾಸ್ತ್ರೀಯವಾಗಲಿ ವ್ಯಾವಹಾರಿಕವಾಗಲಿ, ಅದನ್ನು ಮಾಡುವದರಲ್ಲಿ ಎರಡು ರೀತಿಗಳುಂಟು. ಕರ್ಮವನ್ನು ಮಾಡದೆ ಇದ್ದರೆ ಆಗುವದಿಲ್ಲವಲ್ಲ!' ಎಂದು ಯತ್ನವಿಲ್ಲದೆ ಮಾಡುವದೊಂದು ರೀತಿ, ಕರ್ಮವನ್ನು ಮಾಡುವದೇ ಒಂದು ಸಂತೋಷವೆಂದು ಮಾಡುವದು ಮತ್ತೊಂದು ರೀತಿ. ಮೊದಲನೆಯ ರೀತಿಯನ್ನು ಅನುಸರಿಸುವವನು ಮುಂದೆ ಬರುವ ಫಲದ ಆಸೆಯಿಂದಲೋ ಕರ್ಮವನ್ನು ಮಾಡದಿದ್ದರೆ ಆಗಬಹುದಾದ ದುಷ್ಫಲದ ಭೀತಿಯಿಂದಲೋ ಕೆಲಸಕ್ಕೆ ಕೈಹಾಕುತ್ತಾನೆ. ಎರಡನೆಯವನು ಹಾಗಲ್ಲ. ಅವನು ಕೆಲಸಕ್ಕಾಗಿ ಕೆಲಸವನ್ನು ಮಾಡುತ್ತಾ ಮಿಕ್ಕವರಿಗೂ ಪ್ರೋತ್ಸಾಹಕನಾಗಿರುತ್ತಾನೆ. ಅವನು ಕರ್ಮದ ಗುಲಾಮನಾಗಿ ಕೆಲಸಮಾಡಿ ಸಂಕಟಪಡುವದಿಲ್ಲ, ಕರ್ಮಕ್ಕೆ ಯಜಮಾನನಾಗಿ ಅದನ್ನು ತನ್ನ ಸಂತೋಷದ ಉಪಕರಣವಾಗಿ ಮಾಡಿಕೊಳ್ಳುತ್ತಿರುತ್ತಾನೆ. ಮೊದಲನೆಯವನಿಗೆ ಕರ್ಮವು ಬಂಧಕವಾಗುತ್ತದೆ, ಎರಡನೆಯವನಿಗೆ ಅದು ಸುಖಕ್ಕೆ ಕಾರಣವಾಗಿರುತ್ತದೆ.

ಹೀಗೆ ಅದೇ ಕರ್ಮವು ಒಬ್ಬನಿಗೆ ದುಃಖದಾಯಕವೂ ಮತ್ತೊಬ್ಬನಿಗೆ ಸುಖದಾಯಕವೂ ಆಗಿರುವದರಿಂದ ಕರ್ಮವು ಸ್ವತಃ ಬಂಧಕವಲ್ಲವೆಂದಾಯಿತು.

ದುಷ್ಟಫಲವನ್ನು ಕೊಡದೆ ಎಂದೆಂದಿಗೂ ಸಂತೋಷಜನಕವೇ ಆಗುವಹಾಗೆ ಕರ್ಮವನ್ನು ಮಾರ್ಪಾಡಿಸಿಕೊಳ್ಳಬೇಕಾದರೆ ಅದರಲ್ಲಿ ಯಾವ ದೋಷವೂ ಇಲ್ಲದಂತೆ ನೋಡಿಕೊಳ್ಳಬೇಕು. ಇರಬೇಕಾದ ಗುಣಗಳನ್ನೂ ಅದರಲ್ಲಿ ಉಂಟುಮಾಡಿಕೊಳ್ಳಬೇಕು. ಇದೇ ಕರ್ಮಯೋಗವು.

ಕರ್ಮದಲ್ಲಿ ಮುಖ್ಯವಾಗಿ 'ಸಂಗ', 'ಫಲಾಶೆ'-ಎಂಬ ಎರಡು ದೋಷಗಳಿರುತ್ತವೆ. ಸಂಗವು ಕರ್ಮಸಂಗ, ವಿಷಯಸಂಗ, ಭೋಗಸಂಗ-ಎಂದು ಮೂರು ಬಗೆಯಾಗಿರುವದು. ಕರ್ಮವನ್ನು ಮಾಡಿದ ಅಭ್ಯಾಸದಿಂದ ಅದು ಪ್ರಕೃತಕ್ಕೆ ಬೇಕಾಗಿರಲಿ , ಇಲ್ಲದಿರಲಿ, ಅದನ್ನೇ ಮಾಡುತ್ತಾ ಅದೇ ಎಲ್ಲಕ್ಕೂ ಹೆಚ್ಚಿನದೆಂದು ಮೋಹದಿಂದ ಭಾವಿಸಿಕೊಳ್ಳುವದು **ಕರ್ಮಸಂಗವು**. ಎಷ್ಟೋ ಜನರು ನಾವೇಕೆ ಈ ಕೆಲಸವನ್ನು ಮಾಡುತ್ತಿದೇವೆಯೆಂಬುದನ್ನು ಕೂಡ ಅರಿಯದೆ ಗಾಣದೆತ್ತಿನಂತೆ ಕರ್ಮದಲ್ಲಿಯೇ ತೊಳಲುತ್ತಿರುವರು. ಇದೇ ಕರ್ಮಸಂಗವು. ಮತ್ತೆ ಕೆಲವರು ತಮಗೆ ಕಾಣುವ ಯಾವುದೋ ಒಂದು ವಿಷಯಕ್ಕೆ ಮನಸೋತು ಕರ್ಮವನ್ನು ಮಾಡುವರು; ಅದು ತಮಗೆ ಸಿಕ್ಕುವವರೆಗೂ ಮನಸ್ಸನ್ನು ಅಷ್ಟೊಂದು ಕದಡುತ್ತಾ ತಮ್ಮನ್ನು ಸುಮ್ಮನೆ ದುಡಿಸುತ್ತಿರುವದೆಂಬುದನ್ನು ಅರಿತುಕೊಳ್ಳಲಾರದೆ ಕೆಲಸಮಾಡಿಮಾಡಿ ಸೋತುಸುಣ್ಣವಾಗುವರು ; ಅದು ಸಿಕ್ಕ ಮೇಲೆ ಅದರ ಮೇಲಿನ ಆಸಕ್ತಿಯು ಕಡಿಮೆಯಾಗುವದು; ಆಗ ಅವರು ಇದಕ್ಕಾಗಿ ಅಷ್ಟೊಂದು ಹೆಣಗಾಡಬಾರದಿತ್ತು !- ಎಂದು ಪಶ್ಚಾತ್ತಾಪಪಡುವರು. ಇದೇ **ವಿಷಯ ಸಂಗವು**, ಕೈಗೆ ಸಿಕ್ಕ ವಸ್ತುಗಳನ್ನು ಅನುಭವಿಸಿ ಅನುಭವಿಸಿ ಅದನ್ನು ಬಗೆಬಗೆಯ ದೃಷ್ಟಿಯಿಂದ ನೋಡಿ ಮನಸ್ಸಿನಲ್ಲಿಯೇ ಅದರ ರತಿಯಿಂದ ಹಿಗ್ಗುವವರು ಮತ್ತೆ ಕೆಲವರು ಇರುತ್ತಾರೆ. ಮಾಡಿದ ಕೆಲಸದಿಂದ ತಮಗುಂಟಾಗುವ ಭೋಗವು ಹೆಚ್ಚುತ್ತಿರಬೇಕು, ಮಿಕ್ಕವರು ಅದನ್ನು ನೋಡಿ ಮನಸ್ಸಿನಲ್ಲಿ ಕುದಿದುಕೊಳ್ಳುತ್ತಿರಬೇಕು- ಅಂಥ ಕರ್ಮದಲ್ಲಿಯೇ ಅವರಿಗೆ ಬಹಳ ಪ್ರೀತಿ. ಅಂಥವರಿಗಿರುವ ಸಂಗವನ್ನು **ಭೋಗಸಂಗವೆಂದು** ಕರೆಯಬಹುದು. ಅಜ್ಞರು ಮಾಡುವ ಕರ್ಮದಲ್ಲಿ ಕರ್ಮಸಂಗ, ವಿಷಯಸಂಗ, ಭೋಗಸಂಗ- ಈ ಮೂರರ ಜೊತೆಗೆ **ಫಲಾಶೆ**ಯೆಂಬ ಮತ್ತೊಂದು ದೋಷವೂ ಇರುವದು. ಕರ್ಮದ ಫಲವು

ದೊರಕಿದಮೇಲಲ್ಲವೆ, ಭೋಗ? ಯಾವಾಗ ನಮಗೆ ಇಷ್ಟವಾದ ಲಾಭ, ಜಯ, ಮುಂತಾದವುಗಳು ದೊರಕುವವೋ ಆ ಕ್ಷಣದಲ್ಲಿ ಮಾತ್ರ ಅದು ಫಲವೆನಿಸುತ್ತದೆ: ಆಮೇಲೆ ವಸ್ತುವು ನಮ್ಮ ಸ್ವತ್ತಾಗಿ ಭೋಗಸಾಮಗ್ರಿಯಾಗಿಬಿಡುತ್ತದೆ. ಇಷ್ಟವಸ್ತುವು ಸಿಕ್ಕುವದೂ ಫಲವೇ, ಅನಿಷ್ಟವಾದದ್ದು ತೊಲಗುವದೂ ಫಲವೇ. ಈ ಎರಡು ಬಗೆಯ ಫಲವೂ ಒಂದು ಕ್ಷಣದ ಬಾಳಿನದೆಂಬುದನ್ನು ಲಕ್ಷ್ಯದಲ್ಲಿಟ್ಟರೆ ಇದಕ್ಕಾಗಿ ವಿವೇಕಿಯಾದವನು ಅಷ್ಟು ಶ್ರಮಪಡಲಾರನು. ಇದೂ ಅಲ್ಲದೆ ಕರ್ಮದ ಕಾಲದಲ್ಲಿ ಫಲದ ಕಡೆಗೆ ಕಣ್ಣಿದ್ದರೆ ಕೆಲಸವೂ ಸರಿಯಾಗಿ ಆಗಲಾರದು. ಆದ್ದರಿಂದ ಫಲಾಶೆಯೂ ಒಂದು ದೋಷ, ಅದನ್ನೂ ಬಿಡಬೇಕು.

ಇದುವರೆಗೆ ಹೇಳಿದ ದೋಷಗಳನ್ನು ತೆಗೆದುಹಾಕುವದಲ್ಲದೆ ಗುಣವನ್ನು ಸೇರಿಸುವ ಸಂಸ್ಕಾರವೂ ಕರ್ಮಕ್ಕೆ ಆಗಬೇಕು. ಆಗಲೇ ಕರ್ಮವು **ಕರ್ಮಯೋಗ**ವಾಗುವದು. ಹಪ್ಪಳವು ಸುಟ್ಟಮೇಲೆಯೇ ಕಮ್ಮಗೆ ಆಗುವಂತೆ ಗುಣವನ್ನು ಸೇರಿಸಿಕೊಂಡ ಮೇಲೆಯೇ ಕರ್ಮಕ್ಕೆ ಮೆರುಗು ಬರುತ್ತದೆ. ಆ ಗುಣವನ್ನು ಸೇರಿಸುವ ರೀತಿಯನ್ನು ಒಂದು ಗೀತಾಶ್ಲೋಕದಿಂದ ತಿಳಿದುಕೊಳ್ಳಬಹುದು:

**ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ ।**
**ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥**

ಯಾವನಿಂದ ಭೂತಗಳ ಉತ್ಪತ್ತಿಯಾಗಿರುವದೋ ಯಾವನ ಮಹಿಮೆಯಿಂದಲೇ ಸಕಲಪ್ರಾಣಿಗಳೂ ಕರ್ಮಗಳಲ್ಲಿ ಪ್ರವರ್ತಿಸುತ್ತಿರುವವೋ ಆ ಪರಮೇಶ್ವರನನ್ನು ಸ್ವಕರ್ಮದಿಂದ ಸರಿಯಾಗಿ ಅರ್ಚನೆಮಾಡಿದರೆ ಮನುಷ್ಯನು ಸಿದ್ಧಿಯನ್ನು ಪಡೆಯುತ್ತಾನೆ. ನಾವು ಯಾವನಿಂದ ಬಂದಿದೇವೆ, ಯಾವನ ಸನ್ನಿಧಿಯಲ್ಲಿದ್ದುಕೊಂಡು ಆತನ ಕೈಗೊಂಬೆಗಳಂತೆ ಕೆಲಸಗಳಲ್ಲಿ ತೊಡಗುತ್ತಿದೇವೆ? – ಎಂಬುದನ್ನು ಅರಿತುಕೊಂಡು ಆ ಭಗವಂತನ ಪೂಜೆಯನ್ನು ಮಾಡಬೇಕು. ಈ ಪೂಜೆಗೆ ಘಂಟೆಯಾಗಲಿ ಹಣ್ಣು ಕಾಯಾಗಲಿ ಅವಶ್ಯವಿಲ್ಲ; ನಮ್ಮನಮ್ಮ ಕರ್ಮಗಳನ್ನೇ ಪೂಜಾಸಾಮಗ್ರಿಯಾಗಿ ಮಾಡಿಕೊಂಡರೆಸಾಕಾಗಿದೆ. ಇಲ್ಲಿಪೂಜೆಯೆಂದರೆ ಆತನಿಂದ ಆಗುವ ಕರ್ಮವನ್ನು ಆತನಿಗೆ ಒಪ್ಪಿಸುವದೇ

ಹೊರತು ಮತ್ತೇನಿಲ್ಲ. ನಿಜವಾಗಿ ನೋಡಿದರೆ ನಾವು ಮಾಡುವ ಕರ್ಮಗಳ ಹೊರಗಿನ ರೂಪವಾದ ಚಲನೆಯು ಕೂಡ ನಮ್ಮದಲ್ಲ; ಅದಕ್ಕೆ ಮೂಲವಾಗಿ ಆ ಪರಮಾತ್ಮನೇ ನಮ್ಮಲ್ಲಿದ್ದುಕೊಂಡು ಅದನ್ನು ನಡೆಸುತ್ತಿದಾನೆ. ಇನ್ನು ಕರ್ಮದ ಪರಿಣಾಮವಂತೂ ನಮ್ಮ ಕೈಯಲ್ಲಿಲ್ಲವೇ ಇಲ್ಲ. ಊಟಮಾಡಿದ್ದರಿಂದ ಆಗುವ ತೃಪ್ತಿ, ಆಮೇಲೆ ಅದರಿಂದ ಶರೀರದಲ್ಲಿ ಆಗುವ ರಕ್ತಪುಷ್ಟಿ, ಅದರಿಂದ ಆಗುವ ಬೇರೆಯ ಕರ್ಮಗಳು, ಅವುಗಳ ಫಲ- ಇವೆಲ್ಲವೂ ನಿಜವಾಗಿ ಆತನ ಬಲದಿಂದಲೇ, ಆತನ ಸಂಕಲ್ಪದಂತೆಯೇ ಆಗುತ್ತಿರುವವು. ಇದನ್ನು ಅರಿತುಕೊಂಡು ಆತನ ಕರ್ಮವನ್ನು ಆತನಿಗೆ ಒಪ್ಪಿಸಿ ನಾವು ಕೃತಾರ್ಥರಾಗಬೇಕು.

ಆ ಪರಮಾತ್ಮನು ಎಲ್ಲೆಲ್ಲಿಯೂ ವ್ಯಾಪಿಸಿರುತ್ತಾನೆ: ನಮ್ಮ ಕೆಲಸವನ್ನೂ ಅದರ ಫಲವನ್ನೂ ನೇರ್ಪಡಿಸುತ್ತಾ ಅದರಂತೆ ಮಿಕ್ಕ ಪ್ರಾಣಿಗಳಲ್ಲಿಯೂ ತನ್ನಲೀಲೆಯನ್ನು ನಡೆಸುತ್ತಿದಾನೆ. ಆದ್ದರಿಂದ ''ನಾನು ಮಾಡುವ ಕೆಲಸವು ನನ್ನದು, ಅದರಿಂದಾಗುವ ಫಲವು ನನಗೇ ಆಗಬೇಕು'' ಎಂಬ ದುರಭಿಮಾನವನ್ನು ಬಿಟ್ಟು ''ನಾನು ಆ ಭಗವಂತನ ಉಪಕರಣಮಾತ್ರನಾಗಿರುವೆನು, ನನ್ನಿಂದ ಸೃಷ್ಟಿಯ ರೂಪದಲ್ಲಿರುವ ಆತನ ಸೇವೆಯಾಗಲಿ!'' ಎಂಬ ಭಾವವನ್ನು ನಾವೆಲ್ಲರೂ ಬೆಳೆಯಿಸಿಕೊಳ್ಳಬೇಕು. ಯಾವ ಕೆಲಸವನ್ನು ಮಾಡುತ್ತಿದ್ದರೂ ಈ ಭಾವನೆಯಿಂದ ಹೊರಡಬೇಕು. ಜನರಿಗೆ ಬೇಕಾದ ಕೆಲಸವನ್ನೇ ಕೈಕೊಳ್ಳಬೇಕು, ಸ್ವಾರ್ಥಬುದ್ಧಿಯನ್ನು ಬಿಡಬೇಕು. ವ್ಯವಸಾಯ, ವ್ಯಾಪಾರ, ಸರಕಾರಿಯ ಉದ್ಯೋಗ, ನ್ಯಾಯ ವಿಚಾರ, ವೈದ್ಯ, ಪೋಲೀಸು, ಉಪಾಧ್ಯಾಯವೃತ್ತಿ- ಮುಂತಾದ ಯಾವ ವೃತ್ತಿಯಲ್ಲಿದ್ದರೂ ''ನನ್ನ ವೃತ್ತಿಯು ಜನತೆಯ ಸೇವೆಗಾಗಲಿ, ಇದು ಉತ್ತಮರೀತಿಯಿಂದ ಸಾಗಲಿ, ಇದರಿಂದ ಭಗವಂತನ ಪ್ರೀತಿಯಾಗಲಿ!'' ಎಂದು ಮಾಡುವದಕ್ಕೆ ಬರುತ್ತದೆ. ಹಾಗೆ ಮಾಡಿದರೆ ಕರ್ಮವು ಬಂಧಕವಾಗುವದಿಲ್ಲ, ನಮ್ಮ ಜೀವನವು ಸುಖಮಯವಾಗುತ್ತದೆ, ವ್ಯವಹಾರವು ಸಾಗುವದಕ್ಕೆ ಈ ಭಾವನೆಯು ಎಂದಿಗೂ ಅಡ್ಡಿಮಾಡುವದಿಲ್ಲ; ನಮ್ಮ ಯೋಗಕ್ಷೇಮವನ್ನು ಭಗವಂತನು ಅವಶ್ಯವಾಗಿ ನೋಡಿಕೊಳ್ಳುತ್ತಾನೆ. ಹೀಗೆ ಮಾಡಿದರೆ ಭೋಗಸಾಮಗ್ರಿಗಳ ರಾಶಿಯು ದೊಡ್ಡದಾಗದೆ ಹೋಗಬಹುದು; ಆದರೆ ನಮ್ಮ ಜೀವನಕ್ಕೆ ಬೇಕಾದ ಅವಶ್ಯ ಸಾಧನಗಳು ಮಾತ್ರ ಎಂದಿಗೂ ನಮಗೆ ಸಿಕ್ಕದೆಹೋಗುವದಿಲ್ಲ.

ವ್ಯಕ್ತಿಗಳು ಮಾತ್ರವೇ ಅಲ್ಲ, ಸಮಷ್ಟಿಸಂಘಗಳು ಕೂಡ ದೊಡ್ಡದೊಡ್ಡ ವ್ಯವಹಾರಗಳನ್ನೂ ಈ ತತ್ತ್ವದ ಅವಲಂಬನೆಯಿಂದ ಮಾಡಬಹುದು. ಆಗ ಕೆಲಸವನ್ನು ಪ್ರಾರಂಭಿಸಿರುವ ಯಜಮಾನ, ಅದರಲ್ಲಿ ತೊಡಗಿರುವ ಆಳುಗಳು, ಉಳಿದವರು- ಎಲ್ಲರಿಗೂ ಈ ಕರ್ಮಯೋಗದಿಂದ ಮಹಾ ಪ್ರಯೋಜನವಾಗುತ್ತದೆ- ಎಂದು ಉಪನ್ಯಾಸಕರು ಹಲವು ದೃಷ್ಟಾಂತಗಳಿಂದ ವಿವರಿಸಿ ತಿಳಿಸಿದರು.

★★★★★

## ಶಂಕರಸಿದ್ಧಾಂತದಲ್ಲಿ ಭಕ್ತಿಯ ಸ್ಥಾನ

**19-5-1937**

ಶ್ರೀಶ್ರೀಗಳವರು

ಭಕ್ತಿಯೆಂದರೇನೆಂಬುದನ್ನು ''**ಸಾ ತ್ವಸ್ಮಿನ್ ಪರಮಪ್ರೇಮರೂಪಾ**'', ''**ಸಾ ಪರಾನುರಕ್ತಿರೀಶ್ವರೇ**''- ಎಂಬ ನಾರದಶಾಂಡಿಲ್ಯಸೂತ್ರಗಳು ತಿಳಿಸಿಕೊಟ್ಟಿರುತ್ತವೆ. ಭಗವಂತನಲ್ಲಿ ಮಿಗಿಲಿಲ್ಲದ ಪ್ರೇಮವನ್ನು ಅಥವಾ ಅನುರಾಗವನ್ನು ಇಡುವದೇ ಭಕ್ತಿಯೆಂಬುದು ಈ ಸೂತ್ರಗಳ ಅಭಿಪ್ರಾಯವು. ಪರಮಾತ್ಮನ ಸ್ವರೂಪವನ್ನೂ ಮಹಿಮೆಯನ್ನೂ ತಿಳಿದ ಬಳಿಕ ಅದಕ್ಕಿಂತ ಮತ್ತೆ ಯಾವದೂ ಹೆಚ್ಚಿನದಿಲ್ಲವೆಂದು ಅದರಿಂದ ಮುಗ್ಧನಾಗಿ ಅದರಲ್ಲಿಯೇ ನೆಟ್ಟ ಪ್ರೇಮವುಳ್ಳವನಾಗುವದೇ ಭಕ್ತತ್ವವು. ಆದ್ದರಿಂದಲೇ ಪ್ರಹ್ಲಾದನು ಪರಮೇಶ್ವರನನ್ನು ಹೀಗೆಂದು ಬೇಡಿಕೊಂಡಿರುತ್ತಾನೆ;

**ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ ।**
**ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಪಸರ್ಪತು ॥**

ಎಲೈ ಭಗವಂತನೆ, ಅವಿವೇಕಿಗಳಾದವರು ವಿಷಯದಲ್ಲಿ ಎಡೆಬಿಡದೆ ಎಂಥ ಪ್ರೀತಿಯನ್ನು ಇಟ್ಟುಕೊಂಡಿರುವರೋ, ನನಗೆ ಅಂಥ ಪ್ರೀತಿಯು ನಿನ್ನ ಸ್ಮರಣೆಯನ್ನು ಮಾಡುವದರಲ್ಲಿರಲಿ; ಅದು ನನ್ನ ಹೃದಯವನ್ನು ಬಿಟ್ಟು ಎಂದಿಗೂ ಹೋಗದಿರಲಿ!

ಇಂಥ ಪ್ರೀತಿಯು ಪರಮಾತ್ಮನಲ್ಲಿರುವದು ಯಾವಾಗ ಸಾಧ್ಯವೆಂಬುದನ್ನು ಈಗ ಯೋಚಿಸೋಣ. ಪರಮೇಶ್ವರನನ್ನು ಉಪಾಸನೆಮಾಡುವವನು ಆತನಲ್ಲಿ ಯಾವ ಭಾವನೆಯನ್ನಿಟ್ಟುಕೊಂಡಿರಬೇಕೆಂಬ ಬಗ್ಗೆ ಬಾದರಾಯಣಸೂತ್ರದಲ್ಲಿ ಹೀಗೆಂದು ಹೇಳಿರುತ್ತದೆ ; ''**ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ**'' (ನಿತ್ಯಶುದ್ಧಮುಕ್ತಸ್ವಭಾವನಾದ ಪರಮೇಶ್ವರನು ನಮ್ಮ ಆತ್ಮನೇ ಎಂದು ಭಾವಿಸಬೇಕು; ಏಕೆಂದರೆ ಹಾಗೆಂದೇ ಋಷಿಗಳು ಉಪಾಸನೆಮಾಡಿರುತ್ತಾರೆ, ಹಾಗೆಂದೇ ಉಪದೇಶಿಸಿರುತ್ತಾರೆ.) ಈ ಸೂತ್ರಕ್ಕೆ ವ್ಯಾಖ್ಯಾನವನ್ನು ಮಾಡುವಾಗ ಶ್ರೀರಾಮಾನುಜರೇ ಮುಂತಾದ ದ್ವೈತಭಾಷ್ಯಕಾರರು ಕೂಡ ಪರಮೇಶ್ವರನನ್ನು ಆತ್ಮನೆಂದು ಉಪಾಸನೆಮಾಡಬೇಕೆಂದೇ ಬರೆದಿರುತ್ತಾರೆ. ಆತ್ಮನೆಂಬ ಮಾತಿಗೆ ಪರಮೇಶ್ವರನೇ ಮುಖ್ಯಾರ್ಥವೆಂಬುದು ಅವರಿಗೂ ಒಪ್ಪಾಗಿರುತ್ತದೆ ; ಆದರೆ ಜೀವನ ಬದ್ಧಾವಸ್ಥೆಯಲ್ಲಿಯಾಗಲಿ ಮುಕ್ತಾವಸ್ಥೆಯಲ್ಲಾಗಲಿ ಪರಮಾತ್ಮನು ಜೀವನಿಗಿಂತ ಅತ್ಯಂತವಿಲಕ್ಷಣನಾಗಿರುವನೆಂಬುದು ಅವರ ಅಭಿಪ್ರಾಯವಿರುತ್ತದೆ. ಹಾಗಾದರೆ ಪರಮೇಶ್ವರನನ್ನು ನಮ್ಮ ಆತ್ಮನೆಂದು ಭಾವಿಸುವದು ''ಮಮಾತ್ಮಾ ಭದ್ರಸೇನಃ'' (ಭದ್ರಸೇನನು ನನ್ನ ಆತ್ಮನೇ, ಎಂದರೆ ನಾನೇ) ಎಂದಂತೆ ಉಪಚಾರದ ಮಾತಾಗುವದೇ ಹೊರತು ನಿಜವಾಗಲಾರದು. ಈಶ್ವರನು ನಿಜವಾಗಿಯೂ ನಮ್ಮ ಸ್ವರೂಪವಲ್ಲದೆಹೋದರೆ ಅನಾತ್ಮವಾದ ಆತನನ್ನು ''ನಾನು'' ಎಂದು ಚಿಂತಿಸಬೇಕೆಂದು ಶಾಸ್ತ್ರವು ಏತಕ್ಕೆ ಹೇಳುವದು? ಅದ್ವೈತಕ್ಕೆ ಭಕ್ತಿಯು ಹೊಂದುವದಿಲ್ಲವೆನ್ನುವವರೆಲ್ಲರೂ ಈ ವಿಷಯವನ್ನು ಕುರಿತು ಆಲೋಚನೆ ಮಾಡಬೇಕು. ಇದೂ ಅಲ್ಲದೆ ಈಶ್ವರನು ಎಷ್ಟು ದೊಡ್ಡವನೇ ಆದರೂ ಅವನು ನಮ್ಮ ಸ್ವರೂಪಕ್ಕಿಂತ ಬೇರೆಯಾದರೆ ಅವನಲ್ಲಿ ಮಿಗಿಲಿಲ್ಲದ ಪ್ರೀತಿಯನ್ನು ಇಡುವದು ಹೇಗಾದೀತು? ಎಲ್ಲವೂ ತನಗಾಗಿ ಪ್ರಿಯವಾಗಿರುತ್ತದೆ,

ತನಗಿಂತ ಮಿಕ್ಕದ್ದು ಯಾವದೂ ತನಗೆ ಹೆಚ್ಚು ಪ್ರಿಯವಾಗುವ ಸಂಭವವೇ ಇಲ್ಲ. ಈಶ್ವರನು ನಮ್ಮಲ್ಲಿ ಯಾವನಾದರೊಬ್ಬನ ತಪಸ್ಸಿಗೆ ಮೆಚ್ಚಿ ಪ್ರಸನ್ನನಾಗಿ ''ಇಷ್ಟಾರ್ಥವನ್ನು ಬೇಡಿಕೊ'' ಎಂದರೆ ಆಗ ನಾವು ನಮಗೆ ಹಿತವಾದದ್ದನ್ನಲ್ಲವೆ, ಬೇಡಬೇಕು? ನಮಗಿಂತ ಆತನು ಬೇರೆಯಾಗಿಯೇ ಇದ್ದರೆ ''ನಿನ್ನಲ್ಲಿಯೇ ಮಿಗಿಲಿಲ್ಲದ ಪ್ರೀತಿಯನ್ನು ಕೊಡು'' ಎಂದು ಬೇಡುವದು ಅಂತರಂಗಶುದ್ಧವಾದ ಪ್ರಾರ್ಥನೆಯಾದೀತೆ? ಆಗಲಾರದು. ಆದರೂ ಭಕ್ತರು ಭಕ್ತಿಯೊಂದೇ ಸಾಕೆಂದು ಬೇಡಿಕೊಂಡಿರುತ್ತಾರೆಂಬುದು ಅತ್ಯಂತಪ್ರಸಿದ್ಧವಾಗಿರುತ್ತದೆ. ಇದನ್ನು ನೋಡಿದರೆ ಪರಮೇಶ್ವರನು ನಿಜವಾಗಿಯೂ ನಮ್ಮೆಲ್ಲರ ಆತ್ಮನೆಂಬ ಮತವೇ ಭಕ್ತಿಪಂಥಕ್ಕೆ ಅಡಿಗಲ್ಲಾಗಿರುವದೆಂದು ಏರ್ಪಡುತ್ತದೆ.

ಇಷ್ಟೇ ಅಲ್ಲ. ಈಶ್ವರನನ್ನು ''ನೀನು ಪರಮಾತ್ಮನು, ನೀನು ಸರ್ವೇಶ್ವರನು'' ಎಂದು ಭಕ್ತರು ಕೊಂಡಾಡುತ್ತಾರೆ. ಇದೂ ಅದ್ವೈತಕ್ಕೆ ಹೊಂದಿಗೆಯಾಗುವದೇ ಹೊರತು ದ್ವೈತಕ್ಕೆ ಹೊಂದುವಹಾಗಿಲ್ಲ. ಪರಮಾತ್ಮನೆಂಬ ಮಾತು ದ್ವೈತದಲ್ಲಿ ಹೊಂದುವದಿಲ್ಲವೆಂಬುದು ಸ್ಪಷ್ಟವೇ ಆಗಿರುತ್ತದೆ. ಆ ಮತದಲ್ಲಿ ಭಗವಂತನು ನಮ್ಮ ಜ್ಞಾನಕ್ಕೆ ವಿಷಯನಾಗಿರುತ್ತಾನೆ ; ನಮ್ಮ ಸ್ವರೂಪಕ್ಕಿಂತ ಬೇರೆಯಾಗಿದ್ದು ನಮಗೆ ಬೇಕಾದಾಗ ಮಾತ್ರ ನಮ್ಮ ಇಷ್ಟಾರ್ಥವನ್ನು ಸಲ್ಲಿಸುವವನಾಗಿರುತ್ತಾನೆ. ಆಗ ನಾವು ಶೇಷಿಗಳು, ಅವನೇ ಶೇಷನು ಎಂದರೆ ಪರತಂತ್ರನು-ಎಂದಾಗುತ್ತದೆ; ಆಗ ಈಶ್ವರನ ಈಶ್ವರತ್ವವೇ ಅಪಾಯಕ್ಕೊಳಗಾಗುತ್ತದೆ. ಈಶ್ವರನು ನಮ್ಮ ಕರ್ಮಾದಿಗಳನ್ನು ಅನುಸರಿಸಿ ನಮಗೆ ಫಲವನ್ನು ಕೊಡುವವನೆಂದರೇ ಹೀಗಾಗುವಾಗ ಯಾವ ಕರ್ಮಾದಿಗಳನ್ನೂ ಲೆಕ್ಕಿಸದೆ ಜೀವರನ್ನು ಮನಬಂದಂತೆ ನಡೆಯಿಸುವನೆಂದರಂತೂ ಅವನು ರಾಗಾದ್ವೇಷಾದಿಗಳಿಗೆ ಪರತಂತ್ರನೆಂದೇ ಆಗಿಬಿಡುತ್ತದೆ. ಆಗ ''ನೀನೇ ಸರ್ವೇಶ್ವರನು'' ಎಂದು ಆತನನ್ನು ಹೊಗಳುವದು ಆತನ ಸರ್ವಜ್ಞತೆಗೂ ಸರ್ವಶಕ್ತಿಗೂ ಬೆಚ್ಚಿಬಿದ್ದ ಭಯಭಕ್ತಿಯ ಫಲವೆಂದಾಗುವದೇ ಹೊರತು ಪ್ರೇಮಭಕ್ತಿಯಿಂದುಂಟಾದದ್ದೆಂದಾಗಲಾರದು. ಹೀಗೆ ಈಶ್ವರನು ನಮ್ಮ ನಿಜವಾದ ಸ್ವರೂಪಕ್ಕಿಂತಲೂ ಬೇರೆಯೆಂದು ಇಟ್ಟುಕೊಂಡರೆ ಪ್ರೇಮಭಕ್ತಿಗೆ ಅವಕಾಶವೇ ತಪ್ಪಿಹೋಗುತ್ತದೆಯೆಂದು ಸ್ಪಷ್ಟವಾಗುತ್ತದೆ.

ದ್ವೈತಸಿದ್ಧಾಂತದ ಹುಳುಕನ್ನು ಹೊರಕ್ಕೆ ತೆಗೆಯುವದೇನೂ ನನ್ನ ಉದ್ದೇಶವಲ್ಲ. ಅದ್ವೈತದಲ್ಲಿಯೇ ಭಕ್ತಿಗೆ ಮುಖ್ಯವಾದ ಸ್ಥಾನವು ದೊರಕುವದೆಂಬುದನ್ನು ತೋರಿಸಿಕೊಡುವದಕ್ಕೆ ಇಷ್ಟುಮಟ್ಟಿಗೆ ಹೇಳಬೇಕಾಯಿತು. ಇದಿರಲಿ. ಅದ್ವೈತದಲ್ಲಿ ಪೂಜ್ಯಪೂಜಕಭಾವವು ಹೇಗೆ ಹೊಂದುತ್ತದೆ? ಎಂಬ ಆಕ್ಷೇಪಕ್ಕೆ ಈಗ ಪರಿಹಾರವನ್ನು ಹುಡುಕೋಣ. ಅದ್ವೈತಜ್ಞಾನವುಂಟಾಗುವದಕ್ಕೆ ಮೊದಲು ನಾವೆಲ್ಲರೂ ಸ್ವಾಭಾವಿಕವಾಗಿ ಭೇದದೃಷ್ಟಿಯಿಂದಲೇ ವ್ಯವಹರಿಸುತ್ತೇವಷ್ಟೇ; ಈ ದೃಷ್ಟಿಯು ವ್ಯವಹಾರದಲ್ಲಿ ಸತ್ಯವೆಂದೇ ನಮಗೆಲ್ಲರಿಗೂ ತೋರುತ್ತಿರುವದರಿಂದ ತಿಳಿದವರು ಇದನ್ನು ''ವ್ಯಾವಹಾರಿಕದೃಷ್ಟಿ'', ''ಲೌಕಿಕದೃಷ್ಟಿ''- ಎಂದು ಕರೆಯುತ್ತಾರೆ. ಇದನ್ನು ಕಳೆಯುವದಕ್ಕೆ ಶಾಸ್ತ್ರದಿಂದುಂಟಾಗುವ ನಿಜವಾಗಿಯೂ ನಿಜವಾದ ದೃಷ್ಟಿಗೆ 'ಪರಮಾರ್ಥದೃಷ್ಟಿ' ಎಂದು ಹೆಸರು. ಆ ದೃಷ್ಟಿಯಲ್ಲಿ ಬ್ರಹ್ಮವೊಂದೇ ಸತ್ಯವು, ಅದಕ್ಕಿಂತ ಬೇರೆಯಾಗಿರುವದು ಏನೂ ಇರುವದೇ ಇಲ್ಲ. ಆ ದೃಷ್ಟಿಯುಳ್ಳಾತನು ಕೃತಕೃತ್ಯನಾಗಿರುವದರಿಂದ ಅವನಿಗೆ ಉಪಾಸ್ಯ, ಉಪಾಸಕ- ಮುಂತಾದ ಯಾವ ಭೇದವೂ ಇರುವದಿಲ್ಲ. ಆದರೆ ಜನರೆಲ್ಲರೂ ಆ ಉತ್ತಮದೃಷ್ಟಿಗೆ ತಕ್ಕವರಾಗಿರುವದಿಲ್ಲ. ಕೆಲವರು ಚಾರ್ವಾಕರಾಗಿರುತ್ತಾರೆ. ಅವರಿಗೆ ಪ್ರತ್ಯಕ್ಷವೇ ಪ್ರಮಾಣವು, ಆದ್ದರಿಂದ ಅವರ ದೃಷ್ಟಿಯಲ್ಲಿ ಉಪಾಸ್ಯವಾದ ದೇವರೆಂಬುವನು ಇಲ್ಲವೇ ಇಲ್ಲ. ಸ್ವಲ್ಪಮಟ್ಟಿಗೆ, ಸಾತ್ತ್ವಿಕನಾಗಿರುವವನಿಗೆ ಈ ವಿಚಿತ್ರವಾದ ಸೃಷ್ಟಿಗೆ ಒಡೆಯನಾಗಿಯೂ ಧರ್ಮಾಧರ್ಮಗಳಿಗೆ ಫಲವನ್ನು ಕೊಡುವಾತನೂ ಅದ ಒಬ್ಬ ಪರಮೇಶ್ವರನು ಇದಾನೆಂಬ ನಂಬಿಕೆಯುಂಟಾಗಿರುತ್ತದೆ. ಅವನ ದೃಷ್ಟಿಯಿಂದ ಶಾಸ್ತ್ರವು ಕರ್ಮವನ್ನು ಬೋಧಿಸಿರುತ್ತದೆ. ಅದಕ್ಕಿಂತ ಮೇಲಿನ ಅಂತಸ್ತಿನಲ್ಲಿರುವಾತನಿಗೆ ಈ ಲೋಕದ ಅಥವಾ ಪರಲೋಕದ ವಿಷಯಭೋಗವು ಬೇಕಾಗಿರುವದಿಲ್ಲ; ಅತೀಂದ್ರಿಯವಾದ ಹೆಚ್ಚಿನ ಸುಖವೊಂದು ಅವನಿಗೆ ಬೇಕಾಗಿ ರುತ್ತದೆ. ಆ ದೃಷ್ಟಿಯಿಂದ ಶಾಸ್ತ್ರವು ಜನರಿಗೆ ಉಪಾಸನೆಯನ್ನು ಬೋಧಿಸುತ್ತದೆ. ಹೀಗೆ ವ್ಯವಹಾರದೃಷ್ಟಿಯಿಂದಲೇ ಉಪಾಸ್ಯ, ಉಪಾಸಕ- ಎಂಬ ಭೇದವು ಏರ್ಪಡುತ್ತದೆ; ಆ ದೃಷ್ಟಿಯಿಂದಲೇ ಭಕ್ತನು ಪರಮಾತ್ಮನಲ್ಲಿ ಪ್ರೇಮವುಳ್ಳವನಾಗಿ ರುವನೆಂಬ ವ್ಯವಹಾರವೂ ಉಂಟಾಗುತ್ತದೆ. ಆದರೆ ನಮ್ಮ ಪರಮಾತ್ಮನೊಬ್ಬನೇ ಪರಮಾರ್ಥವಾಗಿರುವದರಿಂದಲೇ ನಮಗೆ ಆತನ ಉಪಾಸನೆಯಲ್ಲಿ

ಪ್ರೀತಿಯುಂಟಾಗುವದು ಸಾಧ್ಯವಾಗಿರುತ್ತದೆಯೆಂಬುದನ್ನು ಇಲ್ಲಿ ಮರೆಯದೆ ಇರಬೇಕು.

ಒಬ್ಬ ದೇವನೇ ಎಲ್ಲೆಲ್ಲಿಯೂ ಇರುತ್ತಾನಾದರೂ ಉಪಾಧಿಶುದ್ಧಿಯ ತಾರತಮ್ಯದಿಂದ ಒಬ್ಬೊಬ್ಬರಲ್ಲಿ ಒಂದೊಂದು ಪ್ರಮಾಣದಿಂದ ಪ್ರಕಟನಾಗಿರುತ್ತಾನೆಂದು ಶ್ರುತಿಯು ಹೇಳುತ್ತದೆ. ಈ ತಾರತಮ್ಯವನ್ನು ಅನುಸರಿಸಿಯೇ ಭಗವದ್ಗೀತೆಯಲ್ಲಿ –

**ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।**
**ತತ್ತದೇವಾವಗಚ್ಛ ತ್ವಂ ಮಮ ತೇಜೋಂಶಸಂಭವಮ್ ॥**

ಎಂದು ವಿಭೂತ್ಯಾದಿಗಳು ಹೆಚ್ಚು ಹೆಚ್ಚಾಗಿ ಪ್ರಕಟವಾಗಿರುವ ವಸ್ತುಗಳನ್ನೆಲ್ಲ ಪರಮೇಶ್ವರನೆಂದೇ ಉಪಾಸನೆಮಾಡಬೇಕೆಂದು ಹೇಳಿರುತ್ತದೆ. ಲೋಕದಲ್ಲಿ ವಜ್ರವೈಡೂರ್ಯಾದಿಗಳು, ಮಹಾಪ್ರವಾಹಗಳು, ಪರ್ವತಗಳು, ಸಂಧ್ಯಾದಿಪ್ರಸನ್ನಕಾಲಗಳು– ಇಂಥವುಗಳನ್ನು ಕಂಡಾಗ ನಮ್ಮ ಮನಸ್ಸು ಪ್ರಶಾಂತವಾಗಿ ಆನಂದಯುಕ್ತವಾಗುವದಕ್ಕೆ ಅವುಗಳಲ್ಲಿ ಪ್ರಕಟವಾಗಿರುವ ಪರಮೇಶ್ವರನ ಸಾನ್ನಿಧ್ಯವೇ ಕಾರಣವು. ಈ ಸಾನ್ನಿಧ್ಯವು ಅಚೇತನಗಳಿಗಿಂತ ಚೇತನಗಳಲ್ಲಿ, ಸಾಮಾನ್ಯಪ್ರಾಣಿಗಳಿಗಿಂತ ಮನುಷ್ಯರಲ್ಲಿ, ಉಳಿದ ಮನುಷ್ಯರಿಗಿಂತ ಸಾತ್ತ್ವಿಕಜನರಲ್ಲಿ, ಸಾತ್ವಿಕ ಮನುಷ್ಯರಿಗಿಂತ ದೇವತೆಗಳಲ್ಲಿ– ಹೀಗೆ ಸೋಪಾನಕ್ರಮದಿಂದ ಹೆಚ್ಚು ಹೆಚ್ಚು ಪ್ರಕಟವಾಗಿರುತ್ತದೆ. ಹೀಗಿರುವಾಗ ಪರಮೇಶ್ವರನೇ ಉಪಾಸಕರಿಗಾಗಿ ಸ್ವೀಕರಿಸಿರುವ ಚಿತ್ತಾಕರ್ಷಕರೂಪದಲ್ಲಿ ನಮಗೆ ಅತ್ಯಂತಪೂಜ್ಯಬುದ್ಧಿಯುಂಟಾಗುವದರಲ್ಲಿ ಆಶ್ಚರ್ಯವೇನು?

ಭಾರತದಲ್ಲಿ **ನಾರಾಯಣೀಯವೆಂಬ** ಉಪಾಖ್ಯಾಸನವಿದೆ. ಅದರಲ್ಲಿರುವದೇನೆಂದರೆ– ದೇವರ್ಷಿಗಳಾದ ನಾರದರು ಒಂದಾನೊಂದು ಕಾಲದಲ್ಲಿ ಬದರ್ಯಾಶ್ರಮಕ್ಕೆ ಬಂದು ಅಲ್ಲಿ ತಪಸ್ಸುಮಾಡುತ್ತಿದ್ದ ನರನಾರಾಯಣರನ್ನು ಕಂಡು ಅತ್ಯಂತ ಆಶ್ಚರ್ಯಭರಿತರಾದರು. ಅವರು ತಮ್ಮನ್ನು ಅರ್ಘ್ಯಪಾದ್ಯಾದಿಗಳಿಂದ

ಸತ್ಕರಿಸಲು ಮತ್ತಷ್ಟು ಕುತೂಹಲಭರಿತರಾಗಿ ನಾರಾಯಣನನ್ನು ಕುರಿತು ''ಭಗವಂತನೆ ವೇದಪುರಾಣಗಳಲ್ಲೆಲ್ಲ ನಿನ್ನನ್ನೇ ಕೊಂಡಾಡಿರುತ್ತದೆ; ನೀನೇ ಈ ಜಗತ್ತಿಗೆಲ್ಲ ತಾಯಿತಂದೆಯಾಗಿರುತ್ತೀಯೆ. ಸಕಲ ಆಶ್ರಮದವರೂ ನಿನ್ನನ್ನೇ ಆರಾಧಿಸುತ್ತಿರುವರು. ಹೀಗಿರುವಲ್ಲಿ ನೀನು ಯಾರನ್ನುದ್ದೇಶಿಸಿ ಈ ದೇವಕಾರ್ಯ ಪಿತೃಕಾರ್ಯಗಳನ್ನು ಮಾಡುತ್ತಿರುವೆ? ಇದಕ್ಕೆ ಉತ್ತರವನ್ನು ಕೊಟ್ಟು ನನ್ನ ಕುತೂಹಲವನ್ನು ನಿವೃತ್ತಿಗೊಳಿಸಬೇಕು'' ಎಂದು ಪ್ರಾರ್ಥಿಸಿದರು. ಆಗ ನಾರಾಯಣನು 'ಅಯ್ಯ ಬ್ರಾಹ್ಮಣೋತ್ತಮನೆ, ಇದು ಪರಮರಹಸ್ಯವಾದರೂ ಭಕ್ತನಾದ ನಿನಗೆ ಹೇಳಲೇಬೇಕು. ಅತ್ಯಂತಸೂಕ್ಷ್ಮವೂ ಇಂಥದ್ದೆಂದು ತಿಳಿಯಲು ಅಶಕ್ಯವೂ ಅಚಲವೂ ಧ್ರುವವೂ ಆಗಿ ಇಂದ್ರಿಯಗಳಿಲ್ಲದೆ ವಿಷಯ ಕೋಟಿಗೆ ಸೇರದಿರುವ ಪರಮತತ್ತ್ವವೇ ಬ್ರಹ್ಮವೆನಿಸುವದು. ಅದೇ ಎಲ್ಲರ ಅಂತರಾತ್ಮನು, ಕ್ಷೇತ್ರಜ್ಞನು, ಪುರುಷನು. ಆತನಿಂದಲೇ ಜಗತ್ಕಾರಣವಾದ ಅವ್ಯಕ್ತವುಂಟಾಗಿರುತ್ತದೆ. ಆತನೇ ನಮ್ಮ ಮೂಲವಾಗಿರುತ್ತಾನೆ. ಆತನು ನಮ್ಮ ಆತ್ಮನೇ ಆಗಿರುವದರಿಂದ ಅವನನ್ನೇ ನಾವು ಪೂಜಿಸುತ್ತಿರುತ್ತೇವೆ **(ಆತ್ಮಾ ಹಿ ನಃ ಸ ವಿಜ್ಞೇಯಸ್ತತಸ್ತಂ ಪೂಜಯಾವಹೇ)** ಎಂದು ಆ ಪರಮಾತ್ಮನ ಸಗುಣನಿರ್ಗುಣರೂಪಗಳನ್ನೂ ಮಹಿಮೆಯನ್ನೂ ವರ್ಣಿಸಿ ಆತನನ್ನು ಶ್ವೇತದ್ವೀಪದಲ್ಲಿ ನೋಡಬಹುದೆಂದು ತಿಳಿಸಿದನು. ನಾರದರ್ಷಿಯು ನಾರಾಯಣನ ಅನುಜ್ಞೆಯನ್ನು ಪಡೆದುಕೊಂಡು ಆ ಶ್ವೇತದ್ವೀಪಕ್ಕೆ ಬಂದು ಆ ಪರಮಪುರುಷನನ್ನು ನಿರತಿಶಯವಾದ ಭಕ್ತಿಯಿಂದ ಸ್ತೋತ್ರಮಾಡಿದನು. ಆಗ ಭಗವಂತನು ಪ್ರಸನ್ನನಾಗಿ ವಿಶ್ವರೂಪದಿಂದ ದರ್ಶನವನ್ನು ಕೊಟ್ಟು ನಿರ್ಗುಣಪರಮಾತ್ಮನ ಸ್ವರೂಪವನ್ನೂ ಆತನು ಜಗಜ್ಜನ್ಮಾದಿಗಳಿಗೆ ಕಾರಣನಾಗಿರುವ ಬಗೆಯನ್ನೂ ಆತನ ವಾಸುದೇವಾದಿವ್ಯೂಹಚತುಷ್ಟಯವನ್ನೂ ವಿವರಿಸಿ ತಿಳಿಸಿಕೊಟ್ಟು ಕೊನೆಗೆ ಹೀಗೆಂದನು :

**ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ ।**
**ಸರ್ವಭೂತಗುಣೈರ್ಯುಕ್ತಂ ನೈವಂ ಮಾಂ ಜ್ಞಾತುಮರ್ಹಸಿ ॥**

ಎಲೈ ನಾರದನೆ, ವಿಶ್ವರೂಪಧರನಾದ ನನ್ನ ಈ ರೂಪವನ್ನು ನೋಡುತ್ತಿರುವೆಯಷ್ಟೆ ; ಇದು ನಾನು ಸೃಷ್ಟಿಸಿರುವ ಮಾಯೆಯು. ನಾನು ನಿಜವಾಗಿಯೂ ಹೀಗೆ ಭೂತಗುಣಗಳಿಂದಲೇ ಕೂಡಿರುವೆನೆಂದು ತಿಳಿಯಬೇಡ-

ಎಂದು ತತ್ತ್ವೋಪದೇಶವನ್ನು ಮಾಡಿ ಅಂತರ್ಧಾನವಾದನು. ನಾರದನು ಸಂತುಷ್ಟನಾಗಿ ಶ್ವೇತದ್ವೀಪದಿಂದ ಹೊರಟುಬಂದು ಭಾಗವತಧರ್ಮವನ್ನು ಎಲ್ಲೆಲ್ಲಿಯೂ ಹರಡಿದನು ಎಂದು ಕಥೆ ಮುಗಿದಿದೆ. ಈ ಆಖ್ಯಾನದಿಂದ ತಿಳಿಯಬರುವ ವಿಷಯಗಳು ಯಾವವೆಂದರೆ; (1) ಪರಮಾತ್ಮನೊಬ್ಬನೇ ಪರಮಾರ್ಥಸತ್ಯವಾದರೂ ಲೋಕಕ್ಕೆ ಉಪಾಸನಾಮಾರ್ಗದ ರಹಸ್ಯವನ್ನು ತಿಳಿಸಿಕೊಡುವದಕ್ಕೆ ನಾನಾರೂಪಗಳನ್ನು ಧರಿಸುತ್ತಾನೆ; (2) ಉಪಾಸನೆಗೆ ದ್ವೈತವು ಬೇಕಾದರೂ ಪರಮಾರ್ಥವಾಗಿ ಯಾವಾಗಲೂ ಅದ್ವೈತವೇ ಇರುತ್ತದೆ ; (3) ಪರಮಾತ್ಮನನ್ನು ನಮ್ಮ ಆತ್ಮನೆಂದೇ ಉಪಾಸನೆ ಮಾಡಬೇಕು, ಆತನು ನಮ್ಮಗಳ ಆತ್ಮನಾಗಿರುವದರಿಂದಲೇ ಈ ಭಕ್ತಿಯ ಉಪಾಸನೆಯು ಸಾಧ್ಯವಾಗಿರುತ್ತದೆ; (4) ಉಪಾಸ್ಯಮೂರ್ತಿಯು ಎಷ್ಟೇ ಉತ್ಕೃಷ್ಟೋಪಾಧಿಯಾಗಿರಲಿ ಆ ರೂಪದಿಂದ ಪರಮಾರ್ಥವಲ್ಲ, ಅದೆಲ್ಲ ಪರಮಾತ್ಮನ ಮಾಯೆ. ಆದರೂ ಈ ರೂಪವನ್ನು ಆರಾಧನೆಮಾಡುವದೇ ಪರಮಾರ್ಥದ ಸಾಕ್ಷಾತ್ಕಾರಕ್ಕೆ ಸಾಧನವಾಗಿರುತ್ತದೆ.

ಭಕ್ತಿಯ ಉದ್ದೇಶವೇ ದ್ವೈತನಾಶವು. ನಾನೊಬ್ಬನು ಎಲ್ಲರಿಗಿಂತಲೂ ಬೇರೆಯಾಗಿದೇನೆ, ನನಗೆ ಇಂಥಿಂಥ ಪ್ರಯೋಜನವಾಗಬೇಕು ಎಂಬ ಭಾವವೇ ಸಂಸಾರದ ಅನರ್ಥಕ್ಕೆಲ್ಲ ಮೂಲವು. ಈ ಅನರ್ಥಕ್ಕೆ ಕಾರಣವಾದ ಅಹಂತೆಯನ್ನು ಸುಟ್ಟುರುಹುವದಕ್ಕೆ ಜ್ಞಾನವೆಂಬ ಅಗ್ನಿಯು ಬೇಕು; ಅದು ಬಂದರೆ ಪರಮೇಶ್ವರನ ಪ್ರೇಮಸಾಗರದಲ್ಲಿ ನಾವು ಹಾಯಾಗಿ ತೇಲಾಡಬಹುದು. ಮಗುವು ತಾಯಿ ತಂದೆಗಳನ್ನು ''ಅಮ್ಮ! ಅಪ್ಪ!'' ಎಂದು ಕರೆಯುತ್ತಾ ತನ್ನ ಕೈಗಳನ್ನು ಮೇಲಕ್ಕೆತ್ತಿದರೆ ಅವರು ಕೂಡಲೆ ಪ್ರೇಮಭರದಿಂದ ಕೆಳಕ್ಕೆ ಬಾಗಿ ಅದನ್ನು ಎತ್ತಿಕೊಂಡು ಮುದ್ದಾಡುವಂತೆ, ನಾವು ನಮ್ಮ ಅಹಂತೆಯನ್ನು ಸ್ವಲ್ಪ ಒತ್ತರಿಸಿ ಭಗವಂತನ ಕಡೆಗೆ ತಿರುಗಿದರೆ ಸಾಕು, ಆ ಕರುಣಾನಿಧಿಯು ನಮ್ಮನ್ನು ತನ್ನವರನ್ನಾಗಿ ಮಾಡಿಕೊಂಡು ತನ್ನಲ್ಲಿಯೇ ಸೇರಿಸಿಕೊಂಡುಬಿಡುತ್ತಾನೆ. 'ನಾನು, ನಾನು!'- ಎಂಬ ಮಿಥ್ಯಾಭಿಮಾನವು ಮಹಾಪಾಪವು ; ಇದನ್ನು ಭಗವಂತನ ಆರಾಧನೆಯಿಂದಲೇ ಕಳೆದುಕೊಳ್ಳಬೇಕು. ಆತನಿಗೆ ಅರ್ಪಿಸಿದ ಹೂ, ಗಂಧ ಮುಂತಾದವುಗಳನ್ನು ಆತನ ಪ್ರಸಾದವೆಂದು ಸ್ವೀಕರಿಸಿದರೆ ಮಾಯಾಕೃತವಾದ ಈ ಅಭಿಮಾನವು ಮೆಲ್ಲಮೆಲ್ಲಗೆ ಸಡಿಲವಾಗುವದು. ದುರಭಿಮಾನಕ್ಕೆ ಕಾರಣವಾಗಿರುವ

ಹೊರಗಿನ 'ನಾನು' ಎಂಬ ತೋರಿಕೆಯೇ ಅಲ್ಲದೆ, ಅದಕ್ಕೂ ಒಳಗಡೆ ಇದ್ದುಕೊಂಡು ಅದರ ಆಗುಹೋಗುಗಳನ್ನೆಲ್ಲ ಕೂಟಸ್ಥರೂಪದಿಂದ ನೋಡುತ್ತಿರುವ ಸಾಕ್ಷಿಚೈತನ್ಯ ರೂಪನಾದ ಮತ್ತೊಂದು 'ನಾನು' ಇರುತ್ತದೆ. ಇದೇ ನಮ್ಮ ನಿಜವಾದ ಆತ್ಮನಾಗಿರುವ ಪರಮೇಶ್ವರನು; ಆದ್ದರಿಂದ ಇದಕ್ಕೆ 'ಪರಮಾತ್ಮ' ಎಂಬ ಹೆಸರನ್ನು ಶಾಸ್ತ್ರದಲ್ಲಿ ಕೊಟ್ಟಿರುತ್ತದೆ. ಈ ಪರಮಾತ್ಮನನ್ನು ಕಂಡುಕೊಂಡು ಅದರಲ್ಲಿ ಹೊರಗಿನ 'ನಾನು' ಎಂಬುದನ್ನು ಒಂದುಗೂಡಿಸಿಕೊಳ್ಳಬೇಕು; ತನ್ಮೂಲಕವಾಗಿ ದ್ವೈತರಾಶಿಯನ್ನೆಲ್ಲ ಆ ಅದ್ವೈತತತ್ತ್ವವಾಗಿ ಮಾರ್ಪಡಿಸಿಕೊಳ್ಳಬೇಕು. ಇದೇ ಭಕ್ತಿಯೋಗದ ಪರಮಧ್ಯೇಯವು.

ಭಕ್ತಿಗೆ ಸದಾಚಾರ, ವಿನಯ, ಸತ್ಸಂಗ- ಇವು ಮುಖ್ಯಸಾಧನಗಳು. ಯಾವನು ಸತ್ಸಂಗದಿಂದ ಭಕ್ತಿಯ ರುಚಿಯನ್ನು ಕಂಡುಕೊಳ್ಳುವನೋ ಅವನಿಗೆ ಅನಾತ್ಮವಾಸನೆಯು ಕಡಿಮೆಯಾಗಿಬಿಡುತ್ತದೆ, ದುರಭಿಮಾನವು ಹೋಗಿ ಬಿಡುತ್ತದೆ. ಆಗ ಅವನು ತನ್ನ ಇಹಪರಸುಖಗಳಿಗೆಲ್ಲ ಭಕ್ತಿಯನ್ನೇ ಸಾಧನವಾಗಿ ಮಾಡಿಕೊಳ್ಳುತ್ತಾನೆ; ಆರ್ತಿಹರಣಕ್ಕೆ, ಇಷ್ಟಾರ್ಥಲಾಭಕ್ಕೆ, ಜ್ಞಾನಾರ್ಜನೆಗೆ- ಎಲ್ಲಕ್ಕೂ ಆ ಪರಮೇಶ್ವರನನ್ನೇ ಭಜಿಸುತ್ತಾನೆ. ಭಕ್ತಿಯಿಂದ ಪರಮೇಶ್ವರನ ಅನುಗ್ರಹವನ್ನು ಹೊಂದಿ ಜೀವನವನ್ನು ಸುಖಮಯವಾಗಿ ಮಾಡಿಕೊಂಡ ನಿದರ್ಶನಗಳು ಎಲ್ಲಾ ಮತದಲ್ಲಿಯೂ ಸಿಕ್ಕುತ್ತವೆ; ಆದರೆ ಭಕ್ತಿಗೆ ಅಹಂತೆಯನ್ನು ಕಳೆಯುವದೇ ಉದ್ದೇಶವೆಂಬುದನ್ನು ತತ್ತ್ವವಿಚಾರದ ದೃಷ್ಟಿಯಿಂದ ತಿಳಿಸಿರುವದು ಶಾಂಕರಸಿದ್ಧಾಂತದಲ್ಲಿ ಮಾತ್ರವೇ. ಅಹಂತೆಯನ್ನು ಕಳೆಯುವದಕ್ಕೆ ಪರಮಾತ್ಮನ ವಿಭೂತಿಗಳ ಉಪಾಸನೆಯು ಒಂದು ಮುಖ್ಯವಾದ ಸಾಧನವಾಗಿರುತ್ತದೆ. ಉತ್ತಮದೃಶ್ಯಗಳನ್ನು ನೋಡುವಾಗ ಮನುಷ್ಯನ ವ್ಯಕ್ತಿತ್ವವು ಮರೆತುಹೋಗಿ ಆನಂದವಾಗುವದು ನಮ್ಮೆಲ್ಲರ ಅನುಭವದಲ್ಲಿಯೂ ಇದೆ; ಆದರೆ ಅನಾತ್ಮ ದೃಷ್ಟಿಯಿಂದ ಅವನ್ನು ನೋಡುವದಕ್ಕಿಂತಲೂ ಪರಮಾತ್ಮದೃಷ್ಟಿಯ ಕಲಾಯವನ್ನು ಬಳಿಯುವದರಿಂದಲೇ ಅವುಗಳಿಂದ ಮಿಗಿಲಿಲ್ಲದ ಆನಂದವುಂಟಾಗಿ ನಮ್ಮ ಚಿತ್ತವೂ ಸಾತ್ತ್ವಿಕಭೂಮಿಕೆಗೆ ಏರುತ್ತದೆ. ಇದಕ್ಕೆ ಕಾರಣವೂ ಆಚಾರ್ಯರವರ ಅದ್ವೈತಸಿದ್ಧಾಂತದಲ್ಲಿಯೇ ಸ್ಪಷ್ಟವಾಗಿ ತಿಳಿಯಬರುತ್ತದೆ.

ಮೊದಮೊದಲು ದ್ವೈತಬುದ್ಧಿಯಿಂದ ಹೊರಟು ಭಕ್ತಿಯ ಮೆಟ್ಟಿಲುಗಳನ್ನು ಒಂದೊಂದಾಗಿ ಹತ್ತಿದಂತೆ ಪರಮೇಶ್ವರನಿಗೆ ಹತ್ತಿರವಾಗುವೆವೆಂಬುದೂ ಕಟ್ಟಕಡೆಗೆ ಎಲ್ಲಾ ಪ್ರತಿಬಂಧಕಗಳೂ ಹಾರಿಹೋಗುವವೆಂಬುದೂ ಅನುಭವಿಗಳ ಉಪದೇಶವು.

**ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿ ಪೂರ್ವಕಮ್ ।**
**ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥**

ಎಂಬ ಗೀತಾವಚನವು ಹೀಗೆಂದೇ ಸಾರುತ್ತಿದೆ. ಸಾಧಕನ ಭಾಗ್ಯವಶದಿಂದ ಇಂಥ ಸ್ಥಿತಿಯು ಬಂದರೆ, ನಮ್ಮ ಹೃದಯದಲ್ಲಿಯೇ ಇದ್ದುಕೊಂಡಿರುವ ಭಗವಂತನು ಜ್ಞಾನದೀಪದಿಂದ ನಮ್ಮ ಅಜ್ಞಾನದ ಕತ್ತಲೆಯನ್ನು ತೊಲಗಿಸಿಬಿಡುತ್ತಾನೆ. ಆಗ ಪೂಜ್ಯಪೂಜಕ ಭಾವವು ಮಾಯವಾಗಿ ಬಿಡುತ್ತದೆ. ಏಕೆಂದರೆ **ಶ್ರೀರಾಮಕೃಷ್ಣಪರಮಹಂಸರು** ಹೇಳಿರುವಂತೆ, ಉಪ್ಪಿನಗೊಂಬೆಯು ಸಮುದ್ರದ ಆಳವನ್ನು ನೋಡಬೇಕೆಂದು ಅದರಲ್ಲಿ ಮುಳುಗಿದರೆ ಸಮುದ್ರದ ನೀರಿನಲ್ಲಿ ಕರಗಿ ತಾನೂ ಅದರಲ್ಲಿ ಐಕ್ಯವಾಗಿ ಬಿಡುವಹಾಗೆ, ಭಕ್ತನು ಆಗ ತಾನೇ ಪರಮಾತ್ಮಸ್ವರೂಪದಲ್ಲಿ ಒಂದಾಗಿಬಿಟ್ಟಿರುತ್ತಾನೆ. ''ಆತ್ಮರತಿರಾತ್ಮಕ್ರೀಡ ಆತ್ಮಮಿಥುನ ಆತ್ಮಾನಂದಃ ಸ ಸ್ವರಾಡ್ ಭವತಿ'' ಎಂಬ ಶ್ರುತಿಯು ತಿಳಿಸಿರುವಂತೆ ಅವನಿಗೆ ಆತ್ಮನಲ್ಲದೆ ಮತ್ತೊಂದರಲ್ಲಿ ರತಿಯಿರುವದಿಲ್ಲ, ಮತ್ತೊಂದರಲ್ಲಿ ಕ್ರೀಡೆಯಿರುವದಿಲ್ಲ. ಮತ್ತೊಂದರ ಸೇರುವಿಕೆಯಿರುವದಿಲ್ಲ, ಮತ್ತೊಂದರಿಂದ ಆನಂದವಿರುವದಿಲ್ಲ ; ಆತ್ಮನೇ ತಾನಾಗಿ ಸ್ವಯಂರಾಜನಾಗಿ ಅವನು ಆನಂದದಿಂದಿರುತ್ತಾನೆ. ಆದ್ದರಿಂದಲೇ ಗೀತೆಯಲ್ಲಿ ಭಗವಂತನು ''**ಜ್ಞಾನೀ ತ್ವಾತ್ಮೈವ ಮೇ ಮತಮ್** '' (ಜ್ಞಾನಿಯು ನನ್ನ ಆತ್ಮನೇ, ಇದು ನನ್ನ ಮತವು) ಎಂದಿರುತ್ತಾನೆ.

ಭಗವದ್ಗೀತೆಯಲ್ಲಿ ಭಗವಂತನೆಂಬ ಒಂದು ಕುಪ್ಪಿಮಾತ್ರೆಯಿರುವದು. ಅದನ್ನು ಬೇರೆಬೇರೆಯ ಅನುಪಾನಗಳಿಂದ ಉಪಯೋಗಿಸಿಕೊಂಡರೆ ಭವರೋಗವನ್ನು ಪರಿಹರಿಸುವ ಕರ್ಮಯೋಗ, ಧ್ಯಾನಯೋಗ, ಜ್ಞಾನಯೋಗ, ಭಕಿಯೋಗ - ಎಂಬ ದಿವ್ಯೌಷಧಗಳು ಏರ್ಪಡುವವು. ಈ ಮಾತ್ರೆಯನ್ನು

ಪ್ರೇಮರಸದಲ್ಲಿ ತೇದು ಉಪಯೋಗಿಸುವ ಕ್ರಮವೇ ಭಕ್ತಿಯೋಗವು. ಭಕ್ತಿಯು ಎಷ್ಟೆಷ್ಟು ಬಲಿತುಕೊಳ್ಳುವದೋ ಅಷ್ಟಷ್ಟು ಕರ್ಮ, ಧ್ಯಾನ, ಜ್ಞಾನ-ಇವೆಲ್ಲವೂ ತಮ್ಮತಮ್ಮ ರೂಪವನ್ನು ಬಿಟ್ಟು ಪರಮಾತ್ಮನಲ್ಲಿ ಒಂದಾಗಿಬಿಡುವವು. ಸಾಧಕನನ್ನು ಭಗವಂತನ ರೂಪಕ್ಕೆ ಮಾರ್ಪಡಿಸಿಬಿಡುವವು. ಇದನ್ನೇ ಆರ್ತಾದಿ ಭಕ್ತಿಗಳಿಗಿಂತ ಹೆಚ್ಚಿನದಾಗಿರುವ ಅನನ್ಯಭಕ್ತಿ ಅಥವಾ ಪರಭಕ್ತಿ- ಎಂಬ ಹೆಸರಿನಿಂದ ಗೀತೆಯು ಕರೆದಿರುತ್ತದೆ.

ಯಾರು ಈ ಪರಭಕ್ತಿಗೆ ಏರಬೇಕೆಂಬ ಆಸೆಯಿದ್ದರೂ ಅದಕ್ಕೆ ಸಮರ್ಥರಾಗಿ ಲ್ಲವೋ ಅವರು ಸಗುಣಸಾಕಾರದ ಉಪಾಸನೆಯನ್ನು ಮಾಡಬೇಕು. ಆ ಉಪಾಸನೆಯಿಂದ ಒಮ್ಮೆಗೇ ಚಿತ್ತಸ್ಥೈರ್ಯವನ್ನು ಪಡೆಯಲಾರದವರು ಅಭ್ಯಾಸಯೋಗವನ್ನನುಸರಿಸಬೇಕು; ಅದೂ ಆಗದಿದ್ದರೆ ಭಗವಂತನಿಗಾಗಿ ಕರ್ಮಗಳನ್ನು ಮಾಡಬೇಕು; ಅದಕ್ಕೂ ಶಕ್ತಿಯಿಲ್ಲದಿದ್ದರೆ ನಿಷ್ಕಾಮಕರ್ಮವನ್ನು ಮಾಡುತ್ತಾ ಭಗವಂತನ ಸ್ಮರಣೆಯನ್ನು ಮಾಡುತ್ತಿರಬೇಕು. ಅಂತೂ ಒಂದಲ್ಲ ಒಂದು ದಿನ ಎಲ್ಲರೂ ಆ ಪರಮಾತ್ಮನಲ್ಲಿ ಪರಭಕ್ತಿಯನ್ನು ಪಡೆದು ಆನಂದಿಸತಕ್ಕವರೇ- ಈ ಧ್ಯೇಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ನಮ್ಮ ನಮ್ಮ ಅಧಿಕಾರಕ್ಕೆ ತಕ್ಕಂತೆ ಭಗವದುಪಾಸನೆಯನ್ನು ಕೈಕೊಳ್ಳಬೇಕೆಂಬುದೇ ಆಚಾರ್ಯರ ಉಪದೇಶವಾಗಿದೆ.

★★★★★

## ವೈದಿಕಧರ್ಮದ ವಿಶ್ವವ್ಯಾಪಕತತ್ತ್ವಗಳು

**5-5-1938**

ಶ್ರೀಶ್ರೀಗಳು

ವೈದಿಕಧರ್ಮವು ಋಷಿಗಳ ಅನುಭವವನ್ನು ತಿಳಿಸುತ್ತದೆ. ವೇದವು ಈ ಸಾರ್ವತ್ರಿಕಾನುಭವವನ್ನೇ ತಿಳಿಸುತ್ತಿರುವದರಿಂದ ವೇದಪ್ರಾಮಾಣ್ಯವೆಂದರೆ

ಮಿಕ್ಕ ಮತಗಳಲ್ಲಿರುವಂತೆ ಒಂದು ಗ್ರಂಥದ ಪ್ರಾಮಾಣ್ಯವಾಗಿರುವದಿಲ್ಲ. ಈ ಮತದಲ್ಲಿ ಹೇಳಿರುವ ಪರಮಾರ್ಥತತ್ತ್ವವು ಬ್ರಹ್ಮ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುತ್ತದೆ. ಅದಕ್ಕಿರುವ ಆತ್ಮಾ, ಭೂಮಾ, ಮಹತ್, ಅಕ್ಷರ, ಪುರುಷ- ಎಂಬ ಬೇರೆಬೇರೆಯ ಹೆಸರುಗಳೂ ವೈದಿಕಧರ್ಮವು ದೇಶಕಾಲಗಳ ಕಟ್ಟಿಲ್ಲದ ಎಂಥ ವ್ಯಾಪಕತತ್ತ್ವವನ್ನು ಪರಮಾರ್ಥವಾಗಿ ಸ್ವೀಕರಿಸಿರುವದೆಂಬುದನ್ನು ತಿಳಿಸುತ್ತವೆ. ಸಗುಣ, ನಿರ್ಗುಣ, ಸಾಕಾರ, ನಿರಾಕಾರ, ವ್ಯಕ್ತ, ಅವ್ಯಕ್ತ- ಮುಂತಾದ ಎಲ್ಲಾ ರೂಪಗಳಿಂದಲೂ ಆ ಬ್ರಹ್ಮವನ್ನು ಅವರವರ ಇಷ್ಟಾನುಸಾರವಾಗಿ ಕಲ್ಪಿಸುವದಕ್ಕೂ ಪೂಜಿಸುವದಕ್ಕೂ ಅವಕಾಶವಿರುತ್ತದೆ. ಭೇದೋಪಾಸಕರಿಗೂ ಅಭೇದೋಪಾಸಕರಿಗೂ ಈ ಧರ್ಮದಲ್ಲಿ ಅವಕಾಶವಿರುತ್ತದೆ. ಇದೇ ರೀತಿಯಲ್ಲಿ ಈ ಧರ್ಮದಲ್ಲಿ ಜೀವಕಲ್ಪನೆಯು ತುಂಬ ವ್ಯಾಪಕವಾಗಿರುತ್ತದೆ ; ಏಕೆಂದರೆ ಮನುಷ್ಯರು ಮಾತ್ರವೇ ಅಲ್ಲದೆ ಇತರ ಪ್ರಾಣಿಗಳೂ ಜೀವರೇ' ಅವರೆಲ್ಲರಿಗೂ ಪರಮೇಶ್ವರನು ಆತ್ಮನೇ; ಪರಮೇಶ್ವರನು ಜಗತ್ತೆಲ್ಲವನ್ನೂ ನಿರ್ಮಿಸಿ ಅದರೊಳಗೆ ತಾನೇ ಜೀವರೂಪದಿಂದ ಪ್ರವೇಶಿಸಿರುತ್ತಾನೆ ಎಂದು ಬೋಧಿಸುವದರಿಂದ ಸರ್ವತ್ರಸಮಬುದ್ಧಿಯನ್ನು ಮಾಡುವದಕ್ಕೂ ಅಹಿಂಸಾಬುದ್ಧಿಯನ್ನು ಅಭ್ಯಾಸ ಮಾಡುವದಕ್ಕೂ ಈ ವಿಶಾಲಕಲ್ಪನೆಯಲ್ಲಿ ಅವಕಾಶವಿದೆ. ಪ್ರಪಂಚವೆಂಬ ಮಾತನ್ನು ವೈದಿಕಧರ್ಮದಲ್ಲಿ ದೃಷ್ಟಾದೃಷ್ಟವಾದ ಭೂಮಿ, ಅಂತರಿಕ್ಷ, ಚಂದ್ರ, ಸೂರ್ಯ, ನಕ್ಷತ್ರ, ಇತರ ಸೌರವ್ಯೂಹಗಳು - ಎಲ್ಲಕ್ಕೂ ಸೇರಿ ಉಪಯೋಗಿಸಿರುತ್ತದೆ. ಬ್ರಹ್ಮಾಂಡವೆಂಬ ಶಬ್ದವು ಈ ವಿಷಯದಲ್ಲಿ ವೈದಿಕಧರ್ಮದ ಉದಾರಕಲ್ಪನೆಯನ್ನು ತಿಳಿಸಿಕೊಡುತ್ತದೆ. ಅನೇಕಕೋಟಿ ಬ್ರಹ್ಮಾಂಡನಾಯಕ ಎಂಬ ಶಬ್ದವು ಪರಮೇಶ್ವರನ ಮಹಿಮೆಯನ್ನೇ ಯಥಾವತ್ತಾಗಿ ಮನನಮಾಡಿಕೊಂಡಿರುವದಕ್ಕೂ ತಕ್ಕದ್ದಾಗಿರುತ್ತದೆ. ಪ್ರಪಂಚವೆಲ್ಲವೂ ಪರಮಾರ್ಥವಾಗಿ ಬ್ರಹ್ಮವೇ ಎಂಬ ಉದಾರಕಲ್ಪನೆಯು ಈ ಮತದಲ್ಲಿ ಮಾತ್ರವೇ ಕಂಡುಬರುತ್ತದೆ. ಸಾಧನ ಕ್ರಮವನ್ನು ಬೋಧಿಸುವಾಗಲೂ ಕರ್ಮ, ಭಕ್ತಿ, ಯೋಗ, ಜ್ಞಾನ- ಎಂಬ ಎಲ್ಲಾ ಅಂತಸ್ತಿನ ಮಾರ್ಗಗಳನ್ನೂ ಸೇರಿಸಿಕೊಂಡಿರುವದು ಈ ಮತದ ಒಂದು ವಿಶೇಷವಾಗಿರುತ್ತದೆ; ಸರ್ವತ್ರ ಪರಮೇಶ್ವರಭಾವನೆಯನ್ನು ಬೋಧಿಸುವದರಿಂದ ಇಲ್ಲಿ ಉತ್ತಮವಾದ ನೀತಿಗೂ ಅವಕಾಶವಿರುತ್ತದೆ. ಆಚಾರದಲ್ಲಿಯೂ ಅವರವರ ಅಂತಸ್ತಿಗೂ ಮತಕ್ಕೂ ಅನುಗುಣವಾಗಿ ನಡೆಯುವದಕ್ಕೆ ಅವಕಾಶವಿರುವದೂ

ಮತಪ್ರಚಾರವನ್ನು ತತ್ತ್ವೋಪದೇಶದಿಂದಲೇ ಮಾಡುತ್ತಾ ಮತಾಂತರದವರಿಗೆ ಮತದೀಕ್ಷೆಕೊಡುವ ಪದ್ಧತಿಗೆ ಪ್ರೋತ್ಸಾಹವನ್ನೀಯದೆ ಇರುವದೂ ಈ ಧರ್ಮದ ಉದಾರಭಾವನೆಯನ್ನು ಕಲ್ಪಿಸುವದು. ಸಾಧಕರು ಪಡೆಯುವದಕ್ಕೆ ಇಲ್ಲಿ ಕಲ್ಪಿಸಿರುವ ಧರ್ಮ, ಅರ್ಥ, ಕಾಮ, ಮೋಕ್ಷ-ಎಂಬ ಪುರುಷಾರ್ಥಚತುಷ್ಟಯವೂ ಈ ಮತದ ವ್ಯಾಪಕದೃಷ್ಟಿಯನ್ನು ಸೂಚಿಸುತ್ತದೆ, ಏಕೆಂದರೆ ಧರ್ಮಾವಿರುದ್ಧವಾಗಿ ಇಹಲೋಕದಲ್ಲಿ ಅರ್ಥಕಾಮಗಳನ್ನು ಭೋಗಿಸುವದು, ಪರಮೇಶ್ವರನ ಭಕ್ತಿ ಜ್ಞಾನಗಳಿಂದ ವಿರಕ್ತನಾಗಿ ಪರಮಾರ್ಥತಾದಾತ್ಮ್ಯವನ್ನು ಹೊಂದಿ ಮೋಕ್ಷವನ್ನು ಪಡೆಯುವದು- ಇವೆರಡರಲ್ಲಿ ಅಡಕವಾಗದ ಪುರುಷಾರ್ಥವೇ ಇರುವದಿಲ್ಲ. ಹೀಗೆ ಯಾವ ಧರ್ಮಕ್ಕೂ ವಿರೋಧವಿಲ್ಲದೆ ಎಲ್ಲಾ ಬಗೆಯ ಸಾಧಕರಿಗೂ ಸ್ಥಾನವನ್ನು ಕಲ್ಪಿಸಿರುವದರಿಂದಲೂ ಅನುಭವದ ಭದ್ರವಾದ ತಳಹದಿಯ ಮೇಲೆ ಹುಟ್ಟಿರುವದರಿಂದಲೂ ಇದರ ತತ್ತ್ವಗಳು ವಿಶ್ವವ್ಯಾಪಕಸ್ವಭಾವವಾಗಿರುತ್ತವೆ.

★★★★★

## ಶಂಕರಸಿದ್ಧಾಂತದಲ್ಲಿ ಧ್ಯಾನವಾದ ಮತ್ತು ಜ್ಞಾನವಾದ

**7-5-1938**

**ಶ್ರೀಶ್ರೀಗಳು**

ಶಂಕರಾಚಾರ್ಯರ ಹೆಸರಿನಲ್ಲಿ ಈಗ ಮುಖ್ಯವಾಗಿ ಎರಡು ವೇದಾಂತ ಮತಗಳು ಪ್ರಚಾರದಲ್ಲಿರುತ್ತವೆ. ಅವುಗಳಲ್ಲಿ ಒಂದಕ್ಕೆ 'ಧ್ಯಾನವಾದ'ವೆಂದೂ ಮತ್ತೊಂದಕ್ಕೆ 'ಜ್ಞಾನವಾದ'ವೆಂದೂ ಹೆಸರಿಡಬಹುದು.

ಧ್ಯಾನವಾದಿಗಳ ಅಭಿಪ್ರಾಯವೇನೆಂದರೆ '**ಆತ್ಮಾವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ**' ಎಂಬ ವಾಕ್ಯದಲ್ಲಿ ಶ್ರವಣಾದಿಗಳನ್ನು ಆತ್ಮದರ್ಶನಕ್ಕೆ ಸಾಧನವಾಗಿ ವಿಧಿಸಿರುತ್ತದೆ. ಬರಿಯ ವಾಕ್ಯಶ್ರವಣದಿಂದಲೇ ಮುಕ್ತಿಯಾಗಲಾರದು ; ಬರಿಯ ಶುಷ್ಕವಿಚಾರದಿಂದಲೂ ಮುಕ್ತಿಯಾಗಲಾರದು;

ಶ್ರವಣವನ್ನೂ ಅದಕ್ಕನುಗುಣವಾಗಿ ಮನನವನ್ನೂ ಮಾಡಬೇಕಲ್ಲದೆ ನಿದಿಧ್ಯಾಸನವನ್ನೂ ಮಾಡಬೇಕು. ನಿದಿಧ್ಯಾಸನವೆಂದರೆ ಧ್ಯಾನವು. ಆತ್ಮತತ್ತ್ವವನ್ನು ಧ್ಯಾನಮಾಡಿ ನಿರ್ವಿಕಲ್ಪಸಮಾಧಿಯನ್ನು ಹೊಂದಿದಲ್ಲದೆ ಅಪರೋಕ್ಷಜ್ಞಾನವು ಉಂಟಾಗಲಾರದು. ಈಗ ನಾವು ಸಂಸಾರಿಗಳೆಂದು ಸತತವಾಗಿ ಯೋಚಿಸಿಕೊಳ್ಳುತ್ತಾ ನಮಗೆ ನಾವೇ ಮಂಕುಬೂದಿಯನ್ನು ತಳಿದುಕೊಂಡಿರುತ್ತೇವೆ; ಆದ್ದರಿಂದ ಈ ಮಂಕು ಹೋಗುವಂತೆ ನಾವು ನಿರಂತರವಾಗಿ ನಾನು ಬ್ರಹ್ಮವು ಎಂದು ನಿದಿಧ್ಯಾಸನಮಾಡಬೇಕು. ನಿದಿಧ್ಯಾಸನದಿಂದ ನಿರ್ವಿಕಲ್ಪ ಸಮಾಧಿಯೆಂಬ ತುರೀಯಾವಸ್ಥೆಯಲ್ಲಿ ಆತ್ಮಸಾಕ್ಷಾತ್ಕಾರವಾಗುತ್ತದೆ. ಇದಿಷ್ಟೂ ಧ್ಯಾನವಾದಿಗಳ ಮತವು.

ಇನ್ನು ಜ್ಞಾನವಾದಿಗಳು ಹೇಳುವದೇನೆಂದರೆ ಧ್ಯಾನವೆಂಬುದು ಯೋಗಕ್ಕೆ ಸೇರಿದ್ದು. ಆಚಾರ್ಯರು ಯೋಗವನ್ನು ತಮ್ಮ ಭಾಷ್ಯಗ್ರಂಥಗಳಲ್ಲಿ ಖಂಡಿಸಿರುತ್ತಾರೆ. ಆದ್ದರಿಂದ ತತ್ತ್ವವಿಚಾರದಿಂದಲೇ ಜ್ಞಾನವಾಗುತ್ತದೆ. ಸಮಾಧಿಯಿಂದ ಸಾಕ್ಷಾತ್ಕಾರವೂ ಮುಕ್ತಿಯೂ ದೊರಕುವದು ನಿಜವೆಂದಾದರೆ ಜ್ಞಾನದಿಂದ ಮುಕ್ತಿಯಾಗುವದೆಂಬ ವೇದಾಂತಸಿದ್ಧಾಂತಕ್ಕೆ ತಿಲಾಂಜಲಿಯನ್ನು ಕೊಡಬೇಕಾದೀತು. ಆದ್ದರಿಂದ ಈ ವಾದವು ಸರಿಯಲ್ಲ. ಮುಕ್ತಿಗೆ ಕರ್ಮವೇ ಮುಂತಾದ ಯಾವ ಸಾಧನೆಗಳೂ ಅವಶ್ಯವಿಲ್ಲ ; ಮುಖ್ಯವಾಗಿ ಭಾಷ್ಯದಲ್ಲಿ ಹೇಳಿರುವಂತೆ ವಿಚಾರಮಾಡಿ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

ಮೇಲೆ ಹೇಳಿದ ಎರಡು ಬಗೆಯ ವೇದಾಂತವಾದಿಗಳು ಆಚಾರ್ಯರ ವಾಕ್ಯಗಳನ್ನು ತಮ್ಮ ಅಭಿಪ್ರಾಯಕ್ಕೆ ಆಧಾರವಾಗಿ ಉದಾಹರಿಸುತ್ತಿರುತ್ತಾರೆ. ಆದರೆ ಇವರಿಬ್ಬರೂ ಬಹುಮಟ್ಟಿಗೆ ತಾವು ಹೇಳುವದನ್ನು ಅನುಷ್ಠಾನದಲ್ಲಿ ಇಟ್ಟುಕೊಂಡಿರುವದೇ ಇಲ್ಲ. ಧ್ಯಾನವಾದಿಗಳು ಸಮಾಧಿಸುಖವನ್ನು ಅನುಭವಿಸಿರುವದಿಲ್ಲ ; ಜ್ಞಾನವಾದಿಗಳು ತಾವು ಜ್ಞಾನವನ್ನು ಪಡೆದಿದ್ದೇವೆಂದೂ ನಿಮಗೆ ಹೇಳಿಕೊಡುತ್ತೇವೆಂದೂ ಮುಂದಕ್ಕೆ ಬರುವಂತಿರುವದಿಲ್ಲ. ಸಾಕ್ಷಾತ್ಕಾರವೆಂಬುದು ಈ ಕಲಿಗಾಲದಲ್ಲಿ ಆಗುವದು ಕಷ್ಟವೆಂತಲೂ ಅನೇಕ ಜನ್ಮಗಳಲ್ಲಿ ಸಂಸಿದ್ಧನಾಗಿ ಪರಗತಿಯನ್ನು ಪಡೆಯುತ್ತಾನೆ ಎಂಬ ಗೀತಾವಾಕ್ಯಕ್ಕೆ ಇದೇ ತಾತ್ಪರ್ಯವೆಂತಲೂ ಅವರಿಬ್ಬರೂ ಹೇಳುತ್ತಾರೆ. ಅದೃಷ್ಟವಶದಿಂದ ಜ್ಞಾನವು

ದೊರಕಿದಾಗಲೂ ಜೀವಂತನಾಗಿರುವವರೆಗೆ ಅಜ್ಞಾನಲೇಶವು ಇದ್ದೇಇರುವದೆಂದು ಈ ವಾದಿಗಳಲ್ಲಿ ಬಹುಜನರು ಅಭಿಪ್ರಾಯಪಡುತ್ತಾರೆ; ಆದ್ದರಿಂದ ಇವರು ಹೇಳುವ ಅಜ್ಞಾನನಾಶವೂ ಮುಕ್ತಿಯೂ ದೇಹವನ್ನು ಬಿಟ್ಟಮೇಲೆ ಆಗುವದೆಂದಾಗಿ ಶಾಂಕರ ವೇದಾಂತದ ಬುಡಕ್ಕೇ ಕೊಡಲಿಯನ್ನು ಹಾಕುವಂತೆ ಆಗುತ್ತದೆ.

ಪ್ರಸ್ಥಾನತ್ರಯಭಾಷ್ಯದಲ್ಲಿ ಕಂಡುಬರುವ ಸಿದ್ಧಾಂತವು ಈ ಎರಡು ವಾದಗಳಿಗಿಂತಲೂ ಭಿನ್ನವಾಗಿರುತ್ತದೆ. ಹೇಗೆಂದರೆ ಆತ್ಮದರ್ಶನಕ್ಕೆ ಶ್ರವಣಾದಿಗಳನ್ನು ವಿಧಿಸಿರುವದು ನಿಜವೆಂದು ಆಚಾರ್ಯರು ಒಪ್ಪಿರುತ್ತಾರಾದರೂ ಸಮಾಧಿಯಿಂದಲೇ ಸಾಕ್ಷಾತ್ಕಾರವಾಗುವದೆಂಬುದನ್ನು ಅವರು ಒಪ್ಪಿರುವದಿಲ್ಲ. ''**ನ ಚಾಯಂ ವ್ಯವಹಾರಾಭಾವೋ ಅವಸ್ಥಾವಿಶೇನಿಬದ್ಧೋ ಅಭಿಧೀಯತ ಇತಿ ಯುಕ್ತಂ ವಕ್ತುಮ್ । ತತ್ತ್ವಮಸಿ ಇತಿ ಬ್ರಹ್ಮಾತ್ಮಭಾವಸ್ಯಾನವಸ್ಥಾವಿಶೇಷ-ನಿಬನ್ಧನತ್ವಾತ್**'' (ಈ ದ್ವೈತವ್ಯವಹಾರವು ಇಲ್ಲವಾಗುವದೆಂಬುದು ಒಂದಾನೊಂದು ಅವಸ್ಥೆಯಲ್ಲಿ ಎಂದು ಹೇಳುವದು ಸರಿಯಲ್ಲ ; ಏಕೆಂದರೆ 'ಅದೇ ನೀನಾಗಿರುವೆ' ಎಂದು ಶ್ರುತಿಯಲ್ಲಿ ಹೇಳಿರುವ ಬ್ರಹ್ಮಾತ್ಮಭಾವವು ಯಾವದೊಂದು ಅವಸ್ಥೆಯ ಕಟ್ಟನ್ನೂ ಇಟ್ಟುಕೊಳ್ಳದೆ ಸಾರ್ವತ್ರಿಕವಾಗಿ ಹೇಳಿದ್ದಾಗಿ ರುತ್ತದೆ.) ಎಂಬ ಸೂತ್ರಭಾಷ್ಯ (2-1-14) ವಚನಕ್ಕೆ ಸಮಾಧಿವಾದವು ವಿರುದ್ಧವಾಗಿರುತ್ತದೆ. ಇದಲ್ಲದೆ ಎಲ್ಲವನ್ನೂ ಮರೆತುಬಿಡುವದೆಂಬ ಸಮಾಧಿಯು ಎಂದಿಗೂ ಜ್ಞಾನವೆನಿಸಲಾರದು. 'ನಿದಿಧ್ಯಾಸಿತವ್ಯಃ' ಎಂಬಲ್ಲಿ ಧ್ಯಾನವನ್ನು ವಿಧಿಸಿದೆಯೆಂಬುದೂ ಸರಿಯಲ್ಲ; ಇಲ್ಲಿ ಶ್ರವಣಮನನಗಳಿಂದ ಅರಿತದ್ದನ್ನು ತನ್ನ ಅನುಭವಕ್ಕೆ ಹೊಂದಿಸಿಕೊಂಡು ತಿಳಿದು ಕೊಳ್ಳುವದನ್ನೇ 'ನಿದಿಧ್ಯಾಸನ' ಎಂದು ಕರೆದಿರುತ್ತದೆ. ''**ಅಪರಾಯತ್ತ ಬೋಧೋಽತ್ರ ನಿದಿಧ್ಯಾಸನಮುಚ್ಯತೇ**'' (ಅನ್ಯಾಧೀನವಲ್ಲದ ಅರಿವನ್ನೇ ಇಲ್ಲಿ 'ನಿದಿಧ್ಯಾಸನ' ವೆಂದು ಕರೆದಿರುತ್ತದೆ), ''**ಧ್ಯಾನಾಶಙ್ಕನಿವೃತ್ತ್ಯರ್ಥಂ ವಿಜ್ಞಾನೇನೇತಿ ಭಣ್ಯತೇ । ನಿದಿಧ್ಯಾಸನಶಬ್ದೇನ ಧ್ಯಾನಮಾಶಙ್ಕ್ಯತೇ ಯತಃ ॥**'' ( ನಿದಿಧ್ಯಾಸನವೆಂಬ ಮಾತಿಗೆ ಧ್ಯಾನವೆಂದು ಯಾರಾದರೂ ಅರ್ಥ ಮಾಡಬೇಕೆಂದು ಆ ಅಭಿಪ್ರಾಯವನ್ನು ತಳ್ಳುವದಕ್ಕಾಗಿ ಶ್ರುತಿಯು ('ನಿದಿಧ್ಯಾಸನ' ಎಂಬ ಮಾತಿಗೆ ಪರ್ಯಾಯವಾಗಿ ವಿಜ್ಞಾನ ಎಂಬ ಮಾತನ್ನು ಉಪಯೋಗಿಸಿರುತ್ತದೆ) ಎಂಬ ಬೃಹದಾರಣ್ಯಕವಾರ್ತಿಕವಚನಗಳು

ಇದಕ್ಕೆ ಪ್ರಮಾಣವಾಗಿರುತ್ತವೆ. ಇನ್ನು ಜ್ಞಾನವಾದಿಗಳು ಹೇಳುವಂತೆ ಆಚಾರ್ಯರು ಧ್ಯಾನವನ್ನು ಸಂಪೂರ್ಣವಾಗಿ ಅಲ್ಲಗಳೆದೂ ಇರುವದಿಲ್ಲ. ಅವರ ಮತದಲ್ಲಿ **''ಪಾರ್ಥಗರ್ಥ್ಯಮೇವೋಪಾಸನಾವಾಕ್ಯಾನಾಂ ಬ್ರಹ್ಮವಾಕ್ಯಾನಾಂ ಚ ನ್ಯಾಯ್ಯಂ ನೈಕವಾಕ್ಯತ್ವಮ್''** (ಉಪಾಸನಾವಾಕ್ಯಗಳೂ ಬ್ರಹ್ಮವಾಕ್ಯಗಳೂ ಬೇರೆಬೇರೆ ಪ್ರಯೋಜನಕ್ಕಾಗಿ ಬಂದಿರುತ್ತವೆ, ಇವೆರಡನ್ನೂ ಸೇರಿಸಿ ಏಕವಾಕ್ಯತೆಮಾಡುವದು ಸರಿಯಲ್ಲ). ಯೋಗವು ನೇರಾಗಿ ಮುಕ್ತಿಸಾಧನವೆಂದು ಆಚಾರ್ಯರು ಒಪ್ಪುವದಿಲ್ಲವಾದರೂ ಆತ್ಮಧ್ಯಾನವು ಜ್ಞಾನಕ್ಕೆ ಅಂತರಂಗಸಾಧನವೆಂದು ಅವರು ಗೀತಾಭಾಷ್ಯವೇ ಮುಂತಾದ ಕಡೆಗಳಲ್ಲಿ ಕಂಠೋಕ್ತವಾಗಿ ಹೇಳಿರುತ್ತಾರೆ. ಕೆಲವರು ಧ್ಯಾನವಾದಿಗಳೂ ಜ್ಞಾನವಾದಿಗಳೂ ಹೇಳುವಂತೆ ಜೀವನ್ಮುಕ್ತನಿಗೂ ಅಜ್ಞಾನವುಂಟೆಂಬುದು 'ತತ್ತ್ವಮಸಿ' (ನೀನು ಬ್ರಹ್ಮನಾಗಿರುವೆ) ಎಂಬ ವಾಕ್ಯದ ಉಪದೇಶದಿಂದ ಕೂಡಲೆ ಜ್ಞಾನವಾಯಿತೆಂದು ಹೇಳುವ ಶ್ರುತಿಗೆ ವಿರುದ್ಧವಾಗಿರುತ್ತದೆ; ಅಜ್ಞಾನವನ್ನು ಕಳೆಯದೆ ಜ್ಞಾನವು ಹುಟ್ಟಬಹುದೆಂಬುದೂ ಜ್ಞಾನಾಜ್ಞಾನಗಳೆರಡೂ ಜೊತೆಯಲ್ಲಿರಬಹುದೆಂಬುದೂ ಯುಕ್ತಿವಿರುದ್ಧವೂ ಆಗಿರುತ್ತದೆ. ಆದ್ದರಿಂದ ಧ್ಯಾನವು ಮುಕ್ತಿಗೆ ಪರಂಪರಾಸಾಧನವೆಂತಲೂ ಶ್ರವಣಾದಿಗಳ ಮೂಲಕವಾಗಿ ಆಗುವ ಜ್ಞಾನವು ಸಾಕ್ಷಾತ್ಸಾಧನವೆಂತಲೂ ಜ್ಞಾನಿಯಲ್ಲಿ ಯಾವ ಅಜ್ಞಾನವೂ ಇರುವದಿಲ್ಲವೆಂತಲೂ ತಿಳಿಯುವದೇ ಆಚಾರ್ಯರ ಸಿದ್ಧಾಂತವು.

★★★★★

# ಮತಾಚಾರವೂ ತತ್ತ್ವವಿಚಾರವೂ

**8-5-1938**

**ಶ್ರೀಶ್ರೀಗಳು**

ಈಗಿನ ಕಾಲದಲ್ಲಿ ಮತಾಚಾರವನ್ನೇ ತತ್ತ್ವವಿಚಾರವೆಂದು ಭ್ರಮಿಸುವವರು ಕೆಲವರು ಇರುತ್ತಾರೆ. ಆದ್ದರಿಂದ ಇವೆರಡಕ್ಕೂ ಇರುವ ಸಂಬಂಧವನ್ನು ಸ್ವಲ್ಪಮಟ್ಟಿಗೆ ಚರ್ಚಿಸುವದು ಸಪ್ರಯೋಜನವಾಗಿ

ರುತ್ತದೆ. ಆಚಾರವೆಂಬುದು ಧರ್ಮದ ಹೊರಗುರುತು, ವಿಚಾರವು ತತ್ತ್ವಾನ್ವೇಷಣೆಯ ಹೊರಗುರುತಾಗಿರುತ್ತದೆ. ಆಚಾರವು ದೇಶಕಾಲಾದಿಗಳಿಂದ ಬೇರೆಬೇರೆಯಾಗಿರುತ್ತದೆ; ವಿಚಾರವು ಮನಃಸ್ವಭಾವವನ್ನನುಸರಿಸಿ ಭಿನ್ನವಾಗಿರುತ್ತದೆ. ಬೇರೆಬೇರೆ ಮತದವರಿಗೆ ಒಬ್ಬೊಬ್ಬರ ಆಚಾರವು ಒಗ್ಗದಿದ್ದರೆ ಜಗಳಕ್ಕೆ ಕಾರಣವಾಗಬಹುದು, ಆದರೆ ವಿಚಾರವು ಭಿನ್ನಾಭಿಪ್ರಾಯಗಳಿಗೆ ಕಾರಣವಾಗುವದೇ ಹೊರತು ಜಗಳಕ್ಕೆ ಕಾರಣವಲ್ಲ. ಆಚಾರವು ಯಾವ ಉದ್ದೇಶದಿಂದ ಹುಟ್ಟಿತೋ ಅದು ಮರೆತು ಹೋದರೆ ಅದಕ್ಕೆ ಅರ್ಥವಿಲ್ಲದೆ ಹೋಗುತ್ತದೆ. ವಿಚಾರದಲ್ಲಿ ಸತ್ಯವನ್ನು ಗೊತ್ತುಪಡಿಸುವ ಉದ್ದೇಶವಿಲ್ಲದೆ ಹೋದರೆ ಅದು ಬರಿಯ ಶುಷ್ಕತರ್ಕವಾಗುತ್ತದೆ. ಆಚಾರವು ಧರ್ಮಕ್ಕೆ ಹೊರಗುರುತಾದರೂ ಆಚಾರವಿಲ್ಲದೆಯೇ ಧರ್ಮವಿರಬಲ್ಲದು. ಇದರಂತೆ ವಿಚಾರದಿಂದ ಅನೇಕರು ತತ್ತ್ವನಿರ್ಧಾರಣೆಯನ್ನು ಮಾಡಿಕೊಳ್ಳುತ್ತಾರಾದರೂ ವಿಚಾರವಿಲ್ಲದೆಯೇ ತತ್ತ್ವನಿರ್ಧಾರಣೆ-ಯಾಗಬಹುದು; ಆದರೆ ತನ್ನ ನಿರ್ಧಾರಣೆಯನ್ನು ವಿಚಾರದ ಆಧಾರವಿಲ್ಲದೆ ಮತ್ತೊಬ್ಬರಿಗೆ ಮಾತ್ರ ತಿಳಿಸುವದಕ್ಕೆ ಬರುವದಿಲ್ಲ. ಇಲ್ಲಿ ಒಂದು ಮುಖ್ಯವಿಷಯವನ್ನು ನಾವು ನೆನಪಿಡಬೇಕು. ಆಚಾರಕ್ಕೂ ಧರ್ಮಕ್ಕೂ ವಿಚಾರಕ್ಕೂ ಪರಮೇಶ್ವರನೆಂಬ ಪರಮಾರ್ಥತತ್ತ್ವವೇ ಪರಮಾಧಾರವು; ಆದ್ದರಿಂದ ಎಲ್ಲರೂ ಅದೊಂದನ್ನೇ ಲಕ್ಷ್ಯದಲ್ಲಿಟ್ಟಿರಬೇಕು.

★★★★★

## ಪರಮೇಶ್ವರ ಭಕ್ತಿ

**9-5-1938**

**ಶ್ರೀಶ್ರೀಗಳು**

ಭಕ್ತಿಯೆಂದರೆ ಮಿಗಿಲಿಲ್ಲದ ಪ್ರೇಮವು. ಪ್ರೇಮದ ವಿಷಯವು ಟಿಪ್ಪಣಿ ಮಾಡಿಕೊಂಡು ಉಪನ್ಯಾಸಮಾಡತಕ್ಕದ್ದಲ್ಲ, ಒಳಗಿರುವ ಪ್ರೇಮವು ತಾನೇ

ಉಕ್ಕಿ ಹೊರಕ್ಕೆ ಬರಬೇಕು. ಹಿರಿಯವರಾದ ತಂದೆತಾಯಿಗಳು ಮುಂತಾದವರ ಮೇಲೆ ನಮಗೆ ಉಂಟಾಗುವ ಪ್ರೇಮವೂ ಭಕ್ತಿಯೇ. ಎಲ್ಲರಿಗೂ ಹಿರಿಯನಾದ ಪರಮೇಶ್ವರನಲ್ಲಿ ಆಗುವ ಪರಮಪ್ರೇಮವನ್ನೇ ಈಗ ನಾವು ಭಕ್ತಿಯೆಂಬ ಶಬ್ದದಿಂದ ಕರೆದಿರುವದು. ಏಕೆಂದರೆ ಇದಕ್ಕಿಂತ ಹೆಚ್ಚಿನ ಪ್ರೇಮವೇ ಇರುವದಿಲ್ಲ. ವಿಷಯಗಳಲ್ಲಿರುವ ರಾಗಕ್ಕೂ ಈ ಪ್ರೇಮರೂಪವಾದ ಭಕ್ತಿಗೂ ಬಹಳ ತಾರತಮ್ಯವುಂಟು. ವಿಷಯದ ಮೇಲಿನ ರಾಗವು ಹೆಚ್ಚಿದಂತೆ ಅದಕ್ಕೆ ವಿರುದ್ಧವಾದ ವಿಷಯಗಳಲ್ಲಿ ದ್ವೇಷವುಂಟಾಗುತ್ತದೆ. ಆದರೆ ಪರಮೇಶ್ವರನ ಭಕ್ತಿಯು ಹೆಚ್ಚಿದರೆ ಸರ್ವತ್ರಪ್ರೇಮವೇ ಉಂಟಾಗುತ್ತವೆ.

ಭಕ್ತಿಯುಂಟಾಗುವದಕ್ಕೆ ಸುಕೃತವು ಬೇಕು. ಲೋಕದಲ್ಲಿ ಜನರು ತಮಗೆ ಬೇಕಾದ ಇಷ್ಟವಸ್ತುವಿನ ಪ್ರಾಪ್ತಿಗಾಗಿ ಅಥವಾ ಅನಿಷ್ಟವಸ್ತುವಿನ ನಿವೃತ್ತಿಗಾಗಿ ಬೇರೆಬೇರೆ ಸಾಧನಗಳನ್ನು ಅವಲಂಬಿಸುತ್ತಾರೆ. ಆದರೆ ತಮಗೆ ಪರಮೇಶ್ವರನಲ್ಲಿ ನೈಜವಾದ ಭಕ್ತಿಯುಂಟಾಗಿ ಕೃತಾರ್ಥನಾಗಬೇಕೆನ್ನುವವನು ತನ್ನ ಯಾವ ಪುರುಷಾರ್ಥಕ್ಕಾದರೂ ಮತ್ತೊಂದು ಅವಲಂಬನೆಯನ್ನು ಹಚ್ಚಿಕೊಳ್ಳಬಾರದು. ಸಂಕಟಪರಿಹಾರಕ್ಕೆ, ಇಷ್ಟಾರ್ಥವು ಪ್ರಾಪ್ತಿಯಾಗುವದಕ್ಕೆ, ತತ್ತ್ವಜ್ಞಾನಕ್ಕೆ - ಎಲ್ಲಕ್ಕೂ ಪರಮೇಶ್ವರನನ್ನೇ ಆಶ್ರಯಿಸಬೇಕು. ನಿಜವಾಗಿ ನಾವು ಬೇರೊಂದು ಆಶ್ರಯವನ್ನು ಹಿಡಿದರೂ ಪರಮೇಶ್ವರನೇ ಅದರ ಮೂಲಕವಾಗಿ ನಮ್ಮ ಕೋರಿಕೆಯನ್ನು ನೆರವೇರಿಸಬೇಕಾಗಿರುತ್ತದೆ. ಹೀಗಿರುವಲ್ಲಿ ನೇರಾಗಿ ಆತನನ್ನೇ ಏತಕ್ಕೆ ಶರಣುಹೋಗಿಬಿಡಬಾರದು? ಭಗವಂತನ ಅನುಗ್ರಹವಿಲ್ಲದೆ ನಮ್ಮ ಸ್ವಂತಪ್ರಯತ್ನದಿಂದ ಯಾವದೊಂದನ್ನೂ ನಾವು ಸಂಪಾದಿಸಿಕೊಳ್ಳಲಾರೆವು. ಭಗವಂತನನ್ನೇ ಶರಣರಾಗಿ ಯಾರು ಭಜಿಸುವರೋ ಅವರಿಗೆ ಅನುಗ್ರಹಮಾಡುವದಕ್ಕೆಂದು ಭಗವಂತನು ಜ್ಞಾನವನ್ನು ಕೊಡುತ್ತಾನೆ. ಅದರಿಂದ ಸರ್ವಾತ್ಮನಾದ ಆತನ ಸ್ವರೂಪವನ್ನು ಕಂಡುಕೊಂಡು ಸರ್ವತ್ರಸಮಬುದ್ಧಿಗಳಾಗಿ ಆನಂದದಲ್ಲಿ ತಾವೂ ಇದ್ದುಕೊಂಡು ಇತರರಿಗೂ ಆನಂದದ ಪಾಲುಕೊಡಬಹುದು.

★★★★★

# ಅಧ್ಯಾತ್ಮಸಾಧನ

**25-4-1939**

ಶ್ರೀಶ್ರೀಗಳು

ಪರಮಾತ್ಮನು ನಮ್ಮಗಳ ಆತ್ಮನೇ ಆಗಿರುತ್ತಿದ್ದರೂ ಅಜ್ಞಾನಕೃತವಾದ ಪ್ರತಿಬಂಧಗಳಿಂದ ನಾವು ಆ ಸ್ವರೂಪವನ್ನು ಕಂಡುಕೊಳ್ಳಲಾರದೆ ಇರುವೆವು. ಯಾವದು ಪರಮಾತ್ಮಪ್ರಾಪ್ತಿಗೆ ಸಾಧನವಾಗುವದೋ ಎಂದರೆ ಪ್ರತಿಬಂಧಗಳನ್ನು ಪರಿಹರಿಸುವದಕ್ಕೆ ಉಪಾಯವಾಗಿರುವದೋ ಅದೇ ಅಧ್ಯಾತ್ಮಸಾಧನವು. ಜ್ಞಾನವೇ ನಿಜವಾಗಿ ಅಧ್ಯಾತ್ಮಸಾಧನವಾಗಿದ್ದರೂ ''ಜ್ಞಾನವಿಲ್ಲದಿದ್ದರೇನು? ಪಾಮರರು ಹಾಯಾಗಿರುವರಲ್ಲ! ಮಿತವಾಗಿ ವಿಷಯಭೋಗವನ್ನು ಮಾಡಿಕೊಂಡಿದ್ದರೆ ಸುಖಿಗಳಾಗಿರಬಹುದಲ್ಲದೆ? ಕಾಮ್ಯಕರ್ಮಗಳನ್ನೇಕೆ ಮಾಡಬಾರದು? ಬೈರಾಗಿಗಳಂತೆ ಎಲ್ಲವನ್ನೂ ಬಿಟ್ಟು ತಿರುಗಾಡುತ್ತಿದ್ದರೊ?'' ಎಂದು ಮುಂತಾಗಿ ಕೆಲವರು ಯೋಚಿಸಿಕೊಳ್ಳುತ್ತಿರುವರು. ಮತ್ತೆ ಕೆಲವರು ಲೌಕಿಕಜ್ಞಾನವೇ ಸಾಕೆಂದು ತಿಳಿಯುವರು; ಸಂಕಲ್ಪಶಕ್ತಿಯನ್ನು ಬೆಳಸಿಕೊಳ್ಳುವದರಿಂದಲೂ ಮಂತ್ರಯಂತ್ರಾದಿಗಳಿಂದಲೂ ಸುಖವನ್ನು ಪಡೆಯಬಹುದೆಂದೂ ಯೋಚಿಸುವರು. ಆದರೆ ನಿಜವಾಗಿ ವಿವೇಕವೈರಾಗ್ಯಗಳಿಲ್ಲದೆಯೂ ಉತ್ಕಟವಾದ ಜಿಜ್ಞಾಸುತ್ವವೂ ಮುಮುಕ್ಷುತ್ವವೂ ಇಲ್ಲದೆಯೂ ಯಾರಿಗೊಬ್ಬರಿಗೂ ನಿಜವಾದ ಜ್ಞಾನವಾಗಲಿ ಸುಖವಾಗಲಿ ದೊರೆಯಲಾರದು, ಜ್ಞಾನದಲ್ಲಿ ಶ್ರದ್ಧೆಯಿರಬೇಕು. ನಮಗೆ ಬಗೆಬಗೆಯ ಸಂಕಟಗಳೂ ತೊಂದರೆಗಳೂ ಒದಗಿದ್ದರೂ ಅಧ್ಯಾತ್ಮಪ್ರವಣತೆಯಿಂದ ಅವುಗಳೆಲ್ಲವನ್ನೂ ತೊಲಗಿಸಿಕೊಳ್ಳಬಹುದೆಂಬ ನಂಬಿಕೆಯಿರಬೇಕು. ಶ್ರದ್ಧೆ, ಸತ್ಸಂಗ, ಶಾಸ್ತ್ರಶ್ರವಣ, ತಾತ್ಪರ್ಯ, ಇಂದ್ರಿಯನಿಗ್ರಹ- ಇವೆಲ್ಲವುಗಳ ಸಹಾಯದಿಂದ ಎಂಥ ಪ್ರತಿಬಂಧವನ್ನೂ ತೊಲಗಿಸಿಕೊಳ್ಳಬಹುದು. ಆದ್ದರಿಂದ ಅದೃಷ್ಟವಾದಿಗಳಾಗದೆ ಪೌರುಷವನ್ನವಲಂಬಿಸಿ ಶಾಂತ್ಯಾದಿಸಾಧನಗಳನ್ನು ಅಳವಡಿಸಿಕೊಳ್ಳಬೇಕು.

★★★★★

# ಅದ್ವೈತಸಿದ್ಧಾಂತ

**26-4-1939**

**ಶ್ರೀಶ್ರೀಗಳು**

ಅದ್ವೈತವೆಂದರೆ ತನಗಿಂತ ಎರಡನೆಯದಾಗಿ ತನ್ನ ಜಾತಿಯದಾಗಲಿ ಬೇರೆಯ ಜಾತಿಯದಾಗಲಿ ಇಲ್ಲದ, ತನ್ನೊಳಗೂ ಕವಲಿಲ್ಲದ ಪ್ರತ್ಯಗಾತ್ಮನು. ಪ್ರತ್ಯಗಾತ್ಮನೊಬ್ಬನೇ ಸತ್ಯವೆಂಬ ಸಿದ್ಧಾಂತಕ್ಕೆ ಅದ್ವೈತಸಿದ್ಧಾಂತವೆಂದು ಹೆಸರು. ದ್ವೈತವನ್ನು ಮತವೆಂದು ಕರೆಯಬಾರದು, ಏಕೆಂದರೆ ಶೈವವೈಷ್ಣವ ಮುಂತಾದಮತಗಳಂತೆ ಕೇವಲ ಶಾಸ್ತ್ರಪ್ರಮಾಣದ ಮೇಲೆ ಅದು ನಿಂತಿರುವದಿಲ್ಲ. ಅದು ಸಿದ್ಧಾಂತವು, ವೇದದಲ್ಲಿ ಹೇಳಿರುವ ತತ್ತ್ವವಾದರೂ ಎಲ್ಲರ ಅನುಭವಕ್ಕೂ ಹೊಂದುವಂತೆ ಯುಕ್ತಿಯಿಂದ ತೋರಿಸಿಕೊಡುವದಕ್ಕೆ ಆಗುವ ತತ್ತ್ವವನ್ನೇ ಹೇಳುವ ವಾದವಾಗಿರುತ್ತದೆ. ವೇದದಲ್ಲಿ ಹೇಳಿರುವ ಬ್ರಹ್ಮವು ದೇಶಕಾಲವಸ್ತು ಪರಿಚ್ಛೇದವಿಲ್ಲದ್ದೆಂದು ತಿಳಿದುಬರುತ್ತದೆ; ಅದನ್ನು ಆತ್ಮನೆಂದು ಹೇಳಿರುವದೂ ಕಂಡುಬರುತ್ತದೆ. ಆದ್ದರಿಂದ ಶ್ರುತಿಯಲ್ಲಿ ಹೇಳಿರುವಂತೆ ವಿಚಾರಮಾಡಿ ನಮ್ಮ ಆತ್ಮನಲ್ಲಿ ಬ್ರಹ್ಮದ ಲಕ್ಷಣವು ಇದೆಯೆ, ಇಲ್ಲವೆ?-ಎಂಬುದನ್ನು ಅನುಭವಕ್ಕೆ ಹೊಂದಿಸಿನೋಡಿಕೊಳ್ಳಬೇಕು; ಆ ಲಕ್ಷಣವು ಇದ್ದರೆ ಅದ್ವೈತವನ್ನು ಒಪ್ಪಿಕೊಳ್ಳಬೇಕು, ಇಲ್ಲದಿದ್ದರೆ ಒಪ್ಪಿಕೊಳ್ಳಬೇಕಾದದ್ದಿಲ್ಲ- ಎನ್ನುವದರಿಂದ ಅದ್ವೈತವು ಅನ್ವರ್ಥವಾಗಿಯೂ ಸಿದ್ಧಾಂತವಾಗಿರುತ್ತದೆ.

ಆತ್ಮನ ಸ್ವರೂಪವನ್ನು ಆತ್ಮಶಬ್ದದ ವ್ಯುತ್ಪತ್ತಿಯಿಂದಲೇ ಸ್ಮೃತಿಕಾರರು ವರ್ಣಿಸಿರುತ್ತಾರೆ. **ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ । ಯಚ್ಚಾಸ್ಯ ಸನ್ತತೋ ಭಾವಸ್ತಸ್ಮಾದಾತ್ಮೇತಿ ಕೀರ್ತ್ಯತೇ ॥** ಎಂಬ ಶ್ಲೋಕದಲ್ಲಿ ಆತ್ಮನಿಗೆ ಬ್ರಹ್ಮದ ಲಕ್ಷಣವೆಲ್ಲವೂ ಇದೆಯೆಂದು ತಿಳಿಸಿರುತ್ತದೆ. ಹೇಗೆಂದರೆ ಜಾಗ್ರದವಸ್ಥೆಯಲ್ಲಿಯೂ, ಸ್ವಪ್ನಾವಸ್ಥೆಯಲ್ಲಿಯೂ, ಆತ್ಮನು ತನ್ನ ಚೈತನ್ಯಸ್ವರೂಪದಿಂದ ಮಿಕ್ಕದ್ದೆಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ, ಆ ಸಾಕ್ಷಿಚೈತನ್ಯಕ್ಕಿಂತ ಯಾವದೊಂದು ಅನಾತ್ಮವೂ ಬೇರೆಯಾಗಿಲ್ಲವೆಂದು

ಏರ್ಪಡುತ್ತದೆ; ಸುಷುಪ್ತಿಯಲ್ಲಿ ಎಲ್ಲವನ್ನೂ ತನ್ನ ಸ್ವರೂಪದಲ್ಲಿಯೇ ಉಪಸಂಹರಿಸಿಕೊಳ್ಳುವದರಿಂದ ಅವನು ಅದ್ವಿತೀಯನೆಂದು ಏರ್ಪಡುತ್ತದೆ; ವ್ಯವಹಾರದಲ್ಲಿ ವಿಷಯಭೋಗಗಳನ್ನು ಮಾಡುತ್ತಿರುವ ಚಿದಾಭಾಸನು ಕೂಡ ಆತ್ಮಸಾಕ್ಷಿಗಿಂತ ಬೇರೆಯಾಗಿರುವದಿಲ್ಲವಾದ್ದರಿಂದ ಜೀವನೂ ಪರಮಾರ್ಥವಾಗಿ ಈ ಆತ್ಮನ ಸ್ವರೂಪವೇ ಎಂದು ಏರ್ಪಡುತ್ತದೆ. ಹೀಗೆ ಅನುಭವದಲ್ಲಿ ತೋರುವ ಆತ್ಮನ ಅದ್ವಿತೀಯತ್ವವನ್ನು ಶ್ರುತಿಯು ಹೇಳುತ್ತಿದೆ. ಆದ್ದರಿಂದ ಶ್ರುತಿಗೆ ಪ್ರಾಮಾಣ್ಯವೂ ಬರುತ್ತದೆ, ಅದ್ವೈತವು ವೈದಿಕಸಿದ್ಧಾಂತವೆಂದೂ ಸಿದ್ಧವಾಗುತ್ತದೆ.

★★★★★

# ಶಂಕರಸಿದ್ಧಾಂತದಲ್ಲಿ ಆತ್ಮಸಾಕ್ಷಾತ್ಕಾರ

**27-4-1939**

ಶ್ರೀ ಶ್ರೀಗಳು

ಶಾಂಕರಸಿದ್ಧಾಂತವೇ ಅದ್ವೈತವಾದರೂ ಶ್ರೀಶಂಕರಾಚಾರ್ಯರ ಹಿಂದೆಯೂ ಈಚೆಗೂ ಅವರ ಸಿದ್ಧಾಂತಕ್ಕೆ ಭಿನ್ನವಾದ ಅದ್ವೈತವನ್ನು ಹೇಳಿರುವದುಂಟು. ಆದ್ದರಿಂದ ಆಚಾರ್ಯರ ಸಿದ್ಧಾಂತದಂತೆ ಸಾಕ್ಷಾತ್ಕಾರವೆಂದರೇನು?- ಎಂಬುದನ್ನು ತಿಳಿಯಬೇಕು. ಸಾಕ್ಷಾತ್ಕಾರವೆಂದರೆ ನೇರವಾಗಿ ಕಾಣುವದು; ದೇಶಕಾಲವಸ್ತುಗಳ ಮರೆಯಿಲ್ಲದಂತೆ ಮಾಡಿಕೊಂಡು ವಸ್ತುವನ್ನು ನೇರಾಗಿ ನೋಡುವದು. ಇದು ಅನಾತ್ಮಗಳಿಗೆ ಹೊಂದುವದೇ ಹೊರತು ಆತ್ಮನಿಗೆ ಹೊಂದುವದಿಲ್ಲ. ಏಕೆಂದರೆ ಆತ್ಮನು ಎಲ್ಲಾದೇಶಕಾಲ ವಸ್ತುಗಳನ್ನೂ ಬೆಳಗುವವನಾದ್ದರಿಂದ ಅವುಗಳ ಮರೆಯು ಅವನಿಗಿಲ್ಲ; ಪ್ರಮಾಣಗಳಿಗೆ ಗೋಚರನಾದ ಪ್ರಮೇಯನೂ ಅಲ್ಲದ್ದರಿಂದ ಸಾಕ್ಷಾತ್ಕಾರವು ಹೊಸದಾಗಿ ಆಗಬೇಕಾದದ್ದಿಲ್ಲ. ಇದೂ ಅಲ್ಲದೆ ಅವನು ಸ್ವತಃಸಿದ್ಧನಾಗಿರುತ್ತಾನೆ; ಪ್ರಮಾಣಗಳುಕೂಡ ಅವನಿಂದ ಸಿದ್ಧಿಯಾಗಬೇಕಾಗಿ ರುವದರಿಂದ ಪ್ರಮಾಣಗಳಿಂದ ಆತ್ಮಸಿದ್ಧಿಯಾಗಲಾರದು. ಆದ್ದರಿಂದ

ಸಿದ್ಧಾಂತದಂತೆ ಆತ್ಮಸಾಕ್ಷಾತ್ಕಾರವೆಂದರೆ ಅಜ್ಞಾನವನ್ನು ತೊಲಗಿಸಿಕೊಳ್ಳುವದೇ ಆಗಿರುತ್ತದೆ; ಅಜ್ಞಾನಶಬ್ದಕ್ಕೆ ಜ್ಞಾನಾಭಾವ, ಸಂಶಯಜ್ಞಾನ, ಮಿಥ್ಯಾಜ್ಞಾನ- ಎಂಬ ಯಾವ ಅರ್ಥವನ್ನು ತೆಗೆದುಕೊಂಡರೂ ಅಜ್ಞಾನವನ್ನು ಕಳೆಯುವದು ಜ್ಞಾನವೇ ಆಗಿರುವದರಿಂದ ಅವಿಷಯನೂ ನಿತ್ಯಸಿದ್ಧನೂ ಅಕರ್ತೃವೂ ಅಭೋಕ್ತೃವೂ ಆದ ಅದ್ವಿತೀಯಾತ್ಮನೇ ನಾನು- ಎಂಬ ಜ್ಞಾನವನ್ನು ಸಂಪಾದಿಸಿಕೊಳ್ಳುವದೇ ಸಾಕ್ಷಾತ್ಕಾರವು.

ಆದರೆ ಆಚಾರ್ಯರ ಹಿಂದೆ ಧ್ಯಾನದಿಂದ ಸಾಕ್ಷಾತ್ಕರಮಾಡಿಕೊಳ್ಳ ಬೇಕೆಂತಲೂ ವಾಕ್ಯಜನ್ಯಜ್ಞಾನದ ಅಭ್ಯಾಸದಿಂದ ಸಾಕ್ಷಾತ್ಕಾರಮಾಡಿಕೊಳ್ಳ ಬೇಕೆಂತಲೂ ಹೇಳುವ ಕೆಲವು ಅದ್ವೈತವಾದಿಗಳಿದ್ದರು; ಅವರ ಮತದಲ್ಲಿ ವಾಕ್ಯಕ್ಕೆ ಪ್ರಾಮಾಣ್ಯವು ಬರುವದಿಲ್ಲವೆಂತಲೂ ಮೋಕ್ಷವು ಕೃತಕವಾಗುವ- ದೆಂತಲೂ ಇನ್ನೂ ಕೆಲವು ದೋಷಗಳು ಬರುವವೆಂತಲೂ ಆಚಾರ್ಯರೂ ವಾರ್ತಿಕಕಾರರೂ ತೋರಿಸಿಕೊಟ್ಟಿರುತ್ತಾರೆ. ಆಚಾರ್ಯಮಂಡನಮಿಶ್ರ- ನೆಂಬಾತನು ಜ್ಞಾನಾಭ್ಯಾಸವು ಅನುಭವಕ್ಕೆ ದೃಷ್ಟಸಾಮಗ್ರಿಯಾಗಿ- ರುವದರಿಂದ ವೇದವಿಹಿತವಲ್ಲವೆಂಬ ಪಕ್ಷವನ್ನುವಹಿಸಿ ಜ್ಞಾನಾಭ್ಯಾಸವನ್ನೇ ಸಮರ್ಥಿಸಿರುತ್ತಾನೆ; ಭಾಮತೀಕಾರರಾದ ವಾಚಸ್ಪತಿಮಿಶ್ರರೂ ಸ್ವಲ್ಪ ಹೆಚ್ಚುಕಡಿಮೆಯಾಗಿ ಈ ಪಕ್ಷವನ್ನೇ ಅನುಸರಿಸಿರುತ್ತಾರೆ. ಕೆಲವರು ವೇದಾಂತಿಗಳು ಅನಿರ್ವಚನೀಯವಾದ ಭಾವರೂಪಾವಿದ್ಯೆಯನ್ನು ಜ್ಞಾನದಿಂದ ತೊಲಗಿಸಿಕೊಳ್ಳಬೇಕೆಂದು ಹೇಳಿರುತ್ತಾರೆ. ಈ ಎಲ್ಲಾ ವಾದಿಗಳೂ ಜ್ಞಾನವು ವಸ್ತುತಂತ್ರವೆಂಬುದನ್ನೂ ನಿತ್ಯಸಿದ್ಧಾತ್ಮನಿಗೆ ಆಚಾರ್ಯರು ಹೇಳಿರುವ ರೀತಿಯಿಂದಲ್ಲದೆ ಮತ್ತೆ ಯಾವ ರೀತಿಯಿಂದಲೂ ಅಜ್ಞಾನದ ಅವರಣವಿರಲಾರದಾಗಿ ಅದನ್ನು ತೊಲಗಿಸುವದಕ್ಕೆ ಜ್ಞಾನವನ್ನು ಕಾರಕವಾಗಿ ಉಪಯೋಗಿಸಬೇಕೆಂಬುದು ಅಯುಕ್ತವೆಂಬುದನ್ನೂ ಮರೆತಿರುತ್ತಾರೆ. ಆದ್ದರಿಂದ ಪದಾರ್ಥಶೋಧನೆಯನ್ನು ಮಾಡಿಕೊಂಡವನಿಗೆ ಶಾಸ್ತ್ರವಾಕ್ಯೋಪದೇಶದಿಂದಲೇ ಅಜ್ಞಾನವು ತೊಲಗಿ ಸಾಕ್ಷಾತ್ಕಾರ- ವಾಗುವದೆಂಬುದೇ ಪರಮಸಿದ್ಧಾಂತವು.

★★★★★

# ಸರ್ವಸಮತ್ವ

**28-4-1939**

**ಶ್ರೀಶ್ರೀಗಳು**

ವೇದಾಂತೋಪದೇಶದಿಂದ ತತ್ತ್ವಜ್ಞಾನವು ಯಾವನಿಗಾಗಿರುವದೋ ಅಂಥವನು ಸರ್ವಸಮನಾಗಿರುತ್ತಾನೆ. ಸರ್ವಸಮತೆಯೆಂಬುದು ಎಲ್ಲರಿಗೂ ಬೇಕಾದದ್ದು. ಸಮಾಜದಲ್ಲಿ ಸರ್ವಸಮತೆಯಿರಬೇಕೆಂದು ಸುಧಾರಕರು ಪ್ರಯತ್ನಮಾಡುತ್ತಿರುವರು; ರಾಜಕೀಯವಿಚಾರದಲ್ಲಿ ಸರ್ವಸಮತ್ವವಿರಬೇಕೆಂದು ರಾಜನೀತಿಜ್ಞರು ಹೊಡೆದಾಡುತ್ತಿರುವರು; ವಿದ್ಯೆಯಲ್ಲಿಯೂ ಧರ್ಮವಿಚಾರದಲ್ಲಿಯೂ ಆರ್ಥಿಕವಿಚಾರದಲ್ಲಿಯೂ ಸರ್ವಸಮತ್ವವಿರಬೇಕೆಂದು ಆಯಾ ಭಾಗದಲ್ಲಿ ಜನರನ್ನು ತಿದ್ದುಪಾಟುಮಾಡುವದಕ್ಕೆ ಹೊರಟಿರುವ ಮುಂದಾಳುಗಳು ಪ್ರಯತ್ನಮಾಡುತ್ತಿರುವರು. ಆದರೂ ಲೋಕದಲ್ಲಿ ಸರ್ವಸಾಮ್ಯವೆಂಬುದು ಎಲ್ಲಿಯೂ ಕಂಡುಬರುತ್ತಲಿಲ್ಲ. ಸರ್ವಸಾಮ್ಯವನ್ನು ಸಾಧಿಸುವದು ಶಕ್ಯವಲ್ಲವೆಂದೂ ಸರ್ವಸಾಮ್ಯವಾದರೆ ಪ್ರಲಯವೇ ಆಗಿ ಬಿಡುವದೆಂದೂ ಆದ್ದರಿಂದ ಅದು ಇಷ್ಟವೂ ಅಲ್ಲವೆಂದೂ ಸಾಂಖ್ಯ ತತ್ತ್ವವನ್ನ ವಲಂಬಿಸಿ ಪೂರ್ವಪಕ್ಷವನ್ನೂ ಮಾಡಬಹುದು. ಹೀಗಿದ್ದರೂ ನಮ್ಮ ಹೃದಯದಲ್ಲಿ ಒಂದು ಬಗೆಯ ಸರ್ವಸಮತೆಯಿರುವದು ಯುಕ್ತವೆಂದೇ ತೋರುತ್ತದೆ. ಇದಕ್ಕೆ ವೇದಾಂತವು ಬೆಂಬಲವನ್ನು ಕೊಡುತ್ತದೆ. ವೇದಾಂತದಲ್ಲಿ ಹೇಳಿರುವದು ಬಾಹ್ಯದ ಸಾಮ್ಯವಲ್ಲ, ಭಾವದ ಸಾಮ್ಯವು. ಕರ್ಮಗಳನ್ನು ಮಾಡುವಾಗ ಸಿದ್ಧಿಯಾಗಲಿ ಆಗದಿರಲಿ ಒಂದೇ ಮನಸ್ಸಿನಿಂದ ಕರ್ತವ್ಯವನ್ನು ಮಾಡುವದೂ, ವ್ಯವಹಾರದಲ್ಲಿ ಉಪಕಾರ್ಯರನ್ನೆಲ್ಲ ಒಂದೇ ದೃಷ್ಟಿಯಿಂದ ಕಾಣುವದೂ, ಧ್ಯಾನದಲ್ಲಿ ಮನಸ್ಸನ್ನು ಏರುಪೇರಿಲ್ಲದೆ ಒಂದೇ ಸಮವಾಗಿಟ್ಟುಕೊಳ್ಳುವದೂ, ಜ್ಞಾನದಲ್ಲಿ ಜಗತ್ತೆಲ್ಲವೂ ಒಬ್ಬ ಪರಮಾತ್ಮನೇ ಎಂದು ಸಮತೆಯನ್ನು ಕಾಣುವದೂ ವೇದಾಂತಿಯ ಸರ್ವಸಮತ್ವವು. ಇದರಿಂದ ಅಭಿಮಾನಗಳು ತೊಲಗುವವು; ಇಹಪರಸುಖಗಳು ಕೈಸೇರುವವು.

★★★★★

# ಜಗತ್ತಿನ ಅಧ್ಯಾತ್ಮವಾಙ್ಮಯದಲ್ಲಿ ಉಪನಿಷತ್ತುಗಳ ಸ್ಥಾನ

**13-5-1940**

**ಶ್ರೀಶ್ರೀಗಳು**

ಉಪನಿಷತ್ತುಗಳು ವೇದಕ್ಕೆ ಸೇರಿರುವ ಬ್ರಾಹ್ಮಣಗಳ ಕೊನೆಯ ಭಾಗವಾದ ಆರಣ್ಯಕದಲ್ಲಿಯೇ ವಿಶೇಷವಾಗಿ ಕಂಡುಬರುತ್ತದೆ. ವೇದದ ಆದಿಭಾಗದಲ್ಲಿ ಕರ್ಮಪ್ರಧಾನವಾದ ವಿಚಾರಗಳೇ ಇರುತ್ತಿದ್ದರೂ ಉಪನಿಷತ್ತುಗಳಂಥ ವಿಚಾರಪ್ರಧಾನವಾದ ಗ್ರಂಥಗಳು ಅದೇ ವೇದದಲ್ಲಿ ತಲೆದೋರಿಕೊಂಡದ್ದು ಹೇಗೆ? ಉಪನಿಷತ್ತು ಎಂದರೆ ಬ್ರಹ್ಮವಿದ್ಯೆಯು; ಪರಮಾತ್ಮನ ತತ್ತ್ವವನ್ನು ತಿಳಿಸುವ ವಿದ್ಯೆಯು. ಉಪನಿಷತ್ತುಗಳು ವೇದದ ಕೊನೆಯಲ್ಲಿರುವುದರಿಂದ ಇವಕ್ಕೆ ವೇದಾಂತವೆಂಬ ಹೆಸರೂ ಉಂಟು. ಆದರೆ ಉಪನಿಷತ್ತೆಂಬ ಮಾತಿನಲ್ಲಿ ಆಧ್ಯಾತ್ಮವಿದ್ಯೆಯೆಂಬ ಹೆಚ್ಚಿನ ಅರ್ಥವು ಎದ್ದುಕಾಣುತ್ತದೆ. ಕರ್ಮಪ್ರಧಾನವಾದ ವೇದದಲ್ಲಿ ಆಧ್ಯಾತ್ಮವಿಚಾರವು ಮೇಲಕ್ಕೆದ್ದುಕೊಂಡದ್ದು ಹೇಗೆ?- ಎಂಬ ಪ್ರಶ್ನೆಗೆ ಸಾಮಾನ್ಯವಾಗಿ ಒಂದು ಬಗೆಯ ಉತ್ತರವನ್ನು ಹೇಳಬಹುದು. ಧರ್ಮಗಳಲ್ಲೆಲ್ಲ ಕರ್ಮಭಾಗವು ಮೊದಲು ಆಗಿರುತ್ತದೆ. ಆಮೇಲೆಯೇ ಉಪಾಸನೆಯೂ ಜ್ಞಾನವೂ ತಲೆದೋರಿವೆ. ಆದರೆ ಉಪನಿಷತ್ತುಗಳಲ್ಲಿ ಜ್ಞಾನವು ಅತ್ಯಂತಮೇಲಿನ ಅಂತಸ್ತಿಗೇರಿದೆ. ಇದಕ್ಕೆ ವೇದಗಳು ಜ್ಞಾನವನ್ನು ಮೊದಲಿನಿಂದಲೂ ಲಕ್ಷ್ಯದಲ್ಲಿಟ್ಟುಕೊಂಡಿದ್ದದ್ದೇ ಕಾರಣವೆನ್ನಬಹುದು. ಕರ್ಮವು ಚಿತ್ತಶುದ್ಧಿಯ ಮೂಲಕ ಜ್ಞಾನಕ್ಕೆ ಕಾರಣವಾಗಿರುವದೆಂಬ ವಾದವು ಹಾಗಿರಲಿ, ವೇದದಲ್ಲಿರುವ ಕರ್ಮಗಳುಕೂಡ ಪರಮಾರ್ಥಜ್ಞಾನದ ಸ್ಥೂಲಾಭಿನಯಪ್ರಕಾರವೆಂದೂ ಕೆಲವರು ಅಭಿಪ್ರಾಯಪಡುತ್ತಿದ್ದಾರೆ. ಈ ದೃಷ್ಟಿಯಿಂದ ಕರ್ಮಕಾಂಡಕ್ಕೆ ಕೂಡ ಹೆಚ್ಚಿನ ಪ್ರಾಶಸ್ತ್ಯವು ಬರುತ್ತದೆ ಎಂಬುದು ಸ್ಪಷ್ಟವಾಗಿದೆ.

ಉಪನಿಷತ್ತುಗಳು ನಮ್ಮನ್ನು ಸತತವಾಗಿ ಮೇಲಿನಂತಸ್ತಿನಲ್ಲಿಯೇ ಇಡುತ್ತವೆ. ನಾವು ಪಾಪಿಷ್ಠರೆಂಬ ವಿಷಯವನ್ನಾಗಲಿ ದೇವರು

ದಯಾಘನನೆಂಬುದನ್ನಾಗಲಿ ಈ ಗ್ರಂಥಗಳು ಹೆಚ್ಚಾಗಿ ಎತ್ತಿ ತಿಳಿಸುವದಿಲ್ಲ. ಅಲ್ಲಿ ವಿಷಯವು ಭೀತಿಪ್ರಧಾನವಾಗಿಲ್ಲ, ಪ್ರೀತಿಪ್ರಧಾನವಾಗಿರುತ್ತದೆ. ಬ್ರಹ್ಮವು ಸತ್ಯವೂ ಜ್ಞಾನವೂ ಅನಂತವೂ ಆಗಿರುತ್ತದೆ ಎಂದು ಹೇಳಿರುವದು ಮತ್ತೆ ಯಾವ ಧರ್ಮ ಗ್ರಂಥದಲ್ಲಿಯೂ ಕಾಣುವದಿಲ್ಲ. ಜಗತ್ತಿನ ಸೃಷ್ಟಿಸ್ಥಿತಿಪ್ರಲಯಗಳಿಗೆ ಆ ಪರಮಾತ್ಮನು ಕಾರಣನಾಗಿರುವದೆಂದು ಹೇಳಿರುವದರಲ್ಲಿ ಎಂಥ ಉದಾತ್ತಕಲ್ಪನೆಯಿದೆ ನೋಡಿರಿ: ''ಹಸಿಯಕಟ್ಟಿಗೆಯನ್ನು ಹೊತ್ತಿಸಿದಾಗ ಹೊಗೆಯು ಹೇಗೆ ಬೇರೆ ಬೇರೆಯಾಗಿ ಬರುವುದೋ ಹಾಗೆ ಈ ಪರಮಾರ್ಥದಿಂದ ಋಗ್ವೇದ, ಯರ್ಜುವೇದ, ಸಾಮವೇದ, ಅಥರ್ವವೇದ, ಇತಿಹಾಸ, ಪುರಾಣ, ವಿದ್ಯೆ, ಉಪನಿಷತ್ತುಗಳು, ಶ್ಲೋಕಗಳು, ಸೂತ್ರಗಳು, ಅನುವ್ಯಾಖ್ಯಾನಗಳು, ಯಾಗದ್ರವ್ಯ, ಹೋಮದ್ರವ್ಯ, ಅನ್ನ, ಪಾನ, ಈ ಲೋಕ, ಪರಲೋಕ, ಸರ್ವಭೂತಗಳು ಇವೆಲ್ಲವೂ ಉಸಿರಿನಂತೆ ಹೊರಕ್ಕೆ ಬರುತ್ತವೆ. (ಬೃ. 4-5-11) ಎಂಬ ಉಪದೇಶದಲ್ಲಿ ಪರಮೇಶ್ವರನ ಸರ್ವಾತ್ಮತ್ವ ಸರ್ವಜ್ಞತ್ವ, ಸರ್ವಶಕ್ತಿತ್ವಗಳು ನಮ್ಮ ಮನಸ್ಸಿಗೆ ಹೇಗೆ ತಟ್ಟುತ್ತದೆ ಎಂಬುದನ್ನು ಭಾವಿಸಿಕೊಂಡರೆ ಸಾಕು, ಉಪನಿಷತ್ತುಗಳ ವಿಚಾರವು ಯಾವ ಅಂತಸ್ತಿನಲ್ಲಿದೆ?- ಎಂಬುದು ಸ್ಪಷ್ಟವಾಗುತ್ತದೆ. ನಾಮರೂಪವಾದ ಜಗತ್ತನ್ನೇ ಪ್ರಧಾನಮಾಡಿಕೊಂಡಿರುವ ನವನಾಗರಿಕತೆಯ ಹಾವಳಿಗೆ ಅಧ್ಯಾತ್ಮಪ್ರಧಾನವಾದ ಈ ವಿಚಾರವು ದಿವ್ಯೌಷಧಿಯಾಗಿರುತ್ತದೆ.

ಉಪನಿಷತ್ತುಗಳಲ್ಲಿರುವ ಉಪಾಸನೆಯಲ್ಲಿಯೂ ಒಂದು ವೈಶಿಷ್ಟ್ಯವಿದೆ. ಅದೇನೆಂದರೆ ಇಲ್ಲಿ ಈಶ್ವರನ ಸಾಕಾರವರ್ಣನೆಯಿದೆ (ಛಾ.1-6-6 ರಿಂದ 8 ಮುಂತಾದದ್ದನ್ನು ನೋಡಿ), ಸಗುಣವರ್ಣನೆಯಿದೆ (ಛಾ 3-14-1ರಿಂದ 4) ನಿರ್ಗುಣನಿರಾಕಾರವರ್ಣನೆಯೂ ಇದೆ (ಬೃ.3-8-8 ಮುಂತಾದ ಕಡೆ). ಯಾರು ಹೇಗೆ ಬೇಕಾದರೂ ಪರಮೇಶ್ವರನನ್ನು ಧ್ಯಾನಮಾಡಬಹುದು, ಪರಲೋಕದಲ್ಲಿಯಾದರೂ ಈ ಲೋಕದಲ್ಲಿಯಾದರೂ ಉಪಾಸನೆಯ ಫಲವನ್ನು ಪಡೆದುಕೊಳ್ಳಬಹುದು. ಇದೊಂದೇ ಪರಮೇಶ್ವರನಿಗೆ ವರ್ಣನೆಯೆಂಬ ದುರಭಿಮಾನವಾಗಲಿ ಕೃಪಣತೆಯಾಗಲಿ ಇಲ್ಲಿ ಕಂಡುಬರುವುದಿಲ್ಲ. ಈ ಇಡಿಯ ಜಗತ್ತೇ ಪರಮಾತ್ಮನ ಒಂದಂಶವೆಂದೂ ಇದಕ್ಕಿಂತಲೂ ಅಧಿಕವಾದ

ಪುರುಷೋತ್ತಮರೂಪವೂ ಅವನಿಗಿದೆಯೆಂದೂ ಹೇಳುವ ಉಪನಿಷತ್ತುಗಳಿಗೆ ಅನುರೂಪವಾಗಿಯೇ ಇದೆ.

ನಮಗೂ ಬ್ರಹ್ಮಕ್ಕೂ ಸಂಬಂಧವೇನು? ವ್ಯಕ್ತಿಗಳಾಗಿ ನಾವೆಲ್ಲರೂ ಬ್ರಹ್ಮದ ಅಂಶರಾಗಿರುತ್ತೇವೆ. ಝುಗಝುಗನೆ ಉರಿಯುವ ಬೆಂಕಿಯಿಂದ ಛಟಛಟನೆ ಕಿಡಿಗಳು ಹಾರಿಬರುವಂತೆ ಆ ನಾಶರಹಿತನಾದ ಪರಮಾತ್ಮನಿಂದ ವಿವಿಧಜೀವರು ಬಂದಿರುವರು, ಅವನಲ್ಲಿಯೇ ಸೇರಿಕೊಳ್ಳುವರು (ಮು. 2-11-1). ಆದರೆ ನಮ್ಮ ತಿರುಳಾಗಿರುವ ಆತ್ಮಚೈತನ್ಯವಾಗಿ ನಾವೆಲ್ಲರೂ ಒಬ್ಬನೇ ಆತ್ಮನಾಗಿರುತ್ತೇವೆ. ಸರ್ವಭೂತಗಳಲ್ಲಿಯೂ ಒಬ್ಬನೇ ಸರ್ವವ್ಯಾಪಿಯೂ ಸರ್ವಾಂತರಾತ್ಮನೂ ಆದ ದೇವನಿರುತ್ತಾನೆ: ಕರ್ಮಕ್ಕೆಲ್ಲ ಆತನೇ ಒಡೆಯನು, ಆತನೇ ಎಲ್ಲಕ್ಕೂ ಸಾಕ್ಷಿಯು, ಚೈತನ್ಯರೂಪನು, ಕೇವಲನು, ನಿರ್ಗುಣನು (ಶ್ವೇ. 6-11). ಈ ಆತ್ಮನು ಬ್ರಹ್ಮನೇ, ನಾನು ಬ್ರಹ್ಮವು, (ಬೃ,) ನೀನೇ ಆ ಸದ್ರೂಪವಾದ ಬ್ರಹ್ಮವು. (ಛಾ) ಇಂಥ ಉಪದೇಶದಿಂದ ನಮ್ಮಲ್ಲಿ ನಮಗೆ ಹೆಚ್ಚಿನ ವಿಶ್ವಾಸವಾಗುತ್ತದೆ. ನಮಗಾಗಿ ಕಾದಿರುವ ಸದ್ಗತಿಯಲ್ಲಿ ಆಶೆಯುಂಟಾಗುತ್ತದೆ, ಜೀವನವು ಉತ್ಸಾಹಮಯವಾಗುತ್ತದೆ.

ಉಪನಿಷತ್ತಿನಲ್ಲಿ ಹೇಳಿರುವ ಪರಮಾರ್ಥಸ್ವರೂಪವೂ ನಮ್ಮ ಆತ್ಮನು ನಿಜವಾಗಿ ಆ ಸ್ವರೂಪದಲ್ಲಿರುತ್ತಾನೆಂಬುದೂ ಬರಿಯ ವಾಕ್ಯಪ್ರಮಾಣದ ಅಪ್ಪಣೆಯಿಂದ ನಂಬತಕ್ಕದ್ದಾಗಿರುವದಿಲ್ಲ. ಉಪನಿಷತ್ತುಗಳು ಈ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವದಕ್ಕೆ ಬೇಕಾದ ಅವಸ್ಥಾತ್ರಯಪ್ರಕ್ರಿಯೆಯನ್ನೂ ತಿಳಿಸುತ್ತವೆ. ಆ ಪ್ರಕ್ರಿಯೆಯನ್ನು ಅರಿತುಕೊಂಡರೆ ಸಚ್ಚಿದಾನಂದಸ್ವರೂಪವು ನಮ್ಮದೆಂಬುದನ್ನು ಇಲ್ಲಿಯೇ ಈಗಲೇ ಮನಗಾಣಬಹುದಾಗಿರುತ್ತದೆ.

ಉಪನಿಷತ್ತುಗಳ ಅಭ್ಯಾಸವು ವಿದ್ಯಾಭ್ಯಾಸಕ್ರಮದಲ್ಲಿ ಸೇರಿದರೆ ನಮ್ಮ ತರುಣರಿಗೆ ಆತ್ಮಗೌರವವುಂಟಾದೀತು, ಜನರಿಗೆ ಬಲವೂ ಉತ್ಸಾಹವೂ ಹೆಚ್ಚೀತು, ಸ್ವಾರ್ಥವನ್ನು ತೊರೆದು ಭ್ರಾತೃವಾತ್ಸಲ್ಯದಿಂದ ಒಬ್ಬರನ್ನೊಬ್ಬರು ಕಾಣುವಂತೆ ಆದೀತು. ಇಷ್ಟೇ ಅಲ್ಲ! ಪ್ರಾಣಿಗಳಲ್ಲಿ ದಯೆ, ಸೃಷ್ಟಿಯಲ್ಲಿ ಪ್ರೇಮ – ಇವುಗಳೂ ಅವಶ್ಯವಾಗಿ ಉಂಟಾಗುವವು.

ಆದ್ದರಿಂದ ಶಾಸ್ತ್ರವಿಚಾರದಲ್ಲಿ ಆದರವೂ ಉದಾರದೃಷ್ಟಿಯೂ ನಮ್ಮಗಳಲ್ಲಿ ಉಂಟಾಗಬೇಕಾದರೆ ಉಪನಿಷತ್ತುಗಳ ಅಭ್ಯಾಸಕ್ಕೆ ಬಲು ಹೆಚ್ಚಿನ ಸ್ಥಾನವು ದೊರೆಯುವುದು ಅವಶ್ಯವು. ಬ್ರಾಹ್ಮಣರು ಇವುಗಳನ್ನು ಬಿಡದೆ ಅಧ್ಯಯನಮಾಡಬೇಕು, ಅರ್ಥವಿಚಾರಮಾಡಬೇಕು; ಉಳಿದವರಿಗೂ ಅನುಕೂಲವಾಗುವಂತೆ ಅವುಗಳ ಅರ್ಥವನ್ನು ತಿಳಿಗನ್ನಡದಲ್ಲಿಟ್ಟು ಪ್ರೋತ್ಸಾಹಿಸಬೇಕು. ಉಪನಿಷತ್ತುಗಳಲ್ಲಿ ಉಪದೇಶಗಳ ಸುಲಭಪಾಠಗಳ ಗ್ರಂಥಗಳನ್ನು ಬರೆಯಿಸಬೇಕು. ಉಪನಿಷತ್ತುಗಳ ತಿರುಳಾಗಿರುವ ಗೀತೆಯ ಪ್ರಚಾರಕ್ಕೆ ಎಲ್ಲರೂ ಪ್ರಯತ್ನಮಾಡಬೇಕು. ಆಗಲೇ ಉಪನಿಷತ್ತುಗಳಿಗೆ ಭೂಮಂಡಲದ ಅಧ್ಯಾತ್ಮಗ್ರಂಥಗಳಲ್ಲಿರುವ, ಅತ್ಯುನ್ನತಸ್ಥಾನದ ಕಲ್ಪನೆಯು ಜನಸಾಮಾನ್ಯಕ್ಕೂ ಉಂಟಾಗುವದು.

★★★★★

## ಉಪಾಸನೆಯೂ ಜ್ಞಾನವೂ

**14-5-1940**

ಶ್ರೀಶ್ರೀಗಳು

ಉಪನಿಷತ್ತುಗಳಲ್ಲಿ ಹೇಳಿರುವ ಉಪಾಸನೆಯೂ ಜ್ಞಾನವೂ ಅನಿತರಸಾಧಾರಣವಾಗಿರುತ್ತವೆ. ಉಪಾಸನೆಯೆಂಬುದು ಸರ್ವಧರ್ಮಗಳಲ್ಲಿಯೂ ಇರುತ್ತಿದ್ದರೂ ಜ್ಞಾನದ ಆಧಾರದ ಮೇಲೆ ನಿಂತಿರುವ ಉಪಾಸನೆಯು ಉಪನಿಷತ್ತುಗಳಿಗೆ ಮಾತ್ರ ಮೀಸಲಾಗಿರುತ್ತದೆ. ಜ್ಞಾನವೆಂಬ ಶಬ್ದವನ್ನು ಕೂಡ ಉಪಾಸನೆ ಎಂಬರ್ಥದಲ್ಲಿಯೇ ಕೆಲವರು ಉಪಯೋಗಿಸುತ್ತಾರೆ; ಆದ್ದರಿಂದ ಜ್ಞಾನವು, ಉಪಾಸನೆಗಿಂತ ಬೇರೆಯಾದ ಜ್ಞಾನವು, ಉಪನಿಷತ್ತುಗಳಲ್ಲಿದೆಯೆ?-ಎಂಬುದೀಗ ವಿಚಾರಮಾಡತಕ್ಕ ವಿಷಯವು. ಶ್ರೀಶಂಕರಾಚಾರ್ಯರವರು ತಮ್ಮ ಭಾಷ್ಯಗಳಲ್ಲಿ ಅಂಥದ್ದೊಂದು ಜ್ಞಾನವಿದೆ ಎಂದು ಹೇಳಿರುತ್ತಾರೆ. ವೇದಕ್ಕೆ ಎಲ್ಲರಿಗೂ ಅಧಿಕಾರವಿಲ್ಲದಿದ್ದರೂ ವೇದೋಕ್ತವಾದ ಜ್ಞಾನವನ್ನು

ಸಂಪಾದಿಸಿಕೊಂಡು ಮುಕ್ತರಾಗುವದಕ್ಕೆ ಅಬ್ರಾಹ್ಮಣರಾದ ಬೇರೆಯ ವರ್ಣದವರಿಗೆ ಮಾತ್ರವೇ ಅಲ್ಲ, ಮಿಕ್ಕವರಿಗೂ ಅಧಿಕಾರವುಂಟು. ಏಕೆಂದರೆ ಜ್ಞಾನವೆಂಬುದು ವಸ್ತುತಂತ್ರವಾಗಿರುತ್ತದೆ. ಜ್ಞಾನದಿಂದ ತಿಳಿಯಬರುವ ಬ್ರಹ್ಮವು ಎಲ್ಲರಿಗೂ ಸಮವಾಗಿಯೇ ಆತ್ಮನಾಗಿರುತ್ತದೆ ಎಂಬುದು ಆ ಆಚಾರ್ಯರ ಸಿದ್ಧಾಂತದಿಂದ ಹೊರಡುತ್ತದೆ. ಈ ಅಭಿಪ್ರಾಯವನ್ನು ಅನುಸರಿಸಿದರೆ ವೈದಿಕಧರ್ಮದ ವೈಶಾಲ್ಯವು ನಮಗೆ ಮನದಟ್ಟಾಗುತ್ತದೆ. ವೇದಾಂತದಲ್ಲಿ ಹೇಳಿರುವ ಜ್ಞಾನದ ವಿಚಾರದ ಗ್ರಂಥಗಳ ಕಾಪಿರೈಟ್' (ಪುನರ್ಮುದ್ರಣದ ಸ್ವಾಮ್ಯ)ವನ್ನು ಯಾರಾದರೂ ಉಳಿಸಿಕೊಳ್ಳಬಹುದು; ಆದರೆ ಜ್ಞಾನವನ್ನು ಯಾರೊಬ್ಬರೂ ತಮ್ಮ ಹಕ್ಕು ಮಾಡಿಕೊಳ್ಳಲು ಸಾಧ್ಯವಿರುವದಿಲ್ಲ.

ಉಪನಿಷತ್ತುಗಳಲ್ಲಿ ಜ್ಞಾನ, ಉಪಾಸನೆ- ಎರಡಕ್ಕೂ ಒಂದೇ ಬಗೆಯ ಶಬ್ದಗಳನ್ನು ಉಪಯೋಗಿಸುವದುಂಟು. ಆದ್ದರಿಂದ ಇಂಥಲ್ಲಿ ಜ್ಞಾನವು ವಿವಕ್ಷಿತವಾಗಿದೆಯೆ, ಇಲ್ಲವೆ? - ಎಂಬುದನ್ನು ಗೊತ್ತುಪಡಿಸುವದಕ್ಕೆ ಜ್ಞಾನದ ಹೆಗ್ಗುರುತುಗಳು ಕೆಲವು ಅವಶ್ಯವಾಗುತ್ತವೆ. ಆದ್ದರಿಂದ ಜ್ಞಾನಕ್ಕೂ ಉಪಾಸನೆಗೂ ಇರುವ ಮುಖ್ಯತಾರತಮ್ಯಗಳನ್ನು ಇಲ್ಲಿ ವಿವರಿಸುತ್ತೇನೆ. ಮೊಟ್ಟಮೊದಲನೆಯದಾಗಿ ಧ್ಯಾನವು ಕರ್ತೃತಂತ್ರವಾಗಿರುತ್ತದೆ, ಜ್ಞಾನವು ವಸ್ತುತಂತ್ರವಾಗಿರುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಧ್ಯಾನವೆಂದರೆ ಹೀಗೆಂದು ಭಾವಿಸಿಕೊಳ್ಳುವದಾದ್ದರಿಂದ ವಸ್ತು ಹೇಗಿದ್ದರೂ ಶಾಸ್ತ್ರದಲ್ಲಿ ಹೇಳಿರುವಂತೆ ಭಾವಿಸಿಕೊಳ್ಳಬಹುದು; ಉದಾಹರಣೆಗೆ ಸಾಲಗ್ರಾಮವನ್ನು ವಿಷ್ಣುವೆಂದು ಧ್ಯಾನಮಾಡಬಹುದು. ಆದರೆ ಜ್ಞಾನವೆಂದರೆ ಹಾಗಲ್ಲ, ಸಾಲಗ್ರಾಮವು ಶಿಲೆ ಎಂಬುದು ತಾನೇ ನಮಗೆ ತೋಚುತ್ತದೆಯೇ ಹೊರತು ನಮ್ಮ ಭಾವನೆಯಿಂದ ಬರುವ ಅರಿವಲ್ಲ. ಎರಡನೆಯದಾಗಿ ಉಪಾಸನೆಗಳು ಶಾಸ್ತ್ರದಲ್ಲಿ ಅನೇಕವಾಗಿರುತ್ತವೆ; ಅವುಗಳಲ್ಲಿ ಯಾವದಾದರೊಂದನ್ನು ತೆಗೆದುಕೊಂಡು ಸಾಕ್ಷಾತ್ಕಾರವಾಗುವವರೆಗೂ ಉಪಾಸನೆಮಾಡಬೇಕು. ಇಂದೊಂದು, ನಾಳೆಯೊಂದು- ಹೀಗೆ ಉಪಾಸನೆಯು ಬೇರ್ಪಡುತ್ತಿದ್ದರೆ ಧ್ಯಾನವು ಅಳವಡುವದಿಲ್ಲ. ಜ್ಞಾನವು ಹೀಗಲ್ಲ; ಸಂಶಯವನ್ನು ತೊಲಗಿಸುವದಕ್ಕೆ ಯಾವ ಯುಕ್ತಿಯನ್ನಾದರೂ ಉಪಯೋಗಿಸಬಹುದು. ಅಂತೂ ಸಂಶಯವು

ಹೋಗುವದು ಮುಖ್ಯ. ತಪ್ಪು ತಿಳಿವಳಿಕೆಯೂ ಒಂದು ಬಗೆಯ ಜ್ಞಾನವೇ. ಆದರೆ ಬಾಧಿತವಾಗುತ್ತಲೂ ಅದು ನಿಂತುಹೋಗುತ್ತದೆ. ಏಕೆಂದರೆ ಜ್ಞಾನವು ತಾನೇ ಆಗತಕ್ಕದ್ದೇ ಹೊರತು ಪುರುಷತಂತ್ರವಲ್ಲ. ಉಪಾಸನೆಗೆ ಧ್ಯೇಯವೊಂದೇ ಮುಖ್ಯ, ಮಿಕ್ಕದ್ದೆಲ್ಲ ಮರೆತು ಧ್ಯೇಯವೇ ತನ್ನೆದುರಿಗೆ ನಿಲ್ಲುವವರೆಗೂ ಉಪಾಸನೆ ಮಾಡಬೇಕು; ಅಹಂಗ್ರಹೋಪಾಸನೆಗಳಲ್ಲಿ ಧ್ಯೇಯವೇ ನಾವೆಂಬ ಗಟ್ಟಿಯಾದ ಭಾವನೆ ಬರುವವರೆಗೂ ಉಪಾಸನೆಮಾಡಬೇಕಾಗುತ್ತದೆ. ಗಟ್ಟಿಯಾದ ಭಾವನೆ ಬಂದರೂ ಉಪಾಸನೆಯನ್ನು ನಿಲ್ಲಿಸಿದರೆ ಮತ್ತೆ ಸಾಕ್ಷಾತ್ಕಾರವು ಮಸುಳಿಸಿಹೋಗುತ್ತದೆ; ಆದ್ದರಿಂದ ಸಾಯುವವರೆಗೂ ಉಪಾಸನೆಮಾಡುತ್ತಲೇ ಇರಬೇಕೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಆದರೆ ಜ್ಞಾನದ ವಿಚಾರವು ಹೀಗಲ್ಲ; ಒಂದುಸಲ ತತ್ತ್ವಜ್ಞಾನವಾದರೆ ಅದು ಮರೆಯುವದಿಲ್ಲ, ತಿಳಿವಳಿಕೆಯು- ನಿಂತುಕೊಂಡೇಬಿಡುತ್ತದೆ. ಧ್ಯಾನಕ್ಕೆ ಸ್ಥಿರಸುಖವಾದ ಒಂದು ಆಸನವು ಬೇಕು; ಜ್ಞಾನಕ್ಕೆ ಈ ನಿಯಮವಿಲ್ಲ; ಕರ್ಮದಂತೆ ದಿಗ್ದೇಶಕಾಲಾದಿಗಳ ನಿಯಮವು ಉಪಾಸನೆಗೆ ಬೇಕಿಲ್ಲ, ಜ್ಞಾನಕ್ಕೂ ಬೇಕಿಲ್ಲ; ಆದರೆ ಉಪಾಸನೆಗೆ ಭಾವನೆಯು ಇದ್ದೇ ಇರಬೇಕು, ಜ್ಞಾನಕ್ಕೆ ಅದರ ಗರಜಿಲ್ಲ. ಇನ್ನೊಂದು ವಿಷಯ: ಉಪಾಸನೆಗೆ ಕಾಲಾಂತರದಲ್ಲಿ ಲೋಕಾಂತರದಲ್ಲಿ ಫಲವಾಗುತ್ತದೆಯೆಂದು ಶಾಸ್ತ್ರದಲ್ಲಿ ಹೇಳಿದೆ; ಆದರೆ ಜ್ಞಾನಕ್ಕೆ ಜ್ಞಾನಸಮಕಾಲವಲ್ಲಿಯೇ ಫಲವಾಗುತ್ತದೆ. ಜ್ಞಾನಕ್ಕೆ ಇಷ್ಟು ಹೆಗ್ಗುರುತುಗಳನ್ನು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ವಿವರಿಸಿರುತ್ತಾರೆ.

ಈಗ ಉಪನಿಷತ್ತಿನ ಕೆಲವು ವಚನಗಳನ್ನು ತೆಗೆದುಕೊಂಡು ನೋಡಿದರೆ ಅಲ್ಲಿ ಜ್ಞಾನದ ವಿಚಾರವಿದೆಯೆ, ಉಪಾಸನೆಯ ವಿಚಾರವಿದೆಯೆ?- ಎಂಬುದನ್ನು ತಿಳಿದುಕೊಳ್ಳಬಹುದಾಗುತ್ತದೆ. ''**ಮನೋ ಬ್ರಹ್ಮೇತ್ಯುಪಾಸೀತ ಭಾತಿ ಚ ತಪತಿ ಚ ಕೀರ್ತ್ಯಾ ಯಶಸಾ ಬ್ರಹ್ಮವರ್ಚಸೇನ ಯ ಏವಂ ವೇದ**'' (ಛಾ.3-18) ಎಂಬ ವಚನವೊಂದಿದೆ. ಇಲ್ಲಿ ಮನಸ್ಸನ್ನು ಬ್ರಹ್ಮವೆಂದು ಉಪಾಸನೆಮಾಡಬೇಕು ಎಂದು ಹೇಳಿರುತ್ತದೆ; ಹಾಗೆಮಾಡಿದರೆ ಕೆಲವು ಫಲಗಳೂ ಉಂಟು, ಮನಸ್ಸೆಂಬ ಬ್ರಹ್ಮಕ್ಕೆ ವಾಕ್ಕು, ಪ್ರಾಣ, ಚಕ್ಷುಸ್ಸು, ಶ್ರೋತ್ರ- ಎಂಬ ನಾಲ್ಕು ಪಾದಗಳಿವೆ. ಯಾವನು ಈ ಬ್ರಹ್ಮವನ್ನು ಉಪಾಸನೆಮಾಡುತ್ತಾನೋ ಅವನಿಗೆ

ವಾಗಿಂದ್ರಿಯವು ಮಾತನಾಡುವದಕ್ಕೆ ಉತ್ಸಾಹಭರಿತವಾಗಿರುತ್ತದೆ, ಅವನಿಗೆ ಒಳ್ಳೆಯ ಹೆಸರು ಬರುತ್ತದೆ, ಬ್ರಹ್ಮವರ್ಚಸ್ಸುಂಟಾಗುತ್ತದೆ- ಎಂದಿದೆ. ಈ ವಾಕ್ಯದಲ್ಲಿ ಮನಸ್ಸನ್ನು ಬ್ರಹ್ಮವೆಂದು ಉಪಾಸನೆಮಾಡಬೇಕೆಂದಿರುವಂತೆ ಆಕಾಶವನ್ನು ಬ್ರಹ್ಮವೆಂದು ಉಪಾಸನೆಮಾಡಬೇಕೆಂದೂ ಹೇಳಿರುತ್ತದೆ. ಬ್ರಹ್ಮವು ಸರ್ವವ್ಯಾಪಕವಾಗಿರುವಂತೆ ಹೊರಗಿನ ಆಕಾಶವೂ ಒಳಗಿನ ಮನಸ್ಸೂ ಸರ್ವವ್ಯಾಪಕವಾಗಿರುವವೆಂಬ ಹೇಳಿಕೆಯು ಕಂಡುಬರುತ್ತದೆಯಾದ್ದರಿಂದ ಅವುಗಳನ್ನು ಬ್ರಹ್ಮವೆಂದು ಚಿಂತಿಸಬಹುದು. ಆದರೆ ಅವು ಬ್ರಹ್ಮವೆಂದು ನಮಗೆ ಅರಿವು ಆಗುತ್ತದೆಯೆ? ಆ ಅರಿವು ಬಾಧಿತವಾಗದೆ ನಿಲ್ಲುವದೆ?- ಎಂದರೆ 'ಇಲ್ಲ' ಎಂದೇ ಉತ್ತರಹೇಳಬೇಕಾಗುತ್ತದೆ. ಆಕಾಶವು ಎಲ್ಲವನ್ನೂ ತನ್ನೊಳಗೆ ಇಟ್ಟುಕೊಂಡಿರುವದು ನಿಜ; ಆದರೆ ಮನಸ್ಸು ಆಕಾಶವನ್ನೂ ತನಗೆ ವಿಷಯಮಾಡಿಕೊಂಡಿರುತ್ತದೆ. ಮನಸ್ಸು ಎಚ್ಚರದಲ್ಲಿ ನಮಗೆ ತಿಳಿದಿರುವ ತತ್ತ್ವಗಳಲ್ಲೆಲ್ಲ ವ್ಯಾಪಕವಾಗಿರುವದಾದರೂ ನಮ್ಮ ಆತ್ಮನು ಅದನ್ನು ವಿಷಯವಾಗಿ ಮಾಡಿಕೊಂಡಿರುತ್ತಾನೆ. ಗಾಢನಿದ್ರೆಯಲ್ಲಿ ಆಕಾಶವೂ ಇರುವದಿಲ್ಲ, ಮನಸ್ಸೂ ಇರುವದಿಲ್ಲ; ಆದರೆ ನಾವು ಮಾತ್ರ ಇದ್ದೇ ಇರುವೆವು. ಈ ದೃಷ್ಟಿಯಿಂದ ನೋಡಿದರೆ ಮನಸ್ಸು, ಆಕಾಶ- ಎರಡಕ್ಕಿಂತಲೂ ಕಾಲದಿಂದ ನಮ್ಮ ಆತ್ಮನು ಹೆಚ್ಚು ವ್ಯಾಪಕನೆಂದಾಯಿತು. ಆದ್ದರಿಂದ ಮನಸ್ಸನ್ನಾಗಲಿ ಆಕಾಶವನ್ನಾಗಲಿ ಬ್ರಹ್ಮವೆಂದು ಚಿಂತಿಸುವದು ಉಪಾಸನೆಯಾದೀತೇಹೊರತು ಜ್ಞಾನವಾಗಲಾರದು.

ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಿ.

**ಅಕೃತ್ಸ್ನೋ ಹಿ ಸ ಪ್ರಾಣನ್ನೇವ ಪ್ರಾಣೋ ನಾಮ ಭವತಿ ವದನ್ ವಾಕ್‌ಪಶ್ಯಂಶ್ಚಕ್ಷುಃ ಶೃಣ್ವನ್ ಶ್ರೋತ್ರಂ ಮನ್ವಾನೋ ಮನಸ್ತಾನ್ಯಸ್ಯೈತಾನಿ ಕರ್ಮನಾಮಾನ್ಯೇವ । ಸ ಯೋಽತ ಏಕೈಕಮುಪಾಸ್ತೇ ನ ಸ ವೇದಾಕೃತ್ಸ್ನೋ ಏಕೈಕೇನ ಭವತ್ಯಾತ್ಮೇತ್ಯೇವೋಪಾಸೀತಾತ್ರಹ್ಯೇತೇ ಸರ್ವಂ ಏಕಂ ಭವಂತಿ ॥ (ಬೃ.1-4-7)**

ಇಲ್ಲಿ ಉಸಿರಾಡುವಾಗ ಪ್ರಾಣನೆಂದು, ಮಾತನಾಡುವಾಗ ವಕ್ತನೆಂದು ನೋಡುವಾಗ ದ್ರಷ್ಟನೆಂದು, ಕೇಳುವಾಗ ಶ್ರೋತನೆಂದು, ಆಲೋಚಿಸುವಾಗ

ಮನ್ತನೆಂದು- ತಿಳಿಯುತ್ತೇವಲ್ಲ; ಇವೆಲ್ಲ ಕರ್ಮನಾಮಗಳು. ಆದ್ದರಿಂದ ಒಂದೊಂದನ್ನೇ ಉಪಾಸನೆಮಾಡಿದವನು ಅರಿಯನು, ಏಕೆಂದರೆ ಅವನು ಅಸಂಪೂರ್ಣನಾಗುತ್ತಾನೆ. ಆತ್ಮನೆಂದೇ ಉಪಾಸನೆಮಾಡಬೇಕು-ಎಂದು ಹೇಳಿರುತ್ತದೆ. 'ಉಪಾಸನೆ' ಎಂಬ ಶಬ್ದವಿದ್ದರೂ ಇಲ್ಲಿ ಭಾವನೆಮಾಡಬೇಕಾದ ಕೆಲಸವೇನೂ ಇರುವದಿಲ್ಲ; ಏಕೆಂದರೆ ಮಾತನಾಡುವಾಗ ನಾನು ಮಾತನಾಡುವವನು ಎಂಬ ಅರಿವು ನಮಗೆ ಆಗುತ್ತದೆಯೇ ಹೊರತು ನಾವು ಹಾಗೆಂದು ಸುಮ್ಮನೆ ಭಾವನೆಮಾಡಿಕೊಳ್ಳುವದಿಲ್ಲ. ಒಂದೊಂದು ಕೆಲಸಮಾಡುವಾಗ ಆಯಾ ಬಗೆಯ ಅರಿವು ಆಗುತ್ತದೆಯಾದರೂ ನಮ್ಮ ಸ್ವಭಾವವು ಮಾತನಾಡುವದಾಗಲಿ, ಕೇಳುವದಾಗಲಿ, ನೋಡುವದಾಗಲಿ, ಯೋಚಿಸುವದಾಗಲಿ ಆಗಿರುವದಿಲ್ಲ: ಈ ಕಾರ್ಯಗಳಲ್ಲಿ ಒಂದನ್ನು ಮಾಡುವಾಗ ಮತ್ತೊಂದನ್ನು ನಾವು ಮಾಡುತ್ತಿರುವದಿಲ್ಲ, ಸುಷುಪ್ತಿಯಲ್ಲಿ ಇವು ಒಂದನ್ನೂ ನಾವು ಮಾಡುವದೇ ಇಲ್ಲ. ಈಗ ನಮ್ಮ ಸ್ವಭಾವವು ಯಾವದೆಂದು ಹೇಳಬೇಕು? ನಾವೇ, ನಾವಿರುವಂತೆ ನಮ್ಮ ನಿಜವಾದ ಸ್ವರೂಪವೇ, ಈ ವಾಗಾದಿಗಳಿಲ್ಲದ ಕೇವಲ ಆತ್ಮನು, ಆದ್ದರಿಂದ ನಮ್ಮ ಸ್ವಭಾವವನ್ನು ನಾವು ಅರಿತುಕೊಳ್ಳಬೇಕಾದರೆ ಆತ್ಮನೆಂದೇ ಅರಿಯಬೇಕು, 'ಮಾತನಾಡುವವನು' ಎಂದು ಮುಂತಾಗಿ ಅಸಂಪೂರ್ಣರೀತಿಯಿಂದ ಅರಿಯಬಾರದು- ಎಂಬುದು ವಾಕ್ಯಾರ್ಥವು. ಈ ವಾಕ್ಯದಲ್ಲಿ ಇದ್ದದ್ದನ್ನು ಇದ್ದಂತೆ ಅರಿತುಕೊಳ್ಳಬೇಕಾದದ್ದನ್ನು ಹೇಳಿದೆಯೇ ಹೊರತು ಧ್ಯಾನಿಸಬೇಕಾದದ್ದೇನನ್ನೂ ಹೇಳಿಲ್ಲ. ಆದ್ದರಿಂದ ಇದು ಧ್ಯಾನವಲ್ಲ, ಉಪಾಸನೆಯಲ್ಲ, ಜ್ಞಾನವೇ.

ಇದರಂತೆಯೇ ಉಪನಿಷತ್ತಿನಲ್ಲಿರುವ ಮಿಕ್ಕ ವಾಕ್ಯಗಳಲ್ಲಿಯೂ ಹೇಳಿರುವ ಉಪಾಸನೆಯನ್ನೂ ಜ್ಞಾನವನ್ನೂ ವಿಂಗಡಿಸಿ ತಿಳಿದುಕೊಳ್ಳಬಹುದಾಗಿ ರುತ್ತದೆ. ಇಲ್ಲಿ ಹೇಳಿರುವ ಜ್ಞಾನವು ಅನುಭವಾನುಸಾರಿಯಾಗಿರುವದರಿಂದ ಅದನ್ನು ಯಾರು ಬೇಕಾದರೂ ತಮ್ಮಲ್ಲಿ ತಾವು ವಿಚಾರಮಾಡಿ ತಿಳಿದುಕೊಳ್ಳಬಹುದಾಗಿದೆ. ಆತ್ಮಜ್ಞಾನವು ವಾಕ್ಯದಿಂದಾಗುವ ಪ್ರತ್ಯಯವಿಶೇಷವಾದರೂ ಅದಕ್ಕೆ ಆಧಾರವಾಗಿರುವ ಆತ್ಮಾನುಭವವು ನಿರ್ವಿಕಲ್ಪಕವಾಗಿರುತ್ತದೆ. ಸಿಟ್ಟಾಗುವದಕ್ಕೂ ಸಿಟ್ಟಿನ ವಿಷಯದಲ್ಲಿ

ವಿಚಾರಮಾಡುವದಕ್ಕೂ ಇರುವ ತಾರತಮ್ಯವನ್ನು ತಿಳಿದುಕೊಂಡರೆ ಆತ್ಮಾನುಭವಕ್ಕೂ ಆತ್ಮಾನುಭವದಿಂದ ಆಡುವ ಮಾತು, ಮಾಡುವ ಮನಸ್ಸಿನ ವಿಚಾರ- ಇವುಗಳಿಗೂ ಇರುವ ತಾರತಮ್ಯವು ಗೊತ್ತಾಗುತ್ತದೆ. ಶಾಸ್ತ್ರವು ಈ ಅನುಭವವನ್ನು ನಮ್ಮ ಲಕ್ಷ್ಯಕ್ಕೆ ತರುತ್ತದೆ. ನಾವು ಅದನ್ನು ಮನದಂದು ನಮ್ಮಲ್ಲಿ ನಾವು ವಿಚಾರಮಾಡಿಕೊಂಡು 'ನಿಜ, ಹೀಗೆ ಇದೆ' ಎಂದು ಹೇಳುತ್ತೇವೆ. ನಮ್ಮ ಆತ್ಮನು ಸಚ್ಚಿದಾನಂದಸ್ವರೂಪವಾದ ಬ್ರಹ್ಮವಾಗಿರುತ್ತಾನೆ- ಎಂಬ ಅರಿವು ಈ ರೀತಿಯಲ್ಲಿ ಶಾಸ್ತ್ರದಿಂದ ಉಂಟಾಗುವದಾಗಿದೆ ಎಂಬುದು ವೇದಾಂತ ಸಿದ್ಧಾಂತವು.

★★★★★

## ಅವಸ್ಥಾತ್ರಯ ಪ್ರಕ್ರಿಯೆ

**15-5-1940**

ಶ್ರೀಶ್ರೀಗಳು

ವೇದಾಂತವು ಒಂದು ಶಾಸ್ತ್ರವೆ? ಶಾಸ್ತ್ರಕ್ಕೆ ಪ್ರಕ್ರಿಯೆ ಮುಖ್ಯ. ಮೀಮಾಂಸಕರು ವೇದವನ್ನು ಅಪೌರುಷೇಯವೆಂದೂ ಪ್ರತ್ಯಕ್ಷಾನುಮಾನಗಳಿಂದ ತಿಳಿಯುವದಕ್ಕೆ ಆಗದ ವಿಷಯಗಳನ್ನು ತಿಳಿಸುವ ಪ್ರಮಾಣವೆಂದೂ ನಂಬಿರುವದಲ್ಲದೆ 'ಮಾಡು, ಬಿಡು' ಎಂಬುದನ್ನು ತಿಳಿಸುವದೇ ಶಾಸ್ತ್ರವೆಂದು ಹೇಳುತ್ತಾರೆ; ಅದೃಷ್ಟವಾದ ಸ್ವರ್ಗಾದಿಗಳಿಗೆ ಸಾಧನವಾದ ಧರ್ಮಾಧರ್ಮಗಳನ್ನು ತಿಳಿಸುವದರಿಂದ ವೇದವು ಶಾಸ್ತ್ರವಾಗಿದೆ ಎಂದು ಅವರ ನಂಬಿಕೆಯಿದೆ. ಉಪಕ್ರಮೋಪಸಂಹಾರಗಳಿಂದ ವೇದವಾಕ್ಯಗಳ ಅರ್ಥವನ್ನು ನಿರ್ಧರಿಸುವದು ಅವರ ಪ್ರಕ್ರಿಯೆ. ಇದರಂತೆ ಭೌತಿಕವಿಜ್ಞಾನಶಾಸ್ತ್ರಜ್ಞರು ತಾವು ವಿಚಾರಕ್ಕೆ ತೆಗೆದುಕೊಂಡಿರುವ ವಿಷಯಗಳನ್ನು ಪರೀಕ್ಷಣ, ಪ್ರಯೋಗ, ಸಂವಾದೀಕರಣ-ಇವುಗಳ ಮೂಲಕ ಸಿದ್ಧಾಂತವಾಗಿಸಿ ತೋರಿಸಿಕೊಡುತ್ತಾರೆ. ಇದು ಅವರ ಪ್ರಕ್ರಿಯೆ. ಹೀಗೆಯೇ ಪ್ರಮಾಣವನ್ನು ಪರಿಶೀಲನೆಮಾಡುವದೂ ಪ್ರಮಾಣಗಳಿಂದ ಸಿದ್ಧವಾದದ್ದನ್ನೇ ಸ್ವೀಕರಿಸುವದೂ ತರ್ಕಶಾಸ್ತ್ರದ

ಪ್ರಕ್ರಿಯೆಯ. ಇದರಂತೆ ವೇದಾಂತವೂ ಒಂದು ಶಾಸ್ತ್ರವಾದರೆ ಅದಕ್ಕೆ ಅಸಾಧಾರಣಪ್ರಕ್ರಿಯೆಯೊಂದಿರಬೇಕಾಯಿತು. ಅದು ಯಾವದು? ವೇದಾಂತದಲ್ಲಿ ಉಪನಿಷತ್ತುಗಳನ್ನು ಪ್ರಮಾಣವಾಗಿ ಹಿಡಿದು ಪೂರ್ವಮೀಮಾಂಸದಂತೆಯೇ ಉಪಕ್ರಮಾದಿಗಳಿಂದ ಅರ್ಥವನ್ನು ನಿರ್ಣಯಿಸುವ ಸಿದ್ಧಾಂತಗಳು ಹಲವು ಆಗಿರುತ್ತವೆ. ಆದರೆ ಅವುಗಳಿಗೆ ಯಾವದೊಂದು ಅಸಾಧಾರಣಪ್ರಕ್ರಿಯೆ ಇರುವದಿಲ್ಲ. ಅದ್ವೈತವೇದಾಂತಿಗಳು ಮಾತ್ರ ವೇದಾಂತವು ಪ್ರತ್ಯಕ್ಷಾದಿಗಳಿಗೆ ನಿಲುಕದ ಅತೀಂದ್ರಿಯವಾದ ಅನುಭವವನ್ನು ತಂದುಕೊಡುವದೆಂತಲೂ ಅದಕ್ಕೆ ಅವಸ್ಥಾತ್ರಯವಿಚಾರವೇ ಅಸಾಧಾರಣಪ್ರಕ್ರಿಯೆಯೆಂದೂ ಹೇಳುತ್ತಿರುವರು. ಆದ್ದರಿಂದ ಅವಸ್ಥಾತ್ರಯಪ್ರಕ್ರಿಯೆಯನ್ನು ಕುರಿತು ಸ್ವಲ್ಪಮಟ್ಟಿಗೆ ವಿಚಾರಮಾಡುವದು ಅವಶ್ಯವಾಗಿರುತ್ತದೆ.

ಲೋಕದಲ್ಲಿ ಪ್ರತ್ಯಕ್ಷ, ಅನುಮಾನ- ಮುಂತಾದವುಗಳ ಮೂಲಕ ನಮಗೆ ಜ್ಞಾನವುಂಟಾಗುವದೆಂಬುದು ತಿಳಿದೇ ಇದೆ. ಪ್ರಮಾಣಗಳೇ ನಮಗೆ ಎಲ್ಲಾ ಬಗೆಯ ಜ್ಞಾನವನ್ನೂ ಕೊಡುವ ಸಾಧನಗಳೆಂದು ತಾರ್ಕಿಕರು ಹೇಳುವದನ್ನು ಮಿಕ್ಕ ದರ್ಶನಕಾರರೂ ಒಪ್ಪಿಕೊಂಡಿರುತ್ತಾರೆ. ಆದರೆ ಈ ಪ್ರಮಾಣಗಳ ಎಲ್ಲೆಕಟ್ಟನ್ನು ತೋರಿಸಿರುವದು ವೇದಾಂತದ ಒಂದು ವಿಶೇಷವಾಗಿರುತ್ತದೆ. ಪ್ರಮಾಣಪ್ರಮೇಯವ್ಯವಹಾರವು ಆತ್ಮಾನಾತ್ಮಗಳ ಅನ್ಯೋನ್ಯಾಧ್ಯಾಸದಿಂದಲೇ ಆಗಿರುತ್ತದೆ; ಆತ್ಮಾನಾತ್ಮಗಳನ್ನು ಕಲೆಬೆರೆಕೆಮಾಡಿ ಒಂದನ್ನೊಂದೆಂದು ತಪ್ಪಾಗಿ ತಿಳಿದುಕೊಂಡು ಒಂದರ ಧರ್ಮವನ್ನು ಮತ್ತೊಂದರಲ್ಲಿ ಹುಟ್ಟಿಹಾಕುವವರೆಗೂ ನಾವು ಪ್ರಮಾತೃಗಳಾಗಲಾರೆವು, ಪ್ರಮಾಣವು ಪ್ರವೃತ್ತಿಯಾಗಲಾರದು-ಎಂದು ಅನುಭವದ ಆಧಾರದಿಂದಲೇ ಶ್ರೀ ಶಂಕರಾಚಾರ್ಯರವರು ತಮ್ಮ ಸೂತ್ರಭಾಷ್ಯದ ಆದಿಯಲ್ಲಿ ತೋರಿಸಿಕೊಟ್ಟಿರುತ್ತಾರೆ. ಈ ಅಧ್ಯಾಸವೆಂಬ ತಪ್ಪುತಿಳಿವಳಿಕೆಯೇ ನಮ್ಮ ಎಲ್ಲಾ ಬಗೆಯ ವ್ಯವಹಾರಕ್ಕೂ ಮೂಲವಾಗಿರುವ ಅವಿದ್ಯೆಯು.

ಅವಿದ್ಯೆಯನ್ನು ಬಿಡಿಸಿಕೊಂಡು ನಮ್ಮ ಸ್ವರೂಪವನ್ನು ತಿಳಿದುಕೊಳ್ಳುವದಕ್ಕೆ ಮಾರ್ಗವಿದೆಯೆ? ಎಂದರೆ ಇದೆ. ಅದೇ ಅವಸ್ಥಾತ್ರಯಪರೀಕ್ಷೆ, ಅವಸ್ಥಾತ್ರಯವನ್ನು ಕುರಿತು ಮಿಕ್ಕವರೂ ವಿಚಾರಮಾಡಿರುತ್ತಾರೆ; ಆದರೆ

ಅವರ ವಿಚಾರದಲ್ಲಿ ಆತ್ಮನ ಅಸ್ವಾತಂತ್ರ್ಯವು ಮಾತ್ರ ಆ ಪ್ರಕ್ರಿಯೆಯಿಂದ ಸಿದ್ಧವಾಗಿರುತ್ತದೆ. ಶ್ರೀ ಶಂಕರಾಚಾರ್ಯರ ಕ್ರಮದಲ್ಲಿ ವಿಚಾರಮಾಡಿದರೆ ಈ ಪ್ರಕ್ರಿಯೆಗೆ ಹೆಚ್ಚಿನ ಮಹತ್ತ್ವವು ಬರುತ್ತದೆ. ಮಾಂಡೂಕ್ಯೋಪನಿಷತ್ತಿನಮೇಲೆ ಕಾರಿಕೆಯನ್ನು ಬರೆದಿರುವ ಶ್ರೀಗೌಡಪಾದಾಚಾರ್ಯರು ಅವಸ್ಥಾತ್ರಯ ಪ್ರಕ್ರಿಯೆಯ ತಳಹದಿಯ ಮೇಲೆಯೇ ತಮ್ಮ ವಿಚಾರದ ಕಟ್ಟಡವನ್ನೆಲ್ಲ ಎಬ್ಬಿಸಿರುತ್ತಾರೆ. ಇದು ಸ್ವಪ್ರಕ್ರಿಯೆಯೆಂದೂ ಇದರಲ್ಲಿ ಮಿಕ್ಕ ವಾದಿಗಳು ಹೇಳಿರುವ ಪದಾರ್ಥಗಳೆಲ್ಲವೂ ಅಡಕವಾಗಿರುವವೆಂದೂ ಆಚಾರ್ಯರು ಕಾರಿಕಾಭಾಷ್ಯದಲ್ಲಿ ಹೇಳಿರುತ್ತಾರೆ.

ಅವಸ್ಥಾತ್ರಯದೃಷ್ಟಿಯಲ್ಲಿರುವ ವಿಶೇಷಗಳೇನು? ಎಂಬುದನ್ನು ಒಂದೊಂದನ್ನಾಗಿ ವಿಚಾರಿಸೋಣ. ಇದು ಅನುಭವದ ಎಲ್ಲಾ ವಿಷಯರಾಶಿಯನ್ನೂ ವಿಚಾರಕ್ಕೆ ತೆಗೆದುಕೊಳ್ಳುವದು. ಎಚ್ಚರದಲ್ಲಿ ನಾವು ನೋಡುವ ಹೊರಗಿನ ಪ್ರಪಂಚ, ಒಳಗೆ ಅನುಭವಿಸುವ ಕರಣಾದಿಗಳು, ಅಹಂಕಾರ-ಇವೆಲ್ಲವೂ ಸೇರಿರುತ್ತವೆ, ಇದೇ ರೀತಿಯಲ್ಲಿ ಕನಸಿನಲ್ಲಿಯೂ ಇದೇ ಬಗೆಯ ಪ್ರಪಂಚಾಭಾಸವೊಂದು ತೋರಿಕೊಳ್ಳುತ್ತದೆ. ಸುಷುಪ್ತಿಯಲ್ಲಿ ಮತ್ತೇನೂ ಕಾಣಿಸುವದಿಲ್ಲ. ದ್ವೈತವನ್ನು ಕಾಣುವದು, ಕಾಣದಿರುವದು-ಈ ಎರಡು ಬಗೆಗಳಿರದೆ ಇರುವ ಅನುಭವವೇ ನಮ್ಮ ಕಲ್ಪನೆಗೆ ಬರುವಂತಿಲ್ಲ. ಆದ್ದರಿಂದ ಈ ಎರಡು ಬಗೆಯ ಅನುಭವವನ್ನು ವಿಚಾರಿಸಿದರೆ ನಮ್ಮ ಅನುಭವಕ್ಕೆ ಗೋಚರವಾಗುವ ವಿಷಯವೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡಂತೆ ಅಗುತ್ತದೆ. ಇದು ದೃಕ್ಪ್ರಾಧಾನ್ಯವಾದ ದೃಷ್ಟಿಯಾಗಿರುವದರಿಂದ ಈ ಸೌಲಭ್ಯವು ನಮಗೆ ದೊರೆಯುತ್ತದೆ. ಇದೇ ಈ ಪ್ರಕ್ರಿಯೆಯ ಎರಡನೆಯ ವಿಶೇಷವು. ವಿಷಯಿಯನ್ನು ಬಿಟ್ಟು ವಿಷಯವು ಇರಲಾರದು; ಒಂದು ವಿಷಯವನ್ನು ಬಿಟ್ಟು ವಿಷಯಿಯು ಮತ್ತೊಂದು ಕಡೆಗೆ ಹಾರಬಲ್ಲದು, ಸುಷುಪ್ತಿಯಲ್ಲಿ ಯಾವದೊಂದು ವಿಷಯವೂ ಇಲ್ಲದೆಯೇ ಇರಬಲ್ಲದು. ಆದ್ದರಿಂದ ದೃಕ್ಕನ್ನು ಅಥವಾ ವಿಷಯಿಯನ್ನು ಮುಖ್ಯವಾಗಿಟ್ಟುಕೊಂಡರೆ ವಿಷಯವು ತನಗೆ ತಾನೇ ಕೈಗೆ ಸಿಕ್ಕಂತೆ ಆಗುತ್ತದೆ. ಅವಸ್ಥಾತ್ರಯದಲ್ಲಿ ಈ ಗುಟ್ಟು ನಮಗೆ ತಿಳಿದು ಬರುತ್ತದೆ. ಅವಸ್ಥೆಗಳಲ್ಲಿ ಪ್ರಪಂಚವಿರುವದೇ ಹೊರತು ಪ್ರಪಂಚದಲ್ಲಿ

ಅವಸ್ಥೆಯಿಲ್ಲವೆಂಬದನ್ನು ತಿಳಿದರೆ ಅರ್ಥವಿಚಾರವು ಸ್ತಿಮಿತವಾಗಿ ನಿಲ್ಲುತ್ತದೆ. ರೂಢಿಯಲ್ಲಿ ನಾವು ಕನಸನ್ನೂ ಗಾಢನಿದ್ರೆಯನ್ನೂ ಎಚ್ಚರಕ್ಕೆ ಬಾಲಂಗಸದಂತೆ ಕಾಣುತ್ತಿರುವೆವು. ಎಚ್ಚರಕ್ಕೇ ಹೆಚ್ಚಿನ ಬೆಲೆಯನ್ನು ಕೊಡುವೆವು. ಇದರಿಂದಲೇ ಕನಸಿನ ಮತ್ತು ಗಾಢನಿದ್ರೆಯ ನಿಜವು ನಮಗೆ ತಿಳಿಯದೆ ಇರುತ್ತದೆ. ಆದರೆ ಅವಸ್ಥಾತ್ರಯದೃಷ್ಟಿಯಿಂದ ಸರಿಯಾಗಿ ನೋಡಿದರೆ ಒಂದೊಂದು ಅವಸ್ಥೆಗೂ ಸರಿಯಾದ ಬೆಲೆಯನ್ನು ಕೊಡಬೇಕು, ಎಚ್ಚರದ ದೃಷ್ಟಿಯಿಂದ ಕನಸನ್ನು ನೋಡುವಹಾಗೆ ಕನಸಿನ ದೃಷ್ಟಿಯಿಂದಲೂ ಎಚ್ಚರವನ್ನು ನೋಡಬೇಕು. ಹಾಗಾದರೆ ಎಚ್ಚರಕ್ಕೆ ಹೆಚ್ಚಿಗೆಯ ಬೆಲೆ ಯಾವದೂ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಹೀಗೆಯೇ ತನಿನಿದ್ರೆಯ ದೃಷ್ಟಿಯಿಂದ ಎಚ್ಚರಕನಸುಗಳನ್ನು ನೋಡುವದಕ್ಕೂ ಕಲಿಯಬೇಕು. ಆಗ ನಮಗೆ ಎಚ್ಚರದ ಮತ್ತು ಅದರಲ್ಲಿ ತೋರುವ ಪ್ರಪಂಚದ ತಿರುಳು ಯಾವದೆಂಬುದು ಸ್ಪಷ್ಟವಾಗಿ ಹೊಳೆಯುತ್ತದೆ. ಹೀಗೆ ದೃಷ್ಟಿಕೋಣಗಳನ್ನು ಬದಲಾಯಿಸುವ ಮಾರ್ಗವೂ ಈ ಪ್ರಕ್ರಿಯೆಗೆ ಮೀಸಲಾಗಿರುತ್ತದೆ. ಮೂರನೆಯ ವಿಷಯವೇನೆಂದರೆ ಈ ದೃಷ್ಟಿಯಿಂದ ನೋಡಿ ಮಾಡಿಕೊಂಡ ತೀರ್ಮಾನವು ಅಬಾಧ್ಯವಾಗಿರುತ್ತದೆ. ಏಕೆಂದರೆ ಅವಸ್ಥೆಗಳಲ್ಲಿಯೇ ದೇಶಕಾಲಗಳು ತೋರಿಕೊಳ್ಳುವವೇ ಹೊರತು ದೇಶಕಾಲಗಳಲ್ಲಿ ಅವಸ್ಥೆಗಳಿರುವದಿಲ್ಲ; ಆದ್ದರಿಂದ ಅವಸ್ಥಾತ್ರಯವನ್ನು ವಿಚಾರಮಾಡಿದ ತೀರ್ಪು ಯಾವ ದೇಶಕಾಲಕ್ಕೂ ಕಟ್ಟುಬೀಳುವಹಾಗಿಲ್ಲ.

ಅವಸ್ಥಾತ್ರಯಪ್ರಕ್ರಿಯೆಯು ಈ ರೀತಿಯಲ್ಲಿ ನಮಗೆ ಒಂದು ಹೊಸ ಕಣ್ಣನ್ನು ಕೊಡುತ್ತದೆ. ಆ ಕಣ್ಣಿನಿಂದ ನೋಡಿದಾಗ ನಾವು ನೋಡುತ್ತಿರುವ ಆಧ್ಯಾತ್ಮಿಕ ಆಧಿಭೌತಿಕ ಪ್ರಪಂಚವು ಒಂದೇ ಅವಸ್ಥೆಗೆ ಕಟ್ಟುಬಿದ್ದಿರುವದರಿಂದಲೂ ಆದರೆ ಅವಸ್ಥಾತ್ರಯಕ್ಕೆ ಸಾಕ್ಷಿಯಾಗಿರುವ ಆತ್ಮನು ತಾನೇತಾನಾಗಿ ಯಾವಾಗಲೂ ಸ್ವರೂಪದಲ್ಲಿ ಬೇರ್ಪಡದೆ ಇರುವದರಿಂದಲೂ ಆತ್ಮನೇ ಪರಮಾರ್ಥವಾಗಿ ಸಚ್ಚಿದಾನಂದಸ್ವರೂನಾಗಿರುವನೆಂದು ಏರ್ಪಡುತ್ತದೆ.

★★★★★

# ವೇದಾಂತದ ಈಗಿನ ಸ್ಥಿತಿ

**16-5-1940**

**ಶ್ರೀಶ್ರೀಗಳು**

ಅವಸ್ಥೆಯ ವಿಷಯದಲ್ಲಿ ವೇದಾಂತಿಗಳು ಕೊಟ್ಟಿರುವ ಕೆಲವು ತೀರ್ಪುಗಳು ವಿಚಾರಾರ್ಹವಾಗಿರುತ್ತವೆ. ಅವಸ್ಥೆಯೆಂದರೇನು? ಕಾಲದಲ್ಲಿ ಆಗುವ ವಿಶೇಷವನ್ನು ಅವಸ್ಥೆಯೆನ್ನುವದು ರೂಢಿಯಾಗಿದೆ. ವ್ಯವಹಾರದಲ್ಲಿ ಈ ಲಕ್ಷಣವು ಸಾಕಾಗಿರುತ್ತದೆ. ಆದರೆ ಜಾಗ್ರತ್ಸ್ವಪ್ನಸುಷುಪ್ತಿಗಳು ಈ ಅರ್ಥದಲ್ಲಿ ಅವಸ್ಥೆಗಳಲ್ಲ. ಏಕೆಂದರೆ ಅವಸ್ಥೆಗಳಲ್ಲಿ ಕಾಲವಿದೆಯೇ ಹೊರತು ಕಾಲದಲ್ಲಿ ಅವಸ್ಥೆಯಿಲ್ಲ. ಜಾಗ್ರತ್ತಿನ ಕಾಲವೂ ಸ್ವಪ್ನದ ಕಾಲವೂ ಬೇರೆಬೇರೆ ಎಂಬುದು ನಮ್ಮೆಲ್ಲರಿಗೂ ತಿಳಿದೇ ಇದೆ. ಹೀಗಿರುವಲ್ಲಿ ಅವೆರಡೂ ಒಂದೇ ಕಾಲದಲ್ಲಿವೆಯೆಂದು ಹೇಳುವದು ಸರಿಯಾದೀತೆ? ಅವಸ್ಥೆಗಳನ್ನು ಒಂದು, ಎರಡು, ಮೂರು- ಎಂದು ಎಣಿಸುವದಕ್ಕೆ ಬರುವದಿಲ್ಲವೆಂಬುದು ಈಗ ಸುಲಭವಾಗಿ ಸಿದ್ಧವಾಗುತ್ತದೆ. ಏಕೆಂದರೆ ಎಣಿಸುವದೆಂಬುದು ದೇಶವನ್ನೋ ಕಾಲವನ್ನೋ ಇಟ್ಟುಕೊಂಡು ಹೊರಡಬೇಕು; ಆದರೆ ಕಾಲದೇಶಗಳು ಅವಸ್ಥೆಯೊಳಗೆ ಇವೆಯೇ ಹೊರತು, ಅವಸ್ಥೆಯು ದೇಶಕಾಲಗಳಲ್ಲಿಲ್ಲ. ಇದೇ ಕಾರಣದಿಂದ ಎಚ್ಚರವಾದಮೇಲೆ ಕನಸೆಂದಾಗಲಿ ಕನಸಾದಮೇಲೆ ಎಚ್ಚರವೆಂದಾಗಲಿ ಹೇಳುವದಕ್ಕಾಗುವದಿಲ್ಲ; ಏಕೆಂದರೆ ಆಗ ಎಚ್ಚರವೂ ಕನಸೂ ಒಂದೇ ಕಾಲದಲ್ಲಿರುವವು ಎಂದಂತೆ ಆಗುತ್ತದೆ. ಎಚ್ಚರಸ್ವಪ್ನಗಳು ಏಕಕಾಲಕ್ಕೆ ಇಲ್ಲ; ಒಂದಿರುವಾಗ ಮತ್ತೊಂದು ಇಲ್ಲ, ಒಂದಾಗುತ್ತಲೂ ಮತ್ತೊಂದು ಇಲ್ಲ. ಈಗ ಎಚ್ಚರಕನಸುಗಳ ತೋರಿಕೆಯನ್ನು ಏನೆಂದು ಕರೆಯಬೇಕಾಯಿತು? ಕನಸು, ಎಚ್ಚರ, ನಿದ್ರೆ-ಎಂದು ನಾವು ವ್ಯವಹರಿಸುವದು ಒಂದೇ ವಸ್ತು. ಅದೇ ಪರಮಾರ್ಥಚೈತನ್ಯವಾದ ನಮ್ಮ ಆತ್ಮನು; ಅವಸ್ಥೆಗಳು ತೋರುವ ರೂಪದಲ್ಲಿ ಮಾಯಿಕ, ಅನಿರ್ವಚನೀಯ. ಆದಕಾರಣ ಅವುಗಳಿಗೆ ಸಂಬಂಧವೂ ಇಲ್ಲ, ಕಾರಣವೂ ಇಲ್ಲ. ಆದ್ದರಿಂದ ಪರಮಾರ್ಥವು ವ್ಯವಹಾರದಲ್ಲಿ ತೋರಿಕೊಳ್ಳುವ ಬಗೆಗೆ ಅವಸ್ಥೆಯೆಂದು ಹೆಸರು. ಅವಸ್ಥೆಗಳ ತತ್ತ್ವವೇನು? ಎಚ್ಚರವಲ್ಲ,

ಕನಸಲ್ಲ, ತನಿನಿದ್ರೆಯಲ್ಲ, ಆತ್ಮನೇ. ಈ ಆತ್ಮನು ಸರ್ವರಿಗೂ ಆತ್ಮನೇ, ಏಕೆಂದರೆ ಸರ್ವವೆಂಬುದು ಉಪಾಧಿಗಳಿಂದಾಗಿದೆ, ಉಪಾಧಿಗಳು ಎಚ್ಚರಕ್ಕೆ ಸೇರಿರುತ್ತವೆ. ಸುಷುಪ್ತಿಯಲ್ಲಿರುವ ನಮ್ಮ ರೂಪದಲ್ಲಿ ಅನೇಕತ್ವವಿಲ್ಲ. ಅದು ಸದ್ರೂಪ, ಏಕೆಂದರೆ ಅದು ಈಗಲೂ ಇದೆ. ಅದು ಚಿದ್ರೂಪ, ಏಕೆಂದರೆ ಸುಷುಪ್ತಿಯಲ್ಲಿ ಏನೂ ಇಲ್ಲವೆಂಬುದನ್ನೂ ಬೆಳಗುತ್ತದೆ. ಅದು ನಿಜವಾದ ಆನಂದರೂಪ, ಏಕೆಂದರೆ ಅದರಲ್ಲಿ ವಿಷಯಗಳಿಂದಾಗುವ ಉಬ್ಬರವಿಳಿತವಿಲ್ಲ. ಆ ಸಚ್ಚಿದಾನಂದರೂಪವೇ ಎಚ್ಚರದಲ್ಲಿ ಸದಸತ್ತಾಗಿಯೂ ಚಿದಚಿತ್ತಾಗಿಯೂ ಸುಖದುಃಖಗಳಾಗಿ ಯೂ ಒಡೆದುಕೊಂಡು ಕಾಣುತ್ತದೆ. ಇದಕ್ಕೆ ಎಚ್ಚರದಭಿಮಾನವೇ ಕಾರಣ. ಅವಸ್ಥೆಗಳು ಮಾಯಿಕವೆಂಬುದನ್ನು ನೆನೆಪಿನಲ್ಲಿಟ್ಟುಕೊಂಡವರಿಗೆ ನಾವು ಯಾವಾಗಲೂ ಸಚ್ಚಿದಾನಂದರೂಪರೇ ಆಗಿರುವೆವೆಂಬುದೂ ನಮ್ಮ ರೂಪದಲ್ಲಿ ಯಾವ ಹೆಚ್ಚುಕಡಿಮೆಯೂ ಇಲ್ಲವೆಂಬುದೂ ಸ್ಪಷ್ಟವಾಗುತ್ತದೆ

ವೇದಾಂತವನ್ನು ಹೇಗೆ ಅಭ್ಯಾಸಮಾಡಬೇಕು? ಅದರ ಐಹಿಕಪ್ರಯೋಜನವನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದರೆ ಸಾಲದು. ಸಾಮಾನ್ಯ ಜನರು ಭೌತಿಕಶಾಸ್ತ್ರವನ್ನು ಕೂಡ ಅದರಿಂದಾಗುವ ಲೌಕಿಕಪ್ರ ಯೋಜನಕ್ಕಾಗಿಯೇ ಅಭ್ಯಾಸಮಾಡುತ್ತಾರೆ; ಆದರೆ ನಿಜವಾದ ಜಿಜ್ಞಾಸುಗಳು ಆ ಶಾಸ್ತ್ರದ ವಿಚಾರಕ್ಕಾಗಿಯೇ ತಮ್ಮ ಜೀವನವನ್ನು ಧಾರೆಯೆರೆದಿರುತ್ತಾರೆ. ಭೌತಿಕಶಾಸ್ತ್ರಗಳು ಒಂದೊಂದು ತತ್ತ್ವವನ್ನು ಕುರಿತು ವಿಚಾರಮಾಡುತ್ತವೆ; ವೇದಾಂತವು 'ತತ್ತ್ವಗಳ ತತ್ತ್ವವೇನು?'- ಎಂಬುದನ್ನೇ ವಿಚಾರಮಾಡುತ್ತದೆ. ಈ ಶಾಸ್ತ್ರಕ್ಕೆ ವಿಷಯವಾಗಿರುವ ಪರಮತತ್ತ್ವವನ್ನರಿಯುವದಕ್ಕೇ ನಿಜವಾಗಿ ಮಾನವನು ಜನ್ಮವೆತ್ತಿರುವನು. ಆ ತತ್ತ್ವಕ್ಕಾಗಿ ಪ್ರಾಣವನ್ನಾದರೂ ಕೊಡುವೆವೆನ್ನುವ ಮಹಾತ್ಮರು ಬಲು ವಿರಳ. ಪ್ರಾಚೀನಕಾಲದ ಪರಮಋಷಿಗಳು ವೇದಾಂತದ ಸವಿಯನ್ನು ತಾವೂ ಕಂಡು ಲೋಕದ ಕಲ್ಯಾಣಕ್ಕೆಂದು ಉಪದೇಶಿಸಿರುತ್ತಾರೆ. ಅವನ್ನು ಕುತೂಹಲಕ್ಕೆ ಓದುವವರ ಸಂಖ್ಯೆಯುಕೂಡ ಈಗ ಕಡಿಮೆಯಾಗುತ್ತಿದೆ. ವೇದಾಂತವನ್ನು ಪರೀಕ್ಷೆಗೆಂದು ಓದಿದವರು ಈಗ ಎಷ್ಟುಜನ ಹೇಗೆ ಜೀವನವನ್ನು ಸಾಗಿಸುತ್ತಿರುವರೋ ತಿಳಿಯದು. ಈ ಶಾಸ್ತ್ರದ ಉಪದೇಶವು ಜೀವನದ ದುಃಖಕ್ಕೆ ಪರಿಹಾರವೆ,

ಅಲ್ಲವೆ? ಎಂಬುದನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲವೂ ಜನರಲ್ಲಿ ಕಡಿಮೆಯಾಗಿದೆ. ಇದಕ್ಕೆ ಕಾರಣವೇನೆಂದರೆ, ಅವರು ವೇದಾಂತವನ್ನು ವೇದಾಂತವಾಗಿ ಓದುತ್ತಿಲ್ಲ. ವೇದಾಂತಕ್ಕೂ ಜನಜೀವನಕ್ಕೂ ಸಂಬಂಧವು ತಪ್ಪುತ್ತಲಿದೆ. ಈಗ ವೇದಾಂತವನ್ನು ಶಾಸ್ತ್ರವಾಗಿ ಅಭ್ಯಾಸಮಾಡುವವರುಕೂಡ ಕಡಿಮೆಯಾಗಿದಾರೆ; ಪ್ರಸ್ಥಾನತ್ರಯವನ್ನು ಪೂರ್ತಿಯಾಗಿ ನೋಡಿ ಸತತಾಭ್ಯಾಸಮಾಡುವವರೂ ಪಾಠವನ್ನು ಹೇಳುವವರೂ ಕೇಳುವವರೂ ಕಣ್ಣಿಗೆ ಬೀಳುವದು ಅಪರೂಪವಾಗಿದೆ. ಕೆಲವು ಪ್ರಕರಣದಲ್ಲಿ ತೃಪ್ತರಾಗಿರುವವರು, ಕೆಲವು ತತ್ತ್ವಗಳನ್ನು ಹಾಡಿಕೊಂಡು ತೃಪ್ತರಾಗಿರುವವರು- ಹೀಗೆಲ್ಲ ಆಗಿದೆ ವೇದಾಂತಿಗಳ ಸ್ಥಿತಿ. ಅತ್ತ ಪಾಶ್ಚಾತ್ಯದೇಶಗಳಲ್ಲಿ ಜನರು ತಮ್ಮ ನಾಗರಿಕತೆಯು ಅತೃಪ್ತಿಕರವೆಂಬುದನ್ನು ಮನಗಂಡು ಪೂರ್ವದೇಶಗಳಲ್ಲಿ ನಮಗೆ ಏನಾದರೂ ಸಮಾಧಾನಕರವಾದ ಉಪದೇಶವು ಸಿಕ್ಕೀತೆ? ಎಂದು ಹಾತುವರಿಯುತ್ತಿದ್ದಾರೆ. ಇತ್ತ ನಮ್ಮವರು ವೇದವನ್ನೂ ಬಿಟ್ಟು, ಬ್ರಹ್ಮವನ್ನೂ ಬಿಟ್ಟು, ಶಮದಮಾದಿಗಳನ್ನೂ ಬಿಟ್ಟು, ಇಹಪರಗಳ ದೃಷ್ಟಿಯೇ ಇಲ್ಲದೆ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಪಶ್ಚಿಮದವರ ಹೊಸ ಅಭಿಪ್ರಾಯಗಳಿಗೆ ಮರುಳಾಗಿ ಎಲ್ಲವನ್ನೂ ರೂಪಾಯಿಗಳ ಕಣ್ಣಿಂದ ನೋಡುವದನ್ನು ಕಲಿತುಕೊಳ್ಳುತ್ತಿದಾರೆ. ಈ ಸ್ಥಿತಿ ಹೋಗಬೇಕಾದರೆ ವೇದಾಂತಕ್ಕೇ ತಮ್ಮ ಜೀವಿತಸರ್ವಸ್ವವನ್ನೂ ಕೊಡುವವರ ಸಂಖ್ಯೆ ಹೆಚ್ಚಬೇಕು; ಅಲ್ಲಲ್ಲಿ ವೇದಾಂತವಿಚಾರದ ಸ್ವತಂತ್ರಸಂಸ್ಥೆಗಳು ಏರ್ಪಡಬೇಕು; ಸಂನ್ಯಾಸಿಗಳ ಅಥವಾ ವಿರಕ್ತರಾದ ಗೃಹಸ್ಥರ ಆಡಳಿತಕ್ಕೆ ಅವು ಸಿಕ್ಕಬೇಕು. ವಿಚಾರಸಂಘಗಳು ಏರ್ಪಾಡಾಗಬೇಕು, ವೇದಾಂತಗ್ರಂಥಗಳ ಭಾಷಾಂತರಾದಿಗಳು ಆಗಬೇಕು. ವೇದಾಂತವಿಚಾರವು ಎಲ್ಲೆಲ್ಲಿಯೂ ಜನರಲ್ಲಿ ಜೀವನಕ್ಕೆ ಸಂಬಂಧಪಟ್ಟದ್ದೆಂಬ ಭಾವನೆಯುಂಟಾಗಬೇಕು. ಆಗ ಈ ಶಾಸ್ತ್ರಕ್ಕೆ ಕಳೆ ಬರುತ್ತದೆ.

★★★★★

# ಜಗತ್ತು ಮಿಥ್ಯೆಯೆ?

**2-5-41**

**ಶ್ರೀ ಶ್ರೀಗಳು**

ಜಗತ್ತು ಮಿಥ್ಯೆಯೆಂದು ಯಾರಿಗೂ ತೋಚುವದಿಲ್ಲ, ಅದು ಮಿಥ್ಯೆಯಾಗಬೇಕೆಂಬುದು ಬಹುಜನರಿಗೆ ಒಪ್ಪಾಗಿಯೂ ಇಲ್ಲ. ಯಾರು ಈ ಲೋಕದ ಸುಖವನ್ನು ಅನುಭವಿಸಿಕೊಂಡು ಹಾಯಾಗಿ ಇರಬೇಕೆನ್ನುವರೋ, ಯಾರು ಈ ಲೋಕದಲ್ಲಿ ಏನಾದರೊಂದು ಕರ್ತವ್ಯವನ್ನು ನೆರವೇರಿಸಿ ಕೀರ್ತಿಯನ್ನು ಗಳಿಸಬೇಕೆಂದಿರುವರೋ ಅಂಥವರಿಗೆ ಈ ಲೋಕವು ಮಿಥ್ಯೆಯಾಗಿರುವದು ಇಷ್ಟವಿಲ್ಲ. ಐಶ್ವರ್ಯವಂತರಿಗೆ, ಯೌವನವಂತರಿಗೆ- ಈ ಮಾತು ಕಿವಿಗೇ ಬೀಳುವದಿಲ್ಲ; ಅಥವಾ ಬಿದ್ದರೆ ಅವರು ಗಾಬರಿಯಾಗುತ್ತಾರೆ. ಏನು, ಪ್ರಪಂಚವು ಮಿಥ್ಯೆಯೆ? ಇನ್ನೇನುಗತಿ!- ಎಂದಾರು, ಅವರು. ಯಾರು ದುಃಖಿಗಳೋ, ಆಶಾಭಂಗವಾದವರೋ, ಭೋಗಸಾಮರ್ಥ್ಯವಿಲ್ಲದೆ ಕಷ್ಟದಿಂದ ಜೀವನಯಾತ್ರೆಯನ್ನು ಸಹಿಸುತ್ತಿರುವರೋ ಅಂಥವರಿಗೆ ಪ್ರಪಂಚವು ಮಿಥ್ಯೆಯಾದರೂ ಆಗಲಿ ಎಂದು ಹಾರೈಕೆಯಾಗಬಹುದು. ಆದರೆ ಈ ಪ್ರಪಂಚವು ಮಿಥ್ಯೆಯೆಂದು ಮಾತ್ರ ಯಾರೊಬ್ಬರಿಗೂ ತೋರುವದಿಲ್ಲ. ಇದು ಸತ್ಯವೆಂದೇ ನಾವೆಲ್ಲರೂ ತಿಳಿದು ವ್ಯವಹಾರಮಾಡುತ್ತಿದೇವೆ. ಹೀಗಿದ್ದರೂ ಕೆಲವರು ಅದ್ವೈತವೇದಾಂತಿಗಳು 'ಜಗತ್ತು ಮಿಥ್ಯೆ' ಎಂಬ ಮಾತನ್ನುಪಯೋಗಿಸುತ್ತಿರುವದನ್ನು ಕೇಳಿ ನಾವೂ ಕುತೂಹಲದಿಂದ ಜಗತ್ತು ಸತ್ಯವೊ, ಮಿಥ್ಯೆಯೊ?-ಎಂಬ ಪ್ರಶ್ನೆಯನ್ನು ಆಗಾಗ್ಗೆ ಹಾಕುತ್ತಿರುವದುಂಟು, ಈ ವಿಷಯದಲ್ಲಿ ಚರ್ಚೆಯನ್ನು ಮಾಡುವದೂ ಉಂಟು.

ಆದರೆ ಈ ಸಂದರ್ಭದಲ್ಲಿ ಸತ್ಯವೆಂದರೇನು, ಮಿಥ್ಯೆಯೆಂದರೇನು?- ಎಂಬುದನ್ನು ನಾವುಗಳು ಬಹುಮಟ್ಟಿಗೆ ಯೋಚಿಸಿರುವದಿಲ್ಲ. ಲೋಕದಲ್ಲಿ ಯಾವದನ್ನು ಸಾಮಾನ್ಯವಾಗಿ ಸತ್ಯವೆನ್ನುತ್ತಾರೆ? ನಾವು ನೋಡಿದ ಪದಾರ್ಥಗಳಲ್ಲಿ ಯಾವಯಾವವು

ಅವುಗಳನ್ನು ನಾವು ಮೊದಲು ನೋಡಿದಂತೆಯೇ ಆಯಾ ದೇಶಕಾಲಗಳಲ್ಲಿ ಇರುವವೋ ಅವನ್ನು ಸತ್ಯವೆಂದು ಎಣಿಸುತ್ತೇವೆ. ಒಬ್ಬನು ನಿದ್ರಿಸಿ ಎಚ್ಚತ್ತಮೇಲೆ ತನ್ನ ಕೋಣೆಯಲ್ಲಿ ತಾನು ಮೊದಲು ಕಂಡ ಸಾಮಾನುಗಳನ್ನು ಹಾಗೆಯೇ ಇರುವಂತೆ ಕಂಡರೆ ಅವನ್ನು ಸತ್ಯವೆಂದು ಬಗೆಯುತ್ತಾನೆ. ಎಚ್ಚತ್ತಿರುವಾಗ ಯಾವದೇಶದಲ್ಲಿ ಯಾವ ಕಾಲದಲ್ಲಿ ಒಂದು ಪದಾರ್ಥವು ಇರುವಂತೆ ತೋರುವದೋ ಆ ದೇಶದಲ್ಲಿ ಆ ಕಾಲದಲ್ಲಿ ಆ ಪದಾರ್ಥವು ಅಲ್ಲಿಯೇ ಹಾಗೆಯೇ ಇರುವದೆಂದು ಸಂವಾದೀಕರಣದಿಂದ ಕಂಡುಬಂದರೆ ಅದು ಸತ್ಯವೆಂದು ನಾವು ಸಾಧಾರಣವಾಗಿ ಎಣಿಸುವೆವು. ಹೀಗೆ ದೇಶ, ಕಾಲ-ಎಂಬ ಎರಡು ಮುದ್ರೆಗಳು ಬಿದ್ದ ಪದಾರ್ಥಗಳನ್ನು ನಾವು ಸತ್ಯವೆಂದು ಎಣಿಸುತ್ತಿರುವೆವಾದರೂ ದೇಶಕಾಲಗಳು ಯಾವಾಗಲೂ ಒಂದೇ ಸ್ಥಿತಿಯಲ್ಲಿರುವದಿಲ್ಲ. ಈಗ ನೋಡಿರಿ. 'ಈ ಊರಿನಿಂದ ನಮ್ಮ ಊರು 'ಒಂದು ದಿನದ ಪ್ರಯಾಣ' ಎಂದರೆ ಅರ್ಥವೇನು? ಕಾಲುನಡಗೆ, ಗಾಡಿ, ಕುದುರೆ, ರೈಲು, ವಿಮಾನ-ಮುಂತಾದ ಸಾಧನಗಳನ್ನು ನಾವು ಉಪಯೋಗಿಸಿದ ಹಾಗೆಲ್ಲ 'ಒಂದು ದಿನದ ಪ್ರಯಾಣ'ವೆಂಬ ಮಾತಿಗೆ ಬೇರೆಬೇರೆ ಅರ್ಥವಾಗುತ್ತದೆ. ದೇಶಕ್ಕೂ ಹೀಗೆಯೇ ಹೇಳಬಹುದು. ಇವುಗಳಲ್ಲಿ ಒಂದುವೇಳೆ ಯಾವದಾದರೊಂದು ಸಾಧನವನ್ನೇ ಗೊತ್ತಾದ ಪ್ರಮಾಣವಾಗಿಟ್ಟುಕೊಂಡು ನಾವು ಮಾತನಾಡುತ್ತೇವೆಂದು ಇಟ್ಟುಕೊಳ್ಳೋಣ. ಆದರೂ ನಾವು ಕಾಲದೇಶವಸ್ತುಗಳ ವಿಷಯಕ್ಕೆ ಒಂದೇ ಅಭಿಪ್ರಾಯವುಳ್ಳವರಾಗಿ ಇರುತ್ತೇವೆಂದು ಹೇಳಬಹುದೆ? ಸ್ವಲ್ಪಹೊತ್ತಿನಲ್ಲಿ ಒಂದು ವಸ್ತುವು ಇಂತಿಷ್ಟು ಮಾರ್ಪಡುವದೆಂದು ನಾವು ನಿರೀಕ್ಷಿಸಿದ್ದರೆ ಅದಕ್ಕಿಂತ ವೇಗವಾಗಿ ಆ ವಸ್ತು ಮಾರ್ಪಟ್ಟರೆ ನಾವು ಅದು ಸತ್ಯವೊ, ಅಲ್ಲವೊ?-ಎಂದು ಸಂಶಯಪಡುತ್ತೇವೆ. ಉದಾಹರಣೆಗೆ ಒಬ್ಬ ಮನುಷ್ಯನು ಈಗ ಐದು ಅಡಿ, ಇನ್ನೊಂದುಸಲ ಕಣ್ಣುಮುಚ್ಚಿ ಬಿಡುವದರೊಳಗೆ ಆರು ಅಡಿ, ಮತ್ತೊಂದು ಸಲಕ್ಕೆ ಎಂಟು ಅಡಿ- ಹೀಗೆ ಹೆಚ್ಚುತ್ತಾಬಂದರೆ ಅವನು ನಿಜವಾಗಿ ಮನುಷ್ಯನಾಗಿರಬಹುದೆ?- ಎಂಬ ಸಂಶಯವು ನಮಗೆ ತಟ್ಟುವದು ನಿಶ್ಚಯ. ಆದರೆ ಜಗತ್ತಿನಲ್ಲಿ ಕಾಲದ ವೇಗವೂ ಅದರಲ್ಲಿ ಆಗುವ ಘಟನೆಗಳ ವೇಗವೂ ಈಗ ಎಷ್ಟು ಹೆಚ್ಚುಕಡಿಮೆಯಾಗಿ ಬಿಟ್ಟಿದೆ! ಹಿಂದೆ ಒಂದು ಜೀವಮಾನವೆಲ್ಲ ಸಂಚಾರಮಾಡಿ ದೂರದೇಶದಲ್ಲಿದ್ದ ಒಬ್ಬ ದೊಡ್ಡಮನುಷ್ಯನೊಡನೆ ಕಂಡು ಮಾತನಾಡಬಹುದಾಗಿದ್ದ

ಸಂದರ್ಭವು ಈಗ ಮಾರ್ಪಟ್ಟು ಒಂದು ರೇಡಿಯೋಮೂಲಕ ಅತ್ಯಂತ ದೂರದಲ್ಲಿರುವ ಒಬ್ಬ ಮನುಷ್ಯನ ವಾಣಿಯನ್ನೂ ನಾವು ಇಲ್ಲಿಯೇ ಕೇಳಬಹುದಾಗಿರುತ್ತದೆ. ಹಿಂದಿನವರು ಈ ಸಮಯದಲ್ಲಿದ್ದರೆ ಇದು ಸತ್ಯವೆ?-ಎಂದು ಸಂಶಯಪಡುತ್ತಿದ್ದರು. ಆದರೆ ಈಗ ನಮಗೆ ಇಂಥ ವಿದ್ಯಮಾನಗಳು ಬಳಕೆಯಾಗಿ ಇವು ಸತ್ಯವೆಂದೇ ನಾವು ಬಗೆಯುತ್ತಿದೇವೆ. ಹಿಂದಿನ ಭೂಮಂಡಲದಲ್ಲಿ ಪ್ರಖ್ಯಾತನಾಗಿದ್ದ ಟಿಪ್ಪುಸುಲ್ತಾನನ ಅರಮನೆಯು ಈಗ್ಗೆ ಅದರ ಮುಂದೆ ಇರುವ ಸ್ಕೂಲುಕಟ್ಟಡದ ಅಪೇಕ್ಷೆಯಿಂದ ಬಲು ಸಣ್ಣದಾಗಿರುವದು. ದೂರಕ್ಕೆ ಕಾಣಿಸದೆ ಇರುವ ಕೆಲವು ವಸ್ತುಗಳು ಹತ್ತಿರಹತ್ತಿರವಾಗುತ್ತಲೂ ದೊಡ್ಡದೊಡ್ಡವಾಗಿ ಕಾಣಿಸುತ್ತವೆ. ಇನ್ನೂ ಕೆಲಕೆಲವು ವಸ್ತುಗಳು ತೀರ ಹತ್ತಿರವಾಗುತ್ತಲೂ ನಮಗೆ ಕಾಣಿಸದೆಹೋಗುತ್ತವೆ; ಉದಾಹರಣೆಗೆ ನಮ್ಮ ಕಣ್ಣಿನಲ್ಲಿರುವ ಬಿಳುಪು ನಮಗೆ ಕಾಣಿಸುವದಿಲ್ಲ. ಹೀಗಿರುವದರಿಂದ ಕಾಲದೇಶಗಳ ಹಿಗ್ಗುವಿಕೆ ಕುಗ್ಗುವಿಕೆಯಿಂದ ಬೇರೆಬೇರೆಯಾಗಿ ಕಾಣಿಸುವ ವಸ್ತುಗಳನ್ನು ಯಾವ ರೂಪದಲ್ಲಿ ಸತ್ಯವಾಗಿರುವವೆಂದು ನಾವು ಎಣಿಸಬೇಕಾಯಿತು? ಇದರ ಜೊತೆಗೆ ನೋಡುವವರ ಕರಣದೋಷವನ್ನೂ ನಾವು ಲೆಕ್ಕಕ್ಕೆ ತೆಗೆದುಕೊಂಡರೆ ವಸ್ತುಗಳ ಸತ್ಯತ್ವಕ್ಕೆ ಯಾವ ಹೆಗ್ಗುರುತನ್ನು ಇಟ್ಟುಕೊಳ್ಳಬೇಕೆಂಬ ವಿಷಯಕ್ಕೆ ನಮಗೆ ಇನ್ನೂ ದಿಕ್ಕುತೋಚದಂತೆ ಆಗುತ್ತದೆ. ಏಕೆಂದರೆ ಕೆಲವರಿಗೆ ಕಣ್ಣಿನ ದೋಷದಿಂದ ಕೆಂಪುಬಣ್ಣವು ಹಸುರಾಗಿ ಕಾಣಿಸುವದುಂಟೆಂದು ಹೇಳುತ್ತಾರೆ; ಆಗ ನಿಜವಾಗಿ ವಸ್ತು ಹಸುರಾಗಿರುವದೊ, ಕೆಂಪಾಗಿರುವದೊ? ಯಾರು ನಿಶ್ಚಯಿಸುವವರು? ಇಂಥ ಸಂದರ್ಭಗಳಲ್ಲಿ ಬಹುಜನರು ಒಪ್ಪಿದ್ದೇ ಸತ್ಯವು-ಎಂದು ನಮಗೆ ಅನ್ನಿಸುವದು ಸಹಜವಾಗಿದೆ. ಆದರೆ ಬಹುಜನರೆಂದರೆ ಎಷ್ಟು ಜನ? ಜ್ವರಬಂದವರೇ ಬಹುಮಂದಿ ಇರುವ ಸಭೆಯಲ್ಲಿ ಮೊಸರನ್ನವು ಪಥ್ಯವೆಂದೇ ಬಹುಮತದಿಂದ ತೀರ್ಮಾನವಾದರೆ ನಿಜವಾಗಿಯೂ ಆ ರೋಗಿಗಳಿಗೆ ಮೊಸರನ್ನವು ಪಥ್ಯವಾದೀತೇನು? ಮುಂದೆ ಯಾವದಾದರೊಂದು ಕಾರಣದಿಂದ ಬಣ್ಣಗುರುಡರೇ ಹೆಚ್ಚಾಗಿ ಹಸುರನ್ನು ಕೆಂಪೆಂದೇ ಬಹುಮಂದಿ ಸಾಧಿಸಿದರೆ ಆಗ ಅದೇ ಸತ್ಯವಾಗುವದೆ? ಹಾಗಾದರೆ ಸತ್ಯವೆಂಬ ಮಾತಿಗೆ ನಿರಪೇಕ್ಷವಾದ ಅರ್ಥವೇ ಇಲ್ಲವೆಂದಾಗುವದಿಲ್ಲವೆ? ಹೀಗೆಯೇ ಕೆಲವರಿಗೆ ನರಗಳ ದುರ್ಬಲತೆಯಿಂದ ಹೊರಗೆ ಇಲ್ಲದ

ವಸ್ತುವಿನ ವಾಸನೆಯುಂಟಾಗುತ್ತದೆ, ಮತ್ತೆ ಕೆಲವರಿಗೆ ಕಿವಿಯ ದೋಷದಿಂದ ಸುಮ್ಮಸುಮ್ಮನೆ ರೈಲುಕೂಗಿದ ಧ್ವನಿಯಾಗುತ್ತದೆ; ಅಂಥ ಜನರು ಹೆಚ್ಚಾದರೆ ಆಗ ನಿಜವಾಗಿಯೂ ಹೊರಗೆ ಆಯಾ ವಾಸನೆಯ ವಸ್ತುಗಳೂ ಆಯಾ ಶಬ್ದವನ್ನು ಕೊಡುವ ಪದಾರ್ಥಗಳೂ ಇವೆಯೆಂದು ನಿರ್ಣಯಮಾಡಬೇಕಾಗಿ ಬಂದೀತಲ್ಲವೆ? ಈ ಆಕ್ಷೇಪಕ್ಕೂ ನಾವು ಒಂದು ಉತ್ತರವನ್ನು ಹೇಳಬಹುದು. ಕರಣದೋಷವಿದ್ದರೆ ವಸ್ತುವಿನ ನಿಶ್ಚಯವನ್ನು ಗೊತ್ತುಮಾಡುವದಕ್ಕೆ ಆಗದೆ ಇದ್ದರೂ ನಿಪುಣರಾದ ಘಟಕರು ಅದನ್ನು ನಿರ್ಣಯಿಸುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಲೋಕದಲ್ಲಿ ಸೂಕ್ಷ್ಮಬುದ್ಧಿಯುಳ್ಳ ಋಷಿತುಲ್ಯರಾದ ಜನರು ಸತ್ಯವನ್ನು ತಿಳಿಯಬಹುದಲ್ಲವೆ? ಇದು ನಮಗೆ ನಿರಾಕ್ಷೇಪಕವಾದ ಉತ್ತರವೆಂದು ಕಾಣಬಹುದು: ಆದರೆ ಇಲ್ಲಿಯೂ ಒಂದು ಸಂಕಟವಿದೆ. ಅದೇನೆಂದರೆ ವಸ್ತುಪರೀಕ್ಷೆಯನ್ನು ಮಾಡಬಲ್ಲ ನಿಪುಣರಿವರೆಂಬುದನ್ನು ಯಾರು ಹೇಗೆ ನಿರ್ಣಯಿಸಬೇಕು? ಒಂದು ಸಲ ವಿದ್ಯಾರ್ಥಿಗಳ ಪರೀಕ್ಷಾಪತ್ರಿಕೆಗಳ ಉತ್ತರಗಳನ್ನು ದೂರದಲ್ಲಿರುವ ಕುಶಲಮತಿಗಳೆಂದು ಪ್ರಸಿದ್ಧರಾದ ಮಹಾಶಯರಿಂದ ನೋಡಿಸಿ ವಿಮರ್ಶಿಸಲಾಗಿ ಆ ಪರೀಕ್ಷಕರು ಒಂದೊಂದೇ ಉತ್ತರಪತ್ರಿಕೆಯ ವಿಷಯಕ್ಕೆ ಅತ್ಯಂತ ಭಿನ್ನವಾದ ಅಭಿಪ್ರಾಯಗಳನ್ನು ಪ್ರಕಟಿಸಿದರೆಂದು ಕಂಡುಬಂತು. ಒಬ್ಬ ಪರೀಕ್ಷಕನು ಮೂರುನಂಬರುಕೊಟ್ಟಿದ್ದ ಉತ್ತರಕ್ಕೆ ಮತ್ತೊಬ್ಬನು ಮೂವತ್ತುಕೊಟ್ಟಿದ್ದನು! ಪರೀಕ್ಷಕರ ಮನಃಸ್ಥಿತಿಯೇ ಮುಂತಾದ ಕಾರಣಗಳಿಂದ ಈ ತಾರತಮ್ಯವು ಆಗಿರಬೇಕೆಂದು ಆಗ ಸಭಿಕರು ನಿರ್ಣಯಿಸಿದರಂತೆ-ಅಂತೂ ಏನಾಯಿತು? ದೇಶಕಾಲಗಳ ಗುರುತಾಗಲಿ, ಸರಿಯಾಗಿ ಪರೀಕ್ಷಿಸಿನೋಡಿದ ಕಾರಣವಾಗಲಿ, ಕುಶಲಮತಿಗಳ ಬಹುಮತವಾಗಲಿ, ಸತ್ಯತ್ವಕ್ಕೆ ಎಂದಿಗೂ ಹೆಗ್ಗುರುತಾಗಲಾರದು. ಇದಿಷ್ಟೂ ವ್ಯವಹಾರದಲ್ಲಿಯೇ ನಾವುಗಳು ಕಂಡಿರುವ ವಿಷಯಗಳ ಅನುಭವದ ವಿಚಾರವಾಯಿತು. ವ್ಯವಹಾರದಲ್ಲಿ ಬಹುಮಟ್ಟಿಗೆ ಬಹುಜನರು ಸತ್ಯವೆಂದು ಬಗೆಯುವದನ್ನೇ ನಾವು ಸತ್ಯವೆಂದು ಎಣಿಸುತ್ತಿರುವದು ನಿಜ. ಆದರೆ ನಮ್ಮಲ್ಲಿ ನೆಲೆಸಿರುವ ಸತ್ಯತ್ವಭಾವನೆಗೆ ಅಡಿಗಲ್ಲು ಯಾವದೆಂಬುದಕ್ಕೆ ಈ ಹೆಗ್ಗುರುತೇನೂ ಪ್ರಯೋಜನಕ್ಕೆ ಬರುವದಿಲ್ಲ. ಆದ್ದರಿಂದಲೇ ಭೌತಿಕಶಾಸ್ತ್ರಜ್ಞರುಕೂಡ ತಾವು ಇದುವರೆಗೆ ಪರಿಶೀಲನೆಮಾಡಿ ನೋಡಿದ್ದರಲ್ಲಿ ಇದು ಸತ್ಯವೆಂದು

ತೋರುತ್ತಿದೆ- ಎಂದು ಹೇಳುವರೇ ಹೊರತು-ಇದೇ ಕೊನೆಯ ಮಾತೆಂದಾಗಲಿ ಪರಮಾರ್ಥಸತ್ಯವೆಂದಾಗಲಿ ಅವರು ಹೇಳುತ್ತಿಲ್ಲ.

ಆದರೆ ಜಗತ್ತು ಸತ್ಯವೆ?- ಎಂಬಲ್ಲಿ ನಾವು ಇಂಥ ವ್ಯಾವಹಾರಿಕಸತ್ಯತ್ವವನ್ನೇನೂ ವಿಚಾರಮಾಡುತ್ತಿಲ್ಲ. ನಮ್ಮೆದುರಿಗೆ ತೋರುತ್ತಿರುವ ಜಗತ್ತು ದೇಶಕಾಲನಿಮಿತ್ತಗಳಿಂದ ಕೂಡಿರುವದಾದರೂ ಬಹುಜನರು ಇದರಲ್ಲಿದ್ದು ನಮ್ಮಂತೆಯೇ ವ್ಯವಹರಿಸುತ್ತಿರುವಂತೆ ಕಂಡುಬರುತ್ತದೆಯಾದರೂ ಅನೇಕರ ಮತದಿಂದಲೂ ನಮ್ಮ ಭಾವನೆಯಿಂದಲೂ ಇದೇ ಸತ್ಯವೆಂದು ತೋರುವದಾದರೂ ಇದಕ್ಕೆ ನಿರಪೇಕ್ಷಸತ್ಯತ್ವವು ಇಲ್ಲ. ಏಕೆಂದರೆ ಕನಸಿನಲ್ಲಿಯೂ ಹೀಗೆಯೇ ಒಂದು ಜಗತ್ತು ತೋರುತ್ತಿರುವದು. ಅಲ್ಲಿ ತೋರುವ ದೇಶಕಾಲನಿಮಿತ್ತಗಳ ಜಗತ್ತು ಹೀಗೆಯೇ ನಮಗೆ ಆಗ್ಗೆ ಸತ್ಯವೆಂದೇ ತೋರುತ್ತಿರುತ್ತದೆ. ಈಗ ನಮ್ಮ ಎದುರಿನಲ್ಲಿ ತೋರುವ ಅವಸ್ಥೆಯೂ ಅದರಲ್ಲಿ ಕಾಣಬರುವ ಪ್ರಪಂಚವೂ ಸತ್ಯವೆ?- ಎಂಬ ಪ್ರಶ್ನೆಯನ್ನು ನಾವು ಬಿಡಿಸಿ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ. ಇದು ಸತ್ಯವಾಗಿ ತೋರುವದೆಂಬುದಾಗಲಿ, ಇದರಲ್ಲಿರುವ ವಸ್ತುಗಳು ದೇಶಕಾಲದಲ್ಲಿ ವ್ಯವಸ್ಥಿತವಾಗಿರುವಂತೆ ಕಾಣುವದೆಂಬುದಾಗಲಿ ಅವುಗಳು ನಮ್ಮ ವ್ಯವಹಾರದಲ್ಲಿ ಬಳಕೆಗೆ ಬರುವವೆಂಬುದಾಗಲಿ ಈ ಪ್ರಪಂಚದ ಸತ್ಯತ್ವಕ್ಕೆ ಒಂದಿಷ್ಟೂ ಸಾಧಕವಾಗಲಾರದು. ಏಕೆಂದರೆ ಕನಸಿನಲ್ಲಿ ತೋರುವ ಪ್ರಪಂಚವೂ ಕನಸಿನ ಕಾಲಕ್ಕೆ ಹೀಗೆಯೇ ಸತ್ಯವೆಂದು ತೋರುತ್ತಿರುತ್ತದೆ; ಹೀಗೆಯೇ ಅಲ್ಲಿಯೂ ವಸ್ತುಗಳು ದೇಶಕಾಲಕ್ಕೆ ಕಟ್ಟುಬಿದ್ದಿರುವಂತೆಯೂ ವ್ಯವಹಾರದಲ್ಲಿ ಬಳಕೆಗೆ ಬರುವಂತೆಯೂ ನಮಗೆ ಕಾಣುತ್ತದೆ. ಆದರೂ ನಾವು ಆ ಅವಸ್ಥೆಯನ್ನಾಗಲಿ ಅಲ್ಲಿರುವ ಪ್ರಪಂಚವನ್ನಾಗಲಿ ಸತ್ಯವೆಂದು ಎಣಿಸುವದಿಲ್ಲ-ಆದ್ದರಿಂದ ಸತ್ಯವೆಂದರೆ ಪ್ರಮಾಣಗೋಚರವಾಗಿರುವದಲ್ಲ, ಬಳಕೆಗೆ ಬರುವಂತೆ ಅರ್ಥಕ್ರಿಯಾಕಾರಿಯಾಗಿರುವದೂ ಅಲ್ಲ; ಯಾವದು ಯಾವ ಸ್ವರೂಪದಿಂದ ತೋರಿಕೊಳ್ಳುವದೋ ಆ ಸ್ವರೂಪವು ಒಂದಿಷ್ಟೂ

ಬದಲಾಯಿಸದೆ ಹಾಗೆಯೇ ಇರಬೇಕು, ಅದು ಆ ಸ್ವರೂಪವನ್ನು ಮಾರ್ಪಡಿಸಿಕೊಳ್ಳಬಹುದೆಂಬ ಶಂಕೆಯುಕೂಡ ಇರಬಾರದು. ಅಂಥದ್ದನ್ನೇ ನಾವು ಶಾಸ್ತ್ರರೀತಿಯಲ್ಲಿ ಸತ್ಯವೆಂದು ಕರೆಯುತ್ತೇವೆ. ಈ ಅರ್ಥದಲ್ಲಿ ನೋಡಿದರೆ ಎಚ್ಚರದ ಜಗತ್ತು ಸತ್ಯವೆ? ಅಲ್ಲ. ಏಕೆಂದರೆ ಇದು ಎಚ್ಚರದಲ್ಲಿ ಮಾತ್ರ ತೋರಿಕೊಳ್ಳತಕ್ಕದ್ದಾಗಿರುತ್ತದೆ. ಎಚ್ಚರವೂ ಎಚ್ಚರದ ಪ್ರಪಂಚವೂ ಕನಸಿನಲ್ಲಿ ಎಲ್ಲಿಯೂ ಇರುವದೇ ಇಲ್ಲ; ಆದ್ದರಿಂದ ಇದು ನಿರಪೇಕ್ಷವಾಗಿ ಸತ್ಯವಾಗಲಾರದು. ಹೀಗೆಯೇ ಕನಸೂ ಕನಸಿನ ಪ್ರಪಂಚವೂ ಎಚ್ಚರದಲ್ಲಿರುವದಿಲ್ಲ; ಆದ್ದರಿಂದ ಅದೂ ನಿರಪೇಕ್ಷಸತ್ಯವಲ್ಲ. ಆದ್ದರಿಂದ ಪ್ರಪಂಚವು ಮಿಥ್ಯೆ-ಎಂದು ವೇದಾಂತಿಗಳು ಹೇಳುತ್ತಾರೆ. ಪ್ರಪಂಚವನ್ನು ಈ ಅರ್ಥದಲ್ಲಿ ಮಿಥ್ಯವೆಂದು ನಾವು ಹೇಳಿದರೂ ಅದು ವ್ಯವಹಾರದಲ್ಲಿ ಸತ್ಯವೆಂಬುದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ಏಕೆಂದರೆ ವೇದಾಂತದ ದೃಷ್ಟಿಯಿಂದ ಪ್ರಪಂಚವು ನಿರಪೇಕ್ಷ ಸತ್ಯವಲ್ಲದಿದ್ದರೂ ನಾವು ಅದನ್ನು ಸತ್ಯವೆಂದೇ ಬಗೆದು ಅದರಲ್ಲಿ ವ್ಯವಹಾರ ಮಾಡುತ್ತಲೇ ಇರುತ್ತೇವೆ.

ಪ್ರಪಂಚವು ಪರಮಾರ್ಥದೃಷ್ಟಿಯಿಂದ ಮಿಥ್ಯವೇ ಆದರೂ ಅದು ಸತ್ಯವೆಂದೇ ಏಕೆ ನಮಗೆ ತೋರುತ್ತದೆ?- ಎಂಬ ಶಂಕೆಯೊಂದು ನಮಗೆ ಉಂಟಾಗುವದು ಸಹಜವಷ್ಟೆ. ಇದಕ್ಕೆ ಒಂದು ಉತ್ತರವಿದೆ. ಅದೇನೆಂದರೆ ಕನಸು ಮಿಥ್ಯೆಯಾದರೂ ನಮಗೆ ಕನಸಿನ ಕಾಲಕ್ಕೆ ಅದು ಸತ್ಯವೆಂದೇ ಏಕೆ ಕಾಣಿಸುತ್ತದೆ? ಭ್ರಾಂತಿಯ ವಸ್ತುಗಳು ಮಿಥ್ಯವೇ ಆದರೂ ಅವುಗಳು ತೋರುವ ಕಾಲಕ್ಕೆ ನಮಗೆ ಸತ್ಯವೆಂದೇ ಏಕೆ ತೋರುತ್ತದೆ? ನಮ್ಮ ಸ್ವರೂಪವಾದ ಆತ್ಮನಲ್ಲಿ ಸತ್ಯತ್ವವಿದೆ. ಆದ್ದರಿಂದ ನಾವು ಯಾವದನ್ನೂ ಅಸತ್ಯವೆಂದು ಬಗೆಯುವದಕ್ಕೆ ಆಗುವಹಾಗೆಯೇ ಇಲ್ಲ. ಮಿಥ್ಯಾತೋರಿಕೆಗಳನ್ನು ಕೂಡ ನಾವು ನಮ್ಮ ಸತ್ಯಸ್ವರೂಪದ ಕಣ್ಣಿಂದಲೇ ನೋಡುತ್ತಿದೇವೆ; ಆದ್ದರಿಂದ ನಮಗೆ ಅದು ಸತ್ಯವೇ ಆಗಿ ಕಾಣುತ್ತದೆ.

ಹಾಗಾದರೆ ತತ್ತ್ವಜ್ಞಾನವಾದಮೇಲಾದರೂ ಪ್ರಪಂಚವು ಮಿಥ್ಯೆಯೆಂದು ತೋರುವದೊ, ಇಲ್ಲವೊ? ಆಗ ಮಾತ್ರ ಇದು ಮಿಥ್ಯೆಯಾಗಿ ತೋರಲು ಕಾರಣವೇನು?- ಎಂದು ಯಾರಾದರೂ ಶಂಕಿಸಬಹುದು. ಇದಕ್ಕೆ ಉತ್ತರವೇನೆಂದರೆ, ನಿಜವಾಗಿ ಯಾವಾಗಲೂ ಪ್ರಪಂಚವು ಮಿಥ್ಯವೆಂದು ಕಾಣಿಸುವದೇ ಇಲ್ಲ. ಏಕೆಂದರೆ ಆತ್ಮನನ್ನು ಬಿಟ್ಟರೆ ಪ್ರಪಂಚವೆಂಬುದೇ ಬೇರೆಯಾಗಿ ಇರುವದಿಲ್ಲ. ಅಜ್ಞಾನಿಗಳಿಗೆ ಅವರ ಪರಮಾತ್ಮಸ್ವರೂಪವು ತಿಳಿಯದು. ಆದ್ದರಿಂದ ಅವರು ಭಿನ್ನಭಿನ್ನರಾಗಿರುವ ಜೀವರುಗಳನ್ನೂ ಅಲ್ಲಿ ಅವರುಗಳು ವ್ಯವಹರಿಸುತ್ತಿರುವ ಪ್ರಪಂಚವನ್ನೂ ಕಾಣುತ್ತಿರುತ್ತಾರೆ. ಆದರೆ ಅವರು ಆತ್ಮಸಾಕ್ಷಾತ್ಕಾರವನ್ನು ಪಡೆದರೆ ''ಇದೆಲ್ಲವೂ ಆತ್ಮನೇ'' ಎಂಬ ಶ್ರುತಿಯ ಅರ್ಥವನ್ನು ಮನಗಾಣುತ್ತಾರೆ. ಆಗ ಅವರಿಗೆ ಪ್ರಪಂಚವೂ ಆತ್ಮನೇ ಆಗಿ ಬಿಡುವದರಿಂದ ಅದು ಪರಮಸತ್ಯವಾಗಿಬಿಡುತ್ತದೆ.

ಆದ್ದರಿಂದ ''ಜಗತ್ತು ಮಿಥ್ಯೆಯೆ?'' ಎಂಬ ಪ್ರಶ್ನೆಗೆ ಕಟ್ಟಕಡೆಯ ಉತ್ತರವು ಯಾವದಾಯಿತು? ಅದು ತಾನಿರುವ ಪರಮಾರ್ಥರೂಪದಲ್ಲಿ ಆತ್ಮನೇ, ಬ್ರಹ್ಮವೇ. ಆದ್ದರಿಂದ ಅದು ನಿಜವಾಗಿಯೇ ಸತ್ಯವಾಗಿದೆ. ಹೀಗೆ ನೋಡಿದರೆ ಯಾವದೊಂದೂ ಮಿಥ್ಯವೇ ಅಲ್ಲ. ಅಜ್ಞಾನಿಗಳಿಗೆ ತೋರುತ್ತಿರುವ ಬ್ರಹ್ಮಭಿನ್ನವಾದ ಜಗತ್ತೆಂಬುದು ಇಲ್ಲವೇ ಇಲ್ಲ; ಆದ್ದರಿಂದ ಅದನ್ನು ಸತ್ಯವೆಂದಾಗಲಿ ಮಿಥ್ಯೆಯೆಂದಾಗಲಿ ವಿಂಗಡಿಸುವದಕ್ಕೇ ಕಾರಣವಿಲ್ಲ. ಜಗತ್ತೆಂದಾದರೂ ಕರೆಯಿರಿ, ಬ್ರಹ್ಮವೆಂದಾದರೂ ಕರೆಯಿರಿ; ಇರುವದು ಒಂದೇ ಒಂದು ಅದ್ವಿತೀಯವಾದ ಪರಮಾರ್ಥಸತ್ಯವು. ಅದಕ್ಕಿಂತ ಬೇರೆಯಾಗಿ ಯಾವದೊಂದೂ ಇರುವದೇ ಇಲ್ಲ-ಇದರಿಂದ ''ಬ್ರಹ್ಮೈವೇದಂ ವಿಶ್ವಮ್''ಎಂಬ ಶ್ರುತಿಯ ಅರ್ಥವು ಸ್ಪಷ್ಟವಾಗುವದು.

★★★★★

# ಸುಷುಪ್ತ್ಯವಸ್ಥೆಯ ರಹಸ್ಯ

**3-5-1941**

**ಶ್ರೀಶ್ರೀಗಳು**

ಸುಷುಪ್ತಿಯು ನಮಗೆ ಹುಟ್ಟಿದಂದಿನಿಂದ ತಿಳಿದಿರುವ ಅವಸ್ಥೆಯಾದರೂ ಅದರ ತತ್ತ್ವವು ನಮ್ಮಲ್ಲನೇಕರಿಗೆ ಸರಿಯಾಗಿ ತಿಳಿದಿರುವದಿಲ್ಲ. ಇದರ ವಿಷಯವನ್ನು ಕುರಿತು ಭೌತಿಕಶಾಸ್ತ್ರಜ್ಞರೂ ತತ್ತ್ವಶಾಸ್ತ್ರಜ್ಞರೂ ವಿಚಾರಿಸುತ್ತಲೇ ಇದ್ದಾರೆ. ಆದರೂ ಇನ್ನೂ ಇದರಲ್ಲಿ ತಿಳಿಯಬೇಕಾದ ಎಷ್ಟೋ ರಹಸ್ಯಗಳಿವೆ.

ಮಗುವಿಗೆ ಯಾವಾಗಲೂ ನಿದ್ರೆ ಬೇಕು. ಯಾರಾದರೂ ಎಬ್ಬಿಸಿದಮಾತ್ರಕ್ಕೆ ಅದು ಕಿರಿಚುತ್ತದೆ. ನಿದ್ರೆಯಲ್ಲಿ ಏನೋ ಒಂದು ಬಗೆಯ ಆನಂದವೂ ಶಾಂತಿಯೂ ಇರುವದೆಂಬ ಸಹಜವಾದ ನಂಬಿಕೆಯು ಅದಕ್ಕೆ ಇರುತ್ತದೆ; ಎಚ್ಚರದ ಪರಿಚಯವೇ ಅದಕ್ಕೆ ಬಹುಕಾಲದವರೆಗೆ ಬೇಡವಾಗಿರುತ್ತದೆ. ಕೆಲವರು ನಿದ್ರೆಯೆಂಬುದು ವಿಶ್ರಾಂತಿಗಾಗಿ ಏರ್ಪಟ್ಟ ಒಂದಾನೊಂದು ಅವಸ್ಥೆಯೆನ್ನುವರು. ಆದರೆ ಮಕ್ಕಳು ಯಾವ ಕೆಲಸವನ್ನು ಮಾಡಿ ಸೋತಿರುತ್ತವೆ? ಅವಕ್ಕೇಕೆ ಅಷ್ಟೊಂದು ಕಾಲದ ನಿದ್ರೆ ಬರಬೇಕು? ಕೆಲಸಮಾಡಿ ವಿಶ್ರಾಂತಿಯನ್ನು ಬಯಸುವ ಮುದುಕರಿಗೇಕೆ ನಿದ್ರೆಯಿಲ್ಲ? ಒಂದು ವೇಳೆ ಕರಣಗಳ ವಿಶ್ರಾಂತಿಯೇ ನಿದ್ರೆಯಾಗಿದ್ದರೆ ಕೈಕಾಲುಗಳನ್ನು ಅಲುಗಾಡಿಸದೆ ಕಣ್ಮುಚ್ಚಿಕೊಂಡಿದ್ದರೆ ಸರಿ: ನಿದ್ರೆಯೇ ಏತಕ್ಕೆ ಬೇಕು? ಇದೆಲ್ಲ ನೋಡಿದರೆ ಗಾಢನಿದ್ರೆಯೆಂಬುದು ಬರಿಯ -ನಿಷೇಧರೂಪವಾದ ಅವಸ್ಥೆಯಲ್ಲ. ಅದರಲ್ಲಿ ವಿಧಿಮುಖವಾದ ಆನಂದವೂ ಉಲ್ಲಾಸಹೇತುವೂ ಇರಬೇಕೆಂದು ತೋರುತ್ತದೆ. ಮನುಷ್ಯನು ನಿದ್ರೆಗಾಗಿ ಮಾಡಿಕೊಳ್ಳುವ ಸಲಕರಣೆಯನ್ನೂ ಅದಕ್ಕಾಗಿ ಅವನು ಹಾತುವರಿಯುವದನ್ನೂ ನೋಡಿದರೆ ಇದು ನಿಜವೆಂದು ಮನದಟ್ಟಾಗುತ್ತದೆ; ಇಷ್ಟೇ ಅಲ್ಲ, ನಿದ್ರೆಯಿಂದೆದ್ದವನ ತಿಳಿಮುಖವನ್ನೂ ಉಲ್ಲಾಸವನ್ನೂ ನಿದ್ರೆಬಾರದಿದ್ದವನ ಅಮಂಗಳಮುಖವನ್ನೂ ನೋಡಿದರೆ ನಿದ್ರೆಯಲ್ಲಿ ಒಂದು ಬಗೆಯ ವಿಧಿರೂಪವಾದ ಲಾಭವು ಇರಬೇಕೆಂದು ಯಾರಿಗೆ ಅನಿಸುವದಿಲ್ಲ! ನಿದ್ರೆಗಾಗಿ ರಾಜ್ಯಕೋಶಾದಿಗಳ

ಭೋಗದ ಸುಖವನ್ನೂ ಬಿಟ್ಟು ಮನುಷ್ಯನು ಮುಂದುವರಿಯುವನು; ಅದರಿಂದ ಯಾವ ಟಾನಿಕ್‌ಗಳಿಂದಲೂ ಸಿಕ್ಕದ ತುಷ್ಟಿಪುಷ್ಟಿಗಳನ್ನು ಪಡೆಯುವನು. ಇದನ್ನೆಲ್ಲ ನೋಡಿದರೆ ನಿದ್ರೆಯಲ್ಲಿ ಏನೋ ರಹಸ್ಯವಿರಬೇಕೆಂದು ತೋರುವದಿಲ್ಲವೆ? ಇದರ ಪರಿಣಾಮಗಳು ನಮಗೆ ತಿಳಿದಿವೆ, ಆದರೆ ಇದರ ತಿರುಳೇನು?- ಎಂಬುದು ಗೊತ್ತಿಲ್ಲ. ಎಂಥ ಕವಿಗಳೂ ನಿದ್ರೆಯ ಸುಖವನ್ನು ವಿಶೇಷಣಗಳಿಂದ ವರ್ಣನೆಮಾಡಲಾರರು ; ಉಪನಿಷತ್ತುಗಳು ಮತ್ತೆಮತ್ತೆ ಇದನ್ನು ಕೊಂಡಾಡುತ್ತವೆ. ಆದ್ದರಿಂದ ಇದನ್ನು ಅವಶ್ಯವಾಗಿ ನಾವು ವಿಚಾರಿಸಬೇಕು.

ಶ್ರುತಿಯು ಈ ಸುಷುಪ್ತಿಯನ್ನು ಕುರಿತು ಹೀಗೆನ್ನುತ್ತಿದೆ: ''ಈ ಲೋಕದಲ್ಲಿ ಯಾವಯಾವ (ಪುತ್ರಾದಿ) ಜೀವರನ್ನು ಪಡೆಯುವದು ಕಷ್ಟವಾಗಿರುವದೋ, ಯಾವ ಮೃತರಾದವರನ್ನು ಪಡೆಯುವಕ್ಕಾಗುವದಿಲ್ಲವೋ, ಇನ್ನೂ(ವಸ್ತ್ರಾನ್ನಪಾನಾದಿಯಾಗಿ) ಯಾವಯಾವದನ್ನು ಪಡೆಯಬೇಕೆಂದು ಇಚ್ಛಿಸಿದರೂ ಪಡೆಯುವದಕ್ಕಾಗುವದಿಲ್ಲವೋ ಆ ಕಾಮಗಳೆಲ್ಲವನ್ನೂ ಹೃದಯದಲ್ಲಿರುವ ಬ್ರಹ್ಮದಲ್ಲಿಯೇ ಪಡೆದುಕೊಳ್ಳಬಹುದು. ಏಕೆಂದರೆ ಇಲ್ಲಿಯೇ ಆ ಕಾಮಗಳೆಲ್ಲ ಇದ್ದುಕೊಂಡಿರುತ್ತವೆ; ಆದರೆ ಅವಕ್ಕೆ ಅನೃತವಾದ ನಮ್ಮ ತೃಷ್ಣೆಯೇ ಮುಸುಕಾಗಿರುತ್ತದೆ. ಹೇಗೆ ನೆಲದ ಸ್ವಭಾವವನ್ನರಿಯದವರು ನೆಲದ ಕೆಳಗೆ ಇರುವ ಚಿನ್ನದ ನಿಧಿಯನ್ನು ತಿಳಿದುಕೊಳ್ಳಲಾರದೆ ಅದರ ಮೇಲುಮೇಲೆಯೇ ತಿರುಗಾಡುತ್ತಿರುವರೋ ಹಾಗೆಯೇ ಅಜ್ಞರು ಈ ಬ್ರಹ್ಮಲೋಕವನ್ನು ದಿನದಿನವೂ (ಸುಷುಪ್ತಿಯಲ್ಲಿ) ಪಡೆಯುತ್ತಿದ್ದರೂ ಅದನ್ನು ದಕ್ಕಿಸಿಕೊಳ್ಳದೆ ಇರುತ್ತಾರೆ. ಏಕೆಂದರೆ ಅನೃತವು ಅವರನ್ನು ಹೊರಕ್ಕೆ ದೂಡಿಬಿಡುತ್ತದೆ'' (ಛಾ.8-3-2) ನಮ್ಮ ತೃಷ್ಣೆಯೇ ನಮ್ಮ ಆನಂದಸ್ವರೂಪಕ್ಕೆ ಮುಸುಕಾಗಿರುತ್ತದೆ. ಅದು ಸುಷುಪ್ತಿಯಲ್ಲಿ ಸ್ವಲ್ಪಕಾಲಮಟ್ಟಿಗೆ ಇಲ್ಲವಾಗುತ್ತದೆಯಾದರೂ ನಾವು ಅದನ್ನು ಅರಿತುಕೊಳ್ಳಲಾರದೆ ಅನೃತವಾದ ಕಾಮಕ್ಕೆ ಮನಸೋತು ಹೊರಗೇ ತಿರುಗಾಡುತ್ತಿರುತ್ತೇವೆ. ಸುಷುಪ್ತಿಯು ಹೀಗೆ ಹಿರಣ್ಯನಿಧಿಯೇ ಆದರೂ 'ಅದರಲ್ಲಿ ಏನೇನೂ ಇಲ್ಲ, ಬರಿಯದಾಗಿದೆ'- ಎಂದು ಭಾವಿಸುತ್ತಿರುವದು ನಮ್ಮ ದೌರ್ಭಾಗ್ಯ. ಸುಷುಪ್ತಿಯನ್ನು ಪಡೆಯುವದೆಂದರೆ ಬ್ರಹ್ಮಲೋಕಕ್ಕೆ ಹೋಗುವ ಆನಂದವೆಂದು

ಶ್ರುತಿಯು ಕೊಂಡಾಡಿದರೂ ಅದನ್ನು ಕಡೆಗಣಿಸಿ ಹೊರಗಿನ ಕಾಮಗಳ ಸೆಳೆತಕ್ಕೆ ಸಿಕ್ಕಿ ನಾವು ಅದನ್ನು ಕಡೆಗಣಿಸುತ್ತಿದೇವೆ.

ಇನ್ನೊಂದು ಶ್ರುತಿಯು ಸುಷುಪ್ತಿಯ ಮಹಿಮೆಯನ್ನು ಹೀಗೆ ಹೇಳುತ್ತಿದೆ: ''ಅಲ್ಲಿ ತಂದೆಯು ತಂದೆಯಲ್ಲದೆಹೋಗುತ್ತಾನೆ, ಅಲ್ಲಿ ತಾಯಿಯು ತಾಯಿಯಲ್ಲ, ಲೋಕಗಳು ಲೋಕಗಳಲ್ಲ, ದೇವತೆಗಳು ದೇವತೆಗಳಲ್ಲ, ವೇದಗಳು ವೇದಗಳಲ್ಲ, ಕಳ್ಳನು ಕಳ್ಳನಲ್ಲ, ಭ್ರೂಣಹತ್ಯೆಯನ್ನು ಮಾಡಿದವನು ಭ್ರೂಣಘಾತಕನಲ್ಲ, ಚಂಡಾಲನು ಚಂಡಾಲನಲ್ಲ, ಪುಲ್ಕಸನು ಪುಲ್ಕಸನಲ್ಲ, ಯತಿಯು ಯತಿಯಲ್ಲ, ತಪಸ್ವಿಯು ತಪಸ್ವಿಯಲ್ಲ. ಆಗ ಪುಣ್ಯದ ಸಂಬಂಧವಿಲ್ಲ, ಪಾಪದ ಸಂಬಂಧವಿಲ್ಲ; ಏಕೆಂದರೆ ಆಗ ಹೃದಯದ ಶೋಕಗಳೆಲ್ಲವನ್ನೂ ದಾಟಿರುತ್ತಾನೆ'' (ಬೃ 4-3-22). ನಾವು ವಿಷಯಗಳ ಆಶೆಯಿಂದ ಹೊರಗಣ್ಣುಳ್ಳವರಾಗಿರುತ್ತೇವೆ. ಈ ಕಾಮಗಳನ್ನು ಸಂಪಾದಿಸುವದಕ್ಕಾಗಿ ಬಗೆಬಗೆಯ ಕರ್ಮಗಳನ್ನು ಮಾಡುತ್ತೇವೆ. ಕರ್ಮಗಳನ್ನು ಮಾಡಿ ಭೋಗಸಾಮಗ್ರಿಗಳನ್ನು ರಾಶಿಹಾಕಿಕೊಂಡ ಹೊರತು ನಮಗೆ ನೆಮ್ಮದಿಯಿಲ್ಲವೆಂದು ಭಾವಿಸಿರುತ್ತೇವೆ. ಆದರೆ ನಿಜವಾಗಿರುವ ಸ್ಥಿತಿಯೇನು? ಕಾಮಗಳನ್ನು ಹಿಂತಡಿಕೆಯಾಗಿಟ್ಟುಕೊಂಡು ಕರ್ಮಗಳು ಮುನ್ನುಗ್ಗುತ್ತಿವೆ. ಈ ಕರ್ಮಗಳಿಗೆ ನಾವು ಕೆಲವು ವೇಳೆಗಳಲ್ಲಿ ''ಕರ್ತವ್ಯ'' ಎಂಬ ಹಿರಿಮೆಯ ಹೆಸರನ್ನು ಇಡಬಹುದು; ಮಾಡಬಾರದ್ದನ್ನು ಮಾಡಿದರೆ ಅದು ಅರಿಯದೆ ಮಾಡಿದ ''ಪಾಪ''ವೆಂದು ನುಣುಚಿಕೊಳ್ಳುವದಕ್ಕೆ ಹೋಗಬಹುದು. ಆದರೆ ನಿಜವೇನು? ನಮ್ಮ ಕರ್ತವ್ಯವೆಂಬುದು ನಮಗೆ ಬೆನ್ನಂಟಿದ ಶನಿಯಾಗಿ ಬಿಟ್ಟಿದೆ. ನಮಗೆ ಆತ್ಮನ ವಿಷಯದಲ್ಲಿ ಮಾತ್ರ 'ಕರ್ತವ್ಯ'ವಿಲ್ಲ, ಮಿಕ್ಕ ವಿಷಯಗಳಲ್ಲಿ ಈ ಕರ್ತವ್ಯವು ಬಂದು ಕುಳಿತುಕೊಳ್ಳುತ್ತದೆ. ಕರ್ಮವೆಂಬುದು ಪುಣ್ಯಕರ್ಮವಾಗಲಿ ಪಾಪಕರ್ಮವಾಗಲಿ ನಾವುನಾವೇ ಸ್ವತಂತ್ರರಾಗಿ ಮಾಡುತ್ತಿಲ್ಲ; ನಾವು ಕಾಮಕ್ಕೆ ಕಟ್ಟುಬಿದ್ದೇ ಮನಸ್ಸು ಬೇಡವೆನ್ನುತ್ತಿದ್ದರೂ ತಪ್ಪಿಸಿಕೊಳ್ಳಲಾರದೆ ಕರ್ಮವನ್ನು ಮಾಡುತ್ತಿದೇವೆ, ಆಮೇಲೆ ಒಳ್ಳೆಯ ಫಲವನ್ನು ಪಡೆದು ಹಿಗ್ಗಿ, ಕೆಟ್ಟ ಫಲವನ್ನು ಪಡೆದು ಕುಗ್ಗಿ, ನಮ್ಮ ಸಮಾಧಾನಸ್ಥಿತಿಯನ್ನು ಕೆಡಿಸಿಕೊಳ್ಳುತ್ತಿದ್ದೇವೆ. ಇದರಿಂದ ನಮಗೆ ಬಿಡುಗಡೆ ಉಂಟೆ? ಈ ಪ್ರಶ್ನೆಗೆ

ಸುಷುಪ್ತಿಯೇ ಉತ್ತರ. ಅದು ನಮ್ಮ ಕರ್ತವ್ಯಗಳಿಗೆಲ್ಲ ಕತ್ತರಿಯಾಗಿಬಿಡುತ್ತದೆ. ಅಲ್ಲಿ ಪುಣ್ಯಕರ್ಮಗಳಾಗಲಿ ಪಾಪಕರ್ಮಗಳಾಗಲಿ ಇರುವದಿಲ್ಲ. ನಮ್ಮ ನಮ್ಮ ಕರ್ಮಗಳಿಂದ ನಾವು ಇಂಥವನ ತಂದೆ, ಇಂಥವನ ಮಗ, ಇಂಥ ಊರಿನವನು, ದೇಶದವನು, ವರ್ಣದವನು, ಆಶ್ರಮದವನು; ಇಂಥ ಓದುಬಲ್ಲವನು, ಇಂಥ ಕೆಲಸಗಳನ್ನು ಮಾಡಿ ಕೀರ್ತಿಯನ್ನು ಗಳಿಸಿದವನು-ಎಂದೂ ''ಅಯ್ಯೋ! ಇಂಥ ಕೆಟ್ಟಕರ್ಮವನ್ನು ಮಾಡಿದೇನೆ, ಪಂಚಮಹಾಪಾತಕಗಳನ್ನು ಮಾಡಿದೇನೆ, ಅಥವಾ ಹಿಂದಿನ ಕರ್ಮದಿಂದ ಈಗ ನೀಚಯೋನಿಯಲ್ಲಿ ಹುಟ್ಟಿದೇನೆ''- ಎಂದೂ ಎಣಿಸುತ್ತಿರುವೆವಷ್ಟೆ. ಸುಷುಪ್ತಿಯಲ್ಲಿ ಇಂಥ ಯಾವ ಕರ್ಮಗಳೂ ನಮಗೆ ಇರುವದಿಲ್ಲ, ಯಾವದೊಂದರ ಸಂಬಂಧವೂ ನಮಗೆ ಇರುವದಿಲ್ಲ; ಎಲ್ಲವೂ ಸರ್ವಸಂಸಾರಧರ್ಮಾತೀತವಾದ ಒಂದೇ ಅಖಂಡಾನಂದರೂಪವಾದ ಬ್ರಹ್ಮವಾಗಿ ಬಿಟ್ಟಿರುತ್ತದೆ. ನಮ್ಮ ಕರ್ತವ್ಯಗಳೆಲ್ಲ ನೀಗಿ, ಯಾವ ಹಕ್ಕುಗಳೂ ಹೊಣೆಗಾರಿಕೆಗಳೂ ಇಲ್ಲದ ನಿತ್ಯಾನಂದಸ್ವರೂಪವಾಗಿರುವ ವಿಲಕ್ಷಣಸ್ಥಿತಿಯದು!

ಮತ್ತೂ ಒಂದು ಶ್ರುತಿಯನ್ನು ಇಲ್ಲಿ ಉದಾಹರಿಸಬಹುದು. ''ಅಲ್ಲಿ ತಿಳಿನೀರಿನಂತೆ ಸ್ವಚ್ಛನಾಗಿ ಒಬ್ಬನೇ ಆಗಿ ದ್ರಷ್ಟೃರೂಪದಲ್ಲಿರುತ್ತಾನೆ. ಎಲೈ ಚಕ್ರವರ್ತಿಯೆ, ಇದೇ ಬ್ರಹ್ಮಲೋಕವು. ಇದು ಈ ಜೀವನಿಗೆ ಪರಮಗತಿಯು, ಇದೇ ಇವನಿಗೆ ಪರಮಸಂಪತ್ತು, ಇದೇ ಇವನಿಗೆ ಪರಮಲೋಕವು, ಇದೇ ಇವನಿಗೆ ಪರಮಾನಂದವು, ಈ ಆನಂದದ ತುಣುಕುಗಳನ್ನೇ ಮಿಕ್ಕ ಜೀವರು ಆಶ್ರಯಿಸಿ ಬದುಕಿರುತ್ತಾರೆ''. (ಬೃ.4-3-32) ಹಿಂದಿನ ಎರಡು ಶ್ರುತಿಗಳಲ್ಲಿ ಹೇಳಿರುವಂತೆ ಸಕಲಕಾಮಗಳನ್ನೂ ಒಂದೇ ಸಲಕ್ಕೆ ತಪ್ಪದೆ ಹೊಂದುವ ಅವಸ್ಥೆಯು ಸುಷುಪ್ತಿಯು. ಯಾವ ಯೋಚನೆಗಳೂ ಯಾವ ಕಿರುಕುಳವೂ ಇಲ್ಲದೆ ಪುಣ್ಯಪಾಪಗಳನ್ನು ಮೀರಿ ಶೋಕದ ಎಲ್ಲೆಕಟ್ಟನ್ನು ದಾಟಿರುವ ಅವಸ್ಥೆಯು ಸುಷುಪ್ತಿಯು. ಇಷ್ಟೇ ಅಲ್ಲ, ಈ ಶ್ರುತಿಯಲ್ಲಿ ಅದನ್ನು ಹಾಡಿ ಹೊಗಳಿರುವ ರೀತಿಯನ್ನು ನೋಡಿರಿ. ನಾವು ಸುಷುಪ್ತಿಯಲ್ಲಿ ಸ್ವಚ್ಛವಾದ ನೀರಿನಂತೆ ಅನಾತ್ಮದ ಬಗ್ಗಡವನ್ನೆಲ್ಲ ಕಳೆದುಕೊಂಡು ನಿರ್ಮಲವಾಗುತ್ತೇವೆ. ಅಲ್ಲಿ ನಾವು ನಮ್ಮ ಬಿಡಿರೂಪದಿಂದ ಹಲವರಲ್ಲಿ ಒಬ್ಬರಾಗಿರುವದಿಲ್ಲ, ನಾವು ಪೂರ್ಣರಾಗಿ ಎರಡನೆಯದಿಲ್ಲದ **ಒಂದೇ ಒಂದಾದ** ಪರಮಾರ್ಥಸ್ವರೂಪದಲ್ಲಿರುವೆವು.

ಆಗಲೂ ನಮ್ಮ ದೃಗ್ರೂಪವಾದ ಚೈತನ್ಯವು ಇದ್ದುಕೊಂಡಿರುತ್ತದೆ. ಅದೇ **ಬ್ರಹ್ಮಲೋಕವು.** ಭೋಗಕ್ಕಾಗಿ ಪಡೆಯುವ ಪರಲೋಕಗಳಲ್ಲೆಲ್ಲ ಬ್ರಹ್ಮಲೋಕವೆಂಬ ಲೋಕವು ಹಿರಿದಾದದ್ದೆಂದು ಶಾಸ್ತ್ರಗಳು ಹೇಳುತ್ತವೆಯಾದರೂ, ಭೋಗವನ್ನು ದಾಟಿ ನಮ್ಮ ನಿತ್ಯಾನಂದಸ್ವರೂಪವೇ ಆಗಿರುವ ಬ್ರಹ್ಮವನ್ನೇ ನಾವು ಪಡೆದಿರುವದು ಈ ಸುಷುಪ್ತಿಯಲ್ಲೇ. ಈ ವಾಕ್ಯವು ಯಾಜ್ಞವಲ್ಕ್ಯರಂಥ ಮಹನೀಯರು ಜನಕಚಕ್ರವರ್ತಿಗೆ ಹೇಳಿದ್ದು. ಎಲೈ ಜನಕನೆ, ಇದೇ ನಿಜವಾದ ವಿದೇಹರಾಜ್ಯವು; ಯಾವ ಚಕ್ರವರ್ತಿಗೂ ಇಂಥ ಅನಂತವಾದ ಅಖಂಡವಾದ ರಾಜ್ಯವು ಇಲ್ಲ. ಇದೇ **ಪರಮಗತಿ**, ಇದೇ **ಪರಮಸಂಪತ್ತು**, ಇದೇ ಪರಮಲೋಕವು. ಎಲ್ಲಿಗೆ ಹೋದರೇನು? ಎಷ್ಟು ಸಂಪತ್ತಿದ್ದರೇನು? ಯಾವ ಲೋಕದಲ್ಲಿ ಹುಟ್ಟಿದರೇನು? ಮನುಷ್ಯನು ಸುಖವನ್ನು ಪಡೆಯುವ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಬೇಕು. ನಾಯಿ ಎಲಬನ್ನು ಕಡಿದು ತನ್ನ ರಕ್ತವನ್ನೇ ಅದರ ಮೇಲೆ ಸುರಿಸಿಕೊಂಡು ಅದನ್ನೇ ಸವಿಯುವಂತೆ ಮನುಷ್ಯನು ತನ್ನಲ್ಲಿಯೇ ಸಹಜವಾಗಿರುವ ಸುಖವನ್ನು ವಿಷಯಗಳಮೇಲೆ ಹಾಕಿಕೊಂಡು ಅವುಗಳು ಸುಖದಾಯಕವೆಂದು ಭ್ರಮಿಸುತ್ತಿರುತ್ತಾನೆ. ನಿಜವಾಗಿ ತನ್ನಲ್ಲಿಯೇ ಎಲ್ಲಾ ಗತಿಗಳಿಂದಾಗುವ, ಎಲ್ಲಾ ಸಂಪತ್ತಿನಿಂದಾಗುವ, ಎಲ್ಲಾ ಲೋಕಗಳಿಂದಾಗುವ ಸುಖದ ಬುಗ್ಗೆಯು ಇರುತ್ತದೆ- ಎಂಬುದು ಸುಷುಪ್ತಿಯನ್ನು ನೋಡಿಕೊಂಡರೆ ತಿಳಿಯಬರುತ್ತದೆ. ನಾವೆಲ್ಲರೂ ಆ ಪರಮಾರ್ಥವಾದ ಆನಂದದ ತುಂತುರನ್ನು ಒಂದಿಷ್ಟಿಷ್ಟು ಯಾವದೋ ಒಂದು ಉಪಾಧಿಯ ನೆಪದಿಂದ ಆರಿಸಿಕೊಂಡು ಜೀವಿಸುತ್ತಿರುತ್ತೇವೆ.

ಶ್ರುತಿಯಲ್ಲಿ ಸುಷುಪ್ತಿಯನ್ನು ಇಷ್ಟೆಲ್ಲ ಕೊಂಡಾಡಿರುವದು ಏತಕ್ಕಾಗಿ? ನಿದ್ರೆಯನ್ನು ಮಾಡುವದೇ ಪರಮಪುರುಷಾರ್ಥವೆಂದು ಮೂರ್ಖರಾದವರು ಶ್ರುತಿಗೆ ಅರ್ಥವನ್ನು ಮಾಡಿಕೊಳ್ಳಬಹುದು, ಆದರೆ ಅದಲ್ಲ, ಶ್ರುತಿಯ ನಿಜವಾದ ಉದ್ದೇಶವು. ಉಪಾಧಿಗಳಿಂದಾಗುವ ಸುಖಕ್ಕಿಂತಲೂ ನಿರುಪಾಧಿಕವಾದ ಸುಖವು ಅಖಂಡವಾಗಿ ಅನಂತವಾಗಿ ನಿತ್ಯವಾಗಿರುತ್ತದೆ; ಉಪಾಧಿಗಳಲ್ಲಿ ಸಿಕ್ಕುವದೆಂಬ ಸುಖವೂ ನಿಜವಾಗಿ ಆ ನಿರುಪಾಧಿಕಸುಖದ ಆವಿದ್ಯಕರೂಪವೇ. ನಾವು ತೃಷ್ಣೆಗೆ

ವಶರಾಗಿ ಸೋಪಾಧಿಕಸುಖದ ಹಿಂದೆ ಓಡುತ್ತಿರುವೆವು. ಆದರೆ ಉಪಾಧಿಯನ್ನು ಮೀರುವ ಉಪಾಯವನ್ನು ತಿಳಿದುಕೊಂಡರೆ ನಮಗೆ ಮಿಗಿಲಿಲ್ಲದ, ಕೊನೆಗಾಣದ ಆನಂದವು ದಕ್ಕುವದು, ನಾವೇ ಆ ಆನಂದದ ಸ್ವರೂಪವೆಂಬುದೂ ತಿಳಿಯಬರುತ್ತದೆ. ಜೀವರೆಲ್ಲರೂ ಸುಷುಪ್ತಿಯಲ್ಲಿ ಸ್ವಾಭಾವಿಕವಾಗಿ ಈ ಆನಂದವನ್ನು ಅರಿಯದೆ ಪಡೆಯುತ್ತಿದ್ದಾರೆ; ಯೋಗಿಗಳಾದವರು ಸಮಾಧಿಯಲ್ಲಿ ತಾವೇ ಸ್ವಾತಂತ್ರ್ಯದಿಂದ ಪಡೆದುಕೊಳ್ಳುತ್ತಿದ್ದಾರೆ. ಸುಷುಪ್ತಿಯಲ್ಲಾಗಲಿ ಸಮಾಧಿಯಲಾಗಲಿ ''ಏನನ್ನೂ ಅರಿಯಲಿಲ್ಲ, ಸುಖವಾಗಿರುತ್ತಿದ್ದೆನು'' ಎಂಬ ಸ್ಮೃತಿಯು ಎಚ್ಚತ್ತಮೇಲೆ ಎಲ್ಲರಿಗೂ ತಪ್ಪದೆಬರುತ್ತದೆ. ಆದ್ದರಿಂದ ಈ ನಿರುಪಾಧಿಕವಾದ ಸಚ್ಚಿದಾನಂದ ಸ್ವರೂಪವು ನಮ್ಮದು ಎಂಬ ಅರಿವನ್ನು ಸಂಪಾದಿಸಿಕೊಳ್ಳಬಹುದು. ಆ ಜ್ಞಾನವೇ ನಮಗೆ ತಾರಕವಾದದ್ದು. ಸುಷುಪ್ತಿಯ ರಹಸ್ಯವನ್ನು ಭೇದಿಸಿ ತಿಳಿದುಕೊಂಡು ಆ ಜ್ಞಾನವನ್ನು ಸಂಪಾದಿಕೊಂಡರೆ ನಾವು ಧನ್ಯರಾಗುವೆವು.

★★★★★

# ಸ್ಥಿತಪ್ರಜ್ಞ

**5-5-1941**

**ಶ್ರೀಶ್ರೀಗಳು**

ಸ್ಥಿತಪ್ರಜ್ಞನೆಂಬುದು ತಿಳಿಯತಕ್ಕದ್ದನ್ನೆಲ್ಲ ತಿಳಿದು ಪಡೆಯತಕ್ಕದ್ದನ್ನು ಪಡೆದುಕೊಂಡಿರುವ ಮಹನೀಯರ ಹೆಸರು. ಅಂಥ ದೊಡ್ಡವರ ಸ್ಥಿತಿಯನ್ನು ನಮ್ಮಂಥವರು ವಿವರಿಸುವದೆಂದರೆ ಹಾಸ್ಯಾಸ್ಪದವಾದದ್ದು. ಆದರೂ ಆಚಾರ್ಯರವರು ಸಿದ್ಧನ ಲಕ್ಷಣವೇ ಸಾಧಕನಿಗೆ ಸಾಧನವಾಗಿರುತ್ತದೆ ಎಂದು ಅಪ್ಪಣೆಕೊಡಿಸುತ್ತಾರಾದ್ದರಿಂದ ಆ ಲಕ್ಷಣಗಳನ್ನು ಸ್ಮರಿಸಿಕೊಂಡು ಕೈಯಲ್ಲಾದಷ್ಟುಮಟ್ಟಿಗೆ ವಿವರಿಸುವದು ತಪ್ಪಲ್ಲ. ಗೀತೆಯೆಂಬುದು ಭಗವಂತನ ವಾಕ್ಯವು. ಅದನ್ನು ಓದುವಾಗ ಭಗವಂತನೊಡನೆಯೇ ನಾವು

ಮಾತನಾಡುತ್ತಿರುವೆವೆಂದು ಭಾವಿಸಿಕೊಂಡರೆ ಮನಸ್ಸು ಆ ಭಾವನೆಯಿಂದ ಮೇಲಿನ ಮಟ್ಟಕ್ಕೆ ಏರುತ್ತದೆ; ಆಮೇಲೆ ಕೆಳಕ್ಕೆ ಇಳಿಯುವದೇ ಇಲ್ಲ. ಸ್ಥಿತಪ್ರಜ್ಞರ ಸ್ವರೂಪವನ್ನು ಭಗವಂತನ ಬಾಯಿಂದ ಬಂದಂತೆ ನಾವು ಮನದಂದುಕೊಂಡರೆ ಆ ಸ್ವರೂಪದಲ್ಲಿ ತಾದಾತ್ಮ್ಯವನ್ನು ಪಡೆಯುವವರೆಗೂ ನಮ್ಮನ್ನು ಬಿಡದೆ ಮುಂದುಮುಂದಕ್ಕೆ ಒಯ್ಯುವ ಮಂತ್ರಶಕ್ತಿ ಈ ಗೀತಾಶ್ಲೋಕಗಳಲ್ಲಿದೆ. ಆದ್ದರಿಂದ ಈ ಶ್ಲೋಕಗಳಲ್ಲಿರುವ ಅಭಿಪ್ರಾಯವನ್ನು ಮನಸ್ಸಿನಲ್ಲಿ ಸ್ವಲ್ಪ ಹೊರಳಾಡಿಸೋಣ. ''ನಿನ್ನ ಬುದ್ಧಿಯು ಯಾವಾಗ ಮೋಹದ ಕಲ್ಮಶವನ್ನು ದಾಟುವದೋ ಆಗ ಶ್ರವಣಮಾಡಿದ್ದು, ಮಾಡಬೇಕಾಗಿರುವದು – ಎರಡರ ವಿಷಯದಲ್ಲಿಯೂ ನಿನಗೆ ವಿರಕ್ತಿಯುಂಟಾಗುವದು. ಬಗೆಬಗೆಯ ವಿರುದ್ಧಾರ್ಥವನ್ನು ಕೊಡುವಂತೆ ಕಾಣುವ ಶ್ರುತಿಗಳಿಂದ ವಿಕ್ಷೇಪವನ್ನು ಹೊಂದಿರುವ ನಿನ್ನ ಬುದ್ಧಿಯು ಯಾವಾಗ ಆತ್ಮನಲ್ಲಿಯೇ ಸಮಾಹಿತವಾಗುವದೋ ಆಗ ಯೋಗವನ್ನು ಹೊಂದುವೆ'' ಎಂದು ಭಗವಂತನು ನುಡಿದದ್ದನ್ನು ಕೇಳಿ ಅರ್ಜುನನು ''ಎಲೈ ಕೇಶವನೆ, ಸ್ಥಿತಪಜ್ಞನೆಂದರೆ ಹೇಗಿರುವನು? ಅವನ ವ್ಯವಹಾರವು ಹೇಗಿರುವದು?'' ಎಂಬ ಪ್ರಶ್ನೆಯನ್ನು ಮಾಡಿರುತ್ತಾನೆ. ಈ ಸಂದರ್ಭದಲ್ಲಿ ನಾವು ತಿಳಿಯಬೇಕಾದದ್ದೇನೆಂದರೆ ಭಗವಂತನು ಹೇಳಿದ ಸಮಾಧಿಯೂ ಯೋಗವೂ ಯಾವವು? ಅವು ಪಾತಂಜಲಯೋಗದಲ್ಲಿ ಹೇಳಿದ ಕೇವಲ ಚಿತ್ತನಿರೋಧದ ಸ್ಥಿತಿಯಲ್ಲ. ಮುಂದೆ ಹೇಳಿರುವ ಭಗವಂತನ ಉತ್ತರದಿಂದಲೇ ಇದು ವ್ಯಕ್ತವಾಗುತ್ತದೆ. ಆತನು ಹೇಳಿದ ಸಮಾಧಿಯು ಭಗವಂತನಲ್ಲಿಯೇ ನೆಲೆನಿಲ್ಲತಕ್ಕದ್ದು. ಈಗ ನಮ್ಮ ಮನಸ್ಸು ಬಹು ಚಂಚಲವಾಗಿರುತ್ತದೆ, ಬುದ್ಧಿಯು ಅನಿಶ್ಚಿತಸ್ವಭಾವದ್ದಾಗಿರುತ್ತದೆ. ಮನಸ್ಸು ಮನಸ್ಸಲ್ಲದೆ ಹೋಗಿ ಬುದ್ಧಿಯು ಪರಮನಿಶ್ಚಯವನ್ನು ಹೊಂದಿ ಆತ್ಮನಲ್ಲಿ ನೆಲೆನಿಂತರೆ ಅದೇ ಸಮಾಧಿಯು. ಹಾಗೆ ನೆಲೆನಿಂತವನೇ ''ಸ್ಥಿತಪ್ರಜ್ಞನು''.

ಮನುಷ್ಯನ ಪ್ರಜ್ಞೆಯು, ಬುದ್ಧಿಯು, ಆತ್ಮನಲ್ಲಿ ಸ್ಥಿತವಾದಾಗ ಹೇಗಿರುವದು? ಯಾವನು ಸ್ಥಿತಪ್ರಜ್ಞನಾಗಿರುವನೋ ಅವನಿಗೆ ಕೆಲವು ಹೆಗ್ಗುರುತುಗಳಿರಬೇಕಷ್ಟೆ. ಅವು ಯಾವವು?– ಎಂದರೆ ಮೊದಲನೆಯದಾಗಿ ಸಕಲಕಾಮಗಳನ್ನೂ ಬಿಟ್ಟವನು ಸ್ಥಿತಪ್ರಜ್ಞನು. ಕಾಮಗಳನ್ನೆಲ್ಲ ಬಿಡುವದು ಸಾಧ್ಯವೆ?

ನಾವು ಬಿಡಬೇಕೆಂದು ಯತ್ನಿಸಿದರೂ ಅವು ಬಿಡಬೇಕಲ್ಲ! ಇದಕ್ಕೇನು ಮಾಡಬೇಕು? ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರವು ''ಆತ್ಮನ್ಯೇವಾತ್ಮನಾ ತುಷ್ಟಃ'' ಆತ್ಮನಿಂದಲೇ ಸಂತುಷ್ಟನಾಗಿ ಆತ್ಮರೂಪದಿಂದಲೇ ನಿಂತರೆ ಕಾಮಗಳನ್ನೆಲ್ಲ ಬಿಡಬಹುದು. ಆತ್ಮನಲ್ಲಿಯೇ ಮನಸ್ಸು ನಿಂತುಬಿಟ್ಟರೆ, ಆಗ ಮನಸ್ಸು ಮನಸ್ಸಲ್ಲದೆ ಹೋಗಿಬಿಡುತ್ತದೆ; ಅದಕ್ಕೆ ಸಂಕಲ್ಪವಾಗಲಿ ಕಾಮವಾಗಲಿ ಇರುವದಿಲ್ಲ. ನಿಜವಾಗಿ ಸ್ಥಿತಪ್ರಜ್ಞರಾಗಿರುವವರು ಕಾಮಗಳನ್ನು ಬಿಡಬೇಕಾದದ್ದೇನೂ ಇಲ್ಲ. ಅವರ ಪ್ರಜ್ಞೆಯು ಆತ್ಮನಾಗಿಯೇ ಇರುತ್ತದೆ, ಅವರ ಕಾಮಗಳೂ ಆತ್ಮನಾಗಿಯೇ ಇರುತ್ತವೆ; ಎಲ್ಲವೂ ಆತ್ಮರೂಪವೇ ಆಗಿರುವಾಗ ಬಿಡುವದೇನನ್ನು? ಇಂಥ ದೊಡ್ಡ ಸ್ಥಿತಿ ಸ್ಥಿತಪ್ರಜ್ಞರದು! ಮೊದಲು ಓಡಾಡುತ್ತಿದ್ದು ಈಗ ಪ್ರಜ್ಞೆಯು ಸ್ಥಿತವಾಯಿತು ಎಂದು ಅವರು ಬಗೆಯುವದಿಲ್ಲ; ಬೆಟ್ಟಗಳು ನಿಂತಿವೆ ಎಂದರೆ ಓಡಾಡುತ್ತಿದ್ದು ಈಗ ನಿಂತಿವೆಯೆಂದೇನೂ ಅರ್ಥವಲ್ಲವಷ್ಟೆ? ಹಾಗೆಯೇ ಎಂದೆಂದಿಗೂ ಆತ್ಮಸ್ಥರಾಗಿ ''ಸ್ಥಿತಪ್ರಜ್ಞ''ರಾಗಿರುವವರು ಅವರು. ಸಾಧಕರಾದ ನಾವು ವಿಷಯಗಳ ಸ್ಮರಣೆಯನ್ನು ಬಿಟ್ಟು, ಸ್ತ್ರೀಧನನಾಸ್ತಿಕಚರಿತ್ರೆಯನ್ನು ಕೇಳದೆ ಪರಮಾತ್ಮನ ನಾಮಸ್ಮರಣೆ, ಗುಣಗಾನ, ತತ್ತ್ವವಿಚಾರ-ಇವುಗಳನ್ನೇ ಮಾಡುತ್ತಿರುವ ಮಹಾತ್ಮರ ಸಹವಾಸವನ್ನು ಮಾಡಬೇಕು. ಆಗ ನಮಗೆ ಕಾಮವಾಸನೆಯು ತಪ್ಪುತ್ತಾ ತಪ್ಪುತ್ತಾ ಪರಮಾತ್ಮನಲ್ಲಿಯೇ ನಿಲ್ಲುವದಕ್ಕೆ ಸಜ್ಜಾಗುತ್ತದೆ. ನಿಜವಾಗಿ ನಾವು ಸ್ಥಿತಪ್ರಜ್ಞರಾದಾಗ ಮೇಲೆ ಹೇಳಿದಂತೆ ಎಲ್ಲವೂ ಪರಮಾತ್ಮನೇ ಎಂಬ ನಿಶ್ಚಿತಜ್ಞಾನವಾಗಿ ಆತ್ಮನಿಷ್ಠೆಯು ಒದಗುತ್ತದೆ. ಇದು ಸ್ಥಿತಪ್ರಜ್ಞನ ಒಂದು ಲಕ್ಷಣ.

ಎರಡನೆಯದಾಗಿ ವ್ಯವಹಾರದಲ್ಲಿ ಸ್ಥಿತಪ್ರಜ್ಞರು ಹೇಗಿರುತ್ತಾರೆಂಬುದನ್ನು ಮುಂದಿನ ಲಕ್ಷಣದಿಂದ ತಿಳಿದುಕೊಳ್ಳಬೇಕು. ಲೋಕದಲ್ಲಿ ಒಳ್ಳೆಯದು, ಕೆಟ್ಟದ್ದು-ಎರಡೂ ಇದ್ದೇ ಇವೆ; ಒಳ್ಳೆಯದು ಬಂದರೆ ಸರಿಯೆಂದು ಉಬ್ಬುವದು, ಕೆಟ್ಟದ್ದು ಬಂದರೆ ಛೀ! ಇದೇಕೆ ಬಂತು?-ಎಂದು ಮುಖವನ್ನು ಕಠ್ರಗೆ ಮಾಡಿಕೊಳ್ಳುವದು-ಇದು ಸಾಮಾನ್ಯಜನರ ಸ್ವಭಾವ. ಆದರೆ ಸ್ಥಿತಪ್ರಜ್ಞರು ಇಂಥ ಸಂದರ್ಭದಲ್ಲಿ ಹೇಗೆ ವರ್ತಿಸುತ್ತಾರೆ? ಅವರಿಗೆ ಒಳ್ಳೆಯದು, ಕೆಟ್ಟದ್ದು-ಎಂಬ ವಿಭಾಗವೇ ಕಾಣಿಸುವದಿಲ್ಲ; ಏಕೆಂದರೆ ಮೇಲೆ ಹೇಳಿದಂತೆ ಎಲ್ಲವೂ ಅವರಿಗೆ ಆತ್ಮನೇ ಆಗಿಬಿಟ್ಟಿರುತ್ತದೆ, ಎಲ್ಲರನ್ನೂ ಪರಮಾತ್ಮನನ್ನಾಗಿಯೇ

ಕಾಣುವವರಿಗೆ ಒಳ್ಳೆಯದು ಯಾವದು, ಕೆಟ್ಟದು ಯಾವದು? ಆಗ ಅವರಿಗೆ ಹಿಗ್ಗು ಯಾವದು, ಕುಗ್ಗು ಯಾವದು? ಒಳ್ಳೆಯದು, ಕೆಟ್ಟದು, ಮನಸ್ಸು, ಅದರ ಹಿಗ್ಗು, ಕುಗ್ಗು-ಎಲ್ಲವೂ ಆತ್ಮನೇ ಆಗಿಬಿಟ್ಟಿರುತ್ತದೆ. ಆತ್ಮನೆಂಬ ಉಪ್ಪರಿಗೆಯಿಂದ ಅವರು ಕೆಳಕ್ಕೆ ಇಳಿಯುವಂತೆಯೇ ಇರುವದಿಲ್ಲ. ಇದು ಸ್ಥಿತಪ್ರಜ್ಞರ ಎರಡನೆಯ ಲಕ್ಷಣವು. ಸಾಧಕರಾದ ನಾವು ಈ ವಿಷಯದಲ್ಲಿ ಹೇಗೆ ನಡೆಯಬೇಕು? ಒಳ್ಳೆಯದು ಕೆಟ್ಟದ್ದು ವ್ಯವಹಾರದಲ್ಲಿ ಬಂದೇ ಬರುವವು, ಅವುಗಳನ್ನು ತಪ್ಪಿಸುವದು ನಮ್ಮಿಂದಾಗದು. ಆದರೆ ಏನೇ ಬಂದೊದಗಲಿ, ನಾವು ಭಗವಚ್ಚಿಂತನೆಯನ್ನು ಬಿಡಬಾರದು. ''ಭಗವಂತ! ಇಗೊ ಸುಖವು ಬಂದಿದೆ, ನಾನೆಲ್ಲಾದರೂ ನಿನ್ನನು ಮರೆತೇನು! ಭಗವಂತ! ಇಗೊ! ದುಃಖವು ಬಂದಿದೆ, ಮೂರ್ಖನಾಗಿ ನಿನ್ನನ್ನೆಲ್ಲಾದರೂ ಬಯ್ದೇನು! ಒಳ್ಳೆಯದಾದರೂ ಬರಲಿ ಕೆಟ್ಟದಾದರೂ ಬರಲಿ, ನಿನ್ನಲ್ಲಿ ನನ್ನ ಚಿತ್ತವು ಮಾತ್ರ ನಿಂತಿರಲಿ. ನನ್ನ ಮನಸ್ಸು ಒಳ್ಳೆಯದು ಕೆಟ್ಟದ್ದರಿಂದ ಏರುಪೇರನ್ನು ಹೊಂದದಂತೆ ಮಾಡು!'' ಎಂದು ಅಡಿಗಡಿಗೆ ಪ್ರಾರ್ಥಿಸುತ್ತಿರಬೇಕು. ಇದು ಎರಡನೆಯ ಲಕ್ಷಣವನ್ನು ಸಾಧಿಸಿಕೊಳ್ಳುವ ಮಾರ್ಗವು.

ಇನ್ನೊಂದು ಲಕ್ಷಣವುಂಟು. ಸ್ಥಿತಪ್ರಜ್ಞರ ಇಂದ್ರಿಯಗಳು ವಿಷಯಗಳಲ್ಲಿ ನಿಂತಿರುವದೇ ಇಲ್ಲ. ಅವು ವಿಷಯಗಳ ಕಡೆಗೆ ಹರಿಯುವಹಾಗೇ ಇಲ್ಲ. ಆಮೆಯು ಅಂಜಿಕೊಂಡಾಗ ತನ್ನ ಕಾಲುಗಳನ್ನೆಲ್ಲ ಹೇಗೆ ಸಂಪೂರ್ಣವಾಗಿ ಒಳಸರಿಸಿಕೊಂಡಿರುವದೋ ಹಾಗೆ ಅವರು ಇಂದ್ರಿಯಗಳ ವಿಷಯಗಳ ಗೋಜಿಲ್ಲದೆ ಪೂರ್ಣವಾಗಿ ಒಳಕ್ಕೆ ಸರಿದುಕೊಂಡಿರುತ್ತಾರೆ. ಇದಕ್ಕೆ ಕಾರಣವನ್ನು ಮೊದಲೇ ಹೇಳಿದ್ದಾಗಿದೆ. ಅವರಿಗೆ ಇಂದ್ರಿಯಗಳೂ ವಿಷಯಗಳೂ ಎಲ್ಲವೂ ಪರಮಾತ್ಮನೇ. ಪರಮಾತ್ಮನ ಜ್ಞಾನದಿಂದ ಅವರು ''ಸ್ಥಿತಪ್ರಜ್ಞ''ರಾಗಿ ಇರುತ್ತಾರೆ. ನಾವುಗಳೂ ಇಂದ್ರಿಯಗಳನ್ನು ಒಳಕ್ಕೆ ಸರಿಯಿಸಿಕೊಳ್ಳಬೇಕು; ಆದರೆ ಅದಕ್ಕಾಗಿ ಯಾವ ಬಲಾತ್ಕಾರವನ್ನೂ ಉಪಯೋಗಿಸಬಾರದು. ಆಯಾ ಇಂದ್ರಿಯಗಳನ್ನು ಭಗವಂತನ ಸೇವೆಗೆ ಹಚ್ಚಬೇಕು, ಸಾತ್ತ್ವಿಕರ ಸೇವೆಗೆ ಬಿಡಬೇಕು. ಇದರಿಂದ ಅವಕ್ಕೆ ವಿಷಯಗಳಲ್ಲಿರುವ ಪ್ರೀತಿಯು ಕಡಿಮೆಯಾಗಿ ಕ್ರಮಕ್ರಮವಾಗಿ ಅವು ಆತ್ಮನಕಡೆಗೆ ತಿರುಗುತ್ತವೆ.

ಬರಿಯ ಇಂದ್ರಿಯಗಳನ್ನು ಒಳಸರಿಯಿಸಿಕೊಂಡರೆ ಸಾಲದು. ಅದಕ್ಕೆಲ್ಲ ಮೂಲವಾದದ್ದು ಮನಸ್ಸು; ಆ ಮನಸ್ಸಿಗೆ ಕೆಲಸವನ್ನು ಕೊಡದಿದ್ದರೆ, ಅದನ್ನು ಪರಮಾತ್ಮನಲ್ಲಿ ನಿಲ್ಲಿಸದಿದ್ದರೆ, ಎಂದಿಗೂ ಅದು ಸುಮ್ಮನೆ ನಿಲ್ಲಲಾರದು. ಅದು ಹೊರಕ್ಕೆ ಹರಿದುಬಿಡುತ್ತದೆ. ಇಂದ್ರಿಯಗಳು ಅದನ್ನು ಹೊರಕ್ಕೆಳೆದುಕೊಂಡು ಹೋಗಿಬಿಡುತ್ತವೆ. ಸ್ಥಿತಪ್ರಜ್ಞರಿಗೆ ಆತ್ಮನೇ ಎಲ್ಲಕ್ಕೂ ಹೆಚ್ಚು, ಆತ್ಮನಿಗಿಂತಬೇರೆ ಯಾವದೂ ಇಲ್ಲವೇ ಇಲ್ಲ. ನಾವುಗಳು ಆತ್ಮನಿಂದಲೇ ಎಲ್ಲವೂ ದೊರಕಬೇಕಾದ್ದರಿಂದ ಆತ್ಮನನ್ನೇ ಹೆಚ್ಚೆಂದು ಭಾವಿಸಿ ಆತ್ಮನಲ್ಲಿಯೇ ಮನಸ್ಸು ನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿರಬೇಕು. ಭಕ್ತಿಯೋಗವನ್ನು ಆಶ್ರಯಿಸಬೇಕು. ಇದು ಪ್ರಜ್ಞೆಯು ಸುಸ್ಥಿತವಾಗುವದಕ್ಕೆ ಬಹುಮುಖ್ಯವಾದ ಸಾಧನವು. ಇಂದ್ರಿಯಗಳು ನಮ್ಮನ್ನು ವಿಷಯಗಳ ಕಡೆಗೆ ಎಳೆಯುವದು ನಿಜ, ಮನಸ್ಸು ಚಂಚಲವಾಗಿರುವದೂ ನಿಜ. ಆದರೆ ಇಂದ್ರಿಯಗಳಿಗೂ ಮನಸ್ಸಿಗೂ ಈ ಬಲವನ್ನೂ ಕೊಟ್ಟಿರುವವರು ಯಾರು? ಪರಮಾತ್ಮನೇ ಅಲ್ಲವೆ? ಆತನನ್ನು ಶರಣುಹೊಕ್ಕರೆ ಇವೇ ನಮ್ಮ ಅಡಿಯಾಳಾಗಿಬಿಡುತ್ತವೆ. ಸಾಧನದಿಂದ ಇಂದ್ರಿಯಗಳನ್ನು ಗೆಲ್ಲುವೆವೆಂಬ ಹೆಮ್ಮೆಯನ್ನು ಬಿಡಬೇಕು. ಸಾಧನೆಗೆಲ್ಲ ಚೈತನ್ಯವನ್ನು ಕೊಡುವ ಪರಮಾತ್ಮನನ್ನು ಶರಣುಹೋಗುವ ಪ್ರಯತ್ನವನ್ನು ಮಾಡಬೇಕು. ಆಗ ಸಾಧನವೂ ನಮ್ಮದಾಗುವದಿಲ್ಲ; ಅದು ಪರಮಾತ್ಮನ ಬಲದಿಂದಲೇ ವೀರ್ಯವತ್ತಾಗಿ ನಮ್ಮನ್ನು ಮುಟ್ಟಿಸಬೇಕಾದ ಸ್ಥಾನಕ್ಕೆ ಕರೆದೊಯ್ಯುತ್ತದೆ. ಸುಮ್ಮನೆ ಇಂದ್ರಿಯಗಳನ್ನು ಬಿಗಿಹಿಡಿಯುವದರಿಂದ ಪ್ರಯೋಜನವಿಲ್ಲ. ಸ್ಥಿತಪ್ರಜ್ಞರಿಗಿರುವ ಬಲವೆಂಬುದೆಲ್ಲ ಪರಮಾತ್ಮನು. ಅವರಿಗೆ ಎಲ್ಲವೂ ಆತ್ಮನೇ ಆಗಿಬಿಟ್ಟಿರುವದರಿಂದ ಅವರಿಗೆ ವಿಷಯಗಳಲ್ಲಿ ರಾಗದ್ವೇಷಗಳುಂಟಾಗುವ ಹಾಗೆಯೇ ಇಲ್ಲ. ನಮಗೆ ಹಾಗಲ್ಲ. ಆದ್ದರಿಂದ ಪ್ರಯತ್ನಪಟ್ಟು ಹೀಗೆಯೇ ಆಗಬೇಕೆಂಬ ರಾಗದ್ವೇಷಗಳನ್ನು ಇಟ್ಟುಕೊಳ್ಳದೆ ಸಮಯಕ್ಕೆ ಒದಗಿದ ವಿಷಯಗಳನ್ನು ಸೇವಿಸುತ್ತಾ ಪರಮಾತ್ಮನ ಕಡೆಗೆ ತಿರುಗುವ ಪ್ರಯತ್ನವನ್ನು ಮಾಡಬೇಕು. ಭಗವಚ್ಚಿಂತನೆಗೆ ಯೋಗ್ಯವಾದದ್ದರಲ್ಲಿ ರಾಗವನ್ನೂ ಅದಕ್ಕೆ ವಿಘ್ನವಾಗುವದರಲ್ಲಿ ದ್ವೇಷವನ್ನೂ ಬೇಕಾದರೆ ಇಟ್ಟುಕೊಳ್ಳಬಹುದು. ಮುಖ್ಯವಾಗಿ ಭಗವಂತನೇ ನಮಗೆ ಗುರಿಯಾಗಿರಬೇಕು. ಹಾಗಾದರೆ ನಮ್ಮ ಮನಸ್ಸು ಸಮಾಹಿತವಾಗಿರುತ್ತದೆ, ಶಾಂತವಾಗಿರುತ್ತದೆ,

ವ್ಯವಹಾರದೃಷ್ಟಿಯಿಂದಲಾದರೂ ನಾವು 'ಸ್ಥಿತಪ್ರಜ್ಞ'ರಾಗಿರುತ್ತೇವೆ.

ಉಪಸಂಹಾರದಲ್ಲಿ ಭಗವಂತನು ಹೇಳಿರುವ ಇನ್ನೊಂದು ಲಕ್ಷಣವನ್ನು ನೆನಪಿಗೆ ತಂದುಕೊಟ್ಟು ಈ ಭಾಷಣವನ್ನು ಮುಗಿಸುತ್ತೇನೆ. ಸಮುದ್ರಕ್ಕೆ ಗಂಗೆಯಮುನೆ ಮುಂತಾದ ನದಿಗಳು ಒಂದೇ ಸಮನೆ ಭೋರ್ಗರೆಯುತ್ತಾ ಸತತವಾಗಿ ಬಂದು ಸೇರುತ್ತಿದ್ದರೂ ಸಮುದ್ರವು ಹೇಗೆ ಎಲ್ಲವನ್ನೂ ಸಮುದ್ರವಾಗಿಯೇ ಮಾರ್ಪಡಿಸಿಕೊಂಡು ತಾನಿದ್ದಂತೆಯೇ ಇದ್ದು ಮೇರೆದಪ್ಪದೆ ಇರುವದೋ, ಹಾಗೆ ಯಾವ ವಿಷಯಗಳು ತನ್ನ ಬಳಿಗೆ ಬಂದರೂ ಅವನ್ನು ಸೇವಿಸುತ್ತಾ ಎಲ್ಲವನ್ನೂ ಪರಮಾತ್ಮನನ್ನಾಗಿ ಮಾರ್ಪಡಿಸಿಕೊಂಡಿರುವ ಮಹಿಮೆಯು ಸ್ಥಿತಪ್ರಜ್ಞರದು. ಸಾಧಕರಾದ ನಾವುಗಳು ಹೀಗಿರುವದಕ್ಕೆ ಪ್ರಯತ್ನಿಸಬೇಕು. ತಂದೆಯ ಹತ್ತಿರವಿರುವ ಮಗುವಿನಂತೆ ನಾವು ಭಗವಂತನಲ್ಲಿ ಭರವಸೆಯಿಟ್ಟು ಸಕಲವ್ಯವಹಾರಗಳನ್ನು ನಡೆಯಿಸುತ್ತಿದ್ದರೆ ನಮಗೆ ಯಾವ ವಿಷಯಗಳಿಂದಲೂ ಯಾವ ಏರುಪೇರೂ ಆಗಲಾರದು. ಆಗ ಎಲ್ಲವೂ ಭಗವಂತನ ಪ್ರಸಾದವೇ ಆಗಿಬಿಡುತ್ತದೆ. ಭಗವಂತನು ಹೇಳಿದ ರೀತಿಯಿಂದ ನಿಷ್ಕಾಮಕರ್ಮವನ್ನು ಮಾಡುತ್ತಾ ಎಲ್ಲವನ್ನೂ ಅವನ ಅರ್ಚನೆಗಾಗಿ ಸಮರ್ಪಣೆಮಾಡುತ್ತಾ ಆತನಲ್ಲಿಯೇ ಯಾರು ಭಕ್ತಿಯನ್ನಿಟ್ಟುಕೊಂಡಿರುವರೋ ಅವರಿಗೆ ನಿಶ್ಚಯವಾಗಿ ಪರತತ್ತ್ವಜ್ಞಾನವಾಗುವದು, ಆತನ ಸಾಯುಜ್ಯವೂ ದೊರೆಯುವದು. ಜ್ಞಾನಿಗಳ ಮಾತುಗಳನ್ನು ಧಾರಾಳವಾಗಿ ಬಳಸುತ್ತಾ ನಾವು ಕೃತಕೃತ್ಯರೆಂದೇ ಭಾವಿಸಿಕೊಂಡು ಹೆಮ್ಮೆಪಡುವವರಿಗೆ ಯಾವ ಸಾಧನವೂ ಇಲ್ಲ, ಯಾವ ಫಲವೂ ಇಲ್ಲ. ಇದಕ್ಕೆ ಬದಲು ಭಗವಂತನಲ್ಲಿಯೂ ಭಗವದ್ಭಕ್ತರಲ್ಲಿಯೂ ಭರವಸೆಯಿಟ್ಟು ತಮ್ಮ ಅಂತಸ್ತಿಗೆ ಸಿಕ್ಕುವ ಸಾಧನವನ್ನು ಮಾಡುತ್ತಿರುವವರಿಗೆ ಆ ಭಗವಂತನೇ ಬೇಕಾದದ್ದನ್ನೆಲ್ಲ ಒದಗಿಸಿ ಇಹದಲ್ಲಿ ಅವರ ಯೋಗಕ್ಷೇಮವನ್ನು ನೋಡಿಕೊಂಡು ಕಡೆಯಲ್ಲಿ ಪರಮಪುರುಷಾರ್ಥವನ್ನೇ ದಯಪಾಲಿಸುವನು. ಅಂಥ ಸಾಧಕರೇ ಸ್ಥಿತಪ್ರಜ್ಞರಾಗುವದಕ್ಕೆ ಅರ್ಹರಾದವರು

★★★★★

# ವೇದಾಂತವೂ ಜನಜೀವನವೂ

**6-5-1941**

**ಶ್ರೀಶ್ರೀಗಳು**

ಅಧ್ಯಾತ್ಮವಿದ್ಯೆಯಿಂದ ಈಗಿನ ಜನಜೀವನಕ್ಕೆ ಯಾವ ಸಹಾಯವಿದೆ? ಸಾವಿರಾರು ವರ್ಷಗಳ ಹಿಂದೆ ಕೆಲವರ ಮನಸ್ಸಿನಲ್ಲಿ ಹೊಳೆದ ಅಲೋಚನೆಗಳನ್ನು ಈಗೇತಕ್ಕೆ ನಾವು ವಿಚಾರಮಾಡಬೇಕು?- ಎಂದು ಅನೇಕರು ಆಗಾಗ್ಗೆ ಕೇಳುತ್ತಿದಾರೆ. ಇದು ಅವಶ್ಯವಾಗಿ ವಿಚಾರಮಾಡಬೇಕಾದದ್ದು. ಅಧ್ಯಾತ್ಮವಿದ್ಯೆಗೆ ವ್ಯವಹಾರದಲ್ಲಿ ಪ್ರಯೋಜನವೇನು?- ಎಂದು ಕೇಳುವವರು ಪ್ರಯೋಜನಶಬ್ದದ ಅರ್ಥವನ್ನು ಬಿಡಿಸಿತಿಳಿದುಕೊಳ್ಳಬೇಕು. ಏಕೆಂದರೆ ವ್ಯವಹಾರದಲ್ಲಿ ಪ್ರಯೋಜನವೆಂದರೆ ಬರಿಯ ಊಟ, ಬಟ್ಟೆ, ಹಣ, ಕಾಸು- ಇಷ್ಟೇ ಅಲ್ಲ. ಅಷ್ಟನ್ನೇ ವ್ಯವಹಾರಕ್ಕೆ ಪ್ರಯೋಜನವೆನ್ನುವದಾದರೆ ಈ ಆಕ್ಷೇಪವು ಇನ್ನೂ ಕೆಲವು ಶಾಸ್ತ್ರಗಳಿಗೂ ಹತ್ತಬೇಕಾಗುವದು. ಜ್ಯೋತಿಷಸಿದ್ಧಾಂತವನ್ನು ಗುಣಿಸುತ್ತಿದ್ದ ತಂದೆಯ ಬಳಿ ಬಂದು ಅವನ ಹುಡುಗನು ''ಅಪ್ಪ, ಈ ವಿದ್ಯೆಯಿಂದ ಕರಿಗಡಬು ಸಿಕ್ಕುತ್ತದೆಯೆ?''ಎಂದು ಕೇಳಿದರೆ ಅಪ್ಪನು ಏನು ಹೇಳಬೇಕು? ಹುಡುಗನ ಪ್ರಯೋಜನದೃಷ್ಟಿಯು ಬೇರೆ, ಜ್ಯೋತಿಷಸಿದ್ಧಾಂತಿಯ ಪ್ರಯೋಜನದೃಷ್ಟಿಯು ಬೇರೆ. ಹೊಟ್ಟೆಬಟ್ಟೆಯ ಪ್ರಯೋಜನವನ್ನು ಅಧ್ಯಾತ್ಮವಿದ್ಯೆಯಿಂದ ಬಯಸುವವರು ಆ ಹುಡುಗನಂತೆಯೇ ಪ್ರಯೋಜನಶಬ್ದಕ್ಕೆ ಸಂಕುಚಿತವಾದ ಅರ್ಥವನ್ನು ಇಟ್ಟುಕೊಂಡಿರುತ್ತಾರೆಂಬುದು ಸ್ಪಷ್ಟವಾಗಿರುತ್ತದೆ. ಇದೇ ಪ್ರಯೋಜನಶಬ್ದದ ಅರ್ಥವಾದರೆ ಈಗಿನ ಸಕಲ ವಿದ್ಯಾನಿಲಯಗಳಲ್ಲಿ ಕಲಿಸುವ ಪ್ರೌಢಗಣಿತ, ಭೌತಿಕಶಾಸ್ತ್ರದ ವಾದಗಳು, ತತ್ತ್ವವಿಚಾರ- ಮುಂತಾದವುಗಳ ಮೇಲೂ ಇದೇ ಆಕ್ಷೇಪವನ್ನು ಹಾಕಬಹುದು. ಲೆಕ್ಕಾಚಾರವು ಬೇಕಾಗಲಿ, ಆದರೆ. 00000005 ಇಂಥ ಅಂಕೆಗಳು ಏಕೆ? ಕರಾರುವಾಕ್ ಪರಿಮಿತಿಯನ್ನು ತಿಳಿಯಬೇಕು ಎಂದರೆ ಅದರಿಂದೇನು ಪ್ರಯೋಜನ? ವಿದ್ಯುದ್ದೀಪಗಳೇನೊ ಸರಿ. ಆದರೆ ವಿದ್ಯುಚ್ಛಕ್ತಿಯ ವಿಷಯಕ್ಕಿರುವ

ಲಕ್ಷಣಪ್ರಮಾಣಗಳೇಕೆ?- ಎಂದು ಅಂಥವರು ಆಕ್ಷೇಪಿಸಬಹುದು. ವಿಜ್ಞಾನವೂ ಪ್ರೌಢವಿಚಾರವೂ ಕೇವಲ ಹೊಟ್ಟೆಬಟ್ಟೆಗಳಿಗಾಗಿ ಅಲ್ಲ; ಅವುಗಳಿಂದ ನಮಗೆ ಆಗುವ ಸ್ಥೂಲ ಪ್ರಯೋಜನಕ್ಕಾಗಿ ಮಾತ್ರವಲ್ಲ, ಜ್ಞಾನಕ್ಕಾಗಿಯೇ ಅವುಗಳನ್ನು ಅಭ್ಯಾಸಮಾಡುತ್ತೇವೆ ಎಂದು ಭೌತಿಕವಿಶಾರದರು ಹೇಳುತ್ತಾರೆ. ವಸ್ತುಶೋಧನೆಗಾಗಿ ಶಾಸ್ತ್ರಜ್ಞರು ಸಾವಿರಾರು ರೂಪಾಯಿಗಳನ್ನು ಕಳೆಯುವದೂ ಆ ಕೆಲಸದಲ್ಲಿ ಒಂದು ಜನ್ಮವನ್ನೇ ಕಳೆಯುವದೂ ಏತಕ್ಕೆ? ಅದರಿಂದಲೇ ಅವರಿಗೆ ಒಂದು ಬಗೆಯ ಆನಂದವಾಗುತ್ತದೆ. ತತ್ತ್ವಾನ್ವೇಷಣೆಗೆ ಸ್ಥೂಲವಾದ ಪ್ರಯೋಜನವನ್ನು ಕೇಳುವದು ಎಂದಿಗೂ ಸರಿಯಲ್ಲ. ಇದರಂತೆ ಅಧ್ಯಾತ್ಮವಿದ್ಯೆಯಲ್ಲಿಯೂ ಜ್ಞಾನವೇ ಮೊಟ್ಟಮೊದಲನೆಯ ಪ್ರಯೋಜನವು. ಆ ಜ್ಞಾನವಿಲ್ಲದಿದ್ದರೆ ಆಗುವ ಅನರ್ಥಗಳೆಲ್ಲವೂ ಹೋಗುವದೆಂಬ ಪರಮಪುರುಷಾರ್ಥವು ಅಧ್ಯಾತ್ಮವಿದ್ಯೆಯಿಂದ ದೊರಕುತ್ತದೆ. ಮಿಕ್ಕ ಶಾಸ್ತ್ರಗಳೆಲ್ಲವೂ ವಿಶ್ವದ ಏಕದೇಶವನ್ನು ಕುರಿತ ಅಜ್ಞಾನವನ್ನು ಕಳೆಯುತ್ತವೆ; ಅವುಗಳು ಕೊಡುವ ಜ್ಞಾನವು ಆಗಾಗ್ಗೆ ಮಾರ್ಪಡುತ್ತಿರಲೂಬಹುದು. ಆದರೆ ಅಧ್ಯಾತ್ಮಶಾಸ್ತ್ರದಜ್ಞಾನವು ಇಡಿಯ ವಿಶ್ವದ ಪರಮಾರ್ಥದ ವಿಷಯವಾದ ಅಜ್ಞಾನವನ್ನೇ ಕಳೆದು ಪರಮಾನಂದವನ್ನೇ ತಂದುಕೊಡುತ್ತದೆ. ಇದೇ ಅಧ್ಯಾತ್ಮವಿದ್ಯೆಯ ಪರಮಪ್ರಯೋಜನವು. ಈ ಪರಮಜ್ಞಾನವುಂಟಾಗುವದು ಬಹುದೂರದ ಮಾತಾದ್ದರಿಂದ ಅದಂತಿರಲಿ. ವಿಜ್ಞಾನಶಾಸ್ತ್ರಗಳ ತೀರ ಒಳಮರ್ಮವನ್ನು ತಿಳಿಯದಿದ್ದರೂ ಏಕದೇಶವನ್ನು ತಿಳಿದು ಮಿಕ್ಕದ್ದನ್ನು ನಂಬಿ ಅದನ್ನು ವ್ಯವಹಾರದಲ್ಲಿ ಉಪಯೋಗಿಸಿಕೊಂಡು ಲಾಭವನ್ನು ಪಡೆಯುವ ಹಾಗೆ ಅಧ್ಯಾತ್ಮವಿದ್ಯೆಯನ್ನು ವ್ಯವಹಾರದಲ್ಲಿ ಉಪಯೋಗಿಸಿ ಪ್ರಯೋಜನವನ್ನು ಪಡೆಯಬಹುದೆ?- ಎಂಬ ಪ್ರಶ್ನೆಗೆ ಉತ್ತರವನ್ನು ಈಗ ಕಂಡುಹಿಡಿಯೋಣ. ವೇದಾಂತದಲ್ಲಿ ಹೇಳಿದ ಪರಮಾರ್ಥವು ಸಚ್ಚಿದಾನಂದಸ್ವರೂಪವಾಗಿರುತ್ತದೆ; ಅದರ ಇರವೇ ನಮ್ಮ ಇರವಿಗೆ ಮೂಲವು, ಆ ಜ್ಞಾನವೇ ನಮ್ಮೆಲ್ಲರ ಜ್ಞಾನದ ಬೆಳಕು, ಆ ಆನಂದವೇ ನಮ್ಮ ಸುಖಲವಗಳ ಮೂಲವು- ಹೀಗೆಂದು ನಂಬಿದಮಾತ್ರದಿಂದ ವ್ಯವಹಾರದಲ್ಲಿ ಪ್ರಯೋಜನವುಂಟೆ? ''ನಾನು ಭರತಖಂಡದ ನಿವಾಸಿಯು'' ಎಂಬ ನಂಬಿಕೆಯನ್ನು ಗಟ್ಟಿಗೊಳಿಸಿಕೊಂಡು ವ್ಯವಹಾರದಲ್ಲಿ ತಂದರೆ ಏನೇನು ಪ್ರಯೋಜನವಾಗುವದೆಂದು ಹೇಳುವರೋ

ಅದನ್ನು ಸ್ವಲ್ಪ ಇಲ್ಲಿ ನೆನಸಿಕೊಳ್ಳಿರಿ. ಸಚ್ಚಿದಾನಂದ ಸ್ವರೂಪನಾದ ಆತ್ಮನೇ ನಮ್ಮ ಆತ್ಮನೆಂಬ ನಂಬಿಕೆಯಿಂದ ಎಂಥ ಪ್ರಯೋಜನವಾಗುವದೆಂಬುದು ಆಗ ವ್ಯಕ್ತವಾಗುವದು. ಹಿಂದಕ್ಕೆ ಸಿಪಾಯಿದಂಗೆಯಲ್ಲಿ ಸಿಕ್ಕಿದವರು ಸಿಕ್ಕಿದವರನ್ನು ಹೊಡೆಯುವಷ್ಟು ಗಲಭೆಯಾಯಿತಂತೆ. ಆಗ ಒಬ್ಬ ಸಂನ್ಯಾಸಿಯನ್ನು ಯಾರೋ ಹೊಡೆದು ಗಾಯಗೊಳಿಸಿದರು; ಸಾತ್ತ್ವಿಕರಾದ ಕೆಲವರು ಅವರನ್ನು ಬಿಡಿಸಿಕೊಂಡು ಬಂದು ಉಪಚರಿಸಿದರು. ಆಗ ಒಬ್ಬನು ಅವರಿಗೆ ಹಾಲುಹಾಕುತ್ತಾ ''ಸ್ವಾಮಿ, ನನ್ನ ಗುರುತು ಸಿಕ್ಕಿತೆ?'' ಎಂದು ಮಾತನಾಡಿಸಲು ಆ ಮಹಾತ್ಮರು ''ಆಗ ಹೊಡೆದವನೂ ನೀನೆ, ಈಗ ಹಾಲುಹಾಕುವವನೂ ನೀನೆ; ನೀನಲ್ಲದೆ ಮತ್ತೆ ಯಾರು ಇದಾರೆ!'' ಎಂದರಂತೆ! ಶತ್ರುಗಳು, ಮಿತ್ರರು, ಉದಾಸೀನರು- ಎಲ್ಲರಲ್ಲಿಯೂ ಒಬ್ಬ ಪರಮಾತ್ಮನನ್ನೇ ಕಾಣುವ ಇಂಥ ಶಾಂತಿ ಸ್ವರೂಪವು ಬಂದರೆ ಯಾರಿಗೆ ತಾನೆ ಭೂಷಣವಲ್ಲ!

ಇಂಥ ಶಾಂತಿಯಿಂದ ವ್ಯವಹಾರಕ್ಕೆ ಭಂಗವುಂಟಾದೀತೆಂದು ಅಂಜುವ ಕೆಲಸವಿಲ್ಲ-ಏಕೆಂದರೆ ಶಾಂತನಾದವನಿಗೇ ಧೈರ್ಯವು ಹೆಚ್ಚುವದು. ಒಬ್ಬ ಮಹಾತ್ಮಗಾಂಧಿಯವರನ್ನು ನೋಡಿರಿ. ಅವರು ತಮ್ಮ ಶಾಂತಸ್ವಭಾವದಿಂದ ಜಗತ್ತನ್ನೇ ವಶಗೊಳಿಸಿಕೊಂಡಿರುತ್ತಾರೆ. ಪರದೇಶದವರುಕೂಡ ತಮ್ಮ ದೇಶದಲ್ಲಿ ಶಾಂತಿಯು ನೆಲಸುವದಕ್ಕೆ ಸಲಹೆಕೊಡಿರೆಂದು ಅವರನ್ನು ಕೇಳುತ್ತಿರುವರು. ಶಾಂತಿಧೈರ್ಯಗಳ ಮೂಲವಾದ ಅಧ್ಯಾತ್ಮವಿದ್ಯೆಯು ಹರಡಿದರೆ ಲೋಕಕ್ಕೆ ಎಷ್ಟು ನೆಮ್ಮದಿಯುಂಟಾದೀತು! ಈಗಿನ ನಮ್ಮ ವಿದ್ಯಾನಿಲಯಗಳಲ್ಲಿ ತಯಾರಾಗಿರುವ ತರುಣರನ್ನು ನೋಡಿರಿ. ಅವರಿಗೆ 'ಜೀವನಕ್ಕೇನು ಗತಿ!'- ಎಂಬ ಯೋಚನೆಯು ಬೆನ್ನಂಟಿಕೊಂಡುಬಿಟ್ಟಿರುತ್ತದೆ. ಅವರ ಮುಖದಲ್ಲಿ ಅಧೈರ್ಯದ ಮುದ್ರೆಯು ಕಾಣುತ್ತಿರುವದು. ನಿರುದ್ಯೋಗಸಮಸ್ಯೆಯೆಂದರೇನೆಂಬುದು ಆ ಹುಡುಗರದಂಡನ್ನು ನೋಡಿದಕೂಡಲೆ ಶಿಲಾಮೂರ್ತಿಯು ಒಡೆದುಮೂಡಿದಂತೆ ಕಾಣುತ್ತದೆ. ಅವರಿಗೆ ಮೇಲಿನ ಅಧಿಕಾರಿಗಳನ್ನು ಕಾಣುವದೆಂದರೆ ನಡುಕ, ದೀನತೆ! ಅವರಿಗೆಲ್ಲ ಹೇಗಾದರೂ ನಾವು ಕೆಲಸಕೊಟ್ಟರೂ ಅವರ ಹೊಟ್ಟೆಗಿಷ್ಟು ಗಂಜಿಹಾಕಿದಂತಾಗುವದೇ ಹೊರತು ಅವರಿಗೆ ಧೈರ್ಯವು ಬರಲಾರದು. ಅವರಲ್ಲಿ ದೇಹಾಭಿಮಾನವು

ತುಂಬಿತುಳುಕುತ್ತಿರುವದು. ಮೊದಲಿನಿಂದಲೂ ದೇಹವನ್ನು ಶೃಂಗರಿಸುವದು, ಮೂರು ಊಟ, ಎರಡು ಉಪಹಾರ-ಮುಂತಾದವುಗಳ ಚಟವನ್ನು ಅವರಿಗೆ ನಾವು ಕಲಿಸಿಕೊಟ್ಟುಬಿಟ್ಟಿರುವೆವು. ಭೂಮಂಡಲದಲ್ಲಿ ಬೆಳೆದಿರುವ ಆಹಾರ ಸಾಮಗ್ರಿಯು ಜನರಿಗೆ ತಕ್ಕಷ್ಟಿಲ್ಲವೆಂಬ ತಿಳಿವಳಿಕೆಯೇ ಅವರಿಗೆ ಅರ್ಥಶಾಸ್ತ್ರದಿಂದ ಬಂದಿರುತ್ತದೆ; ಮಧ್ಯಾಹ್ನಕ್ಕೆ ಕಾಫಿಯಿಲ್ಲವೆಂದರೆ ಭೂಕಂಪವಾದಷ್ಟು ಅಂಜಿಕೆಯಾಗುತ್ತದೆ! ಅವರು ಓದಿರುವದಾದರೂ ಹೇಗೆ? ಪ್ಯಾಸಾಗುವದಕ್ಕೆ ಎಷ್ಟು ಪ್ರಶ್ನೆಗಳಿಗೆ ಉತ್ತರಬರೆಯಬೇಕೋ ಅಷ್ಟನ್ನು ಪಠ್ಯಪುಸ್ತಕಗಳ ಮೇಲಿನ ಟಿಪ್ಪಣಿಗಳಿಂದ ಕಲಿತುಕೊಂಡರೆ ಸಾಕು, ತಿಳಿವಳಿಕೆ ಯಾರಿಗೆ ಬೇಕು? ಹೀಗೆ ಹುಟ್ಟಿದಂದಿನಿಂದ ಸಾಯುವವರೆಗೂ ದೇಹಾಭಿಮಾನವನ್ನೇ ಮುಂದುಮಾಡಿಕೊಂಡು ಹೊಟ್ಟೆಬಟ್ಟೆಗಳ ಚಿಂತೆಯಿಂದಲೇ ಕಾಲಕಳೆಯುವವರಿಂದ ದೇಶದ ಉದ್ಧಾರವಾದೀತೆ? ಅವರಿಗೆ ತಮ್ಮ ಉದ್ಧಾರವೇ ಪರಾಧೀನವಾಗಿರುತ್ತದೆ. ದೇಹಾತ್ಮಬುದ್ಧಿಗೆ ಅನುಕೂಲಗಳು ಹೆಚ್ಚುತ್ತಿರುವದೇ ಈ ಕಲಿಕಾಲದ ಅಸಾಧಾರಣಧರ್ಮವು. ದೇಹಬುದ್ಧಿಯನ್ನು ಬಿಡಿಸುವವರು ಯಾರೂ ಇಲ್ಲ, ಅದನ್ನು ಹೆಚ್ಚಿಸುವ ಪ್ರಕಟನೆಗಳು ಮನೆಮನೆಗೂ ಬಂದುಹೋಗುತ್ತಿವೆ! ಅಧ್ಯಾತ್ಮವಿದ್ಯೆಯ ಪ್ರಸಾರದಿಂದ ದೇಹಾತ್ಮಬುದ್ಧಿಯನ್ನು ತೆಗೆದುಹಾಕಿದರೆ ಈ ಅನರ್ಥವೆಲ್ಲ ಮಾಯವಾದೀತು.

ಗಂಡಸರು, ಹೆಂಗಸರು, ಮಕ್ಕಳು, ವೃದ್ಧರು, ಬ್ರಾಹ್ಮಣರು, ಬ್ರಾಹ್ಮಣೇತರರು, ಅಧಿಕಾರಿಗಳು, ಭೃತ್ಯರು, ಸರಕಾರದವರು, ಪ್ರಜೆಗಳು-ಎಲ್ಲರೂ ಈ ವಿದ್ಯೆಯಿಂದ ಲಾಭವನ್ನು ಪಡೆಯುವದಕ್ಕೆ ಅವಕಾಶವಿದೆ. ಅನುಷ್ಠಾನದಲ್ಲಿ ಅಧ್ಯಾತ್ಮವಿಚಾರಗಳ ಫಲವನ್ನು ಕಾಣುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ, ಆಳಾಗಿರುವವನು ಈ ವಿದ್ಯೆಯಿಂದ ಉತ್ತಮನಾದ ಸೇವಕನಾಗುವನು, ಅರಸನಾದವನು ಉತ್ತಮನಾದ ಅರಸಾಗುವನು. ಅಧ್ಯಾತ್ಮವಿದ್ಯೆಯೇ ನಮ್ಮ ದೇಶದ ಸಂಸ್ಕೃತಿಗೆಲ್ಲ ಅಡಿಗಲ್ಲು. ಈಗಿನ ಸ್ಥಿತಿಗೆ ತಕ್ಕಂತೆ ಇದನ್ನು ನಾವು ನಮ್ಮ ನಮ್ಮ ಸ್ಥಾನದಲ್ಲಿ ಉಪಯೋಗಿಸಿಕೊಂಡು ಮೇಲುಮಟ್ಟಕ್ಕೆ ಏರಬಹುದು.

ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಪ್ರಸಿದ್ಧರಾದ ಭೌತಿಕ ವಿಜ್ಞಾನಶಾಸ್ತ್ರಜ್ಞರಾದ ಬೋಸರವರು ''ಏಕಂ ಸದ್ವಿಪ್ರಾ ಬಹುಧಾ ವದನ್ತಿ'' ಎಂಬ ಋಷಿವಾಕ್ಯವನ್ನು ಮನನಮಾಡಿ ಈ ಅಭಿಪ್ರಾಯವನ್ನು ಪ್ರಾಣತತ್ತ್ವಕ್ಕೆ ಹೊಂದಿಸಿ ಎಲ್ಲೆಲ್ಲಿಯೂ ಒಂದೇ ಪ್ರಾಣವು ಪ್ರಸರಿಸಿರುವದೆಂಬುದನ್ನು ತೋರಿಸಿಕೊಟ್ಟರು. ಅವರು ಈ ತಮ್ಮ ಅಭಿಪ್ರಾಯವನ್ನು ಸರ್ವಶಾಸ್ತ್ರಜ್ಞರಿಗೂ ಸಮ್ಮತವಾಗುವಂತೆ ಮಾಡುವದಕ್ಕಾಗಿ ಪಟ್ಟ ಸಾಹಸವು ಎಂಥ ಸ್ತುತ್ಯವಾಗಿರುತ್ತದೆ! ಮಾನಸಶಾಸ್ತ್ರವನ್ನು ಈಗ ನಾವು ಪಾಶ್ಚಾತ್ಯರ ರೀತಿಯಿಂದ ಕಲಿಯುತ್ತಿದ್ದೇವಷ್ಟೆ. ಈಗ ಆ ಶಾಸ್ತ್ರದಲ್ಲಿ ಎಚ್ಚರದವಸ್ಥೆಯೊಂದನ್ನೇ ಪ್ರಧಾನವಾಗಿ ಹಿಡಿದಿರುತ್ತದೆ; ಕನಸನ್ನು ಎಚ್ಚರದ ದೃಷ್ಟಿಯಿಂದಲೇ ಶೋಧನೆಮಾಡುತ್ತಿದಾರೆ. ಆದರೆ ವೇದಾಂತದ ಅವಸ್ಥಾತ್ರಯದೃಷ್ಟಿಯನ್ನು ಅವಲಂಬಿಸಿ ಯಾವ ಮಹಾರಾಯನಾದರೂ ವಿಚಾರಮಾಡಿದರೆ ಮನಸ್ಸಿನ ವಿಷಯಕ್ಕೆ ಎಷ್ಟೋ ಅಮೋಘವಾದ ರಹಸ್ಯಗಳು ಹೊರಕ್ಕೆಬಿದ್ದಾವು. ಇದರಂತೆ ತರ್ಕಶಾಸ್ತ್ರಕ್ಕೂ ತಿಳಿಯಬೇಕು. ಈಗ ನಮ್ಮ ದೇಶದ ತಾರ್ಕಿಕರು ಲಕ್ಷಣಪರಿಷ್ಕಾರದಲ್ಲಿಯೇ ತಮ್ಮ ಆಯುಸ್ಸನ್ನೆಲ್ಲ ಕಳೆಯುತ್ತಿದಾರೆ. ಆದರೆ ಆ ಶಾಸ್ತ್ರದ ವಿಷಯಗಳಮೇಲೆ ವೇದಾಂತದ ಬೆಳಕು ಬೀಳಲಿ, ಆಗ ಅದಕ್ಕೆ ಎಷ್ಟು ಜೀವಕಳೆ ಬರುತ್ತದೆ! ವೇದಾಂತಸಮ್ಮತವಾದ ತರ್ಕವನ್ನೂ ಆ ಶಾಸ್ತ್ರದವರು ಲೆಕ್ಕಕ್ಕೆ ತೆಗೆದುಕೊಂಡರೆ ಅದು ಎಷ್ಟು ವಿಶಾಲವಾಗುವದೆಂಬುದು ಆಗ ತಾನೇ ಗೊತ್ತಾದೀತು.

ಇವೆಲ್ಲ ಶಾಸ್ತ್ರವಿಭಾಗದಲ್ಲಿ ಅಧ್ಯಾತ್ಮವಿದ್ಯೆಯಿಂದಾಗುವ ಪ್ರಯೋಜನಗಳು. ಇನ್ನು ರಾಜಕೀಯದ ಕಡೆಗೆ ತಿರುಗಿರಿ. ಈಗಿನ ರಾಜಕೀಯಪ್ರಪಂಚದಲ್ಲಿ ಎಂಥ ಅವ್ಯವಸ್ಥೆಯಾಗಿದೆಯೆಂಬುದು ನಮಗೆ ಗೊತ್ತೇ ಇದೆ. ಈಗ ಪ್ರಜಾಸತ್ತಾತ್ಮಕ ರಾಜ್ಯ, ಏಕಪ್ರಭುತ್ವರಾಜ್ಯ, ಕತಿಪಯಾಧಿಕಾರರಾಜ್ಯ, ನಿರಂಕುಶಸ್ವತಂತ್ರಾಧಿಕಾರಿ ರಾಜ್ಯ-ಮುಂತಾದ ರಾಜ್ಯಪದ್ಧತಿಗಳು ಒಂದೊಂದಕ್ಕೆ ತಾಟಾಡಿ ಯಾವದು ಬದುಕಬೇಕು, ಯಾವದು ಸಾಯಬೇಕು?- ಎಂಬ ಪ್ರಶ್ನೆಯು ಎದ್ದುಕೊಂಡಿದೆ. ಪಾಶ್ಚಾತ್ಯದೇಶಗಳಲ್ಲಿ ಎದ್ದುಕೊಂಡಿರುವ ಪೆಡಂಭೂತವು ಹೇಗೆ ಅದೃಶ್ಯವಾಗುವದೋ ಯಾವ ರಾಜತಂತ್ರನಿಪುಣನಿಗೂ ಊಹಿಸಲಶಕ್ಯವಾಗಿರುತ್ತದೆ. ಆದರೆ

ಇಂಗ್ಲಿಷು ಕವಿಯೊಬ್ಬನು ಹೇಳಿದಂತೆ ರಾಜ್ಯಪದ್ಧತಿಗಳ ಆಕಾರದಿಂದಲ್ಲ ಅದಕ್ಕೆ ಶಕ್ತಿಬರುವದು, ಅವುಗಳಲ್ಲಿರುವ ಧಾರ್ಮಿಕಶಕ್ತಿಯಿಂದ. ಎಲ್ಲಿಯವರೆಗೆ ಯಾವ ರಾಜ್ಯವು ಧರ್ಮನೀತಿಗಳ ಬೆಂಬಲದಿಂದ ಪ್ರಜೆಗಳ ಸುಖಕ್ಕಾಗಿ ನಡೆಯುತ್ತಿತ್ತೋ ಅಲ್ಲಿಯವರೆಗೆ ಅದರಲ್ಲಿ ಬಲವಿತ್ತೆಂಬುದು ಇತಿಹಾಸದಲ್ಲಿ ಸುಪ್ರಸಿದ್ಧವಾಗಿರುತ್ತದೆ. ಪುರಾಣಕಾಲಗಳಲ್ಲಲ್ಲದೆ ಇತ್ತೀಚೆಗೆ ಆಳಿದ ಅಶೋಕಚಕ್ರವರ್ತಿಯೇ ಮುಂತಾದವರ ಇತಿಹಾಸದಿಂದಲೂ ನೈತಿಕ ಬೆಂಬಲದಿಂದ ರಾಜ್ಯವನ್ನು ಎಷ್ಟು ಬಲಪಡಿಸಬಹುದೆಂಬುದು ವ್ಯಕ್ತವಾಗುತ್ತದೆ. ನೀತಿಗೆಲ್ಲ ಅಡಿಗಲ್ಲಾಗಿರುವ ಅಧ್ಯಾತ್ಮವಿದ್ಯೆಯ ಪ್ರಯೋಜನವನ್ನು ರಾಜಕೀಯಕ್ಷೇತ್ರದಲ್ಲಿಯೂ ಪಡೆಯಬಹುದೆಂಬುದು ಇದರಿಂದಲೇ ಏರ್ಪಡುತ್ತದೆ.

ಈ ವಿದ್ಯೆಯನ್ನು ಸಮಾಜಸುಧಾರಣೆಗೂ ಉಪಯೋಗಿಸಿಕೊಳ್ಳಬಹುದು. ಅಧ್ಯಾತ್ಮವಿದ್ಯೆಯು ಪ್ರಬಲವಾಗಿದ್ದಾಗ ನಮ್ಮ ದೇಶವು ಪರರಾಜರ ಧಾಳಿಗೆ ಈಡಾಗಿರಲಿಲ್ಲ. ಇಲ್ಲಿಯ ಸಂಪತ್ತು ಸಮೃದ್ಧವಾಗಿತ್ತು. ಜನರ ಸಮಾಜವೂ ಸುಸಂಸ್ಕೃತವಾಗಿತ್ತು. ಈಗಿನ ಸಮಾಜನ್ಯೂನತೆಗಳು ಇರಲಿಲ್ಲ-ಎಂದು ಪೂರ್ವದ ಇತಿಹಾಸದಿಂದ ತಿಳಿಯಬರುತ್ತದೆ. ಯಾವ ದೇಶದಲ್ಲಿಯೇ ಆಗಲಿ, ಹೆಂಗಸರು ಧಾರ್ಮಿಕರಾದರೆ ಆ ದೇಶಕ್ಕೆ ಒಂದು ಬಲವಿರುತ್ತದೆ, ಅವರು ಧರ್ಮಬಾಹ್ಯರಾದರೆ ಆ ದೇಶಕ್ಕೇ ಒಂದು ಅಪಾಯವಿರುತ್ತದೆ. ಬಡವರ ಗೋಳೆಂಬ ರೋಗವನ್ನು ಪರಿಹರಿಸಿ ಅವರನ್ನು ಉದ್ಧಾರ ಮಾಡುವದಕ್ಕೆ ಅಧ್ಯಾತ್ಮವಿದ್ಯೆಯು ಸಂಜೀವಿನಿಯು; ಸ್ತ್ರೀಯರ ಏಳಿಗೆಗೆ ಅದು ಒಂದು ಉತ್ತಮವಾದ ಸಾಧನವಾಗಿ ರುತ್ತದೆ. ಈಗಿನಂತೆ ಸಮಾಜದಲ್ಲಿ ಎಲ್ಲರೂ ತಮ್ಮತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಹೊರಡುವ ಬದಲು ಅಧ್ಯಾತ್ಮವಿದ್ಯೆಯ ಕ್ರಮವನ್ನನುಸರಿಸಿ ತಮ್ಮತಮ್ಮ ಧರ್ಮಗಳನ್ನು ಕಾಪಾಡಿಕೊಳ್ಳುವ ಕರ್ಮಯೋಗವನ್ನವಲಂಬಿಸಿದರೆ ಈಗಿನ ಎಷ್ಟೋ ಸಮಸ್ಯೆಗಳು ಬಹುಸುಲಭವಾಗಿ ಮಾಯವಾದಾವು!

ಅಧ್ಯಾತ್ಮವಿದ್ಯೆಯೆಂಬುದು ಒಂದು ಕುಪ್ಪಿಯ ಮಾತ್ರೆಯಿದ್ದಂತೆ. ಅದನ್ನು ಬೇರೆಬೇರೆಯ ಅನುಪಾನಗಳಿಂದ ಅಧಿಕಾರಿಗಳಿಗೆ ಕೊಟ್ಟರೆ ಅದರಿಂದ ಅತ್ಯುತ್ತಮ ಫಲವು ದೊರಕುತ್ತದೆ. ಕರ್ಮ, ಉಪಾಸನೆ, ಜ್ಞಾನ- ಇವೆಲ್ಲ

ಅದರ ರೂಪಬೇಧಗಳೇ. ಅದನ್ನು ಅರಸರಿಗೆ ಧರ್ಮರಕ್ಷಣಬುದ್ಧಿ, ಸಾಹಸ, ಮುಂತಾದವುಗಳು ಉಕ್ಕುವಂತೆ, ಬ್ರಾಹ್ಮಣನಿಗೆ ಶಮದಮಾದಿಗಳು ಮೂಡುವಂತೆ, ವೈಶ್ಯನಿಗೆ ಪ್ರಜಾಸೌಖ್ಯದ ದೃಷ್ಟಿಯಿರುವಂತೆ-ಹೀಗೆ ಬೇರೆಬೇರೆಯ ರೀತಿಗಳಲ್ಲಿ ಕಲಿಸಬೇಕು. ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಅಧ್ಯಾತ್ಮಗ್ರಂಥಗಳನ್ನು ಬಲ್ಲವರಿಂದ ಬರೆಯಿಸಬೇಕು. ವಿದ್ಯಾವಂತರಾದ ಸಾಧುಸಂತರನ್ನು ಗೌರವಿಸಿ ಅವರಿಂದಲೇ ಅಧ್ಯಾತ್ಮವಿದ್ಯೆಯ ಬೋಧನೆಯನ್ನು ಮಾಡಿಸಬೇಕು. ಆಗಲೇ ನಮ್ಮ ದೇಶದ ಸಂಸ್ಕೃತಿಯು ನಮ್ಮ ತರುಣರ ಹೃದಯದಲ್ಲಿ ನೆಲಸುವದು, ನಿಜವಾದ ದೇಶಾಭಿಮಾನವು ಬರುವದು, ಲೋಕಕ್ಕೆ ಕಲ್ಯಾಣವಾಗುವದು-ಎಂಬುದು ಅಧ್ಯಾತ್ಮವಿದ್ಯೆಯ ಪ್ರಯೋಜನವು.

★★★★★

# ಸದ್ಗುರುಸಚ್ಛಾಸ್ತ್ರಗಳ ಪ್ರಯೋಜನ

**21-4-1942**

**ಶ್ರೀ ಶ್ರೀಗಳು**

ಸದ್ಗುರು ಸಚ್ಛಾಸ್ತ್ರ- ಎಂಬ ಶಬ್ದಗಳಲ್ಲಿ 'ಸತ್' ಎಂಬ ವಿಶೇಷಣದ ಸಾರ್ಥಕ್ಯವೇನು? ಗುರುಗಳು ಹಿತವನ್ನೇ ಉಪದೇಶಿಸುತ್ತಾರೆ: ಶಾಸ್ತ್ರವು ಇದ್ದದ್ದು ಇದ್ದಂತೆಯೇ ತಿಳಿಸಿಕೊಡುತ್ತದೆ. ಆದ್ದರಿಂದ ಗುರುವೂ ಶಾಸ್ತ್ರವೂ ಸ್ವಭಾವದಿಂದಲೇ ಸತ ಪದಾರ್ಥಗಳಾಗಿರುತ್ತವೆ. ಆದ್ದರಿಂದ ಅಸದ್ಗುರುಗಳಾಗಲಿ ಅಸಚ್ಛಾಸ್ತ್ರವಾಗಲಿ ಇರುವ ಸಂಭವವೇ ಇಲ್ಲ. ಹೀಗಿರುವಲ್ಲಿ ಸದ್ಗುರು, ಸಚ್ಛಾಸ್ತ್ರ- ಎಂಬ ವಿಶೇಷಣವೇತಕ್ಕೆ ಬೇಕು?- ಎಂದು ಯಾರಾದರೂ ಕೇಳಬಹುದು. ಆದರೆ ಉತ್ತಮವಾದ ಅರ್ಥವನ್ನು ಹೇಳುವ ಶಬ್ದಗಳನ್ನು ಜನರು ಅರಿಯದೆ ಸಾಮಾನ್ಯ ಪದಾರ್ಥಗಳಿಗೂ ಉಪಯೋಗಿಸುವದು ರೂಢಿಯಾಗಿಬಿಟ್ಟರೆ

ಅವುಗಳ ಬೆಲೆ ಕಡಿಮೆಯಾದಂತೆ ಆಗಿಬಿಡುತ್ತದೆ; ಆಗ ನಿಜವಾದ ವಾಚ್ಯಾರ್ಥವನ್ನು ಸೂಚಿಸುವದಕ್ಕೆ ಶಬ್ದಕ್ಕೆ ಮತ್ತೊಂದು ತಕ್ಕ ವಿಶೇಷಣವನ್ನು ಸೇರಿಸಬೇಕಾಗುತ್ತದೆ. ಅಲ್ಲವೆ? ಅದರಂತೆ ಗುರು ಎಂಬ ಶಬ್ದಕ್ಕೆ ಇದ್ದ ಹಿತತಮವಾದದ್ದನ್ನು ಬೋಧಿಸುವ ಆಚಾರ್ಯನು ಎಂಬ ಅರ್ಥವು ಕಾಲಕ್ರಮದಲ್ಲಿ ಮರೆತುಹೋಗಿ ಯಾವದಾದರೊಂದು ಒಳ್ಳೆಯ ವಿಷಯವನ್ನು ತಿಳಿಸುವವನಿಗೂ ಗುರುವೆಂಬ ಶಬ್ದವನ್ನೇ ಉಪಯೋಗಿಸುತ್ತಾ ಬಂದಿರುತ್ತಾರೆ. ಇದರಂತೆ ಅತ್ಯಂತ ಹೆಚ್ಚಿನ ಪರಮಾರ್ಥವನ್ನು ತಿಳಿಸುವದೇ ಶಾಸ್ತ್ರವೆನಿಸುವದಕ್ಕೆ ಯೋಗ್ಯವಾದರೂ ಯಾವದಾದರೊಂದು ಲೌಕಿಕ ವಿಷಯವನ್ನು ತಿಳಿಸುವ ಕ್ರಮಪಟ್ಟ ಉಪದೇಶಗ್ರಂಥವನ್ನುಕೂಡ ಶಾಸ್ತ್ರವೆಂದೇ ಕರೆಯುವ ರೂಢಿಯಾಗಿ ಬಿಟ್ಟಿರುತ್ತದೆ. ಆದ್ದರಿಂದ ನಿಜವಾದ ಗುರುವನ್ನು ನಿಜವಾದ ಶಾಸ್ತ್ರವನ್ನೂ ತಿಳಿಸುವದಕ್ಕೆ ಈಗ ಸತ್ ಎಂಬ ಉಪಸರ್ಗವನ್ನು ಸೇರಿಸಿ ಸದ್ಗುರು, ಸಚ್ಛಾಸ್ತ್ರ- ಎಂಬ ಪದಗಳನ್ನು ಉಪಯೋಗಿಸಬೇಕಾಗಿ ಬಂದಿರುತ್ತದೆ.

ಸತ್ ಎಂಬುದು ಪರಮಾತ್ಮನ ಹೆಸರು. ''**ಸದೇವ ಸೋಮ್ಯೇದಮಗ್ರ ಆಸೀತ್**'' (**ಛಾಂ**), ''**ಓಂತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ**'' (**ಗೀ**) ಎಂಬ ಶ್ರುತಿಸ್ಮೃತಿಗಳಲ್ಲಿ ಹೀಗೆಂದು ತಿಳಿಸಿರುತ್ತದೆ. ಆದ್ದರಿಂದ ಸದ್ಗುರು ಎಂದರೆ ಪರಮಾತ್ಮತತ್ತ್ವವನ್ನು ತಿಳಿಸಿಕೊಡಬಲ್ಲ ಗುರುವೆಂದು ಅರ್ಥ; ಇದರಂತೆ ಸಚ್ಛಾಸ್ತ್ರವೆಂದರೆ ಪರಮಾತ್ಮತತ್ತ್ವವನ್ನುಪದೇಶಿಸುವ ಶಾಸ್ತ್ರವೆಂದು ಅರ್ಥ. ನಿಜವಾಗಿ ನೋಡಿದರೆ ಪರಮಾತ್ಮತತ್ತ್ವವನ್ನು ಬಲ್ಲಾತನು ಹೇಳುವ ವಾಕ್ಯಕ್ಕೂ ಶಾಸ್ತ್ರಕ್ಕೂ ಭೇದವೇ ಇರುವದಿಲ್ಲ. ಏಕೆಂದರೆ ಸದ್ಗುರುವಾದವನು ಏನು ಹೇಳುತ್ತಾನೆಯೋ ಅದೇ ಶಾಸ್ತ್ರವಾಗುತ್ತದೆ. ವೇದದಲ್ಲಿ ಪ್ರಸಿದ್ಧರಾಗಿರುವ ಋಷಿಗಳು ಇಂಥ ಸದ್ಗುರುಗಳು; ಆದ್ದರಿಂದಲೇ ಮಾಂಡೂಕ್ಯಕಾರಿಕೆಯಲ್ಲಿ ಪರಮಾತ್ಮತತ್ತ್ವವನ್ನು ಬಲ್ಲಾತನೇ ಶಾಸ್ತ್ರಾರ್ಥವನ್ನು ನಿಜವಾಗಿ ಬಲ್ಲವನು ಎಂದಿದೆ; ಆ ಕಾರಿಕೆಯನ್ನು ವಿವರಿಸುವಾಗ ಭಾಷ್ಯಕಾರರು ''ಅಧ್ಯಾತ್ಮವೇತ್ತನಲ್ಲದವನಿಗೆ ಶಾಸ್ತ್ರದ ಅರ್ಥವು ಎಂದಿಗೂ ಹೊಳೆಯಲಾರದು'' ಎಂದು ವಿವರಿಸಿರುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ಸದ್ಗುರು, ಸಚ್ಛಾಸ್ತ್ರ- ಎಂದು ಎರಡಿಲ್ಲ; ಸದ್ಗುರುವಚನವೇ ಸಚ್ಛಾಸ್ತ್ರವೆನಿಸಿರುತ್ತದೆ. ಆದರೂ ಸದ್ಗುರುಗಳು

'ಇದು ನನ್ನ ಅನುಭವದ ವಾಕ್ಯ' ಎಂದು ಹೆಮ್ಮೆಯಿಂದ ಬೋಧಿಸುವದಿಲ್ಲ; 'ಇದು ದೊಡ್ಡವರು ಹೇಳಿದ ಸಂಪ್ರದಾಯವಚನವು, ಹೀಗೆಂದು ಶಾಸ್ತ್ರದಲ್ಲಿ ಹೇಳಿದೆ' ಎಂದು ಹಿಂದಿನವರ ವಚನವನ್ನುದಾಹರಿಸಿಯೇ ಬೋಧಿಸುತ್ತಾರೆ. ಆದ್ದರಿಂದ ಸದ್ಗುರು, ಸಚ್ಛಾಸ್ತ್ರ-ಎಂದು ಎರಡು ಬಗೆಯಿಂದ ಬೋಧನ ಸಾಮಗ್ರಿಯನ್ನು ನಾವು ಅಂಗೀಕರಿಸಿರುತ್ತೇವೆ.

ಯಾರು ಪರಮಾತ್ಮನ ನಿಜವಾದ ಸ್ವರೂಪವನ್ನು ಅರಿತುಕೊಂಡು ಅವನ ತಾದಾತ್ಮ್ಯವನ್ನು ಪಡೆದಿರುವರೋ ಅವರನ್ನೇ ಸತ್ಪುರುಷರು, ಸಾಧುಗಳು, ಸಂತರು-ಎಂದು ಕರೆಯುತ್ತಾರೆ. ಸದ್ಗುರುವೆಂದರೆ ಇಂಥ ಸಾಧುವಾದ ಮಹಾತ್ಮನೇ.

**ಅನನ್ತಂ ಸಮತಾನನ್ದಂ ಪರಮಾರ್ಥಂ ವಿದುರ್ಬುಧಾಃ ।**
**ಸ ಯೇಭ್ಯಃ ಪ್ರಾಪ್ಯತೇ ನಿತ್ಯಂ ತೇ ಸೇವ್ಯಾಃ ಶಾಸ್ತ್ರಸಾಧವಃ ॥**

ಎಂಬ ವಾಸಿಷ್ಠೋಕ್ತಿಯಲ್ಲಿ (2-7-24) ಈ ಅಭಿಪ್ರಾಯವನ್ನು ಪ್ರಕಟಿಸಿರುತ್ತದೆ. ಅನಂತವಾದ ಸಮತಾನಂದವೇ ಪರಮಾರ್ಥವೆಂದು ಬಲ್ಲವರು ಹೇಳುತ್ತಾರೆ; ಆ ಪರಮಾರ್ಥವು ಯಾರಿಂದ ನಮಗೆ ದೊರೆಯುವದೋ ಅಂಥ ಶಾಸ್ತ್ರವನ್ನೂ ಸಾಧುಗಳನ್ನೂ ಸೇವಿಸಬೇಕು-ಎಂಬುದು ಶ್ಲೋಕದ ಅರ್ಥವು. ಏರುಪೇರಿಲ್ಲದ ಆನಂದವೊಂದುಂಟು, ಅದಕ್ಕೇ ಪರಮಾರ್ಥವೆಂದು ಹೆಸರು. ಆ ಆನಂದವು ಕೃತಕವಲ್ಲವಾದ್ದರಿಂದ ಯಾವದಾದರೊಂದು ಸಾಧನದ ಫಲವಾಗಿ ಹೊಸದಾಗಿ ಹುಟ್ಟುವದಲ್ಲ; ನಿಜವಾಗಿ ನಿತ್ಯವಾಗಿ ಯಾವಾಗಲೂ ಇದ್ದುಕೊಂಡಿರುವದರಿಂದ ಅನಂತಾನಂದವೆಂದು ಅದಕ್ಕೆ ಹೆಸರು. ಈ ಆನಂದವು ಸಾಧುಗಳ ಸೇವೆಯಿಂದಲೂ ಸಚ್ಛಾಸ್ತ್ರಶ್ರವಣದಿಂದಲೂ ದೊರಕುತ್ತದೆ. ಆದ್ದರಿಂದ ಅಂಥ ಸಾಧುಗಳನ್ನು ಶರಣುಹೊಕ್ಕು ಅಂಥ ಶಾಸ್ತ್ರವನ್ನು ಶ್ರವಣಮಾಡಿ ಅವನ್ನು ಪಡೆದುಕೊಳ್ಳಬೇಕು.

ಪರಮಾರ್ಥವನ್ನು ಅರಿಯುವದಕ್ಕೆ "**ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ।**" ಎಂಬ

ಶ್ರುತಿಯಲ್ಲಿ ಹೇಳಿರುವಂತೆ ಶಾಸ್ತ್ರಾರ್ಥವನ್ನು ಚೆನ್ನಾಗಿ ಅರಿತವನಾಗಿ ಬ್ರಹ್ಮದಲ್ಲಿಯೇ ನೆಲೆನಿಂತಿರುವ ಶಾಂತನಾದ ಸದ್ಗುರುವಿನ ಬಳಿಗೇ ಹೋಗಬೇಕು. ಈ ಶ್ರುತಿಯಲ್ಲಿರುವ 'ಅಭಿಗಚ್ಛೇತ್' ಎಂಬ ಮಾತಿನಲ್ಲಿ 'ಅಭಿ' ಎಂಬ ಉಪಸರ್ಗದ ಅಭಿಪ್ರಾಯವೇನೆಂದರೆ ಗುರುಗಳನ್ನು ನೋಡಿಬರಬೇಕೆಂಬ ಕುತೂಹಲದಿಂದ ಹೋಗುವದು ಅಭಿಗಮನವಲ್ಲ; ಇಹಪರಫಲಭೋಗದಲ್ಲಿ ವಿರಕ್ತನಾಗಿ ಸಂಸಾರದಿಂದ ಬಿಡುಗಡೆಯನ್ನು ಹೊಂದಬೇಕೆಂಬ ಹಂಬಲಿನಿಂದ 'ಇವರೇ ನನಗೆ ಗತಿ, ಇವರಿಂದಲೇ ನಾನು ಬದುಕಬೇಕು' ಎಂಬ ಸದಭಿಪ್ರಾಯದಿಂದ ಗುರುವನ್ನು ಸೇರುವದೇ ಅಭಿಗಮನವು. ಇಲ್ಲಿ ಗುರುಮೇವ (ಗುರುವನ್ನೇ)-ಎಂದು ಅವಧಾರಣೆಮಾಡಿರುವದರಿಂದ ಎಂಥ ಶಾಸ್ತ್ರಜ್ಞನಾದರೂ ಸ್ವತಂತ್ರವಾಗಿ ಬ್ರಹ್ಮಜ್ಞಾನವನ್ನು ಪಡೆಯುವ ಪ್ರಯತ್ನವನ್ನು ಮಾಡಬಾರದೆಂದು ತಿಳಿಸಿದಂತಾಯಿತು-ಎಂದು ಭಾಷ್ಯಕಾರರು ಬರೆದಿರುತ್ತಾರೆ. ಸ್ವಲ್ಪ ಸಂಸ್ಕೃತವೂ ಶಾಸ್ತ್ರಪರಿಚಯವೂ ಆದರೆ ತತ್ತ್ವಜ್ಞಾನವು ಆಗಿಬಿಡುವದೆಂದು ನೆನಸುವದು ತಪ್ಪು; ಗುರುಗಳ ಅನುಗ್ರಹದಿಂದಲೇ ಆ ಜ್ಞಾನವು ಬರಬೇಕು. ಬರಿಯ ಓದಿನಿಂದಲೂ ಪ್ರಯೋಜನವಿದೆ, ಆದರೆ ಅವಕ್ಕೆ ಜೀವಕಳೆ ಬರುವದು ಸದ್ಗುರುಗಳಿಂದ.

''**ತದ್ವಿಜ್ಞಾನೇನ ಪರಿಪಶ್ಯನ್ತಿ ಧೀರಾಃ**'' (ಮುಂ.2-2-7) ಎಂದು ಶ್ರುತಿಯಲ್ಲಿದೆ. ಆತ್ಮತತ್ತ್ವವು ನಮ್ಮ ಹೃದಯದಲ್ಲಿಯೇ ಇರುತ್ತದೆ; ಅದರ ವಿಜ್ಞಾನದಿಂದ ಅದು ಎಲ್ಲೆಲ್ಲಿಯೂ ಇರುವದೆಂಬುದನ್ನು ಜಾಣರು ಕಂಡುಕೊಳ್ಳುತ್ತಾರೆ-ಎಂಬುದು ಶ್ರುತಿಯ ಅರ್ಥ. **ವಿಜ್ಞಾನವೆಂದರೇನು?** ಇದೊಂದು ವಿಶಿಷ್ಟವಾದ ಜ್ಞಾನವು. ಇದರಲ್ಲಿರುವ ವಿಶೇಷಗಳೇನೆಂಬುದನ್ನು ಭಾಷ್ಯಕಾರರು ಹೀಗೆ ವರ್ಣಿಸಿರುತ್ತಾರೆ: ಇದು ಶಾಸ್ತ್ರಾಚಾರ್ಯರ ಉಪದೇಶದಿಂದಲೇ ಉಂಟಾಗತಕ್ಕದ್ದು; ಶಮ, ದಮ, ಧ್ಯಾನ, ಸರ್ವತ್ಯಾಗ, ವೈರಾಗ್ಯ-ಎಂಬ ಸಾಧನಗಳಿದ್ದವರಿಗೇ ಆ ಉಪದೇಶವು ಫಲಿಸತಕ್ಕದ್ದು. ಸಾಮಾನ್ಯರಾದ ಗುರುಗಳಿಂದ ಇದು ದೊರಕದು. ಅಸದ್ಗುರುಗಳಿಂದ ಲಾಭವಿಲ್ಲ, ಹಾನಿಯೂ ಆಗಬಹುದು. ಆದ್ದರಿಂದ ಇಂಥ ಸದ್ಗುರುವನ್ನೇ ಶರಣುಹೊಗಬೇಕು.

ಸದ್ಗುರುವಿನಿಂದ ಆಗುವ ಲಾಭವೇನು? ಅವರ ಸೇವೆ, ದರ್ಶನ, ಸೇವೆ-ಇವುಗಳಿಂದ ಹೆಜ್ಜೆಹಜ್ಜೆಗೂ ಸುಖಸಂತೋಷಗಳು ಹೆಚ್ಚುವವು. ಬೆಳದಿಂಗಳಲ್ಲಿ ಆಗುವ ಆಹ್ಲಾದದಂತೆ ನಮ್ಮ ಮನಸ್ಸಿನಲ್ಲಿ ಸಂತಾಪವು ನೀಗಿ ಚಿತ್ತವು ಉಲ್ಲಾಸವನ್ನು ಹೊಂದುವದು. ಅವರ ಶಕ್ತಿಯು ನಮ್ಮಲ್ಲಿ ಹೊಕ್ಕು ನಮ್ಮ ವಾಙ್ಮನಃಕಾಯಗಳಮೇಲೆ ಒಂದುಅಸಾಧಾರಣವಾದ ಪರಿಣಾಮವನ್ನುಂಟುಮಾಡುವದು. ಇದಕ್ಕೆ ಶಕ್ತಿಪಾತವೆಂದು ಹೆಸರು. ಸದ್ಗುರುಗಳಿಂದ ಮತ್ತೊಂದು ಲಾಭವಿರುತ್ತದೆ. ಈಗ ನಮ್ಮ ಚಿತ್ತಕ್ಕೂ ಹೊರಗಿನ ವಿಷಯಗಳಿಗೂ ಒಂದು ಗಂಟುಬಿದ್ದಿರುತ್ತದೆ. ನಮಗೆ ಶರೀರದಮೇಲೂ ದಾರಾಪುತ್ರಾದಿಗಳಮೇಲೂ ಮಿತಿಮೀರಿದ ಆಸಕ್ತಿಯುಂಟಾಗಿ ರುತ್ತದೆ. ಈ ಗಂಟಿಗೆ ಮೂಲವು ಅವಿದ್ಯೆ, ತಪ್ಪು ತಿಳಿವು. ಆ ಸದ್ಗುರುವಿನ ಉಪದೇಶದಿಂದ ಈ ಗಂಟು ಬಿಚ್ಚಿಕೊಳ್ಳುತ್ತದೆ. ಪರಮಾತ್ಮನು ಎಲ್ಲೆಲ್ಲಿಯೂ ಇರುವನೆಂಬ ಜ್ಞಾನವುಂಟಾಗಿ ಅದರ ಅಭಾವದಿಂದ ನಮ್ಮಲ್ಲಿದ್ದ ದೃಢವಾದ ಅವಿದ್ಯಾಕಾಮವಾಸನೆಯು ನಾಶವಾಗಿಬಿಡುತ್ತದೆ. ಇದನ್ನೇ **ಗ್ರಂಥಿಭೇದ**ವೆಂದು ಕರೆಯುತ್ತಾರೆ. ನಿಜವಾಗಿ ಪರತತ್ತ್ವವು ಅನುಭವಾನುಸಾರಿಯಾದ ಯುಕ್ತಿಗೇ ತಿಳಿಯತಕ್ಕದ್ದಾಗಿದೆ; ಆದ್ದರಿಂದ ಅದು ಯಾವನೊಬ್ಬ ವ್ಯಕ್ತಿಯನ್ನೂ ಅವಲಂಬಿಸಿಲ್ಲವೆಂಬುದು ನಿಜ. ಆದರೂ ಅದು ಶಾಸ್ತ್ರಾಚಾರ್ಯರ ಪ್ರಸಾದದಿಂದಲೇ ನಮಗೆ ದೊರೆಯತಕ್ಕದ್ದಾಗಿರುತ್ತದೆ.

ಹೀಗಿರುವದರಿಂದ ಯಾವಾತನಿಗೆ ಪರಮೇಶ್ವರನಲ್ಲಿರುವಷ್ಟೇ ಭಕ್ತಿಯು ಗುರುವಿನಲ್ಲಿಯೂ ಇರುವದೋ ಅಂಥವನಿಗೇ ತತ್ತ್ವಾರ್ಥವು ತಿಳಿಯಬರುತ್ತದೆ; ಮೋಹವು ತೊಲಗುತ್ತದೆ. ಇಷ್ಟೇ ಅಲ್ಲ, ಸರ್ವಾತ್ಮಭಾವವನ್ನು ಪಡೆದಿರುವ ಮಹಾತ್ಮರು ಯಾವ ಸಂಕಲ್ಪವನ್ನು ಮಾಡಿದರೆ ಅದು ಅವಶ್ಯವಾಗಿ ನೆರವೇರುತ್ತದೆ. ಅಂಥ ಸತ್ಯಸಂಕಲ್ಪದವರು, ಪರಮಾತ್ಮನಲ್ಲಿ ತಾದಾತ್ಮ್ಯವನ್ನು ಹೊಂದಿರುವವರು! ಆದ್ದರಿಂದ ತಮಗೆ ಒಳ್ಳೆಯದಾಗಬೇಕೆಂದು ಬಯಸುವವರು ಅವಶ್ಯವಾಗಿ ಆತ್ಮಜ್ಞಾನಿಗಳನ್ನು ಗೌರವಿಸಬೇಕು. ಅವರ ಪಾದಸೇವೆ, ಶುಶ್ರೂಷೆ ಇವುಗಳಿಂದ ಇಹಸೌಖ್ಯವೂ ಚಿತ್ತಶುದ್ಧಿಯೂ ಜ್ಞಾನವೂ ತಪ್ಪದೆ ದೊರಕುತ್ತವೆ.

ಸದ್ಗುರುಗಳಾದವರಿಗೆ ದೃಷ್ಟಾಂತವೇ ಇಲ್ಲ. ಅವರನ್ನು ಸ್ಪರ್ಶಮಣಿಯೆಂದು ವರ್ಣಿಸುವದು ಕೂಡ ಕಡಿಮೆಯೇ. ಏಕೆಂದರೆ ಸ್ಪರ್ಶವು ತನ್ನನ್ನು ಮುಟ್ಟಿದ ಲೋಹವನ್ನು ಚಿನ್ನವಾಗಿ ಮಾಡುವದಂತೆ; ಆದರೆ ಆ ಲೋಹವು ಮತ್ತೊಂದು ಸ್ಪರ್ಶಮಣಿಯೇನೂ ಆಗುವದಿಲ್ಲ. ಸದ್ಗುರುಗಳು ಶಿಷ್ಯರನ್ನು ತಮ್ಮಂತೆಯೇ ಮಾಡಿಬಿಡುತ್ತಾರೆ ಎಂದು **ಶತಶ್ಲೋಕಿ**ಯಲ್ಲಿ ವರ್ಣಿಸಿರುತ್ತದೆ. ಇದೇನೂ ಅತ್ಯುಕ್ತಿಯಲ್ಲ. ಏಕೆಂದರೆ ಈಶ್ವರ, ಗುರು, ತಾನು-ಎಂಬ ಭೇದವನ್ನು ತೊಡೆದು ಎಲ್ಲವೂ ಬ್ರಹ್ಮವೇ ಎಂಬ ಜ್ಞಾನವನ್ನು ಕೊಡುವದೇ ಶಾಸ್ತ್ರದ ಉದ್ದೇಶ; ಅದನ್ನು ನೇರಾಗಿ ಅನುಗ್ರಹಿಸುವದೇ ಸದ್ಗುರುವಿನ ಕೆಲಸವು.

★★★★★

# ವೇದಾಂತವೂ ಯೋಗವೂ

**23-4-1942**

**ಶ್ರೀಶ್ರೀಗಳು**

ವೇದಾಂತದರ್ಶನದಲ್ಲಿ ಹೇಳಿರುವ ಜ್ಞಾನಕ್ಕೂ ಯೋಗಸಾಧನಕ್ಕೂ ಎಷ್ಟುಮಟ್ಟಿನ ಸಂಬಂಧವಿದೆ?-ಎಂಬುದು ವಿಚಾರಣೀಯವಾದ ವಿಷಯವು. ಏಕೆಂದರೆ ಈ ವಿಷಯಕ್ಕೆ ವೇದಾಂತಿಗಳಲ್ಲಿಯೇ ಮತಭೇದವಿರುತ್ತದೆ. ಕೆಲವರ ಮತದಲ್ಲಿ ಯೋಗವಿಲ್ಲದೆ ಜ್ಞಾನವುಂಟಾಗುವಂತೆಯೇ ಇಲ್ಲ. ಮತ್ತೆ ಕೆಲವರ ಮತದಲ್ಲಿ ವೇದಾಂತಕ್ಕೆ ಯೋಗದ ಗೋಜೇ ಬೇಕಿರುವದಿಲ್ಲ. ಹೀಗೆ ಅತ್ಯಂತ ವಿರುದ್ಧವಾದ ಈ ಎರಡು ಮತಗಳಲ್ಲಿ ಯಾವದು ಸರಿ? ಅಥವಾ ಇವೆರಡಕ್ಕೂ ಮಧ್ಯವರ್ತಿಯಾದ ಬೇರೊಂದು ತೀರ್ಮಾನವೂ ಆಗಬಹುದೆ?- ಎಂಬುದನ್ನು ಮುಮುಕ್ಷುಗಳು ವಿಚಾರ ಮಾಡತಕ್ಕದ್ದಾಗಿದೆ.

ಸಾಮಾನ್ಯವಾಗಿ ನೋಡಿದರೆ ''**ಶ್ರದ್ಧಾಭಕ್ತಿಧ್ಯಾನಯೋಗಾದವೇಹಿ**'' (ತೈ.2) ''ಶ್ರದ್ಧಾಭಕ್ತಿಧ್ಯಾನಗಳಿಂದ ತಿಳಿದುಕೊ'' **ತತಸ್ತು ತಂ ಪಶ್ಯತೇ ನಿಷ್ಕಲಂ ಧ್ಯಾಯಮಾನಃ॥** (ಮುಂ.3-1-18) ''ಆಮೇಲೆ ಆ ನಿಷ್ಕಲನನ್ನು ಧ್ಯಾನಮಾಡಿ ಕಂಡುಕೊಳ್ಳುವನು'', ''**ವಿದ್ಯಾಮೇತಾಂ ಯೋಗವಿಧಿಂ ಚ ಕೃತ್ಸ್ನಮ್**'' (ಕ.2-1-18) ಈ ವಿದ್ಯೆಯನ್ನೂ ಯೋಗವಿಧಾನವನ್ನೂ ಪಡೆದುಕೊಂಡು ನಚಿಕೇತನು ಬ್ರಹ್ಮವನ್ನು ಸೇರಿದನು- ಎಂದು ಮುಂತಾಗಿ ಶ್ರುತಿಗಳಲ್ಲಿ ಯೋಗದ ಆವಶ್ಯಕತೆಯನ್ನು ಹೇಳಿರುತ್ತದೆ. ''**ಅಪಿ ಚ ಸಂರಾಧನೇ ಪ್ರತ್ಯಕ್ಷಾನುಮಾನಾಭ್ಯಾಮ್**'' (ಬ್ರ. ಸೂ.3-2-24) (ಮತ್ತು ಯೋಗದಿಂದ ಪರಮಾತ್ಮನಲ್ಲಿ ಐಕ್ಯವಾಗುವದೆಂದು ಶ್ರುತಿಸ್ಮೃತಿಗಳಲ್ಲಿ ಹೇಳಿದೆ) ಎಂಬ ಶಾರೀರಕಸೂತ್ರವೂ ಯೋಗವು ಬೇಕೆಂದಿರುತ್ತದೆ. **ಯಂ ವಿನಿದ್ರಾ ಜಿತಶ್ವಾಸಾಃ ಸನ್ತುಷ್ಟಾಃ ಸಂಯತೇನ್ದ್ರಿಯಾಃ । ಜ್ಯೋತಿಃ ಪಶ್ಯನ್ತಿ ಯುಞ್ಜಾನಾಸ್ತಸ್ಮೈ ಯೋಗಾತ್ಮನೇ ನಮಃ ॥** 'ನಿದ್ರೆಯನ್ನು ಗೆದ್ದು ಶ್ವಾಸವನ್ನು ಹತೋಟಿಯಲ್ಲಿಟ್ಟುಕೊಂಡು ಜಿತೇಂದ್ರಿಯರಾಗಿ ತೃಪ್ತರಾಗಿರುವ ಯೋಗಿಗಳು ಯಾವ ಜ್ಯೋತಿಯನ್ನು ಕಾಣುವರೋ ಅಂಥ ಯೋಗರೂಪನಿಗೆ ನಮಸ್ಕಾರ!- ಇವೇ ಮುಂತಾದ ವಚನಗಳಲ್ಲಿ ಯೋಗವು ವೇದಾಂತಜ್ಞಾನಕ್ಕೆ ಅತ್ಯವಶ್ಯವೆಂಬುದು ಸ್ಪಷ್ಟವಾಗುತ್ತದೆ. ಆದರೆ ''**ನಾನ್ಯಃ ಪನ್ಥಾವಿದ್ಯತೇಽಯನಾಯ**''- ಬ್ರಹ್ಮಪ್ರಾಪ್ತಿಗೆ ಜ್ಞಾನದ ಹೊರತು ಮತ್ತೊಂದು ದಾರಿ ಬೇಕಿರುವದಿಲ್ಲ. ''**ಜ್ಞಾನಾದೇವ ತು ಕೈವಲ್ಯಮ್**''-ಜ್ಞಾನದಿಂದಲೇ ಕೈವಲ್ಯವು ದೊರಕುವದು. ''**ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ**''- ಇದನ್ನರಿತುಕೊಂಡಾತನು ಜ್ಞಾನಿಯೂ ಕೃತಕೃತ್ಯನೂ ಆಗುವನು ಎಂಬುದೇ ಮುಂತಾದ ವಚನಗಳು ಜ್ಞಾನಕ್ಕೆ ಮತ್ತೇತರ ಸಹಾಯವೂ ಬೇಡವೆಂಬುದನ್ನು ಸಾರುತ್ತಿರುವವು. ಹೀಗೆ ಎರಡು ರೀತಿಯ ವಚನಗಳಿರುವದರಿಂದ ಈ ವಿಷಯದಲ್ಲಿ ಎರಡು ಬೇರೆಬೇರೆಯ ಅಭಿಪ್ರಾಯಗಳುಂಟಾಗಿರುವದೇನೂ ಆಶ್ಚರ್ಯವಲ್ಲ.

ಇಲ್ಲಿ ಯೋಗಪಕ್ಷಪಾತಿಗಳಾದ ಮೊದಲನೆಯ ಗುಂಪಿನವರು ಹೇಳುತ್ತಿರುವದೇನೆಂದರೆ: ''**ಸ್ವಸ್ವರೂಪಚೈತನ್ಯಸಾಕ್ಷಾತ್ಕಾರಪರ್ಯನ್ತಂ ಶ್ರವಣಮನನನಿದಿಧ್ಯಾಸನಸಮಾಧ್ಯನುಷ್ಠಾನಸ್ಯಾಪೇಕ್ಷಿತತ್ವಾತ್ತೇಽಪಿ ಪ್ರದರ್ಶ್ಯನ್ತೇ**'' ಸ್ವಸ್ವರೂಪವಾದ ಬ್ರಹ್ಮದ ಸಾಕ್ಷಾತ್ಕಾರವಾಗುವವರೆಗೂ

ಶ್ರವಣ, ಮನನ, ನಿದಿಧ್ಯಾಸನ, ಸಮಾಧಿಯ ಅನುಷ್ಠಾನ-ಇಷ್ಟೂ ಬೇಕು. **ಶ್ರವಣ**ವೆಂದರೆ ವೇದಾಂತ ವಾಕ್ಯಗಳಿಗೆಲ್ಲ ಅದ್ವಿತೀಯವಾದ ಆತ್ಮವಸ್ತುವಿನಲ್ಲಿಯೇ ತಾತ್ಪರ್ಯವೆಂಬುದನ್ನು ಉಪಕ್ರಮ, ಉಪಸಂಹಾರ-ಮುಂತಾದ ಆರು ಬಗೆಯ ಲಿಂಗಗಳಿಂದ ಗೊತ್ತುಪಡಿಸಿಕೊಳ್ಳುವದು. **ಮನನ**ವೆಂದರೆ ಶ್ರವಣಮಾಡಿದ ಅದ್ವೈತವಸ್ತುವನ್ನು ಯುಕ್ತಿಗಳಿಂದ ವಿಚಾರಮಾಡುತ್ತಿರುವದು. **ನಿದಿಧ್ಯಾಸನ**ವೆಂದರೆ ವಿಜಾತೀಯ ಪ್ರತ್ಯಯವಿಲ್ಲದೆ ಅದ್ವೈತವಸ್ತುವಿಗೆ ಸಜಾತೀಯವಾದ ಪ್ರತ್ಯಯವನ್ನು ಪ್ರವಾಹವಾಗಿ ನಡೆಯಿಸಿಕೊಳ್ಳುವದು. ಇನ್ನು **ಸಮಾಧಿ**ಯೆಂಬುದು ಎರಡು ಬಗೆ; ಜ್ಞಾತೃ (ಅರಿಯುವವನು), ಜ್ಞೇಯ(ಅರಿಯಲ್ಪಡತಕ್ಕದ್ದು), ಜ್ಞಾನ (ಅರಿವು)-ಎಂಬ ಭೇದವಿದ್ದರೂ ಅದ್ವೈತವಸ್ತುವಿನ ಆಕಾರವಾಗಿಯೇ ಚಿತ್ತವೃತ್ತಿಯನ್ನಿಟ್ಟುಕೊಂಡಿರುವದು **ಸವಿಕಲ್ಪಕಸಮಾಧಿಯು;** ಮಣ್ಣಿನ ಆನೆಕಂಡರೂ ಮಣ್ಣೇಕಾಣುವಂತೆ ದ್ವೈತವು ಕಂಡರೂ ಈ ಸಮಾಧಿಯಲ್ಲಿ ಅದ್ವೈತವೂ ತೋರುತ್ತಿರುತ್ತದೆ. ಆದರೆ **ನಿರ್ವಿಕಲ್ಪಸಮಾಧಿ**ಯಲ್ಲಿ ಹಾಗಲ್ಲ; ಅಲ್ಲಿ ಚಿತ್ತವೃತ್ತಿಯು ಯಾವ ವಿಕಲ್ಪವೂ ಇಲ್ಲದ ಅದ್ವಿತೀಯವಸ್ತುವಿನ ಆಕಾರವಾಗಿರುವದು. ಉಪ್ಪು ನೀರಿನಲ್ಲಿ ಕರಗಿರುವಾಗ ಬರಿಯ ನೀರೇ ಕಾಣುತ್ತಿರುವಂತೆ ಚಿತ್ತವು ಅದ್ವೈತಾತ್ಮನಲ್ಲಿ ಕರಗಿ ಆತ್ಮವೊಂದೇ ತೋರುತ್ತಿರುತ್ತದೆ. ಹೀಗೆ ನಿರ್ವಿಕಲ್ಪಸಮಾಧಿಯನ್ನ-ನುಭವಿಸಿ ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಂಡವರೇ ಕೃತಕೃತ್ಯರು, ಮಿಕ್ಕವರದ್ದೆಲ್ಲ ಪರೋಕ್ಷ ಜ್ಞಾನವು. ಆದ್ದರಿಂದ ಯೋಗದ ನೆರವು ವೇದಾಂತತತ್ತ್ವದ ಸಾಕ್ಷಾತ್ಕಾರಕ್ಕೆ ಅತ್ಯವಶ್ಯವಾಗಿರುತ್ತದೆ.

ಈಗ ಎರಡನೆಯ ಪಕ್ಷದವರ ವಿಚಾರವನ್ನು ಪ್ರಸ್ತಾಪಿಸೋಣ. ಯೋಗದ ಗೋಜೇ ಇಲ್ಲದೆ ತತ್ತ್ವವನ್ನು ಕಂಡುಕೊಳ್ಳಬಹುದೆಂದು ಅವರು ಹೇಳುತ್ತಾರೆ. ಅವರು ಯೋಗಕ್ಕೂ ವೇದಾಂತಕ್ಕೂ ಸಂಬಂಧವೇ ಇಲ್ಲವೆನ್ನುವರು. ಅನೇಕರು ವೇದಾಂತಿಗಳೆಂದು ಹೇಳಿಕೊಳ್ಳುತ್ತಾ ಯೋಗಾದಿಸಾಧನಗಳನ್ನು ಅಲ್ಲಗಳೆದು ಒಣ ತರ್ಕದಿಂದ ಕಾಲಹರಣಮಾಡುತ್ತಿರುವವರೂ ಈ ಗುಂಪಿನಲ್ಲಿದ್ದಾರೆ. ಆದರೆ ಭಾಷ್ಯವಾರ್ತಿಕಕಾರರೂ ಜ್ಞಾನವು ಯೋಗಾದಿಗಳ ಗೊಡವೆಯಿಲ್ಲದೆ ನೇರಾಗಿ ಯೇ ತತ್ತ್ವವನ್ನು ತಿಳಿಸುವದೆಂದು ಹೇಳಿರುತ್ತಾರಾದ್ದರಿಂದ ಶುಷ್ಕತಾರ್ಕಿಕರಿಗೂ

ಅವರ ಮತಕ್ಕೂ ಇರುವ ಹೆಚ್ಚುಕಡಿಮೆಯನ್ನು ತಿಳಿದುಕೊಳ್ಳುವದು ಅತ್ಯಂತ ಅವಶ್ಯವಾಗಿರುತ್ತದೆ.

**''ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ''** ಎಂಬ ಬೃಹದಾರಣ್ಯಕದಲ್ಲಿ ಶ್ರವಣಾದಿಗಳನ್ನು ಹೇಳಿರುತ್ತದೆ. ಅಲ್ಲಿ ಆಚಾರ್ಯರು ಬರೆದಿರುವದೇನೆಂದರೆ: ಮೊದಲು ಆಚಾರ್ಯರಿಂದಲೂ ಆಗಮದಿಂದಲೂ ಶ್ರವಣಮಾಡಬೇಕು, ಆಮೇಲೆ ತರ್ಕದಿಂದ ಮನನಮಾಡಬೇಕು, ಆ ಮೇಲೆ ನಿದಿಧ್ಯಾಸನಮಾಡಬೇಕು, ಎಂದರೆ ನಿಶ್ಚಯವಾಗಿ ಧ್ಯಾನಮಾಡಬೇಕು. ಆತ್ಮನನ್ನು ಶ್ರವಣಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನಮಾಡಬೇಕು-ಎಂದು ಹೇಳಿದ್ದರೂ ಆತ್ಮನು ಯಾವದಕ್ಕೂ ಕರ್ಮವಲ್ಲವಾದ್ದರಿಂದ ಆತ್ಮನನ್ನು ಶ್ರವಣಾದಿಗಳಿಗೆ ವಿಷಯಮಾಡಿಕೊಳ್ಳಬೇಕೆಂಬುದೇನೂ ವಾಕ್ಯಕ್ಕೆ ತಾತ್ಪರ್ಯವಿಲ್ಲ. ಹೊರಗಿನ ವಿಷಯಗಳ ವಿಚಾರವನ್ನೇ ಮಾಡುತ್ತಿರುವ ಜೀವನು ಅದರಿಂದ ಆತ್ಯಂತಿಕ ಪುರುಷಾರ್ಥವು ಸಿಕ್ಕದೆ ಪೇಚಾಡುತ್ತಿರುತ್ತಾನೆ; ಅಂಥ ಮುಮುಕ್ಷುವನ್ನು ಕುರಿತು ''ಆತ್ಮನನ್ನೇ ನೋಡಬೇಕು, ಆತ್ಮನನ್ನೇ ಶ್ರವಣಮಾಡಬೇಕು'' ಎಂದು ಮುಂತಾಗಿ ಶ್ರುತಿಯು ಒಳಗಡೆಗೆ ನೋಟವನ್ನು ತಿರುಗಿಸುವಂತೆ ಹೇಳಿರುತ್ತದೆ. ಶಾಸ್ತ್ರಾಚಾರ್ಯರಿಂದ ಆತ್ಮನ ವಿಷಯವಾಗಿಯೇ ಶ್ರವಣಮಾಡಬೇಕು. ಆತ್ಮನ ವಿಷಯದಲ್ಲಿಯೇ ತರ್ಕವನ್ನುಪಯೋಗಿಸಿಕೊಂಡು ಮನನಮಾಡಬೇಕು-ಎಂದು ಆತ್ಮನ ಕಡೆಗೆ ತಿರುಗಿಸುವದೇ ಶ್ರುತಿಯ ಉದ್ದೇಶವು.

ಇಲ್ಲಿ **ನಿದಿಧ್ಯಾಸಿತವ್ಯಃ** ಎಂದರೆ ನಿಶ್ಚಿತವಾಗಿ ಧ್ಯಾನಮಾಡಬೇಕು-ಎಂದು ಭಾಷ್ಯದಲ್ಲಿ ಹೇಳಿರುವದರಿಂದ ಅನೇಕರು ಇಲ್ಲಿ ಯೋಗದ ಧ್ಯಾನವನ್ನು ಹೇಳಿದೆ ಎಂದು ಭಾವಿಸುತ್ತಾರೆ. ಆದರೆ ಭಾಷ್ಯಕಾರರು ಹಾಗೆಂದು ಎಲ್ಲಿಯೂ ಹೇಳಿರುವದಿಲ್ಲ; ಧ್ಯಾನವಾದ ಬಳಿಕ ಸಮಾಧಿಯು ಅವಶ್ಯವೆಂದಾಗಲಿ ಸವಿಕಲ್ಪಕನಿರ್ವಿಕಲ್ಪಕ ಸಮಾಧಿಗಳು ಒಂದಾಗುತ್ತಲೊಂದು ಬಂದ ಬಳಿಕವೇ ಸಾಕ್ಷಾತ್ಕಾರವಾಗುವದೆಂದಾಗಲಿ ಹೇಳಿರುವದಿಲ್ಲ. ಹೀಗಿರುವಾಗ ಶ್ರುತಿಯಲ್ಲಿಲ್ಲದ, ಭಾಷ್ಯಕಾರರು ಹೇಳದ, ಅರ್ಥವನ್ನು ನಾವೇತಕ್ಕೆ ಮಾಡಬೇಕು? ಶಬರಸ್ವಾಮಿಗಳು, ''ಶ್ರುತಿಯಲ್ಲಿರುವ ಶಬ್ದಗಳಿಗೆಲ್ಲ

ಲೋಕದಲ್ಲಿ ಬಳಕೆಯಾಗಿರುವ ಅರ್ಥವನ್ನು ತೆಗೆದುಕೊಳ್ಳಬೇಕೇ ಹೊರತು ಅನವಶ್ಯವಾಗಿ ಬೇರೊಂದು ಅರ್ಥವನ್ನು ಕಲ್ಪಿಸಬಾರದು''- ಎನ್ನುತ್ತಾರೆ. ಈ ನ್ಯಾಯವನ್ನು ನಾವೂ ಇಲ್ಲಿ ಅನುಸರಿಸುವದು ಯುಕ್ತವಾಗಿರುತ್ತವೆ. ಇದೇ ಶ್ರುತಿಯಲ್ಲಿ ನಿದಿಧ್ಯಾಸನವೆಂಬ ಶಬ್ದವನ್ನು ಇದೇ ಪ್ರಕರಣದಲ್ಲಿ ಮೊಟ್ಟಮೊದಲೇ ಶ್ರುತಿಯು ಉಪಯೋಗಿಸಿರುತ್ತದೆ. ''**ಏಹ್ಯಾಸ್ಸ್ವ ವ್ಯಾಖ್ಯಾಸ್ಯಾಮಿ ತೇ ವ್ಯಾಚಕ್ಷಾಣಸ್ಯ ತು ಮೇ ನಿದಿಧ್ಯಾಸಸ್ವ**''- ಬಾ, ಕುಳಿತುಕೊ; ನಿನಗೆ ಅಮೃತತ್ತ್ವಕ್ಕೆ ಸಾಧನವಾದ ಜ್ಞಾನವನ್ನು ವಿವರಿಸಿ ಹೇಳುತ್ತೇನೆ. ನಾನು ವಿವರಿಸುವದನ್ನು ನಿದಿಧ್ಯಾಸನ ಮಾಡು'' ಎಂದು (ಬೃ.2-4-4) ಯಾಜ್ಞವಲ್ಕ್ಯನು ಮೈತ್ರೇಯಿಗೆ ಹೇಳಿರುತ್ತಾನೆ. ಇಲ್ಲಿ ನಿದಿಧ್ಯಾಸನವೆಂದರೆ ''ಚೆನ್ನಾಗಿ ಲಕ್ಷ್ಯವಿಟ್ಟು ಕೇಳಿ ತಿಳಿದುಕೊ''ಎಂಬುದೇ ಅರ್ಥವೆಂಬುದು ಸ್ಪಷ್ಟ. ''ಆಲಿಸೈ ನೃಪ'' ಎಂದು ಕನ್ನಡ ಭಾರತದಲ್ಲಿ ಬರುವ ವಾಕ್ಯಗಳನ್ನು ಇದಕ್ಕೆ ಹೋಲಿಸಬಹುದಾಗಿದೆ. ಇಲ್ಲಿಯೂ ''ವಾಕ್ಯಗಳನ್ನು ಧ್ಯಾನಮಾಡಿ ಅರ್ಥವನ್ನು ತಿಳಿಯುವದಕ್ಕೆ ಯತ್ನಿಸು'' ಎಂದೇ ಭಾಷ್ಯಕಾರರು ವಿವರಿಸಿರುತ್ತಾರೆ. ಆದ್ದರಿಂದ ಇಲ್ಲಿ ನಿದಿಧ್ಯಾಸನ ಅಥವಾ ಧ್ಯಾನವೆಂದರೆ ಭಾವನೆ ಮಾಡಿ ಸಮಾಧಿಯನ್ನು ತಂದುಕೊಳ್ಳುವ ವಿಷಯವಲ್ಲ; ಆಲೋಚನೆಮಾಡಿ ತನ್ನಲ್ಲಿ ತಾನು ತಿಳಿದುಕೊಳ್ಳುವದು ಎಂದೇ ಅರ್ಥ.

ಹೀಗೆ ಅರ್ಥಮಾಡಿದರೆ ಒಂದು ಅರ್ಥಸ್ವಾರಸ್ಯವೂ ಹೊರಡುತ್ತದೆ. ಅದೇನೆಂದರೆ ಆಗ ಆತ್ಮನ ವಿಚಾರವನ್ನೇ ಕೇಳಿ ಅದನ್ನೇ ತರ್ಕದಿಂದ ತಿಳಿದು ಅನುಭವಕ್ಕೆ ಹೊಂದಿಸಿಕೊಂಡರೆ ಆತ್ಮದರ್ಶನವಾಗುತ್ತದೆ ಎಂದು ಹೇಳಿದಂತೆ ಆಗುತ್ತದೆ. ಹಾಗಿಲ್ಲದೆ ಆತ್ಮನ ವಿಷಯದಲ್ಲಿ ಶ್ರವಣಮನನಗಳನ್ನು ಮಾಡಿ, ದ್ವೈತವನ್ನು ಮರೆಯುವ ಸಮಾಧಿಯನ್ನು ಪಡೆಯುವದಕ್ಕೆ ಧ್ಯಾನವನ್ನು ಮಾಡಿದರೆ ಶ್ರವಣಮನನನಿದಿಧ್ಯಾಸನಗಳಿಗೆ ಏಕತ್ವವೆಂಬುದೇ ಆಗುವದಿಲ್ಲ. ''**ಯದಾ ಏಕತ್ವಮೇತಾನ್ಯುಪಗತಾನಿ ತದಾ ಸಮ್ಯಗ್ದರ್ಶನಂ ಪ್ರಸೀದತಿ**'' ಈ ಮೂರೂ ಒಂದಾದಾಗಲೇ ಸಮ್ಯಗ್ದರ್ಶನ ಮನದಟ್ಟಾಗುತ್ತದೆ ಎಂಬ ಭಾಷ್ಯವಚನಕ್ಕೆ ವಿರೋಧವಾಗಿಬಿಡುತ್ತದೆ. ಇದೂ ಅಲ್ಲದೆ ಶ್ರುತಿಯಲ್ಲಿ 'ನಿದಿಧ್ಯಾಸಿತವ್ಯಃ' ಎಂಬ ಮಾತನ್ನು ವಿವರಿಸುವಾಗ ವಿಜ್ಞಾನವೆಂಬ ಮಾತನ್ನು

ಪ್ರಯೋಗಿಸಿದೆ. "**ಆತ್ಮನೋ ವಾ ಅರೇ ಶ್ರವಣೇನ ಮತ್ಯಾ ವಿಜ್ಞಾನೇನೇದಂ ಸರ್ವಂ ವಿದಿತಮ್**" (ಬೃ.2-4-5) ಆತ್ಮನನ್ನೇ ಶ್ರವಣ ಮಾಡಿ ಮನನಮಾಡಿ ಅರಿತುಕೊಂಡರೆ ಇದೆಲ್ಲವನ್ನೂ ಅರಿತಂತೆ ಆಗುತ್ತದೆ ಎಂದಿರುವದರಿಂದ ನಿದಿಧ್ಯಾಸನವೆಂದರೆ ಆಲೋಚನೆಮಾಡಿ ತಿಳಿದುಕೊಳ್ಳುವದೇ ಎಂಬುದು ಮತ್ತಷ್ಟು ಸ್ಫುಟವಾಗುತ್ತದೆ. ಆದ್ದರಿಂದಲೇ **ಸುರೇಶ್ವರಾಚಾರ್ಯರವರು** ತಮ್ಮ ವಾರ್ತಿಕದಲ್ಲಿ **ಧ್ಯಾನಶಙ್ಕಾನಿವೃತ್ತ್ಯರ್ಥಂ ವಿಜ್ಞಾನೇನೇತಿ ಭಣ್ಯತೇ । ನಿದಿಧ್ಯಾಸನಶಬ್ದೇನ ಧ್ಯಾನಮಾಶಙ್ಕ್ಯತೇ ಯತಃ ॥** (ಬೃ.2-4-233)- ಇಲ್ಲಿ ನಿದಿಧ್ಯಾಸನವೆಂಬ ಮಾತಿಗೆ ಧ್ಯಾನವೆಂಬ ಅರ್ಥವನ್ನು ಯಾರಾದರೂ ಮಾಡಿಕೊಂಡಾರೆಂದು 'ವಿಜ್ಞಾನೇನ' ಎಂಬ ಮಾತಿನಿಂದ ಅದನ್ನು ವಿವರಿಸಿರುತ್ತದೆ ಎಂದು ಬರೆದಿರುತ್ತಾರೆ.

ಇಲ್ಲಿಯವರೆಗಿನ ವಿಚಾರದಿಂದ ವಾಕ್ಯಶ್ರವಣಮನನನಿದಿಧ್ಯಾಸನಗಳಿಗೂ ಯೋಗಕ್ಕೂ ಯಾವ ಸಂಬಂಧವೂ ಇಲ್ಲವೆಂದೂ ವಾಕ್ಯವಿಚಾರದಿಂದಾದ ಜ್ಞಾನವು ನೇರಾಗಿಯೇ ಮುಕ್ತಿದಾಯಕವಾಗಿ ಬಿಡುವದೆಂದೂ ಏರ್ಪಡುತ್ತದೆಯಷ್ಟೆ. ಹಾಗಾದರೆ ಯೋಗಕ್ಕೂ ಜ್ಞಾನಕ್ಕೂ ಏನೇನೂ ಸಂಬಂಧವೇ ಇಲ್ಲವೆ?- ಎಂಬ ಪ್ರಶ್ನೆಯೊಂದು ಎದ್ದುಕೊಳ್ಳುತ್ತದೆ. ಇದಕ್ಕೆ ಆಚಾರ್ಯರು ಭಗವದ್ಗೀತಾಭಾಷ್ಯದಲ್ಲಿ ಬರೆದಿರುವ ಒಂದು ವಾಕ್ಯದಲ್ಲಿ ಉತ್ತರವಿದೆ. **ಅಥ ಧ್ಯಾನಯೋಗಂ ಸಮ್ಯಗ್ದರ್ಶನಸ್ಯಾನ್ತರಙ್ಗಂ ವಿಸ್ತರೇಣ ವಕ್ಷ್ಯಾಮೀತಿ ತಸ್ಯ ಸೂತ್ರಸ್ಥಾನೀಯಾ-ನಿಮಾನ್ ಶ್ಲೋಕಾನಿಮಾನುಪದಿಶತಿ ಸ್ಮ ।** ಗೀತೆಯ ಆರನೆಯ ಅಧ್ಯಾಯದಲ್ಲಿ ಹೇಳುವ ಯೋಗಕ್ಕೆ ಸೂತ್ರರೂಪವಾಗಿರುವ ಕೆಲವು ಶ್ಲೋಕಗಳನ್ನು ಐದನೆಯ ಅಧ್ಯಾಯದ ಕೊನೆಯಲ್ಲಿ ಹೇಳಿರುತ್ತದೆ; ಧ್ಯಾನಯೋಗವು ಸಮ್ಯಗ್ದರ್ಶನಕ್ಕೆ ಅಂತರಂಗಸಾಧನವೆಂಬುದನ್ನು ತಿಳಿಸುವದಕ್ಕಾಗಿ ಈ ಪ್ರಕರಣವು ಪ್ರಾರಂಭವಾಗಿದೆ ಎಂಬುದೇ ಭಾಷ್ಯವಾಕ್ಯದ ಅಭಿಪ್ರಾಯ. ವೇದಾಂತಿಗಳು ಯೋಗವನ್ನು ಖಂಡಿಸಿರುವದಕ್ಕೆ ವೇದನಿರಪೇಕ್ಷವಾದ ಯೋಗಮಾರ್ಗದಿಂದ ಮುಕ್ತಿಯು ದೊರಕಲಾರದೆಂದು ತಿಳಿಸುವದಕ್ಕೇ ಹೊರತು ವೈದಿಕವಾದ ಧ್ಯಾನವು ನಿಷ್ಪ್ರಯೋಜನವೆನ್ನುವದಕ್ಕಲ್ಲ-ಎಂದು ಸೂತ್ರಭಾಷ್ಯದಲ್ಲಿಯೂ ಆಚಾರ್ಯರು ಅಪ್ಪಣೆಕೊಡಿಸುತ್ತಾರೆ.

ಆಚಾರ್ಯರ ಪ್ರಿಯಶಿಷ್ಯರಾದ ಸುರೇಶ್ವರರ ಒಂದು ವಾಕ್ಯವನ್ನು ಆಲೋಚನೆಮಾಡುವದರಿಂದ ಇಲ್ಲಿ ಯೋಗದ ಸ್ಥಾನವು ಯಾವದೆಂಬುದು ಸ್ಪಷ್ಟವಾಗುತ್ತದೆ. ಅವರು **ನೈಷ್ಕರ್ಮ್ಯಸಿದ್ಧಿ**ಯಲ್ಲಿ ಹೀಗೆಂದು ಅಪ್ಪಣೆಕೊಡಿಸಿರುತ್ತಾರೆ; ''ನಿತ್ಯಕರ್ಮವನ್ನು ಮಾಡುವದರಿಂದ ಪುಣ್ಯಪ್ರಾಪ್ತಿಯೂ, ಅದರಿಂದ ಪಾಪನಾಶವೂ ಅದರಿಂದ ಚಿತ್ತಶುದ್ಧಿಯೂ ಆಗಿ ಸಂಸಾರದ ನಿಜವಾದ ಸ್ವರೂಪದ ತಿಳಿವು ಆಗುತ್ತದೆ. ಆಮೇಲೆ ವೈರಾಗ್ಯವೂ ಮುಮುಕ್ಷುತ್ವವೂ ಉಂಟಾಗಿ ಮೋಕ್ಷೋಪಾಯವನ್ನು ಹುಡುಕುತ್ತಾ ಸರ್ವಕರ್ಮಸಂನ್ಯಾಸವನ್ನು ಮಾಡಿ ಯೋಗಾಭ್ಯಾಸವನ್ನು ಮಾಡುವನು; ಅದರಿಂದ ಚಿತ್ತವು ಅಂತರ್ಮುಖವಾಗುವದು. ಆ ಬಳಿಕ ತತ್ತ್ವಮಸಿ ಮುಂತಾದ ವಾಕ್ಯಾರ್ಥದ ಜ್ಞಾನವುಂಟಾಗಲು ಅವಿದ್ಯೆಯು ತೊಲಗಿ ತನ್ನ ಆತ್ಮನೇ ಆಗಿರುವ ಬ್ರಹ್ಮದಲ್ಲಿ ನಲೆನಿಲ್ಲುತ್ತಾನೆ'' ಈ ವಾಕ್ಯವನ್ನು ನೋಡಿದರೆ ಕರ್ಮಸಂನ್ಯಾಸವಾದ ಬಳಿಕ ಚಿತ್ತವು ಆತ್ಮನ ಕಡೆಗೆ ತಿರುಗುವದಕ್ಕೆ ಯೋಗವು ಬೇಕಾಗುವದೆಂದೂ ವಾಕ್ಯಜ್ಞಾನವಾದ ಮೇಲೆ ಅದಕ್ಕೆ ಬೇರೆ ಯಾವದೊಂದು ಸಾಧನದ ನೆರವೂ ಬೇಕಿಲ್ಲವೆಂದೂ ಭಾಷ್ಯವಾರ್ತಿಕಕಾರರುಗಳು ಅಭಿಪ್ರಾಯಪಡುತ್ತಾರೆಂಬುದು ಸುಸ್ಪಷ್ಟವಾಗಿದೆ.

★★★★★

## ಭಕ್ತಿಜ್ಞಾನಗಳ ಸಂಬಂಧ

**24-4-1942**

**ಶ್ರೀಶ್ರೀಗಳು**

ಈ ಉಪನ್ಯಾಸದಲ್ಲಿ ಬಹುಮಟ್ಟಿಗೆ ಭಗವದ್ಗೀತೆಯ ಆಧಾರದಿಂದಲೇ ವಿಚಾರವನ್ನು ನಡೆಯಿಸುವದರಿಂದ ಇದಕ್ಕೆ ''ಗೀತೆಯಲ್ಲಿ ಭಕ್ತಿಜ್ಞಾನಗಳ ಸಂಬಂಧ'' ಎಂಬ ಹೆಸರನ್ನೂ ಕೊಡಬಹುದಾಗಿತ್ತು. ಗೀತೆಯಲ್ಲಿ ಜ್ಞಾನಕ್ಕೆ ಯೋಗವೇ ಅಂತರಂಗಸಾಧನವೆಂದು ಹೇಳಿರುತ್ತದೆಯೆಂಬುದನ್ನು ಹಿಂದಿನ ಉಪನ್ಯಾಸದಲ್ಲಿ ಅರಿಕೆ ಮಾಡಿಕೊಂಡಿದೇನೆ. ಆದರೆ ಆ ಧ್ಯಾನಯೋಗದ ತಿರುಳೇ ಭಕ್ತಿಯೋಗವೆಂಬದನ್ನು ಈಗ ಮನವರಿಕೆಮಾಡಿಕೊಳ್ಳಬೇಕಾಗಿದೆ.

**ಯೋಗಿನಾಮಪಿ ಸರ್ವೇಷಾಂ ಮದ್ಗತೇನಾನ್ತರಾತ್ಮನಾಮ್ ।**
**ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥ 6-44**

ಎಂಬ ಶ್ಲೋಕದಲ್ಲಿ ಇದನ್ನು ಸ್ಪಷ್ಟಗೊಳಿಸಿರುತ್ತದೆ. ಭಗವಂತನಲ್ಲಿಯೇ ಚಿತ್ತವಿಟ್ಟು ಶ್ರದ್ಧೆಯಿಂದ ಭಜಿಸುತ್ತಿರುವಾತನೇ ಯೋಗಿಗಳಿಗೆಲ್ಲ ಹೆಚ್ಚಿನವನು. ಚಿತ್ತವೃತ್ತಿಯನ್ನು ಏತರಲ್ಲಿ ಧಾರಣೆಮಾಡಿದರೂ ಯೋಗವಾಗುತ್ತದೆ. ಇತರ ದೇವತೆಗಳನ್ನು ಧ್ಯಾನಿಸುವವರೂ ಯೋಗಿಗಳೇ; ಆದರೆ ಭಗವಂತನನ್ನೇ ಅನನ್ಯತೆಯಿಂದ ಭಜಿಸುವಾತನು ಉತ್ತಮಯೋಗಿಯು. ಭಜನೆಯೆಂದರೆ ಪರಮಾತ್ಮನ ಪ್ರೇಮದಿಂದ ಆತನಲ್ಲಿಯೇ ಚಿತ್ತವು ಲಯವಾಗುವಂತೆ ಚಿಂತಿಸುವದು. ಇದನ್ನೇ ಭಕ್ತಿಯೆನ್ನುತ್ತಾರೆ. ಧ್ಯಾನಯೋಗವು ಪರಿಪಾಕವಾದರೆ ಪ್ರೇಮವಾಗುವದು. ಅದನ್ನೇ ಭಕ್ತಿಯೆಂಬ ಹೆಸರಿನಿಂದ ಕರೆಯುತ್ತಾರೆ; ಸಾಧನರೂಪವಾಗಿರುವದನ್ನು ಧ್ಯಾನ ಎನ್ನುತ್ತಾರೆ.

ಧ್ಯಾನವನ್ನು ಮಾಡುವಾಗ ಸಾಧನಕ್ಕೆಂದು ಮಾಡುತ್ತೇವೆ. ಆಸ್ಪತ್ರೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವ ದಾದಿಯರು ಮಗುವಿನಲ್ಲಿ ತೋರಿಸುವ ಪ್ರೇಮವು

ತಾಯಿಯ ಪ್ರೇಮದಂತೆ ಸಹಜವಾಗಿರಲಾರದು; ಆದರೆ ಅವರಲ್ಲಿ ಕೆಲವರು ಅನಾಥರಾದ ಮಕ್ಕಳನ್ನು ತಮ್ಮದೆಂದು ಸಾಕಿಕೊಳ್ಳುವದುಂಟು. ಆಗ ನಿಜವಾದ ಪ್ರೇಮವು ಮೇಲಕ್ಕೆದ್ದುಕೊಳ್ಳುತ್ತದೆ. ಇದರಂತೆ ಮತ್ತೊಬ್ಬರನ್ನು ನೋಡಿ ನಾವು ಶರೀರ ವಾಙ್ಮನಗಳಿಂದ ಮಾಡುವ ಸಾಧನಗಳು ಇನ್ನೂ ಭಕ್ತಿಯಿಲ್ಲದಿದ್ದರೂ ಭಕ್ತಿಗೆ ಕರೆದೊಯ್ಯುವದರಿಂದ ಸಾಧನಭಕ್ತಿ, **'ಗೌಣಭಕ್ತಿ'** ಎಂಬ ಹೆಸರಿಗೆ ತಕ್ಕವಾಗಿರುತ್ತವೆ. ಇಂಥ ಭಕ್ತಿಯಾದರೂ ಯಾರಿಗೆ ಪಾಪವು ತೊಲಗಿರುವದೋ, ಅಂಥ ಪುಣ್ಯವಂತರಿಗೆ ಮಾತ್ರ ಉಂಟಾಗುತ್ತದೆ. ಇಚ್ಛೆ, ದ್ವೇಷ-ಎಂಬ ದ್ವಂದ್ವಗಳಿಗೆ ಚಿತ್ತವು ಅಡಿಯಾಳಾಗಿರುವವರೆಗೆ ಹೊರಗಿನ ವಸ್ತುವಿನ ಜ್ಞಾನವು ಕೂಡ ಸರಿಯಾಗಿ ಆಗುವದಿಲ್ಲ; ಹೀಗಿರುವಲ್ಲಿ ಆ ಬೇಕುಬೇಡಗಳಿಗೆ ತುತ್ತಾಗಿರುವ ಮನಸ್ಸಿನವರಿಗೆ ಪ್ರತ್ಯಗಾತ್ಮನ ವಿಷಯದಲ್ಲಿ ಜ್ಞಾನವುಂಟಾಗಲಾರದೆಂಬುದನ್ನು ಹೇಳುವದೇನಿದೆ? (ಗೀ.7-27) ಎಂಬ ಭಾಷ್ಯವಾಕ್ಯವು ಇದನ್ನು ಸ್ಪಷ್ಟಗೊಳಿಸುತ್ತದೆ.

ಭಕ್ತಿಯು ಮೊದಲೇ ಹುಟ್ಟುವದಿಲ್ಲವಾದರೂ ಅದಕ್ಕಾಗಿ ಎಲ್ಲರೂ ಪ್ರಯತ್ನ ಮಾಡಬಹುದು. ಯಾವನು ಎಷ್ಟೇ ದುರಾಚಾರಿಯಾಗಿರಲಿ, ನೀನೇ ಗತಿಯೆಂದು ಭಗವಂತನನ್ನು ಭಜಿಸುವದಕ್ಕೆ ಮೊದಲುಮಾಡಿದರೆ ಸಾಕು, ಅಂದಿನಿಂದ ಅವನು ಸಾಧುವಾದಂತೆಯೇ; ಅವನು ಬಲುಬೇಗ ಧರ್ಮಾತ್ಮನಾಗಿ ಪಾಪವನ್ನು ನೀಗಿಕೊಂಡು ಭಕ್ತನಾಗಿಬಿಡುತ್ತಾನೆ. (ಗೀ.30-32)

ಹೀಗೆ ಭಕ್ತಿಯನ್ನು ಪಡೆದುಕೊಂಡ ಪುಣ್ಯಾತ್ಮರಲ್ಲಿ ನಾಲ್ಕು ಬಗೆಯವರಿರುತ್ತಾರೆಂದು ಗೀತೆಯಲ್ಲಿ ಹೇಳಿರುತ್ತದೆ. ಸಂಕಟದಿಂದ ಪಾರಾಗಬೇಕೆಂದು ಭಜಿಸುವವರು ಕೆಲವರು; ತತ್ತ್ವಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂದು ಭಜಿಸುವವರು ಕೆಲವರು; ಪರಮಾತ್ಮನ ಸ್ವರೂಪವನ್ನರಿತು ಪ್ರೇಮದಿಂದ ಭಜಿಸುವವರು ಕೆಲವರು. ಈ ನಾಲ್ಕರಲ್ಲಿ ನಾಲ್ಕನೆಯವರಾದ ಜ್ಞಾನಿಗಳೇ ಶ್ರೇಷ್ಠರು.

ಆದರೆ ಈ ಜ್ಞಾನವು ಬರುವ ಮುಂಚೆ ಭಾವಭಕ್ತಿಯಿರಬೇಕು. ಭಾವವು ಹೇಗಿರಬೇಕು?- ಎಂಬುದನ್ನು ಗೀತೆಯಲ್ಲಿ ಶ್ರೀ ಕೃಷ್ಣನು ಹೀಗೆ ವರ್ಣಿಸಿರುತ್ತಾನೆ;

**ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।**
**ಇತಿ ಮತ್ವಾ ಭಜನ್ತೇ ಮಾಂ ಬುಧಾ ಭಾವಸಮನ್ವಿತಾಃ ॥ ಗೀ 10-8**

ಭಗವಂತನೇ ಎಲ್ಲಕ್ಕೂ ಕಾರಣನು, ಎಲ್ಲವೂ ಆತನ ಅನುಗ್ರಹದಿಂದಲೇ ನಡೆಯುತ್ತದೆ; ಹೀಗೆಂಬ ಭಾವನೆಯು ಬಲವಾಗಿದ್ದರೆ ಅದೇ ಭಾವಭಕ್ತಿಯು. ಇಂಥ ಭಾವವುಂಟಾದರೆ ಭಗವಂತನಲ್ಲಿಯೇ ಚಿತ್ತವು ನೆಟ್ಟುಬಿಡುತ್ತದೆ; ಭಗವಂತನಿಗಾಗಿಯೇ ಪ್ರಾಣವನ್ನು ಧರಿಸುವೆವೆಂಬ ಅರಿವಿರುತ್ತದೆ, ಭಗವಂತನ ಸ್ವರೂಪವನ್ನು ತಿಳಿಸುವದು, ಆತನ ಜ್ಞಾನ, ಬಲ, ವೀರ್ಯ, ತೇಜಸ್ಸು-ಮುಂತಾದವುಗಳನ್ನು ಪ್ರಕಟಗೊಳಿಸುವ ಲೀಲೆಗಳನ್ನು ಒಬ್ಬರಿಗೊಬ್ಬರು ಹೇಳುವದು-ಇದರಿಂದಲೇ ಅವರಿಗೆ ಸಂತೋಷವಾಗುತ್ತಿರುವದು, ಇದರಲ್ಲಿಯೇ ಅವರ ಮನಸ್ಸು ನಿರತವಾಗಿರುತ್ತದೆ.

ಹೀಗೆ ಯಾರು ಎಡೆಬಿಡದೆ ಭಗವಂತನನ್ನೇ ಚಿಂತಿಸುತ್ತಾ ಭಗವಂತನ ಭಾವಭಕ್ತಿಯಿಂದಲೇ ಕಾಲವನ್ನು ಕಳೆಯುತ್ತಿರುವರೋ ಅಂಥ ಮಹಾತ್ಮರಿಗೆ ಸ್ವಾಭಾವಿಕವಾಗಿಯೇ ಬುದ್ಧಿಯು ತತ್ತ್ವದಕಡೆಗೆ ಹರಿಯುತ್ತದೆ; ಇದು ಭಗವಂತನ ಅನುಗ್ರಹವು. ಆದರೆ ಇಷ್ಟೇ ಸಾಲದು. ಭಗವಂತನಿಗೆ ಅವರಲ್ಲಿ ಎಲ್ಲರಿಗಿಂತಲೂ ಹೆಚ್ಚಿನ ಮರುಕವೂ ದಯೆಯೂ ಇರುವದರಿಂದ ಆತನು ಪ್ರೀತಿಪೂರ್ವಕವಾಗಿ ಅವರಿಗೆ ಜ್ಞಾನವನ್ನೂ ಕೊಡುತ್ತಾನೆ.

**ತೇಷಾಮೇವಾನುಕಮ್ಪಾರ್ಥಮಜ್ಞಾನಜಂ ತಮಃ ।**
**ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥ (ಗೀ.10-11)**

ಎಂದಿರುವಂತೆ ಆತನೇ ಅವರ ಅಂತಃಕರಣದಲ್ಲಿ ಕುಳಿತು ಅವರಿಗುಂಟಾಗಿದ್ದ ತಪ್ಪು ತಿಳಿವಳಿಕೆಯೆಂಬ ಮೋಹಾಂಧಕಾರವನ್ನು ತೊಲಗಿಸುವ ಆತ್ಮಜ್ಞಾನದೀಪವನ್ನು ಹತ್ತಿಸುತ್ತಾನೆ. ಈ ಜ್ಞಾನದೀಪದ ವರ್ಣನೆಯು **ಶಂಕರಭಾಷ್ಯ**ದಲ್ಲಿ ಹೇಗೆ ಇರುವದೆಂಬುದನ್ನು ಕೇಳಿರಿ;

**ಜ್ಞಾನದೀಪೇನ ವಿವೇಕಪ್ರತ್ಯಯರೂಪೇಣ, ಭಕ್ತಿಪ್ರಸಾದಸ್ನೇಹಾಭಿಷಿಕ್ತೇನ, ಮದ್ಭಾವನಾಭಿನಿವೇಶವಾತೇರಿತೇನ, ಬ್ರಹ್ಮಚರ್ಯಾದಿಸಾಧನಸಂಸ್ಕಾರವತ್ಪ್ರಜ್ಞಾ**

**ವರ್ತಿನಾ, ವಿರಕ್ತಾನ್ತಃಕರಣಾಧಾರೇಣ, ವಿಷಯವ್ಯಾವೃತ್ತಚಿತ್ತರಾಗದ್ವೇಷಾಕಲುಷಿತ ನಿವಾತಾಪವರಕಸ್ಥೇನ, ನಿತ್ಯಪ್ರವೃತ್ತೈಕಾಗ್ರ್ಯಧ್ಯಾನಜನಿತ ಸಮ್ಯಗ್ದರ್ಶನಭಾಸ್ವತಾ ಜ್ಞಾನದೀಪೇನೇತ್ಯರ್ಥಃ ॥**

ಈ ಜ್ಞಾನವೆಂಬುದು ಸತ್ಯ, ಮಿಥ್ಯೆ- ಇವುಗಳನ್ನು ವಿಂಗಡಿಸಿ ಆತ್ಮನೊಬ್ಬನೇ ಸತ್ಯವು ಎಂಬುದನ್ನು ತಿಳಿಸಿಕೊಡುತ್ತದೆ. ಈ ಜ್ಞಾನದೀಪಕ್ಕೆ ಭಕ್ತಿಯೆಂಬ ತಿಳಿಯಾದ ಎಣ್ಣೆಯನ್ನೆರೆದಿರಬೇಕು; ಪರಮಾತ್ಮನ ಭಾವನೆಯೆಂಬ ಗಾಳಿ ಮಿತವಾಗಿ ಬೀಸುತ್ತಿರಬೇಕು; ಬ್ರಹ್ಮಚರ್ಯೆಯೇ ಮುಂತಾದ ಸಾಧನೆಗಳಿಂದ ಪ್ರಜ್ಞೆಯೆಂಬ ಬತ್ತಿಯನ್ನು ಸಂಸ್ಕಾರಗೊಳಿಸಿರಬೇಕು; ವಿರಕ್ತಿಯಿಂದೊಡಗೂಡಿದ ಅಂತಃಕರಣವೆಂಬ ದೀಪದಕಂಬವಿರಬೇಕು; ಹೊರಗಿನ ವಿಷಯಗಳಿಂದ ಹಿಮ್ಮೆಟ್ಟಿ, ಬೇಕುಬೇಡವೆಂಬ ಕಲ್ಮಷವಿಲ್ಲದೆ ಬಿರುಗಾಳಿಯಿಲ್ಲದ ಕೋಣೆಯಂತಾಗಿರಬೇಕು. ಇಂಥ ಸನ್ನಿವೇಶದಲ್ಲಿ ಏಕಾಗ್ರವಾಗಿ ಧ್ಯಾನಿಸುವಾಗ ಉಂಟಾಗಿ ಬೆಳಗುತ್ತಿರುವದೇ ಜ್ಞಾನದೀಪವು.

ಇದುವರೆಗಿನ ವಿಚಾರದಿಂದ ಏನು ಸಿದ್ಧವಾಯಿತು? ಜ್ಞಾನಕ್ಕೆ ಭಕ್ತಿಯೇ ಮುಖ್ಯವಾದ ಸಾಧನವು. ಈ ಸಾಧನವು ಗೌಣಭಕಿಯಾದರೂ ವೇದ, ಯಜ್ಞ, ದಾನ, ತಪಸ್ಸು-ಮುಂತಾದವುಗಳೆಲ್ಲಕ್ಕಿಂತಲೂ ಮಿಗಿಲಾದದ್ದು. ಭಕ್ತಿಯಿಂದಲೇ ಭಗವಂತನನ್ನು ಅರಿತುಕೊಳ್ಳಬಹುದು, ಕಾಣಬಹುದು, ಆತನ ಸಾಯುಜ್ಯವನ್ನು ಹೊಂದಲೂಬಹುದು. ಆದರೆ ನಿಜವಾದ ಭಕ್ತಿಯೂ ಜ್ಞಾನವೂ ಎರಡೂ ಒಂದೇ. ಒಂದು ದೃಷ್ಟಿಯಿಂದ ಅದನ್ನು ಜ್ಞಾನವೆಂದೂ ಮತ್ತೊಂದು ದೃಷ್ಟಿಯಿಂದ ಭಕ್ತಿಯೆಂದೂ ಕರೆಯುತ್ತಾರೆ, ಅಷ್ಟೆ. ಗೀತೆಗೂ ಶಂಕರಾಚಾರ್ಯರಿಗೂ ಒಪ್ಪಿಗೆಯಾಗಿರುವದು ಒಂದೇ ನಾಣ್ಯ; ಅದೇ ಭಕ್ತಿಜ್ಞಾನವೆಂಬುದು. ಆ ನಾಣ್ಯದ ಒಂದು ಪಕ್ಕವು ಭಕ್ತಿ, ಮತ್ತೊಂದು ಜ್ಞಾನ. ಭಕ್ತಿಗಿರುವ ಮಿಗಿಲಿಲ್ಲದ ಸ್ಥಾನವನ್ನು ತಿಳಿಸುವದಕ್ಕಾಗಿ ಭಗವಂತನು ಮತ್ತೆಮತ್ತೆ ಪ್ರಸಂಗವನ್ನೊಡ್ಡಿ ಉಪದೇಶಿಸಿರುತ್ತಾನೆ. ಅರ್ಜುನನಿಗೆ ಒಂದೇ ಒಂದು ಮಂತ್ರೋಪದೇಶವನ್ನು ಮಾಡಿರುತ್ತಾನೆ:

**ಮತ್ಕರ್ಮಕೃತ್ಮತ್ಪರಮೋ ಮದ್ಭಕ್ತಃ ಸಙ್ಗವರ್ಜಿತಃ।**
**ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಣ್ಡವ ॥ (11-55)**

ಈ ಶ್ಲೋಕಕ್ಕೆ ಭಾಷ್ಯಕಾರರು ಬರೆದಿರುವ ಅವತರಣಿಕೆಯು ನಾವು ಲಕ್ಷ್ಯವಿಟ್ಟು ನೋಡತಕ್ಕದ್ದಾಗಿದೆ; **ಸರ್ವಸ್ಯ ಗೀತಾಶಾಸ್ತ್ರಸ್ಯ ಸಾರಭೂತೋಽರ್ಥೋ ನಿಃಶ್ರೇಯಸಾರ್ಥೋಽನುಷ್ಠೇಯತ್ವೇನ ಸಮುಚ್ಚಿತ್ಯೋಚ್ಯತೇ ।** ಒಟ್ಟು ಗೀತಾಶಾಸ್ತ್ರದ ಸಾರವಾದ ಅರ್ಥವನ್ನೇ ಇಲ್ಲಿ ಹಿಂಡಿಟ್ಟು ಇಷ್ಟೇ ಮಾಡತಕ್ಕದ್ದು ಎಂದು ಹೇಳಿರುತ್ತದೆ- ಎಂದು ಆಚಾರ್ಯರು ಹೇಳಿರುತ್ತಾರೆ. ಆದ್ದರಿಂದ ಭಕ್ತಿಯೇ ಎಲ್ಲಕ್ಕಿಂತಲೂ ಹೆಚ್ಚಿನ ಸಾಧನವು. ಪರಭಕ್ತಿಯೇ ಪರಜ್ಞಾನವು.

★★★★★

## ಸುಖಶಾಂತಿಗಳ ನೆಲೆ

**26-4-1942**

**ಶ್ರೀಶ್ರೀಗಳು**

ಮನುಷ್ಯನಿಗೆ ಸುಖಶಾಂತಿಗಳು ದೊರೆತಷ್ಟೂ ಜೀವನವು ಹಾಯಾಗಿ ನಡೆಯುವದು, ಅವುಗಳು ಕಡಿಮೆಯಾದಷ್ಟೂ ಅದು ಭಾರವಾಗುವದು. ಸುಖದುಃಖಗಳೆಂಬ ಗಾಳಿಯ ಹೊಡೆತವು ಕಡಿಮೆಯಾದಾಗ ನಮ್ಮ ಚಿತ್ತಸಮುದ್ರದಲ್ಲಿ ಶಾಂತಿಯಿರುವದು. ಕಡಲಿನ ಮೇಲೆ ದೋಣಿಯಲ್ಲಿ ಕುಳಿತಿರುವವರು ಗಾಳಿಯ ಹೊಡೆತಕ್ಕೆ ಅಲೆಗಳ ಏರಿಳಿತಗಳು ಆದಹಾಗೆಲ್ಲ ತಾವೂ ಏರಿಳಿತವನ್ನು ಅನುಭವಿಸುವರಲ್ಲವೆ? ಅದರಂತೆಯೇ ನಮ್ಮಪಾಡು. ಗಾಳಿ ನಿಂತರೆ ಸಮುದ್ರವು ತಾನೇ ಶಾಂತಿಯಾಗುತ್ತದೆ; ಹಾಗೆಯೇ ಈಶ್ವರಾನುಗ್ರಹದಿಂದ ಕೆಲವರು ಪುಣ್ಯಶಾಲಿಗಳಿಗೆ ಶಾಂತಿಯು ತಾನೇ ಬರುತ್ತದೆ. ಅಂಥ ಭಾಗ್ಯಶಾಲಿಗಳನ್ನುಬಿಟ್ಟರೆ ಮಿಕ್ಕವರಿಗೆ ಶಾಂತಿ ಹೇಗೆ ದೊರಕಬೇಕು?-ಎಂಬುದೀಗ ಪ್ರಶ್ನೆ.

ಅಳುತ್ತಿರುವ ಮಗುವಿಗೆ ಅಳುವಿನ ಕಾರಣವನ್ನು ತಿಳಿಯದೆ ಏನೇನೋ ತಿಂಡಿಯನ್ನು ಕೊಟ್ಟರೆ ಅದು ಸುಮ್ಮನಾಗುವದೆಂಬ ಭರವಸೆಯಿಲ್ಲ. ಉದಾಹರಣೆಗೆ ಅದು ಹೊಟ್ಟೆನೋವಿನಿಂದ ಅಳುತ್ತಿದ್ದರೆ ಆಗ ಅದು ಹೇಗೆ ಸುಮ್ಮನಿದ್ದೀತು? ಇದರಂತೆ ಚಿತ್ತದ ಅಶಾಂತತೆಯ ಕಾರಣವನ್ನು ಕಂಡುಕೊಳ್ಳದೆ ಅದನ್ನು ಪರಿಹರಿಸುವ ಪ್ರಯತ್ನವನ್ನು ಮಾಡಿದಮಾತ್ರದಿಂದ ಶಾಂತಿ ದೊರಕಲಾರದು. ಒಳ್ಳೆಯ ವಾತಾವರಣದಿಂದ ಬಂದ ನೈಮಿತ್ತಿಕಶಾಂತಿಯು ಕೊನೆಯವರೆಗೂ ನಿಲ್ಲಲಾರದು; ಹೀಗೆಯೇ ಇದ್ದರೆ ಚೆನ್ನಾಗಿದ್ದೀತು-ಎಂದು ಎಣಿಸಿಕೊಳ್ಳುವದರೊಳಗಾಗಿ ಅದು ಹಾರಿಹೋಗುವದು. ಇದಕ್ಕೆ ಕಾರಣವೇನು? ಗೀತೆಯಲ್ಲಿ ಇದಕ್ಕೆ ಉತ್ತರವಿದೆ: **ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ । ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ ॥** ಹೊರಗಿನ ನೋಟಗಳೆಲ್ಲ ಗುಣಮಯವಾಗಿರುತ್ತವೆ. ಒಂದಾನೊಂದು ಮೋಹಿನಿಯು ಸುಂದರಳಾದ ಸ್ತ್ರೀಯಂತೆ ಕಂಡುಕೊಂಡು, ಸ್ವಲ್ಪದರಲ್ಲಿಯೇ ದೊಡ್ಡದೊಂದು ರೂಪವನ್ನು ತಳೆದು ವಿಕಾರವಾಗಿ ಭೀಕರವಾಗಿ ಕಾಣಿಸಿಕೊಂಡರೆ, ಅದನ್ನು ನೋಡಿದ ಅನುಭವವು ನಮ್ಮ ಮನಸ್ಸಿನಲ್ಲಿಯೇ ನಿಂತುಬಿಟ್ಟು ಮುಂದೆ ಕನಸಿನಲ್ಲಿಯೂ ಅದೇ ಕಾಣಿಸಿಕೊಳ್ಳುತ್ತಾ ಹೆದರಿಕೆಗೂ ಕಾರಣವಾಗುವದಿಲ್ಲವೆ? ಇದರಂತೆ ಮಹಾಮೋಹಿನಿಯಾದ ಮಾಯೆಯು ಬೇರೆಬೇರೆ ರೂಪಗಳಿಂದ ಕಾಣಿಸಿಕೊಂಡು ನಮ್ಮನ್ನು ಇಲಿಗಳನ್ನು ಬೆಕ್ಕು ಚೆಣ್ಣಾಟವಾಡಿಸುವಂತೆ ಆಡಿಸುತ್ತಿರುವದು. ಅದು ನಮ್ಮನ್ನು ಎತ್ತಲೂ ಬಿಡುವದಿಲ್ಲ, ಅದರ ವಿಷಯಕ್ಕೆ ನಾವು ಉದಾಸೀನರಾಗುವಂತೆಯೂ ಇಲ್ಲ. ಅದರ ಸುಂದರರೂಪನ್ನು ಕಂಡು ಮೋಹಗೊಳ್ಳುವೆವು, ಆಮೇಲೆ ಆದರಲ್ಲಿ ರಾಗವುಂಟಾಗುವದು. ಮುಂದೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ-ಎಲ್ಲವೂ ಒಂದರ ಹಿಂದೊಂದು ನಮ್ಮ ಮನಸ್ಸಿನಲ್ಲಿ ಮೂಡಿಕೊಳ್ಳುವವು. ಹುಡುಗರು ತಿಂಡಿ, ಗೋಲಿ, ಗಜ್ಜುಗ-ಮುಂತಾದವುಗಳಲ್ಲಿ ಮನಸ್ಸಿಟ್ಟು ಅವುಗಳು ಬೇಕೆಂಬ ಕಾಮ, ಸಿಕ್ಕದಿದ್ದರೆ ಕ್ರೋಧ, ಸಿಕ್ಕಿದರೆ ಲೋಭ, ಅವುಗಳ ಗುಣದ ವಿಷಯಕ್ಕೆ ಮೋಹ, ಅವು ತನ್ನಲ್ಲಿಯೇ ಇವೆ ಎಂಬ ಮದ, ಮತ್ತೊಬ್ಬರಿಗೂ ಸಿಕ್ಕಿದರೆ ಮಾತ್ಸರ್ಯ-ಹೀಗೆಲ್ಲ ಮಾಡುವರಲ್ಲವೆ? ಇದರಂತೆಯೇ ನಾವು ಹಣದ ವಿಷಯದಲ್ಲಿ ಮಾಡುತ್ತಿರುವೆವು.

ಅಧಿಕಾರದ ವಿಷಯದಲ್ಲಿ ಮಾಡುತ್ತಿರುವೆವು ಕುಲರವಿಷಯದಲ್ಲಿ ಮಾಡುತ್ತಿರುವೆವು, ರೂಪದ ವಿಷಯದಲ್ಲಿ ಮಾಡುತ್ತಿರುವೆವು–ಇದೇ ಮೋಹಿನಿಯಾದ ಮಾಯೆಯ ಕಾಟವು, ಈ ಮಾಯೆಯು ಅಪಾರವಾದೊಂದು ಸಮುದ್ರದಂತೆ ಇರುತ್ತದೆ. ಇದನ್ನು ದಾಟುವದು ಎಂದಿಗೂ ಶಕ್ಯವಿಲ್ಲ. ಇದರ ಅಲೆಗಳು ಒಂದರಹಿಂದೊಂದು ಏಳುತ್ತಲೇಇರುವವು. ಸಮುದ್ರದ ಅಲೆಗಳು ಎದ್ದಿರುವಾಗ ಕಸಪೊರಕೆಯಿಂದ ಅವನ್ನು ಗುಡಿಸುವದು ಹೇಗೆ ಅಶಕ್ಯವೋ ಹಾಗೆಯೇ ಚಿತ್ತದ ಅಶಾಂತಿಯ ಅಲೆಗಳನ್ನು ಪರಿಹರಿಸಿಕೊಳ್ಳುವದೂ ಅಶಕ್ಯ. ನಾನು ನೋಡಲಾರೆನೆಂದು ಕಣ್ಣುಮುಚ್ಚಿಕೊಳ್ಳುವದೂ ಇದಕ್ಕೆ ಉಪಾಯವಲ್ಲ. ಕಾಮಕ್ರೋಧಗಳ ಹೊಡೆತವನ್ನು ತಪ್ಪಿಸಿಕೊಳ್ಳುವದಕ್ಕೆ ದೇಶಾಂತರಕ್ಕೆ ಹೋದರೂ ಅವು ತಪ್ಪುವದಿಲ್ಲ.

ಮಾಯೆಯನ್ನು ದಾಟುವದಕ್ಕೆ ಒಂದೇ ಒಂದು ಉಪಾಯವಿದೆ. ಈಶ್ವರನನ್ನು ಶರಣುಹೊಗುವದೇ ಆ ಉಪಾಯವು. ಯಾರುಯಾರು ಭಗವಂತನಿಗೆ ಎಷ್ಟೆಷ್ಟು ಹತ್ತಿರವಿರುವರೋ ಅವರಿಗೆ ಅಷ್ಟಷ್ಟು ಶಾಂತಿಯಿರುತ್ತದೆ. ಯಾರು ಯಾರು ಆತನಿಂದ ಎಷ್ಟೆಷ್ಟು ದೂರಸರಿಯುವರೋ ಅವರಿಗೆ ಅಷ್ಟಷ್ಟು ಈ ಮಾಯೆಯ ಕಾಟವು ಹೆಚ್ಚುತ್ತದೆ, ಅಶಾಂತಿಯೂ ಪೀಡಿಸುತ್ತದೆ.

ಆ ಭಗವಂತನು ಎಲ್ಲಿರುತ್ತಾನೆ? ಅವನನ್ನು ಶರಣುಹೊಕ್ಕರೆ ನಮಗೆ ಶಾಂತಿದೊರಕುವದೆಂಬುದು ಹೇಗೆ? ಆಗ ಈ ಮಾಯೆ ಏನಾಗುತ್ತದೆ?–ಎಂದು ಯಾರಾದರೂ ಕೇಳಬಹುದು. ಆ ಈಶ್ವರನು ದೂರದಲ್ಲಿಲ್ಲ. ಆತನು ನಮ್ಮಗಳೆಲ್ಲರ ಹೃದಯದಲ್ಲಿಯೇ ಇರುತ್ತಾನೆ. ಆದರೂ ನಾವು ಅದನ್ನು ಅರಿಯದೆ ಈ ಮಾಯೆಗೆ ಸಿಕ್ಕಿಕೊಂಡಿದ್ದೇವೆ. ಹೊರಗಿಂದ ಬಂದವರು ಮನೆಯ ಯಜಮಾನನ ಕಡೆಯವರೆಂದು ತಿಳಿದರೆ ಆತನ ನಾಯಿಯು ಸುಮ್ಮನಾಗುವಂತೆ ಈ ಮಾಯೆಯು ಈಶ್ವರಭಕ್ತರ ಮೇಲೆ ಏನೂ ಕೈಮಾಡದೆ ಇರುತ್ತದೆ, ಅಷ್ಟೇ ಅಲ್ಲ! ಈಶ್ವರನ ಮಾಯೆಯೇ ಬಂಧಕವಾಗಿ ರುತ್ತದೆ, ಅದೇ ಮೋಕ್ಷಕರವೂ ಆಗಿರುತ್ತದೆ. ನಾವು ನೋಡುವ ರೀತಿಯಲ್ಲಿ ಮಾಯೆ ಬಂಧಕರವಾಗಿರುತ್ತದೆಯಾದರೂ ನಿಜವಾಗಿ ಅದು ಅದೇ

ರೂಪದಲ್ಲಿರುವದಿಲ್ಲ. ಶಾಸ್ತ್ರವೂ ಗುರುಗಳೂ ಹೇಳಿದಂತೆ ನೋಡಿದರೆ ಅದು ಮತ್ತೊಂದು ಶಾಂತರೂಪದಿಂದ ತೋರಿಕೊಳ್ಳುತ್ತದೆ. ಜ್ಞಾನಿಗಳಿಗೆ ಕಾಣುವ ಮಾಯೆಯೇ ಬೇರೆ, ಅಜ್ಞಾನಿಗಳಿಗೆ ಕಾಣುವ ಮಾಯೆಯೇ ಬೇರೆ. ಅಜ್ಞಾನಿಗಳು ಶರೀರವೆಂಬ ರಾಟವಾಳದ ಯಂತ್ರದ ಮೇಲೆ ಕುಳಿತು ಮೇಲಕ್ಕೇರುತ್ತಲೂ ಕೆಳಕ್ಕಿಳಿಯುತ್ತಲೂ ಇರುವರು. ಅವರಲ್ಲಿ ಕೆಲವರು ರಾಜಸಗುಣದಿಂದ ಮೋಹಿತರಾಗಿರುವರು. ಮತ್ತೆ ಕೆಲವರು ತಾಮಸಗುಣದಿಂದ ಮೋಹಿತರಾಗಿರುವರು. ಅವರಿಗೆ ಆಸುರಸಂಪತ್ತೂ ರಾಕ್ಷಸರ ಸಂಪತ್ತೂ ಸುಖಕರವಾಗಿ ತೋರುತ್ತಿರುವವು. ಕಹಿಪದಾರ್ಥವು ಕೂಡ ಅವರಿಗೆ ಸಿಹಿಯಾಗಿರುವದು. ಜನರಿಗೆ ತೊಂದರೆಯನ್ನು ಮಾಡುವದೇ ಅವರಿಗೆ ಆನಂದಕರವಾಗಿರುವದು. ಭಾರತದಲ್ಲಿ 'ನರಕದನ'ವೆಂಬುದೊಂದು ನರಕದ ವರ್ಣನೆಯಿದೆ. ಅಲ್ಲಿರುವವರು ನರಕದಲ್ಲಿಯೂ ನಾನು ನನ್ನದು ಎಂಬ ಅಭಿಮಾನವನ್ನು ಮಾಡಿಕೊಂಡು ಒಬ್ಬರೊಡನೊಬ್ಬರು ಜಗಳವಾಡುತ್ತಿರುವರಂತೆ! ಹಾಗಿರುತ್ತದೆ, ಮಾಯಮೋಹಿತರಾದವರ ಪಾಡು! ಈಶ್ವರನು ಮಾಯೆಯೆಂಬ ಯಂತ್ರದಲ್ಲಿ ನಮ್ಮನ್ನು ತಿರುಗಿಸುತ್ತಿದ್ದಾನೆ. ಅದೊಂದು ವಿಚಿತ್ರವಾದ ಯಂತ್ರ. ಅದಕ್ಕೆ ಕಟ್ಟಿದ ರೈಲು ನಾವು ಸ್ವರ್ಗಕ್ಕೋ ನರಕಕ್ಕೋ, ಬಂಧಕ್ಕೋ ಮೋಕ್ಷಕ್ಕೋ-ಎಲ್ಲಿಗೆ ಬೇಕೆಂದರೆ ಅಲ್ಲಿಗೆ ಹೋಗುವದು. ಅದಕ್ಕೆ ನಾವು ಕೊಡಬೇಕಾದ ಟಿಕೆಟ್ಟೆಂದರೆ ಚಿತ್ತವು. ನಮ್ಮ ಚಿತ್ತವು ಬಹಿರ್ಮುಖವಾಗಿ ವಿಷಯಾಸಕ್ತವಾಯಿತೆಂದರೆ ರಾಜಸತಾಮಸಗುಣಗಳು ನಮ್ಮನ್ನು ಮೋಹಗೊಳಿಸಿ ಸಂಸಾರಬಂಧದಲ್ಲಿ ಕಟ್ಟಿಕೆಡಹುವವು. ಒಳಮುಖವಾಗಿ ಈಶ್ವರನನ್ನು ಶರಣುಹೊಗುವದಕ್ಕೆ ಪ್ರಯತ್ನಿಸಿದೆವೆಂದರೆ ಸಾತ್ತ್ವಿಕಗುಣದ ಸಹಾಯದಿಂದ ಆ ಪರಮಾತ್ಮನನ್ನೇ ಸರ್ವಭಾವದಿಂದ ಶರಣುಹೊಗುವ ಮಾರ್ಗವು ತಿಳಿದುಬರುತ್ತದೆ.

ಆದ್ದರಿಂದ ವಿವೇಕಿಯಾದ ಸಾಧಕನು ರಜಸ್ಸಿನಿಂದ ತಮಸ್ಸನ್ನೂ ಸತ್ತ್ವದಿಂದ ರಜಸ್ತಮಸ್ಸುಗಳನ್ನೂ ಶುದ್ಧಸತ್ತ್ವದಿಂದ ಗುಣತ್ರಯವನ್ನೂ ಗೆದ್ದುಕೊಂಡು ಭಗವಂತನನ್ನೇ ಶರಣುಹೊಕ್ಕು ಭಗವನ್ಮಯನಾಗಿ ಪರಮಶಾಂತಿಯನ್ನು ಪಡೆದುಕೊಳ್ಳಬೇಕು.

ಇದುವರೆಗೆ ನಾವು ಶಾಂತಿಯ ಸ್ವರೂಪವನ್ನು ಕುರಿತು ಮಾತನಾಡಿರುತ್ತೇವಾದರೂ ಇದೆಲ್ಲವೂ ಸುಖಕ್ಕೂ ಅನ್ವಯಿಸುತ್ತದೆ. ಮನಸ್ಸಿಗೆ ಮಾಯೆಯಿಂದ ವಿಕ್ಷೋಭವಾಗುತ್ತದೆ; ಅದು ತಪ್ಪಿ ಸ್ವರೂಪದಲ್ಲಿರುವ ಸ್ಥಿತಿಗೆ ಶಾಂತಿ ಎಂದು ಹೆಸರು. ಇದರಂತೆ ಮಾಯೆಯಿಂದ ನಮಗೆ ದುಃಖವುಂಟಾಗುತ್ತದೆ, ಅದು ತಪ್ಪಿ ಸ್ವರೂಪಸ್ಥಿತಿಯನ್ನು ಪಡೆದರೆ ಸುಖವು ಬಂದಂತೆ. ಎರಡಕ್ಕೂ ಒಂದೇ ಉಪಾಯ; ಭಗವಂತನನ್ನು ಶರಣುಹೊಂದುವದೇ ಆ ಉಪಾಯ. ಎರಡಕ್ಕೂ ಒಂದೇ ಅಡ್ಡಿ; ಭಗವಂತನಿಂದ ಪರಾಙ್ಮುಖರಾಗುವದೇ ಆ ಅಡ್ಡಿ.

ವಿಷಯಗಳ ಸಂಸ್ಪರ್ಶದಿಂದಾಗುವ ಭೋಗಗಳು ಸುಖಕ್ಕೆ ಕಾರಣವೆಂದು ತಿಳಿಯುವದು ಮೂರ್ಖತನವು. ಅಫೀಮುತಿಂದವರು ಕೆಲವರು ಅಮಲಿನಿಂದ ನೀರಿನಲ್ಲಿ ಪ್ರತಿಫಲಿಸಿದ್ದ ಚಂದ್ರಬಿಂಬವನ್ನು ದೀಪವೆಂದು ಭ್ರಮಿಸಿ ಚಿಲುಮೆಹೊತ್ತಿಸಿಕೊಳ್ಳುವದಕ್ಕೆ ಹೋದರಂತೆ! ಹಾಗೆಯೇ ಇದೆ, ಮನುಷ್ಯರು ವಿಷಯಸ್ಪರ್ಶದಿಂದ ಸುಖವನ್ನು ಪಡೆಯುವದಕ್ಕೆ ಮಾಡುವ ಪ್ರಯತ್ನ! ಕಳ್ಳರನ್ನು ಹಿಡಿಯುವ ಪೋಲೀಸಿನವರು ಒಳ್ಳೆಯ ಮಾತಿನಿಂದ ಕೈಗೆ ಕೋಳವನ್ನು ತೊಡಿಸುವಂತೆ ವಿಷಯಭೋಗಗಳು ನಮ್ಮನ್ನು ಮರುಳುಮಾಡಿ ದುಃಖಕ್ಕೀಡುಮಾಡಿಬಿಡುತ್ತದೆ.

ನಿಜವಾಗಿ ನೋಡಿದರೆ ದುಃಖವೆನ್ನುವದೇ ಇಲ್ಲ. ಹೇಗೆ ಅದೇ ಮಾಯೆಯು ಅಜ್ಞರಿಗೆ ಅಶಾಂತಿಕಾರಣವಾಗಿಯೂ ಸುಜ್ಞರಿಗೆ ಶಾಂತಿಕಾರಣವಾಗಿಯೂ ಇರುವದೋ ಹಾಗೆಯೇ ಅದೇ ಮಾಯೆಯೇ ಸುಖದುಃಖಗಳಿಗೂ ಕಾರಣವಾಗಿರುತ್ತದೆ. ನಿಷ್ಪಕ್ಷಪಾತದೃಷ್ಟಿಯಿಂದ ನೋಡಿದರೆ ದುಃಖವೆಂಬುದೂ ನಮಗೆ ಚಿತ್ತಶುದ್ಧಿಯಾಗಲೆಂದು ಆಗಿರುವ ಭಗವಂತನ ಏರ್ಪಾಡಾಗಿರುತ್ತದೆ. ಚಿತ್ತಶುದ್ಧಿಯಿಲ್ಲದವರು ನೋಡಿದಾಗಮಾತ್ರವೇ ಪ್ರಪಂಚವು ದುಃಖಮಯವಾಗಿರುತ್ತದೆ. ಜ್ಞಾನಿಗಳು ವಿಷಯಭೋಗವನ್ನೇ ಕೈಬಿಡುವದಿಲ್ಲ; ಆದರೆ ಅವರು ವಿಷಯಗಳನ್ನು ಭೋಗಿಸುವ ಕ್ರಮವು ಬೇರೆಯಾಗಿರುತ್ತದೆ. ಅಜ್ಞರಂತೆ ಅವರು ರಾಗದ್ವೇಷಗಳಿಂದ ಕೂಡಿ ಭೋಗಿಸುವದಿಲ್ಲ; ಆದ್ದರಿಂದ ಅವರಿಗೆ ಎಲ್ಲಿಯೂ ದುಃಖವು ಕಾಣುವದಿಲ್ಲ. ಈ ಜಗತ್ತಿನಲ್ಲಿ ಆನಂದವಿಲ್ಲದಿದ್ದರೆ ಯಾರುತಾನೆ ಬದುಕಿದ್ದಾರು? ಯಾರುತಾನೆ ವ್ಯವಹಾರವನ್ನು ನಡೆಯಿಸಲು

ಶಕ್ತರಾದಾರು?– ಎಂದು ಶ್ರುತಿ ಸಾರುತ್ತದೆ. ಇಡಿಯ ಜಗತ್ತೇ ಆನಂದಮಯವಾಗಿರುತ್ತದೆಯಾದರೂ ಅಜ್ಞರಿಗೆ ಅದನ್ನು ಕಂಡುಕೊಳ್ಳುವ ಮಾರ್ಗವು ತಿಳಿಯದೆ ಇರುತ್ತದೆ. ಅವರಿಗೆ ಸುಖವು ಬಲು ಹತ್ತಿರವೇ ಇರುವಂತೆ ತೋರುತ್ತದೆ; ಆದರೆ ಅದನ್ನು ದೊರಕಿಸಿಕೊಳ್ಳುವದಕ್ಕೆ ಪ್ರಯತ್ನವನ್ನು ಮಾಡಿದರೆ ಸಾಕು, ಅದು ಮಾಯವಾಗುತ್ತದೆ. ಅವರು ಈಗ ಸುಖಕ್ಕಾಗಿ ಮಾಡುತ್ತಿರುವ ಪ್ರಯತ್ನವು ಸಮುದ್ರದ ಅಲೆಗಳೆಲ್ಲ ನಿಂತಬಳಿಕ ಸ್ನಾನಮಾಡುವದಕ್ಕೆಂದು ನಿಂತವರ ಪ್ರಯತ್ನವಾಗಿರುತ್ತದೆ; ಅಥವಾ ಆ ಅಲೆಗಳನ್ನು ಹೇಗೆ ನಿಲುವಳಿಗೆ ತರಬಹುದೆಂಬ ಆಲೋಚನೆಯಿಂದ ತಲೆಯನ್ನು ಕರಡುಮಾಡಿಕೊಳ್ಳುವವರ ಪ್ರಯತ್ನವಾಗಿರುತ್ತದೆ. ಆದರೆ ಅವರು ನಿಷ್ಫಲವಾದ ಈ ಅಹಂಮಮತೆಯ ಪ್ರಯತ್ನವನ್ನು ಬಿಟ್ಟು ತಮ್ಮ ಹೃದಯದಲ್ಲಿಯೇ ಇರುವ ಪರಮಾತ್ಮನ ಕಡೆಗೆ ಚಿತ್ತವನ್ನು ಹೊರಳಿಸಲಿ, ಆಗ ಅವರಿಗೆ ಅಕ್ಷಯವಾದ ಸುಖದ ಬುಗ್ಗೆಯೇ ದೊರೆತುಬಿಡುತ್ತದೆ. ಇಷ್ಟೇ ಅಲ್ಲ, ಆಗ ಪ್ರಪಂಚವೇ ಆನಂದಮಯವಾಗಿ ಕಾಣುತ್ತದೆ. ಸುಖಕ್ಕೂ ಶಾಂತಿಗೂ ಈಶ್ವರಶರಣತೆಯೊಂದೇ ಉಪಾಯವು; ಏಕೆಂದರೆ ಈಶ್ವರನೊಬ್ಬನೇ ಸುಖಶಾಂತಿಗಳ ನೆಲೆ.

★★★★★

## ಉಪನಿಷತ್ತುಗಳ ಉಪದೇಶ

**10-5-1943**

**ಶ್ರೀಶ್ರೀಗಳು**

ಉಪನಿಷತ್ತುಗಳು ಹೇಳುವ ಪರಮಾರ್ಥತತ್ತ್ವಕ್ಕೆ ಬ್ರಹ್ಮವೆಂದು ಹೆಸರು. ಬ್ರಹ್ಮವೆಂದರೆ ದೊಡ್ಡದು. ಯಾವದು ಸತ್ಯವಾಗಿ ಜ್ಞಾನಾನಂದ ಸ್ವರೂಪವಾಗಿ ಅನಂತವಾಗಿರುವದೋ ಅದು ಬ್ರಹ್ಮವು. ನಮಗೆ ಕಾಣುತ್ತಿರುವುದೆಲ್ಲವೂ ಈ ಬ್ರಹ್ಮವೇ ಎಂಬುದು ಉಪನಿಷತ್ತುಗಳ ಪರಮೋಪದೇಶವು. ಯಾವದರಿಂದ ಇದೆಲ್ಲವೂ ಬಂದಿದೆಯೋ,

ಯಾವದರಲ್ಲಿಯೇ ಇದ್ದುಕೊಂಡು ಜೀವಿಸಿರುವದೋ, ಯಾವದನ್ನೇ ಕೊನೆಗೆ ಹೋಗಿ ಸೇರುವದೋ, ಅದೇ ಬ್ರಹ್ಮವು ಎಂದು ಉಪನಿಷತ್ತು ಹೇಳುತ್ತದೆ. ಎಲ್ಲವೂ ಬ್ರಹ್ಮವೆಂಬುದನ್ನು ಹೇಗೆ ತಿಳಿಯಬೇಕು? ಮತ್ತೊಬ್ಬರಿಗೆ ಅದನ್ನು ತಿಳಿಸುವದಾದರೂ ಹೇಗೆ? ಅದು ಮಾತಿಗೆ ನಿಲುಕುವದಿಲ್ಲ. ಮನಸ್ಸಿಗೆ ನಿಲುಕುವದಿಲ್ಲ- ಎಂದು ಉಪನಿಷತ್ತುಗಳೇ ಸಾರುತ್ತಿರುವವು. ಹೀಗಿರುವಲ್ಲಿ ಅದನ್ನು ತಿಳಿದುಕೊಳ್ಳುವದಾದೀತೆ? ಎಂದು ನಮ್ಮಗಳಿಗೆ ಸಂಶಯವುಂಟಾಗುವದು ಸ್ವಾಭಾವಿಕವಾಗಿದೆ. ಆದರೆ ಅದನ್ನು ತಿಳಿದುಕೊಳ್ಳುವ ಬಗೆ ಬೇರೆ ಇದೆ. ಪ್ರಾಪಂಚಿಕರೀತಿಯಲ್ಲಿ ಅದನ್ನು ಅರಿತುಕೊಳ್ಳುವದು ಆಗಲಾರದು. ಹೇಗೆಂದರೆ ವಿಷಯಗಳನ್ನು ನಾವು ಇಂದ್ರಿಯದಿಂದ ಅರಿತುಕೊಳ್ಳುತ್ತೇವೆ. ಆದರೆ ಮನೋವ್ಯಥೆ, ಸಂತೋಷ, ಮುಂತಾದವನ್ನು ಹಾಗೆ ಅರಿತುಕೊಳ್ಳುವದಕ್ಕಾದೀತೆ? ಅವು ಇಷ್ಟು ಉದ್ದ, ಇಷ್ಟು ಅಗಲ, ಇಂಥ ರುಚಿ, ಇಷ್ಟು ತೂಕ, ಇಂಥ ರೂಪ- ಎಂದೇನೂ ಬಣ್ಣಿಸುವದಕ್ಕೆ ಬರುವದಿಲ್ಲ. ಆದ ಮಾತ್ರದಿಂದ ಮನಸ್ಸಿನ ಭಾವವೇ ಇಲ್ಲವೆನ್ನುವದಕ್ಕಾದೀತೆ? ಮತ್ತೊಬ್ಬರ ಮನೋಭಾವವನ್ನು ನಾವು ವಿಷಯಗಳನ್ನು ಕಾಣುವಂತೆ ಇಂದ್ರಿಯಗಳಿಂದ ಕಾಣುವದಕ್ಕೆ ಆಗುವದಿಲ್ಲವಾದರೂ ಸಹಾನುಭೂತಿಯಿಂದ ಅರಿತುಕೊಳ್ಳಬಹುದು. ಇನ್ನು ಆತ್ಮನು ಮನಸ್ಸಿಗೂ ನಿಲುಕುವದಿಲ್ಲವೆಂದು ಶ್ರುತಿಯಲ್ಲಿ ಹೇಳಿದೆಯಲ್ಲ! ಅವನನ್ನು ಹೇಗೆ ತಿಳಿದುಕೊಳ್ಳಬೇಕು? ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉತ್ತರವನ್ನು ಹೇಳುವ ಮುಂಚೆ ಸ್ವಲ್ಪ ವಿಚಾರವು ಅವಶ್ಯವಿದೆ. ವಿಷಯಗಳನ್ನು ನಾವು ಕರಣಗಳಿಂದ ನೋಡುತ್ತೇವೆ. ನಾನು ಕಣ್ಣಿಂದ ಇದನ್ನು ನೋಡುತ್ತೇನೆ' ಎಂಬಲ್ಲಿ ಅರಿಯುವ ನನಗೆ ಕಣ್ಣೆಂಬ ಕರಣವು ಸಾಧನವಾಗುತ್ತದೆ. ಇದರಂತೆ ಕಣ್ಣನ್ನು ಅರಿಯುವದಕ್ಕೆ ನನಗೆ ಮನಸ್ಸು ಸಾಧನವಾಗಿರುತ್ತದೆ. ಆದರೆ ಮನಸ್ಸನ್ನು ಅರಿಯುವದಕ್ಕೆ ಯಾವದು ಸಾಧನ? ಇಲ್ಲಿ ಕರಣಗಳ ಮಾತಿಲ್ಲ. ನಾನೇ ನೇರವಾಗಿ ಮನಸ್ಸನ್ನು ಅರಿಯುತ್ತೇನೆ. ಅಲ್ಲವೇ? ಇದರಂತೆ ನಾನು ನನ್ನ ಸ್ವರೂಪವನ್ನು ಅರಿಯುವಾಗ ನಾನು ಎಂಬ ಕರ್ತೃಭಾಗ, ನನ್ನನ್ನು ಎಂಬ ಕರ್ಮಭಾಗ- ಎರಡಾದರೂ ಇರಬೇಕೆಂದು ನಮಗೆ ಅನ್ನಿಸುತ್ತದೆ. ಮನಸ್ಸನ್ನು ನಾನು ಅರಿಯುವಂತೆ ನನ್ನನ್ನು ನಾನು ಅರಿಯುವದಿಲ್ಲ. ಏಕೆಂದರೆ ನಾನು ಇದ್ದೇನೆಂಬುದು

ನನಗೆ ಸ್ವತಃಸಿದ್ಧವಾಗಿಬಿಟ್ಟಿರುತ್ತದೆ. ನನ್ನ ಸ್ವರೂಪವನ್ನು ಅರಿಯಬೇಕೆಂಬ ಇಚ್ಛೆಯಿದೆಯೆಂದಾಗಲಿ, ನನಗೆ ಅದರ ಅಜ್ಞಾನವಿದೆಯೆಂದಾಗಲಿ ಹೇಳುವದು ಎಂದಿಗೂ ಸರಿಯಾಗಲಾರದು. ಏಕೆಂದರೆ ನಾನು ಇದೇನೆಯೊ ಇಲ್ಲವೊ-ಎಂಬ ಸಂಶಯವು ಯಾರಿಗೆ ತಾನೆ ಬಂದೀತು? ಒಂದು ವೇಳೆ ಬಂದರೆ ಆ ಸಂಶಯಗ್ರಸ್ತನೇ ತಾನು ಎಂದು ನಿಶ್ಚಯಿಸಬೇಕಾಗುತ್ತದೆ. ನನ್ನ ಸ್ವರೂಪವಾದ ಆತ್ಮನನ್ನು ಅರಿಯುವುದಕ್ಕೆ ಮತ್ತೇನೂ ಬೇಡ, ಆ ಸ್ವರೂಪವು ಸ್ವತಃಸಿದ್ಧವಾಗಿರುತ್ತದೆ. ಅದರ ಕಡೆಗೆ ಲಕ್ಷ್ಯವನ್ನು ಹಾಕಿದರೆ ಮನಸ್ಸಿನಲ್ಲಿ ಅದರ ಪ್ರತ್ಯಯವಾಗುತ್ತದೆ. ಅಷ್ಟೆ.

ಆತ್ಮನನ್ನು ಮಾತಿನಿಂದಾಗಲಿ ಮನಸ್ಸಿನಿಂದಾಗಲಿ ವಿಷಯವಾಗಿ ಸಿಕ್ಕೊಳ್ಳುವದಕ್ಕೆ ಆಗುವದಿಲ್ಲ. ಏಕೆಂದರೆ ಎಲ್ಲವನ್ನೂ ಅರಿಯುವ ವಿಷಯಿಯೇ ಅವನು, ಎಲ್ಲವನ್ನೂ ಬೆಳಗುವ ಚೈತನ್ಯವೇ ಆತ್ಮನು ಎಂಬುದು ಸಂಸ್ಕಾರವುಳ್ಳ ಅಂತಃಕರಣಕ್ಕೆ ಹೊಳೆಯುತ್ತದೆ. 'ನಾನು' ಎಂದು ನಾವು ಈಗ ಕರೆಯುತ್ತಿರುವದೂ ಆತ್ಮನಲ್ಲ. ಏಕೆಂದರೆ ನಾನೆಂಬ ಮಾತನ್ನು ನಾವು ಒಂದೊಂದು ಸಲ ಒಂದೊಂದಕ್ಕೆ ಉಪಯೋಗಿಸುತ್ತಿರುತ್ತೇವೆ. ಇದು ಅವಿದ್ಯಾತ್ಮ. ತಪ್ಪುತಿಳಿವಿನಿಂದ ನಾವು ಯಾವಯಾವದನ್ನು ನಮ್ಮ ಸ್ವರೂಪವೆಂದು ತಿಳಿದುಕೊಳ್ಳುವೆವೋ ಅದನ್ನೇ 'ನಾನು' ಎಂದು ಕರೆದುಕೊಳ್ಳುತ್ತೇವೆ. ಆದರೆ ನಿಜವಾದ ಆತ್ಮನು ''**ಪರಮಾತ್ಮನು**'' ಎಂದರೆ ಈ ಆತ್ಮರಿಗೆಲ್ಲ ಆತ್ಮನು. ನಾನು ಎಂಬುದರ ತಿರುಳೇ ಅವನು. ನಾನು ಎಂಬುದಕ್ಕೆ ಹಿಂತಡಿಕೆಯಾಗಿ ಯಾವಾಗಲೂ ಆತ್ಮಸ್ವರೂಪವು ಇದ್ದುಕೊಂಡಿರುತ್ತದೆ. ನಾನೆಂಬುದು ಮುಳುಗಿಹೋಗಬೇಕು, ಆಗಲೇ ಆ ಪರಮಾತ್ಮನ ಸ್ವರೂಪವು ಗೊತ್ತಾಗುವದು. ಯಾವದರಿಂದ ರೂಪವನ್ನೂ ಗಂಧವನ್ನೂ ಶಬ್ದವನ್ನೂ ಮಿಕ್ಕ ಇತರ ವಿಷಯಗಳನ್ನೂ ಅರಿಯುವೆವೋ ಅದೇ ನಮ್ಮ ಆತ್ಮನು. ರೂಪಾದಿಗಳನ್ನು ಕಣ್ಣಿನ ಇಂದ್ರಿಯವೇ ಮುಂತಾದುವು ಅರಿಯುತ್ತವೆಂದೂ ಅಥವಾ ಮನಸ್ಸೇ ಅರಿಯುವದೆಂದೂ ತಿಳಿಯುವದು ತಪ್ಪು. ಇವೆಲ್ಲದರಲ್ಲಿಯೂ ಅರಿವಿನ ತಿರುಳಾಗಿ ಆತ್ಮನ ಬೆಳಕು ಇದ್ದುಕೊಂಡಿರುತ್ತದೆ. ಆ ಬೆಳಕಿನಿಂದಲೇ ನಮ್ಮ ತಿಳಿವಳಿಕೆಯ ವ್ಯವಹಾರವೆಲ್ಲವೂ ಸಾಗಿರುತ್ತದೆ. ಇಂದ್ರಿಯಗಳೂ ಮನಸ್ಸೂ ಕಣ್ಣಿಗೆ ಕನ್ನಡಕದಂತೆ ಸಾಧನಮಾತ್ರವಾಗಿರುತ್ತವೆ; ಅವಕ್ಕೆ ತಾವೇ ತಿಳಿಯುವ ಸಾಮರ್ಥ್ಯವಿಲ್ಲ. ಆ ಸಾಮರ್ಥ್ಯವೇ ಆತ್ಮನು.

ಈ ಪರಮಾತ್ಮನನ್ನು ಸರಿಯಾಗಿ ತಿಳಿಯುವದು ಹೇಗೆಂಬುದನ್ನು ಉಪನಿಷತ್ತುಗಳಲ್ಲಿ **ಅವಸ್ಥಾತ್ರಯಪ್ರಕ್ರಿಯೆಯ** ಮೂಲಕ ಉಪದೇಶಿಸಿರುತ್ತದೆ. ಕನಸು, ಎಚ್ಚರ-ಎಂಬ ಎರಡು ಅವಸ್ಥೆಗಳಲ್ಲಿ ಕಾಣಬರುವ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ- ಈ ಪ್ರಪಂಚಭಾಗಗಳು ಒಂದಕ್ಕೊಂದು ಅತ್ಯಂತವಿಲಕ್ಷಣವಾಗಿರುತ್ತವೆ. ಇವುಗಳಲ್ಲಿ ಒಂದನ್ನೂ ಒಂದವಸ್ಥೆಯಿಂದ ಮತ್ತೊಂದಕ್ಕೆ ಕೊಂಡೊಯ್ಯುವದು ಆಗಲಾರದು. ಆದರೆ ಇವೆರಡನ್ನೂ ಬೆಳಗುವ ಆತ್ಮಸ್ವರೂಪವು ಮಾತ್ರ ಒಂದೇ ಆಗಿರುತ್ತದೆ. ಅದು ಇವೆರಡನ್ನೂ ವ್ಯಾಪಿಸಿಕೊಂಡಿರುವ ದೊಡ್ಡ ಆತ್ಮನಾಗಿರುತ್ತದೆ. ದೊಡ್ಡವರ ಉಪದೇಶದಿಂದ ಶಮದಮಾದಿಸಂಸ್ಕೃತವಾದ ಅಂತಃಕರಣದಿಂದ ಯಾವನು ಈ ಆತ್ಮನನ್ನು ಅರಿತುಕೊಳ್ಳುವನೋ ಅವನು ಶೋಕಿಸುವದಿಲ್ಲ-ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಈ ಎರಡು ಅವಸ್ಥೆಗಳನ್ನೂ ನಾವು ಏತರಿಂದ ಅರಿಯುತ್ತೇವೆ? ಆ ನಮ್ಮ ಸ್ವರೂಪವನ್ನು ಅರಿಯುವದಕ್ಕೆ ಕರಣವು ಅವಶ್ಯವೆ? ಇದನ್ನು ಚೆನ್ನಾಗಿ ಆಲೋಚನೆಮಾಡಬೇಕು. ಆತ್ಮನನ್ನು ಮಾತಿನಿಂದಲಾಗಲಿ ಮನಸ್ಸಿನಿಂದಲಾಗಲಿ ವಿಷಯೀಕರಿಸಿ ಅರಿಯುವದಕ್ಕೆ ಆಗಲಾರದೆಂಬುದು ಆಗ ಮನದಟ್ಟಾಗುವದು. ಆತ್ಮನು ಎಚ್ಚರಕನಸುಗಳ ಕಾಲ, ದೇಶ, ಮನಸ್ಸು, ಇಂದ್ರಿಯಗಳು ಎಲ್ಲಕ್ಕೂ ವ್ಯಾಪಕನಾಗಿ ಈ ಎಲ್ಲವನ್ನೂ ಅರಿಯುವವನಾಗಿರುತ್ತಾನೆಂಬುದು ಆಗ ತಿಳಿಯಬರುತ್ತದೆ. ಉಪನಿಷದ್ವಚನಗಳಿಂದ ಹೀಗೆ ತಿಳಿಯಬರುವ ಆತ್ಮನು ಯಾವ ಶಬ್ದಕ್ಕೂ ವಾಚ್ಯಾರ್ಥವಲ್ಲ, ಅವನು ಬರಿಯ ಲಕ್ಷ್ಯಾರ್ಥವಾಗಿರುತ್ತಾನೆ. ಅವನು ಮನಸ್ಸಿಗೆ ವಿಷಯವಲ್ಲ, ಎರಡವಸ್ಥೆಗಳ ಮನಸ್ಸನ್ನೂ ಅರಿಯುವ ಚೈತನ್ಯವು ಎಂಬುದು ನಮ್ಮ ಮನಸ್ಸಿಗೆ ಆಗ ಹೊಳೆಯುತ್ತದೆ. ಗುರುಗಳೂ ಶ್ರುತಿಗಳೂ ಈ ಆತ್ಮನನ್ನು ಕೊಂಬೆಯಮೇಲೆ ಚಂದ್ರನನ್ನು ತೋರಿಸುವಂತೆ ತೋರಿಸಿಕೊಡುತ್ತಾರೆ. ಇವನು ನಮ್ಮ ಆತ್ಮನೇ ಆಗಿರುವದರಿಂದ ಅಷ್ಟುಮಾತ್ರದಿಂದಲೇ ನಾವು ಅರಿತುಕೊಂಡು ಕೃತಕೃತ್ಯರಾಗುತ್ತೇವೆ. ಸುಷುಪ್ತಿಯನ್ನು ವಿಚಾರಿಸಿದರೆ ಆತ್ಮಸ್ವರೂಪವು ಮತ್ತಿಷ್ಟು ಸ್ಫುಟವಾಗಿ ನಮಗೆ ತಿಳಿದುಬರುತ್ತದೆ. ಏಕೆಂದರೆ ಅಲ್ಲಿ ನಮಗಿಂತ ಬೇರೆಯಾದ ಎರಡನೆಯ ವಸ್ತುವೇ ಇರುವದಿಲ್ಲ; ನಮಗೆ ಅಲ್ಲಿ ಯಾವ ಕರಣಗಳೂ

ಇರುವದಿಲ್ಲ. ಆದರೂ ನಾವು ಅಲ್ಲಿ ನಮಗೆ ಏನೂ ತೋರಲಿಲ್ಲವೆಂಬುದನ್ನು ಅರಿತುಕೊಳ್ಳುವೆವು; ಅದನ್ನು ನಾವು ಅರಿತದ್ದು ಏತರ ಬಲದಿಂದಲೋ ಅದೇ ನಮ್ಮ ಸಿದ್ಧಚೈತನ್ಯಸ್ವರೂಪವಾದ ಆತ್ಮನು.

ಉಪನಿಷತ್ತಿನಲ್ಲಿ ಬಹುಸಂಗ್ರವಾಗಿ ಆತ್ಮಸ್ವರೂಪವನ್ನೂ ಅದನ್ನರಿಯುವ ರೀತಿಯನ್ನೂ ತಿಳಿಸುತ್ತದೆ. ಅಲ್ಲಿ ಯಾವದನ್ನೂ ತರ್ಕದಿಂದ ಸಿದ್ಧಮಾಡಿಕೊಟ್ಟಿಲ್ಲ, ನಮ್ಮ ಅನುಭವದಿಂದಲೇ ನೇರಾಗಿ ತಿಳಿದುಕೊಳ್ಳುವ ಬಗೆಯನ್ನು ತಿಳಿಸಿರುತ್ತದೆ. ಯಾರಿಗೆ ಚಿತ್ತಶುದ್ಧಿಯಾಗಿರುವದೋ ಯಾರು ಅಂತರ್ಮುಖಿಗಳಾಗಿರುವರೋ ಅಂಥ ಮಹನೀಯರು ಮಾತ್ರ ಈ ಪರಮಾತ್ಮನನ್ನು ಅರಿತುಕೊಳ್ಳಬಲ್ಲರು. ನಮಗೆ ಮುಖ್ಯವಾಗಿ ಎಚ್ಚರದಲ್ಲಿರುವ ಪ್ರಪಂಚದ ಅಭಿಮಾನವು ಬಹಳ ಬಲವಾಗಿರುತ್ತದೆ. ಇದರ ಅಭಿಮಾನವನ್ನು ಬಿಡಬೇಕು. ಇದಕ್ಕಾಗಿ ಕರ್ಮಾದಿಗಳನ್ನು ಮಾಡಿ ಚಿತ್ತಶುದ್ಧಿಯನ್ನು ಪಡೆದುಕೊಳ್ಳಬೇಕು. ಪರಮಾತ್ಮನನ್ನು ಯಾವ ಹೆಸರಿನಿಂದ ಕರೆದರೂ ಅದು ಅವನ ಸರಿಯಾದ ಹೆಸರಾಗುವದಿಲ್ಲ; ಅವನಿಗೆ ಯಾವದೊಂದು ವಿಶೇಷಣವನ್ನು ಕೊಟ್ಟರೂ ಅದು ಎಚ್ಚರದ ವಿಶೇಷಣವಾಗುತ್ತದೆ. ಆದ್ದರಿಂದಲೇ ಶ್ರುತಿಯು ''ಅದು ಸ್ಥೂಲವಲ್ಲ, ಅಣುವಲ್ಲ......ಅದಲ್ಲ, ಅದಲ್ಲ'' ಎಂದು ನಿಷೇಧ ರೂಪವಾಗಿ ಆತ್ಮನನ್ನು ವರ್ಣಿಸುತ್ತದೆ. ನಿರಭಿಮಾನದಿಂದ ನಮ್ಮನ್ನು ನಾವೇ ಅರಿತುಕೊಂಡರೆ ಇದರ ನಿಜವು ನಮಗೆ ಗೊತ್ತಾಗುವದು. ಆತ್ಮನನ್ನು ನೇರಾಗಿ ಅಪರೋಕ್ಷವಾಗಿ ಅರಿತುಕೊಂಡವರು ಅವನ ಸ್ವರೂಪವನ್ನು 'ಹೀಗೆ, ಹೀಗಲ್ಲ' ಎಂದು ವರ್ಣಿಸಿದರೂ ನಿಜವನ್ನು ತಿಳಿಸಿದಂತೆ ಆಗುವದಿಲ್ಲವೆಂತಲೂ ಅವನನ್ನು ಅನುಭವದಿಂದಲೇ ತಿಳಿಯಬೇಕೆಂತಲೂ ನಿಶ್ಚಯಿಸಿಕೊಳ್ಳುವರು. ಹೀಗೆ ನಿಶ್ಚಯಿಸಿಕೊಂಡು ಆತ್ಮಾನುಸಂಧಾನದಿಂದಿರುವ ಕೃತಕೃತ್ಯರನ್ನು '**ಮೌನಿಗಳು**' ಎಂದರೆ ಅವಸ್ಥಾತ್ರಯವನ್ನು ಮೀರಿದವರು ಎಂದು ಕರೆಯುತ್ತಾರೆ.

ಉಪನಿಷತ್ತುಗಳಲ್ಲಿ ಮೇಲೆ ಹೇಳಿದ ಆತ್ಮಜ್ಞಾನವನ್ನು ತಿಳಿಸುವ ಭಾಗವಲ್ಲದೆ ಮತ್ತೊಂದು ಭಾಗವೂ ಇದೆ. ಅದನ್ನು **ಉಪಾಸನಾಕಾಂಡವೆಂದು** ಬೇಕಾದರೆ ಕರೆಯಬಹುದು. ಯಾರಿಗೆ ನೇರಾಗಿ ಜ್ಞಾನವು ಅಳವಡುವದಿಲ್ಲವೋ ಅವರಿಗೆ ಬ್ರಹ್ಮವನ್ನು ಸಂತತಧ್ಯಾನಮಾಡಬೇಕೆಂದು ಶ್ರುತಿಯಲ್ಲಿ ಹೇಳಿರುತ್ತದೆ.

ಬ್ರಹ್ಮವೊಂದೇ ಪರಮಾರ್ಥವಾಗಿರುವದು, ಅದಕ್ಕಿಂತ ಬೇರೆಯಾಗಿ ಏನೇನೂ ಇರುವದೇ ಇಲ್ಲ. ನಿಜವಾಗಿ ನೋಡಿದರೆ ಬ್ರಹ್ಮಕ್ಕೆ ಜನ್ಮವಿಲ್ಲ, ಆದರೂ ಮಾಯೆಯಿಂದ ಜಗತ್ತೆಲ್ಲದರ ರೂಪವನ್ನೂ ಅದು ಪಡೆದಿರುತ್ತದೆ; ಅದು ಒಂದೇ ಆಗಿರುತ್ತದೆ, ಆದರೂ ಅನೇಕವಾಗಿ ತೋರುತ್ತಿದೆ; ಅದಕ್ಕೆ ಚಲನವಿಲ್ಲ, ಆದರೂ ಚಲಿಸುವಂತೆ ಕಾಣಿಸುತ್ತಿದೆ. ಅಜ್ಞರಿಗೆ ಬ್ರಹ್ಮವೇ ಹೀಗೆ ನಾನಾರೂಪದಿಂದ ಕಾಣುತ್ತಿದೆಯಾದರೂ ಶರಣಾಗತರಾದವರಿಗೆ ಅದು ತನ್ನ ಸ್ವರೂಪವನ್ನು ತಿಳಿಸಿಕೊಟ್ಟು ಅಭಯವನ್ನು ಕೊಡುವದು. ಆದ್ದರಿಂದ ಮುಮುಕ್ಷುವಾದವನು ಎಲ್ಲೆಲ್ಲಿಯೂ ಬ್ರಹ್ಮಬುದ್ಧಿಯನ್ನು ಮಾಡಬೇಕು. ಯಾರು ಪರಮಾತ್ಮನನ್ನೇ ಆರಿಸಿಕೊಳ್ಳುವರೋ ಅಂಥ ಅನನ್ಯಭಕ್ತರಿಗೆ ಆತನು ಸಿಕ್ಕುವನು. ಎಲ್ಲವೂ ಬ್ರಹ್ಮವೇ ಆದರೂ ಸಾಧಕನು ವಿಭೂತಿಯಿಂದಲೂ ಕಾಂತಿಯಿಂದಲೂ ಬಲದಿಂದಲೂ ಕೂಡಿರುವ ಉತ್ತಮವಾದ ಸಾತ್ತ್ವಿಕವಸ್ತುಗಳನ್ನೇ ಮೊದಲು ಪರಮಾತ್ಮಬುದ್ಧಿಯಿಂದ ಧ್ಯಾನಮಾಡಬೇಕು. ದೊಡ್ಡವರ ಸಂಗದಿಂದಲೂ ಬ್ರಹ್ಮಧ್ಯಾನದಿಂದಲೂ ಮನಸ್ಸು ಶುದ್ಧವಾಗಿ ಪರಮಾತ್ಮನ ಕಡೆಗೆ ತಿರುಗಿದರೆ ಆತನ ಅನುಗ್ರಹದಿಂದ ಜ್ಞಾನವು ದೊರಕುತ್ತದೆ.

ಉಪನಿಷತ್ತುಗಳ ಮುಖ್ಯ ಉಪದೇಶವೇನೆಂದರೆ ಶ್ರೇಯಸ್ಸೆಂಬುದು ನಿಮ್ಮ ವಶದಲ್ಲಿಯೇ ಇರುತ್ತದೆ. ಅದಕ್ಕೆ ಹೊರಗಿನ ವಿಷಯಗಳ ಕಾಮವನ್ನು ಬಿಡುವದೇ ಉಪಾಯವು. ಪರಮಾತ್ಮನಿಗೆ ವಿಮುಖರಾದವರಿಗೆ ಪರಮಾತ್ಮಜ್ಞಾನವಾಗಲಿ ಶ್ರೇಯಸ್ಸಾಗಲಿ ದೊರಕಲಾರದು. ಯಾರು ವೈರಾಗ್ಯದಿಂದಲೂ ಭಕ್ತರ ಸೇವೆಯಿಂದಲೂ ಚಿತ್ತಶುದ್ಧಿಯನ್ನು ಪಡೆದು ಭಗವಂತನ ಕಡೆಗೆ ತಿರುಗುವರೋ ಅವರಿಗೆ ಸಚ್ಚಿದಾನಂದಬ್ರಹ್ಮವು ಎಲ್ಲೆಲ್ಲಿಯೂ ಇದೆಯೆಂಬುದೂ ಅದು ನಿಜವಾಗಿ ತಮ್ಮ ಆತ್ಮನೇ ಎಂಬುದೂ ನಿಸ್ಸಂದಿಗ್ಧವಾಗಿ ತಿಳಿದುಬರುತ್ತದೆ. ಅವರೇ ಧನ್ಯರು.

★★★★★

# ಶಾಸ್ತ್ರವಿಚಾರವೂ ಅನುಭವೂ

**12-5-1943**

**ಶ್ರೀಶ್ರೀಗಳು**

ಶಾಸ್ತ್ರವಿಚಾರವಿಲ್ಲದೆ ಎಂದಿಗೂ ಆತ್ಮಸ್ವರೂಪದ ಅನುಭವವಾಗಲಾರದೆಂದು ಕೆಲವರೂ, ಶಾಸ್ತ್ರವು ಪಾಂಡಿತ್ಯಮಾತ್ರಕ್ಕೆ ಬೇಕಾದದ್ದು, ಅನುಭವವೆಂಬುದು ಗುರುವಿನ ಅನುಗ್ರಹದಿಂದಲೇ ಆಗತಕ್ಕದ್ದು-ಎಂದು ಕೆಲವರೂ ಹೇಳುತ್ತಿರುತ್ತಾರೆ. ಆದ್ದರಿಂದ ಶಾಸ್ತ್ರವಿಚಾರಕ್ಕೂ ಅನುಭವಕ್ಕೂ ಇರುವ ನಿಜವಾದ ಸಂಬಂಧವೇನು-ಎಂಬುದನ್ನು ನಾವು ವಿಚಾರಮಾಡಬೇಕಾಗಿ ರುತ್ತದೆ. ಶಾಸ್ತ್ರವೆಂದರೆ ಇಷ್ಟಪ್ರಾಪ್ತಿಗೂ ಅನಿಷ್ಟನಿವೃತ್ತಿಗೂ ಉಪಾಯವನ್ನು ತಿಳಿಸುವದು. ಇದ್ದದ್ದನ್ನು ಇದ್ದಂತೆ ತಿಳಿಸುವ ತಿಳಿವಳಿಕೆಗೆ ಶಾಸ್ತ್ರವೆಂಬ ಹೆಸರನ್ನು ಕೊಡಬೇಕೆಂದು ಈಗಿನವರು ಹೇಳುತ್ತಾರೆ. ಇದು ತಪ್ಪಲ್ಲವಾದರೂ ಸಪ್ರಯೋಜನವಾದ ತಿಳಿವಳಿಕೆಯನ್ನು ಕೊಡುವದೇ ಶಾಸ್ತ್ರವೆಂಬ ಹೆಸರು ಯುಕ್ತವಾಗಿರುತ್ತದೆ. ನಮ್ಮವರು ವೇದವನ್ನೇ ಶಾಸ್ತ್ರವೆನ್ನುತ್ತಾರೆ. ಪುರುಷಾರ್ಥಕ್ಕೆ ಉಪಾಯವಾಗಿರುವ ಧರ್ಮ, ಜ್ಞಾನ-ಇವುಗಳನ್ನು ಮುಖ್ಯವಾಗಿ ವೇದವು ತಿಳಿಸುತ್ತದೆ. ಪಶುಗಳಿಗೂ ಇಷ್ಟಾರ್ಥವನ್ನು ಪಡೆಯಬೇಕೆಂಬ ಇಚ್ಛೆಯೂ ಅನಿಷ್ಟವಾದದ್ದನ್ನು ತೊಲಗಿಸಿಕೊಳ್ಳಬೇಕೆಂಬ ಇಚ್ಛೆಯೂ ಉಂಟಾದರೂ ಅವಕ್ಕೆ ನಿತ್ಯವಾದ ಸುಖದ ಬಯಕೆಯಿರುವದಿಲ್ಲ. ಆದ್ದರಿಂದ ವೇದವು ಮನುಷ್ಯನಿಗೆ ಬೇಕಾದ ಇಷ್ಟಾರ್ಥ ಉಪಾಯವನ್ನು ತಿಳಿಸಿಕೊಡುವದರಿಂದಲೇ ಶಾಸ್ತ್ರವೆನಿಸಿಕೊಂಡಿರುತ್ತದೆ. ವೇದದ ಅರ್ಥವನ್ನು ತಿಳಿಯುವದಕ್ಕೆ ಸಹಾಯಮಾಡುವದರಿಂದ ಮೀಮಾಂಸಾಶಾಸ್ತ್ರವೇ ಮುಂತಾದವುಗಳಿಗೂ ಗೌಣಾರ್ಥದಿಂದ ಶಾಸ್ತ್ರವೆಂಬ ಹೆಸರು ಬಂದಿರುತ್ತದೆ.

ಮೀಮಾಂಸಾಶಾಸ್ತ್ರವು ಸೂತ್ರರೂಪವಾಗಿರುತ್ತದೆ. ಯಾರು ಶಾಸ್ತ್ರರೂಪವಾದ ವೇದವನ್ನು ಚೆನ್ನಾಗಿ ಅಧ್ಯಯನಮಾಡಿ ಅದರಲ್ಲಿ ಹೇಳಿರುವಂತೆ ತಾವೂ ಅನುಷ್ಠಾನಮಾಡುತ್ತಾ ಮಿಕ್ಕವರನ್ನೂ ಅದೇ

ಆಚಾರದಲ್ಲಿ ನಿಲ್ಲಿಸುತ್ತಿದ್ದರೋ ಅಂಥವರಿಗೆ ಆಚಾರ್ಯನೆಂಬ ಹೆಸರು ಬರುತ್ತಿತ್ತು. ಜೈಮಿನಿ, ಬಾದರಾಯಣ-ಇವರು ಅಂಥ ಆಚಾರ್ಯರುಗಳು. ಅವರು ತಾವು ತಿಳಿದಿದ್ದ ವೇದಾರ್ಥವನ್ನು ಬಹುಸಂಗ್ರಹವಾಗಿ ಸೂತ್ರರೂಪವಾಗಿ ಬರೆದು ಶಿಷ್ಯರಿಗೆ ಅರ್ಥವನ್ನು ತಿಳಿಸಿಕೊಡುತ್ತಿದ್ದರು. ಹೀಗೆ ಗುರುಗಳಿಂದ ನೇರಾಗಿ ಸೂತ್ರಾರ್ಥವನ್ನು ತಿಳಿಯುವ ಸಂಪ್ರದಾಯವು ಕುಗ್ಗುತ್ತಾ ಬಂದಹಾಗೆಲ್ಲ ಸೂತ್ರಗಳಿಗೂ ಅರ್ಥವನ್ನು ತಿಳಿಸುವ ಭಾಷ್ಯಗಳೂ ವೃತ್ತಿಗಳೂ ಅವಶ್ಯವಾದವು. ಇತ್ತಕಡೆಗೆ ಆ ಭಾಷ್ಯಗಳ ಮೇಲೆ ವ್ಯಾಖ್ಯಾನಗಳೂ ವಾರ್ತಿಕಗಳೂ ಹುಟ್ಟಿಕೊಂಡವು. ಆದ್ದರಿಂದ ಇನ್ನು ಮೇಲೆ ವೇದಾರ್ಥವನ್ನು ನಿರ್ಣಯಿಸುವದಕ್ಕೆ ವೇದವೇದಾಂತಗಳ ಅಧ್ಯಯನವೂ ಅಂಗೋಪಾಂಗಗಳ ಅಧ್ಯಯನವೂ ಸೂತ್ರಗಳ ಮತ್ತು ಭಾಷ್ಯಗಳ ಅಧ್ಯಯನವೂ ಭಾಷ್ಯಗಳ ಮೇಲಿನ ವ್ಯಾಖ್ಯಾನವೂ ಅವಶ್ಯವಾದವು. ಇದೆಲ್ಲ ನೋಡಿ ವಿಚಾರಮಾಡಿದರೆ ಶಾಸ್ತ್ರವಿಚಾರವೆನಿಸುತ್ತದೆ.

ಕಾಲಕ್ರಮದಲ್ಲಿ ಯಾವದಾದರೊಂದು ವೇದವಾಕ್ಯದ ಅರ್ಥವನ್ನು ನಿರ್ಣಯಮಾಡಬೇಕಾದರೆ **ಪರಿಷತ್ತು**ಗಳನ್ನು ಕೂಡಿಸುವ ವಾಡಿಕೆಯು ಬಂತು. ಏಕೆಂದರೆ ಶಾಸ್ತ್ರಾರ್ಥನಿರ್ಣಯಕ್ಕೆ ಬೇಕಾದ ಭಾಗಗಳನ್ನೆಲ್ಲ ಓದಿ ಅರಗಿಸಿಕೊಂಡವರು ತೀರಕಡಿಮೆಯಾಗುತ್ತಾ ಬಂದರು. ಅಧ್ಯಯನಮಾಡಿದವರು, ಮೀಮಾಂಸಾತರ್ಕವ್ಯಾಕರಣಾದಿಗಳನ್ನು ಓದಿದವರು, ಭಾಷ್ಯವನ್ನು ಬಲ್ಲವರು-ಇವರೆಲ್ಲ ಸೇರಿ ಚರ್ಚಿಸಿ ನಿರ್ಣಯಮಾಡುತ್ತಿದ್ದರು. ಆದ್ದರಿಂದಲೇ ಈಗ ಯಾವದಾದರೊಂದು ಶಾಸ್ತ್ರದ ಚರ್ಚೆಯನ್ನು ಮಾಡುತ್ತಿದ್ದರೆ 'ವಾಕ್ಯಾರ್ಥ'ವಾಗುತ್ತಿದೆ ಎನ್ನುತ್ತಾರೆ. ಈ ಕಾರಣದಿಂದಲೇ ವಾಕ್ಯವಿಲ್ಲದೆ ಯಾವದಾದರೊಂದು ಶಾಸ್ತ್ರವಿಷಯದ ವಿಚಾರವು ನಡೆದರೂ ವಾಕ್ಯಾರ್ಥವೆಂಬ ಹೆಸರು ಅದಕ್ಕೆ ಲಕ್ಷಣೆಯಿಂದ ಸಲ್ಲುತ್ತದೆ.

ನಮ್ಮ ದೇಶಕ್ಕೆ ಶಾಸ್ತ್ರವೆಂಬುದು ಒಂದು ದೊಡ್ಡನಿಧಿ. ವೇದಶಾಸ್ತ್ರಾದಿಗಳ ವಿಚಾರವನ್ನು ಕಳೆದುಕೊಂಡು 'ನಮ್ಮದೇಶ' ಎಂದು ಒಣಹೆಮ್ಮೆಯನ್ನು ಬೆಳೆಯಿಸಿಕೊಳ್ಳುವದರಿಂದ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದ ನಮ್ಮದೇಶದ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕೆಂಬ ದೃಷ್ಟಿಯಿಂದಲಾದರೂ

ಶಾಸ್ತ್ರವಿಚಾರವನ್ನು ನಡೆಯಿಸಬೇಕು. ಮೀಮಾಂಸಾಶಾಸ್ತ್ರವು ವೇದಕ್ಕೆ ಅರ್ಥವನ್ನು ಮಾಡುವ ವ್ಯವಸ್ಥೆಯನ್ನೊಳಕೊಂಡಿರುವ ಶಾಸ್ತ್ರವು. ಅದನ್ನು ಒಳಹೊಕ್ಕು ವಿಚಾರಮಾಡುವ ಆನಂದವು ಅಸಾಧಾರಣವಾದದ್ದು. ವಾಕ್ಯಕ್ಕೆ ಅರ್ಥವನ್ನು ನಿರ್ಣಯಿಸುವ ಮೀಮಾಂಸಾನ್ಯಾಯಗಳನ್ನು ತಿಳಿಯುವದರಿಂದ ಎಂಥ ಉತ್ತಮಪ್ರಯೋಜನವಿದೆಯೆಂಬುದನ್ನು ಒಂದು ಉದಾಹರಣೆಯಿಂದ ಸ್ಪಷ್ಟಗೊಳಿಸಬಹುದು. ಭಗವದ್ಗೀತೆಗೆ ಈಗ ನೂರಾರು ಅರ್ಥಗಳಿವೆ. ಉಪಕ್ರಮೋಪಸಂಹಾರಾದಿತಾತ್ಪರ್ಯಲಿಂಗಗಳ ಸ್ವರೂಪವನ್ನೂ ಶ್ರುತಿಲಿಂಗಾದಿಗಳ ಸ್ವರೂಪವನ್ನೂ ಅನುಸರಿಸಿ ಅರ್ಥವನ್ನು ಮಾಡುವ ಕಟ್ಟಿಗೆ ಒಳ್ಳಪಟ್ಟರೆ ಇಷ್ಟೊಂದು ಅರ್ಥಗಳು ಎಂದಿಗೂ ಆಗಲಾರವು.

ಶಾಸ್ತ್ರದಲ್ಲಿ ಅದೃಷ್ಟಫಲವನ್ನು ತಿಳಿಸುವ ಧರ್ಮಭಾಗವೆಂದೂ ದೃಷ್ಟಫಲವನ್ನು ಕೊಡುವ ಜ್ಞಾನಭಾಗವೆಂದೂ ಎರಡು ಭಾಗಗಳಿವೆ. ಕರ್ಮಕ್ಕೆ ಸತ್ತಮೇಲೆ ಫಲವಾಗಬೇಕಾಗಿರುವದರಿಂದ ಉಪಕ್ರಮಾದಿಗಳಿಂದ ಅರ್ಥವನ್ನು ಕಲ್ಪಿಸಿಕೊಳ್ಳಬೇಕು. ಆಮೇಲೆ ಶ್ರದ್ಧೆಯಿಂದ ಶಾಸ್ತ್ರದಲ್ಲಿ ಹೇಳಿರುವಂತೆ ಕರ್ಮವನ್ನು ಮಾಡಬೇಕು. ಅಲ್ಲಿ ಶಾಸ್ತ್ರದಮೇಲೆ ಯುಕ್ತಿಯನ್ನು ಕೇಳಿ ಆಕ್ಷೇಪಿಸುವದಕ್ಕೆ ಎಂದಿಗೂ ಎಡೆಯಿರುವದಿಲ್ಲ. ಲೌಕಿಕವಿಚಾರದಲ್ಲಿ ಹೇಗೆ ತಜ್ಞರ ಅಭಿಪ್ರಾಯವನ್ನಿಟ್ಟುಕೊಂಡು ಯಂತ್ರಗಳೇ ಮುಂತಾದವುಗಳನ್ನು ಉಪಯೋಗಿಸಿಕೊಳ್ಳುವೆವೋ ಹಾಗೆಯೇ ಕರ್ಮವಿಚಾರದಲ್ಲಿಯೂ ಅಭಿಯುಕ್ತರ ವಾಕ್ಯವನ್ನು ವಿಶ್ವಾಸದಿಂದ ನಂಬಿ ನಡೆಯಬೇಕಾಗುತ್ತದೆ. ಆದರೆ ಜ್ಞಾನಭಾಗದ ವಿಚಾರದಲ್ಲಿ ಹೀಗಿಲ್ಲ. ಅದರಲ್ಲಿ ಅನುಭವವೇ ಮುಖ್ಯವಾಗಿರುತ್ತದೆ. ಕರ್ಮಕ್ಕೆ ಅದೃಷ್ಟವಾದ ಫಲವೇ ಅಲ್ಲದೆ ಜ್ಞಾನಕ್ಕೆ ತಯಾರಾಗುವ ಚಿತ್ತಸಂಸ್ಕಾರವೆಂಬ ಒಂದು ದೃಷ್ಟಫಲವೂ ಇರುತ್ತದೆ. ಆದರೆ ಜ್ಞಾನವಾಕ್ಯಗಳಿಂದಾಗುವ ಫಲವು ಮುಖ್ಯವಾಗಿ ದೃಷ್ಟವಾಗಿರುತ್ತದೆ. ಆದ್ದರಿಂದಲೇ ಶಂಕರಾಚಾರ್ಯರು ''ಧರ್ಮಜಿಜ್ಞಾಸೆಯಲ್ಲಿ ಬರಿಯ ಶ್ರುತ್ಯಾದಿಗಳೇ ಪ್ರಮಾಣವಾಗಿರುತ್ತವೆ; ಆದರೆ ಬ್ರಹ್ಮಜಿಜ್ಞಾಸೆಯಲ್ಲಿ ಶ್ರುತ್ಯಾದಿಗಳೂ ಅನುಭವಾದಿಗಳೂ ಯಥಾಸಂಭವವಾಗಿ ಪ್ರಮಾಣವಾಗಿರುತ್ತವೆ'' ಎಂದು ಬರೆದಿರುತ್ತಾರೆ. ಉಪನಿಷತ್ತಿನಲ್ಲಿ ಈ ವಾಕ್ಯವಿದೆ: ''ಹೃದಯದಲ್ಲಿರುವ ಕಾಮುಗಳೆಲ್ಲವೂ ಎಂದಿಗೆ ತೊಲಗುವವೋ

ಆಗ ಮರ್ತ್ಯನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಪಡೆಯುವನು''. ಇಲ್ಲಿ ಈ ಜನ್ಮದಲ್ಲಿಯೇ ನಾವು ಬ್ರಹ್ಮದ ಅನುಭವವನ್ನು ಪಡೆಯಬಹುದು ಎಂದು ಸ್ಪಷ್ಟವಾದ ನುಡಿಗಳಿಂದ ವೇದವು ಹೇಳುತ್ತಿದೆ. ಆದ್ದರಿಂದ ವೇದವಾಕ್ಯಕ್ಕೆ ಇಲ್ಲಿಯೇ ಅನುಭವಕ್ಕೆ ಹೊಂದುವಂತೆ ಯಾರು ಅರ್ಥಮಾಡಿ ತೋರಿಸುವರೋ, ಯಾವ ವಾಕ್ಯಾರ್ಥವು ಇಲ್ಲಿಯೇ ನಾವು ಬ್ರಹ್ಮಸ್ವರೂಪರಾಗಿ ರುವೆವೆಂಬುದನ್ನು ಅನುಭವಕ್ಕೆ ಹೊಂದಿಸಿ ತಿಳಿಸುವದೋ ಅದೇ ನಿಶ್ಚಯವಾದದ್ದು ಎಂದು ನಾವು ಹೇಳಬೇಕಾಯಿತು. ಹೀಗೆ ಶಾಸ್ತ್ರದಲ್ಲಿ ಹೇಳಿರುವದು ಅನುಭವಕ್ಕೂ ಹೊಂದಿಕೆಯಾದರೆ ಮಾತ್ರ ಪ್ರಮಾಣವಾಗಿರುವದರಿಂದ ಶಾಸ್ತ್ರಾರ್ಥವು ಬೇರೆ, ಅನುಭವವು ಬೇರೆ-ಎನ್ನುವದಕ್ಕೆ ಬರುವದಿಲ್ಲ. ಏಕೆಂದರೆ ಅದೃಷ್ಟಫಲದ ವಿಷಯದಲ್ಲಿ ವಾಕ್ಯಕ್ಕೆ ಹೊಂದುಗೆಯಾದ ಅರ್ಥವನ್ನು ಮಾಡಿಕೊಂಡು ನಂಬಬೇಕಾಗುತ್ತದೆ. ಆದರೆ ದೃಷ್ಟಫಲವನ್ನು ತಿಳಿಸುವ ವಾಕ್ಯಕ್ಕೆ ಇದೇ ಅರ್ಥವೆಂದು ನಿರ್ಣಯಿಸಿದೆವು, ಅನುಭವಮಾತ್ರ ಆಗಲಿಲ್ಲ ಎಂದು ಹೇಳುವದು ಹೇಗೆ ಸರಿಯಾದೀತು? ಆದ್ದರಿಂದ ವೇದದಲ್ಲಿ ಎಲ್ಲೆಲ್ಲಿ ಈಗಲೇ ಅನುಭವಕ್ಕೆಬರಬಹುದಾದ ವಿದ್ಯಮಾನವಿಷಯಗಳನ್ನು ತಿಳಿಸಿದೆಯೋ ಆ ವಾಕ್ಯಗಳಿಗೆ ಅರ್ಥವನ್ನು ಮಾಡಿಕೊಂಡ ಮೇಲೂ ಬಹುಕಾಲ ಅನುಭವಕ್ಕೆ ಕಾಯಬೇಕು-ಎಂದು ಹೇಳುವದರಲ್ಲಿ ಅರ್ಥವಿಲ್ಲವೆಂದು ನಿಶ್ಚಯಿಸಬೇಕಾಗಿದೆ.

ಈಗ ನಮ್ಮವಿಚಾರದ ಎರಡನೆಯ ಅಂಶಕ್ಕೆ ತೆರಳೋಣ. ಶಾಸ್ತ್ರದ ಅರ್ಥವಾದರೆ ಅನುಭವವಾಗಲೇಬೇಕೆಂದು ನಿರ್ಣಯಿಸಿದ್ದಾಯಿತು. ಆದರೆ ಅನುಭವವು ಶಾಸ್ತ್ರವಿಲ್ಲದೆ ಆಗಲೇ ಆರದೆ? ಹಾಗೆಂದು ಹೇಳುವದಕ್ಕೂ ಬರುವದಿಲ್ಲ. ಶಾಸ್ತ್ರದ ಸಂಬಂಧವಿಲ್ಲದೆ ಇರುವ ಎಷ್ಟೋ ಜನ ಅನುಭವಿಗಳು ವೈದ್ಯವೇ ಮುಂತಾದದ್ದನ್ನು ಹೇಳುವದನ್ನು ನಾವು ಕಂಡಿದೇವೆ. ಅವರ ತಿಳಿವಳಿಕೆಯಿಂದ ಪ್ರಯೋಜನವಾಗಿರುವದೂ ನಮ್ಮ ದೃಷ್ಟಿಗೆ ಬಿದ್ದಿರುತ್ತದೆ, ಹೀಗಿರುವಲ್ಲಿ ಶಾಸ್ತ್ರವಿಲ್ಲದೆ ಅನುಭವವಾಗಲಾರದೆಂದು ಹೇಳುವದು ಹೇಗೆ? ಒಂದಾನೊಂದು ಕಾಲದಲ್ಲಿ ನನಗೆ ಯದೃಚ್ಛೆಯಿಂದ ಒಂದು ಅನುಭವವುಂಟಾಯಿತು. ಹೃದಯದಿಂದ ಒಂದೇಸಮನೆ ಉರಿಯುತ್ತಿರುವ ದೀಪವೊಂದನ್ನು ಕಲ್ಪಿಸಿಕೊಂಡು ಅದರ ಉರಿಯು ಮೇಲಕ್ಕೆ ಏರುವಂತೆ

ಕಲ್ಪಿಸುತ್ತಾ ನಡುನೆತ್ತಿಯನ್ನು ತಾಕುವವರೆಗೂ ಅದೇ ಮೇಲಕ್ಕೆ ಹೋದಂತೆ ಬಿಡದೆ ಭಾವಿಸಿದರೆ ಕೊನೆಗೆ ಶರೀರದ ಭಾನವು ತಪ್ಪಿ ಹೋಗುವದು; ನಾನು, ಮತ್ತೊಬ್ಬರು - ಎಂಬ ಅರಿವು ಇಲ್ಲದಂತಾಗುವದು. ಈ ಅನುಭವವನ್ನು ನಾನು ಒಬ್ಬ ಯೋಗಿಗಳಲ್ಲಿ ತಿಳಿಸಿದೆನು. ಇದು ಯೋಗಿಗಳ ಅನುಭವಕ್ಕೆ ಹೊಂದಿಕೆಯಾಗಿದೆ ಎಂದು ಅವರು ಅದರ ತತ್ತ್ವವನ್ನು ನನಗೆ ಬಿಡಿಸಿ ಹೇಳಿದರು. ಇದನ್ನೆಲ್ಲ ಮನದಂದರೆ ನಮಗೆ ತಿಳಿದುಬರುವದೇನೆಂದರೆ ಅನುಭವವು ಶಾಸ್ತ್ರದ ಮೂಲಕವಾಗಲಿ, ಸ್ವತಂತ್ರವಾಗಿಯೇ ಆಗಲಿ ಅನುಭವವೇ. ಶಾಸ್ತ್ರವು ಇಲ್ಲದ್ದನ್ನು ಸೃಷ್ಟಿಮಾಡಲಾರದು, ಇದ್ದದ್ದನ್ನು ಮಾತ್ರ ಜ್ಞಾಪಿಸುವದು- ಎಂದು ಶಂಕರಾಚಾರ್ಯರು ಹೇಳಿರುವದನ್ನು ನಾವು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಆದ್ದರಿಂದ ಅನುಭವವು ಸ್ವತಂತ್ರವಾಗಿಯೂ ಆಗಬಹುದು. ಅದು ಶಾಸ್ತ್ರಮೂಲಕವಾಗಿ ಉಂಟಾದರೆ ವ್ಯವಸ್ಥೆಯಿಂದ ಮತ್ತೊಬ್ಬರಿಗೂ ತಿಳಿಸಿಕೊಡುವದಕ್ಕೆ ಬರುತ್ತದೆ. ಬರಿಯ ಅನುಭವವು ತನ್ನಮಟ್ಟಿಗೆ ಪ್ರಯೋಜನಕಾರಿಯಾಗಬಹುದಾದರೂ ಸಂಶಯಾದಿಗಳಿಗೆ ಎಡೆಗೊಡದಂತೆ ನಿರಾಕ್ಷೇಪಕವಾಗಿ ಮತ್ತೊಬ್ಬರಿಗೂ ತಿಳಿಸಿಕೊಡುವದು ಕಷ್ಟಸಾಧ್ಯವಾಗಬಹುದು, ಅಷ್ಟೆ.

ಆದ್ದರಿಂದಲೇ ಶ್ರುತಿಯು ಹೀಗೆಂದು ಹೇಳುತ್ತದೆ ''ಆತ್ಮನನ್ನು ಕಾಣಬೇಕಾದರೆ ಶ್ರವಣಮಾಡಬೇಕು, ಮನನಮಾಡಬೇಕು, ನಿದಿಧ್ಯಾಸನಮಾಡಬೇಕು''- ಶಾಸ್ತ್ರದಲ್ಲಿ ಹೇಳಿರುವದನ್ನು ಕೇಳಿ ತಿಳಿದುಕೊಳ್ಳಬೇಕು; ಗುರುವಿನಿಂದ ಉಪದೇಶವನ್ನು ಪಡೆದು ಶಾಸ್ತ್ರಾರ್ಥವನ್ನು ಯುಕ್ತಿಗೂ ಹೊಂದಿಸಿಕೊಳ್ಳಬೇಕು; ಬಳಿಕ ಈ ಎರಡು ತಿಳಿವಳಿಕೆಯನ್ನೂ ತನ್ನ ಅನುಭವಕ್ಕೆ ಒರೆಹಚ್ಚಿ ನೋಡಿಕೊಳ್ಳಲೂಬೇಕು. ಶಾಸ್ತ್ರಪ್ರತಿಪತ್ತಿ, ಆಚಾರ್ಯಪ್ರತಿಪತ್ತಿ, ಆತ್ಮಪ್ರತಿಪತ್ತಿ-ಈ ಮೂರು ಅರಿವುಗಳು ಒಂದಾದರೆ ಆಗ ನಮ್ಮ ಅರಿವು ಸ್ಥಿರವಾಯಿತು. ಆದ್ದರಿಂದ ಶಾಸ್ತ್ರದ ಅರ್ಥವನ್ನು ವಿಚಾರಮಾಡಬೇಕು. ದುಸ್ತರ್ಕವನ್ನು ಬಿಡಬೇಕು, ಅದನ್ನು ಅನುಭವಕ್ಕೆ ತಂದುಕೊಳ್ಳಬೇಕು- ಎಂಬುದೇ ರಾಜಮಾರ್ಗವು, ಶಾಸ್ತ್ರದರ್ಥವನ್ನು ನಾವು ಮನಗಂಡದ್ದಕ್ಕೆ

ಆತ್ಮದರ್ಶನವಾದದ್ದೇ ಗುರುತು. ಆತ್ಮದರ್ಶನವಾದರೆ ಹೃದಯ ಗ್ರಂಥಿಯು ಒಡೆದುಕೊಳ್ಳುವದು, ಸರ್ವಸಂಶಯಗಳೂ ಕತ್ತರಿಸಿಹೋಗುವವು. ಕರ್ಮಗಳೆಲ್ಲ ಸವೆದುಹೋಗುವವು. ಹೀಗೆ ಇಂಥ ಆತ್ಮದರ್ಶನವನ್ನು ಯಾರು ಹೊಂದಿರುವರೋ ಅವರಿಗೆ ಜೀವನದಲ್ಲಿ ನಿತ್ಯಶಾಂತಿಯು ದೊರಕುವದು.

★★★★★

## ಮಾನವ ಜೀವನದ ಹೆಗ್ಗುರಿ

**14-5-43**

**ಶ್ರೀಶ್ರೀಗಳವರು**

ಮಾನವಜೀವನದ ಹೆಗ್ಗುರಿಯೇನು?-ಎಂದು ವಿಚಾರಿಸುವದು ಅತ್ಯವಶ್ಯ. ನಮ್ಮಲ್ಲಿ ಅನೇಕರು ಜೀವನದ ಗುರಿಯೇನೆಂಬುದನ್ನು ವಿಚಾರಿಸಿಲ್ಲ. ಅವ್ಯವಸ್ಥೆಯಿಂದ ಜೀವನವನ್ನು ಸಾಗಿಸುತ್ತಿದ್ದೇವೆ. ಚೆನ್ನಾಗಿ ದುಡಿದು ವಿಷಯಗಳನ್ನು ಅನುಭವಿಸಿ ಬದುಕಿಬಾಳುವದೇ ನಮ್ಮ ಗುರಿ ಎಂದು ಕೆಲವರು ಜನಾಂಗದವರು ತಿಳಿದುಕೊಂಡು ಅದರಂತೆ ನಡೆಯಿಸಿರುತ್ತಾರೆ. ಮೊದಮೊದಲು ಅದು ಸ್ವಲ್ಪಮಟ್ಟಿಗೆ ಫಲಕಾರಿಯಾದ ವ್ಯವಹಾರಕ್ಕೆ ಅವಕಾಶವನ್ನು ಕೊಟ್ಟಿತಾದರೂ ಬರುಬರುತ್ತಾ ಅದರಿಂದ ಪೈಪೋಟಿಯೂ ರಾಗದ್ವೇಷಗಳೂ ಹೆಚ್ಚಿ ಎಷ್ಟೋ ಅನರ್ಥಗಳಾಗುವದು ನಮ್ಮ ಕಣ್ಣ ಮುಂದೆ ಇರುತ್ತದೆ. ಹೀಗೆಯೇ ಜನರೆಲ್ಲರೂ ಅಕ್ಷರಸ್ಥರಾಗಬೇಕು, ಎಲ್ಲರಿಗೂ ಮತಬೋಧನೆ ಆಗಬೇಕು-ಎಂದು ಮುಂತಾದ ಏಕದೇಶದ ಗುರಿಯನ್ನು ಇಟ್ಟುಕೊಂಡು ಹೊರಟದ್ದರ ಫಲವೂ ಕೊನೆಗೆ ತೃಪ್ತಿಕರವಾಗಿರುವದಿಲ್ಲ. ಈ ಗುರಿಗಳಲ್ಲೆಲ್ಲ ನಮಗೆ ತಿಳಿಯದಂತೆಯೇ ಸ್ವಾರ್ಥವು ಮೂಲವಾಗಿರುತ್ತದೆ. ರಾಗದ್ವೇಷಗಳು ತಲೆಯೆತ್ತುತ್ತವೆ. ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು, ಅಡ್ಡಬಂದವರನ್ನು ಸದೆಬಡೆಯಬೇಕು-ಎಂದು ಯಾವ ಚಳುವಳಿ ಪ್ರೇರಿಸುವದೋ ಅಲ್ಲೆಲ್ಲ ಜೀವನದ ನಿಜವಾದ ಗುರಿಯು ನಮ್ಮೆದುರಿಗೆ ಇರುವದಿಲ್ಲ.

ಆದ್ದರಿಂದ ಮನುಷ್ಯನ ಹೆಗ್ಗುರಿಯೇನೆಂಬುದನ್ನು ನಾವು ಹೀಗೆಲ್ಲ ನಮ್ಮ ಮನಸ್ಸಿನ ಒಲವಿನಿಂದ ಕಲ್ಪಿಸಬಾರದು. ಮನುಷ್ಯನಿಗೆ ಸುಖವು ಬೇಕು, ದುಃಖವು ಬೇಡ. ಇದು ಎಲ್ಲಾ ದೇಶಕ್ಕೂ ಎಲ್ಲಾ ಕಾಲಕ್ಕೂ ಅನ್ವಯಿಸುತ್ತದೆ. ಶರೀರಕ್ಕೆ, ಇಂದ್ರಿಯಕ್ಕೆ, ಮನಸ್ಸಿಗೆ-ಎಲ್ಲಕ್ಕೂ ಸುಖವು ಬೇಕು, ದುಃಖವು ಬೇಡ. ಇದಕ್ಕಾಗಿಯೇ ಮನುಷ್ಯನು ಹವಣಿಸುತ್ತಿದ್ದಾನೆ. 'ಇದರಲ್ಲಿಯೂ ಜಗಳ ಬರುವದಿಲ್ಲವೆ? ನಮ್ಮ ಸುಖಕ್ಕಾಗಿ ನಾವು ಮತ್ತೊಬ್ಬರನ್ನು ಹತ್ತಬಡಿಯಬೇಕಾಗುವದಿಲ್ಲವೆ?' ಎಂದರೆ ನಿಜ. ಆದರೆ ರಾಗದ್ವೇಷಗಳಿಗೆ ಎಡೆಗೊಡದಂತೆ ನಮಗೆ ಸುಖವುಂಟಾಗುವಂತೆ ಮಾಡಿಕೊಳ್ಳಬೇಕು. ಅದೇ ನಿಜವಾದ ಗುರಿ.

ಈ ಗುರಿಯನ್ನು ನೆರವೇರಿಸಿಕೊಳ್ಳುವದಕ್ಕೆ ನ್ಯಾಯಕ್ಕಿಂತಲೂ ಧರ್ಮವೇ ಮುಖ್ಯವಾದ ಸಾಧನವಾಗಿರಬೇಕು. ಒಂದು ಮನೆಯಲ್ಲಿ ಹತ್ತುಜನರಿರುತ್ತಾರೆನ್ನಿ; ಮನೆಯಲ್ಲಿರುವ ಒಂದೂಕಾಲು ಸೇರು ಅಕ್ಕಿಯನ್ನು 'ನ್ಯಾಯ'ವಾಗಿ ಹಂಚಿದರೆ ಯಜಮಾನನಿಗೂ ಒಂದು ಅರ್ಧಪಾವು, ತೊಟ್ಟಿಲಿನ ಮಗುವಿಗೂ ಅರ್ಧಪಾವು, ಕಾಹಿಲೆಯಲ್ಲಿ ನರಳುತ್ತಿರುವವರಿಗೂ ಅರ್ಧಪಾವು, ಗಟ್ಟಿಮುಟ್ಟಾಗಿದ್ದು ಕೆಲಸಮಾಡುತ್ತಿರುವವರಿಗೂ ಅರ್ಧಪಾವು-ಹೀಗಾಗುತ್ತದೆ. ಇದರಲ್ಲಿ ನ್ಯಾಯವಿದೆ, ಆದರೆ ಸುಖವಿಲ್ಲ. ಅನ್ನವು ಬೇಕಾದವರಿಗೆ ಸಾಲದೆಹೋಗಿದೆ, ಬೇಡವಾದವರಿಗೆ ಹೆಚ್ಚಾಗಿದೆ. ಇಂಥ ಸಂದರ್ಭದಲ್ಲಿ ಧರ್ಮವನ್ನು ನಮ್ಮ ಅಳತೆಕೋಲನ್ನಾಗಿ ಮಾಡಿಕೊಂಡರೆ ಹೇಗಾಗುವದು, ನೋಡಿರಿ. ಕೆಲವರು ತಮಗೆ ಬಂದಷ್ಟೇ ಸಾಕೆಂದು ಒಪ್ಪುವದಕ್ಕೆ ಸಿದ್ಧರಾಗಿರಬೇಕಾಗುತ್ತದೆ. ಮತ್ತೆಕೆಲವರು ತಮಗೆ ಇಲ್ಲದಿದ್ದರೂ ಚಿಂತೆಯಿಲ್ಲವೆನ್ನಬೇಕಾಗುತ್ತದೆ. ಆಗ ಯಾರುಯಾರಿಗೆ ಎಷ್ಟೆಷ್ಟು ಬರಬೇಕೋ ಅಷ್ಟು ಬಂದು ಮನೆಗೆಲ್ಲ ಸೌಖ್ಯವು ದೊರೆಯುತ್ತದೆ.

ಧರ್ಮವು ಪ್ರವೃತ್ತಿಧರ್ಮವೆಂದೂ ನಿವೃತ್ತಿಧರ್ಮವೆಂದೂ ಎರಡು ಬಗೆಯಾಗಿರುತ್ತದೆ. ಎಲ್ಲರೂ ನಿವೃತ್ತಿಧರ್ಮಕ್ಕೆ ಅಧಿಕಾರಿಗಳಾಗಿರುವದಿಲ್ಲ. ಎಲ್ಲರಿಗೂ ಒಂದೇ ಬಗೆಯ ಧರ್ಮವನ್ನು ಹೇಳುವದರಲ್ಲಿ ಕೆಲವು ಅಡಚಣೆಗಳು ಇರುತ್ತವೆ. ಉದಾಹರಣೆಗೆ 'ಅಹಿಂಸೆ' ಎಂಬುದು ಎಲ್ಲರಿಗೂ

ಮೆಚ್ಚಾದ ಧರ್ಮವೇ ಆಗಿದೆಯಾದರೂ ಪ್ರವೃತ್ತಿಧರ್ಮದಲ್ಲಿರುವಾತನು ಕೆಲಸಂದರ್ಭಗಳಲ್ಲಿ ಹಿಂಸೆಮಾಡುವದೇ ಧರ್ಮವಾಗುತ್ತದೆ. ಗೃಹಸ್ಥನಾದವನು ದುಷ್ಟರನ್ನು ದಮನಮಾಡುವದು, ಶಿಷ್ಟರನ್ನು ಶಿಕ್ಷಣಮಾಡುವದೂ ತನ್ನ ಧರ್ಮವೆಂದು ತಿಳಿಯಬೇಕು. ಧರ್ಮವನ್ನು ಕಾಪಾಡುವದಕ್ಕೆ ಬದ್ಧಕಂಕಣರಾಗಿರುವ ಕ್ಷತ್ರಿಯರು ಧರ್ಮವಿರೋಧಿಗಳನ್ನು ಸುಮ್ಮನೆ ಬಿಟ್ಟರೆ ಅಧರ್ಮವಾದೀತು. ಅಹಿಂಸೆಯೇ ಎಲ್ಲರಿಗೂ ಏಕರೀತಿಯಾದ ಧರ್ಮವೆಂದು ಪಟ್ಟುಹಿಡಿಯುವವರು ಕೆಲಸಂದರ್ಭಗಳಲ್ಲಿ ಬಹಳ ಪೇಚಾಟಕ್ಕೆ ಸಿಕ್ಕಿಕೊಳ್ಳುತ್ತಾರೆ. ಯಾರು ರಜಃಸ್ವಭಾವಪ್ರಧಾನರಾಗಿರುವರೋ ಅವರಿಗೆ ಆತ್ಯಂತಿಕ ಅಹಿಂಸಾದಿ ಪ್ರಧಾನವಾದ ನಿವೃತ್ತಿಧರ್ಮವು ಎಂದಿಗೂ ದಕ್ಕಲಾರದು. ಆದ್ದರಿಂದ ತಿಳಿದವರು ಅಧಿಕಾರಕ್ಕೆ ತಕ್ಕಂತೆ ಪ್ರವೃತ್ತಿಧರ್ಮವನ್ನೂ ನಿವೃತ್ತಿಧರ್ಮವನ್ನೂ ವಿಂಗಡಿಸಿಹೇಳುತ್ತಾರೆ. ಜ್ಞಾನಿಯು ಯಾವ ಕರ್ಮವನ್ನೂ ಮಾಡುವದಿಲ್ಲವೆಂದು ಅಕರ್ತ್ರಾತ್ಮಬುದ್ಧಿರೂಪವಾದ ನೈಷ್ಕರ್ಮ್ಯವನ್ನು ಉಪದೇಶಿಸಿದ ಭಗವಂತನೇ ''ಆದ್ದರಿಂದ ಅರ್ಜುನನೇ ಯುದ್ಧವನ್ನು ಮಾಡೇಳು'' ಎಂದು ಮತ್ತೆಮತ್ತೆ ಬೋಧಿಸಿರುತ್ತಾನೆ. ಅಜ್ಞರಿಗೆ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವೇ ಸುಕರವೆಂದು ಆತನು ಉಪದೇಶಿಸಿರುವದಕ್ಕೆ ಇದೇ ಕಾರಣ. ಪ್ರವೃತ್ತಿಧರ್ಮಕ್ಕೆ ಅಭ್ಯುದಯವೇ ಫಲವು; ನಿವೃತ್ತಿಧರ್ಮವು ಆನಂದರೂಪವಾದ ಪರಮಾತ್ಮನಲ್ಲಿ ನಿಲ್ಲಿಸುತ್ತದೆ. ವಿಹಿತಕರ್ಮಗಳನ್ನು ಮಾಡುವದು, ನಿಂದಿತವಾದದ್ದನ್ನು ಬಿಡುವದು-ಇವೆರಡೂ ಪ್ರವೃತ್ತಿಧರ್ಮದ ಮುಖ್ಯರೂಪಗಳು. ಈ ಕರ್ಮವನ್ನು ಭಗವದರ್ಚನಬುದ್ಧಿಯಿಂದ ಮಾಡಿದರೆ ಚಿತ್ತಶುದ್ಧಿಯಾಗಿ ಕ್ರಮಕ್ರಮವಾಗಿ ಭಕ್ತಿಜ್ಞಾನವೈರಾಗ್ಯರೂಪವಾದ ನಿವೃತ್ತಿಧರ್ಮವು ಕೈಸೇರುವದು. ನಿವೃತ್ತಿಧರ್ಮವು ಫಲರೂಪವಾಗಿರುತ್ತದೆ. ಸಾಧನವಾದ ಪ್ರವೃತಿಯಿಲ್ಲದೆ ಅದು ಹೇಗೆ ಬಂದೀತು? ಮಾವಿನಬೀಜವನ್ನು ನೆಟ್ಟು ಸರಿಯಾಗಿ ಪೋಷಣೆಮಾಡಿದ ಬಳಿಕವಲ್ಲವೆ, ಮರವಾಗಿ ಹಣ್ಣುಬಿಡುವದು? ನಮಗೆ ಗಿಡವೇನೂ ಬೇಡ, ಬರಿಯ ಹಣ್ಣಿದ್ದರೆ ಸಾಕು-ಎನ್ನುವದಕ್ಕಾದೀತೆ?

ಇಂಥ ಕರ್ಮಕ್ಕೆ ಇಂಥ ಫಲವೆಂದು ನಿಯತವಾಗಿರುತ್ತದೆ. ಒಂದಾನೊಂದು ಯಂತ್ರದಲ್ಲಿ ಒಂದು ಮಳೆ ಬಿದ್ದು ಹೋದರೂ ಅದರ

ವ್ಯವಸ್ಥೆ ಕೆಟ್ಟು ಹೋಗುವಂತೆ ಧರ್ಮದ ಆಚರಣೆಯಲ್ಲಿ ಒಂದಿಷ್ಟು ಹೆಚ್ಚುಕಡಿಮೆಯಾದರೂ ಫಲವು ಹೆಚ್ಚುಕಡಿಮೆಯಾಗುತ್ತದೆ. ಧರ್ಮದಿಂದ ಸುಖವೂ ಜ್ಞಾನವೂ ಆಗಬೇಕಾದರೆ ಅದನ್ನು ವ್ಯವಸ್ಥಿತರೀತಿಯಿಂದಲೇ ಮಾಡಬೇಕು. ಮುಖ್ಯವಾಗಿ ತ್ಯಾಗವೇ ಧರ್ಮದಲ್ಲಿರುವ ಮರ್ಮವು. ಎಲ್ಲರಿಗೂ ಸುಖವಾಗುವಂತೆ ನಾನು ವರ್ತಿಸಿದ ಹೊರತು ನನಗೆ ನಿಜವಾದ ಸುಖವು ದೊರಕಲಾರದು. ಆದ್ದರಿಂದ ಸರ್ವರ ಸುಖಕ್ಕಾಗಿ ಸ್ವಲ್ಪವಾಗಿ ತ್ಯಾಗವನ್ನು ಕಲಿತುಕೊಳ್ಳಬೇಕು. ತ್ಯಾಗದಿಂದಲೇ ಅಮೃತತ್ತ್ವವು ಬರುವದೆಂದು ಶ್ರುತಿಯು ಹೇಳುತ್ತಿದೆ. ಧರ್ಮವು ನಿಜವಾಗಿ ಧರ್ಮವೆನಿಸಬೇಕಾದರೆ, ಸ್ವಾರ್ಥತ್ಯಾಗವು ತಲೆಯೆತ್ತಬೇಕು. ಅಹಂಕಾರವೇ ತ್ಯಾಗಕ್ಕೆ ಅಡ್ಡಿಯಾಗಿ ರುತ್ತದೆ. ಆದ್ದರಿಂದ ಅಹಂಕಾರವನ್ನು ತಗ್ಗಿಸಿ ಭಗವಂತನಿಗೆ ನಾವು ಮಾಡುವ ಕರ್ಮವನ್ನು ಸಂಬಂಧಿಸಬೇಕು. ''ಯಾವದನ್ನು ಮಾಡುತ್ತೀಯೋ, ಯಾವದನ್ನು ತಿನ್ನುತ್ತೀಯೋ, ಯಾವದನ್ನು ಹೋಮಮಾಡಿರುತ್ತೀಯೋ ಯಾವದನ್ನು ದಾನಮಾಡುತ್ತಿಯೋ, ಅದನ್ನು ನನಗೆ ಅರ್ಪಣೇಮಾಡು'' ಎಂದು ಭಗವಂತನು ಅಪ್ಪಣೆಮಾಡಿರುತ್ತಾನೆ. ನಾನು ನನ್ನದೆಂಬ ಅಭಿಮಾನವು ನಮಗೆ ಸ್ವಾಭಾವಿಕವಾಗಿರುತ್ತದೆ; ಇದರಿಂದಲೇ ವ್ಯವಹಾರವು ದುಃಖಮಯವಾಗಿರುತ್ತದೆ. ಎಲ್ಲವನ್ನೂ ಭಗವದರ್ಪಣಮಾಡುವದರಿಂದ ಈ ನಾನೆಂಬುದು ತಗ್ಗುತ್ತದೆ.

''ಆನಂದವೇ ಪರಬ್ರಹ್ಮವು'' ಎಂಬುದು ವೇದಾಂತದ ಸಿದ್ಧಾಂತವು. ಆನಂದ ರೂಪನಾದ ಭಗವಂತನು ಹೃದಯದಲ್ಲಿ ಹೊಕ್ಕರೆ ನಮ್ಮ ವ್ಯವಹಾರವೆಲ್ಲವೂ ಸುಖಮಯವಾಗುತ್ತದೆ. ಅಹಂಕಾರವನ್ನು ತಗ್ಗಿಸಬೇಕು; ನ್ಯಾಯಬುದ್ಧಿಯಿಂದ ಕಚ್ಚಾಡುವದನ್ನು ಬಿಟ್ಟು ಧರ್ಮಬುದ್ಧಿಯನ್ನು ಹತ್ತಿಸಿಕೊಳ್ಳಬೇಕು. ನಾವು ಮಾಡುವದೆಲ್ಲ ಭಗವಂತನಿಗೆ ಅರ್ಪಣೆಯಾಗುವದೆಂಬುದು ನಮ್ಮ ನಡತೆಯಲ್ಲಿ ಕಾಣಬೇಕು. ಹೆಮ್ಮೆಯಿಂದ ಪರೋಪಕಾರಮಾಡಿದೆನೆಂದು ಕೊಚ್ಚಿಕೊಳ್ಳುವದೇನೂ ಧರ್ಮವಾಗಲಾರದು. ನಾವು ಮಾಡುವ ಸ್ವಾರ್ಥತ್ಯಾಗವು ಭಗವಂತನ ಅರ್ಚನೆಯೆಂಬ ಭಾವನೆಯು ನಮ್ಮಲ್ಲಿ ತುಂಬಿತುಳುಕುವಂತೆ ಆದರೆ ನಮಗೆ ಪ್ರವೃತ್ತಿಧರ್ಮದ ಮರ್ಮವು

ತಿಳಿದಂತೆ ಆಗುವದು, ನಿವೃತ್ತಿಧರ್ಮಕ್ಕೆ ತಕ್ಕ ಯೋಗ್ಯತೆಯೂ ಬರುವದು. ಆಗ್ಗೆ ನಾವು ಮಾನವಜನ್ಮದ ಹೆಗ್ಗುರಿಯನ್ನು ಲಕ್ಷ್ಯದಲ್ಲಿಟ್ಟುಕೊಂಡಂತೆ ಆಗುವದು.

★★★★★

## ಗೀತೋಪದೇಶ

**15-5-1943**

**ಗೀತಾಪ್ರಚಾರಿಣೀಸಭೆಯ ಸಂಚಾಲಕರಾದ ಸುಪ್ರಸಿದ್ಧ**
**ಶ್ರೀ ಶ್ರೀಶಂಕರಾನಂದಭಾರತೀಸ್ವಾಮಿಗಳವರು**

ಎಷ್ಟೋ ಸಲ ಪ್ರತಿಜ್ಞೆಮಾಡಿ ಪಾಪವನ್ನು ಬಿಡಬೇಕೆಂದು ನಿಶ್ಚಯಿಸಿದರೂ ಮತ್ತೂ ಮಾಡುವಂತಾಗುತ್ತದೆ. ಇದೇಕೆ?- ಎಂದು ಗೀತೆಯನ್ನು ಕೇಳಿದರೆ ಒಂದು ಉತ್ತರವು ಸಿಕ್ಕುತ್ತದೆ. ''ಇದೇ ಕಾಮವು, ಇದೇ ಕ್ರೋಧವು; ಇದು ರಜೋಗುಣದಿಂದಾದದ್ದು; ಇದಕ್ಕೆ ಎಷ್ಟುತಿಂದರೂ ಸಾಕೆನಿಸುವುದಿಲ್ಲ, ಇದೇ ಕೆಟ್ಟ ಕೆಲಸವನ್ನು ಮಾಡಿಸುವ ವೈರಿಯು'' (3-37) ಕಾಮವು ಬೇರೆ, ಕ್ರೋಧವು ಬೇರೆಯಲ್ಲ. ರಾಮನ ಹತ್ತಿರ ಬಂದಿದ್ದ ಶೂರ್ಪಣಖಿಯು ಕಾಮದಿಂದ ಬಂದಾಗ ಒಂದು ರೂಪದಲ್ಲಿದ್ದಳು; ಇಷ್ಟಾರ್ಥವು ಪೂರ್ತಿಯಾಗದಿರಲು ಸಿಟ್ಟಿನಿಂದ ತನ್ನ ನಿಜವಾದ ರೂಪವನ್ನು ಧರಿಸಿದಳು. ಆದರೆ ಅಲ್ಲಿ ಇಬ್ಬರಿರಲಿಲ್ಲ. ಇದರಂತೆ ಕಾಮವೂ ಕ್ರೋಧವೇ.

ಈ ಕಾಮವು ನಮಗೆ ವೈರಿಯಾದಮೇಲೆ ಇದನ್ನು ಮೊದಲು ನಾಶಗೊಳಿಸಬೇಕು. ಆದರೆ ಇದು ನಮಗೆ ಸಿಕ್ಕುವದು ಹೇಗೆ?- ಎಂದರೆ ಅದಕ್ಕೆ ಗೀತೆಯ ಉತ್ತರವಿದು: ಇದಕ್ಕೆ ಇಂದ್ರಿಯಗಳು, ಮನಸ್ಸು, ಬುದ್ಧಿ- ಇವುಗಳೇ ಆಶ್ರಯವು. ಆದ್ದರಿಂದ ಮೊದಲು ಇಂದ್ರಿಯಗಳನ್ನು ಬಿಗಿಹಿಡಿದುಕೊಂಡು ಈ ಜ್ಞಾನವಿಜ್ಞಾನಗಳನ್ನು ನಾಶಮಾಡಿಸುವ ಈ ಪಾಪಿಯನ್ನು ಕೊಂದುಹಾಕಬೇಕು. (3-41) ಪಾಪಕ್ಕೆ ಹೇತುವಾದ ಕಾಮವನ್ನು

ಬಿಟ್ಟರೆ ಆಯಿತು. ಅತ್ಯಾಶೆ ಇರಬಾರದು. ಧರ್ಮಕ್ಕೆ ವಿರುದ್ಧವಲ್ಲದ ಕಾಮವು ಕೆಟ್ಟದಲ್ಲ. ಶಾಸ್ತ್ರೋಕ್ತವಾದ ಕರ್ಮಗಳನ್ನು ಮಾಡಿ ಅವುಗಳ ಫಲವನ್ನನುಭವಿಸಬೇಕು. ಆಗ ನಮಗೆ ದೋಷವು ಅಂಟುವದಿಲ್ಲ.

ಆದರೆ ನಮಗೆ ಯಾವದು ಬೇಕು? ಎಷ್ಟು ಬೇಕು? ಯಾವಾಗ ಬೇಕು?- ಎಂಬುದೇ ತಿಳಿಯುವದಿಲ್ಲ. ಧರ್ಮವಿರುದ್ಧವಾದ ಕಾಮವೆಂದರೆ ಎಷ್ಟು? ''ಜೀವನಕ್ಕೆ ಉಪಯುಕ್ತವಾಗುವಷ್ಟು''-ಎಂಬ ಉತ್ತರವು ಸಾಲದು; ಏಕೆಂದರೆ ನಮ್ಮ ಇಂದ್ರಿಯಕ್ಕೆ ಎಷ್ಟುಬೇಕೋ ಅಷ್ಟು ಎಂದು ನಾವು ಅರ್ಥಮಾಡಿಕೊಂಡುಬಿಡುವೆವು. ಆದ್ದರಿಂದ ನಮಗೆ ಏನು ಬೇಕೆಂಬುದನ್ನು ಗೊತ್ತುಮಾಡುವದಕ್ಕೆ ಭಗವಂತನನ್ನೇ ಬಿಟ್ಟು ಬಿಡುವದು ಒಳ್ಳೆಯದು. ''ಕರ್ಮವೊಂದರಲ್ಲಿಯೇ ನಿನಗೆ ಅಧಿಕಾರವು, ಫಲದಲ್ಲಿ ಎಂದಿಗೂ ಅಧಿಕಾರವಿಲ್ಲ,''(2-47) ರೋಗಿಯು ವೈದ್ಯರನ್ನು ಕೇಳಿ ಪಥ್ಯವಾದದ್ದನ್ನು ತಿಂದರೆ ಒಳ್ಳೆಯದಾಗುವಂತೆ ನಮಗೆ ಒಳ್ಳೆಯದಾದದ್ದನ್ನು ಗೊತ್ತುಪಡಿಸುವದಕ್ಕೆ ಭಗವಂತನನ್ನೇ ಗೊತ್ತುಮಾಡಿಕೊಳ್ಳುವದು ಒಳ್ಳೆಯದಾಗುವದು. ಫಲವನ್ನು ದೇವರಿಗೇ ಬಿಟ್ಟರೆ ಅಪಾಯವೇನೂ ಇಲ್ಲ. ಏಕೆಂದರೆ ''ಆತನಿಗೆ ಆಗಬೇಕಾದದ್ದು ಇಲ್ಲ, ಆತನು ಪಡೆದುಕೊಳ್ಳದಿರುವದೊಂದೂ ಇಲ್ಲ'' (3-22). ಫಲವನ್ನು ಬಿಟ್ಟರೆ ಮತ್ತೇನು ಪಡೆಯುವದೆಂದುಕೊಳ್ಳಬಾರದು. ನಿಜವಾಗಿ ನಿಷ್ಕಾಮರಿಗೆ ಸಕಾಮರಿಗಿಂತಲೂ ಹೆಚ್ಚಾಗಿಯೇ ಬೇಕಾಗಿರುತ್ತದೆ. ಹೇಗೆಂದರೆ ಬುಟ್ಟಿಯಲ್ಲಿ 'ಇಂಥ ಹಣ್ಣುಬೇಕು' ಎಂದು ಬೇರೆಬೇರೆಯಾಗಿ ಕೇಳುವವನು ಮತ್ತೆಮತ್ತೆ ಕೇಳಿ ಪೀಡಿಸುವನು. ಹಣ್ಣಿನ ಬುಟ್ಟಿಯನ್ನೇ ಕೊಡು ಎನ್ನುವವನು ಒಟ್ಟಿಗೆ ಕೇಳಿಬಿಟ್ಟಿರುತ್ತಾನೆ. ಇದರಂತೆ ನಿಷ್ಕಾಮರಾದವರು ಸಕಲಕಾಮಗಳನ್ನೂ ಪೂರ್ತಿಗೊಳಿಸುವ ಭಗವಂತನನ್ನೇ ಒಟ್ಟಿಗೆ ಕೇಳಿಕೊಂಡಿರುತ್ತಾರೆ. ಆದ್ದರಿಂದ ಇಂದ್ರಿಯಗಳನ್ನು ಬಿಗಿಹಿಡಿದು ಕರ್ಮಗಳನ್ನು ಮಾಡಬೇಕು. ಫಲವನ್ನು ಭಗವಂತನಿಗೆ ಅರ್ಪಿಸಿಬಿಡಬೇಕು.

ನಾವು ಮಾಡುವ ಕರ್ಮವೆಲ್ಲ ದೇವರ ಪೂಜೆಯಾಗಲಿ (18-46) ಯಾರೊಬ್ಬರಿಗೂ ತೊಂದರೆಯಾಗಬಾರದು. ಹೀಗೆ ಸರ್ವರಿಗೂ ಸಂತೋಷವನ್ನುಂಟು ಮಾಡುವಂತೆ ಮಾಡಬೇಕು; ಅದೇ ಈಶ್ವರನ

ಪೂಜೆಯು. ಈಶ್ವರನು ಎಲ್ಲೆಲ್ಲಿಯೂ ಇದ್ದರೂ ಚೇತನದಲ್ಲಿ ಕಾಣುವಂತೆ ಜಡನಲ್ಲಿ ಆತನು ನಮಗೆ ಕಾಣುವದಿಲ್ಲ. ಜುಟ್ಟು, ಎದೆ-ಎರಡೂ ನಮ್ಮ ಶರೀರವೇ ಆದರೂ ಗಂಧವನ್ನು ಜುಟ್ಟಿಗೆ ಹಚ್ಚಿದರೆ ಎದೆಗೆ ಹಚ್ಚಿದ ಸುಖವಾಗುವದಿಲ್ಲ. ಅದರಂತೆಯೇ ನಮಗೆ ಹೊರಗೆ ಕಾಣುವ ಚೇತನದಲ್ಲಿ, ಅದರಲ್ಲಿಯೂ ನಮಗೆ ಭಾವನೆ ಬರುವಂಥ ವಿಭೂತಿಗಳಲ್ಲಿ (10-41) ಈಶ್ವರನ ಪೂಜೆಮಾಡಬೇಕು. ಪರಮೇಶ್ವರನೇ ಎಲ್ಲ ರೂಪವಾಗಿರುತ್ತಾನೆಂದು ತಿಳಿದು ಪೂಜೆಯನ್ನು ಸಲ್ಲಿಸಬೇಕು.

ಹೀಗೆ ಕರ್ಮವನ್ನು ಎಲ್ಲಿಯವರೆಗೆ ಮಾಡಬೇಕು? ''ಯಾವನು ಆತ್ಮರತಿಯಾಗಿ ಆತ್ಮತೃಪ್ತನಾಗಿರುವನೋ ಆತ್ಮನಲ್ಲಿಯೇ ಸಂತೋಷವನ್ನು ಹೊಂದಿರುವನೋ ಅವನಿಗೆ ಕರ್ಮವಿರುವದಿಲ್ಲ'' (3-17). ಆ ಸ್ಥಿತಿ ಬರುವವರೆಗೂ ಕರ್ಮವನ್ನು ಮಾಡುತ್ತಿರಬೇಕು. ''ಈ ಆತ್ಮಜ್ಞಾನವನ್ನು ಬಲ್ಲವರಿಂದ ತಿಳಿದುಕೊಳ್ಳಬೇಕು. ದೊಡ್ಡವರಿಗೆ ನಮಸ್ಕಾರಮಾಡಿ ಸೇವೆಮಾಡಿ ಪ್ರಶ್ನೆಮಾಡಿ ತತ್ತ್ವವನ್ನು ತಿಳಿದುಕೊಳ್ಳಬೇಕು'' (4-34). ದೊಡ್ಡವರನ್ನು ಒಲಿಸಿಕೊಂಡು ಪ್ರಶ್ನೆಮಾಡಿ ಅವರ ಸೇವೆಯಿಂದ ಸಂಪಾದನೆಮಾಡಿಕೊಂಡ ಜ್ಞಾನಕ್ಕೆ ಒಂದಾನೊಂದು ಬಲವುಂಟಾಗುತ್ತದೆ. ಅಂಥ ಜ್ಞಾನವು ಬಂದರೆ ಉಂಡಕೂಡಲೆ ತೃಪ್ತಿಯಾಗುವಂತೆ ಕೂಡಲೆ ಮೋಹವು ಹೋಗುತ್ತವೆ, ಶಾಂತಿ ಬರುತ್ತದೆ (4-35, 4-39). ಆದರೆ ಗುರುಗಳು ಹೇಗೆ ತತ್ತ್ವದರ್ಶಿಗಳಾಗಿ ಜ್ಞಾನಿಗಳೂ ಆಗಿರಬೇಕೋ ಹಾಗೆ ಶಿಷ್ಯನಾದವನು ಶ್ರದ್ಧಾವಂತನಾಗಿಯೂ ಜಿತೇಂದ್ರಿಯನಾಗಿಯೂ ಇರಬೇಕು (4-39). ಆಗ ಮಾತ್ರ ಜ್ಞಾನವು ವಶವಾಗುತ್ತದೆ, ಫಲಕಾರಿಯಾಗುತ್ತದೆ.

ಭಗವಂತನನ್ನೇ ಗುರುವೆಂದು ಭಾವಿಸಿದ ಅರ್ಜುನನಿಗೆ ಭಗವಂತನು ಉಪದೇಶಿಸಿರುವ ಜ್ಞಾನವೇನೆಂಬುದನ್ನು ಗೀತೆಯಿಂದ ತಿಳಿದುಕೊಳ್ಳಬಹುದು. ಶರೀರವೆಲ್ಲವೂ ಕ್ಷೇತ್ರವು, ಮಹಾಭೂತಿಧೃತ್ಯಂತವಾಗಿರುವದೆಲ್ಲವೂ ಕ್ಷೇತ್ರವೇ (13-2, 13-5,6). ಅದಕ್ಕಿಂತ ಬೇರೆಯಾಗಿ ಅದನ್ನು ಅರಿಯುತ್ತಿರುವವನೇ ಆತ್ಮನು, ಆತ್ಮನು ಅವಿಭಕ್ತನಾಗಿದ್ದರೂ ಪ್ರಾಣಿಗಳಲ್ಲಿ ಬೇರೆಯಾಗಿರುವಂತೆ

ಕಾಣುತ್ತಾನೆ (13–16). ಅವನಿಗೆ ಎಲ್ಲೆಲ್ಲಿಯೂ ಕೈಕಾಲುಗಳಿರುತ್ತವೆ, ಎಲ್ಲೆಲ್ಲಿಯೂ ಕಣ್ಣುತಲೆಮುಖಗಳಿವೆ, ಎಲ್ಲೆಲ್ಲಿಯೂ ಕಿವಿಗಳಿವೆ. ಅವನು ಎಲ್ಲವನ್ನೂ ವ್ಯಾಪಿಸಿಕೊಂಡಿರುತ್ತಾನೆ (13–13). ನಿಜವಾಗಿ ಚೇತನವೊಂದು, ಜಡವೊಂದು ಹೀಗೆ ಎರಡಿವೆ ಎಂದು ತಿಳಿಯಬಾರದು. ಪ್ರಾಣಿಗಳ ಹೊರಗೂ ಒಳಗೂ ಇದ್ದು ಚರಾಚರವೆಲ್ಲವೂ ಅದೇ ಆಗಿರುತ್ತದೆ (13–15) ಕಾಣುವದೆಲ್ಲವೂ ಕ್ಷೇತ್ರಜ್ಞನೇ ಆಗಿರುತ್ತದೆ; ಕ್ಷೇತ್ರಜ್ಞನಿಗಿಂತ ಬೇರೆಯಾಗಿ ಕ್ಷೇತ್ರವೆಂಬುದೇ ಇಲ್ಲ. ಆದ್ದರಿಂದಲೇ ಸಮಸ್ತಭೂತಗಳೂ ನನ್ನಲ್ಲಿವೆ, ನಾನು ಅವುಗಳಲ್ಲಿಲ್ಲ; ನಿಜವಾಗಿ ಭೂತಗಳು ನನ್ನಲ್ಲಿಲ್ಲವೇ ಇಲ್ಲ'' (9–4,5) ಎಂದು ಭಗವಂತನು ಹೇಳಿರುತ್ತಾನೆ.

ಹೀಗಿದ್ದರೂ ಅದು ಏತಕ್ಕೆ ನಮ್ಮಗಳಿಗೆ ತಿಳಿಯುವದಿಲ್ಲ? ಎಂದರೆ ಅದು ಸೂಕ್ಷ್ಮವಾಗಿರುವದರಿಂದ. ಅಜ್ಞಾನಿಗಳಿಗೆ ಅದು ಅತ್ಯಂತದೂರವಾಗಿರುತ್ತದೆ. ಆದರೆ ಜ್ಞಾನಿಗಳಿಗೆ ಇಲ್ಲಿಯೇ ಹತ್ತಿರದಲ್ಲಿರುತ್ತದೆ (13–15) ಹೀಗೆಂದು ಪ್ರಕೃತಿಪುರುಷರನ್ನು ವಿಂಗಡಿಸಿ ತಿಳಿದುಕೊಂಡವನು ಹೇಗಿದ್ದರೂ ಮತ್ತೆ ಹುಟ್ಟುವದಿಲ್ಲ (13–23). ಅವನಿಗೆ ಜ್ಞಾನವಾಗಿದೆಯೆಂಬುದು ಅವನು ಹೇಳಿಕೊಳ್ಳತಕ್ಕದ್ದಲ್ಲ. ಮತ್ತೊಬ್ಬರಿಗೆ ಅವನ ಮಹಿಮೆ ತಿಳಿದುಬರಬೇಕು. ಜ್ಞಾನವು ನಮಗೆ ಆಗದೆ ಇರುವದಕ್ಕೆ ಮುಖ್ಯವಾಗಿ ನಾವು ಆತ್ಮನನ್ನು ನಮ್ಮ ಹೊರಗೆ ಹುಡುಕುತ್ತಿರುವದೇ ಕಾರಣ. ನಮ್ಮೊಳಗೆ ಕ್ಷೇತ್ರ ಕ್ಷೇತ್ರಜ್ಞರನ್ನು ವಿಂಗಡಿಸಿಕೊಂಡು ಆ ಮೇಲೆ ಕ್ಷೇತ್ರಜ್ಞಸ್ವರೂಪವು ನನ್ನದೇ ಎಂದೂ ಅದೊಂದೇ ಎಲ್ಲೆಲ್ಲಿಯೂ ಇದೆಯೆಂದೂ ತಿಳಿದುಕೊಳ್ಳಬೇಕು. ಹೀಗೆ ವಾಸುದೇವನನ್ನೇ ಸರ್ವವೆಂದು ಯಾವಾತನು ತಿಳಿಯುವನೋ ಅವನೇ ಮಹಾತ್ಮನು (7–19)– ಎಂಬುದು ಗೀತೋಪದೇಶದ ರೀತಿಯು.

★★★★★

# ಶ್ರೀ ಶಂಕರಭಗವತ್ಪಾದರ ಅಸಾಧರಣೋಪದೇಶಗಳು

**18-05-1953**

**ಶ್ರೀ ಶ್ರೀಗಳವರು**

ಈಗ ಶ್ರೀಶಂಕರಚಾರ್ಯರವರ ಜಯಂತೀ ಉತ್ಸವವು ಭರತ ಖಂಡದಲ್ಲಿಯೇ ಅಲ್ಲದೆ ವಿದೇಶಗಳನ್ನೂ ಹರಡುತ್ತಿದೆ. ಲಂಡನ್ ನಗರದಲ್ಲಿ ಕೂಡ ಈ ಸಲ ಜಯಂತ್ಯುತ್ಸವವು ನಡೆಯಿತೆಂದು ವೃತ್ತಪತ್ರಗಳಿಂದ ತಿಳಿಯಬರುತ್ತಿದೆ. ಆದರೆ ಈ ಉತ್ಸವಗಳಲ್ಲಿ ಬಲುಮಟ್ಟಿಗೆ ಶಂಕರರನ್ನು ಕೊಂಡಾಡುವ ಭಾಷಣಗಳು, ಪೂಜಾಭಿಷೇಕಗಳು, ಶಂಕರದಿಗ್ವಿಜಯದ ಪಾರಾಯಣ, ವಿದ್ಯಾರ್ಥಿಗಳ ಪರೀಕ್ಷಾದಿಗಳು, ಮಂಗಳಾರತಿ, ಪ್ರಸಾದವಿನಿಯೋಗ-ಮುಂತಾದವೇ ಮುಖ್ಯವಾಗಿರುತ್ತವೆ. ಆದ್ದರಿಂದ ನಮ್ಮ ಕಾರ್ಯಾಲಯವು ಈಗ ಇಪ್ಪತ್ತೆರಡುವರ್ಷಗಳಿಂದ ಶಂಕರರ ಅಸಾಧಾರಣೋಪದೇಶಗಳನ್ನು ಕರ್ಣಾಟಕ ಪ್ರಾಂತಕ್ಕೆಲ್ಲ ಪ್ರಚಾರಮಾಡುವ ಉದ್ದೇಶದಿಂದ ''ಶಂಕಸಪ್ತಾಹ''ವೆಂಬ ಈ ಉತ್ಸವವನ್ನು ಬೇರೆಬೇರೆಯ ಸ್ಥಲಗಳಲ್ಲಿ ನೆರವೇರಿಸಿ ಜನರ ಮೆಚ್ಚಿಕೆಗೆ ಪಾತ್ರವಾಗಿರುವದೊಂದು ಹೆಮ್ಮೆಯ ವಿಷಯವಾಗಿರುತ್ತದೆ. ಶಂಕರಭಗವತ್ಪಾದರ ಗ್ರಂಥಗಳು ಕನ್ನಡದ ಅನುವಾದಸಮೇತವಾಗಿ ಕಾರ್ಯಾಲಯದಲ್ಲಿ ಪ್ರಕಟಿತವಾಗಿರುವರಿಂದ ಈಗ ಅಧಿಕಾರಿಗಳಾದ ಕನ್ನಡಿಗರೆಲ್ಲರೂ ಶಾಂಕರವೇದಾಂತದ ಅಸಾಧಾರಣ ರೂಪವನ್ನು ಅರಿತುಕೊಳ್ಳುವದಕ್ಕೆ ಅವಕಾಶವಾಗಿರುತ್ತದೆ.

ಶ್ರೀಶಂಕರಭಗವತ್ಪಾದರ ಜಯಂತ್ಯುತ್ಸವವನ್ನು ಎಂದಿನಿಂದ ಪ್ರಾರಂಭಿಸಬೇಕೆಂಬ ವಿಷಯಕ್ಕೆ ಮತಭೇದವಿದೆ; ಪಂಚಮಿಯಿಂದ ಎಂದು ಕೆಲವರು, ದಶಮಿಯಿಂದ ಎಂದು ಕೆಲವರು. ಹೀಗೆ ಅವರು ಹುಟ್ಟಿದ ದಿನ, ಸ್ಥಲ ಮುಂತಾದವುಗಳ ವಿಷಯಕ್ಕೆ ವಿವಾದವಿರುವದೂ ಆಚಾರ್ಯರಿಗೆ ಒಂದು ಭೂಷಣವೆಂದೇ ಹೇಳಬಹುದು. ಏಕೆಂದರೆ ಅವರು ಎಲ್ಲಿ ಹುಟ್ಟಿದರೆಂಬ ನಿರ್ಧಾರಕ್ಕೆ ಬೆಲೆಯೇನೂ ಇಲ್ಲ; ಹುಟ್ಟುಹೊಂದುಗಳಿಲ್ಲದ ಪರಮಾತ್ಮನೇ

ನಮ್ಮೆಲ್ಲರ ಆತ್ಮನು ಎಂದು ಬೋಧಿಸಿದ ವೇದಾಂತತತ್ತಗಳನ್ನು ನಾವು ಮನನ ಮಾಡಿದರೆ ಅದೇ ಅವರಿಗೆ ಅತ್ಯಂತ ಪ್ರೀತಿಯನ್ನುಂಟುಮಾಡುವ ಜಯಂತ್ಯುತ್ಸವವಾಗುವದೆಂದು ನನ್ನ ಭಾವನೆ.

ವೇದಾಂತವೆಂಬುದು ಉಪನಿಷತ್ತಿಗೆ ಹೆಸರು; ಉಪನಿಷತ್ತುಗಳಿಂದ ಹೊರಡುವ ಸಿದ್ಧಾಂತಕ್ಕೂ ವೇದಾಂತವೆಂದೇ ಹೆಸರು ಬಂದಿರುತ್ತದೆ. ಆದರೆ ಆ ಸಿದ್ಧಾಂತವು ಯಾವದೆಂಬ ಬಗ್ಗೆ ಈಗಲೂ ವಿವಾದವಿರುತ್ತದೆ. ಈಗ್ಗೆ ವೇದಾಂತದರ್ಶನದ ಸ್ವರೂಪವನ್ನು ತಿಳಿಯಪಡಿಸುವ ಭಾಷ್ಯಗಳು ಅನೇಕವಿರುತ್ತವೆ; ಇಷ್ಟೇ ಅಲ್ಲ, ತತ್ತ್ವಗಳನ್ನು ಹಾಡುವವರ ವೇದಾಂತ, ಕಟ್ಟೆಯ ಮೇಲೆ ಕೂತು ಮಾತನಾಡಿಕೊಳ್ಳುವವರ ವೇದಾಂತ, ಭಂಗಿ ವೇದಾಂತ, ಸರ್ವಜನರಿಗೂ ಮೈತ್ರಿಯನ್ನುಂಟುಮಾಡುವದಕ್ಕಾಗಿ ಎಲ್ಲಾ ವೇದಾಂತ ಮತಗಳಿಗೂ ಸಾಮರಸ್ಯವನ್ನುಂಟುಮಾಡಬೇಕೆಂಬ ರಾಜಿಕಬೂಲಿಯ ವೇದಾಂತ- ಎಂದುಮುಂತಾಗಿ ಹಲವು ವೇದಾಂತಪ್ರಭೇದಗಳೂ ಕಾಣಬರುತ್ತಿವೆ. ಆದ್ದರಿಂದ ಶಂಕರರ ಅಸಾಧಾರಣೋಪದೇಶಗಳ ವೇದಾಂತವು ಯಾವದು? -ಎಂಬುದನ್ನು ವಿಚಾರಮಾಡುವದು ಅವರ ಅನುಯಾಯಿಗಳಿಗೆಲ್ಲ ಅತ್ಯವಶ್ಯವಾಗಿರುತ್ತದೆ.

ಈ ಆಚಾರ್ಯರು-ಮುಖ್ಯವಾಗಿ ವೇದಾಂತವು ವೇದಾಂತಶಾಸ್ತ್ರದ ಆಧಾರದಿಂದಲೇ ತಿಳಿಯಬರತಕ್ಕದ್ದು; ಪರಮಾತ್ಮನು ವೇದರೂಪವಾದ ಶಾಸ್ತ್ರ ಪ್ರಮಾಣದಿಂದಲೇ ತಿಳೀಯಬರತಕ್ಕವನು - ಎಂದು ಬೋಧಿಸಿರುತ್ತಾರೆ. ಅತೀಂದ್ರಿಯವಾದ ಪರಮಾರ್ಥವನ್ನು ಶಾಸ್ತ್ರರೂಪವಾದ ಶಬ್ದವು ತಿಳಿಸಿಕೊಟ್ಟೀತೆ?- ಎಂಬ ಪ್ರಶ್ನೆಗೆ ಪೂರ್ವಮೀಮಾಂಸಕರು ಅಪೌರುಷೇಯವೂ ನಿತ್ಯವೂ ಆಗಿರುವದರಿಂದ ವೇದವು ಪ್ರಮಾಣವು; ಪ್ರತ್ಯಕ್ಷಾದಿಗಳು ತಿಳಿಸಲಾರದ ವಿಷಯಕ್ಕೆ ವೇದವು ಪ್ರಮಾಣವೆಂದು ಹಿಡಿಯಬೇಕು- ಎಂಬ ಉತ್ತರವನ್ನು ಕೊಟ್ಟಿರುತ್ತಾರೆ. ಆದರೆ ನೈಯಾಯಿಕರೇ ಮೊದಲಾದವರು ವೇದವು ಈಶ್ವರಪ್ರೋಕ್ತವಾದ್ದರಿಂದ ಪ್ರಮಾಣವು ಎಂದು ಆಗ್ರಹಪೂರ್ವಕವಾಗಿ ಅವರನ್ನು ಎದುರಿಸಿರುತ್ತಾರೆ. ಆದ್ದರಿಂದ ವೇದವು ಅಪೌರುಷೇಯವೆಂಬ ಮತವೂ ವ್ಯವಹಾರದೃಷ್ಟಿಯಿಂದ ವೇದಾಂತಿಗಳಿಗೂ ಒಪ್ಪಾದರೂ

ಶಬ್ದವನ್ನು ಅಪೌರುಷೇಯವೆಂಬ ಒಂದೇ ಕಾರಣದಿಂದ ಅದನ್ನು ಪ್ರಮಾಣವೆಂದು ಹಿಡಿಯುವದು ಅಷ್ಟು ಯುಕ್ತವಲ್ಲವೆಂದು ಅವರ ಮತವಾಗಿರುತ್ತದೆ. ವೇದಾಂತದಲ್ಲಿ ಹೇಳಿರುವ ಮುಖ್ಯತತ್ತ್ವಗಳು ಅತೀಂದ್ರಿಯವಾಗಿದ್ದರೂ ಈಗಲೇ ಇಲ್ಲಿಯೇ ಅನುಭವಕ್ಕೆ ಬರುವಂಥವುಗಳಾಗಿರುತ್ತವೆ. ವೇದವಾಕ್ಯವು ಅವನ್ನು ಇದ್ದದ್ದು ಇದ್ದಂತೆ ನಿಸ್ಸಂಶಯವಾಗಿ ಅಬಾಧಿತವಾಗಿ ತಿಳಿಸಿಕೊಡುವದರಿಂದ ಆ ವಿಷಯದಲ್ಲಿ ವಾಕ್ಯವೇ ಪ್ರಮಾಣವಾಗಿರುತ್ತದೆ ಎಂಬುದು ಆಚಾರ್ಯರ ಒಂದು ಅಸಾಧಾರಣವಾದ ಬೋಧೆಯಾಗಿರುತ್ತದೆ. ಪೂರ್ವಮೀಮಾಂಸದಲ್ಲಿ ಹೇಳಿರುವ ಕರ್ಮಗಳಿಗೆ ಸತ್ತ ಬಳಿಕ ಆಗುವ ಪರೋಕ್ಷಫಲಗಳು ಆಗುವವೋ, ಇಲ್ಲವೋ?- ಎಂಬ ಸಂಶಯವಾದರೂ ಉಂಟಾಗಬಹುದು. ಆದರೆ ಇಲ್ಲಿಯೇ ಈಗಲೇ ಅನುಭವಕ್ಕೆ ಬರಬಹುದಾದ ತತ್ತ್ವಗಳನ್ನು ವೇದವಾಕ್ಯವು ತಿಳಿಸುವದರಿಂದ ಭೌತಿಕವಿಜ್ಞಾನದಂತೆ ವೇದಾಂತಜ್ಞಾನವೂ ಅಧಿಕಾರಿಗಳಾದವರೆಲ್ಲರಿಗೂ ನಿರ್ವಿವಾದವಾಗಿ ಮನಗಾಣಬಹುದಾದದ್ದಾಗಿ ಇರುತ್ತದೆ. ಪೂರ್ವಮೀಮಾಂಸಕರು ಹೇಳುವಂತೆ ಬರಿಯ ವಿಧಿನಿಷೇಧಗಳಲ್ಲಿಯೇ ಶಾಸ್ತ್ರವು ಪರ್ಯವಸಾನವಾಗಿರುವದಿಲ್ಲ; ವಸ್ತುತಂತ್ರವಾದ ಜ್ಞಾನವನ್ನೂ ಅದು ಉಂಟುಮಾಡುತ್ತದೆ ಎಂಬುದು ಆಚಾರ್ಯರ ಅಸಾಧಾರಣೋಪದೇಶಗಳಲ್ಲಿ ಒಂದಾಗಿರುತ್ತದೆ. ''ಮರ್ತ್ಯ ಅಮೃತನಾಗಬಹುದು, ಇಲ್ಲಿಯೇ ಬ್ರಹ್ಮವಾಗಬಹುದು'' ಎಂದು ಹೇಳುವ ವೇದೋಕ್ತಿಯು ಅಕ್ಷರಶಃ ನಿಜವೆಂದು ಧೈರ್ಯದಿಂದ ಭೋಧಿಸಿ ಜನರಿಗೆ ವೇದೋಕ್ತಿಗಳನ್ನು ಅನುಭವವೆಂಬ ಒರೆಗಲ್ಲಿಗೆ ಹತ್ತಿಸುವದಕ್ಕೆ ಮಾರ್ಗವನ್ನು ತೋರಿಸಿದ ಆಚಾರ್ಯರಲ್ಲಿ ನಾವೆಲ್ಲರೂ ಕೃತಜ್ಞರಾಗಿರುವದು ನಮ್ಮೆಲ್ಲರ ಆದ್ಯಕರ್ತವ್ಯವಾಗಿರುತ್ತದೆ. ಎಲ್ಲರಿಗೂ ಆನಂದವನ್ನು ಇಲ್ಲಿಯೇ ಈಗಲೇ ತಂದುಕೊಡಬಲ್ಲ ಈ ಶಂಕರಸಂದೇಶಕ್ಕೆ ನಾವೆಲ್ಲರೂ ಅವಶ್ಯವಾಗಿ ಕಿವಿಗೊಡಬೇಕು. ಶಂಕರಸಂದೇಶವು ನಿಜವಾಗಿಯೂ ಶಂಕರವಾದ, ಮಂಗಲಕರವಾದ, ಸಂದೇಶವಾಗಿರುತ್ತದೆ. ನಾವೆಲ್ಲರೂ ಈಗಲೇ ಇಲ್ಲಿಯೇ ಯಾವ ತಾರತಮ್ಯವೂ ಇಲ್ಲದೆ, ನಿತ್ಯಮುಕ್ತವಾಗಿರುವ ಪರಬ್ರಹ್ಮಸ್ವರೂಪರಾಗಿ ಇರುತ್ತೇವೆ. ಈ ಶುಭಕರವಾದ ತತ್ತ್ವವನ್ನು ವೇದರೂಪವಾದ ಶಾಸ್ತ್ರವು ಹೇಳುತ್ತಿದೆ. ವೇದವು ವೇದವೆಂಬ ಕಾರಣದಿಂದ ಪ್ರಮಾಣವಲ್ಲ; ಸಂಶಯ,

ವಿಪರೀತಜ್ಞಾನಗಳು ಉಂಟಾಗದಂತೆ ನಿಶ್ಚಿತವಾದ ಜ್ಞಾನವನ್ನುಂಟುಮಾಡುತ್ತಿರುವದರಿಂದಲೇ ಪ್ರಮಾಣವೆನಿಸಿರುತ್ತದೆ. ಶಂಕರಾಚಾರ್ಯರವರ ಕಣ್ಣಿನಿಂದ ಯಾರುಯಾರು ತತ್ತ್ವವನ್ನು ನೋಡುತ್ತಾರೋ ಅವರೆಲ್ಲ ಅವರ ಅನುಯಾಯಿಗಳು; ಅವರಿಗೆಲ್ಲ ಈ ಪರಮಾರ್ಥದ ಜ್ಞಾನವಾಗುತ್ತದೆ. ಇದೇ ಶಂಕರಜಯಂತಿ.

★★★★★

# ಶ್ರುತಿಪ್ರಮಾಣ

**19-5-1953**

**ಶ್ರೀಶ್ರೀಗಳವರು**

ಶ್ವೇತಾಶ್ವತರೋಪನಿಷತ್ತಿನಲ್ಲಿ ಒಂದು ವಾಕ್ಯವಿದೆ ''ಏತಜ್ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ ನಾತಃಪರಂ ವೇದಿತವ್ಯಂ ಹಿ ಕಿಂಚಿತ್'' ನಿತ್ಯವೂ ಆತ್ಮರೂಪದಿಂದಿದ್ದುಕೊಂಡಿರುವ ಈ ಬ್ರಹ್ಮವನ್ನೇ ಅರಿತುಕೊಳ್ಳಬೇಕು; ಇದಕ್ಕಿಂತ ಮುಂದೆ ಮತ್ತೆ ಯಾವದೂ ಜ್ಞೇಯವಾಗಿ ಉಳಿದಿರುವದಿಲ್ಲ -ಎಂಬುದು ವಾಕ್ಯದ ಅರ್ಥವು. ವೇದವು ಇದ್ದದ್ದನ್ನು ಇದ್ದಂತೆ ಹೇಳುತ್ತದೆ; ಅದು ಕರ್ಮವನ್ನೇ ಅಲ್ಲದೆ ವಸ್ತುವನ್ನೂ ಭೋಧಿಸಬಹುದು - ಎಂದು ಆಚಾರ್ಯರು ಹೇಳುತ್ತಾರೆಂದು ನಿನ್ನೆ ತಿಳಿಸಿರುತ್ತೇನಷ್ಟೆ. ಹಿಂದಿನ ಕೆಲವರು ವೇದಾಂತಿಗಳು ಹೀಗೆನ್ನುತ್ತಿದ್ದರು: ಶ್ರುತಿಯು ಪ್ರತ್ಯಕ್ಷಾದಿಗಳಿಗೆ ನಿಲುಕದ ಬ್ರಹ್ಮವಸ್ತುವನ್ನು ತಿಳಿಸುತ್ತದೆ ಎಂಬುದು ನಿಜವಾದರೂ ವೇದವು ಕರ್ತವ್ಯವನ್ನೇ ಭೋಧಿಸುತ್ತದೆ ಎಂಬ ಮೀಮಾಂಸಕರ ಪಕ್ಷಕ್ಕೆ ನಾವು ತಲೆಬಾಗಲೇಬೇಕು. ಬ್ರಹ್ಮಜ್ಞಾನವನ್ನು ಶ್ರುತಿಯಲ್ಲಿ ಹೇಳಿರುವದು ನಿಜ; ಆದರೆ ಅಲ್ಲಿ ಜ್ಞಾನವೆಂದರೆ ಉಪಾಸನೆಯೇ. ಉಪಾಸ್ಯವಾದ ಬ್ರಹ್ಮವು ಉಪಾಸನಾರೂಪವಾದ ಕ್ರಿಯೆಗೆ ಕರ್ಮವಾಗಿರುವದರಿಂದ ಅದೂ ವಿಧಿಶೇಷವೇ ಆಗಿರುತ್ತದೆ. ಯಾವ ದೇವತೆಗಾಗಿ ಹವಿಸ್ಸನ್ನು ಕೊಡುವೆವೋ ಆ ದೇವತೆಯನ್ನು ಮನಸ್ಸಿನಿಂದ

ಭಾವನೆ ಮಾಡಿಕೊಳ್ಳಬೇಕು - ಎಂದು ವೇದವಚನವಿದೆ; ಆ ವಚನದಂತೆ ದೇವತೆಯಧ್ಯಾನವೂ ಕರ್ಮಕ್ಕೆ ಅಂಗವಾಗಿರುತ್ತದೆಯಷ್ಟೆ. ಹಾಗೆಯೇ ಇಲ್ಲಿಯೂ ಬ್ರಹ್ಮವೂ ಅದರ ಉಪಾಸನೆಗೆ ಅಂಗವಾಗಿಯೇ ಉಪದಿಷ್ಟವಾಗಿದೆ ಎಂದು ಒಪ್ಪಬೇಕು- ಎಂಬುದು ಪ್ರಾಚೀನವೇದಾಂತಿಗಳ ಅಭಿಪ್ರಾಯ. ಆದರೆ ಶಂಕರಭಗವತ್ಪಾದರ ಅಭಿಪ್ರಾಯವೇನೆಂದರೆ ಉಪಾಸನೆಯೂ ಒಂದು ಬಗೆಯ ಮಾನಸ ಕರ್ಮವೇ ಆಗಿರುತ್ತದೆ; ಅದಕ್ಕೂ ಬಾಹ್ಯಕರ್ಮಗಳಿಗೆ ಆಗುವಂತೆ ಉಪಾಸಕನು ಸತ್ತ ಬಳಿಕವೇ ಕಾಲಾಂತರದಲ್ಲಿ ಲೋಕಾಂತರದಲ್ಲಿ ಫಲವಾಗುವದೆಂದು ಶ್ರುತಿಯಲ್ಲಿ ಹೇಳಿದೆ. ಆದರೆ ಬಾದರಾಯಣಾಚಾರ್ಯರು 'ಅಥಾತೋ ಬ್ರಹ್ಮಜಿಜ್ಞಾಸಾ' ಎಂದು ಸೂತ್ರಿಸಿರುವ ಬ್ರಹ್ಮಜ್ಞಾನವು ಈ ಬಗೆಯದಲ್ಲ, ಬ್ರಹ್ಮವೆಂಬ ತತ್ತ್ವವನ್ನು ಸ್ವತಂತ್ರವಾಗಿಯೇ ವೇದದಲ್ಲಿ ಉಪದೇಶಿಸಿರುತ್ತದೆ; ಅದರ ಜ್ಞಾನದಿಂದ ಈಗಲೇ ಇಲ್ಲಿಯೇ ಪರಮಪುರುಷಾರ್ಥವನ್ನು ಪಡೆಯಬಹುದು. ಮುಂದೆ ಕಾಲಾಂತರದಲ್ಲಿ ಪಡೆಯುವ ಆದೃಷ್ಟಫಲವನ್ನು ಕೊಡುವ ಕರ್ಮದ ವಿಷಯದಲ್ಲಿ ಜೈಮಿನಿಗಳು 'ಅಥಾತೋ ಧರ್ಮಜಿಜ್ಞಾಸಾ' ಎಂದು ಪ್ರಾರಂಭಿಸಿ ಒಂದು ಶಾಸ್ತ್ರವನ್ನು ರಚಿಸಿರುತ್ತಾರೆ; ಆದರೆ ಈ ಜನ್ಮದಲ್ಲಿಯೇ ಆಗುವ ದೃಷ್ಟಫಲವನ್ನು ಕೊಡುವ ವಸ್ತುತಂತ್ರವಾದ ಜ್ಞಾನವನ್ನು ಕುರಿತು ಬಾದರಾಯಣರು ಸ್ವತಂತ್ರವಾಗಿ ಬೇರೆ ಒಂದು ಶಾಸ್ತ್ರವನ್ನು ರಚಿಸಿರುತ್ತಾರೆ -ಎಂಬುದು ಆಚಾರ್ಯರ ಮತ.

ಜ್ಞಾನದಿಂದ ಇಲ್ಲಿಯೇ ಬ್ರಹ್ಮವನ್ನು ತಿಳಿಯಬಹುದಾದರೂ ಬ್ರಹ್ಮವು ಅತೀಂದ್ರಿಯತತ್ತ್ವವಾಗಿರುತ್ತದೆಯಾದ್ದರಿಂದ ಅದನ್ನು ವೇದದಿಂದಲೇ ತಿಳಿಯಬೇಕಾಗಿದೆ. ಕರ್ಮದಿಂದ ಅತೀಂದ್ರಿಯವಾದ ಸ್ವರ್ಗಾದಿಫಲಗಳು ದೊರೆಯುವಂತೆಯೇ ಜ್ಞಾನದಿಂದ ಅತೀಂದ್ರಿಯವಾದ ಬ್ರಹ್ಮಾತ್ಮೈಕತ್ವವು ದೊರಕುವದು. ಇದು ಅತೀಂದ್ರಿಯವಾದರೂ ಬುದ್ಧಿಗ್ರಾಹ್ಯವಾಗಿರುವದೆಂದು ಗೀತೆಯಲ್ಲಿ ಹೇಳಿರುತ್ತದೆ.

ಸಿದ್ಧವಸ್ತುಗಳಲ್ಲಿ ಪ್ರಮಾಣಸಿದ್ಧವೆಂದೂ ಸ್ವಯಂಸಿದ್ಧವೆಂದೂ ಎರಡು ವಿಧದ ವಸ್ತುಗಳಿವೆ. ಆತ್ಮವಸ್ತುವು ಸ್ವಯಂಸಿದ್ಧವಾಗಿದೆ; ಗಣಿತದಲ್ಲಿ ಕೊಟ್ಟಿರುವ ಸ್ವಯಂಸಿದ್ಧತತ್ತ್ವಗಳು ಕೂಡ ಇದಕ್ಕೆ ಹೋಲಿಸಿದರೆ ಗೌಣಾರ್ಥದಲ್ಲಿ

ಸ್ವಯಂಸಿದ್ಧವೆನ್ನಬಹುದು. ಆತ್ಮನನ್ನು ಪ್ರತ್ಯಾಖ್ಯಾನಮಾಡುವದಕ್ಕೆ, ನಾನು ಇಲ್ಲ ಎಂದು ಕಲ್ಪಿಸುವದಕ್ಕೆ, ಯಾವನಿಂದಲೂ ಎಂದಿಗೂ ಆಗಲಾರದು. ಡೆ ಕಾರ್ಟೆ ಎಂಬುವನು 'ನಾನು ಯೋಚಿಸುತ್ತೇನೆ, ಆದ್ದರಿಂದ ನಾನು ಇದೇನೆ' ಎಂದು ಆತ್ಮಾಸ್ತಿತ್ವವನ್ನು ತಿಳಿಸಿಕೊಟ್ಟನಂತೆ; ಆದರೆ ಯೋಚನೆಯೂ ಆತ್ಮನಿಗೇ ದೃಶ್ಯವಾಗಿರುವದರಿಂದ ಆತ್ಮನು ಅದಕ್ಕಿಂತಲೂ ಮುಂಚೆಯೇ ಸಿದ್ಧನಾಗಿರುತ್ತಾನೆ; ಆತನು ಪ್ರಮಾಣಪ್ರಮೇಯವ್ಯವಹಾರಕ್ಕಿಂತ ಮೊದಲೇ ಸಿದ್ಧನಾಗಿರುತ್ತಾನೆ. ಆದ್ದರಿಂದ 'ನಾನು ಇದೇನೆ, ಆದ್ದರಿಂದ ಯೋಚಿಸಿತ್ತೇನೆ' ಎನ್ನುವದೇ ಹೆಚ್ಚು ಯುಕ್ತವಾಗಿರುತ್ತದೆ. ನಾನು ಪ್ರಾರಂಭದಲ್ಲಿ ಉದಾಹರಿಸಿರುವ ಶ್ರುತಿಯಲ್ಲಿ 'ಏತಜ್ಜ್ಞೇಯಮ್' (ಇದನ್ನೇ ಅರಿಯಬೇಕು) ಎಂದಿದೆಯಷ್ಟೆ; ಸಂಸ್ಕೃತದಲ್ಲಿ ಏತತ್ ಎಂಬುದು ಹೆಚ್ಚು ಸಮೀಪದಲ್ಲಿರುವದನ್ನು ತಿಳಿಸುವ ಶಬ್ದವು. ಆತ್ಮನು ಅತ್ಯಂತಸಮೀಪದಲ್ಲಿರುತ್ತಾನೆ; ಅವನು ನಮ್ಮ ಸ್ವರೂಪವೇ ಆಗಿರುತ್ತಾನೆ. ಆತ್ಮಬುದ್ಧಿಯು, ನಾನು ಎಂಬ ಬುದ್ಧಿಯು, ದೇಹೇಂದ್ರಿಯಾದಿಗಳಲ್ಲಿಯೂ ಓಡಾಡುತ್ತಿರುತ್ತದೆ. ಆದರೂ ನಿತ್ಯವೂ ಆತ್ಮನೇ ಆಗಿರುವ ಆತ್ಮನನ್ನೇ ನಾನು ಎಂದು ಅರಿತುಕೊಳ್ಳಬೇಕು; ನಿತ್ಯಮೇವಾತ್ಮಸಂಸ್ಥಮ್' ಎಂಬ ವಾಕ್ಯದ ಅರ್ಥವಿದು. ಆತ್ಮನು ಜ್ಞೇಯವಲ್ಲವಲ್ಲ!-ಎಂದು ಶಂಕಿಸಬಾರದು; ಶ್ರುತಿಯಲ್ಲಿ ಆತ್ಮನು ಜ್ಞೇಯನು ಎಂದಿಲ್ಲ, ಆತ್ಮನೇ ಜ್ಞೇಯನು ಎಂದಿದೆ. ಅನಾತ್ಮಗಳನ್ನು ಕೈಬಿಟ್ಟು ಆತ್ಮಸ್ವರೂಪದ ಕಡೆಗೇ ತಿರುಗಬೇಕು ಎಂದು ವಾಕ್ಯದ ಅರ್ಥವೇ ಹೊರತು, ಅನಾತ್ಮದಂತೆ ಜ್ಞಾನಕ್ಕೆ ವಿಷಯವಾಗಿ ಮಾಡಿಕೊಳ್ಳಬೇಕು ಎಂದಲ್ಲ. ಆದ್ದರಿಂದ ಆತ್ಮನು ಸ್ವಯಂಸಿದ್ಧನೇ, ಅವನನ್ನು ಪ್ರಮಾಣದಿಂದ ಸಿದ್ಧಮಾಡಬೇಕಾದದ್ದೇನೂ ಇಲ್ಲ.

ಪ್ರಮಾಣಸಿದ್ಧವಸ್ತುಗಳೆಲ್ಲ ಪ್ರಮಾಣದ ಬಲದಿಂದಲೇ ಸಿದ್ಧವಾಗಬೇಕು; ಆದರೆ ಪ್ರಮಾಣಕ್ಕೆ ವಸ್ತುಸಾಧನೆಮಾಡುವ ಅಧಿಕಾರವು ಯಾವಾಗ ಹೇಗೆ ಬಂತು? -ಎಂಬುದನ್ನು ನಾವು ಯಾರೂ ವಿಚಾರಮಾಡಿಲ್ಲ. ಪ್ರಮಾಣದಿಂದ ಸಿದ್ಧವಾದರೆ ವಸ್ತುವು ಹೀಗೆಯೇ ಇದೆ ಎಂದು ಇಟ್ಟುಕೊಳ್ಳುವದು ರೂಢಿಯಾಗಿಬಿಟ್ಟಿದೆ. ಹಿಂದಕ್ಕೆ ಹೈದರಾಬಾದಿನಲ್ಲಿ ಅಥವಾ ಮತ್ತೆ ಯಾವದೋ ಒಂದು ದೇಶದಲ್ಲಿ, ಸರಕಾರದ ಅಪ್ಪಣೆಯಿಲ್ಲದೆ ಒಂದು ಇನಾಮತಿ

ವಿಚಾರಣೆಯ ಕಚೇರಿಯನ್ನು ಒಬ್ಬನು ತೆಗೆದು ಎಲ್ಲರ ಇನಾಮತಿಗಳನ್ನೂ ರಿಜಿಸ್ಟ್ರೇಶನ್ ಮಾಡಲು ಹೊರಟನಂತೆ; ಕ್ರಮಕ್ರಮವಾಗಿ ಅರಮನೆಯವರ ಇನಾಮತಿಗಳನ್ನೂ ರಿಜಿಸ್ಟರುಮಾಡಿಸಬೇಕೆಂದು ಒತ್ತಾಯಮಾಡುವದಕ್ಕೆ ಮೊದಲುಮಾಡಿದನಂತೆ. ಆಗ ಮಂತ್ರಿಯು'ನಿನ್ನನು ಈ ಅಧಿಕಾರದಲ್ಲಿ ನಿಲ್ಲಿಸಿದ ಸರಕಾರಿ ಹುಕುಂ ಎಲ್ಲಿ?' -ಎಂದು ಕೇಳಲು ನಿಜವು ಹೊರಕ್ಕೆ ಬಿತ್ತಂತೆ! ಹೀಗೆಯೇ ಪ್ರಮಾಣಗಳಿಗೆ ವಸ್ತುಗಳನ್ನು ಸಿದ್ಧಪಡಿಸುವ ಯೋಗ್ಯತೆ ಎಲ್ಲಿಂದ ಬಂತು? -ಎಂಬುದನ್ನು ವಿಚಾರಿಸಿದರೆ ಪ್ರಮಾಣವ್ಯವಹಾರವೆಲ್ಲ ಅವಿದ್ಯಾಪೂರ್ವಕವಾಗಿರುತ್ತದೆ ಎಂಬುದು ಹೊರಪಡುತ್ತದೆ ಎಂಬುದನ್ನು ಆಚಾರ್ಯರು ಅನುಭವದ ಬಲದಿಂದ ತೋರಿಸಿಕೊಟ್ಟಿರುತ್ತಾರೆ. ಇದೇ ಅವರು ಬರೆದಿರುವ ಅಧ್ಯಾಸಭಾಷ್ಯದ ತಿರುಳು.

ಹಾಗಾದರೆ ಬ್ರಹ್ಮವು ಅಥವಾ ಆತ್ಮನು ಶಾಸ್ತ್ರಪ್ರಮಾಣಸಿದ್ಧ ಎಂಬ ಮಾತಿಗೆ ಅರ್ಥವೇನು? ಆತ್ಮನು ಸ್ವಯಂಸಿದ್ಧನೊ, ಪ್ರಮಾಣಸಿದ್ಧನೊ? -ಎಂದು ನೀವು ಕೇಳಬಹುದು. ಇದಕ್ಕೆ ಉತ್ತರವೇನೆಂದರೆ ಆತ್ಮನು ಸ್ವಯಂಸಿದ್ಧ; ಇದನ್ನು ತಿಳಿಸಿಕೊಡುವದರಿಂದಲೇ ಶಾಸ್ತ್ರವು ಆತ್ಮನ ವಿಷಯಕ್ಕೆ ಪ್ರಮಾಣವು. ಶಾಸ್ತ್ರವು ಆತ್ಮನ ವಿಷಯದ ತಪ್ಪುತಿಳಿವಳಿಕೆಯನ್ನೆಲ್ಲ ಕಳೆದು ಪ್ರಮಾಣ ವ್ಯವಹಾರವೆಲ್ಲ ಅವಿದ್ಯೆಯ ಭೂಮಿಕೆಯಲ್ಲಿಯೇ ಇರುವದೆಂದು ತಿಳಿಸುತ್ತದೆ. ಆದ್ದರಿಂದ ಶಾಸ್ತ್ರವೂ ಅವಿದ್ಯೆಯ ದೃಷ್ಟಿಯಿಂದಲೇ ಪ್ರಮಾಣವೆಂದಾಗುತ್ತದೆ. ಪ್ರಮಾಣವ್ಯವಹಾರವೆಲ್ಲ ಅವಿದ್ಯೆಯ ಭೂಮಿಕೆಯಲ್ಲಿಯೇ ಇರುವದರಿಂದ ವೇದವು ವೇದವೆನಿಸಿಕೊಂಡು ಆತ್ಮನಿಗೆ ಪ್ರಮಾಣವೆನಿಸಿರುವದೂ ಅವಿದ್ಯೆಯ ಕ್ಷೇತ್ರದಲ್ಲಿಯೇ. ನಿಜವನ್ನು ಅರಿತಾಗ ವೇದವೂ ವೇದವಲ್ಲ; ಅದು ಪ್ರಮಾಣವೂ ಅಲ್ಲ. ಹೀಗೆ ಪ್ರಮಾಣವ್ಯವಹಾರವನ್ನೇ ತೊಲಗಿಸುವ ಜ್ಞಾನವನ್ನುಂಟುಮಾಡುವದರಿಂದ ಶಾಸ್ತ್ರವನ್ನು ಅಂತ್ಯಪ್ರಮಾಣವೆನ್ನುವರು.

ಪ್ರತ್ಯಕ್ಷಾದಿಗಳಿಂದ ಕಂಡಿರುವ ಪ್ರಪಂಚವನ್ನು ಮಿಥ್ಯೆಯೆಂದು ಹೇಳುವದೂ ಆತ್ಮನೊಬ್ಬನೇ ಸತ್ಯವೆಂದು ಹೇಳುವದೂ ಹೇಗೆ ಸರಿಯಾದೀತು? ಆತ್ಮನು ಪ್ರಮಾತೃವು, ಭೋಕ್ತೃವು ಎಂದು ಪ್ರತ್ಯಕ್ಷಾನುಭವದಲ್ಲಿದೆಯಲ್ಲ! - ಎಂದು ಕೆಲವರು ಆಕ್ಷೇಪಿಸುವರು. ಇದಕ್ಕೆ 'ಇಂದ್ರಿಯಪ್ರಮಾಣವು

ಮಾಯಿಕವಾದ ವಸ್ತುಗಳನ್ನು ತಿಳಿಸುತ್ತದೆ' ಎಂಬುದೇ ಉತ್ತರವು; ''ಇಂದ್ರೋ ಮಾಯಾಭಿಃ ಪುರುರೂಪ ಈಯತೇ'' ಪರಮಾತ್ಮನು ಒಬ್ಬನೇ, ಅದ್ವಿತೀಯನೇ ಆಗಿದ್ದರೂ ಇಂದ್ರಿಯಪ್ರಜ್ಞೆಗಳೆಂಬ ಮಾಯೆಗಳಿಂದ ಅನೇಕರೂಪನಾಗಿ ತೋರುತ್ತಿರುವನು. 'ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ' ಎಂದು ಶ್ರುತಿಯಿದೆ. ನಾವು ದೇಹವೆಂದೂ ಇಂದ್ರಿಯಗಳು ನಮ್ಮವೆಂದೂ ಯಾವ ಆಧಾರವೂ ಇಲ್ಲದೆ ಇಟ್ಟುಕೊಂಡ ಮೇಲೆಯೇ ಇಂದ್ರಿಯದಿಂದಾಗುವ ಪ್ರತ್ಯಕ್ಷಾದಿ ವ್ಯವಹಾರವುಂಟಾಗುತ್ತದೆ; ಆದ್ದರಿಂದ ಈ ವ್ಯವಹಾರವೆಲ್ಲವೂ ಅವಿದ್ಯೆಯಿಂದಲೇ ಆದದ್ದು - ಎಂಬುದನ್ನು ತೋರಿಸಿಕೊಟ್ಟು ಆತ್ಮಸ್ವರೂಪವು ಅದ್ವಿತೀಯವೆಂಬುದನ್ನು ತಿಳಿಸುವದು ವೇದವು. ಈ ವೇದಾರ್ಥವನ್ನು ಅನುಭವಾನುಸಾರವಾಗಿ ಸ್ಪಷ್ಟಪಡಿಸಿಕೊಟ್ಟವರು ಆಚಾರ್ಯರು. ಇರುವದನ್ನು ಇದೆಯೆಂದೂ ಬರಿಯ ತೋರಿಕೆಯನ್ನು ಹುಸಿಯೆಂದೂ ಹೀಗೆ ಸ್ಫುಟವಾಗಿ ತಿಳಿಸುವದರಿಂದಲೇ ವೇದವು ಪ್ರಮಾಣವೆನಿಸಿರುತ್ತದೆ. ಈ ಪ್ರಮಾಣವನ್ನು ಉಪಯೋಗಿಸಿ ತತ್ತ್ವವನ್ನು ಅರಿತುಕೊಂಡು ಕೃತಾರ್ಥರಾಗಬೇಕು.

★★★★★

# ಪರಮಾತ್ಮನೊಬ್ಬನೇ ಪರಮಾರ್ಥವು

**20-5-1953**

**ಶ್ರೀಶ್ರೀಗಳವರು**

ಪರಮಾತ್ಮನು ತಾನೇತಾನಾಗಿ ತಾನು ತನಗಾಗಿಯೇ ಇರತಕ್ಕ ಸ್ವತಂತ್ರತತ್ತ್ವವು; ಅವನು ಅನ್ಯಶೇಷನಲ್ಲ, ಮತ್ತೊಂದಕ್ಕಾಗಿ, ಅದರ ಅಧೀನನಾಗಿ ರುವದಿಲ್ಲ, ಅವನೇ ನಮ್ಮೆಲ್ಲರ ಆತ್ಮನು ಎಂಬುದು ಶಾಸ್ತ್ರದ ಉಪದೇಶವು. ನಾವು ನಮ್ಮ ಸ್ವರೂಪವನ್ನು ಈಗ ಹೇಗೆ ತಿಳಿದುಕೊಂಡಿದೇವೆ? ನಾವು ಕಾರ್ಯಕರಣವಂತರು; ಈ ದೇಹೇಂದ್ರಿಯಗಳಿಂದೊಡಗೂಡಿ ಪರತಂತ್ರರಾಗಿ

ದುಡಿಯುತ್ತಿರುವದೇ ನಮ್ಮ ಸ್ವಭಾವವು. ನಾವು ಅನೀಶ್ವರರು- ಎಂಬುದೇ ನಮ್ಮ ಭಾವನೆ. ಆದರೆ ಶಾಸ್ತ್ರವು ಹೀಗೆನ್ನುತ್ತಿದೆ: ನೀವು ಇಂಥ ಪರತಂತ್ರ ಸ್ವಭಾವದವರಲ್ಲ; ನೀವು ನಿಮಗಾಗಿಯೇ ಇರತಕ್ಕವರು, ಸ್ವಾರ್ಥನಾಗಿ ರುವ ಪರಮಾತ್ಮಸ್ವರೂಪರು. ನಮ್ಮಲ್ಲಿ ಪ್ರತಿಯೊಬ್ಬರೂ ನಮ್ಮಂಥವರು ಅನೇಕರಿದಾರೆ ಇಂದು ಕೊಂಡಿರುತ್ತೇವೆ; ಆದರೆ ಶಾಸ್ತ್ರವು ಒಬ್ಬ ದೇವನೇ ಬ್ರಹ್ಮಾದಿಸ್ತಂಬಪರ್ಯಂತವಾದ ಎಲ್ಲಾ ಪ್ರಾಣಿಗಳಲ್ಲಿಯೂ ಇರುತ್ತಾನೆ- ಎಂದೇ ಹೇಳುತ್ತಿದೆ. ಇಂಥ ಪರಮಾತ್ಮನೊಬ್ಬನೇ ಪರಮಾರ್ಥವು, ಇವನಿಗಿಂತ ವ್ಯತಿರಿಕ್ತನಾದ ಜೀವನೇ ಇಲ್ಲ; ಪ್ರಮಾಣಪ್ರಮೇಯವ್ಯವಹಾರವೆಲ್ಲವೂ ಆವಿದ್ಯಕವೇ. ಆತ್ಮನಲ್ಲಿ ವೇದ್ಯ ವೇದಿತೃ ಭಾವವನ್ನೂ (ಅರಿಯಲ್ಪಡತಕ್ಕದ್ದು- ಎಂಬುದನ್ನು, ಜ್ಞಾನಾಜ್ಞಾನಗಳನ್ನೂ) ಕಲ್ಪಿಸಿಕೊಂಡಿರುವದೇ ಮಿಥ್ಯಾಜ್ಞಾನವು. ನಿಜವಾಗಿ ನೋಡಿದರೆ ಹುಟ್ಟದೆ ಇರುವ ಸಮ್ಯಗ್ಜ್ಞಾನವಿಲ್ಲ; ನಾಶವಾಗದಿರುವ ಅಜ್ಞಾನವೂ ಇಲ್ಲ, ಇಂಥ ತಿಳಿವಳಿಕೆಯ ಸ್ವಾರಾಜ್ಯದಲ್ಲಿ ನಮ್ಮನ್ನು ಅಭೀಷೇಕಮಾಡುವವರೆಗೂ ವೇದವು ಉಪದೇಶಮಾಡಿ, ಕೊನೆಗೆ ಪ್ರಮಾಣವ್ಯವಹಾರವನ್ನೇ ಇಲ್ಲವೆನಿಸಿ ತಾನು ಅಂತ್ಯಪ್ರಮಾಣನಿಸಿಕೊಳ್ಳುತ್ತದೆ.

ಈ ಪರಮಾತ್ಮನೇ ನಿಜವಾಗಿ ಜ್ಞೇಯನು ; ಆದ್ದರಿಂದಲೇ ಶ್ರುತಿಯು ನಾರಾಯಣನು ಮಹಾಜ್ಞೇಯನು ಎಂದು ಹೇಳುತ್ತಿದೆ. ಈಗಿನ (Science ಎಂಬ) ಭೌತಿಕಜ್ಞಾನವು ಕರಾರುವಾಕ ತಿಳಿವಳಿಕೆಯನ್ನು ತಿಳಿಸುತ್ತೇನೆಂದು ಹೊರಟಿದ್ದರೂ 'ಈವರೆಗೆ ಇಷ್ಟು ತಿಳಿದಿದೆ' ಎನ್ನುತ್ತಾ ಅಜ್ಞಾನವನ್ನು ಉಳಿಸಿಕೊಂಡೇ ಬಾಳಬೇಕಾಗಿದೆ. ಆದರೆ ಪರಮಾತ್ಮನನ್ನು ಶಾಸ್ತ್ರವು ತಿಳಿಸುವ ರೀತಿಯಲ್ಲಿ ಅರಿತುಕೊಂಡರೆ ಇನ್ನು ತಿಳಿಯಬೇಕಾದದ್ದೇ ಉಳಿಯದೆ ಇರುವದರಿಂದ ಅಜ್ಞಾನವು ಆತ್ಯಂತಿಕವಾಗಿ ನಾಶವಾಗಿಬಿಡುತ್ತದೆ. ''ತಮೇವ ಧೀರೋ ವಿಜ್ಞಾಯ ಪ್ರಜ್ಞಾಂ ಕುರ್ವೀತ'' ವಿವೇಕಿಯಾದವನು ಆ ಪರಮಾತ್ಮನನ್ನು ಅರಿತುಕೊಂಡು ಪ್ರಜ್ಞೆಯನ್ನು ಸಂಪಾದಿಸಿಕೊಳ್ಳಬೇಕು. ಗುರುವೆಂದರೆ ಯಾರು? ಶಿಷ್ಯನ ಅಜ್ಞಾನವನ್ನು ಪೂರ್ಣವಾಗಿ ಕಳೆಯುವವನು. ಈ ಅರ್ಥದಲ್ಲಿ ವೇದಾಂತಾರ್ಥವನ್ನು ತಿಳಿಸಿಕೊಡುವ ಗುರುವೇ ನಿಜವಾಗಿ ಗುರು; ಏಕೆಂದರೆ ಅವನ ಉಪದೇಶವು ಮನದಟ್ಟಾದರೆ ಶಿಷ್ಯನು ಶಿಷ್ಯನಾಗಿ ಉಳಿಯುವದೇ

ಇಲ್ಲ, ಗುರುವು ಗುರುವಾಗಿಯೂ ಉಳಿಯುವದಿಲ್ಲ. ಎಲ್ಲವೂ ಪರಮಾತ್ಮನೇ ಎಂಬ ನಿಸ್ಸಂಶಯವಾದ ಅರಿವಾಗಿಬಿಡುತ್ತದೆ.

ಶ್ರೀಶಂಕರಭಗವತ್ಪಾದರು ಜಗತ್ತು ಮಿಥ್ಯೆಯೆಂಬುದನ್ನೇ ಒತ್ತಿಹೇಳೀರುವರೆಂದೂ ಎಲ್ಲವೂ ಬ್ರಹ್ಮವೇ ಎಂದು ಹೇಳಲಿಲ್ಲವೆಂದೂ ಕೆಲವರು ಆರೋಪಿಸುವದು ಉಂಟು. ಆದರೆ ಇದು ಸರ್ವಥಾ ಮಿಥ್ಯಾರೋಪವು. ಆತ್ಮೈಕತ್ವಪ್ರತಿಪತ್ತಿಗಾಗಿ- ಆತ್ಮನು ಒಬ್ಬನೇ ಎಲ್ಲವೂ ಎಂಬುದನ್ನು ಅರಿತುಕೊಳ್ಳುವದಕ್ಕಾಗಿ- ಸಕಲವೇದಾಂತಗಳೂ ಹೊರಟಿವೆ ಎಂದು ಆಚಾರ್ಯರು ಬಾಯಿಬಿಟ್ಟು ಹೇಳಿರುತ್ತಾರೆ. ಚಿನ್ಮಾತ್ರವೇ ಎಲ್ಲೆಲ್ಲಿಯೂ ಅನುಗತವಾಗಿರುವದರಿಂದ ಎಲ್ಲವೂ ಚಿದ್ರೂಪವಾದ ಬ್ರಹ್ಮವೇ ಎಂದು ಅವರು ಹೇಳಿರುತ್ತಾರೆ. ಹಾಗಾದರೆ ಜಗತ್ತು ಮಿಥ್ಯೆ ಎಂದರೇನು? -ಎಂದರೆ ಯಾವ ದೃಶ್ಯವೇ ಆಗಲಿ ಅದರದರ ವಿಶೇಷಾಕಾಕರ ರೂಪದಿಂದ ಮಿಥ್ಯೆಯಾದರೂ ಸನ್ಮಾತ್ರವಾದ ಬ್ರಹ್ಮರೂಪದಿಂದ ಸತ್ಯವೇ; ಆ ಸದಾತ್ಮವಿಜ್ಞಾನವುಂಟಾಗುವ ಮುಂಚೆ ಲೌಕಿಕದೃಷ್ಟಿಯಿಂದ ಎಲ್ಲವೂ ಸತ್ಯವೇ -ಎಂಬುದು ಆಚಾರ್ಯರ ಉತ್ತರವು.

ಮುಖ್ಯವಾಗಿ ಆಚಾರ್ಯರ ಸಿದ್ಧಾಂತದಲ್ಲಿ ಶಾಸ್ತ್ರವೇ ಪ್ರಮಾಣ; ನಮ್ಮ ನಮ್ಮ ವಿಶೇಷಾನುಭವವನ್ನು ಪ್ರಮಾಣವೆಂದು ಹಿಡಿಯಬೇಕೆನ್ನುವವರ ಮತವು ಅವರಿಗೆ ರುಚಿಸುವದಿಲ್ಲ. ಶಾಸ್ತ್ರವು ಎಲ್ಲರಿಗೂ ಸಮಾನವಾಗಿ ಅನುಭವವನ್ನು ಕೊಡುವ ಪ್ರಮಾಣವಾಗಿದೆ. ಶಾಸ್ತ್ರದೃಷ್ಟಿಯಿಂದ ನೋಡಿದಾಗ ನಾವು ಪ್ರಮಾತೃಗಳಲ್ಲ; ನಾವು ಪ್ರಮಾತೃಗಳೆಂಬುದು ದೇಹೇಂದ್ರಿಯಗಳ ಅಭಿಮಾನದಿಂದ. ಪ್ರಮಾತೃತ್ವವನ್ನು ಬಿಟ್ಟರೆ ನಮ್ಮ ಸ್ವರೂಪವು ಸರ್ವಕ್ಕೂ ಸಾಕ್ಷಿಯಾಗಿರುವದರಿಂದ ಇದು ಪರಾರ್ಥವಲ್ಲ; ಅನಾತ್ಮವು ಇದರಲ್ಲಿ ಅಧ್ಯಸ್ತವಾಗಿದ್ದುಕೊಂಡು ಪರಾರ್ಥವಾಗಿರುತ್ತದೆ-ಎಂಬ ಅನುಭವವು ಅವಶ್ಯವಾಗಿ ಉಂಟಾಗುತ್ತದೆ.

★★★★★

# ಸಾಕ್ಷಿರೂಪನಾದ ಆತ್ಮನು ಅದ್ವಿತೀಯ

**21-5-1953**

**ಶ್ರೀಶ್ರೀಗಳು**

ಈ ದಿನದವರೆಗೆ ನಾವು ಮಾಡಿರುವ ವಿಚಾರದಲ್ಲಿ ಶಾಸ್ತ್ರವು ಆತ್ಮನ ವಿಷಯದ ತಪ್ಪುತಿಳಿವಳಿಕೆಯನ್ನು ಕಳೆದುಹಾಕಿ ಪ್ರಮಾಣವ್ಯವಹಾರವನ್ನೆಲ್ಲ ಆವಿದ್ಯಕವೆಂಬುದನ್ನು ಮನಗಾಣಿಸಿಕೊಡುವದರಿಂದ ಅಂತ್ಯಪ್ರಮಾಣವೆನಿಸುತ್ತದೆ ಎಂದು ಹೇಳಿದ್ದಾಯಿತು. ನಮ್ಮಗಳ ಪ್ರಮಾತೃತ್ವವನ್ನು ಕಳೆಯುವದರಿಂದಲೇ ಪ್ರಮಾಣವು ಪ್ರಮಾಣವಲ್ಲದೆ ಹೋಗುತ್ತದೆ ; ಆದ್ದರಿಂದ ಆತ್ಮನನ್ನು ಪ್ರಮಾತೃವಲ್ಲವೆಂದು ತಿಳಿಸುವ ದ್ವಾರದಿಂದಲೇ ಶಾಸ್ತ್ರವು ಅಂತ್ಯಪ್ರಮಾಣವೆನಿಕೊಳ್ಳಬೇಕಾಗಿರುತ್ತದೆ. ಆತ್ಮನು ಅಹಂಪ್ರತ್ಯಯಕ್ಕೆ ವಿಷಯನು, ನಾನು ಎಂಬ ಅರಿವಿಗೆ ಗೋಚರನು-ಎಂದೇ ಮಿಕ್ಕ ಎಲ್ಲಾ ಶಾಸ್ತ್ರಗಳೂ ಮೊಳಗುತ್ತಿವೆ. ಭೌತಿಕವಿಜ್ಞಾನಶಾಸ್ತ್ರವು ಪರೀಕ್ಷಣಪ್ರಯೋಗಸಂವಾದೀಕರಣಗಳೆಂಬ ಉಪಾಯಗಳ ಸ್ವೀಕಾರದಿಂದಲೇ ಬದುಕಿರಬೇಕಾಗಿರುವದರಿಂದ ಪರೀಕ್ಷಕನ ಪ್ರಮಾತೃತ್ವವನ್ನು ಅದೂ ಕೈಬಿಡುವಂತಿಲ್ಲ. ಎಂಥೆಂಥ ಮಹಾಪರಿಮಾಣದ ಉದ್ಗ್ರಂಥಗಳನ್ನು ಬರೆದ ಮಹನೀಯರು ಕೂಡ ಅಹಂಪ್ರತ್ಯಯ ಗೋಚರನಾದ ಪ್ರಮಾತೃವನ್ನು ಇಟ್ಟುಕೊಂಡೇ ಬರೆದಿರುತ್ತಾರೆ. ''ಉಪನಿಷತ್ತುಗಳಲ್ಲಿ ವರ್ಣಿಸಿರುವ ಸಾಕ್ಷಿರೂಪನಾದ ಆತ್ಮನನ್ನು ಪೂರ್ವಮೀಮಾಂಸಕರಾಗಲಿ ತಾರ್ಕಿಕರಾಗಲಿ ಕಂಡಿರುವದಿಲ್ಲ'' ಎಂದು ಶ್ರೀಶಂಕರಭಗವತ್ಪಾದರವರು ಹೇಳಿರುವದು ಇತರವಾದಿಗಳ ದೂಷಣೆಯಲ್ಲ, ಉಪನಿಷತ್ತುಗಳ ಅಸಾಧಾರಣವಾದ ವಿಷಯವಾಗಿರುವ ಸಾಕ್ಷಿರೂಪಾತ್ಮಾನನ್ನು ತಿಳಿಸುವ ಪ್ರಕಾರವೇ ಅದು ಎಂಬುದು ಈಗ ಸ್ಪಷ್ಟವಾಗುತ್ತದೆ.

ಈ ಸಾಕ್ಷಿಚೈತನ್ಯವೇ ಅನುಭವಸ್ವರೂಪವಾಗಿರುತ್ತದೆ; ಆ ಅನುಭವರೂಪದಿಂದಲೇ ಆತ್ಮನು ಎಲ್ಲವನ್ನೂ ನೋಡುತ್ತಾನೆ, ಪ್ರಮಾತೃವಿನಂತೆ

ಅಂತಃಕರಣದ ಮೂಲಕವಾಗಿ ನೋಡುವದಿಲ್ಲ. ಈ ಅನುಭವ ಎಂಬ ಮಾತನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ ಇರುವವರೇ ಬಹಳ. ಹಿಂದೆಯೂ ಈಗಲೂ ಈ ಮಾತು ಅನೇಕವಾದಿಗಳನ್ನು ಗೋಳಾಡಿಸಿರುತ್ತದೆ. ಅನುಭವ ಎಂಬ ಶಬ್ದಕ್ಕೆ ಅನು - ಆಮೇಲೆ ಭವ - ಆಗತಕ್ಕದ್ದು ಎಂದು ಅಕ್ಷರಾರ್ಥವಾಗುತ್ತದೆ. ಸಾಮಾನ್ಯವಾಗಿ ಘಟಾದಿಗಳನ್ನು ತಾವು ಅರಿಯುವಾಗ ಕೊನೆಯಲ್ಲಿ ಆಗುವ ಫಲರೂಪವಾದ ಅರಿವೇ ಅನುಭವವು. ಈ ಅನುಭವವು ಪರಮಾರ್ಥವಾಗಿ ನೋಡಿದರೆ ಹೊಸದಾಗಿ ಉಂಟಾಗತಕ್ಕದ್ದಲ್ಲ ; ಮೋಡವು ಹೋದಮೇಲೆ ಮರೆಯಾಗಿದ್ದ ಚಂದ್ರನು ಕಾಣಿಸಿಕೊಳ್ಳುವಂತೆ, ಅಜ್ಞಾನವು ನೀಗಿದಾಗ ಆತ್ಮನ ಸ್ವರೂಪವೇ ಹೊಸದಾಗಿ ಆದಂತೆ ಕಾಣಿಸಿಕೊಂಡು ಆಯಾವಸ್ತುವಿನ ಅನುಭವ ಎಂಬ ಹೆಸರನ್ನು ತಳೆಯುತ್ತದೆ. ಬೃಹದಾರಣ್ಯಕಭಾಷ್ಯದ ವಾರ್ತಿಕದಲ್ಲಿ ಒಂದು ಶ್ಲೋಕವು ಅಲ್ಲಲ್ಲಿ ಬರುತ್ತದೆ: **''ಪರಾಗರ್ಥಪ್ರಮೇಯೇಷು ಯಾ ಫಲತ್ವೇನ ಸಮ್ಮತಾ । ಸಂವಿತ್ ಸೈವೇಹ ಮೇಯೋಽರ್ಥೋ ವೇದಾನ್ತೋಕ್ತಿ ಪ್ರಮಾಣತಃ॥''** ಹೊರಗಿನ ಪದಾರ್ಥರೂಪವಾದ ಪ್ರಮೇಯಗಳ ವಿಷಯದಲ್ಲಿ ಯಾವ ಫಲರೂಪವಾದ ಅರಿವು ಆಗುತ್ತದೆಯೋ ಅದೇ ವೇದಾಂತಪ್ರಮಾಣಕ್ಕೆ ಪ್ರಮೇಯವಾದ ಅರ್ಥವು -ಎಂಬುದು ಶ್ಲೋಕದ ಅರ್ಥವು. ಲೌಕಿಕವಾದ ವಸ್ತ್ವನುಭವದ ಪರಮಾರ್ಥಸ್ವರೂಪವನ್ನು ನಿರ್ಧರಿಸುವದೇ ಶಾಸ್ತ್ರದ ಉದ್ದೇಶವು ಎಂದು ಹೇಳಿದಂತೆ ಆಯಿತು.

ಆತ್ಮನು ಸದ್ರೂಪನೂ ಚಿದ್ರೂಪನೂ ಆನಂದರೂಪನೂ ಆಗಿರುತ್ತಾನೆ; ಅವನ ಆಭಾಸವು ಅಂತಃಕರಣದಲ್ಲಿ ಹೊಳೆದಾಗ ಅದರ ಸಂಬಂಧದಿಂದಲೇ ವಸ್ತುಗಳು ಸತ್ತು, ಚಿತ್ತು, ಆನಂದ - ಎಂಬ ಹೆಸರಿಗೆ ಗೋಚರವಾಗುತ್ತವೆ. ಹೀಗಿರುವದರಿಂದ ಆತ್ಮನು ನಿತ್ಯಾನುಭವಸ್ವರೂಪನಾಗಿರುತ್ತಾನೆ ; ಆತ್ಮನ ವಿಷಯದಲ್ಲಿ ಹೊಸದಾಗಿ ಅನುಭವವುಂಟಾಗತಕ್ಕದ್ದಿಲ್ಲ. ಏಕೆಂದರೆ ಉಂಟಾದದ್ದು ನಾಶವಾಗಬೇಕಾಗುತ್ತದೆ. ಈ ಗುಟ್ಟನ್ನರಿಯದೆ ಹಿಂದೆ ಪ್ರಸಂಖ್ಯಾನವಾದಿ-ಗಳೆಂಬವರು ಆತ್ಮನ ಅನುಭವವಾಗುವದಕ್ಕಾಗಿ ಜ್ಞಾನವನ್ನು ಮತ್ತೆಮತ್ತೆ ಆವೃತ್ತಿಮಾಡಬೇಕು, ಇಲ್ಲದಿದ್ದರೆ ಜ್ಞಾನವು ದೃಢವಾಗುವದಿಲ್ಲ -ಎಂದು ವಾದಿಸುತ್ತಿದ್ದರು. ಉಪದೇಶಸಾಹಸ್ರಿಯ 'ತತ್ತ್ವಮಸಿ' ಪ್ರಕರಣದಲ್ಲಿ

ಅವರ ಮತವನ್ನು ವಿಸ್ತಾರವಾಗಿ ಖಂಡಿಸಿರುತ್ತದೆ. ''**ವಿಜ್ಞಾತೇರ್ಯಸ್ತು ವಿಜ್ಞಾತಾ ಸ ತ್ವಮಿತ್ಯುಚ್ಯತೇ ಯತಃ, ಸ ಏವಾನುಭವಸ್ತಸ್ಯ ತತೋಽನ್ಯೋಽನುಭವೋ ಮೃಷಾ॥**'' (12-8) ನಮ್ಮ ಆತ್ಮನು ಅರಿವಿಗೂ ಅರಿವಾಗಿ ಅದನ್ನು ಅರಿಯುತ್ತಿರುವವನು; ಇದನ್ನು ತಿಳಿದುಕೊಳ್ಳುವದೇ ಅನುಭವವೇ ಹೊರತು ಇದಕ್ಕಿಂತ ಬೇರೆಯಾದ ಅನುಭವವೊಂದಿದೆ ಎಂಬುದು ಸುಳ್ಳು ಎಂದು ಆಚಾರ್ಯರು ಕಂಠರವದಿಂದ ಹೇಳಿರುತ್ತಾರೆ. ಆದ್ದರಿಂದಲೇ ಗೀತಾಭಾಷ್ಯದಲ್ಲಿ ''ಪರಮಾತ್ಮನು ಅತ್ಯಂತಪ್ರಸಿದ್ಧನು, ಸುವಿಜ್ಞೇಯನು, ಅತ್ಯಂತವಾಗಿ ಹತ್ತಿರವಿರುವವನು, ನಮ್ಮ ಆತ್ಮನೇ ಆಗಿರುತ್ತಾನಾದರೂ ಅವಿವೇಕಿಗಳಿಗೆ ಅಪ್ರಸಿದ್ಧವಾಗಿ, ದುರ್ವಿಜ್ಞೇಯವಾಗಿ, ಅತಿದೂರವಾಗಿ ತಮಗಿಂತ ಬೇರೆಯಾಗಿಯೇ ಇರುವನಾಗಿ ತೋರುತ್ತಿರುತ್ತಾನೆ'' (18-50) ಎಂದು ಅವರು ಹೇಳಿರುತ್ತಾರೆ.

ಈ ಜ್ಞಾನವು ಬರಿಯ ಪುಸ್ತಕಜ್ಞಾನವಲ್ಲ. ಯಾರಿಗೆ ಆತ್ಮನು ಎಲ್ಲಕ್ಕೂ ಸಾಕ್ಷಿಯಾಗಿರುವ ಅನುಭವಸ್ವರೂಪನೆಂದೂ ಅವನನ್ನು ಅರಿಯುತ್ತೇವೆನ್ನುವದೇ ಅಜ್ಞಾನವೆಂದೂ ಮನದಟ್ಟಾಗಿರುವದೋ ಅವರೇ ಈ ಆತ್ಮಾನುಭವನ್ನು ಪಡೆದಿರುವವರು. ಆತ್ಮನು ಅರಿಯುವವನು, ಅರಿವಿಗೆ ವಿಷಯನಲ್ಲ. ಹಿಂದೆ ಕೆಲವರು ವಾದಿಗಳು ವಾಕ್ಯಜ್ಞಾನವು ಸಂಸರ್ಗರೂಪವಾಗಿರುತ್ತದೆ, ಎಂದರೆ ಪದಾರ್ಥಗಳ ಸಂಬಂಧವನ್ನು ಹೇಳುತ್ತದೆ; ಅದನ್ನು ಅಭ್ಯಾಸಮಾಡಿಮಾಡಿ ಅಸಂಸರ್ಗಾತ್ಮಕವಾದ ವಿಶೇಷಾನುಭವವನ್ನು ಹೊಂದಬೇಕು- ಎನ್ನುತ್ತಿದ್ದರು. ಆದರೆ ವಾಕ್ಯದಿಂದಲೇ ಅಖಂಡವಾದ ಅದ್ವೈತಾತ್ಮನ ಜ್ಞಾನವಾಗುತ್ತದೆ, ಅದು ನಿಜವಾದ ಅವಾಕ್ಯಾರ್ಥವೇ ಆಗಿರುತ್ತದೆ ಎಂಬುದನ್ನು ಶ್ರುತಿಯುಕ್ತಿಗಳಿಂದ ಅನುಭವಕ್ಕೆ ಹೊಂದಿಕೆಯಾಗುವಂತೆ ಆಚಾರ್ಯರೂ ವಾರ್ತಿಕಕಾರರೂ ತೋರಿಸಿಕೊಟ್ಟರುತ್ತಾರೆ. ವಾಕ್ಯವು ಸಂಸೃಷ್ಟಾರ್ಥವನ್ನು ಹೇಳುವದೆಂಬುದು ಅನಾತ್ಮವಿಷಯ; ಏಕೆಂದರೆ ಪದಪದಾರ್ಥಗಳ ಸಂಬಂಧಜ್ಞಾನವು ಅಲ್ಲಿ ಅವಶ್ಯವಾಗಿ ಬೇಕು. ನಮ್ಮಗಳ ಆತ್ಮನಾಗಿರುವ ಪರಮಾರ್ಥತತ್ತ್ವವು ಪದವೂ ಅಲ್ಲ, ಪದಾರ್ಥವೂ ಅಲ್ಲ; ಯಾರಿಗೆ ವೇದಾಂತದಲ್ಲಿ ಹೇಳಿರುವ ಸಾಕ್ಷಿಸ್ವರೂಪದಲ್ಲಿ ನಿಲ್ಲುವದಕ್ಕೆ ಬರುತ್ತದೆಯೋ ಅವರಿಗೆ ಈ ಅಭಿಪ್ರಾಯವು ನಿಃಸಂಶಯವಾಗಿ ಗೊತ್ತಾಗುವದು.

ಇದುವರೆಗೆ ಸಾಕ್ಷಿಯ ವಿಚಾರವಾಯಿತು. ಇನ್ನು ಸಾಕ್ಷ್ಯದ ವಿಚಾರ. ಸಾಕ್ಷ್ಯವೆಂದರೆ ಯಾವದು? ಪ್ರಮಾತೃಪ್ರಮಾಣಪ್ರಮೇಯವಾದ ಪ್ರಪಂಚವೆಲ್ಲವೂ ಸಾಕ್ಷ್ಯವೇ. ಈ ಸಾಕ್ಷ್ಯವಾದ ಜಗತ್ತನ್ನು ಆಚಾರ್ಯರು ಸೂತ್ರ ಭಾಷ್ಯದಲ್ಲಿ ಎರಡನೆಯ ಸೂತ್ರದ ವಿವರಣೆಯಲ್ಲಿ ವರ್ಣಿಸಿರುತ್ತಾರೆ. ಪ್ರಮಾಣ ವ್ಯವಹಾರದಿಂದ ಗೊತ್ತಾಗುವ ಈ ಜಗತ್ತು ಆತ್ಮನ ಸ್ವರೂಪವೇ ಎಂದಾಗಲಿ ಅದಕ್ಕಿಂತ ಬೇರೆಯೆಂದಾಗಲಿ ಗೊತ್ತುಪಡಿಸಲು ಅಶಕ್ಯವಾಗಿ ತೋರಿಕೊಳ್ಳುತ್ತಿರುವದು, ಸುಷುಪ್ತಾದಿಗಳಲ್ಲಿ ಅತ್ಯಂತವಾಗಿ ಇಲ್ಲವಾಗುವದು. ಆಗ ನಮ್ಮ ಆತ್ಮನು ಪ್ರಾಜ್ಞನೆಂಬ ಪರಮಾತ್ಮನಲ್ಲಿಯೇ ಒಂದಾಗಿಬಿಡುತ್ತಾನೆ ಎಂದು ಶ್ರುತಿಯು ಹೇಳುತ್ತಿರುವದು. ಪ್ರತಿದಿನವೂ ಅದ್ವಿತೀಯ ಪರಮಾತ್ಮನಲ್ಲಿಯೇ ಸೇರಿ ಒಂದಾದರೂ ಜನರು ಈ ತತ್ತ್ವವನ್ನು ಅರಿಯದಿರುವರಲ್ಲ ಎಂದು ಶ್ರುತಿಯು ಮರುಕದಿಂದ ಈ ಸಾಕ್ಷಿಯ ಅದ್ವಿತೀಯತ್ವವನ್ನು ಮತ್ತೆಮತ್ತೆ ಹೇಳುತ್ತದೆ. ಸಾಕ್ಷ್ಯವು ತೋರದೆ ಇರುವ ಸುಷುಪ್ತ್ಯಾದಿಗಳಲ್ಲಿ ಅದ್ವೈತವು ಅನುಭವಕ್ಕೆ ಬರುತ್ತದೆ. ಅದು ತೋರಿಕೊಳ್ಳುವಾಗಲೂ ಆತ್ಮನಿಗಿಂತ ಬೇರೆ ಎಂದಾಗಲಿ ಆತ್ಮನೇ ಎಂದಾಗಲಿ ಹೇಳುವದಕ್ಕೆ ಬಾರದಂಥದ್ದಾಗಿರುತ್ತದೆಯಾದ್ದರಿಂದ ಅದನ್ನು ಆತ್ಮನಿಗೆ ಎರಡನೆಯದು ಎನ್ನುವದಕ್ಕೆ ಬರುವದಿಲ್ಲ, ಅದರಲ್ಲಿಯೇ ದೇಶಕಾಲಗಳೂ ಅಡಕವಾಗಿರುವದರಿಂದ ದೇಶಕಾಲಗಳ ಅಪೇಕ್ಷೆಯಿರುವ ಸಂಖ್ಯೆಯನ್ನು ಅದಕ್ಕಾಗಲಿ ದೇಶಕಾಲಾತೀತನಾದ ಆತ್ಮನಿಗಾಗಲಿ ಧರ್ಮವೆಂದು ಎಣಿಸುವದಕ್ಕೆ ಯುಕ್ತಿಯೂ ಇರುವದಿಲ್ಲ. ಇದನ್ನೇ ''ನ ಚೈಕಂ ದ್ವಿತೀಯಂ ಕುತಃ ಸ್ಯಾತ್'' ಒಂದೇ ಅಲ್ಲ, ಅದಕ್ಕೆ ಎರಡನೆಯದೆಲ್ಲಿದ್ದೀತು? - ಎಂಬ ವಚನವು ಹೇಳುತ್ತಿದೆ. ಹೀಗೆ ಸಾಕ್ಷಿಗೆ ಸಂಖ್ಯೆಯು ಹೇಗೂ ಹೊಂದುವಂತಿಲ್ಲವಾದ್ದರಿಂದ ಜೀವಸಾಕ್ಷಿ, ಈಶ್ವರಸಾಕ್ಷಿ - ಎಂದು ಮುಂತಾಗಿ ಸಾಕ್ಷಿ ನಾನಾತ್ವವನ್ನು ಹೇಳುವ ಈಚಿನ ವೇದಾಂತಿಗಳ ಅಭಿಪ್ರಾಯವು ಅನುಭವಕ್ಕೂ ''ಏಕೋ ದೇವಃ'' ಮುಂತಾದ ಶ್ರುತಿಗೂ ವಿರುದ್ಧವಾಗಿರುತ್ತದೆ ಎಂದು ತಿಳಿಯಬೇಕು. ಹೀಗೆ ಸಾಕ್ಷಿರೂಪನಾದ ಆತ್ಮನು ಅದ್ವಿತೀಯನೇ ಎಂಬುದು ನಿರ್ವಿವಾದವಾಗಿರುತ್ತದೆ.

★★★★★

# ಸುಷುಪ್ತಿಪರೀಕ್ಷೆಯ ಪ್ರಯೋಜನ

**22-5-1953**

**ಶ್ರೀಶ್ರೀಗಳವರು**

ಶಾಸ್ತ್ರಪ್ರಾಮಾಣ್ಯವು ಹೇಗೆ ಸಿದ್ಧಿಸುತ್ತದೆ ಎಂಬುದನ್ನು ತಿಳಿಸಿದ್ದಾಯಿತು. ಸ್ವತಃಸಿದ್ಧವಾದ ಅದ್ವಿತೀಯಾತ್ಮರೂಪವಾಗಿರುವ ಪರಮಾರ್ಥದ ವಿಷಯಕ್ಕಿರುವ ವಿಪರೀತಜ್ಞಾನವನ್ನು ಕಳೆಯುವದೇ ಶಾಸ್ತ್ರದ ಕೃತ್ಯವು. ಹಾಗಾದರೆ ಶಾಸ್ತ್ರ, ಶಿಷ್ಯ, ಶಾಸ್ಯ -ಎಂಬ ಭೇದವು ಹೇಗೆ ತೊಲಗುವದು? ಈ ಜ್ಞಾನವನ್ನು ಮತ್ತೊಂದು ಪ್ರಮಾಣವು ಕಳೆಯಬೇಕಾದೀತಲ್ಲವೇ ? - ಎಂಬ ಶಂಕೆಗೆ ಪರಿಹಾರವಾಗಿ ಶಾಸ್ತ್ರವು ಪ್ರಮಾಣವ್ಯವಹಾರವನ್ನೇ ಆವಿದ್ಯಕವೆಂದು ತೋರಿಸಿ ತಾನೂ ಅಪ್ರಮಾಣವಾಗಿ ಬಿಡುತ್ತದೆ; ಆದ್ದರಿಂದ ಇದೇ ಅಂತ್ಯಪ್ರಮಾಣವು ಎಂಬ ಪರಿಹಾರವನ್ನು ಹೇಳಿದ್ದಾಯಿತು. ಸುಷುಪ್ತಿಯನ್ನು ವರ್ಣಿಸುವಾಗ ಆ ಅವಸ್ಥೆಯಲ್ಲಿ ಆತ್ಮನು ಅದ್ವಿತೀಯಬ್ರಹ್ಮವೇ ಆಗಿರುತ್ತಾನೆ; ಅಲ್ಲಿ ಯಾವದ್ವೈತವೂ ಇಲ್ಲದ್ದರಿಂದಲೇ ವಿಶೇಷಜ್ಞಾನವಾಗುವದಿಲ್ಲ -ಎಂದು ಶ್ರುತಿಯು ಸಾರುತ್ತಿದೆ ಎಂಬುದನ್ನು ತಿಳಿಸಿ ಹೀಗೆ ಶ್ರುತಿಬೋಧಿತವಾದ ಅರ್ಥವು ಅನುಭವ ಸಮ್ಮತವಾಗಿದೆ ಎಂಬುದನ್ನು ತಿಳಿಸಿದ್ದಾಯಿತು. ಹೀಗೆ ಶಾಸ್ತ್ರಾರ್ಥವು ಅನುಭವದ ಆಧಾರದ ಮೇಲೆ ನಿಂತಿದೆ ಎಂದು ತಿಳಿಸಿದ ಮೇಲೆ ಯಾವ ಶಂಕೆಯೂ ಬರುವಂತಿಲ್ಲವಾದರೂ ಶ್ರದ್ಧಾಲುಗಳಾದವರು ಇದು ಆಚಾರ್ಯರ ಸ್ವಕಪೋಲ ಕಲ್ಪಿತವು, ಇದಕ್ಕೆ ವೇದಾಧಾರವೇ ಇಲ್ಲ - ಎಂದು ಶಂಕಿಸಬಹುದು. ಈ ಶಂಕೆಗೆ ಶಂಕರಾಚಾರ್ಯರು ಯಾವ ಸಮಾಧಾನವನ್ನು ಹೇಳಿರುತ್ತಾರೆ ಎಂಬುದನ್ನು ಈಗ ತಿಳಿಸುವದಕ್ಕೆ ಹೊರಡುವೆನು.

ವೇದಕ್ಕೆ ಬಗೆಬಗೆಯ ಅರ್ಥಗಳನ್ನು ಕಲ್ಪಿಸುವವರು ಆಚಾರ್ಯರ ಕಾಲಕ್ಕೂ ಅವರ ಹಿಂದಿನ ಕಾಲಕ್ಕೂ ಇದ್ದರು, ಇಂಥ ಕೆಲವರ ಅಭಿಪ್ರಾಯಗಳನ್ನು ಆಗಲೆ ಪ್ರಸಂಗವಶದಿಂದ ಹೇಳಿರುತ್ತೇನೆ: ವಾಕ್ಯವನ್ನು ಅಭ್ಯಾಸ ಮಾಡಿದ ಮೇಲೆಯೇ ಅಜ್ಞಾನವು ಪೂರ ಹೋಗುವದು; ಅಥವಾ ಹೊಸದೊಂದು

ಸಾಕ್ಷಾತ್ಕಾರರೂಪವಾದ ಜ್ಞಾನವುಂಟಾಗಿ ಅಜ್ಞಾನವನ್ನು ತೊಲಗಿಸುವದು- ಎಂಬ ವಾದಿಗಳು ಕೆಲವರು. ಪ್ರಪಂಚವನ್ನೆಲ್ಲ ಪ್ರವಿಲಯವನ್ನು ಮಾಡಿಕೊಳ್ಳಬೇಕು. ಆತ್ಮನಲ್ಲಿ ತೋರುವ ಪ್ರಪಂಚವು ಅಥವಾ ಭೇದವು ಪರಮಾರ್ಥಪ್ರಾಪ್ತಿಗೆ ಅಡ್ಡಿಯಾಗಿರುತ್ತದೆ. ಶತ್ರುಗಳನ್ನು ನಾಶಗೊಳಿಸದೆ, ಸಮಸ್ತ ಭೂಮಂಡಲದ ಸಿರಿಯನ್ನು ವಶಗೊಳಿಸಿಕೊಳ್ಳದೆ ಇದ್ದವನಿಗೆ ಹೇಗೆ ಬರಿಯ ಚಕ್ರವರ್ತಿ ಎಂಬ ಹೆಸರಿನಿಂದಲೇ ಸಾರ್ವಭೌಮತ್ವವು ಬರಲಾರದೋ ಹಾಗೆ ದೃಶ್ಯವಿಲಯವನ್ನು ಮಾಡಿಕೊಂಡು ಆತ್ಮತತ್ತ್ವವನ್ನು ಅರಿತುಕೊಂಡಲ್ಲದೆ ಬರಿಯ ವಾಕ್ಯದಿಂದ ಎಂದಿಗೂ ಮುಕ್ತಿಯಾಗಲಾರದು ಎಂಬ ವಾದಿಗಳು ಕೆಲವರು. ನೆಲದ ಕೆಳಗೆ ಹೂತಿರುವ ನಿಕ್ಷೇಪವನ್ನು ಬಲ್ಲವರ ಉಪದೇಶ, ಅಗೆಯುವದು, ಹಾಸುಗಲ್ಲು ಮುಂತಾದದ್ದನ್ನು ತೆಗೆದುಹಾಕುವದು - ಮುಂತಾದ ಉಪಾಯಗಳಿಂದಲೇ ಹೇಗೆ ಪಡೆಯಬೇಕಾಗಿರುವದೋ ಹಾಗೆ ಸದ್ಗುರುವಿನ ಉಪದೇಶ, ಮನನ, ಧ್ಯಾನ, ಸಮಾಧಿ -ಎಂಬ ಉಪಾಯ-ಗಳಿಂದಲೇ ತತ್ತ್ವವು ದೊರಕೀತೇ ಹೊರತು ಸುಮ್ಮನೆ ವಾಕ್ಯಮಾತ್ರದಿಂದ ದೊರಕಲಾರದು ಎಂಬವರು ಮತ್ತೆ ಕೆಲವರು. ತತ್ತ್ವವನ್ನು ತನ್ನೊಳಗೂ ಹೊರಗೂ ಕಂಡುಕೊಂಡು ತತ್ತ್ವನಿಷ್ಠೆಯಿಂದ ಜಾರದಂತೆ ನೋಡಿಕೊಳ್ಳಬೇಕು; ಇಲ್ಲದಿದ್ದರೆ ಪರಮಾರ್ಥದ ಪ್ರಾಪ್ತಿಯಾಗಲಾರದು - ಎಂಬವರು ಇನ್ನೂ ಕೆಲವರು. ವೇದಾಂತವಾಕ್ಯಗಳು ಉಪಾಸನೆಯನ್ನೇ ಹೇಳುತ್ತವೆ; ವಸ್ತುವಾಕ್ಯಗಳೆಲ್ಲ ಅವಕ್ಕೆ ಶೇಷ -ಎಂದು ವಾಕ್ಯಕ್ಕೆ ಉಪಾಸನೆಯಲ್ಲಿ ತಾತ್ಪರ್ಯವನ್ನು ಕಲ್ಪಿಸುವವರೂ ಕೆಲವರಿದ್ದರು. ಹೀಗೆಲ್ಲ ವೇದಾಂತಿಗಳು, ಅದ್ವೈತಿಗಳು - ಎಂದು ಕರೆಯಿಸಿಕೊಳ್ಳುತ್ತಿದ್ದವರೇ ಆಗಿನ ಕಾಲಕ್ಕೆ ವೇದಾಂತವಾಕ್ಯಕ್ಕೆ ಬಗೆಬಗೆಯ ಅರ್ಥವನ್ನು ಮಾಡುತ್ತಿದ್ದರು.

ಈಗಿನ ಕಾಲದಲ್ಲಿಯೂ ವೇದಪ್ರಾಮಾಣ್ಯವನ್ನು ಒಪ್ಪಿ ಪರಮಾತ್ಮನ ಉಪಾಸನೆಯಿಂದಲೇ ಅಥವಾ ಯೋಗಾಭ್ಯಾಸದಿಂದಲೇ ಪರಮಾರ್ಥವನ್ನು ಮುಟ್ಟಬೇಕಾಗಿರುತ್ತದೆ ಎಂದು ವಾದಿಸುವವರು ಇರುತ್ತಾರೆ. ಮುಕ್ತಿಯ ಸ್ವರೂಪದ ವಿಷಯದಲ್ಲಿಯೂ ಮತಭೇದಗಳಿರುತ್ತವೆ. ಇವರೆಲ್ಲರನ್ನೂ ಒತ್ತಲಿಸಿ ಶಾಂಕರಮತವನ್ನೇ ನಾವು ಹೇಗೆ ನಂಬುವದು ? -ಎಂಬ ಜಿಜ್ಞಾಸುಗಳೂ ಉಂಟು.

ಇಂಥ ವಾದಿಗಳಿಗೆಲ್ಲ ಉಪಾಸನೆಯು ಅಥವಾ ಮಾನಸಧ್ಯಾನವು ಬಹು ಮುಖ್ಯವಾಗಿರುತ್ತದೆ. ಇಂಥವರ ಮತವನ್ನು ಶ್ರೀಗೌಡಪಾದರು ವಿಮರ್ಶಿಸಿ- ''ಉಪಾಸನೆಯನ್ನಾಶ್ರಯಿಸಿದವನು ಜಾತಬ್ರಹ್ಮದಲ್ಲಿರುತ್ತಾನೆ. ಹಿಂದೆ ಅಜಾತ ಬ್ರಹ್ಮವಿತ್ತು, ಈಗ ನಾನು ಆ ಬ್ರಹ್ಮದಿಂದ ಹುಟ್ಟಿರುವೆನು, ಉಪಾಸನೆಯನ್ನು ಮಾಡಿ ಆ ಬ್ರಹ್ಮವನ್ನು ಸೇರುವೆನು- ಎಂಬುದೇ ಉಪಾಸನಾವಾದಿಯ ಅಭಿಪ್ರಾಯ. ಆದರೆ ಎಂಥ ಕಾರ್ಪಣ್ಯವದು!'' ಎಂದು ಮರುಕವನ್ನು ತೋರಿಸಿರುತ್ತಾರೆ. ವೇದವು ತತ್ತ್ವಮಸಿ- ಈಗಲೇ ನೀನು ಬ್ರಹ್ಮವಾಗಿರುತ್ತೀಯೆ- ಎನ್ನುತ್ತಿದೆಯೇ ಹೊರತು ನೀನು ಸತ್ತಬಳಿಕ ಬ್ರಹ್ಮವಾಗುವೆ, ಧ್ಯಾನದಿಂದ ಬ್ರಹ್ಮವನ್ನು ಪಡೆಯುವೆ ಎಂದೇನೂ ತಾತ್ಪರ್ಯದಿಂದ ಹೇಳುವದಿಲ್ಲ. ಈ ಗುಟ್ಟನ್ನು ತಿಳಿದುಕೊಳ್ಳುವದಕ್ಕೆ ಜಿಜ್ಞಾಸುಗಳಿಗಿರುವ ಮುಖ್ಯವಾದ ಅಡ್ಡಿ ಏನೆಂದರೆ ಶ್ರುತಿಯಲ್ಲಿ ಪರಮೇಶ್ವರನಿಗೆ ಆಕಾರವನ್ನೂ ವರ್ಣಿಸಿರುವ ವಾಕ್ಯಗಳಿವೆ ; ಈ ನನ್ನ ಆತ್ಮನನ್ನು ನಾನು ಸತ್ತ ಬಳಿಕ ಇಲ್ಲಿಂದ ಹೋಗಿ ಸೇರುವೆನು -ಎಂಬ ಸ್ಪಷ್ಟೋಕ್ತಿಗಳೂ ಇವೆ. ಆದ್ದರಿಂದ ತತ್ತ್ವಮಸಿ ಮುಂತಾದ ವಾಕ್ಯಗಳಿಗೆ ಗೌಣಾರ್ಥವನ್ನು ಹೇಳಬೇಕೊ, ಏನೊ! -ಎಂಬ ಶಂಕೆಯು ಉಂಟಾಗುತ್ತದೆ. ಆದರೆ ನಿಜವೇನೆಂದರೆ ಉಪಾಸನಾವಾಕ್ಯಗಳು ಉಪಾಸನಾವಿಧಿಪರವಾಗಿರುತ್ತವೆ, ಬ್ರಹ್ಮಸ್ವರೂಪಪ್ರತಿಪಾದನಪರವಲ್ಲ; ವಸ್ತುಬೋಧಕವಾದ ಅಸ್ಥೂಲಮನಣು, ತತ್ತ್ವಮಸಿ- ಮುಂತಾದ ವಾಕ್ಯಗಳು ವಸ್ತುತತ್ತ್ವವನ್ನು ಹೇಳುವದಕ್ಕೆ ಬಂದಿರುತ್ತವೆ. ಆದ್ದರಿಂದ ಈ ಎರಡು ವಾಕ್ಯಗಳಿಗೂ ಏಕವಾಕ್ಯತೆ ಮಾಡುವದಕ್ಕೆ ಬರುವದಿಲ್ಲ. ಉಪಾಸನೆಯಿಂದ ಪಡೆಯುವ ಫಲವು ಕರ್ಮದಿಂದಾಗುವ ಸ್ವರ್ಗಾದಿಗಳಂತೆ ಅಭ್ಯುದಯ ರೂಪವಾಗಿರುತ್ತದೆ; ಅಥವಾ ಕ್ರಮ ಮುಕ್ತಿಗೆ ದ್ವಾರವಾಗಿರುತ್ತದೆ. ಉಪಾಸಕ, ಉಪಾಸನೆ, ಉಪಾಸ್ಯ -ಎಂಬ ಭೇದವಾಗಲಿ, ಕ್ರಿಯಾಕಾರಕಫಲರೂಪವಾದ ಭೇದವಾಗಲಿ ಸತ್ಯವೆ, ಅಲ್ಲವೆ? -ಎಂಬುದನ್ನು ಉಪಾಸನಾವಾಕ್ಯವು ಚರ್ಚಿಸುವದೇ ಇಲ್ಲ. ಆದರೆ ಬ್ರಹ್ಮವಸ್ತುಜ್ಞಾನವಾಕ್ಯವು 'ಪ್ರಪಂಚವೆಲ್ಲವೂ ತನ್ನ ರೂಪದಿಂದ ಹುಸಿ, ಅದು ಪರಮಾರ್ಥವಾಗಿ ಬ್ರಹ್ಮವೇ, ಆ ಬ್ರಹ್ಮವೇ ನಮ್ಮ ಆತ್ಮನು'- ಎಂದು ಸ್ಪಷ್ಟವಾಗಿ ಯುಕ್ತ್ಯನುಭವಗಳಿಂದ ಬೋಧಿಸುತ್ತಿದೆ. ಈ ಜ್ಞಾನವುಂಟಾದ ಮೇಲೆ ಮತ್ತೆ ಭೇದವು ಇರುವದೇ ಇಲ್ಲ; ಆಗ ಕಾಮಕರ್ಮಗಳೂ ಇರುವದಿಲ್ಲ.

ಆದ್ದರಿಂದ ಜ್ಞಾನವಾಕ್ಯಗಳನ್ನು ಉಪಾಸನಾವಾಕ್ಯಗಳಿಗೆ ಅಂಗವಾಗಿ ಮಾಡುವದಕ್ಕೆ ಬರುವದಿಲ್ಲ. ಇವನ್ನು ಆಚಾರ್ಯರು ಸೂತ್ರಭಾಷ್ಯದಲ್ಲಿ ವಿಸ್ತಾರವಾಗಿ ವಿಶದಗೊಳಿಸಿರುತ್ತಾರೆ.

ಜ್ಞಾನವು ವೇದವಾಕ್ಯದಿಂದ ಕೆಲವರಿಗೆ ಆಗುವದಿಲ್ಲ; ಕೆಲವರಿಗೆ ಏನೋ ಮಸಕುಮಸಕಾಗಿ ತಿಳಿದಂತೆ ಆಗುತ್ತದೆಯೇ ಹೊರತು ಅದರಲ್ಲಿಯೇ ಚಿತ್ತವು ಸ್ಥಿರವಾಗಿ ನಿಲ್ಲುವದಿಲ್ಲ. ಇದಕ್ಕೆ ಕಾರಣವೇನೆಂದರೆ ಅಂತಃಕರಣಗಳೂ ಇಂದ್ರಿಯಗಳೂ ಸಂಸ್ಕಾರರಹಿತವಾಗಿರುವದೇ. ಯಜ್ಞ, ದಾನ, ತಪಸ್ಸು, ಭಗವನ್ನಾಮಗ್ರಹಣ - ಇವೆಲ್ಲ ಚಿತ್ತಶುದ್ಧಿಗೆ ಕಾರಣವಾಗುತ್ತವೆ; ಧ್ಯಾನವು ಅಂತಃಕರಣವು ಮಲವಿಕ್ಷೇಪರಹಿತವಾಗುವಂತೆ ಮಾಡುತ್ತದೆ. ಭಗವದ್ಗೀತಾಭಾಷ್ಯದಲ್ಲಿ ಆಚಾರ್ಯರು ಇದನ್ನು ಸ್ಪಷ್ಟಪಡಿಸಿರುತ್ತಾರೆ. ಶಮದಮಾದಿಗಳಿಂದೊಡಗೂಡಿ ಶ್ರವಣಮನನನಿದಿಧ್ಯಾಸನಗಳನ್ನು ಮಾಡಿದರೆ ಅವಶ್ಯವಾಗಿ ವೇದಾಂತವಾಕ್ಯದಲ್ಲಿ ಹೇಳಿರುವ ಜ್ಞಾನವೂ ಜ್ಞಾನನಿಷ್ಠೆಯೂ ದೊರಕುವದು. ಆದ್ದರಿಂದ ಈ ಸಾಧನಗಳು ಜ್ಞಾನಕ್ಕೆ ಪರಂಪರೆಯಾಗಿ ಅಥವಾ ನೇರಾಗಿ ಉಪಾಯವಾಗಿರುವದರಿಂದ ಅವಶ್ಯವಾಗಿ ಇವುಗಳನ್ನು ಮಾಡಿ ಜ್ಞಾನಕ್ಕೆ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಬೇಕು.

ನಿನ್ನೆಯ ದಿನ ಹೇಳಿದ್ದರಲ್ಲಿ ಸಾಕ್ಷಿಚೈತನ್ಯವಾದ ಆತ್ಮನನ್ನು ಬಿಟ್ಟು ಬೇರೆಯಾಗಿ ಇರಲೇ ಅರದೆಂದೂ ಸುಷುಪ್ತಿಯಲ್ಲಿ ಆತ್ಮನಲ್ಲಿಯೇ ಅಡಕವಾಗಿ ಬಿಡುವದೆಂದೂ ತಿಳಿಸಲಾಗಿತ್ತು. ಹೀಗಿದ್ದ ಮೇಲೆ ಸುಷುಪ್ತಿಯಲ್ಲಿಯೇ ಮೋಕ್ಷವಾಗುವದೆಂದಾಯಿತಲ್ಲ! ಸುಷುಪ್ತಿಯಿಂದ ಮತ್ತೆ ಎಚ್ಚರುವದೂ ಉಂಟಾದದ್ದರಿಂದ ಮೋಕ್ಷವು ಸಿಕ್ಕಿದಮೇಲೂ ಸಂಸಾರಕ್ಕೆ ಮರಳಿಬರಬಹುದೆಂದಾಯಿತಲ್ಲ! -ಎಂದು ಕೆಲವರು ಶಂಕಿಸಬಹುದು. ಆದರೆ ನಿಜವನ್ನು ಚೆನ್ನಾಗಿ ಅರಿತುಕೊಳ್ಳದ್ದರಿಂದ ಈ ಶಂಕೆಯುಂಟಾಗುತ್ತದೆ. ಏಕೆಂದರೆ ಸುಷುಪ್ತಿಯಲ್ಲಿ ಇಲ್ಲವಾದ ಪ್ರಪಂಚವು ಜಾಗ್ರತ್ಸ್ವಪ್ನಗಳಲ್ಲಿ ಮತ್ತೆ ಎದ್ದುಕೊಳ್ಳುತ್ತದೆ ಎಂದೇನೂ ವೇದಾಂತಿಗಳು ಹೇಳುವದಿಲ್ಲ. ಅದ್ವಿತೀಯಾತ್ಮನಲ್ಲಿ ಎಂದಿಗೂ ಇಲ್ಲದ ಮೂರು ಅವಸ್ಥೆಗಳನ್ನೂ ಕಲ್ಪಿಸಿ ಜನರು ವ್ಯವಹಾರ ಮಾಡುತ್ತಿರುತ್ತಾರೆ ; ನಿಜವಾಗಿ ಎಂದೆಂದಿಗೂ ಆತ್ಮನು ಅದ್ವಿತೀಯನೇ ಆಗಿರುತ್ತಾನೆ

ಎಂಬುದು ವೇದಾಂತಿಗಳ ಮತ. ಪ್ರಪಂಚವು ಎಂಬಿದು ಬರಿಯ ಹೆಸರು; ಮಡಕೆ ಎಂಬುದು ಬರಿಯ ಮಣ್ಣೇ ಆಗಿರುವಂತೆ ಸಾಕ್ಷ್ಯವಾದ ಪ್ರಪಂಚವು ನಿಜವಾಗಿ ಸಾಕ್ಷಿಯಾದ ಆತ್ಮನೇ. ಇದು ಸುಷುಪ್ತಿಯ ಪರೀಕ್ಷೆಯಿಂದ ಇನ್ನಷ್ಟು ನಿಶ್ಚಯವಾಗುತ್ತದೆ ಎಂಬುದೇ ಇಲ್ಲಿ ತಿಳಿಯಬೇಕಾದದ್ದು.

★★★★★

## ಶ್ರುತ್ಯನುಗೃಹೀತ ತರ್ಕ

**23-5-1953**

**ಶ್ರೀ ಶ್ರೀಗಳು**

ಆತ್ಮವಸ್ತು ಸ್ವಯಂಸಿದ್ಧವಾಗಿರುವದೆಂದೂ ಅದಕ್ಕೆ ಯಾವ ಪ್ರಮಾಣದ ಬಯಕೆಯೂ ಇಲ್ಲವೆಂದೂ ಈವರೆಗೆ ಹೇಳಿದ್ದಾಗಿದೆ. ಆತ್ಮನು ಸಾಕ್ಷಿರೂಪದಿಂದಿರುವದರಿಂದ ದೇಶಕಾಲಾದಿಗಳಿಗೂ ಸಾಕ್ಷಿಯಾಗಿರುತ್ತಾನೆ; ಸಾಕ್ಷ್ಯವಾಗಿರುವ ಪ್ರಪಂಚದೊಳಗೇ ದೇಶಕಾಲಗಳು ಸೇರಿರುತ್ತವೆ; ಆದ್ದರಿಂದ ಸಾಕ್ಷಿಯನ್ನು ಒಂದೆಂದಾಗಲಿ ಸಾಕ್ಷ್ಯವನ್ನು ಎರಡನೆಯದೆಂದಾಗಲಿ ಎಣಿಸುವದಕ್ಕೆ ಬರುವದಿಲ್ಲ ಎಂಬ ಯುಕ್ತಿಯೊಂದನ್ನು ಹೇಳಿದ್ದಾಗಿದೆ. ಆದರೂ ಜನರು ತಾರ್ಕಿಕಬುದ್ಧಿಯನ್ನವಲಂಬಿಸಿ ಈ ಅನುಭವಸಿದ್ಧವಿಷಯವನ್ನೂ ಆಕ್ಷೇಪಿಸಿರುತ್ತಾರೆ.

ಆಚಾರ್ಯರು ತಮ್ಮ ಪ್ರಸ್ಥಾನತ್ರಯಭಾಷ್ಯದಲ್ಲಿ ತಾರ್ಕಿಕರನ್ನು ಅಲ್ಲಲ್ಲಿ ಖಂಡನೆಮಾಡಿರುತ್ತಾರೆ. ಅದಕ್ಕೆ ತರ್ಕಮಾತ್ರವನ್ನೇ ಕೈಬಿಡಬೇಕೆಂಬ ಅಭಿಪ್ರಾಯವೇನೂ ಇಲ್ಲ; ದುಸ್ತರ್ಕವನ್ನು, ಅನುಭವಕ್ಕೆ ಹೊಂದದ ತರ್ಕವನ್ನು, ಕೈಬಿಡಬೇಕು -ಎಂಬುದೇ ಉದ್ದೇಶ. ತಾರ್ಕಿಕಬುದ್ಧಿಯವರು ಅವಲಂಬಿಸಿರುವ ಕೆಲವು ಸದೋಷಪ್ರಕ್ರಿಯೆಗಳನ್ನು ಇಲ್ಲಿ ಪ್ರಸ್ತಾಪಿಸುವೆನು.

ಕಾಲವು ಸರ್ವಾಧಾರ- ಎಂಬುದೊಂದು ದುಸ್ತರ್ಕ. ಈ ತರ್ಕವನ್ನು ಯಾರು ಉಪಯೋಗಿಸಿದರೂ ಕುತರ್ಕವನ್ನು ಆಶ್ರಯಿಸಿದಂತೆ ಆಗುತ್ತದೆ. ಆತ್ಮನಿಗೆ ಕಾಲವು ಆಧಾರವೆಂದರೆ ಯಾರಿಗಾದರೂ ನಗೆ ಬರುತ್ತದೆ. ವಿಷಯಿಯಾದ ಆತ್ಮನಿಗೆ ವಿಷಯವಾಗಿರುವ ಕಾಲವು ಆಧಾರವೆಂದರೇನು? ಸುಷುಪ್ತಾತ್ಮನಿಗೆ ಕಾಲದ ಹಂಗಿದೆಯೆ? ಇದನ್ನು ನಾವು ಆಲೋಚಿಸಬೇಕು. ಪ್ರಪಂಚಕ್ಕೆ ಕಾಲವು ಆಧಾರವೆಂಬುದೂ ಹೀಗೆಯೇ ಕುತರ್ಕವು; ಏಕೆಂದರೆ ಕಾಲಸಹಿತವಾಗಿರುವದೇ ಪ್ರಪಂಚ, ಕಾಲಕ್ಕೆ ಆಧಾರವಾಗಿರುವ ಮತ್ತೊಂದು ಕಾಲವನ್ನು ಎಲ್ಲಿಂದ ತರೋಣ? ಆದ್ದರಿಂದ ಆತ್ಮನ ಅದ್ವಿತೀಯತ್ವದ ವಿಷಯದಲ್ಲಿ ತರುವ ಈ ತರ್ಕದ ಆಕ್ಷೇಪವನ್ನು ನಾವು ಅಸಡ್ಡೆಮಾಡಬೇಕು. ಹೀಗೆಯೇ ಆತ್ಮನಿಗೆ ದೇಶದ ಕಟ್ಟೂ ಇರುವದಿಲ್ಲ; ದೇಶವು ಪ್ರಪಂಚದೊಳಗೇ ಸೇರಿರುತ್ತದೆ. ಆದ್ದರಿಂದ ದೇಶಕೃತಸಂಖ್ಯೆಯೂ ಆತ್ಮನಿಗಿಲ್ಲ.

ಸಾಕ್ಷಿಗೆ ಸಾಕ್ಷ್ಯವು ಕಾಣಿಸುತ್ತದೆಯಷ್ಟೆ; ಆದ್ದರಿಂದ ಸಾಕ್ಷಿಯು ಸದ್ವಿತೀಯವಾಯಿತು- ಎಂಬ ಯುಕ್ತಿಯೂ ಕುಯುಕ್ತಿ. ಏಕೆಂದರೆ ಸಾಕ್ಷಿಯಲ್ಲಿಯೇ ನಿಂತು ನೋಡುವವರಿಗೆ ದ್ವಿತೀಯವಸ್ತು ಕಾಣಿಸುವದೇ ಇಲ್ಲ. ಮನಸ್ಸಿನಿಂದೊಡಗೂಡಿದ ಪ್ರಮಾತೃವಿಗೆ ಪ್ರಮೇಯವು ಕಾಣಿಸುತ್ತದೆ ಎನ್ನಬಹುದು; ಆದರೆ ಪ್ರಮಾತೃವಿಗಿಂತಲೂ ವಿಲಕ್ಷಣವಾಗಿರುವ ಸಾಕ್ಷಿಗೆ ಇನ್ನೊಂದು ಕಾಣಿಸುವದೆಂದರೇನು? ಪ್ರತಿಬಿಂಬದ ಧರ್ಮವನ್ನು ಬಿಂಬಕ್ಕೆ ಹಾಕುವವರಂತೆ ಅಧ್ಯಸ್ತವಾಗಿರುವ ಪ್ರಮಾತ್ರಾದಿಪ್ರಪಂಚವನ್ನೂ ಆತ್ಮನಿಗೆ ಸೇರಿಸಿಕೊಂಡದ್ದರಿಂದಾದ ದುಷ್ಪರಿಣಾಮವೇ ಇದಲ್ಲವೆ? ಸರ್ಪವನ್ನು ಕರಗಿಸಿಯೇ ಹಗ್ಗವನ್ನು ನೋಡಬೇಕಲ್ಲದೆ, ಹಗ್ಗವನ್ನು ಕಂಡೂ ಅದರಲ್ಲಿ ಕಲ್ಪಿತವಾಗಿದ್ದ ಸರ್ಪವನ್ನು ಮತ್ತೆ ಕಾಣುವದೆಂಬುದು ಆಗದ ಸಾಹಸ. ಹಗ್ಗದ ಅರಿವಾದಮೇಲೂ ಅದು ಹಾವಿನಂತೆ ಕಾಣಬಹುದಲ್ಲ! - ಎಂದರೆ ಅದು ಹಾವಿನಂತೆ, ಹಾವಲ್ಲ - ಎಂಬ ಉತ್ತರವನ್ನು ಕೊಡಬಹುದಾಗುತ್ತದೆ. ನಿಜವಾದ ಆತ್ಮಸ್ವರೂಪದಲ್ಲಿ ಪ್ರಪಂಚವು ಇರುವದು ಸಾಧ್ಯವೇ ಇಲ್ಲ.

ದ್ರವ್ಯಗುಣಕರ್ಮಾದಿಗಳು ಆರು ಪದಾರ್ಥಗಳು ಎಂಬುದೊಂದು ಕುತರ್ಕವು. ಆತ್ಮನಲ್ಲಿ ಇಂಥಿಂಥ ಗುಣಕರ್ಮಗಳಿವೆ ಎಂಬುದೂ ಅದರಂತೆ ಕುತರ್ಕವೇ. ದ್ರವ್ಯಕ್ಕಿಂತ ವ್ಯತಿರಿಕ್ತವಾಗಿ ಯಾವ ಗುಣಾದಿಗಳನ್ನೂ ಯಾವ

ತಾರ್ಕಿಕನೂ ತೋರಿಸಲಾರನು; ಆತ್ಮನಿಗಿಂತ ವ್ಯತಿರಿಕ್ತವಾದ ಗುಣಾದಿಗಳನ್ನೂ ಹೀಗೆಯೇ ತೋರಿಸುವದಕ್ಕೆ ಬರುವುದಿಲ್ಲ. ದ್ರವ್ಯವನ್ನೇ ಗುಣಾದಿಗಳೆಂದು ಹೀಗೆಯೇ ತೋರಿಸುವದಕ್ಕೆ ಬರುವದಿಲ್ಲ. ದ್ರವ್ಯವನ್ನೇ ಗುಣಾದಿಗಳೆಂದು ವಿಕಲ್ಪಿಸುವಂತೆ ಆತ್ಮನನ್ನೇ ಮನಾದಿಗಳೆಂದು ವಿಕಲ್ಪಿಸುತ್ತಿದ್ದಾರೆ; ಗಾಢನಿದ್ರೆಯೇ ಮುಂತಾದ ಅವಸ್ಥೆಗಳಲ್ಲಿ ಯಾವ ಅನಾತ್ಮವೂ ಇರುವದಿಲ್ಲ. ಆದ್ದರಿಂದ ಆತ್ಮನು ನಿರ್ಗುಣನೇ ಎಂದು ಅರಿಯಬೇಕು.

ಅವಸ್ಥೆಗಳನ್ನು ಎಣಿಸಿ ಎರಡು ಮೂರು- ಎಂದು ವಿಕಲ್ಪಿಸುವದೂ ಕುತರ್ಕವೇ; ಏಕೆಂದರೆ ಅವಸ್ಥೆಗಳು ಕಾಲದಲ್ಲಿಲ್ಲ, ಕಾಲವೇ ಅವಸ್ಥೆಗಳೊಳಗೆ ಸೇರಿಕೊಂಡಿರುತ್ತದೆ. ಆದ್ದರಿಂದ ಅವಸ್ಥೆಗಳು ಆತ್ಮನಲ್ಲಿವೆ ಎಂಬುದೂ ವಿಕಲ್ಪ ಮಾತ್ರವೇ. ಸಾಕ್ಷಿಗೆ ನಾನಾತ್ವವನ್ನು ಹೇಳುವದೂ ಕುತರ್ಕವು ; ಏಕೆಂದರೆ ನಾನಾತ್ವಕ್ಕೆ ದೇಶಕಾಲಗಳು ಬೇಕು; ಆ ದೇಶಕಾಲಗಳೇ ನಿಜವಾಗಿ ಆತ್ಮನಲ್ಲಿಲ್ಲ. ಆತ್ಮನಿಂದ ಆಕಾಶವುಂಟಾಯಿತು ಎಂದು ಶ್ರುತಿಯಿಲ್ಲವೆ? ಎಂದರೆ ಆ ವಾಕ್ಯಕ್ಕೆ ಆಕಾಶವು ಆತ್ಮನಲ್ಲಿ ತೋರುವ ವಿಕಲ್ಪವು ಎಂದೇ ಅರ್ಥ. ಏಕೆಂದರೆ ದೇಶಕಾಲಗಳಿಲ್ಲದ ಆತ್ಮನಿಂದ ದೇಶಕಾಲಗಳು ಬಂದವು ಎಂದು ಪರಮಾರ್ಥ ಕಾರ್ಯಕಾರಣವಾದವನ್ನು ಆಶ್ರಯಿಸಿ ಹೇಳುವದಕ್ಕೆ ಆಗುವದೇ ಇಲ್ಲ.

ಶಾಸ್ತ್ರವು ಆತ್ಮನ ನಿತ್ಯಶುದ್ಧಮುಕ್ತಸ್ವಭಾವವನ್ನು ತಿಳಿಸುವದಕ್ಕಾಗಿ ಜನರ ಅಧ್ಯಾರೋಪದೃಷ್ಟಿಯನ್ನುವಲಂಬಿಸಿ ಜಗತಿನ ಸೃಷ್ಟಿ, ಆತ್ಮನು ಶರೀರದಲ್ಲಿ ಪ್ರವೇಶಿಸಿದ್ದು, ಗುರುಬೋಧೆಯಿಂದ ಶಿಷ್ಯನು ಕೃತಾರ್ಥನಾದದ್ದು -ಮುಂತಾದವುಗಳನ್ನು ಇಟ್ಟುಕೊಂಡೇ ತತ್ತ್ವವನ್ನು ಉಪದೇಶಿಸಿದೆ. ಆ ಸಂದರ್ಭದಲ್ಲೆಲ್ಲ ವಾಕ್ಯಕ್ಕೆ ತಾತ್ಪರ್ಯವು ಯಾವದರಲ್ಲಿ, ಶಾಸ್ತ್ರದಲ್ಲಿ ಅನುವಾದ ಮಾಡಿಕೊಂಡಿರುವದು ಯಾವದು? - ಎಂಬಿದನ್ನು ಚೆನ್ನಾಗಿ ಮನನಮಾಡಬೇಕು. ಶಾಸ್ತ್ರವು ಜ್ಞಾಪಕವು, ಇದ್ದದ್ದನ್ನು ಇದ್ದಂತೆ ತಿಳಿಸತಕ್ಕದ್ದು. ಆದ್ದರಿಂದ ಯಾವದರಿಂದ ಅನುಭವಸಮ್ಮತವಾದ ವಿಷಯವು ತಿಳಿದುಬರುವದೋ ಅದರಲ್ಲಿಯೇ ಶಾಸ್ತ್ರದ ತಾತ್ಪರ್ಯ; ವಾಕ್ಯಕ್ಕೆ ಕುತರ್ಕವನ್ನವಲಂಬಿಸಿ ಎಂದಿಗೂ ಅಪಾರ್ಥವನ್ನು ಮಾಡಬಾರದು.

★★★★★

# ಉಪಾಸನಾವಾದ, ಜ್ಞಾನವಾದ

**24-5-1953**

**ಶ್ರೀಗಳವರು**

ವೇದಾಂತವಿಚಾರದ ಇತಿಹಾಸದಲ್ಲಿ ಉಪಾಸನಾವಾದ, ಜ್ಞಾನವಾದ- ಇವೆರಡ್ಕೂ ಹೋರಾಟವು ನಡೆದೇ ಇದೆ. ಇವೆರಡಕ್ಕೂ ಏಕವಾಕ್ಯತೆಯನ್ನು ಹೇಗೆ ಮಾಡಬೇಕೆಂಬುದನ್ನು ಆಚಾರ್ಯರು ತೋರಿಸಿಕೊಟ್ಟರು. ಉಪಾಸನಾವಾಕ್ಯಗಳು ಪರಂಪರೆಯಿಂದ ಜ್ಞಾನಕ್ಕೆ ಕಾರಣವಾಗಿರುತ್ತವೆ, ಸಾಕ್ಷಾತ್ತಾಗಿ ಕಾರಣವಲ್ಲ- ಎಂಬುದು ಆಚಾರ್ಯರ ಮತವು.

ಜ್ಞಾನವಾಕ್ಯಗಳಲ್ಲಿಯೂ ಶ್ರೋತವ್ಯಃ ಮನ್ತವ್ಯಃ ನಿದಿಧ್ಯಾಸಿತವ್ಯಃ- ಎಂದಿದೆ. ಇಲ್ಲಿ ಶ್ರವಣಮನನಗಳು ನೇರಾಗಿ ವಸ್ತುವಿನ ಜ್ಞಾನಕ್ಕೆ ಕಾರಣವಾಗಿರುತ್ತವೆ ಎಂಬುದರಲ್ಲಿ ಯಾವ ವಿವಾದವೂ ಇಲ್ಲ, ಆದರೆ ನಿದಿಧ್ಯಾಸನವೆಂದರೇನು? ಅದು ಯಾವ ದ್ವಾರದಿಂದ ಜ್ಞಾನಕ್ಕೆ ಉಪಾಯವಾಗಿದೆ ಎಂಬ ಬಗ್ಗೆ ಮತಭೇದಗಳುಂಟು.

ನಿದಿಧ್ಯಾಸನಕ್ಕೂ ಉಪಾಸನೆಗೂ, ನಿದಿಧ್ಯಾಸನಕ್ಕೂ ಯೋಗಕ್ಕೂ ಇರುವ ತಾರತಮ್ಯವನ್ನು ತಿಳಿದುಕೊಳ್ಳುವದು ಅತ್ಯವಶ್ಯ. ಏಕೆಂದರೆ ಈಗಿನ ಕಾಲದಲ್ಲಿ ಈ ಮಾತುಗಳನ್ನೆಲ್ಲ ಪರ್ಯಾಯಗಳೆಂದು ಅನೇಕರು ಭಾವಿಸುತ್ತಿದಾರೆ.

ಮೊದಲನೆಯದಾಗಿ ಉಪಾಸನೆಯೆಂದರೆ ಭಾವನೆಯು. ಶಾಸ್ತ್ರದಲ್ಲಿ ಹೇಳಿರುವಂತೆ ಪರಮಾತ್ಮನ ಭಾವನೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಒಂದೇ ಭಾವನೆಯು ಬಲವಾಗಿಬಿಟ್ಟರೆ ಉಪಾಸನೆಯ ನಡುವೆ ಲೌಕಿಕ ಪ್ರತ್ಯಯಗಳು ಯಾವವನ್ನೂ ಬರಗೊಡದೆ ಇದ್ದರೆ, ಉಪಾಸನೆಯಿಂದ ಸಾಕ್ಷಾತ್ಕಾರವಾಗುವದು, ಲೌಕಿಕವಿಚಾರಗಳಲ್ಲಿಯೂ ಭಾವನೆಯು ಇರುತ್ತದೆ;

ನಮ್ಮ ನಮ್ಮ ಮನಸ್ಸಿನ ಮಟ್ಟದಿಂದ ನಾವು ಭಾವನೆಮಾಡುತ್ತೇವೆ. ಕೆಟ್ಟ ಭಾವನೆಗಳು ಕೂಡ ಮತ್ತೆಮತ್ತೆ ಮಾಡಿದರೆ ಅವುಗಳು ನಮ್ಮ ಮನಸ್ಸಿನಲ್ಲಿ ಬೇರೂರಿ ಅದೇ ಆವೇಶದಿಂದ ಅದಕ್ಕೆ ಸರಿಯಾಗಿ ಕಾರ್ಯವನ್ನು ಮಾಡಿಸಿ ಬಿಡುತ್ತವೆ. ಗೋಪಿಯರು ಶ್ರೀಕೃಷ್ಣನ ಭಾವನೆಯಿಂದ ತಾವೇ ಕೃಷ್ಣರಾದದ್ದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು. ಕಲಿಗಾಲದಲ್ಲಿಯೂ ಎಷ್ಟೋ ಜನರು ಸಾಕಾರನಾದ ಸಗುಣಪರಮೇಶ್ವರನನ್ನು ಸಾಕ್ಷಾತ್ಕಾರಗೊಳಿಸಿಕೊಂಡವರುಂಟು. ಆದರೆ ಈ ಉಪಾಸನೆಯು ಅಥವಾ ಧ್ಯಾನವು ಕರ್ತೃತಂತ್ರವೇ ಹೊರತು ವಸ್ತುತಂತ್ರವಲ್ಲ- ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಉಪಾಸನೆಗಳಿಂದ ಕಾಲಾಂತರದಲ್ಲಿ ಫಲವಾಗುವದೆಂದೇ ಶ್ರುತಿಗಳು ಹೇಳುತ್ತಿವೆ.

ಯೋಗವೆಂಬುದು ಪುರುಷಪ್ರಕೃತಿಗಳನ್ನು ವಿಂಗಡಿಸಿಕೊಳ್ಳುವದಕ್ಕಾಗಿ ಮಾಡುವ ಸಾಧನವು. ಚಿತ್ತವೃತ್ತಿಗಳ ನಿರೋಧವನ್ನು ಮಾಡಿಕೊಂಡ ಪುರುಷನು ತನ್ನ ಸ್ವರೂಪದಲ್ಲಿ ಶುದ್ಧನಾಗಿ ನಿಲ್ಲುತ್ತಾನೆ- ಎಂಬುದು ಯೋಗಿಗಳ ಹೇಳಿಕೆ. ಯೋಗಿಗಳ ಮತದಲ್ಲಿ ದ್ವೈತವೇನೂ ಹೋಗುವದಿಲ್ಲ; ಪ್ರಕೃತಿಯು ನಾಶವಾಗುವದೂ ಇಲ್ಲ. ಪುರುಷನಿಂದ ಅದು ವಿವಿಕ್ತವಾಗಿ ನಿಂತಿರುತ್ತದೆ. ಇದಲ್ಲದೆ ಯೋಗತಂತ್ರದ ಪ್ರಕಾರ ಪುರುಷರು ಅನೇಕ ; ಸಾಂಖ್ಯರವಾದಕ್ಕೂ ಅವರ ವಾದಕ್ಕೂ ಯಾವ ಭೇದವೂ ಇರುವದಿಲ್ಲ. ಆದ್ದರಿಂದಲೇ ಬ್ರಹ್ಮಸೂತ್ರದಲ್ಲಿ ಯೋಗವನ್ನು ಖಂಡಿಸಿರುತ್ತದೆ. ಆ ಸಂದರ್ಭದಲ್ಲಿ ಭಾಷ್ಯಕಾರರು ಒಂದು ಶ್ರುತಿಯನ್ನು ಉದಾಹರಿಸಿಕೊಂಡು ವಿಚಾರಮಾಡಿರುತ್ತಾರೆ. ಶ್ವೇತಾಶ್ವತರದಲ್ಲಿ ಸಾಂಖ್ಯಯೋಗಗಳಿಂದ ಪರಮಾತ್ಮಪ್ರಾಪ್ತಿಯಾಗುತ್ತದೆ ಎಂದು ಹೇಳಿರುತ್ತದೆಯಷ್ಟೆ; ಅಲ್ಲಿ ವೈದಿಕಸಾಂಖ್ಯವು ಎಂದರೆ ಜ್ಞಾನವು, ವೈದಿಕಧ್ಯಾನವು ಎಂದರೆ ನಿದಿಧ್ಯಾಸನವು- ಇವುಗಳಿಂದಲೇ ಪರಮಾತ್ಮಪ್ರಾಪ್ತಿಯಾಗುವದು ಎಂದು ವಾಕ್ಯದ ಅರ್ಥ ಎಂಬುದು ಭಾಷ್ಯಕಾರರ ಅಭಿಪ್ರಾಯ. ಸಂಪ್ರಜ್ಞಾತ ಸಮಾಧಿ, ಅಸಂಪ್ರಜ್ಞಾತಸಮಾಧಿ- ಎಂದುಮುಂತಾಗಿ ಯೋಗದರ್ಶನದಲ್ಲಿ ಹೇಳಿರುವ ಕ್ರಮವನ್ನು ಭಾಷ್ಯಕಾರರು ಎಲ್ಲಿಯೂ ಪ್ರತಿಪಾದಿಸಿರುವದಿಲ್ಲ. ಚಿತ್ತವೃತ್ತಿನಿರೋಧವು ಮೋಕ್ಷಕ್ಕೆ ಕಾರಣವೆಂಬುದು ವೇದಾಂತಸಮ್ಮತವಲ್ಲ;

ಆತ್ಮಜ್ಞಾನವಾದಲ್ಲದೆ ಎಂದಿಗೂ ಸಂಪೂರ್ಣ ಚಿತ್ತವೃತ್ತಿನಿರೋಧವು ಆಗುವದೂ ಇಲ್ಲ – ಎಂದು ಬೃಹದಾರಣ್ಯಕಭಾಷ್ಯದಲ್ಲಿ ಬರೆದಿರುತ್ತಾರೆ.

ಇನ್ನು ನಿದಿಧ್ಯಾಸನವೆಂದರೇನು? ಇದು ಉಪಾಸನೆಯೂ ಅಲ್ಲ, ಯೋಗವೂ ಅಲ್ಲ. ಭಾವನಾರೂಪವಾದ ಉಪಾಸನೆಯನ್ನು ಶ್ರುತಿಗಳಲ್ಲಿ ಹೇಳಿರುತ್ತದೆಯಷ್ಟೆ, ಇದನ್ನು ಗೀತೆಯ ಎಂಟನೆಯ ಅಧ್ಯಾಯದಲ್ಲಿಯೂ ಹೇಳಿರುತ್ತದೆ. ಆದರೆ ನಿದಿಧ್ಯಾಸನವೆಂಬುದು ವಸ್ತುಜ್ಞಾನವಾಗುವದಕ್ಕಾಗಿ ಮಾಡುವ ಏಕಾಗ್ರತೆಯ ಪರೀಕ್ಷೆ. ಇದ್ದ ವಸ್ತುವನ್ನೇ ನಿಟ್ಟಿಸಿ ನೋಡುವಾಗ, ರತ್ನಪರೀಕ್ಷಕನಂತೆ ಮಾಡುವ ಪ್ರಯತ್ನವೇ ನಿದಿಧ್ಯಾಸನವು. ಇದೇ ಸಮ್ಯಗ್ದರ್ಶನಕ್ಕೆ ಕಾರಣವು. ಇದನ್ನು ಧ್ಯಾನಯೋಗವೆಂಬ ಗೀತೆಯ ಆರನೆಯ ಅಧ್ಯಾಯದಲ್ಲಿ ಹೇಳಿರುತ್ತದೆ. ಪರಮಾತ್ಮನನ್ನು ಶಾಸ್ತ್ರದಲ್ಲಿ ಹೇಗೆ ವರ್ಣಿಸಿದೆಯೋ ಹಾಗೆಯೇ ಅನುಭವಕ್ಕೆ ತಂದುಕೊಳ್ಳುವ ಯತ್ನವೇ ನಿದಿಧ್ಯಾಸನವು. ಹೊರಗಿನ ವಾಗಾದಿಗಳನ್ನು ನಿಲ್ಲಿಸಿ ಮನಸ್ಸು, ಬುದ್ಧಿ, ಅಹಂಕಾರ- ಇವುಗಳಲ್ಲಿ ಕ್ರಮಕ್ರಮವಾಗಿ ಲಯಮಾಡುತ್ತಾ ಕೊನೆಗೆ ಸರ್ವಸಾಕ್ಷಿಯಾದ ಪರಮಾತ್ಮನಲ್ಲಿಯೇ ಎಲ್ಲವನ್ನೂ ಕರಗಿಸಿಕೊಳ್ಳುವ ಜ್ಞಾನಸಾಧನವೇ ನಿದಿಧ್ಯಾಸನವು.

ಶಾಸ್ತ್ರಜ್ಞನಾದರೂ ಆತ್ಮಜ್ಞಾನಿಯಾದ ಗುರುವನ್ನು ಹುಡುಕಿ ಅವನಿಂದ ಕೃತಾರ್ಥನಾಗಬೇಕು ಎಂದು ಆಚಾರ್ಯರು ಹೇಳಿರುತಾರೆ. ಪರಮಾತ್ಮನೇ ಈ ಸಂದರ್ಭದಲ್ಲಿ ಮುಖ್ಯಗುರು; ಆತನಲ್ಲಿ ನಿಷ್ಠೆಯನ್ನು ಪಡೆದಿರುವ ಅನುಭವಿಗಳೂ ಗುರುಗಳಾಗಿರುತ್ತಾರೆ. ಅವರು ತೋರಿಸಿದ ಮಾರ್ಗದಿಂದ ಅಧ್ಯಾತ್ಮಯೋಗವಾದ ಈ ನಿದಿಧ್ಯಾಸನವನ್ನು ಅಳವಡಿಸಿಕೊಂಡು ಕೃತಾರ್ಥರಾಗಬೇಕು.

★★★★★

# ಶಾಂಕರವೇದಾಂತವೂ ಮಿಕ್ಕ ವೇದಾಂತಪ್ರಕ್ರಿಯೆಗಳೂ

**07-05- 1954**

**ಶ್ರೀಗಳು**

ವೇದಾಂತವೆಂಬುದು ಉಪನಿಷತ್ತುಗಳಲ್ಲಿರುವ ಸಿದ್ಧಾಂತವು. ಗಣಿತವು ಹೇಗೆ ಒಂದೇ ಶಾಸ್ತ್ರವೋ ಹಾಗೆಯೇ ವೇದಾಂತವೂ ಒಂದೇ ಆಗಿರುವದು ಯುಕ್ತವು ; ಆದರೂ ಈ ಸಿದ್ಧಾಂತವು ಯಾವದೆಂಬ ಬಗ್ಗೆ ಅಭಿಪ್ರಾಯಭೇದ-ಗಳಿರುವದರಿಂದ ನಾವು 'ಶಾಂಕರವೇದಾಂತ' ಎಂಬ ಶಬ್ದವನ್ನುಪಯೋಗಿಸಬೇಕಾಗಿದೆ. ವೈಜ್ಞಾನಿಕರು ಆಧುನಿಕವಿಜ್ಞಾನವನ್ನು ಬೇರೆಬೇರೆಯ ಕ್ರಮದಿಂದ ತಿಳಿಸುತ್ತಾ ಕೆಲಕೆಲವು ವಿಚಾರಗಳಲ್ಲಿ ಭಿನ್ನಭಿಪ್ರಾಯವುಳ್ಳವರಾಗಿರುವರಾದರೂ ಸರ್ವಸಮ್ಮತವಾದ ಕೆಲವು ತೀರ್ಮಾನಗಳನ್ನೇ ವಿಜ್ಞಾನಶಾಸ್ತ್ರದ ಸಿದ್ಧಾಂತ ಎಂದು ಅಂಗೀಕರಿಸುತ್ತಾರೆ. ಆದರೆ ಉಪನಿಷತ್ಸಿದ್ಧಾಂತದಲ್ಲಿ ಹೀಗಿಲ್ಲ. ಅನೇಕ ಭಾಷ್ಯಕಾರರುಗಳು 'ಇದೇ ವೇದಾಂತಸಿದ್ಧಾಂತ' ಎಂದು ಹೇಳಿಕೊಂಡಿರುತ್ತಾರೆ. ಶಂಕರಾಚಾರ್ಯರೆಂದರೂ ಒಂದಾನೊಂದು ವ್ಯಕ್ತಿ; ಒಂದಾನೊಂದು ಕಾಲದಲ್ಲಿ ಹುಟ್ಟಿ ಭಾಷ್ಯವನ್ನು ಬರೆದವರು. ಅವರ ವೇದಾಂತವೇ ಸಿದ್ಧಾಂತವೆಂಬುದನ್ನು ನಾವು ಏತರಮೇಲೆ ನಂಬಬೇಕು? ಅವರ ವಾಕ್ಯವೇ ಇಲ್ಲಿ ಪ್ರಮಾಣವೊ ಅಥವಾ ಅವರು ಹೇಳಿರುವದರಲ್ಲಿ ಸಾರ್ವತ್ರಿಕಾನುಭವದ ಆಧಾರವೇನಾದರೂ ಇದೆಯೊ? ಇದನ್ನು ವಿಚಾರಮಾಡುವದು ಅವಶ್ಯವಾಗಿದೆ. ಆದ್ದರಿಂದ ಈ ಸಲ ಶಾಂಕರವೇದಾಂತವನ್ನು ಬಗೆಬಗೆಯ ದೃಷ್ಟಿಯಿಂದ ನೋಡಿ ಈ ವೇದಾಂತದಲ್ಲಿ ಸರ್ವಸಮ್ಮತವಾದ ತತ್ತ್ವಗಳು ಎಷ್ಟರ ಮಟ್ಟಿಗೆ ಸಿಕ್ಕುವವು? ವ್ಯವಹಾರದಲ್ಲಿ ಅವುಗಳಿಂದ ಎಷ್ಟರಮಟ್ಟಿಗೆ ಉಪಯೋಗವಾಗಬಹುದು? - ಎಂಬುದನ್ನು ಪರಿಶೀಲಿಸಬೇಕೆಂದಿರುವೆನು.

ಎಲ್ಲಕ್ಕೂ ಮುಂಚೆ ಶಾಂಕರಸಿದ್ಧಾಂತವೆಂದರೆ ಯಾವದು? ಎಂಬುದನ್ನು ನಿರ್ಣಯಿಸಬೇಕು. ಭಾಷ್ಯಕಾರರ ಗ್ರಂಥಗಳೇ ಸದ್ಯಕ್ಕೆ ಪ್ರತ್ಯಕ್ಷವಾಗಿ ಲಭ್ಯವಾಗಿರುವಾಗ ವ್ಯಾಖ್ಯಾನಕಾರರುಗಳು ತಮ್ಮತಮ್ಮೊಳಗೇ ವಿರುದ್ಧಾಭಿಪ್ರಾಯವನ್ನು ಕೊಟ್ಟು ವಿವಾದಮಾಡುತ್ತಿರುವ ವಿಷಯಗಳನ್ನು ನಾವು

ಗ್ರಹಿಸಬೇಕಾದದ್ದಿಲ್ಲವೆಂಬುದು ಸ್ಪಷ್ಟ. ಆದ್ದರಿಂದ ನಾನು ಶಾಂಕರವೇದಾಂತಕ್ಕೆ ಆಚಾರ್ಯರ ಪ್ರಸ್ಥಾನತ್ರಯಭಾಷ್ಯಗಳನ್ನೇ ಆಧಾರವಾಗಿಟ್ಟುಕೊಳ್ಳುತ್ತೇನೆ. ಮಿಕ್ಕ ವೇದಾಂತಗಳಿಗೆ ಹೋಲಿಸುವಾಗ ಸುಪ್ರಸಿದ್ಧವಾದ ಮತಗಳನ್ನೇ ಅನುಸರಿಸುತ್ತೇನೆ. ಬ್ರಹ್ಮಸೂತ್ರಗಳಲ್ಲಿ ಉಪನಿಷದ್ವಾಕ್ಯಗಳನ್ನೇ ವಿಷಯ ವಾಕ್ಯವಾಗಿ ಇಟ್ಟುಕೊಂಡಿದೆ ಎಂಬುದು ಸರ್ವಸಮ್ಮತವಾಗಿರುವದರಿಂದ ಭಾಗವತವಾಕ್ಯವೇ ಮುಂತಾದವುಗಳ ವಿಚಾರಕ್ಕೆ ಸೂತ್ರವನ್ನುಪಯೋಗಿಸಿ-ಕೊಂಡಿರುವ ಶುಕಭಾಷ್ಯದಂಥ ಕೃತಕಗ್ರಂಥಗಳನ್ನು ಇಲ್ಲಿ ವಿಚಾರಕ್ಕೆ ತೆಗೆದುಕೊಳ್ಳುವದಿಲ್ಲ.

ಭಾಷ್ಯಗಳಲ್ಲೆಲ್ಲ ಅತ್ಯಂತಪುರಾತನವಾಗಿ ಈಗ್ಗೆ ನಮಗೆ ದೊರೆಯುವದು ಶಾಂಕರಭಾಷ್ಯ. ಅದರಲ್ಲಿ ಬಾದರಾಯಣರು ಮೂರು ಬೇರೆಬೇರೆಯ ವೇದಾಂತಪ್ರಕ್ರಿಯಗಳನ್ನು ಉಲ್ಲೇಖನಮಾಡಿದಂತೆ ವರ್ಣಿಸಿದೆ. ''ಆತ್ಮಾ ವಾ ಅರೇ ದ್ರಷ್ಟವ್ಯೋ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ' ಎಂಬ ಬೃಹದಾರಣ್ಯಕವಾಕ್ಯದಲ್ಲಿ ಪರಮಾತ್ಮನೇ ವಿಷಯವೆಂದು ನಮಗೆ ಗೊತ್ತಾದರೂ ಅಲ್ಲಿ ಉಪಕ್ರಮದಲ್ಲಿ ಆತ್ಮನೇ ಪತಿಪುತ್ರಾದಿಯಾದ ಮಿಕ್ಕೆಲ್ಲದ್ದಕ್ಕಿಂತಲೂ ಪ್ರಿಯನೆಂದು ಹೇಳಿದೆ. ಇಲ್ಲಿ ಜೀವಾತ್ಮನನ್ನು ಪರಾಮರ್ಶಿಸಿರುವದೇಕೆ?- ಎಂಬ ವಿಷಯದಲ್ಲಿ ಆತ್ಮನನ್ನು ಅರಿತರೆ ಮಿಕ್ಕೆಲ್ಲವನ್ನೂ ಅರಿತಂತೆ ಆಗುವದೆಂಬ ಪ್ರತಿಜ್ಞೆಯು ಸಿದ್ಧವಾಗುವದಕ್ಕಾಗಿ ಜೀವನು ಪರಮಾತ್ಮನಿಗೆ ಅಭಿನ್ನನೂ ಆಗಿರುವನೆಂದು ಇಲ್ಲಿ ತಿಳಿಸಿದೆ ಎಂದು ಬೇಧಭೇದವಾದಿಗಳಾದ **ಆಶ್ಮರಥ್ಯರ** ಅಭಿಪ್ರಾಯ; ಈ ಸಂಸಾರದಲ್ಲಿದ್ದು ಧ್ಯಾನಾದಿಗಳಿಂದ ನಿರ್ಮಲನಾಗಿ ಪರಮಾತ್ಮನಲ್ಲಿ ಒಂದಾಗುವನೆಂದು ತಿಳಿಸಿದೆ ಎಂದು ಮುಕ್ತಿಯಲ್ಲಿ ಅಭೇದವನ್ನು ಒಪ್ಪುವ **ಔಡುಲೋಮಿಗಳ** ಅಭಿಪ್ರಾಯ ; ಪರಮಾತ್ಮನೇ ಈಗಲೂ ಜೀವರೂಪದಿಂದ ತೋರುತ್ತಿರುವನೆಂದು ತಿಳಿಸುವದಕ್ಕೆ ಹೀಗೆ ಉಪಕ್ರಮಿಸಿದೆ ಎಂದು ನಿತ್ಯಾಭೇದವಾದಿಗಳಾದ **ಕಾಶಕೃತ್ಸ್ನ**ರ ಅಭಿಪ್ರಾಯ -ಎಂದು ಶಾಂಕರಭಾಷ್ಯದಲ್ಲಿದೆ. ಈ ಮೂರು ಮತಗಳಲ್ಲಿ ಭೇದಾಭೇದಮತವನ್ನು ಭರ್ತೃಪ್ರಪಂಚರು ಒಪ್ಪಿದ್ದರು, ಮುಕ್ತಿಯಲ್ಲಿ ಅದ್ವೈತವೆಂಬುದನ್ನು ಭಾಗವತಸಂಪ್ರದಾಯದವರು ಒಪ್ಪಿದ್ದರು-

ಎಂದು ಬೃಹದಾರಣ್ಯಕಸೂತ್ರಭಾಷ್ಯಗಳಿಂದ ತಿಳಿದುಬರುತ್ತದೆ. ಆ ಎರಡು ಮತಗಳನ್ನೂ ಖಂಡಿಸಿ ಮೂರನೆಯ ಮತವನ್ನೇ ಆಚಾರ್ಯರು ಒಪ್ಪಿರುತ್ತಾರೆ. ಪರಮಾತ್ಮನೇ ಪರಮಾರ್ಥವು, ಅವನು ಜೀವಾತ್ಮನೆಂದು . ತಿಳಿಯುವದು ಅವಿದ್ಯೆ; ಜೀವಾತ್ಮನ ಆತ್ಮನು ಈಗಲೇ ಇಲ್ಲಿಯೇ ಪರಮಾತ್ಮನಾಗಿರುತ್ತಾನೆ - ಎಂಬುದು ಅವರ ಮತವು.

ಶಂಕರಾಚಾರ್ಯರಿಗಿಂತ ಹಿಂದೆ ಇದ್ದ ವೇದಾಂತಿಗಳೆಲ್ಲರೂ ಅದ್ವೈತಿಗಳೇ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಅವರು ಪ್ರಸಂಖ್ಯಾನವಾದ, ಬ್ರಹ್ಮಸಾಕ್ಷಾತ್ಕಾರವಾದ, ಪ್ರಪಂಚವಿಲಯವಾದ, ಬ್ರಹ್ಮವು ಉಪಾಸನಾವಿಧಿಶೇಶವೆಂಬವಾದ- ಇವುಗಳನ್ನೂ ಕಾಲಾಂತರದಲ್ಲಿ ಮುಕ್ತಿಯಾಗುವದೆಂಬ ಭೇದವಾದ, ಭೇದಾಭೇದವಾದ- ಇವನ್ನೂ ಖಂಡಿಸಿರುತ್ತಾರೆ. ಬೃಹದಾರಣ್ಯಕವಾರ್ತಿಕದಲ್ಲಿ ಸುರೇಶ್ವರಾಚಾರ್ಯರು ಇನ್ನೂ ಅನೇಕ ವೇದಾಂತಿಗಳ ಮತವನ್ನು ಅನುವಾದ ಮಾಡಿಕೊಂಡು ಖಂಡಿಸಿರುವದು ಕಾಣುತ್ತದೆ; ಅವರೆಲ್ಲರೂ ಅದ್ವೈತಿಗಳೇ ಆಗಿದ್ದರು. ''ಉಪನಿಷತ್ತುಗಳಲ್ಲೆಲ್ಲ ವಿಜ್ಞಾನಾತ್ಮನು ಪರಮಾತ್ಮನೇ ಎಂಬ ಏಕತ್ವಪ್ರತ್ಯಯವನ್ನೇ ಉಪದೇಶಿಸಿದೆ ಎಂಬ ವಿಷಯಕ್ಕೆ ಉಪನಿಷದ್ವಾದಿಗಳೊಳಗೆ ಯಾರಿಗೂ ಭಿನ್ನಾಭಿಪ್ರಾಯವಿಲ್ಲ'' ಎಂದು (ಬೃ.2-1-20) ಬೃಹದಾರಣ್ಯಕಭಾಷ್ಯದಲ್ಲಿ ಬರೆದಿದೆ.

ಈಗ ಶಂಕರಾಚಾರ್ಯರಿಗೂ ಮಿಕ್ಕ ವೇದಾಂತಿಗಳಿಗೂ ಇರುವ ವೇದಾಂತಪ್ರಕ್ರಿಯಾಭೇದವನ್ನು ನಾವು ಸುಲಭವಾಗಿ ನಿರ್ಣಯಿಸ-ಬಹುದಾಗುತ್ತದೆ. ಏಕೆಂದರೆ ಮಿಕ್ಕ ವೇದಾಂತಿಗಳು ಅದ್ವೈತವು ಮುಕ್ತಿದಶೆಯಲ್ಲಿ ಉಂಟಾಗತಕ್ಕದ್ದು ಎಂದು ಒಪ್ಪಿರುತ್ತಾರೆ; ಆದರೆ ಶಂಕರರು ಹೇಳುವ ಅದ್ವೈತವು ಸ್ವಯಂಸಿದ್ಧವಾಗಿರುತ್ತದೆ. ಮಿಕ್ಕ ವೇದಾಂತಿಗಳ ಮತದಲ್ಲಿ ವಿಹಿತವಾಗಿರುವ ಸಾಧನವನ್ನು ಅನುಷ್ಠಾನಮಾಡಿದ ಬಳಿಕವೇ ಮುಕ್ತಿಯು ದೊರೆಯುವದಾಗಿ ರುತ್ತದೆ. ಆದರೆ ಶಂಕರರ ಮತದಲ್ಲಿ ಮುಕ್ತಿಯು ಬ್ರಹ್ಮಸ್ವರೂಪವೇ ಆಗಿದ್ದು ಸಾಧಕನ ಆತ್ಮನೇ ಆಗಿರುವದರಿಂದ ನಿತ್ಯಸಿದ್ಧವಾಗಿರುತ್ತದೆ. ಮಿಕ್ಕ ವೇದಾಂತಿಗಳಿಗೆ ಶ್ರುತಿಯು ಸಾಧನವಿಧಾಯಕಪ್ರಮಾಣವಾಗಿದ್ದು ವೇದವಾಕ್ಯವೆಂಬ ಕಾರಣದಿಂದ ಪ್ರಮಾಣವಾಗಿರುತ್ತದೆ; ಶಂಕರರಿಗೆ ಶ್ರುತಿಯು ಪ್ರಮಾಜನಕವಾಗಿರುವದರಿಂದ,

ಎಂದರೆ ನಿಶ್ಚಿತವಾದ ಯಥಾರ್ಥವಾದ ಅನುಭವವನ್ನು ಉಂಟುಮಾಡುವದರಿಂದ ಪ್ರಮಾಣವಾಗಿರುತ್ತದೆ. ಮಿಕ್ಕವರಿಗೆ ಶ್ರುತಿಯಿಂದುಂಟಾಗುವ ಜ್ಞಾನವು ಸ್ವಯಂಫಲಪ್ರದವಾಗಿರುವದಿಲ್ಲ; ಅಭ್ಯಾಸ, ಪ್ರಪಂಚವಿಲಯ, ಉಪಾಸನೆ, ಯೋಗ-ಮುಂತಾದ ಸಾಧನಾಂತರವನ್ನು ಅಪೇಕ್ಷಿಸುತ್ತದೆ. ಶಂಕರರಿಗೆ ಹಾಗಿಲ್ಲ; ಅದು ನಿತ್ಯಸಿದ್ಧವಾಗಿರುವ ಬ್ರಹ್ಮಾತ್ಮೈಕತ್ವವನ್ನೇ ಬೋಧಿಸುತ್ತದೆ. ಆದ್ದರಿಂದ ಶಾಂಕರವೇದಾಂತವೊಂದೇ ನಿಜವಾದ ಅರ್ಥದಲ್ಲಿ ವೇದಾಂತವು, ಅದರ ಉಪದೇಶವನ್ನು ಸಾರ್ವತ್ರಿಕಾನುಭವದ ಒರೆಗಲ್ಲಿನಿಂದಲೇ ಪರೀಕ್ಷಿಸಬಹುದಾಗಿದೆ ಎಂದು ಶಂಕರಾನುಯಾಯಿಗಳು ಹೇಳಿಕೊಳ್ಳುತ್ತಿದಾರೆ. ಇದನ್ನು ಮಿಕ್ಕವರೂ ಪರಿಶೀಲಿಸುವದಕ್ಕೆ ಅವಕಾಶವಿದೆ.

ಶಂಕರಾಚಾರ್ಯರ ಮತದಲ್ಲಿ ವೇದಾಂತಜ್ಞಾನವು ಅಥವಾ ಬ್ರಹ್ಮವಿದ್ಯೆಯು ಕಳೆಯುವ ಅವಿದ್ಯಾಸ್ವರೂಪವೂ ಹೀಗೆಯೇ ಅನುಭವದ ಆಧಾರದಿಂದಲೇ ತಿಳಿಯಬಹುದಾದದ್ದಾಗಿದೆ. ಯಾರೇ ಆಗಲಿ ತತ್ತ್ವವಿಚಾರಕ್ಕೆ ಹೊರಡಬೇಕಾದರೆ ನಾನು ಪ್ರಮಾತೃ (ಅರಿಯುವವನು) ಎಂದು ಸ್ವಾಭವಿಕವಾಗಿಯೇ ಇಟ್ಟುಕೊಂಡಿರಬೇಕಾಗಿದೆಯಷ್ಟೆ. ಈ ಪ್ರಮಾತೃತ್ವವೇ ಅವಿದ್ಯೆಯಾಗಿರುವದರಿಂದ ಇದರ ಆಧಾರದಿಂದ ಉಂಟಾಗಿರುವ ಪ್ರಮಾಣಪ್ರಮೇಯವ್ಯವಹಾರವೂ ಕರ್ತೃಭೋಕ್ತೃತ್ವವ್ಯವಹಾರವೂ ಆವಿದ್ಯಕವಾಗಿವೆ ಎಂದು ಆಚಾರ್ಯರು ತಮ್ಮ ಸೂತ್ರಭಾಷ್ಯದ ಅವತರಣಿಕೆಯಲ್ಲಿ ಹೇಳಿಟ್ಟಿರುತ್ತಾರೆ. ನಾನು ಪ್ರಮಾತೃ, ಕರ್ತೃ-ಎನ್ನುವವನು ದೇಹವನ್ನು ತಾನೆಂದೂ ಇಂದ್ರಿಯಗಳನ್ನು ತನ್ನವೆಂದೂ ಇಟ್ಟುಕೊಂಡಲ್ಲದೆ ಗತ್ಯಂತರವಿಲ್ಲ. ಆದರೆ ನಾವು ದೇಹಮಾತ್ರವೇ ಎಂಬುದಾಗಲಿ ಅಥವಾ ನಮ್ಮ ಸ್ವರೂಪವಾದ ಆತ್ಮನಿಗೆ ದೇಹವೂ ಇಂದ್ರಿಯಗಳೂ ಸೇರಿಕೊಂಡಿವೆಯೆಂಬುದಾಗಲಿ ಅನುಭವಕ್ಕೆ ಅನುಗುಣವಾಗಿಲ್ಲ, ಅದಕ್ಕೆ ವಿರುದ್ಧವಾಗಿಯೇ ಇದೆ. ನಾನು ಎಂಬ ಬುದ್ಧಿಯು ಶರೀರ, ಇಂದ್ರಿಯ, ಮನಸ್ಸು, ಪ್ರಾಣ, ಬುದ್ಧಿ, ಅಹಂಕಾರ-ಇವುಗಳಲ್ಲೆಲ್ಲ (ಹಾರಾಡುವ ನೊಣವು ಒಂದೊಂದು ವಸ್ತುವಿನ ಮೇಲೆ ಕೂಡುವಂತೆ ) ಆಗಾಗ್ಗೆ ಕುಳಿತಿರುತ್ತದೆ. ಸ್ವಪ್ನ ಸುಷುಪ್ತಿಗಳಲ್ಲಿ ಈ ದೇಹಾದಿಗಳ ಹಂಗು ಆತ್ಮನಿಗೆ ಇರುವದೇ ಇಲ್ಲ ಎಂಬುದು ಅನುಭವಸಿದ್ಧ. ಆದ್ದರಿಂದ ಈ ಪ್ರಮಾತೃತ್ವಬುದ್ಧಿಯು ಆವಿದ್ಯಕವೆಂಬುದನ್ನು

ತಿಳಿಸಿ ಆತ್ಮನು ಅದ್ವಿತೀಯಚಿನ್ಮಾತ್ರನು ಎಂದು ವೇದಾಂತದಲ್ಲಿ ಪ್ರತಿಪಾದಿಸಿದೆ ಎಂಬುದು ಶಂಕರಾಚಾರ್ಯರ ಅಸಾಧಾರಣೋಪದೇಶವು. ಹೀಗೆ ಆಧುನಿಕ ವಿಜ್ಞಾನಶಾಸ್ತ್ರಗಳಂತೆ, ಅಥವಾ ಅವಕ್ಕಿಂತ ಹೆಚ್ಚಿನ ರೀತಿಯಲ್ಲಿ, ಅನುಭವವನ್ನೇ ಇಟ್ಟುಕೊಂಡು ತತ್ತ್ವವನ್ನು ಪ್ರತಿಪಾದಿಸುವದೇ ಶಾಂಕರವೇದಾಂತದ ವಿಶೇಷವು.

★★★★★

## ಶಾಂಕರವೇದಾಂತವೂ ಮತಗಳೂ

**08-5-1954**

**ಶ್ರೀಗಳು**

ಶಾಂಕರವೇದಾಂತವೂ ಇತರ ವೇದಾಂತಪ್ರಕ್ರಿಯೆಗಳೂ- ಎಂಬ ವಿಷಯದಲ್ಲಿ ನಿನ್ನೆ ಮಾತನಾಡಿದ್ದಾಯಿತು. ಶಾಂಕರವೇದಾಂತದಲ್ಲಿ ಅದ್ವೈತಭಾವವು ನಿತ್ಯಸಿದ್ಧವಾಗಿರುವದರಿಂದ ಇಲ್ಲಿಯೇ ಜ್ಞಾನಮಾತ್ರದಿಂದ ಪ್ರಾಪ್ತವಾಗುತ್ತದೆ. ಆದರೆ ಮಿಕ್ಕ ವೇದಾಂತಿಗಳು ವೇದವು ಅಪೌರುಷೇಯವಾದ್ದರಿಂದ ಪುರುಷದೋಷಗಳು ಆದರಲ್ಲಿರುವದಿಲ್ಲ- ಎಂಬ ಮೀಮಾಂಸಕರ ಮತವನ್ನೇ ಅವಲಂಬಿಸಿ ವೇದಪ್ರಾಮಾಣ್ಯವನ್ನು ಹಿಡಿದಿದಾರೆ. ಶಂಕರಾಚಾರ್ಯರು ನಿತ್ಯಸಿದ್ಧವಾದ ಅದ್ವೈತಾತ್ಮತತ್ತ್ವವನ್ನು ನಿಶ್ಚಿತವಾಗಿ ಅಬಾಧಿತವೆಂದು ತೋರಿಸಿಕೊಡುವದರಿಂದಲೇ ಶ್ರುತಿಯು ಪ್ರಮಾಣವೆನಿದೆ ಎನ್ನುತ್ತಾರೆ; ಪ್ರಮಾಣಾಂತರದಿಂದ ತಿಳಿಯಲಾಗದ ವಸ್ತುವನ್ನು ಹೊಸದಾಗಿ ತಿಳಿಸಿಕೊಡುವದೇ ಪ್ರಮಾಣದ ಕೃತ್ಯವು; ವೇದಾಂತ ವಾಕ್ಯವೂ ಹೀಗೆ ಅನಧಿಗತವಾಗಿರುವ ವಸ್ತುವನ್ನು ಅಬಾಧಿತವಾಗಿ ತಿಳಿಯಪಡಿಸುವದರಿಂದ ಪ್ರಮಾಣವೆನಿಸಿದೆ ಎಂಬಿದು ಆಚಾರ್ಯರ ಮತವು. ಮಿಕ್ಕವೇದಾಂತಿಗಳು ಉಪಾಸನಾರೂಪವಾದ ಜ್ಞಾನದಿಂದ ಮೋಕ್ಷಫಲವನ್ನು ಪಡೆದುಕೊಳ್ಳಬೇಕೆಂದು ವಾದಿಸುತ್ತಾರೆ. ವಾಕ್ಯವು ಜ್ಞಾಪಕವಾಗಿರುವದರಿಂದಲೇ ಪ್ರಮಾಣವೆಂಬುದನ್ನೂ ನಮ್ಮೆಲ್ಲರಿಗೂ ಅದ್ವಿತೀಯಬ್ರಹ್ಮವೇ ಆತ್ಮನೆಂಬುದು ಈಗಲೇ ಸಿದ್ಧವಾಗಿರುತ್ತದೆ ಎಂಬುದನ್ನು ತಿಳಿಯುವದೇ ತತ್ತ್ವಜ್ಞಾನವೆಂಬುದನ್ನು

ಆಚಾರ್ಯರ ಗುರುಗಳಾದ ಗೌಡಪಾದರೂ ತಿಳಿಸಿದ್ದರು; ಆದರೆ ಅವರ ವಾಕ್ಯಕ್ಕೆ ಉಪಾಸನಾಪರವಾಗಿಯೂ ಕೆಲವರು ವೇದಾಂತಿಗಳು ಅರ್ಥವನ್ನು ಮಾಡಿದ್ದರು. ಅದನ್ನು ಖಂಡಿಸಿ ಅನುಭವಾರೂಢವಾದ ಫಲವೇ ತತ್ತ್ವಮಸ್ಯಾದಿವಾಕ್ಯಜ್ಞಾನದಿಂದ ಲಭಿಸುವದೆಂಬುದನ್ನು ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಸ್ಥಾಪಿಸಿದರು.

ಈಗ ಪ್ರಚಾರವಾಗಿರುವ ಮತಗಳಲ್ಲಿ ಈಶ್ವರನ ಉಪಾಸನೆಯಿಂದ ಸತ್ತ ಬಳಿಕ ಪರಮಪುರುಷಾರ್ಥಪ್ರಾಪ್ತಿಯಾಗುವದು ಎಂದು ಹೇಳುತ್ತಿದಾರೆ. ಆದರೆ ಅವರು ಹೇಳುವದು ಪರೋಕ್ಷಫಲವಾದ್ದರಿಂದ ವಿವಿಧ ವೇದಾಂತಪ್ರಕ್ರಿಯೆಗಳಲ್ಲಿರುವಂತೆಯೇ ಅಲ್ಲಿಯೂ ಭಿನ್ನಾಭಿಪ್ರಾಯಗಳಿಗೆ ಅವಕಾಶವಿರುತ್ತದೆ. ಈಶ್ವರನಿದಾನೆಂಬುದಕ್ಕೆ ಆಧಾರವೇನು? ಗುರುವಿನ ವಾಕ್ಯದಿಂದಾಗಲಿ ಶಾಸ್ತ್ರವಾಕ್ಯದಿಂದಾಗಲಿ ಇಂಥಿಂಥ ಸಾಧನಕ್ಕೆ ಸತ್ತಮೇಲೆ ಇಂಥಿಂಥ ಫಲವೇ ಆಗುವದೆಂದು ನಾವು ಹೇಗೆ ನಂಬಬೇಕು? - ಎಂಬ ಪ್ರಶ್ನೆಗೆ ಪ್ರತಿಯೊಂದು ಮತದಲ್ಲಿಯೂ ಉತ್ತರವನ್ನು ಹೇಳಿದೆ. ಆದರೆ ಆ ಎಲ್ಲಾ ಉತ್ತರಗಳೂ ನಿಸ್ಸಂದಿಗ್ಧವಾಗಿಲ್ಲ, ಒಂದಕ್ಕೊಂದು ಹೊಂದುಗೆಯಾಗಿಯೂ ಇಲ್ಲ. ಆ ಮತಗಳ ಅನುಯಾಯಿಗಳಿಗೆ ಆಗಾಗ್ಗೆ ಕಲಹಗಳಾಗುತ್ತಲೇ ಇರುತ್ತದೆ. ಹೀಗಿರುವದರಿಂದ ಈಗಿನ ತರುಣರು ಮತವೆಂಬುದೇ ಕಟ್ಟುಕಥೆಗಳ ಕಂತೆ ಎಂದು ಕೂಡ ಹೇಳಲಾರಂಭಿಸಿರುತ್ತಾರೆ.

ಆದರೆ ಎಲ್ಲಾ ಮತಾಚಾರ್ಯರೂ, ಶುದ್ಧಚಾರಿತ್ರರಾಗಿದ್ದರು. ಅವರ ಜೀವಿತಕಾಲದಲ್ಲಿಯೂ ಈಗಲೂ ಅವರಿಗೆ ಅನೇಕರು ಅನುಯಾಯಿಗಳಾಗಿ ಇರುತ್ತಾರೆ ; ಅವರ ಬೋಧೆಯಿಂದ ಜನಜೀವನದ ಮೇಲೆ ಸತ್ಪರಿಣಾಮವೂ ಆಗಿರುತ್ತದೆ. ಇದನ್ನೆಲ್ಲ ಅಲ್ಲಗಳೆಯುವದಕ್ಕಿಲ್ಲವಾದರೂ ಇವಕ್ಕೆ ಯಾವ ತತ್ತ್ವಜ್ಞಾನದ ಆಧಾರವಿದೆ ಎಂಬುದನ್ನು ತೋರಿಸುವವರೆಗೆ ಈ ಮತಗಳು ಮತಮಾತ್ರವೇ, ಅಭಿಪ್ರಾಯಮಾತ್ರವೇ, ಶ್ರದ್ಧಾಮಾತ್ರಗಮ್ಯವೇ- ಎಂದಾಗುತ್ತದೆ.

ಈ ಸ್ಥಿತಿಯಲ್ಲಿ ಶಂಕರಾಚಾರ್ಯರ ವೇದಾಂತದಿಂದ ಎಲ್ಲಾ ಮತಗಳಿಗೂ ನೆರವು ಸಿಕ್ಕುವದೆಂಬುದು ಆಸ್ತಿಕರಿಗೆಲ್ಲ ಸಂತೋಷದಾಯಕವಾಗಿರುವದರಲ್ಲಿ

ಸಂಶಯವಿಲ್ಲ. ಸಂಸಾರಿಯಾದ ಆತ್ಮನು ಸ್ವಯಂಸಿದ್ಧನಾಗಿರುವದರಿಂದಲೂ ಈ ಆತ್ಮನೇ ಎಲ್ಲರಿಗೂ ಆತ್ಮನಾಗಿರುವ ಪರಬ್ರಹ್ಮವೆಂದು ಅನುಭವಾರೂಢವಾಗಿ ವೇದಾಂತದಿಂದ ತಿಳಿಯಬರುವದರಿಂದಲೂ ಈಶ್ವರಾಸ್ತಿತ್ವವೂ ಆತ್ಮಾಸ್ತಿತ್ವವೂ ಏಕಕಾಲದಲ್ಲಿ ಸಿದ್ಧವಾಗುತ್ತವೆ. ಸರ್ವಾತ್ಮನಾದ ಪರಬ್ರಹ್ಮವೇ ವ್ಯವಹಾರದಲ್ಲಿ ಜೀವೇಶ್ವರರಾಗಿ ತೋರಿಕೊಳ್ಳುತ್ತಿರುವದರಿಂದ ಜೀವನ ಉಪಾಸನೆಯಿಂದ ಈಶ್ವರನು ತುಷ್ಟನಾಗಿ ಫಲದಾಯಕನಾಗುವನೆಂಬುದಕ್ಕೂ ಬೆಂಬಲವು ಸಿಕ್ಕುತ್ತದೆ. ಈ ಪರಮಾತ್ಮಜ್ಞಾನಕ್ಕೆ ಸಹಾಯಕವಾಗಿರುವ ನಿಸ್ಸ್ವಾರ್ಥವಾದ ಕ್ರಿಯೆಗಳೆಲ್ಲವೂ ಪುಣ್ಯಕಾರ್ಯಗಳು, ಅದಕ್ಕೆ ಅಡ್ಡಿಯಾಗುವ ಸ್ವಾರ್ಥಕ್ರಿಯೆಗಳೆಲ್ಲವೂ ಪಾಪಕರ್ಮಗಳು; ಏಕೆಂದರೆ ಪುಣ್ಯಕರ್ಮವು ತನ್ನಂತೆ ಪರರನ್ನು ಕಾಣುವ ದೃಷ್ಟಿಯನ್ನು ಬಲಪಡಿಸುತ್ತದೆ, ಪಾಪಕರ್ಮವು ಅದಕ್ಕೆ ಅಡ್ಡಿಯಾಗಿರುತ್ತದೆ. ಹೀಗಿರುವದರಿಂದ ಮತಗಳಲ್ಲಿ ಮಾಡಿರುವ ಪುಣ್ಯಪಾಪವಿಭಾಗವೂ ಯುಕ್ತವೆಂದಾಗುತ್ತದೆ; ಇವಕ್ಕನುಗುಣವಾದ ಆಚಾರವ್ಯವಹಾರಗಳೂ ಸದಾಚಾರಸದ್ವ್ಯವಹಾರವೆನಿಸುತ್ತವೆ. ಉಪಾಸನಾವಾದಗಳಿಗೂ ಈ ವೇದಾಂತದಿಂದ ಪುಷ್ಟಿಯು ದೊರಕುತ್ತದೆ. ಸರ್ವರ ಆತ್ಮನೇ ಪರಮೇಶ್ವರನಾಗಿರುವದರಿಂದ ಅವನ ಭಾವನೆಯಿಂದ ಅಂತಃಕರಣವು ಅದೇ ರೂಪವನ್ನು ಪಡೆಯುವದೆಂದು ನಿರೀಕ್ಷಿಸಬಹುದಾಗಿದೆ. ಪರಮೇಶ್ವರನ ಭಾವನೆಯಲ್ಲಿ ಮಗ್ನವಾದ ಅಂತಃಕರಣವೃತ್ತಿಯು ಪೂರ್ಣವಾಗಿ ಪರಮೇಶ್ವರಮಯವಾಗುವದರಿಂದ ಆಗ ಪ್ರಪಂಚಭಾವನೆಗಾಗಲಿ ಅದರಿಂದಾಗುವ ದುಷ್ಪರಿಣಾಮಕ್ಕಾಗಲಿ ಅವಕಾಶವಿರುವದಿಲ್ಲ. ಮನುಷ್ಯನು ಯಾವ ಭಾವದಿಂದ ಭಾವಿತನಾಗಿರುವನೋ ಅವನ ಸ್ವಭಾವವೂ ಅದಕ್ಕನುಗುಣವಾಗಿರುವದು ಅನುಭವಸಿದ್ಧವಾಗಿರುವದರಿಂದ ಪರಮೇಶ್ವರ ಭಾವನೆಯಿಂದ ಅತ್ಯಂತೋತ್ಕೃಷ್ಟಫಲವೇ ಪ್ರಾಪ್ತವಾಗುವದೆಂಬುದೂ ಯುಕ್ತವಾಗುತ್ತದೆ. ಆದ್ದರಿಂದಲೇ ಶ್ರುತಿಯಲ್ಲಿಯೂ ಉಪಾಸನೆಗಳನ್ನು ವಿಧಿಸಿರುತ್ತದೆ ಎಂದು ಆ ವಾಕ್ಯಗಳಿಗೂ ಪ್ರಾಮಾಣ್ಯವುಂಟಾಗುತ್ತದೆ. ಶ್ರುತಿಯಲ್ಲಿ ಕ್ರತುವಿಗೆ ಎಂದರೆ ಭಾವನೆಗೆ ತಕ್ಕಂತೆಯೇ ಪರದಲ್ಲಿ ಫಲವಾಗುವದೆಂಬ ನ್ಯಾಯವನ್ನು ಹೇಳಿಯೂ ಇದೆ.

ಈ ಉಪಾಸನೆಯ ವಾಕ್ಯಗಳ ಬಲದಿಂದಲೇ ಇತರ ವೇದಾಂತಿಗಳು ಉಪಾಸನೆಯಿಂದಲೇ ಬ್ರಹ್ಮಸಾಕ್ಷಾತ್ಕಾರವಾಗಬೇಕೆಂಬ ವಾದವನ್ನು ಹೂಡಿರುತ್ತಾರೆ; ಕೆಲವರು ಯೋಗಿಗಳು ಏಕಾಂತವಾಸಮಾಡಿ ಯೋಗಾಭ್ಯಾಸಮಾಡುವದರಿಂದ ಸೂರ್ಯ, ಚಂದ್ರ- ಮುಂತಾದ ಜ್ಯೋತಿಗಳ ದರ್ಶನವಾಗುವದೆಂದೂ ಅದೇ ಆಧ್ಯಾತ್ಮಿಕಾನುಭವವೆಂದೂ ವಾದಿಸಿರುತ್ತಾರೆ. ಶಂಕರಸಿದ್ಧಾಂತವನ್ನು ಅಲ್ಲಗಳೆದು ವಸ್ತುವಾಕ್ಯಗಳೆಲ್ಲವೂ ಉಪಾಸನೆಗೆ ಶೇಷವಾದ ಬ್ರಹ್ಮವನ್ನು ತಿಳಿಸುವದಕ್ಕೇ ಬಂದಿದೆ ಎಂಬ ಪೂರ್ವಪಕ್ಷವನ್ನು ಒಡ್ಡಿರುವದೂ ಈ ವಾಕ್ಯಗಳ ಆಧಾರದಿಂದಲೇ. ''**ಏಕಂ ಸದ್ ವಿಪ್ರಾ ಬಹುಧಾ ವದನ್ತಿ, ಏಕಮೇವಾದ್ವಿತೀಯಮ್**''- ಮುಂತಾದ ಶಾಸ್ತ್ರವಾಕ್ಯಗಳ ಪ್ರಾಮಾಣ್ಯವನ್ನು ಬಿಡಲಾರದೆ ಭೇದವನ್ನು ಈಗಲೆ ತೋರಿಸುತ್ತಿರುವ ಪ್ರತ್ಯಕ್ಷಾದಿಗಳ ವಿಷಯವು ಅಸತ್ಯವೆಂದು ಹೇಳುವ ಎದೆಯೂ ಇಲ್ಲದೆ 'ಈಗ ಭೇದ, ಸತ್ತ ಬಳಿಕ ಅಭೇದ ಎಂಬ ವಾದವನ್ನು ಹೂಡವವರಿಗೂ ಉಪಾಸನಾವಾಕ್ಯಗಳೇ ಶರಣು.

ಆದರೆ ದ್ವೈತವು ಮಿಥ್ಯೆಯೆಂದು ಹೇಳಿ ಬ್ರಹ್ಮವೊಂದೇ ಸತ್ಯವೆಂದೂ ಎಲ್ಲವೂ ನಿಜವಾಗಿ ಅದೇ ಎಂದೂ ಹೇಳುವ ನಿಸ್ಸಂದಿಗ್ಧವಾದ ಶ್ರುತಿವಚನಗಳೂ ಇವೆ; ಅವು ಅದ್ವಿತೀಯಾತ್ಮವಸ್ತುವನ್ನು ತಿಳಿಸುವದರಲ್ಲಿಯೇ ಪರ್ಯವಸಾನವಾಗಿದೆ; ಆ ವಾಕ್ಯಗಳಿಂದ ಅಬಾಧಿತವಾದ ಅನುಭವವೂ ಉಂಟಾಗುತ್ತದೆ. ಆದ್ದರಿಂದ ಬ್ರಹ್ಮವಸ್ತುಬೋಧಕವಾಕ್ಯಗಳು ಸ್ವತಂತ್ರವೇ ಎಂಬ ಸಿದ್ಧಾಂತವನ್ನು ಮಂಡಿಸಿ ಉಪಾಸನಾವಾದಿಗಳಿಗೂ ಆಧಾರವನ್ನು ಕಲ್ಪಿಸಿಕೊಟ್ಟ ಕೀರ್ತಿಯು ಆಚಾರ್ಯರಿಗೆ ಮಾತ್ರ ಸಲ್ಲತಕ್ಕದ್ದಾಗಿದೆ. ಆಚಾರ್ಯರ ಈ ಉಪಕಾರದಿಂದ ಗುರುವಾಕ್ಯವು ಪ್ರಮಾಣವೆಂಬ ನಂಬಿಕೆಗೂ ಆಧಾರವು ದೊರೆತಂತಾಯಿತು. ಹೀಗೆ ಅನುಭವಾರೂಢವಾದ ತತ್ತ್ವವನ್ನು ಉಪದೇಶಿಸಿದ ಶಂಕರಭಗತ್ಪಾದರು ಈಶ್ವರಾಭಿನ್ನರಾಗಿರುವದರಿಂದ ಅವರನ್ನು ಜಗದ್ಗುರುಗಳೆಂದು ಸನ್ಮಾನಿಸುವದೂ ಯುಕ್ತವೂ ಉಚಿತವೂ ಆಗಿರುತ್ತದೆ.

ಪರಮೇಶ್ವರನು ಆಯಾ ದೇಶಕಾಲಗಳಲ್ಲಿರುವ ಜನಾಂಗಗಳಿಗೆ ಅನುಕೂಲಿಸುವಂತೆ ಭಿನ್ನಭಿನ್ನಮತಾಚಾರ್ಯರುಗಳನ್ನು ಕಳುಹಿಸಿಕೊಟ್ಟಿರುತ್ತಾನೆ. ಆದರೆ ಆ ಮತಾಚಾರ್ಯರುಗಳಿಗೆ ಕೊಟ್ಟಿರುವ ಗೌರವಸ್ಥಾನದ ಮೇಲಿನಿಂದ

ಅವರ ವಾಕ್ಯವನ್ನು ನಂಬಿಯೇ ಆಯಾ ಮತದವರು ಗುರೂಪದಿಷ್ಟಮಾರ್ಗದಿಂದ ನಡೆಯುತ್ತಿರುತ್ತಾರೆ. ಇಂಥ ಉಪದೇಶಗಳು ಕೆಲವು ತರ್ಕಕ್ಕೆ ಎದುರಾದಾಗ ತಮ್ಮ ಕಾಲಮೇಲೆ ತಾವು ನಿಲ್ಲಲಾರದೆ ಅದೃಶ್ಯವಾಗಿರುತ್ತವೆ; ಮತ್ತೆ ಕೆಲವು ಇನ್ನೂ ನಿಂತಿದ್ದರೂ ಅವಕ್ಕೆ ಆಧಾರವೇನೆಂಬುದು ಮತಾನುಯಾಯಿಗಳಿಗೆ ತಿಳಿಯುವಂತಿಲ್ಲ. ಆದ್ದರಿಂದ ಸಕಲಮತಗಳಲ್ಲಿಯೂ ಇರುವ ಏಕರೂಪವಾಗಿರುವ ಉದಾತ್ತೋಪದೇಶಗಳು ಶ್ರದ್ಧಾಮಾತ್ರಗಮ್ಯವಾಗದೆ ಸರ್ವಸಮ್ಮತವೆಂದು ಹೇಳಿಸಿಕೊಂಡು ಬಾಳಬೇಕಾದರೆ ಶಾಂಕರವೇದಾಂತವನ್ನೇ ಮರೆಹೊಕ್ಕು ಬಾಳಬೇಕು. ಹೀಗೆ ಶಂಕರರು ಯಾವ ದೇಶಕಾಲಗಳಿಗೂ ಕಟ್ಟುಬೀಳದೆ ಇರುವ ಸರ್ವಾತ್ಮತತ್ತ್ವವನ್ನು ಅನುಭವಕ್ಕೆ ಹೊಂದುವಂತೆ ತೋರಿಸಿಕೊಟ್ಟು ಸಕಲವೇದಾಂತಪ್ರಕ್ರಿಯೆಗಳಿಗೇ ಅಲ್ಲದೆ ಸಕಲಮತಗಳಿಗೂ ತತ್ತ್ವಜ್ಞಾನದ ಆಧಾರವನ್ನು ಕಲ್ಪಿಸಿಕೊಟ್ಟಿರುತ್ತಾರೆ. ವೇದಾಂತದ ಕಣ್ಣಿನಿಂದ ನೋಡಿದಾಗ ಎಲ್ಲಾ ಮತಸಿದ್ಧಾಂತಗಳೂ ಪುರುಷಾರ್ಥಸಾಧಕವಾಗಿರುತ್ತವೆ ಎಂಬುದು ವಿಚಾರಕರಿಗೆ ಮನದಟ್ಟಾಗದೆ ಇರದು. ಹೀಗೆ ಸಾರ್ವತ್ರಿಕವಾದ ಮತಕ್ಕೆ ಆಧಾರವನ್ನೊದಗಿಸುವ ಶಾಂಕರವೇದಾಂತವನ್ನು ಹೆತ್ತಿರುವ ಭಾರತಮಾತೆಯುಧನ್ಯಳು.

★★★★★

## ಶಾಂಕರವೇದಾಂತವೂ ದರ್ಶನಗಳೂ

**09-5-1954**

**ಶ್ರೀಗಳು**

ವೇದಾಂತವಲ್ಲದೆ ನಮ್ಮ ದೇಶದಲ್ಲಿ ಅನೇಕದರ್ಶನಗಳು ಬಂದುಹೋಗಿವೆ. ಅವುಗಳಲ್ಲಿ ಕೆಲವು ಮಾತ್ರ ಅಲ್ಪಸ್ವಲ್ಪ ಜೀವವನ್ನು ಹಿಡಿದುಕೊಂಡಿವೆ. ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸಾ- ಇವೆಲ್ಲ ದರ್ಶನಗಳೇ ; ಇವುಗಳ ಜೊತೆಗೆ ಅವೈದಿಕದರ್ಶನಗಳೂ ಉಂಟು. ಅನುಭವವನ್ನು ಪ್ರಧಾನವಾಗಿ ಹಿಡಿದು ತರ್ಕಿಸುತ್ತಿದ್ದದ್ದರಿಂದ ಇವಕ್ಕೆಲ್ಲ

'ದರ್ಶನಗಳು' ಎಂಬ ಹೆಸರು ಬಂದಿರುತ್ತದೆ. ಪಾಶ್ಚಾತ್ಯದೇಶಗಳಲ್ಲಿ 'ಫಿಲಾಸಫಿ' (Philosophy) ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ತತ್ತ್ವಶಾಸ್ತ್ರಗಳೂ ಇದೇ ಗುಂಪಿಗೆ ಸೇರಿರುತ್ತವೆಯಾದರೂ ಅವಕ್ಕೆ ತರ್ಕವೇ ಪ್ರಧಾನವಾಗಿರುತ್ತದೆ.

ಸರಿಯಾಗಿ ನೋಡಿದರೆ ತರ್ಕವೂ ಅನುಭವಸಮ್ಮತವಾಗಿಯೇ ಇರಬೇಕು; ವೇದಪ್ರಾಮಾಣ್ಯವನ್ನು ಹಿಡಿದರೂ ವೇದವು ಪ್ರಮಾಣವಾಗುವದಕ್ಕೆ, ಪ್ರಮೆಗೆ ಎಂದರೆ ಯಥಾರ್ಥಾನುಭವಕ್ಕೆ ಕರಣವಾಗಲೇಬೇಕು. ಅಂತೂ ಹೀಗೆ ಎಲ್ಲೆಲ್ಲಿಯೂ ಅನುಭವವೇ ಕೊನೆಯ ಮಾತಾಗಿರುತ್ತದೆ. ಆದರೆ ತರ್ಕವು ವ್ಯಾಪಕತರ್ಕವಲ್ಲದೆ, ಅನುಭವವು ಪೂರ್ಣಾನುಭವವಲ್ಲದೆ ಇದ್ದರೆ- ಆ ತರ್ಕವು ತರ್ಕಾಭಾಸವಾಗುವದು, ಅನುಭವವೂ ಪೂರ್ಣಾನುಭವದೃಷ್ಟಿಯಿಂದ ಅನುಭವಾಭಾಸವಾಗುವದು. ಆದ್ದರಿಂದಲೇ ಬಾದರಾಯಣರು **'ತರ್ಕಾಪ್ರತಿಷ್ಠಾನಾತ್'** ಎಂಬ ಸೂತ್ರದಲ್ಲಿ ತರ್ಕಕ್ಕೆ ನಿಲುಗಡೆಯಿಲ್ಲ ಎಂದು ತಿಳಿಸಬೇಕಾಗಿಬಂತು. ದೇಶಕಾಲಗಳು ಎಲ್ಲಕ್ಕೂ ಆಧಾರವೆಂದು ಇಟ್ಟುಕೊಂಡಿರುವತನಕ ತರ್ಕವು ಉಳಿಯುವಹಾಗಿರುವದಿಲ್ಲ. ಹಿಂದಕ್ಕೆ ಯಾರೋ ಒಬ್ಬ ಕಮೀಷನರ್ ಸಾಹೇಬರು ಅಮಲುದಾರನಿಗೆ ಹುಕುಂಕೊಟ್ಟರೆ ಅಮಲುದಾರನಾದವನು ಕುದುರೆಯೇರಿ ಹೋಗುತ್ತಿರುವಾಗ ಹಿಂದುಗಡೆಗೇ ನೋಡುತ್ತಿದ್ದನು; ಮತ್ತೆ ಯಾವನು ಅದೇ ಸ್ಥಲಕ್ಕೆ ಅಮಲುದಾರನಾಗಿ ತನ್ನ ಆರ್ಡರನ್ನು ಕ್ಯಾನ್ಸಲ್ ಮಾಡಿಸಿಕೊಂಡುಬರುವನೋ ಎಂಬ ಅಂಜಿಕೆ ಅವನಿಗೆ ಇರುತ್ತಿತ್ತು - ಎಂದು ಜನರು ಹಾಸ್ಯಕ್ಕೆ ಹೇಳುತ್ತಿರುವದುಂಟು. ತರ್ಕವೂ ಹೀಗೆಯೇ. ಯಾವಾಗ ಈ ತರ್ಕವನ್ನು ಪ್ರಬಲತರತರ್ಕವು ಹೊಡೆದುಹಾಕುವದೋ ಎಂಬ ಅಂಜಿಕೆ ಇದ್ದೇ ಇರುತ್ತದೆ. ಆದರೂ ನಾವು ಜನರು ಹೇಳಿದ್ದನ್ನೆಲ್ಲ ಸುಮ್ಮನೆ ನಂಬುವದಕ್ಕಾಗುವದಿಲ್ಲ; ಇದು ಸಿದ್ಧಾಂತವು ಎಂದು ನಂಬಬೇಕಾದರೆ ಅವಕ್ಕೆ ಬೆಂಬಲವಾಗಿ ಏನಾದರೊಂದು ಸತ್ತರ್ಕವು ಇದ್ದೇ ಇರಬೇಕು ಎನಿಸುತ್ತದೆ

ಅನುಭವದ ವಿಷಯವೂ ಹೀಗೆಯೇ. ಅದೂ ಬೇರೆಬೇರೆಯಾಗುತ್ತಲೇ ಇರುತ್ತದೆ. ಇಂದ್ರಿಯಗಳಿಂದಾದ ಅನುಭವವು ಭ್ರಾಂತಿಯೆಂದೂ ಸರಿಯಾದ ಅನುಭವವೆಂದೂ ಎರಡು ಭಾಗವಾಗಿ ಕಂಡುಬರುತ್ತದೆ. ಇದು ಹಾವು; ಇದು

ಹಾವಲ್ಲ, ಹಗ್ಗ –ಎಂಬ ರೀತಿಯ ಬಾಧ್ಯಬಾಧಕಾನುಭವಗಳು ನಮಗೆಲ್ಲ ಆಗುತ್ತಿರುತ್ತವೆ. ಕನಸಿನಲ್ಲಿ ನಿಜವೇ ಎಂದು ನಿಶ್ಚಯವಾದದ್ದು ಎಚ್ಚರವಾಗುತ್ತಲೂ ಬಾಧಿತವಾಗಿಬಿಡುತ್ತದೆ, ಸ್ಥೂಲದೃಷ್ಟಿಯಿಂದ ನೋಡಿಮಾಡಿಕೊಂಡ ಎಷ್ಟೋ ಅನುಭವಗಳು ಜನಸಾಮಾನ್ಯಕ್ಕೆಲ್ಲ ಸಮಾನವಾದರೂ ಶಾಸ್ತ್ರೀಯವಾಗಿ ವಿಚಾರ ಮಾಡಿದಮೇಲೆ ಉಂಟಾಗುವ ನಿಶ್ಚಯದಿಂದ ಬಾಧಿತವಾಗುತ್ತವೆ. ಹೀಗೆಯೇ ಯೋಗಿಗಳಿಗೆ ಆಗುವ ಸೂಕ್ಷ್ಮಾನುಭವಗಳು ನಮ್ಮ ಸಾಮಾನ್ಯಾನುಭವವನ್ನು ಹೊಡೆದುಹಾಕಬಹುದು. ಆದರೆ ಆ ಅನುಭವಗಳು ಸರಿಯೊ, ಭ್ರಾಂತವೊ? ಎಂಬುದನ್ನು ಗೊತ್ತುಪಡಿಸುವದು ಹೇಗೆ? –ಎಂಬ ಶಂಕೆ ಇದ್ದೇ ಇದೆ. ಆದರೂ ಕೊನೆಯದೆನಿಸುವ ನಿಶ್ಚಿತಾನುಭವವೊಂದು ಇದ್ದೇ ಇರಬೇಕು– ಎಂದು ನಮಗೆಲ್ಲ ತೋರುತ್ತಲೇ ಇರುತ್ತದೆ.

ಹೀಗೆ ತರ್ಕಾನುಭವಗಳೆರಡಕ್ಕೂ ನಿಲುಗಡೆಯಿಲ್ಲವೆಂಬಂತೆ ತೋರುತ್ತಿರುವಲ್ಲಿ ಯಾವದನ್ನು ನಾವು ಸದ್ದರ್ಶನವೆನ್ನಬೇಕು? –ಎಂಬ ಪ್ರಶ್ನೆಯು ಎದ್ದು ಕೊಳ್ಳುವದು ಸಹಜವಷ್ಟೆ. ಈ ವಿಷಯದಲ್ಲಿ ಶಂಕರಾಚಾರ್ಯರು ಕೊಟ್ಟಿರುವ ಉತ್ತರವೇನೆಂದರೆ ವ್ಯಾಪಕವಾದ ಪೂರ್ಣಾನುಭವವೇ ಅನುಭವಗಳಿಗೆಲ್ಲ ಕೊನೆ; ಅದಕ್ಕೆ ಅನುಗುಣವಾದ ವ್ಯಾಪಕತರ್ಕವೇ ತರ್ಕಗಳಿಗೆಲ್ಲ ಕೊನೆ. ತರ್ಕ, ಅನುಭವ– ಎರಡರಲ್ಲಿಯೂ ಬಾಧ್ಯಬಾಧಕಭಾವವಿರುವದರಿಂದ ಬಾಧಕವಾದದ್ದೇ ಪ್ರಬಲ ಎಂದಿಟ್ಟುಕೊಂಡದ್ದರಿಂದ ಉಳಿದ ದರ್ಶನಗಳಿಗೆ ಈ ಸಿದ್ಧಾಂತವು ದಕ್ಕದೆಹೋಯಿತು. ಈಗ ಬಾಧಕವೆಂದು ತೋರುವದು ಮುಂದೆ ಬಾಧ್ಯವಾಗಬಾರದೇಕೆ? –ಎಂಬ ಪ್ರಶ್ನೆಗೆ ಆ ದರ್ಶನಗಳಲ್ಲಿ ಉತ್ತರವಿಲ್ಲ. ಎಷ್ಟೋ ದರ್ಶನಗಳು ಬಂದು ಕೆಲವುಕಾಲ ಜನರ ಮೇಲೆ ತಮ್ಮ ಪ್ರಭಾವವನ್ನು ಬೀರಿ– ಇತಿಹಾಸದಲ್ಲಿ ಪಟ್ಟಕ್ಕೇರಿದ ಅರಸನ ಆಳ್ವಿಕೆಯು ಅವನ ತರುವಾಯ ಜನರ ಸ್ಮೃತಿಪಥಕ್ಕೆ ದೂರವಾದಂತೆ – ಈಗ ಇತಿಹಾಸಕ್ಕೆ ಸೇರಿಹೋಗಿವೆ. 'ಇತಿಹಆಸ' ಹೀಗೆ ಆಯಿತಂತೆ –ಎಂಬ ಗುಂಪಿನವು ಅವು. ಪಶ್ಚಿಮದೇಶಗಳಲ್ಲಿಯೂ ಹೀಗೆಯೇ. ನಮ್ಮ ಕಾಲೇಜುಗಳ ಪ್ರೊಫೆಸರುಗಳು ಪ್ರತಿಯೊಬ್ಬ ತತ್ತ್ವಜ್ಞಾನಿಯ ಸಿದ್ಧಾಂತ, ಗುಣದೋಷವಿಮರ್ಶೆ– ಎಂಬ ಟಿಪ್ಪಣಿಗಳ ಸಂಕ್ಷೇಪವನ್ನು ವಿದ್ಯಾರ್ಥಿಗಳಿಂದ ಬರೆಯಿಸಿ ಹಳೆಯ ತತ್ತ್ವಶಾಸ್ತ್ರಜ್ಞರ ವಿಚಾರವನ್ನು ಮುಗಿಯಿಸುತ್ತಾರೆ.

ಶಂಕರಾಚಾರ್ಯರೂ ಒಂದಾನೊಂದು ಕಾಲದಲ್ಲಿ ಒಂದಾನೊಂದು ದೇಶದಲ್ಲಿದ್ದು ತಮ್ಮ ಶಾಸ್ತ್ರವನ್ನು ಹೇಳಿದರೆಂಬುದು ನಿಜ; ಆದರೆ ಅವರು ಉಪದೇಶಿಸಿರುವ ತತ್ತ್ವವು ದೇಶಕಾಲನಿಮಿತ್ತಗಳನ್ನು ಮೀರಿರುವ ಆತ್ಮನ ವಿಷಯವಾದದ್ದು. ಈ ಆತ್ಮನು ಸ್ವತಃಸಿದ್ಧವಾದ ಅನುಭವಸ್ವರೂಪನಾಗಿರುವದರಿಂದಲೂ ಕಾಲದೇಶಾದಿಗಳಿಗೂ ಸಾಕ್ಷಿಯಾಗಿರುವದರಿಂದಲೂ ಬಾಧ್ಯಬಾಧಕಕ್ಷೇತ್ರವನ್ನು ಮೀರಿರುತ್ತಾನೆ; ಈ ಅನುಭವಕ್ಕೆ ಹೊಂದುವ ತರ್ಕವೇ ವ್ಯಾಪಕತರ್ಕವು ಎಂದು ಒಪ್ಪಬೇಕಾಗುತ್ತದೆ. ಕಪಿಲರು ಸರ್ವಜ್ಞರಾದರೆ ಕಣಾದರೇಕಲ್ಲ? -ಎಂದು ಆಕ್ಷೇಪಕ್ಕೆ ಎಡೆಯಿರುವ ತರ್ಕವೂ ಅನುಭವವೂ ಕಾಲಪರಿಚ್ಛಿನ್ನವಾಗಿರುತ್ತವೆ. ಬೇರೆ ಬೇರೆಯ ದರ್ಶನಗಳ ಮತ್ತು ಮತಗಳ ಅನುಯಾಯಿಗಳು ಹೇಳುತ್ತಿರುವ ಯೋಗಾನುಭವಗಳು ಕೂಡ ಕಾಲಪರಿಚ್ಛಿನ್ನವೇ ಆಗಿರುವದರಿಂದ ಅವುಗಳನ್ನೂ ಪೂರ್ಣಾನುಭವವೆನ್ನಲಾಗದು ; ಅವುಗಳ ಆಧಾರದ ಮೇಲೆ ನಿಂತಿರುವ ತರ್ಕಗಳೂ ಆಬಾಧ್ಯವಾಗಲಾರವು.

ತತ್ತ್ವವಿಚಾರಕರ ತರ್ಕವೂ ಸಿದ್ಧಾಂತವೂ ಹೇಗೆ ಮಾರ್ಪಡುತ್ತಾ ಹೋಗುತ್ತದೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ತತ್ತ್ವಸ್ವರೂಪವು ಯಾವದು? -ಎಂಬುದನ್ನು ತಿಳಿಯುವದಕ್ಕೆ ಹೊರಟವರು ಯಾವ ಕಣ್ಣಿನಿಂದ ನೋಡುತ್ತಾರೋ ಅವರಿಗೆ ತತ್ತ್ವವೂ ಅದಕ್ಕನುಗುಣವಾಗಿಯೇ ಕಾಣುತ್ತದೆ. ಉದಾಹರಣೆಗೆ ತಾನು ಒಬ್ಬ ಪಾಂಚಭೌತಿಕಶರೀರಮಾತ್ರನೆಂದು ಎಣಿಸಿರುವವನಿಗೆ ಜಗತ್ತೆಲ್ಲವೂ ಭೌತಿಕವಾಗಿಯೇ ಕಾಣುವದು. ತಾನು ಪ್ರಾಣಶಕ್ತಿಯ ಸ್ವರೂಪನೆಂದು ತಿಳಿದುಕೊಂಡಿರುವವನಿಗೆ ಜಗತ್ತೆಲ್ಲವೂ ಪ್ರಾಣಪ್ರವಾಹವಾಗಿಯೇ ಕ್ರಿಯಾರೂಪವಾಗಿ ಕಾಣುವದು. ತಾನು ಮನಸ್ಸು ಅಥವಾ ವಿಜ್ಞಾನ ಎಂದು ತಿಳಿದುಕೊಂಡಿರುವವನಿಗೆ ಜಗತ್ತೂ ಮನಸಿಕತತ್ತ್ವವಾಗಿಯೇ ಗೋಚರವಾಗುತ್ತದೆ; ಅಂದರೆ ಜಗತ್ತೆಂಬುದು ಕೆಲವು ವಿಕಲ್ಪಗಳ ಅಥವಾ ಪ್ರತ್ಯಯವಿಶೇಷಗಳ ರಾಶಿಯೆಂದೇ ಕಾಣುವದು. ತಾನು ಭೋಕ್ತೃಸ್ವರೂಪನೆಂದು ತಿಳಿದವನಿಗೆ ಜಗತ್ತೂ ಸುಖದುಃಖಗಳ ಒಟ್ಟೆಂಬ ಭಾವನೆಯಾಗುವದು. ವೇದಾಂತದಲ್ಲಿ ಪಂಚಕೋಶವಿವೇಕವನ್ನು ಮಾಡಿರುವದಕ್ಕೆ ಇದೇ ಕಾರಣ. ಪಂಚಕೋಶಗಳಲ್ಲಿ ಒಂದೊಂದರಲ್ಲಿಯೂ ಆತ್ಮನೆಂಬ ಬುದ್ಧಿಯು ಬೇರೆಬೇರೆಯ ಹಂತದಲ್ಲಿ ಬುದ್ಧಿಗೆ ಹೊಳೆಯುತ್ತಿರುವದು. ಆದರೆ ಈ ಎಲ್ಲಾ

ಕೋಶಗಳಿಗೂ ಹೊರಚ್ಚಾಗಿ ಇವೆಲ್ಲವನ್ನೂ ನೋಡುತ್ತಿರುವ ಕೂಟಸ್ಥಸಾಕ್ಷಿಯ ದೃಷ್ಟಿಯಿಂದ ನೋಡಿದರೆ ಇಡಿಯ ಜಗತ್ತೇ ಸಚ್ಚಿದಾನಂದಸ್ವರೂಪವಾದ ಬ್ರಹ್ಮವಾಗುವದು. ಮನುಷ್ಯನು ಕಣ್ಣು, ಕಿವಿ, ಮೂಗು- ಮುಂತಾದವುಗಳ ಮೂಲಕ ವ್ಯಾಪಾರಮಾಡುವ ಇಂದ್ರಿಯಗಳ ತಾದಾತ್ಮ್ಯದಿಂದಲೇ ವ್ಯವಹರಿಸುವಾಗ ಅಥವಾ ಪ್ರಾಣಮನೋಬುದ್ಧಿಗಳ ತಾದಾತ್ಮ್ಯದಿಂದಲೇ ವ್ಯವಹರಿಸುವಾಗ ಅವನಿಗೆ ತನ್ನ ಪೂರ್ಣಸ್ವರೂಪವು ತಿಳಿಯಬರಲಾರದು. ದೇಹಾದಿಗಳೆಲ್ಲವನ್ನೂ- ಇಷ್ಟೇಕೆ? ಜಾಗ್ರತ್ಸ್ವಪ್ನಸುಷುಪ್ತಿಗಳೆಲ್ಲವನ್ನೂ- ಚಿನ್ಮಾತ್ರಸ್ವರೂಪದಿಂದ ವ್ಯಾಪಿಸಿರುವ ಆತ್ಮದೃಷ್ಟಿಯಿಂದಲೇ ನೋಡುವಾಗ ಎಲ್ಲವೂ ಬ್ರಹ್ಮ ರೂಪವಾಗಿರುವದು. ಅನುಭವಕ್ಕೇ ಮೊದಲಿನ ಸ್ಥಾನವನ್ನು ಕೊಟ್ಟ ನಮ್ಮ ದೇಶದ ದಾರ್ಶನಿಕರಿಗೇ ಈ ಪೂರ್ಣಾನುಭವದ ಕಲ್ಪನೆಯು ಬಾರದಿರುವಾಗ ತರ್ಕಪ್ರಧಾನರಾದ ವಿದೇಶೀಯತತ್ತ್ವವಿಚಾರಕರಿಗೆ ಅದು ಎಟುಕದೆ ಇದ್ದದ್ದು ಏನಾಶ್ಚರ್ಯ ? ವಸ್ತುವು ಸ್ವತಃ ಹೇಗಿರುವದು ( Thing-in-itself), ಪರಿಶುದ್ಧವಾದ ಸತ್ತೆಯು (Pure Being) ಯಾವದು? -ಎಂದು ಮುಂತಾಗಿ ತರ್ಕಿಸಿದ ಕ್ಯಾಂಟ್, ಹೆಗೆಲ್ ಮೊದಲಾದವರ ದರ್ಶನಗಳು ಸಾರ್ವತ್ರಿಕಾನುಭವಕ್ಕೆ ಹೊಂದುಗಡೆಯಾಗದೆ ಇರುವದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಮನಃಶಾಸ್ತ್ರದ ಬಾಲವನ್ನು ಹಿಡಿದು ಅವಸ್ಥಾತ್ರಯನ್ನು ವಿಚಾರಿಸಿದವರಿಗೆ ಅರಿವು (Consciousness), ಕೀಳರಿವು (Sub-conssciousness), ಮರವು (Unconsciousness) -ಎಂಬ ಅರಿವಿನ ಹಂತಗಳು ತೋರಿಯಾವೇ ಹೊರತು ಶಂಕರಭಗವತ್ಪಾದರವರು ಪ್ರಸ್ತಾಪಿಸಿರುವ ವೇದಾಂತದ ಪೂರ್ಣಾನುಭವದ ಸಾಮೀಪ್ಯವು ದೊರಕಲಾರದು. ಹೀಗಿ ರುವದರಿಂದ ಉಪನಿಷತ್ತಿನಲ್ಲಿ ಪ್ರತಿಪಾದಿತವಾಗಿರುವ ಅವಸ್ಥಾತ್ರಯದೃಷ್ಟಿಯ ಮಹಾತರ್ಕವನ್ನೂ ಸರ್ವ ಸಾಕ್ಷಿಯ ಪೂರ್ಣಾನುಭವವನ್ನೂ ಜಿಜ್ಞಾಸುಗಳಿಗೆ ತಿಳಿಸಿಕೊಟ್ಟಿರುವದು ಶಾಂಕರವೇದಾಂತದರ್ಶನದ ಅಸಾಧಾರಣೋಪಕಾರವಾಗಿ ರುತ್ತದೆ ಎಂಬುದನ್ನು ನಾವು ಮನದಂದುಕೊಳ್ಳಬೇಕು.

★★★★★

# ವೇದಾಂತವೂ ಬಾಹ್ಯವಿಜ್ಞಾನ ಶಾಸ್ತ್ರಗಳೂ

**10-05-1954**

**ಶ್ರೀಶ್ರೀಗಳವರು**

ಶಾಂಕರವೇದಾಂತವನ್ನು ಇತರ ವೇದಾಂತಪ್ರಕ್ರಿಯೆಗಳಿಗೂ ಮತಗಳಿಗೂ ದರ್ಶನಗಳಿಗೂ ಸಂಬಂಧಿಸಿ ವಿಮರ್ಶಿಸಿ ಮಾತಾಡಿದ್ದಾಗಿದೆ ; ಈ ದಿನ ಈ ವೇದಾಂತವನ್ನು ವಿಜ್ಞಾನಶಾಸ್ತ್ರಗಳಿಗೆ ಸಂಬಂಧಿಸಿ ಪರಿಶೀಲಿಸುವದಕ್ಕೆ ಹೊರಟಿರುತ್ತೇನೆ. ಇದು ವಿಜ್ಞಾನಶಾಸ್ತ್ರಗಳ ಯುಗವೆನಿಸಿಕೊಂಡಿದೆ. ಈಗಿನ ಕಾಲದಲ್ಲಿ ಸೈನ್ಸ್(Science) ಎಂಬ ಹೆಸರಿನಿಂದ ಪ್ರಖ್ಯಾತವಾಗಿರುವ ವಿಜ್ಞಾನಶಾಸ್ತ್ರಕ್ಕೆ ಒಪ್ಪಾಗದಿರುವದನ್ನು ವಿಚಾರಪರರಾದವರು ಯಾರೂ ಪರಿಗ್ರಹಿಸುವಂತೆ ಇಲ್ಲ. ಏಕೆಂದರೆ ಈ ಸೈನ್ಸುಗಳು ವಿಷಯವಿಚಾರವನ್ನು ಕೂಲಂಕಷವಾಗಿ ಮಾಡಿ ನಿರೀಕ್ಷಣಸಂವಾದೀಕರಣಗಳಿಂದ ತತ್ತ್ವನಿರ್ಧಾರವನ್ನು ಮಾಡುತ್ತಿವೆ ; ಅವುಗಳಿಂದ ಜನರಿಗೆ ವ್ಯವಹಾರದಲ್ಲಿ ಉಪಯುಕ್ತವಾಗಿರುವ ಅನೇಕ ಕಲೆಗಳೂ ಉದ್ಭವಿಸಿರುತ್ತವೆ. ಆದ್ದರಿಂದ ವೇದಾಂತವು ಈ ವಿಜ್ಞಾನಶಾಸ್ತ್ರಗಳಿಗೆ ಹೇಗೆ ಸಂಬಂಧಿಸಿದೆ ? -ಎಂಬುದನ್ನಿಷ್ಟು ಅವಶ್ಯವಾಗಿ ವಿಚಾರಮಾಡಬೇಕಾಗಿದೆ.

ಲಾಜಿಕ್ (Logic) ಎಂಬ ಹೆಸರಿನಿಂದ ಪ್ರಖ್ಯಾತವಾಗಿರುವ ತರ್ಕಶಾಸ್ತ್ರದ ವಿಷಯವಾಗಿ ಬರೆಯುವಾಗ ಒಬ್ಬ ಗ್ರಂಥಕರ್ತನು 'ಶಾಸ್ತ್ರಗಳ ಶಾಸ್ತ್ರವು' (Science of Science) ಎಂದು ಅದನ್ನು ಪ್ರಶಂಸಿಸಿರುತ್ತಾನೆ. ಇಂಗ್ಲಿಷಿನಲ್ಲಿ ಸೈನ್ಸುಗಳ ಹೆಸರುಗಳು ಬಹುಮಟ್ಟಿಗೆ 'ಲಜಿ' (Logy) ಎಂಬ ಶಬ್ದ ರೂಪವು ಕೊನೆಯಲ್ಲಿರುವ ಅಭಿಧಾನಗಳಾಗಿರುತ್ತವೆ. 'ಜಿ ಆಲಜಿ' (ಭೂಗರ್ಭಶಾಸ್ತ್ರ), 'ಬೈಆಲಜಿ' (ಪ್ರಾಣಶಾಸ್ತ್ರ), 'ಸೈಕಾಲಜಿ' (ಮನಃಶಾಸ್ತ್ರ), 'ಫಿಸಿಯಾಲಜಿ' (ಶಾರೀರಶಾಸ್ತ್ರ)- ಇತ್ಯಾದಿಯಾಗಿರುವ ಹೆಸರುಗಳಲ್ಲೆಲ್ಲ ಲಾಜಿಕ್ ಎಂಬ ತರ್ಕಶಾಸ್ತ್ರದ ಹೆಸರೇ ಇರುವದರಿಂದ ಅವು ತರ್ಕಶಾಸ್ತ್ರವಿಶೇಷಗಳೇ ಆಗಿರುತ್ತವೆಯೆಂಬುದು ಮಿಕ್ಕ ಶಾಸ್ತ್ರಗಳಿಗೂ ಒಪ್ಪು ಎಂದು ಆತನ ಅಭಿಪ್ರಾಯ. ಭೂಮಿ, ಪ್ರಾಣ, ಮನಸ್ಸು, ಶರೀರ -ಮುಂತಾದವುಗಳ ಸ್ವಭಾವವನ್ನು

ನಿರ್ಧರಿಸುವದಕ್ಕೆ ಉಪಯೋಗಿಸುವ 'ತರ್ಕವೇ ಆಯಾ ಶಾಸ್ತ್ರವಿಶೇಷವು ಎಂದು ಅವನ ಆಶಯ. ಇದು ನಿಜವಾದರೂ ಪಾಶ್ಚಾತ್ತ್ಯರ ತರ್ಕವೆಂಬುದು ಆಲೋಚನೆಯ ಆಕಾರಗಳನ್ನು ಮಾತ್ರ ಚರ್ಚಿಸುತ್ತದೆ ; ಅದಕ್ಕೆ ವಿಷಯವೇನೂ ಮುಖ್ಯವಲ್ಲ. ಉದಾಹರಣೆಗೆ 'ಅ' ಎಂಬುದು ಬಕ್ಕೆ ಸಮವಾಗಿದ್ದು ಬ ಎಂಬುದು ಕಕ್ಕೆ ಸಮನಾಗಿದ್ದರೆ, ಆಗ ಅ ಎಂಬುದು ಕ ಎಂಬುದಕ್ಕೆ ಸಮವಾಗಿರುತ್ತದೆ– ಎಂಬ ರೂಪದಲ್ಲಿ ನಾವು ತರ್ಕಮಾಡುವಲ್ಲಿ ಅ, ಬ, ಕ– ಎಂಬಿವುಗಳು ಯಾವ ವಸ್ತುವನ್ನು ಹೇಳುತ್ತವೆ ಎಂಬುದೇನೂ ಆ ಶಾಸ್ತ್ರಕ್ಕೆ ಅವಶ್ಯವಿಲ್ಲ. ತರ್ಕಶಾಸ್ತ್ರವು ಪ್ರತಿಜ್ಞಾವ್ಯಾಪ್ತಿ ದೃಷ್ಟಾಂತಗಳನ್ನು ಅವಲಂಬಿಸಿ ವಿಚಾರಮಾಡುವ ಕ್ರಮವನ್ನೂ ಹೇತ್ವಾಭಾಸಗಳನ್ನೂ ತಿಳಿಸುತ್ತದೆ ; ಅಷ್ಟರಮಟ್ಟಿಗೆ ಎಲ್ಲಾ ಶಾಸ್ತ್ರಗಳಿಗೂ ಅದರ ಅವಲಂಬನೆ ಬೇಕಾಗಿರುತ್ತದೆ ಎಂಬುದು ನಿಜವಾದರೂ ಶುದ್ಧತರ್ಕವು ತಾನುತಾನೇ ಯಾವ ಪುರುಷಾರ್ಥಕ್ಕೂ ಬರುವಂತಿಲ್ಲ.

ವೇದಾಂತಿಗಳೂ ತಮ್ಮ ಶಾಸ್ತ್ರಕ್ಕೆ ವಿಷಯವಾಗಿರುವ 'ಬ್ರಹ್ಮವಿದ್ಯೆಯು ಸರ್ವವಿದ್ಯಾಪ್ರತಿಷ್ಠ' ವಾಗಿರುವದೆಂದು ಹೇಳುತ್ತಾರೆ. ಇದು ನಿಜವಾದರೆ ಅದು ಈಗಿನ ಸರ್ವವಿಜ್ಞಾನಶಾಸ್ತ್ರಗಳಿಗೂ ಪ್ರತಿಷ್ಠೆಯಾಗಿರಬೇಕಲ್ಲವೆ? ಇಲ್ಲಿ ಬ್ರಹ್ಮ ವಿದ್ಯೆಯು ಪಾಶ್ಚಾತ್ತ್ಯತರ್ಕದಂತೆ ವಿಷಯಶೂನ್ಯವಾದ ಜ್ಞಾನದ ಆಕಾರಗಳನ್ನು ಮಾತ್ರ ಪರೀಕ್ಷಿಸುವದೆಂಬ ಅಭಿಪ್ರಾಯವೇನೂ ಇಲ್ಲ. ಏಕೆಂದರೆ ವೇದಾಂತವು ಬ್ರಹ್ಮವಿದ್ಯೆಯನ್ನು ತಿಳಿಸುತ್ತದೆ. ಬ್ರಹ್ಮವಿದ್ಯೆಯೆಂದರೆ ಬ್ರಹ್ಮದ ಜ್ಞಾನವು. ಈ ವಿದ್ಯೆಯು ಸರ್ವವಿದ್ಯಾಪ್ರತಿಷ್ಠವು, ಎಂದರೆ ಸರ್ವವಿದ್ಯೆಗಳೂ ಅಭಿವ್ಯಕ್ತವಾಗುವದಕ್ಕೆ ಇದೇ ಹೇತುವು; ಎಲ್ಲಾ ವಿದ್ಯೆಗಳೂ ತಮ್ಮ ಪರ್ಯವಸಾನದಲ್ಲಿ ಈ ವಿದ್ಯೆಯ ಗುರಿಯಲ್ಲಿಯೇ ತಮ್ಮ ಗುರಿಯನ್ನು ಅಡಕಮಾಡಿಕೊಳ್ಳಬೇಕಾಗಿದೆ ಎಂದರ್ಥ. ಇನ್ನೊಂದು ದೃಷ್ಟಿಯಿಂದ 'ಬ್ರಹ್ಮವಿದ್ಯೆಯು ಸರ್ವವಿದ್ಯಾಪ್ರತಿಷ್ಠವು' ಎಂದರೆ ಸರ್ವವಿದ್ಯೆಗಳಿಂದ ಅರಿಯಬೇಕಾಗಿರುವ ವಸ್ತುವು ಇದಕ್ಕೇ ವೇದ್ಯವಾಗಿರುತ್ತದೆ ಎಂದೂ ಹೇಳಬಹುದು. ವೇದಾಂತವು ತನಗೆ ಮೀಸಲಾಗಿರುವ ಒಂದಾನೊಂದು ತತ್ತ್ವವನ್ನು ಅರಿತರೆ ಎಲ್ಲವನ್ನೂ ಅರಿತಂತೆ ಆಯಿತು ಎಂದು ಹೇಳುತ್ತಿದೆ. ಇದು ಹೇಗೆ ಸಾಧ್ಯವೆಂದು ಅನೇಕರು ಆಶ್ಚರ್ಯಪಡುತ್ತಾರೆ. ವೇದಾಂತಿಗಳಿಗೆ ಈಗಿನ

ವಸ್ತುಶಾಸ್ತ್ರ, ಶಕ್ತಿಶಾಸ್ತ್ರ, ಮನಃಶಾಸ್ತ್ರ- ಮುಂತಾದವುಗಳೆಲ್ಲ ತಿಳಿಯುತ್ತದೆಯೆ? ಬ್ರಹ್ಮಜ್ಞಾನಿಗಳೆಂದರೆ ಎಲ್ಲಾ ವಿಷಯವನ್ನೂ ಬಲ್ಲ ಸರ್ವಜ್ಞರೆ? -ಎಂದು ಅನೇಕರು ಹಾಸ್ಯಮುಖದಿಂದ ಕೇಳುವದೂ ಉಂಟು.

ಆದ್ದರಿಂದ ವೇದಾಂತಿಗಳ ಅಭಿಪ್ರಾಯವನ್ನು ಸ್ವಲ್ಪ ಸ್ಪಷ್ಟಪಡಿಸುವದು ಅವಶ್ಯವು. ಸೈನ್ಸುಗಳು ತಮ್ಮತಮ್ಮ ಅಸಾಧಾರಣವಿಷಯವಾದ ಪದಾರ್ಥಗಳ ಬಾಹ್ಯಧರ್ಮಗಳು, ಅವುಗಳ ಸ್ವರೂಪ, ರಚನಾಕ್ರಮ- ಮುಂತಾದವುಗಳನ್ನು ಶೋಧಿಸಿರುವದು ನಿಜ. ಪದಾರ್ಥಶಾಸ್ತ್ರವು ಘನಪದಾರ್ಥ, ದ್ರವಪದಾರ್ಥ, ಅನಿಲವಸ್ತು, ಉಷ್ಣ, ಬೆಳಕು, ಸೂಚಿಕಾಂತಶಕ್ತಿ, ವಿದ್ಯುಚ್ಛಕ್ತಿ- ಎಂದು ಮುಂತಾಗಿ ಕಂಡುಹಿಡಿದಿರುವ ವಸ್ತುಧರ್ಮಗಳ ನಿಯಮವು ಆ ಶಾಸ್ತ್ರಕ್ಕೇ ಅಸಾಧಾರಣವಿಷಯವೆಂಬುದು ಸ್ಪಷ್ಟ. ರಸಾಯನಶಾಸ್ತ್ರದಲ್ಲಿ ಪರಮಾಣುಗಳು ಎಲೆಕ್ಟ್ರಾನ್, ಪ್ರೋಟಾನ್- ಮುಂತಾದವುಗಳ ಸ್ವಭಾವವನ್ನೂ ವಸ್ತುಗಳು ಸಂಯೋಗದಿಂದಲೂ ಮಿಶ್ರಣದಿಂದಲೂ ಪಡೆಯುವ ರೂಪವಿಶೇಷಗಳನ್ನೂ ಅವುಗಳ ಧರ್ಮಗಳನ್ನೂ ಶೋಧಿಸುವದು ಆ ಶಾಸ್ತ್ರಕ್ಕೇ ಮೀಸಲು. ಹೀಗೆಯೇ ಶಾರೀರಶಾಸ್ತ್ರ, ಮನಃಶ್ಯಾಸ್ತ್ರ, ನಕ್ಷತ್ರಶಾಸ್ತ್ರಾದಿಗಳ ವಿಚಾರವನ್ನು ತಿಳಿಯಬೇಕು. ಈ ಶಾಸ್ತ್ರಗಳು ಕಂಡುಹಿಡಿದಿರುವ ಚಿತ್ರವಿಚಿತ್ರವಾದ ಪ್ರಕೃತಿನಿಯಮಗಳೂ ಅವುಗಳ ಬಲದಿಂದ ಶಾಸ್ತ್ರಜ್ಞರು ನಿರ್ಮಿಸಿರುವ ಯಂತ್ರೋಪಕರಣಗಳೂ ಜನರ ವ್ಯವಹಾರಕ್ಕೆ ಕಲ್ಪಿಸಿಕೊಟ್ಟಿರುವ ಅದ್ಭುತವಾದ ಸೌಕರ್ಯಗಳೂ ಲೋಕವಿದಿತವಾಗಿದೆ. ಆದರೆ ಆ ಶಾಸ್ತ್ರಗಳ ವಾಸನೆಯಿಂದ ವಾಸಿತವಾದ ಬುದ್ಧಿಯಿಂದ ಈಗಿನ ಜಿಜ್ಞಾಸುಗಳು ಧರ್ಮ, ಪುಣ್ಯ, ಪಾಪ, ಆತ್ಮ- ಮುಂತಾದ ವಸ್ತುಗಳು ಎಲ್ಲಿವೆ? ವಿಜ್ಞಾನಶಾಸ್ತ್ರಗಳಿಗೆ ಅವು ಸಿಕ್ಕಿಯೇ ಇಲ್ಲವಲ್ಲ! ಎಂದು ಕೇಳುತ್ತಿರುವಾಗ ಆ ಶಾಸ್ತ್ರಗಳ ವಿಷಯಪರಿಮಿತಿಯನ್ನು ಅರಿಯದೆ ಇರುತ್ತರೆ. ಏಕೆಂದರೆ ಮೊದಲನೆಯವಾಗಿ ಈ ಶಾಸ್ತ್ರಗಳು ಹೊರಗಿನ ವಿಷಯಗಳನ್ನು ನೋಡುತ್ತವೆಯೇ ಹೊರತು ಸರ್ವಾಂತರನಾದ ಆತ್ಮನನ್ನು ಲೆಕ್ಕಕ್ಕೆ ತೆಗೆದುಕೊಂಡೇ ಇಲ್ಲ. ಎರಡನೆಯದಾಗಿ ಅವು ತಮ್ಮತಮ್ಮ ವಿಷಯಗಳ ಮೇಲುಭಾಗವನ್ನು ಮಾತ್ರ ಪರೀಕ್ಷಿಸಿ ದೃಶ್ಯವಿಶೇಷಗಳಿಗಿರುವ ಸಂಬಂಧವನ್ನು ಮಾತ್ರ ಪರಿಶೀಲಿಸುತ್ತವೆಯೇ ಹೊರತು ಆ ದೃಶ್ಯಗಳಿಗೆ ಮೂಲವು ಯಾವದೆಂಬುದನ್ನು ವಿಚಾರಕ್ಕಿಟ್ಟುಕೊಂಡಿಲ್ಲ. ಉದಾಹರಣೆ ಸಸ್ಯಶಾಸ್ತ್ರದಲ್ಲಿ ಮರಗಿಡಬಳ್ಳಿ- ಮುಂತಾದವುಗಳ ಜಾತಿ, ಸ್ವಭಾವ,

ಉಪಯೋಗ- ಇಂಥವುಗಳನ್ನು ವಿಚಾರಿಸಿರಬಹುದು ; ಆದರೆ ಆ ವೃಕ್ಷಾದಿಗಳ ಸೊಬಗು, ಬೆಳವಣಿಗೆ, ವೈವಿಧ್ಯ- ಮುಂತಾದವುಗಳ ಮೂಲವು ಯಾವದು ?- ಎಂಬುದು ಆ ಶಾಸ್ತ್ರಕ್ಕೆ ಬೇಡ. ಪ್ರಾಣಶಾಸ್ತ್ರ, ಮನಃಶಾಸ್ತ್ರ ಮುಂತಾದವುಗಳಿಗೂ ಹೀಗೆಯೇ. ಆದರೆ ವೇದಾಂತವು ತನ್ನ ಅಸಾಧಾರಣವಿಷಯವೆಂದು ಆರಿಸಿಕೊಂಡಿರುವ ಆತ್ಮ ವಸ್ತುವು ಸ್ವತಃಸಿದ್ಧವಾಗಿದ್ದು ಅದನ್ನವಲಂಬಿಸಿಯೇ ನಮ್ಮೆಲ್ಲ ಕಾರ್ಯಕರಣಗಳೂ ಹೊರಗಿನ ವಸ್ತುಗಳೂ ಸ್ವರೂಪಸ್ಥಿತಿ ಸ್ವಭಾವಗಳನ್ನು ತೋರ್ಪಡಿಸಿಕೊಳ್ಳುತ್ತಿರುತ್ತವೆ. ಈ ದೃಷ್ಟಿಯಿಂದ ನೋಡಿದರೆ ಆತ್ಮನನ್ನು ಅರಿತರೆ ಮಿಕ್ಕೆಲ್ಲದರ ಜೀವಾಳವನ್ನೇ ಅರಿತಂತೆ ಆಗುತ್ತದೆ ಎಂಬುದು ಬರಿಯ ಜಂಬದ ಮಾತಲ್ಲವೆಂದಾಗುತ್ತದೆ. ಸೈನ್ಸು ಎಂಬ ಶಬ್ದಕ್ಕೆ ಜ್ಞಾನವೆಂಬ ಹೆಸರು. ತಾನು ಪ್ರತಿಪಾದಿಸುವದಕ್ಕೆ ಹೊರಟಿರುವ ವಸ್ತುವಿನ ಪೂರ್ಣಜ್ಞಾನವಾಗಲಿ, ಆ ಜ್ಞಾನದ ತತ್ತ್ವದ ಜ್ಞಾನವಾಗಲಿ, ಪೂರ್ಣವಾಗುವವರೆಗೆ ಅದು ಅನ್ವರ್ಥವಾಗಿ ಜ್ಞಾನವೆನಿಸೀತೆ? ವಿಜ್ಞಾನಶಾಸ್ತ್ರದವರು ಯಾರೂ ತಮ್ಮ ತಿಳಿವಳಿಕೆಯು ಈ ಅರ್ಥದಲ್ಲಿ ಪೂರ್ಣವಾಗಿರುವದೆಂದು ಹೇಳಿಕೊಂಡಿಲ್ಲ.

ಇನ್ನೊಂದು ಮಾತು. ವಿಜ್ಞಾನಶಾಸ್ತ್ರಗಳು ಜಾಗ್ರದವಸ್ಥೆಯ ವ್ಯವಹಾರಕ್ಕೆ ಬೇಕಾಗುವಷ್ಟೇ ತಿಳಿವಳಿಕೆಯನ್ನು ಸಂಪಾದಿಸುವದಕ್ಕೆ ಹೊರಟಿವೆ. ಅವು ಅವಸ್ಥಾತ್ರಯವನ್ನು ವಿಚಾರಮಾಡುವಾಗಲೂ ಆ ವ್ಯವಹಾರದ ದೃಷ್ಟಿಯಿಂದಲೇ ವಿಚಾರಮಾಡುತ್ತಿವೆ. ಆದರೆ ವೇದಾಂತವು ಅವಸ್ಥಾತ್ರಯವನ್ನು ನಿಷ್ಪಕ್ಷಪಾತದೃಷ್ಟಿಯಿಂದ ಪರೀಕ್ಷಿಸಿ ಇಡಿಯ ದೃಶ್ಯಜಾತದ ತತ್ತ್ವವನ್ನೂ ಆ ದೃಶ್ಯಗಳನ್ನು ಸಾಕ್ಷಿಯಾಗಿ ನೋಡುತ್ತಿರುವ ಆತ್ಮನ ತತ್ತ್ವವನ್ನೂ ಅನುಭವಾನುಸಾರವಾಗಿ ನಿರ್ಧರಿಸಿರುತ್ತದೆ. ಹೀಗೆ ನೋಡಿದರಂತೂ ವೇದಾಂತವು ಪೂರ್ಣಜ್ಞಾನವನ್ನು ಗೊತ್ತುಮಾಡುವ ಶಾಸ್ತ್ರವೆಂದೇ ಆಗುತ್ತದೆ. ಈ ಎಲ್ಲಾ ಕಾರಣಗಳಿಂದ ವೇದಾಂತವನ್ನು ಅನ್ವರ್ಥವಾಗಿಯೂ ವಿಜ್ಞಾನಶಾಸ್ತ್ರಗಳ ವಿಜ್ಞಾನಶಾಸ್ತ್ರ (Science of Sciences) ಎಂದು ಕರೆಯಬಹುದು. ಆದ್ದರಿಂದ ಬ್ರಹ್ಮವಿದ್ಯೆಯು 'ಸರ್ವವಿದ್ಯಾಪ್ರತಿಷ್ಠ' ವಾದ ವಿದ್ಯೆ ಎಂದು ಉಪನಿಷತ್ತುಗಳಲ್ಲಿ ಹೇಳಿರುವದೊಂದು ನಿತ್ಯಸತ್ಯವಾಗಿದೆ.

★★★★★

# ವೇದಾಂತವೂ ಸಮಾಜವೂ

**11-5-54**

**ಶ್ರೀಗಳು**

ವೇದಾಂತವನ್ನು ವಿಜ್ಞಾನಶಾಸ್ತ್ರಗಳಿಗೆ ಸಂಬಂಧಿಸಿ ನಿನ್ನೆಯದಿನ ಕೆಲವು ಮಾತುಗಳನ್ನು ಹೇಳಿದ್ದಾಗಿದೆ. ಈ ದಿನ ಸಮಾಜಕ್ಕೆ ಸಂಬಂಧಿಸಿ ವೇದಾಂತವನ್ನು ವಿಮರ್ಶಿಸಬೇಕೆಂದಿರುತ್ತೇನೆ. ವಿಜ್ಞಾನಶಾಸ್ತ್ರಗಳು ಬೆಳೆದಂತೆಲ್ಲ ಹೊಸ ಹೊಸ ಶೋಧನೆಗಳಾಗಿರುವವು; ಆ ಶೋಧನೆಗಳ ಮತ್ತು ಯಂತ್ರನಿರ್ಮಾಣಗಳ ಫಲವಾಗಿ ಭೋಗಸಾಮಗ್ರಿಗಳು ಹೆಚ್ಚುವವು. ಜೀವನದ ಮಟ್ಟವು ಹೆಚ್ಚುವದು. ಮನುಷ್ಯನೆಂದರೆ ಶರೀರವೇ; ಪ್ರಾಣವನ್ನೂ ಮನಸ್ಸನ್ನೂ ಇದಕ್ಕೆ ಉಪಕರಣವಾಗಿ ಉಪಯೋಗಿಸಿಕೊಳ್ಳಬೇಕು. ಜೀವನಸೌಕರ್ಯಗಳನ್ನೂ ಶರೀರಕ್ಕೆ ಆಯಾಸವಾಗದಂತೆ ಬೇಕಾದದ್ದನ್ನು ಮಾಡಿಕೊಳ್ಳುವ ಉಪಾಯ ವಿಶೇಷಗಳನ್ನೂ ಹೆಚ್ಚಿಸಿಕೊಳ್ಳಬೇಕು- ಎಂಬುದು ಜನರ ಜೀವನದ ಗುರಿಯಾಗುವದು.

ಆದರೆ ಮನುಷ್ಯನ ಸಂಪಾದನೆಯು ಹೆಚ್ಚಾದಂತೆ ಅವನಿಗೆ ಭೋಗವಿಲಾಸಗಳ ಆವಶ್ಯಕತೆಯೂ ಹೆಚ್ಚಾಗಿಬಿಟ್ಟಿರುತ್ತದೆ. ಈಗ ಹಳೆಯ ಆಟಪಾಟಗಳು ಜನರಿಗೆ ಸಾಲವು; ಅವರಿಗೆ ಹೊಸಹೊಸ ವಿನೋದಗಳು ಬೇಕಾಗಿವೆ. ರೇಡಿಯೊ, ಸಿನೆಮ, ವೃತ್ತಾಂತಪತ್ರಿಕೆಗಳು, ಕಾರುಗಳು, ರೈಲು, ಏರೋಪ್ಲೇನುಗಳು-ಮುಂತಾದವುಗಳಿಂದ ಶೀಘ್ರಪ್ರಯಾಣಮಾಡಿ ದೇಶಸಂಚಾರಮಾಡುವದು-ಮುಂತಾದ ಮನೋರಂಜಕಸಾಮಗ್ರಿಗಳು ಹೆಚ್ಚುಹೆಚ್ಚಾಗಿ ಬೇಕಾಗುತ್ತಿವೆ. ಇದರಿಂದ ದುಂದುವೆಚ್ಚಗಳು ಅಗಣಿತವಾಗಿಬಿಟ್ಟಿವೆ. ಭೋಗಗಳಿಂದ ರೋಗಗಳು, ಅವುಗಳ ನಿವಾರಣೆಗಾಗಿ ವೈದ್ಯರುಗಳು- ಇವೆಲ್ಲ ನಿರ್ಮಾಣವಾಗಬೇಕಾಗಿದೆ. ನಮ್ಮ ಊಟ, ಉಡಿಗೆ, ಆಚಾರ, ವಿಚಾರ, ಸಂಚಾರ-ಎಲ್ಲಕ್ಕೂ ಒಂದು ಹೊಸ ರೂಪು ಬಂದಿದೆ. ಇವುಗಳಿಗೆ ಬೇಕಾದ ವೆಚ್ಚಕ್ಕೆ ನಾವು ಎಷ್ಟುದುಡಿದರೂ ಸಾಲದಂತಾಗಿಬಿಟ್ಟಿದೆ.

ಸಮಾಜದ ಕಣ್ಣು ಹೀಗೆ ಇಹಲೋಕದ ಭೋಗದ ಕಡೆಗೇ ತಿರುಗಿ ಬಿಟ್ಟಿರುವದರಿಂದ ತಮ್ಮ ಚುರುಕಾದ ಬುದ್ಧಿಯನ್ನು ಆಸ್ತಿಕ್ಯದಮೇಲೆ ಹಲ್ಲೆಹತ್ತುವ ಯುಕ್ತಿಗಳ ಕಾರುಖಾನೆಯಾಗಿ ಮಾಡಿಕೊಂಡುಬಿಡುವಂತಾಯಿತು. ಜನ್ಮಾಂತರವನ್ನು ನೋಡಿರುವವರು ಯಾರು? ಲೋಕಾಂತರವನ್ನು ಕಂಡವರು ಯಾರು? ಧರ್ಮವೆಂದರೇನು? ದೇವರು ಎಲ್ಲಿದ್ದಾನೆ? ಗಂಗೆಯ ನೀರಿನಲ್ಲಿ ಪಾವಿತ್ರ್ಯವೇನು? ಅದರಲ್ಲಿಯೂ ಆಮ್ಲಜನಕ, ಜಲಜನಕವೇ ಅಲ್ಲವೆ, ಇರುವದು? - ಇಂಥ ಕುತರ್ಕಗಳು ಈಗ ಎಲ್ಲೆಲ್ಲಿಯೂ ಎದ್ದುಕೊಂಡಿವೆ. ಆದರೆ ಜನರಿಗೆ ಇದರ ಜೊತೆಗೆ ಶರೀರೇಂದ್ರಿಯಮನಸ್ಸುಗಳ ದೌರ್ಬಲ್ಯ, ಸೋಮಾರಿತನ, ಪೈಪೋಟಿ, ಒಬ್ಬರಲ್ಲೊಬ್ಬರಿಗೆ ಸಂಶಯ- ಇವುಗಳೆಲ್ಲ ಬೆಳೆದುಕೊಳ್ಳುತ್ತಿವೆ. ಸೂಕ್ಷ್ಮವಿಚಾರದಲ್ಲಿ ಅಜ್ಞತೆ, ಅಶ್ರದ್ಧೆ, ಅನಾದರ- ಇವುಗಳು ಹೆಚ್ಚಿಕೊಳ್ಳುತ್ತಿವೆ. ವಿಜ್ಞಾನಶಾಸ್ತ್ರದ ತಿಳಿವಳಿಕೆಯ ಸೋಗಿನಲ್ಲಿ ಮತತತ್ತ್ವವಿಚಾರಗಳಿಗೆ ಬೆಲೆಯೇ ಇಲ್ಲವೆಂದು ಧಾರಳವಾಗಿ ಹೇಳುವವರೇ ಬಲುಮಂದಿ. ಕೆಲವರು ಗೌರವಸ್ಥರೆನ್ನಿಸಿಕೊಂಡಿರುವವರು ಹೀಗೆಲ್ಲ ತಿರಸ್ಕಾರದ ಮಾತುಗಳನ್ನು ಆಡದಿದ್ದರೂ ಗಾಂಭೀರ್ಯದ ಮುಖಮುದ್ರೆಯನ್ನು ತೋರಿಸಿಕೊಂಡಿದ್ದು ಹೊಸನಾಗರಿಕತೆಯ ಉಪಾಸಕರಾಗಿಯೇ ಜೀವನವನ್ನು ಮಾಡುತ್ತಿರುತ್ತಾರೆ. ದೇವರು, ಪರಲೋಕ, ಆತ್ಮ-ಮುಂತಾದ ಮಾತುಗಳು ಕಿವಿಗೆ ಬಿದ್ದಾಗ ಹುಸಿನಗೆಯನ್ನು ಪ್ರಕಟಿಸುತ್ತಾರೆ; ಸಾಧುಸಂತರು, ಮಹಾತ್ಮರು- ಮುಂತಾದವರ ಬಗ್ಗೆ ಔದಾಸೀನ್ಯವನ್ನು ವಹಿಸಿ ಪ್ರಪಂಚದಲ್ಲಿ ಅಂಥವರು ಇಲ್ಲವೇ ಇಲ್ಲವೇನೋ ಎಂಬಂತೆ ವರ್ತಿಸುತ್ತಿದಾರೆ.

ಆದರೆ ಇದೆಲ್ಲ ಇದ್ದೂ ಇಲ್ಲವಾದರೂ ಈಗ ಇನ್ನೊಂದು ಉಪಾಸ್ಯದೇವತೆ ಎದ್ದುಕೊಂಡಿದೆ. ಅದಕ್ಕೆ ಸಮಾಜವೆಂದು ಹೆಸರು. ಸಮಾಜದವರು ಹೇಗೆ ನಡೆಯುತ್ತಾರೋ ವ್ಯಕ್ತಿಗಳೂ ಹಾಗೆ ನಡೆಯಬೇಕು, ಹತ್ತೂಜನರಂತೆ ನಾನು ನಡೆಯದಿದ್ದರೆ ಹೇಗೆ?- ಎಂಬ ಭೀತಿಯೊಂದು ನಮ್ಮೆಲ್ಲರನ್ನೂ ಆವರಿಕೊಂಡು ಬಿಟ್ಟಿದೆ. ಈಶ್ವರನಿದಾನೆ ಎಂಬುದರಲ್ಲಿ ನಮಗೆ ನಂಬಿಕೆಯಿಲ್ಲ ; ಆದರೆ ಹತ್ತು ಜನ, ಸಮಾಜ? ಅದಕ್ಕೆ ಅವಶ್ಯವಾಗಿ ಹೆದರಬೇಕು. ವ್ಯಕ್ತಿ ಎಂದರೇನೆಂಬುದು ನಮಗೆಲ್ಲ ತಿಳಿದಿದೆ ; ಆದರೆ ಸಮಾಜವೆಂದರೆ ಯಾವದು?

ಸಮಾಜವೆಂಬುದೊಂದು ಭೂತವಾಗಿಬಿಟ್ಟಿದೆ; ಅದು ನಮಗೆ ಕಾಣಿಸದೆ ಇದ್ದರೂ ನಮ್ಮನ್ನೆಲ್ಲ ಕಾಡುತ್ತಿದೆ. ಊಟ, ಉಡಿಗೆ, ಮಾತು, ಕಥೆ, ಅಭಿಪ್ರಾಯ- ಇದರಲ್ಲೆಲ್ಲ ನಾವು ಸಮಾಜದಂತೆ ನಡೆಯಬೇಕು. ನಾನು ಒಮ್ಮೆ ಹುಬ್ಬಳ್ಳಿಯಿಂದ ಪೂನಾಕ್ಕೆ ಹೋಗಬೇಕಾಗಿತ್ತು. ಅಲ್ಲಿಯವರೊಬ್ಬರು ತನ್ನ ಸ್ನೇಹಿತರಿಗೆ ನನ್ನ ಪರಿಚಯದ ಕಾಗದವನ್ನು ಬರೆಯುವಾಗ- 'ಇವರು ಮಡಿಯಸ್ವಾಮಿಗಳು, ಇವರನ್ನು ನೋಡಿಕೊಳ್ಳಿ' ಎಂದು ಬರೆದಿದ್ದರು! ಹಿಂದಕ್ಕೆ ಅಪರಾಧದ ತಂಡಗಳು (Criminal tribes) ಎಂದು ಕೆಲವು ಜನರನ್ನು ಕಾಣುತ್ತಿದ್ದಂತೆ ಮಡಿಯವರನ್ನು ಯಾವದೋ ಒಂದು ಅಪರಾಧಿಗಳ ಗುಂಪಿಗೆ ಈಗಿನ ಸಮಾಜವು ಸೇರಿಸಿದೆಯೊ, ಏನೊ!- ಎಂದುಕೊಂಡೆ. ಸಮಾಜವು ಸ್ನಾನಮಾಡಬೇಡ- ಎಂದರೆ ನಾವು ಬಿಟ್ಟುಬಿಡಬೇಕಷ್ಟೆ ?

ಸಮಾಜದೊಳಗೆ ರಾಜಕೀಯವಿಚಾರವೂ ಸೇರಿದೆ. ಹಿಂದೆ ಧರ್ಮಶಾಸ್ತ್ರಗಳ ಆಳಿಕೆಯ ಕಾಲ; ಆಗ ರಾಜರುಗಳಲ್ಲಿ ದೈವಿಕಭಾವನೆಯನ್ನಿಡಬೇಕು ಎಂದು ಶಾಸ್ತ್ರಕಾರರು ಬರೆದಿದ್ದರು, ರಾಜರುಗಳು ಶಾಸ್ತ್ರದಂತೆ ನಡೆಯಬೇಕು ಎಂದೂ ಅವರು ಅಭಿಪ್ರಾಯಪಟ್ಟಿದ್ದರು. ಆಗ ಧರ್ಮಾಧರ್ಮಗಳನ್ನು ಶಾಸ್ತ್ರದಂತೆ ನಡೆಯಿಸಬೇಕಾಗಿತ್ತು. ಆದರೆ ಈಚೆಗೆ ಶಾಸ್ತ್ರಗಳು ಮೂಲೆಗೆ ಬಿದ್ದಿವೆ; ರಾಜರುಗಳ ಆಳ್ವಿಕೆಯು ಹೋಗಿ ಪ್ರಜಾಸತ್ತೆಯ ರಾಷ್ಟವು ಏರ್ಪಟ್ಟಿದೆ. ರಾಷ್ಟಪತಿಗಳನ್ನು ಪ್ರಜೆಗಳು ಆರಿಸಬೇಕು. ಶಾಸನಪದ್ಧತಿಗೆ ಕೆಲವು ನಮ್ಮದೇ ಆದ ನಿಬಂಧನೆಗಳನ್ನು ಮಾಡಿಕೊಂಡಿರುತ್ತೇವೆ. ಈಗ ಹತ್ತೂಜನರ ಕಾನೂನು ಎಲ್ಲರನ್ನೂ ಆಳುತ್ತಿದೆ. ಬಹುಜನಮತದಂತೆ ಈ ಕಾನೂನನ್ನು ಮಾರ್ಪಡಿಸಬಹುದಾಗಿಬಂದಿದೆ. ಪ್ರಜೆಗಳ ಮತವು ಯಾವಾಗ ಹೇಗೆ ಬದಲಾಯಿಸುವದು? -ಎಂಬುದನ್ನು ನಿರ್ಣಯಿಸುವದು ಕಷ್ಟ. ವಯಸ್ಕರಾದವರಿಗೆಲ್ಲ ರಾಜಕಾರಣಧುರೀಣರನ್ನು ಆರಿಸುವ ಅಧಿಕಾರ ಬಂದಿದೆ; ಅವರಿಗೆಲ್ಲ ಸಮಾನವಾದ ಹಕ್ಕಿದೆ, ಆದರೆ ಅವರಿಗೆಲ್ಲ ರಾಜ್ಯಶಾಸನದ ತಿಳಿವಳಿಕೆಯು ಸಮಾನವಾಗಿದೆ ಎಂದು ನಾವುಗಳು ಯಾರೂ ಒಪ್ಪುವಂತಿಲ್ಲ. ಪ್ರಜಾಸತ್ತೆಯ ರಾಜ್ಯಗಳು ಕೆಲವು ಅವ್ಯವಸ್ಥೆಗೆ ಬಂದಿವೆ. ಈ ದಿವಸ ಇಂಥಲ್ಲಿ ಮುಖ್ಯಮಂತ್ರಿಗಳನ್ನು ಬಾಯಿತುಂಬ ಹೊಗಳಿ ನಾಳೆಯ ದಿನ ಸೆರೆಯಲ್ಲಿಟ್ಟರೆಂಬ ಸುದ್ದಿಗಳು ವೃತ್ತಾಂತಪತ್ರಿಕೆಗಳಲ್ಲಿ ಬರುತ್ತಿವೆ! ರೋಗಿ

ಗಳೆಲ್ಲರೂ ಸೇರಿ ಜ್ವರ ಬಂದರೂ ಮೊಸರನ್ನವನ್ನು ತಿನ್ನಬಹುದೆಂದಾಗಲಿ, ಇಂಥವರೇ ನಮಗೆ ವೈದ್ಯರಿರಬೇಕೆಂದಾಗಲಿ, ಬಹುಮತದಿಂದ ನಿರ್ಣಯಮಾಡಬಹುದೆಂದು ನಾವು ಯಾರಾದರೂ ಒಪ್ಪುತ್ತೇವೆಯೆ ? ರಾಜ್ಯಪದ್ಧತಿಯಲ್ಲಿ ಹಿಂದಿನ ರಾಜರ ಆಳ್ವಿಕೆಯು ಸರಿಯೊ, ಈಗಿನ ಪ್ರಜಾಸತ್ತಾತ್ಮಕ ರಾಜ್ಯವು-ಅಥವಾ ಕೆಲವು ರಾಷ್ಟ್ರಗಳಲ್ಲಿರುವ ಕೂಲಿಕಾರರ ರಾಜ್ಯವು- ಸರಿಯೊ ಎಂಬುದನ್ನು ಹೇಗೆ ನಿರ್ಣಯಿಸುವದು ? ಅದಕ್ಕೆ ಬಹುಮತವನ್ನು ಕೂಡಿಸುವದಕ್ಕೆ ಹೊರಟರೆ ಸರಿಯಾದೀತೊ ?

ಅಂತೂ ಈಗಿನ ನಮ್ಮ ಕಣ್ಣು ವಿಜ್ಞಾನಶಾಸ್ತ್ರದ ಕಣ್ಣು; ಈ ಕಣ್ಣಿನಿಂದ ನೋಡಿದರೆ ನಿರ್ಜೀವಪದಾರ್ಥಗಳಿಗಾಗಲಿ ಯಂತ್ರಗಳಿಗಾಗಲಿ ಇರುವ ಬೆಲೆಯೂ ಪ್ರಾಣಿಗಳಿಗೆ ಇಲ್ಲ, ಮನುಷ್ಯನ ಪರಮಾರ್ಥಸ್ವಭಾವಕ್ಕಂತು ತೀರ ದೂರದ ಬೆಲೆ! ಈ ದೃಷ್ಟಿಯ ವ್ಯವಹಾರವು ನಮ್ಮ ಸಮಾಜವನ್ನು ಎಲ್ಲಿಗೋ ತಂದು ಮುಟ್ಟಿಸಿಬಿಟ್ಟಿದೆ! ಈಗಿನ ಕಷ್ಟಪರಂಪರೆಗಳಿಗೆ ಪರಿಹಾರವನ್ನು ಯಾರೂ ಹೇಳುವವರಿಲ್ಲವಾಗಿದೆ!

ಈಗ ಈ ವಿಷಯಕ್ಕೆ ವೇದಾಂತದಲ್ಲಿ ಯಾವ ಸೂಚನೆ ಸಿಕ್ಕುತ್ತದೆಯೋ ನೋಡೋಣ. ವೇದಾಂತದ ದೃಷ್ಟಿಯಲ್ಲಿ ವ್ಯವಹಾರವು ಮೂಲತಃ ವ್ಯಕ್ತಿಯ ಅಭಿವೃದ್ಧಿಗೇ ಸೇರಿದ್ದು. ಪ್ರತಿಯೊಬ್ಬನೂ ತನ್ನ ಪರಮಾರ್ಥಸ್ವರೂಪವನ್ನು ತಿಳಿದುಕೊಳ್ಳುವದು ಅತ್ಯವಶ್ಯ ; ಅದು ಬರಿಯ ಇಂದ್ರಿಯಗಳ ಮೂಲಕವಾಗಿ ಬರುವ ತಿಳಿವಳಿಕೆಗೆ ಗೋಚರವಾಗತಕ್ಕದ್ದಲ್ಲ. ಆದರೂ ಪ್ರತಿಯೊಬ್ಬನಿಗೂ ಆತ್ಮನು, ತನ್ನ ಪರಮಾರ್ಥಸ್ವರೂಪವು, ಒಂದು ಇದೆ ಎಂಬುದು ನಿಶ್ಚಯವಾಗಿಬಿಟ್ಟಿದೆ. ಅದನ್ನು ಇಲ್ಲ ಎನ್ನುವದಕ್ಕೆ ಆಗುವಂತಿಲ್ಲ. ಅದು ಹೊರಗಿನ ಪದಾರ್ಥಗಳಂತೆ ಬರಿಯ ಜಾಗ್ರದವಸ್ಥೆಯಲ್ಲಿ ಮಾತ್ರವೇ ತೋರತಕ್ಕದ್ದಲ್ಲ. ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಮೂರವಸ್ಥೆಗಳಲ್ಲಿಯೂ ಇರುತ್ತದೆ. ಹೆಂಗಸರು, ಗಂಡಸರು, ಹುಡುಗರು, ದೊಡ್ಡವರು- ಎಲ್ಲರಲ್ಲಿಯೂ ಇದೆ. ಅತ್ಯಂತ ಸುನಿಶ್ಚಿತವಾದ ಅದರ ತಿಳಿವಳಿಕೆಯೇ ನಿಜವಾದ ಜ್ಞಾನ ; ಆ ತಿಳಿವಳಿಕೆಗೇ ಮಿಕ್ಕದ್ದೆಲ್ಲವನ್ನೂ ಸಹಾಯಕವಾಗಿ ಮಾಡಿಕೊಳ್ಳಬೇಕು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಅಭಿವೃದ್ಧಿಗಾಗಿ ಈ ಜ್ಞಾನವನ್ನು ಸಂಪಾದಿಸುವದಕ್ಕೆ ಅನುಕೂಲವಾಗಿಯೇ

ತನ್ನ ಆಚಾರವಿಚಾರಗಳನ್ನಿಟ್ಟುಕೊಳ್ಳಬೇಕು. ಅದಕ್ಕೆ ತಕ್ಕ ಆಚಾರವಿಚಾರಗಳನ್ನಿಟ್ಟುಕೊಳ್ಳುವವರೆಲ್ಲ ಒಂದು ಸಮಾಜದವರು. ಇದರ ತಿಳಿವಳಿಕೆಯೇ ಜ್ಞಾನ, ಆ ಜ್ಞಾನಕ್ಕೆ ಬೇಕಾದ ನಡೆನುಡಿಗಳೇ ಧರ್ಮ. ಈ ಧರ್ಮವನ್ನನುಸರಿಸುವದಕ್ಕೇ ತಮ್ಮ ಜೀವನವನ್ನು ಧಾರೆಯೆರೆದಿರುವ ಮಹಾತ್ಮರೇ ಬ್ರಾಹ್ಮಣರು; ಅವರ ಉಪದೇಶಕ್ಕೇ ಕಿವಿಗೊಟ್ಟು ಈ ಧರ್ಮವನ್ನು ರಕ್ಷಣೆಮಾಡುವದಕ್ಕೆಂದು ತಮ್ಮ ಜೀವನವನ್ನು ವಿನಿಯೋಗಿಸುವವರು ಕ್ಷತ್ರಿಯರು; ಈ ಧರ್ಮವನ್ನೇ ಅನುಸರಿಸುವವರಿಗೆ ಬೇಕಾದ ಐಹಿಕಸೌಕರ್ಯಗಳನ್ನು ಒದಗಿಸುವದರಲ್ಲಿ ನಿರತರಾಗಿರುವವರು ವೈಶ್ಯರು, ಈ ಮೂರು ಪಂಗಡದವರಿಗೂ ಸಹಾಯಮಾಡುವವರು ಶೂದ್ರರು; ಮಿಕ್ಕವರು ಈ ಧರ್ಮಕ್ಷೇತ್ರಕ್ಕೆ ಹೊರತಾದವರು. ಹಿಂದಿನ ಕಾಲದ ವರ್ಣಾಶ್ರಮಧರ್ಮಗಳಲ್ಲಿ ಈ ಬಗೆಯ ಏರ್ಪಾಡನ್ನು ಎಷ್ಟರಮಟ್ಟಿಗೆ ಆಚರಣೆಗೆ ತಂದಿತ್ತೋ ಅದನ್ನು ನಾವು ವೈದಿಕವಾಙ್ಮಯದ ಇತಿಹಾಸದಿಂದ ತಿಳಿದುಕೊಳ್ಳಬೇಕಾಗಿವೆ. ತತ್ತ್ವವು ಸಮಾಜಕ್ಕಾಗಿಯಲ್ಲ, ಸಮಾಜವೇ ತತ್ತ್ವಕ್ಕೆ- ಎಂಬ ನಿಲವು ಜನರಿಗೆ ಬಂದರೆ ಅಂಥದ್ದೊಂದು ಆದರ್ಶಸಮಾಜವನ್ನು ರಚಿಸುವದಕ್ಕೆ ಈಗಲೂ ಕಷ್ಟವಾಗಲಾರದು. ಅಂಥ ಸಮಾಜದಲ್ಲಿ ಪರಮಾರ್ಥಕ್ಕೆ ಅನುಗುಣವಾದ ವ್ಯವಹಾರವೇ ಪ್ರಧಾನವಾಗಿರುವದರಿಂದ ಅದು ನಿರ್ಮಾಣವಾದರೆ ಈಗಿನ ಆರ್ಥಿಕಸಮಸ್ಯೆಗಳು ಸುಲಭವಾಗಿ ಪರಿಹಾರವಾಗಬಹುದೆಂದು ನನ್ನ ನಂಬಿಕೆ.

ಭಾರತಸಂಸ್ಕೃತಿ ಎಂಬ ಮಾತು ಈಗ ಹೆಚ್ಚಾಗಿ ನಮ್ಮ ಕಿವಿಗೆ ಬೀಳುತ್ತಿದೆ. ಆದರೆ ಭಾಷೆ, ವೇಷ, ಆಚಾರ-ಎಲ್ಲವೂ ವಿವಿಧವಾಗಿರುವ ನಾವು ಭಾರತ ಸಂಸ್ಕೃತಿಯವರು ಎನ್ನುತ್ತಿರುವೆವಲ್ಲ, ಯಾವ ದೃಷ್ಟಿಯಿಂದ ನಮ್ಮ ಸಂಸ್ಕೃತಿಯು ಒಂದು?- ಎಂಬುದನ್ನು ವಿಚಾರಿಸಬೇಕಾದದ್ದಿಲ್ಲವೆ? ನಿಷ್ಪಕ್ಷಪಾತ ದೃಷ್ಟಿಯಿಂದ ನೋಡಿರಿ. 'ಆತ್ಮೈವೇದಂ ಸರ್ವಮ್' ಎಂಬ ಪರಮಾರ್ಥವನ್ನು ಅರಿತುಕೊಂಡು ಆ ಸಾಕ್ಷಿಸ್ವರೂಪದಲ್ಲಿ ನಮ್ಮಲ್ಲಿ ಕೆಲವರಾದವರೂ ನೆಲೆನಿಂತರೆ, ಮಿಕ್ಕವರು ಇದಕ್ಕೇ ಸಹಾಯಕವಾಗಿರುವ ನಡೆನುಡಿಗಳನ್ನು ಇಟ್ಟುಕೊಂಡರೆ, ನಮ್ಮಲ್ಲಿ ಮಿಕ್ಕ ವೈವಿಧ್ಯಗಳು ಎಷ್ಟಿದ್ದರೂ ನಾವೆಲ್ಲರೂ ಭಾರತಕ್ಕೆ ಸೇರಿದವರೇ ಆಗುವೆವು. 'ಏಕೋ ದೇವಃ ಸರ್ವಭೂತೇಷು ಗೂಢಃ'- ಒಬ್ಬ ದೇವನೇ

ಸಕಲ ಪ್ರಾಣಿಗಳಲ್ಲಿಯೂ ಇರುವನೆಂಬುದನ್ನು ಮನದಂದಂತೆಲ್ಲ ನಾವು ಸರ್ವಭೂತಹಿತರತರಾಗುವೆವು. ಅದೇ ಭಾರತಸಂಸ್ಕೃತಿಯ ಆದರ್ಶ.

ಮಹಾಭಾರತದಲ್ಲಿ ಒಂದು ಕಥೆಯಿದೆ. ಹಿಂದಕ್ಕೆ ರಾಜರೇ ಇರಲಿಲ್ಲವಂತೆ. ಅನಾಯಕತ್ವದಿಂದ ಸಮಾಜವು ಬಹಳ ಗಲಿಬಿಲಿಯಾಗಿತ್ತು. ಜನರು ಒಬ್ಬ ರಾಜನನ್ನು ಮಾಡಿಕೊಂಡರೆ ವ್ಯವಸ್ಥೆಯಾದೀತೆಂದು ಬಗೆದು ಯಾರನ್ನು ಕೇಳಿಕೊಂಡರೂ ರಾಜರಾಗಲು ಮುಂದಕ್ಕೆ ಬರಲಿಲ್ಲವಂತೆ. ನಾವು ಎಲ್ಲಿ ಧರ್ಮಕ್ಕೆ ವಿರುದ್ಧವಾಗಿ ನಡೆದೇವೋ! -ಎಂಬ ಅಂಜಿಕೆ ಎಲ್ಲರಿಗೂ ಇತ್ತು. ಕೊನೆಗೆ ಪ್ರಜೆಗಳ ಮುಖಂಡರು ಬ್ರಹ್ಮನ ಅಪ್ಪಣೆಯಂತೆ ಮನುವಿನ ಬಳಿಗೆ ಬಂದು 'ನೀನು ನಮಗೆಲ್ಲ ಸಮ್ಮತನಾಗಿರುವ ರಾಜನು; ನೀನು ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ನಡೆದುಕೊಂಡು ನಮ್ಮೆಲ್ಲರನ್ನೂ ಕಾಪಾಡಬೇಕು' -ಎಂದು ಕೇಳಿಕೊಂಡರಂತೆ. ಆಗ ಮನುವೆಂದದ್ದೇನು? ''ರಾಜ್ಯಭಾರವು ದುಸ್ತರವಾದದ್ದು; ಅದರಲ್ಲಿಯೂ ಮನುಷ್ಯರು ಮಿಥ್ಯಾಚಾರರಾಗಿರುವಲ್ಲಿ ಪಾಪಘಟನೆಯಿಲ್ಲದೆ ರಾಜ್ಯವನ್ನು ನಡೆಸುವದು ಎಂದಿಗೂ ಆಗಲಾರದು. ಆದ್ದರಿಂದ ನನಗೆ ರಾಜ್ಯವೆಂದರೆ ಅಂಜಿಕೆ!'' ಈಗ ಮನೆಮನೆಗೂ ವೋಟ್ (ಮತ) ದಾನಮಾಡಿ, ದಮ್ಮಯ್ಯ!- ಎನ್ನುತ್ತಿರುವ, 'ನೀವು ನಮಗೆ ಬೇಡವಪ್ಪ' ಎಂದು ಜನರು ಕಿರಿಚಿಕೊಂಡರೂ ಕೇಳದೆ ಇರುವ, ಅಧಿಕಾರಲಾಲಸೆಯವರು ಎಷ್ಟುಜನ! ಆಗ ಎಲ್ಲರೂ ಕೇಳಿಕೊಂಡರೂ ಪಾಪಭೀತಿಯಿಂದ ಮನುವಿನಂಥವನುಕೂಡ ಒಪ್ಪಲಿಲ್ಲವಲ್ಲ! ಕೊನೆಗೆ 'ಪ್ರಜೆಗಳು ಮಾಡುವ ಪಾಪಕ್ಕೆ ಅವರೇ ಹೊಣೆ, ನೀನು ಧರ್ಮ ಶಾಸ್ತ್ರದಂತೆ ನಡೆದುಕೊಳ್ಳುವವರೆಗೆ ಪ್ರಜೆಗಳ ಧರ್ಮದ ಚತುರ್ಥಾಂಶವು ನಿನ್ನದು' -ಎಂದು ಜನರು ವಾಗ್ದಾನಮಾಡಿದ ಮೇಲೆ ಆತನು ಒಪ್ಪಿಕೊಂಡನಂತೆ. ಹೀಗೆ ತತ್ತ್ವಜ್ಞಾನವನ್ನು ಗುರಿಯಾಗಿಟ್ಟುಕೊಂಡು ಅದಕ್ಕನುಗುಣವಾದ ಧರ್ಮವನ್ನನುಸರಿಸುವದೇ ಉತ್ತಮಸಮಾಜನಿರ್ಮಾಣಕ್ಕೆ ಉಪಾಯ ಎಂಬಿದು ವೇದಾಂತದಿಂದ ಹೊರಡುವ ಉಪಸಿದ್ಧಾಂತವು.

★★★★★

# ವೇದಾಂತವೂ ನೀತಿಸೌಂದರ್ಯೋಪಾಸನೆಗಳೂ

**12-5-1954**

**ಶ್ರೀಶ್ರೀಗಳವರು**

ನಿನ್ನೆಯ ದಿನ ಸಮಾಜದ ವಿಷಯವಾಗಿ ಮಾತನಾಡಿದೆನು. ಸಮಾಜವೆಂದರೆ ಜೊತೆಯಲ್ಲಿ ಓಡಾಡುವವರು ಎಂದು ಶಬ್ದಾರ್ಥ; ಆದರೆ ಸುಮ್ಮನೆ ಜೊತೆಯಲ್ಲಿ ಓಡಾಡುವ ದನಕರುಎಮ್ಮೆಕುರಿಆಡುಗಳ ಗುಂಪನ್ನು ನಾವು ಸಮಾಜವೆನ್ನುವದಿಲ್ಲ. ಒಂದೇ ಸಂಸ್ಕೃತಿಯ ಹೆಗ್ಗುರಿಯನ್ನು ಇಟ್ಟುಕೊಂಡಿರುವ ಜನರ ಗುಂಪೇ ಸಮಾಜವೆನಿಸುತ್ತದೆ. ಪರಮಾರ್ಥಕ್ಕೆ ಅನುಗುಣವಾದ ವ್ಯವಹಾರವೇ ಪ್ರಧಾನವಾಗಿರುವ ಸಮಾಜವು ಏರ್ಪಟ್ಟರೆ, ನಮ್ಮ ದೇಶದ ಸಂಸ್ಕೃತಿಯು ಉಳಿಯುತ್ತದೆ ಎಂದು ಹೇಳಿರುತ್ತೇನೆ. ಈ ದೃಷ್ಟಿಯಿಂದ ತತ್ತ್ವಕ್ಕಾಗಿಯೇ ಸಮಾಜವಿರುವದರಿಂದ, ತತ್ತ್ವವನ್ನು ಗುರಿಯಾಗಿಟ್ಟುಕೊಂಡಿರುವ ವ್ಯಕ್ತಿಗಳು ಹೆಚ್ಚಬೇಕು ಎಂದಾಗುತ್ತದೆ.

ಸಮಾಜಕ್ಕೆ ವ್ಯಕ್ತಿಯೇ ಮುಖ್ಯ, ವ್ಯಕ್ತಿಯೆಂದರೆ ನಾನೇ; ನಾನು ಉತ್ತಮವಾದ ಧ್ಯೇಯವನ್ನಿಟ್ಟುಕೊಂಡರೆ ನಾನೂ ಬದುಕುವೆನು, ನನ್ನ ಸುತ್ತುಮುತ್ತಲಿನವರೂ ನನ್ನ ಅನುಕರಣೆಯಿಂದ ಬದುಕುವರು. ಈ ಧ್ಯೇಯವಿರುವ ವ್ಯಕ್ತಿಗಳು ಹೆಚ್ಚಿದಷ್ಟೂ ಸಮಾಜವು ಮೇಲಿನ ಮಟ್ಟಕ್ಕೆ ಏರುವದು. ಈ ದಿನ ನಾನು ವಿಚಾರಕ್ಕೆ ಇಟ್ಟುಕೊಂಡಿರುವ 'ನೀತಿಯೂ ಸೌಂದರ್ಯೋಪಾಸನೆಯೂ' ಎಂಬ ವಿಷಯಕ್ಕೆ ಆತ್ಮವಿಚಾರವೇ ತಳಹದಿಯಾಗಿರುತ್ತದೆ. ಸಮಾಜಶಾಸ್ತ್ರವಾಗಲಿ ನೀತಿಶಾಸ್ತ್ರವಾಗಲಿ ಸೌಂದರ್ಯೋಪಾಸನೆಯಾಗಲಿ ಮನುಷ್ಯನಿಗೇ ಸಾಧ್ಯವಾಗಿರುತ್ತದೆ ; ಅದರ ಬಲದಿಂದಲೇ ಮನುಷ್ಯನು ನೀತಿವಂತನೂ ಸೌಂದರ್ಯೋಪಾಸಕನೂ ಉತ್ತಮಸಮಾಜನಿರ್ಮಾಪಕನೂ ಆಗುತ್ತಾನೆ ಎಂಬುದನ್ನು ನಾವು ಮರೆಯದೆ ಇರಬೇಕು.

ಪ್ರತಿಯೊಬ್ಬನೂ ಮಿಕ್ಕ ಎಲ್ಲಾ ವಿಚಾರಕ್ಕಿಂತಲೂ ಮೊದಲು ತನ್ನ ವಿಚಾರವನ್ನು ಮಾಡುವದಕ್ಕೆ ಪ್ರಯತ್ನಿಸಬೇಕು. ತಾನು ಎಲ್ಲಿಗೆ ಹೋಗುವೆನು ಎಂಬುದರ ಅರಿವಿಲ್ಲದೆ ರೈಲ್ವೆಸ್ಟೇಷನಲ್ಲಿ 'ಒಂದು ಟಿಕೆಟ್ ಕೊಡಿ, ಸ್ವಾಮಿ!' ಎಂದು ಕೂಗುವ ಅವಿವೇಕಿಯಂತೆ ಸಮಾಜ, ನೀತಿ- ಎಂದುಮುಂತಾಗಿ ಉದ್ದುದ್ದ ಮಾತಾಡುವವರೂ ಹಾಸ್ಯಾಸ್ಪದರಾಗಿರುತ್ತಾರೆ. ನಾನು ಯಾರು? ನನ್ನ ಗತಿಯೇನು?- ಎಂಬುದನ್ನು ವಿಚಾರಿಸದೆ ಇರುವವನು ವ್ಯರ್ಥವಾಗಿ ಆಯುಸ್ಸನ್ನು ಕಳೆದುಕೊಳ್ಳುತ್ತಿರುವನು; ಅವನ ಚಟುವಟಿಕೆಯೆಲ್ಲ ವ್ಯರ್ಥವೇ. ಧನವಂತರೂ ವಿದ್ಯಾವಂತರೂ ಕೂಡ 'ನಾನು' ಎಂಬುದರ ನಿಜವನ್ನು ವಿಚಾರಿಸದೆ ಜೀವನವನ್ನು ವ್ಯರ್ಥಮಾಡುತ್ತಿರುವರು. ಒಂದು ಕೋರ್ಟಿನ ವಿಷಯಕ್ಕೆ ಜನರು ಸರ್ಕಾರಕ್ಕೆ ದೂರುಹೇಳಿಕೊಂಡಿದ್ದರಂತೆ; ಸ್ಥಲವಿಚಾರಕ್ಕೆ ಬಂದ ಅಧಿಕಾರಿಯಲ್ಲಿ 'ಈ ಕೋರ್ಟಿನಲ್ಲಿ ಖರ್ಚು ಹೆಚ್ಚು' ಎಂದರಂತೆ! ಸೂಕ್ಷ್ಮಮತಿಯಾದ ಅಧಿಕಾರಿಯು ಒಳಹೊಕ್ಕು ನೋಡಿದ್ದದಲ್ಲಿ ಅಲ್ಲಿ ಲಂಚಗುಳಿತನವಿದೆ ಎಂದು ತಿಳಿದುಬಂತು! ಈಗಿನ ನಾವು ಎಷ್ಟು ಸಂಪಾದಿಸಿದರೂ ಹೊಟ್ಟೆಬಟ್ಟೆಗೆ, ಗೌರವದಿಂದ ಜೀವಿಸಿಕೊಂಡಿರುವದಕ್ಕೆ, ಸಾಲದಾಗಿದೆ! ಇನ್ನು ನಮ್ಮ ಜೀವನದ ಹೆಗ್ಗುರಿ ಯಾವದೆಂಬುದನ್ನು ಹೇಗೆ ವಿಚಾರಿಸಿಯೇವು? ಹಿಂದಿನಕಾಲದವರು ಅನೇಕ ವಿಷಯಗಳಲ್ಲಿ ನಮ್ಮಷ್ಟು ತಿಳಿವಳಿಕೆಯಿಲ್ಲದವರಾಗಿದ್ದಿರಬಹುದು; ಅವರಿಗೆ ನಮ್ಮಷ್ಟು ಜೀವನ ಸೌಕರ್ಯಗಳೂ ಇಲ್ಲದೆ ಇದ್ದಿರಬಹುದು. ಆದರೆ ಅವರಿಗೆ ನಮ್ಮಷ್ಟು ಇಹಜೀವನದ ಸಂಕಷ್ಟಗಳಿರಲಿಲ್ಲ. ಅವರು ಈ ಬಾಳು ಮೂರುದಿನದ್ದು, ಮನುಷ್ಯನ ಆಯುಸ್ಸೂ ಐಹಿಕಸುಖವೂ ನಿತ್ಯವಲ್ಲ, ಮುಂದಿನ ಗತಿಯೇನೆಂಬುದನ್ನು ವಿಚಾರಿಸಿಕೊಳ್ಳಬೇಕು- ಎಂದುಕೊಂಡಿದ್ದರು. ನಾವು ಒಬ್ಬರೇ ಹೊರಟುಹೋಗಬೇಕಾಗಿದೆ. ಸುಮ್ಮನೆ ಕಾಲಹರಣ, ವ್ಯರ್ಥಾಲಾಪ, ವೃತ್ತಪತ್ರಿಕೆಗಳನ್ನು ಓದುವದು- ಇವುಗಳಿಂದ ಆಯುಸ್ಸನ್ನು ಕಳೆಯುವದು ಎಂದಿಗೂ ಉಚಿತವಾಗಲಾರದು.

ಧರ್ಮನೀತಿಗಳ ಉಪದೇಶಗಳು ವೇದಶಾಸ್ತ್ರಗಳಲ್ಲಿ ತುಂಬಿ ತುಳುಕುತ್ತಿವೆ; ಋಷಿಗಳೂ ಮುನಿಗಳೂ ಇವನ್ನು ಹಿಂದೆ ಹೇಳಿದ್ದಾರೆ, ಈಗಲೂ ಸಾಧುಸಂತರು ಹೇಳುತ್ತಲೇ ಇರುತ್ತಾರೆ. ಆದರೆ ನಮಗೆ ಆ ಉಪದೇಶಗಳನ್ನು

ಕಿವಿಯಲ್ಲಿ ಹಾಕಿಕೊಳ್ಳುವಷ್ಟು ವಿರಾಮವಿಲ್ಲ. ''ರೋಗೀ ಚಿರಪ್ರವಾಸೀ ಪರಾನ್ನಭೋಜೀ ಪರಾವಸಥಶಾಯೀ ಯಜ್ಜೀವತಿ ತನ್ಮರಣಂ ಯನ್ಮರಣಂ ಸೋಽಸ್ಯ ವಿಶ್ರಾಮಃ ॥'' (ಯಾವಾಗಲೂ ರೋಗ, ಯಾವಾಗಲೂ ಪ್ರವಾಸ, ಯಾವಾಗಲೂ ಪರಾನ್ನ ಭೋಜನ, ಯಾವಾಗಲೂ ಮತ್ತೊಬ್ಬರ ವಸತಿಯಲ್ಲಿ ಶಯನ- ಹೀಗೆ ಜೀವಿಸಿರುವದೇ ಮರಣವು; ಹೀಗೆ ಜೀವಿಸುತ್ತಿರುವವರಿಗೆ ಆಗುವ ಮರಣವೊ ಎಂದರೆ ಅದೇ ವಿಶ್ರಾಂತಿಯು)- ಎಂದು ಸುಭಾಷಿತಕಾರನು ಹೇಳಿರುವದು ನಮ್ಮ ನಾಗರಿಕತೆಯ ಗುರುತಾಗುವದಕ್ಕೆ ಮೊದಲಾಗಿದೆ. ಜೀವನಕ್ಕಾಗಿ ಧರ್ಮದಿಂದ ದುಡಿಯುವದು, ಹೆಂಡತಿಮಕ್ಕಳನ್ನು ಭರಣಮಾಡುವದು, ಅತಿಥಿಸತ್ಕಾರವನ್ನು ಮಾಡುವದು, ಪರೋಪಕಾರಕ್ಕೆ ಸೊಂಟವನ್ನು ಕಟ್ಟುವದು, ಸತ್ಕರ್ಮವನ್ನು ಮಾಡಿ ಜನ್ಮಾಂತರದಲ್ಲಿಯೂ ಲೋಕಾಂತರದಲ್ಲಿಯೂ ಸುಖವೇ ಆಗುವಂತೆ ಪುಣ್ಯದ ಬುತ್ತಿಯನ್ನು ಕಟ್ಟಿಕೊಳ್ಳುವದು- ಇಂಥ ಜೀವನದ ಗುರಿಯುಳ್ಳವರ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಕಾಲದಲ್ಲಿ ನೀತಿ, ಧರ್ಮ- ಎಂದರೆ ಯಾರಿಗೆ ರುಚಿಸೀತು ?

ಮಹಾಭಾರತದಲ್ಲಿ ಕೊನೆಯಲ್ಲಿ ಹೇಳಿರುವ ನಾಲ್ಕು ಶ್ಲೋಕಗಳಿವೆ. ಅವುಗಳನ್ನು ವ್ಯಾಸರ 'ಭಾರತಸಾವಿತ್ರೀ' (ಭಾರತವೆಂಬ ವೇದಕ್ಕೆ ಗಾಯತ್ರೀಮಂತ್ರ) ಎಂದು ಕರೆದಿರುತ್ತಾರೆ. ಭಾರತದ ಆದಿಯಲ್ಲಿಯೂ ಅನುಕ್ರಮಣಿಕೆಯನ್ನು ಹೇಳುವ ಸಂದರ್ಭದಲ್ಲಿ 'ಧರ್ಮೇ ಮತಿರ್ಭವತು' ನಿಮ್ಮಗಳಿಗೆಲ್ಲ ಧರ್ಮದಲ್ಲಿಯೇ ದೃಷ್ಟಿಯಿರಲಿ!- ಎಂದು ವ್ಯಾಸರು ಉಪಕ್ರಮಮಾಡಿರುತ್ತಾರೆ. ಕೊನೆಯಲ್ಲಿಯೂ ಧರ್ಮವೇ ಮುಖ್ಯವೆಂದು ತಿಳಿಸುವ ಈ ಸಾವಿತ್ರಿಯಿಂದಲೇ ಉಪಸಂಹಾರ ಮಾಡಿರುತ್ತಾರೆ. ಬೆಳಗ್ಗೆ ಎದ್ದಕೂಡಲೆ ಈ ಭಾರತಸಾವಿತ್ರಿಯನ್ನು ನಮ್ಮ ಹಿರಿಯರು ತಾವೂ ಹೇಳಿಕೊಂಡು ಮಕ್ಕಳಿಗೂ ಹೇಳಿಕೊಡುತ್ತಿದ್ದದ್ದು ನಮ್ಮಲ್ಲಿ ಕೆಲವರಿಗಾದರೂ ಇನ್ನೂ ನೆನಪಿನಲ್ಲಿರಬಹುದು. ಆ ಶ್ಲೋಕಗಳ ಅಭಿಪ್ರಾಯವು ಇಂತಿದೆ; ಮನುಷ್ಯನಿಗೆ ಹರ್ಷಶೋಕಭಯಗಳು ಮತ್ತೆಮತ್ತೆ ಬರುತ್ತಿರುವವೆಂಬುದು ಮೂಢನ ವಿಷಯ; ಪಂಡಿತನಾದವನಿಗೆ ಎಂದಿಗೂ ಅದಕ್ಕೆ ಎಡೆಯಿರುವದಿಲ್ಲ. ತಾಯಿತಂದೆಗಳು ಸಾವಿರಗಟ್ಟಲೆ, ಹೆಂಡಿರುಮಕ್ಕಳು ನೂರುಗಟ್ಟಲೆ ಹಿಂದೆ ಆಗಿಹೋಗಿರುತ್ತಾರೆ, ಈಗ ಇರುತ್ತಾರೆ, ಮುಂದೆಯೂ

ಬರುವವರಿದ್ದಾರೆ. ಇಗೊ, ಎರಡೂ ತೋಳುಗಳನ್ನೆತ್ತಿ ಸಾರುತ್ತಿದೇನೆ; ಧರ್ಮದಿಂದಲೇ ನಿಜವಾದ ಅರ್ಥಕಾಮಗಳೆಂಬ ಪುರುಷಾರ್ಥಗಳಾಗುವವು. ಅದನ್ನೇಕೆ ಸೇವಿಸಬಾರದು? ಕಾಮದಿಂದಾಗಲಿ ಭಯದಿಂದಾಗಲಿ ಲೋಭದಿಂದಲಾಗಲಿ, ಕೊನೆಗೆ ಜೀವಿತಕ್ಕೋಸ್ಕರವೇ ಆಗಲಿ, ಧರ್ಮವನ್ನು ತ್ಯಜಿಸಬಾರದು. ಏಕೆಂದರೆ ಧರ್ಮವು ನಿತ್ಯವು, ಸುಖದುಃಖಗಳು ಅನಿತ್ಯ, ಜೀವನು ನಿತ್ಯ, ಜೀವಕ್ಕೆ ಹೇತುವು ಅನಿತ್ಯ.'' ವ್ಯಾಸರು ಈ ಉಪದೇಶದ ಕೊನೆಯಲ್ಲಿ ಹೇಳಿರುವ ಫಲಶ್ರುತಿಯ ಶ್ಲೋಕವನ್ನು ನಾವೆಲ್ಲರೂ ನೆನಪಿನಲ್ಲಿಡುವದು ಒಳ್ಳೆಯದು. ''**ಇಮಾಂ ಭಾರತಸಾವಿತ್ರೀಂ ಪ್ರಾತರುತ್ಥಾಯ ಯಃ ಪಠೇತ್ ಸಭಾರತಫಲಂ ಪ್ರಾಪ್ಯ ಪರಂ ಬ್ರಹ್ಮಾಧಿಗಚ್ಛತಿ''॥** ಈ ಭಾರತಸಾವಿತ್ರಿಯನ್ನು ಬೆಳಗ್ಗೆ ಎದ್ದು ಹೇಳಿಕೊಂಡು ಅನುಸಂಧಾನಮಾಡುವಾತನಿಗೆ ಭಾರತಶ್ರವಣದ ಒಟ್ಟುಫಲವು ಬರುವದು; ಪರಬ್ರಹ್ಮಪ್ರಾಪ್ತಿಯೂ ಆಗುವದು -ಎಂಬುದು ಶ್ಲೋಕದ ತಾತ್ಪರ್ಯ. ಧರ್ಮನೀತಿಗಳೇ ಜೀವನದ ಜೀವಾಳ, ಬ್ರಹ್ಮಪ್ರಾಪ್ತಿಯೇ ಈ ನೀತಿಗೆ ಗುರಿ ಎಂದು ಇಲ್ಲಿ ಕಂಠರವದಿಂದ ಹೇಳಿಟ್ಟಿದಾರೆ. ಈ ಉಪದೇಶವು ಈಗಿನಕಾಲಕ್ಕೆ ಅನ್ವಯಿಸದಷ್ಟು ಹಳತಾಗಿದೆಯೇನು?

ನೀತಿಗೆ ಈಗಿನ ಕಾಲದವರಾದ ನಾವು ಬಗೆಬಗೆಯ ಫಲವನ್ನು ಹೇಳುತ್ತಿರುವೆವು. ನೀತಿಗೆಲ್ಲ ನಮಗೆ ತಾತ್ಕಾಲಿಕವಾದ ಫಲವು ಕಾಣಿಸಬೇಕು. ಆದಷ್ಟು ಹೆಚ್ಚು ಜನಗಳಿಗೆ ಆದಷ್ಟು ಹೆಚ್ಚಿನ ಪ್ರಯೋಜನವಾಗಬೇಕು; ಇದೇ ನೀತಿಯ ಪ್ರಯೋಜನ- ಎನ್ನುವವರು ಕೆಲವರು. ಕೆಲಸಮಾಡಿ ತಿನ್ನಬೇಕು; ಕುರುಡುರಾದರೆ ಕೈಯಿಂದ ಕೆಲಸಮಾಡಲಿ, ಕುಂಟರಾದರೆ ಬಾಯಿಂದಲೋ ಕೈಯಿಂದಲೋ ಮಾಡಲಿ! ಯಾರೊಬ್ಬರೂ ಸೋಮಾರಿಗಳಾಗಿರಬಾರದು. ಎಲ್ಲರನ್ನೂ ಹೆಣ್ಣುಗಂಡು; ಹುಡುಗ ಮುದುಕ; ಬಲಶಾಲಿ, ನಿರ್ಬಲ; ಶ್ರಮಜೀವಿ, ಬುದ್ಧಿಜೀವಿ-ಎಂಬುದನ್ನು ಯಾವದನ್ನೂ ಲೆಕ್ಕಿಸದೆ ಇಲ್ಲರೂ ಕೈಕಷ್ಟವನ್ನು ಮಾಡಬೇಕು ಎಂದು ಬಲಾತ್ಕರಿಸುವದೂ ಒಂದು ನೀತಿ. ಚಕ್ರಬಂಧ ಮುಂತಾದ ಲಾಟರಿಗಳಲ್ಲಿ ಭಾಗವನ್ನು ವಹಿಸುವದು, ಜೂಜಾಡುವದು, ಕಳ್ಳಸಂತೆಯ ವ್ಯಾಪಾರ, ಚಕ್ರಬಡ್ಡಿಗೆ ಹಣದಸಾಲ-ಇವೇ ಮುಂತಾದ ದ್ವಾರಗಳಿಂದಲಾದರೂ ಚಿಂತೆಯಿಲ್ಲ, ಹೇಗಾದರೂ ದುಡ್ಡುಗಳಿಸಿ ದೊಡ್ಡಪ್ಪನಾದರಾಯಿತು ಎಂಬುದೂ

ಒಂದು ನೀತಿ. ವೃತ್ತಪತ್ರವೇ ಮುಂತಾದವುಗಳಲ್ಲಿ ಸುಳ್ಳನ್ನು ನಿಜವೆಂದು ಪ್ರಚಾರಮಾಡುವದು, ಧಾರ್ಮಿಕನೆಂಬ ಖ್ಯಾತಿಯನ್ನು ಸಂಪಾದಿಸಿ ಜನರ ಹಣವನ್ನು ಸುಲಿಯುವದು- ಇವೆಲ್ಲ ಈಗ್ಗೆ ನೀತಿಯ ಪ್ರಕಾರಗಳೇ ಆಗಿಬಿಟ್ಟಿವೆ. ಮುಖ್ಯವಾಗಿ ಶರೀರಾರಾಧನೆಗೆ ತನುಮನೋವಾಕ್ಕುಗಳನ್ನು ವಿನಿಯೋಗಿಸುವದೇ ಗುರಿ ಎಂದು ಬೋಧಿಸುತ್ತಾ ಇದನ್ನೇ ಕರ್ಮಯೋಗವೆಂದು ಕರೆಯುತ್ತಿರುವವರ ಕಾಲದಲ್ಲಿ ಧರ್ಮನೀತಿಗಳೆಂದರೇನೆಂಬುದನ್ನು ವಿವರಿಸಿ ತಿಳಿಸುವದು ಕಷ್ಟವೇ ಸರಿ. ಆದರೆ ಶರೀರೇಂದ್ರಿಯಸಂಘಾತಕ್ಕಿಂತ ವ್ಯತಿರಿಕ್ತನಾದ ಆತ್ಮನೊಬ್ಬನು ಇದಾನೆ; ಅವನ ಧರ್ಮಾಧರ್ಮಗಳು ನಿತ್ಯವಾಗಿ ಅವನನ್ನು ಹಿಂಬಾಲಿಸಿ ಫಲವನ್ನು ಕೊಡುವವು -ಎಂಬುದನ್ನು ಮನದಂದುಕೊಂಡರೆ, ಶಾಸ್ತ್ರಾಚಾರ್ಯರುಗಳ ಉಪದೇಶದಿಂದ ಇದನ್ನು ನಂಬಿಕೊಂಡರೆ, ನೀತಿಯ ನಿಜವಾದ ತಳಹದಿಯನ್ನು ಹಾಕಿಕೊಂಡಂತೆ ಆಗುವದು; ಮೇಲೆ ಹೇಳಿದಂಥ ನೀತಿಯ ಜೊಳ್ಳುತನವು ಕೂಡಲೆ ಎದ್ದುಕಾಣುವದು.

ದೇಹಾತ್ಮಬುದ್ಧಿಯಿರುವವರಲ್ಲಿನೀತಿಯ ಆಭಾಸಗಳಿರಬಹುದು; ನಿಜವಾದ ನೀತಿಯು ಇನ್ನೂ ಅಂಕುರಿಸಿರುವದಿಲ್ಲ. ದೇಹವ್ಯತಿರಿಕ್ತಾತ್ಮನನ್ನು ನಂಬಿರುವವರಿಗೆ ಜನ್ಮಾಂತರದಲ್ಲಿ ನಂಬಿಕೆ, ಸದ್ವರ್ತನೆ, ಧರ್ಮ-ಇವೆಲ್ಲ ಸರಪಳಿಯ ಕೊಂಡಿಗಳಂತೆ ಒಂದರಹಿಂದೊಂದು ಬಂದು ಕೂಡಿಕೊಳ್ಳುವವು. ಈ ಒಂದು ಜನ್ಮದ ಶರೀರಕ್ಕಾಗಿ ಎಷ್ಟು ಮಾಡಬಾರದ ಕೆಲಸಗಳನ್ನು ಮಾಡುವೆವು ! ಎಂಥ ಅನಾರ್ಜವದ ಜೀವನವು ನಮ್ಮದಾಗುವದು! ತಾನುಂಟೊ ಮೂರು ಲೋಕವುಂಟೊ-ಎಂಬ ನೀತಿಗೆ ಈ ದೇಹಾತ್ಮಬುದ್ಧಿಯೇ ಕಾರಣವಾಗಿರುತ್ತದೆ. '**ಯೋಽನ್ಯಥಾ ಸನ್ತಮಾತ್ಮಾನಮನ್ಯಥಾ ಪ್ರತಿಪದ್ಯತೇ । ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ॥**' ಎಂಬಂತೆ ಅನಾತ್ಮವನ್ನೇ ಆತ್ಮನೆಂದು ತಿಳಿದು ನಡೆಯುವದು ಸಕಲಪಾಪಗಳಿಗೂ ತವರುಮನೆಯಾಗಿರುತ್ತದೆ. ನಮ್ಮೆಲ್ಲರ ಆತ್ಮನು ಬ್ರಹ್ಮವೇ ; ಆ ಬ್ರಹ್ಮವೇ ಈ ಜಗತ್ತಿನ ಅಸ್ತಿತ್ವಕ್ಕೆಲ್ಲ ಕಾರಣವಾಗಿರುವದು. ಅದು ಇಲ್ಲವೆಂದವನು ಯಾವ ಧರ್ಮನೀತಿಗೂ ಕಟ್ಟುಬೀಳದ ಅಸತ್ಪುರುಷನಾಗುವನು. ಶರೀರಾತಿರಿಕ್ತನಾದ ಆತ್ಮನಿದಾನೆ, ಅವನ ಆತ್ಮನು ನಿತ್ಯಶುದ್ಧಬುದ್ಧಮುಕ್ತನಾದ ಪರಮೇಶ್ವರನೇ-ಎಂದು ನಂಬಿದವನು, ಬ್ರಹ್ಮಜ್ಞಾನದಿಂದ ಪರಮಪುರುಷಾರ್ಥವನ್ನೇ

ಪಡೆದುಕೊಂಡು ಆನಂದದಿಂದಿರಬಹುದು, ಎಂದು ನಂಬಿದವನು ಎಂದಿಗೂ ನೀತಿಬಾಹಿರನಾಗಲಾರನು.

ವೇದಾಂತವು ನೀತಿಗೆ ಹೇಗೆ ಭದ್ರವಾದ ತಳಗಟ್ಟಾಗಿರುತ್ತದೆಯೋ ಹಾಗೆಯೇ ಸೌಂದರ್ಯೋಪಾಸನೆಯಿಂದ ಪಡೆಯುವ ಆನಂದಕ್ಕೂ ಅದೇ ನಿಜವಾದ ಮಾರ್ಗ ಪ್ರದರ್ಶಕವಾಗಿರುತ್ತದೆ. ಪ್ರಕೃತಿಸೌಂದರ್ಯವನ್ನು ನೋಡಿ ಸುಖಿಸುವದೂ ಸಂಗೀತ, ಕವಿತೆ, ಚಿತ್ರಶಿಲ್ಪ, ನೃತ್ಯ-ಮುಂತಾದವುಗಳನ್ನು ಮೆಚ್ಚಿ ಆನಂದಿಸುವದೂ ಎಲ್ಲರಿಗೂ ಸಾಧಾರಣವಾಗಿರುವ ವರವಲ್ಲ - ಯಾರೋ ಕೆಲವರಲ್ಲಿ ಮಾತ್ರ ಅದು ನೈಸರ್ಗಿಕವಾಗಿರಬಹುದು. ಆದರೆ ಈ ಸೌಂದರ್ಯದ ಉಪಾಸನೆಯೂ ಒಂದಾನೊಂದು ವಿಶಿಷ್ಟವಾದ ಅಭ್ಯಾಸವಿಶೇಷದಿಂದುಂಟಾದ ಸಂಸ್ಕಾರದಿಂದ ಕುದುರತಕ್ಕದ್ದಾಗಿದೆ.

ಸುಂದರದೃಶ್ಯಗಳಿಂದಾಗುವ ಆನಂದವು ಹೊರತೋರುವದರ ಮರ್ಮವೇನು?- ಎಂಬ ಪ್ರಶ್ನೆಗೆ ಅನೇಕ ಉತ್ತರಗಳಿರಬಹುದು. ಸಂಗೀತದ ರಸವನ್ನನುಭವಿಸುವದಕ್ಕೆ ಸ್ವರ, ರಾಗ, ತಾಳ-ಮುಂತಾದವುಗಳ ಅರಿವು ಇರಬೇಕು; ಕವಿತೆಯನ್ನು ಮೆಚ್ಚಿ ಸಂತೋಷಪಡುವದಕ್ಕೆ ಶಬ್ದಗಳ ಶಕ್ತಿ, ಯತಿಗಣಪ್ರಾಸಾಲಂಕಾರ ಗುಣದೋಷಾದಿಗಳ ತಿಳಿವಳಿಕೆ ಬೇಕು- ಹೀಗೆ ಆಯಾ ಕಲಾಕಾರ್ಯವನ್ನು ವಿಶ್ಲೇಷಣಮಾಡುವ ಶಾಸ್ತ್ರಗಳನ್ನು ತಿಳಿದವರೇ ಉತ್ತಮವಾದ ರಸಿಕರು, ಅವರಿಗೇ ಇವುಗಳನ್ನು ಅನುಭವಿಸುವ ಯೋಗ್ಯತೆಯಿದೆ ಎಂದು ಕೆಲವರು ಹೇಳುತ್ತಾರೆ. ಈ ಅಭಿಪ್ರಾಯದಲ್ಲಿ ನಿಜದ ಅಂಶವಿಲ್ಲದೆ ಇಲ್ಲ. ಆದರೆ ಯಾವದಾದರೂ ರಾಗವನ್ನು ಆಲಾಪನೆಮಾಡಿ ಹಾಡುವವನಿಗೂ, ವಾದ್ಯವಿಶೇಷವನ್ನು ಬಾಜಿಸುವವನಿಗೂ ಚಿತ್ರಾದಿನಿರ್ಮಾಣದಲ್ಲಿ ವ್ಯಾಪೃತನಾಗಿರುವವನಿಗೂ ಮನಸ್ಸು ಆ ಕಾಲದಲ್ಲಿ ಹೇಗಿರುತ್ತದೆ? ಸಂಗೀತಾದಿಗಳನ್ನು ಅನುಭವಿಸುವ ಕಾಲದಲ್ಲಿ ಶ್ರೋತೃವಿನ ಅಥವಾ ನೋಟಕನ ಮನಸ್ಸು ಯಾವ ಸ್ಥಿತಿಯಲ್ಲಿರುತ್ತದೆ?- ಎಂಬುದನ್ನು ನಾವು ಮನದಂದುಕೊಂಡು ವಿವೇಚಿಸಿದರೆ ಆಗ್ಗೆ ಅವನಿಗೆ ನಾನು, ಹೊರಗಿನ ಪ್ರಪಂಚ- ಎಂಬದರ ಅರಿವೇ ಇಲ್ಲದೆ ಆಯಾ ಕಲೆಯ ಪ್ರದರ್ಶಿತವಿಶೇಷರೂಪದಲ್ಲಿ ಮನಸ್ಸು ಬೆರೆತು ಹೋಗಿರುತ್ತದೆ ಎಂಬುದು ಅನುಭವದಲ್ಲಿ ಕಂಡುಬರುತ್ತದೆ. ಇದರಿಂದ ಒಂದು ತತ್ತ್ವವು ಹೊರಡುತ್ತದೆ.

ಕಲಾಪ್ರದರ್ಶಕನು ತನ್ನ ವ್ಯಕ್ತಿತ್ವವನ್ನೂ ತನ್ನ ಉಪಕರಣಗಳನ್ನೂ ಬಿಟ್ಟು ಇರುವಾಗಲೇ ಅವನ ಕಲೆಯು ಜೀವಂತವಾಗಿರುತ್ತದೆ. ಇದರಂತೆ ಶ್ರೋತೃಗಳಿಗೂ ನೋಟಕರಿಗೂ ಶರೀರಭಾನವೂ ಬಾಹ್ಯವಿಚಾರವೂ ಮನಸ್ಸಿನಿಂದ ದೂರವಾಗಿರುವಾಗಲೆ ಆನಂದವು ಸಿಕ್ಕಿರುತ್ತದೆ.

ಇದು ನಿಜವಾದರೆ, ನಾವೇನು ತಿಳಿಯಬೇಕಾಯಿತು ? ಹೊರಗಿನ ಉಪಾಧಿಗಳೇ ನಮಗೆ ಆನಂದಾನುಭಾವಕ್ಕೆ ಅಡ್ಡಿಯಾಗಿರುತ್ತವೆ. ಯಾವಾಗ ನಾವು ಉಪಾಧಿಗಳನ್ನು ಮೀರಿ ನಿರುಪಾಧಿಕವಾದ ಆತ್ಮನಲ್ಲಿ ನಿಲ್ಲುವೆವೋ ಆಗ ನಮಗೆ ರಸಾನುಭವವಾಗುವದು. ಈ ರಸಾನುಭವವು ನಿಜವಾಗಿ ಒಂದೇ ಆನಂದವಾಗಿರುತ್ತದೆ ; ''**ರಸೋ ವೈ ಸಃ । ರಸಂ ಹ್ಯೇವಾಯಂ ಲಬ್ಧ್ವಾಽಽನನ್ದೀ ಭವತಿ ।**'' ಆ ಪರಮಾತ್ಮನು ರಸವೇ ಆಗಿರುತ್ತಾನೆ ; ಆನಂದರಸರೂಪನಾದ ಆತ್ಮನನ್ನು ಪಡೆದುಕೊಂಡರೇ ಈ ಜೀವನು ಆನಂದಿಯಾಗುತ್ತಾನೆ- ಎಂದು ಶ್ರುತಿಯೂ ಹೇಳುತ್ತಿದೆ. ಮನುಷ್ಯನಿಗೆ ಪುಣ್ಯವಶದಿಂದ ಬಂದೊದಗುವ ಇಷ್ಟದರ್ಶನ, ಇಷ್ಟಪ್ರಾಪ್ತಿ- ಮುಂತಾದವುಗಳು ಸ್ಥೂಲವಾಗಿದ್ದರೂ ಅವುಗಳ ನಿಮಿತ್ತದಿಂದ ಒಂದು ಆನಂದಾಭಿವ್ಯಕ್ತಿಯಾಗಬಹುದು. ಆದರೆ ವಿದ್ಯೆ ಕಲೆ- ಇವುಗಳಿಂದ ದೊರಕುವ ಆನಂದವು ಸೂಕ್ಷ್ಮವಾಗಿಯೂ ಹೆಚ್ಚಿನ ಭೂಮಿಕೆಯಲ್ಲಿರುವದಾಗಿಯೂ ಇರುವದಕ್ಕೆ ಅದು ಶುದ್ಧವಾಗಿದ್ದು ಆತ್ಮನ ಹತ್ತಿರವಿರುವದೇ ಕಾರಣ. ಕಲೋಪಾಸನೆಯಲ್ಲಿ ನಮಗೆ ತಿಳಿಯದೆಯೇ ನಾವು ಈಶ್ವರನ ಉಪಾಸನೆಯನ್ನು ಮಾಡುತ್ತಿರುವೆವು. ಅಷ್ಟರಿಂದಲೇ ಲೌಕಿಕದುಃಖಗಳನ್ನೆಲ್ಲ ಮರೆಯಿಸುವ ಸುಖಪ್ರಾಪ್ತಿಯಾಗುತ್ತಿರುವದು. ಹೀಗಿರುವಲ್ಲಿ ಅರಿತು ಈಶ್ವರಪ್ರೇಮವನ್ನೇ ಬೆಳೆಯಿಸಿಕೊಳ್ಳುವವರಿಗೆ ಆಗುವ ಆನಂದವೆಂಥದ್ದೆಂದಾಯಿತು ! ಕಲೆಗಳನ್ನು ಮನಃಪೂರ್ವಕವಾಗಿ ಪರಮೇಶ್ವರನಿಗೇ ಸಂಬಂಧಿಸಿ ಅಭ್ಯಾಸಮಾಡುವ ಮಹನೀಯರೇ ನಿಜವಾಗಿ ಕಲಾವಿದರು; ಅವರು ತಾವೂ ಆನಂದದಲ್ಲಿ ಮುಳುಗಿರುತ್ತಾರೆ, ಮಿಕ್ಕವರನ್ನೂ ಆನಂದದಲ್ಲಿ ಅದ್ದಬಲ್ಲವರಾಗಿರುತ್ತಾರೆ. ಯಾವ ಸೌಂದರ್ಯಯುಕ್ತದೃಶ್ಯವನ್ನೇ ಆಗಲಿ, ಯಾವ ಕಾವ್ಯ ಚಿತ್ರ ಶಿಲ್ಪಸಂಗೀತಾದಿಕಲೆಯನ್ನೇ ಆಗಲಿ, ಆ ಭಗವಂತನಿಗೆ ಸಂಬಂಧಪಡಿಸಿಕೊಂಡಾಗ ಅದು ಅತ್ಯಂತವಾಗಿ ಪರಿಶುದ್ಧವಾಗುತ್ತದೆ, ಆದ್ದರಿಂದ

ಅತ್ಯಂತಸುಂದರವೆನಿಸುತ್ತದೆ; ಆದ್ದರಿಂದಲೇ ಅದು ಅತ್ಯಂತವಾದ ಆನಂದಕ್ಕೆ ಕಾರಣವಾಗುತ್ತದೆ. ನಿಜವಾದ ವೇದಾಂತಿಯು ತಾನು ಈ ಆನಂದಸ್ವರೂಪನೇ ಆಗಿರುತ್ತಾನೆ; ಆವನ ಕಣ್ಣಿನಲ್ಲಿ ಇಡಿಯ ಜಗತ್ತೇ ಆನಂದಾಮೃತವನ್ನು ಹೊರಸೂಸುವ ಕಲಾವಿಶೇಷವಾಗಿರುತ್ತದೆ. ಆನಂದರೂಪನಾದ ಪರಮೇಶ್ವರನ ಪರಿಶುದ್ಧಸಂಕಲ್ಪದ ಫಲವೇ ಈ ಜಗತ್ತು ಎಂಬ ಶುಭದೃಷ್ಟಿಯನ್ನು ಸಂಪಾದಿಸಿಕೊಂಡವರು ಲೋಕಕ್ಕೆಲ್ಲ ಶುಭದೃಷ್ಟಿಯನ್ನು ಕೊಡುವ ಕಲಾವಿದರಾಗಿರುವರು ಎಂಬುದನ್ನು ಮತ್ತೆ ಬೇರೆ ಹೇಳಬೇಕೆ? ಅಂಥ ಮಹನೀಯರ ದರ್ಶನಸಂಭಾಷಣಾದಿಗಳೇ ಜನರಿಗೆ ನೀತಿಗೂ ಸೌಂದರ್ಯೋಪಾಸನೆಗೂ ಉತ್ತೇಜಕವಾಗಿರುವದು.

★★★★★

## ವೇದಾಂತವೂ ವಿದ್ಯಾಭ್ಯಾಸವೂ

**13-5-1954**

**ಶ್ರೀಶ್ರೀಗಳವರು**

ಶ್ರೀಗಳು ತಮ್ಮ ಚಿಕ್ಕನಿಂದಿನಿಂದ ಈವರೆಗೆ ತಾವು ಕಣ್ಣಾರೆ ಕಂಡಿರುವ ವಿದ್ಯಾಭ್ಯಾಸದ ವಿವಿಧಪದ್ಧತಿಗಳನ್ನು ಮೊದಲು ವಿವರಿಸಿದರು. ಕೂಲಿಯ ಮಠಗಳು, ಸರ್ಕಾರಿ ಪ್ರೈಮರಿ ಸ್ಕೂಲುಗಳು, ಹೈಸ್ಕೂಲುಕಾಲೇಜುಗಳು ಇವುಗಳಲ್ಲಿದ್ದ ಬೋಧನಪದ್ಧತಿಗಳನ್ನು ವಿವರಿಸಿ, ಭೌತಿಕವಿಜ್ಞಾನ ಮತ್ತು ಗಣಿತಕ್ಕೆ ಹೆಚ್ಚಿನ ಬೆಲೆಯನ್ನು ಕೊಡುತ್ತಾ ಬಂದದ್ದು, ಲಲಿತಕಲೆಗಳ ಅನಾದರ-ಇವುಗಳಾದ ಬಳಿಕ ಕೈಕೆಲಸದ ಬೋಧನೆ ಬಂದು ಈಚೀಚೆಗೆ ಶಿಕ್ಷಣದ ಕಾಲದಲ್ಲಿಯೇ ವಿದ್ಯಾರ್ಥಿಗಳು ಸಂಪಾದನೆಯನ್ನು ಮಾಡುವದನ್ನು ಕಲಿಯಬೇಕು ಎಂಬ ನೀತಿಯನ್ನು ಮುಂದಕ್ಕೆ ತರಲಾಗಿದೆ ಎಂಬುದನ್ನು ಶ್ರೋತೃಗಳ ಲಕ್ಷ್ಯಕ್ಕೆ ತಂದರು. ಜನರಲ್ಲಿಯೂ, ರಾಷ್ಟಗಳಲ್ಲಿಯೂ ಪರಸ್ಪರವಾಗಿ ಸ್ಪರ್ಧಾಬುದ್ಧಿಯು ಹೆಚ್ಚಾದಂತೆಲ್ಲ ಜೀವನಕ್ಕಾಗಿ ದುಡಿಯುವದನ್ನೇ ಅಲ್ಲದೆ ದೇಶದ ರಕ್ಷಣೆಗೆ

ಬೇಕಾದ ಸೈನಿಕಶಿಕ್ಷಣವನ್ನು ಪಡೆಯುವದೂ ಅವಶ್ಯವಾಗುತ್ತಾ ಬಂದಿರುತ್ತದೆ ಎಂಬುದನ್ನು ತಿಳಿಸಿದರು.

ಹಿಂದಿನ ವಿದ್ಯಾಭ್ಯಾಸದ ಇತಿಹಾಸವನ್ನು ನೋಡಿದರೆ ನಮಗೆ ಒಂದು ವಿಷಯವು ಒಡೆದುಕಾಣುತ್ತದೆ. ಆಯಾ ಕಾಲ, ಆಯಾ ಸಂದರ್ಭ ಇವುಗಳನ್ನು ಅವಲಂಬಿಸಿ ಜನರು ವಿದ್ಯಾಭ್ಯಾಸಪದ್ಧತಿಯನ್ನು ಮಾರ್ಪಡಿಸಿಕೊಳ್ಳುತ್ತಾ ಬಂದಿರುತ್ತಾರೆ. ಈಗ ಧರ್ಮಶಾಸ್ತ್ರಗಳುಕೂಡ ಸದ್ಯದ ಪರಿಸ್ಥಿಗೆ ತಕ್ಕಂತೆ ಆಗಬೇಕಾಗಿರುವ ವಿದ್ಯಾಭ್ಯಾಸಕ್ಕೇ ಬೆಂಬಲವನ್ನು ನೀಡಬೇಕೆಂಬುದು ನಾವು ನಿರೀಕ್ಷಿಸುತ್ತಿದೇವೆ. ನಮಗೆ ಆಹಾರವು ಹೆಚ್ಚಾಗಿ ಬೇಕಾದರೆ ''ಅನ್ನಂ ಬ್ರಹ್ಮೇತ್ಯುಪಾಸೀತ, ಅನ್ನಂಬಹು ಕುರ್ವೀತ'' ಮುಂತಾದ ವಚನಗಳು ಆ ಅಭಿಪ್ರಾಯಕ್ಕೆ ಬೆಂಬಲವನ್ನು ಕೊಡಬೇಕು ; ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಲವು ಬಂದರೆ 'ತಸ್ಮಾದ್ಯುಧ್ಯಸ್ವ ಭಾರತ', "Fight for the Lord' ಎಂಬಂಥ ವಾಕ್ಯಗಳು ಸೇವೆಗೆ ನಿಂತುಕೊಳ್ಳಬೇಕು; ಜನರಿಗೆ ಕಲಹವಾಡಿ ಸಾಕಾದಾಗ 'ಓಂ ಶಾನ್ತಿಃ ಶಾನ್ತಿಃ ಶಾನ್ತಿಃ' ಎಂಬ ಮಂತ್ರವು ಕೈಕಟ್ಟಿಕೊಂಡು ಮುಂದೆ ನಿಲ್ಲಬೇಕು ! ಹೀಗೆ ವಿದ್ಯಾಭ್ಯಾಸಕ್ಕೆ ಹಿಂದಕ್ಕೊಂದು ಸೂತ್ರ, ಇಂದಿಗೊಂದು ಸೂತ್ರ, ನಾಳೆಗೆ ಮತ್ತೊಂದು ಸೂತ್ರ ಎಂದು ಮಾಡಿಕೊಳ್ಳುತ್ತಿರುವವರಿಗೆ ಧರ್ಮಶಾಸ್ತ್ರಗಳನ್ನೂ ತತ್ತ್ವಶಾಸ್ತ್ರವನ್ನೂ ಕಾನೂನಿನಿಂದ ಬಹುಜನಮತಗಣನೆಯಿಂದ ನಿರ್ಣಯಿಸುವ ಕಾಲವು ಸಮೀಪಿಸಿರುವದರಲ್ಲಿ ಆಶ್ಚರ್ಯವಿಲ್ಲ.

ಜೀವನಕ್ಕೆ ಬೇಕಾಗಿರುವ ತಿಳಿವಳಿಕೆಯು ಅನವಶ್ಯವೆಂದಾಗಲಿ ಅದನ್ನು ಜನರಿಗೆ ಹೇಳಿಕೊಡಬಾರದೆಂದಾಗಲಿ ನನ್ನ ಅಭಿಪ್ರಾಯವಲ್ಲ. ಆದರೆ 'ವಿದ್ಯಾಭ್ಯಾಸ' ಶಬ್ದಕ್ಕೆ ಅಷ್ಟು ಸಂಕುಚಿತಾರ್ಥವನ್ನು ಕೊಡುವದು ಸರ್ವಥಾ ಯುಕ್ತವಲ್ಲ ಎಂದು ಹೇಳದೆ ಇರುವದಕ್ಕಾಗುವದಿಲ್ಲ. ವಿದ್ಯೆ ಎಂದರೆ ತಿಳಿವಳಿಕೆ, ಇದ್ದದ್ದನ್ನು ಇದ್ದಂತೆ ಅರಿತುಕೊಳ್ಳುವ ಜ್ಞಾನ. ಕಾಲದಲ್ಲಿ ಘಳಿಗೆಗೊಂದು ವಿಧವಾಗಿ ಮಾರ್ಪಾಡಾಗುವ ವಿಷಯಗಳ ತಿಳಿವಳಿಕೆಯು ವರ್ತಮಾನಪತ್ರಿಕೆಗಳಿಂದ ಬರಬಹುದು ; ಆ ವಿಷಯಗಳಂತೆಯೇ ಆ ತಿಳಿವಳಿಕೆಯೂ ಮಾರ್ಪಡುವದು ಸ್ವಾಭಾವಿಕವೇ ಆಗಿದೆ. ಆದರೆ ನಿಜವಾದ ತಿಳಿವಳಿಕೆ, ಪೂರ್ಣವಾದ ತಿಳಿವಳಿಕೆ –

ಹೀಗೆ ಬದಲಾಯಿಸಲಾರದು; ಬದಲಾಯಿಸುವದು ನಿಜವಾದರೆ ಅದು ಪೂರ್ಣವಾದ ತಿಳಿವಳಿಕೆಯೂ ಅಗಲಾರದು.

ವಿದ್ಯಾಭ್ಯಾಸವೆಂದರೆ ಮನುಷ್ಯನು ಪರಿಪೂರ್ಣಮನುಷ್ಯನಾಗಿರುವದಕ್ಕೆ ಬೇಕಾದ ತತ್ತ್ವದ ತಿಳಿವಳಿಕೆ. ಮನುಷ್ಯನು ಸ್ಥೂಲಶರೀರ, ಸೂಕ್ಷ್ಮಶರೀರ ಇವುಗಳಿಂದೊಡಗೂಡಿದ ಜೀವನಾಗಿರುತ್ತಾನೆ. ಶರೀರ, ಇಂದ್ರಿಯ, ಮನಸ್ಸು, ಬುದ್ಧಿ ಇವೆಲ್ಲವೂ ಆರೋಗ್ಯವಾಗಿದ್ದುಕೊಂಡು ವಿಕಾಸವಾಗುವದಕ್ಕೆ ಬೇಕಾದ ತಿಳಿವಳಿಕೆಯೆಲ್ಲ ಪೂರ್ಣವಿದ್ಯಾಭ್ಯಾಸದಲ್ಲಿರಬೇಕಲ್ಲವೆ ? ಆದ್ದರಿಂದ ಅಚೇತನವಸ್ತುಗಳ ಸ್ವಭಾವ, ರಚನೆ ಮುಂತಾದವು ತಿಳಿಯುವಂತೆಯೇ, ಪ್ರಾಣಿಗಳ ಮತ್ತು ಮನುಷ್ಯರ ಸ್ವಭಾವಾದಿಗಳನ್ನು ಅರಿತುಕೊಳ್ಳುವದು ಅವಶ್ಯವಾಗಿರುತ್ತದೆ. ಎಲ್ಲಕ್ಕೂ ಮೇಲಾಗಿ ಪ್ರತಿಯೊಬ್ಬನಿಗೂ ತನ್ನ ಸ್ವರೂಪದ ಮತ್ತು ತನಗೂ ತನ್ನ ಹೊರಗೂ ಇರುವ ಸಂಬಂಧದ ಅರಿವು ಬೇಕಾಗಿರುತ್ತದೆ.

ಮನುಷ್ಯನಲ್ಲಿ ಶರೀರವೊಂದೇ ಪ್ರಧಾನವಲ್ಲ; ಆದ್ದರಿಂದ ಇಂದ್ರಿಯಗಳೂ ಮನಸ್ಸೂ ಶರೀರಕ್ಕೆ ಅಡಿಯಾಳಾಗಿರುವಂತೆ ವಿದ್ಯಾಭ್ಯಾಸಮಾಡಿಸಿದರೆ ಸಾಲದು ; ಮಾನವನು ಮನಸ್ಸಿನಿಂದಲೇ ಮಾನವನೆನಿಸಿಕೊಂಡಿರುತ್ತಾನೆ. ಮನಸ್ಸಿಗೆ ನೀತಿ, ಮತ-ಇವೂ ಬೇಕಾಗಿರುತ್ತವೆ. ಮಾಡಬೇಕಾದದ್ದು - ಮಾಡಬಹುದಾದದ್ದು, ಮಾಡಲೇಬಾರದ್ದು ಎಂಬ ವಿವೇಕವಿಲ್ಲದೆ ಮನುಷ್ಯನು ಮನುಷ್ಯನಾಗಿ ಬಾಳುವದು ಸಾಧ್ಯವಿಲ್ಲ, ಮನಃಸಾಕ್ಷಿ ಎಂಬುದೊಂದು ಮನುಷ್ಯನಲ್ಲಿ ನಿಸರ್ಗವಾಗಿದೆ ; ಮನಃಸಾಕ್ಷಿ ಎಂದರೆ ಆಯಾ ಕಾಲದೇಶಾದಿಗಳ ಸಂನಿವೇಶಕ್ಕೆ ತಕ್ಕಂತೆ ಇರಬೇಕಾದ ನಡೆನುಡಿಗಳನ್ನು ಸರಿತಪ್ಪೆಂದು ಹೇಳುವ ಮನಃಶಕ್ತಿ ವಿಶೇಷವು. ಜನರಿಗೆ ಎಷ್ಟೇ ನಾಸ್ತಿಕ್ಯವನ್ನು ಬೋಧಿಸಿದರೂ ಈಶ್ವರನ ಅಸ್ತಿತ್ವ, ಶ್ರದ್ಧಾಭಕ್ತಿಗಳ ಆವಶ್ಯಕತೆ ಇವುಗಳನ್ನು ಮನುಷ್ಯನ ಅಂತಃಕರಣದಿಂದ ಸಂಪೂರ್ಣವಾಗಿ ಒರಸಿಹಾಕುವದು ಸಾಧ್ಯವೇ ಇಲ್ಲ. ಸರಕಾರವು ಕೆಲವು ನಿಮಿತ್ತಗಳಿಂದ ಧರ್ಮಾತೀತವಾಗಿರಬಹುದು ; ಆದರೆ ಅದು ಧರ್ಮವಿರೋಧಿಯಾಗಿರುವದು ಸಾಧ್ಯವಿಲ್ಲ. ಸರಕಾರದಲ್ಲಿರುವ ಉದ್ಯೋಗಿಗಳಿಗೂ ಸಾಮಾನ್ಯಜನರಿಗೂ ನೀತಿದೈವಭಕ್ತಿಗಳು ಅತ್ಯವಶ್ಯ ; ಅವುಗಳಿಗೆ ಅವಕಾಶವೇ ಇಲ್ಲದಂತೆ ಉಸಿರುಕಟ್ಟುವಂತೆ ಕತ್ತುಹಿಸುಕುವದು ಪೂರ್ಣವಿದ್ಯಾಭ್ಯಾಸವಾಗಲಾರದು.

ತಿಳಿವಳಿಕೆಗೆಲ್ಲ ಆಧಾರವಾಗಿರುವ ವೇದಾಂತವನ್ನು ಜನರಿಗೆ ತಿಳಿಯಿಸಿಕೊಡದೆ ಇದ್ದರೆ ವಿದ್ಯಾಭ್ಯಾಸವು ಎಂದಿಗೂ ಪೂರ್ಣವೆನಿಸಲಾರದು. ವೇದಾಂತ ಬೋಧನವೆಂದರೆ ಉಪನಯನಮಾಡಿಸುವದು, ಅಧ್ಯಯನ ಮಾಡಿಸುವದು, ಭಾಷ್ಯಪಾರಾಯಣಮಾಡಿಸುವದು ಎಂಬ ಅರ್ಥವನ್ನೇನೂ ಮಾಡಬೇಕಾದದ್ದಿಲ್ಲ. ಗಣಿತಶಾಸ್ತ್ರದಷ್ಟೇ, ಅಥವಾ ಅದಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ, ಶಾಸ್ತ್ರೀಯವಾಗಿರುವ ತಿಳಿವಳಿಕೆಯು ವೇದಾಂತದಿಂದ ಉಂಟಾಗುತ್ತದೆ; ಎಂಥ ನಾಸ್ತಿಕನಿಗೂ ತನ್ನ ಆತ್ಮನಿಲ್ಲ, ತಾನೇ ಇಲ್ಲ, ಎಂಬ ನಂಬಿಕೆಯಿರುವದಿಲ್ಲ. ಆತ್ಮವಿಚಾರದ ರೂಪರೇಖೆಯನ್ನಾದರೂ ವಿದ್ಯಾಭ್ಯಾಸದಲ್ಲಿರಿಸಬೇಕಲ್ಲವೆ? ವೇದಾಂತದಲ್ಲಿ ಅವಸ್ಥಾತ್ರಯ ವಿಚಾರವನ್ನು ಮಾಡಿದೆ. ಅವಸ್ಥಾತ್ರಯವೆಂಬುದು ಯುಕ್ತಿಸಿದ್ಧವಲ್ಲ; ಆತ್ಮನ ಅನುಭವವಾಗಿದೆ. ನಾವು ಯಾರೊಬ್ಬರೂ ಅವಸ್ಥಾತ್ರಯವನ್ನು ಬಿಟ್ಟು ಹಾರಲಾರೆವು. ಎಚ್ಚರದಲ್ಲಿ ನಾವು ಕಾಣುವ ಜಗತ್ತೂ ಅದರಲ್ಲಿ ನಮಗೆ ಆಗುವ ಸುಖ ದುಃಖಾನುಭವಗಳೂ ಈ ಅನುಭವದಲ್ಲಿ ಒಂದು ಏಕದೇಶವಾಗಿರುತ್ತದೆ. ಆತ್ಮಭಿತ್ತಿಯ ಮೇಲಲ್ಲವೆ, ನಮ್ಮ ವ್ಯವಹಾರದ ಚಿತ್ರವು ಕಾಣಿಸುವದು? ವೇದಾಂತದ ದೃಷ್ಟಿಯಿಂದ ಅವಸ್ಥಾತ್ರಯವನ್ನು ವಿಚಾರಮಾಡುವದು ನಮ್ಮ ತಿಳಿವಳಿಕೆಯನ್ನು ಪೂರ್ಣಗೊಳಿಸುತ್ತದೆ.

ವೇದಾಂತದಲ್ಲಿ ಅಹಂಕಾರಕ್ಕೆ ಹೆಚ್ಚಿನ ಬೆಲೆಯನ್ನು ಕೊಡದೆ ಅದರ ಹಿನ್ನೆಲೆಯಾಗಿರುವ ಪರಮಾತ್ಮತತ್ತ್ವವನ್ನು ಪ್ರಧಾನವಾಗಿ ಎಣಿಸಿರುತ್ತದೆ. ಅದರ ಅವಲಂಬನೆಯಲ್ಲಿಯೇ ನಾವಿರುತ್ತೇವೆ, ಅದೇ ನಮ್ಮ ಪರಮಾರ್ಥಸ್ವರೂಪವು ಎಂಬ ತಿಳಿವಳಿಕೆಯಿಂದ ನಿರಾಶೆ, ಹೇಡಿತನ, ಸೋಮಾರಿತನ ಇವೆಲ್ಲ ಹುಟ್ಟಡಗಿ ಹೋಗುವವು; ವ್ಯವಹಾರದಲ್ಲಿ ಧೈರ್ಯವೂ, ಸರ್ವಪ್ರೇಮವೂ ಜೀವನಸೂತ್ರಗಳಾಗುವವು.

ಆದ್ದರಿಂದ ವೇದಾಂತದ ತಿಳಿವಳಿಕೆಯು ಎಲ್ಲರಿಗೂ ಬೇಕು; ಅದನ್ನು ನಾವು ತಿಳಿದು ಮುಖ್ಯಾರ್ಥದಲ್ಲಿ ಬ್ರಾಹ್ಮಣರೆನಿಸಿಕೊಳ್ಳಬೇಕು. ಗೌಣಾರ್ಥದಲ್ಲಿ ಬ್ರಾಹ್ಮಣರಾಗಿರುವವರು ತಮ್ಮ ಹೊಣೆಗಾರಿಕೆಯನ್ನರಿತು ತಾವೂ ವೇದವಿದ್ಯೆಯಲ್ಲಿ ನಿಷ್ಣಾತರಾಗಿ ಎಲ್ಲರಲ್ಲಿಯೂ ಅದನ್ನು ಪ್ರಚಾರಮಾಡಬೇಕು; ಉಳಿದವರು

ಅವರಿಗೆ ನೆರವಾಗಬೇಕು. ಇದರಿಂದ ಬ್ರಾಹ್ಮಣ್ಯವು ಬದುಕಿ ಲೋಕವನ್ನೇ ಉದ್ಧಾರ ಮಾಡುತ್ತದೆ. ವೇದಾಂತದ ಸಾರವು ಯಾರೋ ಕೆಲವರು ಸಂನ್ಯಾಸಿಗಳ ಸ್ವತ್ತಾಗಬಾರದು. ಅದರ ಸಾರವನ್ನು ವ್ಯವಹಾರಸ್ಥರು ಅದಷ್ಟುಮಟ್ಟಿಗೆ ಅರಿತುಕೊಂಡು ವ್ಯವಹಾರಕ್ಕೆ ಉಪಯೋಗಿಸಬೇಕು. ಪರಮಾರ್ಥತತ್ತ್ವದ ಅರಿವಿಲ್ಲದವರ ವ್ಯವಹಾರಕ್ಕೂ ಅದನ್ನು ಅರಿತಿರುವವರ ವ್ಯವಹಾರಕ್ಕೂ ಬಹಳ ಹೆಚ್ಚುಕಡಿಮೆ ಇರುತ್ತದೆ.

ಮನುಷ್ಯನು ಕೆಲವು ಭಾಷೆಗಳನ್ನು ಕಲಿತಮಾತ್ರಕ್ಕೆ ಅಕ್ಷರವಿದ್ಯೆಯನ್ನು ಕಲಿತಂತೆ ಆಗುವದಿಲ್ಲ. ಶರೀರಪ್ರಧಾನವಾದ ದೃಷ್ಟಿಯಿಂದ ಧನಸಂಪಾದನೆಮಾಡಿ ಶರೀರದ ಭೋಗಕ್ಕೆ ಬೇಕಾದ ಸಾಮಗ್ರಿಗಳನ್ನು ರಾಶಿಹಾಕಿಕೊಂಡಮಾತ್ರದಿಂದಲಾಗಲಿ, ದೇಶವಿದೇಶಗಳಲ್ಲಿ ಸಂಚರಿಸಿ ಆಧುನಿಕಕಾಲದ ಯಂತ್ರೋಪಕರಣಗಳನ್ನುಪಯೋಗಿಸಿಕೊಳ್ಳವ ಚಾತುರಿಯನ್ನು ಸಂಪಾದಿಸಿಕೊಂಡಮಾತ್ರದಿಂದಲಾಗಲಿ ಅವನು ವಿದ್ಯಾವಂತನೆನಿಸುವದಿಲ್ಲ. ಬ್ರಹ್ಮಾದಿಸ್ತಂಬಪರ್ಯಂತವಾದ ಪ್ರಾಣಿಗಳಲ್ಲೆಲ್ಲ ಒಬ್ಬನೇ ಪರಮಾತ್ಮನಿರುತ್ತಾನೆ. ನಾಶರಹಿತವಾದ ಆತನನ್ನರಿತುಕೊಂಡು ಸರ್ವತ್ರಸಮಬುದ್ಧಿಯನ್ನುಗಳಿಸುವ ಗುರಿಯನ್ನಿಟ್ಟುಕೊಳ್ಳುವದೇ ನಿಜವಾದ ವಿದ್ಯಾಭ್ಯಾಸದ ಗುರುತು. ಈ ಅಕ್ಷರಪರಮಾತ್ಮನ ವಿದ್ಯೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಲೌಕಿಕವಿದ್ಯಾಭ್ಯಾಸದ ಕ್ರಮವನ್ನು ರಚಿಸಿಕೊಳ್ಳುವ ಬುದ್ಧಿಯನ್ನು ಆ ಭಗವಂತನೇ ನಮಗೆ ಅನುಗ್ರಹಿಸಲಿ! ವೇದಾಂತವಿದ್ಯೆಯನ್ನು ಲೋಕಕ್ಕೆಲ್ಲ ತಮ್ಮ ಅಮೋಘಗ್ರಂಥಗಳ ಮೂಲಕ ಸೂರೆಮಾಡಿಕೊಟ್ಟಿರುವ ಶ್ರೀಶಂಕರಭಗವತ್ಪಾದರವರೂ ಅನುಗ್ರಹಿಸಲಿ.

★★★★★

# ವೇದಾಂತದರ್ಶನವು ಆತ್ಮವಿಷಯಕಶಾಸ್ತ್ರ

**26-4-1955**

**ಶ್ರೀಶ್ರೀಗಳವರು**

ಶ್ರೀಶಂಕರಭಗವತ್ಪಾದರವ ಅಭಿಪ್ರಾಯದಂತೆ ವೇದಾಂತಕ್ಕೆ ಜೀವನ್ಮುಕ್ತಿಯೇ - ಈ ಜನ್ಮದಲ್ಲಿಯೇ ಅಜ್ಞಾನಕೃತವಾದ ಸಂಸಾರಬಂಧದಿಂದ ಬಿಡುಗಡೆಯನ್ನು ಹೊಂದುವದೇ ಪರಮಪ್ರಯೋಜನವು. ವೇದಾಂತವು ಸತ್ತಬಳಿಕ ಎಲ್ಲಿಯೋ ಸಿಕ್ಕುವ ಫಲವನ್ನು ಕುರಿತ ವಿಚಾರವೆಂಬ ತಪ್ಪುತಿಳಿವಳಿಕೆಯನ್ನು ಹೊಡೆದೋಡಿಸುವದೇ ಆಚಾರ್ಯರ ಉಪದೇಶದ ಗುರಿ.

ವೇದಾಂತದಲ್ಲಿ ಬ್ರಹ್ಮವಿದ್ಯೆಯಿದೆ. ಅದು ದೇಶಕಾಲನಿಮಿತ್ತಾದಿಗಳನ್ನು ಮೀರಿರುವದರಿಂದ ಎಲ್ಲಕ್ಕೂ ದೊಡ್ಡದು ಎಂಬುದನ್ನು ಬ್ರಹ್ಮಶಬ್ದವು ತಿಳಿಸುತ್ತದೆ. ಅದನ್ನು ಅರಿಯುವದು ಪರಿಚ್ಛಿನ್ನಬುದ್ಧಿಯುಳ್ಳ ಮಾನವನಿಗೆ ಸಾಧ್ಯವೆ? ಎಂದು ಕೆಲವರು ಕೇಳುತ್ತಾರೆ. ವೇದಾಂತದ ಸಿದ್ಧಾಂತಗಳ ವಿಷಯಕ್ಕೆ ಮತ ಭೇದಗಳಿವೆ. ಉಪಾಸನೆಯೇ ವೇದಾಂತದಲ್ಲಿ ಮುಖ್ಯವೆಂದು ಹೇಳುವವರು ಮಿಕ್ಕ ಮತಗಳಂತೆ ಕಾಲಾಂತರದಲ್ಲಾಗುವ ಫಲವನ್ನು ಹೇಳುವರಾದ್ದರಿಂದ ಆ ವಿಷಯಕ್ಕೆ ಭಿನ್ನಾಭಿಪ್ರಾಯಗಳುಂಟಾಗುವದೂ, ಅವುಗಳಲ್ಲಿ ಯಾವದು ಸರಿಯೆಂದು ನಿಶ್ಚಯಿಸುವದಕ್ಕೆ ಆಗದೆ ಇರುವದೂ ಸ್ವಾಭಾವಿಕ. ಮಿಕ್ಕ ಮತಗಳಲ್ಲಿ ಶರೀರಾತಿರಿಕ್ತಜೀವನ, ಅಥವಾ ಜೀವಾತಿರಿಕ್ತ ಈಶ್ವರನ, ಸಿದ್ಧಿಯಾಗುವದು ಕಷ್ಟ. ಆದರೆ ಶಾಂಕರಮತದಂತೆ ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದಲೂ ಆತ್ಮನ ಪರಮಾರ್ಥಸ್ವರೂಪವೇ ಈಶ್ವರನಾಗಿರುವದರಿಂದಲೂ ಈಶ್ವರಸಿದ್ಧಿಯೂ ಆತ್ಮಸಿದ್ಧಿಯೂ ಒಂದೇ ಕಾಲಕ್ಕೆ ಆದಂತೆ ಆಗಿರುತ್ತದೆ. ನಾನು ಇದೇನೆ ಎಂಬ ವಿಷಯಕ್ಕೆ ಯಾರಿಗೂ ಸಂಶಯವಿಲ್ಲ; ಬ್ರಹ್ಮವು ನಮ್ಮಗಳ ಆತ್ಮನೇ ಆಗಿರುವದರಿಂದ ಬ್ರಹ್ಮವು ಇದೆ ಎಂಬುದಕ್ಕೂ ಸಂಶಯವಿಲ್ಲ. **'ಸರ್ವಸ್ಯ ಆತ್ಮತ್ವಾಚ್ಚ ಬ್ರಹ್ಮಸಿದ್ಧಿಃ'** ಎಂಬ ಭಾಷ್ಯವಚನದ ಅಭಿಪ್ರಾಯವೇ ಇದು.

ಎಲ್ಲರಿಗೂ ಆತ್ಮನು ಒಬ್ಬನೇ, ಅವನು ನಿತ್ಯಶುದ್ಧಬುದ್ಧಮುಕ್ತನಾದ ಪರಮಾತ್ಮನೇ ಎಂಬುದನ್ನು ಹೇಗೆ ತಿಳಿಯಬೇಕು? ಎಂದರೆ ಹಿಂದಿನ ಅದ್ವೈತಿಗಳು ಕೆಲವರು ಈಗ ಜೀವಪರಮಾತ್ಮರಿಗೆ ಭೇದ, ಮುಕ್ತಿಯಲ್ಲಿ ಅಭೇದ – ಎನ್ನುತ್ತಿದ್ದರು ; ಮತ್ತೆ ಕೆಲವರು ಇವರಿಬ್ಬರಿಗೂ ಉಪಾಧಿಕೃತವಾದ ಭೇದವಿದ್ದರೂ ಉಪಾಸನೆಯಿಂದ ಉಪಾಧಿಯನ್ನು ಕಳಚಿಕೊಂಡರೆ ದೇಹಪಾತವಾದ ಬಳಿಕ ಅಭೇಧವೇ ಆಗುತ್ತದೆ ಎನ್ನುತ್ತಿದ್ದರು. ಆದರೆ ಆಚಾರ್ಯರ ಮತದಲ್ಲಿ ಹೀಗೆ ಅದ್ವೈತವು ಪರೋಕ್ಷವಲ್ಲ; ಈಗಲೇ ಇಲ್ಲಿಯೇ ನಮ್ಮ ಆತ್ಮನು ಬ್ರಹ್ಮವಾಗಿರುತ್ತಾನೆ. **'ಅತ್ರ ಬ್ರಹ್ಮ ಸಮಶ್ನುತೇ'** ಎಂಬ ವೇದಾಂತವಚನವು ಅನುಭವಾವಸಾನವಾದ ವಿಷಯವನ್ನು ಹೇಳುತ್ತಿದೆ ಎನ್ನುತ್ತಾರೆ, ಶಂಕರರು. **ಉಪನಿಷತ್ತುಗಳಲ್ಲಿ ಬ್ರಹ್ಮವು ಆತ್ಮನೆಂದೇ ಹೇಳಿದೆ ; ಇದನ್ನು ಅರಿತರೆ ಇಲ್ಲಿಯೇ ಸರ್ವಕಾಮಾವಾಪ್ತಿರೂಪವಾದ ಬ್ರಹ್ಮಾನಂದವು ದೊರೆಯುತ್ತದೆ** ಎಂದೂ ಹೇಳಿದೆ. ಇದು ಶಾಂಕರ ವೇದಾಂತದಲ್ಲಿರುವ ಅಪೂರ್ವವಿಷಯ.

ಆತ್ಮನು ಅಹಂಪ್ರತ್ಯಯಗೋಚರನು, ನಾನು ಎಂಬ ಅರಿವಿಗೆ ವಿಷಯನು, ಎಂಬುದು ಬಹುದರ್ಶನಕಾರರ ಮತವಾಗಿರುತ್ತದೆ. ಅಹಂಪ್ರತ್ಯಯಗೋಚರನಾದ ಆತ್ಮನು ಎಲ್ಲರಿಗೂ ಒಬ್ಬನೇ ಹೇಗೆ ಆದಾನು ? ಎಂದು ಅವರು ಶಂಕಿಸುತ್ತಿದಾರೆ. ಆದರೆ **ಅಹಂಪ್ರತ್ಯಯಗೋಚರನಾದ ಸಾಕ್ಷಿಯೊಬ್ಬನಿರುತ್ತಾನೆ ; ಆ ಸಾಕ್ಷಿರೂಪನಾದ ಆತ್ಮನೇ ಬ್ರಹ್ಮವು ಎಂಬುದು ವೇದಾಂತದ ಅಸಾಧಾರಣೋಪದೇಶ.** ಇದನ್ನು ವೇದಾಂತಿಗಳಲ್ಲದೆ ಮತ್ತೆಯಾರೂ ಒಪ್ಪಿಲ್ಲ ಎಂಬುದು ಶಂಕರರು ಉಪದೇಶಿಸಿರುವ ಮತ್ತೊಂದು ಅಪೂರ್ವ ವಿಷಯವಾಗಿರುತ್ತದೆ. ನಾನು ಎಂಬ ಅಹಂಪ್ರತ್ಯಯಿಯಾದ ಆತ್ಮನಿಗೂ ನಿಜವಾದ ಆತ್ಮನಾದ ಸಾಕ್ಷಿಗೂ ಹಲವು ಹೋಲಿಕೆಗಳಿರುತ್ತವೆ. ಆದರೆ ಅಹಂಪ್ರತ್ಯಯವು ಇರುವಾಗಲೂ ಇಲ್ಲದಾಗಲೂ ಸಾಕ್ಷಿಯಾದ ಆತ್ಮನು ಇರುತ್ತಾನೆಂಬುದನ್ನು ಮನದಂದವರಿಗೆ ಮಾತ್ರ ನಿಜವಾದ ಆತ್ಮನ ಅರಿವಾಗುವದು. ಮಿಕ್ಕ ಮತದವರು ಈ ಆತ್ಮನ ಸ್ವರೂಪವನ್ನು ಅರಿಯರು; ಇದನ್ನು ಖಂಡಿಸಿಯೂ ಇರುವದಿಲ್ಲ. ಈ ಆತ್ಮನನ್ನು ಅರಿತುಕೊಂಡವರು ಅವಶ್ಯವಾಗಿ ಅದ್ವೈತಿಗಳೇ ಆಗುವರು.

ಈ ಸಾಕ್ಷಿಯು ಪ್ರಮಾಣಸಿದ್ಧನಲ್ಲ. ಏಕೆಂದರೆ ಪ್ರಮಾಣಕ್ಕೆ ಗೋಚರವಾದದ್ದು ಪ್ರಮೇಯವು; ಪ್ರಮಾತೃವು ಪ್ರಮಾಣಗಳಿಗೆ ಗೋಚರನಲ್ಲ. ಪ್ರಮಾತೃವು ನಾನು ಎಂಬ ಪ್ರತ್ಯಯಕ್ಕೆ ಗೋಚರನು; ಆದರೆ ಅವನಿಗಿಂತಲೂ ಒಳಗಿದ್ದು ಅವನನ್ನು ನೋಡುವ ಸಾಕ್ಷಿಯು ಅವನಿಗೂ ಆತ್ಮನಾಗಿರುತ್ತಾನೆ. ಅವನು ಅಸಂಸಾರಿ. ಆದರೂ ಅದನ್ನು ಅರಿತುಕೊಳ್ಳದೆ ಪ್ರಮಾತೃವೇ ನಾವು ಎಂದುಕೊಂಡಿರುತ್ತೇವೆ. ಇದೇ **ಅವಿದ್ಯೆ,** ತಪ್ಪು ತಿಳಿವಳಿಕೆ. ಇದನ್ನು ವಿದ್ಯೆಯಿಂದ ಕಳೆದುಕೊಂಡರೆ ನಮಗೆ ಪರಮಪುರುಷಾರ್ಥವು ಸಿಕ್ಕುವದು. ಇದೇ ವೇದಾಂತದ ಉಪದೇಶವೆಂಬುದನ್ನು ಶಂಕರರು ತಿಳಿಸಿ ನಮ್ಮೆಲ್ಲರ ಅನುಭವಕ್ಕೂ ಬರುವಂತೆ ಹೇಳಿರುವದರಿಂದ ಅವರನ್ನು ಜಗದ್ಗುರುಗಳೆಂದು ಕರೆಯಬಹುದು. ಆದ್ದರಿಂದ ಅವರ ಸ್ಮರಣೆಯನ್ನು ಮಾಡುವ ಈ ದಿನವೇ ಶುಭದಿನ.

★★★★★

# ಶಾಸ್ತ್ರಪ್ರಾಮಾಣ್ಯ

**27-4-1955**

**ಶ್ರೀಶ್ರೀಗಳವರು**

ವೇದಾಂತದಲ್ಲಿ ಬ್ರಹ್ಮವು ನಮ್ಮೆಲ್ಲರ ಆತ್ಮನೇ ಎಂಬುದನ್ನು ಒತ್ತಿಹೇಳಿದೆ. ಈ ಆತ್ಮಸ್ವರೂಪವು ಅಹಂಪ್ರತ್ಯಯಗಮ್ಯನಾದ ಆತ್ಮನಿಗಿಂತ ವಿಲಕ್ಷಣನಾದ ಸಾಕ್ಷಿಯೇ ಎಂಬುದು ಶಂಕರಭಗವತ್ಪಾದರವರು ಒತ್ತಿ ತಿಳಿಸಿರುವಂತೆ ಮತ್ತೆ ಯಾರೂ ತಿಳಿಸಿರುವದಿಲ್ಲ. ವೇದಾಂತದ ಅಸಾಧಾರಣವಿಷಯವನ್ನೂ ವೇದಾಂತ ಜ್ಞಾನದ ಪ್ರಯೋಜನವನ್ನೂ ತಿಳಿಸುವದಕ್ಕೆ ನಾನು ನಿನ್ನೆಯ ಉಪನ್ಯಾಸದ ಕೊನೆಯಲ್ಲಿ ಉದಾಹರಿಸಿರುವ ಒಂದು ಶ್ರುತಿಯನ್ನು ನೆನಪುಕೊಡುತ್ತೇನೆ ; ''**ಸವಾ ಏಷ ಮಹಾನಜ ಆತ್ಮಾऽಜರೋऽಮೃತೋऽಭಯೋಬ್ರಹ್ಮಾऽಭಯಂ ವೈ ಬ್ರಹ್ಮಾऽಭಯಗ್ಂ ಹಿ ವೈ ಬ್ರಹ್ಮ ಭವತಿ ಯ ಏವಂ ವೇದ॥**'' (ಬೃ.4-4-25) ಈ ವಿಜ್ಞಾನಮಯನೆಂದು ನಾವು ತಿಳಿದುಕೊಂಡಿರುವ ಆತ್ಮನೇ ವ್ಯಾಪಕನಾಗಿ

ರುವ ಪರಮಾತ್ಮನು. ಇವನಿಗೆ ಮುಪ್ಪಿಲ್ಲ, ಸಾವಿಲ್ಲ, ಅಮೃತಸ್ವಭಾವದವನಿವನು, ನಿರ್ಭಯಸ್ವರೂಪನು. ಬ್ರಹ್ಮವು ಅದ್ವಿತೀಯವಾಗಿರುವದರಿಂದ ಅದಕ್ಕೆ ಯಾವ ಅಂಜಿಕೆಯೂ ಇಲ್ಲ; ಇಂಥ ಬ್ರಹ್ಮವೇ ನಾನೆಂದು ಅರಿತುಕೊಂಡವನು ಅಭಯಬ್ರಹ್ಮವೇ ಆಗುತ್ತಾನೆ ಎಂಬುದು ಶ್ರುತಿಯ ಅರ್ಥ.

ಈ ದಿನ ವೇದಾಂತವು ಹೇಗೆ ಪ್ರಮಾಣವಾಗಿರುತ್ತದೆ? ಎಂಬುದನ್ನು ವಿಚಾರಮಾಡಬೇಕಾಗಿದೆ. ವೇದವು ಹೇಗೆ ಪ್ರಮಾಣವೆಂದರೆ ಸಾಂಖ್ಯರೇ ಮುಂತಾದವರು ತಾವು ಮಾಡುವ ತರ್ಕವನ್ನು ಮುಖ್ಯವಾಗಿಟ್ಟುಕೊಂಡು ಅದಕ್ಕೆ ಹೊಂದುಗೆಯಾಗಿರುವದರಿಂದ ಶಾಸ್ತ್ರವು ಪ್ರಮಾಣ ಎನ್ನುತ್ತಿದ್ದರು. ತರ್ಕವು ತೋರಿಸಿಕೊಡಲಾರದ ವಿಷಯದಲ್ಲಿಯೇ ಶಾಸ್ತ್ರವು ಪ್ರಮಾಣವೆಂಬುದು ಹಿಂದೆ ಅನೇಕರ ಮತವಾಗಿತ್ತು. ಅದು ಆಪ್ತವಾಕ್ಯದ ಸ್ಥಾನದಲ್ಲಿದ್ದುಕೊಂಡಿತ್ತು; ಆಪ್ತವಾಕ್ಯವು ಪ್ರತ್ಯಕ್ಷಾದಿಗಳನ್ನು ಅಪೇಕ್ಷಿಸಿಯೇ ಪ್ರಮಾಣವಾಗಿದ್ದಿತು. ನಮ್ಮಗಳಿಗಿಂತಲೂ ಸೂಕ್ಷ್ಮದರ್ಶಿಗಳಾದ ಮಹನೀಯರು ಹೇಳುವ ವಾಕ್ಯಗಳನ್ನು ಕೆಲವಿಷಯಗಳಲ್ಲಿ ನಂಬಬೇಕಾಗುತ್ತದೆ. ಆದ್ದರಿಂದ ಅದೊಂದು ಪ್ರಮಾಣವು ಎಂಬುದು ಅವರ ಅಭಿಪ್ರಾಯ. ವೇದವು ಈಶ್ವರನ ವಾಕ್ಯವೆಂಬುದು ನೈಯಾಯಿಕರ ಮತ; ಆದರೆ ಈಶ್ವರನೇ ಸಿದ್ಧಿಯಾಗದ ಅವಸ್ಥೆಯಲ್ಲಿ ವೇದಕ್ಕೆ ಹೇಗೆ ಪ್ರಾಮಾಣ್ಯವನ್ನು ಕೊಡುವದು ? ಎಂಬ ಪ್ರಶ್ನೆಗೆ ಅವರಲ್ಲಿ ಉತ್ತರವಿಲ್ಲ. ಮೀಮಾಂಸಕರ ಮತವೇನೆಂದರೆ, ವಾಕ್ಯವು ಬೋಧಕವಾಗಿರುವದರಿಂದ ಪ್ರಮಾಣವೇ ಆಗಿರುತ್ತದೆ. ಆದರೆ ಪೌರುಷೇಯವಾಕ್ಯವು ಪ್ರಮಾಣಾಂತರವನ್ನು ಆಶ್ರಯಿಸಿರುವದರಿಂದಲೂ ವಕ್ತೃವಿನ ಸ್ವಭಾವವನ್ನು ಅವಲಂಬಿಸಿರುವದರಿಂದಲೂ ಎಲ್ಲಾ ಸಂದರ್ಭಗಳಲ್ಲಿಯೂ ಅದು ನಿಶ್ಚಿತವಾಗಿ ಪ್ರಮಾಣವೆಂದು ಹೇಳುವದಕ್ಕೆ ಬರುವದಿಲ್ಲ ವೇದವೋ ಎಂದರೆ ಅಪೌರುಷೇಯ ; ಆದ್ದರಿಂದ ಅದಕ್ಕೆ ಪುರುಷಸಂಬದ್ಧವಾದ ದೋಷಗಳು ಯಾವವೂ ಇರುವದಿಲ್ಲ ಆದ್ದರಿಂದ ಧರ್ಮವೇ ಮುಂತಾದ ಅತೀಂದ್ರಿಯವಿಷಯಗಳಲ್ಲಿ ಪ್ರಮಾಣಾವು.

ಈಗ ಆಚಾರ್ಯರ ಮತದಲ್ಲಿ ಶಾಸ್ತ್ರಪ್ರಾಮಾಣ್ಯವು ಹೇಗೆ ಸಿದ್ಧಿಸುವದೆಂಬುದನ್ನು ನೋಡೋಣ. ಆಚಾರ್ಯರಿಗಿಂತ ಹಿಂದಿನ ವೇದಾಂತಿಗಳು ಪೂರ್ವಮೀಮಾಂಸಕರ ಮತವನ್ನೇ ಬಹಳವಾಗಿ

ಅವಲಂಬಿಸಿದ್ದರಿಂದ ಅವರು ಕರ್ತವ್ಯವಾದ ಉಪಾಸನೆ ಮುಂತಾದ ವಿಷಯವನ್ನೇ ಉಪನಿಷತ್ತುಗಳಲ್ಲಿಯೂ ಹೇಳಿದೆಯೆಂದು ವಾದಿಸುತ್ತಿದ್ದರು. ಆಚಾರ್ಯರು **'ಶಾಸ್ತ್ರಯೋನಿತ್ವಾತ್'** ಎಂಬ ವೇದಾಂತಸೂತ್ರವನ್ನವಲಂಬಿಸಿ ವೇದಾಂತಶಾಸ್ತ್ರವೇ ಬ್ರಹ್ಮವಸ್ತುವಿಗೆ ಪ್ರಮಾಣವು, ಅದು ಬ್ರಹ್ಮವಸ್ತುವನ್ನು ತಿಳಿಸುವದರಿಂದಲೇ ಬೇರೊಂದು ಶಾಸ್ತ್ರವೆನಿಸಿದೆ ಎಂಬುದನ್ನು ವಿಶದಗೊಳಿಸಿದರು. ವಸ್ತುಬೋಧಕವಾದ ವೇದವಾಕ್ಯವೂ ಇದೆ ಎಂಬುದನ್ನು ಸ್ಫುಟಪಡಿಸಿತೋರಿಸಿಕೊಟ್ಟಿದ್ದೊಂದು ಆಚಾರ್ಯರ ಹೊಸ ಕೆಲಸ.

ಧರ್ಮಜಿಜ್ಞಾಸೆ, ಬ್ರಹ್ಮಜಿಜ್ಞಾಸೆ- ಇವೆರಡೂ ಶ್ರುತಿಪ್ರಾಮಾಣ್ಯದ ಆಧಾರದ ಮೇಲೆಯೇ ಹೊರಟಿವೆಯಾದರೂ ಇವೆರಡಕ್ಕೂ ಒಂದು ಮುಖ್ಯವಾದ ತಾರತಮ್ಯವಿದೆ. ''**ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮಜಿಜ್ಞಾಸಾಯಾಮ್, ಕಿಂ ತು ಶ್ರುತ್ಯಾದಯೋಽನುಭವಾದಯಶ್ಚ ಯಥಾಸಂಭವಮಿಹ ಪ್ರಮಾಣಮ್ । ಅನುಭವಾವಸಾನತ್ವಾದ್ ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ ॥**'' ಧರ್ಮಜಿಜ್ಞಾಸೆಯಲ್ಲಿ ಶ್ರುತಿಯೇ ಪ್ರಮಾಣ, ಏಕೆಂದರೆ ಪ್ರತ್ಯಕ್ಷಾದಿಗಳಿಗೆ ಧರ್ಮವು ವಿಷಯವಲ್ಲ. ಇದರಂತೆ ಬ್ರಹ್ಮಜಿಜ್ಞಾಸೆಯಲ್ಲಿಯೂ ಪ್ರತ್ಯಕ್ಷಾದಿಗಳಿಗೆ ಸ್ಥಲವಿಲ್ಲ ; ಆದ್ದರಿಂದ ಶ್ರುತಿಯೇ ಬೇಕೆಂಬುದು ಇಲ್ಲಿಯೂ ಸಮಾನವಾಗಿದೆ. ಆದರೆ ಇಲ್ಲಿ ಮತ್ತೊಂದು ವಿಶೇಷವಿದೆ. ಅದೇನೆಂದರೆ ಇಲ್ಲಿ ಶ್ರುತಿಯ ಜೊತೆಗೆ ಅನುಭವಾದಿಗಳೂ ಪ್ರಮಾಣವಾಗಿರುತ್ತವೆ. ಇಲ್ಲಿ ತರ್ಕವನ್ನು ಮಾಡುವದಕ್ಕೂ ಅವಕಾಶವಿದೆ; ವಸ್ತುವು ಹೀಗೂ ಇರಬಹುದು ಹಾಗೂ ಇರಬಹುದು – ಎಂದು ವಿಕಲ್ಪಿಸುವದಕ್ಕೆ ಬರುವದಿಲ್ಲ. ಶ್ರುತಿಯಲ್ಲಿ ಹೇಳಿದೆ ಎಂಬಿಷ್ಟೇ ಸಾಲದು, ಮತ್ತೇನೆಂದರೆ ಬ್ರಹ್ಮಜ್ಞಾನವು ಅನುಭವಕ್ಕೂ ಬರಬೇಕು. ಶ್ರುತಿಪ್ರಾಮಾಣ್ಯವು ಅನುಭವದ ಒರೆಗಲ್ಲಿಗೆ ತಿಕ್ಕಿನೋಡತಕ್ಕದ್ದು ಎಂಬುದು ಶಂಕರಾಚಾರ್ಯರು ಒತ್ತಿಹೇಳಿರುವ ವಿಷಯಗಳಲ್ಲಿ ಒಂದಾಗಿರುತ್ತದೆ. 'ನಮ್ಮ ಆತ್ಮನೇ ಬ್ರಹ್ಮವು' ಎಂದು ಶ್ರುತಿ ಹೇಳಿದರೆ ಸಾಲದು ; ನಮ್ಮ ಆತ್ಮನು ಬ್ರಹ್ಮವೆ? ಆ ಆತ್ಮನು ಜನ್ಮಾದಿವಿಕಾರಗಳಿಲ್ಲದ ಅದ್ವಿತೀಯನಾದ ಪರಮಾತ್ಮನಾಗಿರುತ್ತಾನೆಯೆ ? ಇದು **ಅನುಭವಕ್ಕೆ** ಹೊಂದುತ್ತದೆಯೆ? ಈ ಪ್ರಶ್ನೆಯು ಶಾಂಕರವೇದಾಂತದಲ್ಲಿ ಬಹಳ ಮಹತ್ತ್ವದ್ದಾಗಿರುತ್ತದೆ. ಇಲ್ಲಿ ಶಾಸ್ತ್ರವನ್ನು ಪ್ರಮಾಣವೆಂದು ನಂಬುವ ಪ್ರಸಂಗವೇ ಇರುವದಿಲ್ಲ.

ಆದರೆ ವೇದಾಂತದಲ್ಲಿ ಹೇಳಿರುವ ಆತ್ಮನು ಸಾಕ್ಷಿರೂಪನಾಗಿದ್ದು, ಸ್ವಯಂಸಿದ್ಧನಾಗಿರುತ್ತಾನಲ್ಲ! **''ಏಕಧೈವಾನುದ್ರಷ್ಟವ್ಯಮೇತದಪ್ರಮಯಂ ಧ್ರುವಮ್'** (ಈ ತತ್ತ್ವವನ್ನು ಅದ್ವಿತೀಯಾವಾದ ಅಖಂಡೈಕರಸವಾದ ಚೈತನ್ಯವೆಂದೇ ಕಂಡುಕೊಳ್ಳಬೇಕು ; ಇದು ಅಪ್ರಮೇಯವು, ಕೂಟಸ್ಥವು) ಎಂಬ ಶ್ರುತಿಯಲ್ಲಿ ಇದು ಯಾವ ಪ್ರಮಾಣಕ್ಕೂ ಗೋಚರವಲ್ಲವೆಂದೂ ಹೇಳಿದೆಯಲ್ಲ !- ಎಂಬ ಶಂಕೆಯೊಂದು ಎದ್ದುಕೊಳ್ಳಬಹುದು. ಇದಕ್ಕೆ ಪರಿಹಾರವೇನೆಂದರೆ ಪರಮಾರ್ಥಸತ್ಯನಾದ ಆತ್ಮನು ಅದ್ವಿತೀಯನೇ ಆಗಿದ್ದರೂ ಇವನಲ್ಲಿ ಮಿಥ್ಯಾರೂಪವಾದ ಅನಾತ್ಮವನ್ನು ಬೆರೆಯಿಸಿಕೊಂಡುಆತ್ಮಾನಾತ್ಮಗಳಅನ್ಯೋನ್ಯಾಧ್ಯಾಸದಿಂದಾಗಿರುವಅವಿದ್ಯೆಯಿಂದ ಆತ್ಮನನ್ನು ಪ್ರಮಾತೃವೆಂದೇ ಜನರು ಸ್ವಭಾವದಿಂದ ವ್ಯವಹರಿಸುತ್ತಿದಾರೆ. ಈ ಪ್ರಮಾಣಪ್ರಮೇಯವ್ಯವಹಾರವು ಅವಿದ್ಯೆಯಿಂದಾದದ್ದು, ಸತ್ಯವಲ್ಲ ಎಂದು ತಿಳಿಸುವದೇ ಶಾಸ್ತ್ರಪ್ರಮಾಣದ ಕೆಲಸ. ಮಿಕ್ಕ ಪ್ರಮಾಣಗಳು ವ್ಯವಹಾರವನ್ನು ಗಟ್ಟಿಗೊಳಿಸುತ್ತವೆ ; ಇದು ಪ್ರಮಾಣಪ್ರಮೇಯವೆಂಬ ವ್ಯವಹಾರವನ್ನೇ ತಪ್ಪೆಂದು ತೋರಿಸಿಬಿಡುತ್ತದೆ. ಆದ್ದರಿಂದ ಇದು ಅಂತ್ಯಪ್ರಮಾಣವೆನಿಸುತ್ತದೆ. ಶಾಂಕರವೇದಾಂತಪ್ರಕ್ರಿಯೆಗೆ ಇದೂ ಒಂದು ಅಸಾಧಾರಣಧರ್ಮವಾಗುತ್ತದೆ.

ಹೀಗೆ ಶಂಕರರು ಹೇಳಿರುವ ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸರೂಪವಾದ ತಪ್ಪುತಿಳಿವೇ ಅವಿದ್ಯೆ, ಅದನ್ನು ಕಳೆಯುವ ಮಾತ್ರದಿಂದಲೇ ಆತ್ಮನು ಅದ್ವಿತೀಯನಾಗಿರುತ್ತಾನೆಂಬುದನ್ನು ಅನುಭವಕ್ಕೆ ತಂದುಕೊಡುವದರಿಂದ ಶಾಸ್ತ್ರವು ಅಂತ್ಯ ಪ್ರಮಾಣವೆನಿಸಿರುವದು. ಆತ್ಮನು ಸ್ವಯಂಸಿದ್ಧನಾಗಿದ್ದರೂ ಈ ದೃಷ್ಟಿಯಿಂದ ಶಾಸ್ತ್ರವು ಅವನ ಸ್ವರೂಪವನ್ನು ತಿಳಿಸುವದಕ್ಕೆ ಪ್ರಮಾಣವೆನಿಸಿರುವದು - ಇವೆಲ್ಲ ಈ ವೇದಾಂತಪ್ರಕ್ರಿಯೆಯಲ್ಲಿರುವ ಅಸಾಧಾರಣಧರ್ಮಗಳಾಗಿರುತ್ತವೆ. ಶಂಕರರಿಗಿಂತ ಹಿಂದಿನವರೂ ಶಂಕರರ ಅನುಯಾಯಿಗಳೂ ಹೇಳಿರುವ ಅವಿದ್ಯೆಯ ಸ್ವರೂಪವೂ, ಶಾಸ್ತ್ರಪ್ರಾಮಾಣ್ಯಸ್ವರೂಪವೂ, ಆತ್ಮಜ್ಞಾನವು ಅನುಭವಕ್ಕೆ ಹೇಗೆ ಬರುವದೆಂಬುದೂ- ಈವರೆಗೆ ನಾನು ವರ್ಣಿಸಿರುವ ಪ್ರಕಾರಕ್ಕಿಂತ ಭಿನ್ನವಾಗಿರುತ್ತವೆ. ಮತಾಂತರದವರು ಆ ಪ್ರಕಾರಗಳನ್ನು ಖಂಡಿಸಿರುತ್ತಾರಾದರೂ ಶಂಕರರೇ ತಮ್ಮ ಭಾಷ್ಯದಲ್ಲಿ ಒತ್ತಿ ಹೇಳಿರುವ ಈ ಪ್ರಕ್ರಿಯೆಯನ್ನು ಖಂಡಿಸಿಯೂ

ಇಲ್ಲ, ಪರಾಮರ್ಶೆಮಾಡಿರುವದೂ ಇಲ್ಲ. ನಿಷ್ಪಕ್ಷಪಾತದೃಷ್ಟಿಯಿಂದ ವಿಮರ್ಶಿಸುವವರು ಯಾರೂ ಇದನ್ನು ಖಂಡಿಸುವದು ಸಾಧ್ಯವೇ ಇಲ್ಲ; ಏಕೆಂದರೆ ಇದು ಅನುಭವದ ಆಧಾರದಿಂದಲೇ ಏರ್ಪಟ್ಟಿರುವ ಪ್ರಕ್ರಿಯೆಯಾಗಿರುತ್ತದೆ. **'ಅತ್ರ ಬ್ರಹ್ಮ ಸಮಶ್ನುತೇ'** ಇಲ್ಲಿಯೇ ಬ್ರಹ್ಮವನ್ನು ಪಡೆಯುತ್ತಾನೆ ಎಂಬುದನ್ನು ಹೀಗೆ ಸ್ಫುಟಗೊಳಿಸಿರುವ ಈ ಪ್ರಕ್ರಿಯೆಯನ್ನು ಅರಿತುಕೊಂಡು ನಾವು ಕೃತಾರ್ಥರಾಗಬೇಕು.

★★★★★

# ಶಾಸ್ತ್ರಪ್ರಮಾಣದ ಕೃತ್ಯವಿಶೇಷ

**28-4-1955**

**ಶ್ರೀಶ್ರೀಗಳವರು**

ಈ ವಿಜ್ಞಾನಮಯನಾದ ಆತ್ಮನು ನಿಜವಾಗಿ ಜನ್ಮರಹಿತವೂ ಅಮರವೂ ಅಮೃತವೂ ಅಭಯವೂ ಆದ ಬ್ರಹ್ಮವು- ಎಂಬ ಶ್ರುತಿವಾಕ್ಯದ ಅಭಿಪ್ರಾಯವನ್ನು ಸ್ವಲ್ಪಮಟ್ಟಿಗೆ ತಿಳಿಸಿದ್ದಾಯಿತು. ಈ ಆತ್ಮನು ಶಾಸ್ತ್ರಪ್ರಮಾಣದಿಂದಲೇ ತಿಳಿಯಬರುವವನಾಗಿರುತ್ತಾನೆ. ಶಾಸ್ತ್ರವು ಕರ್ತವ್ಯವನ್ನು ಮಾತ್ರ ಹೇಳಬೇಕೆಂತಲೂ ಭಾವಿಸುವದು ಸರಿಯಲ್ಲ. 'ಈ ಆತ್ಮನು ಬ್ರಹ್ಮವು' ಎಂಬ ವಿಷಯವು ಕರ್ತವ್ಯವೂ ಅಲ್ಲ, ಶಾಸ್ತ್ರಪ್ರಮಾಣವಿಲ್ಲದೆ ತಿಳಿಯುವಂತೆಯೂ ಇಲ್ಲ.

ಶಬ್ದವು ದ್ರವ್ಯ, ಗುಣ, ಕ್ರಿಯೆ, ಸಂಬಂಧ- ಮುಂತಾದ ವಿಶೇಶಗಳನ್ನು ಮಾತ್ರ ತಿಳಿಸಬಲ್ಲದು. ಆದರೆ ಆತ್ಮನಲ್ಲಿ ಯಾವ ವಿಶೇಷವೂ ಇಲ್ಲ. ಹೀಗಿರುವಲ್ಲಿ ಶಾಸ್ತ್ರವು ಆತ್ಮನವಿಷಯಕ್ಕೆ ಪ್ರಮಾಣವಾಗಿರುವದು ಹೇಗೆ?- ಎಂದರೆ ಶಾಸ್ತ್ರವು ಆತ್ಮನು ಇಂಥ ವಸ್ತು ಎಂದು ತಿಳಿಸುವದಿಲ್ಲ, ಹಾಗೆ ತಿಳಿಸಬೇಕಾದ ಆವಶ್ಯಕತೆಯೂ ಇಲ್ಲ; ಏಕೆಂದರೆ ಆತ್ಮನು ಸ್ವಯಂಸಿದ್ಧನಾಗಿರುತ್ತಾನೆ. ಶಾಸ್ತ್ರವು ಆತ್ಮನಲ್ಲದ್ದನ್ನೆಲ್ಲ ಅಲ್ಲಗಳೆಯುತ್ತದೆ. 'ಅಥಾತ ಆದೇಶೋ ನೇತಿ ನೇತಿನ ಹ್ಯೇತಸ್ಮಾದಿತಿನೇತ್ಯನ್ಯತ್ ಪರಮಸ್ತಿ' (ಬೃ.2-4-6) ಎಂಬಂತೆ ಪಂಚಭೂತಾತ್ಮಕವಾದದ್ದೆಲ್ಲವನ್ನೂ

ಸೂಕ್ಷ್ಮಶರೀರಕ್ಕೆ ಸಂಬಂಧಪಟ್ಟದ್ದೆಲ್ಲವನ್ನೂ ಅದರ ವಾಸನೆಯನ್ನೂ ಅಲ್ಲಗಳೆದ ಬಳಿಕ ಉಳಿಯುವದೇ ಆತ್ಮನು.

ದೇಹಾದಿಗಳೆಲ್ಲವೂ ಅನಾತ್ಮವು, ಇದನ್ನೆಲ್ಲ ನೋಡುತ್ತಿರುವ ಸಾಕ್ಷಿಯೇ ಆತ್ಮನು. ಆತ್ಮನಿಗೆ ಅಧೀನವಾಗಿಯೇ ಅನಾತ್ಮವು ಇದ್ದುಕೊಂಡಿದೆ; ಅದು ಸ್ವತಂತ್ರವಸ್ತುವಲ್ಲ. ಈ ಅನಾತ್ಮವನ್ನು ಅಲ್ಲಗಳೆದರೆ ಆತ್ಮವಸ್ತುವು ತಾನೇ ಉಳಿದುಕೊಳ್ಳುವದು. ವಿಷ್ಣುಪುರಾಣದಲ್ಲಿ ಅದ್ವೈತಪ್ರಕರಣವೆಂಬ ಭಾಗದಲ್ಲಿ ಅನಾತ್ಮದಿಂದ ಆತ್ಮವಸ್ತುವನ್ನು ವಿಂಗಡಿಸಿಕೊಳ್ಳುವ ಈ ಬಗೆಯನ್ನು ಋಭು-ನಿದಾಘ ಸಂವಾದರೂಪವಾಗಿ ವರ್ಣಿಸಿದೆ. ಇರತಕ್ಕದ್ದೆಲ್ಲವೂ ಒಂದೇ ವಸ್ತು ; ಅದರಲ್ಲಿ ಮಿಕ್ಕದ್ದೆಲ್ಲವೂ ಅಧ್ಯಾರೋಪಿತವಾಗಿರುತ್ತದೆ. ಆದ್ದರಿಂದ ಅಧ್ಯಾರೋಪಿತವಾದದ್ದನ್ನು ಅಲ್ಲಗಳೆಯುವದರಿಂದಲೇ ಶಾಸ್ತ್ರವು ಪ್ರಮಾಣವೆನಿಸುತ್ತದೆ. ಈ ಕ್ರಮವನ್ನೇ **ಆಗಮ** ಎಂದರೆ ಆತ್ಮನನ್ನು ಉಪದೇಶಮಾಡುವ ರೀತಿ ಎಂದು ಕರೆಯುತ್ತಾರೆ. ಹೀಗೆ 'ನೇತಿ ನೇತಿ' ಎನ್ನುವದಕ್ಕಿಂತ ಆತ್ಮನನ್ನು ತಿಳಿಸುವದಕ್ಕೆ ಬೇರೆಯ ಉಪಾಯವೇ ಇರುವದಿಲ್ಲ.

ಆತ್ಮನಲ್ಲಿ ಅಧ್ಯಾರೋಪಿತವಾಗಿರುವದನ್ನು ಹೀಗೆ ಅಲ್ಲಗಳೆಯುತ್ತಾ ಹೋದರೆ ಎಷ್ಟೆಂದು ಅಲ್ಲಗಳೆಯುವದಕ್ಕಾದೀತು?- ಎಂದು ಯಾರಿಗಾದರೂ ಶಂಕೆಯುಂಟಾಗಬಹುದು. ಆದರೆ ಈ ಅಲ್ಲಗಳೆಯುವದಕ್ಕೂ ಒಂದು ಕ್ರಮವಿದೆ. ಆತ್ಮನು ಎಲ್ಲದರಲ್ಲಿಯೂ ಅನುಗತವಾಗಿರುತ್ತಾನೆ. ಅವನಲ್ಲಿ ಸ್ಥೂಲತ್ವ, ಅಣುತ್ವ-ಮುಂತಾದ ಧರ್ಮಗಳು ಕಲ್ಪಿತವಾಗಿವೆ ; ಸ್ಥೂಲವಲ್ಲವೆಂದರೆ ಅಣು ಎಂಬ ಭಾವನೆ ಬರುವದಷ್ಟೆ? ಆದ್ದರಿಂದ ಅಣುವಲ್ಲ ಎಂದೂ ಅಲ್ಲಗಳೆದಿದೆ. ಹೀಗೆ ಘಟವಲ್ಲ ಎಂದರೆ ಪಟ ಎಂಬಂತೆ ಒಂದೊಂದರ ಅನ್ಯೋನ್ಯಾಭಾವವೆಂದು ಭಾವಿಸುವಂತೆ ಆದೀತೆಂದು ಅದರ ವಿರುದ್ಧವಾದ ಧರ್ಮವನ್ನೂ ಶ್ರುತಿಯು ಅಲ್ಲಗಳೆಯುತ್ತದೆ. ದ್ರವ್ಯ, ಗುಣ, ಕರ್ಮ- ಮುಂತಾದ ವಿಶೇಷಧರ್ಮಗಳೆಲ್ಲವನ್ನೂ ಹೀಗೆ ಅಲ್ಲಗಳೆಯುವದಲ್ಲದೆ **'ಅನ್ಯದೇವ ತದ್ವಿದಿತಾದವಿದಿತಾದಧಿ'** ನಮಗೆ ಪ್ರಮಾಣಗಳಿಂದ ತಿಳಿಯಬರಬಹುದಾದ ವ್ಯಾಕೃತಪ್ರಪಂಚವೂ ಅದಲ್ಲ, ಅವುಗಳಿಂದ ತಿಳಿಯಲಿಕ್ಕಾಗದ ಅವ್ಯಾಕೃತಪ್ರಪಂಚವೂ ಅದಲ್ಲ- ಎಂದು ಹೇಳಿರುವದರಿಂದ ಅನಾತ್ಮಸಾಮಾನ್ಯದಿಂದಲೇ ಹಿಂದಿರುಗಿ ಆತ್ಮಸ್ವರೂಪದಲ್ಲಿಯೇ ವಿಶ್ರಾಂತಿಯನ್ನು ಪಡೆಯಬೇಕಾಗುತ್ತದೆ. ನೇತಿನೇತಿ ಎಂಬ ವಾಕ್ಯವು ಬರಿಯ

ಅಭಾವವನ್ನು ಹೇಳುವದಿಲ್ಲ. ಭಾವಾಭಾವಗಳೆರಡನ್ನೂ ಅಲ್ಲಗಳೆದು ಸಾಕ್ಷಿಯಾದ ಆತ್ಮನಲ್ಲಿ ನೆಲೆನಿಲ್ಲಿಸುತ್ತದೆ. ಆತ್ಮಕ್ಕಿಂತ ಬೇರೆಯೆಂದಾಗಲಿ ಬೇರೆಯಲ್ಲವೆಂದಾಗಲಿ ಹೇಳುವದಕ್ಕೆ ಬಾರದ ಅನಿರ್ವಚನೀಯವು ಅನಾತ್ಮವು; ಸ್ವತಂತ್ರಸತ್ತೆಯಿಲ್ಲದ್ದು, ಮಿಥ್ಯ, ಆತ್ಮನ ಚೈತನ್ಯಪ್ರಕಾಶದಿಂದಲೇ ಅದು ಬೆಳಗುತ್ತದೆ. ಸೂರ್ಯನ ಬೆಳಕು ಕನ್ನಡಿಯ ಮೇಲೆ ಬಿದ್ದು ಮತ್ತೊಂದು ವಸ್ತುವನ್ನು ಬೆಳಗುವಂತೆ ಆತ್ಮಚೈತನ್ಯದ ಪ್ರಕಾಶವೇ ಅಂತಃಕರಣಾದಿಗಳಲ್ಲಿ ತೋರಿಕೊಂಡು ಹೊರಗಿನ ವಿಷಯಗಳನ್ನು ಬೆಳಗಿ ತೋರಿಸುತ್ತದೆ. ಆದ್ದರಿಂದ ಆತ್ಮನಂತೆ ಅನಾತ್ಮವು ಸ್ವಪ್ರಕಾಶವೂ ಅಲ್ಲ, ಸ್ವತಂತ್ರವಾಗಿರುವದೂ ಅಲ್ಲ. ಆದ್ದರಿಂದ ಈ ಮಿಥ್ಯೆಯಾದ ಅನಾತ್ಮವನ್ನು ಅಲ್ಲಗಳೆದು ಆತ್ಮನಲ್ಲಿ ನಿಲ್ಲಿಸುವದೇ ಶಾಸ್ತ್ರವು ಮಾಡುವ ಕೆಲಸ.

ಈಚಿನ ಕೆಲವರು ವೇದಾಂತಿಗಳು ಶಾಸ್ತ್ರವು ಆತ್ಮನನ್ನು ವಿಧಿಮುಖದಿಂದಲೂ ನಿಷೇಧಮುಖದಿಂದಲೂ ತಿಳಿಸಿಕೊಡುತ್ತದೆ. ಇವುಗಳಲ್ಲಿ ನಿಷೇಧಕ್ಕಿಂತಲೂ ವಿಧಿರೂಪೋಪದೇಶವೇ ಹೆಚ್ಚಿನದು' ಎನ್ನುತ್ತಿದಾರೆ. ಇದು ನಿಜವಾದರೆ ಆತ್ಮನಲ್ಲಿ ವಿಶೇಷಗಳಿವೆ ಎಂದು ಒಪ್ಪಿದಂತೆ ಆಗುತ್ತದೆ. ನಿಜವಾಗಿ ನೋಡಿದರೆ 'ತತ್ತ್ವಮಸಿ' ಎಂಬುದು ಕೂಡ ವಿಧಿಮುಖವಾದ ಉಪದೇಶವಲ್ಲ. ಆಚಾರ್ಯರು ಉಪದೇಶಸಾಹಸ್ರಿಯಲ್ಲಿ ಹೇಳಿರುವಂತೆ '**ಸಿದ್ಧಾದೇವಾಽಹಮಿತ್ಯಸ್ಮಾದ್ಯುಷ್ಮದ್ಧರ್ಮೋ ನಿಷಿಧ್ಯತೇ । ರಜ್ಜ್ವಾಮಿವಾಹಿಧೀರ್ಯುಕ್ತ್ಯಾ ತತ್ತ್ವಮಿತ್ಯಾದಿಶಾಸನೈಃ॥**' ತ್ವಮ್ ಎಂಬಲ್ಲಿ ಸಿದ್ಧವೇ ಆಗಿರುವ ಸಾಕ್ಷಿರೂಪವೊಂದಿದೆ, ಅದರಲ್ಲಿ ಅನಾತ್ಮಾಂಶವು ಆರೋಪಿತವಾಗಿದೆ. ಆ ಅಂಶವನ್ನು ಅಲ್ಲಗಳೆಯುವದೇ ತತ್ತ್ವಮಸಿ ಎಂಬ ವಾಕ್ಯದ ಕೆಲಸ. ಆತ್ಮನನ್ನು ಶಾಸ್ತ್ರವು ಬೆಳಗಬೇಕಾದದ್ದೇನೂ ಇಲ್ಲ. ಇನ್ನೂ ಒಳಹೊಕ್ಕು ನೋಡಿದರೆ ಲೌಕಿಕ ಪ್ರಮಾಣಗಳೂ ಪ್ರಮೇಯದ ಅಜ್ಞಾನವನ್ನು ಮಾತ್ರವೇ ಕಳೆಯುತ್ತವೆ. ಆದರೆ ಶಾಸ್ತ್ರವು ಪ್ರಮಾತೃ, ಪ್ರಮಾಣ, ಪ್ರಮೇಯ- ಎಂಬ ವಿಭಾಗವೇ ಅಜ್ಞಾನಕೃತವೆಂದು ಎಲ್ಲವನ್ನೂ ತೊಡೆದುಹಾಕುವ ಅಂತ್ಯಪ್ರಮಾಣವಾಗಿರುತ್ತದೆ. ಸ್ವಪ್ನಕಾಲದ ಪ್ರಮಾಣ ಪ್ರಮೇಯವ್ಯವಹಾರವೂ ಆತ್ಮಜ್ಞಾನವಾಗುವವರೆಗೆ ಸತ್ಯವಾಗಿದ್ದು ಆ ಜ್ಞಾನವಾಗುತ್ತಲೂ ಬಾಧಿತವಾಗುತ್ತದೆ.

★★★★★

# ಆತ್ಮಾನುಭವ

**29-4-1955**

**ಶ್ರೀಶ್ರೀಗಳವರು**

ಉಪನ್ಯಾಸದ ಸ್ಥಳವನ್ನು ಬೇರ್ಪಡಿಸುವದರಿಂದ ಪ್ರಯೋಜನವೂ ಇದೆ, ತೊಂದರೆಯೂ ಇದೆ. ಇದರಿಂದ ಎಲ್ಲಾ ಕಡೆಯ ಶ್ರೋತೃಗಳಿಗೂ ಉಪನ್ಯಾಸವು ಸಿಕ್ಕಿದಂತೆ ಆಗುತ್ತದೆ ; ದಿನದಿನವೂ ಅದೇ ವಿಷಯವನ್ನು ಹೇಳಬೇಕಾಗುವದರಿಂದ ಮನನಮಾಡಬೇಕೆಂಬ ಶ್ರೋತೃಗಳಿಗೆ ಲಾಭವುಂಟು. ಆದರೆ ಹೊಸಹೊಸ ಶ್ರೋತೃಗಳು ಸೇರುವದರಿಂದ ವಿಷಯವನ್ನು ಮುಂದುವರಿಸುವದು ಕಷ್ಟವಾಗುತ್ತದೆ. ಇದು ಹೇಗಾದರೂ ಇರಲಿ. ಹಿಂದಿನ ದಿನಗಳಲ್ಲಿ ಹೇಳಿದ್ದರ ಸಾರವನ್ನು ಅನುವಾದಮಾಡಿಕೊಂಡೇ ಮುಂದಕ್ಕೆ ಸಾಗುವೆನು.

ಆತ್ಮನು ಸ್ವತಃಸಿದ್ಧನಾದವನು ; ಹೀಗೆಂಬುದನ್ನು ಶಾಸ್ತ್ರವೇ ತಿಳಿಸಿಕೊಡುವದರಿಂದ ಶಾಸ್ತ್ರವೇ ಅದಕ್ಕೆ ಪ್ರಮಾಣವೆನ್ನುವರು. ಶಂಕರರ ಸಾಕ್ಷಾಚ್ಛಿಷ್ಯರಾದ ಸುರೇಶ್ವರಾಚಾರ್ಯರು ತಮ್ಮ ನೈಷ್ಕರ್ಮ್ಯಸಿದ್ಧಿಯಲ್ಲಿ ಹೀಗೆಂದು ಬರೆದಿರುತಾರೆ. ''**ಸೋಽಯಂ ನ್ಯಾಯೋಽಪಿ ವೇದಾನ್ತಾರ್ಥಃ ಶಾಸ್ತ್ರಚಾರ್ಯ ಪ್ರಸಾದಲಭ್ಯೋಽಪ್ಯನಪೇಕ್ಷಿತಶಾಸ್ತ್ರಾಚಾರ್ಯಪ್ರಸಾದೋಽನನ್ಯಾಪೇಕ್ಷಸಿದ್ಧ ಸ್ವಭಾವತ್ವಾತ್**'' ಈ ವೇದಾಂತಾರ್ಥವಾದ ಆತ್ಮತತ್ತ್ವವು ಯುಕ್ತಿಗೆ ಹೊಂದುವಂಥದ್ದು ; ಶಾಸ್ತ್ರಾಚಾರ್ಯರ ಪ್ರಸಾದದಿಂದ ದೊರಕತಕ್ಕದ್ದಾದರೂ ಮತ್ತೊಂದರ ಅಪೇಕ್ಷೆಯಿಲ್ಲದೆ ತನಗೆತಾನೇ ಸಿದ್ಧವಾಗಿರುವದರಿಂದ ಶಾಸ್ತ್ರಾಚಾರ್ಯರ ಪ್ರಸಾದವನ್ನು ಅಪೇಕ್ಷಿಸಿ ಸಿದ್ಧವಾಗತಕ್ಕದ್ದಲ್ಲ. ಈ ಆತ್ಮವಸ್ತುವನ್ನು 'ಸಾಕ್ಷಿ' ಎಂದೂ ಕರೆದಿರುತ್ತಾರೆ. ಸಾಕ್ಷಿ ಎಂದರೆ ಪ್ರಮಾತೃವಿನಂತೆ ಮತ್ತೊಂದು ಕರಣವನ್ನು ಬಯಸದೆ ನೇರಾಗಿಯೇ ನೋಡುವವನು. ಮಹಾಭಾರತದಲ್ಲಿರುವ ಈ ಶ್ಲೋಕವು ಇದನ್ನು ಸ್ಪಷ್ಟಪಡಿಸುತ್ತದೆ : ''**ಮಮಾನ್ತರಾತ್ಮಾ ತವ ಚ ಯೇಚಾನ್ಯೇ ದೇಹಸಂಸ್ಥಿತಾಃ । ಸರ್ವೇಷಾಂ ಸಾಕ್ಷಿಭೂತೋಽಸೌ ನ ಗ್ರಾಹ್ಯಃ ಕೇನಚಿತ್**

**ಕ್ವಚಿತ್॥** '' **(ಮೋ.ಧ.351-4)** ಇವನು ನನಗೂ ಆತ್ಮನು, ನಿನಗೂ ಆತ್ಮನು, ಶರೀರಗಳೆಂದುಕೊಂಡಿರುವ ಮಿಕ್ಕವರೆಲ್ಲರಿಗೂ ಆತ್ಮನು. ಇವನು ಎಲ್ಲರಿಗೂ ಸಾಕ್ಷಿಯಾಗಿರುವವನು ; ಇವನನ್ನು ಯಾರೊಬ್ಬರೂ ಎಲ್ಲಿಯೂ ಯಾವಾಗಲೂ ಗ್ರಹಿಸಲೇ ಆರರು.'' ಹಾಗಾದರೆ ಶಾಸ್ತ್ರವು ಮಾಡುವ ಕೆಲಸವೇನಿದೆ ? ಎಂದು ಯಾರಾದರೂ ಕೇಳಬಹುದು. ಆತ್ಮನು ಸ್ವಯಂಸಿದ್ಧನೆಂದು ಜ್ಞಾಪಿಸುವದೇ ಅದರ ಕೆಲಸ. ಅದು ಇಲ್ಲದ ಆತ್ಮನನ್ನುಂಟುಮಾಡುವದಿಲ್ಲ, ಇಲ್ಲದ ಜ್ಞಾನವನ್ನುಂಟುಮಾಡುವದೂ ಇಲ್ಲ ; ಇರುವ ಸ್ಥಿತಿಯನ್ನು ಹೀಗಿದೆ ಎನ್ನುತ್ತದೆ. **'ಜ್ಞಾಪಕಂ ಶಾಸ್ತ್ರಮ್, ನ ಕಾರಕಮ್'** ಎಂಬ ಭಾಷ್ಯ ವಾಕ್ಯಕ್ಕೆ ಇದೇ ಅರ್ಥ.

ಶಾಸ್ತ್ರವು ಆತ್ಮನಲ್ಲಿ ಪ್ರಮಾತೃತ್ವವಿಲ್ಲ, ಅವನು ಅರಿಯುವ ಕರ್ತೃವಲ್ಲ ; ಅವನು ಅಹಂಪ್ರತ್ಯಯಗೋಚರನಲ್ಲ, ನಾನು ಎಂಬ ಹೊರರೂಪವು ಅವನನ್ನು ತಿಳಿಯುವದಕ್ಕೆ ಅಡ್ಡಿಯಾಗಿದೆ- ಎಂದು ತಿಳಿಸುತ್ತದೆ. ಹೀಗೆ ಆತ್ಮನನ್ನು ಅರಿತುಕೊಂಡರೆ ಪ್ರಮಾಣಪ್ರಮೇಯವ್ಯವಹಾರವೇ ಹೋಗಿ ಬಿಡುತ್ತದೆ. ಪ್ರತ್ಯಕ್ಷ, ಅನುಮಾನ, ಉಪಮಾನ, ಅರ್ಥಾಪತ್ತಿ-ಎಂಬ ಯಾವ ಪ್ರಮಾಣಕ್ಕೂ ಆತ್ಮನು ಗೋಚರನಲ್ಲ. ಅನುಮಾನಾದಿಗಳು ಪ್ರತ್ಯಕ್ಷವನ್ನೇ ಅವಲಂಬಿಸಿಕೊಂಡು ತಿಳಿಸುತ್ತವೆ; ಪ್ರತ್ಯಕ್ಷಗಳಿಗೆ ಇಂದ್ರಿಯಗಳೇ ಆಧಾರ. ಆತ್ಮನು ಇಂದ್ರಿಯಾದಿ ಗೋಚರನಲ್ಲ ; ಆಪ್ತವಾಕ್ಯವೂ ಅವನನ್ನು ವಿಷಯೀಕರಿಸಲಾರದು. ಏಕೆಂದರೆ ಶಬ್ದವು ತಿಳಿಸಬಹುದಾದ ವಿಶೇಷಗಳೇ ಅವನಲ್ಲಿಲ್ಲ. ಆದ್ದರಿಂದ 'ಸ ಏಷನೇತಿ ನೇತ್ಯಾತ್ಮಾ' ಎಂದು ಅನಾತ್ಮಸ್ವರೂಪವನ್ನು ಅಲ್ಲಗಳೆದೇ ಶಾಸ್ತ್ರವು ಆತ್ಮನನ್ನು ತಿಳಿಸುತ್ತದೆ. ಇದರಿಂದಲೇ ಶಾಸ್ತ್ರವು ಪ್ರಮಾಣವೆನಿಸಿದೆ. **'ಸಿದ್ಧಂ ತು ನಿವರ್ತಕತ್ವಾತ್'** ಎಂಬುದು ಬಲ್ಲವರ ಉಪದೇಶ.

ಶಬ್ದವು ಅನಾತ್ಮಧರ್ಮವನ್ನು ಅಲ್ಲಗಳೆದರೂ ಅದು ಯಾವದೊಂದರ ಅಭಾವವನ್ನು ತಿಳಿಸುವದಿಲ್ಲ. ಇಂಥದ್ದೊಂದಲ್ಲ ಎಂದರೆ ಆದಕ್ಕೆ ಭಿನ್ನವಾದ ಅಥವಾ ವಿರುದ್ಧವಾದ ಮತ್ತೊಂದು- ಎಂದೇನೂ ಅಭಿಪ್ರಾಯವಲ್ಲ. ಆತ್ಮನಲ್ಲಿ ಇಲ್ಲ, ಅಲ್ಲ-ಎಂಬ ಅಭಾವರೂಪಗಳೂ ಇರುವದಿಲ್ಲ. ಅವು ಇಲ್ಲವೆಂಬುದು ಕೂಡ ಇಲ್ಲ; ಅನಾತ್ಮವೆಲ್ಲವೂ ಹೋಗಿ ಪ್ರಪಂಚೋಪಶಮನಾದ ಆತ್ಮಸ್ವರೂಪವನ್ನು ತಿಳಿಸುವದೇ ಶಬ್ದದ ಕೆಲಸವು.

ಸಾಕ್ಷಿಯು ಸ್ವಯಂಸಿದ್ಧ, ಜಗತ್ತು ಸಾಕ್ಷಿಸಿದ್ಧ, ಅದನ್ನು ಭ್ರಾಂತಿಸಿದ್ಧವೆನ್ನುವದಕ್ಕಿಂತಲೂ ಸಾಕ್ಷಿಸಿದ್ಧವೆಂಬುದೇ ಸರಿ ; ಏಕೆಂದರೆ ಭ್ರಾಂತಿಯು ಮನಸ್ಸಿಗೆ ಸೇರಿದ್ದು, ಮನಸ್ಸೂ ಜಗತ್ತಿನೊಳಗೆ ಅಡಕವಾಗಿದೆ. ಜಗತ್ತೆಂಬುದೊಂದು ವಿಚಿತ್ರಪದಾರ್ಥ; ಮನುಷ್ಯನ ನೆರಳು ಅವನನ್ನೇ ಅವಲಂಬಿಕೊಂಡಿದ್ದು ಕೆಲವು ವೇಳೆ ತೋರಿಕೊಂಡು ಮತ್ತೆ ಕೆಲವು ವೇಳೆ ತೋರಿಕೊಳ್ಳದಿರುವಂತೆ ಅದೂ ಒಂದು ತೋರಿಕೆಯಾಗಿದೆ. ಅದು ಆತ್ಮನಲ್ಲ, ಅವನಿಗಿಂತ ಬೇರೆಯಾದ ಸ್ವತಂತ್ರವಸ್ತುವೂ ಅಲ್ಲ. ಅದು ನಾಮರೂಪಾತ್ಮಕವಾಗಿದೆ ; ಗೊತ್ತಾದ ದೇಶಕಾಲನಿಮಿತ್ತಗಳನ್ನು ಅನುಸರಿಸಿ ಆಗುವ ಕ್ರಿಯಾಫಲಗಳುಳ್ಳದ್ದು ಅನೇಕ ಕರ್ತೃಭೋಕ್ತೃರೂಪವಾದ ಚೇತನರುಗಳುಳ್ಳದ್ದು. **'ಜನ್ಮಾದ್ಯಸ್ಯ ಯತಃ'** ಇದಕ್ಕೆ ಸೃಷ್ಟಿಸ್ಥಿತಿಪ್ರಲಯಗಳು ಯಾವದರಿಂದಾಗುವವೋ ಅದು ಆತ್ಮ- ಎಂದು ಸೂತ್ರಕಾರರು ಬರೆದಿರುತ್ತಾರೆ. ಲೋಕದಲ್ಲಿ 'ಇದು' ಎಂಬುದು ಹತ್ತಿರವಿರುವದಕ್ಕೂ, 'ಅದು' ಎಂಬುದು ದೂರವಿರುವದಕ್ಕೂ ಉಪಯೋಗಿಸುವ ಶಬ್ದವಾಗಿವೆ ; ಆದರೆ ಜಗತ್ತನ್ನು 'ಇದು' ಎಂದಿರುವದು ಹೀಗಲ್ಲ. ಅದು ಸಾಕ್ಷಿಗೆ ವಿಷಯವಾಗಿದೆ ಎಂಬರ್ಥದಲ್ಲಿ ಇದು.

ಆತ್ಮನು ಯಾವ ಪ್ರಮಾಣದಿಂದಲೂ ತಿಳಿಯಬರತಕ್ಕವನಲ್ಲ, ಅಪ್ರಮೇಯನು. ಅವನು ಇಂದ್ರಿಯಗಳು, ಮನಸ್ಸು- ಇವೆರಡಕ್ಕಿಂತ ವಿಲಕ್ಷಣವಾದ ಅನುಭವವೆಂಬ ಸಾಧನದಿಂದ ತಿಳಿದುಬರುತ್ತಾನೆ. ಆತ್ಮರುಗಳು ಅನೇಕರಿಲ್ಲ; ಆತ್ಮನು ಅಗ್ರಾಹ್ಯನು; ಅವನು ಲೌಕಿಕವಾದ ಅರಿವಿಗೂ ಅರಿವು. ನಾನು ಎಂಬುದಕ್ಕೆಕೂಡ ಬಹುವಚನವಿಲ್ಲ; ನಾನು, ನಾನು, ನಾನು -ಎಂದು ಅನೇಕ ನಾನುಗಳನ್ನು ಸೇರಿಸಿ ನಾವು ಎಂದು ಹೇಳುವದಕ್ಕಾಗುವದಿಲ್ಲ. ಈ ನಾನು ಎಂಬುದನ್ನು ಮೀರಿರುವ ಅದನ್ನು ಅರಿಯುವ ಸಾಕ್ಷಿಗಳು ಅನೇಕರು ಹೇಗಾದಾರು? ಆತ್ಮನು ಒಬ್ಬನಲ್ಲ, ಏಕೆಂದರೆ ಅವನಲ್ಲಿ ಸಂಖ್ಯೆ ಎಂಬ ಗುಣವಿಲ್ಲ; ಜಗತ್ತು ಅವನಿಗೆ ಎರಡನೆಯದಲ್ಲ, ಏಕೆಂದರೆ ಎರಡನೆಯದೆಂಬುದಕ್ಕೆ ದೇಶಕಾಲಗಳ ಆಧಾರವು ಬೇಕು, ಜಗತ್ತಿಗೆ ದೇಶಕಾಲಗಳ ಆಧಾರವಿಲ್ಲ, ಅದೇ ದೇಶಕಾಲಗಳನ್ನೊಳಗೊಂಡಿದೆ. ಈ ಅರ್ಥದಲ್ಲಿ ಆತ್ಮನನ್ನು 'ಏಕಮೇವಾಽದ್ವಿತೀಯಮ್' ತನಗೆರಡನೆಯದಿಲ್ಲದ ಒಂದೇ ಎಂದು ಶಾಸ್ತ್ರವು ಹೇಳುತ್ತಿದೆ.

ಜಗತ್ತು ಆತ್ಮನನ್ನು ಅವಲಂಬಿಸಿ ತೋರುವದೇ ಹೊರತು ಆತ್ಮನಿಗೆ

ಎರಡನೆಯದಾಗಿದ್ದುಕೊಂಡು ಯಾವದಾದರೊಂದು ಸಂಬಂಧದಿಂದ ಆತ್ಮನಿಗೆ ಹತ್ತಿಕೊಂಡಿಲ್ಲ. ಏಕೆಂದರೆ ಸಂಬಂಧವೆಂಬುದೂ ಜಗತ್ತಿನೊಳಗೇ ಇರುವದಾಗಿದೆ. ನೆರಳನ್ನು ದ್ವಾರವಾಗಿ ಮಾಡಿಕೊಂಡು ಮನುಷ್ಯನನ್ನು ಅರಿತುಕೊಳ್ಳುವಂತೆ ಜಗತ್ತನ್ನು ದ್ವಾರವಾಗಿ ಮಾಡಿಕೊಂಡು ಆತ್ಮನನ್ನು ಅನುಭವದಿಂದ ಅರಿತುಕೊಳ್ಳಬೇಕು. ತಾರ್ಕಿಕರಂತೆ ಶಬ್ದಪ್ರತ್ಯಯಗಳು ಬೇರೆಬೇರೆಯಾದಂತೆ ಒಂದೊಂದು ಪದಾರ್ಥವನ್ನು ಕಲ್ಪಿಸಿಕೊಂಡು ಪರಮಾರ್ಥತತ್ತ್ವದಿಂದ ವಂಚಿತರಾಗಬಾರದು.

★★★★★

# ಆತ್ಮಾನುಭವಕ್ಕೆ ಆಗಮದ ಮತ್ತು ತರ್ಕದ ಉಪಯೋಗ

**30-4-1955**

ಶ್ರೀಶ್ರೀಗಳವರು

ಅಂತಃಕರಣ ಮತ್ತು ಆತ್ಮ-ಇವುಗಳ **ಅನ್ಯೋನ್ಯಾಧ್ಯಾಸದಿಂದ** ನಮಗೆ ನಾವು **ಪ್ರಮಾತೃ**ಗಳು, ಕರಣವನ್ನುಪಯೋಗಿಸಿ ವಿಷಯವನ್ನು ಅರಿಯುವ ಸ್ವರೂಪದವರು ಎಂಬ ತಿಳಿವಳಿಕೆಯುಂಟಾಗಿರುತ್ತದೆ. ಇವುಗಳಲ್ಲಿ ಆತ್ಮನು ಸತ್ಯ, ಅಂತಃಕರಣ ಅನೃತ ; ಇವೆರಡರ ಕಲಬೆರಕೆಯೇ ಅಧ್ಯಾಸವು. ಹೀಗೆಂದು ತಿಳಿದು ಸಂಸಾರಬಂಧದಿಂದ ಬಿಡುಗಡೆಯಾಗಬೇಕೆಂದು ಬಯಸುತ್ತಿರುವ ಅಧಿಕಾರಿಗೆ **'ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ'** ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಆತ್ಮನನ್ನು ಹುಡುಕಿ ಅನುಭವಕ್ಕೆ ತಂದುಕೊಳ್ಳಬೇಕು ಎಂದು ಉಪದೇಶಿಸುತ್ತಿದೆ. ಈ ಉಪದೇಶವನ್ನು ಶ್ರವಣಮಾಡುವ ಉತ್ತಮಾಧಿಕಾರಿಗಳಿಗೆ ನಾನು ಪ್ರಮಾತೃವಲ್ಲ, ಸರ್ವಸಾಕ್ಷಿಯಾದ, ಸರ್ವದೋಷವರ್ಜಿತನಾದ, ಪರಮಾತ್ಮನೇ-ಎಂಬ ಜ್ಞಾನವಾಗುವದು. ಮೊದಲು ಪರಮಾತ್ಮನನ್ನು ಹುಡುಕುತ್ತಿದ್ದ **ಪ್ರಮಾತೃವು ತಾನೇ ಆ ಪರಮಾತ್ಮನು** ಎಂಬ ನಿಜವನ್ನು ಅನುಭವಕ್ಕೆ ತಂದುಕೊಳ್ಳುವನು. ಇದು ವೇದಾಂತದ ಸಾರವು.

ಶಾಸ್ತ್ರವು ನೀನು ಪ್ರಮಾತೃವಲ್ಲ, ಕರ್ತೃ-ಭೋಕ್ತೃವಲ್ಲ-ಎಂದು ಅತಧರ್ಮನಿವೃತ್ತಿಪೂರ್ವಕವಾಗಿ ಆತ್ಮನನ್ನು ತಿಳಿಸುತ್ತದೆ. ಹೀಗೆ ನಿಷೇಧಮುಖದಿಂದ ಉಪದೇಶಿಸಿದರೂ ಅದು ಅಭಾವವನ್ನೇನೂ ಬೋಧಿಸುವದಿಲ್ಲ. ಸ್ವತಃಸಿದ್ಧನಾದ ಸರ್ವಸಾಕ್ಷಿಯೂ ಆದ ಆತ್ಮನನ್ನೇ ಲಕ್ಷ್ಯವಾಗಿಟ್ಟುಕೊಂಡು ಮಿಕ್ಕೆಲ್ಲವನ್ನೂ ಶ್ರೋತೃವಿನ ಬುದ್ಧಿಯಿಂದ ದೂರಮಾಡುತ್ತದೆ. ಸಾಕ್ಷಿ, ಸಾಕ್ಷ್ಯ-ಎಂದು ನಿಜವಾಗಿ ಎರಡು ಪದಾರ್ಥಗಳಿಲ್ಲ; ಏಕೆಂದರೆ ಇವುಗಳಲ್ಲಿ ಯಾವದೊಂದೂ ದೇಶಕಾಲಗಳಲ್ಲಿಲ್ಲ. ಸಾಕ್ಷಿಗಳು ಅನೇಕರಿಲ್ಲ ; ನಮ್ಮ ನಮ್ಮ ಕಿಟಕಿಗಳಿಂದ ನಾವು ಒಬ್ಬನೇ ಸೂರ್ಯನನ್ನು ಕಾಣುವಂತೆ ನಮ್ಮೊಳಗೆ ನಾವೆಲ್ಲರೂ ಅದೇ ಸಾಕ್ಷಿಯನ್ನೇ ಕಾಣುತ್ತಿರುವೆವು. ಆ ಸಾಕ್ಷಿಗಿಂತ ಅನ್ಯವೂ ಅಲ್ಲದೆ, ಅನನ್ಯವೂ ಅಲ್ಲದೆ ಜಗತ್ತು ತೋರುತ್ತದೆ ; ಅದರ ತತ್ತ್ವವು ಆತ್ಮನೇ ಆಗಿದೆ. ಆತ್ಮನಾದ ಸಾಕ್ಷಿಯೂ ಎಲ್ಲವನ್ನೂ ವ್ಯಾಪಿಸಿಕೊಂಡಿರುವನೆಂಬುದನ್ನು ಕಂಡುಕೊಂಡಂತೆಲ್ಲ ಅವನು ಅದ್ವಿತಿಯನೇ ಎಂಬ ಅರಿವು ಹೆಚ್ಚುಹೆಚ್ಚು ಸ್ಫುಟವಾಗುವದು. ಹಲಗೆಯೆಂಬುದೆಲ್ಲ ಮರವೇ ಆಗಿರುವಂತೆ ಪ್ರಪಂಚವೆಲ್ಲ ಆತ್ಮನೇ, ಸಾಕ್ಷಿಗಿಂತ ಸಾಕ್ಷ್ಯವು ಬೇರೆಯಿಲ್ಲ-ಎಂಬುದನ್ನು ಶಾಸ್ತ್ರವು ತಿಳಿಸಿಕೊಡುತ್ತದೆ. ದೇಹಾತ್ಮಜ್ಞಾನವು ಜನರಿಗಿರುವಂತೆ ಆತ್ಮನಲ್ಲಿಯೇ ಆತ್ಮನೆಂಬ ಬುದ್ಧಿಯುಂಟಾದರೆ ಅಂಥವನು ಬೇಡವೆಂದರೂ ಮುಕ್ತನಾಗುತ್ತಾನೆ ಎಂದು ಆಚಾರ್ಯರು ಹೇಳಿರುತ್ತಾರೆ. ಶಾಸ್ತ್ರದಿಂದ ಈ ಅನುಭವುಂಟಾಗಬೇಕಾಗಿದೆ.

ಈ ಬುದ್ಧಿಯು ಲೌಕಿಕತರ್ಕಕ್ಕೆ ನಿಲುಕುವದಿಲ್ಲ, **ಆಗಮ**ದಿಂದ ಎಂದರೆ ವಿಶಿಷ್ಟವಾದ ಒಂದಾನೊಂದು ಉಪದೇಶದಿಂದಲೇ ತಿಳಿದುಕೊಳ್ಳಬೇಕು-ಎಂದು ಶ್ರುತಿ ಹೇಳುತ್ತಿದೆ. ಉತ್ತಮವಾದ ಸಂಗೀತದಲ್ಲಿ ಮೈಮರೆಯುವಂತೆ ಗುರುವಿನ ಉಪದೇಶದಿಂದ ಅನಾತ್ಮವೆಲ್ಲವನ್ನೂ ಕರಗಿಸಿ ಅದ್ವಿತೀಯಾತ್ಮನಲ್ಲಿಯೇ ನೆಲೆ ನಿಲ್ಲುವಂತಾಗುವದು. ಆದರೆ ಕೆಲವರಿಗೆ ಬರಿಯ ಶ್ರವಣದಿಂದ ತತ್ತ್ವವು ಗೊತ್ತಾಗುವದಿಲ್ಲ. ಅವರ ಬುದ್ಧಿಯು ತರ್ಕದ ವಾಸನೆಯಿಂದ ಊಡಿಕೊಂಡಿರುವದರಿಂದ ಅವರಿಗೆ ಶ್ರುತಿಯಲ್ಲಿಯೂ ಅನುಭವಾಂಗವಾಗಿ ತರ್ಕವನ್ನು ಹೇಳಿರುತ್ತದೆ. ಲೌಕಿಕತರ್ಕವು ಬರಿಯ ಕಲ್ಪನೆಯಾಗಿರುತ್ತದೆ. ನಮ್ಮ ದೇಶದಲ್ಲಿ ಕಪಿಲಕಣಾದಾದಿಗಳೂ ಪಶ್ಚಿಮದೇಶಗಳಲ್ಲಿ ಬರ್ಕ್ಲಿ, ಹ್ಯೂಂ, ಕ್ಯಾಂಟ್,

ಹೆಗೆಲ್, ಬರ್ಗ್ಸನ್, ಬ್ರಾಡ್ಲಿ, ಜೇಮ್ಸ್-ಮುಂತಾದವರು ಜಾಗ್ರತ್ಪ್ರಧಾನವಾದ ತರ್ಕವನ್ನೇ ಹಿಡಿದು ವಿಚಾರಮಾಡಿದ್ದರಿಂದ ಅವರ ಪಕ್ಷಗಳು ಪರಸ್ಪರವಿರುದ್ಧವಾಗಿ ಯಾವದೊಂದು ನಿಲುಗಡೆಗೂ ಬಾರದೆಹೋದವು. ತರ್ಕದವರ ಪರಸ್ಪರಕಲಹದಿಂದಲೂ ಅದ್ವಿತೀಯಬ್ರಹ್ಮಾತ್ಮತ್ವವಾದವೇ ಸಿದ್ಧವಾಗುತ್ತದೆ ಎಂಬುದನ್ನು ಗೌಡಪಾದರು ತೋರಿಸಿಕೊಟ್ಟಿರುತ್ತಾರೆ ; ಆಚಾರ್ಯರೂ ಪ್ರಶ್ನಭಾಷ್ಯದಲ್ಲಿ ಹೇಳಿರುತ್ತಾರೆ. ಶ್ರವಣದ ಜೊತೆಗೆ ಮನನನಿದಿಧ್ಯಾಸಗಳನ್ನು ಶ್ರುತಿಯಲ್ಲಿ ಹೇಳಿರುವದಕ್ಕೆ ಇದೇ ಕಾರಣ. ಶ್ರುತಿಗೆ ಅನುಗುಣವಾಗಿರುವ ತರ್ಕಕ್ಕೂ ಪರಮತದವರ ತರ್ಕಕ್ಕೂ ಇರುವ ಹೆಚ್ಚು ಕಡಿಮೆಯೇನೆಂದರೆ, ಇಲ್ಲಿ ಹೆಜ್ಜೆಹೆಜ್ಜೆಗೂ ಅನುಭವವನ್ನೇ ಆಧಾರ ಮಾಡಿಕೊಂಡು ತರ್ಕಮಾಡಿರುತ್ತದೆ ; ಅವಸ್ಥಾತ್ರಯವನ್ನೇ ಇಟ್ಟುಕೊಂಡು ತರ್ಕಮಾಡಿದೆ. ಇಂದ್ರಿಯಪ್ರಧಾನವಾಗಿರುವ ಬುದ್ಧಿಗೂ ಒಳಾನುಭವವು ಪ್ರಧಾನವಾಗಿರುವ ಬುದ್ಧಿಗೂ, ಜಾಗ್ರನ್ಮಾತ್ರವೇ ಪ್ರಧಾನವಾಗಿರುವ ತರ್ಕಕ್ಕೂ ಅವಸ್ಥಾತ್ರಯವನ್ನೂ ಆಧಾರವಾಗಿಟ್ಟುಕೊಂಡಿರುವ ತರ್ಕಕ್ಕೂ ಇರುವ ಹೆಚ್ಚು ಕಡಿಮೆಯನ್ನು ನಾಳೆಯ ದಿನ ವಿಶದಗೊಳಿಸುವದಕ್ಕೆ ಪ್ರಯತ್ನಿಸುವೆನು.

★★★★★

# ವೇದಾಂತಕ್ಕೆ ಒಪ್ಪಾಗಿರುವ ತರ್ಕ

**1-5-1955**

**ಶ್ರೀಗಳವರು**

ಆತ್ಮನನ್ನು ಸರ್ವಸಾಕ್ಷಿಯೆಂದು ತಿಳಿದುಕೊಂಡು ಅದ್ವಿತೀಯಾತ್ಮ-ಭಾವವನ್ನು ಅನುಭವಿಸುವಂತೆ ಉಪದೇಶಿಸುವದೇ ವೇದಾಂತದ ಗುರಿ. 'ತವಾನ್ತರಾತ್ಮಾ ಮಮ ಚ' ಆ ಪರಮಾತ್ಮನು ನಿನಗೂ ನನಗೂ ಅಂತರಾತ್ಮನು, 'ಸ ಏಷನೇತಿನೇತ್ಯಾತ್ಮಾ' ಆ ಇವನು ಇದಲ್ಲ ಇದಲ್ಲ ಎಂದು ತಿಳಿಸಿದ ನಿರ್ವಿಶೇಷಾತ್ಮನು ಎಂದು ಹೇಳುವ ಶ್ರುತಿವಾಕ್ಯಗಳ ಅರ್ಥದ ಜೊತೆಗೆ

'ಇದಂ ಸರ್ವಂ ಯದಯಮಾತ್ಮಾ' ಇದೆಲ್ಲವೂ ಈ ಆತ್ಮನೇ ಎಂಬುದನ್ನು ಅರಿತುಕೊಳ್ಳಬೇಕು. ಕಟ್ಟಕಡೆಗೆ ನಿಲ್ಲುವ ಅರ್ಥವೇ ಇದು.

ವೇದಾಂತದಲ್ಲಿ ಹೇಳಿರುವ ಈ ಅರ್ಥವನ್ನು ವಿಶದಮಾಡಿ ತಿಳಿಸುವದಕ್ಕೆ ಕೆಲವು ಪ್ರಕ್ರಿಯೆಗಳನ್ನು ಉಪಯೋಗಿಸಿರುತ್ತದೆ. ಇದೇ ಅನುಭವಾಂಗವಾದ ತರ್ಕವೆನ್ನುವದು. ಯಾರಿಗೆ ಅದ್ವಿತೀಯಪರಮಾತ್ಮನೇ ನಮ್ಮೆಲ್ಲರ ಆತ್ಮನು ಎಂಬುದು ಉಪದೇಶಮಾತ್ರದಿಂದ ಅನುಭವಕ್ಕೆ ಬರುವದಿಲ್ಲವೋ ಅಂಥವರಿಗೆ ಈ ತರ್ಕದ ಪ್ರಕ್ರಿಯೆಗಳನ್ನು ಇಲ್ಲಿ ಪ್ರಸ್ತಾಪಿಸುವೆವು.

ಮೊದಲನೆಯದು **ಸಾಮಾನ್ಯವಿಶೇಷಪ್ರಕ್ರಿಯೆ.** ಬೃಹದಾರಣ್ಯಕದಲ್ಲಿ ಯಾಜ್ಞವಲ್ಕ್ಯರು ಮೈತ್ರೇಯಿಗೆ ಇದನ್ನು ಉಪಯೋಗಿಸಿಕೊಂಡು ಬೋಧಿಸಿರುತ್ತಾರೆ. ನಗಾರಿಯನ್ನು ಹೊಡೆಯುವಾಗ ಆಗುವ ಶಬ್ದಗಳಲ್ಲಿ ಬಹಳ ವಿಶೇಷಗಳಿರುತ್ತವೆ. ಆದರೆ ಅವೆಲ್ಲ ನಗಾರಿಯ ಶಬ್ದ ಎಂಬ ಸಾಮಾನ್ಯದಲ್ಲಿ ಅಡಕವಾಗಿರುತ್ತವೆ. ಹೀಗೆಯೇ ವೀಣಾಶಬ್ದಗಳ ವಿಶೇಷಗಳೆಲ್ಲ ವೀಣಾಶಬ್ದ ಎಂಬ ಸಾಮಾನ್ಯದಲ್ಲಿ ಅಡಕವಾಗಿವೆ. ಇದರಂತೆ ಶಂಖದ ಶಬ್ದ ಮುಂತಾದವುಗಳನ್ನು ಅರಿಯಬೇಕು. ಇಂಥ ಸಾಮಾನ್ಯ ವಿಶೇಷಗಳೆಲ್ಲ ಶಬ್ದ ಎಂಬ ಸಾಮಾನ್ಯದಲ್ಲಿ ಅಡಕವಾಗಿರುತ್ತವೆ. ಇದರಂತೆ ಸ್ಪರ್ಶ, ರೂಪ, ರಸ, ಗಂಧ-ಎಂಬ ಸಾಮಾನ್ಯದಲ್ಲಿ ಆಯಾ ಸಾಮಾನ್ಯವಿಶೇಷಗಳು ಎಲ್ಲವೂ ಅಡಕವಾಗಿವೆ. ಇನ್ನೂ ಮುಂದಕ್ಕೆ ಹೋದರೆ ಇವೆಲ್ಲವೂ ಜ್ಞೇಯದಲ್ಲಿ ಅಡಕವಾಗುತ್ತವೆ. ಅದು ಸ್ವಪ್ನಜಾಗರಿತಗಳೆಂಬ ಅವಸ್ಥೆಗಳಲ್ಲಿ ಭಿನ್ನವಾಗಿ ಕಂಡರೂ ಅವುಗಳಲ್ಲೆಲ್ಲ ಚಿದ್ರೂಪವು ಅನುಗತವಾಗಿದ್ದು ಆ ಚೈತನ್ಯಕ್ಕಿಂತ ಆ ಜ್ಞೇಯವು ಬೇರೆಯಿರುವದೇ ಇಲ್ಲ. ಆದ್ದರಿಂದ ಚೈತನ್ಯಕ್ಕಿಂತ ವ್ಯತಿರಿಕ್ತವಾಗಿ ಯಾವ ಜ್ಞೇಯವೂ ಇಲ್ಲ-ಎಂಬುದು ಕೊನೆಯ ಸಿದ್ಧಾಂತ. ಇಲ್ಲಿ ಸಾಮಾನ್ಯವಿಶೇಷಭಾವವು ಹೊರಗಿನ ಅನಾತ್ಮದಲ್ಲಿ ಮಾತ್ರವೇ ಇದ್ದರೂ ಚಿದ್ರೂಪವು ಎಲ್ಲದರಲ್ಲಿಯೂ ಅನುಗತವಾಗಿರುವದರಿಂದ ಅದೂ ಸಾಮಾನ್ಯವೇ ಎಂದು ಅಧ್ಯಾರೋಪದೃಷ್ಟಿಯಿಂದ ಕಲ್ಪಿಸಿ ಆತ್ಮೈಕ್ಯವನ್ನು ತಿಳಿಸಿಕೊಟ್ಟಿದೆ.

ಎರಡನೆಯದು **ಕಾರ್ಯಕಾರಣಭಾವಪ್ರಕ್ರಿಯೆ.** ಲೋಕದಲ್ಲಿ ಉಪಾದಾನಕಾರಣವು ಕಾರ್ಯದಲ್ಲಿ ಅನುಗತವಾಗಿಯೇ ಇರುತ್ತದೆ. ಕಾರ್ಯವು

ಹುಟ್ಟುವಾಗ, ಇರುವಾಗ, ಲಯವಾಗುವಾಗ-ಕಾರಣದ ಸಂಬಂಧವನ್ನು ಬಿಟ್ಟು ಎಂದಿಗೂ ಇರುವದಿಲ್ಲ. ಇದರಂತೆ ಆತ್ಮನನ್ನು ಬಿಟ್ಟು ಜಗತ್ತು ಯಾವಾಗಲೂ ಇರುವದಿಲ್ಲವಾದ್ದರಿಂದ ಆತ್ಮನು ಕಾರಣ, ಜಗತ್ತು ಕಾರ್ಯವು-ಎಂದು ಕಲ್ಪಿಸುವದು ಈ ಪ್ರಕ್ರಿಯೆಯ ಕ್ರಮ. ಲೋಕದಲ್ಲಿ ಕಾರಣವು ಹಿಂದಿನ ಕಾಲದಲ್ಲಿರುತ್ತದೆ. ಕಾರ್ಯವು ಮುಂದಿನ ಕಾಲದಲ್ಲಿರುತ್ತದೆ. ಆದರೆ ಪ್ರಕೃತದಲ್ಲಿ ಆತ್ಮನಿಗೆ ಕಾಲವು ಆಧಾರವಲ್ಲ ; ಜಗತ್ತಿಗೂ ಅದು ಆಧಾರವಲ್ಲ. ಆದ್ದರಿಂದ ಕಾಲದಲ್ಲಿ ಹಿಂದುಮುಂದಾಗಿರುವದೆಂಬಂಶವನ್ನು ಕೈಬಿಟ್ಟೇ ಇಲ್ಲಿ ಕಾರ್ಯಕಾರಣಭಾವವನ್ನು ತೆಗೆದುಕೊಳ್ಳಬೇಕು. ಕಾರ್ಯವು ಕಾರಣವನ್ನು ಬಿಟ್ಟು ಇರುವದೇ ಇಲ್ಲ; ಇದರಂತೆ ಆತ್ಮನನ್ನು ಬಿಟ್ಟು ಜಗತ್ತು ಇಲ್ಲ. ಆದ್ದರಿಂದ ಆತ್ಮನೇ ಎಲ್ಲವು ಎಂದು ಸಿದ್ಧಾಂತಮಾಡಿಕೊಳ್ಳಬಹುದು.

ಇನ್ನು ಮೂರನೆಯ **ಅವಸ್ಥಾತ್ರಯಪ್ರಕ್ರಿಯೆ.** ಇದು ಬಹಳ ಮಹತ್ತ್ವದ್ದು. ಜೀವನು ಅವಸ್ಥಾತ್ರಯದಲ್ಲಿಯೂ ದೋಷಯುಕ್ತನಾಗಿರುವನೆಂದು ತೋರಿಸುವದಕ್ಕೆ ಈ ಪ್ರಕ್ರಿಯೆಯನ್ನು ಉಪಯೋಗಿಸಿದೆ ಎಂದು ಕೆಲವರನಂಬಿಕೆ. ನಿಜವೇನೆಂದರೆ ಆತ್ಮನಲ್ಲಿ ಸಾಮಾನ್ಯವಿಶೇಷಭಾವವಿಲ್ಲದಿದ್ದರೂ ಅದನ್ನಿಟ್ಟುಕೊಂಡು ಆತ್ಮತತ್ತ್ವವನ್ನು ನಿರ್ಧಾರಮಾಡುವಂತೆಯೂ ಆತ್ಮನಲ್ಲಿ ಕಾರ್ಯಕಾರಣಭಾವವಿಲ್ಲದಿದ್ದರೂ ಅದನ್ನು ಕಲ್ಪಿಸಿ ಆತ್ಮೈಕತ್ವವನ್ನು ಸಾಧಿಸುವಂತೆಯೂ ಆತ್ಮನಲ್ಲಿ ಯಾವ ಅವಸ್ಥೆಯೂ ಇಲ್ಲದಿದ್ದರೂ ಅವನು ಅವಸ್ಥಾತ್ರಯವಂತನಾಗಿ ಕಾಣುತ್ತಿರುವನೆಂದು ತಿಳಿಸಿಕೊಡುವದೇ ಈ ಪ್ರಕ್ರಿಯೆಯ ಉದ್ದೇಶವು.

**ಪ್ರಪಂಚ**ವೆಂದರೇನು? ನಮ್ಮ ಮುಂದೆ ಬಗೆಬಗೆಯಾಗಿ ಹರಡಿಕೊಂಡು ತೋರುವ ಭೇದದ ಜಗತ್ತು. ಎಚ್ಚರದ ಪ್ರಪಂಚವೇ ಪ್ರಪಂಚವೆಂದು ಸಾಮಾನ್ಯರು ತಿಳಿದುಕೊಂಡಿರುತ್ತಾರೆ. ಇಷ್ಟೇ ಅಲ್ಲ, ಅವರ ಕಣ್ಣಿನಲ್ಲಿ ಎಚ್ಚರವೊಂದೇ ವಿಚಾರಮಾಡತಕ್ಕ ಅವಸ್ಥೆ ; ಕನಸುತನಿನಿದ್ರೆಗಳನ್ನು ಅವರು ಸಂಪೂರ್ಣವಾಗಿ ಕೈಬಿಟ್ಟಿರುತ್ತಾರೆ. ಆದರೆ ಶಂಕರಾಚಾರ್ಯರ ಮತ್ತು ಅವರ ಪರಮಗುರುಗಳಾದ ಗೌಡಪಾದರ ಮತದಲ್ಲಿ ಜ್ಞೇಯವೆಂದರೆ ಮೂರು ಅವಸ್ಥೆಗಳೂ ಆಗಿವೆ. ಎಚ್ಚರದಲ್ಲಿ ಕಾಣುವ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ-ಎಂದು ವಿಭಕ್ತವಾಗಿ

ತೋರುವದೆಲ್ಲವೂ ಆತ್ಮನಿಗೆ ಉಪಾಧಿಯಾಗಿರುತ್ತದೆ. ಇದೇ ಆತ್ಮನಿಗೆ ಸ್ವಪ್ನದಲ್ಲಿ ಈ ಉಪಾಧಿಯೂ ಪೂರ್ಣವಾಗಿ ತಪ್ಪಿ ಇದರ 'ನಕಲು' ಎನ್ನಿಸಿಕೊಳ್ಳುವ ಬರಿಯ ಮಿಥ್ಯಾಪ್ರಪಂಚವೊಂದು ತೋರುತ್ತಿರುತ್ತದೆ. ಈ ಕನಸು, ಎಚ್ಚರ- ಇವೆರಡನ್ನು ಆತ್ಮನು ನೋಡುತ್ತಿರುತ್ತಾನೆ; ಆದರೆ ಒಂದವಸ್ಥೆಯಿಂದ ಇನ್ನೊಂದಕ್ಕೆ ಮತ್ತೆ ಯಾವದೊಂದು ಬರುವದಿಲ್ಲ. ನಾನು, ನಾನು-ಎಂಬ ಪ್ರಮಾತೃರೂಪವೊಂದು ಈ ಎರಡರಲ್ಲಿಯೂ ಕಾಣುತ್ತಿರುತ್ತದೆ; ಅದೇ ನಮ್ಮ ಪ್ರಪಂಚದ ಕೇಂದ್ರವೆಂದು ನಾವು ಭಾವಿಸಿರುತ್ತೇವೆ. ಆದರೆ ಪ್ರಮಾತೃವಿಗಿಂತಲೂ ಬೇರೆಯಾಗಿರುವ ಸಾಕ್ಷಿಯೇ ನಿಜವಾದ ಆತ್ಮನು. ಈ ಎರಡು ಅವಸ್ಥೆಗಳಲ್ಲಿ ಕಾಣುವ ಒಟ್ಟುಪ್ರಪಂಚವೂ ಆತ್ಮನಲ್ಲಿ ವ್ಯಭಿಚರಿತವಾಗುತ್ತಿರುವದರಿಂದ ಆತ್ಮನು ನಿಷ್ಪ್ರಪಂಚನು ಎಂದಾಗುತ್ತದೆ. ಇದನ್ನು ಮನಗಾಣುವದಕ್ಕೆ ಸ್ವಪ್ನಜಾಗ್ರತ್ತುಗಳೆರಡೂ ಸರ್ವಸಮವಾಗಿದೆ ಎಂಬುದನ್ನು ಮತ್ತೆ ಮತ್ತೆ ಮನದಟ್ಟುಮಾಡಿಕೊಳ್ಳಬೇಕು. ಎಚ್ಚರದಲ್ಲಾಗುವ ಸ್ವಪ್ನದ ಸ್ಮರಣೆಯನ್ನು ಲೆಕ್ಕಕ್ಕೆ ತಾರದೆ ಆ ಎರಡು ಅನುಭವಗಳನ್ನೂ ಒಂದಕ್ಕೊಂದು ಹೋಲಿಸಿ ಈ ಸಾಮ್ಯವನ್ನು ಅರಿತುಕೊಳ್ಳಬೇಕು. ಸ್ವಪ್ನವು ಜಾಗ್ರತ್ತೆಂದೇ ತೋರುವದೆಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕು.

ಇನ್ನು **ಸುಷುಪ್ತಿ**ಯ ವಿಚಾರ. ಎಚ್ಚರಕನಸುಗಳೆರಡೂ ಕನಸಿನಂತೆ ಮಿಥ್ಯವೇ ಆಗಿದ್ದು ಅಲ್ಲಿ ಒಬ್ಬನು ಒಂದು ಕರಣದಿಂದ ಇನ್ನೊಂದನ್ನು ಅರಿಯುತ್ತಾನೆ-ಎಂಬ ರೂಪದ ಪ್ರಪಂಚವು ತೋರುತ್ತಿರುವದು. ಆದರೆ ಸುಷುಪ್ತಿಯಲ್ಲಿ ಎಲ್ಲವೂ ಆತ್ಮನೇ ಆಗಿದೆ; ಅಲ್ಲಿ ಒಬ್ಬನು ಇನ್ನೊಂದನ್ನು ನೋಡುವ ವಿಶೇಷ ವಿಜ್ಞಾನವಿಲ್ಲ. ಇದೇ ಆತ್ಮನ ಸ್ವಭಾವ. ಅವಸ್ಥೆಗಳು ಒಂದಕ್ಕೊಂದು ಸಂಬದ್ಧವಲ್ಲ. ಒಂದೇ ತತ್ತ್ವವು ಮೂರು ಬಗೆಯಲ್ಲಿ ಕಾಣುತ್ತದೆ ; ನಿಜವಾಗಿ ಆತ್ಮನು ತನ್ನ ಸ್ವರೂಪದಲ್ಲಿಯೇ ಯಾವಾಗಲೂ ಇರುತ್ತಾನೆ. ಆದ್ದರಿಂದ ಆತ್ಮನು ಅದ್ವಿತೀಯಚಿನ್ಮಾತ್ರನೆಂಬುದು ಈ ಸಾರ್ವತ್ರಿಕಾನುಭವಾನುಸಾರಿಯಾದ ತರ್ಕದಿಂದಲೂ ಸಿದ್ಧವಾಗುತ್ತದೆ.

★★★★★

# ಉಪಾಸನೆಯೂ ನಿದಿಧ್ಯಾಸನವೂ

**2-5-1955**

**ಶ್ರೀಗಳವರು**

ಇಡಿಯ ಜಗತ್ತಿನ ಪರಮಾರ್ಥವಾಗಿರುವ **ಬ್ರಹ್ಮವೇ ನಮ್ಮ ಆತ್ಮನು**-ಎಂಬುದು ವೇದಾಂತಸಿದ್ಧಾಂತ. 'ಬ್ರಹ್ಮವಿಲ್ಲ ಎಂದು ಭಾವಿಸಿಕೊಂಡರೆ ತಾನೇ ಇಲ್ಲವಾಗುತ್ತಾನೆ'- ಎಂದು ಶ್ರುತಿ ಹೇಳುತ್ತಿದೆ. ಬ್ರಹ್ಮವು ನಮ್ಮ ಆತ್ಮನೇ ಆಗಿರುವದರಿಂದ ಇದು ಯುಕ್ತಿಯುಕ್ತವಾಗುತ್ತದೆ. ಒಬ್ಬ ಕಾಲೇಜ್ ಪ್ರೊಫೆಸರನು 'ಶ್ರೀಯುತ ಈಶ್ವರನೆಂಬಾತನು ನನ್ನೆದುರಿಗೆ ಬರಲಿ, ಹಾಗಾದರೆ ನಾನು ಆತನ ಅಸ್ತಿತ್ವವನ್ನು ಒಪ್ಪುವೆನು' ಎಂದನಂತೆ. ಆದರೆ ಎದುರಿಗೆ ಬರುವದು ಈಶ್ವರನ ಪರಮಾರ್ಥಸ್ವರೂಪವೇ ಅಲ್ಲವೆಂಬುದು ಬಲ್ಲವರ ಉಪದೇಶ. ಹಿಂದೆ ನಾರದರು ಶ್ವೇತದ್ವೀಪದಲ್ಲಿ ಪರಮಾತ್ಮನನ್ನು ಭಕ್ತಿಪೂರ್ವಕವಾಗಿ ಸ್ತೋತ್ರ ಮಾಡಲು ಶ್ರೀಮನ್ನಾರಾಯಣನು ಅವರಿಗೆ ತನ್ನ ವಿಶ್ವರೂಪವನ್ನು ತೋರಿಸಿ ಮಾಯಾಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ' ನಾರದನೆ, ಈಗ ನೀನು ನೋಡುತ್ತಿರುವದು ನಾನು ಸೃಷ್ಟಿಸಿಕೊಂಡಿರುವ ಮಾಯಾರೂಪವು ಎಂದು ಹೇಳಿದನೆಂದು ಭಾರತದಲ್ಲಿದೆ. ಆದ್ದರಿಂದ ವಿಷಯರೂಪವಾಗಿ ಕಾಣುವದು ಬ್ರಹ್ಮವಲ್ಲ ; ನಮ್ಮ ಆತ್ಮನೇ ಬ್ರಹ್ಮವು. 'ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ' ಎಂಬ ಶ್ರುತಿಯು ಬ್ರಹ್ಮವು ಎಂದೆಂದಿಗೂ ಅಪರೋಕ್ಷವಾಗಿರುವ ನಮ್ಮ ಆತ್ಮನೇ ಎಂದು ಉಪದೇಶಿಸುತ್ತಿದೆ. ಆತ್ಮನನ್ನು ಅರಿತುಕೊಳ್ಳುವದಕ್ಕೆ ಮತ್ತೆ ಯಾವ ಕರಣವೂ ಬೇಕಿರುವದಿಲ್ಲ. ಆದ್ದರಿಂದಲೇ ಶಂಕರಾಚಾರ್ಯರು **''ಕ್ಷೇತ್ರಜ್ಞಃ ಪರಮಾತ್ಮೇತಿ ನಾಮಮಾತ್ರಭೇದಾತ್ ಕ್ಷೇತ್ರಜ್ಞೋಽಯಂ ಪರಮಾತ್ಮನೋ ಭಿನ್ನಃ ಪರಮಾತ್ಮಾಽಯಂ ಕ್ಷೇತ್ರಜ್ಞಾದ್ಭಿನ್ನ ಇತ್ಯೇವಂಜಾತೀಯಕ ಆತ್ಮಭೇದವಿಷಯೋ ನಿರ್ಬನ್ಧೋ ನಿರರ್ಥಕಃ''** ಎಂದಿರುತ್ತಾರೆ. ಜೀವನು, ಪರಮಾತ್ಮನು-ಎಂಬಿವುಗಳಿಗೆ ಬರಿಯ ಹೆಸರಿನಿಂದಲೇ ಭೇದವಾಗಿರುವದರಿಂದ ಜೀವನು ಪರಮಾತ್ಮನಿಗಿಂತ ಭಿನ್ನನೆಂದಾಗಲಿ,

ಪರಮಾತ್ಮನು ಜೀವನಿಗಿಂತ ಭಿನ್ನನೆಂದಾಗಲಿ ನಿರ್ಬಂಧಿಸಿ ವಾದಿಸುವದು ವ್ಯರ್ಥವು. ನಿಜವಾಗಿ ನೋಡಿದರೆ ''**ನಿತ್ಯಶುದ್ಧಮುಕ್ತ ಸ್ವಭಾವೇ ಕೂಟಸ್ಥನಿತ್ಯೇ ಏಕಸ್ಮಿನ್ನಸಙ್ಗೇ ಪರಮಾತ್ಮನಿ ತದ್ವಿಪರೀತಂ ಜೈವಂ ರೂಪಂ ವ್ಯೋಮ್ನೀವ ತಲಮಲಾದಿ ಪರಿಕಲ್ಪಿತಮ್**'' ನಿತ್ಯಶುದ್ಧ ಬುದ್ಧಮುಕ್ತಸ್ವರೂಪನಾಗಿ ಕೂಟಸ್ಥನಿತ್ಯನಾಗಿರುವ ಪರಮಾತ್ಮನಲ್ಲಿ ಜೀವರೂಪವು ಆಕಾಶದಲ್ಲಿ ತಲಮಾಲಿನ್ಯವೇ ಮುಂತಾದದ್ದರಂತೆ ಕಲ್ಪಿತವಾಗಿರುತ್ತದೆ- ಎಂಬುದು ಆಚಾರ್ಯರ ಅಭಿಪ್ರಾಯ. ಈ ಗುಟ್ಟನ್ನು ಅರಿಯಬಲ್ಲ ಪುಣ್ಯಶಾಲಿಗಳಾದ ಉತ್ತಮಾಧಿಕಾರಿಗಳಿಗೆ 'ತತ್ತ್ವಮಸಿ' ಎಂದು ಒಂದು ಸಲ ಹೇಳಿದಮಾತ್ರದಿಂದಲೇ ತತ್ತ್ವವು ತಿಳಿದುಬಿಡುತ್ತದೆ.

ತಾರ್ಕಿಕರಿಗೆ ವೇದಾಂತವಾಕ್ಯಕ್ಕಿಂತಲೂ **ತರ್ಕವೇ** ಅನುಭವಕ್ಕೆ ಹತ್ತಿರವೆಂಬ ಭ್ರಾಂತಿಯಿರುತ್ತದೆ. ವೇದಾಂತಿಗಳ ಮತದಲ್ಲಿ 'ನಾವೇದವಿನ್ಮನುತೇ ತಂ ಬೃಹನ್ತಮ್' ವೇದಾರ್ಥವನ್ನರಿತುಕೊಳ್ಳದೆ ಇರುವವನಿಗೆ ಎಂದಿಗೂ ಬ್ರಹ್ಮ ಜ್ಞಾನವಾಗಲಾರದು. ಯಾರಿಗೆ ತರ್ಕದಲ್ಲಿಯೇ ಹೆಚ್ಚಿನ ಆದರವಿರುತ್ತದೆಯೋ ಅಂಥವರಿಗಾಗಿ ಕ್ರಮಕ್ರಮವಾಗಿ ಬ್ರಹ್ಮಾತ್ಮೈಕತ್ವದ ಅನುಭವವನ್ನು ತಂದುಕೊಡುವದಕ್ಕಾಗಿ ಶ್ರುತಿಯಲ್ಲಿಯೂ ತರ್ಕವನ್ನು ಹೇಳಿರುತ್ತದೆ. ನಮ್ಮೆಲ್ಲರಲ್ಲಿಯೂ ಇರುವ ಆತ್ಮನು ಸರ್ವಸಾಕ್ಷಿಯೆಂದು ಅರಿತುಕೊಳ್ಳುವದಕ್ಕಾಗಿಯೇ ಈ ತರ್ಕವನ್ನು ಶ್ರುತಿಯಲ್ಲಿ ಉದಾಹರಿಸಿರುತ್ತದೆ. **ಸ್ವಪ್ನಾನ್ತಂ ಜಾಗರಿತಾನ್ತಂ ಚ ಉಭೌ ಯೇನಾನುಪಶ್ಯತಿ । ಮಹಾನ್ತಂ ವಿಭುಮಾತ್ಮಾನಂ ಮತ್ವಾಧೀರೋ ನ ಶೋಚತಿ ॥**'' ಎಂಬ ಶ್ರುತಿಯಲ್ಲಿ ಅವಸ್ಥಾಪರಿಶೀಲನವನ್ನು ಉಪದೇಶಿಸಿರುತ್ತದೆ. ತತ್ತ್ವಮಸಿ ಎಂದು ಶ್ವೇತಕೇತುವಿಗೆ ಒಂಬತ್ತು ಸಲ ಉಪದೇಶಿಸಿದ್ದು ಏಕೆ?-ಎಂದರೆ ಆತ್ಮನಲ್ಲಿ ಅಧ್ಯಸ್ತವಾಗಿರುವ ದೇಹೇಂದ್ರಿಯ ಮನೋಬುದ್ಧ್ಯಾದಿರೂಪವಾದ ಅನೇಕ ಅಂಶಗಳು ಇರುತ್ತವೆ. ಆದ್ದರಿಂದ ಒಂದೊಂದು ಸಲಕ್ಕೆ ಒಂದೊಂದು ವಿಷಯದಲ್ಲಿ ಅವಧಾನವನ್ನಿಟ್ಟು ನೋಡುವದರಿಂದ ಒಂದೊಂದು ಅಂಶವನ್ನು ನೀಗಿಕೊಳ್ಳಬಹುದು. ಆದ್ದರಿಂದ ಇದಕ್ಕಾಗಿ ವೇದಾಂತದಲ್ಲಿಯೂ ಅನುಭವಾಂಗವಾಗಿ ತರ್ಕವನ್ನು ಬಳಸಿಕೊಂಡಿರುತ್ತದೆ.

**ಅವಸ್ಥಾತ್ರಯಪರೀಕ್ಷಾರೂಪವಾದ ತರ್ಕವು** ಇಂಥ ತರ್ಕಪ್ರಕಾರಗಳಲ್ಲಿ ಬಹುಮುಖ್ಯವಾಗಿರುತ್ತದೆ. ಜಾಗ್ರತ್ಸ್ವಪ್ನಗಳೆಂಬ ಅವಸ್ಥೆಗಳನ್ನು ಅವುಗಳಲ್ಲಿ

ತೋರುವ ಸಮಷ್ಟಿರೂಪವನ್ನೇ ತೆಗೆದುಕೊಂಡು ವಿಚಾರಮಾಡುವದರಿಂದ ಅದ್ವಿತೀಯನಾದ ಪರಮಾತ್ಮಸ್ವರೂಪದ ಅರಿವು ಉಂಟಾಗುತ್ತದೆ. ಸ್ವಪ್ನದಲ್ಲಿ ಜಾಗ್ರತ್ತಿರುವದಿಲ್ಲ ಜಾಗ್ರತ್ತಿನಲ್ಲಿ ಸ್ವಪ್ನವಿರುವದಿಲ್ಲ; ಸುಷುಪ್ತಿಯಲ್ಲಿ ಎರಡೂ ಇರುವದಿಲ್ಲ. ಆದ್ದರಿಂದ ಅವಸ್ಥಾತ್ರಯವೂ ಅವುಗಳಲ್ಲಿ ಕಾಣುವ ರೂಪವೂ ನಿಜವಾಗಿ ಆತ್ಮನದಲ್ಲ. ನಿಜವಾಗಿ ನೋಡಿದರೆ ಅವಸ್ಥೆಗಳು ಮೂರೆಂಬುದೇ ಸರಿಯಲ್ಲ; ಏಕೆಂದರೆ ಅವು ಒಂದು ದೇಶದಲ್ಲಿರುವದಿಲ್ಲ, ಒಂದು ಕಾಲದಲ್ಲಿಯೂ ಒಂದಾಗುತ್ತಲೊಂದು ಆಗುತ್ತಿರುವದಿಲ್ಲ. ಒಬ್ಬ ಆತ್ಮನೇ ಈ ಮೂರು ರೂಪಗಳಲ್ಲಿ ತೋರಿಕೊಳ್ಳುತ್ತಿರುತ್ತಾನೆ. ತಾನು ಎರಡನೆಯದನ್ನು ಕಾಣುತ್ತಿರುವೆನೆಂಬುದೊಂದು ಸ್ವಪ್ನವು; ತಾನು ಏನನ್ನೂ ಅರಿಯುತ್ತಿಲ್ಲವೆಂಬುದೊಂದು ನಿದ್ರೆಯು. ಸರಿಯಾಗಿ ನೋಡಿದರೆ ಈ ಸ್ವಪ್ನವಾಗಲಿ ನಿದ್ರೆಯಾಗಲಿ ಇಲ್ಲವೇ ಇಲ್ಲ. ಅವಸ್ಥಾತ್ರಯಕ್ಕೂ ಸಾಕ್ಷಿಯಾಗಿರುವ ಆತ್ಮನ ದೃಷ್ಟಿಯಿಂದ ನೋಡಿದರೆ ಆತ್ಮನು ಅವಸ್ಥಾರಹಿತನು, ನಿತ್ಯಶುದ್ಧನು, ಅದ್ವಿತೀಯನು- ಎಂಬರಿವು ಆಗುತ್ತದೆ. ''**ಅನಾದಿ ಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ । ಅಜಮನಿದ್ರಮಸ್ವಪ್ನಮದ್ವೈತಂ ಬುಧ್ಯತೇ ತದಾ॥**'' ಎಂಬ ಗೌಡಪಾದರ ಉಕ್ತಿಯ ಅಭಿಪ್ರಾಯವೇ ಇದು. ಅವಸ್ಥಾತ್ರಯದಲ್ಲಿ ಸುಷುಪ್ತಿರೂಪವನ್ನು ವಿಶೇಷವಾಗಿ ಪರಿಶೀಲಿಸಬೇಕು. ಅದರಲ್ಲಿ ಅವಿದ್ಯಾ ಕಾಮಕರ್ಮಗಳು ಒಂದಿಷ್ಟೂ ಇಲ್ಲದ ಅಸಂಸಾರಿಸ್ವರೂಪವೇ ಇರುವದೆಂದು ಬೃಹದಾರಣ್ಯಕಭಾಷ್ಯವೇ ಮುಂತಾದವುಗಳಲ್ಲಿ ಆಚಾರ್ಯರು ಸ್ಪಷ್ಟಪಡಿಸಿರುತ್ತಾರೆ.

ಯಾವನು ಈ ನಿತ್ಯಶುದ್ಧಬುದ್ಧಮುಕ್ತಸ್ವಭಾವದ ಆತ್ಮಸ್ವರೂಪವನ್ನು ನಿಃಸಂಶಯವಾಗಿ ಅರಿತುಕೊಳ್ಳುವನೋ ಅವನು ಮಿಕ್ಕವರಂತೆ ಈ ಶರೀರವನ್ನು ಬಿಟ್ಟು ಪ್ರಾಣಸಹಿತನಾಗಿ ಉತ್ಕ್ರಾಂತನಾಗುವದಿಲ್ಲ; ಅವನ ಪ್ರಾಣಗಳು, ವಾಗಾದಿಕರಣಗಳು, ಇಲ್ಲಿಯೇ ಆತ್ಮನಲ್ಲಿ ಸೇರಿಹೋಗುತ್ತವೆ. ಅವನು ಬದುಕಿರುವಾಗಲೇ ಅಶರೀರಿಯಾಗಿರುತ್ತಾನೆ ಅವನು ಮತ್ತೆ ಅಜ್ಞರಂತೆ ಶರೀರಧಾರಣೆಯನ್ನು ಮಾಡುವನೆಂಬುದು ಎಲ್ಲಿಂದ ಪ್ರಸಕ್ತವಾಗುತ್ತದೆ? ಜೀವನು ಅಜ್ಞಾನ ದಶೆಯಲ್ಲಿಯೂ ಬ್ರಹ್ಮವೇ ಆಗಿರುತ್ತಾನೆ: ನಾನು ಬ್ರಹ್ಮವು ಎಂದು ಅರಿತುಕೊಂಡ ಮಾತ್ರದಿಂದ ಮಹಾವೀರ್ಯರಾದ ವಾಮದೇವಾದಿಗಳಂತೆಯೇ ಸರ್ವಾತ್ಮಭಾವವನ್ನು ಪಡೆದುಕೊಂಡುಬಿಡುತ್ತಾನೆ ಎಂದು ಶ್ರುತಿಯಲ್ಲಿರುತ್ತದೆ.

**'ಆತ್ಮೇತ್ಯೇವೋಪಾಸೀತ', 'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ'**- ಮುಂತಾದ ಶ್ರುತಿಗಳಲ್ಲಿ ಈ ಆತ್ಮತತ್ತ್ವವನ್ನು ಅರಿತುಕೊಳ್ಳಬೇಕೆಂದು ಉಪದೇಶಿಸಿದೆ. ಇದನ್ನರಿಯದೆ ಕೆಲವರು ಇವೆಲ್ಲ ಬ್ರಹ್ಮಾತ್ಮೋಪಾಸನೆಯನ್ನು ಹೇಳುವ ವಾಕ್ಯಗಳೆಂದೂ ಉಪಾಸನೆಯಿಂದಲೇ ಅರ್ಚಿರಾದಿಮಾರ್ಗದಿಂದ ಹೋಗಿ ಬ್ರಹ್ಮವನ್ನು ಸೇರುವನೆಂತಲೂ ಭಾವಿಸಿರುತ್ತಾರೆ. ಕರ್ತೃತಂತ್ರವಾದ ಉಪಾಸನೆಗೂ ವಸ್ತುತಂತ್ರವಾದ ಜ್ಞಾನಕ್ಕೂ ಭೇದವನ್ನು ಅರಿತುಕೊಳ್ಳದ್ದರ ಫಲವಿದು.

**ಉಪಾಸನೆಯನ್ನು** ಶ್ರುತಿಯಲ್ಲಿ ಹೇಳಿಯೇ ಇಲ್ಲವೆಂಬುದೇನೂ ಆಚಾರ್ಯರ ಅಭಿಪ್ರಾಯವಲ್ಲ. ಆದರೆ ಕ್ರಿಯಾಕಾರಕಫಲಗಳ ಭೇದವನ್ನು ಸತ್ಯವೆಂದು ತಿಳಿಯುವ ಅವಿದ್ಯಾದೃಷ್ಟಿಯುಳ್ಳವರಿಗೇ ಅದನ್ನು ವಿಧಿಸಿರುತ್ತದೆ. ಅದನ್ನು ಅನುಷ್ಠಾನಮಾಡಿದವರಿಗೆ ಬ್ರಹ್ಮಲೋಕಾಂತವಾದ ಫಲವುಂಟು. ಬ್ರಹ್ಮಲೋಕದಲ್ಲಿ ಯಾರಿಗೆ ತತ್ತ್ವಜ್ಞಾನವುಂಟಾಗುತ್ತದೆಯೋ ಅಂಥವರಿಗೆ ಪರಬ್ರಹ್ಮಪ್ರಾಪ್ತಿ ರೂಪವಾದ ಪರಮಪುರುಷಾರ್ಥವೂ ಉಂಟು. ಆದರೆ ಜ್ಞಾನಪ್ರಕರಣದಲ್ಲಿ ಉಪಾಸನೆಯನ್ನು ವಿಧಿಸಿಲ್ಲ. ಜ್ಞಾನಕ್ಕೆ ಸದ್ಯೋಮುಕ್ತಿಯೇ ಫಲ ಎಂಬುದು ಆಚಾರ್ಯರ ಮತವಾಗಿರುತ್ತದೆ.

ಇನ್ನು **'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮನ್ತವ್ಯೋ ನಿದಿಧ್ಯಾಸಿತವ್ಯಃ'** ಎಂದು ಜ್ಞಾನಪ್ರಕರಣದಲ್ಲಿಯೂ ನಿದಿಧ್ಯಾಸನವೆಂಬ ಹೆಸರಿನಿಂದ ಉಪಾಸನೆಯನ್ನು ಹೇಳಿದೆಯಲ್ಲ! ಇದೇಕೆ? – ಎಂದು ಕೆಲವರು ಶಂಕಿಸುತ್ತಿರುವರು. ಇಲ್ಲಿ **'ವಿಜ್ಞಾಯ ಪ್ರಜ್ಞಾಂಕುರ್ವೀತ'** ಮುಂತಾದ ವಾಕ್ಯಗಳನ್ನು ಉದಾಹರಿಸಿಕೊಂಡು ಜ್ಞಾನವನ್ನು ಮತ್ತೆಮತ್ತೆ ಅಭ್ಯಾಸಮಾಡುವ ರೂಪದ ಉಪಾಸನೆಯನ್ನು ವಿಧಿಸಿದೆಯೆಂದೂ ಅದರಿಂದ ಸಾಕ್ಷಾತ್ಕಾರರೂಪಫಲವಾಗುವದೆಂದೂ ಕೆಲವರು ಹೇಳುತ್ತಿದ್ದರು. ವಾಕ್ಯವು ಪ್ರಮಾಣವಾದರೆ ಅಧಿಕಾರಿಗಳಿಗೆ ಅದರಿಂದ ಅವಶ್ಯವಾಗಿ ಜ್ಞಾನವು ಆಗಲೇಬೇಕು, ಹಾಗೆ ಆಗದೆ ಇದ್ದರೆ ಅಪ್ರಮಾಣವಾದ ಜ್ಞಾನವನ್ನು ಮತ್ತೆಮತ್ತೆ ಅಭ್ಯಾಸಮಾಡುವದರಿಂದ ತಾನೆ ಎಂದಿಗೆ ಜ್ಞಾನವಾದೀತು ?– ಎಂದು ವಾರ್ತಿಕಕಾರರು ಆ ವಾದಿಗಳನ್ನು ಹಾಸ್ಯಮಾಡಿರುತ್ತಾರೆ. ಉಪಾಸನೆಗೂ ನಿದಿಧ್ಯಾಸನಕ್ಕೂ ಇರುವ ತಾರತಮ್ಯವನ್ನು ತಿಳಿದುಕೊಳ್ಳುವದರಿಂದ ಇಂಥ

ತಪ್ಪು ಅಭಿಪ್ರಾಯಗಳೆಲ್ಲ ಮಾಯವಾಗುವವು. ಉಪಾಸನೆಯು ಕೇವಲ ಭಾವನಾಮಯವಾದದ್ದು, ನಿದಿಧ್ಯಾಸನವೆಂದರೆ ಇದ್ದದ್ದನ್ನೇ ಏಕಾಗ್ರತೆಯಿಂದ ಲಕ್ಷ್ಯವಿಟ್ಟು ನೋಡಿ ಅರಿತುಕೊಳ್ಳತಕ್ಕದ್ದು. ಉಪಾಸನೆಯು ಬಲವಾದಂತೆ ಮುಂದೆ ಕಾಲಾಂತರದಲ್ಲಿ ಆಗುವ ಫಲವು ಇಲ್ಲಿಯೇ ತನ್ನ ಮುಂಗುರುಹನ್ನು ತೋರಿಸುವಂತಾಗುತ್ತದೆ. ಅದಕ್ಕೆ ಸಾಕ್ಷಾತ್ಕಾರವೆಂದು ಹೆಸರು. ಆದರೆ ನಿದಿಧ್ಯಾಸನದಿಂದ ಇಲ್ಲಿಯೇ ಆಗುವ ತತ್ತ್ವಜ್ಞಾನವು ಪ್ರಾಪ್ತವಾಗುತ್ತದೆ. ಪರಮಾತ್ಮಸ್ವರೂಪವು ನಿತ್ಯಾಪರೋಕ್ಷವಾಗಿ ಸಿದ್ಧವಾಗಿಯೇ ಇರುವದರಿಂದ ಅದರ ಸಾಕ್ಷಾತ್ಕಾರವೂ ಅವಶ್ಯವಿರುವದಿಲ್ಲ. ಈಗಿನ ವೇದಾಂತಿಗಳು ನಿದಿಧ್ಯಾಸನವನ್ನು ಸಮಾಧಿಗೆ ಅಂಗವಾಗಿ ಮಾಡಿಕೊಂಡಿರುವದೂ **'ಅಹಂ ಬ್ರಹ್ಮಾಸ್ಮಿ'** ಮುಂತಾದ ಬ್ರಹ್ಮಾತ್ಮೈಕ್ಯಬೋಧಕ ವಾಕ್ಯಗಳನ್ನು ಜಪಕ್ಕೆ ಅಂಗವಾಗಿಮಾಡಿಕೊಂಡಿರುವದೂ ಆತ್ಮಜ್ಞಾನವು ವಸ್ತುತಂತ್ರವಾಗಿರುವದೆಂಬುದನ್ನೂ ಇದ್ದದ್ದನ್ನು ಮಾತ್ರ ತಿಳಿಸಿಕೊಡುವದೆಂಬುದನ್ನೂ ಮನಸ್ಸಿಗೆ ತಾರದೆ ಇರುವದರ ಫಲವಾಗಿದೆ. ನಾವು ಎಂದೆಂದಿಗೂ ಬ್ರಹ್ಮಸ್ವರೂಪರೇ ಆಗಿರುತ್ತೇವಾದ್ದರಿಂದ ಅದನ್ನು ಅರಿತುಕೊಳ್ಳದಿರುವದೊಂದೇ ಬ್ರಹ್ಮಪ್ರಾಪ್ತಿಗೆ ಅಡ್ಡಿಯಾಗಿರುತ್ತದೆ. ನಮ್ಮ ಆತ್ಮನು ಸರ್ವಸಾಕ್ಷಿಯಾಗಿರುವದರಿಂದ ಅವನೇ ಎಲ್ಲವನ್ನೂ ಬೆಳಗುತ್ತಿರುತ್ತಾನೆ. ಹೀಗಿರುವಲ್ಲಿ ಅವನನ್ನು ಕಂಡುಕೊಳ್ಳುವದಕ್ಕಾಗಿ ಎಲ್ಲಿಗಾದರೂ ಏತಕ್ಕೆ ಹೋಗಬೇಕು? ಉಪಾಸನೆಯನ್ನು ಮಾಡಿರುವವರು ಅರ್ಚಿರಾದಿ ಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗುವರೆಂದು ಶ್ರುತಿಯಲ್ಲಿ ಹೇಳಿರುವದು ಅಜ್ಞರ ದೃಷ್ಟಿಯಿಂದ. ಪ್ರಮಾತೃವೇ ನಾನೆಂದು ಭಾವಿಸಿಕೊಂಡಿರುವವರಿಗೆ ಅದು ಅವಶ್ಯವಾಗಬಹುದು. ಆದರೆ ಉತ್ತಮಾಧಿಕಾರಿಗಳಿಗೆ ಅದು ಬೇಕಿರುವದಿಲ್ಲ. ಆತ್ಮಜ್ಞಾನಕ್ಕೆ ಶ್ರವಣಮನನನಿದಿಧ್ಯಾಸಗಳೆಲ್ಲವೂ ನೇರಾದ ಸಾಧನಗಳು; ಯಾವನಿಗೆ ಯಾವಾಗ ಎಲ್ಲಿ ಜ್ಞಾನವುಂಟಾದರೆ ಆಗಲೇ ಅಲ್ಲಿಯೇ ಆತ್ಮಸ್ವರೂಪದಲ್ಲಿ ನೆಲೆನಿಲ್ಲುವ ಮೋಕ್ಷಫಲವು ಅಳವಡುವದೆಂಬುದನ್ನು ತಿಳಿಸಿಕೊಟ್ಟಿರುವದೇ ಆಚಾರ್ಯರು ನಮಗೆ ಮಾಡಿರುವ ಮಹೋಪಕಾರವು. ಈ ಉಪದೇಶವನ್ನು ಕಿವಿಗೊಟ್ಟು ಕೇಳಿ ಮುಮುಕ್ಷುಗಳು ಯುಕ್ತರೀತಿಯಿಂದ ಸಾಧನವನ್ನು ಅನುಷ್ಠಾನ ಮಾಡಿ ಕೃತಕೃತ್ಯರಾಗಬೇಕು.

★★★★★

# ಶಾಂಕರಾದ್ವೈತವೂ ಹಿಂದಿನ ವೇದಾಂತಪ್ರಕ್ರಿಯೆಗಳೂ

**15-5-56**

**ಶ್ರೀಶ್ರೀಗಳವರು**

ಶ್ರೀಶಂಕರಭಗವತ್ಪಾದರವರು ನಮಗೆ ಪರಮಪೂಜ್ಯರಾಗಿರುವದಕ್ಕೆ ಅವರು ಹೊರಕ್ಕೆ ತಂದ ಅಸಾಧಾರಣವಾದ ಅದ್ವೈತ ಪ್ರಕ್ರಿಯೆಯು ಕಾರಣವಾಗಿರುತ್ತದೆ. ಶಂಕರಾಚಾರ್ಯರ ಹಿಂದೆ ಇದ್ದ ವೇದಾಂತಿಗಳೆಲ್ಲರೂ ಒಂದರ್ಥದಲ್ಲಿ ಅದ್ವೈತಿಗಳೇ ಆಗಿದ್ದರು. ಜೀವಬ್ರಹ್ಮೈಕ್ಯವನ್ನು ಹೇಳುವದು ಸರ್ವೋಪನಿಷದ್ವಾದಿಗಳಿಗೂ ಸಮ್ಮತವೆಂದು ಆಚಾರ್ಯರು ಬೃಹದಾರಣ್ಯಕಭಾಷ್ಯದಲ್ಲಿ ಬರೆದಿರುತ್ತಾರೆ. ವೇದಾಂತೇತರದರ್ಶನಗಳಲ್ಲೆಲ್ಲ ವೇದಾಂತವೆಂದರೆ ಅದ್ವೈತವೇ ಎಂಬ ಅಭಿಪ್ರಾಯವು ಕಂಡುಬರುತ್ತದೆ. ಆದ್ದರಿಂದ ಆಚಾರ್ಯರು ಪ್ರತಿಪಾದಿಸಿದ ಅದ್ವೈತದ ವಿಶೇಷವೇನು ? ಎಂಬುದನ್ನು ವಿಚಾರಿಸುವದು ಅವಶ್ಯವಾಗಿದೆ. ಹಿಂದಿನ ಪ್ರಕ್ರಿಯಾಂತರಗಳ ಗ್ರಂಥಗಳೆಲ್ಲವೂ ಈಗ ನಾಮಾವಶೇಷವಾಗಿವೆಯಾದರೂ ಆಚಾರ್ಯರ ಭಾಷ್ಯಗಳಲ್ಲಿ ಅಲ್ಲಲ್ಲಿ ಪರಾಮರ್ಶಿಸಿ ಖಂಡಿಸಿರುವ ಪೂರ್ವಪಕ್ಷಗಳಿಂದ ಅವುಗಳ ಸ್ವರೂಪವನ್ನು ತಿಳಿದುಕೊಳ್ಳಬೇಕಾಗಿದೆ.

ಬ್ರಹ್ಮವು ಶಾಸ್ತ್ರಪ್ರಮಾಣಕವು-ಎಂಬುದು ಸರ್ವವೇದಾಂತಿಗಳಿಗೂ ಸಮ್ಮತ. ಆದರೆ ಸ್ವತಂತ್ರವಾಗಿ ಬ್ರಹ್ಮವಸ್ತುಬೋಧಕವಾಕ್ಯಗಳೂ ಇವೆಯೆಂದೂ ಆ ವಾಕ್ಯಗಳಿಂದ ಅನುಭವಪರ್ಯವಸಾನವಾದ ಜ್ಞಾನವಾಗುತ್ತದೆಯೆಂದೂ ತಿಳಿಸಿದ್ದು ಆಚಾರ್ಯರ ಸಂಪ್ರದಾಯದ ವಿಶೇಷವು. ಶಾಸ್ತ್ರವು ವಿಧಿನಿಷೇಧಗಳನ್ನು ಮಾತ್ರವೇ ತಿಳಿಸುವದಿಲ್ಲ; ಅದು ವಸ್ತು ಜ್ಞಾಪಕವು, ಕಾರಕವಲ್ಲ-ಎಂಬುದನ್ನು ತಿಳಿಸಿ ಉಪಾಸನೆಗಿಂತಲೂ ಬೇರೆಯಾದ ವಸ್ತುತಂತ್ರಜ್ಞಾನವು ಶ್ರುತ್ಯುಪದಿಷ್ಟವಾಗಿದೆ ಎಂದು ಹೇಳಿದ್ದೂ ಸಂಸಾರದಶೆಯಲ್ಲಿಯೂ ಜೀವನು ಬ್ರಹ್ಮಕ್ಕಿಂತ ಭಿನ್ನನಾಗಿಲ್ಲ, ಭಿನ್ನಾಭಿನ್ನನಾಗಿಯೂ ಇಲ್ಲ ಎಂಬುದನ್ನು ಉಪದೇಶಿಸಿದ್ದೂ ಈ ಪ್ರಕ್ರಿಯೆಯ ಒಂದು ವಿಶೇಷವು. ವಾಕ್ಯಜ್ಞಾನವಾದಮೇಲೆ ಪ್ರಪಂಚವಿಲಯ,

ಶಬ್ದಯುಕ್ತಿಪ್ರಸಂಖ್ಯಾನ, ಸಮಾಧಿ- ಮುಂತಾದವುಗಳನ್ನು ಮಾಡಬೇಕಾದ ಅವಶ್ಯಕತೆಯಿಲ್ಲವೆಂದು ತಿಳಿಸಿರುವದೂ ಮತ್ತೊಂದು ವಿಶೇಷ. ಅಜ್ಞಾನಮಾತ್ರದಿಂದ ಮರೆಯಾಗಿರುವ ಬ್ರಹ್ಮಾತ್ಮೈಕ್ಯವನ್ನು ವಾಕ್ಯಜ್ಞಾನಮಾತ್ರದಿಂದ ಇಲ್ಲಿಯೇ ಈಗಲೇ ತಿಳಿದುಕೊಳ್ಳಬಹುದೆಂಬುದನ್ನು ತಿಳಿಸಿದ್ದು ಮತ್ತೊಂದು ವಿಶೇಷ. ವೇದಾಂತಜ್ಞಾನದಲ್ಲಿ ಅಧಿಕಾರವು ಶ್ರುತಿಯಮೂಲಕ ತ್ರೈವರ್ಣಿಕರಿಗೆ ಮಾತ್ರವೇ ಇದ್ದರೂ ಇತಿಹಾಸಪುರಾಣಗಳ ಮೂಲಕ ಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೆ ಎಲ್ಲರಿಗೂ ಅವಕಾಶವಿದೆಯೆಂದು ಉಪದೇಶಿಸಿರುವದು ಈ ಪ್ರಕ್ರಿಯೆಯ ಮತ್ತೊಂದು ವಿಶೇಷವು.

ಹೆಚ್ಚೇಕೆ? 'ಇದೆಲ್ಲವೂ ಬ್ರಹ್ಮವೇ', 'ಆ ಬ್ರಹ್ಮವೇ ನಾನು' ಎಂಬೀ ವಾಕ್ಯಗಳ ಅಕ್ಷರಾರ್ಥವನ್ನು ಹಿಡಿದು ಅವುಗಳ ಉಪದೇಶವನ್ನು ಸಾರ್ವತ್ರಿಕಾನುಭವಕ್ಕೆ ಹೊಂದಿಸಿ ತೋರಿಸಿದ ಹೆಚ್ಚುಗಾರಿಕೆಯು ಈ ಪ್ರಕ್ರಿಯೆಗೇ ಮೀಸಲಾದದ್ದು.

★★★★★

# ವೇದಾಂತವೂ ಸಾಂಖ್ಯವೂ

**16-5-1956**

**ಶ್ರೀಶ್ರೀಗಳವರು**

ವೇದಾಂತಕ್ಕೆ ಪೂರ್ವದಲ್ಲಿ ಸಾಂಖ್ಯವೆಂಬ ಹೆಸರೇ ಇದ್ದಿತು. ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವದರಿಂದ ವೇದಾಂತವೆಂಬ ಹೆಸರು ಅದಕ್ಕೆ ಬಂದಿದೆ. ಮಹಾಭಾರತದಲ್ಲಿ ಸಾಂಖ್ಯಶಾಸ್ತ್ರದ ತತ್ತ್ವಗಳನ್ನು ಇಟ್ಟುಕೊಂಡು ಪ್ರತಿಪಾದಿಸಿರುವದು ಕಂಡುಬರುತ್ತದೆ. ಸಾಂಖ್ಯಶಾಸ್ತ್ರವು ವೇದಾಂತಕ್ಕಿಂತಲೂ ಮೊದಲೇ ಪ್ರಖ್ಯಾತವಾಗಿದ್ದಿರಬೇಕೆಂಬುದು ಬ್ರಹ್ಮಸೂತ್ರದಿಂದಲೇ ಗೊತ್ತಾಗುತ್ತದೆ. ಏಕೆಂದರೆ ಅದರಲ್ಲಿ ಮುಖ್ಯವಾಗಿ

ಸಾಂಖ್ಯವನ್ನೇ ಖಂಡಿಸಿದೆ. ಸಾಂಖ್ಯರ ಪ್ರಧಾನಾದಿಗಳನ್ನು ತಿಳಿಸುವಂತೆ ತಟ್ಟನೆ ತೋರುವ ಕೆಲವು ಶ್ರುತಿವಚನಗಳಿರುವದರಿಂದಲೂ. ಸಾಂಖ್ಯಾಚಾರ್ಯರಾದ ಕಪಿಲರು ಸರ್ವಜ್ಞರೆಂದು ಪ್ರಸಿದ್ಧರಾಗಿದ್ದು ಅವರ ಅನುಯಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿರುವದರಿಂದಲೂ ಆ ಮತದ ಅಸಾರತೆಯನ್ನು ತೋರಿಸುವದಕ್ಕಾಗಿ ಬ್ರಹ್ಮಸೂತ್ರದಲ್ಲಿ ಅವುಗಳನ್ನು ಖಂಡಿಸಿದೆ ಎಂದು ಆಚಾರ್ಯರು ಬರೆದಿರುತ್ತಾರೆ. ಈಗ್ಗೆ ಸಾಂಖ್ಯದರ್ಶನವನ್ನೇ ಅನುಸರಿಸುವವರು ಬೇರೆಬೇರೆಯಾಗಿ ಯಾರೂ ಇಲ್ಲದಿದ್ದರೂ ವೇದಾಂತವೆಂಬ ಹೆಸರಿನಿಂದ ಸಾಂಖ್ಯವನ್ನೇ ಅನೇಕರು ಪ್ರತಿಪಾದಿಸುತ್ತಿರುವದು ಕಂಡುಬರುತ್ತದೆ. ಆದ್ದರಿಂದ ವೇದಾಂತಕ್ಕೂ ಸಾಂಖ್ಯದರ್ಶನಕ್ಕೂ ಇರುವ ತಾರತಮ್ಯವನ್ನು ತಿಳಿದುಕೊಳ್ಳುವದರಿಂದ ಪ್ರಯೋಜನವುಂಟು.

ಸಾಂಖ್ಯರು ನಿರೀಶ್ವರವಾದಿಗಳು. ಸತ್ತ್ವರಜಸ್ತಮೋಗುಣಗಳ ಸಾಮ್ಯಾವಸ್ಥೆಯಾದ ಪ್ರಕೃತಿಯು ಮಹತ್ತು ಅಹಂಕಾರ ತನ್ಮಾತ್ರೆಗಳ ರೂಪದಿಂದ ಕ್ರಮಕ್ರಮವಾಗಿ ಪರಿಣಮಿಸಿ ವಿಚಿತ್ರಪ್ರಪಂಚವಾಗಿ ದೆಯೆಂಬ ಅಚೇತನವಿಕಾಸವಾದಿಗಳು. ಪ್ರಕೃತಿಗೂ ಪುರುಷನಿಗೂ ಇರುವ ತಾರತಮ್ಯವನ್ನು ತಿಳಿಯದೆ ಪ್ರಕೃತಿಧರ್ಮವನ್ನು ಪುರುಷನಲ್ಲಿ ಭ್ರಾಂತಿಯಿಂದ ಅಧ್ಯಾರೋಪಮಾಡಿಕೊಂಡಿರುವದರಿಂದ ಆಧ್ಯಾತ್ಮಿಕಾದಿತಾಪತ್ರಯಗಳು ಪುರುಷನಲ್ಲಿ ಕಾಣುತ್ತಿವೆ ಎಂಬುದು ಅವರ ಮತ. ಪ್ರಕೃತಿಯು ಪುರುಷನಿಗಿಂತ ಬೇರೆ ಎಂಬುದು ಸ್ಥೂಲವಾದ ಬೆಟ್ಟ, ನದಿ-ಮುಂತಾದವುಗಳ ದೃಷ್ಟಿಯಿಂದ ನೋಡಿದರೆ ಸುಲಭವಾಗಿ ತಿಳಿಯುತ್ತದೆಯಾದರೂ ಬಗೆಬಗೆಯ ರೂಪಗಳಿಂದ ಗುಣಗಳು ಒಂದರೊಡನೆ ಒಂದು ಸಂಬದ್ಧವಾಗಿ ಶರೀರ, ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ -ಮುಂತಾದವುಗಳಾಗಿ ವಿಕಾಸವಾದಾಗ ಅದನ್ನು ಪುರುಷನಿಂದ ವಿವೇಚಿಸಿಕೊಳ್ಳುವದು ಕಷ್ಟ. ಆದ್ದರಿಂದ ಸರ್ವಜ್ಞರಾದ ಕಪಿಲಾದಿಗಳು ಹೇಳಿರುವಂತೆ ತತ್ತ್ವವಿವೇಕವನ್ನು ಮಾಡಿಕೊಳ್ಳಬೇಕು. ಈ ವಿವೇಕಕ್ಕೆ 'ಸಂಖ್ಯಾ', 'ತತ್ತ್ವವಿಚಾರ' ಎಂದು ಹೆಸರು -ಎಂದು ಸಾಂಖ್ಯರು ಹೇಳುತ್ತಾರೆ.

ಸಾಂಖ್ಯರನ್ನು ವೇದಾಂತಿಗಳು ತಾರ್ಕಿಕರು ಎಂದು ಕರೆಯುತ್ತಾರೆ. ಆದರೆ ವೇದಾಂತಿಗಳೂ ಅವರಂತೆಯೇ ತರ್ಕವನ್ನು ಉಪಯೋಗಿಸುತ್ತಾರಲ್ಲ, ಸಾಂಖ್ಯರೂ

ವೇದಾಂತಿಗಳಂತೆಯೇ ಶ್ರುತಿಯನ್ನು ಪ್ರಮಾಣವಾಗಿ ಹಿಡಿಯುತ್ತಾರಲ್ಲ! - ಎಂದು ಶಂಕೆ ಉಂಟಾಗಬಹುದು. ಇದಕ್ಕೆ ಪರಿಹಾರವೇನೆಂದರೆ ವೇದಾಂತಿಗಳಿಗೆ ವೇದಾಂತವೇ ಅಂದರೆ ಶ್ರುತಿಯೇ ಪ್ರಮಾಣವು, ತರ್ಕವು ಎರಡನೆಯದು; ಸಾಂಖ್ಯರಿಗೆ ತರ್ಕವೇ ಮೊದಲನೆಯದು, ಶ್ರುತಿಯು ಎರಡನೆಯದು. ಸಾಂಖ್ಯರ ಅಭಿಪ್ರಾಯದಲ್ಲಿ ತರ್ಕವು ಅನುಭವಕ್ಕೆ ಹತ್ತಿರವಾಗಿದೆ; ಏಕೆಂದರೆ ಅದಕ್ಕೆ ಅನುಭವದ ಆಧಾರವಿರುತ್ತದೆ. ಶ್ರುತಿಯೊ, ಎಂದರೆ ಅದು ಐತಿಹ್ಯಮಾತ್ರದಿಂದ ಹೀಗಂತೆ - ಎಂದು ಹೇಳುವ ಶಬ್ದಮಾತ್ರವಾಗಿರುತ್ತದೆ. ಈ ಕಾರಣದಿಂದ ಸಾಂಖ್ಯರು ಶ್ರುತಿಯನ್ನು ಆಗಮದ, ಎಂದರೆ ಆಪ್ತವಾಕ್ಯದ-ಸ್ಥಾನದಲ್ಲಿ ಇಟ್ಟಿರುತ್ತಾರೆ. ವೇದಾಂತಿಗಳಿಗೆ ಶ್ರುತಿಯು ಅನುಭವಕ್ಕೆ ಬರುವಂತೆ ವಿಷಯವನ್ನು ಜ್ಞಾಪಿಸುವದಾಗಿರುತ್ತದೆ; ಆದ್ದರಿಂದ ಅದಕ್ಕೆ ಎಲ್ಲಾ ಪ್ರಮಾಣಗಳಿಗಿಂತ ಮೇಲಿನ ಸ್ಥಾನವುಂಟು. ಯಾರಿಗೆ ಶ್ರುತಿವಾಕ್ಯದಿಂದಲೇ ನೇರಾಗಿ ಅನುಭವವುಂಟಾಗುವದಿಲ್ಲವೋ ಅಂಥವರ ಅನುಕೂಲಕ್ಕಾಗಿ ತರ್ಕವನ್ನೂ ವೇದಾಂತದಲ್ಲಿ ಉಪಯೋಗಿಸಿದೆ. ನಿಜವಾಗಿ ನೋಡಿದರೆ ಈ ತರ್ಕವೆಂಬುದು ಪೂರ್ಣಾನುಭವಕ್ಕೆ ಮೆಟ್ಟಿಲುಮೆಟ್ಟಿಲಾಗಿ ತಂದುಬಿಡುವ ಒಳಾನುಭವವನ್ನು ತಿಳಿಸುವ ಉಪದೇಶಮಾತ್ರವೇ ಆಗಿರುತ್ತದೆ. ಉದಾಹರಣೆಗೆ ಆತ್ಮನು ಸರ್ವಜಗತ್ಸಾಕ್ಷಿಯಾಗಿರುತ್ತಾನೆಂದು ತಿಳಿಸುವದಕ್ಕೆ ಅಂಗವಾಗಿ ಜಾಗ್ರತ್ಪ್ರಪಂಚಸಾಕ್ಷಿತ್ವ, ಸ್ವಪ್ನಸಾಕ್ಷಿತ್ವ ಸುಷುಪ್ತಿಸಾಕ್ಷಿತ್ವ-ಇವುಗಳನ್ನು ಒಂದೊಂದಾಗಿ ಹೇಳುವದು ಒಂದು ಈ ಬಗೆಯ ತರ್ಕ. ಸಾಂಖ್ಯರಿಗಾದರೋ ತರ್ಕವೆಂದರೆ ಅನುಮಾನವೇ; ಶ್ರುತಿಯೆಂದರೆ ಅದಕ್ಕೆ ಹೊಂದುಗಡೆಯಾಗುವಂತೆ ಹೇಳುವ ವಾಕ್ಯವೇ. ಹೀಗಿರುವದರಿಂದ ಸಾಂಖ್ಯರಿಗೆ ತರ್ಕ, ಶಬ್ದ-ಎರಡರಿಂದಲೂ ಪರೋಕ್ಷಜ್ಞಾನವೇ ಆಗಬೇಕಾಗುತ್ತದೆ. ಸ್ವಲ್ಪದರಲ್ಲಿ ಹೇಳಿದರೆ ಸಾಂಖ್ಯರಿಗೆ ತರ್ಕವು ಮುಖ್ಯ, ಶ್ರುತಿಯಿಲ್ಲದಿದ್ದರೂ ಸಾಗುತ್ತದೆ; ವೇದಾಂತಿಗಳಿಗೆ ಶ್ರುತಿಯು ಮುಖ್ಯ, ತರ್ಕವು ಇಲ್ಲದಿದ್ದರೂ ಸಾಗುತ್ತದೆ.

ಸಾಂಖ್ಯರಿಗೆ ಪುರುಷ, ಪ್ರಕೃತಿ, ಅವುಗಳ ಸಂಯೋಗ- ಇವು ಮೂರೂ ನಿತ್ಯಾನುಮೇಯಗಳಾಗಿರುತ್ತವೆ. ವೇದಾಂತಿಗಳಿಗೆ ಆತ್ಮನು ನಿತ್ಯಸಿದ್ಧನು; ಪ್ರಕೃತಿಯು ಅಥವಾ ಅನಾತ್ಮವು ಅನಿರ್ವಚನೀಯವು ಎಂದರೆ ಆತ್ಮನೆಂದಾಗಲಿ

ಅವನಿಗಿಂತ ಅನ್ಯನೆಂದಾಗಲಿ ವಿಂಗಡಿಸಿ ಹೇಳುವದಕ್ಕೆ ಬರದಂಥ ಹುಸಿತೋರಿಕೆ. ಸಾಂಖ್ಯರಿಗೆ ಇಪ್ಪತ್ತೈದು ತತ್ತ್ವಗಳು ಬೇಕು; ವೇದಾಂತಿಗಳಿಗೆ ಪರಮಾತ್ಮನು ಅದ್ವಿತೀಯವಾಗಿರುವ ಜನ್ಮರಹಿತವಾದ ಏಕಮಾತ್ರತತ್ತ್ವವು. ಸಾಂಖ್ಯರಿಗೆ ಬೇರೆಬೇರೆ ಕಾರ್ಯಕರಣಸಂಘಾತಗಳಿಗೆ ಬೇರೆಬೇರೆ ಪುರುಷರು ಇರುತ್ತಾರೆ; ವೇದಾಂತಿಗಳ ಮತದಲ್ಲಿ ಪುರುಷನು ಸರ್ವಭೂತಗಳಿಗೂ ಆತ್ಮನಾಗಿರುವ ಒಬ್ಬನೇ ಆತ್ಮನಾಗಿರುತ್ತಾನೆ.

ಸಾಂಖ್ಯರು ಹೇಳುವ ತರ್ಕವು ಸರ್ವಸಂಮತವಲ್ಲ. ಅವರ ತರ್ಕವನ್ನು ಎದುರಿಸುವದಕ್ಕೆ ಬೇರೆಬೇರೆ ಮತದವರಿದ್ದಾರೆ. ಎದುರಾಳಿಗಳು ಇರುವವರೆಗೂ ಯಾವ ತರ್ಕವೂ ನಿಶ್ಚಿತವಾಗುವಹಾಗಿಲ್ಲ. ಕಪಿಲರು ಸರ್ವಜ್ಞರು ಎಂದರೆ ಕಣಾದರು ಏಕಲ್ಲ? ಎನ್ನುವವರು ಇದ್ದೇ ಇರುತ್ತಾರೆ.

ಮೇಲೆ ಹೇಳಿದ ಕಾರಣಗಳಿಂದ ಅನುಭವಪ್ರಧಾನವಾದ ವೇದಾಂತದ ಮುಂದೆ ಸಾಂಖ್ಯವು ನಿಲ್ಲಲಾರದೆಹೋಯಿತು. ವೇದಾಂತಿಗಳು ಗುಣತ್ರಯಗಳು, ಸತ್ಕಾರ್ಯವಾದ, ಆತ್ಮಾನಾತ್ಮವಿವೇಕ–ಇಂಥ ಕೆಲವು ವಾದಗಳನ್ನು ಗ್ರಹಣದೃಷ್ಟಿಯಿಂದ ತನ್ನ ವಿಚಾರಕ್ರಮಕ್ಕೆ ಸೇರಿಸಿಕೊಂಡಿದೆ. ಈ ಗುಟ್ಟನ್ನು ಅರಿಯದೆ ಈಗಿನ ಕೆಲವು ವೇದಾಂತಿಗಳು ಸಾಂಖ್ಯರ ಯುಕ್ತಿಗಳನ್ನೇ ವೇದಾಂತದ ಯುಕ್ತಿಗಳೆಂದು ಭ್ರಮಿಸಿರುವದೂ ಉಂಟು. ಆದರೆ ಈ ಎರಡು ಸಿದ್ಧಾಂತಗಳಿಗೂ ಅಜಗಜಾಂತರದಷ್ಟು ತಾರತಮ್ಯವಿದೆಯೆಂಬುದು ಆಚಾರ್ಯರ ಪ್ರಸ್ಥಾನತ್ರಯವನ್ನು ನೋಡಿದವರಿಗೆ ತಿಳಿದುಬರುತ್ತದೆ.

★★★★★

# ವೇದಾಂತವೂ ಯೋಗವೂ

**17-5-1956**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳು**

ಶ್ರೀಶ್ರೀಗಳವರು ಹಿಂದಿನ ಉಪದೇಶದಲ್ಲಿ ಈಗ ಸಾಂಖ್ಯರು ಯಾರೂ ಉಳಿದಿಲ್ಲವೆಂದು ಅಪ್ಪಣೆಕೊಡಿಸಿದ್ದರಷ್ಟೆ. ಸಾಂಖ್ಯರೆಂಬ ಹೆಸರಿನಿಂದ ಈಗ ಯಾರೂ ಉಳಿದಿಲ್ಲವೆಂಬುದೇ ಅವರ ಅಭಿಪ್ರಾಯ. ಸಾಂಖ್ಯಮತವನ್ನು ರೂಪಾಂತರದಿಂದ ನಾಮಾಂತರದಿಂದ ಅಂಗೀಕರಿಸಿರುವ ದ್ವೈತಿಗಳೂ ಅದ್ವೈತಿಗಳೂ ಈಗಲೂ ಇರುತ್ತಾರೆ. ಒಂದಾನೊಂದು ಮೂಲಕಾರಣವು ಜಗದ್ರೂಪವಾಗಿ ಪರಿಣಮಿಸಿದೆ ಎಂದೇ ಅವರು ಹೇಳುತ್ತಿದಾರೆ. ಮೂಲಾವಿದ್ಯೆಯೆಂಬ ಹೆಸರು ಒಂದಾನೊಂದು ಶಕ್ತಿಯು ಜಗದ್ರೂಪವಾಗಿ ಪರಿಣಮಿಸುತ್ತದೆ-ಎಂದು ಹೇಳುವ ಬೇರೆಯ ವೇದಾಂತಿಗಳೂ ಈಶ್ವರಾಧೀನವಾದ ಪ್ರಕೃತಿಯು ಜಗದ್ರೂಪವಾಗಿ ಪರಿಣಮಿಸುತ್ತದೆ ಎನ್ನುವ ವಾದಿಗಳೂ ಪ್ರಕಾರಾಂತರದಿಂದ ಸಾಂಖ್ಯರೇ ಆಗಿರುತ್ತಾರೆ. ನಿಷ್ಕಲನೂ ನಿಷ್ಕ್ರಿಯನೂ ನಿರವದ್ಯನೂ ಆಗಿರುವ ಅದ್ವೈತ ಪರಮಾತ್ಮನು ಜಗದ್ರೂಪವಾಗಿ ನಿಜವಾಗಿಯೂ ಪರಿಣಮಿಸುತ್ತಾನೆಂಬುದಕ್ಕೆ ಅರ್ಥವೇ ಇಲ್ಲ. ಪರಮಾತ್ಮನು ಜಗತ್ತಾಗುವದಕ್ಕೆ ಸಾವಯವನಲ್ಲವಲ್ಲ-ಎಂಬ ಆಕ್ಷೇಪವನ್ನು ತೆಗೆದು ಭಾಷ್ಯಕಾರರು ಬುದ್ಧಿಕಲ್ಪಿತವಾಗಿರುವ ಅವಯವಗಳೂ ಪರಮಾತ್ಮನಿಗೆ ಉಂಟು- ಎಂಬ ಪರಿಹಾರವನ್ನು ಹೇಳಿರುತ್ತಾರೆ. ಹೀಗಿರುವದರಿಂದ ಪ್ರಕೃತಿಯ ಗುಣಗಳಾಗಲಿ ಪರಮಾತ್ಮನೇ ಆಗಲಿ ಜಗದ್ರೂಪವಾಗಿ ಪರಿಣಮಿಸುವದೆಂದರೆ ಅವಿದ್ಯಾಕಲ್ಪಿತವಾದ ಅವಯವಗಳಿಂದಲೇ ಎಂದು ಎಲ್ಲರೂ ಒಪ್ಪಬೇಕು. ಪರಮಾತ್ಮನಿಗಿಂತ ಬೇರೆಯಾಗಿ ಇದೆಯೆಂಬುದೆಲ್ಲವೂ ಅವಿದ್ಯಾಕಲ್ಪಿತವೇ ಎಂಬುದು ವೇದಾಂತದಸಿದ್ಧಾಂತವು. ಪರಮಾತ್ಮನಲ್ಲಿಯಾಗಲಿ ಪ್ರಕೃತಿಯಲ್ಲಾಗಲಿ ನಿಜವಾಗಿ ಪರಿಣಾಮವಾಗುವ ಸ್ವಭಾವವನ್ನು ಒಪ್ಪುವದೆಲ್ಲವೂ ಒಂದು ಬಗೆಯ ಸಾಂಖ್ಯವೇ ಎಂದು ತಿಳಿಯಬೇಕು.

ಈ ದಿವಸದ ವಿಷಯವು ''**ವೇದಾಂತವೂ ಯೋಗವೂ**'' ಎಂಬುದಾಗಿದೆ. ಯೋಗಿಗಳ ಪ್ರಕ್ರಿಯೆಯೆಲ್ಲವೂ ಸಾಂಖ್ಯರ ಪ್ರಕ್ರಿಯೆಯೇ ಆಗಿದೆ. ಆದರೆ ಅವರು ಸೇಶ್ವರ ಸಾಂಖ್ಯರು, ಈಶ್ವರನಿಗೂ ಒಂದು ಸ್ಥಾನವನ್ನು ಕೊಟ್ಟಿರುತ್ತಾರೆ. ಮಿಕ್ಕ ಎಲ್ಲಾ ಸಿದ್ಧಾಂತಿಗಳೂ ಶಂಕರರು ಹೇಳುವ ಅಧ್ಯಾಸರೂಪದ ಅವಿದ್ಯೆಯನ್ನು ವಿಚಾರಿಸದೆ ಇರುವದರಿಂದ ಅವರ ತೀರ್ಮಾನವು ಅವಿದ್ಯಾಕ್ಷೇತ್ರಕ್ಕೇ ಒಳಪಟ್ಟಿರುವದೆಂಬುದು ಒಂದು ಸರ್ವಸಮಾನದೋಷವಾಗಿರುತ್ತದೆ. ಪ್ರಕೃತ ಯೋಗಿಗಳು ಪ್ರಕೃತಿ ಪುರುಷರ ವಿವೇಕವನ್ನು ವಿಚಾರದೃಷ್ಟಿಯಿಂದ ಮಾಡುವದಕ್ಕೆ ಹೋಗದೆ ಚಿತ್ತವೃತ್ತಿ ನಿರೋಧದಿಂದ ಅದನ್ನು ಅನುಭವಕ್ಕೆ ತಂದುಕೊಳ್ಳುವದಕ್ಕೆ ಪ್ರಯತ್ನಿಸುತ್ತಾರೆ. ಸಮಾಧಿಯಲ್ಲಿ ಸವಿಕಲ್ಪವೆಂದೂ ನಿರ್ವಿಕಲ್ಪವೆಂದೂ ಎರಡು ಭೇದಗಳುಂಟು. ನಿರ್ವಿಕಲ್ಪಸಮಾಧಿಯು ಬಂದಾಗ ಯೋಗಿಗೆ ಯಾವ ಅರಿವೂ ಇರುವದಿಲ್ಲ. ಚಿತ್ತವು ಯಾವ ವೃತ್ತಿಯೂ ಇಲ್ಲದೆ ತನ್ನ ಸ್ವರೂಪದಲ್ಲಿ ಉಳಿದುಕೊಳ್ಳುತ್ತದೆ. ದ್ರಷ್ಟೃವಾದ ಪುರುಷನು ಪ್ರಕೃತಿಯ ಸಂಬಂಧವಿಲ್ಲದೆ ತನ್ನ ಸ್ವರೂಪದಲ್ಲಿಯೇ ಇದ್ದುಕೊಂಡಿರುತ್ತಾನೆ. ಇದೇ ಪ್ರಕೃತಿ ಪುರುಷರ ವಿವೇಕವು , ಎನ್ನುತ್ತಾರೆ. ಸಮಾಧಿಯು ತಪ್ಪಿದಮೇಲೆ ಆ ಅನುಭವದ ಬಲದಿಂದಲೇ ನಾನು ಪ್ರಕೃತಿಸಂಬಂಧವಿಲ್ಲದವನು ಎಂಬ ಜ್ಞಾನವನ್ನು ಉಳಿಸಿಕೊಳ್ಳಬಹುದು ಎಂಬುದು ಅವರ ಆಶಯ.

ಪ್ರತಿಯೊಬ್ಬನೂ ಹೀಗೆ ಪ್ರಕೃತಿಪುರುಷರ ವಿವೇಕವನ್ನು ಮಾಡಿಕೊಳ್ಳಬೇಕಾಗಿರುವದರಿಂದ ಪುರುಷರು ಅನೇಕರು, ಪ್ರಕೃತಿಯ ಸಂಬಂಧದಿಂದ ಅವರಿಗೆ ಬಂಧವೂ ವಿವೇಕದಿಂದ ಮೋಕ್ಷವೂ ಆಗುತ್ತದೆ- ಎಂಬ ಸಾಂಖ್ಯ ಸಿದ್ಧಾಂತವು ಯೋಗಿಗಳಿಗೂ ಸಮ್ಮತವಾಗಿರುತ್ತದೆ. ಸೂತ್ರಭಾಷ್ಯದಲ್ಲಿ '**ಏತೇನ ಯೋಗಃ ಪ್ರತ್ಯುಕ್ತಃ**' ಎಂಬ ಸೂತ್ರದ ಅಭಿಪ್ರಾಯವನ್ನು ವಿವರಿಸುವಾಗ ಭಾಷ್ಯಕಾರರು ಸಾಂಖ್ಯಯೋಗಮತಗಳೆರಡೂ ದ್ವೈತಸಿದ್ಧಾಂತವೆಂದು ಅವರನ್ನು ಖಂಡಿಸಿರುತ್ತಾರೆ. ಶ್ರುತಿಯಲ್ಲಿ ಸಾಂಖ್ಯಯೋಗಗಳಿಂದ ಪರಮೇಶ್ವರಪ್ರಾಪ್ತಿಯಾಗುತ್ತದೆ ಎಂದು ಹೇಳಿರುವದು ಈ ದರ್ಶನಗಳನ್ನು ಕುರಿತದ್ದಲ್ಲ ಅಲ್ಲಿ ಸಾಂಖ್ಯವೆಂದರೆ ವೇದೋಕ್ತವಾದ ಅದ್ವೈತಜ್ಞಾನವೇ: ಯೋಗವೆಂದರೆ ಆ ಜ್ಞಾನಕ್ಕೆ ಅಂತರಂಗಸಾಧನವಾದ ಧ್ಯಾನಯೋಗವೇ.

ಈಗ್ಗೆ ಕೆಲವರು ಅದ್ವೈತಿಗಳು ವೇದಾಂತಕ್ಕೂ ಯೋಗಕ್ಕೂ ಇರುವ ತಾರತಮ್ಯವನ್ನು ಅರಿತುಕೊಳ್ಳಲಾರದೆ ನಿರ್ವಿಕಲ್ಪಸಮಾಧಿಯಿಂದಲೇ ಅದ್ವೈತ ಸಾಕ್ಷಾತ್ಕಾರವಾಗಬೇಕು, ವೇದಾಂತವಾಕ್ಯಜ್ಞಾನಮಾತ್ರದಿಂದ ಎಂದಿಗೂ ಅಜ್ಞಾನವು ತೊಲಗಲಾರದು-ಎಂದು ವಾದಿಸುತ್ತಿದಾರೆ. ಇದರಿಂದ ವೇದಾಂತ ದರ್ಶನವೇ ಯೋಗದರ್ಶನದ ಒಂದು ಅಂಗವಾಗುವ ಅಪಾಯವಿರುತ್ತದೆ. ಯೋಗ ಸಮಾಧಿಯಲ್ಲಿ ಮಾತ್ರವೇ ಬ್ರಹ್ಮಾತ್ಮೈಕ್ಯವು ಅನುಭವಕ್ಕೆ ಬರುವದಾದರೆ ತತ್ತ್ವಮಸಿ ಎಂದು ಸಾರ್ವತ್ರಿಕವಾಗಿ, ಯಾವ ಅವಸ್ಥೆಯ ಹಂಗೂ ಇಲ್ಲದೆ ಆತ್ಮೈಕ್ಯವನ್ನು ಬೋಧಿಸುವ ವೇದಾಂತವಾಕ್ಯಗಳಿಗೂ ವಿರೋಧವಾಗುತ್ತದೆ. ಇದನ್ನು ಜಿಜ್ಞಾಸುಗಳು ನೆನಪಿನಲ್ಲಿಡಬೇಕು.

★★★★★

# ವೇದಾಂತವೂ ತರ್ಕವೂ

**18-5-1956**

**ಬ್ರ॥ಶ್ರೀ॥ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ ಶಾಸ್ತ್ರಿಗಳವರು**

ವೇದಪ್ರಾಮಾಣ್ಯವನ್ನು ಒಪ್ಪಲಿ ಒಪ್ಪದಿರಲಿ ಅನುಮಾನರೂಪತರ್ಕವನ್ನೇ ಪ್ರಧಾನವಾಗಿಟ್ಟುಕೊಂಡವರನ್ನೆಲ್ಲ ವೇದಾಂತಿಗಳು ತಾರ್ಕಿಕರೆಂದೇ ಕರೆಯುತ್ತಾರೆ. ತಾರ್ಕಿಕರಲ್ಲಿ ವೈಶೇಷಿಕರೂ ಸಾಂಖ್ಯರೂ ಪ್ರಧಾನರು. ತಾರ್ಕಿಕರು ಒಬ್ಬರೊಡನೊಬ್ಬರು ವಾದಮಾಡುತ್ತಾ ಒಬ್ಬರೊಡನೊಬ್ಬರು ವಿರುದ್ಧವಾದ ಅಭಿಪ್ರಾಯವನ್ನಿಟ್ಟುಕೊಂಡಿರುತ್ತಾರೆ. ಒಬ್ಬರು ಸತ್ಕಾರ್ಯವಾದವನ್ನೊಪ್ಪಿದರೆ ಇನ್ನೊಬ್ಬರು ಅಸತ್ಕಾರ್ಯವಾದವನ್ನು ಒಪ್ಪುತ್ತಾರೆ. ಒಬ್ಬರು ಆರಂಭವಾದವನ್ನು ಒಪ್ಪಿದರೆ ಮತ್ತೊಬ್ಬರು ಪರಿಣಾಮವಾದವನ್ನು ಒಪ್ಪುತ್ತಾರೆ. ಹೀಗೆ ತಾರ್ಕಿಕರಲ್ಲಿ ಒಮ್ಮತವೆಂಬುದು ಬರುವದೇ ಇಲ್ಲ, ತರ್ಕವು ನಿಲುಗಡೆಗೂ ಬರುವುದಿಲ್ಲ. ಹೀಗೆ ತಾರ್ಕಿಕರು ಒಬ್ಬರೊಡನೊಬ್ಬರು ವಿರುದ್ಧವಾಗಿ ವಾದಮಾಡುತ್ತಿರುವದರಿಂದ

ಯಾವ ತರ್ಕದ ಸಿದ್ಧಾಂತವೂ ಸರಿಯಲ್ಲವೆಂಬುದು ಗೊತ್ತಾಗುತ್ತದೆ. ತರ್ಕಾತೀತವಾದ ವೇದಾಂತಸಿದ್ಧಾಂತವೇ ಹೀಗೂ ಉಳಿದುಕೊಳ್ಳುತ್ತದೆ ಎಂದು ಶ್ರೀಶಂಕರಾಚಾರ್ಯರವರು ''**ವಿವದತ್ಸ್ವೇವ ನಿಕ್ಷಿಪ್ಯ ವಿರೋಧೋದ್ಭವ ಕಾರಣಮ್ । ತೈಸ್ಸಂರಕ್ಷಿತಸದ್ಬುದ್ಧಿಃ ಸುಖಂ ನಿರ್ವಾತಿವೇದವಿತ್ ॥**'' ಎಂಬ ಶ್ಲೋಕದಿಂದ ಸಂಗ್ರಹಿಸಿ ಹೇಳಿರುತ್ತಾರೆ.

ತಾರ್ಕಿಕರಲ್ಲಿ ಹೀಗೆ ವಿಚಾರವು ನೆಲೆನಿಲ್ಲದಿರುವದಕ್ಕೆ ಒಂದು ಕಾರಣವುಂಟು. ಅದೇನೆಂದರೆ ಅವರು ಪರಮಾರ್ಥವಾದ ಸಾರ್ವತ್ರಿಕಾನುಭವವನ್ನು ಆಧಾರವಾಗಿಟ್ಟುಕೊಂಡು ತರ್ಕಿಸುವದಿಲ್ಲ. ಅವರು ಇಟ್ಟುಕೊಂಡಿರುವ ಅನುಭವವು ಅವಿದ್ಯಾಧ್ಯಾಸದಿಂದ ಉಂಟಾಗಿರುವದರಿಂದ ಪ್ರಮಾಣಪ್ರಮೇಯಗಳೂ ಯಾವಾಗಲೂ ನಿರ್ದುಷ್ಟವಾಗಿರುವವೆಂಬ ನಂಬಿಕೆಯೇ ಇಲ್ಲ. ವೇದಾಂತಿಗಳೂ ತರ್ಕವನ್ನುಪಯೋಗಿಸುತ್ತಾರಾದರೂ ಅವರು ಎಲ್ಲರೂ ಒಪ್ಪಬೇಕಾಗಿರುವ ಸಾಕ್ಷ್ಯನುಭವವನ್ನಿಟ್ಟುಕೊಂಡು ಅದಕ್ಕನುಗುಣವಾಗಿಯೇ ತರ್ಕಿಸುತ್ತಾರೆ. ಬ್ರಹ್ಮಸೂತ್ರಭಾಷ್ಯದಲ್ಲಿ ಅನುಭವಾನುಸಾರಿಯಾದ 'ವೇದಾಂತವಾಕ್ಯಮೀಮಾಂಸೆಯನ್ನೂ ಅದಕ್ಕೆ ಅವಿರುದ್ಧವಾದ ತರ್ಕವನ್ನೂ ಇಟ್ಟುಕೊಂಡು ಬ್ರಹ್ಮಜಿಜ್ಞಾಸೆಯನ್ನು ಮಾಡುವದರಿಂದ ಮೋಕ್ಷವೆಂಬ ಪ್ರಯೋಜನವು ದೊರಕುತ್ತದೆ' ಎಂದು ಆಚಾರ್ಯರು ಬರೆದಿರುತ್ತಾರೆ. ವೇದಾಂತಿಗಳು ಉಪಯೋಗಿಸುವ ತರ್ಕದ ಜಾತಿಗೆ ಎರಡು ಉದಾಹರಣೆಗಳನ್ನು ಆ ಭಾಷ್ಯದಲ್ಲಿ ಕೊಟ್ಟಿರುತ್ತಾರೆ. ಅವಸ್ಥಾತ್ರಯಪರೀಕ್ಷೆಯನ್ನು ಮಾಡಿದರೆ ಜಾಗ್ರತ್ಸ್ವಪ್ನಗಳಲ್ಲಿರುವ ಪ್ರಪಂಚಧರ್ಮಗಳು ಆತ್ಮನಿಗೆ ಅಂಟಿಕೊಂಡಿರುವದಿಲ್ಲವೆಂಬುದೂ ಸುಷುಪ್ತಿಯಲ್ಲಿ ಆತ್ಮನು ನಿಷ್ಪ್ರಪಂಚಸದ್ಬ್ರಹ್ಮದಲ್ಲಿ ಒಂದಾಗಿರುತ್ತಾನೆಂಬುದೂ ಅನುಭವಕ್ಕೆ ಬರುತ್ತದೆ. ಇದು ಒಂದು ಬಗೆಯ ಶ್ರೌತತರ್ಕವು. ಕಾರ್ಯಕಾರಣಾನನ್ಯತ್ವನ್ಯಾಯದಿಂದ ಪ್ರಪಂಚವು ಮೂಲಕಾರಣವಾದ ಬ್ರಹ್ಮಕ್ಕಿಂತ ಬೇರೆಯಿಲ್ಲವೆಂದು ತಿಳಿಯಬಹುದು ಎಂಬುದು ಮತ್ತೊಂದು ಬಗೆಯ ತರ್ಕವು.

ವಿಜ್ಞಾನವಾದಿಗಳು ಜ್ಞಾನಕ್ಕಿಂತ ವ್ಯತಿರಿಕ್ತವಾಗಿ ಜ್ಞೇಯವೇ ಇಲ್ಲವೆಂದು ವಾದಿಸುತ್ತಾರೆ; ವೈಶೇಷಿಕರು ಜ್ಞಾನವೆಂಬುದು ದ್ರವ್ಯರೂಪವಾಗಿರುವ ಆತ್ಮನ

ಗುಣವೆನ್ನುತ್ತಾರೆ, ಮೀಮಾಂಸಕರು ಅರ್ಥವೇ ಪ್ರತ್ಯಕ್ಷವಾಗಿರುವದೆಂದೂ ಜ್ಞಾನವು ನಿತ್ಯಾನುಮೇಯವೆಂದೂ ಬಗೆಯುತ್ತಾರೆ. ಈ ಜ್ಞಾನಜ್ಞೇಯವಾದಿಗಳ ಮತವು ತರ್ಕದಿಂದ ನಿಲುಗಡೆಗೆ ಬರುವಹಾಗಿಲ್ಲ. ಅನುಭವವನ್ನು ಹಿಡಿದುನೋಡಿದರೆ ಇವೆರಡೂ ಸಾಕ್ಷಿಪ್ರಕಾಶ್ಯಗಳಾಗಿರುತ್ತವೆ. ಆ ಸಾಕ್ಷಿಯು ಇವೆರಡರ ಹಂಗೂ ಇಲ್ಲದೆ ಇರಬಹುದೆಂಬುದು ಸುಷುಪ್ತ್ಯಾದಿಗಳಿಂದ ಸ್ಪಷ್ಟವಾಗುತ್ತದೆ. ಆತ್ಮನು ಯಾವ ತರ್ಕಕ್ಕೂ ಸಿಕ್ಕುವಂತೆ ಇಲ್ಲ. ಶಾಸ್ತ್ರಾಚಾರ್ಯರ ಉಪದೇಶದಿಂದ ಆತ್ಮನಲ್ಲಿ ಯಾವ ಪ್ರಮಾಣಪ್ರಮೇಯ ವಿಭಾಗವೂ ಇಲ್ಲವೆಂಬುದನ್ನು ಅನುಭವಕ್ಕೆ ತಂದುಕೊಳ್ಳಬಹುದು.

ಈಗಿನ ಕಾಲಕ್ಕೆ ತರ್ಕಪ್ರಧಾನರಾದ ವೈಶೇಷಿಕಾದಿಗಳ ಅನಿಯಾಯಿಗಳೆಂಬುವವರು ಕಾಣುವದೇ ಇಲ್ಲ. ಅವರ ಗ್ರಂಥಗಳು ಮಾತ್ರ ಉಳಿದುಕೊಂಡಿರುತ್ತವೆ. ವೇದಾಂತಿಗಳೂ ವ್ಯವಹಾರದ ವಿಷಯಗಳ ನಿರ್ಣಯಕ್ಕೆ ತಾರ್ಕಿಕರ ಪ್ರಮಾಣಾದಿಗಳ ವಿಭಾಗವನ್ನೂ ದ್ರವ್ಯಗುಣಾದಿಗಳ ವಿಭಾಗವನ್ನೂ ಇಟ್ಟುಕೊಂಡಿರುತ್ತಾರೆ.

★★★★★

## ವೇದಾಂತವೂ ಪೂರ್ವಮೀಮಾಂಸೆಯೂ

**19-5-1956**

**ಬ್ರ॥ಶ್ರೀ॥ಎಸ್.ವಿಠ್ಠಲಶಾಸ್ತ್ರಿಗಳವರು**

ಪೂರ್ವಮೀಮಾಂಸಾಶಾಸ್ತ್ರದವರ ಮತದಂತೆ ವೇದಕ್ಕೆ ಕ್ರಿಯೆಯೇ ಪ್ರಯೋಜನವು. ಪ್ರವೃತ್ತಿನಿವೃತ್ತಿಗಳನ್ನು ಬೋಧಿಸದೆ ಇದ್ದರೆ ಅಂಥ ವೇದವಾಕ್ಯವು ವ್ಯರ್ಥವು-ಎಂಬ ಆಕ್ಷೇಪವನ್ನು ತೆಗೆದು ಅಂಥ ವಾಕ್ಯಗಳು ವಿವಕ್ಷಿತವಾದದ್ದನ್ನು ಹೊಗಳುವದರಿಂದ ಸಾರ್ಥಕವಾಗುತ್ತವೆ ಎಂಬ ಸಮಾಧಾನವನ್ನು ಜೈಮಿನಿಗಳು ಕೊಟ್ಟಿರುತ್ತಾರೆ. ಆದ್ದರಿಂದ ಉಪನಿಷತ್ತುಗಳಿಗೆ ಪ್ರಾಮಾಣ್ಯವು ಬೇಕಾದರೆ ಕರ್ಮಕ್ಕೆ

ಬೇಕಾದ ಕರ್ತೃ, ದೇವತೆಗಳು-ಮುಂತಾದವುಗಳನ್ನು ತಿಳಿಸುವದರಿಂದ ಅವುಗಳನ್ನು ಕರ್ಮಕ್ಕೆ ಹೊಂದಿಸಿಕೊಳ್ಳಬೇಕು ಅಥವಾ ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಇರುವ ಉಪಾಸನೆಯೇ ಮುಂತಾದ ಕರ್ಮವನ್ನು ಹೇಳುವದೇ ಈ ಗ್ರಂಥಭಾಗಕ್ಕೆ ಗುರಿ ಎಂದು ಕಲ್ಪಿಸಬೇಕು. ಬರಿಯ ಬ್ರಹ್ಮವಸ್ತುವನ್ನು ಹೇಳಿದರೆ ವೇದಕ್ಕೆ ಪ್ರಾಮಾಣ್ಯವು ಬರುವಂತೆಯೇ ಇಲ್ಲ ಎಂಬುದು ಪೂರ್ವಮೀಮಾಂಸಕರ ಪಕ್ಷವು.

ಈ ಪಕ್ಷದಲ್ಲಿ ತಾತ್ಪರ್ಯದಿಂದ ಬ್ರಹ್ಮವಸ್ತುವನ್ನು ಹೇಳುವ ವೇದವಾಕ್ಯಗಳಿಗೆ ಅಪ್ರಾಮಾಣ್ಯವನ್ನು ಕಲ್ಪಿಸಿದ ದೋಷವು ಬರುತ್ತದೆ. ಉಪನಿಷತ್ತುಗಳೆಲ್ಲವೂ ಪರಮಾತ್ಮನನ್ನೇ ತಾತ್ಪರ್ಯದಿಂದ ಹೇಳುತ್ತಿರುವದರಿಂದಲೂ ಕ್ರಿಯಾ ಕಾರಕಫಲಭೇದವನ್ನು ನಿರಾಕರಣೆ ಮಾಡುತ್ತಿರುವದರಿಂದಲೂ ಕರ್ಮಪರವೆಂಬುದು ತಪ್ಪು. ಬ್ರಹ್ಮಜ್ಞಾನವಾದಬಳಿಕ ಮಾಡತಕ್ಕದ್ದಾಗಲಿ ಬಿಡತಕ್ಕದ್ದಾಗಲಿ ಏನೂ ಇಲ್ಲವಾದರೂ ಅಷ್ಟರಿಂದಲೇ ಸರ್ವಕ್ಲೇಶಗಳೂ ಪರಿಹಾರವಾಗುವದರಿಂದ ಈ ಜ್ಞಾನವು ನಿಷ್ಫಲವೆಂದು ಹೇಳುವದಕ್ಕೆ ಬರುವದಿಲ್ಲ. ಉಪನಿಷತ್ತುಗಳಲ್ಲಿರುವ ಉಪಾಸನಾವಾಕ್ಯಗಳಲ್ಲಿ ದೇವತಾದಿಸ್ವರೂಪವನ್ನು ಹೇಳಿದರೂ ಜ್ಞಾನ ವಾಕ್ಯಗಳಲ್ಲಿ ಅಂಥ ವಿಚಾರವೇನೂ ಇರುವದಿಲ್ಲ. ಆದ್ದರಿಂದ ಬ್ರಹ್ಮವಸ್ತುವನ್ನೂ ಉಪನಿಷತ್ತು ಹೇಳಬಹುದೆಂಬುದರಲ್ಲಿ ಯಾವ ಆಕ್ಷೇಪಣೆಯೂ ಇಲ್ಲ ಎಂದು ವೇದಾಂತಿಗಳು ಹೇಳುತ್ತಾರೆ.

ಶಾಸ್ತ್ರವು ಯಾವದಾದರೊಂದು ಕರ್ತವ್ಯವನ್ನೇ ಹೇಳಬೇಕು. ಮತ್ತೆ ಯಾವದಾದರೂ ವಸ್ತುವನ್ನು ಹೇಳಿದರೆ ಕ್ರಿಯೆಗೆ ಶೇಷವಾಗಿಯೇ ಹೇಳಬೇಕು ಎಂಬ ಮೀಮಾಂಸಕರ ಪಕ್ಷವನ್ನೇ ಅವಲಂಬಿಸಿಕೊಂಡು ಕೆಲವು ವೇದಾಂತಿಗಳು ಕೂಡ ಉಪನಿಷತ್ತುಗಳಲ್ಲಿ ಉಪಾಸನಾರೂಪವಾದ ಜ್ಞಾನವನ್ನೇ ಹೇಳಿದೆ; ಬ್ರಹ್ಮವನ್ನು ಉಪಾಸನಾಕ್ರಿಯೆಗೆ ಶೇಷವಾಗಿಯೇ ಹೇಳಿರುತ್ತದೆ ಎನ್ನುತ್ತಾರೆ. ಕ್ರಿಯೆಗೆ ಅಂಗವಾಗಿ ಹೇಳುವ ಯೂಪ, ಅಹವನೀಯ-ಮುಂತಾದ ಅಲೌಕಿಕ ವಸ್ತುಗಳಿಗೂ ವೇದವು ಪ್ರಮಾಣವಾಗಿರುವಂತೆ ಉಪಾಸನಾಕ್ರಿಯೆಗೆ ಅಂಗವಾಗಿರುವ ಬ್ರಹ್ಮದ ವಿಷಯಕ್ಕೂ ವೇದಾಂತವಾಕ್ಯವೂ ಪ್ರಮಾಣವಾಗಿರಬಹುದಾಗಿದೆ ಎಂಬುದು ಈ ವೇದಾಂತಿಗಳ ಅಭಿಪ್ರಾಯ. ಆದರೆ ವೇದವು ಕರ್ತವ್ಯಕ್ಕೆ ಅಂಗವಾಗಿ ಭೂತವಸ್ತುವನ್ನು ಹೇಳಬಹುದಾದಂತೆ ಸ್ವತಂತ್ರವಾಗಿಯೇ

ಬ್ರಹ್ಮವಸ್ತುವನ್ನೂ ಹೇಳುವದಕ್ಕೆ ಯಾವ ಅಡ್ಡಿಯೂ ಇರುವದಿಲ್ಲ. ವೇದವಾಕ್ಯವು ಕ್ರಿಯೆಯನ್ನೇ ಅಥವಾ ಕ್ರಿಯಾಶೇಷವಾದ ವಸ್ತುವನ್ನೇ ಹೇಳಬೇಕೆಂಬ ನಿರ್ಬಂಧವೂ ಇಲ್ಲ ; ಏಕೆಂದರೆ ವೇದದಲ್ಲಿ ಕರ್ತವ್ಯವಲ್ಲದ ಪ್ರವೃತ್ತಿಯ ಅಭಾವವನ್ನು ಮಾತ್ರ ಹೇಳುವ ನಿಷೇಧವಾಕ್ಯಗಳೂ ಇವೆ. ಆತ್ಮವಸ್ತುಮಾತ್ರವನ್ನು ಹೇಳಿದರೆ ಶಾಸ್ತ್ರವು ಅನುವಾದಕವಾಗುವದೆಂಬ ಭಯವೂ ಇಲ್ಲ; ಏಕೆಂದರೆ ಅಹಂಪ್ರತ್ಯಯಿಗಿಂತ ವಿಲಕ್ಷಣನಾದ ಸಾಕ್ಷಿರೂಪನಾದ ಆತ್ಮನು ಉಪನಿಷತ್ತಿನಿಂದಲ್ಲದೆ ಮತ್ತೆ ಯಾವ ಪ್ರಮಾಣದಿಂದಲೂ ತಿಳಿಯುವದಕ್ಕೆ ಬರುವಂತೆಯೂ ಇಲ್ಲ. ವಸ್ತುಮಾತ್ರವನ್ನು ಹೇಳಿದರೆ ಯಾವ ಫಲವೂ ಇಲ್ಲವೆಂಬುದು ಸರಿಯಲ್ಲ, ಏಕೆಂದರೆ ರಜ್ಜುಜ್ಞಾನವು ರಜ್ಜುಸರ್ಪಾದಿಗಳ ಭಯವನ್ನು ಕಳೆಯುವಂತೆ ಬ್ರಹ್ಮಾತ್ಮಜ್ಞಾನವು ಅವಿದ್ಯಾಕೃತವಾದ ಸಂಸಾರಭಯವನ್ನು ಕಳೆಯುತ್ತದೆ. ಬ್ರಹ್ಮಾತ್ಮವಾಕ್ಯಗಳು ಅನುಭವಪರ್ಯಂತವಾಗಿ ಇರುವ ಜ್ಞಾನವನ್ನುಂಟುಮಾಡುವದರಿಂದಲೂ ನಿತ್ಯಶುದ್ಧಬುದ್ಧ ಮುಕ್ತನಾದ ಸ್ವಯಂಸಿದ್ಧನಾದ ಆತ್ಮನನ್ನೇ ಹೇಳುವದರಿಂದಲೂ ಆ ವಾಕ್ಯಗಳಿಗೆ ಅಬೋಧಕತ್ವವೆಂಬ ಅಪ್ರಾಮಾಣ್ಯವು ಬರುವಂತೆಯೂ ಇಲ್ಲ.

ಜ್ಞಾನವು ವಸ್ತ್ವಧೀನವಾಗಿರುವ ತಿಳಿವಳಿಕೆ. ಉಪಾಸನೆಯೆಂದರೆ ಪುರುಷಾಧೀನವಾದ ಧ್ಯಾನರೂಪವಾದ ಮಾನಸಿಕಕ್ರಿಯೆ. ಹೀಗಿರುವದರಿಂದ ಉಪನಿಷತ್ತುಗಳಲ್ಲೆಲ್ಲ ಉಪಾಸನಾರೂಪವಾದ ಬ್ರಹ್ಮಜ್ಞಾನವನ್ನು ಬೋಧಿಸಿದೆ ಎಂಬುದು ಸರಿಯಲ್ಲ. ನಿತ್ಯಶುದ್ಧಬುದ್ಧಮುಕ್ತ ಸ್ವರೂಪವಾದ ಬ್ರಹ್ಮವಸ್ತುವನ್ನು ಹೇಳುವ ವಾಕ್ಯಗಳೂ ಹಲವು ಇರುತ್ತವೆ. ಉಪಾಸನಾವಾಕ್ಯಗಳಿಗೆ ಕಾಲಾಂತರದಲ್ಲಿ ಆಗುವ ಫಲವನ್ನು ಹೇಳುತ್ತದೆ; ಆದರೆ ಈ ಬ್ರಹ್ಮವಾಕ್ಯಗಳಿಗೆ ಈಗಲೇ ಇಲ್ಲಿಯೇ ಆಗುವ ಫಲವನ್ನು ಹೇಳಿದೆ. ನಿತ್ಯಸಿದ್ಧವಾಗಿರುವ ಬ್ರಹ್ಮವನ್ನು ಹೇಳಿದರೆ ವಾಕ್ಯಕ್ಕೆ ಪ್ರಾಮಾಣ್ಯ ಹೇಗೆ? ಎಂದು ಕೆಲವರು ಆಕ್ಷೇಪಿಸುತ್ತಾರೆ. ಆದರೆ ಇದು ಸರಿಯಲ್ಲ, ಏಕೆಂದರೆ ಬ್ರಹ್ಮವನ್ನು ವಾಕ್ಯವು ಹೊಸದಾಗಿ ಪ್ರತಿಪಾದಿಸಿರುವದರಿಂದ ಪ್ರಮಾಣವೆನಿಸಿರುವದಿಲ್ಲ. ಅಜ್ಞಾನದಿಂದ ಆತ್ಮನಲ್ಲಿ ಕಲ್ಪಿತವಾಗಿರುವ ಭೇದವನ್ನು ಅಲ್ಲಗಳೆಯುವ ಮಾತ್ರದಿಂದಲೇ ಅದು ಪ್ರಮಾಣವಾಗಿರುತ್ತದೆ. ಪೂರ್ವಮೀಮಾಂಸೆಯು ಕರ್ಮಮಾತ್ರವನ್ನು ಬೋಧಿಸಿ ಜ್ಞಾನಕಾಂಡಕ್ಕೆ ಅಪ್ರಾಮಾಣ್ಯವನ್ನು ತಂದಿತ್ತು. ವೇದಾಂತವು

ವೇದವೆಲ್ಲವೂ ಬ್ರಹ್ಮವಿಷಯದಲ್ಲಿಯೇ ನೇರಾಗಿ ಅಥವಾ ಪರಂಪರೆಯಿಂದ ಬೋಧಿಸುವದರಿಂದಲೇ ಪ್ರಮಾಣವೆನಿಸುವದು ಎಂದು ಹೇಳಿ ಮೀಮಾಂಸೆಯನ್ನೂ ತನ್ನಲ್ಲಿಯೇ ಅಡಕಮಾಡಿಕೊಂಡಿದೆ.

★★★★★

## ವೇದಾಂತವೂ ಬೌದ್ಧಮತವೂ

**20-5-1956**

**ಶ್ರೀಶ್ರೀಗಳವರು**

ಇದುವರೆಗೆ ಮಾಡಿದ ಉಪನ್ಯಾಸಗಳಲ್ಲಿ ವೇದಾಂತಕ್ಕೂ ಉಳಿದ ಆಸ್ತಿಕ ದರ್ಶನಗಳಿಗೂ ಇರುವ ತಾರತಮ್ಯವನ್ನು ಕುರಿತು ವಿಚಾರಮಾಡಿದ್ದಾಗಿದೆ. ಈ ದಿನ ಬೌದ್ಧಮತಕ್ಕೂ ವೇದಾಂತಕ್ಕೂ ಇರುವ ತತ್ತ್ವದೃಷ್ಟಿಕೋಣದ ಭೇದವನ್ನು ತಿಳಿಸುವದಕ್ಕೆ ಹೊರಟಿರುತ್ತೇನೆ. ಗೌತಮಬುದ್ಧನು ಹಿಂದುವಾಗಿಯೇ ಕ್ಷತ್ರಿಯ ವಂಶದಲ್ಲಿ ಉತ್ಪನ್ನನಾಗಿದ್ದು ಸಂಸಾರದ ದುಃಖವನ್ನು ಹೇಗೆ ಕಳೆಯಬೇಕೆಂಬುದನ್ನು ತಿಳಿಯುವದಕ್ಕೋಸ್ಕರ ಆಗಿನ ಕಾಲದಲ್ಲಿ ಕೆಲವರು ತಪಸ್ವಿಗಳ ಉಪದೇಶದಂತೆ ನಡೆದು ಅದರಿಂದ ತೃಪ್ತನಾಗದೆ ಕೊನೆಗೆ ತಾನೇ ಧ್ಯಾನಬಲದಿಂದ ಆರ್ಯ ಸತ್ಯಚತುಷ್ಟಯ- ದುಃಖ, ದುಃಖಕಾರಣ, ದುಃಖನಾಶ, ಅದಕ್ಕೆ ಉಪಾಯ-ಎಂಬ ನಾಲ್ಕು ತತ್ತ್ವಗಳನ್ನು - ಕಂಡುಕೊಂಡನು. ಅವನು ಹೇಳಿದ ತತ್ತ್ವವನ್ನು 'ಪ್ರತೀತ್ಯಸಮುತ್ಪಾದ' ಎಂಬ ಉಪದೇಶದಲ್ಲಿ ಅಡಕಮಾಡಿರುತ್ತಾನೆ; ಅದನ್ನು ಮನನಮಾಡಿದವರಿಗೆ ಜರಾಮರಣಗಳು ಉಂಟಾಗುವ ರೀತಿಯೂ ಅದನ್ನು ಪರಿಹಾರಮಾಡಿಕೊಳ್ಳುವ ರೀತಿಯೂ ಮನದಟ್ಟಾಗುವದೆಂದು ಬೌದ್ಧರು ನಂಬುತ್ತಾರೆ. ಅವನ ಮೂಲೋಪದೇಶಗಳು ಪಾಲೀಭಾಷೆಯಲ್ಲಿವೆ ಎಂದು ಸಿಂಹಳದ್ವೀಪದವರು ನಂಬುತ್ತಾರೆ. ಬುದ್ಧನ ಪರಿನಿರ್ವಾಣವಾದಮೇಲೆ ಅವನ ಅನುಯಾಯಿಗಳು ಹದಿನೆಂಟು ಅಥವಾ ಇಪ್ಪತ್ತು ಬೇರೆಬೇರೆಯ ಶಾಖೆಗಳಾಗಿ

ಒಡೆದುಕೊಂಡರು. ನಮ್ಮ ದೇಶದ ವೇದಾಂತಾದಿಗ್ರಂಥಗಳಲ್ಲಿ ಆ ಪಂಗಡಗಳೊಳಗೆ ಸರ್ವಾಸ್ತಿತ್ವವಾದ, ವಿಜ್ಞಾನವಾದ, ಮಾಧ್ಯಮಿಕ (ಶೂನ್ಯ)ವಾದ- ಎಂಬ ಮೂರು ಶಾಖೆಗಳು ಪ್ರಚುರವಾಗಿ ಪರಾಮೃಷ್ಟವಾಗಿರುವದು ಕಂಡುಬರುತ್ತವೆ. ಇವುಗಳ ಮೂಲಗ್ರಂಥಗಳೆಲ್ಲ ಸಂಸ್ಕೃತದಲ್ಲಿಯೇ ಬರೆದವುಗಳಾದರೂ ಕೆಲವುಮಾತ್ರ ಈಗ ಸಿಕ್ಕುತ್ತವೆ. ಇನ್ನು ಕೆಲವು ಚೀನಾ ತಿಬೆತ್ ಭಾಷೆಗಳಲ್ಲಿ ಅನುವಾದವಾಗಿರುತ್ತವೆ. ಈಗಿನ ವಿದ್ವಾಂಸರು ಅವನ್ನು ಮತ್ತೆ ಸಂಸ್ಕೃತಕ್ಕೆ ತಿರುಗಿಸುತ್ತಿದಾರೆ.

ಸರ್ವಾಸ್ತಿತ್ವವಾದಿಗಳೆನ್ನುವವರು ಬುದ್ಧನು ಉಪದೇಶಿಸಿದ ತತ್ತ್ವಗಳನ್ನು ಸ್ಕಂಧ, ಆಯತನ, ಧಾತು-ಎಂದು ಮೂರು ಪಂಗಡಗಳಾಗಿ ವಿಂಗಡಿಸಿಕೊಂಡಿದ್ದರು. ಅವರ ಮತದಲ್ಲಿ ಆತ್ಮನನ್ನು ನಂಬುವದಿಲ್ಲ ; ವಸ್ತುಗಳು ತೋರುವ ರೀತಿಯಿಂದ ಕ್ಷಣಿಕವೂ ಸ್ವಭಾವದಿಂದ ನಿತ್ಯವೂ ಆಗಿರುತ್ತವೆ. ಪ್ರತೀತ್ಯಸಮುತ್ಪಾದ-ಎಂದರೆ ಅವಿದ್ಯೆ, ಸಂಸ್ಕಾರ, ವಿಜ್ಞಾನ, ನಾಮರೂಪ, ಷಡಾಯತನ, ಸ್ಪರ್ಶ, ವೇದನಾ, ತೃಷ್ಣಾ, ಉಪಾದಾನ, ಭವ, ಜಾತಿ, ಜರಾಮರಣ-ಎಂಬ ಹನ್ನೆರಡು ನಿದಾನಗಳು ಒಂದರಹಿಂದೊಂದು ಉತ್ಪತ್ತಿಯಾಗುತ್ತಿರುವವು ಎಂಬ ವಾದವನ್ನು ಯಥಾರ್ಥವೆಂದು ನಂಬುತ್ತಾರೆ. ಅವಿದ್ಯಾದಿಗಳು ಹೋಗಲಾಗಿ ಮುಂದುಮುಂದಿನದು ಇಲ್ಲವಾಗಲು ನಿರ್ವಾಣವು ದೊರಕುತ್ತದೆ ಎಂಬುದು ಅವರ ಮತ.

ಈಗ ಸರ್ವಾಸ್ತಿತ್ವವಾದಿಗಳ ಮತವು ಪ್ರಚಾರದಲ್ಲಿಲ್ಲದಿದ್ದರೂ ಅದನ್ನು ಖಂಡಿಸಿದ ಮಾಧ್ಯಮಿಕವಿಜ್ಞಾನವಾದಗಳೆಂಬ ಭೇದಗಳೂ ಅವುಗಳಿಂದ ಒಡೆದುಕೊಂಡಿರುವ ಪ್ರಶಾಖೆಗಳೂ ದೇಶಾಂತರದಲ್ಲಿರುತ್ತವೆ. ಗೌಡಪಾದರ ಮಾಂಡೂಕ್ಯಕಾರಿಕೆಯಲ್ಲಿ ಆ ಇಬ್ಬರು ವಾದಿಗಳ ಪ್ರಭಾವವು ಚೆನ್ನಾಗಿ ತೋರುತ್ತದೆಯೆಂದು ಆಧುನಿಕವಿದ್ವಾಂಸರು ಹೇಳುತ್ತಿದ್ದಾರೆ; ಗೌಡಪಾದರೂ ಒಂದು ಬಗೆಯ ವಿಜ್ಞಾನ ವಾದಿಗಳೇ ಎಂದೂ ಶೂನ್ಯವಾದಿಗಳ ವಾದಕ್ರಮವನ್ನು ಅನುಸರಿಸಿರುತ್ತಾರೆ ಎಂದೂ ಕೆಲಕೆಲವರು ಹೇಳುತ್ತಿದ್ದಾರೆ. ಈ ಕಾರಣದಿಂದ ಈ ಮೂರು ಸಿದ್ಧಾಂತಗಳಿಗಿರುವ ತಾರತಮ್ಯವನ್ನು ತಿಳಿದುಕೊಳ್ಳುವದು ಅವಶ್ಯವಾಗಿರುತ್ತದೆ.

ಮಾಧ್ಯಮಿಕ ಮತದಲ್ಲಿ ಕಾರ್ಯಕಾರಣವಾದವನ್ನು ಖಂಡಿಸಿದೆ. ಪ್ರತೀತ್ಯ ಸಮುತ್ಪಾದ ಎಂದರೆ ಒಂದರ ಅಪೇಕ್ಷೆಯಿಂದ ಮತ್ತೊಂದು ಹುಟ್ಟುವದು; ಆದ್ದರಿಂದ ಸ್ವಭಾವದಿಂದ ಯಾವದೂ ಹುಟ್ಟುವದಿಲ್ಲ, ಯಾವ ವಸ್ತುಗಳಿಗೂ ಸ್ವಭಾವವೆಂಬುದೇ ಇಲ್ಲ-ಎಂಬುದು ಈ ವಾದದ ತಿರುಳು. ಇದನ್ನು ಸಾಧಿಸುವ ತರ್ಕವು ಒಂದು ವಿಲಕ್ಷಣರೂಪದ್ದಾಗಿರುತ್ತದೆ. ನಾಗಾರ್ಜುನನು ಯಾವದೊಂದು ಮತವನ್ನೂ ತನ್ನದೆಂದು ಹಿಡಿಯುವದಿಲ್ಲ ; ಏಕೆಂದರೆ ಯಾವ ದೃಷ್ಟಿಯನ್ನು ಹಿಡಿದರೂ ತಪ್ಪೇ ಆಗಿದೆ ಎಂಬುದೇ ಅವನ ಮತವು. ಉದಾಹರಣೆಗೆ ಹುಟ್ಟುವ ವಸ್ತು ತಾನೇ ಹುಟ್ಟುವದೊ, ಮತ್ತೊಂದರಿಂದ ಹುಟ್ಟುವದೊ, ಈ ಎರಡೂ ಸೇರಿ ಹುಟ್ಟುವದೊ, ಅಥವಾ ಕಾರಣವಿಲ್ಲದೆ ಹುಟ್ಟುವದೊ? - ಎಂದು ವಿಕಲ್ಪಿಸಿ ನೋಡೋಣ. ಆಗ ಈ ಪ್ರಕಾರಗಳಲ್ಲಿ ಹೇಗೂ ಹುಟ್ಟುವದಕ್ಕೆ ಅವಕಾಶವೇ ಇಲ್ಲವೆಂದು ಗೊತ್ತಾಗುವದು. ಆದ್ದರಿಂದ ಹುಟ್ಟೆಂಬುದೇ ಇಲ್ಲವೆಂದಾಯಿತು. ಲೋಕದಲ್ಲಿ ವಸ್ತುಗಳು ಹುಟ್ಟುವವು ಎಂದು ತಿಳಿವಳಿಕೆಯಿರುವದು ನಿಜ ; ಆದರೆ ಅದು ತಪ್ಪುತಿಳಿವಳಿಕೆ. ಏಕೆಂದರೆ ಅದು ಯುಕ್ತಿವಿರುದ್ಧ-ಎಂದು ಮಾಧ್ಯಮಿಕರು ಹೇಳುತ್ತಾರೆ. ಯಾವದೊಂದು ವಿಚಾರಕ್ಕೂ ಹೀಗೆ ನಾಲ್ಕು ವಿಕಲ್ಪಗಳನ್ನು ಮಾಡಿ ಯಾವದೊಂದಕ್ಕೂ ಸದುತ್ತರವು ಬರುವದಿಲ್ಲವೆಂದು ತೋರಿಸುವದೇ ಅವರ ತರ್ಕದ ಸಾರವು. ಇವರು ತಮ್ಮ ಮತವನ್ನು **'ಶೂನ್ಯವಾದ'**ವೆಂದು ಕರೆದುಕೊಂಡಿದ್ದರೂ ಶೂನ್ಯವೆಂದರೆ ಇಲ್ಲ' ಎಂಬರ್ಥವೇನೂ ಇಲ್ಲ ; ಏಕೆಂದರೆ ಇದೆ, ಇಲ್ಲ, ಇದ್ದೂ ಇಲ್ಲ, ಇದೆ ಇಲ್ಲ-ಎಂಬುದೆರಡೂ ಇಲ್ಲ-ಎಂಬ ನಾಲ್ಕು ವಿಕಲ್ಪಗಳನ್ನು ಹೊಡೆದುಹಾಕುವದು ಅವರ ಮತ. ಆ ಮತದಲ್ಲಿ ಯುಕ್ತಿಗೇ ಪ್ರಾಧಾನ್ಯ, ಯುಕ್ತಿಯಲ್ಲಿ ಕೊನೆಗೆ ನಿಲ್ಲುವ ಶುದ್ಧವಾದ ತಿಳಿವಳಿಕೆಯನ್ನು ಪ್ರಜ್ಞಾಪಾರಮಿತಾ ಎಂದು ಕರೆಯುತ್ತಾರೆ; ಅದರಿಂದ ನಿರ್ವಾಣವು ದೊರಕುತ್ತದೆ ಎಂದು ಅವರು ಹೇಳುತ್ತಾರೆ.

ಇನ್ನು ವಿಜ್ಞಾನವಾದ. ಅವರೂ ಸರ್ವಾಸ್ತಿತ್ವವಾದದವನ್ನು ಖಂಡಿಸುತ್ತಾರೆ; ಸರ್ವಶೂನ್ಯವನ್ನೂ ಒಪ್ಪುತ್ತಾರೆ. ಆದರೆ ಯಾವ ವಿಜ್ಞಾನದಿಂದ ಪದಾರ್ಥಗಳನ್ನು ಅರಿಯುತ್ತೇವೆಯೋ ಅದನ್ನು ಇಲ್ಲವೆಂಬುದಕ್ಕೆ ಪ್ರಮಾಣವಿಲ್ಲ; ವಿಜ್ಞಾನದ ಹೊರಗೆ ವಸ್ತುಗಳಿವೆ ಎಂಬುದಕ್ಕೆ ಅನುಭವದ ಆಧಾರವಿಲ್ಲ; ಏಕೆಂದರೆ ಯಾವ ವಸ್ತುವಾದರೂ ವಿಜ್ಞಾನಕ್ಕೇ ಸಂಬಂಧಿಸಿರಬೇಕಾಗಿದೆ. ಆದ್ದರಿಂದ ನಮ್ಮೊಳಗಿ

ನ ಅರಿವೇ ಹೊರಗಿನ ವಸ್ತುಗಳಂತೆ ಕಾಣುತ್ತಿರುತ್ತದೆ. ಇದಕ್ಕೆ ಸಂಕ್ಲೇಶವೆಂದು ಹೆಸರು. ಈ ಸಂಕ್ಲೇಶವನ್ನು ವಿಚಾರದಿಂದಲೂ ಯೋಗಾಭ್ಯಾಸದಿಂದಲೂ ಕಳೆದುಕೊಂಡರೆ ಅದಕ್ಕೆ ವ್ಯವದಾನವೆಂದು ಹೆಸರು. ಆ ಶುದ್ಧ ವಿಜ್ಞಾನವು ತಾನೊಂದೇ ಅದ್ವಿತೀಯವಾಗಿರುತ್ತದೆ; ಅದರಲ್ಲಿ ಗ್ರಾಹ್ಯಗ್ರಾಹಕ ಭಾವವು ಕಲ್ಪಿತವಾಗಿರುತ್ತದೆ-ಎಂಬುದು ಅವರ ಮತ.

ಈ ಎರಡು ಮತಗಳಲ್ಲಿಯೂ ಬಾಹ್ಯವಸ್ತುಗಳನ್ನು ಸ್ವಪ್ನವಸ್ತುಗಳಿಗೆ ಹೋಲಿಸುವದುಂಟು. ಅವೆಲ್ಲವೂ ಟೊಳ್ಳು, ಹುಸಿ, ನಿಜವಲ್ಲ-ಎಂದಿಷ್ಟೇ ಆ ಹೋಲಿಕೆಯ ಅಭಿಪ್ರಾಯ. ಶೂನ್ಯವಾದಿಗಳ ಮತದಲ್ಲಿ ಪರಮಾರ್ಥವು ನಿರಪೇಕ್ಷನಿರ್ವಿಶೇಷವಾಗಿರುತ್ತದೆ; ಅದನ್ನು ಏನೆಂದು ಹೇಳುವದಕ್ಕೂ ಬರುವದಿಲ್ಲ. ವಿಜ್ಞಾನವಾದಿಗಳ ಮತದಲ್ಲಿ ಅದು ವಿಜ್ಞಾನಮಾತ್ರವು ಎಂದು ಹೇಳುವದಕ್ಕೆ ಬರುತ್ತದೆ. ಇಷ್ಟಿದ್ದರೂ ವೇದಾಂತರದಲ್ಲಿ ಹೇಳಿರುವ ಅವಸ್ಥಾತ್ರಯಪರೀಕ್ಷಾ ಮಾರ್ಗವು ಈ ಎರಡು ವಾದಗಳಲ್ಲಿ ಕಂಡುಬರುವದಿಲ್ಲ. ಜಾಗ್ರತ್ಸ್ವಪ್ನಗಳೆರಡೂ ಸಮಾನಾವಸ್ಥೆಗಳಾದ್ದರಿಂದ ಎರಡೂ ಮಿಥ್ಯೆಯಾಗಿರುತ್ತವೆ; ಇವಕ್ಕೆ ಆಧಾರನಾಗಿ ರುವ, ಇವೆರಡಕ್ಕೂ ಸಾಕ್ಷಿಯಾಗಿರುವ, ಆತ್ಮನು ಸತ್ಯವಾಗಿರುತ್ತಾನೆ. ಸುಷುಪ್ತಿಯಲ್ಲಿ ಎಲ್ಲವೂ ಆತ್ಮನಲ್ಲಿ ಅಡಗಿ ಒಂದಾಗುತ್ತದೆ; ಆಗ ಆತ್ಮನು ದ್ವೈತದ ಸೋಂಕಿಲ್ಲದೆ ಅದ್ವಿತೀಯನಾಗಿರುತ್ತಾನೆ. ಈ ಆತ್ಮನು ಮೂರು ಅವಸ್ಥೆಗಳಲ್ಲಿಯೂ ತಾನೊಬ್ಬನೇ ಒಂದೇ ರೂಪದಿಂದಿರುತ್ತಾನೆ ; ಅವಸ್ಥೆಗಳು ಮಾತ್ರ ಒಂದಿರುವಾಗ ಮಿಕ್ಕೆರಡೂ ಇರುವದೇ ಇಲ್ಲ. ಆದ್ದರಿಂದ ದ್ವೈತಪ್ರಪಂಚವು ತಾನು ತೋರಿಕೊಳ್ಳುವಾಗ ಸ್ವಪ್ನಪ್ರಪಂಚದಂತೆ ಮಿಥ್ಯೆಯಾಗಿದ್ದರೂ ಅದರ ಪರಮಾರ್ಥವು ಆತ್ಮನೇ ಆಗಿ ರುತ್ತಾನೆ. ಆ ಆತ್ಮನಲ್ಲಿ ಪರಮಾರ್ಥದೃಷ್ಟಿಯಿಂದ ಪ್ರಪಂಚವು ಯಾವಾಗಲೂ ಇಲ್ಲವೇ ಇಲ್ಲ- ಎಂಬುದು ಅದ್ವೈತವೇದಾಂತದ ಸಾರವು.

ವಿಜ್ಞಾನವಾದಿಗಳು ಹೇಳುವ ವಿಜ್ಞಾನವು ಜಾಗ್ರನ್ಮಾತ್ರಕ್ಕೆ ಸಂಬಂಧಿಸಿದ್ದು, ಶೂನ್ಯವಾದಿಗಳು ಹೇಳುವ ಪ್ರಜ್ಞಾಪಾರಮಿತಾ ಎಂಬುದೂ ಹಾಗೆಯೇ. ಅವರಿಬ್ಬರೂ ಧ್ಯಾನದಿಂದ ತತ್ತ್ವವನ್ನು ಕಂಡುಕೊಳ್ಳಬಹುದೆಂದು ಹೇಳಿದರೂ ಧ್ಯಾನವು ಸಾರ್ವತ್ರಿಕಾನುಭವವಲ್ಲವಾದ್ದರಿಂದ ತತ್ತ್ವವಿಚಾರಕ್ಕೆ ಅದು ಆಧಾರವಾದ ಅನುಭವವಾಗಲಾರದು. ಶ್ರುತಿಗಳಲ್ಲಿ ಹೇಳಿರುವ ಅವಸ್ಥಾತ್ರಯಪರೀಕ್ಷೆಯನ್ನು

ಅನುಸರಿಸಿ ವೇದಾಂತಿಗಳು ಮಾಡುವ ವಿಚಾರಕ್ರಮವು ಸಾರ್ವತ್ರಿಕಾನುಭವಕ್ಕೆ ಸೇರಿದ್ದು. ಇದರಿಂದ ಸರ್ವವೂ ನಿತ್ಯಶುದ್ಧಬುದ್ಧಮುಕ್ತರೂಪನಾದ ಪರಮಾತ್ಮನೇ ಎಂಬ ಮಂಗಲಕರವಾದ ಸಿದ್ಧಾಂತವು ಹೊರಡುತ್ತದೆ. ಇದನ್ನು ನಂಬಿಕೊಂಡು ನಡೆಯುವವರಿಗೂ ಸರ್ವರಿಗೂ ಒಬ್ಬ ಪರಮಾತ್ಮನೇ ಆತ್ಮನು ಎಂಬ ಭಾವನೆ ಬರುವದರಿಂದ ಎಲ್ಲರಲ್ಲಿಯೂ ಮೈತ್ರಿಯಿಂದಲೂ ನಡೆಯುವದಕ್ಕೆ ಅನುಕೂಲಿಸುತ್ತದೆ.

★★★★★

# ಶ್ರೀಶಂಕರಭಗವತ್ಪಾದರವರಿಗೆ ಸಂಮತವಾದ ವೇದಾಂತದ ಅಭಿಪ್ರಾಯಗಳು

**24-4-1958**

ಶ್ರೀಶ್ರೀಗಳು

ಶ್ರೀಶಂಕರಭಗವತ್ಪಾದರವರಿಗೆ ಸಂಮತವಾದ ವೇದಾಂತದ ಅಭಿಪ್ರಾಯವೇನೆಂಬುದನ್ನು ವಿಚಾರಮಾಡೋಣ. ಅನರ್ಥಪರಿಹಾರವು ಎಲ್ಲರಿಗೂ ಬೇಕು; ಆದರೆ ಅನರ್ಥದ ಸ್ವರೂಪವೂ ಅದರ ಪರಿಹಾರವೂ ಒಂದೊಂದು ಕ್ಷೇತ್ರದಲ್ಲಿಯೂ ಬೇರೆಬೇರೆಯಾಗಿರುತ್ತದೆ. ಸಮಾಜವನ್ನು ಹೇಗೆ ರಚಿಸಿದರೆ ಜನರು ನೆಮ್ಮದಿಯಾಗಿರಬಹುದು?- ಎಂಬ ಪ್ರಶ್ನೆಗೆ ಅನೇಕರು ಅನೇಕವಿಧವಾಗಿ ಉತ್ತರವನ್ನು ಕೊಟ್ಟಿರುತ್ತಾರೆ. ಹಿಂದೆ ನಮ್ಮವರು ವರ್ಣಾಶ್ರಮ ಧರ್ಮವಿಭಾಗವನ್ನು ಅಡಿಗಲ್ಲಾಗಿ ಇಟ್ಟುಕೊಂಡಿದ್ದರು. ಈಗ್ಗೆ ಸಮಾಜಸ್ಥಿತಿಯು ಬೇರೆಬೇರೆ ಕಾರಣಗಳಿಂದ ಬೇರೆಬೇರೆಯ ದೇಶಗಳಲ್ಲಿ ಬೇರೆಬೇರೆಯಾಗಿರುತ್ತದೆ. ಇದೇಕೆಂದರೆ ಮಾನವರೆಲ್ಲರೂ ಶಾಂತಿಸುಖಗಳನ್ನು ಪಡೆದುಕೊಳ್ಳಬೇಕೆಂದು ಬಯಸುತ್ತಾರಾದರೂ ಶಾಂತಿಯೆಂದರೇನು, ಸುಖವೆಂದರೇನು ? ಎಂಬ ವಿಷಯದಲ್ಲಿ ಅವರಲ್ಲಿ ಮತಭೇದಗಳುಂಟಾಗಿರುತ್ತವೆ.

'ಸದ್ಯಕ್ಕೆ ನಮ್ಮ ಜೀವನವು-ಎಂದರೆ ಅನ್ನ, ಬಟ್ಟೆ, ವ್ಯವಹಾರ, ವಿನೋದ ಮುಂತಾದವುಗಳು-ಸರಿಯಾಗಿದ್ದರೆ ಸಾಕು' ಎಂಬ ದೃಷ್ಟಿಗೂ, 'ಎಂದೆಂದಿಗೂ ಇರುವ ಶಾಂತಿಸುಖಗಳು ನಮ್ಮ ಗುರಿಯಾಗಿರಬೇಕು, ಅದಕ್ಕೆ ತಕ್ಕಂತೆ ನಮ್ಮ ಜೀವನಪದ್ಧತಿಯೂ ಇರಬೇಕು' -ಎಂಬ ದೃಷ್ಟಿಗೂ ಅಜ ಗಜಾಂತರವಿದೆ. ವೇದಾಂತವು ಈ ಎರಡನೆಯ ದೃಷ್ಟಿಯನ್ನು ಅವಲಂಬಿಸಿರುತ್ತದೆ. ಶ್ರೀರಾಮ ತೀರ್ಥರು ಒಮ್ಮೆ ಹೇಳಿದ ಕಥೆಯಲ್ಲಿ ಒಂದು ಕುಟುಂಬದಲ್ಲಿ ಪ್ರತಿರಾತ್ರಿಯೂ ಯಜಮಾನನು ಸಾಮಾನುಗಳನ್ನು ಎಡವರಿಸುವದು, ಮುಗ್ಗರಿಸುವದು, ವ್ಯಥೆಪಡುವದು - ಹೀಗೆ ಮಾಡುತ್ತಿದ್ದನೆಂಬ ಒಂದು ದೃಷ್ಟಾಂತವನ್ನು ಹೇಳಿರುತ್ತಾರೆ. ಅಲ್ಲಿ ಸಾಮಾನುಗಳನ್ನು ಹೇಗೆ ಇರಿಸಿದರೆ ಮುಗ್ಗರಿಸುವದು ತಪ್ಪೀತು? - ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಹಿಡಿಯವದಕ್ಕೆ ಕುಟುಂಬದವರು ಪ್ರಯತ್ನಿಸುತ್ತಿದ್ದರು. ಮನೆಯಲ್ಲೆಲ್ಲ ಹಲವು ಕುರ್ಚಿ, ಮೇಜು, ಬೆಂಚು- ಮುಂತಾದ ಸಾಮಾನುಗಳು ತುಂಬಿದ್ದದ್ದರಿಂದ ಅವನ್ನು ಯಾವ ಕ್ರಮದಲ್ಲಿಟ್ಟರೂ ಎಡಹುವದು ತಪ್ಪಲಿಲ್ಲ. ಕೊನೆಗೆ ಯಾರೋ ಒಬ್ಬರು 'ದೀಪಹಚ್ಚಿಸಿರಿ ; ಬೆಳಕು ಬಂದರೆ ಇದ್ದೆಲ್ಲ ತಪ್ಪಿಹೊಗುವದು'- ಎಂಬ ಸುಲಭೋಪಾಯವನ್ನು ಹೇಳಿಕೊಟ್ಟರಂತೆ! ಇದರಂತೆ ಈಗಿನ ನಮ್ಮ ವಿವಿಧಜನಾಂಗಗಳಲ್ಲಿ ಆಹಾರವಿಹಾರಗಳ ಸಮಸ್ಯೆ, ವಿದ್ಯಾಭ್ಯಾಸದ ಸಮಸ್ಯೆ ಸಮಾಜದ ನೀತಿಯ ಸಮಸ್ಯೆ, ರಾಜಕಾರಣದ ಪ್ರಕಾರದ ಸಮಸ್ಯೆ, ಜನಜನಾಂಗಗಳ ನೀತಿಯ ಸಮಸ್ಯೆ-ಮುಂತಾದವುಗಳ ವಿಮರ್ಶೆಯನ್ನೇ ನಾವು ಮಾಡುತ್ತಿರುವೆವು. ಈ ಬಗ್ಗೆ ನಾವು ನಮ್ಮ ಸ್ಥಿತಿಯನ್ನು ಹೇಗೆಹೇಗೆ ಬದಲಾಯಿಸಿಕೊಂಡರೂ ನಮ್ಮ ಮನಸ್ಸಿನಲ್ಲಿ ವಿಕ್ಷೇಪವು ತಪ್ಪದೆ ಇರುತ್ತದೆ. ದೃಷ್ಟಾಂತದ ಕಥೆಯಲ್ಲಿ ಒಂದು ಬೆಳಕು ಬೇಕಾಗಿದ್ದಂತೆ ಇಲ್ಲಿಯೂ ಒಂದು ವಿದ್ಯೆಯ ಬೆಳಕು ಬೇಕಾಗಿರುತ್ತದೆ. ಆದರೆ ನಾವು ಅವಿದ್ಯೆಯ ಕತ್ತಲನ್ನೇ ಬೆಳಕೆಂದು ಭಾವಿಸಿಕೊಳ್ಳುತ್ತಾ ಮತ್ತೊಬ್ಬರಿಗೂ ನಮ್ಮ ಅವಿದ್ಯೆಯನ್ನೇ ವಿದ್ಯೆಯೆಂದು ಬೋಧಿಸುವ ಪಂಡಿತಮನ್ಯರಾಗಿರುವೆವು. ನಮ್ಮ ಸಕಲವಿದ್ಯಾನಿಲಯಗಳೂ, ಭೌತಿಕವಿಜ್ಞಾನದ ಅದ್ಭುತ ಶೋಧನೆಗಳೂ ರಾಜಕಾರಣದ ವಿವಿಧನೀತಿಗಳೂ-ಎಲ್ಲವೂ ಈ ಅವಿದ್ಯಾಂಧಕಾರವನ್ನು ಬಿಟ್ಟು ಆಚೆಗೆ ಹೋಗಿರುವದಿಲ್ಲ. 'ಅವಿದ್ಯಾಯಾಮನ್ತರೇ ವರ್ತಮಾನಾಃ

ಸ್ವಯಂ ಧೀರಾಃ ಪಣ್ಡಿತಂಮನ್ಯಮಾನಾಃ' ಎಂಬ ಶ್ರುತಿವಾಕ್ಯವು ನಮ್ಮ ಪಾಲಿಗೆ ಅನ್ವರ್ಥವಾಗಿರುತ್ತದೆ. ಈಗ ನಾವು ಇರುವದು ಅವಿದ್ಯೆಯಲ್ಲಿ; ಇದನ್ನು ಎಷ್ಟು ಬೇಗನೆ ನಾವು ಮನಗಂಡರೆ ಅಷ್ಟು ಮೇಲು.

ಅವಿದ್ಯೆಯು ಹೋಗಬೇಕೆಂಬ ಮಾತಿಗೆ ಎರಡಿಲ್ಲ. ಅವಿದ್ಯೆಯನ್ನು ಕಳೆಯುವದಕ್ಕೇ ಅಲ್ಲವೆ, ನಮ್ಮ ದೇಶದಲ್ಲಿ ಸಕಲವಿದ್ಯಾನಿಲಯಗಳನ್ನು ತೆರೆದಿರುವದು? ಭೌತಿಕವಿಜ್ಞಾನ, ಭಾಷಾಜ್ಞಾನ, ಕಲಾಜ್ಞಾನ – ಇವೆಲ್ಲ ಅವಿದ್ಯೆಯೆ?'– ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉಪನಿಷತ್ತಿನಲ್ಲಿ ಉತ್ತರವಿದೆ. ಹಿಂದೆ ನಾರದರು ಸನತ್ಕುಮಾರರಲ್ಲಿಗೆ ಬಂದು ಪೂಜ್ಯರೆ, ನನಗೆ ತಿಳಿವಳಿಕೆ ಹೇಳಿಕೊಡಬೇಕು' ಎಂದು ಬೇಡಿಕೊಂಡರು. ಅವರಿಗೆ ನಾಲ್ಕು ವೇದಗಳು, ಇತಿಹಾಸ, ಪುರಾಣ, ವ್ಯಾಕರಣ, ಗಣಿತ, ಜ್ಯೋತಿಷ, ನಿಧಿಜ್ಞಾನ, ತರ್ಕ, ನೀತಿಶಾಸ್ತ್ರ, ಧನುರ್ವೇದ, ನೃತ್ಯಗೀತಾದಿಗಳು–ಎಲ್ಲವೂ ತಿಳಿದಿದ್ದವು. ಆದರೂ ಅವರು' ಸ್ವಾಮಿ, ನನಗೆ ಮಾತುಗಳು ತಿಳಿದಿವೆ, ಆತ್ಮನ ತಿಳಿವಳಿಕೆಯಿಲ್ಲ ; ಆದ್ದರಿಂದ ಶೋಕಿಸುತ್ತಿದೇನೆ. ಆತ್ಮವಿದ್ಯೆಯಿಂದ ಶೋಕವನ್ನು ಮೀರಬಹುದೆಂದು ಕೇಳಿದ್ದೇನೆ. ದಯವಿಟ್ಟು ಅಧ್ಯಾತ್ಮವಿದ್ಯೆಯನ್ನು ಹೇಳಿಕೊಡಬೇಕು'' ಎಂಬ ಬೇಡಿಕೊಂಡರು! ನಮ್ಮ ಸ್ಥಿತಿಯೂ ಇದೇ ಆಗಿದೆ. ನಮಗೆ ತಿಳಿದಿರುವದೆಲ್ಲ ಅನಾತ್ಮವಿದ್ಯೆ, ಅಥವಾ ಅವಿದ್ಯೆ, ತಪ್ಪುತಿಳಿವಳಿಕೆ; ಇದೇ ನಮ್ಮ ಶೋಕಕ್ಕೆಲ್ಲ ಕಾರಣ' –ಎಂಬುದು ಮಾತ್ರ ತಿಳಿದಿಲ್ಲ. ಪರದೇಶದವರು ಇಂಡಿಯ ದೇಶದ ಜನರು ಸೋಮಾರಿಗಳು, ಒಂದು ಮೂಲೆಯಲ್ಲಿ ಕುಳಿತು ಮೂಗಿನ ತುದಿಯನ್ನು ನೋಡಿಕೊಳ್ಳುತ್ತಾ ಶತಮಾನಗಳನ್ನು ಕಳೆದಿದಾರೆ' ಎಂದು ಒಮ್ಮೆ ನಮ್ಮನ್ನು ಹಾಸ್ಯಮಾಡುತ್ತಿದ್ದರು. ಇಂದು ನಮ್ಮನ್ನು ಮತ್ತೊಬ್ಬರು ಹಾಸ್ಯಮಾಡುತ್ತಿಲ್ಲ, ನಾವೇ ನಮ್ಮನ್ನು ನಿಂದಿಸಿಕೊಳ್ಳುತ್ತಿದೇವೆ. ನಾವು ಸೋಮಾರಿತನದಿಂದ ಕೆಟ್ಟೆವು. ಜಗತ್ತು ಮಿಥ್ಯೆ ಎಂದು ಹೇಳುತ್ತಾ ಅಲಸರಾದೆವು; ಈ ಧರ್ಮಬ್ರಹ್ಮವಿಚಾರ ನಮಗೆ ಬೇಡ'–ಎಂದು ಎಷ್ಟೋ ಜನರು ದೊಡ್ಡವರೆನ್ನುವವರೇ ಹೇಳುತ್ತಿದಾರೆ. ಅವರ ಮಕ್ಕಳಿಗಂತೂ ಇಂಥ ಆತ್ಮನಿಂದೆಗೂ ಪುರಸತ್ತು ಇರುವದಿಲ್ಲ. ಅವರಲ್ಲಿ ಬಡವರುಕೂಡ ತಮ್ಮ ತಂದೆತಾಯಿಗಳ ಆಸ್ತಿಯನ್ನು ಪೋಲುಮಾಡಿ ಈ ದೇಶದಲ್ಲಿ

ಬೇರೆಬೇರೆಯ ಡಿಗ್ರಿಗಳನ್ನು ಪಡೆದು ಪರದೇಶಗಳಲ್ಲಿ ಉತ್ತಮವಾದ ಬೂಟ್ಸ್ ಮಾಡುವದೇ ಮುಂತಾದ ವಿದ್ಯೆಗಳನ್ನು ಕಲಿತುಕೊಂಡು ಬಂದು ದೊಡ್ಡದೊಡ್ಡ ಕಾರುಖಾನೆಗಳನ್ನು ತೆಗೆಯುತ್ತಿದಾರೆ! ಈಗ ಅವರಿಗೆ ಹೊಸದೊಂದು ಯಜ್ಞದೀಕ್ಷೆ ಬಂದಿದೆ. ನಮ್ಮ ದೇಶದ ವೇಷ, ಭಾಷೆ, ಆಚಾರ, ವಿಚಾರ - ಎಲ್ಲವನ್ನೂ ಬಿಡುವದು, ಹಿರಿಯನ್ನು ಅವಿವೇಕಿಗಳೆಂದು ಬಯ್ಯುವದು, ವೇದವೇದಾಂತಗಳಲ್ಲಿ ಉಪೇಕ್ಷೆ, ತತ್ತ್ವಾರ್ಥವನ್ನು ತಿಳಿಯದೆಯೇ ಅದನ್ನು ತಿರಸ್ಕರಿಸುವದು-ಇದೇ ಅವರ ದೀಕ್ಷಾಬಂಧವಾಗಿರುತ್ತದೆ !

ವೇದಾಂತತತ್ತ್ವವನ್ನು ಗುರುಮುಖದಿಂದ ತಿಳಿದುಕೊಂಡು ತಾವೂ ಅನುಭವಕ್ಕೆ ತಂದುಕೊಂಡ -ಶ್ರೀಶಂಕರನ ಅಪರಾವತಾರವೇ ಎಂದು ಎಲ್ಲರಿಂದಲೂ ಹೊಗಳಿಸಿಕೊಂಡ- ಶ್ರೀಶಂಕರಭಗವತ್ಪಾದರವರು ಮಾಡಿರುವ ಉಪದೇಶಕ್ಕೆ ಕಿವಿಗೊಟ್ಟವರಿಗೆ ಕುರುಡರಿಗೆ ಹೊಸದಾಗಿ ಕಣ್ಣು ಬಂದಂತೆ ಆದೀತು. ಮಿಕ್ಕ ಜ್ಞಾನಗಳು ಆಯಾ ವಿಷಯದಲ್ಲಿ ತತ್ಕಾಲಕ್ಕೆ ಸ್ವಲ್ಪ ಬೆಳಕನ್ನು ಬೀರಬಹುದು; ಆದರೆ ಅಜ್ಞಾನವನ್ನು ಆತ್ಯಂತಿಕವಾಗಿ ಕಳೆದು ಸರ್ವರಿಗೂ ಸರ್ವಕಾಲಕ್ಕೂ ಶಾಂತಿಸುಖಗಳನ್ನು ಕೊಡುವ ವಿದ್ಯೆ ಎಂದರೆ ಅಧ್ಯಾತ್ಮವಿದ್ಯೆಯೇ ಎಂಬುದನ್ನು ಅವರು ತೋರಿಸಿಕೊಟ್ಟಿರುತ್ತಾರೆ. ನಮ್ಮ ವ್ಯವಹಾರವೆಲ್ಲ ಅವಿದ್ಯಾಮೂಲಕವಾಗಿದೆ; ನಾವು ಕುರುಡುಗತ್ತಲೆಯಲ್ಲಿ ಸಂಚರಿಸುತ್ತಾ ದುಃಖವನ್ನು ಅನುಭವಿಸುತ್ತಿದೇವೆ. ಆತ್ಮೈಕ್ಯವಿದ್ಯೆಯೆಂಬ ಬೆಳಕು ಬಂದಕೂಡಲೆ ಈ ಅನರ್ಥವೆಲ್ಲವೂ ಹೋಗುವದು. ಲೋಕದಲ್ಲಿ ನಾನು ಬೇರೆ, ನೀನು ಬೇರೆ-ಎಂಬ ತಿಳಿವಿನಿಂದ ರಾಗದ್ವೇಷಗಳೆಂಬ ಮಹಾರೋಗಕ್ಕೆ ತುತ್ತಾಗಿ ಸಂಕಟಪಡುತ್ತಿರುವವರಿಗೆಲ್ಲ ಈ ವಿದ್ಯೆ ದಿವ್ಯೌಷಧವಾಗಿರುತ್ತದೆ.

ಈ ಇಡಿಯ ಪ್ರಪಂಚದ ಸಾರವೆಲ್ಲ ಪರಮಾತ್ಮನೇ, ನಾವೆಲ್ಲರೂ ಆ ಪರಮಾತ್ಮನ ಸ್ವರೂಪವುಳ್ಳವರೇ ಆಗಿರುತ್ತೇವೆ-ಎಂಬುದು ವೇದಾಂತದ ಉಪದೇಶದ ಸಾರವು. ಇದನ್ನು ಮುಚ್ಚುಮರೆಯಿಲ್ಲದೆ ಸಾರಿದವರು ಶ್ರೀಶಂಕರಭಗವತ್ಪಾದರು. ಜಗತ್ತಿಗೆಲ್ಲ ಈ ಅಮೋಘವಾದ ತತ್ತ್ವವನ್ನು ಸಾರಿರುವದರಿಂದ ಅವರು ನಿಜವಾದ ಅರ್ಥದಲ್ಲಿ ಜಗದ್ಗುರುಗಳು. ಅವರನ್ನು ಸ್ಮರಿಸಿ ಉತ್ಸವವನ್ನು ಮಾಡುವದು ಯಾರೋ ಒಬ್ಬರಿಗೆ ನಾವು ಮಾಡುವ

ಸತ್ಕಾರವಲ್ಲ. ನಮ್ಮೆಲ್ಲರ ನಿಜವಾದ ಆತ್ಮನಾದ ಪರಮಾತ್ಮನನ್ನೇ ಮತ್ತೊಮ್ಮೆ ಸ್ಮರಿಸಿಕೊಂಡು, ಅವಿದ್ಯೆಯ ಅಂಧಕಾರವನ್ನು ಕಳೆದುಕೊಂಡು ನಲಿದಾಡುವ ಆತ್ಮೋದ್ಧಾರಕಾರ್ಯವದು! ಶ್ರೀಶಂಕರರ ಅನುಗ್ರಹದಿಂದ ನಮ್ಮೆಲ್ಲರಿಗೂ ಈ ಅಧ್ಯಾತ್ಮವಿದ್ಯೆಯಲ್ಲಿ ಹೆಚ್ಚಿನ ಆಸಕ್ತಿಯುಂಟಾಗಲಿ!

★★★★★

## ವಿದ್ಯಾವಿದ್ಯೆಗಳ ವಿಭಾಗ

**25-4-1958**

**ಶ್ರೀಗಳು**

ಲೋಕದಲ್ಲಿ ಕಾಣಬರುವ ಸಕಲ ಅನರ್ಥಗಳಿಗೂ ಅವಿದ್ಯೆಯೇ ಕಾರಣವೆಂದೂ ವಿದ್ಯೆಯಿಂದ, ಎಂದರೆ ಆತ್ಮೈಕತ್ವರೂಪದ ತಿಳಿವಳಿಕೆಯ ರೂಪದ ತತ್ತ್ವಜ್ಞಾನದಿಂದ ಅದರ ಪರಿಹಾರವಾಗುವದೆಂದೂ ನಿರ್ಣಯಿಸಿರುವದೇ ವೇದಾಂತದ ಸಾರ. ಆತ್ಮೈಕತ್ವವೆಂದರೇನು ? **ಆತ್ಮನು ಒಬ್ಬನೇ ಇರುತ್ತಾನೆ, ಆತ್ಮನೊಬ್ಬನೇ ಪರಮಾರ್ಥವಾಗಿರುತ್ತಾನೆ-ಎಂಬುದೇ ಆತ್ಮೈಕತ್ವ.** ಒಬ್ಬೊಬ್ಬನಿಗೆ ಒಬ್ಬೊಬ್ಬ ಬೇರೆಯ ಆತ್ಮರುಗಳು ಇರುವದಿಲ್ಲ; ಒಬ್ಬನೇ ಆತ್ಮನಿರುತ್ತಾನೆ. ಇಷ್ಟೇಅಲ್ಲ, ಆ ಆತ್ಮನಿಗಿಂತ ಬೇರೆಯಾಗಿ ಮತ್ತೆ ಏನೇನೂ ಪರಮಾರ್ಥವಾದದ್ದು ಇರುವದೇ ಇಲ್ಲ, ಇದೇ ಆತ್ಮೈಕತ್ವ; ಇದನ್ನು ತಿಳಿದುಕೊಂಡರೆ ಅವಿದ್ಯೆಯು ತೊಲಗುತ್ತದೆ, ಅನರ್ಥಗಳು ಮಾಯವಾಗುತ್ತವೆ.

ಈ ಹೇಳಿಕೆಯು ನಮ್ಮಗಳ ಈಗಿನ ಅನುಭವಕ್ಕೆ ಅತ್ಯಂತವಿರುದ್ಧವಾಗಿ ಕಾಣುತ್ತಿದೆ. ನಮ್ಮಲ್ಲಿ ಒಬ್ಬೊಬ್ಬನಿಗೂ ಒಬ್ಬೊಬ್ಬ ಆತ್ಮನಿದಾನೆಂದೇ ನಮಗೆ ತೋರುತ್ತದೆ; ಈ ಒಬ್ಬೊಬ್ಬನಿಗೂ ಬೇರೆಬೇರೆಯ ಶರೀರ, ಇಂದ್ರಿಯ, ಮನಸ್ಸು, ಮುಂತಾದವುಗಳಿರುತ್ತವೆ. ಇದಲ್ಲದೆ ನಾನಾತ್ವಯುಕ್ತವಾದ ಪ್ರಪಂಚವೂ ಪ್ರತ್ಯಕ್ಷಾದಿಗಳಿಂದ ತಿಳಿದುಬರುತ್ತಿದೆ. ಸಾಮಾನ್ಯಜನರು ಹೀಗೆ ತಿಳಿದುಕೊಂಡಿರುತ್ತಾರೆಂಬುದು ಹಾಗಿರಲಿ, ದೊಡ್ಡದೊಡ್ಡ

ಶಾಸ್ತ್ರಜ್ಞರುಕೂಡ-ಹೀಗೆಯೇ ನಾನಾತ್ವವಾದಿಗಳಾಗಿರುತ್ತಾರೆ. ಹೀಗಿರುವಲ್ಲಿ ಲೋಕವಿರುದ್ಧವಾದ ಈ ವೇದಾಂತದ ಹೇಳಿಕೆಯನ್ನು ಹೇಗೆ ನಂಬುವದು? ಭೌತಿಕಶಾಸ್ತ್ರಜ್ಞರು ಪ್ರಕೃತಿಯನ್ನು ಬಗೆಬಗೆಯ ನಿರೀಕ್ಷಣಪರೀಕ್ಷಣಸಂವಾದೀಕರಣಗಳಿಂದ ನೋಡಿ ಪ್ರಕೃತಿಯ ನಿಯಮಗಳು ದೇಶಕಾಲನಿಮಿತ್ತಬದ್ಧಗಳಾಗಿರುತ್ತವೆ, ಒಂದೇ ರೂಪದಲ್ಲಿರುತ್ತವೆ- ಎಂದು ಹೇಳುತ್ತಿದಾರೆ. ವಿದ್ಯುಚ್ಛಕ್ತಿಯೇ ಮುಂತಾದವುಗಳನ್ನು ಶೋಧನಮಾಡಿ ಜನರಿಗೆ ತಿಳಿಸುತ್ತಿದಾರೆ. ಅವರನ್ನೆಲ್ಲ ಅವಿವೇಕಿಗಳೆನ್ನುವದಕ್ಕಿಂತ ಕೂತಲ್ಲಿ ಕೂತುಕೊಂಡು ಮೂಗಿನ ನೇರಕ್ಕೆ ವಿಚಾರಮಾಡಿ ನಿರ್ಣಯಿಸುವ ಈ ವೇದಾಂತಜ್ಞಾನವೇ ಅವಿವೇಕದ ಫಲವೆಂದು ಏಕೆ ಹೇಳಬಾರದು?-ಎಂದು ಯಾರಾದರೂ ಕೇಳಬಹುದು.

ಇದಕ್ಕೆ ವೇದಾಂತಿಗಳ ಉತ್ತರವನ್ನು ತಿಳಿದುಕೊಳ್ಳಲಪೇಕ್ಷಿಸುವವರು ಅವಿದ್ಯೆ ಎಂಬ ಶಬ್ದವನ್ನು ಅವರು ಯಾವ ಅರ್ಥದಲ್ಲಿ ಉಪಯೋಗಿಸುತ್ತಾರೆಂಬುದನ್ನು ತಿಳಿದುಕೊಳ್ಳಬೇಕು. ಅವಿದ್ಯೆ ಅಥವಾ ಅಜ್ಞಾನ, ಎಂಬುದಕ್ಕೆ ತಿಳಿಯದೆ ಇರುವದು, ಸಂಶಯಿತವಾಗಿರುವದು, ಅಥವಾ ತಪ್ಪಾಗಿ ತಿಳಿದಿರುವದು-ಎಂದು ಮೂರುಬಗೆಯ ಅರ್ಥಗಳುಂಟು. ತಿಳಿಯದೆ ಇರುವದು ಎಂಬರ್ಥದಲ್ಲಿ ಅಜ್ಞಾನವನ್ನಿಟ್ಟುಕೊಂಡರೆ ಭೌತಿಕವಿಜ್ಞಾನದ ಬೇರೆಬೇರೆಯ ವಿಭಾಗಗಳಲ್ಲಿ ವಸ್ತು ವಿಚಾರ, ಶಕ್ತಿ ವಿಚಾರ, ಜೀವ ವಿಚಾರ, ನಕ್ಷತ್ರ ವಿಚಾರ, ಗಣಿತ ವಿಚಾರ, ಮನಸ್ಸಿನ ವಿಚಾರ – ಇವೇ ಮುಂತಾದ ಅನೇಕ ವಿಷಯಗಳು ಈಗ ವಿಜ್ಞಾನಿಗಳಲ್ಲಿಯೇ ಮತಭೇದಕ್ಕೆ ಕಾರಣವಾಗಿರುತ್ತವೆ. ವಿಜ್ಞಾನಶಾಸ್ತ್ರದವರು ಮಾಡಿರುವ ಹೊಸಶೋಧಗಳ ವಿಷಯಕ್ಕೆ ಯಾರಿಗೂ ಎರಡು ಮಾತಿಲ್ಲವಾದರೂ ಸಿದ್ಧಾಂತಗಳ ವಿಷಯಕ್ಕೆ ಅವರಲ್ಲಿ ಅಜ್ಞಾನವೇ ತುಂಬಿತುಳುಕುತ್ತಿದೆ; ಇದೇ ಸಿದ್ಧಾಂತವೆಂದು ಯಾರೂ ಹೇಳುವಂತಿಲ್ಲ-ಎಂದು ಆ ಶಾಸ್ತ್ರಜ್ಞರೇ ಒಪ್ಪಿಕೊಳ್ಳುತ್ತಿದಾರೆ. ಇದು ಲೌಕಿಕದೃಷ್ಟಿಯಿಂದ ವಿಮರ್ಶಿಸಿದ ಅವಿದ್ಯೆಯ ವಿಚಾರವಾಯಿತು. ಆದರೆ ವೇದಾಂತಿಗಳು ಹೇಳುವ ಅವಿದ್ಯೆ ಎಂಬುದು ಬೇರೆ. ಇಡಿಯ ಜಗತ್ತಿನ ತಿರುಳಾಗಿರುವ ಪರಮಾರ್ಥವು ಯಾವದೆಂಬುದನ್ನು ಅರಿಯದೆ, ಅದರ ವಿಷಯದಲ್ಲಿ ಬಗೆಬಗೆಯಾಗಿ ವಿಕಲ್ಪಿಸುತ್ತಿರುವದೇ ವೇದಾಂತದಲ್ಲಿ ಅವಿದ್ಯೆ. ಸರ್ವರಿಗೂ ಆತ್ಮನಾಗಿ,

ಸರ್ವಸಾಕ್ಷಿಯಾಗಿರುವ ಪರಮಾತ್ಮನನ್ನು ಅನ್ಯತರೂಪವಾಗಿ ಅನಾತ್ಮವನ್ನು ಬೆರಕೆಮಾಡಿಕೊಂಡು ನಾನು, ನನ್ನದು-ಎಂದು ವ್ಯವಹರಿಸುತ್ತಿರುವದೇ **ಅವಿದ್ಯೆ.** ಮಿಕ್ಕ ಶಾಸ್ತ್ರಗಳಲ್ಲಿ ಅನಾತ್ಮವಾದ ಪ್ರಮೇಯದ ವಿಚಾರವನ್ನು ಮಾಡಿರುತ್ತದೆ; ಅದಕ್ಕೆ ಸಾಕ್ಷಿಯಾದ ಆತ್ಮನನ್ನು ಅವು ಯಾವವೂ ವಿಚಾರಮಾಡಿರುವದಿಲ್ಲ. ಆದ್ದರಿಂದ ಅವರೆಲ್ಲರೂ ಈ ದೃಷ್ಟಿಯಿಂದ ಅವಿದ್ಯಾವಂತರು ಎಂದು ಹೇಳಿದರೆ ತಪ್ಪಾಗುವದಿಲ್ಲ. ನಾನು ಎಂಬುದರ ತತ್ತ್ವವನ್ನು ಹುಡುಕಿಕೊಂಡು ಹೋದರೆ ಅದಕ್ಕೆ ಆಧಾರವಾಗಿರುವ ಪರಮಾರ್ಥವಾದ ಸಾಕ್ಷಿರೂಪವಾದ ಆತ್ಮತತ್ತ್ವವು ಸಿಕ್ಕುತ್ತದೆ. ಈ ಆತ್ಮನನ್ನು ಪ್ರತಿಯೊಬ್ಬನೂ 'ನಾನು' ಎಂದೇ ಭಾವಿಸಬೇಕಾಗಿದೆ ಯಾದರೂ ಅಹಂಪ್ರತ್ಯಯಗಮ್ಯನಾಗಿ-ನಾನು ಎಂಬ ಅರಿವಿಗೆ ವಿಷಯನಾಗಿ ಎಚ್ಚರದಲ್ಲಿಯೂ ಕನಸಿನಲ್ಲಿಯೂ ನಮಗೆ ತಿಳಿಯಬರುವ 'ನಾನು' ಹುಸಿನಾನು, ಅದನ್ನು ಯಾವಾಗಲೂ ನೋಡುತ್ತಿರುವ ಸಾಕ್ಷಿಯು ಪರಮಾರ್ಥವಾದ 'ನಾನು'-ಎಂದು ತಿಳಿದುಬರುತ್ತದೆ. ಆ ಆತ್ಮನನ್ನು ಇಲ್ಲವೆಂದು ಹೇಳುವದು ಯಾರಿಂದಲೂ ಆಗಲಾರದು ; ಏಕೆಂದರೆ ಇದೆ, ಇಲ್ಲ - ಈ ಎರಡಕ್ಕೂ ಸಾಕ್ಷಿಯಾಗಿ, ಈ ಎರಡನ್ನೂ ಬೆಳಗುತ್ತಿರುವದೇ ಆ ಆತ್ಮವಾಗಿರುತ್ತದೆ. ಈ ಆತ್ಮನು ಕೂಟಸ್ಥನು, ಅದ್ವಿತೀಯನು -ಎಂದು ವೇದಾಂತಿಗಳು ಹೇಳುತ್ತಿದಾರೆ. ಅದು ಹೇಗೆಂಬುದನ್ನು ವಿಚಾರಮಾಡ ಬೇಕಾದದ್ದಿದೆ.

★★★★★

## ಅವಿದ್ಯೆಯ ವ್ಯಾಪಕತ್ವ

**26-4-58**

**ಶ್ರೀ ಶ್ರೀಗಳು**

ವೇದಾಂತಿಗಳ ದೃಷ್ಟಿಯಿಂದ ಸಕಲರಿಗೂ ಆತ್ಮನಾಗಿರುವ, ಅದ್ವಿತೀಯಾತ್ಮನನ್ನು ಕಂಡುಕೊಳ್ಳುವದೇ **ವಿದ್ಯೆ,** ಮಿಕ್ಕದ್ದೆಲ್ಲ- ವ್ಯಾವಹಾರಿಕದೃಷ್ಟಿಯ ವಿದ್ಯೆಯು ಕೂಡ-ಅವಿದ್ಯೆಯೇ ಎಂದು ತಿಳಿಸಿದ್ದಾಗಿದೆ.

ವೇದಾಂತಿಗಳ ದೃಷ್ಟಿಯಿಂದ **ಅವಿದ್ಯೆಯು** ಎಷ್ಟು ವ್ಯಾಪಕವಾಗಿದೆ ಎಂಬುದನ್ನು ಇನ್ನೂ ಒಳಹೊಕ್ಕು ಸರಿಯಾಗಿ ಮನವರಿಕೆಮಾಡಿಕೊಳ್ಳುವದು ಅವಶ್ಯವಾಗಿರುತ್ತದೆ. ಶಾಸ್ತ್ರೋಕ್ತಕರ್ಮವನ್ನು ಮಾಡಿದ್ದರ, ಅಥವಾ ಅದನ್ನು ಮಾಡದೆ ಅದರಲ್ಲಿ ನಿಷಿದ್ಧವಾಗಿರುವದನ್ನು ಮಾಡಿದ್ದರ, ಫಲವಾಗಿ ಜನ್ಮಾಂತರದಲ್ಲಿಯೂ ಲೋಕಾಂತರದಲ್ಲಿ ಪಡೆಯುವ ಫಲವೂ ಅವಿದ್ಯಾಕ್ಷೇತ್ರದಲ್ಲಿಯೇ ಸೇರಿದ್ದು. ಪರಮಾತ್ಮನನ್ನು ಉಪಾಸನೆಮಾಡಿ ಉತ್ತಮಲೋಕವನ್ನು ಪಡೆದುಕೊಳ್ಳುವೆವೆಂಬುದೂ ಆವಿದ್ಯಕವ್ಯವಹಾರವೇ; ಇಷ್ಟೇಕೆ, ಸರ್ವಕ್ಕೂ ಆಧಾರವಾಗಿರುವ ಪರಮಾರ್ಥವನ್ನು ತಿಳಿದುಕೊಂಡು ಸಂಸಾರಬಂಧದಿಂದ ಬಿಡುಗಡೆ ಹೊಂದುವೆವೆಂಬ ವ್ಯವಹಾರವುಕೂಡ ಆವಿದ್ಯಕವೇ ಎಂಬುದು ವೇದಾಂತಿಗಳ ಹೇಳಿಕೆ.

ಪ್ರತ್ಯಕ್ಷಾದಿಪ್ರಮಾಣಗಳೂ ಶಾಸ್ತ್ರವೂ ಅವಿದ್ಯಾವಿಷಯವೇ ಆದರೆ, ಇನ್ನು ವಿದ್ಯೆಗೆ ಸಾಧನವಾದದ್ದು ಯಾವದುತಾನೆ ಉಳಿದಿರುತ್ತದೆ? ಪ್ರತ್ಯಕ್ಷಾದಿಪ್ರಮಾಣಗಳೆಲ್ಲವೂ ಆವಿದ್ಯಕವೆನ್ನುವದಕ್ಕೆ ಪ್ರಮಾಣವಾದರೂ ಬೇರೆ ಯಾವದಿದೆ? ಇದ್ದರೆ ಅದೂ ಆವಿದ್ಯಕವೇ ಏತಕ್ಕೆ ಆಗಬಾರದು?- ಎಂದು ಯಾರಾದರೂ ಶಂಕಿಸಬಹುದಷ್ಟೆ? ಅದಕ್ಕೆ ಸಂಕ್ಷೇಪವಾದ ಉತ್ತರವೇನೆಂದರೆ, ಯಾವ ಪ್ರಮಾಣವೇ ಆಗಲಿ, ಸಾರ್ವತ್ರಿಕವಾದ ಅನುಭವಕ್ಕೆ ತಂದುಬಿಡಬೇಕು; ಆ ಅನುಭವವೇ ಎಲ್ಲಕ್ಕೂ ಕೊನೆ. ಆದ್ದರಿಂದ ಅನುಭವದ ಆಧಾರದಿಂದ ಪ್ರಮಾಣಗಳ ಯೋಗ್ಯತೆಯನ್ನು ವಿಮರ್ಶೆಮಾಡಬಹುದಾಗಿದೆ. ಪ್ರಮಾಣಪ್ರಮೇಯ ವ್ಯವಹಾರವು ಆವಿದ್ಯಕವೆನ್ನುವದು ಏಕೆಂದರೆ ದೇಹವನ್ನು ನಾನು ಎಂದೂ ಇಂದ್ರಿಯಗಳು ನನ್ನವು ಎಂದೂ ನಾವೆಲ್ಲರೂ ಸ್ವಾಭಾವಿಕವಾಗಿ- ಯಾವ ವಿಚಾರವೂ ಇಲ್ಲದೆ- ಇಟ್ಟುಕೊಂಡುಬಿಟ್ಟಿರುತ್ತೇವೆ. ಇದು ಸರಿಯೆ, ಅನುಭವಾನುಸಾರಿಯಾದ ಅಂಗೀಕಾರವೆ?- ಎಂದು ವಿಮರ್ಶಿಸುವದಕ್ಕೆ ಹೋದರೆ, ಸ್ವಪ್ನಸುಷುಪ್ತಿಗಳಲ್ಲಿ ಈ ದೇಹೇಂದ್ರಿಯಗಳು ಇರುವದೇ ಇಲ್ಲವೆಂಬುದು ಸಾರ್ವತ್ರಿಕಾನುಭವಸಿದ್ಧವಾಗಿರುತ್ತದೆ ಎಂದು ಕಂಡುಬರುತ್ತದೆ. ನಾವು

ಪ್ರಮಾತೃಗಳೆಂದುಕೊಂಡಿರುವದು ಈ ಎಚ್ಚರದ ದೇಹೇಂದ್ರಿಯಗಳ ಬಲದಿಂದಲೇ ಆಗಿರುವದರಿಂದಲೂ ನಮ್ಮ ಸ್ವರೂಪವಾದ ಆತ್ಮನು ಎಲ್ಲಾ ಅವಸ್ಥೆಗಳಲ್ಲಿಯೂ ಒಂದೇ ರೂಪದಿಂದ ಇದ್ದುಕೊಂಡಿರುವಲ್ಲಿ ಈ ದೇಹೇಂದ್ರಿಯಪ್ರಯುಕ್ತವಾದ ಪ್ರಮಾತೃತ್ವವು ಎಚ್ಚರದವಸ್ಥೆಯಲ್ಲಿ ಮಾತ್ರವೇ ಇದ್ದು ಮಿಕ್ಕ ಅವಸ್ಥೆಗಳಲ್ಲಿ ಇಲ್ಲವಾಗಿಬಿಡುವದರಿಂದಲೂ ನಾವು ಪರಮಾರ್ಥವಾಗಿ ಪ್ರಮಾತೃಗಳಲ್ಲ ; ಆದ್ದರಿಂದ ಈ ಪ್ರಮಾತೃತ್ವದ ಆಧಾರದಿಂದ ಸಾಗುತ್ತಿರುವ ಪ್ರಮಾಣಪ್ರಮೇಯವ್ಯವಹಾರವೂ ಪರಮಾರ್ಥವಲ್ಲ-ಎಂದು ನಿಶ್ಚಯವಾಗುವದು. ಪ್ರಮಾತೃವನ್ನೇ 'ನಾನು' ಎಂದು ಕರೆಯುತ್ತಿರುವದು ಅವಿದ್ಯೆಯೇ ಎಂದು ಸಿದ್ಧವಾಗುವದು.

ಸ್ವಪ್ನವನ್ನೂ ಜಾಗ್ರದವಸ್ಥೆಯನ್ನೂ ಒಂದೇ ರೂಪದಿಂದ ನೋಡುತ್ತಿರುವ ಆತ್ಮನೇ ಮಹಾಂತನು, ವಿಭು-ಎಂದು ಶ್ರುತಿಯು ಸಾರುತ್ತಿದೆ. ಈ ಅವಸ್ಥೆಗಳೂ ಈ ಅವಸ್ಥೆಗಳಲ್ಲಿ ಒಂದರಲ್ಲಿ ಮಾತ್ರವೇ ಕಾಣುವ ಪ್ರಮಾತೃಪ್ರಮಾಣ ಪ್ರಮೇಯಾದಿ ಭಾಗವೂ ಮಿಥ್ಯೆ, ಆವಿದ್ಯಕ-ಎಂಬುದು ಇದರಿಂದಲೇ ಸಿದ್ಧವಾಗುತ್ತದೆ.

ಹೀಗಿದ್ದರೂ ನಾವು ನಾನು ನಾನು-ಎಂದು ತಿಳಿದುಕೊಂಡಿರುವ ಆತ್ಮನು ಬೇರೆಬೇರೆಯಾಗಿ ಕಾಣುತ್ತಿರುತ್ತಾನಲ್ಲ! ನಮ್ಮಂತೆ ಇನ್ನೂ ಅನೇಕ ಆತ್ಮರು ಇದಾರೆಂದು ತೋರುತ್ತಿದೆಯಲ್ಲ! ನನ್ನೊಬ್ಬನ ಅವಸ್ಥಾತ್ರಯವನ್ನು ವಿಚಾರಿಸಿದ ಮಾತ್ರದಿಂದ ಎಲ್ಲರ ವಿಷಯವನ್ನೂ ನಿರ್ಣಯಿಸುವದು ಸರಿಯಾದೀತೆ?-ಎಂದು ಶಂಕೆ ಉಂಟಾಗುವದು ಸ್ವಾಭಾವಿಕವಾಗಿದೆ.

★★★★★

# ಆತ್ಮೈಕ್ಯ

## 27-4-1958

**ಶ್ರೀಗಳವರು**

ಆತ್ಮನು ಒಬ್ಬನೇ, ಅನೇಕರಿಲ್ಲ; ಆತ್ಮನು ಅದ್ವೈತಸ್ವರೂಪನೇ, ಅವನಿಗೆ ಎರಡನೆಯದಾದದ್ದು ಯಾವದೊಂದೂ ಇಲ್ಲ- ಎಂಬುದನ್ನು **ಆತ್ಮೈಕತ್ವ** ಎನ್ನುವರು. ಈ ದಿವಸ ಈ ವಿಚಾರದಲ್ಲಿ ಆಗುವ ಸಂಶಯಗಳನ್ನು ವಿಮರ್ಶೆಗೆ ತೆಗೆದುಕೊಳ್ಳೋಣ. ನನ್ನ ಸ್ವಪ್ನದಲ್ಲಿಯೂ ನನ್ನ ಜಾಗರಿತದಲ್ಲಿಯೂ ಇರುವ ಆತ್ಮನು ಒಬ್ಬನೇ ಎಂಬುದನ್ನು ನಂಬಬಹುದು. ಏಕೆಂದರೆ ನಾನು ಕನಸು ಕಂಡೆನು, ಆ ನಾನೇ ಎಚ್ಚತ್ತಿದೇನೆ-ಎಂದು ಎಲ್ಲರಿಗೂ ಅನುಭವವಾಗುತ್ತಿರುತ್ತದೆ. ಆದರೆ ಮಿಕ್ಕವರ ಆತ್ಮನೂ ನನ್ನ ಆತ್ಮನೂ ಒಬ್ಬನೇ ಎಂದರೆ ಹೇಗೆ ನಂಬುವದು? ಎಷ್ಟು ಜನರಿರುವರೋ ಅಷ್ಟು ಮಂದಿಗೂ ಅವರವರ ಸ್ವಪ್ನ ಜಾಗ್ರತ್ತುಗಳು ಬೇರೆಬೇರೆ ಆಗುತ್ತಿರುತ್ತವೆ. ಹೀಗಿರುವಲ್ಲಿ ನಮ್ಮೆಲ್ಲರ ಆತ್ಮನು ಒಬ್ಬನೇ ಎಂದೂ ಆ ಆತ್ಮನ ತತ್ತ್ವವನ್ನು ನನ್ನೊಬ್ಬನ ಅವಸ್ಥಾತ್ರಯದ ಪರೀಕ್ಷೆಯಿಂದ ನಿರ್ಣಯಿಸಬಹುದೆಂದೂ ಹೇಳುವದು ಹೇಗೆತಾನೆ ಯುಕ್ತಿಯುಕ್ತವಾದೀತು?- ಎಂಬುದೊಂದು ದೊಡ್ಡಸಂಶಯ.

ಇಲ್ಲಿ ಮೊಟ್ಟಮೊದಲು ನಾನು ಎಂದರೇನೆಂಬುದನ್ನು ಗೊತ್ತುಪಡಿಸಬೇಕು. ಏಕೆಂದರೆ ದೇಹವು, ಇಂದ್ರಿಯ, ಮನಸ್ಸು, ಬುದ್ಧಿ- ಈ ಎಲ್ಲವನ್ನೂ ನಾನುನಾನು ಎಂದೇ ನಾವು ಕರೆದುಕೊಳ್ಳುತ್ತಿರುವೆವು. ಇವುಗಳಲ್ಲಿ ನಿಜವಾದ ನಾನು ಯಾವದು? ಈ ಪ್ರಶ್ನೆಗೆ ನಮ್ಮಲ್ಲಿ ಉತ್ತರವು ಬೇಗನೆ ಸಿಕ್ಕುವದಿಲ್ಲ. ಇದಲ್ಲದೆ ನನ್ನ ಆತ್ಮ ಒಬ್ಬನು, ನಿನ್ನ ಆತ್ಮನು ಒಬ್ಬನು-ಎಂದು ಹೇಳುವಾಗ ನಾನು ಎಂಬ ಮಾತಿಗೆ ಏನರ್ಥ ? ನಾನು ಎಂಬುದು ಸಿದ್ಧವಾದ ಮೇಲಲ್ಲವೆ, ನನ್ನದು ಎಂಬ ಮಾತಿಗೆ ಅರ್ಥವಾಗುವದು? ಎಚ್ಚರದಲ್ಲಿ ನಮ್ಮಲ್ಲಿ ಪ್ರತಿಯೊಬ್ಬನೂ ನಾನು, ನಾನು-ಎಂದುಕೊಳ್ಳುತ್ತಿರುವದರಿಂದ ನಾನು ಎಂಬ ವಸ್ತುಗಳು ಅನೇಕ ಇವೆ ಎಂದು ನಮಗೆ ತೋರಬಹುದು. ಆದರೆ

ಸ್ವಪ್ನದಲ್ಲಿ ನೋಡಿರಿ, ಅಲ್ಲಿಯೂ ನಾನು ಎಂದು ಅಂದುಕೊಳ್ಳುತ್ತೇವೆ ; ಆದರೆ ಆ ನಾನು ಯಾವದು? ಈಗ ಎಚ್ಚರದಲ್ಲಿರುವ ನಾನೇ ಅದು ಎನ್ನಬಹುದೆ ? ಈ ನಾನು ಎಂಬುದಕ್ಕೆ ಇರುವ ಶರೀರ, ಇಂದ್ರಿಯ - ಮುಂತಾದ ಯಾವದೊಂದರ ಸಂಬಂಧವೂ ಆ ನಾನಿಗೆ ಇರುವದಿಲ್ಲ. ಅಲ್ಲಿ ಶರೀರ, ಇಂದ್ರಿಯ - ಮುಂತಾದವುಗಳೆಲ್ಲವೂ ಕಲ್ಪಿತವಾಗಿರುತ್ತವೆ. ಅಲ್ಲಿಯೂ ನಮಗಿಂತ ಬೇರೆಯಾಗಿ ನಾನು, ನಾನು-ಎಂದುಕೊಳ್ಳುತ್ತಿರುವವರು ಅನೇಕರು ಇರುವಂತೆ ಆ ಕಾಲಕ್ಕೆ ನಾವು ನಂಬುತ್ತೇವೆ ; ಆದರೂ ಅದೆಲ್ಲ ಕಲ್ಪಿತವೇ ಅಲ್ಲವೆ?

ಹೀಗೆ ನಾನು ಎಂಬುದು ಯಾವದೆಂಬುದೇ ನಿರ್ಧಾರವಾಗದೆ ಇರುವಾಗ, ನನ್ನದೆಂದರೆ ಯಾವದು? 'ನನ್ನ ಸ್ವಪ್ನ' ಎಂಬ ಮಾತಿಗೆ ಏನರ್ಥ? ಇದನ್ನು ನಾವು ಚೆನ್ನಾಗಿ ಆಲೋಚಿಸಬೇಕು. ಇನ್ನೊಂದು ಮಾತು. ನನ್ನ ಸ್ವಪ್ನದಲ್ಲಿ ಕಾಣುವ ಅನೇಕರು ಅಲ್ಲಿ 'ನಾನು' 'ನಾನು' ಎಂದುಕೊಳ್ಳುತ್ತಿದ್ದರು, ಈಗ ಅವರೆಲ್ಲಿ? ಕನಸಿನಲ್ಲಿದ್ದ ಯಾವ ಪದಾರ್ಥವೂ ಅದು ತೋರಿದಂತೆ ಇರಲಿಲ್ಲವೆಂದೇ ನಮ್ಮ ನಂಬಿಕೆ ಅಲ್ಲವೆ? ಅಲ್ಲಿದ್ದ ನೀರು, ಕೊಡ, ಬಾಯಾರಿಕೆ, ನೀರುಕುಡಿದದ್ದು, ಬಾಯಾರಿಕೆ ಹಿಂಗಿದ್ದು-ಎಲ್ಲವೂ ಕನಸೇ. ಹೀಗಿರುವದರಿಂದ ಅದನ್ನು ಕೈಬಿಟ್ಟು ಎಚ್ಚರವನ್ನು ಮಾತ್ರ ವಿಚಾರಿಸಿದರೆ ಸಾಕು ಎಂದು ಕೆಲವರು ಹೇಳಬಹುದು. ಆದರೆ ಎಚ್ಚರವೆಂದರೆ ಯಾವದು? ಕನಸಿನಲ್ಲಿ ನಾವಿದ್ದಾಗ ನಮಗೆ ಅದೊಂದು ಎಚ್ಚರವೆಂದೇ ತೋರುತ್ತಿತ್ತು. ಇಷ್ಟೇ ಅಲ್ಲ, ಅದರೊಳಗೆ ನಮಗೆ ಮತ್ತೊಂದು ಕನಸು ಕಂಡಂತೆ ತೋರಿದ್ದರೆ ಆಗ 'ನಾವು ಅದೆಲ್ಲ ಕನಸು, ಈ ಎಚ್ಚರದ ವಿಷಯವನ್ನು ಹೇಳಿರಿ!' ಎಂದೇ ಅಲ್ಲಿಯೂ ಕೇಳುತ್ತಿದ್ದೆವು. ಅಲ್ಲವೆ? ಇನ್ನೊಂದು ವಿಷಯ. 'ಅದು ಕನಸು', 'ಇದು ಎಚ್ಚರ'- ಎಂದು ನಾವು ಮಾತಾಡುತ್ತಿರುವೆವಷ್ಟೆ. ಅಲ್ಲಿ 'ಇದು' ಎಂದರೆ ಯಾವದು? 'ಅದು' ಎಂದರೆ ಯಾವದು ? 'ಇದು' ಎಂಬುದು ದೇಶಕಾಲಗಳಲ್ಲಿ ಹತ್ತಿರವಿರುವದನ್ನೂ 'ಅದು' ಎಂಬುದು ದೂರವಿರುವದನ್ನೂ, ಹೇಳುತ್ತದೆ-ಎಂದು ನಮ್ಮೆಲ್ಲರ ಅಭಿಪ್ರಾಯ. ಹಾಗಾದರೆ ಕನಸನ್ನು 'ಅದು' ಎಂದೂ ಎಚ್ಚರವನ್ನು 'ಇದು' ಎಂದೂ ಕರೆಯಬಹುದೆ? ಎಚ್ಚರಕನಸುಗಳೆರಡೂ ಒಂದೇ ಕಾಲ, ಒಂದೇ ದೇಶದಲ್ಲಿ ಹತ್ತಿರ, ದೂರ-ಇವೆಯೆ? ಈಗ ವಿಚಾರವು ಇನ್ನಷ್ಟು ಬಿಕ್ಕಟ್ಟಿಗೆ ಬಂದಿತು.

ಇಲ್ಲಿಯವರೆಗಿನ ವಿಚಾರಧಾರೆಯಿಂದ ನಮಗೆ ತಿಳಿದದ್ದು ಏನಾಯಿತೆಂದರೆ ನಾನು ಎಂಬುದು ಯಾವದೆಂಬುದೇ ನಿರ್ಧಾರವಾಗಿಲ್ಲ; 'ನಾನು ನಾನು' ಎಂದು ಅನೇಕರು ಅಂದುಕೊಳ್ಳುತ್ತಿರುವರೆಂದು ತೋರಿದರೂ 'ನಾನು' ಎಂಬುದರ ಬಹುವಚನವು 'ನಾನುಗಳು' ಎನ್ನುವದಕ್ಕೆ ಬರುವದಿಲ್ಲ. ಎಚ್ಚರಕನಸುಗಳಲ್ಲಿ ತೋರುವ 'ನಾನು'ಗಳು ಬೇರೆಬೇರೆಯೇ ಹೊರತು ಒಂದೇ ಅಲ್ಲ. ಇಷ್ಟೇ ಅಲ್ಲ; ಎಚ್ಚರವು ಯಾವದು, ಕನಸು ಯಾವದು?- ಎಂಬುದೂ ನಿರ್ಧಾರವಾಗುವಂತೆಯೇ ಇಲ್ಲ! ಹೀಗಿರುವದರಿಂದ ನನ್ನ ಆತ್ಮ, ನಿನ್ನ ಆತ್ಮ- ಎಂಬ ಮಾತುಗಳಿಗೆ ಅರ್ಥವೇ ಇಲ್ಲ. ಎಲ್ಲಾ ಅವಸ್ಥೆಗಳನ್ನೂ ನೋಡುತ್ತಿರುವ ಚೈತನ್ಯರೂಪವಾದ ಸಾಕ್ಷಿಯೊಂದೇ ಎಲ್ಲಾ ಅವಸ್ಥೆಗಳಿಗೂ ತಿರುಳು, ಎಲ್ಲಾ ಅವಸ್ಥೆಗಳಿಗೂ ಆತ್ಮ; ನಾನು ಎಂಬುದು ಆಯಾ ಅವಸ್ಥೆಯಲ್ಲಿ ಕಾಣುವ ಆತ್ಮನ ಕಲ್ಪಿತರೂಪವಾಗಿದೆ. ಶಿವಾಜಿಯು ತನ್ನಂತೆ ಇರುವ ಮತ್ತೊಬ್ಬನನ್ನು ಇಟ್ಟು ಔರಂಗಜೇಬನ ಹಿಡಿತದಿಂದ ತಪ್ಪಿಸಿಕೊಂಡು ಹೋಗಲು ಔರಂಗಜೇಬನು ಅ ಎರಡನೆಯವನನ್ನೇ ಶಿವಾಜಿಯೆಂದು ತಿಳಿದುಕೊಂಡಂತೆ ನಾವು ಆತ್ಮನ ಆಭಾಸವಾದ 'ನಾನು' ಎಂಬುದನ್ನೇ ಆತ್ಮನೆಂದು ತಿಳಿದಿದೇವೆ. ಇದರಿಂದಲೇ ಆತ್ಮರು ಅನೇಕರೆಂಬ ಭ್ರಾಂತಿಯು ಆಗಿರುತ್ತದೆ. ಆದರೆ ಆತ್ಮನ ಸಾಕ್ಷಿಸ್ವರೂಪವನ್ನು ಮನದಂದರೆ, ಆ ದೃಷ್ಟಿಯಿಂದ ಆತ್ಮನು ಎಂದೆಂದಿಗೂ ಅದ್ವಿತೀಯನೇ ಆಗಿರುತ್ತಾನೆ. ಆತ್ಮನು ದೇಶಕಾಲಗಳಲ್ಲಿಲ್ಲ; ಪ್ರಪಂಚವೂ ದೇಶಕಾಲಗಳಲ್ಲಿಲ್ಲ, ಏಕೆಂದರೆ ಪ್ರಪಂಚದೊಳಗೇ ದೇಶಕಾಲಗಳಿರುತ್ತವೆ. ಆದ್ದರಿಂದ ಆತ್ಮನು ಒಬ್ಬ, ಅವನಿಗೆ ಅವಸ್ಥೆ ಎರಡನೆಯದು-ಎಂದು ಎಣಿಸುವದಕ್ಕೆ ಆಗುವದಿಲ್ಲವೆಂದಾಯಿತು. ಏಕೆಂದರೆ ಎಣಿಕೆಯೆಂಬುದು ಒಂದೇ ದೇಶದಲ್ಲಿ ಅಥವಾ ಒಂದೇ ಕಾಲದಲ್ಲಿರುವ ಪದಾರ್ಥಗಳಿಗೆ ಸಂಬಂಧಿಸಿರುತ್ತದೆ. ಹೀಗೆ ನೋಡಿದರೆ ಅವಸ್ಥೆಗಳು ಅಥವಾ ಅದರಲ್ಲಿರುವ ಪ್ರಪಂಚವು ಆತ್ಮನಿಗೆ ಎರಡನೆಯದೆಂಬುದಕ್ಕೆ ಬರುವಂತಿಲ್ಲವೆಂದಾಯಿತು. ಈ ಎಲ್ಲಾ ಕಾರಣಗಳಿಂದ ಆತ್ಮನು ಅದ್ವಿತೀಯನೇ ಎಂದು ಸಿದ್ಧವಾಯಿತು.

ಈ ಅದ್ವಿತೀಯಜ್ಞಾನದಿಂದ ಸುಖಶಾಂತಿಗಳು ಕಟ್ಟಿಟ್ಟಬುತ್ತಿಯಾಗುತ್ತವೆ. ಏಕೆಂದರೆ ನಾನು, ನೀನು-ಎಂಬ ಪ್ರತಿದ್ವಂದ್ವಿಗಳಿಂದಲೇ ರಾಗದ್ವೇಷಗಳು

ಹೆಚ್ಚುತ್ತಿರುವವು. ಇರುವದೆಲ್ಲ ಒಬ್ಬನೇ ಆತ್ಮನು-ಎಂಬ ಅರಿವಾದರೆ ಎಲ್ಲಿಯರಾಗದ್ವೇಷಗಳು? ಆತ್ಮೈಕತ್ವವು ಸಿದ್ಧವಾದರೆ ಪ್ರಪಂಚದ ವ್ಯವಹಾರವೆಲ್ಲವೂ ಲೋಪವಾಗಿಬಿಟ್ಟೀತೆಂದು ಬೆಚ್ಚಬಾರದು. ಏಕೆಂದರೆ ವ್ಯವಹಾರವು ಅವಿದ್ಯಾದೃಷ್ಟಿಗೆ ಸೇರಿದ್ದು ; ಅದು ಇರುವಂತೆ ಇದ್ದೇ ಇರುತ್ತದೆ. ತತ್ತ್ವಜ್ಞಾನದಿಂದ ವ್ಯವಹಾರಕ್ಕೆ ಅಡ್ಡಿಯಾಗುವದರ ಬದಲು, ಇನ್ನೂ ಅದಕ್ಕೆ ಒಳ್ಳೆಯ ಕಳೆಬರುತ್ತದೆ, ವೇದಾಂತಜ್ಞಾನದಿಂದ ವ್ಯವಹಾರವು ಹೇಗೆ ಉತ್ತಮಗೊಳ್ಳುವದೆಂಬುದನ್ನು ಇನ್ನು ನಾವು ತಿಳಿದುಕೊಳ್ಳಬೇಕಾಗಿರುತ್ತದೆ.

★★★★★

## ವೇದಾಂತವೂ ವ್ಯವಹಾರವೂ

**28-4-1958**

**ಶ್ರೀಗಳವರು**

ಅದ್ವಿತೀಯಾತ್ಮನೇ ಪರಮಾರ್ಥವು, ಪರಮಾತ್ಮನಿಗಿಂತ ಬೇರೆಯಾಗಿ ಯಾವದೊಂದೂ ಇರುವದಿಲ್ಲ- ಎಂಬ ವೇದಾಂತಸಿದ್ಧಾಂತವನ್ನು ಈವರೆಗೆ ವಿವರಿಸುತ್ತಾಬಂದಿರುತ್ತೇನೆ. ಅವಿದ್ಯೆಯ ದೋಷದಿಂದ ಕಾಣುವದನ್ನೆಲ್ಲ ನಿಜವೆಂದು ಹೇಳುವದಕ್ಕೆ ಆಗುವದಿಲ್ಲ. ಬಿಸಿಲಿನಲ್ಲಿ ಕೂದಲುಗಳ ಸುರುಳಿಯಂತೆ ಏನೋ ಕಾಣಿಸುತ್ತಿರುತ್ತದೆ, ಕೆಲವರ ಕಣ್ಣಿಗೆ ಅನೇಕ ಚಂದ್ರರು ಕಾಣಿಸುತ್ತಾರೆ; ಆದರೆ ಹಾಗೆ ಕಾಣಿಸುವದೆಲ್ಲವೂ ನಿಜವೆಂದು ಯಾರೂ ನಂಬುವದಿಲ್ಲ. ಪ್ರಕೃತದಲ್ಲಿ ನಾನು ಎಂದು ತೋರುತ್ತಿರುವಾಗ ಅದರ ಸುತ್ತಲೂ ಅನೇಕ ಆತ್ಮರುಗಳು ನಮ್ಮಂತೆಯೇ ಶರೀರಿಗಳಾಗಿರುವಂತೆಯೂ ಚೇತನಾಚೇತನಯುಕ್ತವಾದ ಪ್ರಪಂಚದೊಳಗೆ ನಾವು ಪರಿಚ್ಛಿನ್ನರೂಪದಿಂದ ಇರುವಂತೆಯೂ ತೋರುತ್ತಿರುತ್ತದೆ; ಆದರೆ ತನಿನಿದ್ರೆಯಲ್ಲಿ ಈ ಯಾವದೂ ಕಾಣಿಸುವದೇ ಇಲ್ಲ. ಮೂರು ಅವಸ್ಥೆಗಳಲ್ಲಿಯೂ ನಮ್ಮ ಆತ್ಮನು ಇದ್ದುಕೊಂಡು ಎಲ್ಲಕ್ಕೂ ಸಾಕ್ಷಿಯಾಗಿರುತ್ತಾನೆ. ತನ್ನ ಸ್ವರೂಪವನ್ನು ಯಾವದು ಎಂದಿಗೂ

ಮಾರ್ಪಡಿಸದೆ ಇರುವದೋ ಅದು ಸತ್ಯವು; ಯಾವದಾದರೊಂದು ವಿಶೇಷನಿಮಿತ್ತದಿಂದ ವಿಶೇಷವಾದ ಅವಸ್ಥೆಯಲ್ಲಿ ಮಾತ್ರ ಕಾಣಿಸುತ್ತಿರುವದು ಬರಿಯ ತೋರಿಕೆ . ನಾನು, ಪ್ರಪಂಚ-ಈ ಎರಡೂ ಕಾಣಿಸದೆ ಇರುವಾಗಲೂ ಸರ್ವಸಾಕ್ಷಿರೂಪನಾದ ನಮ್ಮ ಆತ್ಮನು ಇದ್ದೇ ಇರುತ್ತಾನೆ. ಆದ್ದರಿಂದ ಇವನೇ ಪರಮಾರ್ಥವು ಎಂದು ವೇದಾಂತಿಗಳು ನಿರ್ಣಯಿಸಿರುತ್ತಾರೆ.

ಈವರೆಗೆ ಸಾಕ್ಷಿಚೈತನ್ಯವು ಎಲ್ಲವನ್ನೂ ನೋಡುತ್ತಿರುತ್ತದೆ ಎಂದು ವಿಚಾರಿಸಿ ನಿಶ್ಚಯಿಸಿರುತ್ತೇವಷ್ಟೆ? ಈಗ ಇನ್ನೂ ಸ್ವಲ್ಪ ಮುಂದುವರಿದು ಸಾಕ್ಷಿಗೂ ಸಾಕ್ಷ್ಯವಾದ ಪ್ರಪಂಚಕ್ಕೂ ಆಧ್ಯಾತ್ಮಿಕ, ಆಧಿಭೌತಿಕಾದಿಸರ್ವಪ್ರಪಂಚಕ್ಕೂ-ಇರುವ ಸಂಬಂಧವನ್ನು ಕುರಿತು ವಿಚಾರಮಾಡೋಣ. ಸಾಕ್ಷಿಯು ದೇಶಕಾಲ ನಿಮಿತ್ತಯುಕ್ತವಾದ ಪ್ರಪಂಚಕ್ಕೆಲ್ಲ ಸಾಕ್ಷಿಯಷ್ಟೆ? ಈ ಸಾಕ್ಷಿಚೈತನ್ಯವು ಎಲ್ಲಿಗೆ ಮುಗಿದಿದೆ? ಎಲ್ಲಿಂದ ಪ್ರಪಂಚವು ಪ್ರಾರಂಭವಾಗುತ್ತದೆ?- ಎಂಬುದನ್ನು ನಾವು ಹೇಳುವದಕ್ಕೆ ಬರುವದಿಲ್ಲ. ಏಕೆಂದರೆ ಸಾಕ್ಷಿಯು ದೇಶಕಾಲಗಳಿಗೂ ಸಾಕ್ಷಿಯೇ. ಸಾಕ್ಷಿಚೈತನ್ಯಕ್ಕೆ ತೋರದಿರುವ ವಿಷಯವು ಇರುವದಿಲ್ಲ; ಪ್ರಪಂಚವೆಲ್ಲವೂ ಚೈತನ್ಯವ್ಯಾಪ್ತವಾಗಿರುವದರಿಂದಲೇ ಇದೆಯೆನಿಸಿಕೊಂಡಿದೆ. ಆದ್ದರಿಂದ ಅದೆಲ್ಲವೂ ಚೈತನ್ಯವೇ ಎಂದಾಯಿತು; ಏಕೆಂದರೆ ಚೈತನ್ಯವಲ್ಲದೆ, ಚೈತನ್ಯದ ಆಚೆಗಿರುವ ಅಚೇತನವು ಇದೆ ಎಂಬುದಕ್ಕೆ ನಮಗೆ ಯಾವ ಅನುಭವದ ಪ್ರಮಾಣವೂ ಇರುವದಿಲ್ಲ. ಚೈತನ್ಯವು ಪ್ರಪಂಚವನ್ನು ಬೆಳಗುತ್ತದೆ ಎಂಬುದೊಂದು ಮಿಥ್ಯಾಪ್ರತ್ಯಯವಿಶೇಷವು. 'ಮಿಥ್ಯಾಪ್ರಪಂಚ' ವೆನ್ನುವಾಗಲೂ ಪ್ರಪಂಚವೂ ಇದ್ದುಕೊಂಡೇ ಇರುತ್ತದೆ ಎಂದು ಕೆಲವರಿಗೆ ತೋರಬಹುದು; ಆದರೆ 'ಮೊಲದ ಕೋಡುಗಳು' ಎಂಬ ಮಾತಿಗೆ ಅರ್ಥವೊಂದು ಇರಬೇಕೆಂಬ ನಿಯಮವು ಹೇಗೆ ಇಲ್ಲವೋ ಹಾಗೆಯೇ ಮಿಥ್ಯಾಪ್ರಪಂಚವೆಂಬ ಮಾತೂ ಅರ್ಥಶೂನ್ಯವಾದ ವಿಕಲ್ಪಮಾತ್ರವಾಗಿರುತ್ತದೆ ಎಂದು ತಿಳಿಯಬೇಕು. ಇಲ್ಲದ್ದನ್ನು ಇರುವಂತೆ ತೋರಿಸುವದು, ಇದ್ದದ್ದನ್ನು ಮರೆಯಿಸುವದು-ಇದೇ ಮಾಯೆಯ ವ್ಯಾಪಾರ.

ಪರಮಾತ್ಮನೊಬ್ಬನೇ ಎಲ್ಲಾ ಭೂತಗಳಲ್ಲಿಯೂ ಇರುತ್ತಾನೆ, ಅವನು ಎಲ್ಲರಲ್ಲಿಯೂ ಪೂರ್ಣವಾಗಿಯೇ ಒಂದೇ ರೂಪದಲ್ಲಿರುತ್ತಾನೆ- ಎಂಬ ಸಮದೃಷ್ಟಿಯು ಮಹಾತ್ಮರಾದ ಜ್ಞಾನಿಗಳಿಗೆ ಮಾತ್ರವೇ ಅನುಭವಕ್ಕೆ

ಬಂದಿರುತ್ತದೆ. ನಾವುಗಳೂ ಆ ಮಹನೀಯರ ದೃಷ್ಟಿಯನ್ನನುಸರಿಸಿ ಜ್ಞಾನವನ್ನು ಸಂಪಾದಿಸಿಕೊಂಡು, ಈ ವ್ಯವಹಾರದ ಹೊರೆಯ ಭಾರವನ್ನು ಇಳುಹಿಕೊಳ್ಳಬೇಕು.

ಈ ಜ್ಞಾನವು ಬರಿಯ ತರ್ಕಬುದ್ಧಿಗೆ ನಿಲುಕುವದಲ್ಲ. ವೇದಾಂತವೆಂಬುದು ಬರಿಯ ಶಾಸ್ತ್ರವಲ್ಲ, ಅದೊಂದು ಕಲೆಯೂ ಹೌದು. ಇಲ್ಲಿ ವಿಚಾರವು ಹೇಗೆ ಅವಶ್ಯವೋ ಆಚಾರವೂ ಹಾಗೆಯೇ ಅವಶ್ಯವಾಗಿರುತ್ತದೆ. ಶರೀರಾದಿಗಳು ನಾನಲ್ಲ ಎಂಬುದು ನಿಶ್ಚಿತವಾಗಿ ಗೊತ್ತಾಗಬೇಕಾದರೆ, ಇವುಗಳು ಅಶುಚಿ, ಅನಿತ್ಯ, ಬರಿಯ ತೋರಿಕೆ-ಎಂಬ ಜ್ಞಾನವು ನಮ್ಮಲ್ಲಿ ಗಟ್ಟಿಯಾಗಿ ನಿಲ್ಲಬೇಕು. ಆಹಾರವಿಹಾರನಿದ್ರಾದಿಗಳಲ್ಲಿ ಸ್ವೇಚ್ಛೆಯಿಂದ ನಡೆಯುತ್ತಿರುವ ಸ್ವೇಚ್ಛಾವಿಹಾರಿಗಳಿಗೆ ಶರೀರಾತ್ಮಾಭಿಮಾನವೇ ದೃಢವಾಗಿರುತ್ತದೆ. ಸೈನ್ಯಕ್ಕೆ ಸೇರಬೇಕೆನ್ನುವವನಿಗೆ ಶರೀರದಾರ್ಢ್ಯ, ಒಂದಾನೊಂದು ಉಡುಪು, ಒಂದಾನೊಂದು ಶಿಸ್ತು-ಇವೆಲ್ಲ ಹೇಗೆ ಅವಶ್ಯವಾಗುವವೋ ಹಾಗೆಯೇ ಈ ಸಂಸಾರದಲ್ಲಿ ಹೋರಾಡಿ ಗೆದ್ದು ಮುಕ್ತಿಯನ್ನು ಪಡೆದುಕೊಳ್ಳಬೇಕೆನ್ನುವವನಿಗೆ ಸಾತ್ತ್ವಿಕಾಹಾರ,ಸಾತ್ತ್ವಿಕವಿಹಾರ,ಸಾತ್ತ್ವಿಕವಿಚಾರ-ಇವೆಲ್ಲವೂಅತ್ಯಂತಅವಶ್ಯವಾಗಿ ರುತ್ತವೆ. ವೇದದಲ್ಲಿ ಹೇಳಿರುವ ಕರ್ಮಗಳೂ ಉಪಾಸನೆಗಳೂ ಇದಕ್ಕಾಗಿಯೇ ಬಂದಿರುತ್ತವೆ. ಶಾನ್ತೋದಾನ್ತ ಉಪರತಸ್ತಿತಿಕ್ಷುಃ ಶ್ರದ್ಧಾವಿತ್ತೋ ಭೂತ್ವಾ ಆತ್ಮನ್ಯೇವಾತ್ಮಾನಂ ಪಶ್ಯೇತ್' ಶಮದಮಾದಿಗಳಿಂದೊಡಗೂಡಿ ತನ್ನಲ್ಲಿಯೇ ಆತ್ಮನನ್ನು ಕಂಡುಕೊಳ್ಳುವದಕ್ಕೆ ಯತ್ನಿಸಬೇಕು-ಎಂಬ ಶ್ರುತಿಯು ಇದನ್ನೇ ಹೇಳುತ್ತದೆ. ಯಮನಿಯಮಗಳನ್ನು ಅಭ್ಯಾಸಮಾಡುವದು ಇಲ್ಲಿ ಬಹಳ ಅವಶ್ಯವಾಗಿರುತ್ತದೆ. ವೇದಾಂತವು ಗಹನವಾದದ್ದು, ಅದು ನಮಗೆ ಹಿಡಿಯುವದಿಲ್ಲ' ಎನ್ನುವವರು ಅನೇಕರು ಇರುತ್ತಾರೆ. ಆದರೆ ಕಾಲಕಾಲಕ್ಕೆ ಏಳುವದು, ಸ್ನಾನಾದಿಗಳನ್ನು ಆಚರಿಸುವದು, ಗುರುಹಿರಿಯರನ್ನು ನಮಸ್ಕರಿಸಿಸುವದು, ಭಗವಚ್ಚಿಂತನೆಮಾಡುವದು- ಇವೇ ಮುಂತಾದ ಆಚಾರಗಳನ್ನಿಟ್ಟುಕೊಳ್ಳುವದಕ್ಕೆ ಮಾತ್ರ ಅವರು ಮನಸ್ಸನ್ನು ಒಗ್ಗಿಸಿಕೊಂಡಿರುವದಿಲ್ಲ. ದೇಶಭಕ್ತಿ, ಭಾಷಾಭಕ್ತಿ ಇವುಗಳೆಲ್ಲ ಈಶ್ವರಭಕ್ತಿಯ ಒಂದುಭಾಗ ಎಂಬುದು ಅವರಿಗೆ ಹೊಳೆದಿರುವದಿಲ್ಲ. ಸರ್ವರಲ್ಲಿಯೂ

ಇರುವ ಪರಮಾತ್ಮನನ್ನು ಕಂಡುಕೊಳ್ಳುವದೇ ನಮ್ಮ ಜೀವನದ ಹೆಗ್ಗುರಿ, ಆತ್ಮಲಾಭಕ್ಕಿಂತ ಹೆಚ್ಚಿನ ಲಾಭವಿಲ್ಲ. ಇದನ್ನರಿತು ಆತ್ಮಲಾಭಕ್ಕಾಗಿ ಮಾಡಬೇಕಾದ ಸರ್ವಸಾಧನಗಳನ್ನೂ ಮಾಡುವದಕ್ಕೆ ನಾವು ಸಿದ್ಧರಾಗಬೇಕು.

★★★★★

# ತತ್ತ್ವಸಾಕ್ಷಾತ್ಕಾರಕ್ಕೆ ಬೇಕಾದ ಸಾಧನ

## 29-4-1958

**ಶ್ರೀಗಳವರು**

ವೇದಾಂತದಲ್ಲಿ 'ಸಿದ್ಧಾಂತಭಾಗ', 'ಸಾಧನಭಾಗ' - ಎಂಬ ಎರಡೂ ಇವೆ. ಪ್ರಪಂಚವೆಲ್ಲವೂ ನಿಜವಾಗಿ ಚಿನ್ಮಯವಾಗಿರುತ್ತದೆ. ಆ ಚಿತ್ತತ್ತ್ವವು ನಮ್ಮ ಆತ್ಮನೇ ಆಗಿರುವದರಿಂದ ಅದನ್ನು ಕಂಡುಕೊಂಡು ಧನ್ಯರಾಗುವದು ಮಾತ್ರ ಉಳಿದಿದೆ. 'ಆತ್ಮನ್ಯೇವಾತ್ಮಾನಂ ಪಶ್ಯೇತ್' ತನ್ನಲಿಯೇ ಪರಮಾತ್ಮನನ್ನು ಕಂಡುಕೊಳ್ಳಬೇಕು – ಎಂದು ಶ್ರುತಿ ಸಾರುತ್ತಿದೆ. ತಿಳಿಯದ ಜನರು 'ವೇದಾಂತಿಗಳು ಅಲಸರು' ಎಂಬ ಮಿಥ್ಯಾಪವಾದವನ್ನು ಅವರ ಮೇಲೆ ಹೊರಿಸಿರುತ್ತಾರೆ. ಸರಿಯಾಗಿ ನೋಡಿದರೆ ಯಾರು ದೇಹಾತ್ಮವಾದವನ್ನು ನಂಬಿರುವರೋ ಅವರು ಸ್ವಾರ್ಥವಿದ್ದಲ್ಲಿ ಕೆಲಸಮಾಡುತ್ತಾರೆ ; ಇಲ್ಲದಿದ್ದರೆ ಕೈ ಕಟ್ಟಿ ಕುಳಿತುಕೊಳ್ಳುತ್ತಾರೆ. ಪರಮಾತ್ಮನೇ ಈ ಇಡಿಯ ಜಗತ್ತಿಗೆ ಆತ್ಮನು ಎಂಬ ಸಿದ್ಧಾಂತವನ್ನು ತಿಳಿದ ಪರಮಾರ್ಥಸಾಧಕನು ಕೂಡಲೆ ಅದನ್ನು ತಿಳಿದು ಕೃತಕೃತ್ಯನಾಗಲು ಪ್ರಯತ್ನಿಸುತ್ತಾನೆ. ಹೀಗೆ ಜಿಜ್ಞಾಸುವೇ ಅಲಸನಾಗಿರುವದಕ್ಕಿಲ್ಲ; ಶ್ರವಣಮನನನಿಧಿಧ್ಯಾಸನಗಳಲ್ಲಿ ನಿತ್ಯನಿರತನಾಗಿರುವವನಲ್ಲವೆ, ಜಿಜ್ಞಾಸು ? ಹೀಗಿರುವಲ್ಲಿ ಎಲ್ಲರಿಗೂ ನನ್ನ ಆತ್ಮನೇ ಆತ್ಮನು ಎಂದರಿತಿರುವ ಜ್ಞಾನಿಯು ಹೇಗೆತಾನೆ ಅಲಸನಾಗಿದ್ದಾನು ?

ಈವರೆಗೆ ಬರಿಯ ಸಿದ್ಧಾಂತಭಾಗವನ್ನೇ ಹೇಳಿದ್ದಾಗಿದೆ. ಈ ದಿನ ಸಾಧನ ಭಾಗವನ್ನು ಸ್ವಲ್ಪ ವಿಚಾರಿಸೋಣ. ಪಾಕಶಾಸ್ತ್ರವನ್ನು ಓದಿದಮಾತ್ರದಿಂದ ಅಡಿಗೆ ಮಾಡುವದಕ್ಕೆ ಬರುವದಿಲ್ಲವಷ್ಟೆ ? ಪರಮಾರ್ಥವನ್ನು ಮನಸ್ಸಿನಿಂದಲೇ ತಿಳಿದುಕೊಳ್ಳಬೇಕಾಗುತ್ತದೆ. **''ಮನಸೈವೇದಮಾಪ್ತವ್ಯಂ ನೇಹ ನಾನಾಸ್ತಿ ಕಿಞ್ಚನ । ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ ॥''** ದ್ವೈತದರ್ಶಿಯಾದ ಮನಸ್ಸಿನಿಂದ ನಾನಾತ್ವಶೂನ್ಯವಾದ ಅದ್ವೈತವನ್ನು ಅರಿತುಕೊಳ್ಳಬೇಕಾಗಿದೆ; ಅರಿತಮೇಲೆ ಯಾವ ದ್ವೈತವೂ ಉಳಿದಿರುವದಿಲ್ಲ. ಆದರೂ ಮನಸ್ಸಿನ ಸಿದ್ಧತೆಗಾಗಿ ಕೆಲವು ಬಾಹ್ಯಸಾಧನಗಳೂ ಬೇಕು. (1) ಮೊಟ್ಟಮೊದಲು ತತ್ತ್ವಜಿಜ್ಞಾಸುಗಳಿರುವ ಪ್ರತಿಯೊಂದು ಊರಿನಲ್ಲಿಯೂ ಒಂದೊಂದು ಅಧ್ಯಾತ್ಮಪ್ರಕಾಶ ಕಾರ್ಯಾಲಯವಿರಬೇಕು. ಅಧ್ಯಾತ್ಮವೆಂಬುದು ಇಡಿಯ ಜಗತ್ತಿನ ಆತ್ಮತತ್ತ್ವ; ಅದನ್ನು ಪ್ರಕಾಶಗೊಳಿಸಿಕೊಳ್ಳುವದೆಂದರೆ ಅರಿತುಕೊಳ್ಳುವದು, ಅವ್ಯಕ್ತವಾಗಿರುವದನ್ನು ಮನಸ್ಸಿಗೆ ವ್ಯಕ್ತಪಡಿಸಿಕೊಂಡು ಮನದಟ್ಟುಮಾಡಿಕೊಳ್ಳುವದು. (2) ಬ್ರಾಹ್ಮೀಮುಹೂರ್ತದಲ್ಲಿ ಏಳಬೇಕು. ಆ ಕಾಲದಲ್ಲಿ ಮನಸ್ಸು ಸ್ವಭಾವದಿಂದಲೇ ಶಾಂತವಾಗಿರುತ್ತದೆ. (3) ಆ ಬಳಿಕ ಸ್ನಾನವನ್ನು ಮಾಡಿ ಶುಚಿಯಾದ ಒಗೆದ ಬಟ್ಟೆಗಳನ್ನು ಧರಿಸಿಕೊಂಡು ಪರಮಾತ್ಮನ ಚಿಂತನೆಮಾಡಬೇಕು. (4) ಪರಮಾತ್ಮನ ಚಿಂತನೆಯು ಸುಲಭವಾಗಿ ದಕ್ಕುವದಿಲ್ಲ. ಅದಕ್ಕೆ ತಕ್ಕ ಸಿದ್ಧತೆ ಬೇಕಾಗಿರುತ್ತದೆ. ಪ್ರಾಣಾಯಾಮ, ಯಮನಿಯಮಗಳು, ಆಸನಜಯ – ಇವನ್ನು ಸಂಪಾದಿಸಿಕೊಳ್ಳಬೇಕು. (5) ಈ ಸಾಧನಗಳು ಅಳವಡುವದಕ್ಕೆ ಒಬ್ಬ ಗುರುವಿನ ಉಪದೇಶವು ಬೇಕಾಗುತ್ತದೆ. ಸದ್ಗುರುವಿನಿಂದ ಚಾಕ್ಷುಷದೀಕ್ಷೆಯನ್ನು ಹೊಂದಿದವರ ಮನಸ್ಸಿನಮೇಲೂ ಸತ್ಪರಿಣಾಮವಾಗುತ್ತದೆ. (6) ಶರೀರೇಂದ್ರಿಯಮನಸ್ಸುಗಳು ಶುದ್ಧವಾಗಿದ್ದರೆ ವಾಕ್ಕೂ ಶುದ್ಧವಾಗಿರುತ್ತದೆ; ಶುದ್ಧವಾದ ವಾಕ್ಕಿನಿಂದ ಮನಸ್ಸಿನ ಮೇಲೂ ಒಳ್ಳೆಯ ಪರಿಣಾಮವಾಗುತ್ತದೆ. ಮಿಕ್ಕ ಮಾತುಗಳನ್ನು ಬಿಡಿರಿ, ಆ ಆತ್ಮನ ಮಾತನ್ನೇ ಆಡಿರಿ, ಆತನೊಬ್ಬನನ್ನೇ ಚಿಂತಿಸಿರಿ – ಎಂದು ಶ್ರುತಿಯಲ್ಲಿ ಹೇಳಿರುತ್ತದೆ. ಹಿರಿಯರ ವಾಕ್ಕು

ಶುದ್ಧವಾಗಿದ್ದರೆ ಅವರ ಮಕ್ಕಳೂ ಅದನ್ನು ಕಲಿತುಕೊಳ್ಳುವರು. (7) ಮನಸ್ಸಿನಲ್ಲಿ ಉತ್ತಮವಾದ ವಿಚಾರಗಳಿರಬೇಕು. ಇದನ್ನು ಪ್ರೋತ್ಸಾಹಿಸುವಂತೆ ಮನೆಯಲ್ಲಿ ಭಗವಂತನ ಸಗುಣ ಸಾಕಾರಮೂರ್ತಿಗಳ ಚಿತ್ರಗಳು, ಭಗವದ್ಭಕ್ತರ ಚಿತ್ರಗಳು - ಇಂಥ ಸನ್ನಿವೇಶಗಳಿರಬೇಕು. ಕುಟುಂಬದವರೆಲ್ಲ ಒಂದುಕಡೆ ಸೇರಿ ಭಗವಂತನ ಪೂಜೆ, ಸ್ತೋತ್ರ, ನಮಸ್ಕಾರ, ಭಜನೆ - ಮುಂತಾದವುಗಳನ್ನು ಮಾಡುತ್ತಿರಬೇಕು. ಪರಮಾತ್ಮನೊಬ್ಬನೇ ಪರಮಾರ್ಥತತ್ತ್ವವಾಗಿದ್ದರೂ ನಮ್ಮ ಪಾಲಿಗೆ ಆತನ ವಿಭೂತಿಗಳು ಕೂಡ ಕಾಣಿಸುತ್ತಿಲ್ಲ. ಎಲ್ಲವೂ ಅಚೇತನವಾದ ಭೂತಭೌತಿಕಪದಾರ್ಥಗಳಾಗಿ ಕಾಣುತ್ತಿವೆ. ಆದ್ದರಿಂದ ಮತ್ತೆ ಸರ್ವತ್ರ ಭಗವದ್ದರ್ಶನಾಭ್ಯಾಸವು ಆಗುವಂತೆ ಮಾಡಿಕೊಳ್ಳುವದರಿಂದ ನಮ್ಮ ಈಗಿನ ಮೋಹವು ಹೋಗಿಬಿಡುತ್ತದೆ. ದುರಾಚಾರಗಳನ್ನು ಬಿಟ್ಟು, ಮನಸ್ಸಿಗೆ ಯಾವಾಗಲೂ ಶುಚಿಯಾದ ಸತ್ಸಂಸ್ಕಾರಗಳನ್ನು ಕೊಟ್ಟಂತೆಲ್ಲ ಎಲ್ಲೆಲ್ಲಿಯೂ ಪರಮಾತ್ಮನೊಬ್ಬನೇ ಇದಾನೆ ಎಂಬ ವೇದಾಂತ ಸಿದ್ಧಾಂತವು ಮನದಟ್ಟಾಗುತ್ತಾ ಹೋಗುವದು.

ಇದನ್ನೆಲ್ಲ ಈಗಿನ ಸಮಾಜದಲ್ಲಿ ಅನುಷ್ಠಾನಮಾಡುವದಕ್ಕಾದೀತೆ ? ಎಂದು ಕೇಳದಿರಿ. ಸ್ವಾಮಿ ವಿವೇಕಾನಂದರು ಹೇಳಿದಂತೆ 'ಸಮಾಜವು ತತ್ತ್ವಕ್ಕೆ ಹೊಂದಿಕೊಳ್ಳಬೇಕೇ ಹೊರತು, ತತ್ತ್ವವು ಸಮಾಜಕ್ಕೆ ಹೊಂದಿಕೊಳ್ಳುವಹಾಗಿಲ್ಲ.' ನಿಮಗೆ ಮನಸ್ಸಿದ್ದರೆ ಈ ನಿಮ್ಮ ಸಮಾಜವನ್ನು ತತ್ತ್ವಕ್ಕೆ ಹೊಂದಿಕೊಳ್ಳುವಂತಯೇ ಏರ್ಪಡಿಸಿಕೊಳ್ಳಬಹುದು. ಶುದ್ಧಾಚಾರ, ಶುದ್ಧಭಾಷಣ, ಶುದ್ಧವಿಚಾರ - ಇವುಗಳು ಯಾವ ಸಮಾಜದಲ್ಲಿಲ್ಲವೋ ಅದು ನಿಜವಾದ ಸಮಾಜವೇ ಅಲ್ಲ. ಸಾಧನವನ್ನು ಮಾಡಿರಿ, ಆಗ ನೀವು ನಿತ್ಯಶುದ್ಧಬುದ್ಧಮುಕ್ತಸ್ವಭಾವವಾದ ಅದ್ವೈತ ಬ್ರಹ್ಮವೇ ಎಂಬುದು ಸುಸ್ಪಷ್ಟವಾಗಿ ಮನವರಿಕೆಯಾಗುತ್ತದೆ.

★★★★★

# ಜಗದ್ಗುರು ಶಂಕರಾಚಾರ್ಯರ ಬೋಧೆ

## 13-5-1959

**ಶ್ರೀಶ್ರೀಗಳವರು**

ವೈಶಾಖಮಾಸವು ಶಂಕರ, ರಾಮಾನುಜ, ಬಸವ, ಬುದ್ಧ-ಮುಂತಾದ ಅನೇಕ ಆಚಾರ್ಯರುಗಳ ಅವತಾರದ ಕಾಲ. ಲೋಕದಲ್ಲಿ ಹೀಗೆ ಅವತರಿಸಿದ ಆಚಾರ್ಯರುಗಳಲ್ಲಿ ಶಂಕರಾಚಾರ್ಯರಿಗೆ ಒಂದು ಅಸಾಧಾರಣ ಸ್ಥಾನವಿದೆ. ಬಗೆಬಗೆಯ ಬಿರುದುಗಳನ್ನು ಪ್ರದರ್ಶನಮಾಡಿಕೊಂಡು ಶಿಷ್ಯಾರ್ಜನೆಮಾಡುವ ಹಲವು ಆಚಾರ್ಯರುಗಳಿರಬಹುದು. ಆದರೆ ನಿಜವಾಗಿ ಜಗದ್ಗುರುಗಳೆಂಬ ಹೆಸರು ಈ ಆಚಾರ್ಯರಿಗೆ ಮಾತ್ರ ಅನ್ವರ್ಥವಾಗಿರುತ್ತದೆ. ಇವರಿಗೆ ಶಿಷ್ಯರನೇಕರು ಇದಾರೆಂಬ ಅರ್ಥದಲ್ಲಲ್ಲ, ಇವರನ್ನು ನಾವು ಜಗದ್ಗುರುಗಳೆಂದು ಕರೆಯುವದು. ಸದ್ಗುರುವು ಉಪದೇಶಮಾಡಿದರೆ ಅದು ಕಾರ್ಯಕಾರಿಯೇ ಆಗಬೇಕು; ಆ ದೃಷ್ಟಿಯಿಂದ ಈ ಆಚಾರ್ಯರಿಗೆ ಜಗದ್ಗುರುಸ್ಥಾನವು ದೊರಕುತ್ತದೆ ಎಂದು ನನಗೆ ತೋರುತ್ತದೆ. ''**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ । ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ । ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಣ್ಡವ । ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ॥**'' **(ಗೀ.4-34,35)** ನಿಜವಾದ ಗುರುಗಳು ಹೇಳಿದ್ದನ್ನು ಅರಿತುಕೊಂಡರೆ, ಈಗಿರುವಂತೆ ನಮಗೆ ಮೋಹವಿರುವದಿಲ್ಲ ; ಸರ್ವಭೂತಗಳೂ ನನ್ನಲ್ಲಿಯೂ ಪರಮಾತ್ಮನಲ್ಲಿಯೂ ಇವೆ ಎಂಬ ಅಮೋಘ ತತ್ತ್ವವು ಕಣ್ಣಿಗೆ ಕಟ್ಟಿದಂತೆ ಆಗಿಬಿಡುತ್ತದೆ. ಈ ದೃಷ್ಟಿಯಿಂದ ಶಂಕರಭಗವತ್ಪಾದರವರ ಗುರುತ್ವವನ್ನು ನಾವು ಪರೀಕ್ಷಿಸಬೇಕು.

ಶಂಕರಭಗವತ್ಪಾದರ ಚರಿತ್ರೆಗಳು ಹಲವು ಇವೆ. ಅವುಗಳಲ್ಲಿ ಯಾವವೂ ವಿಶ್ವಾಸಾರ್ಹವಾದ ವಿಷಯವನ್ನು ತಿಳಿಸುವಂತೆ ಕಾಣುವದಿಲ್ಲ. ಆದರೆ ಅವರ ಭಾಷ್ಯಗಳು ಇನ್ನೂ ಜೀವಂತವಾಗಿವೆ. ಅವು ಅವರ ವಾಣಿಯೇ ಆಗಿವೆ. ಅವನ್ನು

ಮನಃಪೂರ್ವಕವಾಗಿ ಓದಿ ಹೃದಯಕ್ಕೆ ಅಂಟುವಂತೆ ಮಾಡಿಕೊಂಡರೆ ಅವರ **ಪ್ರಧಾನೋಪದೇಶವು** ಯಾವದೆಂಬ ವಿಷಯಕ್ಕೆ ಸಂಶಯವುಳಿಯುವಂತಿಲ್ಲ. ಆಚಾರ್ಯರು ಉಪನಿಷತ್ತಿನಲ್ಲಿ ನೇತಿ ನೇತಿ ಎಂದು ವರ್ಣಿಸಿರುವ ಔಪನಿಷದಪುರುಷನನ್ನು 'ಸಾಕ್ಷಿ' ಎಂದು ಅರಿತುಕೊಳ್ಳಬೇಕೆಂದು ಸ್ಫುಟಗೊಳಿಸಿ ತಿಳಿಸಿರುತ್ತಾರೆ. **ಸಾಕ್ಷಿಯ ತತ್ತ್ವವನ್ನು ಪೂರ್ವಮೀಮಾಂಸಾಶಾಸ್ತ್ರದಲ್ಲಾಗಲಿ ತರ್ಕದರ್ಶನಗಳಲ್ಲಾಗಲಿ ಹೇಳಿಲ್ಲ ; ಇದೇ ವೇದಾಂತದ ಅಸಾಧಾರಣ ವಿಷಯ.** ''ನ ಅಹಂಪ್ರತ್ಯಯ ವಿಷಯಕರ್ತೃವ್ಯತಿರೇಕೇಣ ತತ್ಸಾಕ್ಷೀ ಸರ್ವಭೂತಸ್ಥಃ, ಸಮಃ. ಏಕಃ, ಕೂಟಸ್ಥನಿತ್ಯಃ ಪುರುಷೋ ವಿಧಿಕಾಣ್ಡೇ ತರ್ಕಸಮಯೇ ವಾ ಕೇನಚಿದಧಿಗತಃ ಸರ್ವಸ್ಯಾಽಽತ್ಮಾ'' ಎಂದು ಅವರು ಘಂಟಾಘೋಷವಾಗಿ ಸಾರಿರುತ್ತಾರೆ. ಆಚಾರ್ಯರು ಮಿಕ್ಕವರಂತೆ ಶ್ರುತಿವಾಕ್ಯಗಳು ಸುಮ್ಮನೆ ನಂಬತಕ್ಕವೆಂದು ಉದಾಹರಿಸಿಲ್ಲ. ಅವು ಇರುವ ತತ್ತ್ವವನ್ನು ಜ್ಞಾಪಿಸುತ್ತವೆ ಎಂಬ ಕಾರಣದಿಂದ ಅವರು ಅಂಥ ವಾಕ್ಯಗಳನ್ನು ಉದಾಹರಿಸಿರುತ್ತಾರೆ. **''ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥'' (ಶ್ವೇ.6-11)** ಸ್ವಯಂಪ್ರಕಾಶನಾದ ಸಾಕ್ಷಿಯಾದ ಆತ್ಮನಿಗೆ ಸಾಕ್ಷ್ಯವಾಗದ್ದು ಯಾವದೊಂದೂ ಇಲ್ಲ ; ಅವನ ಸಂನಿಧಿಯಲ್ಲಿ ಆಗದಿರುವದು ಯಾವದೂ ಇಲ್ಲ. ನಮ್ಮ ಕರ್ಮಗಳಿಗೆಲ್ಲ ಅಧ್ಯಕ್ಷನು ಅವನೇ, ಸರ್ವ ಪ್ರಾಣಿಗಳಲ್ಲಿಯೂ ಇರುವವನೂ ಆತನೇ, ಚೈತನ್ಯಸ್ವರೂಪನು, ಅದ್ವಿತೀಯನು, ನಿರ್ಗುಣನು- ಎಂದು ಶ್ವೇತಾಶ್ವತರ್‌ಶ್ರುತಿಯು ಸಾರುತ್ತಿದೆ.

ಅದೇ ಶ್ರುತಿಯಲ್ಲಿ ಒಬ್ಬ ಋಷಿಯು ಹೀಗೆಂದಿರುತ್ತಾನೆ: **ವೇದಾಹಮೇತಂ ಪುರಷಂ ಮಹಾನ್ತಮ್ । ಆದಿತ್ಯವರ್ಣಂ ತಮಸಃ ಪರಸ್ತಾತ್ । ತಮೇವ ವಿದಿತ್ವಾಽತಿಮೃತ್ಯುಮೇತಿ ನಾನ್ಯಃ ಪನ್ಥಾ ವಿದ್ಯತೇಽಯನಾಯ ॥'' (ಶ್ವೇ.3-8)** ಈ ಮಹಾಪುರುಷನನ್ನು ನಾನು ಬಲ್ಲೆನು. ಆತನು ಅಜ್ಞಾನತಮಸ್ಸಿನ ಆಚೆಯಿರುವ ಆದಿತ್ಯಪ್ರಕಾಶನು. **ಆತನನ್ನು ಅರಿತುಕೊಂಡರೇ ಮೃತ್ಯುವನ್ನು ದಾಟುವರು, ಹಾಗೆ ದಾಟುವದಕ್ಕೆ ಮತ್ತೊಂದು ಹಾದಿಯಿರುವದಿಲ್ಲ.** ಋಷಿ ಎಂದರೆ ತತ್ತ್ವವನ್ನು ಕಂಡುಕೊಂಡವನು. ಈ ಸರ್ವಾತ್ಮನಾದ ಪುರುಷನನ್ನು

ಅರಿತುಕೊಂಡರೆ ಅಜ್ಞಾನವು ಹೋಗಿಬಿಡುತ್ತದೆ; ತತ್ತ್ವವು ಸೂರ್ಯಪ್ರಕಾಶದಂತೆ ಸ್ಫುಟವಾಗಿ ಕಂಡುಬರುತ್ತದೆ; ಇದನ್ನು ಅರಿತುಕೊಂಡರೇ ಮರ್ತ್ಯರು ಮೃತ್ಯುವನ್ನು ದಾಟುವರು, ಇದಕ್ಕೆ ಮತ್ತೊಂದು ಉಪಾಯವಿಲ್ಲ - ಎಂದು ಈ ಋಷಿಯು ಎದೆತಟ್ಟಿಕೊಂಡು ಹೇಳಿರುತ್ತಾನೆ. ಶಂಕರಾಚಾರ್ಯರು ಇದು ಅನುಭವಕ್ಕೆ ಬರುವ ವಿಷಯವೆಂದು ಸುಸ್ಪಷ್ಟವಾಗಿ ಆಡಿರುತ್ತಾರೆ.

ಶ್ರುತಿಯು 'ಇಹ ಚೇದವೇದೀದಥ ಸತ್ಯಮಸ್ತಿ ನ ಚೇದಿಹಾವೇದೀನ್ಮಹತೀ ವಿನಷ್ಟಿಃ' ಇಲ್ಲಿಯೇ ಅರಿತುಕೊಂಡರೆ ಪರಮಾರ್ಥವು ದಕ್ಕುತ್ತದೆ, ಇಲ್ಲಿ ಅರಿತುಕೊಳ್ಳದಿದ್ದರೆ ದೊಡ್ಡ ನಷ್ಟವಾಗುವದು ಎನ್ನುತ್ತಿದೆ, ಶಂಕರಭಗವತ್ಪಾದರೂ ಇದನ್ನನುಸರಿಸಿ **ಈ ಜನ್ಮದಲ್ಲಿಯೇ ಪರತತ್ತ್ವವನ್ನು ಅರಿತುಕೊಳ್ಳಬಹುದು ; ಅದನ್ನು ಅರಿಯುವದೇ ಪರಮಪುರುಷಾರ್ಥ. ಅದನ್ನರಿತುಕೊಳ್ಳದಿದ್ದವರಿಗೆ ಆಗುವ ಅನುಭವವೆಲ್ಲವೂ ಅವಿದ್ಯಾಕ್ಷೇತ್ರವಾದ ಸಂಸಾರವೇ** ಎಂದು ಹೇಳುತ್ತಿದಾರೆ. ವೇದವು ಇರುವ ತತ್ತ್ವವನ್ನೇ ಹೇಳುವದೆಂಬುದು ನಿಜವಾದರೆ ಶಂಕರಭಗವತ್ಪಾದರವರು ಹೇಳುವಂತೆ ಅದು ಈಗಲೆ ಶ್ರದ್ಧಾವಂತರಾದ ಸೂಕ್ಷ್ಮದರ್ಶಿಗಳಾದ ಅಧಿಕಾರಿಗಳಿಗೆಲ್ಲ ಅನುಭವಕ್ಕೆ ಬರಲೇಬೇಕು. ಹಾಗೆ ಬಂದೇಬರುತ್ತದೆ ಎಂಬುದು ಶಂಕರಾಚಾರ್ಯರ ಉಪದೇಶ. 'ಪರಮಾತ್ಮನು ಎಲ್ಲ ಪ್ರಾಣಿಗಳಿಗೂ ಆತ್ಮನು, ಇಡಿಯ ಜಗತ್ತಿಗೇ ಆತ್ಮನು; ಹಾಗೆಂದು ಈಗಲೇ ಅಧಿಕಾರಿಗಳು ಅರಿತುಕೊಳ್ಳಬಹುದು. ಅರಿತುಕೊಂಡವರು ಮರ್ತ್ಯತ್ವವನ್ನು ದಾಟಿ ಅಮೃತರಾಗುವರು' ಎಂದು ಬೋಧಿಸುವ ಈ ಜಗದ್ಗುರುಗಳ ಉಪದೇಶವನ್ನು ಇನ್ನಷ್ಟು ಒಳಹೊಕ್ಕು ವಿಚಾರಿಸೋಣ.

★★★★★

# ಉಪನಿಷದ್ಗಮ್ಯವಾದ ಪರಮಾತ್ಮನ ಕಲ್ಪನೆ

**14-5-1959**

**ಶ್ರೀಶ್ರೀಗಳವರು**

ಶ್ವೇತಾಶ್ವತರೋಪನಿಷತ್ತಿನಲ್ಲಿ ಹೇಳಿರುವ ಪರಮಾತ್ಮಕಲ್ಪನೆಯಲ್ಲಿರುವ ವಿಶೇಷಣಗಳನ್ನು ಮನದಂದುಕೊಳ್ಳುವದರಿಂದ ಲಾಭವುಂಟು. ಪರಮೇಶ್ವರನ ಭಯಭಕ್ತಿಯನ್ನು ಸಾಧನವಾಗಿ ಹೇಳುವ ಮತಗಳು ವಿದೇಶೀಯರಲ್ಲೂ ಇವೆ. ಆದರೆ ಅವರಿಗೆ ಉಪನಿಷತ್ತಿನಲ್ಲಿರುವ ಪರಮಾತ್ಮನ ಕಲ್ಪನೆಯು ಆಶ್ಚರ್ಯಕರವಾಗಿರುತ್ತದೆ. ಅಭೇದಾನಂದರು ದ್ವೀಪಾಂತರದಲ್ಲಿ ಮಾಡಿದ ಭಾಷಣವೊಂದರಲ್ಲಿ ಪರಮೇಶ್ವರನು ಸರ್ವವ್ಯಾಪಿ, ಸರ್ವಜ್ಞನು, ಸರ್ವಶಕ್ತನು-ಎಂದು ಎಲ್ಲಾ ಮತಗಳವರೂ ಹೇಳುತ್ತಾರೆ; ಆದರೂ ''ನಮ್ಮ ದೇವರು ಹೆಚ್ಚು, ಅವರ ದೇವರು ಕಡಿಮೆ' ಎನ್ನುತ್ತಾರೆ. ಇಂಥ ಅಸಾಧಾರಣ ಧರ್ಮಗಳುಳ್ಳ ಈಶ್ವರನು ಒಬ್ಬನಿದ್ದಾನೇ ಹೊರತು ಇಬ್ಬರು ಇರಲು ಸಾಧ್ಯವೇ ಇಲ್ಲ'' ಎಂದು ವಾದಿಸಿದರು. ಆ ವಾದದಲ್ಲಿ ಒಂದು ಮಹಾತತ್ತ್ವವು ಅಡಗಿದೆ. ಪರಮೇಶ್ವರನನ್ನು ನಂಬುವವರಲ್ಲಿ ಕೂಡ ಮತ್ತೊಬ್ಬರ ದೇವರನ್ನು ಹೀಯಾಳಿಸುವ ಬುದ್ಧಿ ಇರುತ್ತದೆ; ತಮ್ಮ ದೇವರ ಹೆಸರಿನಲ್ಲಿ ಇನ್ನೊಬ್ಬ ದೇವರನ್ನು ನಂಬುವವರನ್ನು ಚಿತ್ರಹಿಂಸೆಮಾಡುವವರೂ ಇದಾರೆ. ಇದು ಇಬ್ಬರು ದೇವರ ಕಲ್ಪನೆಯಲ್ಲವೆ? ಇಂಥದ್ದು ನಮ್ಮ ದೇಶದಲ್ಲಿಯೂ ಕಾಣಿಸಿಕೊಂಡದ್ದುಂಟು. ದಕ್ಷಿಣದೇಶದಲ್ಲಿ ಶೈವವೈಷ್ಣವರ ಮತಭೇದವು ಮಿತಿಮೀರಿದ್ದಾಗ ಒಬ್ಬರನ್ನೊಬ್ಬರು ಹಿಂಸಿಸುವದಕ್ಕೆ ಹಿಂಜರಿಯಲಿಲ್ಲ. ವಿಷ್ಣುವೇ ಸರ್ವೋತ್ತಮನು ಎಂದ ಶ್ರೀರಾಮಾನುಜಾಚಾರ್ಯರ ಕಣ್ಣುಗಳನ್ನು ಕೀಳಿಸಬೇಕೆಂದು ಶೈವರಾಜನೊಬ್ಬನು ಪ್ರಯತ್ನಿಸಿದನೆಂಬ ಕಥೆಯನ್ನು ತಾವೆಲ್ಲ ಕೇಳಿರುವಿರಿ. ಅಲ್ಲಿ ಈಶ್ವರನ ವಿಭೂತಿಯುಕ್ತಸ್ವರೂಪದ ವಿಷಯಕ್ಕೆ ಆದ ಮತ ಭೇದದಿಂದ ಮತಾಂಧತೆಯುಂಟಾಯಿತು. ಸಗುಣೇಶ್ವರವಾದಿಗಳು ಹೇಳುವಂತೆ ಈಶ್ವರನಿಗೆ ಅನಂತಕಲ್ಯಾಣಗುಣಗಳೂ ಆಕಾರವೂ ಆಯುಧಾದಿಗಳೂ ಅನುಗುಣವಾದ

ಪತ್ನಿಯೂ ಪರಿವಾರವೂ ಇವೆಯೆಂಬುದೇನೂ ಅಸಂಭಾವಿತವಲ್ಲ; ಅಂಥ ಸಾಕಾರ ಸಗುಣೋಪಾಸನೆಯನ್ನು ವೇದದಲ್ಲಿ ಹೇಳಿಯೂ ಇರುತ್ತದೆ. ಅದನ್ನು ಅನುಷ್ಠಾನ ಮಾಡಿ ಸಾಧಕರು ಕೃತಕೃತ್ಯರೂ ಆಗುತ್ತಾರೆ. ಆದರೆ ಇದಕ್ಕಿಂತಲೂ ವಿಲಕ್ಷಣವಾದ ಆ ಪರಮೇಶ್ವರನ ಪರಮಾರ್ಥರೂಪವೊಂದು ಇದೆಯೆ? ಆ ಸ್ವರೂಪವನ್ನು ನಾವು ಎಲ್ಲಿ ಹೇಗೆ ಕಂಡುಕೊಳ್ಳಬಹುದು?- ಎಂಬ ಪ್ರಶ್ನೆಗೆ '**ಯೋ ವೇದ ನಿಹಿತಂ ಗುಹಾಯಾಮ್**'- ಆತನು ನಮ್ಮ ಹೃದಯಗುಹೆಯಲ್ಲಿಯೇ ಇರುತ್ತಾನೆ. ನಮ್ಮ ಹೃದಯದಲ್ಲಿ ಮಾತ್ರವಲ್ಲ, ಸರ್ವಭೂತಗಳ ಹೃದಯದಲ್ಲಿಯೂ ಇರುತ್ತಾನೆ. ಬ್ರಹ್ಮಾದಿಸ್ತಂಬಪರ್ಯಂತವಾದ ಭೂತಗಳೆಲ್ಲಕ್ಕೂ **ಅಂತರಾತ್ಮ** (ತೀರ ಒಳಗಿನ ತಿರುಳು) ಆಗಿರುತ್ತಾನೆ-ಎಂಬ ಉತ್ತರವನ್ನು ಶ್ರುತಿಯು ಕೊಟ್ಟಿರುತ್ತದೆ.

ಆತ್ಮನು ಅಣುವಿಗಿಂತಲೂ ಅಣು, ಮಹತ್ತಿಗಿಂತಲೂ ಮಹತ್ತು : ಈ ಸ್ವರೂಪದಲ್ಲಿ ಆತನು ಈ ಜೀವರ ಹೃದಯ ಗುಹೆಯಲ್ಲಿರುತ್ತಾನೆ-ಎಂಬುದೊಂದು ಸಾಂಕೇತಿಕಭಾಷೆ. ಹಿಂದಕ್ಕೆ ಋಷಿಗಳು ಏಕಾಂತವಾಸಕ್ಕಾಗಿ ಗುಹೆಯಲ್ಲಿ ಕುಳಿತುಕೊಂಡು ಪರಮಾತ್ಮನನ್ನು ಧ್ಯಾನಮಾಡುತ್ತಿದ್ದರು. ಅದನ್ನನುಸರಿಸಿ ಈ ಗುಹೆಯ ಉಪಮಾನವು ಇಲ್ಲಿ ಆದೃತವಾಗಿರುತ್ತದೆ. ಆ ಪರಮಾತ್ಮನು ನಮ್ಮ ಹೃದಯ ಗುಹೆಯಲ್ಲಿಯೇ ಇರುತ್ತಾನೆ : ಇಲ್ಲಿಯೇ ಆತನನ್ನು ಯಾವಾಗ ಬೇಕಾದರೂ ಕಂಡುಕೊಳ್ಳಬಹುದು-ಎಂಬುದನ್ನು '**ಏಕೋ ದೇವಃ ಸರ್ವ ಭೂತೇಷು ಗೂಢಃ**' ಎಂಬ ವಿಶೇಷಣಗಳು ತಿಳಿಸುವವು.

ಇನ್ನು '**ಕರ್ಮಾಧ್ಯಕ್ಷ**' ಎಂಬ ವಿಶೇಷಣಕ್ಕೆ ಅರ್ಥವೇನು ? ಪರಮಾತ್ಮನು ಸರ್ವಸಾಕ್ಷಿಯಾಗಿದ್ದಾನಾದ್ದರಿಂದ ಅವನಿಗೆ ಕಾಣದಂತೆ ಯಾವದೊಂದೂ ನಡೆಯುವಂತೆ ಇಲ್ಲ. ಅವನ ಸಂನಿಧಿಯಿಂದಲೇ ನಾವುಗಳು ಮಾಡುವ ಎಲ್ಲಾ ಕರ್ಮಗಳಿಗೂ ಫಲವು ಆಗುತ್ತಿರುತ್ತದೆ.

ಈಗ ಸಾಕ್ಷೀ, ಚೇತಾ, ಕೇವಲೋ, ನಿರ್ಗುಣಶ್ಚ - ಈ ವಿಶೇಷಣಗಳ ಅಭಿಪ್ರಾಯವನ್ನು ಬಿಡಿಸಿನೋಡೋಣ. ಸಾಕ್ಷಿ ಎಂಬ ಮಾತು ಸಾಕ್ಷಾತ್ತಾಗಿ ನೋಡುವವನು ಎಂಬರ್ಥದ ಸಂಜ್ಞಾನಾಮವೆಂದು ವ್ಯಾಕರಣದಲ್ಲಿ ಹೇಳಿದೆ.

ಮತ್ತೊಂದರ ಸಹಾಯದಿಂದ ವಿಷಯವನ್ನು ನೋಡುವಾಗ, ನಡುವೆ ಆದರ ತೋರಿಕೆಯಲ್ಲಿ ಯಾವಯಾವ ಮಾರ್ಪಡಾಗಿದೆಯೋ ತಿಳಿಯುವದಕ್ಕೆ ಆಗುವಂತಿರುವದಿಲ್ಲ. ಇಂದ್ರಿಯಗಳಿಂದ ನೋಡುವಾಗ ಪದಾರ್ಥಗಳು ಹೀಗೆ ತೋರುತ್ತಿವೆ ; ಅವು ಇರುವಂತೆ ಹೇಗಿವೆ ?– ಎಂಬುದನ್ನು ನೇರಾಗಿ ನೋಡಿಯೇ ಹೇಳಬೇಕು. ಆದರೆ ಹಾಗೆ ನೋಡುವದು ಸಾಧ್ಯವಿಲ್ಲ. ಮನಸ್ಸಿನಮೂಲಕವಾಗಿ ವಿಷಯಗಳನ್ನು ಪರಿಶೀಲಿಸುವಾಗ ಅದರ ಸ್ವಭಾವಕ್ಕನುಗುಣವಾಗಿ ಕೆಲಕೆಲವು ವಿಶೇಷಣಗಳು ಆ ದೃಶ್ಯಗಳಿಗೆ ಹತ್ತಿಕೊಳ್ಳಲೇಬೇಕಾಗಿದೆ ಎಂಬುದನ್ನು **ಪಶ್ಚಿಮ ದೇಶದ ತತ್ತ್ವಶಾಸ್ತ್ರಜ್ಞನಾದ ಕ್ಯಾಂಟ್** ಎಂಬಾತನು ಕಂಡುಹಿಡಿದನಂತೆ. ಪ್ರಕೃತದಲ್ಲಿ ಹೇಳುವ ಪರಮಾರ್ಥತತ್ತ್ವವು ಇಂದ್ರಿಯಗಳ ಅಪೇಕ್ಷೆಯಿಲ್ಲದೆ ತಿಳಿಯಬರತಕ್ಕದ್ದು; ಅದು ಮತ್ತೊಂದರ ನೆರವನ್ನು ಬಯಸದೆ ತಾನೇ ತನ್ನ ವಿಷಯವನ್ನು ಬೆಳಗತಕ್ಕದ್ದು. ಆದ್ದರಿಂದ ಸಾಕ್ಷಿ. ಹೀಗೆ ನೇರಾಗಿ ನೋಡುವಾಗ ನೋಡುವದೆಂಬ ಕ್ರಿಯೆಯೊಂದು ಆಗುವದೆಂದೂ ಅದಕ್ಕೆ ಅದು ಕರ್ತೃವೆಂದೂ ತಿಳಿಯಬಾರದು; ಓಡುವವನು ಎಂಬ ಕರ್ತೃವಿನಲ್ಲಿ ಓಟವೆಂಬ ಕ್ರಿಯೆಯಾಗುವಂತೆ ಅಲ್ಲ, ಈ ನೋಟ. ನೋಟವೇ ನೋಡುವವನು; ಏಕೆಂದರೆ ಸಾಕ್ಷಿಯು ಚೈತನ್ಯಸ್ವರೂಪನೇ ಆಗಿರುತ್ತಾನೆ. ಬೆಳಕೆಂಬುದು ಸೂರ್ಯನಿಗೆ ಹೇಗೆ ಸ್ವರೂಪವೇ ಆಗಿದೆಯೋ ಹಾಗೆಯೇ ಇಲ್ಲಿಯೂ ತಿಳಿಯಬೇಕು. ಇದನ್ನು ತಿಳಿಸುವದಕ್ಕೆ ಚೇತಾ ಎಂಬ ವಿಶೇಷಣವನ್ನು ಹಾಕಿರುತ್ತದೆ. ಚೇತೃ ಎಂದರೆ ಸಾಕ್ಷ್ಯವಲ್ಲದ ಸಾಕ್ಷಿಯು, ಬರಿಯರಿವು.

ಚೇತನವೆಂದರೂ ಚೈತನ್ಯವೆಂಬ (ಅರಿವೆಂಬ) ಧರ್ಮವುಳ್ಳದ್ದು ಎಂಬ ಭಾವನೆ ಬರುತ್ತದೆ. ಆದ್ದರಿಂದ ಹಾಗಲ್ಲವೆಂದು ತಿಳಿಸುವದಕ್ಕೆ ಕೇವಲ ಎಂದಿದೆ. ಧರ್ಮ, ಧರ್ಮಿ–ಎಂಬ ಭೇದವಿಲ್ಲದ ಚಿತ್ಸ್ವರೂಪವದು. ಇದನ್ನು ಇನ್ನಷ್ಟು ಸ್ಪಷ್ಟಪಡಿಸುವದಕ್ಕಾಗಿ **ನಿರ್ಗುಣಶ್ಚ** ಎಂಬ ವಿಶೇಷಣವು ಬಂದಿದೆ. ಜ್ಞಾನ, ಆನಂದ–ಮುಂತಾದವು ಪರಮಾತ್ಮನ ಸ್ವರೂಪನಿರೂಪಕ ಧರ್ಮಗಳೆಂದೂ ಜ್ಞಾನ ಸ್ವರೂಪನಾದ ಆತ್ಮನಿಗೆ ಜ್ಞಾನವೆಂಬ ಗುಣವಿರುವದೆಂದೂ ರಾಮಾನುಜಾಚಾರ್ಯರು ಹೇಳಿರುತ್ತಾರೆ. ಜೀವನೂ ಹೀಗೆಯೇ ಚಿತ್ಸ್ವರೂಪನೂ ಚಿದ್ಧರ್ಮಕನೂ ಆಗಿರುತ್ತಾನೆ ಎಂಬುದು ಅವರ

ಅಭಿಪ್ರಾಯ. ಜೀವನ ಧರ್ಮಭೂತವಾದ ಜ್ಞಾನವು ಕರ್ಮಾದಿನಿಮಿತ್ತದಿಂದ ಸಂಕೋಚವಿಕಾಸಗಳನ್ನು ಹೊಂದುತ್ತಿರುವದು. ಮುಕ್ತಿಯಲ್ಲಿ ಮಾತ್ರ ಅದು ಪೂರ್ಣವಾಗಿ ವಿಕಾಸವಾಗಿರುತ್ತದೆ-ಎಂಬುದು ಅವರ ಮತ. ಪ್ರಕೃತದಲ್ಲಿ ಶಂಕರಾಚಾರ್ಯರ ಮತದಂತೆ ನೋಡುವಾಗ ಪರಮಾತ್ಮನ ಸ್ವರೂಪವು ಕೇವಲವಾಗಿ, ಅದ್ವಿತೀಯವಾಗಿರುತ್ತದೆ ; ಅದರಲ್ಲಿ ಯಾವ ಧರ್ಮ ಧರ್ಮಿಭಾವವೂ ಇಲ್ಲ. ಈ ಅಭಿಪ್ರಾಯವು ಕೇವಲೋ ನಿರ್ಗುಣಶ್ಚ ಎಂಬ ವಿಶೇಷಣದಿಂದ ಹೊರಡುತ್ತದೆ ಎಂಬುದು ಶಂಕರಭಗವತ್ಪಾದರ ಮತವಾಗಿರುತ್ತದೆ.

ಈವರೆಗೆ ಹೇಳಿರುವ ಸಾಕ್ಷೀ, ಚೇತಾ, ಕೇವಲೋ, ನಿರ್ಗುಣಶ್ಚ- ಎಂಬ ವಿಶೇಷಣಗಳನ್ನು ಮನಸ್ಸಿನಲ್ಲಿ ಕಲ್ಪಿಸುವದಕ್ಕೆ ಪ್ರಯತ್ನಿಸಿಕೊಳ್ಳಿರಿ. ವಾಲ್ಮೀಕರು ರಾಮಾಯಣದಲ್ಲಿ ವರ್ಣಿಸಿರುವ 'ಋಷ್ಯಶೃಂಗನ' ಕಲ್ಪನೆಯನ್ನು ಮನಸ್ಸಿಗೆ ತಂದುಕೊಳ್ಳುವದು ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳಲಾರದ ಈ ಕಾಲದ ಸಾಮಾನ್ಯ ಜನರಿಗೆ ಹೇಗೆ ಕಷ್ಟತರವಾಗಿ ರುತ್ತದೆಯೋ, ಆದರೂ ಅದು ಹೇಗೆ ನಮಗೊಂದು ಆದರ್ಶವಾದ ಧ್ಯೇಯವನ್ನು ಒದಗಿಸಿಕೊಟ್ಟಿರುವದೋ, ಹಾಗೆಯೇ ಅಥವಾ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಿಂದ, ಶಂಕರಭಗವತ್ಪಾದರು ನಮ್ಮ ಮುಂದಿಟ್ಟಿರುವ ಪರಮಾತ್ಮಸ್ವರೂಪದ ಕಲ್ಪನೆಯೂ ಇಂದ್ರಿಯ ಮನಸ್ಸುಗಳಿಂದ ಮಾತ್ರವೇ ವಸ್ತುಪರೀಕ್ಷಣವನ್ನು ಮಾಡಬಲ್ಲ ನಮ್ಮಂಥವರಿಗೆ ಮನಸ್ಸಿನಲ್ಲಿ ಮಾಡಿಕೊಳ್ಳುವದಕ್ಕೆ ಕಷ್ಟತರವಾದ ಕಲ್ಪನೆಯಾಗಿರುತ್ತದೆ; ಅದರೂ ಅದನ್ನು ಅರಿತುಕೊಂಡರೆ ಪರಮಕಲ್ಯಾಣವು ನಮ್ಮದಾಗುತ್ತದೆ. ಅದನ್ನು ಶ್ರುತಿಯು ಯಾವ ವಿಶೇಷಣದಿಂದಲೂ ವರ್ಣಿಸಲಾರದೆ ನೇತಿ ನೇತಿ ಎಂದು ನಮ್ಮ ಕಲ್ಪನೆಗಳನ್ನೆಲ್ಲ ಬದಿಗೊತ್ತಿ ಅನುಭವದಿಂದ ಮಾತ್ರವೇ ಅರಿತುಕೊಳ್ಳಬೇಕೆಂದು ಹೇಳುತ್ತಿರುವದು. ಈ ತತ್ತ್ವವೇ ಈಗ ಸಂಸಾರಿಗಳಾಗಿ ಕಾಣುತ್ತಿರುವ ಜೀವರುಗಳ ಪರಮಾರ್ಥಸ್ವರೂಪವೆಂಬುದನ್ನು 'ತತ್ತ್ವಮಸಿ' ಎಂಬ ಅಮೂಲ್ಯವಾಕ್ಯವು ಬೋಧಿಸುತ್ತಿದೆ. ವೇದಾಂತವು ಜಗತ್ತಿನ ಧಾರ್ಮಿಕಗ್ರಂಥಗಳ ನಡುವೆ ಹೇಗೆ ಅದ್ವಿತೀಯವಾಗಿರುತ್ತದೆಯೋ

ಅದರಂತೆಯೇ ಈ ತತ್ತ್ವಮಸಿ ಎಂಬ ಬೋಧೆಯೂ ಅದ್ವಿತೀಯವಾಗಿರುತ್ತದೆ. ಈ ಅದ್ವಿತೀಯ ತತ್ತ್ವವು ಎಲ್ಲರ ಆತ್ಮನಾಗಿರುವದರಿಂದ ಅದು ನಮ್ಮದು ಎಂದು ಯಾರೂ ಪೇಟೆಂಟ್ ರಿಜಿಸ್ಟರು (ಹಕ್ಕಿನ ರಕ್ಷಣೆ) ಮಾಡಿಕೊಳ್ಳುವಂತಿಲ್ಲ; ಅದು ನಮ್ಮ ಆತ್ಮನೇ ಆಗಿರುವದರಿಂದ ಅದನ್ನು ಅತ್ತ ಕಿತ್ತೊಗೆಯುವದಕ್ಕೂ ಬರುವಂತಿರುವದಿಲ್ಲ. ಇಂಥ ವಿಶ್ವವ್ಯಾಪಕವಾದ ತತ್ತ್ವಶಾಸ್ತ್ರವನ್ನು ಆಚಾರ್ಯರು ಬೋಧಿಸಿರುತ್ತಾರೆ; ಅದರ ವಿಷಯವು ಅದ್ವಿತೀಯಾತ್ಮನೇ ಆಗಿರುವಂತೆ ಅದು ತಾನೂ ಅದ್ವಿತೀಯಶಾಸ್ತ್ರವೇ ಆಗಿರುತ್ತದೆ.

★★★★★

# ಆತ್ಮಜ್ಞಾನ

**15-5-1959**

**ಶ್ರೀಶ್ರೀಗಳವರು**

ಒಬ್ಬ ದೇವನೇ ಎಲ್ಲಾ ಪ್ರಾಣಿಗಳಲ್ಲಿಯೂ ಇರುತ್ತಾನೆ. ಅವನು ಅವರಿಗೆಲ್ಲ ಅಂತರಾತ್ಮನು, ಕರ್ಮಾಧ್ಯಕ್ಷನು, ಸಾಕ್ಷಿಯು, ಚೈತನ್ಯಸ್ವರೂಪನು, ಕೇವಲನು, ನಿರ್ಗುಣನು-ಎಂದು ಶ್ರುತಿಯಲ್ಲಿ ಹೇಳಿರುವ ಪರಮಾತ್ಮವಿಶೇಷಣಗಳನ್ನು ಮನಸ್ಸಿಗೆ ತಂದುಕೊಂಡರೆ ಇಂಥ ಈಶ್ವರನು ನಮ್ಮ ಆತ್ಮನೆ?' ಅವನು ದೇವನು, ನಾನು ಜೀವನು; ಅವನು ಎಲ್ಲಾ ಪ್ರಾಣಿಗಳಲ್ಲಿಯೂ ಇರುತ್ತಾನೆ. ನಾನು ನನ್ನ ಶರೀರದಲ್ಲಿಮಟ್ಟಿಗೆ ಇದ್ದುಕೊಂಡಿರುತ್ತೇನೆ : ಅವನು ತೀರ ಒಳಗೆ ಇರುವವನು, ನಾನು ಹೊರಗಡೆ ದೃಷ್ಟಿಯುಳ್ಳವನು ; ಅವನು ಕರ್ಮಾಧ್ಯಕ್ಷನು, ನಾನು ಕರ್ಮಿಯು; ಅವನು ನಿತ್ಯಚೈತನ್ಯಸ್ವರೂಪನು, ನಾನು ಅರಿವುಮರಹುಗಳುಳ್ಳವನು; ಅವನು ಕೇವಲನು, ಅದ್ವಿತೀಯನು, ನಾನಾದರೋ ಅನೇಕರೊಂದಿಗೆ ಇರುವ ಒಬ್ಬನು; ಅವನು ನಿರ್ಗುಣನು, ನಾನು ಅನೇಕಗುಣದೋಷಗಳ ಪುಂಜವಾಗಿರುವೆನು. ಹೀಗೆ ಶ್ರುತಿಯಲ್ಲಿ

ಹೇಳಿರುವ ಯಾವದೊಂದು ವಿಶೇಷಣವೂ ನನಗೆ ಹೊಂದುವದಿಲ್ಲವಲ್ಲ! ಶ್ರುತಿಯಲ್ಲಿ 'ಅದೇ ನೀನು' ಎಂದು ಹೇಳಿರಬಹುದು; ಆದರೆ ಅದು ಅನುಭವಕ್ಕೆ ಹೊಂದುವಂತಿಲ್ಲವಲ್ಲ! ಕಾಗದವು ಯಾರಿಗೋ ಬಂದಿದ್ದರೆ ಅದರಲ್ಲಿರುವ ಒಕ್ಕಣೆ ನಮಗೆ ಹೊಂದುತ್ತದೆಯೆ, ಇಲ್ಲವೆ-ಎಂಬುದನ್ನು ವಿಚಾರಿಸದೆ ಇದು ನನ್ನದೇ ಕಾಗದ ಎನ್ನಬಹುದೆ? ಎಂಬ ಸಂಶಯವು ತಲೆದೋರುತ್ತದೆ. ಇದೀಗ ಈ ದಿನ ನಾವು ವಿಚಾರಮಾಡಬೇಕಾಗಿರುವ ವಿಷಯ.

ಈ ಸಮಸ್ಯೆಯನ್ನು ಹಿಂದೆ ಕೆಲವರು ಬಿಡಿಸಿದ್ದ ಪ್ರಕಾರವು ಹೇಗೆಂದರೆ: ಪರಮಾತ್ಮನೊಬ್ಬನೇ ಪರಮಾರ್ಥತತ್ತ್ವವೆಂದು ಶಾಸ್ತ್ರದಲ್ಲಿ ಹೇಳಿರುವದು ನಿಜ. ಆತನಿಂದಲೇ ಜಗತ್ತೆಲ್ಲವೂ ಉಂಟಾಗಿರುತ್ತದೆ. ಅಂಥ ಪರಮೇಶ್ವರನಾದ ಭಗವಂತನನ್ನು ಯಾವಜ್ಜೀವವೂ ಆರಾಧನೆಮಾಡಿ ಕ್ಲೇಶಗಳೆಲ್ಲವೂ ಕ್ಷಯವಾದ ಬಳಿಕ ಜೀವರು ಆ ಭಗವಂತನ ಸಾಯುಜ್ಯವನ್ನು ಹೊಂದುತ್ತಾರೆ. ಇದನ್ನೇ ಶಾಸ್ತ್ರದಲ್ಲಿ 'ತತ್ತ್ವಮಸಿ' ಮುಂತಾದ ವಾಕ್ಯಗಳಿಂದ ಹೇಳಿರುತ್ತದೆ ಎಂಬುದು ಅವರ ಮತ. ಇದಕ್ಕೆ **ಭಾಗವತಮತ**ವೆಂದು ಹೆಸರು. ''**ಆಮುಕ್ತೇರ್ಭೇದ ಏವ ಸ್ಯಾಜ್ಜೀವಸ್ಯ ಚ ಪರಸ್ಯ ಚ । ಮುಕ್ತಸ್ಯ ತು ನ ಭೇದೋಽಸ್ತಿ ಭೇದಹೇತೋರಭಾವತಃ ॥**'' ಮುಕ್ತಿಯಾಗುವವರೆಗೂ ಜೀವ ಪರಮಾತ್ಮರಿಗೆ ಭೇದವೇ ಇರುತ್ತದೆ; ಆದರೆ ಮುಕ್ತನಾದ ಜೀವನಿಗೂ ಪರಮಾತ್ಮನಿಗೂ ಯಾವ ಭೇದವೂ ಇಲ್ಲ ಎಂಬುದು ಅವರ ಅಭಿಪ್ರಾಯ. ಈ ಮತವನ್ನು ಶಂಕರಾಚಾರ್ಯರು ತಮ್ಮ ಸೂತ್ರಭಾಷ್ಯ, ಗೀತಾಭಾಷ್ಯ, ಉಪನಿಷದ್ಭಾಷ್ಯ - ಇವುಗಳಲ್ಲಿ ಅಲ್ಲಲ್ಲಿ ಖಂಡಿಸಿರುತ್ತಾರೆ. 'ತತ್ತ್ವಮಸಿ' ಅದು ನೀನಾಗಿದೀಯೆ-ಎಂಬ ವಾಕ್ಯಕ್ಕೆ ನೀನು ಸತ್ತ ಬಳಿಕ ಆ ತತ್ತ್ವವಾಗುವೆ ಎಂದು ಅರ್ಥಮಾಡುವದಕ್ಕಾಗಲಾರದು; ಆಗ ಶ್ರುತಿಯು ಅಪ್ರಮಾಣವೆಂದಂತೆ ಆಗುವದು ಎಂಬುದು ಖಂಡನೆಯ ಸಾರ.

ಇನ್ನು ಕೆಲವರು ಶಾಸ್ತ್ರದಲ್ಲಿ ನೀನೇ ಬ್ರಹ್ಮವೆಂದು ಹೇಳಿರುವದರಿಂದ ಹಾಗೆಂದು ನಂಬಿ ಉಪಾಸನೆಮಾಡಬೇಕು; ಶಾಸ್ತ್ರದಲ್ಲಿ ಶ್ರದ್ಧೆಯಿಡಬೇಕು-ಎಂದು ಹೇಳುತ್ತಿದ್ದರು. ಅದಂತೂ ಆಸುರಮತವೇ. ನಾನು ಪರಮೇಶ್ವರನು ಎಂದು ವೇನ ಚಕ್ರವರ್ತಿಯೇ ಮುಂತಾದವರು ನಂಬಿ ನಡೆದು ವಿನಾಶವಾದ ಕಥೆಯನ್ನು ಪುರಾಣಗಳಲ್ಲಿ ವರ್ಣಿಸಿರುತ್ತದೆ. ಆದ್ದರಿಂದ ಅದೂ ಸರಿಯಾದ ಮತವಾಗಲಾರದು.

ಹಾಗಾದರೆ ಭಗವಂತನು ಬೇರೆಯೆಂದೇ ತಿಳಿದುಬಿಡೋಣವೆ?- ಎಂದರೆ ಅದೂ ಶ್ರುತ್ಯರ್ಥವಾಗುವಂತಿಲ್ಲ 'ತತ್ಸೃಷ್ಟ್ವಾ ತದೇವಾನುಪ್ರಾವಿಶತ್' (ಅದನ್ನು ಸೃಷ್ಟಿಮಾಡಿ ಅದೇ ಈ ಕಾರ್ಯವನ್ನು ಹೊಕ್ಕಿತು), ಈ 'ದೇವತೆಯು ಈ ಜೀವಾತ್ಮವಾಗಿ ಒಳಹೊಕ್ಕು ನಾಮರೂಪಗಳನ್ನು ವ್ಯಾಕರಣಮಾಡುವೆನೆಂದು ಆಲೋಚಿಸಿಕೊಂಡಿತು' ಎಂದುಮುಂತಾಗಿ ಶ್ರುತಿಗಳಲ್ಲಿ ಪರಮಾತ್ಮನೇ ಜೀವರೂಪದಿಂದ ಸೃಷ್ಟವಾದ ಶರೀರದೊಳಗೆ ಹೊಕ್ಕಿರುತ್ತಾನೆಂದು ಹೇಳಿ, ಆ ತತ್ತ್ವವೇ ನೀನು ಎಂದು ಉಪದೇಶಿಸಿರುತ್ತದೆ. 'ಜೀವೇನಾತ್ಮನಾನುಪ್ರವಿಶ್ಯ' ಎಂದು ಶ್ರುತಿಯಲ್ಲಿರುವದರಿಂದ ಜೀವನ ಹಿಂದೆ ಪರಮಾತ್ಮನೂ ಹೊಕ್ಕನು ಎಂದು ಕೆಲವರು ಅರ್ಥಮಾಡಿರುತ್ತಾರೆ. ಮತ್ತೆ ಕೆಲವರು 'ಸ ಆತ್ಮಾತತ್ತ್ವಮಸಿ' ಎಂಬ ಸಂಸ್ಕೃತವಾಕ್ಯದಲ್ಲಿ ಸವರ್ಣದೀರ್ಘಸಂಧಿಗೆ ಅವಕಾಶವಿರುವದರಿಂದ 'ಸ ಆತ್ಮಾ ಅತತ್ತ್ವಮಸಿ' (ಅವನು ಆತ್ಮನು, ನೀನು ಅದಲ್ಲ) ಎಂದು ಅರ್ಥಮಾಡಿರುತ್ತಾರೆ. ಆದರೆ ಇದು ವ್ಯಾಖ್ಯಾನಕೌಶಲವಾದೀತೇ ಹೊರತು ನಮ್ಮ ಜೊತೆಗೆ ಇನ್ನೊಬ್ಬ ಆತ್ಮನು ನಮ್ಮೊಳಗೆ ಹೊಕ್ಕಿರುತ್ತಾನೆ ಎಂಬುದು ನಮ್ಮ ಅನುಭವಕ್ಕೆ ಬರುವಹಾಗಿಲ್ಲ ; 'ನೀನು ಅವನಲ್ಲ' ಎಂದು ಶ್ರುತಿಯು ನಿಷೇಧಮಾಡುವದಕ್ಕೆ ಕಾರಣವೂ ಇಲ್ಲ, ಏಕೆಂದರೆ ನಾನು ಅವನು ಎಂದು ಲೋಕದಲ್ಲಿ ಯಾರುತಾನೆ ತಿಳಿದಿದ್ದಾರೆ?

ಈ ವ್ಯಾಖ್ಯಾನಪ್ರಕಾರಗಳಂತಿರಲಿ, ಶಂಕರಾಚಾರ್ಯರು ವಾಕ್ಯದ ಅರ್ಥವನ್ನು ಮಾಡುವಕ್ಕೆ ಅನುಸರಿಸಬೇಕೆಂದು ಹೇಳಿರುವ ಒಂದು ನ್ಯಾಯವನ್ನು ತಮ್ಮಗಳ ಅವಗಾಹನೆಗೆ ಮೊದಲು ಮುಂದಿಡುತ್ತೇನೆ. '**ಜ್ಞಾಪಕಂ ಶಾಸ್ತ್ರಂ ನ ಕಾರಕಮ್**' ಶಾಸ್ತ್ರವಾಕ್ಯವು ಇದ್ದದ್ದನ್ನು ಜ್ಞಾಪಿಸುತ್ತದೆಯೇ ಹೊರತು ಇಲ್ಲದ್ದನ್ನು ಉಂಟುಮಾಡುವದಿಲ್ಲ ಎಂಬುದೇ ಆ ನ್ಯಾಯ. ಶಾಸ್ತ್ರವು ಏನು ಹೇಳಲಿ, ಅದು ಅಧಿಕಾರಿಗಳಾದವರಿಗೆ ಅನುಭವಕ್ಕೆ ಬಂದು ತಿಳಿಯುವಹಾಗೆ ಇರಬೇಕು; ಆಗಲೆ ಶಾಸ್ತ್ರವು ಪ್ರಮಾಣವಾಗುತ್ತದೆ. ಹಾಗಾದರೆ ಶಂಕರಭಗವತ್ಪಾದರವರು ಪ್ರಕೃತಶ್ರುತಿಯ ಅರ್ಥವನ್ನು ಹೇಗೆ ಮಾಡಿದರೆ ಅನುಭವಾನುಸಾರಿಯಾಗಿರುವದೆಂದು ಹೇಳುತ್ತಾರೆ ? - ಎಂದು ನೀವು ಕೇಳಬಹುದು. ಅದಕ್ಕೆ ಅವರು ಉದಾಹರಿಸಿರುವ ಮತ್ತೊಂದು

ಶ್ರುತಿವಾಕ್ಯವನ್ನು ಇಲ್ಲಿ ಉದಾಹರಿಸುವದು ಅವಶ್ಯವಾಗುವದು. **ಕೇನೋಪನಿಷತ್ತಿನಲ್ಲಿ** ಈ ವಾಕ್ಯವಿದೆ : '**ಪ್ರತಿಬೋಧವಿದಿತಂ ಮತಮಮೃತತ್ತ್ವಂ ಹಿ ವಿನ್ದತೇ। ಆತ್ಮನಾ ವಿನ್ದತೇ ವೀರ್ಯಂ ವಿದ್ಯಯಾ ವಿನ್ದತೇಽಮೃತಮ್॥**' (ಕೇ.2-4) ಪ್ರತಿಬೋಧದಿಂದ ವಿದಿತವಾದರೆ ಸರಿಯಾದ ತಿಳಿವಳಿಕೆಯಾಗುವದು ; ಏಕೆಂದರೆ ಅಮೃತತ್ತ್ವವು ದೊರಕುತ್ತದೆ; ಆತ್ಮನಿಂದ ವೀರ್ಯವನ್ನು ಪಡೆದುಕೊಳ್ಳುತ್ತಾನೆ, ವಿದ್ಯೆಯಿಂದ ಅಮೃತವನ್ನು ಪಡೆದುಕೊಳ್ಳುತ್ತಾನೆ-ಎಂಬುದು ವಾಕ್ಯದ ಅಕ್ಷರಾರ್ಥ. ಆತ್ಮಜ್ಞಾನವು ಪ್ರತಿಬೋಧದಿಂದ ಆಗುತ್ತದೆ ಎಂದರೇನು ? ಇದಕ್ಕೆ ಹಿಂದಿನ ಕೆಲವರು ಆಚಾರ್ಯರು ಹೀಗೆ ಅರ್ಥವನ್ನು ಮಾಡಿದ್ದರು : ಒಂದೊಂದು ಬೋಧದಿಂದ ಎಂದರೆ ಜ್ಞಾನಕ್ರಿಯೆಯಿಂದ ಆತ್ಮನನ್ನು ಅರಿತುಕೊಳ್ಳಬೇಕು. 'ಕೊಂಬೆಯನ್ನು ಅಲುಗಾಡಿಸುತ್ತಿರುವದೇ ಗಾಳಿ' ಎಂಬಲ್ಲಿ ಅಲುಗಾಟವೆಂಬ ಕ್ರಿಯೆಯನ್ನು ಸಾಧನವಾಗಿಟ್ಟುಕೊಂಡು ಗಾಳಿಯನ್ನು ಊಹಿಸಿ ತಿಳಿಯುವದಿಲ್ಲವೆ, ಹಾಗೆಯೇ ಅರಿಯುವದೆಂಬ ಕ್ರಿಯೆಯ ಕರ್ತೃವೇ ಆತ್ಮನು ಎಂದು ಊಹಿಸಬೇಕು. ಇದೇ ಆತ್ಮಜ್ಞಾನ ಎಂಬುದು ಆ ಆಚಾರ್ಯರ ಅಭಿಪ್ರಾಯ. ವೈಶೇಷಿಕರೇ ಮೊದಲಾದ ಮತ್ತೆಕೆಲವರು ಬೋಧ ಅಥವಾ ಜ್ಞಾನ ಎಂಬುದು ಆತ್ಮನ ಗುಣವು, ಈ ಗುಣವು ಆತ್ಮಮನಃ ಸಂಯೋಗದಿಂದ ಆಗುತ್ತದೆಯೆಂದೂ ಹುಟ್ಟಿದಮೇಲೆ ಆತ್ಮನಿಗೇ ಅಂಟಿಕೊಳ್ಳುತ್ತದೆಯೆಂದೂ ಅಭಿಪ್ರಾಯಪಟ್ಟಿದ್ದರು. ಈ ಎರಡು ಬಗೆಯ ಅಭಿಪ್ರಾಯಗಳಲ್ಲಿಯೂ ಆತ್ಮನು ಕ್ರಿಯೆಯಿಂದ ಅಥವಾ ಗುಣದಿಂದ ಮಾರ್ಪಾಡನ್ನು ಹೊಂದುತ್ತಾನೆಂಬುದನ್ನು ಒಪ್ಪಬೇಕಾಗುವದು. ಆಗ ಆತ್ಮನು ಅನಿತ್ಯನೆಂದಾಗುವದು. ಆತ್ಮನು ತನ್ನನ್ನು ತಾನೇ ತಿಳಿಯುವದೇ ಪ್ರತಿಬೋಧವಿದಿತತ್ವವು ಎಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಿದ್ದರು ; ಆತ್ಮನು ಚೈತನ್ಯಸ್ವರೂಪನೇ ಆಗಿರುವದರಿಂದ, ದೀಪವನ್ನು ತೋರಿಸುವದಕ್ಕೆ ಮತ್ತೊಂದು ದೀಪವು ಹೇಗೆ ಬೇಕಿಲ್ಲವೋ ಹಾಗೆಯೇ, ಆತ್ಮನನ್ನು ತಿಳಿಸಿಕೊಡುವದಕ್ಕೆ ಮತ್ತೊಂದು ಜ್ಞಾನವು ಬೇಕೆಂಬುದು ದೃಷ್ಟವಿರುದ್ಧವಾಗಿ ಇರುತ್ತದೆಯಷ್ಟೆ ? ಪ್ರತಿಬೋಧವೆಂದರೆ ಪ್ರತಿಯೊಂದು ಬೋಧವೆಂಬ ಅರ್ಥವಲ್ಲ ; ಎಚ್ಚರವೆಂದು ಅರ್ಥ. ಕನಸಿನಿಂದ ಎಚ್ಚರವಾದರೆ ಅಜ್ಞಾನವೆಲ್ಲ ತೊಲಗಿ ಎಚ್ಚರದ ಜ್ಞಾನದಿಂದ ನಿಜವು ಹೇಗೆ ಗೊತ್ತಾಗಿಬಿಡುವದೋ ಹಾಗೆಯೇ ಪ್ರತಿಬೋಧವೆಂಬ ಸಕೃದ್ಬೋಧ-ಕೊನೆಯ ಜ್ಞಾನದಿಂದ ಆತ್ಮತತ್ತ್ವದ ನಿಜವಾದ

ಅರಿವು ಆಗುವದು ಎಂದು ಮತ್ತೆ. ಕೆಲವರು ಅಭಿಪ್ರಾಯಪಡುತ್ತಿದ್ದರು. ಆ ಕೊನೆಯ ಜ್ಞಾನವು ಎಂದಿಗೆ ಹೇಗೆ ಆಗುತ್ತದೆಯೋ, ಮತ್ತು ಆತ್ಮನನ್ನು ಮತ್ತೊಂದು ಬೋಧವು ಅಥವಾ ಜ್ಞಾನವು ಹೇಗೆ ತಿಳಿಸಿಕೊಟ್ಟೀತೋ ಆ ಮತದವರೇ ಹೇಳಬೇಕಾಗಿರುತ್ತದೆ. ಹೀಗೆ ಆತ್ಮಜ್ಞಾನವೆಂದರೆ ಏನು? ಅದರಿಂದ ಆತ್ಮಸ್ವರೂಪದ ನಿಜವು ಹೇಗೆ ಆಗುತ್ತದೆ ಎಂಬ ಬಗ್ಗೆ ಬಗೆಬಗೆಯ ದೃಷ್ಟಿಕೋಣಗಳಿಂದ ಬಗೆಬಗೆಯ ವಿಕಲ್ಪನಗಳನ್ನು ಆಚಾರ್ಯರ ಹಿಂದಿನಕಾಲದಲ್ಲಿಯೇ ಮಾಡಿಕೊಂಡಿದ್ದರು : ಆದರೆ ಅವೆಲ್ಲ ಬರಿಯ ಕಲ್ಪನೆಯಾಗಿಯೇ ಇದ್ದವು, ತರ್ಕವಿರುದ್ಧವಾಗಿಯೂ ಇದ್ದವು.

ಈ ವಿಷಯದಲ್ಲಿ ಆಚಾರ್ಯರು ಏನು ಹೇಳಿರುತ್ತಾರೆಂಬುದನ್ನು ಈಗ ನಾವು ಮನಸ್ಸಿಗೆ ತಂದುಕೊಳ್ಳುವದಕ್ಕೆ ಪ್ರಯತ್ನಿಸೋಣ. ಬೋಧವೆಂದರೆ ಪ್ರತ್ಯಯವು. ಯಾವ ಬೋಧವೇ ಆಗಲಿ ಬಂದು ತೋರಿಕೊಂಡು ಮೈಗರೆದರೆ ಅದು ಹುಟ್ಟಿದ್ದು, ತೋರಿಕೊಂಡದ್ದು, ಕಾಣದೆಹೋದದ್ದು- ಎಲ್ಲವನ್ನೂ ಕಾಣುತ್ತಿರುವ ನಮ್ಮ ಸ್ವರೂಪವೊಂದು ಅದರ ಹಿನ್ನಲೆಯಾಗಿ ಇದ್ದೇ ಇರಬೇಕಲ್ಲವೆ? ಅದು ಇರುವದರಿಂದಲೇ ನಾವು 'ಈಗ ಬೋಧವು ಹುಟ್ಟಿತು' ಎನ್ನುವದಕ್ಕೆ ಶಕ್ತರಾಗಿರುತ್ತೇವೆ. ಹೀಗೆ ಅಂತಃಕರಣದ ಪ್ರತ್ಯಯಗಳೆಲ್ಲವನ್ನೂ ಅರಿಯುತ್ತಾ ನಿರ್ವಿಕಾರವಾಗಿರುವ ಸ್ವರೂಪವೇ ನಮ್ಮ ನಿಜವಾದ ಆತ್ಮನು. ಅದು ಅಂತಃಕರಣದ ಎಲ್ಲಾ ವೃತ್ತಿಗಳನ್ನೂ ತನ್ನಲ್ಲಿ ಯಾವ ಮಾರ್ಪಾಡೂ ಇಲ್ಲದೆ ನೋಡುತ್ತಿರುತ್ತದೆಯಾದ್ದರಿಂದ ಅದು ಸಾಕ್ಷಿಯೂ **ಕೂಟಸ್ಥಚೈತನ್ಯಸ್ವರೂಪವೂ** ಆಗಿರುತ್ತದೆ. ಮನಸ್ಸಿನ ಪ್ರತ್ಯಯಗಳು ತಮ್ಮತಮ್ಮ ವಿಷಯವನ್ನು ಬೆಳಗುವದೂ ಈ ಸಾಕ್ಷಿರೂಪನಾದ ಆತ್ಮನ ಚೈತನ್ಯದ ಬೆಳಕಿನಿಂದಲೇ. ನಾನು, ನಾನು-ಎಂದು ನಾವುಗಳು ಕರೆದುಕೊಳ್ಳುತ್ತಿರುವ ಹುಸಿಯಾದ ತೋರಿಕೆಯ ಆತ್ಮನು ಮನಸ್ಸು ಕುಣಿದಂತೆ ಕುಣಿಯುತ್ತಾ ಇರುತ್ತಾನೆ; 'ಇದು ನನ್ನ ಮನಸ್ಸು' ಎಂದು ಅವನು ಹೆಮ್ಮೆಪಡುತ್ತಿದ್ದರೂ ಮನಸ್ಸಿನ ಹಿಂದೆಯೇ ಅದರ ವೃತ್ತಿಗಳನ್ನನುಸರಿಸಿ ಇದು ನಾನು, ಇದು ನಾನು - ಎಂದುಕೊಳ್ಳುತ್ತಿರುತ್ತಾನೆ; ಈ ನಾನು ಎಂಬುದನ್ನೂ ಬೆಳಗುತ್ತಾ ಇದಿಲ್ಲದ ತನಿನಿದ್ರೆಯೇ ಮುಂತಾದ ಅವಸ್ಥೆಗಳಲ್ಲಿಯೂ ಅದಿಲ್ಲವೆಂಬುದನ್ನು ನಿರ್ವಿಕಲ್ಪವಾದ ಅರಿವಿನಿಂದ

ಅರಿಯದೆ ಅರಿಯುತ್ತಿರುವ ನಮ್ಮ ಸ್ವರೂಪವೇ ನಿಜವಾದ ಆತ್ಮನು. ಅಹಂಪ್ರತ್ಯಯಗಮ್ಯನಾಗಿರುವ ಹುಸಿ ಆತ್ಮನ ಅಭಿಮಾನವನ್ನು ಬಿಟ್ಟು ಆ ಸ್ವರೂಪದಲ್ಲಿ ನಿಂತು ನೋಡಿದಾಗ, ಸಾಕ್ಷೀ, ಚೇತಾ, ಕೇವಲೋ, ನಿರ್ಗುಣಶ್ಚ'- ಎಂಬ ವಿಶೇಷಣಗಳೆಲ್ಲವೂ ಆ ಸ್ವರೂಪಕ್ಕೆ ನಿರಾಕ್ಷೇಪವಾಗಿ ಹೊಂದುತ್ತವೆ ಎಂಬುದು ನಮಗೆ ಗೊತ್ತಾಗಿಬಿಡುತ್ತದೆ. ಆದ್ದರಿಂದ ಪ್ರತಿಯೊಂದು ಬೋಧವು, ಅಥವಾ ಪ್ರತ್ಯಯವು, ಉಂಟಾಗುವಾಗಲೂ ಅದಕ್ಕೆ ಸಾಕ್ಷಿಯಾಗಿರುವ ನಮ್ಮ ಆತ್ಮನು ಹಿನ್ನೆಲೆಯಾಗಿರುವನೆಂಬುದನ್ನು ಅರಿಯಬೇಕು; ಇದೇ ಆತ್ಮಜ್ಞಾನವು ಎಂಬುದು ಆಚಾರ್ಯರ ಉಪದೇಶವಾಗಿರುತ್ತದೆ. ಅದು ಸಾರ್ವತ್ರಿಕವಾದ ಅನುಭವಕ್ಕೆ ಹೊಂದಿಕೆಯಾಗಿದೆಯೆ, ಇಲ್ಲವೆ ? ಎಂಬುದನ್ನು ನಾವು ಒಬ್ಬೊಬ್ಬರೂ ಆತ್ಮಪರೀಕ್ಷೆಯಿಂದ ಗೊತ್ತುಪಡಿಸಿಕೊಳ್ಳಬೇಕಾಗಿದೆ.

★★★★★

## ಆತ್ಮಸಾಕ್ಷಾತ್ಕಾರ

**16-5-1959**

**ಶ್ರೀಶ್ರೀಗಳವರು**

ಒಬ್ಬ ದೇವನೇ ಸರ್ವಭೂತಗಳಲ್ಲಿಯೂ ಅಂತರಾತ್ಮನಾಗಿ ದ್ದುಕೊಂಡಿರುವವನು ಎಂದು ಹೇಳಿತ್ತು. ಅವನನ್ನು ಹೇಗೆ ಕಂಡುಕೊಳ್ಳಬೇಕು? ಎಂಬ ಪ್ರಶ್ನೆಗೆ ಉತ್ತರವಾಗಿ 'ಪ್ರತಿಬೋಧವಿದಿತಂ ಮತಮ್' ಪ್ರತಿಯೊಂದು ಪ್ರತ್ಯಯಕ್ಕೂ ಸಾಕ್ಷಿಯಾಗಿ ಅರಿತುಕೊಂಡರೆ ಅದೇ ಸರಿಯಾದ ಜ್ಞಾನ-ಎಂದು ಹೇಳಿದ್ದಾಗಿದೆ. ಆ ಸಂದರ್ಭದಲ್ಲಿ ಜ್ಞಾನ ಎಂಬುದು ಕ್ರಿಯೆ, ಅಥವಾ ಗುಣ ಎಂಬ ಅರ್ಥಗಳು ಸರಿಯಾಗುವದಿಲ್ಲ; ಏಕೆಂದರೆ ಆತ್ಮನು ಕ್ರಿಯೆಯಿಂದ ಅಥವಾ ಗುಣದಿಂದ ಮಾರ್ಪಾಡನ್ನು ಹೊಂದುತ್ತಿರುವನೆಂದು ಆಗುತ್ತದೆ ಎಂದು ಹೇಳಿದ್ದೆವು. ಅದೇ ಸಂದರ್ಭದಲ್ಲಿ ಈಗಿನ ನಮ್ಮ ತಿಳಿವು ಕನಸಿನ ತಿಳಿವಳಿಕೆಯಂತೆ ಇರುವದೆಂದೂ ತಟ್ಟನೆ ಎಚ್ಚರವಾದವನಿಗೆ

ಕನಸೆಲ್ಲವೂ ಹುಸಿಯಾಗಿ ಎಚ್ಚರದರಿವು ಒಮ್ಮೆಗೇ ಬಂದುಬಿಡುವಂತೆ ಸಕೃದ್ವಿಜ್ಞಾನವುಂಟಾಗುವದೇ ಆತ್ಮಜ್ಞಾನವು ಎಂಬವರ ಮತವನ್ನು ಆಚಾರ್ಯರು ಒಪ್ಪುವದಿಲ್ಲ ಎಂದು ತಿಳಿಸಿದ್ದಾಗಿದೆ. ಆದರೂ ಆ ಮತವನ್ನು ರೂಪಾಂತರದಿಂದ ಅಂಗೀಕರಿಸಿರುವ ಅದ್ವೈತಿಗಳು ಈಗಲೂ ಇರುತ್ತಾರೆ. ಆದ್ದರಿಂದ ಅದನ್ನು ಮತ್ತಷ್ಟು ವಿಮರ್ಶೆಮಾಡುವದು ಅವಶ್ಯವಾಗಿದೆ.

ಮಾಂಡೂಕ್ಯೋಪನಿಷತ್ತಿನ ಮೇಲೆ ಗೌಡಪಾದರು ಬರೆದಿರುವ ಕಾರಿಕೆಗಳ ಎರಡನೆಯ ಪ್ರಕರಣದ ಕೊನೆಯಲ್ಲಿ ಈ ಶ್ಲೋಕವಿದೆ : **ತತ್ತ್ವಮಾಧ್ಯಾತ್ಮಿಕಂ ದೃಷ್ಟ್ವಾ ತತ್ತ್ವಂ ದೃಷ್ಟ್ವಾ ತು ಬಾಹ್ಯತಃ । 'ತತ್ತ್ವೀಭೂತಸ್ತದಾರಾಮಸ್ತತ್ತ್ವಾದಪ್ರಚ್ಯುತೋ ಭವೇತ್॥'** ಒಳಗೆ ತತ್ತ್ವವನ್ನು ಕಂಡುಕೊಂಡು, ಹೊರಗೂ ತತ್ತ್ವವನ್ನೂ ಕಂಡುಕೊಂಡು, ತಾನೂ ತತ್ತ್ವವಾಗಿ, ತತ್ತ್ವದಿಂದ ಎಂದಿಗೂ ಜಾರದೆ ಇರಬೇಕು-ಎಂಬುದು ಕಾರಿಕೆಯ ಅಕ್ಷರಾರ್ಥವು. ಇದೇ ಕಾರಿಕೆಯನ್ನು ಪ್ರಮಾಣವಾಗಿ ಮನ್ನಿಸಿದ್ದ ಕೆಲವರು ವೇದಾಂತಿಗಳು ಹೀಗೆಂದು ಹೇಳುತ್ತಿದ್ದರು: ನಾವು ಅತತ್ತ್ವಭಾವನೆಯಿಂದ ಹೊರಕ್ಕೆ ಬಂದಿರುವದರಿಂದ ನಮಗೆ ಆತ್ಮಜ್ಞಾನವಾಗದೆ ಇರುತ್ತದೆ. ನಿಜವಾಗಿ ಆತ್ಮಜ್ಞಾನವಾಗಬೇಕಾದರೆ, ಒಳಗಿರುವದೆಲ್ಲವೂ ಆತ್ಮನೇ, ಹೊರಗಿರುವದೆಲ್ಲವೂ ಆತ್ಮನೇ, ನಾನೂ ಆತ್ಮನೇ, ಆತ್ಮತತ್ತ್ವಕ್ಕಿಂತ ಬೇರೆ ಯಾವದೊಂದೂ ಇಲ್ಲ-ಎಂಬ ಭಾವನೆ ಗಟ್ಟಿಯಾಗಬೇಕು. ಆಗಲೇ ನಮಗೆ ಆತ್ಮತತ್ತ್ವದ ಸಾಕ್ಷಾತ್ಕಾರವಾಯಿತು. ಅಲ್ಲಿಂದ ಮುಂದಕ್ಕೆ ನಾವು ಎಂದಿಗೂ ಪರಮಾತ್ಮತತ್ತ್ವದಿಂದ ಕೆಳಕ್ಕೆ ಜಾರದೆ ಇರುವೆವು. ಈ ಅಭಿಪ್ರಾಯದಲ್ಲಿ ನಿಜದ ಅಂಶವೂ ಇದೆ. ಅಮೆರಿಕದಲ್ಲಿ ಶ್ರದ್ಧಾಚಿಕಿತ್ಸೆ (Faith Cure), ನವೀನ ಚಿಂತನ (New Thought)- ಎಂಬ ಹೆಸರುಗಳಿಂದ ಕ್ರಿಸ್ತೀಮತವನ್ನು ಬೋಧಿಸುವ ಒಂದು ಗುಂಪಿನವರು ಇರುತ್ತಾರೆ. ಅವರ ಅಭಿಪ್ರಾಯವೇನೆಂದರೆ ಯೇಸುಕ್ರೈಸ್ತನು ತನ್ನ ಕಾಲಕ್ಕೆ ಅನೇಕ ರೋಗಿಗಳನ್ನು ಶ್ರದ್ಧಾಮಾತ್ರದಿಂದ ಗುಣಪಡಿಸಿದ್ದನು; 'ನಿನಗೆ ಶ್ರದ್ಧೆಯಿದೆಯೊ? ಹಾಗದರೆ ನಿನಗೆ ಗುಣವಾದಂತೆ' ಎಂದು ಆತನು ಹೇಳುತ್ತಿದ್ದನಂತೆ. ಮಾನವನ ಶ್ರದ್ಧೆಗೆ ಅನುಗುಣವಾಗಿ ಅವನಿಗೆ ಫಲವಾಗುವದು. ಈಗಲೂ ನಾವು ಶ್ರದ್ಧಾವಂತರಾಗಿದ್ದರೆ ನಮ್ಮಲ್ಲಿ ಯಾವವಾದರೂ ರೋಗವೇ

ಮುಂತಾದ ಕುಂದುಕೊರತೆಗಳು ಕಂಡುಬಂದರೆ, ಹಾಗಿಲ್ಲ, 'ನಾನು ನೀರೋಗಿಯಾಗಿರುತ್ತೇನೆ' ಎಂಬ ಭಾವನೆಯನ್ನು ಬಲಪಡಿಸಿಕೊಂಡರೆ ಸಾಕು, ಕೂಡಲೆ ಆ ಕೊರತೆಯು ಮಾಯವಾಗುವದು. ಇದರಂತೆ ನಮ್ಮ ಆಧ್ಯಾತ್ಮಿಕ ವಿಚಾರಗಳಲ್ಲಿಯೂ ನಾವು ಪರಮೇಶ್ವರನ ಮಕ್ಕಳಾಗಿದೇವೆ ಎಂಬ ಭಾವನೆಯು ಬಲವಾಗಿಬಿಟ್ಟರೆ, ನಮ್ಮನ್ನು ಈ ಸಂಸಾರದ ಯಾವ ಕೋಟಲೆಯೂ ಬಾಧಿಸಲಾರದು-ಎಂದು ಈ ಹೊಸತಂಡದ ಉಪದೇಶಕರುಗಳು ಹೇಳುತ್ತಾ ಬಂದಿರುತ್ತಾರೆ. ಇತಿಹಾಸದಲ್ಲಿಕೂಡ ಶ್ರದ್ಧೆಯಿಂದ ಪವಾಡಗಳಾದದ್ದು ಕಂಡುಬಂದಿದೆ 'ನೆಪೋಲಿಯನ್ ಎಂಬಾತನು ಸೈನ್ಯಸಮೇತವಾಗಿ ಮುಂದುವರಿಯುತ್ತಿರುವಲ್ಲಿ ಸ್ವಾಮಿ ಆಲ್ಪ್ಸ್ಪರ್ವತವು ಅಡ್ಡಲಾಗಿದೆ' ಎಂದು ಯಾರೋ ಹೇಳಲು 'There shall be no Alps!', '(ನಮ್ಮ ಮುಂದೆ ಆಲ್ಫ್ಸ್ಇರಲಾರದು)!' ಎಂದು ಆತನು ಗರ್ಜಿಸಿದನಂತೆ ! ಅವನ ಉತ್ಸಾಹದ ಫಲವಾಗಿ ಸೈನಿಕರು ಆ ಪರ್ವತವನ್ನು ಕೊರೆದುಕೊಂಡು ಸುರಂಗಮಾರ್ಗವಾಗಿ ಮುಂದಕ್ಕೆ ಹೊರಟೇಬಿಟ್ಟರಂತೆ! ಇದರಂತೆ ನಾವು ಒಳಗೆ, ಹೊರಗೆ ಸುತ್ತುಮುತ್ತ ಏನನ್ನು ಕಂಡರೂ ಅದಕ್ಕೆಲ್ಲ ಬ್ರಹ್ಮದ ಕಲಾಯವನ್ನು ಬಳಿದು ಎಲ್ಲವೂ ಬ್ರಹ್ಮತತ್ತ್ವವೇ, ನಾನೂ ಬ್ರಹ್ಮತತ್ತ್ವವೇ' ಎಂಬ ಭಾವನೆಯನ್ನು ಗಟ್ಟಿಗೊಳಿಸಿಕೊಂಡುಬಿಟ್ಟ, ದೇವರ ಗಣವು ಮೈಮೇಲೆ ಬರುವ ಪೂಜಾರಿಯಂತೆ, ತದ್ಭಾವನೆಯಿಂದಲೇ ಕೂಡಿಕೊಂಡುಬಿಡುತ್ತೇವೆ-ಎಂದು ಆ ಪೂರ್ವದ ವೇದಾಂತಿಗಳ ಅಭಿಪ್ರಾಯವು. ಅದು ಯುಕ್ತ್ಯನುಭಗಳಿಗೆ ಹೊಂದಿಕೆಯಾಗಿಯೂ ಇದೆ.

ಆದರೆ ಅದರಲ್ಲಿ ಒಂದೇ ದೋಷ : ಯಾವದು ಬರುವದೋ ಅದು ಹೋಗುವದು ಖಂಡಿತ. ನಮ್ಮ ಭಾವನೆಯ ಆವೇಶವು ಇರುವವರೆಗೂ ನಮಗೆ 'ನಾನೇ ತತ್ತ್ವವು' ಎಂಬ ನಂಬಿಕೆ ಬರಬಹುದು. ಆದರೆ ಆ ಭಾವನೆಯ ಬಲವು ಕಡಿಮೆಯಾಯಿತೆಂದರೆ ಅದು ಜ್ವರವು ಬಂದು ಇಳಿದಂತೆ ಹೋಗಿಬಿಡುತ್ತದೆ, ಸಮಾಧಿಯಲ್ಲಿ ಪರಮಾತ್ಮನಲ್ಲಿಯೇ ಮುಳುಗಿ ಒಂದಾಗಬಹುದೆಂದು ಅನೇಕರು ಈಗಲೂ ಉಪದೇಶಿಸುತ್ತಿದಾರೆ. ಹೀಗೆಯೇ ಸ್ವಾಮಿ ವಿವೇಕಾನಂದರೇ ಮೊದಲಾದವರು ನಮಗೆ ಬ್ರಹ್ಮಭಾವನೆಯನ್ನು ಬಲಪಡಿಸಿಕೊಳ್ಳಬೇಕೆಂದು

ಉಪದೇಶಿಸಿರುತ್ತಾರೆ. ನಾವು ಬ್ರಹ್ಮವಾಗಿರುವದು ನಿಜ; ಆದರೆ ಅದನ್ನು ನಾವು ಹೊರಹೊಮ್ಮಿಸಬೇಕು (Express), ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು (Realize) - ಎಂದು ಅವರು ಮತ್ತೆ ಮತ್ತೆ ಉಪದೇಶಿಸಿರುತ್ತಾರೆ. ಆತ್ಮಭಾವನೆಯನ್ನು ಬೆಳೆಯಿಸಿಕೊಳ್ಳಬೇಕು. ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕು- ಎಂದು ಹೇಳುವವರ ಅಭಿಪ್ರಾಯವು ಸರ್ವಥಾ ತಳ್ಳಿಹಾಕತಕ್ಕದ್ದೆಂದೇನೂ ನನ್ನ ಅಭಿಪ್ರಾಯವಲ್ಲ. ಅವರ ಉಪದೇಶಗಳಲ್ಲಿಯೂ ಒಂದೊಂದು ಸ್ವಾರಸ್ಯವಿರುತ್ತದೆ ; ಅಷ್ಟನ್ನು ಅವಶ್ಯವಾಗಿ ಗ್ರಹಿಸಬೇಕು. ಅನಾತ್ಮಚಿಂತನೆಯಿಂದ ಮನಸ್ಸು ಕಲ್ಮಷವಾಗಿ ವಿಕ್ಷಿಪ್ತವಾಗಿರುವದರಿಂದ ನಿಜವಾದ ಆತ್ಮನ ಸ್ವರೂಪವನ್ನು ಮನದಂದುಕೊಳ್ಳುವದಕ್ಕೆ ಅಡ್ಡಿಯಾಗಿ ರುತ್ತದೆಯಾದ್ದರಿಂದ ಪರಮಾರ್ಥವಾದ ಆತ್ಮಸ್ವರೂಪವನ್ನು ನಾವು ಅರಿತುಕೊಳ್ಳುವದಕ್ಕೆ ತತ್ತ್ವಚಿಂತನೆಯ ರೂಪವಾದ ಆವೃತ್ತಿಯು ಅವಶ್ಯವಾಗಿ ಬೇಕಾಗುತ್ತದೆ. ಇದು ಗ್ರಾಹ್ಯಾಂಶ. ಆದರೆ ಆತ್ಮವಸ್ತುವನ್ನು ನಾವು ಪರೋಕ್ಷವಾಗಿ ಈಗ ಅರಿತುಕೊಂಡಿದ್ದು, ದೂರದೇಶದಲ್ಲಿ ಅಥವಾ ಕಾಲಾಂತರದಲ್ಲಿ ಕಾಣಬೇಕಾಗಿ ರುವ ವಸ್ತುವಿನಂತೆ ಅದನ್ನು ಸಾಕ್ಷಾತ್ಕಾರಮಾಡಿಕೊಳ್ಳಬೇಕಾಗಿದೆ ಎಂದರೆ ಅದು ಆಗದ ಮಾತು. ಏಕೆಂದರೆ ಆತ್ಮವಸ್ತುವಿಗೆ ಮಿಕ್ಕ ಅನಾತ್ಮವಸ್ತುಗಳಂತೆ ದೇಶದ ಅಥವಾ ಕಾಲದ ವ್ಯವಧಾನ (ಮರೆ) ಇರುವದಿಲ್ಲ **'ಯತ್ಸಾಕ್ಷಾದಪರೋಕ್ಷಾದ್ ಬ್ರಹ್ಮ ಯ ಆತ್ಮಾ ಸರ್ವಾನ್ತರಃ'** ಪರಬ್ರಹ್ಮವು ನಮ್ಮ ಆತ್ಮನೇ ಆಗಿರುತ್ತದೆ ; ಅದು ನೇರಾಗಿ ಅನುಭವಕ್ಕೆ ಬರತಕ್ಕದ್ದು, ಎಂದಿಗೂ ಪರೋಕ್ಷವಾಗಿರತಕ್ಕದ್ದಲ್ಲ, ನಮ್ಮ ದೇಹಾದಿಗಳಿಗೆಲ್ಲಕ್ಕೂ, ತೀರ ಒಳಗಿರುವ ನಮ್ಮ ಪ್ರತ್ಯಗಾತ್ಮನೇ ಆಗಿರುತ್ತದೆ. ಇದನ್ನು ಚಿಂತನಪೂರ್ವಕವಾಗಿ ನಿಶ್ಚಯಿಸಿಕೊಳ್ಳುವದೇ ಸಾಕ್ಷಾತ್ಕಾರ-ಎಂಬುದು ಶಂಕರಭಗವತ್ಪಾದರ ಅಭಿಪ್ರಾಯವಾಗಿರುತ್ತದೆ.

'ಆತ್ಮನಾ ವಿನ್ದತೇ ವೀರ್ಯಮ್' ಎಂಬ ವಾಕ್ಯಕ್ಕೆ ಈಗ ಅರ್ಥವಾಗುತ್ತದೆ. ಈಗ ಇರುವಂತೆ 'ನಾನು' ಎಂದು ನಮ್ಮಗಳಿಗೆ ತಿಳಿದಿರುವದು ಅಂತಃಕರಣದ ಕಲಬೆರೆಕೆಯಾಗಿರುವ ಸ್ವರೂಪವೇ ಆಗಿರುತ್ತದೆ. ಆದರೆ ಈ ಅಂತಃಕರಣದ ಪ್ರತ್ಯಯಗಳು ಬರುತ್ತಿವೆ, ಹೋಗುತ್ತಿವೆ; ಅವುಗಳನ್ನು ನೋಡುತ್ತಿರುವ ನನಗೆ ಅವುಗಳಿಂದ ಆಗುವ ಹೆಚ್ಚೇನು, ಕುಂದೇನು ? ಸಾಂಖ್ಯರು ಪ್ರಕೃತಿಯ ವಿಷಯದಲ್ಲಿ

ಒಂದು ರಹಸ್ಯವನ್ನು ಹೊರಗೆಡಹಿರುತ್ತಾರೆ : ಪ್ರಕೃತಿ ಎಂಬುದು ನಾಚಿಕೆಯುಳ್ಳ ಒಬ್ಬ ಸ್ತ್ರೀಯಂತೆ ಇದೆ ; ಅದನ್ನು ಪುರುಷನು ಕಣ್ಣಿಟ್ಟುನೋಡಿದರೆ ಲಜ್ಜೆಯಿಂದ ಹಿಂಜರಿಯುವದು-ಎಂದು ಅವರ ಹೇಳಿಕೆ. ವೇದಾಂತಕ್ಕೂ ಇದು ಅನ್ವಯಿಸುತ್ತದೆ; ಅನೃತವಾದ ಅನಾತ್ಮರೂಪಪ್ರತ್ಯಯಗಳಲ್ಲಿ ನಾವು ಬೆರೆತಿರುವವರೆಗೂ ಅವುಗಳ ಕುಣಿತವೇ ಕುಣಿತ. ಆದರೆ ಅವನ್ನು ಸಾಕ್ಷಿರೂಪವಾದ ಚೈತನ್ಯದಿಂದ ನೋಡುವದಕ್ಕೆ ಹತ್ತಿದರೆ ಅವು ಅಲ್ಲಿಯೇ ನಿಂತುಬಿಡುವವು, ಅಲ್ಲಿಯೇ ಕರಗಿಹೋಗುವವು ! 'ನಾನು' ಎಂಬುದರಲ್ಲಿ 'ನಾ' ಎಂಬಕ್ಷರವೇ ಸಾಕ್ಷಿ ; 'ನು' ಎಂಬುದೇ ಅಹಂಕಾರ. ನಾವು ಸಾಕ್ಷಿಯಾಗಿ ನಿಂತುನೋಡಿದರೆ ನಮ್ಮ ಸಂಸಾರದ ದೌರ್ಬಲ್ಯವೆಲ್ಲವೂ ಇಂಗಿಹೋಗುವದು ; ವೀರ್ಯವು ಬರುವದು, ರೈಲ್ವೆ ಸ್ಟೇಷನ್ ಮಾಸ್ತರಾದವನು ಬರುವ ಗಾಡಿಗಳನ್ನು ಬರಮಾಡಿಕೊಂಡು, ಹೋಗುವವನ್ನು ಕಳುಹಿಸುತ್ತಿರುವಂತೆ, ನಾವು ಆಗಮಾಪಾಯಿಗಳಾದ ಈ ಪ್ರತ್ಯಯಗಳಿಗೆ ಸಾಕ್ಷಿಯಾಗಿ ನಿಲ್ಲಬೇಕು. ಆಗ ನಮ್ಮ ಸ್ವರೂಪದಲ್ಲಿರುವ ಶಕ್ತಿಯು ಎಂಥ ಬಲವಾದದ್ದೆಂಬುದು ತಿಳಿಯುವದು. ನಮಗಿರುವ ದೌರ್ಬಲ್ಯವೆಲ್ಲ ಅಂತಃಕರಣದ ಅಧ್ಯಾಸದಿಂದಲೇ ಎಂಬುದೂ ಸ್ಫುಟವಾಗುವದು, ಇಷ್ಟೇ ಅಲ್ಲ. ಆತ್ಮನು ಸರ್ವಶಕ್ತಿಗಳ ಮೂಲಸ್ಥಾನ. ಅವನ ಶಕ್ತಿಯೇ ಅನಾತ್ಮದಲ್ಲಿಯೂ ಕಾಣಿಸಿಕೊಳ್ಳುತ್ತಿರುವದು. ಅಂತಃಕರಣ, ಇಂದ್ರಿಯಗಳು-ಇವುಗಳಲ್ಲಿ ಕಾಣುವ ಚೈತನ್ಯವು. ಕನ್ನಡಿಯಲ್ಲಿ ಮಾರುಹೊಳೆಯುವ ಸೂರ್ಯನ ಶಕ್ತಿಯಂತೆ ಆತ್ಮನಿಂದಲೇ ಬಂದದ್ದು. ಅವುಗಳಿಗೆ ಸ್ವತಃ ಯಾವ ಶಕ್ತಿಯೂ ಇಲ್ಲ. ಇನ್ನೂ ಸರಿಯಾಗಿ ನೋಡಿದರೆ ಆತ್ಮಚೈತನ್ಯವೇ ಈ ಅಂತಃಕರಣ, ಇಂದ್ರಿಯ-ಮುಂತಾದ ಅನಾತ್ಮಗಳ ಸಾರವು. ಇದೆಲ್ಲವೂ ನಾವು ಪ್ರತ್ಯಯಗಳಿಗೆ ಸಾಕ್ಷಿ ಯಾವದೆಂಬುದನ್ನು ನೋಡಿ ನಮ್ಮ ಸ್ವರೂಪದಲ್ಲಿ ನೆಲೆನಿಂತಮಾತ್ರದಿಂದ ಗೊತ್ತಾಗಿಬಿಡುತ್ತದೆ. ಇದೇ ನಿಜವಾದ ಸಾಕ್ಷಾತ್ಕಾರ. ಆಗ ಎಲ್ಲವನ್ನೂ ನೋಡುವ ನಿತ್ಯಚೈತನ್ಯ ವಿಜ್ಞಾತೃವನ್ನು ಮತ್ತೇತರಿಂದ ನೋಡಬೇಕು?-ಎಂಬ ಶ್ರುತಿಯ ಅರ್ಥವು ಮನದಲ್ಲಿ ಮಿಂಚುವದು.

★★★★★

# ಆತ್ಮನಿಂದ ದೊರಕುವ ವೀರ್ಯ

**17-5-1959**

**ಶ್ರೀಶ್ರೀಗಳವರು**

'ಪ್ರತಿಬೋಧವಿದಿತಂ ಮತಮ್' ಎಂಬ ಶ್ರುತಿವಾಕ್ಯದ ಅಭಿಪ್ರಾಯವನ್ನು ವರ್ಣಿಸಿದ್ದಾಯಿತು. ಬೋಧವೆಂದರೆ ಪ್ರತ್ಯಯವು ; ಪ್ರತಿಯೊಂದು ಪ್ರತ್ಯಯದ ಕೊನೆಯಲ್ಲಿಯೂ ಆತ್ಮಸ್ವರೂಪವೇ ಹೊಳೆಯುತ್ತದೆ. 'ಮೋಡದ ಮರೆಯು ಹೋದರೆ ಸೂರ್ಯನು ಕಾಣುತ್ತಾನೆ' ಎಂಬಂತೆಯೇ ಇದನ್ನು ತಿಳಿಯಬೇಕು. ಸಾಮಾನ್ಯವಾಗಿ ಮೋಡವು ನಮಗೆ ಕಾಣುವಾಗಲೂ ಸೂರ್ಯನ ಬೆಳಕು ನಮಗೆ ಕಾಣಿಸುತ್ತಲೇ ಇರುತ್ತದೆ ; ಆ ಬೆಳಕಿನಿಂದಲೇ ಅಲ್ಲವೆ, ನಾವು ಮೋಡವನ್ನಾದರೂ ನೋಡುತ್ತಿರುವದು? ಇದರಂತೆ ಪ್ರತ್ಯಯವು ಆತ್ಮನಿಗೆ ಮರೆಯಾಗಿರುತ್ತದೆ; ಆದರೆ ಪ್ರತ್ಯಯವು ಕಾಣುವದೂ ಆತ್ಮನ ಚೈತನ್ಯದ ಬೆಳಕಿನಿಂದಲೇ. ಈ ಅಂತಃಕರಣವೃತ್ತಿಯು ತೋರಿ ಮೈಗರೆದಾಗ ಫಲವಾಗುತ್ತದೆ, ಎಂದರೆ ಆಯಾ ವಿಷಯದ ಅರಿವು ಆಗುತ್ತದೆ. ಅರಿವು ಆಯಿತು ಎಂದರೇನು? ಆತ್ಮಚೈತನ್ಯವು ತೋರಿಕೊಳ್ಳುವದೇ. ವೃತ್ತಿಯು ಹುಟ್ಟಿಹೋದ ಕೊನೆಯಲ್ಲಿ ಕಾಣಿಸುವದರಿಂದ ಫಲರೂಪವಾದ ಜ್ಞಾನವು ಉಂಟಾಯಿತು ಎನ್ನುತ್ತೇವೆ. ನಿಜವಾಗಿ ಅದು ಉಂಟಾಗುವದಿಲ್ಲ ; ನಿತ್ಯವೂ ಇದ್ದದ್ದೇ ಆಗ ಅಭಿವ್ಯಕ್ತವಾಗುತ್ತದೆ. ಶ್ರೀ ಸುರೇಶ್ವರಾಚಾರ್ಯರು **ವಾರ್ತಿಕದಲ್ಲಿ** ಹೀಗೆಂದಿರುತ್ತಾರೆ; 'ಪರಾಗರ್ಥವಾದ ಪ್ರಮೇಯಗಳನ್ನು ಅರಿಯುವಾಗ ಯಾವದನ್ನು ಫಲರೂಪವಾದ ಜ್ಞಾನವೆನ್ನುವರೋ, ಅದೇ ವೇದಾಂತಪ್ರಮಾಣಕ್ಕೆ ಪ್ರಮೇಯವು' ಎಂದರೆ ವೇದಾಂತದಿಂದ ನಾವು ಅರಿತುಕೊಳ್ಳಬೇಕಾದ ಆತ್ಮತತ್ತ್ವವೇ ಅದು ಎಂದಭಿಪ್ರಾಯ. ವಿಷಯಗಳನ್ನು ಭೋಗಿಸುವಾಗ ಕೊನೆಯಲ್ಲಿ ಆಗುವ ವೃತ್ತಿಯಲ್ಲಿ ತೋರುವ ಆನಂದವೂ ಹೀಗೆಯೇ ಆತ್ಮಸ್ವರೂಪವೇ ಎಂದು ಹೇಳಬಹುದು. ನಿಜವೇನೆಂದರೆ ಆತ್ಮನನ್ನು ವಿಷಯವಾಗಿ ಅರಿಯುವದಕ್ಕೆ ಆಗುವದಿಲ್ಲ; ಅರಿವಿನ ತಿರುಳೇ ಆತ್ಮನು.

ಆತ್ಮನನ್ನು ಅರಿತುಕೊಳ್ಳಬೇಕು-ಎಂದು ಆತ್ಮಜ್ಞಾನಕ್ಕೆ ಮುಮುಕ್ಷುಗಳು ಪ್ರಯತ್ನಿಸುತ್ತಾರಷ್ಟೆ? ಅವರಿಗೆ ಆತ್ಮಜ್ಞಾನವು ಆಗುವಾಗ ಏನಾಗುತ್ತದೆ?- ಎಂಬುದನ್ನು ನಾವು ಮನಸ್ಸಿನಲ್ಲಿಯೇ ಸ್ವಲ್ಪಬಿಡಿಸಿ ತಿಳಿದುಕೊಳ್ಳುವದಕ್ಕೆ ಪ್ರಯತ್ನಿಸುವದು ಅವಶ್ಯ. ಈಗಿನ ಕೆಲವರು ವೇದಾಂತಿಗಳು ವಿಷಯಜ್ಞಾನವನ್ನು ಹೀಗೆಂದು ವರ್ಣಿಸುತ್ತಾರೆ : ಒಂದಾನೊಂದು ಘಟವನ್ನು ನಾವು ಅರಿಯುವಾಗ ಬುದ್ಧಿವೃತ್ತಿಯು ಘಟಾಕಾರವಾಗಿ ಪರಿಣಮಿಸಿ ಅದರ ಅಜ್ಞಾನವನ್ನು ತೊಲಗಿಸಿ ಬಿಡುತ್ತದೆ. ಹೀಗೆ ವೃತ್ತಿಯಿಂದ ವ್ಯಾಪ್ತವಾದ ಘಟವನ್ನು ವೃತ್ತಿಯಲ್ಲಿರುವ ಚಿದಾಭಾಸವು ಬೆಳಗುತ್ತದೆ. ಆತ್ಮಜ್ಞಾನವು ಹೇಗಾಗುತ್ತದೆ?- ಎಂದರೆ ಅವರು ಹೇಳುವದೇನೆಂದರೆ, ಇಲ್ಲಿಯೂ ಆತ್ಮಾಕಾರವಾಗಿ ವೃತ್ತಿಯು ಪರಿಣಮಿಸುತ್ತದೆ; ಆತ್ಮನಿಗೆ ವೃತ್ತಿವ್ಯಾಪ್ಯತ್ವವುಂಟು. ಆದರೆ ಆತ್ಮನನ್ನು ಚಿದಾಭಾಸವು ಬೆಳಗುವದಿಲ್ಲ; ಚಿದಾಭಾಸಕ್ಕೆ ಫಲವೆಂದು ಹೆಸರಾದ್ದರಿಂದ ಆತ್ಮನಿಗೆ ಫಲವ್ಯಾಪ್ಯತ್ವವಿಲ್ಲ. ಈ ವರ್ಣನೆಯಲ್ಲಿ ಜಿಜ್ಞಾಸುಗಳಿಗೆ ಉಂಟಾಗುವ ತೊಡಕು ಯಾವದೆಂದರೆ ಘಟಾಕಾರವಾಗಿ ಪರಿಣಮಿಸಿ ಅಜ್ಞಾನವನ್ನು ಕಳೆದ ಮೇಲೂ ಘಟವು ಬೆಳಗಿರುವದಿಲ್ಲವೆಂದರೇನರ್ಥ? ಅಜ್ಞಾನವೇ ಅಲ್ಲವೆ, ಯಾವ ವಿಷಯಕ್ಕಾದರೂ ಮರೆಯಾಗಿರುವದು? ಇನ್ನು ವೃತ್ತಿಯು ಆತ್ಮಾಕಾರವಾಗಿ ಆಗುತ್ತದೆ ಎಂಬ ಮಾತೂ ಹೀಗೆಯೇ ತೊಡಕನ್ನುಂಟುಮಾಡುತ್ತದೆ. ಏಕೆಂದರೆ ಆತ್ಮನಿಗೆ ಆಕಾರವೇ ಇಲ್ಲ; ಹೀಗಿರುವಲ್ಲಿ **'ಆತ್ಮಾಕಾರವೃತ್ತಿ'** ಎಂದರೇನರ್ಥ ? ಶಂಕರಭಗವತ್ಪಾದರವರೂ, ವಾರ್ತಿಕಕಾರರೂ ವರ್ಣಿಸಿರುವ ಪ್ರಕಾರದಲ್ಲಿ ಈ ಕಷ್ಟವಿರುವದಿಲ್ಲ. ಏಕೆಂದರೆ ಅವರು ಹೇಳುವದೇನೆಂದರೆ ವಿಷಯಗಳನ್ನರಿಯುವಾಗಲೂ ನಮಗೆ ಆಗುವ ಫಲಜ್ಞಾನವೆಂಬುದು ನಿಜವಾಗಿ ಆತ್ಮನ ಪ್ರಕಾಶವೇ; ಆದರೆ ಅದು ಆಯಾ ವೃತ್ತಿಯ ಕೊನೆಯಲ್ಲಿ ತೋರುವದರಿಂದ ವೃತ್ತಿಯು ತನ್ನಲ್ಲಿರುವ ಚಿದಾಭಾಸದಿಂದ ವಿಷಯವನ್ನು ಬೆಳಗಿತು, ಅಥವಾ ವಿಷಯದ ಜ್ಞಾನವಾಯಿತು ಎನ್ನುತ್ತೇವೆ. ಅಷ್ಟೆ. ಆತ್ಮಜ್ಞಾನವಾಗುವಾಗಲೊ, ಎಂದರೆ ಅಂತಃಕರಣವು ಆತ್ಮನನ್ನು ಅರಿಯುವದಕ್ಕೆ ಪ್ರಯತ್ನಿಸುವಾಗ ತನ್ನ ಆತ್ಮನೇ ಆಗಿರುವದನ್ನು ಅರಿಯಲಾರದಾದ್ದರಿಂದ ಉಪ್ಪಿನಗೊಂಬೆಯು ನೀರಿನಲ್ಲಿ ಮುಳುಗಿ ಕರಗಿ ನೀರೇ ಆಗಿಬಿಡುವಂತೆ ಅಂತಃಕರಣವೇ ಆತ್ಮನಾಗಿಬಿಡುತ್ತದೆ. ಇದನ್ನೇ **'ಮನಸ್ಸಿನ ಅಮನೀಭಾವ'**

ಎಂದು ಗೌಡಪಾದರು ವರ್ಣಿಸಿರುತ್ತಾರೆ. 'ಆತ್ಮನ್ಯೇವ ಮನಃ ಕೃತ್ವಾ ನ ಕಿಞ್ಚಿದಪಿ ಚಿನ್ತಯೇತ್' ಆತ್ಮನಲ್ಲಿಯೇ ಮನಸ್ಸನ್ನಿಟ್ಟು ಏನನ್ನೂ ಚಿಂತಿಸದೆ ಇರಬೇಕು-ಎಂದು **ಗೀತೆ**ಯಲ್ಲಿ ವರ್ಣಿಸಿರುವ ಗೀತಾವಾಕ್ಯಕ್ಕೂ ಇದೇ ಅರ್ಥ. ಆತ್ಮಜ್ಞಾನವೆಂದರೆ ಆತ್ಮಾಕಾರವಾಗಿ ವೃತ್ತಿಯನ್ನು ಮಾಡಿಕೊಳ್ಳುವದಲ್ಲ ; ಆತ್ಮಸ್ವರೂಪದಲ್ಲಿಯೇ ಅದನ್ನು ಪ್ರವಿಲಯಮಾಡಿಕೊಂಡುಬಿಡುವದೇ ಅದು. ಇದೇ **ಆತ್ಮಾನುಭವವು.** ಅಂತೂ 'ಪ್ರತಿಬೋಧವಿದಿತಮ್' ಎಂಬಲ್ಲಿ ಪ್ರತಿಯೊಂದು ಪ್ರತ್ಯಯದ ಕೊನೆಯಲ್ಲಿ ಫಲವಾಗಿ ಕಾಣುವ ಸಾಕ್ಷಿರೂಪವಾದ ಚೈತನ್ಯವು ಯಾವದಿರುವದೋ, ಅದೇ ತನ್ನ ಆತ್ಮನೆಂದು ಅನುಭವಕ್ಕೆ ಬರುವಂತೆ ಮಾಡಿಕೊಂಡರೆ ಅರಿತಂತೆ ಆಯಿತು ಎಂದೇ ಅರ್ಥ.

'ಪ್ರತಿಬೋಧವಿದಿತಂ ಮತಮ್' 'ಪ್ರತಿಯೊಂದು ಬೋಧದಿಂದ **ವಿದಿತ**'ವಾದರೆ-ಎಂದು ಹೇಳಿರುವದು ನಿಜವಾಗಿ ವಿದಿತವಾದರೆ ಎಂಬರ್ಥದ್ದಲ್ಲ, ಏಕೆಂದರೆ ವಿದ್ಯೆಗೆ ಅಥವಾ ಜ್ಞಾನಕ್ಕೆ ಆತ್ಮನು ವಿಷಯನೇ ಅಲ್ಲ. ಇದನ್ನು ಶ್ರುತಿಯು ಬೇರೊಂದು ಕಡೆ ಹೇಳಿರುತ್ತದೆ. ''**ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ**'' ಆತ್ಮನು ವಿದಿತಕ್ಕಿಂತಲೂ ಬೇರೆ, ಅವಿದಿತಕ್ಕಿಂತಲೂ ಬೇರೆಯೇ-ಎಂದು ಆ ಶ್ರುತಿಗೆ ಅರ್ಥ. ''**ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್**'' ಯಾವದನ್ನು ಮನಸ್ಸಿನಲ್ಲಿ ಅರಿಯುವದಕ್ಕಾಗಲಾರದೋ, ಯಾವದು ಮನಸ್ಸನ್ನು ಅರಿಯುವದೆಂದು ಹೇಳುವರೋ ಅದೇ ಬ್ರಹ್ಮವು-ಎಂಬ ವಾಕ್ಯಕ್ಕೂ ಈ ಅಭಿಪ್ರಾಯವಿರುತ್ತದೆ. ಆತ್ಮನ ಚೈತನ್ಯಪ್ರಕಾಶವು ಮನಸ್ಸೆಲ್ಲವನ್ನೂ ವ್ಯಾಪಿಸಿಕೊಂಡಿರುತ್ತದೆ. ಕಾದ ಕಬ್ಬಿಣವನ್ನೆಲ್ಲ ಬೆಂಕಿ ವ್ಯಾಪಿಸಿಕೊಂಡಿರುವಂತೆ, ಅಥವಾ ಹಿಮಗಡ್ಡೆಯನ್ನೆಲ್ಲ ನೀರು ವ್ಯಾಪಿಸಿರುವಂತೆ ನಮ್ಮ ಮನಸ್ಸನ್ನೆಲ್ಲ ಚೈತನ್ಯವು ವ್ಯಾಪಿಸಿಕೊಂಡಿರುವದರಿಂದ ಮನಸ್ಸೆಂದರೆ ಆತ್ಮನೇ ಎಂದಾಯಿತು. 'ಹಲಗೆ ಮರ, ಕಂಠ ಕಬ್ಬಿಣ' ಎಂದು ಒಬ್ಬ ಕವಿ ಹೇಳಿರುವಂತೆ ಹಲಗೆಗೂ ಮರಕ್ಕೂ ಯಾವ ಭೇದವೂ ಇಲ್ಲದಿರುವಂತೆಯೂ ಬರೆಯುವ ಕಂಠಕ್ಕೂ ಕಬ್ಬಿಣಕ್ಕೂ ಯಾವ ಭೇದವೂ ಇಲ್ಲದಿರುವಂತೆಯೂ ಮನಸ್ಸಿಗೂ ಆತ್ಮನಿಗೂ ಯಾವ ಭೇದವೂ ಇರುವದಿಲ್ಲ-ಎಂದು ತಿಳಿಯಬೇಕು. 'ಇನ್ದ್ರೋಮಾಯಾಭಿಃ

ಪುರುರೂಪ ಈಯತೇ' ಪರಮೇಶ್ವರನು ಇಂದ್ರಿಯಪ್ರಜ್ಞೆಗಳಿಂದ ಬಗೆಬಗೆಯಾಗಿ ಕಾಣಿಸುತ್ತಿರುತ್ತಾನೆ ಎಂದಿರುವ ಶ್ರುತಿಯೇ '**ಅಯಂ ವೈ ಹರಯಃ**' ಇವನೇ ಎಲ್ಲಾ ಇಂದ್ರಿಯಗಳೂ ಆಗಿರುತ್ತಾನೆ ಎಂದು ಹೇಳಿರುತ್ತದೆ. ಇಂದ್ರಿಯಗಳು ಬೇರೆಬೇರೆಯಾಗಿ ಅನೇಕವಾಗಿವೆ ಎಂದು ತಿಳಿಯುವಾಗ ಇಂದ್ರಿಯ ಪ್ರಜ್ಞೆಗಳಿಂದ ಅದ್ವಿತೀಯನಾದ ಆತ್ಮನೇ ಪರಿಚ್ಛಿನ್ನರಾಗಿ ಬಹುರೂಪನಾಗಿ ಕಾಣುತ್ತಿರುತ್ತಾನೆ; ಆದರೆ ತತ್ತ್ವವನ್ನು ಅರಿತುಕೊಂಡಾಗ ಆತನೇ ಇಂದ್ರಿಯಗಳೆಲ್ಲವೂ ಆಗಿರುತ್ತಾನೆ, ವಿಷಯಗಳೂ ಅವನೇ ಆಗಿರುತ್ತಾನೆ. 'ಆತ್ಮನು ಸರ್ವವ್ಯಾಪಿ, ಸರ್ವಭೂತಾಂತರಾತ್ಮನು' ಎಂಬ ಶ್ರುತ್ಯುಪದೇಶಕ್ಕೆ ಇಲ್ಲಿಯವರೆಗೂ ಅರ್ಥವಿದೆ. ತೋರುವದು ನಾಮರೂಪಪ್ರಪಂಚ, ನಿಜವಾಗಿ ನೋಡಿದರೆ ಎಲ್ಲವೂ ಆ ಪರಮಾತ್ಮನೊಬ್ಬನೇ.

ಹೀಗೆ ಎಲ್ಲಕ್ಕೂ ಆತ್ಮನಿಂದಲೇ **ವೀರ್ಯ**. ಜಗತ್ತು ಜಗತ್ತಾಗಿ ನಿಂತಿರುವದು ಆತ್ಮನ ವೀರ್ಯದಿಂದಲೇ. 'ಪ್ರತಿಯೊಂದು ಕ್ಷಣದಲ್ಲಿಯೂ ಆ ಬ್ರಹ್ಮದಲ್ಲಿ ಅನೇಕ ಬ್ರಹ್ಮಾಂಡಬುದ್ಬುದಗಳು ಹುಟ್ಟಿತೋರಿ ಲಯವಾಗುತ್ತಿರುವವು' ಎಂದು ವಾಸಿಷ್ಠರಾಮಾಯಣದಲ್ಲಿ ವರ್ಣಿಸಿರುವದರ ಅಭಿಪ್ರಾಯವಿದು. ಈ ಜಗತ್ತನ್ನು ಆತ್ಮನೊಳಗೆ ಇಟ್ಟರೆ, ಅವನಲ್ಲಿ ಮುಳುಗಿ ಆತ್ಮನೇ ಆಗಿಬಿಡುತ್ತದೆ. ಆತ್ಮನಿಂದ ನಮಗೂ ಇಡಿಯ ಜಗತ್ತಿಗೂ ವೀರ್ಯವು ಬಂದಿರುತ್ತದೆ ಎಂಬುದು ಹಾಗಿರಲಿ, ಒಳಹೊಕ್ಕು ನೋಡಿದರೆ ನಮ್ಮಲ್ಲಿಯೂ ಜಗತ್ತಿನಲ್ಲಿಯೂ ಇರುವ ವೀರ್ಯವೆಲ್ಲ ಆತ್ಮನೇ. 'ಆತ್ಮೈವೇದಂ ಸರ್ವಮ್' ಎಂಬ ಶ್ರುತ್ಯುಪದೇಶವೇ ಇದು.

★★★★★

# ವಿದ್ಯೆಯಿಂದ ದೊರಕುವ ಅಮೃತತ್ವ

**18-5-1959**

ಮನುಷ್ಯನು ಯಾವದನ್ನು ಪ್ರಧಾನವಾಗಿಟ್ಟುಕೊಂಡು ಪ್ರಪಂಚವನ್ನು ನೋಡುತ್ತಾನೋ ಅದರಂತೆಯೇ ಆಗುತ್ತಾನೆ. 'ಯೋ ಯಚ್ಛ್ರದ್ಧಃ ಸ ಏವ ಸಃ'

ಜಡಪ್ರಧಾನವಾಗಿ ಅದನ್ನು ನೋಡುವವನಿಗೆ ಅಚೇತನವೇ ಎಲ್ಲೆಲ್ಲಿಯೂ ಕಾಣಿಸುತ್ತಿರುವದು. ಹೀಗೆಯೇ ಪ್ರಾಣಪ್ರಧಾನವಾಗಿ ಕಾಣುವವನು ತನ್ನನ್ನೂ ಒಂದು ಪ್ರಾಣಿಯೆಂದುಕೊಳ್ಳುವನು. ಬುದ್ಧಿಯಲ್ಲಿಯೇ ದೃಷ್ಟಿಯನ್ನಿಟ್ಟವನು ತಾರ್ಕಿಕನಾಗುವನು. ನೀತಿಪ್ರಧಾನನಾದವನು ದಯಾಮಯನಾಗುವನು. ಹೀಗೆ ನಮ್ಮ ದೃಷ್ಟಿಯು ಒಳಕ್ಕೆ ಸರಿದಂತೆಲ್ಲ ಸೂಕ್ಷ್ಮಸೂಕ್ಷ್ಮತರವಾದ ತತ್ತ್ವಗಳು ನಮ್ಮ ಅನುಭವಕ್ಕೆ ಬರುವವು. ಯಾರು ತೀರ ಒಳಗೆ ಹೊಕ್ಕು ನೋಡಿಕೊಳ್ಳುವರೋ ಅವರಿಗೆ ತಾನೂ ಚೈತನ್ಯಸ್ವರೂಪನು, ಜಗತ್ತೂ ಚೈತನ್ಯಮಯವಾಗಿದೆ – ಎಂಬ ಅರಿವು ಆಗುತ್ತದೆ. ಹೀಗೆ ತೀರ ಒಳಹೊಕ್ಕು ನೋಡಿದವನಿಗೆ ಮಿಂಚುಥಳಾರೆಂದಂತೆ ಒಂದಾನೊಂದು ಚಮತ್ಕೃತಿಯು ಗೋಚರವಾಗುತ್ತದೆ. ಅದರ ಸಾಕ್ಷಾತ್ಕಾರದಿಂದ ಅವರ ಚಿತ್ತವೆಲ್ಲವೂ ಚಿನ್ಮಯವಾಗಿಬಿಡುತ್ತದೆ. ಹೊಟ್ಟನ್ನು ಕುಟ್ಟಿಕೇರಿ ಕಾಳನ್ನು ಆರಿಸಿಕೊಳ್ಳುವಂತೆ ತತ್ತ್ವಜ್ಞಾನಿಗಳು ಈ ಜಗತ್ತಿನ ಸಾರವನ್ನು ಗ್ರಹಿಸಿಕೊಳ್ಳುತ್ತಾರೆ.

ಈಗ ನಾವು ನಾನುನಾನು ಎಂದುಕೊಳ್ಳುತ್ತಿರುವದು, ನನ್ನ ಸಮಾನರಿಲ್ಲ ಎಂದು ಅಭಿಮಾನಪಟ್ಟುಕೊಳ್ಳುತ್ತಾ ಸರ್ವೋಪಚಾರಪೂಜೆಗೂ ವಿಷಯವಾಗಿ ಮಾಡಿಕೊಳ್ಳುತ್ತಿರುವದು, ಇತಿಹಾಸದ ಶಿವಾಜಿಯ ಅನುಕೃತಿಯ ರೂಪವುಳ್ಳ ಮತ್ತೊಬ್ಬ ಪುರುಷನಂತೆ ಇರುತ್ತದೆ : ನಿಜವಾದ ನಾನು ಇದರ ಹಿಂದೆ ಇದಕ್ಕೆ ಆಧಾರವಾಗಿರುತ್ತದೆ. ಅಂತಃಕರಣದ ತತ್ತ್ವವನ್ನು ಅರಿತುಕೊಳ್ಳುವದಕ್ಕೆ ಪ್ರಯತ್ನಿಸುವಾಗ ನಮಗೆ ಗೊತ್ತಾಗುವದರಿಂದ ಅದು ಅಂತಃಕರಣದ ಹಿಂದುಗಡೆ ಇದೆ ಎನ್ನುವೆವು. ಮೋಡವನ್ನು ಬೆಳಗುತ್ತಿರುವ ವ್ಯಾಪಕನಾದ ಸೂರ್ಯನನ್ನು ಮೋಡದ ಹಿಂದೆ ಮರೆಯಾಗಿದಾನೆ ಎನ್ನುವಂತೆಯೇ ಈ ಮಾತಿನ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕು. ಆತ್ಮನು ಎಲ್ಲವನ್ನೂ ಬೆಳಗುತ್ತಿದಾನೆ ಎಂಬುದೂ 'ಎಲ್ಲ' ಎಂಬ ಅನಾತ್ಮದ ಆಸ್ತಿತ್ವವನ್ನು ಒಪ್ಪಿಕೊಂಡು ಹೇಳಿದ್ದಾಗಿದೆ. ನಿಜವಾಗಿ ಎಲ್ಲವೂ ಆತ್ಮನೇ. ಎಲ್ಲಿ ಎರಡನೆಯದು ಮತ್ತೊಂದು ಕಾಣಿಸುವದಿಲ್ಲವೋ, ಮತ್ತೊಂದು ಕೇಳಿಸುವದಿಲ್ಲವೋ, ಮತ್ತೊಂದರ ಅರಿವು ಆಗುವದಿಲ್ಲವೋ ಅದೇ **ಭೂಮ**ವೆಂಬ ಹೆಸರಿನ ಪರಮಾತ್ಮವಸ್ತು: ಅದೇ ಸುಖವು, ಅಲ್ಪವಾದ ಪರಿಚ್ಛಿನ್ನವಾದ ಮಿಕ್ಕದ್ದೆಲ್ಲವೂ

ಮರ್ತ್ಯ್ವವು-ಎಂದು ಶ್ರುತಿ ಸಾರುತ್ತಿದೆ. ಅಲ್ಪವೆಂಬುದು ಆತ್ಮನಿಗಿಂತ ಬೇರೆಯಾಗಿ ಒಂದು ಇದೆ ಎಂದು ಭಾವಿಸಬಾರದು. ಎಲ್ಲವೂ ಆ ಆತ್ಮನೇ. ಅವನೇ ವಿಜ್ಞಾನವೂ ಆನಂದವೂ ಆಗಿರುತ್ತಾನೆ ; ಆತ್ಮನು, ವಿಜ್ಞಾನ, ಆನಂದ ಎಂದು ಬೇರೆಬೇರೆಯಿಲ್ಲ. ಆತ್ಮನನ್ನು ಮಾತಿನಿಂದ ಉಪದೇಶಿಸುವದಕ್ಕೆ ಆಗಲಾರದು, ಮನಸ್ಸಿನಿಂದ ಅರಿಯುವದೂ ಆಗಲಾರದು. ಮಾತೂ ಮನಸ್ಸೂ ನಾನೂ ಎಲ್ಲವೂ ಆ ಆತ್ಮನೇ ಎಂಬ ಅನುಭವವೇ ನಿಜವಾದ ಆತ್ಮಜ್ಞಾನ. ಆತ್ಮನನ್ನು ಉಪದೇಶಿಸುವ ಶ್ರುತಿಗಳು ನಮ್ಮ ಭ್ರಾಂತಿಯನ್ನು ಕಳೆಯುವದಕ್ಕೆ ಬಂದಿವೆಯೇ ಹೊರತು, ಆತ್ಮಸ್ವರೂಪವನ್ನು ತಿಳಿಸುವದಕ್ಕಲ್ಲ. ಈ ಆತ್ಮನೇ ಸರ್ವಭೂತಗಳಲ್ಲಿಯೂ ಇರುವವನು, ಅಥವಾ ಸರ್ವಭೂತಗಳಾಗಿ ತೋರುವವನು. ಇದೆಲ್ಲವೂ ಮನಸ್ಸನ್ನು ಹಿಂತಿರುಗಿಸಿ ನೋಡಿಕೊಂಡವರಿಗೆ ತಿಳಿಯುತ್ತದೆ. ಮನಸ್ಸು ಆತ್ಮನನ್ನು ತಿಳಿಯುತ್ತದೆ ಎಂದಭಿಪ್ರಾಯವಲ್ಲ ; ಮನಸ್ಸೇ ಆತ್ಮನಾಗಿಬಿಡುತ್ತದೆ, ಆಗ ಎಲ್ಲವೂ ತಾನೂ ಆತ್ಮನೇ ಆಗಿರುತ್ತಾನೆ. 'ವೇದಾಹಮೇತಂ ಪುರುಷಂ ಮಹಾನ್ತಮ್' ಎಂಬುದು ಇಂಥ ಆತ್ಮವೇದನ. ನಿಜವಾಗಿ ಆತ್ಮನು ವಿದಿತನೂ ಅಲ್ಲ. ಅವಿದಿತನೂ ಅಲ್ಲ. ಆದ್ದರಿಂದ ಆತ್ಮಜ್ಞಾನವೆಂದು ಕರೆದರೂ ಅದಕ್ಕೂ ರೂಢಿಯಲ್ಲಿ ಘಟಜ್ಞಾನ, ಪಟಜ್ಞಾನ-ಎಂದು ಮುಂತಾಗಿ ನಾವು ಕರೆಯುತ್ತಿರುವ ಜ್ಞಾನಕ್ಕೂ ಬಹಳ ಅಂತರವಿದೆ.

ಹೀಗೆ ಆತ್ಮಜ್ಞಾನವಾದಾಗ ನಮಗೆ ಸರ್ವವೀರ್ಯವೂ ಬರುತ್ತದೆ. **'ತದಾತ್ಮಾನಮೇವಾವೇತ್ತಸ್ಮಾತ್ತತ್ಸರ್ವಮಭವತ್'** ಅದು ತನ್ನನ್ನೇ ಅರಿತುಕೊಂಡಿತು, ಆದರಿಂದ ಎಲ್ಲವೂ ಆಯಿತು-ಎಂಬ ಶ್ರುತಿಯ ಅರ್ಥವಿದು. ನಿಜವಾಗಿ ಸರ್ವವೀರ್ಯವೂ ಆತ್ಮನದೇ ಆಗಿರುತ್ತದೆ ; ಆದರೆ ಅದನ್ನು ನಾವು ಅರಿಯೆವು. ಶರೀರಾದಿಗಳಲ್ಲಿ ಈಗ ತೋರುತ್ತಿರುವ ಬಲವಾದರೂ ಎಲ್ಲಿಂದ ಬರುತ್ತದೆ? ಬಲಂ ಬಲವತಾಮಸ್ಮಿ-ಬಲವಂತರ ಬಲವು ನಾನೇ ಎಂಬ ಭಗವಂತನ ಉಪದೇಶವನ್ನು ಮನಸ್ಸಿಗೆ ತಂದುಕೊಳ್ಳಿರಿ. ನಾವು ಪರಮಾತ್ಮನಿಂದಲೇ ಬಲವನ್ನು ಎಳೆದುಕೊಳ್ಳಬೇಕು; ಅಕ್ಷಯವಾದ ಬಲವು ಆತನೇ. **'ಪುರುಷ ಏವೇದಂ ಸರ್ವಮ್'**- ಎಲ್ಲವೂ ಆ ಪರಿಪೂರ್ಣನಾದ ಆತ್ಮನೇ. ಆತ್ಮನೇ ಬಲ. ಪರಮಾತ್ಮನ ನಿಜವನ್ನು ಅರಿಯದೆ ನಾವೆಲ್ಲರೂ ಮೂರ್ಖರಾಗಿದೇವೆ ಎಂಬ ದಾಸರ

ಉಪದೇಶವು ಅಕ್ಷರಶಃ ನಿಜವಾಗಿದೆ. ಇದೇ ಶಂಕರರ ನಿಜವಾದ ಉಪದೇಶವು. ಆತ್ಮನಿಂದಲೇ ನಮಗೆ ವೀರ್ಯವು ಬರುತ್ತದೆ. ಇದನ್ನರಿಯದೆ ನಾವು ಭೂಮಂಡಲದಲ್ಲಿರುವ ಬೇರೆಯ ಹುಚ್ಚರನ್ನು ಅನುಸರಿಸುವದಕ್ಕೆ ಹೊರಟಿದೇವೆ. ನಮ್ಮ ಆಚಾರ, ವಿಚಾರ, ಭಾಷೆ, ವೇದಾಂತ–ಎಲ್ಲವನ್ನೂ ಕೆಡಿಸಿಕೊಂಡು ಪರರ ಆಚಾರಾದಿಗಳಿಗೆ ಜೋಳಿಗೆ ಹಿಡಿಯುತ್ತಿದೇವೆ. ಈ ದೇಶದಲ್ಲಿ ಹುಟ್ಟಿದವರಿಂದ ಮಿಕ್ಕವರು ಕಲಿಯಬೇಕು ಎಂದು ಮನು ನುಡಿದಿರುತ್ತಾನೆ.

ಇದನ್ನು ಯಾರುಯಾರು ಅರಿಯುತ್ತಾರೋ ಅವರೇ ಆ ಅಮೃತ ಸ್ವರೂಪವಾದ ಬ್ರಹ್ಮವಾಗುವರು. ದೇವತೆಗಳು, ಋಷಿಗಳು, ಮನುಷ್ಯರು–ಎಲ್ಲರಿಗೂ ಆ ಬ್ರಹ್ಮದ ಜ್ಞಾನವೇ ಬಲವು, ಅದರ ಜ್ಞಾನದಿಂದಲೇ ಅಮೃತ. **'ಸ ವಾ ಏಷ ಮಹಾನಜ ಆತ್ಮಾऽಜರೋऽಮೃತೋऽಭಯೋ ಬ್ರಹ್ಮಾಭಯಂ ವೈ ಬ್ರಹ್ಮಾಭಯಂ ವೈಬ್ರಹ್ಮ ಭವತಿ ಯ ಏವಂ ವೇದ॥'** ಈ ಆತ್ಮನೇ ಮಹಾಂತನಾದ ಆತ್ಮನು, ಮುಪ್ಪಿಲ್ಲದವನು, ಸಾವಿಲ್ಲದವನು, ಅಮೃತಸ್ವಭಾವನು, ಅಭಯಸ್ವರೂಪನು, ಬ್ರಹ್ಮವು ಅಭಯವಲ್ಲವೆ? ಯಾವನು ಹೀಗೆ ತಿಳಿದುಕೊಳ್ಳುವನೋ ಅವನು ಅಭಯವಾದ ಬ್ರಹ್ಮವೇ ಆಗುವನು, ಅಮೃತನೇ ಆಗುವನು.

ಈ ಜ್ಞಾನವೇ ಶಂಕರಭಗವತ್ಪಾದರ ಸಂದೇಶವು. ಬ್ರಹ್ಮವನ್ನು ಬಲ್ಲಾತನನ್ನು ದೇವತೆಗಳುಕೂಡ ಸ್ತೋತ್ರಮಾಡುತ್ತಾರೆ. ನೀವೆಲ್ಲರೂ ಇಲ್ಲಿ ಸೇರಿರುವದು ಯಾವ ಶಕ್ತಿಯಿಂದ? ಅದನ್ನು ತಿಳಿದು ಕೃತಾರ್ಥರಾಗಿರಿ ಎಂತ ಲೋಕಶಂಕರರು ಹೇಳುತ್ತಿದಾರೆ. ನಮ್ಮ ದೇಶದಲ್ಲಿರುವ ಅನೇಕ ಪೀಠಗಳಿಗೆ ಏತರಿಂದ ಬೆಲೆ? ಅವೆಲ್ಲ ಶಂಕರರ ಪೀಠಗಳು ಎಂತಲಲ್ಲವೆ? ಆಚಾರ್ಯರ ಪ್ರಚಾರವು ಹಿಮಾಚಲದಿಂದ ಸೇತುವಿನವರೆಗೂ ವ್ಯಾಪಿಸಿದೆ ಎಂತ ಸುರೇಶ್ವರಾಚಾರ್ಯರವರು ಅಪ್ಪಣೆಕೊಡಿಸಿರುತ್ತಾರೆ. ಆ ವೇದಾಂತದ ಜ್ಞಾನವನ್ನು ಎಷ್ಟು ಅರಿತುಕೊಳ್ಳುವೆವೋ ಅಷ್ಟರಮಟ್ಟಿಗೆ ನಮಗೆ ವೀರ್ಯ, ಅಷ್ಟರಮಟ್ಟಿಗೆ ನಮಗೆ ಅಮೃತತ್ವ. ಆ ಜಗದ್ಗುರುಗಳ ಉಪದೇಶವನ್ನು

ಎಷ್ಟುಮಟ್ಟಿಗೆ ಸ್ಮರಿಸಿಕೊಂಡರೂ, ಎಷ್ಟರಮಟ್ಟಿಗೆ ಹೇಳಿದರೂ, ಎಷ್ಟರಮಟ್ಟಿಗೆ ಕೇಳಿದರೂ ಅಷ್ಟರಮಟ್ಟಿಗೆ ನಮಗೆ ಲಾಭವುಂಟು. ಆದ್ದರಿಂದ ಅವರ ನಾಮಕೀರ್ತನೆಯನ್ನು ಮಾಡಿ ಕೃತಾರ್ಥರಾಗೋಣ. **ಜಯ ಜಯ ಶಂಕರ ಲೋಕಗುರೋ! ಭಯಹರ ಶಂಕರಭುವನಗುರೋ**-ಎಂದು ಮತ್ತೆಮತ್ತೆ ನಾಮಘೋಷವನ್ನು ಮಾಡೋಣ!

★★★★★

## ಶಂಕರಭಗವತ್ಪಾದರವರೂ ಧರ್ಮವೂ

**01-05-1960**

**ಶ್ರೀ ಶ್ರೀಗಳವರು**

ಶಂಕರಭಗವತ್ಪಾದರವರು ಅವತಾರಮಾಡಿರುವ ಶುಭದಿನವೆಂದು ಅನೇಕರು ನಂಬಿರುವ ಇಂದಿನಿಂದ ಏಳು ದಿನಗಳವರೆಗೂ ಆಚಾರ್ಯರು ನಮ್ಮಗಳಮೇಲೆ ಮಾಡಿರುವ ಅನುಗ್ರಹವನ್ನು ಸ್ಮರಿಸಿಕೊಳ್ಳುವ ಸುಯೋಗವು ಒದಗಿರುತ್ತದೆ. ಆದ್ದರಿಂದ ಅವರು ಉಪಯೋಗಿಸಿರುವ ಅಸಾಧಾರಣವಾದ ಧರ್ಮ, ದರ್ಶನ-ಮುಂತಾದವುಗಳನ್ನು ತುಲನಾತ್ಮಕದೃಷ್ಟಿಯಿಂದ ವಿಮರ್ಶಿಸಿ ತಮ್ಮ ಮುಂದೆ ಇಡುವ ಪ್ರಯತ್ನವನ್ನು ಮಾಡುವೆನು.

ಆಚಾರ್ಯರು ಉಪದೇಶಿಸಿರುವ ಧರ್ಮವನ್ನು ಅವರ ವಿಷಯದ ನಮಸ್ಕಾರ ಶ್ಲೋಕವೊಂದರ ಪರಾಮರ್ಶದಿಂದ ತಿಳಿದುಕೊಳ್ಳುವದಕ್ಕೆ ಪ್ರಯತ್ನಿಸಬಹುದು. ''ಶ್ರುತಿಸ್ಮೃತಿಪುರಾಣಾನಾಮಾಲಯಂ ಕರುಣಾಲಯಮ್। ನಮಾಮಿ ಭಗವತ್ಪಾದ ಶಙ್ಕರಂ ಲೋಕಶಙ್ಕರಮ್ ॥'' ಎಂಬುದೇ ಆ ಶ್ಲೋಕ. ಇತಿಹಾಸಪುರಾಣಗಳ ನೆರವಿನಿಂದ ವೈದಿಕಧರ್ಮವನ್ನು ಅನುಭವಕ್ಕೆ ಹೊಂದಿಸಿ ತಿಳಿಸಿರುವದೇ ಆಚಾರ್ಯರ ವಿಶೇಷವು. ಈ ದೇಶದಲ್ಲಿ ಬರಿಯ ಸಂಹಿತೆಯನ್ನು

ಪ್ರಮಾಣವಾಗಿಟ್ಟುಕೊಂಡವರು, ಉಪನಿಷತ್ತುಗಳನ್ನು ಮಾತ್ರ ಪ್ರಮಾಣವಾಗಿ ಹಿಡಿದವರು, ಬರಿಯ ಪುರಾಣೇತಿಹಾಸಗಳು ಅಥವಾ ಆಗಮಗಳು ಇವುಗಳನ್ನು ನಂಬಿದವರು-ಎಂದು ಬೇರೆಬೇರೆಯ ಸಮಾಜಪಂಥಗಳು ಹೊರಟಿವೆ. ಆದರೆ ಇವೆಲ್ಲವನ್ನೂ ಏಕವಾಕ್ಯತೆಮಾಡಿರುವದು, ಧರ್ಮದ ಪರಿಪೂರ್ಣರೂಪವನ್ನು -ಎಂದರೆ ಕರ್ಮ, ಉಪಾಸನೆ-ಮುಂತಾದದ್ದು ಎಲ್ಲವನ್ನೂ ಬೋಧಿಸಿ ಆತ್ಮಜ್ಞಾನಕ್ಕೆ ಸಂಬಂಧಿಸಿರುವದು-ಆಚಾರ್ಯರ ವಿಶೇಷವು.

ಧರ್ಮವೆಂಬ ತತ್ತ್ವವನ್ನು ಇಂಗ್ಲಿಷಿನಲ್ಲಿ ರಿಲಿಜನ್ (Religion) ಎಂದು ಕರೆಯುತ್ತಾರೆ. ಆದರೆ ಆಚಾರ್ಯರು ಬೋಧಿಸಿರುವದು ರಿಲಿಜನ್ ಎಂಬ ಸಂಕುಚಿತಾರ್ಥವು ಶಬ್ದಕ್ಕೆ ವಾಚ್ಯವಾಗಲಾರದು. ಭಿಕ್ಷು ಅಥವಾ ಭಿಕ್ಷುಣಿ ಯಾಗಿರುವದು, ಏಕಾಂತವಾಸಮಾಡುವದು, ಕೆಲವು ಪವಿತ್ರಕರ್ಮವನ್ನು ಆಚರಿಸುವದು ಎಂಬರ್ಥದಲ್ಲಿಯಾಗಲಿ, ಅತಿಮಾನುಷಶಕ್ತಿಯನ್ನು-ಅದರಲ್ಲಿಯೂ ಮುಖ್ಯವಾಗಿ ಸಗುಣೇಶ್ವರನನ್ನು ವಿಧೇಯತೆಯಿಂದ ಪೂಜಿಸುವದು ಎಂಬರ್ಥದಲ್ಲಿಯಾಗಲಿ ಇದನ್ನು ರಿಲಿಜನ್ ಎನ್ನುವದಕ್ಕೆ ಬರುವದಿಲ್ಲ. ಪ್ರವೃತ್ತಿನಿವೃತ್ತಿರೂಪವಾದ ಎರಡು ಧರ್ಮಗಳೂ ಇದರಲ್ಲಿ ಅಡಕವಾಗಿವೆ. ಇಹಪರಗಳಲ್ಲಿ ಅಭ್ಯುದಯವನ್ನು ಕೊಡುವದು ಪ್ರವೃತ್ತಿಧರ್ಮವು; ಅದನ್ನೇ ನಿಷ್ಕಾಮವಾಗಿ ಮಾಡಿ ಜ್ಞಾನವೈರಾಗ್ಯಾದಿರೂಪವಾದ ನಿವೃತ್ತಿಧರ್ಮಕ್ಕೆ ಅದನ್ನು ಸಾಧನವಾಗಿ ಮಾಡಿಕೊಳ್ಳುವದು-ಇವೆರಡೂ **ಧರ್ಮವೆಂಬ** ಹೆಸರಿಗೆ ತಕ್ಕವಾಗಿರುತ್ತವೆ. ಈ ಧರ್ಮವು ನಾಲ್ಕು ವರ್ಣದವರಿಗೂ ನಾಲ್ಕು ಆಶ್ರಮದವರಿಗೂ ವರ್ಣಾಶ್ರಮಾತೀತರಿಗೂ ಪ್ರಯೋಜನಕರ ವಾಗಿರತಕ್ಕದ್ದಾಗಿದೆ.

ಕೇವಲ ವೈರಾಗ್ಯವನ್ನೋ ಬರಿಯ ಈಶ್ವರಭಕ್ತಿಯನ್ನೋ ಹೇಳಿದ ಮತಾಚಾರ್ಯರುಂಟು. ಧೈರ್ಯ, ಈಶ್ವರಭಕ್ತಿ, ಕರ್ಮಯೋಗ, ಪರಿಶುದ್ಧತೆ-ಮುಂತಾದವುಗಳಿಗೆಲ್ಲ ಹೆಚ್ಚಿನ ಬೆಲೆಯನ್ನು ಕೊಟ್ಟ ಮತಗಳೂ ಉಂಟು. ಆದರೆ ಆಚಾರ್ಯರು ಬೋಧಿಸಿರುವ ಧರ್ಮವು ಅಧಿಕಾರವನ್ನು

ಲಕ್ಷ್ಯದಲ್ಲಿಟ್ಟು ಅವರವರಿಗೆ ಹೊಂದುವ ಸಾಧನವನ್ನು ಅವರವರಿಗೆ ಉಪದೇಶಿಸಿರುತ್ತದೆ. ವೇದವನ್ನು ಅಧ್ಯಯನಮಾಡಲು ಎಲ್ಲರಿಗೂ ಅಧಿಕಾರವಿಲ್ಲದಿರಬಹುದು, ಆದರೆ ಅದರಲ್ಲಿ ಬೋಧಿಸಿರುವ ತತ್ತ್ವಜ್ಞಾನದಲ್ಲಿ ಎಲ್ಲರಿಗೂ ಅಧಿಕಾರವುಂಟು; ಅದಕ್ಕೆ ಬೇಕಾಗಿರುವ ಸಾಧನಗಳು ಅವರವರ ಚಿತ್ತದ ಅಂತಸ್ತನ್ನು ಹೊಂದಿಕೊಂಡಿರುತ್ತದೆ. ದಶಧರ್ಮಗಳು ಎಲ್ಲರಿಗೂ ಸಾಧಾರಣವಾಗಿದೆ. ಅವರವರ ಧರ್ಮವನ್ನು ಅವರವರು ಅನುಸರಿಸಲಿ ; ಯಾವ ಧರ್ಮವೂ ಇಲ್ಲದವರಿಗೆ ದಶಧರ್ಮವನ್ನು ಹೇಳಿ ಈಶ್ವರಭಕ್ತಿಯಲ್ಲಿ ನಿಲ್ಲಿಸಬೇಕು-ಎಂಬುದು ವೈದಿಕಧರ್ಮ. ಶೂದ್ರಾದಿಗಳಿಗೂ ಇತಿಹಾಸ ಪುರಾಣಗಳ ಮೂಲಕ ಈ ಧರ್ಮದ ತತ್ತ್ವಗಳನ್ನು ಬೋಧಿಸಬೇಕು. ಮ್ಲೇಂಛರು ಕೂಡ ಭಾಷಾಂತರದಿಂದ ಈ ಧರ್ಮದ ತತ್ತ್ವವನ್ನು ತಿಳಿದುಕೊಳ್ಳಬಹುದೆಂದು ಸೂತಸಂಹಿತೆಯೇ ಮುಂತಾದ ಪುರಾಣಗಳಲ್ಲಿ ಹೇಳಿದೆ.

ಈ ಧರ್ಮದಲ್ಲಿ, ಶ್ರದ್ಧೆಯಿಂದ ಉಪಾಸನೆಮಾಡುವವರಿಗೆ ಸತ್ತ ಬಳಿಕ ಆಗುವ ಗತಿಯನ್ನು ಹೇಳಿದೆ. ಪುಣ್ಯಪಾಪಗಳಿಗೆ ಸ್ವರ್ಗನರಕಗಳನ್ನೂ ಜನ್ಮಾಂತರಗಳಲ್ಲಿ ಮತ್ತೆ ಮಾರ್ಗಾಂತರವನ್ನೂ ಪಡೆಯುವದಕ್ಕೆ ಅವಕಾಶವನ್ನು ಹೇಳಿದೆ. ಮಾಡಿದ ಕರ್ಮಕ್ಕೂ ಸಾಧನೆಗಳಿಗೂ ಸತ್ತಮೇಲೂ ಫಲವುಂಟೆಂಬುದಕ್ಕೆ ಈಗ ಆಗುವ ಕರ್ಮಫಲವನ್ನೇ ಆಧಾರವಾಗಿಟ್ಟುಕೊಂಡಿದೆ. ಸಗುಣದೇವರನ್ನು ಹೇಳಿರುವದೂ, ಈಶ್ವರನು ನಮ್ಮೆಲ್ಲರ ಆತ್ಮನೆಂದೇ ಹೇಳಿರುವದೂ, ಉಪಾಸನೆಯ ಸಾಕ್ಷಾತ್ಕಾರವು ಇಲ್ಲಿಯೇ ಅನುಭವಕ್ಕೆ ಬರುವದೆಂದು ಹೇಳಿರುವದೂ, ಈ ಧರ್ಮದಲ್ಲಿ ಮಾತ್ರವೇ. ಆದ್ದರಿಂದ ವೇದವನ್ನು ಧರ್ಮಗ್ರಂಥವೆಂದು ಸುಮ್ಮನೆ ನಂಬಬೇಕಾದದ್ದೇನೂ ಇಲ್ಲ; 'ಯೇನ ವೇತ್ತಿ' ಯಾವದರಿಂದ ಅನುಭವಕ್ಕೆ ತಂದುಕೊಳ್ಳುವರೋ ಆ ತಿಳಿವಳಿಕೆಯೇ ವೇದ.

ಜ್ಞಾನದಿಂದಾಗುವ ಜೀವನ್ಮುಕ್ತಿಯ ಫಲವಂತೂ ಈ ಜನ್ಮದಲ್ಲಿಯೇ ಕಾಣಬಹುದಾದದ್ದು. ನಿಷ್ಕಾಮನಿಷ್ಕ್ರಿಯನಿರವಸ್ಥಾತ್ಮನನ್ನು ನನ್ನ ಆತ್ಮನೇ

ಎಂದು ಇಲ್ಲಿಯೇ ಕಂಡುಕೊಳ್ಳಬಹುದಾಗಿದೆ. ಬ್ರಹ್ಮಸೂತ್ರದಲ್ಲಿ ಹೇಳಿರುವ (ಸೂ.4-2-15, 4-4-1 ರಿಂದ 5) ಕಲಾಪ್ರಲಯವೂ, ಸ್ವಾತ್ಮರೂಪವನ್ನು ಪಡೆದುಕೊಳ್ಳುವದೂ ಬ್ರಹ್ಮಸಾಯುಜ್ಯವೂ ಆತ್ಯಂತಿಕ ಅಭಯಪ್ರಾಪ್ತಿಯೂ ಇಲ್ಲಿಯೇ ಅನುಭವಕ್ಕೆ ಗೋಚರವಾಗುವವೆಂಬುದನ್ನು ಆಚಾರ್ಯರು ಸಾರ್ವತ್ರಿಕಾನುಭವದಿಂದ ತೋರಿಸಿ ಕೊಟ್ಟಿರುತ್ತಾರೆ. ಇದೆಲ್ಲವನ್ನೂ ಮನದಂದರೆ ಅವರು ಉಪದೇಶಿಸಿರುವ ಧರ್ಮವು ಹೇಗೆ ಎಲ್ಲಾ ಬಗೆಯಿಂದಲೂ ಪರಿಪೂರ್ಣವೆಂಬುದು ಮನದಟ್ಟಾಗುವಂತಿದೆ.

★★★★★

# ಶಂಕರಭಗವತ್ಪಾದರ ಉಪದೇಶವೂ ತತ್ತ್ವಜ್ಞಾನಕ್ರಮಭೇದಗಳೂ

**2-5-1960**

**ಶ್ರೀಶ್ರೀಗಳವರು**

ಆಚಾರ್ಯರ ವಿಚಾರಕ್ರಮವನ್ನು ಇಂಗ್ಲಿಷಿನ ಫಿಲಾಸಫಿ ಎಂಬ ಶಬ್ದದಿಂದ ಈಗಿನವರು ಕರೆಯುತ್ತಿರುವದುಂಟು. ಆದರೆ ಆ ಇಂಗ್ಲಿಷುಶಬ್ದವನ್ನು ಇಂಗ್ಲಿಷುನಿಘಂಟುಗಳಲ್ಲಿ ಜ್ಞಾನದ ಪ್ರೇಮ, ಪರಮಸತ್ಯದ ಅಥವಾ ಅತ್ಯಂತ ಸಾಮಾನ್ಯವಾಗಿ ಕಾರಣಗಳ ಮತ್ತು ತತ್ತ್ವಗಳ ವಿಷಯದ ಜ್ಞಾನದಲ್ಲಿರುವ ಪ್ರೀತಿಯಿಂದ ಮಾಡುವ ವಿಚಾರ-ಎಂದು ವಿವರಿಸಿರುತ್ತದೆ. ಊಹಿಸುವದು, ಯಾವದಾದರೊಂದರ ಕಲ್ಪನೆಯನ್ನು ಯುಕ್ತಿಬದ್ಧವಾಗಿ ಮಾಡುವದು-Speculate, theorize- ಎಂಬರ್ಥದಲ್ಲಿ ಫಿಲಾಸಫಿಯ ವಿಚಾರವನ್ನು ವಿವರಿಸಲಾಗಿದೆ. ಈ ಅರ್ಥದಲ್ಲಿ ಆಚಾರ್ಯರು ಉಪದೇಶಿಸಿರುವ ವೇದಾಂತವು 'ಫಿಲಾಸಫಿ' ಎಂಬ ಶಬ್ದಕ್ಕೆ ತಕ್ಕದ್ದಾಗಿರುವದಿಲ್ಲ. ಪಾಶ್ಚಾತ್ಯರಲ್ಲಿ ಸಾಕ್ರೆಟಿಸ್, ಅರಿಸ್ಟಾಟಲ್, ಪ್ಲೇಟೊ-ಮೊದಲಾದವರನ್ನೂ ಡೆಕಾರ್ಟ, ಸ್ಪೈನೋಜ,

ಲೆಬ್ನಿಟ್ಸ್, ಲಾಕ್, ಬರ್ಕ್ಲಿ, ಹ್ಯೂಮ್, ಕ್ಯಾಂಟ, ಹೆಗೆಲ್, ನಿಟ್ಚೆ, ಬರ್ಗ್ಸನ್-ಇವರೆಲ್ಲರೂ ಫಿಲಾಸಫರ್ಸ್, ತತ್ತ್ವವಿಚಾರಕರು. ಅವರುಗಳ ವಿಚಾರಕ್ರಮಕ್ಕೆಲ್ಲ 'ಪುರುಷ ಮತಿಯ ಊಹಾಪ್ರಭೇದಗಳು' ಎಂಬ ಹೆಸರನ್ನು ಕೊಡಬಹುದು. ಪೂರ್ವಾಪರವಿರೋಧವಿಲ್ಲದಂತೆ ಕ್ರಮಪಡಿಸಿ ಊಹಿಸಿದ ವಿಚಾರಕ್ರಮಗಳೇ ಫಿಲಾಸಫಿಯಾಗಿರುತ್ತದೆ. ಅವುಗಳು ತರ್ಕಬದ್ಧವಾಗಿದ್ದರೂ ತತ್ತ್ವವನ್ನು ಅನುಭವಾನುಸಾರವಾಗಿ ನಿರ್ಣಯಿಸುವ ಪ್ರಕಾರಗಳಾಗಿಲ್ಲ.

ನಮ್ಮ ದೇಶದ ಸಾಂಖ್ಯನ್ಯಾಯವೈಶೇಷಿಕಾದಿಗಳು 'ದರ್ಶನ'ಗಳೆಂಬ ಹೆಸರಿನಿಂದ ಪ್ರಸಿದ್ಧವಾಗಿರುತ್ತವೆ. ಅವು ಪದಾರ್ಥಗಳ ಪ್ರಮಾಣಗಳಿಗೆ ಅಥವಾ ಅನುಭವಕ್ಕೆ ತೋರುವ ರೀತಿಯನ್ನೇ ಹಿಡಿದು ತರ್ಕಬದ್ಧವಾಗಿ ಸಿದ್ಧಾಂತಮಾಡಿಕೊಂಡಿವೆ. ಆದರೂ ಅವುಗಳಲ್ಲಿ ತರ್ಕಕ್ಕೆ ಹೆಚ್ಚಿನ ಸ್ಥಾನವಿದೆ. ಪೂರ್ವಮೀಮಾಂಸವೂ ವೇದಾಂತವೂ ವೇದವನ್ನೇ ಪ್ರಧಾನವಾಗಿ ಮಾಡಿಕೊಂಡು ತರ್ಕಕ್ಕೆ ಎರಡನೆಯ ಸ್ಥಾನವನ್ನು ಕೊಟ್ಟಿದೆ. ಮೀಮಾಂಸಕರಿಗೂ ವೇದಾಂತಿಗಳಿಗೂ ವಸ್ತುನಿರ್ಧಾರಣಕ್ರಮದಲ್ಲಿ ದೃಷ್ಟಿಭೇದವಿರುವದಲ್ಲದೆ ತಮ್ಮತಮ್ಮ ವಿಚಾರ ವಿಷಯದ ತತ್ತ್ವವನ್ನು ನಿರ್ಧರಿಸುವದರಲ್ಲಿ ಮತಭೇದಗಳು ಉಂಟಾಗಿರುತ್ತವೆ.

ಆದರೆ ಆಚಾರ್ಯರು ಉಪದೇಶಿಸಿರುವ ತತ್ತ್ವವಿಚಾರಕ್ರಮವು ಇವೆಲ್ಲಕ್ಕಿಂತಲೂ ಬೇರೆಯಾಗಿದೆ. ಅವರು ಒಂದು ಕಡೆಯಲ್ಲಿ ಹೀಗೆ ಎಂದಿರುತ್ತಾರೆ : ''**ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಮ್ ಬ್ರಹ್ಮಜಿಜ್ಞಾಸಾಯಾಮ್, ಕಿಂ ತು ಶ್ರುತ್ಯಾದಯೋಽನುಭವಾದ ಯಶ್ಚ ಯಥಾಸಂಭವಮ್ ಇಹ ಪ್ರಮಾಣಮ್ । ಅನುಭವಾವಸಾನತ್ವಾದ್, ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ ।**'' ಬ್ರಹ್ಮಜಿಜ್ಞಾಸೆಯಲ್ಲಿ ಬರಿಯ ಶ್ರುತ್ಯಾದಿಗಳೇ ಅಲ್ಲ, ಅನುಭವಾದಿಗಳೂ ಯಥಾಸಂಭವವಾಗಿ ಪ್ರಮಾಣವಾಗಿರುತ್ತವೆ ; ಏಕೆಂದರೆ ಇರುವ ವಸ್ತುವನ್ನು ಇದ್ದಂತೆ ನಿರ್ಣಯಿಸುವದಕ್ಕೆ ಈ ಜಿಜ್ಞಾಸೆಯು ಹೊರಟಿದೆ, ಇದು ಅನುಭವದಲ್ಲಿಯೇ ಕೊನೆಗಾಣಬೇಕಾಗಿರುತ್ತದೆ. ಹೀಗೆ ಅನುಭವವೊಂದನ್ನೇ ಮುಖ್ಯವಾಗಿ ಹಿಡಿದು ವಿಚಾರಕ್ರಮವನ್ನು ಮಾಡುವದರಿಂದ ಆಚಾರ್ಯರು ಉಪದೇಶಿಸಿರುವ ಕ್ರಮವೊಂದೇ '**ದರ್ಶನ**'ವೆಂಬ ಗೌರವದ ಹೆಸರಿಗೆ ತಕ್ಕದ್ದಾಗಿರುತ್ತದೆ.

ಅನುಭವಾನುಸಾರಿಯಾಗಿಲ್ಲದಿದ್ದರೆ ಶ್ರುತಿಯೂ ಪ್ರಮಾಣವಲ್ಲವೆಂತ ಅವರು ನಿಃಸನ್ದಿಗ್ಧವಾಗಿ ಹೇಳಿರುತ್ತಾರೆ.

ಬ್ರಹ್ಮಸೂತ್ರದಲ್ಲಿರುವ **'ತರ್ಕಾಪ್ರತಿಷ್ಠಾನಾತ್'** ತರ್ಕಕ್ಕೆ ನಿಲುಗಡೆಯಿಲ್ಲದ್ದರಿಂದ ತಾರ್ಕಿಕರ ದರ್ಶನವು ಸರಿಯಲ್ಲ-ಎಂಬರ್ಥದ ಸೂತ್ರಕ್ಕೆ ಆಚಾರ್ಯರ ವಿಚಾರಣಸರಣಿಯಲ್ಲಿ ಮಾತ್ರವೇ ಸರ್ವಸಮ್ಮತವಾದ ವ್ಯಾಖ್ಯಾನವು ದೊರೆಯುತ್ತದೆ. **ತರ್ಕ**ವೆಂಬುದು ಮೂರು ಬಗೆಯಾಗಿರುತ್ತದೆ ಎನ್ನಬಹುದು. ಒಂದು **ಕೇವಲ ತರ್ಕ,** ಕೇವಲ ಬುದ್ಧಿಯ ನಿಯಮಗಳನ್ನು ಅನುಸರಿಸಿ ಮಾಡುವ ತರ್ಕ. ಉದಾಹರಣೆಗೆ ಮೂರೂ ನಾಲ್ಕೂ ಎಂಟಾದರೆ ನಾಲ್ಕೂ ಮೂರೂ ಎಂಟಾಗಲೇಬೇಕು-ಎಂಬ ತರ್ಕವು ಈ ಜಾತಿಯದು. ಇಲ್ಲಿ ಮೂರೂ ನಾಲ್ಕೂ ಎಂಟಾಗುವದೋ ಇಲ್ಲವೋ ನಾವು ವಿಚಾರಿಸುವದಿಲ್ಲ ; ಮೊದಲನೆಯ ಸಿದ್ಧಾಂತವು ನಿಜವಾದರೆ ಎರಡನೆಯದೂ ನಿಜವಾಗಿರಬೇಕು, ಏಕೆಂದರೆ ಅದೇ ಎರಡು ಸಂಖ್ಯೆಗಳ ಮೊತ್ತವನ್ನೇ ಕುರಿತು ನಾವು ವಿಚಾರಮಾಡುತ್ತಿದ್ದೇವೆ-ಎಂಬುದಿಷ್ಟೇ ಈ ತರ್ಕದ ಕೆಲಸ. ಆದ್ದರಿಂದ ಅದನ್ನು **ಕೇವಲತರ್ಕ**-ಎಂದು ಕರೆಯಬಹುದು. ಇಂಥ ಒಣತರ್ಕಕ್ಕಿಂತ **ಪ್ರಮಾಣಾನುಸಾರಿಯಾದ ತರ್ಕವು** ಹೆಚ್ಚಿನದು. ಏಕೆಂದರೆ ಅದರಲ್ಲಿ ಪ್ರಮಾಣದಿಂದ ಸಿದ್ಧವಾದ ವಸ್ತುವನ್ನು ಆಧಾರವಾಗಿಟ್ಟುಕೊಂಡು ತರ್ಕಿಸುತ್ತಿದೇವೆ. ಇಲ್ಲಿ ಹೊಗೆಯಿರುವದರಿಂದ ಬೆಂಕಿಯಿರಬೇಕು ; ಇಲ್ಲಿ ಕೂತಿದ್ದನಾದ್ದರಿಂದ ಅವನು ಮತ್ತೊಂದುಕಡೆಯಲ್ಲಿರಲಿಲ್ಲ-ಇಂಥ ತರ್ಕಗಳು ಈ ಜಾತಿಯವು. ಆದರೆ ಇವೆರಡನ್ನೂ ಮೀರಿರುವ ತರ್ಕವೂ ಒಂದುಂಟು. **ಸಾರ್ವತ್ರಿಕವಾದ ಅನುಭವಕ್ಕೆ ಅನುಗುಣವಾಗಿ ಮಾಡುವ ತರ್ಕವು ಆ ಜಾತಿಯದು.** ಉದಾಹರಣೆಗೆ ಎಚ್ಚರಕನಸುಗಳಲ್ಲಿ ಕಾಣುವ ದೃಶ್ಯರಾಶಿಯಾದ ಪ್ರಪಂಚವು ಸುಷಪ್ತಿಯಲ್ಲಿಲ್ಲ; ಆದ್ದರಿಂದ ನಮ್ಮ ಆತ್ಮನು ನಿಷ್ಪ್ರಪಂಚಸ್ವಭಾವದವನು-ಎಂಬುದು ಅನುಭಾವಾನುಸಾರಿ ತರ್ಕ. ಎಲ್ಲರಿಗೂ ಗೊತ್ತಿರುವ ಜ್ಞೇಯವೆಲ್ಲ ಅವಸ್ಥಾತ್ರಯದಲ್ಲಿ ಅಡಕವಾಗಿರುವದರಿಂದಲೂ ಸುಷುಪ್ತಿಯಲ್ಲಿ ಪ್ರಪಂಚವಿಲ್ಲದೆ ಅದ್ವಿತೀಯಾತ್ಮನೇ ಇದಾನೆ-ಎಂಬ ವೇದಾಂತವಾಕ್ಯವು ಈ ಸಾರ್ವತ್ರಿಕಾನುಭವಾನುಸಾರಿಯಾಗಿರುವದರಿಂದಲೂ ಈ ಶ್ರುತ್ಯನುಸಾರಿತರ್ಕವು

ಮಿಕ್ಕೆರಡು ಜಾತಿಯ ತರ್ಕಗಳನ್ನೂ ಹೊಡೆದುಹಾಕುವಷ್ಟು ಪ್ರಬಲವಾಗಿ ರುತ್ತದೆ. ಶ್ರುತಿಯು ಹೀಗೆ ಅನುಭವಾನುಸಾರಿತರ್ಕವನ್ನು ಉಪಯೋಗಿ ಸಿಕೊಂಡೇ ತತ್ತ್ವವನ್ನು ನಿರ್ಧರಿಸುವದರಿಂದ ಅದು ಸರ್ವಪ್ರಮಾಣಗಳಿಗಿ ಂತಲೂ ಪ್ರಬಲವಾಗಿರುತ್ತದೆ. ಬರಿಯ ಸಂಭಾವನೆಗಿಂತ ಅನುಭವ ಹೆಚ್ಚಿನದು ; ಆದರೆ ವ್ಯಾಪಕತಮಾನುಭವವನ್ನು ಅವಲಂಬಿಸಿರುವ ತರ್ಕವನ್ನು ಅವಲಂಬಿಸಿ ಮಾಡುವ ವಿಚಾರಕ್ರಮವು ಸರ್ವಸಂಮತವಾಗಿರುತ್ತದೆ ಎಂಬುದು ಆಚಾರ್ಯರ ಮತವು.

ಈ ದೃಷ್ಟಿಯಿಂದ ಆಚಾರ್ಯರು ಉಪದೇಶಿಸಿರುವ ವೇದಾಂತದರ್ಶನವು ಬರಿಯ ತರ್ಕಪ್ರಧಾನವಾದ ದರ್ಶನಗಳೆಲ್ಲಕ್ಕಿಂತಲೂ ಹೆಚ್ಚಿನ ಅರ್ಥದಲ್ಲಿ ದರ್ಶನವಾಗಿರುತ್ತದೆ. ಇದೇ **ಸಮ್ಯಗ್ದರ್ಶನ.**

★★★★★

## ಆಚಾರ್ಯರು ಅನುಗ್ರಹಿಸಿದ ವೇದಾಂತದರ್ಶನ

**3-5-1960**

**ಶ್ರೀಶ್ರೀಗಳವರು**

ಶಂಕರಭಗವತ್ಪಾದರವರು ಉಪದೇಶಿಸಿದ ವೇದಾಂತಕ್ಕೆ ಶ್ರುತಿಯೇ ಪ್ರಮಾಣ; ಅದರ ಅರ್ಥವನ್ನು ಗ್ರಹಿಸುವದಕ್ಕೆ ಸಹಾಯವಾಗಿ ಶ್ರುತ್ಯನು ಗೃಹೀತವಾದ ತರ್ಕವನ್ನೂ ಅದರಲ್ಲಿ ಇಟ್ಟುಕೊಂಡಿರುತ್ತದೆ. ಆದ್ದರಿಂದ ತರ್ಕ ಪ್ರಧಾನವಾದ ಸಿದ್ಧಾಂತಗಳಿಗಿಂತಲೂ ಕೇವಲ ಶ್ರುತಿಯನ್ನು ಶ್ರುತಿವಾಕ್ಯವೆಂಬ ಕಾರಣದಿಂದ ಪ್ರಮಾಣವಾಗಿಟ್ಟುಕೊಂಡಿರುವವರ ಸಿದ್ಧಾಂತಕ್ಕಿಂತಲೂ ಅದು ವಿಲಕ್ಷಣವಾಗಿರುತ್ತದೆ.

ಆಚಾರ್ಯರು ಅದ್ವೈತವೇದಾಂತವನ್ನು ಹೊಸದಾಗಿ ಪ್ರತಿಷ್ಠಾಪನೆಮಾಡಲಿಲ್ಲ. ಆದ್ದರಿಂದ ಅವರು ಬೌದ್ಧಾದಿದರ್ಶನಗಳ ದ್ವೈತಮತಗಳನ್ನು ಖಂಡಿಸಿ ಮೊಟ್ಟಮೊದಲನೆಯ ಸಲಕ್ಕೆ ಅದ್ವೈತವೇದಾಂತವನ್ನು ಪ್ರತಿಷ್ಠಾಪನೆಮಾಡಿದವರೆಂದು ತಿಳಿಯುವದು ಸರಿಯಲ್ಲ. ಆಚಾರ್ಯರಿಗೆ ಸಂಮತವಾದ ಅದ್ವೈತಸಂಪ್ರದಾಯವು ಅವರ ಹಿಂದೆಯೇ ಇತ್ತು. ಈ ಅಭಿಪ್ರಾಯಕ್ಕೆ ಬೆಂಬಲವಾಗಿ ಗೀತಾ ಭಾಷ್ಯದಲ್ಲಿ ಈ ವಾಕ್ಯಗಳು ದೊರೆಯುತ್ತವೆ: **ತಥಾ ಹಿ ಸಂಪ್ರದಾಯವಿದಾಂ ವಚನಮ್– ''ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಞ್ಚ್ಯತೇ'' ಇತಿ ॥** ಇದಕ್ಕನುಗುಣವಾಗಿ ಅಧ್ಯಾರೋಪಾಪವಾದಗಳಿಂದ ನಿಷ್ಪ್ರಪಂಚತತ್ತ್ವವನ್ನು ವಿಸ್ತರಿಸಿ ತಿಳಿಸಲಾಗುತ್ತದೆ–ಎಂಬ ಸಂಪ್ರದಾಯವಿದರ ವಚನವೂ ಇದೆ. '**ಸತ್ಯಮೇವಮ್, ಗುರುಸಂಪ್ರದಾಯರಹಿತಾನಾಂ ಅಶ್ರುತವೇದಾನ್ತಾನಾಮ್, ಅತ್ಯನ್ತ ಬಹಿರ್ವಿಷಯಾಸಕ್ತಬುದ್ಧೀನಾಂ ಸಮ್ಯಕ್ಪ್ರಮಾಣೇಷು ಅಕೃತಶ್ರಮಾಣಾಮ್। ತದ್ವಿಪರೀತಾನಾಂ ತು ಲೌಕಿಕಗ್ರಾಹ್ಯಕದ್ವೈತವಸ್ತುನಿ ಸದ್ಬುದ್ಧಿರ್ನಿತರಾಂ ದುಃಸಂಪಾದಾ। ಆತ್ಮಚೈತನ್ಯವ್ಯತಿರೇಕೇಣ ವಸ್ತ್ವನ್ತರಸ್ಯ ಅನುಪಲಬ್ಧೇಃ ॥**' ನಿಜ, ಗುರುಸಂಪ್ರದಾಯರಹಿತರೂ ವೇದಾಂತವನ್ನು ಶ್ರವಣಮಾಡಿದವರೂ ಹೊರಗಿನ ವಿಷಯಗಳಲ್ಲಿ ಅತ್ಯಂತವಾಗಿ ಆಸಕ್ತಿಯುಳ್ಳ ಬುದ್ಧಿಯವರೂ ಸರಿಯಾದ ಪ್ರಮಾಣಗಳಲ್ಲಿ ಶ್ರಮವನ್ನು ಮಾಡಿಕೊಳ್ಳದೆ ಇರುವವರೂ ಆಗಿರುವವರಿಗೆ ಹೀಗೇ ಸರಿ. ಆದರೆ ಇದಕ್ಕೆ ವಿರುದ್ಧವಾಗಿರುವವರಿಗೆ ಲೋಕದ ಗ್ರಾಹ್ಯಗ್ರಾಹಕರೂಪವಾದ ದ್ವೈತವಸ್ತುವಿನಲ್ಲಿ ಅದು ಇದೆ ಎಂಬ ಬುದ್ಧಿಯನ್ನು ಮಾಡಿಕೊಳ್ಳುವದು ಸ್ವಲ್ಪವೂ ಆಗುವಹಾಗಿಲ್ಲ ; ಏಕೆಂದರೆ ಆತ್ಮಚೈತನ್ಯಕ್ಕಿಂತ ಬೇರೆಯಾಗಿ ಯಾವ ವಸ್ತುವೂ ಕಾಣಬರುದಿಲ್ಲ, ' ಈ ವಾಕ್ಯಗಳನ್ನು ನೋಡಿದರೆ ಆಚಾರ್ಯರು ಒಂದಾನೊಂದು ವಿಶಿಷ್ಟಸಂಪ್ರದಾಯವನ್ನು ಅನುಸರಿಸಿಯೇ ಶ್ರುತ್ಯಾದಿಗಳಿಗೆ ವ್ಯಾಖ್ಯಾನಮಾಡಿರುತ್ತಾರೆಂದು ನಿರ್ಣಯವಾಗುತ್ತದೆ. ಅವರು ಬೇರೆಯ ಸಂಪ್ರದಾಯದ ಅದ್ವೈತಿಗಳ ಮತವನ್ನು ಅಲ್ಲಲ್ಲಿ ಖಂಡನೆಮಾಡಿಯೂ ಇರುತ್ತಾರೆ. ಬೃಹದಾರಣ್ಯಕವಾರ್ತಿಕದಲ್ಲಿ ಪ್ರಪಂಚವಿಲಯ, ಪ್ರಸಂಖ್ಯಾನ–ಮುಂತಾದ ಅನೇಕ ಅದ್ವೈತಿವಾದಗಳನ್ನು ಖಂಡಿಸಿರುತ್ತದೆ.

ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಖಂಡನೆಗೆಂದು ಪರಾಮರ್ಶಿಸಿಕೊಂಡಿರುವ ಅದ್ವೈತಮತಗಳಲ್ಲಿ (1) **ಉಪಾಸ್ಯಬ್ರಹ್ಮವಾದವೆಂ**ಬುದು ಒಂದು. ಬ್ರಹ್ಮವು ಶಾಸ್ತ್ರದಿಂದಲೇ ತಿಳಿಯಬರುತ್ತದೆಯಾದರೂ ಉಪಾಸನಾವಿಧಿಗೆ ಶೇಷವಾಗಿಯೇ ಶಾಸ್ತ್ರದಲ್ಲಿ ಉಕ್ತವಾಗಿದೆ. 'ಸೋಽನ್ವೇಷ್ಟವ್ಯಃ, ಸ ವಿಜಿಜ್ಞಾಸಿತವ್ಯಃ' ಆತ್ಮನನ್ನು ಹುಡುಕಿ ವಿಜ್ಞಾನಮಾಡಿಕೊಳ್ಳಬೇಕು ಎಂಬ ಶ್ರುತಿಗೆ ಪರಮಾತ್ಮನನ್ನು ಉಪಾಸನೆಮಾಡಬೇಕು-ಎಂದೇ ಅಭಿಪ್ರಾಯ. ಉಪಾಸನೆಯಿಂದ ಶಾಸ್ತ್ರದೃಷ್ಟವಾದ, ಕಾಲಾಂತರದಲ್ಲಾಗುವ ಮೋಕ್ಷವಾಗುತ್ತದೆ, ಅಥವಾ ಅವಿದ್ಯಾನಿವೃತ್ತಿಯಾಗುತ್ತದೆ-ಎಂಬುದು ಆ ವಾದಿಗಳ ಉಪದೇಶ. ಬ್ರಹ್ಮವು ಅಲೌಕಿಕ ವಸ್ತುವಾದರೂ ಯೂಪಾಹವನೀಯಾದಿಗಳಂತೆ ಶಾಸ್ತ್ರಪ್ರಮಾಣದಿಂದಲೇ ತಿಳಿಯತಕ್ಕದ್ದು-ಎಂದು ಅವರು ವಾದಿಸಿರುತ್ತಾರೆ.

ಈ ಮತದಲ್ಲಿ ಜ್ಞಾನಫಲವು ಅದೃಷ್ಟವಾಗುವದರಿಂದ ಪೂರ್ವಮೀಮಾಂಸೆಯಲ್ಲಿಯೇ ಇದರ ವಿಚಾರವು ಸೇರಿಹೋಗುತ್ತದೆ; ಬೇರೊಂದು ಶಾಸ್ತ್ರವು ಇದಕ್ಕಾಗಿ ಹುಟ್ಟಬೇಕಾದದ್ದಿಲ್ಲ. 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ' ಮುಂತಾದ ವಾಕ್ಯಗಳಲ್ಲಿಯೂ 'ಉಪಾಸನೆಮಾಡಬೇಕು' ಎಂಬರ್ಥದ ಶಬ್ದವನ್ನು ಸೇರಿಸಿಕೊಳ್ಳಬೇಕಾಗಿಬರುತ್ತದೆ. ಜ್ಞಾನವು ಅವಿದ್ಯೆಯನ್ನು ಕಳೆಯುವದು ಎಲ್ಲರಿಗೂ ತಿಳಿದಿದೆ. ಆದರೆ ಧ್ಯಾನವು ಅದನ್ನು ಹೇಗೆ ಕಳೆದೀತು?-ಎಂಬ ಆಕ್ಷೇಪಣೆಯೂ ಹುಟ್ಟಿಕೊಳ್ಳುತ್ತದೆ.

(2) **ಪ್ರಪಂಚಪ್ರವಿಲಯವಾದ** ಎಂಬುದು ಮತ್ತೊಂದು ಮತ. ಇದನ್ನು ಈಗಲೂ ಕೆಲವರು ಶಂಕರಾನುಯಾಯಿಗಳು ಅನುಸರಿಸುತ್ತಿದಾರೆ. ಬಾವಿಯೊಳಗೆ ಇರುವ ನೀರನ್ನು ಕಾಣುವದಕ್ಕೆ ಅಡ್ಡಿಯಾಗಿರುವ ಮಣ್ಣನ್ನು ತೆಗೆದುಹಾಕುವಂತೆ ಉಪಾಸನೆಯಿಂದ ಭೇದಪ್ರಪಂಚವನ್ನು ಲಯಮಾಡಿಕೊಂಡರೆ ನಿಷ್ಪ್ರಪಂಚಬ್ರಹ್ಮಾತ್ಮತ್ವದ ಸಾಕ್ಷಾತ್ಕಾರವಾಗುತ್ತದೆ ಎಂಬುದು ಇವರ ಮತ. ಆದರೆ ಬ್ರಹ್ಮಜ್ಞಾನವು ಇರುವದನ್ನು ಎಂದಿಗೂ ತೆಗೆದುಹಾಕಲಾರದು ; ಅದು ಅವಿದ್ಯೆಯನ್ನು ತೆಗೆದುಹಾಕಬಹುದು. ಆಗ ಬ್ರಹ್ಮಜ್ಞಾನವಾಗಿಯೇ ಇರುತ್ತದೆ. ಆಗ ಉಪಾಸನೆಯ ಹಂಗೇನು? 'ನೇತಿ ನೇತಿ'

ಮುಂತಾದ ವಾಕ್ಯಗಳಿಂದ ಬ್ರಹ್ಮಜ್ಞಾನವಾದ ಬಳಿಕ ವಿಲಯಮಾಡಿಕೊಳ್ಳಬೇಕಾದ ಪ್ರಪಂಚವು ಯಾವದೂ ಉಳಿದೇ ಇರುವದಿಲ್ಲ. ಆದ್ದರಿಂದ ಜ್ಞಾನದಿಂದ ಅವಿದ್ಯಾಪ್ರಲಯವಲ್ಲದೆ ಮತ್ತೇನೂ ಮಾಡಬೇಕಾದದ್ದು ಇರುವದಿಲ್ಲ-ಎಂಬುದು ಈ ಮತದ ಖಂಡನೆಯ ಸಾರ.

(3) **ಪ್ರಸಂಖ್ಯಾನವಾದವೆಂ**ಬುದು ಮತ್ತೊಂದು ವಾದವು. ಈ ಪಕ್ಷವನ್ನು ಸೂತ್ರಭಾಷ್ಯ, ಉಪದೇಶಸಾಹಸ್ರಿ, ವಾರ್ತಿಕ-ಇವುಗಳಲ್ಲಿ ಖಂಡಿಸಿದೆ. ಅವಿದ್ಯೆಯು ಬಹುಕಾಲದ್ದಾದ್ದರಿಂದ ಜ್ಞಾನವುಂಟಾದ ಮೇಲೂ-ಜ್ಞಾನದಿಂದ ನಷ್ಟವಾದ ಬಳಿಕವೂ-ಮತ್ತೆ ಎದ್ದುಕೊಳ್ಳುತ್ತದೆ. ಆದ್ದರಿಂದ ಜ್ಞಾನಾಭ್ಯಾಸದಿಂದ ಅದನ್ನು ನಾಶಪಡಿಸಬೇಕು-ಎಂಬುದು ಈ ಮತದವರ ಆಶಯ. ಜ್ಞಾನದಿಂದ ಅಜ್ಞಾನವು ಹೋದ ಬಳಿಕವೂ ಮತ್ತೆ ಅದು ಉಳಿದುಕೊಂಡು ಜ್ಞಾನವನ್ನು ಸಡಲಿಸಬಹುದೆಂಬ ಶಂಕೆ ಹಾಸ್ಯಾಸ್ಪದವಾದದ್ದು. ಅಧ್ಯಾರೋಪಿತಾಂಶಗಳನ್ನು ಒಂದೊಂದಾಗಿ ಕಳೆಯುವದಕ್ಕಾಗಿ ಮಧ್ಯಮಾಧಿಕಾರಿಗಳಿಗೆ ಆವೃತ್ತಿಯನ್ನು ಶಾಸ್ತ್ರದಲ್ಲಿ ಹೇಳಿದೆ-ಎಂಬುದು ಆಚಾರ್ಯರ ಮತ.

ಸೂತ್ರಕಾರರು ಮೂರು ಅದ್ವೈತಮತಪ್ರಭೇದಗಳನ್ನು ಪರಾಮರ್ಶಿಸಿರುತ್ತಾರೆ. ''ಆತ್ಮನನ್ನೇ ಕಂಡುಕೊಳ್ಳಬೇಕು, ಶ್ರವಣಮಾಡಬೇಕು. ಮನನ ಮಾಡಬೇಕು, ನಿದಿಧ್ಯಾಸನಮಾಡಬೇಕು'' ಎಂಬ ಶ್ರುತಿಯು ಜೀವನನ್ನು ಹೇಳುವದಿಲ್ಲ. ಪರಮಾತ್ಮನ ದರ್ಶನವನ್ನೇ ಮಾಡಿಕೊಳ್ಳಬೇಕೆಂದು ಹೇಳಿದೆ-ಎಂದು ಸಿದ್ಧಾಂತಮಾಡಿದ ಬಳಿಕ ''ಹಾಗಾದರೆ 'ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ'- ಆತ್ಮನ ಕಾಮಕ್ಕಾಗಿ ಎಲ್ಲವೂ ಪ್ರಿಯವಾಗಿರುತ್ತದೆ ಎಂದು ಜೀವನನ್ನು ಹೇಳಿರುವದೇಕೆ?'' ಎಂಬ ಶಂಕೆಗೆ ಮೂರು ಜನ ಆಚಾರ್ಯರು ಬೇರೆಬೇರೆಯಾಗಿ ಮೂರು ಸಮಾಧಾನಗಳನ್ನು ಹೇಳಿರುತ್ತಾರೆ. **ಆಶ್ಮರಥ್ಯ**ರೆಂಬವರು ಜೀವನಿಗೂ ಪರಮಾತ್ಮನಿಗೂ **ಭೇದಾಭೇದ**ವಿರುತ್ತದೆ; ಪ್ರಕೃತದಲ್ಲಿ ಅಭೇದಾಂಶವನ್ನು ಹಿಡಿದು ಹೇಳಿದೆ ಎಂದಿರುತ್ತಾರೆ. ಇದರಿಂದ ಒಂದನ್ನು ತಿಳಿದರೆ ಎಲ್ಲವನ್ನೂ ತಿಳಿದುಕೊಂಡಂತೆ ಎಂಬ ವೇದಾಂತಪ್ರತಿಜ್ಞೆಯು ಸಿದ್ಧಿಸುವದು ಎಂದು ಅವರ ಆಶಯ. **ಔಡುಲೋಮಿ** ಎಂಬ ಆಚಾರ್ಯರು ಜ್ಞಾನಧ್ಯಾನಾದಿಗಳಿಂದ ಪ್ರಸನ್ನನಾದ ಜೀವನು ದೇಹಾದಿಗಳನ್ನು ಬಿಟ್ಟಮೇಲೆ ಪರಮಾತ್ಮನಾಗುವನೆಂಬ

ಕಾರಣದಿಂದ ಇಲ್ಲಿ ಜೀವಪರಾಮರ್ಶ ಎಂದು ಅಭಿಪ್ರಾಯಪಟ್ಟಿರುತ್ತಾರೆ. **ಕಾಶಕೃತ್ಸ್ನರು** ಪರಮಾತ್ಮನೇ ಈಗಲೂ ಜೀವರೂಪದಿಂದ ತೋರಿಕೊಳ್ಳುತ್ತಿರುವದರಿಂದ ಹೀಗೆ ಪರಾಮರ್ಶವನ್ನು ಮಾಡಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಇಲ್ಲಿ ಭೇದಾಭೇದವಾದ ; ಸಂಸಾರದಲ್ಲಿ ಭೇದ, ಸತ್ತಬಳಿಕ ಅಭೇದ ಎಂಬ ವಾದ ; ಮತ್ತು ಯಾವಾಗಲೂ ಅಭೇದವೇ ಎಂಬ ವಾದ- ಹೀಗೆ ಮೂರು ವಾದಗಳನ್ನು ಸೂತ್ರಕಾರರು ಸಂಗ್ರಹಿಸಿರುತ್ತಾರೆ. ಈ ಮೂರು ವಾದಗಳೂ ಅದ್ವೈತಿಗಳವೇ ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಹೀಗೆ ಬಗೆಬಗೆಯ ಅದ್ವೈತಪ್ರಭೇದಗಳು ಆಚಾರ್ಯರ ಹಿಂದೆಯೇ ಇದ್ದವು. ಆಚಾರ್ಯರು ಶಾಸ್ತ್ರಾಚಾರ್ಯರ ಉಪದೇಶರೂಪವಾದ ಆಗಮದಿಂದ ತಿಳಿದದ್ದನ್ನು ತರ್ಕದಿಂದ ವಿಚಾರಮಾಡಿಕೊಂಡು ಅನುಭವಪರ್ಯಂತವಾಗಿರುವ ಜ್ಞಾನವನ್ನು ಪಡೆಯುವದಕ್ಕೆ ಸಹಾಯಕವಾಗಿರುವ ಒಂದು ಅದ್ವೈತಸಂಪ್ರದಾಯವನ್ನು ಅನುಸರಿಸಿದರು. ಅಧ್ಯಾರೋಪಾಪವಾದ ಪ್ರಕ್ರಿಯೆಯಿಂದ ತತ್ತ್ವವನ್ನು ಬೋಧಿಸುವ ಸಂಪ್ರದಾಯವು ಅವರದು.

★★★★★

# ವಿದ್ಯಾವಿದ್ಯೆಗಳು

**4-5-1960**

**ಶ್ರೀಶ್ರೀಗಳವರು**

**ವಿದ್ಯೆ** ಎಂದರೆ ಜ್ಞಾನ, ನಿಜವು ಇದ್ದಂತೆ ತಿಳಿಸಿಕೊಡುವ ಅರಿವು. ಬ್ರಹ್ಮವು ಶಾಸ್ತ್ರದಿಂದಲೇ ತಿಳಿಯುವದರಿಂದ ಅದಕ್ಕೆ 'ಶಾಸ್ತ್ರವೇ ಪ್ರಮಾಣ' ಎಂದು ತಿಳಿಸುವದಕ್ಕೆ **'ಶಾಸ್ತ್ರಯೋನಿತ್ವಾತ್'** ಎಂದು ಕರೆದಿರುತ್ತಾರೆ. ಶಾಸ್ತ್ರವು ಯಾವ ಅರ್ಥದಲ್ಲಿ ಪ್ರಮಾಣವು ಎಂಬುದನ್ನು ನಾವು ಇಲ್ಲಿ ವಿಚಾರಮಾಡಬೇಕು.

ಶಾಸ್ತ್ರದಲ್ಲಿ ಹೇಳಿದ್ದನ್ನು ನಂಬಬೇಕು ಎಂದೇನು ಅಭಿಪ್ರಾಯವಲ್ಲ; ಪ್ರತ್ಯಕ್ಷಾದಿಗಳು ಹೇಗೆ ಇದ್ದದ್ದನ್ನು ಇದ್ದಂತೆ ತಿಳಿಸಿಕೊಡುವವೋ ಹಾಗೆಯೇ ಶಾಸ್ತ್ರವು ಬ್ರಹ್ಮವು ಇದ್ದಂತೆ ತಿಳಿಸಿಕೊಡುತ್ತದೆ. ಆ ದೃಷ್ಟಿಯಿಂದ ನಾವು ತತ್ತ್ವವನ್ನು ಅರಿತುಕೊಳ್ಳಬೇಕು. ಇಂದ್ರನು 'ನನ್ನನ್ನು ಉಪಾಸನೆಮಾಡು' ಎಂದು ಪ್ರತರ್ದನನಿಗೆ ಹೇಳಿದನೆಂದು ಶ್ರುತಿಯಲ್ಲಿದೆ. ಅಲ್ಲಿ ಇಂದ್ರನು ತನ್ನನ್ನು ಏನೆಂದು ಅರಿತುಕೊಳ್ಳಬೇಕೆಂದು ಹೇಳಿರುತ್ತಾನೆ?- ಎಂಬ ಚರ್ಚೆಯಲ್ಲಿ ಸೂತ್ರಕಾರರು **'ಶಾಸ್ತ್ರದೃಷ್ಟ್ಯಾತೂಪದೇಶೋ ವಾಮದೇವವತ್'** ಎಂಬ ಸೂತ್ರವನ್ನು ಬರೆದಿರುತ್ತಾರೆ. ಅಲ್ಲಿ ಶಾಸ್ತ್ರದೃಷ್ಟಿ ಎಂದರೇನು? ಶಾಸ್ತ್ರವು ಉಪದೇಶಿಸುವ ದೃಷ್ಟಿಯಿಂದ ನೋಡುವಾಗ ನಮಗೆ ಅನುಭವವೇ ಆಗಿಬಿಡುತ್ತದೆ. ಸಾಮಾನ್ಯಜನರಿಗೆ ತಿಳಿಯದೆ ಇರುವ ಸೂಕ್ಷ್ಮವಿಷಯಗಳು ಭೌತಿಕವಿಜ್ಞಾನದಿಂದ ತಿಳಿಯಬರುವಂತೆಯೇ ವೇದಾಂತ ಶಾಸ್ತ್ರದೃಷ್ಟಿಯಿಂದ ನೋಡಿದಾಗ ಅತ್ಯಂತಸೂಕ್ಷ್ಮವಾದ ಬ್ರಹ್ಮವೇ ನಾನು ಎಂಬ ಅರಿವು ಉಂಟಾಗಿಬಿಡುತ್ತದೆ. ಇದೊಂದು ಅದ್ಭುತವಲ್ಲ, ಯೋಗಫಲವಲ್ಲ, ಭಾವನೆಯಲ್ಲ. ಆದ್ದರಿಂದ ಶಾಸ್ತ್ರದೃಷ್ಟಿಯೇ ಪರಮಾರ್ಥದೃಷ್ಟಿ; ಆ ದೃಷ್ಟಿಯಿಂದ ಇಂದ್ರನು ತನ್ನನ್ನು ಪರಮಾತ್ಮನೆಂದು ಕರೆದುಕೊಂಡಿರುತ್ತಾನೆ ಎಂಬುದು ಸೂತ್ರದ ಅರ್ಥ.

ಈಗ ಸೂತ್ರದಲ್ಲಿರುವ 'ವಾಮದೇವವತ್' ಎಂಬ ದೃಷ್ಟಾಂತದ ಅಭಿಪ್ರಾಯವನ್ನು ಬಿಚ್ಚಿ ನೋಡೋಣ. ವಾಮದೇವಋಷಿಯು ನಾನೇ ಬ್ರಹ್ಮವೆಂದು ತಿಳಿದುಕೊಂಡದ್ದರಿಂದ ನಾನೇ ಮನುವೂ ಸೂರ್ಯನೂ ಆಗಿರುತ್ತೇನೆ (ಅಹಂ ಮನುರಭವಂ ಸೂರ್ಯಶ್ಚ....) ಮುಂತಾದ ಅರ್ಥವುಳ್ಳ ಮಂತ್ರವನ್ನು ಕಂಡು ಹಿಡಿದನು ; ಎಂದರೆ ಸರ್ವಾತ್ಮಭಾವವನ್ನು ಪಡೆದನು. ದೇವತೆಗಳಲ್ಲಿ, ಋಷಿಗಳಲ್ಲಿ, ಮನುಷ್ಯರಲ್ಲಿ ಯಾರುಯಾರು ಈ ತತ್ತ್ವವನ್ನು ಅರಿತುಕೊಂಡರೋ ಅವರೇ ಆ ಬ್ರಹ್ಮವಾದರು-ಎಂದು ಹೇಳಿದಬಳಿಕ ಈಗಲೂ ಯಾವನು 'ನಾನು ಬ್ರಹ್ಮವಾಗಿರುವೆನು' ಎಂದು ಅರಿತುಕೊಳ್ಳುವನೋ ಅವನು ಇದೆಲ್ಲವೂ ಆಗುವನು ! ಎಂದು ಶ್ರುತಿಯು ದೇಶಕಾಲಪರಿಚ್ಛೇದವಿಲ್ಲದೆ ಎಲ್ಲೆಲ್ಲಿ ಯಾವ ಯಾವಾಗ ಯಾರು ಯಾರು ಅರಿತುಕೊಂಡರೂ ಅವರವರು ಸರ್ವಾತ್ಮಭಾವವನ್ನು ಪಡೆದುಕೊಳ್ಳುತ್ತಾರೆ ಎಂದು ಹೇಳಿರುತ್ತದೆ.

ಇಲ್ಲಿ ನಾನು ಬ್ರಹ್ಮವು ಎಂದು ತಿಳಿದುಕೊಳ್ಳುವ ಜ್ಞಾನವು ಘಟಾದಿಜ್ಞಾನಗಳಂತೆ ವೃತ್ತಿರೂಪವಾದದ್ದಲ್ಲ. ಏಕೆಂದರೆ ಬ್ರಹ್ಮಜ್ಞಾನವುಂಟಾಗುವವದರೊಳಗೆ ಎಲ್ಲಾ ವೃತ್ತಿಗಳೂ ಮಾಯವಾಗಿರುವವು. ಅದರಿಂದ ಸಂಸಾರಕ್ಕೆ ಕಾರಣವಾದ ಅವಿದ್ಯಾದಿಗಳೆಲ್ಲವೂ ಅತ್ಯಂತವಾಗಿ ಹೋಗಿಬಿಡುವವು.

ಇಲ್ಲಿ ಅವಿದ್ಯೆ ಎಂದರೇನು? ಅದು ವಿದ್ಯೆಯಿಂದ-ಎಲ್ಲರಿಗೂ ಆತ್ಮನಾಗಿರುವ ಸರ್ವಸಾಕ್ಷಿಯಾಗಿರುವ ಅದ್ವಿತೀಯಾತ್ಮನ ಅರಿವಿನಿಂದ-ಹೋಗುವದು ಹೇಗೆ? ಎಂದರೆ **ಪ್ರಸಂಖ್ಯಾನವಾದಿಗಳು** ಒಂದುಸಲ ಬ್ರಹ್ಮಾತ್ಮಜ್ಞಾನವಾದಮಾತ್ರದಿಂದ ಅವಿದ್ಯೆ ತೊಲಗುವದಿಲ್ಲ; ಆ ಜ್ಞಾನವನ್ನು ಮತ್ತೆಮತ್ತೆ ಅಭ್ಯಾಸಮಾಡುತ್ತಿರಬೇಕು ಎನ್ನುತ್ತಿದ್ದರು; **ಉಪಾಸನಾವಾದಿಗಳು** ಉಪಾಸನೆಯಿಂದಲೇ ಅದು ತೊಲಗುತ್ತದೆ ಎನ್ನುತ್ತಿದ್ದರು. ಅವಿದ್ಯೆಯು ಜ್ಞಾನಾಭ್ಯಾಸದಿಂದ ಅಥವಾ ಉಪಾಸನೆಯಿಂದ ಇಷ್ಟಿಷ್ಟಾಗಿ ಹೋಗುತ್ತದೆ ಎಂದು ಕಲ್ಪಿಸುವದರಿಂದ ಅವಿದ್ಯೆಯೆಂಬುದೊಂದು ಸಾವಯವಪದಾರ್ಥವೆಂದು ಹೇಳಿದಂತೆ ಆಗುತ್ತದೆ. ಅವಿದ್ಯೆ ಎಂದರೇನು?- ಎಂಬುದನ್ನು ತಿಳಿಯದ್ದರಿಂದಲೇ ಆ ವಾದಿಗಳಿಗೆ ಇಂಥ ಕಲ್ಪನೆಗಳು ಬರುವದಕ್ಕೆ ಕಾರಣವಾಗಿತ್ತು. ಆಚಾರ್ಯರು ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸವೇ **ಅವಿದ್ಯೆ** ಎಂದು ವಾಸ್ತವಸ್ಥಿತಿಯನ್ನು ಸ್ಪಷ್ಟಗೊಳಿಸಿದರು. ಮಿಕ್ಕ ದರ್ಶನಗಳಲ್ಲಿಯೂ 'ಅವಿದ್ಯೆ' ಎಂಬ ಶಬ್ದವನ್ನು ಬಳಸುತ್ತಾರೆ. ಉದಾಹರಣೆಗೆ ಯೋಗದರ್ಶನದಲ್ಲಿ ಅವಿದ್ಯೆ, ಅಸ್ಮಿತೆ-ಮುಂತಾದವುಗಳನ್ನು ಕ್ಲೇಶಗಳೆಂದು ಕರೆದು ಅನಿತ್ಯವಾದದ್ದನ್ನು ನಿತ್ಯವೆಂದೂ ಅಶುಚಿಯಾದದ್ದನ್ನು ಶುಚಿಯೆಂದೂ ದುಃಖವಾಗಿರುವದನ್ನು ಸುಖವೆಂದೂ ತಪ್ಪಾಗಿ ತಿಳಿಯುವದೇ ಅವಿದ್ಯೆ ಎನ್ನುತ್ತಾರೆ. ತಾರ್ಕಿಕರು ದೇಹಾದಿಗಳೇ ತಾನೆಂದು ತಿಳಿಯುವ ಮಿಥ್ಯಾಜ್ಞಾನವೇ ಅವಿದ್ಯೆ ಎನ್ನುತ್ತಾರೆ. ಆಚಾರ್ಯರ ಮತದಲ್ಲಿ ಅವಿದ್ಯೆ ಎಂಬುದೊಂದು ಸರ್ವಾನುಭವದಲ್ಲಿರುವ ಸರ್ವಾನರ್ಥಮೂಲವು ; ದೇಹವನ್ನು ತಾನೆಂದೂ ಇಂದ್ರಿಯಗಳನ್ನು ತನ್ನವೆಂದೂ ವಿಚಾರವಿಲ್ಲದೆ ಇಟ್ಟುಕೊಂಡುಬಿಟ್ಟಿರುವದರಿಂದ ನಾನು ಪ್ರಮಾತೃವೆಂಬ ಬುದ್ಧಿಯೂ, ಸಂಸಾರಿಯು, ಕರ್ತೃವು, ಭೋಕ್ತೃವು, ಜನನಮರಣಾದಿಗಳುಳ್ಳವನು-ಎಂಬ ಭ್ರಾಂತಿಯೂ ಉಂಟಾಗಿಬಿಟ್ಟಿರುತ್ತದೆ. ಇದು ಮನುಷ್ಯಮಾತ್ರಕ್ಕೆ ಸಮಾನವಾಗಿರುವ ತಪ್ಪುತಿಳಿವಳಿಕೆ. ನಾನು ಪ್ರಮಾತೃ, ಕರ್ತೃಭೋಕ್ತೃ-ಎಂಬ

ಭಾವನೆಯು ಸರಿಯಾದ ತಿಳಿವಳಿಕೆಯಲ್ಲ-ಎಂಬುದಕ್ಕೆ ಸುಷುಪ್ತ್ಯಾದಿಗಳಲ್ಲಿ ಇದು ಇಲ್ಲದಿದ್ದರೂ ನಮ್ಮ ಸ್ವರೂಪವಾದ ಸಾಕ್ಷಿಯು ಇದ್ದುಕೊಂಡಿರುವದೇ ಪ್ರಮಾಣವಾಗಿರುತ್ತದೆ. ಪ್ರತ್ಯಕ್ಷಾದಿಪ್ರಮಾಣಗಳಿಂದ ಅವಿದ್ಯೆಯು ತೊಲಗುತ್ತದೆ ಎಂಬ ನೈಯಾಯಿಕರ ಅಭಿಪ್ರಾಯವು ಸರಿಯಾದದ್ದಲ್ಲವೆಂಬುದಕ್ಕೆ ಪ್ರಮಾತೃತ್ವವೇ ಈ ಅಧ್ಯಾಸರೂಪವಾದ ಅವಿದ್ಯೆಯ ಮರಿ ಎಂಬ ಅನುಭವವೇ ಸಾಕಾಗಿದೆ. ನಮ್ಮ ಲೌಕಿಕ ವ್ಯವಹಾರವೆಲ್ಲವೂ ಪುಣ್ಯಪಾಪ, ಬಂಧಮೋಕ್ಷ-ಎಂಬ ವೈದಿಕವ್ಯವಹಾರವೂ ಗುರುಶಿಷ್ಯವ್ಯವಹಾರವೂ ಈ ಅವಿದ್ಯೆಯ ಭೂಮಿಯಲ್ಲಿಯೇ. 'ಆತ್ಮನು ಒಬ್ಬನೇ' ಎಂದಾದಾಗ ಏತರಿಂದ ಯಾವದನ್ನು ನೋಡುವದಕ್ಕಾದೀತು ? ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. 'ಎಲ್ಲಿ ಇದು ಬೇರೆ, ಅದು ಬೇರೆ ಎಂಬಂತೆ ಅರಿವಾಗುವದೋ ಅಲ್ಲಿ ಒಬ್ಬರು ಮತ್ತೊಂದನ್ನು ಕಾಣುಬಹುದು....' ಎಂಬ ಶ್ರುತಿಯು ಪ್ರತ್ಯಕ್ಷಾದಿಪ್ರಮಾಣಗಳ ವ್ಯಾಪಾರವು ಅವಿದ್ಯಾಕ್ಷೇತ್ರದಲ್ಲಿಯೇ ಎಂದು ಸ್ಪಷ್ಟವಾಗಿ ತಿಳಿಸಿಕೊಡುತ್ತಿದೆ.

ಹೀಗೆ ವಿದ್ಯಾವಿದ್ಯೆಗಳ ಸ್ವರೂಪವನ್ನು ಆಚಾರ್ಯರು ಶ್ರುತ್ಯನುಭವಗಳ ಆಧಾರದಿಂದ ಸ್ಪಷ್ಟಪಡಿಸಿರುತ್ತಾರೆ. ಅವಿದ್ಯಾದೃಷ್ಟಿಯು **ಲೋಕದೃಷ್ಟಿ,** ಜನ ಸಾಮಾನ್ಯಕ್ಕೆ ಸ್ವಭಾವದಿಂದಲೇ ಇರುವ ದೃಷ್ಟಿ ; ಅದನ್ನು ಯಾರಿಗೂ ಕಲಿಸಿಕೊಡಬೇಕಾದದ್ದಿಲ್ಲ, ಪ್ರಮಾಣತರ್ಕಗಳಿಂದ ಆಗುವ ಅರಿವೇ **ವಿದ್ಯೆ** ಎಂದು ಮಿಕ್ಕ ಶಾಸ್ತ್ರಕಾರರು ಅಭಿಪ್ರಾಯಪಟ್ಟರೆ ವೇದಾಂತಿಗಳು ಇದಲ್ಲ ಅವಿದ್ಯೆಯೇ ; ಏಕೆಂದರೆ ನಾನು ಪ್ರಮಾತೃ ಎಂದು ಇಟ್ಟುಕೊಂಡಮೇಲೆಯೇ ಪ್ರಮಾಣಾದಿಗಳಿಗೆ ಸ್ಥಾನವು ದೊರಕುತ್ತದೆ. ಈ ಪ್ರಮಾತೃತ್ವವು ತಪ್ಪುತಿಳಿವಳಿಕೆಯ ಫಲವೆಂದು ವಿವೇಕದಿಂದ ಅರಿತುಕೊಂಡಬಳಿಕ ಪ್ರಮಾಣಗಳೆಲ್ಲವೂ ಅಪ್ರಮಾಣಗಳಾಗಿ ಬಿಡುತ್ತವೆ. ಅದ್ವಿತೀಯಾತ್ಮನೊಬ್ಬನೇ ಪರಮಾರ್ಥವು, ಅವನೇ ನಾನು ಎಂಬ ತಿಳಿವಳಿಕೆಯುಂಟಾಗಿ, ನಾನು ಜ್ಞಾನೇಚ್ಛಾಕ್ರಿಯೆಗಳುಳ್ಳವನಲ್ಲ, ನನಗೆ ಜನನಮರಣಗಳಿಲ್ಲ-ಎಂಬ ದೃಢನಿಶ್ಚಯವಾಗುವದು. 'ತಮೇವಂ ವಿದ್ವಾನಮೃತ ಇಹ ಭವತಿ' ಅವಿದ್ಯಾತಮಸ್ಸಿನ ಆಚೆಯಿರುವ **ಪರಮಾತ್ಮನನ್ನು ಅರಿತುಕೊಂಡವನು ಇಲ್ಲಿಯೇ ಅಮೃತನಾಗುವನು.**

★★★★★

# ಅವಿದ್ಯಾಸತತ್ತ್ವ

## 5-5-1960

**ಶ್ರೀಶ್ರೀಗಳವರು**

ಅವಿದ್ಯಾಕಾಮಕರ್ಮವೆಂಬುದೆಲ್ಲ ವ್ಯವಹಾರದೃಷ್ಟಿಯಿಂದ ಆಡುವ ಮಾತು. ಆದ್ದರಿಂದ ಇದೆಲ್ಲವೂ ಅವಿದ್ಯಾಕ್ಷೇತ್ರದಲ್ಲಿಯೇ ಎಂಬುದನ್ನು ಜಿಜ್ಞಾಸುಗಳು ನೆನಪಿನಲ್ಲಿಡಬೇಕು. ಮಿಥ್ಯಾಜ್ಞಾನವು ರಾಗದ್ವೇಷಗಳಿಗೆ ಕಾರಣವಾಗಿ ರುತ್ತದೆ. ಅದರಿಂದ ಕರ್ಮ. ಅವಿದ್ಯಾರೂಪವಾದ ಈ ಜ್ಞಾನದಲ್ಲಿಯೇ ಪ್ರಮಾಣಾ-ಪ್ರಮಾಣಗಳ ಭೇದವು ತೋರುತ್ತಿರುತ್ತದೆ. ಇದು ಶಾಂಕರಪ್ರಕ್ರಿಯೆಯ ಸಾರವು.

ಪ್ರಮಾಣಗಳು ಅವಿದ್ಯಾವದ್ವಿಷಯಗಳು ಎಂಬುದು ಹೇಗೆ?-ಎಂದು ಶಂಕಿಸಿ ಆಚಾರ್ಯರು ಈ ರೀತಿ ಅದಕ್ಕೆ ಉಪಪತ್ತಿಯನ್ನು ಕೊಟ್ಟಿರುತ್ತಾರೆ ; ಅರಿಯುವದೆಂಬುದೊಂದು, ಕೆಲಸಮಾಡುವದೆಂಬುದೊಂದು-ಇವೆರಡೂ ಇಂದ್ರಿಯಗಳಿಂದಲೇ ಆಗತಕ್ಕವು. ಇಂದ್ರಿಯಗಳನ್ನು ನನ್ನವು ಎಂದು ಇಟ್ಟುಕೊಂಡಲ್ಲದೆ ಪ್ರತ್ಯಕ್ಷಾದಿಪ್ರಮಾಣವ್ಯವಹಾರವು ಇರಲಾರದಷ್ಟೆ ? ದೇಹವನ್ನು ನಾನು ಎಂದು ಇಟ್ಟುಕೊಂಡವನೇ ಇಂದ್ರಿಯಗಳು ನನ್ನವು ಎಂದುಕೊಳ್ಳುತ್ತಾನೆ. ಆದರೆ ದೃಶ್ಯವಾದ ದೇಹವು ನಾನೆಂಬುದೂ ಆ ದೇಹದಲ್ಲಿದ್ದುಕೊಂಡು ವ್ಯಾಪಾರಮಾಡುತ್ತಿರುವ ಇಂದ್ರಿಯಗಳು ನನ್ನವೆಂಬುದೂ ಕೇವಲ ಅವಿದ್ಯಾಮಾತ್ರವೇ ಹೊರತು ಅದಕ್ಕೆ ಯಾವ ಆಧಾರವೂ ಇರುವದಿಲ್ಲ. ನಾನು ಪ್ರಮಾತೃವು, ಇಂದ್ರಿಯಾದಿಗಳಿಂದ ಪ್ರಮೇಯಗಳನ್ನು ಅರಿಯುತ್ತಿರುವವನು ; ನನ್ನಂತೆ ಅನೇಕರು ಪ್ರಮಾತೃಗಳು ಈ ಜಗತ್ತಿನಲ್ಲಿರುತ್ತಾರೆ ; ಅವರಲ್ಲಿ ಕೀಳುಮೇಲುಗಳಿವೆ-ಎಂದು ಸ್ವಾಭಾವಿಕವಾಗಿ ನಾವು ಇಟ್ಟುಕೊಂಡಿರುವದಕ್ಕೆ ಅವಿದ್ಯೆಯೇ ತಳಹದಿ ; ಹೀಗೆ ಪ್ರಮಾತೃತ್ವವೇ ಆವಿದ್ಯಕವಾದಬಳಿಕ ಪ್ರಮಾಣಪ್ರಮೇಯವ್ಯವಹಾರವು ಆವಿದ್ಯಕವೆಂಬುದನ್ನು ಹೇಳಬೇಕಾದದ್ದೇನು ?

ಹೊರಗಿನ ಪದಾರ್ಥಗಳು ಕಾರ್ಯಕಾರಣಸಂಬಂಧಕ್ಕೆ ಕಟ್ಟುಬಿದ್ದಿರುತ್ತವೆ; ಕಾರ್ಯಕಾರಣಭಾವವು ದೇಶಕಾಲನಿಮಿತ್ತಗಳ ಅಪೇಕ್ಷೆಯಿಂದ ತೋರುತ್ತದೆ. ಇದೆಲ್ಲವನ್ನೂ ಕಾಣುವದಕ್ಕೆ ಪ್ರಮಾತೃತ್ವವು ನಮಗೆ ಇದೆಯೆಂದು ಮೊದಲೇ ಇಟ್ಟುಕೊಂಡಿರಬೇಕು. ಆದ್ದರಿಂದ ಆಚಾರ್ಯರು ಒಂದುಕಡೆ ಹೀಗೆಂದು ಬರೆದಿರುತ್ತಾರೆ: ''**ಸರ್ವಜ್ಞಸ್ಯ ಈಶ್ವರಸ್ಯ ಆತ್ಮಭೂತೇ ಇವ ಅವಿದ್ಯಾಕಲ್ಪಿತೇ ನಾಮರೂಪೇ ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯೇ ಸಂಸಾರಪ್ರಪಞ್ಚಬೀಜಭೂತೇ ಸರ್ವಜ್ಞಸ್ಯ ಈಶ್ವರಸ್ಯ ಮಾಯಾ, ಶಕ್ತಿಃ, ಪ್ರಕೃತಿಃ-ಇತಿ ಚ ಶ್ರುತಿಸ್ಮೃತ್ಯೋರಭಿಲಪ್ಯೇತೇ ।**'' ನಾಮರೂಪಗಳು ಅವಿದ್ಯೆಯಿಂದ ಕಲ್ಪಿತವಾಗಿರುತ್ತವೆ ; ಅವುಗಳ ಬೀಜವೇ ಮಾಯೆ. ಶಕ್ತಿ, ಪ್ರಕೃತಿ, ಆಕಾಶ, ಅಕ್ಷರ, ಅವ್ಯಕ್ತ-ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತದೆ. ಹೀಗೆ ನೋಡಿದರೆ ಪ್ರಮೇಯವೆಲ್ಲವೂ ಆವಿದ್ಯಕವೇ ಎಂದಾಯಿತು ; ಪ್ರಮೇಯದಲ್ಲಿ ಶುಭಾಶುಭಬುದ್ಧಿ, ರಾಗದ್ವೇಷ, ಕರ್ಮ, ಫಲ, ಜನ್ಮಾಂತರ-ಮುಂತಾದದ್ದೆಲ್ಲವೂ ಪ್ರಮಾತೃವು ಪ್ರಮೇಯದಲ್ಲಿ ನೆಟ್ಟ ದೃಷ್ಟಿಯುಳ್ಳವನಾಗಿರುವದರಿಂದಲೇ ತೋರುತ್ತಿರುವದು. ಹೀಗಿರುವದರಿಂದ ಪ್ರಮಾತೃತ್ವದ ನಿಜವೇನು?-ಎಂಬುದನ್ನು ವಿಚಾರಿಸುವವರೆಗೆ ತತ್ತ್ವವು ಹೇಗೆತಾನೆ ತಿಳಿದೀತು?

ಈವರೆಗೆ ಹೇಳಿದ್ದು ಭಾಷ್ಯಕಾರರ ಪ್ರಕ್ರಿಯೆ. ಈಗ **ವ್ಯಾಖ್ಯಾನಪ್ರಸ್ಥಾನದ** ಕಡೆಗೆ ದೃಷ್ಟಿಯನ್ನು ಹೊರಳಿಸೋಣ. ಆಚಾರ್ಯರು ಅಧ್ಯಾಸವೇ' ಮಿಥ್ಯಾಜ್ಞಾನವೇ' ಅವಿದ್ಯೆ; ಅದರಿಂದಲೇ ಎಲ್ಲ ವ್ಯವಹಾರವೂ ಆಗಿದೆ-ಎಂದು ಅನುಭವಾನುಸಾರವಾಗಿ ಸ್ಪಷ್ಟವಾಗಿ ಹೇಳಿರುವಲ್ಲಿ ಕೆಲವರು ವ್ಯಾಖ್ಯಾನಕಾರರು ಅಧ್ಯಾಸವು ಕಾರ್ಯಾವಿದ್ಯೆಯೆಂದೂ ಅದಕ್ಕೆ ಕಾರಣವಾಗಿ ಅವಿದ್ಯೆಯು ಬೇರೆಯಾಗಿರಬೇಕೆಂದೂ ಕಲ್ಪಿಸಿದರು. ಅಧ್ಯಾಸವು ಪ್ರವಾಹರೂಪದಿಂದ ಅನಾದಿಯಾದರೂ ಅದಕ್ಕೆ ಉಪಾದಾನವಾಗಿ ಅವಿದ್ಯೆ ಇದೆ-ಎಂಬರ್ಥವನ್ನು ಮಿಥ್ಯಾಜ್ಞನನಿಮಿತ್ತ ಎಂಬ ಭಾಷ್ಯಕ್ಕೆ ಕಲ್ಪಿಸಿದರು. 'ಈ ಅವಿದ್ಯಾಶಕ್ತಿಯೆಂಬುದು ಹೊರಗಿನ ಮತ್ತು ನಮ್ಮೊಳಗಿನ ವಸ್ತುಗಳಿಗೆ ಅಂಟಿಕೊಂಡಿದೆ ಎಂದು ಅವಶ್ಯವಾಗಿ **ಒಪ್ಪಬೇಕು** ; ಇಲ್ಲದಿದ್ದರೆ ಮಿಥ್ಯಾಪದಾರ್ಥವು ತೋರಿಕೊಳ್ಳಲಾರದು' ''ಶ್ರುತಿಸ್ಮೃತಿಪುರಾಣೇತಿಹಾಸಗಳಲ್ಲಿ ನಾಮರೂಪ, ಅವ್ಯಾಕೃತ, ಅವಿದ್ಯೆ'ಮಾಯೆ,

ಪ್ರಕೃತಿ, ಅಗ್ರಹಣ, ಅವ್ಯಕ್ತ, ತಮಸ್ಸು, ಕಾರಣ, ಲಯ, ಶಕ್ತಿ, ಮಹಾಸುಪ್ತಿ, ನಿದ್ರೆ, ಅಕ್ಷರ, ಆಕಾಶ-ಎಂದು ಮುಂತಾಗಿ ಬಹುವಿಧವಾಗಿ ಹೇಳಿದೆಯಲ್ಲ, ಈ ಅನಾದ್ಯವಿದ್ಯೆಯು ಬ್ರಹ್ಮಸ್ವರೂಪವನ್ನು ಮುಸಿಕಿಕೊಂಡು ಅದು ತೋರದಂತೆ ಅಡ್ಡಿಮಾಡಿರುತ್ತದೆ. ಇದರ ಪರಿಣಾಮವೇ ಅಹಂಕಾರವು ; ತನಿನಿದ್ರೆಯಲ್ಲಿ ಈ ಪರಿಣಾಮವು ಹೋಗಿಬಿಟ್ಟಿರುತ್ತದೆ. ಅದರ ಸಂಸ್ಕಾರವು ಮಾತ್ರ ಉಳಿದುಕೊಂಡಿರುತ್ತದೆ. ಬೀಜವು ವೃಕ್ಷವಾಗುವಂತೆ ಅದು ಎಚ್ಚರದಲ್ಲಿ ಮತ್ತೆ ಅಹಂಕಾರವಾಗುತ್ತಿರುತ್ತದೆ'- ಹೀಗೆಂದು **ಪಂಚಪಾದಿಕಾಕಾರರು** ಅವಿದ್ಯೆಯನ್ನು ವರ್ಣಿಸಿರುತ್ತಾರೆ. ಭಾಷ್ಯಕಾರರ ಮತದಲ್ಲಿ ಯಾವದು ಅಧ್ಯಸ್ತ- ಅವಿದ್ಯಾಕಲ್ಪಿತ-ವಾಗಿತ್ತೋ ಆ ಅವ್ಯಾಕೃತವೇ ಇಲ್ಲಿ ಅನಾದ್ಯವಿದ್ಯೆ ; ಅಧ್ಯಾಸರೂಪಾವಿದ್ಯೆಗೆ ಕಾರಣವಾಯಿತು. ಹೀಗೆ ಭಾಷ್ಯಕಾರರ ಅಭಿಪ್ರಾಯವು ಇಲ್ಲಿ ಬುಡಮೇಲಾಗಿ ಬಿಟ್ಟಿರುತ್ತದೆ !

ಈಗ **ಭಾಮತೀಪ್ರಸ್ಥಾನವೆಂಬ** ಮತ್ತೊಂದು ವ್ಯಾಖ್ಯಾನಪ್ರಕಾರವನ್ನು ಸಂಗ್ರಹಿಸಿ ತಿಳಿಸುವೆನು. ಭಾಷ್ಯಕಾರರು ಬರೆದಿರುವ ಅಧ್ಯಾಸಭಾಷ್ಯಕ್ಕೆ ಇಲ್ಲಿ ವ್ಯಾಖ್ಯಾನಮಾಡಿರುವದು ಹೀಗೆ: ಅಹಮ್ 'ನಾನು' ಎಂಬ ಅನುಭವವು ಆತ್ಮನ ಯಾಥಾತ್ಮ್ಯವನ್ನೇ ತಿಳಿಸುತ್ತಿರುವದರಿಂದ ಅದನ್ನು ಸುಳ್ಳೆಂದು ತೋರಿಸುವದು ಯಾವ ಶ್ರುತಿಯಿಂದಲೂ ಆಗಲಾರದು. ಆದ್ದರಿಂದ ಸಂಸಾರವು ಆವಿದ್ಯಕವೆಂಬುದು ಸರಿಯಲ್ಲ; ಶ್ರುತಿಗಳಿಗೆ ಗೌಣಾರ್ಥವನ್ನು ಹೇಳಬೇಕು-ಎಂಬ ಪೂರ್ವಪಕ್ಷವನ್ನು ತೆಗೆದು ಸಿದ್ಧಾಂತವನ್ನು ಅವರು ಹೀಗೆ ಹೇಳುತ್ತಾರೆ : ನಾನು ಎಂಬ ಪ್ರತ್ಯಯವು ಪ್ರಮಾಣವಾಗಿದ್ದಿದ್ದರೆ ನೀವು ಹೇಳುವಂತೆ ಸಂಸಾರವು ಪರಮಾರ್ಥವೆಂದಾಗಬಹುದಾಗಿತ್ತು. ಆದರೆ ಶ್ರುತಿಸ್ಮೃತೀತಿಹಾಸಪುರಾಣಗಳಲ್ಲಿ ಉಪಕ್ರಮೋಪಸಂಹಾರಾದಿಗಳಿಂದ ತಾತ್ಪರ್ಯಪೂರ್ವಕವಾಗಿ ಒತ್ತಿ ಹೇಳುವ ಅದ್ವೈತಾತ್ಮನನ್ನು ಅಲ್ಲಗಳೆಯುವದಾಗಲಿ ಗೌಣವೆನ್ನುವದಾಗಲಿ ಎಂದಿಗೂ ಆಗಲಾರದು. 'ನಾನು ಇಲ್ಲಿಯೇ ಇದ್ದೇನೆ' ಎಂಬ ಅನುಭವವು ಸುಳ್ಳೆ ? ಎಂದರೆ, ವ್ಯಾವಹಾರಿಕಪ್ರಾಮಾಣ್ಯವು ಇದಕ್ಕೆ ಇದೆ ; ಆದರೆ ಶ್ರುತಿಗೆ ತಾತ್ತ್ವಿಕಪ್ರಾಮಾಣ್ಯವಿದೆ. ಆದ್ದರಿಂದ ಈಗಿರುವ ನಮ್ಮ ಅನುಭವವು ಆವಿದ್ಯಕವೇ ಸರಿ. ಆಚಾರ್ಯರು ಪ್ರಮಾಣಪ್ರಮೇಯವ್ಯವಹಾರವೇ ಆವಿದ್ಯಕವೆಂದು

ಹೇಳಿರುವಲ್ಲಿ, ಇಲ್ಲಿ ಸಂಸಾರವು ಆವಿದ್ಯಕ ಎಂಬುದಕ್ಕೆ ಶ್ರುತಿಪ್ರಾಮಾಣ್ಯವನ್ನು ಉದಾಹರಿಸಿದೆ ಎಂಬುದನ್ನು ವಾಚಕರು ಲಕ್ಷಿಸಬೇಕು. ಇಲ್ಲಿಯೂ ಭಾಷ್ಯಕಾರರ ಪ್ರಕ್ರಿಯೆಯು ಬುಡಮೇಲಾಗಿಬಿಟ್ಟಿದೆ.

ಇನ್ನೊಂದು ವಿಷಯ. ಈ ಎರಡನೆಯ ವ್ಯಾಖ್ಯಾನಪ್ರಸ್ಥಾನದಲ್ಲಿ ಅವಿದ್ಯೆಯು ಪ್ರತಿಜೀವನಿಗೂ ಒಂದೊಂದು-ಎಂಬ ಹೊಸ ಪ್ರಕ್ರಿಯೆಯೊಂದು ಬಂದಿದೆ. ಅವಿದ್ಯೆಯು ಒಂದೊ, ಎರಡೊ-ಎಂದು ಶಂಕೆಯಿಂದ ಸಂಖ್ಯೆಯನ್ನು ಅವಿದ್ಯೆಗೆ ಹೊಂದಿಸಬಹುದೆ ? ದೇಶಕಾಲಗಳ ಅಪೇಕ್ಷೆಯಿಂದ ಸಂಖ್ಯೆಯ ಅರಿವು ಆಗುತ್ತದೆ; ಆದರೆ ಕಾಲಾಕಾಶಗಳೂ ಅವಿದ್ಯಾಕಲ್ಪಿತವಾಗಿರುತ್ತವೆ. ಹೀಗಿರುವದರಿಂದ ಸಂಖ್ಯೆ ಎಂಬುದು ಅವಿದ್ಯಾಕಲ್ಪಿತಪದಾರ್ಥಗಳಿಗೆ ಹೊಂದೀತೇ ಹೊರತು ಅವಿದ್ಯೆಗೆ ಜೋಡಿಸತಕ್ಕದ್ದಲ್ಲ. ಆದರೂ ಈ ವ್ಯಾಖ್ಯಾತೃಗಳು ಅದೇಕೆ ಹೀಗೆ ವಿಚಾರ ಕ್ರಮವನ್ನು ತಲೆಕೆಳಗೆಮಾಡಿರುತ್ತಾರೋ, ವಿಚಾರಮಾಡತಕ್ಕದ್ದಿದೆ.

ಒಟ್ಟಿನಲ್ಲಿ ಆಚಾರ್ಯರು ಹೇಳುವ ಅವಿದ್ಯೆಯು ಜಿಜ್ಞಾಸುಗಳಿಗೆ ಅನುಭವದಲ್ಲಿ ಕಾಣಬರುವ ಅಧ್ಯಾಸವು ; ಅದು ತಪ್ಪುತಿಳಿವಳಿಕೆ ಎಂಬುದು ವಿಚಾರದಿಂದ ಗೊತ್ತಾಗುತ್ತದೆ. ಆದ್ದರಿಂದ ಅದನ್ನು ವಿದ್ಯೆಯಿಂದ ತೆಗೆದುಹಾಕಬಹುದು. ಅದಕ್ಕೆ ಪ್ರಮಾಣ, ಅವಸ್ಥೆ, ಕಾರ್ಯಕಾರಣಭಾವಸಂಬಂಧ-ಮುಂತಾದವುಗಳನ್ನು ಹೊಂದಿಸುವದಕ್ಕೆ, ಹೋಗುವದು ಸರಿಯಲ್ಲ ; ಏಕೆಂದರೆ ಅವೆಲ್ಲವೂ ಅವಿದ್ಯಾಕಲ್ಪಿತವೇ ಆಗಿರುತ್ತವೆ. ಆದರೆ ವ್ಯಾಖ್ಯಾನಕಾರರ ಮತದಲ್ಲಿ ಹಿಂದು ಮುಂದಾಗಿದೆ, ಉರ್ದುಭಾಷೆಯ ಬರೆವಣಿಗೆ ಬಲದಿಂದ ಎಡಕ್ಕೆ ಹೋಗುವಂತೆ, ಈ ಪ್ರಕ್ರಿಯೆಯು ಅವಿದ್ಯಾಕಲ್ಪಿತವಾದದ್ದನ್ನೇ ಎಲ್ಲಕ್ಕೂ ಕಾರಣವಾದ ಅವಿದ್ಯೆ ಎಂದು ಕಲ್ಪಿಸುತ್ತದೆ. ಇಂಥದ್ದು ಅವಿದ್ಯೆಯ ಮಹಿಮೆ !

★★★★★

# ಅವಸ್ಥಾತ್ರಯಪ್ರಕ್ರಿಯೆ

## 6-5-1960

**ಶ್ರೀಶ್ರೀಗಳವರು**

ಅನಾತ್ಮವೆಲ್ಲ ಅವಿದ್ಯಾಕೃತ, ಅಜ್ಞಾತಬ್ರಹ್ಮವೇ ನಾಮರೂಪಗಳಾಗಿ ತೋರುತ್ತಿದೆ-ಎಂಬುದೇ ವೇದಾಂತಸಿದ್ಧಾಂತ. ಅಧ್ಯಾಸವನ್ನು ಇಟ್ಟುಕೊಂಡೇ ಎಲ್ಲಾ ವ್ಯವಹಾರಗಳೂ ಸಾಗಿರುತ್ತವೆ. ಪರಮಾರ್ಥವು ಯಾವ ದ್ವೈತಸಂಬಂಧವೂ ಇಲ್ಲದ್ದೆಂದು ತಿಳಿದರೂ ವೇದಾಂತಿಗಳು ಒಂದೊಂದು ಪ್ರಕ್ರಿಯೆಯಲ್ಲಿಯೂ ಯಾವದಾದರೊಂದು ಅಧ್ಯಾರೋಪಿತವಾದ ಅನಾತ್ಮವು ಇದ್ದಂತೆ ಇಟ್ಟುಕೊಂಡೇ ವಿಚಾರವನ್ನು ಪ್ರಾರಂಭಿಸಿ ಅದು ಪರಮಾರ್ಥವಲ್ಲವೆಂದು ತಿಳಿಸಿಕೊಟ್ಟು ತತ್ತ್ವಕ್ಕೆ ಬಂದು ಮುಟ್ಟುತ್ತಾರೆ. ಇದೇ ಅಧ್ಯಾರೋಪಾಪವಾದಪ್ರಕ್ರಿಯೆ ಎಂಬುದು. ಈಗ ಅವಸ್ಥಾತ್ರಯಪರೀಕ್ಷೆಯ ಪ್ರಕ್ರಿಯೆಯನ್ನು ಕುರಿತು ಹೇಳಬೇಕಾಗಿದೆ.

ಅವಸ್ಥಾತ್ರಯವು ಪರಮಾರ್ಥದೃಷ್ಟಿಯಿಂದ ಇಲ್ಲವೇಇಲ್ಲವಾದರೂ ಅದು ಇದ್ದಂತೆ ಇಟ್ಟುಕೊಂಡು ವಿಚಾರಕ್ಕೆ ಹೊರಡುವದು ಈ ಪ್ರಕ್ರಿಯೆ. ಅವಸ್ಥಾತ್ರಯವೆಂಬುದು 'ನಾನು ಪ್ರಮಾತೃ' ಎಂದು ಭಾವಿಸಿಕೊಂಡಿರುವವರಿಗೆ ತೋರುತ್ತಿರುವದು. ನನ್ನಂತೆ ಅನೇಕರು ಅವಸ್ಥಾತ್ರಯವನ್ನು ಅನುಭವಿಸುತ್ತಾ ಈ ಪ್ರಪಂಚದಲ್ಲಿರುತ್ತಾರೆ ; ಹೀಗೆ ಅನುಭವಿಸಿ ಕೊನೆಗೆ ಆಯುಸ್ಸು ಮುಗಿದ ಮೇಲೆ ಸಾಯುತ್ತೇನೆ- ಎಂಬುದು ಈ ದೃಷ್ಟಿ. ಭಾಗವತದಲ್ಲಿ ಒಂದು ಕಥೆಯಿದೆ. ಅಲ್ಲಿ ನಿಮಿರಾಜನು ಮಾಯೆಯನ್ನು ಕುರಿತು ಪ್ರಶ್ನೆಮಾಡಿದಾಗ ಅಂತರಿಕ್ಷನೆಂಬ ಋಷಿಯು ಹೀಗೆಂದಿರುತ್ತಾನೆ : ಜಾಗ್ರತ್ಸ್ವಪ್ನಸುಷುಪ್ತಿಗಳು ತೋರುತ್ತಿರುವದು, ಜೀವನ ಜನ್ಮಮರಣಗಳಾಗುತ್ತಿರುವದು, ಸೃಷ್ಟಿಸ್ಥಿತಿಪ್ರಲಯಗಳಾಗುತ್ತಿರುವದು- ಇದೇ ಭಗವಂತನ **ಮಾಯೆ.** ಆ ಉಪದೇಶದ ಆಶಯವೇನೆಂದರೆ ಪ್ರತಿದಿನವೂ ನಮಗೆ ಸುಷುಪ್ತಿಯಾಗುತ್ತಿದ್ದರೂ ನಾವು ಅವಸ್ಥಾತ್ರಯಾತೀತರೆಂಬುದನ್ನು ತಿಳಿಯುವದಿಲ್ಲ ; ಮತ್ತೆಮತ್ತೆ ಹುಟ್ಟಿ ಬಾಳುಮಾಡಿಕೊಂಡಿದ್ದು ಸಾಯುತ್ತಿದ್ದರೂ ಜನನಮರಣಾತೀತರು ನಾವೆಂದು ತಿಳಿಯುತ್ತಿಲ್ಲ ; ಸೃಷ್ಟಿಸ್ಥಿತಿಗಳಾದ

ಮೇಲೆ ಪ್ರಲಯವು ಆಗುತ್ತಲೇ ಇದ್ದರೂ ಸೃಷ್ಟ್ಯಾದಿಗಳು ಆತ್ಮನಿಗೆ ಸಂಬಂಧಿಸಿಲ್ಲವೆಂಬುದನ್ನು ಅರಿಯದೆ ಇರುವೆವು. ಇದೇ ಭಗವಂತನ ಮಾಯಾವಿಲಾಸ! ಅವಸ್ಥಾತ್ರಯವು ನಮಗೆ ಇಲ್ಲದಿದ್ದರೂ ನಾವು ಹೇಗೆ ಅದನ್ನು ಸತ್ಯವೆಂದು ನಂಬಿರುವೆವೆಂಬುದನ್ನು ಈ ದಿನ ವಿಚಾರಮಾಡುವದಕ್ಕೆ ಹೊರಟಿರುವೆವು.

ಅವಸ್ಥಾತ್ರಯ ಪರೀಕ್ಷಾಪ್ರಕ್ರಿಯೆಯ ಕೆಲವು ಹೆಗ್ಗುರುತುಗಳನ್ನು ಇಲ್ಲಿ ತಿಳಿಸುವೆನು. ಅಧ್ಯಾತ್ಮಪ್ರಕಾಶ ಕಾರ್ಯಾಲಯದಲ್ಲಿ ಪ್ರಕಟವಾಗಿರುವ 'ಪರಮಾರ್ಥಚಿಂತಾಮಣಿ' ಎಂಬ ಗ್ರಂಥದಲ್ಲಿ ಇದನ್ನು ವಿಸ್ತಾರವಾಗಿ ಹೇಳಿದೆ. ಅದನ್ನಿಲ್ಲಿ ಸಂಕ್ಷೇಪಿಸಿ ತಿಳಿಸುವೆನು. ಅವಸ್ಥೆಗಳ ವಿಷಯಕ್ಕೆ ನಮಗಿರುವ ತಪ್ಪು ತಿಳಿವಳಿಕೆಗಳು ಯಾವವೆಂದರೆ (1) ಪ್ರಪಂಚದಲ್ಲಿದ್ದುಕೊಂಡು ನಾನು ಅವಸ್ಥೆಗಳನ್ನು ಅನುಭವಿಸುತ್ತೇನೆಂಬುದು ತಪ್ಪುಕಲ್ಪನೆ ; ಅವಸ್ಥೆಯಲ್ಲಿ – ಎಚ್ಚರದವಸ್ಥೆಯಲ್ಲಿ – ಪ್ರಪಂಚವು ಕಾಣಿಸುತ್ತಿದೆ, ಪ್ರಪಂಚದಲ್ಲಿ ಅವಸ್ಥೆಯಾಗುತ್ತಿಲ್ಲ. ಕನಕದಾಸರ ಪದದಲ್ಲಿ 'ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ?' ಎಂಬ ಪಲ್ಲವಿಯ ಅರ್ಥವನ್ನು ಇಲ್ಲಿ ಮನನಮಾಡಿಕೊಳ್ಳುವದು ಒಳ್ಳೆಯದು. (2) ಎಚ್ಚರವು ಹೆಚ್ಚಿನ ಅವಸ್ಥೆ, ಕನಸೂ ತನಿನಿದ್ರೆಯೂ ಅದಕ್ಕೆ ಅಡಿಯಾಳಾಗಿ ಸೇರಿಕೊಂಡಿವೆ–ಎಂಬುದು ಮತ್ತೊಂದು ತಪ್ಪುತಿಳಿವಳಿಕೆ. ಸರಿಯಾಗಿ ನೋಡಿದರೆ ಎಚ್ಚರಕನಸುಗಳಿಗೆ ಯಾವ ತಾರತಮ್ಯವೂ ಇಲ್ಲ ; ದರ್ಶನವೃತ್ತ್ಯವಸ್ಥೆ (ಕಾಣುವ ಅವಸ್ಥೆ ). ಅದರ್ಶನವೃತ್ತ್ಯವಸ್ಥೆ (ಏನನ್ನೂ ಅರಿಯದ ಅವಸ್ಥೆ)– ಎಂದು ಎರಡು ರಾಶಿಯಾಗಿ ಅವಸ್ಥೆಗಳನ್ನೆಲ್ಲ ವಿಂಗಡಿಸಿಬಿಡಬಹುದು. (3) ಪ್ರಪಂಚವೆಂದರೆ ಪ್ರಮಾತೃಪ್ರಮಾಣ ಪ್ರಮೇಯ–ಎಲ್ಲವೂ ಸೇರಿದ ಮೂಟೆ, ಅವುಗಳಲ್ಲಿ ಪ್ರಮೇಯಭಾಗವನ್ನು ಮಾತ್ರ ಪ್ರಪಂಚವೆಂದು ಭಾವಿಸುವದು ತಪ್ಪು. (4) ಅವಸ್ಥೆಗಳು ಮೂರೆಂದೂ ಅವು ಒಂದೊಂದಾಗಿ ಬಂದುಹೋಗುತ್ತಿರುವವೆಂದೂ ಕಲ್ಪಿಸುವದು ತಪ್ಪು. ಏಕೆಂದರೆ ಒಂದೇ ಕಾಲದಲ್ಲಿ ಅಥವಾ ಒಂದೇ ದೇಶದಲ್ಲಿರುವವಕ್ಕೆ ಮಾತ್ರ ಸಂಖ್ಯೆಯಿರುತ್ತದೆ : ಒಂದಾಗುತ್ತಲೊಂದು ಬಂದು ಹೋಗುವವೆಂಬ ವ್ಯವಸ್ಥೆಯೂ ಇರುತ್ತದೆ. ಆದರೆ ಅವಸ್ಥೆಗಳು ಕಾಲದಲ್ಲಿಲ್ಲ, ಕಾಲವೇ ಎಚ್ಚರದಲ್ಲಿ ಅಥವಾ ಕನಸಿನಲ್ಲಿ ತೋರಿಕೊಳ್ಳುತ್ತದೆ. ತತ್ತ್ವವೊಂದೇ

ಎಚ್ಚರವಾಗಿಯೂ ಕನಸಾಗಿಯೂ ಕಾಣುತ್ತಿರುತ್ತದೆ. ಎಚ್ಚರವಾದಮೇಲೆ ಕನಸು ಎಂಬುದು ನಿಜವಾದರೆ ಈ ಎರಡಕ್ಕೂ ಸಮಾನವಾದ ಕಾಲಪ್ರವಾಹವೊಂದು ಇರಬೇಕಲ್ಲವೆ? ಅವಸ್ಥೆಗೆ ಒಂದಕ್ಕೊಂದಕ್ಕೆ ಸಂಬಂಧವಿದೆ ಎಂಬುದೇ ತಪ್ಪು.

ಈಗ **ಸುಷುಪ್ತಿ** ಎಂದರೇನೆಂದು ವಿಚಾರಿಸೋಣ. ಎಚ್ಚರವೆಂದರೆ ಇಂದ್ರಿಯಗಳ ವ್ಯಾಪಾರವು ನಡೆಯುತ್ತಿರುವ ಅವಸ್ಥೆಯೆಂದೂ ಸುಷುಪ್ತಿ ಎಂದರೆ ಏನೂ ಮಾಡದೆ ಇರುವ ಅವಸ್ಥೆಯೆಂದೂ ನಮ್ಮಗಳ ಭಾವನೆ. ಆದರೆ ಸುಷುಪ್ತಿಯ ಅನುಭವವು ಹೇಗಿದೆ? ಸುಷುಪ್ತಿಯು ಇಂದ್ರಿಯಗಳ ಕೆಲಸವಿಲ್ಲದ ಅವಸ್ಥೆ-ಎಂದು ಅದನ್ನು ಅಭಾವರೂಪವಾಗಿ ವರ್ಣಿಸುವದು ಸರಿಯಾದೀತೆ? ಅಲ್ಲಿ 'ಇದೆ', 'ಇಲ್ಲ'-ಎಂಬ ಅನುಭವಗಳಾದರೂ ಇವೆಯೆ ?- ಎಂದು ಕೇಳಿದರೆ ಅನುಭಾವಾನುಸಾರವಾಗಿ ವಿಚಾರಮಾಡಿದಾಗ ಅದು ಏತರ ಅಭಾವವೂ ಅಲ್ಲ, ಅಲ್ಲಿ ಭಾವಾಭಾವಗಳ ಅನುಭವಗಳೂ ಇಲ್ಲ. ಇಷ್ಟೇ ಅಲ್ಲ, ಅದನ್ನು ಅವಸ್ಥೆ ಎಂದು ಕರೆಯುವದೂ ಸರಿಯಲ್ಲ. ಏಕೆಂದರೆ ಕಾಲಿಕವಿಶೇಷವೇ ಅವಸ್ಥೆ ಎನ್ನಿಸುತ್ತದೆ ; ಆದರೆ ಸುಷುಪ್ತಿಯೆಂಬುದರಲ್ಲಿ ಯಾವ ಕಾಲದ ಅನುಭವವೂ ಯಾರಿಗೂ ಆಗುವದಿಲ್ಲ ; ಅದು ಕಾಲದಲ್ಲಿ ಬಂದುಹೋಗುವದೂ ಇಲ್ಲ. ಇದರ ರಹಸ್ಯವು ಸಾಮಾನ್ಯರಿಗೆ ಅಭೇದ್ಯವಾಗಿರುತ್ತದೆ. ಆದರೂ ಸುಷುಪ್ತಿಯನ್ನು ಅರಿಯದವರು ಯಾರುತಾನೆ ಇದಾರೆ ? ಇದನ್ನು ಶ್ರುತಿಯು 'ಸತಿ ಸಂಪದ್ಯ ನ ವಿದುಃ' (ಸತ್ತಿನಲ್ಲಿ ಒಂದಾಗಿ ಅರಿಯದೆ ಇರುವದು) ಎಂದೂ 'ಪ್ರಾಜ್ಞೇನ ಸಂಪರಿಷ್ವಕ್ತೋ ನ ಬಾಹ್ಯಂಕಿಞ್ಚನ ವೇದ ನಾನ್ತರಮ್' (ಪ್ರಾಜ್ಞನಿಂದ ಆಲಿಂಗಿತನಾಗಿರುವದರಿಂದ ಹೊರಗನ್ನಾಗಲಿ ಒಳಗನ್ನಾಗಲಿ ಅರಿಯದೆ ಇರುತ್ತಾನೆ)- ಎಂದು ವರ್ಣಿಸಿರುತ್ತದೆ. ನಿಜವಾಗಿ ಸುಷುಪ್ತಿ ಎಂಬುದೊಂದು ಅವಸ್ಥೆಯಲ್ಲ ; ಅಲ್ಲಿ ಕಾಲದೇಶಗಳಿಲ್ಲ, ವಿಶೇಷಜ್ಞಾನವಿಲ್ಲ, ಸತ್ತು, ಪ್ರಾಜ್ಞ-ಎಂಬ ಹೆಸರಿನಿಂದ ಶ್ರುತಿಯಲ್ಲಿ ಪ್ರಖ್ಯಾತನಾಗಿರುವ ಅದ್ವಿತೀಯಪರಮಾತ್ಮನಲ್ಲಿ ಜೀವನು ಒಂದಾಗಿಬಿಟ್ಟಿರುತ್ತಾನೆ ; ಆದ್ದರಿಂದಲೇ ಅಲ್ಲಿ ಇದು, ಅದು, ಸುಖ, ದುಃಖ-ಎಂಬ ವಿಶೇಷಾನುಭವವಿರುವದಿಲ್ಲ. ಆದ್ದರಿಂದ ಅಜ್ಞಾತನಾದ ಪರಮಾತ್ಮನನ್ನೇ ಸುಷುಪ್ತಿ ಎಂದು ಜನರು ವ್ಯವಹರಿಸುತ್ತಿದಾರೆ ಎಂದಾಯಿತು.

ಅವಸ್ಥೆಗಳನ್ನು ನಾವು ಅರಿಯುವದು ಹೇಗೆ ?- ಇದನ್ನು ಮನಸ್ಸಿನಲ್ಲಿ ಹೊರಳಾಡಿಸಬೇಕು. ಸುಷುಪ್ತಿಯನ್ನಾಗಲಿ ಅವಸ್ಥೆಗಳನ್ನಾಗಲಿ ಕಣ್ಣು, ಕಿವಿ-ಮುಂತಾದ ಇಂದ್ರಿಯಗಳಿಂದ ಅರಿಯಲಾಗುವದಿಲ್ಲ ; ಏಕೆಂದರೆ ದರ್ಶನ ವೃತ್ತಿಯ ಅವಸ್ಥೆಗಳಲ್ಲಿ ಇಂದ್ರಿಯಗಳು ವಿಷಯಗಳು ಎಲ್ಲವೂ ಮೂಟೆಯಾಗಿ ಸೇರಿಬಿಟ್ಟಿರುತ್ತದೆ, ಸುಷುಪ್ತಿಯಲ್ಲಿ ಅವು ಇರುವದೇ ಇಲ್ಲ. ಅಲ್ಲಿ ನಾನು, ನೀನು ಎಂಬ ಭೇದವೂ ಇರುವದಿಲ್ಲ. ಅವಸ್ಥೆಗಳನ್ನು ನಾವೇ ನೇರಾಗಿ **ಅನುಭವದಿಂದ** ನೋಡುತ್ತಿರುತ್ತೇವೆ. ಗೌಡಪಾದರು ಅವಸ್ಥಾನುಭವದ ವಿಷಯಕ್ಕೆ ಹೇಳಿರುವದೇನೆಂದರೆ '**ಅನ್ಯಥಾ ಗೃಹ್ಣತಃ ಸ್ವಪ್ನೋ ನಿದ್ರಾತತ್ತ್ವಮಜಾನತಃ । ವಿಪರ್ಯಾಸೇ ತಯೋಃ ಕ್ಷೀಣೇ ತುರೀಯಂ ಪದಮಶ್ನುತೇ ॥**' ಇದು ಎಚ್ಚರ, ಇದು ಕನಸು-ಎಂದು ಬೇರೆಯಾಗಿ ಅರಿಯುವದೇ ಸ್ವಪ್ನ ; ಏನನ್ನೂ ಅರಿಯದೆ ಇರುವದೇ ನಿದ್ರೆ. ಆದರೆ ಇವೆರಡನ್ನೂ ಕಾಣದ ಸಾಕ್ಷಿರೂಪನಾದ ಆತ್ಮನಲ್ಲಿ ಅನ್ಯಥಾಗ್ರಹಣ- ಬೇರೊಂದನ್ನು ಅರಿಯವದಾಗಲಿ, ಅಗ್ರಹಣ-ಅರಿಯದೆ ಇರುವದಾಗಲಿ ಉಂಟೆ ? ಇಲ್ಲ. ಯಾವನು ಅರಿಯುತ್ತಿದೇನೆ, ಅರಿತಿಲ್ಲ- ಎನ್ನುವನೋ ಅವನು ಪ್ರಮಾತೃ. ಆದರೆ ಸಾಕ್ಷಿಯು ಅರಿಯುವದೆಂದರೆ ನಿರ್ವಿಕಲ್ಪಕವಾಗಿ ಅನುಭವಿಸುವದೇ ; ಅವನಿಗೆ ಕನಸೂ ಇಲ್ಲ, ನಿದ್ರೆಯೂ ಇಲ್ಲ. ಅವನೇ ತುರೀಯನು. ಅವನು ಸಾಕ್ಷಿಯೆಂಬುದೂ ಅವಿದ್ಯಾಕಲ್ಪಿತವಾದ ಸ್ವಪ್ನಜಾಗ್ರತ್ತುಗಳ ದೃಷ್ಟಿಯಿಂದ. ನಿಜವಾಗಿ ಅವನು ಅದ್ವಿತೀಯನೇ. ಹೀಗೆ ನೋಡಿದರೆ ಆತ್ಮನೊಬ್ಬನೇ ನಿಜವಾಗಿರುವವನು. ಅವನು ಮನಸ್ಸಿನಿಂದ ಕೂಡಿದಾನೆಂದು ಅರಿತರೆ **ತೈಜಸವಾಗುವನು,** ಇಂದ್ರಿಯಗಳಿಂದ ಕೂಡಿದವನೆಂದರೆ **ವಿಶ್ವನಾಗುವನು;** ಇಂದ್ರಿಯಗಳ ವಿಶ್ರಾಂತಿಯ ಅಪೇಕ್ಷೆಯಿಂದ ಇವರಿಬ್ಬರಿಗೆ ಹೋಲಿಸಿದಾಗ ಏನೂ ಅರಿಯದವನು **ಪ್ರಾಜ್ಞನೆನಿಸುವನು.** ಆದರೆ ಆತ್ಮನು ತನ್ನ ಸ್ವರೂಪದಿಂದ ವಿಶ್ವನಲ್ಲ, ತೈಜಸನಲ್ಲ, ಪ್ರಾಜ್ಞನೂ ಅಲ್ಲ, ತುರೀಯನೇ; ಅವನಲ್ಲಿಯೇ ಅವಸ್ಥೆಗಳೆಲ್ಲವೂ ಕಲ್ಪಿತವಾಗಿರುತ್ತವೆ ಎಂದಾಯಿತು.

ಸುಷುಪ್ತಿಯಲ್ಲಿ ಸದ್ರೂಪವಾದ ಜೀವನು ಒಂದಾಗಿರುತ್ತಾನೆ ಎಂದು ಶ್ರುತಿಯಲ್ಲಿದೆಯಷ್ಟೆ? ಅದರ ಅಭಿಪ್ರಾಯವನ್ನು ಆಚಾರ್ಯರು ಹೀಗೆಂದು ವರ್ಣಿಸಿರುತ್ತಾರೆ : '**ಅಪಿ ಚ ನ ಕದಾಚಿಜ್ಜೀವಸ್ಯ ಬ್ರಹ್ಮಣಾ ಸಂಪತ್ತಿರ್ನಾಸ್ತಿ ।**

**ಸ್ವರೂಪಸ್ಯಾನಪಾಯಿತ್ವಾತ್ । ಸ್ವಪ್ನಜಾಗರಿತಯೋಸ್ತು ಉಪಾಧಿಸಂಪರ್ಕವಶಾತ್ ಪರರೂಪಾಪತ್ತಿಮಿವಾಪೇಕ್ಷ್ಯ ತದುಪಶಮಾತ್ಸುಷುಪ್ತೇ ಸ್ವರೂಪಾಪತ್ತಿರ್ವಕ್ಷ್ಯತೇ।'** ಜೀವನು ಬ್ರಹ್ಮದಲ್ಲಿ ಒಂದಾಗಿರುವದಿಲ್ಲವೆಂಬುದು ಯಾವಾಗಲೂ ಇಲ್ಲ; ಏಕೆಂದರೆ ಬ್ರಹ್ಮವು ಅವನ ಸ್ವರೂಪವೇ ಆಗಿರುವದರಿಂದ ಅದು ಅವನನ್ನು ಎಂದಿಗೂ ಬಿಟ್ಟಗಲುವಂತಿಲ್ಲ. ಆದರೆ ಎಚ್ಚರ ಕನಸುಗಳಲ್ಲಿ ಮನಸ್ಸು, ಇಂದ್ರಿಯಗಳು-ಎಂಬ ಉಪಾಧಿಗಳ ಬೆರಕೆಯಿಂದ ಅವನು ಮತ್ತೊಂದು ರೂಪವನ್ನು ಪಡೆದಂತೆ ಆಗುವದಷ್ಟೆ? ಅದಕ್ಕೆ ಹೋಲಿಸಿದರೆ ಸುಷುಪ್ತಿಯಲ್ಲಿ ಸ್ವರೂಪವನ್ನು ಪಡೆಯುತ್ತಾನೆ ಎಂದಿರುತ್ತದೆ- ಎಂಬುದು ಭಾಷ್ಯಕಾರರ ಅಭಿಪ್ರಾಯ. ಇದನ್ನು ಯಾರು ಮನನಮಾಡುವರೋ ಅವರು ಎಂದೆಂದಿಗೂ ಬ್ರಹ್ಮಸ್ವರೂಪರೇ ಆಗಿರುವೆವೆಂಬುದನ್ನು ಮನಗಾಣುತ್ತಾರೆ. ಸುಷುಪ್ತಿಯಲ್ಲಿ ಏನನ್ನೂ ಅರಿಯುವದಿಲ್ಲವಲ್ಲ, ಇದೇಕೆ ?- ಎಂದರೆ ಆಚಾರ್ಯರ ಉತ್ತರವಿದು:- **'ಸತಿ ಸಂಪನ್ನಸ್ತಾವದೇಕತ್ವಾನ್ನ ವಿಜಾನಾತೀತಿ ಯುಕ್ತಮ್'** ಸತ್ತಿನಲ್ಲಿ ಒಂದಾಗಿರುವದರಿಂದ ತಾನೊಬ್ಬನೇ ಇರುವದರಿಂದ ಅರಿಯುವದಿಲ್ಲವೆಂಬುದು ಯುಕ್ತ. ಶ್ರುತಿಯೂ ಹಾಗೆಂದೇ ಹೇಳುತ್ತಿದೆ. **'ನ ತು ತದ್ದ್ವಿತೀಯಮಸ್ತಿ ತತೋಽನ್ಯದ್ವಿಭಕ್ತಂ ಯತ್ಪಶ್ಯೇತ್ ।'** ಅಲ್ಲಿ ಆತ್ಮನಿಗಿಂತ ಬೇರೆಯಾಗಿ ಪಿಂಗಡವಾಗಿರುವ ಎರಡನೆಯ ವಸ್ತುವೇ ಇರುವದಿಲ್ಲ; ಆದ್ದರಿಂದಲೇ ಅವನು ಅರಿಯುವದಿಲ್ಲ. ಬೇರೊಂದಿದ್ದರಲ್ಲವೆ, ಅರಿಯಬೇಕೆನ್ನುವದು ? ಸುಷುಪ್ತಿಯಲ್ಲಿ ಜೀವರು ಬ್ರಹ್ಮವೇ ಆಗಿಬಿಟ್ಟಿರುತ್ತಾರೆ - ಎಂಬುದನ್ನು ಆಚಾರ್ಯರು ಒಂದು ವಾಕ್ಯದಲ್ಲಿ ತಿಳಿಸಿರುವದನ್ನು ಲಕ್ಷ್ಯದಲ್ಲಿಡತಕ್ಕದ್ದಾಗಿದೆ. **'ಲೋಕೇಽಪಿ ಕಿಲ ಗಾಢಂ ಸುಷುಪ್ತಮಾಚಕ್ಷತೇ ಬ್ರಹ್ಮೀಭೂತೋ ಬ್ರಹ್ಮತಾಂ ಗತ ಇತಿ'** (ಸೂ. ಭಾ. 1-3-15) ಲೋಕದಲ್ಲಿಯೂ ಗಾಢನಿದ್ರೆಯನ್ನು ಪಡೆದವನನ್ನು ಬ್ರಹ್ಮೀಭೂತನಾದನು, ಬ್ರಹ್ಮತ್ವವನ್ನು ಹೊಂದಿದನು ಎನ್ನುತ್ತಾರೆ-ಎಂಬ ಆ ವಾಕ್ಯವನ್ನು ನೋಡಿದರೆ ಸುಷುಪ್ತಿಯ ಮಾಹಾತ್ಮ್ಯವು ಹಿಂದಕ್ಕೆ ಜನರ ಬಾಯಿಯಲ್ಲಿ ಗಾದೆಯಾಗುವಷ್ಟು ಪ್ರಸಿದ್ಧವಾಗಿತ್ತೆಂದಾಗುತ್ತದೆ.

ಈಗ ವ್ಯಾಖ್ಯಾನಪ್ರಸ್ಥಾನವನ್ನಿಷ್ಟು ಇಲ್ಲಿ ತಿಳಿಸಬೇಕಾಗಿದೆ : **'ನನು ನ ಜೀವೋ ಬ್ರಹ್ಮಣೋಽನ್ಯ ಇತ್ಯುಕ್ತಮ್ । ಬಾಢಮ್ । ಅತ ಏವಾರ್ಥಾತ್**

**ಜೀವೇ ಬ್ರಹ್ಮಸ್ವರೂಪಪ್ರಕಾಶಾಚ್ಛಾದಿಕಾ ಅವಿದ್ಯಾ ಕಲ್ಪ್ಯತೇ'** ಜೀವನು ಬ್ರಹ್ಮವೇ ಎಂದಿರಲ್ಲ! ನಿಜ. ಆದ್ದರಿಂದಲೇ ಬ್ರಹ್ಮಸ್ವರೂಪವನ್ನು ತೋರದಂತೆ ಮುಸುಕಿಕೊಂಡಿರುವ ಅವಿದ್ಯೆಯೊಂದಿದೆ ಎಂದು ಕಲ್ಪಿಸಬೇಕಾಗಿದೆ. (ಪಂ.14) **'ಸುಷುಪ್ತೇ ಪ್ರಕಾಶಾಚ್ಛಾದನವಿಕ್ಷೇಪಸಂಸ್ಕಾರಮಾತ್ರರೂಪಸ್ಥಿತಿರನಾದಿರವಿದ್ಯಾ'** (ಪಂ. 20) ಸುಷುಪ್ತಿಯಲ್ಲಿ ಪ್ರಕಾಶವನ್ನು ಮುಚ್ಚಿ ವಿಕ್ಷೇಪಸಂಸ್ಕಾರ ಮಾತ್ರದ ರೂಪದಿಂದ ಅವಿದ್ಯೆಯಿರುತ್ತದೆ ಎಂದರ್ಥ. **'ಚೈತನ್ಯಮಾತ್ರೈಕರಸಮವಿದ್ಯಾಸಂಬನ್ಧಾತ್ ಈಷದ್ವಿಕಲ್ಪವ್ಯವಹಾರಾಲಮ್ಬನಂ ಭವತಿ ಸುಷುಪ್ತೇ । ತತಸ್ತದುಪಾದಾನಾಂತಃಕರಣಾವಚ್ಛೇದಾತ್ ತದೇವ ಸ್ಥೂಲತರವ್ಯವಹಾರಾಲಮ್ಬನಂ ಭವತಿ ಸ್ವಪ್ನೇ । ಪುನರನ್ತಃಕರಣಸಂಸೃಷ್ಟಸ್ಥೂಲಶರೀರೋಪರಾಗಾತ್ ಸ್ಥೂಲತಮಂ ಭವತಿ ಜಾಗರಣೇ । ನ ಚೋಪಾಧಿಭೇದಾಜ್ಜೀವಭೇದಪ್ರಸಙ್ಗಃ ॥'** (ವಿ.66) ಚೈತನ್ಯಮಾತ್ರೈಕರಸನಾಗಿದ್ದರೂ ಸುಷುಪ್ತಿಯಲ್ಲಿ ಅಜ್ಞಾನ, ಸ್ವಪ್ನದಲ್ಲಿ ಅಜ್ಞಾನೋಪಾದಾನಕವಾದ ಅಂತಃಕರಣ, ಎಚ್ಚರದಲ್ಲಿ ಅಂತಃಕರಣದಿಂದೊಡಗೂಡಿದ ಶರೀರ-ಹೀಗೆ ಅವಸ್ಥಾತ್ರಯದಲ್ಲಿಯೂ ಉಪಾಧಿಯಮೂಲಕ ಜೀವತ್ವವಿರುತ್ತದೆ-ಎಂಬುದು ಅಭಿಪ್ರಾಯ. ಆಚಾರ್ಯರು ಎಲ್ಲಿಯೂ ಬ್ರಹ್ಮತ್ವಕ್ಕೆ ಲೋಪವಿಲ್ಲವೆಂದರೆ, ವ್ಯಾಖ್ಯಾತೃಗಳು ಎಲ್ಲಿಯೂ ಜೀವತ್ವಕ್ಕೆ ಲೋಪವಿಲ್ಲವೆಂದಿರುತ್ತಾರೆ. ದೇವರು ವರವನ್ನು ಕೊಟ್ಟರೂ ಪೂಜಾರಿ ಕೊಡ!

ಈಗ **ಇನ್ನೊಂದು ವ್ಯಾಖ್ಯಾನಪ್ರಸ್ಥಾನ :** ಸುಷುಪ್ತಿಯಲ್ಲಿ ಜೀವನು ಪರಮಾತ್ಮನನ್ನು ಸೇರುತ್ತಾನೊ, ಇಲ್ಲವೊ? ಅಲ್ಲಿ ಅವಿದ್ಯೆಯಿದೆಯೊ, ಇಲ್ಲವೊ? ಅಲ್ಲಿ ಅವಿದ್ಯೆಯಿಲ್ಲದಿದ್ದರೆ ಜ್ಞಾನದಿಂದಾಗಬೇಕಾದದ್ದೇನು?- ಎಂದು ಶಂಕಿಸಿ, ಈ ವ್ಯಾಖ್ಯಾನಕಾರರು ಹೇಳುವದೇನೆಂದರೆ : **'ವಿಪರೀತಜ್ಞಾನನಿವೃತ್ತೇರಸ್ತಿಮಾತ್ರಯಾ ಪರಮಾತ್ಮಭಾವ ಉಪಯೋಗಃ । ತಯಾ ಹಿ ತಾವದೇವ ಜೀವಸ್ತದವಸ್ಥೋನೋ ಭವತಿ ಕೇವಲಮ್ । ತತ್ತ್ವಜ್ಞಾನಾಭಾವೇನ ಸಮೂಲಕಾಷಮವಿದ್ಯಾಯಾ ಅಕಾಷಾತ್ ಜಾಗ್ರತ್ಸ್ವಪ್ನಲಕ್ಷಣಂ ಜೀವಸ್ಯವ್ಯುತ್ಥಾನಂ ಭವತಿ'।** ಸುಷುಪ್ತಿಯಲ್ಲಿ ವಿಪರೀತಜ್ಞಾನವು ತೊಲಗುವದರಿಂದ ಅಷ್ಟುಮಟ್ಟಿಗೆ ಪರಮಾತ್ಮನಲ್ಲಿರುತ್ತಾನೆ; ಅವಿದ್ಯೆಯು ಬೇರುಸಹಿತ ನಾಶವಾಗಿಲ್ಲದ್ದರಿಂದ ಮತ್ತೆ ಎಚ್ಚರುತ್ತಾನೆ- ಎಂಬುದು ಅವರ ಮತ. ಅವಿದ್ಯೆಗೆ ಇಷ್ಟಿಷ್ಟು ಎಂಬ ಅಂಶವಿರುವಂತೆ ಭಾವಿಸಿರುವದು,

ಜಾಗ್ರತ್ಸ್ವಪ್ನಸುಷುಪ್ತಿಗಳನ್ನು ಸತ್ಯವೆಂಬಂತೆ ಭಾವಿಸುವದು, ಅವಿದ್ಯೆಯಿಂದ ಸುಷುಪ್ತನಿಗೆ ಎಚ್ಚರವಾಗುತ್ತದೆ ಎಂದು ಕಾರ್ಯಕಾರಣಭಾವವನ್ನು ಕಲ್ಪಿಸುವದು- ಇವೆಲ್ಲ, ಜೀವನು ಯಾವಾಗಲೂ ಬ್ರಹ್ಮಸ್ವರೂಪದಲ್ಲಿಯೇ ಇರುತ್ತಾನೆ; ಜಾಗ್ರತ್ತಿನಲ್ಲಿ ಮಿಥ್ಯಾಜ್ಞಾನದಿಂದ ಜೀವನಾಗಿರುವಂತೆ ತೋರುತ್ತಾನೆ ಎಂಬ ಭಾಷ್ಯವಚನಕ್ಕೂ ಸುಷುಪ್ತಿಯಲ್ಲಿ ಪರಮಾತ್ಮನನ್ನೇ ಸೇರಿರುವದರಿಂದ ಏಕತ್ವವೇ ಅಲ್ಲಿ ವಿಶೇಷಜ್ಞಾನವಿಲ್ಲದ್ದಕ್ಕೆ ಕಾರಣವೆಂಬ ಶ್ರುತಿಗೂ ವಿರುದ್ಧವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಅನುಭವಾನುಸಾರಿಯಾದ ಶ್ರುತ್ಯುಕ್ತಪ್ರಕ್ರಿಯೆಯ ಅರಿವನ್ನು ಅನುಗ್ರಹಿಸಿರೆಂದು ಆಚಾರ್ಯರನ್ನು ನಾವೆಲ್ಲರೂ ಪ್ರಾರ್ಥಿಸೋಣ.

★★★★★

## ಶಾಂಕರವೇದಾಂತದಲ್ಲಿ ಅನುಭವ

**7-5-1960**

**ಶ್ರೀಶ್ರೀಗಳವರು**

ಆಚಾರ್ಯರ ವೇದಾಂತೋಪದೇಶವನ್ನು ಬೇರೆಬೇರೆಯ ದೃಷ್ಟಿಕೋನಗಳಿಂದ ವಿಮರ್ಶಿಸಿ ನೋಡಿದ್ದಾಗಿದೆ. ಅನುಭವದ ಸಂಪರ್ಕವಿಲ್ಲದೆ ಆಚಾರ್ಯರ ಉಪದೇಶವಿಲ್ಲವೆಂಬುದನ್ನು ತಿಳಿದುಕೊಂಡದ್ದಾಗಿದೆ. ವೇದಾಂತದ ಉಪಾಸನಾಭಾಗವು ಮೀಮಾಂಸಾನ್ಯಾಯಕ್ಕೆ ಒಳಪಟ್ಟಿರುತ್ತದೆ: ಅದರ ಫಲವು ಕಾಲಾಂತರದಲ್ಲಿ ಲೋಕಾಂತರದಲ್ಲಿ ಆಗುವದಾಗಿದ್ದರೂ ಆ ಭಾಗದಲ್ಲಿ ಹೇಳುವ ಉಪಾಸ್ಯ ಬ್ರಹ್ಮವೂ ನಿಜವಾಗಿ ಈಗಲೆ ಇಲ್ಲಿಯೇ ಅನುಭವಕ್ಕೆ ಬರುವ ನಿರ್ಗುಣಬ್ರಹ್ಮವೇ ಆಗಿದೆ. ಅವಿದ್ಯಾಕಲ್ಪಿತವಾಗಿರುವ ನಾಮರೂಪಗಳ ಧರ್ಮವನ್ನು ಪರಮಾತ್ಮನಿಗೆ ಸೇರಿರುವಂತೆ ಕಲ್ಪಿಸಿಕೊಂಡು ಕೆಲವು ಉಪಾಸನೆಗಳನ್ನು ಹೇಳಿರುತ್ತದೆ. ಅಷ್ಟೆ. ಅವಿದ್ಯೆ ಎಂದರೆ ಆತ್ಮಾನಾತ್ಮರುಗಳ ಅನ್ಯೋನ್ಯಾಧ್ಯಾಸವೇ; ಅದಕ್ಕಿಂತ ಬೇರೆಯಾಗಿ ಅದಕ್ಕೆ ಉಪಾದಾನಕಾರಣವೆಂದು ವ್ಯಾಖ್ಯಾನಕಾರರು ಹೇಳುತ್ತಿರುವ ಅವಿದ್ಯೆಯು ವಾದಗ್ರಸ್ತ, ಶ್ರುತಿಯುಕ್ತ್ಯನುಭವಗಳಿಗೆ

ಹೊಂದುವದಿಲ್ಲ-ಎಂಬುದನ್ನು ತಿಳಿಸಿದ್ದಾಗಿದೆ. ಆದ್ದರಿಂದ ಉಪನಿಷತ್ತುಗಳು ಹೊರಟಿರುವದು ಈ ಅಧ್ಯಾಸರೂಪಾವಿದ್ಯೆಯ ನಾಶಕ್ಕಾಗಿಯೇ-ಎಂದೂ ತಿಳಿಸಿದ್ದಾಗಿದೆ.

ಈಗ ಆಚಾರ್ಯರ ಪ್ರಕ್ರಿಯೆಯಲ್ಲಿ **ಅನುಭವವೆಂದರೇನು?**- ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಬೇಕಾಗಿರುತ್ತದೆ. ಅನುಭವಶಬ್ದವನ್ನು ಶಾಸ್ತ್ರಕಾರರು ಬೇರೆಬೇರೆಯ ಅರ್ಥಗಳಲ್ಲಿ ಪ್ರಯೋಗಿಸಿರುತ್ತಾರೆ. ಉದಾಹರಣೆಗೆ ಪ್ರತ್ಯಕ್ಷಪ್ರಮಾಣದಿಂದ ಕಂಡದ್ದು ಅನುಭವ, ನೆನಪಿಗೆ ತಂದುಕೊಂಡದ್ದು ಸ್ಮರಣೆ. ಈ ಅನುಭವಕ್ಕೆ ವಿರುದ್ಧವೆಂದು ಗೊತ್ತಾದರೆ ಸ್ಮರಣೆಯು ಪ್ರಮೆಯಾಗುವದಿಲ್ಲ. ಅನುಭವಶಬ್ದಕ್ಕೆ ವೇದನೆ ಎಂಬರ್ಥವೂ ಇದೆ. ಹಸಿವು, ಬಾಯಾರಿಕೆ, ಆಸೆ, ಸಿಟ್ಟು, ಅಂಜಿಕೆ-ಇವುಗಳು ಎಲ್ಲರಿಗೂ ಆಗಾಗ್ಗೆ ಬರುತ್ತವೆ. ಅವು ಅನುಭವರೂಪದಿಂದ ಬಂದಬಳಿಕ, ಅವುಗಳ ವಿಷಯದ ಪ್ರತ್ಯಯವು ಏರ್ಪಡುತ್ತದೆ. ಹಸಿವನ್ನು ಕುರಿತ ಪ್ರತ್ಯಯಗಳು ವಿಚಾರಕ್ಕೆ ಬೇಕಾದರೂ ಹಸಿವಿನ ಅನುಭವವು ಮೊದಲು ಆಗಿರುತ್ತದೆ ಎನ್ನುತ್ತೇವಲ್ಲವೆ ? ಆದ್ದರಿಂದ **ವೇದನೆ** ಎಂಬುದು ಅನುಭವಶಬ್ದದ ಎರಡನೆಯ ಅರ್ಥ. ವೇದನೆಗಳಂತೆ ಏರಿಳಿತಗಳಿಲ್ಲದ ಅನುಭವವೊಂದುಂಟು. ಉದಾಹರಣೆ ಎಚ್ಚರ, ಕನಸು, ನಿದ್ರೆ-ಎಂಬ ಅವಸ್ಥೆಗಳ ಅನುಭವು ನಮಗೆ ಹೇಗೆ ಆಗುತ್ತದೆ ? ನಾವು ಅವನ್ನು ಪ್ರತ್ಯಕ್ಷದಿಂದ ನೋಡಿ ಅರಿತುಕೊಳ್ಳುವದಿಲ್ಲ : ಹೊಗೆಯಿಂದ ಬೆಂಕಿಯನ್ನು ಊಹಿಸುವಂತೆ ಅನುಮಾನದಿಂದ ನಿರ್ಣಯಿಸುವದೂ ಇಲ್ಲ. ಮತ್ತೊಬ್ಬರ ಹೇಳಿಕೆಯಿಂದ ನಂಬುವದೂ ಇಲ್ಲ. ಹೀಗೆ ವೇದನೆಗಳಿಗಿಂತ ವಿಲಕ್ಷಣವಾಗಿ ಪ್ರಮಾಣಗಳ ಹಂಗಿಲ್ಲದೆ ನಮಗೆ ನೇರಾಗಿ ಆಗುವ ಅನುಭವವೂ ಒಂದು ಇದೆ.

ಈ ಮೂರನೆಯ ಅನುಭವವನ್ನು ತರ್ಕದಿಂದ ಪರಿಶೀಲಿಸಿ ಸಿದ್ಧಾಂತಗಳನ್ನು ಏರ್ಪಡಿಸಿಕೊಳ್ಳುವದಕ್ಕೆ ಬರುತ್ತದೆ. ಪ್ರತ್ಯಕ್ಷವಾಗಿ ಕಂಡ ಒಂದು ಹಾವು ನಿಜವಾಗಿ ಹಾವೊ, ಅಲ್ಲವೊ?- ಎಂಬ ಸಂಶಯವುಂಟಾದರೆ ಅದರ ಕಡೆಗೆ ಕಲ್ಲೆಸೆದು ನೋಡಬಹುದು ; ಆಗ ಅದು ಸುಮ್ಮನಿದ್ದರೂ ಹಾವಲ್ಲವೆಂದು ನಿಶ್ಚಯವಾಗುವದಿಲ್ಲ; ಒಂದು ವೇಳೆ ಕಪ್ಪೆಯನ್ನು ನುಂಗಿ ಮದಿಸಿದ ಹಾವಾಗಿ ರಬಹುದೇನೊ ! ಆದರೆ ಹತ್ತಿರಕ್ಕೆ ಹೋಗಿ ಚೆನ್ನಾಗಿ ನೋಡಿದಾಗ ಅದು ಹಗ್ಗವೇ

ಎಂದು ಎಲ್ಲರಿಗೂ ಗೊತ್ತಾದರೆ ಆಗ ಪ್ರತ್ಯಕ್ಷಪ್ರಮಾಣವನ್ನು ತರ್ಕದಿಂದಲೂ ಶೋಧನೆಮಾಡಿ ವಿಷಯವನ್ನು ನಿರ್ಣಯಿಸಿದಂತೆ ಆಯಿತು ಅಲ್ಲವೆ? ಇದರಂತೆ, ನಾವು ನೇರಾಗಿ ಪಡೆದುಕೊಂಡ ಅವಸ್ಥೆಗಳ ಅನುಭವವೂ ತರ್ಕಶುದ್ಧವಾದ ಬಳಿಕ ಕೆಲವು ನಿರ್ಣಯಗಳು ಏರ್ಪಡುವವು. ಹೇಗೆಂದರೆ ನಾವು ಎಚ್ಚರವಾಗಿದ್ದು ಬಳಿಕ ಕನಸನ್ನು ಕಂಡರೆ, ಕನಸಿನವಸ್ಥೆಯಲ್ಲಿ ಎಚ್ಚರವು ಎಲ್ಲಿಯೂ ಇರುವದಿಲ್ಲ. ಆ ಎಚ್ಚರಕ್ಕೆ ಸೇರಿದ ಪ್ರಪಂಚವು ಎಲ್ಲಿಯೂ ಇರುವದಿಲ್ಲ. ಮತ್ತೊಬ್ಬರಿಗೆ ಆ ಪ್ರಪಂಚ ಕಾಣಬಹುದಲ್ಲ!- ಎಂದು ಶಂಕಿಸುವದು ಸತ್ತರ್ಕವಲ್ಲ ; ಏಕೆಂದರೆ ಆ ಮತ್ತೊಬ್ಬರೂ ನಮ್ಮ ಎಚ್ಚರದ ಪ್ರಪಂಚಕ್ಕೇ ಸೇರಿದವರಾಗಿರುತ್ತಾರೆ. ಆದ್ದರಿಂದ ನಾವು ನಿದ್ರೆಮಾಡುತ್ತಿದ್ದರೂ ನಾವು ಕಾಣುತ್ತಿರುವ ಪ್ರಪಂಚವು ಹಾಗೆಯೇ ಇರುತ್ತದೆ ಎಂದು ತೋರುವದು ನಿಜ ; ಆದರೆ ನಮ್ಮ ಎಚ್ಚರವು ಇಲ್ಲದಾಗಲೂ ಎಚ್ಚರದಲ್ಲಿ ಮಾತ್ರವೇ ಕಾಣುವದಕ್ಕಾಗುವ ಪ್ರಪಂಚವು ಇದ್ದುಕೊಂಡಿರುವದೆಂಬುದು ಅನುಭವಾನುಸಾರಿಯಾದ ತರ್ಕಕ್ಕೆ ವಿರುದ್ಧವಾದ ಕೇವಲ ತರ್ಕವಾಗಿರುತ್ತದೆ. ಹೀಗೆಯೇ ಅವಸ್ಥೆಗಳು ಒಂದನ್ನು ಬಿಟ್ಟು ಮಿಕ್ಕೆರಡು ಕಾಣದೆ ಇರುವದರಿಂದ ಅವುಗಳು ಪರಮಾರ್ಥಸತ್ಯವಲ್ಲ; ಅವ್ಯಭಿಚರಿತಸ್ವರೂಪನಾಗಿರುವ ಆತ್ಮನೇ ಪರಮಾರ್ಥಸತ್ಯ-ಎನ್ನುವದು ಇನ್ನೊಂದು ಅನುಭವಾನುಸಾರಿಯಾದ ತರ್ಕವು. ಇದರಿಂದ ನಮ್ಮ ಆತ್ಮನು ನಿಷ್ಪ್ರಪಂಚನು, ಅವಸ್ಥಾತ್ರಯಾತೀತನು-ಎಂದು ಏರ್ಪಟ್ಟಿತು.

ಇದು ಪರೋಕ್ಷವಾಗಿ ಮಾಡಿಕೊಂಡ ನಿಶ್ಚಯವೆನ್ನುವದಕ್ಕೆ ಬರುವದಿಲ್ಲ. ಬೆಟ್ಟದಲ್ಲಿ ಬೆಂಕಿಯಿದೆ ಎಂದು ನಾವು ಎಂಥ ಸತ್ತರ್ಕದಿಂದ ನಿಶ್ಚಯಿಸಿದ್ದರೂ ಆ ಬೆಂಕಿಯು ನಮಗೆ ವ್ಯವಹಾರದಲ್ಲಿ ಯಾವ ಕೆಲಸಕ್ಕೂ ಬರುವದಿಲ್ಲ, ಅದರ ಅನುಭವವು ನಮಗೆ ನೇರಾಗಿ ಆಗಿರುವದಿಲ್ಲ. ಆದರೆ 'ನಾನು ಅವಸ್ಥಾತ್ರಯಾತೀತನು' ಎಂದು ನಿಶ್ಚಯಿಸಿಕೊಂಡದ್ದು ಇಂಥ ಪರೋಕ್ಷಜ್ಞಾನವಲ್ಲ. ನಮ್ಮ ಆತ್ಮಸ್ವರೂವಾದ ಅನುಭವವೇ ಆತ್ಮನು ನಿಷ್ಪ್ರಪಂಚನೆಂಬುದಕ್ಕೆ ಸಾಕ್ಷಿಯಾಗಿರುತ್ತದೆ. ಜಾಗ್ರತ್ಪ್ರಪಂಚವು ನಮ್ಮ ಸ್ವರೂಪಕ್ಕೆ ಸೇರಿಲ್ಲವೆಂಬ ಅನುಭವವು ಈ ತರ್ಕದಿಂದ ನೇರಾಗಿಯೇ ನಮಗೆ ಆಗಿರುತ್ತದೆ. ಇದನ್ನು ಅನುಭವ, ಅವಗತಿ-ಎಂಬ ಹೆಸರುಗಳಿಂದ ಕರೆಯುತ್ತಾರೆ.

ನಮಗೆ ಅವಸ್ಥೆಗಳು ಬಂದುಹೋಗುತ್ತಿರುವವೆಂಬುದು ಪ್ರಮಾತೃದೃಷ್ಟಿಯಿಂದ ನಮಗೆ ಆಗಿರುವ ನಂಬಿಕೆ. ಜಾಗ್ರತ್ತಿನಲ್ಲಿ ವಿಷಯಗಳನ್ನು ಅರಿಯುತ್ತಿರುವ ಪ್ರಮಾತೃವು ಕನಸಿನಲ್ಲಿಯಾಗಲಿ, ನಿದ್ರೆಯಲ್ಲಾಗಲಿ- ಇರುವದೇ ಇಲ್ಲ ; ಪ್ರಮಾತೃವನ್ನು ನೇರಾಗಿ ನೋಡುವ ಆತ್ಮನೇ ಎಲ್ಲಾ ಅವಸ್ಥೆಗಳಲ್ಲಿಯೂ ಇರುತ್ತಾನೆ. ಈ ನಿಷ್ಪ್ರಪಂಚವಾದ ಅನುಭವವನ್ನು **ಸಾಕ್ಷಾತ್ಕಾರವೆಂಬ** ಶಬ್ದದಿಂದಲೂ ಭಾಷ್ಯದಲ್ಲಿ ಅಲ್ಲಲ್ಲಿ ಕರೆದಿರುವದು ಕಂಡುಬರುತ್ತದೆ, ಆತ್ಮನೇ ಅನುಭವ ಸ್ವರೂಪನಾಗಿರುತ್ತಾನಾದರೂ ವೇದಾಂತಪ್ರಮಾಣದಿಂದುಂಟಾದ ಕೊನೆಯ ಅರಿವಿನ ರೂಪದಲ್ಲಿರುವ ಈ ಆತ್ಮನನ್ನು ಅನುಭವ, ಅವಗತಿ, ಸಮ್ಯಗ್ದರ್ಶನ, ಸಮ್ಯಗ್ಜ್ಞಾನ, ಸಾಕ್ಷಾತ್ಕಾರ- ಮುಂತಾದ ಹೆಸರುಗಳಿಂದ ಕರೆಯುವದುಂಟು :

**(1) ಏವಂ ತಾವದ್ವೇದಾನ್ತವಾಕ್ಯಾನಾಂ ಬ್ರಹ್ಮಾತ್ಮಾವಗತಿ**
**ಪ್ರಯೋಜನಾನಾಮ್ (ಸೂ. ಭಾ. 1-1-5)**

**(2) ಏಕರೂಪೇಣ ಹ್ಯವಸ್ಥಿತೋ ಯೋಽರ್ಥಃ ಸ ಪರಮಾರ್ಥಃ ।**
**ಲೋಕೇ ತದ್ವಿಷಯಂ ಜ್ಞಾನಂ ಸಮ್ಯಗ್ಜ್ಞಾನಮಿತ್ಯುಚ್ಯತೇ ॥**
**(ಸೂ. ಭಾ. 2-1-11)**

**(3) ಭೂತೇಷು ಭೂತೇಷು ಸರ್ವಭೂತೇಷು ಸ್ಥಾವರೇಷು ಚರೇಷು**
**ಚೈಕಮಾತ್ಮಾನಂ ಬ್ರಹ್ಮ ವಿಚಿತ್ಯ ವಿಜ್ಞಾಯ ಸಾಕ್ಷಾತ್ಕೃತ್ಯ ॥**
**( ಕೇ.ಭಾ. 2-5)**

**ಸಾಕ್ಷಾತ್ಕಾರ** ಎಂಬ ಮಾತನ್ನು ಭಾಷ್ಯಕಾರರು ಬಹಳ ಕಡೆಯಲ್ಲಿ ಉಪಾಸನೆಯಿಂದ ಉಪಾಸ್ಯದೇವತೆಯನ್ನು ಕಂಡುಕೊಳ್ಳುವ ಪ್ರಕಾರಕ್ಕೆ ಬಳಸುವರು. ಉದಾಹರಣೆ :

**(1) 'ಸಾಕ್ಷಾತ್ಕರಣಸಾಧ್ಯಂ ಚ ವಿದ್ಯಾಫಲಂ ದರ್ಶಯನ್ತಿ ಶ್ರುತಯಃ'**
**(ಸೂ. ಭಾ. 3-3-59)**

ಆದರೂ ಈ ಹಿಂದೆ ಉದಾಹರಿಸಿರುವಂತೆ ಈ ಶಬ್ದವನ್ನು ಆತ್ಮಾನುಭವಕ್ಕೂ ಬಳಸಿದರೆ ತಪ್ಪಲ್ಲ. ಇದರಂತೆ ಪ್ರತ್ಯಕ್ಷ ಎಂಬ ಮಾತನ್ನೂ ಆತ್ಮಾನುಭವಕ್ಕೆ ಬಳಸುವದುಂಟು :

**(2) ಅಪಿ ಚೈಕೇ ವಿದ್ವಾಂಸಃ ಪ್ರತ್ಯಕ್ಷೀಕೃತವಿದ್ಯಾಫಲಾಃ.**

**(ಸೂ.ಭಾ.3-4-15)**

**(3) ಪ್ರಾಕೃತಪುರುಷವಾಙ್ಮನಸಯೋರಗೋಚರಮಪಿ ಸನ್ನಿವೃತ್ತೈಷಣಾ ಯೇ ಬ್ರಾಹ್ಮಣಾಸ್ತೇ ಏತತ್ ಪ್ರತ್ಯಕ್ಷಮೇವೇತಿ ಮನ್ಯನ್ತೇ**

**( ಕ. ಭಾ. 2-2-14)**

ಆದರೆ ಈ ಶಬ್ದಗಳನ್ನುಪಯೋಗಿಸಿದ ಮಾತ್ರದಿಂದ ತತ್ತ್ವಾನುಭವ ವೆಂಬುದು ವಿಷಯವಾಗುವದೆಂದಾಗಲಿ, ಯಾವದಾದರೊಂದು ವ್ಯವಧಾನವನ್ನು ಕಳೆದುಕೊಂಡು ಪರಮಾರ್ಥವನ್ನು ಕಂಡುಕೊಳ್ಳತಕ್ಕದ್ದೆಂದಾಗಲಿ ಭ್ರಮಿಸಬಾರದು. ಏಕೆಂದರೆ ಪರಮಾರ್ಥವು ನಮ್ಮ ಸ್ವರೂಪವೇ ಆಗಿದ್ದು, ಯಾವ ವ್ಯವಧಾನವೂ ಇಲ್ಲದ್ದಾಗಿರುತ್ತದೆ.

ಆತ್ಮಜ್ಞಾನವು ಅಥವಾ ಆತ್ಮಾನುಭವವು ಫಲವೆನ್ನುವದು ವಿಚಾರದ ಕೊನೆಯಲ್ಲಿ ಗೊತ್ತಾಗುತ್ತದೆ ಎಂಬ ಕಾರಣದಿಂದಲೇ ಹೊರತು, ನಿಜವಾಗಿ ಆತ್ಮನ ವಿಷಯವಾದ ಅನುಭವವು ಕೊನೆಯಲ್ಲಿ ಉಂಟಾಗತಕ್ಕದ್ದು ಎಂಬ ಕಾರಣದಿಂದಲಲ್ಲ. ಕಟ್ಟಿಗೆಕಡಿದು ತುಂಡುಮಾಡುತ್ತಾನೆ- ಎಂದರೆ ಎರಡು ತುಂಡು ಮಾಡುವದಲ್ಲದೆ ಹೇಗೆ ಮತ್ತೊಂದು ವ್ಯಾಪಾರವಿರುವದಿಲ್ಲವೋ, ಸೂರ್ಯನು ಮೋಡಹೋದಮೇಲೆ ಕಾಣುತ್ತಾನೆ ಎಂದರೆ ಮೋಡದ ಮರೆ ಹೋಗುವದಲ್ಲದೆ ಕಾಣುವದೆಂಬ ಫಲವು ಬೇರೆ ಹೇಗೆ ಇಲ್ಲವೋ, ಹಾಗೆ ವೇದಾಂತಜ್ಞಾನವುಂಟಾಯಿತು ಎಂದರೆ ಆತ್ಮನ ವಿಷಯದಲ್ಲಿದ್ದ ಅಧ್ಯಾರೋಪವಾದ ಅವಿದ್ಯೆಯು ಕಳೆಯಿತು ಎಂದೇ ಅರ್ಥ. ಹೀಗೆ ನಿತ್ಯಸಿದ್ಧವಾಗಿರುವ ಆತ್ಮಸ್ವರೂಪವನ್ನು ಅನುಭವಾನುಸಾರವಾಗಿ ಪರೀಕ್ಷಿಕೊಂಡು ನಮ್ಮ ಚೈತನ್ಯಸ್ವರೂಪದಲ್ಲಿ ನಿಲ್ಲುವದೇ ಆತ್ಮಾನುಭವವು. ಆದ್ದರಿಂದಲೇ ಆಚಾರ್ಯರು-

**ತಸ್ಮಾತ್ಸರ್ವದುಃಖವಿನಿರ್ಮುಕ್ತೈಕಚೈತನ್ಯಾತ್ಮಕೋಽಹಮ್ ಇತ್ಯೇಷ ಅತ್ಮಾನುಭವಃ' (ಸೂ. ಭಾ.4-1-2)**

ಎಂದಿರುತ್ತಾರೆ. ಅಂತೂ ವೈಯಕ್ತಿಕವಾದ ಯಾವ ಅನುಭವವನ್ನೂ ಆಚಾರ್ಯರು ಆತ್ಮಾನುಭವಕ್ಕೆ ಪ್ರಮಾಣವೆಂತ ಹಿಡಿದಿಲ್ಲವೆಂಬುದು ಸುಸ್ಪಷ್ಟವಾಗಿರುತ್ತದೆ. ಆದರೆ ವ್ಯಾಖ್ಯಾನಕಾರರು ಮಾತ್ರ ಇದಕ್ಕೆ ವಿರುದ್ಧವಾಗಿ ಒಂದಾನೊಂದು ವಿಶಿಷ್ಟಾನುಭವವುಂಟಾದ ಹೊರತು ಆತ್ಮಜ್ಞಾನವಾಗಲಾರದು ಎಂದೇ ಹಠಹಿಡಿದಿರುತ್ತಾರೆ. (1) ಅಸಂಪ್ರಜ್ಞಾತಸಮಾಧಿಯಲ್ಲಿ ಅದ್ವೈತಾನುಭವವಾಗುತ್ತದೆ; ಅದರಿಂದೆಚ್ಚೆತ್ತ ಬಳಿಕ ಬಾಧಿತಾನುವೃತ್ತಿಯಿಂದ ದ್ವೈತವು ತೋರುತ್ತಿರುತ್ತದೆ-ಎಂದು ಕೆಲವರು ; (2) ಬರಿಯ ಬ್ರಹ್ಮಜ್ಞಾನವು ಸಾಂಸಾರಿಕಧರ್ಮನಿವೃತ್ತಿಯನ್ನು ಮಾಡಲಾರದು. ಕಾರ್ಯಕಾರಣಾವಿದ್ಯಾದ್ವಯವೂ ಅವುಗಳ ಸಂಸ್ಕಾರವೂ ಜ್ಞಾನಾಭ್ಯಾಸದಿಂದ ಹೋಗಿ ಸಾಕ್ಷಾತ್ಕಾರವುಂಟಾಗಬೇಕು, ಷಡ್ಜಾದಿಸ್ವರಗಳ ಸಂಸ್ಕಾರವು ಹೇಗೆ ಸಂಗೀತದಲ್ಲಿ ಅವಶ್ಯವೋ ಹಾಗೆ ಆತ್ಮಸಾಕ್ಷಾತ್ಕಾರವು ಆಗಬೇಕು-ಎಂದು ಕೆಲವರು. ಆಚಾರ್ಯರು ಶ್ರವಣಮನನಗಳಾದಮೇಲೆ ನಿದಿಧ್ಯಾಸನದಿಂದ ಆತ್ಮನಲ್ಲಿ ಮನಃ ಸಮಾಧಾನಮಾಡಿಕೊಳ್ಳಬೇಕೆಂದು ಶ್ರುತಿಯು ಉಪದೇಶಿಸುತ್ತಿದೆ-ಎಂದು ಸ್ಪಷ್ಟವಾಗಿ ಹೇಳಿರುತ್ತಾರೆ. ಆತ್ಮಜ್ಞಾನವು ಯಾವದಾದರೊಂದು ಅವಸ್ಥೆಯಲ್ಲಿ ಆಗತಕ್ಕದ್ದಲ್ಲ, ಏಕೆಂದರೆ 'ತತ್ತ್ವಮಸಿ' ಎಂಬುದು ಎಂದೆಂದಿಗೂ ಇದ್ದುಕೊಂಡಿರುವ ಬ್ರಹ್ಮಭಾವವನ್ನು ಹೇಳುತ್ತದೆ- ಎಂದು ಸಾರಿರುತ್ತಾರೆ. ಆತ್ಮನಲ್ಲಿ ಆಗಿರುವ ಅಧ್ಯಾರೋಪವನ್ನು ಕಳೆದುಕೊಳ್ಳುವದಲ್ಲದೆ ನೇರಾಗಿ ಮಾಡಿಕೊಳ್ಳಬೇಕಾಗಿ ರುವ ಆತ್ಮಜ್ಞಾನವೆಂಬುದು ಯಾವದೂ ಇಲ್ಲವೆಂದೂ ಘಂಟಾಘೋಷವಾಗಿ ಡಂಗುರಹಾಕಿಸಿರುತ್ತಾರೆ. ಈ ಭಾಷ್ಯಪ್ರಕ್ರಿಯೆಯನ್ನೆಲ್ಲ ಅತ್ತ ಒತ್ತರಿಸಿ, ಪಾತಂಜಲಯೋಗವನ್ನು ಎಳೆದು ತಂದಿರುವ ವ್ಯಾಖ್ಯಾನಗಳೆಲ್ಲ ಭಾಷ್ಯಕ್ಕೆ ವಿರುದ್ಧವಾಗಿರುತ್ತವೆ ಎಂಬುದು ಸ್ಪಷ್ಟ.

★★★★★

ಆಚಾರ್ಯರ ಜಯಂತಿ ಉತ್ಸವವನ್ನು ಮಾಡುವದು ಅಲ್ಲಲ್ಲಿ ನಡೆದೇ ಇರುತ್ತದೆ. ಆದರೆ ಈ ಉತ್ಸವವು ಮಿಕ್ಕ ಉತ್ಸವಗಳಂತೆ ರಥೋತ್ಸವ, ಮೆರವಣಿಗೆ, ಅಭಿಷೇಕ, ಪಾನಕಪನಿವಾರ, ಬಾಜಾಬಜಂತ್ರಿ – ಮುಂತಾದವುಗಳಲ್ಲಿಯೇ ಮುಗಿಯಬಾರದು; ಆಚಾರ್ಯರ ಸಿದ್ಧಾಂತವೇನು? ಅವರು ಲೋಕಕ್ಕೆ ಮಾಡಿರುವ ಉಪಕಾರವೇನು? – ಎಂಬುದನ್ನು ಸ್ಪಷ್ಟವಾಗಿ ಜನರಿಗೆ ತಿಳಿಯಪಡಿಸುವ ಮಹೋತ್ಸವವಾಗಿರಬೇಕು. ಏಕೆಂದರೆ ಶಂಕರಾಚಾರ್ಯರು ಪ್ರಚ್ಛನ್ನ ಬೌದ್ಧರೆಂದು ಕೆಲವರು ಅದ್ವೈತದ್ವೇಷಿಗಳು ಎನ್ನುತ್ತಿದ್ದಾರೆ. ಅದ್ವೈತಿಗಳಲ್ಲಿಯೂ ಕೆಲವರು ಶಂಕರಾಚಾರ್ಯರ ಸಿದ್ಧಾಂತವನ್ನು ಯೋಗದಲ್ಲಿಯೋ ಒಣತರ್ಕದ ಮಾತಿನ ಅಥವಾ ಪುಸ್ತಕದ ವೇದಾಂತದಲ್ಲಿಯೋ ಅಡಕಮಾಡಿಬಿಡುತ್ತಿದ್ದಾರೆ. ಆದ್ದರಿಂದ ವರ್ಷಕ್ಕೆ ಒಮ್ಮೆಯಾದರೂ ಅಲ್ಲಲ್ಲಿ ಜನರನ್ನು ಸೇರಿಸಿ ಆಚಾರ್ಯರ ನಿಜವಾದ ತತ್ತ್ವವನ್ನು ಜನರ ಮನಸ್ಸಿಗೆ ಹಿಡಿಯುವಂತೆ ಮಾಡಿಸುವ ಉತ್ಸವಗಳು ಅವಶ್ಯವಾಗಿವೆ ಎಂದು ಶ್ರೀಶ್ರೀಗಳು 1931ರ ಶಂಕರಜಯಂತಿಯಿಂದ “ಶಂಕರಸಪ್ತಾಹ”ವನ್ನು ಕರ್ನಾಟಕದ ಬೇರೆಬೇರೆ ಭಾಗದಲ್ಲಿ ಏರ್ಪಡಿಸಿ, ಮಹಾಮಹಾ ವಿದ್ವಾಂಸರುಗಳಿಂದ ಉಪನ್ಯಾಸಗಳನ್ನು ಆಯೋಜಿಸುತ್ತಿದ್ದರು.

ಉತ್ಸವದಲ್ಲಿ – ಆಚಾರ್ಯರ ಪೂಜೆ ಮುಂತಾದವುಗಳ ಜೊತೆಯಲ್ಲಿ ಆಚಾರ್ಯರ ಗ್ರಂಥಗಳ ಪಾರಾಯಣ, ಶ್ರವಣ; ಅವರ ಸಿದ್ಧಾಂತಗಳನ್ನೊಳಗೊಂಡ ಭಕ್ತಿಜ್ಞಾನವೈರಾಗ್ಯಪ್ರಧಾನವಾದ ಪುರಾಣ, ಭಜನೆಗಳು, ಹರಿಕಥೆಗಳನ್ನು ಏರ್ಪಡಿಸುತ್ತಿದ್ದರು. ವೇದಾಂತವನ್ನೋದುವ ಚಿಕ್ಕವಯಸ್ಸಿನವರಿಗೆ ಪ್ರೋತ್ಸಾಹ, ಆಚಾರ್ಯರ ಸದುಪದೇಶಗಳನ್ನು ಪುಟ್ಟಪುಟ್ಟ ಪುಸ್ತಕಗಳಲ್ಲಿ ಪ್ರಕಟಿಸಿ ಧರ್ಮಾರ್ಥವಾಗಿ ಹಂಚುತ್ತಿದ್ದರು. ಆ ಸಂದರ್ಭದಲ್ಲಿ ಶುದ್ಧಶಾಂಕರ ವೇದಾಂತದ ಮಹತ್ವವನ್ನು ತಿಳಿಸಲು ವಿದ್ವಾಂಸರುಗಳಿಂದ ಬೆಳಿಗ್ಗೆ – ಪ್ರಸ್ಥಾನತ್ರಯ ಭಾಷ್ಯೋಪನ್ಯಾಸಗಳು, ಮಧ್ಯಾಹ್ನ – ಪುರಾಣಪ್ರವಚನ, ಸಂಜೆ – ವೇದಾಂತೋಪನ್ಯಾಸಗಳು, ಹೀಗೆ ಉಪನ್ಯಾಸಗಳನ್ನು ಏರ್ಪಡುಸುತ್ತಿದ್ದರು. ಆ ಉಪನ್ಯಾಸಗಳನ್ನು ಶ್ರೀಶ್ರೀಗಳವರ ಶಿಷ್ಯರು, ಶ್ರೋತೃಗಳು ಆ ಸಮಯದಲ್ಲಿಯೇ ಬರೆದಿಟ್ಟು, ಮತ್ತೆ ಪರಿಷ್ಕರಿಸಿ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಸುಮಾರು ಇಪ್ಪತ್ತು ಸಪ್ತಾಹಗಳ ಉಪನ್ಯಾಸಗಳು ಪ್ರಕಟವಾಗಿದ್ದು ಅವು ಈ ಗ್ರಂಥದಲ್ಲಿ ಅಡಕವಾಗಿವೆ. ಈ ಗ್ರಂಥವು ಶ್ರೀಶಂಕರರ ಉಪದೇಶಗಳನ್ನು ಕುರಿತ ಅಮೋಘ ಸಂಗ್ರಹವಾಗಿದೆ.

**2021** **₹ 500/-**